आधुनिक भारत के निर्माता

BUILDERS OF MODERN INDIA

ಲಜಪತ್‌ರಾಯ್

ಜೀವನ ಮತ್ತು ಸಾಧನೆ

ଆଧୁନିକ ଭାରତର ନିର୍ମାତା

आधु … तार:

ಫಿರೋಜ್ ಚಾಂದ್

ਨਵ-ਭਾਰਤ ਦੇ ਨਿਰਮਾਤਾ

நவபாரதச் சிற்பிகள்

നവഭാരത നിർമ്മാതാക്കൾ

నవ భారత నిర్మాతలు

جدید ہندوستان کے معمار



ಆಧುನಿಕ ಭಾರತದ ನಿರ್ಮಾಪಕರು

ಲಜಪತ್‌ರಾಯ್

ಜೀವನ ಮತ್ತು ಸಾಧನೆ

ಆಧುನಿಕ ಭಾರತದ ನಿರ್ಮಾಪಕರು

ಲಜಪತ್‌ರಾಯ್

ಜೀವನ ಮತ್ತು ಸಾಧನೆ

ಫಿರೋಜ್ ಚಾಂದ್

ಅನುವಾದ: ಕೆ.ಎಚ್. ಸಾವಿತ್ರಿ

ಪ್ರಕಾಶನ ವಿಭಾಗ
ವಾರ್ತಾ ಮತ್ತು ಪ್ರಸಾರ ಸಚಿವಾಲಯ
ಭಾರತ ಸರ್ಕಾರ

1999 (Saka 1921)

ISBN : 81-230-0721-3

Price : Rs. 145.00

ಪ್ರಕಾಶಕರು, ನಿರ್ದೇಶಕರು, ಪ್ರಕಾಶನ ವಿಭಾಗ, ಸೂಚನಾ ಮತ್ತು ಪ್ರಸಾರ ಮಂತ್ರಾಲಯ, ಭಾರತ ಸರ್ಕಾರ, ಪಟಿಯಾಲಾ ಹೌಸ್, ನವದೆಹಲಿ-110001.

ಮಾರಾಟ ವಿಭಾಗ • ಪ್ರಕಾಶನ ವಿಭಾಗ
- 1, ತಿಲಕ್ ಮಾರ್ಗ್, ಪಟಿಯಾಲಾ ಹೌಸ್, ಹೊಸ ದೆಹಲಿ-110001
- ಸೂಪರ್ ಬಜಾರ್, ಕನ್ನಾಟ್ ಸರ್ಕಸ್, ನವದೆಹಲಿ-110001
- ಕಾಮರ್ಸ್ ಹೌಸ್, ಕರೀಂಭೋಯ್ ರಸ್ತೆ, ಬಲ್ಲಾರ್ಡ್ ಪೀರ್, ಮುಂಬಯಿ-400038
- 8, ಎಸ್ಪ್ಲನೇಡ್ ಪೂರ್ವ, ಕಲ್ಕತ್ತಾ-700069
- 'ಎ'-ವಿಂಗ್, ಗ್ರೌಂಡ್ ಫ್ಲೋರ್, ಎಫ್ ಮತ್ತು ಜಿ ಬ್ಲಾಕ್, ರಾಜಾಜಿ ಭವನ, ಬೆಸಂಟ್ ನಗರ, ಚೆನ್ನೈ-600090
- ಬಿಹಾರ ರಾಜ್ಯ ಕೊ-ಆಪರೇಟಿವ್ ಬ್ಯಾಂಕ್ ಭವನ, ಅಶೋಕ ರಾಜಪಥ, ಪಾಟ್ನಾ-800004
- ಪ್ರೆಸ್ ರಸ್ತೆ, ತಿರುವನಂತಪುರ-695001
- 27/6 ರಾಜಾ ರಾಮಮೋಹನ ರಾಯ್ ಮಾರ್ಗ (ಕೃಷಿ ಭವನದ ಹಿಂಭಾಗ), ಲಕ್ನೋ-226001
- ರಾಜ್ಯ ಪುರಾತತ್ವ ಸಂಗ್ರಹಾಲಯದ ಕಟ್ಟಡ, ಪಬ್ಲಿಕ್ ಗಾರ್ಡನ್, ಹೈದರಾಬಾದ್-500004.

ಮಾರಾಟದ ಕೌಂಟರುಗಳು:
- ಕೇ/ಆ ಪಿಐಬಿ, ಸಿ.ಜಿ.ಓ. ಕಾಂಪ್ಲೆಕ್ಸ್, 'ಎ' ವಿಂಗ್, ಎ.ಬಿ. ರಸ್ತೆ, ಇಂದೋರ್, (ಎಂ.ಪಿ.)
- ಕೇ/ಆ ಪಿಐಬಿ, 80, ಮಾಲವೀಯ ನಗರ್, ಭೋಪಾಲ್-462003 (ಎಂ.ಪಿ.)
- ಕೇ/ಆ ಪಿಐಬಿ, K-21, ನಂದ ನಿಕೇತನ್, ಮಾಲವೀಯ ನಗರ್, 'C' ಸ್ಕೀಮ್, ಜೈಪುರ್-302003 (ರಾಜಸ್ಥಾನ್)

LAJPAT RAI-JEEVAN MATTHU SADHANE (Kannada)

Printed at : Akashdeep Printers, 20 Ansari Road, New Delhi-110002.

ಮಾಲಿಕೆ ಕುರಿತು...

ಈ ಮಾಲಿಕೆಯ ಪ್ರಮುಖ ಉದ್ದೇಶ ಭಾರತದ ಸ್ವಾತಂತ್ರ್ಯ ಹಾಗೂ ಪುನರುತ್ಥಾನಕ್ಕಾಗಿ ಶ್ರಮಿಸಿದ ನಮ್ಮ ದೇಶದ ಮಹಾನ್ ವ್ಯಕ್ತಿಗಳ ಹೋರಾಟ ಹಾಗೂ ಸಾಧನೆಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಾಗಿ ದಾಖಲು ಮಾಡುವುದು. ಕೆಲವು ಜೀವನ ಚರಿತ್ರೆಗಳನ್ನು ಬಿಟ್ಟರೆ ಅನೇಕ ಪ್ರಮುಖರ ಅಧಿಕೃತ ಜೀವನ ಚರಿತ್ರೆಗಳು ಲಭ್ಯವಿಲ್ಲ.

ಸರಳ ಭಾಷೆಯಲ್ಲಿ ದೇಶದ ನಾಯಕರ ಜೀವನ ಹಾಗೂ ಅವರ ಕಾರ್ಯ ಚಟುವಟಿಕೆಗಳನ್ನು ಉತ್ತಮ ಲೇಖಕರಿಂದ ಬರೆಯಿಸುವ ಯೋಜನೆ ಇದು. ಇವುಗಳು ಸಮಗ್ರ ಅಧ್ಯಯನವೆಂದಾಗಲಿ ಅಥವಾ ಈಗಾಗಲೇ ಇರಬಹುದಾದ ಸುದೀರ್ಘ ಜೀವನ ಚರಿತ್ರೆಗಳಿಗೆ ಪರ್ಯಾಯವೆಂದಾಗಲಿ ಭಾವಿಸಬಾರದು.

ಈ ಜೀವನ ಚರಿತ್ರೆಗಳನ್ನು ಬರೆಯುವ ಕಾರ್ಯವನ್ನು ವಿವಿಧ ವ್ಯಕ್ತಿಗಳಿಗೆ ನೀಡಲಾಗಿದೆ. ಆದ್ದರಿಂದ ಜೀವನ ಚರಿತ್ರೆಗಳನ್ನು ನಿರ್ದಿಷ್ಟ ಕಾರ್ಯ ಸೂಚಿಯಂತೆ ಪ್ರಕಟಿಸಲು ಸಾಧ್ಯವಾಗಿಲ್ಲ. ಆದರೆ ಶೀಘ್ರದಲ್ಲಿಯೇ ಎಲ್ಲಾ ರಾಷ್ಟ್ರೀಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಈ ಮಾಲಿಕೆಯ ಮೂಲಕ ಹೊರತರಲಾಗುವುದು

ಶ್ರೀ ಆರ್. ಆರ್. ದಿವಾಕರ್ ಈ ಮಾಲಿಕೆಯ ಮುಖ್ಯ ಸಂಪಾದಕರು.

...1978

ಸಂಪಾದಕರ ಮಾತು

ದೇಶದ ಇತಿಹಾಸ, ಸಂಸ್ಕೃತಿ, ಕಲೆ, ವಿಜ್ಞಾನ, ಅಭಿವೃದ್ಧಿಯಂತಹ ವಿಷಯಗಳ ಬಗ್ಗೆ ಜನರಲ್ಲಿ ಜ್ಞಾನವನ್ನು ಉಂಟು ಮಾಡುವ ಕೆಲಸ ತುಂಬಾ ಜವಾಬ್ದಾರಿಯದು. ನಿಖರ ಮಾಹಿತಿಯನ್ನು ಜನತೆಗೆ ನೀಡುವ ಮೂಲಕ ಜ್ಞಾನದ ಪ್ರಚೋದನೆಯನ್ನು ಭಾರತ ಸರ್ಕಾರದ ಪ್ರಕಾಶನ ವಿಭಾಗ ಮಾಡುತ್ತಾ ಬಂದಿದೆ. ಪುಸ್ತಕಗಳು, ನಿಯತಕಾಲಿಕೆಗಳ ಮೂಲಕ ಮಾಹಿತಿಯ ಪ್ರಸಾರ ಮಾಡುತ್ತಿದೆ. ವೈವಿಧ್ಯಮಯ ವಿಷಯಗಳ ಬಗ್ಗೆ ಬಹು ಅಪರೂಪದ ಪುಸ್ತಕಗಳನ್ನು ವಿಭಾಗ ಹೊರತಂದಿದೆ.

ಪುಸ್ತಕಗಳನ್ನು ವಿವಿಧ ಭಾರತೀಯ ಭಾಷೆಗಳಿಗೆ ಅನುವಾದ ಮಾಡುವ ಮೂಲಕ ಹೆಚ್ಚಿನ ಜನರನ್ನು ತಲುಪುವ ಕಾರ್ಯವನ್ನು ಪ್ರಕಾಶನ ವಿಭಾಗ ಮಾಡುತ್ತಿದೆ. ಕನ್ನಡಕ್ಕೆ ಅನುವಾದಗೊಂಡಿರುವ ಪುಸ್ತಕಗಳು ಕಡಿಮೆ ಎಂಬುದನ್ನು ಅರಿತ ಈಗಿನ ನಿರ್ದೇಶಕಿಯಾದ ಶ್ರೀಮತಿ ಸುರೀಂದರ್ ಕೌರ್ ಹಲವಾರು ಪುಸ್ತಕಗಳನ್ನು ಕನ್ನಡದಲ್ಲಿ ತರಲು ನಿರ್ಧರಿಸಿದರು.

ಯೋಜನಾ ಕನ್ನಡ ಪತ್ರಿಕೆಯ ಸಂಪಾದಕರನ್ನು ಈ ಅನುವಾದ ಮಾಲೆಯ ಮುಖ್ಯಸ್ಥರನ್ನಾಗಿ ನೇಮಿಸಿದರು. ವಿವಿಧ ವಿಷಯಗಳ ಪುಸ್ತಕಗಳು ಈಗ ಅನುವಾದಗೊಳ್ಳುತ್ತಿದೆ.

ಈ ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಸನ್ಮಿತ್ರ ಶ್ರೀ ಎಂ.ಎಸ್. ರಜನೀಕಾಂತ್, ಕಿರಣ್ಮಯಿ, ಪೂರ್ಣಿಮಾ, ಶ್ರೀನಿವಾಸ್ ಹಾಗೂ ಮಿಶ್ರಾರಿಗೆ ನಾನು ಅಭಾರಿ. ಅಂತೆಯೇ ಈ ಕಾರ್ಯದ ಮುಖ್ಯ ರೂವಾರಿ ಶ್ರೀಮತಿ ಸುರೀಂದರ್ ಕೌರ್, ಯೋಜನಾದ ಪ್ರಧಾನ ಸಂಪಾದಕ ಶ್ರೀ ಎನ್.ಎನ್. ಶರ್ಮಾ ಮತ್ತಿತರ ಎಲ್ಲ ಅಧಿಕಾರಿಗಳಿಗೂ ಕೃತಜ್ಞ.

ಲಾಲಾ ಲಜಪತ್‌ರಾಯ್ ಪುಸ್ತಕವನ್ನು ಸುಲಲಿತವಾಗಿ ಅನುವಾದ ಮಾಡಿರುವ ಶ್ರೀಮತಿ ಕೆ.ಎಚ್. ಸಾವಿತ್ರಿ, ಡಿಟಿಪಿ ಅಕ್ಷರ ಜೋಡಿಸಿದ ದಿಶಾ ಕಮ್ಯೂನಿಕೇಷನ್ಸ್ ಅವರಿಗೂ ಕೃತಜ್ಞತೆಗಳು.

ಎಂ.ಎನ್. ಶಂಕರ್
ಸಂಪಾದಕ
ಯೋಜನಾ- ಕನ್ನಡ ಪತ್ರಿಕೆ ಹಾಗೂ
ಸಂಪಾದಕ ಅನುವಾದ ಮಾಲೆ

ಬೆಂಗಳೂರು
ಮೇ 1998

ಮುನ್ನುಡಿ

"ನೀವು ಹೇಗಾದರೂ ಮಾಡಿ ನಿಮ್ಮ ನೆನಪಿನ ಬುತ್ತಿಯನ್ನು ಪ್ರಕಟಿಸಲು ಕೆಲವು ಸಮಯ ನಿಗದಿ ಗೊಳಿಸಬೇಕು."- ಹೀಗೆಂದು ಪದೇ ಪದೇ ನಾನು ನನ್ನ ಮುಖ್ಯಸ್ಥರನ್ನು ಪೀಡಿಸುತ್ತಿದ್ದೆ. ಅವರು ಆಗಾಗ ತಮ್ಮ ಶ್ರೀಮಂತ ನೆನಪಿನಂಗಳದಿಂದ ನಮಗೆ ನೀಡುತ್ತಿದ್ದ ಮಾಹಿತಿಗಳು ಈ ರೀತಿ ನಾನು ಪೀಡಿಸಲು ಪ್ರೇರಣೆ ನೀಡಿದವು. ನನ್ನಂತೆ ಹಲವಾರು ಜನ ಇದೇ ವಿನಂತಿ ಮಾಡಿದ್ದಿರಬೇಕು. ಬೇರೆಯವರಿಗೆ ಏನು ಉತ್ತರ ದೊರಕಿತೋ ನನಗೆ ತಿಳಿಯದು. ನನಗಂತೂ, "ಈ ಕಾರ್ಯ ನಿನ್ನಿಂದ ಆಗಬೇಕು" ಎಂಬ ಉತ್ತರ ಲಭ್ಯವಾಗುತ್ತಿತ್ತು.

ನಾನು ನನ್ನ ಆಗ್ರಹವನ್ನು ಬಹಳ ಗಂಭೀರವಾಗಿಯೇ ಮಾಡುತ್ತಿದ್ದೆ. ಆದರೆ ಅವರ ನಿರಾಕರಣೆ ಅಥವಾ ಪರ್ಯಾಯ ಸೂಚನೆಯನ್ನು ನಾನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ.

ನಾನು ಗಂಭೀರವಾಗಿ ತೆಗೆದುಕೊಂಡಿದ್ದರೆ ನಾನು ಈ ವಿಚಾರಗಳನ್ನು ಸಂಗ್ರಹ ಮಾಡುವುದು ಹೇಗೆ ಯಾವ ಯಾವ ಮೂಲಗಳಿಂದ ಮಾಹಿತಿ ಸಂಪರ್ಕಿಸಬೇಕು, ಎಂತೆಂತಹ ವ್ಯಕ್ತಿಗಳನ್ನು ಮಾಹಿತಿಗಾಗಿ ಅಥವಾ ಅವರ ಬಳಿ ಇರಬಹುದಾದ ದಾಖಲೆಗಳಿಗಾಗಿ ಸಂಪರ್ಕಿಸಬೇಕು ಎಂಬ ವಿಚಾರಗಳ ಬಗ್ಗೆ ನನ್ನ ಮುಖ್ಯಸ್ಥರಿಂದ ಮಾರ್ಗದರ್ಶನ ಪಡೆಯುತ್ತಿದ್ದೆ. ಎಲ್ಲಕ್ಕಿಂತ ಮುಖ್ಯವಾಗಿ ಮಾಹಿತಿಯ ಚಿಲುಮೆಯೇ ಆಗಿದ್ದ ಅವರಿಂದಲೇ ನಾನು ಸಾಕಷ್ಟು ಸಂಗತಿಗಳನ್ನು ತಿಳಿದುಕೊಂಡು ಗುರುತು ಮಾಡಿಕೊಳ್ಳಬಹುದಿತ್ತು. ಇವು ಯಾವ ಅಂಶವೂ ನನ್ನ ಮನಸ್ಸಿಗೆ ಗೋಚರಿಸಲಿಲ್ಲ. ಅವರ ನಿರಂತರ ಉತ್ತರ ನನ್ನನ್ನು ಸಾಗ ಹಾಕಲಿಕ್ಕೆ ನೀಡುತ್ತಿದ್ದ ಪ್ರತಿಕ್ರಿಯೆ ಎಂದೇ ನಾನು ಭಾವಿಸಿದ್ದೆ.

ಮಾಹಿತಿಯ ಮುಖ್ಯ ಚಿಲುಮೆಯಿಂದ ಒಂದು ದಿನ ವಿಚಾರಗಳ ಪ್ರವಾಹ ನಿಂತು ಹೋಯಿತು. ಹಾಗೂ ಅವರು ಅಂದು ನೀಡಿದ್ದ ಉತ್ತರವನ್ನು ನಾನು ಗಂಭೀರವಾಗಿಯೇ ಪರಿಗಣಿಸಬೇಕಾಗಿ ಬಂದಿತು. ಅಂದು ಅವರು ತಪ್ಪಿಸಿಕೊಳ್ಳಲೆಂದೇ ನನಗೆ ನೀಡಿದ್ದ ಸೂಚನೆ ಒಂದು ರೀತಿಯಿಂದ ಆದೇಶವಾಗಿ ಮಾರ್ಪಾಟಾಯಿತು. ಲಜಪತ್‌ರಾಯ್ ಅವರ ಜೀವನ ಒಂದು ರೀತಿಯಿಂದ ಮಹಾನ್ ವಿಚಾರ ಎಂಬುದು ನನಗೆ ತಿಳಿದಿದ್ದ ಕಾರಣ ನನ್ನ ಇತಿಮಿತಿ ಹಾಗೂ ನನ್ನಲ್ಲಿದ್ದ ಕೊರತೆ ನನಗೆ ಎಚ್ಚರಿಕೆ ನೀಡುತ್ತಿತ್ತು. ಇದುವರೆಗೂ ನಾನು ಯಾವುದೇ ಸಣ್ಣ ಜೀವನ ಚರಿತ್ರೆಯನ್ನೂ ಬರೆದಿರಲಿಲ್ಲ. ಇದರೊಂದಿಗೆ ನನ್ನ ಮನೋಧರ್ಮ ಸಹ ಈ ರೀತಿಯ ಜೀವನ ಚರಿತ್ರೆ ಬರೆಯಲು ಅನರ್ಹಗೊಳಿಸಿದೆ ಎಂಬುದು ನನಗೆ ತಿಳಿದಿತ್ತು.

ಆದರೂ ಈ ಮಹಾನ್ ವ್ಯಕ್ತಿಯ ಜೀವನ ನನ್ನನ್ನು ಕೈ ಬೀಸಿ ಕರೆಯಿತು. ನನ್ನ ಮೇಲೆ ಸತತ ಒತ್ತಡ ಹೇರಿತು. ಇದರೊಂದಿಗೆ ನಾನು ಯಾವುದೇ ರೀತಿಯ ತಯಾರಿ ಮಾಡಿಲ್ಲದಿರುವುದು ಮತ್ತು ಆಗಾಗ ನನ್ನ ಗಮನಕ್ಕೆ ಬಂದ ಸಂಗತಿಗಳನ್ನು ಗುರುತು ಹಾಕಿಕೊಂಡಿಲ್ಲದಿರುವುದು ನನ್ನನ್ನು ಬಾಧಿಸುತ್ತಿತ್ತು.

ವಿಶೇಷವಾಗಿ ಲಜಪತ್‌ರಾಯ್ ಅವರ ಜೊತೆ ಅತ್ಯಂತ ಆಪ್ತರಾಗಿದ್ದ ಶ್ರೀ ಸಿ.ಎಫ್. ಆಂಡ್ರ್ಯೂಸ್ ಅವರು ನಮ್ಮ ವಾರಪತ್ರಿಕೆಯಾದ ದಿ ಪೀಪಲ್‌ನಲ್ಲಿ ವಿಶೇಷ ಆಸಕ್ತಿ ತೋರುತ್ತಾ ನನ್ನ ಸಾಮರ್ಥ್ಯದ ವಿಶ್ಲೇಷಣೆ ಮಾಡುತ್ತಾ ಒಳ್ಳೆಯ ಅವಕಾಶ ಕಂಡಿದ್ದರು. ಈ ಒಂದು ಮಹಾನ್ ಗ್ರಂಥ ರಚಿಸಲು ನನ್ನಿಂದ ಆಗುತ್ತದೋ ಇಲ್ಲವೋ ಎಂಬುದನ್ನು ತೀರ್ಮಾನಿಸಲು ಅವರು ಅತ್ಯಂತ ಸೂಕ್ತ ವ್ಯಕ್ತಿಯಾಗಿದ್ದರು. ಅವರು ನನಗೆ ಮಾರ್ಗದರ್ಶನ ಮಾಡುವ, ಪ್ರತಿ ಹಂತದಲ್ಲೂ ಸಲಹೆ ನೀಡುವ ಮತ್ತು ನನ್ನ ಹಸ್ತಪ್ರತಿಯನ್ನು ಪರಿಶೀಲಿಸುವ, ಈ ಪುಸ್ತಕಕ್ಕೆ ಪ್ರಾಯೋಜಕರನ್ನು ಹಾಗೂ ಪ್ರಕಾಶಕರನ್ನು ಹುಡುಕಿಕೊಡುವ ಭರವಸೆ ನೀಡಿದರು.

ಈ ಜೀವನ ಚರಿತ್ರೆ ಪ್ರಕಟಿಸಿರುವುದೇ ಅವರ ಉದಾರತೆ ಹಾಗೂ ಒತ್ತಾಸೆಗಳಿಂದ. ಗ್ರಂಥ ರಚನೆಯನ್ನು ಪ್ರಾರಂಭಿಸುವ ಮೊದಲು ನಡೆದ ಪ್ರಾಥಮಿಕ ಹಂತದ ಮಾತುಕತೆಯ ನಂತರ ಕರಡು ಪ್ರತಿ ರಚನೆಯಾದ ಕೂಡಲೇ ಒಂದು ದೀರ್ಘ ಅವಧಿಯ ಚರ್ಚೆ ನಡೆಯಬೇಕೆಂದು ನಾನು ತೀರ್ಮಾನಿಸಿದ್ದರೂ ಅಷ್ಟರೊಳಗಾಗಿ ಈ ಮಾರ್ಗದರ್ಶಕ ನನ್ನಿಂದ ಕಣ್ಮರೆಯಾದರು.

ಈ ಪುಸ್ತಕದ ಪ್ರಕಟಣೆ ವಿಳಂಬವಾದುದಕ್ಕೆ ಕಾರಣವಾದ ಅನೇಕ ಘಟನೆಗಳನ್ನು ವಿವರಿಸುವುದು ಅನಗತ್ಯ. ಅದರ ಬದಲಿಗೆ ವಿಳಂಬದ ಪೂರ್ಣ ಜವಾಬ್ದಾರಿಯನ್ನು ಲೇಖಕ ತನ್ನ ಮೇಲೆ ಹೊತ್ತುಕೊಂಡು ಮಿಕ್ಕ ವಿಚಾರವನ್ನು ಓದುಗರಿಗೆ ಬಿಡುವುದು ಸೂಕ್ತ.

ದೇಶದ ವಿಭಜನೆಯಿಂದ ಆದ ನಷ್ಟವನ್ನು ಇಲ್ಲಿ ತಿಳಿಸುವುದು ಲೇಖಕನ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಾದರೆ ಆ ಅವಧಿಯಲ್ಲಿ ಬಹಳ ಪ್ರಮುಖ ದಾಖಲೆಗಳನ್ನು ಲಜಪತ್‌ರಾಯ್ ಅವರ ಸ್ವಂತ ಪತ್ರ ವ್ಯವಹಾರಗಳ ಕಡತ ಹಾಗೂ ವಿವಿಧ ಮಾಹಿತಿಗಳನ್ನು ಒಳಗೊಂಡ ಆಲ್ಬಂಗಳನ್ನು ಕಳೆದುಕೊಂಡ ವಿಚಾರಗಳನ್ನು ತಿಳಿಸಿ ಹೇಳುವುದಾಗಿದೆ. ಇನ್ನು ಕೆಲವು ಸುದ್ದಿ ಮೂಲಗಳು ನಮಗೆ ಉಪಯುಕ್ತವಾಗಲಿಲ್ಲ. ಈ ರೀತಿಯ ವಿಷಯ ಸಂಪನ್ಮೂಲದ ಕೊರತೆಯ ನಡುವೆಯೇ ಈ ಯೋಜನೆಯನ್ನು ಫಲಪ್ರದವಾಗಿ ಮಾಡಬೇಕಾಗಿ ಬಂದಿತು. ಹಿನ್ನೋಟದಲ್ಲಿ 1947ರ ವಿಭಜನೆಯ ದುರಂತದ ನಂತರ ದೊರಕದಿದ್ದ ಅನೇಕ ವಿಷಯಗಳನ್ನು ಒಳಗೊಂಡಿದ್ದು ಒಂದು ರೀತಿಯಿಂದ ದೈವಿ ಕೃಪೆ ಎಂದೇ ಹೇಳಬಹುದು.

ಈ ಒಂದು ದೀರ್ಘ ಕಾಲೀನ ಯೋಜನೆಯ ವಿವಿಧ ಹಂತಗಳಲ್ಲಿ ನನ್ನ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರು ವಿವಿಧ ರೀತಿಯಲ್ಲಿ ನನಗೆ ಸಹಾಯ ನೀಡಿದ್ದರೂ ಸಾಹಿತ್ಯದ ದೃಷ್ಟಿಯಲ್ಲಿ ನನ್ನ ಮೊದಲ ಕೃತಜ್ಞತೆ ಆರ್ಥರ್ ಮೂರ್ ಅವರಿಗೆ

ಸಲ್ಲಬೇಕಿದೆ. ಅವರು ಲಾಲಾ ಲಜಪತ್‌ರಾಯ್ ಅವರೊಂದಿಗೆ ವಿಧಾನಸಭೆಯಲ್ಲಿ ಸಹ ಸದಸ್ಯರಾಗಿದ್ದರು. ನಮ್ಮ ದೇಶದಿಂದ ಲಾಹೋರ್ ದೂರವಾದ ಮೇಲೆ ದೆಹಲಿಯಲ್ಲಿ ನಾನು ಅವರೊಂದಿಗೆ ವೈಯಕ್ತಿಕ ಸಖ್ಯ ಬೆಳೆಸಿದ್ದೆ. ಅವರಾಗಲೇ ದಿ ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕ ಹುದ್ದೆಯಿಂದ ನಿವೃತ್ತಿ ಪಡೆದಿದ್ದರು. ನಾವಿಬ್ಬರು ಯೋಚಿಸಿದ್ದ ಒಂದು ಪತ್ರಿಕಾ ಯೋಜನೆ ಫಲಪ್ರದವಾಗದಿದ್ದರೂ ಆ ಯೋಜನೆಗೆ ಸಂಬಂಧಪಟ್ಟ ಒಡನಾಟ ನಮ್ಮಿಬ್ಬರನ್ನು ಸನಿಹಕ್ಕೆ ತಂದಿತು. ಅವರು ನನ್ನ ಹಸ್ತಪ್ರತಿಯನ್ನು ಬಹಳ ಕಾಳಜಿಯಿಂದ ಓದಿ ಸಿ.ಎಫ್. ಆಂಡ್ರ್ಯೂಸ್ ಅವರಿಂದ ಯಾವ ಮಾರ್ಗದರ್ಶನ ಪಡೆಯಬೇಕಾಗಿತ್ತೋ ಅದನ್ನು ನನಗೆ ನಿರ್ವಂಚನೆಯಿಂದ ನೀಡಿದರು. ಆಂಡ್ರ್ಯೂಸ್ ಅವರ ರೀತಿಯಲ್ಲಿ ಆರ್ಥರ್ ಮೂರ್ ಅವರು ಕೇವಲ ಸಾಹಿತ್ಯದ ಗುಣಮಟ್ಟದಲ್ಲಿ ಮಾತ್ರ ಆಸಕ್ತಿ ವಹಿಸದೆ ಅದನ್ನು ಪ್ರಕಾಶಿಸುವುದರ ಬಗ್ಗೆಯೂ ತಮ್ಮ ಕಾತರ ತೋರಿಸುತ್ತಿದ್ದರು. ನನ್ನ ಹಸ್ತಪ್ರತಿಯನ್ನು ಪ್ರಮುಖ ದೈನಿಕವೊಂದರಲ್ಲಿ ಮಾಲಿಕೆಯ ರೀತಿ ಪ್ರಕಟಿಸಲು ಆ ಪತ್ರಿಕೆಯ ಸಂಪಾದಕರಿಗೆ ಶಿಫಾರಸು ಮಾಡಿದ್ದರು. ನಾನು ಈ ರೀತಿಯ ಸಹಾಯವನ್ನು ಕೇಳದಿದ್ದರೂ ಅವರು ನನಗೆ ಅರಿವಿಲ್ಲದೆ ಈ ಕಾರ್ಯ ಮಾಡಿದ್ದರು. ಈ ವಿಚಾರವು ಅವರು ಇಂಗ್ಲೆಂಡಿಗೆ ಮರಳಿದ ಮೇಲೆಯೇ ನನಗೆ ತಿಳಿದು ಬಂದಿತು. ಅವರ ಒಂದು ಪ್ರಯತ್ನದಿಂದಾಗಿ ನನ್ನ ಹಸ್ತಪ್ರತಿಯ ಸಾಕಷ್ಟು ಭಾಗ ಒಂದೇ ಬಾರಿಗೆ ಮೂರು ಇಂಗ್ಲಿಷ್ ದಿನ ಪತ್ರಿಕೆಗಳಲ್ಲಿ ಹಾಗೂ ಹಿಂದಿ, ಬಂಗಾಳಿ, ಮರಾಠಿ, ಗುಜರಾತಿ, ತೆಲುಗು ಹಾಗೂ ಒರಿಯಾ ಭಾಷೆಗಳ ಒಂದೊಂದು ದಿನ ಪತ್ರಿಕೆಗಳಲ್ಲಿ ಸಹ ಪ್ರಕಟವಾಗಲು ಸಹಾಯವಾಯಿತು. ಈ ಮಾಲಿಕೆಗಳು 12 ಹಾಗೂ 12ಕ್ಕಿಂತ ಹೆಚ್ಚು ಕಂತುಗಳಲ್ಲಿ ಪ್ರಕಟವಾದವು. ಲಜಪತ್‌ರಾಯ್ ಮಾಲಿಕೆ ಅಂದಿನ ದಿನಗಳಲ್ಲಿ ಪ್ರಮುಖ ರಾಷ್ಟ್ರೀಯ ವಿಷಯವಾಗಿ ಪರಿಗಣಿಸಲ್ಪಟ್ಟಿತು. ಹಿಂದೂಸ್ತಾನ ಟೈಮ್ಸ್‌ನಲ್ಲಿದ್ದ ನನ್ನ ಸ್ನೇಹಿತರಾದ ದಿ. ಈಶ್ವರ್ ದತ್ ಅವರು ತೋರಿದ ಕುತೂಹಲ ಇನ್ನೊಂದು ದೊಡ್ಡ ಪ್ರಮಾಣದ ಮಾಲಿಕೆ ಪ್ರಕಟಣೆಗೆ ಕಾರಣವಾಯಿತು.

ಪಂಜಾಬ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದ, ನನ್ನ ಕಾಲೇಜು ದಿನಗಳಲ್ಲಿ ನನ್ನ ಗುರುಗಳಾಗಿದ್ದ ಪ್ರೊ. ಮದನ್ ಗೋಪಾಲ್ ಸಿಂಗ್ ಅವರು ಪ್ರಥಮ ಅಧ್ಯಾಯಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಅನೇಕ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ. ಅವರು 1947ರಲ್ಲಿ ನಡೆದ ರಕ್ತಪಾತಕ್ಕೆ ಬಲಿಯಾದ ಕಾರಣ ನನಗೆ ಕೊಟ್ಟ ಭರವಸೆಯನ್ನು ಈಡೇರಿಸಲಾಗಲಿಲ್ಲ. ಅವರನ್ನು ಗೌರವದಿಂದ ಸ್ಮರಿಸುವುದು ನನ್ನ ಕರ್ತವ್ಯ.

ಸರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿಯ ಸ್ನೇಹಿತರು ಈ ಯೋಜನೆಯಲ್ಲಿ ಸಹಜವಾಗಿಯೇ ತೀವ್ರ ಆಸಕ್ತಿ ತೋರಿದ್ದಾರೆ. ದಿ. ಮೋಹನ್‌ಲಾಲ್ ಅವರು ಈ ಜೀವನ ಚರಿತ್ರೆ ಯೋಜನೆಯನ್ನು ಪೂರ್ಣಗೊಳಿಸಲು ನನ್ನ ಮಿಕ್ಕೆಲ್ಲಾ ಕಾರ್ಯಗಳನ್ನು ಬದಿಗೊತ್ತುವಂತೆ ಆಗ್ರಹ ಮಾಡುತ್ತಾ ನನಗೆ ಒಂದು ರೀತಿಯ ಪ್ರೇರಣೆ ನೀಡಿದರು. ಆದರೆ ಈ ಪುಸ್ತಕದ ಪ್ರಕಟಣೆಯಲ್ಲಿ ಉಂಟಾದ ವಿಳಂಬದ ಕಾರಣ ಈ ಅತ್ಯಮೂಲ್ಯ ಸ್ನೇಹಿತ ನನ್ನಲ್ಲಿ ವಿಶ್ವಾಸ ಕಳೆದುಕೊಳ್ಳುವಂತೆ ಆಗಿದ್ದು ವಿಷಾದನೀಯ. ಹೀಗಾದರೂ ಅವರು ನನ್ನಲ್ಲಿ ವಿಶ್ವಾಸ ತೋರಿಸುತ್ತಾ ಬಂದರು.

ನಾನು ಕಂಡದ್ದನ್ನು ಅಥವಾ ಸಮೀಪದಿಂದ ಕಂಡ ವ್ಯಕ್ತಿಯನ್ನು ಚಿತ್ರಿಸುವುದು ಅತ್ಯಂತ ಸುಲಭವಾದರೂ ನನ್ನಿಂದ ಅಪೇಕ್ಷಿಸಿದ್ದು ಕೇವಲ ಇಷ್ಟೇ ಅಲ್ಲ. ನಾನು ಲಜಪತ್‌ರಾಯ್ ಅವರನ್ನು ಕೊನೆಯ ಎಂಟು ವರ್ಷಗಳಲ್ಲಿ ಮಾತ್ರ ನೋಡಿದ್ದು. ಅದರಲ್ಲೂ ಅವರು ಲಾಹೋರಿನಲ್ಲಿದ್ದಾಗಿನ ಮಾಹಿತಿಗಳು ಮಾತ್ರ ನನಗೆ ಲಭ್ಯವಿತ್ತು. ಅವರ ಜೀವನ ರೂಪುಗೊಂಡ ಅವಧಿ, ನಾನು ಅವರ ಸಂಪರ್ಕಕ್ಕೆ ಬರುವ ಮುನ್ನ ಮೂರು ದಶಕಗಳ ಕಾಲದ ಅವರ ಸಾರ್ವಜನಿಕ ಜೀವನ, ಅವರ ಜೀವನಕ್ಕೆ ಸಂಬಂಧಪಟ್ಟ ಮಾಹಿತಿಗಳು ಮೂರು ಖಂಡಗಳಲ್ಲಿ ಹಂಚಿ ಹೋಗಿದ್ದವು... ವಿಷಯ ಸಂಪನ್ಮೂಲಗಳ ಶೋಧನೆ, ಪರಿಶ್ರಮ ಹಾಗೂ ಅವುಗಳನ್ನು ಒಗ್ಗೂಡಿಸ ಬೇಕಾದ ಅಗತ್ಯತೆ ಹಾಗೂ ಇವುಗಳಲ್ಲಿದ್ದ ಕೊರತೆ ನನ್ನಲ್ಲಿ ಆತಂಕವನ್ನು ಹುಟ್ಟು ಹಾಕಿದ್ದವು. ಆದರೆ ಲಾಲಾ ಲಜಪತ್‌ರಾಯ್ ಅವರು ಚಿಕ್ಕಂದಿನಿಂದಲೇ ಬರೆಯುವ ಅಭ್ಯಾಸ ಇಟ್ಟುಕೊಂಡಿದ್ದು ಹಾಗೂ ಜೀವನದುದ್ದಕ್ಕೂ ಇದನ್ನು ಮುಂದುವರೆಸಿದ್ದು ನನಗೆ ತುಂಬಾ ಸಹಾಯವಾಯಿತು. ನಾನೆಂದೂ ಸಹ ದಿನಚರಿಯನ್ನು ಬರೆಯದಿದ್ದರೂ ಅಥವಾ ಲಾಲಾಜಿಯವರ ಹೇಳಿಕೆಗಳನ್ನು ಹಾಗೂ ಕಾರ್ಯಗಳನ್ನು ಗುರುತು ಹಾಕಿಕೊಳ್ಳದಿದ್ದರೂ 1925ರ ದಿ ಪೀಪಲ್ ಪತ್ರಿಕೆಯ ಕಡತಗಳು ತುಂಬಾ ಉಪಯುಕ್ತವಾದವು. ಮುಂಚಿನ ಅವಧಿಯ ಬಗ್ಗೆ ಈ ರೀತಿ ಸಂಪೂರ್ಣ ತಯಾರಿದ್ದ ದಾಖಲೆ ದೊರಕದಿದ್ದರೂ ಲಭ್ಯವಿದ್ದ, ಪ್ರಕಟವಾಗಿದ್ದ, ಕೆಲವು ಅಪ್ರಕಟಿತ ಮಾಹಿತಿಗಳು ದೊರಕಿದ್ದು ನನಗೆ ಸಹಾಯವಾಯಿತು.

ಆದರೆ ಈ ಪರಿಣಾಮ ಮೂಡಿಸುವಲ್ಲಿ ಯಾವುದೇ ಪ್ರಭಾವ ಅಥವಾ ತಂತ್ರ ಅಳವಡಿಸಿಕೊಳ್ಳಲಾಗಿದೆ ಎಂದು ಹೇಳಲಾರೆ... ಈ ರೀತಿಯ ಚೌಕಟ್ಟು ಒದಗಿಸಲು ನಾನು ಮುನ್ನುಡಿಯಲ್ಲಿ ಪ್ರಯತ್ನಿಸಿದ್ದೇನೆ. ಆ ಎಂಟು ವರ್ಷಗಳ (20ರ ದಶಕದ) ಹಿನ್ನೋಟ ನನ್ನಲ್ಲಿ ಅಚ್ಚರಿಯನ್ನು ಉಂಟು ಮಾಡಿದೆ. ನಾನು ಹೊಂದಿರುವ ಮಾಹಿತಿ ಅತ್ಯಲ್ಪ. ಕಾಲೇಜು ವಿದ್ಯಾರ್ಥಿಯಿಂದ ಪ್ರಖ್ಯಾತ ವ್ಯಕ್ತಿಯಾಗುವವರೆಗೂ ಕೊಂಚ ಹಿಂದೇಟಿನಿಂದಲೇ ನಾನು ನೆನಪಿನಾಳದಿಂದ ಕೆಲವೇ ಕೆಲವು ಮಾಹಿತಿಗಳನ್ನು ಕೆಲವೇ ವಾಕ್ಯಗಳಲ್ಲಿ ತಿಳಿಸಲು ಪ್ರಯತ್ನಿಸುತ್ತೇನೆ. ಆದರೆ ಘಟನೆಗಳ ವಿವರಗಳು ಕಾಲನ ಸುಳಿಯಲ್ಲಿ ಸಿಲುಕಿ ಮಸುಕಾಗುತ್ತವೆ. ಆದರೆ ವ್ಯಕ್ತಿತ್ವ ಪ್ರಕಾಶಮಾನವಾಗಿ ಉಳಿಯುತ್ತದೆ. ಇದು ವ್ಯಕ್ತಿ ಚಿತ್ರಣಕ್ಕೆ ಅಗತ್ಯವಾದುದು ಎಂದು ನನ್ನ ಭಾವನೆ. ನನ್ನ ವಿವರಣೆಯ ಮೂಲಕ ಆ ವ್ಯಕ್ತಿತ್ವ ಪರಿಣಾಮಕಾರಿಯಾಗಿ ಓದುಗರನ್ನು ಮುಟ್ಟುತ್ತದೋ ಇಲ್ಲವೋ ಎಂಬುದು ಬೇರೆ ವಿಚಾರ. ಈ ವಿವರಣೆಯ ಮೂಲಕ ವ್ಯಕ್ತಿತ್ವವನ್ನು ಚಿತ್ರಿಸಲು ಅಗತ್ಯವಾದ ಪ್ರತಿಭೆ ಹಾಗೂ ತಾಂತ್ರಿಕ ಅರ್ಹತೆ ನನ್ನಲ್ಲಿದೆ ಎಂದು ಹೇಳಿಕೊಳ್ಳದಿದ್ದರೂ ನಾನು ಮುನ್ನುಡಿಯಲ್ಲಿ ವ್ಯಕ್ತಿತ್ವದ ಚಿತ್ರಣ ನೀಡಲು ಪ್ರಯತ್ನಿಸುತ್ತಿದ್ದೇನೆ.

20ರ ದಶಕದ ಆ ಎಂಟು ವರ್ಷಗಳನ್ನು ಅವಲೋಕನ ಮಾಡಿದಾಗ ಒಬ್ಬ ಸಾಮಾನ್ಯ ಕಾಲೇಜು ವಿದ್ಯಾರ್ಥಿಗೂ ಒಬ್ಬ ಮಹಾನ್ ವ್ಯಕ್ತಿಗೂ ಇದ್ದ ಅಗಾಧ ಅಂತರವನ್ನು ಅರಿಯುವ ನನ್ನ ಬಗ್ಗೆಯೇ ಅಚ್ಚರಿಯುಂಟಾಗುತ್ತದೆ. ನನ್ನ ಸಹಜವಾದ ವಿಶಿಷ್ಟ ಗುಣಗಳೊಂದಿಗೆ ಪರಿಶ್ರಮ, ಏಕಾಗ್ರತೆ ಮತ್ತು ತ್ಯಾಗಗಳನ್ನು ಸಮ್ಮಿಳನಗೊಳಿಸಿ ಖ್ಯಾತಿಯ ತುತ್ತ ತುದಿಗೇರಿದ ಹಾಗೂ ಅನೇಕ ದಶಕಗಳ ಕಾಲ ತನ್ನ ಜನರಿಂದ ಓರ್ವ ಮಹಾನ್ ನಾಯಕನಿಗೆ ಸಲ್ಲ ಬೇಕಾಗಿರುವ ಎಲ್ಲಾ ಗೌರವಕ್ಕೆ ಪಾತ್ರರಾದ ಲಾಲಾ ಲಜಪತ್‌ರಾಯ್ ಅವರ ಮಹತ್ವವನ್ನು ನಾನು ಅರಿಯಲೇ ಇಲ್ಲ. ಏನೂ ಅರಿಯದ ಒಬ್ಬ ಯುವಕನಿಗೆ ಇಂತಹ ಮಹಾನ್ ವ್ಯಕ್ತಿಯೊಬ್ಬರ ಜೊತೆಗಿನ ಪ್ರಥಮ ಭೇಟಿ ದಿಙ್ಮೂಢಗೊಳಿಸುತ್ತದೆ. ಮತ್ತು ಆ ಮಹಾನ್ ವ್ಯಕ್ತಿಯ ಜೊತೆಗಿನ ನಿರಂತರ ಸಂಪರ್ಕ ಈ ದಿಙ್ಮೂಢತೆಯನ್ನು ತೊಡೆದು ಹಾಕುತ್ತದೆ. ಆದರೆ ಇಬ್ಬರ ನಡುವಿನ ಅಂತರವು ಗೌರವ ಹಾಗೂ ಶ್ರದ್ಧೆ ಭಕ್ತಿಗಳ ಮೂಲಕ ವ್ಯಕ್ತವಾಗುತ್ತಲೇ ಇರುತ್ತದೆ. ಮುಗುಳ್ನಗೆಯ ಮೂಲಕ ಸ್ವಾಗತಿಸುವ ಆ ಮಹಾನ್ ವ್ಯಕ್ತಿ ತನ್ನ ದೃಷ್ಟಿಯಿಂದಲೇ ಆ ಅಪರಿಚಿತ ವ್ಯಕ್ತಿಯನ್ನು ಅಳೆಯುತ್ತಾರೆ. ನೀವು ಅವರೊಂದಿಗೆ ಮುಖಾಮುಖಿಯಾದ ಕ್ಷಣದಿಂದಲೇ ಭಯ ಸಂಪೂರ್ಣವಾಗಿ ದೂರವಾಗ ತೊಡಗುತ್ತದೆ. ನಿಮ್ಮನ್ನು ಆತ ಮಾತನಾಡಿಸ ಹೊರಟ ತಕ್ಷಣವೇ ಅಪರಿಚಿತನಿಂದ ಪರಿಚಿತ ವ್ಯಕ್ತಿಯಾಗಿಸಿ ಅನೇಕ ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡುತ್ತಿರುವ ಇಬ್ಬರು ಸಹೋದ್ಯೋಗಿಗಳ ನಡುವಿನ ಸಂವಾದದಂತೆ ಮಾತುಕತೆ ಪ್ರಾರಂಭವಾಗುತ್ತದೆ. ಈ ಮಹಾನ್ ವ್ಯಕ್ತಿ ಎಂತಹವರೊಂದಿಗಾದರೂ ಸಮಾನತೆಯಿಂದ ಮಾತನಾಡುವ ಮೂಲಕ ತಮ್ಮ ಪ್ರಖ್ಯಾತ ವ್ಯಕ್ತಿತ್ವವನ್ನೇ ಮರೆ ಮಾಚುತ್ತಾರೆ. ಪ್ರಜಾಪ್ರಭುತ್ವ ಎಂಬುದು ಅವರಿಗೆ ಕೇವಲ ಒಂದು ರಾಜಕೀಯ ವ್ಯವಸ್ಥೆಯಲ್ಲ. ಬದಲಿಗೆ ಜೀವನದ ಉಸಿರೇ ಆಗಿತ್ತು.

ಇದು ಮೊದಲ ಭೇಟಿಯ ಒಂದು ಚಿತ್ರಣವಾದರೆ ಅದಾದ ನಂತರ ಎಂಟು ವರ್ಷಗಳ ಸಂಬಂಧ ಇದಕ್ಕೆ ಪೂರಕವಾಗಿತ್ತು. ಅವರ ಬುದ್ಧಿ ಪ್ರೌಢಿಮೆ, ಅವರ ಮಹಾನ್ ವ್ಯಕ್ತಿತ್ವ ಎಲ್ಲರಿಗೂ ಗೊತ್ತಿರುವ ವಿಚಾರವಾಗಿದ್ದರೂ ಇವುಗಳು ಯಾವುದೇ ರೀತಿಯಿಂದ ಸಮಾನತೆಗಾಗಲಿ ಅಥವಾ ಮುಕ್ತ ಚರ್ಚೆಗಾಗಲಿ ಬಾಧಕವಾಗಿರಲಿಲ್ಲ. ಅವರು ಭಿನ್ನ ವಿಚಾರಗಳನ್ನು ಕೇವಲ ಸಹಿಸುತ್ತಿದ್ದುದ್ದಷ್ಟೇ ಅಲ್ಲ, ಬದಲಿಗೆ ಭಿನ್ನ ವಿಚಾರಗಳನ್ನು ಅಭಿವ್ಯಕ್ತ ಪಡಿಸುವಂತೆ ಪ್ರಚೋದಿಸುತ್ತಿದ್ದರು. ಒಂದೊಮ್ಮೆ ಕಿರಿಯರು ತಪ್ಪು ವಿಚಾರವನ್ನು ವ್ಯಕ್ತಪಡಿಸುತ್ತಿದ್ದರೂ ಅವರು ಹಿರಿಯರ ಅನುಭವದ ತೀರ್ಪುಗಳನ್ನು ಒಪ್ಪುವುದರ ಬದಲು ತಮ್ಮ ಅನುಭವಗಳಿಂದಲೇ ಅಥವಾ ವಿಚಾರ ವಿಮರ್ಶೆಗಳಿಂದಲೇ ತಮ್ಮ ತಪ್ಪನ್ನು ಅರಿತು ಭ್ರಮೆಗಳನ್ನು ದೂರ ಮಾಡಬೇಕೆಂಬುದು ಆ ನಾಯಕರ ವಿಶಿಷ್ಟ ನಂಬಿಕೆಯಾಗಿತ್ತು. ಅವರ ಭಾಷಣಗಳು ನೇರ ಮಾತುಗಳಿಂದ ಕೂಡಿದ್ದವು. ಪದಗಳನ್ನು ಉಪಯೋಗಿಸುವಾಗ ಯಾವುದೇ ಸಂಕೋಚ ಕಾಣುತ್ತಿರಲಿಲ್ಲ. ಅವರ ಸುತ್ತಲೂ ಸೇರುತ್ತಿದ್ದ ಸರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿಯ ಆಜೀವ ಸದಸ್ಯರಾದ ಯುವಕರು ಅವರಿಂದ ಈ ಗುಣಗಳನ್ನು ಗ್ರಹಿಸಿ ಅವರೊಂದಿಗೆ ಮಾತನಾಡುವಾಗ ಅನ್ಯ ವಿಚಾರಗಳನ್ನು ವ್ಯಕ್ತಪಡಿಸುವುದು ಅಥವಾ ಅವರ ವಿಚಾರಗಳನ್ನು ವಿಮರ್ಶಿಸುವಷ್ಟರ ಮಟ್ಟಿಗೆ ಪ್ರಭಾವಿತರಾದರು. ಹೀಗೆ

ಮಾಡುತ್ತಿದ್ದರಿಂದ ಯುವಕರು ಅಗೌರವ ಸೂಚಿಸುತ್ತಿದ್ದಾರೆಂದಾಗಲಿ ಅಥವಾ ಅದನ್ನು ಅಗೌರವವೆಂದು ಪರಿಗಣಿಸುತ್ತಿದ್ದರೆಂದಾಗಲಿ ಭಾವಿಸಬಾರದು.

ಒಂದು ಮನವಿ ಪತ್ರದ ಮೂಲಕ ಸಂಸ್ಥಾಪಕರನ್ನು ಜೀವನ ಪರ್ಯಂತ ನಿರ್ದೇಶಕರೆಂದು ಮತ್ತು ಯುವಕರನ್ನು ತರಬೇತಿ ಪಡೆಯುತ್ತಿರುವ ಸದಸ್ಯರೆಂದು ಘೋಷಿಸಿದ ನಂತರ ನನ್ನ ಸಂಬಂಧಗಳು ಹಾಗೂ ಪರಸ್ಪರ ಹಕ್ಕು ಬಾಧ್ಯತೆಗಳು ಅಧಿಕೃತವಾಗಿ ರೂಪುಗೊಂಡವು. ನಮಗೆ ತರಬೇತಿ ನೀಡುತ್ತಿದ್ದ ಅವರು ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪೂರ್ಣಾವಧಿ ಪಾತ್ರಧಾರಿಗಳ ವ್ಯವಸ್ಥೆಯನ್ನು ಯೋಜಿಸಿದ್ದಕ್ಕಾಗಿ ಗೋಪಾಲ ಕೃಷ್ಣ ಗೋಖಲೆಯವರಿಗೆ ಅದರ ಸಂಪೂರ್ಣ ಕೀರ್ತಿಯನ್ನು ಅರ್ಪಿಸುತ್ತಿದ್ದರು. ನಂತರ ಬಂದ ಸದಸ್ಯರಿಗೆ ಗೊಂದಲ ಉಂಟು ಮಾಡುತ್ತಿದ್ದ ವಿಚಾರವೆಂದರೆ ಸಂಸ್ಥೆಯ ಸ್ಥಾಪಕ ನಿರ್ದೇಶಕರು ಸ್ಥಾಪಿಸಿದ ವ್ಯವಸ್ಥೆಯ ಸದಸ್ಯರಾಗಿಲ್ಲದಿದ್ದದ್ದು. ತಾನು ಪ್ರತಿಜ್ಞೆಯನ್ನು ಸ್ವೀಕರಿಸದೆ, ತಾನು ಸಂಸ್ಥೆಯ ನಿಯಮಗಳನ್ನು ಪ್ರತಿಪಾದಿಸದೆ ಬೇರೆಯವರಿಗೆ ಪ್ರತಿಜ್ಞೆಯನ್ನು ಬೋಧಿಸುವುದು ಹೇಗೆ ಸಾಧ್ಯ? ಗೋಖಲೆಯವರು ಮೊದಲು ತಾವು ಪ್ರತಿಜ್ಞೆ ಸ್ವೀಕರಿಸಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರಲಿಲ್ಲವೇ? ಗೋಖಲೆಯವರು ಮಾಡಿದಂತೆ ಲಾಲಾಜಿಯವರು ಎಂದೂ ಸಹ ಪ್ರತಿಜ್ಞೆಗಳ ಬಗ್ಗೆ ಹಾಗೂ ಕಾರ್ಯಕ್ರಮಗಳ ಬಗ್ಗೆ ವಿಶೇಷ ಮಹತ್ವ ನೀಡಿರಲಿಲ್ಲ. ತಮ್ಮನ್ನು ತಾವೇ ಸಮರ್ಪಿಸಿಕೊಳ್ಳುವುದರ ಬಗ್ಗೆ ಅನೇಕ ವರ್ಷಗಳ ಹಿಂದೆಯೇ ಲಾಹೋರ್ ಆರ್ಯ ಸಮಾಜದ ವೇದಿಕೆಯಿಂದ ಅವರು ತಮ್ಮ ದೃಢ ನಿಲುವನ್ನೇ ಘೋಷಿಸಿದ್ದರು. ಇದರ ಪ್ರಕಾರ ತಮ್ಮ ಖಾಸಗಿ ಕೆಲಸಗಳಿಗಿಂತ ಸಾರ್ವಜನಿಕ ಕೆಲಸ ಮಹತ್ವದ್ದುಳ್ಳದ್ದೆಂದೂ ಪ್ರಾಮಾಣಿಕ ಪರಿಶ್ರಮದ ನಂತರ ಗಳಿಸಿದ ಹಣದಲ್ಲಿ ಕಾರ್ಯಗಳಿಗೆ ನೀಡುವುದಾಗಿ ಘೋಷಿಸಲಾಗಿತ್ತು. ಇದರಂತೆ ಒಂದು ವರ್ಷದ ಅವರ ದುಡಿಮೆ 60 ಸಾವಿರ ರೂಪಾಯಿಗಳನ್ನು ಮೀರಿದ್ದು ಅದರಲ್ಲಿ 50 ಸಾವಿರ ರೂಪಾಯಿಗಳನ್ನು ಅಧಿಕವಾಗಿ ಮಿಕ್ಕಿದ್ದು ಎಂದು ಸಾರ್ವಜನಿಕ ಕಾರ್ಯಕ್ರಮಗಳಿಗೆ ನೀಡಿದ್ದರು. ತಮ್ಮ ಕೊನೆಯವರೆಗೂ ಇದೇ ನಿಲುವನ್ನು ಅನುಸರಿಸಿಕೊಂಡು ಬಂದರು. ಈ ರೀತಿ ಘೋಷಣೆಯಾದ ಕೆಲವು ಕಾಲದ ನಂತರ ಅವರು ತಮ್ಮ ವೃತ್ತಿಯಿಂದ ಸಂಪೂರ್ಣ ನಿವೃತ್ತರಾಗ ಬೇಕಾಗಿ ಬಂದು ದುಡಿಮೆಯ ಹಣ ತೀರಾ ಕಡಿಮೆಯಾದರೂ ತಮ್ಮ ಜೀವನದ ಸಿದ್ಧಾಂತಗಳನ್ನು ಅವರೆಂದೂ ಮರೆಯಲಿಲ್ಲ. ತಮ್ಮ ಪೂರ್ಣ ಸಮಯವನ್ನು ಸಾರ್ವಜನಿಕ ಬದುಕಿಗೆ ಮೀಸಲಾಗಿಟ್ಟು ತಾವು ಬರೆದ ಪುಸ್ತಕಗಳ ಮೂಲಕ ದೊರೆಯುತ್ತಿದ್ದ ಗೌರವಧನ, ಪತ್ರಿಕೆಗಳ ಮೂಲಕ ಬಂದ ಬರಹಗಳ ಸಂಭಾವನೆ ಲಕ್ಷ್ಮೀ ಮತ್ತು ಪಂಜಾಬ್ ನ್ಯಾಷನಲ್‌ನ ನಿರ್ದೇಶಕರಾಗಿ ಪಡೆಯುತ್ತಿದ್ದ ಸಂಭಾವನೆ ಇವುಗಳಲ್ಲಿ ತಮ್ಮ ಸರಳವಾದ ಜೀವನಕ್ಕೆ ಅಗತ್ಯವಾದ ಹಣವನ್ನು ಉಪಯೋಗಿಸಿದ ನಂತರ ಮಿಕ್ಕ ಅಪಾರ ಹಣವನ್ನು ಸಾರ್ವಜನಿಕ ಕಾರ್ಯಗಳಿಗಾಗಿ ನೀಡುತ್ತಿದ್ದರು.

ಅವರ ವೈಯಕ್ತಿಕ ಜೀವನಕ್ಕಾಗಿ ತಾವು ಸಾರ್ವಜನಿಕ ಕಾರ್ಯಕ್ಕಾಗಿ ನೀಡಿದ್ದ ಹಣದಿಂದ ಕಿಂಚಿತ್ತೂ ನೆರವನ್ನು ಪಡೆಯಲಿಲ್ಲ. ಈ ಶತಮಾನದ ಆರಂಭದ ದಿನಗಳಲ್ಲಿ ತೆಗೆದುಕೊಂಡ ಕಠೋರ ನಿರ್ಧಾರ ಜೀವನ ಪರ್ಯಂತ ಅನುಷ್ಠಾನದಲ್ಲಿತ್ತು. ಯಾವುದೇ

ಪ್ರತಿಜ್ಞೆ ಇಲ್ಲದೆ ಇದು ಅವರ ಜೀವನದ ಸಿದ್ಧಾಂತವಾಗಿತ್ತು. ತಮ್ಮ ಈ ಸಿದ್ಧಾಂತವನ್ನು ಅನುಷ್ಠಾನಗೊಳಿಸುತ್ತಿದ್ದದ್ದು ತಾವೇ ಹಾಕಿಕೊಂಡ ನಿಯಮದ ಪ್ರಕಾರವೇ ಹೊರತು ಯಾವುದೇ ಹೊರಗಿನ ಶಕ್ತಿಯ ಆದೇಶದಿಂದಲ್ಲ.

ಇಂತಹ ವ್ಯಕ್ತಿಯಿಂದ ಎಂತಹ ಸಮರ್ಪಣೆ ಯಾರು ತಾನೇ ನಿರೀಕ್ಷಿಸಬಹುದು. ಗೋಪಾಲ ಕೃಷ್ಣ ಗೋಖಲೆಯವರು ಡೆಕ್ಕನ್ ಎಜುಕೇಷನ್ ಸೊಸೈಟಿಯಲ್ಲಿ ಓರ್ವ ನಿಷ್ಠಾವಂತ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದದ್ದು ಅದೇ ಭಾವನೆಯಿಂದ. ಆದರೆ ಭಿನ್ನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಪ್ರಾರಂಭಿಸಿದರು. ಲಾಲಾ ಲಜಪತ್‌ರಾಯ್ ಅವರು ಗೋಖಲೆಯವರಿಗಿಂತ ತುಸು ಭಿನ್ನವಾದ ದಾರಿಯನ್ನು ಅನುಸರಿಸುತ್ತಾ ಗೋಖಲೆಯವರ ಸಂಸ್ಥೆಯಂತೆಯೇ ಮತ್ತೊಂದು ಸಂಸ್ಥೆಯನ್ನು ಕಟ್ಟಿದರು. ಆ ಸಂಸ್ಥೆಗೆ ಸಾಕಷ್ಟು ಉದಾರವಾಗಿ ತಮ್ಮ ಶಕ್ತ್ಯಾನುಸಾರ ಕೊಡುಗೆ ನೀಡಿದ್ದರು. ತಮ್ಮ ವೈಯಕ್ತಿಕ ಜೀವನಕ್ಕೆ ಆ ಸಂಸ್ಥೆಯಿಂದ ಯಾವುದೇ ಸಹಾಯ ಪಡೆಯಲಿಲ್ಲ. ತನ್ನ ಸಾರ್ವಜನಿಕ ಕೆಲಸಗಳಿಗೆ ಬಾಧಕವಾಗದಂತೆ ಜೀವನ ನಿರ್ವಹಣೆ ಮಾಡುತ್ತಿದ್ದರು. ಲಕ್ಷ್ಮೀ ಅಥವಾ ಪಂಜಾಬ್ ನ್ಯಾಷನಲ್‌ನಿಂದ ದೊರೆಯುತ್ತಿದ್ದ ಸಂಭಾವನೆ ಅಥವಾ ಶಾಸನಸಭೆಯ ಸದಸ್ಯರಾಗಿದ್ದಾಗ ದೊರಕುತ್ತಿದ್ದ ಗೌರವಧನ ಅಥವಾ ಪತ್ರಿಕೆಗಳಿಗೆ ಬರೆಯುತ್ತಿದ್ದಾಗ ದೊರೆಯುತ್ತಿದ್ದ ಸಂಭಾವನೆ ಇವುಗಳು ಅವರ ಸರಳ ಜೀವನಕ್ಕೆ ಹೆಚ್ಚಿನ ಮೊತ್ತವೇ ಆಗುತ್ತಿದ್ದು ಮಿಗುತ್ತಿದ್ದ ಹಣವನ್ನು ತಮ್ಮ ಸಂಸ್ಥೆಗಾಗಲಿ ಅಥವಾ ಗುಲಾಬ್ ದೇವಿ ಟ್ರಸ್ಟ್ ಮುಂತಾದ ಯೋಜನೆಗಳಿಗಾಗಲಿ ನೀಡುತ್ತಿದ್ದರು.

ಪ್ರಾಪಂಚಿಕ ಆಸೆ, ಆಕಾಂಕ್ಷೆಗಳನ್ನು ಅವರು ಬಹು ಹಿಂದೆಯೇ ಬಿಟ್ಟು ಬಿಟ್ಟಿದ್ದರು. ಒಂದು ರೀತಿಯಿಂದ ಸನ್ಯಾಸತ್ವವನ್ನೇ ಸ್ವೀಕರಿಸಿದ್ದರೆಂದು ಹೇಳಬಹುದು. ಆದರೂ ವೈರಾಗ್ಯ ಎಂಬುದು ಅವರಿಗೆ ಹಿಡಿಸದ ವಿಚಾರವಾಗಿತ್ತು. ತನ್ನ ಯೌವನದಲ್ಲಿ ಗುರುವಾಗಿ ಸ್ವೀಕರಿಸಿದ್ದ ಆರ್ಯ ಸಮಾಜದ ಸಂಸ್ಥಾಪಕ ಶ್ರೀ ದಯಾನಂದ ಸರಸ್ವತಿಯವರು ಜಗತ್ತು ಒಂದು ಮಿಥ್ಯೆ ಎಂದು ಸಾರುತ್ತಿದ್ದದ್ದು ಅವರಿಗೆ ಹಿಡಿಸುತ್ತಿರಲಿಲ್ಲ. ನವ ವೇದಾಂತವಾದಿಗಳ ಬಗ್ಗೆ ತೀಕ್ಷ್ಣವಾದ ಟೀಕೆಗಳನ್ನು ಮಾಡಿ ಇಂತಹ ವೇದಾಂತಿಗಳಿಂದ ಜನಸಾಮಾನ್ಯರ ಮೇಲೆ ಕೆಟ್ಟ ಪರಿಣಾಮ ಬೀರುವುದೆಂದು ಘೋಷಿಸಿದ್ದರು. ಶಂಕರರ ನಂತರ ಭಾರತದಲ್ಲಿ ವೈರಾಗ್ಯ ಎಂಬುದಕ್ಕೆ ಇದೇ ರೀತಿಯ ಅರ್ಥ ಬಂದಿತ್ತು. ಭಾರತದ ಮುನ್ನಡೆಗಾಗಿ ವೈರಾಗ್ಯ ಎಂಬುದು ಒಂದು ಅಡ್ಡಗೋಡೆ ಎಂದು ಲಜಪತ್‌ರಾಯ್ ಭಾವಿಸಿದ್ದರು.

ಲಜಪತ್‌ರಾಯ್ ಅವರ ಇನ್ನೊಂದು ವೈಶಿಷ್ಟತೆ ಎಂದರೆ ಪವಿತ್ರತೆ, ಪಾವಿತ್ರ್ಯ, ಪುಣ್ಯ ಇವುಗಳ ಬಗ್ಗೆ ಅವರಿಗಿದ್ದ ಅಲರ್ಜಿ. ಎಲ್ಲಾ ರೀತಿಯ ಸ್ವಾರ್ಥ ಹಾಗೂ ಆಸೆಗಳಿಗೆ ಪವಿತ್ರ ವ್ಯಕ್ತಿಗಳು ತಿಲಾಂಜಲಿ ನೀಡಿದಂತೆ ಅವರು ನೀಡಿದ್ದರೂ ಸಹ ಈ ಪದಗಳ ಬಗ್ಗೆ ಅವರಿಗೆ ತಮ್ಮದ್ದೇ ಆದ ಭಯ, ಆತಂಕ ಇತ್ತು. ಅವರ ಪ್ರಕಾರ ಈ ಭಾವನೆಗಳು ಅವರು ಪ್ರತಿಪಾದಿಸುತ್ತಿದ್ದ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದ್ದು ಜನಸಾಮಾನ್ಯರಿಗಿಂತ ಭಿನ್ನವಾದ ಒಂದು ವರ್ಗವನ್ನು ಸೃಷ್ಟಿಸಿ ಆ ವರ್ಗಕ್ಕೆ 'ಅಪವಿತ್ರ' ಜನ ಸಮೂಹ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದದ್ದು ಅವರಿಗೆ ಹಿಡಿಸದ ವಿಚಾರವಾಗಿತ್ತು. ಜೊತೆಗೆ ಬೇರೊಂದು

ಲೋಕದಲ್ಲಿ ವಿಶ್ವಾಸವಿಟ್ಟು ಈ ಲೋಕದ ಜೀವನವನ್ನು ಉದಾಸೀನದಿಂದ ನೋಡುವ ಪ್ರವೃತ್ತಿಯನ್ನು ಬೆಳೆಸುವ ವೈರಾಗ್ಯ ಈ ಪವಿತ್ರತೆಯ ಜೊತೆಗೆ ಗುರುತಿಸಿಕೊಂಡಿತ್ತು. ಇನ್ನೊಂದು ಲೋಕದ ಬಗ್ಗೆ ಘೋರರವರನ್ನು ಕೇಳಿದಾಗ ಅವರು ನೀಡಿದ ಉತ್ತರ 'ಒಂದು ಬಾರಿಗೆ ಒಂದೇ ಪ್ರಪಂಚ.' ಯಾವುದೇ ದೇವಾಲಯಕ್ಕಾಗಲಿ, ಪಂಥಕ್ಕಾಗಲಿ ತನ್ನ ಶ್ರದ್ಧೆಯನ್ನು ವ್ಯಕ್ತಪಡಿಸದ ಅವರು ದೇವರನ್ನು ಪ್ರಸ್ತಾಪಿಸುತ್ತಿದ್ದದ್ದು ಬಹಳ ಅಪರೂಪವಾಗಿತ್ತು. ಅವರೆಂದೂ ಪ್ರಾರ್ಥನೆಯನ್ನು ಮಾಡುತ್ತಲೇ ಇರಲಿಲ್ಲ. ಆದರೆ ಸುತ್ತಮುತ್ತಲಿನ ವ್ಯಕ್ತಿಗಳು ತಮ್ಮನ್ನೇ ಅನುಸರಿಸಬೇಕೆಂದು ಅಪೇಕ್ಷಿಸುತ್ತಿರಲಿಲ್ಲ. ಅವರೊಂದು ಅಯಸ್ಕಾಂತವಾಗಿದ್ದರು. ಸೂಜಿಗಳು ತಾವಾಗಿಯೇ ಬಂದು ಸೇರಿಕೊಳ್ಳಬೇಕೆಂದು ಬಯಸುತ್ತಿರಲಿಲ್ಲ. ಕಾಲ ಕ್ರಮೇಣ ಆರ್ಯ ಸಮಾಜದ ಸಿದ್ಧಾಂತವೂ ಅವರ ಜೀವನದಿಂದ ಮಾಸುತ್ತಾ ಬಂದಿತು. ಆದರೆ ಅವರ ಜೀವನದಲ್ಲಿನ ಮೌಲ್ಯಗಳು ಹಾಗೂ ಸಂವೇದನಶೀಲತೆಗೆ ಆರ್ಯ ಸಮಾಜ ಸಾಕಷ್ಟು ಕೊಡುಗೆ ನೀಡಿತ್ತು.

ಅವರ ಜನ್ಮದಿನದ ಬಗ್ಗೆ ನಮಗೆ ಪರಿಜ್ಞಾನವೇ ಇರಲಿಲ್ಲ. ಅವರ ನಿಧನದ ನಂತರ ಅವರಿಗೆ ಶ್ರದ್ಧಾಂಜಲಿ ಕೋರಬಹುದಾದ ಯಾವುದೇ ಅವಕಾಶವೂ ನಮ್ಮ ಮನಸ್ಸಿಗೆ ತೋಚಲಿಲ್ಲ. ಅವರು ಕೇವಲ ಮನುಷ್ಯರ, ಮನುಷ್ಯ ಜೀವನದ ಸಂಗತಿಗಳನ್ನು ಮಾತ್ರ ಇಷ್ಟಪಡುತ್ತಿದ್ದರು. ಅವರ ಮೂಡಿ ಸ್ವಭಾವ ಹಾಗೂ ಸಣ್ಣ ಪುಟ್ಟ ಸಂಗತಿಗಳ ಬಗ್ಗೆಯೂ ಅಸಹನೆ ತೋರುತ್ತಿದ್ದ ಗುಣಗಳೇ ಅವರ ವಿಶೇಷ ಆಕರ್ಷಣೆಯಾಗಿತ್ತು. ಮುಂಗೋಪ ಅಥವಾ ಕಠಿಣ ಪದಗಳ ಬಳಕೆಯ ನಂತರ ಪರಿಹಾರದ ರೂಪವಾಗಿ ಅವರ ಉದಾರ ಕೊಡುಗೆ ಸಹಜವಾಗಿ ಇರುತ್ತಿತ್ತು.

iii

ನನ್ನ ವಿವರಣೆಯಲ್ಲಿ ನಾನು ನಮ್ಮ ಮುಖ್ಯಸ್ಥರ ಕಾರ್ಯ, ಅವರ ನಂಬಿಕೆ, ಅಭಿಪ್ರಾಯ, ಅವರ ವರ್ತನೆಗಳ ಬಗ್ಗೆ ಸಹಜವಾಗಿ ನನಗಿದ್ದ ಅನುಭವದ ಹಿನ್ನಲೆಯಲ್ಲಿ ತಿಳಿಸಿದ್ದೇನೆ. ಅವರೊಂದಿಗೆ ನನ್ನ ಸಂಪರ್ಕ ಸರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿಯಿಂದ ಆರಂಭವಾಗಿ ನಂತರದ ದಿನಗಳಲ್ಲಿ ಯುವಕರ ಸಣ್ಣ ತಂಡವೊಂದು ಲಜಪತ್‌ರಾಯ್ ಅವರ ನಂಬಿಕಸ್ಥ ಬಂಟರೆಂದು ಗುರುತಿಸಲ್ಪಟ್ಟು ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುವವರೆಗೆ ಪಕ್ವಗೊಂಡಿತು. ಈ ತಂಡವೇ ಲಜಪತ್‌ರಾಯ್ ಅವರ ಅತ್ಯಂತ ಆಪ್ತ ವಲಯವೆಂದು ಪರಿಗಣಿಸಲ್ಪಟ್ಟಿತ್ತು. ಆದರೆ ಅವರೆಂದೂ ಕೇಂದ್ರ ಸ್ಥಾನದಲ್ಲಿ ದೀರ್ಘ ಕಾಲದವರೆಗೆ ವಾಸ್ತವ್ಯ ಹೂಡುತ್ತಿರಲಿಲ್ಲ. ಅವರೊಂದಿಗೆ ದೀರ್ಘ ಕಾಲದ ಸಹವಾಸ ಲಾಭ ಪಡೆಯಬೇಕೆಂದು ಬಯಸುತ್ತಿದ್ದವರು ಅವರೊಡನೆ ಪ್ರವಾಸ ಕೈಗೊಳ್ಳಬೇಕಾಗಿತ್ತು. ಅಥವಾ ಅವರು ಶಾಸನಸಭೆಗೆ ಚುನಾಯಿತರಾದ ನಂತರ ಅಧಿವೇಶನದ ಸಮಯದಲ್ಲಿ ಅವರೊಂದಿಗೆ ಇರಬಹುದಿತ್ತು. 1925ರಲ್ಲಿ ಪ್ರಾರಂಭವಾದ ವಾರಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ನಾನು ಸಹಜವಾಗಿ ಲಾಹೋರಿನಲ್ಲಿಯೇ ಕೇಂದ್ರೀಕೃತನಾಗಿರಬೇಕಾಗಿತ್ತು.

ಇದಕ್ಕೆ ಮುನ್ನ ನನಗೆ ಒಂದು ಸದಾವಕಾಶ ದೊರಕಿತು. ಲಾಲಾಜಿ ಅವರು ಸೆರೆಮನೆಯಿಂದ ಬಿಡುಗಡೆಯಾದ ನಂತರ ಅವರ ಆರೋಗ್ಯದ ದೃಷ್ಟಿಯಿಂದ ವೈದ್ಯರು ಅವರು ಸಮುದ್ರ ದಂಡೆಯ ಮೇಲೆ ಸ್ವಲ್ಪ ಸಮಯ ವಾಸಿಸಬೇಕೆಂದು ಸೂಚಿಸಿದ್ದರು. ಡಿಸೆಂಬರ್ 1923ರಲ್ಲಿ ನಾನು ಲಾಲಾಜಿ ಅವರ ಜೊತೆ ಕರಾಚಿಯಲ್ಲಿ ಇದ್ದೆ. 1924ರ ಮೊದಲ ಕೆಲವು ತಿಂಗಳುಗಳಲ್ಲಿ ಅವರೊಂದಿಗೆ ಪ್ರವಾಸ ಸಹ ಮಾಡಿದೆ. 'Unhappy India' (ಅಸಂತುಷ್ಟ ಭಾರತ)ದ ಹಸ್ತಪ್ರತಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸುವುದಾಗಿತ್ತು. ಈ ಎರಡು ಮೂರು ಸಂದರ್ಭಗಳನ್ನು ಹೊರತುಪಡಿಸಿದರೆ ನನಗೆ ಅವರೊಂದಿಗೆ ಸಂಪರ್ಕ ಲಭ್ಯವಾಗಿದ್ದು ಲಾಲಾಜಿ ಅವರು ಕೇಂದ್ರ ಸ್ಥಾನದಲ್ಲಿ ಅಲ್ಪಾವಧಿ ವಾಸ್ತವ್ಯ ಹೂಡುತ್ತಿದ್ದಾಗ ಅಥವಾ ಶಾಸನಸಭೆಯ ಅಧಿವೇಶನದ ಸಂದರ್ಭದಲ್ಲಿ ದೆಹಲಿಗೆ ಅಲ್ಪಾವಧಿ ಕಾಲದ ಭೇಟಿ ನೀಡಿದಾಗ. ದಿ ಪೀಪಲ್ ವಾರಪತ್ರಿಕೆ ಲಾಲಾಜಿ ಒಡನಾಟದಲ್ಲಿ ನಾನು ಇರುವುದಕ್ಕೆ ಅವಕಾಶ ನಿರಾಕರಿಸಿದರೂ ಅವರೊಂದಿಗೆ ಸತತ ಹಾಗೂ ಉಪಯುಕ್ತ ಸಂಪರ್ಕದ ಲಾಭವನ್ನು ನನಗೆ ದಯಪಾಲಿಸಿತು. ಅವರೆಲ್ಲೇ ಹೋದರೂ ಪತ್ರಿಕೆಗಾಗಿ ನಿಯಮಿತವಾಗಿ ಬರೆಯುತ್ತಿದ್ದ ಕಾರಣ ಪ್ರತಿ ವಾರ ಬರವಣಿಗೆ ಮೂಲಕ ಹಾಗೂ ಆಗಾಗ ಭೇಟಿಯಾದಾಗ ಪ್ರಚಲಿತ ವಿದ್ಯಮಾನಗಳ ಬಗ್ಗೆ ಚರ್ಚಿಸುವುದರ ಮೂಲಕ ನಿರಂತರ ಸಂಪರ್ಕವಿತ್ತು. ಈ ನನ್ನ ನಿರೂಪಣೆಯಲ್ಲಿ ತಿಳಿಸಿರುವುದರೊಂದಿಗೆ ಕೆಲವೊಂದು ಮೇಲ್ಕಂಡ ವಿಶೇಷ ಪ್ರಸಂಗಗಳಿಗೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ತಿಳಿಸಲು ಇಚ್ಛಿಸುತ್ತೇನೆ.

1923ರ ಕೊನೆಯ ಭಾಗದಲ್ಲಿ ಪ್ರಾರಂಭವಾದ ಕೆಲವು 'ವಿಶೇಷ' ಸಂದರ್ಭಗಳು ಮೂರು ತಿಂಗಳಷ್ಟು ದೀರ್ಘ ಅವಧಿಯಾಗಿದ್ದರಿಂದ ಮತ್ತು ನಾನು ರೂಪುಗೊಂಡ ಅವಧಿಯಲ್ಲಿ ನನ್ನ ತಿಳುವಳಿಕೆಯ ದೃಷ್ಟಿಯಿಂದ ಮಹತ್ವದ್ದಾಗಿದ್ದರಿಂದ ಆ ಅವಧಿ ಪ್ರಮುಖ. ಈ ಸಂಪರ್ಕದ ಕಾರಣ ಲಾಲಾಜಿ ಅವರ ಚಿಂತನೆಗೆ ಕಾರಣವಾದ ಹಿನ್ನಲೆ ಮತ್ತು ಅವರ ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಈ ಅವಧಿಯಲ್ಲಿ ಅವಲೋಕನ ಮಾಡಲು ಹಾಗೂ ಕಾರ್ಯ ಯೋಜನೆಯನ್ನು ಪುನರ್ ವಿಮರ್ಶೆ ಮಾಡಲು ಉಪಯೋಗಿಸಿಕೊಳ್ಳಲಾಯಿತು. ಮಹಾತ್ಮಾಜಿ ಅವರ ನೇತೃತ್ವದಲ್ಲಿ ಸಾಧಿಸಲಾದ ಕೋಮು ಸೌಹಾರ್ದತೆ ಅಭದ್ರ ಹಾಗೂ ಅಸ್ಥಿರವೆಂದು ರುಜುವಾತಾಯಿತು. ಇದಕ್ಕೆ ಮುನ್ನ ಲಾಲಾಜಿ ಅವರು ಕೋಮುವಾದಿ ಸಂಘಟನೆಗಳ ವಿರುದ್ಧ ವಿಶೇಷವಾಗಿ ಹಿಂದೂ ಸಂಘಟನೆಗಳ ವಿರುದ್ಧ ಕಠೋರ ಭಾಷೆಯನ್ನು ಉಪಯೋಗಿಸಿದ್ದರೂ ಸಹ ಈಗ ಅವರಿಗೆ ಈ ಬಗ್ಗೆ ಮರು ಚಿಂತನೆ ಅಗತ್ಯವೆಂದು ಅನಿಸಿತು. ಅಸ್ಪೃಶ್ಯತೆಯಂತಹ ಹಿಂದೂಗಳ ಸಮಸ್ಯೆಯನ್ನು ಪರಿಹರಿಸಲು ಹಾಗೂ ಕೆಲವು ದುರಾದೃಷ್ಟ ಪ್ರಸಂಗಗಳನ್ನು ಎದುರಿಸಲು ಹಿಂದೂ ವೇದಿಕೆಯ ಅಗತ್ಯತೆಯ ಮನದಟ್ಟಾಯಿತು. ಸಿಂಧ್, ಮುಂಬಯಿ, ಮಹಾರಾಷ್ಟ್ರ, ಬಂಗಾಳ, ಉತ್ತರ ಪ್ರಾಂತ್ಯದಲ್ಲಿದ್ದ ರಾಷ್ಟ್ರೀಯ ನಾಯಕರೊಡನೆ ಚರ್ಚೆ ಹಾಗೂ ವಿಚಾರ ವಿನಿಮಯದ ನಂತರ ಹಿಂದೂ ಮಹಾ ಸಭಾದ ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡುವಂತಾಯಿತು. ಆ ಸಂಸ್ಥೆಯು ನಡೆದು ಬಂದ ದಾರಿಯಲ್ಲಿ ಈ ಅವಧಿ ಅತ್ಯಂತ ಮಹತ್ವಪೂರ್ಣವಾಗಿದ್ದು, ಈ ಅವಧಿಯಲ್ಲಿ ರಾಷ್ಟ್ರೀಯ ಹಿತಾಸಕ್ತಿಗಾಗಲಿ ಅಥವಾ ರಾಜಕೀಯ ಕಾರ್ಯಕ್ರಮಗಳಿಗಾಗಲಿ ಯಾವುದೇ ರೀತಿಯ ಧಕ್ಕೆಯಾಗದಂತೆ ಹಿಂದೂ ಸಮುದಾಯಕ್ಕೆ

ಸಹಾಯವಾಗುವಂತಹ ರೀತಿಯಲ್ಲಿ ಮಾಳವೀಯರು ಹಾಗೂ ಲಜಪತ್‌ರಾಯ್ ಅವರು ನೀತಿ, ಸಿದ್ಧಾಂತ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದರು.

ಲಾಲಾಜಿ ಅವರೊಂದಿಗಿನ ನನ್ನ ಎಂಟು ವರ್ಷದ ಒಡನಾಟದಲ್ಲಿ ಮುಂಬಯಿ ಪ್ರವಾಸದ ನೆನಪು ವಿಶಿಷ್ಟವಾದುದು. ಸಾವರ್ಕರ್ ಅವರ ಮನೆಯಿಂದ ಹೊರಬಿದ್ದು ನಮ್ಮ ವಾಸ್ತವ್ಯದ ಜಾಗಕ್ಕೆ ಹಿಂತಿರುಗಲು ಕಾರಿನಲ್ಲಿ ಕುಳಿತ ಕ್ಷಣದಿಂದ ಲಾಲಾಜಿ ಅವರು ಗಾಢ ಚಿಂತನೆಯಲ್ಲಿ ತೊಡಗಿ ಏಕಾಂತದಲ್ಲಿ ಸ್ವಗತ ಎಂಬಂತೆ ಮಾತನಾಡತೊಡಗಿದರು. ಅವರು ನನ್ನೊಡನೆ ಮಾತನಾಡುತ್ತಿರಲಿಲ್ಲ - ಅಲ್ಲಿ ಬೇರೆ ಯಾರೂ ಇರಲಿಲ್ಲ. ಅವರೊಡನೆ ಇನ್ಯಾರೋ ಇದ್ದಾರೆಂಬ ಅಂಶವನ್ನೇ ಮರೆತು ನಾನು ಕೇಳದಿದ್ದ ಅನೇಕ ವಿಚಾರಗಳನ್ನು ವ್ಯಕ್ತಪಡಿಸುತ್ತಾ ಹೋದರು. ಆ ಏಕಾಂತದ ಮಾತುಗಳು ಈ ರೀತಿ ಇದ್ದವು. ''ಇದನ್ನು ನಾವು ಪ್ರಯತ್ನಿಸಿದೆವು... ಇದನ್ನು ಸಹ... ಇದನ್ನು ಸಹ... ಯಾವುದೇ ಪ್ರಯತ್ನ ಮಾಡುವುದರಲ್ಲಿ ವಂಚನೆ ಮಾಡಲಿಲ್ಲ... ನಾವು ಈ ಕೆಲಸ ಮಾಡುವುದರಲ್ಲಿ ತಪ್ಪಿಸಿಕೊಳ್ಳಲಿಲ್ಲ... ಆದರೂ... ಇದ್ಯಾವುದು ಯಶಸ್ವಿಯಾಗುವುದಿಲ್ಲವೇ?'' ಅವರ ಅಂದಿನ ಮಾತುಗಳಲ್ಲಿ ಆಳವಾದ ನಿರಾಶೆ ಎದ್ದು ಕಾಣುತ್ತಿತ್ತು. ನೇಪಾಳದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಅವರಿಗೆ ನೇರ ಸಂಬಂಧ ಇಲ್ಲದ ಅನೇಕ ವಿಚಾರಗಳ ಬಗ್ಗೆ ಅವರ ವಾಗ್ಝರಿ ಹರಿದು ಬರುತ್ತಿತ್ತು. ನಾನೆಂದೂ ಕಾಣದಿದ್ದ ಅಥವಾ ಆ ಸಂದರ್ಭದ ನಂತರ ಎಂದೂ ಗಮನಿಸದಿದ್ದ ಒಂದು ಮನಸ್ಥಿತಿಯನ್ನು ಸಾವರ್ಕರ್ ಅವರೊಂದಿಗಿನ ಭೇಟಿ ಸೃಷ್ಟಿಸಿತ್ತು. ನಾನು ನಿಶ್ಶಬ್ದವಾಗಿ, ಮೂಕನಾಗಿ ಕುಳಿತೆ. ನಂತರವೂ ಸಹ ಆ ಏಕಾಂತ ವಿಚಾರಗಳ ಬಗ್ಗೆ ಕುತೂಹಲದ ಪ್ರಶ್ನೆಗಳನ್ನು ಕೇಳುವ ಧೈರ್ಯ ತೋರಲಿಲ್ಲ.

ಆ ಏಕಾಂತದ ಮಾತುಗಳ ಪ್ರವಾಹ ನನಗೆ ಗೋಚರವಿಲ್ಲದ ಒಂದು ವ್ಯಕ್ತಿತ್ವವನ್ನು ಅನಾವರಣಗೊಳಿಸಿತು. ಹಾಗೂ ನಮ್ಮಿಂದ ಮರೆಮಾಚಲ್ಪಟ್ಟ ಅನೇಕ ಸಂಗತಿಗಳು ಇರಬಹುದೆಂಬ ವಿಚಾರಗಳನ್ನು ನನ್ನ ಅರಿವಿಗೆ ತಂದಿತು. ನಂತರ ಅವರ ಆತ್ಮಕಥೆಯಲ್ಲಿ ಕೆಲವು ಖೇದದಿಂದ ಕೂಡಿದ ಆದರೆ ವಿಚಾರಪೂರ್ಣ ಸಂಗತಿಗಳು ನನಗೆ ತಿಳಿದು ಬಂದವು. ಉದಾಹರಣೆಗೆ- ಅವರು ಕಲ್ಕತ್ತಾದಲ್ಲಿ ಸಹೋದರಿ ನಿವೇದಿತಾ ಅವರೊಂದಿಗೆ ಸಂಭಾಷಣೆ ನಡೆಸಿದ್ದು. ಅಥವಾ ಎಲ್ಲಾ ಅತಿಥಿಗಳು ಹೋದ ನಂತರ ಯುವರಾಜ ಗಾಯಕವಾಡರೊಂದಿಗೆ ಮಾತನಾಡಿದ್ದು. ಅಥವಾ ಅವರು ಸ್ಪ್ಯಾನಿಷ್ ಭಾಷೆಯ ತರಗತಿಗೆ ಸೇರಿ ನಂತರ ದಕ್ಷಿಣ ಅಮೆರಿಕದಲ್ಲಿ ಒಂದು ವಸಾಹತು ಪ್ರಾರಂಭ ಮಾಡುವಂತೆ ಗಾದ್ರೇಜ್ ಸ್ನೇಹಿತರಲ್ಲಿ ಆಗ್ರಹ ಮಾಡಿದ್ದು, ಈ ವಸಾಹತುವಿನಲ್ಲಿ ಭಾರತದ ದೇಶಭಕ್ತ ಯೋಧರು ಆಶ್ರಯ ಪಡೆಯುವಂತಾಗುವಂತೆ ಸೂಚಿಸಿದ್ದು ಇತ್ಯಾದಿ... ಪ್ರಾಯಶಃ ಅವರು ತಮ್ಮನ್ನು ತಾವೇ ಆ ಪರಿಸ್ಥಿತಿಯಲ್ಲಿ ಇರಬಹುದಾದ್ದನ್ನು ತಳ್ಳಿ ಹಾಕಿರಲಿಲ್ಲ.

ಲಾಲಾಜಿ ಅವರು ಬ್ರಿಟಿಷ್ ಸರ್ಕಾರದ ಪರವಾಗಿ ಪರ್ಷಿಯಾಗೆ ಹೋಗಲು ಒಪ್ಪುವರೇ ಎಂದು ವೆಡ್‌ವುಡ್ ಅವರು ಪತ್ರದ ಮೂಲಕ ಕೇಳಿದ ಅಂಶ ನನ್ನಲ್ಲಿ ಅಚ್ಚರಿ ಉಂಟು ಮಾಡಿತು. ಆ ಪ್ರಮೇಯವೇ ಬರಲಿಲ್ಲ ಎಂಬುದು ಬೇರೆ ಮಾತು. ವೆಡ್‌ವುಡ್ ಅವರು ಉದ್ಭವಿಸಬಹುದಾದ ವಿಪತ್ತುಗಳನ್ನು ಯೋಚಿಸಿರಲಿಲ್ಲ. ಲಾಲಾಜಿ

ಅವರು ಈ ಆಹ್ವಾನಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ ತೋರಿಸಿದ್ದು ನಾನೆಂದೂ ಗಮನಿಸಲಿಲ್ಲ. ಆದರೆ ಪರ್ಷಿಯದಲ್ಲಿ ಜವಾಬ್ದಾರಿ ತೆಗೆದು ಕೊಳ್ಳುವ ಆಗಾಖಾನ್ ಅವರ ಪ್ರಯತ್ನ ಕುರಿತು ಲಾಲಾಜಿ ಅವರು ಮಾತನಾಡಿದ್ದನ್ನು ಕೇಳಿದ್ದೆ. ಪ್ರಾಯಶಃ ಲಾಲಾಜಿ ಅವರಿಗೆ ಇದರ ಬಗ್ಗೆ ಮಾಹಿತಿ ಇತ್ತೆಂದು ಕಾಣುತ್ತದೆ. ಲಾಹೋರಿನಿಂದ ಪ್ರಕಟವಾಗುತ್ತಿದ್ದ ಟ್ರಿಬ್ಯೂನ್ ಪತ್ರಿಕೆಯ ಸಂಪಾದಕ ಕಾಲಿನಾಥ್ ರೇ 'ಜಾನ್ ಮೇನಾರ್ಡ್ ಲಾಲಾಜಿ ಅವರು ಸಚಿವ ಪದವಿಯನ್ನು ಒಪ್ಪಿಕೊಳ್ಳುವರೇ' ಎಂದು ಕೇಳಿದ್ದನ್ನು ನನಗೆ ತಿಳಿಸಿದಾಗ ಆಶ್ಚರ್ಯ ಉಂಟಾಯಿತು. ಪಂಜಾಬಿನ ನೋವು ಹಾಗೂ ಅವಮಾನಕ್ಕೆ ಕಾರಣಕರ್ತ ಅಧಿಕಾರಿಗಳ ಬಗ್ಗೆ ತೀವ್ರ ಅಸಮಾಧಾನ ತೋರಿ ಅಸಹಕಾರದ ಕುರುಹಾಗಿ ಶಾಸನಸಭೆಗಳನ್ನು ಬಹಿಷ್ಕರಿಸುವ ಕಾರ್ಯಕ್ರಮವನ್ನು ಲಾಲಾಜಿ ಅವರೇ ಮೊದಲು ಸೂಚಿಸಿದ್ದು. ಲಾಲಾಜಿ ಅವರು ಖಂಡಿತವಾಗಿಯೂ ಈ ರೀತಿಯ ಆಹ್ವಾನಗಳನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ನಾವು ಅವರ ಸಂಪರ್ಕದಲ್ಲಿ ಬಂದ ನಂತರವೂ ಇವುಗಳ ಬಗ್ಗೆ ಚಕಾರ ಕೂಡಾ ಮಾತನಾಡದಿದ್ದದ್ದು ಇಲ್ಲಿ ಗಮನಿಸಬೇಕಾದ ಅಂಶ.

iv

ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ಲಾಲಾಜಿ ಅವರೊಂದಿಗೆ ಕಾಲ ಕಳೆಯುವ ಸದಾವಕಾಶ ನೀಡಿತು. ಮೇಲೆ ತಿಳಿಸಿದಂತೆ ಹೊಸ ಪಥವನ್ನು ಹಿಡಿದು ಕಾರ್ಯಕ್ರಮ ರೂಪಿಸುವ ಯೋಜನೆ ಮುಂದುವರೆದಿತ್ತು. ಆ ಸಂದರ್ಭದಲ್ಲಿ ಶ್ರೀನಿವಾಸ ಅಯ್ಯಂಗಾರ್ ಅವರೊಡನೆ ಲಾಲಾಜಿ ಅವರು ಮಾತನಾಡುತ್ತಿದ್ದ ವಿಚಾರ ಹಾಗೂ ಅವರ ಉತ್ತರ ನನ್ನ ನೆನಪಿನಲ್ಲಿ ಮಾಸದೇ ಉಳಿದಿದೆ. ''ಹೌದು ನಾನು ನಿಮ್ಮ ವಿಚಾರಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಸಾರ್ವಜನಿಕವಾಗಿ ಒಪ್ಪುವುದಕ್ಕೆ ಆಗುವುದಿಲ್ಲ. ಒಂದು ವರ್ಷ ನನ್ನ ಪಾಡಿಗೆ ನನ್ನನ್ನು ಬಿಡಿ. ನಂತರ ನಾನು ನಿಮ್ಮೊಡನೆ ಇರುತ್ತೇನೆ.''

ಈ ರೀತಿ ಖಾಸಗಿಯಾಗಿ ಒಪ್ಪಿಕೊಳ್ಳುವುದು ಶ್ರೀನಿವಾಸ ಅಯ್ಯಂಗಾರ್ ಅವರ ಗುಣಕ್ಕೆ ವ್ಯತಿರಿಕ್ತವಾದುದು. ಬಹುಶಃ ಅವರ ಮನಸ್ಸಿನಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಬಹುದೆಂಬ ನಿರೀಕ್ಷೆ ಕಾರಣವಾಗಿತ್ತು.

ಲಾಲಾಜಿಯವರ ಈ ರೀತಿಯ ಧೋರಣೆ ಇಟ್ಟುಕೊಂಡ ವ್ಯಕ್ತಿಗಳೊಂದಿಗೆ ಎಂದಿಗೂ ವಾದಕ್ಕೆ ಇಳಿಯುತ್ತಿರಲಿಲ್ಲ. ಆದರೆ ರಾಜಕೀಯದಲ್ಲಿ ಅವರ ಅಸಮಾಧಾನ ಇನ್ನಷ್ಟು ಹೆಚ್ಚುತ್ತಿತ್ತು.

ಹಿನ್ನೋಟದಲ್ಲಿ ಬೆಳಗಾವಿಯ ಘಟನೆಗಳು ಪಂಡಿತ ಮೋತಿಲಾಲ್ ಹಾಗೂ ಲಾಲಾಜಿಯವರ ಮಧ್ಯೆ ಇದ್ದ ಆಚಾರ ಹಾಗೂ ವಿಚಾರಗಳ ವ್ಯತ್ಯಾಸವನ್ನು ಸ್ಪಷ್ಟಗೊಳಿಸುತ್ತವೆ. ಮಹಾತ್ಮ ಅವರನ್ನು ಸಂಪ್ರೀತಗೊಳಿಸಲು ಚರಕ ಅಭಿಯಾನವನ್ನು ಕಾಂಗ್ರೆಸ್ ಅಧಿವೇಶನ ಅನುಮೋದಿಸಿತು. ಇದನ್ನು ಲಾಲಾಜಿ ಅವರು ವಿರೋಧಿಸಿದ್ದಷ್ಟೇ ಅಲ್ಲ ಇದರ ಬಗ್ಗೆ ವ್ಯಂಗ್ಯವಾಡಿದರು. ಅವರಿಗೆ ಈ ನಿರ್ಣಯ ಭದ್ರವಾದ ನೆಲೆಗಟ್ಟಿನಿಂದ

ಕೂಡಿಲ್ಲದಿರುವುದರಿಂದ ಜೊತೆಗೆ ಸ್ವರಾಜ್ಯದ ಘೋಷಣೆಯಲ್ಲಿ ಪ್ರಾಮಾಣಿಕತೆ ಇಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರ ವಿರೋಧ ರಾಜಕೀಯ ಕಾರಣಗಳಿಗಿಂತ ಹೆಚ್ಚಾಗಿ ನೈತಿಕ ದೃಷ್ಟಿಯಿಂದ ಆಗಿತ್ತು. ಅಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳದ ಅವರಲ್ಲಿದ್ದ ನೈತಿಕ ಸಂವೇದನಾಶೀಲತೆ ಅವರನ್ನು ಏಕಾಂಗಿಯನ್ನಾಗಿ ಮಾಡಿತು. ಕೆಲವೇ ತಿಂಗಳುಗಳಲ್ಲಿ ಸ್ವತಃ ಗಾಂಧೀಜಿಯವರೇ ಬೆಳಗಾವಿ ಸಾಧನೆಯ ಟೊಳ್ಳುತನವನ್ನು ಅರಿತು ಆ ಅಭಿಯಾನಕ್ಕೆ ಇತಿಶ್ರೀ ಹಾಡಿದರು.

V

ಬೆಳಗಾವಿಯಲ್ಲಿ ಅವರಲ್ಲಿ ಕಂಡ 'ಏಕಾಂಗಿತನ' ಮುಂಬರುವ ತಿಂಗಳುಗಳಲ್ಲಿ ಇನ್ನಷ್ಟು ಗಾಢವಾಯಿತು. ಲಾಹೋರಿನ ಕಾಲುವೆಯ ಪಕ್ಕದಲ್ಲಿ ನಡೆದಾಡುತ್ತಿದ್ದಾಗ ಅವರಷ್ಟಕ್ಕೆ ಅವರು ಠಾಗೂರರ 'ಏಕ್ಲಾ ಚಲೋ' (ಏಕಾಂಗಿಯಾಗಿ ನಡಿ) ಗೀತೆಯನ್ನು ಗುಣಗುಣಿಸುತ್ತಿದ್ದನ್ನು ನಾನು ಕೇಳಿಸಿಕೊಂಡಿದ್ದೆ. ಒಬ್ಬರೇ ನಡೆಯುವುದರ ಬಗೆಗಿನ ಅವರ ನಂಬಿಕೆ ಈ ಪುಸ್ತಕದಲ್ಲಿ ಕಂಡು ಬರುವ 'ಕೋಮುವಾದಿ' ಅಧ್ಯಾಯದಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಕಾಬೂಲಿನಲ್ಲಿದ್ದ ಒಂದು ಶಾಖೆಗೆ ಅಪಾಯಕರ ಸ್ವಾಯತ್ತತೆ ಕೊಡುವ ವಿಷಯದಲ್ಲಿ ಉನ್ನತ ಮಟ್ಟದ ನಾಯಕರ ಉಡಾಫೆತನದಿಂದ ಅವರೆಷ್ಟು ನೊಂದಿದ್ದರು ಹಾಗೂ ಇದರ ಬಗ್ಗೆ ನಾಯಕರ ಗಮನ ಸೆಳೆಯಲು ಅವರು ಪ್ರಾಮಾಣಿಕವಾಗಿ ಪ್ರಯತ್ನಪಟ್ಟಾಗ ನಾಯಕರು ಕಿವಿಗೊಡದೆ ಸಿನಿಕತನ ತೋರಿದ್ದರಿಂದ ಇನ್ನಷ್ಟು ದುಃಖಿತರಾಗಿದ್ದರು. ಲಾಲಾ ಲಜಪತ್‌ರಾಯ್ ಜನ್ಮಶತಾಬ್ಧಿ ಸಂದರ್ಭದಲ್ಲಿ ಹಿಂದೂಸ್ತಾನ ಟೈಮ್ಸ್ ದಿನ ಪತ್ರಿಕೆಗೆ ನಾನು ಬರೆದ ಲೇಖನದಲ್ಲಿ ಲಾಲಾ ಲಜಪತ್‌ರಾಯ್ ಅನೇಕ ಸಲ ತಾವು ಹೇಗೆ ಮುಂಬರುವ 'ವಿಭಜನೆ' ಬೇಡಿಕೆಯನ್ನು ಊಹೆ ಮಾಡಿ ಅದಕ್ಕಾಗಿ ಈ ಕ್ಷುಲ್ಲಕ ಕೋಮುವಾದಿಗಳಲ್ಲಿ ಹೋಗಿ ಸೇರಿಕೊಳ್ಳ ಬೇಕಾಯಿತು ಎಂದು ತಿಳಿಸುತ್ತಿದ್ದನ್ನು ನೆನಪಿಸಿಕೊಂಡಿದ್ದೆ. ಒಬೆದುಲ್ಲಾ ಪ್ರಕರಣ ಅವರ ಆತಂಕವನ್ನು ಇನ್ನಷ್ಟು ಹೆಚ್ಚಿಸಿತು. ನನಗೆ ಗೊತ್ತಿದ್ದ ಮಟ್ಟಿಗೆ ಬೇರಾವುದೇ ಕಾಂಗ್ರೆಸ್ ನಾಯಕರು 'ವಿಭಜನೆ'ಯನ್ನು ಊಹಿಸಿರಲಿಲ್ಲ. ಆದರೆ ಲಾಲಾಜಿಯವರು ಮುಂಬರುವ ಈ ದುರಂತವನ್ನು ಮುಂಗಾಣಿದ್ದರ ಜೊತೆಗೆ ಲಿಂಕನ್ನರ ರೀತಿ ಅದನ್ನು ಎಷ್ಟೇ ಕಷ್ಟ ಬಂದರೂ ಎದುರಿಸಲು ತೀರ್ಮಾನವನ್ನು ಮಾಡಿದ್ದರು.

ನಾನು ಒಬೆದುಲ್ಲಾ ಅವರನ್ನು 1940ರಲ್ಲಿ ಲಾಹೋರಿನಲ್ಲಿ ಭೇಟಿ ಮಾಡಿದ್ದೆ. ಆಗ ಅವರಿಗೆ ಸುಮಾರು 70 ವರ್ಷಗಳಾಗಿದ್ದವು. ಅವರ ಜೊತೆ ದೀರ್ಘ ಚರ್ಚೆಯ ಸಂದರ್ಭದಲ್ಲಿ ಒಬೆದುಲ್ಲಾ ಹೇಗೆ ಲಾಲಾಜಿ ಅವರ ಮನಸ್ಸಿನಲ್ಲಿ 'ಬ್ರಿಟಿಷ್ ಏಜಂಟ್‌ಗಳು' ತಪ್ಪು ಕಲ್ಪನೆ ಮೂಡಿಸಿದ್ದರು ಎಂದು ವಿವರಿಸಲು ಬಹಳ ಪ್ರಯತ್ನಪಟ್ಟರು. ಆದರೆ ಕಾಂಗ್ರೆಸ್ಸಿನವರು ಕಾಬೂಲ್‌ನಲ್ಲಿ ಶಾಖೆ ತೆರೆಯಲು ಏಕೆ ಆಸ್ಥೆ ತೋರಿಸಿದರು ಎಂಬುದರ ಬಗ್ಗೆ ಬೆಳಕು ಚೆಲ್ಲಲೇ ಇಲ್ಲ.

ಇಷ್ಟೆಲ್ಲಾ ಆದರೂ ಲಾಲಾಜಿ ಅವರ ಕೊನೆಯ ದಿನಗಳವರೆಗೂ ಅವರಿಗೆ 'ಏಕತೆ'ಯಲ್ಲಿದ್ದ ನಂಬಿಕೆ ಒಂದು ಒಪ್ಪಂದಕ್ಕಾಗಿ ಸತತ ಪ್ರಯತ್ನ ಮಾಡುವಂತೆ ಮಾಡಿತ್ತು. ಕೊನೆಯವರೆಗೂ ಅವರು ಜಿನ್ನಾರೊಂದಿಗೆ ನಿರಂತರ ಚರ್ಚೆ ಮಾಡುತ್ತಿದ್ದ ಸಂಗತಿ ಇದಕ್ಕೆ ಉತ್ತಮ ಸಾಕ್ಷಿ. ಅನೇಕ ಬಾರಿ ಲಾಲಾಜಿ ಅವರ ನಂತರ ಜಿನ್ನಾ ಅವರೊಂದಿಗೆ ಮಾತುಕತೆ ನಡೆಸುವ ಕಾಂಗ್ರೆಸ್ ನಾಯಕರ ಶೈಲಿಯೇ ಬದಲಾಗಿದ್ದರಿಂದ ನಿವಾರಿಸಬಹುದಾಗಿದ್ದ ಅನೇಕ ಸಂಕಷ್ಟಗಳು ಉಂಟಾಯಿತು. 1940 ಲಾಹೋರ್ ಅಧಿವೇಶನದ ಘೋಷಣೆ ಮಾಡಿದ ನಂತರ ನಾನು ಲಾಹೋರಿನಲ್ಲಿ ಜಿನ್ನಾ ಅವರನ್ನು ಭೇಟಿ ಮಾಡಿ ಒಂದು ದೀರ್ಘಾವಧಿ ಮಾತುಕತೆ ನಡೆಸಿದೆ. ಆ ಸಂದರ್ಭದಲ್ಲಿ ಜಿನ್ನಾ ಹಾಗೂ ಲಜಪತ್‌ರಾಯ್ ಹಾರ್ದಿಕ ಹಾಗೂ ಅನೌಪಚಾರಿಕ ಮಾತುಕತೆಗಳ ಮೂಲಕ ಅನೇಕ ವಿಷಯಗಳನ್ನು ಬಗೆಹರಿಸಿಕೊಳ್ಳುತ್ತಿದ್ದನ್ನು, ಭಿನ್ನಾಭಿಪ್ರಾಯಗಳು ಸರಿ ಹೋಗದಿದ್ದರೂ ಪ್ರಾಮಾಣಿಕ ಪ್ರಯತ್ನ ಮುಂದುವರೆಸಿದ್ದನ್ನು ನಾನು ನೆನಪಿಸಿದಾಗ ಜಿನ್ನಾ ಅವರು ''ನೀನು ಅಂದು ನೋಡಿದ ಜಿನ್ನಾ ಆಗಿಯೇ ನಾನಿಂದು ಉಳಿದಿದ್ದರೂ ನನ್ನ ಬಗ್ಗೆ ಬೇರೆ ರೀತಿ ವರ್ತಿಸಲಾಗುತ್ತಿದೆ. ಗುಲಾಂ ಹುಸೇನ್ ಹಿದಾಯುತುಲ್ಲಾ ಜೀವನವಿಡೀ ಏನು ಸಾದಿಸದಿದ್ದರೂ ಅವರನ್ನು ಮಹಾನ್ ದೇಶಭಕ್ತರನ್ನಾಗಿ ಚಿತ್ರಿಸಿ ನನ್ನನ್ನು ದೇಶದ್ರೋಹಿ ಎಂದು ಪರಿಗಣಿಸಲಾಗುತ್ತಿದೆ'' ಎಂದು ನುಡಿದರು.

ಜಿನ್ನಾ ಅವರ ಬಗ್ಗೆ ಕಾಂಗ್ರೆಸ್ ನಾಯಕರ ಬದಲಾದ ಧೋರಣೆಯ ಕಾರಣದಿಂದಲೇ ಪಾಕಿಸ್ತಾನದ ಜನನವಾಯಿತು ಎಂಬುದು ಬಹಳ ಹಾಸ್ಯಾಸ್ಪದ ಅಭಿಪ್ರಾಯ ಎಂದು ಪರಿಗಣಿಸಿದರೂ, ಆ ಬದಲಾವಣೆ ದುರದೃಷ್ಟಕರವಾಗಿತ್ತು ಮತ್ತು ತನ್ನದೇ ಕೊಡುಗೆಯನ್ನು ನೀಡಿತ್ತು. ಇದನ್ನು ಇಲ್ಲಿ ಹೇಳಲಿಕ್ಕೆ ಕಾರಣ ಏಕತೆಗಾಗಿ ಲಜಪತ್‌ರಾಯ್ ಅವರ ಪ್ರಾಮಾಣಿಕ ಪ್ರಯತ್ನಗಳನ್ನು ವಿಶ್ಲೇಷಿಸುವುದೇ ಆಗಿದೆ.

ಆ ಸಂದರ್ಶನದ ನಂತರ ಜಿನ್ನಾ ಅವರ ದೂರು ನನ್ನ ಮನಸ್ಸಿನಲ್ಲಿ ಬಲವಾಗಿ ಬೇರೂರಿತು. ನಾನು ರಾಜಾಜಿಯವರಿಗೆ ಒಂದು ಪತ್ರ ಬರೆದು ಆ ಮಾತುಕತೆಯ

---

* ದೇಶಬಂಧು ಅವರ ಬಳಿ ಮೂರನೇಯ ದಾಖಲೆ ಯೊಂದು ಇತ್ತು. ಅದು ಲಾಲಾಜಿ ಅವರ 'ವಿಶ್ವಾಸ ಪತ್ರ' (ಜೈಲಿನಿಂದ ಕಳುಹಿಸಿದ್ದು) ಅವೆಲ್ಲವನ್ನು ಹಿನ್ನಲೆಯಲ್ಲಿಟ್ಟುಕೊಂಡೇ ವಿಧಾನಪರಿಷತ್ತುಗಳ ಕಾರ್ಯಕ್ರಮದ ಬಗ್ಗೆ ಅವರು ತಮ್ಮ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದರು. ಲಾಲಾಜಿ ಅವರ ಪತ್ರದಲ್ಲಿ ದಾಸ್ ಅವರು ಯಾರು ಯಾರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂಬ ವಿವರ ಇತ್ತು. ಆದರೆ ದಾಸ್ ಆ ಪತ್ರವನ್ನು ಬಹಿರಂಗಗೊಳಿಸಿ ತಮ್ಮ ವಿಶ್ವಾಸಾರ್ಹತೆಗೆ ಚ್ಯುತಿ ತಂದುಕೊಂಡರು.

ಸಾರಾಂಶ ಮತ್ತು ಜಿನ್ನಾ ಅವರ ಮನಸ್ಥಿತಿಯ ಬಗ್ಗೆ ನನ್ನ ಅನಿಸಿಕೆಗಳನ್ನು ತಿಳಿಸಿದೆ. ರಾಜಾಜಿ ಅವರ ರಾಜಕೀಯ ಅಭಿಪ್ರಾಯಗಳು ವಾಸ್ತವಾಂಶಗಳಿಂದ ಹಾಗೂ ಸೂಕ್ಷ್ಮ ವಿಚಾರಗಳಿಂದ ಕೂಡಿದ್ದ ಕಾರಣ ನಾನು ಅವರನ್ನೇ ಆರಿಸಿಕೊಂಡೆ. ಆದರೆ ಅವರು ಈ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ರೀತಿ ನನ್ನನ್ನು ದಿಙ್ಮೂಢಗೊಳಿಸಿತು. ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಆಜಾದ್‌ರವರನ್ನು ಕಾಂಗ್ರೆಸ್ಸಿನ ಒಂದು ಪ್ರದರ್ಶಕ ವ್ಯಕ್ತಿ ಎಂದು ಕರೆದ ಅಪರಾಧದಿಂದ ಜಿನ್ನಾ ಅವರು ಮುಕ್ತಿಯಾಗುವವರೆಗೆ ಜಿನ್ನಾ ಅವರೊಂದಿಗೆ ಯಾವುದೇ ಮಾತುಕತೆ ಇಲ್ಲವೆಂದು ರಾಜಾಜಿ ಅವರು ತೀರ್ಪಿತ್ತರು.

vii

ಪತ್ರಿಕೋದ್ಯಮದಲ್ಲಿ ಅಂಬೆಗಾಲಿಕ್ಕುತ್ತಿದ್ದ ನನಗೆ ನನ್ನ ನೇತಾರರು ತಾಯಿಯ ರೀತಿ ಇದ್ದರು. ಭಾವನರಮ್ಯತೆ ಇಲ್ಲದ ಭಾಷೆಯಲ್ಲಿ ತಿಳಿಸಬೇಕೆಂದರೆ ನಾನು ಅವರಿಂದ ಕಲಿತ ಪಾಠ ಎರಡೇ ಪದಗಳ ಸೂತ್ರ. 'ಬರಿ, ಹರಿದು ಹಾಕು.' ಇದನ್ನು ಅವರು ಯಾವಾಗಲು ಹೇಳುತ್ತಿದ್ದರಷ್ಟೇ ಅಲ್ಲ. ತಾವು ಸಹ ಅದೇ ರೀತಿ ಮಾಡುತ್ತಿದ್ದರು. ಈ ಎರಡು ಪದಗಳ ಮುಖೇನ ಆ ಸೂತ್ರ ಪ್ರಮುಖ ಅಂಶಗಳಿಂದ ಕೂಡಿತ್ತು; ಸಹನೆ ಹಾಗೂ ತೀವ್ರ ವಿಮರ್ಶೆಯಿಂದ ಕೂಡಿದ ಸ್ವವಿಮರ್ಶೆ. ಈ ಎರಡು ಪದಗಳ ಮಂತ್ರಗಳು ಬೇರೆ ಕ್ಷೇತ್ರಗಳಲ್ಲಿಯೂ ಸಹ ಬಹಳ ಉಪಯುಕ್ತ ಸಾಧನಗಳಾಗಬಹುದಾಗಿದೆ. ಬೇರೆಡೆ 'ಬರಿ, ಹರಿದು ಹಾಕು.' ಎಂಬುದನ್ನ 'ಪ್ರಯತ್ನ ಪಡು ಹಾಗೂ ಉಂಟಾಗುವ ತಪ್ಪನ್ನು ಸರಿಪಡಿಸು' ಎಂದು ಬದಲಾವಣೆ ಮಾಡಿಕೊಳ್ಳಬಹುದು. ಅನುಭವದ ಈ ಮೂಸೆಯಲ್ಲಿ ಅವರು ತಮ್ಮೆಲ್ಲಾ ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸಿದರು. ಧ್ಯೇಯವಾದದ ಆಕರ್ಷಣೆ ಅಥವಾ ಯಾವುದೇ ವ್ಯಕ್ತಿಯ ಸಮ್ಮೋಹಿನಿ ಶಕ್ತಿಗೆ ಅಥವಾ ಯಾವುದೇ ತರ್ಕಕ್ಕೆ ಬಲಿಯಾಗಲು ಅವರು ಸಿದ್ಧರಿರಲಿಲ್ಲ. ಈ ಒಂದು ಸೂತ್ರದ ಮೂಲಕ ಪತ್ರಿಕಾರಂಗದಲ್ಲಿ ವಿಶಿಷ್ಟ ಸಾಧನೆಯನ್ನೇ ಮೈಗೂಡಿಸಿಕೊಂಡರು. ಇದನ್ನು ಕಂಡ ಸಿ.ಎಫ್. ಆಂಡ್ರ್ಯೂಸ್ ಅವರು ಬೇರೆಲ್ಲಾ ಚಟುವಟಿಕೆಗಳಿಂದ ಹಿಂತೆಗೆದುಕೊಂಡು ಭಾರತದ ಸಾರ್ವಜನಿಕ ಅಭಿಪ್ರಾಯಕ್ಕೆ ಒಂದು ನೆಲೆ ಕೊಡುವ ಒಂದು ದಿನಪತ್ರಿಕೆಯನ್ನು ಪ್ರಾರಂಭಿಸಲು ಲಾಲಾ ಲಜಪತ್‌ರಾಯ್ ಅವರನ್ನು ತಮ್ಮೆಲ್ಲಾ ಪ್ರತಿಭೆ ಹಾಗೂ ಶಕ್ತಿಯನ್ನು ವಿನಿಯೋಗಿಸುವಂತೆ ಆಗ್ರಹ ಮಾಡುತ್ತಿದ್ದರು. ಇಂಗ್ಲೆಂಡಿನ ಸಾರ್ವಜನಿಕ ಅಭಿಪ್ರಾಯಕ್ಕೆ ಸಿ.ಪಿ. ಸ್ಕಾಟ್ ಅವರ ಮ್ಯಾಂಚೆಸ್ಟರ್ ಗಾರ್ಡಿಯನ್ ಹೇಗೋ ಅದೇ ರೀತಿಯ ಪತ್ರಿಕೆ ಭಾರತಕ್ಕೆ ಅಗತ್ಯವಿರುವುದನ್ನು ಸಿ.ಎಫ್. ಆಂಡ್ರ್ಯೂಸ್ ಮನಗಾಣಿಸಲು ಪ್ರಯತ್ನಿಸುತ್ತಿದ್ದರು. ಈ ಒಂದು ಮಹತ್ಸಾಧನೆಗಾಗಿ ಲಜಪತ್‌ರಾಯ್ ಅವರು ಬೇರೆಲ್ಲಾ ಕ್ಷೇತ್ರಗಳಿಂದ ವಿಮುಖರಾಗುವುದು ಅತ್ಯಂತ ಸೂಕ್ತ ಎಂದು ಅವರು ಪ್ರತಿಪಾದಿಸುತ್ತಿದ್ದರು. ಲಜಪತ್‌ರಾಯ್ ಅವರನ್ನು ಬಿಟ್ಟರೆ ಭಾರತೀಯ ಪತ್ರಿಕೋದ್ಯಮದಲ್ಲಿ ಬೇರೆ ಯಾರಿಂದಲೂ ಈ ಕಾರ್ಯ ಸಾಧ್ಯವಿಲ್ಲವೆಂದು ಹಾಗೂ ಲಜಪತ್‌ರಾಯ್ ಅವರು ಮಾತ್ರ ಬುದ್ಧಿ ಮತ್ತು ಮನಸ್ಸು ಎರಡನ್ನು ವಿನಿಯೋಗಿಸಿ ಇಂತಹ ಒಂದು ಪತ್ರಿಕೆ

ತರಲು ಸಾಧ್ಯ ಎಂದು ಅವರು ತೀರ್ಮಾನಿಸಿದ್ದರು. (ಭಾರತದ ಪತ್ರಕರ್ತರನ್ನು ದೀರ್ಘ ಕಾಲದಿಂದ ನೋಡಿದ ಮೇಲೆ, ಅವರ ಕಾರ್ಯ ವಿಧಾನಗಳನ್ನು, ಸಾಧನೆಗಳನ್ನು ನೋಡಿದ ಮೇಲೆ ಆಂಡ್ರ್ಯೂಸ್ ಅವರ ನಿರ್ಣಯವನ್ನು ತುಂಬು ಹೃದಯದಿಂದ ಒಪ್ಪಿಕೊಳ್ಳುವುದರಲ್ಲಿ ನನಗೆ ಯಾವುಗೇ ಸಂಕೋಚ ಉಳಿದಿಲ್ಲ.)

ವಿಶ್ವವಿದ್ಯಾಲಯದ ಔಪಚಾರಿಕ ಶಿಕ್ಷಣದಿಂದ ವಂಚಿತರಾದರೂ ಅವರು ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಪತ್ರಿಕಾರಂಗದಲ್ಲಿ ಅತ್ಯಂತ ಮೇಧಾವಿತನದಿಂದ ಕೂಡಿದ ಧೀಮಂತ ವ್ಯಕ್ತಿಯಾಗಿದ್ದರು. ಇದಕ್ಕೆ ಕಾರಣ ಅವರು ವಿಶ್ವಾಸವಿಟ್ಟ ನಂಬಿಕೆಗಳು, ಜೀವನದಲ್ಲಿ ಇಟ್ಟುಕೊಂಡ ಮೌಲ್ಯಗಳು ಹಾಗೂ ಗುರಿ. ಆದರೆ ಕಾರ್ಯಕ್ರಮಗಳು ಮತ್ತು ಸಿದ್ಧಾಂತಗಳು ಅನುಭವದ ಬೆಳಕಿನಡಿ ಮತ್ತೆ ಮತ್ತೆ ಪರೀಕ್ಷೆಗೆ ಒಳಗಾಗಬೇಕು ಎಂಬುದು ಅವರ ನಿಲುವಾಗಿತ್ತು. ಇದನ್ನು ನಾವು ''ಕ್ರಿಯಾತ್ಮಕ ವ್ಯವಹಾರಿಕ ದೃಷ್ಟಿಕೋನ'' ಎಂದು ಕರೆಯಬಹುದು. ಅವರು ಯಾವುದೇ ನಿರ್ದಿಷ್ಟ ಸಿದ್ಧಾಂತಕ್ಕೆ ಕಟ್ಟುಬಿದ್ದಿರದಿದ್ದರೂ ವಿಶಾಲ ಅರ್ಥದಲ್ಲಿ ಅವರೊಬ್ಬ ಸಮಾಜವಾದಿಯಾಗಿದ್ದರು. ಅವರು ಅಮೆರಿಕದಲ್ಲಿದ್ದಾಗ ಅಲ್ಲಿನ ಭಾರತೀಯ ವಿದ್ಯಾರ್ಥಿ ಸಮುದಾಯಕ್ಕೆ ನೀಡಿದ ಒಂದು ಸಮಗ್ರವಾದ ಸಮಾಜವಾದಿ ಕಾರ್ಯಕ್ರಮವನ್ನು ಘೋಷಿಸಿದ್ದರು. 'ಯುವ ಭಾರತಕ್ಕೊಂದು ಕರೆ' ಎಂಬ ಶೀರ್ಷಿಕೆಯಡಿ ಅವರು ''ನಾವು ಸಮಾಜವಾದಿ ಧ್ವಜವನ್ನು ಹಾರಿಸುವುದಿಲ್ಲ'' ಎಂದು ಘೋಷಿಸಿ ಸಮಾಜವಾದಿ ಉದ್ದೇಶಗಳನ್ನು ಪ್ರತಿಬಿಂಬಿಸುವ ನಿರ್ಣಯಗಳನ್ನು ವಿವರಿಸಿದ್ದರು. ಸಮಾಜವಾದಕ್ಕೆ ಹೆದರಿ ಬುದ್ಧಿಜೀವಿಗಳು ಪಲಾಯನ ಮಾಡದಂತೆ ತಡೆಯಲು ಪ್ರಾಯಶಃ ಅವರು ಈ ಘೋಷಣೆ ಮಾಡಿದ್ದಿರಬೇಕು.

ಅವರ ಮೊದಲ ಜನ ಸೇವಕನಾಗಿ (ಸರ್ವೆಂಟ್ಸ್ ಆಫ್ ದಿ ಪೀಪಲ್) ಮತ್ತು ವಾರಪತ್ರಿಕೆಯಲ್ಲಿ ಮೊದಲು ಅವರ ಶಿಷ್ಯನಾಗಿ ನಂತರ (ಉತ್ತರಾಧಿಕಾರಿ) ನನ್ನ ಅವರೊಂದಿಗಿನ ಒಡನಾಟ ಈ ಎರಡು ಸಂಸ್ಥೆಗಳ ಬಗೆಗಿನ ವಿವರಣೆಗೆ ಪುಷ್ಟಿ ಕೊಟ್ಟಿದೆ.

viii

ಕೇವಲ ಅಸಹಕಾರ ಚಳವಳಿಗಾರರೆಂಬ ಹೆಸರಿನಲ್ಲಿ ಕಾಲೇಜಿನಿಂದ ಹೊರಬಿದ್ದು ವಿದೇಶಿ ಸರ್ಕಾರದ ವಿರುದ್ಧ ಚಳವಳಿಗೆ ಧುಮುಕುವುದಷ್ಟೇ ಅಲ್ಲ ಎಂಬ ಅಂಶವನ್ನು ನನ್ನ ನೇತಾರರ ಪ್ರಾಥಮಿಕ ಒಡನಾಟದಿಂದ ನಾನು ಕಲಿತೆ.

ಸ್ವಾತಂತ್ರ್ಯ ಎಂದರೆ ನಿಜವಾದ ಅರ್ಥದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೋರಾಡುವ ಹಾಗೂ ವೈವಿಧ್ಯಮಯ ಸಂಗತಿಗಳ ಬಗ್ಗೆ ಜ್ಞಾನ ಹಾಗೂ ಸಮರ್ಥ ಬುದ್ಧಿಶಕ್ತಿಯ ಅಗತ್ಯವಿದೆ. ಯಾವುದೇ ಶೈಕ್ಷಣಿಕ ಅಥವಾ ವೃತ್ತಿಪರ ಆಕಾಂಕ್ಷೆ ಇಲ್ಲದಿದ್ದರೂ ಅವರು ಸತತ ಪರಿಶ್ರಮದಿಂದ ಜನಸಾಮಾನ್ಯರ ಕಷ್ಟಗಳನ್ನು ಅರಿತು ಅವರ ಸೇವೆ ಮಾಡುವಷ್ಟು ಬುದ್ಧಿಶಕ್ತಿ ಹಾಗೂ ಸಾಮರ್ಥ್ಯವನ್ನು ಗಳಿಸಿದ್ದರು. ಬುದ್ಧಿಯನ್ನು ಸದಾ ಚುರುಕುಗೊಳಿಸುತ್ತಾ ಹೃದಯ ಸೇವೆಯಲ್ಲಿ ತೊಡಗುವಂತೆ ಮಾಡುತ್ತಿರಬೇಕು. ಅಧ್ಯಯನ ಹಾಗೂ ಬುದ್ಧಿ

ಸಾಮರ್ಥ್ಯ ಇವೆರಡು ಅವಶ್ಯಕವೆಂಬುದು ನಿಜವಿದ್ದರೂ ನಿಸ್ವಾರ್ಥ ಸೇವೆ ಹಾಗೂ ಹೃದಯವಂತಿಕೆಯಿಂದ ಬರುವ ಅಗತ್ಯ ಗುಣಗಳಿಗೆ ಪರ್ಯಾಯವಾಗಲಾರವು. ಭಾರತದ ಸಮಸ್ಯೆಗಳಿಗೆ ಲಜಪತರು ಅನುಸರಿಸುತ್ತಿದ್ದ ಮಾರ್ಗವನ್ನು ನಾನು ತ್ರಿವೇಣಿ ಸಂಗಮಕ್ಕೆ ಹೋಲಿಸುತ್ತೇನೆ.- ಸ್ವಾತಂತ್ರ್ಯವೆಂಬುದು ಮುಖ್ಯವಾಹಿನಿಯ ಗಂಗೆಯಾದರೆ, ಗಂಗೆಯ ಜೊತೆಗೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಮತ್ತು ಆಧುನಿಕ ವ್ಯವಸ್ಥೆಯನ್ನು ಅಳವಡಿಸುವ ಯಮುನೆಯು ಸೇರಬೇಕು. ಗುಪ್ತಗಾಮಿನಿಯಾದ ಸರಸ್ವತಿಯನ್ನು ಮರೆಯುವಂತಿಲ್ಲ. ಸರಸ್ವತಿಯು ಸಾಗರದೆಡೆಗೆ ಹರಿಯುವುದನ್ನು ನೋಡಲಿಕ್ಕೆ ಸಾಧ್ಯವಿಲ್ಲದಿದ್ದರೂ ಭೂಮಿಯೊಳಗಿನ ಶಕ್ತಿಯಾಗಿ ಪ್ರವಹಿಸಿರುತ್ತಾಳೆ. ಭಾರತದ ಪ್ರಾಚೀನ ಸಂಸ್ಕೃತಿಯ ಜೀವಂತ ಶಕ್ತಿಯಾಗಿ ಆಧುನಿಕ ಪಠ್ಯಪುಸ್ತಕಗಳಿಂದ ಅಥವಾ ಅರೆಬರೆ ಸೂತ್ರಗಳಿಂದ ತಯಾರಾದ ಪರಿಹಾರಗಳನ್ನು ಸ್ವೀಕರಿಸುವುದನ್ನು ಒಪ್ಪುವುದಿಲ್ಲ. ಆಧುನಿಕ ಸಮಾಜ ಹಾಗೂ ಆರ್ಥಿಕ ಚಿಂತನೆಗಳ ಪರಿಚಯವಿರುವುದು ಅಗತ್ಯವಿದ್ದರೂ ಭಾರತದ ಜನಮಾನಸದ ರೀತಿ ನೀತಿಗಳ ಜೊತೆಗೆ ಸಂಬಂಧವಿಟ್ಟುಕೊಂಡು ಸಹಸ್ರಾರು ವರ್ಷಗಳ ಭಾರತದ ಇತಿಹಾಸದಲ್ಲಿ ಭದ್ರವಾದ ನೆಲೆ ಕಂಡುಕೊಳ್ಳುವುದು ಮೊದಲ ಆದ್ಯತೆಯಾಗಬೇಕು. ಸ್ವಾತಂತ್ರ್ಯಕ್ಕಾಗಿ ಸ್ವಾತಂತ್ರ್ಯದ ಹಂಬಲದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಗಂಗೆಯನ್ನು ಮುಟ್ಟುವವರೆಗೂ ಲಾಲಾ ಲಜಪತ್‌ರಾಯ್ ಅವರ ಜೀವನದ ಸರಸ್ವತಿ ಅವರ ಆರ್ಯ ಸಮಾಜದ ದಿನಗಳ ಮೊದಲ ಹಂತವಾಗಿತ್ತು. ಲಜಪತ್‌ರಾಯ್ ಅವರ ಜೀವನದ ಕಥೆಯನ್ನು ಮೂರು ಹರವುಗಳಲ್ಲಿ ಅಧ್ಯಯನ ಮಾಡುತ್ತಾ ಅವುಗಳು ತ್ರಿವೇಣಿ ಸಂಗಮವಾಗಿರುವುದನ್ನು ಅಭ್ಯಸಿಸಬಹುದು. ಆದರೆ ಅಲ್ಲಲ್ಲಿ ಮಾಯವಾಗುತ್ತಾ ಅಲ್ಲಲ್ಲಿ ಗೋಚರಿಸುತ್ತಾ ಇರುವ ಸರಸ್ವತಿಯನ್ನು ಕಡೆಗಣಿಸುವಂತಿಲ್ಲ.

ix

''ಅಂತ್ಯಕ್ಕಾಗಿ ಆದಿ'' ಎಂಬ ಹೇಳಿಕೆ ಭಾರತದ ಸ್ವಾತಂತ್ರ್ಯದ ಹೋರಾಟವು ಲಜಪತ್‌ರಾಯ್ ಅವರ ಜೀವಿತಾವಧಿಯಲ್ಲಿಯೇ ಯಶಸ್ಸು ಗಳಿಸಿತೆಂದು ಹೇಳುವ ಅರ್ಥವಲ್ಲಿಲ್ಲ. ಅವರು ವೈಯಕ್ತಿಕ ಜೀವನದ ಪಯಣದಲ್ಲಿ ತುತ್ತ ತುದಿ ಮುಟ್ಟಿದರು ಎಂದು ಅರ್ಥೈಸಬಹುದು. ಲೌಕಿಕ ವ್ಯಕ್ತಿಗಳ ಎಲ್ಲಾ ಸಹಜ ಆಸೆ, ಆಕಾಂಕ್ಷೆಗಳನ್ನು ತೊರೆದಿದ್ದ ಅವರು ಅದೇ ರೀತಿ ಅಲೌಕಿಕ ಜಗತ್ತಿನ ಬಗ್ಗೆಯೂ ಚಿಂತಿಸಿದವರಲ್ಲ. ತಾವು ಸ್ವೀಕರಿಸಿದ್ದ ಧ್ಯೇಯಕ್ಕಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡರು. ಯುದ್ಧರಂಗದ ಮುಂಚೂಣಿಯಲ್ಲಿ ನಿಂತು ತೀವ್ರವಾಗಿ ಗಾಯಗೊಂಡು ಭಾರತದ ಸ್ವಾತಂತ್ರ್ಯಕ್ಕಾಗಿ ಬಲಿ ತೆತ್ತ ಮಹಾನ್ ಹುತಾತ್ಮರೆಂದು ಅವರ ಸಮಾಜ ಬಂಧುಗಳಿಂದ ಗುರುತಿಸಲ್ಪಟ್ಟರು.

ಕಾಲೇಜು ದಿನಗಳಿಂದ ಅವರನ್ನು ನೋಡುತ್ತಾ ಬಂದ ನಾನು ನಂತರದ ಜೀವನದಲ್ಲಿಯೂ ಹತ್ತಿರದಿಂದ ಕಾಣುವ ಅವಕಾಶ ಪಡೆದಿದ್ದೆ. ಅವರ ಪಕ್ಷದ ಗುಪ್ತ ಯೋಜನೆಗಳನ್ನು ಹಂಚಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಅವರು ಎಂತಹ ವ್ಯಕ್ತಿ, ಯಾವ ಯಾವ ರೀತಿಯ ಪ್ರಭಾವಗಳು ಅವರ ಮೇಲೆ ಪರಿಣಾಮ ಬೀರಿತ್ತು ಅಥವಾ ಅವರ

ರಾಜಕೀಯ ಚಿಂತನೆ ಹಾಗೂ ದೃಷ್ಟಿಕೋನ ಬೆಳವಣಿಗೆಯನ್ನು ಕುರಿತು ಅಭ್ಯಸಿಸಲು ಇದು ಅಗತ್ಯವೂ ಇರಲಿಲ್ಲ. ಇವರ ಮೇಲೆ ಭಗತ್‌ಸಿಂಗ್‌ರ ಛಾಯೆ ಕೇವಲ ಘಟನೆಗಳಿಂದ ಮಾತ್ರ ವ್ಯಕ್ತವಾಗುವುದಿಲ್ಲ. ಬದಲಿಗೆ ಇವರಲ್ಲಿದ್ದ ಭಾವನೆಗಳು ಹಾಗೂ ಹಂಬಲಗಳು ವ್ಯಕ್ತಗೊಂಡಿದ್ದರಿಂದ ತಿಳಿಯುತ್ತದೆ. ಘಟನಾವಳಿಗಳ ನಂತರವೂ ಪಿತೂರಿಯ ಪ್ರಕರಣದಲ್ಲಿ ಆರೋಪಿಗಳ ರಕ್ಷಣೆಗಾಗಿ ರಚಿಸಲ್ಪಟ್ಟ ಸಮಿತಿಯ ಕಾರ್ಯದರ್ಶಿಯಾಗಿ ನಾನು ಭಗತ್‌ಸಿಂಗ್ ಹಾಗೂ ಅವರ ಸಹಕಾರಿಗಳೊಡನೆ ಸತತ ಸಂಪರ್ಕದಲ್ಲಿದ್ದೆ. ಅವರ ತಲೆಗೆ ಸರ್ಕಾರ ಬೆಲೆ ನಿಗದಿ ಪಡಿಸಿದ್ದಾಗ, ಅವರು ತಪ್ಪಿಸಿಕೊಳ್ಳಲು ತಮ್ಮ ಉದ್ದ ತಲೆಕೂದಲು ಹಾಗೂ ಪೇಟಾದ ಬದಲು ಒಂದು ಟೋಪಿ ಧರಿಸಿ ಮುಖಕ್ಷೌರಗೊಳಿಸಿಕೊಂಡ ವಿಭಿನ್ನ ಸ್ವರೂಪವನ್ನು ಹೊಂದಿದ್ದರು. ಒಂದು ವೃತ್ತಪತ್ರಿಕೆಯ ಕಚೇರಿಯ ಹೊರಗೆ ನಾನು ಅವರನ್ನು ಭೇಟಿ ಮಾಡಿದೆ. ಲಾರಿ ಹೊಡೆತದಿಂದ ರಿವಾಲ್ವರ್ ಗುಂಡೇಟಿನ ಮರುಪಾವತಿಯವರೆಗೂ ನಾನು ಭಗತ್‌ಸಿಂಗ್ ಅವರನ್ನು ಸಾಕಷ್ಟು ಕಂಡೆ. ಹಾಗೂ ಭಾರತದ ಯುವಕರಿಗೆ ಬಸಂತಿದೇವಿ ನೀಡಿದ ಸವಾಲಿನಿಂದ ಕೂಡಿದ ಹೇಳಿಕೆಯನ್ನು ಹಿನ್ನುಡಿಯಲ್ಲಿ ಸೇರಿಸಲಾಗಿದೆ.

ನಾನು ಪ್ರಕಾಶನ ವಿಭಾಗ ಹಾಗೂ ಅದರಲ್ಲೂ ವಿಶೇಷವಾಗಿ ಜಂಟಿ ನಿರ್ದೇಶಕರಾದ ಶ್ರೀ ಮದನ್‌ಗೋಪಾಲ್ ಹಾಗೂ ನನ್ನ ಹಸ್ತಪ್ರತಿಯನ್ನು ಆಳವಾಗಿ ಪರಿಶೀಲಿಸಿ ಅನೇಕ ಸಲಹೆಗಳನ್ನು ನೀಡಿದ ಆರ್.ಎಂ. ಭಟ್ ಅವರ ಸಹಕಾರಕ್ಕೆ ನನ್ನ ಕೃತಜ್ಞತೆಗಳನ್ನು ತಿಳಿಸುವುದು ನನ್ನ ಕರ್ತವ್ಯ.

ನವದೆಹಲಿ,
21, ಜೂನ್, 1973

-ಫಿರೋಜ್ ಚಾಂದ್

ಪರಿವಿಡಿ

ಕಡೆಗೂ ಸಂದಾಯ 367-615

ಬೀಜ ಮತ್ತು ನೆಲ

ಅಧ್ಯಾಯ-1

ಬೀಜ ಮತ್ತು ನೆಲ

ಕ್ರಿಸ್ತನ ಹುಟ್ಟುಹಬ್ಬದ ಸಂದರ್ಭ. ಕೇವಲ ಹತ್ತು ದಿನಗಳಷ್ಟೇ ಇದೆ. ಇದ್ದಕ್ಕಿದ್ದಂತೆ ಸರ್ ಹ್ಯೂಗೋ ಮಹಾ ಉತ್ಸವದ ಸಿದ್ಧತೆಗಳನ್ನು ರದ್ದುಪಡಿಸಿದ. ಆತ ಬ್ರಿಟಿಷ್ ಸೇನಾಧಿಪತಿ. ಸಾಕಷ್ಟು ಮುಂಚಿತವಾಗಿ ಸಕಲ ಸಿದ್ಧತೆಗಳನ್ನು ಮಾಡಿದ್ದ. ಆ ಮಹೋತ್ಸವವನ್ನು ಬ್ರಿಟಿಷ್ ಸೇನಾಧಿಪತಿ ಒಮ್ಮೆಗೆ ರದ್ದು ಪಡಿಸಿದ್ದಕ್ಕೆ ಪ್ರಬಲವಾದ ಕಾರಣವೇ ಇತ್ತು.

ಕ್ರಿ.ಶ. 1845ರ ಚಳಿಗಾಲ. ಋತುಗಾಲದ ಶೈತ್ಯಕ್ಕೆ ಹೊಂದಿಕೊಂಡಂತೆ ಬ್ರಿಟಿಷರ ಪಾಲಿಗೆ ಹೇಗೋ ಹಾಗೆಯೇ ಭಾರತೀಯರ ಪಾಲಿಗೂ ದೇಶದ ಪರಿಸ್ಥಿತಿ ಶೀತಲವಾಗಿತ್ತು. ಅಂಬಾಲದಲ್ಲಿ ಬ್ರಿಟಿಷ್ ಸೇನಾ ಕಚೇರಿಗೆ ಸುದ್ದಿಯೊಂದು ತಲುಪಿತ್ತು. ಸಿಖ್ ಸೇನೆ ಪೂರ್ವದ ಕಡೆಗೆ ಮುನ್ನುಗ್ಗುತ್ತಿದೆ ಎಂದು ಆ ಸುದ್ದಿ ಹೇಳಿತ್ತು. ಸೇನಾಧಿಪತಿ ಹ್ಯೂಗೋ ಯುದ್ಧದ ಕಹಳೆ ಹಿನ್ನಲೆಯಲ್ಲಿ ಕ್ರಿಸ್ಮಸ್ ಉತ್ಸವವನ್ನು ರದ್ದುಪಡಿಸಿದ್ದು.

ಆ ಅವಧಿಯಲ್ಲಿ ಸಟ್ಲೇಜ್ ನದಿಯ ಒಡೆತನ ಸಾಧಿಸಿಕೊಳ್ಳಲು ಅಂಗ್ರೇಜಿಗಳು ಅದೆಷ್ಟೋ ಸಲ ವಿಫಲ ಪ್ರಯತ್ನ ಮಾಡಿದ್ದರು. ರಣಜಿತ್ ಸಿಂಗ್‌ನ ವಶದಿಂದ ಸಟ್ಲೇಜ್ ನದಿ ನೀರಿನ ಸಾರ್ವಭೌಮ ಅಧಿಕಾರ ಸ್ಥಾಪಿಸಲು ಬ್ರಿಟಿಷ್ ಸೇನೆ ಸರ್ವ ಪ್ರಯತ್ನ ಮಾಡಿತ್ತು. ಆದರೆ ಪಂಜಾಬಿನ ಆ ಸಿಂಹ ಅವಕಾಶ ಕೊಟ್ಟಿರಲಿಲ್ಲ. ಸಟ್ಲೇಜ್ ನದಿ ಮತ್ತು ಅದರ ಪಶ್ಚಿಮದ ಅಂಬಾಲ ರಣಜಿತ್ ಸಿಂಗ್‌ನ ಉತ್ತರಾಧಿಕಾರಿಗಳಿಗೆ ಉಳಿದಿತ್ತು. ಆದರೂ ಬ್ರಿಟಿಷರು ಪ್ರಯತ್ನ ಬಿಟ್ಟಿರಲಿಲ್ಲ. ರಣಜಿತ್ ಸಿಂಗ್‌ನ ರಾಜ್ಯದಿಂದ ಲೂಧಿಯಾನ ಹಾಗೂ ಫಿರೋಜ್‌ಪುರಗಳನ್ನು ಪ್ರತ್ಯೇಕಿಸಿ ತಮ್ಮ ಸೇನಾ ಉಕ್ಕಡಗಳನ್ನು ಸ್ಥಾಪಿಸಿಕೊಂಡಿದ್ದರು.

ಪರಿಸ್ಥಿತಿ ಎರಡು ಕಡೆಗಳಿಗೂ ಅನುಕೂಲವಾಗಿರಲಿಲ್ಲ. ಬ್ರಿಟಿಷರು ಯಶಸ್ಸು ಸಾಧಿಸುವ ಸಲುವಾಗಿ ಸ್ವತಃ ಗವರ್ನರ್ ಜನರಲ್ ಹೆನ್ರಿ ಹಾರ್ಡಿನ್ ಧಾವಿಸಿ ಬಂದಿದ್ದ. ಸೇನಾಧಿಪತಿಯ ಕರ್ತವ್ಯವನ್ನು, ಜವಾಬ್ದಾರಿಯನ್ನು ಹಂಚಿಕೊಳ್ಳುವಷ್ಟು ಆತನಲ್ಲಿ ಕರ್ತವ್ಯ ಪ್ರಜ್ಞೆ ಜಾಗೃತವಾಗಿತ್ತು. ರಣಜಿತ್ ಸಿಂಗ್‌ನ ಉತ್ತರಾಧಿಕಾರಿಗಳಾಗಿ ಅವರ ಪ್ರಾಬಲ್ಯ ಕಠೋರವಾಗಿತ್ತು. ಆ ಯುದ್ಧದಲ್ಲಿ ಜಯವನ್ನು ತಮ್ಮದಾಗಿಸಿಕೊಳ್ಳಲು ಹೆನ್ರಿ ಹಾರ್ಡಿನ್ ಎಲ್ಲಾ ಪಯತ್ನಗಳನ್ನು ಮಾಡತೊಡಗಿದ. ಅದೆಷ್ಟೋ ಸಾರಿ ಆತ ಮರದ ಕೆಳಗೆ ಕುಳಿತು ಯುದ್ಧ ತಂತ್ರಗಳನ್ನು ನಿರೂಪಿಸುತ್ತಿದ್ದದ್ದು ಸಾಮಾನ್ಯ ದೃಶ್ಯವಾಗಿತ್ತು. ಬ್ರಿಟಿಷ್ ದಂಡು ಬರುವಷ್ಟರಲ್ಲಿ ಆತ ಮುಂದೆ ಸಾಗಿ ಮರದಡಿ ಕುಳಿತು ತುರ್ತು ಕಾಗದ ಪತ್ರಗಳನ್ನು ವಿಲೇವಾರಿ ಮಾಡುತ್ತಿದ್ದದ್ದು ಉಂಟು.

ಏಕಾಂಗಿಯಾಗಿ ಹೀಗೆ ಮಾಡುವುದರಿಂದ ಆಪತ್ತಿಗೆ ಸಿಲುಕಿಕೊಳ್ಳಬಹುದೆಂದು ಕಿರಿಯ ಬ್ರಿಟಿಷ್ ಅಧಿಕಾರಿಗಳು ಹೆನ್ರಿ ಹಾರ್ಡಿನ್‌ಗೆ ಅನೇಕ ವೇಳೆ ಸಲಹೆ ನೀಡಿದ್ದು ಉಂಟು. ಆದರೆ ಆತ ಅದಾವುದನ್ನು ಲೆಕ್ಕಿಸುತ್ತಿರಲಿಲ್ಲ. ಬಹುಶಃ ಆತ ತನ್ನನ್ನು ತಾನು ಮ್ಯಾಸಿಡೋನಿಯಾದ ಮಹಾವೀರನಿಗೆ ಹೋಲಿಸಿಕೊಂಡಿದ್ದನೋ ಏನೋ! ಅವನಂತೆ ಪರ ರಾಜ್ಯದ ಭೂಮಿಯಲ್ಲಿ ನಿರ್ಭೀತನಾಗಿ ಅಡ್ಡಾಡಬಹುದು ಎಂದು ಅಂದುಕೊಂಡಿದ್ದನೋ ಏನೋ ! ಅದರ ಫಲವಾಗಿಯೇ ಆತ ಕಿರಿಯ ಅಧಿಕಾರಿಗಳ ಹಿತವಾದವನ್ನು   ನಿರ್ಲಕ್ಷಿಸಿದನೇ?

ನಿಜ. ಹಾರ್ಡಿನ್ ನಿವೃತ್ತ ಸೈನಿಕನಾಗಿದ್ದ. ಬಂದಿಯೂ ಆಗಿ ಸೈನಿಕ ಬದುಕಿನ ಇನ್ನೊಂದು ಮುಖವನ್ನು ಕಂಡಿದ್ದವ. ತನ್ನ ನಡವಳಿಕೆ ಎಷ್ಟೊಂದು ವಿಪತ್ಕಾರಿ ಎಂಬುದರ ಪ್ರಜ್ಞೆಯೂ ಅವನಲ್ಲಿತ್ತು. ಅತ್ತ ಸಿಖ್‌ರ ಕಡೆ ಪರಿಸ್ಥಿತಿಯೂ ಹಾಗೇಯೇ ಇತ್ತು. ಅವರು ಶತಾಯಗತಾಯ ಜಯಲಕ್ಷ್ಮಿಯನ್ನು ಒಲಿಸಿಕೊಳ್ಳಲು ಸಿದ್ಧತೆ ನಡೆಸಿದ್ದರು. ಓರ್ವ ಚರಿತ್ರೆಕಾರ ಬರೆದಿರುವಂತೆ ''ಜೀವಕ್ಕೆ ಜೀವ, ಹಗಲಿಗೆ ಹಗಲು ಕೊಟ್ಟು ಹೋರಾಡಲು ಸನ್ನದ್ಧರಾಗಿದ್ದರು. ಆದರೇನೂ ಆ ವೀರ ಸಿಖ್‌ರಿಗೆ ಮಾರ್ಗದರ್ಶನ ಮಾಡಬಲ್ಲ ನಾಯಕನಿರಲಿಲ್ಲ. ಅವರೆಲ್ಲರನ್ನು ಏಕಶಕ್ತಿಯಾಗಿ ಹೊಸೆಯಬಲ್ಲ ನೇತಾರಿರಲಿಲ್ಲ.''

ಪಂಜಾಬಿನ ಸಿಂಹ, ಪರಮ ವೀರಾಗ್ರಣಿ, ರಣಜಿತ್ ಸಿಂಗ್ ವೀರಮರಣ ಕಂಡು ಆ ವೇಳೆಗೆ ಆರು ವರ್ಷಗಳಾಗಿದ್ದವು. ಸರ್ವ ಸನ್ನದ್ಧವಾದ ಸೈನ್ಯವನ್ನೇನೋ ಆತ ಸಿದ್ಧ ಮಾಡಿಟ್ಟಿದ್ದ. ಆದರೂ ಸಮರ್ಥನಾದ ಉತ್ತರಾಧಿಕಾರಿ ಇಲ್ಲವಾಗಿದ್ದು ವಿಧಿ ವೈಪರಿತ್ಯ. ತತ್ಫಲವಾಗಿ ಮಹಾನ್ ಯೋಧರ ಸಿಖ್ ಪಡೆಯನ್ನು ಸಮಯೋಚಿತವಾಗಿ ಬಳಸಿಕೊಂಡು ರಾಜ್ಯ ರಕ್ಷಣೆಯ ನೌಕೆಯನ್ನು ಸಾಗಿಸಬಲ್ಲ ನಾವಿಕ ಇಲ್ಲವಾಗಿದ್ದರು.

ಅದೇ ಸಂದರ್ಭದಲ್ಲಿ, ಯುದ್ಧ ಭೂಮಿ ಮುಡ್ಕಿಗೆ ಸರಿಸುಮಾರು 48 ಕಿ.ಮೀ. ದೂರದ ಜಗ್ರಾಂವ್‌ನಲ್ಲಿ ಡಿಸೆಂಬರ್ 1845ರಲ್ಲಿ ಪಂಜಾಬಿನ ಸಿಂಹವೆಂಬ ಬಿರುದನ್ನು ಪುನರುತ್ಥಾನಗೊಳಿಸಿದ ನಮ್ಮ ಕಥಾನಾಯಕನ ತಂದೆ ರಾಧಾಕಿಷನ್ ಹುಟ್ಟಿದರು.

ಮುಡ್ಕಿ ಯುದ್ಧದಲ್ಲಿ ಸಿಖ್‌ರು ಸೋತರು. ಬ್ರಿಟಿಷರ ಪಾಲಿಗೆ ಆರಂಭದಿಂದಲೂ ಜಯ ಒಲಿಯುತ್ತಾ ಬಂದಿತು. ನೆರೆ ಹೊರೆ ಪ್ರದೇಶಗಳಲೆಲ್ಲಾ ಒಂದರ ಹಿಂದೆ ಒಂದರಂತೆ ಯುದ್ಧಗಳು ನಡೆಯುತ್ತಲೇ ಸಾಗಿದವು. ಎಲ್ಲದರಲ್ಲೂ ಬ್ರಿಟಿಷರಿಗೆ ಜಯ. ಕೇವಲ ಒಂದು ತಿಂಗಳ ಅವಧಿಯೊಳಗೆ ಇಡೀ ರಾಜ್ಯ ಬ್ರಿಟಿಷರ ಪಾಲಾಯಿತು. ಜಗ್ರಾಂವ್ ಸಹ. ಲೂಧಿಯಾನ ವ್ಯಾಪ್ತಿಯಲ್ಲಿದ್ದ ಜಗ್ರಾಂವ್‌ನ್ನು ಬ್ರಿಟಿಷ್ ಪಡೆ ಫಿರೋಜ್‌ಪುರಕ್ಕೆ ಸೇರಿಸಿಕೊಂಡಿತು.

ಸುಮಾರು ಎರಡು ತಿಂಗಳು ಯುದ್ಧ ಸಾಗಿತು. ರಣಜಿತ್ ಸಿಂಗ್ ಬದುಕಿದ್ದಾಗ ಬ್ರಿಟಿಷರು ಮಾಡಿಕೊಂಡಿದ್ದ ಒಪ್ಪಂದ ರದ್ದಾಯಿತು. ಸಟ್ಲೇಜ್ ನದಿಯ ನೀರಿನ ಒಡೆತನ ಸಂಪೂರ್ಣವಾಗಿ ಬ್ರಿಟಿಷರಿಗೆ ದಕ್ಕಿತು. ಮುಂದಿನ 4 ವರ್ಷಗಳಲ್ಲಿ ಸಟ್ಲೇಜ್ ನದಿ ಆಚೆಗಿನ ಪಂಜಾಬ್ ಪ್ರದೇಶವೆಲ್ಲಾ ಬ್ರಿಟಿಷರ ಸಾಮ್ರಾಜ್ಯಕ್ಕೆ ಸೇರಿಕೊಂಡಿದ್ದು ನಂತರದ ಕಥೆ.

ಪಂಜಾಬಿಗೆ ಬ್ರಿಟಿಷರ ಆಡಳಿತ ಬಂದಾಗ, ನಾವಿಲ್ಲಿ ಓದುತ್ತಿರುವ ಅಗರವಾಲ ಸಮುದಾಯ ಶತ ಶತಮಾನಗಳಿಂದಲೂ ಮಲೇಕೋಟ್ಲಾ ಮತ್ತು ಅದರ ಆಸುಪಾಸಿನ ಪ್ರಾಂತ್ಯದಲ್ಲಿ ನೆಲಸಿದ್ದದ್ದಾಗಿತ್ತು. ಇತರೆಡೆಗಳಲ್ಲಿ ಅಗರವಾಲಗಳಂತೆಯೇ ಅವರು ಸಹ ವ್ಯಾಪಾರ ಮತ್ತು ಲೇವಾದೇವಿಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಆದರೂ ಅಲ್ಲಿ ಅವರಿಗೊಂದು ವಿಶಿಷ್ಟ ಗೌರವವಿತ್ತು. ಆಡಳಿತದ ಪ್ರಮುಖ ಸ್ಥಾನಗಳಲ್ಲಿ ಅಧಿಕಾರದಲ್ಲಿದ್ದ ಗೌರವ ಅದು. ಅಂದರೆ ತಲೆಮಾರುಗಳಿಂದಲೂ ರಾಜರುಗಳಿಗೆ ಖಜಾಂಚಿಯನ್ನು ನೀಡುತ್ತಾ ಬಂದ ಸಮುದಾಯ ಅದು. ಮಲೇಕೋಟ್ಲಾದ ಮುಸ್ಲಿಂ ಆಡಳಿತಗಾರರು ಸಹ ಆ ಸಮುದಾಯದವರನ್ನೇ ಖಜಾಂಚಿಯನ್ನಾಗಿ ನೇಮಿಸಿಕೊಂಡಿದ್ದರು. ಮಲೇಕೋಟ್ಲಾ ಪಂಜಾಬಿನ ಆಗ್ನೇಯದ ಒಂದು ಸಣ್ಣ ರಾಜ್ಯವಾಗಿತ್ತು.

ಲೂಧಿಯಾನದಿಂದ ಮಲೇಕೋಟ್ಲಾಕ್ಕೆ ತಲುಪಲು ರೈಲಿನಲ್ಲಿ 45 ನಿಮಿಷಗಳ ಪ್ರಯಾಣ. ಅಲ್ಲಿಯ ಜನಸಂಖ್ಯೆ 20 ಸಾವಿರಕ್ಕಿಂತ ಸ್ವಲ್ಪ ಹೆಚ್ಚು. ಆರಂಭದಲ್ಲಿ ಮಲೇ ಮತ್ತು ಕೋಟ್ಲಾ ಎರಡು ಪ್ರತ್ಯೇಕ ನಗರಿಗಳಾಗಿದ್ದವು. ಎರಡರ ಮಧ್ಯೆ ರೂಪುಗೊಂಡ ಸುಂದರ ಮೋತಿ ಬಜಾರ್ 20ನೇ ಶತಮಾನದಲ್ಲಿ ಎರಡು ನಗರಿಗಳನ್ನು ಬೆಸೆಯಿತು.

ನಮ್ಮ ಕಥೆಯಲ್ಲಿ ಬರುವ ಅಗರವಾಲಗಳು ಮೂಲತಃ ಮಲೇ ನಗರದ ನಿವಾಸಿಗಳು. ಆ ಅವಳಿ ನಗರಗಳಲ್ಲಿ ಅದೇ ದೊಡ್ಡದು. ಚರಿತ್ರೆ ಹೇಳುವ ಪ್ರಕಾರ ಸಿಖ್‌ರ ಕಾಲದಲ್ಲಿ ಸ್ಥಳೀಯವಾಗಿ ಆ ಪ್ರದೇಶ ಕ್ಷೋಭೆಗೆ ಒಳಗಾಯಿತು. ವಿಧಿ ಇಲ್ಲದೆ ಅಗರವಾಲ ಸಮುದಾಯ ಗುಳೆ ಎದ್ದಿತು. ಆ ವಲಸೆ ಅತಿ ದೂರಕ್ಕೇನೂ ಸಾಗಲಿಲ್ಲ. ಅನೇಕರು ಪಕ್ಕದಲ್ಲೇ ಇರುವ ಸುಮಾರು ಮೂರು ಫರ್ಲಾಂಗ್ ದೂರದ ಕೋಟೆಗಳ ನಗರಿ ಕೋಟ್ಲಾದಲ್ಲಿ ಆಶ್ರಯ ಪಡೆದರು. ಉಳಿದವರು ಲೂಧಿಯಾನ ಮತ್ತು ಫಿರೋಜ್‌ಪುರ ಜಿಲ್ಲೆಗಳಲ್ಲಿ ಚೆಲ್ಲಾ ಚೆದುರಾದರು. ಹೀಗಾದರೂ ತಮ್ಮ ಗುರುತನ್ನು ಅವರೆಲ್ಲರೂ ಎಲ್ಲಾ ಕಡೆಗಳಲ್ಲೂ ಮಲೇರಿಗಳೆಂದೇ ಜನಪ್ರಿಯ ಮಾಡಿಕೊಂಡರು.

ಹಾಗೆ ಗುಳೆ ಎದ್ದ ಮಲೇರಿ ಅಗರವಾಲಗಳಲ್ಲಿ ಲಜಪತ್‌ರಾಯ್ ಅವರ ಪೂರ್ವಜರು ಜಗ್ರಾಂವ್‌ನಲ್ಲಿ ಆಶ್ರಯ ಪಡೆದರು. ಆಗ ಆ ಪಟ್ಟಣ ಫಿರೋಜ್‌ಪುರಕ್ಕೆ ಸ್ವಲ್ಪ ದೂರದಲ್ಲೇ ಇರುವ ಲೂಧಿಯಾನ ಜಿಲ್ಲೆಗೆ ಒಳಪಟ್ಟಿತು. ಈಗಲೂ ಸಹ ಪೂರ್ವಜರ ಮನೆ ಅಲ್ಲೇ ಇದೆ. ರಾಧಾಕಿಷನ್ ಅವರ ಮಕ್ಕಳು ತಮ್ಮ ತಂದೆ ಬದುಕಿದ್ದಾಗಲೇ ಅವರ ನೆನಪಿಗಾಗಿ ಕಟ್ಟಿದ ಶಾಲೆಯೂ ಅಲ್ಲಿದೆ. ನಂತರದಲ್ಲಿ ಅದನ್ನು ಕಾಲೇಜಿನ ಮೇಲ್ದರ್ಜೆಗೆ ಏರಿಸಲಾಗಿದೆ.

ರಾಧಾಕಿಷನ್ ಅವರ ತಂದೆ ಪಟವಾರಿಯಾಗಿ ಆಳರಸರ ಬಳಿ ಸೇವೆ ಸಲ್ಲಿಸುತ್ತಿದ್ದರು. ಪಟವಾರಿ ಎಂದರೆ ಒಂದು ಗೌರವಾನ್ವಿತ ಹುದ್ದೆ. ಹಳ್ಳಿಯ ಆಡಳಿತಗಾರ. ಭೂ ದಾಖಲೆಗಳು ಆತನಲ್ಲೇ. ರಾಧಾಕಿಷನ್ ಪಟವಾರಿಯಾಗಿದ್ದ ಹಳ್ಳಿ ಜಗ್ರಾಂವ್‌ಗೆ ತೀರಾ ಸಮೀಪದಲ್ಲೇ ಇತ್ತು. ನೋಟಕ್ಕೆ ಅಷ್ಟೇನೂ ಎತ್ತರದ ವ್ಯಕ್ತಿಯೇನೂ ಅಲ್ಲ. ಅವರ ಮೊಮ್ಮಗನ ಮಾತುಗಳಲ್ಲಿ ಹೇಳುವುದಾದರೆ ; ''ಕಷ್ಟಸಹಿಷ್ಣು, ಧೈರ್ಯಶಾಲಿ... ಬಲು ಚುರುಕು, ಬುದ್ಧಿವಂತ ಮತ್ತು ಸರಳವಾಗಿ ಎಲ್ಲರೊಂದಿಗೆ

ಮಿಳಿತವಾಗಬಲ್ಲವರಾಗಿದ್ದರು." ತನ್ನ ಪೂರ್ವಜರು ನಡೆಸಿಕೊಂಡು ಬಂದ ಶತಮಾನಗಳಷ್ಟು ಪರಂಪರೆಯ ಅಂಗಡಿ ವ್ಯಾಪಾರಿಯಾಗಿ, ಎಲ್ಲಾ ಏಳುಬೀಳುಗಳನ್ನು ಅವರು ಕಂಡಿದ್ದರು. ಮನೆತನಗಳ ಆಶೋತ್ತರಗಳಿಗೆ ಅನುಗುಣವಾಗಿ ಸಾಧ್ಯವಿರುವ ಎಲ್ಲಾ ಮಾರ್ಗದಿಂದಲೂ ಹಣ ಮಾಡುತ್ತಿದ್ದರು.

ಸಾಮಾನ್ಯ ನೋಟದಲ್ಲಿ ಪಟವಾರಿಗಳ ಬಗ್ಗೆ ಅಷ್ಟೊಂದು ಗಂಭೀರವಾದ ಭಾವನೆಗಳಿಲ್ಲ. ಅವರಿಗೆ ಕೊಡುತ್ತಿದ್ದ ಸಂಬಳ ಸಾರಿಗೆ ಹೆಚ್ಚಿಗೆ ಇರುತ್ತಿರಲಿಲ್ಲ. ಆದರೆ ಹಳ್ಳಿಯ ಆಡಳಿತದಲ್ಲಿ ಪಟವಾರಿ ಅವಿಭಾಜ್ಯ. ಆ ಹಳ್ಳಿಯಲ್ಲಿ ಆತನಿಗೆ ಎಲ್ಲಾ ಗೌರವ. ಯಾವುದಕ್ಕೂ ಕೊರತೆ ಇರುತ್ತಿರಲಿಲ್ಲ. ಕಾನೂನಿನ ಲೋಪದೋಷಗಳು ಆತನಿಗೆ ವರ. ಅಕ್ರಮ ಗಳಿಕೆಗೆ ವಿಪುಲ ಅವಕಾಶ. ಹೀಗಾಗಿ ಆತನ ಸಂಬಳ ಲೆಕ್ಕಕ್ಕೆ ಇರುತ್ತಿರಲಿಲ್ಲ. ಬಹುಶಃ ಆತನ ತೆರೆಮರೆಯ ಗಳಿಕೆಗೆ ಸಂಬಳ ಪೂರಕವೆಂದರೆ ಚೆನ್ನ. ಇಂದೂ ಸಹ ಭ್ರಷ್ಟಾಚಾರದ ಬಗ್ಗೆ ಭಾರೀ ಕೂಗೇಳುತ್ತಿದೆ. ಆದರೇನೂ ಭ್ರಷ್ಟಾಚಾರವಿಲ್ಲದ ಪಟವಾರಿಯೊಬ್ಬನನ್ನು ಕಾಣುವುದೆಂದರೆ ಬಿಳಿ ಕಾಗೆಯನ್ನು ಕಂಡಂತೆಯೇ ಸರಿ. ನಿಜವಾಗಿ ಹೇಳುವುದಾದರೆ ಮೇಲು ಸಂಪಾದನೆಯಾಗಿ ಪಟವಾರಿಗೆ ಸಂದಾಯವಾಗುವ ಮೊತ್ತವೆಲ್ಲಾ "ಟಿಪ್ಸ್" ಎಂದೇ ಪರಿಗಣಿತ. ಅದನ್ನು ಭ್ರಷ್ಟಾಚಾರ ಎಂದು ಕರೆಯಲಾದೀತೇ! ಎಲ್ಲಾ ಪಟವಾರಿಗಳು ಟಿಪ್ಸ್ ಸಂಗ್ರಹಿಸಿಯೇ ತೀರುತ್ತಾರೆ. ಅದು ತಮ್ಮ ಹಕ್ಕು ಎನ್ನುವಷ್ಟರ ಮಟ್ಟಿಗೆ. ಒತ್ತಾಯಪೂರ್ವಕವಾಗಿ ತೆಗೆದುಕೊಳ್ಳುವ ಪಟವಾರಿಗಳು ಇಲ್ಲದಿಲ್ಲ.

ಹೀಗೆ ವಂಶಪಾರಂಪರ್ಯವಾದ ಗುಣವನ್ನೇ ರೂಢಿಸಿಕೊಂಡ ರಾಧಾಕಿಷನ್ ಸಹ ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಂಡಿದ್ದರು.

ರಾಜಕೀಯ ಸ್ಥಿತ್ಯಂತರಗಳಾದಾಗ ಯಾವುದೇ ವರ್ತಕ ಸಮುದಾಯ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಅಂತಹ ಸಂದರ್ಭಗಳಲ್ಲಿ ಈ ಸಮುದಾಯ ಪರಿಸ್ಥಿತಿಗೆ ತಕ್ಕಂತೆ ತಾಳ ಹಾಕುತ್ತದೆ. ಮಲೇಕೋಟ್ಲಾದಲ್ಲಿ ಮುಸ್ಲಿಂ ಆಡಳಿತಗಾರರಿಗೂ ಸಿಖ್‌ರಿಗೂ ಕದನ ಏರ್ಪಟ್ಟಿತು. ಆಗಲೇ ಅಳಿವು-ಉಳಿವಿನ ಪ್ರಶ್ನೆಯಾಗಿ ಅಗರವಾಲಗಳು ಜಗ್ರಾಂವ್‌ಗೆ ಗುಳೆ ಎದ್ದು ಬಂದಿದ್ದು. ರಾಜಕೋಟೆಯಲ್ಲಿ ಮುಸ್ಲಿಂ ಕ್ಷೋಭೆ, ಕಪುರ್ತಲಾದಲ್ಲಿ ರಣಜಿತ್ ಸಿಂಗ್‌ನ ಅಹ್ಲುವಾಲಿಯ ಬಣದ ಕ್ಷೋಭೆ, ಸಿಖ್‌ರ ಪತನ, ಬ್ರಿಟಿಷರ ಹಿಡಿತ. ಅಗರವಾಲ ಸಮುದಾಯ ಚರಿತ್ರೆಯ ಉರುಳಿನಲ್ಲಿ ಕಂಡ ದುರ್ದಿನಗಳು. ರಾಧಾಕಿಷನ್ ಮಲೇರಿ ಪಟವಾರಿಯಾಗಿ ಯಶಸ್ವಿಯಾಗಿದ್ದೇನೋ ನಿಜ. ಅವರ ಶಿಕ್ಷಣ ತೀರಾ ಗೌಣ. ಆದರೂ ವಂಶ ಪಾರಂಪರ್ಯವಾಗಿ ಬಂದಂತೆ ವ್ಯಾಪಾರಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಲೆಕ್ಕಣಿಕೆ ಚೆನ್ನಾಗಿ ಕಲಿತಿದ್ದರು. ಮಹಾಜನಿ ಎಂದೇ ಕರೆಯಲ್ಪಡುವ ಆ ಲೆಕ್ಕಪತ್ರ ವಿಧಾನ ಅವರಿಗೆ ಮಾತ್ರ ಸೀಮಿತವಾದುದು. ಪರ್ಷಿಯನ್ ಭಾಷೆಯಾಗಲಿ, ಉರ್ದು ಭಾಷೆಯಾಗಲಿ ಗಣನೆಗಿಲ್ಲ. ಪಟವಾರಿಗಳ ಲೆಕ್ಕಪತ್ರ ನಿರ್ವಹಣೆ ಆ ಎರಡು ಭಾಷೆಗಳ ಧಾಟಿಯಲ್ಲೂ ಅಲ್ಲ.

ರಾಜಕೀಯ ಪರಿವರ್ತನೆ ಮತ್ತು ಆಡಳಿತ ಮಾರ್ಪಾಟುಗಳಲ್ಲಿ ಪರ್ಷಿಯನ್ ಮತ್ತು ಉರ್ದು ಭಾಷೆಗಳು ಪ್ರಧಾನವಾಗುತ್ತ ಬಂದವು. ದಾಖಲೆಗಳಲ್ಲಿ ಆ ಭಾಷೆಯ

ಬಳಿಕ ಅನಿವಾರ್ಯವಾಯಿತು. ಪಟವಾರಿಗಳು ಬದಲಾದ ಪರಿಸ್ಥಿತಿಯನ್ನು ಬಹು ಬೇಗ ಅರಿತರು. ಅವರ ಜಾಣ್ಮೆಯೇ ಅಂತಹುದು. ಪರ್ಷಿಯನ್ ಮತ್ತು ಉರ್ದು ಭಾಷೆಗಳಲ್ಲಿ ಪರಿಜ್ಞಾನ ಇದ್ದವರು ಅಧಿಕಾರ ಸೇವೆಗಳ ಅವಕಾಶ ಪಡೆಯುವ ಮೊದಲೇ ಪಟವಾರಿಗಳು ಆ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದದ್ದು ಅವರ ವ್ಯಾಪಾರಿ ಮನೋಧರ್ಮಕ್ಕೆ ಹಿಡಿದ ಕೈಗನ್ನಡಿ. ಹೀಗೆ ಯಾವುದೇ ರಾಜಕೀಯ ಪರಿಸ್ಥಿತಿಯಲ್ಲೂ ತಮ್ಮ ಹಣಕಾಸಿನ ಸೇವೆ ಸುಲಲಿತವಾಗಿ ತೇಲುವಂತೆ ನೋಡಿಕೊಳ್ಳುತ್ತಾ ಬಂದವರು. ಎಷ್ಟೇ ನ್ಯೂನತೆಗಳಿದ್ದರೂ ಅವುಗಳನ್ನು ಸರಿಪಡಿಸಿಕೊಂಡು ತಮ್ಮ ವ್ಯಾಪಾರಿ ಹಿತವನ್ನು ನಿರ್ವಹಿಸಬಲ್ಲ ಪಟವಾರಿಯನ್ನು ಅಗರವಾಲ ಸಮುದಾಯ ಒದಗಿಸುತ್ತಾ ಬಂದಿತು. ಇತಿಹಾಸ ಮಾರ್ಪಾಟಿನಲ್ಲಿ ಪಟವಾರಿಗಳು ಬೆಳೆದು ಬಂದ ಸ್ಥಿತಿಯನ್ನು ಹೀಗೆಯೇ ಗುರುತಿಸುತ್ತಾ ಬರಲಾಗಿದೆ. ಕಾಲಕ್ಕೆ ತಕ್ಕಂತೆ ಉಚಿತವಾದ ತರಬೇತಿ ಮತ್ತು ಅರ್ಹತೆಗಳನ್ನು ಸಾಧಿಸಿಕೊಳ್ಳುತ್ತಾ ಬಂದ ಸಮುದಾಯ ಅದಾಗಿದೆ. ಆ ಸಮುದಾಯದೊಂದಿಗೆ ಹೋಲಿಸಬಹುದಾದ ಇನ್ನೊಂದು ಸಮುದಾಯವೆಂದರೆ ಜಾಟ್‌ಭಾಯಿಗಳು. ವಂಶ ಪರಂಪರಾಗತವಾದ ಸಂಪ್ರದಾಯ, ಧಾರ್ಮಿಕ ಅನುಷ್ಠಾನಗಳಲ್ಲಿ ಈ ಎರಡು ಸಮುದಾಯಗಳ ನಡುವೆ ಕಿಂಚಿತ್ತೂ ಅಂತರ ಕಂಡು ಬರುವುದಿಲ್ಲ. ಅಗರವಾಲ ಸಮುದಾಯಗಳ ತರವೇ ಜಾಟ್‌ಭಾಯಿ ಸಹ ದಿನಕ್ಕೆರಡು ಬಾರಿ ನಿಯಮಿತವಾಗಿ ಪೂಜೆ, ಪ್ರಾರ್ಥನಾ ವಿಧಿಗಳನ್ನು ಸಲ್ಲಿಸುವನು. ಅಗರವಾಲಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಜೈನ ಧರ್ಮದ ಶ್ವೇತಾಂಬರ ಸಾಧುಗಳನ್ನು ಗುರುಗಳಂತೆ ಭಾವಿಸುವ ವರ್ಗವೂ ಆ ಸಮುದಾಯದ ವಿಶೇಷ.

ರಾಧಾಕಿಷನ್ ತಂದೆ ಸಹ ಇದರಿಂದ ಹೊರತಾಗಿರಲಿಲ್ಲ. ಆದರೆ ಅವರ ಪತ್ನಿ ತೀರಾ ವಿಭಿನ್ನ. ಆಕೆಯೇನೂ ಅಕ್ಷರಸ್ಥೆಯಲ್ಲ. 20ಕ್ಕಿಂತ ಹೆಚ್ಚು ಎಣಿಸುವುದು ಆಕೆಗೆ ಕಷ್ಟವಾಗಿತ್ತು. ಅಂದಿನ ಮಹಿಳಾ ವರ್ಗಕ್ಕೆ ಹೋಲಿಸಿದರೆ ಆಕೆಯ ಕಲಿಕೆ ಅಗ್ಗಳಿಕೆಯೇ ಸರಿ. ಆದರೂ ಆಕೆ ಧನಪಿಪಾಸುವಾಗಿರಲಿಲ್ಲ. ತನ್ನ ಈ ಅಜ್ಜಿಯ ಬಗ್ಗೆ ಬರೆಯುತ್ತಾ ಲಜಪತ್‌ರಾಯ್ ಹೀಗೆಂದಿದ್ದಾರೆ. ''ಶುದ್ಧ ಧಾರ್ಮಿಕ ಮಹಿಳೆಯಾಗಿ, ತುಂಬು ಹೃದಯಿಯಾಗಿ, ಆದರ ಆತಿಥ್ಯಗಳ ಗಣಿಯಾಗಿ, ದಯಾಳುವಾಗಿ, ಸರಳವಾದ ಬದುಕು ಕಂಡವರು. ಹಣವನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಅವರಿಂದ ಸಾಧ್ಯವೇ ಇರಲಿಲ್ಲ. ಗಂಡ ಸಹ ಆಕೆಯ ಮನೋಧರ್ಮ ಅರಿತೋ ಏನೋ ಹಣವನ್ನು ಆಕೆಯ ಕೈಯಲ್ಲಿ ಕೊಡುತ್ತಿರಲಿಲ್ಲ. ಜೀವನ ಪರ್ಯಂತ ಆಕೆ ಬೀಗವನ್ನು ಬಳಸಿದವರಲ್ಲ-ಕೀಲಿಯನ್ನು ಭದ್ರವಾಗಿ ಇಟ್ಟುಕೊಂಡವರಲ್ಲ. ಒಡವೆಗಳ ಬಗ್ಗೆ ಮೋಹವೇ ಇರಲಿಲ್ಲ. ವಸ್ತ್ರಗಳ ಬಗ್ಗೆಯೂ ಅಷ್ಟೇ. ತನ್ನ ಗಂಡ ತನಗೆ ಕೊಡುವುದನ್ನೆಲ್ಲವನ್ನು ಆಕೆ ಬೇರೆಯವರಿಗೆ ಕೊಟ್ಟು ಬಿಡುತ್ತಿದ್ದರು. ಅಂತಹ ಮಹಿಳೆಯನ್ನು ನಾನು ಕಂಡೇ ಇಲ್ಲ.''

ವಿಧಿ ಕೈ ಚಳಕ ವಿಚಿತ್ರವೆನ್ನಬೇಕು. ಅಂತಹ ವಿಚಿತ್ರದ ಸೃಷ್ಟಿಯಾಗಿಯೇ ರಾಧಾ ಕಿಷನ್ ತಾಯಿ ಜನಿಸಿರಬೇಕು. ಹಣ ಗಳಿಕೆಯೇ ಪ್ರಧಾನವಾದ ಸಮುದಾಯದಲ್ಲಿ ಹುಟ್ಟಿ ಅಂತಹ ಗುಣಗಳನ್ನೇ ಮೈಗೂಡಿಸಿಕೊಂಡ ಗಂಡನ ಕೈ ಹಿಡಿದರೂ ಉದಾತ್ತವಾದ ಗುಣಗಳು ಆಕೆಯಲ್ಲಿ ಇದ್ದದ್ದು ಅಚ್ಚರಿಯೇ ಸರಿ. ಈ ವಿಭಿನ್ನ ಮಹಿಳೆ ಇನ್ನೊಂದು

ಅಧ್ಯಯನಕ್ಕೂ ಕಾರಣವಾಗಿದ್ದು ಕಾಣದ ಕೈಗಳ ವಿಚಿತ್ರ ಕೊಡುಗೆ. ವಿಜ್ಞಾನದ ಸಂಶೋಧನೆಗೆ ಆಕೆ ಒಂದು ಜ್ವಲಂತ ವಸ್ತುವಾದರು. ಗಂಡನ ದಿವಂಗತ ಸೋದರಿಯ ಆತ್ಮ ಆಕೆಯನ್ನು ಆಗಾಗ ಆವರಿಸುತ್ತಿತ್ತು ಎಂದು ಹೇಳಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಇಡೀ ಕುಟುಂಬದ ಸದಸ್ಯರೆಲ್ಲರೂ ಆಕೆಯ ಸುತ್ತ ಸೇರಿಕೊಳ್ಳುತ್ತಿದ್ದರು. ಪ್ರವಾದಿಯಂತೆ ಮಾನ್ಯ ಮಾಡುತ್ತಿದ್ದರು. ಮುಂದಿನ ಆಗುಹೋಗುಗಳ ಬಗ್ಗೆ ಕೇಳುತ್ತಿದ್ದರು. ಭವಿಷ್ಯದ ಬಗ್ಗೆ ಆ ಸಂದರ್ಭಗಳಲ್ಲಿ ಆಕೆ ಸೂಚನೆಗಳನ್ನು ನೀಡುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಆಕೆ ಹೇಳುತ್ತಿದ್ದ ಮಾತುಗಳು ನಿಜವಾಗುತ್ತಿದ್ದವು. ಕಂಡು ಕೇಳರಿಯದ ವಿದ್ಯಮಾನಗಳು ಘಟಿಸುತ್ತಿದ್ದವು. ಬೇರೊಂದು ಆತ್ಮ ಆಕೆಯನ್ನು ಆವರಿಸಿ ಹಾಗೆ ಕೇಳಿಸುತ್ತಿತ್ತೋ ಅಥವಾ ಬೇರಾವುದೇ ಮಾನಸಿಕ ವೈಚಿತ್ರ್ಯವೋ ಒಟ್ಟಿನಲ್ಲಿ ಆಕೆಯ ಆ ಸಂದರ್ಭದ ಮಾತುಗಳಲ್ಲಿ ಕುಟುಂಬದವರೆಲ್ಲರಿಗೂ ಅತುಲ ವಿಶ್ವಾಸವಿತ್ತು. ನಮ್ಮ ಕಥಾನಾಯಕ, ಆಕೆಯ ಮೊಮ್ಮಗನೂ ಕೂಡಾ ಪುಟ್ಟ ಬಾಲಕನಾಗಿ ಅಜ್ಜಿಯ ಮನೋವಿಕಾರದ ಆ ಸಂದರ್ಭಗಳನ್ನು ವೀಕ್ಷಿಸಿದ್ದಾರೆ. ಅದರ ಬಗ್ಗೆ ಬರೆದಿಟ್ಟಿದ್ದಾರೆ. ಆದರೆ ತನ್ನ ಅಜ್ಜಿಯ ಆ ನಡವಳಿಕೆಗಳ ಬಗ್ಗೆ ಯಾವುದೇ ವಿವರಣೆ, ವಿಶ್ಲೇಷಣೆಗಳನ್ನು ಸೇರಿಸಿಲ್ಲ. ಒಂದು ಮಾತನ್ನಂತೂ ಸ್ಪಷ್ಟವಾಗಿ ಬರೆದಿಟ್ಟಿದ್ದಾರೆ, ''ತಂತ್ರವಾಗಲಿ, ವಂಚನೆಯಾಗಲಿ, ಮಾಟ, ಮೋಡಿಯಾಗಲಿ, ನನ್ನ ಅಜ್ಜಿಗೆ ಗೊತ್ತಿರಲಿಲ್ಲ. ಅವರ ಆರೋಗ್ಯ ಅತ್ಯುತ್ತಮವಾಗಿತ್ತು. ಕಾಯಿಲೆ ಮಲಗಿದ್ದೇ ನನಗೆ ತಿಳಿಯದು.''

ರಾಧಾಕಿಷನ್ ತಂದೆ ಒಂದು ರೀತಿಯಲ್ಲಿ ಅಲೆಮಾರಿ ಮನೋಭಾವದವರು. ರೈಲುಗಳೇ ಇಲ್ಲದಿದ್ದ ಕಾಲದಲ್ಲಿ ಅವರು ದೀರ್ಘ ಪ್ರಯಾಣ ಕೈಗೊಂಡರೇ ಎಂಬುದು ನಮಗೆ ತಿಳಿದು ಬರುವುದಿಲ್ಲ. ಅವರ ಕೊನೆಗಾಲವೂ ಅಂತಹ ವೈಪರಿತ್ಯದಲ್ಲೇ ಕಂಡು ಬರುತ್ತದೆ. ಪ್ರಯಾಣ ಮಾಡುತ್ತಿದ್ದಾಗ ಕಾಯಿಲೆ ಹಿಡಿದವರು ಮತ್ತೆ ಚೇತರಿಸಿಕೊಳ್ಳಲೇ ಇಲ್ಲ. ಇಂತಹ ವೈವಿಧ್ಯ ನಡವಳಿಕೆಯ ದಂಪತಿಗಳ ಮಗನಾಗಿ ಹುಟ್ಟಿದ ರಾಧಾಕಿಷನ್ ಬದುಕಿನ ರೀತಿಯೂ ವಿಭಿನ್ನ. ಅದರಲ್ಲೂ ಅವರ ಧಾರ್ಮಿಕ ಬದುಕು ಅಸಾಮಾನ್ಯ. ಆ ವೇಳೆಗೆ ಲಾರ್ಡ್ ಮೆಕಾಲೆ ಭಾರತದಲ್ಲಿ ಶಿಕ್ಷಣ ರೀತಿಯ ಬಗ್ಗೆ ತನ್ನ ಪ್ರಸಿದ್ಧ ವರದಿಯನ್ನು ಪ್ರಕಟಿಸಿದ್ದ. ಅದರ ಫಲವಾಗಿಯೇ ಆಗ ಶಾಲೆಗಳು ಆರಂಭಗೊಂಡಿದ್ದವು. ರಾಧಾ ಕಿಷನ್ ಅವರ ಶಿಕ್ಷಣ. ಕಾಲದ ಪರಿವರ್ತನೆಗೆ ಹೊಂದಿಕೊಂಡ ಅಗರವಾಲ ಸಮುದಾಯದ ಪ್ರಕಾರ ಆಂಗ್ಲ ಶಾಲೆಯಿಂದಲೇ ಆರಂಭಗೊಂಡಿತು. ಮೆಕಾಲೆ ದೇಶವಾಸಿಗಳು ರಾಧಾ ಕಿಷನ್ ಹುಟ್ಟಿ ಬೆಳೆದ ಊರಿನಲ್ಲಿ ಸ್ಥಾಪಿಸಿದ ಶಾಲೆಯನ್ನು ಓರ್ವ ಮೌಲ್ವಿ ನಡೆಸುತ್ತಿದ್ದರು. ಅದನ್ನು ಪರ್ಷಿಯನ್ ಶಿಕ್ಷಣ ಎಂದು ಕರೆಯಲಾಗಿದೆ. ರಾಧಾಕಿಷನ್ ಬಲು ಚುರುಕು ವಿದ್ಯಾರ್ಥಿ. ತರಗತಿಯಲ್ಲಿ ಯಾವಾಗಲೂ ಅಗ್ರಶ್ರೇಣಿ ಅವರದೇ. ಶಾಲೆಯ ಅಂತಿಮ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿ ಗಳಿಸಿ ಇಡೀ ಪಂಜಾಬಿಗೆ ಮೊದಲಿಗರಾಗಿ ತೇರ್ಗಡೆಯಾದರು. ಗಣಿತ ಮತ್ತು ಭೌತ ವಿಜ್ಞಾನಗಳಲ್ಲಿ ತುಂಬು ಅಂಕಗಳನ್ನು ಗಳಿಸಿದ ಸಾಧನೆ ಅವರದು. ಅವರು ಕೇವಲ ಬುದ್ಧಿವಂತರಷ್ಟೇ ಆಗಿರಲಿಲ್ಲ. ಅದಕ್ಕಿಂತಲೂ ಹೆಚ್ಚಿನ ಧೀಶಕ್ತಿ ಅವರಲ್ಲಿತ್ತು. ಶಾಲೆಗಳಲ್ಲಿ ಪ್ರಥಮ ಸ್ಥಾನ ಗಳಿಸುವುದು, ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾಗುವುದು, ಬಹುಮಾನವೆಲ್ಲವನ್ನು ತಮ್ಮದಾಗಿಸಿಕೊಳ್ಳುವುದಕ್ಕಿಂತಲೂ ಹೆಚ್ಚಿನ ದೃಷ್ಟಿಕೋನ ಅವರಲ್ಲಿತ್ತು. ಬೌದ್ಧಿಕ ಸ್ಥಿತಿಸ್ಥಾಪಕತ್ವ ಅಸಾಧಾರಣವಾಗಿತ್ತು. ತತ್ಫಲವಾಗಿ

ರಾಧಾಕಿಷನ್ ಹಣ ಸಂಪಾದನೆ ಮತ್ತು ಅದಕ್ಕೆ ಪೂರಕವಾದ ಸೂತ್ರಗಳಿಗಿಂತಲೂ ವಿಶಿಷ್ಟವಾದ ಗಳಿಕೆಯತ್ತ ಸಹಜವಾಗಿ ವಾಲಿದರು. ತಮ್ಮ ತಾಯಿಯಂತೆ ಹಣದ ಬಗ್ಗೆ ತೀರಾ ವೈರಾಗ್ಯದ ಮನೋಭಾವ ಅವರಲ್ಲೇನೂ ಇರಲಿಲ್ಲ. ತಂದೆಯಂತೆ ಕಂಡ ಕಂಡ ಮಾರ್ಗಗಳಿಂದ ಹಣ ಸಂಪಾದಿಸುವ ಹಪಾಹಪಿತನವೂ ಇರಲಿಲ್ಲ.

ಈ ಮಧ್ಯೆ ರಾಧಾಕಿಷನ್ ಅತುಲ ಧಾರ್ಮಿಕ ಆಸಕ್ತಿ ರೂಢಿಸಿಕೊಂಡರು. ಅದು ಅವರ ಪೂರ್ವಜರು ನೂರಾರು ವರ್ಷಗಳಿಂದ ಅಳವಡಿಸಿ ಅನುಷ್ಠಾನದಲ್ಲಿ ಇಟ್ಟುಕೊಂಡ ಬಂದ ಪದ್ಧತಿಗಳನ್ನು ವಿಶ್ಲೇಷಿಸುವಂತೆ ಮಾಡಿತು. ಇತರೆ ಧರ್ಮಗಳನ್ನು ಅಧ್ಯಯನ ಮಾಡಿ ಅವುಗಳ ಒಳಿತು-ಕೆಡುಕುಗಳನ್ನು ತಮ್ಮ ಧರ್ಮದೊಂದಿಗೆ ಹೋಲಿಸಿ, ಪುರಸ್ಕರಿಸಿ, ಸಮ್ಮತವಾದುದನ್ನು ಒಪ್ಪಿಕೊಳ್ಳುವ ಮನೋಧರ್ಮ ಅವರಲ್ಲಿ ಬೆಳೆದು ಬಂದಿತು. ಆರಂಭದಲ್ಲಿ ಅವರನ್ನು ಆಕರ್ಷಿಸಿದ ಅನ್ಯ ಧರ್ಮ ಮುಸಲ್ಮಾನ ಧರ್ಮ. ಅವರಿಗೆ ಶಿಕ್ಷಕರಾಗಿದ್ದವರು ಸುನ್ನಿ ಮುಸಲ್ಮಾನರು. ''ಈ ಶಿಕ್ಷಕರು ತಮ್ಮ ಧರ್ಮದ ಕಟ್ಟಾ ಅನುಯಾಯಿಯಾಗಿದ್ದರು. ಅವರಲ್ಲಿ ಪ್ರಾಮಾಣಿಕತೆ ಇತ್ತು. ಒಳಿತು-ಕೆಡುಕುಗಳ ವಿವೇಚನೆ ಇತ್ತು'' ಎಂದು ಒಂದು ಕಡೆ ಹೇಳಿದ್ದಾರೆ.

ನಮಗೆ ತಿಳಿದು ಬರುವಂತೆ ಆ ಶಿಕ್ಷಕರ ಉದಾತ್ತ ಗುಣಗಳು ಅವರಲ್ಲಿ ಕಲಿಯುತ್ತಿದ್ದ ಅನೇಕ ಮುಸ್ಲಿಮೇತರ ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ಇಸ್ಲಾಂ ಧರ್ಮವನ್ನು ಅವರು ಅನುಸರಿಸುತ್ತಿದ್ದ ರೀತಿ ಕಾಲಾಂತರದಲ್ಲಿ ಅನೇಕ ಮುಸ್ಲಿಮೇತರ ಶಿಷ್ಯರು ಧರ್ಮಾಂತರ ಹೊಂದುವಂತೆ ಮಾಡಿತು. ಧರ್ಮ ಪರಿವರ್ತನೆಗೆ ಸಾಹಸ ಮಾಡಲಾಗದವರು ಮಾನಸಿಕವಾಗಿ ಆ ಶಿಕ್ಷಕರ ಬೋಧನೆ ಮತ್ತು ಅನುಷ್ಠಾನಗಳಿಗೆ ಮನಸೋತಿದ್ದರು.

ರಾಧಾಕಿಷನ್ ಸಹ ಇದಕ್ಕೆ ಹೊರತಾಗಿರಲಿಲ್ಲ. ಆ ಶಿಕ್ಷಕರ ಪ್ರಭಾವಕ್ಕೆ ಅತಿ ಹೆಚ್ಚಾಗಿಯೇ ಒಳಗಾಗಿದ್ದರು. ನಮಾಜಿನಲ್ಲಿ ಪಾಲ್ಗೊಳ್ಳುತ್ತಿದ್ದರು. ರಂಜಾನ್ ಉಪವಾಸ ಮಾಡುತ್ತಿದ್ದರು. ಉಲೇಮಾದಲ್ಲಿ ಗೆಳೆಯರೊಂದಿಗೆ ಮಿಳಿತವಾಗುತ್ತಿದ್ದರೂ ಕೂಡಾ. ವಿಧ್ಯುಕ್ತವಾಗಿ ಮತಾಂತರ ಹೊಂದಿರಲಿಲ್ಲ ಅಷ್ಟೇ. ಅದಕ್ಕಾಗಿ ತುದಿಗಾಲಲ್ಲಿ ನಿಂತಿದ್ದರೂ ಕೂಡಾ. ಆದರೆ ಕೌಟುಂಬಿಕವಾಗಿ ಎದುರಾಗಬಹುದಾದ ಬಿಕ್ಕಟ್ಟು, ಆಘಾತಗಳನ್ನು ಎದುರಿಸುವ ಶಕ್ತಿ ಇಲ್ಲದೆ ಅವರು ಆ ಸಾಹಸಕ್ಕೆ ಕೈ ಹಾಕಿರಲಿಲ್ಲ.

ರಾಧಾಕಿಷನ್ ಇಸ್ಲಾಂ ಧರ್ಮವನ್ನು ಸತ್ಯಾನ್ವೇಷಿಯಾಗಿ ಅಧ್ಯಯನ ಮಾಡಿದರು. ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಹೊಸ ಅಂಶಗಳನ್ನು ಟೀಕಾತ್ಮವಾಗಿ, ಹೊಸ ಧರ್ಮದ ರೀತಿ, ರಿವಾಜು ಅನುಷ್ಠಾನಗಳೊಂದಿಗೆ ತುಲನೆ ಮಾಡಿದರು. ಸರ್ ಸಯದ್ ಅಹಮದ್‌ಖಾನ್ ಬರೆಯತೊಡಗಿದ ಇಸ್ಲಾಂ ಧರ್ಮದ ಮುಕ್ತ ವಿಶ್ಲೇಷಣೆಯನ್ನು ಅವರು ಆಸಕ್ತಿ, ವಿಚಾರಪೂರ್ವಕವಾಗಿ ಓದತೊಡಗಿದರು. ಸರ್ ಸಯದ್ ಅವರ ವಿಶ್ಲೇಷಣೆಯನ್ನು ಸಹಜ ತತ್ವ ಸಿದ್ಧಾಂತವೆಂದೇ ಕರೆಯಲಾಗಿದೆ. ಸರ್ ಸಯದ್‌ರ ಬರಹವನ್ನೆಲ್ಲ ರಾಧಾಕಿಷನ್ ಸಮಗ್ರವಾಗಿ ಓದಿದರು. ವರ್ಷಾಂತರಗಳ ಕಾಲ ಅವರೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದರು. ಒಮ್ಮೆ ಒಂದು ಪತ್ರದಲ್ಲಿ ಮುಸಲ್ಮಾನ ಆಗಬೇಕಾದರೆ ರಾಧಾಕಿಷನ್ ಹೆಸರು ವರ್ಜಿಸಬೇಕೇ? ಇಸ್ಲಾಮಿಕ್ ಹೆಸರನ್ನು ಇಟ್ಟುಕೊಳ್ಳಬೇಕೇ? ಎಂಬ ಬಗ್ಗೆ ವಿವರಣೆ

ಕೇಳಿದ್ದರು. ಸರ್ ಸಯದ್‌ರು ಕೊಟ್ಟ ಉತ್ತರ ರಾಧಾಕಿಷನ್ ಅವರ ಹೃದಯಕ್ಕೆ ಮಾನ್ಯವಾಯಿತು. "ಮೂಲಧರ್ಮದಲ್ಲಿ ಹೆಸರಿನ ಪ್ರಸ್ತಾಪವೇ ಇಲ್ಲ. ಅಲ್ಲಾನಲ್ಲಿ ಖಚಿತ ನಂಬಿಕೆ ಇರಬೇಕು. ಆತನ ಪ್ರವಾದಿ ಮಹಮದರಲ್ಲಿ ಅನನ್ಯ ವಿಶ್ವಾಸವಿರಬೇಕು." ಸರ್ ಸಯದ್‌ರ ಈ ಉತ್ತರ ರಾಧಾಕಿಷನ್‌ರ ಮೇಲೆ ದೊಡ್ಡ ಪ್ರಭಾವ ಬೀರಿತು.

ರಾಧಾಕಿಷನ್ ಆತ್ಮೀಯ ಗೆಳೆಯ ನ್ಯಾಯವಾದಿ ಘೂನಿಚಂದ್ ಪ್ರಕಾರ ಅವರ ಗೆಳೆಯರದು ಧರ್ಮದ ವಿಷಯದಲ್ಲಿ ವಿಚಿತ್ರವಾದ ಮನೋಧರ್ಮವಾಗಿತ್ತು. ಮತ ಪರಿವರ್ತನೆಗೆ ಅವರು ತೀರಾ ಆಸಕ್ತರಾಗಿದ್ದರು. ಆದರೆ ವಿಚಿತ್ರ ಪರಿಸ್ಥಿತಿ, ಸಂಕಷ್ಟಗಳು ಪ್ರೋತ್ಸಾಹ ಕೊಟ್ಟಿರಲಿಲ್ಲ. ಘೂನಿಚಂದ್ ಮನೋಧರ್ಮ ಸಹ ಅದೇ ಆಗಿತ್ತು. ಒಂದು ದಿನ ಇದ್ದಕ್ಕಿದ್ದ ಹಾಗೆ ಇಬ್ಬರು ಗೆಳೆಯರು ಇಸ್ಲಾಂ ಧರ್ಮವನ್ನು ಬಹಿರಂಗವಾಗಿ ಅಪ್ಪಿಕೊಳ್ಳಲು ನಿರ್ಧರಿಸಿಬಿಟ್ಟರು. ಮಸೀದಿಗೂ ಹೊರಟರು. ರಾಧಾಕಿಷನ್ ಅವರ ಪತ್ನಿಗೆ ವಿಷಯ ತಿಳಿಯಿತು. ಆಕೆ ಬಲವಾದ ಅಡ್ಡಿ ಒಡ್ಡಿದರು. ತನ್ನ ಗಂಡ ಇಸ್ಲಾಂ ಧರ್ಮೀಯನಾಗುವ ಬಗ್ಗೆ ಆಕೆ ಬಹುದಿನಗಳಿಂದ ಕೇಳುತ್ತಾ ಬಂದಿದ್ದರು. ಅನ್ಯ ಧರ್ಮದ ಪರ ಧೋರಣೆಗಳನ್ನು ಸಹಿಸಿಕೊಳ್ಳುತ್ತಲೇ ಬಂದಿದ್ದರು. ಆದರೆ ವಾಸ್ತವವಾಗಿ ಧರ್ಮ ಪರಿವರ್ತನೆ ಮಾಡಿಕೊಳ್ಳುವ ಗಂಡನ ನಿಲುವನ್ನು ಆಕೆ ಸುತರಾಂ ಸಹಿಸಲಿಲ್ಲ. ಆಕೆಯ ತಂದೆ, ತಾಯಿಗಳು ಸಿಖ್ ಧರ್ಮದಲ್ಲಿ ನಂಬಿಕೆ ಇಟ್ಟಿದ್ದರು. ಬಾಲ್ಯದಲ್ಲಿಯೇ ತಂದೆ, ತಾಯಿಗಳ ಪ್ರಭಾವದ ಫಲವಾಗಿ ಸಿಖ್ ಧರ್ಮದ ಪ್ರಾರ್ಥನೆ, ಪೂಜಾ ವಿಧಾನಗಳನ್ನು ಕಲಿತುಕೊಂಡಿದ್ದರೂ ಕೂಡಾ. ತನ್ನ ಗಂಡನ ಮನೆಯಲ್ಲೂ ಸಿಖ್ ಮಂತ್ರವಾದ 'ಜಪ್ಜಿ' ಜಪಿಸುತ್ತಿದ್ದರು.

ರಾಧಾಕಿಷನ್ ಮುಸ್ಲಿಂ ಗೆಳೆಯರನ್ನು ಮನೆಗೆ ಕರೆ ತಂದಾಗ ಅವರ ಭೋಜನ ಸತ್ಕಾರಕ್ಕೆ ಆಕೆ ಸಂತೋಷದಿಂದಲೇ ಏರ್ಪಾಟು ಮಾಡುತ್ತಿದ್ದರು. ಸಂಪ್ರದಾಯ, ಪರಂಪರೆಗಳ ಹಿಡಿತ ಭದ್ರವಾಗಿದ್ದ ಆ ಕಾಲದಲ್ಲಿ ಹಿಂದೂ ಕುಟುಂಬವೊಂದರಲ್ಲಿ ಹೀಗೆ ನಡೆಯುವುದೆಂದರೆ ಸುಲಭದ ಮಾತೇನೂ ಆಗಿರಲಿಲ್ಲ. ತನ್ನ ಗಂಡನ ಧಾರ್ಮಿಕ ಪ್ರವೃತ್ತಿಯ ವಿಷಯದಲ್ಲಿ ಆಕೆ ಎಂದೂ ಮನೆಯಲ್ಲಿ ರಾದ್ಧಾಂತ ಮಾಡಿದವರಲ್ಲ. ತಮ್ಮ ಮನೆಯಲ್ಲಿ ಬಳಸುವ ತಟ್ಟೆ, ಲೋಟಗಳನ್ನೇ ಬಳಸಿ ಮುಸ್ಲಿಂ ಗೆಳೆಯರಿಗೆ ಆಕೆ ಸತ್ಕಾರ ನೀಡುತ್ತಿದ್ದರು. ನಂತರ ಲೋಹದ ಆ ತಟ್ಟೆ, ಲೋಟಗಳನ್ನು ಬೆಂಕಿಯಲ್ಲಿ ಶುದ್ಧೀಕರಣಗೊಳಿಸುತ್ತಿದ್ದರು.

ಆ ದಿನಗಳಲ್ಲಿ ಮಾಂಸಾಹಾರಿ ಅಗರವಾಲನನ್ನು ಆ ಸಮುದಾಯದವರು ದುರಾಚಾರಿ, ರಾಕ್ಷಸನೆಂದೇ ಪರಿಭಾವಿಸುತ್ತಿದ್ದರು. ಆದರೆ ಜೈನ್ ಇಲ್ಲವೇ ಹಿಂದೂ ಅಥವಾ ಅಗರವಾಲ ಸಂಪ್ರದಾಯ ಪರಂಪರೆಗಳಿಂದ ಅತೀತರಾದ ರಾಧಾಕಿಷನ್ ತಮ್ಮ ಮುಸ್ಲಿಂ ಗೆಳೆಯರ ಮನೆಯಿಂದ ಮಾಂಸದ ಊಟವನ್ನು ಮನೆಗೆ ತಂದು ತಿನ್ನುತ್ತಿದ್ದದ್ದು ಸಾಮಾನ್ಯ ದೃಶ್ಯವಾಗಿತ್ತು. ಈ ಎಲ್ಲಾ ಅತಿರೇಕಗಳನ್ನು ಆ ಪತ್ನಿ ಸಹಿಸಿಕೊಂಡಿದ್ದರು. ಆದರೂ ಯಾವ ಸಂದರ್ಭದಲ್ಲಿಯಾದರೂ ಪತ್ನಿ ತಮ್ಮ ಸಹಿಷ್ಣುತೆಯನ್ನು ಕಳೆದುಕೊಳ್ಳಬಹುದೆಂಬುದರ ಅರಿವು ರಾಧಾಕಿಷನ್ ಅವರಿಗಿತ್ತು.

ಮುಸ್ಲಿಂ ಧರ್ಮಕ್ಕೆ ಪರಿವರ್ತನೆಗೊಳ್ಳಲು ನಿರ್ಧರಿಸಿದ ದಿನ ರಾಧಾಕಿಷನ್ ತೀರಾ ಅನುಮಾನಪಟ್ಟರು. ಆಕೆ ಮಕ್ಕಳೊಂದಿಗೆ ಮನೆಯನ್ನೇ ಬಿಟ್ಟು ಹೋಗಬಹುದು. ಇಲ್ಲವೇ ತನ್ನ ತಂದೆಯ ಮನೆಗೆ ಹೋಗಿ ಆಸರೆ ಪಡೆಯಬಹುದು. ಅಥವಾ ಪ್ರತ್ಯೇಕ ಮನೆಯನ್ನೇ ಮಾಡಬಹುದು ಎಂದು ಅವರು ಎಣಿಸಿದ್ದರು. ರಾಧಾಕಿಷನ್‌ರ ಪುತ್ರ, ನಮ್ಮ ಕಥಾನಾಯಕ ಒಂದೆಡೆ ಹೀಗೆ ಬರೆದಿದ್ದಾರೆ. ''ನನ್ನ ತಂದೆ ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಳ್ಳದಂತೆ ನೋಡಿಕೊಳ್ಳಲಾಯಿತು... ಅದೊಂದು ಪವಾಡವೇ ಸರಿ... ಆ ಯಶಸ್ಸು ನನ್ನ ತಾಯಿಗೆ ಸಂದಾಯ.'' ಆದರೂ ಅವರ ಕುಟುಂಬದ ಗೆಳೆಯರಿಬ್ಬರು ನೀಡಿರುವ ಚಿತ್ರಣದ ರೀತ್ಯಾ, ರಾಧಾಕಿಷನ್‌ರ ಶುದ್ಧಿ ಅಥವಾ ಇಸ್ಲಾಂ ಪರಿವರ್ತನೆಯ ತಡೆಗೆ ಮಗು ಲಜಪತ್‌ರಾಯ್ ಕಾರಣ. ಅದು ಒಂದು ಪವಾಡ ಸದೃಶ್ಯವೇ. ಆ ಸಂದಿಗ್ಧ ಪರಿಸ್ಥಿತಿಯಲ್ಲಿ, ಮಸೀದಿಯ ಹೊಸ್ತಿಲ ಬಳಿ ತಾಯಿ ಗುಲಾಬ್ ದೇವಿ ತನ್ನ ಗಂಡನನ್ನು ಮತ ಪರಿವರ್ತನೆಗೆ ಎಳೆಸದಂತೆ ಅಡ್ಡಗಟ್ಟಿದಾಗ ಮಗು ಲಜಪತ್‌ರಾಯ್ ಆಕೆಯ ತೋಳುಗಳಲ್ಲಿದ್ದರು. ರಾಧಾಕಿಷನ್ ಪತ್ನಿಯ ಮನವಿಯನ್ನು ಮಾನ್ಯ ಮಾಡಲಿಲ್ಲ. ಮಸೀದಿ ಹೊಸ್ತಿಲನ್ನು ದಾಟಿ ಒಳಗೆ ಪ್ರವೇಶಿಸುವವರಿದ್ದರು. ಅಷ್ಟರಲ್ಲಿ ಮಗು ಲಜಪತ್ ರಾಯ್ ಹಿಂದೆಂದೂ ಕಾಣದಷ್ಟು ವಿಚಿತ್ರವಾಗಿ ಕಿರುಚಿಕೊಂಡರು. ತಂದೆ ರಾಧಾಕಿಷನ್‌ಗೆ ಮಗುವಿನ ಆ ರೋದನವನ್ನು ಸಹಿಸಲಾಗಲಿಲ್ಲ. ಇನ್ನೊಂದು ರೀತಿಯಲ್ಲಿ ಮಗು ಲಜಪತ್ ರಾಯ್ ತಾಯಿಯ ಮೊರೆಗೆ ಬೆಂಬಲವಾಗಿದ್ದರು... ರಾಧಾಕಿಷನ್ ಮುಂದುವರಿಯಲಿಲ್ಲ. ಮುಸ್ಲಿಮರಾಗಲಿಲ್ಲ. ಪತ್ನಿ, ಮಗುವಿನೊಂದಿಗೆ ಮನೆಗೆ ಮರಳಿದರು.

ಗುಲಾಬ್ ದೇವಿ ಅಸಾಧಾರಣ ಕುಟುಂಬಿನಿ. ವಿಚಿತ್ರ ನಡವಳಿಕೆಯ ತನ್ನ ಗಂಡನೊಂದಿಗೆ ಆಕೆ ನಡೆಸಿದ ಸಂಸಾರದ ರೀತಿ, ಸಹನೆ ಅಮೋಘ. ರಾಧಾಕಿಷನ್‌ರ ಸಂಪಾದನೆ ಅವರ ತಂದೆಯಂತೆ ವಿಪುಲವಾಗಿರಲಿಲ್ಲ. ಅವರು ಓರ್ವ ಶಿಕ್ಷಕರೇನೋ ಆಗಿದ್ದರು. ಆದರೆ ಗಳಿಕೆ ಮಾತ್ರ ತೀರಾ ಕಡಿಮೆ. ತಿಂಗಳಿಗೆ 25 ರೂಪಾಯಿ. ಬೇರೆ ಯಾವುದೇ ಸಂಪಾದನೆಯ ಮಾರ್ಗಕ್ಕೆ ಅವರು ಇಳಿಯಲಿಲ್ಲ. ಸದಾ ಕಾಲ ಧಾರ್ಮಿಕ, ತಾತ್ವಿಕ ಅಧ್ಯಯನದಲ್ಲಿ ನಿರತರು. ವೃತ್ತಿಪರವಾಗಿಯೂ ಹೆಚ್ಚಿನದನ್ನು ಸಾಧಿಸಿಕೊಳ್ಳುವ ಮನೋಧರ್ಮವೂ ಅವರದಾಗಿರಲಿಲ್ಲ. ಇಲಾಖೆಯ ಮೇಲಾಧಿಕಾರಿಗಳನ್ನು ಒಲಿಸಿಕೊಳ್ಳುವ ಪರಿಯಂತೂ ಅವರಿಂದ ಬಲು ದೂರ. ಹಾಗಾಗಿ ವೃತ್ತಿಯಲ್ಲಿ ಬಡ್ತಿಯಾಗಲಿ, ಸಂಬಳವಾಗಲಿ ಹೆಚ್ಚಳವಾಗಲಿಲ್ಲ. ಲಜಪತ್‌ರಾಯ್ ತಮ್ಮ ತಂದೆಯನ್ನು ಶಿಕ್ಷಕರಾಗಿ ಕಂಡು ಹೀಗೆ ಬರೆದಿಟ್ಟಿದ್ದಾರೆ.

ಆ ವೇಳೆಗೆ ರಾಧಾಕಿಷನ್‌ರನ್ನು ಮುನ್ಶೀಜಿ ಎಂದು ಮಾನ್ಯ ಮಾಡಲಾಗಿತ್ತು. ಇಡೀ ಶಿಕ್ಷಕ ಬದುಕಿನಲ್ಲಿ ಮುನ್ಶೀ ರಾಧಾಕಿಷನ್ ಅವರಿಗೆ ವೇತನ ಬಡ್ತಿ ಸಿಕ್ಕಿದ್ದು ಕೇವಲ ಎರಡೇ ಬಾರಿ. ಅದು ತಲಾ 5 ರೂಪಾಯಿ! ಅವರು ನಿವೃತ್ತರಾದಾಗ ಅವರ ತಿಂಗಳ ಸಂಬಳ 35 ರೂಪಾಯಿ!

ಗುಲಾಬ್ ದೇವಿ ಕುಟುಂಬವನ್ನು ಅಷ್ಟು ಮೊತ್ತದಲ್ಲಿ ಹೇಗೆ ನಿರ್ವಹಿಸಿರಬೇಕು? ಅದೂ ಹತ್ತು ಮಕ್ಕಳ ತಂದೆ, ತಾಯಿ ಅವರು. ಆಕೆ ನಿಧನ ಹೊಂದುವ ವೇಳೆಗೆ

ಉಳಿದದ್ದು ಆರು ಮಕ್ಕಳು ಮಾತ್ರ. ನಾಲ್ವರು ಪುತ್ರರು ಮತ್ತು ಇಬ್ಬರು ಪುತ್ರಿಯರು. ಬಟ್ಟೆಬರೆಗಳಿಂದ ಹಿಡಿದು ಕುಟುಂಬದ ಎಲ್ಲಾ ಆಗುಹೋಗುಗಳನ್ನು ತನ್ನ ಗಂಡನ ಸೀಮಿತ ವರಮಾನದಲ್ಲೇ ನಿರ್ವಹಿಸಿದ ಮಹಿಳೆ ಆಕೆ. ಸಂಪ್ರದಾಯ, ಪರಂಪರೆಯಂತೆ ಹಬ್ಬ ಹರಿದಿನಗಳು ಇತರೆ ಕೈಂಕರ್ಯಗಳು ಮೇಲಿಂದ ಮೇಲೆ ಬರುತ್ತಿದ್ದವು. ಯಾವ ಸಂಸ್ಕಾರ, ವಿಧಿ ಆಚರಣೆಗಳನ್ನು ಆಕೆ ತಪ್ಪಿಸುತ್ತಿರಲಿಲ್ಲ. ಈ ಮಧ್ಯೆ ಧರ್ಮ ಪರಿವರ್ತನೆಗೊಳ್ಳುವ ಗಂಡನ ಒತ್ತಡ ಬೇರೆ. ಗುಲಾಬ್ ದೇವಿ ಇಷ್ಟೆಲ್ಲವನ್ನು ಏಕಾಂಗಿಯಾಗಿ, ಮೂಕವಾಗಿ ಸಹಿಸಿದರು. ನಿಜಕ್ಕೂ ಸಾಧ್ವಿ, ಕಷ್ಟ ಸಹಿಷ್ಣು, ಕುಟುಂಬದ ಗೌರವ ಪ್ರತಿಷ್ಠೆಗಳ ಸಂರಕ್ಷಣೆಯ ಜೀವಂತ ಸಾಕ್ಷಾತ್ಕಾರ. ಕುಟುಂಬದಲ್ಲಿ ಎಂದೂ ನೆಮ್ಮದಿ ಕದಡಿದವರಲ್ಲ. ಅತಿರೇಕದ ಪರಿಸ್ಥಿತಿ ಉಂಟು ಮಾಡಿದವರಲ್ಲ. ತಮ್ಮೆಲ್ಲಾ ನೋವುಗಳನ್ನು ತಾವೇ ನುಂಗಿಕೊಂಡರು. ಅಪಾರವಾದ ದುಃಖವನ್ನು ತಮ್ಮಲ್ಲೇ ಅಡಗಿಸಿಕೊಂಡರು. ಅಮ್ಮ ತಾಯಿ ಒಂಟಿಯಾಗಿ ಕುಳಿತು ಗಂಟೆಗಟ್ಟಳೆ ಅಸಹಾಯಕತೆಯಿಂದ ಕಣ್ಣೀರು ಸುರಿಸುತ್ತಿದ್ದನ್ನು ಬಾಲಕ ಲಜಪತ್‌ರಾಯ್ ನಿರ್ವಿಣ್ಣರಾಗಿ ನೋಡುತ್ತಿದ್ದರು. ಅವರು ತಾಯಿಯ ದಯನೀಯ ಸ್ಥಿತಿಯನ್ನು, "ದಿನಗಟ್ಟಳೆ ಅಮ್ಮ ಊಟ ಮಾಡುತ್ತಿರಲಿಲ್ಲ. ಮಕ್ಕಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮೃದುವಾಗಿ ಅವರ ತಲೆ, ಬೆನ್ನುಗಳನ್ನು ನೇವರಿಸುತ್ತಾ, ನಿಟ್ಟುಸಿರು ಬಿಡುತ್ತಿದ್ದರು. ಏನೇ ಆದರೂ ಪತಿಯನ್ನು ಅಗಲುವ ಬಗ್ಗೆ ಅವರು ಯಾವ ಕ್ಷಣದಲ್ಲೂ ಯೋಚಿಸಿದವರಲ್ಲ. ಸದಾ ತಮ್ಮ ಪತಿಯೊಂದಿಗೆ ಬದುಕಲು, ಸಾಂಗತ್ಯದಲ್ಲಿರಲು ಅವರು ತವಕಿಸುತ್ತಿದ್ದರು. ಒಂದೆರಡು ದಿನ ಸಹ ತಂದೆಯಿಂದ ದೂರವಾಗಿ ಅವರು ಇದ್ದದ್ದು ನನ್ನ ನೆನಪಿನಲ್ಲಿ ಇಲ್ಲ... ನಾವೆಲ್ಲರೂ ಆ ನೋವು ಕಂಡೆವು. ಅನುಭವಿಸಿದೆವು. ಸಾಧ್ಯವಾದಷ್ಟು ನಮ್ಮ ತಂದೆಯ ಮತ ಪರಿವರ್ತನೆಯ ಅವಘಡವನ್ನು ತಪ್ಪಿಸಲು ನಮ್ಮ ತಾಯಿಗೆ ನೆರವಾದೆವು" ಎಂದು ದಾಖಲಿಸಿದ್ದಾರೆ.

ಲಜಪತ್‌ರಾಯ್ ಅವರ ತಾಯಿಗೆ ಒಳ್ಳೆಯ ದಿನಗಳು, ದುರ್ದಿನಗಳು ಎಂಬ ತಾರತಮ್ಯವಿರಲಿಲ್ಲ. ತಮ್ಮ ಪಾಲಿಗೆ ಬಂದದ್ದೆಲ್ಲವನ್ನು ಸಮನಾಗಿ ಕಾಣುತ್ತಿದ್ದರು. ರಾಧಾಕಿಷನ್ ತಮ್ಮ ಧರ್ಮ ಪರಿವರ್ತನೆಯ ಬಗ್ಗೆ ಅದೆಷ್ಟೋ ಸಲ ಪತ್ನಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ್ದು ಉಂಟು. ಕೊನೆಗೆ ಲಜಪತ್‌ರಾಯ್ ಮೂಲಕ ಪತ್ನಿಯ ಮನ ಒಲಿಸಲು ಯತ್ನಿಸಿದರು ಕೂಡಾ. ಗುಲಾಬ್ ದೇವಿ ಈ ಅವಘಡಗಳ ವಿಷಯದಲ್ಲಿ ಬಿಗಿ ನಿಲುವು ತಾಳಿದ್ದರು. ಈ ಮಧ್ಯೆ ಅವರ ಆರೋಗ್ಯವೂ ಹದಗೆಡತೊಡಗಿತು. ಒಂದೆಡೆ ಮಾನಸಿಕ ಹಿಂಸೆ, ಇನ್ನೊಂದೆಡೆ ದೊಡ್ಡ ಕುಟುಂಬವನ್ನು ಸೀಮಿತ ಸಂಪಾದನೆಯಲ್ಲಿ ನಿರ್ವಹಿಸುವ ಹೊಣೆಗಾರಿಕೆ. ಮತ್ತೊಂದೆಡೆ ಅಪಾರವಾದ ಗೃಹಕೃತ್ಯಗಳ ನಿರ್ವಹಣೆ. ಆಕೆ ಅಕ್ಷರಸ್ಥೆಯೂ ಅಲ್ಲ. ಅಂದಿನ ದಿನಗಳಲ್ಲಿ ಸಮೃದ್ಧಿ ಹೊಂದಿದ ಹಿಂದೂ ಕುಟುಂಬಗಳಲ್ಲೂ ಹೆಣ್ಣು ಮಕ್ಕಳಿಗೆ ಶಿಕ್ಷಣದ ಸೌಲಭ್ಯವಿರಲಿಲ್ಲ ಎಂದ ಮೇಲೆ ಲಜಪತ್ ರಾಯ್ ಅವರ ತಾಯಿಯ ಮಾತೇನು?

ಹೀಗಾಗಿ ರಾಧಾಕಿಷನ್ ತಮ್ಮ 40ನೇ ವಯಸ್ಸಿನ ತನಕ ಅನಧಿಕೃತ ಮುಸ್ಲಿಂ ಆಗಿಯೇ ಮುಂದುವರೆದರು. ಅವರು ಇಸ್ಲಾಂ ಧರ್ಮವನ್ನು ಅನನ್ಯ ಮನಸ್ಸಿನಿಂದ, ನಿಷ್ಠೆಯಿಂದ ಒಪ್ಪಿಕೊಂಡಿದ್ದರಷ್ಟೇ ಅಲ್ಲ ಅದನ್ನು ಅನುಷ್ಠಾನಕ್ಕೂ ತಂದಿದ್ದರು. ತತ್ಫಲವಾಗಿ

ವಂಶ ಪಾರಂಪರ್ಯವಾಗಿ ಬಂದ ತಮ್ಮ ನಿಜ ಧರ್ಮ ಮತ್ತು ಪೂರ್ವಜರು ಅನುಸರಿಸಿಕೊಂಡು ಬಂದ ಸಂಪ್ರದಾಯ ವಿಧಿಗಳನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದರು. ಇಸ್ಲಾಂ ಧರ್ಮದ ಅನುಷ್ಠಾನಗಳನ್ನು ಗುಟ್ಟಾಗಿಯೋ ಅಥವಾ ಖಾಸಗಿಯಾಗಿಯೋ ಅನುಷ್ಠಾನ ಮಾಡುವುದು ಸಹ ಅವರಿಗೆ ಹಿಡಿಸುತ್ತಿರಲಿಲ್ಲ. ತಮ್ಮ ನಿಲುವು ಧೋರಣೆಗಳನ್ನು ವ್ಯಕ್ತಿಗತವಾಗಿಯೂ ಇಟ್ಟುಕೊಳ್ಳುತ್ತಿರಲಿಲ್ಲ. ತಮ್ಮ ಧರ್ಮದ ತೆಗಳಿಕೆ ಮತ್ತು ಇಸ್ಲಾಂ ಧರ್ಮದ ಹೊಗಳಿಕೆಯನ್ನು ಆ ಕಾಲದ ಬಹೋ ಪ್ರೆಸ್ ವೃತ್ತ ಪತ್ರಿಕೆಯಲ್ಲಿ ಲೇಖನಗಳ ರೂಪದಲ್ಲಿ ಬರೆದರು.

ಅಂತಹ ವಿಚಲಿತ ಮನಸ್ಸಿನ ತಂದೆಯ ಮೇಲೂ ಕಾಲಾಂತರದಲ್ಲಿ ಪ್ರಭಾವ ಬೀರಿದ ಸಾಧನೆ ನಮ್ಮ ಕಥಾನಾಯಕರದು. ಮಗ ಲಜಪತ್‌ರಾಯ್ ನವ ಹಿಂದೂ ವಾದದ ತತ್ವಗಳನ್ನು ಅನುಸರಿಸತೊಡಗಿದ್ದು ಅವರ ತಂದೆಯನ್ನು ವಿಚಲಿತಗೊಳಿಸಿತು. ಹೊಸ ಅವಲೋಕನದಲ್ಲಿ ಹಿಂದೂ ವಾದವನ್ನು ಅಧ್ಯಯನ ಮಾಡತೊಡಗಿದಂತೆ ರಾಧಾಕಿಷನ್‌ರ ಭಾವನೆಗಳು ಪರಿವರ್ತನೆಗೊಳ್ಳತೊಡಗಿತು. ಹಿಂದೂ ಧರ್ಮದ ವಿಕೃತ ರೂಪ, ಅದರ ಆಚರಣೆಯಲ್ಲಿ ಇರುವ ಅನಿಷ್ಟ ನಡವಳಿಕೆಗಳನ್ನು ಲಜಪತ್‌ರಾಯ್ ತಮ್ಮ ತಂದೆಗೆ ಸಾದರಪೂರ್ವಕವಾಗಿ ನಿರೂಪಿಸಿದರು. ಆ ವಿಕೃತ ವಿರೂಪಗಳ ಕೆಳಗೆ ಅಡಗಿರುವ ಹಿಂದೂ ಧರ್ಮದ ಸುಗಂಧ ಸುಮೋದಗಳನ್ನು ತೋರಿಸಿಕೊಟ್ಟರು.

ರಾಧಾಕಿಷನ್ ಪೂರ್ವಾಗ್ರಹ ಪೀಡಿತರಾಗಿರಲಿಲ್ಲ. ವಿಕೃತ ಮನಸ್ಥಿತಿಯನ್ನು, ಅಸಹನೆಯನ್ನು ಹಿಂದೂ ಧರ್ಮದ ಬಗ್ಗೆ ಬೆಳೆಸಿಕೊಂಡಿದ್ದವರಲ್ಲ. ಈ ಧರ್ಮದ ಅಂತರ್ಗತವನ್ನು ತಿಳಿಯಲು ಅವರಿಂದ ಸಾಧ್ಯವಾಗಿರಲಿಲ್ಲ. ಕಾರಣ ಅವರಿಗೆ ಸಂಸ್ಕೃತ ಗೊತ್ತಿರಲಿಲ್ಲ. ತಮ್ಮ ಓದಿನ ಕಾಲದಲ್ಲೇ ಧರ್ಮದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದ ಅವರಿಗೆ ಹಿಂದೂ ಧರ್ಮದ ಒಳಮುಖಗಳನ್ನು ಅರಿಯುವ ಅವಕಾಶ ಪ್ರಾಪ್ತಿಯಾಗಿರಲಿಲ್ಲ. ತಮ್ಮ ಲೋಪದ ಅರಿವು ಆಗುತ್ತಿದ್ದಂತೆಯೇ ರಾಧಾಕಿಷನ್ ತಮ್ಮ ಧಾರ್ಮಿಕ ಧೋರಣೆಗಳನ್ನು ಸರಿಪಡಿಸಿಕೊಳ್ಳಲು ಉತ್ಸುಕರಾದರು. ತಮಗೆ ಲಭ್ಯವಾದ ಎಲ್ಲಾ ಮೂಲಗಳಿಂದಲೂ ಹಿಂದೂ ಧರ್ಮವನ್ನು ಅಧ್ಯಯನ ಮಾಡಿದರು.

ಈ ಮಧ್ಯೆ ಲಜಪತ್‌ರಾಯ್ ಚರ್ಚ್ ಪರವಾಗಿ ಕೆಲಸ ಮಾಡಿದರು. ಹೆಚ್ಚು ಶ್ರದ್ಧೆ ವಹಿಸಿದ್ದರೂ ಕೂಡಾ. ತಂದೆ ರಾಧಾಕಿಷನ್‌ಗೆ ಮಗನ ನಡವಳಿಕೆ ಹಿಡಿಸಿತೋ ಇಲ್ಲವೋ ತಿಳಿಯದು. ಆದರೆ ಅವರು ಮಾತ್ರ ಆ ಕೆಲಸಕ್ಕೆ ಕೈ ಜೋಡಿಸಲಿಲ್ಲ. ಅಧ್ಯಯನ ಆಳವಾದಂತೆ ರಾಧಾಕಿಷನ್ ಆರ್ಯ ಸಮಾಜದತ್ತಲೂ ವಾಲಲಿಲ್ಲ. ಅವರನ್ನು ಆಕರ್ಷಿಸಿದ್ದು ವೇದಾಂತ. ವೇದ ಉಪನಿಷತ್ತುಗಳ ಸಾರ ಸರ್ವಸ್ವವು ಅವರನ್ನು ನಿರಂತರ ಬಾಧಿಸತೊಡಗಿದವು. ಇಳಿ ವಯಸ್ಸಿನಲ್ಲೂ ಉಪನಿಷತ್ ವಾಣಿಗಳು ಅವರ ಬದುಕಿನ ಸಾರ ಸರ್ವಸ್ವಗಳಾದವು.

ಬದುಕಿನುದ್ದಕ್ಕೂ ರಾಧಾಕಿಷನ್ ಓರ್ವ ಕಟ್ಟಾ ಧಾರ್ಮಿಕ ಅಧ್ಯಯನಕಾರರೆನಿಸಿದರು. ಇಸ್ಲಾಂ ಧರ್ಮವನ್ನು ಅಧ್ಯಯನ ಮಾಡುತ್ತಿರುವಾಗ ಆತುರ ತೋರಿದಂತೆ ಅವರು ಹಿಂದೂ ಧರ್ಮದ ಅಧ್ಯಯನದಲ್ಲಿ ಕೇವಲ ಪುಸ್ತಕಗಳನ್ನಷ್ಟೇ

ಅವಲಂಬಿಸಲಿಲ್ಲ. ಇತರ ಮೂಲಗಳ ಜೊತೆಗೆ ಉರ್ದು, ಹಿಂದಿ ಇಲ್ಲವೇ ಗುರುಮುಖಿಯಲ್ಲಿ ಲಭ್ಯವಾದ ಎಲ್ಲಾ ಪುಸ್ತಕಗಳನ್ನು ತಮ್ಮ ಧಾರ್ಮಿಕ ಅಧ್ಯಯನ, ಸಂಶೋಧನೆಗೆ ಸಾಮಾಗ್ರಿ ಮಾಡಿಕೊಂಡರು. ಅವರ ಪರಿಶ್ರಮ ದಿನೇ ದಿನೇ ಆಳವಾಯಿತು. ಶ್ರದ್ಧಾಪೂರ್ವಕವಾಯಿತು.

ವೃತ್ತ ಪತ್ರಿಕೆಗಳಲ್ಲಿ ಲೇಖನಗಳ ಜೊತೆಗೆ ರಾಧಾಕಿಷನ್ ಕೆಲವು ಕಿರು ಹೊತ್ತಿಗೆಗಳನ್ನು ರಚಿಸಿದ್ದಾರೆ. ಕೆಲವು ಕೃತಿಗಳು ಹಕ್ಕುಗಳನ್ನು ಕಾದಿರಿಸಿಕೊಂಡರು. ಉರ್ದುವಿನಲ್ಲಿ ಅವರು ರಚಿಸಿದ ತಹಖಿಕ್ ಮಝಾಹಿಬ್ ಜನಪ್ರಿಯ ಧಾರ್ಮಿಕ ಅಧ್ಯಯನ ಕೃತಿ. ಧರ್ಮಗಳ ಬಗ್ಗೆ ಇಣುಕು ನೋಟ ನೀಡುವ ಈ ಕೃತಿಯಲ್ಲಿ ಪ್ರಮುಖ ಧರ್ಮಗಳ ಮೂಲ ತತ್ವಗಳ ನಿರೂಪಣೆ ಇದೆ. 22 ವರ್ಷಗಳ ಸುದೀರ್ಘ ಅಧ್ಯಯನದಲ್ಲಿ ವಿವಿಧ ಧರ್ಮಗಳ ಲೇಖಕರು ಅಧ್ಯಯನ ಮಾಡಿ ಫಲಿತಗಳನ್ನು ದಾಖಲಿಸಿದ್ದಾರೆ ಎಂದೇ ಆ ಕೃತಿಯನ್ನು ಬಣ್ಣಿಸಲಾಗಿದೆ.

ಮುನ್ಷೀಜಿ ಕಾವ್ಯ ಅಥವಾ ಕವನಗಳನ್ನು ಬರೆದರೆ ಎಂಬುದರ ಬಗ್ಗೆ ನಮಗೆ ತಿಳಿದು ಬಂದಿಲ್ಲ. ಆದರೂ ಅಜಾಬ್ ಕಾವ್ಯನಾಮದಲ್ಲಿ ಅವರ ಕೆಲವು ರಚನೆಗಳಿವೆ ಎಂದು ತಿಳಿದು ಬರುತ್ತದೆ. ಧಾರ್ಮಿಕ ದೃಷ್ಟಿಕೋನ ಮತ್ತು ನೈತಿಕ ಸ್ವರೂಪ ಆ ರಚನೆಗಳಲ್ಲಿ ವ್ಯಕ್ತ. ಅವರ ಕೃತಿಗಳಲ್ಲಿ ರಿಸಲ್ಲಾ-ಈ-ತಾನ್‌ಸುಖ್ ಕೃತಿಯೂ ಒಂದು. ಅದರಲ್ಲಿ ಅವರ ಹಿಂದಿನ ಗುರು ಸರ್ ಸಯದ್ ಅಹಮದ್‌ರ ಬೋಧನೆಗಳನ್ನು ಹಿಂದೂ ತತ್ವಜ್ಞಾನಿಗಳ ಬೋಧನೆಗಳೊಂದಿಗೆ ಹೋಲಿಕೆ ಮಾಡಲಾಗಿದೆ. ಅಂತಿಮವಾಗಿ ಹಿಂದೂ ತತ್ವಜ್ಞಾನಿಗಳ ಪ್ರತಿಪಾದನೆಯನ್ನೇ ಎತ್ತಿ ಹಿಡಿಯಲಾಗಿದೆ.

ಆದರೂ ಮುನ್ಷೀಜಿ ಯಾವುದೇ ನಿರ್ದಿಷ್ಟ ಪ್ರಾಕಾರದ ಕಡೆಗೆ ತಮ್ಮ ವೈಯಕ್ತಿಕ ಧೋರಣೆಯನ್ನು ವಾಲಿಸಲಿಲ್ಲ. ಸ್ವಾಮಿ ದಯಾನಂದರ ಜೊತೆ ಅವರು ನಡೆಸಿರುವ ಆಧ್ಯಾತ್ಮಿಕ ಚಿಂತನೆ ಜನಪ್ರಿಯ. ರಾಧಾಕಿಷನ್‌ರ ಪ್ರತಿಪಾದನೆಯಲ್ಲಿ "ಮೋಕ್ಷ ಸಾಧಿಸಿದ ನಂತರ ಆತ್ಮಗಳು ಆತ್ಮಸಾಕ್ಷಾತ್ಕಾರವನ್ನು ಶಾಶ್ವತವಾಗಿ ಅನುಭವಿಸುವುದಿಲ್ಲ. ದೀರ್ಘ ವಿನ್ಯಾಸವಾದರೂ ಸೀಮಿತ ಅವಧಿಯವರೆಗೆ ಮಾತ್ರ ಈ ಫಲಶ್ರುತಿ ಇರುತ್ತದೆ." ಈ ವಿಶ್ಲೇಷಣೆ ಭಾರತೀಯ ಪ್ರಾಚೀನ ತತ್ವಜ್ಞಾನಿಗಳ ಬೋಧನೆ ಹಾಗೂ ಸ್ವತಃ ರಾಧಾಕಿಷನ್‌ರ ಆರಂಭ ಕಾಲದ ಚಿಂತನೆಗೆ ವ್ಯತಿರಿಕ್ತವಾಗಿದೆ.

ರಾಧಾಕಿಷನ್ ಚಿಂತನೆ, ವಿಮರ್ಶೆ ಸೀಮಿತವಾದುದು. ಸಂಬಂಧಪಟ್ಟ ಒಂದು ಅಂಶಕ್ಕೆ ಮಾತ್ರ ಅದನ್ನು ಅವರು ಅಳವಡಿಸಿಕೊಳ್ಳುತ್ತಿದ್ದರು. ತಮ್ಮ ಪ್ರತಿಪಾದನೆಯನ್ನು ಸಮರ್ಥಿಸಿಕೊಳ್ಳುವ ಜೊತೆಗೆ ವಿವಿಧ ತತ್ವವೇತ್ತರ ವಿಚಾರ ವಿಮರ್ಶೆಗಳನ್ನು ಯಥಾವತ್ತಾಗಿ ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ಚಿಂತನ, ಮಂಥನಗಳ ಸಮಯದಲ್ಲಿ ವಿದುರಾಳಿಗಳಿಗೆ ಮುಕ್ತ ಅವಕಾಶ ನೀಡುತ್ತಿದ್ದದ್ದು ಅವರ ಸ್ವಭಾವ. ಅವರ ಬರಹಗಳಲ್ಲಿ ಅಲಂಕಾರವಿಲ್ಲ ಲಾಲಿತ್ಯವಿಲ್ಲ. ವಿಷಯ ಪ್ರಧಾನ ಅಷ್ಟೇ. ಜೊತೆಗೆ ರುಕ್ಷ ಕೂಡಾ. ಇನ್ನು ಹೇಳಬೇಕೆಂದರ ಮನಮುಟ್ಟುವಂತಹ ಬರವಣಿಗೆಯೂ ಅಲ್ಲ. ರಾಧಾಕಿಷನ್‌ರಲ್ಲಿ ಇತಿಹಾಸ ಅಧ್ಯಯನ ಕುತೂಹಲವೂ ಇತ್ತು. ತತ್ಫಲವಾಗಿ ಸುಮಾರು 150 ಪುಟಗಳ ವೀರ ಚರಿತ ಕೃತಿಯನ್ನು

ಉರ್ದುವಿನಲ್ಲಿ ರಚಿಸಿದ್ದಾರೆ. ಅದು ಟಾಡ್ ಮಹಾಶಯನ *Annals and antiquities of Rajastan* ಕೃತಿಯಿಂದ ಆಯ್ದ ಒಕ್ಕಣಿಕೆಗಳು. ಮುನ್ನುಡಿಯಲ್ಲಿ ಅವರು ಚರಿತ್ರೆ, ಅಧ್ಯಯನದ ಮೌಲ್ಯಗಳ ಬಗ್ಗೆ ಮಾತನಾಡಿದ್ದಾರೆ. ತಮಗೆ ಈ ಅಧ್ಯಯನದಲ್ಲಿದ್ದ ಆಸಕ್ತಿಯನ್ನು ತೋರಗೊಟ್ಟಿದ್ದಾರೆ. ಆ ಕೃತಿ ಸಾಕಷ್ಟು ಜನಪ್ರಿಯವಾಯಿತು. ಎರಡನೇ ಮುದ್ರಣವನ್ನು ಕಂಡಿತು.

ಅಧ್ಯಯನದ ಅದಮ್ಯ ಒಲವನ್ನು ಮುನ್ಶೀಜಿ ರಾಧಾಕಿಷನ್ ಕೊನೆಯ ತನಕ ಸ್ಥಿರವಾಗಿಸಿಕೊಂಡಿದ್ದರು. ಅವರ ನೆರೆಯವನು ನಾನು ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತದೆ. ಲಾಹೋರಿನಲ್ಲಿ ಕೋರ್ಟ್ ಸ್ಟ್ರೀಟಿನ ಎರಡನೇ ಮನೆಯಲ್ಲಿ, ಅವರ ಮನೆಯ ಪಕ್ಕದ ಕೊಠಡಿಯವನಾಗಿ ನಾನಿದ್ದೆ. ಆಗ ನಾನು ಜನಸೇವಾ ಸಂಘವನ್ನು ಸೇರಿದ್ದೆ. ಮುಂದೆ ಲಜಪತ್‌ರಾಯ್ ಆ ಮನೆಯನ್ನು ಸಂಘಕ್ಕೆ ಕೊಟ್ಟು ಬಿಟ್ಟರು. ಅದೇ ಕಾಂಪೌಂಡ್‌ನಲ್ಲಿ ಚಿಕ್ಕದಾದ ಎರಡು ಅಂತಸ್ತಿನ ಮನೆಯನ್ನು ಅವರು ಕಟ್ಟಿಕೊಂಡರು. ಅವರ ತಂದೆಯನ್ನು ಹೊಸ ಮನೆಗೆ ಸ್ಥಳಾಂತರಿಸಲಿಲ್ಲ. ತಮ್ಮ ಅಚ್ಚುಮೆಚ್ಚಿನ ಹಳೆಯ ಕೊಠಡಿಯನ್ನೇ ಮುನ್ಶೀಜಿ ಬಯಸಿದ್ದರು. ಹಜಾರದ ದಕ್ಷಿಣ ಮೂಲೆಯಲ್ಲಿದ್ದ ಆ ಕೊಠಡಿಯಲ್ಲಿ ಇದ್ದದ್ದು ಒಂದು ಮಂಚ, ಒಂದು ಕಚೇರಿ ಕುರ್ಚಿ ಅಷ್ಟೇ. ಆ ಕೊಠಡಿಯಲ್ಲಿ ಒರಟು ಮರದಿಂದ ಮಾಡಿದ ವಾರ್ನಿಶ್ ಗಂಧವನ್ನೇ ಕಾಣದ ದಪ್ಪ ಪಟ್ಟಿಗಳ ಪುಸ್ತಕದ ಕಪಾಟು ಎದ್ದು ಕಾಣುತ್ತಿತ್ತು. ಕೊಠಡಿಯ ಮೂರು ಗೋಡೆಗಳಿಗೆ ಆನಿಸಿಕೊಂಡಿದ್ದ ಆ ಕಪಾಟು ಅಷ್ಟೇನೂ ಎತ್ತರದ್ದಲ್ಲ. ಅದರ ತುಂಬೆಲ್ಲಾ ಪುಸ್ತಕಗಳೇ. ಅಲ್ಲಲ್ಲಿ ಬರೆಯುವ ಕಾಗದ ಮತ್ತು ಇತರೆ ಲೇಖನಿ ಸಾಮಾಗ್ರಿ. ಒಟ್ಟಿನಲ್ಲಿ ಮುನ್ಶೀಜಿ ರಾಧಾಕಿಷನ್‌ರ ಬದುಕಿನ ಪ್ರಮುಖ ಆಶೋತ್ತರಗಳನ್ನು ಆ ಕಪಾಟು ಪ್ರತಿನಿಧಿಸುತ್ತಿತ್ತು. ಕಪಾಟಿಗೆ ಹೊಸತನದ ಅಲಂಕಾರದ ಗಂಧವೂ ಇರಲಿಲ್ಲ. ಆ ಕೊಠಡಿಗೂ ಅಷ್ಟೇ. ಕಿಟಕಿಯಾಗಲಿ, ಗವಾಕ್ಷಿಯಾಗಲಿ, ಗಾಜಿನ ತೆರೆಯಾಗಲಿ ಇರಲಿಲ್ಲ.

ಬೇಸಿಗೆ ಕಾಲದಲ್ಲಿ ಮುನ್ಶೀಜಿ ರಾಧಾಕಿಷನ್ ಹಾಲಿನಲ್ಲೋ ಅಥವಾ ಮೇಲ್ಛಾವಣಿ ಇಲ್ಲದ ಜಾಗದಲ್ಲಿಯೋ ಮಲಗುತ್ತಿದ್ದರು. ಮುಂಜಾವಿನಲ್ಲಿ ಎದ್ದು ಪುಸ್ತಕ ಓದುತ್ತಿದ್ದದ್ದು ಅವರ ಸಾಮಾನ್ಯ ಕೈಂಕರ್ಯಗಳಲ್ಲಿ ಮೊದಲನೆಯದು. ಒಮ್ಮೊಮ್ಮೆ ಹಿಂದಿನ ಸಂಜೆ ಪತ್ರಿಕೆಯನ್ನು ಓದುತ್ತಿದ್ದದ್ದು ಉಂಟು. ಲಾಹೋರಿನಲ್ಲಿ ಆ ದಿನಗಳಲ್ಲಿ ಬೆಳಗಿನ ಪತ್ರಿಕೆಗಳು ಇರಲಿಲ್ಲ. ಮುನ್ಶೀಜಿ ಅವರ ಈ ಓದುವ ಹವ್ಯಾಸ ಬೆಳಗಿನ ಉಪಹಾರದ ತನಕ ಮುಂದುವರೆಯುತ್ತಿತ್ತು. ತಿಂಡಿ ಮುಗಿಸಿ ತಮ್ಮ ಎರಡನೇ ಮಗನ ಅಂಗಡಿಯತನಕ ನಡೆದು ಹೋಗುತ್ತಿದ್ದರು. ರಣಪತ್‌ರಾಯ್ ಓರ್ವ ಪೇಪರ್ ವ್ಯಾಪಾರಿ. ಅನಾರ್ಕಲಿಯ ಗಣಪತ್ ರಸ್ತೆಯಲ್ಲಿ ಅವರ ಅಂಗಡಿ ಇತ್ತು. ಮುನ್ಶೀಜಿ ತಮ್ಮ ದಿನದ ಉಳಿದ ಭಾಗವನ್ನು ಹೆಚ್ಚು ಕಡಿಮೆ ಅಧ್ಯಯನದಲ್ಲಿ ಕಳೆಯುತ್ತಿದ್ದರು. ರಾತ್ರಿ ಊಟವನ್ನು ಆ ಮಗನ ಮನೆಯಲ್ಲಿ ಮುಗಿಸಿ ತಮ್ಮ ಕೊಠಡಿಗೆ ಮರಳುತ್ತಿದ್ದರು. ಬರುವಾಗ ಅಪರಾಹ್ನದ ಬಂದೇ ಮಾತರಂ ಪತ್ರಿಕೆ ಹಿಡಿದು ಬರುವುದನ್ನು ಅವರು ಮರೆಯುತ್ತಿರಲಿಲ್ಲ. ಅಧ್ಯಯನ ಮಾಡದೇ ಅವರೆಂದೂ ಮಲಗುತ್ತಿರಲಿಲ್ಲ. ಅವರ ಅಚ್ಚುಮೆಚ್ಚಿನ ಪುಸ್ತಕಗಳಲ್ಲಿ ಡ್ರೇಪರನ ಉರ್ದು ಅನುವಾದ ಕೃತಿಯೂ ಒಂದು. ವಿಶಿಷ್ಟ, ಆಸಕ್ತಿ ಕೆರಳಿಸುವ *Conflict between Religion*

and Science ಪುಸ್ತಕದ ತರ್ಜುಮೆ ಅದು. ಅವರ ಇತರ ಅಚ್ಚುಮೆಚ್ಚಿನ ಕೃತಿಗಳಲ್ಲಿ ಮೆಚ್ಚಿನ ಪುಸ್ತಕಗಳು ವಿವಿಧ ಧರ್ಮಗಳಿಗೆ ಸಂಬಂಧಪಟ್ಟವು, ಇಲ್ಲವೇ ಚಾರಿತ್ರಿಕಗಳು.

ಮುನ್ಶೀಜಿ ರಾಧಾಕಿಷನ್ ಈ ಲೋಕ ತ್ಯಜಿಸಿದಾಗ ಅವರಿಗೆ 82 ವರ್ಷ. ಲಜಪತ್‌ರಾಯ್ ತಮ್ಮ ತಂದೆಯ ಸಾವನ್ನು ಅತಿ ಹೆಚ್ಚು ಹಚ್ಚಿಕೊಂಡರು. ಕಾರಣ ಆಗ ಅವರು ರಾಜಕೀಯ ಬಂದಿ. ತನ್ನ ತಂದೆಯ ಅಂತಿಮ ಇಚ್ಛೆಗಳನ್ನು ಸಹ ತಿಳಿದುಕೊಳ್ಳಲು ಅವರ ಕಡೆಯ ದಿನಗಳಲ್ಲಿ ಅವರ ಬಳಿ ಇರಲಿಲ್ಲವೆಂಬ ಕೊರಗು ಅವರ ಜೀವನ ಪರ್ಯಂತ ಕಾಡುತ್ತಿತ್ತು. ತಂದೆಯ ಅಂತಿಮ ಸಂಸ್ಕಾರಗಳನ್ನು ತಾವು ಬರಹಗಾರರಾಗಿ ಗಳಿಸಿದ ಗೌರವಧನದಲ್ಲಿಯೇ ನಡೆಸಬೇಕೆಂದು ಅವರು ಜೈಲಿನಿಂದ ನಿರ್ದಿಷ್ಟ ಸೂಚನೆಗಳನ್ನು ತಮ್ಮ ಕುಟುಂಬದವರಿಗೆ ನೀಡಿದರು. ಆ ಗೌರವಧನ ತಮ್ಮ ಭಾಗದ ಪವಿತ್ರ ಗಳಿಕೆ ಎಂಬ ಆತ್ಮೀಯತೆ ಅವರಲ್ಲಿತ್ತು.

* * *

ಅಧ್ಯಾಯ-2

ಶೈಶವ: ಮೊಳಕೆಯಲ್ಲೇ ಹೋರಾಟ

ಮುನ್ಷೀಜಿ ರಾಧಾಕಿಷನ್ ಅಂಬಾಲ ಜಿಲ್ಲೆಯ ರೂಪಾಲದಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆಯ ಶಿಕ್ಷಕರಾಗಿ ಎರಡು ವರ್ಷಗಳ ಸೇವೆ ಸಲ್ಲಿಸಿದರು. ಆ ಅವಧಿಯಲ್ಲೇ ಜನವರಿ 28, 1865ರಲ್ಲಿ ಅವರು ತಂದೆಯಾದರು. ಚೊಚ್ಚಲ ಪುತ್ರನಿಗೆ ಅವರಿಟ್ಟ ಹೆಸರು ಲಜಪತ್‌ರಾಯ್. ಧೂಡಿಕೆ ಗ್ರಾಮದಲ್ಲಿ ಮಾವನ ಪುಟ್ಟ ಮಣ್ಣಿನ ಮನೆಯಲ್ಲಿ ಲಜಪತ್‌ರಾಯ್ ಲೋಕದ ಬೆಳಕು ಕಂಡರು. ಈಗಲೂ ವಾಡಿಕೆಯಲ್ಲಿರುವಂತೆ, ಪತ್ನಿ ಮೊದಲ ಹೆರಿಗೆಗೆ ತವರಿಗೆ ಹೋಗುವಂತೆ ಆಗಲೂ ಲಜಪತ್‌ರಾಯ್ ತಾಯಿ ಹೋಗಿದ್ದರು. ಧೂಡಿಕೆ ಫಿರೋಜ್‌ಪುರ ಜಿಲ್ಲೆಯ ಮೊಗಾತಹಸಿಲ್‌ನಲ್ಲಿ ಒಂದು ಸಣ್ಣ ಗ್ರಾಮ. ರಾಧಾಕಿಷನ್‌ರ ಸ್ವಂತ ಊರಾದ ಜಗ್ರಾಂವ್‌ನಿಂದ 8 ಕಿ.ಮೀ ದೂರದ್ದು. ಜಗ್ರಾಂವ್ ಲೂಧಿಯಾನ ಜಿಲ್ಲೆಯ ಊರು.

ಲಜಪತ್‌ರಾಯ್ ಹುಟ್ಟಿದ ಸಂದರ್ಭದಲ್ಲಿ ತಂದೆ ರಾಧಾಕಿಷನ್ ಅಲ್ಪಕಾಲದ ವೃತ್ತಿ ತರಬೇತಿಗಾಗಿ ದೆಹಲಿಯಲ್ಲಿದ್ದರು. ಸುದ್ದಿ ಅವರಿಗೆ ಅಲ್ಲಿಯೇ ತಲುಪಿತು. ಶಿಶು ತೀರಾ ಸಣಕಲು ಎಂಬುದೂ ತಿಳಿಯಿತು. ರಾಧಾಕಿಷನ್ ಅವರದು ಎತ್ತರವಾದ ಕಟ್ಟುಮಸ್ತಾದ ದೇಹ. ತಮ್ಮ ಪುತ್ರ ತಮ್ಮ ಆಶಯಕ್ಕೆ ಸನಿಹವಾಗಲಿಲ್ಲ ಎಂದು ಅವರು ಖಿನ್ನರಾಗಿದ್ದು ಉಂಟು. ಆ ದಿನಗಳಲ್ಲಿ ರೂಪಾರ್ ಪ್ರದೇಶವೆಲ್ಲಾ ಮಲೇರಿಯಾ ಪೀಡಿತ. ಅದು ಲಜಪತ್‌ರಾಯ್ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಎಳೆಯವರಾಗಿದ್ದಾಗಲೇ ಲಜಪತ್‌ರಾಯ್ ಅವರಿಗೆ ಆಟೋಟಗಳಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ. ಶಾಲಾ ಹಂತದ ಹುಡುಗನಾಗುತ್ತಿದ್ದಂತೆಯೇ ಪುಸ್ತಕಗಳಲ್ಲಿ ದಿನೇ ದಿನೇ ವ್ಯಾಮೋಹ ಹೆಚ್ಚಾಯಿತು. ಈ ಮಧ್ಯೆ ಮಲೇರಿಯಾ ಅವರನ್ನು ಪದೇ ಪದೇ ಕಾಡಿತು. ಅದರ ಕೆಟ್ಟ ಪರಿಣಾಮವಾಗಿ ಅವರ ಗುಲ್ಮ ಅಳತೆಗಿಂತ ದೊಡ್ಡದಾಯಿತು.

ತಮ್ಮ ಪುತ್ರನ ಆರಂಭದ ಕಲಿಕೆಯ ಮೇಲೆ ಸ್ವತಃ ರಾಧಾಕಿಷನ್ ಆಸಕ್ತಿ ವಹಿಸಿದರು. ಅದು ಮನೆಯಲ್ಲೇ. ಶಾಲೆಯ ಪಾಠ ಪ್ರವಚನಗಳನ್ನು ಸುಲಲಿತವಾಗಿ ಅರ್ಥ ಮಾಡಿಕೊಂಡು, ಅಂತರ್ಗತವಾಗುವಂತೆ ಅವರು ನೋಡಿಕೊಂಡರು. ಬಾಲಕ ಲಜಪತ್‌ರಾಯ್ ಅಸಾಧಾರಣ ಚುರುಕುಮತಿ, ಕಷ್ಟಸಹಿಷ್ಣು. ತಂದೆಯಂತೆ ಶಾಲೆಯಲ್ಲಿ ಮೊದಲಿಗ. ಎಲ್ಲಾ ಬಹುಮಾನಗಳು ಈ ಬಾಲಕನಿಗೆ. ರಾಧಾಕಿಷನ್ ತಮ್ಮ ಮಗನಿಗೆ ಕೇವಲ ಮೂರು 'R'ಗಳಷ್ಟೇ ಕಲಿಸಲಿಲ್ಲ. ಧರ್ಮ (Religion)ದ ವಿಷಯದಲ್ಲಿಯೂ ಆಸ್ಥೆ ಬೆಳೆಸಿದರು. ಬಾಲಕ ಲಜಪತ್‌ರಾಯ್ ತಮ್ಮ ತಂದೆಯೊಂದಿಗೆ ಕುರಾನ್ ಗ್ರಂಥದ ಬಹುಭಾಗ ಪಠಣ ಮಾಡಿದರು. ತಂದೆಯಂತೆ ನಮಾಜ್ ಮಾಡುತ್ತಿದ್ದರು.

ಅದೆಷ್ಟೋ ಸಲ ರಂಜಾನ್ ಉಪವಾಸ ಮಾಡುತ್ತಿದ್ದದ್ದು ಉಂಟು.

ತಮ್ಮ ಮನೆಯಲ್ಲಿ ಅನುಷ್ಠಾನದಲ್ಲಿದ್ದ ಧಾರ್ಮಿಕ ನಡವಳಿಕೆಗಳ ವಿಷಯದಲ್ಲಿ ಲಜಪತ್‌ರಾಯ್ ಅವರಿಗೆ ಕುತೂಹಲ ಸಹಜವಾಗಿ ಕೆರಳಿರಲೇಬೇಕು. ಅಜ್ಜ ಕಟ್ಟಾ ಜೈನಧರ್ಮಿ. ತಂದೆ ಅನಧಿಕೃತ ಮುಸ್ಲಿಂ. ಪತಿಯ ಧಾರ್ಮಿಕ ನಿಲುವಿನಿಂದ ಮೂಕನೋವು ಅನುಭವಿಸುತ್ತಿದ್ದ ತಾಯಿ ಸಿಖ್ ಸ್ತೋತ್ರ, ಮಂತ್ರಗಳನ್ನು ಪಠಿಸುತ್ತಿದ್ದರು. ಅತ್ತ ತಾತನ ಮನೆಗೆ ಹೋದರೋ ಅಲ್ಲಿ ಶುದ್ಧ ಸಿಖ್ ಧರ್ಮದ ನಡವಳಿಕೆ. ಇದೆಲ್ಲವನ್ನು ಒಟ್ಟಾರೆ ಚಿತ್ರಿಸಿಕೊಂಡ ಆ ಬಾಲಕನ ಭಾವನೆಗಳು ಹೇಗಿರಬೇಕು? ಅದೇನೇ ಇರಲಿ, ಮುನ್ಷೀಜಿ ರಾಧಾಕಿಷನ್ ತಮ್ಮ ಪುತ್ರರಿಗೆ ಧರ್ಮಗಳ ಅಂತರ್ಗತಗಳನ್ನು ಶೋಧಿಸುವ ಪರಿಯನ್ನು ಮನನ ಮಾಡಿಕೊಟ್ಟರು. ತತ್ಫಲವಾಗಿ ಬದುಕಿನ ಮಾಗಿದ ವರ್ಷಗಳಲ್ಲಿ ಸಹ ಅವರಲ್ಲಿ ಧಾರ್ಮಿಕ ಅನ್ವೇಷಣೆಯ ಕುತೂಹಲ ನಿತ್ಯ ಹಸುರಾಗಿತ್ತು. ಈ ಮಧ್ಯೆ ಲಜಪತ್‌ರಾಯ್ ಮುಸಲ್ಮಾನ ಧರ್ಮದ ನಡವಳಿಕೆಯ ಬಗ್ಗೆ ಆಸಕ್ತಿಯನ್ನು ಯೌವನದಲ್ಲೇ ಕಳೆದುಕೊಂಡರು.

ತಂದೆಯಿಂದ ದತ್ತವಾದ ಕೊಡುಗೆಯೋ ಎಂಬಂತೆ ಲಜಪತ್‌ರಾಯ್ ಸಹ ಇತಿಹಾಸದ ಅಧ್ಯಯನದಲ್ಲಿ ಹೆಚ್ಚು ಒಲವು ಹೊಂದಿದ್ದರು. ಅದರಲ್ಲೂ ಐತಿಹ್ಯಗಳ ಬಗ್ಗೆ ವಿಶೇಷ ಆಸಕ್ತಿ. ಮುನ್ಷೀಜಿ ರಾಧಾಕಿಷನ್ ತಮ್ಮ ಮಗನಿಗೆ ಬಾಲ್ಯದಲ್ಲಿಯೇ ಫಿರ್ದೋಸಿ ರಚಿತ ಷಹನಾಮ ಪಠಣ ಮಾಡಿಸಿದ್ದರು. ಪರ್ಷಿಯನ್ ಕವಿ ಹೋಮರನ ಐತಿಹ್ಯ, ವೇದವ್ಯಾಸರ ಮಹಾಭಾರತ ಕಾವ್ಯಗಳ ಜೊತೆಗೆ ಹೋಲುವ ಕೃತಿ ಅದು. ಲಜಪತ್‌ರಾಯ್ ತಮ್ಮ ಜೊತೆಯಲ್ಲಿ ಪದೇ ಪದೇ ಫಿರ್ದೋಸಿ ಕಾವ್ಯದ ಭಾಗಗಳನ್ನು ಇಟ್ಟುಕೊಂಡು ಪಠಣ ಮಾಡುತ್ತಿದ್ದರು. ಯೌವನಾವಸ್ಥೆ ತಲುಪಿದ ಮೇಲೆ ತಾವೇ ಆ ಪಠಣವನ್ನು ಮುಂದುವರಿಸಿದರು. ಲಜಪತ್‌ರಾಯ್ ಕೊನೆಯತನಕ ಫಿರ್ದೋಸಿಯನ್ನು ಬಿಟ್ಟವರಲ್ಲ. ಆರಂಭದಲ್ಲಿ ಷಹನಾಮ ಹುಟ್ಟಿಸಿದ ಆಸಕ್ತಿಯ ಫಲವೇ ಮುಂದೆ ಅವರಿಗೆ ಐತಿಹಾಸಿಕ ಹಾಗೂ ಐತಿಹ್ಯ ಕೃತಿಗಳ ಹುಚ್ಚು ಹಿಡಿಸಿತು. ಫಿರ್ದೋಸಿಯ ಪಾತ್ರಗಳು ಲಜಪತ್‌ರಾಯ್ ಅವರ ಎಳೆ ಮನಸ್ಸಿನ ಮೇಲೆ ಶಾಶ್ವತದ ಮುದ್ರೆ ಒತ್ತಿದವು. ಕಲಿಕೆಯುದ್ದಕ್ಕೂ ತಮ್ಮಲ್ಲಿ ತಾವು ಅವರು ಷಹನಾಮ ಪಾತ್ರಗಳನ್ನು ಅನುರೂಪಗೊಳಿಸಿಕೊಳ್ಳುತ್ತಿದ್ದರು. ವೇದವ್ಯಾಸರು ಅಥವಾ ಹೋಮರ್ ರೀತಿಯಲ್ಲಿ ಫಿರ್ದೋಸಿ ಯುದ್ಧದ ಚಿತ್ರಣಕಷ್ಟೇ ತನ್ನ ನಿರೂಪಣೆಯನ್ನು ಸೀಮಿತಗೊಳಿಸಿಕೊಳ್ಳುವುದಿಲ್ಲ. ಈ ದೃಷ್ಟಿಯಿಂದಲೇ ಅವರು ಪ್ರಾಚೀನ ಚರಿತ್ರೆಕಾರರಲ್ಲಿ ವಿಭಿನ್ನರಾಗಿ ಕಾಣುತ್ತಾರೆ. ತಮ್ಮ ನಿರೂಪಣೆಯಲ್ಲಿ ಅವರು ಆ ಕಾಲದ ಜೀವನ ವಿಧಾನ, ಸಂಸ್ಕೃತಿ, ನಾಗರಿಕತೆ ಅನುಷ್ಠಾನಗಳನ್ನೆಲ್ಲಾ ನೇಯ್ದಿದ್ದಾರೆ. ಬಾಲಕ ಲಜಪತ್‌ರಾಯ್ ಅಧ್ಯಯನಶೀಲ ಎಳೆಯ ಮನಸ್ಸಿನ ಮೇಲೆ ಈ ಪಠಣ ತುಲನಾತ್ಮಕ ಪ್ರಭಾವ ಬೀರಿತು. ಚರಿತ್ರೆಯ ಅಭ್ಯಾಸವೆಂದರೆ ಕೇವಲ ಪದ ಕೋಶಗಳ ಪಠಣವಲ್ಲ ಎಂಬವಿವೇಚನೆ ಅವರಲ್ಲಿ ಸಹಜವಾಗಿತ್ತು.

ಕುರಾನ್, ಷಹನಾಮ ಪಠಣಗಳ ಜೊತೆಗೆ ಪದೇ ಪದೇ ಮಲೇರಿಯಾ ಪೀಡಿತರಾಗುತ್ತಿದ್ದರೂ ಲಜಪತ್‌ರಾಯ್ ಪಾಠ ಪ್ರವಚನಗಳನ್ನು ಎಂದೂ ಉಪೇಕ್ಷಿಸಿದವರಲ್ಲ. ಶಾಲೆಯಲ್ಲಿ ಅಗ್ರಸ್ಥಾನ ಎಂದೂ ಅವರಿಗೆ ಮೀಸಲು ಅತ್ಯಂತ

ಕಿರಿಯರಾಗಿದ್ದರಿಂದ ಅವರ ಬಗ್ಗೆ ಅನುರಾಗವೂ ಸಹಜವಾಗಿತ್ತು. ರೂಪಾರ್ ಶಾಲೆಯಲ್ಲಿ ಅವರು ಆರನೇ ತರಗತಿಯವರೆಗೆ ಓದಿದರು. ಅದೇ ಸಂದರ್ಭದಲ್ಲಿ ಮುನ್ಶೀ ರಾಧಾಕಿಷನ್ ಅವರ ಸೇವೆಯನ್ನು ಸಿಮ್ಲಾಕ್ಕೆ ವರ್ಗಾಯಿಸಲಾಯಿತು. ಪತ್ನಿ ಮತ್ತು ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಹೋಗುವಷ್ಟು ಅವರು ಸ್ಥಿತಿವಂತರಾಗಿರಲಿಲ್ಲ. ತೀರಾ ಕಡಿಮೆ ಮೊತ್ತದ ಸಂಬಳ ಪೊಸ ಜಾಗದಲ್ಲಿ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಮುಂದಿನ ಶಿಕ್ಷಣಕ್ಕಾಗಿ ಲಜಪತ್‌ರಾಯ್ ಅವರನ್ನು ಲಾಹೋರಿಗೆ ಕಳುಹಿಸಲಾಯಿತು. ಶಿಕ್ಷಣ ಇಲಾಖೆಯು ಅವರಿಗೆ ಮಾಹೆಯಾನ 7 ರೂಪಾಯಿ ಸ್ಟೈಪೆಂಡ್ ನೀಡಿತು. ಲಾಹೋರಿನ ನಂತರ ಅವರು ದೆಹಲಿಗೆ ಬಂದರು. ಸುಮಾರು ಮೂರು ತಿಂಗಳ ಕಾಲವಷ್ಟೇ ಅಲ್ಲಿರಲು ಅವರಿಗೆ ಸಾಧ್ಯವಾಯಿತು. ಕಾರಣ ಮೊದಲೇ ಶಿಥಿಲ ಆರೋಗ್ಯದ ಲಜಪತ್‌ರಾಯ್ ಮೇಲೆ ದೆಹಲಿಯ ವೈಪರಿತ್ಯದ ಹವಾಮಾನ ಘೋರ ಪರಿಣಾಮ ಬೀರಿತು. ಆ ವೇಳೆಯಲ್ಲಿ ಮುನ್ಶೀಜಿ ದೂರದ ಸಿಮ್ಲಾದಲ್ಲೇ ಇದ್ದದ್ದರಿಂದ ತಾಯಿ ತನ್ನ ಮೊದಲ ಪುತ್ರನನ್ನು ಜಗ್ರಾಂವ್‌ಗೆ ಕರೆಯಿಸಿಕೊಂಡರು.

ಲಜಪತ್‌ರಾಯ್‌ಗೆ ಇನ್ನೂ 13 ವರ್ಷ ತುಂಬಿರಲಿಲ್ಲ. ಮಾಧ್ಯಮಿಕ ಶಾಲೆಯಲ್ಲಿ ಕಲಿಯುತ್ತಿದ್ದ ಸಂದರ್ಭ. ಮದುವೆ ಮಾಡಿಬಿಟ್ಟರು. ಅದು ಸಂಪ್ರದಾಯಸ್ಥ ಮದುವೆ. ವಧು ರಾಧಾದೇವಿ ಹಿಸ್ಸಾರಿನ ಅಗರವಾಲ ಕುಟುಂಬಕ್ಕೆ ಸೇರಿದವರು. ಲಜಪತ್‌ರಾಯ್ ಕುಟುಂಬಕ್ಕೆ ಹೋಲಿಸಿದರೆ ಆಕೆಯ ಮನೆಯ ಸ್ಥಿತಿ ಹೆಚ್ಚು ಅನುಕೂಲವಾದದ್ದು. ಆ ವಧುವಿನ ಬಗ್ಗೆ, ನವದಂಪತಿಗಳ ವೈವಾಹಿಕ ಜೀವನದ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ಓದೋಣ. ಸದ್ಯಕ್ಕೆ ವರನ ವಿದ್ಯಾಭ್ಯಾಸದತ್ತ ಮರಳೋಣ.

ದೆಹಲಿ ಬಿಟ್ಟ ನಂತರ, ಜಗ್ರಾಂವ್‌ನಲ್ಲಿ ಕೆಲವು ತಿಂಗಳು ಕಳೆದು ಲಜಪತ್‌ರಾಯ್ ಲೂಧಿಯಾನದಲ್ಲಿ ಮಿಷನ್ ಸ್ಕೂಲಿಗೆ ಪ್ರವೇಶ ಪಡೆದರು. ಶಾರದೆಯ ವರಪುತ್ರರಾದ ಅವರಿಗೆ ಅಲ್ಲಿಯೂ ಸ್ಟೈಪೆಂಡ್ ಬೆಂಬಲ ದೊರೆಯಿತು. ಆದರೆ ದುರ್ವಿಧಿ ಕಾಯಿಲೆ ರೂಪದಲ್ಲಿ ಕಾಡುವುದನ್ನು ನಿಲ್ಲಿಸಲಿಲ್ಲ. ಕೆಲವೇ ತಿಂಗಳುಗಳಲ್ಲಿ ಕಲಿಕೆಯನ್ನು ಮೊಟಕುಗೊಳಿಸಲಾಯಿತು. ವಿಧಿಯ ಇನ್ನೊಂದು ಆಟವೂ ವಿಚಿತ್ರ. ಮುನ್ಶೀಜಿ ರಾಧಾಕಿಷನ್ ಮತ್ತೆ ವರ್ಗವಾದರು. ಅವರ ಸೇವೆಯನ್ನು ಅಂಬಾಲಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿಗೆ ಅವರು ಪತ್ನಿ, ಮಕ್ಕಳನ್ನು ಕರೆಯಿಸಿಕೊಂಡರು.

ರೂಪಾರ್‌ನಲ್ಲಿದ್ದಾಗ ಹುಟ್ಟಿದ ಇಬ್ಬರು ಮಕ್ಕಳಲ್ಲಿ ಮೇಲಾರಾಂ ಬಾಲ್ಯದಲ್ಲೇ ಅಸು ನೀಗಿದ್ದ. ಮತ್ತೊಬ್ಬಳು ಪುತ್ರಿ ಆರೋಗ್ಯವಾಗಿದ್ದಳು. ಅಂಬಾಲದ ದಿನಗಳಲ್ಲಿ ಹುಟ್ಟಿದ್ದು ಮೂರು ಮಕ್ಕಳು. ರಣಪತ್‌ರಾಯ್, ಧನಪತ್‌ರಾಯ್ ಮತ್ತು ನಂದಲಾಲ್. ಮುಂದೆ ನಂದಲಾಲ್‌ರನ್ನು ಅವರ ಸಹೋದರರ ಹೆಸರಿಗೆ ಅನುಗುಣವಾಗಿ ದಳಪತ್‌ರಾಯ್ ಎಂದೇ ಜನಪ್ರಿಯಗೊಳಿಸಲಾಯಿತು. ಆ ದಿನಗಳಲ್ಲಿ ಲಾಹೋರಿನಲ್ಲಿ ...ಪತ್‌ರಾಯ್ ಪ್ರಭಾವಿ ಹಾಗೂ ಯಶಸ್ವಿ ವಕೀಲರೆನಿಸಿದರು.

ಅಂಬಾಲದಲ್ಲಿ ಸಹ ಲಜಪತ್‌ರಾಯ್ ಎರಡು ತಿಂಗಳುಗಳಿಗಿಂತ ಹೆಚ್ಚು ಇರಲಾಗಲಿಲ್ಲ. ಕಾಯಿಲೆ ಅಪಾಯದ ಅಂಚು ಮುಟ್ಟಿತು. ನಾಲ್ಕು ತಿಂಗಳ ಕಾಲ ಹಾಸಿಗೆ

ಹಿಡಿದರು. 2-3 ಬಾರಿ ಶಸ್ತ್ರಚಿಕಿತ್ಸೆಯೂ ಆಯಿತು. ಆ ದಿನಗಳನ್ನು ಅವರು ಹೀಗೆ ಬರೆದಿಟ್ಟಿದ್ದಾರೆ. ''ನಾನು ನನ್ನ ಜೀವನದ ಉದ್ದಕ್ಕೂ ತಂದೆ ತಾಯಿಯ ಪಾಲಿಗೆ ಉಪಟಳಕಾರಿಯಾಗಿದ್ದೆ. ಆತಂಕಕಾರಿ ಮಗನಾಗಿದ್ದೆ. ಅದರಲ್ಲೂ ಆ ವರ್ಷ ನಾನು ಅವರನ್ನು ಅತಿ ಹೆಚ್ಚು ಸಂಕಷ್ಟಕ್ಕೆ, ಇಕ್ಕಟ್ಟಿಗೆ ಒಳಪಡಿಸಿದೆ. ನನ್ನ ಜೀವನದಲ್ಲಿ ಆ ದಿನಗಳನ್ನು ಮರೆಯಲು ಸಾಧ್ಯವೇ ಇಲ್ಲ.''

ಅಂತೂ ಇಂತೂ ಅದೇ ವರ್ಷ ಲಜಪತ್ ಮೆಟ್ರಿಕ್ಯುಲೇಷನ್‌ನಲ್ಲಿ ಉತ್ತೀರ್ಣರಾದರು ವಾಸ್ತವದಲ್ಲಿ ಅವರು ಎರಡು ಮೆಟ್ರಿಕ್ಯುಲೇಷನ್‌ಗಳಲ್ಲಿ ಉತ್ತೀರ್ಣರಾದರು. ಪಂಜಾಬ್ ವಿಶ್ವವಿದ್ಯಾಲಯ ಆಗಿನ್ನು ಶೈಶವಾವಸ್ಥೆಯಲ್ಲಿತ್ತು. ಡಾ. ಲಿಟ್ನರ್ ತಮ್ಮ ವಿಶ್ವವಿದ್ಯಾಲಯವನ್ನು ಜನಪ್ರಿಯವೂ, ಸಮರ್ಥವೂ ಆಗುವಂತೆ ಮಾಡಲು ಏನೆಲ್ಲಾ ಪ್ರಯೋಗಗಳನ್ನು ಮಾಡುತ್ತಿದ್ದರು. ಆದರೂ ಆ ಪ್ರಾಂತ್ಯದಲ್ಲಿ ಆ ಹೊಸ ವಿಶ್ವವಿದ್ಯಾಲಯ ಗಳಿಸಬೇಕಾದಷ್ಟು ಸ್ಥಾನಮಾನವನ್ನು ಸಾಧಿಸಲಿಲ್ಲ. ಕಲ್ಕತ್ತಾ ವಿಶ್ವವಿದ್ಯಾಲಯದ ಡಿಪ್ಲೋಮಾ ಮತ್ತು ಪದವಿಗಳಿಗೆ ಅಪಾರ ಗೌರವ ಹಾಗೂ ಬೇಡಿಕೆ ಇತ್ತು. ಹೀಗಾಗಿ ಲಜಪತ್‌ರಾಯ್ ಕಲ್ಕತ್ತಾ ಮತ್ತು ಪಂಜಾಬ್ ವಿಶ್ವವಿದ್ಯಾಲಯಗಳೆರಡರ ಪರೀಕ್ಷೆಗಳನ್ನು ತೆಗೆದುಕೊಂಡು ವಿಶಿಷ್ಟ ಸಾಧನೆ ಮಾಡಿದರು. ಕಲ್ಕತ್ತಾ ಪರೀಕ್ಷೆಯಲ್ಲಿ ಮೊದಲ ದರ್ಜೆ ಸಾಧಿಸಿದ್ದು ಅವರ ಅಗ್ಗಳಿಕೆ. ಅದೂ ನಿರಂತರ ಕಾಯಿಲೆಯ ಮಧ್ಯೆ. ಆ ಪರೀಕ್ಷೆಯಲ್ಲಿ ಅವರು ಪರ್ಷಿಯನ್ ಭಾಷೆಯನ್ನು ದ್ವಿತೀಯ ಪತ್ರವನ್ನಾಗಿ ತೆಗೆದುಕೊಂಡಿದ್ದರು. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಅರೇಬಿಕ್, ಉರ್ದು ಮತ್ತು ಭೌತವಿಜ್ಞಾನವನ್ನು ಆಯ್ದುಕೊಂಡಿದ್ದರು. ಕಲ್ಕತ್ತಾ ವಿಶ್ವವಿದ್ಯಾಲಯದ ಇತರೆ ಪತ್ರಗಳೆಲ್ಲವೂ ಕಡ್ಡಾಯವಾಗಿದ್ದವು. ತಮ್ಮ ಪುತ್ರ ಅರೇಬಿಕ್ ಕಲಿಯಬೇಕೆಂದು ಮುನ್ಷೀಜಿ ರಾಧಾಕಿಷನ್‌ರ ಆಶಯವಾಗಿತ್ತು. ಚಿಕ್ಕಂದಿನಿಂದಲೂ ಮಗನಿಗೆ ಅರೇಬಿಕ್ ಆಸಕ್ತಿ ಹುಟ್ಟಿಸಿದ್ದರೂ ಕೂಡಾ. ಅದರ ಎಳೆತನದಲ್ಲಿ ಲಜಪತರಿಗೆ ಆ ಭಾಷೆಯ ಬಗ್ಗೆ ಅಷ್ಟು ಆಸಕ್ತಿ ಬೆಳೆದಿರಲಿಲ್ಲ.

ಆ ವರ್ಷ ಡಾ. ಲಿಟ್ನರ್ ವಿಶ್ವವಿದ್ಯಾಲಯದಲ್ಲಿ 106 ಮಂದಿ ಮೆಟ್ರಿಕ್ಯುಲೇಷನ ಮುಗಿಸಿದರು. ಅದರಲ್ಲಿ ಲಜಪತ್‌ರಾಯ್ ಒಬ್ಬರು.

* * *

ಅಧ್ಯಾಯ- 3

ಕಾಲೇಜು: ಪ್ರಭಾವ ಮತ್ತು ಗೆಳೆತನ

ಲಜಪತರ ಮುಂದಿನ ಶಿಕ್ಷಣದಲ್ಲಿ ಗಂಭೀರ ಸಮಸ್ಯೆಯೊಂದು ಉದ್ಭವಿಸಿತು. ಲಜಪತ್ ಬುದ್ಧಿವಂತರೆಂಬುದರಲ್ಲಿ ಅನುಮಾನವೇ ಇರಲಿಲ್ಲ. ಸದಾ ಅಧ್ಯಯನಶೀಲರೂ ಹೌದು. ಮಗನ ಶಿಕ್ಷಣದ ವಿಷಯದಲ್ಲಿ ಪ್ರಾಮಾಣಿಕ ಆಸಕ್ತಿ ಹೊಂದಿದ್ದ ತಂದೆಗೆ ಅವನ ಶಿಕ್ಷಣ ಮೊಟಕುಗೊಳಿಸುವ ವಿಷಯದಲ್ಲಿ ಅಪಾರ ನೋವು ಉಂಟಾಗಿರಲೇಬೇಕು. ಇದಕ್ಕೆಲ್ಲಾ ಕಾರಣ ಮುನ್ಶಿಜಿ ರಾಧಾಕಿಷನ್ ಸೀಮಿತ ಗಳಿಕೆ. ಮಗನಿಗೆ ಕಾಲೇಜು ಶಿಕ್ಷಣ ಕೊಡಿಸುವಷ್ಟು ಹಣದ ಶಕ್ತಿ ಇರಲಿಲ್ಲ. ಕಷ್ಟಗಳು ಬೆಟ್ಟದಷ್ಟಾದರೂ ಲಜಪತರಿಗೆ ಕಾಲೇಜು ಶಿಕ್ಷಣ ನೀಡಲು ಮುನ್ಶಿಜಿ ರಾಧಾಕಿಷನ್ ಮನಸ್ಸೇನೋ ಮಾಡಿದರು. ಆದರೆ ಹಣದ ಅಡ್ಡಿ ನಿವಾರಣೆಗೆ ಉಪಾಯ ತೋರಲಿಲ್ಲ. ಕುಟುಂಬ ನಿರ್ವಹಣೆಗೆ ಎಷ್ಟೇ ಕಷ್ಟವಾದರೂ ಮಗನಿಗೆ ಕಾಲೇಜು ಶಿಕ್ಷಣ ಕೊಡಿಸುವ ಅವರ ನಿರ್ಧಾರ ಗಟ್ಟಿಯಾಗುತ್ತಾ ಹೋಯಿತು. ಆದರೂ ಹಣದ ಅಡಚಣೆ ನಿವಾರಣೆಗೆ ದಾರಿ ಕಾಣಲಿಲ್ಲ. ಸ್ವತಂತ್ರ ಮನೋಭಾವದ ಮುನ್ಶಿಜಿ ಅವರ ಹುಟ್ಟುಗುಣ ಗೆಳೆಯರಿಂದ ನೆರವು ಕೇಳಲು ಬಿಡಲಿಲ್ಲ. ಯಾವಾಗಲಾದರೊಮ್ಮೆ ಅವರು ನೆರವು ಪಡೆಯುತ್ತಿದ್ದರೆ ಅದು ಗೆಳೆಯ ಸಾಜವಾಲ್ ಬಿಲೋಜ್ ಒಬ್ಬರಿಂದಲೇ. ಲಜಪತರ ಲಾಹೋರ್‌ನ ಉನ್ನತ ಶಿಕ್ಷಣಕ್ಕೆ ಸಾಜವಾಲ್ ಉದಾರ ಮನಸ್ಸಿನಿಂದ ನೆರವು ನೀಡಬಲ್ಲವರಾಗಿದ್ದರು. ಆದರೆ ಮುನ್ಶಿಜಿ ರಾಧಾಕಿಷನ್ ಆ ದಾಕ್ಷಿಣ್ಯಕ್ಕೆ ಎಂದೂ ಅವಕಾಶ ಕೊಟ್ಟಿರಲಿಲ್ಲ. ಲಾಹೋರಿನಲ್ಲಿ ಲಜಪತರು ಕಲಿತಿದ್ದು ತೀರಾ ಸೀಮಿತ ಅವಧಿಯಲ್ಲಿ ಎಂಬುದನ್ನು ನಾವು ಈಗಾಗಲೇ ಓದಿದ್ದೇವೆ. ಹೀಗಾಗಿ ಲಜಪತರು ಕಾಲೇಜು ಶಿಕ್ಷಣಕ್ಕೆ ಸಹ ಸ್ಟೈಪೆಂಡ್ ಗಳಿಕೆಯನ್ನೇ ಅವಲಂಬಿಸಬೇಕಾಯಿತು. ಕುಟಂಬದ ಅದೆಷ್ಟೋ ಅಗತ್ಯ ಖರ್ಚುವೆಚ್ಚಗಳನ್ನು ಮೊಟಕುಗೊಳಿಸಿ 8-10 ರೂಪಾಯಿಗಳ ನೆರವನ್ನು ತಂದೆ ಮಗನಿಗೆ ಒದಗಿಸತೊಡಗಿದರು.

1881ರ ಫೆಬ್ರವರಿ. ಆಗಷ್ಟೇ 16 ತುಂಬಿದ ಲಜಪತರು ಪಂಜಾಬ್ ಅಥವಾ ಲಾಹೋರಿನ ಅಂದಿನ ಏಕೈಕ ವಿಶ್ವವಿದ್ಯಾಲಯ ಇಲ್ಲವೇ ಕಾಲೇಜನ್ನು ಸೇರಿದರು.

ಕಾಲೇಜಿನ ದಿನಗಳಲ್ಲಿ ಬಡತನದ ಬವಣೆ ಲಜಪತರನ್ನು ಸಾಕಷ್ಟು ನಲುಗಿಸಿತು. ಕುಟಂಬದ ಗಳಿಕೆಯಲ್ಲಿ ಹೆಚ್ಚಳವೇನೂ ಆಗಲಿಲ್ಲ. ಸೀಮಿತ ಗಳಿಕೆಯಲ್ಲೇ ತಮ್ಮ ಉನ್ನತ ಶಿಕ್ಷಣಕ್ಕೆ ಹಣ ಒಗಿಸುವ ತಂದೆಯ ಸ್ಥಿತಿ ಅವರನ್ನು ಒಂದು ಕಡೆ ಕಾಡುತ್ತಿತ್ತು. ಈ ಮಧ್ಯೆ ಸ್ವತಃ ರೋಗಗ್ರಸ್ತ ದುಸ್ಥಿತಿ. ತೀರಾ ಅಲ್ಪ ಪ್ರಮಾಣದಲ್ಲಿ ದೊರೆಯುತ್ತಿದ್ದ ಸ್ಟೈಪೆಂಡ್, ತಂದೆ ಒದಗಿಸುತ್ತಿದ್ದ ಪುಟ್ಟ ಮೊತ್ತದಲ್ಲಿ ಬಡತನದ ಹಾಸಿಗೆ, ಹೊದಿಕೆಗಳ ನಡುವೆ ಲಜಪತ್‌ರಾಯ್ ಕಾಲೇಜು ಶಿಕ್ಷಣ ಮುಂದುವರೆಸಿದರು.

"ಮೊದಲ ಎರಡು- ಮೂರು ತಿಂಗಳು" ಲಜಪತರೇ ಬರೆದಿಟ್ಟಿರುವಂತೆ "ನಾನು ಭಾರೀ ಕಿರಿಕಿರಿ ಎದುರಿಸಬೇಕಾಯಿತು. ನನ್ನ ಕಣ್ಣುಗಳು ನನಗೆ ತುಂಬಾ ತೊಂದರೆ ಕೊಟ್ಟವು. ಎಷ್ಟೋ ಸಾರಿ ಊಟವೇ ಇಲ್ಲದ ಸ್ಥಿತಿ. ಸಾಕಷ್ಟು ಪರಿಶ್ರಮಪಟ್ಟ ಬಳಿಕ ತಿಂಗಳಿಗೆ ಮೂರು ರೂಪಾಯಿ ಸ್ಟೈಪೆಂಡ್ ವಿಶ್ವವಿದ್ಯಾಲಯದಿಂದ ದೊರೆಯಿತು. ನಾನು ಕಲಾ ಪದವಿ ಪಡೆಯುವ ಆಸೆಯೊಂದಿಗೆ ಲಾಹೋರಿಗೆ ಬಂದಿದ್ದೆ. ಅಲ್ಲಿ ಕೆಲವು ಜೊತೆಗಾರ ವಿದ್ಯಾರ್ಥಿಗಳ ಸಲಹೆ ಮೇರೆಗೆ ನಾನು ಕಾನೂನು ಶಾಲೆಯನ್ನು ಸೇರಿದೆ. ಮಾಸಿಕ ಸ್ಟೈಪೆಂಡ್ ಮೊತ್ತದಲ್ಲಿ ಎರಡು ರೂಪಾಯಿಗಳನ್ನು ಸರ್ಕಾರಿ ಕಾಲೇಜಿನ ಬೋಧನಾ ಶುಲ್ಕಕ್ಕೆ ನೀಡುತ್ತಿದ್ದೆ. ಮೂರು ರೂಪಾಯಿ ಕಲಾ ಕಾಲೇಜಿಗೆ ಹೋಗುತ್ತಿತ್ತು. ಹಾಸ್ಟೆಲ್ ಶುಲ್ಕ ಒಂದು ರೂಪಾಯಿ. ತಂದೆ ಕಳುಹಿಸುತ್ತಿದ್ದ 8-10 ರೂಪಾಯಿಗಳಲ್ಲಿ ನನ್ನೆಲ್ಲಾ ಖರ್ಚುವೆಚ್ಚಗಳು ಸಾಗಬೇಕಿತ್ತು. ಕಾನೂನು ಪುಸ್ತಕಗಳು ಬಲು ದುಬಾರಿ. ಅಗತ್ಯವಾದವುಗಳನ್ನು ಮಾತ್ರ ನಾನು ಹಳೆಯ ಪುಸ್ತಕಗಳ ಅಂಗಡಿಗಳಲ್ಲಿ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿದ್ದೆ. ಸಿಗದ ಪುಸ್ತಕಗಳಿಗೆ ಗೆಳೆಯರನ್ನು ಅವಲಂಬಿಸುತ್ತಿದ್ದೆ. ಅವರಿಂದ ಎರವಲು ಪಡೆದು ಓದುತ್ತಿದ್ದೆ. ಗೆಳೆಯರ ಪುಸ್ತಕಗಳನ್ನು ಕೇಳಿ, ಓದಿ ಕೊಡುವುದೇ ನನಗೆ ಅನಿವಾರ್ಯವಾಗಿ ಹೋಯಿತು. ನನಗೆ ಸಾಧ್ಯವಾದ ಎಲ್ಲಾ ನೆರವನ್ನು ಕೊಡಲು ತಂದೆ-ತಾಯಿ ಮುಂದಾಗುತ್ತಿದ್ದರು. ಸಾಲಕ್ಕೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದರೆ ನನಗೆ ತಂದೆ-ತಾಯಿ ಸಾಲಗಾರರಾಗುವುದು ಸುತರಾಂ ಹಿಡಿಸುತ್ತಿರಲಿಲ್ಲ. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಖರ್ಚಿನಲ್ಲಿ ನನ್ನ ಉನ್ನತ ಶಿಕ್ಷಣವನ್ನು ಸಾಗಿಸತೊಡಗಿದೆ."

ಬದುಕಿನ ಆರ್ಥಿಕ ಜಂಜಾಟ ಲಜಪತರ ಮೇಲೆ ಪರ್ಯಾಯ ಮಾರ್ಗಕ್ಕಾಗಿ ಒತ್ತಡ ಹೇರತೊಡಗಿತು. ಕಾನೂನು ಅಧ್ಯಯನವನ್ನು ಬೇಗ ಮುಗಿಸಿ ಡಿಪ್ಲೋಮ ಮಾಡಿ ಗಳಿಕೆಗೆ ಮಾಧ್ಯಮವಾಗಿಸಿಕೊಳ್ಳಬೇಕೆಂದು ಅವರು ನಿರ್ಧರಿಸಿದರು. ತತ್ಫಲವಾಗಿ ಸಾಮಾನ್ಯ ಶಿಕ್ಷಣ ಅವರ ಕಲಿಕೆಯಲ್ಲಿ ಎರಡನೇ ಸ್ಥಾನ ಪಡೆಯಿತು. ಕಾನೂನು ಪರೀಕ್ಷೆಯನ್ನು ಸಾಕಷ್ಟು ಅಧ್ಯಯನದ ಮೂಲಕ ಎದುರಿಸಲು ಮುಕ್ತಾರ್‌ಶಿಪ್ ಗಳಿಸಿದರು. ಕಾಲೇಜು ಶಿಕ್ಷಣದಲ್ಲಿ ಸಾಮಾನ್ಯ ಕಲಿಕೆಯ ವಿದ್ಯಾರ್ಥಿಯಾಗಿ ಎರಡು ವರ್ಷ ಹಾಜರಾತಿಯಲ್ಲಿದ್ದರೂ ಯಾವುದೇ ಪರೀಕ್ಷೆಯನ್ನು ಪಾಸು ಮಾಡಲಾಗಲಿಲ್ಲ. ಪದೇ ಪದೇ ಕಾಯಿಲೆ. ಕಾನೂನು ಕಲಿಕೆಗೆ ಆದ್ಯತೆ ಕೊಟ್ಟ ಕಾರಣ ಅವರು ಈ ಶಿಕ್ಷಣದಲ್ಲಿ ಹಿಂದುಳಿದರು. ಈ ಮಧ್ಯೆ ಸಾರ್ವಜನಿಕರ ಸಮಸ್ಯೆಗಳಲ್ಲೂ ಸಕ್ರಿಯ ಪಾತ್ರ ವಹಿಸುತ್ತಿದ್ದುದು ಇನ್ನೊಂದು ಕಾರಣ. ಇದೆಲ್ಲದರ ಕೊಡುಗೆಯಾಗಿ 1883ರ ಕಲಾ ಪದವಿಯ ಮಧ್ಯಾಂತರ ಪರೀಕ್ಷೆಗಳಲ್ಲಿ ಲಜಪತರು ಉತ್ತೀರ್ಣ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಲಾಗಲಿಲ್ಲ

ಅದೆಲ್ಲಾ ಏನೇ ಇರಲಿ, ಸರ್ಕಾರಿ ಕಾಲೇಜಿನ ಆ ದಿನಗಳು ಲಜಪತರ ಬದುಕಿನ ಬಹು ಮುಖ್ಯ ದಿನಗಳಾಗಿದ್ದವು. ಅವರ ಸಹಪಾಠಿಗಳಲ್ಲಿ ಮಹಾತ್ಮ ಹನ್ಸರಾಜ್, ಪಂಡಿತ್ ಗುರುದತ್ ವಿದ್ಯಾರ್ಥಿ, ರಾಜಾ ನರೇಂದ್ರನಾಥ್ ಮತ್ತು ಪ್ರೊ. ರುಚಿರಾಂ ಸಹಾನಿ ಪ್ರಮುಖರು. ಮುಂದೆ ಅಸಾಮಾನ್ಯ ಮಹನೀಯರಾದವರು. ಅಂದಿನ ದಿನಗಳಲ್ಲಿ ಕಾಲೇಜು ಚಟುವಟಿಕೆ ಒಂದು ಪುಟ್ಟ ಅವಧಿಯಷ್ಟೇ. ವಿದ್ಯಾರ್ಥಿಗಳ ಸಂಖ್ಯೆಯೂ ತೀರಾ ಕಡಿಮೆ. ಈ ದಿನಗಳಂತೆ ವರ್ಷಕ್ಕೆ 50-60 ಸಾವಿರಗಳಷ್ಟು ವಿದ್ಯಾರ್ಥಿಗಳು ಆ

ದಿನಗಳಲ್ಲಿ ಇರಲಿಲ್ಲ. ಅದರಲ್ಲೂ ಕಾಲೇಜು ಶಿಕ್ಷಣದಲ್ಲಿ. ಅವರೂ 1882-83ರಲ್ಲಿ ಪಂಜಾಬಿನ ಶೈಕ್ಷಣಿಕ ವರ್ಷದಲ್ಲಿ ಕಂಡು ಬಂದ ಮಹಾನ್ ಮಹಿಮಾನ್ವಿತರ ಪಟ್ಟಿ ಈತನಕ ವಿಶ್ವವಿದ್ಯಾಲಯದಲ್ಲಿ ಕಂಡು ಬಂದಿಲ್ಲ. ಆಧುನಿಕ ಪಂಜಾಬಿನ ನಿರ್ಮಾಣದಲ್ಲಿ ಹೆಚ್ಚು ಕಡಿಮೆ ಅವರೆಲ್ಲರೂ ಪಾತ್ರಧಾರಿಗಳೇ. ಲಜಪತ್‌ರಾಯ್, ಹನ್ಸ್‌ರಾಜ್, ನರೇಂದ್ರನಾಥ್, ಗುರುದತ್ ಮತ್ತು ರುಚಿರಾಂ 1883ರಲ್ಲಿ ಮಧ್ಯಂತರ ಪರೀಕ್ಷೆಗೆ ಕುಳಿತರು. ಅಂತಹ ಹೆಸರುಗಳು ಆ ವಿಶ್ವವಿದ್ಯಾಲಯದಲ್ಲಿ ಮುಂದೆಂದೂ ಕಂಡು ಕೇಳಿ ಬಂದಿಲ್ಲ. ಆ ಮಹಿಮಾನ್ವಿತರಲ್ಲಿ ಲಜಪತ್‌ರಾಯ್ ಅವರ ಹೆಸರು ಅಗ್ರಮಾನ್ಯ. ಅವರ ಅನುಯಾಯಿಗಳದು ದೊಡ್ಡ ಗುಂಪು. ವಾಸ್ತವದಲ್ಲಿ ಗುರುದತ್, ಹನ್ಸ್‌ರಾಜ್, ಚೇತನ್ ಆನಂದ್ ಮತ್ತು ರಾಯ್ ಶಿವನಾಥ್ ಕಾಲೇಜಿನ ದೊಡ್ಡ ಗುಂಪಾದರು. ಅವರಲ್ಲಿ ಲಜಪತ್‌ರಾಯ್ ಅವರದು ದೊಡ್ಡ ಸ್ಥಾನ. ಎತ್ತರದ ಸ್ಥಾನ. ಕಾಲೇಜು ದಿನಗಳ ನಂತರವೂ ಸಹ ಅವರ ವ್ಯಕ್ತಿತ್ವ, ಎತ್ತರಗಳು ಹಾಗೆಯೇ ಬೆಳೆಯುತ್ತಾ ಹೋದವು. ಅವರ ಜೀವನ ವಿಧಾನ ಶುದ್ಧವಾಗಿತ್ತು. ಒಬ್ಬೊಬ್ಬರು ಒಂದೊಂದು ಕ್ಷೇತ್ರವನ್ನು ಆರಿಸಿಕೊಂಡರು. ರಾಯ್ ಶಿವನಾಥ್ ಮುಂದೆ ಉತ್ತರಪ್ರದೇಶದಲ್ಲಿ ಎಂಜಿನಿಯರ್ ಆದರು. ಅವರ ತಾತ್ವಿಕ ಜೀವನ ಅಸಾಮಾನ್ಯ. ಬರಿಗಾಲಲ್ಲೇ ನಡೆಯುತ್ತಿದ್ದರು. ಭಾರತೀಯ ಪ್ರಾಚೀನ ಸಂಸ್ಕೃತಿಯ ಪುಸ್ತಕಗಳನ್ನು ಸಂಗ್ರಹಿಸುವುದರಲ್ಲಿ ಅವರ ಶ್ರದ್ಧೆ ಅಪಾರವಾಗಿತ್ತು. ಡೆಹರಾಡೂನ್‌ನಲ್ಲಿದ್ದ ಅವರ ಮನೆ ಒಂದು ಖಾಸಗಿ ವಸ್ತು ಸಂಗ್ರಹಾಲಯವೇ ಸರಿ. ಪ್ರಾಚೀನ ಗಣಿತ ಶಾಸ್ತ್ರ, ರೇಖಾ ಶಾಸ್ತ್ರಗಳ ಆಧಾರದ ಮೇಲೆ ಹೊಸ ಅವಿಷ್ಕಾರಗಳನ್ನು ಅವರು ಕೈಗೊಳ್ಳುತ್ತಿದ್ದರು. ಸಾಕಷ್ಟು ಅಧ್ಯಯನ, ಪರಿಶೀಲನೆ, ಪರಿಶ್ರಮದ ಮೂಲಕ ಆರ್ಯರ ಪ್ರಾಚೀನ ಯಜ್ಞಶಾಲೆಯ ಮಾದರಿಗಳನ್ನು ಅವರು ರೇಖಾ ಶಾಸ್ತ್ರದ ಆಧಾರದ ಮೇಲೆ ರಚಿಸಿಟ್ಟಿದ್ದರು.

* * *

ಅಧ್ಯಾಯ-4

ಉರ್ದು ವಿರುದ್ಧ ಹಿಂದಿ-ಮಹೋದ್ದೇಶಕ್ಕೆ ದಾರಿ

ಸರ್ಕಾರಿ ಕಾಲೇಜಿನಲ್ಲಿ ಲಜಪತರ ಅಧ್ಯಾಪಕರೆಲ್ಲರೂ ಅವರ ಹಾಗೂ ಅವರ ಪ್ರಭಾವಿ ಗೆಳೆಯರಷ್ಟು ಪ್ರತಿಭಾನ್ವಿತರಾಗಿರಲಿಲ್ಲ. ಆ ಶಿಕ್ಷಕರಲ್ಲಿ ಹೆಸರಿಸಬಹುದಾದ ಕೇವಲ ಕೆಲವರ ಪೈಕಿ ಡಾ. ಲಿಟ್ನರ್ ಮತ್ತು ಮೊಹಮದ್ ಹುಸೇನ್ ಆಜಾದ್ ಪ್ರಮುಖರು. ಹೊಸ ಶಿಕ್ಷಣ ನೀತಿಯನ್ನು ರೂಪಿಸುವ ಕನಸು ಹೊತ್ತವರು ಲಿಟ್ನರ್. ಪಂಜಾಬ್ ವಿಶ್ವವಿದ್ಯಾಲಯದ ಮೂಲಕ ಪೌರಾತ್ಯ ಮಾದರಿಯಲ್ಲಿ ಸಿದ್ಧಪಡಿಸಲು ಹೊರಟ ಅವರ ಶಿಕ್ಷಣ ನೀತಿ ಯಶಸ್ಸು ಕಾಣಲಿಲ್ಲ. ಆದರೂ ದೇಶಿಯ ಶಿಕ್ಷಣ ವಿಷಯದಲ್ಲಿ ಪ್ರಮುಖವಾದ ದಾಖಲೆಯನ್ನು ಸಿದ್ಧಪಡಿಸಿದ ಪರಿಶ್ರಮಿ ಎಂದು ಅವರನ್ನು ಪರಿಗಣಿಸಲೇಬೇಕಾಗಿದೆ. ಬ್ರಿಟಿಷ್ ಸಾಮ್ರಾಜ್ಯದ ಪೂರ್ವದ ದಿನಗಳಲ್ಲಿ ಅಪರೂಪದ ಮಾತಾಗಿದ್ದ ಶಿಕ್ಷಣದ ಬಗ್ಗೆ ಅದರಲ್ಲೂ ಪಂಜಾಬಿನ ವಿಷಯದಲ್ಲಿ ಅಂತಹ ದಾಖಲೆಯೊಂದನ್ನು ಸಿದ್ಧಪಡಿಸಿದ್ದು ಸಾಮಾನ್ಯ ಸಂಗತಿಯೇನೂ ಅಲ್ಲ. ಬ್ರಿಟಿಷರು ಸುಮಾರು ಶತಮಾನಗಳ ಕಾಲ ಆಡಳಿತ ನಡೆಸುತ್ತಾ ಬಂದ ನಂತರವೂ ಆ ವರದಿಯನ್ನು ಸಿದ್ಧಪಡಿಸಿದ ಅವರ ಸಾಮರ್ಥ್ಯ ಅದ್ಭುತ. ಶಿಕ್ಷಕರಾಗಿಯೂ ಅಷ್ಟೇ. ಡಾ. ಲಿಟ್ನರ್ ಪ್ರತಿಭಾನ್ವಿತರು ಮತ್ತು ಬಹುಮುಖಿ ವರ್ಚಸ್ಸು ಉಳ್ಳವರಾಗಿದ್ದರು. ಕಲೆ, ಪೌರಾತ್ಯ ಸಂಸ್ಕೃತಿ, ಕಾನೂನು ಶಾಲೆಗಳಲೆಲ್ಲಾ ಅವರು ಅಧ್ಯಾಪನ ನೀಡುತ್ತಿದ್ದರು. ಬಹು ಭಾಷೆಗಳು ಅವರಿಗೆ ಕರಗತ. ಅದರಲ್ಲೂ ಪೌರಾತ್ಯ ಭಾಷೆಗಳಲ್ಲಿ ಹೆಚ್ಚು ಪರಿಶ್ರಮವಿತ್ತು. ಆದರೆ ಆಡಳಿತದ ವಿಷಯದಲ್ಲಿ ತೀರಾ ಭಿನ್ನ. ವಿಶ್ವವಿದ್ಯಾಲಯದ ಅಧಿಕೃತ ಚರಿತ್ರೆಯನ್ನು ಅವಲೋಕಿಸಿದಾಗ ಅದರ ದೀನ ಸ್ಥಿತಿಗೆ ಡಾ. ಲಿಟ್ನರ್‌ರ ಅಸಮರ್ಥ ಲೆಕ್ಕಪತ್ರ ಮತ್ತು ಹಣಕಾಸು ನಿರ್ವಹಣೆಯೇ ಕಾರಣ ಎಂಬುದು ತಿಳಿಯುತ್ತದೆ.

ಮೊಹಮದ್ ಹುಸೇನ್ ಆಜಾದರು ಸರ್ಕಾರಿ ಕಾಲೇಜಿನಲ್ಲಿ ಇನ್ನೊಂದು ರೀತಿಯಲ್ಲಿ ಚರಿತ್ರೆಯನ್ನು ಸೃಷ್ಟಿಸುತ್ತಾ ಬಂದವರು. ಪರ್ಷಿಯನ್ ಮತ್ತು ಅರೇಬಿಕ್‌ನಲ್ಲಿ ಪಾಂಡಿತ್ಯ ಸಾಧಿಸಿದ್ದ ಅವರು ಸಾಹಿತ್ಯ ಮತ್ತು ಅಧ್ಯಯನಗಳು ಕಾಲದ ಅಗತ್ಯಕ್ಕೆ ಅನುಗುಣವಾಗಿ ಮಾರ್ಪಾಟಾಗಬೇಕೆಂದು ಮನಗಂಡಿದ್ದರು. ಉರ್ದು ಭಾಷೆಯನ್ನು ಶ್ರೀಮಂತಗೊಳಿಸಲು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಉದ್ಭವಿಸಿದ ಹೊಸ ಸಾಹಿತ್ಯಿಕ ಅಗತ್ಯಗಳನ್ನು ಪೂರೈಸಲು ಉರ್ದು ಭಾಷೆಯನ್ನು ಮಾಧ್ಯಮವಾಗಿ ಮಾಡಿಕೊಳ್ಳಬೇಕೆಂದು ಅವರು ತವಕಿಸಿದ್ದರು. ಅವರ ಕಾವ್ಯ ಕೊಡುಗೆ ಅಷ್ಟೇನೂ ಮಹತ್ತರವೆನಿಸುವುದಿಲ್ಲವಾದರೂ ಉರ್ದು ಗದ್ಯ ಸಾಹಿತ್ಯದಲ್ಲಿ ಅವರದು ಅನ್ಯಾದೃಶ ಸ್ಥಾನ. ಮೊಟ್ಟಮೊದಲಿಗರಾಗಿ ಅವರು ಉರ್ದು ಸಾಹಿತ್ಯದ ತೌಲನಿಕ ಹಾಗೂ ಪರಿಷ್ಕೃತ ಚರಿತ್ರೆಯನ್ನು ನೀಡಿದರು. ಅವರ ಸಾಹಿತ್ಯ

ರಚನೆಯ ಶಕ್ತಿ ಅತುಳ, ವೈವಿಧ್ಯವಾದರೂ ಕಾಲದ ಉರುಳಿನಲ್ಲಿ ಆಧಾರ ಕಳೆದುಕೊಂಡು ಜಾಳು ಜಾಳೆನಿಸಿದವು. ಸಾಹಿತ್ಯಿಕ ಚಿತ್ರಿಕರಣದಲ್ಲಿ ಅವರದು ಬಲು ಚುರುಕುಮತಿ. ಅವರ ಸಾಹಿತ್ಯಿಕ ಸಾಲುಗಳನ್ನು ಉದಾಹರಣೆಗಳನ್ನು ಇಂದಿಗೂ ಸಹ ಓದುಗರು ಪ್ರಸ್ತಾಪ ಮಾಡಬಹುದು. *ಗೀಕಾರ್ಡಿಯಾನಿಯಾ* ಚರಿತ್ರೆಯನ್ನು ಓದುವ ವಿಷಯದಲ್ಲಿ ಲಾರ್ಡ್ ಮೆಕಾಲೆ ಮಾಡುವ ತರ್ಕವನ್ನು ಚರಿತ್ರೆಕಾರರು ವಿವಾದಕ್ಕೆ ಎಳೆಯಬಹುದು. ಆದರೆ *ಗೀಕಾರ್ಡಿಯಾನಿಯಾ* ಕತೆ ಇಲ್ಲವಾಗುವುದಿಲ್ಲ. ಮೊಹಮದ್ ಹುಸೇನ್ ಆಜಾದರ ಸಾಹಿತ್ಯ ರಚನೆಯಲ್ಲಿಯೂ ಸಹ ಇಂತಹ ಅಪಾಯಕಾರಿ ಲಕ್ಷಣಗಳು ಅಡಕ. ಯಾವುದೋ ಓರ್ವ ಉರ್ದು ಕವಿಯ ಲಕ್ಷಣಗಳನ್ನು ಚಿತ್ರಿಸುವಾಗ ಅವರು ತೀರಾ ಅತಿರೇಕ ಮಾಡುತ್ತಿದ್ದರು. ಅಂತಹ ಕವಿಗಳಲ್ಲಿ ಮೀರ್ ಪ್ರಕರಣ ಎದ್ದು ಕಾಣುತ್ತದೆ. ವಾಸ್ತವಕ್ಕೆ ಹೊರತಾಗಿ ಕಟ್ಟುಕಥೆಯಂತೆ ಆ ಕವಿಯ ಪಾಂಡಿತ್ಯವನ್ನು ಮೊಹಮದ್ ಹುಸೇನ್ ಆಜಾದರು ಚಿತ್ರಿಸಿದ್ದಾರೆ. ಆದರೆ ಕಾಲದ ಉರುಳಿನಲ್ಲಿ ಮೀರ್ ಕವಿಯು ಆಜಾದರು ಚಿತ್ರಿಸಿದಷ್ಟು ಎತ್ತರದಲ್ಲಿ ಉಳಿದು ಬರುವುದು ಕಾಣುತ್ತಿಲ್ಲ.

ಲಜಪತ್‌ರಾಯ್ ಅವರು ಆಜಾದರ ಅರೇಬಿಕ್ ತರಗತಿಗಳಿಗೆ ಕೆಲವು ದಿನಗಳು ಮಾತ್ರ ಹಾಜರಾಗಿದ್ದರು. ಆ ಕೆಲವು ದಿನಗಳು ಲಜಪತರ ಮನಸ್ಸಿನ ಮೇಲೆ ಅಸಾಧಾರಣ ಮುದ್ರೆ ಒತ್ತಿದವು. ಆಜಾದರು ಪಾಠ ಪ್ರವಚನಗಳ ಮಧ್ಯೆ ಹಾಸ್ಯ ಚಟಾಕಿ ಹಾರಿಸುತ್ತಿದ್ದರು. ಲಜಪತರನ್ನು ಬಹುವಾಗಿ ಆಕರ್ಷಿಸಿದ ಗುಣಗಳಲ್ಲಿ ಅದೂ ಒಂದು. ಆದರೂ ಲಜಪತರು ಅರೇಬಿಕ್ ತರಗತಿಗಳನ್ನು ಬಿಟ್ಟದ್ದಕ್ಕೆ ಕಾರಣಗಳೇ ಬೇರೆ. ಆಗಷ್ಟೇ ಭಾಷಾ ವಿವಾದ ಆರಂಭಗೊಂಡಿತ್ತು. ಅಂದಿನ ಸಂಯುಕ್ತ ಪ್ರಾಂತ್ಯ ಅಂದರೆ ಇಂದಿನ ಉತ್ತರ ಪ್ರದೇಶದಲ್ಲಿ ಭಾಷಾ ಚಳವಳಿ ಹುಟ್ಟಿಕೊಂಡಿತ್ತು. ಅದು ದಿನೇ ದಿನೇ ಉಲ್ಬಣಗೊಳ್ಳುತ್ತಾ ನ್ಯಾಯಾಲಯಗಳಲ್ಲಿ ಹಿಂದಿ ಭಾಷೆ ಮಾನ್ಯವಾಗಬೇಕೆಂಬ ಒತ್ತಾಯದವರೆಗೆ ತೀಕ್ಷ್ಣಗೊಂಡಿತು. ಇತ್ತ ಪಂಜಾಬಿನಲ್ಲಿ ಆರ್ಯ ಸಮಾಜವು ಹಿಂದೂಗಳಿಗೆ ಹಿಂದಿ ಮತ್ತು ಸಂಸ್ಕೃತ ಭಾಷೆಯ ಹಿಡಿತ ಸಾಧಿಸಲು ಹೆಚ್ಚು ಒತ್ತು ಕೊಡುತ್ತಾ ಬಂದಿತು. ಕಾಲೇಜಿನಲ್ಲಿ ಲಜಪತರ ಆರ್ಯ ಸಮಾಜದ ಗೆಳೆಯರು ಹಿಂದಿ ಮತ್ತು ಸಂಸ್ಕೃತವನ್ನು ಹೆಚ್ಚು ಓಲೈಸುತ್ತಿದ್ದರು. ಅವರ ಒತ್ತಡ ಮತ್ತು ಪ್ರಭಾವಗಳು ಲಜಪತ್‌ರಾಯ್ ಅವರ ಮೇಲೆ ಪರಿಣಾಮ ಬೀರದಿರಲಿಲ್ಲ. ತತ್ಫಲವಾಗಿ ಅವರು ಅರೇಬಿಕ್‌ನ್ನು ಬಿಟ್ಟುಕೊಟ್ಟು ಸಂಸ್ಕೃತದತ್ತ ಒಲವು ತೋರಬೇಕಾಯಿತು. ವಿಚಿತ್ರವೆಂದರೆ ಲಜಪತರಿಗೆ ಸಂಸ್ಕೃತದ ಒಂದು ಶಬ್ದವೂ ಗೊತ್ತಿರಲಿಲ್ಲ. ಆದರೂ ತ್ಯಾಗಕ್ಕೆ ಮುಂದಾದರು. ಈ ಮಧ್ಯೆ ಸ್ವತಃ ಪ್ರೊ. ಆಜಾದರ ವೈಯಕ್ತಿಕ ನಿಲುವು ಸಹ ಲಜಪತರನ್ನು ಅರೇಬಿಕ್ ತರಗತಿಗಳಿಂದ ದೂರ ಮಾಡಿತೆನ್ನಬಹುದು. ಆಜಾದ್ ಓರ್ವ ಷಿಯಾ ಮುಸ್ಲಿಂ. ಸಹಜ ಸ್ವಭಾವಿಯಾಗಿ ಅವರು ತಮ್ಮ ಧರ್ಮವನ್ನು ಮೆರೆಸುತ್ತಿದ್ದರು. ಜೊತೆಗೆ ಅವರು ಪರ್ಷಿಯನ್ ವಿದ್ವಾಂಸ. ಅದಾಗಿ ಅವರು ಇರಾನ್‌ನನ್ನು ತಮ್ಮ ತವರು ಎಂದು ಪರಿಗಣಿಸಿದ್ದರೇ ಹೊರತು ಭಾರತವನ್ನಲ್ಲ. ಲಜಪತರ ಎಳೆಯ ಮನಸ್ಸಿನಲ್ಲಿ ಕುಡಿಯೊಡೆಯುತ್ತಾ ಬಂದಿದ್ದ ದೇಶಭಕ್ತಿಯ ನರುಗಂಪು ಪ್ರೊ. ಆಜಾದರ ನಿಲುವು ಧೋರಣೆಗಳನ್ನು ಗ್ರಹಿಸಲಿಲ್ಲ. ಅರೇಬಿಕ್ ಮತ್ತು ಪರ್ಷಿಯನ್ ಕಲಿತರೆ ಅದರಿಂದ ರಾಷ್ಟ್ರೀಯತೆಯ ಅಭಿಮಾನದ ಮೇಲೆ ಪ್ರತಿಕೂಲದ

ಪರಿಣಾಮ ಬೀರಬಹುದೆಂಬ ಶಂಕೆ ಅವರನ್ನು ಆವರಿಸಿತು. ಶತ್ರು ದೂರದಲ್ಲಿಲ್ಲೋ ಇಲ್ಲಿ ಹತ್ತಿರದಲ್ಲೇ ಅಡಗಿದ್ದಾನೆ ಜಾಗೃತವಾಗಿರಬೇಕೆಂದು ಅವರು ಮನಗಂಡರು. ಆಜಾದರ ತರಗತಿಗಳಿಂದ ದೂರವಾದರು. ಸಂಸ್ಕೃತಕ್ಕೆ ಹತ್ತಿರವಾಗಲು ಪ್ರಯತ್ನಿಸಿದರು. ಆದರೂ ಹೊಸ ಭಾಷೆಯಲ್ಲಿ ಹೆಚ್ಚಿನದನ್ನು ಸಾಧಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆರ್ಯ ಸಮಾಜದಲ್ಲಿ ಹೆಚ್ಚು ಸಕ್ರಿಯವಾಗಿದ್ದ ಕಾಲದಲ್ಲೂ ಸಹ ಸಂಸ್ಕೃತ ಭಾಷೆಯನ್ನು ಅಂತರ್ಗತ ಮಾಡಿಕೊಳ್ಳಲು ಅವರಿಗೆ ಆಗಲಿಲ್ಲ. ಭಾಷಾಂತರದ ಮೂಲಕವಷ್ಟೇ ಈ ಪ್ರಾಚೀನ ಭಾರತೀಯ ಭಾಷೆಯ ಅಂತರ್ಗತವನ್ನು ಅರಿತುಕೊಳ್ಳಲು ಅವರಿಗೆ ಶಕ್ಯವಾಯಿತು.

ಇಲ್ಲಿ ಒಂದು ಮಾತು ಮುಖ್ಯ. ಪ್ರೊ. ಆಜಾದರು ಹಿಂದಿ ವಿರೋಧಿಯಾಗಿದ್ದರು ಎಂಬ ಭಾವನೆ ಖಂಡಿತಾ ಸಲ್ಲ. ಅವರು ಹಿಂದಿ ವಿರೋಧಿಯೂ ಆಗಿರಲಿಲ್ಲ. ತಮ್ಮದೇ ರೀತಿಯಲ್ಲಿ ಅವರು ಭಾರತವನ್ನು ಪ್ರೀತಿಸುತ್ತಿದ್ದರು. ಅವರ ಕೊಡುಗೆ ಉರ್ದು ಭಾಷೆಗೆ ಮೀಸಲಾದರೂ ಹಿಂದಿ ಬಗ್ಗೆ ಅವರು ಮತ್ಸರ ಹೊಂದಿದ್ದರೆಂದು ಆರೋಪಿಸಲು ಯಾವ ಕಾರಣಗಳು ಇರಲಿಲ್ಲ. ಉರ್ದು ಸಾಹಿತ್ಯ ಸೊರಗಿದೆ ಎಂಬುದನ್ನು ಆಜಾದರು ಮನಗಂಡರು. ಅದು ನಿಂತ ನೀರಾಗಿದೆ ಎಂದು ಅರಿತುಕೊಂಡರು. ಉರ್ದು ಗದ್ಯ ಸಾಹಿತ್ಯ ಹೊಸ ಪ್ರತಿಭೆಗಳಿಗೆ ಆಕರ್ಷಕವಾಗಿರಲಿಲ್ಲ. ಕಾವ್ಯ ಸಾಹಿತ್ಯ ಕಾಲಾತೀತ ಪ್ರಕಾರದಲ್ಲಿ ದುಬಾರಿ ವೆಚ್ಚಕ್ಕೆ ಮೂಲವಾಗಿತ್ತು. ಅದೇ ಸ್ಥಿತಿಯಲ್ಲಿ ಉರ್ದು ಕಾವ್ಯ ಮತ್ತು ಸಾಹಿತ್ಯಗಳು ಮುಂದುವರೆದರೆ ಆಧುನಿಕ ಮನಸ್ಸುಗಳಿಗೆ ಲಭ್ಯವಾಗದಷ್ಟು ಶಿಥಿಲವಾಗಿ ಹೋಗಬಹುದೆಂದು ಆಜಾದ್ ಹೆದರಿದರು. ಕಾಲಾತೀತವಾಗುತ್ತಿದ್ದ ಭಾಷೆಗೆ ಹೊಸ ಅರ್ಥ ತುಂಬಲು ಅವರು ಮುಂದಾದರು. ಉರ್ದು ಸಾಹಿತ್ಯದ ಆಧುನಿಕರಣ ತನ್ನ ಹುಟ್ಟು ಕಂಡಿದ್ದು ಪಂಜಾಬಿನಲ್ಲಿ. ಅದರ ಸೃಷ್ಟಿಕರ್ತರು ಮೊಹಮದ್ ಹುಸೇನ್ ಆಜಾದರೇ. ಉರ್ದು ಸಾಹಿತ್ಯದ ಗ್ರಹಣ ಶಕ್ತಿ ಮಹತ್ತರವಾದುದು. ನಂಬಿಕೆಗೆ ನಿಲುಕದ್ದು. ಪಾಶ್ಚಿಮಾತ್ಯರ ಪ್ರಭಾವವನ್ನು ಅದರಲ್ಲೂ ಇಂಗ್ಲಿಷ್ ಮಾಧ್ಯಮದ ಮೂಲಕ ಹರಡಿದ ಪ್ರಭಾವವನ್ನು ಈ ಭಾಷೆ ಸುಲಭವಾಗಿ ತನ್ನದಾಗಿಸಿಕೊಂಡಿತು. ಇನ್ನೂ ಅಚ್ಚರಿ ಎಂದರೆ ಇಂಗ್ಲಿಷ್ ಭಾಷಾ ಜ್ಞಾನವನ್ನೇ ಅರಿಯದವರಿಂದ ಆ ಪ್ರಭಾವವನ್ನು ಅದು ಅಂತರ್ಗತ ಮಾಡಿಕೊಂಡಿತು. ಆಜಾದ್ ಮತ್ತು ಹ್ಯಾಲಿ ಉರ್ದು ಸಾಹಿತ್ಯದ ಪ್ರವರ್ತಕರಲ್ಲಿ ಅಗ್ರಮಾನ್ಯರು. ನಂತರದ ಹೆಸರು ಸರ್ ಸಯದ್ ಅಹಮದ್ ಮತ್ತು ಶಿಬ್ಲಿ. ಈ ನಾಲ್ವರಲ್ಲಿ ಉರ್ದು ಸಾಹಿತ್ಯದ ನವ ನಿರ್ಮಾಣದ ಹೊಸ ಅಧ್ವರ್ಯು ಮೊಹಮದ್ ಹುಸೇನ್ ಆಜಾದರೇ. ಚಳವಳಿ ಆರಂಭಿಸಿ ಅದನ್ನು ಬೆಳೆಸಿದರು. ಅವರ ಪ್ರಭಾವದಲ್ಲಿ ಪಂಜಾಬ್ ಪ್ರಾಂತ್ಯದಾದ್ಯಂತ ಉರ್ದು ಸಾಹಿತ್ಯಕ್ಕೆ ಹೊಸ ಪ್ರಾಕಾರ ಸುಲಲಿತವಾಗಿ ಸೇರಿಕೊಳ್ಳತೊಡಗಿತು. ಅವರ ನಿರ್ದೇಶನದಂತೆ ಹಾಲಿ ಲಾಹೋರಿಗೆ ಬಂದರು. ಉರ್ದು ಸಾಹಿತ್ಯದ ಆಧುನಿಕರಣದಲ್ಲಿ ನಿಮಗ್ನರಾದರು. ಈ ಇಬ್ಬರ ಕೊಡುಗೆಯ ಫಲವಾಗಿ ಸಾಹಿತ್ಯ ಕ್ರಾಂತಿ ಉಂಟಾಯಿತು. ಉರ್ದು ಭಾಷೆ ಹೀಗೆ ಸರ್ವಾಂಗ ಪರಿವರ್ತನೆ ಪಡೆಯುತ್ತಿದ್ದ ಸಮಯದಲ್ಲೇ ಪಂಜಾಬಿಗೆ ಹಿಂದಿ ಚಳವಳಿ ಪಾದಾರ್ಪಣೆ ಮಾಡಿತು. ಹಿಂದೂ-ಉರ್ದು ವಿವಾದ ಆ ದಿನಗಳ ಬೃಹತ್ ಸಮಸ್ಯೆಗಳಲ್ಲಿ ಒಂದಾಯಿತು.

ಲಾಲಾ ಲಜಪತ್‌ರಾಯ್ ಹಿಂದಿ ಆಂದೋಲನಕಾರರೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಅಂದ ಮಾತ್ರಕ್ಕೆ ಅವರು ಮೊಹಮದ್ ಹುಸೇನರ ಪ್ರಭಾವಗಳನ್ನೆಲ್ಲಾ ಸುಲಭವಾಗಿ ಕೊಡವಿ ಕೊಂಡರೆಂದಲ್ಲ. ಲಜಪತರು ಅವರ ಉರ್ದು ಶಾಲೆಗಳನ್ನು ಬಿಟ್ಟಿದ್ದಕ್ಕೆ ಕಾರಣ ಆಜಾದರ ಇರಾನಿ ಕಲಿಕೆಯ ಪ್ರಭಾವದಲ್ಲಿ ತಮ್ಮತನವೆಲ್ಲಿ ಕಳೆದು ಹೋಗಬಹುದೆಂಬ ಭಯ. ಆದರೂ ಮೊಹಮದ್ ಹುಸೇನರ ಲೇಖನಿಗಳು ಲಜಪತರ ರಾಷ್ಟ್ರೀಯ ಅಭಿಮಾನ ಪ್ರಜ್ವಲಗೊಳಿಸಿದವು. ತಮ್ಮ ಆತ್ಮ ಚರಿತ್ರೆಯಲ್ಲಿ ಅವರು ಮೊಹಮದ್ ಹುಸೇನರ ಬಗ್ಗೆ ಅಪಾರ ಗೌರವ, ಅಭಿಮಾನಗಳನ್ನು ಸಾದರಪಡಿಸಿದ್ದಾರೆ. ಲಜಪತರಿಗೆ ಅವರ ತಂದೆ ಮೊಟ್ಟ ಮೊದಲ ಮಹಾಗುರು. ಅವರು ಕಲಿಸಿದ ಫಿರ್ದೋಸಿಯ ಷಹನಾಮ ಮೂಲಕ ಎಳೆಯ ಮನಸ್ಸನ್ನು ರೂಪಿಸಿಕೊಂಡಿದ್ದರು. ಮೊಹಮದ್ ಹುಸೇನ್ ಆಜಾದ್ ಅವರಿಗೆ ಎರಡನೇ ಮಹಾಗುರು. ಆಜಾದರ ಉತ್ತಮ ಕೃತಿಗಳಲ್ಲಿ ಒಂದಾದ ಉರ್ದು ಭಾಷೆಯ ಕ್ವಾಸಿ-ಇ-ಹಿಂದ್ ಕೃತಿ ಲಜಪತರ ಮನಸ್ಸಿನಲ್ಲಿ ಅನನ್ಯ ರಾಷ್ಟ್ರಾಭಿಮಾನ ಮೂಡಿಸಿತು. ಭಾರತದ ಗತ ವೈಭವದ ಪ್ರಥಮ ಚಿತ್ರಣ ಪ್ರಾಪ್ತವಾಗಿದ್ದು ಆ ಹೊತ್ತಿಗೆಯಿಂದಲೇ. ಐತಿಹ್ಯ, ಇತಿಹಾಸ ಮತ್ತು ಕಥನದ ರೂಪದಲ್ಲಿ ಆಜಾದರು ಚಿತ್ರಿಸಿದ ಭಾರತದ ಭೂತಕಾಲ ಲಜಪತರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿತು. ಇನ್ನೂ ವಿಶೇಷವೆಂದರೆ ತಮ್ಮ ತಂದೆಯೂ ಮುಸ್ಲಿಂ ಪೂರ್ವ ಭಾರತದ ಬಗ್ಗೆ ಏನನ್ನೂ ಅರಿತಿಲ್ಲವೆಂಬ ವಾಸ್ತವವೂ ಲಜಪತರಿಗೆ ಮನದಟ್ಟಾಯಿತು. ಅವರು ಷಹನಾಮ ಹಾಗೂ ಕ್ವಾಸಿಯನ್ನು ಪದೇ ಪದೇ ತೌಲನಿಕವಾಗಿ ಓದತೊಡಗಿದರು. ಮುಂದೆ ಲಜಪತರು ಕರ್ನಲ್ ಟಾಡ್‌ರ *Annals & Antiquities of Rajasthan* ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿದರು. ಈ ಕೃತಿಯ ಜೊತೆಗೆ ಆರ್ಯ ಸಮಾಜದ ಪ್ರಕಟಣೆಗಳು ಪ್ರಾಚೀನ ಭಾರತದ ಭವ್ಯ ಭೂತಕಾಲವನ್ನು ಲಜಪತರ ಮನಸ್ಸಿನ ಮುಂದೆ ತೆರೆದಿಟ್ಟವು. ಮಾತೃಭೂಮಿಯ ಗತವೈಭವ ಎಷ್ಟೊಂದು ಅಮೋಘ ಎಂಬುದನ್ನು ಅವರು ಮನಗಂಡರು. ಇಷ್ಟೆಲ್ಲಕ್ಕೂ ಕಾರಣ ಆಜಾದರ ಕ್ವಾಸಿ-ಇ-ಹಿಂದ್‌ನ ವರ್ಣನೆಗಳೇ ಮೂಲ ಪ್ರೇರಣೆ.

ಹೀಗೆ ಬದುಕಿನ ಆ ಹಂತದಲ್ಲಿ ಲಜಪತರ ಮನಸ್ಸಿನ ಮೇಲೆ ಒಂದು ರೀತಿಯಲ್ಲಿ ಪರಿಣಾಮಕಾರಿ ಪ್ರಭಾವ ಬೀರಿದ ಮೊಹಮದ್ ಹುಸೇನರ ಗದ್ಯ ಸಾಹಿತ್ಯ ಲಜಪತರ ಬದುಕಿನ ಕೊನೆಯತನಕ ಉಳಿದಿತ್ತು. ಆಜಾದ್, ಸರ್ ಸಯದ್, ಶಿಬ್ಲಿ ಈ ಮೂರು ಹೆಸರುಗಳು ಲಜಪತರಿಗೆ ನಿತ್ಯ ಚಿರಂತನದ ಹೆಸರುಗಳಾಗಿದ್ದವು.

* * *

ಅಧ್ಯಾಯ-5

ಬ್ರಹ್ಮ ಸಮಾಜ ಮತ್ತು ಆರ್ಯ ಸಮಾಜದ ನಡುವೆ

ಹಿಂದಿ ಚಳವಳಿ ಲಜಪತರಲ್ಲಿ ಸಕ್ರಿಯ ಸೇವಾ ಪ್ರವೃತ್ತಿಯನ್ನು ಮೂಡಿಸಿತು. ಅವರ ಮೊಟ್ಟಮೊದಲ ಸಾರ್ವಜನಿಕ ಆಂದೋಲನದ ಪ್ರವೇಶ ಆಗಿದ್ದು ಈ ಚಳವಳಿಯ ಮೂಲಕವೇ. ಅದು ವಿಚಿತ್ರ ಪರಿಸ್ಥಿತಿಯಲ್ಲಿ. ಆಗಿನ್ನೂ ಅವರು ಕಾಲೇಜು ವಿದ್ಯಾರ್ಥಿ. ಲಜಪತರ ಜೊತೆಗೆ ಗುರುದತ್, ಹನ್ಸ್‌ರಾಜ್ ಸಹ ಸಾರ್ವಜನಿಕ ಹೋರಾಟವನ್ನು ಈ ಚಳವಳಿಯ ಮೂಲಕವೇ ಆರಂಭಿಸಿದರು. ಈ ಮೂವರು ಗೆಳೆಯರು ಕಾಲೇಜಿಗೆ ಆಗಷ್ಟೇ ಸೇರಿದ್ದರು. ಗುರುದತ್, ಹನ್ಸ್‌ರಾಜ್ ಹಿಂದಿ ಪರವಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಹಿ ಸಂಗ್ರಹಿಸುವ ಕಾರ್ಯದಲ್ಲಿ ಸದಾ ನಿರತರು.

ಲಜಪತರು ಮೊದಲ ಬಾರಿಗೆ ಸಾರ್ವಜನಿಕ ಭಾಷಣ ಮಾಡಿದ್ದು ಹಿಂದಿ ಪರವಾಗಿ. 1882ರಲ್ಲಿ ಅಂಬಾಲದಲ್ಲಿ. ಆಗ ಅವರಿಗೆ 18 ವರ್ಷ. ವಸ್ತುಶಃ ಅವರು ಅಲ್ಲಿಗೆ ಪ್ರಚಾರಾರ್ಥವಾಗಿ ಹೋಗಿದ್ದರು. ಅಲ್ಲಿನ ಸಭೆಯಲ್ಲಿದ್ದ ಓರ್ವ ಅಧೀನ ಮ್ಯಾಜಿಸ್ಟ್ರೇಟ್ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರಿಗೆ ವರದಿ ಕಳುಹಿಸಿದ್ದರು. ಪ್ರಿನ್ಸಿಪಾಲರು ಆ ವರದಿಯ ಆಧಾರದ ಮೇಲೆ ಲಜಪತರಿಗೆ ಎಚ್ಚರಿಕೆ ನೀಡಿ ವಿದ್ಯಾರ್ಥಿಗಳು ಇಂತಹ ಚಳವಳಿಗಳಿಂದ ದೂರವಿರಬೇಕು ಎಂದು ಬುದ್ಧಿ ಹೇಳಿದರು. ಲಜಪತರು ಹಿಂದಿ ಪರವಾಗಿ ಚಳವಳಿಗಾರರಾಗಲು ಆರ್ಯ ಸಮಾಜದ ಪ್ರಭಾವವೇ ಮುಖ್ಯವೇನೂ ಅಲ್ಲ. ನಿಜವಾಗಿ ಹೇಳುವುದಾದರೆ ಒಂದು ಹಂತದಲ್ಲಿ ಸ್ವಲ್ಪ ಕಾಲ ಅವರು ಬ್ರಹ್ಮ ಸಮಾಜ ಮತ್ತು ಆರ್ಯ ಸಮಾಜಗಳ ನಡುವೆ ತೊಯ್ದಾಡಿದ್ದು ಉಂಟು. ಪಂಜಾಬಿನಲ್ಲಿ ಬ್ರಹ್ಮ ಸಮಾಜವು ನವೀನ್ ಚಂದ್ರ ರಾಯ್ ಪ್ರಭಾವದಲ್ಲಿತ್ತು. ಆ ದಿನಗಳ ಬಂಗಾಳಿ ನಾಯಕರಿಗಿಂತ ಭಿನ್ನವಾಗಿದ್ದ ನವೀನ್‌ಚಂದ್ರ ರಾಯ್ ಹಿಂದಿ ಚಳವಳಿಗೆ ಹೆಚ್ಚು ಮಹತ್ವ ನೀಡಿದ್ದರು. ಭಾರತೀಯ ರಾಷ್ಟ್ರೀಯತೆಯು ಒಂದಲ್ಲ ಒಂದು ದಿನ ಸಮಗ್ರವಾಗಿ ಮೂರ್ತೀಕರಿಸಬಹುದಾದ ನೆಲೆಗಟ್ಟು ಹಿಂದಿಯಾಗುತ್ತದೆ ಎಂಬುದನ್ನು ಅವರು ಮನಗಂಡಿದ್ದರು. ಆ ದಿನಗಳಲ್ಲಿ ಪಂಜಾಬಿನಲ್ಲಿ ಬ್ರಹ್ಮಸಮಾಜ ಕಟ್ಟಿದ ಆಧಾರ ಸ್ತಂಭಗಳಲ್ಲಿ ಅಗ್ನಿಹೋತ್ರಿಯೂ ಒಬ್ಬರು. ಮುಂದೆ ದೇವರೇ ಇಲ್ಲದ ಮಂದಿರವೆಂದೂ ಕರೆಯಲ್ಪಟ್ಟ ದೇವ ಸಮಾಜವನ್ನು ಸ್ಥಾಪಿಸಿದವರು ಅವರು. ಮುನ್ಷಿ ರಾಧಾಕಿಷನ್ ತಮ್ಮ ಪುತ್ರ ಲಜಪತರನ್ನು ಲಾಹೋರಿಗೆ ಕರೆ ತಂದು ಪರಿಚಯ ಮಾಡಿಕೊಟ್ಟಿದ್ದು ಅವರಿಗೇ. ಆಗ ಅಗ್ನಿಹೋತ್ರಿ ಸರ್ಕಾರಿ ಕಾಲೇಜಿನಲ್ಲಿ ಡ್ರಾಯಿಂಗ್ ಮಾಸ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಬಿರಾದಾರ್-ಇ-ಹಿಂದ್ ಉರ್ದು ಪತ್ರಿಕೆ ಸಹ ನಡೆಸುತ್ತಿದ್ದರು. ಮುನ್ಷಿ

ರಾಧಾಕಿಷನ್ ಆ ಪತ್ರಿಕೆಯ ಅಂಕಣಕಾರರಾಗಿ ಆರ್ಯ ಸಮಾಜ ಮತ್ತು ಹಿಂದೂವಾದವನ್ನು ಕಟುವಾಗಿ ಟೀಕಿಸುತ್ತಿದ್ದರು. ಲಾಹೋರಿನಲ್ಲಿ ಲಜಪತರು ಅಗ್ನಿಹೋತ್ರಿಯವರ ತೀವ್ರ ಪ್ರಭಾವಕ್ಕೆ ಒಳಗಾದರು. ಅದೆಷ್ಟೋ ವೇಳೆ ಲಜಪತರು ಅವರೊಂದಿಗೆ ಉಪನ್ಯಾಸ ಪ್ರವಾಸದಲ್ಲಿ ಸಹ ಪಾಲ್ಗೊಳ್ಳುತ್ತಿದ್ದರು. ಅಂತಹ ಒಂದು ಬ್ರಹ್ಮ ಸಮಾಜದ ಸಭೆಯಲ್ಲಿ ಅವರು ರಾಂ ಮೋಹನ್‌ರಾಯ್ ಜೀವನ ಕುರಿತು ಒಂದು ಪ್ರಬಂಧ ಮಂಡಿಸಿದರು. 1882ರಲ್ಲಿ ಅಗ್ನಿಹೋತ್ರಿ ಲಜಪತರನ್ನು ವಿಧ್ಯುಕ್ತವಾಗಿ ಬ್ರಹ್ಮಸಮಾಜಕ್ಕೆ ಸೇರಿಸಿಕೊಂಡರು. ಅಗ್ನಿಹೋತ್ರಿ ಪ್ರಭಾವಿ ವಾಗ್ಮಿ ಅಸಾಧಾರಣ ವಾಕ್ಪಟುತ್ವವೂ ಎಷ್ಟು ಪ್ರಭಾವಶಾಲಿ ಎಂಬುದನ್ನು ಲಜಪತರು ಮನಗಂಡಿದ್ದು ತಮ್ಮ ತಂದೆಯ ಗೆಳೆಯರಿಂದಲೇ.

ಆದರೂ ಲಜಪತರು ಬ್ರಹ್ಮ ಸಮಾಜದಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ನಾವು ಈಗಾಗಲೇ ಓದಿರುವಂತೆ ಕಾಲೇಜಿನಲ್ಲಿದ್ದ ಅವರ ಮುಖ್ಯ ಗೆಳೆಯರೆಲ್ಲರೂ ಆರ್ಯ ಸಮಾಜಕ್ಕೆ ಸೇರಿದವರೇ. ಗುರುದತ್ ಆಕರ್ಷಕ ವ್ಯಕ್ತಿತ್ವದ ತರುಣ. ಅಸಾಧಾರಣ ಬುದ್ಧಿವಂತ. ಆತನಿಗೆ ತಿಳಿಯದ ಜ್ಞಾನದ ಶಾಖೆಯೇ ಇಲ್ಲವೇನೋ ಎನಿಸುತ್ತಿತ್ತು. ಲಜಪತರ ಮೇಲೆ ಹೆಚ್ಚು ಪ್ರಭಾವ ಬೀರಿದ ಗೆಳೆಯ ಅವರು. ಇಷ್ಟಾದರೂ ಸಮಾಜದ ಅಧ್ಯಕ್ಷರಾಗಿದ್ದ ಸಾಯಿನ್‌ದಾಸ್ ಲಜಪತರನ್ನು ತಮ್ಮ ಸಮಾಜಕ್ಕೆ ಸೆಳೆದುಕೊಂಡರು. ಸಾಯಿನ್‌ದಾಸ್‌ರದು ಅಸಾಧಾರಣ ವ್ಯಕ್ತಿತ್ವ. ಜನರ ಶಕ್ತಿ, ಸಾಮರ್ಥ್ಯಗಳನ್ನು ಮೊದಲ ನೋಟದಲ್ಲೇ ವಿವೇಚಿಸಬಲ್ಲ ಬುದ್ಧಿವಂತಿಕೆ ಅವರದು . ಅವರು ಆಗಿಂದಾಗ್ಗೆ ಕಾಲೇಜ್ ಹಾಸ್ಟೆಲ್‌ಗೂ ಹೋಗಿ ಬರುತ್ತಿದ್ದರು. ತಮ್ಮ ಸಮಾಜಕ್ಕೆ ಹೊಸಬರನ್ನು ಪರಿವರ್ತನೆ ಮಾಡಿಕೊಳ್ಳುವ ಉದ್ದೇಶದಿಂದಲೇ ಅವರು ಹಾಗೇ ಮಾಡುತ್ತಿದ್ದರು. ಮನಸ್ಸಿಗೆ ಒಮ್ಮೆ ಹಿಡಿಸಿಬಿಟ್ಟರೆ ಸಾಕು ಆ ತರುಣನನ್ನು ಅವರು ಸೆಳೆದುಕೊಂಡು ಬಿಡುತ್ತಿದ್ದರು. ಒಮ್ಮೆ ಬ್ರಹ್ಮಸಮಾಜದ ಸಭೆಯೊಂದಕ್ಕೆ ಸಾಯಿನ್‌ದಾಸ್ ಹೋಗಿದ್ದರು. ಆ ಸಭೆಯಲ್ಲಿ ಅಗ್ನಿಹೋತ್ರಿ ತಮ್ಮ ಹೊಸ ಶೋಧ ಲಜಪತರನ್ನು ಪರಿಚಯಿಸಿದರು. ಸಭೆ ಮುಗಿದು ಹೊರ ಬಂದ ನಂತರ ಪ್ರತ್ಯೇಕವಾಗಿ ಸಾಯಿನ್‌ದಾಸ್ ಲಜಪತರನ್ನು ಕಂಡರು. ಓರ್ವ ಸಮರ್ಥ ಹಾಗು ಉಜ್ವಲ ಭವಿಷ್ಯತ್ತಿನ ಯುವಕನನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ, ಸೀಮಿತ ಚೌಕಟ್ಟಿನಲ್ಲಿ ಬಂಧಿಸಿಡಲಾಗಿದೆ ಎಂದು ಅವರು ಸಕಾರಣ ಸಹಿತ ವಿವರಿಸಿದರು.

ಅದೇ ದಿನಗಳಲ್ಲಿ ಬ್ರಹ್ಮ ಸಮಾಜದೊಳಗೆ ಉತ್ತರಾಧಿಕಾರದ ಬಿಕ್ಕಟ್ಟು ತಲೆದೋರಿತು. ಮೂರು ಬಣಗಳು ಅಧಿಕಾರಕ್ಕಾಗಿ ಸೆಣಸಾಡುತ್ತಿದ್ದವು. ಆ ಪರಿಸ್ಥಿತಿ ಲಜಪತರ ಮನಸ್ಸಿನ ಮೇಲೆ ಗೊಂದಲದ ಛಾಯೆ ಮೂಡಿಸಿತು.

ಆ ವರ್ಷಾಂತ್ಯದಲ್ಲಿ ಲಾಹೋರಿನಲ್ಲಿ ಆರ್ಯ ಸಮಾಜ ತನ್ನ ವಾರ್ಷಿಕೋತ್ಸವ ಏರ್ಪಡಿಸಿತು. ಗೆಳೆಯರಾದ ಗುರುದತ್, ಹನ್ಸ್‌ರಾಜ್ ಜೊತೆಗೂಡಿ ಲಜಪತರು ಆರ್ಯ ಸಮಾಜದತ್ತ ಹೆಜ್ಜೆ ಹಾಕಿದರು. ಅದಕ್ಕೆ ಮುನ್ನ ಅವರೆಂದೂ ಆರ್ಯ ಸಮಾಜದ ಸಭೆ, ಸಮಾರಂಭಗಳಲ್ಲಿ ಪಾಲ್ಗೊಂಡಿರಲಿಲ್ಲ. ವಾರ್ಷಿಕೋತ್ಸವದ ಮೊದಲ ದಿನದ ಕಲಾಪಗಳನ್ನು ವೀಕ್ಷಿಸಿದ ಅವರು ಎರಡನೇ ದಿನದ ಸಮಾರಂಭಗಳಿಗೆ ತಾವೇ ತಾವಾಗಿ ಹಾಜರಾದರು. ಆ ದಿನದ ಪ್ರಮುಖ ಭಾಷಣಕಾರರು ಅವರಿಗೆ ಗೊತ್ತಿದ್ದವರೇ. ಅವರ

ಬಗ್ಗೆ ಅಪಾರ ಅಭಿಮಾನ ಇಟ್ಟುಕೊಂಡಿದ್ದವರು. ಆ ಭಾಷಣಕಾರರು ಲಜಪತರನ್ನು ಕಟ್ಟಡದ ಮೇಲ್ಛಾವಣಿಗೆ ಕರೆದೊಯ್ದು ಒಂದು ಬದಿಯಲ್ಲಿ ನಿಲ್ಲಿಸಿಕೊಂಡು ತಾವು ಸಿದ್ಧಪಡಿಸಿದ್ದ ಭಾಷಣದ ಪ್ರತಿಯನ್ನು ಓದಲು ಕೊಟ್ಟರು. ಅದರ ಬಗ್ಗೆ ಅಭಿಪ್ರಾಯ ತಿಳಿಸಲು ಕೇಳಿಕೊಂಡರು. ಲಜಪತರ ಮನಸ್ಸು ಆಗಲೇ ಆರ್ಯ ಸಮಾಜವನ್ನು ಅಪ್ಪಿಕೊಂಡಾಗಿತ್ತು.

ಸಾಯಿನ್‌ದಾಸ್ ಲಜಪತರನ್ನು ಆಲಂಗಿಸಿಕೊಂಡರು. ಆರ್ಯ ಸಮಾಜ ಸೇರಲು ಆಹ್ವಾನ ನೀಡಿದರು. ಲಜಪತರು ಇಲ್ಲವೆನ್ನಲಿಲ್ಲ. ''ನನ್ನ ಸಮ್ಮತಿ ತಿಳಿದಾಗ ಸಾಯಿನ್‌ದಾಸ್‌ರ ಮುಖದಲ್ಲಿ ಅವರ್ಣನೀಯ ಸಂತೋಷ ಮಿಂಚಿತು.''

* * *

ಅಧ್ಯಾಯ-6

ಆರ್ಯ ಸಮಾಜದಲ್ಲಿನ ಆರಂಭದ ದಿನಗಳು

ಆರ್ಯ ಸಮಾಜ ಪ್ರವೇಶಿಸಿದ್ದೇ ತಡ ಲಜಪತರು ಅದರ ಆಪ್ತ ವಲಯದಲ್ಲಿ ಒಬ್ಬರಾಗಿಬಿಟ್ಟರು. ಅನತಿ ಕಾಲದಲ್ಲೇ ಅಗ್ರ ಶ್ರೇಣಿ ನಾಯಕ ಗಣದಲ್ಲಿ ಮಿಂಚಿದರು. ಲಾಹೋರ್ ಆರ್ಯ ಸಮಾಜದ ಅಧ್ಯಕ್ಷ ಸಾಯಿನ್‌ದಾಸ್ ಲಜಪತರನ್ನು ಆರ್ಯ ಸಮಾಜದ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದಂತೆಯೇ ಅವರ ಸೇವೆಯನ್ನು ರಜಪೂತಾನರ ಸಂಯುಕ್ತ ಪ್ರಾಂತ್ಯಕ್ಕೆ ನಿಯೋಜಿಸಿದರು. ಅವರು ಮೀರತ್, ಅಜ್ಮೀರ್, ಫರೂಕ್‌ಬಾದ್ ಮತ್ತು ಇತರೆ ಸ್ಥಳಗಳಿಗೆ ಭೇಟಿ ಕೊಟ್ಟರು. ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ನಿಧಿ ಸಂಗ್ರಹಿಸಿದರು. ಹೋದ ಕಡೆಗಳಲೆಲ್ಲಾ ಆರ್ಯ ಭ್ರಾತೃಗಳನ್ನು ಭೇಟಿ ಮಾಡಿ ಒಡಂಬಡಿಕೆ ಹೆಚ್ಚಿಸಿಕೊಂಡರು. ಆಳವಾಗಿ ಕೆಲಸ ಮಾಡುತ್ತಾ ಹೋದಂತೆ ಸಂಸ್ಥೆಯಾಗಿ, ಸಮಾಜದ ಪ್ರಭಾವ, ಚಾಲನ ಶಕ್ತಿಗಳು ಲಜಪತರಿಗೆ ಮನವರಿಕೆಯಾದವು. ತುಂಬು ಮನಸ್ಸಿನಿಂದ ಸಮಾಜಕ್ಕಾಗಿ ಕೆಲಸ ಮಾಡುವ ಸುಸಂಬದ್ಧ ಕಾರ್ಯಕರ್ತರ ಪಡೆ ಎಲ್ಲೆಡೆ ಇರುವುದು ಅವರಿಗೆ ಗೋಚರಿಸಿತು. ಕಂಡು ಕಾಣದಂತೆ ಯಾವುದೋ ಸೇವೆಗಾಗಿ ತವಕಿಸಿದ್ದ ಅವರ ಬಹುಕಾಲದ ಬಯಕೆಗೆ ಸೂಕ್ತ ಪರಿಹಾರ ದೊರೆತಂತಾಯಿತು. ಅಷ್ಟು ದಿನಗಳ ಹೋರಾಟದ ಬದುಕಿನಲ್ಲಿ ನೆಮ್ಮದಿಯ ನೆಲೆಯೊಂದನ್ನು ಕಂಡು ಕೊಂಡಂತಾಯಿತು. ಆರ್ಯ ಸಮಾಜದ ಬ್ರಹ್ಮ ವಾದವಾಗಲಿ ಅಥವಾ ಬೌದ್ಧಿಕ ಬೋಧನೆಗಳಾಗಲಿ ಲಜಪತರನ್ನು ಸೆಳೆದಿದ್ದಲ್ಲ. ಸಮಾಜದ ಸದಸ್ಯರಲ್ಲಿ, ಕಾರ್ಯಕರ್ತರಲ್ಲಿ ಸಹಜವಾಗಿದ್ದ ಅತುಳ ದೇಶಭಕ್ತಿ, ಆರ್ಯವರ್ತವನ್ನು ಅದರ ಪ್ರಾಚೀನ ವೈಭವಕ್ಕೆ ಕೊಂಡೊಯ್ಯುವಂತಹ ಕಳಕಳಿ ಲಜಪತರನ್ನು ಆಕರ್ಷಿಸಿದ್ದವು. ಈ ನಿಟ್ಟಿನಲ್ಲಿ ಸಮಾಜದ ಗುರಿ, ಅದರ ಸದಸ್ಯರ ಧೋರಣೆಗಳು ಅವರ ಅಂತಃಶಕ್ತಿಯನ್ನು ಸ್ಫುರಿಸಿದ್ದವು.

ಕಾಲೇಜು ದಿನಗಳಲ್ಲಿ ಆತ್ಮೀಯ ಗೆಳೆಯರಾಗಿದ್ದ ಗುರುದತ್ ಹಾಗೂ ಹನ್ಸ್‌ರಾಜ್ ಅವರ ಸಹಯೋಗ ಲಜಪತರ ಮೇಲೆ ಅನನ್ಯ ಪ್ರಭಾವ ಬೀರಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಗುರುದತ್ ಆ ಕಾಲದಲ್ಲಿ ಬಹು ವರ್ಚಸ್ವಿ ಯುವಕ. ಜನಪ್ರಿಯ ವ್ಯಕ್ತಿತ್ವ ಅವರದು. ಯೌವನದ ಆರಂಭದಲ್ಲೇ ವಿಜ್ಞಾನ ಮತ್ತು ತತ್ವಶಾಸ್ತ್ರಗಳೆರಡರಲ್ಲೂ ಸಮಾನ ಆಸಕ್ತಿ ತೋರಿ ವಯಸ್ಸಿಗೆ ಮೀರಿದ ಧೀಶಕ್ತಿ ಗಳಿಸಿಕೊಂಡವರು. ಆಧ್ಯಾತ್ಮಿಕ ವಿಚಾರದಲ್ಲೂ ಅಸೀಮ ವಿದ್ಯಾರ್ಥಿ ಆಗಿದ್ದರು. ಬಹು ಭಾಷೆಗಳ ಅಧ್ಯಯನದಲ್ಲಿ ಎಲ್ಲಿಲ್ಲದ ಆಸಕ್ತಿ. ವಿನೂತನವಾದ ಅವರ ಈ ಆಶೋತ್ತರಗಳ ಈಡೇರಿಕೆಗೆ ಅನುಕೂಲಕರವಾದ ಸೌಲಭ್ಯ, ಸವಲತ್ತುಗಳು ಒದಗಿದ್ದವು. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಬಹು ಶ್ರದ್ಧೆಯಿಂದ ಸಂಸ್ಕೃತ ಅಧ್ಯಯನ ನಡೆಸಿದ್ದರು. ಪಾಶ್ಚಾತ್ಯ ತತ್ವಶಾಸ್ತ್ರದ ಬಗ್ಗೆ ಅವರ ಅಧ್ಯಯನ ಗಹನವಾಗಿತ್ತು. ಸಮಕಾಲೀನ ಐರೋಪ್ಯ ಚಿಂತಕರಲ್ಲಿ ನಿಲ್ಲಬಲ್ಲ ಸಾಮರ್ಥ್ಯ

1880-90ರ ದಶಕದಲ್ಲೇ ಅವರಲ್ಲಿತ್ತು. ಪಾಶ್ಚಾತ್ಯ ತತ್ವಶಾಸ್ತ್ರದ ಆಳವಾದ ಅಧ್ಯಯನ ನಡೆಸಿದರೂ ಅವರಲ್ಲಿ ಸ್ವಸಂಸ್ಕೃತಿ, ಸ್ವಮತಗಳನ್ನು ಹೀಗಳೆಯುವ ಉದ್ಧಟತನ ಇರಲಿಲ್ಲ. ವಿವಿಧ ಸಂಸ್ಕೃತಿ, ಧರ್ಮಗಳ ಬಗ್ಗೆ ಅಧ್ಯಯನ ಮಾಡಿ ತೌಲನಿಕ ನಿರ್ಧಾರಗಳ ಕೈಗೊಳ್ಳುವ ಪರಿಜ್ಞಾನ ಅವರಲ್ಲಿ ಮಥಿತವಾಗಿತ್ತು. ಅವರು ಯೋಗದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಸಂಸ್ಕೃತ, ವ್ಯಾಕರಣ ಮತ್ತು ವೇದ ವಿಚಾರಗಳ ಸೂಕ್ಷ್ಮಗಳನ್ನು ಗ್ರಹಿಸಿದ್ದರು. ಪಾಶ್ಚಾತ್ಯ ಚಿಂತನಕಾರರಲ್ಲಿ ಮಾನ್ಯರೆನಿಸಿದ ಬೆಂತಂ, ಮಿಲ್, ಹರ್ಬರ್ಟ್, ಸ್ಪೆನ್ಸರ್ ಅವರಿಗಿಂತಲೂ ಹೆಚ್ಚಿನ ಪರಿಶ್ರಮ ಗುರುದತ್ತರದಾಗಿತ್ತು. ಸಂಸ್ಕೃತ ಮತ್ತು ವಿಚಾರಗಳಲ್ಲಿ ಈ ಪಾಶ್ಚಾತ್ಯ ವಿಚಾರವೇತ್ತರು ನಡೆಸಿದ ಅಧ್ಯಯನಕ್ಕಿಂತಲೂ ಹೆಚ್ಚಿನ ಪರಿಶ್ರಮ ಗುರುದತ್ತರದಾಯಿತು.

ಆದಾಗ್ಯೂ ಅವರೆಂದು ಕೇವಲ ಪುಸ್ತಕ ಪ್ರೇಮಿ ಎನಿಸಲಿಲ್ಲ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಹೊತ್ತಿಗೆಗಳನ್ನು ಅವರು ಗಂಭೀರವಾಗಿ ಪರಿಗಣಿಸಿದ್ದರು. ಶೈಕ್ಷಣಿಕವಾಗಿ ಅವುಗಳ ದಾಸರೂ ಆಗಿದ್ದರು. ಅದರೊಟ್ಟಿಗೆ ಬದುಕನ್ನು ವಿಚಾರಾತ್ಮಕವಾಗಿ ವಿಶ್ಲೇಷಿಸುವ ವಿಶೇಷ ಗುಣವು ಅವರಲ್ಲಿತ್ತು. ಅವರು ನಿಯತಕಾಲಿಕೆಯನ್ನು ಹೊರತರುತ್ತಿದ್ದರು. ಅದರ ಮೂಲಕ ತಮ್ಮ ವಿಚಾರಧಾರೆಯನ್ನು ಸಾರ್ವಜನಿಕ ಚರ್ಚೆಗೆ ಒದಗಿಸುತ್ತಿದ್ದರು. ಅಂದ ಮಾತ್ರಕ್ಕೆ ಅವರ ಧೋರಣೆ, ತರ್ಕಗಳೆಲ್ಲವೂ ಸದಾ ಕಾಲ ಮಾನ್ಯವೆಂದಲ್ಲ. ಸೋಲನ್ನು ಗೆಲುವಿನ ಮೆಟ್ಟಿಲಾಗಿ ಸ್ವೀಕರಿಸಿದ ದೊಡ್ಡತನ ಗುರುದತ್ತರದು. ಅವರು ಕೂಡಲೇ ಸ್ವಸುಧಾರಣೆ, ಪರಿಷ್ಕಾರಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದರು. ಯೌವನದ ಎಳೆತನದಲ್ಲೇ ಯೋಗಿಯೊಬ್ಬರ ಒಡನಾಟವನ್ನು ಅವರು ಗಳಿಸಿಕೊಂಡಿದ್ದರು. ಆ ದಿನಗಳು ಪಾಶ್ಚಾತ್ಯ, ತಾತ್ವಿಕ, ಧಾರ್ಮಿಕ ಚಿಂತನೆಗಳಿಗೆ ಒಳಗಾಗಿದ್ದ ಸಮಯ. ಅಂತಹ ಪರಿಸರದಲ್ಲೂ ಯೋಗದ ಮಹಿಮೆಯನ್ನು ಅರಿತುಕೊಂಡರು. ಆ ಯೋಗಿಯ ಆಕರ್ಷಣೆಗೆ ಒಳಗಾದರು. ಅವರ ಶಿಷ್ಯರಾಗಲು ಬಯಸಿದರು. ಆದರೆ ಗೆಳೆಯರ ಮಧ್ಯ ಪ್ರವೇಶದಿಂದ ಅದು ತಪ್ಪಿತು. ಮನೆಯ ಬಾಂಧವ್ಯವೂ ಸೆಳೆಯಿತು. ಗೆಳೆತನ ಮತ್ತು ಕುಟುಂಬದ ಆಕರ್ಷಣೆಗಳಲ್ಲಿ ಯೋಗಿಯ ಶಿಷ್ಯರಾಗುವ ಅವರ ಬಯಕೆ ಕ್ಷೀಣವಾಯಿತು. ಸ್ವಾಮಿ ದಯಾನಂದರನ್ನು ರುಗ್ಣಶಯ್ಯೆಯಲ್ಲಿ ಕಂಡಾಗ ಗುರುದತ್ತರಲ್ಲಿ ಇನ್ನಷ್ಟು ಬದಲಾವಣೆಗಳಾದವು. ಆರ್ಯ ಸಮಾಜದ ಸ್ಥಾಪಕರ ಅಂತಿಮ ದಿನಗಳ ಬಯಕೆ ಗುರುದತ್ತರನ್ನು ಅವ್ಯಕ್ತ ಅನುಬಂಧದಲ್ಲಿ ಬಂಧಿಸಿದವು. ಸ್ವಾಮಿ ದಯಾನಂದರ ಅಸೀಮ ಬೌದ್ಧಿಕ ಅನುಯಾಯಿಗಳಲ್ಲಿ ಗುರುದತ್ತರು ಒಬ್ಬರಾಗಿದ್ದು ಹೀಗೆ. ಅವರು ವಿಚಿತ್ರ ನಡವಳಿಕೆಯವರಾಗಿದ್ದಕ್ಕೆ ಅನೇಕ ನಿದರ್ಶನಗಳಿವೆ. ಬೇಸಿಗೆಯಲ್ಲಿ ಅತಿ ಶೀತಕಾಲದಲ್ಲಿ ಧರಿಸುವ ಬಟ್ಟೆಗಳನ್ನು ಧರಿಸುತ್ತಿದ್ದರು. ಮೈ ಕೊರೆಯುವ ಚಳಿಯಲ್ಲಿ ಬೇಸಿಗೆ ಉಡುಪುಗಳನ್ನು ಧರಿಸುತ್ತಿದ್ದರು. ಈ ವೈಪರಿತ್ಯಗಳ ಮೂಲಕ ದೇಹ ಮತ್ತು ಮನಸ್ಸಿನ ಮೇಲೆ ಸಾಧಿಸಿರಬಹುದಾದ ಹಿಡಿತವನ್ನು ಅವರು ಪರೀಕ್ಷಿಸಿಕೊಳ್ಳುತ್ತಿದ್ದರು. ಅತ್ಯಕ್ಷಿ ವಿಧೇಯವಾಗಿ ಮೈ, ಮನಸ್ಸುಗಳು ತುಡಿಯಬೇಕೆಂಬ ಕಟ್ಟಳೆ ಅವರದಾಗಿತ್ತು. ಸಣ್ಣ ಪುಟ್ಟ ಕೆಲವು ಬದಲಾವಣೆಗಳು ಅವರಲ್ಲಿ ಆಗಿದಿದ್ದರೆ ಗಾಂಧೀಜಿಗೆ ಮೊದಲೇ ಅವರೇ ಗಾಂಧೀಯಾಗುತ್ತಿದ್ದರು. ಮಹಾತ್ಮನ ವರ್ಚಸ್ಸು ಅವರಲ್ಲಿ ಬೆಳಗುತ್ತಿತ್ತು. ಕೇವಲ ಓರ್ವ ಗಾಂಧಿಯಲ್ಲ. ದಿವ್ಯ ಬೌದ್ಧಿಕ ಶಕ್ತಿಯು ಅನೇಕ ವರ್ಚಸ್ವಿಗಳಲ್ಲಿ ಅವರೊಬ್ಬರಾಗಿರುತ್ತಿದ್ದರು. ಪಂಜಾಬ್ ವಿಶ್ವವಿದ್ಯಾಲಯ ಕೊಟ್ಟ ಅಪ್ಪಟ ಬೌದ್ಧಿಕ

ಕೊಡುಗೆಗಳಲ್ಲಿ ಗುರುದತ್ತರಷ್ಟು ವರ್ಚಸ್ಸು ಬೀರಿದವರು ಇನ್ನೊಬ್ಬರಿಲ್ಲ. ಅವರ ನಂತರದ ಸ್ಥಾನ ಹರದಯಾಳರದು. ಲಜಪತ್‌ರಾಯ್ ಅವರು ಹರದಯಾಳ್‌ರನ್ನು ಬಹುವಾಗಿ ಹಚ್ಚಿಕೊಂಡಿದ್ದರು. ಮುಂದೆ ಲಾಹೋರಿನಲ್ಲಿ, ಯುರೋಪಿನಲ್ಲಿ, ಎಲ್ಲಕ್ಕಿಂತ ಹೆಚ್ಚಿನದಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಲಜಪತರಿಗೆ ಬಹುವಾಗಿ ನೆರವು ಒದಗಿದ್ದು ಹರದಯಾಳ್, ಅವರ ಬೆಂಬಲಿಗರು ಹಾಗೂ ಅನುಯಾಯಿಗಳಿಂದ. ಗುರುದತ್ ಮತ್ತು ಹರದಯಾಳ್ ನಡುವೆ ಕೆಲವು ಸಾಮ್ಯಗಳಿದ್ದವು. ವೈಯಕ್ತಿಕ ನಡವಳಿಕೆಗಳಲ್ಲಿ ಇಬ್ಬರದು ಅತಿರೇಕದ ಪರಾಕಾಷ್ಠೆ. ಹೆಚ್ಚು ಕಡಿಮೆ ಚಿಂತನೆ, ವಿಚಾರಗಳಲ್ಲೂ ಅಷ್ಟೇ. ಇಬ್ಬರಲ್ಲೂ ಅಪೂರ್ವ ಮನಸ್ಸು ಮತ್ತು ಮೇಧಾಶಕ್ತಿಯ ಮಹಾ ವರದಾನಗಳಿದ್ದವು. ಸಮಾಜದಲ್ಲಿ ಅಷ್ಟೇ ಗೌರವ ಸಂಪಾದಿಸಿದ್ದರು. ಆಪ್ತೇಷ್ಟರು, ಬೆಂಬಲಿಗರಲ್ಲಿ ಕುತೂಹಲ ಕೆರಳಿಸಿದ್ದರು. ದೃಢವಾದ ಮನಸ್ಸು, ಅಭಿವ್ಯಕ್ತಿಗೆ ಸಾಲು ಸಾಲು ಭಾಷೆಗಳು. ತಾತ್ವಿಕ ವಿಚಾರಧಾರೆ ಮತ್ತು ಅವುಗಳ ಮಂಥನಗಳಿಗೆ ಅವರಿಗೆ ಅವರೇ ಸಾಟಿ. ತಮ್ಮ ವಿಚಾರ ಲಹರಿಗಳನ್ನು ಇಬ್ಬರು ಗರಿಷ್ಠ ಪರಮಾವಧಿಗೆ ಕೊಂಡೊಯ್ಯುತ್ತಿದ್ದರು. ಪಾಶ್ಚಿಮಾತ್ಯದ ಆ ತುದಿಯಿಂದ ಪೌರಾತ್ಯದ ಈ ತುದಿಯತನಕ ವಿಚಾರ ವಾಹಿನಿ ಓತಪ್ರೋತವಾಗಿ ಹರಿಯುತ್ತಿತ್ತು. ಕಾಸ್ಮೋಪಾಲಿಟನ್ ವಾದದಿಂದ ಹಿಡಿದು ಅಂತಾರಾಷ್ಟ್ರೀಯ ತರ್ಕಗಳವರೆಗೆ, ಸಂಕುಚಿತ ಧೋರಣೆಯಿಂದ ಹಿಡಿದು ರಾಷ್ಟ್ರವಾದದವರೆಗೆ, ನಶ್ವರವಾದದಿಂದ ಪರಿಪಕ್ವ ಈಶ್ವರವಾದದವರೆಗೆ ಇಬ್ಬರಲ್ಲೂ ಕೊನೆ ಮೊದಲಿಲ್ಲದಷ್ಟು ವಿಚಾರ ಸಂಗ್ರಹವಿತ್ತು. ಗೆಳೆಯರು, ಅಭಿಮಾನಿಗಳು, ಬೆಂಬಲಿಗರು ಅವರ ಧೀಶಕ್ತಿಗೆ ಮೂಕರಾಗುತ್ತಿದ್ದರು. ವಿಸ್ಮಿತರಾಗುತ್ತಿದ್ದರು. ಅಮೆರಿಕದ ಭೌತಿಕವಾದದ ಮೂಸೆಯಲ್ಲಾಗಲಿ, ಪ್ಯಾರಿಸ್‌ನ ಪರಿವರ್ತನೆಯ ಆಕರ್ಷಣೆಯಲ್ಲಾಗಲಿ, ಹರದಯಾಳ್ ಕಿಂಚಿತ್ ಸೋತವರಲ್ಲ. ಒಂದು ವೇಳೆ ಗುರುದತ್ತರಂತೆ ಹರದಯಾಳ್‌ರು ನಿಯತಕಾಲಿಕೆಯನ್ನು ಪ್ರಾರಂಭಿಸಿದ್ದರೆ ಅವರಿಬ್ಬರ ಬದುಕಿನ ರೀತಿ ರಿವಾಜುಗಳು ಇನ್ನಷ್ಟು ಕುತೂಹಲಕಾರಿಯಾಗಿರುತ್ತಿದ್ದವೋ ಏನೋ.

ಆತ್ಮತೃಪ್ತಿ ಅಥವಾ ಸಾಕ್ಷಾತ್ಕಾರಕ್ಕಾಗಿ ಇಬ್ಬರು ಯೋಗ ಮತ್ತು ತತ್ವಾಭ್ಯಾಸಗಳನ್ನು ಆಳವಾಗಿ ಅನುಷ್ಠಾನ ಮಾಡುತ್ತಿದ್ದರು. ಈ ಇಬ್ಬರ ನಡುವಿನ ಅಂತರ ಅತಿ ಸೂಕ್ಷ್ಮ. ಇಷ್ಟೆಲ್ಲಾ ಇದ್ದರೂ ಗುರುದತ್ ಎಂದೂ ತಮ್ಮ ಸಾಮಾಜಿಕ ಮತ್ತು ಸಾಮೂಹಿಕ ಮೌಲ್ಯಗಳನ್ನು ಬಿಟ್ಟುಕೊಡಲಿಲ್ಲ. ಆ ಸೇವೆಯಲ್ಲಿ ಎಂದೂ ಹಿಂದುಳಿಯಲಿಲ್ಲ. ಅಷ್ಟಾದರೂ ರಾಜಕೀಯ ಮನಸ್ಥಿತಿ ಅವರಲ್ಲಿ ಇರಲಿಲ್ಲ. ರಾಜಕೀಯ ಮನೋಧರ್ಮಿಗಳು ಗುರುದತ್ತರನ್ನು ಅವಲಂಬಿಸದೆ ಇದ್ದದ್ದಕ್ಕೆ ಅದೇ ಕಾರಣ. ಆದರೆ ದೇಶಭಕ್ತಿ ವಿಷಯದಲ್ಲಿ ಗುರುದತ್ ಎಂದು ಯಾರಿಗೂ ಕಡಿಮೆಯೆನಿಸಲಿಲ್ಲ. ವಿದ್ಯಾರ್ಥಿಯಾಗಿದ್ದಾಗ ಲಜಪತರಂತೆ ಅವರು ಸಹ ಕೇವಲ ಪರೀಕ್ಷೆಗಳನ್ನಷ್ಟೇ ಲಕ್ಷ್ಯಕ್ಕೆ ಇಟ್ಟುಕೊಂಡವರಲ್ಲ. ಪರೀಕ್ಷೆಗಳಲ್ಲಿ ಸ್ಪರ್ಧಾತ್ಮಕವಾಗಿ ನಿಂತು ಎಲ್ಲರಿಗಿಂತ ಮುಂದಿರಬೇಕೆಂದು ತವಕಪಟ್ಟವರಲ್ಲ. ಸಂಸ್ಕೃತ ಮತ್ತು ವೇದಗಳ ಅಧ್ಯಯನದಲ್ಲಿ ಎಷ್ಟು ಆಸಕ್ತಿ ಹೊಂದಿದ್ದರೋ ಅಷ್ಟೇ ಆಸಕ್ತಿ ಪಾಶ್ಚಾತ್ಯ ಚಿಂತನೆ ಮತ್ತು ಆಧುನಿಕ ವಿಜ್ಞಾನಗಳ ಕಲಿಕೆಯಲ್ಲೂ ಅವರಿಗಿತ್ತು. 1886ರಲ್ಲಿ ಭೌತವಿಜ್ಞಾನದಲ್ಲಿ ಅವರು ಎಂ.ಎ. ಪದವಿ ಗಳಿಸಿದರು. ಅವರಿಗೆ ಲಾಹೋರಿನ ಸರ್ಕಾರಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಭೌತಶಾಸ್ತ್ರ ವಿಭಾಗದಲ್ಲಿ ನೀಡಲಾಯಿತು. ಅವರ

ನಿಯತಕಾಲಿಕೆಯಿಂದ ವ್ಯಕ್ತವಾಗುವಂತೆ ಒಂದು ಕಡೆ ಯುದ್ಧ, ಇನ್ನೊಂದು ಕಡೆ ತಮ್ಮ ವೈವಿಧ್ಯದ ವಿಚಾರಶಕ್ತಿಯ ನಡುವೆ ಶ್ರಮಿಸುತ್ತಾ ಬಂದರು.

ಇವೆಲ್ಲದರ ನಡುವೆ ಆರ್ಯ ಸಮಾಜಕ್ಕಾಗಿ ಗುರುದತ್ತರ ಸೇವೆ ಮೀಸಲಾಗಿತ್ತು. ಉಪನ್ಯಾಸಗಳು, ಬರಹಗಳು, ಸಂಘಟನೆ, ಮಾರ್ಗದರ್ಶನದ ಮೂಲಕ ತಮ್ಮ ಗೆಳೆಯರು ಮತ್ತು ಅಭಿಮಾನಿಗಳ ಮೇಲೆ ವೈಯಕ್ತಿಕ ಪ್ರಭಾವದ ಮೂಲಕ ಅವರು ಸಮಾಜದ ಸೇವೆ ಕೈಗೊಳ್ಳುತ್ತಾ ಬಂದರು. ಅವರ ಅಸಾಧಾರಣ ಬುದ್ಧಿಶಕ್ತಿ, ಅವರು ಸಾಧಿಸಿದ ವಿಶಿಷ್ಟತೆ, ಅವರ ಶ್ರದ್ಧೆ, ಪ್ರಾಮಾಣಿಕ ನಡವಳಿಕೆ ಹಾಗೂ ವೈಯಕ್ತಿಕ ಆಸೆ, ಆಮಿಷಗಳ ತ್ಯಾಗ ತ್ರಿವಳಿ ಗೆಳೆಯರ ಪೈಕಿ ಕಿರಿ ವಯಸ್ಸಿನ ಲಜಪತರನ್ನು ಬಹುವಾಗಿ ಆಕರ್ಷಿಸಿತು. ತಮ್ಮ ಬದುಕನ್ನು ರೂಪಿಸಿಕೊಳ್ಳುವ ಪ್ರತಿ ಹಂತದಲ್ಲೂ ಅವರು ಗುರುದತ್ತರ ಸಲಹೆ, ಸೂಚನೆಗಳನ್ನು ಪಡೆಯುತ್ತಿದ್ದರು. ರಾಜಕೀಯ ನಿಲುವು, ಧೋರಣೆಗಳಿಂದ ದೂರತಾದರೂ ಆ ವಿಷಯದಲ್ಲಿ ಗುರುದತ್ ಎಂದೂ ಸಹ ಪೂರ್ವಾಗ್ರಹಪೀಡಿತರಾಗಿ ಆಗಲಿ, ಅಸಹಿಷ್ಣುವಾಗಿ ಆಗಲಿ ನಡೆದುಕೊಂಡವರಲ್ಲ. ಆ ದಿನಗಳಲ್ಲಿ ಅದರಲ್ಲೂ ಪಂಜಾಬಿನಲ್ಲಿ ನೇರ ರಾಜಕೀಯ ಚಳವಳಿ ಹುಟ್ಟಿರಲೂ ಇಲ್ಲ. ಒಂದು ವೇಳೆ ಅಂತಹ ಚಳವಳಿ ಇದ್ದಿದ್ದರೂ ''ಗುರುದತ್ತ ತಮ್ಮ ವಿಚಾರಧಾರೆಯಲ್ಲಿ ಮುಳುಗಿರುತ್ತಿದ್ದರೇ ಹೊರತು ಒಲ್ಲದ ತುಮುಲದಲ್ಲಿ ತಮ್ಮತನವನ್ನು ಕಳೆದುಕೊಳ್ಳುತ್ತಿರಲಿಲ್ಲ.'' ಆದರೆ ನಿಶ್ಚಯವಾಗಿಯೂ ಅವರೊಬ್ಬ 'ಅಸಾಮಾನ್ಯ ದೇಶಭಕ್ತ. ಅವರೊಡನೆ ಒಡನಾಡಿದ ಯಾರೂ ಸಹ ಅವರ ದೇಶಭಕ್ತಿಯ ಪ್ರಭಾವವನ್ನು ಕಾಣದಿರಲಾಗದೇ ಇರುತ್ತಿರಲಿಲ್ಲ. ಲಜಪತರನ್ನು ಆಕರ್ಷಿಸಿದ ಗುರುದತ್ತರ ಆದರ್ಶಗಳಲ್ಲಿ ತ್ಯಾಗ ಮನೋಧರ್ಮ ಪ್ರಮುಖವಾದುದು. ಅಪ್ರತಿಮ ಬೌದ್ಧಿಕ ಸಾಧನೆ ಅಥವಾ ಪರಿಪೂರ್ಣತೆಯ ಯೋಗಾಭ್ಯಾಸಗಳಿಗಿಂತಲೂ ಈ ಗುಣ ಲಜಪತರಿಗೆ ಹೆಚ್ಚಿನದೆನಿಸಿತು.

ಆರ್ಯ ಸಮಾಜದ ಜನಪ್ರಿಯತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗುರುದತ್ತರು ಇಂಗ್ಲಿಷ್‌ನಲ್ಲಿ ಒಂದು ಮ್ಯಾಗಜೀನ್ ಹೊರತಂದರು. ಅದಕ್ಕೆ ಅನ್ವರ್ಥವಾಗಿ *'Regenerator of Aryavarth'* ಎಂದು ಹೆಸರಿಟ್ಟರು. ದೇಶಭಕ್ತಿಯ ಸಂಕೇತ ಈ ಹೆಸರಿನಲ್ಲಿ ಅಡಕ. ಲಜಪತರನ್ನು ಆರ್ಯ ಸಮಾಜದತ್ತ ಆಕರ್ಷಿಸಿ ಅಲ್ಲಿ ಭದ್ರವಾಗಿ ನೆಲೆಗೊಳ್ಳುವಂತೆ ಮಾಡಿದ ಶಕ್ತಿ ಸಹ ಗುರುದತ್ತರ ದೇಶಭಕ್ತಿಯೇ. ತಮ್ಮ ವೃತ್ತಿಪರ ಆಯ್ಕೆಯ ಪ್ರಶ್ನೆ ಬಂದಾಗ ಅವರು ಗುರುದತ್ತರ ಸಲಹೆ ಕೇಳುತ್ತಿದ್ದರು. ಒಂದು ಹಂತದಲ್ಲಿ ತಮ್ಮ ಕಾನೂನು ಕಲಿಕೆಯನ್ನು ಬಿಟ್ಟುಕೊಟ್ಟು ಸಮಾಜವು ಆರಂಭಿಸಿದ ಶೈಕ್ಷಣಿಕ ಆಂದೋಲನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದೇ ಎಂದು ಲಜಪತರು ಗುರುದತ್ತರನ್ನು ಕೇಳಿದರು. ಆಗಿನ ಒಂದು ಸಲಹೆಯಂತೆ ಹಂಸರಾಜ್‌ರನ್ನು ಮುಖ್ಯ ಅಧ್ಯಾಪಕರನ್ನಾಗಿ ನೇಮಿಸುವುದು ಲಜಪತರನ್ನು ಅವರಿಗೆ ಸಹಾಯಕರಾಗಿ ಕೆಲಸ ಮಾಡುವುದು ಎಂದಾಗಿತ್ತು. ಸಮಾಜವು ಆಗ ಪ್ರೌಢಶಾಲೆಯನ್ನಷ್ಟೇ ಆರಂಭಿಸಿತ್ತು. ಕಾಲೇಜು ಆರಂಭಗೊಂಡಿದ್ದು ನಂತರದ ದಿನಗಳಲ್ಲಿ. ಲಜಪತರಿಗೆ ಆ ಹುದ್ದೆ ಸಹಜವೂ ಆಗಿತ್ತು. ಕಾರಣ ಹಂಸರಾಜ್ ಬಿ.ಎ. ಪದವಿ ಗಳಿಸಿದ್ದರು. ಲಜಪತರ ಬಳಿ ಅಂತಹ ಶೈಕ್ಷಣಿಕ ಸಾಧನೆ ಇರಲಿಲ್ಲ. ಮೂರು ಜನರು ಈ ವಿಷಯದಲ್ಲಿ ಸಮಾಲೋಚನೆ ನಡೆಸಿದರು. ಅಂತಿಮವಾಗಿ ಲಜಪತರು

'ಮುಕ್ತಾರ್' ಸೇವೆಯನ್ನು ಮುಂದುವರಿಸಬೇಕೆಂದೂ ಮುಂದೆ ಕಾಲೇಜಿಗೆ ಅವರ ಸೇವೆ ಉಪಯುಕ್ತವಾಗುವುದೆಂದು ನಿರ್ಧರಿಸಲಾಯಿತು.

ಅಸಾಧಾರಣ ಬುದ್ಧಿಶಕ್ತಿಯ ಗುರುದತ್ತರ ಪಾಲಿಗೆ ವೃತ್ತಿಪರವಾಗಿ ಅನೇಕ ಅವಕಾಶಗಳು ಮುಕ್ತವಾಗಿದ್ದವು. ಅವರು ಓರ್ವ 'ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್' ಆಗಬಹುದಿತ್ತು. ಆ ದಿನಗಳಲ್ಲಿ ಒಂದು ಪ್ರಾಂತ್ಯದ ನಾಗರಿಕ ಸೇವೆಯ ಉನ್ನತಾಧಿಕಾರ ಅದು. ಅದನ್ನು ವಹಿಸಿಕೊಳ್ಳುವಂತೆ ಅವರನ್ನು ಒತ್ತಾಯಿಸಲಾಯಿತು ಕೂಡಾ. ಅದರ ಮೂಲಕ ಗುರುದತ್ತರು ಆಡಳಿತ ಹುದ್ದೆಗಳಲ್ಲಿ ಮೆಟ್ಟಿಲುಗಳ ಮೇಲೆ ಮೆಟ್ಟಿಲುಗಳನ್ನು ಏರಬಹುದಾಗಿತ್ತು. ಆ ದಿನಗಳಲ್ಲಿ ಯಾವುದೇ ಭಾರತೀಯನಿಗೆ ದೊರೆಯಬಹುದಾದ ಅತಿ ದೊಡ್ಡ ಉದ್ಯೋಗ ಗುರುದತ್ತರಿಗೆ ಪ್ರಾಪ್ತವಾಗಿತ್ತು. ಸಾಕಷ್ಟು ವಿವೇಚನೆ ಮಾಡಿದ ನಂತರ ಅವರು ಸರ್ಕಾರಿ ಕಾಲೇಜಿನಲ್ಲಿ ತಮಗೆ ಕೊಟ್ಟ ಸೇವಾ ಅವಕಾಶವನ್ನೇ ಮುಂದುವರೆಸಲು ನಿರ್ಧಾರ ಕೈಗೊಂಡರು. ಅವರ ಸೇವೆ ಅದೇ ಹುದ್ದೆಯಲ್ಲಿ ಮುಂದುವರಿಯಿತು. ಈ ಮಧ್ಯೆ ಅವರು ಡಿ.ಎ.ವಿ. ಕಾಲೇಜು ಸೊಸೈಟಿಯ ಓರ್ವ ಪ್ರಮುಖ ಸದಸ್ಯರಾಗಿಯೂ ಸೇವೆ ಸಲ್ಲಿಸತೊಡಗಿದರು.

ಗುರುಪತ್ತರ ಬದುಕು ಸ್ವಯಂಕೃತ ಬಡತನದ ಬದುಕು. ಅವರ ವ್ಯಕ್ತಿಗತ ಬೇಕು, ಬೇಡಗಳು ತೀರಾ ಸೀಮಿತ. ಅತ್ಯಲ್ಪ ಖರ್ಚಿನವು. ಅವರ ಸಂಬಳದ ಬಹುಭಾಗವೆಲ್ಲಾ ಇತರರ ಸೇವೆಗೆ ಹರಿದು ಹೋಗುತ್ತಿತ್ತು. ಗುರುದತ್ತ ದೊಡ್ಡ ಪುಸ್ತಕ ಪ್ರೇಮಿ. ಅವುಗಳ ಖರೀದಿಗೂ ಒಂದಷ್ಟು ಹಣ ಹೋಗುತ್ತಿತ್ತು. ಹಣ ಕೂಡಿಡುವುದು ಮಹಾ ಪಾಪವೆಂದು ಭಾವಿಸಿದ್ದ ಪುಣ್ಯಾತ್ಮ ಅವರು. ಅವರು ಸತ್ತಾಗ ಪತ್ನಿ ಮತ್ತು ಮಕ್ಕಳಿಗೆ ಬಿಟ್ಟ ಆಸ್ತಿ ನಿರ್ಗತಿ. ಗುರುದತ್ ನಿಧನ ಹೊಂದಿದ ಪೂರ್ವದಲ್ಲಿ ಆರ್ಯ ಸಮಾಜದಲ್ಲಿ ಎರಡು ಬಗೆಯ ವಿಚಾರಧಾರೆ ಹುಟ್ಟಿಕೊಂಡಿತ್ತು. ಒಂದರ ದೃಷ್ಟಿಕೋನ ಆಧುನಿಕ ರೀತಿ ರಿವಾಜುಗಳಿಗೆ ಪೂರಕವಾದುದು. ಯಾವುದನ್ನು ಸಾಧಿಸಲು ಸಾಧ್ಯವೋ ಅದನ್ನು ಮಾತ್ರ ಮಾಡಬೇಕೆಂಬ ಧೋರಣೆ ಆ ಗುಂಪಿನದು. ಅಂದರೆ ವಾಸ್ತವಿಕ ವಾದಕ್ಕೆ ಮನ್ನಣೆ ಕೊಟ್ಟ ಬಣ ಅದು. ಮತ್ತೊಂದು ಬಣದ್ದು ಅದಕ್ಕೆ ತದ್ವಿರುದ್ಧ ನಿಲುವು. ಈಶ್ವರ ವಾದದಲ್ಲಿ ಪೂರ್ಣ ಶ್ರದ್ಧೆ ವಹಿಸಿದ್ದ ಬಣ ಅದು. ಮೊದಲ ಬಣದಲ್ಲಿ ರಾಜಕೀಯ ಮತ್ತು ದೇಶಭಕ್ತಿಯ ಅವಲೋಕನ ಪ್ರಬುದ್ಧವಾಗಿತ್ತು. ಗುರುದತ್ತರು ಈ ಎರಡು ಬಣಗಳಿಗೂ ಬೇಕಾದವರಾಗಿದ್ದರು. ಅವರ ಕಡೆಯ ದಿನಗಳಲ್ಲಿ ಈ ಎರಡು ಬಣಗಳ ಸ್ವರೂಪ ನಿಚ್ಚಳಗೊಂಡವು. ಅವರ ನಿಧನದ ನಂತರ ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿ, ಗೌರವಾರ್ಪಣೆಗಳಲ್ಲಿ ಎರಡು ಬಣಗಳು ಹಿಂದೆ ಬೀಳಲಿಲ್ಲ. ತಮ್ಮ ತಮ್ಮ ಪರವಾಗಿ ಎರಡು ಬಣಗಳು ಗುರುದತ್ತರನ್ನೇ ಆಧಾರವಾಗಿಟ್ಟುಕೊಂಡವು. ಲಜಪತ್‌ರಾಯ್ ತಮ್ಮ ಆತ್ಮೀಯ ಮಿತ್ರನಿಗೆ ಲೇಖನಿಯ ರೂಪದಲ್ಲಿ ಅಂತಿಮ ನಮನ ಸಲ್ಲಿಸಿದರು. ಗುರುದತ್ತರ ಬಗ್ಗೆ ಅವರು ಚಿತ್ರಿಸಿದ ಜೀವನ ಕಥೆ 1890ರ ಆದಿಭಾಗದಲ್ಲಿ ಇಂಗ್ಲಿಷ್ ಹಾಗೂ ಉರ್ದು ಭಾಷೆಯಲ್ಲಿ ಪ್ರಕಟಗೊಂಡವು. ಲಜಪತ್‌ರಾಯ್ ಪ್ರಥಮ ಲೇಖಕನ ಹಕ್ಕು ಆ ಕೃತಿಯಿಂದಲೇ ಆರಂಭ. ಇದಕ್ಕೂ ಮುನ್ನ ಅವರು ಆರ್ಯ ಸಮಾಜಕ್ಕಾಗಿ ಅನೇಕ ಕರಪತ್ರಗಳನ್ನು ಹಾಗೂ ಕಿರು ಹೊತ್ತಿಗೆಗಳನ್ನು ಸಿದ್ಧಪಡಿಸಿದ್ದು ಉಂಟು. ಅವೆಲ್ಲಾ

ವೃತ್ತಿಪರವೆನಿಸಿದ್ದಲ್ಲ. ನ್ಯಾಯಾಲಯದಲ್ಲಿ ಕ್ರಿಮಿನಲ್ ಹಾಗೂ ಇತರೆ ವ್ಯಾಜ್ಯಗಳ ಸಂಬಂಧವಲ್ಲಿ ಕೆಲವು ಬರಹಗಳನ್ನು ಲಜಪತರು ಪ್ರಕಟಿಸಿದ್ದು ಉಂಟು. ಅವರ ಹಿಸ್ಸಾರ್ ವಾಸ್ತವ್ಯದ ದಿನಗಳಲ್ಲಿ ಆದ ಲೇಖಕನ ಬೆಳವಣಿಗೆಗಳು ಇವು. ಗೆಳೆಯ ಗುರುದತ್ತರ ಬಗ್ಗೆ ಅವರು ಬರೆದ ಜೀವನ ಚರಿತ್ರೆ ಅವರ ಅತ್ಯುತ್ತಮ ಕೃತಿಗಳಲ್ಲಿ ಒಂದೆಂದು ಹೇಳಲಾಗುವುದಿಲ್ಲ. ಆಗಿನ್ನು ಅವರಲ್ಲಿ ಲೇಖಕನ ಕುಶಲ ಕೈಚಳಕ ರೂಢಿಯಾಗಿರಲಿಲ್ಲ. ಆ ಜೀವನ ಚರಿತ್ರೆಯನ್ನು ಓದಿದಾಗ ಓರ್ವ ಹವ್ಯಾಸಿ ಅವಸರದಲ್ಲಿ ಬರೆದ ಪುಸ್ತಕವೆಂಬ ಭಾವನೆ ಬರದೇ ಇರದು. ಆದರೂ ಆ ಪ್ರಯತ್ನದಲ್ಲಿ ಅವರು ಭವಿಷ್ಯದ ಓರ್ವ ಪ್ರೌಢ ಲೇಖಕ ಹೊರಬರಬಹುದಾದ ಲಕ್ಷಣಗಳನ್ನು ಅನೇಕ ಪುಟಗಳಲ್ಲಿ ತೋರಗೊಟ್ಟಿದ್ದಾರೆ. ಜೀವನ ಚರಿತ್ರೆಯೊಂದರ, ಪ್ರಬಂಧವೊಂದರ ಮೂಲಕ ಲಜಪತರು ಓರ್ವ ಲೇಖಕರಾದರು ಎಂಬುದು ಇಲ್ಲಿ ಮುಖ್ಯ. ತಮ್ಮ ಬದುಕಿನ ಕೊನೆಯತನಕ ಅವರು ಜೀವನ ಚರಿತ್ರೆಗಳನ್ನು ಚಿತ್ರಿಸುವುದಕ್ಕೆ ಹೆಚ್ಚು ಒಲವು ತೋರುತ್ತಾ ಬಂದರು. ಮುಂದಿನ ದಿನಗಳಲ್ಲಿ ಅಪಾರ ಸಂಖ್ಯೆಯಲ್ಲಿ ಅವರು ಜೀವನ ಚರಿತ್ರೆಗಳನ್ನು ಹೊರತಂದರು. ಅವುಗಳಲ್ಲಿ ಬಹಳಷ್ಟು ಜನಪ್ರಿಯವಾದವು. ಆ ಹೊತ್ತಿಗೆಗಳಲ್ಲಿ ವಿಶೇಷವಾಗಿ ಪಂಜಾಬಿನಲ್ಲಿ ರಾಷ್ಟ್ರೀಯ ಜಾಗೃತಿ ಮೂಡಲು ಕಾರಣವಾಗಿದ್ದು ಉರ್ದುವಿನಲ್ಲಿ ಚಿತ್ರಿಸಿದ ಮಜ್ಜೀನಿ ಜೀವನ ಚರಿತ್ರೆ.

ಲಜಪತರ ಕಾಲೇಜು ದಿನಗಳ ಗಣ್ಯ ಗೆಳೆಯರಲ್ಲಿ ಮತ್ತೊಬ್ಬರಾದ ಹನ್ಸ್‌ರಾಜ್, ಗುರುದತ್ತರಿಗೆ ತೀರಾ ತದ್ವಿರುದ್ಧ. ಗುರುದತ್ತರಷ್ಟು ಅಪ್ರತಿಮ ಪ್ರತಿಭೆ ಅವರಲ್ಲಿ ಇಲ್ಲದಿದ್ದರೂ ಕರ್ತೃತ್ವ ಶಕ್ತಿ ಇತ್ತು. ಅಸಾಧಾರಣ ಸ್ಥಿರತೆ ಇತ್ತು. ಕಾಲೇಜು ಸೇರುವ ಮೊದಲೇ ಅವರು ಆರ್ಯ ಸಮಾಜ ಸೇರಿದ್ದರು. ಆದರೆ ಅವರು ಸಂಸ್ಕೃತ ವಿದ್ಯಾರ್ಥಿಯಾಗಿರಲಿಲ್ಲ. ಮುಂದೆಂದೂ ಆ ಭಾಷೆಯಲ್ಲಿ ಕಲಿತವರೂ ಅಲ್ಲ. ಯೋಗದ ಬಗ್ಗೆ ಕಿಂಚಿತ್ತೂ ಒಲವು ಹೊಂದಿದವರಲ್ಲ. ಪರಸೇವೆ ಹನ್ಸ್‌ರಾಜ್ ಅವರಿಗೆ ಬಹು ಪ್ರಿಯವಾದ ಕಾಯಕ. ಅದನ್ನು ಸಹ ಆದರ್ಶವಾದಿಯಂತೆ ಮಾಡಿ ತೋರಿಸುವ ಮೋಹ ಅವರದಲ್ಲ. ವಸ್ತುನಿಷ್ಠ ವ್ಯಕ್ತಿಯಾಗಿ ಎಷ್ಟರಮಟ್ಟಿಗೆ ಪರಸೇವೆ ಸಲ್ಲಿಸಬಹುದೋ ಅಷ್ಟಕ್ಕೆ ಮಾತ್ರ ಅವರು ಸೀಮಿತರಾಗುತ್ತಿದ್ದರು. ತಮ್ಮ ಸುತ್ತಲೂ ಅನುಯಾಯಿಗಳ ಗುಂಪಿರಬೇಕು ಎಂದು ಹನ್ಸ್‌ರಾಜ್ ಬಯಸುತ್ತಿದ್ದವರಲ್ಲ. ತಮಗೆ ಇಷ್ಟವಾದ ಕೆಲಸವನ್ನು ಸಾಧಿಸಿ ತೋರಿಸುವ ತಂತ್ರಗಾರಿಕೆ ಅವರಲ್ಲಿ ಅಸಾಧಾರಣವಾಗಿತ್ತು. ಅವರದು ಸರಳ ಜೀವನ. ಡಿ.ಎ.ವಿ. ಕಾಲೇಜನ್ನು ಆರಂಭಿಸಿದಾಗ ಅದರೊಂದಿಗೆ ಹನ್ಸ್‌ರಾಜ್ ತಮ್ಮನ್ನು ಗುರುತಿಸಿಕೊಂಡರು. ಅದರ ಅಸ್ತಿತ್ವಕ್ಕೆ ಮೀರಿ ಶ್ರಮಿಸಿದರು. ಅವರ ಟೀಕಾಕಾರರು ಸಂಸ್ಥೆಯ ಸ್ಥಾಪನೆ ಒಂದು ಸಾಧನೆಯಷ್ಟೇ ಹೊರತು ಅದೇ ಅಂತಿಮವಲ್ಲ ಎಂದು ಎಚ್ಚರಿಸಿದ್ದುಂಟು. ಹನ್ಸ್‌ರಾಜ್‌ರಲ್ಲಿ ಸಂಘಟನೆ ಶಕ್ತಿಯ ವಿಶಿಷ್ಟ ಪ್ರತಿಭೆ ಇತ್ತು. ಅದನ್ನು ಅವರು ಕಾಲೇಜ್ ಸ್ಥಾಪನೆಗೆ ಕಾಯಾ, ವಾಚಾ, ಮನಸಾ ಬಳಸಿಕೊಂಡರು. ಟೀಕಾಕಾರರ ಮಾತಿಗೆ ಸೊಪ್ಪು ಹಾಕಲಿಲ್ಲ. ತಾವು ಮನಸಾರೆ ಒಪ್ಪಿಕೊಂಡ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಿ ತೋರಿಸಿದರು

ಹನ್ಸ್‌ರಾಜ್‌ರಿಗೆ ಆಧ್ಯಾತ್ಮಿಕ ವಿಚಾರಗಳ ಸೂಕ್ಷ್ಮತೆಗಳಲ್ಲಾಗಲಿ, ಬ್ರಹ್ಮಜ್ಞಾನದ ಮಾರ್ಮಿಕಗಳಲ್ಲಾಗಲಿ, ಸಂಸ್ಕೃತಿ, ವ್ಯಾಕರಣ ಮತ್ತು ವೈದಿಕ ವಿಚಾರಧಾರೆಗಳಲ್ಲಾಗಲಿ ಆಸಕ್ತಿ ಇರಲಿಲ್ಲ. ಹಿಂದೂ ಸಮಾಜದ ಪುನರುತ್ಥಾನದಲ್ಲಿ ಪುರೋಗಾಮಿ ಆಂದೋಲನವಾಗಿ ಆರ್ಯ ಸಮಾಜವು ಶಕ್ತಿಯುತ ಪಾತ್ರ ವಹಿಸುತ್ತದೆ ಎಂಬ ಅಚಲ ವಿಶ್ವಾಸವೊಂದೇ ಅವರಲ್ಲಿ ನಿಶ್ಚಿತವಾಗಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆರ್ಯ ಸಮಾಜದ ತಾತ್ವಿಕ ಹಾಗೂ ಸ್ವಮತಾಭಿಮಾನಗಳಿಗಿಂತಲೂ ದೇಶಭಕ್ತಿಯ ಸೆಳೆತ ಅವರನ್ನು ಹಿಡಿದಿಟ್ಟಿತ್ತು.

ಲಜಪತರು ಪರಿಪೂರ್ಣ ಆದರ್ಶ ಹಾಗೂ ವಾಸ್ತವವಾದಗಳ ಎರಡು ಅತಿರೇಕಗಳ ಮಧ್ಯೆ ಇದ್ದರು. ಆರ್ಯ ಸಮಾಜದ ಹಿತರಕ್ಷಣೆಯ ಪ್ರಶ್ನೆ ಬಂದಾಗ ಸಮಸ್ಯೆಗಳ ನಿವಾರಣೆಗೆ ಅವರು ಗುರುದತ್ತರಿಗಿಂತಲೂ ಹನ್ಸ್‌ರಾಜ್‌ರ ಕಡೆಗೆ ವಾಲುತ್ತಿದ್ದರು. ಹಿಂದೂ ಸಮಾಜದಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸುವ ಕೈಂಕರ್ಯಕ್ಕೆ, ಸಾಮಾಜಿಕ, ಶೈಕ್ಷಣಿಕ ಹಾಗೂ ಕಲ್ಯಾಣಕಾರಿ ಕಾರ್ಯಗಳಿಗೆ ಸಮಾಜವನ್ನು ಸಾಧನದ ಮಾರ್ಗವಾಗಿ ಮಾಡಿಕೊಳ್ಳಬೇಕಾದರೆ ಹನ್ಸ್‌ರಾಜ್ ನಿಲುವು, ಧೋರಣೆಗಳೇ ವಾಸ್ತವಿಕವೆಂದೂ ಲಜಪತ್‌ರಾಯ್ ಮನಗಂಡಿದ್ದರು. ಈ ಮೂವರ ಗೆಳೆತನ ಡಿ.ಎ.ವಿ. ಕಾಲೇಜಿನ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗಿದ್ದರೂ ಅವರ ವ್ಯಕ್ತಿಗತ ಚಟುವಟಿಕೆಗಳು ಭಿನ್ನ ಭಿನ್ನವಾಗಿದ್ದವು. ಹನ್ಸ್‌ರಾಜ್‌ರಂತೆ ಕಾಲೇಜಿನ ಹಿತಕ್ಕಾಗಿ ತಮ್ಮ ಜೀವಿತವನ್ನೇ ಸಮರ್ಪಿಸಲು ಲಜಪತ್‌ರಾಯ್ ಆಸಕ್ತರಾಗಿದ್ದರು. ವಿಶ್ವವಿದ್ಯಾಲಯದ ಪದವೀಧರರಾಗದೆ ತಮ್ಮ ಗೆಳೆಯ ಗುರುದತ್ತರಿಗೆ ಅಧೀನವರ್ತಿಯಾಗಿ ಸೇವೆಗೆ ತಮ್ಮನ್ನು ಮೀಸಲು ಮಾಡಿಕೊಂಡಿದ್ದರು. ಗುರುದತ್ತರನ್ನು ಕಾಲೇಜಿನ ಪ್ರಿನ್ಸಿಪಾಲರಾಗಿ ನಿಯೋಜಿಸಲಾಯಿತು.

ಮೂವರು ಗೆಳೆಯರ ನಡುವೆ ವೈಚಾರಿಕವಾಗಿಯೋ, ವ್ಯಕ್ತಿಗತವಾಗಿಯೋ ಭಿನ್ನಮತ ಅತಿರೇಕಕ್ಕೆ ಹೋಗುತ್ತಿದ್ದದ್ದು ಉಂಟು. ಅವರ ಗೆಳೆತನಕ್ಕೆ ಅದರಿಂದ ಬಾಧಕವಾಗುತ್ತಿದ್ದದ್ದು ಉಂಟು. ಆದರೆ ಕಾಲೇಜಿನ ಹಿತ ಬಂದಾಗ ಭಿನ್ನಮತ ಮಂಗಮಾಯವಾಗುತ್ತಿತ್ತು.

* * *

ಅಧ್ಯಾಯ-7

ಆರ್ಯ ಸಮಾಜದಲ್ಲಿ ಆರಂಭದ ತರಬೇತಿ

ತುಂಬು ತಾರುಣ್ಯದಲ್ಲಿ, ಆಶೋತ್ತರಗಳ ಬೆನ್ನು ಹತ್ತುವ ವಯಸ್ಸಿನಲ್ಲಿ ಲಜಪತ್‌ರಾಯ್ ಆರ್ಯ ಸಮಾಜದ ಆರೋಗ್ಯಕರ ಆದರ್ಶಗಳೆಲ್ಲವನ್ನು ಮುಕ್ತ ಮನಸ್ಸಿನಿಂದ ತುಂಬಿಕೊಂಡರು. ಸ್ವಮತಾಭಿಮಾನಗಳಂತಹ ಧೋರಣೆಗಳಿಂದ ಹೊರತಾದ ಆದರ್ಶಗಳನ್ನು ಆರಿಸಿ ಹಂಸಕ್ಷೀರ ನ್ಯಾಯದಂತೆ ಅಂತರ್ಗತ ಮಾಡಿಕೊಂಡಿದ್ದು ಅವರ ವೈಶಿಷ್ಟ್ಯ. ಅವರು ರೂಢಿಸಿಕೊಂಡಿದ್ದುದ್ದನ್ನು ಅರಿತುಕೊಳ್ಳಬೇಕಾದರೆ 1880-90ರ ದಶಕದ ಆರ್ಯ ಸಮಾಜದ ಸಿದ್ಧಾಂತ ಹಾಗೂ ಆದರ್ಶಗಳು ಹೇಗಿದ್ದವು ಎಂಬುದನ್ನು ತಿಳಿದುಕೊಳ್ಳುವುದು ಉಚಿತವಾಗುತ್ತದೆ. ಸಮಾಜದ ರೂಪುರೇಷೆಗಳನ್ನು ರೂಪಿಸಿದ ಹಿರಿಯರ ಆಶೋತ್ತರಗಳನ್ನು, ಪೂರ್ವೋತ್ತರಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಆ ಪಂಕ್ತಿಯಲ್ಲಿ ಮೊಟ್ಟಮೊದಲಿಗರು ಲಾಹೋರಿನ ಆರ್ಯ ಸಮಾಜದ ಅಧ್ಯಕ್ಷರಾಗಿದ್ದ ಸಾಯಿನ್‌ದಾಸ್. ಈಗಾಗಲೇ ಓದಿರುವಂತೆ ಲಜಪತ್‌ರಾಯ್ ಅವರನ್ನು ಆರ್ಯ ಸಮಾಜಕ್ಕೆ ಒಲಿಸಿಕೊಂಡವರು ಅವರು.

ಸಮಾಜದ ಸೇವಾ ಪರಿಕಲ್ಪನೆಯಲ್ಲಿ ಅವರ ಪಾತ್ರವೇನು? ಅವರಲ್ಲಿ ಕೇವಲ ಬ್ರಹ್ಮ ಜ್ಞಾನ ಮತ್ತು ಆಧ್ಯಾತ್ಮಿಕ ಚಿಂತನೆಗಳ ಆಸಕ್ತಿಯಷ್ಟೇ ಇತ್ತೇ? ಅಥವಾ ಯೋಗದ ಸೆಳೆತವಿತ್ತೇ? ಇಲ್ಲವೇ ವೈಯಕ್ತಿಕ ಪರಿಪೂರ್ಣತೆ ಮತ್ತು ಆತ್ಮಸಾಕ್ಷಾತ್ಕಾರದ ದೃಷ್ಟಿಕೋನವಿತ್ತೇ? ಅಥವಾ ಈ ಎಲ್ಲವೂ ಸೇರಿಕೊಂಡು ಜನತೆಯ ಸೇವೆಗಿಂತಲೂ ಹೆಚ್ಚಾಗಿ ಆಧ್ಯಾತ್ಮಿಕವಾಗಿ ಸಮಾಜವನ್ನು ರೂಢಿಸುವುದಷ್ಟೇ ಅವರ ಆಶಯವಾಗಿತ್ತೇ? ಇಲ್ಲವೇ ಈ ನೆಲೆಗಟ್ಟಿನಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುವ ಜೊತೆಗೆ ದೇಶಭಕ್ತಿಯ ಸ್ಫೂರ್ತಿಯನ್ನು ಹೊರಹೊಮ್ಮಿಸಿ ಜನತೆಯಲ್ಲಿ ಸ್ವಾವಲಂಬನೆಯ ಕಿಚ್ಚು ಹಚ್ಚುವುದು ಅವರ ಲಕ್ಷ್ಯವಾಗಿತ್ತೇ? ವೈಯಕ್ತಿಕವಾಗಿ ಸಾಯಿನ್‌ದಾಸ್ ಸರ್ಕಾರಿ ಕಚೇರಿಯೊಂದರಲ್ಲಿ ಗುಮಾಸ್ತರಾಗಿದ್ದರು. ಯಾವುದೇ ರಾಜಕೀಯ ಆಂದೋಲನದೊಂದಿಗೆ ನೇರವಾಗಿ ತಮ್ಮನ್ನು ಗುರುತಿಸಿಕೊಳ್ಳುವಂತಿರಲಿಲ್ಲ. ತಮ್ಮ ಆತ್ಮಸಾಕ್ಷಾತ್ಕಾರಕ್ಕಾಗಿ ಯಾವುದೇ ಯೋಗಿಯ ಬೆನ್ನ ಹಿಂದೆ ಬಿದ್ದ ವಿಷಯ ನಮಗೆ ತಿಳಿದು ಬರುವುದಿಲ್ಲ. ಸಂಸ್ಕೃತ, ವ್ಯಾಕರಣದ ಬಗ್ಗೆಯಾಗಲಿ, ವೇದ ವಿಚಾರಗಳು, ಬ್ರಹ್ಮ ಜ್ಞಾನದ ವಿಷಯದಲ್ಲಾಗಲಿ ಆಳವಾಗಿ ತಲೆಕೆಡಿಸಿಕೊಂಡವರೂ ಅವರಲ್ಲ. ಆದರೆ ಆರ್ಯ ಸಮಾಜದ ಅನುಯೋಗಿಗಳಲ್ಲಿ ಮತ್ತು ಪಳಗಿದವರಲ್ಲಿ ಅವರು ಒಬ್ಬರಾಗಿದ್ದರು. ಸಮಾಜಕ್ಕೆ ಮತ್ತು ಅವರ ವ್ಯವಹಾರಕ್ಕೆ ಅಗತ್ಯ ಜನರನ್ನು ಆರಿಸಿಕೊಳ್ಳುವುದರಲ್ಲಿ ಕುಶಾಗ್ರಮತಿಯಾಗಿದ್ದರು. ಅವರದು ಗಟ್ಟಿ ನಿಲುವು. ಅಪಾರ ಲೌಕಿಕ ಜ್ಞಾನವಿತ್ತು. ಕಷ್ಟದ ಪರಿಸ್ಥಿತಿಯನ್ನು ಸುಲಲಿತವಾಗಿ ನಿಭಾಯಿಸುವ ವಿಶೇಷ ಸಾಮರ್ಥ್ಯ ಅವರಲ್ಲಿತ್ತು. ತಾವು ಬುದ್ಧಿಜೀವಿ ಎಂಬ ಅಹಂ ಅವರಲ್ಲಿ ಇರಲಿಲ್ಲ

ಆದರೂ ಕೆಲವು ಕೃತಿಗಳನ್ನು ಅವರು ರಚಿಸಿದ್ದಾರೆ. ಅವರು ಬರೆದ ಪುಸ್ತಕಗಳಲ್ಲಿ ಒಂದಂತೂ ವೇದಾಂತಕ್ಕೆ ಸಂಬಂಧಪಟ್ಟಿದ್ದು ಅಲ್ಲ. ಆರ್ಯ ಸಮಾಜದ ತತ್ವಜ್ಞಾನಕ್ಕೆ ಒಳಪಟ್ಟಿದ್ದೂ ಅಲ್ಲ. ಫ್ರಾನ್ಸಿಸ್ ಬೇಕನ್‌ನ ಪ್ರಬಂಧಗಳ ತರ್ಜುಮೆ ಆ ಕೃತಿ. ಬಹುಶಃ ಆ ಮಹಾಶಯನ ಪ್ರಬಂಧಗಳು ಸಾಯಿನ್‌ದಾಸ್ ಅವರ ಮೇಲೆ ತಾತ್ವಿಕ ಪರಿಣಾಮ ಬೀರಿ ಆರ್ಯ ಸಮಾಜದ ಸೇವೆಗೆ ನಿಯುಕ್ತಿಗೊಳ್ಳುವಂತೆ ಮಾಡಿರಲೂಬಹುದು.

ಮುಂದಿನ ವರ್ಷಗಳಲ್ಲಿ ಆರ್ಯ ಸಮಾಜವು ರಾಜಕೀಯ ಆಂದೋಲನಕ್ಕೆ ಇಳಿಯಬೇಕೇ ಅಥವಾ ಧಾರ್ಮಿಕ ಚಳವಳಿಯಲ್ಲಿ ಮುಂದುವರಿಯಬೇಕೇ ಎಂಬ ಬಗ್ಗೆ ಸಾಕಷ್ಟು ಜಿಜ್ಞಾಸೆ ತಲೆದೋರಿತು. ವಾಸ್ತವದಲ್ಲಿ ಸಮಾಜದ ಸ್ಥಾಪಕರು ಓರ್ವ ಧಾರ್ಮಿಕ ಮುಖಂಡರು. ರಾಜಕಾರಣಿಯಲ್ಲ. ಅದೇ ಸಂದರ್ಭದಲ್ಲಿ ಆ ಮುಖಂಡರು ದೇಶಭಕ್ತಿಯ ಕೈಂಕರ್ಯವನ್ನು ತಮ್ಮ ಕೃತಿಯ ಮೂಲಕ ಮಾಡಿ ತೋರಿಸುತ್ತಾ ಬಂದವರು. ಕೇವಲ ಆಧ್ಯಾತ್ಮಿಕ, ಅಲೌಕಿಕ ಆಸಕ್ತರಷ್ಟೇ ಅಲ್ಲ. ದೇಶಭಕ್ತರೂ ಕೂಡಾ ಅವರಿಂದ ಆಕರ್ಷಿತರಾಗಿದ್ದರು. ಒಂದು ಹಂತದಲ್ಲಿ ದೇಶಭಕ್ತಿಯೂ ಧರ್ಮದ ಒಂದು ಭಾಗವೆಂಬ ಭಾವನೆ ಆಳವಾಗಿ ಬೆಳೆಯಿತು. ದೇಶಭಕ್ತಿ ಇಲ್ಲದ ಧರ್ಮಕ್ಕೆ ಅರ್ಥವಿಲ್ಲವೆಂಬ ನಿಲುವು ಗಟ್ಟಿಯಾಯಿತು. ಅಂತಹ ಧೋರಣೆಯನ್ನೇ ಅಚಲ ಮಾಡಿಕೊಂಡ ಕೆಲವರು ಕಾಲಾನಂತರದಲ್ಲಿ ಸಮಾಜವನ್ನು ರಾಜಕೀಯ ಚಳವಳಿಯತ್ತ ಹೊರಳಿಸಲು ಉತ್ಸುಕರಾದರು.

ಆದರೆ ಆರ್ಯ ಸಮಾಜವನ್ನು ರಾಜಕೀಯ ತೆರೆಮರೆಗಳ ಪ್ರೇರಣೆ ಸಂಘಟನೆ ಎಂದು ಪರಿಗಣಿಸುವುದು ಅಸಂಗತವಾಗುತ್ತದೆ. ರಾಜಕೀಯ ಚಳವಳಿಯ ಗುಪ್ತ ಚಟುವಟಿಕೆ ಕೇಂದ್ರವೆಂದು ಅದನ್ನು ಕರೆಯುವುದು ವಾಸ್ತವಿಕತೆಗೆ ಬಗೆಯುವ ದ್ರೋಹವಾಗುತ್ತದೆ. ಅಧಿಕಾರಸ್ಥರನ್ನು ವಂಚಿಸಲು ಧಾರ್ಮಿಕತೆಯ ಮುಸುಕು ತೊಟ್ಟ ಆಂದೋಲನ ಆರ್ಯ ಸಮಾಜದ್ದಲ್ಲ. ನಿಜ, ಸ್ವಾಮಿ ದಯಾನಂದರು ಆರ್ಯ ಸಮಾಜದ ಸ್ಥಾಪಕರು. ಅವರು ತಮ್ಮ ಅನೇಕ ಶಿಷ್ಯರು ಮತ್ತು ಅನುಯಾಯಿಗಳು ಹಾಗೂ ಗೆಳೆಯರೊಂದಿಗೆ ಸುದೀರ್ಘ ಚಿಂತನೆ, ವಿಮರ್ಶೆ ನಡೆಸಿ ಸಾಮಾಜಿಕ ಸುಧಾರಣೆಯ ದೇಶಭಕ್ತಿಯ ಪುನರುತ್ಥಾನದ ಸ್ಫೂರ್ತಿಯಾಗಿ ಸಮಾಜವನ್ನು ಕಟ್ಟಿದರು. ಸಮಾಜದ ಹತ್ತು ಮೂಲ ನೀತಿ, ನಿರ್ದೇಶನಗಳನ್ನು ಸ್ವಾಮೀಜಿಯವರ ಅನುಯಾಯಿಗಳಲ್ಲಿ ಪ್ರಮುಖರಾಗಿದ್ದ ಪಂಜಾಬಿನ ಅಭಿಮಾನಿಗಳು ಮತ್ತು ಸಲಹೆಗಾರರು ರೂಪಿಸಿದ್ದರು. ಆ ಪೈಕಿ ರಾಯ್ ಬಹದ್ದೂರ್ ಮುಲ್‌ರಾಜ್ ಪ್ರಮುಖರು.

ರಾಯ್ ಬಹದ್ದೂರ್ ಮುಲ್‌ರಾಜ್ ಮಾಜದ ಇತರ ಮುಖಂಡರಿಗಿಂತ ಹೆಚ್ಚು ಪ್ರಭಾವಿಯಾಗಿದ್ದರು. ಸಾಧ್ಯವಾದಷ್ಟು ತೆರೆಮರೆಯಲ್ಲೇ ಕಂಡು ಬರುವ ಅವರು ವಿಶೇಷ ಮಹತ್ವದ ಬೌದ್ಧಿಕ ಕೊಡುಗೆಯನ್ನು ಸಮಾಜದ ರಚನೆಗೆ ಸಲ್ಲಿಸಿದ್ದಾರೆ. ತಮ್ಮ ನಿಲುವು ಧೋರಣೆಗಳಿಗೆ ಅನುಗುಣವಾಗಿ ಇತರರನ್ನು ಒಪ್ಪಿಸಿಕೊಳ್ಳುವ ಅಲೌಕಿಕ ಶಕ್ತಿ ಅವರಲ್ಲಿತ್ತು. ಅದರ ಫಲವಾಗಿಯೇ ಆರ್ಯ ಸಮಾಜದ ಆಂದೋಲನಕ್ಕೆ ಅವರ ನಿಲುವು, ಧೋರಣೆಗಳು ಸೂತ್ರ ಮತ್ತು ವಿಧಿ ರೂಪಗಳಾದವು. ರಾಜಕೀಯ

ಆಶೋತ್ತರಗಳಿಲ್ಲದ ನಾಯಕತ್ವ ಹೊಂದಿದ ಅವರು ಸಮಾಜದ ವಿವಿಧ ಚಳವಳಿಗಳನ್ನು ತೆರೆಮರೆಯಲ್ಲಿ ಇದ್ದುಕೊಂಡೇ ಸಮರ್ಥವಾಗಿ ನಿರೂಪಿಸಿದರು. ಈ ದೇಶದಲ್ಲಿ ರಾಜಕೀಯ ಪರಿವರ್ತನೆಯಾಗಬೇಕೆಂಬ ಬಗ್ಗೆ ಅವರು ಆಲೋಚಿಸಿದ್ದರು. ರಾಜಕೀಯ ನೇತಾರರಾಗದೆ ಅಂತಹ ಕೆಲಸ ಮಾಡಿದ್ದು ಮಹಾತ್ಮ ಗಾಂಧೀಜಿ. ಲಜಪತ್‌ರಾಯ್ ತಮ್ಮ ಕೃತಿಯಲ್ಲಿ ಇದನ್ನು ದಾಖಲೆ ಮಾಡಿದ್ದಾರೆ.

ಗಾಂಧೀಜಿ ಕೊಟ್ಟ ಅಸಹಕಾರ ಚಳವಳಿ ಹಾಗೂ ಸ್ವದೇಶಿ ಚಳವಳಿಯನ್ನು ಬಹುಶಃ ಅವರಿನ್ನು ಶಾಲಾ ಬಾಲಕರಾಗಿದ್ದ ಕಾಲದಲ್ಲೇ ಮುಲ್‌ರಾಜ್ ಪರಿಕಲ್ಪನೆ ಮಾಡಿದ್ದರು. ಆದರೆ ಅದನ್ನು ಕಾರ್ಯಗತಗೊಳಿಸುವ ದಿಟ್ಟತನ ಪ್ರದರ್ಶಿಸಿರಲಿಲ್ಲ ಅವರು. ಸರ್ಕಾರಿ ಸೇವೆಯಲ್ಲಿ ಇದ್ದದ್ದು ಇದಕ್ಕೆ ಮುಖ್ಯ ಕಾರಣ. ತಮ್ಮಂತೆ ಸರ್ಕಾರಿ ನೌಕರಿ ಹಿಡಿಯಬಾರದೆಂದು ತಮ್ಮನ್ನು ಭೇಟಿ ಮಾಡುತ್ತಿದ್ದ ಯುವಜನರಿಗೆ ಅವರು ನೀಡುತ್ತಿದ್ದ ಸಲಹೆ. ದೇಶ ಇಬ್ಭಾಗವಾಗುವುದಕ್ಕೆ ಮೊದಲೇ ದೊಡ್ಡ ಚಳವಳಿಯಾದ ಸ್ವದೇಶಿ ಆಂದೋಲನವನ್ನು ಮುಲ್‌ರಾಜ್ ಹೀಗೆ ತಮ್ಮ ಕಾಲದಲ್ಲೇ ಕೈಗೊಂಡಿದ್ದರು. ಸ್ವದೇಶಿತನದ ಮೂಲಕ ದೇಶದಲ್ಲಿ ಕೈಗಾರಿಕೆ ಮತ್ತು ಆರ್ಥಿಕ ಪುನರುತ್ಥಾನ ಸಾಧ್ಯವೆಂದು ಅವರು ಲೆಕ್ಕಾಚಾರ ಹಾಕಿದ್ದರು. ಸರ್ಕಾರದೊಂದಿಗೆ ರಾಜಕೀಯ ಅಸಹಕಾರದ ಮೂಲಕ ಸ್ವದೇಶಿ ಹಿತಾಸಕ್ತಿಯನ್ನು ಗಟ್ಟಿ ಮಾಡಬಹುದೆಂದು ಮನಗಂಡಿದ್ದರು. ಲಜಪತ್‌ರಾಯ್ ತಮ್ಮ ಜೀವನ ಚರಿತ್ರೆಯಲ್ಲಿ ಮುಲ್‌ರಾಜ್ ಕುರಿತು ಹೀಗೆ ಬರೆಯುತ್ತಾ,

"ರಾಯ್ ಮುಲ್‌ರಾಜ್ ಜನಪ್ರಿಯರಾಗಿ ರಾಯ್ ಸಾಬ್ ಎಂದೇ ಕರೆಯಲ್ಪಡುತ್ತಿದ್ದರು. ಯುರೋಪಿನ ಗುಪ್ತ ಸಮಾಜ ವ್ಯವಸ್ಥೆಯ ಬಗ್ಗೆ ತಮ್ಮಲ್ಲಿ ಎರಡು ಸಂಪುಟಗಳ ಚರಿತ್ರೆ ಇಟ್ಟುಕೊಂಡಿದ್ದರು. ಆ ಎರಡು ಸಂಪುಟಗಳನ್ನು ಅವರು ಯಾವುದೋ ಗ್ರಂಥಾಲಯದಿಂದ ಸಂಗ್ರಹಿಸಿದ್ದರು. ಆ ಚರಿತ್ರೆಯನ್ನು ಅವರು ಕರತಲಾಮಲಕ ಮಾಡಿಕೊಂಡಿದ್ದರು. ನಾನು ಅವರಲ್ಲಿಗೆ ಹೋದಾಗ ಕೆಲವು ಪುಟಗಳನ್ನು ತಿರುವಿ ಹಾಕಿದ್ದೆ. ಮನೆಗೆ ತಂದು ಆ ಚರಿತ್ರೆಯನ್ನು ಓದಲು ನಾನು ತವಕಪಟ್ಟೆನಾದರೂ ಅವರು ಅದಕ್ಕೆ ಸಮ್ಮತಿಸಲಿಲ್ಲ..."

ಮುಂದೆ ಲಜಪತ್‌ರಾಯ್ ಇಂಗ್ಲೆಂಡಿನಿಂದ ಆ ಚರಿತ್ರೆಯ ಎರಡು ಸಂಪುಟಗಳನ್ನು ತರಿಸಿಕೊಂಡು ತಮ್ಮ ಕುತೂಹಲದ ದಾಹ ತಣಿಸಿಕೊಂಡರು.

ಮುಲ್‌ರಾಜ್‌ರಿಗೆ ಸ್ವದೇಶವಾದದಲ್ಲಿ ಅಪಾರ ನಂಬಿಕೆ ಹುಟ್ಟಿ ಭಾರತವನ್ನು ಬ್ರಿಟಿಷರ ಹಿಡಿತದಿಂದ ತಪ್ಪಿಸಬೇಕೆಂಬ ಆಲೋಚನೆ ದಟ್ಟವಾಗಿದ್ದರೂ ಹಿಂದೂ- ಮುಸ್ಲಿಂ ಐಕ್ಯತೆಯ ಬಗ್ಗೆ ವಿಶ್ವಾಸವಿರಲಿಲ್ಲ. ತಮ್ಮ ಮೇಲೆ ಪ್ರಭಾವ ಬೀರಿದ ಮುಲ್‌ರಾಜ್‌ರ ಗುಣಗಳನ್ನು ಲಜಪತ್‌ರಾಯ್ ಅವರ ಹೆಸರಿನ ಪ್ರಸ್ತಾಪವಿಲ್ಲದೆ ಹೀಗೆ ದಾಖಲು ಮಾಡಿಟ್ಟಿದ್ದಾರೆ.

"1889ರ ನಂತರ ಕಾಂಗ್ರೆಸ್ ವಿಷಯದಲ್ಲಿ ನನ್ನಲ್ಲಿ ಉದಾಸೀನ ಮೂಡಿದ್ದಕ್ಕೆ ಆರ್ಯ ಸಮಾಜದ ನನ್ನ ಗೆಳೆಯರ ಪ್ರಭಾವವೇ ಕಾರಣ. 1889ರ ನಂತರ ಕಾಂಗ್ರೆಸ್‌ನ

ಗೌರವಾನ್ವಿತ ಗೆಳೆಯರೊಬ್ಬರ ಒಡನಾಟದಲ್ಲಿರುವ ಗೌರವ ಪ್ರಾಪ್ತವಾಗಿತ್ತು. ಅವರು ಕಾಂಗ್ರೆಸ್ ಬಗ್ಗೆ ವಿರೋಧಿ ಭಾವನೆ ತಾಳಿರುವುದಕ್ಕೆ ಪ್ರಬಲವಾದ ಕಾರಣಗಳಿದ್ದವು. ಅವುಗಳಲ್ಲಿ...

1. ''ಕಾಂಗ್ರೆಸ್‌ನ್ನು ಸ್ಥಾಪಿಸಿದ್ದು ಇಂಗ್ಲಿಷರು. ಇಂಗ್ಲಿಷರು ತಮ್ಮ ತಾಯ್ನಾಡನ್ನು ಪ್ರೀತಿಸುವುದರಿಂದ ಅವರೇ ಸ್ಥಾಪಿಸಿದ ಕಾಂಗ್ರೆಸ್ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ತಂದು ಕೊಡಲು ಸಾಧ್ಯವಿಲ್ಲ. ಭಾರತದಲ್ಲಿ ಆಡಳಿತ ನಡೆಸುವ ಮೂಲಕ ಇಂಗ್ಲಿಷರು ದೊಡ್ಡ ಲಾಭ ಪಡೆದುಕೊಳ್ಳುತ್ತಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದು ಅವರಿಂದ ಖಂಡಿತ ಸಾಧ್ಯವಿಲ್ಲ. ಇಂಗ್ಲೆಂಡಿನ ಪರಮಾಧಿಕಾರವನ್ನು ಪ್ರಶ್ನಿಸುವ ಸಲುವಾಗಿ ಆಳವಾದ, ಪ್ರಬಲವಾದ ರಾಜಕೀಯ ಆಂದೋಲನವೊಂದು ಹುಟ್ಟಿಕೊಳ್ಳಬಹುದೆಂಬ ಭೀತಿಯ ಹಿನ್ನಲೆಯಲ್ಲಿ ಬ್ರಿಟಿಷ್ ಕುಟಿಲ ಚಾಣಾಕ್ಷತನ ಕಾಂಗ್ರೆಸ್‌ನ್ನು ಹುಟ್ಟು ಹಾಕಿದೆ. ಆ ದಿನಗಳಲ್ಲಿ ಈ ವ್ಯಕ್ತಿ ಪ್ರತಿಯೊಬ್ಬ ಇಂಗ್ಲಿಷನನ್ನು ಭಾರತದ ಶತ್ರುವೆಂದೇ ಕಾಣುತ್ತಿದ್ದರು... ನಮಗೆ ಕಾಂಗ್ರೆಸ್ ಪ್ರಯೋಜನವಿಲ್ಲದ್ದು ಮಾತ್ರವಲ್ಲ. ಅದರ ಅಸ್ತಿತ್ವ ಭಾರತದ ಹಿತಕ್ಕೆ ಧಕ್ಕೆ ಎಂದು ಭಾವಿಸಿದ್ದರು. ಅವರ ಧೋರಣೆಯ ಪ್ರಕಾರ ಭಾರತೀಯರು ಶಿಕ್ಷಿತರಾಗಿ ಬಲಿಷ್ಠರಾಗಬೇಕು. ಸ್ವದೇಶಿ ಧೋರಣೆ ಆಳವಾಗಿ ಅನುಷ್ಠಾನಕ್ಕೆ ಬರಬೇಕು. ಶಸ್ತ್ರಾಸ್ತ್ರಗಳನ್ನು ಮುಚ್ಚುಮರೆಯಲ್ಲಿ ತರಿಸಿಕೊಳ್ಳಬೇಕು. ಒಂದಲ್ಲ ಒಂದು ದಿನ ಬ್ರಿಟಿಷರ ಮೇಲೆ ಎರಗಲು ಎಲ್ಲಾ ಶಕ್ತಿಯನ್ನು ಕ್ರೋಢಿಕರಿಸಿಕೊಳ್ಳಬೇಕು.''

2. ''ಈ ವ್ಯಕ್ತಿಗೆ ಹಿಂದೂ- ಮುಸ್ಲಿಂ ಐಕ್ಯತೆಯಲ್ಲಿ ವಿಶ್ವಾಸವಿಲ್ಲ. ಐಕ್ಯತೆಗಾಗಿ ಪ್ರಯತ್ನ ಪಡುವುದರಿಂದ ಹಿಂದೂಗಳಿಗೆ ಅಪಾಯ ಹೆಚ್ಚು. ಹಿಂದೂಗಳಲ್ಲಿ ಏಕತೆ ಇಲ್ಲ. ಧಾರ್ಮಿಕ ಕಟ್ಟಾತನವಿಲ್ಲ. ಮತೀಯವಾಗಿ ಆತ್ಮಾಭಿಮಾನವಿಲ್ಲ. ಮುಸ್ಲಿಮರು ತದ್ವಿರುದ್ಧ. ಅವರಲ್ಲಿ ಈ ಮೂರು ಗುಣಗಳು ಉಸಿರಿನಷ್ಟೇ ಗಟ್ಟಿ. ಆದ್ದರಿಂದ ಈ ಐಕ್ಯತೆಯಲ್ಲಿ ಲಾಭವಾಗುವುದು ಮುಸ್ಲಿಮರಿಗೆ. ಅಷ್ಟೇ ಅಲ್ಲದೆ ಇಸ್ಲಾಂ ಅಫಘಾನಿಸ್ತಾನ, ತುರ್ಕಿ ಇತರೆಡೆಗಳಲ್ಲಿ ಶಕ್ತಿಯುತವಾಗಿದೆ. ಆದ್ದರಿಂದ ಐಕ್ಯತೆಗಾಗಿ ಪ್ರಯತ್ನ ಪಡುವುದೆಂದರೆ ಮುಸ್ಲಿಮರನ್ನು ರಾಜಕೀಯವಾಗಿ ಪ್ರಬಲಗೊಳಿಸಿದಂತೆ. ಅವರ ಪ್ರಕಾರ ಮೊದಲನೆಯದಾಗಿ ಹಿಂದೂಗಳು ಬಲಿಷ್ಠರಾಗಬೇಕು. ಅವರ ಏಕತೆ ನಿಸ್ಸಂಶಯವಾಗಿ ಮೆರೆಯಬೆಕು. ರಾಷ್ಟ್ರೀಯವಾದ ಎಲ್ಲಕ್ಕಿಂತ ಹೆಚ್ಚಿನದಾಗಿ ಎದ್ದು ನಿಲ್ಲಬೇಕು. ಅವರ ವಾದದಂತೆ ಕಾಂಗ್ರೆಸ್ ಚಳವಳಿ ಹಿಂದೂ ಏಕತೆಯ ಕೆಲಸವನ್ನು ಶಿಥಿಲಗೊಳಿಸುತ್ತದೆ. ಹಿಂದೂ ಸುಧಾರಣೆ ಮೂಲೆಗುಂಪಾಗುತ್ತದೆ. ಹಿಂದೂಗಳ ಗುರಿ ವ್ಯರ್ಥವಾಗುತ್ತದೆ.''

3. ''ಅವರ ಇನ್ನೊಂದು ವಾದದ ಪ್ರಕಾರ ರಾಜಕೀಯ ಚಳವಳಿಯನ್ನು ಕೈಗೊಂಡರೆ ಹಿಂದೂಗಳ ಬಗ್ಗೆ ಬ್ರಿಟಿಷರಲ್ಲಿ ಅನುಮಾನ ಮೂಡುತ್ತದೆ. ಆಗ ಅವರು ಹಿಂದೂಗಳ ಏಳಿಗೆಯನ್ನು ಸಹಿಸುವುದಿಲ್ಲ. ಸಾಧ್ಯವಾದ ಎಲ್ಲ ಕಡೆಗಳಿಂದಲೂ ಅಡ್ಡಿ, ಅಡಚಣೆ ಒಡ್ಡಿ ತೊಂದರೆ ಮಾಡಬಹುದು.''

ಆರ್ಯ ಸಮಾಜದ ಮುಖಂಡರು ಮುಲ್‌ರಾಜ್‌ರ ಈ ವಾದವನ್ನು ಒಪ್ಪಿಕೊಂಡರು. ಸಾಯಿನ್‌ದಾಸ್ ಮತ್ತು ಲಾಲ್‌ಚಂದರು ಮುಲ್‌ರಾಜ್‌ರ ವಾದವನ್ನು

ಪ್ರಬಲವಾಗಿ ಪ್ರತಿಪಾದಿಸಿದರು. ಲಾಲ್‌ಚಂದ್ ಮುಂದೆ ಪಂಜಾಬಿನ ಮುಖ್ಯ ನ್ಯಾಯಾಲಯದ ನ್ಯಾಯಾಧೀಶರಾದರು. ಈ ಮೂವರು ಸರ್ಕಾರಿ ಸೇವೆಯಲ್ಲಿದ್ದವರೇ. ಈಗಾಗಲೇ ನಾವು ತಿಳಿದುಕೊಂಡಿರುವಂತೆ ಸಾಯಿನ್‌ದಾಸ್ ಸರಳ ಉಡುಗೆ ತೊಡುಗೆಯವರು. ಸ್ವದೇಶಿ ಉಡುಪನ್ನೇ ಅವರು ಧರಿಸುತ್ತಿದ್ದರು. 1881ರಷ್ಟು ಹಿಂದಿನಿಂದಲೂ ಅವರದು ಸ್ವದೇಶಿವಾದ. ಮುಲ್‌ರಾಜ್ ಅವರ ಸ್ವಭಾವವಂತೂ ಹೇಳುವಂತೆಯೇ ಇಲ್ಲ. ಸಾಯಿನ್‌ದಾಸ್ ಅವರು ಉಡುಗೆ ತೊಡುಗೆ ಮೂಲಕ ಸ್ವದೇಶಿ ವಾದ ಪ್ರತಿಪಾದಿಸದಿದ್ದರೂ ಅವರು ಕಟ್ಟಾ ಧೋರಣೆ ಹೊಂದಿದ್ದರು. ಅವರ ಕಿರಿಯ ಸಹವರ್ತಿಯಾಗಿದ್ದವರು ಹನ್ಸ್‌ರಾಜ್. ಎಳೆಯ ವಯಸ್ಸಿನಲ್ಲೇ ಅವರು ತಮ್ಮ ಬದುಕಿನಲ್ಲಿ ಸ್ವದೇಶಿತನ ಅಳವಡಿಸಿಕೊಂಡವರು. ಬಂಗಾಳ ಮತ್ತು ಮಹಾರಾಷ್ಟ್ರಗಳಲ್ಲಿ ಸ್ವದೇಶಿ ಆಂದೋಲನ ಪ್ರಾರಂಭವಾಗುವುದಕ್ಕೆ ಬಹಳ ಹಿಂದಿನಿಂದಲೂ ಆರ್ಯ ಸಮಾಜದ ಹಿರಿಯ ಸದಸ್ಯರು ಸ್ವದೇಶಿ ಬೋಧಿಸುತ್ತಿದ್ದರು. ಆಚರಣೆಗೂ ತಂದಿದ್ದರು. ಸಮಾಜಕ್ಕೆ ಸೇರಿದ್ದರಿಂದಲೇ ಅವರಲ್ಲಿ ಎಲ್ಲರೂ ಸ್ವದೇಶಿ ಆಂದೋಲನಕಾರರಲ್ಲ. ಅದಕ್ಕೆ ಮೊದಲೇ ಸ್ವದೇಶಿತನ ಮತ್ತು ದೇಶಭಕ್ತಿಯನ್ನು ತಮ್ಮಲ್ಲಿ ರೂಢಿಸಿಕೊಂಡಿದ್ದರು. ಅದಕ್ಕೆ ಪೂರಕವಾದ ವಾತಾವರಣ ಸಮಾಜದಲ್ಲಿ ಲಭ್ಯವಾಗಿದ್ದರಿಂದ ಅದನ್ನು ಸೇರಿದ್ದರು. ಸಮಾಜಕ್ಕೆ ಸೇರಿದ ನಂತರ ತಮ್ಮ ನಿಲುವು ಧೋರಣೆಗಳ ಬಗ್ಗೆ ಅವರೆಂದೂ ಹೆಚ್ಚುಗಾರಿಕೆ ತೋರಿಸಿದವರಲ್ಲ. ಸಮಾಜದಲ್ಲಿ, ಆಂದೋಲನದಲ್ಲಿ ತಾವು ಎಲ್ಲರಂತೆ ಒಂದಾಗಿದ್ದರು. ಅವರಲ್ಲಿ ಕೆಲವರ ಪರಿಕಲ್ಪನೆ ಇನ್ನೂ ಒಂದು ಹಂತ ಮುಂದೆ ಹೋಗಿತ್ತು. ಕಾಂಗ್ರೆಸ್ ಪಕ್ಷವು ಯೋಚಿಸುವುದಕ್ಕೆ ಸುಮಾರು ಅರ್ಧ ಶತಮಾನಕ್ಕೆ ಮೊದಲೇ ಆರ್ಯ ಸಮಾಜದಲ್ಲಿದ್ದ ಆ ಮಂದಿ ವಿದೇಶಿ ಸರ್ಕಾರದ ವಿರುದ್ಧ ಅಸಹಕಾರ ಚಳವಳಿಯ ಸ್ವರೂಪ ನೇಯ್ದಿದ್ದರು. ಲಜಪತ್‌ರಾಯ್ ತಮ್ಮ ಜೀವನ ಚರಿತ್ರೆಯಲ್ಲಿ ಅದನ್ನು ಹೀಗೆ ಬರೆದಿಟ್ಟಿದ್ದಾರೆ.

"ದೇಶದಲ್ಲಿ ವಿದೇಶಿಯರ ಆಡಳಿತ ಸಮರ್ಥವಾಗುತ್ತಿರುವುದಕ್ಕೆ ಅತ್ಯುತ್ತಮ ಭಾರತೀಯ ಮಿದುಳುಗಳು ಸಹಕಾರಿಯಾಗುತ್ತಿರುವುದು ದುಃಖದ ಸಂಗತಿ ಎಂದು ಲಾಲಾ ಮುಲ್‌ರಾಜ್ ಮತ್ತು ಲಾಲಾ ಸಾಯಿನ್‌ದಾಸ್ ಪದೇ ಪದೇ ಪಶ್ಚಾತ್ತಾಪ ಪಡುತ್ತಿದ್ದರು. ಭಾರತೀಯ ಚಾಣಾಕ್ಷ ವಿದ್ಯಾರ್ಥಿಗಳು ಸರ್ಕಾರಿ ಸೇವೆ ಸೇರದಂತೆ ಅವರ ಮನ ಒಲಿಸುವ ಪ್ರಯತ್ನ ಮಾಡುತ್ತಿದ್ದರು... ಲಾರ್ಡ್ ರಿಪ್ಪನ್ ಆಮಿಷಕ್ಕೆ ಒಳಗಾಗಿ ಕಾಶಿಯ ಹಿಂದೂ ಪಂಡಿತರು ಹಿಂದೂ ಧರ್ಮದ ಬೋಧನೆ ಆರಂಭಿಸಿರುವುದು ವಿಪತ್ಕಾರಿ ಎಂದು ಲಾಲಾ ಸಾಯಿನ್‌ದಾಸ್ ಮಮ್ಮಲ ಮರುಗುತ್ತಿದ್ದರು. ಅವರ ಪ್ರಕಾರ ಹಿಂದೂಗಳ ಸಾರ್ವಜನಿಕ, ನೈತಿಕ ಮೌಲ್ಯ ಅವರ ಧರ್ಮದಲ್ಲೇ ಅಡಕವಾಗಿದೆ ಶೈಕ್ಷಣಿಕ ವ್ಯವಹಾರಗಳಲ್ಲಿ ಅಂತರ್ಗತವಾಗಿದೆ. ಸರ್ಕಾರದಿಂದಾಗಲಿ, ಬ್ರಿಟಿಷರಿಂದಾಗಲಿ ಹಿಂದೂಗಳಿಗೆ ಏನೂ ಆಗಬೇಕಾಗಿಲ್ಲ. ಆದ್ದರಿಂದ ಹಿಂದೂಗಳು ಬ್ರಿಟಿಷರಿಂದಾಗಲಿ, ಸರ್ಕಾರದಿಂದಾಗಲಿ, ಹಣ, ಸೇವೆ ಇಲ್ಲವೇ ಮಾರ್ಗದರ್ಶನ ಪಡೆಯಬಾರದು ಹಿಂದೂಗಳು ತಮಗೆ ಏನು ಬೇಕೋ ಅದನ್ನು ಸ್ವಪ್ರಯತ್ನದಿಂದಲೇ ಪಡೆದುಕೊಳ್ಳಬೇಕು ಸ್ವಾವಲಂಬನೆಯ ಸ್ಫೂರ್ತಿಯನ್ನು ತಮ್ಮಲ್ಲೇ ಬೆಳೆಸಿಕೊಳ್ಳಬೇಕು.

ಈ ರಾಷ್ಟ್ರೀಯ ವಿಚಾರಧಾರೆ-ಶುದ್ಧ ಹಿಂದೂ ರಾಷ್ಟ್ರೀಯ ವಾದವಾಗಿತ್ತು.

''ಮುಸ್ಲಿಮರು ಈ ದೇಶವನ್ನು ಸುದೀರ್ಘ ಕಾಲ ಆಳಿದ ನೆನಪು ಇನ್ನೂ ಮಾಸದ ದಿನಗಳು ಅವು. ಹಿಂದೂಗಳು ಸ್ವಲ್ಪ ಕಾಲ ಆಡಳಿತ ನಡೆಸಿದ ಸಂದರ್ಭ ಇನ್ನೂ ಹಸಿರಾಗಿತ್ತು. ಈ ಮಧ್ಯೆ ಎರಗಿ ಬಂದಿತ್ತು ಬಿಳಿಯರ ಆಡಳಿತ. ಹಿಂದೂಗಳ ಪರಿಸ್ಥಿತಿ ಗಟ್ಟಿಯಾಗಬೇಕೆಂಬ ಭಾವನೆ ಆರ್ಯ ಸಮಾಜದ ನಾಯಕರಲ್ಲಿ ಪೃದ್ಗತವಾಗಿತ್ತು. ದೇಶಭಕ್ತಿ ಅವರಲ್ಲಿ ದೀಪ್ತವಾಗಿತ್ತು. 1880ರ ದಶಕದಲ್ಲಿ ಆರ್ಯ ಸಮಾಜವನ್ನು ರೂಪಿಸಿದ ಸಮರ್ಥ ವ್ಯಕ್ತಿತ್ವ ಸಾಯಿನ್‌ದಾಸ್ ಅವರದು. ಆ ಕಾಲದಲ್ಲಿ ಯಾವುದೇ ಓರ್ವ ವ್ಯಕ್ತಿ ಸಲ್ಲಿಸಲಾಗದಷ್ಟು ಪರಿಶ್ರಮವನ್ನು ಅವರು ಸಮಾಜಕ್ಕೆ ಧಾರೆ ಎರೆದರು. ಅವರ ಧರ್ಮ ಮುಕ್ಕಾಲು ಪಾಲು 'ರಾಜಕೀಯ' ಎಂದು ಬೇಕಾದರೂ ಹೇಳಿ. ಅವರ 'ರಾಜಕೀಯ' ಮುಕ್ಕಾಲು ಪಾಲು 'ಹಿಂದೂ ರಾಷ್ಟ್ರ'ವೆಂದಾದರೂ ಕರಿಯಿರಿ. ಒಂದು ವೇಳೆ ಅದನ್ನೇ ಧರ್ಮ ಎನ್ನುವುದಾದರೆ ಅವರ ರಾಜಕೀಯ ಮುಕ್ಕಾಲು ಪಾಲು ಧಾರ್ಮಿಕವಾಗಿತ್ತು.

ಸಮಾಜದಲ್ಲಿದ್ದ ಇಂತಹ ವರ್ಚಸ್ವಿ ನಾಯಕ ಗಣದ ಪ್ರಭಾವದಲ್ಲಿ ಲಜಪತ್‌ರಾಯ್ ಆರ್ಯ ಸಮಾಜದಲ್ಲಿ ಬೆರೆತರು. ಆ ನಾಯಕಗಣದ ಲೋಪದೋಷಗಳೇನೇ ಇರಲಿ, ಅವೆಲ್ಲಾ ಗೌಣ. ಅವರೊಂದು ನಿತ್ಯ ಹರವಿನ ಸಮೂಹ. ಘಟನೆಗಳನ್ನು ರೂಪಿಸುವುದಕ್ಕಾಗಿ ನಿಶ್ಚಿತವಾದ ಕೈಗಳು ಅವು. ಆ ಕೈಗಳು ಆರ್ಯ ಸಮಾಜದಲ್ಲಿ ಲಜಪತ್‌ರಾಯ್ ಅವರನ್ನು ನಿರೂಪಿಸಿದವು. ಅವರನ್ನು ಓರ್ವ ನಿಶ್ಚಿತ ಧೋರಣೆಯ, ಕರ್ತವ್ಯಶೀಲ ಪ್ರಬುದ್ಧ ಲಜಪತ್‌ರಾಯ್‌ರನ್ನಾಗಿ ರೂಪಿಸಿದವು. ಸಮಾಜಕ್ಕೆ ಅಗತ್ಯವಾಗಿದ್ದ ಕಾರ್ಯಕರ್ತರನ್ನು ಕಡೆದವು. ತತ್ಫಲವಾಗಿ ಅವರು ಅವರಿಗೆ ಹೆಗಲಿಗೆ ಹೆಗಲು ಕೊಟ್ಟು, ಭುಜಕ್ಕೆ ಭುಜಕ್ಕೆ ಕೊಟ್ಟು ದೀರ್ಘ ಕಾಲ ಸಮಾಜದ ಸೇವೆಯಲ್ಲಿ ನಿಂತರು.

ಸಮಾಜದ ಸೇವೆಯಿಂದ ಹೊರಬಂದ ನಂತರವೂ ಸಹ ಲಜಪತರು ಅದರ ಪ್ರಭಾವದಿಂದ ಹೊರತಾಗಲಿಲ್ಲ. ತಮ್ಮ ನಡೆ, ನುಡಿ, ಧೋರಣೆಗಳಲೆಲ್ಲ ಆರ್ಯ ಸಮಾಜವನ್ನೇ ಅವರು ಪ್ರತಿನಿಧಿಸುತ್ತಿದ್ದರು. ಅವರ ಸೇವಾ ವಿಧಾನವೂ ಭಿನ್ನವಾಗಲಿಲ್ಲ. ಸಾರ್ವಜನಿಕ ಬದುಕಿನಲ್ಲಿ ತಾವು ಆರಿಸಿಕೊಂಡ ಎಲ್ಲಾ ವಿಭಾಗಗಳಲ್ಲಿ ಅವರು ಆರ್ಯ ಸಮಾಜದಲ್ಲಿ ತಾವು ಪಡೆದ ತರಬೇತನ್ನು ಅಳವಡಿಸಿಕೊಳ್ಳದೇ ಇರಲಿಲ್ಲ. ಸಾರ್ವಜನಿಕ ವಾಗ್ಮಿಯಾಗಿ ಅವರು ರೂಪುಗೊಂಡಿದ್ದು ಆರ್ಯ ಸಮಾಜದಲ್ಲೇ. ಓರ್ವ ಪತ್ರಕರ್ತರಾಗಿದ್ದು ಅಲ್ಲೇ. ಪ್ರಚಾರಕರಾಗಿದ್ದು ಸಮಾಜದಲ್ಲೇ. ಜೀವನ ಚರಿತ್ರೆಕಾರರಾಗಿ ರೂಪುಗೊಂಡಿದ್ದು ಅಲ್ಲೇ. ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಲೇಖಕರಾಗಿ ಹೊರಹೊಮ್ಮಿದ್ದು ಅಲ್ಲೇ. ಚಳವಳಿಯ ನಾಯಕರಾಗಿ, ದೊಡ್ಡ, ದೊಡ್ಡ ಸಂಸ್ಥೆಗಳ ವ್ಯವಸ್ಥಾಪಕರಾಗಿ ಪರಿಶ್ರಮ ಹೊಂದಿದ್ದು ಸಮಾಜದಲ್ಲೇ. ಅದಮ್ಯ ಸಮಾಜ ಸೇವಕರಾಗಿ, ನಿಷ್ಠ ಪರಿಚಾರಕರಾಗಿ, ಬರಗಾಲ ಇಲ್ಲವೇ ಭೂಕಂಪ ಅಥವಾ ಪ್ರಾಕೃತಿಕ ವಿಕೋಪಗಳು ಇಲ್ಲವೇ ಅವಘಡಗಳ ಸಂದರ್ಭದಲ್ಲಿ ಪರಿಹಾರ ಕಾರ್ಯಕರ್ತರಾಗಿ ತಮ್ಮನ್ನು ತಾವು ರೂಪಿಸಿಕೊಂಡಿದ್ದು ಆ

ಸಮಾಜದಲ್ಲೇ. ಅನಾಥರನ್ನು, ಅಶಕ್ತರನ್ನು ಕಂಡಾಗ ಅವರಿಗೆ ಆಸರೆಯಾಗಿ ನಿಲ್ಲುವ ಉದಾರತನ ಬೆಳೆದು ಬಂದಿದ್ದು ಅಲ್ಲೇ. ಆ ಅಶಕ್ತ ಜನರನ್ನು ಸಮರ್ಥ ನಾಗರಿಕರನ್ನಾಗಿ ರೂಪಿಸಬಲ್ಲ ಪರಿಹಾರೋಪಾಯವನ್ನು ಅವರು ಕಂಡು ಕೊಂಡಿದ್ದು ಸಮಾಜದಿಂದಲೇ. ಸಭೆಯ ಮುಂದೆ ನಿಂತು ಜನರ ಹೃದಯದಲ್ಲಿ ತಮ್ಮ ಹೃದಯವನ್ನು ಒಂದಾಗಿಸುವ ಕಲೆ ಕರತಲಾಮಲಕ ಮಾಡಿಕೊಂಡಿದ್ದು ಆ ಸಮಾಜದ ವೇದಿಕೆಗಳಲ್ಲೇ. ಮಹದುದ್ದೇಶದ ಕಾರ್ಯಗಳಿಗೆ ಅಂತಹ ಸಂಘ ಸಂಸ್ಥೆಗಳ ಬೆಂಬಲಕ್ಕೆ ಸಾರ್ವಜನಿಕರ ಜೇಬು ಖಾಲಿ ಮಾಡಿಸುವ ಪ್ರಭಾವಿ ಕಲೆಗಾರಿಕೆಯನ್ನು ಲಜಪತ್‌ರಾಯ್ ಅಂತರ್ಗತ ಮಾಡಿಕೊಂಡಿದ್ದು ಆ ಮಹಾನ್ ಸಮಾಜದಲ್ಲೇ.

* * *

ಅಧ್ಯಾಯ-8

ಹರಿಯಾಣದ ಪಟ್ಟಣಗಳಲ್ಲಿ ವಕೀಲರಾಗಿ

ಗ್ರಾಮಾಂತರ ಪ್ರದೇಶಗಳಲ್ಲಿ ವಕೀಲರಾಗಿ ಸೇವೆ ಸಲ್ಲಿಸುವುದು ಮೌಲ್ವಿಕ ತರಬೇತಿಯೇ ಸರಿ. ಆದರೆ ಲಜಪತ್‌ರಾಯ್ ಪಾಲಿಗೆ ಈ ವೃತ್ತಿ ಅಷ್ಟೇನೂ ಆರ್ಥಿಕವಾಗಿ ಸಹಕಾರಿಯಾಗಿರಲಿಲ್ಲ. ಮಗನ ವಿದ್ಯಾಭ್ಯಾಸಕ್ಕಾಗಿ ತಂದೆ ಮಹಾ ತ್ಯಾಗವನ್ನೇ ಮಾಡಿದ್ದರು. ಇಡೀ ಕುಟುಂಬವನ್ನು ಸಂಕಷ್ಟಕ್ಕೆ ಸಿಲುಕಿಸಿ ಲಜಪತರ ಶಿಕ್ಷಣಕ್ಕಾಗಿ ಶ್ರಮಿಸಿದ್ದರು. 1881ರಲ್ಲಿ ಲಜಪತರು 'ಮುಖ್ತಾರ್'ಪದವಿ ಗಳಿಸಿಕೊಂಡಿದ್ದು ಅದರ ಫಲವಾಗಿಯೇ. ಈಗಾಗಲೇ ಓದಿರುವಂತೆ ಕಲಾ ವಿಭಾಗದಲ್ಲಿ ಅವರು ವಿಶ್ವವಿದ್ಯಾಲಯದ ಯಾವುದೇ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲಿಲ್ಲ. ಶಿಕ್ಷಣೇತ್ತರ ಚಟುವಟಿಕೆ ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದರಿಂದ ಪದವಿ ಗಳಿಕೆ ಸಾಧ್ಯವಾಗಲಿಲ್ಲ. ಈ ಮಧ್ಯೆ ಅವರಿಗೆ ಮದುವೆಯೂ ಆಯಿತು. ಸ್ವಂತ ಗಳಿಕೆಯ ಮೇಲೆ ಕುಟುಂಬ ನಿರ್ವಹಣೆ ಮಾಡುವ ಅನಿವಾರ್ಯತೆ ಲಜಪತ್‌ರಾಯ್ ಪಾಲಿಗೆ. ಸೀಮಿತ ವರಮಾನದಲ್ಲಿ ಬಹು ದೊಡ್ಡ ಕುಟುಂಬದ ನಿರ್ವಹಣೆ ನಡೆಸಿದ ತಮ್ಮ ತಂದೆಗೆ ಸ್ವಲ್ಪ ಮಟ್ಟಿಗಾದರೂ ನೆರವಾಗುವುದು ಅವರ ಕರ್ತವ್ಯವಾಗಿತ್ತು. ತಂದೆಯೂ ಸಹ ಈ ಪರಿಹಾರದ ದಿನಗಳಿಗಾಗಿ ಎದುರು ನೋಡುತ್ತಿದ್ದದ್ದು ಅವರ ಲಕ್ಷ್ಯದಲ್ಲಿತ್ತು. ತಮ್ಮ ಮಗ ಜನತಾ ಸೇವೆಯಲ್ಲಿ ಆಸಕ್ತಿ ಹೊಂದಿರುವುದು ಮುನ್ಶಿ ರಾಧಾಕಿಷನ್ ಅವರಿಗೆ ಆಗಾಗ ಇರಸು ಮುರಸು ಉಂಟು ಮಾಡುತ್ತಿತ್ತು. ಸಂಕಷ್ಟದಲ್ಲಿರುವ ಜನರಿಗೆ ನೆರವು ನೀಡುವುದರಲ್ಲಿ ಲಜಪತರಿಗೆ ಅಪಾರ ಒಲವಿತ್ತು. ಅಂದ ಮಾತ್ರಕ್ಕೆ ಸ್ವಂತ ಕುಟುಂಬದ ಸಂಕಷ್ಟಗಳ ಅರಿವು ಅವರಿಗೆ ಇರಲಿಲ್ಲವೆಂದಲ್ಲ. ತಮ್ಮ ತಂದೆಗೆ ಕೃತಘ್ನರಾಗುವಂತಹ ಮನೋಧರ್ಮ ಅವರಲ್ಲಿರಲಿಲ್ಲ. ಈ ಎರಡು ಆಶೋತ್ತರಗಳ ನಡುವೆ ಲಜಪತರು ಬಸವಳಿದದ್ದು ಉಂಟು.

ಅವರ ಅಂದಿನ ಪರಿಸ್ಥಿತಿ ಬಗ್ಗೆ ಅವರ ಬರಹದಲ್ಲೇ ಓದಿದರೆ ಚೆನ್ನ, ''ನನ್ನ ಬಯಕೆಗಳು ಬಹು ಎತ್ತರದಲ್ಲಿದ್ದವು. ಆದರೆ ಬಡತನ ಮತ್ತು ಸಂಕಷ್ಟಗಳು ನನ್ನನ್ನು ಹತಾಶೆಗೊಳಿಸುತ್ತಿದ್ದವು. ಅದೆಷ್ಟೋ ಸಾರಿ ದಂಡ ಸಂಹಿತೆ ಮತ್ತು ಇತರ ಕಾನೂನು ಪುಸ್ತಕಗಳು ನನ್ನ ಮುಂದೆ ನೆಪ ಮಾತ್ರಕ್ಕೆ ತೆರೆದಿರುತ್ತಿದ್ದವು. ನನ್ನ ಮನಸ್ಸಾದರೋ ಹಿಂದಿನ ದಿನಗಳಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಸಂದರ್ಭಗಳನ್ನು ಮೆಲುಕು ಹಾಕುತ್ತಿದ್ದವು.''

ಲಜಪತರು ಜನತೆಯ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಳ್ಳಲು ಪದೇ ಪದೇ ಯೋಚಿಸುತ್ತಾ ಬಂದರು. ಆ ಮಹತ್ಕಾರ್ಯಕ್ಕೆ ತಮ್ಮನ್ನು ಅಣಿಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದರು. ಅವರ ಆಕಾಂಕ್ಷೆ ಮತ್ತು ಬಯಕೆಗಳು ಮುಗಿಲೆತ್ತರಕ್ಕೆ ಏರುತ್ತಿದ್ದರೆ ಬಡತನದ ಜಂಜಾಟ ಕಬ್ಬಿಣದ ಶೃಂಖಲೆ ಬಿಗಿದು ಅವರನ್ನು ಭೂಮಿಗೆ ಎಳೆದು ತರುತ್ತಿತ್ತು. ವಾಸ್ತವದಲ್ಲಿ

ನಿಜ ಪರಿಸ್ಥಿತಿಗಳೇ ಅಂತಿಮ ಜಯ ಕಾಣುತ್ತವೆ. ಲಜಪತರ ಪಾಲಿಗೂ ಅದು ಹೊರತಾಗಲಿಲ್ಲ. ತಮ್ಮೆಲ್ಲಾ ಆದರ್ಶಮಯ ಆಸೆ, ಆಕಾಂಕ್ಷೆಗಳಿಗೆ ಆ ಪರಿಸ್ಥಿತಿಯಲ್ಲಂತೂ ಅವರು ಕಡಿವಾಣ ಹಾಕಬೇಕಾಯಿತು. ತಾವು ಗಳಿಸಿದ್ದ 'ಮುಖ್ತಾರ್' ಪದವಿಯ ಮೂಲಕ ವೃತ್ತಿಪರರಾದರು. ಗಳಿಕೆಗೆ ಮೊದಲಿಟ್ಟರು.

'ಮುಖ್ತಾರ್'ರಾಗಿ ನ್ಯಾಯಾಲಯಗಳಲ್ಲಿ ವೃತ್ತಿಪರರಾಗುವ ಸಲುವಾಗಿ ಲಜಪತರು ತಮ್ಮ ಹುಟ್ಟೂರು ಜಗ್ರಾಂವ್‌ನ್ನು ಆರಿಸಿಕೊಂಡರು. ಅಲ್ಲಿಗೆ ತೆರಳಿ ವೃತ್ತಿ ಹಿಡಿದರು. ತಾವು ಹಿಡಿದ ವೃತ್ತಿ, ಅದಕ್ಕಾಗಿ ಆರಿಸಿಕೊಂಡ ಸ್ಥಳ ಅನುಕೂಲಕರವಾಗಿಲ್ಲ ಎಂಬುದನ್ನು ಮನಗಾಣಲು ಹೆಚ್ಚು ಸಮಯ ಬೇಕಾಗಲಿಲ್ಲ. ಮಾನಸಿಕವಾಗಿಯೂ, ಕಾರ್ಯಶೀಲತೆಯಲ್ಲಿಯೂ ಸಾಕಷ್ಟು ಹರವು ಕಂಡಿದ್ದ ಅವರಿಗೆ ಆ ಪರಿಸರ ತೀರಾ ಚಿಕ್ಕದೆನಿಸಿತು. ಆ ಪುಟ್ಟ ಪಟ್ಟಣದಲ್ಲಿ ಬೋನಿಗೆ ಬಿದ್ದಂತಾದರು. ಹೆಸರಿಸುವಂತಹ ಸಮಸ್ಯೆಗಳು ಅಲ್ಲಿರಲಿಲ್ಲ. ಅವರ ಅದಮ್ಯ ಆಕಾಂಕ್ಷೆಗಳನ್ನು ಪ್ರೇರೇಪಿಸಬಲ್ಲ ಅವಕಾಶಗಳು ಕೂಡಿ ಬರಲಿಲ್ಲ. ಅವರ ಮನಸ್ಸು ಹತಾಶವಾಯಿತು. ಜಗ್ರಾಂವ್‌ನ ಆ ಪರಿಸ್ಥಿತಿಯಷ್ಟೇ ಮುಖ್ತಾರ್ ವೃತ್ತಿ ಸಹ ಬೇಸರಿಕೆ ತಂದಿತು. ಈ ನೀರಸ ಪರಿಸ್ಥಿತಿಯ ನಡುವೆಯೂ ಅವರ ಜ್ಞಾನದಾಹವನ್ನು ತಣಿಸಿಕೊಳ್ಳದೇ ಇರಲಿಲ್ಲ. ಆ ಸಂದರ್ಭದಲ್ಲಿ ಅವರು ಓದಿದ್ದು ರಜಪೂತರ ವೀರೋಚಿತ ಕಥನ ಸಾಹಸಗಳನ್ನು. ಆ ಅಧ್ಯಯನದಿಂದ ವೀರೋಚಿತವಾದ ಸಾಹಸಗಳನ್ನು ಕೈಗೊಳ್ಳಲು ಹುಟ್ಟಿದ ಹುಮ್ಮಸ್ಸಿಗೆ ಜಗ್ರಾಂವ್‌ನಲ್ಲಿ ಅವಕಾಶವಂತೂ ಖಂಡಿತಾ ಇರಲಿಲ್ಲ.

ಬೇಸರ, ಬಸವಳಿಕೆ ದಿನೇ ದಿನೇ ಹೆಚ್ಚತೊಡಗಿತು. ಸ್ವಲ್ಪಮಟ್ಟಿನ ಪರಿಹಾರ ನಿರೀಕ್ಷಿಸಿ ತಮ್ಮ ವೃತ್ತಿಯನ್ನು ರೋಹ್‌ಟಕ್‌ಗೆ ಬದಲಿಸಿಕೊಂಡರು. ಅವರಿಗೆ ಅನುಕೂಲಕರವೋ ಎಂಬಂತೆ ಮುನ್ಶಿ ರಾಧಾಕಿಷನ್‌ರ ಸೇವೆಯೂ ಅಲ್ಲಿಗೆ ವರ್ಗವಾಯಿತು. ರೋಹ್‌ಟಕ್ ಜಗ್ರಾಂವ್‌ಗಿಂತ ದೊಡ್ಡ ಪಟ್ಟಣ ಎಂಬುದರಲ್ಲಿ ಅನುಮಾನವಿರಲಿಲ್ಲ. ಅಲ್ಲಿನಷ್ಟು ಹತಾಶೆ, ಬವಣೆ ಇಲ್ಲಿ ಕಾಣಲಿಲ್ಲ. ರೋಹ್‌ಟಕ್ ಜಿಲ್ಲಾ ಕೇಂದ್ರವಾಗಿದ್ದು ಅವರಿಗೆ ಅನುಕೂಲಕರವೆನಿಸಿತು.

ಅದರೇನೂ ಮುಖ್ತಾರ್ ವೃತ್ತಿ ಲಜಪತರಿಗೆ ತೃಪ್ತಿ ತರಲಿಲ್ಲ. ಕಂಡು ಕಾಣದ ಕಿರಿಕಿರಿ ಅವರನ್ನು ಬಾಧಿಸತೊಡಗಿತು. ಕನಿಷ್ಠ ಕಾನೂನು ಪದವಿ ಗಳಿಸಿದರೆ ವಕೀಲ ವೃತ್ತಿಯ ಶ್ರೇಣಿಗೆ ಸೇರಬಹುದಿತ್ತು. ಲಜಪತರು ಆ ಪ್ರಯತ್ನಕ್ಕೆ ಮುಂದಾದರು. 1883ರಲ್ಲಿ ಪರೀಕ್ಷೆಯನ್ನು ತೆಗೆದುಕೊಂಡರು. ಈ ವೇಳೆಗೆ ಅವರು ರೋಹ್‌ಟಕ್ ಆರ್ಯ ಸಮಾಜದ ಕೆಲಸವನ್ನು ಹಚ್ಚಿಕೊಂಡಿದ್ದರು. ಒಂದೆಡೆ ಮುಖ್ತಾರ್ ವೃತ್ತಿ, ಇನ್ನೊಂದೆಡೆ ಸಮಾಜ ಸೇವೆ. ಈ ಎರಡರ ಮಧ್ಯೆ ಅವರ ಓದು ನಲುಗಿತು. ಮತ್ತೆ ಫಲಿತಾಂಶ ವಿಫಲ. ಆ ವರ್ಷ ಪರೀಕ್ಷೆ ಕಟ್ಟಿದ ವಿದ್ಯಾರ್ಥಿಗಳಲ್ಲಿ ಉತ್ತೀರ್ಣರಾದ ಹತ್ತು ಜನ ವಿದ್ಯಾರ್ಥಿಗಳಲ್ಲಿ ಅವರ ಹೆಸರು ಇರಲಿಲ್ಲ. ಕೇವಲ 3 ಅಂಕಗಳು ಬಂದಿದ್ದರೆ ಅವರು ಯಶಸ್ವಿಯಾಗಿರುತ್ತಿದ್ದರು. ಅನುತ್ತೀರ್ಣರಾಗಿದ್ದು ಅವರಲ್ಲಿ ಭಾರೀ ಪ್ರಮಾಣದ ನಿರಾಶೆ ತಂದಿತು. ಆದರೆ ಮುನ್ಶಿಜಿ ಪಟ್ಟು ಬಿಡಲಿಲ್ಲ. ಮತ್ತೊಮ್ಮೆ ಪರೀಕ್ಷೆ ತೆಗೆದುಕೊಳ್ಳಲು

ಮಗನ ಮೇಲೆ ಪ್ರಭಾವ ಹಾಗೂ ಒತ್ತಡ ಬೀರಿದರು. ಯಾವುದೇ ಕಾರಣದಿಂದಲೂ ಸಮಾಜದ ಕೆಲಸ, ಕಾರ್ಯಗಳನ್ನು ಉಪೇಕ್ಷಿಸಲು ಲಜಪತರು ಸಿದ್ಧರಿರಲಿಲ್ಲ. ರೋಹ್‌ಟಕ್‌ನ ಆರ್ಯ ಸಮಾಜ ತೀರಾ ಗಂಭೀರ ಸ್ಥಿತಿಯಲ್ಲಿದ್ದದ್ದು ಅವರಿಗೆ ಮನದಟ್ಟಾಗಿತ್ತು. ಅದಕ್ಕೆ ಜೀವ, ಉಸಿರು ತುಂಬಲು ಹೆಚ್ಚು ಶ್ರಮಿಸತೊಡಗಿದರು. ಅದರ ಫಲವಾಗಿ ಪದೇ, ಪದೇ ಸಮಿತಿ, ಸಭೆಗಳಿಗಾಗಿ ಇಲ್ಲವೇ ಮುಖ್ಯ ಕಚೇರಿಯ ಸಲಹೆ ಸೂಚನೆಗಳನ್ನು ಪಡೆಯುವುದಕ್ಕೆ ಲಾಹೋರಿಗೆ ಬರಬೇಕಾಗುತ್ತಿತ್ತು. ಡಿ.ಎ.ವಿ. ಕಾಲೇಜು ಸ್ಥಾಪನೆಯ ಪರಿಕಲ್ಪನೆ 1883ರಲ್ಲಿ ವಸ್ತುಸ್ಥಿತಿಗೆ ಇಳಿಯತೊಡಗಿತು. ಅದರ ಪೂರ್ವ ಸಿದ್ಧತಾ ಕಾರ್ಯದಲ್ಲಿ ಲಜಪತರು ಹೆಚ್ಚು ಶ್ರದ್ಧೆ ವಹಿಸಿದ್ದರು. ಯೋಜಿಸಿದಂತೆ ಕೆಲಸ, ಕಾರ್ಯಗಳು ಸಾಗುವಂತೆ ಮಾಡಿದರು. ಉದ್ದೇಶಿತ ಕಾಲೇಜಿಗಾಗಿ ನಿಧಿ ಸಂಗ್ರಹಿಸಲು ರೋಹ್‌ಟಕ್‌ನಲ್ಲಿ ಅವರು ಹೆಚ್ಚು ಶ್ರಮಿಸತೊಡಗಿದರು. ಕಾನೂನು ಪದವಿಯ ಅಧ್ಯಯನಕ್ಕಿಂತಲೂ ಅವರಿಗೆ ಕಾಲೇಜು ಸ್ಥಾಪನೆಯ ಕೆಲಸವೇ ಪ್ರಮುಖವಾಯಿತು.

ಮಿತ್ರ ಹನ್ಸ್‌ರಾಜ್‌ರಂತ ಶೈಕ್ಷಣಿಕವಾಗಿ ಮುಂದೆ ಸಾಗಲು ತಮ್ಮಿಂದ ಸಾಧ್ಯವಿಲ್ಲದಿದ್ದರೂ ಅವರು ಬಿ.ಎ ಪದವಿ ಗಳಿಸಿದಾಗ ಮಾನವ ಸಹಜವಾಗಿ ಮತ್ಸರಪಟ್ಟಿದ್ದು ಉಂಟು. ಹನ್ಸ್‌ರಾಜ್‌ರಿಗೆ ಅವರ ಅಣ್ಣ ನೀಡುತ್ತಿದ್ದ ಬೆಂಬಲ ಕಂಡು ತಮ್ಮ ಅಸಹಾಯಕತೆಗೆ ಮರುಗಿದ್ದುಂಟು. ದೊಡ್ಡ ಕುಟುಂಬದ ನಿರ್ವಹಣೆಯ ಮಧ್ಯೆ ತಂದೆ ಒದಗಿಸುತ್ತಿದ್ದ ಸೀಮಿತ ಬೆಂಬಲ ಬಿಟ್ಟರೆ ಬೇರಾವುದೇ ಪ್ರೋತ್ಸಾಹ ಲಜಪತರಿಗೆ ಇರಲಿಲ್ಲ. ಮುಖ್ತಾರ್ ವೃತ್ತಿ ಹಿಡಿದ ಮೇಲೂ ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ. ಈ ವೃತ್ತಿಯಿಂದ ಅವರಿಗೆ ಮಾಹೆಯಾನ 200 ರೂಪಾಯಿ ಗಳಿಕೆ ಇತ್ತು. ಅದೇನೂ ಭಾರೀ ಆದಾಯವೇನಲ್ಲ. ಆದರೂ ತಮ್ಮ ತಂದೆಯ ಗಳಿಕೆಗೆ ಹೋಲಿಸಿದರೆ ಅದೆಷ್ಟೋ ಪಟ್ಟು ಹೆಚ್ಚಿನದು. ಈ ನಡುವೆ ಮುಖ್ತಾರ್ ವೃತ್ತಿಯ ಅತೃಪ್ತಿ ಲಜಪತರನ್ನು ಹೆಚ್ಚು ಕಾಡತೊಡಗಿತು.

ಅಂತಹ ಸಂದರ್ಭದಲ್ಲಿ ಲಾಹೋರಿಗೆ ಭೇಟಿ ನೀಡಿದಾಗ ಮತ್ತೆ ಮುಖ್ತಾರ್ ವೃತ್ತಿಗೆ ಮರುಳುವುದು ಬೇಡವೆಂದು ಲಜಪತರು ನಿರ್ಧರಿಸಿಕೊಂಡರು. ಪರಿಣಾಮ ಏನಾದರೂ ಸರಿ ಎಂದು ಗಟ್ಟಿ ಮನಸ್ಸು ಮಾಡಿದರು. ಮುಂದೇನು ಮಾಡಬೇಕೆಂಬ ಪರ್ಯಾಯವನ್ನು ಯೋಚಿಸಿಕೊಂಡಿರಲಿಲ್ಲ. ಗುರುದತ್ತರು ತಮ್ಮ ಮಿತ್ರನ ಮನದ ತುಡಿತವನ್ನು ಗ್ರಹಿಸಿದರು. ಕಾರಣ ಕೇಳಿದರು. ಲಜಪತರು ತಮ್ಮ ನೆಚ್ಚಿನ ಆ ಮಿತ್ರನ ಮುಂದೆ ಮನಸ್ಸು ಬಿಚ್ಚಿಟ್ಟರು. ಯಾವುದೇ ಸಲಹೆ ಕೊಡುವ ಮೊದಲು ಮೂರನೇ ಪ್ರಯತ್ನದಲ್ಲಿ ಕಾನೂನು ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸುವ ಮನಸ್ಸು ಉಂಟೇ ಎಂಬುದನ್ನು ತಮ್ಮ ಮಿತ್ರನಿಂದ ಖಚಿತ ಪಡಿಸಿಕೊಂಡರು. ಪರೀಕ್ಷೆಗೆ ಕುಳಿತುಕೊಳ್ಳಲು ಸಲಹೆ ಇತ್ತು, ಪ್ರೋತ್ಸಾಹ ನೀಡಿದರು. ಫಲಿತಾಂಶದ್ದೇ ಕುತೂಹಲ. ವಿಶ್ವವಿದ್ಯಾಲಯದ ಕ್ಲರ್ಕ್ ಒಬ್ಬನನ್ನು ಹಿಡಿದು ಪ್ರಕಟಣೆಗೆ ಮೊದಲೇ ಫಲಿತಾಂಶ ತಿಳಿದುಕೊಂಡರು. ಮೂರನೇ ದರ್ಜೆಯಲ್ಲಿ ಪಾಸಾಗಿದ್ದು ತಿಳಿದು ಹರ್ಷಪಟ್ಟರು. ಫಲಿತಾಂಶ ಪ್ರಕಟವಾದಾಗ ಲಜಪತರು ಎರಡನೇ ಶ್ರೇಣಿಯಲ್ಲಿ ಕಾನೂನು ಪದವೀಧರರಾಗಿದ್ದರು. ಗುರುದತ್ತರ ಸಲಹೆಯಂತೆ ಅವರು ರೋಹ್‌ಟಕ್‌ಗೆ ಮರಳಿ ವಕೀಲ ವೃತ್ತಿ ಕೈಗೊಂಡರು.

ಹನ್ಸ್‌ರಾಜ್ ಅಧೀನವರ್ತಿಯಾಗಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವ ಬದಲು ರೋಹ್‌ಟಕ್‌ನಲ್ಲಿ ಸ್ವತಂತ್ರವಾಗಿ ವಕೀಲ ವೃತ್ತಿ ಮಾಡುವುದು, ಸಮಾಜದ ಚಳವಳಿಯನ್ನು ಬಲಪಡಿಸುವುದು ಹೆಚ್ಚು ಸೂಕ್ತವೆಂದು ಗುರುದತ್ ಸಲಹೆ ಮಾಡಿದ್ದರು. ಲಜಪತರು ರೋಹ್‌ಟಕ್‌ನಲ್ಲಿ ಸ್ಥಳೀಯ ಆರ್ಯ ಸಮಾಜಕ್ಕಾಗಿ ಸ್ವಲ್ಪಮಟ್ಟಿಗೆ ಕೆಲಸ ಮಾಡಿದರು. ಅವರು ಹೆಚ್ಚಿನ ಸೇವೆ ಆರ್ಯ ಸಮಾಜದ ಕೇಂದ್ರ ಕಚೇರಿ ಮತ್ತು ಡಿ.ಎ.ವಿ. ಕಾಲೇಜುಗಳಿಗೆ ಮೀಸಲಾಯಿತು. ಮಧ್ಯೆ ಮಧ್ಯೆ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಕೆಲವೊಮ್ಮೆ ಅದು ಇಂಗ್ಲಿಷ್‌ನಲ್ಲಿದ್ದರೆ ಹೆಚ್ಚಿನವು ಉರ್ದುವಿನಲ್ಲಿರುತ್ತಿದ್ದವು. ಅವರ ಕಿರಿಯ ಮಿತ್ರ ಮೌಲ್ವಿ ಮೊಹರಂ ಅಲಿ ಛಿಸ್ತಿ ನಡೆಸುತ್ತಿದ್ದ ಉರ್ದು ಪತ್ರಿಕೆ 'ರಫೀಕ್-ಇ-ಹಿಂದ್' ಪತ್ರಿಕೆಯಲ್ಲಿ ಉರ್ದು ಲೇಖನಗಳು ಹೆಚ್ಚು ಪ್ರಕಟಗೊಂಡವು.

ಜನತೆಗೆ ಅಸಾಮಾನ್ಯ ಸೇವೆ ಸಲ್ಲಿಸಬೇಕೆಂಬ ದೇಶಭಕ್ತಿಯ ತುಡಿತ ಮತ್ತು ನಿಜ ಆಕಾಂಕ್ಷೆಗಳು ಲಜಪತರಲ್ಲಿದ್ದವು. ಆದರೆ ಕಿರಿಯ ವಯಸ್ಸಿನ ಮಹತ್ವಾಕಾಂಕ್ಷೆಯ ಆ ತರುಣನಲ್ಲಿ ದೇಶದ ರಾಜಕೀಯ ಸಮಸ್ಯೆಗಳನ್ನು ಆಳವಾಗಿ ಅಧ್ಯಯನ ಮಾಡುವ ವ್ಯವಧಾನವಿರಲಿಲ್ಲ. ಕೇವಲ ವಿರೋಧಕ್ಕಾಗಿ ಸರ್ಕಾರವನ್ನು ವಿರೋಧಿಸಬೇಕೆಂಬ ಹುಂಬತನವೂ ಅವರದಾಗಿರಲಿಲ್ಲ. ಯಾವುದೇ ವಿರೋಧ, ಪ್ರತಿಭಟನೆಗಳ ಹಿಂದೆ ಸಮಸ್ಯೆಯ ಆಳವಾದ ಅಧ್ಯಯನ ಹಾಗೂ ಪರಿಚಯ ಇರಬೇಕೆಂಬುದನ್ನು ಲಜಪತರು ಮನಗಂಡಿದ್ದರು. ಆರ್ಯ ಸಮಾಜದ ತಮ್ಮ ಭಾಷಣಗಳಲ್ಲಿ ಸರ್ಕಾರದ ರೀತಿ, ನೀತಿಗಳನ್ನು ಕಟುವಾಗಿ ಖಂಡಿಸುವಾಗ ಅದಕ್ಕೆ ಸಂಬಂಧಪಟ್ಟ ಅಧ್ಯಯನಗಳ ಹಿನ್ನಲೆಯನ್ನು ಅವರು ರೂಢಿಸಿಕೊಂಡಿರುತ್ತಿದ್ದರು. ಲಜಪತರಿಗೆ ಇಸ್ಲಾಮಿಕ್ ಪರ ಪೂರ್ವಾಗ್ರಹ ಪೀಡನೆ ಇರಲಿಲ್ಲ. ಅವರ ತಂದೆ ಅವರಲ್ಲಿ ಅಂತಹ ಪ್ರಭಾವ ಬೀರಿದ್ದರಾದರೂ ಅದು ಅಚ್ಚಳಿದಿರಲಿಲ್ಲ. ಬದಲಾಗಿ ದೇಶದ ಮುಸ್ಲಿಂ ಆಳ್ವಿಕೆಯ ದಬ್ಬಾಳಿಕೆಯನ್ನು ಬ್ರಿಟಿಷರು ಅಂತ್ಯಗೊಳಿಸಿದರೆಂಬ ಒಂದು ಬಗೆಯ ಕೃತಜ್ಞತಾ ಭಾವ ಲಜಪತರಲ್ಲಿ ಮೊಳಕೆಯೊಡೆದಿತ್ತು. ಅವರಲ್ಲಿ ರಾಜಕೀಯ ಧ್ಯೇಯೋದ್ದೇಶಗಳು ಇನ್ನೂ ಮಥಿತವಾಗಿರಲಿಲ್ಲ. ಆಗಷ್ಟೇ ಆ ಸಂಬಂಧ ಪತ್ರಿಕೆಗಳಲ್ಲಿ ಲೇಖನ ಬರೆಯಲು ಆರಂಭಿಸಿದ್ದರು.

ಆರ್ಯ ಸಮಾಜಕ್ಕೆ ಅವರದೇ ಆದ ಪತ್ರಿಕೆಯೊಂದು ಬೇಕೆಂದು ಲಜಪತ್ ಮತ್ತು ಅವರ ಗೆಳೆಯರು ಮನಗಂಡರು. ಉರ್ದು ನಿಯತಕಾಲಿಕೆಯೊಂದರ ಪ್ರಕಾಶನಕ್ಕೆ ಯೋಜಿಸಿದರು. "ಭಾರತ ದೇಶದ ಸುಧಾರಕ" ಹೆಸರಿನಲ್ಲಿ ನಿಯತಕಾಲಿಕೆಗೆ ಅಣಿ ಮಾಡಿದರು. ಆ ಪತ್ರಿಕೆಯ ನಿರ್ವಹಣೆ ಲಜಪತರ ಪಾಲಿಗೆ ಬಂದಿತು. ಅದರ ಇಂಗ್ಲಿಷ್ ಅವತರಣಿಕೆಯಾಗಿ "*Regenerator of Aryavarta*"ವನ್ನು ಗುರುದತ್ತ ಮತ್ತು ಹನ್ಸ್‌ರಾಜ್ ನಿರ್ವಹಿಸುವುದೆಂದು ಯೋಜಿಸಲಾಯಿತು. ಉರ್ದು ಪತ್ರಿಕೆಯ ನಿರ್ವಹಣೆ ಲಜಪತರ ಜವಾಬ್ದಾರಿಗೆ ಒಳಪಟ್ಟಿದ್ದೇನೋ ಸರಿ. ಕೇಂದ್ರ ಕಚೇರಿಯಲ್ಲಿ ಅವರು ಇರದಿದ್ದ ಸಮಯದಲ್ಲಿ ಪತ್ರಿಕೆಯ ಪ್ರಕಾಶನಕ್ಕೆ ಅಡಚಣೆ ಉಂಟಾಗತೊಡಗಿತು. ಈ ಮಧ್ಯೆ ಲಜಪತರ ಲೇಖನಗಳು 'ರಫೀಕ್-ಇ-ಹಿಂದ್' ಹಾಗೂ ಇತರ ಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟಗೊಳ್ಳುತ್ತಲೇ ಇದ್ದವು.

ವಕೀಲ ವೃತ್ತಿಯಲ್ಲಿ ಲಜಪತರಿಗೆ ನೆಮ್ಮದಿ ಕಂಡಿತು. ಯಶಸ್ಸು ಲಭಿಸಿತು. ರೋಹ್‌ಟೆಕ್‌ನಲ್ಲೇ ಕಾಯಂ ಆಗಿ ಉಳಿಯುವ ಆಸೆಯೇನೂ ಅವರಲ್ಲಿ ಇರಲಿಲ್ಲ. ಆರಂಭದ ದಿನಗಳಾದ್ದರಿಂದ ರೋಹ್‌ಟೆಕ್ ಅವಧಿ ಅಷ್ಟೊಂದು ಪ್ರಮುಖವೂ ಎನಿಸಲಿಲ್ಲ. ಅವರು ರೋಹ್‌ಟೆಕ್‌ಗೆ ಬಂದಿದ್ದು 1884ರಲ್ಲಿ. 1885ರಲ್ಲಿ ವಕೀಲಿ ಪದವಿ ಗಳಿಸಿದರು.

1886ರಲ್ಲಿ ಅವರು ನೆರೆಯ ಹಿಸ್ಸಾರ್ ಜಿಲ್ಲೆಗೆ ಸ್ಥಳಾಂತರಗೊಂಡರು. ಹೊಸ ಸ್ಥಳ ಲಜಪತರಿಗೆ ಬಹುವಾಗಿ ಹಿಡಿಸಿತು. ಯಶಸ್ಸನ್ನು ತರತೊಡಗಿತು. ಅಲ್ಲಿಯೇ ವಾಸ್ತವ್ಯ ಹೂಡಲು ಬಯಸಿದರು. ಮೊದಲ ಬಾರಿಗೆ ತಾವು ಭದ್ರಗೊಳ್ಳುತ್ತಿರುವ ಭಾವನೆ ಅವರಲ್ಲಿ ಮೂಡಿತು. ಸುಮಾರು 6 ವರ್ಷಗಳ ಕಾಲ ಲಜಪತರು ಹಿಸ್ಸಾರ್‌ನಲ್ಲಿದ್ದರು. ಆ ಅವಧಿಯಲ್ಲಿ ಅವರ ಮನಸ್ಸು ಸಾಕಷ್ಟು ಪರಿಪಕ್ವಗೊಂಡಿತು. ಸಮಾಜದ ಕೆಲಸವು ಸುಲಲಿತವಾಗಿ ನಡೆಯಿತು. ಇನ್ನು ಹೆಚ್ಚಿನದೆಂದರೆ ರಾಜಕೀಯ ಚಟುವಟಿಕೆಗಳನ್ನು ಅವರು ಅಲ್ಲಿಯೇ ಆರಂಭಿಸಿದರು.

ಲಜಪತರು ರೋಹ್‌ಟೆಕ್‌ಗೆ ಹೋಗುವ ಮೊದಲೇ ಆರ್ಯ ಸಮಾಜ ಅಲ್ಲಿತ್ತು. ಆದರೆ ಅದು ಶಕ್ತಿಯುತವಾಗಿರಲಿಲ್ಲ. ಅಲ್ಲಿಗೆ ಹೋದ ಮೇಲೆ ಲಜಪತರು ಅದರ ಬಲವರ್ಧನೆ ಮಾಡಿದರು. ಹಿಸ್ಸಾರ್‌ನಲ್ಲಿ ಹಾಗಾಗಲಿಲ್ಲ. ಅಲ್ಲಿ ಆರ್ಯ ಸಮಾಜವೇ ಇರಲಿಲ್ಲ. ಸಮಾಜದ ಸ್ಥಾಪನೆಗಾಗಿ ಲಜಪತರು, ಗೆಳೆಯರು ಹಾಗೂ ಬೆಂಬಲಿಗರ ನೆರವಿನಿಂದ ಭೂಮಿಕೆ ಸಿದ್ಧಪಡಿಸಿ ಬಿತ್ತನೆ ಮಾಡಿದರು. ಉತ್ತಮ ಪರಿಸರವಿದ್ದದ್ದರಿಂದ ಬೇಗ ಮೊಳಕೆಯೊಡೆದು ಫಸಲು ಲಕಲಕಿಸತೊಡಗಿತು. ಇಡೀ ಪ್ರಾಂತ್ಯದಲ್ಲಿ ಅತಿ ಹೆಚ್ಚು ಕ್ರಿಯಾಶೀಲವಾದ ಆರ್ಯ ಸಮಾಜ ಅದೆನಿಸಿತು.

ಲಜಪತರು ತಮ್ಮ ಜೀವನ ಚರಿತ್ರೆಯಲ್ಲಿ ಹಿಸ್ಸಾರ್ ಆರ್ಯ ಸಮಾಜದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಉನ್ನತ ಶ್ರೇಣಿಯ ನಾಯಕ ವರ್ಗ ಅಲ್ಲಿತ್ತು ಎನ್ನುವ ಮೂಲಕ ಆ ಮಹನೀಯರ ಚಿತ್ರಣ ನೀಡಿದ್ದಾರೆ. ಆ ಸಮಯದಲ್ಲಿ ಅವರ ಒಡನಾಟಕ್ಕೆ ಒದಗಿದ ಅನೇಕ ಗಣ್ಯರು ಅವರ ಜೀವನ ಪರ್ಯಂತ ಗೆಳೆಯರಾದರು. ಆ ಪೈಕಿ ಲಾಲಾ ಚಂದುಲಾಲ್ ಒಬ್ಬರು. ಹರಿಯಾಣದ ಸರ್ದಾರರೆಂದೇ ಅವರು ಕರೆಯಲ್ಪಡುತ್ತಿದ್ದರು. ತೀರಾ ರಾಜಕೀಯವಾದಿಗಳ ಜೊತೆಗೆ ಬೆರೆಯುತ್ತಿದ್ದವರಲ್ಲ. ಅವರನ್ನು ಗ್ರಹಿಸುವುದು ಅಷ್ಟು ಸುಲಭವಾಗಿರಲಿಲ್ಲ. ಒಮ್ಮೆ ಒಲಿದರೆ ಕೊನೆಯತನಕ ಉಳಿಯುತ್ತಿದ್ದ ಗೆಳೆತನದ ಮನೋಧರ್ಮ ಅವರದು.

ಲಜಪತ್‌ರಾಯ್ ಸಮಯ ಸಾಧಕ ರಾಜಕಾರಣಿಯಲ್ಲವೆಂಬುದು ಚಂದುಲಾಲ್ ಬಹು ಬೇಗ ಅರ್ಥ ಮಾಡಿಕೊಂಡರು. ಅದೆಷ್ಟೋ ಸಂದರ್ಭಗಳಲ್ಲಿ ಲಜಪತರ ಇತರ ಗೆಳೆಯರು ಅವರ ರಾಜಕೀಯ ಧ್ಯೇಯೋದ್ದೇಶಗಳನ್ನು ಒಪ್ಪುತ್ತಿರಲಿಲ್ಲ. ಅಂತಹ ಸಂದರ್ಭಗಳಲಲ್ಲೆಲ್ಲಾ ಚಂದೂಲಾಲ್ ಲಜಪತರಿಂದ ದೂರವಾಗದೆ ಅವರ ನಿರ್ಧಾರವನ್ನೇ ಎತ್ತಿ ಹಿಡಿಯುತ್ತಿದ್ದರು. ಚಂದೂಲಾಲ್ ಅಧಿಕಾರಸ್ಥರ ಮಧ್ಯೆ ಓಡಾಡುತ್ತಿದ್ದವರು. ಅನೇಕ ಸಂದರ್ಭಗಳಲ್ಲಿ ಲಜಪತರ ವಿರುದ್ಧದ ಪ್ರಸಂಗಗಳನ್ನು ಎದುರಿಸಬೇಕಾಗುತ್ತಿತ್ತು. ತಮ್ಮ ಅನುಕೂಲಕರ ಸಾಧನೆಗಾಗಿ, ಅಧಿಕಾರಿಗಳನ್ನು ಖುಷಿಪಡಿಸುವ ದೃಷ್ಟಿಯಿಂದಲೂ ಸಹ

ಅವರೆಂದೂ ಲಜಪತರನ್ನು ಬಿಟ್ಟುಕೊಡುತ್ತಿರಲಿಲ್ಲ. ತಮ್ಮ ಮತ್ತು ಲಜಪತರ ನಡುವಿನ ಸ್ನೇಹವನ್ನು ಮುಚ್ಚಿಡುತ್ತಲೂ ಇರಲಿಲ್ಲ. ತಾವು ಲಜಪತರ ಗೆಳೆಯ ಎಂದು ಮುಕ್ತವಾಗಿ ಹೇಳಿಕೊಳ್ಳುತ್ತಿದ್ದರು. ಅವರ ನಿಲುವು, ಧೋರಣೆಗಳಲ್ಲಿ ತಮಗೆ ಖಚಿತ ನಂಬಿಕೆ ಇದೆ ಎಂದು ಸಾರಿಕೊಳ್ಳುತ್ತಿದ್ದರು. ತಮ್ಮ ಜೀವನ ಚರಿತ್ರೆಯಲ್ಲಿ ಲಜಪತ್‌ರಾಯ್ ಈ ಮಹಾನ್ ಗೆಳೆಯನ ಬಗ್ಗೆ ಅನನ್ಯ ಕೃತಜ್ಞತೆ ಸಲ್ಲಿಸಿದ್ದಾರೆ.

ಹಿಸ್ಸಾರ್ ನಾಯಕಗಣ ಅಲ್ಲಿನ ಆರ್ಯ ಸಮಾಜವನ್ನು ಜನಾಂದೋಲನವಾಗಿ ಬೆಳೆಯಿಸಿತು. ಅದನ್ನೆಂದೂ ಬುದ್ಧಿಜೀವಿಗಳ ಮುಗಿಲ ಮಲ್ಲಿಗೆಯಾಗಿ ಇರಗೊಡಲಿಲ್ಲ. ಮಣ್ಣಿನ ವಾಸನೆ ಆ ಆರ್ಯ ಸಮಾಜದ ಜೀವಾಳವಾಗಿತ್ತು. ಅನೇಕ ಕಡೆಗಳಲ್ಲಿ 'ಬಾಬುಗಳು' ಆರ್ಯ ಸಮಾಜದ ಆಗುಹೋಗುಗಳು ಆಗಿದ್ದರೆ, ಹಿಸ್ಸಾರ್‌ನಲ್ಲಿ ರೈತರು ಅದರ ಜೀವ ಜೀವಾಳ. ಚಂದೂಲಾಲ್ ಮತ್ತು ಲಜಪತ್‌ರಾಯ್ ಆರ್ಯ ಸಮಾಜದ ಮೂಲ ನೆಲೆಗಳೆನಿಸಿದರು. ಆರ್ಯ ಸಮಾಜದ ಚರಿತ್ರೆಯಲ್ಲಿ ಅದೊಂದು ವಿನೂತನ ನಡವಳಿಕೆ.

ಹಿಸ್ಸಾರಿನಲ್ಲಿ ಲಜಪತರು ಯಶಸ್ವಿ, ಪ್ರಭಾವಿ ವಕೀಲರೆನಿಸಿದರು. ಔದಾರ್ಯಕ್ಕೆ ಅವರೊಂದು ಹೆಸರಾದರು. ಬಹುಮುಖಿ ನಾಯಕ ಪ್ರತಿಭೆಯ ಜೊತೆಗೆ ಬಹುಮುಖಿ ಸೇವೆಯು ಅವರ ಪ್ರತಿಭೆಯನ್ನು ಹೆಚ್ಚಿಸಿತು. ಸ್ವಯಂ ಅರ್ಜನೆಯ ಮೂಲಕ ಶಾಲಾ ದಿನಗಳನ್ನು ಕಳೆದು ಸರ್ಕಾರಿ ಕಾಲೇಜಿನಲ್ಲಿ ಪದವಿ ಗಳಿಸಲು ಪರಿಸ್ಥಿತಿಯ ಒತ್ತಡದಿಂದ ಅಶಕ್ತರಾದ ಲಜಪತ್‌ರಾಯ್ ವಕೀಲರಾಗಿ ಯಶಸ್ಸಿನ ಮೆಟ್ಟಿಲುಗಳನ್ನು ಏರತೊಡಗಿದರು.

ಅಧ್ಯಯನದ ಮೂಲಕ ಜ್ಞಾನದ ಮಡುವನ್ನು ವರ್ಣಮಯಗೊಳಿಸಿಕೊಳ್ಳುವ ಅವರ ಆಸೆ ಇನ್ನಷ್ಟು ರಂಗು ರಂಗಾಗತೊಡಗಿತು. ವೈಯಕ್ತಿಕ ಪುಸ್ತಕಗಳ ಸಂಗ್ರಹ ದೊಡ್ಡದಾಗುತ್ತಾ ಹೋಯಿತು. ಆ ಜಿಲ್ಲಾ ಕೇಂದ್ರಕ್ಕೆ ಐರೋಪ್ಯ ಜನರು ಬಂದು ಹೋಗುತ್ತಿದ್ದರಿಂದ ಹೊಸ ಹೊಸ ಪುಸ್ತಕಗಳು ಲಭ್ಯವಾಗತೊಡಗಿದವು. ದಿನ ಕಳೆದಂತೆ ಲಜಪತರ ಜನಪ್ರಿಯತೆ ಜನಮಾನ್ಯವಾಯಿತು. ಆ ಪಟ್ಟಣದ ಗೌರವಾನ್ವಿತ ಪ್ರಜೆಗಳ ಸಾಲಿನಲ್ಲಿ ಅವರ ಹೆಸರು ಚಿರಪರಿಚಿತವಾಯಿತು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಅವರನ್ನು ಅಲ್ಲಿಯ ಜನರು ಆಯ್ಕೆ ಮಾಡಿದರು. ಮುಸ್ಲಿಂ ಮತದಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಮತ ಕ್ಷೇತ್ರ ಅದು. ಆ ಪುರಸಭೆಯಲ್ಲಿ ಗೌರವ ಕಾರ್ಯದರ್ಶಿಯಾಗಿ ಅವರು ಸೇವೆ ಸಲ್ಲಿಸಿದರು. ಕೇವಲ ಆರ್ಯ ಸಮಾಜದ ದೃಷ್ಟಿಯಿಂದಷ್ಟೇ ಅಲ್ಲದೆ ನಾಗರಿಕ ಮತ್ತು ರಾಜಕೀಯ ದೃಷ್ಟಿಯಿಂದಲೂ ಹಿಸ್ಸಾರ್ ದಿನಗಳು ಲಜಪತರ ನಿರ್ಣಾಯಕ ದಿನಗಳಲ್ಲಿ ಪ್ರಮುಖವೆನಿಸಿವೆ.

* * *

ಅಧ್ಯಾಯ- 9

ಜ್ಯೂನಿಯರ್ ಜ್ಯೂನಿಯಸ್

ಲಜಪತ್‌ರಾಯ್ ಅವರ ಹಿಸ್ಸಾರ್ ಅವಧಿ ರಾಜಕೀಯ ತರಬೇತಿ ಕಾಲವೂ ಆಗಿತ್ತು ಎಂಬುದನ್ನು ಹಿಂದೆಯೇ ಓದಿದ್ದೇವೆ. ಅದೇ ಸಂದರ್ಭದಲ್ಲಿ ಭಾರತೀಯ ನ್ಯಾಷನಲ್ ಕಾಂಗ್ರೆಸ್ಸಿನ ಮೊಟ್ಟ ಮೊದಲ ಅಧಿವೇಶನವು ಮುಂಬಯಿಯಲ್ಲಿ ಡಿಸೆಂಬರ್ 1885ರಲ್ಲಿ ಡಬ್ಲ್ಯೂ.ಸಿ. ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ನಡೆಯಿತು. ಅನ್ವೇಷಕ ದೃಷ್ಟಿಕೋನದ ನಿಷ್ಣಾತ ಮನೋಧರ್ಮಿ ಮೂಲ್‌ರಾಜ್ ಕಾಂಗ್ರೆಸ್ ಸಂಘಟನೆ ಮತ್ತು ಅದರ ಆಂದೋಲನದ ಬಗ್ಗೆ ಸಹಜವಾಗಿ ಶಂಕೆ ವ್ಯಕ್ತಪಡಿಸಿದರು. ಆದಾಗ್ಯೂ ಲಜಪತ್, ಮುಲ್‌ರಾಜ್‌ರ ದೃಷ್ಟಿಕೋನಕ್ಕೆ ಸಂಪೂರ್ಣವಾಗಿ ಈಡಾಗಲಿಲ್ಲ. ತಪ್ಪು ದಾರಿಗೆ ಎಳೆಯಲ್ಪಡಲೂ ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಕಾಂಗ್ರೆಸ್ ಆಂದೋಲನವನ್ನು ಅವರು ಬೆಂಬಲಿಸತೊಡಗಿದರು. ಮೊದಲ ಅಧಿವೇಶನದ ನಂತರ ಅವರ ಕಾಂಗ್ರೆಸ್ ಪರ ಧೋರಣೆ ನಿಕಟವಾಗತೊಡಗಿತ್ತು. 1888ರಲ್ಲಿ ಕಾಂಗ್ರೆಸ್ ಪಕ್ಷವು ಅಲಿ ಮೊಹಮದ್ ಭೀಮ್‌ಜಿ ಅವರನ್ನು ಪಂಜಾಬಿನಲ್ಲಿ ಸಂಯೋಜನೆಗಾಗಿ ನಿಯೋಜಿಸಿತು. ಹಿಸ್ಸಾರಿನ ಪ್ರಭಾವಿ ಹಾಗೂ ಯುವ ವರ್ಚಸ್ಸಿನ ಈ ಯುವ ವಕೀಲರು ಭೀಮ್‌ಜಿ ಅವರನ್ನು ತಮ್ಮ ಪಟ್ಟಣಕ್ಕೆ ಬರ ಮಾಡಿಕೊಂಡರು. ಅವರಿಗಾಗಿ ಸಾರ್ವಜನಿಕ ಸಭೆ ಏರ್ಪಡಿಸಿದರು. ಆ ಮೂರು ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಸಂಘಟನೆಗೆ ಸನ್ನಿಹಿತರಾಗಿದ್ದ ಲಜಪತರು ನೇರ ಸಂಬಂಧ ಹೊಂದಿದ್ದು ಅದೇ ಮೊದಲು.

ಕಾಂಗ್ರೆಸ್ ಸಂಘಟನೆಯನ್ನು ಹ್ಯೂಮ್ ಸ್ಥಾಪಿಸಿದಾಗ ಸರ್ ಸಯದ್ ಅಹಮದ್ ಖಾನರು ಮುಸ್ಲಿಂ ಸಮುದಾಯದ ಹೆಸರಿನಲ್ಲಿ ಹೊಸ ಸಂಘಟನೆ ಅಸ್ತಿತ್ವವನ್ನು ಕಠೋರವಾಗಿ ಟೀಕಿಸಿದ್ದರು. ಅಲಿಘಡದ ಆ ನಾಯಕರು ತಮ್ಮ ಸಹಧರ್ಮಿಯರಿಗೂ ಎಚ್ಚರಿಕೆ ಕೊಟ್ಟು ಹೊಸ ಸಂಘಟನೆಯ ವಿಷಯದಲ್ಲಿ ಜಾಗೃತವಾಗಿರುವಂತೆ ತಿಳುವಳಿಕೆ ನೀಡಿದ್ದರು. ದೇಶಿಯ ಆಡಳಿತಗಾರರ ಜೊತೆಗೆ ನಿಂತು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳುವಂತೆ ಅವರು ಮುಸ್ಲಿಂ ಸಮುದಾಯಕ್ಕೆ ಕಿವಿ ಮಾತು ಹೇಳುತ್ತಾ ಬಂದಿದ್ದರು.

ಸರ್ ಸಯದ್ ಅಹಮದರ ಧೋರಣೆಗೆ ಲಜಪತರು ದೂರದಿಂದಲೇ ಮಾರು ಹೋಗಿದ್ದರು. ಅವರ ಬಗ್ಗೆ ಅದಮ್ಯ ಗೌರವ ರೂಪಿಸಿಕೊಂಡಿದ್ದರು. ತಂದೆ ರಾಧಾ ಕಿಷನರು ಸಹ ಸರ್ ಸಯದ್ ಅಹಮದ್‌ರ ಬೋಧನೆಗಳನ್ನು ಉಣ ಬಡಿಸಿದ್ದರು. ಅದರ ಪ್ರಭಾವವೂ ಲಜಪತರ ಮೇಲಿತ್ತು. ಆದರೆ ಸರ್ ಸಯದ್ ಅಹಮದರು ಮುಂದೆ ತಮ್ಮ ಸಿದ್ಧಾಂತಕ್ಕೆ ಹೊಸ ತಿರುವು ಕೊಟ್ಟು ದೇಶಭಕ್ತಿಗೆ ಧಕ್ಕೆಯಾಗುವ ಜಾಡು ಹಿಡಿದಾಗ ಲಜಪತ್‌ರಾಯ್ ಅವರಿಗೆ ಸಹಿಸಲಾಗಲಿಲ್ಲ. ಅಲಿಘಡ ನಾಯಕನ ಬಗ್ಗೆ

ಅವರಲ್ಲಿದ್ದ ಗೌರವ ತಿರುವು ಮುರುಗಾಗತೊಡಗಿತು. ಪತ್ರಿಕೆಗಳಲ್ಲಿ 'ಬಹಿರಂಗ ಪತ್ರ'ಗಳನ್ನು ಬರೆಯುವ ಮೂಲಕ ಸರ್ ಸಯದ್ ಅಹಮದರ ಇಬ್ಬಂದಿತನವನ್ನು ಬಯಲು ಮಾಡತೊಡಗಿದರು. ಹಿಂದಿನ ದಿನಗಳಲ್ಲಿ ತಾವೇ ಸಾರಿದ್ದಕ್ಕೆ ವಿರುದ್ಧವಾಗಿ ಅವರು ಹೇಗೆ ವರ್ತಿಸುತ್ತಿದ್ದಾರೆ ಎಂಬುದನ್ನು ಪತ್ರಗಳ ಧಾರಾವಾಹಿಯ ಒಕ್ಕಣೆಕೆಯ ಮೂಲಕ ಎಳೆ ಎಳೆಯಾಗಿ ಬಿಚ್ಚಿಡತೊಡಗಿದರು. ಸರ್ ಸಯದ್ ಅಹಮದ್ ಉರ್ದುವಿನಲ್ಲಿ ಬರೆದಿದ್ದ ಲೇಖನಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿ ಪ್ರಕಟಿಸತೊಡಗಿದರು. ಬಣ್ಣ ಬದಲಾಯಿಸಿಕೊಂಡು ಹಳೆಯ ನಿಲುವು, ಧೋರಣೆಗಳನ್ನು ಅವರು ತಿರುಚುತ್ತಿದ್ದ ಪರಿಯನ್ನು ಲಜಪತರು ಓದುಗರ ಮುಂದಿಡತೊಡಗಿದರು. ಆದರೆ ಆ 'ಬಹಿರಂಗ ಪತ್ರ'ಗಳ ಸಹಿಕಾರ 'ಓರ್ವ ಅಭಿಮಾನಿ', ಊರು ಹಿಸ್ಸಾರ್. ಆ ದಿನಗಳಲ್ಲಿ ಅಂತಹ ಪ್ರಯತ್ನಗಳನ್ನು ಮಾಡಬಲ್ಲ ದಿಟ್ಟರು ಹಿಸ್ಸಾರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರಲಿಲ್ಲ. ಲಜಪತರನ್ನು ಹತ್ತಿರದಿಂದ ಬಲ್ಲವರಿಗೆ 'ಬಹಿರಂಗ ಪತ್ರ'ಗಳ 'ಓರ್ವ ಅಭಿಮಾನಿ' ಯಾರೆಂಬುದನ್ನು ಗ್ರಹಿಸಲು ಕಷ್ಟವೂ ಆಗಲಿಲ್ಲ. ತಮ್ಮ ಹೆಸರನ್ನು ಹೀಗೆ ಮುಚ್ಚುಮರೆ ಮಾಡಿಕೊಳ್ಳಲು ಲಜಪತರಿಗೆ ಪ್ರಬಲ ಕಾರಣಗಳು ಸಹ ಇರಲಿಲ್ಲ. ಅವರು ಭಾವಿಸಿದ್ದು ತಾವಿನ್ನು ಆ ಎತ್ತರಕ್ಕೆ ಬೆಳೆದಿಲ್ಲವೆಂದು. ಆ ಉದಾತ್ತ ಗುಣದಿಂದಾಗಿ ಅನಾಮಿಕರಾಗಿ ಉಳಿಯಲು ಬಯಸಿದ್ದರು.

ಆ 'ಬಹಿರಂಗ ಪತ್ರ'ಗಳ ಉರ್ದು ಅವತರಣಿಕೆ ಮುನ್ಷಿ ರಾಧಾಕಿಷನ್‌ರ 'ಕೋಹ್-ಇ-ನೂರ್' ಸಾಪ್ತಾಹಿಕದಲ್ಲಿ ಪ್ರಕಟಗೊಳ್ಳತೊಡಗಿದವು. ಇಂಗ್ಲಿಷಿನಲ್ಲಿ ಪ್ರಕಟಗೊಂಡ ಆ 'ಬಹಿರಂಗ ಪತ್ರ'ಗಳ ಮೊದಲ ಕಂತು 1888, ಅಕ್ಟೋಬರ್ 27ರಂದು ಆರಂಭಗೊಂಡಿತು. ಶೀರ್ಷಿಕೆ "*The son of an old Followers of Yours*". ಸರ್ ಸಯದ್ ಅಹಮದರು ಭಾರತೀಯ ಕಾಂಗ್ರೆಸ್ ವಿರುದ್ಧ ಪ್ರಚಾರ ಆರಂಭಿಸಿದಾಗ ಬಹುಶಃ ತಮ್ಮ ಹಳೆಯ ಬರಹಗಳು ಮತ್ತು ಭಾಷಣಗಳ ಉದ್ಧೃತಗಳನ್ನು ತಮ್ಮ ಮುಖದ ಮೇಲೆ ಯಾರಾದರೂ ಅಪ್ಪಳಿಸಬಹುದೆಂದು ಭಾವಿಸಿರಲಿಲ್ಲವೇನೋ? ಜನತೆಯ ನೆನಪು ತೀರಾ ಕಡಿಮೆ ಎಂಬ ಮಾತಿಗೆ ಅನುಗುಣವಾಗಿಯೂ, ತಮ್ಮ ಬರಹಗಳು ಮತ್ತು ಭಾಷಣಗಳು ಉರ್ದುವಿನಲ್ಲಿ ಇದ್ದುದರಿಂದ ಹೆಚ್ಚು ಜನರು ಅದನ್ನು ಓದಿರಲಾರರು ಎಂದೂ ಸರ್ ಸಯದ್ ಭಾವಿಸಿರಬಹುದು. ಅದು ನಿಜವೂ ಆಗಿತ್ತು. ವೆಡರ್ನ್‌ಬರ್ನ್, ಯೂಲೆ ಮತ್ತು ಹ್ಯೂಮ್ ಸೇರಿದಂತೆ ಬಂಗಾಳ, ಮುಂಬೈ ಮತ್ತು ಮದ್ರಾಸ್ ನಗರಗಳ ಕಾಂಗ್ರೆಸ್ ನಾಯಕರಿಗೆ ಸರ್ ಸಯದರ ಹಳೆಯ ನಿಲುವು, ಧೋರಣೆಗಳು ಗೊತ್ತಿರಲೂ ಇಲ್ಲ. ಲೇಖನ ರೂಪದಲ್ಲಿ ಅವು ದಾಖಲಾಗಿರುವುದು ಅವರಿಗೆ ಅರಿವಿರಲಿಲ್ಲ. ಬಹಿರಂಗ ಪತ್ರಗಳ ಕರ್ತೃ ಅಲಿಗಢ ನಾಯಕರ ಆ ಎಲ್ಲಾ ಲೇಖನ, ಭಾಷಣಗಳ ಪದ ಪದವನ್ನು, ವಾಕ್ಯ ವಾಕ್ಯವನ್ನು ಬಿಚ್ಚಿಡುತ್ತಾ ಹೋದರು ಅಷ್ಟೇ. ಅಲ್ಲದೆ ಪ್ರತಿ ಹಂತದಲ್ಲಿಯೂ "ನಾನೊಬ್ಬ ನಿಮ್ಮ ಬರಹಗಳ ನಿಷ್ಠ ಓದುಗ ಹಾಗೂ ಕಟ್ಟಾ ಅಭಿಮಾನಿ" ಎಂದು ಎಚ್ಚರಿಸುತ್ತಲೂ ಬಂದರು.

"ಹುಡುಗನಾಗಿದ್ದಾಗಿನಿಂದಲೂ ಅಲಿಘಡದ ಬಿಳಿ ಗಡ್ಡದ ಸಯದರ ಅಭಿಮತಗಳನ್ನು ಓದುತ್ತಾ, ಗೌರವಿಸುತ್ತಾ ಬಂದಿದ್ದೇನೆ ನಿಮ್ಮ 'ಸಮಾಜ ಸುಧಾರಕ'

ಕೃತಿ ನಮ್ಮ ತಂದೆಗೆ ಅಚ್ಚುಮೆಚ್ಚು. ಅದನ್ನು ಅವರು ನನಗೆ ಓದಿ ಹೇಳಿ ಅಂತರ್ಗತ ಮಾಡಿಸಿದ್ದಾರೆ. 19ನೇ ಶತಮಾನದ ಪ್ರವಾದಿ ನೀವು ಎನ್ನುವಷ್ಟರಮಟ್ಟಿಗೆ ನಮ್ಮ ತಂದೆ ಚಿತ್ರಣ ನೀಡಿದ್ದಾರೆ. ಅಲಿಘಡ ಸಂಸ್ಥೆಯ ಗೆಜೆಟ್‌ನಲ್ಲಿ ನೀವು ಬರೆದಿರುವುದನ್ನು, ಸಂಸತ್ತಿನ ಪರಿಷತ್ತಿನಲ್ಲಿ ನೀವು ಮಾಡಿದ ಭಾಷಣಗಳನ್ನು ಮತ್ತು ಸಾರ್ವಜನಿಕ ಸಭೆಯಲ್ಲಿನ ನಿಮ್ಮ ಭಾಷಣಗಳನ್ನು ನಾನು ಶ್ರದ್ಧೆಯಿಂದ ಓದಿದ್ದೇನೆ. ಅವೆಲ್ಲವನ್ನು ನನ್ನ ಪಿತ್ರಾರ್ಜಿತ ಆಸ್ತಿಯೋ ಎನ್ನುವಂತೆ ಜತನ ಮಾಡಿಟ್ಟುಕೊಂಡಿದ್ದೇನೆ.''

ಜಾನ್ ಸ್ಟುವರ್ಟ್ ಮಿಲ್ಲರ್‌ನ *'On Liberty'*, ಬೆಂಥಾಮರ *'Utility'* ಕೃತಿಗಳನ್ನು ತಮ್ಮ *'Reformer'*ಗಾಗಿ ಭಾಷಾಂತರಿಸಲು ಮಾಡಿದ ಸ್ಫೂರ್ತಿಯನ್ನು ಸಹ *'ಬಹಿರಂಗ* ಪತ್ರ'ಗಳ ಕರ್ತೃ, ಸರ್ ಸಯದ್‌ರಿಗೆ ನೆನಪು ಮಾಡುತ್ತಾ ಬಂದರು. ತಮ್ಮ ಅಭಿಮಾನದ ಕುರುಹು ಈ ಬೆಳವಣಿಗೆಗಳು ಎಂದು ಹೇಳುತ್ತಾ ಬಂದರು. ಸರ್ ಸಯದ್‌ರು ಬರೆದ *'Causes of the Indian Revolt'* ಕೃತಿಯಿಂದ ಆಯ್ದ ಭಾಗಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪತ್ರಗಳಲ್ಲಿ ಉದ್ಧರಿಸಲಾಗಿತ್ತು. 1873ರಲ್ಲಿ ಸರ್ ಸಯದ್‌ರ ಆ ಕೃತಿಯನ್ನು ಬ್ರಿಟಿಷ್ ಸಂಸತ್ ಸದಸ್ಯರ ಅವಗಾಹನೆಗೂ ಒದಗಿಸಿದ್ದರು. ತಮ್ಮ ಆ ಪುಸ್ತಕದಲ್ಲಿ ಸರ್ ಸಯದ್‌ರು ಜನ ಪ್ರತಿನಿಧಿ ಸರ್ಕಾರದ ತತ್ವಗಳನ್ನು ಪ್ರತಿಪಾದಿಸಿದ್ದರು:

''ಸಂಸದೀಯ ಸಭೆಗಳಲ್ಲಿ ಜನರ ಧ್ವನಿಗೆ ಪ್ರಾತಿನಿಧ್ಯವಿದ್ದರೆ ಅದರಿಂದ ಆಡಳಿತದಲ್ಲಿ ಸ್ಥಿರತೆ ದೊರೆಯುವುದರ ಜೊತೆಗೆ ಸರ್ಕಾರದ ಅಭ್ಯುದಯ ಮತ್ತು ಕಲ್ಯಾಣ ಕಾರ್ಯಗಳಿಗೂ ವಿಶೇಷ ಒತ್ತು ಬರುತ್ತದೆ ಎಂಬ ನನ್ನ ನಂಬಿಕೆಯನ್ನು ಬಹು ಜನರು ಮಾನ್ಯ ಮಾಡುತ್ತಾರೆ. ಜನರ ಧ್ವನಿಯ ಮೂಲಕ ಸರ್ಕಾರವು ತನ್ನ ಯೋಜನೆಗಳು ಅರ್ಥಪೂರ್ಣವಾಗುತ್ತಿದೆಯೋ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಜನರ ಧ್ವನಿಯಿಂದ ಮಾತ್ರ ತಪ್ಪು ತೊಡರುಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಲು ಸಾಧ್ಯ. ಅಪಾಯಗಳು ಗಂಡಾಂತರ ಸ್ಥಿತಿಗೆ ತಲುಪಿ ಹಾನಿ ಉಂಟು ಮಾಡುವ ಮೊದಲೇ ಎಚ್ಚತ್ತುಕೊಳ್ಳಲು ಸಹ ಅದು ಸಹಾಯಕವಾಗುತ್ತದೆ. ಸರ್ಕಾರದ ಸಲಹಾ ವ್ಯವಸ್ಥೆಗಳಲ್ಲಿ ಜನರ ಧ್ವನಿಗೆ ಪ್ರಾತಿನಿಧ್ಯ ಕೊಡದಿದ್ದರೆ ಆಗಬಾರದ ಅವಘಡಗಳು ಶತಸಿದ್ಧ. ಪರಿಹಾರ ಕಾರ್ಯಗಳಿಗೆ ಅವಕಾಶವೇ ಆಗುವುದಿಲ್ಲ'' -ಎಂದು ಸರ್ ಸಯದ್‌ರು ತಮ್ಮ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

''ಸಂಸತ್ತಿನ ಪರಿಷತ್ತಿನಲ್ಲಿ ಹಿಂದೂಸ್ತಾನಿಗಳಿಗೆ ಅವಕಾಶವಾದರೆ ಆಡಳಿತದ ಮುಖಗಳನ್ನು ತಮ್ಮ ದೇಶವಾಸಿಗಳಿಗೆ ವಿವರಿಸಿ ತಿಳಿಸಲು ಸಾಧ್ಯವಾಗುವುದು. ಅಂತಹ ವ್ಯವಸ್ಥೆ ಮೊದಲಿನಿಂದಲೂ ಆಗಿದ್ದಿದ್ದರೆ ಈಗ ಕಂಡು ಬರುತ್ತಿರುವ ಅತಿರೇಕಗಳನ್ನು, ವಿಪರ್ಯಾಸಗಳನ್ನು ತಪ್ಪಿಸಬಹುದಾಗಿತ್ತು.'' ಎಂದು ಅವರು ಆ ಕೈಪಿಡಿಯಲ್ಲಿ ಜನ ಪ್ರಾತಿನಿಧ್ಯದ ತತ್ವಗಳ ಮಹತ್ವವನ್ನು ಸಾದರಪಡಿಸಿದರು. ಉರ್ದುವಿನಲ್ಲಿ ಬರೆದಿದ್ದ ಸರ್ ಸಯದ್‌ರ ಆ ಹೊತ್ತಿಗೆಯನ್ನು ಸರ್ ಅಕ್ಲೆಂಡ್ ಕೊಲ್ವಿನ್ ಮತ್ತು ಲೆಫ್ಟಿನೆಂಟ್ ಕರ್ನಲ್ ಗ್ರಹಾಂ ಇಂಗ್ಲಿಷ್‌ಗೆ ತರ್ಜುಮೆ ಮಾಡಿದರು. ನಮ್ಮ ಕಥಾನಾಯಕರು 'ಬಹಿರಂಗ ಪತ್ರ'ಗಳನ್ನು ಬರೆಯುತ್ತಿದ್ದ ಸಮಯದಲ್ಲೇ ಕೊಲ್ವಿನ್ ಈಶಾನ್ಯ ಪ್ರಾಂತ್ಯದಲ್ಲಿ ಲೆಫ್ಟಿನೆಂಟ್ ಗವರ್ನರ್ ಆಗಿದ್ದರು. ಲೆಫ್ಟಿನೆಂಟ್ ಗ್ರಹಾಂ ಸರ್ ಸಯದ್‌ರ ಜೀವನ

ಚರಿತ್ರೆಯ ಅಧಿಕೃತ ಬರಹಗಾರರಾಗಿದ್ದರು. ಆಗ ತಮ್ಮ ಈ ನಿರೂಪಣೆಗಳು ಸರ್ ಸಯದ್‌ರಿಗೆ ಸಂಕುಚಿತವೋ, ದೇಶದ್ರೋಹವೋ ಎನಿಸಿರಲಿಲ್ಲ. ಆದರೆ ಈಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅದೇ ಪ್ರಾತಿನಿಧಿಕ ಸರ್ಕಾರಕ್ಕಾಗಿ ಪ್ರತಿಪಾದನೆ ಮಾಡಿದಾಗ ಅದರಲ್ಲಿ ಸರ್ ಸಯದ್‌ರಿಗೆ ದೇಶದ್ರೋಹದ ಲಕ್ಷಣ ಕಂಡು ಬಂದಿತ್ತು. ಕಾಂಗ್ರೆಸ್ ಸಂಘಟನೆಯ ರೂಪದಲ್ಲಿ ಅಂತಹ ಪ್ರಯತ್ನ ಮಾಡುವವರು ದ್ರೋಹಿಗಳಂತೆ ಭಾಸವಾಗಿದ್ದರು. ಹೋಂ ರೂಲ್, ಸ್ವಸರ್ಕಾರ, ಸ್ವರಾಜ್ ಕಾಂಗ್ರೆಸ್ಸಿನ ಘೋಷಣೆಗಳಾಗುವುದಕ್ಕೆ ಮೊದಲು ಶಾಸನ ಸಭೆಗಳಲ್ಲಿ ಚುನಾಯಿತ ಜನ ಪ್ರಾತಿನಿಧ್ಯಕ್ಕೆ ಅವಕಾಶವಿರಬೇಕೆಂಬ ಒತ್ತಾಯ ಪ್ರಮುಖವಾಗಿತ್ತು.

ನಿಜ. ಕೆಲವು 'ಸ್ಥಳೀಯರನ್ನು' ರಾಜಾಶ್ರಯದ ರೂಪದಲ್ಲಿ ಸಂಸತ್ತಿನ ಪರಿಷತ್ತಿಗೆ ಬ್ರಿಟಿಷರು ನೇಮಕ ಮಾಡಿದ್ದರು. ಅಂತಹ ನೇಮಕವನ್ನು 'ಬಹಿರಂಗ ಪತ್ರಕಾರರು' ಕೆಣಕಿದರು. ''ರಾಜಾ ಶಿವಪ್ರಸಾದ್ ಮತ್ತು ನಿಮ್ಮಂತಹವರನ್ನು ಜನ ಪ್ರತಿನಿಧಿಗಳೆಂದು ಪರಿಗಣಿಸಲು ಸಾಧ್ಯವೇ? ನಿಮ್ಮನ್ನು ಸಂಸತ್ತಿನ ಪರಿಷತ್ತಿಗೆ ಆಯ್ಕೆ ಮಾಡಿದ ರೀತಿ ಮತ್ತು ಮೌಲ್ಯವನ್ನು ಒಪ್ಪಿಕೊಳ್ಳಲಾದೀತೇ? ಸಾಮಾನ್ಯ ಪರಿಜ್ಞಾನವಿರುವ ಯಾವ ಮನುಷ್ಯನು ಸಹ ಇದನ್ನು ಒಪ್ಪಲು ಸಾಧ್ಯವಿಲ್ಲ. ಎಲ್ಬರ್ಟ್ ಮಸೂದೆಯ ಮೇಲೆ ಕುಖ್ಯಾತವೆನಿಸಿದ ಭಾಷಣ ಮಾಡಿರುವ ರಾಜಾ ಶಿವಪ್ರಸಾದ್‌ರನ್ನು ಇಡೀ ಭಾರತದ ಪ್ರತಿನಿಧಿ ಎಂದು ಮಾನ್ಯ ಮಾಡಲು ಸಾಧ್ಯವಿಲ್ಲ. ಉಪ್ಪಿನ ಮೇಲೆ ತೆರಿಗೆ ವಿಧಿಸಿದ ಆ ಮಸೂದೆಗೆ ರಾಜಾ ಪೀಲೆ, ಮೋಹನ್ ಮುಖರ್ಜಿ ಹಾಗೂ ಇತರರು ಸಮ್ಮತಿ ನೀಡಿದರು. ಹಾಗೆ ಮಾಡದಿದ್ದರೆ ತಮ್ಮ ಕುರ್ಚಿ ಉಳಿಯುವುದಿಲ್ಲವೆಂದು ಅವರಿಗೆ ಗೊತ್ತಿತ್ತು. ಅಂತಹವರ ಧ್ವನಿಗಳನ್ನು ಜನ ಪ್ರಾತಿನಿಧ್ಯ ಎಂದು ಹೇಳಲಾದೀತೇ?''

ಸರ್ ಸಯದ್ ಅಹಮದರ ಯುವ ಟೀಕಾಕಾರರು ಕೇವಲ ಅವರ ಬರಹಗಳ 30 ವರ್ಷಗಳಷ್ಟು ಹಳೆಯದಾದ ಉಧೃತಗಳನ್ನಷ್ಟೇ ತಮ್ಮ ಪತ್ರಗಳಲ್ಲಿ ಪ್ರಸ್ತಾಪಿಸುತ್ತಾ ಬರಲಿಲ್ಲ. ಅಲಿಘಡದ ಮುಖಂಡರು ತೀರಾ ಇತ್ತೀಚೆಗೆ ಬರೆದಿದ್ದ ಲೇಖನಗಳಿಂದಲೂ ಪ್ರಸ್ತಾಪ ಮಾಡತೊಡಗಿದರು. ಕೇವಲ 7 ವರ್ಷಗಳ ಹಿಂದಷ್ಟೇ ಸರ್ ಸಯದ್ ಅಹಮದರು ಬರೆದಿದ್ದ ಹಳೆಯ ಧೋರಣೆಯನ್ನೇ ಪ್ರತಿಪಾದಿಸುತ್ತಿದ್ದ ಲೇಖನಗಳ ಭಾಗಗಳನ್ನು 'ಬಹಿರಂಗ ಪತ್ರಕಾರರು' ಉದ್ಧರಿಸಿದರು. 1881ರಲ್ಲಿ ಲಾಹೋರಿನ ಕಾಲೇಜನ್ನು ವಿಶ್ವವಿದ್ಯಾಲಯದ ಅಂತಸ್ತಿಗೆ ಏರಿಸುವ ಹಂತದಲ್ಲಿ ಸರ್ ಸಯದ್‌ರು ಬರೆದಿದ್ದ ಲೇಖನ:

''ಮೆಚ್ಚುಗೆ ಗಳಿಸಿಕೊಳ್ಳುವ ಸಲುವಾಗಿ ಏನನ್ನಾದರೂ ಕೊಡಬಹುದು. ವಾಸ್ತವದಲ್ಲಿ ಅದೆಲ್ಲಾ ಹಿಂದೂಸ್ತಾನಿಗಳು ತಮ್ಮ ಆಳ್ವಿಕೆದಾರರಿಗೆ ಅಧೀನರಾಗಿರಬೇಕೆಂದು ಒಡ್ಡುವ ಆಮಿಷ. ಅದನ್ನು ಒಪ್ಪಿಕೊಳ್ಳುವುದು ಒಡೆಯರಿಗೆ ಗುಲಾಮರು ನಮಿಸಿಕೊಳ್ಳುವುದಕ್ಕಿಂತ ಭಿನ್ನವಾದುದು ಏನಲ್ಲ.''

ಮುಂದೆ ವಿಕ್ಟೋರಿಯಾ ಕಾಂಗ್ರೆಸ್ ಎಂದೇ ಪ್ರಸಿದ್ಧವಾದ ನಾನಾ ಫೌಜಿಸ್ತಾನ ಕಾಲೇಜಿಗೆ ಭೂಮಿ ಪೂಜೆ ನೆರವೇರಿಸುವ ಸಂದರ್ಭದಲ್ಲಿ ಸರ್ ಸಯದರು ಮಾಡಿದ

ಭಾಷಣ ಇನ್ನೂ ತೀಕ್ಷ್ಣವಾಗಿತ್ತು. ಅದರ ಭಾಗವನ್ನು ಸಹ ಬಹಿರಂಗ ಪತ್ರಗಳ ಅನಾಮಿಕ ಬರಹಗಾರರು ಪ್ರಕಟಿಸದೇ ಇರಲಿಲ್ಲ:

''ಸಂಸತ್ತಿನ, ಪರಿಷತ್ತಿನ ಸ್ಥಳೀಯ ಪ್ರತಿನಿಧಿಗಳನ್ನು ನೇಮಿಸುವುದು ಭಾರತದ ಚರಿತ್ರೆಯಲ್ಲಿ ಅವಿಸ್ಮರಣೀಯ ಬೆಳವಣಿಗೆ ಆಗುತ್ತದೆ. ನಾನು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಅಂತಹ ದಿನಗಳು ದೂರವಿಲ್ಲ. ಆ ದಿನ ಬಂದಾಗ ನೀವು ನನ್ನ ಈ ಮಾತುಗಳನ್ನು ಸ್ಮರಿಸಿಕೊಳ್ಳುವಿರಿ. ದೇಶದ ಪ್ರತಿ ವಿಭಾಗ ಇಲ್ಲವೇ ಜಿಲ್ಲೆಗಳಿಂದಲೂ ಆಯ್ದ ಪ್ರತಿನಿಧಿಗಳಿಂದ ಕೂಡಿದ ಸಂಸತ್ತಿನ ಪರಿಷತ್ತು ಅದಾಗುತ್ತದೆ. ಆ ಪರಿಷತ್ತು ರೂಪಿಸುವ ಕಾಯ್ದೆ, ಕಾನೂನುಗಳು ಇಡೀ ದೇಶದ ಅಗತ್ಯವನ್ನು ಒಳಗೊಂಡಿರುತ್ತದೆ.''

ಇದನ್ನು ಉದ್ಧರಿಸಿದ 'ಬಹಿರಂಗ ಪತ್ರಕಾರರು' ತಮ್ಮ ಟೀಕೆಯನ್ನು ಅದರಲ್ಲಿ ಸೇರಿಸದಿರಲಿಲ್ಲ. ''ಸರ್ ಸಯದರೇ, 1864ರಲ್ಲಿ ನೀವು ಕನಸು ಕಂಡು ಆಡಿದ ಸಂತೋಷದ ಮಾತುಗಳು ವಾಸ್ತವಕ್ಕೆ ಬರುವ ಕಾಲ ತೀರಾ ದೂರದಲ್ಲೇನೂ ಇಲ್ಲ. ಅದು ಸನಿಹದಲ್ಲಿದೆ. ಅಂದು ಆಡಿದ ಮಾತುಗಳಿಗೆ ತಕ್ಕಂತೆ ನಡೆದುಕೊಳ್ಳದಿದ್ದರೆ ನೀವು ದೇಶವಾಸಿಗಳ ದೃಷ್ಟಿಯಲ್ಲಿ ಹಾಸ್ಯಕ್ಕೆ ಈಡಾಗುವುದು ಖಂಡಿತ. ಸದ್ಯಕ್ಕೆ ನಿಮ್ಮ ಭವಿಷ್ಯವಾಣಿ ಈಡೇರಿಲ್ಲದಿರಬಹುದು. ಆದರೆ ನಮಗೆ ಖಾತ್ರಿ ಇದೆ. ಒಂದಲ್ಲ ಒಂದು ದಿನ ಆ ನಿಮ್ಮ ಭವಿಷ್ಯವಾಣಿ ಈಡೇರಿಯೇ ತೀರುತ್ತದೆ. ನಿಮ್ಮ ದೃಷ್ಟಿಕೋನ ವ್ಯರ್ಥವಾಗಲಿಲ್ಲವೆಂಬ ಸಂತೃಪ್ತಿ ಒಳಗೊಳಗೆ ನಿಮ್ಮನ್ನು ಆವರಿಸದೇ ಇರದು. ಸರ್ ಸಯದರೇ, ಹೇಳಿ. ನಿಮ್ಮ ಅಂದಿನ ಭವಿಷ್ಯವಾಣಿಯನ್ನು ಈಗ ಹಿಂದಕ್ಕೆ ತೆಗೆದುಕೊಳ್ಳ ಬಯಸುವಿರೇನು?''

ಅಲಹಾಬಾದಿನ ಗೌರವಾನ್ವಿತ ಪಂಡಿತ್ ಅಯೋಧ್ಯಾನಾಥರು ಮಾಡಿದ್ದ ಲಕ್ನೋ ಭಾಷಣವನ್ನು ಸರ್ ಸಯದರು ಕಟುವಾಗಿ ಟೀಕಿಸಿದರು. ''ನೀವು ಇಂದು ಅನುಭವಿಸುತ್ತಿರುವ ಸ್ಥಾನಮಾನಗಳನ್ನು ಸರ್ಕಾರ ನಿಮಗೆ ಕೊಡುವ ಮುನ್ನ ಕಾಂಗ್ರೆಸ್ಸಿಗರು ಯಾವುದೇ ರೀತಿಯಲ್ಲಿ ಚಳವಳಿ ಮಾಡಿದ್ದರೇ?'' ಎಂದು ಅವರು ಪ್ರಶ್ನಿಸಿದರು. ಬಹಿರಂಗ ಪತ್ರಕಾರನ ಉತ್ತರ ಸಿದ್ಧವಾಗಿತ್ತು. 'ಅಂತಹ ಚಳವಳಿ ನಡೆದಿದೆ ಎಂಬುದನ್ನು ಸ್ವತಃ ನೀವೇ ಬರೆದಿರುವ ಲೇಖನದ ಮೂಲಕ ನಾನು ಸಾದರಪಡಿಸುತ್ತಿದ್ದೇನೆ. ಅಂತಹ ಚಳವಳಿಗಾರರ ಅಗ್ರಪಂಕ್ತಿಯ ಅಗ್ರಮಾನ್ಯರು ನೀವೇ?'

ಸರ್ ಸಯದರು ಅದಕ್ಕೆ ಪ್ರತಿಕ್ರಿಯೆ ನೀಡಿ, ''ಸರ್ಕಾರವಾಗಲಿ, ಜಿಲ್ಲಾ ಅಧಿಕಾರಿಗಳಾಗಲಿ ನಿಮ್ಮನ್ನು ಅಗೌರವದಿಂದಲೋ, ಅತೃಪ್ತರೆಂದೋ ಪರಿಗಣಿಸಬಹುದೆಂಬ ಭಯ ನಿಮ್ಮನ್ನು ಕಾಡುತ್ತಿದೆ. ಆ ಭಯವು ದೇಶದ ಹಿತಕ್ಕಾಗಿ ಮುನ್ನುಗ್ಗಲು ನಿಮ್ಮನ್ನು ತಡೆಯುತ್ತದೆ ಎಂಬ ಕಳವಳ ನನಗಿದೆ. ನಾನು ಹೇಳುತ್ತೇನೆ ಕೇಳಿ. ಮಾನಸಿಕವಾದ ಇಂತಹ ಹೇಡಿತನ ಹಿತಕಾರಿಯಲ್ಲ. ಇಂತಹ ಬಯಕೆಗೆ ಎಡೆಕೊಡಬೇಡಿ. ಉದಾರ ಮನಸ್ಸಿನ ಯಾವ ಇಂಗ್ಲಿಷನು ಭಾರತದಲ್ಲಿ ಇಲ್ಲ. ತಮ್ಮ ಹಿತ, ಸೌಖ್ಯಕ್ಕಿಂತಲೂ ಹೆಚ್ಚಿನದಾಗಿ ಇತರರ ಒಳಿತನ್ನು ಅವರೆಂದಿಗೂ ಬಯಸಲಾರರು. ದೇಶವಾಸಿಗಳು ಹೆಚ್ಚು ನಾಗರಿಕರಾಗಿರಬೇಕೆಂಬ ಆರೋಗ್ಯಕರ ಮನಸ್ಸು ಅವರದಿರಲು ಸಾಧ್ಯವಿಲ್ಲ. ಸರ್ಕಾರದ ನಡವಳಿಕೆಗಳನ್ನು, ರೀತಿ, ರಿವಾಜುಗಳನ್ನು ದಿಟ್ಟವಾಗಿ ಎದುರಿಸುವ ಬಹಿರಂಗ ಪ್ರಾಮಾಣಿಕತೆ

ಮತ್ತು ಅಭಿವ್ಯಕ್ತಿ ಕಟ್ಟು ಬೆಳೆಸಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಅತ್ಯುತ್ತಮವಾದುದು." ಆ ವೇಳೆಗೆ ಸಯದರು ಪತಾಕರಾದಂತ್ತಿತ್ತು. ಹಿಂದೆ ತಾವೇ ಪ್ರತಿಪಾದಿಸಿದ್ದಕ್ಕೆಲ್ಲಾ ವ್ಯತಿರಿಕ್ತವಾಗಿ ಬಡಬಡಿಸತೊಡಗಿದರು. ತೀರಾ ಇತ್ತೀಚಿನವರೆಗೆ ಅಲಿಘಡದ ಈ ಮುತ್ಸದ್ದಿಯೂ ತಮ್ಮ ವಿಶಾಲ ಮನೋಧರ್ಮ ಮತ್ತು ಐಕ್ಯತೆಯ ಪ್ರವಾದಿಯಂತೆ ಕಂಡು ಬಂದಿದ್ದರು. ಈಗ ಇದ್ದಕ್ಕಿದ್ದಂತೆ ಹಿಂದೂಗಳು ಮತ್ತು ಮುಸ್ಲಿಮರ ಹಿತ ಸಂಘರ್ಷದತ್ತ ಸಾಗುತ್ತಿದೆ ಎಂದು ಬೊಬ್ಬಿಡತೊಡಗಿದರು. ಆ ಕಾರಣದಿಂದಲೇ ಮುಸ್ಲಿಮರು ಕಾಂಗ್ರೆಸ್ಸಿನಿಂದ ದೂರ ಸರಿಯಬೇಕೆಂದು ಮಾಳಿಗೆಯ ಮೇಲೆ ನಿಂತು ಬೊಬ್ಬೆ ಹಾಕತೊಡಗಿದರು. ತಾಯಿ ಭಾರತಾಂಬೆಯ ಎರಡು ಕಣ್ಣುಗಳು ಹಿಂದೂಗಳು ಮತ್ತು ಮುಸ್ಲಿಮರು ಎಂದು ಘೋಷಿಸುತ್ತಾ ರಾಷ್ಟ್ರೀಯ ಏಕತೆಯ ಉದಾತ್ತ ಕನಸನ್ನು ಕಟ್ಟಿ ಅದಕ್ಕಾಗಿ ತಮ್ಮ ಧೀಶಕ್ತಿಯ ಕೊಡುಗೆ ನೀಡಿದ್ದವರು ಸರ್ ಸಯದರೇ. ಆದರೆ ಈಗ ಅವರ ಧೋರಣೆ ತೀರಾ ತದ್ವಿರುದ್ಧ. ಅವರೇ ಹೇಳಿದ ಕಣ್ಣುಗಳು ಪರಸ್ಪರ ಹೊಡೆದಾಟಕ್ಕೆ ಇಳಿಯಲು ಅವರೇ ಪ್ರಚೋದಿಸುತ್ತಿರುವಂತಿತ್ತು.

ಒಂದು ಕಾಲಕ್ಕೆ ಅವರ ಅದಮ್ಯ ಅಭಿಮಾನಿ ಎನಿಸಿದ ನಮ್ಮ ಕಥಾನಾಯಕ, ಯುವ ಟೀಕಾಕಾರರು ಅಲಿಘಡ ಮುತ್ಸದ್ದಿಯ ಇಬ್ಬಂದಿತನ ಬಯಲಿಗೆಳೆಯಲು ಹಿಂದೆ ಮುಂದೆ ನೋಡಲಿಲ್ಲ. ಅವರ ಹಿಂದಿನ ಮತ್ತು ಅಂದಿನ ಮಾತುಗಳನ್ನೇ ತಾತ್ಕಾಲಿಕವಾಗಿ ಓದುಗರ ಮುಂದಿಡುತ್ತಾ ಅವರ ಇತ್ತಂಡತನವನ್ನು ಬಹಿರಂಗಗೊಳಿಸತೊಡಗಿದರು. ಹಿಂದೂ ಮತ್ತು ಮುಸ್ಲಿಮರ ಹಿತಾಸಕ್ತಿ ಒಂದೇ ಎಂದು ಸಾರಿದ ಬಾಯಿಯೇ ಅದನ್ನು ಸಂಘರ್ಷದ ಅಪಸ್ವರದಲ್ಲಿ ಮಲಿನಗೊಳಿಸುತ್ತಿದ್ದುದನ್ನು ನಮ್ಮ ಅನಾಮಧೇಯ ಪತ್ರಕಾರರು ನಿಚ್ಚಳವಾಗಿ ತೆರೆದಿಟ್ಟರು. ಸರ್ ಸಯದರ ಹಿಂದಿನ ಭಾಷಣಗಳು, ಲೇಖನಗಳು ಚಾರಿತ್ರಿಕವೆನಿಸುವಷ್ಟು ಹಳೆಯದಾಗಿರಲಿಲ್ಲ. 1880ರ ದಶಕದಲ್ಲಿ ಪಂಜಾಬಿಗೆ ನೀಡಿದ್ದ ಭೇಟಿಯ ಸಮಯದಲ್ಲಿ ಸರ್ ಸಯದರು ಹಿಂದೂ ಮತ್ತು ಮುಸ್ಲಿಮರು ಭಿನ್ನವಾಗಿ ಭಾರತೀಯ ರಾಷ್ಟ್ರೀಯತೆಯನ್ನು ಪೋಷಿಸಬೇಕೆಂಬ ಉಜ್ವಲ ಕರೆ ಕೊಟ್ಟಿದ್ದರು. ಅದರಲ್ಲಿ ಕ್ರಿಶ್ಚಿಯನ್ನರು ಮಿಳಿತವಾಗಬೇಕೆಂದಿದ್ದರು. ಗುರದಾಸಪುರದ ಭಾಷಣದಲ್ಲಿ ಅವರು:

"ಚರಿತ್ರೆಯು ಪ್ರಾಚೀನ ಕಾಲದಿಂದಲೂ 'ರಾಷ್ಟ್ರ'ವೆಂಬ ಪದಕ್ಕೆ ಅರ್ಥ ಒಂದು ದೇಶದ ನಿವಾಸಿಗಳಿಂದ ಕೂಡಿದ ಪ್ರದೇಶವೆಂದು ವಿಶ್ಲೇಷಿಸುತ್ತಾ ಬರಲಾಗಿದೆ. ಆ ಜನರಲ್ಲಿ ಆಚಾರ - ವಿಚಾರಗಳಲ್ಲಿ ಭಿನ್ನತೆ ಇರಬಹುದು... ನೆನಪಿನಲ್ಲಿ ಇಟ್ಟುಕೊಳ್ಳಿ. ಹಿಂದೂ ಮತ್ತು ಮುಸ್ಲಿಮ ಪದಗಳೆರಡು ಕೇವಲ ಧಾರ್ಮಿಕ ಭಿನ್ನತೆಯ ತೋರಿಕೆಗಳು ಮಾತ್ರ. ಅದನ್ನು ಹೊರತುಪಡಿಸಿದರೆ ಹಿಂದೂ ಮತ್ತು ಮುಸ್ಲಿಮರು ಜೊತೆಗೆ ಕ್ರಿಶ್ಚಿಯನ್ನರು ಸೇರಿ ಎಲ್ಲರೂ ಈ ದೇಶವಾಸಿಗಳೇ. ಎಲ್ಲರೂ ಈ ಅರ್ಥದಲ್ಲಿ ಒಂದೇ. ಒಂದೇ ರಾಷ್ಟ್ರಕ್ಕೆ ಸೇರಿದವರು... ಎಲ್ಲರೂ ಒಗ್ಗೂಡಬೇಕು. ದೇಶದ ಹಿತ ಸರ್ವಸಮಾನ."

ಅದಕ್ಕೆ ಪೂರಕವೋ ಎನ್ನುವಂತೆ ರಾಷ್ಟ್ರೀಯ ಸ್ತರದಲ್ಲಿ ಸಮಾನ ವೇದಿಕೆಯನ್ನು ರಚಿಸುವ ಹಂತದಲ್ಲಿ ಸರ್ ಸಯದರು ತಾವು ಆಡಿದ್ದ ಮಾತುಗಳನ್ನು ಹಾಗೇ [illegible]. ಬದಲ್ಲಾ ಸಂಘರ್ಷದ ಪ್ರಚಾರಕ [illegible]. ಅವರು

ಗುರುದಾಸಪುರದಲ್ಲಿ ಆ ಚೇತೋಹಾರಿ ಭಾಷಣ ಮಾಡಿದ್ದು 1884ರ ಜನವರಿಯಲ್ಲಿ. ಕೇವಲ ಒಂದು ವರ್ಷ ತುಂಬುವುದರೊಳಗಾಗಿ ಸರ್ ಸಯದರು ಅಷ್ಟೊಂದು ಹೀನ ವಿಕೃತ ಮನಸ್ಕರಾಗಿದ್ದರು. 1884ರ ಫೆಬ್ರವರಿ 3ರಂದು ಲಾಹೋರಿನಲ್ಲಿ ಅವರು ಮಾಡಿದ ಭಾಷಣ ಗುರುದಾಸಪುರದ ಇಂಗಿತಕ್ಕಿಂತಲೂ ಹೆಚ್ಚು ಶಕ್ತಿಯುತವಾಗಿತ್ತು. ಲಾಹೋರದ ಭಾರತೀಯ ಸಂಘವು ಏರ್ಪಡಿಸಿದ್ದ ಸಭೆಯಲ್ಲಿ ತಮ್ಮನ್ನು ಗೌರವಿಸಿದ ಸನ್ಮಾನಕ್ಕೆ ಉತ್ತರ ನೀಡುತ್ತಾ ಅವರು,

''ಈ ಸಂಘದಲ್ಲಿ ಹಿಂದೂಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೂ ಬಂಗಾಳಿಗಳ ಸಾಮಾನ್ಯ ಧೋರಣೆಯನ್ನು ನಾನು ಪ್ರಶಂಸಿಸುತ್ತೇನೆ. ನಮ್ಮ ದೇಶದಲ್ಲಿ ನಾವು ಅಭಿಮಾನ ಪಡಬಹುದಾಗಿರುವ ಏಕ ಮಾತ್ರ ಜನಾಂಗವೆಂದರೆ ಬಂಗಾಳಿಗಳೆಂದು ನಾನು ಹೇಳುತ್ತೇನೆ. ಅವರಿಂದಾಗಿಯೇ ದೇಶದಲ್ಲಿ ತಿಳುವಳಿಕೆ, ಸ್ವಾತಂತ್ರ್ಯ, ದೇಶಭಕ್ತಿಯ ಓಘ ಓತಪ್ರೋತವಾಗುತ್ತಿದೆ. ಹಿಂದೂಸ್ತಾನದ ವಿವಿಧ ಸಮುದಾಯಗಳ ತಲೆಯೂ ಅವರೇ. ಕಿರೀಟವೂ ಅವರೇ ಎಂದು ನಾನಿಲ್ಲಿ ಹೇಳಬಯಸುತ್ತೇನೆ... ಇನ್ನು ನನ್ನ ವಿಷಯ... ನನ್ನ ದೇಶ ಮತ್ತು ರಾಷ್ಟ್ರಕ್ಕೆ ವಿಶ್ವಾಸಪೂರ್ವಕವಾಗಿ ಸೇವೆ ಸಲ್ಲಿಸಲು ಹೃದಯ ಪುರಸ್ಸರವಾಗಿ ಮುಂದಾಗಿದ್ದೇನೆ. ನಾನೀಗ ಬಳಸಿದ 'ರಾಷ್ಟ್ರ' ಪದದಲ್ಲಿ ಹಿಂದೂ-ಮುಸಲ್ಮಾನರಿಬ್ಬರನ್ನು ಏಕರೂಪದಲ್ಲಿ ಕಾಣುತ್ತಿದ್ದೇನೆ. ಈ ಏಕತೆಗೆ ನಾನು ಕೊಡಬಹುದಾದ ಅರ್ಥ ಒಂದೇ... ಅದುವೇ ರಾಷ್ಟ್ರ... ನಾವೆಲ್ಲಾ ಒಂದೇ ನಾಡಿನ ವಾಸಿಗಳು. ಸಮಾನ ರಾಜ್ಯಾಡಳಿತಕ್ಕೆ ಒಳಪಟ್ಟವರು. ಎಲ್ಲರಿಗೂ ಸಮಾನ ಅನುಕೂಲಗಳು ಒದಗಬೇಕು. ಬರಗಾಲದ ನರಳಾಟವೂ ಸಮನಾಗಿರಬೇಕು. ಈ ಎಲ್ಲಾ ವಿಭಿನ್ನ ಗುಂಪುಗಳನ್ನು ಒಗ್ಗೂಡಿಸಿ 'ಹಿಂದೂ' ಎಂಬ ಒಂದೇ ಪದದಿಂದ ಕರೆಯಬೇಕು. ಅದರರ್ಥ ಹಿಂದೂಸ್ತಾನದಲ್ಲಿ ವಾಸಿಸುವವರು ಎಂದು. ಸಂಸತ್ತಿನ ಪರಿಷತ್ತಿನಲ್ಲಿ ಇದ್ದಾಗಲೂ ನಾನು ಇದನ್ನೇ ಪ್ರತಿಪಾದಿಸುತ್ತಾ ಬಂದಿದ್ದೇನೆ.''

ಒಂದಲ್ಲ ಒಂದು ಕಾಲದಲ್ಲಿ ಸರ್ ಸಯದರು ಪ್ರತಿಪಾದಿಸುತ್ತಾ ಬಂದ ಎಲ್ಲಾ ಬೇಡಿಕೆ, ಸಲಹೆ, ಸೂಚನೆ, ನೀತಿ, ನಿರ್ದೇಶನಗಳನ್ನು ಕಾಂಗ್ರೆಸ್ ಪ್ರತಿಪಾದಿಸುತ್ತಾ ಬಂದಿದೆ. ಆದರೆ ರಾಷ್ಟ್ರೀಯ ಕಾಂಗ್ರೆಸ್ ಬಂದ ಹಂತದಲ್ಲಿ ಸರ್ ಸಯದರು ತಮ್ಮ ನೀತಿ ಮತ್ತು ಧೋರಣೆಗಳನ್ನು ಸಂಪೂರ್ಣವಾಗಿ ತದ್ವಿರುದ್ಧ ಮಾಡಿಕೊಂಡುಬಿಟ್ಟರು. ಸಂಕುಚಿತ ಧೋರಣೆಯ ಜನರು ಕಾಂಗ್ರೆಸ್ಸನ್ನು ದೇಶದ್ರೋಹದ ಸಂಘಟನೆ ಎಂದು ಕುಹಕವಾಡತೊಡಗಿದರು. ಸೀಮಿತ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಭಾರತೀಯ ಸ್ವಯಂ ಸೇವಕರನ್ನು ಕಾಂಗ್ರೆಸ್ ಸೃಷ್ಟಿಸುತ್ತಿದೆ ಎಂದು ಆರೋಪಿಸಲಾಯಿತು. 1883ರ ಮಾರ್ಚ್‌ನಲ್ಲಿ ಅಂದರೆ ವಿಧ್ಯುಕ್ತವಾಗಿ ಕಾಂಗ್ರೆಸ್ ಅಸ್ತಿತ್ವಕ್ಕೆ ಬರುವ ಕಾಲಕ್ಕೆ ಸ್ವಲ್ಪ ಮೊದಲು ಸರ್ ಎ.ಓ. ಹ್ಯೂಮ್‌ರು ಭಾರತದಲ್ಲಿ 'ರಾಷ್ಟ್ರೀಯ ಸ್ವಯಂ ಸೇವಕ' ಅಗತ್ಯದ ಬಗ್ಗೆ ಒತ್ತಿ ಹೇಳಿದ್ದರು. ಸರ್ ಸಯದರ ಜೀವನ ಚರಿತ್ರೆಕಾರ ಲೆಫ್ಟಿನೆಂಟ್ ಕರ್ನಲ್ ಗ್ರಹಾಂ 'ದಿ ಪಯನಿರ್' ಪತ್ರಿಕೆಯ ಅಂಕಣದ ಮೂಲಕ ಹ್ಯೂಮರ ಕಲ್ಪನೆಯನ್ನು ವಿರೋಧಿಸಿದ್ದರು. ಸರ್ ಸಯದರು ಅದನ್ನು ಎತ್ತಿ ಹಿಡಿದು ಕಟುವಾದ ಟೀಕೆಗಳನ್ನು ಮಾಡಿದರು.

'ಬಹಿರಂಗ ಪತ್ರಗಳ' ಅಂಕಣಕಾರರು ಅವನ್ನು ಸಮರ್ಥವಾಗಿ ಖಂಡಿಸಿದರು. ಸರ್ ಸಯದ್ ಅವರ ಇಬ್ಬಂದಿ ಧೋರಣೆಗಳು ಮತ್ತು ಅವರ 'ಬಹಿರಂಗ ಪತ್ರಗಳ' ಟೀಕಾಕಾರರ ಕಥನಕ್ಕೆ 'Tale of Two Cities' ಸರಿ ಹೋಗುತ್ತದೆ. ಅನಾಮಿಕ ಅಂಕಣಕಾರರ ಅಭಿಪ್ರಾಯ ಒಂದೆಡೆ ಹೀಗೆ ಹರಿಯಿತು.

''ಅದೇನೇ ಇರಲಿ, ಇದೇ ಅತ್ಯುತ್ತಮ ಕಾಲ ಎಂದಾದರೂ ಹೇಳೋಣ. 'ಅತಿ ದುರ್ದಿನ'ಗಳು ಎಂದಾದರೂ ಕರೆಯೋಣ. ನೆಮ್ಮದಿಯ ಮಾತೆಂದರೆ ದೇಶವು ಒಂದು ರಾಷ್ಟ್ರದ ದಿಕ್ಕಿನಲ್ಲಿ ಸಾಗುತ್ತಿದೆ. ತೀರಾ ಕೆಟ್ಟದ್ದೆಂದರೆ ಒಂದು ಸಮುದಾಯವು ದೇಶದ ಈ ಪ್ರಗತಿಯನ್ನು ಕುಂಠಿತಗೊಳಿಸಲು ಬಯಸುತ್ತದೆ. ದುರಾದೃಷ್ಟವೆಂದರೆ ಅಂತಹ ಸಮುದಾಯದ ನಾಯಕತ್ವದಲ್ಲಿ ಭಾರತದಲ್ಲಿ ಪ್ರಾತಿನಿಧಿಕ ಸರ್ಕಾರವನ್ನು ಪ್ರತಿನಿಧಿಸುತ್ತಾ ಬಂದ ವ್ಯಕ್ತಿ ವಹಿಸಿಕೊಂಡಿದ್ದಾರೆ.''

ಟೀಕೆ ಅಷ್ಟಕ್ಕೆ ನಿಲ್ಲಲಿಲ್ಲ. 'ಬುದ್ಧಿವಂತಿಕೆಯ ಯುಗ', 'ಅವಿವೇಕದ ಕಾಲ', 'ನಂಬಿಕೆ ಹಾಗೂ ವಿಶ್ವಾಸಗಳ ಆಗರ' ಮತ್ತು 'ಅವಿಶ್ವಾಸಗಳ ಕೂಪ', 'ಭರವಸೆಯ ಬೆಳದಿಂಗಳು' ಮತ್ತು 'ಹತಾಶೆಯ ಚಳಿಗಾಲ'... ದೇಶದ ಪುತ್ರರೇ ಹೀಗೆ ಇಬ್ಬಂದಿತನದಲ್ಲಿ ಆಕೆಯನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದಾರೆಂದು ಒಳಿತು ಕೆಡುಕುಗಳ ಎರಡು ವೈಪರಿತ್ಯಗಳನ್ನು ಟೀಕಾಕರರು ವಿವೇಚಿಸಿದರು.

ಅಷ್ಟಕ್ಕೆ ಟೀಕಾಸ್ತ್ರ ನಿಲ್ಲಲಿಲ್ಲ. ಸರ್ ಸಯದರೇ, ನೀವು ಒಮ್ಮೆ ಕಂಡ ಕನಸು, ಉಂಟು ಮಾಡಿದ ಅರಿವು , ಆಡಿದ ಭವಿಷ್ಯವಾಣಿಗಳು ನಿಜವಾಗುವ ಕಾಲ ಬರುತ್ತಿದೆ. ಯಾವುದೇ ವಿರೋಧಕ್ಕೂ ಸೊಪ್ಪು ಹಾಕದೆ ಮುನ್ನುಗ್ಗಲು ಜನತೆ ನಿರ್ಧರಿಸಿದ್ದಾರೆ. ಸ್ವತಃ ನಿಮ್ಮ ವಿರೋಧಕ್ಕೂ ಯಾವ ಬೆಲೆಯೂ ಇಲ್ಲ. 'ಬಹಿರಂಗ ಪತ್ರಗಳು', ಸರ್ ಸಯದರ ಬರಹಗಳು ಮತ್ತು ಭಾಷಣಗಳಿಂದ ಆಯ್ದ ಭಾಗಗಳಿಂದ ಕೂಡಿದ ಸಂಗ್ರಹವಷ್ಟೇ ಆಗಿರಲಿಲ್ಲ. ಅವರ ಜೊತೆಯಲ್ಲಿ ಸಮಯೋಚಿತವಾದ ಟೀಕೆ, ವಿಶ್ಲೇಷಣೆ, ವಿವೇಚನೆ ಮತ್ತು ಅಭಿಪ್ರಾಯಗಳು ಮೊನಚಾಗಿರುತ್ತಿದ್ದವು. ವ್ಯಂಗ್ಯ, ಲೇವಡಿ, ಖಂಡನೆ, ಮಂಡನೆ ಮತ್ತು ಸಮರ್ಥನೆಗಳು ಓದುಗರ ಮೇಲೆ ಭಾರಿ ಪ್ರಭಾವ ಬೀರುತ್ತಿದ್ದವು. ಅನೇಕ ಸಂದರ್ಭಗಳಲ್ಲಿ ಕಠೋರ ಎನಿಸಿದ್ದರೂ ಅನಾಮಿಕ ಯುವ ಪತ್ರಕಾರನ ಹುಮ್ಮಸ್ಸು ರಾಷ್ಟ್ರಭಕ್ತಿಯ ಓಜಸ್ಸು ಪ್ರಖರವೆನಿಸುತ್ತಿತ್ತು. ಅಲಿಘಡ ಮುತ್ಸದ್ದಿ, ಶ್ವೇತ ಗಡ್ಡಧಾರಿಯ ಬಗ್ಗೆ ಅಪಾರ ಗೌರವ ನೀಡುತ್ತಾ ಬರಲಾಗಿದೆ. ಆದರೆ ಆ ಎತ್ತರವನ್ನು ಈ ಗಡ್ಡಧಾರಿಗಳು ತಮ್ಮ ಇಬ್ಬಂದಿತನದಿಂದ ತಾವೇ ಅಪಹಾಸ್ಯಕ್ಕೆ ಈಡು ಮಾಡಿಕೊಳ್ಳುತ್ತಿದ್ದಾರೆ ಎನ್ನುವಷ್ಟರ ಮಟ್ಟಿಗೆ ಟೀಕೆ ಮೊನಚಾಗಿತ್ತು.

ಅಲಿಘಡದ ಮುತ್ಸದ್ದಿಯಲ್ಲಿ ಇಂತಹ ಅಸಂಗತ ಧೋರಣೆ ತಲೆದೋರಿದ್ದಾದರೂ ಏಕೆಂಬುದು ಬಿಡಿಸಲಾರದ ಒಗಟು. ಮೊದಲ ಪತ್ರದ ಅಂತ್ಯದಲ್ಲಿ ಅನಾಮಿಕ ಪತ್ರಕಾರರು ಕೆಲವು 'ಕಿಡಿಗೇಡಿ' ಜನರ ಕುಮ್ಮಕ್ಕು ಇದೆ ಎಂದು ಶಂಕಿಸಿದರು. ''ನಾನು ಇಲ್ಲಿ ಉದ್ಧರಿಸಿರುವ ಅಭಿಪ್ರಾಯಗಳೆಲ್ಲವೂ ಓರ್ವ ಪ್ರಾಮಾಣಿಕ, ಶುದ್ಧ ಮನಸ್ಸಿನ ವ್ಯಕ್ತಿಯ ಬರಹದಿಂದ ಆಯ್ದುಕೊಂಡವು. ಸಂಸತ್ತಿನ ಪರಿಷತ್ತಿಗೆ ಆಯ್ಕೆಯಾಗುತ್ತೇನೆಂಬ ಯಾವ

ಸೂಚನೆಯೂ ಇರದಿದ್ದ ಕಾಲದಲ್ಲಿ ಅವರು ವ್ಯಕ್ತಪಡಿಸಿದ ಅಭಿಮತಗಳು.''

ಸರ್ ಸಯದರು ಯುವ ಅನಾಮಿಕ ಪತ್ರಕಾರನ 'ಕುಮ್ಮಕ್ಕು' ವಿಶ್ಲೇಷಣೆಯನ್ನು ನಿರಾಕರಿಸಿದರು. ಅದೇ ನಿಟ್ಟಿನಲ್ಲಿ ಅನಾಮಿಕ ಪತ್ರಕಾರರು ಬರೆದ ಎರಡನೆ ಪತ್ರದ ಅಭಿಪ್ರಾಯವನ್ನು ಅವರು 'ಬಾಲಿಶ' ಎಂದು ಕರೆದರು.

ನಂತರದ ಪತ್ರವೊಂದರಲ್ಲಿ ಅನಾಮಿಕ ಪತ್ರಕಾರರು ಸರ್ ಸಯದರನ್ನು ಆಡಮನಿಗೆ ಹೋಲಿಸಿದರು.

''ನಮ್ಮ ವಂಶದ ಪಿತಾಮಹನ ಪತನಕ್ಕೆ ಸೈತಾನನು ಕಾರಣವೆನ್ನಲಾಗಿದೆ. ಲೌಕಿಕರ ಆಮಿಷಕ್ಕೆ ಒಳಗಾಗಿ ನೀವೀಗ ನೀಡುತ್ತಿರುವ ಕಾರಣಗಳು ನಿಮ್ಮ ಪತನಕ್ಕೆ ಕಾರಣವಾಗುತ್ತದೆ.''

ಟೀಕೆ ಮತ್ತೆ ಮುಂದುವರೆದು:

''ಇದರಿಂದ ನಿಮಗೇನು ಪ್ರಯೋಜನವಾಗುವುದಿಲ್ಲ. ಕಾರಣ ಈ ಲೋಕದಲ್ಲಿ ನಿಮ್ಮ ಕಾಲವಿನ್ನು ಹೆಚ್ಚು ದಿನಗಳು ಉಳಿದಿಲ್ಲ. ಆದರೆ ನಮ್ಮ ಪಾಲಿಗೆ ನಾವಿನ್ನು ಹೆಚ್ಚು ಕಾಲ ಇರುತ್ತೇವೆ ಎಂಬ ವಿಶ್ವಾಸವಿದೆ. ಸ್ವಾತಂತ್ರ್ಯಕ್ಕಾಗಿ ರಕ್ತ ಕೊಟ್ಟು ಹೋರಾಡುತ್ತೇವೆ ಎಂಬ ನಂಬಿಕೆಯೂ ಇದೆ. ಆದರೆ ನೀವು, ಶಾಶ್ವತವಾದ ಕಳಂಕಕ್ಕೆ ಪಾತ್ರರಾಗುವಿರಿ.''

ಕಡೆಯ ಪತ್ರದ ಕೊನೆಯಲ್ಲಿ ಕಾಣಿಸಿದ ಟಿಪ್ಪಣಿಯಲ್ಲಿ ಭಿನ್ನ ರೀತಿಯಲ್ಲಿ ಕುಮ್ಮಕ್ಕಿನ ಪ್ರಸ್ತಾಪ ಮಾಡಲಾಗಿತ್ತು. ''ಒಂದು ಕಾಲಕ್ಕೆ ಉದಾತ್ತವಾಗಿದ್ದ, ಬೌದ್ಧಿಕವಾಗಿದ್ದ ನಿಮ್ಮ ಚಿಂತನೆಗಳು ಸಂಕುಚಿತ, ಸೀಮಿತ ಚೌಕಟ್ಟಿಗೆ ಕುಗ್ಗಿರುವುದಕ್ಕೆ ನಿಮ್ಮ ಸುತ್ತಮುತ್ತಲ ವಾತಾವರಣವೇ ಕಾರಣವಿರಬೇಕು. ಮರ್ಲಿನ್‌ನಂತಹ ಉದಾತ್ತ ಮನಸ್ಸಿನೊಂದಿಗೆ ಭಾರತದ ಹಿತಕ್ಕಾಗಿ ದುಡಿದ ನೀವು ಈಗ ಅವೆಲ್ಲವನ್ನು ಹೊಸಕಿ ಹಾಕಿ ಆಧುನಿಕ ವಿವಿಯನ್ ರೀತಿ ವಿಧ್ವಂಸಕ ಧೋರಣೆಗಳಿಗೆ ಇಳಿದಿರುವುದಕ್ಕೆ ಸಂಕುಚಿತ ವಾತಾವರಣವೇ ಕಾರಣವಿರಬೇಕಲ್ಲವೇ?''

ಬಹಿರಂಗ ಪತ್ರಗಳಲ್ಲಿ ಅಲ್ಲೊಂದು ಇಲ್ಲೊಂದು ಅತಿರೇಕವಿದ್ದಿರಬಹುದು. ಆದರೆ ವಾಸ್ತವವಾಗಿ ಸಮಗ್ರವಾಗಿ ಗ್ರಾಮಾಂತರ ಪ್ರದೇಶದ ವಕೀಲರೊಬ್ಬರು ತಮ್ಮ ಎಳೆಯ ವಯಸ್ಸಿನಲ್ಲೇ ಸಮರ್ಥವಾಗಿ ಪ್ರದರ್ಶಿಸಿದ ಮಹತ್ಸಾಧನೆ ಇದು ಎಂಬುದರಲ್ಲಿ ಎರಡು ಮಾತಿಲ್ಲ. ಲಜಪತರ ವೃತ್ತಿ ಜೀವನದಲ್ಲಿ ಅದು ಅವರ ಮೊಟ್ಟಮೊದಲ ಗಹನವಾದ ಸಾರ್ವಜನಿಕ ಹೋರಾಟದ ಕ್ರಿಯೆ. ಅಷ್ಟೇ ಭರವಸೆದಾಯಕ ಆರಂಭ. ಅಡಿಗಡಿಗೂ ತೊಡಕು-ತೊಡರುಗಳೇ ಎಡತಾಕುವ ರಾಜಕಾರಣದಲ್ಲಿ ಯಶಸ್ಸು ಕಾಣಬಯಸುವವರು ಪ್ರತಿಕೂಲ ಪರಿಸ್ಥಿತಿಗಳನ್ನು ನಿಭಾಯಿಸುವ ತಂತ್ರಗಾರಿಕೆಗಳನ್ನು ಮನಗಂಡಿರಬೇಕು. ಎದುರಾಳಿಗಳ ದೌರ್ಬಲ್ಯದ ಮೇಲೆ ಸದಾ ಕಣ್ಣಿಟ್ಟಿರಬೇಕು. ಅವಕಾಶ ಸಿಕ್ಕಾಗಲೆಲ್ಲಾ ಆಕ್ರಮಣ ಮಾಡಿ ಹುಟ್ಟಡಗಿಸಬೇಕು.

ಇಪ್ಪತ್ತರ ತಾರುಣ್ಯದಲ್ಲಿ ಲಜಪತ್‌ರಾಯ್ ಅತ್ಯಂತ ಸೂಕ್ಷ್ಮವಾದ ರಾಜಕೀಯ ಪ್ರಜ್ಞೆ ರೂಢಿಸಿಕೊಂಡಂತೆ ಕಾಣುತ್ತದೆ. ಮುಂದೆ ಅದು ಸಮರ್ಥವಾಗಿ ವಿಕಾಸಗೊಂಡಿತು ಸರ್ ಸಯ್ಯದರ ಇಬ್ಬಂದಿತನದಲ್ಲಿ ಅವರು ಮನಗಂಡ ಅಪಾಯ ಮುಂದೆ ನಿಜವಾಯಿತು. ಅಲಿಘಡದ ಮುತ್ಸದ್ದಿ ಹೇಳುತ್ತಾ ಬಂದಂತೆ ಹಿಂದೂ ಮುಸ್ಲಿಂ ರಾಷ್ಟ್ರಗಳು ಪ್ರತ್ಯೇಕವಾದವು. ಅವರು ಬಿತ್ತಿದ ಬೀಜ 'ಜಿನ್ನಾ' ರೂಪದಲ್ಲಿ ಹೆಮ್ಮರವಾಯಿತು. ಅಂದ ಮಾತ್ರಕ್ಕೆ ಲಜಪತ್‌ರಾಯ್ ಸರ್ ಸಯ್ಯದರ ಮಹಾನ್ ಗುಣಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದರೆಂದಲ್ಲ. ನಂತರವೂ ಸಹ ಅವರು ಸರ್ ಸಯ್ಯದರನ್ನು ತಮ್ಮ ಗುರುವೆಂದೇ ಗೌರವಿಸುತ್ತಿದ್ದರು. ಉರ್ದು ಗದ್ಯ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸುತ್ತಿದ್ದರು.

* * *

ಅಧ್ಯಾಯ-10

ಮಝ್ಝಿನಿ-ಪ್ರಥಮ ಗುರು

'ಬಹಿರಂಗ ಪತ್ರಗಳು' ಭಾರೀ ಪ್ರಮಾಣದಲ್ಲಿ ಬಿಸಿ ಹುಟ್ಟಿಸಿದವು. ಸಯದರ ಪ್ರಚಾರದಿಂದ ಕಂಗಾಲಾಗಿದ್ದ ಹ್ಯೂಮ್‌ರಿಗೆ ಅವು ಸಾಕಷ್ಟು ಉಪಯುಕ್ತವಾದವು. ಪತ್ರಗಳನ್ನೆಲ್ಲಾ ಒಗ್ಗೂಡಿಸಿ ಕೈಪಿಡಿಯೊಂದರ ರೂಪದಲ್ಲಿ ಹೊರತರುವಂತೆ ಅದರ ಕರ್ತೃವಿಗೆ ಸಲಹೆ ನೀಡಲಾಯಿತು. ಅವರು ಹರ್ಷದಿಂದ ಒಪ್ಪಿಕೊಂಡರು. ಸ್ವತಃ ಹ್ಯೂಮರೇ ಆ ಪತ್ರಗಳನ್ನು ಪರಿಷ್ಕರಿಸಿದರು. ಅಥವಾ ಸಂಪಾದನೆ ಮಾಡಿದರು. ಅಲ್ಲೊಂದು ಇಲ್ಲೊಂದು ಲೇಖನಗಳನ್ನು ಪರಿಷ್ಕರಿಸಲಾಯಿತು.

ಮಹಾನ್ ಮುಸ್ಲಿಂ ನಾಯಕನ ಇಬ್ಬಂದಿತನವನ್ನು ನಿಚ್ಚಳವಾಗಿ ಬಯಲಿಗೆಳೆದ ಸಂಘರ್ಷಕಾರಿಯೂ, ಪರಿಣಾಮಕಾರಿಯೂ ಎನಿಸಿದ ಅವರದೇ ಮಾತುಗಳ ಎಡಬಿಡಂಗಿತನಗಳನ್ನು ಸ್ಪಷ್ಟವಾಗಿ ಚಿತ್ರಿಸಿದ ಕೈಪಿಡಿ ಕಾಂಗ್ರೆಸ್ ಅಧಿವೇಶನದ ಮುಂಬೆಳಕಿನಲ್ಲಿ ಪ್ರಕಟವಾಯಿತು. ಬೆಳಕು ಹರಿಯುವುದರೊಳಗೆ ಲಜಪತ್‌ರಾಯ್ ಹೆಸರು ರಾಷ್ಟ್ರವ್ಯಾಪಿಯಾಗಿತ್ತು. ರಾಜಕೀಯ ಚರ್ಚೆಯ ಸಾಮಾಗ್ರಿಯಾಗಿತ್ತು.

ಅಲಹಾಬಾದ್‌ನಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಸಮಾವೇಶಗೊಳ್ಳುವುದಕ್ಕೆ ಕೆಲವು ದಿನಗಳ ಮೊದಲು ಸರ್ ಸಯದರಿಗೆ ಬರೆದ ಪತ್ರಗಳ ಕೈಪಿಡಿ ಹೊರಬಂದಿತು. ಆ ಕೈಪಿಡಿಯ ಷಾಹಿ ಆರುವ ಮೊದಲೇ 'ಜ್ಯೂನಿಯಸ್' ತನ್ನ ಅನಾಮಧೇಯ ತೆರೆಯಿಂದ ಹೊರಗೆ ಬಂದಾಗಿತ್ತು. ವಿಚಿತ್ರವೆಂದರೆ ವಾಸ್ತವದಲ್ಲಿ ಆ 'ಜ್ಯೂನಿಯಸ್' ಈತನಕ ಅಜ್ಞಾತವಾಗಿಯೇ ಉಳಿದಿದ್ದಾರೆ. ನಮ್ಮ ಸರ್ವಜ್ಞನಂತೆ. ಆದರೆ ನಮ್ಮ 'ಜ್ಯೂನಿಯರ್ ಜ್ಯೂನಿಯಸ್' ಹಾಗಾಗಲಿಲ್ಲ. ಲಜಪತ್‌ರಾಯ್ ಎಂದು ಬೆಳಕಿಗೆ ಬಂದುಬಿಟ್ಟರು. ಅಲಹಾಬಾದ್ ರೈಲು ನಿಲ್ದಾಣದಲ್ಲಿ ಮಾಳವೀಯ ಮತ್ತು ಅಯೋಧ್ಯಾನಾಥ್ ಅವರಿಂದ ಲಜಪತ್‌ರಾಯ್ ಅವರಿಗೆ ಪ್ರಚಂಡ ಸ್ವಾಗತ ದೊರೆಯಿತು. ಭಾರತದ ರಾಷ್ಟ್ರೀಯ ರಾಜಕಾರಣದಲ್ಲೂ ಅವರ ಹೆಸರು ಚಿರಸ್ಥಾಯಿಯಾಗಿ ಬಹು ಪ್ರಸಿದ್ಧವಾಗಿ ಹೋಯಿತು.

ಅತಿ ದೊಡ್ಡ ವಿಚಾರವಾದಿ ಎಂದು ಪರಿಚಿತರಾದರು. ಅಲಿಘಡದ ಮಹಾ ಮುತ್ಸದ್ಧಿ ಸರ್ ಸಯದರನ್ನು ಬಯಲುಗೊಳಿಸಿದರೆಂದು ಜನಪ್ರಿಯರಾದರು. ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದಲ್ಲಿ ಲಜಪತರು ಎರಡು ಭಾಷಣಗಳನ್ನು ಮಾಡಿದರು. ಅದರಲ್ಲಿ ಒಂದು ಅವರ 'ಬಹಿರಂಗ ಪತ್ರಗಳ' ಮುಂದುವರಿದ ಭಾಗದಂತಿತ್ತು. ಆ ಅಧಿವೇಶನ ಕೈಗೊಂಡ ಶಾಸಕಾಂಗಗಳ ಮೇಲ್ಮನೆಗಳ ಸ್ಥಾನಗಳನ್ನು ಹೆಚ್ಚಿಸಿ ಚುನಾಯಿತ ಪ್ರತಿನಿಧಿಗಳಿಗೆ ಅನುವು ಮಾಡಿಕೊಡಬೇಕೆಂಬ ನಿರ್ಣಯವನ್ನು ಅನುಮೋದಿಸಿ ಮಾಡಿದ ಭಾಷಣ ಅದಾಗಿತ್ತು. ತಮ್ಮ ಭಾಷಣದಲ್ಲಿ ಅವರು ಸರ್ ಸಯದರ ಹಿಂದಿನ ಮತ್ತು ಇಂದಿನ

ನಿಲುವುಗಳ ಠಾಕಠೀಕನ್ನು ಸಮರ್ಥವಾಗಿ ಎತ್ತಿ ತೋರಿಸಿದರು. 30 ವರ್ಷಗಳ ಹಿಂದಷ್ಟೇ ತಾವು ಬರೆದ ಬಂಡಾಯ ಕೃತಿಯಲ್ಲಿ ಸರ್ ಸಯದರು ಜನಪ್ರಾತಿನಿಧ್ಯ ಪ್ರತಿಪಾದಿಸಿದ್ದನ್ನು ಎತ್ತಿ ಹಿಡಿದು ಸದ್ಯದಲ್ಲಿ ತದ್ವಿರುದ್ಧ ಧೋರಣೆ ತಳೆದಿರುವುದನ್ನು ಅವರು ಕಟುವಾಗಿ ಖಂಡಿಸಿದರು.

ಕಾಂಗ್ರೆಸ್ಸಿನ ಅಧಿಕೃತ ಚರಿತ್ರಕಾರ ಡಾ. ಪಟ್ಟಾಭಿ ಸೀತಾರಾಮಯ್ಯ ಅವರು 1888ರಲ್ಲಿ ಅಧಿವೇಶನದ ಬಗ್ಗೆ ಬರೆಯುತ್ತಾ:

"ಲಜಪತ್‌ರಾಯ್ ನಿಸ್ಸಂದೇಹವಾಗಿ ಶುದ್ಧ ದೃಷ್ಟಿಕೋನ ಹೊಂದಿದ್ದ ವ್ಯಕ್ತಿಯಾಗಿದ್ದರು. 1888ರ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಉರ್ದುವಿನಲ್ಲಿ ಮಾಡಿದ ಭಾಷಣದ ಸಾರ ನಿರ್ದಿಷ್ಟವಾಗಿತ್ತು. ಆ ದಿನದ ಅರ್ಧ ಭಾಗವನ್ನು ಶೈಕ್ಷಣಿಕ ಹಾಗೂ ಕೈಗಾರಿಕಾ ಪ್ರಸ್ತಾಪಗಳಿಗೆ ಮೀಸಲಿಡುವಂತೆ ಅವರು ಸೂಚಿಸಿದ್ದರು. ಅದರಂತೆ ಅಧಿವೇಶನ ನಿರ್ಣಯ ಕೈಗೊಂಡಿತು. ಕೈಗಾರಿಕಾ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಯಿತು. ಅವರ ಸಲಹೆಯಂತೆ ರಚಿಸಲಾದ ಸಮಿತಿಯು ಕಾಂಗ್ರೆಸ್ ಪರವಾಗಿ ಏರ್ಪಾಟುಗಳನ್ನು ಕೈಗೊಂಡಿತು."

ಲಜಪತ್‌ರಾಯ್ ಅವರ ಎರಡು ಭಾಷಣಗಳಲ್ಲಿ ಮೊದಲನೆಯದು ಹೆಚ್ಚು ಜನಾಕರ್ಷಿತವಾಯಿತು. ಕಾರಣ ಅದು ಅಂದಿನ ವಿವಾದದ ಸಂಗತಿಯಾಗಿತ್ತು. ಎರಡನೆಯದು ಕರ್ತವ್ಯಪರವಾದ ಭಾಷಣ. ಕಾಂಗ್ರೆಸ್ ತನ್ನ ಕಾರ್ಯ ಕಲಾಪಗಳನ್ನು ಸಂಪೂರ್ಣವಾಗಿ ಇಂಗ್ಲಿಷಿನಲ್ಲಿ ನಡೆಸುತ್ತಿದ್ದ ಕಾಲದಲ್ಲಿ ಲಜಪತ್‌ರಾಯ್ ಹಿಂದೂಸ್ತಾನಿಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡರು. ಕಾಂಗ್ರೆಸ್ಸಿನ ವ್ಯವಹಾರಗಳಲ್ಲಿ ತಾವೇನಾದರೂ ಪಾತ್ರಧಾರಿಯಾಗುವುದಾದರೆ ಸಂಘಟನೆಯನ್ನು ಜನಸಾಮಾನ್ಯರ ನಿಜ ಶಕ್ತಿಯನ್ನಾಗಿ ಮಾಡುವ ಭರವಸೆಯನ್ನು ಅವರು ತಮ್ಮ ನಿಲುವುಗಳ ಮೂಲಕ ಸೂಚಿಸಿದರು. ಕೈಗಾರಿಕಾ ವಸ್ತುಪ್ರದರ್ಶನದ ಬಗ್ಗೆ ಅವರು ಕೊಟ್ಟ ಒತ್ತು ಅವರೊಬ್ಬ ಕೇವಲ ರಾಜಕಾರಣಿಯಲ್ಲ. ಸೃಜನಾತ್ಮಕ ಕಾರ್ಯಗಳ ಪ್ರತಿಪಾದಕರು ಎಂಬುದನ್ನು ಎತ್ತಿ ತೋರಿಸಿತು.

1888ರ ಕಾಂಗ್ರೆಸ್ ಅಧಿವೇಶನ ಲಜಪತ್‌ರಾಯ್ ಅವರನ್ನು ನೇರವಾಗಿ ಸಕ್ರಿಯ ರಾಜಕೀಯ ಆಂದೋಲನಕ್ಕೆ ಎಳೆದು ತಂದಿತು. ಒಂದೆರಡು ಪ್ರಸಂಗಗಳ ಔದಾಸೀನ್ಯವನ್ನು ಹೊರತುಪಡಿಸಿದರೆ ತಮ್ಮ ಬದುಕಿನ ಉದ್ದಕ್ಕೂ ಅವರು ಕಾಂಗ್ರೆಸ್ಸಿಗರಾಗಿಯೇ ಶ್ರಮಿಸಿದರು. ಅಂದರೆ ಮುಂದಿನ ನಾಲ್ಕು ದಶಕಗಳ ಕಾಲ ಅವರ ಸೇವೆ ಕಾಂಗ್ರೆಸ್ಸಿಗೆ ಮೀಸಲಾಯಿತು. ಆರಂಭದ ಮೊದಲ ಮೂರು ಕಾಂಗ್ರೆಸ್ ಅಧಿವೇಶನಗಳಿಗೆ ಅವರು ಹಾಜರಾಗಲಿಲ್ಲ. ಮುಲ್‌ರಾಜ್ ಪ್ರಭಾವದಿಂದಾಗಿ ಕಾಂಗ್ರೆಸ್ಸಿನ ತಪ್ಪು ತೊಡರುಗಳ ವಿಷಯದಲ್ಲಿ ಪ್ರಾಮಾಣಿಕ ಶಂಕೆ ಹೊಂದಿದ್ದರು. ಎ.ಓ. ಹ್ಯೂಮ್‌ರ ಬರಹಗಳನ್ನು ಓದಿದ ನಂತರ ಅವರ ನಿಲುವು ಬದಲಾಯಿತು. ಆದರೂ ಮುಲ್‌ರಾಜ್ ಹೊಸ ಸಂಘಟನೆಯನ್ನು ಅನುಮಾನದ ದೃಷ್ಟಿಯಿಂದಲೇ ನೋಡುತ್ತಿದ್ದರು. ಕೆಟ್ಟ ಮನಸ್ಸಿನ ಇಂಗ್ಲಿಷರು ಸಂಘಟನೆಯ ಮೂಲಕ ಗೆಳೆತನದ ಮುಸುಕು ಹಾಕಿಕೊಂಡಿದ್ದಾರೆಂಬ ಅಪಾಯವನ್ನು ಅವರು ಸೂಚ್ಯವಾಗಿ

ಹೇಳುತ್ತಿದ್ದರು. ಹ್ಯೂಮ್‌ರ ಲೇಖನಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಾ ಹೋದಂತೆ ಅಂತಹ ಶಂಕೆಗಳಿಗೆ ಎಡೆ ಇಲ್ಲವೆಂದು ಲಜಪತ್‌ರಾಯ್ ಅವರಲ್ಲಿ ಅಭಿಪ್ರಾಯ ಮೂಡಿತು. ಮದ್ರಾಸ್‌ನಲ್ಲಿ ಬದ್ರೂ- ಉದ್- ದಿನ್ ತ್ಯಾಬ್ಜಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಮೂರನೇ ಅಧಿವೇಶನ ನಡೆಯುವ ವೇಳೆಗೆ ಲಜಪತ್‌ರಾಯ್ ಶುದ್ಧ ಕಾಂಗ್ರೆಸ್ಸಿಗರಾಗಿ ತಮ್ಮನ್ನು ತಾವು ಪರಿವರ್ತಿಸಿಕೊಂಡಿದ್ದರು.

ತಮ್ಮ ಆತ್ಮಚರಿತ್ರೆಯಲ್ಲಿ ಅವರು ಆ ಅಧಿವೇಶನದ ಬಗ್ಗೆ ಬರೆಯುತ್ತಾ, ''ನನ್ನ ಮೇಲೆ ಅಪಾರ ಪ್ರಭಾವ ಬೀರಿತು'' ಎಂದಿದ್ದಾರೆ.

''ಅಧಿವೇಶನದ ವೇಳೆಗೆ ಹ್ಯೂಮರು ಎರಡು ಕೈಪಿಡಿಗಳನ್ನು ಪ್ರಕಟಿಸಿದ್ದರು. - 'The Star of the East' ಮತ್ತು 'An old Man's Hope'. ಆ ಎರಡು ಕೈಪಿಡಿಗಳ ಜೊತೆಗೆ ಕಾಂಗ್ರೆಸ್ ಸಾಹಿತ್ಯದ ಮತ್ತೊಂದು ಕೃತಿಯನ್ನು ಸಹ ಓದುವ ಅವಕಾಶ ದೊರೆಯಿತು. ಪ್ರತಿ ಪುಟದಲ್ಲೂ ಸ್ವಾತಂತ್ರ್ಯದ ಹುಮ್ಮಸ್ಸು ಪ್ರಬಲವಾಗಿತ್ತು. ಅದು ನನ್ನನ್ನು ಬರಸೆಳೆಯಿತು.''

ತಮ್ಮ ''ಬಹಿರಂಗ ಪತ್ರಗಳು'' ಮತ್ತು ಭಾಷಣಗಳ ಮೂಲಕ ಕಾಂಗ್ರೆಸ್‌ನಲ್ಲಿ ಹೊಸ ಸೆಳೆಕು ಬೀರಿದ್ದ ಲಜಪತ್‌ರಾಯ್ ಸಂಘಟನೆ ವಿಷಯದಲ್ಲಿ ಸ್ವಲ್ಪ ಕಾಲ ಉದಾಸೀನರೂ ಆಗಿದ್ದುಂಟು. ಕಾಂಗ್ರೆಸ್ಸಿನ ಸಂಘಟನಾತ್ಮಕ ವಿಷಯ ಅದರ ನೀತಿ, ಧೋರಣೆಗಳ ಬಗ್ಗೆ ಅವರಲ್ಲಿ ಅನುಮಾನ ಹುಟ್ಟಿತ್ತು. ಅಲಹಾಬಾದಿನ ಅಧಿವೇಶನದಲ್ಲಿ ಪಂಜಾಬಿನ ನಿಯೋಗವು ಲಜಪತ್‌ರಾಯ್‌ರಿಗೆ ಜವಾಬ್ದಾರಿಯನ್ನು ವಹಿಸಿತು. ಮುಂದಿನ ಅಧಿವೇಶನವನ್ನು ಲಾಹೋರಿನಲ್ಲಿ ನಡೆಸುವಂತೆ ನಿಮಂತ್ರಣ ನೀಡುವ ಜವಾಬ್ದಾರಿ ಅದು. ಆದರೆ ಮುಂದಿನ ಅಧಿವೇಶನಕ್ಕೆ ಆಯ್ಕೆಯಾಗಿದ್ದು ಮುಂಬಯಿ. ಆ ಅಧಿವೇಶನದಲ್ಲಿ ಲಜಪತರು ಪಾಲ್ಗೊಂಡರಾದರೂ ಅವರ ಉತ್ಸಾಹ ಹಿಂದಿನಂತಿರಲಿಲ್ಲ. ಕಾಂಗ್ರೆಸ್ ನಾಯಕರು ತಮ್ಮ ಹೆಸರಿನ ಜನಪ್ರಿಯತೆಗಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಭಾವನೆ ಅವರಿಗೆ ಬಂದಿತ್ತು. ದೇಶದ ಹಿತಕ್ಕಿಂತಲೂ ತೋರಿಕೆಯೇ ಹೆಚ್ಚಾಗಿದೆ ಎಂದೆನಿಸತೊಡಗಿತು.

1893ರವರೆಗೆ ಲಜಪತರು ಕಾಂಗ್ರೆಸ್ ಅಧಿವೇಶನದಿಂದ ದೂರ ಉಳಿಯುತ್ತಾ ಬಂದರು. ಕಾಂಗ್ರೆಸ್ಸಿನ ಬಗ್ಗೆ ಅವರಲ್ಲಿ ಹುಟ್ಟಿದ ಔದಾಸಿನ್ಯದ ಮೊದಲ ಅವಧಿ ಇದು.

ಕಾಂಗ್ರೆಸ್ಸಿಗಿಂತಲೂ ಮಝ್ಜಿನಿ ಬಗ್ಗೆ ಲಜಪತರಲ್ಲಿ ಅನನ್ಯ ಅಭಿಮಾನ ಮೂಡಿತ್ತು. ಸ್ವಾತಂತ್ರ್ಯ ಹೋರಾಟದ ಅನನ್ಯ ಶ್ರದ್ಧೆ ಅವರಿಗೆ ಪ್ರಾಪ್ತವಾಗಿದ್ದು ಆ ಮಹಾಶಯನಿಂದಲೇ. ಬಹುಶಃ ಮಝ್ಜಿನಿಯನ್ನು ತಮ್ಮ ಗುರುವಾಗಿ ಅವರು ಪರಿಗಣಿಸದೇ ಇದ್ದಿದ್ದರೆ ಕಾಂಗ್ರೆಸ್ಸಿನ ಬಗ್ಗೆ ಅವರಲ್ಲಿ ಒಲವು, ಆಸಕ್ತಿ ಮೂಡುತ್ತಿರಲಿಲ್ಲವೇನೋ? ಸುರೇಂದ್ರನಾಥ ಬ್ಯಾನರ್ಜಿ ಅವರು ಇಟಲಿಯ ಆ ಮಹಾನ್ ಹೋರಾಟಗಾರನ ಬಗ್ಗೆ ಬರೆದ 'Speeches of Joseph Mazzine' ಬರಹಗಳನ್ನು ಲಜಪತ್‌ರಾಯ್ ಬಹು ಶ್ರದ್ಧೆಯಿಂದ ಓದಿದರು. 1880ರಷ್ಟು ಹಿಂದೆಯೇ ಬಂಗಾಲದ ಶ್ರೇಷ್ಠ ವಾಕ್ಪಟುವಿನ ಆ ಕೃತಿಯನ್ನು ಓದಿ ತಮ್ಮ ಸಂಗ್ರಹದಲ್ಲಿ ಜತನ ಮಾಡಿಟ್ಟುಕೊಂಡಿದ್ದರು. ಲಜಪತ್‌ರಾಯ್ ತಮ್ಮ ಜೀವನ

ಚರಿತ್ರೆಯಲ್ಲಿ "ಮಝಿನಿಯವರ ಒಂದು ಭಾಷಣವನ್ನು ಓದಿದಾಗಲೆಲ್ಲಾ ನನ್ನ ಕಣ್ಣುಗಳು ಒದ್ದೆಯಾಗುತ್ತಿದ್ದವು. ಅಂತಃಕರಣ ಸ್ಫುರಿಸುತ್ತಿತ್ತು. ನನ್ನ ಎಳೆಯ ಹೃದಯದ ಮೇಲೆ ಆ ಭಾಷಣ ಅಪಾರ ಪ್ರಭಾವ ಬೀರಿತು. ನನ್ನ ಇಡೀ ಜೀವಿತವೇ ಮಝಿನಿ ಬೋಧನೆಯ ಆಧಾರದ ಮೇಲೆ ನೆಲೆಗೊಳ್ಳಬೇಕೆಂದು ನಾನು ದೀಕ್ಷೆ ತೆಗೆದುಕೊಂಡೆ. ನನ್ನ ದೇಶಕ್ಕಾಗಿ ನನ್ನೆಲ್ಲಾ ಸೇವೆ ಸಲ್ಲಿಸಬೇಕೆಂದು ಕಂಕಣ ತೊಟ್ಟೆ. ಮಝಿನಿಯನ್ನು ನಾನು ನನ್ನ ಗುರುವಾಗಿ ಸ್ವೀಕರಿಸಿದೆ. ಇಂದಿಗೂ ಅವರೇ ನನ್ನ ಗುರು. ನನ್ನ ಚಿರಂತನ ಸ್ಫೂರ್ತಿಯ ನೆಲೆಗಟ್ಟು." ಎಂದು ಸ್ಮರಿಸಿದ್ದಾರೆ.

ಇವೆಲ್ಲಾ ನಡೆದದ್ದು ಲಜಪತರು ಆರ್ಯ ಸಮಾಜಕ್ಕೆ ಸೇರುವ ಮೊದಲು. ಅವರೇ ಹೇಳಿಕೊಂಡಿರುವಂತೆ ಅವರ ಮೊದಲ ಗುರು ಮಝಿನಿ. ಸ್ವಾಮಿ ದಯಾನಂದರಲ್ಲ. ಆರ್ಯ ಸಮಾಜವನ್ನು ಸೇರುವ ಮೊದಲೇ ಅವರು ದೇಶಭಕ್ತಿಯ ಕೊಳದಲ್ಲಿ ಮಿಂದಿದ್ದರು. ಸಮಾಜದಲ್ಲಿ ದೇಶಭಕ್ತಿ ಇದ್ದದ್ದನ್ನು ಗಮನಿಸಿ ಅದನ್ನು ಅವರು ಒಪ್ಪಿಕೊಂಡಿದ್ದರು. ತನ್ನ ದೇಶದ ಹಿತಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳಲು ವೇದಿಕೆಯಾಗಿ ಯಾವುದೇ ಪ್ರತ್ಯಕ್ಷ ರಾಜಕೀಯ ಆಂದೋಲನವನ್ನು ಪ್ರಾರಂಭಿಸದೆ ಇದ್ದಾಗ ಅವರ ದೃಷ್ಟಿ ಸಹಜವಾಗಿ ಕಾಂಗ್ರೆಸ್ ಕಡೆ ಹರಿಯಿತು. ಆ ನಿರೀಕ್ಷೆಯಲ್ಲಿ ಸಮಾಜದಲ್ಲಿ ಸಾಕಷ್ಟು ಸಮಯ ಅವರು ಕಾದರು. ಅವರ ಅಂತರಾತ್ಮದ ತುಡಿತವನ್ನು ತಾಳ್ಮೆಯಿಂದ ನಿಗ್ರಹಿಸಿಕೊಂಡಿದ್ದರು.

ಮಝಿನಿ ಅವರ 'ಜೀವನ ಬೋಧನೆ'ಗಳಿಗಾಗಿ ಪುಸ್ತಕದ ಅಂಗಡಿಗಳಲ್ಲಿ ಬಹು ಕಾಲ ಹುಡುಕಾಡಿದರು. ಕೊನೆಗೆ ಅವರ ಪಂಜಾಬಿ ಗೆಳೆಯರೋರ್ವರು ಇಂಗ್ಲೆಂಡ್‌ನಿಂದ ಒಂದು ಸಂಪುಟವನ್ನು ತಂದು ಕೊಟ್ಟರು. ಅದರ ಅಕ್ಷರ ಅಕ್ಷರವನ್ನು ಬಿಡದೆ ಅವರು ಪದೇ ಪದೇ ಓದಿದರು.

"ಹಾಗೆ ಓದುತ್ತಾ ನಾನು ನನ್ನನ್ನೇ ಮರೆಯತೊಡಗಿದೆ. ಅನೇಕ ವರ್ಷಗಳ ಹಿಂದೆ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರ ಲೇಖನದಲ್ಲಿ ಓದಿದ್ದಕ್ಕಿಂತಲೂ ಗಹನವಾದ ಸಾರ, ಸಂದೇಶ ನನಗೆ ಲಭ್ಯವಾಯಿತು. ಮಝಿನಿ ಅವರ ಆಳ, ಅಂತರಾಳಗಳನ್ನು ಗ್ರಹಿಸಲು ನನಗೆ ಶಕ್ಯವಾಯಿತು. ಇಟಲಿಯ ಆ ಮಹಾನ್ ರಾಷ್ಟ್ರವಾದಿಯ ದೇಶಭಕ್ತಿ ಅದಮ್ಯವಾದುದು. ತನ್ನ ಗುರಿ ಸಾಧನೆಗಾಗಿ ಆತ ಪಟ್ಟಪಾಡು ಬವಣೆಗಳು ದೇಶಭಕ್ತರಿಗೆ ಮಾರ್ಗದರ್ಶಿ. ಆತನ ನೈತಿಕ ನೆಲೆಗಟ್ಟು ಸದಾ ಕಾಲದ ದಾರಿದೀಪ. ಆತನ ವಿಶಾಲವಾದ ಮಾನವೀಯ ಅಂತಃಕರಣ ನನ್ನನ್ನು ಅವ್ಯಾಹತವಾಗಿ ಬಂಧಿಸಿತು."

ಲಜಪತರು ಮಝಿನಿಯ 'Duties of Man' ಕೃತಿಯನ್ನು ಉರ್ದು ಭಾಷೆಗೆ ತರ್ಜುಮೆ ಮಾಡಿದರು. ಹಸ್ತಪ್ರತಿಯನ್ನು ಅವರು ತಿದ್ದುಪಡಿಗಾಗಿ ಲಾಹೋರಿನ ಓರ್ವ ಪತ್ರಕರ್ತ ಗೆಳೆಯನಿಗೆ ಕಳುಹಿಸಿಕೊಟ್ಟರು. ಆತ ಹಸ್ತಪ್ರತಿಯಲ್ಲಿ ಕೈಯಾಡಿಸಿ, ಕೊನೆಗೆ ತನ್ನ ಹೆಸರಿನಲ್ಲೇ ಪ್ರಕಟಿಸಿಕೊಂಡ. ನಂತರ ಸ್ವತಃ ಲಜಪತರೇ ಉರ್ದು ಭಾಷೆಯಲ್ಲಿ ಮಝಿನಿ ಬದುಕು-ಬರಹಗಳ ಜೊತೆಗೆ ಪ್ರಕಟಿಸಿದರು. ಅದರ ಜೊತೆಯಲ್ಲೇ ಗ್ಯಾರಿಬಾಲ್ಡಿಯ ಜೀವನ ಕಥನವನ್ನು ಹೊರತಂದರು. ಆ ದಿನಗಳಲ್ಲಿ, ವಿಶೇಷವಾಗಿ ಪಂಜಾಬಿನ

ಜನಮಾನಸದ ಮೇಲೆ ಈ ಎರಡು ಕೃತಿಗಳು ಅಪಾರ ಪ್ರಭಾವ ಬೀರಿದವು. ಮಝ್ಜಿನಿ ಕೃತಿಯ ಕೊಡುಗೆ ಒಂದು ಸ್ತರ ಮೇಲೆಂದರೂ ಸರಿ. ಈ ಬಗ್ಗೆ ಮುಂದೆ ಮತ್ತಷ್ಟು ಓದೋಣ. ಈ ಮಧ್ಯೆ ಲಜಪತರು ಪ್ರಥಮ ಗುರು ಮಝ್ಜಿನಿ ಎಂಬುದು, ಅವರ ಮನಸ್ಸಿನಲ್ಲಿ ಶಾಂತಿರಹಿತ ಭಾವನೆ ಬಿತ್ತಿದ್ದು ಅವರೇ ಎಂಬುದು ನಮ್ಮ ನೆನಪಿನಲ್ಲಿ ಇದೆ. ಅವರು ಆರ್ಯ ಸಮಾಜ ಮತ್ತು ಕಾಂಗ್ರೆಸ್‌ಗೆ ಸೇರುವ ಮೊದಲೇ ಅವರ ಮನಸ್ಥಿತಿ ನಿರ್ದಿಷ್ಟವಾಗಿತ್ತು. ತಮ್ಮ ಸಂದೇಶವನ್ನು ನಿವೇದಿಸಿಕೊಳ್ಳುವ ಸಲುವಾಗಿ ಅವರು ಪ್ರಾಪ್ತ ಮಾಡಿಕೊಂಡ ಎರಡು ಮಾರ್ಗಗಳು ಸಮಾಜ ಮತ್ತು ಕಾಂಗ್ರೆಸ್ ಅಷ್ಟೇ.

1883ರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರು ನಿಧನ ಹೊಂದಿದರು. ದೀಪಾವಳಿಯ ಆ ಉತ್ಸಾಹದ ದಿನ ಮ್ಲಾನವಾಯಿತು. ತಮ್ಮ ಮಹಾನ್ ಗುರುವಿನ ನಿಧನಕ್ಕೆ ಸಂತಾಪ ಸೂಚಿಸಲು ಸಮಾಜದವರೆಲ್ಲರೂ ಶೋಕಸಭೆ ಸೇರಿದರು. ಅಜ್ಮೀರದಲ್ಲಿ ಸ್ವಾಮೀಜಿಯವರ ಜೊತೆಯಲ್ಲಿದ್ದವರು ಗುರುದತ್ತ. ಮಹಾ ದ್ರಷ್ಟಾರನ ಸಾವಿನಿಂದ ಅಪಾರ ದುಃಖದಲ್ಲಿ ಅವರು ಮುಳುಗಿದ್ದರು. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಶೋಕಸಭೆಯಲ್ಲಿ ಸ್ವಾಮೀಜಿಯ ಬಗ್ಗೆ ಮಾತನಾಡಲು ಎದ್ದು ನಿಂತಾಗ ಗುರುದತ್ತರ ಬಾಯಿಯಿಂದ ಪದಗಳೇ ಹೊರಡಲಿಲ್ಲ. ನಂತರ ಮಾತನಾಡಲು ಬಂದ ಎಲ್ಲರ ಸ್ಥಿತಿಯೂ ಅದೇ ಆಯಿತು. ಆಗಷ್ಟೇ ಸಮಾಜಕ್ಕೆ ಸೇರ್ಪಡೆಯಾಗಿದ್ದ ಲಜಪತರಿಗೆ ಶೋಕಸಭೆಯನ್ನು ಉದ್ದೇಶಿಸಿ ಮಾತನಾಡುವ ಅವಕಾಶ ದೊರೆಯಿತು. ದುಃಖ, ಉಮ್ಮಳಿಕೆಗಳ ನಡುವೆ ಸಮಾಜದ ಮುಂದಿರುವ ಅಗಾಧ, ಧ್ಯೇಯೋದ್ದೇಶಗಳನ್ನು ಚಿತ್ರಿಸಿದರು. ಸ್ವಾಮೀಜಿಯವರ ಗುರಿ, ಬೋಧನೆಗಳ ಸಾಕ್ಷಾತ್ಕಾರಕ್ಕೆ ಸಮಾಜ ಸಾಗಬೇಕಾಗಿರುವ ಲಕ್ಷ್ಯವನ್ನು ವಿವರಿಸಿದರು. ಎರಡು ತಾಸಿಗೂ ಹೆಚ್ಚು ಕಾಲ ಅವರು ಮಾಡಿದ ಶೋಕ ಸಂದೇಶದ ಭಾಷಣವನ್ನು ಸಭೆ ಮಂತ್ರಮುಗ್ಧವಾಗಿ ಆಲಿಸಿತು. ಅವರೊಬ್ಬ ಅತ್ಯುತ್ತಮ ಸಾರ್ವಜನಿಕ ವಾಗ್ಮಿ ಎಂಬುದು ಬೆಳಕಿಗೆ ಬಂದಿದ್ದು ಆ ವೇದಿಕೆಯಿಂದಲೇ. ಆರ್ಯ ಸಮಾಜದ ಸಮರ್ಥ ನಿಷ್ಣಾತ ವಾಗ್ಮಿ ಎಂದು ಅವರನ್ನು ಕರೆಯುತ್ತಾ ಬರಲಾಯಿತು. ಸಾರ್ವಜನಿಕ ಸಭೆಗಳಲ್ಲಿ ಲಜಪತ್‌ರಾಯ್ ಎಂದೂ ಭಾವೋನ್ಮಾದ ಕೆರಳಿಸುವ ಭಾಷಣ ಮಾಡುತ್ತಿರಲಿಲ್ಲ. ಇತರೆ ಸುಧಾರಣಾ ಭಾಷಣಕಾರರ ಧಾಟಿಯೂ ಅವರದಾಗಿರಲಿಲ್ಲ. ಲಜಪತರ ಭಾಷಣದಲ್ಲಿ ಮುತ್ಸದ್ಧಿತನವಿತ್ತು. ಸಮಸ್ಯೆಯ ಸ್ಪಷ್ಟ ಚಿತ್ರಣವಿರುತ್ತಿತ್ತು. ಮಾಡಬೇಕಾದ ಕರ್ತವ್ಯ, ತಲುಪಬೇಕಾದ ಗುರಿ, ಸಾಗಬೇಕಾದ ದಾರಿಯ ಸ್ಪಷ್ಟ ನೋಟವಿರುತ್ತಿತ್ತು. ಅವರ ಭಾಷಣದ ಧಾಟಿ, ರೀತಿ ಗ್ರೀಕ್ ವಾಗ್ಮಿಗಳನ್ನು ಹೋಲುತ್ತಿತ್ತು.

ಸ್ವಾಮಿ ದಯಾನಂದರ ನಿಧನದ ನಂತರ ಅವರ ಸ್ಮಾರಕವೊಂದನ್ನು ಸ್ಥಾಪಿಸಲು ಅವರ ಅನುಯಾಯಿಗಳು ಮತ್ತು ಅಭಿಮಾನಿಗಳು ನಿರ್ಧರಿಸಿದರು. 'ದಯಾನಂದ ಆಂಗ್ಲೋ ವೇದಿಕ್ ಕಾಲೇಜು' ಸ್ಥಾಪನೆ ಪ್ರಶಸ್ತವೆನಿಸಿತು. ಈ ಸ್ಮಾರಕದ ಬಗ್ಗೆ ಇತರರು ಪ್ರಾಯೋಗಿಕ ಹಂತ ತಲುಪುವ ವೇಳೆಗೆ ಲಜಪತ್‌ರಾಯ್ ತಮ್ಮ ಪಾಲಿನ ಬಹುತೇಕ ಕೊಡುಗೆಯನ್ನು ಸಿದ್ಧ ಮಾಡಿಕೊಂಡಿದ್ದರು.

1880ರ ದಶಕದ ಅಂತ್ಯದವರೆಗೆ ಲಜಪತರು ಹಿಸ್ಸಾರಿನಲ್ಲಿಯೇ ಇದ್ದರು. ಅವರ ಗೌರವ, ಪ್ರತಿಷ್ಠೆಗಳು ಸಾರ್ವಜನಿಕವಾಗಿ ಬಹುಮುಖಗೊಂಡಿದ್ದವು. ಆರ್ಯ ಸಮಾಜದ ಪ್ರಮುಖ ವ್ಯಕ್ತಿತ್ವ ಅವರೇ ಎನಿಸಿದ್ದರು. ಅವರ ಹೆಸರು ಶುದ್ಧವಾಗಿ ಬೆಳಗತೊಡಗಿತು. "ಬಹಿರಂಗ ಪತ್ರಗಳ ಪ್ರಕರಣದ ನಂತರ ಲಜಪತರ ವ್ಯಕ್ತಿಗತ ವರ್ಚಸ್ಸು ಇನ್ನಷ್ಟು ಆಕರ್ಷಕವಾಯಿತು. ತಮ್ಮ ಬದುಕಿನ ಹೆಚ್ಚಿನ ಸಮಯವನ್ನು ಅವರು ಸಾರ್ವಜನಿಕ ಸೇವೆಗೆ ವಿನಿಯೋಗಿಸುತ್ತಿದ್ದರು. ಅದರೊಟ್ಟಿಗೆ ವೃತ್ತಿಪರ ವಕೀಲರಾಗಿ ಒಳ್ಳೆಯ ಯಶಸ್ಸನ್ನು ಸಾಧಿಸುತ್ತಾ ಬಂದರು. ಅವರ ಗಳಿಕೆ ಮಾಹೆಯಾನ ತಿಂಗಳಿಗೆ 1000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಆಯಿತು. ಅದೆಷ್ಟೋ ಸಲ ಅದು ದುಪಟ್ಟಾಗುತ್ತಿದ್ದದ್ದು ಉಂಟು. ವೃತ್ತಿಪರವಾಗಿ ನಿಜಕ್ಕೂ ಅವರದು ಅಸಾಧಾರಣ ಗಳಿಕೆಯೇನೂ ಅಲ್ಲ. ಆದರೆ ಎಳೆಯ ವಯಸ್ಸಿನಲ್ಲೇ ಮಹದುದ್ದೇಶದ ಕನಸುಗಾರರಾಗಿ ವ್ಯಾಪಕ ಚಟುವಟಿಕೆಗಳನ್ನು ಹಚ್ಚಿಕೊಂಡ ಲಜಪತರ ಪಾಲಿಗೆ ಅದು ನಿಜಕ್ಕೂ ಒಳ್ಳೆಯ ಗಳಿಕೆ ಎನಿಸಿತು. ಅದರಲ್ಲೂ ಗ್ರಾಮಾಂತರ ಪ್ರದೇಶದ ವಕೀಲರಾಗಿ ಅವರ ಗಳಿಕೆ ಪ್ರಶಂಸನೀಯವೇ ಸರಿ. ತಮ್ಮ ವೃತ್ತಿಯಲ್ಲಿ ಇನ್ನಷ್ಟು ಸಮಯವನ್ನು ವಿನಿಯೋಗಿಸಬಹುದಾಗಿದ್ದರೆ ಗಳಿಕೆ ಇಮ್ಮಡಿಯಾಗುತ್ತಿತ್ತೋ ಏನೋ? ವಕೀಲ ವೃತ್ತಿಯಲ್ಲಿ ನಿಷ್ಣಾತರಾಗಿ ತಮ್ಮನ್ನು ಆಶ್ರಯಿಸುತ್ತಿದ್ದ ಕಕ್ಷಿದಾರರ ವಿಶ್ವಾಸವನ್ನು ಅವರು ಗೆಲ್ಲುತ್ತಾ ಬಂದರು. ಹೀಗೆ ಹಿಸ್ಸಾರಿನಲ್ಲಿ ವಕೀಲರಾಗಿ, ಆರ್ಯ ಸಮಾಜದ ಪ್ರಮುಖ ಕಾರ್ಯಕರ್ತರಾಗಿ, ಸಾರ್ವಜನಿಕ ಸೇವಕರಾಗಿ, ರಾಜಕೀಯ ಹೋರಾಟಗಾರರಾಗಿ ಲಜಪತ್‌ರಾಯ್ ಅಗ್ರಸ್ಥಾನದಲ್ಲಿ ನಿಂತರು. ತಮ್ಮ ತಂದೆಯ ಮನ ಒಲಿಸಿ ಶಿಕ್ಷಕ ವೃತ್ತಿಯಿಂದ ಅವರಿಗೆ ವಿರಾಮ ಕೊಡಿಸಿದರು. ತಮ್ಮ ಗಳಿಕೆಯ ಹೆಚ್ಚಿನ ಭಾಗವನ್ನು ತಂದೆಗೆ ಕೊಟ್ಟು ಅವರ ಗಳಿಕೆ ತಪ್ಪಿದ್ದರ ನಿರಾಶೆ ಇಲ್ಲದಂತೆ ಮಾಡಿದರು. ತಮ್ಮಂದಿರ ಶಿಕ್ಷಣಕ್ಕೆ, ಪಾಲನೆ, ಪೋಷಣೆಗೆ, ಮದುವೆಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಿದರು. ಹೆಚ್ಚು ಕಡಿಮೆ ಮನೆಯ ಎಲ್ಲಾ ಖರ್ಚು ವೆಚ್ಚಗಳನ್ನು ಲಜಪತರೇ ನೋಡಿಕೊಳ್ಳುತ್ತಿದ್ದರು. ತಂದೆಗೆ ಕೊಡುತ್ತಿದ್ದ ಹಣವನ್ನು ಉಳಿತಾಯವಾಗುವಂತೆ ಮಾಡುತ್ತಿದ್ದರು. ಮದುವೆಯ ಪ್ರಸಂಗಗಳಲ್ಲಿ ಮುನ್ಸೀಜಿ ಹಣ ಬಳಕೆಯಾಗದಂತೆ ಈ ಹಿರಿಯ ಪುತ್ರ ಎಚ್ಚರ ವಹಿಸುತ್ತಿದ್ದರು. ತಂದೆಯ ಪಾಲಿನ ಹಣ ಸಂಗ್ರಹವಾಗುತ್ತಾ ಬಡ್ಡಿ ಗಳಿಸುವಂತೆ ನೋಡಿಕೊಂಡರು.

ಹಿಸ್ಸಾರಿನಲ್ಲಿದ್ದ ಆ ದಿನಗಳಲ್ಲಿ ಬೆಲೆಬಾಳುವ ಸ್ಥಿರಾಸ್ತಿ ಮಾಡುವ ಅವಕಾಶಗಳು ಗಣನೀಯ ಪ್ರಮಾಣದಲ್ಲಿ ಲಜಪತರ ಪಾಲಿಗೆ ಬಂದವು. ಆಸ್ತಿ ಮಾಡಿದ್ದಿದ್ದರೆ ನಿಜಕ್ಕೂ ಅದು ದೊಡ್ಡ ಬಂಡವಾಳವೇ ಆಗುತ್ತಿತ್ತು. ಆದರೆ ಲಜಪತರ ಆಸೆ, ಆಕಾಂಕ್ಷೆಗಳು ಇನ್ನೊಂದು ದಿಕ್ಕಿನಲ್ಲಿದ್ದವು. ಹಾಗಾಗಿ ಒದಗಿ ಬಂದ ಆಸ್ತಿ ಗಳಿಕೆಯ ಅವಕಾಶಗಳನ್ನು ಅವರು ನಿರಾಕರಿಸಿದರು. ಹಿಸ್ಸಾರ್ ಪಟ್ಟಣವನ್ನು ಬಿಟ್ಟು ಮೆಟ್ರೋಪಾಲಿಟನ್ ಲಾಹೋರ್ ನಗರಕ್ಕೆ ತೆರಳಿ ಅಲ್ಲಿಯೇ ತಮ್ಮ ವಾಸ ಮಾಡಿಕೊಳ್ಳಲು ಅವರು ಬಯಸಿದರು. ಸ್ಥಿರಾಸ್ತಿಯ ಮೋಹದಲ್ಲಿ ಪ್ರಾಂತೀಯ ಪಟ್ಟಣವೊಂದರಲ್ಲಿ ಉಳಿದುಕೊಳ್ಳಲು ಅವರು ಇಷ್ಟಪಡಲಿಲ್ಲ ಈ ಹಿನ್ನೆಲೆಯಲ್ಲಿ ಅವರು ಹಿಸ್ಸಾರಿನಲ್ಲಿ ಯಾವುದೇ ಬಂಡವಾಳ ತೊಡಗಿಸಲಿಲ್ಲ

* * *

ಅಧ್ಯಾಯ-11

ಪ್ರಾಚೀನ ನಗರಿಯಲ್ಲಿ ಹೊಸ ಹುದುಗು

1890ರ ದಶಕದ ಆರಂಭದಲ್ಲಿ ಕಾಯಂ ಆಗಿ ನೆಲೆಗೊಳ್ಳಲು ಬಯಸಿ ಲಜಪತರು ಮರಳಿದ ಲಾಹೋರ್ ನಗರವು ಈ ಹಿಂದೆ ವಿದ್ಯಾರ್ಥಿಯಾಗಿದ್ದಾಗ ಅವರು ತೆರಳಿದ್ದ ಸ್ಥಿತಿಗತಿಗಿಂತ ಸಾಕಷ್ಟು ಭಿನ್ನವಾಗಿತ್ತು. ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಯಾಗಿದ್ದಾಗ ಮೊಟ್ಟಮೊದಲ ಬಾರಿಗೆ ಆ ಪ್ರಾಚೀನ ನಗರಿಯ ರೈಲ್ವೆ ನಿಲ್ದಾಣದಲ್ಲಿ ಇಳಿದಾಗ ವಾತಾವರಣ ಭಯಕಾರಿಯಾಗಿತ್ತು. ಜೇಬುಗಳ್ಳರು ಮತ್ತು ವಂಚಕರ ಬಗ್ಗೆ ಜಾಗರೂಕರಾಗಿರುವಂತೆ ಪೊಲೀಸ್ ಪೇದೆಗಳು ಪದೇ ಪದೇ ಎಚ್ಚರಿಸುತ್ತಿದ್ದರು. ವಿದ್ಯಾರ್ಥಿ ಲಜಪತ್ ಸಹಜವಾಗಿ ನಡುಗಿದ್ದರು. ಕೂಲಿಯು ತಮ್ಮ ಸಾಮಾನುಗಳನ್ನು ಹೊತ್ತು ಸಾಗುತ್ತಿದ್ದರೆ ಸ್ವತಃ ಲಜಪತರು ತಾವೆಲ್ಲಿ ಮೋಸ ಹೋಗುವೇನೋ ಎಂಬ ಭಯದಲ್ಲಿ ಮೆಯೆಲ್ಲಾ ಕಣ್ಣಾಗಿಸಿಕೊಂಡಿದ್ದರು. ತಮ್ಮ ವಸ್ತುಗಳೆಲ್ಲಾ ಕಳೆದು ಹೋಗಬಹುದೆಂದು ಆತಂಕಗೊಂಡಿದ್ದರು. ತಾವು ನಿರಾಶ್ರಿತರಾಗಬಹುದೆಂಬ ಭೀತಿಗೆ ಒಳಗಾಗಿದ್ದರು. ಈಗ ಅಂತಹ ಸ್ಥಿತಿ ಇರಲಿಲ್ಲ. ಅನಾಗರಿಕ, ಗೂಂಡಾ ವೃತ್ತಿಗಳು, ವರ್ತನೆಗಳು ಹೊಸಬರಿಗೆ ಕಾಣುತ್ತಿರಲಿಲ್ಲ. ಹಣದ ಒತ್ತಡವೂ ಇಲ್ಲದಿದ್ದರಿಂದ, ಒಳ್ಳೆಯ ಬಾಡಿಗೆ ಪಡೆಯುವ ಸವಲತ್ತು ಇತ್ತು. ಕೈ ತಟ್ಟಿದರೆ ಸಾಕು ಕುದುರೆಯೋ, ಗಾಡಿಯೋ, ಕುದುರೆಗಾಡಿಯೋ ಅವರ ಬಳಿಗೆ ಬಂದು ಸಾಮಾನು ಸರಂಜಾಮುಗಳೆಲ್ಲವನ್ನು ಹೊತ್ತು ಬಯಸಿದೆಡೆಗೆ ತಲುಪಿಸುವ ನಾಗರಿಕತೆ ಇತ್ತು.

ಬಿಳಿಯರ ರಾಜ್ಯಾಭಾರ ಆರಂಭವಾಗಿ ಅರ್ಧ ಶತಕ ಕಳೆದಿದ್ದ ಸಮಯ ಅದು. ಆಡಳಿತ ಕಾಲ ಕಾಲಕ್ಕೆ ಸುಧಾರಿಸಿತ್ತು. ತನ್ನತನದ ಛಾಯೆಯನ್ನು ಸರ್ಕಾರ ಮೂಡತೊಡಗಿಸಿತ್ತು. ಅದರ ಕಚೇರಿಗಳು ಶಾಖೋಪಶಾಖೆಗಳಾಗುತ್ತಿದ್ದವು. ತತ್ಫಲವಾಗಿ 'ಬಾಬುಗಳ' ಸಂಖ್ಯೆ ಲಾಹೋರ್ ನಗರಕ್ಕೆ ಎಲ್ಲೆಡೆಯಿಂದ ಹರಿದು ಬರುತ್ತಿತ್ತು. ಶೈಕ್ಷಣಿಕ ಕಾರ್ಖಾನೆಗಳು 'ಬಾಬು'ಗಳನ್ನು ತಯಾರಿಸಿ, ತಯಾರಿಸಿ ಸರ್ಕಾರಿ ಕೆಲಸಗಳಿಗೆ ಪೂರೈಕೆ ಮಾಡುತ್ತಿದ್ದವು. ತ್ವರಿತವಾಗಿ ಉದ್ಯೋಗಾವಕಾಶಗಳು ಸರ್ಕಾರದ ಹಂತದಲ್ಲಿ ಹೆಚ್ಚಾಗಿ ಇದ್ದುದ್ದರಿಂದ ಪಟ್ಟಣ ಪ್ರದೇಶದಲ್ಲಿ ಅವರೆಲ್ಲಾ ಬಹುಬೇಗ ಹೊಸ ಜೀವಿತ ಆರಂಭಿಸಲು ಅನುವಾಗುತ್ತಿತ್ತು.

ಲಾಹೋರ್ ನಗರಿಯೇನೋ ತೀವ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿತ್ತು. ವಿಚಿತ್ರವೆಂದರೆ ಅಲ್ಲಿ ಯಾವುದೇ ಕಾರ್ಖಾನೆಯೂ ಇಣುಕು ಹಾಕಿರಲಿಲ್ಲ. ಬ್ಯಾಂಕಿಂಗ್ ಮತ್ತು ವಿಮಾ ವಲಯದಲ್ಲಿ ಭಾರತೀಯರು ಉದ್ಯಮಶೀಲರಾಗಿರಲಿಲ್ಲ. ಅಲ್ಲಿದ್ದ ವಾಣಿಜ್ಯ ಬ್ಯಾಂಕ್ ಕಚೇರಿಗಳೆಲ್ಲವೂ ಐರೋಪ್ಯ ಪ್ರಧಾನವಾಗಿದ್ದವು. ಅವುಗಳಲ್ಲಿ ಬಹುತೇಕ ದೂರದ

ಕಲ್ಕತ್ತಾ, ಮುಂಬಯಿ ಇಲ್ಲವೇ ಸಾಮ್ರಾಜ್ಯಶಾಹಿಗಳ ನೆಲೆಯಾದ ಲಂಡನ್‌ನಲ್ಲಿ ಕೇಂದ್ರ ಕಚೇರಿಗಳನ್ನು ಹೊಂದಿರುತ್ತಿದ್ದವು. ಒಂದು ರೀತಿಯಲ್ಲಿ ಆಕ್ಟೋಪಸ್ ತಲೆ ಮತ್ತು ಅದರ ಕಬಂಧ ಬಾಹುಗಳ ತರಹ ಆ ವಾಣಿಜ್ಯ ಕಚೇರಿಯಲ್ಲೂ 'ಬಾಬುಗಳಿಗೆ' ಉದ್ಯೋಗ ಅವಕಾಶವಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವಿದ್ದದ್ದು ಸರ್ಕಾರಿ ಮತ್ತು ರೈಲ್ವೆ ಕಚೇರಿಗಳಲ್ಲಿ. ಶಿಕ್ಷಣ ಸಂಸ್ಥೆಗಳು ಇಮ್ಮಡಿಗೊಂಡಿದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿತ್ತು. ಭವಿಷ್ಯದ ಬಾಬುಗಳು ವ್ಯವಸ್ಥಿತವಾಗಿ ರೂಪುಗೊಳ್ಳುತ್ತಿದ್ದರು. ವಕೀಲರ ಸಂಖ್ಯೆಯೂ ಏರುಮುಖವಾಗಿತ್ತು. ಈ ವೃತ್ತಿಯಲ್ಲಿ ತ್ವರಿತ ಎನ್ನುವುದಕ್ಕಿಂತಲೂ ಸ್ಥಿರವಾದ ಹೆಚ್ಚಳವಾಗುತ್ತಿತ್ತು ಎಂದರೆ ಚೆಂದ. ಹೊಸ ಬಗೆಯ ಜನ ಹರಿದು ಬರುತ್ತಿದ್ದರಿಂದ ಅನಾರ್ಕಲಿ ಆಕರ್ಷಕ ಮಾರುಕಟ್ಟೆ ಬೀದಿಯಾಗಿ ರೂಪುಗೊಳ್ಳತೊಡಗಿತು. ಸಾಹೇಬ್‌ಗಳು ಹಾಗೂ ಮೇಮ್‌ಸಾಹೇಬ್‌ಗಳು ತಮ್ಮ ಷಾಪಿಂಗ್‌ನ್ನು 'ಮಾಲ್'ನಲ್ಲಿ ನಡೆಸುತ್ತಿದ್ದರು. ಅಲ್ಲಿ ಅಂಗಡಿಗಳು ಬಹುತೇಕ ಬಂಗಲೆಗಳಲ್ಲಿರುತ್ತಿದ್ದವು. ಆ ಬಂಗಲೆಗಳೋ ಲೋಕೋಪಯೋಗಿ ಇಲಾಖೆಯ ಅಜ್ಞಾತ ವಾಸ್ತು ಶಿಲ್ಪಿಗಳ ಆಕರ್ಷಣೆ ರಹಿತ ಕೊಡುಗೆಗಳು! ವಾಸ್ತು ವಿಷಯದಲ್ಲಿ ಸೌಂದರ್ಯದ ಗಂಧವೇ ಅವುಗಳಿಗೆ ಇರಲಿಲ್ಲ. ಹೆಚ್ಚು ಕಡಿಮೆ ಪೌರಾತ್ಯಕ್ಕೆ ಹೊಂದುವ ಕಟ್ಟಡಗಳು ಅವಾಗಿದ್ದವು. ಪಾಶ್ಚಿಮಾತ್ಯರಿಗೆ ಪರಿಚಯವೇ ಇಲ್ಲದ ಶೈಲಿಯ ಕಟ್ಟಡಗಳವು.

ಧಾವಿಸಿ ಬರುತ್ತಿದ್ದ ಬಾಬುಗಳು, ವಕೀಲರು, ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ ಅನಿವಾರ್ಯವಾದಂತೆ ಬಾಡಿಗೆ ಮನೆಗಳ ಸಂಖ್ಯೆಯೂ ಹೆಚ್ಚತೊಡಗಿತು. ಸಣ್ಣ ಪುಟ್ಟ ಮನೆಗಳೆಲ್ಲಾ ಇಟ್ಟಿಗೆ ಗಾರೆಯ ನೇಯ್ಗೆಯಲ್ಲಿ ಸಣ್ಣಪುಟ್ಟ ಗೂಡುಗಳಂತೆ ಯದ್ವಾತದ್ವಾ ವಿಸ್ತಾರಗೊಳ್ಳತೊಡಗಿದವು. ಬಾಡಿಗೆಯ ಆಮಿಷಕ್ಕೆ ಈಡಾದ ಮಂದಿ ಅಂದ, ಚೆಂದ, ಬೆಳಕು, ನೈರ್ಮಲ್ಯಗಳತ್ತ ಲಕ್ಷ್ಯ ಸಹ ಹರಿಸುತ್ತಿರಲಿಲ್ಲ. ಗಳಿಕೆಯಲ್ಲಿ ಹೆಚ್ಚಳವಾಗುತ್ತಿದ್ದದ್ದೇ ಅವರಿಗೆ ಅದೃಷ್ಟ ಖುಲಾಯಿಸಿದಂತಾಯಿತು. ಈ ಬಗ್ಗೆ ಅರ್ಥ ಶಾಸ್ತ್ರಜ್ಞರು ವ್ಯಾಖ್ಯಾನ ಮಾಡಿಕೊಳ್ಳಲಿ.

ಲಾಹೋರ್ ನಗರಿಯ ಈ ಬಾಹ್ಯ ಸ್ವರೂಪದಂತೆ ಅದರ ಅಂತಃಸತ್ವದಲ್ಲೂ ತೀವ್ರ ಬದಲಾವಣೆಗಳಾಗುತ್ತಿದ್ದವು. ಅವರವರು ಅವರವರ ಕೆಲಸಗಳಲ್ಲಿ ಸಂಲಗ್ನವಾಗುತ್ತಿದ್ದರಿಂದ ಬದಲಾವಣೆ ಮತ್ತು ಅದರ ಕಾರಣಗಳನ್ನು ಗುರುತಿಸುವ ಹಂತಕ್ಕೆ ಯಾರೂ ಹೋಗುತ್ತಿರಲಿಲ್ಲ. ಸ್ಥೂಲವಾಗಿ ಹೇಳುವುದಾದರೆ ಆಗುತ್ತಿದ್ದ ಬದಲಾವಣೆಗಳಲ್ಲಿ ಶೈಕ್ಷಣಿಕ, ಧಾರ್ಮಿಕ ಅಂಶಗಳು ಪ್ರಮುಖವಾಗಿದ್ದವು. ಬಾಬುಗಳು ಮತ್ತು ವಕೀಲರಿಂದಾಗಿ ಈ ಮಾರ್ಪಾಟು ಆಗತೊಡಗಿತ್ತು.

ಲಜಪತರು ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಶುದ್ಧ ಭಾರತೀಯ ಅಧಿಕಾರಿಯೇತರ ವ್ಯಕ್ತಿಯೊಬ್ಬ ಶೈಕ್ಷಣಿಕ ಉದ್ಯಮದಲ್ಲಿ ಕೈ ಹಾಕುವುದನ್ನು ನಿರೀಕ್ಷಿಸಲೂ ಸಾಧ್ಯವಿರಲಿಲ್ಲ. ಆದರೆ ಕ್ರೈಸ್ತ ಮಿಷನರಿಗಳು ಯಾವುದೇ ಅಡೆತಡೆ ಇಲ್ಲದೆ ಶಿಕ್ಷಣ ಉದ್ಯಮದಲ್ಲಿ ಮುನ್ನುಗ್ಗುತ್ತಿದ್ದರು. ಲಜಪತ್‌ರಾಯ್ ವಕೀಲರಾಗುವ ಮುನ್ನ ಈ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದು ಡಾ. ಫೋರ್ಮನ್ ನೇತೃತ್ವದ ಕ್ರೈಸ್ತ ಮಿಷನರಿ. ೧೮೮೯ರಲ್ಲಿ ಫೋರ್ಮನ್

ಕ್ರಿಶ್ಚಿಯನ್ ಕಾಲೇಜು ಸ್ಥಾಪಿತವಾಯಿತು. ಸಹಜವಾಗಿ ಮಿಷನರಿಗಳಿಗೆ ಸಂಪನ್ಮೂಲಗಳು ವಿಪುಲವಾಗಿದ್ದವು. ಆಡಳಿತಗಾರರ ಕೃಪಾಕಟಾಕ್ಷ ಅವರ ಪಾಲಿಗೆ ಇರುತ್ತಿತ್ತು. ಅವರ ಕೆಲಸಗಳಿಗೆ ಅಡ್ಡಿ ಒಡ್ಡುವವರೇ ಇರಲಿಲ್ಲ. ಸರ್ಕಾರವು ಕಾಣಿಕೆಯ ರೂಪದಲ್ಲಿ ಎರಡು ಎಕರೆಗಳಷ್ಟು ಜಾಗವನ್ನು ನಗರದ ಆಯಕಟ್ಟಿನ ಸ್ಥಳಗಳಲ್ಲಿ ಮಿಷನರಿಗಳಿಗೆ ಒದಗಿಸುತ್ತಿತ್ತು. ಮಿಷನರಿಗಳ ಮೂಲಕ ಕ್ರೈಸ್ತ ಶಿಕ್ಷಣ ಸಂಸ್ಥೆಗಳು ಅಸಂಖ್ಯ ಪ್ರಮಾಣದಲ್ಲಿ ಹರಡಿಕೊಳ್ಳುತ್ತಿದ್ದವು. ಅವೆಲ್ಲವೂ ಯೋಜಿತವಾಗಿದ್ದವು. ಲಾಹೋರ್ ನಗರದಲ್ಲಿ ಆಗುತ್ತಿದ್ದ ಹುದುಗಿಗೆ ಆ ಮಿಷನರಿಗಳ ಕೊಡುಗೆಯೇ ಹೆಚ್ಚಿನದು. ದೇಶಿಯವಾಗಿ ಹೊಸ ರೀತಿಯ ಶಿಕ್ಷಣವನ್ನು ಕೊಡುವ ರೀತಿಯಲ್ಲಿ ಮಿಷನರಿಗಳು ಪರೋಕ್ಷ ಪ್ರಭಾವ ಬೀರತೊಡಗಿದ್ದರು. ಆ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮಗಳನ್ನು ಧ್ಯೇಯೋದ್ದೇಶಗಳನ್ನು ರೂಪಿಸಲಾಗುತ್ತಿತ್ತು. ಅದಕ್ಕೆ ಪೂರಕವಾಗಿ ಬಾಬು ವೃತ್ತಿಗಳು ಹೆಚ್ಚ ತೊಡಗಿದ್ದವು. ಷಾಪಿಂಗ್ ಬಂಗಲೆಗಳು ಇನ್ನೊಂದು ರೀತಿಯಲ್ಲಿ ಮೋಹಕಗೊಳ್ಳತೊಡಗಿದವು. ದಯಾನಂದ ಶಾಲೆ ಇದ್ದಂತಹ ಸರ್ಕಾರಿ ಕಟ್ಟಡಗಳು ಅಷ್ಟೇನೂ ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಲಜಪತ್‌ರಾಯ್ ವಿದ್ಯಾರ್ಥಿಯಾಗಿದ್ದಾಗ ಅಸ್ತಿತ್ವಕ್ಕೆ ಬಂದಿದ್ದ ಡಿ.ಎ.ವಿ. ಕಾಲೇಜ್ ಸಹ ಸುರಕ್ಷಿತ ಕಟ್ಟಡದಲ್ಲಿ ಇರಲಿಲ್ಲ.

ಲಜಪತ್‌ರಾಯ್ ತಮ್ಮ ವಿದ್ಯಾರ್ಥಿ ಜೀವನದ ಸಮಯದಲ್ಲಿ ಪಂಜಾಬ್ ವಿಶ್ವವಿದ್ಯಾಲಯ ಹೆಚ್ಚು ಕಡಿಮೆ ಅಸ್ತಿತ್ವಕ್ಕೆ ಬರದಿರುವುದನ್ನು ಕಂಡಿದ್ದರು. ಡಾ. ಲಿಟ್ನರ್ ತಮ್ಮೆಲ್ಲಾ ಶಕ್ತಿಯನ್ನು ವಿನಿಯೋಗಿಸಿ ತಮ್ಮ ಆ ಕೂಸು ವಿಶ್ವವಿದ್ಯಾಲಯವಾಗಿ ರೂಪುಗೊಳ್ಳುವುದನ್ನು ಬಯಸಿದ್ದರು. ಆದರೆ ವಕೀಲರಾಗಿ ಲಜಪತರು ಲಾಹೋರಿಗೆ ಬಂದಾಗ ಡಾ. ಲಿಟ್ನರ್‌ರ ಆಶೋತ್ತರಗಳೆಲ್ಲವೂ ಭಗ್ನವಾಗಿದ್ದವು. ಕಲ್ಕತ್ತಾ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳ ರೀತಿಯಲ್ಲಿ ಅವರ ಕನಸಿನ ವಿಶ್ವವಿದ್ಯಾಲಯ ರೂಪುಗೊಳ್ಳಲಿಲ್ಲ. ಬದಲಿಗೆ ವಿಶ್ವವಿದ್ಯಾಲಯ ಕಾಲೇಜೆಂದೇ ಕರೆಯಲ್ಪಡುತ್ತಿದ್ದ ಸರ್ಕಾರಿ ಕಾಲೇಜು ವಿಶ್ವವಿದ್ಯಾಲಯದ ಸ್ವರೂಪ ಪಡೆದುಕೊಳ್ಳತೊಡಗಿತು.

ಈ ವಿಶ್ವವಿದ್ಯಾಲಯಕ್ಕೆ ಕಾನೂನು, ವೈದ್ಯಕೀಯ ಹಾಗೂ ಡಾ. ಲಿಟ್ನರರ ಪೌರಾತ್ಯ ಕಾಲೇಜುಗಳನ್ನು ಸೇರ್ಪಡೆ ಮಾಡಲಾಗಿತ್ತು. ಈ ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ಮಿಷನರಿಗಳು ಸಹ ಕಾಲೇಜು ತೆಗೆದರು. ಹೊಸ ಹರೆಯದ ಸ್ಫೂರ್ತಿಯೋ ಎಂಬಂತೆ ಭಾರತೀಯ ಮುಖಂಡರು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ಮುಂದಾದರು. 1880ರ ದಶಕದಲ್ಲಿ ಲಾಹೋರಿನಲ್ಲಿ ಆಗುತ್ತಿದ್ದ ಮಾರ್ಪಾಟಿನಲ್ಲಿ ಬ್ರಹ್ಮಸಮಾಜ ಮತ್ತು ಆರ್ಯ ಸಮಾಜಗಳ ಪೈಪೋಟಿಯೂ ಒಂದು. ಆ ದಶಕದ ನಂತರ ಎರಡೂ ಸಮಾಜಗಳ ಸ್ಥಿತಿಗತಿಯೂ ಹದಗೆಡುತ್ತಾ ಬಂದದ್ದು ವೈಪರಿತ್ಯ.

ಮುನ್ಷಿ ರಾಧಾ ಕಿಷನ್‌ರ ಗೆಳೆಯ ಪಂಡಿತ್ ಶಿವನಾರಾಯಣ ಅಗ್ನಿಹೋತ್ರಿ ಬಾಲಕ ಲಜಪತರಿಗೆ ಲಾಹೋರಿನಲ್ಲಿ ಆಸರೆ ನೀಡಿದ್ದರು ಎಂಬುದನ್ನು ನಾವು ಈಗಾಗಲೇ ಓದಿದ್ದೇವೆ. ಈಗ ಅವರು ತಮ್ಮ ಶಿಕ್ಷಕ ವೃತ್ತಿಯನ್ನು ಬಿಟ್ಟಿದ್ದರು. ಬ್ರಹ್ಮ ಸಮಾಜದಿಂದಲೂ ದೂರವಾಗಿದ್ದರು. ತಮ್ಮದೇ ಸಮಾಜವೊಂದನ್ನು ಕಟ್ಟಿ ಅದನ್ನು 'ದೇವ ಸಮಾಜ' ಎಂದು

ಕರೆದಿದ್ದರು. ಅವರ ಹೆಸರಿನಲ್ಲೂ ಬದಲಾವಣೆ ಆಗಿತ್ತು. ಈಗ ಅವರನ್ನು 'ದೇವ ಗುರು ಭಗವಾನ್' ಎಂದು ಅವರ ಅನುಯಾಯಿಗಳು ಸಂಬೋಧಿಸುತ್ತಿದ್ದರು. ಬ್ರಹ್ಮಸಮಾಜ ಬೋಧಿಸುತ್ತಿದ್ದ ಕಠಿಣತರವೆನಿಸಿದ ಅನೇಕ ಆಚರಣೆಗಳು ಹಾಗೂ ಪ್ರವೃತ್ತಿಗಳನ್ನು ಅವರು ಕೈಬಿಟ್ಟಿದ್ದರು. ತಮಗೆ ಪ್ರತಿಸ್ಪರ್ಧಿ ಎನಿಸಿದ ಆ ಸಮಾಜದ ಜನಪ್ರಿಯತೆಯನ್ನು ಕುಗ್ಗಿಸಿ ತಾವು ಸ್ಥಾಪಿಸಿರುವ ಹೊಸ ಸಮಾಜದ ಬೆಳವಣಿಗೆಗೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಸುಲಭ, ಸರಳ ಗ್ರಾಹ್ಯ ಆಚಾರ-ಪ್ರಚಾರಗಳನ್ನು ಅಳವಡಿಸಿಕೊಂಡಿದ್ದರು. ಅದೇ ಸಮಯದಲ್ಲಿ ಆರ್ಯ ಸಮಾಜದ ವಿರುದ್ಧವೂ ಅವರು ಪೈಪೋಟಿಗೆ ಇಳಿದಿದ್ದರು. ಆದರೆ ಆರ್ಯ ಸಮಾಜ ಹೊಸ ಶಿಕ್ಷಣ ಸ್ವರೂಪಕ್ಕೆ ಮುಕ್ತವಾಗಿದ್ದರಿಂದಲೂ, ಸಮರ್ಥ ಪ್ರಗತಿಪರ ಕಾರ್ಯಕರ್ತರು ಇದ್ದಿದ್ದರಿಂದಲೂ ಅದರ ಸಾಧನೆಗೆ ಯಾವುದೇ ರೀತಿಯ ಧಕ್ಕೆಯಾಗಲಿಲ್ಲ. ಅದೇ ಸಮಯಕ್ಕೆ ಆರ್ಯ ಸಮಾಜವು ಆ ದಿನಗಳಲ್ಲಿ ತನ್ನ ಮುಖ್ಯ ಕರ್ತವ್ಯ ಶಿಕ್ಷಣ ಪ್ರಸಾರ ಮಾತ್ರ ಎನ್ನುವಂತೆ ಶಾಲೆಯೊಂದನ್ನು ಆರಂಭಿಸಿ ತನ್ನ ಸ್ಥಾಪಕರ ಹೆಸರಿನಲ್ಲಿ ನಡೆಸತೊಡಗಿತು. ಇದು ಬ್ರಹ್ಮಸಮಾಜ ಹಾಗೂ ದೇವ ಸಮಾಜಗಳಿಗಿಂತ ಮುನ್ನಡೆ ಸಾಧಿಸಿ ಆರ್ಯ ಸಮಾಜ ಇನ್ನಷ್ಟು ಜನಪ್ರಿಯವಾಗಲು ಸಹಕಾರಿಯಾಯಿತು. ಆರ್ಯ ಸಮಾಜದ ಶೈಕ್ಷಣಿಕ ಚಟುವಟಿಕೆ ಮುನ್ನಡೆದು ಕಾಲೇಜು ವಿಭಾಗವು ಆರಂಭಗೊಂಡಿತು. ಕಿರಿಯ ವಯಸ್ಸಿನಲ್ಲೇ ಪದವಿ ಗಳಿಸಿದ ಕ್ರಿಯಾಶೀಲ ತರುಣನೋರ್ವರು ಕಾಲೇಜಿನ ಮುಖ್ಯಸ್ಥರಾದರು. ಪದವೀಧರರಿಗೆ ಲಭ್ಯವಿರಬಹುದಾದ ಸರ್ಕಾರಿ ಉದ್ಯೋಗಕ್ಕೆ ಆಕರ್ಷಿತರಾಗದೆ ತಮ್ಮ ಸೇವೆಯನ್ನು ಸಮಾಜಕ್ಕೆ ಮೀಸಲಿಟ್ಟ ತರುಣ ಅವರು. ಅವರು ಗೌರವ ಪ್ರಿನ್ಸಿಪಾಲರಾಗಿ ಕಾಲೇಜಿನ ಮುನ್ನಡೆಗೆ ಶ್ರಮಿಸುತ್ತಿದ್ದರು. ಲಜಪತರಿಗೆ ತಮ್ಮ ಶಾಲಾ ದಿನಗಳಲ್ಲಿ ಗೌರವ ಪ್ರಿನ್ಸಿಪಾಲರೆಂದರೆ ಏನೆಂಬುದರ ಅರ್ಥ ಗ್ರಾಹ್ಯವಾಗಿರಲಿಲ್ಲ.

ಹೀಗಾಗಿ ಆರ್ಯ ಸಮಾಜವು ತನ್ನ ಗಟ್ಟಿತನವನ್ನು ಬುದ್ಧಿಜೀವಿ ವರ್ಗದಲ್ಲಿ ಬೇರೂರಿಸಿಕೊಂಡಿತ್ತು. ಲಾಹೋರ್ ಹಾಗೂ ಪಂಜಾಬಿನಾದ್ಯಂತ ಪ್ರತಿವರ್ಷವೂ ಅದರ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಿದ್ದವು. ವೈದಿಕ ಧರ್ಮವನ್ನು ಪುನರುತ್ಥಾನಗೊಳಿಸುವ ಆಶಯ ಸಮಾಜದ್ದಾಗಿತ್ತು. ಪ್ರಾಚೀನ ಭಾರತದ ವೈಭವವನ್ನು ಆ ತಾಯಿಯ ಸದ್ಯದ ದಯನೀಯ ಸ್ಥಿತಿಯೊಂದಿಗೆ ಹೋಲಿಸಿ ಪುನರುತ್ಥಾನಕ್ಕೆ ಹಿಂದೂಗಳನ್ನು ಮಾನಸಿಕವಾಗಿ ಸನ್ನದ್ಧಗೊಳಿಸುತ್ತಿತ್ತು. ತನ್ಮೂಲಕ ದೇಶಭಕ್ತಿಯ ಛಾಪು ಒತ್ತುತ್ತಿತ್ತು. ಸಮಾಜದ ಬಹುಮುಖ ಉದ್ದೇಶಗಳಲ್ಲಿ ದೇಶಭಕ್ತಿ ಮೂಡಿಸುವ ಕೆಲಸವೂ ಪ್ರಮುಖವಾದದ್ದು. ಹಿಂದೂ ಸಮಾಜವನ್ನು ಆಧುನಿಕಗೊಳಿಸುವುದು ಅದರ ಇನ್ನೊಂದು ಪ್ರಾತಿನಿಧಿಕ ಕರ್ತವ್ಯವಾಗಿತ್ತು. ಕಾಲದ ಅಗತ್ಯಕ್ಕೆ ತಕ್ಕಂತೆ ಸಮರ್ಥವಾಗಿ ಆಧುನಿಕ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ಹಿಂದೂ ಸಮಾಜವನ್ನು ಸಶಕ್ತಗೊಳಿಸುವುದು ಅದರ ಉದ್ದೇಶವಾಗಿತ್ತು. ವೇದವನ್ನು ಉಪೇಕ್ಷಿಸಿದ್ದರಿಂದಲೇ ಹಿಂದೂ ಸಮಾಜಕ್ಕೆ ಅನಿಷ್ಟಗಳೆಲ್ಲಾ ಅಂಟಿಕೊಂಡಿವೆ ಎಂಬ ವಾದವೊಂದು ಆರ್ಯ ಸಮಾಜದಲ್ಲಿತ್ತು. ಇನ್ನೊಂದು ಕಡೆ ಯುರೋಪಿನ ಆಧುನಿಕ ಬರಹಗಾರರು, ಚಿಂತನಶೀಲರು, ಚರಿತ್ರಕಾರರು ಹಾಗೂ ಮುತ್ಸದ್ದಿಗಳ ಕೊಡುಗೆಗಳೊಂದಿಗೆ ವೇದ ಮತ್ತು ಋಷಿಗಳ ಪರಿಚಯಕ್ಕಿಂತಲೂ ಹೆಚ್ಚು ಹತ್ತಿರವಾದವರು ಸಮಾಜದಲ್ಲಿ

ಗಣನೀಯ ಸಂಖ್ಯೆಯಲ್ಲಿದ್ದರು. ಆಧುನಿಕ ವಿಶ್ವದಲ್ಲಿ ಹಿಂದೂ ಸಮಾಜವು ಕಾಲೋಚಿತ ಹೋರಾಟಕ್ಕೆ ಸಮರ್ಥವಾಗಬೇಕೆಂದು ಬಯಸುತ್ತಿದ್ದವರು ಈ ವರ್ಗದವರೇ. ಬಾಲ್ಯ ವಿವಾಹವನ್ನು ಅಳಿಸಬೇಕು. ವಂಶಪಾರಂಪರ್ಯ ಪೂಜಾ ವಿಧಾನವನ್ನು ರದ್ದು ಪಡಿಸಬೇಕು. ಎಲ್ಲಾ ಶಾಸ್ತ್ರ ವಿಧಿಗಳನ್ನು ಸರಳಗೊಳಿಸಬೇಕು. ವಿಧವಾ ವಿವಾಹದ ಮೇಲಣ ನಿಷೇಧವನ್ನು ತೆರವು ಮಾಡಬೇಕು. ಸಾಗರೋತ್ತರ ಪ್ರಯಾಣದ ಮೇಲಿನ ನಿರ್ಬಂಧ ತೆಗೆದು ಹಾಕಬೇಕು ಎಂಬುದು ಈ ವರ್ಗದ ಧೋರಣೆಯಾಗಿತ್ತು. ಇಂತಹ ಬಹುತೇಕ ನಿಲುವುಗಳು ಬ್ರಹ್ಮ ಸಮಾಜದಲ್ಲಿ ಇದ್ದವು. ಆದರೆ ಪ್ರಗತಿಪರ ಎನ್ನುವುದಕ್ಕಿಂತಲೂ ಸಂಪ್ರದಾಯಕ್ಕೆ ಅಂಟಿಕೊಂಡ ಧೋರಣೆಗಳೇ ಹೆಚ್ಚಾಗಿದ್ದವು.

ಸಂಪ್ರದಾಯವಾದಿಗಳು ಕಾಲದ ಮಾರ್ಪಾಟಿಗೆ ಹೊಂದಿಕೊಳ್ಳುವ ಇತರೆ ಧರ್ಮಗಳಲ್ಲಿನ ಒಳ್ಳೆ ಗುಣಗಳನ್ನು ಗ್ರಹಿಸುವ ಎತ್ತರಕ್ಕೆ ಬೆಳೆದಿರಲಿಲ್ಲ. ಇತರೆ ಧರ್ಮಗಳ ಮಿಷನರಿಗಳು ಹಿಂದೂವಾದದ ಬಗ್ಗೆ ಟೀಕೆ ಮಾಡಿದಾಗ ಆ ಟೀಕೆಯ ಸತ್ಯಾಸತ್ಯತೆಯನ್ನು ಪರಾಮರ್ಶಿಸುವ ಬದಲು ಮುಯ್ಯಿಗೆ ಮುಯ್ಯಿಗಾಗಿ ಹಾತೊರೆಯುತ್ತಿದ್ದರು.. ಹಿಂದೂವಾದ ಆಕ್ರಮಣಶೀಲವಾಗಿರಬೇಕೆಂದು ವಾದಿಸುತ್ತಿದ್ದರು. ಪ್ರತಿಸ್ಪರ್ಧಿ ಧರ್ಮಗಳಿಗಿಂತ ಹಿಂದುಳಿಯಬಾರದೆಂದು ಹೇಳುತ್ತಿದ್ದರು. ಈ ಮಧ್ಯೆ ಸುಧಾರಣಾವಾದಿಗಳು ತದ್ವಿರುದ್ಧವಾದ ಕ್ರಿಯೆಗಳಲ್ಲಿ ಸಕ್ರಿಯರಾಗುತ್ತಾ ಬಂದರು. ಅಸ್ಪೃಶ್ಯತೆ ನಿವಾರಣೆಗೆ ಹೆಚ್ಚು ಒತ್ತು ಕೊಟ್ಟರು. ಸುಧಾರಣಾ ಆಂದೋಲನ ಆರಂಭಿಸಿದರು. ದೇವನಾಗರಿ ಮತ್ತು ಹಿಂದಿಗೆ ಆದ್ಯತೆ ನೀಡಿದರು. ಈ ಕಾರಣಗಳಿಂದಾಗಿ ಬ್ರಹ್ಮ ಸಮಾಜಕ್ಕಿಂತಲೂ ಆರ್ಯ ಸಮಾಜದ ಸೇವೆ ಮುಂಚೂಣಿಯತ್ತ ಸಾಗತೊಡಗಿತು. ಕೆಲವು ನಾಯಕರಲ್ಲಿ ಕಾಲೋಚಿತ ಪರಿಜ್ಞಾನ ಮತ್ತು ಪರಿವರ್ತನೆಯ ಸಂಸ್ಕೃತಿ ಕಡಿಮೆ ಇದ್ದಿರಬಹುದು. ಪರಿವರ್ತನೆಯ ಚಕ್ರ ತಿರುಗಲು ಅವರಿಂದ ಉತ್ಸಾಹ ಭಂಗವಾಗಲಿಲ್ಲ. 1890ರ ದಶಕದಲ್ಲಿ ಆರ್ಯ ಸಮಾಜವು ಪಂಜಾಬ್ ಜನಜೀವನದ ಎಲ್ಲಾ ಮುಖಗಳಲ್ಲೂ ಪ್ರಭಾವಶಾಲಿಯಾಯಿತು. ಹಿಂದೂಗಳಲ್ಲಿನ ಕರ್ತೃತ್ವಶೀಲ, ಪುರೋಗಾಮಿ ಶಕ್ತಿಗಳು ಆರ್ಯ ಸಮಾಜವನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅಪ್ಪಿಕೊಳ್ಳತೊಡಗಿತು. ಲಾಹೋರಿನಲ್ಲಿ ಶಿಕ್ಷಿತ ವರ್ಗದ ಸಂಖ್ಯೆ ಹೆಚ್ಚಾದಷ್ಟು ಆರ್ಯ ಸಮಾಜದ ಶಕ್ತಿ ಬಲಿಷ್ಟವಾಗತೊಡಗಿತ್ತು. ಹೀಗೆ ಲಾಹೋರ್ ನಗರಿಯ ಮಾನಸದಲ್ಲಿ ತ್ವರಿತಗತಿಯಲ್ಲಿ ಮಾರ್ಪಾಟಾಗತೊಡಗಿತ್ತು. ಒಂದು ಕಡೆ ಪುನರುತ್ಥಾನದ ವಾದ. ಮತ್ತೊಂದೆಡೆ ಆಧುನಿಕರಣದ ಕ್ರಿಯೆಗಳು. ಆರ್ಯ ಸಮಾಜದಲ್ಲಿ ಒಟ್ಟೊಟ್ಟಿಗೆ ಮುನ್ನುಗ್ಗತೊಡಗಿದ್ದು ವಿಚಿತ್ರವೂ ಹೌದು. ವಾಸ್ತವವೂ ಹೌದು.

ಅದೇ ಸಮಯದಲ್ಲಿ ರಾಜಕೀಯದ ಬಗ್ಗೆ ಒಲವು ಹೆಚ್ಚ ತೊಡಗಿತು. ಕಾಂಗ್ರೆಸ್ಸಿನ ಘಟಕ ಅಲ್ಲಿ ಇನ್ನು ಆರಂಭಗೊಂಡಿರಲಿಲ್ಲ. ಆದರೆ ಭಾರತೀಯ ಸಂಘದ ಶಾಖೆ ಸ್ಥಾಪಿತವಾಗಿತ್ತು. ರಾಜಕಾರಣ ವಕೀಲರಿಗೆ ಹವ್ಯಾಸ. ಕಾನೂನು ವೃತ್ತಿ ತುಂಬಾ ಆಕರ್ಷಕವಾಗಿತ್ತು. ಅದರರ್ಥ ಸಮೃದ್ಧ ಹಣ ಗಳಿಕೆ, ಅಪಾರ ಜನಮನ್ನಣೆ. ವ್ಯವಹಾರಿಕ ಪರಿಜ್ಞಾನವುಳ್ಳ ಮನುಷ್ಯ ಬಂಡವಾಳ ಇಲ್ಲದೆ ಮೇಲೆಳಲಾರನೆಂದು ಸಹಜವಾಗಿ ತರ್ಕಿಸುತ್ತಾನೆ. ವಕೀಲ ವೃತ್ತಿಯಲ್ಲಿ ಅದು ಮೂಲ ಗುಣ. ವೃತ್ತಿಪರವಾಗಿ ಒಮ್ಮೆ

ಸಾಮರ್ಥ್ಯವನ್ನು ಸ್ಥಾಪಿಸಿಕೊಂಡರೆ ಮೇಲ್ದರ್ಜೆಗೆ ಏರಿದಂತೆಯೇ. ದೊಡ್ಡ ಪ್ರಮಾಣದಲ್ಲಿ ಶುಲ್ಕ ವಸೂಲಿ ಸುಲಭವಾಗುತ್ತದೆ. ನಿಜ. ಪಂಜಾಬಿನಲ್ಲಿ ದೊಡ್ಡ ದೊಡ್ಡ ಜಮೀನ್ದಾರರಿಲ್ಲ. ರಾಜರೂ ಇರಲಿಲ್ಲ. ಆದಾಗಿ ಲಕ್ಷಗಟ್ಟಳೆ ವರಮಾನ ವಕೀಲರಿಗೆ ಸಾಧ್ಯವೂ ಇರಲಿಲ್ಲ. ಆದರೂ ಯಶೋಪರ ವಕೀಲರು ಮಧ್ಯಮ ವರ್ಗದ ಕಕ್ಷಿದಾರರಿಂದ ಆಕರ್ಷಕವೆನಿಸಬಹುದಾದ ಮೊತ್ತವನ್ನೇ ಪಡೆಯುತ್ತಿದ್ದರು. ವಕೀಲ ವೃತ್ತಿಯಲ್ಲಿ ರಾಜೋಚಿತ ವರಮಾನ ಇಲ್ಲದಿದ್ದರೂ ಸುಖ ವೈಭವಕ್ಕೆ ಒದಗದಷ್ಟು ಲೋಪವಂತೂ ಇರಲಿಲ್ಲ. ಗೌರವವಂತೂ ಕಟ್ಟಿಟ್ಟ ಬುತ್ತಿ. ಅದು ನಿರಾಯಾಸವಾಗಿ ದೊರೆಯುತ್ತಿದ್ದ ಸಂಪತ್ತು. ತಮ್ಮ ಸಹಜ ಹಕ್ಕೋ ಎನ್ನುವಂತೆ ವಕೀಲರು ರಾಜಕಾರಣದಲ್ಲಿ ತಾವೇ ತಾವಾಗುತ್ತಿದ್ದರು. ಬುದ್ಧಿಜೀವಿ ವರ್ಗದಲ್ಲಿ ' ಸ್ವತಂತ್ರ' ಗ್ರಹಣಶಕ್ತಿಯುಳ್ಳ ಅರ್ಧಕ್ಕೂ ಹೆಚ್ಚಿನ ಸಂಖ್ಯೆ ಅವರದೇ. ಉಳಿದ ಭಾಗ ಸರ್ಕಾರಿ ಸೇವೆಯಲ್ಲಿದ್ದವರದು. ಅವರು ಕಾಯ್ದೆ ಕಾನೂನುಗಳ 'ಚೌಕಟ್ಟಿ'ಗೆ ಒಳಪಟ್ಟವರು. ಲಾಹೋರ್ ನಗರಿಯಲ್ಲಿ ಬಾಬುಗಳ ಸಂಖ್ಯೆ ಹೆಚ್ಚಾದಂತೆ ಆರ್ಯ ಸಮಾಜದ ಕಾರ್ಯಕರ್ತರ ಸಂಖ್ಯೆಯೂ ಬೆಳೆಯತೊಡಗಿತು. ವಕೀಲರ ಸಂಖ್ಯೆ ಹೆಚ್ಚಿದಂತೆ ರಾಜಕಾರಣಿಗಳ ಗುಂಪು ವರ್ಧಿಸತೊಡಗಿತು.

ಹಿಂದೂಗಳಲ್ಲಿ ಬ್ರಹ್ಮಸಮಾಜ ಮತ್ತು ಆರ್ಯ ಸಮಾಜಗಳ ಚಟುವಟಿಕೆಗಳು ಬಿರುಸಾಗುತ್ತಿದ್ದಂತೆ ಅತ್ತ ಮುಸ್ಲಿಮರಲ್ಲೂ ದನಿ ಏಳತೊಡಗಿತು. 1883-84ರಲ್ಲಿ ಪಂಜಾಬಿನಲ್ಲಿ ಪ್ರವಾಸ ಕೈಗೊಂಡ ಸರ್ ಸಯದರು ಹೊಸ ಅಲೆ ಎಬ್ಬಿಸಿದ್ದರು. ಅಹಮದೀಯರೆಂಬ ಒಂದು ಹೊಸ ಪಂಗಡ ಹುಟ್ಟಿಕೊಂಡಿತ್ತು. ಅನೇಕ ವಿಧದಲ್ಲಿ ಆಧುನಿಕ ಮುಕ್ತ ಧೋರಣೆಗಳೊಂದಿಗೆ ಮುಸ್ಲಿಮರು ಸೈಯದ್ ವಾದಿಗಳು ಹಿಂದೂಗಳ ಬ್ರಹ್ಮ ಸಮಾಜದ ಆಂದೋಲನದೊಂದಿಗೆ ಹೋಲುತ್ತಿದ್ದರು. ಈ ಹೋಲಿಕೆ ಸರ್ ಸಯದರದು. ಕಾಂಗ್ರೆಸ್ ವಿರುದ್ಧ ತಮ್ಮ ಸಂಕುಚಿತ ಮನಸ್ಸಿನ ಪ್ರಚಾರ ಕೈಗೊಳ್ಳುವವರೆಗೆ ಆರೋಗ್ಯಕರವಾಗಿತ್ತು. ಅಹಮದೀಯ ಮತ್ತು ಆರ್ಯ ಸಮಾಜಗಳ ನಡುವೆ ಉತ್ಸಾಹ ಮತ್ತು ಕಾರ್ಯಶೀಲತೆಗಳಲ್ಲಿ ಪೈಪೋಟಿಯೂ ಇತ್ತು. ಅದೇ ಸಂದರ್ಭದಲ್ಲಿ ಸಿಖ್‌ರು ಸಹ ಜಾಗೃತರಾದರು. ಹಿಂದೂಗಳಿಗಿಂತ ತಾವು ಭಿನ್ನವಾದವರು ಎಂದು ತೋರಿಸಿಕೊಳ್ಳತೊಡಗಿದರು. ಆ ತನಕ ಹಿಂದೂ ಧರ್ಮದ ಅನೇಕ ಅರೆ ಸ್ವಾಯತ್ತ ಅಂಗಗಳಂತೆ ಸಿಖ್‌ರು ಸಹ ಒಂದು ಭಾಗವೆಂದು ಲೋಕ ಭಾವಿಸಿತ್ತು. ಲಜಪತರ ಕಾಲೇಜು ದಿನಗಳ ಸಮಯದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರದಲ್ಲಿ ತಾವು ಸಿಖ್‌ರೇ, ಹಿಂದೂಗಳೇ, ಕ್ರಿಶ್ಚಿಯನ್ನರೇ, ಅಥವಾ ಮುಸ್ಲಿಮರೇ ಎಂದು ನಮೂದಿಸಬೇಕಾಗುತ್ತಿತ್ತು. ಅದಕ್ಕೆ ಮೊದಲು ಹಿಂದೂ-ಸಿಖ್‌ರ ನಡುವೆ ತಾರತಮ್ಯ ಇರಲಿಲ್ಲ. 1893ರಲ್ಲಿ ಮಖಾಲಿಫ್ ತಮ್ಮ ನ್ಯಾಯಾಂಗ ಸೇವೆಯನ್ನು ತೊರೆದು ಸಿಖ್ ಗ್ರಂಥಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದರು. ಸಿಖ್ ಧರ್ಮದ ಆರು ಸಂಪುಟಗಳನ್ನು ಭಾಷಾಂತರಿಸಿದರು. ಅದಕ್ಕೆ ಮುನ್ನ ಆದಿ ಗ್ರಂಥವನ್ನು ಡಾ. ಟ್ರಂಪ್ ಮಾಡಿದ್ದರು ಅವರು ನಿಧನ ಹೊಂದಿದ 8 ವರ್ಷಗಳ ನಂತರ ಈ ಅನುವಾದ ಕಾರ್ಯ ನಡೆದಿತ್ತು ಅದೇ ವೇಳೆಯಲ್ಲಿ ಸಿಖ್ ಧರ್ಮದಲ್ಲಿ ಜಾನ್ ಬುಲ್ ವಿಶೇಷ ಆಸಕ್ತಿ ತೋರಿದರು '1857ರ ದಂಗೆ' ಬಗ್ಗೆ ಈ ಕೃತಿಯಲ್ಲಿ ಹೆಚ್ಚು ಪ್ರಸ್ತಾಪವಿದೆ

ಸಿಖ್‌ರಿಗೆ ವಿಶೇಷ ಸ್ಥಾನಮಾನ ದೊರೆಯಬೇಕು ಎಂಬ ಕುಮ್ಮಕ್ಕು ತುಂಬಿದ್ದು ಸಾಮ್ರಾಜ್ಯವಾದಿಗಳೇ. ಎಲ್ಲಾ ಸಮುದಾಯಗಳಲ್ಲೂ ಹೀಗೆ ಸಮಾನತೆಯ ಹುದುಗು ಕಾಣಿಸಿಕೊಂಡಿತು. ಲಾಹೋರ್ ನಗರದಿಂದ ಅದು ಪಂಜಾಬಿನ ದೂರದ ಊರುಗಳಿಗೆಲ್ಲಾ ಹಬ್ಬಿತು. ಅದೇ ವೇಳೆಯಲ್ಲಿ ಪಂಜಾಬ್ ಆಧುನಿಕ ಮೆಟ್ರೋಪಾಲಿಟನ್ ನಗರವಾಗಿ ರೂಪುಗೊಳ್ಳತೊಡಗಿತು.

ಸಶಕ್ತ ರಾಜಕಾರಣವೂ ದಿನೇ ದಿನೇ ಗಟ್ಟಿಯಾಗತೊಡಗಿತು. ಪತ್ರಿಕೆಗಳ ಪ್ರಾಮುಖ್ಯತೆಯೂ ಆ ನಗರಿಯಲ್ಲಿ ದಿನೇ ದಿನೇ ವೃದ್ಧಿ ಕಂಡಿತು. ನಗರ ಜೀವನದಲ್ಲಿ ಬುದ್ಧಿಜೀವಿಗಳದೇ ದೊಡ್ಡ ಪಾತ್ರವಾಯಿತು. ಅಮಾಯಕ ಜನರು ಅಮಾಯಕರಾಗೇ ಉಳಿದಿದ್ದು ಇನ್ನೊಂದು ಮುಖ. ಇಂಗ್ಲಿಷ್ ಮಾಧ್ಯಮದ ಪತ್ರಿಕೆಗಳ ಪರವೂ ಪ್ರತಿಷ್ಠೆ ಮತ್ತು ಪ್ರಭಾವ ಸಹಜವಾಗಿ ಹೆಚ್ಚುತ್ತಾ ಬಂದಿತು. ಇಂಗ್ಲಿಷರು ಪಂಜಾಬನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಳ್ಳುತ್ತಿದ್ದಂತೆ 'The Civil & Military Gazette' ಪ್ರಕಟಗೊಳ್ಳತೊಡಗಿತು. ಭಾರತೀಯರಿಗೂ ಒಂದು ಪತ್ರಿಕೆ ಬೇಕಿತ್ತು. ದಯಾಳ ಸಿಂಗ್ ಮಜೀಥಿಯಾ ಶ್ರಮದ ಫಲವಾಗಿ 'Tribune' ಪ್ರಾರಂಭವಾಯಿತು.

ಕೆಲವೇ ವರ್ಷಗಳ ನಂತರದಲ್ಲಿ 'Tribune' ವಾರಕ್ಕೆ ಎರಡು ಬಾರಿ ಪ್ರಕಟಣೆಯ ಬೆಳವಣಿಗೆ ಕಂಡಿತು. ಲಾಹೋರಿನಿಂದ ಆ ಕಾಲದಲ್ಲಿ ಪ್ರಕಟಗೊಳ್ಳತೊಡಗಿದ ಇಂಗ್ಲಿಷಿನ ಭಾರತೀಯ ಪ್ರಮುಖ ಪತ್ರಿಕೆ ಅದೊಂದೇ. 1890ರಲ್ಲಿ ಬಂಗಾಳದ ಹೆಸರಾಂತ ನಾಗೇಂದ್ರನಾಥ ಗುಪ್ತ ಸಂಪಾದಕತ್ವ ವಹಿಸಿಕೊಂಡ ಮೇಲೆ 'Tribune' ವಾರಕ್ಕೆ ಮೂರು ಬಾರಿ ಪ್ರಕಟಗೊಳ್ಳತೊಡಗಿತು.

ಈ ರೀತಿ 1890ರ ಆರಂಭದಲ್ಲಿ ತನ್ನ ನಿಜ ವಾಸ್ತವ್ಯಕ್ಕಾಗಿ ಲಜಪತ್‌ರಾಯ್ ಲಾಹೋರಿಗೆ ಅಡಿ ಇಟ್ಟಾಗ ಆ ನಗರಿಯ ಬಹಿರಂಗ ಮತ್ತು ಆಂತರಿಕ ಮುಖಗಳ ಮಾರ್ಪಾಟು ತ್ವರಿತ ಗತಿಯಲ್ಲಿ ಆಗುತ್ತಿತ್ತು. ಆ ಪರಿಸ್ಥಿತಿ ಅವರ ವೃತ್ತಿ ಮತ್ತು ಸಾರ್ವಜನಿಕ ಬದುಕಿನ ಪ್ರವೃತ್ತಿಗಳಿಗೆ ಹದವಾದ ಭೂಮಿಕೆ ಒದಗಿಸಿತು. ಅವರ ಪ್ರತಿಭೆ, ಕ್ರಿಯಾಶೀಲತೆ, ಸಹಜ ಪ್ರವೃತ್ತಿಗಳು ಅರಳಲು ಸುಲಲಿತ ಅವಕಾಶ ಒದಗಿಸಿಕೊಟ್ಟಿತು. ಜೀವನೋಪಾಯದ ಶುದ್ಧ ಬದುಕಿನ ನಡುವೆ ಮಹೋದ್ದೇಶಗಳನ್ನು ಸಾಧಿಸಿಕೊಳ್ಳುವಂತಹ ಆಂತರಿಕರಣ, ಬಾಹ್ಯ ಸ್ಫೂರ್ತಿ ಲಾಹೋರ್ ನಗರಿಯಲ್ಲಿ ಲಜಪತರಿಗೆ ಪ್ರಾಪ್ತವಾಯಿತು.

* * *

ಅಧ್ಯಾಯ-12

ಸಮಾಜದಲ್ಲಿ ವರ್ಚಸ್ಸಿನ ತಾಕಲಾಟ

ಈಗ ಆರ್ಯ ಸಮಾಜ ಅವರ ಚಟುವಟಿಕೆಯ ಕ್ಷೇತ್ರವಾಯಿತು. ನಿಸ್ಸಂಶಯವಾಗಿ ಅದು ಪ್ರವರ್ಧಮಾನದಲ್ಲಿತ್ತು. ಅದೇ ಸಮಯದಲ್ಲಿ ಗಂಭೀರ ಬಿಕ್ಕಟ್ಟು ಸಹ ಅದರಲ್ಲಿ ಕಾಣಿಸಿಕೊಂಡಿತ್ತು. ಎರಡು ಗುಂಪುಗಳ ನಡುವೆ ಸೈದ್ಧಾಂತಿಕ ತಾಕಲಾಟ ಗಹನವಾಗುತ್ತಾ ಹೋಯಿತು. ಶಾಖಾಹಾರಿ ವಾದ ಪ್ರಮುಖ ಕಾರಣ. ಸಾಯಿನ್‌ದಾಸ್ ಮತ್ತು ಗುರುದತ್ತರ ನಡುವೆ ಈ ತಾರತಮ್ಯ ಹುಟ್ಟಿ ಎರಡು ಬಣಗಳಾಗುವಷ್ಟರ ಮಟ್ಟಿಗೆ ಅಸಮಾಧಾನ ಬೆಳೆಯಿತು. ಅವರಿಬ್ಬರು ನಿಧನ ಹೊಂದಿದ ನಂತರ ಆ ಭಿನ್ನಮತ ಆರ್ಯ ಸಮಾಜವಾದಿಗಳಲ್ಲಿ ದೊಡ್ಡದಾಗುತ್ತಾ ಹೋಗಿ ಕೊನೆಗೆ ಇಬ್ಭಾಗದ ಸ್ಥಿತಿ ಮುಟ್ಟಿತು. ಎರಡು ಗುಂಪುಗಳ ನಡುವೆ ಹುಟ್ಟಿದ ಸೈದ್ಧಾಂತಿಕ ತಾಕಲಾಟ ವಾಸ್ತವ್ಯದಲ್ಲಿ ಯಾರ ಹಿತದೃಷ್ಟಿಯಿಂದಲೂ ಒಳಿತಿನದಾಗಿರಲಿಲ್ಲ. ಆ ಅವಧಿಯಲ್ಲೇ, ಗುರುದತ್ ಇನ್ನೂ ಬದುಕಿದ್ದಾಗಲೇ, ಡಿ.ಎ.ವಿ. ಆಡಳಿತ ಸಮಿತಿ ನಿರ್ಣಯ ಅಂಗೀಕರಿಸಿ ಕಾಲೇಜು ವಿಭಾಗ ತೆರೆಯಲು ಮುಂದಾಯಿತು. ಅವರು ನಿಧನ ಹೊಂದಿದ ಅನತಿ ಕಾಲದಲ್ಲೇ ಸಮಾಜದ ಆಂತರಿಕ ಕಚ್ಚಾಟ ವಿಕೋಪಕ್ಕೆ ಹೋಯಿತು. ಲಜಪತ್‌ರಾಯ್ ತಮ್ಮ ಜೀವನ ಚರಿತ್ರೆಯಲ್ಲಿ ಆ ಕಿತ್ತಾಟದ ಬಗ್ಗೆ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ.

''ಮೊದಲ ಕಾರಣ ಲಾಲಾ ಹನ್ಸರಾಜ್ ಅವರ ವೈಯಕ್ತಿಕ ವರ್ಚಸ್ಸಿನ ಕೊರತೆ. ಜನತೆ ಅವರನ್ನು ಹಠಮಾರಿ ಎಂದೂ, ಜಿದ್ದು ಸ್ವಭಾವದವರು ಎಂದೂ ಭಾವಿಸಿದ್ದರು. ತಮ್ಮ ವಾದಕ್ಕೆ ಕಟ್ಟು ಬೀಳುವ ಗುಣ, ಉದ್ಧಟತನ, ಆಡಳಿತದ ಅತಿರೇಕದ ಕಟ್ಟಳೆಯಿಂದಾಗಿ ಜನಪ್ರಿಯತೆ ಕಳೆದುಕೊಂಡಿದ್ದರು.''

ಎರಡನೇಯದಾಗಿ, ಶಾಖಾಹಾರದ ಪ್ರಶ್ನೆ. ಈ ಧೋರಣೆಯನ್ನು ಕಡೆಗಣಿಸುವುದು ಸ್ವಾಮಿ ದಯಾನಂದರ ನಿರೂಪವನ್ನು ಪ್ರಶ್ನಿಸಿದಂತೆ ಎಂಬ ವಾದ ಒಂದು ಕಡೆ ಪ್ರಬಲವಾಗುತ್ತಾ ಬಂದಿತು. ತಮ್ಮ ಅಂತಿಮ ದಿನಗಳಲ್ಲಿ ಪಂಡಿತ್ ಗುರುದತ್ತರು ಸ್ವಾಮಿ ಅವರ ಕಟ್ಟಾ ಅನುಯಾಯಿಯಾಗಿದ್ದರು. ಅವರು ಹಾಕಿ ಕೊಟ್ಟಿದ್ದ ಸಿದ್ಧಾಂತ, ನಿರ್ದೇಶನಗಳಿಂದ ಕಿಂಚಿತ್ತೂ ಭಿನ್ನವಾಗಲು ಅವರು ಒಪ್ಪಲಿಲ್ಲ. ತಮ್ಮ ಆತ್ಮಾಭಿಮಾನದ ಪ್ರಸಂಗಗಳಲ್ಲಿ 'ಸತ್ಯಾರ್ಥ ಪ್ರಕಾಶ' ಸೂಕ್ತಿ ಸಹ ಅಕ್ಷರಶಃ ಮಾನ್ಯವೆಂದು ಪಟ್ಟು ಹಿಡಿಯುತ್ತಿದ್ದರು. ಅವರ ಬೆಂಬಲಿಗರು ಮತ್ತು ಅನುಯಾಯಿಗಳಲ್ಲೂ ಅದೇ ಹುಮ್ಮಸ್ಸು ಹರಿಯತೊಡಗಿತು. ಶಾಖಾಹಾರದ ವಿಚಾರವನ್ನು ಅತಿ ಮಾಡಿದಾಗ ಸಹಜವಾಗಿ ಎದುರು ವರ್ಗ ತಿರುಗಿ ಬಿದ್ದಿತು. ಆರ್ಯ ಸಮಾಜ ವಾದಿಗಳಿಗೆ ಸ್ವಾಮಿ ದಯಾನಂದರ ಎಲ್ಲಾ ಬೋಧನೆಗಳನ್ನು ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿಲ್ಲ. ಮತ್ತು ಅವರು ಹೇಳಿದ್ದೆಲ್ಲವೂ ಅಕ್ಷರಶಃ ಮಾನ್ಯವಲ್ಲ ಎಂಬ ಪ್ರತಿಪಾದನೆ ಹುಟ್ಟಿಕೊಂಡಿತು

ಕಾಲೇಜು ಆಡಳಿತದಲ್ಲೂ ಭಿನ್ನಮತ ದಟ್ಟವಾಗತೊಡಗಿತು. 1890ರಲ್ಲಿ ಗುರುದತ್ತರ ನಿಧನದ ನಂತರ ದೊಡ್ಡ ವಿವಾದವೇ ತಲೆದೋರಿತು. ಕಾಲೇಜಿನ ಪಠ್ಯದಲ್ಲಿ ಸಂಸ್ಕೃತಕ್ಕೆ ಇರಬೇಕಾದ ಸ್ಥಾನಮಾನ ಮತ್ತು ಸಂಸ್ಕೃತ ಪಠ್ಯ ವಿಷಯದಲ್ಲಿ ವಿವಾದ ದಿನೇ ದಿನೇ ಹೆಚ್ಚುತ್ತಾ ಹೋಯಿತು. ದಯಾನಂದರ ಸತ್ಯಾರ್ಥ ಪ್ರಕಾಶದಲ್ಲಿ ಶಿಕ್ಷಣ ಕುರಿತ ಒಂದು ಅಧ್ಯಾಯವಿತ್ತು. ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣಗಳಲ್ಲಿ ಪಠ್ಯ ವಿಷಯಗಳು ಹೇಗಿರಬೇಕೆಂಬ ನಿರ್ದೇಶನ ಅದರಲ್ಲಿತ್ತು. ಅದೊಂದು ಶುದ್ಧ ಸಂಪ್ರದಾಯದ ನಿರೂಪಣೆ. ಕಾಳಿದಾಸ, ಭವಭೂತಿಯಂತಹ ಮಹಾನ್ ಕವಿಗಳ ಅಧ್ಯಯನಕ್ಕೆ ಸಹ ಅದರಲ್ಲಿ ಅವಕಾಶವೇ ಇರಲಿಲ್ಲ. ಹೇಳಬೇಕೆಂದರೆ ಸಂಸ್ಕೃತ ನಾಟಕ ಪ್ರಕಾರವನ್ನೇ ಉಪೇಕ್ಷಿಸಲಾಗಿತ್ತು. ಪಠ್ಯ ಭಾಗದಲ್ಲೂ ಕೇವಲ ವಾಲ್ಮೀಕಿ ಮತ್ತು ವ್ಯಾಸರ ಕೃತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಅದು ಸಹ ಚರಿತ್ರೆಯ ರೂಪದಲ್ಲಿ ಅಲ್ಲ. ಕಾವ್ಯಾಧ್ಯಯನದ ರೀತಿಯಲ್ಲಿ. ಸಂಸ್ಕೃತ ಅಧ್ಯಯನದಲ್ಲಿ ಹೆಚ್ಚು ಆದ್ಯತೆ ಕೊಟ್ಟಿದ್ದು 'ಪಾಣಿನಿ'ಗೆ. ಅದರ ಜೊತೆಗೆ 'ಪತಂಜಲಿ'ಯ ಮಹಾಭಾಷ್ಯಕ್ಕೆ. ನಂತರದ ವೈಯಾಕರಣಿಗಳ ಅಧ್ಯಯನಕ್ಕೆ ಅವಕಾಶವೇ ಇರಲಿಲ್ಲ. ಕಾರಣ ಸ್ವಾಮಿ ದಯಾನಂದರು 'ಪಾಣಿನಿ', 'ಪತಂಜಲಿ'ಯ ನಂತರದ ಎಲ್ಲಾ ವೈಯಾಕರಣಿಗಳನ್ನು ಕಟುವಾಗಿ ಖಂಡಿಸಿದ್ದರು.

ಋಷಿಗಳು ಮತ್ತು ಸಾಮಾನ್ಯ ವರ್ಗದವರು ರಚಿಸಿದ ಕೃತಿಗಳ ವಿಷಯದಲ್ಲಿ ದಯಾನಂದರಲ್ಲಿ ಮೂಲಭೂತವಾಗಿ ತಾರತಮ್ಯದ ಮನೋಧರ್ಮವಿತ್ತು. ಈ ಎರಡು ಕೃತಿಗಳ ನಡುವೆ ಬೆಸೆಯಲಾಗದ ಅಂತರವಿದೆ ಎಂದು ಅವರು ತಿಳಿದುಕೊಂಡಿದ್ದರು. ವೇದಗಳಲ್ಲಿ ಉತ್ತಮವಾದ ಮಹಾಸತ್ಯಗಳನ್ನು ಋಷಿಗಳು ಮಾತ್ರ ಮನಗಂಡು ಅದನ್ನು ಲೋಕಕ್ಕೆ ನೀಡಿದ್ದಾರೆ. ವಿದ್ವಾಂಸರು, ಋಷಿಗಳು ರಚಿಸಿದ ಕೃತಿಗಳನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂದು ಅವರು ನಿರ್ದೇಶನ ನೀಡುತ್ತಿದ್ದರು. ಸತ್ಯಾರ್ಥ ಪ್ರಕಾಶವನ್ನು ಅಕ್ಷರಶಃ ಸಹ ಪಾಲಿಸುತ್ತಿದ್ದರು. ಅವರ ಇತರೆ ಯಾವುದೇ ಸಿದ್ಧಾಂತ, ನೀತಿ, ತತ್ವಗಳಿಗಿಂತ ಹೆಚ್ಚಿನ ಗೌರವ, ಶ್ರದ್ಧೆಯನ್ನು ಸತ್ಯಾರ್ಥ ಪ್ರಕಾಶಕ್ಕೆ ಸಲ್ಲಿಸಲಾಗುತ್ತಿತ್ತು. ವಾಸ್ತವ ವಾದದ ಸಮಾಜದ ಅನುಯಾಯಿಗಳಲ್ಲಿ ಸತ್ಯಾರ್ಥ ಪ್ರಕಾಶದ ಅನುಷ್ಠಾನದ ಬಗ್ಗೆ ಭಿನ್ನಮತವಿತ್ತು. ಅದರ ಅಕ್ಷರಶಃ ಪಾಲನೆ ವರ್ತಮಾನಕ್ಕೆ ಹೊಂದಿಕೊಳ್ಳುವುದಿಲ್ಲವೆಂದೂ, ಆರ್ಯವರ್ತದ ಸಂಸ್ಕೃತ ಭಾಷಿಕ ವರ್ಗಕ್ಕೆ ಸೀಮಿತವಾದುದೆಂದೂ ಅವರು ಹೇಳುತ್ತಿದ್ದರು. ದಯಾನಂದರ ಕಟ್ಟಾ ಅನುಯಾಯಿಗಳು ಅವರ ನೆನಪಿನಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಆಂಗ್ಲೋ ವೇದಿಕ್ ಕಾಲೇಜು ಈ ಕಾರಣಕ್ಕಾಗಿ ಇನ್ನು ಆರಂಭಗೊಳ್ಳಲು ಸಾಧ್ಯವಾಗಿರಲಿಲ್ಲ. ಗುರುದತ್ತರು ಕಾಲೇಜಿನ ಆರಂಭಕ್ಕೆ ಹೆಚ್ಚಿನ ಆಸಕ್ತಿ ವಹಿಸಿದ್ದರು. ಕೊನೆಗೆ ಪ್ರಾಚೀನ ಮತ್ತು ಆಧುನಿಕ ಆಧಾರದ ಮೇಲೆ ಕಾಲೇಜನ್ನು ಆರಂಭಿಸಲು ನಿರ್ಧರಿಸಲಾಯಿತು. ಈ ಬದಲಾವಣೆ ಕಾಲೇಜು ಸ್ಥಾಪನೆಗೆ ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಹಾಯವಾಯಿತು. ಆದರೂ ಎರಡು ವರ್ಷಗಳಾದರೂ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಹಣ ಸಂಗ್ರಹವಾಗಲಿಲ್ಲ.

ಹನ್ಸ್‌ರಾಜ್ ತಮ್ಮ ಗೌರವ ಸೇವೆಯನ್ನು ಕಾಲೇಜಿಗೆ ಮುಡುಪಾಗಿಟ್ಟ ನಂತರ ತರಗತಿಗಳು ಆರಂಭಗೊಂಡವು. ಆದರೂ ಸ್ಪಷ್ಟ ರೂಪದಲ್ಲಿ ಕಾಲೇಜು ಅಸ್ತಿತ್ವಕ್ಕೆ ಬರಲು ಮತ್ತೆ ಮೂರು ವರ್ಷಗಳು ಹಿಡಿದವು. ಆಡಳಿತ ಸಮಿತಿಯಲ್ಲಿ ಲಜಪತ್‌ರಾಯ್ ಸಹ ಇದ್ದರು. ಆರು ಜನರ ಆ ಸಮಿತಿಯು ಬಹುಮತದೊಂದಿಗೆ ಕಾಲೇಜಿನ ಸ್ಥಾಪನೆಗೆ ನಿರ್ಣಯ ಕೈಗೊಂಡಿತು. ಅದರ ಅನುಷ್ಠಾನಕ್ಕೆ ರಚಿಸಿದ ಐವರ ಉಪಸಮಿತಿಯಲ್ಲಿ ಲಜಪತರಿದ್ದರು. ಆ ಸಮಿತಿಯ ಕಾರ್ಯದರ್ಶಿಯಾಗಿ ಕಾಲೋಚಿತವಾದ ಪಠ್ಯ ವಿಷಯಗಳ ರಚನೆಗೆ ಅವರು ಕರಡು ವರದಿಯೊಂದನ್ನು ಸಿದ್ಧಪಡಿಸಿದರು. ಕೊಡುಗೆಗೆ ಗುರುದತ್ ಸಿದ್ಧವಾಗಿದ್ದು ಕಾಲೇಜ್ ಸ್ಥಾಪನೆಯ ಪ್ರಕ್ರಿಯೆಗೆ ಅನುಕೂಲವಾಯಿತು. ಆದರೂ ಸಾಯಿನ್‌ದಾಸ್‌ರ ನಿಲುವಿಗೆ ವಿರುದ್ಧವಾದ ಧೋರಣೆಗಳನ್ನೇ ಗುರುದತ್ತರು ಪ್ರತಿಪಾದಿಸುತ್ತಾ ಬಂದರು. ಆ ಇಬ್ಬರ ಮುಖಂಡರ ಭಿನ್ನಮತಗಳು ಅವರವರ ಗೆಳೆಯರು ಮತ್ತು ಅನುಯಾಯಿಗಳ ಮಧ್ಯೆ ದಿನ ಕಳೆದಂತೆ ಗಹನವಾಗುತ್ತಾ ಬಂದಿತು. ದಯಾನಂದರ ಕಟ್ಟಾ ಸಿದ್ಧಾಂತವಾದಿಗಳು ಹೆಚ್ಚು ಸಂಪ್ರದಾಯಸ್ಥರಾಗುತ್ತಾ ಬಂದರು. ಆಧುನಿಕ ಅಗತ್ಯಕ್ಕೆ ಅನುಗುಣವಾಗಿ ಕಾಲೇಜ್ ನಡೆಯತೊಡಗಿದ ಪರಿಯನ್ನು ಬಹಿರಂಗವಾಗಿ, ನಿಷ್ಠೂರವಾಗಿ ಖಂಡಿಸತೊಡಗಿದರು.

ಕೊನೆಗೆ ಆ ಗುಂಪು ಕಾಲೇಜಿನಿಂದ ಕಳಚಿಕೊಂಡಿತು ಕೂಡಾ. ತಮ್ಮ ಗುರುಗಳ ಧ್ಯೇಯೋದ್ದೇಶಗಳನ್ನು ಕಾರ್ಯಗತಗೊಳಿಸಲು ಗುರುಗಳ ವಿಶ್ವವಿದ್ಯಾಲಯ ಆರಂಭಿಸಿತು. ಸುಧಾರಣಾವಾದಿಗಳ ಗುಂಪು ಕಾಲೇಜಿನ ಇನ್ನಷ್ಟು ಯಶಸ್ಸಿಗೆ ಮುಂದಾಗಿ ನಿಧಿ ಸಂಗ್ರಹದ ಮಾರ್ಗೋಪಾಯಗಳನ್ನು ಯೋಚಿಸಿತು. ಹೆಚ್ಚು ಹೆಚ್ಚು ವಿದ್ವಾಂಸರು ಆಂಗ್ಲೋ ವೇದಿಕ್ ಕಾಲೇಜ್ ಕಡೆಗೆ ಒಲವು ತೋರಿದರು. ಶಿಕ್ಷಣವನ್ನು ಜನಸಾಮಾನ್ಯರ ಮಾಧ್ಯಮದ ಮೂಲಕ ಒದಗಿಸುವುದರಿಂದ ಸಮಾಜದ ಧ್ಯೇಯೋದ್ದೇಶಗಳು ಸುಗಮವಾಗಿ ಕಾರ್ಯಗತವಾಗುತ್ತದೆ ಎಂಬುದನ್ನು ಅವರು ಅರಿತುಕೊಂಡರು. ಪಂಜಾಬಿನಲ್ಲಿ ಹಿಂದಿಯನ್ನು ಜನಪ್ರಿಯಗೊಳಿಸಲು ಹೆಚ್ಚು ಪ್ರಾಧಾನ್ಯತೆ ನೀಡಲಾಯಿತು. ಸಂಸ್ಕೃತ ಅಧ್ಯಯನದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳನ್ನು ನಿರಾಶೆಗೊಳಿಸಲಿಲ್ಲ. ದಯಾನಂದ ಸರಸ್ವತಿಯವರು ನೀಡಿದ ಪಠ್ಯಕ್ರಮಕ್ಕೆ ಅನುಗುಣವಾಗಿ ಸಂಸ್ಕೃತ ಅಧ್ಯಯನವನ್ನು ಅಳವಡಿಸಲಾಯಿತು. ಹಾಗೆಂದ ಮಾತ್ರಕ್ಕೆ ಸಂಸ್ಕೃತ ಬೋಧಕರು, ಸ್ವಾಮಿ ಹೇಳಿದ್ದ ರೀತಿಯಲ್ಲಿ ಬ್ರಹ್ಮಚರ್ಯ ಪಾಲಕರಾಗಿರಬೇಕೆಂಬ ಕಟ್ಟಳೆಯೇನೂ ವಿಧಿಸಿರಲಿಲ್ಲ. ಹೀಗೆ ಕಾಲೇಜು ಶಿಕ್ಷಣದ ಉದ್ದೇಶದ ಜೊತೆಗೆ ದೇಶಭಕ್ತಿ ಪ್ರಸಾರದಲ್ಲೂ ಗಹನ ಪಾತ್ರ ವಹಿಸತೊಡಗಿತು. ದಯಾನಂದರಿಗೆ ಹೆಚ್ಚು ಆತ್ಮೀಯವಾಗಿದ್ದ ಪಾಣಿನಿ ಮತ್ತು ಪತಂಜಲಿ ವ್ಯಾಕರಣ ಕಲಿಕೆಯನ್ನು ಕಾಲೇಜಿನ ಅಧ್ಯಯನದಲ್ಲಿ ಕಡ್ಡಾಯ ಮಾಡಲಿಲ್ಲ. ಕಾಲದ ಅಗತ್ಯಕ್ಕೆ ಒದಗದ ಕಲಿಕೆಯನ್ನು ವಿದ್ಯಾರ್ಥಿಗಳ ಮೇಲೆ ಕಡ್ಡಾಯವಾಗಿ ಹೇರಲಿಲ್ಲ.

ಲಜಪತ್‌ರಾಯ್ ಪ್ರಮುಖ ಪಾತ್ರ ವಹಿಸತೊಡಗಿದಾಗ ಬದಲಾವಣೆ ಇನ್ನಷ್ಟು ಸ್ಪಷ್ಟವಾಗತೊಡಗಿತು. ಆರಂಭದಲ್ಲಿ ಸ್ವಲ್ಪ ಕಾಲ ಎರಡು ಬಣಗಳಲ್ಲಿ ಯಾವ ಕಡೆಗೂ ಅವರು ವಾಲಿರಲಿಲ್ಲ. ಆದರೆ ದಿನ ಕಳೆದಂತೆ ಅವರ ಅಂತಃಸಾಕ್ಷಿ ಅವರನ್ನು ಬಿಡಲಿಲ್ಲ.

ಕಾಲೇಜಿನ ಅಗತ್ಯ ಹಾಗೂ ಅರ್ಹತೆಯನ್ನು ಶುದ್ಧವಾಗಿ ದಯಾನಂದರ ದೃಷ್ಟಿಕೋನಕ್ಕೆ ತಕ್ಕಂತೆ ಪರಿವರ್ತಿಸುವ ಒತ್ತಾಯ ಅವರಿಗೆ ಹಿಡಿಸಲಿಲ್ಲ. ಕೇವಲ ಸಂಸ್ಕೃತದ ಪಾಠವಾಗಲಿ, ಅಥವಾ ಅದರ ಶಿಕ್ಷಣವಾಗಲಿ ಕಾಲೋಚಿತವಲ್ಲವೆಂದು ಅವರು ಬಹಿರಂಗವಾಗಿ ಹೇಳತೊಡಗಿದರು. ದಯಾನಂದರು ವಿಚಾರವಾದಿ. ಬೌದ್ಧಿಕ ಸ್ವಾತಂತ್ರ್ಯ ರೂಢಿಸಿಕೊಂಡಿದ್ದರು. ಕಾಲಾತೀತವಾದ ಸ್ವಾಮಿ ದಯಾನಂದರ ದೃಷ್ಟಿಕೋನವನ್ನು ಅಕ್ಷರಶಃ ಪಾಲಿಸುವುದು ಯುಕ್ತವಲ್ಲ ಎಂದು ತರ್ಕಿಸಿದ್ದರು. ಅವರ ಮಾಂಸಾಹಾರದ ವಿರೋಧಿ ನಿಲುವನ್ನು ಒಪ್ಪಿಕೊಂಡಿರಲಿಲ್ಲ.

ಆ ಆಧಾರ ಆಹಾರ ಸೇವನೆಗೆ ಪಾಪಯುಕ್ತವೆಂದು ಲಜಪತರಿಗೆ ಕಂಡು ಬರಲಿಲ್ಲ. ಮಝ್ಝಿನಿಯನ್ನು ತಮ್ಮ ಗುರುವಾಗಿ ಸ್ವೀಕರಿಸಿದ್ದವರು ಅವರು. ದೇಶವಾಸಿಗಳಲ್ಲಿ ರಾಷ್ಟ್ರಭಕ್ತಿಯ ಪ್ರಜ್ಞೆ ಜಾಗೃತಗೊಳಿಸಬೇಕೆಂಬ ತಮ್ಮ ಆಶಯವನ್ನು ಶುದ್ಧ ಶಾಖಾಹಾರಿಗಳಿಗಿಂತಲೂ 'ಸಂಸ್ಕೃತವಂತ' ವರ್ಗ ಪ್ರೋತ್ಸಾಹಿಸುತ್ತಾ ಬಂದಿದ್ದನ್ನು ಅವರು ಮನನ ಮಾಡಿಕೊಂಡಿದ್ದರು. ಶಾಖಾಹಾರಿ ವರ್ಗ ತೀರಾ ಸಂಕುಚಿತ ಮನೋಧರ್ಮವೆಂದು, ವಾಸ್ತವಿಕತೆಯಿಂದ ಬಹು ಹಿಂದುಳಿದಿದೆ ಎಂದೂ, ಕಾಲಾತೀತವಾದದ್ದೆಂದು ಅವರಿಗೆ ಕಂಡು ಬಂದಿತ್ತು. ತಮ್ಮ ಗೆಳೆಯ ಹನ್ಸ್‌ರಾಜ್ ಸಹ ತಪ್ಪು ಗ್ರಹಿಕೆ ಮತ್ತು ಅಪಪ್ರಚಾರಕ್ಕೆ ಈಡಾಗಿದ್ದಾರೆಂದು ಲಜಪತರಿಗೆ ಭಾಸವಾಗತೊಡಗಿತು. ಪ್ರಗತಿಪರವಾದ ಆ ತಮ್ಮ ಗೆಳೆಯ ಹನ್ಸ್‌ರಾಜ್ ನಿಲುವು ಧೋರಣೆಗಳನ್ನು ಲಜಪತರು ಬೆಂಬಲಿಸಿದರು. ಬಹಿರಂಗವಾಗಿ ಆ ಗುಂಪಿನಲ್ಲಿ ತಮ್ಮನ್ನು ಗುರುತಿಸಿಕೊಂಡರು. ಹನ್ಸ್‌ರಾಜ್ ಗುಂಪಿನ ಸುಧಾರಣಾ ವಾದಕ್ಕೆ ಲಜಪತರು ಹೆಚ್ಚು ಶಕ್ತಿ ತುಂಬಿದರು. ಸಂಸ್ಕೃತ ಅಧ್ಯಯನದ ವಿಷಯದಲ್ಲಿ ವಿವಾದ ಪ್ರಕೋಪಕ್ಕೆ ಹೋದಾಗ ಲಜಪತರು ಉರ್ದುವಿನಲ್ಲಿ ಕೈಪಿಡಿಯೊಂದನ್ನು ಹೊರತಂದು ಡಿ.ಎ.ವಿ. ಕಾಲೇಜಿನಲ್ಲಿ ಸಂಸ್ಕೃತ ಪಠ್ಯ ಉಪೇಕ್ಷಿತವಾಗಿಲ್ಲವೆಂದು ಸಾರಿದರು. ಶುದ್ಧ ಶಾಖಾಹಾರಿ ಟೀಕಾಕಾರರು ಮಾಡುತ್ತಿದ್ದ ಆರೋಪಗಳಲ್ಲಿ ಹುರುಳಿಲ್ಲವೆಂದು ತೋರಿಸಿದರು. ತಮ್ಮ ಗುಂಪಿನ ನಿಲುವು, ಧೋರಣೆಗಳನ್ನು ಸಮರ್ಥಿಸಲು ಆಗಿಂದಾಗ್ಗೆ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಅದೆಷ್ಟೋ ವೇಳೆ ಎದುರಾಳಿಗಳ ಮೇಲೆ ಇಂತಹ ಪ್ರಚಾರಗಳ ಮೂಲಕ ಆಕ್ರಮಣ ನಡೆಸುತ್ತಿದ್ದರು. ಸಲಹೆ, ಸಮಾಲೋಚನೆಗಳು ಮತ್ತು ಸಮಿತಿ ಸಭೆಗಳಲ್ಲಿ ಲಜಪತರ ನಿಲುವೇ ಪ್ರಮುಖವಾಗಿರುತ್ತಿತ್ತು. ಅದೆಷ್ಟೋ ಸಂದರ್ಭಗಳಲ್ಲಿ ಸಮಾಜದ ನಿಯಮ ಶಿಸ್ತನ್ನು ಇತರರ ಜೊತೆಯಲ್ಲಿ ಲಜಪತರು ಸಹ ಉಲ್ಲಂಘಿಸುವುದು ಅನಿವಾರ್ಯವಾಯಿತು. ತಾವು ಮಾಡುತ್ತಿರುವುದು ವಿಹಿತವಲ್ಲವೆನಿಸಿದರೂ ಕಾಲ ಮತ್ತು ದೇಶದ ಅಗತ್ಯದ ದೃಷ್ಟಿಯಿಂದ ಅದೆಲ್ಲಾ ಅನಿವಾರ್ಯವೆಂದು ಸಮಾಧಾನಪಟ್ಟುಕೊಳ್ಳುತ್ತಿದ್ದರು.

ಆರ್ಯ ಸಮಾಜದ ಎರಡು ಗುಂಪುಗಳ ನಡುವೆ ಹುಟ್ಟಿ ಕೆಟ್ಟದ್ದಾಗಿ ಬೆಳೆಯುತ್ತಾ ಬಂದ ಅಂತಃಕಲಹ ಲಜಪತರನ್ನು ತುಂಬಾ ನೋಯಿಸಿತು. ದಿನ ಕಳೆದಂತೆ ಜಗಳ, ಕಿತ್ತಾಟ ವಿಪರೀತವಾಗುತ್ತಾ ಬಂದಿತು. 1891ರಲ್ಲಿ ಸಮಾಜಕ್ಕೆ ನಡೆದ ಚುನಾವಣೆಯ ಬಗ್ಗೆ ಅವರು ಹೀಗೆ ಬರೆದಿಟ್ಟಿದ್ದಾರೆ:

"ಆ ದೃಶ್ಯಗಳನ್ನು ನಾನು ಕಣ್ಣಾರೆ ಕಂಡೆ. ಅತೀವ ವೇದನೆ ಪಟ್ಟೆ. ಅದೆಷ್ಟೋ ರಾತ್ರಿಗಳಲ್ಲಿ ನಿದ್ದೆ ಬರಲಿಲ್ಲ. ಆ ಕೆಟ್ಟ ಸ್ಥಿತಿಯ ಬಗ್ಗೆಯೇ ಯೋಚಿಸುತ್ತಿದ್ದೆ. ದೇಶಕ್ಕೆ ಅಂಟಿದ ಅನೈಕ್ಯತೆ ಮತ್ತು ಅಂತಃಕಲಹಗಳನ್ನು ದೇವರೇ ಗುಣಪಡಿಸಬೇಕು ಎಂದು ಮೊರೆ ಇಡುತ್ತಿದ್ದೆ. ಅಂತಃಕಲಹ, ಭಿನ್ನಮತಗಳನ್ನು ಕೊನೆಗಾಣಿಸಿ ಜನತೆಯಲ್ಲಿ ಐಕ್ಯತೆ ಮೂಡಿಸಲು ದೇವರೇ ನೆರವಾಗಬೇಕು ಎಂದುಕೊಳ್ಳುತ್ತಿದ್ದೆ. ಆದರೂ ಸಹ ನಾವು ನಮಗೆ ತಟ್ಟಿರುವ ಯಾವುದೋ ಪಾಪದಿಂದ ಹೊರಬರಲಾಗದೇನೋ ಎನಿಸುತ್ತಿತ್ತು. ಆ ಪಾಪದ ಫಲವಾಗಿಯೇ ನಮ್ಮಲ್ಲಿ ಅನೈಕ್ಯತೆ, ಅಂತಃಕಲಹಗಳ ಘೋರ ಘಟನೆಗಳು ನಡೆಯುತ್ತಿವೆ. ಅದು ತೀರಾ ಅನಾಗರಿಕ ರೀತಿಯಲ್ಲಿ. ಎಲ್ಲಿಯೂ ಇಲ್ಲವೋ ಎನ್ನುವಷ್ಟರ ಮಟ್ಟಿಗೆ ಪರಸ್ಪರ ತಿಕ್ಕಾಟ, ಕಚ್ಚಾಟಗಳು ನಡೆಯುತ್ತಿವೆ ಎನಿಸುತ್ತಿತ್ತು. 1891ರ ವಾರ್ಷಿಕ ಸಭೆಯ ನಂತರ ನಾನು ಹಿಸ್ಸಾರಿಗೆ ಮರಳಿದಾಗ ನನ್ನ ಹೃದಯ ಅತೀವ ವೇದನೆಯಿಂದ ಕಂಗೆಟ್ಟಿತ್ತು. ಸಮಾಜದ ಸ್ಥಿತಿ ಹದಗೆಟ್ಟಿತ್ತು. ಇವೆಲ್ಲವನ್ನು ನೋಡಿ ನಾನು ಬೇಸತ್ತಿದ್ದೆ. ಆ ಒತ್ತಡಗಳ ಕಾರಣದಿಂದಲೇ ಹಿಸ್ಸಾರ್ ಪಟ್ಟಣವನ್ನು ಶಾಶ್ವತವಾಗಿ ತೊರೆದು ಲಾಹೋರಿಗೆ ಬಂದು ನೆಲೆಸಲು ನಿರ್ಧರಿಸಿದೆ."

ಆರ್ಯ ಸಮಾಜದ ಇತಿಹಾಸದಲ್ಲಿ ಅತ್ಯಂತ ಕೆಟ್ಟ ಪ್ರಸಂಗ ಅದು ಎಂದು ದಾಖಲೆ ಮಾಡಿರುವ ಅವರು ಆ ಸ್ಥಿತಿಗೆ ಎರಡೂ ಕಡೆಯವರನ್ನು ಸಮಾನವಾಗಿ ಹೊಣೆಗಾರರಾಗಿ ಮಾಡಿದ್ದಾರೆ. "ನನ್ನ ಅಭಿಮತದಲ್ಲಿ ಲಾಲಾ ಹನ್ಸ್‌ರಾಜ್‌ರ ಜವಾಬ್ದಾರಿ ಲಾಲಾ ಮುನ್ಷಿರಾಮರ ಹೊಣೆಗಾರಿಕೆಯಷ್ಟೇ ಪ್ರಮುಖವಾಗಿತ್ತು." ಎಂದು ಅವರು ಬರೆದಿಟ್ಟಿದ್ದಾರೆ. ಆರ್ಯ ಸಮಾಜ 1892ರ ಅಂತ್ಯದ ವೇಳೆಗೆ ವಸ್ತುಶಃ ಇಬ್ಭಾಗವಾಯಿತು. ಅದು ಲಾಹೋರ್ ಸಮಾಜದ ವಾರ್ಷಿಕ ಚುನಾವಣೆಯ ಸಂದರ್ಭ. ಚುನಾವಣೆಗೆ ಹಿಂದಿನ ಸಂಜೆ ಲಜಪತರಿದ್ದ ಗುಂಪು ನ್ಯಾಯಮೂರ್ತಿಗಳಾದ ಲಾಲ್‌ಚಂದ್ ಮನೆಯಲ್ಲಿ ಸಭೆ ಸೇರಿತು. ಆ ದಿನಗಳಲ್ಲಿ ಸಮಾಜದ ಪ್ರಮುಖ ನಾಯಕರಲ್ಲಿ ಅವರೂ ಒಬ್ಬರು. ಮರುದಿನದ ಚುನಾವಣೆಯಲ್ಲಿ ತಳೆಯಬೇಕಾದ ನಿಲುವಿನ ಬಗ್ಗೆ ಚರ್ಚಿಸಿ ನಿರ್ಧಾರಕ್ಕೆ ಬರುವುದು ಆ ಸಭೆಯ ಉದ್ದೇಶವಾಗಿತ್ತು. ಚುನಾವಣೆಯಲ್ಲಿ ಗೆಲುವನ್ನು ತಮ್ಮದಾಗಿಸಿಕೊಳ್ಳಲು ಎದುರು ಗುಂಪು ಎಲ್ಲಾ ಬಗೆಯ ಅಕ್ರಮ ಅನ್ಯಾಯಗಳನ್ನು ಎಸಗಲು ಹೇಸುವುದಿಲ್ಲವೆಂಬ ಸ್ಪಷ್ಟ ಮುನ್ಸೂಚನೆ ಈ ಗುಂಪಿಗೆ ಲಭ್ಯವಾಗಿತ್ತು.

ಲಜಪತ್‌ರಾಯ್ ಆ ಸಭೆಯ ಕಲಾಪವನ್ನು ಹೀಗೆ ಬರೆದಿಟ್ಟಿದ್ದಾರೆ, "ಪೊಲೀಸರ ಸಹಾಯದಿಂದ ಸಮಾಜದ ಮಂದಿರವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಕೆಲವರು ಅಪೇಕ್ಷಿಸಿದರು. ಎರಡು ಗುಂಪುಗಳ ಪ್ರತ್ಯೇಕ ಸಭೆಗಳಿಗೆ ಪ್ರತ್ಯೇಕ ಸಮಯ ನಿಗದಿ ಪಡಿಸುವಂತೆ ನ್ಯಾಯಾಲಯದಿಂದ ಆದೇಶ ಪಡೆಯುವಂತೆ ಇನ್ನು ಕೆಲವರು ಸೂಚಿಸಿದರು. ಮತ್ತೆ ಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾತ್ರೋರಾತ್ರಿ ಬಲ ಪ್ರಯೋಗದಿಂದ ಮಂದಿರವನ್ನು ವಶಕ್ಕೆ ತೆಗೆದುಕೊಳ್ಳೋಣ ಎಂದರು. ಪ್ರತಿಭಟನೆ ಕಂಡು ಬಂದರೆ ಹೋರಾಟಕ್ಕೂ ಸಿದ್ಧವೆಂದು ಅವರು ಸಾರಿದರು. ನಾನು ಸೇರಿದಂತೆ ಉಳಿದವರು ದಯಾನಂದರ ಕಟ್ಟಾ ಅನುಯಾಯಿಗಳೊಂದಿಗೆ ಸಹಕಾರ ಸಾಧ್ಯವಿಲ್ಲವೆಂದು

ಅಭಿಪ್ರಾಯಪಟ್ಟೆವು. ಪ್ರತ್ಯೇಕವಾಗುವ ನಿಲುವು ತಳೆದೆವು. ತಾತ್ಕಾಲಿಕ ಬಾಡಿಗೆಯ ಮನೆಯನ್ನು ಪಡೆದು ಪ್ರತ್ಯೇಕವಾಗಿ ಸಭೆ ಹಾಗೂ ಇತರೆ ಕಲಾಪಗಳಿಗೆ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದೆವು.''

ಆ ಸಭೆಯಲ್ಲಿ ಲಜಪತರು ಮಾಡಿದ ಭಾಷಣ ಆರ್ಯ ಸಮಾಜದ ಇತಿಹಾಸದಲ್ಲೇ ಎಂದೂ ಮರೆಯಲಾಗದ ಲಕ್ಷಣಗಳಿಂದ ಕೂಡಿವೆ:

''ಈ ಸಮಾಜವನ್ನು ಕಟ್ಟಿರುವುದು ನೀತಿ ಮತ್ತು ನಿರ್ದೇಶನಗಳು. ಇಟ್ಟಿಗೆ, ಕಲ್ಲು, ಗಾರೆಯಲ್ಲ. ನಮ್ಮ ಜೀವನವನ್ನು ಸುಧಾರಿಸಿಕೊಂಡು ಜನತೆಗೆ ಸೇವೆ ಸಲ್ಲಿಸಲು ನಾವು ಈ ಸಮಾಜಕ್ಕೆ ಸೇರಿದ್ದೇವೆ. ಕಟ್ಟಡಗಳನ್ನು ವಶಪಡಿಸಿಕೊಳ್ಳಲೋ, ಅವರೊಂದಿಗೆ ಹೋರಾಡಲೋ ಅಲ್ಲ...ಜಗಳಕ್ಕೆ ಇಳಿಯುವುದಕ್ಕಾಗಿ, ಹೊಡೆದಾಟಕ್ಕಾಗಲಿ, ಪೊಲೀಸರನ್ನು ಕರೆಯಿಸುವುದಕ್ಕಾಗಲಿ, ನ್ಯಾಯಾಲಯದ ಮೊರೆ ಹೋಗುವುದಕ್ಕಾಗಲಿ ನನ್ನ ಪ್ರಬಲ ವಿರೋಧವಿದೆ.''

ಪ್ರಾಮಾಣಿಕವಾದ, ಸತ್ಯಭರಿತವಾದ ಲಜಪತರ ಮಾತುಗಳು ಆ ಗುಂಪಿನ ಮನಗೆದ್ದವು. ಸಮಾಜದಲ್ಲಿ ಪ್ರತ್ಯೇಕ ಬಣವಾಗಲು ಸಭೆ ವಿಧ್ಯುಕ್ತ ನಿರ್ಣಯ ಕೈಗೊಂಡಿತು. ಅದಕ್ಕೆ ಅನುಗುಣವಾಗಿ ಮಾರನೇ ದಿನ ಅನಾರ್ಕಲಿ ಆರ್ಯ ಸಮಾಜ ಅಸ್ತಿತ್ವಕ್ಕೆ ಬಂದಿತು. ವಾಛೋಲಿಯಲ್ಲಿದ್ದ ಆರ್ಯ ಸಮಾಜದ ನಿಜ ಮಂದಿರವನ್ನು ತೊರೆಯಲು ಲಾಲಾ ಹನ್ಸ್‌ರಾಜ್‌ರಿಗೆ ಅತೀವ ವೇದನೆ ಆಯಿತು. ಆದರೆ ಪ್ರತಿಷ್ಠೆ ಮತ್ತು ಗೌರವ ಹಾಗೂ ಧ್ಯೇಯ ಸಾಧನೆ ಅಂತಿಮವಾಗಿ ಅವರನ್ನು ಇಬ್ಭಾಗಕ್ಕೆ ಒಪ್ಪಿಸಿತು.

ಅನಾರ್ಕಲಿ ಆರ್ಯ ಸಮಾಜಕ್ಕೆ ಲಜಪತ್‌ರಾಯ್ ಪ್ರಥಮ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಈ ಮಧ್ಯೆ ಮುಂಗೆ ಸ್ವಾಮಿ ಶ್ರದ್ಧಾನಂದರು ಎಂದು ಕರೆಯಲ್ಪಟ್ಟ ಎದುರು ಬಣದ ಮುಖಂಡ ಮಹಾತ್ಮ ಮುನ್ಶಿರಾಂ ಈ ವಿಷಯದಲ್ಲಿ ತಪ್ಪಾಗಿ ನಡೆದುಕೊಂಡೆನೆಂದು ಲಜಪತರಲ್ಲಿ ಪಶ್ಚಾತ್ತಾಪಪಟ್ಟರು. ಇಬ್ಭಾಗದ ಸಂಕುಚಿತ ಪರಿಸ್ಥಿತಿಯಿಂದಾಗಿ ಅವರ ಬಗ್ಗೆ ಅಪಭಾವನೆ ತಾಳಿದೆನೆಂದು ಮನಗಂಡು ಅದರ ಪರಾಮರ್ಶೆ ಮಾಡಿಕೊಂಡರು.

ತಮ್ಮ ಜೀವನ ಚರಿತ್ರೆಯಲ್ಲಿ ಆ ಪ್ರಸಂಗವನ್ನು ಅವರು ಈ ರೀತಿ ವರ್ಣಿಸಿದ್ದಾರೆ. ''1892-93ರಲ್ಲಿ ಅವರ ಬಗ್ಗೆ ನಾನು ವ್ಯಾಪಕವಾಗಿ ತಾಳಿದ್ದ ಭಾವನೆಯನ್ನು ಪರಾಮರ್ಶೆ ಮಾಡಿಕೊಂಡೆನೆಂದು ನಾನು ಹೇಳಲೇ ಬೇಕಾಗಿದೆ. ಅವರೊಬ್ಬ ಕಿಡಿಗೇಡಿ ಎಂದೂ, ಹೆಸರನ್ನು ಬೆನ್ನು ಹತ್ತುವರೆಂದೂ, ನಾಯಕತ್ವದ ಆಕಾಂಕ್ಷಿ ಎಂದೂ ಭಾವಿಸಿಕೊಂಡಿದ್ದೆ. ಈಗ ನನಗೆ ಮನವರಿಕೆಯಾಗಿದೆ. ಆ ಭಾವನೆಗಳೆಲ್ಲವೂ ತಪ್ಪು ಅನಿಸಿಕೆಗಳೆಂದು ಜಗಳದ ಸಂದರ್ಭದಲ್ಲಿ ತಮ್ಮ ಗುಂಪಿನ ಮೇಲುಗೈಗಾಗಿ ಅವರು ನಡೆದುಕೊಂಡಿದ್ದ ರೀತಿ ನನ್ನಲ್ಲಿ ಅಂತಹ ಭಾವನೆಗಳನ್ನು ಹುಟ್ಟಿಸಿರಬಹುದು. ಎಲ್ಲಾ ಮಹಾತ್ಮರಂತೆ ಲಾಲಾ ಮುನ್ಶಿರಾಂ ಅವರಲ್ಲಿ ಅವರದೇ ಆದ ಕೆಲವು ವೈಫಲ್ಯಗಳಿದ್ದವು. ಸಂದರ್ಭೋಚಿತವಾಗಿ ಅವು ಅವರನ್ನು ಶೋಷಿಸಿರಲುಬಹುದು. ಜೊತೆಗೆ ಅವರ ಸುತ್ತಮುತ್ತಲಿದ್ದವರ ಪ್ರಭಾಪಗಳು ಅವರ ಅಭಿಪ್ರಾಯ ಮತ್ತು ಕೃತಿಗಳಲ್ಲಿ ಸೇರಿಕೊಂಡಿರಬಹುದು.''

"ಆದರೆ ಅವರೊಬ್ಬ ಕಿಡಿಗೇಡಿ, ಪಟಿಂಗ ವ್ಯಕ್ತಿ ಎಂದು ನಾನು ಖಂಡಿತ ಹೇಳುವುದಿಲ್ಲ. ಪರಿಸ್ಥಿತಿಯ ಪ್ರತಿಕೂಲ ಒತ್ತಡದಲ್ಲಿ ಅವರ ಬಗ್ಗೆ ನನ್ನಲ್ಲಿ ಅಭಿಪ್ರಾಯವೊಂದು ಮೂಡಿತ್ತು. ಅದನ್ನು ನಂತರ ನಾನು ಬದಲಾಯಿಸಿಕೊಂಡೆ. ಅಂತಹ ಅಭಿಪ್ರಾಯ ಮೂಡಿದ್ದಕ್ಕೆ ಪಶ್ಚಾತ್ತಾಪಪಟ್ಟೆ. ನನ್ನಿಂದ ಅವರಿಗೆ ಅಂತಹ ಅನ್ಯಾಯವಾಗಬಾರದಿತ್ತು. ಸ್ವಭಾವತಃ ಲಾಲಾ ಮುನ್ಷಿರಾಂ ಆತುರದವರು. ಆದರೆ ಅವರ ಸಹಜ ಗುಣ ಉದಾತ್ತವಾಗಿತ್ತು. ಚಿಂತನೆಯೂ ಅತಿ ಎತ್ತರದ್ದು. ಉದಾರವಾದಿ. ಸೇವಾ ಮನೋಧರ್ಮಿ. ಜನಸೇವೆಗೆ ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದವರು. ನರಳಾಟ ಮತ್ತು ತ್ಯಾಗಗಳ ಅರ್ಥ ಅವರಿಗೆ ಗೊತ್ತಿತ್ತು. ಅವರು ಓರ್ವ ನಿಷ್ಠಾವಂತ ಗೆಳೆತನದ ಲಕ್ಷಣ ಹೊಂದಿದ್ದರು. ನಿಷ್ಠುರವಾದಿ. ಮುಚ್ಚುಮರೆ ಮಾಡುತ್ತಿರಲಿಲ್ಲ. ಸಹೃದಯಿ."

ಲಜಪತರು ಇದನ್ನು ಬರೆದಿದ್ದು 1915ರಲ್ಲಿ. ನಂತರ ಸ್ವಾಮಿ ಶ್ರದ್ಧಾನಂದರು ಬಹು ಎತ್ತರಕ್ಕೆ ಏರಿದರೆಂಬುದರಲ್ಲಿ ಸಂಶಯವಿಲ್ಲ. 1919ರ ವೇಳೆಗೆ ಅವರು ದೊಡ್ಡ ಹೋರಾಟಗಾರರೆನಿಸಿದರು. ,ಆ ಸಂದರ್ಭ ಪಂಜಾಬಿನಲ್ಲಿ ಮಿಲಿಟರಿ ಕಾನೂನು ಜಾರಿಯಲ್ಲಿತ್ತು. 1926ರಲ್ಲಿ ಆ ಕಾನೂನು ಅಂತ್ಯವಾಗುವ ವೇಳೆಗೆ ಸ್ವಾಮಿ ಶ್ರದ್ಧಾನಂದರು ಹುತಾತ್ಮರಾಗಿದ್ದರು. ಅಂಗ್ರೇಜಿಯವರ ವಿರುದ್ಧದ ಹೋರಾಟದಲ್ಲಿ ಸ್ವಾಮಿ ಶ್ರದ್ಧಾನಂದರ ಪಾತ್ರ ಕಟ್ಟಾ ರಾಷ್ಟ್ರಭಕ್ತನನ್ನು ನಾಚಿಸುವಂತಹುದು. ಸ್ವಾಮಿ ಶ್ರದ್ಧಾನಂದರ ಆ ಹೋರಾಟ, ದಿಟ್ಟತನ ಅವರು ಹುತಾತ್ಮರಾದ ಪರಿಯನ್ನು ಲಜಪತರು ಕೊನೆಯತನಕ ಮೆಲುಕು ಹಾಕುತ್ತಿದ್ದರು.

ಆ ದಿನಗಳಲ್ಲಿ ಲಜಪತರು ವಿಶ್ರಾಂತಿರಹಿತರಾಗಿ ಕಾರ್ಯಶೀಲರಾಗಿದ್ದರು. ಅವರದು ಅಪ್ರತಿಮ ಸೇವಾ ನಿಷ್ಠೆ. ತಮಗೆ ಆಯಾಸ, ಬಳಲಿಕೆ ಆದರೂ ಕರ್ತವ್ಯ ವಿಮುಖರಾಗುತ್ತಿರಲಿಲ್ಲ. ವಕೀಲರಾಗಿ ವೃತ್ತಿಪರ ಕರ್ತವ್ಯದಲ್ಲಿ ಸಹಜವಾದ ಪರಿಶ್ರಮ ವಹಿಸಬೇಕಾಗುತ್ತಿತ್ತು. ಇನ್ನೊಂದು ಕಡೆ ಸಾರ್ವಜನಿಕ ಬದುಕನ್ನು ಅಪ್ಯಾಯವಾಗಿ ಹಚ್ಚಿಕೊಂಡಿದ್ದರು. ಈ ಸೇವೆ ಅಷ್ಟೊಂದು ಸುಲಭ ಸಾಧ್ಯವಲ್ಲ. ಹೆಚ್ಚಿನ ಪರಿಶ್ರಮದಿಂದ ಕೂಡಿದ್ದು. ನ್ಯಾಯಾಲಯಕ್ಕೆ ರಜವಿರುತ್ತಿದ್ದ ದಿನಗಳಲ್ಲಿ ಅವರು ಪ್ರವಾಸಕ್ಕೆಗೊಂಡು ಕಾಲೇಜಿಗೆ ನಿಧಿ ಸಂಗ್ರಹ ಮಾಡುತ್ತಿದ್ದರು. ಕಾಲೇಜಿನ ಮತ್ತು ಸಮಾಜದ ಪ್ರಮುಖ ಪ್ರಚಾರಕರಾಗಿಯಷ್ಟೇ ಅಲ್ಲದೆ ಪ್ರಧಾನ 'ತಿರುಕ'ರಾಗಿಯೂ ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಷ್ಟೊಂದು ಪರಿಶ್ರಮದ, ಆಶೋತ್ತರಗಳಿಂದ ಕೂಡಿದ ಸಮಾಜದಲ್ಲಿ ಅಂತಃಕಲಹ ತಲೆದೋರಿ ಅದು ಇಬ್ಭಾಗದಲ್ಲಿ ಪರ್ಯಾವಸನಗೊಂಡಾಗ ಅವರ ಹೃದಯದ ಮೇಲೆ ಅವ್ಯಕ್ತ ಒತ್ತಡ ಬಿದ್ದಿತು. ಭರಿಸಲಾಗದ ವೇದನೆಯಾಯಿತು. ಸಮಾಜ ಮತ್ತು ಕಾಲೇಜಿನ ಕೆಲಸವನ್ನು ಅವರು ಎಷ್ಟರಮಟ್ಟಿಗೆ ಹಚ್ಚಿಕೊಂಡಿದ್ದರೆಂಬುದನ್ನು ಅವರ ಬರಹದಲ್ಲೇ ತಿಳಿದುಕೊಂಡರೆ ಚೆನ್ನ. "ಒಂದು ವೇಳೆ ಒಂದೆರಡು ತಾಸು ವಿಳಂಬವಾಗಿ ಪೇಷಾವರಕ್ಕೆ ಬಂದಿದ್ದರೂ ಸಹ ನನ್ನ ಕೆಲಸವಾಗುತ್ತಿರಲಿಲ್ಲ. ಸಕಾಲದಲ್ಲಿ ಅಲ್ಲಿಗೆ ನಾನು ತಲುಪಿದ್ದರಿಂದ ಮೂರು ಸಾವಿರ ರೂಪಾಯಿಗಳಷ್ಟು ನಗದು ಸಂಗ್ರಹವಾಯಿತು. ಅಷ್ಟರಲ್ಲೇ ಎದುರಾಳಿಗಳ ಗುಂಪು ಅಲ್ಲಿಗೆ ತನ್ನ ನಿಯೋಗ ಕಳುಹಿಸಿದ್ದರಿಂದ ವಂತಿಕೆ ಸಂಗ್ರಹವೇ ನಿಂತು ಹೋಯಿತು."

1892ರಲ್ಲಿ ಎರಡು ಗುಂಪುಗಳು ಪ್ರತ್ಯೇಕಗೊಂಡರೂ ಇಬ್ಭಾಗ ಪೂರ್ಣಗೊಂಡಿರಲಿಲ್ಲ. ಸಮಾಜದ ಮಂದಿರಗಳೇನೋ ಬೇರೆ ಬೇರೆಯಾಗಿದ್ದವು. ಆದರೆ ಕಾಲೇಜಿನ ಆಡಳಿತ ಸಮಿತಿ ಒಂದೇ ಆಗಿತ್ತು. ಅದರಲ್ಲಿದ್ದ ಕಟ್ಟಾವಾದಿಗಳ ಪ್ರತಿನಿಧಿಗಳು ಒಳಗೊಳಗೆ ಕೆಡಕು ಮಾಡತೊಡಗಿದರು. 1897ರ ವೇಳೆಗೆ ಕಾಲೇಜಿನ ಆಡಳಿತ ನಡೆಸುವುದೇ ಕಷ್ಟಕರವಾಯಿತು.

ಒಂದು ದಿನ ಸಭೆಯಲ್ಲಿ ದೊಣ್ಣೆ ಹಾಗು ಇತರ ಮಾರಕ ಆಯುಧಗಳನ್ನು ಹಿಡಿದು ಪರಸ್ಪರ ಮುಗಿ ಬೀಳುವಷ್ಟು ವಿಕೋಪ ಉಂಟಾಯಿತು. ದಿ. ಸಾಯಿನ್‌ದಾಸ್‌ರ ಹಿರಿಯ ಪುತ್ರ ಸುಂದರ್‌ದಾಸ್ ಅವರ ತಲೆಗೆ ಭಾರೀ ಪೆಟ್ಟು ಬಿದ್ದು ಅವರು ನಿಧನ ಹೊಂದಿದರು. ಎದುರಾಳಿ ಗುಂಪಿನಲ್ಲೂ ಒಬ್ಬರು ಬೆಲೆ ತೆರಬೇಕಾಯಿತು.

ಕಠಿಣವಾದ ಪರಿಶ್ರಮ, ವಿಶ್ರಾಂತಿ ಇಲ್ಲದ ದುಡಿಮೆ ಮತ್ತು ಕರ್ತವ್ಯಗಳ ಮಧ್ಯೆ ಮನಸ್ಸಿಗಾದ ಭಾರೀ ಹಿಂಸೆಯಿಂದ ಲಜಪತರ ಆರೋಗ್ಯ ತೀರಾ ಹದಗೆಟ್ಟಿತು. ದಿನದಿಂದ ದಿನಕ್ಕೆ ಅನಾರೋಗ್ಯ ಉಲ್ಬಣಗೊಂಡಿತು. ನ್ಯೂಮೋನಿಯಾಕ್ಕೆ ತುತ್ತಾಗಿ ಒಂದು ಹಂತದಲ್ಲಿ ಸಾವಿನ ಅಂಚು ತಲುಪಿದರು. ಎರಡು ಶ್ವಾಸಕೋಶಗಳಿಗೆ ತೀವ್ರ ಧಕ್ಕೆಯಾಯಿತು. ಇತರೆ ದೈಹಿಕ ಸಮಸ್ಯೆಗಳು ಕಾಣಿಸಿಕೊಂಡವು. ಎರಡು ತಿಂಗಳಿಗೂ ಹೆಚ್ಚು ಕಾಲ ಹಾಸಿಗೆಯಲ್ಲಿರ ಬೇಕಾಯಿತು.

''ಡಾ. ಬೇಲಿಯಂ ನನಗೆ ಶ್ರದ್ಧೆಯಿಂದ ಚಿಕಿತ್ಸೆ ನೀಡಿದರು. ವೈದ್ಯೋಪಚಾರ ಒದಗಿಸಿದರು. ನನ್ನನ್ನು ಬದುಕಿಸಲು ಬಹುವಾಗಿ ಶ್ರಮಿಸಿದರು. ನನ್ನ ಬದುಕಿನ ಕೊನೆಯತನಕ ಅವರಿಗೆ ನಾನು ಋಣಿ'' ಎಂದು ಲಾಲಾಜಿ ಕೃತಜ್ಞತೆ ಸಲ್ಲಿಸಿದ್ದಾರೆ.

* * *

ಅಧ್ಯಾಯ-13

ಲಾಹೋರಿನಲ್ಲಿ ಕಾಂಗ್ರೆಸ್ ಅಧಿವೇಶನ

1889ರಲ್ಲಿ ಮುಂಬೈ ಅಧಿವೇಶನದಲ್ಲಿ ಪಾಲ್ಗೊಂಡ ನಂತರ ಲಜಪತ್‌ರಾಯ್ ಅವರ ಉತ್ಸಾಹ ಈ ಸಂಘಟನೆಯ ವಿಷಯದಲ್ಲಿ ಗೌಣವಾಯಿತು ಎಂಬುದನ್ನು ನಾವಿಗಾಗಲೇ ಓದಿದ್ದೇವೆ. ನಂತರ ಕಾಂಗ್ರೆಸ್ ವಾರ್ಷಿಕ ಅಧಿವೇಶನದಲ್ಲಿ ಅವರು ಪಾಲ್ಗೊಳ್ಳಲಿಲ್ಲ. ಆದರೂ 1893ರಲ್ಲಿ ''ಪರ್ವತವೇ ಮಹಮದನ ಬಳಿಗೆ ಬಂದಿತು.'' ಡಿ.ಎ.ವಿ. ಕಾಲೇಜು ಮುಖಂಡರಲ್ಲಿ ಒಬ್ಬರಾದ ಭಕ್ಷಿ ಜಯಶಿರಾಮ್ ಸಲಹೆ ಮೇರೆಗೆ ಪಂಜಾಬಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸುವ ಏರ್ಪಾಟಾಯಿತು. ಭಕ್ಷಿ ಜಯಶಿರಾಮ್ ಅವರು ನ್ಯಾಯಮೂರ್ತಿ ಟೇಕ್ ಚಂದ್ ರಾಮ್ ಅವರ ತಂದೆ. ಸ್ವಾಗತ ಸಮಿತಿಗೆ ಲಜಪತರ ಸೇರ್ಪಡೆಯೂ ಆಯಿತು. ಆದರೆ ಅವರು ಕ್ರಿಯಾಶೀಲ ನಾಯಕತ್ವ ವಹಿಸಲಿಲ್ಲ. ಆರ್ಯ ಸಮಾಜದ ನಾಯಕರೇ ಕಾಂಗ್ರೆಸ್ ಅಧಿವೇಶನಕ್ಕೆ ಆಮಂತ್ರಣ ನೀಡಿದ್ದರೂ ಸಮಾಜದ ಕಾರ್ಯಕರ್ತರು ಉದಾಸೀನರಾಗಿದ್ದರು. ಆದರೂ ದಯಾಳ್ ಸಿಂಗ್ ಮಝಿಥಿಯಾ ಅವರಂತಹ ದಾನಿಗಳು, ಹರಿಕಿಷನ್ ಲಾಲ್ ಅವರಂತಹ ಉತ್ಸಾಹಿ ಯುವಕರು ಕಾಂಗ್ರೆಸ್ ಅಧಿವೇಶನದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿದರು. ಬ್ರಹ್ಮ ಸಮಾಜದವರೂ ಈ ಅಧಿವೇಶನದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿದರು. ಆ ಕಾಲಕ್ಕೆ ಲಾಹೋರಿನಲ್ಲಿ ಬ್ರಹ್ಮ ಸಮಾಜದಲ್ಲಿ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ನಬೀನ್ ಚಂದ್ರ ರಾಯ್ ಸ್ವಾಗತ ಸಮಿತಿಯ ಅಧ್ಯಕ್ಷರಾದರು.

ಕಾಂಗ್ರೆಸ್ ಅಧಿವೇಶನದಲ್ಲಿ ಲಜಪತ್‌ರಾಯ್ ಎರಡು ಮೂರು ಭಾಷಣಗಳನ್ನು ಮಾಡಿದರು. ಅವರೇ ದಾಖಲು ಮಾಡಿರುವಂತೆ 'ರಾಯ್ ಮುಲ್‌ರಾಜ್ ಪ್ರಮುಖ ಪಾತ್ರ ವಹಿಸಿದ್ದು ಗಮನಿಸಬೇಕಾದ ಸಂಗತಿ.'' ಈ ಹಿಂದೆ ನಾವು ಓದಿರುವಂತೆ ಅವರು ಓರ್ವ ಸರ್ಕಾರಿ ಸೇವಕ. ಅದರಲ್ಲೂ ನ್ಯಾಯಾಂಗ ಸೇವೆಯಲ್ಲಿದ್ದವರು. ಆದ್ದರಿಂದ ರಾಜಕಾರಣದ ವಿಷಯದಲ್ಲಿ ಅವರು ತೀರಾ ನಿರ್ಲಿಪ್ತರಾಗಿ ಇರಬೇಕಾಗುತ್ತಿತ್ತು. ವ್ಯತಿರಿಕ್ತವಾಗಿ ಅವರು ತೆರೆಮರೆಯಲ್ಲಿದ್ದುಕೊಂಡು ಸಕ್ರಿಯ ರಾಜಕಾರಣಿಗಿಂತ ಪ್ರಬಲರಾಗಿದ್ದರು. ಅನೌಪಚಾರಿಕ ಸಭೆಗಳಲೆಲ್ಲಾ ಅವರದೇ ಮೇಲುಗೈ. ಸ್ವಾಮಿ ದಯಾನಂದರ ಬಲಗೈಯಾಗಿ ಆರ್ಯ ಸಮಾಜದ ವಿಧಿ ವಿಧಾನಗಳನ್ನು, ಸಂವಿಧಾನಗಳನ್ನು ರಚಿಸಿದವರು ಅವರೇ. ಕಾಂಗ್ರೆಸ್‌ನಲ್ಲೂ ಘಟನಾವಳಿಗಳು ಇರಬೇಕೆಂದು ಮುಲ್‌ರಾಜ್ ಸಹಜವಾಗಿ ಆಶಿಸಿದ್ದರು. ಎ.ಓ. ಹ್ಯೂಮ್ ಬಗ್ಗೆ ಅವರಲ್ಲಿದ್ದ ಅನುಮಾನ ಇಂಗಿರಲಿಲ್ಲ. ಬಹುಶಃ ಕಾಂಗ್ರೆಸ್ ಸಂಘಟನೆಯ ಹಿಂದೆ ಹ್ಯೂಮ್‌ರಲ್ಲಿದ್ದ ನಿಲುವನ್ನು ಪರೀಕ್ಷಿಸುವ ಸಲುವಾಗಿಯೇ ಅವರು ಸಂವಿಧಾನ ರಚನೆಗೆ ಒತ್ತಾಯ ಮಾಡುವಂತಿತ್ತು. ತಮ್ಮ ಒತ್ತಾಯವನ್ನು ಎ.ಓ. ಹ್ಯೂಮ್ ಒಪ್ಪಿಕೊಳ್ಳಲಾರರೆಂದು ಅವರು ಆಶಿಸಿದ್ದರು. ಅವರ ಭಾವನೆ ಹುಸಿಯಾಗಲಿಲ್ಲ. ಕಾಂಗ್ರೆಸ್ ಸಂಘಟನೆಗೆ ಯಾವುದೇ ಸಂವಿಧಾನದ ಅಗತ್ಯವಿಲ್ಲವೆಂದು ಹ್ಯೂಮ್ ಹೇಳಿದರು. ಅಂತಹ ಪ್ರಸ್ತಾಪ ಯಾವ ರೀತಿಯಲ್ಲೂ ಬಲಗೊಳ್ಳಲು ಅವರು ಅವಕಾಶ ಕೊಡಲಿಲ್ಲ.

ಅಲ್ಲಿಯತನಕ ಕಾಂಗ್ರೆಸ್‌ನಲ್ಲಿ ಸಂವಿಧಾನ ಇರಲಿಲ್ಲವೆಂದು ಹೇಳಿದರೆ ಆಶ್ಚರ್ಯವಾಗುತ್ತದೆ. 1899ರಲ್ಲಿ ಲಕ್ನೋದಲ್ಲಿ ಅಧಿವೇಶನ ನಡೆಯುವ ತನಕ ಕಾಂಗ್ರೆಸ್ ಸಂಘಟನೆ ತನ್ನ ಘಟನಾವಳಿಗಳನ್ನು ರೂಪಿಸಿಕೊಂಡಿರಲಿಲ್ಲ. ಆ ವರ್ಷ ಸಂಘಟನೆಯ ಘಟನಾವಳಿಗಳು ರೂಪಿತವಾದರೂ ಅದರಲ್ಲಿ ಮುಲ್‌ರಾಜ್ ಸೂಚಿಸಿದ್ದ ಅತ್ಯಗತ್ಯ ಅಂಶಗಳು ಇರಲಿಲ್ಲ. ಸಂಘಟನೆಯ ಪ್ರತಿನಿಧಿಗಳಿಗೆ ಪ್ರಾತಿನಿಧಿಕ ಸ್ವರೂಪವಿರಬೇಕು. ವರ್ಷಾದ್ಯಂತ ಕೆಲಸ ಮಾಡಲು ಪೂರಕವಾಗಿ ಒಂದು ಕೇಂದ್ರ ಕಚೇರಿ ಮತ್ತು ಅದರ ಶಾಖೆಗಳು ಇರಬೇಕು ಎಂಬ ಅಂಶಗಳು ಮುಲ್‌ರಾಜ್ ಅವರ ಸಲಹೆಗಳಲ್ಲಿ ಪ್ರಮುಖವಾಗಿದ್ದವು. 1908ರ ತನಕ ಪ್ರಾಂತೀಯ ಸಮಿತಿಗಳ ರಚನೆ ಆಗಲಿಲ್ಲ. ಪಂಜಾಬ್ ನಿಯೋಗ ಪ್ರತಿ ಅಧಿವೇಶನದಲ್ಲೂ ಮುಲ್‌ರಾಜ್ ಪ್ರಸ್ತಾವಗಳ ಆಧಾರದ ಮೇಲೆ ಘಟನಾವಳಿಗಳನ್ನು ರಚಿಸಲು ಒತ್ತಾಯಿಸುತ್ತಲೇ ಬಂದಿತ್ತು. ಮುಲ್‌ರಾಜರದು ಸ್ವ ಸಿದ್ಧಾಂತ ಪ್ರತಿಪಾದನೆಯ ಮನೋಧರ್ಮ. ತೆರೆಮರೆಯಲ್ಲಿ ಇದ್ದುಕೊಂಡೇ ತಮ್ಮ ಸಿದ್ಧಾಂತ ಕಾರ್ಯರೂಪಕ್ಕೆ ಬರಲು ಒತ್ತಡ ಹಾಕುತ್ತಿದ್ದರು.

1904ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಲಜಪತ್‌ರಾಯ್ ನೇತೃತ್ವದ ಪ್ರತಿನಿಧಿ ತಂಡ ಸಂವಿಧಾನ ರೂಪಿಸುವಂತೆ ಒತ್ತಾಯ ಹಾಕಿತು. ಆ ತಂಡದಲ್ಲಿ ಹೆಚ್ಚು ಒತ್ತಾಯ ಮಂಡಿಸಿದ ದ್ವಾರಕದಾಸ್ ಲಜಪತರ ಮಿತ್ರಗಣದಲ್ಲಿ ಒಬ್ಬರು. ಅವರ ಪ್ರಯತ್ನ ಫಲಕಾರಿಯಾಗಲಿಲ್ಲ. ಆಗ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಹೆಚ್ಚು ಜನಪ್ರಿಯರಾಗಿದ್ದ ಸರ್ ಪೆರೋಜ್ ಷಹಾ ಮೆಹ್ತಾ. ಮುಂಬೈ ಅಧಿವೇಶನದಲ್ಲಿ ಪಾಲ್ಗೊಂಡ ಅಂಬಾಲದ ಧೂನಿಚಂದ್ ಹೀಗೆ ಬರೆದಿಟ್ಟಿದ್ದಾರೆ:

"ಲಾಲಾ ಲಜಪತ್‌ರಾಯ್ ಮತ್ತು ಲಾಲಾ ದ್ವಾರಕದಾಸ್ ಕಾಂಗ್ರೆಸ್ ಘಟನಾವಳಿಗಳನ್ನು ರಚಿಸಲು ಬಹಳ ಒತ್ತಡ ಹಾಕಿದರು. ಅದು ಫಲಕಾರಿಯಾಗಲಿಲ್ಲ. ಪಾರ್ಸಿ ಮುತ್ಸದ್ಧಿ ಪಂಜಾಬ್ ಪ್ರತಿನಿಧಿ ತಂಡದ ಬಾಯಿ ಮುಚ್ಚಿಸಿದರು. ಆ ವೇಳೆಯಲ್ಲಿ ಲಾಲಾ ಲಜಪತ್‌ರಾಯ್ ಅಷ್ಟೊಂದು ನಾಯಕತ್ವಕ್ಕೆ ಏರಿರಲಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ಅವರು ಜನಪ್ರಿಯ ನಾಯಕರಾಗಿದ್ದರು."

ಎರಡು ವರ್ಷಗಳ ನಂತರ ಬನಾರಸ್ ಅಧಿವೇಶನದಲ್ಲಿ ಮಹತ್ವದ ಬೆಳವಣಿಗೆಗಳಾದವು. ಮುಂದಿನ ಅಧ್ಯಾಯದಲ್ಲಿ ಅಂದಿನ ಘಟನೆಗಳನ್ನು ತಿಳಿದುಕೊಳ್ಳೋಣ. 1893ರಲ್ಲೇ ಕಾಂಗ್ರೆಸ್ ಸಂಘಟನೆಗೆ ಒಂದು ಯೋಗ್ಯವಾದ ಸಂವಿಧಾನ ಇರಬೇಕೆಂದು ಲಾಲಾ ಲಜಪತ್‌ರಾಯ್ ಮತ್ತು ಅವರ ಬೆಂಬಲಿಗರು ಒತ್ತಡ ಹೇರಿದರು. ಅವರ ಒತ್ತಡವನ್ನು ಒತ್ತಟ್ಟಿಗೆ ಇಡುತ್ತಾ ಬಂದಷ್ಟು ನಂತರದ ಅಧಿವೇಶನದಲ್ಲಿ ಅದು ಇನ್ನಷ್ಟು ಪುಟಿಯುತ್ತಾ ಬಂದಿತು. ಕಾಂಗ್ರೆಸ್ ಘಟನಾವಳಿಗಳನ್ನು ರಚಿಸುವ ಬಗ್ಗೆ ಒಂದು ಹೋರಾಟವೇ ನಡೆಯಿತು. ವಿದೇಶಿ ಆಡಳಿತಗಾರರ ಕೈಗಳಲ್ಲಿ ಸಿಕ್ಕಿಕೊಂಡ ಸಂಘಟನೆಯಲ್ಲಿ ಭಾರತದ ಹಿತಕ್ಕೆ ಪೂರಕವಾಗುವಂತಹ ಸಂವಿಧಾನ ರಚಿಸುವುದು ಅಷ್ಟೊಂದು ಸುಲಭವಾಗಿರಲಿಲ್ಲ. ದೇಶಭಕ್ತರು ಎನಿಸಿಕೊಂಡ ಕಾಂಗ್ರೆಸ್ಸಿನ ಮುಖಂಡರು ತಮ್ಮ ಸಂಘಟನೆಯಲ್ಲಿ ಸಂವಿಧಾನಾತ್ಮಕ ವ್ಯವಸ್ಥೆ ಇರಬೇಕೆಂಬುದನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

ಲಾಹೋರಿನಲ್ಲಿ ನಡೆದ ಮೊಟ್ಟ ಮೊದಲ ಕಾಂಗ್ರೆಸ್ ಕಾಂಗ್ರೆಸ್ ಅಧಿವೇಶನದಲ್ಲಿ ಲಜಪತ್‌ರಾಯ್ ಸಂವಿಧಾನ ರಚನೆಗೆ ಸಂಬಂಧಪಟ್ಟಂತೆ ಪುಣೆಯ ಇಬ್ಬರು ನೇತಾರರಾದ ಗೋಪಾಲ ಕೃಷ್ಣ ಗೋಖಲೆ ಮತ್ತು ಬಾಲ ಗಂಗಾಧರ ತಿಲಕರನ್ನು ಭೇಟಿ ಮಾಡಿದರು. ಅವರ ಅಂದಿನ ಆ ಪರಿಚಯ ಮುಂದಿನ ದಿನಗಳಲ್ಲಿ ಅತಿ ಹೆಚ್ಚು ಮೌಲ್ವಿಕ ಗೆಳೆತನವಾಗಿ ಮಾರ್ಪಾಟ್ಟಿದ್ದು ಮುಂದಿನ ಕಥನ.

* * *

ಅಧ್ಯಾಯ- 14

ಜನಜಾಗೃತಿಗಾಗಿ ಜೀವನ ಚರಿತ್ರೆಗಳು

ಇಂಗ್ಲಿಷ್ ಭಾಷೆ ಬಾರದ ಜನರಿಗಾಗಿ ತಾವು ಸ್ಫೂರ್ತಿ ಪಡೆದ ಮಝ್ಜಿನಿ ಅಂತಹವರ ಜೀವನಗಾಥೆಗಳನ್ನು ಒದಗಿಸಿ ರಾಷ್ಟ್ರಭಕ್ತಿಯ ಜಾಗೃತಿ ಮೂಡಿಸಲು ಲಾಲಾ ಲಜಪತ್‌ರಾಯ್ ತವಕಿಸಿದ್ದರು. ಅದಕ್ಕಾಗಿ 1896ರಲ್ಲಿ ಯೋಜನೆಯೊಂದನ್ನು ಹಾಕಿಕೊಂಡು ಉರ್ದು ಭಾಷೆಯಲ್ಲಿ ಪುಸ್ತಕ ಸರಣಿಯೊಂದರ ಪ್ರಕಟಣೆಗೆ ಮುಂದಾದರು. ಅದನ್ನು ಅವರು 'ಜಗತ್ತಿನ ಮಹಾ ಮೇಧಾವಿಗಳು' ಎಂದು ಹೆಸರಿಸಿದರು. ಈ ಸರಣಿಯಲ್ಲಿ ಪ್ರಥಮ ವ್ಯಕ್ತಿಯನ್ನಾಗಿ ಅವರು ತಮ್ಮ ಇಟಲಿಯ ಗುರು ಜೋಸೆಫ್ ಮಝ್ಜಿನಿ ಕಥನವನ್ನೇ ಆರಿಸಿಕೊಂಡರು. ಎಳೆತನದಲ್ಲಿ ತಮ್ಮ ಮೇಲೆ ಅಪಾರ ಪ್ರಭಾವ ಬೀರಿದ ಅವರ ಜೀವನ ಚರಿತ್ರೆ ದೇಶವಾಸಿಗಳ ಮೇಲೆ ಹೆಚ್ಚು ಪರಿಣಾಮ ಬೀರಬಹುದೆಂದು ಲಜಪತ್‌ರಾಯ್ ಆಶಿಸಿದರು. ಈ ಹಿಂದೆ 'Duties of Man' ಶೀರ್ಷಿಕೆಯಲ್ಲಿ ಉರ್ದು ಭಾಷೆಯಲ್ಲಿ ಮಝ್ಜಿನಿ ಬಗ್ಗೆ ಹೊತ್ತಿಗೆಯೊಂದನ್ನು ತಂದಿದ್ದರು. ಹೊಸ ಯೋಜನೆಯಲ್ಲಿ ಮಝ್ಜಿನಿ ಕುರಿತು ಜನಪ್ರಿಯವಾದ ಪುಟ್ಟ ಜೀವನ ಚರಿತ್ರೆಯನ್ನು ಹೊರ ತಂದರು. ಎರಡನೇ ಜೀವನ ಚರಿತ್ರೆ ಗ್ಯಾರಿಬಾಲ್ಡಿಯದು. ಈ ಎರಡು ಕೃತಿಗಳು ತಮ್ಮ ನಿರೀಕ್ಷೆಯ ಪರಿಣಾಮ ಬೀರಿದವೆಂದು ಅವರಿಗೆ ಅನಿಸಲಿಲ್ಲ. ಮಝ್ಜಿನಿ ಮತ್ತು ಗ್ಯಾರಿಬಾಲ್ಡಿ ಅವರ ಓದುಗರಿಗೆ ಚಿರಪರಿಚಿತವಾದ ವ್ಯಕ್ತಿತ್ವಗಳಾಗಿರಲಿಲ್ಲ. ರಾಜಕೀಯ ಮಾನಸದ ಮೇಲೆ ನಿಶ್ಚಿತ ಪ್ರಭಾವ ಬೀರಬಹುದಾದ ಕೆಲಸವನ್ನೇ ಕೈಗೊಂಡಿದ್ದರು. ಇಟಲಿಯ ಏಕೀಕರಣ ಮತ್ತು ಸ್ವಾತಂತ್ರ್ಯ ಗಳಿಕೆಯ ಆಂದೋಲನ ಅವರನ್ನು ಬಹುವಾಗಿ ಆಕರ್ಷಿಸಿತ್ತು.

ಭಾರತದಲ್ಲಿದ್ದ ಪರಿಸ್ಥಿತಿ ಮತ್ತು ಸಮಸ್ಯೆಗಳು ಇಟಲಿಯ ಸ್ಥಿತಿಗತಿಗಳಿಗಿಂತ ಭಿನ್ನವಾಗಿರಲಿಲ್ಲ. ಇಟಲಿಯ ನಾಯಕರು ಎದುರಿಸಿದ ಪ್ರಸಂಗವೇ ಭಾರತದಲ್ಲೂ ಇತ್ತು. ಅದಕ್ಕಿಂತ ಹೆಚ್ಚಿನದಾಗಿ ಮಝ್ಜಿನಿ ಹೋರಾಟ ಮತ್ತು ಸಾಧನೆ ವಿಶ್ವಮಾನ್ಯವಾದುದು. ಅವರ ಕರೆ ಇಟಲಿಯ ಜನರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅನೇಕ ದೇಶಗಳಲ್ಲಿ ಅಸಂಖ್ಯಾತ ಜನರನ್ನು ಸೆಳೆದಿದ್ದಂತೆ ಮಝ್ಜಿನಿ ಸಂದೇಶಗಳು ಲಜಪತರನ್ನು ಸೆಳೆದಿದ್ದವು. ಮಝ್ಜಿನಿ ಸಾಧನೆಗೆ ಪೂರಕವಾದುದು ಗ್ಯಾರಿಬಾಲ್ಡಿಯ ಅಗ್ಗಳಿಕೆ. ಆ ಚಿತ್ರಣವಿಲ್ಲದೆ ಓದುಗರ ಮುಂದೆ ಇಟಲಿಯ ಏಕೀಕರಣ ಮತ್ತು ಸ್ವಾತಂತ್ರ್ಯದ ಸಾಧನೆ ಸಮಗ್ರವಾಗಿ ನಿಲ್ಲುವುದಿಲ್ಲ. ಮಝ್ಜಿನಿಯ ಚಿಂತನೆ ಮತ್ತು ಕಲ್ಪನೆಗಳನ್ನು ಸಾಕಾರವಾಗಿಸಿದ್ದು ಗ್ಯಾರಿಬಾಲ್ಡಿ. ಮಝ್ಜಿನಿಯಂತೆ ಆತ ಸಹ ಅಸೀಮಾ ಸ್ವಾತಂತ್ರ್ಯ ಪ್ರೇಮಿ. ಕೇವಲ ಇಟಲಿಯನ್ನಷ್ಟೇ ಆತ ಪ್ರೀತಿಸಲಿಲ್ಲ. ದಕ್ಷಿಣ ಅಮೆರಿಕದಲ್ಲಿ ಆತ ನಡೆಸಿದ ಅಪ್ರತಿಮ ಹೋರಾಟಗಳು ಅದನ್ನು ಸಾರುತ್ತವೆ. ಆತ ಅವಿರತ ಹೋರಾಡಿದ. ವಿಜಯ ಗಳಿಸಿದ. ತಾನು ಗೆದ್ದ ರಾಜ್ಯಗಳನ್ನು ಸ್ವಾತಂತ್ರ್ಯವಾಗಿಸಿ ಇತರರಿಗೆ ಬಿಟ್ಟುಕೊಟ್ಟ. ತಾನು ಮಾತ್ರ ತನ್ನ ಬಡತನದ

ಸೀಮೆಯಿಂದ ಹೊರಕ್ಕೆ ಬರಲಿಲ್ಲ. ಒಂದು ಸಣ್ಣ ದ್ವೀಪವನ್ನು ಸಹ ತನ್ನ ಮನೆಯನ್ನಾಗಿ ಮಾಡಿಕೊಳ್ಳಲಿಲ್ಲ. ತನ್ನ ತಾಯ್ನಾಡಿನ ಯುವ ಪೀಳಿಗೆಯಲ್ಲಿ ದೇಶಭಕ್ತಿಯನ್ನು ಉದ್ದೀಪನಗೊಳಿಸಲು ಲಜಪತ್‌ರಾಯ್ ಮಝ್ಜಿನಿ ಮತ್ತು ಗ್ಯಾರಿಬಾಲ್ಡಿಯ ಪುಸ್ತಕಗಳ ಪ್ರಕಟಣೆಗೆ ಮುಂದಾದರು.

ಇಂಗ್ಲಿಷ್‌ನಲ್ಲಿ ಸುಪರಿಚಿತವಾಗಿದ್ದ ಜೀವನ ಚರಿತ್ರೆಗಳ ಆಧಾರದ ಮೇಲೆ ಲಜಪತ್‌ರಾಯ್ ಆ ಕೃತಿಗಳನ್ನು ಹೊರತಂದರು. ಮಝ್ಜಿನಿ ಜೀವನ ಮತ್ತು ಬರಹಗಳನ್ನು ಕುರಿತ ಆರು ಸಂಪುಟಗಳು ಹೊರ ಬಂದವು. ಜೊತೆಯಲ್ಲಿ ಕೌಂಟೆಸ್ ಸೆಸರಿಸ್ಕೊ ಜೀವನ ಚರಿತ್ರೆಯನ್ನು ನೀಡಿದರು. ಬಾಲ್ಟನ್ ಕಿಂಗ್ಸ್‌ರ 'Life of Mazzine'ಯನ್ನು ತರ್ಜುಮೆ ಮಾಡಿದರು. ಭಾರತದಲ್ಲಿ ಪ್ರಕಟಣೆ ಕಾಣದಿದ್ದ ಇಂಗ್ಲಿಷ್‌ನ ಇತರೆ ಜನಪ್ರಿಯ ಕೃತಿಗಳನ್ನು ಅವರು ಉರ್ದುಕರಿಸಿದರು. ವಿಶ್ಲೇಷಣಾತ್ಮಕವಾಗಿ ಬರೆಯುವುದಾಗಲಿ, ಹೊಸ ಸಂಗತಿಗಳನ್ನು ಸೇರಿಸುವುದಾಗಲಿ ಅವರ ಕೃತಿಗಳ ಆಶಯವಾಗಿರಲಿಲ್ಲ. ತಮ್ಮ ದೇಶವಾಸಿಗಳು ಇಟಲಿಯ ಮಹಾನ್ ನಾಯಕರ ಪರಿಚಯ ಮಾಡಿಕೊಂಡು ಅವರ ಪ್ರಭಾವವನ್ನು ತಮ್ಮಲ್ಲಿ ಅಚ್ಚೊತ್ತಿಕೊಳ್ಳಬೇಕೆಂದು ಅವರು ಬಯಸಿದ್ದರು. ಲಜಪತರ ಪರಿಶ್ರಮ ಫಲ ನೀಡಲು ದಶಕಗಳೇ ಬೇಕಾದವು. ಅವರ ಈ ಉರ್ದು ಕೃತಿಗಳನ್ನು ಓದಿದ ಯುವ ಜನತೆ ಅದರಲ್ಲೂ ವಿಶೇಷವಾಗಿ ಪಂಜಾಬಿನ ಯುವ ಪೀಳಿಗೆಯಲ್ಲಿ ದೇಶಭಕ್ತಿ ಪ್ರಜ್ವಲಿಸಿತು. ಹೊಸ ಸ್ಫೂರ್ತಿ, ಸೆಳಕು ಮೂಡಿಸುವಲ್ಲಿ ಮಝ್ಜಿನಿ ಜೀವನ ಚರಿತ್ರೆ ಪರಿಪೂರ್ಣ ಯಶಸ್ಸು ಕಂಡಿತು. ಪಂಜಾಬಿನಲ್ಲಿ ದೇಶಭಕ್ತಿಯ ಉಜ್ವಲ ಕಾಂತಿ ಬೆಳಗ ತೊಡಗಿತು. ಅವರ ಕೊಡುಗೆ 1906ರ ಮಹಾನ್ ರಾಜಕೀಯ ಸಂಘಟನೆಗಳಿಗೆ ಸ್ಫೂರ್ತಿಯಾಯಿತು.

ಇಟಲಿ ಮುಕ್ತವಾಗಬೇಕು. ತನ್ನ ನಾಡು ಏಕೀಕೃತವಾಗಬೇಕು. ಸ್ವಾತಂತ್ರ್ಯದ ಸ್ವಚ್ಛಗಾಳಿ ಮಂದಾನಿಲವಾಗಿ ಬೀಸಬೇಕು ಎಂದು ಕನಸು ಕಂಡಿದ್ದ ಮಝ್ಜಿನಿ ಅತುಳ ದೇಶಪ್ರೇಮಿ. ಆತ ಕಟ್ಟಾ ರಾಷ್ಟ್ರೀಯವಾದಿ. ಆತನ ದೃಷ್ಟಿಕೋನ ಸಂಕುಚಿತ ಧೋರಣೆಗಳಿಂದ ಅತೀತವಾಗಿ ಮಾನವೀಯ ಗುಣಗಳಿಂದ ಆವರಿಸಿಕೊಂಡಿತ್ತು. ಆತ ಓರ್ವ ಮಹಾನ್ ಕ್ರಾಂತಿಕಾರಿ. "ಜನತೆಯಿಂದ ಜನತೆಗಾಗಿ" ಕ್ರಾಂತಿ ನಡೆಯಬೇಕೆಂದು ತುಂಬು ವಿಶ್ವಾಸ ಹೊಂದಿದ್ದ ಹೋರಾಟಗಾರ. ಭಯೋತ್ಪಾದನೆಯಲ್ಲಿ ಆತನಿಗೆ ನಂಬಿಕೆ ಇರಲಿಲ್ಲ. ಅದರಿಂದ ಪೂರ್ಣ ಫಲ ದೊರೆಯುತ್ತದೆ ಎಂದು ಆತ ನಂಬಿರಲಿಲ್ಲ. ನೈತಿಕ ಮೌಲ್ಯಗಳಲ್ಲಿ ಮಝ್ಜಿನಿ ಸಂಪೂರ್ಣ ವಿಶ್ವಾಸವಿಟ್ಟುಕೊಂಡಿದ್ದವ. ಆದ್ದರಿಂದಲೇ ಆತ ಕೊಟ್ಟ ಕರೆಗಳಲ್ಲಿ ಜೀವಶಕ್ತಿ ಇರುತ್ತಿತ್ತು. ಲಜಪತ್‌ರಾಯ್ ಅವೆಲ್ಲವನ್ನು ತಮ್ಮಲ್ಲಿ ಅಂತರ್ಗತ ಮಾಡಿಕೊಂಡಿದ್ದರು. ತಮ್ಮ ನಾಡಿನ ಜನರಿಗೆ ಮಝ್ಜಿನಿಯಂತಹ ಆದರ್ಶ ಮೂರ್ತಿಯೇ ಬೇಕೆಂದು ನಿರೂಪಿಸಿಕೊಂಡಿದ್ದರು. ಬ್ರಿಟಿಷ್ ಆಡಳಿತ ಭಾರತಕ್ಕೆ ಅಪೂರ್ವವಾದ ಐಕ್ಯತೆ ಕೊಟ್ಟಿದೆ ಎಂಬ ಒಳ ವಾಸ್ತವವನ್ನು ಲಜಪತರು ಮನಗಂಡಿದ್ದರು. ಆ ಐಕ್ಯತೆಗೆ ಧಕ್ಕೆಯಾಗದ ರೀತಿಯಲ್ಲಿ ದೇಶವನ್ನು ಬಂಧ ಮುಕ್ತಗೊಳಿಸಬೇಕೆಂದು ಅವರು ಬಯಸಿದ್ದರು. ಅದಕ್ಕಾಗಿ ಎಂತಹ ಬಲಿದಾನವೂ ದೊಡ್ಡದಲ್ಲವೆಂದು ಅವರು ಪರ್ಯಾಲೋಚಿಸಿದ್ದರು.

ಇಟಲಿ ಏಕೀಕರಣದ ನಿರ್ಮಾತೃಗಳನ್ನು ಕುರಿತು ಮೆರೆಡಿತ್ ಮಹಾಶಯ ' ಕ್ರೋಢಿಕೃತವಾಗಿ ಹೀಗೆ ದಾಖಲು ಮಾಡಿಟ್ಟಿದ್ದಾನೆ.

'ಕೇವೂರ್, ಮಝಿನಿ, ಗ್ಯಾರಿಬಾಲ್ಡಿ ; ಮೂವರು!

ತಾಯ್ನಾಡಿನ ಮಾನಸ, ಆಕೆಯ ಆತ್ಮ, ಆಕೆಯ ಖಡ್ಗ...

ಲಜಪತರ ಪುಟ್ಟ ಮಝಿನಿ ಜೀವನ ಕಥನ ಬ್ರಿಟಿಷರ ಪಾಲಿಗೆ ಅಪಾಯದ ಸೂಚನೆಯಾಯಿತು. ಅನೇಕ ಅಧಿಕಾರಿಗಳು ಆಗಬಹುದಾದ ಗಂಡಾಂತರದ ವಾಸನೆ ಹಿಡಿದರು. ಒಂದಲ್ಲ ಒಂದು ದಿನ ತಮ್ಮನ್ನು ಕಾನೂನು ಕ್ರಮಕ್ಕೆ ಒಳಪಡಿಸುತ್ತಾರೆಂಬ ವದಂತಿಗಳು ಲಜಪತರಿಗೆ ಪದೇ ಪದೇ ತಲುಪತೊಡಗಿದವು. ಬಹುಶಃ ಅವರ ವಿರುದ್ಧ ಯಾವುದೇ ಪ್ರಕರಣಕ್ಕೆ ಆಧಾರ ಒದಗಿಸಲು ಸರ್ಕಾರಿ ವಕೀಲರಿಗೆ ಸಾಧ್ಯವಾಗಿರಲಿಲ್ಲವೇನೋ? ಅವರಿಗೆ ತಲುಪಿದ ಮಾಹಿತಿಗಳ ಪ್ರಕಾರ ''ಆ ಪುಸ್ತಕವನ್ನು ಅಧಿಕಾರಿಗಳು ಎರಡು-ಮೂರು ಬಾರಿ ಇಂಗ್ಲಿಷ್‌ಗೆ ತರ್ಜುಮೆ ಮಾಡಿ ಕಾನೂನು ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿದ್ದರು. ಕಾನೂನಿನ ತಜ್ಞ ಅಧಿಕಾರಿಗಳಲ್ಲಿ ಅಪರಾಧದ ಅಭಿಪ್ರಾಯ ನೀಡಲು ಒಮ್ಮತ ಮೂಡಿರಲಿಲ್ಲ. ಈ ಮಧ್ಯೆ ಶಿಕ್ಷಣ ಇಲಾಖೆಯು ಹೊಸ ಅಲೆಯ ಜನಪ್ರಿಯತೆ ಕಂಡು ತೀರಾ ಚಿಂತೆಗೆ ಒಳಗಾಗಿತ್ತು. ಅನುಮಾನದ ದೃಷ್ಟಿಯಿಂದ ಬೆಳವಣಿಗೆಯನ್ನು ನೋಡತೊಡಗಿತು. ಎಲ್ಲಾ ಮುಖ್ಯೋಪಾಧ್ಯಾಯರಿಗೂ ಸುತ್ತೋಲೆ ಕಳುಹಿಸಿ ಜಾಗೃತರಾಗಿರುವಂತೆ ನಿರ್ದೇಶನ ನೀಡಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಡಿ.ಎ.ವಿ. ಕಾಲೇಜಿನ ಪ್ರಿನ್ಸಿಪಾಲರನ್ನು ಪದೇ ಪದೇ ಪ್ರಶ್ನಿಸಿ ಲಜಪತರ ಪುಸ್ತಕಗಳನ್ನು ಕಾಲೇಜಿನ ಅಥವಾ ಶಾಲಾ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆಯೇ ಎಂದು ತಿಳಿಯ ಬಯಸಿದರು. ಗ್ರಾಮಾಂತರ ಪ್ರದೇಶದಲ್ಲಿ ಓರ್ವ ವಿದ್ಯಾರ್ಥಿ ಬಳಿ ಅಂತಹ ಪುಸ್ತಕ ಇದ್ದದ್ದನ್ನು ಓರ್ವ ಶಾಲಾ ಇನ್‌ಸ್ಪೆಕ್ಟರ್ ಪತ್ತೆ ಹಚ್ಚಿಯೂ ಬಿಟ್ಟ. ಆ ಶಾಲೆಯ ಮುಖ್ಯೋಪಾಧ್ಯಾಯರು ವಿವರಣೆ ಒದಗಿಸುವಂತೆ ಮಾಡಲಾಯಿತು!

ಲಜಪತರು ಪುಸ್ತಕ ಜಾಗೃತಿಯ ಮೂಲಕ ಜನರಲ್ಲಿ ರಾಜಕೀಯ ಪ್ರಜ್ಞೆ ಕೆರಳಿಸುವ ತಮ್ಮ ಯೋಜನೆಗೆ ಮುಂದಿನ ಕಥಾನಾಯಕರನ್ನಾಗಿ ಮಾತೃಭೂಮಿಯ ಮೂವರು ಮಹಾನ್ ಶ್ರೇಷ್ಠರನ್ನು ಆರಿಸಿಕೊಂಡರು. ಶಿವಾಜಿ, ದಯಾನಂದ ಮತ್ತು ಶ್ರೀ ಕೃಷ್ಣ ಅವರ ಭಾರತೀಯ ಕಥಾನಾಯಕರಾದರು. ಮಝಿನಿ ಮತ್ತು ಗ್ಯಾರಿಬಾಲ್ಡಿ ಕೃತಿಗಳ ನಂತರ ಲಜಪತ್‌ರಾಯ್ ಹೊರತಂದಿದ್ದು ಶಿವಾಜಿ ಕಥನ. ಎಲ್ಲಾ ಈ ಮೂರು ಕೃತಿಗಳು 1896ರಲ್ಲೇ ಹೊರಬಂದವು. ಶಿವಾಜಿ ಕಥನ ಹೆಚ್ಚು ಆಸಕ್ತಿ ಮೂಡಿಸಿತು. ಅದಕ್ಕೆ ಕಾರಣವೂ ಪ್ರಬಲವಾಗಿತ್ತು. ಮುಸ್ಲಿಂ ಚರಿತ್ರೆಕಾರರು ಶಿವಾಜಿಯನ್ನು ಅತ್ಯಂತ ಹೀನಾಯವಾಗಿ ಚಿತ್ರಿಸಿದ್ದರು. ಶಿವಾಜಿಗೆ ಎದುರಾಗಿ ನಿಂತು ಹೋರಾಡಿದವರನ್ನು ವೈಭವಿಕರಿಸಿದ್ದರು. ಶಿವಾಜಿ ಚಿತ್ರಣ ತೀರಾ ವಿಕೃತವಾಗಿತ್ತು. ಐರೋಪ್ಯ ಚರಿತ್ರೆಕಾರರು ಕೂಡಾ ಮರಾಠ ಚರಿತ್ರೆಯ ಬಗ್ಗೆ ಪೂರ್ವಾಗ್ರಹಪೀಡಿತರಾಗಿದ್ದರು. ತಮ್ಮ ದಾಖಲೆಗಳಿಗೆ ಅವರು ಪರ್ಷಿಯನ್ ಮೂಲವನ್ನು ಆಶ್ರಯಿಸಿದ್ದೇ ಅದಕ್ಕೆ ಕಾರಣ. ಮಾತೃಭೂಮಿಯ

ಮಹಾನ್ ನಾಯಕನನ್ನಾಗಿ ಶಿವಾಜಿಯನ್ನು ಚಿತ್ರಿಸುವ ಕೆಲಸ ಚಾರಿತ್ರಿಕವಾಗಿ ನಡೆದೇ ಇರಲಿಲ್ಲ. ಇತ್ತ ಮಹಾರಾಷ್ಟ್ರದಲ್ಲಿ ತೀಲಕರು ಸಾರ್ವಜನಿಕ ಗಣೇಶೋತ್ಸವದ ಮೂಲಕ ಶಿವಾಜಿಯನ್ನು ಶ್ರೇಷ್ಠ ರಾಷ್ಟ್ರೀಯ ನಾಯಕನನ್ನಾಗಿ ಚಿತ್ರಿಸುವ ಕೆಲಸ ಕೈಗೊಂಡಿದ್ದರು. ಮಹಾರಾಷ್ಟ್ರೀಯರಲ್ಲಿ ರಾಜಕೀಯ ಜಾಗೃತಿಯನ್ನು ಉಂಟು ಮಾಡುವ ಕೈಂಕರ್ಯಕ್ಕೆ ಅವರು ಗಣೇಶೋತ್ಸವವನ್ನು ಪ್ರಭಾವಿ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರು. ಶಿವಾಜಿಯ ದೇಶಭಕ್ತಿ, ತ್ಯಾಗ, ಸಮರ್ಪಣೆ, ಪರಕೀಯರ ವಿರುದ್ಧ ಹೋರಾಟಗಳನ್ನು ಆ ಸಮಾರಂಭಗಳಲ್ಲಿ ಅವರು ಚಿತ್ರಿಸಿ ಮಹಾರಾಷ್ಟ್ರೀಯರ ಅಂತಃಶಕ್ತಿಯನ್ನು ಬಡಿದೆಬ್ಬಿಸುತ್ತಿದ್ದರು. ಲಜಪತರಿಗೆ ತಿಲಕರ ಮಾಧ್ಯಮ ವಿಧಾನಗಳು ಹುಮ್ಮಸ್ಸು ನೀಡಿದವು. ಸ್ಫೂರ್ತಿ ತುಂಬಿದವು. ಅದೇ ಸಮಯದಲ್ಲಿ ಮರಾಠ ಚರಿತ್ರೆಯ ಬಗ್ಗೆ ರಾನಡೆ ಬರೆದಿದ್ದ ಕೃತಿ ಲಜಪತರಿಗೆ ಆಧಾರವಾಗಿ ಒದಗಿತು. ಪರ್ಷಿಯನ್ ಚರಿತ್ರೆಕಾರರು, ಐರೋಪ್ಯ ಚರಿತ್ರೆಕಾರರು ಮತ್ತು ಪೂರ್ವಾಗ್ರಹಪೀಡಿತ ಮುಸ್ಲಿಂ ಬರಹಗಾರರ ಚಿತ್ರಣಕ್ಕಿಂತ ತೀರ ವಿಭಿನ್ನವೂ, ರಾಷ್ಟ್ರೀಯ ಪ್ರೇಮಭರಿತವೂ, ವೀರೋಚಿತವೂ ಆದ ಸಂಪನ್ಮೂಲ ಲಜಪತರಿಗೆ ಒದಗಿ ಬಂದಿತು. ಶಿವಾಜಿ ಕಥನ ವಿಭಿನ್ನವಾಯಿತು. ಆತನಕ ಬೆಟ್ಟ, ಗುಡ್ಡಗಳಲ್ಲಿ ಅಡಗಿ ಹೋರಾಡುವ ಕುಟಿಲ ಬಂಡಾಯಗಾರ, ದರೋಡೆಗಾರ, ಬೆಟ್ಟದ ಇಲಿ ಇತ್ಯಾದಿ ಕುಹಕ ವರ್ಣನೆಗಳಿಂದ ಚಿತ್ರಿತವಾಗಿದ್ದ ಶಿವಾಜಿ ಲಜಪತರ ಲೇಖನಿಯಲ್ಲಿ ಮಹಾನ್ ಹೋರಾಟಗಾರನಾಗಿ ಹೊರಹೊಮ್ಮಿದ. ಶುದ್ಧ ಸ್ವಾಭಿಮಾನ, ಜನನಿ ಜನ್ಮಭೂಮಿಶ್ಚ, ನಿಷ್ಠೆ ಶಿವಾಜಿ ಕೃತಿಯ ಓದುಗರಲ್ಲಿ ಅನನ್ಯ ಅಭಿಮಾನ ಕೆರಳಿಸತೊಡಗಿತು. ಲಜಪತರ ಶಿವಾಜಿ ಕೃತಿ ಅತ್ಯಂತ ಜನಪ್ರಿಯವಾಯಿತು. ಮರಾಠ ಚರಿತ್ರೆಯ ಬಗ್ಗೆ ಹೊಸ ಬೆಳಕು ಚೆಲ್ಲತೊಡಗಿತು. ಲಜಪತರು ಸಹಜವಾಗಿ ತಮ್ಮ ಲೇಖನಿಯನ್ನು ಶಿವಾಜಿ ಪರ ಗೊಳಿಸುತ್ತಾ ಬಂದರು. ಆ ಹೋರಾಟಗಾರನ ಪ್ರತಿ ಸಾಹಸ, ತಂತ್ರ ಹೋರಾಟಗಳನ್ನು ಸಮರ್ಥಿಸುತ್ತಾ ಬಂದರು. ಆ ವೀರಾಗ್ರಣಿಯ ಹೆಸರಿಗೆ ಕಳಂಕ ಹತ್ತಿಸಲು ನಡೆದ ಸಂಕುಚಿತ, ಚಾರಿತ್ರಿಕ ಯತ್ನಗಳನ್ನು ಖಂಡಿಸತೊಡಗಿದರು. ಮರಾಠಿ ತಾಳೆಗರಿ ಲೇಖನಗಳನ್ನು ಅಧ್ಯಯನ ಮಾಡಿ ಅಪೂರ್ಣವಾಗಿದ್ದ ಭಾಗಶಃವಾಗಿದ್ದ ಚರಿತ್ರೆಯನ್ನು ಮುಂದುವರೆಸತೊಡಗಿದರು.

ಭಾರತೀಯ ಚರಿತ್ರೆಯ ಬಗ್ಗೆ ತಮ್ಮ ದೃಷ್ಟಿಕೋನವನ್ನು ಶಿವಾಜಿ ಕೃತಿಯ ಪೀಠಿಕೆಯಲ್ಲಿ ಸುಮಾರು 40 ಪುಟಗಳಷ್ಟು ಹರವಿನಲ್ಲಿ ಚಿತ್ರಿಸಿದರು. ಹಿಂದೂಗಳು ತಮ್ಮ ಗತವೈಭವವನ್ನು ಏಕೆ ಅವಲೋಕನ ಮಾಡುತ್ತಿಲ್ಲವೆಂದು ಪ್ರಶ್ನಿಸಿದರು. ತಮ್ಮ ಚರಿತ್ರೆಯನ್ನು ವಿಕೃತಗೊಳಿಸುತ್ತಿರುವ ಯತ್ನಗಳನ್ನು ಸಹಿಸುತ್ತಿರುವ ಬಗ್ಗೆ ಕಟುವಾಗಿ ಟೀಕಿಸಿದರು. ಕುತಂತ್ರಿಗಳು, ಕುಹಕಿಗಳು, ಸ್ವಹಿತ ಸಾಧಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಚಾರಿತ್ರಿಕ ಸಂಗತಿಗಳನ್ನು ತಿರುಚಿ ಬರೆಯುತ್ತಿದ್ದರೂ ಕಣ್ಣಿದ್ದು ಕುರುಡರಾಗಿ ಅದನ್ನು ವೀಕ್ಷಿಸುತ್ತಿದ್ದ ಹಿಂದೂಗಳನ್ನು ತರಾಟೆಗೆ ತೆಗೆದುಕೊಂಡರು. ಹಿಂದೂಗಳ ಮೇಲೆ ಮಾನಸಿಕವಾಗಿ, ಮೌಲ್ಯಿಕವಾಗಿ ಆಗಬಹುದಾದ ಗಂಡಾಂತರಗಳನ್ನು ತೆರೆದಿಟ್ಟರು. ಅವರ ವಿಚಾರಧಾರೆ, ಛಡಿಯೇಟಿನಂತಹ ಲೇಖನ ಬರಹಗಳು ಹಿಂದೂಗಳ ಮನಸ್ಸಿನ ಮೇಲೆ ಅಪಾರ ಪರಿಣಾಮ ಬೀರಿತು. ವೈಚಾರಿಕ, ಭಾವನಾತ್ಮಕ ಕ್ರಾಂತಿಗೆ ನಾಂದಿಯಾಯಿತು. ತಮ್ಮ ಆ ಪೀಠಿಕೆಯಲ್ಲಿ ಲಜಪತರು ಮರಾಠ ಮಹಾನ್ ನಾಯಕನನ್ನು ಪಂಜಾಬಿನ

ಪುನರುತ್ಥಾನದ ಮಹಾನ್ ಕಲಿ'ಗೆ ಹೋಲಿಸಿದರು. ''ಪಂಜಾಬ್ ತನ್ನ ಅಸ್ತಿತ್ವದ ಬಿಕ್ಕಟ್ಟಿನಲ್ಲಿದ್ದಾಗ ಅದರ ಪುನರುತ್ಥಾನಕ್ಕೆ ಅದಮ್ಯ ಕಾಣಿಕೆ ಸಲ್ಲಿಸಿದ ಮಹಾನ್ ನಾಯಕನಿಗೆ ಸರಿ ಸಮಾನ'' ಎಂದು ಬರೆದರು. ಅಂದರೆ ಶಿವಾಜಿಯನ್ನು ಅವರು ಸಿಖ್ ಧರ್ಮದ ಹತ್ತು ಮಂದಿ ಗುರುಗಳಲ್ಲಿ ಕೊನೆಯವರಾದ ಗುರುಗೋವಿಂದ ಸಿಂಗ್‌ರಿಗೆ ಹೋಲಿಸಿದ್ದರು. ಲಜಪತರು ಸ್ವಯಂ ಗುರುಗೋವಿಂದ ಸಿಂಗ್‌ರಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದ್ದವರು. ಮಹಾನ್ ವ್ಯಕ್ತಿಗಳ ಸರಣಿಯಲ್ಲಿ ಲಜಪತರು ಶ್ರೀಕೃಷ್ಣನನ್ನು ನಾಲ್ಕನೇ ಕೃತಿಯಲ್ಲಿ ಚಿತ್ರಿಸಲು ಬಯಸಿದರು.

ಆದರೂ ನಮ್ಮ ಕಥಾನಾಯಕನ ಬಯಕೆ ಈಡೇರಲಿಲ್ಲ. ಮಹಾಭಾರತದ ನಾಯಕನ ಚಿತ್ರಣದ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಂಡರಾದರೂ ಅವರ ಸರಣಿಯಲ್ಲಿ ಅದು ಹೊರಬಂದದ್ದು ಆರನೇ ಕೃತಿಯಾಗಿ. ನಾಲ್ಕನೇಯ ಕೃತಿ ದಯಾನಂದ. ದಳಪತ್‌ರಾಯ್ ವಿದ್ಯಾರ್ಥಿ ಉರ್ದುವಿನಲ್ಲಿ ಸ್ವಾಮಿ ದಯಾನಂದರ ಆತ್ಮ ಚರಿತ್ರೆಯನ್ನು ಭಾಗಶಃ ಪ್ರಕಟಿಸಿದ್ದರು. ದಳಪತ್‌ರಾಯ್ ನಿಧನದ ನಂತರ ಲಜಪತ್‌ರಾಯ್ ಎರಡು ತಿಂಗಳಿಗೂ ಹೆಚ್ಚು ಕಾಲ ಶ್ರಮಿಸಿ ಆರ್ಯ ಸಮಾಜದ ಸ್ಥಾಪಕರ ಚಿಂತನೆಗೆ ಸಂಬಂಧಪಟ್ಟಂತೆ ಇತರ ಆಧಾರಗಳನ್ನು ಸಂಗ್ರಹಿಸಿದರು. ದಯಾನಂದರನ್ನು ಕುರಿತ ಪುಸ್ತಕ 1898ರ ಸೆಪ್ಟೆಂಬರ್‌ನಲ್ಲಿ ಪ್ರಕಟಗೊಂಡಿತು. ಯಾವದೇ ಸಮಾಜ ಅಥವಾ ಧರ್ಮ ತನ್ನ ಸ್ಥಾಪಕನ ವಿಷಯದಲ್ಲಿ ಕಟುವಾದ ಟೀಕೆಗಳನ್ನು ಸಹಿಸುವುದಿಲ್ಲ. ಲಜಪತ್‌ರಾಯ್ ಅಂತಹ ಸಂದರ್ಭ ಬಂದಾಗ ಹೆಚ್ಚು ಜಾಗ್ರತೆ ವಹಿಸಿದರು. ಅವರ ಕೃತಿಯು ಸ್ವಾಮಿ ದಯಾನಂದರ ಬದುಕು ಮತ್ತು ಚಟುವಟಿಕೆಗಳ ಮೇಲೆ ಅಪಾರ ಬೆಳಕು ಚೆಲ್ಲಿತು. ಆರ್ಯ ಸಮಾಜವನ್ನು ಸ್ಥಾಪಿಸಿದ ನಂತರ ಅವರು ಕೈಗೊಂಡ ಸಾಂಸ್ಕೃತಿಕ ಪುನರುತ್ಥಾನದ ಕರ್ತವ್ಯ, ನೀತಿ ಮತ್ತು ತತ್ವ ನಿರೂಪಣೆಗಳನ್ನು ವಿಸ್ತಾರವಾಗಿ ಬರೆದರು. ಅವರ ಬಾಲ್ಯ ಹಾಗೂ ನಂತರದ ಪೂರ್ವಾಶ್ರಮದ ಬದುಕಿನ ಬಗ್ಗೆಯೂ ಲಜಪತ್‌ರಾಯ್ ಚಿತ್ರಣ ನೀಡಿದರು. ಒಟ್ಟಾರೆ ಇಡಿಯಾದ ಒಂದು ಕಥನ ಆ ಕೃತಿಯ ಕೊಡುಗೆಯಾಯಿತು. ಅನೇಕ ದಶಕಗಳ ಕಾಲ ಸ್ವಾಮಿ ದಯಾನಂದರ ಬಗ್ಗೆ ಒಂದು ಪ್ರಾಮಾಣಿಕ ಕೃತಿಯಾಗಿ ಲಜಪತ್‌ರಾಯ್ ರಚನೆ ಉಳಿದುಕೊಂಡಿತು.

ಮುಂದೆ ಆರ್ಯ ಸಮಾಜ ಒಂದು ಸಮಿತಿ ರಚಿಸಿ ತನ್ನ ಸ್ಥಾಪಕನ ಬಗ್ಗೆ ಅಧಿಕೃತವಾದ ಜೀವನ ಚರಿತ್ರೆ ರಚಿಸಿ ಪ್ರಕಟಿಸುವ ತನಕ ಲಜಪತ್‌ರಾಯ್ ಹೊತ್ತಿಗೆಯೇ ಏಕಮೇವ ಅದ್ವಿತೀಯವಾಗಿತ್ತು. ಲಜಪತ್‌ರಾಯ್ ತಮ್ಮ ಕೃತಿಯಲ್ಲಿ ಉತ್ಪ್ರೇಕ್ಷೆಗಾಗಲಿ, ಅತಿರೇಕಕ್ಕಾಗಲಿ, ನಿಸ್ತೇಜಕ್ಕಾಗಲಿ, ನೀರಸಕ್ಕಾಗಲಿ ಎಡೆ ಕೊಟ್ಟಿರಲಿಲ್ಲ. ಪುಟ ಪುಟದಲ್ಲೂ ವಾಸ್ತವಿಕ ಚಿತ್ರಣಗಳ ಜೊತೆಗೆ ದಯಾನಂದರ ಹೇಳಿಕೆಗಳನ್ನು ಹಾಗೂ ಅವರ ಸಮಕಾಲೀನರ ಮಾತುಗಳನ್ನು ಪ್ರಸ್ತಾಪಿಸಿದರು. ಆದರೂ ಆ ಕೃತಿ ಒಂದು ಮಧ್ಯಂತರ ಚಿತ್ರಣವೆಂದೇ ಹೇಳಬೇಕಾಗುತ್ತದೆ. ಆರ್ಯ ಸಮಾಜವು ಸ್ಥಾಪಿಸಿದ ಸಮಿತಿ ದಯಾನಂದರ ತವರು ಖತಿಯಾವಾರ್‌ನಲ್ಲಿ ಅಗಾಧವಾದ ಸಂಶೋಧನೆ ಮತ್ತು ಅಧ್ಯಯನಗಳನ್ನು ನಡೆಸಿ ವಿಸ್ತೃತವೂ, ಅಧಿಕೃತವೂ ಆದ ಜೀವನ ಚರಿತ್ರೆಯನ್ನು ಹೊರತಂದಿತು.

ಲಜಪತ್‌ರಾಯ್ ಪ್ರಕಟಿಸಿದ ಮಹಾನ್ ಪುರುಷರ ಕೃತಿಗಳ ಶ್ರೇಣಿಯಲ್ಲಿ ಶ್ರೀಕೃಷ್ಣ ಕೊನೆಯ ಕೃತಿ. ಅನೇಕ ಕಾರಣಗಳಿಂದ ಅದು ಅತ್ಯುತ್ತಮ ಕೃತಿಯೂ ಹೌದು. ಶ್ರೀಕೃಷ್ಣನ ಪ್ರೇಮ ಪ್ರಸಂಗಗಳಿಗೆ ಸಂಬಂಧಪಟ್ಟ ಸುಮಾರು ಒಂದು ಡಜನ್ ಪುಟಗಳನ್ನು ಹೊರತುಪಡಿಸಿದರೆ ಆ ಕೃತಿ ಅತ್ಯುತ್ತಮ ನೇಯ್ಗೆಯುದು. ಅದರ ನಿರೂಪಣೆ ಲಜಪತ್‌ರಾಯ್ ಅವರಲ್ಲಿದ್ದ ಸುಂದರ ಕಥೆಗಾರರನ್ನು ಸಾಕ್ಷೀಕರಿಸುತ್ತದೆ. ಇಂದಿಗೂ ಸಹ ಯುವ ಪೀಳಿಗೆಗೆ ಲಜಪತ್‌ರಾಯ್ ಅವರ ಶ್ರೀಕೃಷ್ಣ ನಿಜಕ್ಕೂ ಆಕರ್ಷಕ.

ಲಜಪತ್‌ರಾಯ್ ಅವರ ಶ್ರೀಕೃಷ್ಣ ನಮಗಿಲ್ಲಿ ಮುಖ್ಯವಾಗಿ ಮಹಾಭಾರತದ ಶ್ರೀಕೃಷ್ಣನಾಗಿ ಮಾತ್ರ ಕಂಡು ಬರುತ್ತಾನೆ. ಭಾಗವತದ ಶ್ರೀಕೃಷ್ಣನಾಗಲಿ, ಇತರೆ ಪುರಾಣಗಳಲ್ಲಿ ಚಿತ್ರಿತನಾಗಿರುವ ಕೃಷ್ಣನಾಗಲಿ, ಬ್ರಜ್ ಕಾವ್ಯದ ಪ್ರೇಮಿ ಕೃಷ್ಣನಾಗಲಿ ಇಲ್ಲಿ ಕಂಡು ಬರುವುದಿಲ್ಲ. ಭಾಗವತರ ಕಾವ್ಯದಲ್ಲಿ ಇಲ್ಲವೇ ಇತರ ಪುರಾಣ ಕಾವ್ಯಗಳಲ್ಲಿ ಕೃಷ್ಣನು ಮಹಾಭಾರತದ ಕೃಷ್ಣನಷ್ಟು ಸೂಕ್ಷ್ಮಮತಿಯೂ, ಚತುರನೂ ಆಗಿ ಕಂಡು ಬರುವುದಿಲ್ಲ. ತಾವು ಆರಂಭಿಸಿದ ಮಾಲಿಕೆಯ ಉದ್ದೇಶದ ಸಾರ್ಥಕತೆಗೆ ಅನುಗುಣವಾಗಿ ಲಜಪತ್‌ರಾಯ್ ಶ್ರೀಕೃಷ್ಣನನ್ನು ಮಹಾಭಾರತದ ನಾಯಕನಾಗಿಯೇ ಪ್ರತಿ ಹಂತದಲ್ಲೂ ಚಿತ್ರಿಸುತ್ತಾ ಬಂದರು. ಶ್ರೀಕೃಷ್ಣನ ಪಾತ್ರದ ಐತಿಹಾಸಿಕ ಉದ್ದೇಶವನ್ನು ಸಾದರಪಡಿಸುವುದೇ ಅವರ ಪ್ರಮುಖ ಲಕ್ಷ್ಯವಾಗಿತ್ತು. ಮಹಾಭಾರತದ ಕೃಷ್ಣನನ್ನು ಕಂಡ ಮೇಲೆ ಆ ಕಥಾನಾಯಕನ ಕುರಿತು ಮುಂದಿನ ಐತಿಹ್ಯ ಕಾವ್ಯಗಳಲ್ಲಿ ಗೌಣವೆನಿಸುತ್ತದೆ. ಚರಿತ್ರೆಯನ್ನು ವೈಜ್ಞಾನಿಕ-ವೈಚಾರಿಕ ಅಳತೆಗೋಲಿನಿಂದ ಮಾಪನ ಮಾಡತೊಡಗಿದಾಗ ಅದರಲ್ಲಿ ಬರುವ ನಾಯಕನ ಪಾತ್ರಗಳು ಕಾವ್ಯಾತ್ಮಕವಾಗುವುದಿಲ್ಲ. ಲಜಪತರ ಶ್ರೀಕೃಷ್ಣನಲ್ಲಿ ಆಗಿರುವುದೇ ಅದು. ಶ್ರೀಕೃಷ್ಣನನ್ನು ಈ ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದಾಗ ಕಾವ್ಯಗಳಲ್ಲಿ ಪ್ರಸ್ತಾಪವಾಗಿರುವಂತೆ ತನ್ನ ಯೌವನದ ಬಹು ಭಾಗವನ್ನು ಗೋಕುಲದಲ್ಲಿ ಗೋಪಿಕಾ ಸ್ತ್ರೀಯರ ನಡುವೆ ವ್ಯರ್ಥವಾಗಿ ಕಳೆದನೆಂದೇ ವಿಷಾದಿಸಬೇಕಾಗುತ್ತದೆ. ಅದೇನೇ ಇರಲಿ, ಎಲ್ಲಾ ಪುರಾಣ, ಐತಿಹ್ಯ, ಕಾವ್ಯ ಹಾಗೂ ಇತರೆ ಪ್ರಕಾರಗಳಲ್ಲಿ ಅಂತಿಮವಾಗಿ ಕಂಡು ಬರುವಂತೆ ಶ್ರೀಕೃಷ್ಣ ಗೋಕುಲದಲ್ಲಿ ಉಳಿಯುವುದಿಲ್ಲ. ದನಗಾಹಿಯೂ ಅಲ್ಲ. ಅವನಲ್ಲೂ ಸಹ ಕರ್ತವ್ಯ ಪ್ರಜ್ಞೆ ಇದೆ. ರಾಜಕುಮಾರನಾದರೂ ಕೃಷ್ಣ ತನ್ನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದನೆಂದು ಸಾದರಪಡಿಸುತ್ತಿದೆ. ಬಾಲಕನಾಗಿ ಶ್ರೀಕೃಷ್ಣನು ನಡೆದುಕೊಂಡ ರೀತಿ ಹೀಗೆ ಚಿತ್ರಿತವಾದರೆ ಚೆನ್ನ.

ಲಜಪತರ ಲೇಖನಿಯಲ್ಲಿದ್ದ ಈ ವೈಚಾರಿಕತನ ಅವರ ದೃಷ್ಟಿಕೋನವನ್ನು ನಿಚ್ಚಳಗೊಳಿಸಿದೆ. ಐತಿಹ್ಯಗಳನ್ನು ಅವರು ಈ ದೃಷ್ಟಿಕೋ ¯ದಿಂದಲೇ ನೋಡಿ ಚಾರಿತ್ರಿಕ ಅಪಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

* * *

ಅಧ್ಯಾಯ-15

ಮೃದು ಹೃದಯಿ

ಲಜಪತರ ಹೃದಯವಂತಿಕೆಯಸ್ನು ಉರ್ದು ಕವಿ ಹೀಗೆ ಕಂಡಿದ್ದಾರೆ. -''ಅರ್ಧ ಭಾಗ ಅರಗಿನಂತೆ, ಇನ್ನರ್ಧ ಉಕ್ಕಿನಂತೆ'' ಎಂದು. ಎಲ್ಲಾ ಕಷ್ಟ ತೊಡರುಗಳನ್ನು ದಿಟ್ಟತನದಿಂದ ಎದುರಿಸಿ ನಿಲ್ಲುತ್ತಿದ್ದ, ಬಳಲಿಕೆಯನ್ನೇ ಕಾಣದ ಅವರ ಕರ್ತೃತ್ವ ಶಕ್ತಿ, ಕಷ್ಟ ಕಾರ್ಪಣ್ಯಗಳನ್ನು ಸಹಿಸುತ್ತಿದ್ದ ಅವರ ಶಕ್ತಿಗಳ ರಹಸ್ಯ ಅವರ ಹೃದಯವಂತಿಕೆಯ ಉಕ್ಕಿನ ಅಂಗವಾಗಿತ್ತು. ಬಡವರು ಮತ್ತು ಶೋಷಿತರ ಪರವಾಗಿ ಸಂವೇದನಾಶೀಲರಾಗಿದ್ದ ಅವರ ನಿಲುವು ಧೋರಣೆಗಳು ಹೃದಯವಂತಿಕೆಯ ಭಾಗದಲ್ಲಿ ವ್ಯಕ್ತ. ಹೋರಾಟದ ಬದುಕಿನಲ್ಲಿ ಉಕ್ಕಿನ ನಿರ್ಧಾರಗಳೇ ಅವರ ಜೀವನದ ಉದ್ದಕ್ಕೂ ಕಂಡು ಬರುತ್ತವೆ. ಅವರೊಬ್ಬ ಮಹಾನ್ ವ್ಯಕ್ತಿಯಾಗಿ ಕಂಡು ಬಂದಿರುವುದರಲ್ಲಿ ಹೆಚ್ಚಿನ ಭಾಗ ಅವರ ಮೃದು ಹೃದಯದ ಸಮರ್ಪಣೆಗೆ ಅರ್ಪಿತ.

ಆರ್ಯ ಸಮಾಜವು ಲಜಪತರ ಈ ಎರಡು ಬಗೆಯ ಹೃದಯವಂತಿಕೆಯನ್ನು ಸಮೃದ್ಧವಾಗಿ ಬಳಸಿಕೊಂಡಿತು. ಅವರ ನಾಯಕತ್ವವನ್ನು ಅಷ್ಟೇ ಪರಿಣಾಮಕಾರಿಯಾಗಿ ಉಪಯೋಗ ಮಾಡಿಕೊಂಡಿತು.

ಸಮಾಜದ ನಿಯತಕಾಲಿಕೆಗಳ ಸಂಪಾದನೆ ಇಲ್ಲವೇ ಸಮಾಜಕ್ಕೆ ಸಂಬಂಧಪಟ್ಟ ಸಾಹಿತ್ಯಗಳ ರಚನೆ ಜೊತೆಗೆ ಡಿ.ಎ.ವಿ. ಕಾಲೇಜು ಮತ್ತು ಅದರ ಶಾಖೆಗಳ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಚಂದಾ ಸಂಗ್ರಹಣೆಯೂ ಸೇರಿದಂತೆ ನಾನಾ ರೀತಿಯ ಕೆಲಸಗಳಿಗೆ ಲಜಪತರನ್ನು ಬಳಸಿಕೊಳ್ಳಲಾಗುತ್ತಿತ್ತು. ವಾಸ್ತವದಲ್ಲಿ ಪ್ರಿನ್ಸಿಪಾಲ್ ಹನ್ಸ್‌ರಾಜ್‌ರನ್ನು ಬಿಟ್ಟರೆ ಕಾಲೇಜಿನ ಕರ್ತವ್ಯದ ದೃಷ್ಟಿಯಿಂದ ಲಜಪತರದು ಎರಡನೇ ಸ್ಥಾನ. ಆದರೂ ಆರ್ಯ ಸಮಾಜದಲ್ಲಿ ಪ್ರಮುಖವಾದ ಕಾರ್ಯಗಳೆಲ್ಲವೂ ಶೈಕ್ಷಣಿಕ ಕೆಲಸಕ್ಕಿಂತಲೂ ಅದರ ಅಭಿವೃದ್ಧಿಗೆ ಪೂರಕವಾದ ಕೆಲಸಗಳಲ್ಲೇ ಹೆಚ್ಚಾಗಿರುತ್ತಿತ್ತು. ಪ್ರವಾಸ, ಉಪನ್ಯಾಸ, ಪ್ರಚಾರದ ಮೂಲಕ ಆರ್ಯ ಸಮಾಜದ ಬೆಳವಣಿಗೆಯಲ್ಲಿ ಅವರು ಆತ್ಮವಾಗಿದ್ದರು. ಆಪತ್ ರಕ್ಷಕರಾಗಿದ್ದರು.

ಆ ಶತಮಾನದ ಅಂತಿಮ ದಶಕವು ಬರಗಾಲ, ದುರ್ಭಿಕ್ಷ, ಸಾಂಕ್ರಾಮಿಕ ರೋಗಗಳ ಹಾವಳಿಯಂತಹ ಘನ ಘೋರ ಪ್ರಾಕೃತಿಕ ವಿಕೋಪಗಳನ್ನು ಕಂಡಿತು. ಮುಂಬೈಯಲ್ಲಿ ಪ್ಲೇಗ್ ಮಾರಿಯನ್ನು ನಿಯಂತ್ರಿಸುವ ವಿಷಯದಲ್ಲಿ ಬ್ರಿಟಿಷ್ ಆಡಳಿತ ವಿಫಲಗೊಂಡ ಬಗ್ಗೆ ಉಗ್ರವಾಗಿ ಲೇಖನಗಳನ್ನು ಬರೆದ ಆರೋಪದ ಮೇರೆಗೆ 1897ರಲ್ಲಿ ತಿಲಕರನ್ನು 18 ತಿಂಗಳ ಕಾಲ ಜೈಲುವಾಸಕ್ಕೆ ಗುರಿ ಮಾಡಲಾಗಿತ್ತು. ಆ ವರ್ಷ ದುರ್ಭಿಕ್ಷ ಮತ್ತು ಬರಗಾಲಗಳು ಸೀಳ ಸೆರಗು ಹಾಸಿದ್ದವು. ಇತರೆಡೆಗಳಂತೆ ರಜಪುಟಾನದಿಂದಲೂ

ಭಯಂಕರ ಸುದ್ದಿಗಳು ಹೊರಬೀಳುತ್ತಿದ್ದವು. ಅಂತಹ ಪರಿಸ್ಥಿತಿ ಲಜಪತರನ್ನು ಸುಮ್ಮನಿರಗೊಟ್ಟೀತೇ? ರಜಪುಟಾನ ಲಜಪತರ ಮನಸ್ಸಿನ ಮೇಲೆ ವೀರೋಚಿತ, ವೈಭವಯುತ ಪರಿಣಾಮಗಳನ್ನು ಬೀರಿದ ಐತಿಹಾಸಿಕ ಪ್ರದೇಶ. ಬಾಲ್ಯದಲ್ಲಿ, ಯೌವನದಲ್ಲಿ ಮತ್ತು ಪದವರಿತ ಬದುಕಿನಲ್ಲಿ ಅವ್ಯಕ್ತವಾಗಿ ಸ್ಫೂರ್ತಿ ತುಂಬುತ್ತಾ ಬಂದ ವೀರಗಾಥೆ ಆ ಪ್ರದೇಶದ್ದು. ಇಂತಹ ಮಹಾವೀರರ ವಂಶಸ್ಥರು ಆಸರೆ ಇಲ್ಲದೆ, ಆಶ್ರಯ ಕಾಣದೆ ನೊಣಗಳಂತೆ ಸಾಯುತ್ತಿದ್ದದ್ದು ಲಜಪತರನ್ನು ತಲ್ಲಣಗೊಳಿಸಿತು. ರಜಪುಟಾನರ ಬದುಕು ಶೋಚನೀಯವೆನಿಸಿತು.

ರಜಪುಟಾನದಿಂದ ಬರುತ್ತಿದ್ದ ಶೋಷಣೆಯ ವರದಿಗಳು ಭಯಾನಕವಾಗಿದ್ದವು. ಆ ಪ್ರದೇಶಕ್ಕೆ ಬಡಿದ ಬರಗಾಲದ ಮಹಾಮಾರಿ ಕ್ರೈಸ್ತ ಮಿಷನರಿಗಳ ಪಾಲಿಗೆ ವರದಾನವಾಗಿತ್ತು. ಅಂತಹ ಘೋರ ಪರಿಸ್ಥಿತಿಯನ್ನು ತಮಗೆ ದೇವರೇ ಹೊನ್ನ ಬೆಳೆಯ ರೂಪದಲ್ಲಿ ಒದಗಿಸಿದ್ದಾನೆಂದು ಸೇವೆಯ ಹೆಸರಿನ ವಿಧರ್ಮಿ ಆಸೆಬುರುಕರು ಪರಿಗಣಿಸಿದಂತಿತ್ತು. ವಾಸ್ತವದಲ್ಲಿ ಅಸಹಾಯಕರು, ಅಮಾಯಕರು ಆಗಿದ್ದವರಿಗೆ ಅನ್ನ ಮತ್ತು ಆಸರೆಯನ್ನು ಕೊಟ್ಟು ಸಲಹಬೇಕಾದದ್ದು ಮಿಷನರಿಗಳ ಕರ್ತವ್ಯ. ಅವರು ತೋರಿಕೆಯಲ್ಲಿ ಅದಕ್ಕೆ ಒತ್ತು ಕೊಟ್ಟಿದ್ದರು. ಆದರೆ ಒಳಮುಖದಲ್ಲಿ ತದ್ವಿರುದ್ಧ. ಅವಕಾಶದ ದುರ್ಲಾಭಕ್ಕೂ ಮಿಷನರಿಗಳು ಹೇಸಲಿಲ್ಲ. ಮತ ಪರಿವರ್ತನೆಗೆ ಪರಿಸ್ಥಿತಿಯನ್ನು ಬಳಸಿಕೊಂಡರು. ಮರುಳುತನಕ್ಕೂ ಹಿಂದೆ ಮುಂದೆ ನೋಡಲಿಲ್ಲ. ಮಿಷನರಿಗಳ ಸೇವಾಕರ್ತರು ಧೋತ್ರಗಳನ್ನು ತೊಟ್ಟರು. ಜನಿವಾರಗಳನ್ನು ಹಾಕಿದರು. ಹಣೆಯ ಮೇಲೆ ತಿಲಕವನ್ನು ಇಟ್ಟರು. ಸಂಪ್ರದಾಯಸ್ಥ ಬ್ರಾಹ್ಮಣ ಸಮುದಾಯದ ಬಳಿಗೂ ನೆರವಿನ ನೆಪದಲ್ಲಿ ತಲುಪಿದರು. ಎಳೆಯ ಮಕ್ಕಳು, ಬಾಲಕ, ಬಾಲಕಿಯರನ್ನು ದೂರಕ್ಕೆ ಕರೆದೊಯ್ದು ಕ್ರೈಸ್ತ ಮಿಷನರಿಗಳು ನಡೆಸುತ್ತಿದ್ದ ಅನಾಥಾಶ್ರಮಗಳಲ್ಲಿ ಬಿಡಲಾಯಿತು. ಪುಣೆಯಲ್ಲಿ ಪಂಡಿತ ರಮಾಭಾಯಿ ನಡೆಸುತ್ತಿದ್ದ ಕ್ರೈಸ್ತ ಅನಾಥಾಶ್ರಮ ಅವುಗಳಲ್ಲಿ ಒಂದು. ಈ ಮತಾಂಧ ಕೆಲಸ ಇನ್ನೂ ಹೀನಾಯವಾಯಿತು. ಎಷ್ಟೋ ಕಡೆ ಪತಿ-ಪತ್ನಿಯರನ್ನು ದೂರ ಮಾಡಲಾಯಿತು. ಹಸಿವೆಯಿಂದ ಕಂಗೆಟ್ಟಿದ್ದ ಆ ದಂಪತಿಗಳನ್ನು ಕೊನೆಗೂ ಒಂದುಗೂಡಿಸದ ಪ್ರಸಂಗಗಳು ಎಷ್ಟೋ. ಇಬ್ಬರು ಬದುಕಿದ್ದರೂ ಒಬ್ಬರ ಪಾಲಿಗೆ ಒಬ್ಬರು ಉಳಿಯದ ಚಿತ್ರಣ ನೀಡಲಾಯಿತು. ಮಾನವ ಅಂತಃಕರಣ ಕದಡುವ ಇಂತಹ ವರದಿಗಳು ಲಜಪತರನ್ನು ತೀರಾ ನೋವಿಗೆ ಒಳಪಡಿಸಿದವು.

ತಮ್ಮೊಳಗೆ ಸಾಕಷ್ಟು ಚಿಂತಿಸಿ ನರಳಿದ ಲಜಪತರು ಕೊನೆಗೊಂದು ನಿರ್ಧಾರಕ್ಕೆ ಬಂದರು. ತಮ್ಮ ಲೇಖನಿಯನ್ನು ಹರಿತಗೊಳಿಸಿದರು. ಅವರ ಬರಹಗಳು, ವರದಿಗಳು ಓದುಗರ ಮೇಲೆ ಅಪಾರ ಪರಿಣಾಮ ಬೀರಿದವು. ಅವರ ಭಾಷಣಗಳು ಕೇಳುಗರ ಹೃದಯ, ಕಣ್ಣುಗಳು ಆರ್ದ್ರವಾಗುವಂತೆ ಮಾಡಿದವು.

1897-1900 ಕಠೋರ ದುರ್ಭಿಕ್ಷದ ದಿನಗಳಲ್ಲಿ ಲಜಪತರು ತಮ್ಮೆಲ್ಲ ಹೃದಯವಂತಿಕೆಯನ್ನು ಪಣವಾಗಿಟ್ಟರು. ಅವರ ಮನವರಿಕೆಯ ಪಟುತ್ವ, ಸಮಯೋಚಿತ ಕಾರ್ಯನಿಷ್ಠೆ, ಅಗತ್ಯದ ಸಂಘಟನೆ ಮತ್ತು ಅವುಗಳ ನಿರ್ವಹಣೆ ಹೆಚ್ಚು ಮಿಂಚಿದ್ದು ಆ ಸಂದರ್ಭಗಳಲ್ಲೇ. ಹಿಂದೂ ಓದುಗರಲ್ಲಿ ಲಜಪತರು ಸೆಳೆತದ ಬಿಂದುವಾದರು. ಆರ್ಯ

ಸಮಾಜದ ಒಂದು ನೆಲೆಯಾಗಿ ಅವರು ತಮ್ಮ ಕಾರ್ಯವನ್ನು ಆರಂಭಿಸಿದರೂ ಅತಿ ಶೀಘ್ರದಲ್ಲೇ ಅವರು ಹಿಂದೂಗಳ ಕೇಂದ್ರ ಆಕರ್ಷಣೆಯಾದರು. ಅವರು ಕೋರಿದ ಬೆಂಬಲ ನೆರವಿಗೆ ಹಿಂದೂ ಸಮಾಜ ಧಾವಿಸಿತು. ಕಟ್ಟಾ ಸಂಪ್ರದಾಯಸ್ಥ ಹಿಂದೂಗಳೇ ಲಜಪತರ ನೆರವಿಗೆ ಕಟಿಬದ್ಧರಾದರು. ಆರ್ಯ, ಬ್ರಹ್ಮಸಮಾಜವಾದಿಗಳಿಗಿಂತ ಯಾರು ಹಿಂದುಳಿಯಲಿಲ್ಲ. ಲಜಪತರು ಪರಿಹಾರ ಸಮಿತಿಗಳನ್ನು ರಚಿಸಿದರು. ಅವುಗಳ ಕಾರ್ಯವ್ಯಾಪ್ತಿಗೆ ನಿಧಿಗಳನ್ನು ಸಂಗ್ರಹಿಸಿದರು.

ಡಿ.ಎ.ವಿ. ಕಾಲೇಜಿನಲ್ಲಿ ಅವರು ಗಳಿಸಿಕೊಂಡಿದ್ದ ವೈಯಕ್ತಿಕ ಆತ್ಮೀಯತೆಯ ಫಲವಾಗಿ ವಿದ್ಯಾರ್ಥಿ ಸಮೂಹ ಅವರ ಸೇವೆಗೆ ಸಹಜವಾಗಿ ಹಾತೊರೆಯಿತು. ನಿಷ್ಠವೂ, ಶಕ್ತಿವಂತವೂ ಆದ ಸ್ವಯಂಸೇವಕ ಪಡೆ ಭುಜಕ್ಕೆ ಭುಜ ಕೊಟ್ಟು ನಿಂತಿತು. ಕೇವಲ ತಾತ್ಕಾಲಿಕ ಪರಿಹಾರ ಕಾರ್ಯ ಕೈಗೊಂಡರಷ್ಟೇ ಸಾಲದು ಎಂದು ಲಜಪತರು ತರ್ಕಿಸಿದರು. ಕಾಯಕ ಪರಿಹಾರ ಒದಗಿಸುವ ಕೇಂದ್ರಗಳನ್ನು ಅನಾಥಾಶ್ರಮಗಳ ಕಲ್ಪನೆಯಲ್ಲಿ ಹೊಸೆದರು. ಭವಿಷ್ಯದಲ್ಲಿ ತುರ್ತು ಪ್ರಸಂಗಗಳು ಒದಗಿದಾಗ ಅವುಗಳನ್ನು ನಿಭಾಯಿಸುವ ಶಕ್ತಿ, ತರಬೇತಿಗೆ ಸಜ್ಜು ಮಾಡಿದರು. ದುರ್ಭಿಕ್ಷದಿಂದ ಪಾರು ಮಾಡಿದ ಬಾಲಕ, ಬಾಲಕಿಯರಿಗೆ ಅನಾಥಾಶ್ರಮಗಳ ಕೇಂದ್ರಗಳಲ್ಲಿ ಕುಶಲ ಕಲೆಗಳಲ್ಲಿ ತರಬೇತಿಗೆ ಏರ್ಪಾಟು ಮಾಡಿದರು. ನಾಳಿನ ಪ್ರಜೆಗಳಾಗಿ ಅವರು ಸ್ವಾವಲಂಬಿಗಳಾಗಬೇಕು. ಉಪಯುಕ್ತ ನಾಗರಿಕರಾಗಬೇಕು ಎಂದು ಲಜಪತರು ಬಯಸಿದರು. ತಮ್ಮ ಸ್ವಯಂಸೇವಕ ಪಡೆಗೆ ಸ್ಪಷ್ಟ ನಿರ್ದೇಶನ ಕೊಟ್ಟು ಪರಿಹಾರ ಕಾರ್ಯದಲ್ಲಿ ಮೊದಲ ಆದ್ಯತೆಯನ್ನು ಶಿಶುಗಳಿಗೆ, ಮಕ್ಕಳಿಗೆ, ವಿಧವೆಯರು ಹಾಗೂ ಅಪ್ರಾಪ್ತ ವಯಸ್ಸಿನ ಬಾಲಕಿಯರಿಗೆ ಕಾಯ್ದಿರಿಸಬೇಕೆಂದು ಹೇಳಿದರು. ಹಾಗೆ ಮಾಡುವ ಮೂಲಕ ಕ್ರೈಸ್ತ ಮಿಷನರಿಗಳು ಹಾಗೂ ಧರ್ಮಘಾತುಕ ಶಕ್ತಿಗಳಿಂದ ಸುಲಭದಲ್ಲಿ ಆಗುತ್ತಿದ್ದ ಅನಾಹುತಕ್ಕೆ ತಡೆ ಹಾಕಿದರು. ಸರ್ಕಾರದಿಂದ ದೊರೆಯುತ್ತಿದ್ದ ಪರಿಹಾರದ ಪ್ರಯೋಜನ ಸುಲಭವಾಗಿ ಈ ವರ್ಗಗಳ ಅಸಹಾಯಕರಿಗೆ ದೊರೆಯುವಂತೆ ಮಾಡಿದರು.

ಪರಿಹಾರದಲ್ಲಿ ಕೇವಲ, ಅನ್ನ, ಆಶ್ರಯವಷ್ಟೇ ಇರಬಾರದು. ಸಾಧ್ಯವಾದಷ್ಟು ಜನರಿಗೆ ಕೆಲಸ ಮಾಡುವ ಶಕ್ತಿ, ಮಾಧ್ಯಮ ಒದಗುವಂತಾಗಬೇಕು ಎಂದು ಲಜಪತರು ಯೋಚಿಸಿ ಆ ನಿಟ್ಟಿನಲ್ಲಿ ಯಶಸ್ಸು ಕಂಡರು. ನೂಲುವುದನ್ನು ಮೊದಲ ಆದ್ಯತೆಯ ಮೇಲೆ ಅಳವಡಿಸಿದರು. ಲಜಪತರ ದೂರದೃಷ್ಟಿಯ ಫಲ ಮತ್ತು ಸೇವಾ ದೃಷ್ಟಿಯ ಕೊಡುಗೆಯಾಗಿ ಫಿರೋಜ್‌ಪುರದಲ್ಲಿ ಆರ್ಯ ಸಮಾಜದ ಪ್ರತಿಷ್ಠಿತ ಅನಾಥಾಶ್ರಮ ಸ್ಥಾಪಿತವಾಯಿತು. ಅನೇಕ ವರ್ಷಗಳ ಕಾಲ ಅವರು ಅದರ ಕಾಯದರ್ಶಿಗಳಾಗಿದ್ದರು. ಅದರೊಟ್ಟಿಗೆ ಲಾಹೋರಿನಲ್ಲಿ ಹಿಂದೂ ಅನಾಥಾಶ್ರಮ ಮತ್ತು ಮೀರತ್‌ನಲ್ಲಿ ಅನಾಥಾಶ್ರಮಗಳು ಸ್ಥಾಪಿತವಾದವು. ಭಾರತದ ಅನೇಕ ಕಡೆಗಳಲ್ಲಿ ತಾತ್ಕಾಲಿಕವಾಗಿ ಇಂತಹ ಅನಾಥಾಶ್ರಮಗಳು ಸ್ಥಾಪಿತವಾದವು. ಮುಂದೆ ಕೆಲವು ಕಡೆಗಳಲ್ಲಿ ಕಾಯಂ ಅನಾಥಾಶ್ರಮಗಳಾಗಿ ಅಭಿವೃದ್ಧಿ ಹೊಂದಿದವು. ಈ ಎಲ್ಲಾ ಅಭಿವೃದ್ಧಿ ಹಾಗೂ ಪರಿಹಾರ ನಿರ್ಧಾರಗಳ ಹಿಂದೆ ಲಜಪತರ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವ ಇತ್ತು. ಪಂಜಾಬ್ ಮತ್ತು ಮೀರತ್‌ನಲ್ಲಿ ಲಜಪತರು ಹಾಕಿದ ಪರಿಹಾರದ ಅಡಿಪಾಯ ದೇಶದ ಇತರೆಲ್ಲಾ ಕಡೆಗಳಿಗೂ ಮಾರ್ಗದರ್ಶನವಾಯಿತು.

ದುರ್ಭಿಕ್ಷ ಪ್ರದೇಶಗಳಿಂದ ಮೊದಲ ತಂಡವನ್ನು ಲಾಹೋರಿನ ಅನಾಥಾಶ್ರಮಕ್ಕೆ ಕರೆತಂದಾಗ ಲಜಪತರು ತಮ್ಮ ಪ್ರಯತ್ನ ಫಲಕಾರಿಯಾದ ಬಗ್ಗೆ ಸಂತೃಪ್ತಿ ಹೊಂದಿದರು. ಆ ತಂಡ ಮತ್ತು ಅದರ ಹಿಂದೆಯೇ ಬಂದ ಇನ್ನೊಂದು ತಂಡ ಲಜಪತರ ಔದಾರ್ಯದ ನೆರಳಿನಲ್ಲಿ ಅವರ ಮನೆಯಲ್ಲಿ ಆಶ್ರಯ ಪಡೆದವು. ಅನಾರ್ಕಲಿಯ ಗಣಪತಿ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿದ್ದಾಗಲೇ ಅವರು ಕೋರ್ಟ್ ರಸ್ತೆಯಲ್ಲಿ ಖರೀದಿಸಿದ್ದ ಮನೆಯನ್ನು ಈ ಸೇವೆಗೆ ಬಳಸಿಕೊಂಡರು.

ದುರ್ಭಿಕ್ಷ ಪರಿಹಾರದ ಕಾರ್ಯದಲ್ಲಿ ಲಜಪತರ ಸ್ವಯಂ ಸೇವಕರು ಕ್ರೈಸ್ತ ಮಿಷನರಿಗಳೊಂದಿಗೆ ಮುಖಾಮುಖಿಯಾಗಬೇಕಾಗುತ್ತಿತ್ತು. ಲಜಪತರು ತೋರಿದ್ದ ದಾರಿಯಲ್ಲಿ ಕಟ್ಟಾ ಬೆಂಬಲಿಗರಾಗಿ ಕಾರ್ಯಪ್ರವೃತ್ತರಾಗುತ್ತಿದ್ದರಿಂದ ಆ ಸ್ವಯಂಸೇವಕರಿಗೆ ಮಿಷನರಿಗಳು ಎಡರುತೊಡರುಗಳು ಲೆಕ್ಕಕ್ಕೆ ಇಲ್ಲವಾಗುತ್ತಿದ್ದವು. ಸರ್ಕಾರ ತನ್ನ ನೆರವನ್ನು ಕೊಡುವಾಗ ಕ್ರೈಸ್ತ ಮಿಷನರಿಗಳ ಕಡೆಗೆ ವಾಲಬಾರದೆಂದು ಲಜಪತರು ಮೇಲಿಂದ ಮೇಲೆ ಹೇಳತೊಡಗಿದರು. ಅದರ ಫಲವಾಗಿ ತಾರತಮ್ಯವಿಲ್ಲದೆ ಅಧಿಕೃತ ಪರಿಹಾರ ಕೇಂದ್ರಗಳು, ಸ್ವಯಂಸೇವಾ ಸಂಸ್ಥೆಗಳ ನಡುವೆ ಬರ ಪರಿಹಾರದ ಸೌಲಭ್ಯಗಳು ವಿತರಣೆಯಾಗತೊಡಗಿದವು. ಈ ಮಧ್ಯೆಯೂ ಕೆಲವು ಏರುಪೇರುಗಳಾಗುತ್ತಿದ್ದವು. ಅಂತಹ ಪ್ರಸಂಗಗಳನ್ನು ಪತ್ತೆ ಹಚ್ಚಿ ನ್ಯಾಯಾಂಗದ ಕಟೆಕಟೆಗೆ ಒಯ್ದು ಕ್ರೈಸ್ತ ಮಿಷನರಿಗಳ ಕಡೆಗೆ ವಾಲುತ್ತಿದ್ದ ಅಧಿಕೃತ ಯಂತ್ರದ ಪಕ್ಷಪಾತದ ಧೋರಣೆಗಳನ್ನು ಬಯಲಿಗೆಳೆಯುತ್ತಿದ್ದರು. ವಿಧರ್ಮಿ ಮಿಷನರಿಗಳ ಧರ್ಮಬಾಹಿರ ಚಟುವಟಿಕೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಿದ್ದರು. ಅಂತಿಮವಾಗಿ ನ್ಯಾಯಾಲಯವು ಕ್ರೈಸ್ತ ಮಿಷನರಿಗಳಿಗೆ ಎಚ್ಚರಿಕೆ ಕೊಟ್ಟು ಹಿಂದೂ ಪರಿಹಾರ ಸಂಸ್ಥೆಗಳು ನಿರಾಕರಿಸದ ಹೊರತು ಯಾವುದೇ ಹಿಂದೂ ನಿರಾಶ್ರಿತರನ್ನು ಕರೆದುಕೊಳ್ಳಬಾರದೆಂದು ನಿರ್ಬಂಧ ವಿಧಿಸಿತು.

ಲಜಪತರ ಸೇವಾ ಕಾರ್ಯ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ಅವೆಲ್ಲವು ತಮ್ಮ ನೈತಿಕ ಯಶಸ್ಸೆಂದು ಅವರು ಭಾವಿಸಿದ್ದರು. ಅಂಕಿ ಅಂಶಗಳ ಬಗ್ಗೆ ತೃಪ್ತಿಪಟ್ಟುಕೊಳ್ಳಲಿಲ್ಲ. ಅಂಕಿ ಅಂಶಗಳ ದೃಷ್ಟಿಯಿಂದ ಅಳೆಯುತ್ತಾ ಹೋದರೆ ಕರ್ತವ್ಯಕ್ಕಿಂತಲೂ ಜಂಬದ ರೂಪವಾಗುತ್ತದೆ ಎಂದು ಅವರು ನಂಬಿದ್ದರು. 1897ರಲ್ಲಿ ಅಧಿಕೃತ ವ್ಯವಸ್ಥೆ ತನ್ನೆಲ್ಲಾ ಸವಲತ್ತು ಸೌಲಭ್ಯಗಳನ್ನು ಬಳಸಿ ಪರಿಹಾರಕ್ಕೆ ತೊಡಗಿದರೂ ಲಜಪತ್‌ರಾಯ್ ಅವರ ಸ್ವಯಂಸೇವಕರು ಮಾಡಿದಷ್ಟು ಕೆಲಸವನ್ನು ಮಾಡಲಾಗಲಿಲ್ಲ. 300ಕ್ಕೂ ಹೆಚ್ಚು ನಿರಾಶ್ರಿತರನ್ನು ಅನಾಥಾಶ್ರಮಗಳಿಗೆ ಅವರು ಸೇರಿಸಿದರು. ಲೆಕ್ಕವಿಲ್ಲದಷ್ಟು ಆಯಾ ಸ್ಥಳಗಳಲ್ಲೇ ಪರಿಹಾರ ಕಾರ್ಯಗಳನ್ನು ಒದಗಿಸಿದ್ದರು. 1900ರ ಎರಡನೇ ಮಹಾ ದುರ್ಭಿಕ್ಷ ಕಾಲದಲ್ಲಿ ಲಜಪತರ ಸ್ವಯಂಸೇವಕರು 200ಕ್ಕೂ ಹೆಚ್ಚು ನಿರಾಶ್ರಿತರಿಗೆ ಆಸರೆ ಒದಗಿಸಿದರು. ಅವರ ರಾಜಕೀಯ ಹಾಗೂ ದೇಶಭಕ್ತಿಯ ಗರಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಯುವಜನರು ತರಬೇತಿ ಹೊಂದಿದ್ದ ಫಲ ಅದು. ಇಡೀ ಆಂದೋಲನ ಸ್ವಸಹಾಯ ನೆಲೆಗಟ್ಟಿನಲ್ಲಿ ಕೆಲಸ ಮಾಡಿತು. ಎಂತಹ ಭೀಕರ ಪ್ರಕೃತಿ ವಿಕೋಪದಲ್ಲೂ ಪರಿಹಾರ ಕಾರ್ಯಗಳನ್ನು ಸ್ವಯಂಸೇವಕರು ಸರ್ಕಾರಿ ಅಥವಾ ಯಾವುದೇ ವಿದೇಶಿ ಮಿಷನರಿ ವ್ಯವಸ್ಥೆಗಿಂತ ಕಡಿಮೆ ಇಲ್ಲದಂತೆ ನಿರ್ವಹಿಸಬಹುದೆನ್ನುವುದಕ್ಕೆ ಅದೊಂದು ಸಾಕ್ಷಿಯಾಗಿದೆ.

ಲಜಪತ್‌ರಾಯ್ ಅವರ ವೈಯಕ್ತಿಕ ವಿಕಾಸದಲ್ಲಿ ಈ ಎರಡು ಪ್ರಸಂಗಗಳು ಆಂದೋಲನಗಳು ಅತಿ ಹೆಚ್ಚು ಪ್ರಭಾವಿ ಎನಿಸಿವೆ. ಅವರಿಗೆ ಅವಕಾಶದ ವ್ಯಾಪ್ತಿ ಹೆಚ್ಚಿದ್ದು ತದನಂತರವೇ. ಕೇವಲ ಆರ್ಯ ಸಮಾಜಕ್ಕೆ ಸೀಮಿತವಾದವರೆಂಬ ಚೌಕಟ್ಟಿನಿಂದಲೂ ಲಜಪತರು ಹೊರಗೆ ಬರಲು ಅದರಿಂದ ಸಾಧ್ಯವಾಯಿತು. ಅವರ ಸೇವೆ ಪಂಜಾಬನ್ನು ದಾಟಿ ವಿಸ್ತೃತವಾಯಿತು. ಅವರ ಹೆಸರು ನಾಡಿನೆಲ್ಲೆಡೆ ದಿನ ನಿತ್ಯದ ಮಾತಾಯಿತು. ರಾಜಕೀಯವಾಗಿ ಇನ್ನೂ ಜಡ ಸ್ವಭಾವದಲ್ಲೇ ಇದ್ದ ಜನರಲ್ಲೂ ಲಜಪತರು ಜನಪ್ರಿಯ ನಾಯಕರೆನಿಸಿದರು. ಆತನಕ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡುತ್ತಿದ್ದ ಭಾಷಣಗಳ ಮೂಲಕ ಅವರು ಬುದ್ಧಿವಂತ ವರ್ಗದಲ್ಲಿ ಮಾತ್ರ ಮಾನ್ಯವಾಗಿದ್ದರು. ಎರಡು ದುರ್ಭಿಕ್ಷ ಕಾಲದ ಪರಿಹಾರ ಕಾರ್ಯಗಳ ಮೂಲಕ ಅವರೀಗ ಜನಸಾಮ್ಯಾನರ ಮಹಾ ಮಾನ್ಯ ನಾಯಕರಾದರು.

ಲಜಪತರ ಸೇವೆಯಲ್ಲಿ ಪ್ರತಿಕೂಲದ ಮುಖವೂ ಇಲ್ಲದಿರಲಿಲ್ಲ. ಕ್ರೈಸ್ತ ಮಿಷನರಿಗಳು ತಮ್ಮ ಚಟುವಟಿಕೆ ಕ್ಷೇತ್ರದಲ್ಲಿ ಒತ್ತುವರಿಯಾಗುತ್ತಿದ್ದನ್ನು ಸಹಿಸುತ್ತಿರಲಿಲ್ಲ. ಸೇವೆ ತಮಗೆ ಮಾತ್ರ ಸೀಮಿತವಾದದ್ದು ಎಂಬುದು ಅವರ ಧೋರಣೆಯಾಗಿತ್ತು. ನ್ಯಾಯಾಲಯಗಳಲ್ಲಿ ತಮ್ಮನ್ನು ಬಯಲಿಗೆಳೆಯಲಾಗುತ್ತದೆ ಎಂದು ಅವರು ಭಾವಿಸಿರಲಿಲ್ಲ. ಬರ ಪರಿಹಾರ ಆಯೋಗ ಹಾಗೂ ಸಾರ್ವಜನಿಕ ಮಾಧ್ಯಮಗಳ ಮೂಲಕ ತಮ್ಮ ಬಣ್ಣ ಬಯಲು ಮಾಡಲಾಗುತ್ತದೆ ಎಂದು ಅವರೆಣಿಸಿರಲಿಲ್ಲ. ಕ್ರೈಸ್ತ ಮಿಷನರಿಗಳ ಈ ಇಬ್ಬಗೆಯ ಕೃತ್ಯವನ್ನು ಲಜಪತರು ಬಹು ಹತ್ತಿರದಿಂದ ಮನಗಂಡಿದ್ದರು. ತೋರಿಕೆಯ ಕ್ರೈಸ್ತ ಪಾದ್ರಿಗಳ ಮುಖವನ್ನು ಅವರು ಸಹಜವಾಗಿ ಬೀದಿಗೆ ತಂದಿದ್ದರು. ಹೀಗಾಗಿ ಕ್ರೈಸ್ತ ಮಿಷನರಿಗಳ ವಿಷಯದಲ್ಲಿ ಲಜಪತರಿಗೆ ಗೌರವ ಇರಲಿಲ್ಲ. ಅವರ ನೈತಿಕ ನಿಲುವಿಗಾಗಲಿ, ಮಾನವೀಯ ಧೋರಣೆಗಳಿಗಾಗಲಿ ಲಜಪತರು ಗೌರವ ಕೊಡುತ್ತಿರಲ್ಲ. ಮುಂದೆ ಲಜಪತರು ಅಮೆರಿಕಕ್ಕೆ ಹೋದಾಗ ತೋರಿಕೆಯ ಕ್ರೈಸ್ತ ಮಿಷನರಿಗಳ ಇನ್ನೊಂದು ಮುಖವನ್ನು ಮನನ ಮಾಡಿಕೊಂಡರು. ಭಾರತದಲ್ಲಿನ ಸ್ಥಿತಿಗತಿಗಳನ್ನು ವಿಪರೀತವಾಗಿ ಬಣ್ಣಿಸಿ, ಅಲ್ಲಿ ಪರಿಹಾರ ನೆಪದಲ್ಲಿ ಹಣ ಪಡೆಯುತ್ತಿದ್ದ ರೀತಿ ಅದು. ಆ ಹಣವನ್ನೆಲ್ಲಾ ವೈಯಕ್ತಿಕ ಶ್ರೀಮಂತಿಕೆಗೆ ಅವರು ಬಳಸಿಕೊಳ್ಳುತ್ತಿದ್ದ ಚಿತ್ರಣವು ಲಜಪತರಿಗೆ ಸಿಕ್ಕಿತು. ಹೀಗಾಗಿ ಕ್ರೈಸ್ತ ಮಿಷನರಿಗಳ ವಿಷಯದಲ್ಲಿ ಲಜಪತರಿಗೆ ಶತ್ರುತ್ವದ ಭಾವನೆ ಸಹಜವಾಗಿ ಆಳವಾಗುತ್ತಾ ಬಂದಿತು. ಅವರು ಅಷ್ಟೇ ಶಕ್ತಿವಂತರು, ಅಧಿಕಾರದ ಆಶ್ರಯವಿದ್ದವರು, ಪ್ರತಿಕಾರದ ರಕ್ತವನ್ನೇ ಮೈಗೂಡಿಸಿಕೊಂಡಿದ್ದವರು. ಲಜಪತರ ವಿರುದ್ಧ ಸಮರಕ್ಕಾಗಿ ಹೊಂಚು ಹಾಕುತ್ತಿದ್ದವರು.

ಬರ ಪರಿಹಾರ ಆಯೋಗ ರಚಿತವಾಗಿ ಸಾಕ್ಷಿಗಳನ್ನು ಆಹ್ವಾನಿಸಿದಾಗ ಲಜಪತರು ಸುಮ್ಮನಿರಲಿಲ್ಲ. ಈ ಅವಕಾಶದ ಪ್ರಯೋಜನ ಪಡೆಯಲು ಮುಂದಾದರು. ದುರ್ಭಿಕ್ಷ ಪರಿಹಾರಕ್ಕೆ ಸಮರ್ಥವಾದ ಆರ್ಥಿಕ ಕ್ರಮಗಳನ್ನು ಕೈಗೊಳ್ಳಲು ಅವರು ರಚನಾತ್ಮಕ ಸಲಹೆಗಳನ್ನು ನೀಡಿದರು. ಅದರ ಜೊತೆಯಲ್ಲೇ ದುರ್ಭಿಕ್ಷದ ಲಾಭ ಪಡೆದು ವೈಯಕ್ತಿಕ ಶ್ರೀಮಂತಿಕೆ ಹೆಚ್ಚಿಸಿಕೊಳ್ಳುವವರ ವಿರುದ್ಧ ಕ್ರಮಕ್ಕೂ ಒತ್ತಾಯಿಸಿದರು. ಪರಿಹಾರದ ಹೆಸರಿನಲ್ಲಿ ಧರ್ಮ ಪರಿವರ್ತನೆಯ ಪಾಖಂಡಿತನವನ್ನು ಅವರು ಬಿಚ್ಚಿಟ್ಟರು. 1901ರಲ್ಲಿ

ಆಯೋಗವು ನೀಡಿದ ವರದಿಯಲ್ಲಿ ''ಅನಾಥರು'' ಕುರಿತ 23ನೇ ಅಧ್ಯಾಯದಲ್ಲಿ ಇದೆಲ್ಲವು ವಿಸ್ತಾರವಾಗಿ ದಾಖಲು ಮಾಡಲಾಯಿತು. ''ಅನಾಥರಿಗೆ ಸಂಬಂಧಪಟ್ಟಂತೆ ಸರ್ಕಾರದ ನೀತಿಯನ್ನು ಪ್ರಾಂತ್ಯವಾರು ಆಧಾರ ರೂಪಿಸಬೇಕು. ಅಧಿಕಾರಿಗಳಿಂದಾಗಲಿ ಅಥವಾ ಸಾರ್ವಜನಿಕರಿಂದಾಗಲಿ ದುರುಪಯೋಗಕ್ಕೆ ಅವಕಾಶವಾಗದಂತೆ ತಡೆ ಇರಬೇಕು'' ಎಂದು ಆಯೋಗ ಸ್ಪಷ್ಟ ಪದಗಳಲ್ಲಿ ತಿಳಿಸಿತು. ಅಷ್ಟೇ ಅಲ್ಲದೆ ''ದುರ್ಭಿಕ್ಷದ ಕಾಲದಲ್ಲಿ ಅನಾಥರಾಗುವ ಇಲ್ಲವೇ ಪರಿತ್ಯಕ್ತರಾಗುವ ಮಕ್ಕಳನ್ನು ಸರ್ಕಾರ ತಾತ್ಕಾಲಿಕ ಪೋಷಕನಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಆ ಮಕ್ಕಳನ್ನು ಮತೀಯ ಪರಿವರ್ತನಕಾರರಿಗೆ ಒಪ್ಪಿಸಬಾರದು. ದುರ್ಭಿಕ್ಷ ಕಾಲ ಮುಗಿದು ಪರ್ಯಾಯ ವ್ಯವಸ್ಥೆ ಆಗುವತನಕ ಸರ್ಕಾರ ತನ್ನ ಕರ್ತವ್ಯದಿಂದ ವಿಮುಖವಾಗಬಾರದು. ಈ ಅವಧಿಯಲ್ಲಿ ಮಕ್ಕಳ ತಂದೆ-ತಾಯಿ, ಇಲ್ಲವೇ ಪೋಷಕರನ್ನು ಹುಡುಕುವ ಪ್ರಯತ್ನ ಆಗಬೇಕು. ಒಂದು ವೇಳೆ ಅವರು ಸಿಗದಿದ್ದರೆ ಆಯಾ ಧರ್ಮದಲ್ಲೇ ಆ ಮಕ್ಕಳನ್ನು ಸಾಕಿ ಸಲಹುವಂತಹ ಸಮರ್ಥರನ್ನು ಹುಡುಕಬೇಕು. ಅವರು ಸಮ್ಮತಿಸಿದರೆ ದತ್ತು ಕೊಡಬೇಕು'' ಎಂದು ಸ್ಪಷ್ಟವಾಗಿ ನಿರ್ದೇಶಿಸಿತು.

ಆಯೋಗವು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ''ಸರ್ಕಾರವು ಸ್ಥಾಪಿಸುವ ಸಾರ್ವಜನಿಕ ಬರ ಪರಿಹಾರ ಅನಾಥಾಲಯಗಳಿಗೆ ಕಾಲ ಕಾಲಕ್ಕೆ ಅಧಿಕಾರೇತರ ಸಮಿತಿ ಭೇಟಿ ಕೊಡುವ ಅವಕಾಶ ಇರಬೇಕು. ಆ ಸಮಿತಿಗಳಲ್ಲಿ ವಿವಿಧ ಧರ್ಮಗಳ ಸಂಭಾವಿತರು ಸದಸ್ಯರಾಗಿರಬೇಕು'' ಎಂದು ತಿಳಿಸಿತು.

1897 ಹಾಗೂ 1898 ಲಜಪತ್‌ರಾಯ್ ಅವರ ವೈಯಕ್ತಿಕ ಬದುಕಿನಲ್ಲೂ ತೀರಾ ದುರ್ದಿನಗಳು ಹೌದು. ದುರ್ಭಿಕ್ಷ ಪರಿಹಾರ ಕಾಲದಲ್ಲಿ ದೈಹಿಕವಾಗಿ ಅವರು ಬಹಳ ನರಳಿದರು. 1898ರ ಆಗಸ್ಟ್ ತನಕ ಅವರಿಗೆ ವಿಶ್ರಾಂತಿಯೇ ಇರಲಿಲ್ಲ. ಹಗಲಿರುಳು ಅವರಿಗೆ ಒಂದೇ ಆಗಿದ್ದವು. ಬೆವರಿಳಿಸುವ ಬಿಸಿಲಲ್ಲೂ ಅವರು ಅಬೋಟ್ಟಾಬಾದ್ ಮೈದಾನ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಲ್ಲಿ ತೊಡಗಿದರು. ಅಂತಹ ಒಂದು ಸಂದರ್ಭದಲ್ಲಿ ಅವರು ಇದ್ದಕ್ಕಿದ್ದಂತೆ ಬಂದ ಮಳೆಯಲ್ಲಿ ತೊಯ್ದು ಹೋದರು. ಜ್ವರ ಹಿಡಿಯಿತು. ಸುಲಭವಾಗಿ ಗುಣಮುಖರಾಗಲಿಲ್ಲ. ಆ ಜ್ವರದ ತಾಪ ಅವರ ಯಕೃತ್ತುಗಳಲ್ಲಿ ನಂಜು ತಂದಿತು. ಸೆಪ್ಟೆಂಬರ್ ತಿಂಗಳಿನಿಂದ ಎಪ್ರಿಲ್‌ತನಕ ಅವರು ಹಾಸಿಗೆ ಹಿಡಿಯಲೇ ಬೇಕಾಯಿತು. ಎಳೆತನದಿಂದಲೇ ಲಜಪತರಿಗೆ ಯಕೃತ್ತಿನ ತೊಂದರೆ ಇತ್ತು. ರೂಪಾರ್ ಪಟ್ಟಣದಲ್ಲಿ ಹುಡುಗನಾಗಿದ್ದಾಗ ಲಜಪತರನ್ನು ದೈಹಿಕವಾಗಿ ಸಾಕಷ್ಟು ಹಿಂಡಿ ಹಿಪ್ಪೆ ಮಾಡಿದ ಕಾಯಿಲೆ ಅದು. ಈಗ ಅವರ ಸ್ಥಿತಿ ತೀರಾ ಚಿಂತಾಜನಕವಾಯಿತು. ಲಜಪತರು ಮತ್ತೆ ಚೇತರಿಸಿಕೊಳ್ಳುವರೆಂಬ ಭರವಸೆಯನ್ನು ಅವರ ಬಹುತೇಕ ಮಿತ್ರರು ನೀಗಿಕೊಳ್ಳುವ ಪರಿಸ್ಥಿತಿಯು ಉದ್ಭವಿಸಿತು.

ಲಜಪತರು ಆರೋಗ್ಯದ ದೃಷ್ಟಿಯಿಂದ ಸಂಕಷ್ಟದಲ್ಲಿದ್ದ ದಿನಗಳಲ್ಲಿ ಅವರ ಸಹೋದರ ದಳಪತ್‌ರಾಯ್ ಸಹ ತೀರಾ ಅಸ್ವಸ್ಥರಾಗಿದ್ದರು. ಕ್ಷಯರೋಗ ಅವರನ್ನು ಕಾಡುತ್ತಿತ್ತು. ಅಣ್ಣ ಚೇತರಿಸಿಕೊಂಡ ಹಂತದಲ್ಲಿ ತಮ್ಮ ಮೃತ್ಯುವಿಗೆ ಸನಿಹವಾಗಿದ್ದರು. 1899ರ ಜೂನ್‌ನಲ್ಲಿ ದಳಪತ್‌ರಾಯ್ ನಿಧನ ಹೊಂದಿದರು. ಲಜಪತ್‌ರಾಯ್ ತಮ್ಮ

ಸಹೋದರನನ್ನು ಅತೀವವಾಗಿ ಪ್ರೀತಿಸುತ್ತಿದ್ದರು. ಅವರ ಎಲ್ಲಾ ತಮ್ಮಂದಿರ ಪೈಕಿ ಸಾರ್ವಜನಿಕ ಸೇವೆಯಲ್ಲಿ ಹೆಚ್ಚು ಆಸಕ್ತರಾಗಿದ್ದವರು ಅವರೇ. ಕಟ್ಟಾ ಆರ್ಯ ಸಮಾಜವಾದಿ. ಸಂಸ್ಕೃತದಲ್ಲಿ ಅತುಳ ಆಸಕ್ತಿ ಇತ್ತು. ಅದರ ಪರಿಣಾಮವಾಗಿಯೇ ಅವರು ತಮ್ಮ ಹೆಸರನ್ನು ದಳಪತ್‌ರಾಯ್ ವಿದ್ಯಾರ್ಥಿ ಎಂದಾಗಿಸಿಕೊಂಡಿದ್ದರು. ಲಜಪತ್‌ರಾಯ್ ತಮ್ಮ ಜೀವನ ಚರಿತ್ರೆಯಲ್ಲಿ ''ಅವನು ನನಗಿಂತಲೂ ಹೆಚ್ಚು ಸಾರ್ವಜನಿಕ ಸೇವೆಯ ದಾಖಲೆ ಮಾಡುತ್ತಾನೆಂದು ನಾನು ವಿಶ್ವಾಸವಿಟ್ಟುಕೊಂಡಿದ್ದೆ'' ಎಂದು ಬರೆದಿದ್ದಾರೆ.

ಹೆಚ್ಚು ಆಸೆಗಳನ್ನು ಇಟ್ಟುಕೊಂಡಿದ್ದ ತಮ್ಮ ಸಹೋದರ ದಳಪತ್‌ರಾಯ್ ವಿದ್ಯಾರ್ಥಿ ಮೂವತ್ತರ ತಾರುಣ್ಯದಲ್ಲೇ ಲೌಕಿಕವಾಗಿ ತಮ್ಮಿಂದ ದೂರವಾಗಿದ್ದು ಲಜಪತರ ಪಾಲಿಗೆ ಸಹಿಸಲಾರದಷ್ಟು ವೇದನೆ ತಂದಿತು.

* * *

ಅಧ್ಯಾಯ-16

ವಕೀಲ ವೃತ್ತಿಗೆ ವಿದಾಯ

ಸಮರ್ಥರೂ, ಜನಪ್ರಿಯರೂ ಆದ ವಕೀಲರೊಬ್ಬರಿಗೆ ವೃತ್ತಿಯೇತರವಾದ ಇಷ್ಟೊಂದು ಚಟುವಟಿಕೆಗಳನ್ನು ಕೈಗೊಳ್ಳಲು ಹೇಗೆ ಸಾಧ್ಯ? ವಕೀಲರ ಮಾತಿನಲ್ಲಿ ಬಣ್ಣಿಸುವುದಾದರೆ ಕಾಯ್ದೆ ಕಾನೂನುಗಳ ವೃತ್ತಿಯೂ ಮತ್ಸರವನ್ನು ಹುಟ್ಟಿಸುವ ಶ್ರೀಮತಿ ಇದ್ದಂತೆ.

ಈ ವೃತ್ತಿಯ ಜೊತೆಯಲ್ಲಿ ಸಂಪಾದಕರು ಆಗಿ ಲಜಪತರು ಅಷ್ಟೇ ಜನಪ್ರಿಯತೆ, ಸಾಮರ್ಥ್ಯ ಪ್ರದರ್ಶಿಸುತ್ತಿದ್ದರು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅವರ ಪಾಲಿಗೆ ಅದು ಪೂರ್ಣ ಕಾಲದ ವೃತ್ತಿಯೂ ಆಗಿತ್ತು. ಆ ಎರಡು ವೃತ್ತಿಗಳ ಜೊತೆಯಲ್ಲಿ ಪ್ರವಾಸ, ಭಾಷಣಗಳು ಹಾಗೂ ನಿಧಿ ಸಂಗ್ರಹಣೆ ಜವಾಬ್ದಾರಿ ಹೊಂದಿದ್ದ ಅನೇಕ ಸಂಘ ಸಂಸ್ಥೆಗಳ ಅನುದಿನದ ಕಾರ್ಯಗಳಿಗೆ ನಿಯತವಾಗಿ ಆಯಾ ಕಚೇರಿಗಳ ಭೇಟಿ, ಸಮಿತಿಗಳ ಸಭೆಗಳಲ್ಲಿ ಪಾಲ್ಗೊಳ್ಳುವಿಕೆ, ಸಮಾಜ ಮತ್ತು ಕಾಲೇಜಿನ ಕೆಲಸ ಮತ್ತು ಕಾರ್ಯಗಳು, ಅನಾಥಾಶ್ರಮಗಳ ನಿರ್ವಹಣೆ, ದುರ್ಭಿಕ್ಷ ಪರಿಹಾರ ಆಂದೋಲನ ಸೇರಿದಂತೆ ಬಹುಮುಖದ ಹೊಣೆಗಾರಿಕೆಗಳು ಅವರೊಬ್ಬರಲ್ಲಿ ಕನಿಷ್ಠ ಇಬ್ಬರು ಮೂವರು ಪೂರ್ಣಾವಧಿ ವ್ಯಕ್ತಿಗಳಾಗಿ ಅಂತರ್ಗತಗೊಂಡಂತಿತ್ತು. ನಾನಾ ವೃತ್ತಿ ಕರ್ತವ್ಯಗಳ ಸಂಗಮ ಲಜಪತ್‌ರಾಯ್ ಎಂದರೆ ಚೆಂದ. ಅವರು ಸಾರ್ವಜನಿಕ ಚಟುವಟಿಕೆಯಲ್ಲಿ ಹಾಗೂ ವೃತ್ತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದುದರಲ್ಲಿ ಅರ್ಧಕ್ಕಿಂತ ಕಡಿಮೆ ಭಾಗವನ್ನು ಸಹ ಇನ್ನೊಬ್ಬರಿಂದ ನಿರ್ವಹಿಸಲು ಸಾಧ್ಯವಿರಲಿಲ್ಲ. ಭರವಸೆಯಿಂದ ತಮ್ಮ ಬಳಿ ಬರುತ್ತಿದ್ದ ಕಕ್ಷಿದಾರರ ಹಿತವನ್ನು ಲಜಪತರು ತಮ್ಮ ಸಾರ್ವಜನಿಕ ಚಟುವಟಿಕೆಯ ಹಿತಕ್ಕೆ ಧಕ್ಕೆಯಾಗುವಂತೆ ಮಾಡಿಕೊಂಡವರಲ್ಲ. ಯಾವ ಕಕ್ಷಿದಾರನನ್ನು ಹತಾಶೆಗೊಳಿಸುತ್ತಿರಲಿಲ್ಲ. ಪ್ರಧಾನ ನ್ಯಾಯಾಲಯದಲ್ಲಿ ಅವರೊಬ್ಬ ಯಶಸ್ವಿ ನ್ಯಾಯವಾದಿ ಎನಿಸಿಕೊಂಡರು. ಹಂತ ಹಂತವಾಗಿ ಮೇಲ್ದರ್ಜೆಗೆ ಏರುತ್ತಿದ್ದರು. ಸ್ವತಃ ಲಜಪತರಿಗೆ ಅರಿವಿಲ್ಲದೆಯೇ ವೃತ್ತಿಪರವಾದ ಬೆಳವಣಿಗೆಗಳು ಊರ್ಧ್ವಮುಖವಾಗುತ್ತಿದ್ದವು. ಆದರೂ ಅವರಿಗೆ ವಕೀಲ ವೃತ್ತಿ ತಮ್ಮ ಶಾಶ್ವತ ಚಟುವಟಿಕೆ ಎನಿಸಲಿಲ್ಲ. ಅದನ್ನು ಅವರ ಮಾತುಗಳಲ್ಲೇ ಬರೆದಿಟ್ಟಿದ್ದಾರೆ. ''ನನ್ನ ವಕೀಲ ವೃತ್ತಿಯು ನನ್ನ ಸಾರ್ವಜನಿಕ ಚಟುವಟಿಕೆಗಳನ್ನು ಬಾಧಿಸುತ್ತಿತ್ತು. ನನ್ನ ಸಾರ್ವಜನಿಕ ಚಟುವಟಿಕೆಗಳು ನನ್ನ ವಕೀಲ ವೃತ್ತಿಗೆ ಪೂರಕವಾಗಿರಲಿಲ್ಲ.'' ಹೀಗಾಗಿ ಒಂದೇ ಕಾಲದಲ್ಲಿ ಪರಸ್ಪರ ಮತ್ಸರ ಇಣುಕು ಹಾಕುವ ಇಬ್ಬರು ಶ್ರೀಮತಿಯರ ನಡುವೆ ಬದುಕುವ ಕ್ಲಿಷ್ಟಕರ ಪರಿಸ್ಥಿತಿ ಅವರದಾಯಿತು.

ಅದೆಷ್ಟೋ ಸಂದರ್ಭಗಳಲ್ಲಿ ಲಜಪತರು ದ್ವಂದ್ವಕ್ಕೆ ಒಳಗಾಗುತ್ತಿದ್ದರು. ವೃತ್ತಿಪರವಾಗಿ ಮುಂದುವರೆಯುವುದೇ ಅಥವಾ ಸಾರ್ವಜನಿಕ ಚಟುವಟಿಕೆಯನ್ನು ಅಪ್ಪಿಕೊಳ್ಳುವುದೇ

ಎಂದು ತರ್ಕಿಸುತ್ತಿದ್ದರು. ಹೃದಯಾಂತರ್ಗತವಾಗಿ ಬಯಸಿ ಅಪ್ಪಿಕೊಂಡ ಸಾರ್ವಜನಿಕ ಚಟುವಟಿಕೆಯ ಶ್ರೀಮತಿಯನ್ನು ಬಿಟ್ಟುಕೊಡುವುದು ಅವರಿಗೆ ಕನಸಿನಲ್ಲೂ ಊಹಿಸಲಾಗದ ಸಂಗತಿ. ವಕೀಲ ವೃತ್ತಿ ಅನುಕೂಲಕ್ಕಾಗಿ ಆರಿಸಿಕೊಂಡ ಚಟುವಟಿಕೆ ಎಂಬ ಭಾವನೆ ಬೇರೂರುತ್ತಾ ಬಂದಿತು. ಬದುಕಿಗಾಗಿ ವೃತ್ತಿ ಹಿಡಿದಿದ್ದು ಎಂಬ ಭಾವನೆ ದಟ್ಟವಾಗುತ್ತಾ ಬಂದಿತು. ಸದ್ಯದ ಪರಿಸ್ಥಿತಿಯ ಹಿನ್ನಲೆಯಲ್ಲಿ ಬದುಕಿಗಾಗಿ ವೃತ್ತಿಯ ಅಗತ್ಯವಿಲ್ಲವೆಂಬ ಸಹಜ ಸ್ಥಿತಿಯೂ ಮನವರಿಕೆಯಾಯಿತು. ಎರಡು ಬಗೆಯ ಚಟುವಟಿಕೆಗಳ ನಡುವೆ ಬಸವಳಿಯುವ ಸ್ಥಿತಿಯಿಂದ ಹೊರಬರಬೇಕೆಂದು ಅವರ ಮನಸ್ಸು ಪದೇ ಪದೇ ತುಡಿಯತೊಡಗಿತು. ಬದುಕಿಗಾಗಿ ಆಯ್ದುಕೊಂಡ ವೃತ್ತಿಯನ್ನು ಕೈಬಿಟ್ಟರೆ ಕುಟುಂಬದ ಮೇಲೆ ಅದರ ಪರಿಣಾಮ ಆಗಬಹುದೆಂಬ ಕಂಡೂ ಕಾಣದ ಆತಂಕವೂ ಆಗಾಗ ಇಣಕು ಹಾಕುತ್ತಿತ್ತು. ತಾವೇ ತಾವಾಗಿ ಈ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳುವುದು ಬೇಡವೆಂದು ಅವರು ಭಾವಿಸಿದರು.

ಆ ಸಮಯದಲ್ಲಿ ಲಜಪತರು ಮೂರು ಮಕ್ಕಳ ತಂದೆ. ಇಬ್ಬರು ಪುತ್ರರು. ಓರ್ವ ಪುತ್ರಿ. 1890ರ ದಶಕದಲ್ಲಿ ಹುಟ್ಟಿದವರು. ಕಡೆಯ ಪುತ್ರ ಹುಟ್ಟಿದ್ದು ಮುಂದಿನ ದಶಕದಲ್ಲಿ. ಕುಟುಂಬದ ವ್ಯವಹಾರದಲ್ಲಿ ನಿರ್ದಿಷ್ಟವಾಗಿ ಧ್ವನಿ ಸೇರಿಸುವ ಎತ್ತರಕ್ಕೆ ಬೆಳೆದವರು ಆ ಮಕ್ಕಳಾಗಿರಲಿಲ್ಲ. ಆದರೆ ಲಜಪತರು ಕಿರಿಯರಾದರೂ ಅವರ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಮಾಡಿಕೊಟ್ಟರು. ಆ ವೇಳೆಗೆ ಲಜಪತರ ಸಹೋದರರೆಲ್ಲಾ ಅವರ ಶಿಕ್ಷಣ ಮುಗಿಸಿದ್ದರು. ತಮ್ಮದೇ ಆದ ಜೀವನ ಕಂಡು ಕೊಂಡಿದ್ದರು. ಅವರ ಪತ್ನಿ ಯಾವ ವಿಷಯದಲ್ಲೂ ಹೆಚ್ಚು ಮಾತನಾಡುತ್ತಿರಲಿಲ್ಲ. ಆ ಸಾಧ್ವಿಯ ಸಾಂಸಾರಿಕ ಜೀವನ ಅಷ್ಟೊಂದು ಅಚ್ಚುಕಟ್ಟಾಗಿತ್ತು. ಆದರೂ ಲಜಪತರು ತಮ್ಮ ಜೀವನ ಚರಿತ್ರೆಯಲ್ಲಿ ತಮ್ಮ ಬಾಳ ಸಂಗಾತಿಯ ವಿಷಯದಲ್ಲಿ ಅಷ್ಟೊಂದು ಮಹತ್ವದ ಪ್ರಸ್ತಾಪಗಳನ್ನು ಮಾಡಿಲ್ಲ. ತಂದೆ, ತಾಯಿಗಳ ವಿಷಯದಲ್ಲಿ ಅತ್ಯಂತ ಆಳವಾದ ಪ್ರಸ್ತಾಪಗಳನ್ನು ಕಲಮುಗಟ್ಟಳೆ ಮಾಡಿದ್ದಾರೆ. ಸಹೋದರರು ಇಲ್ಲವೇ ಮಕ್ಕಳ ವಿಷಯದಲ್ಲಿ ಸಂದರ್ಭೋಚಿತವಾಗಿ ಭಾವಪೂರ್ಣ ಪ್ರಸ್ತಾಪಗಳನ್ನು ಬರೆದಿಟ್ಟಿದ್ದಾರೆ. ಆದರೆ ತಮ್ಮ ಕೈಹಿಡಿದವಳ ವಿಷಯದಲ್ಲಿ ಅದೇಕೋ ಅವರ ಲೇಖನಿ ಹಿಂಜರಿದಿದೆ. ಗಾಂಧೀಜಿ ತಮ್ಮ 'Experiments with Truth' ಕೃತಿಯಲ್ಲಿ ಕಸ್ತೂರ ಬಾ ಬಗ್ಗೆ ನಡೆಸಿರುವ ಚಿಂತನೆಯ ಧಾಟಿ ಲಜಪತರ ಆತ್ಮಕಥನದಲ್ಲಿ ಕಂಡು ಬರುವುದಿಲ್ಲ. ಬಹುಶಃ ಅವರಿಗೆ ಅಂತಹ ಪ್ರಸ್ತಾಪಗಳು ಸದಭಿರುಚಿ ಎನಿಸಿರಲಿಲ್ಲವೇನೋ? ಅಂದ ಮಾತ್ರಕ್ಕೆ ತಮ್ಮ ಬದುಕಿನ ಸಂಗಾತಿಯ ಬಗ್ಗೆ ಅವರೇನೂ ಬರೆದಿಲ್ಲವೆಂದಲ್ಲ. ಸ್ವಲ್ಪವೇ ಬರೆದರೂ ಅದು ದಿಟ್ಟ, ನಿರ್ದುಷ್ಟ.

ನಾವು ಈಗಾಗಲೇ ಓದಿರುವಂತೆ ರಾಧಾಕಿಷನ್ ದಂಪತಿಗಳು ತಮ್ಮ ಹಿರಿಯ ಪುತ್ರನಿಗೆ ಆತನ ಶಾಲಾ ದಿನಗಳಲ್ಲೇ ಮದುವೆ ಮಾಡಿದ್ದರು. ಆದರೂ ಅವರ ಸಾಂಸಾರಿಕ ಬದುಕು ಆರಂಭಗೊಂಡಿದ್ದು ಕೆಲವು ವರ್ಷಗಳ ನಂತರ. ಲಜಪತರ ದಾಂಪತ್ಯದ ಬದುಕಿನಲ್ಲಿ ಜಗಳಕ್ಕಾಗಲಿ, ತಿಕ್ಕಾಟಕ್ಕಾಗಲಿ ಎಡೆ ಇರಲಿಲ್ಲ. ಹಾಗೆಂದ ಮಾತ್ರಕ್ಕೆ ಉನ್ನತ ಸೌಲಭ್ಯಗಳ, ಸೌಕರ್ಯಗಳ ಅನುಗ್ರಹವೆಲ್ಲಾ ಅವರ ಕುಟುಂಬಕ್ಕೆ ಇತ್ತೆಂದಲ್ಲ.

ಲಜಪತರ ಸುಧಾರಣೆ, ಸೃಜನಶೀಲ ಮತ್ತು ಮಹತ್ವಾಕಾಂಕ್ಷೆ ಬದುಕಿನ ನಡುವೆ ಅವರ ಸಾಂಸಾರಿಕ ಜೀವನ ಅಷ್ಟೊಂದು ನೆಮ್ಮದಿಯಿಂದ ಕೂಡಿತ್ತೇ ಎಂಬ ಮನೋವಿಶ್ಲೇಷಣೆಯನ್ನು ಮನೋ ವಿಜ್ಞಾನಿಗಳೇ ನೀಡಬೇಕು. ಅವರ ಚಟುವಟಿಕೆಗಳನ್ನು ಓದಿದಾಗ ನಮಗೆ ಸಹಜವಾಗಿ ಅನಿಸುತ್ತದೆ ಅವರು ಪತ್ನಿ ಮತ್ತು ಮಕ್ಕಳ ವಿಷಯದಲ್ಲಿ ಹೆಚ್ಚಿನ ಕಾಳಜಿ ವಹಿಸಿರಲಾರರೆಂದು. ಅವರ ಸಾಂಸಾರಿಕ ಬದುಕನ್ನು ಯದ್ವಾತ್ವಾಗಿ ನೋಡಿದಾಗ ತಮಗೆ ಪ್ರಿಯವಾದ ಚಟುವಟಿಕೆಗಳಲ್ಲಿ ಬಾಳ ಸಂಗಾತಿ ಜೊತೆಗೂಡಲಿಲ್ಲವೆಂಬ ಕೊರಗು, ಖೇದ ಲಜಪತರಲ್ಲಿ ಇದ್ದಿತೆನಿಸುತ್ತದೆ. ಅವರ ಪತ್ನಿಗೂ ಅದು ಮನವರಿಕೆಯಾಗಿರಬೇಕು. ಪತಿಯ ಸ್ವಭಾವ, ಆಶೋತ್ತರಗಳನ್ನು ಆಕೆ ಮನಗಂಡಿದ್ದರು. ಆ ಹಿನ್ನಲೆಯಲ್ಲಿ ಕುಟುಂಬ, ಮಕ್ಕಳ ಪಾಲನೆ, ಪೋಷಣೆ ಮತ್ತು ತಮ್ಮ ಪತಿಯ ಹಿತರಕ್ಷಣೆ ಸೌಕರ್ಯಕ್ಕಾಗಿ ಅವರು ತಮ್ಮ ಸೇವೆಯನ್ನು ಶ್ರದ್ಧೆಯಿಂದ ಸೀಮಿತ ಮಾಡಿಕೊಂಡರು. ಅದು ನ್ಯಾಯಸಮ್ಮತವೂ ಹೌದು. ಪತಿ ಸದಾ ಕುಟುಂಬದ ಹೊರಗಿನ ಚಟುವಟಿಕೆಗಳಲ್ಲಿ ನಿರತರಾಗಿದ್ದಾಗ ಮನೆಯ ಹೊಣೆಗಾರಿಕೆಯನ್ನು ಪತ್ನಿಯೇ ನಿಭಾಯಿಸಬೇಕಾಗುತ್ತದೆ. ಗೌರವ, ಪ್ರತಿಷ್ಠೆ, ಸ್ಥಾನಮಾನಗಳಿಗೆ ತಕ್ಕಂತೆ ಗೃಹಕಾರ್ಯಗಳ, ಮಕ್ಕಳ ಪಾಲನೆ ಪೋಷಣೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹಾಗೆಂದು ಆ ಸಾಧ್ವಿ ಎಂದೂ ಸಹ ತನ್ನ ಗಂಡನ ಚಟುವಟಿಕೆಗಳ ಬಗ್ಗೆ ಚಕಾರ ಎತ್ತಿದವರಲ್ಲ. ತಮ್ಮ ಭಾವನೆ, ಅನಿಸಿಕೆಗಳನ್ನು ತಮ್ಮಲ್ಲೇ ಹುದುಗಿಸಿಕೊಂಡರು. ಎಷ್ಟರಮಟ್ಟಿಗೆ ಸಾಧ್ಯವೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅವರು ಹೊಂದಾಣಿಕೆ ಮಾಡಿಕೊಳ್ಳುತ್ತಾ ಬಂದರು. ಶ್ರೀಮಂತಿಕೆ ಬದುಕನ್ನು ಆಕೆ ಬಯಸಿದವರಲ್ಲ. ಹೆಚ್ಚಿನ ಬೇಡಿಕೆಗಳಿಗೆ ಗಂಡನ ಮೇಲೆ ಒತ್ತಡ ಹೇರಿದವರಲ್ಲ. ಮನೆಯಲ್ಲಿ ನೆಮ್ಮದಿ ಭಂಗ ಮಾಡುವ, ಉದ್ರಿಕ್ತ ಪರಿಸ್ಥಿತಿ ಉಂಟು ಮಾಡುವಂತಹ ಪರಿಸ್ಥಿತಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ತಾನಾಯಿತು ತನ್ನ ಹೊಣೆಗಾರಿಕೆಯಾಯಿತು ಎನ್ನುವಷ್ಟರ ಮಟ್ಟಿಗೆ ತಮ್ಮನ್ನು ತಾವು ನಿಯುಕ್ತಗೊಳಿಸಿಕೊಂಡರು ಲಜಪತರ ಜೀವನದ ದೊಡ್ಡ ದೊಡ್ಡ ನಿರ್ಧಾರಗಳಲ್ಲೂ ಪಾತ್ರಧಾರಿಯಾಗುತ್ತಿರಲಿಲ್ಲ. ಲಜಪತರು ಪತ್ನಿಯ ಸಲಹೆಗಳನ್ನು ಕೇಳುತ್ತಿರಲಿಲ್ಲ. ಹೀಗಾಗಿ ಲಜಪತರಿಗೆ ಅಂತಿಮವಾಗಿ ವಕೀಲ ವೃತ್ತಿಗೆ ವಿದಾಯ ಹೇಳುವ ವಿಷಯದಲ್ಲಿ ತಂದೆ, ತಾಯಿಯರ ಸಲಹೆಗಳನ್ನೇ ಆಧಾರ ಮಾಡಿಕೊಳ್ಳಬೇಕಾಯಿತು.

ತಮ್ಮ ಪುತ್ರ ನ್ಯಾಯವಾದಿಯಾಗಿ ನಿರೀಕ್ಷೆಗೂ ಮೀರಿ ಸಂಪಾದನೆ ಮಾಡುತ್ತಿದ್ದದ್ದು, ದಿನೇ ದಿನೇ ಪ್ರವರ್ಧಮಾನರಾಗುತ್ತಿದ್ದದ್ದು ಮುನ್ಷಿ ರಾಧಾಕಿಷನ್ ಅವರಿಗೆ ಹರ್ಷದ ಸಂಗತಿಯಾಗಿತ್ತು. ಮಗನ ಸಲಹೆ ಮತ್ತು ಒತ್ತಡದ ಮೇರೆಗೆ ಬಹು ಹಿಂದೆಯೇ ಅಕಾಲಿಕವಾಗಿ ತಮ್ಮ ಬೋಧಕ ವೃತ್ತಿಯನ್ನು ಅವರು ತ್ಯಜಿಸಿದ್ದರು. ಲಜಪತರು ಇನ್ನು ತಾರುಣ್ಯದಲ್ಲೇ ಇದ್ದ ಸಮಯ ಅದು. ಅಂತಹ ವೇಳೆಯಲ್ಲಿ ಸಂಭಾವಿತವೂ, ಉತ್ತಮ ಗಳಿಕೆಯಾದ ವಕೀಲ ವೃತ್ತಿಗೆ ವಿದಾಯ ಹೇಳುವ ಮಗನ ಆಶಯಕ್ಕೆ ಅವರು ಇಂಬು ಕೊಡಲಿಲ್ಲ. ತಂದೆ ಮಕ್ಕಳು ಈ ವಿಷಯದಲ್ಲಿ ಒಡಂಬಡಲಿಲ್ಲ. ಲಜಪತರು ಆ ಸಂದರ್ಭವನ್ನು ಹೀಗೆ ಉಲ್ಲೇಖಿಸಿದ್ದಾರೆ. -"ವಕೀಲನಾಗಿ ಕೆಲಸ ಮಾಡುವುದು ನನಗಿಷ್ಟವಿರಲಿಲ್ಲ. ಅದನ್ನು ಬಿಟ್ಟು ಬಿಡಬೇಕೆಂದು ನಾನು ಬಯಸಿದ್ದೆ. ದೇಶಕ್ಕಾಗಿ ನನ್ನ

ಇಡೀ ಸೇವೆಯನ್ನು ಮೀಸಲಿಡಲು ತವಕಿಸಿದ್ದೆ. ಆದರೆ ನನ್ನ ತಂದೆ, ತಾಯಿ ನನ್ನ ಆಶಯಕ್ಕೆ ಒತ್ತಾಸೆಯಾಗಲಿಲ್ಲ. ನಾನು ನನ್ನ ಕಾಲ ಮೇಲೆ ನಿಲ್ಲಬೇಕೆಂದು ಅವರು ಬಯಸಿದ್ದರು. ನನ್ನ ಸಹೋದರರು ಮತ್ತು ನನ್ನ ಮಕ್ಕಳಿಗೆ ನೆಮ್ಮದಿಯ ಬದುಕು ಒದಗಿಸಬೇಕು ಎಂದು ಹೇಳಿದರು. ನನ್ನ ಸಹೋದರರಿಗೆ ಅಗತ್ಯವಾದ ಶಿಕ್ಷಣ ಒದಗಿಸುವ ಮೂಲಕ ನನ್ನ ಕರ್ತವ್ಯ ನಿರ್ವಹಿಸಿದ್ದೇನೆಂದು ನಾನು ನನ್ನ ತಂದೆಗೆ ಉತ್ತರಿಸಿದೆ. ನನ್ನ ಮಕ್ಕಳಿಗೆ ಅನುಕೂಲಕರವಾಗುವಷ್ಟು ಗಳಿಕೆ ನನ್ನಲ್ಲಿದೆ ಎಂದು ತಿಳಿಸಿದೆ... ನನ್ನ ಘನತೆವೆತ್ತ ಆಶಯಕ್ಕೆ ನನ್ನ ತಾಯಿಯ ಯಾವುದೇ ಪ್ರತಿರೋಧ ಬರಲಿಲ್ಲ. ಅವರ ಅಂತಃಕರಣ ನನ್ನ ಪರವಾಗಿ ಇತ್ತು.''

ಈ ವಿಷಯದಲ್ಲಿ ಹಿಗ್ಗಾಟ, ಜಗ್ಗಾಟ ಲಜಪತರ ಮನೆಯಲ್ಲಿ ಕೆಲವು ಕಾಲ ನಡೆಯಿತು. 1899ರಲ್ಲಿ ಲಾಹೋರ್ ಆರ್ಯ ಸಮಾಜದ ವಾರ್ಷಿಕೋತ್ಸವ ಸಂದರ್ಭ. ವಕೀಲ ವೃತ್ತಿಗೆ ವಿದಾಯ ಹೇಳುವ ತಮ್ಮ ನಿರ್ಣಯವನ್ನು ಲಜಪತರು ಪ್ರಕಟಿಸಿದರು. ``ನಾನು ನನ್ನ ಬದುಕಿನ ಉಳಿದ ಎಲ್ಲಾ ಸಮಯ, ಶಕ್ತಿ, ಸಾಮರ್ಥ್ಯವನ್ನು ಕಾಲೇಜಿನ ಸೇವೆಗಾಗಿ, ಸಮಾಜಕ್ಕಾಗಿ ಮತ್ತು ನನ್ನ ತಾಯ್ನಾಡಿಗಾಗಿ ವಿನಿಯೋಗಿಸುತ್ತೇನೆ'' ಎಂದು ಘೋಷಿಸಿದರು. ಶಾಲಾ ಕಟ್ಟಡದಲ್ಲಿ ಒಂದು ಕೊಠಡಿಯನ್ನು ಬಳಸಿಕೊಂಡು ತಮ್ಮ ಕಚೇರಿಯನ್ನು ಆರಂಭಿಸಿದರು. ಪ್ರವಾಸ ಇಲ್ಲದ ದಿನಗಳಲ್ಲಿ ಅವರು ಕಾಲೇಜು ಮತ್ತು ಸಮಾಜದ ಕಾರ್ಯಗಳಲ್ಲಿ ನಿಮಗ್ನರಾಗುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿದ್ದ ಸಮಾಜಗಳಿಗೆ ಅವರು ಪದೇ ಪದೇ ಭೇಟಿ ಕೊಡುತ್ತಿದ್ದರು.

ಪ್ರತಿ ಆರ್ಯ ಸಮಾಜ ತನ್ನ ವಾರ್ಷಿಕೋತ್ಸವಗಳಲ್ಲಿ ಲಜಪತರನ್ನು ಕರೆಯಿಸುವುದನ್ನು ತನ್ನ ಹಕ್ಕೆಂದು ಪರಿಗಣಿಸಿತ್ತು. ಕೆಲವು ತಿಂಗಳ ಕಾಲ ಅವರು ಕಾಲೇಜಿನಲ್ಲಿ ಭಾರತೀಯ ಚರಿತ್ರೆ ಕುರಿತು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಹೆಚ್ಚು ಕಾಲ ಅದನ್ನು ಮುಂದುವರೆಸಲಾಗಲಿಲ್ಲ. ಶಾಲಾ ಮಕ್ಕಳಿಗೆ ಉಪಯುಕ್ತವಾಗುವಂತೆ ಉರ್ದುವಿನಲ್ಲಿ ಕಿರು ಪುಸ್ತಕವೊಂದನ್ನು ಅವರು ಹೊರತಂದರು. ಅದು ಪ್ರೌಢರ ಅಚ್ಚುಮೆಚ್ಚಿನ ಹೊತ್ತಿಗೆಯಾಗಿದ್ದು ಇನ್ನೊಂದು ಮುಖ. ಆ ಹೊತ್ತಿಗೆಯಲ್ಲಿ ಲಜಪತರು ಪ್ರಾಚೀನ ಆರ್ಯ ನಾಗರಿಕತೆಯ ಸಿಂಹಾವಲೋಕನ ಮಾಡಿದ್ದಾರೆ. ಪ್ರಾಚೀನ ಭಾರತ ಕುರಿತು ತಾವು ಪ್ರಕಟಿಸಲು ಕಲ್ಪಿಸಿಕೊಂಡಿದ್ದ ಯೋಜನೆಗೆ ಪೂರಕವೋ ಎನ್ನುವಂತಿತ್ತು ಆ ಕೃತಿಯ ರಚನೆ. ಮುಂದೆ ಅಸಹಕಾರ ಚಳವಳಿಯಲ್ಲಿ ಬಂಧನಕ್ಕೆ ಒಳಗಾಗಿ ಸೆರೆಮನೆಯಲ್ಲಿದ್ದ ದಿನಗಳಲ್ಲಿ ಅವರು ಆ ಕೃತಿಯನ್ನು ಅವರು ರಚಿಸಿದರು. ಶಾಲಾ ಮಕ್ಕಳಿಗೆ ಇಂಗ್ಲಿಷ್ ಪಠ್ಯ ಪುಸ್ತಕವೊಂದನ್ನು ಅವರು ಸಂಯೋಜಿಸಿದರು. ಶಿಕ್ಷಣವೆತ್ತರಾಗಿ ಪೂರ್ಣ ಪ್ರಮಾಣದ ಬೋಧಕರಾಗಿ ಅನುಭವ ಹೊಂದಿದವರು ಸಿದ್ಧಪಡಿಸಿದ ಕೃತಿಗಿಂತ ಯಾವ ರೀತಿಯಲ್ಲೂ ಅದು ಕಡಿಮೆ ಇರಲಿಲ್ಲ.

ಲಜಪತರು ಹಂತ ಹಂತವಾಗಿ ತಮ್ಮ ಕಕ್ಷಿದಾರರ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಬಂದರು. ಹೊಸ ಕಕ್ಷಿದಾರರನ್ನು ಆಕರ್ಷಿಸಲಿಲ್ಲ. ಮೊದಲೇ ಒಪ್ಪಿಕೊಂಡಿದ್ದ ಕಕ್ಷಿದಾರರಿಂದ ಸಂದಾಯವಾಗುತ್ತಿದ್ದ ಗಳಿಕೆಯನ್ನು ಕಾಲೇಜಿನ ಪುರೋಭಿವೃದ್ಧಿಗೆ ಕೊಡಲು

ಅವರು ನಿರ್ಧರಿಸಿದರು. ಸುಮಾರು ಎರಡು ವರ್ಷಗಳ ಕಾಲ ಅದು ನಡೆಯಿತು. ಗೆಳೆಯ ಹಾಗೂ ಪ್ರಿನ್ಸಿಪಾಲ್ ಹನ್ಸ್‌ರಾಜ್‌ರಿಗೆ ಪತ್ರ ಬರೆದು ಈ ಬಗ್ಗೆ ತಿಳಿಸಿದರು. ತಮ್ಮ ಗಳಿಕೆಯನ್ನು ಡಿ.ಎ.ವಿ. ಕಾಲೇಜು ಮತ್ತು ಸಮಾಜಕ್ಕೆ ಸಮರ್ಪಿಸುವುದಾಗಿ ಅವರು ಪ್ರಕಟಿಸಿದರು. ದಿನ ಕಳೆದಂತೆ ಲಜಪತರು ತಮ್ಮ ಎಲ್ಲಾ ವರಮಾನ ಕಾಲೇಜು ಮತ್ತು ಸಮಾಜದ ಅಭಿವೃದ್ಧಿಗೆ ವಿನಿಯೋಗಿಸತೊಡಗಿದರು. ಅಂದರೆ ವಕೀಲರಾಗಿ ಅವರು ಗಳಿಸುತ್ತಿದ್ದ ವರಮಾನ ಹೀಗೆ ತ್ಯಾಗವಾಗಿ ಸಂದಾಯವಾಗುತ್ತಿತ್ತು.

ಅನೇಕ ವರ್ಷಗಳ ಕಾಲ ಅವರ ಸೇವೆ ಮತ್ತು ತ್ಯಾಗ ಹೀಗೆ ನಡೆಯುತ್ತಾ ಬಂದಿತು. ಎಂತಹ ವಿನೂತನ ತ್ಯಾಗ. ಬಹುಶಃ ಅಪೂರ್ವವಾದದ್ದು. ದೇಶವಾಸಿಗಳ ಮೇಲೆ ಅವರ ಸೇವೆ ಮತ್ತು ತ್ಯಾಗಗಳು ಅಪಾರ ಪ್ರಭಾವ ಬೀರಿದವು. ಅವರ ಈ ತ್ಯಾಗ, ಸಮರ್ಪಣೆ ಹಣಕ್ಕಾಗಿ ವೃತ್ತಿಪರರಾಗದ ಸೇವಾಧರ್ಮ, ವಾಕ್ಪಟುತ್ವ, ಪರಿಸ್ಥಿತಿಗಳ ನಿರೂಪಣೆಯ ಸಾಮರ್ಥ್ಯ ಅವರನ್ನು ಕಾಲೇಜು ಮತ್ತು ಸಮಾಜದ ಆಧಾರಸ್ತಂಭವನ್ನಾಗಿ ಮಾಡಿದವು. ಅವುಗಳ ನಿರ್ವಹಣೆಗಾಗಿ ಎಲ್ಲೇ ಕೈಚಾಚಿದರೂ ಬರಿದಾಗುತ್ತಿರಲಿಲ್ಲ. ನಿಧಿ ಸಂಗ್ರಹ ಸಮೃದ್ಧವಾಗುತ್ತಿತ್ತು. ಆರ್ಯ ಸಮಾಜದ ಪ್ರತಿ ವಾರ್ಷಿಕ ಸಭೆಗಳಲ್ಲೂ ಅವರು ನಿಧಿ ನೀಡಲು ಮನವಿ ಮಾಡುತ್ತಿದ್ದರು. ಜನರು ಅಷ್ಟೇ ಉದಾರವಾಗಿ ವಂತಿಕೆಗಳನ್ನು ನೀಡುತ್ತಿದ್ದರು. ಕಡು ಜಿಪುಣರೂ ಸಹ ಉದಾರವಾಗಿ ದಾನ ಮಾಡುವಂತಹ ಪರಿಣಾಮವನ್ನು ಲಜಪತರು ಬೀರುತ್ತಿದ್ದರು. ಸಮಾಜ ಮತ್ತು ಕಾಲೇಜಿನ ಪ್ರವರ್ಧಮಾನ ನಿರ್ಭಾದಿತವಾಗಿ ನಡೆಯತೊಡಗಿತು.

* * *

ಅಧ್ಯಾಯ-17

ಹರ್‌ಕಿಷನ್ ಲಾಲ್

1890ರ ದಶಕದಲ್ಲಿ ಲಾಹೋರ್ ಕಂಡ ಸಿಂಹದ ಮರಿಗಳಲ್ಲಿ ಯುವ ಬ್ಯಾರಿಸ್ಟರ್ ಹರ್‌ಕಿಷನ್ ಲಾಲ್ ಒಬ್ಬರು. ಪ್ರಧಾನ ನ್ಯಾಯಾಲಯದಲ್ಲಿ ಲಜಪತ್‌ರಾಯ್, ಅವರ ಪರಿಚಯ ಮಾಡಿಕೊಳ್ಳಲೇ ಬೇಕಾಯಿತು. ಆರ್ಯ ಸಮಾಜವಾದಿಗಳಲ್ಲಿ ದುಂದು ವೆಚ್ಚದವರು ಎಂದು ಹೆಸರಾಗಿದ್ದವರಲ್ಲಿ ಅವರೂ ಒಬ್ಬರು. ಆ ವರ್ಗಕ್ಕೆ ಸೇರಿದವರನ್ನೆಲ್ಲ ಲಜಪತರು ಕೀಟಲೆ ಮಾಡುತ್ತಿದ್ದರು. ಇಷ್ಟಾದರೂ ಲಜಪತರು ಮತ್ತು ಹರ್‌ಕಿಷನ್ ಲಾಲ್ ನಡುವೆ ಕೆಲವು ಸಾಮ್ಯತೆಗಳಿದ್ದವು. ಅದನ್ನು ಇಬ್ಬರೂ ಮನಗಂಡರು. ದಿನ ಕಳೆದಂತೆ ಅವರು ಮಿತ್ರರೂ ಆದರು.

ಇಂಗ್ಲೆಂಡಿನಲ್ಲಿ ಶಿಕ್ಷಣ ಮುಗಿಸಿ ಆಗಷ್ಟೇ ಆಗಮಿಸಿದ್ದರೂ ಹರ್‌ಕಿಷನ್ ಲಾಲ್ ತಮ್ಮ ವೈಯಕ್ತಿಕ ಪ್ರಾಮುಖ್ಯತೆ ಎಷ್ಟೆಂಬುದನ್ನು ಮನಗಂಡಿದ್ದಂತೆ ಕಾಣುತ್ತಿದ್ದರು. ಗಣಿತ ಶಾಸ್ತ್ರದ ವಿದ್ಯಾರ್ಥಿಯಾಗಿ ಕೇಂಬ್ರಿಡ್ಜ್‌ನಲ್ಲಿ ಪ್ರತಿಭಾನ್ವಿತರು ಎನಿಸಿಕೊಂಡಿದ್ದರು ಸಹ. ಆ ದಿನಗಳಲ್ಲಿ ಇಂಗ್ಲೆಂಡಿನಲ್ಲಿ ಬಹುತೇಕ ಭಾರತೀಯ ವಿದ್ಯಾರ್ಥಿಗಳು ಆಯ್ದುಕೊಳ್ಳುತ್ತಿದ್ದಂತೆ ಅವರು ಸಹ ವಕೀಲ ಪದವಿಯನ್ನು ಗಳಿಸಿಕೊಂಡಿದ್ದರು. ಆದರೆ ಇತರರಂತೆ ವಕೀಲ ವೃತ್ತಿಯನ್ನೇ ಅವಲಂಬಿಸದೆ ಲಾಂಬರ್ಡ್ ಬೀದಿಯ ಮೇಲೆ ಅವರು ಕಣ್ಣಿಟ್ಟಿದ್ದರು. ಷೇರು ವಿನಿಮಯದ ಆಕರ್ಷಣೆ ಆ ಬೀದಿಯಲ್ಲಿತ್ತು. ಹರ್‌ಕಿಷನ್ ಲಾಲ್ ಲಾಹೋರಿಗೆ 1890ರ ದಶಕದಲ್ಲಿ ಬಂದರು. ತಲೆ ತುಂಬಾ ಅಗಾಧ ಧ್ಯೇಯೋದ್ದೇಶಗಳನ್ನು ಹೊತ್ತು ಬಂದಿದ್ದರು. ಹಣಕಾಸಿನ ಚಟುವಟಿಕೆ ಅವರ ಆದ್ಯತೆ ಆಗಿತ್ತು. ಷೇರು ವಿನಿಮಯದ ವಹಿವಾಟನ್ನು ಅವರು ತಲೆ ತುಂಬಾ ತುಂಬಿಕೊಂಡಿದ್ದರು. ಆರ್ಥಿಕ ಪ್ರಗತಿಯಲ್ಲಿ ವೈಯಕ್ತಿಕ ಆಶೋತ್ತರಗಳ ಕನಸು ಕಟ್ಟಿದ್ದ ಅವರು ಪಾರಂಪರಿಕ ನಡವಳಿಕೆಗೆ ಗೌರವ ಕೊಡುತ್ತಿರಲಿಲ್ಲ. ದೊಡ್ಡ ವಹಿವಾಟನ್ನು ನಡೆಸುವ ಯೋಜನೆ ಅವರದಾಗಿತ್ತು. ಆ ವಹಿವಾಟನ್ನು ವಕೀಲರಾಗಿ ಸಾಧಿಸುವುದೋ, ರಾಜಕೀಯದಲ್ಲೋ, ಕೈಗಾರಿಕೆಯಿಂದಲೋ ಅಥವಾ ಹಣಕಾಸಿನ ಚಟುವಟಿಕೆಯಿಂದಲೋ ಎಂಬ ಸ್ಪಷ್ಟವಾದ ಚಿತ್ರಣ ಅವರ ಮುಂದಿರಲಿಲ್ಲ.

ಆ ದಿನಗಳಲ್ಲಿ ವಕೀಲರಾದರೆ ಚುರುಕು ಬುದ್ಧಿಯವರಿಗೆ ಆಕರ್ಷಕ ಅವಕಾಶಗಳಿದ್ದವು. ಅದನ್ನು ಹರ್‌ಕಿಷನ್ ಲಾಲ್ ಕಂಡುಕೊಂಡರು. ರಾಜಕಾರಣದಲ್ಲಿ ಪ್ರತಿಭಾವಂತರಿಗೆ ಹಾಗೂ ಕೆಚ್ಚೆದೆಯ ನಾಯಕತ್ವ ಉಳ್ಳವರಿಗೆ ಸಾಕಷ್ಟು ಅವಕಾಶ ಇದ್ದುದ್ದನ್ನು ಅವರು ಕಂಡು ಕೊಂಡರಾದರೂ ಕೆಲವರು ಅದಾಗಲೇ ಬಹು ದೂರ ಸಾಗಿದ್ದನ್ನು ಅರಿತರು. ಕೈಗಾರಿಕೆ ಮತ್ತು ಹಣಕಾಸಿನ ಚಟುವಟಿಕೆಯಲ್ಲಿ ಪಂಜಾಬಿನಲ್ಲಿ ಇನ್ನೂ ಯಾರೂ ಹೆಸರು ಮಾಡಿರಲಿಲ್ಲ. ಅದನ್ನು ಅವರು ಮನಗಂಡರು. ಆರಂಭದಲ್ಲಿ

ಹರ್‌ಕಿಷನ್ ಲಾಲ್ ಬ್ಯಾರಿಸ್ಟರ್ ಆಗಿ ವೃತ್ತಿಪರರೇನೋ ಆದರು. ಆದರೆ ಬಹುಕಾಲ ಆ ವೃತ್ತಿಯಲ್ಲಿ ಉಳಿಯುವ ವಿಷಯದಲ್ಲಿ ಅವರಲ್ಲೇ ನಿರ್ಧಾರವಿರಲಿಲ್ಲ. ಅವಕಾಶಗಳು ಹೇಗೆ ಒದಗಿ ಬರುತ್ತವೆ, ಪರಿಸ್ಥಿತಿ ಅನುಕೂಲಕರವೇ ಎಂಬುದನ್ನು ಅವರು ಕುತೂಹಲದಿಂದ ವೀಕ್ಷಿಸತೊಡಗಿದರು. ಆರ್ಯ ಸಮಾಜದ ವಿಷಯದಲ್ಲಿ ಅವರಿಗೆ ಹೇಳಿಕೊಳ್ಳುವ ಆಸಕ್ತಿ ಇರಲಿಲ್ಲ. ಸಮಾಜದವರನ್ನು ಕಂಡಾಗ ಗೇಲಿ ಮಾಡುತ್ತಿದ್ದದ್ದು ಉಂಟು. ಅವರನ್ನು ತೀರಾ ನಿಕೃಷ್ಟವಾಗಿ ಕಾಣುತ್ತಿದ್ದರು. ಛೇಡಿಸುತ್ತಲೂ ಇದ್ದರು.

ಹರ್‌ಕಿಷನ್ ಲಾಲ್ ಪ್ರತಿಭೆ, ವ್ಯವಹಾರ ಚಾತುರ್ಯ, ಹಣಕಾಸಿನ, ವ್ಯಾಪಾರ ವಹಿವಾಟಿನ ವಿಷಯದಲ್ಲಿ ಹೆಚ್ಚಿನ ಬಣ್ಣನೆಗಳಿದ್ದರೂ ಮುಂದೆ ಅವರಲ್ಲಿ ಉದಾತ್ತವಾದ ಗುಣಗಳು ಕಂಡು ಬಂದಿದ್ದು ಓದುಗರನ್ನು ಅಚ್ಚರಿಗೊಳಿಸದೆ ಇರುವುದಿಲ್ಲ.

ಹರ್‌ಕಿಷನ್ ಲಾಲ್ ಬ್ಯಾಂಕ್ ವ್ಯವಹಾರ ಕೈಗೊಂಡರು. ಆದರೆ ಅದರಲ್ಲಿ ಕೈಸುಟ್ಟುಕೊಂಡರು. ಎದುರಾಳಿ ಬ್ರಿಟಿಷರು ಅಟ್ಟಹಾಸ ಮಾಡಿದರು. ಉತ್ಸವ ಆಚರಿಸಿದರು. 1919ರ ಮಾರ್ಷಲ್ ಲಾ ಸಂದರ್ಭದಲ್ಲಿ ಪಂಜಾಬಿನಲ್ಲಿ ಹರ್‌ಕಿಷನ್ ಲಾಲ್ ತೋರಿದ ದಿಟ್ಟತನ ಪ್ರತಿ ಪಂಜಾಬಿಯೂ ಅವರ ಬಗ್ಗೆ ಹೆಮ್ಮೆಪಡುವಂತಾಯಿತು. ಲಜಪತ್‌ರಾಯ್ ಗಡಿಪಾರು ಶಿಕ್ಷೆಯಿಂದ ಮರಳಿದ ಮೇಲೆ ಇಬ್ಬರು ಪದೇ ಪದೇ ಭೇಟಿಯಾಗಿ ಪರಸ್ಪರ ವಿಚಾರಧಾರೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ದಿನ ಕಳೆದಂತೆ ಇಬ್ಬರು ತೀರಾ ಹತ್ತಿರವಾದರು. ಪಂಜಾಬಿನ ಮೇಲೆ ಮೈಕೆಲ್ ಓ' ಡಯರ್ ಎಸಗಿದ ಘೋರ ಅಪಚಾರವನ್ನು ನೀಗಿಸಲು ಇಬ್ಬರು ಬಹಳಷ್ಟು ಚಿಂತಿಸಿದರು. ಅದಕ್ಕೆ ಪೂರಕವಾದ ಕಾರ್ಯಗಳಲ್ಲೂ ತೊಡಗಿದರು. ಓ' ಡಯರ್ ಅದನ್ನು ಅರಿತು ಕೊಂಡ.

ಲಜಪತ್‌ರಾಯ್ ಮತ್ತು ಹರ್‌ಕಿಷನ್ ಲಾಲ್‌ರ ಬಗ್ಗೆ ಆತನಲ್ಲಿ ದ್ವೇಷ ಹುಟ್ಟಿತು. ಅದರ ಫಲ ಲಜಪತ್‌ರಾಯ್ ಮತ್ತು ಹರ್‌ಕಿಷನ್ ಲಾಲ್‌ರ ಮೈತ್ರಿ ಗಟ್ಟಿಯಾಯಿತು. ಅಮೆರಿಕದಲ್ಲಿ ಬಹುಕಾಲ ಇದ್ದು ಮರಳಿದ ನಂತರ ಪಂಜಾಬಿನಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಮತ್ತೆ ಲಜಪತರು ನೆಲೆಯೂರಿಸಿಕೊಂಡು ಉರ್ದು ದೈನಿಕ 'ಬಂದೇ ಮಾತರಂ' ಆರಂಭಿಸಿದರು. ಅದರೊಟ್ಟಿಗೆ 'ತಿಲಕ್ ರಾಜ್ಯಶಾಸ್ತ್ರ' ಶಾಲೆಯನ್ನು ಸ್ಥಾಪಿಸಿದರು. ಹರ್‌ಕಿಷನ್ ಲಾಲ್ ಈ ಎರಡು ಕಾರ್ಯಗಳಿಗೆ ಉದಾರವಾದ ನೆರವು ನೀಡಲು ಮುಂದಾದರು. ಪತ್ರಿಕೆಗೆ ಅವರು ಪ್ರಧಾನ ಪಾಲುದಾರರಷ್ಟೇ ಅಲ್ಲದೆ ಓರ್ವ ನಿರ್ದೇಶಕರೂ ಆದರು. ರಾಜ್ಯಶಾಸ್ತ್ರ ಶಾಲೆಗೆ ಹತ್ತು ಸಹಸ್ರ ರೂಪಾಯಿಗಳ ಕೊಡುಗೆಯ ಭರವಸೆಯನ್ನು ನೀಡಿದರು. ಆದರೆ ಅವರಿಬ್ಬರ ಸಹಯೋಗ ಬಹುಕಾಲ ಉಳಿಯಲಿಲ್ಲ. ಅಸಹಕಾರ ಚಳವಳಿ ಪ್ರಾರಂಭವಾಗುತ್ತಿದ್ದಂತೆಯೇ ಇಬ್ಬರ ಧೋರಣೆಯೂ ಬದಲಾಯಿತು. ಹರ್‌ಕಿಷನ್ ಲಾಲ್ ಸರ್ಕಾರದ ಸದಸ್ಯರಾಗಿ ತಮ್ಮ ಸ್ಥಾನ ಭದ್ರ ಮಾಡಿಕೊಂಡರು. ಲಜಪತ್‌ರಾಯ್ ಮತ್ತೆ ತುರಂಗವಾಸಿಗಳಾದರು. 'ಬಂದೇ ಮಾತರಂ'ನಲ್ಲಿ ಹರ್‌ಕಿಷನ್ ಲಾಲ್ ಹೊಂದಿದ್ದ ಷೇರುಗಳನ್ನು ಲಜಪತ್‌ರಾಯ್ ಖರೀದಿಸಿಕೊಂಡರು. ಶಾಲೆಗೆ ಹತ್ತು ಸಾವಿರ ರೂಪಾಯಿಗಳ ದೇಣಿಗೆ ಕೊಡುವ ಭರವಸೆ ಭರವಸೆಯಾಗಿಯೇ ಉಳಿಯಿತು. ಹರ್‌ಕಿಷನ್ ಲಾಲ್ ಯುರೋಪಿಗೆ ಪ್ರಯಾಣ ಮಾಡುವ ಸುದ್ದಿ ತಿಳಿದು

ಲಜಪತ್‌ರಾಯ್ ದೇಣಿಗೆಯ ಬಗ್ಗೆ ನೆನಪು ಮಾಡಿ ಪತ್ರ ಬರೆದರು. ಮುಂಬಯಿಯಿಂದ ಪತ್ರ ಬರೆದ ಹರ್‌ಕಿಷನ್ ಲಾಲ್ ತಿಲಕ್ ಅಥವಾ ಯಾವುದೇ ಇತರೆ ರಾಜ್ಯಶಾಸ್ತ್ರ ಶಾಲೆಯಲ್ಲಿ ತಮಗೆ ನಂಬಿಕೆ ಇಲ್ಲವೆಂದು ಹಣಕ್ಕಾಗಿ ತಮ್ಮನ್ನು ಕೇಳುವುದರಲ್ಲಿ ಯಾವುದೇ ಪ್ರಯೋಜನವಿಲ್ಲವೆಂದು ಬರೆದರು. ವಿಚಿತ್ರ ಬೆಳವಣಿಗೆಯಲ್ಲಿ ಅವರಿಬ್ಬರ ಗೆಳೆತನ ಹೀಗೆ ವಿರಸಕ್ಕೆ ಈಡಾಯಿತು.

1890ರ ಈ ಘಟನೆಯ ಬಗ್ಗೆ ಇನ್ನಷ್ಟು ವಿವರಗಳನ್ನು ತಿಳಿದುಕೊಳ್ಳುವುದು ಇಲ್ಲಿ ಸಮಂಜಸ.

ಸೃಜನಶೀಲ ಸ್ವದೇಶಿ ಚಳವಳಿಯಲ್ಲಿ ಪ್ರಥಮ ಹೆಜ್ಜೆಯಾಗಿ ಭಾರತೀಯ ಜಂಟಿ ಷೇರು ಬ್ಯಾಂಕ್‌ವೊಂದನ್ನು ಆರಂಭಿಸಿಬೇಕೆಂದು ಮುಲ್‌ರಾಜ್ ಬಹು ಕಾಲದಿಂದ ಒತ್ತಾಯಿಸುತ್ತಾ ಬಂದಿದ್ದರು. ಅವರ ಸಲಹೆಯಂತೆ ಲಜಪತ್‌ರಾಯ್ ತಮ್ಮ ಗೆಳೆಯರಲ್ಲಿ ಆಯ್ದ ಕೆಲವರಿಗೆ ಸುತ್ತೋಲೆಯೊಂದನ್ನು ಕಳುಹಿಸಿದರು. ಅವರಿಂದ ಬಂದ ಪ್ರತಿಕ್ರಿಯೆ ಪೂರಕವಾಗಿತ್ತು. ಲಜಪತ್‌ರಾಯ್ ಆ ಬ್ಯಾಂಕಿನ ನಿರ್ವಹಣೆಗೆ ಮುಂದಾಗಲಿಲ್ಲ. ಬೇರೆ ಯಾರಾದರೂ ಅದರ ಜವಾಬ್ದಾರಿ ಹೊರಬೇಕೆಂದು ಬಯಸಿದರು. ತಮ್ಮ ಕೈಯಲ್ಲಿದ್ದ ಕೆಲಸಗಳಿಗೆ ಬಾಧೆಯಾಗುವುದನ್ನು ಅವರು ಒಪ್ಪಲಿಲ್ಲ. ಕಾಲೇಜು ಮತ್ತು ಸಮಾಜಸೇವೆಗೆ ಅಡಚಣೆಯಾಗುವುದನ್ನು ಅವರು ಇಷ್ಟಪಡಲಿಲ್ಲ. ಆ ಸಮಯದಲ್ಲಿ ಹರ್‌ಕಿಷನ್ ಲಾಲ್ ಪ್ರತಿಭೆ ಸಾಕಷ್ಟು ಕುತೂಹಲ ಕೆರಳಿಸಿತ್ತು. ಆರ್ಯ ಸಮಾಜದವರ ಬಗ್ಗೆ ತಮ್ಮಲ್ಲಿ ಸದಭಿಪ್ರಾಯವಿಲ್ಲದಿದ್ದರೂ ಪಂಜಾಬಿನಲ್ಲಿ ಅವರ ಸಹಕಾರವಿಲ್ಲದೆ ತಾವೇನೂ ಮಾಡುವಂತಿಲ್ಲವೆಂಬ ವಾಸ್ತವವನ್ನು ಅವರು ಅರಿತಿದ್ದರು. ಯಾವುದೇ ಸಾಹಸಕ್ಕೆ ಕೈಯಿಟ್ಟು ಯಶಸ್ವಿಯಾಗಬೇಕಾದರೆ ಸಮಾಜದ ಬೆಂಬಲವಿರಬೇಕೆಂದು ಮನಗಂಡಿದ್ದರು. ಆಗಿಂದಾಗ್ಗೆ ಅವರು ಮುಲ್‌ರಾಜ್‌ರನ್ನು ಭೇಟಿ ಮಾಡಿ ಅಭಿಮತ ವಿನಿಮಯ ಮಾಡಿಕೊಳ್ಳುತ್ತಿದ್ದರು. ಅದೇ ಕಾಲದಲ್ಲಿ ದಯಾಳ್ ಸಿಂಗ್ ಮಜೀಥಿಯಾ ಅವರ ವಿಶ್ವಾಸವನ್ನು ಗಳಿಸಿಕೊಂಡಿದ್ದರು. ಸರ್ದಾರರು ನಡೆಸುತ್ತಿದ್ದ *'Tribune'* ಪತ್ರಿಕೆಯ ಸಂಪಾದಕ ನಾಗೇಂದ್ರನಾಥ ಗುಪ್ತರನ್ನು ಆತ್ಮೀಯರನ್ನಾಗಿ ಮಾಡಿಕೊಂಡಿದ್ದರು. ಹೀಗೆ ಪಂಜಾಬ್ ನ್ಯಾಷನಲ್ ಬ್ಯಾಂಕ್ ಅಸ್ತಿತ್ವಕ್ಕೆ ಬಂದಿತು. ನಿರ್ದೇಶಕ ಮಂಡಳಿಯಲ್ಲಿ ಲಜಪತ್‌ರಾಯ್ ಸೇರಲಿಲ್ಲ. ಆದರೆ ಅವರ ಸಹೋದರ ದಳಪತ್‌ರಾಯ್ ಅವರನ್ನು ಓರ್ವ ನಿರ್ದೇಶಕರನ್ನಾಗಿ ಮುಲ್‌ರಾಜ್ ಮತ್ತು ಹರ್‌ಕಿಷನ್ ಲಾಲ್ ಆಯ್ಕೆ ಮಾಡಿದರು. ಅವರಿಗೆ ಮ್ಯಾನೇಜರ್ ತಥಾ ಕಾರ್ಯದರ್ಶಿ ಹುದ್ದೆಯನ್ನು ನೀಡಲಾಯಿತು. ಆ ಬೆಳವಣಿಗೆ ಹರ್‌ಕಿಷನ್ ಲಾಲ್ ಜೊತೆ ಲಜಪತ್‌ರಾಯ್ ಹೊಂದಿದ್ದ ಗೆಳೆತನಕ್ಕೆ ಮೊದಲ ಆಘಾತ ಉಂಟಾಯಿತು.

ನಮ್ಮ ಕಥಾನಾಯಕರು ತಮ್ಮ ಜೀವನ ಚರಿತ್ರೆಯಲ್ಲಿ ದಾಖಲು ಮಾಡಿರುವಂತೆ, ''ಕಾರ್ಯದರ್ಶಿಯಾಗಿ ನನ್ನ ಸಹೋದರನು ಹರ್‌ಕಿಷನ್ ಲಾಲ್ ಅವರ ಆದೇಶದ ಮೇರೆಗೆ ಮತ್ತೋರ್ವ ನಿರ್ದೇಶಕರಿಗೆ ಹಾನಿಕಾರಕವಾಗುವಂತಹ ಕೆಲಸವೊಂದನ್ನು ಮಾಡಿದ. ಆ ವಹಿವಾಟಿನಲ್ಲಿ ಬ್ಯಾಂಕಿಗೆ ನಷ್ಟವಾಯಿತು. ಹರ್‌ಕಿಷನ್ ಲಾಲ್ ಅವರಿಗೆ ವರದಿಯೊಂದನ್ನು ಸಲ್ಲಿಸುವಂತೆ ನಿರ್ದೇಶಕ ಮಂಡಳಿ ಮ್ಯಾನೇಜರನಿಗೆ ತಿಳಿಸಿತು. ತಮ್ಮದೇ

ಆದೇಶಗಳಿಗೆ ತಕ್ಕಂತೆ ತಾನು ನಡೆದುಕೊಂಡಿದ್ದಾಗಿ ದಳಪತ್‌ರಾಯ್ ಹರ್‌ಕಿಷನ್ ಲಾಲರಿಗೆ ತಿಳಿಸಿದ. ಆದರೆ ಹರ್‌ಕಿಷನ್ ಲಾಲ್ ತತ್ಸಂಬಂಧದ ದಾಖಲೆಗಳನ್ನೆಲ್ಲಾ ನಾಶ ಮಾಡುವಂತೆ ದಳಪತ್‌ರಾಯ್‌ಗೆ ತಿಳಿಸಿದರು. ದಳಪತ್‌ರಾಯ್ ಅದಕ್ಕೆ ಒಪ್ಪಲಿಲ್ಲ. ಅದರಿಂದ ಹರ್‌ಕಿಷನ್ ಲಾಲ್ ಅಸಂತುಷ್ಟರಾದರು. ಆಗ ಅನ್ಯ ಮಾರ್ಗವಿಲ್ಲದೆ ದಳಪತ್‌ರಾಯ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.''

ಹರ್‌ಕಿಷನ್ ಲಾಲ್ ಕೆಡಕು ಅಷ್ಟಕ್ಕೆ ನಿಲ್ಲಲಿಲ್ಲ. ದಳಪತ್‌ರಾಯ್ ಬ್ಯಾಂಕ್‌ನಲ್ಲಿ ಭದ್ರತಾ ಠೇವಣಿಯಾಗಿ ಇಟ್ಟಿದ್ದ 10 ಸಾವಿರ ರೂಪಾಯಿಗಳನ್ನು ಹಿಂದಿರುಗಿಸಲಿಲ್ಲ.

ಲಜಪತ್‌ರಾಯ್ ತತ್ಸಂಬಂಧದಲ್ಲಿ ಬರೆಯುತ್ತಾ, ''ನನ್ನ ಸಹೋದರನ ನಿಧನದ ನಂತರವೂ ನಿರ್ದೇಶಕ ಮಂಡಳಿ ಆ ಮೊತ್ತವನ್ನು ಹಿಂದಕ್ಕೆ ಕೊಡಲಿಲ್ಲ. ಬ್ಯಾಂಕಿನ ಹುದ್ದೆಗೆ ರಾಜೀನಾಮೆ ಕೊಟ್ಟು ಒಂದು ವರ್ಷಕ್ಕೂ ಹೆಚ್ಚು ಕಾಲದ ನಂತರ ಆತ ನಿಧನ ಹೊಂದಿದ. ಆ ಹಣವನ್ನು ನನ್ನ ಸಹೋದರ ನನ್ನಿಂದ ಸಾಲವಾಗಿ ಪಡೆದು ಬ್ಯಾಂಕಿಗೆ ತುಂಬಿದ್ದ. ತನ್ನಿಂದಾದ ಆ ಪ್ರಮಾದಕಾಗಿ ಆತ ತನ್ನ ಬದುಕಿನ ಕೊನೆಯ ಕ್ಷಣಗಳಲ್ಲೂ ಮರುಗುತ್ತಿದ್ದ'' ಎಂದಿದ್ದಾರೆ.

ಲಜಪತ್‌ರಾಯ್ ಹಾಗೂ ಹರ್‌ಕಿಷನ್ ಲಾಲ್ ಮೈತ್ರಿಗೆ ಧಕ್ಕೆ ತಂದ ಇನ್ನೊಂದು ಘಟನೆಗೆ ಹೆಚ್ಚು ಕಾಲವೇನೂ ಬೇಕಾಗಲಿಲ್ಲ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ನಿರ್ದೇಶಕ ಮಂಡಳಿ ತನಗೆ ಅನುಕೂಲಕರವಾಗಿಲ್ಲವೆಂದು ಹರ್‌ಕಿಷನ್ ಲಾಲ್ ಕಂಡು ಕೊಂಡರು. ಅತ್ತ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ತಮ್ಮ ನಿರ್ದೇಶಕ ಸ್ಥಾನದ ಅವಧಿ ಮುಗಿಯುತ್ತಾ ಬಂದಾಗ ಪುನರಾಯ್ಕೆ ಬಯಸಿದರು. ಆರ್ಯ ಸಮಾಜದ ಸಮೂಹವು ಲಜಪತ್‌ರಾಯ್ ಅವರನ್ನು ಹರ್‌ಕಿಷನ್ ಲಾಲ್ ಪ್ರತಿಸ್ಪರ್ಧಿಯಾಗಿ ಕಣಕ್ಕೆ ಇಳಿಸಿತು. ಇದು ಅವರಿಬ್ಬರ ನಡುವಣದ ಮೊಟ್ಟಮೊದಲ ಮುಖಾಮುಖಿ. ಅಂತಿಮವಾಗಿ ಲಜಪತ್‌ರಾಯ್ ವಿಜಯಿಯಾದರು.

''ನಾನೇನೋ ಅವರ ಸ್ಥಾನಕ್ಕೆ ಆಯ್ಕೆ ಆದೆ. ಆದರೆ ಕೊನೆಗಾಣದ ವಿರಸ ಉಳಿದುಹೋಯಿತು. ಕಾಂಗ್ರೆಸ್ ನಿಧಿಯ ಪ್ರಸಂಗದಲ್ಲಿ ಆ ವಿರಸ ಇನ್ನಷ್ಟು ವಿಕೋಪಕ್ಕೆ ಹೋಯಿತು. ಭಾರತ ವಿಮಾ ಕಂಪನಿ ವ್ಯವಹಾರದಲ್ಲೂ ಭಿನ್ನಮತ ಅತಿಯಾಯಿತು. ಮುಲ್‌ರಾಜ್ ಮತ್ತು ಹರ್‌ಕಿಷನ್ ಲಾಲ್ ನಡುವಿನ ವೈಷಮ್ಯ ವಿಕಾರ ರೂಪ ಪಡೆಯಿತು. ಹರ್‌ಕಿಷನ್ ಲಾಲ್‌ರಿಗೆ ಅಂತಿಮ ಗತಿ ಕಾಣಿಸುವಷ್ಟರ ಮಟ್ಟಿಗೆ ಮುಲ್‌ರಾಜ್ ಸಿಡಿದೆದ್ದರು'' ಎಂದು ಲಜಪತ್‌ರಾಯ್ ದಾಖಲು ಮಾಡಿದ್ದಾರೆ.

ಹರ್‌ಕಿಷನ್ ಲಾಲ್ ಮತ್ತು ಆರ್ಯ ಸಮಾಜದವರು ಮತ್ತೆಂದೂ ಸಮನ್ವಯಗೊಳ್ಳಲಿಲ್ಲ. ಅತ್ತ ಹರ್‌ಕಿಷನ್ ಲಾಲ್ ಸುಮ್ಮನಿರಲಿಲ್ಲ. ಕಾಂಗ್ರೆಸ್ ಚಳವಳಿಯಿಂದ ಸಮಾಜದವರನ್ನು ದೂರವಿರಿಸುವ ತಂತ್ರಕ್ಕೆ ಕೈ ಹಾಕಿದರು. ಅನೇಕ ಧಾರ್ಮಿಕ ಪುದವಟ್ಟುಗಳನ್ನು ಸ್ಥಾಪಿಸಿದ *'Tribune'* ಪತ್ರಿಕೆಯನ್ನು ಆರಂಭಿಸಿದ ದಯಾಳ್ ಸಿಂಗ್ ಮಜೀಥಿಯಾ ಪಂಜಾಬ್ ಕಾಂಗ್ರೆಸ್ ವ್ಯವಹಾರದಲ್ಲಿ ಹೆಚ್ಚು ಆಸಕ್ತಿ

ವಹಿಸತೊಡಗಿದರು. 1893ರಲ್ಲಿ ಕಾಂಗ್ರೆಸ್ಸಿನ ಅಧಿವೇಶನವನ್ನು ಪಂಜಾಬಿನಲ್ಲಿ ನಡೆಸುವಂತೆ ಲಾಹೋರಿನ ಪ್ರಖ್ಯಾತ ವಕೀಲರು, ಆರ್ಯ ಸಮಾಜದ ಗಣ್ಯರಲ್ಲಿ ಒಬ್ಬರೂ, ಡಿ.ಎ.ವಿ. ಕಾಲೇಜು ಸಮುದಾಯದ ಓರ್ವ ಪ್ರಮುಖರೂ ಆಗಿದ್ದ ಭಕ್ಷಿ ಜಯಶಿರಾಂ ನಿಮಂತ್ರಣ ನೀಡಿದರು. ಅಂದಿನ ಪರಿಸ್ಥಿತಿಯಲ್ಲಿ ಆರ್ಯ ಸಮಾಜದವರು ಸಹಜವಾಗಿ ಕಾಂಗ್ರೆಸ್ಸಿನ ವ್ಯವಹಾರಗಳ ಬಗ್ಗೆ ಹೆಚ್ಚು ಆಸಕ್ತಿ ತೋರಲಿಲ್ಲ. ಮುಲ್‌ರಾಜ್ ತೆರೆಮರೆಯಲ್ಲಿದ್ದುಕೊಂಡೇ ಪ್ರಮುಖ ಪಾತ್ರವಹಿಸಲು ಉತ್ಸುಕರಾಗಿದ್ದರೂ ಕಾಂಗ್ರೆಸ್ ಸಮಿತಿಯ ಬಗ್ಗೆ ತಮಗಿದ್ದ ಅಸಹನೆಯನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ಕೊನೆಗೆ ದಯಾಳ್ ಸಿಂಗ್ ಮತ್ತು ಬ್ರಹ್ಮಸಮಾಜದ ಪ್ರಮುಖರಾದ ಜೋಗೇಂದ್ರ ಚಂದ್ರ ಬೋಸ್ ಪಂಜಾಬ್ ಕಾಂಗ್ರೆಸ್‌ನಲ್ಲಿ ಪ್ರಮುಖ ವ್ಯಕ್ತಿಗಳೆನಿಸಿದರು. ದಯಾಳ್ ಸಿಂಗ್‌ರಿಗೂ ಹರ್‌ಕಿಷನ್ ಲಾಲ್‌ರಿಗೂ ಅನ್ಯೋನ್ಯತೆ ಬಹಳವಾಗಿತ್ತು. ಆ ವೇಳೆಗೆ ಹರ್‌ಕಿಷನ್ ಲಾಲ್ ತಮ್ಮ ಅಸ್ತಿತ್ವವನ್ನು ಸಂಪೂರ್ಣವಾಗಿ ರಾಜಕಾರಣದಲ್ಲಿ ಗುರುತಿಸಿಕೊಳ್ಳತೊಡಗಿದರು. 1893ರ ಅಧಿವೇಶನದ ನಂತರ ಪಂಜಾಬ್ ಕಾಂಗ್ರೆಸ್ ವ್ಯವಹಾರವೆಲ್ಲಾ ದಯಾಳ್ ಸಿಂಗ್ ಮತ್ತು ಹರ್‌ಕಿಷನ್ ಲಾಲ್ ಅವರ ಹಸ್ತಗತವಾಯಿತು.

1900ರಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್ ಅಧಿವೇಶನಕ್ಕೆ ಆತಿಥ್ಯ ನೀಡುವ ಅವಕಾಶ ಲಾಹೋರಿನದಾಯಿತು. ಈ ಮಧ್ಯೆ 1898ರಲ್ಲಿ ದಯಾಳ್ ಸಿಂಗ್ ನಿಧನ ಹೊಂದಿದ್ದರು. ಭಕ್ಷಿ ಜಯಶಿರಾಮ್ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. 1900ರ ವೇಳೆಗೆ ಅವರು ತಮ್ಮದೇ ವಲಯವೊಂದನ್ನು ಕಟ್ಟಿಕೊಂಡು ಹೆಚ್ಚು ಪ್ರಭಾವಿಯೂ ಆಗಿದ್ದರು. ಅದಾಗಿ ಅಧಿವೇಶನದಲ್ಲಿ ಆರ್ಯ ಸಮಾಜದವರು ಹಿಂದಿನ ಅಧಿವೇಶನಕ್ಕಿಂತ ಹೆಚ್ಚು ಕ್ರಿಯಾಶೀಲರಾದರು. ಆರ್ಯ ಸಮಾಜದವರು ದೂರದೃಷ್ಟಿಗೆ ಹೆಸರುವಾಸಿಯಾದವರು. ಅದನ್ನು ಅಧಿವೇಶನದಲ್ಲಿ ನಿಚ್ಚಳಗೊಳಿಸಿದರು. ತಾತ್ಕಾಲಿಕವಾಗಿ ಮಂಟಪ ಕಟ್ಟಿ ಹಣವನ್ನು ಪೋಲು ಮಾಡುವ ಬದಲು ದೊಡ್ಡ ಹಜಾರವೊಂದನ್ನು ನಿರ್ಮಿಸಿ ಅದರಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಲು ನಿರ್ಧರಿಸಿದರು. ಆ ಕಟ್ಟಡವನ್ನು ಕಾಂಗ್ರೆಸ್ ಅಧಿವೇಶನದ ಹೆಸರಿನಲ್ಲಿ ಕಾಯಂ ಆಗಿ ಉಳಿಸಿಕೊಳ್ಳಲು ಬಯಸಿದರು. ಆ ಸಿದ್ಧಾಂತವಾದಿಗಳ ಆಶಯ ಕಾರ್ಯಗತವೂ ಆಯಿತು. ಬ್ರಾಡ್ಲ ಹಜಾರ ನಿರ್ಮಾಣಗೊಂಡಿತು. ವಿದೇಶಿಯೊಬ್ಬನ ಹೆಸರನ್ನು ಆ ಹಜಾರಕ್ಕೆ ಇಟ್ಟಿದ್ದು ಬಹುತೇಕ ಆರ್ಯ ಸಮಾಜವಾದಿಗಳಿಗೆ ಸಮ್ಮತವಾಗಲಿಲ್ಲ.

ಆರ್ಯ ಸಮಾಜದವರು ಮತ್ತು ಹರ್‌ಕಿಷನ್‌ಲಾಲ್ ನಡುವೆ ಭಿನ್ನಮತ ಇಷ್ಟಕ್ಕೆ ಮುಗಿಯಲೂ ಇಲ್ಲ. ಕಾಂಗ್ರೆಸ್ ಅಧಿವೇಶನದ ಲೆಕ್ಕಪತ್ರಗಳ ವಿಷಯದಲ್ಲಿ ಮತ್ತೆ ವಿವಾದ ಹುಟ್ಟಿಕೊಂಡಿತು. ಆ ಅಧಿವೇಶನಕ್ಕೆ ಕೆಲವೇ ತಿಂಗಳ ಮೊದಲು ಭಕ್ಷಿ ಜಯಶಿರಾಂ ನಿಧನ ಹೊಂದಿದ್ದರು. ಅವರ ಅಸಂಖ್ಯಾತ ಗೆಳೆಯರು ಮತ್ತು ಡಿ.ಎ.ವಿ. ಕಾಲೇಜಿನ ಪ್ರಮುಖರು ತೀರಾ ದುಃಖತಪ್ತರಾಗಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಬಾಬು ಕಾಳಿ ಪ್ರಸನ್ನರಾಯ್ ತಮ್ಮ ದಿವಂಗತ ನೇತಾರನ ಬಗ್ಗೆ ''ಈ ಪ್ರಾಂತ್ಯದ ಕಾಂಗ್ರೆಸ್ ಆಂದೋಲನದ ಜೀವ ಮತ್ತು ಬೆಳಕು ಅವರಾಗಿದ್ದರು'' ಎಂದು ಬಣ್ಣಿಸಿದರು. ಭಕ್ಷಿ ಜಯಶಿರಾಂ ಅವರ ನಿಧನದಿಂದ ಪಂಜಾಬಿನ ರಾಜಕೀಯ ಸ್ತರಕ್ಕೆ ಭಾರೀ ಹಿಂಜರಿತ ಉಂಟಾಗಿತ್ತು.

ಕಾಂಗ್ರೆಸ್ಸಿನ ಬಗ್ಗೆ ಸಮಾಜದವರಲ್ಲಿದ್ದ ಕೆಲವು ಅಪಾರ್ಥಗಳನ್ನು ಹರ್‌ಕಿಷನ್ ಲಾಲ್ ಅರ್ಥ ಮಾಡಿಕೊಂಡರೇ? 1907ರ ಸಂಕಷ್ಟದ ದಿನಗಳಲ್ಲಿ 'ಹಿಂದೂ ಹಿತಾಸಕ್ತಿ'ಯ ಹೆಸರಿನಲ್ಲಿ ಆರ್ಯ ಸಮಾಜದ ನಾಯಕರು ಪ್ರತಿಭಟನೆ ವ್ಯಕ್ತಪಡಿಸಿ ಕಾಂಗ್ರೆಸ್ಸಿನ ಕೆಲವರ 'ಅಪಿಧೇಯ' ಚಟುವಟಿಕೆಗಳಿಂದ ದೂರ ಸರಿದಾಗ ಹರ್‌ಕಿಷನ್ ಲಾಲ್ ಹಿಂದೂ ಹಿತಾಸಕ್ತರ ಪರವಾಗಿ ನಿಂತರು. ಅನುಮಾನಕ್ಕೆ ಈಡಾದವರ ಅಸುಪಾಸಿಗೂ ಸುಳಿಯಲಿಲ್ಲ. ಲಜಪತ್‌ರಾಯ್ 1897ರ ಹಿಂದೂ ನಿಷ್ಠ ಧೋರಣೆಯನ್ನು ಪ್ರಮುಖವಾಗಿಟ್ಟುಕೊಂಡು -''ಸಮಾಜವಾದಿಗಳ ರಾಜಕೀಯ ದೃಷ್ಟಿಕೋನಕ್ಕೆ ತಕ್ಕಂತೆ ಹರ್‌ಕಿಷನ್ ಲಾಲ್ ನಡೆದುಕೊಂಡರು. ಆದರೂ ಅವರೋರ್ವ ಶುದ್ಧ ಕಾಂಗ್ರೆಸ್ಸಿಗ'' ಎಂದು ಚಿತ್ರಿಸಿದ್ದಾರೆ.

1900ರಲ್ಲಿ ಲಾಹೋರಿನಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್ ಅಧಿವೇಶನ ಸೇರಿದಾಗ ಪರಸ್ಪರ ವಿರೋಧದ ಎರಡು ಗುಂಪುಗಳು ಎದ್ದು ಕಾಣುತ್ತಿದ್ದವು. ಒಂದು ಹರ್‌ಕಿಷನ್ ಲಾಲ್ ಬಣ. ಇನ್ನೊಂದು ಆರ್ಯ ಸಮಾಜದವರದು. *'Tribune'* ಟ್ರಸ್ಟ್ ಸ್ಥಾಪಕ ದಯಾಳ್ ಸಿಂಗ್ ಅವರು ತಮ್ಮ ಉಯಿಲಿನಲ್ಲಿ ಟ್ರಸ್ಟಿನ ನಿರ್ದೇಶಕರಾಗಿ ಹರ್‌ಕಿಷನ್ ಲಾಲ್ ಅವರನ್ನು ನಾಮಕರಣ ಮಾಡಿದ್ದರು. ದಯಾಳ್ ಸಿಂಗ್ ಬದುಕಿದ್ದ ಕಾಲದಲ್ಲಿ ಆರ್ಯ ಸಮಾಜದವರು ಪತ್ರಿಕೆಯ ವಿಷಯದಲ್ಲಿ ಚಕಾರ ಎತ್ತಿದವರಲ್ಲ. ಆದರೆ ಹರ್‌ಕಿಷನ್ ಲಾಲ್ ಪತ್ರಿಕೆಯ ಹಿಡಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡ ನಂತರ ಅದರ ಧೋರಣೆಯಲ್ಲಿ ಬದಲಾವಣೆ ಆಗತೊಡಗಿತು. 1900ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ವೇಳೆಗೆ *'Tribune'* ತನ್ನತನ ಕಳೆದುಕೊಂಡು ಹರ್‌ಕಿಷನ್ ಲಾಲ್ ಪತ್ರಿಕೆಯಾಗಿತ್ತು.

ಲಜಪತ್‌ರಾಯ್ ಅವರ ಜೀವನ ಚರಿತ್ರೆ ಓದಿದಾಗ, ''1900ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ಲೆಕ್ಕಪತ್ರಗಳ ವಿವಾದ ಸಮಂಜಸವಾಗಿ ಇತ್ಯರ್ಥವಾಗಿರಲಿಲ್ಲ. ಅದಾಗಿ ಕಾಂಗ್ರೆಸ್ ಸಮಿತಿ ಸಭೆ ಸೇರಿದಾಗಲೆಲ್ಲಾ ಲೆಕ್ಕಪತ್ರಗಳ ವಿವಾದ ಪ್ರಸ್ತಾಪಗೊಳ್ಳುತ್ತಲೇ ಇತ್ತು. ಕೊನೆಗೆ ಹರ್‌ಕಿಷನ್ ಲಾಲ್ ಸಮಿತಿ ಸಭೆ ಕರೆಯುವುದನ್ನೇ ಬಿಟ್ಟರು. ಜೊತೆಗೆ ಸ್ವತಃ ಹರ್‌ಕಿಷನ್ ಲಾಲ್ ಕಾಂಗ್ರೆಸ್ ನಾಯಕರಿಂದ ದೂರವಾಗುತ್ತಾ ಬಂದರು... ಭಾರತೀಯ ಸಂಘ ನಿಸ್ತೇಜವಾಯಿತು. ಒಟ್ಟಾರೆ ಪಂಜಾಬಿನಲ್ಲಿ ಯಾವುದೇ ರಾಜಕೀಯ ಚಟುವಟಿಕೆಗೆ ಜೀವವಿರಲಿಲ್ಲ. ಲಾರ್ಡ್ ಕರ್ಜನ್ ವೈಸರಾಯ್ ಆಗಿದ್ದ ಆ ಆರಂಭದ ದಿನಗಳಲ್ಲಿ ದೇಶದ ಇತರ ಪ್ರಾಂತ್ಯಗಳಲ್ಲಿ ಕಂಡುಬರುತ್ತಿದ್ದ ಆಂದೋಲನಗಳ ಯಾವುದೇ ಬಿರುಸು ಪಂಜಾಬಿನಲ್ಲಿ ಇಲ್ಲವಾಗಿತ್ತು'' ಎಂಬುದು ಸ್ಪಷ್ಟವಾಗಿ ಭಾಸವಾಗುತ್ತದೆ.

ಸರ್ಕಾರದ ಆಡಳಿತ ಸಾರ್ವಜನಿಕರಲ್ಲಿ ಸಾಕಷ್ಟು ಅಸಮಾಧಾನ ಹುಟ್ಟಿಸಿತು. ಪರಿಸ್ಥಿತಿ ಇನ್ನಷ್ಟು ಹದಗೆಡುವುದಕ್ಕೆ ಮೊದಲು ಪಂಜಾಬಿನಲ್ಲಿ ರಾಜಕೀಯ ಚಟುವಟಿಕೆಗಳನ್ನು ಪುನರುತ್ಥಾನಗೊಳಿಸಲು ಪಂಜಾಬ್ ನಾಯಕರು ಮುಂದಾದರು. ಆರ್ಯ ಸಮಾಜದ ಮುಖಂಡರು ಪ್ರಮುಖ ಪಾತ್ರಧಾರಿಗಳಾದರು. 1903 ಮತ್ತು 1904ರಲ್ಲಿ ಪದೇ ಪದೇ ಈ ಮುಖಂಡರು ಸಭೆ ಸೇರಿ ಪರಿಸ್ಥಿತಿಯ ಪರ್ಯಾಲೋಚನೆ ನಡೆಸಿದರು. ರಾಜಕೀಯ

ಆಂದೋಲನಕ್ಕೆ ಜೀವ ತುಂಬಲು ನಿರ್ಧರಿಸಿದರು. ಆದರೇ ಹೇಗೆ? ಎಂತು? ಕಾಂಗ್ರೆಸ್ ಸಮಿತಿ ಇದ್ದು ಇಲ್ಲವಾಗಿತ್ತು. ಹರ್‌ಕಿಷನ್ ಲಾಲ್ ಕೈಯಲ್ಲಿ ಸಿಕ್ಕಿದ ಮಂಗನ ಕೈಯ ಮಾಣಿಕ್ಯ ಅದಾಗಿತ್ತು. ಭಾರತೀಯ ಸಂಘ ಇದ್ದು ಇಲ್ಲವಾಗಿತ್ತು. *'Tribune'* ಪತ್ರಿಕೆ ಹರ್‌ಕಿಷನ್ ಲಾಲ್ ಕೈಗೊಂಬೆಯಾಗಿತ್ತು. ರಾಜಕೀಯ ಚಟುವಟಿಕೆಗೆ ಅದರಿಂದ ಯಾವುದೇ ಪ್ರಯೋಜನವಿರಲಿಲ್ಲ. ಪಂಜಾಬಿನಲ್ಲಿ ರಾಜಕೀಯ ಆಂದೋಲನಕ್ಕೆ ಪುನರುಜ್ಜೀವ ತುಂಬಬೇಕಾದರೆ ತಮ್ಮದೇ ಆದ ಪತ್ರಿಕೆಯೊಂದು ಅತ್ಯಗತ್ಯ ಎಂದು ಅವರು ನಿರ್ಣಯಿಸಿದರು. ಹರ್‌ಕಿಷನ್ ಲಾಲ್‌ರಿಂದ ಉಂಟಾಗಿದ್ದ ಎಡರು ತೊಡರುಗಳನ್ನು ಹತ್ತಿಕ್ಕಲು ಪ್ರಾಮಾಣಿಕ ಹಾಗೂ ಶಕ್ತಿಯುತವಾದ ನಿಯತಕಾಲಿಕೆಯೊಂದು ಬೇಕೆ ಬೇಕೆಂದು ಅವರು ತೀರ್ಮಾನಿಸಿದರು.

* * *

ಅಧ್ಯಾಯ-18

ದಿ ಪಂಜಾಬಿ

ರಾಜಕೀಯ ಕ್ಷಿತಿಜದ ಹರವು ವಿಸ್ತಾರವಾಗಿದ್ದ, ದಿನೇ ದಿನೇ ವಿಸ್ತೃತಗೊಳ್ಳುತ್ತಿದ್ದ ಹೊಸ ಶಕೆಯನ್ನು ಲಜಪತ್‌ರಾಯ್ ಪ್ರವೇಶಿಸಿದರು. ತಮ್ಮಲ್ಲಿದ್ದ ಹೊಸ ಉತ್ಸಾಹ ಹಾಗೂ ದಿನೇ ದಿನೇ ತಮ್ಮಲ್ಲಿ ಪ್ರಬಲಗೊಳ್ಳುತ್ತಿದ್ದ ಅದಮ್ಯ ಆಶೋತ್ತರಗಳನ್ನು ಬಳಸಿಕೊಳ್ಳಲು ಆರ್ಯ ಸಮಾಜ ಮತ್ತು ಪಂಜಾಬ್ ತೀರಾ ಚಿಕ್ಕದೇನೋ ಎಂಬ ಭಾವನೆ ಲಜಪತರಲ್ಲಿ ಮೂಡತೊಡಗಿತು. ತಮ್ಮ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪಕಗೊಳಿಸಲು ಅವರ ಮನಸ್ಸು ಹಾತೊರೆಯತೊಡಗಿತು. ಮಝ್ಜಿನಿ ಮತ್ತು ಗ್ಯಾರಿಬಾಲ್ಡಿ ಹೊತ್ತಿಗೆಗಳ ಮೂಲಕ ರಾಷ್ಟ್ರೀಯ ಜಾಗೃತಿಗೆ ಹೊಸ ಹುಮ್ಮಸ್ಸನ್ನು ಸೇರಿಸಿದ ಲಜಪತ್‌ರಾಯ್ ಬಗ್ಗೆ ದೇಶವು ಹೆಚ್ಚು ಕುತೂಹಲಗೊಂಡಿತ್ತು. ಸಾಮಾಜಿಕ, ಧಾರ್ಮಿಕ ಆಂದೋಲನಗಳಲ್ಲಿ ಅವರು ಸಾಧಿಸಿದ ಯಶಸ್ಸು, ಅವರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಿತ್ತು. ಸ್ವತಃ ಲಜಪತರ ಬಯಕೆಗೆ ಅನುಗುಣವಾಗಿ ರಾಷ್ಟ್ರ ಮಾನಸದ ನಿರೀಕ್ಷೆಯೂ ಮಿಳಿತವಾಗಿತ್ತು.

ಕಾಂಗ್ರೆಸ್‌ನಲ್ಲಿ ರಾಜಕೀಯ ಆಂದೋಲನದ ಸಾಮರ್ಥ್ಯಕ್ಕೆ ಕಡಿಮೆ ಇರಲಿಲ್ಲ. ಆದರೆ ಆ ಗುರಿಯತ್ತ ಸಾಗುವಲ್ಲಿ ಅದರ ನಡೆ ತೀರಾ ನಿಧಾನ ಎನಿಸುತ್ತಿತ್ತು. ಕಾಂಗ್ರೆಸ್ ವಾಹಿನಿಯಲ್ಲಿ ಚಟುವಟಿಕೆಗಳಿಗೆ ಹುರಿದುಂಬಿಸಬಲ್ಲ ಬಿಸಿರಕ್ತದ ಕೊರತೆ ಇದೆಯೇನೋ ಎನಿಸುತ್ತಿತ್ತು. ಹುಮ್ಮಸ್ಸಿನ ಆ ಶಕ್ತಿ ತುಂಬಿದರೆ ಕಾಂಗ್ರೆಸ್ ಅಪೂರ್ವವಾದುದನ್ನು ಸಾಧಿಸಿ ತೋರಿಸುತ್ತದೆ ಎಂಬ ಭರವಸೆ ಇಣಕು ಹಾಕುತ್ತಿತ್ತು.

ನಾವು ಈಗಾಗಲೇ ಓದಿರುವಂತೆ ಪಂಜಾಬಿನ ಲಾಹೋರಿನಲ್ಲಿ 1900ರಲ್ಲಿ ನಡೆದ ಅಧಿವೇಶನದ ನಂತರ ಕಾಂಗ್ರೆಸ್ಸಿನ ಪರಿಸ್ಥಿತಿ ಮ್ಲಾನವಾಗಿತ್ತು. ಕಾಂಗ್ರೆಸ್ ಸೂತ್ರ ಹಿಡಿದು ಅದರ ಓಟವನ್ನು ನಿಯುಕ್ತಗೊಳಿಸಬೇಕಾಗಿದ್ದ ಹರ್‌ಕಿಷನ್ ಲಾಲ್ ಅದನ್ನು ಮೂಲೆಗುಂಪು ಮಾಡಲು ಹೊರಟಂತಿತ್ತು. ಅದನ್ನೆಲ್ಲಾ ಲಜಪತ್‌ರಾಯ್ ಅವರಿಗೆ ಸಹಿಸಲಾಗಲಿಲ್ಲ. ನೇರವಾಗಿ ರಾಜಕೀಯದಲ್ಲಿ ಸಕ್ರಿಯರಾಗಲು ಈ ಪರಿಸ್ಥಿತಿ ಅವರನ್ನು ಪ್ರೇರೇಪಿಸಿತು. ಹಗಲು-ರಾತ್ರಿ ರಾಜಕೀಯ ಕ್ರಿಯಾಶೀಲತೆಗಾಗಿ ನೇರವಾಗಿ ಕೆಲಸ ಮಾಡತೊಡಗಿದರು. ಅದರಲ್ಲಿ ಅವರ ಮೊಟ್ಟ ಮೊದಲ ಎಂಟೆದೆಯ ಸಾಹಸ ಹೊಸ ಪತ್ರಿಕೆಯ ಆರಂಭ. ಅವರು ಮತ್ತು ಅವರಂತೆಯೇ ಸಮಾನ ಮನಸ್ಸಿನ ಚಿಂತನೆಯುಳ್ಳವರು ಮಿಳಿತಗೊಂಡರು. ಅವರ ಬಳಿ ಇದ್ದ ಮುದ್ರಣಾಲಯದ ಸಾಮರ್ಥ್ಯ ಸಾಕಾಗುತ್ತಿರಲಿಲ್ಲ. ಪರ್ಯಾಯ ಯೋಜನೆಗಳನ್ನು ಯೋಚಿಸತೊಡಗಿದರು.

ಒಂದು ದಿವಸ ವಿಚಿತ್ರ ಪರಿಸ್ಥಿತಿ ನಿರ್ಮಾಣವಾಯಿತು. ಸಹಿಸಲು ಅಸಾಧ್ಯವಾದ ಘಟನೆ ಅದು. ಲಾಹೋರಿನ ಪ್ರಮುಖ ಪತ್ರಿಕೆಯ ಸಂಪಾದಕರು ತಮ್ಮ ವೃತ್ತಿಗೆ ಯೋಗ್ಯವಾದ ರೀತಿಯಲ್ಲಿ ನಡೆಮಕೊಂಡದ್ದಲ್ಲ ಅದು. ಪತ್ರಿಕಾ ಧರ್ಮದ ಮೌಲ್ಯಗಳಿಗೆ ಮತ್ತು ವಿಶ್ವಾಸಾರ್ಹತೆಗಳಿಗೆ ಚ್ಯುತಿ ತಂದ ಕೃತ್ಯ ಅದು. ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು ಬೇನಾಮಿಯಾಗಿ ಸಿದ್ಧಪಡಿಸಿದ ಪ್ರಕಟಣೆಯೊಂದರ ಮೂಲ ಹಸ್ತಪ್ರತಿಯನ್ನು ಅವರು ಪ್ರಿನ್ಸಿಪಾಲರಿಗೆ ಹಸ್ತಾಂತರ ಮಾಡಿದ್ದರು. ತತ್ಪರಿಣಾಮ ಆ ವಿದ್ಯಾರ್ಥಿಗಳನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಈ ಬೆಳವಣಿಗೆ ಲಜಪತ್‌ರಾಯ್ ಮತ್ತು ಅವರ ಮಿತ್ರರಲ್ಲಿ ಜಿದ್ದು ಹುಟ್ಟಿಸಿತು. ತಮ್ಮದೇ ಆದ ಪತ್ರಿಕೆಯೊಂದನ್ನು ಕೂಡಲೇ ಪ್ರಾರಂಭಿಸಬೇಕೆಂಬ ಅವರ ಅದಮ್ಯ ಬಯಕೆಗೆ ಇನ್ನಷ್ಟು ಒತ್ತು ಸಿಕ್ಕಿತು. ಅವರ ಪೈಕಿ ಪ್ರಮುಖರಾದ ಹತ್ತು ಮಂದಿ ಸಭೆ ಸೇರಿದರು. ಪತ್ರಿಕೆ ಪ್ರಕಟಣೆಗೆ ನಿರ್ಧರಿಸಿದರು. ಆ ಸಾಹಸಕ್ಕೆ ಒಂದು ಸಾವಿರ ರೂಪಾಯಿಗಳನ್ನು ತೊಡಗಿಸಲು ತೀರ್ಮಾನಿಸಿದರು. ಆ ಹಣ ನಷ್ಟವಾದರೂ ಚಿಂತೆ ಇಲ್ಲ ಎಂಬ ತೀರ್ಮಾನಕ್ಕೂ ಬಂದರು. ವಸ್ತುತಃ ಅವರಿಗೆ ನಷ್ಟವೇನೂ ಆಗಲಿಲ್ಲ. ತಮ್ಮ ವೃತ್ತಿಗಾಗಿ ಸಮರ್ಥವಾದ ವ್ಯಾಪಾರಿ ಧೋರಣೆಯುಳ್ಳ ವ್ಯಕ್ತಿಯೊಬ್ಬನನ್ನು ಮ್ಯಾನೇಜರ್ ಆಗಿ ನೇಮಿಸಿಕೊಂಡಿದ್ದು ಅವರ ಯಶಸ್ಸಿನ ಮೊದಲ ಪಂತ. ಜಸವಂತ್‌ರಾಯ್ ಡಿ.ಎ.ವಿ. ಕಾಲೇಜಿನ ಓರ್ವ ಉಪನ್ಯಾಸಕರಷ್ಟೇ ಅಲ್ಲ, ವ್ಯಾಪಾರಿ ಪ್ರವತ್ತಿಯನ್ನು ಮೈಗೂಡಿಸಿಕೊಂಡಿದ್ದರು.

ಹೀಗೆ 'ದಿ ಪಂಜಾಬಿ' 1904, ಅಕ್ಟೋಬರ್ ತಿಂಗಳಲ್ಲಿ ಹೊಸ ನಿಯತಕಾಲಿಕವಾಗಿ ಹೊರಟಿತು. ಮೊದಲ ಸಂಚಿಕೆಯಿಂದಲೇ ಸಾರ್ವಜನಿಕ ಮನ್ನಣೆಗೆ ಪಾತ್ರವಾಯಿತು. ನಿರ್ಭೀಡೆಯ ದಿಟ್ಟ ಪತ್ರಿಕೆ ಎಂದು ಕರೆಯಿಸಿಕೊಳ್ಳತೊಡಗಿತು. ಪತ್ರಿಕೆಯ ನೀತಿ, ನಿರೀಕ್ಷೆಯಂತೆ ಲಜಪತ್‌ರಾಯ್ ಅವರ ನೀತಿಯೇ ಆಗಿತ್ತು. ಅವರೇ ಅದರ ಮಾರ್ಗದರ್ಶಿಯೂ ಆದರು. ಮಾರ್ಗಸೂಚಿಯೂ ಆದರು. ಕೆ.ಕೆ. ಅತಾವಳೆ ಅವರನ್ನು ಪತ್ರಿಕೆಯ ಸಂಪಾದಕರನ್ನಾಗಿ ಲಜಪತ್‌ರಾಯ್ ನೇಮಿಸಿದರು. ತಿಲಕರ ಸಲಹೆ ಈ ನೇಮಕಾತಿಯ ಹಿಂದಿತ್ತು. ಸ್ವತಃ ಲಜಪತ್‌ರಾಯ್ ಅಗತ್ಯ ಹಾಗೂ ನಿರ್ಣಾಯಕ ಸಂದರ್ಭಗಳಲ್ಲಿ ಸ್ವಅಂಕಿತದ ಲೇಖನಗಳನ್ನು, ಸಂಪಾದಕೀಯಗಳನ್ನು ಬರೆಯುತ್ತಿದ್ದರು. ಉಳಿದಂತೆ ಅವರ ಅಂಕಿತವಿಲ್ಲದಿದ್ದರೂ ಅವರೇ ಬರೆಯುತ್ತಿದ್ದ ಲೇಖನಗಳು ಮತ್ತು ಸಂಪಾದಕೀಯಗಳು ಪತ್ರಿಕೆಯ ಜೀವಾಳವಾಗುತ್ತಾ ಬಂದವು.

'ದಿ ಪಂಜಾಬಿ' ಲಾಹೋರ್ ನಗರಿಯಲ್ಲಿ ಹತ್ತರಲ್ಲಿ ಹನ್ನೊಂದನೇಯ ಪತ್ರಿಕೆಯಾಗಲಿಲ್ಲ. ತನ್ನ ಧ್ಯೇಯೋದ್ದೇಶಗಳ ಈಡೇರಿಕೆಯಲ್ಲಿ ಅದು ವಾರದಿಂದ ವಾರಕ್ಕೆ ಆಳವಾಗುತ್ತಾ ಬಂದಿತು. ವೈವಿಧ್ಯತೆ ಪತ್ರಿಕೆಯ ವಿಶೇಷವಾಯಿತು. ಪಂಜಾಬಿನಾದ್ಯಂತ ಹೊಸ ಜಾಗೃತಿಗೆ ಶ್ರೀಗಣೇಶ ಬರೆಯತೊಡಗಿತು. ಬೇರೆ ಜನರ ಪಾಲಿಗೆ ಅದು ಹೇಗಾದರೂ ಕಂಡಿರಲಿ, ಸ್ವತಃ ಲಜಪತರ ಪಾಲಿಗಂತೂ ಅವರು ಬಯಸಿದ್ದ ಧ್ಯೇಯೋದ್ದೇಶಗಳ ಈಡೇರಿಕೆಯ ಮಹಾ ಮಾಧ್ಯಮ ಎಂಬುದರಲ್ಲಿ ಸಂದೇಹ ಉಳಿಯಲಿಲ್ಲ. ವರ್ಷಾಂತರಗಳ ಹಿಂದೆ ಮಝ್ಝಿನಿ, ಗ್ಯಾರಿಬಾಲ್ಡಿ ಪುಸ್ತಕಗಳ ಮೂಲಕ ತಾವು ಕೈಗೊಂಡ ಘನ ಕಾರ್ಯದ ಮುಂದುವರಿದ ಕೆಲಸ 'ದಿ ಪಂಜಾಬಿ' ಎಂಬ

ಮನವರಿಕೆ ಅವರಿಗಾಯಿತು. ಅಂದಿನ ಆ ಕೆಲಸ ಮತ್ತು ಇಂದಿನ ಈ ಕೆಲಸಗಳು ಅವರಿಗೆ ಭಿನ್ನವೆನಿಸಲಿಲ್ಲ. ತಾವು ನಂಬಿದ ಸಿದ್ಧಾಂತ, ಬಯಸಿದ ಗುರಿ ಸಾಧನೆಗೆ ಇನ್ನೊಂದು ಪ್ರಭಾವಿ ಮಾಧ್ಯಮ ಪತ್ರಿಕೆ ಎಂಬುದನ್ನು ಲಜಪತರು ಮೊದಲೇ ಮನಗಂಡಿದ್ದರು. ನಿಜ. ಪತ್ರಿಕೆ ವರ್ಚಸ್ವಿ ಮುದ್ರಣ ಮಾಧ್ಯಮ. ಆಯಾ ಕಾಲಕ್ಕೆ ಅನ್ವಯವಾಗುವ ವಿಚಾರ, ಚಿಂತನ, ಮಂಥನಗಳನ್ನು ಮೂರ್ತೀಕರಿಸುವ ವೇದಿಕೆ ಅದು.

ಜಡ್ಡುಗಟ್ಟಿದ ಜನಾಭಿಪ್ರಾಯವನ್ನು ಬಡಿದೆಬ್ಬಿಸುವ ಅತ್ಯಾವಶ್ಯಕ ಸಂಕಲ್ಪದೊಂದಿಗೆ ಲಜಪತರು 'ದಿ ಪಂಜಾಬಿ'ಯನ್ನು ಆರಂಭಿಸಿದರು. ಅಲ್ಲಿಗೆ ಹಿಂದಿನ ಮೂರು ವರ್ಷಗಳ ಅವಧಿಯಲ್ಲಂತೂ ಪಂಜಾಬಿನಾದ್ಯಂತ ಜನಾಭಿಪ್ರಾಯ ನಿಂತ ನೀರಾಗಿತ್ತು. ಪರಿಸ್ಥಿತಿ ಇನ್ನೂ ಹಿಡಿತದಲ್ಲಿದ್ದು ಅದನ್ನು ತಮ್ಮ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ಗುರಿ ಸಾಧನೆಗೆ ಪೂರಕವಾಗಿ ಬಳಸಿಕೊಳ್ಳಬಹುದೆಂದು ಅವರು ಮನಗಂಡಿದ್ದರು.

ಇವತ್ತಿನ ಪತ್ರಿಕೋದ್ಯಮದ ಸ್ಥಿತಿಗತಿಗಳಿಗೆ ಹೋಲಿಸಿದರೆ 'ದಿ ಪಂಜಾಬಿ' ಉತ್ಪಾದನೆಯ ದೃಷ್ಟಿಯಿಂದ ಮಹಾನ್ ಪತ್ರಿಕೆಯಾಗಿರಲಿಲ್ಲ. ತೀರಾ ಬಡತನದ ಉತ್ಪಾದನೆ ಎಂದರೆ ಚಂದ. ಅದು ಎಂಟು ಪುಟಗಳ ಸಾಪ್ತಾಹಿಕ. ತೀರಾ ಸಾಂಪ್ರದಾಯಕವಾದ ಮುದ್ರಣಾಲಯದಿಂದ ಹೊರ ಬರುತ್ತಿತ್ತು. ಹೊಸ ಹೊಸ ಸುದ್ದಿ ಕಥನಗಳ ಪ್ರಕಟಣೆಗೆ ಸಮರ್ಥವಾದ ಸಂಪನ್ಮೂಲ ಆ ಸಾಪ್ತಾಹಿಕಕ್ಕೆ ಇರಲಿಲ್ಲ. ಆ ದಿನಗಳ ಪರಿಸ್ಥಿತಿಯೂ ಹಾಗೆಯೇ ಇತ್ತು. ಪತ್ರಿಕೋದ್ಯಮದ ಗಾಂಭೀರ್ಯಕ್ಕೆ ಜೊಟ್ಟಿಟ್ಟಂತಿರುವ ಆಯಾ ಕಾಲದ ಅನ್ವೇಷಕ, ವಿಶ್ಲೇಷಕ, ಆಳವಾದ ಸುದ್ದಿ ಕಥನಗಳು ಭಾರತೀಯ ಪತ್ರಿಕೆಗಳಲ್ಲಿ ಪಡೆಯಬೇಕಾದ ಸ್ಥಾನ ಪಡೆದಿರಲಿಲ್ಲ. ಓದುಗರಿಗೆ ವೈವಿಧ್ಯದ ಸುದ್ದಿಗಳನ್ನು ಉಣಬಡಿಸಬಲ್ಲ ಬಹುಮುಖಿ ಹರವಿನ ಸಿಬ್ಬಂದಿಯೂ ಸಾಕಷ್ಟು ಇರದಿದ್ದ ಕಾಲವದು.

ಈಗ ನಾವು ಯಾವುದನ್ನು ವಿಶೇಷ ವರದಿಗಳೆಂದು ಹೇಳುತ್ತೇವೆಯೋ ಅವು ಆ ಕಾಲದಲ್ಲಿ ಇರಲೇ ಇಲ್ಲ. ಪಡಿಯಚ್ಚಿನ ಚಿತ್ರವೊಂದನ್ನು ಬಳಸುವುದು ಪತ್ರಿಕೆಯಲ್ಲಿ ಹಬ್ಬದ ಆಚರಣೆ ಮಾಡಿದಂತಾಗುತ್ತಿತ್ತು. ಆಫ್- ಟೋನ್ ಬ್ಲಾಕ್‌ವೊಂದನ್ನು ಮಾಡಿಸಲು ಮುಂಬಯಿ ಇಲ್ಲವೇ ಕಲ್ಕತ್ತಾ ಅಥವಾ ಪೂನಾಕ್ಕೆ ಹೋಗಿ ಬರಬೇಕಾಗುತ್ತಿತ್ತು. ಟೈಪೋಗ್ರಫಿ ಮತ್ತು ಪುಟ ವಿನ್ಯಾಸದ ತಂತ್ರಗಳ ಹೆಸರೇ ಇರಲಿಲ್ಲ. ಹಾಗೆ ನೋಡಿದರೆ ಆಗ ಪ್ರಕಟಗೊಳ್ಳುತ್ತಿದ್ದ ಪತ್ರಿಕೆಗಳಲ್ಲಿ 'ದಿ ಪಂಜಾಬಿ'ಯ ಗುಣಧರ್ಮ ಇನ್ನೂ ಒರಟಾಗಿತ್ತು. ಆದರೆ ಅದರ ಉದ್ದೇಶ ಈಡೇರಿಕೆ ಮಹತ್ತರವಾಗಿತ್ತು. ಭಾಷೆ ತೀಕ್ಷ್ಣವಾಗಿತ್ತು. ಜನಜಾಗೃತಿ ಮೂಡಿಸುವ ಯತ್ನ ಭಾರೀ ಹರಿತವಾಗಿತ್ತು. ಓದುಗರಿಗೆ ಏನನ್ನು ಕೊಡಬೇಕು, ಹೇಗೆ ಕೊಡಬೇಕು ಎಂಬುದಕ್ಕೆ 'ದಿ ಪಂಜಾಬಿ' ಜ್ವಲಂತ ಸಾಕ್ಷಿಯಾಗಿತ್ತು. ಉದ್ದೇಶ ಈಡೇರಿಕೆಯ ನಿರೂಪಣೆ ಹೀಗೆ ಇರಬೇಕೆಂಬ ಗತ್ತು, ಗಮ್ಮತ್ತು ಅದರದಾಗಿತ್ತು. ಹೀಗೆ 'ದಿ ಪಂಜಾಬಿ' ತಾತ್ಕಾಲಿಕ ಅಗತ್ಯಕ್ಕೆ ಜನರನ್ನು ಸನ್ನದ್ಧಗೊಳಿಸುವ ಜೊತೆಗೆ ಭವಿಷ್ಯದ ಹೋರಾಟಕ್ಕೂ ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸುತ್ತಿತ್ತು.

ಭವಿಷ್ಯದಲ್ಲಿ ಆಗಬಹುದಾದ ತುಮುಲದ ಬಗ್ಗೆ ಹಿರಿಯ ಕಾಂಗ್ರೆಸಿಗರಲ್ಲಿ ಕಲ್ಪನೆ ಇರದಿದ್ದರೂ ಯುವ ಕಾಂಗ್ರೆಸಿಗರಲ್ಲಿ ಅಂತಹ ತುಡಿತ ಎದ್ದು ಕಾಣುತ್ತಿತ್ತು. ಆ ತುಡಿತವನ್ನು

ಗ್ರಹಿಸುವ ಸೂಕ್ಷ್ಮ ಲಜಪತ್‌ರಾಯ್ ಅವರಲ್ಲಿ ವಿಶಿಷ್ಟವಾಗಿತ್ತು. ಅದನ್ನು ಅವರು ಹಿನ್ನಲೆಯಾಗಿಟ್ಟುಕೊಂಡೇ ಲೇಖನ ಮತ್ತು ಸಂದೇಶಗಳನ್ನು ನಿರೂಪಿಸುತ್ತಿದ್ದರು. 'ದಿ ಪಂಜಾಬಿ' ವಾರದಿಂದ ವಾರಕ್ಕೆ ಪ್ರಭಾವಿಯಾಗುತ್ತಾ ಜನಪರವಾಗತೊಡಗಿತು. ಸಾರ್ವಜನಿಕರ ಕುಂದುಕೊರತೆಗಳು, ಪೊಲೀಸರ ಅತಿರೇಕದ ಅತ್ಯಾಚಾರಗಳು, ವರ್ಣವಿದ್ವೇಷಗಳು ಪತ್ರಿಕೆಯಲ್ಲಿ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿದ್ದವು. ಲಾರ್ಡ್ ಕರ್ಜನನ ತೀರಾ ವಿವಾದಾತ್ಮಕ ವಿಶ್ವವಿದ್ಯಾಲಯಗಳ ಮಸೂದೆಯಂತಹ ಅಖಿಲ ಭಾರತ ಮಟ್ಟದ ವಿಷಯಗಳು ಪತ್ರಿಕೆಯಲ್ಲಿ ಚರ್ಚಿತವಾಗುತ್ತಿದ್ದವು. ಹಿಂದೂಗಳಲ್ಲಿ ರಾಷ್ಟ್ರಪ್ರೇಮವನ್ನು ಜ್ವಲಂತಗೊಳಿಸುವಲ್ಲಿ ಸಹಾಯಕವಾಗುವಂತಹ, ವಿದೇಶಿ ಹಾಗೂ ಅಂತಾರಾಷ್ಟ್ರೀಯ ಘಟನೆಗಳು 'ದಿ ಪಂಜಾಬಿ' ಅಂಕಣಗಳಲ್ಲಿ ರೋಚಕವಾಗಿ ತುಂಬಿರುತ್ತಿದ್ದವು. ರಷ್ಯಾದ ಜ್ಯೂರಿಸ್ಟ್‌ವಾದಿಗಳ ವಿರುದ್ಧ ಜಪಾನಿಯರು ಸಾಧಿಸಿದ ವಿಜಯದ ಕಥನಗಳಿಗೆ 'ದಿ ಪಂಜಾಬಿ'ಯಲ್ಲಿ ಆರಂಭದಿಂದಲೂ ಪ್ರಾಶಸ್ತ್ಯ ನೀಡುತ್ತಾ ಬರಲಾಯಿತು. ಇಡೀ ಪೌರಾತ್ಯವನ್ನು ಎಚ್ಚರಿಸಿ ಸಾಮ್ರಾಜ್ಯಷಾಹಿವಾದದ ವಿರುದ್ಧ ಮುಗಿಬೀಳುವಂತೆ ಮಾಡಿದ ವಿಜಯದ ಕಥನಗಳು ಓದುಗರನ್ನು ಸದಾ ಕಾಲ ಆಕರ್ಷಿಸಿ ಕುತೂಹಲ ಕೆರಳಿಸುತ್ತಿದ್ದ ಪತ್ರಿಕೆ ಅದಾಯಿತು.

'ದಿ ಪಂಜಾಬಿ' ಹೊರಬರುವುದನ್ನೇ ಓದುಗರು ಕುತೂಹಲದಿಂದ ನಿರೀಕ್ಷಿಸುವಂತಾಯಿತು. ಲಜಪತ್‌ರಾಯ್ ಮತ್ತು 'ದಿ ಪಂಜಾಬಿ' ಯಾವ ದೊಡ್ಡ ಹೋರಾಟ ಎದುರಿಸಲು ಹಗಲಿರುಳು ಶ್ರಮಿಸುತ್ತಾ ಬಂದರೋ ಅದು ನಿರೀಕ್ಷೆಗಿಂತ ಮೊದಲೇ ಬಂದು ಬಿಟ್ಟಿತು. ಲಾರ್ಡ್ ಕರ್ಜನನ ಕ್ರೂರ ಅಧಿಕಾರಷಾಹಿ ಕೃತ್ಯದಿಂದಾಗಿ ಬಂಗಾಳ ಇಬ್ಭಾಗವಾಗುವ ನಿರ್ಧಾರ ಹೊರಬಿದ್ದಿತು. ಪಂಜಾಬಿನ ಜೀವಸ್ತರವನ್ನೇ ಅಲ್ಲೋಲಕಲ್ಲೋಲ ಮಾಡುವಂತಹ ಲೆಫ್ಟಿನೆಂಟ್ ಗವರ್ನರ್ ಇಬೆಟ್ಸನ್‌ನ ಭೂಮಿ ಮತ್ತು ವಸಾಹತು ಕಾಯ್ದೆ ಅಸ್ತಿತ್ವಕ್ಕೆ ಬಂದಿತು. ಈ ಎರಡು ಜನವಿರೋಧಿ, ದೇಶ ವಿರೋಧಿ ನಿರ್ಧಾರಗಳ ವಿರುದ್ಧ ಜನಜಾಗೃತಿ ಉಂಟು ಮಾಡಲು 'ದಿ ಪಂಜಾಬಿ' ಸಮರ್ಥ ಅಗ್ರಮಾನ್ಯ ಪಾತ್ರ ವಹಿಸಿತು. ಈ ಎರಡು ಕಾಯ್ದೆಗಳ ಒಳಮುಖದ ವಿಕೃತ ರೂಪ, ಕುಹಕಗಳನ್ನು ಬಿಚ್ಚಿಟ್ಟು ವಾಸ್ತವಿಕ ಸಂಗತಿಗಳನ್ನು ದಿಟ್ಟತನದಿಂದ ಅಭಿವ್ಯಕ್ತಿಗೊಳಿಸಿತು. ತತ್ಫಲವಾಗಿ ಚಳವಳಿ ಉಗ್ರ ಸ್ವರೂಪ ತಾಳಿತು. ಬಿಳಿಯರ ಆಡಳಿತಕ್ಕೆ ಆ ಎರಡು ಕಾಯ್ದೆಗಳ ವಿರುದ್ಧದ ಚಳವಳಿ ಸಹಿಸಲು ಅಸಾಧ್ಯವಾದ ಪೆಟ್ಟಾಯಿತು.

* * *

ಅಧ್ಯಾಯ-19

ಮುಂಬಯಿ ಕಾಂಗ್ರೆಸ್ ಅಧಿವೇಶನ

ಪಂಜಾಬಿ ಗುಂಪು ಕಾಂಗ್ರೆಸ್ ಜೊತೆ ತನ್ನ ಸಂಬಂಧವನ್ನು ಮತ್ತೆ ಸ್ಥಾಪಿಸಿಕೊಳ್ಳಲು ನಿರ್ಧರಿಸಿತು. ಅದಕ್ಕೆ ಪೂರಕವಾಗಿ ಮುಂಬಯಿಯಲ್ಲಿ 1904ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ತನ್ನ ನಿಯೋಗ ಕಳುಹಿಸಿಕೊಟ್ಟಿತು. ಆ ನಿಯೋಗದಲ್ಲಿ ಲಜಪತ್‌ರಾಯ್ ಮತ್ತು ಅವರ ಗೆಳೆಯ ದ್ವಾರಕದಾಸ್ ಸೇರಿದಂತೆ ಪಂಜಾಬಿನ ಪ್ರಮುಖ ನಾಯಕರಿದ್ದರು. ಮುಂದೆ ಜನತಾ ಸೊಸೈಟಿಯ ಸೇವಕರಾಗಿ ತಾವು ಸಮರ್ಪಿಸಿದ ಗ್ರಂಥಾಲಯಕ್ಕೆ ಲಜಪತ್‌ರಾಯ್ ತಮ್ಮ ಮಿತ್ರ ದ್ವಾರಕದಾಸ್ ಅವರ ಹೆಸರಿಟ್ಟು ಗೌರವಿಸಿದ್ದು ಇನ್ನೊಂದು ಕಥೆ. ಮುಂಬಯಿ ಅಧಿವೇಶನದ ಕಾಲದಲ್ಲೂ ಕಾಂಗ್ರೆಸ್‌ನಲ್ಲಿ ಹೇಳಿಕೊಳ್ಳುವಂತಹ ಹೋರಾಟದ ಗತ್ತು ಇರಲಿಲ್ಲ. ಅದರ ಸೃಜನಾತ್ಮಕ ಕೊಡುಗೆಯೂ ಅಷ್ಟಕಷ್ಟೇ. ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ ಎಂದರೆ ಒಂದು ರೀತಿಯಲ್ಲಿ ವಾರ್ಷಿಕ ಜಾತ್ರೆ ಇದ್ದಂತಿತ್ತು. ವಾಕ್ಪಟುಗಳಿಗೆ ತಮ್ಮ ನಾಲಿಗೆಯ ಚಪಲ ತೀರಿಸಿಕೊಳ್ಳಲು ಅದೊಂದು ವೇದಿಕೆಯೋ ಎನ್ನುವಂತಾಗಿತ್ತು. ಇಡೀ ವರ್ಷದ ಸಾರ್ವಜನಿಕ ಕುಂದುಕೊರತೆಗಳಿಗೆ ಅಧಿಕೃತ ಮುದ್ರೆ ಒತ್ತುವುದೊಂದೇ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದ ಮುಖ್ಯ ಉದ್ದೇಶದಂತಿತ್ತು. ಹಿಂದಿನಿಂದಲೂ ಉಳಿದು ಬಂದ ಕುಂದುಕೊರತೆಗಳ ಗುಂಪಿಗೆ ಹೊಸಬರನ್ನು ಸೇರಿಸಿ ವಾರ್ಷಿಕ ಜಾತ್ರೆ ಮುಕ್ತಾಯಗೊಳ್ಳುತ್ತಿತ್ತು.

ಒಂದು ರೀತಿಯಲ್ಲಿ 'ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲದ' ಸಂಘಟನೆ ಅದಾಗಿತ್ತು. ಸಂಘಟನೆಯ ವಿಷಯ ಬಂದಾಗ ಆರ್ಯ ಸಮಾಜದವರದು ಉತ್ತಮ ನಿದರ್ಶನ. ಕಾರ್ಯ ಚಟುವಟಿಕೆಗಳನ್ನು ಅವರು ಸುಸಂಘಟಿತವಾಗಿ ಸಂಯೋಜಿಸಿಕೊಳ್ಳುತ್ತಿದ್ದರು. ಯೋಜನೆ ಹಾಕಿಕೊಂಡು ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದರು. ಅಂತಹ ಸಮಾಜದವರಿಗೆ ಕಾಂಗ್ರೆಸ್ ಸಂಘಟನೆಯ ನಡವಳಿಕೆ ಮೆಚ್ಚಿಕೆಯಾಗಲಿಲ್ಲ. ಪಂಜಾಬಿನ ನಿಯೋಗ ಲಜಪತ್‌ರಾಯ್ ಮತ್ತು ದ್ವಾರಕದಾಸ್ ಅವರನ್ನು ವಕ್ತಾರರನ್ನಾಗಿ ಮುಂದೆ ಮಾಡಿತು. ಕಾಂಗ್ರೆಸ್ ಸಂಘಟನೆಯು ವರ್ಷವಿಡೀ ಕೆಲಸ ಮಾಡುವ ಒಂದು ವ್ಯವಸ್ಥೆಯಾಗಬೇಕು. ಅದರ ಚಾಲನೆಗೆ ಸಂವಿಧಾನವೊಂದು ಇರಲೇಬೇಕೆಂಬ ಅಗತ್ಯವನ್ನು ಈ ಇಬ್ಬರು ವಕ್ತಾರರು ಹೇಳಿದರು. ಇಂತಹ ಪ್ರಯತ್ನವನ್ನು ಈ ಹಿಂದೆಯೂ ಮಾಡಲಾಗಿತ್ತು. ಆಗಿನಂತೆ ಈಗಲೂ ಸಹ ಸರ್ ಫೆರೋಜ್ ಷಹ ಮೆಹ್ತಾ ಪಂಜಾಬ್ ನಿಯೋಗದ ಒತ್ತಡವನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಆ ಸಮಯದಲ್ಲಿ ಮೆಹ್ತಾ ಕಾಂಗ್ರೆಸ್ ಸಂಘಟನೆಯಲ್ಲಿ ಹೆಚ್ಚು ಪ್ರಭಾವಿ ವ್ಯಕ್ತಿಯಾಗಿದ್ದರು.

ಆದರೂ ಮುಂಬಯಿ ಅಧಿವೇಶನ ಕೆಲವೊಂದು ರೀತಿಯಲ್ಲಿ ಲಜಪತರ ಪಾಲಿಗೆ ಅನುಕೂಲವಾಯಿತು.

ಅಧಿವೇಶನ ಮುಗಿಯುತ್ತಿದ್ದಂತೆ ಲಜಪತರು ದೋಣಿಯೊಂದನ್ನು ಹಿಡಿದು ಶ್ರೀಲಂಕಾಕ್ಕೆ ಹೋದರು. ಅಲ್ಲೆಲ್ಲಾ ಸುತ್ತಾಡಿದರು. ಆ ದ್ವೀಪ, ಆ ರಾಷ್ಟ್ರದ ಭೂರಮೆಯ ಸೌಂದರ್ಯವನ್ನು ಮೆಚ್ಚಿದರು. ಮಲಬಾರ್ ತೀರದ ಸೌಂದರ್ಯ ರಾಶಿಯನ್ನು ಸವಿದರು. ಮರಳುವಾಗ ರಾಮೇಶ್ವರದ ಯಾತ್ರೆಯನ್ನು ಕೈಗೊಂಡರು. ವಿಖ್ಯಾತ ಮಧುರೈ ದೇವಸ್ಥಾನಕ್ಕೆ ಭೇಟಿ ಕೊಟ್ಟರು. ದಕ್ಷಿಣ ಭಾರತಕ್ಕೆ ಅವರು ನೀಡಿದ ಮೊಟ್ಟ ಮೊದಲ ಭೇಟಿ ಅದು. ಮದ್ರಾಸ್‌ನಲ್ಲಿ ಜಿ. ಸುಬ್ರಮಣ್ಯ ಅಯ್ಯರ್ ಅತಿಥಿಯಾಗಿ ಮೂರು ದಿನ ಇದ್ದರು. ನಂತರ ಅಲ್ಲಿಂದ ಕಲ್ಕತ್ತಾಕ್ಕೆ ಹೋದರು.

ಮುಂಬಯಿ ಅಧಿವೇಶನದ ನಂತರ ತಾವು ಕೈಗೊಂಡ ಪರ್ಯಟನೆ ಕಾಲದಲ್ಲೇ ಅವರು ಮುಂದೆ ಮಹತ್ವದ್ದು ಎನಿಸಿದ ಗೋಖಲೆಯವರೊಂದಿಗೆ ಪ್ರಥಮ ಭೇಟಿಯನ್ನು ಕೈಗೊಂಡರು. ಆಗ ಗೋಖಲೆ ಕಲ್ಕತ್ತಾದಲ್ಲಿ ಇದ್ದರು. ಸಂಸತ್ತಿನ ಮೇಲ್ಮನೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅವರು ಅಲ್ಲಿಗೆ ತೆರಳಿದ್ದರು. ಗೋಖಲೆಯವರು ಪರಿಷತ್ತಿನ ಸಭೆಗೆ ಓರ್ವ ಸಂದರ್ಶಕರ ರೀತಿಯಲ್ಲಿ ಲಜಪತರನ್ನು ಕರೆದೊಯ್ದರು. ಆ ದಿನ ಪರಿಷತ್ತು ಕರ್ಜನನ ವಿಶ್ವವಿದ್ಯಾಲಯ ಕಾಯ್ದೆಯ ಸಾಧಕ- ಬಾಧಕಗಳ ಬಗ್ಗೆ ಚರ್ಚೆ ನಡೆಸುತ್ತಿತ್ತು. ಗೋಖಲೆ ಅಧಿಕಾರೇತರ ಸದಸ್ಯರಾಗಿ ಮಾತನಾಡಿ ಕಾಯ್ದೆಯನ್ನು ಕಟುವಾಗಿ ವಿರೋಧಿಸಿದ್ದನ್ನು ಲಜಪತ್‌ರಾಯ್ ಪ್ರತ್ಯಕ್ಷವಾಗಿ ಕೇಳಿದರು. ಇತರರ ಭಾಷಣಗಳನ್ನು ಆಲಿಸಿದರು. ಅದನ್ನು ಅವರು ತಮ್ಮ ಜೀವನ ಚರಿತ್ರೆಯಲ್ಲಿ -''ಇಡೀ ಕಲಾಪದ ಆ ಅಣಕು ನನ್ನ ಮನಸ್ಸಿನಲ್ಲಿ ಅಚ್ಚಳಿಯದ ಪರಿಣಾಮ ಬೀರಿದೆ!'' ಎಂದಿದ್ದಾರೆ.

ಲಾರ್ಡ್ ಕರ್ಜನನ ನೀತಿ ನಿರೂಪಗಳಿಂದ ಬೇಸತ್ತ ಕಾಂಗ್ರೆಸ್ ಮುಖಂಡರು ವೈಸರಾಯ್ ಬಳಿಗೆ ನಿಯೋಗವೊಂದನ್ನು ಕೊಂಡೊಯ್ಯಲು ನಿರ್ಧರಿಸಿದರು. ಆದರೆ ಲಾರ್ಡ್ ಕರ್ಜನ್ ಕಾಂಗ್ರೆಸ್ ಅಧ್ಯಕ್ಷರಿಗೆ ಸಂದರ್ಶನ ಕೊಡಲು ನಿರಾಕರಿಸಿದ. ಹಾಗೆ ಮಾಡುವ ಮೂಲಕ ''ಕಾಂಗ್ರೆಸ್ಸಿನ ಮುಖದ ಮೇಲೆ ಅಪ್ಪಳಿಸಿದ.'' ಕಾಂಗ್ರೆಸ್ ನಾಯಕರಿಗೆ, ''ಅಪಮಾನವಾಯಿತು. ಹತಾಶರಾದರು. ವ್ಯಗ್ರರಾದರು... ಅನ್ಯ ಮಾರ್ಗವಿಲ್ಲದೆ ಬ್ರಿಟಿಷ್ ಜನತೆಯ ಮುಂದೆ ವಿಷಯ ಪ್ರಸ್ತಾಪಿಸಲು ನಿರ್ಧರಿಸಿದರು.'' ಬ್ರಿಟಿಷ್ ಸಾರ್ವಜನಿಕರ ಮುಂದೆ ಭಾರತದ ನೋವು, ನಂಜುಗಳನ್ನು ಪ್ರಸ್ತಾಪಿಸಲು ಬ್ರಿಟನ್‌ಗೆ ಕಾಂಗ್ರೆಸ್ ನಿಯೋಗವೊಂದನ್ನು ಕಳುಹಿಸಲು ಮುಂಬಯಿ ಅಧಿವೇಶನ ನಿರ್ಧರಿಸಿತು. ಇಂಗ್ಲೆಂಡ್‌ನಲ್ಲಿ ಚುನಾವಣೆಗಳು ನಡೆಯುವ ಸಮಯದಲ್ಲಿ ನಿಯೋಗ ಅಲ್ಲಿಗೆ ಹೋಗಬೇಕೆಂದು ನಿರ್ಧರಿಸಲಾಯಿತು. ಇಂಗ್ಲೆಂಡಿಗೆ ಕಳುಹಿಸಲು ಗೊತ್ತುಪಡಿಸಿದ ನಿಯೋಗದಲ್ಲಿ ಲಜಪತ್‌ರಾಯ್ ಇರಬೇಕೆಂದು ಗೋಖಲೆ ಸಲಹೆ ಮಾಡಿದ್ದರು. ಅದನ್ನು ಲಜಪತರು ಒಪ್ಪಿಕೊಂಡಿದ್ದರು. ತಾವು ಪಾಲ್ಗೊಳ್ಳುವುದರಿಂದ ನಿಯೋಗಕ್ಕೆ ಉಪಯೋಗವಾಗಬಹುದು. ವಿದೇಶದ ಅನುಭವ ತಮಗೂ ಅನುಕೂಲ ಆಗಬಹುದು ಎಂದು ಭಾವಿಸಿ ಲಜಪತರು ಒಪ್ಪಿಗೆ ಕೊಟ್ಟಿದ್ದರು. ಲಜಪತರು ಗೋಖಲೆಯವರನ್ನು ಕಂಡ ಆ ಮೊದಲ ಭೇಟಿ

ಮುಂದೆ ಮೌಲ್ಯಿಕ ಗೆಳೆತನವಾಗಿ ಮಾರ್ಪಟ್ಟಿತು. ದಿನ ಕಳೆದಂತೆ ಆ ಸ್ನೇಹ ಪರಸ್ಪರ ಮನವರಿಕೆಯ ಗಾಢವಾದ ಬಾಂಧವ್ಯವಾಯಿತು. ಲಜಪತರು ಮಾಡಿದ ಬಲಿದಾನವ ಸ್ಫೂರ್ತಿ ಆ ಮೈತ್ರಿಯ ಕೊಡುಗೆ. ಅಷ್ಟಾದರೂ ಇಬ್ಬರು ನಾಯಕರ ರಾಜಕೀಯ ದೃಷ್ಟಿಕೋನ ಒಂದೇ ರೀತಿಯದಾಗಿರಲಿಲ್ಲ. ಭಿನ್ನಾಭಿಪ್ರಾಯಗಳು ಗಹನವಾಗಿದ್ದು ಉಂಟು. ಅಂದ ಮಾತ್ರಕ್ಕೆ ಸ್ನೇಹದ ಸಂಘರ್ಷ ಆದಾಗಲಿಲ್ಲ.

ಗೋಖಲೆಯವರ ಮೂಲಕ ಲಜಪತರಿಗೆ ಕಲ್ಕತ್ತಾದಲ್ಲಿ ಕೆಲವು ಪ್ರಮುಖ ನಾಯಕರ ಭೇಟಿ ಆಯಿತು. ಆ ಪೈಕಿ ಭಗಿನಿ ನಿವೇದಿತಾರ ಪರಿಚಯ ಲಜಪತರ ಬದುಕಿನಲ್ಲೊಂದು ಮಹತ್ವದ ಘಟ್ಟ. ಈ ಮೊದಲೇ ಅವರು ಭಗಿನಿ ನಿವೇದಿತಾರ ಅನೇಕ ಕೃತಿಗಳನ್ನು ಓದಿ ಮಾನಸಿಕವಾಗಿ ಆಕೆಯನ್ನು ಮೆಚ್ಚಿಕೊಂಡಿದ್ದರು. ಅದರಲ್ಲೂ ಭಗಿನಿ ನಿವೇದಿತಾ ಬರೆದ 'ಆಕ್ರಮಣಕಾರಿ ಹಿಂದೂವಾದ'ದ ಕೃತಿಯು ಲಜಪತರ ಮೇಲೆ ಹೆಚ್ಚು ಪರಿಣಾಮ ಬೀರಿತ್ತು. ಅದೇ ಧಾಟಿಯ ಇತರ ಪುಸ್ತಕಗಳು ಅವರನ್ನು ಬಹುವಾಗಿ ಆಕರ್ಷಿಸಿದ್ದವು.

ಆರ್ಯ ಸಮಾಜದ 'ಆಕ್ರಮಣಕಾರಿ ಹಿಂದೂವಾದ'ಕ್ಕಿಂತ ಅದು ಭಿನ್ನವಾದುದೇನೂ ಆಗಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಸಮಾಜ ಭಾರೀ ಪ್ರಮಾಣದಲ್ಲಿ ಸರಳೀಕೃತವೂ ಆಗಿತ್ತು. ಲಜಪತರ ದೃಷ್ಟಿಯಲ್ಲಿ ಹಿಂದೂವಾದದ ವಿಶ್ಲೇಷಣೆ ಎಂದರೆ ಹಿಂದೂತನದ ಪ್ರೌಢಿಮೆಯನ್ನು ಮೆರೆಸುವುದು ಎಂದರ್ಥ. ತೀರಾ ಸಂಕುಚಿತ ಧೋರಣೆಯಲ್ಲಿ ಹಿಂದೂವಾದವನ್ನು ಪರಿಗಣಿಸುವುದಾಗಿರಲಿಲ್ಲ. ವಸ್ತುಶಃ ಜನತೆಯ ಜೀವನ ಸರ್ವ ವಿಧದಲ್ಲೂ ಸರಳೀಕೃತವಾಗಿರಬೇಕು. ಜನತೆ ಸ್ವತಂತ್ರರಾಗಿರಬೇಕು. ವಿಶೇಷವಾಗಿ ರಾಜಕೀಯ ಸ್ವಾತಂತ್ರ್ಯ ಅವರಿಗಿರಬೇಕು ಎಂದು ಲಜಪತರು ಕನಸು ಕಂಡಿದ್ದರು. ತಮ್ಮ ತಂದೆ ವ್ಯಕ್ತಿಗತವಾಗಿ ಮಾಡಿಕೊಂಡಿದ್ದ ರೀತಿಯಲ್ಲಿ ಅವರದು ವೇದಾಂತವಾದವಾಗಿರಲಿಲ್ಲ. ಆದರೂ ತತ್ವಶಾಸ್ತ್ರದಲ್ಲಿದ್ದ ಸೌಂದರ್ಯೋಪಾಸನೆಯ ಅಂತರ್ಗತವನ್ನು ಮನನ ಮಾಡಿಕೊಳ್ಳುವಂತಹ ಸಂಸ್ಕೃತಿ ಮತ್ತು ಅರಿವು ಅವರಲ್ಲಿ ಪ್ರೌಢವಾಗಿತ್ತು. ಭಗಿನಿ ನಿವೇದಿತಾ ಸಹ ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಕಾರ್ಯಶೀಲರಾಗಿದ್ದವರು.

ಲಜಪತರ ಕಾರ್ಯಕ್ಷೇತ್ರ ಹೆಚ್ಚು ರಾಜಕೀಯ ಪೂರಕವಾದದ್ದಾಗಿತ್ತು. ಆದರೂ ಇಬ್ಬರು ಒಬ್ಬರನ್ನೊಬ್ಬರು ಅರಿತುಕೊಂಡರು. ಆ ಭೇಟಿ ಅನುಪಮವಾದ ಸ್ನೇಹದ ಬೆಸುಗೆಯಾಗಿ ಪರಿವರ್ತನೆಗೊಂಡಿತು. ಇಬ್ಬರೂ ರಾಜಕೀಯ ಚಿಂತನೆ ನಡೆಸುತ್ತಿದ್ದರು ಆ ಚಿಂತನೆಯಲ್ಲಿ ಯಾವುದೇ ಪೂರ್ವಾಗ್ರಹವಾಗಲಿ, ಪಕ್ಷಪಾತವಾಗಲಿ ಇರುತ್ತಿರಲಿಲ್ಲ. ಆಗ 'ದಿ ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕರಾಗಿದ್ದ ಎಸ್.ಕೆ. ರ್‍ಯಾಡ್‌ಕ್ಲಿಫ್ ಅವರನ್ನು ಭಗಿನಿ ನಿವೇದಿತಾ ಲಜಪತರಿಗೆ ಭೇಟಿ ಮಾಡಿಸಿದರು. ತಮ್ಮ ಜೀವನ ಚರಿತ್ರೆಯಲ್ಲಿ ಲಜಪತರು ಆ ದಿನಗಳನ್ನು ಹೀಗೆ ವರ್ಣಿಸಿದ್ದಾರೆ. "ಅವರ ಬಾಯಿಯಿಂದ ಆಗ ನಾನು ಕೇಳಿದ ವಿಷಯಗಳನ್ನು ನಾನು ಎಂದಿಗೂ ಮರೆಯಲಾರೆ. ಆ ಸಾಧ್ವಿ ಬ್ರಿಟಿಷ್ ರಾಜ್‌ನ್ನು ಬಹುವಾಗಿ ದ್ವೇಷಿಸುತ್ತಿದ್ದರು. ಭಾರತೀಯರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು.

ರಾಜಕೀಯವಾಗಿ ಮರಿಜ್ಜಿನಿ ಪ್ರೇರಿತ ನೀತಿ ನಿರ್ದೇಶನಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದರು. ಒಟ್ಟಿನಲ್ಲಿ ಹೇಳುವುದಾದರೆ ನಾನು ನಂಬಿದ ಧ್ಯೇಯೋದ್ದೇಶ ಮತ್ತು ಕಟ್ಟುಪಾಡುಗಳಿಗೆ ಅವರ ಭೇಟಿ ಇನ್ನಷ್ಟು ಇಂಬು ಕೊಟ್ಟಿತು. ನನ್ನಲ್ಲಿ ಅಪಾರ ಹರ್ಷ ಮೂಡಿಸಿತು.''

ಭಗಿನಿ ನಿವೇದಿತಾರೊಂದಿಗಿನ ಭೇಟಿ ಮತ್ತು ಅವರೊಂದಿಗಿನ ಮಾತುಕತೆ ಲಜಪತರ ಬದುಕಿನಲ್ಲಿ ಅವಿಸ್ಮರಣೀಯ ಸ್ಮರಣೆಯಾಗಿ ಉಳಿಯಿತು. ಮುಂದೆ ಪದೇ ಪದೇ ಅವರು ಅದನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಹಾಗೆ ನೆನಪು ಮಾಡಿಕೊಳ್ಳುವಾಗಲೆಲ್ಲಾ ತುಂಬಾ ಹರ್ಷಚಿತ್ತರಾಗುತ್ತಿದ್ದರು. ಘಮ ಘಮಿಸುವ ಲ್ಯಾವೆಂಡರ್ ಪರಿಮಳದಂತೆ ಇರುತ್ತಿತ್ತು ಅವರಲ್ಲಿ ಆ ಸ್ಮರಣೆ.

* * *

ಅಧ್ಯಾಯ-20

ಗೋಖಲೆಯವರೊಂದಿಗೆ ಇಂಗ್ಲೆಂಡಿನಲ್ಲಿ

ಬ್ರಿಟನ್‌ನಲ್ಲಿ ಮಹಾ ಚುನಾವಣೆಗಳು ವಿಳಂಬಗೊಂಡವು. ಬ್ರಿಟಿಷ್ ಸಂಸತ್ತಿನ ಪರಮೋಚ್ಚ ತೀರ್ಪುಗಾರರಾದ ಬ್ರಿಟಿಷ್ ಮತದಾರರು ಚುನಾವಣೆಯ ಮುಂದೂಡಿಕೆಯ ಹಿನ್ನಲೆಯಲ್ಲಿ ಮುಂದಿನ ಕೆಲವು ತಿಂಗಳುಗಳ ಕಾಲ ಭಾರತೀಯ ನಿಯೋಗದ ಅಹವಾಲುಗಳನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಇದನ್ನು ಅರಿತ ಗೋಖಲೆ ತಮ್ಮ ಯೋಜನೆ ಬದಲಾಯಿಸಿಕೊಂಡರು. ಆ ದಿನ ಮೇ 10, 1905. ಲಜಪತ್‌ರಾಯ್ ಲಾಹೋರಿನಿಂದ ಹೊರಡಲು ಸನ್ನದ್ಧರಾಗಿದ್ದರು. ಆಗ ಗೋಖಲೆ ಅವರಿಂದ ತಂತಿಯೊಂದು ಬಂದಿತು. ಜುಲೈ ತಿಂಗಳವರೆಗೆ ಭೇಟಿಯನ್ನು ಮುಂದೂಡುವಂತೆ ಭಾರತೀಯ ಬ್ರಿಟಿಷ್ ಕಾಂಗ್ರೆಸ್ಸಿನ ಬ್ರಿಟಿಷ್ ಸಮಿತಿಯ ಮುಖ್ಯಸ್ಥ ಸರ್ ವಿಲಿಯಂ ವೆಡರ್ಬರ್ನ್ ಅವರಿಂದ ಸಲಹೆ ಬಂದಿರುವುದಾಗಿ ತಂತಿ ಸಂದೇಶದಲ್ಲಿ ತಿಳಿಸಲಾಗಿತ್ತು. ಲಜಪತರಿಗೆ ಈ ಬೆಳವಣಿಗೆ ತೀರಾ ಕೆಡುಕೆನಿಸಿತು. ಯೂರೋಪಿನ ಭೇಟಿಗಾಗಿ ಅವರು ತಮ್ಮ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದರು. ಲಾಹೋರಿನ ಅವರ ಗೆಳೆಯರು ಅವರಿಗೆ ಭವ್ಯವಾದ ಬೀಳ್ಕೊಡುಗೆಯನ್ನು ನೀಡಿದ್ದರು. ಅದೆಲ್ಲಾ ನಿಷ್ಫಲವೆನಿಸಿತು. ಬ್ರಿಟನ್‌ನಲ್ಲಿ ಮಹಾ ಚುನಾವಣೆಗಳು ನಡೆಯುತ್ತವೆಯೋ ಇಲ್ಲವೋ ಅದು ಬೇರೆ ಮಾತು. ತಮ್ಮ ಯೋಜನೆಯನ್ನು ಮಾತ್ರ ತಾವು ಅದಲು-ಬದಲು ಮಾಡುವುದಿಲ್ಲವೆಂದು ಲಜಪತರು ನಿರ್ಧರಿಸಿದರು.

ನಿಜಾರ್ಥದಲ್ಲಿ ವೆಡರ್ಬರ್ನ್ ಕೇವಲ ಚುನಾವಣೆ ಮುಂದೂಡಿಕೆಯನ್ನಷ್ಟೇ ತಿಳಿಸಿದ್ದರು. ಆದರೆ ಮುಂಬಯಿಯಲ್ಲಿ ಅದನ್ನು ವಿಪರೀತವಾಗಿ ಅರ್ಥ ಮಾಡಿಕೊಳ್ಳಲಾಗಿತ್ತು. ಅದರ ಫಲವಾಗಿ ಭಾರತೀಯ ನಿಯೋಗದ ಭೇಟಿ ಸಮಯದಲ್ಲಿ ಬದಲಾವಣೆ ಆಗಿದೆ ಎಂದು ಭಾವಿಸಲಾಯಿತು ..!

ಲಜಪತರು ತಮ್ಮ ಕಾರ್ಯಕ್ರಮಕ್ಕೆ ಅಂಟಿಕೊಂಡರು. ಮುಂಬಯಿಗೆ ಹೋಗುವ ಮಾರ್ಗದಲ್ಲಿ ಅವರು ಪುಣೆಯಲ್ಲಿ ತಂಗಬೇಕಾಯಿತು. ಆಗ ಅವರು ಗೋಖಲೆ ಮತ್ತು ತಿಲಕರ ಅತಿಥಿಯಾಗಬೇಕಾಯಿತು. ಅದು ಕೇವಲ ಒಂದು ದಿನದ ಬೆಳವಣಿಗೆ. ಮರುದಿನ ಲಜಪತರು ಹಡಗಿನ ಮೂಲಕ ಪ್ರಯಾಣ ಬೆಳೆಸಿದರು.

ಇತ್ತ 'ದಿ ಪಂಜಾಬಿ' ಸಾಪ್ತಾಹಿಕಕ್ಕೆ ಅಂಕಿತವಿಲ್ಲದ ಲೇಖನ ಮತ್ತು ಅಗ್ರಲೇಖನಗಳನ್ನು ಮುಂದುವರೆಸಲು ಲಜಪತರಿಗೆ ಸಾಧ್ಯವಾಗಲಿಲ್ಲ. ಹಾಗೆಂದ ಮಾತ್ರಕ್ಕೆ ಅವರು ಲೇಖನಗಳನ್ನು ಬರೆಯುತ್ತಿರಲಿಲ್ಲವೆಂದು ಅರ್ಥವಲ್ಲ. ಬ್ರಿಟನ್ ತಲುಪುತ್ತಿದ್ದಂತೆಯೇ ಅವರು ಅಲ್ಲಿನ ಅವಕಾಶದ ಲಾಭ ಪಡೆದುಕೊಂಡರು. ತಮ್ಮ ಪ್ರವಾಸ ಮತ್ತು

ಚಟುವಟಿಕೆಗಳ ಬಗ್ಗೆ ಲೇಖನಗಳನ್ನು ಬರೆದು ಕಳುಹಿಸತೊಡಗಿದರು. ಆ ಪ್ರವಾಸಿ ಲೇಖನಗಳಲ್ಲಿ ಪೋರ್ಟ್‌ಸೆಡ್. ನೇಪಲ್ಸ್. ರೋಂ ಮತ್ತು ಮಿಲಾನ್‌ಗಳಂತಹ ಐತಿಹಾಸಿಕ ಸ್ಥಳಗಳ ವಿಸ್ತೃತ ವಿವರಣೆಗಳಿರುತ್ತಿದ್ದವು. ದಾರಿಗುಂಟ ತಾವು ಕಂಡಿದ್ದೆಲ್ಲವನ್ನು ಅವರು ಸುಂದರವಾಗಿ ಚಿತ್ರಿಸಿ ಓದುಗರ ಕುತೂಹಲ ಕೆರಳಿಸುತ್ತಿದ್ದರು. 1905, ಜೂನ್ 10ರಂದು ಅವರು ಲಂಡನ್ ತಲುಪಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪರವಾಗಿ ಬ್ರಿಟನ್‌ನಲ್ಲಿ ತಕ್ಕಮಟ್ಟಿಗೆ ಪ್ರಚಾರ ಕಾರ್ಯ ನಡೆದಿತ್ತು. ಆ ವೇಳೆಗಾಗಲೇ 20 ವರ್ಷಗಳು ತುಂಬಿದ್ದ ಕಾಂಗ್ರೆಸ್‌ನ ಬಗ್ಗೆ ವೆಡರ್ಬರ್ನ್ ಅಧ್ಯಕ್ಷತೆಯಲ್ಲಿ ಲಂಡನ್ ಭಾರತೀಯ ಸಮಿತಿಯು ಈ ಪ್ರಚಾರದ ಅಧ್ವರ್ಯುವಾಗಿತ್ತು. 'ಇಂಡಿಯಾ' ಶೀರ್ಷಿಕೆಯಲ್ಲಿ ಭಾರತೀಯ ಚಟುವಟಿಕೆಗಳನ್ನು ಬಿತ್ತರಿಸುವ ಕಿರು ಮಾಸಿಕವೊಂದನ್ನು ಸಮಿತಿ ಪ್ರಕಟಿಸುತ್ತಿತ್ತು. ಕಾಂಗ್ರೆಸ್ ಸಂಘಟನೆಯು ಈ ನಿಯತಕಾಲಿಕೆಯ ಪ್ರಕಟಣೆಗಾಗಿ ವಾರ್ಷಿಕ ವಂತಿಕೆ ನೀಡುತ್ತಿತ್ತು. ದಾದಾ ಭಾಯಿ ನವರೋಜಿ ಅವರು ತಮ್ಮ ಜೀವಿತದ ಬಹುಕಾಲವನ್ನು ಇಂಗ್ಲಂಡಿನಲ್ಲಿಯೇ ಕಳೆಯುತ್ತಿದ್ದರು. ಅವರು ವಾಸಿಸುತ್ತಿದ್ದದ್ದು ಸೌತ್ ಕೆನ್ಸಿಂಗ್‌ಟನ್‌ನಲ್ಲಿ. ಭಾರತದ ಹಿತರಕ್ಷಣೆಯ ಉದ್ದೇಶಗಳಿಗಾಗಿ ಹೆಚ್ಚು ಸಮಯವನ್ನು ಅವರು ಪ್ರಚಾರ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದರು. 1886 ಮತ್ತು 1893ರ ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷತೆಯನ್ನು ಅವರು ಆ ವೇಳೆಗಾಗಲೇ ವಹಿಸಿದ್ದರು. ದಾದಾ ಭಾಯಿ ನವರೋಜಿ ಅವರಿಗೆ ಇಂಗ್ಲಿಷ್‌ಮನ್ನನ 'Instinctive Love of justice And fair play'ಯಲ್ಲಿ ಅದಮ್ಯ ನಂಬಿಕೆ ಇತ್ತು. ಭಾರತದ ಪರವಾಗಿ 'ಹುತ್ಪೂರ್ವಕ ಪ್ರೇಮಿ'ಯಾಗಿ ಅವರು ತಮ್ಮ ಕಾರ್ಯವನ್ನು ನಡೆಸುತ್ತಿದ್ದರು. ಇಂಗ್ಲೆಂಡ್‌ನಲ್ಲಿ ದಾದಾ ಭಾಯಿ ನವರೋಜಿ ಮತ್ತು ವೆಡನ್ಬರ್ನ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿಕೃತ ವಕ್ತಾರರಾಗಿದ್ದರು.

ಲಂಡನ್‌ನ ಭಾರತೀಯ ಸಮಿತಿಯಲ್ಲಿ ಹಿರಿಯ ಕಾಂಗ್ರೆಸ್ಸಿಗರ ರಾಜಕೀಯ ನಡವಳಿಕೆಗಳು ಅಲ್ಲಿನ ಯುವ ಕಾಂಗ್ರೆಸ್ಸಿಗರನ್ನು ಅತೃಪ್ತಿಗೊಳಿಸಿತ್ತು. ಯುವ ಕಾಂಗ್ರೆಸ್ ಬಣದಲ್ಲಿ ಸ್ಫೂರ್ತಿಯ ಸೆಲೆಯೂ ನಾಯಕ ನೆಲೆಗಟ್ಟು ಹೊಂದಿದ್ದವರು ಶ್ಯಾಮ್‌ಜಿ ಕೃಷ್ಣವರ್ಮ. ಅವರು ಸ್ವಾಮಿ ದಯಾನಂದರ ಶಿಷ್ಯ ವರ್ಗದಲ್ಲಿ ಒಬ್ಬರಾಗಿದ್ದರು. ದಯಾನಂದರ ಶಿಫಾರಸಿನ ಮೇರೆಗೆ ಹೆಸರಾಂತ ಸಂಸ್ಕೃತ ತಜ್ಞ ಪ್ರೊ. ಮೋನಿಯರ್ ವಿಲಿಯಮ್ಸ್, ವರ್ಮ ಅವರನ್ನು ತಮ್ಮ ಸಂಶೋಧನಾ ಕಾರ್ಯಗಳ ಸಹಾಯಕರಾಗಿ ಇಂಗ್ಲೆಂಡಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ವಕೀಲ ಪದವಿಯನ್ನು ಗಳಿಸಿದ ಅವರು ಭಾರತಕ್ಕೆ ಮರಳಿ ವೃತ್ತಿಪರರಾಗಲು ಬಯಸಿ, ಹತಾಶರಾಗಿ ಮತ್ತೆ ಇಂಗ್ಲೆಂಡಿಗೆ ಮರಳಿದ್ದವರು. ಸ್ವತಂತ್ರ ಪ್ರೇಮಿಗೆ ಭಾರತದಲ್ಲಿ ಉಸಿರಾಡುವ ಪರಿಸ್ಥಿತಿಯಿಲ್ಲವೆಂದು ಅವರು ಮನಗಂಡಿದ್ದರು. ಲಂಡನ್‌ನಲ್ಲೇ ಅವರು ತಮ್ಮ ವಾಸ್ತವ್ಯ ಕಂಡುಕೊಂಡಂತೆ ಕಾಣ ಬರುತ್ತಿದ್ದರು.

ಅವರ ಬರಹಗಳಿಂದ ಆಳವಾಗಿ ಪ್ರಭಾವಿತರಾಗಿದ್ದ ವರ್ಮ 'ಇಂಡಿಯನ್ ಸೋಷಿಯಲಾಜಿಸ್ಟ್' ನಿಯತಕಾಲಿಕವೊಂದನ್ನು ಇಂಗ್ಲೆಂಡ್‌ನಲ್ಲಿ ಆರಂಭಿಸಿದ್ದರು. ಅದು

ಸಮಾಜಶಾಸ್ತ್ರ ಹರ್‌ಬರ್ಟ್ ಸ್ಪೆನ್ಸರ್ ಅವರ ಪ್ರಣೀತಿ. ತಮ್ಮ ಅಚ್ಚುಮೆಚ್ಚಿನ ಆ ಲೇಖಕರ ಅಚ್ಚುಮೆಚ್ಚಿನದ್ದೇ ತಮ್ಮ ನಿಯತಕಾಲಿಕೆಗೆ ಶೀರ್ಷಿಕೆಯನ್ನಾಗಿ ಆರಿಸಿಕೊಂಡಿದ್ದರು. ಸ್ಪೆನ್ಸರ್ ಪ್ರಣೀತ ಸಾಮಾಜಿಕ ಚಿಂತನೆಯನ್ನು ಅವರು ತಮ್ಮ ನಿಯತಕಾಲಿಕೆ ಮೂಲಕ ಜಾಹೀರು ಪಡಿಸುತ್ತಿದ್ದರು. ಆ ಪತ್ರಿಕೆಯು ಗೋಖಲೆ, ದಾದಾ ಭಾಯಿ ನವರೋಜಿ ಹಾಗೂ ಕಾಂಗ್ರೆಸ್ಸಿನ ಬ್ರಿಟಿಷ್ ಗೆಳೆಯರ ಮೇಲೆ ಆಗಿಂದಾಗ್ಗೆ ಉಗ್ರ ದಾಳಿ ನಡೆಸುತ್ತಿತ್ತು. ಅದು ಒಂದು ರೀತಿಯಲ್ಲಿ ಕಾಂಗ್ರೆಸ್ಸಿನ 'ಇಂಡಿಯಾ' ನಿಯತಕಾಲಿಕೆಗೆ ಎದುರಾಳಿಯಾಗಿತ್ತು. ಶ್ಯಾಮ್‌ಜಿ ಕೃಷ್ಣವರ್ಮ ಧೃಡ ನಿಶ್ಚಯದ ವ್ಯಕ್ತಿ. ರಾಜಿಗೆ ಒಡಂಬಡುತ್ತಿದ್ದವರಲ್ಲ. ವಿದೇಶಗಳಲ್ಲಿ ಭಾರತೀಯ ಕ್ರಾಂತಿಕಾರಿ ಚಟುವಟಿಕೆಗಳನ್ನು ಹುಟ್ಟಿ ಹಾಕಿ ಸಂಘಟಿಸಿದವರು ಅವರೇ. ಅವರ ದೀರ್ಘ ಕಾಲದ ಗೆಳೆಯರನ್ನಾಗಲೀ, ನಿಷ್ಠಾವಂತ ಬೆಂಬಲಿಗರನ್ನಾಗಲಿ ರೂಢಿಸಿಕೊಳ್ಳಲಿಲ್ಲ. ಅವರ ಹಟಮಾರಿತನ ಧೋರಣೆಯೇ ಅದಕ್ಕೆ ಕಾರಣವಾಗಿತ್ತು. ಜೊತೆಗೆ ಅಷ್ಟೇ ಜಿಪುಣ ಸ್ವಭಾವ. ಹಣ ಗಳಿಕೆಯಲ್ಲಿ ಸದಾ ಮುಂದು. ಅದರಲ್ಲಿ ಕಿಂಚಿತ್ತನ್ನು ವಿನಿಯೋಗಿಸಲು ಇಷ್ಟಪಡುತ್ತಿರಲಿಲ್ಲ.

ಲಜಪತ್‌ರಾಯ್ ತಮ್ಮ ಜೀವನ ಚರಿತ್ರೆಯಲ್ಲಿ ಬರೆಯುತ್ತಾರೆ "ಹರ್‌ದಯಾಳ್ ಮತ್ತು ಸಾವರ್ಕರ್ ಅವರ 'ಶಿಷ್ಯ'ರೆನಿಸಿಕೊಂಡರು. ವರ್ಮ ಅವರ ಸಿದ್ಧಾಂತ ಅವರನ್ನು ಬಹಳ ಪ್ರಭಾವಿತರನ್ನಾಗಿ ಮಾಡಿತು." ಅವರಿಬ್ಬರು ಕ್ರಾಂತಿಕಾರಿ ಚಳವಳಿಯನ್ನು ದಿಟ್ಟವಾಗಿ ಕೈಗೊಂಡವರು. ವರ್ಮ ಅವರ ಪ್ರಭಾವ ಅವರ ಕಾರ್ಯದಲ್ಲಿ ಎದ್ದು ಕಂಡಿತ್ತು. ಆದರೆ ಅವರಿಬ್ಬರು ಎಂದೂ ವರ್ಮ ಅವರ ಕಟ್ಟಾ ಶಿಷ್ಯರೆನಿಸಿಕೊಳ್ಳಲಿಲ್ಲ.

1905ರ ಸುಮಾರಿನಲ್ಲಿ ಶ್ಯಾಮ್‌ಜಿ ಕೃಷ್ಣವರ್ಮ ತಮ್ಮ 'ಇಂಡಿಯನ್ ಸೋಷಿಯಲಾಜಿಸ್ಟ್'ನ್ನು ತುಂಬಾ ಪ್ರಭಾವಿಯನ್ನಾಗಿ ಮಾಡಿದ್ದರು. ಭಾರತೀಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಅವರು ಇಂಡಿಯಾ ಹೌಸ್ ಎಂಬ ಹಾಸ್ಟೆಲ್ ನಡೆಸುತ್ತಿದ್ದರು. ಅವರು ಲಜಪತ್‌ರಾಯ್ ಅವರನ್ನು ತಮ್ಮ ಹಾಸ್ಟೆಲ್‌ಗೆ ಬರಮಾಡಿಕೊಂಡರು. ಅವರೊಂದಿಗೆ ವಿಚಾರ ವಿನಿಮಯ ನಡೆಸಿದರು. ಅಲ್ಲಿಯೇ ಉಳಿಯಲು ನಿಮಂತ್ರಣವಿತ್ತರು. ಲಜಪತರು ಕೆಲವು ದಿನಗಳ ನಂತರ ಆ ಅವಕಾಶವನ್ನು ಬಳಸಿಕೊಂಡರು.

ಲಂಡನ್‌ನ ಹೈಗೇಟ್‌ನಲ್ಲಿ ಇಂಡಿಯಾ ಹೌಸ್ ವಿಧ್ಯುಕ್ತವಾಗಿ ಆರಂಭಗೊಂಡಿತು ಲಜಪತರು ಇಂಗ್ಲೆಂಡಿಗೆ ಭೇಟಿಕೊಟ್ಟಿದ್ದು ಅದೇ ಸಮಯದಲ್ಲಿ. ಹಾಸ್ಟೆಲ್‌ನ ಉದ್ಘಾಟನಾ ಸಮಾರಂಭದಲ್ಲೂ ಅವರು ಪಾಲ್ಗೊಂಡಿದ್ದರು.

ಲಜಪತರು ಸುಮಾರು ಒಂದು ತಿಂಗಳ ಕಾಲ ಇಂಗ್ಲಿಷ್ ದೇಶಗಳು ಮತ್ತು ಸ್ಕಾಟ್‌ಲ್ಯಾಂಡ್‌ನಲ್ಲಿ ಪ್ರವಾಸ ಮಾಡಿದರು. ತಾವು ಹೊತ್ತು ತಂದ ಉದ್ದೇಶದ ಸಂದೇಶಗಳನ್ನು ಎಲ್ಲಾ ಸಭೆಯಲ್ಲೂ ಬಿತ್ತರಿಸುತ್ತಾ ಬಂದರು. ಆಗಸ್ಟ್ ತಿಂಗಳ ವೇಳೆಗೆ ಪ್ರವಾಸ ಮತ್ತು ಭೇಟಿ ಕಲಾಪಗಳನ್ನು ಮುಗಿಸಿ ಲಂಡನ್‌ಗೆ ಮರಳಿದ ಅವರು ವರ್ಮ ಅವರ ಆಮಂತ್ರಣಕ್ಕೆ ಅನುಗುಣವಾಗಿ ಇಂಡಿಯಾ ಹೌಸ್‌ನಲ್ಲಿ ಬೀಡು ಬಿಟ್ಟರು

ಆದರೆ ಲಜಪತರು ಇಂಡಿಯಾ ಹೌಸ್‌ನಲ್ಲಿ ಉಳಿದುಕೊಂಡಿದ್ದು ಲಂಡನ್ನಿನ ಭಾರತೀಯ ಕಾಂಗ್ರೆಸ್‌ನ ಕೆಲವು ಸದಸ್ಯರ ದೃಷ್ಟಿಯಲ್ಲಿ ಓತವನಿಸಲಿಲ್ಲ. ಒಂದು ದಿನ ಶ್ಯಾಮ್‌ಜಿ ಕೃಷ್ಣವರ್ಮ ಮತ್ತು ಲಜಪತ್‌ರಾಯ್ ಲೇಬರ್ ಅಥವಾ ಸೋಷಿಯಲಿಸ್ಟ್ ಸಭೆಯೊಂದರಲ್ಲಿ ಮಾತನಾಡಬೇಕಾಯಿತು. ಆ ಸಭೆಯನ್ನು ಹಾಲ್‌ಬರ್ನ್ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಭಾಷಣದ ವಿಷಯ 'ಹೋಂರೂಲ್'. ಭಾರತೀಯ ಕಾಂಗ್ರೆಸ್ ಸಮಿತಿಯ ಕೆಲವು ಸದಸ್ಯರಲ್ಲಿ ಅಸಹನೆ ವ್ಯಕ್ತವಾಯಿತು. ಆಗಿನ್ನು ಲಜಪತ್‌ರಾಯ್ ವರ್ಮ ಅವರ ಇಂಡಿಯಾ ಹೌಸ್ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿರಲಿಲ್ಲ. ಆ ಸಭೆಯನ್ನು ಕಾರ್ಮಿಕ ಸಂಘಟನೆಯೊಂದು ಸಂಯೋಜಿಸಿತ್ತು. ಆ ಸಂಘಟನೆಯ ಉಪಾಧ್ಯಕ್ಷರಾಗಿದ್ದ ದಾದಾ ಭಾಯಿ ನವರೋಜಿ ಲಜಪತ್‌ರಾಯ್ ಅವರನ್ನು ಆಹ್ವಾನಿಸಿದ್ದರು.

ಲಜಪತ್‌ರಾಯ್ ಆ ಘಟನೆಯನ್ನು ಹೀಗೆ ತಿಳಿಸಿದ್ದಾರೆ:

''ಆ ವೇದಿಕೆಯಲ್ಲಿ ನಿಂತು ವರ್ಮ ಮತ್ತು ನಾನು 'ಹೋಂರೂಲ್' ಪರವಾಗಿ ಮಾತನಾಡಿದ್ದನ್ನು ತಿಳಿದು ಸರ್ ಹೆನ್ರಿ ಕಾಟನ್ ತೀವ್ರ ಅತೃಪ್ತಿ ವ್ಯಕ್ತಪಡಿಸಿದರು. ಅವರಿಗೆ ಅದು ಸಹ್ಯವಾಗಲಿಲ್ಲ. ಬ್ರಿಟಿಷ್ ಸಮಿತಿ ಮುಂದೆ ಅವರು ನಿರ್ಣಯವೊಂದನ್ನು ಮಂಡಿಸಿ ನಿಯೋಗದ ಪ್ರತಿನಿಧಿಯಾಗಿ ನಾನು ಇಂಗ್ಲೆಂಡಿಗೆ ಬಂದಿದ್ದರಿಂದ ಅಂತಹ ಆಕ್ಷೇಪಾರ್ಹವಾದ ನಡವಳಿಕೆಯಲ್ಲಿ ತೊಡಗಬಾರದೆಂದು ಹೇಳಿದರು.''

ಸರ್ ಹೆನ್ರಿ ಕಾಟನ್‌ರ ಧೋರಣೆ ಏನೇ ಇದ್ದರೂ ಸರ್ ವಿಲಿಯಂ ವೆಡನ್ಬರ್ನ್ ಅದನ್ನು ಬೆಂಬಲಿಸಲಿಲ್ಲ. ಸ್ವತಃ ಲಜಪತ್‌ರಾಯ್ ಸರ್ ಹೆನ್ರಿ ಕಾಟನ್‌ರ ಆಕ್ಷೇಪಕ್ಕೆ ಸೊಪ್ಪು ಹಾಕಲಿಲ್ಲ. ಅವರು ಹೀಗೆ ತಿಳಿಸಿದರು. ''ಕಾಂಗ್ರೆಸ್ ನಿಯೋಗದ ಸದಸ್ಯನಾದ ಮಾತ್ರಕ್ಕೆ ನಾನು ನನ್ನ ಸ್ವಾತಂತ್ರ್ಯವನ್ನು ನೀಗಿಕೊಂಡಿಲ್ಲ. ನನ್ನ ಭಾಷಣದಲ್ಲಿ ಯಾವುದೇ ಕಾಂಗ್ರೆಸ್ ವ್ಯಕ್ತಿ ಆಕ್ಷೇಪ ಎತ್ತುವಂತಹ ಯಾವ ಅಂಶವೂ ಇಲ್ಲ. ಒಂದು ವೇಳೆ ನಿಯೋಗದ ಸದಸ್ಯನಾಗಿ ಈ ದೇಶದಲ್ಲಿ ನನ್ನ ಧೋರಣೆಯನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ನನಗೆ ಇಲ್ಲವಾದರೆ ಆ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧನಾಗಿದ್ದೇನೆ. ಯಾವ ಕಾರಣಕ್ಕೂ ಸ್ವಾತಂತ್ರ್ಯವನ್ನು ನೀಗಿಕೊಳ್ಳಲು ನಾನು ಸಿದ್ಧನಿಲ್ಲ.''

ತಮ್ಮ ಅತೃಪ್ತಿಯನ್ನು ಸರ್ ಹೆನ್ರಿ ಕಾಟನ್ ಇನ್ನೊಂದು ರೀತಿ ಮಾರ್ಪಡಿಸಿ ತೃಪ್ತಿಪಟ್ಟರೇನೋ? ಲಜಪತರ ಭಾಷಣದ ವರದಿ ತಪ್ಪಾಗಿದೆ ಎಂದು ಅವರು ತಿಳಿಸಿದರು. ಅದರೊಂದಿಗೆ ಆ ಪ್ರಕರಣಕ್ಕೆ ಅಲ್ಲಿಗೆ ತೆರೆ ಹಾಕಲಾಯಿತು. ಲಜಪತರು ತಮ್ಮ ಸ್ವಾತಂತ್ರ್ಯವನ್ನು ಅಷ್ಟು ಸುಲಭದಲ್ಲಿ ಬಿಟ್ಟು ಕೊಡುವವರಾಗಿರಲಿಲ್ಲ. ಪೂರ್ಣ ಪ್ರಮಾಣದಲ್ಲಿ ಆ ಶಕ್ತಿಯನ್ನು ಅವರು ಬಳಸಿಕೊಳ್ಳುತ್ತಿದ್ದರು. ಮ್ಯಾಂಚೆಸ್ಟರ್, ಎಡಿನ್‌ಬರ್ಗ್, ಲಿವರ್‌ಪೂಲ್ ಸೇರಿದಂತೆ ಬ್ರಿಟನ್‌ನ ಅನೇಕ ಕಡೆಗಳಲ್ಲಿ ಅವರು ಅನೇಕ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಗೋಖಲೆಯರು ಪಾಲ್ಗೊಂಡಿದ್ದರು. ಒಮ್ಮೊಮ್ಮೆ ಇಬ್ಬರೂ ಒಂದೇ ವೇದಿಕೆಯಲ್ಲಿ ನಿಂತು ಮಾತನಾಡುತ್ತಿದ್ದರು. ಮತ್ತೆ ಕೆಲವೊಮ್ಮೆ ಇಬ್ಬರು ಪ್ರತ್ಯೇಕವಾಗಿ ಪ್ರವಾಸಕೈಗೊಂಡು ಪ್ರತ್ಯೇಕ ಸಭೆಗಳಲ್ಲಿ ಮಾತನಾಡುತ್ತಿದ್ದರು. ಬ್ರಿಟಿಷ್ ಮತ ಪುರುಷರ ಮುಂದೆ ಅವರಿಬ್ಬರು ಭಾರತದ ಪರವಾಗಿ ಮುಟ್ಟಿಸಬೇಕಾದ ಸಂದೇಶದ ಕೈಂಕರ್ಯವನ್ನು

ಸಮರ್ಥವಾಗಿ ನಿರ್ವಹಿಸಿದರು. ತೀರ್ಮಾನವನ್ನು ಮಟ್ಟಾ ಪ್ರಜಾಪ್ರಭುತ್ವವಾದಿ ನಾಡಿನ ಜನತಾ ಜನಾರ್ಧನರಿಗೆ ಬಿಟ್ಟರು.

ಭಾರತ ಮತ್ತು ಬ್ರಿಟಿಷ್ ಪಕ್ಷ ರಾಜಕಾರಣ ಕುರಿತು 'ದಿ ಪಂಜಾಬಿ'ಗೆ ಬರೆದ ಲೇಖನವೊಂದರಲ್ಲಿ ಲಜಪತರು ಲಿಬರಲ್ಸ್ ಮತ್ತು ಟೋರಿಗಳ ನಡುವೆ ಭಿನ್ನವಾದದ್ದೇನೂ ಇಲ್ಲ. ಗಳಿತನ ಲಕ್ಷ್ಯವಿರುವ ಜನರಿಂದ ಕೂಡಿದ ಏಕೈಕ ಪಕ್ಷವೆಂದರೆ ಲೇಬರೈಟ್ಸ್ ಮಾತ್ರ. ಅಲ್ಲಿಯತನಕ ಲೇಬರ್ ಬಣವು ಲಿಬರಲ್ ಪಕ್ಷದ ಒಂದು ಅಂಗವಾಗಿತ್ತು. ಲಜಪತ್‌ರಾಯ್ ಮತ್ತು ವರ್ಮ ಅವರು ಆ ಪೂರ್ವಭಾವಿ ಪಕ್ಷದಲ್ಲಿ ಕೆಲವರ ಸ್ನೇಹ ಸಂಪಾದನೆ ಮಾಡಿಕೊಂಡರು. ಲಜಪತರು ಅಮೋಘವಾಗಿ ಬ್ರಿಟಿಷ್ ಸಮಾಜವಾದಿ ಲೇಖಕ ಎಚ್.ಎನ್. ಹಿಂಡ್‌ಮನ್ ಮತ್ತು ಕೆಲವು ಐರಿಷ್ ಮುಖಂಡರ ಬಗ್ಗೆ ತಮ್ಮ ಜೀವನ ಚರಿತ್ರೆಯಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ.

ಆ ದಿನಗಳಲ್ಲಿ ಬರೋಡಾದ ಗಾಯಕವಾಡರು ಲಂಡನ್‌ನಲ್ಲಿದ್ದರು. ಅವರು ವಾಸ್ತವ್ಯ ಹೂಡಿದ್ದ ಸೆಸಿಲ್‌ನಲ್ಲಿ ಸ್ವಾಗತ ಕೂಟವೊಂದನ್ನು ಅವರು ಏರ್ಪಡಿಸಿದ್ದರು. ಆ ಕೂಟಕ್ಕೆ ಲಜಪತ್ ಮತ್ತು ವರ್ಮರನ್ನು ಅವರು ಆಮಂತ್ರಿಸಿದ್ದರು. ಕೂಟದಲ್ಲಿ ಪಾಲ್ಗೊಂಡವರಲ್ಲಿ ಮೂರನೇ ಎರಡಷ್ಟು ಮಂದಿ ಭಾರತೀಯರೇ ಆಗಿದ್ದರು. ಅವರನ್ನು ಮಹಾರಾಣಿಯವರಿಗೆ ಪರಿಚಯ ಮಾಡಿಕೊಡಲಾಯಿತು. ಸ್ವಾಗತಕೂಟ ಮುಗಿಯುತ್ತಿದ್ದಂತೆಯೇ ಅವಸರ ಅವಸರವಾಗಿ ಹೊರಟು ಬಿಡಬಾರದೆಂದು ಗಾಯಕವಾಡರು ಲಜಪತ್ ಮತ್ತು ವರ್ಮರಿಗೆ ಪಿಸು ಮಾತಿನಲ್ಲಿ ತಿಳಿಸಿದರು. ಇಂಗ್ಲಿಷ್ ಅತಿಥಿಗಳೆಲ್ಲಾ ನಿರ್ಗಮಿಸುವ ತನಕ ಅವರು ಅಲ್ಲಿಯೇ ಉಳಿದರು. ನಂತರ ಮಾತುಕತೆ ನಡೆಯಿತು. ಮಹಾರಾಜರು ಹೃದಯ ಬಿಚ್ಚಿ ಮಾತನಾಡಿದರು. ಲಜಪತರು ಉರ್ದುವಿನ ತಮ್ಮ ಸಾಹಿತ್ಯದಲ್ಲಿ, "ಅವರ ಹೃದಯದಲ್ಲಿ ಕುದಿಯುತ್ತಿದ್ದ ಗುಳ್ಳೆಗಳು ಸಿಡಿದವು" ಎಂದು ಬರೆದಿಟ್ಟಿದ್ದಾರೆ.

ಭಾರತಕ್ಕೆ ಮರಳುವ ಮುನ್ನ ಲಜಪತರು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ನೀಡಿದರು. ಅವರ ಜೊತೆಯಲ್ಲಿ ದೇವನ್ ಬದರಿನಾಥ್ ಇದ್ದರು. ಪಂಜಾಬಿನ ನೇತಾರರಲ್ಲಿ ಅಗ್ರಮಾನ್ಯರಾಗಿದ್ದವರು ಅವರು. ಪ್ರಗತಿಪರ ದೃಷ್ಟಿಕೋನ ಹೊಂದಿದ್ದ ಅವರು ಆ ಕಾಲದ ಸ್ಫೂರ್ತಿಶೀಲ ಯುವಕರು ಎನಿಸಿದ್ದರು.

ಲಜಪತರು ಅಕ್ಟೋಬರ್ ವೇಳೆಗೆ ಮತ್ತೆ ಲಂಡನ್‌ಗೆ ಮರಳಿದರು. ಬ್ರಿಟನ್‌ನಲ್ಲಿ ಲಜಪತರ ಇನ್ನೊಂದು ಸುತ್ತು ಪ್ರವಾಸ ಮತ್ತು ಭಾಷಣಕ್ಕಾಗಿ ಸರ್ ವಿಲಿಯಂ ವೆಡರ್ಬರ್ನ್ ಕಾರ್ಯಕ್ರಮ ನಿರೂಪಿಸಿದರು. ಅವರು ಮತ್ತು ಗೋಖಲೆ ಭಾರೀ ಸಂಖ್ಯೆಯ ಸಭೆಗಳಲ್ಲಿ ಪಾಲ್ಗೊಂಡರು. ಆ ಪೈಕಿ ಹೆಚ್ಚಿನ ಸಭೆಗಳು ಲಜಪತರದೇ ಆಗಿದ್ದವು. ಅವುಗಳನ್ನು ಲೇಬರ್ ಪಕ್ಷದ ಆಶ್ರಯದಲ್ಲಿ ಸಂಯೋಜಿಸಲಾಗಿತ್ತು.

ನಿಯೋಗದ ಸದಸ್ಯರಾಗಿ ಲಜಪತರನ್ನು ಇಂಗ್ಲೆಂಡಿಗೆ ಕಳುಹಿಸಲು ಗೋಖಲೆಯವರು ಮಾಡಿದ ಆಯ್ಕೆಯನ್ನು ಭಾರತೀಯ ಸಂಘದ ಪಂಜಾಬ್ ಶಾಖೆ

ಹಿಂದು-ಮುಂದು ನೋಡದೆ ಮಾನ್ಯ ಮಾಡಿತ್ತು. ಅದಕ್ಕನುಗುಣವಾಗಿ ಅದು ತಮ್ಮ ಪ್ರತಿನಿಧಿಯ ಖರ್ಚು ವೆಚ್ಚಕ್ಕಾಗಿ ಹಣ ಸಂಗ್ರಹ ಮನವಿಯೊಂದನ್ನು ಮಾಡಿಕೊಂಡಿತ್ತು. ಮೂರು ಸಾವಿರ ರೂಪಾಯಿಗಳಷ್ಟು ಮೊತ್ತವನ್ನು ಸಂಗ್ರಹಿಸಿಕೊಡಲಾಗಿತ್ತು. ಲಜಪತರು ಲಾಹೋರಿಗೆ ಬಂದ ಮೇಲೆ ಈ ಇಡೀ ಮೊತ್ತವನ್ನು ಖರ್ಚಾಗದೆ ಹಾಗೆ ಉಳಿದಿದೆ ಎಂದು ತಿಳಿಸಿದರು. ಅದನ್ನು ಇತರೆ ಸಾರ್ವಜನಿಕ ಕಾರ್ಯಗಳಿಗಾಗಿ ವಿನಿಯೋಗಿಸಲು ಹಿಂದಕ್ಕೆ ಕೊಟ್ಟರು. ಆ ವರ್ಷ ವಕೀಲರಾಗಿ ಅವರು ಗಳಿಸಿದ್ದ ಸಂಪಾದನೆ ಡಿ.ಎ.ವಿ. ಕಾಲೇಜಿಗೆ ಸಂದಾಯವಾಗುವ ಬದಲು ವಿದೇಶಿ ಪ್ರವಾಸದ ರಾಜಕೀಯ ಕೈಂಕರ್ಯಕ್ಕೆ ವಿನಿಯೋಗವಾಗಿತ್ತು.

* * *

ಅಧ್ಯಾಯ-21

ಹೊಸಹುಮ್ಮಸ್ಸು

1905. ನವೆಂಬರ್ ಆದಿಭಾಗದಲ್ಲಿ ಲಜಪತರು ಎಸ್.ಎಸ್. ಪೆನಿನ್‌ಸುಲಾರ್ ಹಡಗಿನ ಮೂಲಕ ಮರ್ಸಿಲೆಸ್‌ನಲ್ಲಿ ಇಂಗ್ಲೆಂಡ್ ತೀರಕ್ಕೆ ವಿದಾಯ ಹೇಳಿ ಭಾರತಕ್ಕೆ ಹೊರಟರು. ಅದೇ ಹಡಗಿನಲ್ಲಿ ಭಾರತದ ವೈಸರಾಯ್ ಆಗಿ ಅಧಿಕಾರ ವಹಿಸಿಕೊಳ್ಳಲು ಲಾರ್ಡ್ ಮಿಂಟೋ ಸಹ ಪ್ರಯಾಣ ಕೈಗೊಂಡಿದ್ದರು. ನವೆಂಬರ್ 17ರಂದು ಹಡಗು ಮುಂಬಯಿ ತೀರಾ ಸೇರಿತು.

ಲಾಹೋರಿನಲ್ಲಿ ಲಜಪತರನ್ನು ಸ್ವಾಗತಿಸಲು ರೈಲುನಿಲ್ದಾಣದಲ್ಲಿ ಭಾರೀ ಸಂಖ್ಯೆಯಲ್ಲಿ ಜನ ಸೇರಿದ್ದರು. ಅವರ ಉತ್ಸಾಹ, ಕುತೂಹಲ ಅಪೂರ್ವವಾಗಿತ್ತು. ತಮ್ಮ ಬೋಗಿಯಿಂದ ಅವರು ಇಳಿಯುತ್ತಿದ್ದಂತೆಯೇ ಅಂದಿನ ವರ್ಚಸ್ವಿ ನಾಯಕ ಬ್ರಹ್ಮಸಮಾಜದ ಮುಖಂಡ ಬಾಬು ಜೋಗಿಂದರ್ ಚಂದ್ರ ಬೋಸ್ ಅವರು ಲಜಪತರನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಂಡರು. ತಮ್ಮ ನಾಯಕನನ್ನು ಕಾಣುವ ಕುತೂಹಲದಿಂದ ಕಾತರಿಸಿದ್ದ ಜನಸಾಗರಕ್ಕೆ ಲಜಪತರ ದರ್ಶನ ಸುಲಭವಾಗುವಂತೆ ಮಾಡಿದರು. ಅಲ್ಲಿದ್ದ ಬೋಸ್ 'ಹೋಂರೂಲ್'ರನ್ನು ಹೆಗಲ ಮೇಲೆ ಹೊತ್ತು ಕೊಂಡೇ ಗಾಡಿಯ ಬಳಿಗೆ ಕರೆದುತಂದರು. ಲಜಪತರು ಗಾಡಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ವಿದ್ಯಾರ್ಥಿಗಳು ಮತ್ತು ಯುವಜನರು ಅದಕ್ಕೆ ಕಟ್ಟಿದ ಕುದುರೆಗಳನ್ನು ಬಿಚ್ಚಿ ತಾವೇ ಎಳೆಯತೊಡಗಿದರು. ಸುಮಾರು 3 ಕಿಲೋ ಮೀಟರ್ ದೂರ ತಾಮುಂದು ನಾಮುಂದು ಎಂದು ಯುವ ಪೀಳಿಗೆ ಲಜಪತರಿದ್ದ ಗಾಡಿಯನ್ನು ಎಳೆದುತಂದು ಕೋರ್ಟ್ ಸ್ಟ್ರೀಟ್‌ನಲ್ಲಿದ್ದ ಅವರ ಮನೆಗೆ ಮುಟ್ಟಿಸಿತು. ವಿದ್ಯಾರ್ಥಿ ಯುವಜನರ ಪಾಲಿಗೆ ಲಜಪತರು ಆರಾಧ್ಯ ದೈವವಾಗಿದ್ದರು. ಲಜಪತರಿಗಾಗಿ ಏರ್ಪಟ್ಟ ಸ್ವಾಗತ ಸಮಾರಂಭದಲ್ಲಿ ಸರ್ಕಾರಿ ಕಾಲೇಜುಗಳು ಸೇರಿದಂತೆ ಅಸಂಖ್ಯಾತ ಸಂಘಟನೆಗಳು ಸ್ವಾಗತ ಭಾಷಣದ ಸರಮಾಲೆಯನ್ನೇ ಹರಿಸಿದವು.

ಕಣ್ಣು ಹಾಯಿಸಿದಷ್ಟು ದೂರ ಕಾಣುತ್ತಿದ್ದ ಜನಸಾಗರ ಆ ಸಭೆಯಲ್ಲಿತ್ತು. ಲಜಪತರಿಗೆ ಭವಿಷ್ಯದ ಅಂದಾಜು ಸಿಗತೊಡಗಿತು. ಮುಂದೆ ಆರ್ಯ ಸಮಾಜದ ವಾರ್ಷಿಕೋತ್ಸವ ಏರ್ಪಾಡಾಯಿತು. ಆ ಸಭೆಗೂ ನಿರೀಕ್ಷೆಗೂ ಮೀರಿ ಜನಕೋಟಿ ಹರಿಯಿತು. ಆ ಉತ್ಸಾಹಕ್ಕೆ ತಲೆದೂಗಿದ ಲಜಪತರು ಅಗತ್ಯ ಏರ್ಪಾಟುಗಳನ್ನು ಮಾಡಿಕೊಳ್ಳಲೆಂದೇ ವಾರ್ಷಿಕೋತ್ಸವವನ್ನು ಒಂದೆರಡು ದಿನ ಮುಂದಕ್ಕೆ ಹಾಕಿದರು. ನಂತರ ಡಿ.ಎ.ವಿ. ಕಾಲೇಜಿನ ಹಾಸ್ಟೆಲ್‌ನಲ್ಲಿ ನಡೆದ ಸಭೆಯಲ್ಲಿ ಲಜಪತರು ಮಾತನಾಡಿದರು. ತಮ್ಮಿಂದ ಏನಾದರೂ ಒಳ್ಳೆಯದಾಗಿದ್ದರೆ ಅದೆಲ್ಲವೂ ಆರ್ಯ ಸಮಾಜಕ್ಕೆ

ಸೇರಬೇಕೆಂದು ಆ ಸಭೆಯಲ್ಲಿ ಲಜಪತರು ವಿನಮ್ರವಾಗಿ ನುಡಿದರು. ಅವರ ಆ ಭಾಷಣ ಹಲವು ದೃಷ್ಟಿಗಳಿಂದ ಸಾರ್ವಜನಿಕ ನೆನಪಿನ ಭಾಷಣವೆನಿಸಿದೆ. ಭಾಷಣವನ್ನು ಮುಗಿಸುತ್ತಾ ಅವರು, -''ಭಾರತೀಯ ಆಕಾಶದಿಂದ ರಕ್ತದ ಮಳೆ ಸುರಿದೀತು. ಸದ್ಯಕ್ಕಂತೂ ಆಕಾಶ ನಿರ್ಮಲವಾಗಿ ಕಾಣುತ್ತಿದೆಯಾದರೂ ಅಲ್ಲಲ್ಲಿ ರಕ್ತದ ಛಾಯೆ ಕಾಣಿಸಿಕೊಂಡಿದೆ'' ಎಂದು ದೇಶದಲ್ಲಿ ಸಂಭವಿಸಬಹುದಾದ ಭವಿಷ್ಯವನ್ನು ನುಡಿದರು.

ಇತ್ತ ಬ್ರಿಟಿಷ್ ಸರ್ಕಾರದ ಸಿಐಡಿ ವಿಭಾಗದಲ್ಲಿ ಲಜಪತರ 'ಹಾವಳಿ' ದಿನೇ ದಿನೇ ಅತಿಯಾಗತೊಡಗಿತು. ಅವರಿಗೆ ಸಂಬಂಧಪಟ್ಟ ದಾಖಲೆಗಳು ಬೆಳೆಯುತ್ತಿದ್ದವು. 'ರಕ್ತದ ಮಳೆ ಸುರಿದೀತು' ಭಾಷಣ, ಅದರ ಬೆನ್ನ ಹಿಂದೆಯೇ ಬಂದ 'ಅಹಿತಕರ ಪರಿಣಾಮಗಳು' ಬ್ರಿಟಿಷ್ ಆಡಳಿತಗಾರರ ನೆಮ್ಮದಿ ಕಲಕತೊಡಗಿತು. ಅಷ್ಟೇ ಅಲ್ಲದೆ 'ಷರತ್ತಿನ ವಿಧೇಯತೆ' ಕುರಿತು ಅವರ ಮಾತುಗಳು ಬ್ರಿಟಿಷರಿಗೆ ಅಪಾಯದ ಸೂಚನೆ ನೀಡಿದಂತಿತ್ತು. ಲಾಹೋರಿನಲ್ಲಿ ಎಲ್ಲವೂ ಸರಿ ಇಲ್ಲವೆಂದು ಬ್ರಿಟಿಷರು ಸುಮ್ಮನಿರಲಾಗಲಿಲ್ಲ. ಆ ನಗರಿ ಜ್ವಾಲಾಮುಖಿಯನ್ನು ತುಂಬಿಕೊಂಡ ಅಪಾಯಕಾರಿ ನಗರವೆನಿಸಿಕೊಂಡಿತು. ದೂರದ ಬಾರಿಸಲ್‌ನಲ್ಲಿ ನಡೆದ ಲಾಠಿ ಪ್ರಹಾರಕ್ಕೆ ಮೊಟ್ಟ ಮೊದಲ ಪ್ರತಿಭಟನಾ ಸಭೆ ಲಾಹೋರಿನಲ್ಲಿ ಪುಟಿಯುವ ಮೂಲಕ ಅದು ನಿಜವೂ ಆಯಿತು. ಕಂಗೆಟ್ಟು ಉದ್ರಿಕ್ತರಾದ ಅಂಗ್ರೇಜಿ ಅಧಿಕಾರಿಗಳು ಲಜಪತ್‌ರಾಯ್ ಅವರ ಲಾಹೋರಿನಲ್ಲಿ, ಪಂಜಾಬಿನಲ್ಲಿ ಕಟ್ಟೆಚ್ಚರ ವಹಿಸತೊಡಗಿದರು. ಲಾಹೋರ್ ಹಾಗೂ ಪಂಜಾಬಿನಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ತುಮುಲ ಅಧಿಕಗೊಳ್ಳಲು ಎಚ್ಚತ್ತ ರಾಷ್ಟ್ರಪ್ರಜ್ಞೆ ಮತ್ತು ಹೊರಗಿನಿಂದ ಬಂದ ವೈಚಾರಿಕ ವಿಚಾರಗಳಷ್ಟೇ ಕಾರಣವಾಗಿರಲಿಲ್ಲ. ಬ್ರಿಟಿಷ್ ಆಡಳಿತ ಹೊಸದಾಗಿ ಕೈಗೊಂಡ ಭೂ ಹಿಡುವಳಿ ಕಾಯ್ದೆಯು ಆಂತರಿಕವಾಗಿ ಪಂಜಾಬಿಗಳ ನೆಮ್ಮದಿ ಕೆಡಿಸಿತು.

ಭೂ ನಿರ್ವಹಣೆಗೆ ಸಂಬಂಧಪಟ್ಟಂತೆ ತೀರಾ ನಿರ್ಬಂಧಕಾರಿ ಶಾಸನವನ್ನು ಜಾರಿಗೆ ತರಲಾಯಿತು. ಜನ ಸಮುದಾಯದಲ್ಲಿ ಪ್ರತಿಭಟನೆ ತೀವ್ರವಾಯಿತು. ಆದರೆ 'ಕೃಷಿಕರು' ಎಂದು ಸ್ವಯಂ ಪಟ್ಟಿ ಕಟ್ಟಿಕೊಂಡ ಮೇಲ್ವರ್ಗದ ಜನರಿಗೆ ಅದರಿಂದ ಅನುಕೂಲವಾಗುತ್ತಿತ್ತು. ಅವರು ಆ ಕಾಯ್ದೆಯನ್ನು ಬೆಂಬಲಿಸುತ್ತಿದ್ದರು. ಲಜಪತ್‌ರಾಯ್ ಮತ್ತು 'ದಿ ಪಂಜಾಬಿ' ಆ ಶಾಸನವನ್ನು ಸಮಗ್ರವಾಗಿ ವಿರೋಧಿಸಿದರು. ಕಾಂಗ್ರೆಸ್ ಸಂಘಟನೆಯು ಅಧಿವೇಶನದಲ್ಲಿ ಮೊದಲು ಶಾಸನವನ್ನು ವಿರೋಧಿಸಿ ನಿರ್ಣಯಕೈಗೊಂಡಿತು. ಭಾರೀ ಪ್ರಮಾಣದಲ್ಲಿ ಮುಸ್ಲಿಂ ಜಮೀನುದಾರರು ಆ ಶಾಸನವನ್ನು ಬೆಂಬಲಿಸುತ್ತಿದ್ದಾರೆಂದು ತಿಳಿಯುತ್ತಿದ್ದಂತೆಯೇ ಕಾಂಗ್ರೆಸ್ ತನ್ನ ಪ್ರತಿಭಟನೆ ಕೈಬಿಟ್ಟಿತು. ಆ ಜಮೀನುದಾರರ ಬೆಂಬಲಕ್ಕೆ ಮುಂದಾಯಿತು.

ಇಬ್ಬೆಟ್‌ಸನ್‌ನ ಭೂಮಿ ವಸಾಹತು ವಿಧೇಯಕಗಳಿಗೆ ಜನಸಾಮಾನ್ಯರಲ್ಲಿ ತೀವ್ರ ವಿರೋಧ ಎದ್ದಿತು. ಹಿಂದುಗಳು, ಸಿಖ್ಖರು ಮತ್ತು ಮುಸ್ಲಿಮರು, ಪಟ್ಟಣವಾಸಿಗಳು ಮತ್ತು ಗ್ರಾಮಸ್ಥರು, ಕೃಷಿಕರು ಹಾಗೂ ಕೃಷಿಯೇತರರು ಈ ಪ್ರತಿಭಟನೆಯಲ್ಲಿ ಏಕ ಧ್ವನಿಯಾಗಿದ್ದರು. ಪಂಜಾಬಿನಾದ್ಯಂತ ಕೃಷಿಕರ ಈ ಚಳವಳಿ ಸುಂಟರಗಾಳಿಯಂತೆ ವ್ಯಾಪಿಸಿತು. ಈ ಚಳವಳಿಯ ಬಗ್ಗೆ ನಾವು ಮುಂದಿನ ಅಧ್ಯಾಯದಲ್ಲಿ ಓದೋಣ.

ಬಾರಿಸಲ್ ಸಮ್ಮೇಳನದ ಕೆಲವು ದಿನಗಳ ನಂತರ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ ಬನಾರಸ್‌ನಲ್ಲಿ ಏರ್ಪಾಟಾಯಿತು. 'ಎಡ' ಮತ್ತು 'ಬಲ' ಸಿದ್ಧಾಂತವಾದಿಗಳು, 'ತೀವ್ರವಾದಿಗಳು' ಮತ್ತು 'ಸುಧಾರಣಾವಾದಿಗಳು' ಪಟ್ಟಿಯೊಂದಿಗೆ ಅಧಿವೇಶನದಲ್ಲಿ ಬಹಿರಂಗ ಸಂಘರ್ಷಕ್ಕೆ ಇಳಿದರು.

ಬಂಗಾಳದಲ್ಲಿ ಅರವಿಂದರ 'ವಂದೇ ಮಾತರಂ' ಅಂಕಣಗಳ ಮೂಲಕ ಹೊಸ ಹೋರಾಟದ ಹುರುಪು ನರುಗಟ್ಟಿತು. ಅತ್ತ ಮಹಾರಾಷ್ಟ್ರದಲ್ಲಿ ತಿಲಕರ ಪಕ್ಷವು ಗೋಖಲೆ ಮತ್ತು ಅವರ ಅನುಯಾಯಿಗಳ ಸುಧಾರಣಾವಾದವನ್ನು ಹೀಗೆಳೆಯುತ್ತಿತ್ತು. ಆ ಕಡೆ ಪಂಜಾಬಿನಲ್ಲಿ ಲಜಪತ್‌ರಾಯ್ ದೇಶವಾಸಿಗಳ ಆರಾಧ್ಯ ಮೂರ್ತಿಯಾಗಿದ್ದರು. ಅದರಲ್ಲೂ ಯುವ ಪೀಳಿಗೆ ಅವರನ್ನು ಬಹುವಾಗಿ ಹಚ್ಚಿಕೊಂಡಿತ್ತು. ಲಜಪತರು ತಾವು ತಿಲಕರಾಗಲಿ, ಅರವಿಂದರಾಗಲಿ, ಬಿಪಿನ್‌ಚಂದ್ರ ಪಾಲ್‌ರಾಗಲಿ, ಗೋಖಲೆಯಾಗಲಿ, ದಾದಾ ಭಾಯಿ ನವರೋಜಿಯಾಗಲಿ ಅಥವಾ ಫಿರೋಜ್ ಷಹಾ ಮೆಹ್ತಾರಾಗಲಿ ಯಾವುದೇ ಬಣಕ್ಕೆ ನಿರ್ದಿಷ್ಟವಾಗಿ ಅಂಟಿಕೊಂಡಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರ್ಪಡಿಸುತ್ತಾ ಬಂದರು.

ಬನಾರಸ್‌ನಲ್ಲಿ ಹೊಸ ಹುರುಪು ತ್ವರಿತವಾಗಿ ನೇಯ್ಗೆಯಾಗುತ್ತಿದ್ದನ್ನು ಲಜಪತರು ಮನಗಂಡರು. ಆ ವರ್ಷದ ಕಾಂಗ್ರೆಸ್ ಅಧಿವೇಶನದಲ್ಲಿ ಅದರ ಪ್ರತಿಫಲವು ಪ್ರತಿಧ್ವನಿಸಿತು. ಹಿಂದಿನ ಎಲ್ಲಾ ಅಧಿವೇಶನಗಳಿಗಿಂತ ಅದು ಹೆಚ್ಚು ತುಮುಲಕರವೆನಿಸಿತು. ಅಧಿವೇಶನದ ಅಧ್ಯಕ್ಷರಿಗೆ ನೀಡುತ್ತಿದ್ದ ಮೆರವಣಿಗೆಯಲ್ಲಿ ಆ ವರ್ಷ ಹಿಂದೆಂದಿಗಿಂತ ಹೆಚ್ಚು ವೈವಿಧ್ಯತೆ ಕಂಡು ಬಂದಿತು. ಸುಧಾರಣಾವಾದಿಗಳ ಮುಖಂಡ ಗೋಖಲೆ ಅಧ್ಯಕ್ಷರಾಗಿದ್ದು ಅದಕ್ಕೆ ಕಾರಣ. ಹೊಸ ಉತ್ಸಾಹ ಚಿಮ್ಮತೊಡಗಿತು. ಮೆರವಣಿಗೆ ಗಾಡಿಯಲ್ಲಿ ಗೋಖಲೆಯವರೊಂದಿಗೆ ಲಜಪತರನ್ನು ಕೂಡಿಸಲಾಗಿತ್ತು. ಆ ಪ್ರಸಂಗವನ್ನು ಅವರು ತಮ್ಮ ಜೀವನ ಚರಿತ್ರೆಯಲ್ಲಿ, "ಬನಾರಸ್‌ನ ನಾಗರಿಕರು ಗೋಖಲೆಯವರಿಗೆ ಅಧ್ಬುತ ಸ್ವಾಗತ ನೀಡಿದರು. ನಾನೂ ಅವರೊಂದಿಗೆ ಮೆರವಣಿಗೆ ಗಾಡಿಯಲ್ಲಿ ಕುಳಿತಿದ್ದೆ. ಗಾಡಿಯ ಮೆಟ್ಟಿಲ ಮೇಲೆ ಓರ್ವ ಸ್ವಯಂಸೇವಕ ನಿಂತು ಘೋಷಣೆಗಳನ್ನು ಕೂಗುತ್ತಿದ್ದ. ಅವನ ಘೋಷಣೆಗಳಿಗೆ ಪ್ರತಿಯಾಗಿ ಹೊರಡುತ್ತಿದ್ದ ಘೋಷಣೆಗಳು ಕಿವಿಗಳನ್ನು ಅಪ್ಪಳಿಸುತ್ತಿದ್ದವು. ಕಿವುಡರಾಗುವ ಭಯ ಉಂಟಾಗುತ್ತಿತ್ತು. ಆ ಮೆರವಣಿಗೆಯನ್ನು ನೋಡಿದಾಗ ದೇಶಕ್ಕೆ ಅಂಟಿದ ಪೀಡೆ ತೊಲಗುವ ಕಾಲ ಸನ್ನಿಹಿತವಾಗಿದೆಯೇ ಎನ್ನುವಂತಿತ್ತು. ಗೋಖಲೆ ಹರ್ಷಚಿತ್ತರಾಗಿದ್ದರು. 'ಇನ್ನೂ ಶ್ರಮಪಟ್ಟು ಕೆಲಸ ಮಾಡಿದರೆ ಜನತೆಯಲ್ಲಿ ಉತ್ಸಾಹ ಕೆರಳುವುದರಲ್ಲಿ ಸಂಶಯವಿಲ್ಲ' ಎಂದು ಅವರು ಹೇಳಿದರು. ಹಾಗೆ ಹೇಳುವಾಗ ಅವರ ಕಣ್ಣುಗಳಲ್ಲಿ ಅವ್ಯಕ್ತ ಬಾಷ್ಪಾಂಜಲಿ ಉರುಳಿದ್ದನ್ನು ನಾನು ಕಂಡೆ. ಅದೊಂದು ಮರೆಯಲಾಗದ ನೆನಪು" ಎಂದು ಬರೆದಿದ್ದಾರೆ.

* * *

ಅಧ್ಯಾಯ-22

ಲಾಲ್ - ಬಾಲ್ - ಪಾಲ್

1906. ಕಾಂಗ್ರೆಸ್ ಸಂಘಟನೆಯ ದೃಷ್ಟಿಯಿಂದ ಪರಿವರ್ತನೆಯ ವರ್ಷ. ಬನಾರಸ್ ಅಧಿವೇಶನದಲ್ಲಿ ಅದು ಸ್ಪಷ್ಟವಾಗಿ ಎದ್ದು ಕಂಡಿತು. ಆ ಪವಿತ್ರ ನಗರಿಯ ಆ ಅಧಿವೇಶನದಲ್ಲಿ ತೀವ್ರವಾದಿಗಳಿಗೆ ಸೋಲಿನ ಅನುಭವವಾಯಿತು. ಸುಧಾರಣಾವಾದಿಗಳ ಕೈ ಮೇಲಾಯಿತು. ಭರವಸೆ ಹುಟ್ಟಿಸುವ ನಿರ್ಣಯಗಳು ಸ್ವೀಕೃತವಾದವು. ಹಿಂದಿನ ಯಾವ ಅಧಿವೇಶನವೂ ಕಂಡರಿಯದಂತಹ ಭಾಷಣಗಳು ನಡೆದವು. ಆದರೂ ದೇಶವಾಸಿಗಳಲ್ಲಿ ಜಾಗೃತಿ ಮೂಡಿದಂತೆ ಕಾಣಲಿಲ್ಲ. ವಿದೇಶಿ ಆಡಳಿತಗಾರರ ನೆಮ್ಮದಿ ಕಲಕಿದಂತಾಗಲಿಲ್ಲ. ಅದೇನೂ ಹೆಚ್ಚು ಕಾಲ ಉಳಿಯಲೂ ಇಲ್ಲ. ಕಟ್ಟಾ ಹೋರಾಟ, ಸಮೂಹ ಆಂದೋಲನಗಳು ಮೂರ್ತವಾಗಬೇಕಾಗಿತ್ತು ಅಷ್ಟೇ.

ಲಾರ್ಡ್ ಕರ್ಜನನ ನೇತೃತ್ವದಲ್ಲಿ ಬ್ರಿಟಿಷ್ ಅಧಿಕಾರಷಾಹಿ ದರ್ಪದ ಆಡಳಿತ ನಡೆಸತೊಡಗಿತು. ವಿಶ್ವವಿದ್ಯಾಲಯ ಕಾಯ್ದೆ ಮತ್ತು ಬಂಗಾಳ ಇಬ್ಭಾಗದ ಪ್ರತಿರೋಧಗಳನ್ನು ತಡೆಯಲು ಏನೆಲ್ಲಾ ಪ್ರಯತ್ನಗಳನ್ನು ನಡೆಸಿತು. ಆಂಗ್ರೇಜಿಗಳ ಆಡಳಿತದ ಒಂದೊಂದು ಜನ ವಿರೋಧಿ ಕೃತ್ಯಗಳು ಸಂಗ್ರಹವಾಗುತ್ತಾ ಬಂದವು. 1905ರಲ್ಲಿ ಕರ್ಜನ್ ಇಂಗ್ಲೆಂಡಿಗೆ ವಾಪಸು ಹೋದ. ಆದರೆ ಆತ ಹಾಕಿದ ಅಧಿಕಾರಷಾಹಿ ಹುಂಬತನ ಇಲ್ಲೇ ಉಳಿಯಿತು. ಅದಿನ್ನೂ ಕ್ರೂರವಾಯಿತು. ಅದೇ ಸಮಯದಲ್ಲಿ ಬಂಗಾಳದಲ್ಲಿ ಪಾಲ್, ಅರವಿಂದ ಮತ್ತು 'ವಂದೇ ಮಾತರಂ' ಹೊಸ ವಿಚಾರಧಾರೆಗಳು, ಮಹಾರಾಷ್ಟ್ರದಲ್ಲಿ ತಿಲಕ್ ಮತ್ತು ಅವರ 'ಕೇಸರಿ'ಯ ಕ್ರಾಂತಿಕಾರಿ ಆಂದೋಲನ ಹಾಗೂ ಪಂಜಾಬಿನಲ್ಲಿ ಲಜಪತ್‌ರಾಯ್ ಮತ್ತು ಅವರ 'ದಿ ಪಂಜಾಬಿ' ಜನಜಾಗೃತಿಯ ಹೋರಾಟಗಳು ದಿನೇ ದಿನೇ ಪ್ರಬಲವಾಗುತ್ತಾ ಬಂದವು. ಬಂಗಾಳದಲ್ಲಿ ಈ ಚಳವಳಿ ದಿನೇ ದಿನೇ ವ್ಯಾಪಕವಾಗಿ ಹಬ್ಬತೊಡಗಿತು. ವಂಗಭಂಗದ ಕ್ರಮವನ್ನು ಹಿಂದೆಗೆದುಕೊಳ್ಳುವತನಕ ಆಂದೋಲನ ನಿಲ್ಲದೆಂದು ಘೋಷಿಸಲಾಯಿತು.

ಬ್ರಿಟಿಷ್ ವಸ್ತುಗಳ ಬಳಕೆ ಅದರಲ್ಲೂ ಬ್ರಿಟನ್ ತಯಾರಿತ ಬಟ್ಟೆಗಳ ಉಪಯೋಗ ಬಹಿಷ್ಕಾರವಾಗತೊಡಗಿತು. ಆ ಬಹಿಷ್ಕಾರ ದಿನೇ ದಿನೇ ವ್ಯಾಪಕವಾಗುತ್ತಾ ಹೋಯಿತು. ಮ್ಯಾಂಚೆಸ್ಟರ್‌ನಿಂದ ಬಟ್ಟೆಗಳನ್ನು ತರಿಸಿಕೊಳ್ಳುತ್ತಿರುವ ಮಾರ್ವಾಡಿಗಳ ಉತ್ಸಾಹಕ್ಕೆ ದೀಪಾವಳಿಯ ಸಮಯದಲ್ಲಿ ತಣ್ಣೀರು ಎರಚಲಾಯಿತು. 1906. ಮಾರ್ವಾಡಿಗಳ ಹೊಸ ವರ್ಷಕ್ಕೆ ಈ ಬಹಿಷ್ಕಾರ ಭರಿಸಲಾಗದ ನಷ್ಟ ಉಂಟು ಮಾಡಿತು. ''ಸ್ವದೇಶಿ ಆಂದೋಲನ-ವಿದೇಶಿ ವಸ್ತುಗಳ ಬಹಿಷ್ಕಾರ'' ಚಳವಳಿ ಬಗ್ಗೆ ಅಪಸ್ವರ ಎತ್ತಿದವರಿಗೆ ಮುಖಭಂಗ ಉಂಟಾಯಿತು. ಈ ಚಳವಳಿ ನಾಡಿನಲ್ಲಿ ಮನೆ, ಮನೆಯಲ್ಲೂ ಅನುಷ್ಠಾನಗೊಳ್ಳತೊಡಗಿತು.

ಹಳ್ಳಿ ಹಳ್ಳಿಗಳಲ್ಲಿ ಮನೆ ಮಾಳಿಗೆಯ ಮೇಲೆ ನಿಂತು ಜನ ಕೂಗು ಹಾಕತೊಡಗಿದರು. ಸ್ವದೇಶಿ ವಸ್ತುಗಳ ಬಳಕೆ ನಾಡಿನ ಮನೆ, ಮನೆಯಲ್ಲೂ ಅನುಷ್ಠಾನಗೊಳ್ಳತೊಡಗಿತು. ವಿದೇಶಿ ವಸ್ತುಗಳ ಬಳಕೆಯ ಬಹಿಷ್ಕಾರಕ್ಕೆ ಲಕ್ಷಗಟ್ಟಳೆ ಸ್ವಯಂ ಸೇವಕರು ಮುಂದಾದರು. ಪಿಕೆಟಿಂಗ್ ಸಾಮಾನ್ಯ ಆಂದೋಲನವಾಯಿತು. ಅದೇ ಸಮಯದಲ್ಲಿ ರಾಷ್ಟ್ರೀಯ ಶಿಕ್ಷಣ ಆಂದೋಲನ ವಿದ್ಯಾರ್ಥಿಗಳ ಮೇಲೆ ಅಸಾಧಾರಣಾ ಪ್ರಭಾವ ಬೀರಿತ್ತು. ಕಲ್ಕತ್ತಾದಲ್ಲಿ ವೈಟ್‌ವೇ ಲೇಡ್ಲಾಸ್ ಕಚೇರಿ ಮುಂದೆ ವಿದ್ಯಾರ್ಥಿಗಳು ದೊಡ್ಡ ಪಿಕೆಟಿಂಗ್ ನಡೆಸಿದರು. ಫ್ಯಾಷನ್ ಪ್ರಿಯರಾದ ಮಹಿಳೆಯರು ವಿದೇಶಿ ಉಡುಗೆ ತೊಡುಗೆಗೆ ವಿದಾಯ ಹೇಳಿ ಸ್ವದೇಶಿ ವಸ್ತುಗಳನ್ನು ಬಳಸುವಂತಾಯಿತು. ಹಾಗೆ ಮಾಡದವರು ಪಿಕೆಟಿಂಗ್ ಎದುರಿಸಬೇಕಾಗುತ್ತಿತ್ತು.

ಕರ್ಜನ್ ಹಾಕಿದ ಕೆಟ್ಟ ಗಾಳಿಯ ಫಲವಾಗಿ ಬಂಗಾಳ ಇಬ್ಭಾಗವಾಗಿ ಪೂರ್ವ ಬಂಗಾಳ ಅಸ್ತಿತ್ವಕ್ಕೆ ಬಂದಿತು. ಅದರ ಹೊಸ ಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರ್‌ಗೆ ಬಾರಿಸಲ್‌ನಲ್ಲಿ ಮ್ಯಾಂಚೆಸ್ಟರ್‌ನಿಂದ ತರಿಸಿಕೊಂಡ ತುಣುಕು ಬಟ್ಟೆಯೂ ಸಹ ಖರೀದಿಗೆ ಸಿಗಲಿಲ್ಲ. ಅಷ್ಟೊಂದು ಕಠೋರವಾಗಿತ್ತು ಸ್ವದೇಶಿ ಆಂದೋಲನ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ. ಆ ಲೆಫ್ಟಿನೆಂಟ್ ಗವರ್ನರ್ ಕಳುಹಿಸಿದ ಸೇವಕರು ನಗರದ ಎಲ್ಲಾ ಅಂಗಡಿಗಳನ್ನು ಸುತ್ತಿದರೂ ಪ್ರಯೋಜನವಾಗಲಿಲ್ಲ. ಸ್ವದೇಶಿ ಬಟ್ಟೆ ಖರೀದಿಸಬೇಕಾದರೂ ಪಶ್ಚಿಮ ಬಂಗಾಳದ ನೇತಾರ ಅಶ್ವಿನಿಕುಮಾರ್ ದತ್ತರ ಅನುಮತಿ ಪಡೆಯಬೇಕೆಂಬ ನಿಯಮ ಎಲ್ಲೆಡೆ ರೂಪಿಸಲಾಗಿತ್ತು!

ಸುಧಾರಣಾವಾದಿಗಳಲ್ಲಿ ಹೆಚ್ಚು ಜನಪ್ರಿಯರಾದ ನೇತಾರ ಬಿಪಿನ್‌ಚಂದ್ರ ಪಾಲ್. ವಿದೇಶಿ ವಸ್ತುಗಳ ಬಹಿಷ್ಕಾರ ಎಲ್ಲೆಡೆ ಹಬ್ಬುವಂತೆ ಎಲ್ಲಾ ಕ್ರಮವನ್ನು ಅವರು ಕೈಗೊಂಡರು. ಅಂಗ್ರೇಜಿಗಳ ಆಡಳಿತ ಹಾಗೂ ಅದಕ್ಕೆ ಪೂರಕವಾಗಿದ್ದ ಸಂಘ ಸಂಸ್ಥೆಗಳು ಮತ್ತು ಜನರಿಗೆ ಚಳವಳಿ ಬಿಸಿ ತಟ್ಟುವಂತೆ ಕಾರ್ಯಕ್ರಮ ಸಂಯೋಜಿಸಿದ್ದರು. ಪರಿಸ್ಥಿತಿ ದಿನ ಕಳೆದಂತೆ ಗಂಭೀರ ರೂಪ ತಾಳುತ್ತಿತ್ತು. ಅಧಿಕಾರಿಶಾಹಿಗೆ ಸಹಿಸಲಾಗಲಿಲ್ಲ. ಚಳವಳಿಯನ್ನು ಬಗ್ಗು ಬಡಿಯಲು ಏನೆಲ್ಲಾ ಕ್ರಮಗಳನ್ನು ಕೈಗೊಂಡಿತು.

ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳು ಮತ್ತು ಸ್ವದೇಶಿ ಚಳವಳಿಕಾರರ ವಿರುದ್ಧ ಕುಖ್ಯಾತ ಸುತ್ತೋಲೆಯೊಂದನ್ನು ಅಂಗ್ರೇಜಿ ಆಡಳಿತಶಾಹಿ ಹೊರಡಿಸಿತು. ಅಂದಿನ ಅಗ್ರಮಾನ್ಯ ಪತ್ರಿಕೆಯಾಗಿದ್ದ ಆಂಗ್ಲೋ ಇಂಡಿಯನ್ನರ 'ದಿ ಸ್ಟೇಟ್‌ಮನ್' ಹೀಗೆ ಬರೆಯಿತು. ''ಲೆಫ್ಟಿನೆಂಟ್ ಗವರ್ನರ್ ಆದೇಶವನ್ನು ಹೊರಡಿಸಲು ಕಾರಣವಾದ ಸಂಕುಚಿತ ಧೋರಣೆಯ ಆ ಅಧಿಕಾರಿ ಯಾರೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಸರ್ಕಾರ ಬಾಲಿಶ ಕ್ರಮಕ್ಕೆ ಎಳೆಸಿದೆ. ಹುತಾತ್ಮರ ಸೇನೆಯ ಹುಟ್ಟಿಗೆ ಪ್ರೇರಣೆಯಾಗಬಲ್ಲ ಪತಾಕ ನೀತಿಯಲ್ಲದೆ ಇದು ಬೇರೇನೂ ಅಲ್ಲ.''

ಪೂರ್ವ ಬಂಗಾಳದಲ್ಲಿ ಆಡಳಿತಶಾಹಿ ಹೊರಡಿಸಿದ ಅನೇಕ ಕುಟಿಲ, ಕುಖ್ಯಾತ ಸುತ್ತೋಲೆಗಳಲ್ಲಿ ಸಾರ್ವಜನಿಕರು 'ವಂದೇ ಮಾತರಂ' ಘೋಷಿಸಬಾರದು ಎಂಬುದು ಒಂದು. ಈ ಸುತ್ತೋಲೆಯ ನೇರ ಪರಿಣಾಮ ಗಂಭೀರವಾಯಿತು. ಏಪ್ರಿಲ್ ತಿಂಗಳಿನಲ್ಲಿ

ಬಂಗಾಳಿಗಳು ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಒಂದೆಡೆ ಜಮಾ ಮಾಡಿದರು. ಆ ಹಿನ್ನಲೆಯಲ್ಲಿ ಸುರೇಂದ್ರನಾಥ ಬ್ಯಾನರ್ಜಿ ಅವರನ್ನು ಬ್ರಿಟಿಷ್ ಆಡಳಿತ ಬಂಧಿಸಿತು. ಅಲ್ಲಿ ಸಭೆ ಸೇರಿದ್ದವರ ಮೇಲೆ ಅನಾಗರಿಕವಾಗಿ ಲಾಠಿ ಪ್ರಹಾರ ನಡೆಸಲಾಯಿತು

ಬಾರಿಸಲ್‌ನ ಬ್ರಿಟಿಷರ ಹೇಯ ಕೃತ್ಯವನ್ನು ದೇಶಾದ್ಯಂತ ಖಂಡಿಸಲಾಯಿತು. ಲಾಹೋರಿನಲ್ಲಿದ್ದ ಲಜಪತ್‌ರಾಯ್ ಭಾರೀ ಬಹಿರಂಗ ಸಭೆಯೊಂದರಲ್ಲಿ ಬಾರಿಸಾಲ್ ಕೃತ್ಯವನ್ನು ಕಟುವಾಗಿ ಖಂಡಿಸಿದರು. ಅದರ ಪ್ರತಿಧ್ವನಿ ದೇಶದ ಪ್ರಮುಖ, ನಗರ, ಪಟ್ಟಣಗಳಲೆಲ್ಲಾ ಅನುರಣಿಸಿತು. ಬಂಗಾಳ, ಮಹಾರಾಷ್ಟ್ರ ಮತ್ತು ಪಂಜಾಬ್‌ಗಳನ್ನು 'ಉಗ್ರವಾದಿ'ಗಳ ಪ್ರಮುಖ ನೆಲೆ ಎಂದು ಅಂಗ್ರೇಜಿ ಶಾಸನ ಪರಿಗಣಿಸಿತು. ಅದರಲ್ಲಿ ಅನುಮಾನವೂ ಇರಲಿಲ್ಲ. ಅಧಿವೇಶನದಲ್ಲಿ ತೀವ್ರವಾದಿಗಳ ಹಿಡಿತ ಮೇಲುಗೈ ಆಗುವ ಸಂಭವವಿತ್ತು. ಅದನ್ನು ತಪ್ಪಿಸಲು ಸುಧಾರಣಾವಾದಿಗಳು ಹಗಲು, ರಾತ್ರಿ ಶ್ರಮಿಸಬೇಕಾಯಿತು. ಇಂಗ್ಲೆಂಡಿನಿಂದ 82ರ ವೃದ್ಧ ದಾದಾ ಭಾಯಿ ನವರೋಜಿ ಅವರನ್ನು ಕರೆಯಿಸಿ, ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಿ ಕಾರ್ಯಕಲಾಪಗಳ ನಿರ್ವಹಣೆ ನೋಡಿಕೊಳ್ಳುವಂತೆ ಮಾಡಲಾಯಿತು. ದಾದಾ ಭಾಯಿ ನವರೋಜಿ ಅವರನ್ನು ಎರಡು ಬಣಗಳು ಗೌರವಿಸುತ್ತಿದ್ದವು. ಅದರ ಫಲವಾಗಿ ಆ ಅಧಿವೇಶನದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ಇಲ್ಲದೆ ಎರಡು ಬಣಗಳು ತೃಪ್ತಿಯಾಗುವ ರೀತಿ ಕಲಾಪಗಳು ನಡೆದವು.

ಅದೇನೇ ಇರಲಿ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ ಸುಧಾರಣಾವಾದಿಗಳ ಪಾಲಿಗೆ ಒಂದು ಹೆಜ್ಜೆ ಮುಂದಿಟ್ಟಂತೆ ಅನಿಸಿತು. ಅದರ ನಿರ್ಣಯಗಳು ಸ್ವದೇಶಿ ಆಂದೋಲನ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ ಆಂದೋಲನಗಳನ್ನು ಪುರಸ್ಕರಿಸಿದವು. ರಾಷ್ಟ್ರೀಯ ಶಿಕ್ಷಣ ಕ್ರಮವನ್ನು ಬೆಂಬಲಿಸಿದವು. ಬಂಗಾಳ ಚಳವಳಿಯ ಮೂರು ಹಂತದ ಕಾರ್ಯಕ್ರಮಕ್ಕೆ ಉತ್ತೇಜನ ದೊರೆಯಿತು. ಇನ್ನೂ ಹೆಚ್ಚೆಂದರೆ ಸ್ವತಃ ದಾದಾ ಭಾಯಿ ನವರೋಜಿ ಅವರೇ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ವದೇಶಿ ಪದಕ್ಕೆ ಶಕ್ತಿ, ಹುಮ್ಮಸ್ಸು ತುಂಬಿದರು. ಅದೇ ಸಮಯದಲ್ಲಿ ಅವರು ಪ್ರಬಲವಾದ ಇನ್ನೊಂದು ಪದವನ್ನು ಘೋಷಿಸಿದರು. ಕಾಂಗ್ರೆಸ್ ಅಧಿವೇಶನದ ಆ ವೇದಿಕೆಯಲ್ಲಿ ಮಾರ್ದೊನಿಗಿಸಿದ ಆ ಪದ 'ಸ್ವರಾಜ್ಯ'. 'ಸ್ವರಾಜ್ಯ, ಸ್ವದೇಶಿ, ಹಾಗೂ ವಿದೇಶಿ ವಸ್ತುಗಳ ಬಹಿಷ್ಕಾರ'. ಈ ಮೂರು ಘೋಷಣೆಗಳು ರಾಷ್ಟ್ರೀಯತೆಯ ಪರಮ ಮಂತ್ರಗಳಾದವು.

ಲಜಪತ್‌ರಾಯ್ ಅದನ್ನೆಲ್ಲಾ ಹೀಗೆ ದಾಖಲು ಮಾಡಿದ್ದಾರೆ, ''ಈ ಅಧಿವೇಶನವು ರಾಷ್ಟ್ರೀಯವಾದಿಗಳನ್ನು ಸಂತೃಪ್ತಿಗೊಳಿಸಿತು. ಸುಧಾರಣಾವಾದಿಗಳು ಗೊಣಗುವಂತಾಯಿತು. ಅಂದಿನ ಪರಿಸ್ಥಿತಿ ಹಾಗೆಯೇ ಇತ್ತು. ಬೇರೆ ಯಾವುದೇ ರೀತಿಯ ನಿರ್ಧಾರವಾಗಿದ್ದರೂ ಕಾಂಗ್ರೆಸ್ಸಿನ ಅಸ್ತಿತ್ವವೇ ಉಳಿಯುತ್ತಿರಲಿಲ್ಲ.''

ಈ ಸಮಯದಲ್ಲಿ ಕೇಶ ಮುಂಡನವಾಗಿದ್ದು ಒಂದು ಗಮನಾರ್ಹ ಸಂಗತಿ. ಆರ್ಯ ಸಮಾಜದ ಅನೇಕ ಮುಖಂಡರಂತೆ ಲಜಪತ್‌ರಾಯ್ ಸಹ ಉದ್ದವಾದ ತಲೆಗೂದಲು ಹಾಗೂ ಗಡ್ಡ ಬಿಟ್ಟಿದ್ದರು. ಬಂಗಾಳಿ ಸಭಿಕರು ನಿಯೋಜಿತ ಅಧ್ಯಕ್ಷ

ದಾದಾ ಭಾಯಿ ನವರೋಜಿ ಅವರಿಗೆ ಕುತೂಹಲದ ಸ್ವಾಗತವನ್ನೇನೋ ನೀಡಿದ್ದರು. ಆದರೆ, ಭಾರತೀಯ ರಾಜಕಾರಣದಲ್ಲಿ ಲಾಲ್ - ಬಾಲ್ - ಪಾಲ್ ಅಧ್ಯಾಯ ಆರಂಭವಾಗಿತ್ತು. ಈ ಅಧ್ಯಾಯವನ್ನು ಬಂಗಾಳ ಕುತೂಹಲದಿಂದ ತನ್ನದಾಗಿಸಿಕೊಂಡಿತ್ತು. 'ಮಹಾರಾಷ್ಟ್ರ ಮತ್ತು ಪಂಜಾಬ್‌ನಿಂದ ಬಂದಿದ್ದ ತಮ್ಮ ಇಬ್ಬರು ಮಹಾನ್ ನಾಯಕರಿಗೆ ಬಂಗಾಳಿಗಳು ತೋರಿದ ವಿಶೇಷ ಗೌರವದಿಂದ ಅದು ವ್ಯಕ್ತವಾಗುತ್ತಿತ್ತು. ಪಂಜಾಬಿನಿಂದ ಹೊರಟು ಹೌರಾ ನಿಲ್ದಾಣದಲ್ಲಿ ಇಳಿದ ಲಜಪತರನ್ನು ಅಲ್ಲಿ ಸೇರಿದ್ದ ಭಾರೀ ಜನಸಮೂಹ ಮೊದಲು ಗುರುತು ಹಿಡಿದಿದ್ದು ಅವರ ಗಡ್ಡ ಮತ್ತು ಮತ್ತು ಕೇಶದಿಂದ.

ಅವರ ಕಾಂಗ್ರೆಸ್ ಅಧಿವೇಶನ ಆರಂಭಗೊಂಡು, ಅಧ್ಯಕ್ಷ ಸ್ಥಾನಕ್ಕೆ ದಾದಾ ಭಾಯಿ ನವರೋಜಿ ಅವರ ಹೆಸರನ್ನು ಸಮೂದಿಸಲು ಲಜಪತ್‌ರಾಯ್ ಅವರು ವೇದಿಕೆಗೆ ಹೋದಾಗ ಅವರಿಗೆ ಗಡ್ಡ, ಕೇಶಗಳಿರಲಿಲ್ಲ. ಸಭಿಕರು ಗರಬಡಿದಂತಾದರು. ಅನುಮೋದಕ ಮಾತನಾಡತೊಡಗಿದಂತೆ ಆ ವ್ಯಕ್ತಿ ಯಾರೆಂಬುದು ಸಭೆಗೆ ತಿಳಿದು ಹೋಯಿತು. ಆ ಕಂಚಿನ ಕಂಠ ತಾನೇ ಲಜಪತ್‌ರಾಯ್ ಎಂದು ಸ್ಪಷ್ಟವಾಗಿ ಸಾರಿ ಹೇಳಿತು. ಲಾಲಾ ಲಜಪತ್‌ರಾಯ್ ಅವರನ್ನು ಜನ ಗಡ್ಡ, ಕೂದಲಿಗಿಂತ ಹೆಚ್ಚಿನದಾಗಿ ಅವರ ಧ್ವನಿ ಮತ್ತು ಮಾತುಗಳಿಂದ ಗುರುತಿಸುವಂತಾಗಿತ್ತು.

ಲಾಲಾ ಲಜಪತ್‌ರಾಯ್ ಬಂಗಾಳಕ್ಕೆ ಆಗಮಿಸಿದ ನಂತರ ತಮ್ಮ ಅತಿಥೇಯ ರಾಯ್ ಬಹುದ್ದೂರ್ ರಾಲಿಯಾ ರಾಮ್ ಅವರ ಮನೆಯಲ್ಲಿ ಬೀಡುಬಿಟ್ಟಿದ್ದರು. ಅವರು ಓರ್ವ ಪಂಜಾಬಿ ಹಾಗೂ ಆರ್ಯ ಸಮಾಜದ ಕಾರ್ಯಕರ್ತರಾಗಿದ್ದವರು. ಬಂಗಾಳದ ಪೂರ್ವ ರೈಲ್ವೆಯಲ್ಲಿ ಸುಪರಿಂಟೆಂಡೆಂಟ್ ಎಂಜಿನಿಯರ್ ಆಗಿ ವೃತ್ತಿಯಲ್ಲಿ ಇದ್ದವರು. ಆ ಮನೆಗೆ ಕೇಶ, ಗಡ್ಡಧಾರಿಯಾಗಿ ಹೋದ ಲಜಪತ್‌ರಾಯ್ ಕಾಂಗ್ರೆಸ್ ಅಧಿವೇಶನಕ್ಕೆ ಬಂದಾಗ ಕೇಶ ಮುಂಡನಗೊಂಡಿದ್ದರು. ಆ ದಿನ ಹೆಚ್ಚು ಆ ಬೆಳವಣಿಗೆಯೇ ಕುತೂಹಲವಾಗಿತ್ತು. ಸಂಜೆ ಲಜಪತ್‌ರಾಯ್ ತಂಗಿದ್ದ ಮನೆಗೆ ಭೇಟಿ ನೀಡಿದ ಅನೇಕರು ಈ ಬಗ್ಗೆ ಪ್ರಶ್ನಿಸಿದ್ದು ಉಂಟು. ನಂತರ ಲಜಪತ್‌ರಾಯ್ ಕೇಶ, ಗಡ್ಡ ಬೆಳೆಸಲಿಲ್ಲ. ಆದರೆ ಅವರ ಜನಪ್ರಿಯ ಮೀಸೆಗೆ ಕೊನೆಯತನಕ ಧಕ್ಕೆಯಾಗಲಿಲ್ಲ.

1906ರ ಕೊನೆಯ ದಿನಗಳು, 1907ರ ಆರಂಭದ ದಿನಗಳು ತೀರಾ ಕಠೋರ ಎನಿಸಿದವು. ಬಂಗಾಳದಲ್ಲಿ ಆರಂಭಗೊಂಡ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಆಂದೋಲನ ಪಂಜಾಬಿನಲ್ಲಿ ಕಟ್ಟಾ ಅನುಕರಣೆ ಕಂಡಿತು. ಅದಕ್ಕಿಂತ ಹೆಚ್ಚಿನದಾಗಿ ಲಾರ್ಡ್ ಕರ್ಜನ್ ಬಿತ್ತಿದ್ದ ಅಸಮಾಧಾನದ ಬೀಜಗಳನ್ನು ಲೆಫ್ಟಿನೆಂಟ್ ಗವರ್ನರ್ ಸರ್ ಡೆಂಜಿಲ್ ಇಬ್ಬೆಟ್‌ಸನ್ ಇನ್ನಷ್ಟು ಅಪಾಯಕಾರಿಯಾಗಿ ಬಿತ್ತರಿಸತೊಡಗಿದ್ದ. ಆತನ ಕಾಲುವೆ ವಸಾಹತು ಶಾಸನ, ನೀರಿನ ತೆರಿಗೆ ದರ ಏರಿಕೆ, ಭೂ ಕಂದಾಯ ಏರಿಕೆಗಳು ದೇಶವಾಸಿಗಳ ರಕ್ತ ಹೀರುವಂತಿದ್ದವು.

ಬಂಗಾಳದ ಚಳವಳಿ ಸಾಮಾನ್ಯ ವ್ಯವಹಾರದ ರೀತಿಯಂತಿದ್ದರೆ ಪಂಜಾಬಿನ ಆಂದೋಲನ ಕೃಷಿಮೂಲದ್ದಾಗಿತ್ತು. ಹಳ್ಳಿ, ಹಳ್ಳಿಯಲ್ಲೂ ಜನ ಆಂಗ್ರೇಜಿ ಆಡಳಿತದ ವಿರುದ್ಧ ರೊಚ್ಚಿಗೆದ್ದಿದ್ದರಿಂದ ಅಲ್ಲಿನ ಚಳವಳಿ ವಿಕೋಪಕ್ಕೆ ಹೋಯಿತು. ಬಂಗಾಳದಲ್ಲಿ

ಅರವಿಂದರ ಸಂಪಾದಕತ್ವದ 'ವಂದೇ ಮಾತರಂ' ಜನರಲ್ಲಿ ಜಾಗೃತಿ ಮೂಡಿಸುತ್ತಿತ್ತು. ಮಹಾರಾಷ್ಟ್ರದಲ್ಲಿ ತಿಲಕರ 'ಕೇಸರಿ' ಆ ಕೆಲಸವನ್ನು ನಿತ್ಯನೂತನಗೊಳಿಸುತ್ತಿತ್ತು. ಪಂಜಾಬಿನಲ್ಲಿ ಅತಾವಳೆ ಸಂಪಾದಕತ್ವದಲ್ಲಿ, ಲಜಪತ್‌ರಾಯ್ ಮಾರ್ಗದರ್ಶನದಲ್ಲಿ 'ದಿ ಪಂಜಾಬಿ' ಕಟ್ಟಾ ರಾಷ್ಟ್ರೀಯತೆಯನ್ನು ದೇಶವಾಸಿಗಳ ಜೀವಮುಸಿರು ಮಾಡುತ್ತಿತ್ತು. ವಸ್ತುತಃ ಅವರೇ ಪತ್ರಿಕೆಯ ಸಂಪಾದಕರು. ಅವರ ದಿನ ನಿತ್ಯದ ಕಲಾಪ ಪತ್ರಿಕಾಲಯದ ಭೇಟಿಯಿಂದ ಆರಂಭಗೊಂಡು ಸಂಜೆ ಅಂತಿಮವಾಗಿ ಕರಡುಗಳನ್ನು ತಿದ್ದಿಕೊಡುವ ಮೂಲಕ ಅಂತ್ಯಗೊಳ್ಳುತ್ತಿತ್ತು. ಸಾಪ್ತಾಹಿಕವಾಗಿ ಆರಂಭಗೊಂಡ 'ದಿ ಪಂಜಾಬಿ' ಈ ವೇಳೆಗೆ ವಾರಕ್ಕೆ ಮೂರು ಬಾರಿ ಪ್ರಕಟಗೊಳ್ಳುತ್ತಿತ್ತು. ಪತ್ರಿಕೆಯ ಪ್ರಸಾರ ಮತ್ತು ಪ್ರಭಾವ ಪ್ರತಿ ಸಂಚಿಕೆಯಲ್ಲಿ ಇಮ್ಮಡಿಗೊಳ್ಳುತ್ತಿತ್ತು. ಆ ಪತ್ರಿಕೆಯ ಬಗ್ಗೆ ಸರ್ಕಾರದ ಅಸಹನೆಯೂ ದಿನೇ ದಿನೇ ಪಿಕೃತವಾಗತೊಡಗಿತು. ಇಂದಲ್ಲ, ನಾಳೆ 'ದಿ ಪಂಜಾಬಿ'ಗೆ ಬ್ರಿಟಿಷರ ಆಡಳಿತದ ಕೆಂಗಣ್ಣು ಒಕ್ಕರಿಸದೇ ಇರದು ಎಂಬ ಭಾವನೆ ದಿನೇ ದಿನೇ ಮೂಡಲಾರಂಭಿಸಿತು. ಆದರೂ ಪತ್ರಿಕೆಯ ದಿಟ್ಟತನ ಹಿಮ್ಮೆಟ್ಟಲಿಲ್ಲ. ಲಜಪತರು ಪ್ರತಿಭಾನ್ವಿತ ವಕೀಲರೂ ಆಗಿದ್ದರಿಂದ ಪದಗಳನ್ನು ಪರಿಷ್ಕರಿಸಿ ಬಳಸುತ್ತಿದ್ದರು.

ಆದರೂ ಆ ದಿನ ಬಂದೇ ಬಿಟ್ಟಿತು. ಸರ್ಕಾರ ಪತ್ರಿಕೆಯ ಸಂಪಾದಕ ಕೆ.ಕೆ. ಅತಾವಳೆ ಮತ್ತು ಮುದ್ರಕ ಜಸವಂತ್‌ರಾಯ್ ವಿರುದ್ಧ ಕ್ರಮಕ್ಕೆಗೊಂಡಿತು. ಪೊಲೀಸ್ ಪೇದೆಯೊಬ್ಬನ ಸಾವಿನ ಸುತ್ತಲ ರಹಸ್ಯಕ್ಕೆ ಸಂಬಂಧಪಟ್ಟ ಲೇಖನವನ್ನು ಸಾಮ್ರಾಜ್ಯಷಾಹಿ ಸರ್ಕಾರ ಆಕ್ಷೇಪಾರ್ಹ ಎಂದು ಪರಿಗಣಿಸಿತ್ತು. ಲಜಪತ್‌ರಾಯ್ ಆ ಲೇಖನದ ಕರಡನ್ನು ನೋಡಿರಲಿಲ್ಲ. ಕಾನೂನು ಕ್ರಮ ಪತ್ರಿಕೆಗೆ ವಾಸ್ತವದಲ್ಲಿ ವರದಾನವಾಯಿತು. 'ದಿ ಪಂಜಾಬಿ' ಜನಪ್ರಿಯತೆ ಹೆಚ್ಚಿತು. ಅದು ಹಿಂದೆಂದಿಗಿಂತಲೂ ಪ್ರಭಾವಿಯಾಯಿತು. ವಿಶೇಷವೆಂದರೆ ಆ ಲೇಖನದಲ್ಲಿದ್ದ ಪ್ರತಿ ಅಂಶವೂ ನಂಬಿಕೆಗೆ ಅರ್ಹವಾಗಿತ್ತು. ಪತ್ರಿಕೆಗೆ ಮುಸ್ಲಿಂ ಸಮುದಾಯದ ಅನುಕಂಪವೂ ದೊರೆಯಿತು. ಕಾರಣ ಆ ಲೇಖನದ ಕೇಂದ್ರಬಿಂದುವಾಗಿದ್ದ ಪೊಲೀಸ್ ಪೇದೆ ಓರ್ವ ಮುಸಲ್ಮಾನ. ಜಸವಂತ್‌ರಾಯ್ ಮತ್ತು ಅತಾವಳೆ ಅವರನ್ನು ಬಂಧಿಸಲಾಯಿತು. ಜಾಮೀನಿನ ಮೇಲೆ ಬಿಡುಗಡೆಯೂ ಆಯಿತು. ವಿಚಾರಣೆ ನಡೆದು ಶಿಕ್ಷೆಗೆ ಒಳಪಡಿಸಲಾಯಿತು. ಅದೂ ಕಠಿಣ ಶಿಕ್ಷೆ.

'ದಿ ಪಂಜಾಬಿ' ಪತ್ರಿಕೆ ವಿರುದ್ಧ ಜರುಗಿಸಿದ ಕಾನೂನು ಕ್ರಮ ಪಂಜಾಬಿನಾದ್ಯಂತ ಉದ್ರಿಕ್ತ ಪರಿಸ್ಥಿತಿ ಉಂಟು ಮಾಡಿತು. ಸಂಪಾದಕರು ಮತ್ತು ಮುದ್ರಕರನ್ನು ಶಿಕ್ಷೆಗೆ ಒಳಪಡಿಸಿದಂದು ಲಾಹೋರಿನಲ್ಲಿ ಉಂಟಾದ ಉದ್ರಿಕ್ತ ಪರಿಸ್ಥಿತಿ ಆ ದಿನಗಳಲ್ಲಿ ಹಿಂದೆಂದೂ ಕಂಡು ಬಂದಿರಲಿಲ್ಲ.

ಮುಂದೆ ಸತ್ರ ನ್ಯಾಯಾಲಯವು ಜಸವಂತ್‌ರಾಯ ಅವರ ಶಿಕ್ಷೆಯನ್ನು ಆರು ತಿಂಗಳಿಗೆ ಇಳಿಸಿತು. ಪ್ರಭಾರ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಯಿತು.

ಆ ದಿನಗಳಲ್ಲಿ ಗೋಖಲೆ ಉತ್ತರ ಭಾರತದ ಪ್ರವಾಸದಲ್ಲಿದ್ದರು. ಆ ವೇಳೆಗೆ ಲಜಪತ್‌ರಾಯ್ ಮತ್ತು ಗೋಖಲೆ ರಾಜಕೀಯ ಚಿಂತನೆಯಲ್ಲಿ ಭಿನ್ನಮತಿಗಳಾಗಿದ್ದರು. ಅಂದ ಮಾತ್ರಕ್ಕೆ ವೈಯಕ್ತಿಕ ಆದರ, ಅಭಿಮಾನಿಗಳಿಗೆ ಕಿಂಚಿತ್ತೂ ಧಕ್ಕೆಯಾಗಿರಲಿಲ್ಲ.

ತಾವು ಅಧ್ಯಕ್ಷರಾಗಿದ್ದ ಭಾರತೀಯ ಸಂಘದ ಪರವಾಗಿ ಲಜಪತರು ಗೋಖಲೆ ಅವರನ್ನು ಲಾಹೋರಿಗೆ ಆಹ್ವಾನಿಸಿದರು. ಗೋಖಲೆ ಹಿಂದೆ ಮುಂದೆ ನೋಡದೆ ಒಪ್ಪಿಕೊಂಡರು.

ಅವರು ಲಾಹೋರಿಗೆ ಬಂದ ದಿನ ಅದೇ ಉದ್ರಿಕ್ತ ದಿನವಾಗಿತ್ತು. ಜಸವಂತ್‌ರಾಯ್ ಅವರನ್ನು ಎರಡು ವರ್ಷ ಕಠಿಣ ಶಿಕ್ಷೆಗೆ ಒಳಪಡಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನ ಅದಾಗಿತ್ತು. ನಗರಿಯಲ್ಲೆಲ್ಲಾ ಜನ ಗುಂಪು ಗುಂಪಾಗಿ ಸೇರಿ 'ದಿ ಪಂಜಾಬಿ' ನಾಯಕರಿಗೆ ಜಯಕಾರ ಹಾಕುತ್ತಿದ್ದರು. ಆ ಮಧ್ಯಾಹ್ನ ಗೋಖಲೆಯವರ ಆಗಮನವನ್ನು ವರದಿ ಮಾಡಲು ರೈಲ್ವೆ ನಿಲ್ದಾಣಕ್ಕೆ ಬಂದಿದ್ದ ಆಂಗ್ಲೋ ಇಂಡಿಯನ್ ವರದಿಗಾರನನ್ನು ಹುರಿದುಂಬಿಸಿತು. ಆತನಿಗೂ ಅಧ್ಭುತ ಸ್ವಾಗತ ನೀಡಲಾಯಿತು.

ಗೋಖಲೆ ಅವರಿಗೆ ಪ್ರಚಂಡ ಸ್ವಾಗತ ದೊರೆಯಿತು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನಸಂದಣಿಯಲ್ಲಿ ಉತ್ಸಾಹ ಒಂದು ಕಡೆ. ಅಲ್ಲಿದ್ದ ಪೋಲೀಸರನ್ನು ಕಂಡಾಗ ಸಿಟ್ಟು ಒಂದು ಕಡೆ. ಜನಸಮೂಹ ಮತ್ತು ಪೋಲೀಸರ ನಡುವೆ ಸೆಣಸಾಟವೇ ನಡೆದು ಹೋಯಿತು. ಲಾಹೋರಿನ ಜನತೆಯ ಹುಮ್ಮಸ್ಸು, ಉತ್ಸಾಹ ಮುಗಿಲೇಳುತ್ತಿದ್ದ ಜಯಘೋಷಣೆ ಕಂಡು ಗೋಖಲೆ ಮಂತ್ರಮುಗ್ಧರಾದರು.

ಜಾಮೀನಿನ ಮೇಲೆ ಬಿಡುಗಡೆಯಾದ ಜಸವಂತ್‌ರಾಯ್ ಮತ್ತು ಅಠಾವಳೆ ಅವರನ್ನು ಅನಾರ್ಕಲಿಗೆ ಮೆರವಣಿಗೆಯಲ್ಲಿ ಕರೆದು ತರಲಾಯಿತು. ಜನಸಮುದಾಯ ಈ ಇಬ್ಬರು ಪತ್ರಿಕಾ ನೇತಾರರನ್ನು ಮೇಲೆತ್ತಿ ಮೆರೆಸಿತು. ಗೋಖಲೆಯವರಿದ್ದ ಮೆರವಣಿಗೆಯ ಗಾಡಿಯಲ್ಲಿ ಅವರನ್ನು ಲಜಪತರ ಜೊತೆಯಲ್ಲಿ ಕೂಡಿಸಿ ಸಂಭ್ರಮ ಆಚರಿಸಿತು.

'ದಿ ಪಂಜಾಬಿ' ಪತ್ರಿಕೆಯ ಕಾನೂನು ಕ್ರಮಗಳು ಜರುಗುತ್ತಿದ್ದ ಸಮಯದಲ್ಲೇ ಲಜಪತರನ್ನು ಒಂದು ವಿಯೋಗ ಬಾಧಿಸಿತು. ಲಜಪತರ ಏಕಮಾತ್ರ ಸಹೋದರಿ ಪಾರ್ವತಿದೇವಿ ಅವರ ಪತಿ ಡೆಹರಾಡೂನ್‌ನ ಡಾ. ಜಯಚಂದ್ರ ಅಕಾಲ ಮೃತ್ಯುವಿಗೆ ತುತ್ತಾದರು. ಅವರು ಯುವ ಪತ್ನಿ ಹಾಗೂ ಏಕಮಾತ್ರ ಪುತ್ರನನ್ನು ಅಗಲಿದ್ದರು. ನ್ಯಾಯಾಲಯದಲ್ಲಿ 'ದಿ ಪಂಜಾಬಿ' ವಾದ ವಿವಾದಗಳು ನಡೆಯುತ್ತಿದ್ದಾಗ ಆ ಸುದ್ದಿ ಲಜಪತರಿಗೆ ಬಂದು ಮುಟ್ಟಿತು. ಲಜಪತರಿಗೆ ತೀವ್ರ ಆಘಾತವಾಯಿತಾದರೂ ಅವರು ಕರ್ತವ್ಯ ವಿಮುಖರಾಗಲಿಲ್ಲ. ಆ ದಯನೀಯ ಸ್ಥಿತಿಯನ್ನು ಅವರು ಪ್ರಬಲ ಚಿತ್ತಶಕ್ತಿಯಿಂದ ನಿಗ್ರಹಿಸಿಕೊಂಡರು. ತಮ್ಮ ಆಗಿನ ಜವಾಬ್ದಾರಿಯನ್ನು ಕೈಬಿಡಲಿಲ್ಲ. ತಮ್ಮ ಮಗನಿಗೆ ಸಮಂಜಸ ತಿಳುವಳಿಕೆ ನೀಡಿ ಡೆಹರಾಡೂನಿಗೆ ಕಳುಹಿಸಿಕೊಟ್ಟರು. ಕಾನೂನು ಕಲಾಪದಲ್ಲಿ ತಾವು ಮಗ್ನರಾದರು.

ತಂಗಿಯನ್ನು ಅವರು ಅಪಾರವಾಗಿ ಪ್ರೀತಿಸುತ್ತಿದ್ದರು. ಮುಂದೆ ಅವರು ಆಕೆಯನ್ನು ತಮ್ಮ ಸ್ವಂತ ಕೆಲಸಗಳಲ್ಲಿ ಭಾಗಿಯಾಗುವಂತೆ ನೋಡಿಕೊಂಡರು. ಪಾರ್ವತಿದೇವಿ ಅಣ್ಣನಂತೆ ಕುಶಾಗ್ರಮತಿ. ಸಾರ್ವಜನಿಕ ಸಭೆಗಳಲ್ಲಿ ಮುಕ್ತ ಭಾಷಣಕಾರ್ತಿ

ಎನಿಸಿಕೊಂಡರು. ಅಸಹಕಾರ ಚಳವಳಿಯಲ್ಲಿ ಕ್ರಿಯಾಶೀಲರಾಗಿ ತುರಂಗವಾಸವನ್ನು ಅನುಭವಿಸಿದರು ಲಜಪತರು ನಿಧನ ಹೊಂದಿದ ಎಂಟು ವರ್ಷಗಳ ನಂತರ ಪ್ರಾಂತೀಯ ವಿಧಾನಸಭೆಗಳಿಗೆ ಚುನಾವಣೆ ನಡೆಸುವ ಹೋರಾಟದಲ್ಲಿ ಕಾಂಗ್ರೆಸ್ ಯಶಸ್ವಿಯಾದಾಗ ಆಕೆ ಲಾಹೋರ್ ನಗರಿಯ ಮಹಿಳಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. ದುರಾದೃಷ್ಟ, ತೀವ್ರ ಕಾಯಿಲೆಗೆ ತುತ್ತಾಗಿ 1938ರ ಜನವರಿಯಲ್ಲಿ ಪರ್ಬತಿದೇವಿ ಈ ಲೋಕ ತ್ಯಜಿಸಿದರು.

* * *

ಅಧ್ಯಾಯ-23

ಪಂಜಾಬಿನಲ್ಲಿ ಬಂಡಾಯ

1907 ನಾಡಿನಾದ್ಯಂತ ಚಳವಳಿಯ ಅಲೆ ಎದ್ದ ವರ್ಷ. ಪಂಜಾಬಿನಲ್ಲಿ ಈ ಚಳವಳಿ ಕೃಷಿಕರ ಬಂಡಾಯದ ರೂಪದಲ್ಲಿ ಉಗ್ರ ರೂಪ ತಾಳಿತು. ಆ ಚಳವಳಿಯನ್ನು ಜಮೀನುದಾರರ ಚಳವಳಿ ಎಂದೇ ಸಾಮಾನ್ಯವಾಗಿ ಕರೆಯಲಾಗಿದೆ. ಜಮೀನುದಾರರೆಂದರೆ ಹೊಲದ ಒಡೆತನವನ್ನು ಹೊಂದಿರುವವರು ಎಂದು ಐದು ನದಿಗಳ ಆ ರಾಜ್ಯದಲ್ಲಿ ಬಳಕೆಯಾಗುತ್ತಿತ್ತು. ಪರಂಗಿ ಆಡಳಿತ ಜಾರಿಗೆ ತಂದ ಹೊಸ ಕಾಯ್ದೆಗಳು ಜಮೀನುದಾರರಲ್ಲಿ ತೀವ್ರ ಅತೃಪ್ತಿ ಉಂಟು ಮಾಡಿದವು... ದಿನ ಕಳೆದಂತೆ ಅತೃಪ್ತಿ ದಾವಾನಲವಾಗತೊಡಗಿತು. ಕಾಲುವೆ ವಸಾಹತು ವಿಧೇಯಕವು ಕಾಲುವೆ ನೀರಾವರಿ ಪ್ರದೇಶದಲ್ಲಿ ರೈತರ ಸಮೃದ್ಧಿಯನ್ನು ಹಾಳು ಮಾಡುತ್ತಿತ್ತು. ಪರಿಸ್ಥಿತಿ ಗಂಭೀರವಾಯಿತು. ಪಶ್ಚಿಮ ಪಂಜಾಬಿನಲ್ಲಿ ರಾವಲ್ಪಿಂಡಿಯು ರೈತ ಪ್ರಕೋಪದ ಪಟ್ಟಣವೆನಿಸಿತು. ಬಿಳಿಯರ ಆಡಳಿತ ಭೂ ಕಂದಾಯದ ದರವನ್ನು ಹಿಗ್ಗಾಮುಗ್ಗಾ ಹೆಚ್ಚಿಸಿದ್ದು ರಾವಲ್ಪಿಂಡಿಯ ಬೇಗುದಿಗೆ ಕಾರಣವಾಗಿತ್ತು. ಲಜಪತರು ಸರ್ಕಾರದ ವಿರುದ್ಧ ತಮ್ಮ ಧ್ವನಿ ಸೇರಿಸಿದರು. ಆದರೆ ನೇರವಾಗಿ ಅವರು ಚಳವಳಿಗೆ ಇಳಿಯಲಿಲ್ಲ. ಹಾಗೆಂದು ಸುಮ್ಮನಿರಲೂ ಇಲ್ಲ. ಅವರು ಸುಮ್ಮನಿರಲು ಜಮೀನುದಾರರು ಬಿಡುತ್ತಲೂ ಇರಲಿಲ್ಲ.

ಹೋರಾಟದ ಯುವ ಕಿಡಿಗಳಲ್ಲಿ ಅಜಿತ್ ಸಿಂಗ್ ಆಕರ್ಷಣೆಯ ಹೆಸರು. 'ಭಾರತಮಾತ' ಸಂಘಟಕ ಆತ. ಭಗತ್ ಸಿಂಗ್ ಅವರ ತಂದೆ ಕಿಷನ್ ಸಿಂಗ್ ಸಹೋದರ ಈ ಅಜಿತ್ ಸಿಂಗ್. ಆತನೂ ಸಹ ಜಲಂಧರ್‌ನಲ್ಲಿ ಆಂಗ್ಲೋ ಸಂಸ್ಕೃತ ವಿದ್ಯಾರ್ಥಿ. ಆರ್ಯ ಸಮಾಜದ ಹಿರಿಯ ನಾಯಕ ಸಾಯಿನ್ ದಾಸ್ ಅವರ ಜ್ಯೇಷ್ಠ ಪುತ್ರ. ಸುಂದರ್ ದಾಸ್ ಮುಖ್ಯ ಅಧ್ಯಾಪಕರಾಗಿದ್ದ ಅಜಿತ್ ಸಿಂಗ್ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿ. ಲಜಪತರು ತಮ್ಮ ಅಭಿಪ್ರಾಯವನ್ನು ಹೀಗೆ ಬರೆದಿಟ್ಟಿದ್ದಾರೆ. "ಆ ಇಬ್ಬರು ಸಹೋದರರಲ್ಲಿ ದೇಶಭಕ್ತಿಯ ಬೀಜವನ್ನು ಬಿತ್ತಿದ್ದು ಲಾಲಾ ಸುಂದರ್‌ದಾಸ್ ಎಂಬುದರಲ್ಲಿ ಅನುಮಾನವೇ ಇಲ್ಲ."

ಕಿಷನ್‌ಸಿಂಗ್ ಲಜಪತ್‌ರಾಯ್ ಅವರಿಗೆ ನಿಕಟವಾಗಿದ್ದು ಪರಿಹಾರ ಕಾರ್ಯದಲ್ಲಿ ಮಗ್ನರಾಗಿದ್ದಾಗ, 1897ರ ದುರ್ಭಿಕ್ಷ ಕಾಲದಲ್ಲಿ. "ಆ ಶಿಬಿರಗಳಲ್ಲಿ ಅವರು ಅತ್ಯುತ್ತಮ ಸೇವೆ ಸಲ್ಲಿಸಿದರು. ಅನಾಥರ ಒಂದು ತಂಡವನ್ನು ಅವರು ಕರೆತಂದ ನಂತರ ಅವರ ಕಾರ್ಯ ಶ್ರದ್ಧೆಯ ಬಗ್ಗೆ ನನ್ನಲ್ಲಿ ವಿಶ್ವಾಸ ಹುಟ್ಟಿತು. ಲಾಹೋರಿನಲ್ಲಿ ಹೊಸದಾಗಿ ಆರಂಭಿಸಿದ ಅನಾಥಾಶ್ರಮಕ್ಕೆ ಅವರನ್ನು ಸುಪರಿಂಟೆಂಡೆಂಟ್ ಆಗಿ ನೇಮಕ ಮಾಡಿದೆ." ಎಂದು ಲಜಪತರು ನೆನಪು ಮಾಡಿಕೊಂಡಿದ್ದಾರೆ. ಆ ಅನಾಥಾಶ್ರಮಕ್ಕೆ ಸ್ವತಃ ಲಜಪತರೇ ಅನೇಕ

ವರ್ಷಗಳ ಕಾಲ ಕಾರ್ಯದರ್ಶಿಯಾಗಿದ್ದರು. ಸುಪರಿಂಟೆಂಡೆಂಟ್ ಆಗಿ ಕಿಷನ್ ಸಿಂಗ್ ನಿರ್ವಹಿಸುತ್ತಿದ್ದ ಜವಾಬ್ದಾರಿಯನ್ನು ಕಂಡು ತೃಪ್ತಿಪಟ್ಟುಕೊಳ್ಳುತ್ತಿದ್ದರು. ಆದರೆ ಅವರ ಸಹೋದರ ಅಜಿತ್ ಸಿಂಗ್ ವಿಷಯದಲ್ಲಿ ಅವರು ಅಷ್ಟೇನೂ ಆಸಕ್ತಿ ವಹಿಸಲಿಲ್ಲ.

ಲಜಪತರು ತಮ್ಮ ನೆನಪಿನಲ್ಲಿ, "ಆ ದಿನಗಳಲ್ಲಿ ಅಜಿತ್ ಸಿಂಗ್ ಡಿ.ಎ.ವಿ. ಕಾಲೇಜಿನ ಓರ್ವ ವಿದ್ಯಾರ್ಥಿಯಾಗಿದ್ದ. ದುಂದುವೆಚ್ಚ ಮತ್ತು ಹುಡುಗಾಟದ ಸ್ವಭಾವ ಅವನದಾಗಿತ್ತು... ನನಗೆ ಅವನಿಗಿಂತ ಕಿಷನ್ ಸಿಂಗ್ ಅಚ್ಚುಮೆಚ್ಚು ಎನಿಸಿದ್ದ. 1906ರ ಕಾಂಗ್ರೆಸ್ ಅಧಿವೇಶನದಲ್ಲಿ ಅಜಿತ್ ಸಿಂಗ್ ತೀವ್ರಗಾಮಿಗಳ ಬಣದಲ್ಲಿದ್ದದ್ದನ್ನು ಗಮನಿಸಿದೆ. ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನು ಮಾಡತೊಡಗಿದ್ದ. ಪತ್ರಿಕೆಗಳಿಗೂ ಲೇಖನಗಳನ್ನು ಕೊಡುತ್ತಿದ್ದ. 1907ರಲ್ಲಿ ಸೂಫಿ ಅಂಬಾ ಪ್ರಸಾದ್ ಜೊತೆಗೂಡಿ 'ಭಾರತಮಾತಾ' ಹೆಸರಿನ ಸಂಘಟನೆಯೊಂದನ್ನು ಕಟ್ಟಿದ. ಆ ಸಂಘಟನೆ ಯುವಕರಿಂದ ಕೂಡಿತ್ತು. ಅದು ಬಹಿರಂಗವಾಗಿ ಕಾಂಗ್ರೆಸ್ಸಿನ ತೀವ್ರಗಾಮಿ ಬಣದ ಧ್ಯೇಯೋದ್ದೇಶಗಳನ್ನು ಬೆಂಬಲಿಸುತ್ತಿತ್ತು. ಬ್ರಿಟಿಷ್ ಸರ್ಕಾರದ ವಿರುದ್ಧ ಉಗ್ರವಾದ ಭಾಷಣಗಳನ್ನು ಆ ಯುವ ಜನರು ಮಾಡುತ್ತಿದ್ದರು..." ಎಂದು ಚಿತ್ರಿಸಿದ್ದಾರೆ.

ಲಜಪತ್‌ರಾಯ್ 'ಭಾರತಮಾತಾ' ಸಂಘಟನೆಯೊಂದಿಗೆ ಯಾವ ಸಂಬಂಧವನ್ನು ಹೊಂದಿರಲಿಲ್ಲ. ಆ ಸಂಘಟನೆಯ ಯುವಕರು ಮಾಡುತ್ತಿದ್ದ ನಾನಾ ರೀತಿಯ ಚಟುವಟಿಕೆಗಳನ್ನು ಅವರು ಮಾನ್ಯ ಮಾಡುತ್ತಲೂ ಇರುತ್ತಿರಲಿಲ್ಲ. ಆರಂಭದಿಂದಲೂ ಸಂಘಟನೆಯ ಯುವಕರು ಲಜಪತರ ನೆರವನ್ನು ಬಯಸುತ್ತಲೇ ಇದ್ದರು. ತಾವು ದೇಶಭಕ್ತರೆಂಬ ಭಾವನೆ ಲಜಪತರಲ್ಲಿದೆ ಎಂದು ಅವರು ಮನವರಿಕೆ ಮಾಡಿಕೊಂಡಿದ್ದರು.

ಲಜಪತರು ಅವನ್ನೆಲ್ಲಾ ಹೀಗೆ ನಿರೂಪಿಸಿದ್ದಾರೆ, "ಆ ಸಮಯದಲ್ಲಿ ಒಮ್ಮೆ ಅಜಿತ್ ಸಿಂಗ್ ನನ್ನನ್ನು ಭೇಟಿ ಮಾಡಿದ. ಹಣಕಾಸಿನ ನೆರವು ಕೇಳಿದ. ನಾನು ವಿಧಿಸಿದ ಷರತ್ತುಗಳನ್ನು ಅಳವಡಿಸಿಕೊಳ್ಳಲು ಆತ ಸಮ್ಮತಿಸಲಿಲ್ಲ. ನಾನು ನಿರಾಕರಿಸಿದೆ. ಆದರೆ ಆತ ಬಿಡಲಿಲ್ಲ. ಮತ್ತೆ ಮತ್ತೆ ಭೇಟಿಯಾಗಿ ಹಣಕಾಸಿನ ನೆರವಿಗಾಗಿ ಒತ್ತಾಯಿಸತೊಡಗಿದ."

ಪಂಜಾಬಿನ ಜಮೀನುದಾರರ ಚಳವಳಿಯಲ್ಲಿ ಅಜಿತ್ ಸಿಂಗ್ ಮತ್ತು ಆತನ 'ಭಾರತಮಾತಾ' ಸಂಘಟನೆ ಪ್ರಮುಖ ಪಾತ್ರ ವಹಿಸಿತು. ಹುಟ್ಟಿನಿಂದ ಜಾಟ್ ಸಮುದಾಯದವನಾದ ಆತನಿಗೆ ರೈತರ ಪರವಾಗಿ ಮಾತನಾಡುವ ಎಲ್ಲಾ ಹಕ್ಕು ಇತ್ತು. ಆದರೆ ಇತರ ಜಾಟ್ ಮುಖಂಡರಂತೆ ಅಜಿತ್ ಸಿಂಗ್ ಮತ್ತು ಆತನ ಸಹೋದರ ಕೇವಲ ವಸಾಹತು ಕಾಯ್ದೆ ರದ್ದಿಗಾಗಿ ಅಷ್ಟೇ ಚಳವಳಿಯಲ್ಲಿ ಪಾಲ್ಗೊಳ್ಳಲಿಲ್ಲ. ಪರಂಗಿ ಆಡಳಿತದ ವಿರುದ್ಧ ಜನರಲ್ಲಿ ಅತೃಪ್ತಿ ಉಂಟು ಮಾಡುವುದು ಅವರ ಉದ್ದೇಶವಾಗಿತ್ತು.

ದಿನ ಕಳೆದಂತೆ ಅಜಿತ್ ಸಿಂಗ್ ಓರ್ವ ಪ್ರಭಾವಿ ಹಾಗೂ ಸಮರ್ಥ ಹೋರಾಟಗಾರನಾಗಿ ರೂಪುಗೊಳ್ಳುತ್ತಾ ಬಂದ. ಆತ ಪಂಜಾಬಿನಾದ್ಯಂತ ಓಡಾಡಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ. ಆತನ ಭಾಷಣಗಳಿಗೆ ಜನ ಮುಗಿಬೀಳುತ್ತಿದ್ದರು. ಕಾಲುವೆ ವಸಾಹತು ಕಾಯ್ದೆ ರದ್ದಿಗಾಗಿ ಲಯಲ್‌ಪುರದಲ್ಲಿ ಚಳವಳಿ

ಇನ್ನಷ್ಟು ಉಗ್ರವಾಯಿತು. ಪಂಜಾಬಿನ ಇತರ ಕಡೆಗಳಿಗಿಂತ ವಸಾಹತು ವಿಧೇಯಕವನ್ನು ಪ್ರಾರಂಭಿಸಿದ ಅಲ್ಲಿನ ಚಳವಳಿ ಫರಂಗಿ ರಾಜ್‌ಗೆ ಭಾರೀ ತಲೆನೋವು ತಂದಿತು. ಆ ಪ್ರದೇಶದ ನಾಯಕರಲ್ಲಿ ಚೌಧರಿ ಸಾಹೇಬ್-ಉದ್-ದಿನ್ ಹೆಸರಾದವರು. ಮುಂದೆ ಪಂಜಾಬ್ ವಿಧಾನಸಭೆಯಲ್ಲಿ ಬೆಂಕಿಯ ಕಿಡಿ ಎನಿಸಿದ ನಾಯಕರು ಅವರು. ಚಳವಳಿಯ ಸಮಯದಲ್ಲಿ ಅವರು ವಕೀಲರಾಗಿದ್ದವರು. ಜಮೀನುದಾರರ ಚಳವಳಿಯಲ್ಲಿ ಸಂಪೂರ್ಣವಾಗಿ ಪಾಲ್ಗೊಂಡಿದ್ದವರು.

1907ರ ಮಾರ್ಚ್ ಅಂತ್ಯ ಇಲ್ಲವೇ ಏಪ್ರಿಲ್ ಆರಂಭದಲ್ಲಿ ಲಯಲ್‌ಪುರದ ಜಮೀನುದಾರ ಸಂಘ ಲಜಪತರಿಗೆ ನಿಮಂತ್ರಣವೊಂದನ್ನು ಕಳುಹಿಸಿತು. ಮತ್ತೆ ಮತ್ತೆ ಒತ್ತಡ ಹಾಕಿ ಅವರು ಬರಲೇಬೇಕೆಂದು ಕೋರತೊಡಗಿತು. ಲಯಲ್‌ಪುರದಲ್ಲಿ ಆ ಸಮಯದಲ್ಲಿ ಏರ್ಪಟ್ಟ ದನಗಳ ಜಾತ್ರೆ ಸಂದರ್ಭಕ್ಕೆ ಲಜಪತರನ್ನು ಕರೆಯಿಸುವುದು ಸಂಘದ ಉದ್ದೇಶವಾಗಿತ್ತು. ಷಹಬುದ್ದೀನ್ ಖುದ್ದಾಗಿ ಆಹ್ವಾನ ನೀಡಿದರು. ಏಪ್ರಿಲ್ 21ರಂದು ರಾಯ್ ಬಹದ್ದೂರ್ ಸಿಂಗ್ ದಯಾಳ್ ಜೊತೆ ಲಜಪತರು ಲಯಲ್‌ಪುರಕ್ಕೆ ಆಗಮಿಸಿದರು. ದಯಾಳ್ ಮುಂದೆ ಜಮ್ಮು ಮತ್ತು ಕಾಶ್ಮೀರದ ವಕೀಲರಾದರು. ಲಜಪತರ ಜೊತೆಯಲ್ಲಿ ಭಕ್ತ ಟೇಕ್ ಚಂದ್, ರಾಂ ದತ್ ಚೌಧರಿ ಮತ್ತು ಜಸ್ವಂತ್ ರಾಯ್ ಸಾಹೇಬ್ ಸಹ ಇದ್ದರು.

ಲಯಲ್‌ಪುರ ಮತ್ತು ರಾವಲ್ಪಿಂಡಿಯಲ್ಲಿ ಚಳವಳಿಯ ದಾವಾನಲ ಮುಗಿಲೆದ್ದಿತು. ಲಯಲ್‌ಪುರದಲ್ಲಿ ಬಹಿರಂಗ ಸಭೆ ನಡೆಯುವುದಕ್ಕೆ ಕೆಲವು ದಿನ ಮುಂಚಿತವಾಗಿ ರಾವಲ್ಪಿಂಡಿಯಲ್ಲಿ ಅಜಿತ್ ಸಿಂಗ್ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ. ರಾವಲ್ಪಿಂಡಿಯ ಸ್ಥಳೀಯ ನಾಯಕರಲ್ಲಿ ಹನ್ಸ್‌ರಾಜ್ ಸಾಹ್ನಿ ಪ್ರಮುಖರು. ಇಬ್ಬರೂ ಹೆಸರಾಂತ ವಕೀಲರು. ಆರ್ಯ ಸಮಾಜದ ಸಕ್ರಿಯ ನಾಯಕರು. ದೇಶಭಕ್ತಿಯ ತುಡಿತವಿದ್ದರಿಂದ ರಾಜಕೀಯದಲ್ಲೂ ಅವರಿಬ್ಬರು ಹೆಚ್ಚಿನ ಆಸಕ್ತಿ ಹೊಂದಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದಲ್ಲಿ ಪಾಲ್ಗೊಳ್ಳುತ್ತಿದ್ದರು. ಇನ್ನೂ ವಿಶೇಷವೆಂದರೆ 'ದಿ ಪಂಜಾಬಿಗೆ' ಖಾತ್ರಿದಾರರಾಗಿ ಅಂಕಿತ ಹಾಕಿದ ಹತ್ತು ಮಂದಿಯಲ್ಲಿ ಅವರಿಬ್ಬರು ಸೇರಿದ್ದರು. ರಾವಲ್ಪಿಂಡಿಯ ವ್ಯವಹಾರಗಳಲ್ಲಿ ಪತ್ರಿಕೆ ಪ್ರಮುಖ ಪಾತ್ರ ವಹಿಸಲು ಅದೂ ಒಂದು ಕಾರಣವಾಗಿತ್ತು. ಕೆಲವು ದಿನಗಳಿಂದ ರಾವಲ್ಪಿಂಡಿಯ ಡೆಪ್ಯುಟಿ ಕಮಿಷನರ್ ಆಂಗ್ಲೋ ವಿರುದ್ಧ ಪತ್ರಿಕೆಯಲ್ಲಿ ಕಟು ಟೀಕೆ ಪ್ರಕಟಗೊಳ್ಳುತ್ತಿತ್ತು. ಸಂಪಾದಕೀಯ ಅಂಕಣದಲ್ಲೂ ಕಟು ಅಭಿವ್ಯಕ್ತಿ ಇರುತ್ತಿತ್ತು. ಅಜಿತ್ ಸಿಂಗ್ ಭಾಷಣಕಾರನಾಗಿದ್ದ ರಾವಲ್ಪಿಂಡಿಯ ಸಭೆಯೊಂದರ ಅಧ್ಯಕ್ಷತೆಯನ್ನು ಗುರುದಾಸ್ ರಾಂ ಸಾಹ್ನಿ ವಹಿಸಿದ್ದರು. ಅವರ ಸಹೋದರ ಹನ್ಸ್‌ರಾಜ್ ಮತ್ತು ವಕೀಲ ಸಂಘದ ಇತರ ಸದಸ್ಯರಾದ ಜಾನಕಿನಾಥ್ ಕೌಲ್ ಹಾಗೂ ಖಜಾನಸಿಂಗ್ ಸಹ ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾವಲ್ಪಿಂಡಿಯ ವಕೀಲ ಸಂಘಗಳ ಪ್ರಮುಖ ವ್ಯಕ್ತಿಯಾಗಿದ್ದ ಅಮೋಲಕ್ ರಾಂ ಸಭೆಯನ್ನು ಸಂಘಟಿಸಿದ್ದ.

'ಸಭೆಯಲ್ಲಿ ಪಾಲ್ಗೊಂಡು ಪ್ರಚೋದಕ ಭಾಷಣಗಳನ್ನು ಮಾಡಿದ ಆರೋಪದ ಮೇರೆಗೆ ನಿಮ್ಮ ಐವರನ್ನು ವಕೀಲ ಸಂಘದಿಂದ ಉಚ್ಚಾಟನೆ ಏಕೆ ಮಾಡಬಾರದು?' ಎಂದು ಜಿಲ್ಲಾ ಮ್ಯಾಜಿಸ್ಟ್ರೇಟರು ನೋಟಿಸ್ ಜಾರಿ ಮಾಡಿದರು. ಆ ನೋಟಿಸ್ ಜಾರಿ ಪಂಜಾಬಿನಾದ್ಯಂತ ಪರಿಸ್ಥಿತಿಯನ್ನು ಉದ್ರಿಕ್ತಗೊಳಿಸಿತು. ಪ್ರಾಂತ್ಯದೆಲ್ಲೆಡೆ ಲಾಲಾ ಹನ್ಸ್‌ರಾಜ್ ಮತ್ತು ಲಾಲಾ ಅಮೋಲಕ್ ರಾಂ ಗೌರವಾನ್ವಿತ ಮುಖಂಡರೆನಿಸಿಕೊಂಡರು. ನೋಟಿಸಿನ ಬಗ್ಗೆ ವಿಚಾರಣೆ ನಡೆದು ಬೇಕಾಗಿದ್ದ ದಿನಕ್ಕೆ ಒಂದು ದಿನ ಮೊದಲು ಲಜಪತ್‌ರಾಯ್ ರಾವಲ್ಪಿಂಡಿಗೆ ಆಗಮಿಸಿದರು. ನ್ಯಾಯಾಲಯದಲ್ಲಿ ನೋಟಿಸಿನ ಬಗ್ಗೆ ವಿಚಾರಣೆ ನಡೆಯುವ ಸಂದರ್ಭದಲ್ಲಿ ಇಡೀ ಪಟ್ಟಣದಲ್ಲಿ ಹರತಾಳ ಆಚರಿಸಲು ನಿರ್ಧರಿಸಲಾಗಿದೆ ಎಂಬ ಸುದ್ದಿ ಅವರಿಗೆ ತಿಳಿಯಿತು.

ರಾವಲ್ಪಿಂಡಿಯಲ್ಲಿ ವಾತಾವರಣ ಗಂಭೀರವಾಗಿತ್ತು. ಐವರು ವಕೀಲರಿಗೆ ನೋಟಿಸ್ ಜಾರಿ ಮಾಡಿದ ಸುದ್ದಿ ಪಟ್ಟಣದಾದ್ಯಂತ ಕುತೂಹಲ ಕೆರಳಿಸಿತ್ತು. ವಿಚಾರಣೆಯ ದಿನ ಕನಿಷ್ಠವೆಂದರೂ 20 ಸಾವಿರ ಮಂದಿ ನ್ಯಾಯಾಲಯದ ಬಳಿ ಸೇರಿದ್ದರು. ನ್ಯಾಯಾಲಯದ ಕೆಲಸ ಕ್ಲುಪ್ತ ಕಾಲಕ್ಕಿಂತ ಸುಮಾರು ಎರಡು ತಾಸು ತಡವಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರು ಆಗಮಿಸಿದರು. ಪರಿಸ್ಥಿತಿ ಉದ್ರಿಕ್ತವಾಗಿತ್ತು. ಅವರು ಇದ್ದಕ್ಕಿದ್ದಂತೆಯೇ ನಾಟಕೀಯ ಪ್ರಕಟಣೆ ನೀಡಿ ''ಪಂಜಾಬ್ ಸರ್ಕಾರದ ಸೂಚನೆಯ ಮೇರೆಗೆ ವಿಚಾರಣೆಯ ಕೆಲಸವನ್ನು ಮುಂದಕ್ಕೆ ಹಾಕಲಾಗಿದೆ'' ಎಂದು ಘೋಷಿಸಿದರು. ಆಗಿನ ಸಂದರ್ಭವನ್ನು ಲಜಪತ್‌ರಾಯ್ ''ಆ ಪ್ರಕಟಣೆಯನ್ನು ಅಲ್ಲಿ ಸೇರಿದ್ದ ಬೃಹತ್ ಜನಸಮೂಹ ಹರ್ಷೋದ್ಗಾರಗಳಿಂದ ಸ್ವಾಗತಿಸಿತು. ಮಿಂಚಿನಂತೆ ಸುದ್ದಿ ಪಟ್ಟಣದಲ್ಲೆಲ್ಲಾ ಹಬ್ಬಿತು.'' ಎಂದು ನಮೂದಿಸಿದ್ದಾರೆ.

ಜನಸಮೂಹವನ್ನು ಉದ್ದೇಶಿಸಿ ಮಾತನಾಡಲು ಲಜಪತ್‌ರಾಯ್ ಅವರನ್ನು ಬಹುವಾಗಿ ಒತ್ತಾಯ ಮಾಡಲಾಯಿತು. ಇಲ್ಲವಾದರೆ ಪಟ್ಟಣದಾದ್ಯಂತ ನಡೆಸುವ ಮೆರವಣಿಗೆಯಲ್ಲಾದರೂ ಇರಬೇಕೆಂದು ಕೇಳಿಕೊಳ್ಳಲಾಯಿತು. ಅವರು ಆ ಎರಡು ಬೇಡಿಕೆಯನ್ನು ಒಪ್ಪಲಿಲ್ಲ. ಬದಲಾಗಿ ಸಂಜೆ ಏರ್ಪಡಿಸುವ ಸಭೆಯಲ್ಲಿ ಮಾತನಾಡುವುದಾಗಿ ತಿಳಿಸಿದರು. ಲಜಪತ್‌ರಾಯ್ ಇನ್ನು ವಕೀಲರ ಸಂಘದಲ್ಲಿದ್ದಾಗಲೇ ಸುದ್ದಿಯೊಂದು ಬಂದಿತು. ''ಜನರ ಗುಂಪು ಡೆಪ್ಯುಟಿ ಕಮಿಷನರ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ಬಂಗಲೆಗಳತ್ತ ನುಗ್ಗಿ ಬಲವಂತವಾಗಿ ಒಳಪ್ರವೇಶ ಮಾಡಿತು.'' ಕೆಲವು ಮಂದಿ ಪ್ರಮುಖರು ಲಜಪತ್‌ರಾಯ್ ಅವರ ಸೂಚನೆಯಂತೆ ಆ ಸ್ಥಳಗಳಿಗೆ ಧಾವಿಸಿ ಜನರ ಅತಿಕ್ರಮ ಪ್ರವೇಶ ತಡೆಯಲು ಮುಂದಾದರು. ಆದರೆ ಯಾವುದೇ ಫಲ ಸಿಗಲಿಲ್ಲ. ಚಳವಳಿಯ ಉಗ್ರರೆನಿಸಿದ್ದ ಕೆಲವರು ಜನರ ಗುಂಪಿನಲ್ಲಿ ಕ್ರೌರ್ಯಕ್ಕೆ ಪ್ರಚೋದನೆ ನೀಡಿದ್ದಾರೆಂದು ತಿಳಿದು ಬಂದಿತು. ಚಳವಳಿಕಾರರು ಮತ್ತು ಸರ್ಕಾರದ ಕಡೆ ತ್ವರಿತ ಗತಿಯ ಬೆಳವಣಿಗೆಗಳಾದವು. ನಾನಾ ರೀತಿಯ ಸುದ್ದಿಗಳು ಹಬ್ಬಿದವು.!

''ನಾವಿನ್ನು ನ್ಯಾಯಾಲಯದಲ್ಲಿರುವಾಗಲೇ ಹಿಂಸಾಚಾರವನ್ನು ತಡೆಗಟ್ಟಲು ಮಿಲಿಟರಿಯನ್ನು ಬಳಸಿಕೊಂಡ ಸುದ್ದಿಯೂ ಬಂದಿತು. ಅಸಂಖ್ಯಾತ ಚಳವಳಿಗಾರರನ್ನು

ಬಂಧಿಸಿದ್ದು ಗೊತ್ತಾಯಿತು. ಚಳವಳಿಗಾರರ ವಿರುದ್ಧ ಕಾರ್ಯಾಚರಣೆಗೆ ಪಠಾಣ ರೆಜಿಮೆಂಟ್ ನಿರಾಕರಿಸಿತೆಂದು ಕೇಳಿ ಬಂದಿತು. ಅದೇ ಸಮಯದಲ್ಲಿ ಓರ್ವ ಪಠಾಣ ನನ್ನ ಬಳಿಗೆ ಬಂದ. ನಿಮ್ಮ ಆದೇಶಕ್ಕಾಗಿ ನಮ್ಮ ರೆಜಿಮೆಂಟ್ ಕಾತರಿಸಿದೆ ಎಂದೂ ಹೇಳಿದ. ನಾನು ನಕ್ಕು ಬಿಟ್ಟೆ. ಆತನಿಗೆ ಏನೂ ಹೇಳದೆ ಅಲ್ಲಿಂದ ಕಳುಹಿಸಿಕೊಟ್ಟೆ. ಆ ವ್ಯಕ್ತಿ ಬೇಹುಗಾರನಾಗಿರಬಹುದು ಎಂದು ನನಗೆ ಅನಿಸಿತು.''

''ಮಿಲಿಟರಿ ಚಳವಳಿಯನ್ನು ನಿಗ್ರಹಿಸಿತು. ಲೆಕ್ಕವಿಲ್ಲದಷ್ಟು ಜನರನ್ನು ಲಾಕಪ್‌ಗಳಿಗೆ ಹಾಕಲಾಯಿತು. ಅವರಲ್ಲಿ ರಾವಲ್ಪಿಂಡಿಯ ಅನೇಕ ಪ್ರಮುಖ ನಾಗರಿಕರಿದ್ದರು. ಶಿಕ್ಷಿತ ಯುವ ಜನರಿದ್ದರು. ಎಲ್ಲಾ ಬಗೆಯ ಸುದ್ದಿಯು ನಮಗೆ ತಿಳಿಯುತ್ತಿತ್ತು. ಆದರ ಏನು ಮಾಡುವುದು?'' ಎಂದು ಲಜಪತರು ತಮ್ಮ ಜೀವನ ಚರಿತ್ರೆಯಲ್ಲಿ ಆಗಿನ ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ.

ಆ ಸಂಜೆ ನಡೆಯಬೇಕಿದ್ದ ಬಹಿರಂಗ ಸಭೆಗೆ ಆಡಳಿತ ಅವರಿಗೆ ಅವಕಾಶ ಕೊಡಲಿಲ್ಲ. ಬಂಧನಗಳು ನಡೆಯುತ್ತಲೇ ಇದ್ದವು. ಮಾರನೇಯ ದಿನ ತಲುಪಿದ ಸುದ್ದಿಯಲ್ಲಿ ಲಜಪತರ ಅತಿಥೇಯ ಅಮೋಲಕ್ ರಾಂ ಹಾಗೂ ಇನ್ನು ಕೆಲವು ವಕೀಲರನ್ನು ಬಂಧಿಸಿದ ವಿಷಯ ತಿಳಿಯಿತು. ಜಾಮೀನು ನಿರಾಕರಿಸಲಾಯಿತು. ಪ್ರಧಾನ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಲಜಪತ್‌ರಾಯ್ ಮರಳಿ ಲಾಹೋರಿಗೆ ಧಾವಿಸಿದರು. ಅಲ್ಲೂ ಸಹ ಅನೂಹ್ಯ ಬೆಳವಣಿಗೆಗಳು ಕಂಡು ಬಂದವು. ಲಜಪತರ ಕೃತಿಯನ್ನು ಓದಿದಾಗ ಅದು ಹೀಗೆ ತಿಳಿದು ಬರುತ್ತದೆ.

''ಮೇಲ್ಮನವಿಯ ಅರ್ಜಿಯನ್ನು ವಿಭಾಗೀಯ ಪೀಠವೊಂದು ವಿಚಾರಣೆ ಮಾಡಬೇಕೆಂದು ನ್ಯಾಯಾಧೀಶರು ನಿರ್ಧರಿಸಿದರು. ಈ ಮಧ್ಯೆ ಜಾಮೀನು ಕೊಡಬಾರದೇಕೆನ್ನುವ ವಿಷಯದಲ್ಲಿ ರಾವಲ್ಪಿಂಡಿ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿವರಣೆ ಪಡೆಯಬೇಕೆಂದೂ'' ಅವರು ಸೂಚಿಸಿದರು.

''ಅರ್ಜಿ ವಿಚಾರಣೆಗೆ ಬರುವ ಮೊದಲೇ ಜಿಲ್ಲಾ ಮ್ಯಾಜಿಸ್ಟ್ರೇಟರು ನ್ಯಾಯಾಲಯಕ್ಕೆ ಬಂದರು. ರಾವಲ್ಪಿಂಡಿಯಲ್ಲಿ ಕಾನೂನು ಪರಿಸ್ಥಿತಿ ನಿರ್ವಹಿಸುತ್ತಿದ್ದ ಅಧಿಕಾರಿಯ ಪತ್ರವೊಂದನ್ನು ಅವರು ತಂದಿದ್ದರು. ಪ್ರಧಾನ ನ್ಯಾಯಾಲಯದ ನ್ಯಾಯಾಧೀಶರಿಗೆ ಬರೆದ ಪತ್ರ ಅದಾಗಿತ್ತು. ಒಂದು ವೇಳೆ ಬಂಧಿತ ಮುಖಂಡರನ್ನು ಬಿಡುಗಡೆ ಮಾಡಿದರೆ ಭಾರತೀಯ ಸೇನೆಯಲ್ಲಿ ಬಂಡಾಯ ಏಳುವ ಭೀತಿ ಇದೆ ಎಂದು ಆ ಪತ್ರದಲ್ಲಿ ಆ ಅಧಿಕಾರಿ ತಿಳಿಸಿರುವುದಾಗಿ ಕೇಳಿ ಬಂದಿತು. ಆದರೆ ಆರೋಪಿಗಳ ವಕೀಲರಾಗಿ ಆ ಪತ್ರವನ್ನು ಖುದ್ದಾಗಿ ನೋಡುವ ಅವಕಾಶವನ್ನು ಕೊಡಲಿಲ್ಲ. ಪತ್ರದ ಪ್ರತಿಗಾಗಿ ವಿದ್ಯುಕ್ತ ಕೋರಿಕೆ ಸಲ್ಲಿಸಿದ್ದು ವಿಫಲವಾಯಿತು. ವಿಚಾರಣೆಯ ಎಲ್ಲಾ ವಿಧಿ ವಿಧಾನಗಳು ಮುಗಿದ ನಂತರ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಲು ನಿರಾಕರಿಸಿದರು.''

* * *

ಅಧ್ಯಾಯ-24

ಮೊದಲ ಬಂಧನ

‘‘**ಇಡೀ** ಪ್ರಕರಣಕ್ಕೆ ಕಾರಣರಾದ ವ್ಯಕ್ತಿ ಇನ್ನೂ ತೆರೆಮರೆಯಲ್ಲೇ ಇದ್ದಾರೆ. ಆದರೆ ಹೆಚ್ಚು ದಿನ ಹಾಗೆ ಇರಲು ಸಾಧ್ಯವಿಲ್ಲ’’ ಎಂದು ಹಿರಿಯ ಬ್ರಿಟಿಷ್ ಅಧಿಕಾರಿಯೂ, ಪ್ರಧಾನ ನ್ಯಾಯಾಲಯದ ರಿಜಿಸ್ಟ್ರಾರ್ ಆಗಿದ್ದವರೊಬ್ಬರು ವಕೀಲರ ಸಂಘದ ಹಿರಿಯ ಸದಸ್ಯ ಭೋಜ್‌ರಾಜ್ ಅವರಿಗೆ ಆಗ ತಿಳಿಸಿದರು. ಭೋಜ್‌ರಾಜ್ ಮುಂದೆ ಜಮ್ಮು ಮತ್ತು ಕಾಶ್ಮೀರದ ನ್ಯಾಯಾಧೀಶರಾದರು. ಆ ಬ್ರಿಟಿಷ್ ಅಧಿಕಾರಿ ಪ್ರಸ್ತಾಪ ಮಾಡಿದ ವ್ಯಕ್ತಿ ಬೇರಾರು ಅಲ್ಲ. ಲಜಪತ್‌ರಾಯ್.

ಅದೇ ರೀತಿಯ ವರದಿಗಳು ಮೇಲಿಂದ ಮೇಲೆ ವಿವಿಧ ಮೂಲಗಳಿಂದ ಲಜಪತರ ಕಿವಿಯ ಮೇಲೆ ಬೀಳತೊಡಗಿದವು. ಉನ್ನತ ಐರೋಪ್ಯ ಅಧಿಕಾರಿಗಳನ್ನು ಪದೇ ಪದೇ ಭೇಟಿ ಮಾಡುತ್ತಿದ್ದ ಲಜಪತರ ಓರ್ವ ಗೆಳೆಯರು ಈ ಬಗ್ಗೆ ತಿಳಿಸಿದರು. ‘‘ರಾವಲ್ಪಿಂಡಿಯಲ್ಲಿ ನಡೆದ ಘಟನೆಯ ಬಗ್ಗೆ ಅವರು ಹಲ್ಲು ಕಡಿಯುತ್ತಿದ್ದಾರೆ’’ ಎಂದು ಆ ಮಿತ್ರರು ಲಜಪತರಿಗೆ ತಿಳಿಸಿದರು. ಲಯಾಲ್‌ಪುರದಲ್ಲಿ ಲಜಪತರು ಮಾಡಿದ ಭಾಷಣವನ್ನು ಸೂಕ್ತ ಪರಿಶೀಲನೆಗೆ ಒಳಪಡಿಸಲಾಯಿತೆಂದು ನಂತರ ಅವರಿಗೆ ತಿಳಿದು ಬಂದಿತು. ಪರಿಸ್ಥಿತಿಯ ಕಾವು ಆರಿ ನೆಮ್ಮದಿಯ ವಾತಾವರಣ ಮೂಡುವತನಕ ಲಾಹೋರ್‌ನಿಂದ ಹೊರಗೆ ಹೋಗಿ ಕಾಲ ಕಳೆದು ಬರಲು ಕೆಲವು ಮಿತ್ರರು ಲಜಪತರಿಗೆ ಸಲಹೆ ನೀಡಿದರು. ಅದಕ್ಕೆ ಅವರು ಕೊಟ್ಟ ಉತ್ತರ ‘‘ಆಡಳಿತ ನನ್ನ ವಿರುದ್ಧ ಕಾನೂನು ಕ್ರಮ ಜರುಗಿಸುವಂತಹ ಯಾವುದೇ ಕೆಲಸ ನಾನು ಮಾಡಿಲ್ಲ. ಸರ್ಕಾರದ ಶಿಸ್ತು ಕ್ರಮ ನನ್ನ ವಿರುದ್ಧ ಜರುಗುವಂತಹ ಯಾವದೇ ಕೃತ್ಯವನ್ನು ನಾನು ಪ್ರಜ್ಞಾಪೂರ್ವಕವಾಗಿ ಎಸಗಿಲ್ಲ. ನನಗೆ ಯಾವುದರ ಭಯವೂ ಇಲ್ಲ.’’

ಈ ಮಧ್ಯೆ ಸರ್ಕಾರದ ಅಧಿಕಾರದ ವಲಯದಲ್ಲಿ ಹೆಚ್ಚು ನಿಕಟ ಸಾಮಿಪ್ಯ ಹೊಂದಿದ್ದ ಗೆಳೆಯರೊಬ್ಬರಿಂದ ಒಂದು ದಿನ ಆಶ್ಚರ್ಯ ಹಾಗೂ ಕುತೂಹಲ ಕೆರಳಿಸುವ ವರ್ತಮಾನವೊಂದು ಲಜಪತರಿಗೆ ಸಿಕ್ಕಿತು. ಭಾಯಿ ರಾಂ ಸಿಂಗ್ ಅವರಂತಹ ವ್ಯಕ್ತಿಗಳಿಗೆ ಆಶ್ರಯ ಕೊಟ್ಟ ಆರೋಪದ ಮೇರೆಗೆ ತಮ್ಮ ವಿರುದ್ಧ ಆರೋಪ ಹೊರಿಸಲಾಗುತ್ತದೆಂದು ಅವರು ಲಜಪತರಿಗೆ ತಿಳಿಸಿದರು. ಭಾಯಿ ರಾಂ ಸಿಂಗ್ ನಾಮಧಾರಿ ಸಿಖ್ ಸಂಘಟನೆಯ ಪ್ರಮುಖ ಸ್ಥಾಪಕರಾಗಿದ್ದರು. ನಾಮಧಾರಿ ಸಿಖ್‌ರನ್ನು ‘ಕುಕಾ’ ಎಂದು ಕರೆಯಲಾಗುತ್ತಿತ್ತು. 1872ರಲ್ಲಿ ಅವರ ಸುಮಾರು 50 ಅನುಯಾಯಿಗಳನ್ನು ನಿಗ್ರಹಿಸಿದ ಬ್ರಿಟಿಷ್ ಸರ್ಕಾರ ಗುರು ರಾಮ ಸಿಂಗ್‌ರನ್ನು ಬರ್ಮಾಕ್ಕೆ ಗಡಿಪಾರು ಮಾಡಿತ್ತು. ಅವರ ವಿರುದ್ಧ ವಿಚಾರಣೆಯನ್ನು ಮುಗಿಸಿರಲಿಲ್ಲ. ರಾಂ ಸಿಂಗ್‌ರ ವಿರುದ್ಧ 1818ರ ಮೂರನೇ ಕಲಮಿನ

ಅನ್ಯಾಯ ಆರೋಪ ಹೊರಿಸಲಾಗಿತ್ತು. ಈ ಬಗ್ಗೆ ಲಜಪತರು ತಮ್ಮ ಕೃತಿಯಲ್ಲಿ ಒಂದು ಅಧ್ಯಾಯವನ್ನೇ ಬರೆದಿದ್ದಾರೆ. ಅವರು ರಾಂ ಸಿಂಗ್‌ರನ್ನು ಶಿಕ್ಷೆಗೆ ಒಳಪಡಿಸಿದ ಕಲಮಿನ ಸಿಂಧುತ್ವವನ್ನು ಪ್ರಶ್ನಿಸಿದರು.

"ಕಲಮಿನ ಮರು ಪರಿಶೀಲನೆಗೆ ನಾನು ಕೇಳಿಕೊಂಡೆ. ಅದರ ಪ್ರಕಾರ ಯಾರನ್ನೇ ಆಗಲಿ ಏಕಾಏಕಿ ಗಡಿಪಾರು ಮಾಡುವಂತಿರಲಿಲ್ಲ. ಆ ಸಮಯದಲ್ಲಿ ಪಂಜಾಬ್ ಸರ್ಕಾರದ ನೇತೃತ್ವದಲ್ಲಿ ಆ ಅಧಿಕಾರಿ ಕಲಮಿನ ವ್ಯಾಪ್ತಿಯನ್ನು ಮೀರಿ ವರ್ತಿಸಿದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ನಾನು ಆ ಕಲಮಿನನ್ವಯ ಕೊಟ್ಟ ಶಿಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿದಾಗ ಅದರಿಂದಾಗಬಹುದಾದ ಪರಿಣಾಮದ ಬಗ್ಗೆಯೂ ತರ್ಕಿಸಿದ್ದೆ. ಸುದ್ದಿ ತಿಳಿದಾಕ್ಷಣ ಕೆಲವು ಕಾಲ ತಲೆಮರೆಸಿಕೊಳ್ಳಬೇಕೆಂದು ನನ್ನ ಮನಸ್ಸಿನಲ್ಲಿಯೂ ಸ್ವಲ್ಪ ಹೊತ್ತು ಗೊಂದಲ ಮೂಡಿತ್ತು. ರಾವಲ್ಪಿಂಡಿಯ ಗೆಳೆಯನಿಗೆ ಹಾಗೂ ನನ್ನ ದೇಶಕ್ಕಾಗಿ ನನ್ನ ಕರ್ತವ್ಯವನ್ನು ಮಾಡಿದ್ದೇನೆಂದು ನನ್ನ ಒಳ ಮನಸ್ಸು ಹೇಳಿತು. ಪಂಜಾಬಿನ ಪರಿಸ್ಥಿತಿಯ ಬಗ್ಗೆ ದೇಶದ ಇತರೆಡೆಗಳ ಭಾರತೀಯ ನಾಯಕರಿಗೆ ನಾನು ಪತ್ರಗಳನ್ನು ಬರೆದು ತಿಳಿಸಿದ್ದೆ. ಬ್ರಿಟನ್‌ನಲ್ಲಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷ್ ಸಮಿತಿಯ ಅಧ್ಯಕ್ಷ ಸರ್ ವಿಲಿಯಂ ವೆಡರ್ನ್‌ಬರ್ನ್ ಅವರಿಗೂ ಪತ್ರ ಬರೆದು ತಿಳಿಸಿದ್ದೆ. ಚೇನಾ ಕಾಲುವೆ ವಸಾಹತು ನಿರ್ಣಯಕ್ಕೆ ಸಂಬಂಧಪಟ್ಟ ಕೆಲವು ಕಾಗದ ಪತ್ರಗಳನ್ನು ಅವರಿಗೂ ಕಳುಹಿಸಿಕೊಟ್ಟೆ. 'ಇಂಗ್ಲಿಷ್ ಅಂಚೆ ದಿನಾಚರಣೆಯ ಎರಡು ದಿನಗಳ ಮೊದಲು ಇಂಗ್ಲೆಂಡಿನಲ್ಲಿದ್ದ ನನ್ನ ಗೆಳೆಯರೊಬ್ಬರಿಗೆ ಪತ್ರವೊಂದನ್ನು ರವಾನಿಸಿದೆ. ಅಂಚೆ ದಿನಾಚರಣೆ ದಿನವೇ ಪತ್ರ ಬರೆಯಲು ನಾನು ಸ್ವತಂತ್ರನಾಗಿರುತ್ತೇನೆಯೋ ಇಲ್ಲವೋ ಎಂಬ ಶಂಕೆಯಿಂದ ಮುಂಚಿತವಾಗಿ ಪತ್ರ ಬರೆಯುತ್ತಿದ್ದೇನೆ ಎಂದು ಅವರಿಗೆ ತಿಳಿಸಿದೆ" ಎಂದು ಲಜಪತರು ಬರೆದಿದ್ದಾರೆ.

ಆ ದಿನ ಲಜಪತರು ತಮ್ಮ ತಂದೆಗೂ ಪತ್ರ ಬರೆದರು. ಆ ದಿನಗಳಲ್ಲಿ ಅವರ ಹಿರಿಯ ಪುತ್ರ ಪ್ಯಾರೇಲಾಲ್ ಅವರ ಬಳಿ ಇದ್ದರು. ಕುಟುಂಬದ ಉಳಿದವರೆಲ್ಲರೂ ಲೂಧಿಯಾನದಲ್ಲಿದ್ದರು. ಲಾಹೋರಿನಲ್ಲಿ ಪ್ಲೇಗ್ ಹಾವಳಿ ಇದ್ದದ್ದು ಆ ಸ್ಥಳಾಂತರಕ್ಕೆ ಕಾರಣ. ಪತ್ರದಲ್ಲಿ ಲಜಪತರು ತಮ್ಮ ಬಂಧನದ ಸಂದೇಹವನ್ನು ತಿಳಿಸಿದ್ದರು. ಆ ಪತ್ರದಲ್ಲಿ ಅವರು ತಮ್ಮ ತಂದೆಗೆ ನಿವೇದನೆಯೊಂದನ್ನು ಮಾಡಿದ್ದರು.

"ನನಗೆ ಏನೇ ಆಗಲಿ. ನೀವು ನಿಮ್ಮ ತಾಳ್ಮೆಯನ್ನು ದಯವಿಟ್ಟು ಕಾಪಾಡಿಕೊಳ್ಳಿ. ಬೆಂಕಿಯೊಂದಿಗೆ ಸರಸವಾಡುವವರು ಒಂದಲ್ಲ ಒಂದು ದಿನ ಸುಟ್ಟಗಾಯವನ್ನು ಅನುಭವಿಸಲೇ ಬೇಕಾಗುತ್ತದೆ. ಆಳುವವರ ಕಾರ್ಯವನ್ನು ವಿಶ್ಲೇಷಿಸಿ ಟೀಕಿಸುವುದೆಂದರೆ ಬೆಂಕಿಯನ್ನು ಮೈಮೇಲೆ ಎಳೆದುಕೊಂಡಂತಲ್ಲದೆ ಬೇರೇನೂ ಅಲ್ಲ. ನನ್ನ ಮನಸ್ಸನ್ನು ನೋವು ಕಾಡುವ ಅಂಶವೊಂದಿದೆಯಾದರೆ ಅದು ನೀವು ಪಡಬಹುದಾದ ತೊಂದರೆ ಅದರಿಂದ ನನ್ನ ಬಂಧನದಿಂದ ನೀವು ಉದ್ವಿಗ್ನರಾಗುವುದಿಲ್ಲವೆಂಬ ಭರವಸೆಯನ್ನು ದಯವಿಟ್ಟು ನನಗೆ ಕೊಡಿ. ಆಗುವುದೆಲ್ಲವನ್ನು ಸಮಯೋಚಿತವಾಗಿ ಸಹಿಸಿಕೊಳ್ಳಬೇಕೆಂದು ಕೋರುತ್ತೇನೆ" ಎಂದು ಪತ್ರದಲ್ಲಿ ತಿಳಿಸಿದರು. ಹೀಗಾಗಿ ಲಜಪತರಿಗೆ ಪೂರ್ವ ಸೂಚನೆ

ಸ್ಪಷ್ಟವಾಗಿ ತಿಳಿದಿತ್ತು. ತಮಗೆ ಎದುರಾಗಬಹುದಾದ ಪರಿಸ್ಥಿತಿಯನ್ನು ಸ್ವೀಕರಿಸಲು ಅವರು ಸಾಕಷ್ಟು ಮುಂಚಿತವಾಗಿಯೇ ಸಜ್ಜಾದರು. ತಮ್ಮ ತಂದೆಗೆ ಬರೆದ ಪತ್ರದಲ್ಲಿ ಅವರು ಕೆಲವು ಸಂಗತಿಗಳನ್ನು ವಿಸ್ತೃತವಾಗಿ ಬರೆದಿದ್ದರು. ಒಂದು ರೀತಿಯಲ್ಲಿ ಅವೆಲ್ಲಾ ಮುನ್ನೆಚ್ಚರಿಕೆಯ ಸೂಚನೆಗಳೂ ಆಗಿದ್ದವು. ಜಗ್ರಾಂವ್‌ನಲ್ಲಿದ್ದ ಆಸ್ತಿಯನ್ನು ತಮ್ಮ ಮಕ್ಕಳಿಗೆ ಹಂಚಿಕೊಡುವ ಬಗ್ಗೆಯೂ ಅದರಲ್ಲಿ ಸಲಹೆಗಳಿತ್ತು.

* * * *

ಮೇ 9, ಇಂಗ್ಲಿಷ್ 'ಅಂಚೆ ದಿನ'. ಆ ದಿನ ಬೆಳಿಗ್ಗೆ ಕೆಲವು ಪತ್ರಗಳನ್ನು ಅಂಚೆಗೆ ಹಾಕಲು ಲಜಪತರು ಸಿದ್ಧಪಡಿಸುತ್ತಿದ್ದರು. ಪಂಜಾಬಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಪತ್ರಿಕೆಗೆ ಲೇಖನವೊಂದನ್ನು ಸಿದ್ಧಪಡಿಸುತ್ತಿದ್ದರು. ಸುಮಾರು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಲಾಲಾ ಹನ್ಸ್‌ರಾಜ್ ಅಲ್ಲಿಗೆ ಬಂದರು. ಲಜಪತರು ಕಾರ್ಯಬಾಹುಳ್ಯದ ಒತ್ತಡದಲ್ಲಿದ್ದರು. ಲಾಲಾ ಹನ್ಸ್‌ರಾಜ್ ಲಜಪತರಿಗೆ ಆಮಂತ್ರಣವಿತ್ತು ಕೆಲವು ಗೆಳೆಯರೊಂದಿಗೆ ಪಿಕ್‌ನಿಕ್‌ಗೆ ಬರಲು ಆಹ್ವಾನಿಸಿದರು. ಲಜಪತರು ಒಪ್ಪಲಿಲ್ಲ. ತಮಗೆ ಸಮಯವಿಲ್ಲವೆಂದೂ ಪಿಕ್‌ನಿಕ್‌ಗೆ ಬರಲು ಆಸಕ್ತಿ ಇಲ್ಲವೆಂದೂ ತಿಳಿಸಿದರು. ಆ ಗೆಳೆಯ ಬರಿಗೈಯಲ್ಲಿ ಮರಳಿದರು. ಲಜಪತರು ತಮ್ಮ ಬರಹಗಳನ್ನು ಮುಗಿಸಿ ಉಪಹಾರ ಸ್ವೀಕರಿಸಿದರು. ಮತ್ತೆ ಬರೆಯಲು ಕುಳಿತು ಇನ್ನೂ ಒಂದೆರೆಡು ಪತ್ರಗಳನ್ನು ಬರೆದು ಮುಗಿಸಿದರು. ಅಲ್ಲಿಗೆ ಅವರ ಬೆಳಗಿನ ಕೆಲಸ ಪೂರ್ಣಗೊಂಡಿತು. ಪ್ರಧಾನ ನ್ಯಾಯಾಲಯಕ್ಕೆ ಹೊರಡಲು ಸನ್ನದ್ಧರಾದರು. ಎರಡು ದಿನಗಳ ಹಿಂದೆ ತಮ್ಮ ಬಳಿಗೆ ಬಂದು ವ್ಯಾಜ್ಯ ಒಪ್ಪಿಸಿ 350 ರೂಪಾಯಿ ಶುಲ್ಕ ತೆತ್ತಿದ್ದ ಕಕ್ಷಿದಾರನಿಗೆ ಹಿರಿಯ ವಕೀಲರೊಬ್ಬರನ್ನು ನೇಮಿಸಿಕೊಡಲು ಅವರು ಯೋಚಿಸಿದರು. ಆ ಹಣವನ್ನು ಅವರು ಜೇಬಿನಲ್ಲಿಟ್ಟುಕೊಂಡು ತಮ್ಮ ಗಾಡಿಯಲ್ಲಿ ಕುಳಿತು ಹೊರಡಲು ಸನ್ನದ್ಧರಾದರು. ಅಷ್ಟರಲ್ಲಿ ಅವರ ಮುನ್ಷಿ ಅಲ್ಲಿಗೆ ಬಂದು ತಮ್ಮ ಭೇಟಿಗಾಗಿ ಇಬ್ಬರು ಬಂದಿದ್ದಾರೆ ಎಂದು ತಿಳಿಸಿದರು.

ಲಜಪತರು ತಮ್ಮ ಕೊಠಡಿಗೆ ಬಂದರು. ಅಲ್ಲಿ ಅನಾರ್ಕಲಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಗಂಗರಾಂ, ನಗರ ಪೊಲೀಸ್‌ನ ಮುನ್ಷಿ ರಹಮತ್ ಉಲ್ಲಾ ನಾಗರಿಕ ಉಡುಪಿನಲ್ಲಿ ಕುಳಿತಿದ್ದರು. ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ತಮ್ಮನ್ನು ತುರ್ತಾಗಿ ಕಾಣಲು ಬಯಸಿದ್ದಾರೆ ಎಂಬ ಸಂದೇಶವನ್ನು ಅವರು ಲಜಪತರಿಗೆ ನೀಡಿದರು. ಲಾಹೋರಿನ ಕಮಿಷನರ್ ನಗರ ಪ್ರಮುಖರನ್ನು ಕರೆಯಿಸಿಕೊಂಡು ಉದ್ರಿಕ್ತ ಪರಿಸ್ಥಿತಿಯ ಬಗ್ಗೆ ಸಲಹೆ ಸೂಚನೆ ಪಡೆಯುವ ಅಭ್ಯಾಸ ಇಟ್ಟುಕೊಂಡಿದ್ದವರು. ಲಜಪತರನ್ನು ಆಹ್ವಾನಿಸಿದ ಉದ್ದೇಶವೂ ಅದೇ ಆಗಿದ್ದಿರಬಹುದೇ? ಲಜಪತರು ಕೂಡಲೇ ಆ ಸಂದೇಶಕ್ಕೆ ಓಗೊಡಲಿಲ್ಲ. ನ್ಯಾಯಾಲಯದಲ್ಲಿ ಕೆಲವು ತುರ್ತು ಕೆಲಸಗಳಿವೆ ಎಂದೂ, ಸ್ವಲ್ಪ ಸಮಯದ ನಂತರ ಬಂದು ಕಮಿಷನರ್ ಅವರನ್ನು ನೋಡುವುದಾಗಿ ಮುನ್ಷಿ ರಹಮತ್ ಉಲ್ಲಾ

ಅವರಿಗೆ ತಿಳಿಸಿದರು. ಆದರೆ ಅವರು ಸಮ್ಮತಿಸಲಿಲ್ಲ. ಕಮಿಷನರ್ ಜಿಲ್ಲಾ ಕಚೇರಿಯಲ್ಲಿ ನಿರೀಕ್ಷಿಸುತ್ತಿದ್ದು ಕೆಲವು ನಿಮಿಷಗಳ ಮಟ್ಟಿಗೆ ತಮ್ಮನ್ನು ಕಾಣ ಬಯಸುತ್ತಾರೆಂದೂ, ಮೊದಲು ಅವರನ್ನು ಭೇಟಿಯಾಗಿ ನಂತರ ನ್ಯಾಯಾಲಯಕ್ಕೆ ಹೋಗಬಹುದೆಂದು ಪಟ್ಟು ಹಿಡಿದರು.

ಇನ್‌ಸ್ಪೆಕ್ಟರ್‌ರ ಈ ಅನಗತ್ಯ ಅವಸರ ಸಹಜವಾಗಿ ಅನುಮಾನಕ್ಕೆ ಎಡೆ ಮಾಡಿಕೊಟ್ಟಿತು. ನಸು ನಗುತ್ತಾ ಲಜಪತ್‌ರಾಯ್ ಹೇಳಿದರು. ''ಸರಿ ಬನ್ನಿ, ನನ್ನ ಗಾಡಿ ಸಿದ್ಧವಿದೆ. ಅದರಲ್ಲಿ ಒಟ್ಟಿಗೆ ಹೋಗೋಣ.'' ಗಾಡಿ ಮನೆಯ ತಲೆಬಾಗಿಲು ದಾಟುವ ಮೊದಲೇ ಇಬ್ಬರು ಪರಂಗಿ ಅಧಿಕಾರಿಗಳು ದಿಢೀರ್ ಎಂದು ಪ್ರತ್ಯಕ್ಷರಾದರು. ಆ ಗಾಡಿಗೆ ಮುತ್ತಿಗೆ ಹಾಕಿದರು. ಅವರಲ್ಲಿ ಓರ್ವ ಪೊಲೀಸ್ ಸುಪರಿಂಟೆಂಡೆಂಟ್ ರಂಡ್ಲರ್. ಲಜಪತ್‌ರಾಯ್ ಅವರಿಗೆ ಚಿರಪರಿಚಿತರಿದ್ದ ಅಧಿಕಾರಿ. ಆತನೂ ಗಾಡಿ ಹತ್ತಿ ಕುಳಿತ. ಲಜಪತ್‌ರಾಯ್ ಮನೆಯಿಂದ ಕೇವಲ ಎರಡು ನಿಮಿಷಗಳ ಪ್ರಯಾಣದ ನಂತರ ಜಿಲ್ಲಾ ಪೊಲೀಸ್ ಕಚೇರಿ ಸಿಕ್ಕಿತು. ಕಮಿಷನರ್ ಯಂಗ್ ಹಸ್ಬೆಂಡ್ ಲಜಪತ್‌ರಾಯ್ ಅವರನ್ನು ಬರಮಾಡಿಕೊಂಡರು. ಗವರ್ನರ್ ಜನರಲ್ ಹೊರಡಿಸಿದ್ದ ವಾರಂಟನ್ನು ಲಜಪತ್‌ರಾಯ್ ಅವರಿಗೆ ನೀಡಿದರು.

ಹೀಗೆ ಭಾಯಿ ರಾಂ ಸಿಂಗ್ ಅವರನ್ನು ಬಂಧಿಸಿದ ರೀತಿಯಲ್ಲೇ ಅದೇ ಕಾಯ್ದೆಯಡಿಯಲ್ಲಿ ಲಜಪತ್‌ರಾಯ್ ಅವರನ್ನು ಬಂಧಿಸಲಾಯಿತು. ಆದರೆ ನಾಮಧಾರಿ ಗುರುವನ್ನು ದೂರದ ಬರ್ಮಾದಲ್ಲಿ ಸೆರೆಮನೆಯಲ್ಲಿಟ್ಟಂತೆ ಲಜಪತ್‌ರಾಯ್ ಅವರನ್ನು ಇಡಲಾಗುವುದೇ ಅಥವಾ ಬೇರೆ ಯಾವುದೇ ಗಡಿಪಾರು ಶಿಕ್ಷೆ ಮತ್ತು ಬಂಧನ ವಿಧಿಸಲಾಗುವುದೇ ಎಂಬುದು ಆ ಕ್ಷಣದಲ್ಲಿ ತಿಳಿದು ಬರಲಿಲ್ಲ.

* * *

ಅಧ್ಯಾಯ-25

ಸಿಪಾಯಿ ದಂಗೆಯ ಸನ್ನಿ

ಸಿಪಾಯಿ ದಂಗೆಯ ಭೀಕರ ಘಟನೆ ಭಾರತದಲ್ಲಿದ್ದ ಐರೋಪ್ಯ ಸಮುದಾಯದಲ್ಲಿ ಭಯಂಕರ ಭೀತಿಯ ಛಾಯೆಯನ್ನು ಅಚ್ಚೊತ್ತಿತ್ತು... ಅಸಂಖ್ಯಾತ ನಾಗರಿಕರು, ಹೆಂಗಸರು ಮತ್ತು ಮಕ್ಕಳನ್ನು ನಿರ್ದಯವಾಗಿ ಕೊಚ್ಚಿ ಹಾಕಿದ ಸಿಪಾಯಿ ದಂಗೆಯ ದುಃಸ್ವಪ್ನದ ಛಾಯೆಯೂ ಹಾಗೆಯೇ ಇತ್ತು. ಐರೋಪ್ಯ ಸಮುದಾಯವನ್ನು ಆ ಕರಾಳ ಛಾಯೆ ಆಗಿಂದಾಗ್ಗೆ ಕಾಡುತ್ತಿತ್ತು. ಸಮೂಹ ಸನ್ನಿಯನ್ನು ಆ ಸಮುದಾಯದಲ್ಲಿ ಏಕಾಏಕಿ ಹುಟ್ಟಿಸುತ್ತಿತ್ತು. ದುಃಸ್ವಪ್ನದ ಸನ್ನಿ ಹಿಡಿದಾಗಲೆಲ್ಲಾ ಭಯ, ವಿಷಾದದ ದುಃಖಕರ ಪರಿಸ್ಥಿತಿ ತಲೆದೋರುತ್ತಿತ್ತು... ನಮಗೆ ತೋರಗೊಟ್ಟಿರುವ ರೀತಿಯಲ್ಲಿ ನೋಡಿದಾಗ ಸಿಪಾಯಿ ದಂಗೆ ಘೋರ ಪರಿಣಾಮ ಬೀರಿತ್ತು ಎಂಬುದರಲ್ಲಿ ಅನುಮಾನವೇ ಇಲ್ಲ. ಅಂಗ್ರೇಜಿಗಳು ಸಿಪಾಯಿ ದಂಗೆಯ ಹೆಸರೆತ್ತಿದರೆ ಸಾಕು ದೈಹಿಕವಾಗಿ, ಮಾನಸಿಕವಾಗಿ ನಿರ್ವಿಣ್ಣರಾಗುತ್ತಿದ್ದದ್ದೇ ಅದಕ್ಕೆ ಸಾಕ್ಷಿಯಾಗಿತ್ತು. *

ಲಜಪತ್‌ರಾಯ್ ಅವರನ್ನು ಏಕಾಏಕಿ ಯಾವುದೇ ವಿಚಾರಣೆ ಇಲ್ಲದೆ ಗಡಿಪಾರು ಮಾಡಲು ಕೈಗೊಂಡ ನಿರ್ಧಾರವನ್ನು ಅರ್ಥ ಮಾಡಿಕೊಳ್ಳಬೇಕಾದರ 1907ರ ಸುಮಾರಿನಲ್ಲಿ ಅಂಗ್ಲೋ ಇಂಡಿಯನ್ನರಲ್ಲಿದ್ದ ಮಾನಸಿಕ ಸ್ಥಿತಿಯನ್ನು ನಾವು ಮೊದಲು ಗಮನಿಸಬೇಕಾಗುತ್ತದೆ. ಆ ಕ್ರಮಕ್ಕೆ ಕೇವಲ ಲೆಫ್ಟಿನೆಂಟ್ ಗವರ್ನರ್ ಆಗಲಿ, ಗವರ್ನರ್ ಜನರಲ್ ಆಗಲಿ ಕಾರಣವಾಗುವುದಿಲ್ಲ. ಇಡೀ ಆಂಗ್ಲೋ ಇಂಡಿಯನ್ ಸಮುದಾಯದ ಮಾನಸಿಕ ಸ್ಥಿತಿ, ಭೀತಿ, ಕಳವಳ ನಂಜುಪೂರಿತವಾಗಿತ್ತು ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಆಂಗ್ಲೋ ಇಂಡಿಯನ್ ಆಡಳಿತಗಾರ ಸರ್ಕಾರದ ನಿರ್ವಹಣೆಗೆ ಸರಳ ವಿಧಾನವನ್ನು ಕಂಡುಕೊಂಡಿದ್ದ, ಪ್ರತಿಷ್ಠೆಯ ಬಲದ ಮೇಲೆ ತನಗೆ ಅನುಕೂಲಕರವಾದ ಕೆಲಸಗಳನ್ನು ಸಾಧಿಸಿಕೊಳ್ಳುತ್ತಿದ್ದ, ತನಗೆ ಎದುರಾಗಿ, ಪ್ರತಿಕೂಲವಾಗಿ ಯಾವ ಶಕ್ತಿ ಕೆಲಸ ಮಾಡುತ್ತಿದೆ ಎಂಬುದನ್ನು ಮನಗಂಡಾಗ ಅದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಕಂಗೆಡುತ್ತಿದ್ದ ಅದೆಷ್ಟೋ ಸಂದರ್ಭಗಳಲ್ಲಿ ಆಂಗ್ಲೋ ಇಂಡಿಯನ್ನನ ಮನಸ್ಥಿತಿ 1857ರ ಸಂಕೀರ್ಣದಲ್ಲಿ ಮೂಕಪಶುವಾಗುತ್ತಿತ್ತು. ಸಿಪಾಯಿ ದಂಗೆಯ ಆ ದಿನಗಳು ಆಂಗ್ಲೋ ಇಂಡಿಯನ್ನರ ಪಾಲಿಗೆ ಮಾನಸಿಕವಾಗಿ ಭಯಾನಕ ಅಧ್ಯಾಯವಾಗಿ ಉಳಿದುಹೋಗಿತ್ತು. 1907ರಲ್ಲೂ 1857ರ ಆ ಕೆಟ್ಟ ಕನಸು ಆಂಗ್ಲೋ ಇಂಡಿಯನ್ನರ ಮನಸ್ಥಿತಿಯನ್ನು ಕಾಡತೊಡಗಿತ್ತು. 1857ರಿಂದ 1907ರವರೆಗಿನ

---

* ಥಾಂಪ್ಸನ್ ಎಡ್ವರ್ಡ್, ದಿ ಅದರ್ ಸೈಡ್ ಆಫ್ ದಿ ಮೆಡಲ್ (ಮೂರನೇ ಆವೃತ್ತಿ) ಪುಟ 86-87.

ಅವಧಿ ಕರಾರುವಕ್ಕಾಗಿ ಅರ್ಧ ಶತಕ. ಎಷ್ಟೊಂದು ಕಾಕತಾಳೀಯ...! ಅದೇ ಶಕ್ತಿಗಳು ಮತ್ತೆ ಕರಿ ನೆರಳನ್ನು ಹಾಸಬಹುದೆಂಬ ಶಂಕೆ ಅವರಿಗಿತ್ತು. ಭಾರತೀಯ ಸಿಪಾಯಿಗಳು ಮತ್ತೆ ದಂಗೆ, ಬಂಡಾಯ ಏಳಬಹುದು ಎಂಬ ಭಯ ಮೂಡಿತ್ತು. ಸಹಿಸಲು ಅಸಾಧ್ಯವಾದ ಕ್ರೌರ್ಯಗಳು ನಡೆದು ಹೋಗಬಹುದೆಂಬ ಭ್ರಮೆ ಆವರಿಸಿತ್ತು. ಶೀತಲ ರಕ್ತಪಾತದಲ್ಲಿ ಆಂಗ್ಲೋ ಇಂಡಿಯನ್ ಮಹಿಳೆಯರು ಮತ್ತು ಮಕ್ಕಳು, ಸೈನಿಕರು, ನಾಗರಿಕರೆಲ್ಲರಿಗೂ ಒದಗಿದ ವಿಪತ್ತು ಪುನರಾವರ್ತಿತವಾಗಬಹುದೆಂಬ ಕಳವಳ ಗಾಢವಾಗತೊಡಗಿತು. ಆಂಗ್ಲೋ ಇಂಡಿಯನ್ ಪತ್ರಿಕಾ ಮಾಧ್ಯಮವೂ ಸಹ ಅದಕ್ಕೆ ಪೂರಕವಾದ ವರದಿಗಳನ್ನೇ ಕೊಡತೊಡಗಿತ್ತು. ಮತ್ತೆ ಸಿಪಾಯಿ ದಂಗೆಯ ಸುಳುಹುಗಳನ್ನು ವರದಿ ಮಾಡತೊಡಗಿತು. ಕ್ಲಬ್‌ಗಳಲ್ಲಿ, ಮೆಸ್‌ಗಳಲ್ಲಿ ಹಗಲು ರಾತ್ರಿ ಇವರ ಬಗ್ಗೆ ಊಹಾಪೋಹ. ಹೆಂಗಸರು ಮತ್ತು ಮಕ್ಕಳಿಂದ ಹಿಡಿದು ದೊಡ್ಡ ದೊಡ್ಡ ಅಧಿಕಾರಿಗಳವರೆಗೆ ಎಲ್ಲರಲ್ಲೂ ಅದೇ ಗುಸು ಗುಸು. ಅವರಿಗೆ ಎಲ್ಲೆಲ್ಲೂ 1857ರ 'ಸೀಲಿ ಭೂತಗಳೇ' ಕಂಡಂತಾಗುತ್ತಿತ್ತು! ಆಗಿನ್ನು ಸಿಪಾಯಿಗಳಿಗೆ ಕೆಂಪು ಸಮವಸ್ತ್ರ ನೀಡಿರಲಿಲ್ಲ. ಸಿಪಾಯಿ ದಂಗೆಯ ಹಿನ್ನಲೆಯಲ್ಲಿ ಯಾವುದೇ ಕಥೆ, ವದಂತಿ ಹೊರಬಿದ್ದರೂ ಅದನ್ನು ಇಡೀ ಸಮುದಾಯ ನಂಬಿ ಬಿಡುತ್ತಿತ್ತು. ಸಮಾಜಘಾತುಕ ಶಕ್ತಿಗಳು, ಕಿಡಿಗೇಡಿ ವದಂತಿಕಾರರು ಆ ಪರಿಸ್ಥಿತಿಯ ಲಾಭ ಪಡೆಯತೊಡಗಿದ್ದು ಇನ್ನೊಂದು ಮುಖ.

ವಸ್ತುತಃ ಆಂಗ್ಲೋ ಇಂಡಿಯನ್ ಪತ್ರಿಕಾ ಮಾಧ್ಯಮದಲ್ಲಿ 1907ಕ್ಕೆ ಮೊದಲೇ ಸಿಪಾಯಿದಂಗೆಯ ಸನ್ನಿ ಕಾಣಿಸಿಕೊಂಡಿತು. 1857ರ ಭಯಾನಕ ಘಟನೆಗಳೊಂದಿಗೆ ಆಗಿನ ವಿದ್ಯಮಾನವನ್ನು ಹೋಲಿಸ ತೊಡಗಿದ್ದು ಆಂಗ್ಲೋ ಇಂಡಿಯನ್ನರ ಮನೋಸ್ಥೈರ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿತು. ಪತ್ರಿಕಾ ಮಾಧ್ಯಮದ ಈ ಸನ್ನಿ ಹಿಡಿದಿದ್ದು ಲಾಹೋರಿನ ಆಂಗ್ಲೋ ಇಂಡಿಯನ್ ದೈನಿಕದ ಮೂಲಕ. ಅದರ ಅಂಕಣಗಳಲ್ಲಿ ಹುಚ್ಚು ಮನಸ್ಸಿನ ಪತ್ರಗಳನ್ನೆಲ್ಲಾ ಪ್ರಕಟಿಸಲಾಗುತ್ತಿತ್ತು. ರಾಜಕೀಯ ಚಳವಳಿಗೆ ಇಳಿದಿರುವ ಶಿಕ್ಷಿತ ಜನರೆಲ್ಲರನ್ನು ಕಠೋರ ಶಿಕ್ಷೆಗೆ ಒಳಪಡಿಸಬೇಕೆಂಬ ಅಭಿಪ್ರಾಯಗಳು ಆ ಪತ್ರದಲ್ಲಿರುತ್ತಿದ್ದವು. ದೆಹಲಿಯ ಸೇಂಟ್ ಸ್ಟೀಫನ್ ಕಾಲೇಜಿನ ಪ್ರೊಫೆಸರ್ ಆಗಿ ಆಗಷ್ಟೇ ಭಾರತಕ್ಕೆ ಆಗಮಿಸಿದ್ದ, ಆಂಗ್ಲೋ ಇಂಡಿಯನ್ನರ ಚಿಂತನೆಗಿಂತ ಇನ್ನೂ ಭಿನ್ನವಾಗಿದ್ದ ಸಿ. ಎಫ್. ಆಂಡ್ರ್ಯೂಸ್ ಆ ಪತ್ರಗಳನ್ನು ಓದಿ ದಿಗ್ಭ್ರಮೆಗೊಂಡರು. ಅದನ್ನು ಪ್ರತಿಭಟಿಸಿ ಖಾರವಾದೊಂದು ಪತ್ರ ಬರೆದರು. ಅದಕ್ಕೆ ಪೂರಕವೇ ಎನ್ನುವಂತೆ ಅದೇ ಸಮಯದಲ್ಲಿ ಲಾಹೋರಿನ ಬಿಷಪ್ ಡಾ. ಲೆಫ್ರಾಯ್ ಕೂಡಾ ಪ್ರತಿಭಟನಾ ಪತ್ರವೊಂದನ್ನು ಬರೆದರು. ಆಂಗ್ಲೋ ಇಂಡಿಯನ್ ಪತ್ರಿಕಾ ಪ್ರವೃತ್ತಿಯನ್ನು ಅವರು ಖಂಡಿಸಿದರು. ಮುಂದೆ ನಮಗೆ ತಿಳಿದು ಬರುವ ರೀತಿಯಲ್ಲಿ ವೈಸ್‌ರಾಯ್‌ಗೆ ಕಳುಹಿಸಿದ ಗುಪ್ತ ವರದಿಯಲ್ಲಿ ಇಬ್ಬೆಟ್ಸನ್ ಸಹ ಆಂಗ್ಲ ಪತ್ರಿಕಾ ಮಾಧ್ಯಮದ ಬರಹಗಳು ಗೌರವಾರ್ಹವಾಗಿಲ್ಲವೆಂದು ಒಪ್ಪಿಕೊಂಡಿದ್ದರು. ಆದರೂ ಪಂಜಾಬ್ ಸರ್ಕಾರ ಹಾಗೆ ಅಪಪ್ರಚಾರ ನಡೆಸುತ್ತಿದ್ದವರ ಮೇಲೆ ಕಾನೂನು ಕ್ರಮ ಜರುಗಿಸಲು ಅನುಮತಿ ನೀಡಲಿಲ್ಲ.

ಇಂತಹ ಕುಹಕ, ಕುಚೇಷ್ಟೆ ವರದಿಗಳನ್ನು ಪ್ರತಿ ನಿತ್ಯ ಓದುತ್ತಿದ್ದ ಬ್ರಿಟಿಷ್ ಅಧಿಕಾರಿಗಳು 1857ರ ಪುನರಾವರ್ತನೆ ಆಗುವ ಲಕ್ಷಣಗಳ ಬಗ್ಗೆ ಒಟ್ಟಾಗಿ

ನಂಬತೊಡಗಿದರು. ಲಜಪತ್‌ರಾಯ್ ಅವರ ಒಂದೇ ಒಂದು ಆಣತಿಗಾಗಿ ಸಿಪಾಯಿಗಳು ಕಾಯುತ್ತಿದ್ದಾರೆ ಎಂಬ ಕುತ್ಸಿತ ವರದಿಯನ್ನು ಅವರು ನಿಜವೆಂದು ನಂಬತೊಡಗಿದರು. ಅರ್ಧ ಶತಕದ ನಂತರವೂ ಮೇ 10 ಸನಿಹವಾಗುತ್ತಿದ್ದ ಸಂದರ್ಭದಲ್ಲೇ ಆಂಗ್ಲೋ-ಇಂಡಿಯನ್ ಸಮುದಾಯ ಅದರ ಪುನಾರವರ್ತನೆಯನ್ನು ಭ್ರಮಿಸಿಕೊಳ್ಳತೊಡಗಿತು. ಅದಕ್ಕೆ ಪೂರಕವಾಗಿ ಮಾರ್ಚ್ ತಿಂಗಳಿನಿಂದಲೂ ನಡೆದ ವಿದ್ಯಮಾನಗಳು ನಂಬಿಕೆ ಹುಟ್ಟಿಸತೊಡಗಿದವು. ಮೇ 10 ಹತ್ತಿರವಾಗತೊಡಗಿದಂತೆ ಆಂಗ್ಲೋ ಇಂಡಿಯನ್ ಆಡಳಿತಗಾರರಲ್ಲಿ ದುಃಸ್ವಪ್ನದ ಭಯ ಅತಿಯಾಗಿ ಕಾಡತೊಡಗಿತು. ಕೂಡಲೇ ಕಠಿಣ ಕ್ರಮಕೈಗೊಳ್ಳಬೇಕೆಂದು ಭಯದ ಒತ್ತಡ ಅವರ ಮೇಲೆ ಬೀಳತೊಡಗಿತು. ವರದಿಗಳ ಪ್ರಕಾರ ಆ ದುರ್ದಿನ ನಿಭಾಯಿಸಲು ಉನ್ನತ ಅಧಿಕಾರಿಗಳು ತಮ್ಮ ಕುಟುಂಬಗಳ ರಕ್ಷಣೆಗೆ ಅಗತ್ಯವಾದ ಎಲ್ಲಾ ಬಂದೋಬಸ್ತ್ ವ್ಯವಸ್ಥೆ ಮಾಡಿದರು. ತುರ್ತು ಪರಿಸ್ಥಿತಿ ಒದಗಿದರೆ ಅದನ್ನು ನಿಭಾಯಿಸಲು ಸಿದ್ಧವಾಗಿರುವಂತೆ ರೈಲ್ವೆ ಅಧಿಕಾರವನ್ನು ಸನ್ನದ್ಧಗೊಳಿಸಲಾಗಿತ್ತು. 1907ರಲ್ಲಿ ಭಾರತಕ್ಕೆ ಭೇಟಿಕೊಟ್ಟ ಕೈರ್ ಹಾರ್ಡಿ ಆಂಗ್ಲೋ-ಇಂಡಿಯನ್ ಆಡಳಿತಗಾರರ ಇಂತಹ ದಯನೀಯ ಮನಸ್ಥಿತಿಯ ಬಗ್ಗೆ ಉತ್ತಮ ಸಾಕ್ಷ್ಯವನ್ನು ದಾಖಲು ಮಾಡಿಟ್ಟಿದ್ದಾರೆ. ಅದೇ ದಿನಗಳಲ್ಲಿ ದೆಹಲಿಯಲ್ಲಿ ಪೌರ ತೆರಿಗೆಗಳನ್ನು ದುಪ್ಪಟ್ಟುಗೊಳಿಸಲಾಗಿತ್ತು. ಅದನ್ನೆಲ್ಲಾ ನೆನಪು ಮಾಡಿಕೊಂಡು ಕೈರ್ ಹಾರ್ಡಿ ಹೀಗ ಬರೆದಿಟ್ಟಿದ್ದಾರೆ.

''ಭಾರೀ ಚಳವಳಿ, ಪ್ರತಿಭಟನೆ ಎದುರಾಯಿತು. ಹೆಚ್ಚಿಸಿದ ತೆರಿಗೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಮೇ 10ರಂದು ಒಂದೆಡೆ ಸೇರಿ ದೇಶವಾಸಿಗಳ ನಡುವೆ ಬೀದಿ ಜಗಳವೂ ನಡೆಯಿತು. ಅದು ಕೇವಲ ಐದು ನಿಮಿಷದ್ದೂ ಅಲ್ಲ. ಅತ್ತ ಯುರೋಪಿಯನ್ ಕ್ಲಬ್‌ಗಳಿಗೆ ವಿಕೃತ ವರದಿಗಳು ತಲುಪಿದವು. ಆಂಗ್ಲೋ ಇಂಡಿಯನ್‌ರು ತತ್ತರಿಸಿದರು. ದೇಶವಾಸಿಗಳು ದಂಗೆ ಎದ್ದಿದ್ದಾರೆ, ಯುರೋಪಿಯನ್ನರನ್ನು ಕೊಚ್ಚಿ ಹಾಕುತ್ತಿದ್ದಾರೆ ಎಂದು ಗುಲ್ಲೆಬ್ಬಿಸಲಾಯಿತು. ಆದರೆ ಅತ್ತ ದೆಹಲಿ ನಗರದಲ್ಲಿ ವ್ಯಾಪಾರ ವಹಿವಾಟುಗಳು ಎಂದಿನಂತೆ ಸಾಮಾನ್ಯವಾಗಿ ನಡೆಯುತ್ತಿದ್ದವು.''

ಕೈರ್ ಹಾರ್ಡಿಗೆ ಆಶ್ಚರ್ಯಕರವೆನಿಸಿದ ಘಟನೆಯೂ ಆಗ ನಡೆಯಿತು. ಇಟಾವದಲ್ಲಿ ಅಹಿತಕರ ಘಟನೆಯೊಂದು ನಡೆಯಿತು. ಆದರೆ ಅನಗತ್ಯವಾಗಿ ಲಾಲಾ ಲಜಪತ್‌ರಾಯ್ ಅವರ ಹೆಸರನ್ನು ಜೋಡಿಸಿದ್ದು ಹಾರ್ಡಿಗೆ ಅಚ್ಚರಿ ಎನಿಸಿತು. ಆ ಪ್ರಕರಣವನ್ನು ಮುಂದೆ 'ಇಟಾವ ಗೊಂದಲ' ಎಂದೇ ಕರೆಯಲಾಗಿದೆ. 1907ರಲ್ಲಿ ಆಂಗ್ಲೋ ಇಂಡಿಯನ್ ಮನಸ್ಥಿತಿ ಹೇಗೆ ಕೆಲಸ ಮಾಡುತ್ತಿತ್ತು ಎಂಬುದನ್ನು ಅದು ಸಾಕ್ಷೀಕರಿಸುತ್ತದೆ. ಸಂಯುಕ್ತ ಪ್ರಾಂತ್ಯದಲ್ಲಿನ ಇಟಾವದಲ್ಲಿ ಸರ್ಕಾರಿ ಹುದ್ದೆಯಲ್ಲಿದ್ದ ಹಿಂದೂ-ಮುಸ್ಲಿಂ ಅಧಿಕಾರಿಗಳಲ್ಲಿ ತಿಕ್ಕಾಟವಿದ್ದಂತೆ ಕಂಡುಬರುತ್ತದೆ. ಮುಸ್ಲಿಂ ಕೊತ್ವಾಲನನ್ನು ವರ್ಗಾವಣೆ ಮಾಡಿ ಆ ಜಾಗಕ್ಕೆ ಬ್ರಾಹ್ಮಣ ಡೆಪ್ಯೂಟಿ ಪೊಲೀಸ್ ಸುಪರಿಂಟೆಂಡೆಂಟ್ ಒಬ್ಬರನ್ನು ಕರೆಯಿಸಿಕೊಳ್ಳುವುದು ಹಿಂದೂ ಅಧಿಕಾರಿ ಸಮುದಾಯದ ಕೆಲಸವಾದರೆ, ಮುಸ್ಲಿಂ ಅಧಿಕಾರಿಗಳು ತದ್ವಿರುದ್ಧದ ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಈ ತಿಕ್ಕಾಟ ಪ್ರಕೋಪಕ್ಕೆ ಹೋಗಿ ಮುಸ್ಲಿಂ ಪ್ರಧಾನವಾದ ಶಾಖೆಗಳಲ್ಲಿ ಸದಾ ವಿಗಸ ಎದ್ದು ಕಾಣುತ್ತಿತ್ತು. ಸಂಘರ್ಷವು

ಸಾಮಾನ್ಯವಾಗಿತ್ತು. ಪಂಜಾಬಿನಲ್ಲಿ ಲಾಲಾ ಲಜಪತ್‌ರಾಯ್ ಚಟುವಟಿಕೆಗಳು ವ್ಯಾಪಕವಾಗುವತನಕ ಅಂತಹ ವಿಶೇಷವಾದ್ದೇನೂ ನಡೆದಿರಲಿಲ್ಲ. ಇದ್ದಕ್ಕಿದ್ದಂತೆ ಮುಸ್ಲಿಂ ಸಮುದಾಯದ ಓರ್ವ ತಹಶೀಲ್ದಾರನು ಇಟಾವದ ಮ್ಯಾಜಿಸ್ಟ್ರೇಟ್ ರೋಜ್‌ನಿಗೆ ಗುಪ್ತವಾಗಿ ಸುದ್ದಿಯೊಂದನ್ನು ನೀಡಿ ಸ್ಥಳೀಯ ಹಿಂದೂ ಅಧಿಕಾರಿಗಳು ಲಾಲಾ ಲಜಪತ್‌ರಾಯ್ ಅವರಿಗಾಗಿ ಚಂದಾ ವಸೂಲಿ ಯಾದಿಯೊಂದನ್ನು ಸಿದ್ಧಪಡಿಸುತ್ತಿದ್ದಾರೆಂದು ತಿಳಿಸಿದ. ಆ ಚಟುವಟಿಕೆಯಲ್ಲಿ ಡೆಪ್ಯುಟಿ ಪೊಲೀಸ್ ಸುಪರಿಂಟೆಂಡೆಂಟ್ ಶ್ಯಾಮ ಬಿಹಾರಿ ಮಿಶ್ರಾ ಮತ್ತು ಡೆಪ್ಯುಟಿ ಕಲೆಕ್ಟರ್ ಪುತ್ರೀ ಪ್ರಸಾದ್, ಕೆಲವು ವಕೀಲರು ಅವರಲ್ಲೂ ಇಟಾವದಲ್ಲಿ ವೃತ್ತಿಪರವಾಗಿದ್ದ ಪಂಜಾಬಿನ ಜಸವಂತ್ ಸಿಂಗ್ ಶಾಮೀಲಾಗಿದ್ದಾರೆ ಎಂದು ಆತ ತಿಳಿಸಿದ. ಈ ಜನರು ಅದರ ಜೊತೆಯಲ್ಲೇ ರಾಜದ್ರೋಹದ ಕೃತ್ಯಗಳಲ್ಲೂ ತೊಡಗಿದ್ದು, ಪತ್ರ ವ್ಯವಹಾರಗಳನ್ನು ನಡೆಸುತ್ತಿದ್ದಾರೆಂದೂ, ಆರ್ಯ ಸಮಾಜದ ವಿವಿಧ ವಿಭಾಗಗಳ ಜೊತೆ ಸಂಪರ್ಕ ಇಟ್ಟುಕೊಂಡಿದ್ದಾರೆಂದೂ ತಿಳಿಸಿದ. ಪತ್ರ ವ್ಯವಹಾರವನ್ನು ರಹಸ್ಯವಾಗಿ ಭೇದಿಸಬಹುದೆಂದೂ ಮ್ಯಾಜಿಸ್ಟ್ರೇಟರಿಗೆ ಮನವರಿಕೆಯಾಯಿತು. ಅದಕ್ಕೆ ಅನುಗುಣವಾಗಿ ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಯಿತು. ಕೈರ್ ಹಾರ್ಡಿ ಬರಹಗಳಲ್ಲಿ ನಮಗೆ ಇದೆಲ್ಲಾ ತಿಳಿದು ಬರುತ್ತದೆ.

ಒಟ್ಟು 19 ಪತ್ರಗಳನ್ನು ಭೇದಿಸಲಾಯಿತು. ಈ ಕೆಲಸಕ್ಕಾಗೇ ವಿಶೇಷವಾಗಿ ನೇಮಿಸಿಕೊಂಡ ಸುಳಿವುಗಾರ ಖಲೀಲ್ ಆ ಪತ್ರಗಳನ್ನು ಒದಗಿಸಿದ... ಅವುಗಳಲ್ಲೇ ಬಹುತೇಕ ದೇಶದ್ರೋಹದ ಪ್ರಚೋದಕಗಳಾಗಿದ್ದವು. ಬಂಡಾಯದ ಅಂಶಗಳನ್ನು ಒಳಗೊಂಡಿದ್ದವು. ಮತ್ತೆ ಕೆಲವು ಖಾಸಗಿ ಅಂಶಗಳನ್ನು ಒಳಗೊಂಡಿದ್ದವು. ಇನ್ನೂ ಹೆಚ್ಚೆಂದರೆ ಕೆಲವು ಪತ್ರಗಳಲ್ಲಿ ಹಿಂದೂ ಅಧಿಕಾರಿಗಳ ಸಹಿಗಳು ಇದ್ದವು. ಆಗ ವಿಭಾಗೀಯ ಕಮಿಷನರ್ ಆಗಿದ್ದ ಕೋಬ್ ಆ ಬೆಳವಣಿಗೆಯ ಬಗ್ಗೆ ಇನ್ನಷ್ಟು ತನಿಖೆ ಕೈಗೊಂಡರು. ಆರೋಪಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ತಾಳೆ ನೋಡುವುದಾಗಿ ಅವರು ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಪ್ರಾಂತೀಯ ಅಪರಾಧ ತನಿಖಾ ವಿಭಾಗದ ನಿರ್ದೇಶಕ ವಾರ್ಡ್ ಅವರನ್ನು ಕರೆಯಿಸಲಾಯಿತು. ಪ್ರಕರಣದ ಗಾಂಭೀರ್ಯವನ್ನು ಅವರು ಒಪ್ಪಿಕೊಂಡರು. ಏಕ ಕಾಲದಲ್ಲಿ ಉನಾವ್, ಮೇರಿ ಮತ್ತು ಅಮೃತಸರಗಳಲ್ಲಿ ಶೋಧ ಮತ್ತು ವಿಚಾರಣೆಗಳನ್ನು ಕೈಗೊಳ್ಳುವಂತೆ ಅವರಿಗೆ ಆದೇಶಿಸಲಾಯಿತು. ಈ ಮಧ್ಯೆ ಅತಿ ವಿಚಿತ್ರವಾದ ಇನ್ನೊಂದು ಬೆಳವಣಿಗೆಯೂ ನಡೆಯಿತು. ತಮ್ಮ ಕಾರ್ಯಕ್ಕೆ ಪೂರಕವಾಗುವಂತೆ ರೋಜ್ ಸ್ಥಳೀಯ ಸ್ವಯಂಸೇವಕ ದಳದ ಕ್ಯಾಪ್ಟನ್ ಆಡಂಸನ್ ಜೊತೆ ಚರ್ಚಿಸತೊಡಗಿದ್ದರು. ಈ ಪ್ರಕರಣದ ಬಗ್ಗೆ ಎಲ್ಲಾ ಸ್ಥಳೀಯ ಅಧಿಕಾರಿಗಳು ಗಂಭೀರರಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಇಡೀ ನಗರದಲ್ಲಿ ಸಂಚು ನಡೆಯುತ್ತಿದೆ ಎಂದು ಪೊಲೀಸರು ನಂಬಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ತಲೆದೋರಿತು. ಆಂಗ್ಲೋ ಇಂಡಿಯನ್ನರ ರಕ್ಷಣೆ ಉಸ್ತುವಾರಿ ಹೊತ್ತ ಆ ಅಧಿಕಾರಿ ಯಾವುದೇ ಅಪಘಾತವನ್ನು ಎದುರಿಸಲು ಸಿದ್ಧವಾಗಿರುವಂತೆ ಸೂಚನೆ ಕೊಟ್ಟ. ಕೂಡಲೇ ರಕ್ಷಣೆಗೆ ಧಾವಿಸಿ ಬರುವಂತೆ ಟುಂಡ್ಲಾ ಮತ್ತು ಕಾನ್ಪುರದ ಸ್ವಯಂ ಸೇವಕ ಪಡೆಗಳಿಗೆ ಸೂಚನೆ ಕಳುಹಿಸಿದ. ಈ ಮಧ್ಯೆ ಕೋಬ್ ಮತ್ತು ವಾರ್ಡ್ ಹೆಚ್ಚು ಕಾರ್ಯಪ್ರವೃತ್ತರಾಗಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್

ಜನರಲ್ ಸಹ ಅವರ ನೆರವಿಗೆ ಸೇರಿಕೊಂಡರು. ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಅವರಿಗೆ ಕೆಲವು ಶಂಕೆಗಳು ಮೂಡಿದವು. ಆ ಪ್ರಕರಣವನ್ನು ಅವರು ಸಂಪೂರ್ಣವಾಗಿ ಭಿನ್ನವಾಗಿ ನೋಡತೊಡಗಿದರು...ಅವರ ಅನುಮಾನ ಪ್ರಬಲವಾಯಿತು... ಇನ್ನಷ್ಟು ಆಳವಾಗಿ ತನಿಖೆ ನಡೆಸಿದ ನಂತರ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ದೇಶದ್ರೋಹದ ಬಂಡಾಯ ಅಂಶಗಳನ್ನು ಒಳಗೊಂಡ ಆ ಪತ್ರಗಳೆಲ್ಲಾ ನಕಲಿ ಎಂದು ಅವರು ತಿಳಿಸಿದರು. ಖಲೀಲ್ ಹೀನ ಮನುಷ್ಯನೆಂಬುದು ಅತಿ ಬೇಗ ಬೆಳಕಿಗೆ ಬಂದಿತು. ಆದರೆ ಆತನಕ ಅವನಿಗೆ ಯಾವ ಶಿಕ್ಷೆಯೂ ಆಗಿರಲಿಲ್ಲ... ಹೀಗಾಗಿ ತನಿಖೆ ಕೈಗೊಂಡ ಅಧಿಕಾರಿಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿದವು. ಇಡೀ ಪ್ರಕರಣವನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ರೋಜ್ ಒತ್ತಾಯಿಸಿದರೆಂದು ತಿಳಿದು ಬರುತ್ತದೆ. ಅಂತಿಮವಾಗಿ ಸರ್ಕಾರ ಪೊಲೀಸ್ ಇನ್‌ಸ್ಪೆಕ್ಟರ್ ಅವರ ಅಭಿಪ್ರಾಯವನ್ನು ಮಾನ್ಯ ಮಾಡಿತು. ಖಲೀಲ್ ಬಂಧನಕ್ಕೆ ವಾರಂಟ್ ಹೊರಡಿಸಲಾಯಿತು. ಆ ವೇಳೆಗೆ ಆತ ತಲೆತಪ್ಪಿಸಿಕೊಂಡಿದ್ದ. ಸರ್ಕಾರ ಬ್ಯೂರೊಲಿಗೆ ಛೀಮಾರಿ ಹಾಕಿತು. ರೋಜ್ ವಿರುದ್ಧ ಕಠಿಣ ಕ್ರಮಕೈಗೊಂಡಿತು. 'ಇಟಾವ ಗೊಂದಲ'ವನ್ನು ಅಷ್ಟೊಂದು ಉಲ್ಬಣಾವಸ್ಥೆಗೆ ಕೊಂಡೊಯ್ದ ಅಧಿಕಾರಿ ರೋಜ್ ಎಂಬುದನ್ನು ಮರೆಯುವಂತಿಲ್ಲ.''

ಆಂಗ್ಲೋ ಇಂಡಿಯನ್ ಅಧಿಕಾರಿಷಾಹಿಯಲ್ಲಿ ಯಾವುದೇ ಊಹಾಪೋಹವನ್ನು ಮಾನ್ಯ ಮಾಡುವಂತಹ ಮನಸ್ಥಿತಿ ಇದ್ದುದ್ದರಿಂದಾಗಿಯೇ ಲಜಪತ್‌ರಾಯ್ ಅವರ ವಿರುದ್ಧ ಅಂತಹ ಕಠಿಣಕ್ರಮವನ್ನು ಕೈಗೊಂಡಿತು. ಇಡೀ ಇಟಾವ ಪಟ್ಟಣದಲ್ಲಿ ಬಂಡಾಯವೇಳುತ್ತದೆ ಎಂದು ಅದು ಭ್ರಮಿಸಿತು. ''ಪೊಲೀಸರ ನಿಷ್ಠೆಯ ಬಗ್ಗೆ ನಂಬಿಕೆ ಇರಲಿಲ್ಲ.'' ಹೀಗಾಗಿ 1818ರ ನಿಯಂತ್ರಣ ಕಾಯ್ದೆಯನ್ನು ಬಳಸಿಕೊಳ್ಳಲು ಸರ್ಕಾರಕ್ಕೆ ಮುಕ್ತ ಅವಕಾಶ ನೀಡಲಾಯಿತು. ಅದನ್ನು ಜಾರಿಗೂ ತರಲಾಯಿತು. ಕೈರ್ ಹಾರ್ಡಿ ಹೇಳುವ ಪ್ರಕಾರ ಗಡಿಪಾರು ಶಿಕ್ಷೆಯನ್ನು ಹೊರಡಿಸಲಾಯಿತು.

ಲಾಲಾ ಲಜಪತ್‌ರಾಯ್ ಅವರನ್ನು ಗಡಿಪಾರು ಮಾಡಿದ ಸಂದರ್ಭದಲ್ಲಿ ಪಂಜಾಬ್ ಸರ್ಕಾರದ ಮನಸ್ಥಿತಿಯೂ ಅದಕ್ಕಿಂತ ಭಿನ್ನವಾಗಿರಲಿಲ್ಲ.

ಲಜಪತರನ್ನು ಬಂಧಿಸುವ ಕೆಲಸದಲ್ಲಿ ಮುಂದಾಗಿದ್ದು ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಡೆಂಜಿಲ್ ಇಬ್ಬೆಟ್‌ಸನ್ ಎಂಬುದಂತೂ ನಿಜ. ಆದರೂ 1818ರ ನಿಯಂತ್ರಣ ಕಾಯ್ದೆಯ 3ನೇ ಕಲಮನ್ನು ಬೆಳಕಿಗೆ ತರಬೇಕೆಂಬುದು ಮೊದಲು ಯಾರ ತಲೆಯಲ್ಲಿ ಹೊಳೆಯಿತೆಂಬುದು ಸ್ಪಷ್ಟವಾಗಿಲ್ಲ. 1907ರ ಆ ತುಮುಲಕಾರಿ ಘಟನೆಗಳ ಬಗ್ಗೆ ಇಬ್ಬೆಟ್‌ಸನ್ ಸ್ವಯಂ ಪ್ರತಿಕ್ರಿಯೆ ಏನಾಗಿತ್ತೆಂಬುದು ಆ ನಂತರ ಆತನೇ ಬರೆದು ಕೊಂಡಿರುವ ಜ್ಞಾಪನಾ ಪತ್ರದಲ್ಲಿ ವ್ಯಕ್ತವಾಗುತ್ತದೆ. ಮಿಂಟೋ ಆ ಜ್ಞಾಪನಾ ಪತ್ರದ ಸಾರಾಂಶವನ್ನು ಮಾರ್ಲೆಗೆ ಕಳುಹಿಸಿಕೊಟ್ಟಿದ್ದು ಮುಂದೆ ನಮಗೆ ತಿಳಿದು ಬರುತ್ತದೆ. ಭಾರತೀಯ ರಾಜದ್ರೋಹ ಸಮಿತಿಯು 1917ರಲ್ಲಿ ನ್ಯಾಯಮೂರ್ತಿ ಸರ್ ಎಸ್.ಟಿ. ರೌಲಟ್ ನೇತೃತ್ವದಲ್ಲಿ ಕಲಾಪಕೈಗೊಂಡು ದಾಖಲೆಗಳನ್ನೆಲ್ಲಾ ಪರಿಶೀಲಿಸಿತು. ಅದರ ಕೆಲವು ಅಂಶಗಳನ್ನು ಸಮಿತಿಯು ತನ್ನ ವರದಿಯಲ್ಲಿ ದಾಖಲು ಮಾಡಿದೆ. ಪ್ರಾಂತ್ಯವಾರು ಘಟನೆಯ ಬಗ್ಗೆ ಸಾರಾಂಶ ನೀಡುತ್ತಾ ರೌಲಟ್ ಹೀಗೆ ಬರೆದಿದ್ದಾರೆ,

"ಕೆಲವು ನಾಯಕರು ಬ್ರಿಟಿಷರನ್ನು ದೇಶದಿಂದ ಹೊರಗಟ್ಟಬೇಕೆಂದು ಯತ್ನಿಸುತ್ತಿರುವುದಾಗಿ ಕಂಡು ಬರುತ್ತಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಹೇಳಿದ್ದಾರೆ. ಜನತೆಯನ್ನು ಒಟ್ಟಾಗಿ ಎತ್ತಿ ಕಟ್ಟಿ ಬ್ರಿಟಿಷರಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಯತ್ನಿಸುತ್ತಿದ್ದಾರೆ. ಮತೀಯ ವಿದ್ವೇಷವನ್ನು ಕೆಣಕುವ ಮೂಲಕ ದಂಗೆ ಎಬ್ಬಿಸಿ ಸರ್ಕಾರಿ ಯಂತ್ರವನ್ನು ನಿಸ್ತೇಜಗೊಳಿಸುವ ಸಂಚನ್ನು ಅವರು ಹೂಡಿದ್ದಾರೆಂದು ತಿಳಿಸಿದ್ದಾರೆ. ಒಟ್ಟಾರೆ ಪರಿಸ್ಥಿತಿ ಅಪಾಯಕಾರಿ ಸ್ಥಿತಿಯಲ್ಲಿದೆ. ಅತಿ ಜರೂರಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ." ಆ ಪರಿಹಾರವೇ ಲಜಪತರ ಮತ್ತು ಅಜಿತ್ ಸಿಂಗ್‌ರ ಗಡಿಪಾರು. ಅವರಿಬ್ಬರನ್ನು ಚಳವಳಿಯ ನಾಯಕರೆಂದು ಪರಿಗಣಿಸಿ 1818ರ ನಿಯಂತ್ರಣ ಕಾಯ್ದೆ 3ನೇ ಕಲಮಿನನ್ವಯ ಆ ಶಿಕ್ಷೆಗೆ ಗುರಿಪಡಿಸಲಾಯಿತು. ಅದೇ ಸಮಯದಲ್ಲಿ ಭಾರತ ಸರ್ಕಾರ ಕಾಲುವೆ ವಸಾಹತು ಶಾಸನವನ್ನು ಅನೂರ್ಜಿತಗೊಳಿಸಿತು. ರೈತರು ಸಿಡಿದೇಳಲು ಅತೃಪ್ತಿಯೇ ಮೂಲ ಕಾರಣ ಎಂಬುದನ್ನು ಸರ್ಕಾರ ಒಪ್ಪಿಕೊಳ್ಳಲಿಲ್ಲ. ಆಗ ಜಾನ್ ಎಂದೇ ಕರೆಯಲ್ಪಡುತ್ತಿದ್ದ ಸರ್ಕಾರದ ಕಾರ್ಯದರ್ಶಿ ಲಾರ್ಡ್ ಮಾರ್ಲೆ ಜನಪ್ರತಿನಿಧಿ ಸಭೆಯಲ್ಲಿ 1907ರ ಜೂನ್ 6ರಂದು ಮಾತನಾಡುತ್ತಾ ಹೀಗೆ ಹೇಳಿದರು,

"ಪಂಜಾಬಿನಲ್ಲಿ ಪ್ರಮುಖ ಚಳವಳಿಗಾರರು ಮಾರ್ಚ್ 1 ಮತ್ತು 10ರ ನಡುವೆ 28 ಸಭೆಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಐದು ಮಾತ್ರ ಅದರಲ್ಲೂ ಅಲ್ಪ ಪ್ರಮಾಣದಲ್ಲಿ ಕೃಷಿ ಕುಂದುಕೊರತೆಗಳಿಗೆ ಸಂಬಂಧಪಟ್ಟವು. ಉಳಿದ 23 ಶುದ್ಧ ರಾಜಕೀಯ ಮೂಲದವು."

ಲಜಪತರು ಪಂಜಾಬಿನ ಚಳವಳಿಯನ್ನು ಸಂಪೂರ್ಣವಾಗಿ ಕೃಷಿಕರ ಅತೃಪ್ತಿಯ ಆಂದೋಲನವೆಂದೇ ದಾಖಲು ಮಾಡಿದ್ದಾರೆ. ಆ ಅತೃಪ್ತಿಗೆ ಸರ್ಕಾರದ ಆರ್ಥಿಕ ಕ್ರಮಗಳೇ ಕಾರಣವೆಂದು ನಿರೂಪಿಸಿದ್ದಾರೆ. ಮಾರ್ಲೆ ನೀಡಿದ ಅಂಕಿ ಅಂಶಗಳನ್ನು ಲಜಪತರು ಹೀಗೆ ಸರಿಪಡಿಸಿದ್ದಾರೆ,

"1907ರ ಮಾರ್ಚ್ 1 ಮತ್ತು 10ರ ನಡುವೆ ನಡೆದ ಸಭೆಗಳ ಸಂಖ್ಯೆ 28ರ ದುಪ್ಪಟ್ಟಾಗುತ್ತದೆ. ಅದು ಮೂರು ಪಟ್ಟು ಆಗಬಹುದು. ಅವುಗಳಲ್ಲಿ ಬಹುತೇಕ ಶುದ್ಧ ಕೃಷಿಕರ ಕುಂದುಕೊರತೆಗಳಿಗೆ ಸಂಬಂಧಪಟ್ಟವು. ರಾಜಕೀಯ ಸಭೆಗಳೆಂದೇ ಹೇಳಬಹುದಾದವು ಹತ್ತು ಹನ್ನೆರಡಕ್ಕಿಂತ ಹೆಚ್ಚಿಗೆ ಇಲ್ಲ."*

ಲಜಪತ್‌ರಾಯ್ ಅವರ ಗಡಿಪಾರು ಕ್ರಮಕ್ಕೆ ವೈಸರಾಯ್ ಲಾರ್ಡ್ ಮಿಂಟೋ ಅನುಮತಿ ಕೊಡಲೇ ಸಿಕ್ಕಿಬಿಟ್ಟಿತು. ಸರ್ಕಾರದ ಕಾರ್ಯದರ್ಶಿ 'ಲಿಬರಲ್' ಪಕ್ಷಕ್ಕೆ ಸೇರಿದ 'ಹಾನೆಸ್ಟ್ ಜಾನ್ (ಲಾರ್ಡ್ ಮಾರ್ಲೆ)'ಗೆ ವಾರಂಟ್ ಜಾರಿಯಾದ ನಂತರ ಈ ವಿಷಯ ತಿಳಿಸಲಾಯಿತು. ಜನಪ್ರತಿನಿಧಿ ಸಭೆಯಲ್ಲಿ ಅವರು ಈ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡರು. ವೈಸ್‌ರಾಯ್ ಮತ್ತು ಸರ್ಕಾರದ ಕಾರ್ಯದರ್ಶಿ ನಡುವೆ ವಿಸ್ತು

---

* ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯಾ, ಪುಟ. 164.

ನಡೆಯಿತೆಂಬುದನ್ನು ಲಾರ್ಡ್ ಮಾರ್ಲೆಯ "Recollections"ನಲ್ಲಿ ಭಾಗಶಃವಾಗಿ ಮತ್ತು ಲೇಡಿ ಮಿಂಟೋ ರಚಿತ 'India, Minto and Morley 1905-1910' ಕೃತಿಯಲ್ಲಿ ಭಾಗಶಃ ತಿಳಿದುಕೊಳ್ಳಬಹುದು.

1907 ಮೇ. 20ರಂದು ಮಾರ್ಲೆಗೆ ಮಿಂಟೋ ಹೀಗೆ ಬರೆದರು.

"ನಾಗರಿಕ ಮತ್ತು ಮಿಲಿಟರಿ ಗೆಜೆಟ್‌ನಲ್ಲಿ ಪ್ರಕಟವಾದ ಕೆಲವು ಪತ್ರಗಳ ಬಗ್ಗೆ ಸಾಮಾನ್ಯರ ಸಭೆಯಲ್ಲಿ ಸರ್ ಹೆನ್ರಿ ಕಾಟನ್ ನಿಮ್ಮನ್ನು ಪ್ರಶ್ನಿಸಿದ್ದರು. ಆ ಪತ್ರಗಳ ಒಕ್ಕಣೆ ಗೌರವಪ್ರದವಾಗಿರಲಿಲ್ಲ. ಮತೀಯ ವಿದ್ವೇಷವನ್ನು ವಿಕೃತಗೊಳಿಸುವಂತಹ ಬರಹಗಳು ಅವು. ಪಂಜಾಬ್ ಸರ್ಕಾರ ಕಾನೂನು ಕ್ರಮಕೈಗೊಳ್ಳಲು ಹಾಗೂ ಖಾಸಗಿ ಕಾನೂನು ಕ್ರಮಕ್ಕೆ ಅವಕಾಶ ಕೊಡದಿರಲು ನಿರ್ಧರಿಸಿತು. ನಿಮ್ಮ ನಡವಳಿಕೆ ಸರಿಯಾಗಿರಬಹುದು. ಆದರೆ ಅಂತಹ ಪತ್ರಗಳನ್ನು ಪ್ರಮುಖ ಇಂಗ್ಲಿಷ್ ವೃತ್ತ ಪತ್ರಿಕೆಯೊಂದು ಪ್ರಕಟಿಸಿದರೆ ಅದನ್ನು ಓದಿದವರ ರಕ್ತ ಕುದಿಯದೇ ಇರದು. ನಾವು ಲೆಫ್ಟಿನೆಂಟ್ ಗವರ್ನರ್‌ಗೆ ಪತ್ರ ಬರೆದಿದ್ದೇವೆ. ಯಾವುದೇ ಕಠಿಣ ಕ್ರಮಕೈಗೊಳ್ಳದಿದ್ದರೂ ಸಂಪಾದಕರನ್ನು ಕಂಡು ಆಗಿರುವ ಅನಾಹುತದ ಬಗ್ಗೆ ಅವರ ಗಮನ ಸೆಳೆಯಲು ತಿಳಿಸಿದ್ದೇವೆ." **

ಆರು ದಿನಗಳ ನಂತರ ಮಿಂಟೋ ಮಾರ್ಲೆಗೆ ತಂತಿಯೊಂದನ್ನು ಕಳುಹಿಸಿದ,

ತಂತಿ ಸಂದೇಶ.

ಮಿಂಟೋಯಿಂದ ಮಾರ್ಲೆಗೆ ಮೇ, 8

"ಪಂಜಾಬಿನ ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಇಬ್ಬೆಟ್‌ಸನ್‌ರಿಂದ ಮೂರು ದಿನಗಳ ಮೊದಲು ನಮಗೆ ಒಂದು ಗಂಭೀರವೂ ತುರ್ತಿನದೂ ಆದ ಸೂಚನೆಯೊಂದು ಬಂದಿದೆ... ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ ಎಂದು ಅವರು ಎಚ್ಚರಿಸಿದ್ದಾರೆ. ಎಲ್ಲೆಡೆ ಉಗ್ರಗಾಮಿಗಳು ರಾಜದ್ರೋಹವನ್ನು ಬಹಿರಂಗವಾಗಿ ಎಡಬಿಡದೆ ಪ್ರಚೋದಿಸುತ್ತಿದ್ದಾರೆ. ಪತ್ರಿಕೆಗಳಲ್ಲೂ, ತಾವು ಕರೆಯುತ್ತಿರುವ ಸಾರ್ವಜನಿಕ ಸಭೆಗಳಲ್ಲೂ ಇದು ನಿರಾತಂಕವಾಗಿ ನಡೆಯುತ್ತಿದೆ. ತಾವು ಯಾವುದೇ ಕ್ರಮ ಕೈಗೊಳ್ಳದಿರುವುದು ನಮ್ಮ ಸಮುದಾಯದ ಜನರನ್ನು ಕಳವಳಕ್ಕೆ ಈಡು ಮಾಡಿದೆ. ಇಬ್ಬೆಟ್‌ಸನ್ ಪ್ರಕಾರ ಸರ್ಕಾರದ ಈ ತಾಟಸ್ಥ್ಯ ಧೋರಣೆ ರಾಜದ್ರೋಹದ ಕೃತ್ಯಗಳು ಅಡೆತಡೆ ಇಲ್ಲದೆ ಸಾಗಲು ಅನುವು ಮಾಡಿಕೊಟ್ಟಂತೆ ಆಗಿದೆ. ಸರ್ಕಾರಕ್ಕೆ ಬಹಿರಂಗವಾಗಿ ಅಪಮಾನವಾಗುತ್ತಿದೆ.

"ರಾಜದ್ರೋಹದ ಚಟುವಟಿಕೆಗಳಲ್ಲಿ ಸಾಮಾನ್ಯವಾಗಿ ಎರಡು ಲೋಪಗಳಿವೆ. ಲಾಹೋರ್, ಅಮೃತಸರ, ಪಿಂಡಿ, ಫಿರೋಜ್‌ಪುರ, ಮುಲ್ತಾನ ಮತ್ತು ಇತರೆ ಸ್ಥಳಗಳಲ್ಲಿ ಬಹಿರಂಗವಾಗಿ ಉನ್ನತ ಅಧಿಕಾರಿಗಳನ್ನು ಕೊಂದು ಹಾಕಲು ಕರೆ ನೀಡಲಾಗುತ್ತಿದೆ.

** ಮೇರಿ, ಕೋರ್ಟೆಸ್ ಆಫ್ ಮಿಂಟೋ: ಇಂಡಿಯಾ, ಮಿಂಟೋ ಅಂಡ್ ಮಾರ್ಲೆ 1905-1910, ಪುಟ. 123

ಜನರಿಗ ದಂಗ ಏಳಲು ಪ್ರಚೋದಿಸಿ ಇಂಗ್ಲಿಷರ ಮೇಲೆ ಮುಗಿಬೀಳುವಂತೆ ಒಡಿವಪ್ಪಿಸಲಾಗುತ್ತಿವೆ. ಹಾಗೆ ಮಾಡುವ ಮೂಲಕ ಅವರನ್ನು ಹೊಡೆದೋಡಿಸಲು. ತಾವು ಸ್ವತಂತ್ರರಾಗಲು ಹವಣಿಸುತ್ತಿದ್ದಾರೆ. ಇನ್ನೊಂದು ಕಡೆ ಸೇನೆಗೆ ನೇಮಕಾತಿ ಮಾಡುತ್ತಿರುವ ವ್ಯವಸ್ಥೆಯನ್ನು ಭ್ರಷ್ಟಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಸಿಖ್ಖರು ಮತ್ತು ಮಿಲಿಟರಿ ಪೆನ್ ಶನ್‌ದಾರರ ಮೇಲೆ ವಿಶೇಷ ಆಕರ್ಷಣೆಯ ಬಲೆ ಒಡ್ಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಸಿಖ್ಖರ ಹಳ್ಳಿಗಳಲ್ಲಿ ರಾಜದ್ರೋಹದ ಕರಪತ್ರಗಳನ್ನು ಹಂಚಲಾಗುತ್ತಿದೆ. ಫಿರೋಜ್‌ಪುರದಲ್ಲಿ ಸರ್ಕಾರದ ಈ ಜನವಿರೋಧಿ ಧೋರಣೆ ಪ್ರಕೋಪದಲ್ಲಿದ್ದು ಅಲ್ಲಿನ ಸಭೆಗಳಲ್ಲಿ ಬಹಿರಂಗವಾಗಿ ದಂಗೆ ಏಳಲು ಪ್ರಚೋದಿಸಲಾಗುತ್ತಿವೆ. ಅಲ್ಲಿ ಬಿಡಾರ ಹೂಡಿರುವ ಸಿಖ್ ರೆಜಿಮೆಂಟ್ ಯೋಧರನ್ನು ಚಳವಳಿಗೆ ಧುಮ್ಮಿಕ್ಕುವಂತೆ ಪ್ರಚೋದಿಸಲಾಗುತ್ತಿದೆ. ಆ ಸಭೆಗಳಲ್ಲಿ ರಾಜದ್ರೋಹದ ಭಾಷಣ ಕೇಳಲು ಹಲವು ನೂರು ಸಂಖ್ಯೆಯಲ್ಲಿ ಜನರು ಸೇರುತ್ತಿದ್ದಾರೆ. ಸಿಪಾಯಿ ದಂಗೆಯಲ್ಲಿ ಸಿಖ್ಖರು ನಮಗೆ ಬೆಂಬಲ ಕೊಟ್ಟಿದ್ದನ್ನು ಪ್ರಸ್ತಾಪಿಸಿ ಈಗಲೂ ಅವರನ್ನು ನಾವು ನಿರ್ಲಕ್ಷ್ಯದಿಂದ ಕಾಣುತ್ತಿರುವುದಾಗಿ ಪ್ರಚೋದನೆ ನೀಡಲಾಗುತ್ತಿದೆ... ದೇಶಿಯ ಹತ್ತಿ ಮತ್ತು ಸಕ್ಕರೆ ಕಾರ್ಖಾನೆಗಳು ಬೆಳೆಯದಂತೆ ನಾವು ಮಾಡುತ್ತಿದ್ದೇವೆಂದು ಆರೋಪಿಸಲಾಗುತ್ತಿದೆ. ನಾವು ಜನರಿಂದ ಹಣ ತೆಗೆದುಕೊಂಡು ಅವರಿಗೆ ಖಾಲಿ ಕಾಗದಗಳನ್ನು ಕೊಡುತ್ತಿರುವುದಾಗಿ ದೂರಲಾಗುತ್ತಿದೆ. ನಾವು ಹಳ್ಳಿಗಳಿಗೆ ಹೋದಾಗ ಕರೆನ್ಸಿ ನೋಟುಗಳ ವಿನಿಮಯಕ್ಕೆ ಹಣ ಕೊಡುವ ಹಂತದಲ್ಲಿ ಜನರೇ ನಮ್ಮನ್ನು ಈ ಬಗ್ಗೆ ಪ್ರಶ್ನಿಸುತ್ತಿದ್ದಾರೆ. ಸರ್ಕಾರಕ್ಕೆ ಕಂದಾಯ ಕೊಡದಂತೆ ಜನರನ್ನು ತಡೆಯಲಾಗುತ್ತಿದೆ. ನೀರಿನ ತೆರಿಗೆ ಹಾಗೂ ಇತರೆ ಕರಗಳನ್ನು ಕೊಡುತ್ತಿಲ್ಲ. ಸರಕು ಸಾಗಣೆಕೆ ಪೂರೈಕೆ ಮುಂತಾದ ಕಾರ್ಯಗಳಲ್ಲಿ ಹಾಗೂ ಅಧಿಕಾರಿಗಳ ಪ್ರವಾಸಗಳಲ್ಲಿ ಜನರು ಸಹಕಾರ ಕೊಡುತ್ತಿಲ್ಲ. ಸ್ಥಳೀಯ ಸೈನಿಕರು ಮತ್ತು ಪೊಲೀಸ್ ಇಲಾಖೆಯಲ್ಲಿರುವ ಸ್ಥಳೀಯರನ್ನು ದೇಶದ್ರೋಹಿಗಳೆಂದು ಹಣೆಪಟ್ಟಿ ಕಟ್ಟಲಾಗುತ್ತಿದೆ. ಸರ್ಕಾರಿ ಸೇವೆ ತ್ಯಜಿಸಲು ಒತ್ತಡ ಹಾಕಲಾಗುತ್ತಿದೆ.

"ಈ ಎಲ್ಲಾ ಚಟುವಟಿಕೆಗಳನ್ನು ಆರ್ಯ ಸಮಾಜದ ರಹಸ್ಯ ಸಮಿತಿಯೊಂದು ರೂಪಿಸುತ್ತಿದೆ. ಆರಂಭದಲ್ಲಿ ಆರ್ಯ ಸಮಾಜ ಒಂದು ಧಾರ್ಮಿಕ ಸಂಘಟನೆಯಾಗಿತ್ತು. ಪಂಜಾಬಿನಲ್ಲಿ ಈ ಸಂಘಟನೆಗೆ ಭದ್ರವಾದ ರಾಜಕೀಯ ಅಡಿಪಾಯವಿದೆ.

"ಎಲ್ಲಾ ಈ ಕೃತ್ಯಗಳ ಕೇಂದ್ರಬಿಂದು ಹಾಗೂ ಪ್ರಮುಖ ವ್ಯಕ್ತಿ ಲಾಲಾ ಲಜಪತ್‌ರಾಯ್. ವೃತ್ತಿಯಲ್ಲಿ ಅವರು ವಕೀಲರು. ಪಂಜಾಬಿನ ಕಾಂಗ್ರೆಸ್ ಪ್ರತಿನಿಧಿಯಾಗಿ ಇಂಗ್ಲೆಂಡಿಗೂ ಹೋಗಿ ಬಂದಿದ್ದಾರೆ. ಅವರು ಓರ್ವ ಕ್ರಾಂತಿಕಾರಿ. ಉತ್ಸಾಹಿ ರಾಜಕಾರಣಿ. ಬ್ರಿಟಿಷ್ ಸರ್ಕಾರದ ವಿರುದ್ಧ ದ್ವೇಷ ಕಾರುವ ವ್ಯಕ್ತಿ."

ಏಕಮುಖಿ ಅಭಿಪ್ರಾಯದ ಈ ತಂತಿ ಸಂದೇಶ ಅಷ್ಟಕ್ಕೆ ಮುಗಿಯುವುದಿಲ್ಲ.

"ಅವರು ಶಿಮ್ಲಾದಲ್ಲಿಯೇ ಇರುತ್ತಾರೆ. ಆದರೆ ಲೆಫ್ಟಿನೆಂಟ್ ಗವರ್ನರ್ ಅವರೊಂದಿಗೆ ಮಾತನಾಡಿರುವ ಎಲ್ಲಾ ದೇಶಿಯ ವ್ಯಕ್ತಿಗಳು ಅವರೇ ಪ್ರಮುಖ ಸಂಘಟನಾ

ಮುಖಂಡರೆಂದು ಒಪ್ಪಿಕೊಂಡಿದ್ದಾರೆ. ರಾಜದ್ರೋಹದ ಪ್ರಸಾರ ಕೃತ್ಯದಲ್ಲಿ ಅವರ ಪ್ರಮುಖ ಪ್ರತಿನಿಧಿ ಅಜಿತ್ ಸಿಂಗ್. ಆರಂಭದಲ್ಲಿ ಓರ್ವ ಶಾಲಾ ಮಾಸ್ತರ್ ಆಗಿದ್ದ. ರಷ್ಯಾದ ಬೇಹುಗಾರ ಲಸೆಫ್ ತನ್ನ ಕೆಲಸಕ್ಕೆ ಕಳೆದ ವರ್ಷ ಈತನನ್ನು ನೇಮಿಸಿಕೊಂಡ. ರಾಜಕೀಯ ಸಭೆಗಳಲ್ಲಿ ಆತನದು ಹಿಂಸಾ ಪ್ರಚೋದಕ ಭಾಷಣ. ಸರ್ಕಾರದ ವಿರುದ್ಧವಾಗಿ ಜನರನ್ನು ಎತ್ತಿ ಕಟ್ಟಲು ಆತ ಸದಾ ಕರೆ ಕೊಡುತ್ತಿರುತ್ತಾನೆ. ಕೃಷಿಕ ವರ್ಗದಲ್ಲಿರುವ ಅತೃಪ್ತಿಯನ್ನು ಇನ್ನಷ್ಟು ಉದ್ರೇಕಗೊಳಿಸಿ ಅವರೆಲ್ಲರೂ ಒಗ್ಗಟ್ಟಾಗಿರುವಂತೆ ಮಾಡುತ್ತಿದ್ದಾನೆ. ಈ ಇಬ್ಬರ ವಿರುದ್ಧವೂ ಕ್ರಮ ಕೈಗೊಳ್ಳಲು ಲೈಫ್ಟಿನೆಂಟ್ ಗವರ್ನರ್ ವರದಿ ಸಲ್ಲಿಸಿದ್ದಾರೆ. 1818ರ ನಿಯಂತ್ರಣ ಕಾಯ್ದೆ 3ನೇ ಕಲಮಿನನ್ವಯ ವಾರಂಟ್ ಹೊರಡಿಸಲು ಕೋರಿದ್ದಾರೆ. ಈ ವಾರಂಟ್ ತೀರಾ ಅಗತ್ಯವಾಗಿದ್ದು ಪ್ರಕ್ಷುಬ್ಧ ಪರಿಸ್ಥಿತಿಯ ಹಿನ್ನಲೆಯಲ್ಲಿ ಕೂಡಲೇ ಈ ವಾರಂಟ್ ಹೊರಡಿಸುವುದು ಸೂಕ್ತ.

"ಈ ಇಡೀ ಪ್ರಕರಣವನ್ನು ನಿನ್ನೆ ಪರಿಷತ್ತು ಪರಿಶೀಲಿಸಿದೆ. ಲಜಪತ್‌ರಾಯ್ ಮತ್ತು ಅಜಿತ್ ಸಿಂಗ್ ಅವರನ್ನು ಕೂಡಲೇ ಮಾಂಡೇಲೆ ಜೈಲಿಗೆ ಗಡಿಪಾರು ಮಾಡಲು ವಾರಂಟ್‌ನ್ನು ಇಂದು ಹೊರಡಿಸಲಾಗಿದೆ. ಈ ಮಧ್ಯೆ ಯಾವುದೇ ಜನಪ್ರಿಯ ಪ್ರದರ್ಶನಗಳು ನಡೆಯದಂತೆ, ವಿಶೇಷ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

"ನನ್ನ ಅಭಿಪ್ರಾಯದಲ್ಲಿ ಹಾಗೂ ಪರಿಷತ್ತಿನ ಅಭಿಪ್ರಾಯದಲ್ಲಿ ಈ ಕ್ರಮ ತುರ್ತು ಅಗತ್ಯದ್ದು. ಸಾರ್ವಜನಿಕ ಸಭೆಗಳನ್ನು ನಿಯಂತ್ರಿಸಲು 1861 ಕಾಯ್ದೆಯ 23ನೇ ವಿಧಿಯಂತೆ ಆದೇಶ ಹೊರಡಿಸುವುದು ನನಗೆ ಅನಿವಾರ್ಯವಾಗಿದೆ. ಸಭೆಗಳು ಏರ್ಪಟ್ಟು ಭಾಷಣಕಾರರು ಪ್ರಚೋದನೆ ನೀಡುವ ಭಾಷಣ ಮಾಡಿ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳದಂತೆ ಮಾಡುವುದನ್ನು ತಡೆಯಬೇಕಾಗಿದೆ. ದೇಶಿಯ ಭಾಷೆಗಳಲ್ಲಿ ನಡೆಯುವ ಭಾಷಣಗಳ ವರದಿಗಳನ್ನು ತರಿಸಿಕೊಳ್ಳಲು ಸಾಧ್ಯವಾಗುವುದೂ ಇಲ್ಲ. ಕೇವಲ ಬಾಯಿ ಮಾತಿನಿಂದ ವರದಿ ನೀಡುವವರನ್ನು ನಾವು ಅವಲಂಬಿಸಬೇಕಾಗಿದೆ. ಎಷ್ಟೋ ಪ್ರಸಂಗಗಳಲ್ಲಿ ತದ್ವಿರುದ್ಧವಾದ ವರದಿಗಳು ಬರುವ ಸಂಭವವೂ ಉಂಟು. ಈ ಹಿನ್ನಲೆಯಲ್ಲಿ ಎಲ್ಲೂ ಬಹಿರಂಗ ಸಭೆ ನಡೆಯದಂತೆ ಮಾಡುವುದೇ ಸರಿಯಾದ ಕ್ರಮ.

"ಇಂದು ಲಭ್ಯವಾಗಿರುವ ವರದಿಗಳ ಪ್ರಕಾರ ಪಿಂಡಿ ವಿಭಾಗದಲ್ಲಿರುವ ಸಿಪಾಯಿ ದಳದಲ್ಲಿ ಅತೃಪ್ತಿ ಉಂಟು ಮಾಡುವ ಪ್ರಯತ್ನ ನಡೆದಿದೆ. ಆದರ ಸಿಪಾಯಿಗಳು ಅದಕ್ಕೆ ಅವಕಾಶ ಕೊಟ್ಟಿಲ್ಲ."

ತಾನು ಇದುವರೆಗೆ ಓದಿದ ತಂತಿ ಸಂದೇಶದ ಒಟ್ಟಾರೆ ಅಭಿಪ್ರಾಯ ನೀಡುತ್ತಾ ಲಾರ್ಡ್ ಮಿಂಟೋ ಮೇ 8ರಂದು ಸರ್ಕಾರದ ಕಾರ್ಯದರ್ಶಿಗೆ ಹೀಗೆ ಬರೆದಿದ್ದಾರೆ.

"... ನಾನು ಲಾರ್ಡ್ ಕೆ. (ಕಿಟ್ನರ್) ಜೊತೆ ದೀರ್ಘ ಮಾತುಕತೆ ನಡೆಸಿದ್ದೇನೆ. ಅವರಿಗೆ ತಿಳಿದಿರುವ ಮಟ್ಟಿಗೆ ಸಿಪಾಯಿ ದಳದ ಮೇಲೆ ಪರಿಣಾಮ ಬೀರುವಂತೆ ಯಾವುದೇ ಪ್ರಯತ್ನ ನಡೆದಿಲ್ಲ. ಆದರೆ ಪಂಜಾಬಿನ ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಕೆಟ್ಟದಾಗಿದೆ. ಬಂಗಾಳದ 11ನೇ ಲ್ಯಾನ್ಸರ್ ಅವರ ಪ್ರಕಾರ ಹಳ್ಳಿಗರ ಅತೃಪ್ತಿಯನ್ನು ಮನವರಿಕೆ ಮಾಡಿಕೊಳ್ಳಲು ಸಮೀಕ್ಷಾ ತಂಡಗಳನ್ನು ಕಳುಹಿಸುವುದು ವಿಹಿತ.

''ಪಂಜಾಬಿನ ಅಹಿತಕರ ಘಟನೆಗಳ ಬಗ್ಗೆ ಆಗಿಂದಾಗ್ಗೆ ನಮಗೆ ಊಹಾಪೋಹಗಳು ತಿಳಿದು ಬರುತ್ತಿರುವುದರಿಂದ... ಇಬ್ಬೆಟ್ಸನ್ ವರ್ತಮಾನವನ್ನು ನಾವು ಗಂಭೀರವಾಗಿ ಸ್ವೀಕರಿಸಿದ್ದೇವೆ. ನನಗೆ ತಿಳಿದಿರುವಮಟ್ಟಿಗೆ ಪಂಜಾಬಿನ ಪರಿಸ್ಥಿತಿಯನ್ನು ಅವರಷ್ಟು ಚೆನ್ನಾಗಿ ತಿಳಿದುಕೊಂಡಿರುವವರು ಇನ್ನೊಬ್ಬರಿಲ್ಲ. ಅವರು ಉತ್ಪ್ರೇಕ್ಷಿಯ ವರದಿ ನೀಡುತ್ತಾರೆಂದು ನನಗೆ ಅನಿಸುವುದಿಲ್ಲ. ಸೈನ್ಯ ಎಲ್ಲಿಯತನಕ ನಿಷ್ಠವಾಗಿರುತ್ತದೆಯೋ ಅಲ್ಲಿಯತನಕ ಶಸ್ತ್ರಹೀನ ಜನತೆಯಿಂದ ಯಾವುದೇ ರೀತಿಯ ಗಂಡಾಂತರ ಉಂಟಾಗುತ್ತದೆ ಎಂದು ನನಗಂತೂ ಈ ಕ್ಷಣದಲ್ಲಿ ಕಂಡು ಬರುವುದಿಲ್ಲ. ಅದೇನೇ ಇದ್ದರೂ ಹಿಂಸಾಚಾರ ನಡೆಯುವ ಸಂಭವ ಕಂಡು ಬರುತ್ತದೆ. ಅದು ವಿಕೋಪಕ್ಕೂ ಹೋಗುತ್ತದೆ. ಈ ಹಿನ್ನಲೆಯಲ್ಲಿ ನಾವು ಜಾಗೃತರಾಗಿ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ವಿಹಿತ.'' *

ಗಡಿ ಪ್ರದೇಶದಿಂದಲೂ ಸಹ ಆತಂಕದ ಸುದ್ದಿಗಳು ಬರುತ್ತಿದ್ದವು. ಮುಂದಿನ ಭಾಗದಲ್ಲಿ ಅದರ ಚಿತ್ರಣ ನಮಗೆ ಲಭ್ಯ.

''ಪೇಶಾವರ ಜಿಲ್ಲೆಯಲ್ಲಿ ಅಲ್ಲಿನ ಗಡಿಭಾಗದಲ್ಲಿರುವ ಮಹಮದೀಯ ಸಮುದಾಯಕ್ಕೆ ಮಹಮದೀಯರು ವ್ಯಕ್ತಪಡಿಸುತ್ತಿರುವ ಅನುಕಂಪದ ಹಿನ್ನಲೆಯಲ್ಲಿ ಉದ್ರಿಕ್ತ ಪರಿಸ್ಥಿತಿ ಕಂಡು ಬರುತ್ತಿದೆ... ನನ್ನ ಅಭಿಪ್ರಾಯದಲ್ಲಿ ಅಪಾಯಕಾರಿ ಸ್ಥಿತಿ ಎಂದರೆ ಪಂಜಾಬ್ ಮತ್ತು ಉತ್ತರ ಪ್ರಾಂತ್ಯ. ಲಾರ್ಡ್ K ಸಹ ಸಾಧ್ಯವಾದ ಎಲ್ಲಾ ಮಿಲಿಟರಿ ಮುನ್ನೆಚ್ಚರಿಕೆ ಕ್ರಮಕೈಗೊಂಡಿದ್ದಾರೆ... '' #

ಆ ಕಾಲದಲ್ಲಿದ್ದ ಆಂಗ್ಲೋ ಇಂಡಿಯನ್ನರ ಭ್ರಮಾಧೀನ ಮನಸ್ಥಿತಿ ಲಾರ್ಡ್ ಮಿಂಟೋ ಅವರ ಈ ಪತ್ರದ ಒಕ್ಕಣಿಕೆಯಿಂದ ವ್ಯಕ್ತವಾಗುತ್ತದೆ.

''ನನ್ನ ಸ್ವಂತ ಭಾವನೆಯಲ್ಲಿ ಸಿಪಾಯಿ ದಂಗೆಯ ವರ್ಷಾಚರಣೆಯಿಂದಾಗಿ ಪ್ರಕ್ಷುಬ್ಧ ಸ್ಥಿತಿಗೆ ಹೆಚ್ಚು ಒತ್ತು ಬಂದಿದೆ. ದಿನಾಂಕ 8 ಮತ್ತು 11ರ ಮಧ್ಯೆ ಪರಿಸ್ಥಿತಿ ಉಲ್ಬಣಗೊಳ್ಳಬಹುದೆಂದು ನಾವು ನಿರೀಕ್ಷಿಸುತ್ತಿದ್ದೇವೆ. ಸಿಪಾಯಿ ದಂಗೆ ಮೀರತ್‌ನಲ್ಲಿ 10ರಂದು, ದೆಹಲಿಯಲ್ಲಿ 11ರಂದು ಸಂಭವಿಸಿತೆಂದು ನನಗೆ ನೆನಪು. ನನಗನ್ನಿಸುವ ಪ್ರಕಾರ ರಾಜಕೀಯ ಕಾರಣಗಳನ್ನು ಬದಿಗಿಟ್ಟರೂ 1857ರ ನೆನಪು ಸದ್ಯದ ಪರಿಸ್ಥಿತಿಯನ್ನು ಪ್ರಚೋದಿಸಬಹುದು.'' **

1857-1907! ಮಹಾವಿಪ್ಲವವೊಂದರ ಸ್ವರ್ಣ ಜಯಂತಿ ಪ್ರಸಂಗ! 'ಮಾರ್ಚ್ 15ರ' ಅಪಶಕುನದಂತೆ 'ಮೇ 10' ದುಶ್ಶಕುನವಾಯಿತು.

ಕೆಳಗಿನ ಈ ಎರಡು ವ್ಯಾರಗಳು ಆಂಗ್ಲೋ ಇಂಡಿಯನ್ನರ ಭ್ರಮಾಧೀನ ಮನಸ್ಥಿತಿಯನ್ನು ಇನ್ನಷ್ಟು ಸ್ಪಷ್ಟವಾಗಿ ಸಾದರ ಪಡಿಸುತ್ತಿವೆ.

* ಅದೇ ಪುಸ್ತಕದ ಪುಟ [illegible] 15

ಮತ್ತು ** ಅದೇ [illegible] 126

ಕಲ್ಕತ್ತಾದಿಂದ ನನಗೆ ಬಂದಿರುವ ಮಾಹಿತಿ ಪ್ರಕಾರ ಅಲ್ಲಿನ ಆಂಗ್ಲೋ ಇಂಡಿಯನ್ನರ ಭಾವನೆಗಳಿಗೆ ಭ್ರಾಮಕ ಸನ್ನಿ ಹಿಡಿದಿದೆ ಎಂದು ನನಗೆ ಕಂಡು ಬರುತ್ತಿದೆ. ಅದು ಸಮ್ಮತ್ರವೆಂದು ನನಗೆ ಅನ್ನಿಸುವುದಿಲ್ಲ. ಸಿಪಾಯಿ ದಂಗೆ ಸಮಯದಲ್ಲಿ ಲಾರ್ಡ್ ಕೆನ್ನಿಂಗ್ಸ್‌ರಲ್ಲೂ ಇದೇ ತರಹದ ಭಾವನೆಗಳು ಕಾಣಿಸಿಕೊಂಡಿದ್ದವು. ಆಗಿನ ಸಂದರ್ಭಕ್ಕೂ ಈಗಿನ ಸಂದರ್ಭಕ್ಕೂ ಹೋಲಿಕೆ ಇಲ್ಲ. ನಾವೀಗ ಅವರಿಗಿಂತ ಹೆಚ್ಚು ಬಲಶಾಲಿಯಾಗಿದ್ದೇವೆ. ಅದರ ಜೊತೆಗೆ ವರ್ತಮಾನಗಳ ಅರಿವು ನಮಗಿದೆ. ದೇಶವಾಸಿಗಳ, ಸಾರ್ವಜನಿಕ ಅಭಿಪ್ರಾಯಗಳನ್ನು ಸುಲಭದಲ್ಲಿ ಸಂಗ್ರಹಿಸುತ್ತಿದ್ದೇವೆ. 1857ರ ಸ್ಥಿತಿಗಿಂತ ಈಗಿನ ಪರಿಸ್ಥಿತಿ ನಮ್ಮ ಪರವಾಗಿದೆ. ನಮ್ಮ ಅಧಿಕಾರಿಗಳು ಎಸಗುವ ಅತಿರೇಕ, ಅಪಚಾರಗಳು ನಮಗೆ ಸಾಮಾನ್ಯವಾಗಿ ಗೊತ್ತು. ಜನರಿಗೂ ಸಹ ತಮ್ಮ ಹಕ್ಕುಗಳು ಏನೆಂಬುದರ ಅರಿವು ಇದೆ. ಆ ಜನರು ನಮ್ಮ ಅಧಿಕಾರಿಗಳು ಎಸಗುವ ಅತಿರೇಕ, ಅಪಚಾರಗಳನ್ನು ಸಹಿಸಲು ಸಿದ್ಧರಿಲ್ಲ. ಸದ್ಯದಲ್ಲೇ ನಾವು ಬಿಕ್ಕಟ್ಟೊಂದನ್ನು ಎದುರಿಸಬೇಕಾಗಿದೆ. ಈ ಬಿಕ್ಕಟ್ಟು ದೀರ್ಘವಾದದ್ದು ಎಂದು ನನಗನಿಸುವುದಿಲ್ಲ. ಇದನ್ನು ನಿಭಾಯಿಸುವಾಗ ನಾವು ಹೆಚ್ಚು ನಿಶ್ಚಿತರೂ, ನ್ಯಾಯಪರರೂ ಆಗಿರಬೇಕಾಗುತ್ತದೆ. ನಾವು ನಿಯಂತ್ರಿಸಬೇಕಾಗಿರುವ ಹಾಗೂ ಸಮನ್ವಯಗೊಳಿಸಬೇಕಾಗಿರುವ ಅಂಶಗಳು ತುಂಬಾ ಸೂಕ್ಷ್ಮವಾದವು. ಯಾವ ರೀತಿಯಿಂದಲೂ ನಾವು ವಿಪರೀತಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಈ ಮಧ್ಯೆ ನಾವು ಸ್ಥಿರವಿಲ್ಲವೆಂದಾಗಲಿ ಅಥವಾ ದುರ್ಬಲರಾಗಿದ್ದೇವೆಂದಾಗಲಿ ದೇಶವಾಸಿಗಳಿಗೆ ಕಂಡು ಬಂದರೆ ಅದು ತೀರಾ ಅಪಾಯಕಾರಿ ಪರಿಸ್ಥಿತಿಗೆ ಕಾರಣವಾಗುತ್ತದೆ. ಅದೇನೇ ಇರಲಿ, ನನ್ನ ಅರಿವಿಗೆ ಬರುತ್ತಿರುವಂತೆ, ನನಗೆ ಮನವರಿಕೆಯೂ ಆಗುತ್ತಿರುವಂತೆ ದೇಶದ ಆಡಳಿತದಲ್ಲಿ ಶಿಕ್ಷಿತ ದೇಶವಾಸಿಗಳಿಗೆ ಗಣನೀಯ ಪ್ರಮಾಣದಲ್ಲಿ ಅವಕಾಶ ಕೊಡುವತನಕ 'ನಿರಕುಲತೆ' ಯಾವುದೇ ಭ್ರಾಮಕ ಪರಿಸ್ಥಿತಿಯ ಮೇಲೆ, ಕಾಲ್ಪನಿಕ ಭರವಸೆಯ ಮೇಲೆ ಭಾರತದಲ್ಲಿ ಆಡಳಿತ ಮುಂದುವರೆಸಲು ಆಗುವುದಿಲ್ಲ.

ಮಾರ್ಲೆ ಸಮಂಜಸವಾಗಿ ಪ್ರತ್ಯುತ್ತರ ನೀಡಿದ್ದಾರೆ. ಸಂದರ್ಭೋಚಿತವಾಗಿ ಪರಿಸ್ಥಿತಿಯನ್ನು ನಿಭಾಯಿಸಲು ಸಾಮಾನ್ಯವಾಗಿ ಅನುಸರಿಸಬೇಕಾದ ಮಾರ್ಗದ ಬಗ್ಗೆ ತಮ್ಮ ಉತ್ತರದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ.

ಮಾರ್ಲೆಯಿಂದ ಮಿಂಟೋಗೆ ಪ್ರತ್ಯುತ್ತರ,

‘‘ಮೇ 9 - ನೀವು ಕಳುಹಿಸಿರುವ ಪಂಜಾಬ್ ಸುದ್ದಿಯನ್ನು ಓದಿದಾಗ ನಾವು ಆಳವಾದ ನೀರಿನತ್ತ ಸಾಗುತ್ತಿರುವಂತೆ ಕಂಡು ಬರುತ್ತದೆ... ಏನೇ ಇರಲಿ, ನಮಗೆ ಅನುಕೂಲಕರವಾದುದನ್ನು ನಾವು ಮಾಡಲೇಬೇಕು. ಪರಿಸ್ಥಿತಿ ಬಿಗಡಾಯಿಸುತ್ತಿದೆ. ಆದರೆ ಕೆಲವು ಕಠಿಣ ಕ್ರಮಗಳನ್ನು ಅನಿವಾರ್ಯವಾಗಿ ಕೈಗೊಳ್ಳಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅತ್ಯಂತ ಅಹಿತಕರವಾದ ಕ್ರಮಗಳನ್ನು ಕೈಗೊಳ್ಳುವಂತೆ, ದುರಾದೃಷ್ಟಕರ ಪರಿಸ್ಥಿತಿ ಅನಿವಾರ್ಯವಾದರೆ ಅದಕ್ಕೆ ನನ್ನ ಬೆಂಬಲವಿದೆ ಎಂದು ನೀವು ಖಂಡಿತವಾಗಿ ನಂಬಬಹುದು. ಈ ಬೆಂಬಲ ನಿಮಗೆ ಕೇವಲ ರಾಜದ್ರೋಹ ಪ್ರಚೋದಕರ ವಿರುದ್ಧದ

ಕ್ರಮಕಷ್ಟೇ ಅಲ್ಲ. ಸ್ವತಃ ನಿಮ್ಮ ಕಾನೂನು ಮತ್ತು ಸುವ್ಯವಸ್ಥೆ ಪಾಲಕರ ವಿರುದ್ಧ ಕ್ರಮಕ್ಕೂ ಅನ್ವಯಿಸುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಕ್ರಾಂತಿಕಾರಿಗಳಂತೆಯೇ ಸರ್ಕಾರಿ ಅಧಿಕಾರಿಗಳು ಸಹ ಅನೇಕ ಅಪಚಾರಗಳನ್ನು ಎಸಗಿರುವುದು ಚರಿತ್ರೆಯಲ್ಲಿ ಕಂಡು ಬರುತ್ತದೆ. ಯಾವುದೇ ಕಠಿಣ ಕ್ರಮವನ್ನು ತೆಗೆದುಕೊಳ್ಳುವ ಮೊದಲು ಆಳವಾದ ವಿಮರ್ಶೆ, ತೌಲನಿಕ ಅಧ್ಯಯನಗಳ ಮೂಲಕ ಸಾಧ್ಯ ಸಾಧ್ಯತೆಗಳನ್ನು ನಿಷ್ಕರ್ಷಿಸುವಿರೆಂದು ನನ್ನಲ್ಲಿ ವಿಶ್ವಾಸವಿದೆ... ರಾಜದ್ರೋಹಿಗಳು ದೇಶಿಯ ಸೈನ್ಯದಲ್ಲಿ ಅಸಂತೃಪ್ತಿಯ ಬೀಜ ಬಿತ್ತುತ್ತಿದ್ದಾರೆಂಬುದು ಕಿಂಚಿತ್ತೂ ಸಾಕ್ಷಿಭೂತವಾದರೂ ಸಾಕು ಕಠಿಣ ಕ್ರಮವನ್ನು ಜರುಗಿಸಲೇಬೇಕು. ಒಂದು ಅಂಶವನ್ನು ನೀವು ಮರೆಯಬಾರದು. ಪರಿಸ್ಥಿತಿ ಉದ್ರಿಕ್ತವಾದ ಕ್ಷಣಗಳಲ್ಲಿ ಅಂದರೆ ಸದ್ಯದ ಪರಿಸ್ಥಿತಿಯಲ್ಲಿ... ಸಾಮಾನ್ಯವಾಗಿ ವಾಸ್ತವಿಕತೆಯ ಸಾಧ್ಯ ಸಾಧ್ಯತೆಗಳಿಗಿಂತ ಹೆಚ್ಚಿನದಾಗಿ ಗೊಂದಲಕ್ಕೆ ಈಡಾಗುವ ಅಸಹಜ ಪರಿಸ್ಥಿತಿ ಇರುತ್ತದೆ...#

ಪತ್ರಿಕೆಗಳು ಉಂಟು ಮಾಡುತ್ತಿದ್ದ ಸಮೂಹ ಸನ್ನಿಯ ಬಗ್ಗೆ ಅವರು ಪ್ರಸ್ತಾಪಿಸುತ್ತಾ,

''ಹೆಚ್ಚು ಓದುಗರನ್ನು ಹೊಂದಿರುವ ನಮ್ಮ ಕೆಲವು ಪತ್ರಿಕೆಗಳ ಭಾಷೆ, ಪ್ರಚೋದಕ ಶೀರ್ಷಿಕೆಗಳು ನಿಮ್ಮ ಗಮನಕ್ಕೆ ಬಂದಿಲ್ಲವೇನೋ! ಅವುಗಳನ್ನು ಓದಿದಾಗ ಪಿಂಡಿಯೂ ಹೊತ್ತಿ ಉರಿಯುತ್ತಿದೆಯೇನೋ ಎಂಬ ಭಾವನೆ ಬರುತ್ತದೆ. 30 ವರ್ಷಗಳ ಕಾಲ ಯುದ್ಧವನ್ನು ಎದುರಿಸಿದ ಮಗ್ದೇಬರ್ಗ್ ಮುತ್ತಿಗೆಯ ಕಾಲದಲ್ಲಿ ಕಂಡು ಬಂದಂತಹ ಅಗ್ನಿಸ್ಪರ್ಷ, ಕತ್ತಿಗಳ ಖಣ್ ಖಣ್ ಧ್ವನಿ, ರಕ್ತಪಾತ ಮತ್ತು ಅತ್ಯಾಚಾರಗಳು ನಡೆಯುತ್ತಿದೆಯೋ ಎನಿಸುತ್ತದೆ. ಎಂತಹ ಪ್ರಚೋದನಾಕಾರಿ, ಹೌದಲ್ಲವೇ?'' *

ಹೀಗೆ ಮಾರ್ಲೆ ಎಲ್ಲಾ ಬಗೆಯ ಪುರೋಗಾಮಿ ಹಾಗೂ ಸಂಪ್ರದಾಯವಾದಿ ಕ್ರಮಗಳಿಗೆ ತಮ್ಮ ಸಮ್ಮತಿಯನ್ನು ಕೊಡುತ್ತಾ ಬಂದರು. ಆದರೂ ಅವರೊಳಗಿದ್ದ ಅವರ ಹಿಂದಿನ 'ಲಿಬರಲ್'ತನ ಸಂಪೂರ್ಣವಾಗಿ ಅಳಿದು ಹೋಗಿರಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಸುಧಾರಣಾವಾದದತ್ತ ಅವರ ತುಡಿತವನ್ನು ಸೆಳೆಯುತ್ತಿತ್ತು. ವಿವಿಧ ಹಂತಗಳಲ್ಲಿ ಜಾರ್ ದೊರೆಗಳು ಹಾಗೂ ಇತರ ಕ್ರೂರ ಆಡಳಿತಗಾರರು ಎಸಗಿದ ಕೃತ್ಯಗಳನ್ನು ಅವರೊಳಗೆ ನೆನಪು ಮಾಡುತ್ತಿದ್ದಂತಿತ್ತು. ಮಿಂಟೋ ಅವರಿಗೆ ಮಾರ್ಲೆ ಕಳುಹಿಸಿದ ಕೆಲವು ದಾಖಲೆಗಳಲ್ಲಿ ಅವರ ಇಂತಹ ಮನಸ್ಥಿತಿಯನ್ನು ನಾವು ಗಮನಿಸಬಹುದು. ಭಾರತದಲ್ಲಿ ಪ್ರತಿಕೂಲ ರೀತಿಯೊಂದನ್ನು ಕೈಗೊಂಡ ಒಂದು ಸಂದರ್ಭದಲ್ಲಿನ ದಾಖಲೆಯನ್ನು ಗಮನಿಸೋಣ,

ಪ್ರಶ್ನೆ ಉದ್ಭವಿಸುವುದು ಭವಿಷ್ಯದ ಬಗ್ಗೆ. ಅದು ಜಾರ್ ಡ್ಯೂಮ್ ದೊರೆಗಳಿಗೆ ಹೋಲುವ ರೀತಿಯದು. ನಾವು ಹೀಗೆ ಹೇಳಬೇಕೇನು? ಗಂಭೀರ ಪರಿಸ್ಥಿತಿಯನ್ನು ನೀವು ಎದುರಿಸುತ್ತಿರುವ ಸಮಯದಲ್ಲಿ ಸುಧಾರಣೆಗಳನ್ನು ಕೈಗೊಳ್ಳಬೇಕು. ಅದೇ

ಮಾರ್ಲೆ, ಜಾನ್ ರಿಕಲೆಕ್ಷನ್ಸ್, ಸಂಪುಟ.2, ಪುಟ. 211-212

* ಅದೇ ಪುಸ್ತಕದ ಪುಟ. 213

ಸಮಯದಲ್ಲಿ ನೀವು ಹೇಳುವ ಮಾತುಗಳನ್ನು ನಾವು ಕೇಳಲೂ ಬಾರದು. ನಮ್ಮ ಸುಧಾರಣೆ ಯೋಜನೆಗಳು ತಟಸ್ಥಗೊಳ್ಳುತ್ತವೆ... ಪೀಟರ್ಸ್‌ಬರ್ಗ್‌ನಲ್ಲಿ ಡ್ಯೂಮನ ಸೊಲ್ಲಡಗಿಸಲು ಗ್ರಾಂಡ್ ಡ್ಯೂಕ್‌ರನ್ನು ಜನತೆ ಒತ್ತಾಯ ಮಾಡಿದಂತೆ ನಿಮ್ಮ ವಿರುದ್ಧವೂ ಜನ ಒತ್ತಾಯ ಮಾಡಬಹುದು. ನಮಗೆ ಅಲ್ಲವಾದರೂ ನನ್ನ ಮೇಲೆ ಒತ್ತಡ ಬಿದ್ದು ಗ್ರಾಂಡ್ ಡ್ಯೂಕ್ ನೀತಿಯನ್ನು ಬಲವಂತವಾಗಿ ಅನುಸರಿಸಬೇಕಾಗಿ ಬರಬಹುದು...#

ಪಂಜಾಬ್‌ನಲ್ಲಿ 1907ರಲ್ಲಿ ಸರ್ಕಾರಕೈಗೊಂಡ ಕೃತ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮಾರ್ಲೆ ಮತ್ತು ಮಿಂಟೋ ಹಾಗೂ ಇಬ್ಬೆಟ್‌ಸನ್‌ರ ನಡವಳಿಕೆಗಳನ್ನು ಎಚ್ಚರದಿಂದ ವೀಕ್ಷಿಸಬೇಕಾಗುತ್ತದೆ. ಮಾರ್ಲೆ ಓರ್ವ 'ಲಿಬರಲ್' ಎಂಬ ಖ್ಯಾತಿ ಹೊಂದಿದ್ದವರು. ಬಹುತೇಕ ಪ್ರಗತಿಪರವಾದಿ. ಆದರೆ ಅದಕ್ಕೆ ಅವರು ವಿದಾಯ ಹೇಳಿದ್ದರು. ಆದರೂ ಹೊಸ ದಮನಕಾರಿ ನೀತಿಯನ್ನು ಜಾರಿಗೆ ತರುವ ಹಂತದಲ್ಲಿ ಅವರ ಮೂಲ ಸ್ವಭಾವ ಇಣಕು ಹಾಕದೇ ಇರಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಪುರೋಗಾಮಿ ನೀತಿಯನ್ನು ಅವರು ವಿರೋಧಿಸಿದರು. ಮಿಂಟೋ ಕಟ್ಟಾ ಸಂಪ್ರದಾಯವಾದಿ. ಪುರೋಗಾಮಿ ಆದರೂ ಸಮೂಹ ಸನ್ನಿಗೆ ಒಳಪಟ್ಟಿರಲಿಲ್ಲ. ಹಾಗೆಂದು ಪರಿಸ್ಥಿತಿಯಿಂದ ಉದ್ವಿಗ್ನರಾಗಿಯೂ ಇರಲಿಲ್ಲ. ಭಾರತದ ಐರೋಪ್ಯ ಸಮೂಹದಲ್ಲಿ ಸನ್ನಿ ಸಾಂಕ್ರಾಮಿಕ ರೋಗದಂತೆ ಹರಡಿ ಬಿಟ್ಟಿತು. ಆ ಪರಿಸ್ಥಿತಿ ಮಿಂಟೋ ಪಾಲಿಗೆ ಅನುಕೂಲಕರವೂ ಆಯಿತು. ಅತಿರೇಕದ ಕಥನವನ್ನು ಸಂಪೂರ್ಣವಾಗಿ ಸ್ವಇಚ್ಛೆಯ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರಲು ಸಹಾಯಕವಾಗುವಂತೆ ಅವರು ಬಳಸಿಕೊಳ್ಳತೊಡಗಿದರು. ಅದು ಮಾರ್ಲೆ ಸಮ್ಮತಿ ಜೊತೆಗೆ, ಸ್ವಲ್ಪಮಟ್ಟಿಗೆ ಇಬ್ಬೆಟ್‌ಸನ್ ಸಹಕಾರದೊಂದಿಗೆ.

ಎಲ್ಲಾ ಬಗೆಯ ಚಳವಳಿಗಳನ್ನು ಹತ್ತಿಕ್ಕುವ ಸಲುವಾಗಿ. ಮುಕ್ತವಾದ ಅಧಿಕಾರವನ್ನು ಪಡೆದುಕೊಳ್ಳಲು ಉದ್ದೇಶಪೂರ್ವಕವಾಗಿಯೇ ಮಿಂಟೋ ಕೆಲವು ಕೃತಕ ಗೊಂದಲಗಳನ್ನು ಸೃಷ್ಟಿಸಿದರೆಂದೂ ಕೆಲವು ಜನರು ಅನುಮಾನ ಪಡುತ್ತಿದ್ದದ್ದು ಉಂಟು. ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್‌ರನ್ನು ಗಡಿಪಾರು ಮಾಡಿದ ಕೆಲವೇ ದಿನಗಳಲ್ಲಿ ಅನಾರೋಗ್ಯದ ನಿಮಿತ್ತ ಶಸ್ತ್ರಚಿಕಿತ್ಸೆಗಾಗಿ ಇಬ್ಬೆಟ್‌ಸನ್ ರಜೆಯ ಮೇಲೆ ಇಂಗ್ಲೆಂಡಿಗೆ ತೆರಳಿದ ಮೇಲೆ ಮಾರ್ಲೆ ಕೈಗೊಂಡ ನಿರ್ಣಯಗಳು ಉದಾರ ರೀತಿಯದಾಗಿದ್ದವು. ಪಂಜಾಬ್ ಲೆಫ್ಟಿನೆಂಟ್ ಗವರ್ನರ್ ಬಗ್ಗೆ ಮಾರ್ಲೆ ತಮ್ಮ ಅಭಿಪ್ರಾಯವನ್ನು ಹೀಗೆ ದಾಖಲು ಮಾಡಿದ್ದಾರೆ,

''...ಇಬ್ಬೆಟ್‌ಸನ್ ನನ್ನನ್ನು ನೋಡಲು ಬಂದರು. ಅವರು ಸುಧಾರಿಸಿದಂತೆ ಕಂಡು ಬರುತ್ತಿದ್ದರು. ಅವರ ಯೋಚನೆ ಸ್ಪಷ್ಟವಾಗಿತ್ತು. ತಮ್ಮ ಚಿಂತನೆ ಮತ್ತು ಅನುಭವದ ಹಿನ್ನಲೆಯಲ್ಲಿ ಅವರ ಉದ್ದೇಶಗಳು ಖಚಿತವಾಗಿದ್ದವು. ಅವರ ಆಲೋಚನೆ ಮತ್ತು ಅನುಭವಕ್ಕೆ ತಕ್ಕಂತೆ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರು. ಅದಕ್ಕಿಂತ ಭಿನ್ನವಾದ ರೀತಿಯಲ್ಲಿ ನಡೆದುಕೊಳ್ಳಲು ಸಾಧ್ಯವೂ ಇರಲಿಲ್ಲವೆಂದು ನನಗೆ ಅನಿಸಿತು. ಹಿಂದಿನಿಂದಲೂ ತಮ್ಮದೇ

ಮಾರ್ಲೆ, ಜಾನ್, ರಿಕಲೆಕ್ಷನ್ಸ್, ಸಂಪುಟ. 2, ಪುಟ. 215

ನಡವಳಿಕೆಯಲ್ಲಿ ಕೆಲಸ ಮಾಡುತ್ತಾ ಬಂದ ಯಾರಿಗೆ ಆಗಲಿ ಕಾಲದ ಅಗತ್ಯಕ್ಕೆ ಸುಲಭವಲ್ಲಿ ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ. ಯಾವ ಜನರ ಮನಸ್ಥಿತಿ ಹಿಂದುಳಿದಿದೆ ಎಂದು ಕಂಡು ಬರುತ್ತಿದೆಯೋ ಅಂತಹ ಜನರಿಂದ ಕೂಡಿದ ವ್ಯವಸ್ಥೆಯ ನಡುವೆ ನೀವು ಕೆಲಸ ಮಾಡುತ್ತಿರುವುದು ಕಷ್ಟಕರ ಸಂಗತಿಯೇ ಸರಿ. ಆದಾಗ್ಯೂ ಅವರಲ್ಲೂ ಒಳ್ಳೆಯದನ್ನೇ ಸಾಧಿಸಲು ನಾವು ಪ್ರಯತ್ನಿಸಬೇಕಾಗುತ್ತದೆ. ನಮ್ಮ ಮುಂದಿರುವ ಗುರುತರ ಕೆಲಸಗಳ ವಿಷಯದಲ್ಲಿ ನಾನು ಅವರೊಂದಿಗೆ ಅಲ್ಪಸ್ವಲ್ಪ ಮಾತನಾಡಿದ್ದೇನೆ... ಸ್ವಲ್ಪಮಟ್ಟಿಗಾದರೂ ನಾನು ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದೇನೆ ಎನಿಸುತ್ತದೆ. ಆದರೂ ಅವರದು ಕಟ್ಟಾ ಪುರೋಗಾಮಿ ಮನಸ್ಸು... ಸತ್ಯ ಇಷ್ಟೇ. ಭಾರತ ಅಪಾಯಕಾರಿ ಸ್ಥಿತಿಯತ್ತ ವಾಲುತ್ತಿದೆ ಎನ್ನುವುದಕ್ಕೆ ಯಾವುದೇ ಪ್ರಬಲವಾದ ಮತ್ತು ಸಮರ್ಥವಾದ ಕಾರಣವಿದೆಯೇ ಎಂಬುದು. ಇದು ವಿಶ್ವಾಸಪೂರ್ವಕವಾಗಿ ರುಜುವಾತಾದರೆ, ಸಂಸತ್ತಿನ ನಿಲುವಿಗೆ ಅನಗುಣವಾಗಿ, ದೇಶದ ಹಿತಕ್ಕೆ ಪೂರಕವಾಗಿ ಯಾವುದೋ ಅದನ್ನು ನಾವು ಮಾಡಬಹುದು.''*

ತಮಗೆ ಸಂದಾಯವಾಗುತ್ತಿದ್ದ ವರದಿಗಳಲ್ಲಿ ''ಗಟ್ಟಿತನವೂ, ಸಮರ್ಥನೀಯವೂ ಆದ ಅಂಶಗಳು'' ಇರುವ ಬಗ್ಗೆ ಮಾರ್ಲೆಯಲ್ಲಿ ಅವರದೇ ಆದ ಅನುಮಾನಗಳಿದ್ದವು. ಆ ವರದಿಗಳೆಲ್ಲವೂ ಗಾಳಿಸುದ್ದಿ, ಬಾಯಿಮಾತಿನ ಅಂಶಗಳನ್ನು ಒಳಗೊಂಡವು ಎಂಬುದು ಅವರಿಗೂ ಗೊತ್ತಿತ್ತು. ದೇಶವಾಸಿಗಳ ಸಾರ್ವಜನಿಕ ಸಭೆಗಳಿಗೆ ನುಸುಳಿಕೊಳ್ಳುತ್ತಿದ್ದ ಮಾಹಿತಿಕಾರರು ಒದಗಿಸುತ್ತಿದ್ದ ಅಂಶಗಳ ಆಧಾರದ ಮೇಲೆ ಆ ವರದಿಗಳು ಅವಲಂಬಿಸುತ್ತಿದ್ದವು. ಮಾರ್ಲೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಒಡಂಬಡಿಸುವ ಚಾತುರ್ಯವನ್ನು ಮಿಂಟೋ ಕಂಡುಕೊಂಡಿದ್ದರು. ಕೆಲವು ಕಾಲ ಅದು ಯಶಸ್ವಿಯಾಗಿಯೂ ನಡೆಯಿತು. ಯುದ್ಧದ ಲೇಖನಗಳ ಬಗ್ಗೆ ಒಟ್ಟಾರೆ ವಿಚಾರಣೆ ನಂತರ ರಾಜದ್ರೋಹದ ಚಟುವಟಿಕೆಗಳನ್ನು ನಿಗ್ರಹಿಸುವ ಬಗ್ಗೆ ಮಿಂಟೋ ಬಹುವಾಗಿ ಮಾತನಾಡುತ್ತಿದ್ದರು. ತಮ್ಮ ತಂತ್ರಕ್ಕೆ ಪೂರಕವಾಗಿ ಪತ್ರಿಕೆಗಳ ವರದಿಗಳನ್ನು ಆಧಾರ ಮಾಡಿಕೊಳ್ಳುತ್ತಿದ್ದರು! ತಮ್ಮ ತಂತ್ರ ಎಷ್ಟು ದಿನ ಫಲಕಾರಿಯಾಗಿರುತ್ತದೆ ಎಂಬುದರ ಅರಿವು ಸಹ ಅವರಿಗಿತ್ತು. ತಮ್ಮ ಪತ್ನಿಗೆ ಬರೆದ ಪತ್ರದಲ್ಲಿ ಅವರು,

''ಜೂನ್ 6, (ಸಿಮ್ಲಾ). ಕಳೆದ ವಾರ ಮಾರುಕಟ್ಟೆಗೆ ಬಂದಿರುವ 'ದಿ ಟೈಮ್ಸ್' ಸಂಚಿಕೆಯನ್ನು ಓದಿದಾಗ ನನಗೇನೂ ಆಶ್ಚರ್ಯವಾಗಲಿಲ್ಲ. ಎಲ್ಲಾ ಕ್ರಮಗಳನ್ನು ಮಾರ್ಲೆ ಕೈಗೊಳ್ಳುತ್ತಿದ್ದಾರೆಂದು ಪತ್ರಿಕೆಯವರು ಭಾವಿಸಿಕೊಂಡಿದ್ದಾರೆ. ಹಾಗೆ ಮಾಡುವ ಮೂಲಕ ಅವರು ನನಗೆ ಅಪಾರ ಬೆಂಬಲ ಕೊಡುತ್ತಿದ್ದಾರೆ. ವಾಸ್ತವದಲ್ಲಿ, ಮಾರ್ಲೆ ಯಾವುದೇ ಕ್ರಮಕೈಗೊಂಡಿಲ್ಲ,: ಈಗ ಆಗುತ್ತಿರುವುದೆಲ್ಲದಕ್ಕೂ ನಾನೇ ಸಮಗ್ರ ಜವಾಬ್ದಾರ ಲಜಪತ್‌ರಾಯ್ ಗಡಿಪಾರಿಗೆ ಸಂಬಂಧಪಟ್ಟಂತೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಸಹ ಮಾರ್ಲೆಗೆ ಅವಕಾಶ ಸಿಕ್ಕಿಲ್ಲ. ಕೆಲವು ಜಿಲ್ಲೆಗಳನ್ನು ಪ್ರಕ್ಷುಬ್ಧವೆಂದು ಘೋಷಿಸಿರುವ

* ಅದೇ ಪುಸ್ತಕದ ಪುಟ 223

ವಿಶೇಷ ಆಜ್ಞೆ ಸಹ ನನ್ನವೇ. ವಾಸ್ತವದಲ್ಲಿ ಅಂತಹ ಆಜ್ಞೆಗಳನ್ನು ವೈಸರಾಯ್ ಮಾತ್ರ ಹೊರಡಿಸಬೇಕಾಗುತ್ತದೆ...*

ಮಿಂಟೋ ಹೂಡಿದ ತಂತ್ರವೂ ವಿಫಲವಾಗಲಿಲ್ಲ. ಅವರ ಅಧಿಕಾರ ಮುಗಿಯುತ್ತಿದ್ದ ಹಂತದಲ್ಲಿ ಪತ್ನಿಗೆ ಬರೆದ ಪತ್ರದಲ್ಲಿ ಅವರೇ ಇದನ್ನು ಹೀಗೆ ತಿಳಿಸಿದ್ದಾರೆ,

''ನಾನು ಇಲ್ಲಿಗೆ ಬಂದು ಅಧಿಕಾರ ವಹಿಸಿಕೊಂಡಾಗಿನಿಂದ ಪ್ರತಿ ಹಂತದಲ್ಲೂ ನಾನು ಬಯಸಿದಂತೆಯೇ ಎಲ್ಲವೂ ನಡೆಯುವಂತೆ ನಿರ್ವಹಿಸಿಕೊಂಡಿದ್ದೇನೆಂದು ನನಗೆ ಖಾತ್ರಿಯಾಗಿದೆ. ಈ ಯಶಸ್ಸಿನಲ್ಲಿ ನನ್ನ ತಾಳ್ಮೆ, ಸಹನೆ ನನಗೆ ಸಾಮಾನ್ಯವಾಗಿ ಸಹಕಾರಿಯಾಗಿದೆ. ಎಷ್ಟೋ ಸಂದರ್ಭಗಳಲ್ಲಿ ನಾನು ನನ್ನ ಅಂತಸ್ತಿಗಿಂತಲೂ ವಿನಯ, ವಿಧೇಯತೆಗಳಿಂದ ನಡೆದುಕೊಳ್ಳಬೇಕಾಯಿತು. ನಾನು ಯಾರೊಂದಿಗೆ ವ್ಯವಹಾರ ಮಾಡುತ್ತಿದ್ದೇನೆಯೋ ಅವರನ್ನು ವೈಯಕ್ತಿಕವಾಗಿ ಸಂತೋಷದಲ್ಲಿ ಇಡಲು ಪ್ರಯತ್ನಿಸಬೇಕಾಯಿತು.''

ಮಾರ್ಲೆ ಬುದ್ಧಿವಂತ ವೈಸ್‌ರಾಯ್ ಎಂಬುದರಲ್ಲಿ ಅನುಮಾನವಿರಲಿಲ್ಲ. ಸುಧಾರಣಾವಾದದ ಹಿನ್ನಲೆಯೂ ಅವರಿಗಿತ್ತು. ಆದರೂ ಮಿಂಟೋ ತಂತ್ರಗಾರಿಕೆಯಲ್ಲಿ ಅವರು ತಮಗರಿವಿಲ್ಲದಂತೆ ಸುಸುಳಿಬಿಟ್ಟರು. ವೈಸ್‌ರಾಯ್ ಆಗಿ ಮಿಂಟೋ ರೂಪಿಸಿದ ನೀತಿಗಳಿಗೆ ಮುದ್ರೆಯೊತ್ತಿಬಿಟ್ಟರು. ಕೊನೆಯ ಹಂತದಲ್ಲಿ ಮಾರ್ಲೆಯವರಿಗ ತಾವು ಅಂಕಿತ ಹಾಕಿದ ನೀತಿಯ ವಾಸ್ತವಿಕತೆಯ ಬಗ್ಗೆ ಅನುಮಾನವೂ ಮೂಡಿತು. 'RECOLLECTIONS' ಕೃತಿಯಲ್ಲಿ ಅವರು ತಮಗಾದ ಅಸಮಾಧಾನವನ್ನು ಪ್ರದರ್ಶಿಸಿದ್ದಾರೆ. ವೈಸ್‌ರಾಯ್ ಮತ್ತು ರಾಜ್ಯದ ಕಾರ್ಯದರ್ಶಿ ನಡುವೆ ಹೆಚ್ಚುತ್ತಾ ಹೋದ ಭಿನ್ನಾಭಿಪ್ರಾಯದ ಐತಿಹಾಸಿಕ ಘಟನೆಗಳು ಈ ಕೃತಿಯಲ್ಲಿ ನಮಗೆ ಸ್ಪಷ್ಟವಾಗಿ ಲಭ್ಯವಾಗುತ್ತದೆ. 1907ರ ಆಗಸ್ಟ್ ಆರಂಭದ ವೇಳೆಗೆ ಮಿಂಟೋ ಮತ್ತು ಅವರ ಜನರ ವಿಷಯದಲ್ಲಿ ಮಾರ್ಲೆ ತೀರಾ ಅಸಂತುಷ್ಟರಾಗಿದ್ದಂತೆ ಕಂಡು ಬರುತ್ತದೆ. ಆಗಸ್ಟ್ 23ರ ಟಿಪ್ಪಣಿಯೊಂದು ಅದನ್ನು ಸಾದರಪಡಿಸುತ್ತದೆ.

ನಿಮ್ಮ ಪತ್ರಿಕೆ ತಂತಿ ವರದಿಯೊಂದನ್ನು ಅವರು ನಿನ್ನೆ ನನಗೆ ಕಳುಹಿಸಿಕೊಟ್ಟಿದ್ದಾರೆ. ಚಿನೋವ್‌ನಿಕ್ಸ್‌ರೊಂದಿಗೆ ಹೋಲುವ ನೀವು ಸಹ ಅವರನ್ನು ಸ್ವತಂತ್ರ ದೇಶವೊಂದರ ಸೇವಕರು ಮತ್ತು ಸಂಸತ್ತಿನ ಏಜೆಂಟರೆಂದು ಅರಿವಿನಲ್ಲಿಟ್ಟುಕೊಳ್ಳಲು ಮರೆತಿರುವುದು ನನಗೆ ದಿಗ್ಭ್ರಮೆ ತಂದಿದೆ. ಸಂಸತ್ತು ಅಧಿವೇಶನ ಸೇರಿದ ಒಂದು ತಾಸಿನೊಳಗೆ ಪತ್ರಿಕೆಗಳಿಗೆ ಸಂಬಂಧಪಟ್ಟ ಹೊಸ ವಿಧಿ ವಿಧಾನಗಳನ್ನು ಅಂಗೀಕರಿಸಲು ಸಾಧ್ಯವೇ? ಓರ್ವ ಚಳವಳಿಕಾರನ ವಿರುದ್ಧ ಇಂತಹ ಕಠಿಣ ಕ್ರಮಕೈಗೊಳ್ಳುವ ಮೂಲಕ ಅವರನ್ನು ಗಡಿಪಾರು ಮಾಡುವುದು ಅಗತ್ಯವಿಲ್ಲವೆಂದು ನನಗೆ ಕಂಡು ಬರುತ್ತದೆ. ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳಿರುವುದನ್ನು ಮರೆತಂತಿದೆ. ಯಾವ ವ್ಯಕ್ತಿಯ ವಿರುದ್ಧ ನಂಬುವಂತಹ ಪ್ರಬಲವಾದ ಕಾರಣಗಳು ಇಲ್ಲವೋ, ಆತನ ಚಟುವಟಿಕೆಗಳು ಉದ್ದೇಶಪೂರ್ವಕವಾಗಿ ಹಾಗೂ ನೇರವಾಗಿ

---

* ಮೇರಿ, ಕೌಂಟೆಸ್ ಆಫ್ ಮಿಂಟೋ: ಇಂಡಿಯಾ, ಮಿಂಟೋ ಅಂಡ್ ಮಾರ್ಲೆ 1905-1910 ಪುಟ. 138.

ವ್ಯವಸ್ಥೆಗೆ ಪ್ರಚೋದಕಗಳಾಗಿ ಸ್ಥಿರವಾಗುವುದಿಲ್ಲವೋ ಅಲ್ಲಿಯತನಕ ನಾನು ಗಡಿಪಾರು ಕ್ರಮಕ್ಕೆ ಅನುಮತಿ ಕೊಡುವುದಿಲ್ಲವೆಂದು ತಿಳಿಸಿದ್ದೇನೆ.

ಈ ಜನರೆಲ್ಲಾ ಯಾರು, ಮತ್ತು...?... ನೀವು ಸುಧಾರಣೆ ಕೈಗೊಂಡಾಗ ಪ್ರತಿರೋಧ ಒಡ್ಡಿದ ಆ ಜನರೇ ಇವರು. ನಮ್ಮ ಕಾಲದಲ್ಲಿ ಹೆಚ್ಚು ಮೆಚ್ಚುಗೆಯ, ಸಮಂಜಸವೂ ಆಗಬಹುದಾಗಿದ್ದ ಸುಧಾರಣೆಗಳು ಅವು. ಇದೇ ಜನ, ಇದೇ ರೀತಿಯ ಜನ ಲಾಹೋರ್ ಮತ್ತು ಪಿಂಡಿಗಳ ಪರಿಸ್ಥಿತಿಯನ್ನು ಮುಂದು ಮಾಡಿ ಅರುಂಡೇಲ್ ಸುಧಾರಣೆಗಳನ್ನು ಕೈಬಿಡುವಂತೆ ಮಾಡಿದರು.! ನಂತರ ಸಚಿವ ಸಂಪುಟ ಸಭೆ ಮುಗಿದ ಮೇಲೆ ವಕೀಲರೆಲ್ಲರೂ ನಿರ್ಗಮಿಸಿದ ಮೇಲೆ ನನ್ನ ಸಂಸತ್ತಿನ ಸದಸ್ಯರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಹೊರಟು ಹೋದ ಮೇಲೆ ಆ ಜನರು ನನಗೊಂದು ವರದಿಯನ್ನು ಒಪ್ಪಿಸಿದರು. ಕೇವಲ ಒಂದು ವಾರದೊಳಗೆ ಅದರ ಮೇಲೆ ಕ್ರಮಕೈಗೊಳ್ಳಬೇಕೆಂದು ಶಿಫಾರಸು ಮಾಡಿದರು. ಆ ವರದಿಯಲ್ಲಿನ ತೀರಾ ಸೂಕ್ಷ್ಮ ವಿಚಾರಗಳಿದ್ದವು. ಬಿಕ್ಕಟ್ಟಿನ ಅಂಶಗಳಿದ್ದವು. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ರಾಜಕಾರಣಗಳ ನೆಲೆಗಟ್ಟಿನ ಮೇಲೆ ಆ ವರದಿಯನ್ನು ಪರಿಷ್ಕರಿಸಿ ಕ್ರಮಕೈಗೊಳ್ಳಬೇಕಿತ್ತು. ತಮ್ಮ ಕರ್ತವ್ಯ, ಅನುಭವ ಮತ್ತು ಸೇವಾ ನಿಷ್ಠೆಗಳಿಗೆ ಹೆಸರುವಾಸಿಯಾದವರೆಂದೇ ಹೇಳಲ್ಪಡುವ ಈ ಸಭ್ಯ ಅಧಿಕಾರಸ್ಥ ಜನ ಆ ವರದಿಯನ್ನು ಒಂದು ವಾರ ಅಥವಾ ಒಂದು ತಾಸಿನಲ್ಲಿ ಇತ್ಯರ್ಥ ಮಾಡಿಬಿಡಬಲ್ಲವರಾಗಿದ್ದರು. ಹಾಗೆ ಮಾಡಿದಿದ್ದರೆ ಯಾವುದೇ ವಿವಾದ ಅಥವಾ ಸಮರ್ಥನೆಗೆ ಅವಕಾಶವೂ ಇರುತ್ತಿರಲಿಲ್ಲ. ನನಗೆ ಈ ಜನರ ನಡವಳಿಕೆ ಹರ್ಷ ತಂದಿಲ್ಲ. ಸ್ಟ್ರಾಫರ್ಡ್ ವಿಚಿತ್ರ ಸ್ವಭಾವದ ವ್ಯಕ್ತಿಯಾಗಿದ್ದರು ಎಂದು ನಾನು ಅನೇಕ ಸಾರಿ ನಿಮಗೆ ಹೇಳಿದ್ದೇನೆ. 17ನೇ ಶತಮಾನದಲ್ಲಿ ಐರ್ಲೆಂಡಿನ ಗವರ್ನರ್ ಆಗಿದ್ದಾಗ ಅವರ ನಡವಳಿಕೆ ಹೇಗಿತ್ತೆಂಬುದನ್ನು ತಿಳಿಸಿದ್ದೇನೆ. ಅವರ ಆಳ್ವಿಕೆಯ ಸಿದ್ಧಾಂತ ಉಚಿತವಾಗಿರಲಿಲ್ಲವೆಂದು ಎರಡು ಅವಧಿಯಲ್ಲಿ ಸಾಬೀತಾಯಿತು. ಬಡಪಾಯಿ ಸ್ಟ್ರಾಫರ್ಡ್ ತಲೆ ಉರುಳಿತು. ಈ ವಿಷಯದಲ್ಲಿ ನನ್ನ ನಿರ್ಧಾರ ಏನೆಂಬುದನ್ನು ತಂತಿ ಮೂಲಕ ನಿಮಗೆ ತಲುಪುತ್ತದೆ. ಆದರೆ ಇದು ಕೇವಲ ವೀಟೋಗಿಂತಲೂ ಇತರ ರೀತಿಯಲ್ಲಿ ಪರಿಷ್ಕೃತವಾದರೆ ನನಗೆ ಅಚ್ಚರಿಯೇನೂ ಇಲ್ಲ. ಓರ್ವ ಮನುಷ್ಯನ ಚಟುವಟಿಕೆಗಳು ಪ್ರಚೋದನಕಾರಿಯಾಗಿದ್ದರೆ ದಂಗೆಯ ಆರೋಪದ ಮೇಲೆ ಆತನನ್ನು ಬಂಧಿಸಬಾರದೇಕೆ? ಸಾಕಷ್ಟು ಸಂಖ್ಯೆಯಲ್ಲಿ ಪೊಲೀಸರು ಇಲ್ಲವೇ? ಒಂದು ವೇಳೆ ಪೊಲೀಸರು ಸಾಕಷ್ಟು ಪ್ರಮಾಣದಲ್ಲಿ ಇಲ್ಲವಾದರೆ ಮೀಸಲು ಪಡೆ ಇರುವುದೇಕೇ? ಈ ಪ್ರಸ್ತಾಪಗಳು ''ದೇಶದ ಶಾಂತಿಯನ್ನು ಕಾಪಾಡುವ ಸಲುವಾಗಿ'' ಅಗತ್ಯವೆಂದು ಭಾರತ ಸರ್ಕಾರ ಭಾವಿಸಿರುವ ಪ್ರಸ್ತಾವಗಳೆಂದು ಖಂಡಿತವಾಗಿಯೂ ತಿಳಿಸಬಹುದು. ಹಾಗೆ ಹೇಳುವುದರಿಂದ ಪ್ರಯೋಜನವಾದರೂ ಏನು? ಸಂಸತ್ತು ಅದನ್ನು ಅಂಗೀಕರಿಸಿತೇ? ಈ ಪ್ರಸ್ತಾವಗಳನ್ನು ಕಳುಹಿಸುವುದರಿಂದ ಮತ್ತು ಅದನ್ನು ಅಂಗೀಕರಿಸುವಂತೆ ಕೋರುವುದರಿಂದ ಸಂಸತ್ತಿನ ವಿಶ್ವಾಸವನ್ನು ನಾನು ದುರುಪಯೋಗ ಮಾಡಿಕೊಂಡಂತೆ ಆಗುವುದಿಲ್ಲವೇ?

''ಮಿಲಿಟರಿ ಅಥಾರಿಟಿಯೊಂದು ಸಲಹೆ ಮಾಡುವ ಸಾಮಾನ್ಯ ಪತ್ರಿಕಾ ಕಾಯ್ದೆಯನ್ನು ಮಸೂದೆಯನ್ನಾಗಿ ಅಂಗೀಕರಿಸಲು ಓರ್ವ ಬ್ರಿಟಿಷ್ ಸಚಿವರು ಸಂಸತ್ತಿನಲ್ಲಿ

ಮಂಡಿಸುತ್ತಾರೆಂಬುದು ಕಳೆದ 100 ವರ್ಷಗಳ ದಾಖಲೆಯಲ್ಲಿ ಎಲ್ಲೂ ಕಂಡು ಬರುವುದಿಲ್ಲ. ಖಾಸಗಿ ಸಭೆಗಳನ್ನು ಸಾರ್ವಜನಿಕ ಸಭೆಯನ್ನಾಗಿ ಪರಿಗಣಿಸುವಂತೆ ನಿರ್ಬಂಧ ತರುವ ಪ್ರಯತ್ನವೂ ಅಷ್ಟೇ.

''ತಾನು ಸೂಚಿಸಿದ ಸ್ಥಳದಲ್ಲಿಯೇ ಭಾಷಣಕಾರನು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಮಾಡ ಹೊರಟಿರುವುದು ಲೆಫ್ಟಿನೆಂಟ್ ಗವರ್ನರ್‌ಗಾಗಲಿ ಅಥವಾ ಇತರೆ ಅಧಿಕಾರಿ ವರ್ಗಕ್ಕಾಗಲಿ ಸಮಂಜಸವಾದ ಕೆಲಸವಾಗುವುದಿಲ್ಲ. ನಾವು ಈ ಪ್ರಸ್ತಾಪದ ಬಗ್ಗೆ ಪ್ರಾಮಾಣಿಕವಾಗಿ ಪರಿಷ್ಕಾರ ಮಾಡೋಣ, ಅಗತ್ಯವಾಗಿರುವುದನ್ನೆಲ್ಲಾ ಕೈಬಿಡೋಣ."*

ಮಾರ್ಲೆ ಟಿಪ್ಪಣಿ ಅಷ್ಟಕ್ಕೆ ಮುಗಿಯುವುದಿಲ್ಲ. ಆಡಳಿತದ ರೀತಿ, ನೀತಿಯನ್ನು ಅವರು ಇಂಗ್ಲಿಷಿನ ಜನಪ್ರಿಯ ಕಾಮಿಕ್‌ನಲ್ಲಿ ಬರುವ ಪಿಕ್‌ವಿಕಿಯನ್ ಪರಿಸ್ಥಿತಿ ಮತ್ತು ಕುದುರೆಗಳ ಬಳಕೆಗೆ ಹೋಲಿಸಿದ್ದಾರೆ;

''ನಾವಿಬ್ಬರು ಭಾರತವನ್ನು ನಮ್ಮದ್ರೇ ದೃಷ್ಟಿಕೋನದಲ್ಲಿ ಅರಿತುಕೊಳ್ಳಲು ಹೊರಟಿದ್ದೇವೆ. ಆಗುಹೋಗನ್ನು ಒರೆ ಹಚ್ಚಿ ನೋಡಿದಾಗ ಪಿಕ್‌ವಿಕಿಯನ್ ಚಿತ್ರಣದಲ್ಲಿ ಕಂಡು ಬರುವಂತೆ ಒಂದು ಕುದುರೆ ಬಲಕ್ಕೂ, ಇನ್ನೊಂದು ಕುದುರೆ ಎಡಕ್ಕೂ ಎಳೆಯುವಂತಿದೆ. ಅಥವಾ ಅದರಲ್ಲಿ ಕಥಾನಾಯಕ ಚಿತ್ರವನ್ನು ಪರಿಶೀಲಿಸಲು ತಾನೇ ತಲೆಕೆಳಗು ಮೇಲಾಗಿ ಸುತ್ತುವಂತಿದೆಯಲ್ಲವೇ?''

ಎರಡು ವರ್ಷಗಳ ನಂತರ ಲಜಪತ್‌ರಾಯ್ ಗಡಿಪಾರು ಶಿಕ್ಷೆಯನ್ನು ಮುಗಿಸಿ ಮಾಂಡೇಲೆಯಿಂದ ಮರಳಿದ ಮೇಲೆ ಮತ್ತೆ ಅವರನ್ನು ಗಡಿಪಾರು ಶಿಕ್ಷೆಗೆ ಒಳಪಡಿಸಲು ಮಿಂಟೋ ಬಯಸಿದರು. ಮಾರ್ಲೆ ಆ ಸಲಹೆಯನ್ನು ಒಪ್ಪಿಕೊಳ್ಳಲಿಲ್ಲ. ಅದು ನವೆಂಬರ್ 9, 1909ರ ಸಂದರ್ಭ.

''ನೀವು ಕಳುಹಿಸಿರುವ ಉಚ್ಚಾಟನೆ ಸಲಹೆಯನ್ನು ನಾನು ಒಪ್ಪುವುದಿಲ್ಲ. ನಿಮ್ಮ ಸಲಹೆಗೆ ನೀವು ಪ್ರಬಲವಾದ ಕಾರಣವನ್ನೇ ಕೊಟ್ಟಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನ್ನದೇ ಆದ ಅಧ್ಯಯನ ನಿಮ್ಮ ಸಲಹೆಗಳಿಗೆ ಭಿನ್ನವಾಗಿದೆ. ನೆದರ್‌ಲ್ಯಾಂಡ್‌ನ ಸ್ಪಾನಿಷ್ ವೈಸ್‌ರಾಯ್‌ಗಳು. ವೆನಿಸ್‌ನ ಆಸ್ಟ್ರೀಯ ವೈಸ್‌ರಾಯ್, ಎರಡು ಸಿಸಿಲಿಗಳ ಬೋರ್‌ಬನ್ ಹಳೆಯ ಅಮೆರಿಕ ಕಾಲೋನಿಗಳ ಒಬ್ಬೊಬ್ಬರು ಗವರ್ನರ್‌ಗಳ ನಡವಳಿಕೆಯನ್ನು ನಾನು ಅನುಸರಿಸುತ್ತೇನೆ. ಸ್ಟ್ರಾಫರ್ಡ್ ಕಿಂಗ್ ಜಾನ್, ಕಿಂಗ್ ಚಾರ್ಲ್ಸ್ ನಿಯೋ ಮತ್ತು ಟಿಬೇರಿಯಸ್ ನಡವಳಿಕೆಗಳಿಗೆ ನಾನು ಸಮ್ಮತಿಸುವುದಿಲ್ಲ.'' #

ಒಂದೆರಡು ತಿಂಗಳುಗಳ ನಂತರ ಗಡಿಪಾರಿಗೆ ಸಂಬಂಧಪಟ್ಟ ನೀತಿ ಪ್ರಸ್ತಾಪಕ್ಕೆ ಬಂದಾಗಲೂ,

---

* ಮಾರ್ಲೆ, ಜಾನ್, ರಿಕಲೆಕ್ಷನ್ಸ್, ಸಂಪುಟ 2, ಪುಟ. 231-32.

ಅದೇ ಪುಸ್ತಕದ ಪುಟ. 234.

"ಜನವರಿ 27, 1910. ಇಂತಹ ನೀತಿ ರಷ್ಯಾದಲ್ಲಿ ಪರಿಣಾಮಕಾರಿಯಾಗಲಿಲ್ಲ. ಟ್ರೆಪ್ರೋಸ್ ಜೀವಗಳನ್ನು ಉಳಿಸಲಿಲ್ಲ. ಡ್ಯೂಮನ ಹಿಡಿತದಿಂದ ರಷ್ಯಾವನ್ನು ಕಾಪಾಡಲಿಲ್ಲ. ಅವರೆಲ್ಲರ ನಡವಳಿಕೆಗಳು ಅವರಿಗೆ ಉರುಳಾದವು."

ಜನಪ್ರತಿನಿಧಿ ಸಭೆಯಲ್ಲಿ ಈ ವಿಷಯದ ಪ್ರಸ್ತಾಪ, ಮಾರ್ಲೆ, ಲಜಪತ್‌ರಾಯ್ ಬಂಧನಕ್ಕೆ ಆಧಾರವಾದ ಕಾರಣಗಳನ್ನು 'ಸಾರ್ವಜನಿಕ ಹಿತದೃಷ್ಟಿ' ಕಾರಣದ ಮೇಲೆ ಬಹಿರಂಗ ಪಡಿಸಲು ಇಷ್ಟಪಡಲಿಲ್ಲ. ಇನ್ನೂ ವಿಶೇಷವೆಂದರೆ ಆ ಕಾರಣಗಳು ಸ್ವತಃ ಮಾರ್ಲೆಗೆ ತಿಳಿದೇ ಇರಲಿಲ್ಲ! ಆ ಮಹಾಸದನದಲ್ಲಿ ಮಾರ್ಲೆ ಪದೇ ಪದೇ 'ಸಾರ್ವಜನಿಕ ಹಿತದೃಷ್ಟಿ' ನೆಪದಲ್ಲಿ ರಕ್ಷಣೆ ಪಡೆಯಬೇಕಾಯಿತು. ಲಜಪತರ ಬಂಧನ ಮತ್ತು ಶಿಕ್ಷೆಗೆ ಸಂಬಂಧಪಟ್ಟ ವಾಸ್ತವಾಂಶಗಳನ್ನು ಅವರು ಸಭೆಯ ಮುಂದಿಡಲು ಸಾಧ್ಯವಾಗಲೇ ಇಲ್ಲ. ಅವರ 'Recollections' ಕೃತಿಯಲ್ಲಾಗಲಿ, ಮೇರಿ ಮಿಂಟೋ ಕೃತಿಯಲ್ಲಾಗಲಿ ಅದರ ಬಗ್ಗೆ ಸುಳಿವು ಸಹ ಸಿಗುವುದಿಲ್ಲ. ಅಥವಾ ಸರ್ಕಾರದ ಇತರ ಯಾವುದೇ ಹೊತ್ತಿಗೆಗಳಲ್ಲಾಗಲಿ ಲಜಪತರ ಬಂಧನ ಮತ್ತು ಶಿಕ್ಷೆಗೆ ನಿಜವಾದ ಆಧಾರ ಮಾಡಿಕೊಂಡ ವಾಸ್ತವಾಂಶಗಳು ಪ್ರಸ್ತಾಪವಾಗಿಲ್ಲ. ಆ ಕರಾಳ ಕೃತ್ಯಗಳ ಹಿಂದಿನ ನಿಜ ಸಂಗತಿ ಕಾಲದ ಉರುಳಿನಲ್ಲಿ ಒಂದಲ್ಲ ಒಂದು ದಿನ ಬಯಲಾಗಬಹುದೇನೋ! ಮಾರ್ಲೆ ತಿಳಿಸಿರುವುದೆಲ್ಲವೂ ಕ್ಷುಲ್ಲಕ ಆಂಗ್ಲೋ ಇಂಡಿಯನ್ ಕಥಿತಗಳ ರೂಪ ಅಷ್ಟೇ. ಅವರ ಕೃತ್ಯಗಳು ನಾನಾ ಸಾಹೇಬ್ ಕೃತ್ಯಗಳಂತಿದೆ ಎಂದಾಗಲಿ ಅಥವಾ 50 ವರ್ಷಗಳ ನಂತರ ಕಂಡು ಬಂದ ಇನ್ನೊರ್ವ ನಾನಾ ಸಾಹೇಬ್ ಎಂದಾಗಲಿ, ಲಕ್ಷಾಂತರ ಸಿಪಾಯಿಗಳು ಅವರ ಒಂದೇ ಒಂದು ಆದೇಶಕ್ಕಾಗಿ ಕಾದಿದ್ದರು ಎಂಬುದಾಗಲಿ ಅತಿರೇಕದ ಪ್ರಸಂಗಗಳು.

ಕ್ರಿಶ್ಚಿಯನ್ ಮನೋಧರ್ಮಕ್ಕೆ ಭಿನ್ನವೆಂದು ಭಾವಿಸಬಹುದಾದ ಓರ್ವ ಐರೋಪ್ಯ ಅಧಿಕಾರಿ ಲಜಪತ್‌ರಾಯ್ ಅವರನ್ನು ಅವರು ಬಂಧನದಲ್ಲಿದ್ದಾಗಲೇ ಭೇಟಿ ಮಾಡಿದರು. ಆತ ಅವರಿಗೆ ತಿಳಿಸಿದ್ದರಲ್ಲಿ ಇಂಗ್ಲೆಂಡ್ ದೊರೆಗೆ ನಿಷ್ಠವಾಗಬೇಕಾದ ಸೈನ್ಯದಲ್ಲಿ ರಾಜದ್ರೋಹದ ಬೀಜ ಬಿತ್ತಿ ಎರಡನೇ ನಾನಾ ಸಾಹೇಬ್ ರೀತಿಯಲ್ಲಿ ರಾಜದ್ರೋಹದ ಕೃತ್ಯ ಎಸಗಿದ್ದೀರಿ ಎಂದು ಆರೋಪಿಸಲಾಗಿದೆ ಎಂಬುದು ಒಂದು.

1857-1907! ಅಂದು ನಾನಾ ಸಾಹೇಬ. ಇಂದು ಲಜಪತ್‌ರಾಯ್. ಭಾರತ ಸರ್ಕಾರಕ್ಕೆ ಸಲ್ಲಿಸಿದ ತಮ್ಮ ಲಿಖಿತ ಹೇಳಿಕೆಯಲ್ಲಿ ಲಜಪತ್‌ರಾಯ್ ನಿಜಾಂಶ ತಿಳಿಸಿದರು. ಸೈನ್ಯದೊಂದಿಗೆ ಬೆರೆಯುವ ಅವಕಾಶ ತಮಗೆ ಯಾವಾಗಲೂ ಸಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಅವರ ಆ ಹೇಳಿಕೆಯನ್ನು ಅಲ್ಲಗಳೆಯಲು ಸರ್ಕಾರದ ಬಳಿ ಯಾವುದೇ ಸಾಕ್ಷ್ಯಾಧಾರಗಳು ಇರಲಿಲ್ಲ. ಅವರ ವಿರುದ್ಧ ಹೊರಿಸಿದ್ದ ಆರೋಪ ಅವರನ್ನು ಗಡಿಪಾರು ಮಾಡುವ ಮೊದಲು ಹೇಳಿರಲಿಲ್ಲ. ಅನಂತರ ಅದನ್ನು ಹೊಸೆಯಲಾಗಿತ್ತು. ಅದರಲ್ಲೂ ಆರೋಪಿಗಳ ವಿರುದ್ಧ ಸಾಕ್ಷಿ ಆಧಾರಗಳನ್ನು ಸರಿಪಡಿಸುವ ಹಂತದಲ್ಲಿ ಹಾಗೆ ಸಂಚು ಮಾಡಲಾಗಿತ್ತು. ಮಿಂಟೋ ಮಾರ್ಲೆ ನಡುವಣದ ಪತ್ರ ವ್ಯವಹಾರಗಳಲ್ಲಿ ಈ ಬಗ್ಗೆ

ಸೂಕ್ಷ್ಮವಾಗಿ ತಿಳಿದು ಬರುತ್ತದೆ. ಅದರಲ್ಲೂ ಆಗಸ್ಟ್ 29ರ ಮಿಂಟೋ ಪತ್ರದಲ್ಲಿ ಅದು ಸ್ಪಷ್ಟವಾಗಿ ಗೋಚರಿಸುತ್ತದೆ.

ಮಾರ್ಲೆಯಿಂದ ಮಿಂಟೋಗೆ ಪತ್ರ

ಆಗಸ್ಟ್ 29:

''... ಸೇನೆಯ ಸ್ಥಿತಿಗತಿಗೆ ಸಂಬಂಧಪಟ್ಟಂತೆ ನಮ್ಮ ನಿರ್ಧಾರವನ್ನು ನೀವು ಸ್ಪಷ್ಟವಾಗಿ ಪರಿಗಣಿಸಲಿಲ್ಲವೇನೋ ಎಂಬ ಭಯ ನನ್ನನ್ನು ಕಾಡುತ್ತಿದೆ... ತೀರಾ ನಿಧಾನವಾಗಿ ಅದರಲ್ಲೂ ಲಜಪತ್‌ರಾಯ್ ಬಂಧನದ ನಂತರ ಸ್ಥಳೀಯ ಸೈನಿಕರು ಮತ್ತು ಸೈನ್ಯಾಧಿಕಾರಿಗಳನ್ನು ಭ್ರಷ್ಟಗೊಳಿಸುವ ಪ್ರಯತ್ನಗಳು ನಡೆದಿರುವುದು ಗಮನಕ್ಕೆ ಬರುತ್ತದೆ... ನಮ್ಮೆಲ್ಲರಿಗೂ ಇದು ಆಶ್ಚರ್ಯಕರ ಬೆಳವಣಿಗೆಗಳು ಎನಿಸಿದೆ ಎಂಬುದನ್ನು ನಿಮಗಾಗಲೇ ತಿಳಿಸಿದ್ದೇನೆ. ಇನ್ನೂ ಆಘಾತಕರ ಬೆಳವಣಿಗೆಗಳು ನಮ್ಮ ಅರಿವಿಗೆ ಬರಬೇಕಾಗಿದೆ.'' *

ಈ ಪತ್ರ ಹೆಚ್ಚು ಆತಂಕಕಾರಿಯಾಗಿದ್ದು ಅದರಲ್ಲೂ ಸಮೂಹ ಸನ್ನಿಯ ಸೆಳೆತಕ್ಕೆ ಸಿಕ್ಕಿದ್ದು. ತನಗೆ ಅನುಕೂಲವಾದ ರೀತಿಯಲ್ಲಿ ಪತ್ರಿಕಾ ಕಾಯ್ದೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಮಾರ್ಲೆಯವರನ್ನು ಒಪ್ಪಿಸ ಹೊರಟ ಮಿಂಟೋ ಪ್ರಯತ್ನಗಳಲ್ಲಿ ಇದು ತೀರಾ ಒಳಸಂಚಿನ ತಂತ್ರವೆನಿಸುತ್ತದೆ. ಪತ್ರದ ಮುಂದಿನ ಭಾಗವನ್ನು ಓದಿದಾಗ ಅದರ ಒಳ ಉದ್ದೇಶ ಇನ್ನಷ್ಟು ಸ್ಪಷ್ಟವಾಗುತ್ತದೆ.

''ಪ್ರತಿನಿತ್ಯದ ಘಟನೆಗಳ ವಿದ್ಯಮಾನಗಳು ನಮಗೆ ಪ್ರಾಪ್ತವಾಗುತ್ತಿದೆ. ದೇಶವಾಸಿಗಳ ಮೂಲಗಳಿಂದ ನಿರಂತರವಾಗಿ ಲಭ್ಯವಾಗುತ್ತಿರುವ ಸುಳಿವುಗಳು ಸೂಕ್ಷ್ಮಗಳನ್ನು ತಿಳಿಸುತ್ತಿದೆ. ಸೇನೆಯಲ್ಲಿ ಇರುವ ದೇಶಿಯ ಅಧಿಕಾರಿಗಳು ಕೊಡುತ್ತಿರುವ ಎಚ್ಚರಿಕೆಗಳು ಅದನ್ನು ಸಮರ್ಥಿಸುತ್ತಿದೆ. ನಮ್ಮ ದೇಶಿಯ ಬೇಹುಗಾರರು ಕೊಡುತ್ತಿರುವ ಹೇಳಿಕೆಗಳು ಅವುಗಳಿಗೆ ಪೂರಕವಾಗಿವೆ. ಈ ಎಲ್ಲಾ ಬೆಳವಣಿಗೆಗಳು ಸಂಪೂರ್ಣವಾಗಿ ನಂಬಲಾಗದವು ಎಂಬ ಮಾತನ್ನು ನಾನು ಒಪ್ಪುತ್ತೇನೆ. ಕೇವಲ ಪೂರ್ವಾಗ್ರಹಪೀಡಿತವೂ ಆದ ಮಾಹಿತಿಗಳು ಹಾಗೂ ಸುಳಿವುಗಳು ಇವು ಎಂದು ನಾವು ಉಪೇಕ್ಷಿಸುವುದಿಲ್ಲ. ಎಲ್ಲವೂ ಊಹಾಪೋಹವೆಂದು ಸುಮ್ಮನಿರಲು ಸಾಧ್ಯವಿಲ್ಲ. ಸಿಪಾಯಿ ದಂಗೆಯ ಪೂರ್ವದಲ್ಲಿ ನಡೆದ 'ಚಾಪಟ್ಟಿ' ಕರಪತ್ರಗಳ ಪ್ರಕರಣದ ರಹಸ್ಯಾತ್ಮಕ ಕಥನ ನಮಗೆ ಎಚ್ಚರಿಕೆಯಾಗಿ ಉಳಿಗಿದೆ. ಅದೇ ಸಂಪೂರ್ಣವಾಗಿ ಸಾಕ್ಷಿ ಆಗದಿದ್ದರೂ ಮುಂದೆ ಆದ ಬೆಳವಣಿಗೆಗಳಿಗೆ ಅದು ಸೂಚನೆಯಾಗಿತ್ತೆಂಬುದನ್ನು ಕಡೆಗಣಿಸುವಂತಿಲ್ಲ. ಇಂದು ರಾಜದ್ರೋಹ ಪ್ರಚೋದಕ ವೃತ್ತ ಪತ್ರಿಕೆಗಳು ಅಂದಿನ ಕರಪತ್ರಗಳ ಪ್ರತಿರೂಪವಾಗಿರಬಹುದು. ಸ್ಥಳೀಯ ಸೇನಾ ತುಕಡಿಗಳಲ್ಲಿ ಅದೇ ರೀತಿಯ ಪ್ರಭಾವವನ್ನು ಬೀರುತ್ತಿರಬಹುದು...

---

* ಮೇರಿ, ಕೋರ್ಟೆಸ್ ಆಫ್ ಮಿಂಟೋ: ಇಂಡಿಯಾ, ಮಿಂಟೋ ಅಂಡ್ ಮಾರ್ಲೆ 1905-1910, ಪುಟ. 151.

ದೇಶಿಯ ಸೈನಿಕರಿಗೆ ಲಭ್ಯವಾಗುತ್ತಿರುವ ಕಡಿಮೆ ಸಂಬಳ, ಪ್ಲೇಗ್ ಕಾಯಿಲೆಯ ಉಪಟಳಗಳೂ ಸೇರಿದಂತೆ ತಮಗೆ ಅನುಕೂಲಕರವಾಗುವ ಎಲ್ಲಾ ಅವಕಾಶಗಳನ್ನು ಬಂಡಾಯಕಾರರು ಬಳಸಿಕೊಂಡು ದೇಶಿಯ ಸೈನ್ಯದ ನಿಷ್ಠೆಯನ್ನು ಭ್ರಷ್ಟಗೊಳಿಸುವ ಯತ್ನಕ್ಕೆ ಕೈಹಾಕಿರುವುದು ಈಗಾಗಲೇ ತಡವಾಗಿ ನಮ್ಮ ಅರಿವಿಗೆ ಬಂದಿದೆ. ನಾನೀಗ ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳದೆ... ಅರ್ಥಾತ್ ಯುದ್ಧ ವಿಧಿಗಳ ಅಧಿಕಾರವನ್ನು ಬಳಸಿಕೊಳ್ಳದಿದ್ದರೆ, ರಾಜದ್ರೋಹ ಪ್ರಚೋದಕ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಜರುಗಿಸದಿದ್ದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಈತನಕ ಕೇವಲ ಇಬ್ಬರ ವಿರುದ್ಧ ಮಾತ್ರ ಸೇನಾ ನ್ಯಾಯಾಲಯದ ವಿಚಾರಣೆ ನಡೆದಿದೆ. ಪರಿಸ್ಥಿತಿಯನ್ನು ಅವಲೋಕಿಸಿದಾಗ ಅತ್ಯಂತ ಉಗ್ರಕ್ರಮವನ್ನು ಕೈಗೊಂಡರೆ ಅದರಿಂದ ಪ್ರಚೋದನೆಗೆ ಕಾರಣವಾಗಲೂಬಹುದು. ನಾವೀಗ ಮಾಡಬೇಕಾದುದು ಇಷ್ಟೇ. ಕಟ್ಟೆಚ್ಚರದಿಂದ ಧೃಡವಾಗಿ ಪ್ರಚೋದನೆಗೆ ಅವಕಾಶವಿಲ್ಲದ ರೀತಿಯಲ್ಲಿ ನಿಗ್ರಹ ಕೆಲಸಕೈಗೊಳ್ಳಬೇಕು. ನಮಗಂತೂ ಎಚ್ಚರ ಸಿಕ್ಕಿದೆ. ದೇಶಿಯ ಸೈನ್ಯ ಇನ್ನಷ್ಟು ಭ್ರಷ್ಟವಾಗುವುದನ್ನು ತಡೆಯಲು ಅಗತ್ಯವಾದ ಮುನ್ನೆಚ್ಚರಿಕೆಯನ್ನು ಕೈಗೊಳ್ಳಲೇ ಬೇಕಾಗಿದೆ. ದೇಶಿಯ ಸೈನ್ಯ ಭ್ರಷ್ಟವಾದರೆ ಅದರಿಂದ ದಂಗೆಯಲ್ಲದೆ ಬೇರೇನೂ ಅಲ್ಲದಂತಹ ಬೆಳವಣಿಗೆ ಸಂಭವಿಸುವುದು ದಿಟ. ಪರಿಸ್ಥಿತಿ ಆ ಹಂತ ಮುಟ್ಟಿದಾಗ ನಾವು ಯುದ್ಧ ವಿಧಿಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದು...*

1857-1907! ಅಂದು ಚಾಪಟ್ಟಿಗಳು-ಇಂದು ವೃತ್ತಪತ್ರಿಕೆಗಳು! ಅಂದು ನಾನಾ ಸಾಹೇಬ-ಇಂದು ಲಜಪತ್‌ರಾಯ್! ಅಂದು ಮೊಘಲ್ ಕೊನೆಯ ಚಕ್ರವರ್ತಿಯ ಬರ್ಮಾ ಗಡಿಪಾರು- ಇಂದು ಪಂಜಾಬಿನ ಸಿಂಹಕ್ಕೆ ಗೊತ್ತುಗುರಿಯಿಲ್ಲದ ಕಡೆಗೆ ಗಡಿಪಾರು ಮಾಡುವ ಸಂಭವ!

ಇಷ್ಟೆಲ್ಲಾ ಆದರೂ ಮಿಂಟೋ ಪತ್ರದಲ್ಲಿ ಎಲ್ಲಿಯೂ ಲಜಪತರ ಹೆಸರಿನ ನೇರ ಪ್ರಸ್ತಾಪವಾಗಿಲ್ಲ. ಸ್ಥಳೀಯ ಸೈನ್ಯವಲ್ಲಿ ನಿಷ್ಠೆ ಬದಲಾಯಿಸುವ ಅವರ ಪ್ರಯತ್ನದ ಬಗ್ಗೆಯೂ ಹೇಳಿಲ್ಲ. ಬದಲಾಗಿ ಅವರ ಬಂಧನ ಮತ್ತು ಉಚ್ಚಾಟನೆಯ ನಂತರ ದೇಶಿಯ ಸೈನ್ಯದಲ್ಲಿ ಇಂತಹ ಬೆಳವಣಿಗೆಗಳು ಕಂಡು ಬಂದವೆಂದು ಆ ಪತ್ರಗಳಲ್ಲಿ ತಿಳಿದು ಬರುತ್ತದೆ. ಇಂತಹ ಪ್ರಯತ್ನಗಳ ಬಗ್ಗೆ ಮಾರ್ಲೇಗೆ ತಿಳಿಸುವ ಹಂತದಲ್ಲಿ 1857ರ ಸಿಪಾಯಿ ದಂಗೆಯ ವಜ್ರಮಹೋತ್ಸವದ ವರ್ಷವಾಗಿ ಆಂಗ್ಲೋ ಇಂಡಿಯನ್ ಸಮುದಾಯದಲ್ಲಿ ತಾನೇ ತಾನಾಗಿ ಸಾಂಕ್ರಾಮಿಕಗೊಂಡ ಸಮೂಹ ಸನ್ನಿಯ ಮನೋಸ್ಥಿತಿಯನ್ನು ಅತಿರೇಕಗೊಳಿಸಿದ್ದರಲ್ಲಿ ಅನುಮಾನವಿಲ್ಲ. ಆ ಸಂದರ್ಭಕ್ಕೆ ಲಜಪತ್‌ರಾಯ್ ಬಂಧನದ ಪರಿಸ್ಥಿತಿಯೂ ಪೂರಕವಾಗಿತ್ತು. ಭಾರತೀಯರಲ್ಲಿ ಸಹಜವಾಗಿ ಪ್ರತಿರೋಧ ಹುಟ್ಟಿತ್ತು. ದಂಡಿನಲ್ಲಿದ್ದ ಕೆಲವು ದೇಶಿಯ ತುಕಡಿಗಳಲ್ಲೂ ಅಸಮಾಧಾನಕ್ಕೆ ಕಾರಣವಾಗಿತ್ತು. ಅದು ಮಿಂಟೋ ಅವರಿಗೆ ರಾಜದ್ರೋಹ ಮತ್ತು ಅವಿಧೇಯತೆಯ ಸ್ಪಷ್ಟ ಸುಳಿವಾಗಿ ಕಂಡಿದ್ದರೆ ಅದಕ್ಕೆ ಅವರನ್ನು ಆವರಿಸಿದ್ದ ಆಂಗ್ಲೋ ಇಂಡಿಯನ್ನರ ಸಿಪಾಯಿ ದಂಗೆಯ ಸಮೂಹ ಸನ್ನಿಯ ಭೂತವೇ ಕಾರಣ.

* ಅದೇ ಪುಸ್ತಕದ ಪುಟ.151

ಮಿಂಟೋಯಿಂದ ಮಾರ್ಲೆಯವರಿಗೆ ಪತ್ರ ರವಾನೆಯಾಗುತ್ತಿದ್ದ ಸಂದರ್ಭದ ಇನ್ನೊಂದು ಬೆಳವಣಿಗೆಯೂ ನಮಗೆ ಇಲ್ಲಿ ಪ್ರಾಪ್ತವಾಗುತ್ತದೆ. ಹಬಿಬುಲ್ಲಾ ಮತ್ತು ಲಜಪತ್‌ರಾಯ್ ಅವರಿಗೆ ಸಂಬಂಧಪಟ್ಟ ಕುತೂಹಲಕಾರಿ ಕಥನ ಅದು.

''ಲಜಪತ್‌ರಾಯ್ ಮತ್ತು ಇತರ ಬಂಡಾಯಕಾರರು ಅಮೀರ್ ಜೊತೆ ನಡೆಸಿದ ಕೆಲವು ಪತ್ರ ವ್ಯವಹಾರಗಳ ಕುತೂಹಲಕಾರಿ ಸುಳಿವುಗಳು ನಮಗೆ ಸಿಕ್ಕಿವೆ. ಅಮೀರ್ ಬಗ್ಗೆ ಹೇಳುವುದಾದರೆ ಈ ಪತ್ರ ವ್ಯವಹಾರಗಳ ವಿಷಯದಲ್ಲಿ ನಾನು ಹೆಚ್ಚು ಒತ್ತು ಕೊಡಲಾರೆ. ಅಂತಹ ಪತ್ರಗಳನ್ನೆಲ್ಲಾ ಅವರು ಕಸದ ಬುಟ್ಟಿಗೆ ಹಾಕಿರುತ್ತಾರೆ. ಅವರು ಯಾವುದನ್ನಾದರೂ ಗೌರವಿಸುತ್ತಾರೆ ಎನ್ನುವುದಾದರೆ ನಮ್ಮೊಂದಿಗಿರುವ ಆಳವಾದ ಸ್ನೇಹವನ್ನು ಮಾತ್ರ...'' *

ಹೌದು. ಪರಂಗಿಯರು ಮತ್ತು ಹಬೀಬಲ್ಲಾ ನಡುವೆ ಸ್ನೇಹ ಅಷ್ಟು ಗಾಢವಾಗಿತ್ತೆಂಬುದು ನಿಜ. ಅಮೀರ್ ಭೇಟಿ ಕೊಟ್ಟಾಗ ವಿದೇಶಿ ಆಡಳಿತ ಖರ್ಚು ಮಾಡಿದ ಭಾರೀ ಮೊತ್ತ ಅದನ್ನು ಸಮರ್ಥಿಸುತ್ತದೆ. ಲಾರ್ಡ್ ಕರ್ಜನ್‌ರಿಗೆ ಸಹ ಅದೊಂದು ಭಾರೀ ದುಂದು ವೆಚ್ಚ ಎನಿಸಿತು!

* * *

---

* ಅದೇ ಪುಸ್ತಕದ ಪುಟ. 151.

ಅಧ್ಯಾಯ-26

ಮೋಹರಾದ ರೈಲು: ಗೊತ್ತು ಗುರಿಯಿಲ್ಲದ ಪಯಣ

ಉಚ್ಚಾಟನೆಯ ವಾರಂಟ್ ಹೊರಡಿಸಲಾಗಿತ್ತು. ಅದಕ್ಕನುಗುಣವಾಗಿ ತಮ್ಮನ್ನು ಬಂಧಿಸಲಾಗಿದೆ ಎಂದು ಅಂಗ್ರೇಜಿ ಅಧಿಕಾರಿಗಳು ಲಜಪತರಿಗೆ ತಿಳಿಸಿದರು. ಗುಟ್ಟಾಗಿ ಇಡಲ್ಪಟ್ಟ ನೆಲೆಯತ್ತ ಹೊರಡುವ ಮುನ್ನ ಯಾರನ್ನಾದರೂ ಭೇಟಿ ಮಾಡುವಿರಾ? ಎಂದು ಅವರನ್ನು ಕೇಳಲಾಯಿತು. ಲಜಪತರು ಖಡಾಖಂಡಿತವಾಗಿ ನಿರಾಕರಿಸಿದರು. ಮನೆಯಲ್ಲಿ ಯಾವುದೇ ರೀತಿಯ 'ದೃಶ್ಯ'ಗಳಿಗೆ ಅವಕಾಶವಾಗದೆ ನ್ಯಾಯಾಲಯದಲ್ಲಿ ಯಾವುದೇ ರೀತಿಯ 'ಗೊಂದಲ'ಕ್ಕೆ ಎಡೆ ಇಲ್ಲದ ಅಷ್ಟೊಂದು ವ್ಯವಸ್ಥಿತವಾಗಿ ನಡೆದ ತಮ್ಮ ಬಂಧನದ ಬಗ್ಗೆ ಲಜಪತರಲ್ಲಿ ಒಂದು ರೀತಿಯ ನೆಮ್ಮದಿ ಮೂಡಿತ್ತು. ತೊಟ್ಟ ವಸ್ತ್ರದಲ್ಲಿ ಅವರನ್ನು ವಸಾಹತುಶಾಹಿಗಳು ಬಂಧಿಸಿದ್ದರು. ಮನೆಯಿಂದ ಹಾಸಿಗೆ ತರಲು ಅಥವಾ ಉಡುಪು ಬದಲಾಯಿಸಿಕೊಂಡು ಬರಲು ಅವರಿಗೆ ಅವಕಾಶ ನೀಡಿರಲಿಲ್ಲ.

ಯಾವುದೇ ಪತ್ರಗಳನ್ನು ಯಾರಿಗಾದರೂ ಬರೆಯುವಿರಾ? ಎಂದು ಬಿಳಿಯ ಅಧಿಕಾರಿಗಳು ಕೇಳಿದ್ದನ್ನು ಲಜಪತರು ಸಂತೋಷದಿಂದಲೇ ಒಪ್ಪಿಕೊಂಡರು. ಅವರು ಎರಡು ಪತ್ರಗಳನ್ನು ಬರೆದರು. ಒಂದು ತಮ್ಮ ಗೆಳೆಯ ದ್ವಾರಕದಾಸರ ವಿಳಾಸಕ್ಕೆ. ಅದರಲ್ಲಿ ತಮ್ಮ ವೃತ್ತಿಗೆ ಸಂಬಂಧಪಟ್ಟ ಸೂಚನೆಗಳನ್ನು ನೀಡಿದ್ದರು. ತಮ್ಮಿಂದ ಅರ್ಧಕ್ಕೆ ನಿಂತಿರುವ ಕೆಲಸಗಳನ್ನು ಪೂರ್ಣಗೊಳಿಸಲು ಗೆಳೆಯನನ್ನು ಕೋರಿದರು. ಬದಲಾದ ವ್ಯವಸ್ಥೆಯನ್ನು ಯಾವುದೇ ಕಕ್ಷಿದಾರ ಒಪ್ಪಿಕೊಳ್ಳದಿದ್ದರೆ ಆತ ಸಂದಾಯ ಮಾಡಿದ ಫೀಸಿನ ಮೊತ್ತವನ್ನು ಮರಳಿಸಲು ಸ್ಪಷ್ಟವಾಗಿ ತಿಳಿಸಿದ್ದರು. ತಮ್ಮ ಬಳಿಯಲ್ಲಿದ್ದ ನೋಟುಗಳ ಒಂದು ಕಂತೆಯನ್ನು ಆ ಕಾಗದದ ಜೊತೆಯಲ್ಲಿಡಲು ಅವರು ಬಯಸಿದರು. ಆದರೆ ಹಣವನ್ನು ತಮ್ಮಲ್ಲೇ ಇಟ್ಟುಕೊಳ್ಳಬಹುದು ಎಂದು ಅಧಿಕಾರಿಗಳು ತಿಳಿಸಿದ್ದರಿಂದ ಅದನ್ನು ಮತ್ತೆ ಜೇಬಿನಲ್ಲಿ ಇಟ್ಟುಕೊಂಡರು. ತಮ್ಮ ವಿಷಯದಲ್ಲಿ ಕಂಗೆಡಬಾರದೆಂದು ತಮ್ಮ ನಾಳೆಗಳು ಭಗವಂತನ ಕೈಯಲ್ಲಿವೆ ಎಂದು, ಆಗುತ್ತಿರುವುದೆಲ್ಲಾ ಒಳ್ಳೆಯದಕ್ಕೆಂದು ಅವರು ಮಿತ್ರನಿಗೆ ಸಮಾಧಾನದ ಮಾತುಗಳನ್ನು ಬರೆದರು. ಇನ್ನೊಂದು ಪತ್ರ ಆ ಸಮಯದಲ್ಲಿ ಲಾಹೋರಿನಲ್ಲಿದ್ದ ತಮ್ಮ ಏಕಮಾತ್ರ ಪುತ್ರ ಪ್ಯಾರೇಲಾಲ್ ವಿಳಾಸದ್ದು.

"ಇದು ನಾನು ನಿರೀಕ್ಷಿಸಿದಂತೆ ಆಗಿರುವ ಬಂಧನ. ನನ್ನ ಗೈರುಹಾಜರಿಯ ದಿನಗಳಲ್ಲಿ ನೀನು ನನ್ನ ತಂದೆಗೆ ವಿಧೇಯನಾಗಿರು. ಅವರನ್ನು ಸಂತೈಸು. ಅವರಿಗೆ ಎಲ್ಲಾ ರೀತಿಯಲ್ಲಿಯೂ ಅನುಕೂಲವಾಗುವಂತೆ ನೋಡಿಕೊ." ಎಂದು ಹಿತವಚನ ನುಡಿದಿದ್ದರು. ಪೊಲೀಸರ ಮೂಲಕ ತಮಗೆ ಕೆಲವು ಬಟ್ಟೆಗಳನ್ನು, ಉಡುಪುಗಳನ್ನು, ಹಾಸಿಗೆಯ ವಸ್ತುಗಳನ್ನು ಕಳುಹಿಸುವಂತೆ ತಿಳಿಸಿದರು.

ನಂತರ ಡೆಪ್ಯುಟಿ ಕಮಿಷನರ್ ತಮ್ಮೊಂದಿಗೆ ಬರುವಂತೆ ಲಜಪತರಿಗೆ ತಿಳಿಸಿದರು. ಅವರ ಮೋಟಾರು ಕಾರನ್ನು ಅಲ್ಲೇ ಹೊರಗೆ ತಂದು ನಿಲ್ಲಿಸಲಾಯಿತು. ಜಿಲ್ಲಾಧಿಕಾರಿ ಮೌಂಟ್ ಸ್ವತಃ ಡ್ರೈವರ್ ಸೀಟಿನಲ್ಲಿ ಕುಳಿತರು. ಪೊಲೀಸ್ ಸುಪರಿಂಟೆಂಡೆಂಟ್ ರಂಡಲ್ ರಿವಾಲ್ವರ್ ಒಂದನ್ನು ಹಿಡಿದು ಅವರ ಪಕ್ಕದ ಮುಂದಿನ ಸೀಟಿನಲ್ಲಿ ಕುಳಿತರು. ಹಿಂದಿನ ಸಾಲಿನಲ್ಲಿ ಕೈದಿ. ಅವರ ಪಕ್ಕದಲ್ಲಿ ಓರ್ವ ಐರೋಪ್ಯ ಸಬ್ ಇನ್‌ಸ್ಪೆಕ್ಟರ್. ಅದೆಲ್ಲಾ ಪಕ್ಕಾ ಬಿಳಿಯರ ರಕ್ಷಣಾ ವ್ಯವಸ್ಥೆ. ಭಾರತೀಯ ಪೊಲೀಸ್ ಅಧಿಕಾರಿಗೆ ಅವಕಾಶವೇ ಇರಲಿಲ್ಲ. ಅಷ್ಟೊಂದು ರಹಸ್ಯದ ಏರ್ಪಾಟು. ಗೋಲ್‌ಬಾಗ್ ಮೂಲಕ ಅಪ್ಪರ್‌ಮಲ್ ಕಾಲುವೆ ಸೇತುವೆ ದಾಟಿ ದಂಡು ಪ್ರದೇಶ ಸೇರಿತು. ಅಲ್ಲಿ ಎಲ್ಲಿ ನೋಡಿದರೂ ಮಿಲಿಟರಿ ಬಂದೋಬಸ್ತ್. ವಿಶೇಷ ಪರಿಸ್ಥಿತಿಗೆ ಸಿದ್ಧತೆ ಮಾಡಿದಂತಿತ್ತು. ಯುದ್ಧಾಸ್ತ್ರ ವಾಹನಗಳ ಪೆರೇಡ್ ಸಹ ನಡೆದಿತ್ತು.

ಮೋಟಾರು ಕಾರು ಐರೋಪ್ಯ ಗಾರ್ಡ್ ಓರ್ವ ನಿಂತಿದ್ದ ಒಂದು ಸ್ಥಳದಲ್ಲಿ ನಿಂತಿತು. ಕೈದಿಗೆ ಕೆಳಗಿಳಿಯಲು ತಿಳಿಸಲಾಯಿತು. ಅಲ್ಲಿದ್ದ ಬಂದಿಖಾನೆ ಕೋಣೆಯೊಂದರ ಬೀಗ ತೆಗೆಯಲಾಯಿತು. ಅಂದು ಮೇ 9. ಸಂಜೆ 6ರತನಕ ಕೈದಿ ಆ ಕೋಣೆಯಲ್ಲಿ ಇರುವಂತೆ ಮಾಡಿದರು. ಅದರ ಹೊರಗೆ ಶಸ್ತ್ರಸಜ್ಜಿತರಾದ ಓರ್ವ ಬ್ರಿಟಿಷ್ ಸೈನಿಕ ಪಹರೆಗೆ ನಿಂತಿದ್ದ. ಕೈದಿಗಳನ್ನು ಆ ಕೋಣೆಯಲ್ಲಿ ಹಾಕಿದ ನಂತರ ತಿನ್ನಲು ಅಥವಾ ಕುಡಿಯಲು ಏನಾದರೂ ಬೇಕೇ? ಎಂದು ಡೆಪ್ಯುಟಿ ಕಮಿಷನರ್ ಮತ್ತು ಪೊಲೀಸ್ ಸುಪರಿಂಟೆಂಡೆಂಟ್ ಕೇಳಿದರು. 'ಬೇಡ, ಥ್ಯಾಂಕ್ಸ್' ಎಂಬ ಉತ್ತರ ಕೈದಿಯಿಂದ ಬಂದ ಮೇಲೆ ಅವರು ಅಲ್ಲಿಂದ ನಿರ್ಗಮಿಸಿದರು.

ತಮ್ಮನ್ನು ಬಂಧಿಸಿದ ಒಂದು ತಾಸು ತುಂಬುವ ಮೊದಲೇ ಲಜಪತರಿಗೆ ತಮ್ಮ ಒಂಟಿತನದ ಮನವರಿಕೆಯಾಯಿತು. ಭವಿಷ್ಯದ ಬಗ್ಗೆ ತಾವೊಬ್ಬರೇ ಚಿಂತಿಸಬೇಕೆನಿಸಿತು. ''ಟಾಮಿ ಆಟ್‌ಕಿನ್ಸ್‌ನ ಆ ಬಂದಿಖಾನೆ ಕೋಣೆಯಲ್ಲಿ ಮರದ ಹಾಸು ಬೆಂಚಿನ ಮೇಲೆ ಕುಳಿತು ನನ್ನನ್ನು ನಾನೇ ಆತ್ಮ ಪರೀಕ್ಷೆಗೆ ಒಳಪಡಿಸಿಕೊಂಡೆ.'' ತಮ್ಮ ಬಂಧನದ ಸಮಯದಲ್ಲಿ ತಂದೆಯಾಗಲಿ, ಪತ್ನಿಯಾಗಲಿ, ಮಕ್ಕಳಲ್ಲಿ ಯಾರೊಬ್ಬರಾಗಲಿ ಇರದೇ ಯಾವುದೇ ರೀತಿಯ 'ದೃಶ್ಯ' ಉಂಟಾಗದ ಬಗ್ಗೆ ತಮ್ಮ ಅದೃಷ್ಟವನ್ನು ತಾವೇ ಪ್ರಶಂಸಿಸಿಕೊಂಡರು. ಆ ದಿನದ ವೇಳೆಗೆ 'ನನ್ನ ತಾಯಿಯೂ ನಿಧನ ಹೊಂದಿದ್ದರು. ಅದಕ್ಕಾಗಿ ಭಗವಂತನನ್ನು ಅಭಿನಂದಿಸಿದೆ.'

ತಮ್ಮ ತಂದೆಯ ವಿಷಯದಲ್ಲಿ ಆಗಿನ ತಮ್ಮ ಆಲೋಚನೆಯನ್ನು ಲಜಪತರು ಹೀಗೆ ಬರೆದಿಟ್ಟಿದ್ದಾರೆ. ''ನಮ್ಮ ತಂದೆಯ ನಡವಳಿಕೆ ಮತ್ತು ದುಃಖದ ಸಂದರ್ಭಗಳಲ್ಲಿ ಅದನ್ನು ನಿಗ್ರಹಿಸುವ ಅವರ ಮನಸ್ಥಿತಿ, ಸ್ಥೈರ್ಯವಾಗಿರುತ್ತಿದ್ದನ್ನು ನಾನು ಮನಗಂಡಿದ್ದೆ. ನನ್ನ ಬಂಧನದ ಸಮಯದಲ್ಲೂ ಅದೇ ಚಿತ್ತಸ್ಥಿತಿ ಅವರಲ್ಲಿ ಇರುತ್ತದೆ ಎಂಬ ಬಲವಾದ ನಂಬಿಕೆ ನನ್ನಲ್ಲಿತ್ತು. ಹೀಗಾಗಿ ಅವರ ವಿಷಯದಲ್ಲಿ ಹೆಚ್ಚಿನ ಚಿಂತನೆಗೆ ನನ್ನಲ್ಲಿ ಎಡೆಯಾಗಲಿಲ್ಲ. ಇನ್ನು ನನ್ನ ಪತ್ನಿ ಮತ್ತು ಮಕ್ಕಳ ವಿಷಯ. ಅವರು ನನ್ನ ತಂದೆಯ ಪೋಷಕತ್ವದಲ್ಲಿ ಇದ್ದದ್ದರಿಂದ ಆ ಬಗ್ಗೆಯೂ ನನ್ನ ಮನಸ್ಸಿನಲ್ಲಿ ಹೆಚ್ಚಿನ ಕಳವಳಕ್ಕೆ ಕಾರಣವಾಗಲಿಲ್ಲ.''

ಹೀಗೆ ಕುಟುಂಬಕ್ಕೆ ಸಂಬಂಧಪಟ್ಟಂತೆ ತಮ್ಮ ಚಿಂತನೆಗಳನ್ನು ತಾವೇ ದೂರ ಮಾಡಿಕೊಂಡ ನಂತರ ಅವರ ಆತ್ಮವಿಶ್ಲೇಷಣೆ ಅವರ ದಾಖಲೆಯಲ್ಲೇ ಹೀಗೆ ಮುಂದುವರೆಯಿತು. "ಬಾಲ್ಯದಿಂದಲೂ ನಾನು ದೇವರಲ್ಲಿ ಪ್ರಬಲವಾದ ನಂಬಿಕೆ ಇಡುತ್ತಾ ಬಂದಿದ್ದರಿಂದ ಎಂತಹ ವಿಪತ್ತು ಬಂದರೂ ಆ ಪರಿಸ್ಥಿತಿಯನ್ನು ನಿಗ್ರಹಿಸಿಕೊಳ್ಳುವ ಶಕ್ತಿ ನನ್ನಲ್ಲಿ ಸಹಜವಾಗಿ ಬೆಳೆದಿತ್ತು. ಅಂತಹ ಸಂದರ್ಭಗಳಲ್ಲಿ ನನ್ನನ್ನು ನಾನೇ ಸ್ವಯಂ ವಿಶ್ಲೇಷಣೆಗೆ ಒಳಪಡಿಸಿಕೊಳ್ಳುತ್ತಿದ್ದೆ. ಅಂತಹ ಪ್ರತಿ ಹಂತದಲ್ಲೂ ನಾನು ಮಾನಸಿಕವಾಗಿ ಇನ್ನಷ್ಟು ದೃಢಗೊಳ್ಳುತ್ತಿದ್ದೆ. ನನ್ನ ಬದುಕಿನ ಬಗ್ಗೆ ಹಿಂದೆಂದಿಗಿಂತ ಹೆಚ್ಚಾಗಿ ಖಾತ್ರಿ ಹೊಂದುತ್ತಿದ್ದೆ. ಅಂತಹ ಪರಿಸ್ಥಿತಿಗಳಲ್ಲಿ ನನ್ನ ಆ ಸೃಷ್ಟಿಕರ್ತನಿಗೆ ಪ್ರಾರ್ಥನೆ ಸಲ್ಲಿಸಿ ನನ್ನ ಆತ್ಮ ಪರಿಶೋಧನೆಯನ್ನು ಪರಿಸಮಾಪ್ತಗೊಳಿಸಿಕೊಳ್ಳುತ್ತಿದ್ದೆ. ನನಗೆ ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುವ ಶಕ್ತಿ ಕೊಡುವಂತೆ, ಉದಾತ್ತ ಮನೋಧರ್ಮಿಯಾಗಿ ಬದುಕುವಂತೆ, ನನ್ನ ಕರ್ತವ್ಯದ ನಿರ್ವಹಣೆಯ ಪ್ರಜ್ಞೆ ಕೊಡುವಂತೆ, ಅರಿತೋ ಅರಿಯದೆಯೋ ಉದ್ರೇಕಕ್ಕೆ ಒಳಗಾಗದಂತೆ, ದೇಶಕ್ಕಾಗಿ ಸಲ್ಲಿಸಬಯಸುವ ಕರ್ತವ್ಯ, ಸೇವೆಯಲ್ಲಿ ಕಿಂಚಿತ್ತೂ ಅಪಚಾರವಾಗದಂತೆ, ಯಾವುದೇ ಸಂದರ್ಭದಲ್ಲೂ ನನ್ನ ಸಮಾಜಕ್ಕೆ ಅಪಚಾರವಾಗುವಂತಹ ಕೆಲಸಗಳನ್ನು ನನ್ನಿಂದ ಮಾಡಿಸದಂತೆ ರಕ್ಷಿಸಿ ಕಾಪಾಡಲು ನಾನು ಮೊರೆ ಇಡುತ್ತಿದ್ದೆ."

ಆ ಕೋಣೆಯಲ್ಲಿದ್ದುಕೊಂಡೇ ಅವರು ಬ್ರಿಟಿಷ್ ಸರ್ಕಾರದ ನಡವಳಿಕೆಗಳನ್ನು ಚಿಂತಿಸುತ್ತಾ ತಮ್ಮಲ್ಲೇ ತಾವು ನಕ್ಕರು. "ಈ ಸರ್ಕಾರಕ್ಕೆ ಜನರ ಧೋರಣೆ ಏನೆಂಬುದು ಚೆನ್ನಾಗಿ ತಿಳಿದಿದೆ. ಆದರೂ ಅದು ಅರೆಬರೆ ಮಾಹಿತಿ ನೀಡುವ ಮಾಹಿತಿಗಾರರಿಂದ ಅಷ್ಟೊಂದು ಹೀನಾಯವಾಗಿ ದಾರಿ ತಪ್ಪುತ್ತಿದ್ದದ್ದು ನನಗೆ ಆಶ್ಚರ್ಯ ತರುತ್ತಿತ್ತು. ಅದೇನೇ ಇರಲಿ, ಅದೆಲ್ಲದರ ಹಿಂದೆ ಭಗವಂತನನ್ನು ನಾನು ಕಾಣುತ್ತಿದ್ದೆ. ನನ್ನ ಮಾತೃಭೂಮಿಯ ಕ್ಷಿತಿಜದ ಮೇಲೆ ದಟ್ಟೈಸಿದ ಕಾರ್ಮೋಡಗಳ ಮಧ್ಯೆಯೂ ಬೆಳ್ಳಿಯ ಹೊಳಪು ನನಗೆ ಕಾಣುತ್ತಿತ್ತು. ಅಷ್ಟೊಂದು ದೀರ್ಘ ಕಾಲದಿಂದ ನನ್ನ ದೇಶಕ್ಕೆ ದಾಸ್ಯದ ಶೃಂಖಲೆಗಳನ್ನು ತೊಡಿಸಿದ ಶತ್ರುಗಳಿಗೆ ಪಾರ್ಶ್ವವಾಯು ಬಡಿಯುತ್ತಿದ್ದನ್ನು ನಾನು ಕಂಡೆ." "ಸಂಜೆ 6ರ ಸಮಯ. ಜೈಲಿನ ಅಧಿಕಾರಿ ನಾನಿದ್ದ ಕೊಠಡಿಗೆ ಹಾಕಿದ್ದ ಬೀಗವನ್ನು ತೆಗೆಯುತ್ತಿದ್ದದ್ದು ನನಗೆ ಕೇಳಿಸಿತು. ಬಾಗಿಲನ್ನು ತೆಗೆಯಲಾಯಿತು. ಅಲ್ಲಿ ರಂಡಲ್‌ರನ್ನು ಕಂಡೆ. ಅವರ ಜೊತೆ ಮತ್ತೊಬ್ಬ ಐರೋಪ್ಯ ಅಧಿಕಾರಿ ಇದ್ದ. ಇನ್ನೊಬ್ಬ ಮುಸ್ಲಿಂ ಪೊಲೀಸ್ ಇನ್‌ಸ್ಪೆಕ್ಟರ್ ಅಥವಾ ಸಬ್ ಇನ್‌ಸ್ಪೆಕ್ಟರ್ ಇರಬಹುದು."

ಲಾಹೋರ್ ದಂಡು ಪ್ರದೇಶದ ಪಶ್ಚಿಮ ಠಾಣೆಯನ್ನು ಆ ದಿನಗಳಲ್ಲಿ ಮಿಯಾನ್ ಮೀರ್ ಎಂದು ಕರೆಯಲಾಗುತ್ತಿತ್ತು. ರಂಡಲ್ ತನ್ನ ಕೈದಿಯನ್ನು ಮಿಲಿಟರಿ ವಾಹನದಲ್ಲಿ ಅಲ್ಲಿಗೆ ಕರೆದೊಯ್ದ. ನಿಲ್ದಾಣದಲ್ಲಿ ವಿಶೇಷ ರೈಲೊಂದು ಸಜ್ಜಾಗಿತ್ತು. ಪತ್ರಗಳನ್ನು ತಲುಪಿಸಿರುವುದಾಗಿ ರಂಡಲ್ ತನ್ನ ಕೈದಿಗೆ ತಿಳಿಸಿ ವಿದಾಯ ಹೇಳಿದ. ರೈಲಿನ ಶಿಳ್ಳೆ ಕೂಗಿತು. ಲಜಪತ್‌ರಾಯ್ ಮನಸ್ಸಿನಲ್ಲೇ ತಮ್ಮ ಲಾಹೋರಿಗೆ ನಮಿಸಿ, ತಮಗೆ ತಾವೇ ಬೀಳ್ಕೊಂಡರು. ಅವರೇ ದಾಖಲೆ ಮಾಡಿಟ್ಟಿರುವಂತೆ, "ಅದು ಲಾಹೋರಿಗೆ ನಾನು ಸಲ್ಲಿಸುವ ಕಟ್ಟಕಡೆಯ ವಿದಾಯ ಎಂದೆನಿಸಲಿಲ್ಲ." ಅವರ ಹೃದಯದಲ್ಲಿ ತಮ್ಮ

ಸ್ಥಿತಿ ನಾಮಧಾರಿ ಗುರುವಿಗಿಂತಲೂ ಭಿನ್ನವಾಗುವ ಆಶಯ ಇಣಕು ಹಾಕಿತ್ತು. ರಾಜಕೀಯ ಕೈದಿಗಳಿಗೆ ಸಾಮ್ರಾಜ್ಯಷಾಹಿ ಬ್ರಿಟಿಷ್ ಅಧಿಕಾರಿಗಳು ಕೊಡುತ್ತಿದ್ದ ಸಣ್ಣಪುಟ್ಟ ಕಿರುಕುಳಗಳು ಸಹ ಲಜಪತರಿಗೆ ಮನದಟ್ಟಾಗತೊಡಗಿತು. ಅವರ ಬೆಂಗಾವಲಿಗೆ ಇದ್ದ ಪೊಲೀಸ್ ದಳದ ಮುಖ್ಯಾಧಿಕಾರಿ ಓರ್ವ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್. ರೈಲು ತಿರುಗುತ್ತಿದ್ದಂತೆಯೇ ಆ ಅಧಿಕಾರಿ ಲಜಪತ್‌ರಾಯ್ ಇದ್ದ ಬೋಗಿಗೆ ಬಂದ. ಅವರ ಎದುರಿನಲ್ಲಿ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್‌ನೋರ್ವ ಲಜಪತರನ್ನು ಮತ್ತೆ ಶೋಧಿಸಿದ. ಅವರ ಜೇಬಿನಲ್ಲಿದ್ದ ನೋಟುಗಳ ಕಂತೆ, ಅವರ ಚಿನ್ನದ ಗಡಿಯಾರ ಮತ್ತು ಅದರ ಚೈನುಗಳನ್ನು ತೆಗೆದುಕೊಂಡ. ಆ ಪ್ರಯಾಣ ಮುಗಿಯುವತನಕ ಆ ವಸ್ತುಗಳನ್ನು ಜತನವಾಗಿಡುವುದಾಗಿ ತಿಳಿಸಲಾಯಿತು. ಪೊಲೀಸ್ ಅಧಿಕಾರಿ ಆ ನಡವಳಿಕೆಗಾಗಿ ವಿಷಾದ ವ್ಯಕ್ತಪಡಿಸುತ್ತಾ -''ನಿಮ್ಮ ವಿರುದ್ಧ ಬಲವಂತದ ಒತ್ತಡದ ಮೇರೆಗೆ ಕ್ರಮಗಳನ್ನು ನಡೆಸಬೇಕಾಯಿತು.'' ಎಂದ. ''ಸ್ವಯಂ ರಕ್ಷಣೆಗಾಗಿ ಈ ಕೆಲಸ ಅನಿವಾರ್ಯವಾಯಿತು'' ಎಂದೂ ಆತ ವಿವರಿಸಿದ.

ಸರ್ಕಾರವು ತಮ್ಮನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವುದಾಗಿ ಭರವಸೆ ನೀಡಿದೆ ಎಂದು ಆ ಪೊಲೀಸ್ ಅಧಿಕಾರಿ ಲಜಪತರಿಗೆ ತಿಳಿಸಿದ. ತಾವು ಲಾಹೋರ್ ನಗರಿಗೆ ಕಟ್ಟಕಡೆಯ ವಿದಾಯ ಹೇಳುತ್ತಿಲ್ಲ ಎನ್ನಬಹುದಾದ ಕೆಲವು ಸುಳಿವುಗಳನ್ನು ಸಹ ಆ ಅಧಿಕಾರಿ ನೀಡಿದ. ಉನ್ನತ ಪೊಲೀಸ್ ಅಧಿಕಾರಿಯಾಗಿ ಸರ್ಕಾರದ ರಹಸ್ಯ ನೀತಿಗಳನ್ನು ಹಾಗೆ ಬಹಿರಂಗ ಪಡಿಸಬಾರದು. ಆದರೆ ಆ ಅಧಿಕಾರಿ ತನ್ನ ಕರ್ತವ್ಯವನ್ನು ಉಲ್ಲಂಘಿಸಿ ಆ ಸುಳಿವುಗಳನ್ನು ನೀಡಿದ್ದ.

ಅಷ್ಟೇ ಅಲ್ಲದೇ ಆ ಪೊಲೀಸ್ ಅಧಿಕಾರಿಯು ಲಜಪತ್ ಅವರಿಗೆ ಕೆಲವು ಸೂಚನೆಗಳನ್ನು ನೀಡಿ ನಿಮಗೆ ಇಷ್ಟವಾದ ಆಹಾರವನ್ನು ತೆಗೆದುಕೊಳ್ಳಬಹುದು ಎಂದೂ ತಿಳಿಸಿದ. ಬೆಂಗಾವಲು ಪಡೆಯಲ್ಲಿ ಹಿಂದೂ ಪೊಲೀಸ್ ಪೇದೆಗಳಿದ್ದಾರೆಂದೂ ಅಗತ್ಯ ಕಾರ್ಯಗಳಿಗೆ ಅವರ ನೆರವು ಪಡೆಯಬಹುದೆಂದೂ, ಅವರಿಗೆ ಸೂಕ್ತವಾದ ಆದೇಶ ಕೊಡಲಾಗಿದೆ ಎಂದೂ ಆತ ತಿಳಿಸಿದ. ಪ್ರಯಾಣದ ಉದ್ದಕ್ಕೂ ಎಲ್ಲವೂ ಹಾಗೆಯೇ ನಡೆಯಿತು. ಕೈದಿ ಲಜಪತರನ್ನು ಚೆನ್ನಾಗಿ ನೋಡಿಕೊಳ್ಳಲಾಯಿತು.

ಮೊಘಲ್ ಸರಾಯ್‌ಯಲ್ಲಿ ಕೈದಿಗೆ ಬಟ್ಟೆಗಳನ್ನು ಬದಲಾಯಿಸಲಾಯಿತು. ಹಾಸಿಗೆ ವ್ಯವಸ್ಥೆಯನ್ನು ಮಾಡಲಾಯಿತು. ಅವರ ಬಟ್ಟೆ ಮತ್ತು ಹಾಸಿಗೆ ವಸ್ತುಗಳು ಲಾಹೋರಿನಿಂದಲೂ ಅದೇ ರೈಲಿನಲ್ಲಿ ಸಾಗುತ್ತಾ ಬಂದಿತ್ತಾದರೂ ಆತನಕ ಅವುಗಳನ್ನು ಅವರಿಗೆ ಕೊಟ್ಟಿರಲಿಲ್ಲ. ಓರ್ವ ಇನ್‌ಸ್ಪೆಕ್ಟರ್ ಅಲ್ಲಿನ ಸಿದ್ಧ ಉಡುಪುಗಳ ಅಂಗಡಿಯೊಂದರಿಂದ ಒಂದು ಶರ್ಟ್ ಮತ್ತು ಒಂದು ಪೈಜಾಮ ಖರೀದಿಸಿ ತಂದುಕೊಟ್ಟ. ಆ ರೈಲಿಗೆ ಎಲ್ಲಾ ಕಡೆಗಳಲ್ಲೂ ನಿಲುಗಡೆ ನೀಡುತ್ತಿರಲಿಲ್ಲ. ವಿಶೇಷ ರೈಲ್ವೆ ಮಂಡಳಿಯ ರೈಲು ಅದೆಂದು ರೈಲ್ವೆ ಸಿಬ್ಬಂದಿಗೆ ತಿಳಿಸಲಾಗಿತ್ತು. ಎಲ್ಲೆಲ್ಲಿ ರೈಲು ನಿಲ್ಲುತ್ತದೆಯೋ ಅಲ್ಲೆಲ್ಲಾ ಬೆಂಗಾವಲು ಪಡೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿತ್ತು. ಕಾರಣ ಆ ಪಡೆಯಲ್ಲಿ ಓರ್ವ ಮುಸ್ಲಿಂ ಇನ್‌ಸ್ಪೆಕ್ಟರ್, ಅರ್ಧ ಡಜನ್ ಮುಸ್ಲಿಂ ಪೇದೆಗಳು, ಓರ್ವ ಹಿಂದೂ ಸಾರ್ಜಂಟ್ ಮತ್ತು ಓರ್ವ ಹಿಂದೂ ಪೇದೆ ಇದ್ದರು.

"ಪಂಜಾಬ್ ಬಿಡುವತನಕ ರೈಲಿನ ಆ ಬೋಗಿಯ ಎಲ್ಲಾ ಕಿಟಕಿ ಬಾಗಿಲುಗಳನ್ನು ಭದ್ರಪಡಿಸಲಾಗಿತ್ತು. ಔದ್ ಹಾಗೂ ರೋಹಿಲ್‌ಖಂಡ್ ರೈಲ್ವೆ ವಿಭಾಗದಲ್ಲಿ ಸಾಗುವಾಗ ಕಿಟಕಿಗಳನ್ನು ತೆರೆಯಲು ನನಗೆ ಅವಕಾಶ ನೀಡಲಾಯಿತು" ಎಂದು ಲಜಪತರು ಬರೆದಿಟ್ಟಿದ್ದಾರೆ. ಹಗಲಿನ ಉಷ್ಣಾಂಶ ಜಾಸ್ತಿ ಇದ್ದರೂ ಪ್ರಯಾಣ ಮುಜುಗರದ್ದು ಎಂದು ಕೈದಿಗೆ ಅನಿಸಲಿಲ್ಲ. ಆ ಬೋಗಿಯಲ್ಲಿ ಒಂದು ಫ್ಯಾನ್ ಮತ್ತು ಬಿಸಿಗಾಳಿಯನ್ನು ಹೊರದೂಡುವ ಫ್ಯಾನ್‌ವೊಂದನ್ನು ಅಳವಡಿಸಲಾಗಿತ್ತು. ಆ ವೇಳೆಗೆ ಲಜಪತರ ಮನಸ್ಥಿತಿ ಒಂದು ಹಂತಕ್ಕೆ ಬಂದಿತ್ತು. "ಅನೇಕ ವರ್ಷಗಳಿಂದ ನಾನು ಸರಿಯಾಗಿ ನಿದ್ದೆ ಬಾರದ ಮನಸ್ಥಿತಿಯಿಂದ ನರಳುತ್ತಿದ್ದೆ. ಆಗ ನನ್ನ ಮನಸ್ಸಿನ ಮೇಲಾದ ವಿಚಿತ್ರ ಪರಿವರ್ತನೆಯಿಂದಾಗಿ ಆ ರಾತ್ರಿ ನನಗೆ ಒಳ್ಳೆಯ ನಿದ್ದೆ ಹತ್ತಿತು. ನನ್ನ ಬೆಂಗಾವಲಿಗರು ನನಗೆ ಬಿಸಿ ಹಾಲು ಕೊಡಲು ಪಿಲೋರ್‌ನಲ್ಲಿ ಎಚ್ಚರಿಸಿದಾಗಲೇ ಬೆಳಗಾಗಿದ್ದರ ಅರಿವಾಗಿದ್ದು."

ಆ ದಿನ ಡೈಮಂಡ್ ಹಾರ್ಬರ್ ತಲುಪುವುದರೊಂದಿಗೆ ರೈಲ್ವೆ ಪ್ರಯಾಣ ಮುಕ್ತಾಯಗೊಂಡಿತು. ಪ್ರಧಾನ ಪೊಲೀಸ್ ಅಧಿಕಾರಿ ಲಜಪತರ ಬಳಿಗೆ ಬಂದು ತಾವು ಎಲ್ಲಿದ್ದೀರಿ ಎಂಬುದು ತಮಗೆ ಗೊತ್ತೇ? ಎಲ್ಲಿಗೆ ಹೋಗುತ್ತಿರುವಿರಿ ಎಂಬುದನ್ನು ಊಹಿಸಬಲ್ಲಿರಾ? ಎಂದು ಪ್ರಶ್ನಿಸಿದರು. ಹಿಂದೊಮ್ಮೆ ಅಲ್ಲಿಗೆ ಬಂದಿದ್ದರಿಂದ ಆ ನಿಲ್ದಾಣ ಗೊತ್ತೆಂದು ಕೈದಿ ಉತ್ತರಿಸಿದರು. ಬಹುಶಃ ತಮ್ಮನ್ನು ರಂಗೂನ್ ಅಥವಾ ಮಾಂಡೇಲೆಗೋ ಕರದೊಯ್ಯುತ್ತಿರಬಹುದೆಂದು ಅವರು ಹೇಳಿದರು. ಕೈದಿಗೆ ಆಶ್ಚರ್ಯವಾಗಿತ್ತು. ಕಾರಣ ಆತನಕ ತಮ್ಮನ್ನು ಎಲ್ಲಿಗೆ ಕರದೊಯ್ಯಲಾಗುತ್ತಿದೆ ಎಂಬ ಸುಳಿವೂ ಸಿಕ್ಕಿರಲಿಲ್ಲ. ತಮ್ಮ ಪ್ರಯಾಣದ ಗೊತ್ತುಗುರಿಯನ್ನು ಅಷ್ಟೊಂದು ರಹಸ್ಯವಾಗಿ ಕಾಪಾಡಿಕೊಂಡು ಬರಲಾಗಿತ್ತು.

ಡೈಮಂಡ್ ಹಾರ್ಬರ್‌ನಲ್ಲಿ ಸ್ಟೀಮ್ ದೋಣಿಯೊಂದರಲ್ಲಿ ಲಜಪತರು ಮತ್ತು ಅವರ ಬೆಂಗಾವಲು ಪಡೆಯನ್ನು ಸರ್ಕಾರಿ ಹಡಗು 'ಗೈಡ್'ಗೆ ಕರದೊಯ್ಯಲಾಯಿತು. ರೈಲ್ವೆ ನಿಲ್ದಾಣವನ್ನು ಬಿಡುವ ಮೊದಲು ವಾರಂಟ್ ಸ್ವೀಕರಿಸಿದ್ದಕ್ಕೆ ಗುರುತಾಗಿ ಕೈದಿಯ ಹೆಬ್ಬೆರಳ ಗುರುತನ್ನು ದಾಖಲೆ ಮೇಲೆ ಹಾಕಿಸಿಕೊಳ್ಳಲಾಯಿತು. ತನ್ನ ಜನರಿಗೆ ತಂತಿ ಸಂದೇಶ ಕೊಡಬಹುದೇ ಎಂದು ಅವರು ಕೇಳಿದರು. ಅದಕ್ಕೆ ಅವಕಾಶ ಸಿಗಲಿಲ್ಲ. ಆದರೆ ಪತ್ರಗಳನ್ನು ಬರೆಯಲು ಅವಕಾಶ ನೀಡಲಾಯಿತು. ತಂದೆಗೆ ಪತ್ರ ಬರೆದರು. ಅದು ಅವರಿಗೆ ತಲುಪಲಿಲ್ಲ ಎಂಬುದು ಮುಂದಿನ ಮಾತು. ಇನ್ನೊಂದು ಪತ್ರ ಮಗ ಪ್ಯಾರೇಲಾಲ್‌ಗೆ ಬರೆದರು. "ಕಾಲ ಹೇಗೆ ಬರುತ್ತದೆಯೋ ಅದನ್ನು ಅನುಭವಿಸಲು ಸಿದ್ಧವಾಗಿದ್ದೇನೆ. ದಯವಿಟ್ಟು ನೀನು ನಿನ್ನ ತಾಯಿ ಮತ್ತು ತಾತನನ್ನು ಚೆನ್ನಾಗಿ ನೋಡಿಕೊ. ಅವರಿಗೆ ವಿಧೇಯನಾಗಿರು. ಸಮಾಧಾನ ಹೇಳು. ನನ್ನ ವಿಧವಾ ಸಹೋದರಿ ಬಗ್ಗೆ ಹೆಚ್ಚು ಲಕ್ಷ್ಯವಿಡು. ಆಕೆಯ ಪುಟ್ಟ ಮಗನನ್ನು ಆರೈಕೆ ಮಾಡು. ನಿನ್ನ ಚಿಕ್ಕಪ್ಪಂದಿರೊಂದಿಗೆ ಅನುರಾಗದಿಂದಿರು. ನಿನ್ನ ದುರಾದೃಷ್ಟವನ್ನು ಮಾನವ ಸಹಜ ಶಕ್ತಿಯಿಂದ ಎದುರಿಸು."

ಪಂಜಾಬಿನಿಂದ ಬಂದಿದ್ದ ಪೊಲೀಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಕರ್ತವ್ಯ ಅಲ್ಲಿಗೆ ಮುಗಿಯಿತು. ಬಂಗಾಳದ ಹಿರಿಯ ಪೊಲೀಸ್ ಅಧಿಕಾರಿಗೆ ಜವಾಬ್ದಾರಿಯನ್ನು ಹಸ್ತಾಂತರಿಸಿದರು. ಕೈದಿಯ ಒಂದು ಚಿಟಿಕೆ ಛಾಯಚಿತ್ರವನ್ನು ತೆಗೆದುಕೊಂಡರು. ದೋಣಿಗೆ

ಅವರನ್ನು ಹತ್ತಿಸಿ ವಿದಾಯ ಹೇಳಿದರು. ಕಡೆಯದಾಗಿ ಆ ಅಧಿಕಾರಿ ಹೇಳಿದ ಮಾತು ಮಾರ್ಮಿಕವಾಗಿತ್ತು. ''ನೀವು ಭಾರತವನ್ನು ಬಿಟ್ಟು ಹೋಗುತ್ತಿದ್ದೀರಿ; ಮರಳಿದ ನಂತರ ಭೇಟಿಯಾಗೋಣ.''

ಆದರೆ ಕೈದಿಯ ಬೆಂಗಾವಲಿಗೆ ಬಂದಿದ್ದ ಪಂಜಾಬಿನ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಪೊಲೀಸ್ ಪೇದೆಗಳು ಪ್ರಯಾಣ ಮುಂದುವರಿಸಿದರು. ಬಂಗಾಳದ ಹೊಸ ಪೊಲೀಸ್ ಅಧಿಕಾರಿ ಲಜಪತರ ವಿಷಯದಲ್ಲಿ ಸಮಂಜಸವಾಗಿ ನಡೆದುಕೊಳ್ಳಲಿಲ್ಲ. ಆ ಅಧಿಕಾರಿ ಇನ್‌ಸ್ಪೆಕ್ಟರ್‌ಗೆ ನಿಷ್ಠನಾಗಿದ್ದ. ಹೀಗಾಗಿ ಲಜಪತರಿಗೆ ಪಂಜಾಬಿನಿಂದ ಬಂದ ಅಧಿಕಾರಿಯಿಂದ ದೊರೆತಷ್ಟು ಅನುಕೂಲ, ಉಪಚಾರಗಳು ಈ ಅಧಿಕಾರಿಯಿಂದ ಪ್ರಾಪ್ತವಾಗಲಿಲ್ಲ.

ಹಡಗಿನಲ್ಲಿ ಲಜಪತರಿಗೆ ಬಿಡಾರ ಒದಗಿಸುವ ವಿಷಯದಲ್ಲಿ ಅಡ್ಡಿ ಉಂಟಾಯಿತು. ಸರಕು ಇಡುವ ಅಟ್ಟದ ಕೆಳಗೆ ಖಾಲಿ ಜಾಗವನ್ನು ತೋರಿಸಿ ಅಲ್ಲಿ ಇರುವಂತೆ ಕ್ಯಾಪ್ಟನ್ ತಿಳಿಸಿದ. ಹಡಗಿನಲ್ಲಿ ಅಷ್ಟೇ ಜಾಗ ಲಭ್ಯವೆಂದು ಹೇಳಿದ. ಆದರೆ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್ ಕ್ಯಾಪ್ಟನ್‌ನನ್ನು ಸ್ವಲ್ಪ ಪಕ್ಕಕ್ಕೆ ಕರೆದು ಮಾತನಾಡಿದ. ಅದರ ಫಲವಾಗಿ ಎರಡು ಕೋಣೆಗಳನ್ನು ಒದಗಿಸಲಾಯಿತು. ಅವುಗಳಲ್ಲಿ ಒಂದನ್ನು ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್ ತನಗೆ ಇಟ್ಟುಕೊಂಡ. ಇನ್ನೊಂದನ್ನು ಐರೋಪ್ಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗೆ ಕೊಟ್ಟ. ಲಜಪತರು, ಮುಸ್ಲಿಂ ಸಬ್ ಇನ್‌ಸ್ಪೆಕ್ಟರ್ ಮತ್ತು ಪೇದೆಗಳಿಗೆ ಕತ್ತಲೆ ಕೋಣೆಯಂತಹ ಜಾಗವೊಂದನ್ನು ಕೊಡಲಾಯಿತು. ಅಲ್ಲಿ ಗಬ್ಬುವಾಸನೆ ಹೊಡೆಯುತ್ತಿತ್ತು. ಮನುಷ್ಯ ಮಾತ್ರದವರು ಉಳಿದುಕೊಳ್ಳಲು ಯೋಗ್ಯವಲ್ಲದ ಜಾಗದಂತಿತ್ತು ಅದು. ಆ ಜಾಗದಲ್ಲೇ ಅನುಕೂಲ ಮಾಡಿಕೊಡಲು ಅವರಿಗೆ ತಿಳಿಸಲಾಯಿತು. ಲಜಪತರು ಅದನ್ನು ಒಪ್ಪಲಿಲ್ಲ. ತಮ್ಮ ಹಕ್ಕನ್ನು ಪ್ರತಿಪಾದಿಸಿದರು. ತಮ್ಮ ಜೀವನ ರೀತಿಗೆ ಅನುಗುಣವಾಗಿ ಸರ್ಕಾರ ಸಮಂಜಸ ವ್ಯವಸ್ಥೆಗೆ ಒತ್ತಾಯಿಸಿಲ್ಲವೆಂದು ಅವರು ಪ್ರತಿಭಟಿಸಿದರು. ಇನ್‌ಸ್ಪೆಕ್ಟರ್‌ಗೆ ಅದರಿಂದ ಆತನ ಕರ್ತವ್ಯದ ಅರಿವಾಯಿತು.

''ಸ್ವಲ್ಪ ಸಮಯದವರೆಗೆ ಸರಕು ತುಂಬುವ ಅಟ್ಟದ ಕೆಳಗಿನ ಜಾಗದಲ್ಲಿ ಇರುವಂತೆಯೂ ಕ್ಯಾಪ್ಟನ್ ಜೊತೆ ಈ ಬಗ್ಗೆ ಮಾತನಾಡುವುದಾಗಿಯೂ ನನಗೆ ತಿಳಿಸಿದ.'' ವಾಸ್ತವದಲ್ಲಿ ಹಡಗಿನಲ್ಲಿ ಇತರ ಬಿಡಾರಗಳು ಲಭ್ಯವಿರಲಿಲ್ಲ. ಕ್ಯಾಪ್ಟನ್ ಅಸಹಾಯಕನಾಗಿದ್ದ. ಸುಮಾರು ಒಂದು ತಾಸಿನ ನಂತರ ಇನ್‌ಸ್ಪೆಕ್ಟರ್ ಲಜಪತರ ಬಳಿಗೆ ಬಂದು ಐರೋಪ್ಯ ಸಬ್ ಇನ್‌ಸ್ಪೆಕ್ಟರ್‌ಗೆ ಕೊಟ್ಟಿರುವ ಕೋಣೆಯನ್ನು ಬಳಸಿಕೊಳ್ಳಲು ತಿಳಿಸಿದ. ''ಹಡಗನ್ನು ಹತ್ತಿದಾಗಿನಿಂದ ನಾನು ಹಡಗುಕಟ್ಟೆಯಲ್ಲೇ ಇರುತ್ತಾ ಬಂದಿದ್ದೇನೆ. ನನಗೆ ಈ ಜಾಗವೇ ಸಮ್ಮತವಾಗಿರುವುದರಿಂದ ಆ ಕೋಣೆಯ ಅಗತ್ಯವಿಲ್ಲವೆಂದು ನಾನು ಆತನಿಗೆ ತಿಳಿಸಿದೆ.''

ಆ ಸ್ಟೀಮ್ ಹಡಗು 'ಗೈಡ್' ಹಾರ್ಬರ್‌ನ್ನು 12ರ ಮಧ್ಯಾಹ್ನ ಬಿಟ್ಟಿತು. ನಾನು ಸೇರಬೇಕಾಗಿದ್ದ ರಂಗೂನ್‌ನ್ನು 15ರ ಮಧ್ಯಾಹ್ನ ಮುಟ್ಟಿತು. ಸಮುದ್ರದ ಮಾರ್ಗ ಮಧ್ಯೆ ಅದು ಪ್ರತಿಕೂಲ ಹವಾಮಾನವನ್ನು ಎದುರಿಸಬೇಕಾಯಿತು. ರಂಗೂನ್‌ನಲ್ಲಿ ಲಂಗರು ಹಾಕಿದಾಗ ಮಳೆ ಸುರಿಯುತ್ತಿತ್ತು. ಅದರ ಕ್ಯಾಪ್ಟನ್‌ನು ಆ ವಿಚಿತ್ರ ಹವಾಮಾನದಷ್ಟೇ

ಒರಟ. ತನ್ನ ಹಡಗಿನಲ್ಲಿದ್ದ ಕೈದಿ ಯಾರೆಂಬುದನ್ನು ಅರಿತ ನಂತರ ಒಂದೆರಡು ಬಾರಿ ರಾಜಕೀಯವಾಗಿ ಲಜಪತರೊಂದಿಗೆ ಮಾತನಾಡಲು ಪ್ರಯತ್ನಿಸಿದ.

'ವಂದೇ ಮಾತರಂ' ಜನತೆಯ ಬಗ್ಗೆ ಅವನು ಕೆಟ್ಟದಾಗಿ ಮಾತನಾಡಿ ಬೈಯ್ಗಳ ಹಾಕತೊಡಗಿದಾಗ ಅದರಲ್ಲೂ ಸುರೇಂದ್ರನಾಥ ಬ್ಯಾನರ್ಜಿಯವರ ಬಗ್ಗೆ ಹೀನವಾಗಿ ಮಾತನಾಡತೊಡಗಿದಾಗ ನಾನು ಅವನೊಂದಿಗೆ ಸಂಭಾಷಿಸುವುದನ್ನು ಬಿಟ್ಟುಬಿಟ್ಟೆ. ಅಂತಹ ಮಾತುಗಳು ನನಗೆ ಹಿಡಿಸುವುದಿಲ್ಲವೆಂದು ಅವನಿಗೆ ಸ್ಪಷ್ಟವಾಗಿ ಹೇಳಿದೆ.'' ಎಂದು ಲಜಪತರು ಆ ಸಂದರ್ಭವನ್ನು ನಮೂದಿಸಿದ್ದಾರೆ.

ಆ ಕ್ಯಾಪ್ಟನ್‌ಗೆ ಸಹಜವಾಗಿ ಕೋಪ ಬಂದಿರಬೇಕು. ಅಡಿಗೆಯವನ ಮೇಲೆ ಕೈಮಾಡುವ ಮೂಲಕ ಅದನ್ನು ಪ್ರದರ್ಶಿಸಿದ. ಲಜಪತರ ಮೇಲೆ ಅದು ಯಾವುದೇ ಪರಿಣಾಮ ಬೀರಲಿಲ್ಲ. ಅವರು ಅವನೊಂದಿಗೆ ಮತ್ತೆ ಮಾತನಾಡಲಿಲ್ಲ. ಹಡಗಿನಲ್ಲಿದ್ದಾಗಲೂ ಸಹ ಐರೋಪ್ಯ ಪೋಲೀಸ್ ಇನ್‌ಸ್ಪೆಕ್ಟರ್ ಕೈದಿ ಬೆಂಗಾವಲಿಗೆ ಪೇದೆಗಳನ್ನು ನಿಯೋಜಿಸಿದ್ದ. ಅದನ್ನು ಕಂಡು ಲಜಪತರಿಗೆ ಆ ಸ್ಥಿತಿಯಲ್ಲಿಯೂ ನಗು ಬಂದಿತು. ನಗುತ್ತಲೇ ಆ ಇನ್‌ಸ್ಪೆಕ್ಟರ್‌ನಿಗೆ ಅವರು ತಮಗೆ ತಮ್ಮ ಪ್ರಾಣದ ಬಗ್ಗೆ ಸರ್ಕಾರ ಮತ್ತು ಅದರ ಅಧಿಕಾರಿಗಳಿಗಿಂತಲೂ ಹೆಚ್ಚು ಪ್ರಾಣದಾಸೆ ಇರುವುದರಿಂದ ತಪ್ಪಿಸಿಕೊಳ್ಳುವ ಪ್ರಮೇಯವೇ ಇಲ್ಲವೆಂದು ತಿಳಿಸಿದರು.

ಸ್ಟೀಮ್ ಹಡಗು ಬಂದರು ತಲುಪಿದ ನಂತರ ಕೈದಿಯನ್ನು ಗುಟ್ಟಾಗಿಡುವ ಕೆಲಸಕ್ಕೆ ಮತ್ತೆ ಒತ್ತು ಕೊಡಲಾಯಿತು. ಗೊತ್ತು ಪಡಿಸಿದ ಕೋಣೆಗೆ ಹೋಗುವಂತೆ ಲಜಪತರಿಗೆ ತಿಳಿಸಲಾಯಿತು. ಹಡಗಿನಲ್ಲಿ ಓಡಾಡುವ ಜನರ ದೃಷ್ಟಿಗೆ ಅವರು ಬೀಳಬಾರದೆಂದೂ ಪೋಲೀಸ್ ಕಮಿಷನರ್‌ರ ದೋಣಿ ಬರುವತನಕ ಅವರು ಆ ಕೊಠಡಿಯಲ್ಲೇ ಇರಬೇಕೆಂದು ನಿರ್ಬಂಧ ವಿಧಿಸಲಾಯಿತು. ಪೋಲೀಸ್ ಕಮಿಷನರ್‌ರ ದೋಣಿ ಬಂದ ಮೇಲೆ ಲಜಪತರು ಮತ್ತು ಅವರೊಂದಿಗೆ ಲಾಹೋರಿನಿಂದ ಬಂದ ಐರೋಪ್ಯ ಇನ್‌ಸ್ಪೆಕ್ಟರ್‌ರನ್ನು ಜೂಯಿನ್ ರೈಲು ನಿಲ್ದಾಣಕ್ಕೆ ಕರೆದೊಯ್ಯಲಾಯಿತು. ಅದು ರಂಗೂನ್ ಮುಖ್ಯ ರೈಲ್ವೆ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿದ್ದ ಸಣ್ಣ ಉಪನಗರದ ನಿಲ್ದಾಣವಾಗಿತ್ತು. ಲಜಪತರು ಈ ಹಿಂದೆ ಎಂದೂ ಬರ್ಮಾಕ್ಕೆ ಬಂದಿದ್ದವರಲ್ಲ. ತಾವು ಕುಳಿತಿದ್ದ ಗಾಡಿಯಿಂದ ಬರ್ಮಾ ಜನರನ್ನು ನೋಡತೊಡಗಿದರು. ಅವರ ಮುಖಲಕ್ಷಣ ಲಜಪತರಲ್ಲಿ ಕುತೂಹಲ ಕೆರಳಿಸಿತು. ಅವ್ಯಕ್ತ ವೇದನೆ ಅವರಲ್ಲಿ ಮೂಡಿತು. ಶ್ರೀಲಂಕಾವನ್ನು ಬಿಟ್ಟರೆ ಬೇರಾವುದೇ ಏಷ್ಯಾ ದೇಶವನ್ನು ಆತನಕ ನೋಡಿರಲೂ ಇಲ್ಲ.

''ಬರ್ಮಾದಲ್ಲಿ ನನಗೆ ಯಾವುದೋ ವಿಚಿತ್ರ ನಾಡಿನಲ್ಲಿದ್ದೇನೆ ಎಂದು ಅನಿಸಲಿಲ್ಲ. ಅಲ್ಲಿದ್ದ ಭಾರತೀಯರ ಮುಖಗಳನ್ನು ನೋಡಿದಾಗ ಪರಿಚಯದ ಭಾವನೆ ಉಂಟಾಗುತ್ತಿತ್ತು. ಅವರು ಹಿಂದೂಗಳೋ, ಮಹಮದೀಯರೋ, ಪಂಜಾಬಿಗಳೋ, ಬಂಗಾಳಿಗಳೋ, ಮದ್ರಾಸಿಗಳೋ ಯಾರೇ ಆಗಿದ್ದರೂ ಭಾರತೀಯರು ಎಂದೆನಿಸುತ್ತಿತ್ತು. ನನ್ನ ಪಾಲಿಗೆ ಅವರೆಲ್ಲರೂ ನನ್ನ ಜನರೇ ಆಗಿದ್ದರು. ಆ ಕಾಲದಲ್ಲಿ ಆತ್ಮೀಯವೂ, ಶಕ್ತಿಯುತವೂ ಆದ ಬಾಂಧವ್ಯವೊಂದು ನಮ್ಮನ್ನೆಲ್ಲಾ ಬೆಸುಗೆ ಹಾಕಿದಂತೆ ಕಂಡು ಬಂದಿತು.'' ಲಜಪತರ

ಹಿಂದೆ ಮುಂದೆ ಬೆಂಗಾವಲು ಭದ್ರವಾಗಿ ನಿಯೋಜಿಸಲಾಗಿತ್ತು. ಹಾಗೆ ಹೋಗುವಾಗ, ''ಒಳ್ಳೆಯ ಪೋಷಾಕು ಧರಿಸಿದ ಪಂಜಾಬಿಯೊಬ್ಬರು ನನ್ನ ಗುರುತು ಹಚ್ಚಿದರು. ಅವರ ಮುಖದಲ್ಲಿ ಆಗ ಉಂಟಾದ ನೋವು ಮತ್ತು ವ್ಯಥೆಯನ್ನು ನಾನು ಕ್ಷಣಾರ್ಧದಲ್ಲಿ ಗುರುತಿಸಿದೆ. ನನ್ನನ್ನು ಅವರು ನಗಿಸಿದರು. ನಾನು ನನ್ನ ಕಣ್ಣುಗಳಲ್ಲೇ ನಮಿಸಿದೆ.''

ಲಜಪತರು ಮತ್ತು ಅವರ ಬೆಂಗಾವಲು ಪಡೆಗಾಗಿ ಪ್ರಥಮ ದರ್ಜೆ ಬೋಗಿಯೊಂದನ್ನು ಕಾದಿರಿಸಲಾಗಿತ್ತು. ರೈಲಿನ ಮುಂಭಾಗದಲ್ಲಿದ್ದ ಬೋಗಿಗಳಲ್ಲಿ ಪೊಲೀಸ್ ಸಮವಸ್ತ್ರ ತೊಟ್ಟಿದ್ದ ಪಂಜಾಬ್ ಸಿಖ್ಖರಿದ್ದದ್ದನ್ನು ಲಜಪತರು ಗಮನಿಸಿದರು. ''ಅವರೆಲ್ಲರೂ ಬೋಗಿಯ ಕಿಟಕಿ ಮೂಲಕ ನನ್ನನ್ನು ನೋಡುತ್ತಿದ್ದರು. ನನ್ನೊಡನೆ ಮಾತನಾಡಲು ತವಕಿಸುತ್ತಿದ್ದರು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಆ ಬೋಗಿಗಳ ಕಿಟಕಿಗಳನ್ನು ಮುಚ್ಚಲಾಯಿತು. ದಾರಿಗುಂಟ ಲಜಪತರಿದ್ದ ಆ ಬೋಗಿಗಳ ಕಿಟಕಿಗಳನ್ನು ತೆರೆಯಲಿಲ್ಲ. ಹೊರಗಿನ ದೃಶ್ಯ ಕಾಣದಂತೆ ಅಥವಾ ಅವರು ಅಲ್ಲಿರುವುದು ಹೊರಗಿನವರಿಗೆ ತಿಳಿಯದಂತೆ ಬಲವಂತದ ಮರೆ ಮಾಡಲಾಗಿತ್ತು. ಆ ಪಯಣ ಅನನ್ಯವಾದದ್ದು. 'ನನ್ನ ಬೆಂಗಾವಲಿಗಿದ್ದ ಪೊಲೀಸ್ ಪಡೆಯ ಓರ್ವ ಮಹಮದೀಯ ಪೇದೆ ನನಗೆ ತೋರಿದ ಗೌರವ, ಆದರಗಳು ಅಪೂರ್ವ.' ಲಾಹೋರಿನಿಂದ ಮಾಂಡೇಲೆ ತಲುಪುವವರೆಗಿನ ಸುದೀರ್ಘ ಪ್ರಯಾಣವನ್ನೆಲ್ಲಾ ಲಜಪತರು ದಾಖಲೆ ಮಾಡಿದ್ದಾರೆ. ತಮ್ಮ ಬೆಂಗಾವಲಿನಲ್ಲಿದ್ದ ಪೇದೆಗಳಲ್ಲಿನ ಹಿಂದೂ ಮತ್ತು ಮಹಮದೀಯ ಪೊಲೀಸ್ ಪೇದೆಗಳು ತೋರಿದ ಗೌರವ ಮತ್ತು ಮನ್ನಣೆಗಳನ್ನು ಅವರು ವಿಶೇಷವಾಗಿ ನಮೂದಿಸಿದ್ದಾರೆ. ಹಡಗಿನ ಪಯಣದ ಕಾಲದಲ್ಲಂತೂ ಅವರು ನನ್ನೊಂದಿಗೆ 'ಮುಕ್ತವಾಗಿ' ಮಾತನಾಡಿದರು. ಆ ವಿವರಣೆಯಲ್ಲಿ ವಿಶೇಷವಾಗಿ ಅವರು ''ಓರ್ವ ಯುವ ಮಹಮದೀಯ ಪೇದೆ ನನ್ನ ಬಗ್ಗೆ ತೋರಿದ ಆತ್ಮೀಯತೆ ಅತ್ಯಂತ ಗಾಢವಾಗಿತ್ತು. ಆತ ಸುಂದರ ತರುಣ. ಅವನ ವ್ಯಕ್ತಿತ್ವವೇ ಆಕರ್ಷಕವಾಗಿತ್ತು. ಆ ಪೇದೆ ವ್ಯಕ್ತಪಡಿಸಿದ ನೋವುಗಳನ್ನು ಬರೆಯುತ್ತಾ, 'ತನ್ನ ದುರಾದೃಷ್ಟದ ಬಗ್ಗೆ ಅವನು ತೀರಾ ಪರಿತಪಿಸುತ್ತಿದ್ದ. ಕಣ್ಣೀರು ಇಡುತ್ತಿದ್ದ. ತನ್ನ ದೇಶ ಮತ್ತು ಜನರಿಗೆ ಒದಗಿರುವ ಸ್ಥಿತಿಯ ಬಗ್ಗೆ ಖಿನ್ನನಾಗುತ್ತಿದ್ದ.' ಆ ರೈಲು ಪ್ರಯಾಣದ ಸಮಯದಲ್ಲಿ ಬೆಂಗಾವಲು ಪಡೆಯ ಓರ್ವ ಲಜಪತರಿಗೆ ತನ್ನ ಸ್ವಂತ ಖರ್ಚಿನಿಂದ ಬರ್ಮಾ ಬಾಳೆಹಣ್ಣು ಖರೀದಿಸಿ ತಂದುಕೊಟ್ಟ. ಆಗ ಆತ ಹೇಳಿದ ಮಾತನ್ನು ಲಜಪತರು ಹೀಗೆ ನಮೂದಿಸಿದ್ದಾರೆ. ''ನಾವು ನಿಮ್ಮನ್ನು ನೋಡುವುದು ಬಹುಶಃ ಇದೇ ಕೊನೆಯೋ ಏನೋ?'' ಅದಕ್ಕೆ ಲಜಪತರು ನೀಡಿದ ಪ್ರತಿಕ್ರಿಯೆ. 'ದೇವರು ಇರುವಾಗ ನಿರಾಶೆಗೆ ಕಾರಣವಿಲ್ಲ.' ಮತ್ತೆ ಮುಂದುವರಿದು ಹೇಳಿದರು. ''ನನ್ನ ಒಳ ಮನಸ್ಸು ನಾನು ನನ್ನ ದೇಶಕ್ಕೆ ಮರಳುತ್ತೇನೆಂದು ಹೇಳುತ್ತಿದೆ. ಬಹುಶಃ ಈಗಿನ ಸ್ಥಿತಿ ಹೆಚ್ಚು ಕಾಲವಿರಲಾರದು. ನನ್ನ ಮಾತುಗಳು ಆತನ ಮೇಲೆ ಪರಿಣಾಮ ಬೀರಿತು. ಮುಖದಲ್ಲಿ ಹರ್ಷ ಚಿಮ್ಮಿತು. ಆತ ನನ್ನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ.''

''ಮೊದಲ ಬಾರಿಗೆ ನನ್ನ ಮನಸ್ಸಿನಲ್ಲಿ ಹಿಂದೆಂದೂ ಕಾಣದ ಅನುಭವವಾಯಿತು. ಪಾಶ್ಚಾತ್ಯ ಸಂಸ್ಕೃತಿಯ ಆಷಾಡಭೂತಿತನದಲ್ಲಿ ಮಲಿನವಾಗದ ಶುದ್ಧ ಭಾರತೀಯ

ಮನಸ್ಥಿತಿಯೊಂದನ್ನು ನಾನು ಕಂಡೆ. ನನ್ನ ಮನಸ್ಸಿನ ಮೇಲೆ, ಹೃದಯದ ಮೇಲೆ ಅಚ್ಚಳಿಯುವ ಪರಿಣಾಮ ಬೀರಿತು ಆ ಪ್ರಸಂಗ. ಆತನೂ ಭಾರತೀಯ. ನನ್ನ ಧಾರ್ಮಿಕ ಭಾವನೆಗಿಂತ ಭಿನ್ನವಾದ ಭಾರತೀಯ. ಕಡು ಬಡತನದ ರೈತ ಕುಟುಂಬದಿಂದ ಬಂದವ. ಪರಿಸ್ಥಿತಿಯ ಶಿಶುವಾಗಿ ತಿಂಗಳಿಗೆ ಕೇವಲ 7-8 ರೂಪಾಯಿಗಳಿಗೆ ಪೋಲೀಸ್ ವೃತ್ತಿಯನ್ನು ಹಿಡಿದವ. ಆ ವೃತ್ತಿ ಬಿಟ್ಟರೆ ಬದುಕಿಗೆ ಅವನಿಗೆ ಬೇರೆ ಆಸರೆ ಇದ್ದಂತೆ ಇರಲಿಲ್ಲ. ಹಾಗಿದ್ದು ತನ್ನ ವೃತ್ತಿಯನ್ನು ಮತ್ತು ವೃತ್ತಿಪರವಾದ ಏಳಿಗೆಯನ್ನು ನಿರ್ಲಕ್ಷಿಸಿ ನನ್ನ ಆ ಸಂಕಷ್ಟದ ದಿನಗಳಲ್ಲಿ ಆತ ನನಗೆ ತೋರಿದ ಆ ಅನುಕಂಪ ಶುದ್ಧ ಭಾರತೀಯತೆಯ ಪ್ರತೀಕವೆನಿಸಿತು'' ಎಂದು ಲಜಪತರು ತಮ್ಮ ಜೀವನಗಾಥೆಯಲ್ಲಿ ವರ್ಣಿಸಿದ್ದಾರೆ. ಅಷ್ಟಕ್ಕೆ ಅವರ ವರ್ಣನೆ ನಿಲ್ಲುವುದಿಲ್ಲ,

''ನನ್ನ ದಾರ್ಮಿಕ ಭಾವನೆಗೆ ಭಿನ್ನವಾಗಿದ್ದಾರೆಂದು ಬ್ರಿಟಿಷ್ ಹಿರಿಯ ಪೊಲೀಸ್ ಅಧಿಕಾರಿಗಳು ಮಹಮದೀಯ ಪೊಲೀಸ್ ಪೇದೆಗಳನ್ನು ನನ್ನ ಬೆಂಗಾವಲಿಗೆ ನಿಲ್ಲಿಸಿದ್ದರೇನು? ತದ್ವಿರುದ್ಧವಾಗಿ ಆ ಪೇದೆಗಳ ನಡವಳಿಕೆಗಳು ಕಂಡು ಬಂದಾಗ ಆ ಅಧಿಕಾರಿಗಳು ತಮ್ಮ ಅಂದಾಜಿನ ಬಗ್ಗೆ ತಾವೇ ಚಕಿತರಾದರು.'' ಎಂದು ಬರವಣಿಗೆಯಲ್ಲಿ ದಾಖಲಿಸಿದ್ದಾರೆ.

ಲಜಪತರು ಲೇಖನಿಯನ್ನು ಮತ್ತೆ ಮುಂದುವರಿಸಿ, 'ನನ್ನ ಮನಸ್ಸಿನಲ್ಲಿದ್ದ ನೈಜವಾದ ಕಳವಳವೊಂದು ಮಾಂಡೇಲೆಯಲ್ಲಿ ಹೀಗೆ ನಿವಾರಿಸಲ್ಪಟ್ಟಿತು.' ಮಾಂಡೇಲೆಯಲ್ಲಿ ನನಗೆ ಹಿತವೆನಿಸಿದ ರೀತಿಯಲ್ಲಿ ಸ್ವಾಗತ ದೊರೆತ ಅನುಭವವಾಯಿತು. ಆಶ್ಚರ್ಯವೂ ಆಯಿತು. ರೈಲ್ವೆ ಪ್ಲಾಟ್‌ಫಾರಂನ್ನು ಸಂಪೂರ್ಣವಾಗಿ ನಿರ್ಜನಗೊಳಿಸಲಾಗಿತ್ತು. ಆ ವೇಳೆಗಾಗಲೇ ಪಂಜಾಬಿನ ಜನಪ್ರಿಯ ನಾಯಕೊಬ್ಬರನ್ನು ಬರ್ಮಾಕ್ಕೆ ಕರೆ ತರಲಾಗಿದೆ ಎಂಬ ಸುದ್ದಿ ಹಬ್ಬಿತ್ತು. ರೈಲ್ವೆ ಪ್ಲಾಟ್‌ಫಾರಂನಲ್ಲಿ ಬೋಗಿಯಿಂದ ಇಳಿದು ಸಾಗತೊಡಗಿದಂತೆ ಅವರನ್ನು 'ಅನೇಕ ಪಂಜಾಬಿ ಬಂಧುಗಳು ಅವರವರ ಕಚೇರಿಯಲ್ಲಿನ ಬಾಗಿಲು, ಕಿಟಕಿಗಳಿಂದ ಇಣುಕಿ ನೋಡುತ್ತಿದ್ದದ್ದು ಕಂಡು ಬಂದಿತು.'

ಲಜಪತರಿನ್ನೂ ರೈಲ್ವೆ ನಿಲ್ದಾಣದ ಬಾಗಿಲನ್ನು ಹಾಯ್ದು ಹೊರಗೆ ಹೆಜ್ಜೆ ಇಟ್ಟಿರಲಿಲ್ಲ. ಅಷ್ಟರಲ್ಲಿ ಇದ್ದಕ್ಕಿದ್ದಂತೆ, ಆಶ್ಚರ್ಯಕರ ರೀತಿಯಲ್ಲಿ ಪುಣೆಯ ಭಾರತೀಯ ಸೇವಕ ಸಮಾಜದ ಜಿ.ಕೆ. ದೇವಧರ್ ಎದುರಾದರು. ಲಜಪತರನ್ನು ಕಾಣುತ್ತಿದ್ದಂತೆ ಓಡಿ ಬಂದು ಅವರ ಕಾಲುಗಳನ್ನು ಹಿಡಿದುಕೊಂಡರು. ಈ ಅನಿರೀಕ್ಷಿತ ಘಟನೆಯಿಂದ ಪೊಲೀಸರಿಗೆ ಆಶ್ಚರ್ಯವಾಯಿತು. ಜೊತೆಗೆ ಅವರು ಬೆಚ್ಚಿದರು. ದೇವಧರ್ ಲಜಪತರಿಗೆ ತೋರಿದ ಗೌರವವನ್ನು ಪೊಲೀಸರು ಕೈದಿಯನ್ನು ಬಿಡಿಸುವ ಯತ್ನವೆಂದು ಗ್ರಹಿಸಿದರು. ಕೂಡಲೇ ಕಾರ್ಯತತ್ಪರರಾದರು. ''ಇಂಗ್ಲಿಷ್ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಐರೋಪ್ಯ ಸಾರ್ಜಂಟ್ ನನ್ನ ಕೈಗಳನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾ ನನ್ನ ಕಾಲುಗಳನ್ನು ಮುಟ್ಟಿದ ಅವರನ್ನು ದೂರಕ್ಕೆ ತಳ್ಳಿದರು. ಪೇದೆಗಳು ಅವರನ್ನು ಎಳೆದು ದೂರಕ್ಕೆ ಬಿಟ್ಟರು.''

* * *

ಅಧ್ಯಾಯ-27

ಮಾಂಡೇಲೆ

ಪಾಶ್ಚಿಮಾತ್ಯಕ್ಕೆ ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲವೇನೋ ಎನ್ನುವಂತೆ ಪೌರಾತ್ಯದಲ್ಲೂ ಬ್ರಿಟಿಷ್ ವಸಹಾತುಷಾಹಿಗಳ ಪ್ರಭಾವ ಅಡರಿತ್ತು. ಬರ್ಮಾದಲ್ಲಿ ಸಾಮ್ರಾಜ್ಯಷಾಹಿಗಳ ಅಟ್ಟಹಾಸ ರಂಗಾರಂಗುಗಳೆಲ್ಲಾ ಕಾಲೂರಿದ್ದವು. ಅದರ ನತದೃಷ್ಟ ರಾಜಧಾನಿ ಮಾಂಡೇಲೆ ತನ್ನ ಘೋರ ಉಲ್ಕಾಪಾತವನ್ನು ಕಂಡಿತ್ತು. ಒಳಸಂಚುಗಳು, ನಾಟಕೀಯ, ಕಪಟ, ಕುತಂತ್ರಗಳು ಆ ಐತಿಹಾಸಿಕ ನಗರಿಯಲ್ಲಿ ಆಗಿ ಹೋಗಿದ್ದವು. ರಾಣಿ ಸುಪ್ಲಾಯತ್ ಮತ್ತು ದೊರೆ ಥಿಬಾವ್ ಬಗೆಗಿನ ಊಹಾಪೋಹದ ಕಥೆಗಳು ಇನ್ನೂ ಜೀವಂತವಾಗಿದ್ದವು. ಅವರಿಬ್ಬರನ್ನು ಪದಚ್ಯುತಗೊಳಿಸಿ ಕಾಣದ ಎಡೆಗೆ ಗಡಿಪಾರು ಮಾಡಿ ಕಾಲು ಶತಮಾನವೂ ತುಂಬಿರಲಿಲ್ಲ. ಅವರ ಅರಮನೆ ಐತಿಹಾಸಿಕ ಸಂಚು, ವಿದ್ರೋಹ, ಪ್ರಣಯ, ವಿಷಫಲಗಳ ಮೂಕಸಾಕ್ಷಿಯೋ ಎನ್ನುವಂತೆ ವಿಶಾಲವಾದ ಕೋಟೆಯ ಮಧ್ಯದ ಹರವು ಪ್ರದೇಶದಲ್ಲಿತ್ತು. ಅರಮನೆಯ ಅಲಂಕರಣ, ಪೀಠೋಪಕರಣಗಳೆಲ್ಲಾ ಕಳೆಗುಂದಿದ್ದವು. ರಾಜೋಪಚಾರದ ವೈಭವ ಕಳೆದುಕೊಂಡಿದ್ದವು. ಆದರೂ ಅರಸೊತ್ತಿಗೆಯ ದಿನಗಳ ನವಿರು ಲೇಪನ ಅಲ್ಲಿಯ ಗಾಳಿಯಲ್ಲಿನ್ನೂ ಸುಳಿದಾಡುವಂತಿತ್ತು. ಒಂದು ಕಾಲಕ್ಕೆ ಅರಸು ಮನೆತನದ ಗಜಗಾಂಭೀರ್ಯದಲ್ಲಿ ಬೀಗುತ್ತಿದ್ದ ಅರಮನೆಯ ಹಜಾರಗಳು, ಕೋಣೆಗಳು ಜನರಹಿತವಾಗಿ ಸಂಜೆಗಣ್ಣಿನ ಭೀಬತ್ಸ ನೋಟ ಹುಟ್ಟಿಸುತ್ತಿದ್ದವು. ಆ ಒಂದೊಂದು ನೋಟವೂ ಬ್ರಿಟಿಷ್ ಸಾಮ್ರಾಜ್ಯಷಾಹಿಗಳು ಎಸಗಿದ ಘೋರ ಕೃತ್ಯಗಳ ಒಂದೊಂದು ಅಧ್ಯಾಯವೋ ಎನ್ನುವಂತೆ ಇತಿಹಾಸದ ಪುಟಗಳಲ್ಲಿ ನಮೂದಾಗುವಂತಿದ್ದವು.

ಎರಡು ದಶಕಗಳ ಹಿಂದೆ ಬರ್ಮಾದ ರಾಜಮನೆತನದ ಕೊನೆಯ ಅರಸನನ್ನು ಗಡಿಪಾರು ಮಾಡಿದ ಆ ಅರಮನೆಗೆ ಈಗ ದೂರದ ಪಂಜಾಬಿನಿಂದ ಓರ್ವ ಮಹಾನಾಯಕನನ್ನು ಗಡಿಪಾರು ಮಾಡಿ ತರಲಾಗಿತ್ತು. ರೈಲ್ವೆ ನಿಲ್ದಾಣದಲ್ಲಿ ಲಜಪತ್‌ರಾಯ್ ಅವರೊಂದಿಗೆ ರಂಗೂನ್ ಪೊಲೀಸ್ ಸಹಾಯಕ ಕಮಿಷನರ್, ಲಾಹೋರಿನಿಂದ ಬಂದ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್‌ರನ್ನು ಹೊತ್ತು ಹೊರಟ ಜಟಕಾಬಂಡಿ ರಾಜಮಾರ್ಗದಲ್ಲಿ ಸಾಗದೆ ಸುತ್ತು ಬಳಸು ದಾರಿ ಹಿಡಿದು ಜನದಟ್ಟಣೆ ಕಡಿಮೆ ಇದ್ದ ಪ್ರದೇಶಗಳ ಮೂಲಕ ಮಾಂಡೇಲೆಯ ಅರಮನೆಯನ್ನು ದಕ್ಷಿಣ ದ್ವಾರದ ಮೂಲಕ ಪ್ರವೇಶಿಸಿತು. ಅರಮನೆ, ಅದರ ಮಹಾಗುಮ್ಮಟಗಳನ್ನು ಹಿಂದೆ ಹಾಕಿ ಮುಂದೆ ಸಾಗಿದ ಆ ಕುದುರೆಗಾಡಿ ಮರಾಮತ್ (ಲೋಕೋಪಯೋಗಿ) ಇಲಾಖೆಯ ಬಂಗಲೆಯೊಂದರ ಪೋರ್ಟಿಕೋದಲ್ಲಿ ನಿಂತಿತು. ಇಟ್ಟಿಗೆಯಿಂದ ಕಟ್ಟಿದ ಆ ಬಂಗಲೆ ಹೆಂಚಿನ ಮೇಲ್ಛಾವಣಿ ಹೊಂದಿತ್ತು.

ಓರ್ವ ಐರೋಪ್ಯ ಅಧಿಕಾರಿ ಮಾಂಡೇಲೆ ಜೈಲಿನ ಸುಪರಿಂಟೆಂಡೆಂಟ್‌ರನ್ನು ಕರೆಯಿಸಿದ. ಕೈದಿಯನ್ನು ಆತನಿಗೆ ಒಪ್ಪಿಸಿ ದಾಖಲೆಗೆ ಸಹಿ ಪಡೆದ. ಲಾಹೋರಿನಿಂದ ಬಂದ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್‌ರಿಗೆ ದಾಖಲೆ ಕೊಟ್ಟು ಹಿಂದಕ್ಕೆ ಕಳುಹಿಸಲಾಯಿತು. ಕೈದಿಯ ಜೊತೆಗೆ ಅವರಿಗೆ ಸಂಬಂಧಪಟ್ಟ 350 ರೂಪಾಯಿಗಳಿದ್ದ ನೋಟಿನ ಕಂತೆ, ಚಿನ್ನದ ವಾಚು, ಗಡಿಯಾರ ಮತ್ತು ಜೈನುಗಳ ದಾಖಲೆಯನ್ನು ಹಸ್ತಾಂತರಿಸಲಾಯಿತು.

ಕೋಟೆಯ ಎತ್ತರದ ಗೋಡೆ ಒಣ ಇಟ್ಟಿಗೆಯಿಂದ ನಿರ್ಮಿತವಾಗಿತ್ತು. ಒಣಗಿದ ಗುಲಾಬಿ ದಳದ ಬಣ್ಣ ಅದರದು. ಕೋಟೆಯ ಸುತ್ತಲೂ ಕಂದಕವಿತ್ತು. ಅದರಲ್ಲಿ ನೀರಿದ್ದರೂ ಅವರಲ್ಲಿದ್ದದ್ದು ನಿಂತ ನೀರಾಗಿರಲಿಲ್ಲ. ಸುತ್ತಲೂ ಬೆಳೆದಿದ್ದ ದಟ್ಟವಾದ ಮರಗಳ ಪ್ರತಿಬಿಂಬ ಆ ನೀರಿನಲ್ಲಿ ಸುಂದರ ದೃಶ್ಯವಾಗಿ ಪ್ರತಿಫಲಿಸುತ್ತಿತ್ತು. ಗೋಡೆಯ ಮಧ್ಯೆ ಅಲ್ಲಲ್ಲಿ ಬುರುಜು ಕೊತ್ತಲಗಳಿದ್ದವು. ಆ ಬುರುಜುಗಳು ಫಿರಂಗಿಗಳ ಗೂಡುಗಳಂತಿರದೆ ಸುಂದರವಾದ ತೋಟ ಅಥವಾ ಉದ್ಯಾನವನ ವೀಕ್ಷಿಸಲು ರೂಪಿಸಿದ ಪುಟ್ಟ ಗೋಪುರಗಳಂತಿದ್ದವು. ತನ್ನದೇ ರೀತಿಯಲ್ಲಿ ಸೊಗಸು ಸೌಂದರ್ಯ ಹೊಂದಿದ್ದ ಕೋಟೆ ನಿಜಾರ್ಥದಲ್ಲಿ ಯುದ್ಧ ಮನಸ್ಥಿತಿಯನ್ನು ಪ್ರತಿನಿಧಿಸುವ ಕೋಟೆಯಂತೆ ಕಾಣುತ್ತಿರಲಿಲ್ಲ. ನಮ್ಮ ಸಿಂಗರು ನಿರ್ಮಿಸಿದ ಕೋಟೆಗಳಂತಾಗಲಿ, ಉದಯಪುರದ ರಾಜಾಧಿರಾಜರ ಕೋಟೆಗಳಂತಾಗಲಿ, ಪುರಂದರಪುರದ ಶಿವಾಜಿಯ ಕೋಟೆಗಳಂತಾಗಲಿ, ಅದರ ಲಕ್ಷಣಗಳು ಇರಲಿಲ್ಲ. ಗಡಿಪಾರು ಶಿಕ್ಷೆಗೆ ಈಡಾದ ಕೈದಿಗೆ ಮೊದಲ ನೋಟದಲ್ಲೇ ಹತಾಶೆಯಾದಂತಾಯಿತು. ಅವರು ಅಂದುಕೊಂಡಿದ್ದಂತೆ 'ಎತ್ತರದ ಗೋಡೆಗಳಿಂದ ಸುತ್ತುವರಿದ ಭದ್ರವಾದ ಕಟ್ಟಡ ಅದಾಗಿರಲಿಲ್ಲ...!' ಅದೊಂದು ಸಾಧಾರಣ ಕಟ್ಟಡ. ನಗರದ ಇತರೆ ಕಟ್ಟಡಗಳಿಗಿಂತ ಭಿನ್ನವಾದದ್ದಲ್ಲ. ಸ್ವಲ್ಪ ಎತ್ತರದ್ದೆನ್ನಬಹುದಾದ ಸುತ್ತುವರಿದ ಗೋಡೆ, ವಿಶಾಲವೂ, ಆಳವೂ, ಆದ ಕಂದಕ ಮಾತ್ರ ಭಿನ್ನವಾಗಿತ್ತು.

ಆ ಪ್ರದೇಶದಲ್ಲಿ ವಿಶಾಲವಾದ ಮೈದಾನಗಳಿದ್ದವು. ಹುಲ್ಲು ಹಸಿರಾಗಿ ನಳನಳಿಸುತ್ತಿತ್ತು. ಎತ್ತರದೆತ್ತರಕ್ಕೆ ಬೆಳೆದ ಜಾಲಿಮರಗಳು ತಾವೇ ತಾವಾಗಿದ್ದವು. ಅವುಗಳನ್ನು ಮೀರಿಸುವಂತಿತ್ತು ಹುಣಿಸೆ ವೃಕ್ಷಗಳ ಸಂಖ್ಯೆ.

ಬಂದಿಖಾನೆಯ ಸುಪರಿಂಟೆಂಡೆಂಟ್ ಹೊಸ ವ್ಯಕ್ತಿಯನ್ನು ಆ ಬಂಗಲೆಯ ಮೊದಲ ಅಂತಸ್ತಿಗೆ ಕರೆದೊಯ್ದರು. ಎರಡು ಕೊಠಡಿಗಳ ಆ ಸ್ಥಳವನ್ನು ತೋರಿಸಿ ಅಲ್ಲಿರಲು ಸೂಚಿಸಿದರು. ಅದು ಸುಂದರವಾದ ವಸತಿ ಸ್ಥಳವೆನಿಸಿತು. ಗಾಳಿ ಬೆಳಕು ಸಮೃದ್ಧವಾಗಿತ್ತು. ಕೋಣೆಗಳಲ್ಲಿ ಎಲ್ಲಾ ಅನುಕೂಲಗಳು ಕಂಡು ಬಂದವು. ವಸತಿಗೆ ಇನ್ನೊಂದು ವ್ಯವಸ್ಥೆ ಮಾಡುವತನಕ ಅಲ್ಲಿರಬಹುದೆಂದು ಅಧಿಕಾರಿ ಲಜಪತರಿಗೆ ತಿಳಿಸಿದರು. ಒಂದು ಮೇಜು, ಒಂದೆರೆಡು ಕುರ್ಚಿಗಳು, ಒಂದು ಮಂಚ ಅದರ ಮೇಲೆ ಜೈಲಿನ ಎರಡು ಜೊತೆ ಕಂಬಳಿಗಳು, ಅಷ್ಟೇ ಸಂಖ್ಯೆಯ ತಿಳಿ ಹಾಸಿಗೆಯ ಹಾಸುಗಳು ಅಲ್ಲಿದ್ದವು. ಹಜಾರದ ನೆಲಕ್ಕೆ ಹಾಕಿದ್ದ ಬರ್ಮಾ ನೆಲಹಾಸು ವರ್ಣಮಯವಾಗಿತ್ತು

ಊಟದ್ದೊಂದು ಸಮಸ್ಯೆ ಎನಿಸಿತು. ಕೋಟೆಯ ಅಧಿಕಾರಿಗಳು ಲಜಪತರಿಗೆ ಭಾರತೀಯ ಆಹಾರದ ವ್ಯವಸ್ಥೆಯನ್ನೇನೋ ಮಾಡಿದ್ದರು. ಆಂಗ್ಲರ ದೃಷ್ಟಿಯಲ್ಲಿ ಭಾರತೀಯ ಊಟವೆಂದರೆ ಆಂಗ್ಲೋ ತಮಿಳು ಊಟವಾಗಿತ್ತು. ದಕ್ಷಿಣ ಭಾರತೀಯನೊಬ್ಬನಿಂದ ಆ ಅಡಿಗೆ ಸಿದ್ಧವಾಗಿತ್ತು. ಪಂಜಾಬಿ ಕೈದಿಗೆ ಊಟ ಹಿಡಿಸಲಿಲ್ಲ. ಓರ್ವ ಸಿಖ್ ಅಡಿಗೆಯವನ್ನೇನೋ ಗೊತ್ತು ಪಡಿಸಲಾಯಿತು. ಆದರೆ ಅದೂ ಲಜಪತರಿಗೆ ಸಹಾಯಕವಾಗಲಿಲ್ಲ. ಆತ ವಾಸ್ತವದಲ್ಲಿ ಅಡಿಗೆಯವನಲ್ಲ. ಲಜಪತರ ದರ್ಶನ ಪಡೆಯುವ ದೃಷ್ಟಿಯಿಂದ ಉತ್ತೇಜಿತನಾಗಿ ಸುಳ್ಳು ಹೇಳಿ ಆ ಕೆಲಸಕ್ಕೆ ಬಂದಿದ್ದವ. ಅವನು ಸಿಖ್ ರೈತ ಕುಟುಂಬಕ್ಕೆ ಸೇರಿದವನು. ಬಹು ವಾಚಾಳಿ. ತನ್ನಿಂದಾದ ಅಪಚಾರವನ್ನು ಆತ ಲಜಪತರಿಗೆ ತಿಳಿಸಿದ. ಅವರಿಗೆ ಪಂಜಾಬಿ ಊಟ ಒದಗಿಸುವ ಏರ್ಪಾಟು ಯಶಸ್ವಿಯಾಗಲಿಲ್ಲ. ಎರಡೇ ದಿನಗಳಲ್ಲಿ ಲಜಪತರು ಆಂಗ್ಲೋ ತಮಿಳು ಊಟಕ್ಕೆ ಮೊರೆ ಹೋಗಬೇಕಾಯಿತು. ಅಡಿಗೆಯವನೆಂದು ಹೇಳಿಕೊಂಡ ಪಂಜಾಬಿ ಭಟ್ಟನ ಊಟಕ್ಕಿಂತಲೂ ದಕ್ಷಿಣ ಭಾರತದ ಊಟವೇ ರುಚಿಕರ ಎನ್ನುವಂತಾಯಿತು ಅವರಿಗೆ. ಜೈಲು ಸುಪರಿಂಟೆಂಡೆಂಟರ ಬಂಗಲೆಯ ವಾಸ್ತವ್ಯ ಎರಡು ದಿನಗಳಲ್ಲೇ ಮುಕ್ತಾಯಗೊಂಡಿತು. ನಂತರ ಅವರನ್ನು ಅರಮನೆಯ ಕಾಲುವೆಯ ಅತ್ತ ಕಡೆಗಿನ ಲೋಕೋಪಯೋಗಿ ಇಲಾಖೆಯ ಬಂಗಲೆಗೆ ಸ್ಥಳಾಂತರಿಸಲಾಯಿತು. ಅರಮನೆ ಉದ್ಯಾನದ ಉತ್ತರ ಭಾಗಕ್ಕೆ ಇದ್ದ ಕಟ್ಟಡ ಅದು. ಆ ಬಂಗಲೆಗೆ ಮತ್ತು ಉದ್ಯಾನಗಳ ಮಧ್ಯೆ ಜಲ್ಲಿಕಲ್ಲಿನಿಂದ ಮಾಡಿದ ರಸ್ತೆಯೊಂದಿತ್ತು. ಆ ರಸ್ತೆ ಸಾರ್ವಜನಿಕ ಬಳಕೆಗೂ ಮುಕ್ತವಾಗಿತ್ತು. ಆ ರಸ್ತೆಯಲ್ಲಿ ಅಡ್ಡಾಡುವುದಕ್ಕೂ ಬೆಂಗಾವಲಿನ ಪೇದೆಯ ದೃಷ್ಟಿ ಎಳವಿನ ಒಳಗೆ ಉದ್ಯಾನದಲ್ಲಿ ಓಡಾಡುವುದಕ್ಕೂ ಸುಪರಿಂಟೆಂಡೆಂಟರು ಲಜಪತರಿಗೆ ಅವಕಾಶ ಮಾಡಿಕೊಟ್ಟರು. ಆ ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಭಾರತೀಯರು ಅದರಲ್ಲೂ ವಿಶೇಷವಾಗಿ ಪಂಜಾಬಿಗಳು ಲಜಪತರನ್ನು ಕಂಡು ಗುರುತಿಸಿ ಗೌರವ ಸೂಚಿಸುತ್ತಿದ್ದರು.

ಹೊಸ ಬಂಗಲೆಯು ಆಧುನಿಕ ವಾಸ್ತುರಚನೆಯದು. ಮರ ಮತ್ತು ಇಟ್ಟಿಗೆಗಳಿಂದ ಎರಡು ಅಂತಸ್ತಿನಲ್ಲಿ ಅದನ್ನು ಕಟ್ಟಲಾಗಿತ್ತು. ಎರಡು ಕುಟುಂಬಗಳ ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಅದನ್ನು ಇಬ್ಭಾಗ ಮಾಡಲಾಗಿತ್ತು. ಕಟ್ಟಡದ ಪಶ್ಚಿಮ ಭಾಗದ ಮೊದಲ ಅಂತಸ್ತಿನಲ್ಲಿ ಲಜಪತರ ಬಿಡಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ಎರಡು ಕೋಣೆಗಳಿದ್ದವು. ಒಂದು ವರಾಂಡ ಒಂದು ಸ್ನಾನದ ಕೊಠಡಿ. ಕೌಂಟರ್‌ಗೆ ಹೊಂದಿಕೊಂಡಂತೆ ಮರದ ಮೆಟ್ಟಿಲುಗಳಿದ್ದವು. ಆ ಮೆಟ್ಟಿಲುಗಳನ್ನು ಹತ್ತುವ ಜಾಗದಲ್ಲಿ ಐರೋಪ್ಯ ಕಾವಲು ಸಾರ್ಜಂಟ್‌ಗೆ ಎಂದು ಹಾಸಿಗೆ ಮೇಜು ಮತ್ತು ಕುರ್ಚಿ ಹಾಕಲಾಗಿತ್ತು. ಆತನ ಅನುಮತಿ ಇಲ್ಲದೆ ಯಾರೂ ಸಹ ಮೆಟ್ಟಿಲು ಹತ್ತಿ ಮೊದಲ ಅಂತಸ್ತಿಗೆ ಪ್ರವೇಶಿಸುವಂತಿಲ್ಲ. ಲಜಪತರಿಗೆ ಕೊಟ್ಟಿದ್ದ ಆ ವಸತಿಯ ಕೊಠಡಿಗಳಲ್ಲಿ ಒಂದು ಊಟದ ಮೇಜು, ಮಾಂಸವನ್ನು ಸಂರಕ್ಷಿಸಿರುವ ಕಪಾಟು ಸದಾ ಬಳಕೆಯ ಒಂದು ಮೇಜು ಒಂದು ಬೆತ್ತದ ಆರಾಮ ಕುರ್ಚಿ, ಒಂದೆರೆಡು ಕಚೇರಿ ಕುರ್ಚಿಗಳು ಮತ್ತು ಟಿಪಾಯಿಗಳು ಬಟ್ಟೆ ಹಾಗೂ ಇತರ ವಸ್ತುಗಳನ್ನು ಇಟ್ಟುಕೊಳ್ಳಲು ಒಂದು ಅಲೆಮಾರು ಸೊಳ್ಳೆ ಪರದೆ ಸಹಿತ ಒಂದು ಹಾಸಿಗೆ ಅಲ್ಲಿದ್ದವು. ಮರದ ನೆಲಹಾಸಿನ ಮೇಲೆ ಬರ್ಮಾ ಕಾರ್ಪೆಟ್

ಹಾಸಲಾಗಿತ್ತು. ರಾತ್ರಿಯ ಸಮಯದಲ್ಲಿ ಎರಡು ಕೊಠಡಿಗಳಲ್ಲಿ ಒಂದೊಂದು ಮೇಣದ ಬತ್ತಿ ಹಚ್ಚಿಡಲಾಗಿತ್ತು. ನಂತರ ಚಿಮಣಿಯೊಂದನ್ನು ಕೊಡಲಾಯಿತು.

ಲಜಪತರ ಜೊತೆಗೆ ಸಹ ಕೈದಿಗಳನ್ನು ಇಟ್ಟಿರಲಿಲ್ಲ. ಅವರ ಜೊತೆಗಾರರೆಂದರೆ ಓರ್ವ ದಕ್ಷಿಣ ಭಾರತೀಯ ಅಡಿಗೆಯವ. ಇನ್ನೋರ್ವ ಸೇವಕ. ತಿಂಗಳಿಗೆ 25 ರೂಪಾಯಿ ಸಂಬಳದ ಆಧಾರದ ಮೇಲೆ ಆ ಸೇವಕನನ್ನು ಅವರು ನೇಮಿಸಿಕೊಂಡಿದ್ದರು. ಬಟ್ಟೆ ಒಗೆದುಕೊಡಲು ಧೋಬಿಯನ್ನು ನೇಮಿಸಲಾಗಿತ್ತು. ನೈರ್ಮಲ್ಯ ಮತ್ತು ಶೌಚ ಕಾರ್ಯಗಳನ್ನು ಓರ್ವ ದಿನಕ್ಕೆರಡು ಬಾರಿ ನಿರ್ವಹಿಸುತ್ತಿದ್ದ. ಕೆಲವು ಕೆಲಸಗಳನ್ನು ಮಾಡಿಸಿಕೊಡಲು ತಗಲುತ್ತಿದ್ದ ಖರ್ಚುಗಳನ್ನು ತಾವೇ ಭರಿಸುವಂತೆ ಕೈದಿಗೆ ತಿಳಿಸಲಾಗುತ್ತಿತ್ತು. ಅವರ ಬಯಕೆಗಳಲ್ಲಿ ಕೆಲವನ್ನು 'ಲಕ್ಷುರಿ' ಎಂದು ಪರಿಗಣಿಸಿ ಸುಪರಿಂಟೆಂಡೆಂಟರು ತಿರಸ್ಕರಿಸುತ್ತಿದ್ದರು. ಈ ತಿರಸ್ಕಾರ ಒಂದು ರೀತಿಯಲ್ಲಿ ಕಿರುಕುಳವಾಗಿ ಆಗಾಗ ತಿಕ್ಕಾಟಕ್ಕೂ ಕಾರಣವಾಗುತ್ತಿತ್ತು.

ಈ ಮಧ್ಯೆ ಇನ್ನೂ ಒಂದೆರೆಡು ಕಿರುಕುಳಗಳು ಕಂಡು ಬಂದವು. ಸುಪರಿಂಟೆಂಡೆಂಟರು ಆರಂಭದಲ್ಲಿ ಕೈದಿಗೆ ಅನುಕೂಲಕರವಾಗುವ ರೀತಿಯಲ್ಲಿ ಕಂಡು ಬಂದಿದ್ದರು. ತಾವು ಒಪ್ಪಿಕೊಳ್ಳಬಹುದಾದ ವ್ಯಕ್ತಿ ಆತನೆಂದು ಲಜಪತರು 'ಂದುಕೊಂಡಿದ್ದರು. ಉಚಿತ ರೀತಿಯಲ್ಲಿ ನೋಡಿಕೊಳ್ಳುವ ಭರವಸೆಯನ್ನು ಸುಪರಿಂಟೆಂಡೆಂಟರು ಅವರಿಗೆ ನೀಡಿದ್ದರು. ಜಸ್ಟೀಸ್ ಮೈಕ್ ಆರ್ಥಿಸ್ ಬರೆದ 'Reminiscences' ಕೃತಿಯೂ ಸೇರಿದಂತೆ ತನ್ನಲ್ಲಿದ್ದ ಕೆಲವು ಪುಸ್ತಕಗಳನ್ನು ಅವರು ಲಜಪತರಿಗೆ ಓದಲು ಕೊಟ್ಟಿದ್ದರು. ಬರ್ಮಾ ಭಾಷೆಯನ್ನು ಕಲಿಯಲು ಅನುಕೂಲವಾಗುತ್ತದೆ ಎಂದು ಆಂಗ್ಲೋ - ಬರ್ಮಾ ಕೈಪಿಡಿಯೊಂದನ್ನು ಸಹ ಆ ಅಧಿಕಾರಿ ಲಜಪತರಿಗೆ ಓದಲು ಕೊಟ್ಟಿದ್ದರು. ಸ್ವತಃ ವೈದ್ಯ ವ್ಯಕ್ತಿಯೂ ಆಗಿದ್ದರಿಂದ ಅವರು ಲಜಪತರನ್ನು ಪರೀಕ್ಷಿಸಿ ಕೆಲವು ಔಷಧಿಗಳನ್ನು ಕೊಟ್ಟಿದ್ದರು. ಔದಾರ್ಯ ಮತ್ತು ಸೌಹಾರ್ದತೆಗಳನ್ನು ತೋರಿಸಿದ್ದರು. ಆದರೆ ಅದೆಲ್ಲಾ ಹೆಚ್ಚು ದಿನ ಸಾಗಲಿಲ್ಲ. ಪಂಜಾಬಿನಲ್ಲಿ ಲಜಪತರ ಸ್ಥಾನಮಾನ ಏನೆಂಬುದು ಆ ಸುಪರಿಂಟೆಂಡೆಂಟರಿಗೆ ಅರಿವಿರಲಿಲ್ಲ. ಲಜಪತರಂತಹ ವ್ಯಕ್ತಿಗಳನ್ನು ನೋಡಿಕೊಳ್ಳುವ ಪರಿಯೂ ಆತನಿಗೆ ಗೊತ್ತಿರಲಿಲ್ಲ. ತಾವು ಹೇಳಿದಂತೆಯೇ ಎಲ್ಲರೂ ನಡೆಯಬೇಕೆಂದು ಧೋರಣೆ ಅವರದಾಗಿತ್ತು. ಆ ಅಧಿಕಾರಿಯ ಅಡಿಗೆಯವನು ಅದಕ್ಕೆ ಪೂರಕವಾಗಿ ವರ್ತಿಸತೊಡಗಿದ. ಕೈದಿಯ ಹಿತಕ್ಕಾಗಿ ಖರ್ಚು ಮಾಡಬೇಕಾಗಿದ್ದ ಹಣವಲ್ಲಿ ಆ ಅಧಿಕಾರಿ ಮತ್ತು ಅಡಿಗೆಯವನ ಮೋಜು ಸಹ ನಡೆಯತೊಡಗಿತು. ಅನುಕೂಲಗಳು ಮತ್ತು ಮುಖಕ್ಷೌರದ ವಿಷಯದಲ್ಲಿ ವಿವಾದ ಗಂಭೀರ ಸ್ವರೂಪವನ್ನು ತಾಳಿತು.!

ಆ ಬೆಳವಣಿಗೆಯನ್ನು ಲಜಪತರು ಹೀಗೆ ದಾಖಲು ಮಾಡಿದ್ದಾರೆ.

"ನನಗೆ ಮುಖಕ್ಷೌರ ದಿನ ಬಿಟ್ಟು ದಿನ ಮಾಡಲು ಓರ್ವ ಭಜಂತ್ರಿಯನ್ನು ಗೊತ್ತುಪಡಿಸಲಾಯಿತು. ಮೊದಲ ತಿಂಗಳು ಮುಗಿಯುತ್ತಿದ್ದಂತೆಯೇ ಆ ಭಜಂತ್ರಿ ನನ್ನ

ಬಳಿ ಬಂದು ತನ್ನ ಸಂಬಳ ಕೊಡುವಂತೆ ಕೇಳಿದ. ಕೆಲಸಕ್ಕೆ ನೇಮಕ ಮಾಡಿಕೊಂಡ ಜೈಲು ಸುಪರಿಂಟೆಂಡೆಂಟರು ನಿನ್ನ ಸಂಬಳ ಕೊಡುತ್ತಾರೆ ಎಂದು ನಾನು ತಿಳಿಸಿದೆ. ಅದಕ್ಕೆ ಆತ ನಿಮ್ಮಿಂದಲೇ ತನ್ನ ಸೇವೆಯ ಹಣ ಪಡೆಯುವಂತೆ ಸುಪರಿಂಟೆಂಡೆಂಟರು ಹೇಳಿರುವುದಾಗಿ ತಿಳಿಸಿದ. ಸಾಹೇಬರೊಂದಿಗೆ ಮಾತನಾಡುವತನಕ ನಿಧಾನಿಸುವಂತೆ ನಾನು ಆತನಿಗೆ ತಿಳಿಸಿದೆ.''

ಆ ಅಧಿಕಾರಿ ಲಜಪತರನ್ನು ಕ್ಷೌರಿಕನಿಗೆ ಸಂಬಳ ಪಾವತಿ ಮಾಡದಿರುವ ಬಗ್ಗೆ ಕೇಳಿದರು. ಸರ್ಕಾರವೇ ಅದನ್ನು ಕೊಡಬೇಕೆಂದು ಲಜಪತರು ಉತ್ತರಿಸಿದರು. ''1818ರ ನಿಯಂತ್ರಣ ಕಾಯ್ದೆಯ 3ನೇ ವಿಧಿಯಂತೆ ನನ್ನ ಜೀವನದ ಅಂತಸ್ತಿಗೆ ತಕ್ಕಂತೆ ಅವರು ನೋಡಿಕೊಳ್ಳಬೇಕಾಗಿತ್ತು.'' ಲಜಪತರು ತಮ್ಮ ಕಾನೂನು ಹಕ್ಕಿನ ಬಗ್ಗೆ ತಳೆದ ಆ ನಿಲುವು ಆ ಅಧಿಕಾರಿಗೆ ಸಮಂಜಸವೆನಿಸಲಿಲ್ಲ. ಅಂತಹ ಕಾನೂನು ಯಾವುದೂ ತನಗೆ ಗೊತ್ತಿಲ್ಲವೆಂದು ತಿಳಿಸಿದರು. ನನ್ನ ಅರಿವಿಗೆ ಬಂದ ಪ್ರಕಾರ ಆತನ ಮಾತೇ ಅಲ್ಲಿನ ಕಾನೂನು ಆಗಿತ್ತು. ಮುಖಕ್ಷೌರ ಮಾಡಿಸಿಕೊಳ್ಳುವುದು ಲಕ್ಷುರಿ ಎಂದು ಆತ ಹೇಳಿದ. ಆ ಖರ್ಚನ್ನು ಸರ್ಕಾರ ಭರಿಸುವುದಿಲ್ಲ ಎಂದು ತಿಳಿಸಿದ. ನನಗೆ ಮುಖಕ್ಷೌರದ ಅಗತ್ಯವಿಲ್ಲವೆನ್ನುವಂತೆ ಆತ ಮಾತನಾಡಿದ. ಈ ದೇಶದ ಪದ್ಧತಿಯ ಬಗ್ಗೆ ಆತನಿಗಿದ್ದ ಸೀಮಿತ ಜ್ಞಾನವನ್ನು ಪ್ರದರ್ಶಿಸುತ್ತಾ ನನ್ನ ಮೇಲೆ ಒತ್ತಡ ಹಾಕಲು ತೊಡಗಿದ. ಮಹಮದೀಯನೋರ್ವ ಆಗಿಂದಾಗ್ಗೆ ಕೇಶಮುಂಡನ ಮಾಡಿಸಿಕೊಳ್ಳುವುದರಲ್ಲಿ ಅರ್ಥವಿದೆ. ಆದರೆ ಹಿಂದೂವಾದ ನನಗೆ ಹಾಗೆ ಅದರಲ್ಲೂ ಮುಖಕ್ಷೌರ ಮಾಡಿಸಿಕೊಳ್ಳುವ ಅಗತ್ಯವೇನಿದೆ ಎಂದು ಪ್ರಶ್ನಿಸಿದ. ನೀವೇಕೆ ದಾಡಿ ಬೆಳೆಸಬಾರದು ಎಂದು ನೇರವಾಗಿ ಕೇಳಿದ. ಮನೆಯಲ್ಲಿ ಗಡ್ಡ ಬೆಳೆಸುವುದಿಲ್ಲವೇನು? ನಿಮಗೆ ನಿಯತವಾಗಿ ಮುಖಕ್ಷೌರ ಮಾಡಲು ನಾಯಿಂದನನ್ನು ನೇಮಿಸಿಕೊಂಡಿದ್ದೀರೇನು? ಎಂದು ಪ್ರಶ್ನಿಸಿದ. ನನಗೆ ಉತ್ತರ ಕೊಡಲು ಅವಕಾಶ ನೀಡದಂತೆ ಒಂದರ ಮೇಲೊಂದು ಪ್ರಶ್ನೆಯನ್ನು ಆತ ಚಿಮ್ಮತ್ತೊಡಗಿದ.

ತನ್ನ ಮಾತೇ ಕಾನೂನು ಎಂಬ ಸುಪರಿಂಟೆಂಡೆಂಟನ ಬಡಬಡಿಕೆಯಿಂದ ಲಜಪತರಿಗೇನೂ ನೋವಾಗಲಿಲ್ಲ. ಆದರೆ, ಆತ ''ನಾನು ಹೇಳಿದ ಸತ್ಯ ಸಂಗತಿಯನ್ನು ನನ್ನ ಮನೆಯಲ್ಲಿ ದಿನ ಬಿಟ್ಟು ದಿನ ಮುಖಕ್ಷೌರ ಮಾಡಲು ಓರ್ವ ಕ್ಷೌರಿಕನನ್ನು ನೇಮಿಸಿಕೊಂಡಿದ್ದೆ ಎಂದು ಹೇಳಿದ ಮಾತನ್ನು ಆತ ಶಂಕಿಸಿದ. ಜೊತೆಗೆ ನನ್ನ ಬಂಧನದ ಅವಧಿಯಲ್ಲಿ ಮುಖಕ್ಷೌರವೊಂದು ಪ್ರತಿಷ್ಠೆ ಎಂದು ನಾನೆಂದು ಭಾವಿಸಿರಲಿಲ್ಲ. ಸರ್ಕಾರದ ವೆಚ್ಚದಲ್ಲಿ ಲಕ್ಷುರಿಯನ್ನು ಪಡೆದುಕೊಳ್ಳಲು ನಾನು ಇಚ್ಚಿಸಿರಲಿಲ್ಲ.''

ಈ ಹಿಂದೆ ಆರ್ಯ ಸಮಾಜದಲ್ಲಿದ್ದ ಗೆಳೆಯರ ರೀತಿಯಲ್ಲಿ ಲಜಪತರು ಗಡ್ಡ ಬೆಳೆಸಿದ್ದರು. ಅವರನ್ನು ಬಂಧಿಸಿ ಗಡಿಪಾರು ಮಾಡುವುದಕ್ಕೆ ಸಾಕಷ್ಟು ಮುಂಚೆ ಆ ಗಡ್ಡವನ್ನು ಅವರು ತೆಗೆಯಿಸಿ ದಿನಬಿಟ್ಟು ದಿನ ಮುಖಕ್ಷೌರವನ್ನು ಅಭ್ಯಾಸ ಮಾಡಿಕೊಂಡಿದ್ದರು.

ಕೊನೆಗೆ ಲಜಪತರೇ ನಾಯಿಂದನಿಗೆ ಆ ತಿಂಗಳ ಸಂಭಾವನೆ ಕೊಟ್ಟರು. ಎರಡು ಮೂರು ತಿಂಗಳ ನಂತರ ಜೈಲು ಅಧಿಕಾರಿ ತನ್ನ ಧೋರಣೆ ಬದಲಾಯಿಸಿಕೊಂಡು ಆ

'ಲಕ್ಸುರಿ'ಯ ಖರ್ಚನ್ನು ತಾನೇ ಕೊಡತೊಡಗಿದ. ಲಜಪತರು ಸದಾ ಒಳ್ಳೆಯ ಆಹಾರವನ್ನೇ ಬಯಸುತ್ತಿದ್ದವರು. ಒಳ್ಳೆಯ ಆಹಾರವೆಂದರೆ ನಾಲಿಗೆಗೆ ರುಚಿಯಾದದ್ದು ಎಂದಲ್ಲ. ಸುಪರಿಂಟೆಂಡೆಂಟರ ಅಡಿಗೆಯವನು ಲಜಪತರ ಅಡಿಗೆಯ ವ್ಯವಸ್ಥೆಯ ಮೇಲೆ ಪರೋಕ್ಷವಾಗಿ ಪರಿಣಾಮಕಾರಿ ಹಿಡಿತ ಹೊಂದಿದ್ದ. ಅವರ ಅಡಿಗೆಗೆ ಬೇಕಾದ ಸಾಮಾಗ್ರಿಗಳನ್ನು ಖರೀದಿಸುವಾಗ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಲಪಟಾಯಿಸುವ ಸಲುವಾಗಿ ಹೊಂಚು ಹಾಕುತ್ತಿದ್ದ. ಆಗಾಗ ಅದರ ಪರಿಣಾಮ ಲಜಪತರಿಗೆ ಭಾಸವಾಗತೊಡಗಿತು. ಬಯಸಿದ ತರಕಾರಿಗಳನ್ನು ಆತ ಲಜಪತರಿಗೆ ತಂದು ಕೊಡುತ್ತಿರಲಿಲ್ಲ. ಅಂತಹ ತರಕಾರಿಗಳಿಗೆ ಹಣ ಖರ್ಚು ಮಾಡುವ ಮೂಲಕ ತನ್ನ ಗಳಿಕೆಯನ್ನು ಕಡಿಮೆ ಮಾಡಿಕೊಳ್ಳಲು ಅಡಿಗೆಯವ ಬಯಸದಿದ್ದದ್ದೇ ಅದಕ್ಕೆ ಕಾರಣ. ಈ ಬಗ್ಗೆ ಸುಪರಿಂಟೆಂಡೆಂಟ್ ಅವರನ್ನು ಪ್ರಶ್ನಿಸಿದಾಗ ಕೈದಿ ಬಯಸುವ ತರಕಾರಿಗಳು ಲಭ್ಯವಿಲ್ಲವೆಂದೋ, ಅಥವಾ ದುಬಾರಿ ಬೆಲೆಯದೆಂದೋ ಹೇಳಿಬಿಡುತ್ತಿದ್ದ. ಆದರೆ ಲಜಪತರ ಬೆಂಗಾವಲಿಗಿದ್ದ ಸಾರ್ಜಂಟ್‌ನ ಊಟದ ತಟ್ಟೆಯಲ್ಲಿ ಅಂತಹ ತರಕಾರಿಗಳು ಇರುತ್ತಿದ್ದದ್ದು ಲಜಪತರಿಗೆ ಅರಿವಾಗುತ್ತಿತ್ತು.

ವಿಹಾರಾರ್ಥ ಓಡಾಟದ ವಿಷಯದಲ್ಲಿ ಗೊಂದಲ ಹುಟ್ಟಿಕೊಂಡಿತು. ಆರಂಭದ ದಿನಗಳಲ್ಲಿ ಸುಪರಿಂಟೆಂಡೆಂಟ್ ಲಜಪತರಿಗೆ ಆತ್ಮೀಯತೆಯನ್ನು ತೋರಗೊಟ್ಟಿದ್ದರು. ಹಿಂದು ಮುಂದು ನೋಡದೆ ಸಾರ್ಜಂಟ್‌ನ ನೋಟಕ್ಕೆ ಒಳಪಡುವ ವ್ಯಾಪ್ತಿಯೊಳಗೆ ಅಡ್ಡಾಡುವ ಸ್ವಾತಂತ್ರ್ಯವನ್ನು ನಿರಾಯಸವಾಗಿ ಕೊಟ್ಟಿದ್ದರು. ಇನ್ನೂ ಒಂದು ಹಂತ ಮುಂದೆ ಹೋಗಿ ಶಸ್ತ್ರಸಜ್ಜಿತ ಸಾರ್ಜಂಟನ ಬೆಂಗಾವಲಿನಲ್ಲಿ ಕೋಟೆಯೊಳಗೆ ಅಡ್ಡಾಡುವ ಅವಕಾಶವನ್ನು ನೀಡಿದ್ದರು. ಆರೋಗ್ಯ ದೃಷ್ಟಿಯಿಂದ ಲಜಪತರು ಪ್ರತಿನಿತ್ಯ ಒಂದೆರಡು ತಾಸು ನಿಯಮಿತವಾಗಿ ತೆರೆದ ಮೈದಾನದಲ್ಲಿ ಅಡ್ಡಾಡಿ ಬರಲು ಆಶಿಸುತ್ತಿದ್ದರು. ಕಾಲ ಕಾಲಕ್ಕೆ ಅವರನ್ನು ಭೇಟಿ ಮಾಡುತ್ತಿದ್ದ ಡೆಪ್ಯುಟಿ ಕಮಿಷನರ್ ಸಹ ಆ ಸಲಹೆಯನ್ನು ಪುರಸ್ಕರಿಸಿದ್ದರು. ಆದರೆ ದಿನಕಳೆದಂತೆ ಆ ಅನುಕೂಲ ಚ್ಯುತಿಗೊಳ್ಳತೊಡಗಿತು. ದಿನವಲ್ಲಿ ಎರಡು ಬಾರಿ ಲಜಪತರೊಂದಿಗೆ ಹೋಗಲು ಸಾರ್ಜಂಟ್ ನಿರಾಕರಿಸತೊಡಗಿದ. ನಿಜವಾಗಿ ಹೇಳುವುದಾದರೆ ಲಜಪತರ ಓಡಾಟವನ್ನು ಆತ ಬಯಸುತ್ತಿರಲಿಲ್ಲ. ಅದಕ್ಕೆ ಪ್ರಬಲವಾದ ಕಾರಣವೂ ಇತ್ತು. ಬೆಂಗಾವಲಿಗೆ ಹೋಗುವಾಗ ಆತ ಸಮವಸ್ತ್ರ ತೊಡಬೇಕಾಗುತ್ತಿತ್ತು. ಖಡ್ಗ ಧರಿಸಬೇಕಾಗಿತ್ತು. ಗುಂಡುಗಳನ್ನು ತುಂಬಿದ ರಿವಾಲ್ವರ್‌ಗಳನ್ನು ಹಿಡಿದಿರಬೇಕಾಗಿತ್ತು. 24 ಕಾಡತೂಸುಗಳ ಪಟ್ಟಿಯನ್ನು ಹಾಕಿಕೊಳ್ಳಬೇಕಾಗಿತ್ತು. ಬೇಸಿಗೆಯಲ್ಲಿ ಹೀಗೆ ಸಮವಸ್ತ್ರ ಧರಿಸಿ ಶಸ್ತ್ರಾಸ್ತ್ರ ಹಿಡಿದು ಲಜಪತರೊಂದಿಗೆ ಅಡ್ಡಾಡುವುದು ಆ ಸಾರ್ಜಂಟನಿಗೆ ಸಮ್ಮತವಾಗುತ್ತಿರಲಿಲ್ಲ. ಅದು ಆ ಬಂಗಲೆಯ ಮೈದಾನದಲ್ಲಿ ಸುಮಾರು 3 ಕಿ.ಮೀ. ದೂರ ಅಡ್ಡಾಡಬೇಕಾಗಿದ್ದನ್ನು ಆತ ಇಷ್ಟಪಡುತ್ತಿರಲಿಲ್ಲ.

ಈ ಮಧ್ಯೆ 'ವ್ಯವಸ್ಥೆ'ಯ ತೊಡಕು ಸಹ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವಂತೆ ಮಾಡಿತು.

"ಕೈದಿಯಾಗಿ ನಾನು ಜೈಲು ಸುಪರಿಂಟೆಂಡೆಂಟರ ವ್ಯಾಪ್ತಿಯಲ್ಲಿದ್ದೆ. ಆದರೆ ನನ್ನ ಬೆಂಗಾವಲಿಗಿದ್ದ ಸಾರ್ಜಂಟ್ ಜಿಲ್ಲಾ ಪೊಲೀಸ್ ಸುಪರಿಂಟೆಂಡೆಂಟ್ ಅವರಿಂದ

ನೇಮಿಸಲ್ಪಟ್ಟಿದ್ದ. ಬಂಗಲೆಯಲ್ಲಿ ನನ್ನ ಸುರಕ್ಷತೆಯ ಹೊಣೆ ತನಗೆ ಸಂಬಂಧಪಟ್ಟಿದ್ದೆಂದೂ, ವಿಹಾರದ ಓಡಾಟದ ಕಾಲದ ಹೊಣೆಗಾರಿಕೆಯು ತನಗೆ ಸಂಬಂಧಪಟ್ಟದ್ದೆಂದೂ ಆತ ಭಾವಿಸಿಕೊಂಡಿದ್ದ. ಹೀಗಾಗಿ ತಾನು ಅವಕಾಶ ನೀಡದ ಯಾವುದೇ ರಸ್ತೆಯಲ್ಲೂ ಲಜಪತರು ಓಡಾಡುವುದನ್ನು ಆತ ಸಹಿಸುತ್ತಿರಲಿಲ್ಲ.''

ಮಾಂಡೇಲೆ ಕೋಟೆಗೆ ಗಡಿಪಾರು ಕೈದಿಯಾಗಿ ಅಜಿತ್ ಸಿಂಗ್ ಬಂದ ನಂತರ ಪರಿಸ್ಥಿತಿ ಇನ್ನಷ್ಟು ತೀಕ್ಷ್ಣವಾಯಿತು. ಕೇವಲ ಎರಡು ರಸ್ತೆಗಳಲ್ಲಿ ಮಾತ್ರ ಲಜಪತರ ಓಡಾಟ ಸೀಮಿತಗೊಂಡಿತು. ಆ ಪೈಕಿ ಒಂದು ರಸ್ತೆಯಲ್ಲಂತೂ ಹುಣಿಸೆಮರಗಳು ಇರಲೇ ಇಲ್ಲ. ಸುಡುಬಿಸಿಲಲ್ಲಿ ತಂಪನೆಯ ಹವಾಮಾನ ಹಾಗೂ ಹಿತಕರ ಉತ್ಸಾಹ, ಉಲ್ಲಾಸ ನೀಡುತ್ತದೆ ಎಂಬ ಲಜಪತರು ಆ ವೃಕ್ಷಗಳಿದ್ದ ರಸ್ತೆಯನ್ನೇ ಹೆಚ್ಚು ಅಪೇಕ್ಷಿಸುತ್ತಿದ್ದರು. ಈ ಬೆಳವಣಿಗೆಯನ್ನು ಲಜಪತ್‌ರಾಯ್ ಜಿಲ್ಲಾಧಿಕಾರಿ ಲಕ್ಷ್ಯಕ್ಕೆ ತಂದರು. ಆ ಅಧಿಕಾರಿ ಒಂದು ಜೊತೆ ಕಪ್ಪು ಕನ್ನಡಕಗಳನ್ನು ಶಿಫಾರಸು ಮಾಡಿದರು. ಅವು 'ಲಕ್ಸುರಿ' ವಸ್ತುಗಳೆಂದು ಜೈಲಿನ ಸುಪರಿಂಟೆಂಡೆಂಟ್ ಒದಗಿಸಲಿಲ್ಲ.!

ಅರಮನೆಯ ಕಾಲುವೆಯಲ್ಲಿ ಮೀನುಗಳು ಸಮೃದ್ಧವಾಗಿದ್ದವು. ಜೈಲು ಸುಪರಿಂಟೆಂಡೆಂಟ್ ಕಾಲಕಳೆಯಲೋಸುಗ ಮೀನು ಹಿಡಿಯುವ ಹವ್ಯಾಸ ಬೆಳೆಸಿಕೊಳ್ಳಲು ಸಲಹೆ ಮಾಡಿದ. ಐಜಾಕ್ ವಾಲ್ಟನ್‌ನ ಹವ್ಯಾಸವನ್ನು ಬೆಳೆಸಿಕೊಳ್ಳಲು ಲಜಪತರು ಎಂದಿಗೂ ಇಷ್ಟಪಡಲಿಲ್ಲ. ಆದರೆ ಓರ್ವ ಬಂದಿಯಾಗಿ ನಾಲ್ಕು ಗೋಡೆಗಳ ಮಧ್ಯೆ ಇರುವುದಕ್ಕಿಂತಲೂ ಸಾಧ್ಯವಾದಷ್ಟು ಹೊರ ವಾತಾವರಣದಲ್ಲಿರುವ ಬಯಕೆಯಿಂದಾಗಿ ಅವರು ಆ ಸಲಹೆಯನ್ನು ಮಾನ್ಯ ಮಾಡಿದರು. ಗಾಳವೊಂದನ್ನು ತರಿಸಿಕೊಂಡರು. ಅದನ್ನು ಸಾರ್ಜಂಟನೋ, ಅಥವಾ ಪೊಲೀಸ್ ಪೇದೆಗಳೋ ಯಾರು ಕರ್ತವ್ಯದ ಮೇಲಿರುತ್ತಿದ್ದರೋ ಅವರು ಬಳಸುತ್ತಿದ್ದರು. ಲಜಪತರು ಕಾಲುವೆಯ ದಂಡೆಯಲ್ಲಿ ಕುಳಿತು ಕಾಲಹರಣ ಮಾಡುತ್ತಿದ್ದರು ಅಷ್ಟೇ.!

ಬೇಸರದ ಬವಣೆಯಲ್ಲಿ ಬಸವಳಿಯ ತೊಡಗಿದ ಕೈದಿಗೆ ಆ ಪರ್ಯಾಯವೂ 'ಸಂತೋಷವನ್ನಾಗಲಿ, ಪರಿಹಾರವನ್ನಾಗಲಿ ನೀಡಲಿಲ್ಲ.'

ಮಾಂಡೇಲೆ ಗಡಿಪಾರು ಶಿಕ್ಷೆಯ ಸಮಯದಲ್ಲಿ ಲಜಪತರು ದಿನಚರಿಯೊಂದನ್ನು ಬರೆದಿಡುವ ಪ್ರಯತ್ನವನ್ನು ಮಾಡಿದರು. ಮೊದಲ ಒಕ್ಕಣೆ ಜೂನ್ 26ರ ದಿನಾಂಕದ್ದು. ಆ ದಿನಚರಿಯನ್ನು ಮುಂದೆ ಜತನ ಮಾಡಕೊಳ್ಳಲಿಲ್ಲ. ಆದರೂ ಅದರ ಕೆಲವು ಭಾಗಗಳನ್ನು 'Story of My Deportation' ಕೃತಿಯಲ್ಲಿ ಬಳಸಲಾಗಿದೆ. ಅವುಗಳ ಪ್ರಕಾರ ಲಜಪತರ ಆರೋಗ್ಯ ಉತ್ತಮವಾಗಿರಲಿಲ್ಲ. ಉದರ ಸ್ಥಿತಿ ಏರುಪೇರಾಗುತ್ತಿತ್ತು. ನಿದ್ದೆ ಹಿತಕರವಾಗಿರುತ್ತಿರಲಿಲ್ಲ. ಅವರನ್ನು ಪರೀಕ್ಷಿಸಿದ ಸುಪರಿಂಟೆಂಡೆಂಟ್ ಹೊಟ್ಟೆಯ ಆರೋಗ್ಯಕ್ಕೆ ಅನುಕೂಲಕರವಾದ ವಿರೇಚಕ ಪುಡಿ ಮತ್ತು ಸಲ್ಫೋನಾಲ್‌ಗಳಂತಹ ನಿದ್ದೆಕಾರಕ ಮದ್ದುಗಳನ್ನು ಸಲಹೆ ಮಾಡುತ್ತಿದ್ದರು. ತಮಗೆ ಉಂಟಾಗುತ್ತಿದ್ದ ತೊಡರು ಹಾಗೂ ತೊಂದರೆಗಳನ್ನು ತಾವೇ ಕಂಡು ಕೊಂಡ ರೀತಿಯಲ್ಲಿ ಅವರು ಹೀಗೆ ಬರೆದಿಟ್ಟಿದ್ದಾರೆ.

"ಆ ಬಂಧನ, ಏಕಾಂಗಿತನದ ಶಿಕ್ಷೆ, ನಿಯತ ವ್ಯಾಯಾಮ ತಪ್ಪಿದ ರೀತಿ, ಅಪಮಾನದಿಂದಾಗುತ್ತಿದ್ದ ನೋವು, ಅನಗತ್ಯ ಕಿರುಕುಳ, ಮನಸ್ಸಿಗೆ ಹಿಡಿಸುವ ಸಹವಾಸ ಇಲ್ಲದ ಸ್ಥಿತಿ ಮತ್ತು ಅದಕ್ಕೆ ಪೂರಕವಾದ ಇತರ ಅನಾನುಕೂಲಗಳು ಪ್ರತಿಕೂಲ ಪರಿಣಾಮ ಬೀರತೊಡಗಿದವು. ಅವು ಸಹಿಸಲಾರದ ಬವಣೆಗಳಾಗಿ ಕಂಡು ಬರತೊಡಗಿದವು. ಸಹಜವಾಗಿ ನಾನು ಈ ಬವಣೆಗಳಿಂದ ಬಾಧೆಗೆ ಒಳಗಾದೆ. ಮೊದಲ ಮೂರು ತಿಂಗಳ ಶಿಕ್ಷೆಯಂತೂ ಸಹಿಸಲು ಅಸಾಧ್ಯವಾಗಿತ್ತು. ದಿನ ಕಳೆದಂತೆ ನನ್ನ ವಿಧಿಯೊಂದಿಗೆ ನಾನೇ ರಾಜಿ ಮಾಡಿಕೊಳ್ಳತೊಡಗಿದೆ. ನನ್ನ ಪರಿಸರದೊಂದಿಗೆ ಒಗ್ಗಿಕೊಳ್ಳತೊಡಗಿದೆ. ಸಾಧ್ಯವಾದಷ್ಟು ನಾನೇ ಆ ಪರಿಸ್ಥಿತಿಗೆ ಒಗ್ಗಿಸಿಕೊಳ್ಳುವ ಪ್ರಯತ್ನ ಮಾಡಿದೆ. ಸಣ್ಣದೆನ್ನಬಹುದಾದ 'ಪ್ರೀತಿಯ ಪ್ರಕರಣ'ವೊಂದು ಅವರ ರಾತ್ರಿಗಳನ್ನು ನುಂಗಿತು. ಈ ಪ್ರಕರಣವನ್ನು ಲಜಪತರ ನಿರೂಪಣೆಯಲ್ಲೇ ಓದಿದರೆ ರೋಚಕ. ಅವರ 'Story of My Deportation' ಕೃತಿಯ ಸುಮಾರು ಅರ್ಧ ಡಜನ್ ಪುಟಗಳಲ್ಲಿ ಈ ನಿರೂಪಣೆ ಬರುತ್ತದೆ.

"ನನ್ನ ಗಡಿಪಾರು ಶಿಕ್ಷೆಯಲ್ಲಿ ನನ್ನನ್ನು ಗಹನವಾಗಿ ಕಾಡಿದ್ದು ಒಂಟಿತನ... ಐರೋಪ್ಯ ಸಾರ್ಜಂಟ್‌ರುಗಳಲ್ಲಿ ಕೆಲವರು ನನ್ನೊಂದಿಗೆ ಮಾನವ ಸಹಜ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಅಂತಹವರ ಸಹವಾಸವನ್ನು ನಾನು ಆಗಿಂದಾಗ್ಗೆ ಬಯಸುತ್ತಿದ್ದೆ. ಆದರೂ ಆ ಸಹವಾಸದಿಂದ ನನಗೆ ಎಂತಹ ಹರ್ಷ ಸಿಕ್ಕಿತು? ಮೊದಲನೆಯದಾಗಿ, ನನ್ನ ಶಿಕ್ಷಣ ಮತ್ತು ಜೀವನದ ಸ್ಥಾನಮಾನ ಅವರದಕ್ಕಿಂತಲೂ ಹೆಚ್ಚು ಹರವಿನಿಂದ ಕೂಡಿದ್ದಾಗಿತ್ತು. ಆ ಹಂತಕ್ಕೆ ಅವರ ಎತ್ತರಗಳು ಕಾಣುತ್ತಿರಲಿಲ್ಲ. ನನ್ನ ಭಾವನೆಗಳು ಮತ್ತು ಸ್ಫುರಣಗಳಿಗೆ ಸ್ಪಂದಿಸುವ ಹರವು ಅವರಲ್ಲಿರಲಿಲ್ಲ. ಜೊತೆಗೆ ಅಭಿರುಚಿಗಳು ತೀರಾ ಭಿನ್ನವಾಗಿದ್ದವು. ಅವರದೋ ಬ್ರಿಟಿಷ್ ನಡವಳಿಕೆಯ ಪಾಶವಿ ಕೃತ್ಯಗಳು. ನನ್ನ ಅಭಿರುಚಿ ಮತ್ತು ಆಶಯಗಳು ಹಿಂದೂ ಪ್ರಣೀತ ನೈತಿಕ ಮುಖದವು."

ಅಂತಹ ಪ್ರಸಂಗದಲ್ಲಿ ಲಜಪತರಿಗೆ ವಿಚಿತ್ರ ಸಹಯೋಗವೊಂದು ಒದಗಿಬಂದಿತು. ವ್ಯಾಘ್ರ ಕುಟುಂಬಕ್ಕೆ ಸೇರಿದ ಬ್ರಿಟಿಷ್ ಸಿಂಹವನ್ನು ಪ್ರತಿನಿಧಿಸುವ ಮನುಷ್ಯ ಮಾತ್ರರೊಂದಿಗೆ ಹೊಂದಿಕೊಳ್ಳಬಹುದಾದ ಸಹಯೋಗ ಅದು. ಅವರು ತಮ್ಮ 'Story of My Deportation' ಕೃತಿಯಲ್ಲಿ ಈ ಸಹವಾಸಕ್ಕೆ ಹೆಚ್ಚು ಒತ್ತು ನೀಡಿದ್ದಾರೆ.

"ನಾನಿದ್ದ ಬಂಗಲೆಯಲ್ಲಿ ನನಗೆ ಎರಡು ಬೆಕ್ಕಿನ ಮರಿಗಳು ಜೊತೆಗೂಡಿದವು ! ನಾನು ಅವುಗಳನ್ನು ತುಂಬಾ ಹಚ್ಚಿಕೊಂಡೆ... ಅವು ಬಹು ಸುಂದರವಾಗಿದ್ದವು. ಒಂದಂತೂ ಹುಂಡಿ ಬಣ್ಣದ ವ್ಯಾಘ್ರಿಣಿಯಂತೆ ಕಾಣುತ್ತಿತ್ತು. ಇನ್ನೊಂದರ ಮೇಲೆ ಕಪ್ಪು ಪಟ್ಟೆಗಳಿದ್ದವು. ಅವುಗಳಿಗೆ ನಾನು ಕೈಯಾರೆ ಊಣಬಡಿಸುತ್ತಿದ್ದೆ. ಅವು ನನ್ನನ್ನು ತುಂಬಾ ಹಚ್ಚಿಕೊಂಡಿದ್ದವು. ನನ್ನ ಪಾಲಿಗೆ ಅವುಗಳ ಸಹಯೋಗ ಒಂದಷ್ಟು ಸಂತೋಷ ಉಂಟು ಮಾಡಿತು. ಆದರೆ ಅತಿ ಶೀಘ್ರದಲ್ಲಿ ಆ ಸಂತೋಷ ವಿಷಮವೆಂಬ ಅನುಭವವೂ ನನಗಾಯಿತು. ರಾತ್ರಿಯ ವೇಳೆಯಲ್ಲಿ ನನ್ನ ಹಾಸಿಗೆಗೆ ನುಸುಳಿ ನನ್ನೊಂದಿಗೆ ಮಲಗಲು ಅವು ಇಷ್ಟಪಡತೊಡಗಿದವು. ಈ ವಿಷಯದಲ್ಲಿ ಅವು ನನ್ನನ್ನು ಅವು ಬಹುವಾಗಿ ಪೀಡಿಸುತ್ತಿದ್ದವು. ಅನೇಕ ರಾತ್ರಿಗಳಲ್ಲಿ

ಅದೊಂದು ಉಪಟಳವೆನಿಸಿತು. ಒಂದು ಕಡೆ ನಾನು ಅವುಗಳನ್ನು ಬಹುವಾಗಿ ಹಚ್ಚಿಕೊಂಡಿದ್ದೆ. ಇನ್ನೊಂದು ಕಡೆ ನನ್ನ ನಿದ್ದೆಯನ್ನು ಹಾಳುಗೆಡವಿ ಅವು ನನ್ನ ನೆಮ್ಮದಿಗೆ ಭಂಗ ತರುತ್ತಿದ್ದವು. ಹಗಲು ಹೊತ್ತಿನಲ್ಲಿ ಅವುಗಳ ಸಹವಾಸ ನನಗೆ ಹಿತಕರವೆನಿಸಿದರೆ ರಾತ್ರಿಯೆಲ್ಲಾ ಅದು ಹಿಂಸೆಯಾಗುತ್ತಿತ್ತು.'' ಹೀಗೆ ಹಲವು ದಿನಗಳು ಕಳೆದ ನಂತರ ಲಜಪತರು ಪರ್ಯಾಯ ಮಾರ್ಗವೊಂದನ್ನು ಕಂಡು ಕೊಂಡರು. ಹಗಲಿನೊಂದಿಗೆ ಅವುಗಳೊಂದಿಗೆ ಒಡನಾಟ. ರಾತ್ರಿ ಊಟವಾದ ನಂತರ ಇನ್ನೊಂದು ಕೋಣೆಯಲ್ಲಿ ಅವುಗಳನ್ನು ಕೂಡಿ ಹಾಕುತ್ತಿದ್ದರು. ಆ ಬೆಕ್ಕಿನ ಮರಿಗಳ ಆಟ, ಚೆಲ್ಲಾಟಗಳನ್ನು ಕಂಡು ತಾವು ಸಂತೋಷಿಸುತ್ತಿದ್ದ ರೀತಿಯನ್ನು ಅವರು ಹೀಗೆ ವಿವರಿಸಿದ್ದಾರೆ.

''ಅವೆರಡು ಒಂದರೊಂದಿಗೊಂದು ಚೆಲ್ಲಾಟವಾಡುತ್ತಿದ್ದನ್ನು ನಾನು ಬಹು ಹೊತ್ತಿನತನಕ ನೋಡುತ್ತಾ ಸಂತೋಷಪಡುತ್ತಿದ್ದೆ. ಒಂದನ್ನೊಂದು ಅವು ಪರಸ್ಪರ ನಾಲಿಗೆಯಿಂದ ನೆಕ್ಕಿಕೊಳ್ಳುತ್ತಿದ್ದವು. ಒಂದರ ತೋಳನ್ನು ಇನ್ನೊಂದು ತೆಕ್ಕೆಗೆ ಹಾಕಿಕೊಂಡು ಮಲಗುತ್ತಿದ್ದವು. ಆಗ ಆ ನೋಟ ಅವಳಿ ಸಹೋದರಿಯರಂತೆ ಕಾಣುತ್ತಿತ್ತು. ಒಂದನ್ನೊಂದು ಅವು ಹಚ್ಚಿಕೊಂಡಿದ್ದ, ಅನುಬಂಧ ಹೊಂದಿದ್ದ ರೀತಿ ಅಮೋಘ. ನನಗಂತೂ ಅದು ತೀರಾ ಹೊಸ ಅನುಭವವೆನಿಸಿತು.''

ಬೆಕ್ಕಿನ ಮರಿಗಳು ಅಷ್ಟೊಂದು ವಿಸ್ಮಯ ವಿಚಿತ್ರ ಅನುಭವ ಒದಗಿಸುತ್ತಿದ್ದನ್ನು ಕಂಡು ತಮ್ಮ ಕುಟುಂಬದಲ್ಲಿ ಇನ್ನೊಬ್ಬ ಸದಸ್ಯರನ್ನು ಸೇರಿಸಿಕೊಳ್ಳಲು ಲಜಪತರು ಬಯಸಿದರು. ನಾಯಿಮರಿಯೊಂದನ್ನು ಸಂಪಾದಿಸಿಕೊಂಡರು. ಆದರೆ ಅವರ ಮನೆಗೆಲಸದ ಆಳು ಇನ್ನೂ ಉತ್ತಮವಾದ ಕುನ್ನಿಯನ್ನು ತಂದುಕೊಡುವ ಭರವಸೆಯೊಂದಿಗೆ ಆ ಮರಿಯನ್ನು ಕೊಂಡೊಯ್ದ. ಇನ್ನೊಂದು ನಾಯಿಮರಿ ಬರಲೇ ಇಲ್ಲ. ಅದೇ ಸಮಯದಲ್ಲಿ ಇನ್ನೊಂದು ಸಹವಾಸದ ಆನಂದವೂ ಲಜಪತರಿಗೆ ಖುಷಿ ನೀಡತೊಡಗಿತು. ಅದು ಸಹ ಹೆಚ್ಚು ಕಾಲ ಉಳಿಯದೇ ಭ್ರಮನಿರಸನವಾಯಿತು.

''ಮೆಟ್ಟಿಲು ಹಾಕಿದ್ದ ಜಾಗದಲ್ಲಿ ಮೇಲ್ಛಾವಣಿಯ ತೊಲೆ ಮತ್ತು ಅಡ್ಡಪಟ್ಟಿಗಳ ಮಧ್ಯೆ ಮೈನಾ ಕುಟುಂಬವೊಂದು ಗೂಡು ಕಟ್ಟಿತ್ತು. ಆ ದಂಪತಿಗಳು ಆಗಾಗ ಮಧುರವಾಗಿ ಹಾಡುತ್ತಾ ನನಗೆ ಸಂಗೀತದ ಆಮೋದ ನೀಡುತ್ತಿದ್ದರು. ದುರಾದೃಷ್ಟ ನನ್ನ ಬೆಂಗಾವಲಿಗೆ ಬರುತ್ತಿದ್ದ ಒಬ್ಬ ಸಾರ್ಜಂಟನ ಕಣ್ಣು ಆ ಅಮಾಯಕ ಕುಟುಂಬದ ಮೇಲೆ ಬಿತ್ತು. ಗಂಡು ಮೈನಾ ಹಿಡಿಯುವುದು ಅವನಿಗೆ ಸಾಧ್ಯವಿರಲಿಲ್ಲ. ಹೆಣ್ಣು ಬಲು ಚುರುಕು. ಅದು ಅವನ ಪ್ರಯತ್ನಕ್ಕೆ ತಣ್ಣೀರು ಎರಚುತ್ತಿತ್ತು. ಆದರೆ ಆಕೆ ಆಗ ತಾಯಿ. ತನ್ನ ಪುಟ್ಟ ಮನೆಯಲ್ಲಿ ಎರಡು ಮರಿಗಳನ್ನು ಸಾಕುತ್ತಿದ್ದಳು. ಆ ಪಾಶ್ಚಾತ್ಯ ಕಲ್ಲು ಹೃದಯದ ಸಾರ್ಜಂಟ್ ಆ ಎರಡು ಅಸಹಾಯಕ ಮರಿಗಳನ್ನು ಅಪಹರಿಸಿದ. ಅದೂ ತಾಯಿ ಮೈನಾ ಗುಡಿನಲ್ಲಿ ಇಲ್ಲದ ಸಮಯದಲ್ಲಿ. ಆಕೆ ಮರಳಿ, ತನ್ನ ಗೂಡಿನಲ್ಲಿ ಮರಿಗಳನ್ನು ಕಾಣದಾದಾಗ ಅಧೀರಳಾದಳು. ಮೈನಾಳ ಆ ಸಂತಾನ ವಿಯೋಗದ ನೋವನ್ನು ನನ್ನಿಂದ ಸಹಿಸಲು ಆಗಲಿಲ್ಲ. ತನ್ನ ಗೂಡಿನ ಒಳಗೂ ಹೊರಗೂ ಹರಿಹಾಯ್ದಳು. ಆರ್ತನಾದ ಮಾಡಿದಳು. ಆ ಸುತ್ತಮುತ್ತ ಪ್ರದೇಶದಲೆಲ್ಲಾ ಕೂಗುತ್ತಾ, ಚೀರುತ್ತಾ ಹಾರಾಡಿದಳು. ಇಡೀ ಮನೆಯಲ್ಲೆಲ್ಲಾ ಹುಡುಕಾಡಿದಳು. ಸುಂದರವಾಗಿ ಹಾಡು ಹೊಮ್ಮಿಸುತ್ತಿದ್ದ ಆಕೆಯ ಧ್ವನಿ

ಆರ್ತನಾದವಾಯಿತು! ಅನೇಕ ದಿನಗಳ ಕಾಲ ಆಕೆಯ ಸ್ಥಿತಿ ದುಃಖಕರವಾಗಿತ್ತು. ಹೊರಗೆ ಹೋಗುವುದು ಮತ್ತೆ ಬರುವುದು. ಗೂಡಿನಲ್ಲಿ, ಮನೆಯಲ್ಲಿ ತನ್ನ ಕರುಳಕುಡಿಗಾಗಿ ಹುಡುಕಾಡುವುದು. ನಿಸ್ತೇಜವಾಗಿ ಚೀರುವುದು ನಡೆಯಿತು. ಕ್ರೂರ ಬ್ರಿಟಿಷರ ಕಟುಕ ಹೃದಯದ ವರ್ತನೆಗಳಿಗೆ ಅದೊಂದು ಜ್ವಲಂತ ಸಾಕ್ಷಿಯಾಗಿ ನನಗೆ ಭಾಸವಾಯಿತು. ಇಂಗ್ಲೀಷ್ ಮತ್ತು ಇಂಡಿಯನ್ನರ ರಾಕ್ಷಸಿ ಕೃತ್ಯಗಳ ಪ್ರತೀಕ ಆ ಸಾರ್ಜಂಟ್ ಎಂದು ನನಗೆ ಅನಿಸಿತು. ಕೆಲವು ದಿನಗಳ ನಂತರ ಆ ಮೈನಾಗಳು ಅಲ್ಲಿಗೆ ಬರುವುದನ್ನು ನಿಲ್ಲಿಸಿದವು.''

ಲಜಪತರಿಗೆ ಆ ಗಡಿಪಾರು ಬಂಧನ ದಿನಕಳೆದಂತೆ 'ಎರಡನೇ ಮನೆ'ಯ ರೀತಿಯಾಯಿತು. ಮಾಂಡೇಲೆ ಬಂಧನದಿಂದ ಬಿಡುಗಡೆಯಾದಾಗ ಅವರ ಮನಸ್ಸಿನಲ್ಲಿ ರಕ್ತ ಸಂಬಂಧವೊಂದನ್ನು ಕಡಿದುಕೊಳ್ಳುತ್ತಿರುವಂತಹ ನೋವಾಯಿತು. ಚಿಲಾನ್ ಕ್ಯಾಸಲ್‌ನಿಂದ ಬೋನಿವಾರ್ಡ ಅನುಭವಿಸಿದಂತಹ ನೋವು ಎಂದರೂ ಸರಿ. ಮಾಂಡೇಲೆ ಬಂಧನದ ಅವಧಿಯಲ್ಲಿ ಲಜಪತರು ಬೈರಾನ್ ಸೇರಿದಂತೆ ಅನೇಕ ಮಹಾನ್ ಸಾಹಿತಿಗಳ ಕೃತಿಗಳನ್ನು ಓದಿದ್ದರು. ತಮ್ಮ 'Story'ಯಲ್ಲಿ ಬೈರಾನ್ ಚಿತ್ರಿಸುವ 'Prisoner of Chillon' ಅವರ ಕಣ್ಣ ಮುಂದೆ ಹಾಯ್ದು ಹೋದಂತಾಯಿತು. ಕಥಾನಾಯಕ ತನ್ನ 'ಎರಡನೇ ಮನೆ'ಗೆ ವಿದಾಯ ಹೇಳುವ ಸಮಯದಲ್ಲಿ ವ್ಯಕ್ತಪಡಿಸಿದ ಭಾವನೆಗಳು ಕಣ್ಣ ಮುಂದೆ ಬಂದು ನಿಂತವು.

''ಮತ್ತೆ ಅವು ಕೊನೆಗೂ ಬಂದಾಗ,

ನನ್ನೆಲ್ಲ ಬಂಧನಗಳೂ ಬಿಚ್ಚಿದಂತಾದಾಗ,

ಇವೇ ಗೋಡೆಗಳು ಬೆಳೆದಂತೆ ಕಂಡವು

ಒಂದು ಕುಟೀರ- ಮತ್ತೆ ಅದೆಲ್ಲ ನನ್ನದೇ!

ನನಗೆ ಬಹುವಾಗಿ ಅನಿಸಿತು ಅವು ಬಂದೇ ಬಿಟ್ಟವೆಂದು

ಈ ಎರಡನೇ ಮನೆಯಿಂದ ನನ್ನ ಹೊರಗೆಳೆಯಲೆಂದು,''

ಬೈರಾನ್ ಕಥಾನಾಯಕ ಬೋನಿವಾರ್ಡ್ ತನ್ನ ಬಂಧನದ ಅವಧಿಯಲ್ಲಿ ಜೇಡಗಳೊಂದಿಗೆ ಗೆಳೆತನ ಮಾಡಿಕೊಂಡಿದ್ದನ್ನು ಹೇಳುತ್ತಾನೆ. ಜೇಡಗಳು ತೀರಾ ಸಂಕುಚಿತ ಧೋರಣೆಯವು. ತಮ್ಮ ಬಲೆಯನ್ನು ಬಿಟ್ಟು ಹೊರಗೆ ಬರುವವಲ್ಲ. ಆ ಬಂದಿ ಅವುಗಳೊಂದಿಗೆ ಸ್ನೇಹ ಮಾಡಿಕೊಂಡ ಕಥನ ಅದು. ಬೋನಿವಾರ್ಡ್ 'ಬೆಳದಿಂಗಳ ಅಂಗಳದಲ್ಲಿ ಇಲಿಗಳು ಆಟವಾಡುತ್ತಿದ್ದನ್ನು ನೋಡಿ ಆನಂದಿಸುತ್ತಿದ್ದ. ಅಷ್ಟೇ ಅಲ್ಲ 'ನನ್ನನ್ನು ಬಂಧಿಸಿದ್ದ ಶೃಂಖಲೆಗಳೊಂದಿಗೆ ನಾನು ಸ್ನೇಹ ಮಾಡಿಕೊಂಡಿದ್ದೆ' ಬೈರಾನನ ಲೇಖನಿ ಅಂತ್ಯಗೊಳ್ಳುವುದು. 'ನಾನು ನನ್ನ ಸ್ವಾತಂತ್ರ್ಯವನ್ನು ನಿಟ್ಟುಸಿರು ಬಿಡುತ್ತಾ ಮರಳಿ ಪಡೆದುಕೊಂಡೆ.' ಎಂದು ಮಾಂಡೇಲೆಯ ಕೈದಿಯು ಅಂತಿಮದ ನಿಟ್ಟುಸಿರಿನೊಂದಿಗೆ ತಮ್ಮ ಸ್ವಾತಂತ್ರ್ಯವನ್ನು ಮತ್ತೆ ಪಡೆದುಕೊಂಡ ಬಗ್ಗೆ ಇನ್ನು ಒಂದು ಸಾಲು ಕೊಡುತ್ತಾರೆ.

'' ಅಂದು ನವೆಂಬರ್ 11ರ ಬೆಳಗು. ನನ್ನ ಎರಡು ಬೆಕ್ಕಿನ ಮರಿಗಳು ಅಡ್ಡಾಡಲು ಮನೆಯಿಂದ ಹೊರಗೆ ಹೋಗಿದ್ದವು. ಆ ಸಮಯದಲ್ಲೇ ರೈಲ್ವೆ ನಿಲ್ದಾಣಕ್ಕೆ ಸಾಗಲು ನನ್ನ ಚೀಲ ಮತ್ತು ಸರಕುಗಳನ್ನು ಅಣಿಗೊಳಿಸಲಾಯಿತು. ಕಮಿಷನರ್ ಅವಸರ ಪಡಿಸುತ್ತಿದ್ದರಿಂದ ನನ್ನ ಕುಟುಂಬದ ಆ ಸದಸ್ಯರು ಮರಳುವ ತನಕ ಕಾಯುವ ವ್ಯವಧಾನ ನನಗಿರಲಿಲ್ಲ. ವಿಶೇಷ ರೈಲು ಸಿದ್ಧವಾಗಿದೆ ಎಂದು ಅವರು ಮೇಲಿಂದ ಮೇಲೆ ನನಗೆ ಹೇಳುತ್ತಿದ್ದರು. ಸುಪರಿಂಟೆಂಡೆಂಟ್ ಮತ್ತು ಡೆಪ್ಯುಟಿ ಸುಪರಿಂಟೆಂಡೆಂಟ್ ಬೇಗ ಹೊರಡಲು ಒತ್ತಾಯ ಮಾಡುತ್ತಿದ್ದರು. ಹೀಗಾಗಿ ಆ ಮನೆಯಿಂದ ನಾನು ನೋವಿನಿಂದಲೇ ಬೀಳ್ಕೊಂಡೆ. ನನ್ನ ಆತ್ಮೀಯ ಬೆಕ್ಕಿನ ಮರಿಗಳನ್ನು ಕೊನೆ ಗಳಿಗೆಯಲ್ಲಿ ನೋಡದೇ ವಿದಾಯಗೊಂಡೆ.

ಆ ಮುದ್ದು ಪ್ರಾಣಿಗಳ ಸಹವಾಸ ಲಜಪತರಿಗೆ ಮನರಂಜನೆಯ ಆಯಾಮವಾಗಿತ್ತು ಅಷ್ಟೇ. ವಸ್ತುಶಃ ಅವರು ತಮ್ಮ ಕಡ್ಡಾಯ ಬಿಡುವಿನ ಆ ದಿನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಓದಲು ಬರೆಯಲು ವಿನಿಯೋಗಿಸಿಕೊಳ್ಳುತ್ತಿದ್ದರು. ದಿನಕ್ಕೆ ಸರಾಸರಿ 8-10 ಗಂಟೆಗಳನ್ನು ಓದು ಮತ್ತು ಬರವಣಿಗೆಗೆ ಉಪಯೋಗಿಸುತ್ತಿದ್ದರು. ಓದಿನಲ್ಲಿ ಗಂಭೀರ ಕೃತಿಗಳು ಇರುತ್ತಿದ್ದವು. ನಿಯತಕಾಲಿಕೆ ಮತ್ತು ಕಥೆಗಳು ಸೇರಿಕೊಳ್ಳುತ್ತಿದ್ದವು. 'ಕಾಲಹರಣ'ದ ಸಲುವಾಗಿ ಎರಡನೇ ವರ್ಗದ ಓದು ಪರ್ಯಾಯವಾಗಿದ್ದವು. ಬರ್ಮಾ, ಬರ್ಮಿಯರು ಮತ್ತು ಬರ್ಮಾ ಚರಿತ್ರೆಯ ಬಗ್ಗೆ ಅನೇಕ ಕೃತಿಗಳನ್ನು ಅವರು ಅಧ್ಯಯನ ಮಾಡಿದರು. ಅಂತ್ಯದಲ್ಲಿ 'ಅಫ್ಸಾನ-ಇ-ಬರ್ಮಾ' ಶೀರ್ಷಿಕೆಯಲ್ಲಿ ಉರ್ದು ಸಂಪುಟವೊಂದನ್ನು ಅವರು ಹೊರತಂದರು. ಬರ್ಮಾದ ರೋಚಕ ಕಥನದ ಆ ಕೃತಿಯಲ್ಲಿ ಭಾಗಶಃ ಬರ್ಮಿಯಾ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸಮಸ್ಯೆಗಳ ಚಿಂತನವಿದೆ. ಆಧುನಿಕ ಬರ್ಮಾ ಎದುರಿಸಿದ ಸಮಸ್ಯೆಗಳ ವಿಸ್ತಾರವಿದೆ. ಅದಕ್ಕೆ ಪೂರ್ವದಲ್ಲಿ ಕೆಲವು ಅಧ್ಯಾಯಗಳಲ್ಲಿ ಐತಿಹಾಸಿಕ ಹಿನ್ನಲೆಯನ್ನು ಚಿತ್ರಿಸಲಾಗಿದೆ. ಮಾಂಡೇಲೆ ಕೋಟೆಯ ಗಡಿಪಾರು ಬಂಧನದ ದಿನಗಳಲ್ಲಿ ಅವರು ಓದಿದ ಕೃತಿಗಳು ಉತ್ತಮ ದರ್ಜೆಯವು. ಅವುಗಳ ಪಟ್ಟಿಯನ್ನು 'Story of My Deportation' ಕೃತಿಯಲ್ಲಿ ನೀಡಲಾಗಿದೆ. ಐತಿಹಾಸಿಕ ಕೃತಿಗಳಲ್ಲಿ ಹ್ಯಾಲಂ ಮಹಾಶಯನ 'History of Middle Ages' ಮಾಟ್ಲೀ ಅವರ 'Rise of the Dutch Republic' ಕಯೇ ಮತ್ತು ಮಾಲ್ಲೇಸನ್ ಅವರ 'History of the Indian Mutiny' ಮುಖ್ಯವಾದವು. ಚಾರಿತ್ರಿಕ ಕೃತಿಗಳ ನಂತರ ಅವರ ಅಧ್ಯಯನ ಹರಿದಿದ್ದು ತತ್ವಶಾಸ್ತ್ರದತ್ತ. ಲೇಖಿ, ಹರ್ಬರ್ಟ್ ಸ್ಪೆನ್ಸರ್, ಫೀಲ್ಡಿಂಗ್ ಆಲ್ ರಚಿತ ಕೃತಿಗಳು ಅವುಗಳಲ್ಲಿ ಪ್ರಮುಖವಾದವು. ಅವರನ್ನು ರಂಜಿಸಿದ ಕಥೆಗಳಲ್ಲಿ ಥ್ಯಾಕರೆ ಮತ್ತು ಡಿಕನ್ಸ್ ಕೊಡುಗೆಗಳು ಮುಖ್ಯವಾದವು. ಜೊತೆಗೆ ಟಾಲ್‌ಸ್ಟಾಯ್ ಮತ್ತು ವಾಲ್ಟೇರ್ ಹೊತ್ತಿಗೆಗಳು ಆಕರ್ಷಕವಾಗಿದ್ದವು. ಆಂತೋಣಿ ಹೋಪ್, ಮೇರಿ ಕೊರೆಲಿ ಮತ್ತು ಚರ್ಚಿಲ್‌ರ ಕಥಾಕೃತಿಗಳು ಸಮಯಹರಣಕ್ಕೆ ಹೆಚ್ಚು ಸಹಾಯಕವಾದವು. ಲಜಪತರ ಹೃದಯ ಮೀಟಿದ ಕೃತಿಗಳಲ್ಲಿ ಪರ್ಷಿಯಾದ ಹಫೀಜ್ ರಚನೆಗಳು ಮೊದಲ ಸಾಲಿನಲ್ಲಿ ನಿಲ್ಲುತ್ತವೆ. ಅವುಗಳನ್ನು ಓದಿದಾಗ ಅವರ ಮನಸ್ಥಿತಿಯ ಮೇಲೆ ಹಿಂದೆಂದೂ ಆಗದಂತಹ ಪರಿಣಾಮ ಆಯಿತು. ಲಜಪತರು ಓದಿದ ಉರ್ದು ಕಾವ್ಯಗಳಲ್ಲಿ ಝಾಕ್ ರಚನೆ ಪ್ರಮುಖವಾದವು. ಅವರ ಪ್ರಥಮ ಗುರು ಮಹಮದ್ ಹುಸೇನ್ ಆಜಾದರ ಗದ್ಯಗಳನ್ನು ಅಧ್ಯಯನ ಮಾಡಿದರು.

ಮಾಂಡೇಲ ಬಂಧನದ ದಿನಗಳಲ್ಲಿ ಅವರು ಬರೆದ ಕೃತಿಗಳಲ್ಲಿ ಈಗಾಗಲೇ ...ಮವಂತ ಬರ್ಮಾ ಕುರಿತ ಹೊತ್ತಿಗೆಯೂ ಒಂದು. ಉರ್ದುವಿನಲ್ಲಿ ಜೀವನ ಚರಿತ್ರೆಯ ಕೆಲವು ಅಧ್ಯಾಯಗಳನ್ನು ಬರೆದರು. ಸುಮಾರು 150 ಪುಟಗಳ ರಚನೆ ಅದು. ಆದರೆ ಅವರು ಅದನ್ನು ಪೂರ್ಣಗೊಳಿಸಲಿಲ್ಲ. ಮುಂದೆ ಅವರು ಆ ಹಸ್ತಪ್ರತಿಯನ್ನು ಅವರ ತಂದೆ ಹಾಗೂ ಗೆಳೆಯರು ಕಾಣೆಯಾಗಿಸಿದರು. ಇದನ್ನು ಅವರು 1915ರಲ್ಲಿ ಹೊರತಂದ ತಮ್ಮ ಜೀವನ ಚರಿತ್ರೆಯ ಪೀಠಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಮಧ್ಯೆ ಮಾಂಡೇಲೆ ಕೋಟೆಯ ಬಂಧನದ ದಿನಗಳಲ್ಲಿ ಅವರು ಭಗವದ್ಗೀತೆಯನ್ನು ಸ್ವಲ್ಪಕಾಲ ಅಧ್ಯಯನ ಮಾಡಿದರು. ತತ್ಫಲವಾಗಿ ಇಂಗ್ಲೀಷ್‌ನಲ್ಲಿ 'Message of the Bhagavadgita' ಪ್ರಬಂಧವನ್ನು ಸಿದ್ಧಪಡಿಸಿದರು. 1908ರ ಮಾರ್ಚ್‌ನಲ್ಲಿ ಕಲ್ಕತ್ತಾದ ಮಾಡರ್ನ್ ರಿವ್ಯೂ ನಿಯತಕಾಲಿಕೆಯಲ್ಲಿ ಪ್ರಥಮ ಬಾರಿಗೆ ಅದು ಪ್ರಕಾಶನ ಕಂಡಿತು. ನಂತರ ಕಿರುಹೊತ್ತಿಗೆಯ ರೂಪದಲ್ಲಿ ಅದನ್ನು ಪ್ರಕಟಿಸಲಾಗಿದೆ. ಸೆರೆವಾಸದ ದಿನಗಳಲ್ಲಿ ಲಜಪತರಿಗೆ ಹೆಚ್ಚು ಸಹಾಯವಾದದ್ದು ಭಗವದ್ಗೀತೆ ಮತ್ತು ಹಫೀಜ್ ಕೃತಿಗಳು. ಮನಶಾಂತಿಯನ್ನು ಬಯಸುವ ಯಾರಿಗಾದರೂ ಈ ಎರಡು ಕೃತಿಗಳು ಮಹಾನ್ ಸಂಗತಿಗಳಾಗುತ್ತವೆ. ಅವುಗಳಿಂದಾದ ಅವ್ಯಕ್ತ ಪ್ರಭಾವವನ್ನು ಲಜಪತರು ದಾಖಲು ಮಾಡಿದ್ದಾರೆ.

''ಕೃಷ್ಣ... ನೈಜ ಜ್ಞಾನದ ರೂಪದಲ್ಲಿ ಪದಗಳಾಗಿ ನನ್ನೊಂದಿಗೆ ಸಂಭಾಷಣೆ ನಡೆಸಿದ. ಮಾನವಾತೀತವಾದ ವರ್ಚಸ್ಸಿನ ಪ್ರಭಾವ ಬೀರಿದ. ಸಿದ್ಧಿ ಸಾಧಿಸಿಕೊಂಡ ಕವಿ ಹಫೀಜ್ ತನ್ನ ಶಿರಾಜ್ ಕಾವ್ಯದ ಮೂಲಕ ನನ್ನೊಂದಿಗೆ ಪ್ರೇಮ ಸಂವಾದ ನಡೆಸಿದ... ನಾನು ಬಾಲ್ಯದಲ್ಲಿ ನನ್ನ ತಂದೆಯೊಂದಿಗೆ ಹಫೀಜ್‌ರನ್ನು ಓದಿದ್ದೆ. ಮತ್ತೆ ಬಂಧನದ ಅವಧಿಯಲ್ಲಿ ಅದನ್ನು ಓದಿದಾಗ ಇನ್ನು ಹೆಚ್ಚು ಪ್ರಭಾವದಲ್ಲಿ ಆಳಕ್ಕಿಳಿದೆ.''

ಭಗವದ್ಗೀತೆಯ ಜೊತೆಗೆ ಉಪನಿಷತ್‌ಗಳಲ್ಲಿ ಕೆಲವನ್ನು ಅವರು ಓದುತ್ತಿದ್ದರು. ಧಾರ್ಮಿಕ ಕರ್ತವ್ಯ ಎನ್ನುವಂತೆ ಪ್ರತಿನಿತ್ಯ ಅವುಗಳ ಪಠಣ ಮಾಡುತ್ತಿದ್ದರು. ಬೆಳಗಿನ ಪ್ರಾರ್ಥನೆ ನಿಯತವಾಗಿರುತ್ತಿತ್ತು. ಸಂಧ್ಯಾವಂದನೆ ಕೈಬಿಡುತ್ತಿದ್ದರೆಂದಲ್ಲ. ಆದರೆ ಬೆಳಗಿನ ಹೊತ್ತಿನಲ್ಲಿ ವೇದ ಮತ್ತು ಉಪನಿಷತ್‌ಗಳ ವಿಧ್ಯುಕ್ತ ಪಠಣಕ್ಕೆ ಕೊಟ್ಟಷ್ಟು ಒತ್ತು ಸಂಜೆ ಹೊತ್ತಿನಲ್ಲಿ ಇರುತ್ತಿರಲಿಲ್ಲ.

'The Story of My Deportation' ಕೃತಿಯ ಒಂದು ಅಧ್ಯಾಯದಲ್ಲಿ 'ಬಂಧನದ ಕಾಲದಲ್ಲಿ ನನ್ನ ಪರಿಸ್ಥಿತಿ' ಶೀರ್ಷಿಕೆಯನ್ನಿಟ್ಟಿದ್ದಾರೆ. ಅದರ ಕೊನೆಯಲ್ಲಿ ಹೀಗೆ ಬರೆದಿರುವರು.''...ನಾನು ಆಗಿಂದಾಗ್ಗೆ, ಆಗಿಂದಾಗ್ಗೆ ದುಃಖಿತಪ್ತನು, ಖಿನ್ನನೂ ಆಗುತ್ತಿದ್ದೆ. ಅಂತಹ ಪ್ರಸಂಗಗಳಲ್ಲಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಉತ್ತಮ ಬಳಕೆಗೆ ವಿನಿಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಹೀಗೆ ಮಾಡುವ ಮೂಲಕ ನನ್ನನ್ನು ನಾನೇ ಸಾಂತ್ವನಗೊಳಿಸಿಕೊಳ್ಳುತ್ತಿದ್ದೆ.''

ಈ ಆತ್ಮ ವಿಶ್ಲೇಷಣೆಗೆ ಪೂರಕವಾಗಿ ಮನಃಶಾಂತಿಯ ಸಾಧನೆ ಪರಿಸ್ಥಿತಿಗೆ ಅನುಗುಣವಾಗಿ ಸಂತೃಪ್ತಿ ಸಾಧಿಸಿಕೊಂಡ ವಿವರಗಳನ್ನು ಅವರು ಒದಗಿಸಿದ್ದಾರೆ

ಲಜಪತರಲ್ಲಿ ಸೂಕ್ಷ್ಮ ಸಂವೇದನೆ ಇದ್ದುದ್ದರಿಂದ ಜೈಲಿನಲ್ಲಿ ಅವರಿಗೆ ದೊರೆತ ಉಪಚಾರ ನಿಸ್ಸಂದೇಹವಾಗಿ ಅವರ ಮನಸ್ಸಿನ ಮೇಲೆ ಆಗಿಂದಾಗ್ಗೆ ದುಃಖದ ಪರಿಣಾಮ ಉಂಟು ಮಾಡಿರಲು ಸಾಧ್ಯ. ಆರಂಭದಲ್ಲಿ ಅವರಲ್ಲಿ ಸಂತೋಷದ ಭಾವನೆ ಉಂಟು ಮಾಡಿದ ಜೈಲು ಸುಪರಿಂಟೆಂಡೆಂಟರು ಕೊನೆತನಕ ಅದನ್ನು ಉಳಿಸಲಿಲ್ಲ. ಅನುಕೂಲಕರವಾಗಿಯೂ ನಡೆದುಕೊಳ್ಳಲಿಲ್ಲ. ಆ ಅಧಿಕಾರಿಯ ಹುಂಬುತನದ ನಡವಳಿಕೆಗಳನ್ನು ನಾವು ಈಗಾಗಲೇ ಓದಿದ್ದೇವೆ. 'The Story of My Deportation' ಲಜಪತರ ಸೂಕ್ಷ್ಮತನವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಅವರ ಸ್ವಭಾವ ಎಷ್ಟು ನವಿರಾಗಿತ್ತೆಂಬುದನ್ನು ಹೇಳುತ್ತದೆ. ಅವರ ಸುತ್ತ ಮುತ್ತಲ ಜನ ತಮ್ಮ ಅನುಗಾಲದ ನಡವಳಿಕೆಗಳಲ್ಲಿ ಔದಾಸೀನ್ಯ ತೋರಿದರೂ ಅದನ್ನು ಲಜಪತರು ಗ್ರಹಿಸಿಬಿಡುತ್ತಿದ್ದರು. ತ್ಯಾಗ, ಬಲಿದಾನ ಮಾತುಗಳು ಬಂದಾಗ ಇದು ಅನ್ವಯವಾಗುವುದಿಲ್ಲವೇನೋ ನಿಜ. ಅಂತಹ ತ್ಯಾಗ, ಬಲಿದಾನವನ್ನೇ ಬಯಸುವ ಓದುಗನಿಗೆ ಇದನ್ನೆಲ್ಲಾ ಓದಿದಾಗ ನಿರಾಶೆ ಆಗದೇ ಇರಲು ಸಾಧ್ಯವಿಲ್ಲ. ಈ ವಾಸ್ತವಿಕ ವಿವರಣೆಗಳನ್ನು ಓದುತ್ತಿದ್ದಂತೆ ಅಂತಹ ಓದುಗನ ಭಾವನೆಗಳಲ್ಲಿ ಬೇಸರ ಮೂಡಬಹುದು. ಹಾಗೆಂದ ಮಾತ್ರಕ್ಕೆ ಕೃತಿಯ ಕರ್ತೃ ತ್ಯಾಗ, ಸಮರ್ಪಣೆ ಮತ್ತು ತತ್ಸಂಬಂಧದ ನೋವು ಕಷ್ಟಗಳಿಗೆ ಸಿದ್ಧವಾಗಿರಲಿಲ್ಲವೆಂದು ಭಾವಿಸಿಕೊಂಡರೆ ಅದು ತೀರಾ ಕ್ಷುಲ್ಲಕವಾಗುತ್ತದೆ. ಲಜಪತರು ಎಲ್ಲಾ ತ್ಯಾಗ, ಸಮರ್ಪಣೆಗಳಿಗೂ ಸಿದ್ಧರಾಗಿದ್ದರು. ಹಾಗೆಂದು ಅವರು ತಮಗಾಗಿ ತಾವು ಆರಿಸಿಕೊಂಡ ಮಾರ್ಗದಿಂದ ವಿಚಲಿತರಾಗಲು ಬಯಸುತ್ತಿರಲಿಲ್ಲ. ತಮಗೆ ನೋವು ಉಂಟು ಮಾಡಿದ ಪ್ರಸಂಗಗಳನ್ನು ಅವರು ಬರೆದಿಟ್ಟಿರುವುದರ ಹಿಂದೆ ತಮ್ಮ ಬಗ್ಗೆ ಸಾರ್ವಜನಿಕರಿಂದ ಅನುಕಂಪ ಸಂಪಾದಿಸಿಕೊಳ್ಳುವ ಉದ್ದೇಶ ಖಂಡಿತವಾಗಿ ಇರಲಿಲ್ಲ. ಅನಾಗರಿಕವಾಗಿ, ಹೇಯತನದಿಂದ ತಮ್ಮನ್ನು ನಡೆಸಿಕೊಂಡಿದ್ದರ ವಿರುದ್ಧ ನೊಂದಿದ್ದ ಅವರ ಆತ್ಮ ತನ್ನ ಕಿಡಿಯನ್ನು ಕಾರಿದೆ. ಒಳ ಅಂತರ್ಯವನ್ನು ಗ್ರಹಿಸಲಾಗದ ಓದುಗ ಇದನ್ನು ಅವರ ದೌರ್ಬಲ್ಯವೆಂದು ಭಾವಿಸಬಹುದು. ತಮ್ಮ ನಂಬಿಕೆಗೆ ಅನುಗುಣವಾಗಿ ತಾನು ತೋರಿದ ಪ್ರತಿಭಟನೆಯನ್ನು ಅಂತಹ ಓದುಗ ಅಪಾರ್ಥವಾಗಿ ಭಾವಿಸಬಹುದು. ಆಳವಾದ ಸಂವೇದನೆ ಇಲ್ಲದ ಮನುಷ್ಯನಿಗೆ ಲಜಪತರ ಬದುಕಿನ ಘಟನೆಗಳು ಹಗುರವೆನಿಸಬಹುದು. ಈ ವಿವರಗಳು ಅನಗತ್ಯವೆನಿಸಬಹುದು. 'The Story of My Deportation'ನಲ್ಲಿ ಲಜಪತರು ನೀಡುವ ವಿವರಗಳು ಅವರ ವೈಯಕ್ತಿಕ ಹಾಗೂ ಖಾಸಗಿ ನಡವಳಿಕೆಗಳನ್ನು ಓದುಗನ ಮುಂದೆ ತೆರೆದಿಡಲಾಗಿದೆ. ಮನಸ್ಥಿತಿಯ ಸೂಕ್ಷ್ಮ ವಿಚಾರಧಾರೆಗಳನ್ನು ಲಜಪತರು ಅದರಲ್ಲಿ ತೆರೆದಿಟ್ಟಿದ್ದಾರೆ.

''ಆತ (ಸುಪರಿಂಟೆಂಡೆಂಟ್) ಒಂದು ದಿನ ನನ್ನ ವಿಷಯದಲ್ಲಿ ತೀರಾ ಉದ್ಧಟತನದಿಂದ ವರ್ತಿಸಿದ. ನನ್ನ ಗೆಳೆಯನೊಬ್ಬನಿಗೆ ನಾನು ಬರೆದ ಪತ್ರವೊಂದಕ್ಕೆ ಸಂಬಂಧಪಟ್ಟ ವಿಷಯ ಅದು. ನನಗೆ ಕಾಯಿಲೆಯಾಗಿದೆ ಎಂದು ನಾನು ಅದರಲ್ಲಿ ತಿಳಿಸಿದ್ದೆ. ನನ್ನ ಕಾಯಿಲೆಯ ವಿಷಯವನ್ನು ನಾನು ತಿಳಿಸುವ ಮೂಲಕ ನನ್ನ ಜನರನ್ನು ರೊಚ್ಚಿಗೆಬ್ಬಿಸಿ ನನ್ನ ಬಿಡುಗಡೆಗೆ ನಾನು ಯೋಜಿಸಿದ್ದೇನೆಂದು ಆತ ದೂರಿದ. ನನ್ನದು ಕಪಟ ಕಾಯಿಲೆ ಎಂದೂ ಆತ ಆರೋಪಿಸಿ ನನ್ನ ಮನಸ್ಸನ್ನು ನೋಯಿಸಿದ. ಇನ್ನೊಮ್ಮೆ ಕ್ಷೌರಿಕನಿಗೆ ಸಂಬಳ ಕೊಡಲು ನಿರಾಕರಿಸಿ ಅನಾಗರಿಕನಂತೆ ವರ್ತಿಸಿದ. ಸಾಲದ್ದಕ್ಕೆ ನನ್ನ

ಮನೆಯಲ್ಲಿ ನಾನು ದಿನ ಬಿಟ್ಟು ದಿನ ಮುಖಕ್ಷೌರ ಮಾಡಿಸಿಕೊಳ್ಳುತ್ತೇನೆಂದು ಹೇಳಿದ ಮಾತಿನ ಸತ್ಯಾಸತ್ಯತೆಯನ್ನು ಆತ ಶಂಕಿಸಿದ. ನನ್ನ ಬಗ್ಗೆ ಆತನ ನಡವಳಿಕೆ ದಿನಗಳೆದಂತೆ ನಾಗರಿಕ ಹೀನವಾಗತೊಡಗಿತು. ನನ್ನ ಹೆಸರಿಡಿದು ಆತ ಸಂಭೋಧಿಸುತ್ತಿದ್ದ. ನನಗೆ ಔಷಧಗಳನ್ನು ಗೊತ್ತುಪಡಿಸುವಾಗ ಎಲ್ಲೆ ಮೀರಿ ವರ್ತಿಸುತ್ತಿದ್ದ. ನನಗೆ ಸೂಚನೆಗಳನ್ನು ಬರೆದು ಕಳುಹಿಸುತ್ತಿದ್ದಾಗ ಕನಿಷ್ಠ ಗೌರವ ತೋರಿಸುತ್ತಿರಲಿಲ್ಲ.''

ಒಂದು ದಿನ ಆ ಸುಪರಿಂಟೆಂಡೆಂಟ್ ಲಜಪತರನ್ನು ಕುರಿತು ಧನಪತ್‌ರಾಯ್ ಹೆಸರಿನ ತಮ್ಮನಿರುವನೇ ಎಂದು ಪ್ರಶ್ನಿಸಿದ. ನಿಮ್ಮನ್ನು ನೋಡಲು ಎಂದಾದರೂ ಅವರು ಬಯಸಿದ್ದಾರೆಯೇ ಎಂದು ಕೇಳಿದ. ಆತ ನನ್ನ ಕಿರಿಯ ತಮ್ಮನೆಂದು ಲಜಪತರು ಉತ್ತರಿಸಿದರು.

''ಆತ ಅಲ್ಲಿಂದ ಹೋದ ಮೇಲೆ ನಾನು ಆತನಿಗೆ ಪತ್ರ ಬರೆದೆ. ನನ್ನ ತಮ್ಮನಿಗೆ ಸಂಬಂಧಪಟ್ಟ ಮಾಹಿತಿಗಳಿರುವ ಕೆಲವು ಪತ್ರಗಳನ್ನು ನನಗೆ ಕೊಡದೇ ನೀವೇ ಇಟ್ಟುಕೊಂಡಿರಬಹುದೆಂದು ನನಗೆ ಅನಿಸುತ್ತಿದೆ. ಈ ಹಿಂದಿನಂತೆ ಈಗಲೂ ಕೂಡಾ ಕೇವಲ ಪತ್ರ ಬರೆದವನ ಹೆಸರನ್ನು ಮಾತ್ರ ನೀವು ಪ್ರಸ್ತಾಪಿಸಿರುವುದರಿಂದ ನನಗೆ ಈ ಗೊಂದಲ ಉಂಟಾಗಿದೆ... ಮಾರನೇ ದಿವಸ ಆತ ತನ್ನ ಸರದಿಯಂತೆ ಅಲ್ಲಿಗೆ ಬಂದ. ನಾನು ಮಹಡಿಯಲ್ಲಿ ಹಜಾರದಲ್ಲಿ ನಿಂತಿದ್ದೆ. ಆತ ಏನು ಹೇಳುತ್ತಾನೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ನನ್ನಲ್ಲಿತ್ತು. ಐರೋಪ್ಯ ಸಾರ್ಜಂಟ್ ಮತ್ತು ಇತರ ಪೊಲೀಸ್ ಪೇದೆಗಳು ಅನುದಿನದಂತೆ ಆತನಿಗೆ ಸೆಲ್ಯೂಟ್ ಸಲ್ಲಿಸಿದರು. ಒಂದು ಹಂತದಲ್ಲಿ ಆತ ಗಟ್ಟಿಯಾಗಿ ಅಬ್ಬರಿಸಿದ. ನನಗೆ ಮರುಪ್ರಶ್ನೆ ಹಾಕಲಾಗದು. ಕೇಳಿದ ಪ್ರಶ್ನಗೆ ಮಾತ್ರ ಉತ್ತರ ಕೊಡಬೇಕು ಎಂದು ಆತ ಹೇಳಿದ.''

ಆತ ಆಡಿದ ಮಾತುಗಳನ್ನು ಯಥ್ವತ್ತಾಗಿ ಬರೆಯುವಾಗ ಲಜಪತರಿಗೆ ಅತೀವ ನೋವಾಗಿದೆ,

ವಸ್ತುಶಃ ಆತ ಆಡಿದ ಮಾತುಗಳು ಹೀಗಿದ್ದವು:

''ನಾನು ನಿನಗೆ ಯಾವುದೇ ಪ್ರಶ್ನೆ ಹಾಕಿದಾಗ ನೀನು ಯಾವುದೇ ಮರುಪ್ರಶ್ನೆ ಹಾಕಬೇಡ. ಇಂತಹ ಯಾವುದೇ ಅಸಂಗತ ಪ್ರಶ್ನೆಗಳನ್ನಂತೂ ಕೇಳಲೇಬೇಡ. ಪಾಟಿ ಸವಾಲು ಹಾಕುವುದು ನನಗೆ ಸಹ್ಯವಾಗುವುದಿಲ್ಲ.'' ಮತ್ತೆ ಆತ ಹೇಳಿದ, ''ನಿನ್ನೊಂದಿಗೆ ಹೆಚ್ಚು ವಾದ ಮಾಡುವುದು ನನಗೆ ಹಿಡಿಸುವುದಿಲ್ಲ. ಮತ್ತೊಮ್ಮೆ ಹೇಳುತ್ತೇನೆ. ಪುನಃ ಹೀಗೆ ಮಾಡಬೇಡ. ಆತ ಅಲ್ಲಿಂದ ತೆರಳುತ್ತಿದ್ದಂತೆಯೇ ಅವನಾಡಿದ ಮಾತುಗಳನ್ನು ನಾನು ಹಾಗೆಯೇ ಬರೆದಿಟ್ಟುಕೊಂಡೆ.''

ಆತನಾಡಿದ ಪದಗಳನ್ನು ನೆನಪು ಮಾಡಿಕೊಂಡು ತಮ್ಮ ಕೃತಿಯಲ್ಲಿ ನಮೂದಿಸುವಾಗಲೂ ಲಜಪತರ ಹೃದಯ ಚೀರಿದೆ. ಇದನ್ನು ಓದಿದಾಗ ಕೆಲವು ಓದುಗರ ಮೇಲೆ ವೈಲ್ಫ್ರೆಡ್ ಬ್ಲಂಟ್ ಅವರಿಗಾದಂತೆ ಭಾವನಾತ್ಮಕ ಅನುಭವವೂ ಆಗಬಹುದು. ಗಾಂಭೀರ್ಯದ ಸೂಕ್ಷ್ಮವೂ ಎದ್ದು ನಿಲ್ಲಬಹುದು. ಐದು ಸಾಲುಗಳ ಸಾರ್ಜಂಟ್‌ನ

ಮಾತುಗಳ ಯದ್ವತ್ ಪ್ರಸ್ತಾಪ ಲಜಪತರ ಆತ್ಮಗೌರವದ ಹಿತರಕ್ಷಣೆಯನ್ನು ಸಾಕ್ಷಿಕರಿಸುತ್ತವೆ. ಅವರೆಷ್ಟು ಸೂಕ್ಷ್ಮಸಂವೇದಿ ಆಗಿದ್ದರು ಎಂಬುದನ್ನು ತೋರಗೊಡುತ್ತದೆ. ಆ ಅಧಿಕಾರಿಯ ಅತಿರೇಕದ ಇನ್ನೂ ಕೆಲವು ನಡವಳಿಕೆಗಳನ್ನು 'Story'ಯಲ್ಲಿ ಚಿತ್ರಿಸಲಾಗಿದೆ.

"ರಾಜಕೀಯ ಕೈದಿಗಳಿಗೆ ಸಂಬಂಧಪಟ್ಟಂತೆ ಪ್ರತಿ ವಿಷಯವನ್ನು ತುಂಬಾ ರಹಸ್ಯವಾಗಿ ಇಡುತ್ತಿದ್ದರ ಫಲವಾಗಿ ಕೆಲವು ತಾತ್ಸಾರ ನಡವಳಿಕೆಗಳಿಗೆ ಅವಕಾಶವಾಗುತ್ತಿತ್ತು. ಕೈದಿಯು ಅಧೀನ ಅಧಿಕಾರಿಗಳಿಂದ ಯಾವುದೇ ಸಹಾಯವನ್ನು ಕೇಳುವಂತಿರಲಿಲ್ಲ. ಹಾಗೆ ಮಾಡುವುದನ್ನು ಆ ಅಧಿಕಾರಿ ಸಹಿಸುತ್ತಿರಲಿಲ್ಲ. ತಾನು ಜೈಲು ಸುಪರಿಂಟೆಂಡೆಂಟ್ ಎಂಬ ಅಧಿಕಾರದ ಅಹಂ ಆತನನ್ನು ದುರಹಂಕಾರಿಯಾಗಿರಿಸಿತ್ತು ಎಂದೇ ನನ್ನ ಭಾವನೆ. ತನಗೆ ಕೊಡಲ್ಪಟ್ಟ ಅಪಾರ ಅಧಿಕಾರವನ್ನು ಬಳಸಿ ಸಾವಿರಾರು ಆರೋಪಿಗಳ ಮೇಲೆ ಆತ ತನ್ನ ದರ್ಪವನ್ನು ಪ್ರದರ್ಶಿಸುತ್ತಿದ್ದ. ಯಾರ ಬಗ್ಗೆಯೂ ಯಾವುದೇ ಅನುಕಂಪ ತೋರಿಸುವುದು ಆತನಿಗೆ ಅಗತ್ಯವಾಗಿರಲಿಲ್ಲ. ಕೈದಿಯ ಅಗತ್ಯಗಳನ್ನು ಪೂರೈಸುವ ಅವನ ಅನುಭವವೂ ಅಷ್ಟೇ ಸೀಮಿತವಾಗಿತ್ತು. ಕಾರಣ ಆತ ಸಾಧಾರಣಾ ಜೈಲುವಾಸದ ಅನುಭವನ್ನಷ್ಟೇ ಕಂಡಿದ್ದ." 'The Syory of My Deportation' ಕೃತಿಯಲ್ಲಿ ಅವರ ನಿರೂಪಕನ ಸೂಕ್ಷ್ಮ ಸಂವೇದನೆಗಳು ಚಿತ್ರಿತವಾಗಿವೆ. ಆರಂಭದಲ್ಲಿ ಜೈಲಿನ ಸುಪರಿಂಟೆಂಡೆಂಟ್ ತನ್ನ ಬಗ್ಗೆ ನಯವಾಗಿ ನಡೆದುಕೊಂಡಿದ್ದನ್ನು ಕುತೂಹಲದಿಂದ ಅವರು ಪರಿಗಣಿಸಿದ್ದಾರೆ. ಅದನ್ನು ಹೀಗೆ ಬರೆದಿಟ್ಟಿರುವರು:

"ಮೊದಲ ಕೆಲವು ದಿನಗಳು ಆತ ನನ್ನ ವಿಷಯದಲ್ಲಿ ಔದಾರ್ಯ ತೋರಿದ. ದಿನ ಕಳೆದಂತೆ ಅಷ್ಟೇ ಉದ್ಧಟತನದಿಂದ ವರ್ತಿಸಿದ. ಅವನ ಆ ವರ್ತನೆ ಅವನ ಸರ್ಕಾರ ನನ್ನನ್ನು ನಯವಾಗಿ ಕಿಡ್ನಾಪ್ ಮಾಡಿ ನಂತರ ಬಂಧಿಸಿ ಗಡಿಪಾರು ಮಾಡಿದ ರೀತಿಗಿಂತ ಭಿನ್ನವಾಗಿರಲಿಲ್ಲ. ಆ ಒರಟ ಸರ್ಕಾರ ನನ್ನ ವಿರುದ್ಧ ಕಾನೂನು ಮೊಕದ್ದಮೆ ನಡೆಸಲಿಲ್ಲ. ಆರೋಪಗಳನ್ನು ಹೊರಿಸಲಿಲ್ಲ. ಶಿಕ್ಷೆ ಮಾತ್ರ ಗೊತ್ತು ಪಡಿಸಿತು." ಈ ಹೋಲಿಕೆ ಪೂರಕವಾದದ್ದೇ ಸರಿ. ಸುಪರಿಂಟೆಂಡೆಂಟ್‌ನ ಔದಾರ್ಯ ಮತ್ತು ಅದಕ್ಕೆ ಅನುಗುಣವಾದ ಉಪಚಾರ ಮತ್ತು ನಂತರ ಆತ ತೋರಿದ ಉದ್ಧಟತನ ಮತ್ತು ಅಗೌರವಗಳನ್ನು ಆ ಕೃತಿಯ ಲೇಖಕರು ತಮ್ಮ ಅನುಭವದ ಮನಸ್ಥಿತಿಯನ್ನು ಹೀಗೆ ತೌಲನಿಕವಾಗಿ ವಿಶ್ಲೇಷಿಸಿದ್ದಾರೆ.

ಬಂಧನದ ಕಾಲದಲ್ಲಿ ತಮ್ಮನ್ನು ತೀವ್ರವಾಗಿ ನೋಯಿಸಿದ 'ಸಲಾಂ ಬೆದರಿಕೆ'ಯನ್ನು ಅವರು ತಮ್ಮ ಕೃತಿಯಲ್ಲಿ ತುಂಬಾ ವಿಷಾದದಿಂದ ಬರೆದಿಟ್ಟಿದ್ದಾರೆ. ಲಜಪತರಿಗೆ ಪ್ರತಿನಿತ್ಯವೂ ವಿಹಾರಾರ್ಥ ಅಡ್ಡಾಡುವುದು ಅನಿವಾರ್ಯವಾಗಿತ್ತು. ಮೊದಲೇ ದುರ್ಬಲವಾಗಿದ್ದ ಅವರ ಯಕೃತ್ತಿನ ಸಮರ್ಪಕ ಕಾರ್ಯನಿರ್ವಹಣೆಗಾಗಿ ಅವರು ಅಡ್ಡಾಡಲೇ ಬೇಕಾಗುತ್ತಿತ್ತು. ಹಾಗೆ ಓಡಾಡುತ್ತಿದ್ದರಿಂದ ರಾತ್ರಿಯ ನಿದ್ದೆಗೆ ಸಹಾಯಕವಾಗುತ್ತಿತ್ತು. ಹೀಗಾಗಿ ಓಡಾಟವನ್ನು ಯಾವುದೇ ಕಾರಣದಿಂದಲೂ ಬಿಟ್ಟು ಕೊಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಅವರು ಅದನ್ನು ನಿಲ್ಲಿಸಲು ಚಿಂತಿಸಬೇಕಾಯಿತು. ಅವರ ಸೂಕ್ಷ್ಮಸಂವೇದನೆ ಆಗಾಗ ವಿಚಿತ್ರ ಹಿಂಸೆಗೆ ಒಳಗಾಗುತ್ತಿದ್ದುದ್ದು

ಅವರ ಆ ನಿರ್ಧಾರಕ್ಕೆ ಕಾರಣ. ವಿಹಾರಾರ್ಥವಾಗಿ ಹೋಗುತ್ತಿದ್ದ ಸಮಯದಲ್ಲಿ ಅವರೊಂದಿಗೆ ಸಂಪೂರ್ಣವಾಗಿ ಶಸ್ತ್ರಧಾರಿಯಾಗಿ ಓರ್ವ ಸಾರ್ಜಂಟ್ ಇರುತ್ತಿದ್ದ. ಆತನ ಹಿಂದೆ ಇಬ್ಬರು ಸಮವಸ್ತ್ರ ಧರಿಸಿದ ಪೊಲೀಸ್ ಪೇದೆಗಳು. ಅವರನ್ನು ಬಂಧನದಲ್ಲಿಟ್ಟಿದ್ದ ಮನೆಯ ಸುತ್ತಲೂ ನಾಗರಿಕ ಉಡುಪು ತೊಟ್ಟ ಪೊಲೀಸ್ ಪಹರೆ ನಿಯೋಜಿತವಾಗಿತ್ತು. ಅಕ್ಕಪಕ್ಕದ ರಸ್ತೆಗಳಲ್ಲೂ ಸಹ ಅವರಿರುತ್ತಿದ್ದರು. ಮಾಂಡೇಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ಭಾರತೀಯರನ್ನು ಬಂಧನದಲ್ಲಿಟ್ಟ ಹಿನ್ನಲೆಯಲ್ಲಿ ಅಧಿಕಾರಿಗಳು ಈ ಬಂದೋಬಸ್ತ್ ಕ್ರಮವನ್ನು ವಿಶೇಷವಾಗಿ ಮುನ್ನೆಚ್ಚರಿಕೆಯೊಂದಿಗೆ ಕೈಗೊಂಡಿದ್ದರು. ರಸ್ತೆಯಲ್ಲಿ ಹೋಗುವಾಗ ಲಜಪತರಿಗೆ ಯಾರಿಂದಲೂ ಸಲಾಂ ಸಿಗದಂತೆ ನೋಡಿಕೊಳ್ಳಲಾಗುತ್ತಿತ್ತು. ಅವರೊಂದಿಗೆ ಯಾರೂ ಸಹ ಮಾತನಾಡದಂತೆ ಜಾಗ್ರತೆ ವಹಿಸಲಾಗಿತ್ತು. ಈ ನಿರ್ಬಂಧಗಳು ಆ ರಸ್ತೆಯಲ್ಲಿ ಓಡಾಡುತ್ತಿದ್ದ ಭಾರತೀಯ ಪಾದಚಾರಿಗಳಿಗೆ ಭಾರೀ ಹಿಂಸೆಯುಂಟು ಮಾಡುತ್ತಿದ್ದವು. ದೂರದಿಂದಲೇ ಅವರು ತಮ್ಮ ಕೈಗಳನ್ನು ಹಣೆಗೆ ಮುಟ್ಟಿಸುವ ಮೂಲಕ ಲಜಪತರಿಗೆ ವಂದನೆ ಸಲ್ಲಿಸುತ್ತಿದ್ದರು. ಅದು ಬ್ರಿಟಿಷ್ ಅಧಿಕಾರಿಗಳ ಪಾಲಿಗೆ ಕೆಂಪು ಬಟ್ಟೆ ಕಂಡ ಗೂಳಿಯಂತಾಗುತ್ತಿತ್ತು. ಪದೇ ಪದೇ ವಿಪರೀತಕ್ಕಿಟ್ಟುಕೊಂಡು ತೊಂದರೆಗಳಿಗೆ ಕಾರಣವಾಗುತ್ತಿತ್ತು.

ಬಂಧನದ ಸಮಯದಲ್ಲಿ ಲಜಪತರಿಗೆ ಹೆಚ್ಚು ಕಡಿಮೆ ಪ್ರತಿನಿತ್ಯ ದೇಶದ ಜನತೆಯಿಂದ ದೊರೆಯುತ್ತಿದ್ದ ಪ್ರೀತಿ, ವಾತ್ಸಲ್ಯ, ಗೌರವಗಳು ಯಾವುದೇ ಕೈದಿಯ ಪಾಲಿಗೆ ನಿಜಕ್ಕೂ ಹೆಮ್ಮೆಯ ಪ್ರಸಂಗವೇ ಸರಿ. ಪಂಜಾಬಿನ ಮಹಿಳೆಯರು ಆಗಿಂದಾಗ್ಗೆ ಲಜಪತರನ್ನು ನೋಡುವ ಸಲುವಾಗಿಯೇ ದೂರದೂರಿಂದ ಬರುತ್ತಿದ್ದರು. ಕೈದಿಯ ಬಳಿಗೆ ಅವರನ್ನು ಬರಗೊಡದಿದ್ದರೂ ದೂರದಿಂದಲೇ ಲಜಪತರು ಅದನ್ನು ಸುಲಭದಲ್ಲಿ ಗ್ರಹಿಸಿಬಿಡುತ್ತಿದ್ದರು. ಆಗಾಗ ಭಾರತೀಯ ಯುವಕರು ಗುಂಪು ಗುಂಪಾಗಿ ಅಲ್ಲಿನ ರಸ್ತೆಯಲ್ಲಿ ಹಾಯುತ್ತಾ ಅವರ ಬಂಧನದ ಬಗ್ಗೆ ವೇದನೆಯ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದನ್ನು ಅವರು ಕೇಳಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಅವರ ದರ್ಶನಕ್ಕಾಗಿ ಬರುತ್ತಿದ್ದ ಜನರನ್ನು ಮುಂಗಾರಿನ ವೈಪರಿತ್ಯದ ಹವಾಮಾನದಲ್ಲೂ ರಕ್ಷಣಾ ಪಡೆಯವರು ತಡೆಗಟ್ಟುತ್ತಿದ್ದದ್ದು ಕಂಡು ಬರುತ್ತಿತ್ತು. "ಅಂತಹ ಸಂದರ್ಭದಲ್ಲಿ ಅವರ ದೃಷ್ಟಿ ನಾನಿದ್ದ ಮನೆಯ ವರಾಂಡದ ಮೇಲೆ ನೆಟ್ಟು ನಿಲ್ಲುತ್ತಿದ್ದವು. ಅವರ ಘೋಷಣೆ ಮತ್ತು ಮಾತುಗಳಿಂದ ಮುಂಬಯಿಯಿಂದ ಬಂದ ಬೋರಾ ತಂಡದವರೆಂದು ಮನವರಿಕೆಯಾಗುತ್ತಿತ್ತು." ಮಾಂಡೇಲೆಗೆ ಭೇಟಿ ಕೊಡುವ ಯಾವುದೇ ಭಾರತೀಯನ ಪಾಲಿಗೆ ಆ ಕೋಟೆಯೊಂದು ಭೇಟಿ ಕೊಡಲೇಬೇಕಾದ ಸ್ಥಳವೆನಿಸತೊಡಗಿತು. ಎಷ್ಟೇ ನೋವು, ಕಿರುಕುಳವಾದರೂ ಕೋಟೆಯ ಆ ಮನೆಯಲ್ಲಿ ಬಂದಿಯಾಗಿದ್ದ ವ್ಯಕ್ತಿಯನ್ನು ದೂರದಿಂದಲಾದರೂ ನೋಡಿ ಬರಬೇಕೆಂದು ತಹತಹಿಸುವಂತಾಗಿತ್ತು.

ಈ ಮಧ್ಯೆ ಲಜಪತರೊಂದಿಗೆ ಬಂಧನಕ್ಕೆ ಒಳಪಡಿಸಲಾದ ಅಜಿತ್‌ಸಿಂಗ್‌ರನ್ನು ಅದೇ ಕೋಟೆಗೆ ತಂದು ಸೆರೆಯಲ್ಲಿಡಲಾಗಿತ್ತು. ಅದರ ಆ ಸುಳಿವು ಹೊರಬೀಳದಂತೆ ಬ್ರಿಟಿಷ್ ಆಡಳಿತಶಾಹಿ ನಿಗಾ ವಹಿಸಿತ್ತು. ರಹಸ್ಯವನ್ನು ಕಾಪಾಡುವ ಕಟ್ಟಳೆ ಮತ್ತು ಉಸ್ತುವಾರಿಗಳು ಕಟ್ಟುನಿಟ್ಟಾದಾಗ ಸಹಜವಾಗಿ ಗುಟ್ಟು ಬಯಲಾಗಿ ಆಡಳಿತದ ಮತ್ತ

ಹುಸಿ ತಮಾಷೆ ಎನಿಸಿತು.ಲಜಪತ್‌ರಾಯ್ ರಾಜಕೀಯ ಬಂದಿಯಾದರೂ ತೀರಾ ಕ್ಷುಲ್ಲಕವಾದ ಕಠಿಣ ನಿರ್ಬಂಧಗಳಲ್ಲಿ ಅವರನ್ನು ಡೆಫರಿಂಗ್ ಕೋಟೆಯಲ್ಲಿ ಇಡಲಾಗಿತ್ತು. ಅವರಿಗೆ ಯಾವುದೇ ವೃತ್ತಪತ್ರಿಕೆ ಒದಗಿಸುತ್ತಿರಲಿಲ್ಲ. ಈ ಬಗ್ಗೆ ಭಾರತ ಸರ್ಕಾರಕ್ಕೆ ಮನವಿ ಮಾಡಿದ ಮೇಲೂ ಸಹ ಪರಿಸ್ಥಿತಿ ಸುಧಾರಿಸಲಿಲ್ಲ. ಪರಿಸ್ಥಿತಿ ಹೇಗಿತ್ತೆಂದರೆ, ''ಕರ್ತವ್ಯದ ಮೇಲಿದ್ದ ಸಮಯದಲ್ಲಿ ಸಾರ್ಜಂಟ್‌ರಾಗಲಿ, ರಕ್ಷಕರಾಗಲಿ ಯಾವುದೇ ಪತ್ರಿಕೆಯನ್ನು ತಮ್ಮೊಂದಿಗೆ ಕೊಂಡೊಯ್ಯಲಾಗದಷ್ಟು ನಿರ್ಬಂಧ ವಿಧಿಸಲಾಗಿತ್ತು.'' ಲಜಪತರಿಗೆ ಒದಗಿಸುತ್ತಿದ್ದ ಪುಸ್ತಕಗಳನ್ನು ಸಹ ಪರಿಶೀಲಿಸಿ ಕೊಡಲಾಗುತ್ತಿತ್ತು. 'ರಾಜಕೀಯ ಕಾರಣಗಳಿಗಾಗಿ' ಜರ್ಮನ್ ಭಾಷೆಯನ್ನು ಕಲಿಯಲು ಅವರಿಗೆ ಅವಕಾಶ ನಿರಾಕರಿಸಲಾಯಿತು. ಮಾಂಡಲೆಯ ಆ ಡೆಫರಿಂಗ್ ಕೋಟೆಯ ಸೆರೆವಾಸದ ಆರು ತಿಂಗಳ ಅವಧಿಯಲ್ಲಿ ಅವರನ್ನು ಭೇಟಿ ಮಾಡಲು ಅವರ ಯಾವುದೇ ಓರ್ವ ಗೆಳೆಯರಿಗಾಗಲಿ, ಬಂಧುಗಳಿಗಾಗಲಿ ಅನುಮತಿ ನೀಡಲಿಲ್ಲ. ಲಜಪತರ ಭೇಟಿಗೆ ಅವರ ಸಹೋದರ ಧನಪತ್‌ರಾಯ್ ಕೋರಿದ ಅನುಮತಿಯನ್ನು ಸರ್ ಡೆಂಜಿಲ್ ಇಬ್ಬೆಟ್‌ಸನ್‌ನ ಸರ್ಕಾರ ನಿರಾಕರಿಸಿತು. 'ಈ ಹಿನ್ನಲೆಯಲ್ಲಿ ಆ ರೀತಿಯ ಮನವಿಗಳ ಸಲ್ಲಿಕೆಯನ್ನು ನಿಲ್ಲಿಸಲಾಗಿತ್ತು.'

ಡೆಫರಿಂಗ್ ಕೋಟೆಯಿಂದ ಹೊರಗಡೆ ವಾಹನದಲ್ಲಿ ಅಡ್ಡಾಡಿ ಬರಲು ಲಜಪತರು ಅನುಮತಿ ಕೋರಿದರು. ಅದಕ್ಕೂ ಅವಕಾಶ ಸಿಗಲಿಲ್ಲ. ಕೋಟೆಯ ಒಳಗಡೆ ಹಗಲು, ರಾತ್ರಿ ಅವರ ಮೇಲೆ ಕಟ್ಟೆಚ್ಚರದ ನಿಗಾ ಇಡಲಾಗಿತ್ತು. ಲಜಪತರ ಎಲ್ಲಾ ಪತ್ರ ವ್ಯವಹಾರಗಳನ್ನು ತೀವ್ರ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಎಲ್ಲೋ ಕೆಲವು ಪತ್ರಗಳನ್ನು ಮಾತ್ರ ನೇರವಾಗಿ ಕೊಡಲಾಗಿತ್ತು. ಅವರ ಬಂಧನದ ಬಗ್ಗೆಯಾಗಲಿ, ಗಡಿಪಾರು ಶಿಕ್ಷೆಯ ಬಗ್ಗೆಯಾಗಲಿ, ಪಂಜಾಬಿ ಅಥವಾ ಹಿಂದಿ ಅಥವಾ ದೇಶದ ಬೇರಾವುದೇ ಭಾಗದಲ್ಲಿ ಚಳವಳಿ, ಆಂದೋಲನಗಳ ಬಗ್ಗೆ ಸ್ವಲ್ಪವೇ ಪ್ರಸ್ತಾಪವಿದ್ದರೂ ಸಹ ಅಂತಹ ಪತ್ರಗಳನ್ನು ಲಜಪತರಿಗೆ ಕೊಡುತ್ತಿರಲಿಲ್ಲ. ಈ ಮಧ್ಯೆಯೂ ಖಜನ್‌ಸಿಂಗ್ ಮತ್ತು ಸಂಗಡಿಗರ ಆಂದೋಲನದ ಬಗ್ಗೆ ಸಂಬಂಧಪಟ್ಟ ಪತ್ರವೊಂದು ಲಜಪತರ ಇನ್ನುಳಿದ ಪತ್ರಗಳ ಜೊತೆ ನುಸುಳಿ ಹೋಗಿದ್ದು ಉಂಟು. ಖಜನ್‌ಸಿಂಗ್ ಹಿಂಡಿಯ ಪ್ರಮುಖ ವಕೀಲರಲ್ಲಿ ಒಬ್ಬರಾಗಿದ್ದು ರಾಜದ್ರೋಹದ ಆಪಾದನೆಯ ಮೇಲೆ ಅವರನ್ನು ಬಂಧಿಸಲಾಗಿತ್ತು.

ವಕೀಲರ ಸಲಹಾ ಸಂಸ್ಥೆಯೊಂದರಿಂದ ಬಂದ ಶುದ್ಧ ವ್ಯವಹಾರಿಕ ಪತ್ರವನ್ನು ಸಹ ಹಿಡಿದಿಟ್ಟುಕೊಳ್ಳಲಾಗಿತ್ತು. ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಅದರ ಸಿಮ್ಲಾ ಪ್ರತಿನಿಧಿ ಬರೆದ ಲಜಪತರಿಗೆ ಧಕ್ಕೆ ತರುತ್ತಿದ್ದ ಸುಳ್ಳು ವರದಿಯೊಂದರ ಬಗ್ಗೆ ಕಾನೂನು ಕ್ರಮ ಒದಗಿಸಲು ಅವರು ಬಯಸಿದ್ದರು. ತತ್ಸಂಬಂಧದಲ್ಲಿ ಅವರ ಸಲಹೆ, ಸೂಚನೆಗಳನ್ನು ಕೇಳಿ ಸಲಹಾ ಸಂಸ್ಥೆ ಪತ್ರ ಬರೆದಿತ್ತು. ವಕೀಲರು ಲಜಪತರಿಂದ ಸಹಿ ಹಾಕಿದ ಕಾನೂನು ಅಧಿಕಾರದ ಪತ್ರವನ್ನು ಕೋರಿದ್ದರು. ಹೀಗೆ ನೂರಕ್ಕೆ ನೂರರಷ್ಟು ವ್ಯವಹಾರಿಕ ಸಂಬಂಧದ ಪತ್ರಗಳನ್ನು ಸಹ ಬ್ರಿಟಿಷ್ ಆಡಳಿತ ಅನುಮಾನದಿಂದ ಕಾಣುತ್ತಿತ್ತು. ರಾಜಕೀಯ ಕೈದಿಯೋರ್ವ ಬ್ರಿಟಿಷ್ ಪತ್ರಿಕೆಯ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ಅನುಮತಿ ಕೋರಲು ಜೈಲಿನ ಸುಪರಿಂಟೆಂಡೆಂಟರು ನಿರಾಕರಿಸಿದ್ದರು! ವಸ್ತುಸ್ಥಿತಿ ಹೀಗಿರಬೇಕಾದರೆ ಅತ್ತ 'ಪ್ರಾಮಾಣಿಕ ಜನ' 1907ರ ಜುಲೈ 9ರಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ವಿಲಿಯಂ ರೆಡ್ಮಂಡ್ ಅವರ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ,

"ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್ ಅವರಿಗೆ ಅವರ ಆತ್ಮೀಯರೊಂದಿಗೆ ಪತ್ರ ವ್ಯವಹಾರ ಮಾಡಲು ಅವಕಾಶ ನೀಡಲಾಗಿದೆ. ಆದರೆ ಅವರ ಪತ್ರ ವ್ಯವಹಾರಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಗೊಂದಲಕ್ಕೆ ಕಾರಣವಾಗಬಹುದಾದ ಸಂದೇಶಗಳಿವೆಯೇ ಎಂಬುದನ್ನು ಪರೀಕ್ಷಿಸಲಾಗುತ್ತಿದೆ. ಈತನಕ ಆ ಹಿನ್ನಲೆಯಲ್ಲಿ ಕೇವಲ ಒಂದು ಪತ್ರವನ್ನು ಹಿಡಿದಿಟ್ಟುಕೊಳ್ಳಲಾಗಿದೆ. ಭಾರತದಿಂದ ನನಗೆ ಬಂದಿರುವ ಮಾಹಿತಿ ಪ್ರಕಾರ ಆ ಕೈದಿಯನ್ನು ನೋಡಲು ಯಾರೂ ಇಷ್ಟಪಟ್ಟಿಲ್ಲ. ಯಾವುದೇ ಕಿಡಿಗೇಡಿತನ ಅಥವಾ ಅನಪೇಕ್ಷಿತ ಮಾಹಿತಿಗಳ ರವಾನೆಗೆ ಅವಕಾಶವಾಗದಂತೆ ಸಮಂಜಸ ಉಸ್ತುವಾರಿಯಲ್ಲಿ ಕೈದಿಯನ್ನು ಭೇಟಿ ಮಾಡಲು ಯಾವುದೇ ಆಕ್ಷೇಪವಿಲ್ಲವೆಂದು ಭಾವಿಸಿಕೊಂಡಿದ್ದೇನೆ." ಮೆಕಾನಸ್ ಕೇಳಿದ 'ಕೈದಿಯು ತನ್ನ ಕಾನೂನು ಸಲಹೆಗಾರರೊಂದಿಗೆ ಸಂಪರ್ಕ ಇಟ್ಟುಕೊಂಡಿರುವರೇ'? ಎಂಬ ಪೂರಕ ಪ್ರಶ್ನೆಗೆ ಜಾನ್ ಮಾರ್ಲೆ ಉತ್ತರಿಸುತ್ತಾ, 'ಇರಬಹುದೆಂದು ನಾನು ಅಂದು ಕೊಂಡಿದ್ದೇನೆ' ಎಂದರು.

ಲಜಪತರು ತಮ್ಮ ಸೆರೆವಾಸದ ಕಾಲದಲ್ಲಿ ಮನೆಯ ಬಗ್ಗೆ ಆಗಿಂದಾಗ್ಗೆ ಚಿಂತಿಸುತ್ತಿದ್ದರು. ಬಹುಶಃ ಮನೆಯಲ್ಲಿ ತಾವಿದ್ದ ಕಾಲದಲ್ಲಿ ಕುಟುಂಬದ ಬಗ್ಗೆ ಚಿಂತಿಸಲು ಲಭ್ಯವಾಗುತ್ತಿದ್ದ ಸಮಯಕ್ಕಿಂತ ಹೆಚ್ಚು ಕಾಲ ಅಲ್ಲಿ ದೊರೆಯುತ್ತಿದ್ದದ್ದೇ ಅದಕ್ಕೆ ಕಾರಣ. ಆ ಕೋಟೆಯಿಂದ ಅವರು ತಮ್ಮ ತಂದೆ ಅಥವಾ ಮಕ್ಕಳಿಗೆ ಬರೆಯುತ್ತಿದ್ದ ಪತ್ರಗಳು ಕುಟುಂಬದ ವಿಷಯದಲ್ಲಿ ಅವರು ಚಿಂತಿಸುತ್ತಿದ್ದುದರ ಇಣುಕು ನೋಟ ಒದಗಿಸಿದೆ. ಆ ಪತ್ರಗಳಲ್ಲಿ ಯಾವುದೇ ರಾಜಕೀಯದ ಪ್ರಸ್ತಾಪ ಇರುತ್ತಿರಲಿಲ್ಲ. ಕೈದಿಯಾಗಿ ತಾವು ಕಳೆಯುತ್ತಿರುವ ದಿನಗಳ ಬಗ್ಗೆ, ಹವಾಮಾನದ ಬಗ್ಗೆ, ಆರೋಗ್ಯದ ಬಗ್ಗೆ, ತಮ್ಮ ಓದು ಬರಹಗಳ ಬಗ್ಗೆ ಸಾಮಾನ್ಯವಾಗಿ ಅವರು ಹೆಚ್ಚು ವಿವರಿಸುತ್ತಿದ್ದರು. ಮನೆಗೆ ಸಂಬಂಧಪಟ್ಟ ಕೆಲವೊಂದು ವಿಷಯಗಳು ಆಗೊಮ್ಮೆ ಈಗೊಮ್ಮೆ ಪ್ರಸ್ತಾಪವಾಗುತ್ತಿದ್ದವು. ಆಗಾಗ ಕುಟುಂಬದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಲಹೆ, ಸೂಚನೆಗಳನ್ನು ನೀಡುತ್ತಿದ್ದರು. ಲಜಪತರ ತಂದೆ ತಮ್ಮ ಮಗನ ಬಂಧನದಿಂದ ಉದ್ವೇಗಿ ಏನೂ ಆಗಿರಲಿಲ್ಲ. "ನನ್ನ ಮಕ್ಕಳು ಅವರ ಎಲ್ಲಾ ಕೆಲಸಗಳನ್ನು ನಿರ್ವಹಿಸಿಕೊಡುತ್ತಿದ್ದರು. ಅನುದ್ವೇಗಿಯಾಗಿ ಅವರು ತಮ್ಮ ದುರಾದೃಷ್ಟವನ್ನು ಸಹಿಸಿಕೊಳ್ಳುತ್ತಿದ್ದರು. ಕುಟುಂಬವನ್ನು ನೋಡಿಕೊಳ್ಳುವುದಕ್ಕೆ ಹೊರತಾಗಿ ಅವರು ನನ್ನ ಪರವಾಗಿ ಲೇಖನಿ ಹಿಡಿದು ಝಳಪಿಸುವ ಯಾವುದೇ ಯತ್ನ ಮಾಡಿದರೆಂದು ನನಗನ್ನಿಸಿಲ್ಲ. ಹಾಗೇ ಮಾಡುವ ಮೂಲಕ ವಿದೇಶಿಯರಿರಲಿ, ನನ್ನ ದೇಶವಾಸಿಗಳಲ್ಲೇ ಕೆಡಕು ಬಯಸುವವರನ್ನು ಪ್ರೇರಿತರಾಗುವಂತೆ ಮಾಡಿದವರಲ್ಲ. ಆದರೂ ಭಾರತೀಯ ಡೆಪ್ಯುಟಿ ಕಮಿಷನರ್ ಓರ್ವ ಬ್ರಿಟಿಷ್ ಮ್ಯಾಜಿಸ್ಟ್ರೇಟರಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವ ಅಗತ್ಯವೋ ಎಂಬಂತೆ ನನ್ನ ವೃದ್ಧ ತಂದೆಯ ಚಲನವಲನಗಳ ಮೇಲೆ ಬೇಹುಗಾರಿಕೆಯ ನಿಗಾ ಇಟ್ಟಿದ್ದಾರೆಂದು ನನಗೆ ತಿಳಿದು ಬಂದಿತು. ಎಂತಹ ನಾಚಿಕೆಗೇಡಿನ ಪ್ರಸಂಗವೆಂದು ನಾನೆಂದುಕೊಂಡೆ. ನನ್ನ ರಾಜಕೀಯ ಚಟುವಟಿಕೆಗಳಿಗೆ, ನನ್ನ ಕಾರ್ಯಯೋಜನೆಗಳಿಗೆ ಆ ವೃದ್ಧರು ಎಷ್ಟರಮಟ್ಟಿಗೆ ಹೊಣೆ ಎಂಬುದನ್ನು ತಿಳಿಯಲು ಆ ಅಧಿಕಾರಿ ಬಯಸಿದ್ದ. ಪುತ್ರ ವಾತ್ಸಲ್ಯದಲ್ಲಿ ವೇದಕರಾಗಿದ್ದ ಅವರಿಗೆ ಅದರಿಂದ ಎಷ್ಟರಮಟ್ಟಿಗೆ ನೋವಾಗಿರಬಹುದೆಂದು ನಾನು ಊಹಿಸಬಲ್ಲವನಾಗಿದ್ದೆ."

* * *

ಅಧ್ಯಾಯ-28

ಜಾನ್ ಮಾರ್ಲೆಗೆ ಸತ್ವಪರೀಕ್ಷೆ

ಯಾವುದೇ ವಿಚಾರಣೆ ಇಲ್ಲದೆ, ಯಾವುದೇ ಶಿಕ್ಷೆ ಇಲ್ಲದೆ ಬಂದಿಯಾಗಿ ಮಾಂಡೇಲೆಗೆ ಕರೆತಂದ ಕೆಲವು ವಾರಗಳ ನಂತರ ಲಜಪತರಿಗೆ "ಬ್ರಿಟನ್ನಿನ ಸಂಸತ್ತಿನಲ್ಲಿ ಪ್ರಶ್ನೆಯೊಂದನ್ನು ಮಂಡಿಸಿ ನಾನು ನನ್ನ ಗಡಿಪಾರು ಶಿಕ್ಷೆಯನ್ನು ಪ್ರತಿಭಟಿಸಿರುವೆನೇ?, ಹಾಗಿದ್ದರೆ ಆ ಪ್ರತಿಭಟನೆಯ ಅಂಶವೇನು?" ಎಂಬುದನ್ನು ಸರ್ಕಾರದ ಕಾರ್ಯದರ್ಶಿಯಿಂದ ತಿಳಿಯಬಯಸಿರುವುದಾಗಿ ಗೊತ್ತಾಯಿತು. ಈ ಮಾಹಿತಿಯಿಂದಾಗಿ "ಯಾವುದೇ ವಿಚಾರಣೆ ಇಲ್ಲದೆ ನನ್ನನ್ನು ಗಡಿಪಾರು ಮಾಡಿರುವ ಸರ್ಕಾರದ ಹದ್ದುಮೀರಿದ ವರ್ತನೆಯ ಬಗ್ಗೆ ನಾನೇನು ಹೇಳುತ್ತೇನೆಂಬುದನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿರುವ ನನ್ನ ಗೆಳೆಯರು ಬಹುಶಃ ತಿಳಿಯ ಬಯಸಿರಬೇಕೆಂದು ನಾನು ಅಂದುಕೊಂಡೆ." ಅತನಕ ಲಜಪತರು ಬಿಡುಗಡೆಗೆ ಕೋರಿ ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ. ಹೌಸ್ ಆಫ್ ಕಾಮನ್ಸ್‌ನಲ್ಲಿನ ಪ್ರಶ್ನೆ ಅವರಿಗೆ ಈ ಬಗ್ಗೆ ನಿರ್ಧರಿಸುವಂತೆ ಮಾಡಿತು. ಆ ವೇಳೆಗಾಗಲೇ ಅವರು ತಮ್ಮ ಬಂಧನ ಮತ್ತು ಅದಕ್ಕೆ ಆಧಾರ ಮಾಡಿಕೊಂಡ ಹಿನ್ನಲೆಯ ಸರ್ಕಾರಿ ಆದೇಶದ ಪ್ರತಿಯನ್ನು ತಮಗೆ ಒದಗಿಸುವಂತೆ ಮನವಿ ಮಾಡಿದ್ದರು. ಈ ಮಧ್ಯೆ 1907 ಮೇ 7ರಂದು ಅವರನ್ನು ಬಂಧನಕ್ಕೆ ಒಳಪಡಿಸಿದ ಅನುಜ್ಞಾ ಪತ್ರದ ಪ್ರತಿ ಅವರ ಬಳಿ ಇತ್ತು. ಅದರಲ್ಲಿ,

ಗೃಹ ಇಲಾಖೆ, ಭಾರತ

ಗೆ,

ಜೈಲ್ ಸುಪರಿಂಟೆಂಡೆಂಟ್, ಮಾಂಡೇಲೆ.

ರಾಧಾ ಕಿಷನ್‌ರ ಪುತ್ರ ಲಜಪತರನ್ನು ಸಾಕಷ್ಟು ಕಾರಣಗಳ ಆಧಾರಗಳ ಮೇಲೆ ಬಂಧಿಸಿರುವ ಗವರ್ನರ್ ಜನರಲ್ ಅವರು ಕೈದಿಯನ್ನು ಮಾಂಡೇಲೆಯಲ್ಲಿ ನಿಮ್ಮ ಅಧೀನದಲ್ಲಿ ಬಂಧನದಲ್ಲಿಡಲು ನಿರ್ದೇಶಿಸಿದ್ದಾರೆ. ಗವರ್ನರ್ ಜನರಲ್ ಅವರ ಆದೇಶಗಳಿಗೆ ಅನುಗುಣವಾಗಿ ನಿಮ್ಮ ವೈಯಕ್ತಿಕ ಉಸ್ತುವಾರಿಯಲ್ಲಿ 1818ರ ನಿಯಂತ್ರಣ ಕಾಯ್ದೆ 3ರ ವಿಧಿಯಂತೆ ಅವರನ್ನಿಟ್ಟುಕೊಳ್ಳಲು ಈ ಮೂಲಕ ಆದೇಶಿಸಲಾಗಿದೆ.

ಗವರ್ನರ್ ಜನರಲ್ ಆದೇಶದ ಮೇರೆಗೆ,

(ಸಹಿ) ಎಚ್.ಎಚ್. ರಿಸ್ಲೇ

ದಿನಾಂಕ 7 ಮೇ, 1907 ಭಾರತ ಸರ್ಕಾರದ ಕಾರ್ಯದರ್ಶಿ, ಗೃಹ ಇಲಾಖೆ.

ಈ ಹಾಳೆಯಲ್ಲಿ ಲಜಪತರ ಬಂಧನಕ್ಕಾಗಲಿ, ಶಿಕ್ಷೆಗಾಗಲಿ ಸಂಬಂಧಪಟ್ಟ ಯಾವುದೇ ಆಧಾರ ಇರಲಿಲ್ಲ. ನಿಯಂತ್ರಣ ಪದದ ಮೂಲಕ, "ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ದೇಶದಲ್ಲಿ ದಂಗೆ ಏಳದಂತೆ ತಡೆಯಲು" ಎಂದಷ್ಟೇ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಲಜಪತರು ನಿಯಂತ್ರಣ ಕಾಯ್ದೆಯ 3ನೇ ವಿಧಿಯ ಪ್ರತಿಯೊಂದನ್ನು ಪಡೆದುಕೊಂಡಿದ್ದರು. ಆ ಪತ್ರವನ್ನು ಅವರು ಮನೆಯಿಂದ ತರಿಸಿಕೊಂಡಿದ್ದಾದರೂ ಜೈಲಿನ ಸುಪರಿಂಟೆಂಡೆಂಟರು ಅದನ್ನು ಅವರಿಗೆ ತಲುಪಿಸಿರಲಿಲ್ಲ. ಆಕ್ಷೇಪಾರ್ಹ ಪತ್ರವೆಂದು ಅವರು ಹಿಡಿದಿಟ್ಟುಕೊಂಡಿದ್ದರು. ಆದರೆ ಲಜಪತರು ಪದೇ ಪದೇ ಆ ಪತ್ರದ ಬಗ್ಗೆ ವಿಚಾರಣೆ ಮಾಡಿದ ನಂತರ ಸ್ಥಳೀಯ ಸರ್ಕಾರದ ಸಲಹೆ ಮೇರೆಗೆ ಅದನ್ನು ಅವರಿಗ ಕೊಡಲಾಗಿತ್ತು. ಲಜಪತರು ತಮ್ಮ ಬಂಧನದ ಆಜ್ಞಾ ಪತ್ರದ ಆಧಾರದ ಮೇಲೆ ಭಾರತದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಅವರಿಗೆ ಮನವಿ ಪತ್ರವೊಂದನ್ನು ಬರೆದರು. 1907 ಜೂನ್ 29ರಂದು ಅವರು ಬರೆದ ಆ ಪತ್ರವನ್ನು ಜೈಲಿನ ಸುಪರಿಂಟೆಂಡೆಂಟರಿಗೆ ಕೊಡಲಾಯಿತು. ಸುಮಾರು ಮೂರು ವಾರಗಳ ನಂತರ ಸುಪರಿಂಟೆಂಡೆಂಟರು ಆ ಪತ್ರದ ಇನ್ನೊಂದು ಪ್ರತಿಯನ್ನು ಬರ್ಮಾ ಸರ್ಕಾರಕ್ಕೆ ಕೊಡಲು ಕೇಳಿದರು. ಆದರೆ ಲಜಪತರ ಬಳಿ ಪ್ರತಿ ಇರಲಿಲ್ಲ. ನೆನಪಿನ ಆಧಾರದ ಮೇಲೆ ಇನ್ನೊಂದು ಪತ್ರವನ್ನು ಸಿದ್ಧಪಡಿಸಿಕೊಟ್ಟರು. ಆ ಪತ್ರದ ಪ್ರತಿಯನ್ನು ಅವರು ತಮ್ಮಲ್ಲಿ ಜತನ ಮಾಡಿಟ್ಟುಕೊಂಡು ಮುಂದೆ ತಮ್ಮ '*The Story of My Deportation*' ಕೃತಿಯಲ್ಲಿ ಸಾದರಪಡಿಸಿದ್ದಾರೆ.

ಹೀಗೆ ಲಜಪತರು ವಿನಾಕಾರಣದ ತಮ್ಮ ಬಂಧನವನ್ನು ಪ್ರತಿಭಟಿಸಿದರು. ಅದಕ್ಕೆ ಆಧಾರವನ್ನು ಕೊಟ್ಟರು. 'ಬಂಧನದ ಸಮಯದಲ್ಲಾಗಲಿ, ಅದರ ತಕ್ಷಣದ ಪೂರ್ವದಲ್ಲಾಗಲಿ ಅಥವಾ ನಂತರದಲ್ಲಾಗಲಿ ದೇಶದ ಯಾವುದೇ ಭಾಗದಲ್ಲಾಗಲಿ ಬಂಡಾಯದ ಪ್ರಸಂಗಗಳು ಇರಲಿಲ್ಲ.' ಎಂದು ವಾದಿಸಿದರು. ಅಷ್ಟೇ ದೃಢವಾಗಿ ಕಳಕಳಿಯಿಂದ ತಾವು ಬ್ರಿಟಿಷ್ ಸರ್ಕಾರಕ್ಕೆ ಧಕ್ಕೆಯಾಗುವ ಬಂಡಾಯ ಇಲ್ಲವೇ ದಂಗೆಗೆ ಪ್ರಯತ್ನಿಸಿಲ್ಲವೆಂದೂ ಅಂತಹ ಪ್ರಯತ್ನಗಳಿಗೆ ಬೆಂಬಲ ಕೊಟ್ಟಿಲ್ಲವೆಂದೂ ತಮ್ಮ ವಿರುದ್ಧ ವಿಧಿಸಿರುವ 1818ರ ನಿಯಂತ್ರಣ ಕಾಯ್ದೆಯ 3ನೇ ವಿಧಿ ಅನ್ವಯವಾಗುವಂತಹ ಯಾವುದೇ ಕೆಲಸ ಮಾಡಿಲ್ಲವೆಂದೂ ಲಜಪತರು ಮನವಿಯಲ್ಲಿ ತಿಳಿಸಿದರು. ತಾವು ಓರ್ವ ರಾಜಕೀಯ ಕಾರ್ಯಕರ್ತ. ದೇಶವಾಸಿಗಳಲ್ಲಿ ಓದು ಬರಹದ ಅನುಕೂಲಕ್ಕಾಗಿ ಹೆಚ್ಚು ಸಮಯವನ್ನು ವಿನಿಯೋಗಿಸುತ್ತಿರುವ ಸೇವಕ. ಅನಾಥ ಮಕ್ಕಳು, ಅಸಹಾಯಕ ವಿಧವೆಯರು ಮತ್ತು ಬರಪೀಡಿತ ಪ್ರದೇಶಗಳ ಜನರಿಗೆ ಪರಿಹಾರ ಕಾರ್ಯಗಳನ್ನು ಕಲ್ಪಿಸಿಕೊಡುವ ಓರ್ವ ಸಮಾಜ ಸೇವಕ. 1905ರ ಕಾಂಗ್ರಾ ಕಣಿವೆಯ ಭೀಕರ ಭೂಕಂಪಗಳಂತಹ ಪರಿಸ್ಥಿತಿಗಳ ಸಂತ್ರಸ್ತರಿಗೆ ಪರಿಹಾರ ಕಾರ್ಯಗಳನ್ನು ಸಂಘಟಿಸಿ ಕೊಡುತ್ತಿರುವ ಓರ್ವ ಸೇವಕ. ಮೂರು ವರ್ಷಗಳ ಕಾಲ ಮುನ್ಸಿಪಲ್ ಕಮಿಷನರ್ ಆಗಿ ನಾಗರಿಕ ಸೇವೆ ಸಲ್ಲಿಸಿದವ. 25 ವರ್ಷಗಳಿಂದ ವಕೀಲಿ ವೃತ್ತಿ ಹಿಡಿದಿರುವವ. ಕಾಲು ಶತಮಾನದ ತಮ್ಮ ಸಾರ್ವಜನಿಕ ಜೀವನದಲ್ಲಿ ಬ್ರಿಟಿಷ್ ಚಕ್ರವರ್ತಿಯ ಆಡಳಿತಕ್ಕೆ ಒಳಪಟ್ಟ ಈ ದೇಶದಲ್ಲಿ ದಂಗೆಗೆ ಕಾರಣವಾಗುವಂತಹ ಯಾವುದೇ ಅನುಮಾನಕರ ಚಟುವಟಿಕೆಯಲ್ಲಿ ತೊಡಗಿದವನಲ್ಲ.'' ಎಂದು ಅವರು ವಿವರವಾಗಿ ತಿಳಿಸಿದರು.

ಲಜಪತರು ತಮ್ಮ ಆರೋಗ್ಯದತ್ತಲೂ ಮನವಿ ಪತ್ರದಲ್ಲಿ ಗಮನ ಸೆಳೆದರು. ''ಯಕೃತ್ತಿನ ಕಾಯಿಲೆಯಿಂದ ನಿರಂತರವಾಗಿ ನರಳುತ್ತಿರುವವನು. ಉದರ ಬೇನೆಯೂ ಉಂಟು.'' ಅಂತಿಮವಾಗಿ ಅವರು ಮನವಿ ಪತ್ರದಲ್ಲಿ ''ಒಂದು ವೇಳೆ ನನ್ನನ್ನು ಕೂಡಲೇ ಬಿಡುಗಡೆ ಮಾಡಲು ಸಾಧ್ಯವಾಗದಿದ್ದರೆ ನನ್ನ ಬಂಧನಕ್ಕೆ ಕಾರಣವೇನೆಂಬುದನ್ನಾದರೂ ತಿಳಿಸಬೇಕು. ನನ್ನ ಮನವಿಯನ್ನು ಚಕ್ರವರ್ತಿಯವರಿಗೆ ರವಾನಿಸಬೇಕು. ನನ್ನ ಮನವಿ ಇತ್ಯರ್ಥವಾಗುವತನಕ ಕೆಲವು ಸೌಲಭ್ಯಗಳನ್ನು ಅಂದರೆ ಒಂದು ಭಾರತೀಯ ಪತ್ರಿಕೆ, ಇಂಗ್ಲಿಷ್ ಪತ್ರಿಕೆಗಳನ್ನು ಓದುವ ಅವಕಾಶ ಕಲ್ಪಿಸಬೇಕು. ಅವುಗಳನ್ನು ಓದುವ ಹಕ್ಕನ್ನು ಕಸಿದುಕೊಂಡಿರುವುದರಿಂದ ಕಟ್ಟಾ ಏಕಾಂಗಿತನಕ್ಕೆ ಒಳಪಡಿಸಿರುವ ಕಳವಳಕ್ಕೆ ಈಡಾಗಿದ್ದೇನೆ. ನನ್ನ ಮನೆಯಿಂದ ನಮ್ಮವನೇ ಆದ ಸೇವಕನನ್ನು ಒದಗಿಸಿಕೊಡಬೇಕು.'' ಆ ಮನವಿಯಲ್ಲಿ ಕಡೆಯದಾಗಿ ಅವರು ''ನನ್ನ ಬಂಧನದ ಅವಧಿಯ ಬಗ್ಗೆ ತಿಳಿಸಬೇಕು'' ಎಂದಿದ್ದಾರೆ.

ಆಗಸ್ಟ್ 6ರಂದು ಅವರ ಅರ್ಜಿಗೆ ಭಾರತ ಸರ್ಕಾರದಿಂದ ಬಂದ ಆದೇಶಗಳನ್ನು ಜೈಲಿನ ಸುಪರಿಂಟೆಂಡೆಂಟರು ಓದಿ ತಿಳಿಸಿದರು. ನಂತರ ಅವರಿಗೆ ಸರ್ಕಾರದ ನಿರ್ಧಾರಗಳನ್ನು ಒಳಗೊಂಡ ಚೀಟಿಯೊಂದನ್ನು ಒದಗಿಸಲಾಯಿತು. ಅದರಲ್ಲಿ,

''ನೀವು ಫೋರ್ಟ್ ಡಬರಿನ್ ಕೋಟೆಯಿಂದ ವಾಹನದಲ್ಲಿ ಹೊರಗೆ ಓಡಾಡಲು ಭಾರತ ಸರ್ಕಾರ ಅನುಮತಿ ಕೊಟ್ಟಿಲ್ಲ. ಪೊಲೀಸ್ ಕಣ್ಗಾವಲು ಕಡಿಮೆ ಮಾಡಲು ಒಪ್ಪಿಲ್ಲ. ನಿಮ್ಮ ವಿರುದ್ಧದ ಆರೋಪಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕೊಟ್ಟಿರುವ ಕಾರಣಗಳಿಗಿಂತ ಹೆಚ್ಚಿನದೇನನ್ನು ತಿಳಿಸಲು ಸಾಧ್ಯವಿಲ್ಲವೆಂದು ಭಾರತ ಸರ್ಕಾರ ತಿಳಿಸಿದೆ. ನೀವು ನಿಮ್ಮ ಮನವಿಯನ್ನು ಸ್ಥಳೀಯ ಸರ್ಕಾರದ ಮುಖಾಂತರ ಸಲ್ಲಿಸಬೇಕು.

''ನಿಮ್ಮವನೇ ಆದ ಸೇವಕನನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲ. ವೃತ್ತಪತ್ರಿಕೆಗಳನ್ನು ಒದಗಿಸಲು ಆಗುವುದಿಲ್ಲ. ಈಗಾಗಲೇ ಈ ಬಗ್ಗೆ ನಿರಾಕರಣೆ ನೀಡಲಾಗಿದೆ.

''ಬಂಧನದ ಅವಧಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನೀವು ನಿಮ್ಮ ಬಂಧುಗಳನ್ನು ನೋಡುವ ಬಗ್ಗೆ ಪ್ರಬಲವಾದ ಆಕ್ಷೇಪಗಳೇನೂ ಇಲ್ಲ. ಆದರೆ ಅಂತಹ ಭೇಟಿ ಮಾಡುವವರ ಬಗ್ಗೆ ಪಂಜಾಬ್ ಸರ್ಕಾರದಿಂದ ಮಾತ್ರ ಅನುಮತಿ ಅಗತ್ಯವಾಗುತ್ತದೆ.''

ಲಜಪತರ ಮನವಿಗೆ ದೊರೆತ ಒಟ್ಟಾರೆ ಉತ್ತರ ಇದು.

ಲಜಪತರಿಂದ ಪಡೆದುಕೊಂಡ ನಿಯಂತ್ರಣ ವಿಧಿಯ ಕಾಯ್ದೆಯನ್ನು ಓದಿದ ಮೇಲೆ ಜೈಲು ಸುಪರಿಂಟೆಂಡೆಂಟರಿಗೆ ಜುಲೈ 1ರೊಳಗೆ ಸರ್ಕಾರಕ್ಕೆ ತಾವೊಂದು ತನ್ನ ಬಂದಿಯ ಬಗ್ಗೆ ವರದಿ ಸಲ್ಲಿಸಬೇಕೆಂದು ಗೊತ್ತಾಯಿತು. ಈ ಬಗ್ಗೆ ಲಜಪತರೊಂದಿಗೆ ಮಾತನಾಡಿದ ಆ ಅಧಿಕಾರಿ ಯಾವುದಾದರೂ ಅನುಕೂಲದ ಬಗ್ಗೆ ಶಿಫಾರಸು ಮಾಡಲೇ ಎಂದು ಕೇಳಿದ. ಲಜಪತರು ''ಕೋಟೆಯಿಂದ ಹೊರಗೆ ವಾಹನದಲ್ಲಿ ಓಡಾಡಲು ಅವಕಾಶಬೇಕು. ಸಾಧ್ಯವಾದಷ್ಟು ಪೊಲೀಸರ ಉಸ್ತುವಾರಿಯನ್ನು ಕಡಿಮೆ ಮಾಡಬೇಕು. ನನ್ನ ಮಿತ್ರರನ್ನು ಭೇಟಿ ಮಾಡಲು ಅನುಮತಿ ಬೇಕು'' ಎಂದು ತಿಳಿಸಿದರು.

ಸ್ಥಳೀಯ ಸರ್ಕಾರದ ಮೂಲಕ ಚಕ್ರವರ್ತಿಗೆ ತನ್ನ ಮನವಿಯನ್ನು ಸಲ್ಲಿಸಬಹುದೆಂಬ ಅವಕಾಶವನ್ನು ಲಜಪತರು ಬಳಸಿಕೊಳ್ಳಲು ಇಷ್ಟಪಡಲಿಲ್ಲ. ಸರ್ಕಾರವು ತಾಂತ್ರಿಕ ಕಾರಣವನ್ನು ಮುಂದೆ ಮಾಡಿ ಆ ಮನವಿಯನ್ನು ಚಕ್ರವರ್ತಿಗೆ ಕಳುಹಿಸಲು ಒಪ್ಪುವುದಿಲ್ಲವೆಂಬ ವಾಸ್ತವದ ಅರಿವು ಅವರಿಗಿತ್ತು. ಯುಕ್ತ ಮಾರ್ಗದಲ್ಲಿ ಮನವಿಯನ್ನು ಕಳುಹಿಸುವುದರ ಫಲಶ್ರುತಿ ಏನೆಂಬುದನ್ನು ಅವರು ಮನಗಂಡಿದ್ದರು. ''ಓರ್ವ ಕೈದಿಗೆ ಕಾನೂನು ಬದ್ಧವಾದ ಎಲ್ಲಾ ಅನುಕೂಲ, ಸವಲತ್ತುಗಳನ್ನು ನಿರಾಕರಿಸುತ್ತಿರುವಾಗ ಆತ ಜೈಲು ಸುಪರಿಂಟೆಂಡೆಂಟ್‌ರ ಮೂಲಕ ಯುಕ್ತ ಮಾರ್ಗದಲ್ಲಿ ಕಳುಹಿಸುವ ಮನವಿಯನ್ನು ಮೇಲು ಹಂತದವರೆಗೆ ತಲುಪಿಸಲಾಗುತ್ತದೆ ಎಂಬುದು ಹಾಸ್ಯಾಸ್ಪದ ಸಂಗತಿ ಎಂದು ನಾನು ಯೋಚಿಸಿದೆ.'' ಅಷ್ಟೇ ಅಲ್ಲ ಚಕ್ರವರ್ತಿಯ ಸಂವಿಧಾನಾತ್ಮಕ ಅಧಿಪತಿ ಜಾನ್ ಮಾರ್ಲೆಯಂಥ ರಾಜಕಾರಣ ನೀತಿಗಳಿಗೆ ಹೆಸರಾದ ಮುತ್ಸದ್ದಿಯೋರ್ವರಿಂದ ಸಮ್ಮತಿಯ ಮುದ್ರೆ ಹಾಕಲ್ಪಟ್ಟ ಭಾರತ ಸರ್ಕಾರದ ನಿರ್ಧಾರದಲ್ಲಿ ಅವರು ಹಸ್ತಕ್ಷೇಪ ಮಾಡಲಾರರೆಂದು ನನ್ನ ವಿವೇಚನೆ ಹೇಳಿತು.'' ಅದರೂ ಒಂದು ಅಂಶದಲ್ಲಿ ''ಭಾರತದಲ್ಲಿನ ಅವರ ಸರ್ಕಾರವು ನನ್ನಂತಹ ಶಿಕ್ಷಿತ ಹಾಗೂ ಉನ್ನತ ಸ್ಥಾನದ ರಾಜಕೀಯ ಕೈದಿಗೆ ವೃತ್ತಪತ್ರಿಕೆಗಳ ಓದುವ ಹಕ್ಕನ್ನು ನಿರಾಕರಿಸುತ್ತಿರುವ ಹೃದಯ ಹೀನತೆಯನ್ನು ಚಕ್ರವರ್ತಿಯ ಗಮನಕ್ಕೆ ತರಲು ಬಯಸಿದರು.'' ಅಷ್ಟೇ ಅಲ್ಲ. ''ತಮ್ಮ ವಿರುದ್ಧ ಪ್ರಬಲವಾದ ಸಾಕ್ಷಿಗಳಿಗೆ, ಆಧಾರಗಳಿಗ ಇನ್ನೂ ಪ್ರಯತ್ನಿಸುತ್ತಿರುವ ಹಂತದಲ್ಲಿ ತಮ್ಮ ಮನವಿಯನ್ನು ಯುಕ್ತ ಮಾರ್ಗದಲ್ಲಿ ಭಾರತ ಸರ್ಕಾರ ಚಕ್ರವರ್ತಿಗೆ ಸಲ್ಲಿಸುವುದಿಲ್ಲವೆಂಬ ಪ್ರಬಲ ಶಂಕೆಯೂ ಅವರಲ್ಲಿ ಮೂಡಿತು. ''ಲಾಹೋರ್ ಮತ್ತು ರಾವಲ್ಪಿಂಡಿ ಹಿಂಸಾಚಾರಗಳಲ್ಲಿ ಬಂಧಿತರಾದವರನ್ನು ಬಲವಂತಪಡಿಸಿ ನನ್ನ ಹೆಸರನ್ನು ಅವರ ಬಾಯಿಯಿಂದ ಹೊರಹಾಕಿಸಲು ಪ್ರಯತ್ನಿಸಲಾಗುತ್ತಿತ್ತು. ನನ್ನ ವಿರುದ್ಧ ಅವರಿಂದ ಗಟ್ಟಿಯಾದ ಸಾಕ್ಷಿ ಆಧಾರಗಳನ್ನು ದಕ್ಕಿಸಿಕೊಳ್ಳಲು ಸರ್ಕಾರ ಅವರಿಗೆ ಕಠೋರ ಹಿಂಸೆ ಸಹ ಕೆಲವು ಪ್ರಕರಣಗಳಲ್ಲಿ ಕೊಡುತ್ತಿತ್ತು.''

ಚಕ್ರವರ್ತಿಗೆ ಮನವಿ ಸಲ್ಲಿಸುವ ಮೂಲಕ ಲಜಪತರ ಇಂಗಿತದ ಬಗ್ಗೆ ಜೈಲು ಸುಪರಿಂಟೆಂಡೆಂಟರು ಮೇಲಿಂದ ಮೇಲೆ ನೆನಪು ಮಾಡತೊಡಗಿದರು. ಲಜಪತರು ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಕಾಲ ಬಂದಾಗ ತಾವು ತಮ್ಮ ಮನವಿ ಪತ್ರ ಸಲ್ಲಿಸುವುದಾಗಿ ಹೇಳುತ್ತಾ ಬಂದರು. ''ಚರಿತ್ರೆಯನ್ನು ಓದಿದ್ದ ನನಗೆ ಅದುವರೆಗಿನ ಅನುಭವದ ಹಿನ್ನೆಲೆಯಲ್ಲಿ ಬ್ರಿಟಿಷ್ ಆಡಳಿತದಿಂದ ನ್ಯಾಯ ಸಿಗುವುದಿಲ್ಲವೆಂದು ಮನವರಿಕೆಯಾಗತೊಡಗಿದಂತೆ ಬಂಧನದ ಆ ಬದುಕಿಗೆ ಒಗ್ಗಿಕೊಳ್ಳಲು ನಿರ್ಧರಿಸಿಕೊಂಡೆ. ಬರವಣಿಗೆಯ ಮೂಲಕ ನನ್ನ ಪ್ರತಿಭಟನೆ ಸಲ್ಲಿಸಿದ್ದೇನೆಂದು ತೃಪ್ತಿಪಟ್ಟುಕೊಂಡೆ. ನನ್ನ ವಿರುದ್ಧ ಮಾಡಿರುವ ಆರೋಪಗಳನ್ನು ನಿರಾಕರಿಸಿದ್ದೇನೆ ಎಂಬ ಸಮಾಧಾನವು ನನ್ನಲ್ಲಿ ಮೂಡಿತು.''

ಆದರೂ ಲಜಪತರಿಗೆ ನೆಮ್ಮದಿಯಿಂದ ಇರಲಾಗಲಿಲ್ಲ. ಸಾಮ್ರಾಜ್ಯಶಾಹಿಯ ಸಂಚುಗಳು ಹೀನ ಕೃತ್ಯದಲ್ಲಿ ತೊಡಗಿದ್ದುದು ಅದಕ್ಕೆ ಕಾರಣ. ಕೆಲವು ತಿಂಗಳುಗಳ ನಂತರ ಮತ್ತೆ ಅವರ ನೆಮ್ಮದಿ ಕದಡಿತು.

''ಸೆಪ್ಟೆಂಬರ್ ತಿಂಗಳಿನಲ್ಲಿ... ಜೈಲಿನ ಸುಪರಿಂಟೆಂಡೆಂಟರು ನನಗೆ ಕಳುಹಿಸಿಕೊಟ್ಟ ಇಂಗ್ಲಿಷ್ ನಿಯತಕಾಲಿಕೆಯೊಂದನ್ನು ಓದುತ್ತಿದ್ದೆ. ಅದರಲ್ಲಿ ನನ್ನ ವಿರುದ್ಧ ಬರೆದಿದ್ದ ಲೇಖನವೊಂದರಲ್ಲಿ ದೇಶಿಯ ಸೇನೆಯ ರಾಜನಿಷ್ಠೆಯನ್ನು ನಾನು ಕಲಕಿದನೆಂದು ಆರೋಪ ಹೊರಿಸಲಾಗಿತ್ತು. ಅದು ಸಂಪೂರ್ಣವಾಗಿ ಅಸಂಬದ್ಧ ಆರೋಪವಾಗಿತ್ತು. 'ಶುದ್ಧ ಸುಳ್ಳು' ಆದಾಗಿತ್ತು.'' ಅದರ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಲು ಲಜಪತರು ಬಯಸಿದರು. ಮುಂದೆ ಬಂಧನದಿಂದ ಬಿಡುಗಡೆಯಾದ ಮೇಲೆ ಕೆಲವು ಪತ್ರಿಕೆಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದು ನಂತರದ ಬೆಳವಣಿಗೆ. ಸೆಪ್ಟೆಂಬರ್ 22ರಂದು ಮಾಂಡೇಲೆ ಜೈಲಿನಿಂದ ಸರ್ಕಾರಕ್ಕೆ ಸಲ್ಲಿಸಿದ ತಮ್ಮ ಎರಡನೇ ಮನವಿಯಲ್ಲಿ ಅವರು ಈ ಬಗ್ಗೆ ಪ್ರಸ್ತಾಪ ಮಾಡಿದರು. ಪತ್ರಿಕೆಗಳ ವಿರುದ್ಧ ಮೊಕದ್ದಮೆ ಹೂಡುವುದಾಗಿ ತಿಳಿಸಿದರು. ಆ ಪತ್ರವನ್ನು ಅವರು ನೇರವಾಗಿ ಲಂಡನ್ನಿನ ಭಾರತ ಸರ್ಕಾರದ ಕಾರ್ಯದರ್ಶಿ ಹೆಸರಿಗೆ ಬರೆದಿದ್ದರು. ಆ ಪತ್ರದಲ್ಲಿಯೂ ಸಹ ಯಾವುದೇ ದಂಗೆಯ ವಿಷಯ ತಮಗೆ ತಿಳಿಯದೆಂದೂ, ಅಂತಹ ಆರೋಪಗಳಲ್ಲಿ ತಮ್ಮ ಪಾತ್ರ ಇಲ್ಲವೆಂದೂ, ವಿನಾ ಕಾರಣ ತಮ್ಮನ್ನು 1818ರ ನಿಯಂತ್ರಣ ಕಾಯ್ದೆಯ 3ನೇ ವಿಧಿ ವ್ಯಾಪ್ತಿಗೆ ಗುರಿಪಡಿಸಲಾಗಿದೆ ಎಂದೂ ತಿಳಿಸಿದರು. ತಮ್ಮ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಪಟ್ಟಂತೆ ತಾವು ಸಲ್ಲಿಸಿರುವ ಪ್ರತಿಭಟನೆಯನ್ನು ಕಡೆಗಣಿಸಲಾಗಿದೆ ಎಂದೂ ಪುನರ್ ಪ್ರಸ್ತಾಪ ಮಾಡಿದರು. ಹಿಂದಿನ ಮನವಿಯಲ್ಲಿ ಸಲ್ಲಿಸಿದಂತೆ ವೃತ್ತಪತ್ರಿಕೆಗಳನ್ನು ತಮಗೆ ಸಂಪೂರ್ಣವಾಗಿ ನಿರಾಕರಿಸಲಾಗುತ್ತಿದೆ ಎಂದು ಹೇಳಿದ್ದರು. ನಿಮ್ಮ ಈ ಮನವಿಕಾರನಿಗೆ ಭಾರತ ಸರ್ಕಾರವು ತನ್ನ ವಿರುದ್ಧ ಕೈಗೊಂಡಿರುವ ಕ್ರಮಗಳಿಗೆ ಕಾರಣಗಳನ್ನು ತಿಳಿಸಿಲ್ಲವೆಂಬ ಸಂಗತಿಯನ್ನು ವಿವರಿಸಲು ಸಹ ಸಾಧ್ಯವಾಗುತ್ತಿಲ್ಲ. ಆ ಪತ್ರದ ಮುಂದಿನ ಪ್ಯಾರಗಳಲ್ಲಿ 'ಸರ್ಕಾರದ ಕ್ರಮಗಳ' ಬಗ್ಗೆ ನಿರಾಕರಣೆ ನೀಡುತ್ತಾ, ''ನಿಮ್ಮ ಮನವಿಕಾರನು ಲಾಹೋರಿನಲ್ಲಾಗಲಿ, ರಾವಲ್ಪಿಂಡಿಯಲ್ಲಾಗಲಿ ಯಾವುದೇ ಗಲಭೆಯಲ್ಲಾಗಲಿ ಪರೋಕ್ಷವಾಗಿಯಾಲಿ, ಪ್ರತ್ಯಕ್ಷವಾಗಿಯಾಗಲಿ ಯಾವುದೇ ವ್ಯಕ್ತಿಯನ್ನು ನಿಯೋಜಿಸಿಲ್ಲ. ಆತ ಯಾವುದೇ ರೀತಿಯಲ್ಲೂ ವಿದ್ರೋಹಕ್ಕೆ ಪ್ರಚೋದನೆ ನೀಡುವ ಭಾಷಣಗಳನ್ನು ಮಾಡಿಲ್ಲ. ಆತ ಯಾವಾಗಲೂ ಕಾನೂನು ಮತ್ತು ಸಂವಿಧಾನದ ಚೌಕಟ್ಟಿನೊಳಗಿದ್ದುಕೊಂಡೇ ಸರ್ಕಾರದ ಕೆಲವು ಕ್ರಮಗಳನ್ನು ಅನುಚಿತವೆಂದು ಹೇಳುತ್ತಾ ಬಂದಿದ್ದಾನೆ. ಹಾಗೆ ಮಾಡುವಾಗಲೂ ಸಹ ಜನರಲ್ಲಿ ಯಾವುದೇ ರೀತಿಯಲ್ಲೂ ಹಿಂಸೆಯಾಗಲಿ, ಕಾನೂನುಬಾಹಿರ ಕ್ರಮಕ್ಕಾಗಲಿ ಪ್ರಚೋದನೆಯಾಗುವಂತೆ ಮಾಡಿಲ್ಲ. ಆತನ ಗಮನದಲ್ಲಿರುವಷ್ಟರ ಮಟ್ಟಿಗೆ ಆತ ಎಂದೂ ಪ್ರಚೋದನೆಗೆ ಪ್ರೇರೇಪಿಸುವ ವ್ಯಕ್ತಿಗಳ ಸಹಯೋಗ ಮಾಡಿಲ್ಲ. ದೇಶೀಯ ಸೇನೆಯಲ್ಲಿ ಅತೃಪ್ತಿ ಮೂಡಲು ಕಾರಣನಾದೆನೆಂಬ ಶಂಕೆಯಲ್ಲಿ ಯಾವುದೇ ಹುರುಳಿಲ್ಲ. ಅಂತಹ ಸೇನೆಯೊಂದಿಗೆ ಮಿಳಿತವಾಗುವ ಯಾವುದೇ ಅವಕಾಶವೂ ನಿಮ್ಮ ಈ ಮನವಿಕಾರನಿಗೆ ಲಭ್ಯವಿಲ್ಲ.''

ಈ ಮನವಿಯು ಕಾನೂನು ಮತ್ತು ಸಂವಿಧಾನಾತ್ಮಕ ಪ್ರಾಮುಖ್ಯತೆಗೆ ಒಂದು ಆಯಾಮವಾಯಿತು. ''ತನ್ನ ವಿರುದ್ಧ ಜಾರಿಗೊಳಿಸಿರುವ ನಿಯಂತ್ರಣ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಯ ಸಂವಿಧಾನಬಾಹಿರ ಕಾಯ್ದೆ ಎಂದು ಹೇಳಲು ಮನವಿಕಾರನಿಗೆ

ಅವಕಾಶ ಪ್ರಾಪ್ತವಾಯಿತು. ಈಸ್ಟ್ ಇಂಡಿಯಾ ಕಂಪನಿಗೆ ದತ್ತವಾದ ಅಧಿಕಾರದ ವ್ಯಾಪ್ತಿಗೆ ಮೀರಿದ ನಿಯಂತ್ರಣ ಕಾಯ್ದೆ ಅದೆಂದೂ ವಾದಿಸುವಂತಾಯಿತು. ಬ್ರಿಟಿಷ್ ಸಂವಿಧಾನ ಮತ್ತು ಬ್ರಿಟಿಷ್ ಕಾಯ್ದೆಗೆ ಸಂಪೂರ್ಣವಾಗಿ ತದ್ವಿರುದ್ಧವಾದ ಕಾಯ್ದೆ ಅದೆಂದೂ ವಾದಿಸುವ ಅವಕಾಶ ಸಿಕ್ಕಿತು. ಆ ಕಾಯ್ದೆಗೆ ಬ್ರಿಟಿಷ್ ಸಂಸತ್ತಿನ ಅನುಮೋದನೆ ಸಿಕ್ಕಿರಲಿಲ್ಲವೆಂಬುದು ಸ್ಥಿರಪಟ್ಟಿತು. ಬ್ರಿಟಿಷ್ ಪ್ರಜೆಗಳಿಗೆ ಅವರ ವೈಯಕ್ತಿಕ ಸ್ವಾತಂತ್ರ್ಯವನ್ನು ನ್ಯಾಯಾಲಯದಲ್ಲಿ ಯುಕ್ತ ವಿಚಾರಣೆ ಇಲ್ಲದೆ ಹರಣಗೊಳಿಸುವಂತಹ ಅಂತಹ ಕಾಯ್ದೆ ಸ್ವಾಭಾವಿಕ ನ್ಯಾಯ ಮತ್ತು ಸರ್ಕಾರದ ಶಾಸನಗಳಿಗೆ ವಿರುದ್ಧವಾದದ್ದೆಂದು ಸ್ಥಿರವಾಯಿತು.''

'Story'ಯಲ್ಲಿ ಈ ಬಗ್ಗೆ ಲಜಪತರು ದಾಖಲೆ ಮಾಡಿಟ್ಟಿದ್ದಾರೆ. ನಿಯಂತ್ರಣ ಕಾಯ್ದೆಯು ಬ್ರಿಟನ್ನಿನ ಸಂವಿಧಾನ ಮತ್ತು ಕಾಯ್ದೆಗಳಿಗೆ ವಿರುದ್ಧವಾದುದು ಎಂಬ ಸಂಗತಿ ಅವರಿಗೆ ಈಸ್ಟ್ ಇಂಡಿಯಾ ಕಂಪನಿಯ ಚರಿತ್ರೆಯೊಂದನ್ನು ಓದುವಾಗ ತಿಳಿದು ಬಂದಿತ್ತು. *'Ledger and Sword'* ಶೀರ್ಷಿಕೆಯ ಕೃತಿಯಲ್ಲಿ ಈ ಪ್ರಸ್ತಾಪವಿತ್ತು. ಕೆಲವು ಪ್ರತಿಷ್ಠಿತ ನ್ಯಾಯವಾದಿಗಳು ಈ ಬಗ್ಗೆ ಚರ್ಚಿಸಿ, ವಿಮರ್ಶಿಸಿ ನಿಯಂತ್ರಣ ಕಾಯ್ದೆಗೆ ಸಿಂಧುತ್ವವಿಲ್ಲವೆಂದು ಅಭಿಪ್ರಾಯ ದಾಖಲು ಮಾಡಿದರು. ವೃತ್ತಪತ್ರಿಕೆಗಳ ನಿರಾಕರಣೆ ಲಜಪತರಿಗೆ ಸಾಕಷ್ಟು ಇರಸು ಮುರಸು ಉಂಟು ಮಾಡಿತು. ಅವುಗಳನ್ನು ಓದದೇ ಅವರಿಗೆ ನೆಮ್ಮದಿಯೇ ಇರುತ್ತಿರಲಿಲ್ಲ. ಮುಂದಿನ ವರ್ಷಗಳಲ್ಲಿ ಬಂಧನಕ್ಕೆ ಒಳಗಾದಾಗ ಅವರು ಸರ್ಕಾರದ ಕೈದಿಯಾಗಿ ಇರಲು ನಿರಾಕರಿಸುತ್ತಿದ್ದರು. ಜೈಲಿನ ಮೂರ್ಖತನದ ನಿರ್ಬಂಧಗಳು, ವೃತ್ತಪತ್ರಿಕೆಗಳ ಮೇಲೆ ಹಾಕಿದ್ದ ನಿಷೇಧ ಅವರನ್ನು ತೀರಾ ಅಸಮಾಧಾನಕ್ಕೆ ಗುರಿ ಮಾಡಿದ್ದವು. ಅನಧಿಕೃತ ಮಾರ್ಗದಲ್ಲಿ ಪತ್ರಿಕೆಗಳನ್ನು ತರಿಸಿಕೊಳ್ಳಲು ಕೆಲವರು ಸಲಹೆಯನ್ನೇನೋ ಮಾಡಿದರು. ಆ ವ್ಯವಸ್ಥೆ ಎಲ್ಲಾ ಕಾಲಕ್ಕೂ ಅನುಕೂಲಕರವಾಗಿರಲಿಲ್ಲ. ವೃತ್ತಪತ್ರಿಕೆ ಮೇಲಿನ ನಿರ್ಬಂಧ ಅವರನ್ನು ಪೇಚಿಗೆ ಸಿಲುಕಿಸಿದ್ದು ಉಂಟು. ಜೈಲಿನ ಯಾವ ಕಟ್ಟುಕಟ್ಟಳೆಗಳು ಹಿಂಸಕವೆನಿಸುತ್ತಿರಲಿಲ್ಲ

. ಚಕ್ರವರ್ತಿಗೆ ಸಲ್ಲಿಸಿದ ಮೊದಲನೇ ಮತ್ತು ಎರಡನೇ ಮನವಿಗಳೆರಡರಲ್ಲೂ ಅವರು ಈ ಹಕ್ಕಿನ ಹರಣದ ಬಗ್ಗೆ ದೀರ್ಘವಾದ ಪ್ರಸ್ತಾಪ ಮಾಡಿದ್ದರು.

''ನಿಯಂತ್ರಣ ಕಾಯ್ದೆಯಲ್ಲಿ ವಿವರಿಸಿರುವ 'ವೈಯಕ್ತಿಕ ನಿರ್ಬಂಧಗಳು' ಆ ಕಾಯ್ದೆಯ ಪೂರ್ವ ಪೀಠಿಕೆಯಲ್ಲಿ ಕೇಳಿರುವ ಅಗತ್ಯ ಧ್ಯೇಯೋದ್ದೇಶಗಳಿಗೆ ತೀರಾ ಭಿನ್ನವಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಲು ಈ ಮನವಿಕಾರನು ಕೋರುತ್ತಾನೆ. ನಿಯಂತ್ರಣ ಕಾಯ್ದೆಯ ಉದ್ದೇಶ ಆತನ ಚಟುವಟಿಕೆಗಳಿಗೆ ತಡೆ ಒಡ್ಡುವುದಷ್ಟೇ ಹೊರತು ವಿಚಾರಣೆಗೆ ಒಳಪಡಿಸದಿರುವ ಮನುಷ್ಯನಿಗೆ ಎಲ್ಲಾ ರೀತಿಯ ಶಿಕ್ಷೆಗಳನ್ನು ಕೊಡುವುದಲ್ಲ.''

ಈ ಹಿನ್ನೆಲೆಯಲ್ಲಿ ನೋಡಿದಾಗ ವೃತ್ತಪತ್ರಿಕೆಯನ್ನು ಒದಗಿಸದಿರುವ, ದೇಶಿಯ ಆಯ್ಕೆಯ ಖಾಸಗಿ ಸೇವಕನನ್ನು ಅಥವಾ ಅಡಿಗೆಯವನನ್ನು ನೇಮಿಸಿಕೊಳ್ಳಲು ಅವಕಾಶ ಕೊಡದಿರುವುದು ಅನ್ಯಾಯ ಮತ್ತು ಅಸಂಗತ. ಕೈದಿಯು ತನ್ನ ಗೆಳೆಯರನ್ನು ಭೇಟಿ ಮಾಡಬಾರದೆಂಬ ನಿರ್ಬಂಧವು ಸಹ ನ್ಯಾಯಸಮ್ಮತವಲ್ಲ. ಅವರನ್ನು ನೋಡಲು ಬಂಧುಗಳು ಪಂಜಾಬ್ ಸರ್ಕಾರದ ಪೂರ್ವ ಅನುಮತಿ ಪಡೆಯಬೇಕೆಂಬ ನಿರ್ಬಂಧವು

ನ್ಯಾಯೋಚಿತವಾದದ್ದಲ್ಲ. ಅಂತಹ ಅವಕಾಶ ದೊರೆತರೂ ಓರ್ವ ಅಧಿಕಾರಿಯ ಎದುರಿನಲ್ಲಿ ಭೇಟಿ ನಡೆಯಬೇಕೆಂಬ ಕಟ್ಟಳೆ ಹಾಸ್ಯಾಸ್ಪದ. ''ಯಾವುದೇ ವಿಚಾರಣೆ ಇಲ್ಲದೇ ರಾಜಕೀಯ ಕೈದಿಗಳ ಇಲ್ಲವೇ ಇತರೆ ಕೈದಿಗಳಿಗೆ ಇಂತಹ ನಿರ್ಬಂಧಗಳನ್ನು ಹಾಕುವುದಕ್ಕೆ ಗ್ರೇಟ್ ಬ್ರಿಟನ್‌ನಲ್ಲಿ ಪ್ರಬಲ ವಿರೋಧವಿದೆ.'' ಅಂತಿಮವಾಗಿ ತಮ್ಮ ಮನವಿಯಲ್ಲಿ ಅವರು ''ಬ್ರಿಟಿಷ್ ರಾಷ್ಟ್ರ ಮತ್ತು ಅದರ ಸರ್ಕಾರ ನ್ಯಾಯ ಮತ್ತು ನ್ಯಾಯಸಮ್ಮತ ಕಾರ್ಯಗಳನ್ನು ಎತ್ತಿ ಹಿಡಿಯುತ್ತದೆ ಎಂಬ ಭರವಸೆ ಈ ಮನವಿದಾರನಿಗಿದೆ'' ಎಂದಿದ್ದಾರೆ. ಆ ದಿನಗಳಲ್ಲಿ ಭಾರತೀಯ ರಾಜಕೀಯ ನಾಯಕರುಗಳು ಇದನ್ನು ಪ್ರಮುಖ ಸೂತ್ರವಾಗಿ ಪರಿಗಣಿಸಿದ್ದರು.

ಇಡೀ ಮನವಿಯಲ್ಲಿ ಓದಿದಾಗ ಕ್ಷಮೆ ಕೋರಿ ಬರೆದ ಅರ್ಜಿ ಅದೆಂದು ಅನ್ನಿಸುವುದಿಲ್ಲ. ಅದು ಸ್ಪಷ್ಟವಾಗಿ, ನಿಚ್ಚಳವಾಗಿ ಕಾನೂನಿನ ಹಕ್ಕುಗಳನ್ನು ಪ್ರತಿಪಾದಿಸಿದೆ. ಕೇವಲ ಕಾನೂನಿನ ಬಳಕೆಯನ್ನಷ್ಟೇ ಅಲ್ಲ ಅದರ ಸಿಂಧುತ್ವವನ್ನು ಸಹ ಆ ಮನವಿಯಲ್ಲಿ ಪ್ರಶ್ನಿಸಲಾಗಿದೆ. ಪ್ರತಿಭಟಿಸಲಾಗಿದೆ.

ಎರಡನೇಯ ಮನವಿಗೆ ಸಂಬಂಧಪಟ್ಟಂತೆ ಲಜಪತರಿಗೆ ಯಾವುದೇ ಉತ್ತರ ಬಂದಂತಿಲ್ಲ. ಮೊದಲ ಮನವಿಗೆ ಸಂಬಂಧಪಟ್ಟಂತೆ ಅವರ ಬಿಡುಗಡೆ ಪ್ರಸ್ತಾಪ ಮುಂದಿನ ಅಧ್ಯಾಯದಲ್ಲಿ ಓದಬಹುದು. ಮಾರ್ಲೆ ಮತ್ತು ಮಿಂಟೋ ಪತ್ರ ವ್ಯವಹಾರದ ಪ್ರಸಂಗದಲ್ಲಿ ಈ ಪ್ರಸ್ತಾಪ ಬರುತ್ತದೆ. ಅದರಲ್ಲೂ ಮಿಂಟೋ ಮತ್ತು ಪಂಜಾಬ್ ಸರ್ಕಾರದ ವ್ಯವಹಾರದಲ್ಲಿ ಅದರ ಪ್ರಸ್ತಾಪ ವಿಶೇಷವಾಗಿದೆ. ಎರಡನೇ ಮನವಿಗೆ ಸಂಬಂಧಪಟ್ಟಂತೆ ಜೈಲು ಸುಪರಿಂಟೆಂಡೆಂಟರು ಯಾವುದೇ ನಿರ್ಧಾರಗಳನ್ನು ಲಜಪತರಿಗೆ ಓದಿ ತಿಳಿಸಲಿಲ್ಲ.

ಅವುಗಳ ಆಧಾರದ ಮೇಲೆ ಯಾವುದೇ ಸೂಚನೆಯನ್ನು ಲಿಖಿತ ರೂಪದಲ್ಲಿ ಕೊಡಲೂ ಇಲ್ಲ.

* * *

ಅಧ್ಯಾಯ-29

ಗಡಿಪಾರಿನಿಂದ ಮತ್ತೆ ಮನೆಗೆ

ಲಜಪತರನ್ನು ಮಾಂಡಲೇ ಕೋಟೆಯ ಬಂಧನದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಎಷ್ಟು ದಿನ ಬಂಧನದಲ್ಲಿಡಲು ಸಾಧ್ಯ? ಈ ಬಗ್ಗೆ ಬಹುಶಃ ಲಜಪತರಿಗಂತೂ ನಿಶ್ಚಿತವಾಗಿ ಗೊತ್ತಿರಲೇ ಇಲ್ಲ. ಅವರನ್ನು ಬಂಧನದಲ್ಲಿಟ್ಟ ಪರಂಗಿ ಅಧಿಕಾರಿ ವರ್ಗಕ್ಕೂ ಅದು ಸ್ಪಷ್ಟವಾಗಿ ಇದ್ದಂತೆ ಕಾಣುತ್ತಿರಲಿಲ್ಲ. ಈ ಪ್ರಶ್ನೆ ಎಲ್ಲರ ತುಟಿಗಳ ಮೇಲೂ ಸಹಜವಾಗಿತ್ತು. ಉತ್ತರ ಮಾತ್ರ ಎಲ್ಲೂ ಸಿಗುತ್ತಿರಲಿಲ್ಲ.

ಲಜಪತರು ಸುಳಿವಿಗಾಗಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವೀಕ್ಷಿಸತೊಡಗಿದರು. ಘಟನೆಗಳನ್ನೆಲ್ಲಾ ಅಧ್ಯಯನ ಮಾಡತೊಡಗಿದರು. ದೂರದ ಮಾಂಡಲೇ ಜೈಲಿನಲ್ಲಿ ರಾಜಕೀಯ ಬಂದಿಯಾಗಿ ಇರುವುದನ್ನು ಹೊರತು ಪಡಿಸಿದರೆ ಅವರಿಗೆ ಬೇರಾವ ಸಾಧ್ಯತೆಯೂ ಕಂಡು ಬರಲಿಲ್ಲ. ಪತ್ರಿಕೆಗಳ ಅಧ್ಯಯನಕ್ಕೆ ವಿಧ್ಯುಕ್ತ ಅವಕಾಶ ಇಲ್ಲದ್ದು ಅವರಿಗೆ ಬಲಗೈ ಮುರಿದಂತಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಲಜಪತರು, 'ಪಿಂಡಿ ಹಿಂಸಾಚಾರ ಪ್ರಕರಣ' ಇತ್ಯರ್ಥವಾಗುವುದನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ತಮ್ಮ 'Story of My Deportation' ಕೃತಿಯಲ್ಲಿ ಅವರು, ಈ ಬಗ್ಗೆ ಹೀಗೆ ಬರೆದಿಟ್ಟಿದ್ದಾರೆ.

"ರಾವಲ್ಪಿಂಡಿ ಮತ್ತು ಲಾಹೋರ್ ಹಿಂಸಾಚಾರ ಪ್ರಕರಣಗಳ ವಿಚಾರಣೆ ಅಂತಿಮವಾಗಿ ಇತ್ಯರ್ಥವಾಗುವುದಕ್ಕೆ ಮೊದಲು ತನ್ನ ಬಿಡುಗಡೆ ಖಂಡಿತಾ ಸಾಧ್ಯವಿಲ್ಲ ಎಂಬ ಮೊದಲ ಹಂತದ ಭಾವನೆ ನನ್ನಲ್ಲಿ ಖಾತ್ರಿಯಾಗಿತ್ತು... ರಾವಲ್ಪಿಂಡಿ ಹಿಂಸಾಚಾರದಲ್ಲಿ ಆರೋಪಿಗಳನ್ನಾಗಿ ಮಾಡಲಾಗಿದ್ದ ವಕೀಲರು ಬಿಡುಗಡೆಯಾಗುವುದು ಪ್ರತಿನಿತ್ಯವು ಸೂರ್ಯೋದಯವಾಗುವಷ್ಟೇ ನಿಚ್ಚಳ ಎಂದು ನನ್ನ ಒಳಮನಸ್ಸಿಗೆ ಖಚಿತವಾಗಿ ಬೇಕಾಗಿತ್ತು. ಅಧಿಕಾರಶಾಹಿ ನಿಯೋಜಿಸಿಕೊಂಡಿದ್ದ ಖಾಸಗಿ ಬೇಹುಗಾರರು ಇಲ್ಲದೇ ಮಾಹಿತಿದಾರರು ಅವರನ್ನು ಬೆಪ್ಪುತಕ್ಕಡಿಗಳನ್ನಾಗಿ ಮಾಡಿದ್ದರು. ಹೀಗೆ ಲಜಪತರ ಮನಸ್ಸು ಭರವಸೆ ಮತ್ತು ಕಳವಳಗಳ ನಡುವೆ ನಿರಂತರವಾಗಿ ತುಮುಲಕ್ಕೆ ಒಳಗಾಗುತ್ತಿತ್ತು."

ನವೆಂಬರ್ 11. ಬೆಳಿಗ್ಗೆ 10.15ರ ಸಮಯ. ಲಜಪತರ ಮನಸ್ಥಿತಿಯ ತುಮುಲಕ್ಕೆ ಇತಿಶ್ರೀ ಹಾಡುವ ಗಳಿಗೆ. ಮಾಂಡಲೇ ವಿಭಾಗದ ಕಮಿಷನರ್, ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಲಜಪತರನ್ನು ನೋಡಲು ಬಂದರು. ಬಿಡುಗಡೆ ಮಾಡುವುದಾಗಿ ಅವರು ಲಜಪತರಿಗೆ ತಿಳಿಸಿದರು. ಅವರ ಜೊತೆಯಲ್ಲಿ ಕಮಿಷನರು ಲಜಪತರಿಗೆ ವೈಸ್‌ರಾಯ್ ಪರವಾಗಿ ಮುನ್ನೆಚ್ಚರಿಕೆಯೊಂದನ್ನು ನೀಡಿ ಮತ್ತೆ ಯಾವುದೇ ರೀತಿಯ ರಾಜದ್ರೋಹದ ಕೃತ್ಯದಲ್ಲಿ ತೊಡಗಿದ್ದೇ ಆದರೆ ಕೂಡಲೇ ಬಂಧಿಸಿ ಉಚ್ಚಾಟನೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವಿಶೇಷ ರೈಲು ಕಾಯುತ್ತಿರುವುದರಿಂದ ಕೂಡಲೇ ಎಲ್ಲಾ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಲಜಪತರಿಗೆ ತಿಳಿಸಲಾಯಿತು. ನಿಗದಿತ ಸಮಯದ ಪ್ರಕಾರ ಆ ರೈಲು 10.45ಕ್ಕೆ ಅಲ್ಲಿಂದ ಹೊರಡಬೇಕಾಗಿತ್ತು. ತಮಗೆ ಎರಡನೇ ಮನೆಯಂತಿದ್ದ ಆ ಕಟ್ಟಡಕ್ಕೆ ಕೇವಲ ಅರ್ಧ ತಾಸುಗಳ ಅವಧಿಯೊಳಗೆ ಅವರು ವಿದಾಯ ಹೇಳಬೇಕಾಯಿತು.

ಪೋಲೀಸ್ ಸುಪರಿಂಟೆಂಡೆಂಟರು ರೈಲ್ವೆ ನಿಲ್ದಾಣದತನಕ ಲಜಪತರ ಜೊತೆಯಲ್ಲಿದ್ದರು. ವಿಶೇಷ ಬರ್ತ್‌ವೊಂದು ಅವರ ಬರುವಿಕೆಗೆ ಕಾದು ನಿಂತಿತ್ತು. ಐರೋಪ್ಯ ಅಧಿಕಾರಿಗಳ ಒಂದು ಪುಟ್ಟ ಹಿಂಡು ಅಲ್ಲಿ ಸಮಾವೇಶಗೊಂಡಿತ್ತು. ಆ ಪೈಕಿ ಜೈಲಿನ ಸುಪರಿಂಟೆಂಡೆಂಟ್ ಮುಂದಾಗಿ ಲಜಪತರಿಗೆ ಹಸ್ತಲಾಘವ ಇತ್ತು, ''ನಿಮ್ಮ ಉಪಟಳದಿಂದ ಪಾರಾದೆನೆಂದು ನನಗೆ ಭರಿಸಲಾಗದ ಸರ್ವೇದಾಶ್ಚರ್ಯವಾಗುತ್ತಿದೆ! ನಿಮಗೆ ಒಳ್ಳೆಯದಾಗಲಿ!'' ಎಂದು ನಗುತ್ತಾ ನುಡಿದರು. ನಿಮ್ಮ ಮೇಲೆ ಹೊರಿಸಲಾದ ಆರೋಪ ಮತ್ತೆ ಮರುಕಳಿಸದಿರಲಿ ಎಂದೂ ಹಾರೈಸಿದರು. ಪೋಲೀಸ್ ಸುಪರಿಂಟೆಂಡೆಂಟರು ಹೃದಯಸ್ಪರ್ಶಿ ಹಸ್ತಲಾಘವವಿತ್ತು ಬೀಳ್ಕೊಟ್ಟರು. ಅವರು ಲಜಪತರ ಜೊತೆಯಲ್ಲಿ ಅವರಿಗಾಗಿ ಕಾದಿರಿಸಿದ್ದ ವಿಶೇಷ ಬೋಗಿಯತನಕ ಸಾಗಿ ಬಂದರು.

ಆ ರೈಲ್ವೆ ನಿಲ್ದಾಣದಲ್ಲಿ ಸರ್ದಾರ ಅಜಿತ್‌ಸಿಂಗ್ ಜೊತೆಯಲ್ಲಿ ಇದ್ದಾಗ ತಾವು ಗಮನಿಸಿದ್ದ ಓರ್ವ ಸಾರ್ಜಂಟರನ್ನು ಲಜಪತರು ನೋಡಿದರು. ಸರ್ದಾರ್ ಅಜಿತ್‌ಸಿಂಗ್ ಸಹ ಅದೇ ರೈಲಿನಲ್ಲಿ ಇರಬೇಕೆಂದು ಅವರು ತೀರ್ಮಾನಿಸಿಕೊಂಡರು. ಆ ದಿನ ಸೂರ್ಯಾಸ್ತವಾಗುವುದಕ್ಕೆ ಮೊದಲೇ ಅವರಿಗೆ ದೊರೆತ ವರ್ತಮಾನದ ಪ್ರಕಾರ ಅಜಿತ್‌ಸಿಂಗ್ ಸಹ ಅದೇ ರೈಲಿನ ದ್ವಿತೀಯ ದರ್ಜೆ ಬೋಗಿಯಲ್ಲಿ ಓರ್ವ ಐರೋಪ್ಯ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಐರೋಪ್ಯ ಸಾರ್ಜಂಟ್ ಬೆಂಗಾವಲಿನಲ್ಲಿದ್ದರು.

ಈ ಇಬ್ಬರು ಉಚ್ಚಾಟಿತ ಮುಖಂಡರ ಬಿಡುಗಡೆಗೆ ಸರ್ಕಾರಿ ಯಂತ್ರದೊಳಗೆ ಬೆಳವಣಿಗೆಗಳು ಹೇಗಾದವು ಎಂಬುದರ ಒಳಮುಖದ ಇಣುಕು ನೋಟ ಮಾರ್ಲೆ ಬರೆದಿರುವ 'Recollections' ಹಾಗೂ ಮೇರಿ ಮಿಂಟೋ ಅವರ ಕೃತಿಗಳಲ್ಲಿ ಬರುವ ಮಿಂಟೋ-ಮಾರ್ಲೆ ಪತ್ರ ವ್ಯವಹಾರದ ಪ್ರಕರಣದಿಂದ ವ್ಯಕ್ತವಾಗುತ್ತದೆ.

ಅಕ್ಟೋಬರ್ 25ರಂದು ಮಾರ್ಲೆ, ಮಿಂಟೋಗೆ ಪತ್ರ ಬರೆದು,

''...ಲಜಪತರ ಪ್ರಕರಣವನ್ನು ನೀವು ಗಂಭೀರವಾಗಿ ಇತ್ಯರ್ಥ ಪಡಿಸುವಿರೆಂದು ನಾನು ಆಶಿಸಿದ್ದೇನೆ. ನೀವು ಬಯಸಿರುವ ಹೊಸ ಬಹಿರಂಗ ಸಭೆಗಳ ನಿಯಂತ್ರಣ ಕಾಯ್ದೆಯನ್ನು ಸಂಸತ್ತು ಅಂಗೀಕಾರಕ್ಕೆ ಪರಿಗಣಿಸುವ ಹಂತದಲ್ಲಿ ನನಗೆ ಸಮರ್ಥನೆಗೆ ಅನುಕೂಲವಾಗುವಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುವಿರೆಂದು ನಾನು ಆಶಿಸಿದ್ದೇನೆ. 'ನಾವೀಗ ಹೊಸ ಅಧಿಕಾರದಿಂದ ಸಜ್ಜಿತರಾಗಿದ್ದೇವೆ. ಈ ಹೊಸ ಬಲ ಮತ್ತು ಅದರ ವಿನಿಯೋಗದಿಂದ ಉಚ್ಚಾಟನಾ ಪ್ರಕರಣಗಳಿಗೆ ನಿಶ್ಚಿತ ಆಧಾರ ಪ್ರಾಪ್ತವಾಗುತ್ತದೆ ಎಂದು ಛಾಪಿಸಿದ್ದೇವೆ. ಲಜಪತರ ಪ್ರಕರಣ ಇತ್ಯರ್ಥಗೊಂಡಿದೆ.' ಎಂದು ನಾನು ಹೇಳುವಂತಾಗಬೇಕು... ನೀವು ಪರಿಸ್ಥಿತಿಯ ಗಾಂಭೀರ್ಯವನ್ನು ಅರ್ಥ

ಮಾಡಿಕೊಂಡಿದ್ದೀರೆಂದು ನಾವು ಭಾವಿಸಿರುವೆ. ನಿರ್ದಿಷ್ಟ ಆರೋಪ ಇಲ್ಲದೆ ಅನಿರ್ದಿಷ್ಟ ಕಾಲ ಬಂಧನದಲ್ಲಿಟ್ಟುಕೊಂಡಿರುವ ಪ್ರಕರಣವನ್ನು ಹೌಸ್ ಆಫ್ ಕಾಮನ್ಸ್‌ನಲ್ಲಿ ಸಮರ್ಥಿಸಿಕೊಳ್ಳುವುದು ಅತ್ಯಂತ ದುಸ್ತರವಾಗುತ್ತದೆ. ನೀವು ಬಯಸಿರುವ ಹೊಸ ಕಾಯ್ದೆಗೆ ಅನುಮತಿ ಪಡೆದುಕೊಳ್ಳಲು ಅವರ ಬಿಡುಗಡೆಗೆ ಒಂದು ಆಧಾರವಾಗುತ್ತದೆ. ನೀವು ಮುಂದೆ ಕೈಗೊಳ್ಳಬೇಕಾದ ಯಾವುದೇ ದಮನಕಾರಿ ಕ್ರಮಗಳಿಗೂ ಅದರಿಂದ ಸಹಾಯಕವಾಗುತ್ತದೆ.''*

ಲಜಪತರ ಬಿಡುಗಡೆಗೆ ಕಾರಣವಾದ ಮೊಟ್ಟಮೊದಲ ಬೆಳವಣಿಗೆ ಅದು. ಲಂಡನ್‌ನಿಂದ ಬಂದ ಸೂಚನೆ ಅದು. ಚಕ್ರವರ್ತಿ ಹೊರಡಿಸಿದ ಆದೇಶವೇನೂ ಅದಲ್ಲ. ಕಲ್ಕತ್ತಾದಲ್ಲಿದ್ದ ವೈಸ್‌ರಾಯ್ ಮೇಲೆ ಹಾಕಿದ ಒತ್ತಡವೂ ಅದಲ್ಲ. ವಸ್ತುತಃ ಮಾರ್ಲೆ ಬಸವಳಿದಿದ್ದರು. ಹೌಸ್ ಆಫ್ ಕಾಮನ್ಸ್‌ನಲ್ಲಿ ಆರೋಪ ಇಲ್ಲದೆ ಮಾಡಲಾದ ಬಂಧನ ಮತ್ತು ಉಚ್ಚಾಟನೆಯನ್ನು ಸಮರ್ಥಿಸಿಕೊಳ್ಳುವುದು ಅವರಿಗೆ ದುಸ್ತರವಾಗಿತ್ತು. ದಿನ ಬೆಳಗಾದರೆ ಅದು ಅವರ ಮೇಲೆ ಒತ್ತಡ ಹಾಕತೊಡಗಿತು. ''ನಿರ್ದಿಷ್ಟ ಆರೋಪ ಇಲ್ಲದೆ ಅನಿರ್ದಿಷ್ಟ ಕಾಲ ಬಂಧನದಲ್ಲಿಟ್ಟುಕೊಂಡಿರುವ ಪ್ರಕರಣ'' ಅಸಮರ್ಥನೀಯವಾಗಿ ಅವರನ್ನು ಅನುದಿನ ಕಾಡತೊಡಗಿತ್ತು. ಮಿಂಟೋ ತಮ್ಮ ಹೊಸ ಕಾಯ್ದೆಗೆ ಹೌಸ್ ಆಫ್ ಕಾಮನ್ಸ್ ಅನುಮತಿ ಬಯಸಿದಾಗ ಹಾಗೂ ಅವರು ಉದ್ದೇಶಿಸಿದ ಇತರ ಕ್ರಮಗಳಿಗೆ ಆ ಮಹಾಸಭೆಯ ಅಂಗೀಕಾರ ಬಯಸಿದಾಗ ಮಾರ್ಲೆ ಅವರಿಗೊಂದು ಪರಿಹಾರೋಪಾಯ ತಾನೇ ತಾನಾಗಿ ಒದಗಿ ಬಂದಿತು. ಇನ್ನೊಂದು ತಪ್ಪನ್ನು ಮಾಡುವ ಮೊದಲು ಹಿಂದಿನ ತಪ್ಪನ್ನು ಸರಿಪಡಿಸಿಕೊಳ್ಳ ಬಹುದೆಂದು ಅವರು ನಿರ್ಧರಿಸಿದರು. ಮೂಲತಃ ಮಾರ್ಲೆ ನಂಬಿದ್ದ ಸಿದ್ಧಾಂತವ ಸ್ವಾತಂತ್ರ್ಯವಾದದ ರಥಿಳಕು ಅವರನ್ನು ಲಜಪತರ ಅಕ್ರಮ ಬಂಧನದ ಪ್ರಕರಣದಲ್ಲಿ ಕಾಡತೊಡಗಿತು. ಅದರ ಪರಿಹಾರಕ್ಕೆ ಮಾರ್ಗ ಕಂಡುಕೊಳ್ಳುವ ಅವಕಾಶ ಆಗ ಪ್ರಾಪ್ತವಾಗಿತ್ತು. ತನ್ಮೂಲಕ ಅವರು ತಮ್ಮ ಮೂಲ ರಾಜಕೀಯ ಸಿದ್ಧಾಂತಕ್ಕೆ ಬದ್ಧರಾಗುವಂತಾಯಿತು. ನಿರ್ದಿಷ್ಟ ಆರೋಪ ಇಲ್ಲದೆ ಬಂಧಿಸಿ ಗಡಿಪಾರು ಮಾಡಿದವರನ್ನು ಬಿಡುಗಡೆಗೆ ಆದೇಶಿಸುವ ಮೂಲಕ ಮಾರ್ಲೆ ಮತ್ತೇ ತಮ್ಮತನವನ್ನು ಮೆರೆಸಿದರು. ಪ್ರತಿರೋಧಕ ಶಕ್ತಿಗೆ ಮುಕ್ತವಾದ ಅವಕಾಶವನ್ನು ತಾವು ನೀಡಿಲ್ಲವೆಂಬುದನ್ನು ಅವರು ತೋರಿಸಿಕೊಟ್ಟಂತಾಯಿತು. ಅದೇ ಸಮಯದಲ್ಲಿ ಇತ್ತ ಮಿಂಟೋ ಅವರಿಗೂ ಸಹ ಆಂಗ್ಲೋ ಇಂಡಿಯನ್ ಅಧಿಕಾರಶಾಹಿಯ ಎದುರು ತಮ್ಮ ಸಾಮರ್ಥ್ಯವನ್ನು ಗೊಂದಲಕ್ಕೆ ಈಡು ಮಾಡಿಕೊಂಡ ಪ್ರಸಂಗವಾಗದಂತೆ ನೋಡಿಕೊಂಡರು. ಗಡಿಪಾರು ಮಾಡಿದವರನ್ನು ಬಿಡುಗಡೆ ಮಾಡುವ ಮೂಲಕ ಆಡಳಿತ ಶಕ್ತಿಯ ಧೋರಣೆಗಳನ್ನು ಸಡಿಲಗೊಳಿಸಲಾಗಿದೆ ಎಂಬ ಭಾವನೆ ಅವರಲ್ಲಿ ಮೂಡದಂತೆ ಎಚ್ಚರಿಕೆಯನ್ನು ವಹಿಸಿದಂತಾಯಿತು!

ಬಹಿರಂಗ ಸಭೆಗಳ ನಿಯಂತ್ರಣ ಕಾಯ್ದೆ ಬಗ್ಗೆ ಮಿಂಟೋ ಹೆಚ್ಚು ಆಸಕ್ತರಾಗಿದ್ದರಿಂದ ಅವರು ಮಾರ್ಲೆ ಸಲಹೆಯನ್ನು ಕೂಡಲೇ ಒಪ್ಪಿಕೊಂಡರು. ಆದರೆ ಇಬ್ಬೆಟ್ಸನ್ ತಮ್ಮ ಸಮ್ಮತಿಯನ್ನು ಏಕಾಏಕಿ ನೀಡಲಿಲ್ಲ.

---

* ಅದೇ ಪುಸ್ತಕದ ಪುಟ 161

ಮಾರ್ಲೆ ಅವರಿಗೆ ಮಿಂಟೋ ನೀಡಿದ ಪ್ರತ್ಯುತ್ತರದಲ್ಲಿ ಇದನ್ನು ತಿಳಿಸಿದರು. ನವೆಂಬರ್ 5ರಂದು ಮಿಂಟೋ ಪತ್ರ ಬರೆದು,

''ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್ ಅವರಿಬ್ಬರನ್ನು ಬಿಡುಗಡೆ ಮಾಡುವ ವಿಷಯದಲ್ಲಿ ನಮ್ಮಿಬ್ಬರಲ್ಲೂ ಸಮಾನ ನಿಲುವಿದೆ ಎಂಬುದರಲ್ಲಿ ನನ್ನಲ್ಲಿ ಕಿಂಚಿತ್ತೂ ಅನುಮಾನವಿಲ್ಲ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹಾಗೆ ಮಾಡುವುದು ನನಗೆ ವಿಹಿತವಾಗುತ್ತದೆ. ಪಂಜಾಬ್ ಈಗ ಪ್ರಶಾಂತವಾಗಿದೆ ಎಂದು ನಾವು ಘೋಷಿಸಿದ್ದೇವೆ. ಹೀಗಿದ್ದೂ ಮತ್ತೂ ಅವರಿಬ್ಬರನ್ನು ಬಂಧನದಲ್ಲಿರಿಸುವುದು ಸಮರ್ಥನೀಯವಾಗುವುದಿಲ್ಲ... ಬಿಡುಗಡೆಯನ್ನು ಪಂಜಾಬ್ ಸರ್ಕಾರ ಆಕ್ಷೇಪಿಸುತ್ತದೆ ಎಂಬುದರಲ್ಲಿ ಅನುಮಾನವೂ ಇಲ್ಲದಿಲ್ಲ... ಸಮಂಜಸವಾದದ್ದನ್ನು ಮಾಡುವ ವಿಷಯದಲ್ಲಿ ನನ್ನ ಸಮ್ಮತಿ ಇದೆ. ಈ ಸಂಬಂಧದಲ್ಲಿ ನಾನು ಎಲ್ಲಾ ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳುತ್ತೇನೆ. ತಂತಿ ಮುಖಾಂತರ ಅದನ್ನೆಲ್ಲಾ ನಿಮಗೆ ತಿಳಿಸುತ್ತೇನೆ.''*

ಇಬ್ಬೆಟ್‌ಸನ್ ಬಡಬಡಿಸುತ್ತಲೇ ಇದ್ದರು. ಆದರೆ ಮಿಂಟೋ ತಮ್ಮ ನಿರ್ಧಾರಕ್ಕೆ ಅನುಗುಣವಾಗಿ ಕ್ರಮಕೈಗೊಳ್ಳತೊಡಗಿದರು.

''ಲಜಪತ್‌ರಾಯ್ ಭಾರತೀಯ ಸೇನೆಯಲ್ಲಿ ನಿಷ್ಠೆ ಭ್ರಷ್ಟರಾಗುವ ಕೃತ್ಯವೆಸಗಿದ್ದಾರೆ ಎಂಬ ಇಬ್ಬೆಟ್‌ಸನ್ ಅವರ ಮುಖ್ಯ ಆಕ್ಷೇಪವನ್ನು ಸಮರ್ಥಿಸುವ ಯಾವ ಆಧಾರವೂ ನನಗಂತೂ ಲಭ್ಯವಾಗಿಲ್ಲ. ಈ ಬಗ್ಗೆ ಯಾವ ಸಾಕ್ಷಿಯೂ ಸಿಕ್ಕಿಲ್ಲ. ಅವರು ಸಂಪೂರ್ಣವಾಗಿ ತಪ್ಪು ಗ್ರಹಿಕೆಯುಳ್ಳವರಾಗಿದ್ದರು ಎಂದು ನನಗನಿಸುತ್ತದೆ. ಈ ಬಂಧನ ಮತ್ತು ಗಡಿಪಾರು ಮೂಲಕ ಅಶಾಂತಿಯ ಪುಟ್ಟಡಗಿಸಬಹುದೆಂದು ಅವರು ಭಾವಿಸುವಂತಿದೆ. ಅದು ಎಂದಿಗೂ ಫಲಕಾರಿಯಾಗದ ಕೆಲಸ. ನಾವು ಹಾಗೆ ಮಾಡಲು ಸಾಧ್ಯವೂ ಇಲ್ಲ. ಅಶಾಂತಿಗೆ ಕಾರಣವಾದ ಅಂಶಗಳನ್ನು ಮನಗಂಡು ಹೊಸ ಸಿದ್ಧಾಂತ ಮತ್ತು ಆಶೋತ್ತರಗಳಿಗೆ ಒತ್ತು ಕೊಡುವ ಮೂಲಕ ಪರಿಸ್ಥಿತಿಯನ್ನು ಶಾಂತ ಸ್ಥಿತಿಗೆ ತರಲಾಗಿದೆ ಎಂಬುದು ಎಲ್ಲರೂ ಬಲ್ಲ ಸಂಗತಿ. ಇಬ್ಬೆಟ್‌ಸನ್ ಈ ವಾಸ್ತವಿಕ ಸಂಗತಿ ಮತ್ತು ರಾಜದ್ರೋಹದ ವಿಷಯಗಳಲ್ಲಿ ಸಂಪೂರ್ಣವಾಗಿ ಗೊಂದಲಕ್ಕೆ ಈಡಾಗಿದ್ದಾರೆ...**

ಅದೇ ಸಂದರ್ಭದಲ್ಲಿ ಮಿಂಟೋ ಬರೆದ ಇನ್ನೊಂದು ಪತ್ರದಲ್ಲಿ,

''ಲಜಪತರು ನಿಸ್ಸಂದೇಹವಾಗಿ ಉನ್ನತ ಚಾರಿತ್ರ್ಯದ ವ್ಯಕ್ತಿ. ಅವರನ್ನು ಅವರ ದೇಶವಾಸಿಗಳು ಅತ್ಯಂತ ಗೌರವದಿಂದ ಕಾಣುತ್ತಾರೆ. ಅವರನ್ನು ಬಂಧಿಸುವ ಹಂತದಲ್ಲಿ ನನಗೆ ಇದೆಲ್ಲವೂ ತಿಳಿದಿರಬೇಕಾಗಿತ್ತು. ಬಂಧನದ ಆದೇಶಕ್ಕೆ ಕೊಡುವ ಮೊದಲು ಇನ್ನಷ್ಟು ಸಾಕ್ಷಿ ಆಧಾರಗಳನ್ನು ಒದಗಿಸಲು ನಾನು ಕೇಳಬೇಕಾಗಿತ್ತು...'' ಎಂದಿದ್ದಾರೆ.*

---

* ಅದೇ ಪುಸ್ತಕದ ಪುಟ. 163.

** ಸೈಯದ್ ವಸ್ತಿ ಬರೆದಿರುವ ಲಾರ್ಡ್ ಮಿಂಟೋ ಅಂಡ್ ದಿ ಇಂಡಿಯನ್ ನ್ಯಾಷನಲಿಸ್ಟ್ ಮೂವ್‌ಮೆಂಟ್ 1905-1910 ಪುಸ್ತಕದಲ್ಲಿ ಉಧೃತ, ಪುಟ. 105

ನನಗೆ ಇದೆಲ್ಲವೂ ತಿಳಿದಿರಬೇಕಾಗಿತ್ತು. ಬಂಧನದ ಆದೇಶ ಕೊಡುವ ಮೊದಲು ಇನ್ನಷ್ಟು ಸಾಕ್ಷಿ ಆಧಾರಗಳನ್ನು ಒದಗಿಸಲು ನಾನು ಕೇಳಬೇಕಾಗಿತ್ತು...'' ಎಂದಿದ್ದಾರೆ.*

ಆದರೆ ಮಿಂಟೋ ಲಜಪತರ ಬಗ್ಗೆ ವ್ಯಕ್ತಪಡಿಸಿದ ಮೆಚ್ಚುಗೆಯ ಮಾತುಗಳನ್ನು ಅವರೊಂದಿಗೆ ಬಂಧಿಸಲ್ಪಟ್ಟ, ಉಚ್ಚಾಟನೆ ಮಾಡಲಾದವರ ಬಗ್ಗೆ ಪ್ರಸ್ತಾಪಿಸಿಲ್ಲ.

''ಅಜಿತ್‌ಸಿಂಗ್ ಎಲ್ಲಾ ರೀತಿಯಲ್ಲೂ ನಿಕೃಷ್ಟ ವ್ಯಕ್ತಿ. ಅವರೊಂದಿಗೆ ಆತನನ್ನು ಬಿಡುಗಡೆ ಮಾಡುವ ಬಗ್ಗೆ ನನಗೆ ವಿಷಾದವಾಗುತ್ತದೆ.''**

''ನವೆಂಬರ್ 8. ಲಜಪತ್‌ರಾಯ್ ಅವರಿಗೆ ಸಂಬಂಧಪಟ್ಟಂತೆ ನೀವು ತೆಗೆದುಕೊಂಡಿರುವ ಕ್ರಮವನ್ನು ತಿಳಿದು ನನಗೆ ತುಂಬಾ ಸಮಾಧಾನವಾಗಿದೆ. ಸಚಿವ ಸಂಪುಟಕ್ಕೆ ತಿಳಿಸಿದಂತೆಯೇ ನಾನು ಎಲ್ಲವನ್ನು ವಿವರಿಸಿದ್ದೇನೆ. ಸಭೆ ಸರ್ವಾನುಮತದಿಂದ ತೀರ್ಮಾನಿಸಿದೆ. ಈಗ ಸಿಕ್ಕಿರುವ ಅವಕಾಶದಂತಹ ಉತ್ತಮ ಅವಕಾಶ ಮತ್ತೆ ಸಿಗಲಾರದೆಂದು ನಿಮ್ಮಲ್ಲಿರುವ ಗಣ್ಯ ಮಂದಿಯನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಹೊಸ ಶಾಸನಾಧಿಕಾರ ಪಡೆಯುವ ಮೊದಲು ಇದು ಸಮಂಜಸವಾಗುತ್ತದೆ ಎಂದೂ ಸಭೆ ಸೂಚಿಸಿದೆ... ಇಬ್ಬೆಟ್‌ಸನ್‌ರ ವಾದದಲ್ಲೇ ಸಾಗುವುದಾದರೆ ಲಜಪತರ ವಿರುದ್ಧ ಹೊರಡಿಸಿರುವ ಆರೋಪಗಳು ಸ್ಥಿರಪಡಬೇಕಾದರೆ ಅವರು ಜೀವನಪರ್ಯಂತ ಮಾಂಡೇಲೆಯಲ್ಲೇ ಇರಬೇಕಾಗುತ್ತದೆ.! ಇದಕ್ಕಿಂತ ಬಾಲಿಶವಾದ ನಡವಳಿಕೆ ಇನ್ನೊಂದಿರಲಾರದು...'' ***

ದೇಶಿಯ ಸೈನ್ಯವನ್ನು ರಾಜದ್ರೋಹಕ್ಕೆ ಪ್ರಚೋದಿಸುವ ಆರೋಪ ಹೊರಿಸದಿದ್ದರೆ ಲಜಪತರನ್ನು ಗಡಿಪಾರು ಮಾಡುವ ಪ್ರಸಂಗವೇ ಬರುತ್ತಿರಲಿಲ್ಲ. ಅವರು ಕಂಡ ಕಂಡಲೆಲ್ಲಾ ಸಾರಸಗಟಾಗಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದವರಲ್ಲ. ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಲಜಪತರು ಮಾಡಿದ ಭಾಷಣದ ಎರಡಕ್ಕಿಂತ ಹೆಚ್ಚು ಪ್ರತಿಗಳನ್ನು ಮಂಡಿಸಲು ಮಾರ್ಲೆಯವರಿಗೆ ಸಾಧ್ಯವಾಗಿರಲಿಲ್ಲ. ಅವುಗಳಲ್ಲಿ ದೇಶಿಯ ಸೈನ್ಯದ ನಿಷ್ಠೆ ಭ್ರಷ್ಟಗೊಳಿಸುವ ಇನಿತು ಅಂಶ ಇದ್ದಿದ್ದರೂ ಲಜಪತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶವಾಗಿರುತ್ತಿತ್ತು.

ಈ ಬಗ್ಗೆ ಸ್ವತಃ ಮಿಂಟೋ ಅವರಲ್ಲೇ ಅನುಮಾನಗಳಿದ್ದವು. ಲಜಪತರು ಗಡಿಪಾರು ಶಿಕ್ಷೆಗೆ ಆದೇಶ ನೀಡಿದಾಗಲೂ ಈ ಅನುಮಾನ ಅವರನ್ನು ಕಾಡಿತ್ತು. ಆದರೆ ಆ ಪ್ರಸಂಗದ ಪರಿಸ್ಥಿತಿ ಉದ್ವಿಗ್ನವಾಗಿದ್ದುದ್ದರಿಂದ ಅವರು ಗಡಿಪಾರು ಆದೇಶಕ್ಕೆ ಅಂಕಿತ ಹಾಕಿದ್ದರು. ಇಂಗ್ಲೆಂಡಿನಲ್ಲಿದ್ದ ತಮ್ಮ ಪತ್ನಿಗೆ 1907, ಮೇ 15ರಂದು ಬರೆದ ಪತ್ರದಲ್ಲಿ ಮಿಂಟೋ ಈ ಪ್ರಸ್ತಾಪ ಮಾಡಿದ್ದಾರೆ.

---

* & ** ಸೈಯದ್ ರಝಿ ವಸ್ತಿ ಉದ್ಧೃತ, ಪುಟ. 105

*** ಮೇರಿ, ಕೌಂಟೆಸ್ ಆಫ್ ಮಿಂಟೋ: ಇಂಡಿಯಾ, ಮಿಂಟೋ ಅಂಡ ಮಾರ್ಲೆ 1905-1910, ಪುಟ. 163.

"... ವೈಯಕ್ತಿಕವಾಗಿ ಪರಿಸ್ಥಿತಿ ತೀರಾ ಅಪಾಯಕಾರಿಯಾಗಿದೆ ಎಂದು ನನಗೆ ಅನಿಸುತ್ತಿಲ್ಲವಾದರೂ ಇಲ್ಲಿನ ಆಗೋಹೋಗು ತೀರಾ ಬಿಕ್ಕಟ್ಟಿನಲ್ಲಿದೆ."*

ಬಿಕ್ಕಟ್ಟು ನಿಜ. ಅದೂ ಸಹ ಮಿಂಟೋ ಅವರ ಸ್ವಯಂ ನಿರ್ಣಯ. ಆ ಪರಿಸ್ಥಿತಿ ನಿರ್ಮಾಣವಾಗಿದ್ದು 'ಯುರೋಪಿಯನ್ನರು ಮತ್ತು ಯುರೋಪಿಯನ್ನರಿಂದ'. ಆ ಬಗ್ಗೆ ಅದೇ ಪತ್ರದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ.

ಯುರೋಪಿಯನ್ನರು ಮತ್ತು ಯುರೋಪಿಯನ್ನರಿಂದ ಎಲ್ಲೆಲ್ಲೂ ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡುತ್ತಿದ್ದಾರೆ. ಮೈದಾನ ಪ್ರದೇಶದಲ್ಲಿ ಸೈನಿಕರು ತಮ್ಮ ರೈಫಲ್‌ಗಳನ್ನು ಹಾಸಿಗೆಯ ಕೆಳಗಿಟ್ಟು ಮಲಗುತ್ತಿದ್ದಾರೆಂದು ನನಗೆ ಕೇಳಿ ಬರುತ್ತಿದೆ. ಬಂದೂಕುಧಾರಿಗಳು ತಮ್ಮ ಬಂದೂಕುಗಳನ್ನು ಪಕ್ಕಕ್ಕೆ ಇರಿಸಿರುವುದಾಗಿಯೂ ಗೊತ್ತಾಗಿದೆ. ಇದೆಲ್ಲವೂ ಊಹಾಪೋಹ ಇರಬೇಕೆಂದು ನಾನು ನಿನಗೆ ಹೇಳಬಲ್ಲೆ. ಆದರೆ ಆ ಊಹಾಪೋಹಗಳಲ್ಲೂ ನಿಜವಿದೆಯೇನೋ ಎಂದು ನನಗನಿಸುತ್ತಿದೆ. ಎಲ್ಲೆಲ್ಲೂ ಅದೇ ಭಾವನೆಯನ್ನು ನಾನು ಕಾಣುತ್ತಿದ್ದೇನೆಂದು ನಿನಗೆ ಹೇಳಬಯಸುತ್ತೇನೆ. ಸಿಪಾಯಿ ದಂಗೆಯ ಕಹಿ ನೆನಪು ಇಲ್ಲಿನ ಯುರೋಪಿಯನ್ನರು ಮತ್ತು ದೇಶವಾಸಿಗಳ ಮೇಲೆ ಅಗಾಧ ಪರಿಣಾಮ ಬೀರಿದೆ. ಆದರೆ ಮಿಸ್ಟರ್ 'k' ಅವರಿಗೆ ಮತ್ತು ನನಗೆ ಹಾಗೂ ಇತರ ಜನರಿಗೆ ಪರಿಸ್ಥಿತಿಯ ನೈಜ ಅರಿವು ಇದೆ. ಸದ್ಯದ ಚಳವಳಿಯಲ್ಲಿ ಅಪಾಯದ ಮಸಲತ್ತು ಇಲ್ಲವೆಂಬ ಲಕ್ಷಣವೂ ನಮಗೆ ಕಂಡು ಬರುತ್ತಿದೆ. **

ಲಜಪತ್‌ರಾಯ್ ಅವರನ್ನು ಗಡಿಪಾರು ಮಾಡಿದ ಆರಂಭದ ದಿನಗಳಲ್ಲೇ ಮಿಂಟೋ ಅವರಿಗೆ ನಿಜಸಂಗತಿಯ ಅರಿವಾಯಿತು. ಅವರ ವಿರುದ್ಧದ ಆರೋಪಕ್ಕೆ ಸಂಬಂಧಪಟ್ಟಂತೆ ದೃಢವಾದ ಸಾಕ್ಷಿಗಳಿಲ್ಲವೆಂದು ಮನವರಿಕೆಯಾಯಿತು. ಮಿಂಟೋ ತಮ್ಮ ಪತ್ನಿಗೆ ಬರೆದ ಅದೇ ಪತ್ರದಲ್ಲಿ ಈ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ,

"ಲಾಹೋರಿನಲ್ಲಿರುವ ಪೊಲೀಸರು ದುಡುಕಿದ್ದಾರೆ. ಅವಸರದಲ್ಲಿ ಬಂಧನ ಮಾಡಿದ್ದಾರೆ. ಆ ಹಂತದಲ್ಲಿ ಲಜಪತರ ಮನೆಯಿಂದ ಒಂದು ಪತ್ರವನ್ನಾದರೂ ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ. ಮತ್ತೊಬ್ಬ ಬಂದಿ ತಪ್ಪಿಸಿಕೊಳ್ಳಲು ಅವಕಾಶವನ್ನು ಕೊಟ್ಟಿಲ್ಲ."***

ಪುಣ್ಯ. ಲಜಪತ್‌ರಾಯ್ ಅವರ ಮನೆಯ ಶೋಧ ನಡೆಸಿರಲಿಲ್ಲ. ಒಂದು ವೇಳೆ ಶೋಧ ನಡೆಸಿದ್ದರೂ ಮಿಂಟೋ ಅವರಿಗೆ ಹತಾಶೆಯೇ ಕಾದಿರುತ್ತಿತ್ತು. ಸೈನ್ಯದಲ್ಲಿ ದಂಗೆ ಎಬ್ಬಿಸುವ ಕೃತ್ಯಕ್ಕೆ ಲಜಪತರು ಕೈಹಾಕಿರಲಿಲ್ಲ. ಅವರ ಬಳಿ ನಿಜವಾಗಿ ಅಪಾಯಕಾರಿ ಪತ್ರ ವ್ಯವಹಾರವಿರಲಿಲ್ಲ. ಅದರಲ್ಲೂ ಅಫಘಾನಿಸ್ತಾನದ ಅಮೀರರೊಂದಿಗೆ ನಡೆಸಿದ ಪತ್ರಗಳಂತೂ ಅವರ ಬಳಿ ಇರಲಿಲ್ಲ. ಆ ರೀತಿಯ ಯಾವ ಪತ್ರಗಳು ಲಭ್ಯವಾಗುತ್ತಿರಲಿಲ್ಲ.

---

* & ** ಅದೇ ಪುಸ್ತಕದ ಪುಟ. 136.

*** ಅದೇ ಪುಸ್ತಕದ ಪುಟ. 137.

ಹಾಗಿದ್ದರೆ ಮಿಂಟೋ ಬಳಿ ಆ ರೀತಿಯ ಕಪೋಲಕಲ್ಪಿತ ಪತ್ರಗಳಿದ್ದವೇ? ಪರಿಸ್ಥಿತಿಯನ್ನು ಅಧ್ಯಯನ ಮಾಡಿದಾಗ ಹಾಗೆನಿಸುತ್ತದೆ. ಮಿಂಟೋ ಅವರನ್ನು ನಂಬುವಂತೆ ಮಾಡಲಾಗಿತ್ತೆಂದು ತಿಳಿದು ಬರುತ್ತದೆ. "ಲಜಪತ್‌ರಾಯ್ ಅವರನ್ನು ಬಂಧಿಸುವುದಕ್ಕೆ ಸಾಕಷ್ಟು ಮುಂಚಿತವಾಗಿ ಅವರ ಬಂಧನದ ಸುದ್ದಿ ಹಾದಿ ಬೀದಿಯ ಮಾತಾಗಿತ್ತು.*

ಆದರೆ ಲಜಪತರ ಬಂಧನಕ್ಕೆ ಮತ್ತು ಗಡಿಪಾರು ಶಿಕ್ಷೆಗೆ ಆದೇಶ ಹೊರಡಿಸಿದ ಬೆನ್ನಲ್ಲೇ ಮಿಂಟೋ ಅವರಿಗೆ ಹತಾಶೆಯೂ ಕಾದಿತ್ತು. ತಾವು ಹೊರಡಿಸಿದ ಆದೇಶಗಳಿಗೆ ಆಧಾರವಾಗುವ ಯಾವುದೇ ಸಾಕ್ಷ್ಯಾಧಾರಗಳನ್ನು ದೃಢವಾಗಿ ಪೊಲೀಸರು ಒದಗಿಸಲಿಲ್ಲ. ಈ ವಿಷಯದಲ್ಲಿ ತಾವು ತಪ್ಪೆಸಗಿರುವುದಾಗಿ ಅವರಿಗೆ ಭಾಸವಾಯಿತು. ಸ್ಥಳೀಯ ಉಸ್ತುವಾರಿಯಲ್ಲಿದ್ದ ವ್ಯಕ್ತಿ ಇಬ್ಬೆಟ್‌ಸನ್‌ನ ಮೇಲೆ ತಾವಿಟ್ಟ ವಿಶ್ವಾಸಕ್ಕೆ ಸಿಕ್ಕಿದ ಪರಿಣಾಮದ ಬಗ್ಗೆ ಮಿಂಟೋ ಅವರಿಗೆ ವಿಷಾದವೂ ಆಯಿತು. ಈ ಹಿನ್ನಲೆಯಲ್ಲಿ ಅಜಿತ್‌ಸಿಂಗ್ ಬಂಧನದ ಆದೇಶ ಹೊರಡಿಸಲು ಅವರು ವಿಳಂಬ ಮಾಡಿದರು. ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್ ಬಂಧನದ ನಡುವೆ 25 ದಿನಗಳ ಅಂತರವಾಗಿದ್ದಕ್ಕೆ ಕಾರಣ ಇದೇ. ಇಬ್ಬೆಟ್‌ಸನ್ ನಂಬಿದ್ದುದು ತಾವು ನೇಮಿಸಿಕೊಂಡ ಖಾಸಗಿ ಬೇಹುಗಾರರು ಮತ್ತು ಮಾಹಿತಿದಾರರನ್ನು. ಅವರು ಕೇವಲ ಊಹಾಪೋಹ ವದಂತಿಗಳ ಆಧಾರದ ಮೇಲೆ ಮಾಹಿತಿಗಳನ್ನು ಒದಗಿಸುತ್ತಿದ್ದರು. ಇಬ್ಬೆಟ್‌ಸನ್ ಆ ಮಾಹಿತಿಗಳನ್ನು ತಾಳೆ ನೋಡುತ್ತಿರಲಿಲ್ಲ. ತನ್ನ ಪೊಲೀಸ್ ಮೂಲಗಳ ಮೂಲಕ ಆ ಬಗ್ಗೆ ಸಾಕ್ಷ್ಯಾಧಾರಗಳನ್ನು ತರಿಸಿಕೊಳ್ಳಲು ಯತ್ನಿಸುತ್ತಿರಲಿಲ್ಲ.

ಲಜಪತರ ಬಂಧನ ಮತ್ತು ಗಡಿಪಾರು ಶಿಕ್ಷೆಯ ನಂತರ ಗೋಖಲೆ ವಹಿಸಿದ ಪಾತ್ರ ಮುಖ್ಯವಾದದ್ದು. ಅಧಿಕಾರಷಾಹಿ ಮನಸ್ಸಿನ ಮೇಲೆ ಗೋಖಲೆ ಸಾಕಷ್ಟು ಪ್ರಭಾವ ಬೀರಿದರೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಅದರಲ್ಲಿ ಅನುಮಾನವೂ ಇಲ್ಲ. ಸುಧಾರಣಾವಾದಿಗಳ ವಿಷಯದಲ್ಲಿ ಮಿಂಟೋ ನೀತಿ ಅನುಕೂಲಕರವಾಗಿತ್ತು. ಲಜಪತ್‌ರಾಯ್ ಅವರನ್ನು ಬಿಡುಗಡೆ ಮಾಡಬೇಕೆಂದು ಗೋಖಲೆ ಕೇವಲ ಪತ್ರಗಳಲ್ಲಿ ಅಷ್ಟೇ ಅಲ್ಲದೆ ತಮ್ಮ ವೈಯಕ್ತಿಕ ಪ್ರಭಾವದ ವರ್ಚಸ್ಸನ್ನು ಬೀರಿ ಒತ್ತಾಯಿಸಿದರು. ಅಧಿಕಾರಷಾಹಿಯಲ್ಲಿ ಅವರ ಪ್ರಭಾವ ವಿಶೇಷವಾಗಿತ್ತು. ಗೋಖಲೆ ವಿಶೇಷವಾಗಿ ಮಿಂಟೋ ಹಾಗೂ ಅವರ ಆಪ್ತ ಕಾರ್ಯದರ್ಶಿ ಡನ್‌ಲಪ್ ಸ್ಮಿತ್ ಜೊತೆ ಈ ಬಗ್ಗೆ ವ್ಯಾಪಕ ಚರ್ಚೆ ನಡೆಸಿದರು. ಲಜಪತ್‌ರಾಯ್ ಅವರನ್ನು ಅಜಿತ್‌ಸಿಂಗ್ ಜೊತೆ ಸಮನ್ವಯ ಮಾಡಿದ್ದಕ್ಕೆ ಅವರು ಪ್ರಬಲ ವಿರೋಧ ವ್ಯಕ್ತಪಡಿಸಿದರು. 1907 ಜೂನ್ 10ರಂದು ಅವರು ಡನಲಪ್ ಸ್ಮಿತ್‌ರಿಗೆ ಪತ್ರವೊಂದನ್ನು ಬರೆದು ಹೀಗೆ ತಿಳಿಸಿದರು.

"ಅಜಿತ್‌ಸಿಂಗ್ ಜೊತೆ ಲಜಪತರನ್ನು ಶಾಮೀಲು ಮಾಡಿರುವುದು ಲಜಪತರ ಪಾಲಿಗೆ ಎಸಗಲಾಗಿರುವ ಘೋರ ಅನ್ಯಾಯ. ಕಳೆದ ಫೆಬ್ರವರಿಯಲ್ಲಿ ನಾನು

* ಮಿಂಟೋ ಟು ಮಾರ್ಲೆ, 21 ಮೇ 1907, ಮಾರ್ಲೆ ಪೇಪರ್ಸ್. ಸ್ಟೆಯಿನ್ ವಸ್ತಿ ಬರೆದಿರುವ ಲಾರ್ಡ್ ಮಿಂಟೋ ಅಂಡ್ ದಿ ಇಂಡಿಯನ್ ನ್ಯಾಷನಲಿಸ್ಟ್ ಮೂವ್‌ಮೆಂಟ್ 1905-1910 ಪುಸ್ತಕದಲ್ಲಿ ಉದ್ಧೃತ. ಪುಟ 143

ಲಾಹೋರಿನಲ್ಲಿದ್ದ. ಆಗ ಅಜಿತ್‌ಸಿಂಗ್ ಲಜಪತರನ್ನು ಬಸುವಾಗಿ ತೆಗಳುತ್ತಿದ್ದ. ಅವರೊಬ್ಬ ಹೇಡಿ ಎಂದು ಹೀಗಳೆಯುತ್ತಿದ್ದ. ಸರ್ಕಾರದ ಪರ ವ್ಯಕ್ತಿ ಎಂದೂ ದೂರುತ್ತಿದ್ದ. ಕಾರಣ ಅಜಿತ್‌ಸಿಂಗ್ ಬಯಸಿದಂತೆ ಲಜಪತರು ನಡೆದುಕೊಳ್ಳುತ್ತಿರಲಿಲ್ಲ. ಆತನ ಚಳವಳಿಗೂ ಲಜಪತರಿಗೂ ಸಂಬಂಧವೇ ಇರಲಿಲ್ಲ.''*

ಗೋಖಲೆ ಅವರ ಪತ್ರವನ್ನು 1907ರ ಸೆಪ್ಟೆಂಬರ್ 18ರಂದು ಮಿಂಟೋ, ಮಾರ್ಲೆಯವರಿಗೆ ಬರೆದ ಪತ್ರದ ಅಳವಡಿಕೆಯಾಗಿ ಸೇರಿದೆ.

''ಗೋಖಲೆ ಈ ವಿಷಯದಲ್ಲಿ ಡನ್‌ಲಪ್ ಸ್ಮಿತ್ ಅವರೊಂದಿಗೆ ಮತ್ತೆ ಮಾತುಕತೆ ನಡೆಸಿದರು. ಆ ಮಾತುಕತೆಯ ಒಟ್ಟಾರೆ ಅಂಶದಲ್ಲಿ 'ಗೋಖಲೆ ವಸ್ತುಶಃ ಲಜಪತ್‌ರಾಯ್ ಅವರ ಬಿಡುಗಡೆಗೆ ಮೊರೆ ಇಟ್ಟರು; ಅಜಿತ್‌ಸಿಂಗ್ ವಿಷಯದಲ್ಲಿ ಆತ ನರಕದಲ್ಲಿ ಬಿದ್ದು ಒದ್ದಾಡಲಿ' ಎಂದರು. ಲಜಪತ್‌ರಾಯ್ ಅವರನ್ನು 'ಅಂಡಮಾನ್ ದ್ವೀಪಕ್ಕೆ ಗಡಿಪಾರು ಮಾಡಬೇಕಾದಾಗ ಅಜಿತ್‌ಸಿಂಗ್ ಜೊತೆ ಸಮನ್ವಯ ಮಾಡಬಾರದು' ಎಂದು ಗೋಖಲೆ ಮತ್ತೆ ಮತ್ತೆ ಒತ್ತಾಯ ಮಾಡಿದರು.''**

ಅದೇ ಸಮಯದಲ್ಲಿ ಅಂದರೆ ಲಜಪತ್‌ರಾಯ್ ಅವರನ್ನು ಗಡಿಪಾರು ಶಿಕ್ಷೆಗೆ ಒಳಪಡಿಸಿದ ಕಾಲದಲ್ಲಿ ಕೈರ್ ಹಾರ್ಡಿ ಭಾರತಕ್ಕೆ ಭೇಟಿ ಕೊಟ್ಟಿದ್ದು ಸಹ ಹೆಚ್ಚು ಅನುಕೂಲಕರವಾಯಿತು. ಅಂದಿನ ಭಾರತದ ಸ್ಥಿತಿಯನ್ನು ಅವರು ಸಮಗ್ರವಾಗಿ ಅಧ್ಯಯನ ಮಾಡಿದರು. ಅದನ್ನೆಲ್ಲಾ ಕ್ರೋಢೀಕರಿಸಿ ಒಟ್ಟಾರೆ ವರದಿಯೊಂದನ್ನು ಅಕ್ಟೋಬರ್ 21ರಂದು ಲಂಡನ್‌ನ 'ಡೈಲಿ ಎಕ್ಸ್‌ಪ್ರೆಸ್' ಪತ್ರಿಕೆಗೆ ಬರೋಡಾದಿಂದ ಕೇಬಲ್ ಮೂಲಕ ಕಳುಹಿಸಿದರು.

''ನಾನು ಸಂಯುಕ್ತ ಪ್ರಾಂತ್ಯಗಳು ಮತ್ತು ಪಂಜಾಬ್ ಭೇಟಿ ಮುಗಿಸಿ ಬಂದಿದ್ದೇನೆ... ಪಂಜಾಬಿನಿಂದ ಕಳೆದ ವಸಂತ ಋತುವಿನಲ್ಲಿ ಬಂದ ಕುತೂಹಲಕಾರಿ ವರದಿಗಳು ನಿಮ್ಮ ಓದುಗರ ನೆನಪಿನಲ್ಲಿ ಇನ್ನೂ ಇರಬಹುದು. ಅಲ್ಲಿ ದೇಶಿಯ ಸೈನ್ಯದ ನಿಷ್ಠೆ ಭ್ರಷ್ಟಗೊಳಿಸುವ ಕೃತ್ಯ, ನಿರಂತರ ಕೊಲೆಗಳು, ಅಗ್ನಿಸ್ಪರ್ಷ, ಹದಗೆಟ್ಟ ಶಾಂತಿ ಮತ್ತು ಸುವ್ಯವಸ್ಥೆ ಬಗ್ಗೆ ವ್ಯಾಪಕವಾಗಿ ಬರೆಯಲಾಗಿತ್ತು. ಈಗ ಅಧ್ಯಯನ ಮಾಡಿದರೆ ಅವೆಲ್ಲಾ ಅತಿರೇಕದ, ವಾಸ್ತವಕ್ಕೆ ದೂರವಾದ ಕಾಮಲೆ ಕಣ್ಣಿನ ಪತ್ರವೃತ್ತಿಯ ಕಪೋಲಕಲ್ಪಿತ ಕಲ್ಪನೆಗಳೆಂದು ಮನವರಿಕೆಯಾಗುತ್ತಿದೆ.

''ಲಾಹೋರ್ ಮತ್ತು ರಾವಲ್ಪಿಂಡಿ ಜಿಲ್ಲೆಗಳ ಅಶಾಂತಿಗೆ ಕಾರಣಗಳೇ ಬೇರೆ.

---

* ಸೈಯದ್ ರಝಿ ವಸ್ತಿ ಬರೆದಿರುವ ಲಾರ್ಡ್ ಮಿಂಟೋ ಅಂಡ್ ದಿ ಇಂಡಿಯನ್ ನ್ಯಾಷನಲಿಸ್ಟ್ ಮೂವ್‌ಮೆಂಟ್ 1905-1910 ಪುಸ್ತಕದಲ್ಲಿ ಉಧೃತ, ಪುಟ. 102. ಮಿಂಟೋ ಮಾರ್ಲೆಗೆ ಬರೆದ ಪತ್ರಕ್ಕೆ ಗೋಖಲೆಯವರ ಪತ್ರ ಅಡಕವಾಗಿತ್ತು, 18 ಸೆಪ್ಟೆಂಬರ್ 1907.

** ಸೈಯದ್ ರಝಿ ವಸ್ತಿ, ಪುಟ. 103.

ಅಲ್ಲಿನ ಭೂಕಂದಾಯವನ್ನು ಶೇ. 25ರಷ್ಟು ಹೆಚ್ಚಿಸಲಾಗಿತ್ತು. ಅಳತೆ ಮೀರಿ ನೀರಾವರಿ ತೆರಿಗೆಗಳನ್ನು ವಿಧಿಸಲಾಗಿತ್ತು. ರೈತರಿಗೆ ಕಿರುಕುಳಕಾರಿಯಾದ ಶಾಸನ ಜಾರಿಗೆ ತರಲಾಗಿತ್ತು. ಅದನ್ನು ವಿರೋಧಿಸಿ ಆಂದೋಳನ ಪ್ರಬಲವಾಗಿತ್ತು. ಪರಿಸ್ಥಿತಿ ವಿಕೋಪ ಹಂತ ಮುಟ್ಟಿದಾಗ ಹೆಚ್ಚುವರಿ ಶುಲ್ಕಗಳನ್ನು ಸರ್ಕಾರ ಹಿಂದಕ್ಕೆ ಪಡೆದುಕೊಂಡಿತು. ಕಾಲುವೆ ವಸಾಹತು ವಿಧೇಯಕವನ್ನು ಕೈಬಿಡಲಾಯಿತು. ಅದರೊಂದಿಗೆ ಚಳವಳಿಯೂ ತಣ್ಣಗಾಯಿತು. ಇದಿಷ್ಟೇ ಆಗ ನಡೆದ ರಾಜದ್ರೋಹದ ಚಳವಳಿ! 55 ಜನರನ್ನು ಬಂಧಿಸಿ ಜಾಮೀನು ಕೊಡದೆ ನಾಲ್ಕು ತಿಂಗಳ ಕಾಲ ಜೈಲಿನಲ್ಲಿ ಇರಿಸಲಾಗಿತ್ತು. ನಂತರ ವಿಚಾರಣೆಗಳು ನಡೆದು ಅವರೆಲ್ಲಾ ದೋಷಮುಕ್ತರಾಗಿದ್ದಾರೆ. ನ್ಯಾಯಾಧೀಶರು ಪ್ರಾಸಿಕ್ಯೂಷನ್, ಸಾಕ್ಷ್ಯ ಆಧಾರಗಳ ಬಗ್ಗೆ ಛೀಮಾರಿ ಹಾಕಿದ್ದಾರೆ. ಇನ್ನೂ ರಾಜದ್ರೋಹದ ಆಂದೋಲನದ ಬಗ್ಗೆ ನನಗಂತೂ ಯಾವ ಸೂಚನೆಗಳು ಕಂಡು ಬಂದಿಲ್ಲ. ಸ್ಥಳೀಯ ಪೊಲೀಸರಿಗೆ ಕೊಡುತ್ತಿರುವ ಸಂಬಳ, ಸಾರಿಗೆ ತೀರಾ ಕಡಿಮೆ. ಏನೇನೂ ಸಾಲದು ಎಂದರೆ ಚೆನ್ನ. ಅವರ ಸೇವಾ ವ್ಯವಸ್ಥೆ ತುಂಬಾ ಹೀನಾಯವಾಗಿದೆ. ಈ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಅರಿಯದೆ ವಿಪರೀತ ಅರ್ಥ ಕಲ್ಪಿಸಲಾಗಿದೆ. ಭಾವುಕ ಸುದ್ದಿಗಳನ್ನು ಕೊಡಲು ಬಯಸುವವರಿಗೆ ಇದೊಂದು ಅವಕಾಶವಾಗಿದೆ. ಕಾಮಾಲೆ ಕಣ್ಣಿನ ವರದಿಗಳು, ಆಧಾರರಹಿತ ಊಹಾಪೋಹಗಳು ಏನೆಲ್ಲಾ ಅನಾಹುತಗಳಿಗೆ ಕಾರಣವಾಗಿದೆ...

''ಸರ್ಕಾರಿ ಅಧಿಕಾರಿಗಳಿಗೆ ತಪ್ಪು ಮಾಹಿತಿಗಳನ್ನು ಒದಗಿಸಲಾಗಿದೆ. ಅವರೋ ಜನಸಂಪರ್ಕದಿಂದ ಬಹುದೂರ ಉಳಿದಿರುವರು. ಪೊಲೀಸರ ಹಾಗೂ ಖಾಸಗಿ ಮಾಹಿತಿದಾರರ ವರದಿಗಳನ್ನೇ ಸಂಪೂರ್ಣವಾಗಿ ನಂಬಿ ಕುಳಿತಿರುವ ವರ್ಗ ಅದು. ಆದರೆ ಉನ್ನತ ಹಂತದ ನ್ಯಾಯಾಲಯಗಳಲ್ಲಿ ಈ ನಡವಳಿಕೆಗಳಿಗೆ ಸಹಜವಾಗಿಯೇ ಮನ್ನಣೆ ಇಲ್ಲವಾಗಿದೆ.'' ಎಂದು ಪರಿಸ್ಥಿತಿಯ ವಾಸ್ತವಿಕ ಸ್ಥಿತಿಯನ್ನು ವರದಿ ಮಾಡಿದರು. ಅದೇ ಸಮಯದಲ್ಲಿ ಎಚ್. ಡಬ್ಲ್ಯು. ನೇವಿನ್‌ಸನ್ ಭಾರತಕ್ಕೆ ನೀಡಿದ ಭೇಟಿಯನ್ನು ಸಹ ಇಲ್ಲಿ ಪ್ರಸ್ತಾಪಿಸುವುದು ಸಮಂಜಸವಾಗುತ್ತದೆ. ಅವರು ತಮ್ಮ ವರದಿಗಳನ್ನು ಡೈಲಿ ಕ್ರಾನಿಕಲ್, ಮಾಂಚೆಸ್ಟರ್ ಗಾರ್ಡಿಯನ್, ಮತ್ತು ಗ್ಲಾಸ್ಗೋ ಹೆರಾಲ್ಡ್ ಪತ್ರಿಕೆಗಳಿಗೆ ರವಾನಿಸಿದರು. ಸರ್ಕಾರದ ನಡವಳಿಕೆಗಳನ್ನು ಪ್ರಬಲವಾಗಿ ಟೀಕಿಸಿದರು. ಲಜಪತರನ್ನು ಗಡಿಪಾರು ಮಾಡಿದ ನಂತರ ಪಂಜಾಬಿನಲ್ಲಿ ಪರಿಸ್ಥಿತಿ ಖಂಡಿತವಾಗಿಯೂ 'ನಿರಾಕುಲ'ವಾಗಿತ್ತು. ಆ ನಿರಾಕುಲತೆಗೆ ಕಾರಣಗಳಲ್ಲಿ ಇಬ್ಬೆಟ್‌ಸನ್ ವಸಾಹತುಕರಣ ವಿಧೇಯಕವನ್ನು ಕೈಬಿಟ್ಟಿದ್ದು ಪ್ರಮುಖವಾಗಿತ್ತು. ಆ ವಿಧೇಯಕದ ಅಪಾಯಗಳನ್ನು ಮನಗಂಡು ಮಿಂಟೋ ಅದನ್ನು ತಿರಸ್ಕರಿಸಿದ್ದರು. ರಾವಲ್ಪಿಂಡಿಯ ನಾಯಕರನ್ನು ನ್ಯಾಯಾಲಯ ಮುಕ್ತಗೊಳಿಸಿದ್ದು ಇನ್ನೊಂದು ಕಾರಣವಾಗಿತ್ತು. ಜೊತೆಗೆ ಪಂಜಾಬನ್ನು ನಿಷಿದ್ಧ ಪ್ರದೇಶವಾಗಿಯೂ ಘೋಷಿಸಲಾಗಿತ್ತು. ಯಾವುದೇ ಬಹಿರಂಗ ಸಭೆಗಳಿಗೆ ಅವಕಾಶ ಇರಲಿಲ್ಲ. ಲಜಪತ್‌ರಾಯ್ ಅವರಿಗೆ ವಿಧಿಸಿರುವ ಗಡಿಪಾರು ಶಿಕ್ಷೆಯನ್ನು ಪ್ರತಿಭಟಿಸಿ ದೆಹಲಿಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಅದಾದ ನಂತರ ಅಲ್ಲಿಯೂ ನಿಷೇಧ ಘೋಷಿಸಲಾಯಿತು. ಪೂರ್ವ ಬಂಗಾಳವನ್ನು ನಿಷೇಧಾಜ್ಞೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ಅಲ್ಲಿನ ಫರಿದ್‌ಪುರದಲ್ಲಿ ಕಲೆಕ್ಟರ್ ಅನುಮತಿಯೊಂದಿಗೆ

ಸಮ್ಮೇಳನವೊಂದು ನಡೆಸಲು ಸಿದ್ಧತೆ ಸಹ ನಡೆದಿತ್ತು. ಆ ಸಮ್ಮೇಳನದಲ್ಲಿ ಲಜಪತ್‌ರಾಯ್ ಗಡಿಪಾರು ಶಿಕ್ಷೆ ಖಂಡಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ ಎಂದು ತಿಳಿದ ನಂತರ ಕಲೆಕ್ಟರ್ ತಮ್ಮ ಅನುಮತಿಯನ್ನು ಹಿಂದಕ್ಕೆ ಪಡೆದು ಸಮ್ಮೇಳನವನ್ನು ನಿಷೇಧಿಸಿದರು.

'ನಿರಾಕುಲತೆ'. 'ನಿರಾಕುಲತೆ'ಯ ಅರ್ಥ ಸಾರ್ವಜನಿಕ ಸಭೆಗಳು ನಡೆಯುತ್ತಿರಲಿಲ್ಲ ಎಂಬುದಕಷ್ಟೇ ಸೀಮಿತ. ಉಳಿದಂತೆ ಪರಿಸ್ಥಿತಿ ಗಂಭೀರವಾಗಿಯೇ ಇತ್ತು. ಲಜಪತರನ್ನು ಗಡಿಪಾರು ಮಾಡಿದ ನಾಲ್ಕು ತಿಂಗಳು ತುಂಬಿದ ನಂತರವೂ ಪರಿಸ್ಥಿತಿ ಅನುಕೂಲಕರವಾಗಿರಲಿಲ್ಲ. ಸ್ವತಃ ಮಿಂಟೋ ಅದನ್ನು ಮನಗಂಡಿದ್ದರು. ಮಾರ್ಲೆ ಅವರಿಗೆ ಬರೆದ ಪತ್ರದಲ್ಲಿ ಅವರು ಈ ವಿಷಯ ಪ್ರಸ್ತಾಪಿಸಿದ್ದರು. ಬಹಿರಂಗ ಸಭೆಗಳು ನಡೆಯದಿದ್ದರೂ ಖಾಸಗಿಯಾಗಿ ಪಂಜಾಬಿನಾದ್ಯಂತ ಸಭೆಗಳು ನಿಯತವಾಗಿ ನಡೆಯುತ್ತಲೇ ಇದ್ದವು. ಈಶಾನ್ಯ ಗಡಿ ಪ್ರದೇಶಗಳಲ್ಲಿ ಸಹ ಅಂತಹ ಸಭೆಗಳು ಸಾಮಾನ್ಯವಾಗಿದ್ದವು. ಅಂತಹ ಸಭೆಗಳಲ್ಲಿ ಕೇವಲ ಪುರುಷರಷ್ಟೇ ಅಲ್ಲ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಿದ್ದರು. ಲಜಪತರ ಗಡಿಪಾರು ಶಿಕ್ಷೆಯನ್ನು ಉಗ್ರವಾಗಿ ಖಂಡಿಸಲಾಗುತ್ತಿತ್ತು. ಅದಕ್ಕಾಗಿ ಪ್ರತಿರೋಧ ಎಲ್ಲೆಡೆಯಿಂದಲೂ ವ್ಯಕ್ತವಾಗುತ್ತಿತ್ತು. ಸಂಘಟನೆಗಳನ್ನು ಸಂಯೋಜಿಸಿ ಚಳವಳಿಗೆ ಸನ್ನದ್ಧರಾಗಲೂ ನಿಧಿ ಸಂಗ್ರಹಿಸಲಾಗುತ್ತಿತ್ತು. ಬಂಗಾಳ ಮತ್ತು ಮಹಾರಾಷ್ಟ್ರದಲ್ಲೂ ಅಂತಹ ಸಭೆ, ಸಂಘಟನೆಗಳು ನಡೆಯುತ್ತಿದ್ದ ವರದಿಗಳು ಆಗಿಂದಾಗ್ಗೆ ಬಹಿರಂಗವಾಗತೊಡಗಿದವು. ಈ ಎಲ್ಲಾ ಸಂಗತಿಗಳು ಪೂರ್ಣವಾಗಿ ಅಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಸರ್ಕಾರಕ್ಕೆ ವರದಿಯಾಗುತ್ತಿದ್ದರಿಂದ ಅಧಿಕಾರಸ್ಥರ ತಲೆನೋವು ದಿನೇ ದಿನೇ ಉಲ್ಬಣವಾಗತೊಡಗಿತು.

ಲಜಪತರ ಬಿಡುಗಡೆಯ ನಿರ್ಧಾರದ ಹಿಂದೆ ಗೋಖಲೆ ಮತ್ತು ಕೈರ್ ಹಾರ್ಡಿ ಪ್ರಯತ್ನದ ಫಲ ಸಾಕಷ್ಟಿತ್ತು. ಅದೇ ಸಮಯದಲ್ಲಿ ಮಾರ್ಲೆ, ಮಿಂಟೋ ಅವರ ನಿರ್ಧಾರಗಳನ್ನು ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ. ಮಿಂಟೋ ಮಾರ್ಲೆಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ ಪ್ರಕಾರ "ಲಜಪತ್‌ರಾಯ್ ಅವರಿಗೆ ಸಾಮಾನ್ಯ ನ್ಯಾಯವನ್ನು ದೊರಕಿಸಿಕೊಡಬೇಕು" ಎಂಬ ನಿಲುವು ತಾಳಿದ್ದು ವ್ಯಕ್ತವಾಗುತ್ತದೆ. ಶಿಕ್ಷೆ ವಿಧಿಸಿದ ಆರು ತಿಂಗಳ ಅವಧಿಯಲ್ಲಿ ಅದಕ್ಕೆ ಆಧಾರವಾಗುವ ಇನಿತೂ ಸಾಕ್ಷಿ ಅವರಿಗೆ ದೊರೆತಿರಲೂ ಇಲ್ಲ. ಅವರ ವಿರುದ್ಧ ಹೊರಿಸಲಾದ ರಹಸ್ಯ ಸಂಚು, ಸೈನ್ಯದಲ್ಲಿ ಬಂಡಾಯ ಯತ್ನಗಳಂತಹ ಘೋರ ಆರೋಪಗಳು ಹುಸಿಯಾಗತೊಡಗಿದ್ದವು. ಅಧಿಕಾರಸ್ಥರು ತಮ್ಮ ಯಕಶ್ಚಿತ ಸುಳಿವುಗಾರರು ಮತ್ತು ಬೇಹುಗಾರರ ಮಾತುಗಳಿಗೆ ಮೋಹಿತರಾಗಿದ್ದದ್ದು ಎದ್ದು ಕಾಣುತ್ತಿತ್ತು. ಆ ಖಾಸಗಿ ಬೇಹುಗಾರರು ಹಾಗೂ ಸುಳಿವುಗಾರರು ಸಹ ಅಧಿಕಾರಸ್ಥರ ಗಾಬರಿ ಮನಸ್ಥಿತಿ ಮತ್ತು ಪೆಚ್ಚುತನಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದರು. ಆರು ತಿಂಗಳ ಅಂತ್ಯದಲ್ಲಿ ತಾವೇ ಹಣೆದುಕೊಂಡ ತಪ್ಪನ್ನು ತಾವೇ ಸರಿಪಡಿಸಿಕೊಳ್ಳಲು ಮಿಂಟೋ, ಮಾರ್ಲೆ ಏನಾದರೂ ಮಾಡಲೇಬೇಕಾಗಿತ್ತು. ಕಲ್ಕತ್ತಾಕ್ಕೆ ರವಾನಿಸಿದ್ದ ತಮ್ಮ ಪತ್ರದಲ್ಲಿ ಮಾರ್ಲೆ ಲಜಪತರ ಬಿಡುಗಡೆಗೆ ಸಲಹೆ ಮಾಡಿದ್ದರು.

* * * * * *

ಲಜಪತರ ಬಿಡುಗಡೆ ಅಧಿಕಾರಿ ಹಂತದಲ್ಲಿ ಎಷ್ಟೇ ಗುಟ್ಟಾಗಿ ನಡೆದರೂ ಸುದ್ದಿ ರಹಸ್ಯವಾಗಿ ಉಳಿಯಲಿಲ್ಲ. ನವೆಂಬರ್ 12ರ ಒಳಗೆ ಬಿಡುಗಡೆಯ ಸುದ್ದಿ ಬಹಿರಂಗವಾಯಿತು. ದಿ ಸ್ಟೇಟ್ಸ್‌ಮನ್ ಪತ್ರಿಕೆಯ ರಂಗೂನ್ ಪ್ರತಿನಿಧಿ ಖಚಿತ ಮಾಹಿತಿ ಆಧಾರಗಳೊಂದಿಗೆ ಲಜಪತರ ಬಿಡುಗಡೆಯ ಸುದ್ದಿಯನ್ನು ತಂತಿ ಮೂಲಕ ರವಾನಿಸಿದ. ಸುದ್ದಿ ಎಲ್ಲೆಲ್ಲೂ ಹಬ್ಬಿತು. ಆರು ತಿಂಗಳ ಹಿಂದೆ ಮಾಂಡೇಲೆಗೆ ಸಾಗಿದ್ದಂತೆಯೇ ಈಗ ವ್ಯತಿರಿಕ್ತವಾಗಿ ಪ್ರಯಾಣ ಸಾಗಿತು. ಆದರೆ ಈಗಿನ ಪ್ರಯಾಣದ ರೀತಿ ರಿವಾಜಿಗಿಂತ ವಾಪಸಾತಿಯ ಪ್ರಯಾಣದ ಉಪಚಾರ, ಆದರಗಳು ಸಂಪೂರ್ಣವಾಗಿ ಭಿನ್ನವಾಗಿದ್ದವು. ಅಧಿಕಾರಿಗಳು ಎಲ್ಲೆಲ್ಲೂ ಲಜಪತರನ್ನು ಅತಿ ವಿಧೇಯತೆಯಿಂದ ನಡೆಸಿಕೊಳ್ಳುತ್ತಿದ್ದರು. ಊಟೋಪಚಾರಗಳು ಇತರ ಸೌಲಭ್ಯ ಸವಲತ್ತುಗಳು ಅಳತೆ ಮೀರಿದವೋ ಎನಿಸಿತು

ಲಜಪತರು ಅದನ್ನೆಲ್ಲಾ ವ್ಯರ್ಥ ಮುಂಜಾಗರಿಕೆ ಎಂದು ಬಣ್ಣಿಸಿದ್ದಾರೆ. ಆದರೆ ದಾರಿಯುದ್ದಕ್ಕೂ ಆರು ತಿಂಗಳ ಹಿಂದೆ ಇಟ್ಟಿದ್ದ ಗೌಪ್ಯವನ್ನೇ ಮುಂದುವರೆಸಲಾಗಿತ್ತು. ಸುದ್ದಿ ತಿಳಿದಿದ್ದ ಜನತೆ ಆ ವಿಶೇಷ ರೈಲು ನಿಲ್ಲುತ್ತಿದ್ದ ಕಡೆಗಳಲೆಲ್ಲಾ ದಟ್ಟೈಸುತ್ತಿದ್ದದ್ದು ಲಜಪತರಿಗೆ ಅರಿವಾಗುತ್ತಿತ್ತು. ಲಜಪತರಿದ್ದ ರೈಲಿನ ವಿಶೇಷ ಬೋಗಿಯ ಕಿಟಕಿ ಬಾಗಿಲುಗಳನ್ನು ಹಿಂದಿನಂತೆಯೇ ಈಗಲೂ ಭದ್ರಪಡಿಸಲಾಗಿತ್ತು. ಇಬ್ಬರೂ ಅದೇ ರೈಲಿನಲ್ಲಿದ್ದರೂ ಲಜಪತರು ಮತ್ತು ಅಜಿತ್‌ಸಿಂಗ್ ಎಲ್ಲಿಯೂ ಪರಸ್ಪರ ಮುಖಾಮುಖಿಯಾಗುವ ಅವಕಾಶ ಸಿಗಲೇ ಇಲ್ಲ. ರೈಲು ಪ್ರಯಾಣ ಮುಗಿದು ಹಡಗು ಪ್ರಯಾಣಕ್ಕೆ ಮೊದಲಿಟ್ಟ ಸಂದರ್ಭದಲ್ಲೂ ಸಹ ಅದು ಒದಗಲಿಲ್ಲ. ರಂಗೂನಿನ ಉಪನಗರವಾದ ಥಾಜಾಡಾಂಗ್ ನಿಲ್ದಾಣದಲ್ಲಿ ಆ ರೈಲು ನಿಂತಿತು. ಈ ಹಿಂದೆ ಅದೇ ಜಾಗದಿಂದ ಬಂಧಿತರನ್ನು ಮಾಂಡೇಲೆಗೆ ಹಡಗಿನಿಂದ ಕರೆದೊಯ್ಯಲಾಗಿತ್ತು. ಈಗ ತದ್ವಿರುದ್ಧದ ಸ್ಥಿತಿ. ಅದೇ ಸ್ಟೀಮರ್ ಹಡಗು 'ಗೈಡ್'. ಅದೇ ದೋಣಿಯಲ್ಲಿ ಅವರನ್ನು ಹಡಗಿಗೆ ಸ್ಥಳಾಂತರಿಸಲಾಯಿತು. ಆ ಹಡಗು 12ರ ಬೆಳಿಗ್ಗೆ 7.10ರ ಸುಮಾರಿನಲ್ಲಿ ರಂಗೂನ್ ಬಿಟ್ಟು ಹೂಗ್ಲಿ ಮುಖಜ ಭೂಮಿಯನ್ನು 15ರ ಸಂಜೆ ತಲುಪಿತು. ಸೌಗರ್ ಲೈಟ್‌ಹೌಸ್ ಎದುರು ಲಂಗುರು ಹಾಕಲಾಯಿತು. ಮಾರನೇ ದಿನ ಬೆಳಿಗ್ಗೆ 5.30ರ ಸುಮಾರಿಗೆ ಹಡಗು ಅಲ್ಲಿಂದ ಹೊರಟಿತು. 8.30ರ ವೇಳೆಗೆ ಡೈಮಂಡ್ ಹಾರ್ಬರ್ ತಲುಪಿತು. ಈ ಮರು ಪ್ರಯಾಣ ಅವಧಿಯಲ್ಲೂ ಸಮುದ್ರ ಪ್ರಕ್ಷುಬ್ಧವಾಗಿಯೇ ಇತ್ತು. ಆದರೂ ಕಡೆಯ ದಿನದ ಸಾಗರದ ಪ್ರಯಾಣ ಸಂತೋಷಕರವೆನಿಸಿತು. ಬೆಳಿಗ್ಗೆ ಸುಮಾರು 10ರ ಸಮಯಕ್ಕೆ ಆ ಹಡಗು ರಾಯ್ಪುರದಲ್ಲಿ ಅಂದರೆ ಕಲ್ಕತ್ತಾಕ್ಕೆ ಸುಮಾರು 40-50 ಕಿ.ಮೀ ಅಂತರದಲ್ಲಿ ಲಂಗರು ಹಾಕಿತು.

ಅಪರಾಹ್ನ 4.30ರತನಕ ಲಜಪತರು ಹಾಗೂ ಅವರೊಂದಿಗೆ ಇದ್ದ ಅಧಿಕಾರಿಗಳು ಅಲ್ಲೇ ಇರಬೇಕಾಯಿತು. ಸೂರ್ಯಾಸ್ತದ ಸಮಯದಲ್ಲಿ ಅವರನ್ನು ಬಜ್ ಬಜ್ ಬಳಿ ಹಡಗಿನಿಂದ ಭೂ ಪ್ರದೇಶಕ್ಕೆ ಕರೆದು ತರಲಾಯಿತು. -" ಮತ್ತೆ ನಾನು ನನ್ನ ತಾಯ್ನಾಡಿನ ಭೂ ಸ್ಪರ್ಶ ಮಾಡಿದೆ". ವಿಶೇಷ ರೈಲು ಸಿದ್ಧವಾಗಿತ್ತು. ಲಜಪತರಿಗಾಗಿ ನಿಯುತಗೊಳಿಸಿದ ವಿಶೇಷ ಬೋಗಿಯನ್ನು ಸಾರ್ವಜನಿಕರ ಲಕ್ಷ್ಯಕ್ಕೆ ಬೀಳದಂತೆ ಇನ್ನೊಂದು ಕಡೆ ಪ್ರತ್ಯೇಕವಾಗಿ ನಿಲ್ಲಿಸಲಾಗಿತ್ತು. ಬಂಗಾಳದ ಪೊಲೀಸ್ ಇನ್ಸ್‌ಪೆಕ್ಟರ್ ಲಜಪತರ ಉಸ್ತುವಾರಿಯ

ಜವಾಬ್ದಾರಿಯನ್ನು ವಹಿಸಿಕೊಂಡರು. ಅಲ್ಲೂ ಸಹ ಲಜಪತ್ ಹಾಗೂ ಅಜಿತ್‌ಸಿಂಗ್ ಭೇಟಿಗೆ ಅವಕಾಶವಾಗಲಿಲ್ಲ. ಲಜಪತರಿಗೆ ಪ್ರಥಮ ದರ್ಜೆ ಬೋಗಿಯನ್ನು ಒದಗಿಸಲಾಗಿತ್ತು. ಅಜಿತ್‌ಸಿಂಗ್ ದ್ವಿತೀಯ ದರ್ಜೆ ಬೋಗಿಯಲ್ಲಿದ್ದರು. ರೈಲು ಮರುಪ್ರಯಾಣ ಆರಂಭಿಸಿತು. ಆದರೆ ಆ ಪ್ರಯಾಣ ಹಿಂದೆ ಅವರನ್ನು ಕರೆತಂದ ಮಾರ್ಗದಲ್ಲಿರಲಿಲ್ಲ. ಜನದಟ್ಟಣೆ ತಪ್ಪಿಸಲು ಹಾಗೆ ಮಾಡಲಾಗಿತ್ತು. ಬಿಲಾಸ್‌ಪುರದ ಮೂಲಕ ಕಥಣಿ ಮಾರ್ಗವಾಗಿ ದಕ್ಷಿಣ ಪಂಜಾಬ್ ರೈಲ್ವೆಯ ಮೂಲಕ ಬಥಿಂದ್ ಹಾಯ್ದು ಲಾಹೋರ್ ತಲುಪಿತು. "ಆ ರೈಲನ್ನು ಹುಸಿ ಹೆಸರಿನಲ್ಲಿ ಓಡಿಸಲಾಯಿತು. ರೈಲು ನಿಲ್ಲುತ್ತಿದ್ದ ಪ್ರತಿ ನಿಲ್ದಾಣದಲ್ಲಿ ಪ್ಲಾಟ್‌ಫಾರಂಗಳಲ್ಲಿ ಭಾರತೀಯರು ಇಲ್ಲದಂತೆ ನೋಡಿಕೊಳ್ಳಬೇಕಾಗಿತ್ತು."

ಪೊಲೀಸ್ ಬೆಂಗಾವಲಿನ ಜೊತೆಗೆ ಬಂಗಾಳ ನಾಗಪುರ ರೈಲ್ವೆಯ ಟ್ರಾಫಿಕ್ ಮ್ಯಾನೇಜರ್ ಆ ರೈಲಿನಲ್ಲಿ ವಿಶೇಷವಾಗಿ ಪ್ರಯಾಣ ಮಾಡಿದರು. "ನನಗೆ ಕ್ಲಾರ್ಕ್ ಶ್ರೀಮಂತ ಊಟೋಪಚಾರಗಳನ್ನು ತಮ್ಮದೇ ಸಲೂನಿನಲ್ಲಿ ವ್ಯವಸ್ಥೆ ಮಾಡಿದರು. ಅವರು ತುಂಬಾ ಔದಾರ್ಯ ಹಾಗೂ ವಿಧೇಯತೆಯಿಂದ ನಡೆದುಕೊಂಡರು." ಅವರು ಟಿನ್‌ಗಳಲ್ಲಿ ಜತನ ಮಾಡಿದ ಆಹಾರವನ್ನೇ ಬಳಸುತ್ತಿದ್ದರು. ಆದರೂ ಲಜಪತರಿಗೆ ಸಾಧ್ಯವಾದಷ್ಟು ಉತ್ತಮ ಆಹಾರಕ್ಕೆ ಏರ್ಪಾಟು ಮಾಡಿದರು.

ಮರು ಪ್ರಯಾಣದ ದಾರಿಗುಂಟ ಸವಲತ್ತುಗಳನ್ನು ಸಮೃದ್ಧವಾಗಿ, ಮುಕ್ತವಾಗಿ ಪೂರೈಸಲಾಯಿತು. ಅದರಲ್ಲಿ ಬೆಲೆಬಾಳುವ ವಸ್ತು, ಸಾಮಾಗ್ರಿಗಳು ಅಪಾರವಾಗಿದ್ದವು. ಲಾಲಾಜಿ ಅದಾವುದನ್ನು ಬಳಸಲಿಲ್ಲ. ಅವೆಲ್ಲಾ ಸಾರ್ವಜನಿಕ ಹಣದ ಸೊತ್ತೆಂದೂ ಅವುಗಳ ಬಳಕೆ ತಮಗೆ ಉಚಿತವಲ್ಲವೆಂದು ಅವರು ಪರಿಭಾವಿಸಿದರು.

ಪ್ರಯಾಣ ಅಂತ್ಯಗೊಂಡಿತು. ಲಾಹೋರಿನ ಮುಖ್ಯ ನಿಲ್ದಾಣದಲ್ಲಿ ಇಳಿಯಲಿಲ್ಲ. ಅವರೆಲ್ಲಾ ಇಳಿದಿದ್ದು ಈಗ ಲಾಹೋರ್ ಪ್ರದೇಶವೆಂದು ಕರೆಯಲಾಗುತ್ತಿರುವ ಮಿನಾಮಿರ್ ಪಶ್ಚಿಮ ನಿಲ್ದಾಣದಲ್ಲಿ. ಅಂದು 1907, ನವೆಂಬರ್ 18. ಸಮಯ ಬೆಳಿಗ್ಗೆ 5.30. ರೈಲು ಇಳಿಯುತ್ತಿದ್ದಂತೆ ಲಜಪತರು ಮತ್ತು ಸರ್ದಾರ್ ಅಜಿತ್‌ಸಿಂಗ್ ಅವರನ್ನು ಲಾಹೋರ್ ಸೆಂಟ್ರಲ್ ಜೈಲಿನ ಸುಪರಿಂಟೆಂಡೆಂಟ್ ಮೇಜರ್ ಸಿ.ಎಚ್. ಬಾನ್ಸ್‌ಲೇ ಇದ್ದ ಸಲೂನಿಗೆ ಕರೆದೊಯ್ದರು. ಮಾಂಡೇಲೆ ಜೈಲಿನಿಂದ ವರ್ಗಾವಣೆ ಮಾಡಿದ ವಿಧಿ ವಿಧಾನಗಳನ್ನು ಅಲ್ಲಿ ಪೂರ್ಣಗೊಳಿಸಲಾಯಿತು. ಕುದುರೆಗಾಡಿಯನ್ನು ಲಜಪತರ ಪ್ರಯಾಣಕ್ಕೆ ಒದಗಿಸಲಾಯಿತು. ಅವರ ಸರಕುಗಳನ್ನು ಸಾಗಿಸಲು ಟಾಂಗಾ ಗಾಡಿಯನ್ನು ನಿಯೋಜಿಸಲಾಯಿತು. ಲಾಹೋರ್ ಜಿಲ್ಲಾ ಪೊಲೀಸ್ ಸುಪರಿಂಟೆಂಡೆಂಟ್ ರಂಡಲ್ ತಮ್ಮ ವಾಹನದಲ್ಲಿ ಮುಂದೆ ಸಾಗಿದರು. ತಮ್ಮ ಬಂಗಲೆ ತಲುಪಿ ಲಜಪತರು ಕಾಂಪೌಂಡ್ ಹಾಯುವತನಕ ಆತ ಅಲ್ಲಿದ್ದು ಅವರಿಗೆ ಅಭಿನಂದನೆ ಸಲ್ಲಿಸಿ ಅಲ್ಲಿಂದ ಬೀಳ್ಕೊಂಡರು. ಆರು ತಿಂಗಳು 9 ದಿನಗಳ ಬಂಧನ ಮತ್ತು ಗಡಿಪಾರು ಶಿಕ್ಷೆಯ ನಂತರ ಲಜಪತರು ತಮ್ಮ ಮನೆಯಂಗಳಕ್ಕೆ ಮರು ಪಾದಾರ್ಪಣೆ ಮಾಡಿದರು.

* * *

ಧುಮ್ಮಿಕ್ಕಿದ ತ್ರಿವಳಿ ಪ್ರವಾಹ

ಅಧ್ಯಾಯ-30

ಉಚ್ಚಾಟನೆಯ ನಂತರದ ಬೆಳವಣಿಗೆಗಳು

ಲಜಪತ್‌ರಾಯ್ ಮಾಂಡೇಲೆಯಿಂದಾಗಿ ಭಾರತೀಯ ರಾಜಕಾರಣದಲ್ಲಿ ಆ ದಿನಗಳ ಮಹಾನ್ ನಾಯಕರಾಗಿ ಹೊರಹೊಮ್ಮಿದ್ದರು. ದೇಶೋಚ್ಚಾಟನೆ ಅವರ ಹೋರಾಟದ ಬದುಕಿನಲ್ಲೊಂದು ಪರಿವರ್ತನೆಯ ಮೈಲ್ಲಿಗಲ್ಲಾಯಿತು. ಕೀರ್ತಿಯ ಶಿಖರಕ್ಕೆ ಏರಿದ ಅವರ ಬೆಳವಣಿಗೆಗಳಲ್ಲಿ ಸ್ವಾಮಿ ದಯಾನಂದರ ನಿಧನದ ನಂತರ ಅವರು ಹದಿಹರೆಯದ ಕಿರಿ ವಯಸ್ಸಿನಲ್ಲಿ ಗಂಭೀರವಂತ ವಾಗ್ಮಿಯಾಗಿ ರೂಪುಗೊಂಡಿದ್ದನ್ನು ನಾವು ಈಗಾಗಲೇ ಓದಿದ್ದೇವೆ. ಬಹಿರಂಗ ಭಾಷಣಗಳಲ್ಲಿ ಅವರಿಗೆ ಆ ವಾಕ್ಪಟುತ್ವ ಒಂದು ಮೋಡಿಯ ವರದಾನವಾಯಿತು. ಆರ್ಯ ಸಮಾಜದ ಅಂತರಂಗದ ವಲಯದಲ್ಲಿ ವರ್ಚಸ್ವಿ ವ್ಯಕ್ತಿತ್ವದಲ್ಲಿ ಬೆಳಗಲು ಅವರಿಗೆ ಅದು ಸುಲಭದ ಸೋಪಾನವಾಯಿತು. ಎರಡನೇ ಹಂತದ ಬೆಳವಣಿಗೆಯಲ್ಲಿ ಅವರ ವಿಕಾಸವನ್ನು ನಾವು ಸರ್ ಸಯದ್ ಅಹಮದ್ ಖಾನ್‌ರಿಗೆ ಬರೆದ 'ಬಹಿರಂಗ ಪತ್ರ'ಗಳಲ್ಲಿ ಮನಗಂಡಿದ್ದೇವೆ. ಅದರಿಂದ ಅವರ ಹೆಸರು ಸಮಾಜದ ಚೌಕಟ್ಟನ್ನು ದಾಟಿ ಇನ್ನಷ್ಟು ಹರವಿನಲ್ಲಿ ಜನ ಮನ್ನಣೆ ಪಡೆದುಕೊಂಡಿತು. ಆ ಜನಪ್ರಿಯತೆ ಪಂಜಾಬ್ ಪ್ರಾಂತ್ಯವನ್ನು ದಾಟಿ ಹೊರಗೆ ತುಳುಕಿತು. ಆ ಬೆಳವಣಿಗೆ ಮಜಲಿನಲ್ಲಿ ಅವರು ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಾಗ ಅವರ ವೈಯಕ್ತಿಕ ಖ್ಯಾತಿ ದಿಕ್ ದಿಗಂತವಾಗಿದ್ದದ್ದು ತಾನೇ ತಾನಾಗಿ ಪ್ರಚುರಗೊಂಡಿತು. ಬನಾರಸ್‌ನಲ್ಲಿ ಅವರು ಮಾಡಿದ ಭಾಷಣ ಅಮೋಘವೆನಿಸಿತು. ಸ್ವಾವಲಂಬನೆ ಮತ್ತು ರಾಷ್ಟ್ರಾಭಿಮಾನದ ಬಗ್ಗೆ ಅವರು ತಳೆದ ನಿಲುವು ವೈಯಕ್ತಿಕವಾಗಿ ಅವರಿಗಷ್ಟೇ ಅಲ್ಲ ಕಾಂಗ್ರೆಸ್ಸಿನ ವರ್ಚಸ್ಸಿಗೂ ಪೂರಕ, ಪ್ರೇರಕವಾಯಿತು. ಆಗಷ್ಟೇ ಸಂಘಟಿತವಾಗುತ್ತಿದ್ದ ಕಾಂಗ್ರೆಸ್‌ನಲ್ಲಿ ಜನತೆ ವಿಶ್ವಾಸ ಹಾಗೂ ಭರವಸೆ ತಾಳಲು ಸಹಾಯಕವಾಯಿತು. ಆತನಕ ಕಾಂಗ್ರೆಸ್‌ನಲ್ಲಿದ್ದ ಸೌಮ್ಯವಾದಿ ರಾಜಕಾರಣಿಗಳ ವಿಷಯದಲ್ಲಿ ಭಿನ್ನ ನೋಟಕ್ಕೂ ಎಡೆಯಾಯಿತು. ಈ ಸಂಘಟನೆಯಲ್ಲಿ ಕೇವಲ ಒಳಜಗಳ, ಅಧಿಕಾರಸ್ಥರ ಕೃಪೆ ಯಾಚಿಸುವ ವಾಸ್ತವಿಕತೆಯನ್ನು ಮರೆಮಾಚುವ ಜನರಷ್ಟೇ ಇಲ್ಲವೆಂಬ ಭಿನ್ನ ಧೋರಣೆಯೂ ಬೆಳಕಿಗೆ ಬಂದಿತು. ಅಂತಹ ಜನರಿಂದಾಗಿ ಕಾಂಗ್ರೆಸ್ ಸಂಘಟನೆಯಲ್ಲಿ ಕೇವಲ ಅಂಜುಬುರಕತನ, ಸಮಯ ಸಾಧಕತ್ವಗಳ ಸ್ವರೂಪವೇ ಇಲ್ಲವೆಂಬುದು ನಿಚ್ಚಳವಾಯಿತು. ಲಜಪತ್‌ರಾಯ್ ಪಾಲಿಗೆ ಎಳೆತನದಿಂದಲೂ ತಮ್ಮಲ್ಲಿ ರೂಢಿಸಿಕೊಂಡು ಬಂದ ಗಟ್ಟಿ ಚಿಂತನೆಯ ಬೆಳವಣಿಗೆಗೆ ಒತ್ತುಗೊಂಡಂತಾಯಿತು. ಇಂಗ್ಲೆಂಡ್ ಭೇಟಿಯಲ್ಲಿ ಅವರಿಗಾದ ಅನುಭವ ಸಾಕ್ಷಾತ್ಕಾರಗೊಂಡಂತಾಯಿತು. ನಂತರ ಅವರು ಕೈಗೊಂಡ ಸಂತ್ರಸ್ತ ಜನರ ಸೇವೆ ಅವರಲ್ಲಿ ಇನ್ನಷ್ಟು ಗಟ್ಟಿತನವನ್ನು ಎರಕ ಹಾಕಿತು. ಆ ಎರಕಕ್ಕೆ ಪುಟವಿಟ್ಟಿದ್ದು ಬಂಧನ ಮತ್ತು ದೇಶೋಚ್ಚಾಟನೆ.

ಸೌಮ್ಯವಾದಿ ನಾಯಕರ ಭಾಷಣಗಳು ಯುವ ಪೀಳಿಗೆಯ ಮನಸ್ಸಿನ ಮೇಲೆ ಪ್ರಭಾವವೇನೂ ಬೀರಿದ್ದವು. ಆದರೆ ಆ ನಾಯಕರು ಆಡುತ್ತಿದ್ದ ಸ್ವರಾಜ್ಯ, ಸ್ವದೇಶಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರಗಳಂತಹ ಮಾತುಗಳಿಗೆ ಅವರಿಂದ ನಿರೀಕ್ಷಿಸಿದಷ್ಟು ಪ್ರತಿಫಲ ವ್ಯಕ್ತವಾಗುತ್ತಿರಲಿಲ್ಲ. ಕಾಂಗ್ರೆಸ್ ಸಂಘಟನೆಯ ಸೂತ್ರಧಾರಿಗಳು ಎಂತಹವರೇ ಆಗಿದ್ದರೂ ಅದು ಜನತೆಯ ಮನ್ನಣೆಗೆ ಪಾತ್ರವಾಗಿತ್ತು ಎಂಬುದರಲ್ಲಿ ಅನುಮಾನವಿರಲಿಲ್ಲ. ಆತನಕ ಅಳೆದು ತೂಗಿದ ಪದಗಳಿಂದ ಕೂಡಿದ ಸೌಮ್ಯವಾದಿ ನಾಯಕರ ಚರ್ವಿತ ಚರ್ವಣ ಭಾಷಣಗಳನ್ನೇ ಕೇಳುತ್ತಾ ಬಂದಿದ್ದ ಜನಸಾಗರದಲ್ಲಿ ಹೊಸ ಬಗೆಯ ಸತ್ವಭರಿತ ಭಾಷಣವನ್ನು ಕೇಳಿದಾಗ ಸಹಜವಾಗಿ ಹೃದಯದ ತುಮುಲ ವಿಸ್ಫೋಟಗೊಂಡಿತು. ಕುತೂಹಲ, ಉತ್ಸಾಹಗಳು ಹೆಚ್ಚಿದವು. ಅದೇ ಮೊದಲ ಬಾರಿಗೆ ನಾಯಕತ್ವದ ಆರಾಧನೆಯೂ ಕವಲೊಡೆಯಿತು. ಆ ಹೊಸ ಅಲೆಯಲ್ಲಿ ಲಾಲ್- ಬಾಲ್ - ಪಾಲ್ ತ್ರಿವಳಿ ಹೊಸ ಪ್ರವಾಹ ಎದ್ದಿತು. ಪಂಜಾಬ್, ಮಹಾರಾಷ್ಟ್ರ ಮತ್ತು ಬಂಗಾಳದ ಲಾಲಾ ಲಜಪತ್‌ರಾಯ್, ಬಾಲ ಗಂಗಾಧರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲ್ ಆ ಹೊಸ ಪ್ರವಾಹದ ಮೂರು ವರ್ಚಸ್ವಿ ಶಕ್ತಿಗಳಾದರು. ಆ ಮೂವರು ಮಹಾನ್ ನಾಯಕರು ಒಟ್ಟಿಗೆ ಇರುವ ಛಾಯಚಿತ್ರಗಳು ಅಸಂಖ್ಯಾತ ಜನರ ಮನೆಗಳ ಗೋಡೆಗಳಲ್ಲಿ ಅಲಂಕೃತಗೊಳ್ಳತೊಡಗಿದವು. ತನ್ಮೂಲಕ ದೇಶವಾಸಿ ಜನಸಾಗರದಲ್ಲಿ ಅವರಿಗಿದ್ದ ಬೆಂಬಲ ಸ್ಪಷ್ಟವಾಗಿ ಪ್ರಕಟಗೊಳ್ಳತೊಡಗಿತು. ಅದರಲ್ಲೂ ಯುವ ಪೀಳಿಗೆಯಲ್ಲಿ ತ್ರಿವಳಿ ನಾಯಕರ ಹೆಸರೇ ಪ್ರಚೋದನೆಯ ಹುರುಪಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆ ನಾಯಕರಿಂದ ಪ್ರೇರಿತರಾಗಿ ತಮ್ಮ ಬದುಕಿನ ತ್ಯಾಗ, ಬಲಿದಾನಗಳನ್ನು ಸಮರ್ಪಿಸಿದ ಜನ ಪ್ರಸ್ತುತ ನಮ್ಮೊಡನಿದ್ದರೂ ಲಾಲ್- ಬಾಲ್ - ಪಾಲ್‌ರನ್ನು ನೆನೆಯದಿರುವುದಿಲ್ಲ. ಬಿಸಿ ರಕ್ತದ, ನವ ಕಲ್ಪನೆಯ ಯುವಸಾಗರಕ್ಕೆ ಸ್ಪಷ್ಟವಾದ ದಾರಿ ಮತ್ತು ನಿಶ್ಚಿತ ಗುರಿಯ ಕೈಮರಗಳಾದವರು ಆ ತ್ರಿಮೂರ್ತಿ ನಾಯಕರು. ಅದಕ್ಕೆ ಪೂರಕವಾಗಿದ್ದು 'ವಂದೇ ಮಾತರಂ'. ಲಾಲ್- ಬಾಲ್ - ಪಾಲ್ ನಾಯಕತ್ವ ಒತ್ತಿದ ಜನಪ್ರಿಯತೆಯ ಮುದ್ರೆಯಲ್ಲಿ ಯುವ ಜನತೆ ಮುನ್ನುಗ್ಗಿದ್ದುದರಿಂದ 1907ರಲ್ಲಿ ಘೋಷಿತವಾದ ಸ್ವರಾಜ್ಯ, ಸ್ವದೇಶಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿ ಪರಾಕಾಷ್ಠೆ ಮುಟ್ಟಲು ಕಾರಣವಾಯಿತು

ಬಾಲ್ ಮತ್ತು ಪಾಲ್ ತಮ್ಮ ಪಕ್ಷ ನಿಷ್ಠೆಯಲ್ಲಿ ಅಚಲವಾಗಿದ್ದವರು. ಆದರೆ ಲಾಲ್ ನಾಲ್ಕು ಗೋಡೆಗಳ ಮಧ್ಯೆ ಸೀಮಿತಗೊಳ್ಳುವುದಕ್ಕಿಂತಲೂ ಬೀದಿಗೆ ಇಳಿಯುವುದರಲ್ಲಿ ದೃಢವಾದ ನಂಬಿಕೆ ಹೊಂದಿದ್ದರು. ಹಾಗೆಂದ ಮಾತ್ರಕ್ಕೆ ಅವರು ಗೋಖಲೆ ಬಗ್ಗೆ ತಮ್ಮಲ್ಲಿದ್ದ ವೈಯಕ್ತಿಕ ನಿಷ್ಠೆಯನ್ನು ಮಲಿನ ಮಾಡಿಕೊಳ್ಳಲಿಲ್ಲ. ಗೋಖಲೆ ಕಾಂಗ್ರೆಸ್ಸಿನ ಸೌಮ್ಯವಾದಿ ಬಣದಲ್ಲಿ ಪ್ರಭಾವಿ ನಾಯಕರಾಗಿದ್ದರು. ಅದೇನೇ ಇರಲಿ ಲಜಪತರ ವೈಯಕ್ತಿಕ ನಿಷ್ಠೆ ಹೇಗೆ ಇರಲಿ ಆತನಕ ಅವರು ಸಲ್ಲಿಸಿದ್ದ ವಿಶಿಷ್ಟ ಸೇವೆ ಮತ್ತು ಸಮರ್ಪಣೆ, ಅವರ ಉನ್ನತ ನಡವಳಿಕೆ ಮತ್ತು ಪ್ರಶ್ನಾತೀತ ಪ್ರಾಮಾಣಿಕತೆ, ಶುದ್ಧ ಚಾರಿತ್ರ್ಯ ಮತ್ತು ಪಾರದರ್ಶಕ ನಿಲುವು, ಧೋರಣೆಗಳು ಹಾಗೂ ತಮ್ಮ ಶತ್ರುಗಳು ಹಾಕುತ್ತಿದ್ದ ವಂಚನೆ - ತಂತ್ರಗಳಿಗೆ ಜಗ್ಗದೆ ಸೇವಾ ನಿಷ್ಠರಾಗಿ ಹಿಡಿದ ಗುರಿಯತ್ತ ಸಾಗುತ್ತಿದ್ದ ಪರಿ ಅವರನ್ನು ಹಿರಿ ನಾಯಕತ್ವದ ಪ್ರಭಾವಳಿಯಲ್ಲಿ ಮೆರಗುಗೊಳಿಸಿತ್ತು

ಅದಕ್ಕೆ ಅವರ ಗಡಿಪಾರು ಶಿಕ್ಷೆ ಮುಕುಟಪ್ರಾಯವಾಗಿತ್ತು. ಹೋರಾಟದ ಹೊಸ ಸ್ವರೂಪದಲ್ಲಿ ಆಸಕ್ತಿ ವಹಿಸಿದ ಇಲ್ಲವೇ ಅದನ್ನು ಬೆಂಬಲಿಸಲು ಬಯಸಿದವರಿಗೆ ಲಜಪತರು ಧೀರೋದಾತ್ತ ನಾಯಕರಾಗಿ ಕಂಡರು. ರಾಜಕೀಯದ ಅರಿವಿಲ್ಲದ ಜನರಿಗೆ ಅವರು ಕುತೂಹಲದ ಸೆಳೆತವಾದರು. ಉಗ್ರವಾದಿ ಬಣವನ್ನು ವಿದೇಶಿ ಆಳ್ವಿಕೆದಾರರ ವಿರುದ್ಧ ಸೆಟೆದು ನಿಲ್ಲುವಂತೆ ಮಾಡುವಲ್ಲಿ ಚಳವಳಿಯನ್ನು ಇನ್ನಷ್ಟು ಉಗ್ರ ರೂಪದತ್ತ ಸೆಳೆಯುವಲ್ಲಿ ಲಜಪತರ ಹೆಸರು ಉತ್ತೇಜನಕಾರಿಯಾಯಿತು. ಲಜಪತರು ತಮ್ಮ ದೇಶೋಚ್ಚಾಟನೆಯ ಶಿಕ್ಷೆಯ ನಂತರದ ಘಟನೆಗಳನ್ನು ವಿಶ್ಲೇಷಿಸುತ್ತಾ 'ಯಂಗ್ ಇಂಡಿಯಾ'ದಲ್ಲಿ ಹೀಗೆ ಬರೆದರು.*

''1907ರ ಮೇಯಲ್ಲಿ ಲಜಪತರನ್ನು ಏಕಾಏಕಿ ಗಡಿಪಾರು ಮಾಡಿದ್ದು ದೇಶಾದ್ಯಂತ ಚಿಂತನೆ ಮತ್ತು ಕ್ರಿಯಾಸ್ವರೂಪವನ್ನೇ ಇಡಿಯಾಗಿ ಅದಲು ಬದಲು ಮಾಡಿತು. ರಾಷ್ಟ್ರೀಯವಾದಿಗಳು ಚಳವಳಿ ತೀವ್ರಗೊಳಿಸಲು ರಹಸ್ಯ ಪ್ರಚಾರ ಆಂದೋಲನಕ್ಕೆ ನಿರ್ಧರಿಸಿದರು. ಅದಕ್ಕೆ ಪೂರಕವಾಗಿ ಶಕ್ತಿಗೆ ಎದುರಾಗಿ ಶಕ್ತಿಯನ್ನೇ ಬಳಸಲು ನಿಶ್ಚಯಿಸಿದರು. ಲಜಪತ್‌ರಾಯ್ ದೇಶೋಚ್ಚಾಟನೆ ಮಾಡಿದ ಹೊಸದರಲ್ಲೇ ಗವರ್ನರ್ ಜನರಲ್ ಮಂಡಳಿ ಸಭೆಯಲ್ಲಿ ಮಾತನಾಡಿದ ಗೌರವಾನ್ವಿತ ಜಿ.ಕೆ. ಗೋಖಲೆ ಅವರ ಮಾತಿನಲ್ಲಿ ಹೇಳುವುದಾದರೆ ''ಲಜಪತ್‌ರಾಯ್ ಅವರನ್ನು ಉಗ್ರ ರಾಷ್ಟ್ರೀಯವಾದಿಗಳು ತಮ್ಮವರೆಂದು ಹೇಳಿಕೊಳ್ಳುತ್ತಿದ್ದಾರೆ... ಜನಸಮುದಾಯ ಅವರನ್ನು ಧಾರ್ಮಿಕ ನೇತಾರರೆಂದು, ಶೈಕ್ಷಣಿಕ ಪ್ರಸಾರಕನೆಂದು ಮಾನ್ಯ ಮಾಡಿದೆ. ಸೌಮ್ಯ ದೇಶವಾಸಿಗಳು ಸಹ ಅವರನ್ನು ಗೌರವಿಸುತ್ತಾರೆ. ಅಂತಹ ವ್ಯಕ್ತಿಯನ್ನು ಯಾವುದೇ ವಿಚಾರಣೆ ಇಲ್ಲದೆ, ಆರೋಪ ಇಲ್ಲದೆ, ಕಾನೂನು ಸೂಚನೆ ಇಲ್ಲದೆ ಬಂಧಿಸಿ ದೇಶೋಚ್ಚಾಟನೆ ಮಾಡಿರುವುದು ಯುವ ದೇಶವಾಸಿಗಳನ್ನು ಸಿಟ್ಟಿಗೆಬ್ಬಿಸಿದೆ. ಸೌಮ್ಯ ಹಾಗು ಚಿಂತನಾಶೀಲ ದೇಶವಾಸಿಗಳು ಸಹ ಹತಾಶರಾಗಿದ್ದಾರೆ.''

''ಆ ಸಮಯದಲ್ಲಿ ದೇಶಾದ್ಯಂತ ಆಂಗ್ಲೋ ಇಂಡಿಯನ್ ಪತ್ರಿಕೆಗಳು ವಿಜಯೋತ್ಸವ ಆಚರಿಸಿದವು. ಲಾಹೋರಿನಿಂದ ಪ್ರಕಟಗೊಳ್ಳುವ ಅರೆ ಸರ್ಕಾರಿ ದೈನಿಕ ಅಲ್ಲಿನ ನೇತಾರ ಲಜಪತ್‌ರಾಯ್ ಅವರನ್ನು ಕಟ್ಟಾ ಕ್ರಾಂತಿಕಾರಿ ಆಂದೋಳನದ ನಾಯಕನೆಂದೂ, ಕೇವಲ ಬೆರಳ ಸೂಚನೆಯ ಮೂಲಕ ಚಳವಳಿ ನಡೆಸುತ್ತಿದ್ದಾರೆಂದೂ ಬಣ್ಣಿಸಿತು. ಅತಿ ಹೆಚ್ಚು ಪ್ರಸಾರದ ಆ ಪತ್ರಿಕೆಯ ವರ್ಣನೆಗಳು ಅಷ್ಟಕ್ಕೆ ನಿಲ್ಲಲಿಲ್ಲ. ಒಂದು ಲಕ್ಷದಷ್ಟು ಉಗ್ರಗಾಮಿಗಳ ಬೆಂಬಲ ಅವರಿಗಿದೆ ಎಂದು ಬರೆಯಿತು. ಕಲ್ಕತ್ತಾದ 'ದಿ ಇಂಗ್ಲಿಷ್‌ಮನ್' ಪತ್ರಿಕೆಯು ಲಜಪತರ ವಿರುದ್ಧ ಆರೋಪ ಹೊರಿಸಿ ಭಾರತೀಯ ಸೇನೆಯ ನಿಷ್ಠೆಯನ್ನು ಭ್ರಷ್ಟಗೊಳಿಸಿದರೆಂದು ಬರೆಯಿತು. ಅಲ್ಲದೆ ಭಾರತದ ಮೇಲೆ ದಾಳಿ ನಡೆಸಲು ಅಫಘಾನಿಸ್ತಾನದ ದೊರೆಗೆ ಆಹ್ವಾನವಿತ್ತೆಂದು ಆಪಾದಿಸಿತು. ಲಜಪತರ ಉಚ್ಚಾಟನೆಯ ಗಾಯದಲ್ಲಿ ನರಳುತ್ತಿದ್ದ ದೇಶವಾಸಿಗಳ ಪಾಲಿಗೆ ಆಂಗ್ಲೋ ಇಂಡಿಯನ್ ಪತ್ರಿಕೆಗಳ ಈ ನಿಂದನೆಗಳು ಗಾಯದ ಮೇಲೆ ಉಪ್ಪು ಸುರಿದಂತಾಯಿತು. ದೇಶದಲ್ಲಿ

* ಪುಟ. 155-56.

ಆಸಹನೆಯ ದಳ್ಳುರಿ ಎದ್ದಿತು. ಎಲ್ಲಾ ಮತಭೇದಗಳು ಮೂಲೆಗುಂಪಾದವು. ಇಡೀ ದೇಶ ಒಂದಾಗಿ ಪ್ರತಿಭಟಿಸಿತು. ದೇಶಿಯವಾದಿಗಳ ಉಗ್ರ ಬಣವು ಇನ್ನು ಒಂದು ಹೆಜ್ಜೆ ಮುಂದಾಗಲು ನಿರ್ಧರಿಸಿತು. ಶಕ್ತಿಯನ್ನು ತಮ್ಮ ಅಸ್ತ್ರವಾಗಿ ಬಳಸಿಕೊಳ್ಳಲು ಅವರು ನಿಶ್ಚಯಿಸಿದರು. ಬಾಂಬ್ ರಿವಾಲ್ವರ್‌ಗಳ ಬಳಕೆ; ಗೆರಿಲ್ಲಾ ಯುದ್ಧಗಳ ಮೂಲಕ ವಿದೇಶಿ ಆಡಳಿತಷಾಹಿಯನ್ನು ಎದುರಿಸಲು ಸಜ್ಜಾಗಬಯಸಿತು. ಆದರೆ ಹಿರಿಯ ಪೀಳಿಗೆ ಲಜಪತರ ವಿಷಯದಲ್ಲಿ ಅನುಕಂಪ ಉಳ್ಳವರಾದರೂ ದೈಹಿಕ ಬಲ ಬಳಕೆಯ ಮೂಲಕ ಚಳವಳಿಯಲ್ಲಿ ಯಾವುದೇ ರೀತಿಯ ಪಾತ್ರಧಾರಿಗಳಾಗಲು ಬಯಸಲಿಲ್ಲ. ಅಂತಹ ಕ್ರಮಕ್ಕೆ ಅವರು ಅನುಮತಿಯನ್ನು ಕೊಡಲಿಲ್ಲ.''

ಈ ವಿಶ್ಲೇಷಣೆಗೆ ಕಾಲಾನುಕ್ರಮಣಿಕೆಯ ವಿದ್ಯಮಾನ ಮತ್ತು ಘಟನೆಗಳನ್ನು ಆಧಾರವಾಗಿ ನಿರೂಪಿಸಿದ್ದಾರೆ,

''1906ರಲ್ಲಿ ಬಂಗಾಳದಲ್ಲಿ ರಹಸ್ಯ ಸಂಘಟನೆಯೊಂದು ಇದ್ದಿರಲು ಸಾಧ್ಯ. ಆದರೆ ಆ ಶಕ್ತಿ 1907 ಮೇ ನಂತರದ ತನಕ ತನ್ನ ಬಲ ಪ್ರದರ್ಶನ ಮಾಡಿರಲಿಲ್ಲ. ಅರ್ಥಾತ್ ಲಜಪತರಿಗೆ ಗಡಿಪಾರು ಶಿಕ್ಷೆ ವಿಧಿಸುವತನಕ. ಆ ಶಿಕ್ಷೆ ಆ ಶಕ್ತಿಯ ನಿರ್ಧಾರಕ್ಕೆ ಪ್ರೇರಕವಾಯಿತು. ಆದರೂ ಅದರ ಮೊದಲ ಬಿಸಿ 1907 ಡಿಸೆಂಬರ್‌ತನಕ ಸ್ಫೋಟಗೊಳ್ಳಲಿಲ್ಲ. ಅದರ ಮೊದಲ ಬಾಂಬ್ 1908 ಮೇ ಅಥವಾ ಎಪ್ರಿಲ್‌ತನಕ ಬಳಕೆಯಾಗಿಲ್ಲ. 1907 ಡಿಸೆಂಬರ್‌ನಲ್ಲಿ ಸೂರತ್‌ನಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ಯುವ ಪೀಳಿಗೆಯ ಬಲಿಷ್ಟವಾದ ಕಾಂಗ್ರೆಸ್ಸಿನ ಉಗ್ರವಾದಿ ಬಣ ತನ್ನ ಬಲ ಪ್ರದರ್ಶನದಲ್ಲಿ ಮುನ್ನುಗ್ಗ ಬಯಸಿತು.''

'ಬಲ' ಪ್ರದರ್ಶನದ ಬಗ್ಗೆ ವಿಶ್ಲೇಷಣೆ ಮಾಡಿದಾಗ ನಮಗೆ ಇಲ್ಲೊಂದು ಹೇಳಿಕೆ ನೆನಪಾಗುತ್ತದೆ. ಲಜಪತ್‌ರಾಯ್ ದೇಶೋಚ್ಚಾಟನೆಯ ಸುದ್ದಿ ತಿಳಿದಾಕ್ಷಣ ತಿಲಕರಿಂದ ಸಹಜವಾಗಿ ಹೊರಬಿದ್ದ ಪ್ರತಿಕ್ರಿಯೆ-''ಮಿಂಟೋ ಇನ್ನೂ ಬದುಕಿದ್ದಾನೆಯೇ?'' ನಿಜ. ತಿಲಕರು ಜನಪ್ರಿಯ ಆಂದೋಲನವನ್ನೇ ತಮ್ಮ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಬಯಸಿದರು. ಆದರೆ ಬಿಸಿ ನೆತ್ತರಿನ ಪೀಳಿಗೆ ಅದಕ್ಕೆ ಭಿನ್ನವಾಗಿ ಬಲ ಪ್ರದರ್ಶನಕ್ಕೆ ಹಾತೊರೆಯುತ್ತಿತ್ತು. ತಿಲಕರಿಗೆ ಅತ್ಯಂತ ನಿಕಟವರ್ತಿಯಾಗಿದ್ದ ಸೇನಾಪತಿ ಬಾಪಟ್ ಯುರೋಪಿನಿಂದ ಬಾಂಬ್ ತಯಾರಿಕೆಯ ಪುಸ್ತಕವನ್ನು ತರಿಸಿಕೊಂಡು ತನ್ನ ಹೆಸರನ್ನು ಉಗ್ರವಾದದ ಆಂದೋಲನದಲ್ಲಿ ಚಿರಸ್ಥಾಯಿ ಮಾಡಿಕೊಂಡ. ಲಜಪತ್‌ರಾಯ್ ದೇಶೋಚ್ಚಾಟನೆಯ ನಂತರ ಮುನ್ನೆಚ್ಚರಿಕೆ ಕ್ರಮವಾಗಿ ಬ್ರಿಟಿಷ್ ಪೊಲೀಸರು ಬಾಪಟ್‌ನನ್ನು ಬಂಧಿಸಿದರು.

ದೇಶೋಚ್ಚಾಟನೆಯಾದರೂ ಲಜಪತರು ಆಂಗ್ಲೋ ಇಂಡಿಯನ್‌ರ ನೆಮ್ಮದಿಯನ್ನು, ಭಾರತೀಯ ಉಗ್ರವಾದದ ಕೂಪದಲ್ಲಿ ವಿಭಿನ್ನ ಮುಖದಲ್ಲಿ ವ್ಯಾಪಕವಾದ ಹರವಿನಲ್ಲಿ ಕದಡತೊಡಗಿದರು. ವಾಸ್ತವದಲ್ಲಿ ಆಂಗ್ಲೋ ಇಂಡಿಯನ್ನರೇ ಒಪ್ಪಿಕೊಂಡಿದ್ದ ರೀತಿಯಲ್ಲಿ ಲಜಪತರದು ಬಹು ಎತ್ತರದ ವ್ಯಕ್ತಿತ್ವವಾಗಿತ್ತು. ಅವರ ವಿರುದ್ಧ ಹೊರಿಸಿದ ಆರೋಪದಲ್ಲಿ ಕಿಂಚಿತ್ತೂ ಹುರುಳಿರಲಿಲ್ಲ. ತಮ್ಮ ತಪ್ಪನ್ನು ತಾವು ಮುಚ್ಚಿಕೊಂಡು 'ಪ್ರತಿಷ್ಠೆ'ಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಲಜಪತರಿಗೆ ಶಿಕ್ಷೆ ವಿಧಿಸಿದ ಮಂದಿ ತಮ್ಮ ನೆಮ್ಮದಿಯು

ಬೆಲೆ ತೆರಬೇಕಾಗಿ ಬಂದಿತು. ಈ ಕಥೆಯ ಅಂತ್ಯದಲ್ಲಿ 1907ರ ಕಥಾನಕಕ್ಕೆ ಸಂಬಂಧಪಟ್ಟಂತೆ ಆಂಗ್ಲೋ ಇಂಡಿಯನ್ನರ ಮನಸ್ಥಿತಿ ಹೇಗೆ ಕೆಲಸ ಮಾಡಿತೆಂಬುದನ್ನು, ಬ್ರಿಟಿಷ್ ಅಧಿಕಾರಿಗಳಿಂದ ಪ್ರೇರಿತರಾಗಿ ಕೆಲವು ದೇಶವಾಸಿಗಳು ಗೆಳೆಯರಾಗಿಯೋ, ಶತ್ರುಗಳಾಗಿಯೋ ಅನುಮಾನಕರವಾಗಿ ನಡೆದುಕೊಂಡ ರೀತಿಯನ್ನು ನಾವು ಓದುತ್ತೇವೆ. ಬ್ರಿಟಿಷ್ ಆಡಳಿತಷಾಹಿ ಲಜಪತರಿಗೆ ವಿಧಿಸಿದ ಶಿಕ್ಷೆಗೆ ಪೂರಕವಾಗಿ ಕಿಂಚಿತ್ತೂ ಆಧಾರ ಸಿಕ್ಕದಿದ್ದರೂ ಸಹ ಇಂತಹ ನಿರೂಪಣೆಯ ಪ್ರಸಂಗ ಸಿಗುತ್ತಿರಲಿಲ್ಲವೇನೋ! ಅಥವಾ ತಾವು ತಪ್ಪು ಎಸಗಿದ್ದೇವೆಂದು ಒಪ್ಪಿಕೊಂಡು ಅದನ್ನು ಸರಿಪಡಿಸುವ ದಿಟ್ಟತನವನ್ನು ಅವರು ಪ್ರದರ್ಶಿಸಿದ್ದರು ಸಹ ಮುಂದಿನ ಚಿತ್ರಣ ತೀರಾ ಭಿನ್ನವಾಗಿರುತ್ತಿತ್ತು.

* * *

ಅಧ್ಯಾಯ-31

ಸೂರತ್‌ನಲ್ಲಾದ ವಿಭಜನೆ

"ವಾಲ್ಮಿ ಯುದ್ಧದಲ್ಲಿ ಗೋಯಟೆ ನುಡಿದಂತೆ ಹೊಸ ಯುಗವೊಂದರ ಆರಂಭಕ್ಕೆ ಇಂದು ನಾಂದಿಯಾಗಿದೆ. ಆ ಪ್ರಸಂಗದಲ್ಲಿ ಇದ್ದೆನೆಂದು ನೀವು ಹೇಳಿಕೊಳ್ಳಬಹುದೆಂದು ನಾನು ಹೇಳಬಹುದಾಗಿತ್ತು."*

"1907ರಲ್ಲಿ ಕಂಡು ಬಂದ ಘಟನೆಗಳಿಗೆ ಲಾಲಾಜಿ ಕೇಂದ್ರಬಿಂದುವಾಗಿದ್ದರು."**

"ಚರಿತ್ರೆಯಲ್ಲಿ ನಿರ್ಣಾಯಕವಾದ ಘಟ್ಟಗಳು ದಾಖಲಾಗುವುದು ತೀರಾ ಕಮ್ಮಿ ತೆರೆಮರೆಯ ಘಟನೆಗಳಂತೂ ಬೆಳಕು ಕಾಣುವುದೇ ಇಲ್ಲ. ತೆರೆಯ ಮುಂದೆ ಗೋಚರವಾಗುವುದನ್ನೇ ಅದು ದಾಖಲು ಮಾಡುತ್ತದೆ. ಕಾಂಗ್ರೆಸ್ ಇಬ್ಭಾಗಕ್ಕೆ ಕಾರಣವಾದ ಆದೇಶವನ್ನು ಕೊಟ್ಟಿದ್ದು (ತಿಲಕರರೊಂದಿಗೆ ಸಮಾಲೋಚಿಸಿ) ನಾನೇ ಎಂಬುದು ಕೇವಲ ಕೆಲವೇ ಜನರಿಗಷ್ಟೇ ಗೊತ್ತು. ಹೊಸದಾಗಿ ಹುಟ್ಟಿಕೊಂಡ ಸೌಮ್ಯವಾದಿಗಳ ಅಧಿವೇಶನದಲ್ಲಿ ಪಾಲ್ಗೊಳ್ಳದಿರುವುದಕ್ಕೂ ನಾನೇ ಕಾರಣ. ಸೂರತ್‌ನಲ್ಲಿ ನಡೆದ ಅಧಿವೇಶನದ ನಿರ್ಣಾಯಕ ವಿದ್ಯಮಾನಗಳು ಇವು."- ತಮ್ಮನ್ನು ಕುರಿತು ತಾವೇ ಶ್ರೀ ಅರವಿಂದರು ಹೀಗೆ ಹೇಳಿಕೊಂಡಿದ್ದಾರೆ.

ಲಜಪತರು ರಾಷ್ಟ್ರೀಯ ವೀರರಾಗಿ ಹೊರಹೊಮ್ಮಲು ಕಾರಣವಾದ ಘಟನೆಗಿಂತಲೂ ಕಠಿಣವಾದ ಇನ್ನೊಂದು ಪ್ರಸಂಗ ಅವರಿಗೆ ಎದುರಾಯಿತು. ತಮ್ಮ ಬಂಧನ ಮತ್ತು ದೇಶೋಚ್ಚಾಟನೆಯ ಶಿಕ್ಷೆಗೆ ಕಾಂಗ್ರೆಸ್‌ನಲ್ಲಿ ಸೌಮ್ಯವಾದಿಗಳು ಮತ್ತು ಉಗ್ರ ಧೋರಣೆಗಳ ಬಣಗಳ ನಡುವೆ ಅಭಿಪ್ರಾಯ ಭೇದಗಳು ಹೆಚ್ಚುತ್ತಿದ್ದದ್ದನ್ನು ಮನಗಂಡಿದ್ದರು. ಉಗ್ರ ಧೋರಣೆಯ ರಾಷ್ಟ್ರೀಯವಾದಿಗಳನ್ನು ಉಗ್ರಗಾಮಿಗಳ ಬಣವೆಂದೂ ಅಥವಾ ತಿಲಕ್ ವಾದಿಗಳೆಂದು ಅಥವಾ ಹೊಸ ಪಕ್ಷ- "ಎಡಪಂಥೀಯ"ರೆಂದು ಬಣ್ಣಿಸಲಾಗುತ್ತಿತ್ತು. "ಎಡಪಂಥೀಯ"ರೆಂದರೆ ಇಲ್ಲಿ ಹೆಚ್ಚು ಸಮಂಜಸ. 1907ರಲ್ಲಿ ಭಾರತೀಯ ರಾಜಕಾರಣದ ನಡವಳಿಕೆಯಲ್ಲಿ 'ಬಲ' ಮತ್ತು **'ಎಡ' ಅಷ್ಟೊಂದು ಪ್ರಚಲಿತಗೊಂಡಿರಲಿಲ್ಲ.**

---

* ಹೆನ್ರಿ ನೇವಿನ್‌ಸನ್ ತಮ್ಮ ದಿ ನ್ಯೂ ಸ್ಪಿರಿಟ್ ಇನ್ ಇಂಡಿಯಾ ಪುಸ್ತಕದಲ್ಲಿ ಪುಟ 258ರಲ್ಲಿ 1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ವಿಭಜನೆಗೆ ಕಾರಣವಾದ ಘಟನೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

** ಪಟ್ಟಾಭಿ ಸೀತಾರಾಮಯ್ಯನವರ ಹಿಸ್ಟರಿ ಆಫ್ ದಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಪುಟ. 1. ಪುಟ.102.

ಈ ಎರಡು ಗುಂಪುಗಳಿಗೆ ಲಜಪತ್‌ರಾಯ್ ವಿಷಯದಲ್ಲಿ ಅವುಗಳದೇ ಆದ ಅನುಮಾನವಿತ್ತು. ರಾಜಕಾರಣಕ್ಕೆ ಅವರು ಬರುವರೇ, ರಾಷ್ಟ್ರೀಯ ಕಾಂಗ್ರೆಸ್ ಸೇರುವರೇ ಎಂಬ ಶಂಕೆ ಇತ್ತು. ಕಾಂಗ್ರೆಸ್ಸಿನ ಮೊದಲ ಹಂತದ ದಿನಗಳಲ್ಲಿ ಲಜಪತರು ಅದರತ್ತ ಹೆಚ್ಚು 'ಉತ್ಸಾಹ' ತೋರಿರಲಿಲ್ಲ. ಅಥವಾ ಕಾಂಗ್ರೆಸ್ ಅವರನ್ನು ಅಷ್ಟಾಗಿ ಆಕರ್ಷಿಸಿರಲಿಲ್ಲ. ಆ ದಿನಗಳಲ್ಲಿ ರಾಷ್ಟ್ರೀಯ ಜಾಗೃತಿಗಾಗಿ ಲಜಪತರು ತಮ್ಮದೇ ಆದ ವೇದಿಕೆ ರೂಪಿಸಿಕೊಂಡಿದ್ದರು. ಕಾಂಗ್ರೆಸ್ ವೇದಿಕೆಗಿಂತಲೂ ಪ್ರಭಾವಿ ಮಾಧ್ಯಮವಾಗಿ ಉರ್ದುವಿನಲ್ಲಿ ಮಝ್ಜಿನಿ ಮತ್ತು ಗ್ಯಾರಿಬಾಲ್ಡಿ ಕೃತಿಗಳನ್ನು ಹೊರತರುವ ಮೂಲಕ ರಾಷ್ಟ್ರೀಯ ಜಾಗೃತಿಗೆ ತಮ್ಮದೇ ಕೊಡುಗೆ ಸಲ್ಲಿಸುತ್ತಿದ್ದರು. ಆದರೆ, 1904-1905ರ ನಂತರ ರಾಜಕೀಯ ವಾತಾವರಣದಲ್ಲಿ ಆದ ಬದಲಾವಣೆಗೆ ಅವರು ಸ್ಪಂದಿಸತೊಡಗಿದರು. ಬನಾರಸ್ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಮಾಡಿದ ಭಾಷಣದಲ್ಲಿ ಎಡಪಂಥೀಯರ ನಿಲುವು ಧೋರಣೆಗಳನ್ನು ನಿರ್ದಿಷ್ಟವಾಗಿ ಸಮರ್ಥಿಸಿದರು. ಆದರೂ ಆ ಭಾಷಣದಲ್ಲಿ ಅವರು ವೈಯಕ್ತಿಕವಾಗಿ ಗೋಖಲೆ ಅವರಿಗೆ ಧಕ್ಕೆಯಾಗದಷ್ಟು ಎಚ್ಚರ ವಹಿಸಿದ್ದನ್ನು ನಾವಿಲ್ಲಿ ಗುರುತಿಸಬೇಕಾಗುತ್ತದೆ. ಲಜಪತರು ಅವರಿಗೆ ವ್ಯಕ್ತಿಶಃ ಪರಮಾದರ ತೋರುತ್ತಿದ್ದರು. ಗೋಖಲೆ ಅವರ ಬಗ್ಗೆ ಅವರಿಗಿದ್ದ ಗೌರವ, ಆದರದ ಫಲವಾಗಿ ರಾಜಿ ಸೂತ್ರವೊಂದು ಒಡಂಬಟ್ಟು ಕಾಂಗ್ರೆಸ್ಸಿನ ಆ ಮಂಟಪದಲ್ಲಿ ಆಗಬೇಕಾಗಿದ್ದ ವಿಕೃತ ಬೆಳವಣಿಗೆಯೊಂದು ತಪ್ಪುವಂತಾಯಿತು. ಸ್ವತಃ ಲಜಪತರು ತಿಲಕರ ಪಕ್ಷ ವಹಿಸಿದರು. ಆ ರಾಜಿ ಸೂತ್ರದಲ್ಲಿ ಅವರು ಗೋಖಲೆಯವರನ್ನು ನಿರ್ದಿಷ್ಟವಾಗಿ ಓಲೈಸಿದರು. ಯಶಸ್ವಿ ಮಧ್ಯವರ್ತಿ ಪಾತ್ರ ನಿರ್ವಹಿಸಿದರೂ, ಅವರ ಸಹಜ ಕಟ್ಟುಪಾಡುಗಳು ತಿಲಕರ ಧೋರಣೆಗಳಿಗಿಂತ ಭಿನ್ನವಾಗಿರಲಿಲ್ಲ.

ಲಜಪತರ ಬಿಡುಗಡೆಯಾಗಿದ್ದು ನವೆಂಬರ್‌ನಲ್ಲಿ. ಮುಂದಿನ ತಿಂಗಳು ನಡೆಯಲಿದ್ದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದಲ್ಲಿ ಎಡ-ಬಲ ಪಂಥಗಳ ನಡುವೆ ಭಾರೀ ಸಂಘರ್ಷ ನಡೆಯುತ್ತದೆ ಎಂಬುದು ಸ್ಪಷ್ಟವಾಗಿತ್ತು. 'ಗಂಡು' ನೀತಿಯನ್ನು ಕೈಗೊಳ್ಳಬೇಕೆಂಬ ವಿಷಯದಲ್ಲಿ ಲಜಪತರು ಪಕ್ಷಪಾತಿಯಾದರೂ, ಇತರ ಅನೇಕ ಜನರಂತೆ ಕಾಂಗ್ರೆಸ್ ಇಬ್ಭಾಗವನ್ನು ತಪ್ಪಿಸುವ ವಿಷಯದಲ್ಲಿ ಅವರು ತೀರಾ ಉತ್ಸುಕರಾಗಿದ್ದರು. ಎರಡೂ ಕಡೆ ಸಮತೋಲನ ಕಾಪಾಡುವ ಯತ್ನದಲ್ಲಿ ತಾವು ಯಶಸ್ವಿಯಾಗುವುದಿಲ್ಲವೆಂಬ ಮನವರಿಕೆ ಅವರಿಗೆ ಬಹು ಬೇಗ ಉಂಟಾಯಿತು. ಬಹುಶಃ ಗೋಖಲೆ ಬಗ್ಗೆ ತಮ್ಮಲ್ಲಿದ್ದ ವೈಯಕ್ತಿಕ ಗೌರವ, ಹಾಗೆಯೇ ಮಾಳವೀಯರ ಬಗ್ಗೆಯೂ ಅನುರಕ್ತಿ ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಿರಬಹುದು. ಒಟ್ಟಿನಲ್ಲಿ ಕಾಂಗ್ರೆಸ್ ಇಬ್ಭಾಗವಾಗುವುದಕ್ಕೆ ಅವರ ಸಮ್ಮತಿಯಂತೂ ಇರಲಿಲ್ಲವೆಂಬುದು ಸತ್ಯ.

ಅಲ್ಪಸ್ವಲ್ಪ ರಾಜಕೀಯ ಪರಿಜ್ಞಾನವಿದ್ದ ಜನಸಾಮಾನ್ಯರು ಸಹ ಲಜಪತರನ್ನು ತಿಲಕರ ಬಣದಲ್ಲಿ ಗುರುತಿಸತೊಡಗಿದರು. ದೇಶೋಚ್ಚಾಟನೆ ನಂತರದಲ್ಲಿ ಜನತೆ ಇದನ್ನು ನಿಚ್ಚಳವಾಗಿ ನಿರೀಕ್ಷಿಸತೊಡಗಿತು. ಆಯಾಚಿತವಾಗಿ ಜನತೆ ಲಾಲ್ ಅವರನ್ನು ಬಾಲ್, ಪಾಲ್ ಅವರೊಂದಿಗೆ ಮಿಳಿತಗೊಳಿಸಿ ತಮ್ಮ ರಾಜಕೀಯ ಕ್ಷಿತಿಜದಲ್ಲಿ 'ತ್ರಿಮೂರ್ತಿ'ಗಳನ್ನು ಕಂಡುಕೊಳ್ಳತೊಡಗಿದರು.

ಅತ್ತ, ಕಾಂಗ್ರೆಸ್ ಸಂಘಟನೆಯಲ್ಲಿನ ಎಡಪಂಥೀಯರು ತಮ್ಮ ಅಭ್ಯರ್ಥಿಗಾಗಿ ಲಜಪತರನ್ನು ಅಧ್ಯಕ್ಷ ಗಾದಿಗಾಗಿ ಏರಿಸಲು ಸಜ್ಜು ನಡೆಸತೊಡಗಿದರು.

ವೈಪರಿತ್ಯವೆಂದರೆ ಬಲಪಂಥೀಯ ಬಣದವರು ಸಹ ಲಜಪತರನ್ನು ತಮ್ಮವರೆಂದೇ ಹೇಳಿಕೊಳ್ಳತೊಡಗಿದರು. ಆದರೆ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಏರಿಸುವ ವಿಷಯದಲ್ಲಿ ಅವರು ಸ್ಪಷ್ಟವಾಗಿ ಒಪ್ಪಿಕೊಳ್ಳಲಿಲ್ಲ. ಲಜಪತರ ಬಗ್ಗೆ ಗೋಖಲೆಯವರಲ್ಲಿ ನಿಜವಾದ ಉನ್ನತ ಗೌರವವಿದ್ದದ್ದು ನಿಜ. ಅಂತೆಯೇ ಲಜಪತರಲ್ಲಿ ತಿಲಕರು ಮತ್ತು ಗೋಖಲೆಯವರಿಬ್ಬರ ಬಗ್ಗೆಯೂ ಅದೇ ರೀತಿ ಗೌರವ ಭಾವನೆಗಳಿದ್ದವು. ಅವರು ಅವರಿಬ್ಬರ ಗೆಳೆಯರೂ ಆಗಿದ್ದರು. ಅಭಿಮಾನಿಯೂ ಆಗಿದ್ದರು. ಜನಪ್ರಿಯ ತಿಳುವಳಿಕೆಯ ಪ್ರಕಾರ ಗೋಖಲೆ ಅವರಿಗೆ ಗೌರವ, ಆದರಗಳನ್ನು ತೋರುವ ಹಿನ್ನಲೆಯಲ್ಲಿ ತಿಲಕರ ಬಂಧನಕ್ಕೆ ಭಾಗಶಃ ಅವರು ಕಾರಣರಾದರೆಂಬ ತರ್ಕಹೀನ ವಿಚಾರವೂ ಉಂಟು. ವಾಸ್ತವದಲ್ಲಿ ಅದು ಸತ್ಯವಲ್ಲ. ಲಜಪತರಿಗೆ ಅವರ ಸ್ವಾತಂತ್ರ್ಯ ಮರಳಲು ತಿಲಕರು ಕಾರಣವೆಂಬುದನ್ನು ಮನಗಾಣಬೇಕಾಗುತ್ತದೆ. ಕಾಂಗ್ರೆಸ್ ಸಂಘಟನೆಯಲ್ಲಿ ಸೌಮ್ಯವಾದಿಗಳು ಮತ್ತು ಉಗ್ರಗಾಮಿಗಳ ಅಸ್ತಿತ್ವದ ಪ್ರಶ್ನೆ ನಿಚ್ಚಳವಾದ ಸಂದರ್ಭದಲ್ಲಿ ಲಜಪತರು ಗೋಖಲೆಯವರ ವ್ಯಕ್ತಿನಿಷ್ಠರಲ್ಲ ಎಂಬ ಅಂಶ ಬೆಳಕಿಗೆ ಬಂದಿತು. ಅವರು ತಮ್ಮ ನಡವಳಿಕೆಯ ಮೂಲಕ ಅದನ್ನು ಸಾದರಪಡಿಸಿದರು.

ಹೀಗಾಗಿ ಸಾರ್ವಜನಿಕರ ಅಭಿಮತದ ಪ್ರಕಾರ ತಿಲಕ್ ವಾದಿಗಳು ಮತ್ತು ಸೌಮ್ಯವಾದಿಗಳಿಬ್ಬರು ಲಜಪತರನ್ನು ಕಟ್ಟಾ ಎಡಪಂಥೀಯರೆಂದೇ ಪರಿಭಾವಿಸಿದರು. ಆದರೆ ನಿಜಾರ್ಥದಲ್ಲಿ ಲಜಪತರು ಆ ಪಾತ್ರದ ಬಗ್ಗೆ ಪಕ್ಷಪಾತಿಯಾಗಿರಲಿಲ್ಲ. ಒಂದು ವೇಳೆ ಅವರಿಂದ ಕಾಂಗ್ರೆಸ್ ಇಬ್ಭಾಗವಾಗುತ್ತದೆ ಎಂಬುದಾದರೆ ತಮ್ಮ ಎಡಪಂಥೀಯ ವಾದವನ್ನು ಬಿಟ್ಟುಕೊಡಲು ಅವರು ಸಿದ್ಧರಿದ್ದರು. ಅವರ ಸ್ಪಷ್ಟವಾದ ಧೋರಣೆ ಇದರಿಂದ ವ್ಯಕ್ತವಾಗುತ್ತದೆ. ದೇಶದ ಹಿತದ ಬೆಲೆಯ ಮೇಲೆ ಉನ್ನತ ಸ್ಥಾನವನ್ನು ಲಜಪತರು ಅಪೇಕ್ಷಿಸುತ್ತಿರಲಿಲ್ಲ. ಗೋಖಲೆಯವರಿಗೆ ಖೇದ ತರುವ ಬೆಳವಣಿಗೆ ಮತ್ತು ತನ್ಮೂಲಕ ಕಾಂಗ್ರೆಸ್‌ನಲ್ಲಿ ಪರಸ್ಪರ ಸಂಘರ್ಷದ ಎರಡು ಗುಂಪುಗಳಾಗುವುದಕ್ಕೆ ತಾವು ಕಾರಣರಾಗಲು ಅವರು ಸುತರಾಂ ಬಯಸುತ್ತಿರಲಿಲ್ಲ. ತಾಳ್ಮೆ ಮತ್ತು ನಿಧಾನಕ್ಕೆ ಒತ್ತು ಕೊಟ್ಟರು.

ಹಾಗೆಯೇ ನೇರವಾಗಿ ಅವರು ತಿಲಕ್ ವಾದಿಗಳನ್ನು ಭ್ರಮನಿರಸನಗೊಳಿಸಲು ಇಷ್ಟಪಡಲಿಲ್ಲ. ಕಾಂಗ್ರೆಸ್ಸಿನ ಎಡಪಂಥೀಯ ಬೆಳವಣಿಗೆಯ ಮೇಲೆ ತಮ್ಮ ನಿರಾಕರಣೆಯ ಪರಿಣಾಮ ಹೇಗಾಗಬಹುದೆಂಬ ಬಗ್ಗೆ ಅವರು ಚಿಂತಿಸಿದರು. ಹಾಗೆಂದು ಆ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲ. ಕಾಂಗ್ರೆಸ್ ಏಕೀಕೃತವಾಗಿರಬೇಕೆಂದು ಅವರು ಹೃದಯಪೂರ್ವಕವಾಗಿ ಬಯಸಿದ್ದು ಅದಕ್ಕೆ ಪ್ರಬಲ ಹಿನ್ನಲೆ. ಅದರಿಂದಾಗಿಯೇ ಅವರು ಯಾವುದೇ ಬಣದ ಪರ ನಿಷ್ಠೆ ವ್ಯಕ್ತಪಡಿಸಲಿಲ್ಲ. ಸೂಕ್ತ ಸಮಯದಲ್ಲಿ ತಮ್ಮ ಕೈಬಿಟ್ಟರೆಂಬ ಭಾವನೆ ಗೆಳೆಯರಲ್ಲಿ ಮೂಡಿದ ಅಹಿತಕರ ಪ್ರಸಂಗಕ್ಕೆ ಅವರು ಇದೇ ಉದ್ದೇಶದಲ್ಲಿ ಸಿದ್ಧರಾದರು. ನಿಜ, ಲಜಪತರು ಗೆಳೆಯರನ್ನು ಕೈಬಿಟ್ಟ ರೀತಿ ಮತ್ತು ಸ್ಥಿತಿ ಬ್ರೌನಿಂಗ್‌ನ 'Last Leader' ಆಕಾಂಕ್ಷೆಗಿಂತ 'ಭಿನ್ನವಾದುದು' - 'ಕೇವಲ ಒಂದು ಗೌರವ ಪದವಿಗಾಗಿ

ಆತ ನಮಗೆ ಕೈಕೊಟ್ಟ.' ಲಜಪತರು ಅಂತಹ ಗೌರವ ಪದವಿಯನ್ನು ನಿರಾಕರಿಸಿದರು. ಆ ಗೌರವ ಪದವಿಯನ್ನು ತಮಗೆ ದೊರಕಿಸಲು ಮುಂದಾದ ಗೆಳೆಯ ವರ್ಗವನ್ನೇ ಅವರು 'ಕೈ ಬಿಟ್ಟರು'. ಮುಂದೆ ತಮ್ಮ ಜೀವನ ಚರಿತ್ರೆಯನ್ನು ಬರೆದಾಗ ಲಜಪತರು ಸೂರತ್ ಕಾಂಗ್ರೆಸ್ ಅಧಿವೇಶನದ ಮುಸ್ಸಂಜೆಯಲ್ಲಿ ನಡೆದ ವಿದ್ಯಮಾನಗಳು ಮತ್ತು ಒಳ ಚಟುವಟಿಕೆಗಳನ್ನು ವಿಧ್ಯುಕ್ತವಾಗಿ ವಿಶ್ಲೇಷಣಾತ್ಮಕವಾಗಿ ಬರೆದಿದ್ದಾರೆ,

''ನಮ್ಮನ್ನು ನವೆಂಬರ್ ತಿಂಗಳಿನಲ್ಲಿ ಬಿಡುಗಡೆ ಮಾಡಲಾಯಿತು. ನಾನು ಭಾರತಕ್ಕೆ ವಾಪಸಾದ ತಕ್ಷಣ ತಿಲಕರು ಆಗಿನ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನನ್ನ ಹೆಸರನ್ನು ಸೂಚಿಸಿದರು. ಸೌಮ್ಯವಾದಿಗಳು ಅದನ್ನು ವಿರೋಧಿಸಿದರೂ ಅಭ್ಯರ್ಥಿಯಾಗಲು ನಾನು ಸಹ ನಿರಾಕರಿಸಿದೆ. ನನ್ನ ನಿಲುವು ಗೋಖಲೆಯವರಿಗೆ ಹರ್ಷ ತಂದಿತು. ಆದರೆ ತಿಲಕರಿಗೆ ನೋವುಂಟು ಮಾಡಿತು. ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನದಲ್ಲಿ ಅಧಿಕೃತ ಅಭ್ಯರ್ಥಿ ರಾಸ್ ಬಿಹಾರಿ ಘೋಷರಿಗೆ ಪ್ರತಿಸ್ಪರ್ಧಿಯಾಗಿ ಅಧ್ಯಕ್ಷ ಸ್ಥಾನಕ್ಕೆ ತಿಲಕರ ಹೆಸರನ್ನು ವಿಧ್ಯುಕ್ತವಾಗಿ ಸೂಚಿಸಲು ನಿಶ್ಚಯಿಸಲಾಯಿತು. ಘೋಷರನ್ನು ಕಾಂಗ್ರೆಸ್ಸಿನ ಸ್ವಾಗತ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ಆಯ್ಕೆ ಮಾಡಿತು. ಎಡಪಂಥೀಯ ಬಣ ತಿಲಕರನ್ನು ಎದುರಾಳಿಯಾಗಿ ಕಣಕ್ಕೆ ಇಳಿಸಲು ಹವಣಿಸಿತು.''

ಆದರೆ ವಾಸ್ತವದಲ್ಲಿ ಸೂರತ್‌ನಲ್ಲಿ ಆದ ಬೆಳವಣಿಗೆಗಳು ವಿಚಿತ್ರಕರವೆನಿಸಿದವು. ಎರಡು ಗುಂಪುಗಳ ವಿರೋಧಾಭಾಸದ ಹೇಳಿಕೆಗಳನ್ನು ವಿಶ್ಲೇಷಿಸಿದಾಗ ಪೂರ್ವಭಾವಿ ಮಾತುಕತೆಯ ಹಂತದಲ್ಲಿ ವಿರೋಧ, ವೈಷಮ್ಯಗಳು ವಿವಾದಾಸ್ಪದವಾಗಿದ್ದವು.

ಸೂರತ್ ಅಧಿವೇಶನದ ನಂತರ ಉಗ್ರವಾದಿಗಳ ಬಣ ಪ್ರತಿ ಹೇಳಿಕೆಯೊಂದನ್ನು ನೀಡಿತು. ಅಧಿವೇಶನದ ಸಮಯದಲ್ಲಿ ಕಾಂಗ್ರೆಸ್ ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ಅದಾಗಿತ್ತು. ಲಜಪತ್‌ರಾಯ್ ಅವರ ನಾಮಪತ್ರ ತಿರಸ್ಕರಿಸಲು ಗೋಖಲೆಯವರು ಅದಕ್ಕೆ ತಿಲಕ್, ಕರ್ಪಡೆ, ಅರವಿಂದ್ ಘೋಷ್, ಎಚ್. ಮುಖರ್ಜಿ ಮತ್ತು ಬಿ.ಸಿ. ಚಟರ್ಜಿ ಅವರು ಹಾಕಿದ್ದ ಅಂಕಿತದ ಬಗ್ಗೆ ನೀಡಿದ ಹೇಳಿಕೆಗೆ ಪ್ರತಿ ಹೇಳಿಕೆ ಅದಾಗಿತ್ತು. ಲಜಪತ್‌ರಾಯ್ ಅವರ ನಾಮಪತ್ರವನ್ನು ತಿರಸ್ಕರಿಸುತ್ತಾ ಗೋಖಲೆಯವರು ಮಾಡಿದ ಆರೋಪ ಇನ್ನೊಂದು ಕಾರಣವಾಗಿತ್ತು. ಅವರು ತಮ್ಮ ಆರೋಪದಲ್ಲಿ ''ಸದ್ಯದ ಪರಿಸ್ಥಿತಿಯಲ್ಲಿ 'ಸರ್ಕಾರವನ್ನು ರಚಿಸುವ ಸ್ಥಿತಿಯಲ್ಲಿ ನಾವಿಲ್ಲ' ಹಾಗೆ ಮಾಡುವುದರಿಂದ ಅದಿಕಾರಸ್ಥರು ಕಿಂಚಿತ್ತು ಕಾಲ ವಿಳಂಬವಿಲ್ಲದೆ ನಮ್ಮ ಚಳವಳಿಯನ್ನು ತೊಡೆದು ಹಾಕಿ ಬಿಡುತ್ತಾರೆ' ಎಂದಿದ್ದರು. ಸಹಜವಾಗಿ ಸಾರ್ವಜನಿಕರ ಭಾವನೆಗಳಿಗೆ ತೇಜೋವಧೆ ಮಾಡುವ ನಿಲುವು ಅದೆಂದು ಪರಿಭಾವಿಸಿಲಾಯಿತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಡಾ. ಘೋಷ್ ಅವರಿಗೆ ಭಾರತದ ನಾನಾ ಕಡೆಗಳಿಂದ ಕನಿಷ್ಠ ಒಂದು ನೂರು ತಂತಿಗಳು ಬಂದವು. ಅವೆಲ್ಲವೂ ಲಜಪತರ ಪರವಾಗಿ ಡಾ. ಘೋಷರು ನಿವೃತ್ತಿ ಹೊಂದಬೇಕೆಂದು ಮನವಿ ಮಾಡಿದ್ದವು.''

ಹೇಳಿಕೆ ಅಷ್ಟಕ್ಕೆ ಮುಗಿಯುವುದಿಲ್ಲ. ''ಅದೇನೇ ಇದ್ದರೂ ಲಜಪತ್‌ರಾಯ್ ಆ ಸ್ಥಾನಕ್ಕೆ ತಮ್ಮ ಹೆಸರು ಪ್ರಸ್ತಾಪವಾಗುವುದನ್ನು ಒಪ್ಪಲಿಲ್ಲ. ಬಹಿರಂಗ ನಿರಾಕರಣೆ ನೀಡಿದರು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯ ನಿರ್ಧಾರವನ್ನು ತಾತ್ವಿಕ ನೆಲೆಗಟ್ಟಿನ ಮೇಲೆ ಚರ್ಚಿಸಬೇಕು ಮತ್ತು ಸರ್ಕಾರದ ತಿರೋಗಾಮಿ ನೀತಿಯನ್ನು ಸಮರ್ಥವಾಗಿ ಪ್ರತಿಭಟಿಸಲು ಲಜಪತ್‌ರಾಯ್ ಅವರನ್ನು ಅಧ್ಯಕ್ಷಗಾದಿಗಾಗಿ ಆಯ್ಕೆ ಮಾಡಬೇಕೆಂದು ಬಯಸಿದವರಿಗೆ ಈ ಬೆಳವಣಿಗೆ ತೃಪ್ತಿ ತರಲಿಲ್ಲ.''

ಉಗ್ರಗಾಮಿಗಳ ಪ್ರತಿ ಹೇಳಿಕೆಯನ್ನು ಗೋಖಲೆ ವಿರೋಧಿಸಿದರು. ''ಖಾಸಗಿಯಾಗಿ ನಡೆದ ಸಂಭಾಷಣೆಯ ಅಲ್ಲೊಂದು ಇಲ್ಲೊಂದು ಮಾತನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿರುವ ಕಿಡಿಗೇಡಿತನದ ವಿಕೃತ ಹೇಳಿಕೆ ಇದು'' ಎಂದು ಅವರು ಟೀಕಿಸಿದರು. ಸೂರತ್‌ನಲ್ಲಿ ಉಗ್ರವಾದಿ ಬಣದ ಗಣ್ಯ ವ್ಯಕ್ತಿಯೊಬ್ಬರೊಂದಿಗೆ ಈ ಸಂಬಂಧದಲ್ಲಿ ತಾವು ಮಾತುಕತೆ ನಡೆಸಿದ್ದನ್ನು ಅವರು ಪ್ರಸ್ತಾಪಿಸಿದರು. ಸ್ವಾಗತ ಸಮಿತಿ ಸಭೆಗೆ ಹಿಂದಿನ ದಿನ ಅಂದರೆ ನವೆಂಬರ್ 24ರಂದು ಅವರು ಈ ಮಾತುಕತೆಯನ್ನು ನಡೆಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಲಾಲಾ ಲಜಪತ್‌ರಾಯ್ ಅವರ ಹೆಸರನ್ನು ಮುಂದು ಮಾಡುವುದು ಜಾಣತನವಾಗುವುದಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಸೂರತ್‌ನಲ್ಲಿ ಯಾವುದೇ ರೀತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಭಿನ್ನಮತ ಉಂಟಾದರೆ ಅದರಿಂದ ಸಂಘಟನೆಯ ಕಾರ್ಯಗಳಿಗೆ ಧಕ್ಕೆಯಾಗುವುದು ನಿಶ್ಚಿತ ಎಂದು ಅವರು ಹೇಳಿದ್ದರು. ಸ್ವಾಗತ ಸಮಿತಿಯು ಲಾಲಾ ಲಜಪತ್‌ರಾಯ್ ಅವರ ಹೆಸರನ್ನು ಪ್ರಸ್ತಾಪಿಸುವ ಸಂಭವ ಇಲ್ಲವೇ ಇಲ್ಲ. ಅಂತಹುದರಲ್ಲಿ ''ಅವರ ಹೆಸರನ್ನು ಪ್ರಸ್ತಾಪಿಸಿ ಅದು ತಿರಸ್ಕೃತವಾದರೆ ವ್ಯಕ್ತಿಶಃ ಅದು ನೋವಿನ ಹಾಗೂ ಹೀನ ಅಪಮಾನದ ಪ್ರಕರಣವಾಗುತ್ತದೆ.''

ಗೋಖಲೆ ತಮ್ಮ ಇಂಗಿತವನ್ನು ಅಷ್ಟಕ್ಕೆ ನಿಲ್ಲಿಸಿರಲಿಲ್ಲ. ''ವ್ಯಕ್ತಿಶಃ ಲಜಪತ್‌ರಾಯ್ ಅವರಿಗೆ ಸ್ವಾತಂತ್ರ್ಯವೇನೋ ಮರುಕಳಿಸಿದೆ. ಅವರನ್ನು ಬಂಧಿಸಿ ಗಡಿಪಾರು ಮಾಡಿದ ಪ್ರಕರಣದಲ್ಲಿನ ನೈತಿಕ ಪ್ರಶ್ನೆಗಳು ಇನ್ನೂ ಇತ್ಯರ್ಥವಾಗಿಲ್ಲ. ದೇಶದ ಭಾವನೆಯನ್ನು ಅವರ ಪರವಾಗಿ ಸುಮಾರ್ಗವಾಗಿಯೂ, ಏಕತೆಯಿಂದಲೂ ಇರುವಂತೆ ನೋಡಿಕೊಳ್ಳುವ ಮೂಲಕ ಆ ಪ್ರಶ್ನೆಗಳ ಇತ್ಯರ್ಥಕ್ಕೆ ಹೋರಾಡಬೇಕಾಗಿದೆ. ಒಂದು ವೇಳೆ ಕಾಂಗ್ರೆಸ್ಸಿನ ಒಂದು ವರ್ಗ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಮಾಡ ಹೊರಟರೆ ಭಾವನೆಯ ಏಕತೆ ಒಡೆದು ಹೋಗುತ್ತದೆ.'' ಎಂದು ಅವರು ವಾದಿಸಿದ್ದರು. 'ಸರ್ಕಾರ ರಚನೆ'ಯ ಪ್ರಸ್ತಾಪದ ಬಗ್ಗೆ ಗೋಖಲೆಯವರು ಹೀಗೆ ಹೇಳಿದರು. ''ನಾನು ಅಷ್ಟಕ್ಕೆ ನನ್ನ ಅಭಿಮತವನ್ನು ಮುಗಿಸಲಿಲ್ಲ. ಲಜಪತ್‌ರಾಯ್ ಅವರನ್ನು ನಾವೆಲ್ಲರೂ ಗೌರವದಿಂದ ಸಂಭಾವಿಸಲು ಇನ್ನೂ ಅನೇಕ ಮಾರ್ಗಗಳಿವೆ. ಒಂದು ವೇಳೆ ಕೇವಲ ಸರ್ಕಾರವನ್ನು ರಚಿಸುವುದಷ್ಟೇ ನಿಮ್ಮ ಧ್ಯೇಯವಾಗಿದ್ದರೆ ನಿಮ್ಮ ಸೂಚನೆ ಏನೆಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ ಎಂದು ಹೇಳಿದೆ. ಅದಕ್ಕೆ ಅವರಲ್ಲಿನ ಓರ್ವ ಸಭ್ಯರು, 'ಹೌದು ನಾವು ಏನನ್ನು ಮಾಡಲಾಗದಿದ್ದರೂ ಸರ್ಕಾರ ರಚಿಸಲು ಸಿದ್ಧವಾಗಿದ್ದೇವೆ ಎಂಬುದನ್ನಾದರೂ ಮಾಡಿ ತೋರಿಸಬೇಕಾಗಿದೆ.' ಎಂದು ಮಾರ್ನುಡಿದರು. ಅದಕ್ಕೆ ಪ್ರತಿಯಾಗಿ ನಾನು 'ಹಾಗೆ ಸರ್ಕಾರ ರಚಿಸುವುದರಲ್ಲಿ ನನಗೆ ನಂಬಿಕೆ ಇಲ್ಲ. ಕಾಂಗ್ರೆಸ್ ಸಂಘಟನೆ ಅಗತ್ಯ ಬಿದ್ದಾಗಲೆಲ್ಲಾ ಸರ್ಕಾರದ ತಪ್ಪು ತಡವರಿಕೆಗಳನ್ನು ಖಂಡಿಸಬೇಕಾಗುತ್ತದೆ. ಅಷ್ಟೇ ಅಲ್ಲ

ಅದು ಮಾಡಬೇಕಾದ ಪ್ರಮುಖ ಕೆಲಸಗಳು ಇನ್ನೂ ಇದೆ. ಸದ್ಯದ ನಮ್ಮ ಸ್ಥಿತಿಯಲ್ಲಿ ಸರ್ಕಾರದ ಸಹಾಯ, ಸಹಕಾರ ಇಲ್ಲದೆ ನಾವು ಅವುಗಳನ್ನು ಸಾಧಿಸಲು ಸಾಧ್ಯವಿಲ್ಲ.' ಎಂದು ತಿಳಿಸಿದೆ.''

ಇದೆಲ್ಲಾ ನಡೆದದ್ದು ಮಹಾ ಅಧಿವೇಶನಕ್ಕೆ ಒಂದು ತಿಂಗಳ ಮೊದಲು. ಪೂರ್ವಭಾವಿ ಮಾತುಕತೆಗಳಿಗೆ ಸಂಬಂಧಪಟ್ಟಂತೆ ತಮ್ಮ ಇನ್ನೊಂದು ಹೇಳಿಕೆಯಲ್ಲಿ ಗೋಖಲೆ ಹೀಗೆ ಹೇಳಿದ್ದಾರೆ.

''ಆ ದಿನ (ಡಿಸೆಂಬರ್ 25) ಬೆಳಿಗ್ಗೆ ಸೂರತ್‌ಗೆ ಬಂದ ನಂತರ ಲಜಪತ್‌ರಾಯ್ ತಿಲಕ್ ಮತ್ತು ಕರ್ಪಡೆ ಅವರನ್ನು ಮಧ್ಯಾಹ್ನ ಭೇಟಿ ಮಾಡಿದರು. ವಿವಾದಾಸ್ಪದವಾಗಿರುವ ಪ್ರಶ್ನೆಯನ್ನು ಇತ್ಯರ್ಥಪಡಿಸುವಂತೆ ಕೇಳಿಕೊಂಡರು. ಅವರಿಬ್ಬರ ಸಮ್ಮತಿ ಪಡೆದು ಸಾಧ್ಯವಾದರೆ ಸಭೆಯೊಂದನ್ನು ಕರೆಯುವ ಸಂಬಂಧದಲ್ಲಿ ಗೋಖಲೆಯವರನ್ನು ಭೇಟಿ ಮಾಡಿದರು. ಆ ಸಂಜೆ (ಡಿಸೆಂಬರ್ 25) ರಂದು ನಡೆದ ದೇಶಿಯವಾದಿಗಳ ಸಭೆಯಲ್ಲಿ ತಿಲಕ್ ಮತ್ತು ಕರ್ಪಡೆ ಪಾಲ್ಗೊಂಡರು. ಆ ಸಭೆಯಲ್ಲಿ ದೇಶಿಯವಾದಿಗಳ ಸಮಿತಿಯೊಂದನ್ನು ರಚಿಸಲಾಯಿತು. ಪ್ರತಿ ಪ್ರಾಂತ್ಯದಿಂದಲೂ ಓರ್ವ ಸದಸ್ಯನನ್ನು ಸಮಿತಿಗೆ ನೇಮಿಸಲಾಯಿತು. ಎರಡು ಕಡೆಗಳ ನಾಯಕರೊಂದಿಗೆ ಸಂಧಾನ ನಡೆಸುವುದು, ಆ ಸಮಿತಿಯ ರಚನೆಯ ಉದ್ದೇಶವಾಗಿತ್ತು. ಒಂದು ವೇಳೆ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಕಾಂಗ್ರೆಸ್ ನಾಯಕರಿಂದ ಸಮ್ಮತಿ ಪ್ರಾಪ್ತವಾಗಿದಿದ್ದರೆ ಅಧ್ಯಕ್ಷ ಆಯ್ಕೆಗೆ ಸಂಬಂಧಪಟ್ಟ ವಿಧ್ಯುಕ್ತ ವಿಧಿ ವಿಧಾನಗಳನ್ನು ಸ್ವಾಗತ ಸಮಿತಿ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು... ಲಾಲಾ ಲಜಪತ್‌ರಾಯ್ ಅವರಿಂದ ಆ ರಾತ್ರಿಯಾಗಲಿ, ಮರುದಿನ ಬೆಳಿಗ್ಗೆಯಾಗಲಿ ಯಾವುದೇ ಸೂಚನೆಗಳು ಬರಲಿಲ್ಲ...

''ಆ ದಿನ (ಡಿಸೆಂಬರ್.25) ಮಧ್ಯಾಹ್ನ ಲಾಲಾ ಲಜಪತ್‌ರಾಯ್ ಉಗ್ರವಾದಿ ಬಣವನ್ನು ಭೇಟಿ ಮಾಡುವವರಿದ್ದರು. ಅದಕ್ಕೆ ಮುನ್ನ ನನ್ನನ್ನು ಕಂಡ ಅವರು ನಿರ್ಣಯದ ವಿಷಯದಲ್ಲಿ ತಾವು ತಪ್ಪು ಗ್ರಹಿಕೆಯಲ್ಲಿದ್ದೀರಿ ಎಂದು ಆ ಬಣದ ನಾಯಕರಿಗೆ ತಾವು ತಿಳಿಸಬಹುದೇ ಎಂದೂ, ಕಾರ್ಯಕ್ರಮದ ಪಟ್ಟಿ ಮುದ್ರಣಾಲಯದಿಂದ ಬಂದ ನಂತರ ಆ ನಿರ್ಣಯವನ್ನು ಪರಿಶೀಲಿಸಬಹುದೆಂದು ತಿಳಿಸಲೇ ಎಂದು ಕೇಳಿದರು. ನಾನು ಕೂಡಲೇ ಒಪ್ಪಿಕೊಂಡೆ. ಅದೇ ಸಂಜೆ ಲಾಲಾ ಲಜಪತ್‌ರಾಯ್ ಉಗ್ರವಾದಿ ಬಣವನ್ನು ಭೇಟಿ ಮಾಡಿ ನನ್ನೊಂದಿಗೆ ಮಾತನಾಡಿದಂತೆ ತಿಳಿಸಿದರು.''

ಉಗ್ರವಾದಿಗಳ ಹೇಳಿಕೆಯ ಪ್ರಕಾರ ಸಂಧಾನದ ವ್ಯವಸ್ಥೆಗಾಗಿ ಕೆಲವು ನಾಯಕರು ಪ್ರಯತ್ನಪಟ್ಟವೆಂದು ತಿಳಿದು ಬಂದಿತು. ಆ ನಿಟ್ಟಿನಲ್ಲಿ ಮೂವರ ಹೆಸರು ಪ್ರಸ್ತಾಪವಾಗಿತ್ತು. ನನ್ನೊಂದಿಗೆ ಮಾತನಾಡಲು ನಿಯೋಜಿಸಲಾಗಿತ್ತು. ಲಾಲಾ ಲಜಪತ್‌ರಾಯ್, ಬಾಬು ಸುರೇಂದ್ರನಾಥ್ ಬ್ಯಾನರ್ಜಿ ಮತ್ತು ಚುನಿಲಾಲ್ ಡಿ. ಸರಾಯ್ ಆ ಮೂವರು ಪ್ರತಿನಿಧಿಗಳು. ಅವರಲ್ಲಿ ತತ್ಸಂಬಂಧದಲ್ಲಿ ಚುನಿಲಾಲ್ ನನ್ನನ್ನು ಯಾವಾಗಲೂ ಭೇಟಿ ಮಾಡಲೇ ಇಲ್ಲ. ಲಾಲಾ ಲಜಪತ್‌ರಾಯ್ ನನ್ನೊಂದಿಗೆ ಸಂಕ್ಷಿಪ್ತವಾಗಿ ಮಾತನಾಡಿದರು. ಡಿಸೆಂಬರ್ 25ರ ಆ ಸಂಜೆ ಅಧ್ಯಕ್ಷರನ್ನು ಸ್ವಾಗತಿಸಲು ನಾವು ರೈಲು ನಿಲ್ದಾಣಕ್ಕೆ ಹೋಗಿದ್ದವು.

ಲಜಪತರು ತಿಲಕರ ಪ್ರಸ್ತಾಪವನ್ನು ನನಗೆ ಅಲ್ಲಿ ತಿಳಿಸಿದರು. ಅವರ ಕಡೆಯಿಂದ ಐವರು, ಇತ್ತ ಕಡೆಯಿಂದ ಐವರು ಕಲೆತು ನಿರ್ಣಯದಲ್ಲಿ ಆಗಿರುವ ಪದಗಳ ಬಳಕೆಯನ್ನು ಪುನರ್ ಸಂಯೋಜಿಸಲು ಸೂಚಿಸಲಾಗಿತ್ತು. ನಾನು ಲಾಲಾ ಲಜಪತ್‌ರಾಯ್ ಅವರಿಗೆ ವಸ್ತುಸ್ಥಿತಿಯನ್ನು ತಿಳಿಸಿದೆ. ಆ ಕೆಲಸ ವಿಷಯ ನಿಯಾಮಕ ಸಮಿತಿಗೆ ಸಂಬಂಧಪಟ್ಟದ್ದೆಂದು ಹೇಳಿದೆ. ತಿಲಕ್ ಸಲಹೆ ಮಾಡಿರುವಂತಹ ಸಮಿತಿಯನ್ನು ಹಿಂದೆ ಯಾವಾಗಲೂ ರಚಿಸಿಲ್ಲವೆಂದು ಹೇಳಿದೆ. ಐದು ಜನರನ್ನು ತಮ್ಮ ಕಡೆಯಿಂದ ನಿಯೋಜಿಸಿರುವುದು ತಿಲಕರಿಗೇನೋ ಸುಲಭವಾಗಿತ್ತು. ಕಾರಣ ದಿನ ಬಿಟ್ಟು ದಿನ ಅವರ ಬೆಂಬಲಿಗರ ಸಭೆ ನಡೆಯುತ್ತಲೇ ಇತ್ತು. ಇನ್ನೊಂದು ಕಡೆಯಿಂದ ಹಾಗೆ ಮಾಡಲು ಸಾಧ್ಯವಿರಲಿಲ್ಲ. ನಾನು ಒಂದು ವೇಳೆ ಐದು ಜನರನ್ನು ಹೆಸರಿಸಿದರೂ ಆಗ ಇದ್ದ ಉದ್ರಿಕ್ತ ಹಾಗೂ ವಿಷಮ ಭಾವನೆಗಳ ಪರಿಸ್ಥಿತಿಯಲ್ಲಿ ಅಂತಹ ಸಮಿತಿಗೆ ಅಧಿಕೃತ ಮನ್ನಣೆಯು ಪ್ರಾಪ್ತವಾಗಿರಲಿಲ್ಲ. ನಾನು ಲಜಪತರಿಗೆ ಸೂಚಿಸಿದೆ. ''ವಿಷಯ ನಿಯಾಮಕ ಸಮಿತಿ ನಾಳೆಯೇ ಸಭೆ ಸೇರಲಿ. ಯಾವುದೇ ಭಿನ್ನಾಭಿಪ್ರಾಯವಿದ್ದರೆ ಅದರಲ್ಲಿ ಇತ್ಯರ್ಥವಾಗುವಂತೆ ಮಾಡೋಣ. ನಮ್ಮ ಪ್ರಸ್ತಾಪವನ್ನು ನಾವು ಆ ಸಮಿತಿಗೆ ತಿಳಿಸೋಣ.' ಎಂದು ಹೇಳಿದೆ. ನನ್ನ ನಿಲುವಿನ ಸತ್ವವನ್ನು ಲಜಪತರು ಒಪ್ಪಿಕೊಂಡರು. ತಾವು ತಂದಿದ್ದ ಸಂದೇಶದ ಬಗ್ಗೆ ಅವರು ಮತ್ತೆ ಒತ್ತಾಯ ಮಾಡಲಿಲ್ಲ.''

ಗೋಖಲೆಯವರ ವಿಷಯದಲ್ಲಿ ಲಜಪತರ ಭಾವನೆ ಏನೇ ಆಗಿದ್ದರೂ ಅವರಿಗೆ ದುಃಖವಾಗುವ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ಅಂದರೆ ಮೇಲ್ನೋಟಕ್ಕೆ ಅವರು ಗೋಖಲೆ ಪಕ್ಷಪಾತಿಯಾಗಿ ಕಂಡರೂ ಅದರಲ್ಲಿ ಸಂಕುಚಿತ ಕಾರಣಕ್ಕಿಂತಲೂ ವಿಶಾಲ ಮನೋಸ್ತರ ಪ್ರಮುಖವಾಗಿತ್ತು. ಈ ಪ್ರಕರಣದಿಂದ ಅವರು ಗೋಖಲೆಗೆ ನಿಷ್ಠರಿದ್ದರೆಂದಾಗಲಿ, ಅವರ ಬಗ್ಗೆ ಹೆಚ್ಚು ಗೌರವ ಹೊಂದಿದ್ದರೆಂದಾಗಲಿ ಕಂಡು ಬರುವುದಿಲ್ಲ. ಗೋಖಲೆಯವರೊಂದಿಗೆ ಹೇಗೆ ಆಪ್ತರು, ವಿಶ್ವಾಸ ಪಾತ್ರರು ಆಗಿದ್ದರೋ ಹಾಗೆಯೇ ತಿಲಕರೊಂದಿಗೆ ನಿಷ್ಠರು, ಆತ್ಮೀಯರು ಆಗಿದ್ದರು. ತಮ್ಮ ನಡವಳಿಕೆ ವಿವೇಕಯುತವೂ, ಸಮಯೋಚಿತವೂ ಆಗಿದೆ ಎಂಬುದನ್ನು ಕೃತಿಯ ಮೂಲಕ ಅವರು ತೋರಗೊಟ್ಟರು. ಆದರೂ ಅವರಿಗೆ ವಿಷಾದವಾಗದೆ ಉಳಿಯಲಿಲ್ಲ. ಯಾವ ಘೋರತನವಾಗಬಾರದು, ಅನಾಹುತವಾಗಬಾರದು ಎಂದು ಅವರು ಬಯಸಿ ಅದಕ್ಕೆ ಪೂರಕವಾಗಿ ನಡೆದುಕೊಂಡರೋ ಅದು ಕೊನೆಗೂ ನಡೆದೇ ಹೋಯಿತು. ಎರಡು ಕಡೆ ಹಿಡಿತಕ್ಕೆ ಸಿಗದಷ್ಟು ಅನುಮಾನ, ಅಪನಂಬಿಕೆಗಳು ಬೆಳೆದುಕೊಂಡಿದ್ದವು. ತಮ್ಮ ತಮ್ಮ ನಿಲುವಿಗೆ ತಕ್ಕಂತೆ ಬಹಿರಂಗವಾಗಿ ಹೋರಾಟ ಮಾಡುವ ನಿರ್ಧಾರಗಳು ಆಗಿ ಹೋಗಿದ್ದವು. ಲಾಲಾ ಲಜಪತ್‌ರಾಯ್ ಅವರೇ ಹೇಳಿರುವಂತೆ ಆ ಪ್ರಕರಣ ನಿಶ್ಚಿತವಾಗಿಯೂ ಒಂದು ಐತಿಹಾಸಿಕ ಕುತೂಹಲ.

''ಎರಡೂ ಕಡೆ ಅನುಮಾನವೋ ಅನುಮಾನ. ಅಪನಂಬಿಕೆಯು ಕಂದಕ ಅಗಲವಾಗುತ್ತಿತ್ತು. ಎರಡೂ ಕಡೆ ಕಾರ್ಯಕರ್ತರಿಂದ ಹಿಡಿದು ನಾಯಕರವರೆಗೆ ಪರಸ್ಪರ ಮುಗಿಬೀಳಲು ನಿಶ್ಚಯಿಸಿದಂತೆ ಕಂಡು ಬಂದಿತು. ಸಂಧಾನ-ಹೊಂದಾಣಿಕೆಗಾಗಿ ಎಲ್ಲಾ ಪ್ರಯತ್ನಗಳು ನಿರರ್ಥಕವಾದವು.''

ಹಾಗೆಂದ ಮಾತ್ರಕ್ಕೆ, ಲಜಪತರು ಆ ಘಟನೆಗೆ ಗೋಖಲೆಯವರನ್ನಾಗಲಿ ತಿಲಕರನ್ನಾಗಲಿ ಹೊಣೆ ಮಾಡಿಲ್ಲ. ಸೂರತ್ ಅಧಿವೇಶನ ಮುಗಿದ ನಂತರ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಹೇಳಿಕೆಯೊಂದರಲ್ಲಿ ಅವರು ''ಎರಡೂ ಕಡೆಯವರು ಹೋರಾಡಲು ನಿಶ್ಚಯಿಸಿದ್ದರು. ದೇಶಿಯವಾದಿಗಳಿಗಿಂತ ಸೌಮ್ಯವಾದಿಗಳಲ್ಲೇ ಕಾಂಗ್ರೆಸ್ ಇಬ್ಭಾಗಕ್ಕೆ ಹೆಚ್ಚು ಆಸಕ್ತಿ ಕಂಡು ಬಂದಿತು. ಗೋಖಲೆಯವರ ಅಭಿಪ್ರಾಯವೇನೇ ಇರಲಿ ಈ ಇಬ್ಭಾಗಕ್ಕೆ ಅವರ ಒತ್ತಾಸೆ ಇರಲಿಲ್ಲ. ತಿಲಕರು ಅದನ್ನು ಆಶಿಸಿದವರಲ್ಲ. ಆದರೆ ಅದನ್ನು ತಪ್ಪಿಸಲು ಅವರಿಬ್ಬರಿಂದಲೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು."

ಪರಸ್ಪರ ಸಂಘರ್ಷದ; ಒಬ್ಬರನ್ನೊಬ್ಬರು ಹೀಗೆಳೆದು ಹೊಣೆಗಾರರನ್ನಾಗಿ ಮಾಡುವ ಹೇಳಿಕೆಗಳು ಹೊರಬಿದ್ದವು. ಶಾಂತಿ, ಸಮಾಧಾನಕ್ಕಾಗಿ ತಾವು ಪಟ್ಟ ಪ್ರಯತ್ನದ ಬಗ್ಗೆ ಲಜಪತರು ದೀರ್ಘವಾಗಿ ಬರೆದಿಟ್ಟಿದ್ದಾರೆ,

''ಆ ದಿನಗಳಲ್ಲಿ ನಾನು ಗೋಖಲೆಯವರೊಂದಿಗೆ ನಿಕಟವಾಗಿದ್ದೆ. ಅವರೆಷ್ಟು ಅಧೀರರಾಗಿದ್ದರೆಂಬುದನ್ನು ನಾನು ಬಲ್ಲೆ. ಆರೋಗ್ಯ ಸರಿ ಇರಲಿಲ್ಲ. ರಾತ್ರಿ ಅವರು ನಿದ್ದೆ ಮಾಡುತ್ತಿರಲಿಲ್ಲ. ವಿಶ್ರಾಂತಿ ಎಂಬುದೇ ಅವರಿಗೆ ಇರಲಿಲ್ಲ. ತಮ್ಮೆಲ್ಲಾ ಸಮಯವನ್ನು ಚರ್ಚೆ, ಮಾತುಕತೆಗಳಿಗೆ ವಿನಿಯೋಗಿಸುತ್ತಿದ್ದರು. ಅವರ ಸಂದೇಶಗಳನ್ನು ಹೊತ್ತು, ಭರವಸೆಗಳನ್ನು ಹಿಡಿದು ನನ್ನದೇ ಆದ ಆಶಯಗಳೊಂದಿಗೆ ನಾನು ದೇಶಿಯವಾದಿಗಳ ಬಣಕ್ಕೆ ಪ್ರತಿನಿತ್ಯ ಅನೇಕ ಸಲ ಅಡ್ಡಾಡಿದೆ. ಅಧ್ಯಕ್ಷ ಚುನಾವಣೆಯನ್ನು ವಿರೋಧಿಸದಂತೆ ತಿಲಕರ ಮನ ಒಲಿಸಲು ಪ್ರಯತ್ನಪಟ್ಟೆ. ಅದು ಅಪೇಕ್ಷಣೀಯವಲ್ಲ, ಜಾಣತನದ್ದಲ್ಲವೆಂದೂ ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದೆ. ನಾವು ಆ ವಿಷಯದ ಬಗ್ಗೆ ಬಹಳಷ್ಟು ಚರ್ಚಿಸಿದೆವು. ವಾದ-ವಿವಾದ ನಡೆಸಿದೆವು. ಪ್ರತಿ ಹಂತದಲ್ಲೂ ತಿಲಕರು ನನ್ನೊಂದಿಗೆ ಸಹಮತ ಹೊಂದಿದ್ದಾರೆ ಎಂಬ ಭಾವನೆ ನನ್ನಲ್ಲಿ ಮೂಡುತ್ತಿತ್ತು. ಆದರೆ ಆಗಿದ್ದೇ ಬೇರೆ.''

ಕಾಂಗ್ರೆಸ್ ಪಕ್ಷದ ಇಬ್ಭಾಗ ಅಧ್ಯಕ್ಷ ಚುನಾವಣೆಯ ವಿಷಯದ ಮೇಲೆ ಆಧಾರವಾಯಿತಾದರೂ ಅದರ ಭಿನ್ನಮತದ ಒಳಮುಖ ಬೇರೆಯಾಗಿತ್ತು. ರಾಜಕೀಯ ವಿಷಯಗಳ ಆಳವಾದ ಭಿನ್ನಾಭಿಪ್ರಾಯ ಅದು. ಅಧ್ಯಕ್ಷ ಪದವಿಯ ಸ್ಪರ್ಧೆಯಿಂದ ನಾಮಪತ್ರವನ್ನು ಹಿಂದಕ್ಕೆ ಪಡೆದ ನಂತರ ಲಾಲಾ ಲಜಪತ್‌ರಾಯ್ ಅವರು ಈ ರಾಜಕೀಯ ಭಿನ್ನಮತ ನಿವಾರಣೆಗೆ ಸಂಬಂಧಪಟ್ಟಂತೆ ರಾಜಿ ಸೂತ್ರವೊಂದಕ್ಕೆ ಪ್ರಯತ್ನಿಸಿದರು. ಅದು ಯಾವುದೇ ರೀತಿಯ ಫಲ ತರಲಿಲ್ಲ. ಇತ್ಯರ್ಥ ಸಾಧ್ಯವಾಗಲಿಲ್ಲ. ದೇಶಿಯವಾದಿಗಳು ಕಾಂಗ್ರೆಸ್ ಅಧಿವೇಶನದಲ್ಲಿ ಆತನಕ ಸಂಭವಿಸದಂತಹ ತಂತ್ರಕ್ಕೆ ಎಳೆಸಿದರು. ಹಿಂದೆ ಕಲ್ಕತ್ತಾದಲ್ಲಿ ನಡೆದ ಅಧಿವೇಶನದಲ್ಲಿ ತಮ್ಮ ಪರವಾಗಿ ಕೆಲವು ಸಾಧನೆಗಳು ಆಗಿದ್ದುದ್ದರ ಹುಮ್ಮಸ್ಸು ದೇಶಿಯವಾದಿಗಳಲ್ಲಿ ಎದ್ದು ಕಾಣುತ್ತಿತ್ತು. ಈ ಅಧಿವೇಶನದಲ್ಲಿ ಹಿಂದಿನಂತೆಯೇ ತಮ್ಮ ಹಿಡಿತವನ್ನು ಸಾಧಿಸಿಕೊಳ್ಳಲು ಅವರು ಬಯಸಿದರು. ಆದರೆ ಕಲ್ಕತ್ತಾ ಅಧಿವೇಶನದ ನಿರ್ಣಯಗಳಿಗೆ ಎಳ್ಳುನೀರು ಬಿಡಲಾಯಿತು ಎಂಬ ವರದಿಗಳು ಬಂದವು. ಅಂತಹ ವರದಿಗಳಿಗೆ ಯಾವುದೇ ಸಕಾಲಿಕ ಖಾತ್ರಿ ಇರಲಿಲ್ಲ. ದೇಶಿಯವಾದಿಗಳು ತಮ್ಮ ಫಲ ಸಾಧನೆಗಾಗಿ ಎಲ್ಲಾ ಸಿದ್ಧತೆಗಳನ್ನು

ಮಾಡಿಕೊಳ್ಳತೊಡಗಿದರು. ಸೂರತ್ ಅಧಿವೇಶನದಲ್ಲಿ ತಮ್ಮದೇ ಆದ ಪ್ರತ್ಯೇಕ ಪಾಳೆಯವೊಂದನ್ನು ಕಟ್ಟಿಕೊಂಡರು. ಎದುರು ಪಾಳೆಯವೂ ಸಹ ಅದಕ್ಕೆ ಹೊರತಾಗಲಿಲ್ಲ. ಅಧಿವೇಶನಕ್ಕೆ ಎರಡು ದಿನಗಳ ಮೊದಲು ದೇಶಿಯವಾದಿಗಳು ಎಡೆಬಿಡದೆ ಸಭೆಗಳನ್ನು ನಡಯಿಸಿದರು. ಆ ಸಭೆಗಳನ್ನು ಉದ್ದೇಶಿಸಿ ತಿಲಕರು ಮತ್ತು ಅರವಿಂದರು ಮಾತನಾಡಿದರು. ಹೆಚ್ ಡಬ್ಲ್ಯು. ನೇವಿನ್‌ಸನ್ ಬರೆದಿಟ್ಟಿರುವಂತೆ ಆ ಪಾಳೇಯದಲ್ಲಿ, "ಅನುಮಾನಗಳೇ ಪ್ರಧಾನವಾಗಿದ್ದವು. ಊಹಾಪೋಹಗಳ ಮೇಲೆ ಅಭಿಪ್ರಾಯಗಳನ್ನು ಬೆಳೆಸಿಕೊಳ್ಳಲಾಯಿತು."*

ಸಂಧಾನಗಳು ಯಾವುದೇ ಫಲ ಕೊಡಲಿಲ್ಲ. ಮುಹೂರ್ತ ಸಮೀಪಿಸಿತು. ಆ ಪ್ರಸಂಗವನ್ನು ನೇವಿನ್‌ಸನ್ ದಾಖಲಿಸುತ್ತಾ,

"ವೇದಿಕೆಗೆ ಜನರು ಬರತೊಡಗಿದರು. ಮೊದಲು ಬಂದವರು ಡಾ.ರುದರ್ ಫೋರ್ಡ್...ನಂತರ ಬಂದವರು ಗಾಂಭೀರ್ಯದ ಶ್ವೇತಪೇಟ ತೊಟ್ಟ, ಸ್ವಲ್ಪ ಭಿನ್ನವಾದ ನೋಟದ ವ್ಯಕ್ತಿ. ಅವರು ವೇದಿಕೆಯ ಒಂದು ಪಾರ್ಶ್ವದಿಂದ ಪ್ರವೇಶಿಸುತ್ತಿದ್ದಂತೆಯೇ ಸಭಾಂಗಣದಲ್ಲಿದ್ದ ಸುಮಾರು 10 ಸಾವಿರ ಸಂಖ್ಯೆಯ ಇಡೀ ಸಮೂಹ ಏಕ ವ್ಯಕ್ತಿಯಂತೆ ಎದ್ದು ನಿಂತಿತು. ಘೋಷಣೆಗಳು ಮುಗಿಲು ಮುಟ್ಟಿದವು. ಜಯಕಾರಗಳ ಮೇಲೆ ಜಯಕಾರ. ಆ ಘೋಷಣೆ, ಜಯಕಾರಗಳಿಗೆ ಅಂತ್ಯವೇ ಇಲ್ಲವೇನೋ ಎನಿಸಿದ್ದು ಉಂಟು. ಪರಮೋಚ್ಚ ಹಿತಸಾಧನೆಗಾಗಿ ತುರಂಗವಾಸದಲ್ಲಿ ನರಳಿದ ಆ ಮಹಾನ್ ವ್ಯಕ್ತಿಯನ್ನು ಪ್ರೀತಿಸದವರೇ ಅಲ್ಲಿ ಕಾಣಲಿಲ್ಲವೇನೋ? ಆ ವ್ಯಕ್ತಿ ಲಾಲಾ ಲಜಪತ್‌ರಾಯ್."**

ಸ್ವಾಗತ ಸಮಿತಿಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಡಾ. ರಾಸ್ ಬಿಹಾರಿ ಘೋಷರ ಹೆಸರು ಸೂಚಿಸುತ್ತಿದ್ದಂತೆಯೇ ಸಭೆ ಪ್ರಕ್ಷುಬ್ಧವಾಯಿತು. ಎಲ್ಲವೂ ಆಯೋಮಯ. "ಕ್ಷೋಭೆ ವಿಸ್ಫೋಟಗೊಂಡಿತು. ಅಧ್ಯಕ್ಷರ ಭಾಷಣದ ಒಂದು ಪದವೂ ಕೇಳಿಸದಂತಾಯಿತು." ***

ಸಮಾವೇಶವನ್ನು ಮುಂದೂಡಬೇಕಾಯಿತು. ಸಂಧಾನಕಾರರು ಆ ಇಡೀ ಸಂಜೆ ಮತ್ತು ಇಡೀ ರಾತ್ರಿ ಬಿಡುವಿಲ್ಲದಷ್ಟು ಪ್ರಯತ್ನಪಟ್ಟರು. ಫಲಿತಾಂಶ ಮಾತ್ರ ಶೂನ್ಯ.

ಮರುದಿನ ಮತ್ತೆ ಸಮಾವೇಶ ಸೇರಿದಾಗ ದೇಶಿಯವಾದಿಗಳು ಮೆರವಣಿಗೆಯಲ್ಲಿ ಸಭಾಂಗಣಕ್ಕೆ ಬಂದರು. ಅಧ್ಯಕ್ಷ ಚುನಾವಣೆಗೆ ಸಂಬಂಧಪಟ್ಟಂತೆ ನಿರ್ಣಯಕ್ಕೆ ತಿದ್ದುಪಡಿಯ ಸೂಚನೆಯೊಂದನ್ನು ಕಳುಹಿಸಿಕೊಟ್ಟರು. ಅವರು ತಮ್ಮ ಸೂಚನೆಯ ಬಗ್ಗೆ ಮಾತನಾಡಲು ಎದ್ದಾಗ ಕ್ರಿಯಾಲೋಪವೊಂದನ್ನು ಎತ್ತಿ ಅದಕ್ಕೆ ಅವಕಾಶ ನೀಡಲಿಲ್ಲ. ತಿಲಕರು ಕ್ರಿಯಾಲೋಪದ ತೀರ್ಪಿಗೆ ತಲೆಬಾಗಲಿಲ್ಲ. ಡಾ. ಘೋಷರು ಇನ್ನು ಅಧ್ಯಕ್ಷರಾಗಿ

* ದಿ ನ್ಯೂ ಸ್ಪಿರಿಟ್ ಇನ್ ಇಂಡಿಯಾ, ಪುಟ. 242.

** ಅದೇ ಪುಸ್ತಕದ ಪುಟ. 245-46.

*** ಅದೇ ಪುಸ್ತಕದ ಪುಟ. 247.

ಆಯ್ಕೆಯಾಗಿರಲಿಲ್ಲ. ಅವರು ತೀರ್ಪು ಕೊಡುವಂತಿರಲಿಲ್ಲ. ಸ್ವಾಗತ ಸಮಿತಿಯ ಅಧ್ಯಕ್ಷ ಮಾಳ್ವಿ-''ಅಧ್ಯಕ್ಷರಾಗಿ ಉಳಿದಿರಲಿಲ್ಲ.'' ಆ ದಿನವೂ ಸಭೆಯಲ್ಲಿ ಕ್ಷೋಭೆ ಎದ್ದಿತು. ಅದು ಶಾಂತವಾಗುವ ಲಕ್ಷಣವೇ ಇರಲಿಲ್ಲ. ಮಹಾರಾಷ್ಟ್ರ ಮಾದರಿಯ ಚಪ್ಪಲಿಯೊಂದು ವೇದಿಕೆಯತ್ತ ತೂರಿ ಬಂದಾಗ ಪರಿಸ್ಥಿತಿ ಪರಾಕಾಷ್ಠೆ ಮುಟ್ಟಿತು. ಆ ಚಪ್ಪಲಿ ಸುರೇಂದ್ರನಾಥ ಬ್ಯಾನರ್ಜಿಯವರಿಗೆ ತಗಲಿ ಫಿರೋಜ್ ಷಹಾ ಮೆಹ್ತಾ ಅವರಿಗೆ ತಟ್ಟಿತು. ಕಾಂಗ್ರೆಸ್ಸಿನ ಚರಿತ್ರೆಯಲ್ಲಿ ಹಳೆಯದೊಂದು ಯುಗ ಮುಗಿದು ಹೊಸ ಯುಗದ ಆರಂಭಕ್ಕೆ ಆ ಕ್ಷಣವೇ ನಾಂದಿ ಹಾಡಿದಂತಾಯಿತು. ವರ್ಷಾಂತರಗಳ ನಂತರ ತಮ್ಮ ಮನಃಪಟಲದಲ್ಲಿ ಯದ್ವತ್ತಾಗಿ ಅಚ್ಚಳಿದಿದ್ದ ಸೂರತ್ ವಿದ್ಯಮಾನಗಳನ್ನು ನೆನಪು ಮಾಡಿಕೊಳ್ಳುತ್ತಾ ಲಜಪತರು ಬರೆದಿದ್ದಾರೆ.

''ಅದರೊಂದಿಗೆ (ಸೂರತ್ ಅಧಿವೇಶನ) ನಮ್ಮ ರಾಷ್ಟ್ರೀಯ ಆಂದೋಲನದ ಒಂದು ಯುಗ ಅಂತ್ಯಗೊಂಡು ಇನ್ನೊಂದು ಯುಗ ಆರಂಭವಾಯಿತು." ಮತ್ತು ''(ಯುಗಗಳ) ಆದಿ, ಅಂತ್ಯಗಳೆರಡು'' ಅವರು ವಿಶ್ಲೇಷಿಸುತ್ತಾ, ''ದಿವಂಗತ ತಿಲಕರ ಕೊಡುಗೆ'' ಎಂದಿದ್ದಾರೆ. ಸೂರತ್ ಅಧಿವೇಶನದಲ್ಲಿ ತಿಲಕರ ವ್ಯಕ್ತಿತ್ವ ಬಿಟ್ಟ ಬಳ್ಳಿ ಲಜಪತರ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವದ ಮುದ್ರೆಯೊತ್ತಿತ್ತು.

''ತಿಲಕರ ವಿಶಿಷ್ಟ ಬಲ ಮತ್ತು ಪ್ರಭಾವಗಳು ಆ ಕ್ಷಣದಲ್ಲಿ ನನ್ನ ಮನಸ್ಸಿನ ಮೇಲೆ ತಾವೇ ತಾವಾಗಿ ಅಚ್ಚೊತ್ತಿದವು. ಅವುಗಳನ್ನು ನಾನು ಎಂದೆಂದಿಗೂ ತೊಡೆದು ಹಾಕಲು ಸಾಧ್ಯವಾಗಲೇ ಇಲ್ಲ. ತಮ್ಮ ತಿದ್ದುಪಡಿ ಸೂಚಿಸಲು ಎದ್ದು ನಿಂತಾಗ ವೇದಿಕೆಯಲ್ಲಿ, ಸಭೆಯಲ್ಲಿ ಹುಯಿಲು ಎದ್ದಿತು. ಅವರನ್ನು ಬದಿಗೆ ಸರಿಸುವ ಪ್ರಯತ್ನಗಳು ನಡೆದವು. ತಮಗೆ ಅನುಕೂಲಕರವಲ್ಲದವರೇ ಅಧಿಕ ಸಂಖ್ಯೆಯಲ್ಲಿದ್ದ ಆ ಅಧಿವೇಶನದ ವೇದಿಕೆಯಲ್ಲಿ ಅವರು ಗಜ ಗಾಂಭೀರ್ಯದಿಂದ ನಿಂತಿದ್ದರು. ತಮ್ಮ ಯತ್ನವನ್ನು ಮಣಿಸಲು ಬುಸುಗುಡುತ್ತಿದ್ದವರಿಗೆ ಸವಾಲಾಗಿ ಕಂಡರು. ವೇದಿಕೆಯಲ್ಲಿ ಕುಳಿತಿದ್ದವರ ಪೈಕಿ ತಿಲಕರ ಬೆಂಬಲಿಗರಾಗಿದ್ದವರು ಕೇವಲ ಕೆಲವೇ ಮಂದಿ... ಅವರ ಮುಖದ ಮೇಲೆ ನಿಶ್ಚಿತ, ಸೋಲಿಗೆ ಎಡೆ ಇಲ್ಲದ ಛಾಯೆ ಎದ್ದು ಕಾಣುತ್ತಿತ್ತು. ಅವರ ಬಗ್ಗೆ ಪೂರ್ವಾಗ್ರಹ ಪೀಡನೆ ಇಲ್ಲದ ಎಲ್ಲರ ಮನಸ್ಸಿನಲ್ಲೂ ಅವರ ಆ ನಿರ್ಭೀಡೆಯ ನಿಲುವು ಮೆಚ್ಚುಗೆಯ ಪ್ರಭಾವ ಮೂಡಿಸಿತು. ಆ ಅಧಿವೇಶನದ ಗುಂಟ ತಿಲಕರು ನಡೆದುಕೊಂಡ ರೀತಿ ತಮ್ಮ ಇಚ್ಛೆಗೆ ವಿರುದ್ಧ ಭೂಮ್ಯಾಕಾಶಗಳ ಎಲ್ಲಾ ಶಕ್ತಿಗಳು ಎದುರಾದರೂ ಅವುಗಳನ್ನು ದಿಟ್ಟವಾಗಿ ಎದುರಿಸುತ್ತೇನೆಂದು ಸೆಟೆದು ನಿಂತ ವ್ಯಕ್ತಿಯಂತೆ ಭಾವಿಸಿತು.''

ಲಾಲಾಜಿ ಸೂರತ್ ವಿದ್ಯಮಾನಗಳನ್ನು ಪದೇ ಪದೇ ಸ್ಮೃತಿಪಟಲದಿಂದ ನೆನಪು ಮಾಡಿಕೊಳ್ಳುತ್ತಿದ್ದರು. ಅಧಿವೇಶನದ ವೇದಿಕೆಯಲ್ಲಿ ನಡೆದ ಘಟನೆ - ವಿದ್ಯಮಾನ ಅವರ ನೆನಪಿನಲ್ಲಿ ಯಥಾವತ್ತಾಗಿ ಉಳಿದು ಹೋಗಿತ್ತು. (ನಾವೀಗಲೇ ಓದಿದ್ದೇವೆ.) ತಮ್ಮ ವಿರುದ್ಧ ಎದುರಾಳಿಗಳೇ ಅಗಾಧ ಸಂಖ್ಯೆಯಲ್ಲಿದ್ದರೂ, ಇಡೀ ಪರಿಸ್ಥಿತಿ ಪ್ರತಿಕೂಲವಾಗಿದ್ದರೂ ತಿಲಕರು ಕಿಂಚಿತ್ತೂ ವಿಚಲಿತರಾಗದೆ ತಮ್ಮ ಹೋರಾಟ ನಡೆಸಿದ್ದನ್ನು ಅವರು ಯದ್ವಾತ್ತಾಗಿ ನಿರೂಪಿಸುತ್ತಿದ್ದರು. ಶಾಂತಿ ಸಂದೇಶವನ್ನು ಹೊತ್ತು ಉಗ್ರಗಾಮಿಗಳ

ಬಣಕ್ಕೆ ತಾವು ಹೋದಾಗ ಅಲ್ಲಿ ನಡೆಯುತ್ತಿದ್ದ ವಾದ ವಿವಾದಗಳನ್ನು ಲಜಪತರು ಪದೇ ಪದೇ ಸ್ಮರಿಸಿಕೊಳ್ಳುತ್ತಿದ್ದರು. ಶ್ರೀ ಅರವಿಂದರೊಂದಿಗೆ ನಡೆಸುತ್ತಿದ್ದ ಮಾತುಕತೆಯಲ್ಲಿ ಶಿಕ್ಷಕರಾಗಿ ತಮ್ಮ ಪಾತ್ರ ಪಕ್ಷಾತೀತವಾಗಿರಬೇಕೆಂದು ವಾದಿಸಿದ್ದರು. ಅದಕ್ಕೆ ಶ್ರೀ ಅರವಿಂದರು ಕೊಟ್ಟ ಉತ್ತರ, ''ನಿಮ್ಮ ಕೈಯಲ್ಲಿರುವ ಬಟ್ಟಲನ್ನು ಬರಿದು ಮಾಡದ ಹೊರತು ನೀವು ಅದನ್ನು ಮತ್ತೆ ತುಂಬಿಕೊಳ್ಳಲಾಗುವುದಿಲ್ಲ.'' ಲಾಲಾಜಿ ಆ ಕ್ಷಣ ನೆನಪು ಮಾಡಿಕೊಳ್ಳುವಾಗಲೆಲ್ಲಾ ಅರವಿಂದರಂತೆ ತಮ್ಮ ಕೈಯಲ್ಲಿದ್ದ ಬಟ್ಟಲನ್ನು ಮತ್ತೆ ತುಂಬಿಕೊಳ್ಳುವ ಮೊದಲು ಅದನ್ನು ಬರಿದು ಮಾಡುತ್ತಿದ್ದರು.

* * * * *

1907ರಲ್ಲಿ ಲಜಪತ್‌ರಾಯ್ ಅಂದಿನ ರಾಜಕೀಯ ಕ್ಷಿತಿಜದ ಧೃವತಾರೆಯಾಗಿ ಅಷ್ಟೇ ಉಳಿದುಕೊಳ್ಳಲಿಲ್ಲ. ಅವರನ್ನು ನಿಟ್ಟಿಸಿ ನೋಡುತ್ತಿದ್ದ ಕೋಟ್ಯಾನುಕೋಟಿ ಕಣ್ಣುಗಳಿಗೆ ಅವರ ಕೃತಿಗಳು ಸಾಕ್ಷಿಭೂತವಾಗಿದ್ದವು. ಕಾಂಗ್ರೆಸ್‌ನ ಅಧ್ಯಕ್ಷರು ಯಾರೇ ಆಗಿರಲಿ, ಅದರ ನಿರ್ವಾಹಕರು ಹೇಗಾದರೂ ಇರಲಿ ಲಜಪತರು ಮಾತ್ರ ಜನತೆಯ ಎಲ್ಲಾ ತ್ಯಾಗ, ಸಮರ್ಪಣೆಗಳಿಗೂ ಸಿದ್ಧವಾಗಿದ್ದರು. ಅವರ ವಿಜಯವೇ ತಮ್ಮ ವಿಜಯವೆಂದು ಭಾವಿಸಿದ್ದರು. ಎಲ್ಲಾ ಯಶಸ್ಸು, ಕೀರ್ತಿಗಳೂ ಲಜಪತರಿಗೆ ಮೀಸಲಿಟ್ಟಂತೆ ಕಂಡು ಬರುತ್ತಿತ್ತು. ವಸ್ತುಶಃ ಲಜಪತರು ಶಾಂತಿ ನಿರ್ವಾಹಕರಾಗಿ ತಮ್ಮ ಕರ್ತವ್ಯ ನಿರ್ವಹಿಸುತ್ತಾ ಬಂದರು. . ಹೋರಾಟದಲ್ಲಿ ಅವರ ಹೆಸರೇ ಸುತ್ತಿಕೊಳ್ಳುತ್ತಿದ್ದನ್ನು ಕಂಡು ಅವರಿಗೆ ಅದೆಷ್ಟೋ ಬಾರಿ ಕಿರಿ ಕಿರಿ ಉಂಟಾಗುತ್ತಿತ್ತು. ಸೂರತ್‌ನ ಅತಿ ದೊಡ್ಡ ವಿರೋಧಾಭಾಸ ಅದು. ಸಂಧಾನಗಳು ಸಂಪೂರ್ಣವಾಗಿ ವಿಫಲಗೊಂಡು ಕಾಂಗ್ರೆಸ್ ಇಬ್ಭಾಗವಾದ ನಂತರವೂ ಲಜಪತರು ಶಾಂತಿಗಾಗಿ ಮೊರೆ ಇಟ್ಟರು. ಸ್ವದೇಶಿ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ ಸೂರತ್‌ನಿಂದ ಅವರು ಕೊಟ್ಟ ಕಡೆಯ ಸಂದೇಶವಾಯಿತು.

''ನನ್ನ ಸೌಮ್ಯವಾದಿ ಗೆಳೆಯರಲ್ಲಿ ನನ್ನ ಪ್ರಾರ್ಥನೆ ಇದು. ದಯಮಾಡಿ ನಮ್ಮ ಶತ್ರುಗಳ ಕೈಗೆ ಬೀಳಬೇಡಿ... ಉಗ್ರವಾದಿ ಗೆಳೆಯರೆಂದು ಹೇಳುತ್ತಿರುವವರಲ್ಲಿ ಕೆಲವರ ಮಾರ್ಗ, ಮಾಧ್ಯಮಗಳು ಸೌಮ್ಯವಾದಿಗಳಿಗೆ ಹಿಡಿಸದಿರಬಹುದು. ಅದೇ ಕಾರಣಕ್ಕಾಗಿ ಉಗ್ರವಾದಿಗಳನ್ನು ಲಘುವಾಗಿ ನೋಡುತ್ತಾ ತಮ್ಮ ಎದುರಾಳಿಗಳನ್ನು ಪರಿಭಾವಿಸುವುದು ತಪ್ಪಾಗುತ್ತದೆ. ಸರ್ಕಾರದ ಕಿರುಕುಳಕ್ಕೆ ಅವರನ್ನು ಒಳಪಡಿಸುವುದು, ಒಳಗಾಗುವಂತೆ ಮಾಡುವುದು ಒಳ್ಳೆಯದಲ್ಲ. ನನ್ನ ಉಗ್ರವಾದಿ ಬಂಧುಗಳಿಗೂ ಇದು ನನ್ನ ಮನವಿ. ಆಂಗ್ಲೋ ಇಂಡಿಯನ್ನರನ್ನು ಗೋಳು ಹುಯ್ಯುಕೊಳ್ಳುವುದು ವಿವೇಕಯುತವಲ್ಲ . ನನ್ನ ಗೌರವಪೂರ್ವಕ ಮನವಿ ಇಷ್ಟೇ. ತಾಳ್ಮೆಗೆಡಲು ಇದು ಕಾಲವಲ್ಲ. ಅನುಚಿತ ವರ್ತನೆಗೆ ಅವಕಾಶ ಬೇಡ!''

ಈ ವಿದ್ಯಮಾನಗಳು ನಡೆದಂತೆ ಕಾಂಗ್ರೆಸ್‌ನಲ್ಲಿ ಕಿತ್ತಾಟಕ್ಕೆ ಕಾರಣ ಲಜಪತರು ಅಧ್ಯಕ್ಷರಾಗುವುದನ್ನು ಸೌಮ್ಯವಾದಿಗಳು ಒಪ್ಪದಿದ್ದದ್ದೇ ಎಂಬುದು ಸ್ಪಷ್ಟವಾಗುತ್ತದೆ. ಸಂಧಾನಗಳು ಒಂದು ಹಂತಕ್ಕೆ ಬಂದ ಮೇಲೂ, ತಿಲಕ್ ಪಕ್ಷದವರು ತಾತ್ವಿಕ ಷರತ್ತೊಂದನ್ನು ಮುಂದು ಮಾಡಿದರು. ಲಜಪತರಿಗೆ 'ಗೌರವಪೂರ್ವಕ ಉಲ್ಲೇಖ' ಇರಬೇಕೆಂದು ಅದರಲ್ಲಿ ಒತ್ತಿ ಹೇಳಲಾಯಿತು. ಆದರೆ ಆ ಸಂಧಾನವೂ ಮುರಿದು ಬಿತ್ತು. ಆ ಅಧಿವೇಶನದಲ್ಲಿ ಓದಲೆಂದು ಸಿದ್ಧಪಡಿಸಿಕೊಂಡಿದ್ದ ಡಾ. ರಾಸ್ ಬಿಹಾರಿ ಘೋಷ್‌ರ ಭಾಷಣ ಪಠಣಕ್ಕೆ ಅವಕಾಶವೇ ಸಿಗಲಿಲ್ಲ. ಆದರೆ ಒಳಮುಖವನ್ನು ಹೊಕ್ಕು ನೋಡಿದಾಗ ಅವರ ಭಾಷಣದಲ್ಲಿ ಲಜಪತರ ಬಗ್ಗೆ 'ಗೌರವಪೂರ್ವಕ ಉಲ್ಲೇಖ' ಇರದೇ ಇರಲಿಲ್ಲ. ಆ 'ಗೌರವಪೂರ್ವಕ ಉಲ್ಲೇಖ'ದಲ್ಲಿ ಕಾಂಗ್ರೆಸ್ ಅಧ್ಯಕ್ಷತೆಗೆ ಅವರ ಸ್ಪರ್ಧೆಗೆ ಸಂಬಂಧಪಟ್ಟಂತೆ ಅಂಶಗಳೇನೂ ಇರಲಿಲ್ಲ. ಆದರೆ ಅವರ ಬಂಧನದ ಬಗ್ಗೆ ವಿಸ್ತೃತವಾದ ಪ್ರಸ್ತಾಪವಿತ್ತು. ಅಧ್ಯಕ್ಷ ಮುಕುಟದ ಪರಾಮರ್ಶೆ ಅದರಲ್ಲಿ ಇರದಿದ್ದರೂ ಲಜಪತರು ತೊಟ್ಟ 'ಮುಳ್ಳಿನ ಕಿರೀಟ'ದ 'ಅಕರ ವಿಮರ್ಶೆ' ಅದರಲ್ಲಿತ್ತು.

''ಈಗ ಮುಕ್ತಾಯವಾಗುತ್ತಿರುವ ವರ್ಷದಲ್ಲಿ' ಅಧ್ಯಕೀಯ ಭಾಷಣದಲ್ಲಿ ತಿಳಿದು ಬರುವಂತೆ, 'ದೇಶವು ಆಳವಾದ ಸೆಳವಿನತ್ತ ಎಳೆಯಲ್ಪಟ್ಟಿದೆ. ಮತ್ತು ನಿಜವಾಗಿಯೂ ಕುತೂಹಲಕಾರಿ ವರ್ಷ ಎನಿಸಲ್ಪಟ್ಟಿದೆ. ಲಾಲಾ ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್ ಅವರ ದೇಶೋಚ್ಚಾಟನೆಯೊಂದಿಗೆ ಈ ಬೆಳವಣಿಗೆ ಆರಂಭಗೊಂಡಿತು. ನಂತರ ಬಹಿರಂಗ ಸಭೆಗಳ ನಿಷೇಧದ ವಿಶೇಷಾಜ್ಞೆ ಜಾರಿ, ರಾವಲ್ಪಿಂಡಿ ವಿಚಾರಣೆ ಮತ್ತು ಪಂಜಾಬ್ ಹಾಗೂ ಪಂಜಾಬ್‌ನಲ್ಲಿ ಪತ್ರಿಕಾ ನಿರ್ಬಂಧ ಕಾಯ್ದೆಗಳ ಜಾರಿಯಾಗಿದೆ.''

''1818ರ ನಿಯಂತ್ರಣ ಕಾಯ್ದೆಯ 3ನೇ ವಿಧಿಯ ಅನ್ವಯವನ್ನು ಸಮರ್ಥಿಸುತ್ತಾ ಅದನ್ನೀಗ ಸ್ಥಾಯಿ ಕಾಯ್ದೆಯನ್ನಾಗಿ ಪರಿಗಣಿಸಲಾಗುತ್ತದೆ ಎಂದು ಕೇಳಿ ಬರುತ್ತಿದೆ. ಅದು ಕೇವಲ ಸ್ಥಾಯಿ ಕಾಯ್ದೆಯಷ್ಟೇ ಆಗುವುದಿಲ್ಲ. ಈಗಿರುವ ಇತರ ಕಾಯ್ದೆಗಳೆಲ್ಲವನ್ನು ಮೀರಿಸಿ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಸ್ಥಾಯಿ ಉಪಟಳದ ಕಾಯ್ದೆಯಾಗುತ್ತದೆ. ನಮ್ಮ ಶಾಸನಬದ್ಧ ಹಕ್ಕುಗಳಿಗೆ ಮಾರಕವಾಗುತ್ತದೆ. ನಾಗರಿಕ ನ್ಯಾಯ ಕೌಶಲದ ವ್ಯವಹಾರದಲ್ಲಿ ಇದೊಂದು ಅಡಚಣೆಯ ಮುಳ್ಳಾಗುತ್ತದೆ. ಓರ್ವ ವ್ಯಕ್ತಿಯನ್ನು ಕಾರಣ ಕೊಡದೆ ಗಡಿಪಾರು ಮಾಡುವಂತಹ ಅವರ ಕ್ರಮವನ್ನು ಈ ಅನಾಗರಿಕ ಕಾಯ್ದೆ ಸಮರ್ಥಿಸುತ್ತದೆ. ದೇಶೋಚ್ಚಾಟನೆಗೆ ಕಾರಣ ಕೊಡದಿರುವ ಅವರ ಕೃತ್ಯ 'ಕಾನೂನು ಬಾಹಿರ', 'ಸಂವಿಧಾನಬಾಹಿರ', 'ಹಿಂಸಾತ್ಮಕ', 'ಸರ್ವಾಧಿಕಾರಿತನದ್ದು', 'ಉದ್ಧಟತನದ್ದು', 'ಅವಿವೇಕದ್ದು', 'ನಾಗರಿಕ ನಡವಳಿಕೆಗಳಿಂದ ಅಸಂಬದ್ಧವಾದದ್ದು'. ನಾನೀಗ ಬಳಸಿದ ವಿಶ್ಲೇಷಣೆಗಳು ನನ್ನವಲ್ಲ. ಹ್ಯಾನ್ಸರ್ಡ್ ಲೇಖನದಿಂದ ನಾನು ಈ ಪದಗಳನ್ನು ತೆಗೆದುಕೊಂಡಿದ್ದೇನೆ. ಕಟ್ಟಾ ಲಿಬರಲ್ ಸದಸ್ಯರು ಮಹಾ ಪ್ರಸಂಗವೊಂದರಲ್ಲಿ ಬಹಿರಂಗವಾಗಿ ತಮ್ಮ ಭಾಷಣದಲ್ಲಿ ಬಳಸಿದ್ದಾರೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾರ್ಲೆ ಕೊಟ್ಟ ಉತ್ತರ ನಾಗರಿಕ ಆಡಳಿತಕ್ಕೆ ಅಪಚಾರವೆಸಗಿದೆ. ಸೈಮನ್ -ಬಿ- ಮೌಂಟ್ ಫೋರ್ಡ್ ಸಂಸತ್ತನ್ನು ಪರಿಷ್ಕರಿಸಿದ ನಂತರ ಇಂತಹ ನಿರ್ಲಜ್ಜ ಉತ್ತರವನ್ನು ಯಾರೂ ಕೊಟ್ಟಿಲ್ಲ.!

ಅಧ್ಯಕ್ಷರು ಆ ತಮ್ಮ ಭಾಷಣದಲ್ಲಿ ಲಜಪತರನ್ನು ಬಹುವಾಗಿ ಪ್ರಶಂಸಿಸಿದ್ದಾರೆ.

''ಕಾನೂನು ಹೀನವಾದ ಈ ಶಕ್ತಿಯ ಬಳಕೆಗೆ ಅವರು ಬಲಿಪಶು ಮಾಡಿಕೊಂಡ ವ್ಯಕ್ತಿಯಾದರು ಯಾರು? ಓರ್ವ ಶ್ರದ್ಧಾವಂತ ಮಾನವತಾವಾದಿ ಮತ್ತು ನಿಷ್ಠ ಸಮಾಜ ಸುಧಾರಕ; ಯಾವುದೇ ಕಳಂಕಕ್ಕೂ ಸಿಲುಕದ ಶುದ್ಧ ಚಾರಿತ್ರ್ಯದ ವ್ಯಕ್ತಿ. ತನಗಾಗಿ ತಾನು ಬದುಕದೆ ಪರರ ಹಿತಕ್ಕಾಗಿ ಬದುಕುತ್ತಿರುವ ವ್ಯಕ್ತಿ. - ಪಂಜಾಬಿನ ಆರಾಧ್ಯ ಮೂರ್ತಿ... ಈಗ ಲಾಲಾ ಲಜಪತ್‌ರಾಯ್ ಅವರನ್ನು ಅವರ ದೇಶವಾಸಿಗಳು ಆಪ್ಯಾಯತೆಯಿಂದ ಮಹಾ ವೀರನೆಂದು ಗೌರವಿಸುತ್ತಿದ್ದರೆ ಅವರಿಗೆ ಆ ಉನ್ನತ ಗೌರವಕ್ಕೆ ಅರ್ಹವಾಗುವಂತೆ ಮಾಡಿದ್ದು ಈ ಸರ್ಕಾರವೇ. ಸಂಪೂರ್ಣವಾಗಿ ಈ ಸರ್ಕಾರವೇ. ಈ ಸರ್ಕಾರ ಅವರ ತಲೆಯ ಮೇಲೆ ಭರಿಸಲಾಗದ ಬೆಲೆಯ ಮುಳ್ಳಿನ ಕಿರೀಟ ತೊಡಿಸಿದೆ. ಒಂದು ವೇಳೆ ಈಗ ಮಾಂಡೇಲೆ ಕೋಟೆಗೆ ಪವಿತ್ರ ಸ್ಥಾನಮಾನದ ಗೌರವ ಪ್ರಾಪ್ತವಾಗಿದ್ದರೆ, ನನಗೆ ತಿಳಿದಿರುವ ಮಟ್ಟಿಗೆ, ಅದಕ್ಕೆ ಕಾರಣ ನನ್ನ ಬಹುತೇಕ ದೇಶವಾಸಿಗಳಿಂದಲೇ. ಈ ಸರ್ಕಾರ, ಈ ಸರ್ಕಾರ, ಸಂಪೂರ್ಣವಾಗಿ ಈ ಸರ್ಕಾರವೇ ನಮ್ಮ ವೀರೋದಾತ್ತ ಜನರನ್ನು ಅಲ್ಲಿಗೆ ಕಳುಹಿಸಿ ಆ ಪಾವಿತ್ರ್ಯವನ್ನು ಬಂಡವಾಳ ಮಾಡಿಕೊಟ್ಟಿದೆ.''

ಲಜಪತ್‌ರಾಯ್ ಅವರು ತಮ್ಮ ಬಂಧನಕ್ಕೆ ಕೆಲವು ಗಂಟೆಗಳ ಮೊದಲು 'ದಿ ಪಂಜಾಬಿ' ಪತ್ರಿಕೆಗೆ ಬರೆದ ಲೇಖನಗಳಿಂದ ಮತ್ತು ನಂತರದ ಕೆಳಗಿನ ಉದ್ಧೃತವಾದ ಕೆಲವು ಘಟನೆಗಳನ್ನು ಇಲ್ಲಿ ಪಟ್ಟಿ ಮಾಡಿಕೊಡಲಾಗಿದೆ.

''ಸರ್ಕಾರ ನಡೆಸಿದ ಚಿಕಿತ್ಸೆ ಕರಾರುವಕ್ಕಾಗಿದೆ. ಪ್ರಮುಖವಾದ ಕುಂದು ಕೊರತೆಗಳನ್ನು ನಿವಾರಿಸತೊಡಗಿದಂತೆ ಪಂಜಾಬ್ ಶಾಂತವಾಗತೊಡಗಿದೆ. ಈ ಸಂತೋಷಕರ ಫಲಿತಾಂಶಕ್ಕೆ ಲಾಲಾ ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್‌ರನ್ನು ದೇಶೋಚ್ಚಾಟನೆ ಮಾಡಿದ್ದೇ ಸಂಪೂರ್ಣವಾಗಿ ಕಾರಣವೆಂದು ಅಧಿಕಾರಶಾಹಿ ತಮ್ಮಲ್ಲೇ ಬೀಗಬಹುದು. ದೂರದೃಷ್ಟಿ ಹಾಗೂ ಸಕಾಲಿಕ ಮುನ್ನೆಚ್ಚರಿಕೆ ಕ್ರಮಗಳಿಂದ ಇನ್ನೊಂದು ಸಿಪಾಯಿ ದಂಗೆಯನ್ನು ತಪ್ಪಿಸಿದ್ದೇವೆಂದು ಅವರು ಉಬ್ಬಿರಲುಬಹುದು.''

*　　*　　*　　*　　*

''ಲಾಲಾ ಲಜಪತ್‌ರಾಯ್ ಅವರು ಸೂರತ್ ವಿದ್ಯಮಾನವನ್ನು ಅತಿ ದೊಡ್ಡ ವಿರೋಧಾಭಾಸದ ನೆಲೆ ಎನಿಸಿದರು. ಕಾಂಗ್ರೆಸ್ ಇಬ್ಭಾಗವಾಗದಂತೆ ಶಾಂತಿ ಕಾಪಾಡಲು ಶಕ್ತಿಮೀರಿ ಶ್ರಮಿಸಿದರು. ಆದರೆ ಅಶಾಂತಿಯ ವಾತಾವರಣ ಅವರ ಹೆಸರಿನಲ್ಲಿಯೇ ಘಮಿಕ್ಕಿತು. ಶಾಂತಿ ಸಂಧಾನದ ಪ್ರಯತ್ನಗಳೆಲ್ಲವೂ ಮುರಿದು ಬಿದ್ದಾಗ ಸಂಘಟನೆ ಇಬ್ಭಾಗವಾಗುವುದನ್ನು ತಪ್ಪಿಸುವುದು ದುಸ್ತರವಾದಾಗ ತಮಗೆ ಉನ್ನತ ಸ್ಥಾನವನ್ನು ದೊರಕಿಸಲು ತೊಡರುಗಾಲು ಹಾಕಿದ ಜನರೊಂದಿಗೆ ಅವರು ಮೀಳತವಾದರು. ಅವರೀಗ ಆ ಉನ್ನತ ಸ್ಥಾನದ ಗೌರವ ತಂದು ಕೊಡಲು ಹೋರಾಟಕ್ಕೂ ಇಳಿದ ಜನರೊಂದಿಗೆ

ಮಿಳಿತವಾಗಲಿಲ್ಲ. ಭಾರೀ ಕ್ಷೋಭೆಯ ವಾತಾವರಣದಲ್ಲಿ ಎರಡು ಬಣವಾಗಿ ಕಾಂಗ್ರೆಸ್ ಇಬ್ಭಾಗವಾದಾಗ- ಬೇಕಾದರೆ ನೀವು ಅದನ್ನು ಅಂತರಿಕ ಯುದ್ಧವೆಂದಾದರೂ ಕರೆಯಿರಿ- ಅವರು ಯುದ್ಧ ಕ್ಷೇತ್ರ ಸೂರತ್‌ನಲ್ಲಿಯೇ ಕುಳಿತು ಗಂಭೀರವಾಗಿ ಏನೂ ನಡೆದೆ ಇಲ್ಲವೋ ಎನ್ನುವಂತೆ ತಮ್ಮ ಸೃಜನಾತ್ಮಕ ಕೆಲಸಗಳಲ್ಲಿ ತೊಡಗಿದರು. ಸೂರತ್ ವಿಭಜನೆಯ ಅರ್ಥ ಕಾಂಗ್ರೆಸ್ಸಿನ ವರ್ಚಸ್ಸಿಗೆ ತಟ್ಟಿದ ಘೋರ ಹಿಂಜರಿತ. ಅದರ ಪರಿಣಾಮದಿಂದ ಲಜಪತರು ತಪ್ಪಿಸಿಕೊಳ್ಳಲಾಗಲಿಲ್ಲ. ಬಹುಶಃ ಆ ಕಾಲದ ಮತ್ತು ನಂತರದ ಯಾವುದೇ ಪ್ರಮುಖ ನಾಯಕರಿಗೆ ತಟ್ಟದಷ್ಟು ಧಕ್ಕೆ ಆ ಇಬ್ಭಾಗದಿಂದ ಲಜಪತರಿಗೆ ತಟ್ಟಿತು. ಅವರು ಕಾಂಗ್ರೆಸ್‌ನಿಂದ ಸಂಪೂರ್ಣವಾಗಿ ತಮ್ಮನ್ನು ತಾವು ತೊಡೆದು ಹಾಕಿಕೊಳ್ಳಲು ದೇಶಿಯವಾದಿಗಳೊಂದಿಗೆ ಕೈಜೋಡಿಸಲು ಮುಂದಾಗಲಿಲ್ಲ. ಅಲ್ಲದೆ ಅದೇ ಸಮಯದಲ್ಲಿ ತಾವು ಸೌಮ್ಯವಾದಿಗಳೊಂದಿಗೆ ಮಿಳಿತವಾದರೆ ಅವರು ನೆಮ್ಮದಿಯಿಂದಿರಲು ತಮ್ಮನ್ನು ಬಿಡುವುದಿಲ್ಲವೆಂದು ಅವರಿಗೆ ಗೊತ್ತಿತ್ತು. ರಾಜಕಾರಣ ಸದ್ಯದಲ್ಲೇ ಮರಣಾವಸ್ಥೆಯನ್ನು ಮುಟ್ಟಬಹುದೆಂಬ ಭಯವೂ ಅವರನ್ನು ಕಾಡತೊಡಗಿತು.

* * * * *

ಈ ಮಧ್ಯೆ ಇನ್ನೊಂದು ಮೂಲದಿಂದ ಅವರನ್ನು ತುರ್ತಾಗಿ ಆಪದ್ಭಾಂಧವ ಸೇವೆಗಾಗಿ ಕೈಬೀಸಿ ಕರೆಯತೊಡಗಿತು. ಅಂತಹ ಸೇವೆಯನ್ನು ಅವರು ಆಪ್ಯಾಯತೆಯಿಂದ ಅಪ್ಪಿಕೊಂಡಿದ್ದರೆಂಬುದನ್ನು ನಾವು ಈಗಾಗಲೇ ಓದಿದ್ದೇವೆ. ಕರೆ ಬಂದಾಕ್ಷಣ ಲಜಪತರು ಇನಿತೂ ಸಮಯ ಹರಣ ಮಾಡಲಿಲ್ಲ. 1906ರ ಆ ಅವಧಿಯಲ್ಲಿ ಪ್ಲೇಗ್ ಮಹಾಮಾರಿಯಾಗಿ ಆವರಿಸಿತ್ತು. ಅದರ ಬೆನ್ನಲ್ಲೇ ಅಂಟಿಕೊಂಡು ಬಂದಿತ್ತು ದುರ್ಭಿಕ್ಷ. ತನ್ನ ವಿಕೃತ ತಲೆಯನ್ನು ಚಾಚಿ ಹಿಂದೆಂದೂ ಕಂಡರಿಯದಂತಹ ಅನಾಹುತ ಉಂಟು ...ಡುವ ಘೋರ ಕರಿ ನೆರಳನ್ನು ಹಾಸತೊಡಗಿತ್ತು. ಅಂತಹ ಪ್ರಸಂಗಗಳಲ್ಲಿ ಲಜಪತರು ...ಸೀನರಾಗಲು ಸಾಧ್ಯವೇ ಇರಲಿಲ್ಲ. ರಾಜಕಾರಣದ ಆಗು ಹೋಗು ಅವರಿಗೆ ...ಾಗಿಯೂ ಇರಲಿಲ್ಲ. ಜೊತೆಗೆ ಜನಸಮುದಾಯದ ಸೇವೆಯ ಕಾರ್ಯಕ್ರಮವಿಲ್ಲದ ...ಜಕಾರಣ ಅವರಿಗೆ ಅರ್ಥಹೀನವೆನಿಸಿತ್ತು. ಅರ್ಥವಿಲ್ಲದ ಶುಷ್ಕ ಕಾರ್ಯದಲ್ಲಿ ತಮ್ಮೆಲ್ಲಾ ...ಯನ್ನು ವ್ಯರ್ಥ ಮಾಡಿಕೊಳ್ಳಲು ಅವರು ಇಷ್ಟಪಡಲಿಲ್ಲ. ಮುಂದಿನ ಕೆಲವು ತಿಂಗಳ ...ರ್ಣಂತ ಪರಿಹಾರ ಕಾರ್ಯಗಳಲ್ಲಿ ತಮ್ಮನ್ನು ತಾವು ಅವರು ಸಂಪೂರ್ಣವಾಗಿ ...ಡಗಿಸಿಕೊಂಡರು. ಸೂರತ್‌ನಲ್ಲಿ ಇದ್ದಾಗಲೇ ಈ ಬಗ್ಗೆ ಅವರು ನಿರ್ಣಯವನ್ನು ಕೈಗೊಂಡರು. ಆಗ ಅಲ್ಲಿ ನಡೆದ ಸ್ವದೇಶಿ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಕೊನೆಯಲ್ಲಿ ಹೀಗೆ ಹೇಳಿದರು,

''ದೇಶವು ಈಗ ಭೀಕರ ಬರಗಾಲದ ಕಪಿಮುಷ್ಟಿಯಲ್ಲಿದೆ. ಅಮಾಯಕರಾಗಿ ಗುಡಿಸಿಲುಗಳಲ್ಲಿ ಇರುವ ಜೀವಗಳ ಶೋಚನೀಯ ಸ್ಥಿತಿಯನ್ನು ನಿವಾರಿಸಲು ನಾವೀಗ

ಮುನ್ನುಗ್ಗಬೇಕೆಂದು ದೇಶ ಬಯಸುತ್ತಿದೆ. ಸರ್ಕಾರವೇನೋ ತನ್ನ ಕೆಲಸವನ್ನು ತಾನು ಮಾಡುತ್ತಿದೆ. ಅಥವಾ ಮಾಡುತ್ತಿರುವಂತೆ ತೋರಿಸಿಕೊಳ್ಳುತ್ತಿದೆ... ನಾವು ನಮ್ಮ ದಯನೀಯ ಸ್ಥಿತಿಯಲ್ಲಿರುವ ಜನರ ರಕ್ತದವರೇ ಆಗಿದ್ದು ಹಿಂದುಳಿಯಬೇಕೇನು? ನಾನೀಗ ನನ್ನ ಮಿತ್ರರಿಗೆ ಮತ್ತು ಸಹವರ್ತಿಗಳಿಗೆ ಕರೆ ಕೊಡುತ್ತಿದ್ದೇನೆ... ಅವರ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಿ ಎಂದು ಕೋರುತ್ತಿದ್ದೇನೆ... ದುರ್ಭಿಕ್ಷಪೀಡಿತ ಪ್ರದೇಶಗಳಲ್ಲಿ ಅಧಿಕಾರೇತರ ಬರ ಪರಿಹಾರ ಕಾರ್ಯಗಳನ್ನು ಸಂಘಟಿಸಲು ಕೈಜೋಡಿಸಬೇಕೆಂದು ಕೋರುತ್ತೇನೆ. ನನಗೆ ಗೊತ್ತು ಈ ಕೆಲಸ ಅಗಾಧವಾದದ್ದು. ಕಷ್ಟಕರವಾದದ್ದು. ಆದರೆ ಅದು ದೇಶಭಕ್ತಿಯ ಬದುಕಿಗೆ ಪೂರಕವಾಗುತ್ತದೆ. ಪರಿಣಾಮಕಾರಿ ಪ್ರಭಾವ ಬೀರುತ್ತದೆ. ಉಪಯುಕ್ತ ಸೇವೆ ಎನಿಸುತ್ತದೆ...''

ನೇವಿನ್‌ಸನ್ ಹೀಗೆ ದಾಖಲು ಮಾಡಿದ್ದಾರೆ.

''ಆಗ ಅವರು ತೋರಿದ ಆ ಶಕ್ತಿ ಅವರ ನಡವಳಿಕೆಯನ್ನು ಪ್ರತಿಪಾದಿಸಿತು. ಕೇವಲ ಜನಪ್ರಿಯತೆಯತ್ತ ಅವರಿಗಿದ್ದ ಔದಾಸೀನ್ಯವನ್ನು ಎತ್ತಿ ಹಿಡಿಯಿತು. ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ಇಬ್ಭಾಗವಾದ ಮೇಲೆ ಅವರು ತಮ್ಮ ಸಹನೆಯನ್ನು ಸೌಮ್ಯವಾದಿಗಳಿಗೆ ತೋರಗೊಟ್ಟರು. ಹಳೆಯ ಧ್ವಜದಡಿಯಲ್ಲಿ ನಿಂತು ಹೋರಾಡುವುದಾಗಿ ಘೋಷಿಸಿದರು... ಕಾಲದ ಉರುಳಿನ ವಿಚಿತ್ರ ಗಂಭೀರವಾದದ್ದು. ಕಾಂಗ್ರೆಸ್ ಅಳಿದು ಹೋದಾಗ ಲಜಪತರು ಸೂರತ್‌ನಲ್ಲಿ ಬೆಳಗಿದರು. ಸಾಮಾಜಿಕ ಮತ್ತು ಸ್ವದೇಶಿ ಸಮ್ಮೇಳನಗಳನ್ನು ನಡೆಯಿಸಿದರು. ದುರ್ಭಿಕ್ಷ ಪರಿಹಾರ ನಿಧಿಯನ್ನು ಸಂಘಟಿಸಿದರು. ಏನೂ ಆಗಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಮಾನವ ಸೇವೆಯಲ್ಲಿ ಅವರು ತಮ್ಮನ್ನು ತಾವು ಲೀನ ಮಾಡಿಕೊಂಡರು.''*

ನೇವಿನ್‌ಸನ್, ಸೂರತ್ ವಿದ್ಯಮಾನವನ್ನು ಕಣ್ಣಾರೆ ಕಂಡವರು. ಆ ನಗರದಲ್ಲಿ ಅತ್ಯಂತ ಸಮೀಪದಿಂದ ಲಜಪತರನ್ನು ನೋಡಿದವರು. ಅವರು ಮುಂದುವರೆದು ಬರೆದಿದ್ದಾರೆ,

''...ಅವರ ಪರುಷ ಮತ್ತು ಉದಾತ್ತ ಬದುಕು ಅವರಿಗೆ ಬದುಕಿನ ಯಶಸ್ಸು ತಂದು ಕೊಟ್ಟಿತು. ಆ ಯಶಸ್ಸನ್ನು ಅವರು ಬಡವರ ಸೇವೆ ಮತ್ತು ಮಾನವತೆಯ ಪ್ರದರ್ಶನದಲ್ಲಿ ಸಾಧಿಸಿಕೊಂಡರು... ತಮ್ಮ ಜನರೇ ಎಸಗುವ ತಪ್ಪುಗಳನ್ನು ತಮ್ಮ ಮೇಲೆ ಎರಗಿಸಿಕೊಂಡ ಪುಣ್ಯಾತ್ಮನ ವರ್ಗಕ್ಕೆ ಸೇರಿದವರು ಲಜಪತರು. ಸಹಜವಾಗಿ ರಾಜಕೀಯದಿಂದ ವಿಮುಖರಾಗಿ ಅವರು ತಮ್ಮ ಸೇವೆಯನ್ನು ಗಹನವಾದ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಸರ್ಕಾರದ ಒಳಿತು ಕೆಡಕುಗಳಿಂದ ಹೊರತಾದ ಸೇವೆ ಅದು. ಆಗಿನ್ನೂ ಅವರ ವಯಸ್ಸು ಸುಮಾರು 40. ಆ ಪ್ರಾಯದಲ್ಲೇ ನಿರ್ಣಾಯಕವಾದ

---

* ಅದೇ ಪುಸ್ತಕದ ಪುಟ. 296.

** ಅದೇ. ಪುಸ್ತಕದ ಪುಟ 295-96.

ಮಾರ್ಪಾಟು ಅವರಲ್ಲಾಗಿತ್ತು. ನಿಜ. 1888ರಲ್ಲಿ ಅವರು ಕಾಂಗ್ರೆಸ್ ಆಂದೋಲನದಲ್ಲಿ ಸೇರಿದರು. ಆ ಸಂಘಟನೆ ಹುಟ್ಟಿ ಆಗ್ಗೆ ಎರಡು-ಮೂರು ವರ್ಷವಾಗಿತ್ತಷ್ಟೇ. ಕಾಂಗ್ರೆಸ್‌ನ್ನು ಅವರು ಟೀಕಿಸಿದಷ್ಟು ಟೀಕಿಸಿದವರು ಯಾರೂ ಇಲ್ಲ. ಅದರ ನಡವಳಿಕೆ, ರೀತಿ ರಿವಾಜು, ರಚನೆ, ಕಾರ್ಯ ವಿಧಾನ ಬಡವರಿಂದ ದೂರವಾಗಿ ಉಳಿಯುವ ಪರಿ ಭಾರತದ ಬಗ್ಗೆ ಅವಜ್ಞೆ ಅವರ ಭಾಷಣಗಳಲ್ಲಿ ಇರುತ್ತಿದ್ದ ವಿಶ್ವಾಸರಹಿತ ಧೋರಣೆ, ರಾಜಕೀಯ ತಪ್ಪುಗಳನ್ನು ಸರಿಪಡಿಸಲು ಸಾಧ್ಯವಿಲ್ಲದಂತಹ ಅದರ ಪರಿಸ್ಥಿತಿಗಳನ್ನು ಲಜಪತರು ಹಿಗ್ಗಾಮುಗ್ಗಾ ಖಂಡಿಸುತ್ತಿದ್ದರು.''

ನೇವಿನ್‌ಸನ್‌ರು, ''ಲಜಪತರನ್ನು ಓರ್ವ ಅನುಕಂಪದ, ಶಾಂತ, ಸ್ಪಷ್ಟ ನಿರ್ಧಾರದ ವ್ಯಕ್ತಿ. ಹೆಸರಿಗಾಗಿ, ಕೀರ್ತಿಗಾಗಿ ಕೆಲಸಗಳನ್ನು ಮಾಡದಿದ್ದ ದ್ರಷ್ಟಾರ'' ಎಂದು ಬಣ್ಣಿಸಿದ್ದಾರೆ.*

ತಮ್ಮ ಅಭಿಮತವನ್ನು ಕ್ರೋಢಿಕರಿಸುತ್ತಾ ಅವರು, ''ಸರ್ಕಾರವು ಮಾಡಲು ಅಸಾಧ್ಯವಾದ ಕೆಲಸಗಳನ್ನು ಅವರು ಮಾಡಿದರು. ಭಾಷಣಗಳಿಂದ ತುಂಬಲಾರದ ಸಾಧನೆಗಳನ್ನು ಅವರು ಮಾಡಿ ತೋರಿಸಿದರು. ಅವರ ಬದುಕೆಲ್ಲಾ ಸೇವೆ ಸಾಧನೆಯ ಆಗರವಾಗಿತ್ತು.'' ಎಂದು ಹೇಳಿದ್ದಾರೆ.**

* * *

---

* ಅದೇ ಪುಸ್ತಕದ ಪುಟ. 302.

** ಅದೇ ಪುಸ್ತಕದ ಪುಟ. 296.

ಅಧ್ಯಾಯ-32

ಸೂರತ್ ಬೆಳವಣಿಗೆ ತರುವಾಯ

ಸೂರತ್ ಘಟನೆಗಳು ಕಾಂಗ್ರೆಸ್ ಸಂಘಟನೆಯನ್ನು ಎರಡು ತುಂಡುಗಳಾಗಿ ಸೀಳಿದವು. ತಮಗೆ ಭಿನ್ನರಾಗಿಯೇ ಕಂಡು ಬಂದ ಬಣದವರಿಗೆ ಆಶ್ಚರ್ಯವೋ ಎನ್ನುವಂತೆ, ತಮ್ಮನ್ನು ತಮ್ಮ ನಾಯಕರೆಂದು ಪರಿಗಣಿಸಿದ ಅಭಿಮಾನಿ ವಲಯದ ಬಹುತೇಕ ಜನರಿಗೆ ಹತಾಶೆಯೋ ಎನ್ನುವಂತೆ 'ಹಳೆಯ ಧ್ವಜದಡಿಯಲ್ಲಿ ಹೋರಾಟ ಮುಂದುವರೆಸುತ್ತೇನೆ' ಎಂದು ಲಜಪತರು ಬಹಿರಂಗವಾಗಿ ಘೋಷಿಸಿದರು. ಆ ಧ್ವಜವನ್ನು ಸಂಪೂರ್ಣವಾಗಿ ಸೌಮ್ಯವಾದಿಗಳು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಅವರು ಕಾಂಗ್ರೆಸ್‌ನಿಂದ ಬೇರ್ಪಟ್ಟವರ ಸಹವಾಸ ತೊರೆದರು. ವಸ್ತುತಃ ಅವರ ರಾಜಕೀಯ ಕಟ್ಟುಪಾಡುಗಳು ಬೇರ್ಪಟ್ಟವರ ನಿಲುವು ಧೋರಣೆಗಳೊಂದಿಗೆ ಹೆಚ್ಚು ತಾದ್ಯಾತ್ಮ ಹೊಂದಿತ್ತು. ಕಾಂಗ್ರೆಸ್ ಪಕ್ಷವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದವರ ಸಿದ್ಧಾಂತಕ್ಕೂ ಲಜಪತರ ನಂಬಿಕೆ, ಧೋರಣೆಗಳಿಗೂ ತಾಳೇ ಇರಲೇ ಇಲ್ಲ. ಸೂರತ್ ಅಧಿವೇಶನ ಮುಗಿದ ನಂತರ ಸೌಮ್ಯವಾದಿ ನಾಯಕರು ಸಂಯೋಜಿಸಿದ ಅಧಿವೇಶನದಲ್ಲಿ ಪಾಲ್ಗೊಳ್ಳುವ ಮೂಲಕ ಅವರು ಬಹಿರಂಗವಾಗಿ ಸೌಮ್ಯವಾದಿ ಹಣೆಪಟ್ಟಿಯನ್ನು ಕಟ್ಟಿಕೊಂಡಂತಾಯಿತು.

ವಾಸ್ತವಿಕದಲ್ಲಿ ಆ ಸೌಮ್ಯವಾದಿಗಳ ಮಧ್ಯದಲ್ಲಿದ್ದು ಕೊಂಡೇ ಲಜಪತರು ರಾಷ್ಟ್ರೀಯವಾದಿಗಳ ಧ್ಯೇಯೋದ್ದೇಶಗಳನ್ನು ಜಾರಿಗೆ ತರಲು ಒತ್ತಾಯ ಪಡಿಸತೊಡಗಿದರು. ಅನಿರೀಕ್ಷಿತವಾದ ಬೆಳವಣಿಗೆಯಿಂದಾಗಿ ಲಜಪತರ ಗೌರವಪ್ರದ ಜನಪ್ರಿಯತೆಗೆ ಕಿಂಚಿತ್ತೂ ಧಕ್ಕೆಯಾಗಲಿಲ್ಲ. ಸೂರತ್ ಕಾಂಗ್ರೆಸ್ ಅಧಿವೇಶನದ ನಂತರ ಅವರು ಕೈಗೊಂಡ ಭಾರತಾದ್ಯಂತ ಪ್ರವಾಸದಲ್ಲಿ ವ್ಯಕ್ತವಾದ ಜನಪ್ರಿಯತೆ ಅದನ್ನು ಸಾದರಪಡಿಸಿತು. ಆದರೂ ರಾಜಕೀಯ ನೇತಾರರ ಒಂದು ವರ್ಗದಲ್ಲಿ ಅವರ ಎಣಿಕೆ ಗೌಣವಾಯಿತು. ಸೌಮ್ಯವಾದಿಗಳಿಗೆ ಹೆಚ್ಚು ಕಾಲ ಲಜಪತರನ್ನು ತಮ್ಮಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಮನವರಿಕೆಯಾಗಿತ್ತು. ಸೌಮ್ಯವಾದದಲ್ಲೇ ತಮ್ಮತನವನೆಲ್ಲವನ್ನು ತೊಡಗಿಸಲು ಸ್ವತಃ ಲಜಪತರು ಬಯಸಿರಲಿಲ್ಲ. ದೇಶಿಯವಾದಿಗಳಲ್ಲಿ ಅವರು ತಮ್ಮನ್ನು ಕೈಬಿಟ್ಟರೆಂಬ ಸಿಟ್ಟು ಎದ್ದು ಕಾಣುತ್ತಿತ್ತು. ಒಟ್ಟಿನಲ್ಲಿ ಲಜಪತರ ರಾಜಕೀಯ ಸ್ಥಿತಿ ಡೋಲಾಯಮಾನವಾಯಿತು.

ತಮ್ಮ ವಿರುದ್ಧ ಹೊರಿಸಲಾದ 'ಕೈಬಿಟ್ಟ' ಆರೋಪವನ್ನು ಅವರು ಅಷ್ಟಾಗಿ ಹಚ್ಚಿಕೊಂಡಂತೆ ಕಾಣಲಿಲ್ಲ. ನಿಜವಾಗಿ ಹೇಳುವುದಾದರೆ ಅತಿ ಸೂಕ್ಷ್ಮ ಸ್ವಭಾವಿಯಾದ, ನಿಷ್ಠಾಪರರಾದ ಅಂತಹವರು ಅಂತಹ ಆರೋಪವನ್ನು ಸಹಜವಾಗಿ ಹಚ್ಚಿಕೊಳ್ಳುತ್ತಾರೆ. ಲಜಪತರು ತಮ್ಮ ಧ್ಯೇಯೋದ್ದೇಶಗಳ ಗುರಿಯನ್ನು ಸ್ಪಷ್ಟವಾಗಿ ಅರಿತಿದ್ದರಿಂದ ಅಂತಹ ಆರೋಪಕ್ಕೆ ಮಣಿಯಲಿಲ್ಲ. ಇನ್ನೂ ಹೆಚ್ಚಿನದಾಗಿ ಕಾಂಗ್ರೆಸ್ ಮನಸ್ಥಿತಿಯನ್ನು ಹೊಂದಿದ್ದ ಪಂಜಾಬ್ ಅವರ ಬೆಂಬಲಕ್ಕೆ ಭುಜಕೊಟ್ಟು ನಿಂತಿತ್ತು. ಧೂನಿಚಂದ್, ರಾಮ್‌ಭಜ್

ದತ್, ಹರಿಕಿಷನ್ ಲಾಲ್ ಹಾಗೂ ಇತರೆ ಪಂಜಾಬ್ ಕಾಂಗ್ರೆಸಿಗರು ಸೌಮ್ಯವಾದಿಗಳ ಜೊತೆ ತಮ್ಮನ್ನು ಗುರುತಿಸಿಕೊಳ್ಳದೆಯೇ ಅವರು ಕರೆದಿದ್ದ ಸಭೆಗಳಲ್ಲಿ ಪಾಲ್ಗೊಂಡಿದ್ದರು. ಲಜಪತರ ಪ್ರಾಂತ್ಯದಲ್ಲೇ ಅವರನ್ನು ಟೀಕಿಸುತ್ತಿದ್ದವರು ತೀರಾ ಭಿನ್ನವರ್ಗಕ್ಕೆ ಸೇರಿದವರು. ಹರದಯಾಳ್ ಅಂತಹವರಲ್ಲಿ ಒಬ್ಬರು. ಮುಂದೆ ಅದೇ ಹರದಯಾಳ್ ವೈವಿಧ್ಯದ ನಂಬಿಕೆಗಳ ಸಂದೇಶಕಾರರಾಗಿ ಯಾವುದೇ ಬಣಕ್ಕೆ ಅಂಟಿಕೊಳ್ಳದಿದ್ದನ್ನು ಕಾಣಬಹುದು. ಬೆಳವಣಿಗೆಗಳು ಹೇಗೆ ಆದರೂ ಲಜಪತರು ಮಾತ್ರ ರಾಜಿ ಮಾಡಿಕೊಳ್ಳಲಿಲ್ಲ. ತಾರ್ಕಿಕವಾಗಿ ಅವರು ಇಡೀ ಕಾಂಗ್ರೆಸ್ ನೀತಿಯನ್ನು ಖಂಡಿಸಿದರು. ಚರಿತ್ರೆಯಲ್ಲಿ ಸೌಮ್ಯವಾದಿಗಳು ನಡೆದುಕೊಂಡ ಸಣ್ಣತನಗಳು ಸಾಕಷ್ಟು ಕಂಡು ಬರುತ್ತವೆ.

ಸೂರತ್ ಅಧಿವೇಶನದಲ್ಲಿ ಪಂಜಾಬ್‌ನ ಕಾಂಗ್ರೆಸ್ ಸಮೂಹ ಪಾಲ್ಗೊಂಡಿತ್ತು. ಸೌಮ್ಯವಾದಿಗಳೆಂದು ಪರಿಗಣಿಸಲಾದ ಕಾಂಗ್ರೆಸ್ಸಿಗರು ಬಹುಸಂಖ್ಯೆಯಲ್ಲಿ ಇತರ ರಾಜ್ಯಗಳಿಂದಲೂ ಈ ಅಧಿವೇಶನಕ್ಕೆ ಬಂದಿದ್ದರು. ಅಂತಹವರಲ್ಲಿ ಮೋತಿಲಾಲ್ ಘೋಷ್ ಮತ್ತು ಅಶ್ವಿನಿಕುಮಾರ್ ದತ್ತ ಸೇರಿದ್ದರು. ಇನ್ನೂ ಅನೇಕ ಕಟ್ಟಾ ದೇಶಿಯವಾದಿಗಳು ಅಧಿವೇಶನದಲ್ಲಿ ಪಾಲ್ಗೊಳ್ಳಲು ಬಯಸಿದ್ದರಾದರೂ ಸೌಮ್ಯವಾದಿ ಬಣದ ಸಂಚಾಲಕರು ಆಹ್ವಾನ ಇಲ್ಲವೆಂಬ ಕಾರಣದ ಮೇಲೆ ಅವರನ್ನು ಹಿಂದಕ್ಕೆ ಕಳುಹಿಸಿದರು. 1908ರ ಎಪ್ರಿಲ್‌ನಲ್ಲಿ ಅಲಹಾಬಾದ್‌ನಲ್ಲಿ ಮತ್ತೆ ಕಾಂಗ್ರೆಸ್ ಅಧಿವೇಶನ ಸೇರಿದಾಗಲೂ ಸೌಮ್ಯವಾದಿಗಳೆನಿಸಿದ ಉತ್ತರ ಪ್ರದೇಶದ ಪುರುಷೋತ್ತಮ ದಾಸ್ ಟಂಡನ್, ಬಿಹಾರದ ದೀಪ್ ನಾರಾಯಣ ಸಿಂಗ್ ಮುಂತಾದವರಿದ್ದರು.

ಸೂರತ್ ಅಧಿವೇಶನವು ರಾಸ್ ಬಿಹಾರಿ ಘೋಷ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತಾದರೂ ಅತಿ ಶೀಘ್ರದಲ್ಲೇ ಅದನ್ನು ಸುರೇಂದ್ರನಾಥ ಬ್ಯಾನರ್ಜಿ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಸಮ್ಮೇಳನವಾಗಿ ಪರಿವರ್ತಿಸಲಾಯಿತು. ಸಂಕ್ಷಿಪ್ತ ಅಧಿವೇಶನದಲ್ಲಿ ಅದು ಅನೇಕ ಗೊತ್ತುವಳಿಗಳನ್ನು ಅಂಗೀಕರಿಸಿತು. ಸ್ವಯಂ ಆಡಳಿತ, ಸ್ವದೇಶಿ, ಇಬ್ಭಾಗ ಬಹಿಷ್ಕಾರ ಮತ್ತು ದೇಶಿಯ ಶಿಕ್ಷಣ ಆ ನಿರ್ಣಯಗಳಲ್ಲಿ ಪ್ರಮುಖವೂ, ವಿವಾದಾತ್ಮಕವೂ ಎನಿಸಿದ ನಾಲ್ಕು ವಿಧಿಗಳೆನಿಸಿದವು. ಇನ್ನೊಂದು ನಿರ್ಣಯದಲ್ಲಿ ದೇಶೋಚ್ಚಾಟನೆಯನ್ನು ಪ್ರಮುಖ ವಿಷಯವಾಗಿ ಮಾಡಿಕೊಳ್ಳಲಾಯಿತು. ಅದರಲ್ಲಿ,

''(ಅ). ಬೇರೆ ಬೇರೆ ಕಾಲಕ್ಕೆ, ಬೇರೆ ಬೇರೆ ವರ್ಗಗಳ ಜನರ ವಿರುದ್ಧ ಬಳಸಲು ಮತ್ತು ಸಂಪೂರ್ಣವಾಗಿ ಬ್ರಿಟಿಷ್ ಆಡಳಿತದ ಸ್ಥಾಪಿತ ಪರಂಪರೆಗೆ ವಿರುದ್ಧವಾದ ಕಾಯ್ದೆಯನ್ನು ಬಳಸಿ ಶಾಂತಿ ಮತ್ತು ನೆಮ್ಮದಿಯ ಕಾಲದಲ್ಲಿ ಲಜಪತ್‌ರಾಯ್ ಮತ್ತು ಸರ್ದಾರ ಅಜಿತ್‌ಸಿಂಗ್ ಅವರನ್ನು ಬಂಧಿಸಿ ಯಾವುದೇ ವಿಚಾರಣೆ ಇಲ್ಲದೆ, ಅವರ ನಿರಪರಾಧಿತನವನ್ನು ಸ್ಥಿರಪಡಿಸಲು ಯಾವುದೇ ಅವಕಾಶವನ್ನು ನೀಡದೆ ಐವರನ್ನು ದೇಶೋಚ್ಚಾಟನೆ ಮಾಡಿದ್ದನ್ನು ಈ ಸಮ್ಮೇಳನ ಕಟುವಾಗಿ ಖಂಡಿಸಿ ಇಲ್ಲಿ ದಾಖಲೆ ಮಾಡಿದೆ.

(ಆ). ಪ್ರಸ್ತುತ ಲಾಲಾ ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್ ಅವರಿಗೆ ಅವರ ಸ್ವಾತಂತ್ರ್ಯವನ್ನು ಮರಳಿಸಲಾಗಿದೆ. ಅವರ ವಿರುದ್ಧ ಕಳೆದ ಮೇ ತಿಂಗಳಲ್ಲಿ

ಸರ್ಕಾರವು ಯಾವ ಕಾರಣದ ಮೇಲೆ ಆಕ್ರಮ ಜರುಗಿಸಿತು ಎಂಬುದರ ಆಧಾರವನ್ನು ಈ ಕೂಡಲೇ ಬಹಿರಂಗಪಡಿಸಬೇಕು ಎಂದು ಈ ಸಮ್ಮೇಳನ ತೀವ್ರ ಒತ್ತಾಯ ಮಾಡುತ್ತದೆ.

(೧). 1818ರ ನಿಯಂತ್ರಣ ಕಾಯ್ದೆ ಮತ್ತು ಅದನ್ನೇ ಹೋಲುವ ಇತರ ಕಾಯ್ದೆಗಳು ಜವಾಬ್ದಾರಿಹೀನ ಆಡಳಿತಾಧಿಕಾರಿಗಳ ಕೈಯಲ್ಲಿ ಅಪಾಯಕಾರಿ ರೀತಿಯಲ್ಲಿ ಬಳಕೆಯಾಗುತ್ತಿರುವ ವಾಸ್ತವಿಕ ಸಂಗತಿಗಳ ಹಿನ್ನಲೆಯಲ್ಲೂ ಮತ್ತು ಅಮಾಯಕ ಜನರ ಸ್ವಾತಂತ್ರ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿರುವುದರಿಂದಲೂ ಅಂತಹ ನಿಯಂತ್ರಣ ಕಾಯ್ದೆಗಳನ್ನು ಕೂಡಲೇ ರದ್ದು ಪಡಿಸಬೇಕೆಂದು ಈ ಸಮ್ಮೇಳನ ಆಗ್ರಪಡಿಸುತ್ತದೆ.''

ಆ ಸಮ್ಮೇಳನವು ಪ್ರಾಂತೀಯ ಕಾರ್ಯದರ್ಶಿಗಳನ್ನು ನೇಮಕ ಮಾಡಿತು. ಪಂಜಾಬಿಗೆ ಲಾಲಾ ಲಜಪತ್‌ರಾಯ್ ಮತ್ತು ಹರ್‌ಕಿಷನ್ ಲಾಲ್ ಅವರನ್ನು ಆಯ್ಕೆ ಮಾಡಲಾಯಿತು. ಆ ಅಧಿವೇಶನವು ಮುಂದಿನ ಎಪ್ರಿಲ್ ತಿಂಗಳಿನಲ್ಲಿ ಅಲಹಾಬಾದ್‌ನಲ್ಲಿ ಮತ್ತೆ ಸಭೆ ಸೇರಿತು. ಅದಕ್ಕೆ ಮೊದಲು ಕಲ್ಕತ್ತಾದಲ್ಲಿ ಭಾಷಣ ಮಾಡಿದ್ದ ಬಿಪಿನ್ ಚಂದ್ರಪಾಲ್ ಕಾಂಗ್ರೆಸ್‌ನಲ್ಲಿ ಸಾಮರಸ್ಯ ಸಾಧಿಸಲು ರಾಷ್ಟ್ರೀಯವಾದಿಗಳ ಷರತ್ತೊಂದನ್ನು ಪ್ರಕಟಿಸಿದ್ದರು. ಮುಂದೂಡಲ್ಪಟ್ಟಿರುವ ಕಾಂಗ್ರೆಸ್ ಅಧಿವೇಶನವನ್ನು ರಾಸ್ ಬಿಹಾರಿ ಘೋಷ್ ಅವರ ಅಧ್ಯಕ್ಷತೆಯಲ್ಲೇ ಮತ್ತೆ ಕರೆಯಬೇಕು. ಹಿಂದಿನ ಅಧಿವೇಶನದಲ್ಲಿ ಅಷ್ಟೊಂದು ವಿವಾದಕ್ಕೆ ಕಾರಣಗಳನ್ನು ಮತ್ತೆ ಕೆಣಕಬಾರದು. ಈ ಷರತ್ತುಗಳನ್ನು ಒಪ್ಪಿಕೊಂಡಿದ್ದೇ ಆದರೆ ದೇಶಿಯವಾದಿಗಳು ಕಾಂಗ್ರೆಸ್‌ಗೆ ಮರಳಲು ಇಷ್ಟಪಡುತ್ತಾರೆ ಎಂದು ಅವರು ಸಾರಿದರು.

ಸೂರತ್ ಅಧಿವೇಶನದಲ್ಲಿ ಡಾ. ಘೋಷ್ ಅಧ್ಯಕ್ಷತೆಯನ್ನು ಮಾನ್ಯ ಮಾಡಲು ದೇಶಿಯವಾದಿಗಳು ಒಪ್ಪಿರಲಿಲ್ಲ. ವಿಧ್ಯುಕ್ತವಾಗಿ ಅವರು ಆಯ್ಕೆಯಾದರೂ ಅದನ್ನು ತಿರಸ್ಕರಿಸಲಾಗಿತ್ತು. ಆ ಚುನಾವಣೆ ನಿಯತವಾಗಿ ನಡೆಯಲಿಲ್ಲವೆಂಬ ಧೋರಣೆ ದೇಶಿಯವಾದಿಗಳಲ್ಲಿ ಪ್ರಬಲವಾಗಿದ್ದರೂ ರಾಜಿಯ ಹಿತದೃಷ್ಟಿಯಿಂದಲೂ, ಸೌಮ್ಯವಾದಿಗಳು ತಮ್ಮ ಪಟ್ಟನ್ನು ಸಡಿಲಿಸಲಿ ಎಂಬ ಕಾರಣದಿಂದಲೂ ಪಾಲರು ಡಾ. ಘೋಷ್ ಅವರ ಆಯ್ಕೆಯನ್ನು ಮಾನ್ಯ ಮಾಡಲು ಸಮ್ಮತಿಸಿದ್ದರು. ದೇಶಿಯವಾದಿಗಳ ಈ ಷರತ್ತನ್ನು ಒಪ್ಪಿಕೊಳ್ಳುವಂತೆ ಮಾಡಲು ಅಧಿವೇಶನದಲ್ಲಿ ಲಜಪತರು ಇತರರೊಂದಿಗೆ ಬಹುವಾಗಿ ಶ್ರಮಿಸಿದರು. ಆದರೆ ದೇಶಿಯವಾದಿಗಳು ಕಾಂಗ್ರೆಸ್ಸಿಗೆ ಮರಳುವ ಬಗ್ಗೆ ಸೌಮ್ಯವಾದಿಗಳು ಒಲವು ತೋರಿಸಲಿಲ್ಲ. ಗೋಖಲೆಯವರಿಗೇನೋ ಕಾಂಗ್ರೆಸ್ ವಿಭಜನೆ ಬೇಕಾಗಿರಲಿಲ್ಲ. ಆದರೆ ಅವರಿಗೆ ಶಾಂತಿ ಬೇಕಾಗಿತ್ತು. ದೇಶಿಯವಾದಿಗಳೊಂದಿಗೆ ಕೆಲಸ ಮಾಡುವುದೆಂದರೆ ಕಾಂಗ್ರೆಸ್ ಪಾಲಿಗೆ ಸಮನ್ವಯದ ಸ್ವರ್ಗವಾಗಲಾರದೆಂದು ಅವರು ಭಾವಿಸಿದ್ದರು. ಸೌಮ್ಯವಾದಿಗಳ ಬಹುತೇಕ ನಾಯಕರಿಗೆ ರಾಷ್ಟ್ರೀಯವಾದಿಗಳನ್ನು ದೂರವಿರಿಸುವುದು ಬೇಕಾಗಿತ್ತು. ಅದರಿಂದ ರಾಜಕೀಯ ಆಂದೋಲನ ದುರ್ಬಲಗೊಂಡರೂ ಪರವಾಗಿಲ್ಲವೆಂಬ ಭಾವನೆ ಅವರದಾಗಿತ್ತು

ಅಲಹಾಬಾದ್ ಅಧಿವೇಶನದಲ್ಲಿ ಮರು ಹೊಂದಾಣಿಕೆಗೆ ನಡೆದ ಪ್ರಯತ್ನಕ್ಕೆ ಸೌಮ್ಯವಾದಿ ನಾಯಕರಿಂದ ಬೆಂಬಲವಾಗಲಿ , ಅನುರಕ್ತಿಯಾಗಲಿ ಸಿಗಲಿಲ್ಲ. ಗೋಖಲೆ ಅವರು ಅಧಿವೇಶನದಲ್ಲಿ ಮಂಡಿಸಿದ ತಿದ್ದುಪಡಿಯಲ್ಲಿ ಈ ಬಗ್ಗೆ ಪ್ರಸ್ತಾಪ ಇಲ್ಲದ್ದನ್ನು ಕಂಡು ಸರ್ ಫಿರೋಜ್ ಷಹ ಮೆಹ್ತಾ ಸಿಟ್ಟಿಗೆದ್ದರು. ಅವರು ತತ್ಸಂಬಂಧದಲ್ಲಿ ಬೆದರಿಕೆಯನ್ನು ಹಾಕಿದರು.

ಕಾಂಗ್ರೆಸ್ ಐಕ್ಯತೆ ಕುರಿತಂತೆ, ಅತ್ತ ಸೌಮ್ಯವಾದಿ ನಾಯಕರು ಬಿಪಿನ್ ಚಂದ್ರ ಪಾಲ್ ಸೂಚಿಸಿದ ಪ್ರಸ್ತಾಪವನ್ನು ತಿರಸ್ಕರಿಸಿದರು. ಆ ಸೂಚನೆ ಕಾಂಗ್ರೆಸ್‌ನಿಂದ ಬೇರ್ಪಟ್ಟವರು ಸೂಚಿಸಿದ ರೀತಿಯಲ್ಲೇನೂ ಇರಲಿಲ್ಲ. ಸೂರತ್‌ನಲ್ಲಿ ಅಧಿಕೃತ ಪಕ್ಷವೇ ಕೈಗೊಂಡ ನಿಲುವಿಗೆ ಪೂರಕವಾಗಿ ನಿರೂಪಣೆ ಇತ್ತು. ಆದರೂ ಸೌಮ್ಯವಾದಿ ಕಾಂಗ್ರೆಸ್ ಮುಖಂಡರು ಅದನ್ನು ಮಾನ್ಯ ಮಾಡಲಿಲ್ಲ. ಅಧಿಕೃತ ಪಕ್ಷಕ್ಕೆ ದೇಶಿಯವಾದಿಗಳು ಮರಳುವುದು ಸುತರಾಂ ಇಷ್ಟವಿರಲಿಲ್ಲವೆಂಬುದು ಈ ಪ್ರಕರಣದಿಂದ ರುಜುವಾತಾಯಿತು.

ಆ ಅಧಿವೇಶನದಲ್ಲಿ ಸೌಮ್ಯವಾದಿಗಳು ತಮ್ಮದೇ ಆದ ರೀತಿಯಲ್ಲಿ ಕಲಾಪಗಳನ್ನು ನಡೆಸಲು ನಿಶ್ಚಯಿಸಿದ್ದು ಕಂಡು ಬಂದಿತು. ಸೂರತ್ ಅಧಿವೇಶನದಲ್ಲಿ ತಾವೇ ಆಯ್ಕೆ ಮಾಡಿದ್ದ ಡಾ. ಘೋಷ್ ಅವರಿಗೆ ಆ ಅಧಿವೇಶನದ ಅಧ್ಯಕ್ಷತೆ ವಹಿಸುವಂತೆ ಕೋರುವ ಬದಲಾಗಿ ಅದರ ಕಾರ್ಯ ಕಲಾಪಗಳನ್ನು ನಡೆಸುವ ಅಧಿಕಾರವನ್ನು ಗೋಖಲೆ ಮತ್ತು ವಚ್ಚ ಅವರಿಗೆ ವಹಿಸಲಾಯಿತು. ಅಧಿವೇಶನವನ್ನೇ ಹೊಸದೆಂದು, ಪ್ರತ್ಯೇಕವಾದದ್ದೆಂದು ಸಾರಲಾಯಿತು. ದೇಶಿಯವಾದಿಗಳ ಬಯಕೆಯಂತೆ ಮುಂದುವರೆದ ಅಧಿವೇಶನದ ಸಮಾವೇಶವಿದು ಎನ್ನುವ ಪ್ರಸ್ತಾಪವನ್ನು ಎ. ಚೌಧರಿ ಮಂಡಿಸಿದರು. ಅದನ್ನು ಲಜಪತ್‌ರಾಯ್ ಬೆಂಬಲಿಸಿದರು. ಆದರೆ ಸೌಮ್ಯವಾದಿ ನಾಯಕರು ಆ ಪ್ರಸ್ತಾಪವನ್ನು ವಿರೋಧಿಸಿದರು. ಅಧಿವೇಶನ ಹೊಸದೆನ್ನುವ ತಮ್ಮದೇ ಪ್ರಸ್ತಾಪ ಮಂಡಿಸಿದರು. ಅದು ಅಂಗೀಕೃತವಾಗುವಂತೆಯೂ ನೋಡಿಕೊಂಡರು. ಲಜಪತರು ಆ ವಿದ್ಯಮಾನಕ್ಕೆ ಅಷ್ಟೇನೂ ಬೆಲೆ ಕೊಡಲಿಲ್ಲ. ಹಿಂದಿನ ಅಧಿವೇಶನವನ್ನು ಮುಂದುವರೆದ ಅಧಿವೇಶನವೆಂದು ಕರೆಯುವುದಾಗಲಿ ಅಥವಾ ಹೊಸ ಅಧಿವೇಶನ ಎನ್ನುವುದಾಗಲಿ ಕೇವಲ ನಾಮ ಮಾತ್ರ ವ್ಯವಸ್ಥೆ ಎಂದೂ, ತಾಂತ್ರಿಕ ಚರ್ಚೆಗೆ ಅದರಿಂದ ಯಾವುದೇ ಪರಿಣಾಮವಾಗದೆಂದು ಅವರು ಭಾವಿಸಿದರು. ಆದರೆ ತಾವು ಅಂದುಕೊಂಡ ರೀತಿಯಲ್ಲಿ ದೇಶಿಯವಾದಿಗಳಿಗೆ ಮನವರಿಕೆ ಮಾಡಿಕೊಡಲು ಅವರು ವಿಫಲಗೊಂಡರು. ಒಂದು ವೇಳೆ ಅವರ ಚಿಂತನೆಗೆ ಅನುಗುಣವಾಗಿ ದೇಶಿಯವಾದಿಗಳು ನಡೆದುಕೊಂಡಿದ್ದಿದ್ದರೆ ಅವರು ಮತ್ತೆ ಕಾಂಗ್ರೆಸ್ ತೆಕ್ಕೆಗೆ ಸೇರಿಕೊಳ್ಳಬಹುದಾಗಿತ್ತೇನೋ? ತಾಂತ್ರಿಕ ಕಾರಣದಿಂದ ಅತೀತವಾಗಿ ನಡೆದುಕೊಳ್ಳಲು ದೇಶಿಯವಾದಿಗಳು ಒಪ್ಪಲಿಲ್ಲ. ಅತ್ತ, ಸೌಮ್ಯವಾದಿಗಳು ತಮ್ಮ ನಿಲುವಿನಿಂದ ವಿಚಲಿತರಾಗಲಿಲ್ಲ. ಅಧಿವೇಶನವನ್ನು ಮುಂದುವರೆದ ಅಧಿವೇಶನವೆಂದು ಮಾನ್ಯ ಮಾಡುವಂತೆ ಲಜಪತರು ಅವರನ್ನು ಒಪ್ಪಿಸಲು ನಡೆಯಿಸಿದ ಪ್ರಯತ್ನ ಫಲಕಾರಿಯಾಗಲಿಲ್ಲ.

ಕಾಂಗ್ರೆಸ್ ಬಣಗಳ ಪುನರೈಕ್ಯ ಸಂಪೂರ್ಣವಾಗಿ ಸಾಧ್ಯವಾಗಲಿಲ್ಲ.

ಮಧ್ಯವರ್ತಿಯಾಗಿ ಎರಡೂ ಕಡೆಯವರನ್ನು ಮನ ಒಲಿಸುವ ಪ್ರಯತ್ನ ಮೂರ್ಖತನದ ಪಾತ್ರ ಎನಿಸಿತು. ಆದೇನೇ ಆದರೂ ಲಜಪತರು ಯಾವ ಬಣದಲ್ಲೂ ತಮ್ಮನ್ನು ತಾವು ನೆಲೆಗೊಳಿಸಿಕೊಳ್ಳಲಿಲ್ಲ. ಎರಡೂ ಬಣಗಳೂ ಶಕ್ತಿ ಮೀರಿ ತಮ್ಮ ಅಸ್ತಿತ್ವವನ್ನು ಪ್ರತಿಷ್ಠಾಪಿಸಿಕೊಳ್ಳಲು ಪ್ರಯತ್ನಿಸತೊಡಗಿದವು. ಅತಿ ವೇಗದಲ್ಲಿ ಜನರನ್ನು ಆಕರ್ಷಿತಗೊಳಿಸುವ ಕೆಲಸಗಳು ಪರಸ್ಪರ ಸ್ಪರ್ಧೆಯ ಮೇಲೆ ನಡೆಯತೊಡಗಿದವು.

ಇತ್ತೀಚೆಗಷ್ಟೇ ಮಾಂಡೇಲೆಯಿಂದ ವಾಪಸಾಗಿ ತಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡಿದ್ದ ಲಜಪತರಿಗೆ ಎಲ್ಲೆಡೆ ವಿಜಯದ ಸ್ವಾಗತ ಕಾಯ್ದಿರುತ್ತಿತ್ತು. ಅದೇ ಸಮಯದಲ್ಲಿ ಅತ್ತ, ರಾಷ್ಟ್ರೀಯ ರಾಜಕಾರಣದಲ್ಲಿ ಅವರ ನೆಲೆ ಏಕಾಂಗಿ ಆಯಿತು. ಅದೇ ಸಮಯದಲ್ಲಿ ರಾಜಕೀಯ ಸಮ್ಮೇಳನವೊಂದರಲ್ಲಿ ಮಾತನಾಡಿದ ರವೀಂದ್ರನಾಥ ಠಾಗೂರ್ ಹೀಗೆ ಬಣ್ಣಿಸಿದರು.-''ಸಾರ್ವಜನಿಕ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳದಿರುವುದರ ಫಲವಾಗಿ ಸಾರ್ವಜನಿಕ ದುಮ್ಮಿನ ಕೆಲಸ ಕಾರ್ಯಗಳಿಗೆ ಉತ್ಸಾಹ ತುಂಬಿಕೊಳ್ಳಲು ವಿಫಲವಾಗಿರುವುದರಿಂದ ಸಾರ್ವಜನಿಕ ಬದುಕಿನಲ್ಲಿರುವ ಜನ ಹೀಗೆ ತಮ್ಮ ತಮ್ಮಲ್ಲಿ ಕಿತ್ತಾಟ-ಕಚ್ಚಾಟ ನಡೆಸುತ್ತಿದ್ದಾರೆ.'' ಟ್ರಾನ್ಸ್‌ವಾಲ್ ಪ್ರಶ್ನೆ ಸಂದಿಗ್ಧವಾಗಿರುವ ಸಂದರ್ಭದಲ್ಲಿ ಅದಕ್ಕೆ ಸಮಂಜಸವಾದ ಕೆಲಸ ಕಾರ್ಯಗಳಲ್ಲಿ ತೊಡಗದೆ ಎರಡು ಬಣಗಳು ಹೇಗೆ ಕಚ್ಚಾಡುತ್ತಿವೆ ಎಂಬುದನ್ನು ಅವರು ಉದಾಹರಣೆಯಾಗಿ ತೋರಿಸಿದರು.

ರವೀಂದ್ರನಾಥರು ಮುಂದುವರೆದು, ''ಬಾಬು ಬಿಪಿನ್‌ಚಂದ್ರಪಾಲ್ ತಮ್ಮ ವೇದಾಂತವನ್ನು ಪರಿಸ್ಥಿತಿಯ ಹಿತಕ್ಕೆ ಸಮನ್ವಯ ಮಾಡುತ್ತಾರೆಂದು ಭಾವಿಸೋಣ. ಮತಭೇದ ಸಂವಿಧಾನ, ಸಂಘಟನೆ, ಹೆಸರು ಮತ್ತು ಪದಗಳು, ತಾಂತ್ರಿಕತೆ ಮತ್ತು ವೈಯಕ್ತಿಕತೆಗಳ ಆಧಾರದ ಮೇಲೆ ಕಿತ್ತಾಡುವುದನ್ನು ಬಿಟ್ಟು ಕೆಲಸ ಮಾಡುವುದೊಂದೇ ಏಕೈಕ ಗುರಿಯಾಗಿ ಪರಿಗಣಿಸುತ್ತಾರೆಂದು ಭಾವಿಸೋಣ. ಈಗ ಬೇಕಾಗಿರುವುದು ಕೆಲಸ, ಕೆಲಸ ಮತ್ತು ಕೆಲಸ.'' ರವೀಂದ್ರನಾಥರು ಬಳಸಿದ ''ಕೆಲಸ, ಕೆಲಸ ಮತ್ತು ಕೆಲಸ.''ದಲ್ಲಿ ಲಜಪತರು ಎಂದೂ ಹಿಂದೆ ಬೀಳಲಿಲ್ಲ. ಆದರೆ ಪಕ್ಷಾತೀತವಾದ ಅವರ ಪರಿಶ್ರಮ ರಾಷ್ಟ್ರೀಯ ಚಳವಳಿ ನೀತಿ, ನಿರೂಪಣೆಯನ್ನು ಕೈಗೊಳ್ಳುವಲ್ಲಿ ಅವರ ಪ್ರತಿಭೆ, ತ್ಯಾಗ, ಸಮರ್ಪಣೆಗಳಿಗೆ ಸಹಜವಾಗಿ ಸಿಗಬೇಕಾಗಿದ್ದ ಸ್ಥಾನಮಾನಗಳು ಪ್ರಾಪ್ತವಾಗಲಿಲ್ಲ. ಕಾಂಗ್ರೆಸ್ಸಿನ ಕಚ್ಚಾಟ, ಒಳಜಗಳದಿಂದ ಯಾರಿಗೂ ಸಂತೋಷವಾಗಿರಲಿಲ್ಲ. ಲಜಪತರು ತಮ್ಮನ್ನು ತಾವು ಆ ಕಾಲಕ್ಕೆ ಹೆಚ್ಚು ಉಚಿತವೂ, ವಿವಾದಾತೀತವೂ ಆದ ಚಟುವಟಿಕೆಗಳಲ್ಲಿ ಸಮನ್ವಯ ಮಾಡಿಕೊಂಡರು. ವಿಶೇಷವಾಗಿ, ಮುಂದಿನ ಕೆಲವು ತಿಂಗಳುಗಳು ಅವರ ಪಾಲಿಗೆ ಬರಗಾಲ ಪರಿಹಾರ ಕಾರ್ಯಬಾಹುಳ್ಯದ ಕಾಲವಾಯಿತು.

ಬರ್ಮಾದಿಂದ ಲಜಪತರಿಗೆ ನಿರಂತರವಾಗಿ ಆಮಂತ್ರಣ ಪತ್ರಗಳು ಬರತೊಡಗಿದವು. ಅಲ್ಲಿಗ ಭೇಟಿ ಕೊಡಲೇಬೇಕೆಂದು ಒತ್ತಾಯಿಸಲಾಗುತ್ತಿತ್ತು. ಈಗ ಸ್ವಚ್ಛಂದ ವ್ಯಕ್ತಿಯಾಗಿ ಆ ರೋಚಕ ಹಾಗೂ ಕುತೂಹಲಭರಿತ ನಾಡಿನಲ್ಲಿ ಅಡ್ಡಾಡಿ ಬರಬೇಕೆಂದು ಅವರಿಗೂ ಆಸೆಯಾಗತೊಡಗಿತು. ಅದಕ್ಕಾಗಿ ಅವರು ತವಕಿಸಿದರು

ಕೂಡಾ. ಬರ್ಮಾದಿಂದ ಬಂದ ಆಹ್ವಾನ ಪತ್ರಗಳನ್ನು ಒಪ್ಪಿಕೊಂಡರು. ಅಲಹಾಬಾದಿನಿಂದ ಅಲ್ಲಿಗೆ ಹೊರಡಲು ಯೋಚಿಸಿದರು. ಕಾಂಗ್ರೆಸ್ ಅಧಿವೇಶನದ ನಂತರ ಹೋಗುವುದೆಂದು ನಿಶ್ಚಯಿಸಿದರು. ಆದರೆ ಅಲಹಾಬಾದ್‌ನಲ್ಲಿ ಅವರ ಆರೋಗ್ಯ ಕೆಟ್ಟಿತು. ಅವರನ್ನು ಮತ್ತೆ ಮನಗೆ ಮರಳುವಂತೆ ಮಾಡಿತು. ಅವರ ಆರೋಗ್ಯ ಸುಧಾರಿಸುವ ವೇಳೆಗೆ ಬರ ಪರಿಹಾರ ಕಾಮಗಾರಿಗಳಲ್ಲಿ ತಮ್ಮನ್ನು ಅಚಲಗೊಳಿಸಿಕೊಂಡಿದ್ದರು. ಸಂಯುಕ್ತ ಪ್ರಾಂತ್ಯದಲ್ಲಿ ತೋರಿದ ಭೀಕರ ಬರಗಾಲ ತ್ವರಿತ ಪರಿಹಾರ ಕಾರ್ಯಕ್ಕಾಗಿ ಅವರನ್ನು ಕೈಬೀಸಿ ಕರೆಯುತ್ತಿತ್ತು.

* * *

ಅಧ್ಯಾಯ-33

ದುರ್ಭಿಕ್ಷ

ಸೂರತ್ ತರುವಾಯದ ರಾಜಕೀಯ ಬೆಳವಣಿಗೆಗಳು, ಅಧಿವೇಶನಗಳು ಮತ್ತು ಪರಾಕಾಷ್ಠೆಗೆ ಇಳಿದ ವಾದ ವಿವಾದಗಳೆಲ್ಲಾ ಹೆಚ್ಚು ಕಡಿಮೆ ನಿರೀಕ್ಷಿಸಿದಂತೆಯೇ ನಡೆದ ಘಟನೆಗಳು ಎಂಬುದನ್ನು ನಾವು ಕುತೂಹಲದಿಂದ ಓದಿದ್ದೇವೆ. ಸೂರತ್ ನಂತರದ ಬೆಳವಣಿಗೆಗಳನ್ನು, ಖಚಿತವಾಗಿ ಹೇಳುವುದಾದರೆ ನಾವು ಮುಂಬಯಿಯ ವಿವರಣೆಯೊಂದಿಗೆ ತಿಳಿದುಕೊಳ್ಳಬೇಕಾಗುತ್ತದೆ. ಲಜಪತರ ಪ್ರವಾಸದ ಕಾರ್ಯಕ್ರಮದ ಪಟ್ಟಿಯಲ್ಲಿ ವಿಜಯೋತ್ಸವದ ಕಲಾಪಗಳು ಮುಂಬಯಿಯ ಭೇಟಿಯಲ್ಲಿದ್ದವು. ಮಾಂಡೇಲೆಯಿಂದ ಮರಳಿದ ಧೀರೋದಾತ್ತ ನಾಯಕನನ್ನು ನೋಡಲು ಕುತೂಹಲವೋ ಕುತೂಹಲ. ಅವರ ಭಾಷಣವನ್ನು ಕೇಳಲು ನೂಕುನುಗ್ಗಲು. ಮುಂಬಯಿಯಿಂದ ಲಜಪತರು ಕಲ್ಕತ್ತೆಗೂ, ಅಲ್ಲಿಂದ ಕಾನ್ಪುರಕ್ಕೂ ಮತ್ತು ನಂತರ ದೆಹಲಿಗೂ ಭೇಟಿ ಕೊಟ್ಟು ಲಾಹೋರಿಗೆ ಮರಳಿದರು.

ಮುಂಬಯಿಗೆ ಲಜಪತರು ಬಂದಾಗ ಆರ್ಯ ಸಮಾಜದ ವಾರ್ಷಿಕೋತ್ಸವದ ಪ್ರಸಂಗ. ಮಾಂಡೇಲೆ ಕೋಟೆಯ ಮಹಾ ನಾಯಕನಿಗೆ ಹರ್ಷಭರಿತ ವೀರೋಚಿತವಾದ ಸ್ವಾಗತ ದೊರೆಯಿತು. ಹೆಚ್ಚು ಕಡಿಮೆ ಮುಂಬಯಿಯ ನಾಗರಿಕ ಜನರೆಲ್ಲಾ ಅಲ್ಲಿ ನೆರೆದಿದ್ದರು. ಆರ್ಯ ಸಮಾಜದ ವಾರ್ಷಿಕೋತ್ಸವಕ್ಕೆ ಆಸಕ್ತರಾಗಿ ಬಂದವರು ಅವರು ಎನ್ನುವುದಕ್ಕಿಂತಲೂ ಗಡಿಪಾರು ಶಿಕ್ಷೆಯನ್ನು ಅನುಭವಿಸಿ ಬಂದ ಮಹಾ ನಾಯಕನನ್ನು ಕಾಣಲು ಬಂದವರೇ ಹೆಚ್ಚು ಎಂದರೆ ಚೆನ್ನ. ಸೂರತ್ ಕಾಂಗ್ರೆಸ್ ಅಧಿವೇಶನ ನಂತರ ಮುಂಬಯಿಯಲ್ಲಿ ಲಜಪತರು ಕೈಗೊಂಡ ಸಾರ್ವಜನಿಕ ಕಲಾಪಗಳು ತೀರಾ ಭಿನ್ನವಾಗಿದ್ದವು. ಅವರು ಅಲ್ಲಿ ಸಾರ್ವಜನಿಕ ಭಾಷಣಗಳನ್ನು ನೀಡಿದರು. ಒಂದು ಆರ್ಯ ಸಮಾಜಕ್ಕೆ ಸಂಬಂಧಪಟ್ಟಿದ್ದು. ಡಿ.ಎ.ವಿ. ಕಾಲೇಜಿನ ಬಗ್ಗೆ ಜನತೆಗೆ ತಿಳಿಸಿದರು. ದೇಶಿಯ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿದರು. ಇನ್ನೊಂದು ಸ್ವದೇಶಿ ಆಂದೋಲನಕ್ಕೆ ಸಂಬಂಧಪಟ್ಟ ಭಾಷಣ. ಅದರೊಟ್ಟಿಗೆ ಬರಗಾಲ ಪರಿಹಾರ ಕಾರ್ಯಗಳಿಗಾಗಿ ನಿಧಿ ಸಂಗ್ರಹಿಸುವ ಕೆಲಸವನ್ನು ಅವರು ಕೈಗೆತ್ತಿಕೊಂಡರು.

ಮುಂಬಯಿಯಿಂದ ಲಜಪತರು ಕಲ್ಕತ್ತೆಗೆ ತೆರಳಿದಾಗ ಹೌರಾದಲ್ಲಿ ಅದ್ಭುತ ಸ್ವಾಗತ ನೀಡಲಾಯಿತು. ಅವರಿಗಾಗಿ ಎರಡು ಸ್ವಾಗತ ಭಾಷಣಗಳು ನಡೆದವು. ಒಂದು ನಾಗರಿಕರ ಪರವಾಗಿ ಸಮರ್ಪಿತವಾದದ್ದು. ಇನ್ನೊಂದು ಆ ದಿನಗಳಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದ ಭಾರತೀಯ ಯುವ ಪೀಳಿಗೆಯದು. ಅದರಲ್ಲೂ ದೇಶದ ಪೌರಾತ್ಯ ಮಹಾ ನಗರದ ವಿದ್ಯಾರ್ಥಿ ಸಮುದಾಯವೇ ಅಗ್ರ ಮಾನ್ಯವಾಗಿದ್ದು, ಪ್ರಾರಂಭದಲ್ಲಿ

ಕಿಕ್ಕಿರಿದು ಜನಸಂದಣಿ ದಟ್ಟೈಸಿತ್ತು. ಲಜಪತರು ಮುಂಬಯಿಯಂತೆ ಅಲ್ಲಿಗೂ ಮೊದಲನೆಯದಾಗಿ ಆರ್ಯ ಸಮಾಜದ ಬಗ್ಗೆ ಮತ್ತು ದೇಶಿಯ ಶಿಕ್ಷಣದ ಬಗ್ಗೆ ಮಾತನಾಡಿದರು. ನಂತರ ತಮ್ಮ ಕೈಂಕರ್ಯವಾದ ಬರ ಪರಿಹಾರ ಮತ್ತು ಅದರ ನಿಧಿ ಸಂಗ್ರಹಕ್ಕೆ ಸಂಬಂಧಪಟ್ಟದ್ದು. 'ಈಗ ಆಗಬೇಕಾಗಿರುವುದು ಜನ ಸಮುದಾಯದ ಕೆಲಸ' ಎಂದು ಸಾರಿದರು. ಮಾರನೇಯ ದಿನ ಸುರೇಂದ್ರನಾಥ ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ಇನ್ನೊಂದು ಬಹಿರಂಗ ಸಭೆ. ಮಾಂಡೇಲೆಯ ಮಹಾ ನಾಯಕನನ್ನು ನೋಡಲು ಕಲ್ಕತ್ತಾದ ಜನಸಾಗರವೆಲ್ಲಾ ಕಿಕ್ಕಿರಿದು ಸೇರಿತ್ತು. ಇಡೀ ದಿನ ಮಳೆ ಜಿನುಗುತ್ತಿತ್ತು. ಕಲ್ಕತ್ತಾ ವಾಸಿಗಳು ಅದನ್ನು ಲೆಕ್ಕಿಸಲಿಲ್ಲ. ಕಾನ್ಪುರದಲ್ಲಿ ಸ್ವದೇಶಿ ಕ್ರಾಂತಿಕಾರರಿಗೆ ಅಷ್ಟೇ ಪ್ರಚಂಡ ಸ್ವಾಗತ ದೊರೆಯಿತು. ಬರಪೀಡಿತರಾಗಿ ಹಸಿವಿನಿಂದ ಕಂಗೆಟ್ಟಿರುವ ಜನರಿಗೆ ಉದಾರವಾಗಿ ದಾನ ನೀಡಿ ಎಂದು ಅವರು ಕೈ ಚಾಚಿ ಕೋರಿದರು. ಅವರ ಕೈಗಳು ಸಭಿಕರ ಉದಾರ ಕೊಡುಗೆಯಲ್ಲಿ ತುಂಬಿದವು. ಲಜಪತರ ವಿಜಯ ಯಾತ್ರೆಯ ಕಡೆಯ ಮಜಲು ದೆಹಲಿ. ದಾರಿಗುಂಟ ಅವರ ಮೇಲೆ ಪುಷ್ಪವೃಷ್ಟಿಯಾಯಿತು. ಹಾರ ತುರಾಯಿಗಳ ಸುರಿಮಳೆಯಾಯಿತು. ಮೆರವಣಿಗೆಗಳು ಉತ್ಸಾಹ, ಹುಮ್ಮಸ್ಸಿನಲ್ಲಿ ರಂಗೇರಿದವು. ಎಲ್ಲೆಲ್ಲೂ ಲಜಪತರ ಗುಣಗಾನ, ಪ್ರಶಂಸೆ, ಸ್ವಾಗತ ಭಾಷಣಗಳು. ಅವರನ್ನು ಅವರ ಅತಿಥೇಯ ಮನೆಯಿಂದ ಪತ್ನಿ-ಮಲ್ ಕಿ ಹವೇಲಿಗೆ ಭವ್ಯ ಮೆರವಣಿಗೆಯಲ್ಲಿ ಕರದೊಯ್ಯಲಾಯಿತು. ತೆರೆದ ವಾಹನದಲ್ಲಿ ಅಭಿಮಾನಿಗಳು ಅವರನ್ನು ಕೂರಿಸಿ ಗಾಡಿಯನ್ನು ತಾವೇ ಅಮಿತೋತ್ಸಾಹದಿಂದ ಜಯಘೋಷ ಹಾಕುತ್ತಾ ಎಳೆದರು. ಆ ಸಭಾಂಗಣ ಜನಜಂಗುಳಿಯಿಂದ ದಟ್ಟೈಸಿತ್ತು. ಹಿಂದಿನ ಮಹಾ ನಗರಗಳಲ್ಲಿ ಮಾಡಿದಂತೆಯೇ ಇಲ್ಲಿಯೂ ಅವರ ಭಾಷಣ ಸಾಗಿತು. ಅಂತಿಮವಾಗಿ ಆ ಮಹಾನಗರದ ಜನತೆಯ ಮುಂದೆ ನೆರೆಯ ಜಿಲ್ಲೆಗಳ ಜನರು ಹಸಿವು, ತೃಷೆಗಳಿಂದ ಕಂಗೆಡುತ್ತಿರುವುದನ್ನು ಚಿತ್ರಿಸಿದರು. ದುರ್ಭಿಕ್ಷದ ವಿರುದ್ಧದ ಹೋರಾಟಕ್ಕೆ ಬೆಂಬಲ ಕೊಡಬೇಕೆಂದರು. ಅವರ ಕೋರಿಕೆ ಶುಷ್ಕವಾಗಲಿಲ್ಲ. ಲಾಹೋರಿಗೆ ಮರಳಿದರು. ಅಲ್ಲಿಯೂ ನಿಧಿ ಸಂಗ್ರಹಿಸಿದರು. ಅದಕ್ಕಾಗಿ ಅವರು ಮೊದಲಿಗೆ ಮಾಡಿಕೊಂಡ ವೇದಿಕೆ ಆರ್ಯಸಮಾಜ. ಎಂದಿನಂತೆ ಸೇರುತ್ತಿದ್ದ ಪ್ರತಿ ಭಾನುವಾರ ಮುಂಜಾನೆಯ ಸಭೆಯಲ್ಲಿ ನಿವೇದನೆ ಮಾಡಿದರು. ನಂತರ ಪತ್ರಿಕೆಗಳಲ್ಲಿ ತಮ್ಮ ಅಂಕಣದ ಮೂಲಕ ಸಾರ್ವಜನಿಕ ಕರೆ-ನಿವೇದನೆ ನೀಡಿದರು.

ಅವರು ಲಾಹೋರಿನಲ್ಲಿ ಬಹುಕಾಲ ಉಳಿಯಲಿಲ್ಲ. 1908ರ ಫೆಬ್ರವರಿಯ ದ್ವಿತೀಯಾರ್ಧದಲ್ಲಿ ಬರ ಪರಿಹಾರ ಕಾರ್ಯಗಳಿಗಾಗಿ ಸಂಯುಕ್ತ ಪ್ರಾಂತ್ಯದಲ್ಲಿ ನಿರಂತರವಾಗಿ ಓಡಾಡುತ್ತಿದ್ದನ್ನು ನಾವು ಕಾಣುತ್ತೇವೆ. ಆಗ್ರಾ ಪಟ್ಟಣ ಮತ್ತು ಜಿಲ್ಲೆ ದುರ್ಭಿಕ್ಷದಲ್ಲಿ ತೀವ್ರವಾಗಿ ನರಳಿತ್ತು. ಆ ಪಟ್ಟಣ ಮತ್ತು ಆ ಜಿಲ್ಲೆಗಾಗಿ ಲಜಪತರು ವಿಶೇಷ ಗಮನ ಹರಿಸಿದರು. ಆಗ್ರಾದಲ್ಲಿ ಅವರಿಗೊಂದು ಸ್ವಾಗತ ಸಮಾರಂಭ ಏರ್ಪಡಿಸಿ ಆರ್ಯ ಮಿಲನ್ ಸಭಾ ನಿಧಿಯೊಂದನ್ನು ಸಮರ್ಪಿಸಿತು. ಪ್ರದೇಶ ಬಜಾರ್‌ನಲ್ಲಿ ಏರ್ಪಟ್ಟ ಸಭೆಯಲ್ಲಿ ಸಭಿಕರು ಅವರ ಕರೆಗೆ ಓಗೊಟ್ಟು ಸ್ಥಳದಲ್ಲೇ 1000 ರೂಪಾಯಿಗಳಷ್ಟು ದೊಡ್ಡದಾದ ಮೊತ್ತವನ್ನು ಸಮರ್ಪಿಸಿದರು. ಆ ಪರಿಸ್ಥಿತಿಯಲ್ಲಿ ಅದೊಂದು ಮಹತ್ವದ ...ಕೆಯಾಗಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ. ಸಂಯುಕ್ತ ಪ್ರಾಂತ್ಯದಲ್ಲಿ 12

ದಿನಗಳ ಪ್ರವಾಸ ಮುಗಿಸಿದ ನಂತರ ದುರ್ಭಿಕ್ಷ ಪೀಡಿತ ಪ್ರದೇಶಗಳಲ್ಲಿ ತಾವು ಕಂಡ ಸ್ಥಿತಿಯ ಚಿತ್ರಣವನ್ನು ಅಂಕಿತ ಲೇಖನವೊಂದರ ಮೂಲಕ ಪತ್ರಿಕೆಗೆ ಕಳುಹಿಸಿಕೊಟ್ಟರು. ಅಧಿಕೃತ ಏಜೆನ್ಸಿಯು ಎಷ್ಟೇ ಸಮರ್ಥವಾಗಿ ಕೆಲಸ ಮಾಡಿದ್ದರೂ ಸಂತ್ರಸ್ತ ಜನತೆಗೆ ಅದರ ಪರಿಹಾರ ತಲುಪಲಾರದೆಂದು ಅವರು ಜನತೆಗೆ ಹೇಳುತ್ತಲೇ ಬಂದರು. ಆಗಬೇಕಾದ ಕೆಲಸ ಅಗಾಧ. ಅದರ ಜೊತೆಗೆ ಅದರ ಪರಿಕಲ್ಪನೆಯೂ ವಿಸ್ತಾರವಾಯಿತು. ಪರಿಹಾರ ಶಿಬಿರಗಳಲ್ಲಿ ಸಂತ್ರಸ್ತ ಜನತೆಗೆ ಅವರ ಭವಿಷ್ಯದ ಬದುಕಿಗೆ ಅನುಕೂಲವಾಗುವಂತೆ ಸ್ವಾವಲಂಬನೆಯ ತರಬೇತಿ ಕಾರ್ಯಕ್ರಮವನ್ನು ಸಂಯೋಜಿಸಿದರು. ಅವರ ಎಲ್ಲಾ ಈ ಸೃಜನಾತ್ಮಕ ಕಾರ್ಯಗಳಿಗೆ ಏಕ ವ್ಯಕ್ತಿಯಂತೆ ಜನತೆಯ ಬೆಂಬಲ ಪ್ರಾಪ್ತವಾಯಿತು. ಲಜಪತರ ಸೇವೆಯ ಮುಂದೆ ಅಧಿಕಾರಶಾಹಿ ಏಜೆನ್ಸಿಯ ಕೆಲಸ ಕಾರ್ಯಗಳು ಏನೇನೂ ಅಲ್ಲವೆನಿಸಿದವು. ಆ ಏಜೆನ್ಸಿಯಲ್ಲಿದ್ದ ನಾನಾ ರೀತಿಯ ಲೋಪ ದೋಷಗಳನ್ನು ಲಜಪತರು ಅನೇಕ ಸಂದರ್ಭಗಳಲ್ಲಿ ಕಣ್ಣಾರೆ ಕಂಡರು. ಆಗ್ರಾದ ಒಂದು ಪ್ರಕರಣ ಅದರಲ್ಲಿ ಮುಖ್ಯ. ತೀರಾ ಬಡ ಸ್ಥಿತಿಯ ಒಂದು ಮನೆಯಲ್ಲಿ 47 ಜನರಿಗೆ ಪರಿಹಾರ ಶಿಬಿರ ಏರ್ಪಡಿಸಲಾಗಿತ್ತು. ಅಷ್ಟು ಜನರಿಗೆ ಒಂದು ತಿಂಗಳಿಗೆ ಊಟ, ತಿಂಡಿಯ ಖರ್ಚು 120 ರೂಪಾಯಿಗಳಿಗಿಂತಲೂ ಹೆಚ್ಚಿಗೆ ಆಗುತ್ತಿರಲಿಲ್ಲ. ಆದರೆ ವ್ಯವಸ್ಥೆಯ ಖರ್ಚು, ವೆಚ್ಚಗಳು ದುಬಾರಿಯಾಗಿದ್ದವು. ಓರ್ವ ಸುಪರಿಂಟೆಂಡೆಂಟ್, ಓರ್ವ ಆಸ್ಪತ್ರೆ ಸಹಾಯಕ, ಓರ್ವ ಲೆಕ್ಕಪತ್ರಾಧಿಕಾರಿ, ಇಬ್ಬರು ನೌಕರರು, ಓರ್ವ ಕಾವಲುಗಾರ, ಓರ್ವ ಅಡಿಗೆಯವ, ನೀರು ಸರಬರಾಜಿಗೆ ಓರ್ವ. ಹೀಗೆ ಸಿಬ್ಬಂದಿಯ ಖರ್ಚೇ ಸಂತ್ರಸ್ತರ ಖರ್ಚಿಗಿಂತ ಎರಡು ಮೂರು ಪಟ್ಟು ಹೆಚ್ಚಾಗಿರುತ್ತಿತ್ತು. ಇದೆಲ್ಲವನ್ನು ಆ ಮೊತ್ತದಲ್ಲಿ ಕಳೆದಾಗ ಸಂತ್ರಸ್ತರಿಗೆ ದೊರೆಯುತ್ತಿದ್ದುದು ತೆಳುವಾದ ಹಾಳೆಯಂತಹ ತುಣುಕು ಮಾತ್ರ.

ಬರ ಪರಿಹಾರ ಕಾರ್ಯದಲ್ಲಿ ಲಜಪತರು ಪಕ್ಕಾದ ಹಿಂದೂ ಮಾನವತಾವಾದಿಯಾಗಿದ್ದರು. ನಿರ್ದಯದ ಮತೀಯವಾದಿ ಆಗಿರಲಿಲ್ಲ. ಅದೇ ಕಾಲದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಸಮಾಜಘಾತುಕ ಕೃತ್ಯದಲ್ಲಿ ತೊಡಗಿದ್ದರು. ಲಜಪತರು ನಿರಾಶ್ರಿತರಾಗಿ ಬಂದವರನ್ನು ಹಿಂದೂ ಮತಕ್ಕೆ ಪರಿವರ್ತಿಸಿಕೊಳ್ಳಿ ಎಂದು ಕೇಳುತ್ತಿರಲಿಲ್ಲ. ಆದರೆ ಅಮಾಯಕ ಹಿಂದೂಗಳನ್ನು ಅವರ ಅಸಹಾಯಕ ಸ್ಥಿತಿಯ ಗೋರಿಯ ಮೇಲೆ ಇಸಾಯಿ ಮತಕ್ಕೆ ಪರಿವರ್ತನೆ ಮಾಡಿಕೊಳ್ಳುತ್ತಿದ್ದ ಹಪಾಹಪಿತನವನ್ನು ತಮ್ಮ ಕಣ್ಣಾರೆ ನೋಡುತ್ತಿದ್ದರು. ಕಾಯಂ ವ್ಯವಸ್ಥೆ ಇಲ್ಲದ ಕಡೆಗಳಲ್ಲಿ ತಾತ್ಕಾಲಿಕ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿ ಸಂತ್ರಸ್ತರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಜವಾಬ್ದಾರಿಯುತ ವ್ಯವಸ್ಥೆಯೊಂದು ಏರ್ಪಟ್ಟ ನಂತರ ಆ ತಾತ್ಕಾಲಿಕ ಶಿಬಿರವನ್ನು ಅಲ್ಲಿಂದ ವರ್ಗಾಯಿಸುತ್ತಿದ್ದರು. ಮೇ ತಿಂಗಳಿನಲ್ಲಿ ಅವರು ದುರ್ಭಿಕ್ಷ ಪೀಡಿತ ಪ್ರದೇಶಗಳಲ್ಲಿ ಎರಡನೇ ಪ್ರವಾಸ ಕೈಗೊಂಡರು. ಲಕ್ನೋದಿಂದ ಆರಂಭಗೊಂಡ ಆ ಪ್ರವಾಸದ ಗುಂಟ ಸೀತಾಪುರ, ಗೋಂಡಾ, ಮಿರ್ಜಾಪುರ ಮತ್ತು ಅಲಹಾಬಾದ್ ಸೇರಿದಂತೆ ಅನೇಕ ಸ್ಥಳಗಳು ಒಳಗೊಂಡಿದ್ದವು. ನಿರಾಶ್ರಿತರ ಪರಿಹಾರ ಶಿಬಿರಗಳಿಗೆ ಅವರು ಹೋದರು. ಕಾರ್ಯಕರ್ತರೊಂದಿಗೆ ಪರಿಸ್ಥಿತಿಯ ವಿನಿಮಯ ಮಾಡಿಕೊಂಡರು. ಅನೇಕ ಸ್ಥಳಗಳಲ್ಲಿ ಸ್ಥಳೀಯ ಬರ ಪರಿಹಾರ ಸಮಿತಿಗಳನ್ನು ಸ್ಥಾಪಿಸಿ ಕೇಂದ್ರ ಸಮಿತಿಯನ್ನು ಲಕ್ನೋ ಮತ್ತು

ಅಲಹಾಬಾದ್‌ಗಳಲ್ಲಿ ಆರಂಭಿಸಿದರು. ಬಾಬು ಪುರೋಷತ್ತಮ ದಾಸ್ ಟಂಡನ್ ಅಲಹಾಬಾದ್‌ನ ಕೆಲವು ಸಮಿತಿಯ ಕಾರ್ಯದರ್ಶಿಯಾದರು. ಪಂಡಿತ ಮದನ ಮೋಹನ ಮಾಳವೀಯ ಬರ ಪರಿಹಾರ ಆಂದೋಲನದಲ್ಲಿ ವೈಯಕ್ತಿಕ ಆಸಕ್ತಿ ಹೊಂದಿದವರಾಗಿ ಲಜಪತರೊಂದಿಗೆ ಅವರು ಭೇಟಿ ಕೊಟ್ಟ ಅನೇಕ ಸ್ಥಳಗಳನ್ನು ಸಂದರ್ಶಿಸಿದರು. ಆ ಸೇವೆಯಲ್ಲಿ ಲಜಪತರಿಗೆ ಹೆಚ್ಚು ಬೆಂಬಲಿಗರಾಗಿ ನಿಂತಹವರಲ್ಲಿ ಭಾರತೀಯ ಸೇವಕ ಸಮಾಜದ ಜಿ.ಕೆ. ದೇವಧರ್ ಒಬ್ಬರು. ಪುಣೆಯಿಂದ ಲಾಹೋರಿಗೆ ಬಂದು ಲಜಪತರ ಸೂಚನೆ, ನಿರ್ದೇಶನಗಳನ್ನು ಪಡೆದು ಉತ್ತರ ಪ್ರದೇಶಕ್ಕೆ ಹೋಗಿ ಪರಿಹಾರ ಕಾರ್ಯಗಳನ್ನು ಕೈಗೊಂಡವರು ಅವರು. ಲಜಪತ್‌ರಾಯ್ ಅವರು ತಮ್ಮ ಕಾರ್ಯಕ್ಕೆ ಆರಿಸಿಕೊಂಡ ಸ್ವಯಂ ಸೇವಕರಲ್ಲಿ ಹೆಚ್ಚಿನವರು ಅವರ ಪ್ರಾಂತ್ಯಕ್ಕೆ ಸೇರಿದವರು. ಬಂಗಾಳದಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುವವರ ಪಡೆಯೊಂದು ಮುಂದಾಯಿತು. ಆದರೆ ಹಿಂದೂಸ್ತಾನಿಯಲ್ಲಿ ಅವರಿಗೆ ಸಾಕಷ್ಟು ಪರಿಶ್ರಮವಿಲ್ಲದ್ದರಿಂದ ಲಜಪತರು ಅವರ ಸೇವೆಯನ್ನು ತಡೆ ಹಿಡಿದರು. ಬರ ಪರಿಹಾರ ನಿಧಿಗಾಗಿ ಲಜಪತರು ಮಾಡಿಕೊಂಡ ಮನವಿಗೆ ಭಾರತದ ಎಲ್ಲೆಡೆಯಿಂದ ಸಮಂಜಸವಾದ ಪ್ರತಿಕ್ರಿಯೆ ದೊರೆಯಿತು. ಜಪಾನಿನಂತಹ ಹೊರ ರಾಷ್ಟ್ರಗಳಿಂದಲೂ ಭಾರತೀಯರು ಹಣ ಕಳುಹಿಸಿಕೊಟ್ಟರು. ಕಾರ್ಯಕರ್ತರ ಪ್ರಶ್ನೆ ಬಂದಾಗ ಬರ ಪೀಡಿತ ಪ್ರದೇಶವಾದ ಸಂಯುಕ್ತ ಪ್ರಾಂತ್ಯದಿಂದಲೇ ಅವರಿಗೆ ಹೆಚ್ಚು ಪ್ರೋತ್ಸಾಹ ಸಿಗಲಿಲ್ಲ. ಈ ಬಗ್ಗೆ ಅವರು ಪತ್ರಿಕಾ ಹೇಳಿಕೆಯೊಂದರಲ್ಲಿ ಖೇದವನ್ನು ವ್ಯಕ್ತಪಡಿಸಿದರು. ತಮ್ಮ ಪ್ರಾಂತ್ಯಕ್ಕೆ ಕರೆ ಕೊಟ್ಟು ಸ್ವಯಂ ಸೇವಕರ ಕೊರತೆಯನ್ನು ಭರಿಸಿಕೊಂಡರು. ಕೆಲವು ಕೇಂದ್ರಗಳಲ್ಲಿ ಸ್ಥಳೀಯ ಅಧಿಕಾರಿಗಳಿಂದ ಅವರ ಕಾರ್ಯಕರ್ತರಿಗೆ ಒಳ್ಳೆಯ ಸಹಾಯ ಮತ್ತು ಸಹಕಾರ ಪ್ರಾಪ್ತವಾಯಿತು. ಆದರೆ ಇನ್ನೂ ಕೆಲವು ಕೇಂದ್ರಗಳಲ್ಲಿ ಪೊಲೀಸರು ಮತ್ತು ಅಧಿಕಾರಿಗಳ ಸಹಕಾರ, ಸಹಯೋಗ ನೀಡುತ್ತಿಲ್ಲವೆಂದು ಅವರು ದೂರಿದರು. ಮೊಟ್ಟ ಮೊದಲನೆಯದಾಗಿ ಈಶಾನ್ಯ ರೈಲ್ವೆಯು ಬರ ಪರಿಹಾರಕ್ಕಾಗಿ ಸಂತ್ರಸ್ತ ಪ್ರದೇಶಗಳಿಗೆ ಸಾಗಿಸುವ ಸರಕುಗಳ ಧಾರಣೆಗೆ ರಿಯಾಯ್ತಿ ಕೊಟ್ಟಿತು. ಅಂತಹ ರಿಯಾಯಿತಿ ಪಡೆಯಲು ಲಜಪತ್‌ರಾಯ್ ಅವರ ಅಂಕಿತದಲ್ಲಿ ಪ್ರಮಾಣೀಕರಣ ಅಗತ್ಯವಾಗುತ್ತಿತ್ತು. ಆ ರಿಯಾಯಿತಿ ನಿಯೋಜಿತ ದರದ ಅರ್ಧದಷ್ಟಿತ್ತು. ಲಜಪತ್‌ರಾಯ್ ಅವರ ಪ್ರಮಾಣೀಕರಣ ಪತ್ರದ ಕಡ್ಡಾಯದ ಮೇಲೆ ಪೂರ್ವ ರೈಲ್ವೆಯು ಸರಕು ಸಾಗಣಿಕೆ ರಿಯಾಯಿತು ಒದಗಿಸಿತು.

ಬರ ಪರಿಹಾರದ ಕಾರ್ಯಗಳನ್ನು ದಿನ ಕಳೆದಂತೆ ವಿಸ್ತರಿಸುವುದು ಅಗತ್ಯವಾಯಿತು. ಅದು ಉತ್ತರ ಪ್ರದೇಶದ ಗಡಿ ಭಾಗವನ್ನು ದಾಟಿತು. ದುರ್ಭಿಕ್ಷದ ದಿನಗಳು ಮುಗಿದು ಆಯಾ ಪ್ರದೇಶಗಳ ಜನರ ಜೀವನ ಅನುಕೂಲವಾದಾಗ ಆ ಕಾರ್ಯಗಳಿಗಾಗಿ ಸಂಗ್ರಹಿಸಿದ್ದ ನಿಧಿಯಲ್ಲಿ ಹಣವಿನ್ನೂ ಉಳಿದಿತ್ತು. ಪತ್ರಿಕಾ ಪ್ರಕಟಣೆ ನೀಡುವ ಮೂಲಕ ನಿರ್ಗತಿಕ ಮಕ್ಕಳಿಗೆ ಅವರ ಶಿಕ್ಷಣಕ್ಕಾಗಿ ಹಣ ಕೊಡಲು ಅರ್ಜಿಗಳನ್ನು ಆಹ್ವಾನಿಸಿದರು. ಅದೇ ಸಂದರ್ಭದಲ್ಲಿ ಇನ್ನೊಂದು ಹೇಳಿಕೆಯನ್ನು ನೀಡಿ ಬರ ಪರಿಹಾರಕ್ಕಾಗಿ ತಾವು ಕೊಟ್ಟಿರುವ ವಂತಿಕೆಯಲ್ಲಿ ಉಳಿದಿರುವ ಹಣವನ್ನು ಬಡ ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಬಳಸಿಕೊಳ್ಳಲು ಅನುಮತಿ ಕೊಡುವಂತೆ ದಾನಿಗಳಿಗೆ ಮನವಿ ಮಾಡಿದರು.

ಹಸಿವು, ಕ್ಷೋಭೆಗಳಿಂದ ನರಳುತ್ತಿದ್ದ ಅಪಾರ ಜನಸಮುದಾಯ ಆ ಸ್ಥಿತಿಗತಿಯು ಲಜಪತರಿಗೆ ಭಾರತ ಎದುರಿಸುತ್ತಿರುವ ಅತಿ ಪ್ರಧಾನ ಸಮಸ್ಯೆಯೊಂದರ ನಿಕಟ ಪರಿಚಯ ಮಾಡಿಕೊಟ್ಟಿತು. ಅದುವೇ ದೊಡ್ಡ ಜನ ಸಮುದಾಯ ತೊಳಲುತ್ತಿದ್ದ ಬಡತನ. ಕೇವಲ ನೀಲಿ ಅಕ್ಷರಗಳಲ್ಲಿ ಮುದ್ರಿತ ಪುಸ್ತಕಗಳು, ಅಂಕಿ ಅಂಶಗಳ ಜಗ್ಗಾಟದ ವರದಿಗಳು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಸಿದ್ಧಪಡಿಸಿದ ಮಾಹಿತಿಗಳ ಆಧಾರದ ಮೇಲೆ ಭಾರತದ ಪರಿಸ್ಥಿತಿಯನ್ನು ಮನಗಾಣುವವರಿಗೆ ಭಿನ್ನವೂ ವಾಸ್ತವಿಕವೂ ಆದ ವರದಿ ಲಜಪತರಿಗೆ ಸಾಕ್ಷಾತ್ಕಾರವಾಯಿತು. ಅನೇಕ ಪ್ರಸಂಗಗಳಲ್ಲಿ ಭಾರತದ ನೈಜ ಸ್ಥಿತಿಯು ಆ ನಿಕಟ ಪರಿಚಯ ಅವರನ್ನು ಅಧೀರರನ್ನಾಗಿ ಮಾಡುತ್ತಿತ್ತು. ಅವರು ನಿಸ್ತೇಜರಾಗುತ್ತಿದ್ದರು. ದುರ್ಭಿಕ್ಷದಲ್ಲಿ ತಾವು ಕಂಡದ್ದನ್ನು ಅವರು ವರ್ಣಿಸಿ ಬರೆದ ಲೇಖನವೊಂದರ ಭಾಗ ಅದನ್ನು ಸಾರಿ ಹೇಳುತ್ತಿದೆ.

''ಅವರಲ್ಲಿ ಬೃಹತ್ ಸಂಖ್ಯೆಯ ಜನತೆ ಸಾವಿನ ಅಂಚಿನಲ್ಲಿದ್ದರು. ಆಯ್ದ ಕೆಲವು ಪ್ರಕರಣಗಳಿಗೆ ಮಾತ್ರ ನೆರವು ನೀಡಲು ನಾವು ಬಯಸಿದೆವು. ಅಂತಹ ಕಡೆಗಳಲ್ಲಿ ಅನ್ನ, ನೀರು, ಔಷಧಿಗಳ ವ್ಯವಸ್ಥೆ ಮಾಡಿದೆವು. ಪರಿಹಾರ ದೊರೆತಿದ್ದನ್ನು ತಿಳಿದು ಕೊಂಡ ಇಡೀ ಸಂತ್ರಸ್ತ ಸಮುದಾಯ ಅಲ್ಲಿಗೆ ಮಕ್ಕಳು ಮರಿಗಳೊಂದಿಗೆ ಓಡೋಡಿ ಬರುತ್ತಿದ್ದರು. ನೆರವಿಗಾಗಿ ಮೊರೆ ಇಡುತ್ತಿದ್ದರು. ಒಂದು ಕಡೆ ಕೆಲವು ಸ್ವಯಂ ಸೇವಕರು ತಾಮ್ರದ ನಾಣ್ಯಗಳನ್ನು ಎಸೆದರು. ಅದನ್ನು ಹೆಕ್ಕಿ ಕೊಳ್ಳಲು ನಡೆದ ಸಾಹಸ ಕರುಳು ಹಿಂಡುವಂತಿತ್ತು. ಹೃದಯವನ್ನು ಹಿಂಸಿಸುತ್ತಿತ್ತು. ಹಾಗೆ ನಾಣ್ಯಗಳನ್ನು ಎಸೆಯಬೇಡವೆಂದು ನಾನು ಸ್ವಯಂಸೇವಕರಿಗೆ ನಿರ್ಬಂಧ ಹಾಕಿದೆ...

ಆ ಶಿಬಿರದಲ್ಲಿ ನಾನು ಗಂಭೀರವಾದ ನಿರ್ಧಾರಗಳನ್ನು ಕೈಗೊಂಡೆ. ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂಬ ಕಾರಣದಿಂದಲೂ ಅವರಲ್ಲಿ ಬಹುಪಾಲು ಜನರಿಗೆ ಅಂತಿಮವಾಗಿ ಸಾವೇ ಗತಿ ಎಂದು ತಿಳಿದು ಅವರನ್ನು ಸಾವಿನ ದವಡೆಗೆ ಬಿಡುವುದು ತೀರಾ ಅಮಾನವೀಯ ವಾಗುತ್ತದೆ ಎಂದು ನಾನು ನಿಶ್ಚಯಿಸಿಕೊಂಡೆ.''

ಆ ಶೋಚನೀಯ ಪರಿಸ್ಥಿತಿಯಲ್ಲಿ ಒಮ್ಮೊಮ್ಮೆ ಬೆಳ್ಳಿ ಬೆಳಕು ಕಂಡು ಬರುತ್ತಿತ್ತು. ಭರವಸೆಯ ಕಿರಣವಾಗಲಿ, ಆಸೆಯ ಬೆಳಕಾಗಲಿ ಅವಕ್ಕೆ ಕಾರಣವಾಗುತ್ತಿರಲಿಲ್ಲ. ಅದು ಅವ್ಯಕ್ತವಾದ ಆತ್ಮತೃಪ್ತಿ. ಸಂತ್ರಸ್ತರಿಗೆ ಅನ್ನ, ನೀರು, ಔಷಧಿ ಒದಗಿಸಿದ್ದರಿಂದಲೇ... ಪ್ರಾಪ್ತವಾದ ಸಂತೃಪ್ತಿಯಲ್ಲ. ಅನನ್ಯವಾದ ಶಕ್ತಿಯೊಂದು ಆ ಕೆಲಸ ಮಾಡಿಸಿತೆಂದು ಲಜಪತರೇ ಕೊನೆಯಲ್ಲಿ ಹೇಳಿದ್ದಾರೆ. ''ಎಲ್ಲಾ ಆ ಸಂಕಷ್ಟಗಳ ನಡುವೆ ನನ್ನ ಮನಸ್ಸಿನ ಮೇಲೆ ಭಿನ್ನವಾದ ಮುದ್ರೆಯೊಂದನ್ನು ಒತ್ತಿದ ದೃಶ್ಯವೊಂದನ್ನು ನಾನು ಕಂಡೆ. ಓರ್ವ ಬಾಲಕಿ ಹತ್ತು ಹನ್ನೆರಡು ವಯಸ್ಸಿನವಳಿರಬಹುದು. ಕೃಶವಾದ ದೇಹದವಳು. ಸೊಂಟದಲ್ಲಿ ತುಂಡು ಬಟ್ಟೆ ಬಿಟ್ಟರೆ ತಲೆಯಿಂದ ಕಾಲಿನ ಹೆಬ್ಬೆರಳವರೆಗೆ ದಿಗಂಬರೆ. ತಲೆಯ ಮೇಲೊಂದು ಮಣ್ಣು ತುಂಬಿದ ಬುಂಕರಿ ಹೊತ್ತು ಸಾಗುತ್ತಿದ್ದಾಳೆ. ಅಷ್ಟಾದರೂ ಅವಳ ಮುಖದ ಮೇಲೆ ಮಂದ ನಗೆ ತೇಲುತ್ತಿದೆ. ಮನಸ್ಸಿನಲ್ಲಿ ಆಕೆ ತನಗೆ ತಾನೇ ಸಂತೋಷ ಪಡುತ್ತಾ ತನ್ನ ಸುತ್ತಮುತ್ತಲಿನ ಲೋಕವೆಲ್ಲಾ ನಗುತ್ತಿದೆ ಎಂದು ಭಾವಿಸಿಕೊಂಡಿದ್ದಾಳೋ

ಏನೋ ಅಥವಾ ಅಸಂಗತವಾದ ಈ ಜಗತ್ತಿನ ಭೇದ ಭಾವ ಮತ್ತು ತಾರತಮ್ಯಗಳ ಸಂಕುಚಿತತನವನ್ನು ಕಂಡು ನಗುತ್ತಿದ್ದಳೋ ಏನೋ? ನಶ್ವರ ಮತ್ತು ಕ್ಷಣಿಕವಾದ ಬದುಕಿನ ನಿತ್ಯ ಹೋರಾಟ ಮತ್ತು ಸೆಣಸಾಟದಲ್ಲಿ ತನ್ನ ಸುತ್ತಮುತ್ತಲಿನ ಜಿಪುಣತನ ಮತ್ತು ಔದಾಸಿನ್ಯವನ್ನು ಕಂಡು ಆಕೆ ತನ್ನೊಳಗೆ ತಾನೇ ನಗುತ್ತಿದ್ದಳೋ ಏನೋ?''

ಆ ಮುಗ್ಧ ದೇವತೆಯ ಮೇಲೆ ನನ್ನ ನೋಟ ಬೀಳುತ್ತಿದ್ದಂತೆಯೇ ನನಗೆ ನಾನೇ ಅವಳಿದ್ದ ಸ್ಥಳಕ್ಕೆ ಎಳೆಯಲ್ಪಟ್ಟಂತಾಯಿತು. ಹತ್ತಿರದಿಂದ ನಾನು ಅವಳನ್ನು ನೋಡಿದೆ. ಅವಳ ಮುಗುಳ್ನಗೆಯನ್ನು ಆನಂದಿಸಿದೆ. ನನ್ನನ್ನು ನೋಡಿ ಅವಳು ಇನ್ನಷ್ಟು ನಕ್ಕಳು. ನಾನು ಮುಗುಳ್ನಗೆ ಚೆಲ್ಲಿದೆ. ಅಯಾಚಿತವಾಗಿ ಪ್ರೀತಿಯ ಸೆಳೆತಕ್ಕೆ ಒಳಪಟ್ಟವನಾಗಿ ನಾನು ಅವಳಿಗೆ ಇನ್ನಷ್ಟು ಸಮೀಪವಾದೆ. ಅವಳ ತಲೆಯ ಮೇಲೆ ನನ್ನ ಕೈಯಾಡಿಸುತ್ತಾ ಮೃದುವಾಗಿ ನೇವರಿಸಿದೆ. ಅವಳ ಹಣೆಗೆ ನನ್ನ ತುಂಬು ಭಾವನೆಯ ಮುತ್ತೊಂದನ್ನು ಕೊಟ್ಟು ಅವಳ ಕೈಗೆ ಒಂದಷ್ಟು ಹಣವನ್ನು ಇಡಬೇಕೆಂದು ನನಗೆ ಅನಿಸಿತು. ಅದರ ಬಗ್ಗೆ ಸುತ್ತಮುತ್ತಲಿದ್ದವರು ಪರಿಹಾಸ್ಯ ಮಾಡಬಹುದೆಂದು ಹಿಂದೆಯೇ ನನಗೆ ಭಾಸವಾಗಿ ನನ್ನ ಮೊದಲಿನ ಅನಿಸಿಕೆಯನ್ನು ಕೈಬಿಟ್ಟೆ. ಅವಳ ಮಧುರವಾದ ಭಾವನೆಗೆ ನಾನು ಬೆಲೆ ಕಟ್ಟಿ ಶುದ್ಧವಾದ ಆತ್ಮಕ್ಕೆ ಅಪಚಾರ ಎಸಗುವೆನೇನೋ ಎಂಬ ಭೀತಿ ಆವರಿಸಿ ಎರಡನೇ ಬಯಕೆಯನ್ನು ಅದುಮಿಟ್ಟೆ. ಇಷ್ಟೆಲ್ಲಾ ಕೆಲವೇ ಕ್ಷಣಗಳಲ್ಲಿ ನಡೆದು ಹೋಯಿತು. ಆ ಅಮಾಯಕ ಹುಡುಗಿ ಮಣ್ಣಿನ ಹುಂಕರಿಯನ್ನು ಹೊತ್ತು ಸಾಗುತ್ತಲೇ ಕಣ್ಮರೆಯಾದಳು. ಭಾರವಾದ ಹೃದಯದೊಂದಿಗೆ ನಾನು ಆ ಸ್ಥಳದಿಂದ ಕದಲಿದೆ... ಆಗ ಮಧ್ಯಾಹ್ನ 12 ಗಂಟೆ ಮೀರಿರಬಹುದೆಂದು ನನಗೆ ಅನಿಸುತ್ತದೆ. ನಾವು ಆ ಸ್ಥಳದಿಂದಲೇ ಹೊರಟೆವು. ಆ ದೃಶ್ಯ ನನ್ನ ಮನಸ್ಸಿನ ಮೇಲೆ ಅಪಾರ ಪರಿಣಾಮ ಬೀರಿತು. ಇಡೀ ದಿನ ಅದನ್ನು ನಾನು ಅಳಿಸಿ ಹಾಕಲು ಸಾಧ್ಯವಾಗಲಿಲ್ಲ.'' ಅಂತಹ 'ದೈವದತ್ತ ದೃಷ್ಟಿ' ಲಜಪತರನ್ನು ಸತ್ಕಾರ್ಯ ಮಾಡುವರಲ್ಲೂ ವಿಶಿಷ್ಟರನ್ನಾಗಿ ರೂಪಿಸಿದೆ.

* * *

ಅಧ್ಯಾಯ-34

ಮತ್ತೆ ಯುನೈಟೆಡ್ ಕಿಂಗ್‌ಡಂ ಪ್ರವಾಸ

1908, ಆಗಸ್ಟ್ 23ರಂದು ಲಾಹೋರ್ ರೈಲ್ವೆ ನಿಲ್ದಾಣದಲ್ಲಿ ಲಜಪತರಿಗೆ ಅವರ ಗೆಳೆಯರು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬಂದ ಅಭಿಮಾನಿಗಳು ಸೇರಿದಂತೆ ದೊಡ್ಡ ಸಮೂಹವೊಂದು ಬೀಳ್ಕೊಡುಗೆ ನೀಡಿತು. ಆಗಸ್ಟ್ 29ರಂದು ಅವರು ಸ್ಟೀಮರ್ ಹಡಗು ಹತ್ತಿ ಮರ್ಸೂರ್ರದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು.

ಆ ವೇಳೆಗೆ, ತಿಲಕರಿಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿತ್ತು. 'ವಂದೇ ಮಾತರಂ' ಪತ್ರಿಕೆಗಳಲ್ಲಿನ ಲೇಖನಗಳ ಕಾರಣಗಳನ್ನು ಮುಂದೆ ಮಾಡಿ ಅರವಿಂದ ಘೋಷರನ್ನು ಬಂಧಿಸಲಾಗಿತ್ತು. ನ್ಯಾಯ ಹೋರಾಟದ ವ್ಯವಸ್ಥೆಗಾಗಿ ವಂತಿಕೆ ನೀಡುವಂತೆ ಅವರ ಸಹೋದರಿ ಸಾರ್ವಜನಿಕ ನಿವೇದನೆ ಮಾಡಿದ್ದರು. ಪಂಜಾಬ್ ಮತ್ತು ಇತರ ಕಡೆಗಳಲ್ಲಿ ದೇಶೀಯವಾದಿಗಳು ನಡೆಸುತ್ತಿದ್ದ ಪತ್ರಿಕೆಗಳ ವಿರುದ್ಧ ರಾಜದ್ರೋಹದ ಹಾಗೂ ಇತರ ಆರೋಪಗಳ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿತ್ತು.

ಲಾಲ್-ಬಾಲ್-ಪಾಲ್ ತ್ರಿವಳಿ ಪೈಕಿ ಹಿಂದಿನ ವರ್ಷವಷ್ಟೇ ಲಾಲ್ ಮರಳಿದ ಬೆನ್ನಿಗೆ ಬಾಲ್‌ರನ್ನು ಆರು ವರ್ಷಗಳ ಶಿಕ್ಷೆ ಕೊಟ್ಟು ಗಡಿಪಾರು ಮಾಡಲಾಗಿತ್ತು. ಆ ಶಿಕ್ಷೆ ಅವಧಿಯವರೆಗೆ ಅವರ ಉತ್ಕೃಷ್ಟ ಕೃತಿ 'ಗೀತಾ ರಹಸ್ಯ' ಬರೆಯಲು ಅನುವಾಯಿತು. ಲಾಲರು ಆ ಕ್ಷಣದಲ್ಲಿ ಪಕ್ಷ ರಾಜಕಾರಣದಿಂದ ದೂರ ಉಳಿದಿದ್ದರೂ ಸಾರ್ವಜನಿಕರಲ್ಲಿ ಆ ತ್ರಿವಳಿಗಳ ಬಗ್ಗೆ ಇದ್ದ ಗೌರವ, ಅಭಿಮಾನಗಳಿಗೆ ಕಿಂಚಿತ್ತೂ ಲೋಪ ತಂದಿರಲಿಲ್ಲ. ರಾಷ್ಟ್ರೀಯ ರಾಜಕಾರಣವನ್ನು ರೂಪಿಸುವುದರಲ್ಲಿ ತಿಲಕರೊಂದಿಗೆ ಜವಾಬ್ದಾರಿಯುತವಾಗಿ, ಪ್ರತಿಷ್ಠೆಯಿಂದ ಸಹಭಾಗಿತ್ವ ನೀಡಿದವರು ಎಂಬ ಅಭಿಮಾನ ಅರವಿಂದ ಘೋಷರ ಬಗ್ಗೆ ಜನತೆಯಲ್ಲಿ ಮೂಡಿತ್ತು. ಅವರು ಸಹ ಹೆಚ್ಚು ಕಾಲ ಸ್ವತಂತ್ರರಾಗಿ ಉಳಿಯಲು ಆಗಲಿಲ್ಲ.

ಸೂರತ್ ಅಧಿವೇಶನದ ನಂತರ ಪಾಲ್ ದಕ್ಷಿಣ ಪ್ರಾಂತ್ಯದಲ್ಲಿ ವಿಜಯಪ್ರದ ಪ್ರವಾಸ ಕೈಗೊಂಡಿದ್ದರು. ಅವರ ವಿಜಯದ ಕಹಳೆಗೆ ಎಲ್ಲೆಡೆ ಪ್ರಚಂಡ ಪ್ರೋತ್ಸಾಹ ದೊರೆಯುತ್ತಿತ್ತು. ಅವರು ತಮ್ಮ ಕಾರ್ಯಕ್ಷೇತ್ರವನ್ನು ಇನ್ನಷ್ಟು ಹರವು ಮಾಡಿಕೊಳ್ಳಲು ನಿಶ್ಚಯಿಸಿದರು. ಯುರೋಪಿಗೆ ತೆರಳಿ 'ಬ್ರಿಟಿಷ್ ಜನತೆಗೆ ಹಾಗೂ ಅದರ ನಾಯಕರಿಗೆ, ಯುರೋಪ್ ಮತ್ತು ಅಮೆರಿಕಗಳಲ್ಲಿಯೂ ನಾಯಕರ ಅಭಿಮತಗಳನ್ನು ತಿಳಿಸಲು' ಅವರು ಬಯಸಿದರು. 'ಭಾರತದಲ್ಲಿ ಕ್ರಾಂತಿ ನಡೆದೇ ತೀರುತ್ತದೆ. ಆ ಕ್ರಾಂತಿ ಶಾಂತಿಯುತವಾಗಿ ನಡೆಯುತ್ತದೆಯೋ ಅಥವಾ ಬೇರೆ ಮುಖದಲ್ಲಿ ಇರುತ್ತದೆಯೋ ಅದು ಬ್ರಿಟಿಷ್ ಜಾತಿ ಅನುಸರಿಸುವ ನೀತಿಯ ಮೇಲೆ ಅವಲಂಬಿತವಾಗಿರುತ್ತದೆ' ಎಂದು ಅವರು ತಿಳಿಸಲು

ಯೋಜಿಸಿದರು. ತಿಲಕರ ನಿಕಟ ಬೆಂಬಲಿಗರಾದ ಜಿ. ಎಸ್. ಕಪರ್ದೆ ಸಹ ಅದೇ ಸಮಯದಲ್ಲಿ ಯುರೋಪಿಗೆ ಭೇಟಿ ನೀಡಿದರು. ಲಜಪತರ ಪಾಲಿಗೆ ರಾಜಕೀಯ ವಿದ್ಯಮಾನಗಳು ಆಶಾದಾಯಕ ಚಿತ್ರಣವನ್ನು ನೀಡಲು ಸಾಧ್ಯವಿರಲಿಲ್ಲ.

ಕಾಂಗ್ರೆಸ್ ಇಬ್ಭಾಗ ರಾಜಕೀಯ ಆಂದೋಲನವನ್ನು ದುರ್ಬಲಗೊಳಿಸಿತು. ಅದರ ಫಲಿತ ಹಾಗೆ ಆಗುತ್ತದೆ ಎಂಬ ಭಯವೂ ಅವರಿಗೆ ಆ ಮೊದಲೇ ಉಂಟಾಗಿತ್ತು. ಸರ್ಕಾರವು ದಬ್ಬಾಳಿಕೆ ನೀತಿಯನ್ನು ಅನುಸರಿಸತೊಡಗಿತು. ಕಾಂಗ್ರೆಸ್ ಇಬ್ಭಾಗ ಅದಕ್ಕೆ ಪೂರಕವಾಯಿತು. ರಾಷ್ಟ್ರೀಯ ಉತ್ಸಾಹದ ಅಲೆ ತಾನೇ ತಾನಾಗಿ ಕುಗ್ಗಿರಲಿಲ್ಲ. ಆದರೆ ಅದಕ್ಕೆ ನಿಶ್ಚಿತವಾದ ಗುರಿ ಧೋರಣೆಯ ಗತ್ತೊಂದು ಬೇಕಾಯಿತು. ಬಹಿರಂಗ ಆಂದೋಲನದಲ್ಲಿ ತಮಗೆ ತೃಪ್ತಿಕರ ಎನಿಸುವ ಅವಕಾಶವಿಲ್ಲವೆಂಬುದನ್ನು ಮನಗಂಡ ಉತ್ಸಾಹಿ ಯುವಕರು ಭಯೋತ್ಪಾದನೆಯ ಭೂಗತ ಚಳವಳಿಯ ಸದಸ್ಯರಾಗಿ ಪರಿವರ್ತನೆಗೊಳ್ಳತೊಡಗಿದರು. ಬಂಗಾಳದಲ್ಲಿ ವಿಖ್ಯಾತ ಭಯೋತ್ಪಾದಕ ಪ್ರಕರಣವೊಂದರ ವಿಚಾರಣೆಯೂ ನಡೆಯಿತು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಲಜಪತರಿಗೆ ಮಿಂಚಿನಂತೆ ಮುಟ್ಟಿದ ಸುದ್ದಿಯಂತೆ ಆ ಪ್ರಕರಣ ಉಗ್ರವಾಗಿತ್ತು. ಸರ್ಕಾರಿ ಸಾಕ್ಷಿದಾರ ನರೇಂದ್ರ ಗೊಸ್ವಾಮಿಯನ್ನು ಕನಯಲಾಲ್ ದತ್ತ ಮತ್ತು ಸುರೇಂದ್ರನಾಥ್ ಬೋಸ್ ಕೊಲೆ ಮಾಡಿದ ವರದಿ ಅದಾಗಿತ್ತು.

1905ರಲ್ಲಿ ಲಜಪತರು ಕಾಂಗ್ರೆಸ್ ನಿಯೋಗದ ಸದಸ್ಯರಾಗಿ ಯುರೋಪಿಗೆ ಭೇಟಿ ಕೊಟ್ಟಿದ್ದರು. ನಿಯೋಗದ ಕೆಲಸದ ಜೊತೆಗೆ ಅಲ್ಲಿನ ಬಹುತೇಕ ಸ್ಥಳಗಳನ್ನು ನೋಡುವ ಮತ್ತು ಅಧ್ಯಯನ ಮಾಡುವ ಆಸಕ್ತಿ ತೋರಿದ್ದರು. ಈಗ ಅವರಿಗೆ ಅಂತಹ ನಿರ್ದಿಷ್ಟವಾದ ಯಾವುದೇ ನಿಮಂತ್ರಣವಿರಲಿಲ್ಲ. ನಿರ್ದಿಷ್ಟವಾದ ಸಂದೇಶವೂ ಇರಲಿಲ್ಲ. ತಾವೇಕೆ ಈ ಪ್ರವಾಸ ಕೈಗೊಳ್ಳಬೇಕಾಯಿತು ಎಂಬುದರ ಬಗ್ಗೆ ಅವರು ಹಡಗಿನಿಂದಲೇ ಬರೆದ ಸುದೀರ್ಘ ಪತ್ರವೊಂದರಲ್ಲಿ ವಿವರಿಸಿದ್ದಾರೆ. ಆ ಪತ್ರವನ್ನು ಅವರು ಜಸ್ವಂತ್‌ರಾಯ್ ವಿಳಾಸಕ್ಕೆ ಕಳುಹಿಸಿದರು. ನಂತರ ಅದು 'ದಿ ಪಂಜಾಬಿ' ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಅವರು ಆ ಪತ್ರ ಬರೆದ ಉದ್ದೇಶವೂ ಅದೇ ಆಗಿತ್ತು.

''ಕಳೆದ ಏಪ್ರಿಲ್ ತಿಂಗಳಿನಲ್ಲಿ ನನ್ನ ಕೆಲವು ಪ್ರಮುಖ ಗೆಳೆಯರು ಮತ್ತೆ ನಾನು ಇಂಗ್ಲೆಂಡಿಗೆ ಭೇಟಿ ಕೊಡಲು ಸಲಹೆ ಮಾಡಿದರು'' ಎಂದು ಪೀಠಿಕೆ ಹಾಕಿರುವ ಅವರು ಆಗ ತಾವು ಆ ಸಲಹೆಯನ್ನು ನಿರಾಕರಿಸಿದ್ದಾಗಿಯೂ, ಅಗಾಧವಾದ ಬರ ಪರಿಹಾರ ಕೆಲಸಗಳು ಕೈಯಲ್ಲಿ ಇದ್ದುದ್ದರಿಂದಲೂ ಆ ಸಲಹೆಯನ್ನು ಒಪ್ಪಲಿಲ್ಲವೆಂದಿದ್ದಾರೆ. 'ಬಾಂಬ್ ಬೆದರಿಕೆ ಹಿನ್ನಲೆಯಲ್ಲಿ ವ್ಯಾಪಕ ಶೋಧಗಳು ಅನಿವಾರ್ಯವಾಗಿದ್ದವು. ರಾಜದ್ರೋಹದ ಆರೋಪದ ಮೇರೆಗೆ ಮೇಲಿಂದ ಮೇಲೆ ಬಂಧನಗಳು ನಡೆಯುತ್ತಿದ್ದವು. ಅಂತಹ ವಿಷಯಗಳಲ್ಲಿ ನನಗೆ ಆಸಕ್ತಿಯೂ ಇರಲಿಲ್ಲ.' ಎಂದು ಅವರು ಆಗಿನ ಪ್ರಸಂಗವನ್ನು ಪ್ರಸ್ತಾಪ ಮಾಡಿದ್ದಾರೆ.

ತಮ್ಮನ್ನು ಇಂಗ್ಲೆಂಡಿಗೆ ಎರಡನೇ ಬಾರಿಗೆ ಭೇಟಿ ಕೊಡುವಂತೆ ಮಾಡಿದ ಪ್ರೇರಣೆಯನ್ನು ಜಸ್ವಂತ್‌ರಾಯ್ ಮತ್ತು ಅವರ ಮೂಲಕ ಪತ್ರಿಕೆಯ ಓದುಗರಿಗೆ

ತಿಳಿಸುತ್ತಾ ಅವರು "ನಿಜವಾಗಿಯೂ ನನಗೆ ಲಾಹೋರ್ ಜೀವನ ಬೇಸರ ಹುಟ್ಟಿಸಿತ್ತು ಸಜ್ಜನತೆಯ ಬದುಕೊಂದನ್ನು ನೀತಿ ಭ್ರಷ್ಟಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ನಾನು ಎಣಿಸಿರಲಿಲ್ಲ. ದೇಶೋಚ್ಚಾಟನೆಯಾದ ನಂತರ ಈ ಬಗ್ಗೆ ಸ್ವಲ್ಪ ಬೆಳವಣಿಗೆಗಳು ನನ್ನ ಗಮನಕ್ಕೆ ಬರತೊಡಗಿವವು. ದೇಶೋಚ್ಚಾಟನೆ ಹಾಗೂ ನಂತರದ ಬೆಳವಣಿಗೆಗಳು ನೈತಿಕ ಮೌಲ್ಯ ಪತನಕ್ಕೆ ಪ್ರಮುಖವಾದ ವ್ಯಕ್ತಿಗಳು ಹೇಗೆ ಸಂಚು ನಡೆಸಿದರು ಎಂಬುದು ತಿಳಿಯುತ್ತಾ ಬಂದಿತು. ಅವರ ಆ ಪ್ರಯತ್ನಗಳಿಗೆ ಅಡೆತಡೆ ಇರಲಿಲ್ಲವೇನೋ ಅನಿಸುತ್ತದೆ.

ಪ್ರಾಮಾಣಿಕತೆಯುಳ್ಳ ದೇಶಿಯವಾದಿಗಳು ನೇರ ನಡೆ ನುಡಿಯ ನೈಜ ಸೌಮ್ಯವಾದಿಗಳ ಜೊತೆ ಖಂಡಿತವಾಗಿಯೂ ವಿಶ್ವಾಸಪೂರ್ವಕವಾಗಿ ಒಡನಾಡಬಹುದು. ಆದರೆ ಸೋಗಲಾಡಿಗಳು, ಆಷಾಡಭೂತಿಗಳು ಮತ್ತು ದೇಶದ್ರೋಹಿಗಳಿರುವ ಕಡೆಗಳಲ್ಲಿ ಒಡನಾಟ ಖಂಡಿತವಾಗಿಯೂ ಸಾಧ್ಯವಿಲ್ಲ. ಪ್ರಾಮಾಣಿಕ ವ್ಯಕ್ತಿಗಳಿಗೆ ನಿಕೃಷ್ಟರಾಗಿಯೂ, ಸೌಮ್ಯವಾದಿಗಳಾಗಿಯೂ, ಉಗ್ರವಾದಿಗಳಾಗಿಯೂ ನಡೆದುಕೊಳ್ಳುವವರೊಂದಿಗೆ ಕೆಲಸ ಮಾಡುವುದು ಹೆಮ್ಮೆ ಎನಿಸುತ್ತದೆ. ಆದರೆ ವೈಯಕ್ತಿಕ ಹಿತಾಸಕ್ತಿಗಾಗಿ ತಮ್ಮ ಸಂಪತ್ತಿನ ವರ್ಧನೆಗಾಗಿ ಎಂತಹ ದ್ರೋಹಕ್ಕೂ ಎಳಸದ ಬೇಹುಗಾರಿಕೆ ಜನರೊಂದಿಗೆ ಒಡನಾಡುವುದು ಸಾಧ್ಯವೇ...?''

ಈ ಹಿಂದೆ ನಾವು ಎದುರಿಸಿರುವ ಬಿಕ್ಕಟ್ಟುಗಳ ಸಂದರ್ಭದಲ್ಲಿ ರಾಷ್ಟ್ರೀಯವಾದಿಗಳು ಮತ್ತು ಸೌಮ್ಯವಾದಿಗಳೊಂದಿಗೆ ನಿಷ್ಠಾವಂತ ಸಹವರ್ತಿಗಳಾಗಿ ನಡೆದುಕೊಂಡ ಕೆಲವರ ವರ್ತನೆಗಳ ಬಗ್ಗೆ ಲಾಹೋರಿನಲ್ಲಿ ಕೇಳಿ ಬರುತ್ತಿರುವ ಮಾತುಗಳಲ್ಲಿ ಅರ್ಧದಷ್ಟು ನಂಬುವುದಾದರೂ ''ಅಂತಹ ದೇಶಭಕ್ತರಿಂದ ನಾಡನ್ನು ಆ ದೇವರೇ ಕಾಪಾಡಬೇಕಾಗುತ್ತದೆ.'' ಸೌಮ್ಯವಾದಿಗಳಲ್ಲೂ ಸೌಮ್ಯವಾದಿಗಳು ಎನಿಸಿದ ಮಾಳವೀಯ ಹಾಗೂ ಬಾಬು ಸುರೇಂದ್ರನಾಥ ಅಂತಹವರು ಇದ್ದರು. ಲಜಪತರು ಅವರ ಬಗ್ಗೆ ಯಾವುದೇ ಅಪಸ್ವರ ಎತ್ತಿಲ್ಲ.

ಆದರೆ, -''ಒಂದಲ್ಲ ಒಂದು ಮಾರ್ಗದಿಂದ ಹಣಕ್ಕಾಗಿ ರಾಷ್ಟ್ರೀಯವಾದಿಗಳೊಂದಿಗೆ, ಸೌಮ್ಯವಾದಿಗಳೊಂದಿಗೆ ಅಥವಾ ನಿಷ್ಠಾವಂತರೊಂದಿಗೆ ತಮ್ಮ ಒಡನಾಟವನ್ನು ತೋರಗೊಡುವವರ ಬಗ್ಗೆ ನೀವೇನನ್ನುತ್ತೀರಿ. ತಮ್ಮ ಸಂಪತ್ತನ್ನು ಮತ್ತು ಭದ್ರತೆಯನ್ನು ಏನಕೇನವಾಗಿ ಹೆಚ್ಚಿಸಿಕೊಳ್ಳುವ ಏಕೈಕ ಉದ್ದೇಶದಿಂದ ಜನರು ಮಾಹಿತಿದಾರರಾಗಿಯೋ, ಬೇಹುಗಾರರಾಗಿಯೋ ಘಾತುಕ ಕೆಲಸದಲ್ಲಿ ತೊಡಗುತ್ತಿದ್ದವರ ಬಗ್ಗೆ ನೀವೇನನ್ನುತ್ತೀರಿ. ಸದ್ಯದಲ್ಲೇ ಲಾಹೋರ್ ಇಂತಹ ಜನರಿಂದ ತುಂಬಿ ಹೋಗಿದೆ. ಯಾರೊಂದಿಗೆ ವಿಶ್ವಾಸಪೂರ್ವಕವಾಗಿ ಮಾತನಾಡುವುದೋ ಗೊತ್ತಾಗುವುದೇ ಇಲ್ಲ. ಯಾರನ್ನು ನಂಬಬೇಕೋ ತಿಳಿಯುವುದಿಲ್ಲ. ಗೌರವಾನ್ವಿತ ಸ್ಥಾನಗಳನ್ನು ಹೊಂದಿರುವ ಉತ್ತಮ ಪೋಷಾಕುಗಳನ್ನು ತೊಡುವ ಜನರು ಕೆಲವರಿದ್ದಾರೆ. ಅವರ ಏಕೈಕ ಕೆಲಸವೆಂದರೆ ಅಧಿಕಾರಸ್ಥರಿಗೆ ಸುಳಿವು ಹಾಗೂ ಮಾಹಿತಿಗಳನ್ನು ಒದಗಿಸುವುದಷ್ಟೇ. ಅವು ನಿಜವಿರಲು ಬಹುದು, ಸುಳ್ಳಿರಲುಬಹುದು. ಅಥವಾ ಉತ್ಪ್ರೇಕ್ಷಿತವೂ ಆಗಿರಬಹುದು. ಅದರ ಆಗುಹೋಗುಗಳು ಅವರಿಗೆ ಸಂಬಂಧಿಸಿದ್ದಲ್ಲ.

ಕಳೆದ ಎರಡು ಮೂರು ತಿಂಗಳಿಂದ ಅತಿ ಹೆಚ್ಚು ಆಹ್ಲಾದಕರ ವಾತಾವರಣದಲ್ಲಿ ಆರ್ಯಸಮಾಜದ ಕೆಲಸವನ್ನು ಒಂದೇ ತೆರನಾಗಿ ಮಾಡುತ್ತಾ ಬಂದಿದ್ದೇನೆ. ಆರ್ಯ ಸಮಾಜ ಅಥವಾ ಬ್ರಹ್ಮ ಸಮಾಜ ಇಲ್ಲವೇ ಬೇರೆ ಯಾವುದೇ ಸಭೆ, ಸಮಾಜದಲ್ಲಿ ತಮ್ಮ ಪಾಡಿಗೆ ತಾವು ಗಂಭೀರವಾಗಿ ಸಾಮಾಜಿಕ ಹಾಗೂ ಧಾರ್ಮಿಕ ಕೆಲಸಗಳನ್ನು ನಿರ್ವಹಿಸುವ ಮಂದಿ ಖಂಡಿತವಾಗಿಯೂ ನಂಬಿಕೆಗೆ ಅರ್ಹರು...ಲಾಹೋರ್ ಸಮಾಜವು ಕಾಂಗ್ರೆಸ್ಸಿನ ಈ ಹಿಂದಿನ ಬಿಕ್ಕಟ್ಟಿನಲ್ಲಿ ಎಂತಹ ನೈತಿಕ ಅನಾಹುತ ಉಂಟು ಮಾಡಿದೆ ಎಂಬುದನ್ನು ಲಾಹೋರಿನಿಂದ ಹೊರಗಿರುವ ಜನ ಊಹಿಸಲು ಸಾಧ್ಯವಿಲ್ಲ. ಅಜೀವ ಗೆಳೆಯರಂತೆ ಕಂಡು ಬಂದ ಜನರು ಕ್ಷಣಿಕ ಗಳಿಕೆಗಾಗಿ ದ್ರೋಹವೆಸಗಿದ್ದಾರೆ... ಅಜೀವ ಶತೃಗಳಂತೆ ಕಂಡುಬಂದವರೂ ತಮ್ಮ ಅತ್ಯಾಸೆಗಳಿಗೆ ಸಹಜವಾಗಿ ಆಕರ್ಷಿತರಾಗಿದ್ದಾರೆ.

ನನ್ನ ವಿರುದ್ಧ ನಿರಂತರವಾಗಿ ಬೇಹುಗಾರಿಕೆ ನಡೆಯುತ್ತಾ ಬಂದದ್ದು ತೀವ್ರ ಜಿಗುಪ್ಸೆಗೆ ಈಡು ಮಾಡಿದೆ. ಹೀಗಾಗಿ ಕೆಲವು ಕಾಲದ ಮಟ್ಟಿಗಾದರೂ ನಾನು ನಿಮ್ಮೆಲ್ಲರಿಂದ, ನನ್ನ ಕುಟುಂಬದಿಂದ ಮತ್ತು ನನ್ನ ಕೆಲಸ ಕಾರ್ಯಗಳಿಂದ ಏಕೆ ದೂರವಾಗುತ್ತಿದ್ದೇನೆಂದು ನಿಮಗೆ ಹಾಗೂ ಇತರ ಗೆಳೆಯರಿಗೆ ಈಗ ಅರ್ಥವಾಗಿರಬಹುದು. ಭಾರತದಿಂದ ಸ್ವಲ್ಪಕಾಲ ದೂರ ಉಳಿಯುವ ಈ ಯತ್ನದಲ್ಲಿ ನನ್ನ ಮನಸ್ಥಿತಿ ಸಮತೋಲನ ಕಾಪಾಡಿಕೊಳ್ಳುತ್ತದೆ. ಮುಂದಿನ ಕೆಲಸದಲ್ಲಿ ನಾನು ಹೆಚ್ಚು ವಿಶ್ವಾಸಪೂರ್ಣದಿಂದ ತೊಡಗಲು ಸಾಧ್ಯವಾಗುತ್ತದೆ ಎಂದು ನಾನು ಭರವಸೆ ಹೊಂದಿದ್ದೇನೆ.''

ಆ ಹೊರಗಿಟ್ಟ ಪರಿಸ್ಥಿತಿಯಿಂದಾಗಿ ಲಜಪತರು ವಿದೇಶಕ್ಕೆ ಹೋಗಬೇಕಾಯಿತು. ಇಲ್ಲಿದ್ದುಕೊಂಡೇ ಹೆಚ್ಚು ಕಾಲ ಅದನ್ನು ಸಹಿಸುವುದು ಅವರಿಗೆ ಸಾಧ್ಯವಾಗಲಿಲ್ಲ! ಬೇಹುಗಾರಿಕೆಯ ಕಿರುಕುಳ ಅವರ ಪ್ರಯಾಣದ ಸಂದರ್ಭದಲ್ಲೂ ಮುಂದುವರೆಯಿತು. ಅದರ ಬಗ್ಗೆ ಅವರಿಗೆ ಕೆಲವು ಅನುಭವವಾಗತೊಡಗಿತು. ಕೆಲವು ಪ್ರಸಂಗಗಳಲ್ಲಿ ಹಾಸ್ಯಾಸ್ಪದವೂ ಆಗುತ್ತಿದ್ದವು. ಲಾಹೋರಿನಿಂದ ಹೊರಟ ನಂತರ ಲಜಪತ್‌ರಾಯ್ ಪತ್ರಿಕೆಗೆ ಬರೆದಿರುವ ಲೇಖನದ ಕೆಲವು ಭಾಗಗಳಲ್ಲಿ ಅವುಗಳ ಬಗ್ಗೆ ನಾವು ಓದಬಹುದು.

ಲಾಲಾ ಲಜಪತ್‌ರಾಯ್ ಕಾಯ್ದಿರಿಸಿಕೊಂಡಿದ್ದ ದ್ವಿತಿಯ ದರ್ಜೆ ಬೋಗಿಯ ಪಕ್ಕದಲ್ಲೇ ಓರ್ವ ಮುಸಲ್ಮಾನ ಡೆಪ್ಯುಟಿ ಪೊಲೀಸ್ ಸುಪರಿಂಟೆಂಡೆಂಟ್ ಪ್ರಥಮ ದರ್ಜೆ ಸಲೂನ್‌ನಲ್ಲಿದ್ದರು. ಆ ಮುಸ್ಲಿಂ ಅಧಿಕಾರಿ ಲಜಪತರೊಂದಿಗೆ ಹಡಗಿನಲ್ಲಿ ಪ್ರಯಾಣ ಮುಂದುವರಿಸಲಿಲ್ಲವೆಂದು ಕಂಡು ಬರುತ್ತದೆ. ಆದರೆ ಆ ಜಾಗವನ್ನು ಓರ್ವ ಬ್ರಿಟಿಷ್ ಅಧಿಕಾರಿ ತುಂಬಿಕೊಂಡ. ಆದರೆ ಆತನಿಗೆ ಅಲ್ಲಿರುವುದು ಸುಲಭ ಸಾಧ್ಯವಾಗಲಿಲ್ಲ. ಮಾರ್ಸಿಲಿಸ್‌ನಲ್ಲಿ ತಮ್ಮ ಯುವ ನಾಯಕನನ್ನು ಸ್ವಾಗತಿಸಲು ಭಾರತೀಯ ವಿದ್ಯಾರ್ಥಿಗಳ ಉತ್ಸಾಹಿ ಗುಂಪೊಂದು ನೆರೆದಿತ್ತು. ಆ ಗುಂಪು ಆ ಅಧಿಕಾರಿಯನ್ನು ಎಳೆದು ಹಾಕಿತು. ಆತ ಪ್ರಯಾಣಕ್ಕೆ ಬೇರೆ ವ್ಯವಸ್ಥೆ ಮಾಡಿಕೊಂಡು ಕೊನೆಗೂ ಲಂಡನ್ ತಲುಪಿದ. ಆತ ಲಜಪತರ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದ!

ಲಜಪತರು ಜಸ್ವಂತ್‌ರಾಯ್‌ಗೆ ಬರೆದ ಪತ್ರದಲ್ಲಿ ಪಂಜಾಬಿನಲ್ಲಿ ರಾಜಕೀಯ ಕೆಲಸಗಳು ಹೇಗೆ ಸಾಗಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದ್ದಾರೆ. ಪಂಜಾಬ್

ಸೌಮ್ಯವಾದಿಗಳು ಮತ್ತು ಉಗ್ರವಾದಿಗಳ ಹಣೆಪಟ್ಟಿಕೊಂಡು ಇಬ್ಭಾಗವಾಗಬಾರದು ಎಂಬ ಬಗ್ಗೆ ಸುದೀರ್ಘ ಪ್ರಸ್ತಾಪ ಮಾಡಿದ್ದಾರೆ. ಯಾವ ಬಗೆಯ ರಾಜಕೀಯ ನಾಯಕರು ಮತ್ತು ಕಾರ್ಯಕರ್ತರನ್ನು ನಿಯೋಜಿಸಿಕೊಳ್ಳಬೇಕು ಮತ್ತು ಅವರಿಗೆ ಹೇಗೆ ಪ್ರೋತ್ಸಾಹ ನೀಡಬೇಕು ಎಂಬ ಬಗ್ಗೆಯೂ ಅವರು ಚಿಂತನೆ ನಡೆಸಿದ್ದಾರೆ.

ಆ ಪತ್ರದ ಕೊನೆಯಲ್ಲಿ ಹಡಗಿನಲ್ಲಿ ತಮಗೆ ದೊರೆತ ಸಹವರ್ತಿಗಳ ಬಗ್ಗೆ ಕೆಲವು ಪ್ರಸ್ತಾಪಗಳನ್ನು ಮಾಡಿದ್ದಾರೆ. ಬ್ರಿಟಿಷ್ ವಿಶ್ವವಿದ್ಯಾಲಯಗಳಲ್ಲಿ ಕಲಿಕೆಗಾಗಿ ತೆರಳಿದ್ದ ಒಂದು ಡಜನ್ ಪಂಜಾಬಿ ವಿದ್ಯಾರ್ಥಿಗಳು ಅವರಲ್ಲಿದ್ದರು. ಎಲ್ಲರೂ ಸೇರಿ ಆ ಹಡಗಿನಲ್ಲಿದ್ದ ಭಾರತೀಯರ ಸಂಖ್ಯೆ 30ರಿಂದ 40. ಆ ಪೈಕಿ ಠಾಗೂರ್ ಮನೆತನಕ್ಕೆ ಸೇರಿದ ಓರ್ವ ಬಂಗಾಳಿ ಯುವತಿಯೂ ಇದ್ದಳು. ಜೊತೆಗೆ ಪಿ. ಚೌಧರಿ ಸಹ. 'ಈ ದಿನ ನಮಗೆ ಚಪಾತಿ ಮತ್ತು ತರಕಾರಿಗಳ ಪಲ್ಯ ದೊರೆಯಿತು. ಹುಡುಗರು ಬಹುದಿನಗಳಿಂದ ರೊಟ್ಟಿಗಾಗಿ ತಣಿದಿದ್ದರು. ಅವರಿಗೆ ಇಂದು ಸಿಕ್ಕಿದ ಈ ಬದಲಾವಣೆ ತುಂಬಾ ಖುಷಿ ಕೊಟ್ಟಿತು.'

ಲಜಪತರು ಯಾವುದೇ ನಿರ್ದಿಷ್ಟ ಸಂದೇಶವಿಲ್ಲದೆ ಹೊರಟ್ಟಿದ್ದವರು. ಅವರೇ ಹೇಳಿರುವಂತೆ ಜಿಗುಪ್ಸೆಗೊಂಡು ದೇಶದಿಂದ ಹೊರಕ್ಕೆ ಹೊರಟಿದ್ದರು. ತಮ್ಮ ಸುತ್ತಮುತ್ತಲಿದ್ದ ಸಾರ್ವಜನಿಕ ಜೀವನದಲ್ಲಿ ನೈತಿಕ ಮೌಲ್ಯದ ಪತನವನ್ನು ಕಂಡು ಅವರ ಹೃದಯ ನೊಂದು ಆ ಕ್ರಮಕ್ಕೆ ಪ್ರೇರೇಪಿಸಿತ್ತು. ಹಾಗೆಂದ ಮಾತ್ರಕ್ಕೆ ತನ್ನ ದೇಶದ ಹಿತಕ್ಕಾಗಿ ಯಾವುದೇ ಉತ್ತಮ ಅವಕಾಶವನ್ನು ಶುಷ್ಕವಾಗಿ ಹೋಗಗೊಡುವ ಸ್ವಭಾವ ಅವರದಾಗಿರಲಿಲ್ಲ. ಅಂತಹ ಅವಕಾಶವನ್ನು ಯಾವ ಕಾರಣಗಳಿಂದಲೂ ನಿರರ್ಥಕಗೊಳಿಸುತ್ತಿರಲಿಲ್ಲ. ಅವರು ಓರ್ವ ಅಪ್ರತಿಮ ಸುಧಾರಣಾವಾದಿ ಮತ್ತು ಪ್ರಚಾರಕ ಎಂಬುದರ ಪರಿಚಯ ನಮಗೆ ಈಗಾಗಲೇ ಆಗಿದೆ. ತಮ್ಮ ಕಾರ್ಯಗಳಿಗಾಗಿ ಅವಕಾಶಗಳನ್ನು ಅವರೇ ಸೃಷ್ಟಿಸಿಕೊಳ್ಳುವಷ್ಟು ಕ್ರಿಯಾಶೀಲರಾಗಿದ್ದವರು. ಲಭ್ಯವಾಗುತ್ತಿದ್ದ ಎಲ್ಲಾ ಅವಕಾಶಗಳನ್ನು ತಮ್ಮ ಪರವಾಗಿ ಬಳಸಿಕೊಳ್ಳುತ್ತಿದ್ದವರು ಅವರು. ಪತ್ರಿಕೆಗಳ ಮೂಲಕ ಅಭಿವ್ಯಕ್ತಗೊಳಿಸುವುದು ಒಂದು ಪರಿಯಾದರೆ, ವೇದಿಕೆಗಳಲ್ಲಿ ಭಾಷಣ ಮಾಡಿ ಜನರ ಮೇಲೆ ಪ್ರಭಾವ ಬೀರುತ್ತಿದ್ದದ್ದು ಇನ್ನೊಂದು ಮಾಧ್ಯಮವಾಗಿತ್ತು.

ಭಾರತೀಯ ಆಂದೋಲನದ ಶತ್ರುಗಳು ಇಂಗ್ಲಿಷ್ ಪತ್ರಿಕೆಗಳಲ್ಲಿ ವಿಕೃತ ಬರಹಗಳನ್ನು ನೀಡಿದ್ದು ಕಂಡು ಬಂದ ಕೂಡಲೇ ಲಜಪತರು ಆ ಅಪಚಾರವನ್ನು ಬಯಲಿಗೆಳೆದು ಭೂತ ಬಿಡಿಸುತ್ತಿದ್ದರು. ಮ್ಯಾಂಚೆಸ್ಟರ್ ಗಾರ್ಡಿಯನ್ ಮತ್ತು ಡೈಲಿ ನ್ಯೂಸ್‌ಗಳಂತಹ ಜನಪ್ರಿಯ ಬ್ರಿಟಿಷ್ ನಿಯತಕಾಲಿಕೆಗಳು ಲಜಪತರ ಸಂದರ್ಶನ ನಡೆಸಿದವು. ಬ್ರಿಟಿಷ್ ಪತ್ರಿಕೋದ್ಯಮದಲ್ಲಿ ಅತ್ಯುನ್ನತ ಸ್ಥಾನದಲ್ಲಿದ್ದ ಜನರು ಅವರ ಸಂದರ್ಶನಗಳನ್ನು ತೆಗೆದುಕೊಂಡರು. ಆ ಪೈಕಿ ನೇವಿನ್‌ಸನ್ ಮತ್ತು ಸ್ಟೆಡ್ ಪ್ರಮುಖರು. ರಿವ್ಯೂ ಆಫ್ ರಿವ್ಯೂಸ್ ಪತ್ರಿಕೆಗಾಗಿ ಲಜಪತರನ್ನು ಸಂದರ್ಶಿಸಿದ ಸ್ಟೆಡ್ ಧುತ್ತನೆ 'ನಿಮ್ಮನ್ನು ಭಾರತದ ಬ್ರಿಟಿಷ್ ವೈಸ್‌ರಾಯ್ ಆಗಿ ನೇಮಿಸಿದರೆ ನೀವೇನು ಮಾಡುತ್ತೀರಿ?' ಎಂದು ಈ ಭಾರತೀಯ ನೇತಾರರನ್ನು ಪ್ರಶ್ನಿಸಿದರು. ಅಂತಹ ಪ್ರಶ್ನೆ ಎದುರಾಗಬಹುದೆಂದು ಲಜಪತರು

ನಿರೀಕ್ಷಿಸಿರಲಿಲ್ಲ. ಹಾಗೆಂದು ಅವರು ಆ ಪ್ರಶ್ನೆಯನ್ನು ನಿರರ್ಥಕಗೊಳಿಸಲಿಲ್ಲ. 'ಇತರ ಎಲ್ಲಾ ವ್ಯವಸ್ಥೆಗಳನ್ನು ಬದಿಗಿರಿಸಿ ಕಟ್ಟಾ ತಾತ್ಕಾಲಿಕ ನೇಮಕವಾಗಿ ನಿರ್ವಹಿಸುತ್ತೇನೆ.' ಉತ್ತರಕ್ಕೆ ಅವರು ವಿವರಣೆಯನ್ನು ಒದಗಿಸುತ್ತಾ ಪ್ರಾಂತೀಯ ಮತ್ತು ಕೇಂದ್ರೀಯ ಶಾಸನಗಳು ಹಾಗೂ ಸರ್ಕಾರಗಳ ಬಗ್ಗೆ ತಮ್ಮ ಧೋರಣೆಯನ್ನು ತಿಳಿಸಿದರು. ಸಂದರ್ಶನಕಾರರು ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿ, 'ನಿಮ್ಮ ಮಾತನ್ನು ಹೀಗೆ ವಿಶ್ಲೇಷಿಸಿ, ನೀವು ವೈಸ್‌ರಾಯ್ ಹುದ್ದೆಯನ್ನು ಭಾರತದಲ್ಲಿ ಬ್ರಿಟಿಷ್ ಸರ್ಕಾರದ ಗೋರಿ ತೋಡುವುವಕ್ಕೆ ಬಳಸಿಕೊಳ್ಳುವಿರಿ ಎನ್ನಬಹುದೇ?' ಎಂದರು.

ಲಜಪತರು ಬಳಸಿದ 'ಕಟ್ಟಾ ತಾತ್ಕಾಲಿಕ' ನೇಮಕಾತಿಯ ಅರ್ಥ ಏನೆಂಬುದನ್ನು ನಾವಿಲ್ಲಿ ಅರ್ಥ ಮಾಡಿಕೊಳ್ಳಬಹುದು. ನೇವಿನ್‌ಸನ್‌ರು ಭಾರತೀಯ ಸಮಸ್ಯೆಯನ್ನು ಮತ್ತು ಭಾರತೀಯ ಆಂದೋಲನವನ್ನು ಈ ನೆಲದಲ್ಲಿ ನಿಂತು ಪ್ರತ್ಯಕ್ಷವಾಗಿ ಅಧ್ಯಯನ ಮಾಡಿದ್ದವರು. ಅವರು ಈ ಬಗ್ಗೆ ತಮ್ಮದೇ ಅಭಿಪ್ರಾಯ ರೂಡಿಸಿಕೊಂಡಿದ್ದವರು. ಲಜಪತರೊಂದಿಗೆ ನಡೆಸಿದ ಸಂದರ್ಶನದಲ್ಲಿ ತತ್ಕಾಲದ ಸಣ್ಣಪುಟ್ಟ ಕುಂದುಕೊರತೆಗಳ ಬಗ್ಗೆ ಎಲ್ಲಾ ಪ್ರಶ್ನೆಗಳನ್ನು ಹಾಕಿದರು. ಲಜಪತರು ಉತ್ತರಿಸುತ್ತಾ ಬೇಹುಗಾರಿಕೆ ಬಗ್ಗೆ ಹೇಳಿದರು. ರಾಜಕೀಯ ಕೈದಿಗಳನ್ನು ಘೋರ ಪಾತಕಿಗಳಂತೆ ನಡೆಸಿಕೊಳ್ಳುತ್ತಿದ್ದ ಬಗ್ಗೆಯೂ ಅವರು ಹೇಳಿದರು.

ಯಾರೋ ಓರ್ವ ಭಾರತೀಯ 'ಡೈಲಿ ನ್ಯೂಸ್' ಪತ್ರಿಕೆಯಲ್ಲಿ ಲೇಖನವೊಂದು ಬರೆದು ಹೈದರಾಬಾದ್‌ನಲ್ಲಿ ಜೀವಿಸಿರಲು ಒಂದು ಪೆನ್ನಿ ಬೆಲೆಯ ಆಹಾರ ಸಾಕೆಂದು ತಿಳಿಸಿದ್ದ. ಲಜಪತರು ಅದಕ್ಕೆ ಸೂಕ್ತವಾದ ಮಾರುತ್ತರ ನೀಡಿ ಭಾರತದಲ್ಲಿನ ಧಾರಣೆಯ ಪಟ್ಟಿಯನ್ನೇ ಒದಗಿಸಿದರು. ಅದೇ ಪತ್ರಿಕೆಯಲ್ಲಿ ಬಂದ ಇನ್ನೊಂದು ಕುಹಕ ಲೇಖನಕ್ಕೆ ಪ್ರತಿ ಲೇಖನ ಬರೆದ ಈ ಪಂಜಾಬಿ ಪ್ರಚಾರಕರು ಬಲವಂತದ ಕಾರ್ಮಿಕ ವೃತ್ತಿಯನ್ನು ಸಮರ್ಥಿಸಿಕೊಂಡರು.

ಲಾಯ್ಡ್ ಜಾರ್ಜ್ ಅವರು ಸ್ವಾನ್ಸಿಯಲ್ಲಿ ಮಾತನಾಡುತ್ತಾ ಲಿಬರಲ್ ಕ್ಷೇತ್ರಗಳು ಮತ್ತು ಲಿಬರಲ್ ಯುವ ಜನತೆಯಲ್ಲಿ ಹೊಸ ಹುರುಪು ಮೂಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಶ್ರೇಷ್ಠವಾದ ಲಿಬರಲ್ ಲಸಿಕೆಯನ್ನು ಈ ಕ್ಷೇತ್ರ ಮತ್ತು ಯುವಜನತೆಗೆ ಕೊಡಬೇಕೆಂದು ಆಶಿಸಿದರು. ದೇಶದ ಪ್ರತಿಷ್ಠಿತ ವರ್ಗ ಧೈರ್ಯ ಮತ್ತು ಮಾನವ ಸಹಜ ಗುಣಗಳನ್ನು ಕಳೆದುಕೊಳ್ಳುತ್ತಿದೆ. ಗುಲಾಮಿತನಕ್ಕೆ ಒಗ್ಗಿ ಪ್ರತಿಭಟನೆಯ ಸ್ವರೂಪವನ್ನು ಕಳೆದುಕೊಂಡಿರುವ ದೇಶ ಮತ್ತು ಜನರನ್ನು ಯಾವುದೂ ರಕ್ಷಿಸಲಾರದು ಎಂದು ಅವರು ಕೀಟಲೆ ಮಾಡಿದರು.

ಲಜಪತ್‌ರಾಯ್ 'ಡೈಲಿ ನ್ಯೂಸ್'ಗೆ ಪತ್ರವೊಂದನ್ನು ಬರೆದು ಆ ಕೀಟಲೆಗೆ ಸಮರ್ಥವಾದ ಉತ್ತರ ಕೊಟ್ಟರು. ಲಿಬರಲಿಸಂ ತತ್ವಗಳನ್ನು ವಿಶ್ವಮಾನ್ಯ ಸತ್ಯವೆಂದು ಪರಿಗಣಿಸಿರುವಾಗ ಭಾರತಕ್ಕೂ ಅವುಗಳನ್ನು ಸಮನ್ವಯಗೊಳಿಸಬಾರದೇಕೆ ಎಂದು ಪ್ರಶ್ನಿಸಿದರು. ಲಜಪತರ ಪ್ರಚಾರ ವೈಖರಿ ಎಷ್ಟೊಂದು ಕಾಲೋಚಿತವಾಗಿತ್ತು ಎಂಬುದಕ್ಕೆ ಇದೊಂದು ಜ್ವಲಂತ ಉದಾಹರಣೆ.

ಲಜಪತರು ಯುರೋಪಿನಲ್ಲಿ ವ್ಯಾಪಕ ಪ್ರವಾಸ ಕೈಗೊಂಡರು. ಭಾಷಣಗಳನ್ನು ಮಾಡಿದರು. ಕ್ಲಾಫಂನಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಎಸ್.ಕೆ. ರ್‍ಯಾಡ್‌ಕ್ಲಿಫ್ ವಹಿಸಿದ್ದರು. ವೆಸ್ಟ್ ಬೋರ್ನ್ ಚಾಪೆಲ್ ಸಭೆಯ ಅಧ್ಯಕ್ಷತೆಯನ್ನು ಸಂಸತ್ ಸದಸ್ಯ ಜಿ.ಪಿ. ಗೂಚ್ ವಹಿಸಿದ್ದರು. ಇತರ ಅನೇಕ ಕಡೆಗಳಲ್ಲಿ ನಡೆದ ಸಭೆಗಳ ಪೈಕಿ ರಾಂಸೇ ಮೆಕಡೊನಾಲ್ಡ್ ಮತ್ತು ಆಲಿವರ್ ಎರಡು ಕಡೆ ಅಧ್ಯಕ್ಷತೆ ವಹಿಸಿದ್ದರು. ಪ್ರತಿ ಭಾಷಣದ ಅಂತ್ಯದಲ್ಲೂ ಲಜಪತರು ಪ್ರಶ್ನೆಗಳನ್ನು ಸ್ವಾಗತಿಸುತ್ತಿದ್ದರು. ಅದಕ್ಕೆ ಅವರು ತ್ವರಿತವಾದ, ಹರಿತವಾದ ಉತ್ತರಗಳನ್ನು ಕೊಡುತ್ತಿದ್ದರು. ಎಷ್ಟೋ ಪ್ರಸಂಗಗಳಲ್ಲಿ ಆ ಉತ್ತರಗಳು ಅವರ ಭಾಷಣಕ್ಕಿಂತಲೂ ಪರಿಣಾಮಕಾರಿಯಾಗಿರುತ್ತಿದ್ದವು.

ಒಂದು ಸಭೆಯಲ್ಲಿ ಅವರ ಮುಂದಿಟ್ಟ ಪ್ರಶ್ನೆಗಳ ಪೈಕಿ-''ಜನಪ್ರಿಯ ಸರ್ಕಾರ ಬೇಕೆಂದು, ನೀವು ಮಾತನಾಡಿರುವ ಜನರ ಪೈಕಿ ಎಷ್ಟು ದಶಲಕ್ಷ ಜನರು ಒತ್ತಾಯಿಸುತ್ತಿದ್ದಾರೆ. ಎಷ್ಟು ಸಂಘ ಸಂಸ್ಥೆಗಳು ಈ ಬಗ್ಗೆ ಲಿಖಿತ ಮನವಿಯನ್ನು ಕಳುಹಿಸಿವೆ ಮುಂತಾದವುಗಳ ಅಂಕಿ ಅಂಶಗಳನ್ನು ಕೊಡುವಿರಾ? ಅಥವಾ ಕೆಲವು ಮೂಲಗಳ ಸೂಚನೆಯ ಪ್ರಕಾರ ಕೇವಲ ಪ್ರತಿಶತ 5ರಷ್ಟು ಜನರೂ ಸಹ ನಿಮ್ಮ ಈ ಭಾಷಣಗಳನ್ನು ಕೇಳುತ್ತಿಲ್ಲವೆಂಬುದು ನಿಜವೇ?'' ಎಂಬ ಪ್ರಶ್ನೆಯನ್ನು ಕೇಳಲಾಯಿತು. ಲಜಪತರು ಚಿಕ್ಕದಾದ ಅಷ್ಟೇ ಸಮರ್ಥವಾದ ಉತ್ತರವನ್ನು ಕೊಟ್ಟು 'ಆಂದೋಲನದ ಶಕ್ತಿ ಸಾಮರ್ಥ್ಯವನ್ನು ಬ್ರಿಟಿಷ್ ಸರ್ಕಾರವೇ ಒರೆಗೆ ಹಚ್ಚಿದೆ! ಒಂದು ವೇಳೆ ಕೇವಲ ಪ್ರತಿಶತ 5ರಷ್ಟು ಜನ ಮಾತ್ರ ಆಂದೋಲನದಲ್ಲಿ ಇದ್ದರೆ ಎನ್ನುವುದಾದರೆ ಸರ್ಕಾರ ದೇಶೋಚ್ಚಾಟನೆ ಮತ್ತು ದಮನಕಾರಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿರುತ್ತಿರಲಿಲ್ಲ.'' ಎಂದು ಖಚಿತವಾಗಿ ನುಡಿದರು.

ಅವರ ಬಳಿ ಯಾವುದೇ ಪ್ರಶ್ನೆಗೆ ಉತ್ತರ ಕ್ಷಣದಲ್ಲೇ ಸಿದ್ಧವಾಗಿರುತ್ತಿತ್ತು. ಅದರಲ್ಲಿ ಅಂಕಿ ಅಂಶಗಳು ಪ್ರಬಲವಾಗಿರುತ್ತಿದ್ದವು. ಪರ್ಸಿವಲ್ ಲ್ಯಾಂಡನ್ ಅವರು ಡೈಲಿ ಟೆಲಿಗ್ರಾಫ್ ಪತ್ರಿಕೆಯಲ್ಲಿ ಭಾರತದ ಅಶಾಂತಿ ಕುರಿತು ಪತ್ರಗಳನ್ನು ಬರೆದರು. ಆ ಪತ್ರದಲ್ಲಿದ್ದ ಆರೋಪಗಳಿಗೆ ಉತ್ತರವನ್ನು ಕೊಡುವ ಮೂಲಕ ವಸ್ತುಸ್ಥಿತಿಯನ್ನು ಸಮರ್ಥವಾಗಿ ಪ್ರತಿಪಾದಿಸುವ ಅವಕಾಶ ಲಜಪತರಿಗೆ ಪ್ರಾಪ್ತವಾಯಿತು. ಅದರಲ್ಲಿದ್ದ ಆರೋಪಗಳ ಪೈಕಿ ದೇಶೀಯವಾದಿಗಳ ಆಂದೋಲನ ಬ್ರಾಹ್ಮಣರ ಸಾಮರ್ಥ್ಯವನ್ನು ಎತ್ತಿ ಹಿಡಿಯುವ ಒಂದು ಚಳವಳಿಯಾಗಿದೆ ಎಂಬುದು ಪ್ರಮುಖ. ಆರ್ಯ ಸಮಾಜವಾದಿಗಳು ಸಿಖ್ಖರ ನಿಷ್ಠೆಯನ್ನು ಕಡೆಗಣಿಸಿದ್ದಾರೆಂಬ ಕ್ಷುಲ್ಲಕ ಪ್ರಸ್ತಾಪವು ಆ ಪತ್ರದಲ್ಲಿತ್ತು. ಲಜಪತರ ವಿರುದ್ಧ ವ್ಯಕ್ತಿಗತ ಆರೋಪಗಳನ್ನು ಮಾಡಲಾಗಿತ್ತು. ಅವರು ಉತ್ತರಗಳನ್ನು ಕೊಟ್ಟು ಎಲ್ಲಾ ಆರೋಪಗಳನ್ನು ನಿರಾಕರಿಸಿದರು.

''ನನ್ನ ವ್ಯಕ್ತಿಗತ ಆರೋಪಗಳು ಪ್ರಸ್ತುತ ಕಲ್ಕತ್ತಾದಲ್ಲಿ ಶ್ರೇಷ್ಠ ನ್ಯಾಯಾಲಯದ ಮುಂದಿದೆ. ಪತ್ರಿಕೆಗಳಲ್ಲಿ ನನ್ನ ಚಾರಿತ್ರ್ಯ ವಧೆಗೆ ಯತ್ನಿಸಿದವರ ವಿರುದ್ಧ ನಾನು ಕೇಸು ದಾಖಲೆ ಮಾಡಿದ್ದೇನೆ (ಲಜಪತ್‌ರಾಯ್ ಮತ್ತು ಇಂಗ್ಲಿಷ್‌ಮನ್ ಪ್ರಕರಣ) ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡಬಾರದೆಂಬ ಸಾಮಾನ್ಯ

ಕಾನೂನು ಪರಿಜ್ಞಾನವಾದರೂ ನಿಮ್ಮ ಪ್ರತಿನಿಧಿಯಲ್ಲಿರಬೇಕಾಗಿತ್ತು. ಬ್ರಿಟಿಷ್ ಸಾರ್ವಜನಿಕರ ದೃಷ್ಟಿಯಲ್ಲಿ ನನ್ನ ಬಗ್ಗೆ ಪೂರ್ವಾಗ್ರಹ ಪೀಡನೆ ಪ್ರಚೋದಿಸುವ ಯತ್ನವನ್ನು ನಾನು ಪ್ರಬಲವಾಗಿ ಪ್ರತಿಭಟಿಸಲೇ ಬೇಕಾಗಿದೆ'' ಎಂದು ಅವರು ಪತ್ರಿಕೆಗೆ ಬರೆದ ಪತ್ರದಲ್ಲಿ ಕಟುವಾಗಿ ನುಡಿದರು.

ಹಿಂದೂಗಳಲ್ಲಿ ಕ್ಷಾತ್ರ ತೇಜಸ್ಸು ಇಲ್ಲವೆಂಬ ಲ್ಯಾಂಡನ್‌ನ ಅಪರೂಪದ ಪ್ರಸ್ತಾವಗಳನ್ನು ಲಜಪತರು ವೀರೋಚಿತವಾಗಿ ಧಿಕ್ಕರಿಸಿದರು. ಅಫಘನ್ನರಿಂದ ಭಾರತೀಯರು ಎದುರಿಸಿದ ದಾಳಿಯನ್ನು ಲ್ಯಾಂಡನ್ ಪ್ರಸ್ತಾಪಿಸಿದ್ದ. ಲಜಪತರು ಕೊಟ್ಟ ಉತ್ತರ ಲ್ಯಾಂಡನ್‌ನ ಐತಿಹಾಸಿಕ ಘಟನೆಗಳ ಅವಜ್ಞಾನವನ್ನು ಪ್ರದರ್ಶಿಸಿತು. ''ಲ್ಯಾಂಡನ್‌ರು ಚರಿತ್ರೆಯನ್ನು ಎಚ್ಚರದಿಂದ ಓದಬೇಕಾಗಿತ್ತು. ಬ್ರಿಟಿಷರು ಅಲ್ಲಿಗೆ ತಲುಪುವ ಮೊದಲೇ ಅಫಘನ್ ದಾಳಿಕೋರರು ಪಂಜಾಬಿನ ಹಿಂದೂಗಳಿಂದ ಭಾರೀ ಸೋಲು ಅನುಭವಿಸಿದರು. ಅಫಘಾನಿಸ್ತಾನದ ಗಡಿಯಲ್ಲಿ ಈಗಲೂ ಸಹ ಅಲ್ಲಿನ ತಾಯಂದಿರು ತಮ್ಮ ಮಕ್ಕಳು ಅಳುವಾಗ ಹಿಂದೂ ಖಾತ್ರಿ ಸೇನಾಧಿಪತಿಯ ಹೆಸರನ್ನು ಪ್ರಸ್ತಾಪಿಸುತ್ತಿರುವುದು ಬಹುಶಃ ಲ್ಯಾಂಡನ್ ಅರಿಯರೇನೋ? ಮಿಲಿಟರಿ ಸಾಮರ್ಥ್ಯಗಳು ಆಯಾ ಕಾಲ ಮತ್ತು ಪರಿಸ್ಥಿತಿಯ ಅಗತ್ಯಕ್ಕೆ ಅನುಗುಣವಾಗಿರುತ್ತವೆ ಎಂಬ ಸತ್ಯವನ್ನು ಮನಗಾಣಬೇಕು. ಅದು ಯಾವುದೇ ಒಂದು ವರ್ಣ ಅಥವಾ ವಂಶದ ಏಕಸ್ವಾಮ್ಯ ಶಕ್ತಿಯಲ್ಲ.'' ಎಂದು ಲಜಪತರು ಲ್ಯಾಂಡನ್‌ನ ಚಾರಿತ್ರಿಕ ಅಜ್ಞಾನವನ್ನು ಅದೇ ಪತ್ರಿಕೆಯ ಮೂಲಕ ಬಯಲಿಗೆಳೆದರು.

ಲಂಡನ್‌ನಲ್ಲಿದ್ದ ಭಾರತೀಯರು 1908 ಅಕ್ಟೋಬರ್ 16ನ್ನು ರಾಷ್ಟ್ರೀಯ ದಿನಾಚರಣೆಯನ್ನಾಗಿ ಆಚರಿಸಿದರು. ಕ್ಯಾಕ್ಸ್‌ಟನ್ ಸಭಾಂಗಣದಲ್ಲಿ ಅವರು ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಿದ್ದರು. ಮುಖ್ಯವಾಗಿ ಭಾಷಣಕಾರರಲ್ಲಿ ಲಜಪತ್‌ರಾಯ್ ಮತ್ತು ಬಿಪಿನ್ ಚಂದ್ರಪಾಲ್ ಪ್ರಮುಖರಾಗಿದ್ದರು. ಪಾಲರು ತಮ್ಮ ಭಾಷಣದಲ್ಲಿ ವೀರೋಚಿತ ಕಾವ್ಯ ಧಾಟಿಯ ವಿಚಾರ ಧಾರೆ ಹರಸಿದರು. ಲಜಪತರು ತಮ್ಮ ಮಾತಿನ ಮಧ್ಯೆ ಭಾರತದಲ್ಲಿ ರಾಷ್ಟ್ರೀಯವಾದ 1905, ಅಕ್ಟೋಬರ್ 16ರಂದು ಜನ್ಮ ತಾಳಿತೆಂದರು. ಅದರ ಮೂರನೇ ವರ್ಷಾಚರಣೆಯನ್ನು ಆಚರಿಸುತ್ತಿರುವುದಾಗಿ ಅವರು ಸಭೆಗೆ ತಿಳಿಸಿದರು.

ಲಜಪತ್‌ರಾಯ್ ಅವರು ವಿದೇಶದಿಂದ ದಿ ಪಂಜಾಬಿಗೆ ಬರೆದ ಪತ್ರಿಕೆಯ ಕೆಲವು ಅಂಶಗಳನ್ನು ನಾವು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಪತ್ರಿಕೆಯಲ್ಲಿ ಲಜಪತರ ವಿದೇಶಿ ಪತ್ರಗಳ ಧಾರಾವಾಹಿ ನಿರಂತರವಾಗಿತ್ತು. ಅವರು ಕಳುಹಿಸುತ್ತಿದ್ದ ಲೇಖನಗಳಲ್ಲಿ ಕೆಲವು ಸ್ಥಳ ವರ್ಣನೆಗಳಿದ್ದವು. ತಮ್ಮ ವಾಸ್ತವ್ಯದ ಅವಧಿಯಲ್ಲಿ ತಾವು ಕಂಡ ವಿದ್ಯಮಾನಗಳ ಘಟನಾವಳಿಗಳ ಚಿತ್ರಣವಿರುತ್ತಿತ್ತು. ಉದಾ: ಆಂಗ್ಲೋ ಫ್ರೆಂಚ್ ಕಲೆ ಮತ್ತು ಉದ್ಯಮ ವಸ್ತು ಪ್ರದರ್ಶನದ ವಿವರಣೆ ಯಥೋಚಿತವಾಗಿತ್ತು. ಅವರು ಯುನೈಟೆಡ್ ಕಿಂಗ್‌ಡಂಗೆ ಭೇಟಿಕೊಟ್ಟಾಗ ನಡೆಯುತ್ತಿದ್ದ ಪ್ರದರ್ಶನ ಅದು. ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಸ್ತ್ರೀವಾದದ ಆಂದೋಲನ ಬಿರುಸಾಗಿತ್ತು. ಶ್ರೀಮತಿ ಪ್ಯಾಂಕ್‌ಹರ್ಸ್ಟ್ ಮತ್ತು ಅವರ ನಿಷ್ಠ ಬೆಂಬಲಿಗರು

ನಡೆಸುತ್ತಿದ್ದ ಚಳವಳಿಯ ಕುತೂಹಲಕಾರಿ ವರದಿಗಳು ಪತ್ರಿಕೆಗಳ ಗಮನ ಸೆಳೆದಿದ್ದವು. ಅವೆಲ್ಲವನ್ನು ಕ್ರೋಢೀಕರಿಸಿ 'ದಿ ಪಂಜಾಬಿ'ಗೆ ಲೇಖನಗಳನ್ನು ಬರೆದು ಕಳುಹಿಸಿದ್ದರು.

ಲಂಡನ್‌ನಲ್ಲಿ ಉಳಿದುಕೊಂಡ ಆ ದಿನಗಳಲ್ಲಿ ಕೆಲವು ಕಾಲ ಲಜಪತರು ಪುನಃ ಶಾಮ್‌ಜಿಯವರ ಇಂಡಿಯಾ ಹೌಸ್‌ನಲ್ಲಿ ವಾಸ್ತವ್ಯ ಹೂಡಿದರು. ಆ ಭೇಟಿಯ ಅವಧಿಯಲ್ಲಿ ಅವರು ಹೊಸದಾಗಿ ಬೆಳೆಯಿಸಿಕೊಂಡ ಒಡನಾಟ ಮತ್ತು ಸಂಪರ್ಕಗಳಲ್ಲಿ ವೈಚಾರಿಕ ಮತ್ತು ಕ್ರಾಂತಿಕಾರಿ ವಲಯವೂ ಒಂದಾಯಿತು. ರಷ್ಯಾದ ಕ್ರಾಂತಿಕಾರಿ ರಾಜಕುಮಾರರೆಂದೇ ಆ ಸಮಯದಲ್ಲಿ ಪರಿಗಣಿಸಲಾಗಿದ್ದ ಹಾಗೂ ಯುರೋಪಿನ ಅಗ್ರಮಾನ್ಯ ಕ್ರಾಂತಿಕಾರಿ ಬರಹಗಾರರು ಹಾಗು ಚಿಂತನಶೀಲರಲ್ಲಿ ಪ್ರಥಮ ಸಾಲಿನವರೆಂದು ಮಾನ್ಯ ಮಾಡಲಾಗಿದ್ದ ಕ್ರೋಪೊಟ್ಕಿನ್‌ನನ್ನು ಲಜಪತರು ಭೇಟಿ ಮಾಡಿದರು.

ಗೋಖಲೆ ಅವರ ಜೊತೆಗೂಡಿ ಲಜಪತರು ವಿಲ್‌ಫ್ರಿಡ್ ಸ್ಕ್ಯಾವನ್ ಬ್ಲಂಟ್‌ರನ್ನು ಕಂಡರು. ಆ ಲೇಖಕ ತಮ್ಮನ್ನು ಭೇಟಿ ಮಾಡಿದ ಆ ಇಬ್ಬರು ಭಾರತೀಯ ನಾಯಕರ ಬಗ್ಗೆ ತಮ್ಮ ಅನಿಸಿಕೆಯನ್ನು ತಮ್ಮ ಡೈರೀಸ್‌ನಲ್ಲಿ ದಾಖಲೆ ಮಾಡಿದರು. ಜವಹರ್‌ಲಾಲ್ ನೆಹರು ತಮ್ಮ ಆಟೋಗ್ರಫಿ*ಯಲ್ಲಿ 1909ರಲ್ಲಿ ಬ್ಲಂಟ್ ಮಾಡಿರುವ ದಾಖಲೆಯನ್ನು ಪ್ರಸ್ತಾಪ ಮಾಡಿದ್ದಾರೆ: "ಅವರು ಆ ಇಬ್ಬರ ಬಗ್ಗೆಯೂ ನಿಷ್ಠೂರವಾಗಿದ್ದಾರೆ. ಇಬ್ಬರು ತುಂಬಾ ಎಚ್ಚರಿಕೆಯ ಪ್ರಜ್ಞೆ ಉಳ್ಳವರೆಂದು ವಾಸ್ತವಿಕತೆಗಳನ್ನು ಎದುರಿಸಲು ಹೆದರುವವರೆಂದು ಬರೆದಿಟ್ಟಿದ್ದಾರೆ" ಎಂದಿದ್ದಾರೆ. ತಮ್ಮ ಆ ಪ್ರಸ್ತಾವಕ್ಕೆ ಇನ್ನಷ್ಟು ಸೇರಿಸುತ್ತಾ, "ಅವರೂ ಲಾಲಾಜಿ ಬಹುತೇಕ ಇತರ ಭಾರತೀಯ ನಾಯಕರಿಗಿಂತ ಮುಂದೆ ನಿಂತು ಅವುಗಳನ್ನು ಎದುರಿಸುತ್ತಿರುವವರು ಎಂದಿದ್ದಾರೆ." ಎಂದು ನಮೂದಿಸಿದ್ದಾರೆ.

ಆ ಪ್ರಸ್ತಾವದ ಬಗ್ಗೆ ಜವಹರ್‌ಲಾಲ್ ನೆಹರು ನಿರೂಪಣೆಯೊಂದನ್ನು ನೀಡಿ 'ಆ ಕಾಲದಲ್ಲಿ ನಮ್ಮ ರಾಜಕಾರಣ ಮತ್ತು ಗತಿಶೀಲತೆ ಎಷ್ಟು ಕೆಳಸ್ತರದಲ್ಲಿತ್ತು ಎಂಬುದನ್ನು ಬ್ಲಂಟರ ಭಾವನೆಗಳ ಮೂಲಕ ನಾವು ಮನವರಿಕೆ ಮಾಡಿಕೊಳ್ಳಬಹುದು. ಸಮರ್ಥ ಹಾಗೂ ಅನುಭವಿ ವಿದೇಶಿಯೊಬ್ಬರು ಆ ಇಬ್ಬರನ್ನು ಕಂಡಾಗ ತಮ್ಮ ಅಭಿಪ್ರಾಯವನ್ನು ಹೇಗೆ ರೂಪಿಸಿಕೊಂಡರು ಎಂಬುದು ಇದರಿಂದ ವಿಧಿತವಾಗುತ್ತದೆ' ಎಂದಿದ್ದಾರೆ.

ನಂತರದ 'ಒಂದು ದಶಕ'ದಲ್ಲಿ (ಜೊತೆಗೆ ಒಂದು ವಿಶ್ವ ಯುದ್ಧ) ಆ ಭಾವನೆಗಳಿಗೆ 'ಭಿನ್ನವಾದ' ಬೆಳವಣಿಗೆಗಳು ಭಾರತದಲ್ಲಾದವು. ಬ್ಲಂಟರ ಅಭಿಪ್ರಾಯಕ್ಕೆ ತೀರಾ ಭಿನ್ನವಾದಂತಹ, ಮಹಾತ್ಮ ಗಾಂಧಿಯವರು ಯುದ್ಧದ ಸಮಯ, ಯುದ್ಧದ ಅನಂತರ ಕೈಗೊಂಡು ಅನುಷ್ಠಾನಕ್ಕೆ ತಂದ ಅಸಹಕಾರ ಚಳವಳಿಯ ಮೂಲಕ ರಾಜಕೀಯ ಜಾಗೃತಿ ರೂಪಿತವಾಯಿತು. 'ಸಮರ್ಥ ಹಾಗು ಅನುಭವಿ' ವಿದೇಶಿಯನ ಆ ಭಾವನೆಗಳಿಗೆ ಕರ್ಜಡೆ ಪ್ರಚೋದಕವಾಗಿದ್ದು ಕುತೂಹಲದ ವಿದ್ಯಮಾನ ಎನಿಸಿದೆ. ಜವಹರ್ ಲಾಲ್ ನೆಹರು ಅವರು ಕರ್ಜಡೆ ಬಗ್ಗೆ ದಾಖಲು ಮಾಡುತ್ತಾ - "ನಂತರದ ವರ್ಷಗಳಲ್ಲಿ

* ಪುಟ. 64.

ಪಾರಿವಾಳದ ಹಕ್ಕಿಗಿಂತಲೂ ಸೌಮ್ಯವಾದವರು. ಸೌಮ್ಯವಾದಿಗಳಲ್ಲೂ ಸೌಮ್ಯವಾದಿಗಳೆನಿಸಿಕೊಂಡರು.'' ಎಂದಿದ್ದಾರೆ. ಸಿಮ್ಲಾದಲ್ಲಿ ರಾಸ್ ಬಿಹಾರಿ ಘೋಷರು ಏರ್ಪಡಿಸಿದ ಔತಣ ಕೂಟವೊಂದರಲ್ಲಿ ಜವಹರಲಾಲರು ಕರ್ಪಡೆಯವರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತು. ಆಗ ಕರ್ಪಡೆ ಆಗ ತಮಗೆ ಹೀಗೆ ಹೇಳಿದರೆಂದು ಬರೆದಿಟ್ಟಿದ್ದಾರೆ.

''ಗೋಖಲೆಯವರನ್ನು ಟೀಕಿಸುತ್ತಾ (ಕೆಲವು ವರ್ಷಗಳ ಹಿಂದೆ ಅವರು ನಿಧನ ಹೊಂದಿದ್ದರು.) ಅವರು ಲಂಡನ್‌ನಲ್ಲಿ ಬ್ರಿಟಿಷರ ಏಜಂಟರಾಗಿ ನನ್ನ ಬಗ್ಗೆ ಬೇಹುಗಾರಿಕೆ ನಡೆಸಿದರು.'' ಎಂದು ಕರ್ಪಡೆ ಹೇಳಿದರು ಎಂದಿದ್ದಾರೆ. ಕರ್ಪಡೆ ಆ ವಿದೇಶಿ 'ಸಮರ್ಥ ಹಾಗು ಅನುಭವಿ' ಲೇಖಕನ ಮೇಲೆ ಪ್ರಭಾವ ಬೀರಿರಬಹುದೆಂದು ನಮಗೆಲ್ಲಾ ಮನದಟ್ಟಾಗುತ್ತದೆ. ಬ್ಲಂಟರ ಡೈರೀಸ್‌ನಲ್ಲಿ ಕರ್ಪಡೆಯ ಬಗ್ಗೆ ತೃಪ್ತಿಕರವಾದ ಪ್ರಸ್ತಾಪವಿದೆ. ಭಾರತೀಯ ರಾಜಕಾರಣದಲ್ಲಿ ಜಾಗೃತಿ ಮೂಡಿಸಿದರೆಂದು ನಮೂದಿಸಲಾಗಿದೆ. ಗೋಖಲೆ ಅವರನ್ನು ಭಾರತೀಯ ರಾಜಕಾರಣದಲ್ಲಿ ಒಂದು ವರ್ಗಕ್ಕೆ ಸೇರಿದವರೆಂದು ಪ್ರತಿನಿಧಿಸಲಾಗಿದೆ. ಅದು ವಾಸ್ತವವೂ ಹೌದು. ಸೌಮ್ಯವಾದಿಗಳ ಬಗ್ಗೆ ಬ್ಲಂಟರು ತಮ್ಮ ಅಪಸ್ವರವನ್ನು ಗುಟ್ಟಾಗಿ ಏನೂ ಇಟ್ಟಿಲ್ಲ. ಲಜಪತ್‌ರಾಯ್ ಬಗ್ಗೆ ಹೇಳುವುದಾದರೆ ಅದು ಆ ಸಮಯದಲ್ಲಿ (ಮಾರ್ಲೆ ಸುಧಾರಣೆಗಳು ಜಾರಿಗೆ ಬಂದ ಸಂದರ್ಭ) ಗೋಖಲೆ ಜೊತೆಯಲ್ಲಿ ಆ ವಿದೇಶಿ ಲೇಖಕನನ್ನು ಭೇಟಿ ಮಾಡಬಾರದಿತ್ತು.

ಹೆಚ್ಚು ಕಡಿಮೆ ಆ ಪ್ರಸಂಗದ ವೇಳೆಗೆ ಗೋಖಲೆ ಮತ್ತು ಲಜಪತರ ರಾಜಕೀಯ ನಿಲುವುಗಳು ಸ್ಪಷ್ಟವಾಗಿ ಕವಲೊಡೆದಿದ್ದವು. ಆದರೆ ತಮ್ಮ ರಾಜಕೀಯ ವಿಭಿನ್ನ ಧೋರಣೆಗಳನ್ನು ಆ ವಿದೇಶಿ ಲೇಖಕನ ಮುಂದೆ ಲಜಪತರು ಪ್ರದರ್ಶಿಸಲಿಲ್ಲ. ಗೋಖಲೆ ಅವರೊಂದಿಗೆ ತಮಗಿದ್ದ ವೈಯಕ್ತಿಕ ಗೌರವದ ಕಾರಣದಿಂದಲೇ ಅವರ ಜೊತೆಯಲ್ಲಿ ಅವರು ಬ್ಲಂಟರನ್ನು ಭೇಟಿ ಮಾಡಿದ್ದು ಅವರ ರಾಜಕೀಯ ದೃಷ್ಟಿಕೋನವನ್ನು 'ಗೊಂದಲ'ವಾಗಿ ಪರಿಗಣಿಸಲು ಕಾರಣವಾಗಿದ್ದಿರಬಹುದು. ಬ್ಲಂಟರ ಲೇಖನದಲ್ಲಿ ಲಜಪತರು ಮತ್ತು ಕರ್ಪಡೆಯವರ ಬಗ್ಗೆ ಮಾಡಿರುವ ಪ್ರಸ್ತಾಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಅಂಶ ಭಾಸವಾಗುತ್ತದೆ. ಇನ್ನೂ ವಿಶೇಷವೆಂದರೆ ಬ್ಲಂಟರ ಡೈರೀಸ್‌ನಲ್ಲಿ ಈ ಪ್ರಸಂಗಗಳ ನಿರ್ದಿಷ್ಟ ದಿನಾಂಕ ಕಂಡು ಬರುವುದಿಲ್ಲ. ಸುಮಾರು ಐದು ತಿಂಗಳ ನಂತರ ಕರ್ಪಡೆ ಭೇಟಿ ಮಾಡಿದ ನಂತರ ಬ್ಲಂಟರು ಲಜಪತರ ಬಗ್ಗೆ ತಮ್ಮ ಅಭಿಮತವನ್ನು ದಾಖಲು ಮಾಡಿದ್ದಾರೆ. ಬಹುಶಃ ಕರ್ಪಡೆ, ಲಜಪತರ ವಿಷಯದಲ್ಲಿ ಎಂತಹ ಅಭಿಪ್ರಾಯ ಬರುವಂತೆ ಪ್ರಭಾವ ಬೀರಿರಬಹುದು! ಅಲ್ಲದ ಬ್ಲಂಟರು ಲಜಪತರ The story of My Deportation ಕೃತಿಯಿಂದಲೂ ಪ್ರಭಾವಿತರಾದಂತೆ ಕಂಡು ಬರುವುದಿಲ್ಲ. ಆದರೆ ಆ ಕೃತಿಯ ಕೆಲವು ಪುಟಗಳ ಬಗ್ಗೆ ಅವರು ಟೀಕೆಗಳನ್ನೇನೋ ಬರೆದಿದ್ದಾರೆ. ಆ ಟೀಕೆಗಳು ಕಪೋಲ ಕಲ್ಪಿತವೆಂದು ಮೇಲು ನೋಟದಲ್ಲಿ ಕಂಡು ಬರುತ್ತದೆ. ಬಹುಶಃ ಲಜಪತರು ಲಂಡನ್‌ನಿಂದ ಮರಳುವ ಹಂತದಲ್ಲಿ ತಮ್ಮ ಆ ಕೃತಿಯ ಒಂದು ಪ್ರತಿಯನ್ನು ಅವರಿಗೆ ಒದಗಿಸಿರಬಹುದು. ಪುಸ್ತಕವನ್ನು ಓದದೆಯೇ ಬಹುಶಃ ಕರ್ಪಡೆ ನೀಡಿದ ಹೇಳಿಕೆಯ ಆಧಾರದ ಮೇಲೆ ಅವರು ಆ ಟೀಕೆಯನ್ನು ಬರೆದಿರಬೇಕು. ತಮ್ಮ ಗೆಳೆಯ

ಕರ್ನಾಡೆಯಂತಹ ನಿರ್ಭೀತ ವಾಗ್ಮಿಯನ್ನು ಭಾರತ ತನ್ನ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಕಳುಹಿಸಬಹುದಾಗಿತ್ತು ಎಂಬ ಅವರ ತರ್ಕದಲ್ಲಿ ಈ ಅಂಶ ಎದ್ದು ಕಾಣುತ್ತದೆ. ಅಕ್ಟೋಬರ್‌ನಲ್ಲಿ ಬೆಂಜಾಮಿನ್ ತಮಗೆ ಕರ್ನಾಡೆಯನ್ನು ಪರಿಚಯಿಸಿದ ನಂತರ ಅವರ ಮಾತುಗಳನ್ನು ಕೇಳಿ ಭಾರತದಲ್ಲಿ ತಮ್ಮ ಶತ್ರುಗಳನ್ನು ತರಾಟೆಗೆ ತೆಗೆದುಕೊಳ್ಳಬಲ್ಲಂಥ ತಮ್ಮ ಮಿತ್ರರಂತಹ ಕ್ರಾಂತಿಕಾರಿಗಳಿದ್ದಾರೆಂಬ ಭಾವನೆ ಬ್ಲಂಟರಲ್ಲಿ ಬಂದಿದ್ದಿರಲೂ ಬಹುದು.

* * *

ಅಧ್ಯಾಯ-35

ಲಾಹೋರ್ ಕಾಂಗ್ರೆಸ್‌ನಿಂದ ದೂರ

1909ರ ಮಾರ್ಚ್‌ನಲ್ಲಿ ಲಜಪತರು ಭಾರತಕ್ಕೆ ಮರಳಿದರು. ಲಾಹೋರಿಗೆ ಬಂದರು. ಮತ್ತೆ ಅದೇ ಹಳೆಯ ಬಣಗಳು ಮತ್ತು ವಾದ ವಿವಾದಗಳು. ಲಾಹೋರಿನಲ್ಲಿದ್ದ ನಾಯಕರು ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಅಲ್ಲಿ ನಡೆಸಲು ತುಂಬಾ ಉತ್ಸಾಹಿಗಳಾಗಿದ್ದರು. ಅಧಿವೇಶನಕ್ಕೆ ಇನ್ನೂ ಅನೇಕ ತಿಂಗಳುಗಳಿದ್ದರೂ ಚಟುವಟಿಕೆಗಳು ಬಿರುಸುಗೊಂಡಿದ್ದವು. ಒಂದು ಗುಂಪು ಸ್ವಾಗತ ಸಮಿತಿಯ ವ್ಯವಸ್ಥೆಗಳ ಬಗ್ಗೆ ಆಸಕ್ತಿ ವಹಿಸಿತ್ತು. ಇನ್ನೊಂದು ಗುಂಪಿಗೆ ಲಾಹೋರಿನಲ್ಲಿಯೇ ಏಕೆ ಪಂಜಾಬಿನಲ್ಲಿ ಎಲ್ಲಿಯೂ ಸಹ ಕಾಂಗ್ರೆಸ್ ಅಧಿವೇಶನ ನಡೆಯುವುದು ಬೇಕಾಗಿರಲಿಲ್ಲ.

ದೇಶೀಯವಾದಿಗಳ ಎಲ್ಲಾ ರಾಜಕೀಯ ನಿಲುವು ಧೋರಣೆಗಳೊಂದಿಗೆ ಸಹಮತ ಹೊಂದಿದ್ದು ಸಹ ಲಜಪತರು ಏಕತೆಯ ಐಕ್ಯತ ಆಶಯದೊಂದಿಗೆ ಸೌಮ್ಯವಾದಿಗಳ ಬಣದಲ್ಲೇ ಹೆಚ್ಚು ಆಸಕ್ತಿ ಹೊಂದಿದ್ದರು. ತಮ್ಮ ನಡವಳಿಕೆಗೆ ಅಲ್ಲಿ ಸಿಗತೊಡಗಿದ ಮನ್ನಣೆಯ ಬಿಸಿ ಅವರಿಗೆ ತಟ್ಟಲು ಹೆಚ್ಚು ಕಾಲ ಬೇಕಾಗಲಿಲ್ಲ. ಸೌಮ್ಯವಾದಿಗಳ ಸಮೂಹದಲ್ಲಿ ರಾಷ್ಟ್ರೀಯವಾದದ ಓರ್ವರ ಸೇರ್ಪಡೆ ಎಷ್ಟೊಂದು ಖೇದಕರವಾಗುತ್ತದೆ ಎಂಬ ಪ್ರತ್ಯಕ್ಷ ಅನುಭವ ಅವರಿಗಾಗತೊಡಗಿತು. ಕಾಂಗ್ರೆಸ್ ಬಣಗಳ ಏಕತೆಗಾಗಿ ಅವರು ಕೈಗೊಂಡ ಪ್ರಯತ್ನಗಳು ಫಲಭರಿತವಾಗಲಿಲ್ಲ. ತಮ್ಮ ಆಶಯದ ಬಗ್ಗೆ ಅವರು ಹೊಂದಿದ್ದ ಕಿಂಚಿತ್ತು ವಿಶ್ವಾಸವು ಸಹ ತಿಲಕರ ದೇಶೋಚ್ಚಾಟನೆಯಿಂದ ಭಗ್ನವಾಗಿತ್ತು. ತಿಲಕರ ಮನ ಒಲಿಸುವುದು ಅವರಿಗೆ ಸುಲಭವಾಗಿತ್ತು. ಆದರೆ ಅವರ ಅನುಯಾಯಿಗಳು ಅವರಂತಿರಲಿಲ್ಲ. ಸೌಮ್ಯವಾದಿಗಳು ದೇಶೀಯವಾದಿಗಳ ವಿಷಯದಲ್ಲಿ ಹೊಂದಿದ್ದ ವಿಶಿಷ್ಟ ಭಾವನೆ ಮತ್ತು ಅವರನ್ನು ದೂರವಿಡಲು ಹೊಸೆಯುತ್ತಿದ್ದ ತಂತ್ರಗಳನ್ನು ಅವರು ಕಣ್ಣಾರೆ ಕಂಡಿದ್ದರು. ಅರ್ಥಾತ್ ಸೌಮ್ಯವಾದಿಗಳು ತಮ್ಮ ಕೈಯಲ್ಲಿದ್ದ ಬಟ್ಟಲನ್ನು ಬರಿದು ಮಾಡುತ್ತಿದ್ದರು. ಇತ್ತ ದೇಶಿಯವಾದಿಗಳು ಅದೇ ನಿಟ್ಟಿನಲ್ಲಿರುತ್ತಿದ್ದರು. ಆ ಬಟ್ಟಲನ್ನು ಬರಿದಾಗದಂತೆ ಕಾಪಾಡಲು ಪ್ರಯತ್ನಿಸಿದಷ್ಟು ಅದೇ ಇಬ್ಭಾಗವಾಗುವ ಪರಿಸ್ಥಿತಿ ಉದ್ಭವಿಸುತ್ತದೆಂದು ಲಜಪತರಿಗೆ ಮನವರಿಕೆಯಾಯಿತು. ಸೌಮ್ಯವಾದಿಗಳು ದೇಶೀಯವಾದಿಗಳನ್ನು ದೂರವಿಡುವ ಮೂಲಕ ಅವರ ವಿರುದ್ಧ ಸರ್ಕಾರ ದಬ್ಬಾಳಿಕೆ ಕ್ರಮಕೈಗೊಳ್ಳಲು ಪರೋಕ್ಷವಾಗಿ ಕಾರಣವಾಯಿತು. ಅವರೊಟ್ಟಿಗೆ ಇಡೀ ರಾಜಕೀಯ ಚಳವಳಿಯನ್ನು ದುರ್ಬಲಗೊಳಿಸಿತು. ರಾಷ್ಟ್ರೀಯ ಕಾಂಗ್ರೆಸ್‌ಗೆ ರಕ್ತಹೀನ ಕಾಯಿಲೆ ಅಂಟಿಕೊಂಡಿತು...

1909ರ ಡಿಸೆಂಬರ್‌ನಲ್ಲಿ ಲಾಹೋರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಬೇಕೇ ಬೇಡವೇ ಎಂಬ ವಿಷಯದಲ್ಲಿ ಹುಟ್ಟಿದ ವಿವಾದದ ಸಂಬಂಧವಾಗಿ ಲಜಪತರು ಜುಲೈನಲ್ಲಿ

'ದಿ ಪಂಜಾಬಿ'ಗೆ ಪತ್ರಗಳನ್ನು ಬರೆಯುವ ಮೂಲಕ ಕಾಂಗ್ರೆಸ್ ಇಬ್ಭಾಗ ಮತ್ತು ತರುವಾಯ ಹಾಗೂ ಸೂರತ್ ಅಧಿವೇಶನದ ನಂತರದ 18 ತಿಂಗಳುಗಳ ವಿದ್ಯಮಾನಗಳನ್ನು ಬಹು ನಿರ್ದಿಷ್ಟವಾಗಿ ಜನರ ಗಮನಕ್ಕೆ ತಂದರು. ಈ ವಿಷಯ ನಿರೂಪಣೆ ಮಾಡುವ ಆರಂಭದಲ್ಲೇ ಸ್ವತಃ ತಮ್ಮ ಮೇಲೆ ತಾವು ವಿಧಿಸಿಕೊಂಡ ನಿರ್ಬಂಧವನ್ನು ಪ್ರಸ್ತಾಪ ಮಾಡಿದರು.

“ಸಾರ್ವಜನಿಕ ಬದುಕಿನಲ್ಲಿ ನಾನು ಪಡೆದು ಕೊಂಡಿರುವ ಅತಿ ಕಹಿಯ ಅನುಭವ ವಿವಾದದಿಂದ ದೂರ ಉಳಿಯಲು ನನಗೆ ತಿಳುವಳಿಕೆ ನೀಡಿತು. ಯಾವುದೇ ಒಂದು ಪಕ್ಷದ ಪರವಾಗಿರದೆ ಎರಡೂ ಕಡೆಯ ಒಳಿತಿಗೆ ಕೆಲಸ ಮಾಡುವಂತೆ ಅದು ನನಗೆ ತಿಳುವಳಿಕೆ ನೀಡಿತು. ಸೂರತ್‌ನಲ್ಲಿ 1907ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಇಬ್ಭಾಗವಾದ ನಂತರ ಆ ಕಾರಣದಿಂದಲೇ ನಾನು ಕಾಂಗ್ರೆಸ್ ವಿವಾದದ ವಿಷಯದಲ್ಲಿ ತಾಟಸ್ಥ್ಯ ಧೋರಣೆ ಅನುಸರಿಸುತ್ತಾ ಬಂದಿದ್ದೇನೆ. ಬರ ಪರಿಹಾರ ಸಂದರ್ಭದಲ್ಲಿ ನಾನು ಕೈಗೊಂಡ ಪ್ರವಾಸದ ಗುಂಟ ಇಬ್ಭಾಗ ಮತ್ತು ಅದಕ್ಕೆ ಸಂಬಂಧಪಟ್ಟ ಎರಡೂ ಬಣಗಳ ಹೊಣೆಗಾರಿಕೆಯ ಬಗ್ಗೆ ನನ್ನ ಅಭಿಪ್ರಾಯ ಬಹಿರಂಗಪಡಿಸಲು ಕೇಳಲಾದ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ನಿರಾಕರಿಸುತ್ತಾ ಬಂದೆ.”

ಆದರೆ ಸದ್ಯದ ವಿಭಿನ್ನ ಪರಿಸ್ಥಿತಿಯಲ್ಲಿದ್ದ ಅವರು ತಮ್ಮ ಆ ಧೋರಣೆಯನ್ನು ಸ್ವಲ್ಪಮಟ್ಟಿಗೆ ಸಡಿಲಿಸಿಕೊಂಡಿದ್ದರು. ತಮ್ಮ ಪತ್ರದಲ್ಲಿ ಅವರು ಮುಂದುವರೆದು,

“ಸರ್ ಫಿರೋಜ್ ಷಾ ಮೆಹ್ತಾ ಮತ್ತು ಗೋಖಲೆ ಅವರ ವಿಷಯದಲ್ಲಿ ನನ್ನಲ್ಲಿ ಅಪಾರ ಗೌರವ ಮತ್ತು ಅಭಿಮಾನಗಳಿವೆ. ನನ್ನ ಅಭಿಪ್ರಾಯದಲ್ಲಿ ಸರ್ ಪಿ. ಮೆಹ್ತಾ ಸಮರ್ಥರು, ಸ್ಥಿರ ಪ್ರಜ್ಞೆಯವರು. ಭಾರತೀಯ ರಾಜಕಾರಣಗಳಲ್ಲಿ ದಿಟ್ಟರು ಸದ್ಯದ ಪರಿಸ್ಥಿತಿಗೆ ಹೇಳಿ ಮಾಡಿಸಿದವರು. ಗೋಖಲೆಯವರ ದೇಶಭಕ್ತಿ ಮತ್ತು ಎತ್ತರದ ವಿಚಾರಧಾರೆ ಶಂಕಾತೀತ. ಅವರ ಪ್ರಾಮಾಣಿಕತೆಯನ್ನು ಶಂಕಿಸುವುದಾದರೆ ಯಾರ ಪ್ರಾಮಾಣಿಕತೆಯನ್ನು ಒಪ್ಪಿಕೊಂಡಂತೆ ಆಗುವುದಿಲ್ಲ. ಈ ಅಭಿಪ್ರಾಯಗಳನ್ನು ಪರಿಗಣಿಸುವಾಗ, 1907ರ ಇಬ್ಭಾಗದ ನಂತರ ಅನುಸರಿಸುತ್ತಾ ಬರುತ್ತಿರುವ ನೀತಿ ವಿಷಯದಲ್ಲಿ ಯಾರಿಗಾದರೂ ಸಹಜ ಶಂಕೆ ಮೂಡದಿರದು. ಸೂರತ್‌ನಲ್ಲಿ ನಡೆದ ನತದೃಷ್ಟಕರ ಘಟನೆಯನ್ನು ನಾನು ಖಂಡಿಸುವಷ್ಟರ ಮಟ್ಟಿಗೆ ಯಾರೂ ಖಂಡಿಸಿರಲಾರರು. ಆ ಘಟನೆ ನಡೆಯಲು ನೇರವಾದ ಜವಾಬ್ದಾರ ನಾನೇ ಆದುದರಿಂದ ನನ್ನಷ್ಟು ಕಟುವಾಗಿ ಅಂದಿನ ಘಟನೆಗಳನ್ನು ಬೇರೆ ಯಾರೂ ಖಂಡಿಸಿರಲಾರರೆಂದು ನಾನು ಖಾತ್ರಿಯಾಗಿ ಹೇಳಬಲ್ಲೆ. ತಿಲಕರ ಪ್ರಮುಖ ತಪ್ಪು (ದೇಶೋಚ್ಚಾಟನೆಯ ಮೂಲಕ ಈಗ ಅದರ ಬೆಲೆಯನ್ನು ತೆರುತ್ತಿದ್ದಾರೆ) ಅವರ ನಾಯಕತ್ವದಲ್ಲಿ ನಿರ್ವಹಣೆ ಇರಲಿಲ್ಲ. ಬದಲಾಗಿ ಅವರ ಸುತ್ತಮುತ್ತ ಇದ್ದ ಕೆಲವು ಉಗ್ರ ಮನಸ್ಸುಗಳು ಅವರನ್ನು ತಮ್ಮ ಯೋಚನೆಗೆ ಅನುಗುಣವಾಗಿ ಎಳೆದೊಯ್ದವು. ಸೂರತ್‌ನಲ್ಲಿ ನಾನು ಮಾಡಿಕೊಂಡ ಮನವಿಗೆ ಓಗೊಟ್ಟು ಅವರು ಎರಡು ಬಾರಿ ಡಾ. ರಾಸ್ ಬಿಹಾರಿ ಘೋಷ್ ಅವರ ಬಗ್ಗೆ ವಿರೋಧ ಕೈಬಿಡಲು ಮತ್ತೆ ಕಲ್ಕತ್ತಾದ ನಾಲ್ಕು ನಿರ್ಣಯಗಳ ವಿಷಯವನ್ನು ಬಿಡಲು ಸಿದ್ಧರಾದರು

ಸಮಿತಿಗೆ ಒಪ್ಪಿಸಲು ಒಪ್ಪಿದರು. ಆದರೆ ನಾನು ಆ ಸ್ಥಳವನ್ನು ಬಿಟ್ಟು ಕದಲುತ್ತಿದ್ದಂತೆ ಅವರ ಸುತ್ತಲಿದ್ದ ಮನಸ್ಸುಗಳು ಅವರನ್ನು ಅಸಹಾಯಕಗೊಳಿಸುತ್ತಿದ್ದವು. ಅಂದಿನ ಘಟನೆಗಳಿಗೆ ತಿಲಕರ ಪಕ್ಷವೇ ನೇರ ಹೊಣೆ ಎಂಬುದು ಸತ್ಯವಾದರೂ ಎದುರು ಬಣದ ನಾಯಕರೂ ಸಹ ಇಬ್ಭಾಗಕ್ಕೆ ಕಾತರಿಸಿದ್ದರು ಎಂಬುದನ್ನು ಯಾರೂ ನಿರಾಕರಿಸಲಾಗುವುದಿಲ್ಲ. ಒಂದು ವೇಳೆ ಅವರಲ್ಲಿ ಅಂತಹ ನಿಲುವು ಇಲ್ಲದಿರುತ್ತಿದ್ದರೆ ಪರಿಣಾಮ ಬೇರೆ ರೀತಿಯದಾಗಿರುತ್ತಿರಲಿಲ್ಲವೇ? ನನ್ನ ಅಭಿಪ್ರಾಯದಲ್ಲಿ ದೇಶದ ಹಿತದೃಷ್ಟಿಯಿಂದ 'ಸೌಮ್ಯವಾದಿಗಳು' ಎನಿಸಿಕೊಂಡ ಪಕ್ಷ ಕಾಂಗ್ರೆಸ್ಸಿನ ಒಳಗೆ ಇರಬೇಕು. ಎಲ್ಲಾ ಸಂಘಟನೆಗಳಲ್ಲೂ ಪ್ರಬಲವಾದ ಅಲ್ಪಸಂಖ್ಯಾತ ವರ್ಗ ಒಳಗೊಳಗೆ ಒತ್ತಡ ಹೇರುವಂತೆ ಕಾಂಗ್ರೆಸ್ಸಿನೊಳಗೂ ಇರಬೇಕು. ಈ ಹಿನ್ನಲೆಯಲ್ಲೇ ನಾನು ಮರು ಹೊಂದಾಣಿಕೆಗೆ ಕೆಲಸ ಮಾಡುವ ಆಶಯದೊಂದಿಗೆ ಇಬ್ಭಾಗದ ನಂತರ ನಡೆದ ಅಧಿವೇಶನಗಳಲ್ಲಿ ಪಾಲ್ಗೊಂಡೆ. ಆದರೆ ನನ್ನ ಪ್ರಯತ್ನಗಳು ನಿರರ್ಥಕವೆಂದು ಮನಗಾಣಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಹಾಗಾಗಿ ಆರಂಭದಲ್ಲೇ ನಾನು ನನ್ನ ಆ ಪ್ರಯತ್ನವನ್ನು ಬಿಟ್ಟುಬಿಟ್ಟೆ. ಆಗಿನಿಂದಲೂ ವಿಶಾಲ ಭಾವನೆಯ ಗೆಳೆಯರು ಕಾಂಗ್ರೆಸ್ ಏಕತೆಗಾಗಿ ನಡೆಸುತ್ತಾ ಬಂದ ಎಲ್ಲಾ ಪ್ರಯತ್ನಗಳು ವಿಫಲಗೊಂಡಿವೆ. ಸದ್ಯದ ಪರಿಸ್ಥಿತಿಯಲ್ಲಂತೂ ಆ ಎರಡು ವಾದಗಳು ಒಂದಾಗುವ ಕಿಂಚಿತ್ತೂ ಆಶಯವೂ ಕಂಡು ಬರುತ್ತಿಲ್ಲ. ನನ್ನಂತಹ ವಿನಮ್ರ ಮನಸ್ಸಿನ ಯಾವುದೇ ವ್ಯಕ್ತಿಗಾದರೂ ಸೌಮ್ಯವಾದಿಗಳಲ್ಲಿ 'ಕಟು ಧೋರಣೆ'ಯ ವ್ಯಕ್ತಿಗಳು ಇಬ್ಭಾಗ ಪರಿಪೂರ್ಣವಾಗುವಂತೆ ಮಾಡುವ ಮೂಲಕ ದೊಡ್ಡ ತಪ್ಪನ್ನೆಸಗಿದ್ದಾರೆ ಎಂಬುದನ್ನು ಮನಗಾಣದಿರಲು ಸಾಧ್ಯವಿಲ್ಲ.

''ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ಉಗ್ರಗಾಮಿಗಳ ಬಣವನ್ನು ಹೊರಕ್ಕೆ ಹಾಕಿದ ರೀತಿ ಕಾಂಗ್ರೆಸಿಗೆ ಸಹಜವಾಗಿ ಅಂಟಿಕೊಂಡ ಒಂದು ರೋಗವೆಂದು ನನಗೆ ಪ್ರಬಲವಾಗಿ ಅನಿಸುತ್ತದೆ. ಇಂಗ್ಲೆಂಡಿನಲ್ಲಿ ಸರ್ಕಾರ ಬದಲಾವಣೆ ಆಗುವುದರೊಂದಿಗೆ ಸೌಮ್ಯವಾದಿಗಳು ಬಯಸುತ್ತಿರುವ ವಸಾಹತುಷಾಹಿ ಸ್ವಸರ್ಕಾರವನ್ನು ಭಾರತಕ್ಕೆ ತಂದುಕೊಳ್ಳಬೇಕೆಂದು ವಾದಿಸುತ್ತಿರುವವರ ಆಶಯ ಈಡೇರುತ್ತದೆ ಎಂದು ನನಗಂತೂ ಅನಿಸುವುದಿಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ಗಾಳಿಯೂ ಬೀಸತೊಡಗಿದೆ. ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಭಾರತೀಯ ಪರಿಷತ್ತುಗಳು ವಿಧೇಯಕವನ್ನು ಮಂಡಿಸುತ್ತಾ ಲಾರ್ಡ್ ಮಾರ್ಲೆ ಮಾಡಿದ ಎರಡನೇ ಸುತ್ತಿನ ಭಾಷಣದಲ್ಲಿ ಈ ಬಗ್ಗೆ ಸೂಕ್ಷ್ಮ ಸೂಚನೆಯನ್ನು ನೀಡಿದ್ದಾರೆ. ಅದೇನಾದರೂ ಆಗಲಿ ಸದ್ಯದ ಪರಿಸ್ಥಿತಿಯಲ್ಲಂತೂ ಎರಡೂ ಪಕ್ಷಗಳು ಒಂದೇ ರಾಜಕೀಯ ವೇದಿಕೆಯಲ್ಲಿ ಒಗ್ಗೂಡಲು ಸಾಧ್ಯವಿಲ್ಲ. ಎರಡೂ ಕಡೆ ಪರಸ್ಪರ ಅಪನಂಬಿಕೆಗಳು ಅಳತೆ ಮೀರಿ ಬೆಳೆದುಕೊಂಡಿದೆ. ನಡೆದು ಹೋದದ್ದನ್ನು ಮರೆಯಲು ಸಾಧ್ಯವಿಲ್ಲ. ಆದಾಗಿ ಒಂದುಗೂಡಲು ಸಾಧ್ಯವಿಲ್ಲ.''

ಅಲಹಾಬಾದಿನಲ್ಲಿ ನಡೆದ ಅಧಿವೇಶನದಲ್ಲಿ ಕೈಗೊಳ್ಳಲಾದ ನಿರ್ಣಯಗಳ ಸಂವಿಧಾನಾತ್ಮಕ ಮುಖದ ಬಗ್ಗೆ ಲಜಪತ್‌ರಾಯ್ ತಮ್ಮ ಪತ್ರದಲ್ಲಿ ಹೀಗೆ ವಿವೇಚಿಸಿದ್ದಾರೆ,

"ಸೌಮ್ಯವಾದಿ ಬಣವು 'ಭಾರತ ರಾಷ್ಟ್ರೀಯ ಕಾಂಗ್ರೆಸ್' ಎಂದು ತನ್ನನ್ನು ತಾನು ಕರೆದುಕೊಂಡು ಸಂಘಟನೆಯಾಗಿ ಮುಂದುವರೆಯುವುದು ಯಥೋಚಿತವಾಗುತ್ತದೆ ಎಂದು ನನಗನಿಸುವುದಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸ್ 1887ರಿಂದ 1907ರವರೆಗೆ ಅಸ್ತಿತ್ವದಲ್ಲಿತ್ತು. ಈಗ ಅದಿಲ್ಲ. ಆ ಅಧಿವೇಶನವು ಹಳೆಯ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹೆಸರನ್ನು ಮುಂದುವರೆಸಿ ಅದೇ ಹೆಸರಿನಲ್ಲಿ ಪುನರ್ ಸಂಘಟನೆಯಾಗುವುದು ಹಕ್ಕುಬದ್ಧವಾಗುವುದಿಲ್ಲ. ಒಗ್ಗೂಡಿದ ಕಾಂಗ್ರೆಸ್ಸಿನ ಬಹುತೇಕ ಸದಸ್ಯರು ಬಹುಮತದ ಮೂಲಕ ನಿರ್ಣಯಕೈಗೊಂಡರೆ ಹಳೆಯ ಸ್ವರೂಪವನ್ನು ಮುಂದುವರೆಸಲು ಸಾಧ್ಯವಾಗುತ್ತದೆ. ನನ್ನ ಖಚಿತ ಅಭಿಪ್ರಾಯದಲ್ಲಿ ಹಳೆಯ ಸಂಘಟನೆಯ ಹೆಸರನ್ನು ಮುಂದುವರೆಸಿಕೊಂಡು, ಸಂವಿಧಾನವನ್ನು ರಚಿಸಿಕೊಳ್ಳುವುದು ಕಾನೂನು ಬದ್ಧವಲ್ಲ. ಅಲಹಾಬಾದ್ ಅಧಿವೇಶನ ಕೈಗೊಂಡಿರುವ ನಿರ್ಣಯಗಳು ಕೇವಲ ಕಾಂಗ್ರೆಸ್ ಬಣವೊಂದಕ್ಕೆ ಮಾತ್ರ ಅನ್ವಯವಾಗುವುದೇ ಹೊರತು ಹಿಂದಿನದಕ್ಕಲ್ಲ."

ಲಜಪತರು ಹೀಗೆ ಅನೇಕ ಸಲಹೆಗಳನ್ನು. ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಕೊನೆಗೆ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನಗಳನ್ನು ಕೆಲವು ಸಮಯದವರೆಗ ಅಮಾನತುಗೊಳಿಸಬೇಕೆಂದು ಬರೆದರು.

"1909ರ ಮಾರ್ಚ್‌ನಲ್ಲಿ ನಾನು ಇಂಗ್ಲೆಂಡಿನಿಂದ ಮರಳಿದ ಮೇಲೆ ಕಾಂಗ್ರೆಸ್ಸಿನ ಓರ್ವ ಪ್ರಧಾನ ಕಾರ್ಯದರ್ಶಿಯಿಂದ ನನಗೊಂದು ಖಾಸಗಿ ಪತ್ರ ಬಂದಿತು. ಪಂಜಾಬಿನ ವಿದ್ಯಮಾನದ ಬಗ್ಗೆ ತಿಳಿಸುವಂತೆ ಅದರಲ್ಲಿ ಕೋರಲಾಗಿತ್ತು. ನಾನು ರಹಸ್ಯ ಪತ್ರವೊಂದನ್ನು ಅವರಿಗೆ ಕಳುಹಿಸಿ ನನ್ನ ಅಭಿಪ್ರಾಯವನ್ನು ತಿಳಿಸಿದೆ. ಆ ಪತ್ರವನ್ನು ಸರ್ ಫಿರೋಜ್ ಷಹ ಮೆಹ್ತಾ ಮತ್ತು ಗೋಖಲೆಯವರಿಗೆ ತಲುಪಿಸಲು ಅವರಿಗೆ ಅಧಿಕಾರ ಕೊಟ್ಟೆ. ಪಂಜಾಬಿನ ಈಗಿನ ವಿದ್ಯಮಾನಗಳು ನಾನು ಮರಳುವ ಮೊದಲೇ ಹುಟ್ಟಿಕೊಂಡಿವೆ. ಈ ಆರಂಭದಲ್ಲಿ ಸಂಪೂರ್ಣವಾಗಿ ನನ್ನ ಪಾತ್ರವೇನೂ ಇಲ್ಲ... ನನ್ನ ಖಚಿತವಾದ ಅಭಿಪ್ರಾಯದಲ್ಲಿ ಹೇಳುವುದಾದರ ಈ ಪ್ರಾಂತ್ಯದ ಶುದ್ಧ ಹಿಂದೂ ಅಭಿಪ್ರಾಯಗಳಿಗ ವಿರುದ್ಧವಾಗಿ ಲಾಹೋರಿನಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನ ನಡೆಸುವ ಪ್ರಯತ್ನಗಳು ವಿವೇಕಯುಕ್ತವಲ್ಲ. ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಪ್ರಾಂತ್ಯ ಮತ್ತು ಕಾಂಗ್ರೆಸ್ಸಿನ ಅನುಕೂಲದ ದೃಷ್ಟಿಯಿಂದ ವಿಹಿತವಲ್ಲ."

ಸಾರ್ವಜನಿಕ ಅಭಿಪ್ರಾಯದ ಗೊತ್ತುಗುರಿಗಳನ್ನು ತಿಳಿದುಕೊಳ್ಳುವ ಸಲುವಾಗಿ ಲಜಪತರು ಪಂಜಾಬಿನ ವಿವಿಧ ಪ್ರಾಂತ್ಯಗಳ ವಿವಿಧ ಮುಖಂಡರುಗಳೊಂದಿಗೆ ಸಮಾಲೋಚನೆ ನಡೆಸಿದ್ದರು. ಆ ಎಲ್ಲಾ ಅಭಿಪ್ರಾಯಗಳನ್ನು ಪ್ರಸ್ತಾಪಿಸುತ್ತಾ ಅವುಗಳ ಒಂದು ಚರ್ಚೆಯನ್ನೇ ನಡೆಸಿದರು. ಪತ್ರದ ಕೊನೆಯಲ್ಲಿ ಅವರು, "ಹಾಗಿದ್ದರೆ, ಕಾಂಗ್ರೆಸ್ ಸಂಘಟನೆಯನ್ನು ಮುಕ್ತಾಯಗೊಳಿಸಬೇಕೇ? ಖಂಡಿತವಾಗಿ ಕೂಡದು. ಕೆಲವು ಕಾಲದವರೆಗೆ ವಾರ್ಷಿಕ ಪ್ರದರ್ಶನವನ್ನು ಕೈಬಿಡಬೇಕು. ರಾಷ್ಟ್ರೀಯ ಸಮಿತಿಯನ್ನು ಉಳಿಸಿಕೊಳ್ಳಬೇಕು. ಅಗತ್ಯವಿದ್ದರೆ ಪ್ರಾಂತ್ಯವಾರು ಅಧಿವೇಶನಗಳನ್ನು ನಡೆಸಬಹುದು. ಅದರಲ್ಲೂ ಸರ್ವಾನುಮತ ಇರುವ ಕಡೆಗಳಲ್ಲಿ ಮಾತ್ರ ಶಿಕ್ಷಿತ ಹಿಂದೂಗಳಿರುವ ಕಡೆಗಳಲ್ಲಾದರೆ ಇನ್ನೂ ಅರ್ಥಗರ್ಭಿತ

'ಈ ಪ್ರಾಂತ್ಯದ ಬಗ್ಗೆ ಹೇಳುವುದಾದರೆ ಇಲ್ಲಿನ ಹಿಂದೂಗಳಲ್ಲಿ ಸಮಾಧಾನವಿಲ್ಲ. ಅವರಿಗೆ ಯೋಚಿಸಲು ಮತ್ತು ತರ್ಕಿಸಲು ಸ್ವಲ್ಪ ಸಮಯಬೇಕು. ಕಳೆದು ಹೋಗಿರುವ ತಮ್ಮ ಸ್ಥಾನ ಮರಳಿ ಪಡೆದುಕೊಳ್ಳಲು ಅವರಿಗೆ ಸಮಯಾವಕಾಶ ಅಗತ್ಯವಾಗುತ್ತದೆ. ಅವರ ಪ್ರಯತ್ನಕ್ಕೆ ಅವರನ್ನು ಬಿಡಬೇಕಾಗುತ್ತದೆ. ಬದಲಾಗಿ ಅವರಲ್ಲಿ ಪ್ರಚೋದನೆ ಉಂಟಾಗುವಂತಹ ಪರಿಸ್ಥಿತಿ ತರುವುದು ಬೇಡ. ಇನ್ನಷ್ಟು ಇಬ್ಭಾಗವಾಗುವುದು ಬೇಡ. ಕಹಿಗೆ ಕಹಿ ಮತ್ತೆ ಸೇರುವುದು ಬೇಡ. ಈಗಾಗಲೇ ಹದಗೆಟ್ಟಿರುವ ಪರಿಸ್ಥಿತಿ ಇನ್ನಷ್ಟು ಹದಗೆಡಬಾರದು. ದುರ್ಬಲವಾಗಿರುವ ಸ್ಥಳಗಳಲ್ಲಿ ಸಾರ್ವಜನಿಕರ ಬದುಕು ನರಕವಾಗುವಂತೆ ಮಾಡಬೇಡಿ. ಎಳೆಯ ಸಸಿ ಅಳತೆ ಮೀರಿದ ಹೊರೆ ಹೊರಲು ಸಾಧ್ಯವಾಗುವುದಿಲ್ಲ. ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಕಾಲದಲ್ಲಿ ಆಶ್ವಾಸನೆಗಳಿಗಿಂತಲೂ ಕಾರ್ಯ ಕಾರಣಗಳು ವಿವೇಕಯುತವಾಗುತ್ತವೆ. ದೇಶಿಯವಾದಿಗಳು ಸೌಮ್ಯವಾದಿಗಳ ಜಗಳವಷ್ಟೇ ಇಲ್ಲಿನ ಎಡರು ತೊಡರಲ್ಲ. ಹಿಂದೂ ಮುಸ್ಲಿಮರ ನಡುವಣದ ಅಸಂಗತಗಳು ಪಂಜಾಬಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸುವುದಕ್ಕೆ ಪೂರಕವಾಗಿಲ್ಲ.

''ಕಳೆದ ಡಿಸೆಂಬರ್‌ನಲ್ಲಿ ಪಂಜಾಬಿನ ನಿಯೋಗವೊಂದು ಕಾಂಗ್ರೆಸ್ ಅಧಿವೇಶನವನ್ನು ಲಾಹೋರಿನಲ್ಲಿ ನಡೆಸುವಂತೆ ನಿಮಂತ್ರಣ ನೀಡಿದಾಗ ಪರಿಸ್ಥಿತಿ ಭಿನ್ನವಾಗಿತ್ತು. ಅಲ್ಲಿಂದೀಚೆಗೆ ವೈಪರಿತ್ಯಗಳು ತಲೆದೋರಿವೆ. ಪರಿಸ್ಥಿತಿಯ ಮಾರ್ಪಾಡಿಗೆ ಅನುಗುಣವಾಗಿ ನಮ್ಮ ಯೋಜನೆಗಳನ್ನು ಪರಿವರ್ತಿಸಿಕೊಳ್ಳುವುದರಲ್ಲಿ ಅಗೌರವವೇನೂ ಇಲ್ಲ. ವಸ್ತುಶಃ ಅದೇ ನಿಜವಾದ ಪರಿಹಾರವಾಗುತ್ತದೆ. ರಾಷ್ಟ್ರೀಯ ಬದುಕಿನಲ್ಲಿ ಅದು ಅನುಚಿತ ಅಂಶವಾಗುವುದಿಲ್ಲ. ನಾವು ಸಾಧ್ಯವಾದಷ್ಟು ಅನುಕೂಲವಾಗುವ ರೀತಿಯಲ್ಲಿ ನಡೆದುಕೊಳ್ಳೋಣ. ಅದರೊಟ್ಟಿಗೆ ಸರ್ಕಾರದ ಕೆಟ್ಟ ಯೋಚನೆಗಳಿಗೆ ಅವಕಾಶವಾಗದಂತೆ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾಗುವ ರೀತಿಯಲ್ಲಿ ನಮ್ಮ ಕೆಲಸವನ್ನು ನಿರ್ವಹಿಸೋಣ. ತಪ್ಪು ತಿಳುವಳಿಕೆಗಳಿಗೆ ಎಡ ಮಾಡಿಕೊಳ್ಳುವುದಕ್ಕಿಂತಲೂ ಸೃಜನಶೀಲವಾಗುವ ವಿನೀತ ಕಾರ್ಯದಲ್ಲಿ ಕೈಹಾಕುವುದು ಒಳ್ಳೆಯದಾಗುತ್ತದೆ. ಏಕತೆಯೇ ಇಲ್ಲದಿರುವಾಗ ಅದು ಸಾಧ್ಯವಾಗುವ ಸಮಾಧಾನವೂ ಇಲ್ಲದಿರುವಾಗ ಬಲವಂತದ ಮೂಲಕ ಅದಕ್ಕೆ ಕೈಹಾಕಿ ಇನ್ನಷ್ಟು ಪ್ರತಿಕೂಲ ಪ್ರಚೋದನೆಗೆ ಕಾರಣವಾಗದಿರುವುದು ಸರ್ವ ಹಿತವಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಹಿಂದೂ ಮುಸ್ಲಿಂ ಹೆಸರುಗಳನ್ನು ಒಟ್ಟಿಗೆ ಪ್ರಸ್ತಾಪಿಸುವುದು ಹಿತಕಾರಿಯಾಗಿಲ್ಲ. ಹಾಗೆ ಮಾಡುವುದರಿಂದ ಎರಡು ಕಡೆಯ ಸಮೃದ್ಧಿ ಹಾಳಾಗಲು ಕಾರಣವಾದಂತಾಗುತ್ತದೆ'' ಎಂದು ವಿವೇಚಿಸಿದರು.

ಲಜಪತರ ಈ ಪರಿಗಣನೆಗಳು ಮತ್ತು ಮಾರ್ಲೆ ಸುಧಾರಣೆಗಳು ಅವರ ಹಾಗೂ ಸ್ವತಃ ಗೋಖಲೆ ಸೇರಿದಂತೆ ಸೌಮ್ಯವಾದಿ ಕಾಂಗ್ರೆಸ್ ಪ್ರಮುಖರ ಅಂತರವನ್ನು ಇನ್ನಷ್ಟು ಅಗಲಗೊಳಿಸಿತು. ಲಜಪತರು ಸೌಮ್ಯವಾದಿಗಳ ನಿಲುವು ಧೋರಣೆಗಳಿಗೆ ಪ್ರಾಮುಖ್ಯತೆ ಕೊಡಲಿಲ್ಲ. ಗೋಖಲೆ ಕೈಗೊಂಡ ಕೆಲವು ರಿಯಾಯಿತಿ ನಿಲುವುಗಳನ್ನು ಅವರು ಒಪ್ಪಲಿಲ್ಲ. ಮುಸ್ಲಿಮರನ್ನು ಆಕರ್ಷಿಸುವ ಸಲುವಾಗಿ ಮಿಂಟೋ ಜಾರಿಗೆ ತಂದ ಕೋಮು ಪ್ರಾತಿನಿಧ್ಯವನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸಿದರು. ಮುಸ್ಲಿಮರ ಬೆಂಬಲಕ್ಕೆ ಸೌಮ್ಯವಾದಿಗಳು ಬೆಂಬಲ ನೀಡಬೇಕೆಂಬ ಘೋಷಣೆಯನ್ನು ಲಜಪತರು ಮಾನ್ಯ

ಮಾಡಲಿಲ್ಲ. ಸೌಮ್ಯವಾದಿಗಳಿಗೆ ಕೊಡುವ ಬೆಂಬಲ ಮುಸ್ಲಿಮರಿಗೆ ಕೊಡುವ ಬೆಂಬಲವಾಗುತ್ತದೆ ಎಂಬ ನೀತಿಯನ್ನು ಅವರು ಕಟುವಾಗಿ ಟೀಕಿಸಿದ್ದರು. ಅದರ ಮಿಂಟೋ ಮಾರ್ಲೆ ಹೊಸೆದ ಸಂಚಿನ ಒಳ ಪದರು ಅದೇ ಆಗಿತ್ತು.

ಏನೇ ಆದರೂ ಕಾಂಗ್ರೆಸ್ ಅಧಿಕಾರಸ್ಥರು ಲಜಪತ್‌ರಾಯ್ ಅವರ ಸಲಹೆಯನ್ನು ಮಾನ್ಯ ಮಾಡಲಿಲ್ಲ. ವಾರ್ಷಿಕ ಅಧಿವೇಶನವನ್ನು ತಟಸ್ಥಗೊಳಿಸಲಿಲ್ಲ. ಲಾಹೋರಿನಲ್ಲಿ ಡಿಸೆಂಬರ್ ಕೊನೆಯ ವಾರದಲ್ಲಿ ಪ್ರತಿನಿಧಿಗಳು ಸಮಾವೇಶಗೊಳ್ಳತೊಡಗಿದರು. ಹರಿಕಿಷನ್ ಲಾಲ್ ಗುಂಪು ಎಲ್ಲಾ ತಯಾರಿ ನಡೆಸಿತು. ಆರ್ಯಸಮಾಜದ ಮುಖಂಡರು ಬಹುತೇಕವಾಗಿ ಆ ಅಧಿವೇಶನದಿಂದ ದೂರ ಉಳಿದರು. ಲಜಪತ್‌ರಾಯ್ ಮತ್ತು ಹರಿಕಿಷನ್ ಲಾಲ್ ನಡುವಣದ ವಿರಸ ಇನ್ನಷ್ಟು ಉಲ್ಬಣಗೊಂಡಿತು. ಆಲ್‌ಫ್ರೆಡ್ ನುಂಡಿ ಸಂಪಾದಕತ್ವದಲ್ಲಿ 'The Tribune' ಲಜಪತ್‌ರಾಯ್ ವಿಷಯದಲ್ಲಿ ಇನ್ನಷ್ಟು ವ್ಯಗ್ರವಾಯಿತು... ಕೊನೆ ಕೊನೆಗೆ ಪೀತ ಪತ್ರಿಕೆಯ ನಂಜನ್ನು ಕಾರತೊಡಗಿತು. ಏಷ್ಟೇ ಆದರೂ ಆ ಪತ್ರಿಕೆಯ ಹತೋಟಿ ಹರ್‌ಕಿಷನ್ ಲಾಲ್ ಅವರ ಕೈಯಲ್ಲೇ ಇದ್ದಿತು. ಪತ್ರಿಕೆಯ ಟ್ರಸ್ಟಿಗಳಲ್ಲಿ ಹೆಚ್ಚು ಸಮರ್ಥವಾಗಿದ್ದವರು. ಅವರ ಮೂಗಿನ ನೇರಕ್ಕೆ ತಕ್ಕಂತೆ ಅದು ಪ್ರಕಟವಾಗಬೇಕಿತ್ತು. ಆ ಅಧಿವೇಶನಕ್ಕೆ ಮೊದಲು ನಿಯೋಜಿತ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಂಡು ಅಧ್ಯಕ್ಷತೆ ವಹಿಸಲು ಸರ್ ಫಿರೋಜ್ ಷಾ ಮೆಹ್ತಾ ನಿರಾಕರಿಸಿದ್ದಾರೆಂದು ಸುದ್ದಿ ಹಬ್ಬಿತು. ಅಧಿವೇಶನಕ್ಕೆ ಇನ್ನೂ ಆರು ದಿನಗಳಿರುವಾಗ ಆ ಸುದ್ದಿ ಖಾತ್ರಿಯಾಯಿತು. ಅವರ ಸ್ಥಾನವನ್ನು ಪಂಡಿತ ಮದನ ಮೋಹನ ಮಾಳವೀಯ ಅವರಿಗೆ ವಹಿಸಿದರು. ಪಂಡಿತ ಮಾಳವೀಯರ ಬಗ್ಗೆ ವ್ಯಕ್ತಿಗತವಾಗಿ ಅಪಾರ ಗೌರವವಿದ್ದರೂ ಸಹ ಲಜಪತ್‌ರಾಯ್ ಕಾಂಗ್ರೆಸ್ ಅಧಿವೇಶನದಿಂದ ದೂರ ಉಳಿದರು. ವಸ್ತುಶಃ ಅವರು ಆ ಅಧಿವೇಶನದ ಸಮಯದಲ್ಲಿ ಲಾಹೋರ್ ನಗರಿಯಲ್ಲೇ ಇರಲಿಲ್ಲ.

ಮುಸ್ಲಿಮರನ್ನು ಓಲೈಸಿಕೊಳ್ಳುವ ಮಿಂಟೋ ಮಾರ್ಲೆ ನೀತಿಗಳು ತ್ವರಿತವಾಗಿ ಅನುಷ್ಠಾನಕ್ಕೆ ಬರತೊಡಗಿದವು. ಸಂವಿಧಾನದ ಸುಧಾರಣೆಯ ಹೊಸ ರೂಪುರೇಷೆಗಳ ಪ್ರಕಾರ ಪ್ರಾತಿನಿಧ್ಯ ನೀಡಲು ಅವರು ಆ ನೀತಿಗಳಲ್ಲಿ ಅವಕಾಶ ಮಾಡಿಕೊಂಡಿದ್ದರು. ಗೋಖಲೆ ಅವುಗಳನ್ನು ಸ್ವಾಗತಿಸಿದ್ದರು. ಆದರೆ ಪಂಜಾಬಿನ ಉನ್ನತ ಮುಖಂಡರು ಆ ನೀತಿಗಳನ್ನು ಅತ್ಯಂತ ಕಠಿಣವಾಗಿ ವಿರೋಧಿಸಿದ್ದರು. ಸರ್ಕಾರದ ಕೆಲವು ಉನ್ನತ ಸ್ಥಾನಗಳಿಗೆ ನೇಮಕಗಳು ಆ ನೀತಿಗಳಿಗೆ ಅನುಗುಣವಾಗಿ ನಡೆಯುತ್ತಿದ್ದವು. ನೇಮಕಾತಿಗಳ ಬಗ್ಗೆ ಪತ್ರಿಕೆಯ ಅಂಕಣಗಳಲ್ಲಿ ಕೋಮು ಸ್ವರೂಪದ ವಿವಾದಗಳು ಹೆಡೆಯಾಡತೊಡಗಿದವು. ಹಿಂದೂ ಸಮುದಾಯದವರು ತಮ್ಮದೇ ಆದ ಪ್ರತ್ಯೇಕ ಸಂಘಟನೆಯೊಂದನ್ನು ಕಲ್ಪಿಸಿಕೊಳ್ಳಬೇಕೆಂಬ ಹೊಸ ನಿಲುವು ಬಹು ಬೇಗ ಅನೇಕರ ಮನಸ್ಸಿನಲ್ಲಿ ಒಡಮೂಡಿತು. ಡಿ.ಎ.ವಿ. ಸಮುದಾಯದ ಪ್ರಮುಖ ನೇತಾರ ಲಾಲ್ ಚಂದ್ ಈ ನಿಟ್ಟಿನಲ್ಲಿ ವಿಶೇಷ ಆಸಕ್ತಿ ವಹಿಸಿದರು. ಅವರು ನಂತರದಲ್ಲಿ ಪ್ರಧಾನ ನ್ಯಾಯಾಲಯದ ನ್ಯಾಯಾಧೀಶರಾದವರು. ವಕೀಲರ ಸಂಘದ ಹಿಂದೂಯೇತರ ಸದಸ್ಯ ಶಾದಿನ್ ಅವರನ್ನು ಅವರ ಸ್ಥಾನಕ್ಕೆ ಪದೋನ್ನತಿಗೊಳಿಸುವತನಕ ಅವರು ಪದವಿಯನ್ನು ನಿರ್ವಹಿಸಿದರು. ಲಾಲ್ ಚಂದ್ ಆಶಯಗಳಿಗೆ ಅನುಗುಣವಾಗಿ ಪಂಜಾಬ್ ಹಿಂದೂ ಸಭಾ ಅಸ್ತಿತ್ವ

ಬಂದಿತು. ಅದರ ಮೊಟ್ಟ ಮೊದಲ ಸಮ್ಮೇಳನ ಲಾಹೋರಿನಲ್ಲಿ 1909 ಅಕ್ಟೋಬರ್ 21 ಮತ್ತು 22ರಂದು ನಡೆಯಿತು. ಅರ್ಥಾತ್ ಅಲ್ಲಿ ಕಾಂಗ್ರೆಸ್ ಅಧಿವೇಶನ ಸೇರುವುದಕ್ಕೆ ಮೊದಲು ಈ ಹಿಂದೂ ಸಮ್ಮೇಳನ ಜರುಗಿತು. ಲಜಪತರು ಪ್ರತಿನಿಧಿಯಾಗಿ ಪಾಲ್ಗೊಂಡರು. ತಮ್ಮ ಭಾಷಣದಲ್ಲಿ ಅವರು ಹಿಂದೂ ರಾಷ್ಟ್ರೀಯವಾದವನ್ನು ಪ್ರತಿಪಾದಿಸಿದರು. ಅಪ್ರತಿಮ ಬ್ರಾಹ್ಮಣ ವಾಕ್ಪಟು ದೀನ್ ದಯಾಳ್ ಶರ್ಮ ಮಂಡಿಸಿದ ಈ ಸಂಬಂಧದ ಮೊದಲ ಸೂಚನೆಯನ್ನು ಅವರು ಅನುಮೋದಿಸಿದರು.

''ಹಿಂದೂ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರವರ್ಗಗಳನ್ನು ತಮ್ಮ ಪರಸ್ಪರ ಭ್ರಾತೃತ್ವದ ಭಾವನೆಗಳನ್ನು ಇನ್ನಷ್ಟು ಗಟ್ಟಿ ಮಾಡಿಕೊಳ್ಳಬೇಕೆಂದು ಈ ಸಮ್ಮೇಳನ ಕೋರುತ್ತದೆ. ಸಮಾನ ರಾಷ್ಟ್ರೀಯತೆಯನ್ನು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಬಲಪಡಿಸಲು ಒಗ್ಗೂಡಬೇಕೆಂದು ಮನವಿ ಮಾಡುತ್ತದೆ. -

(ಅ) ದೇಶದ ಪರಮೋಚ್ಚ ಸ್ಥಾನಗಳಲ್ಲಿ ತಮ್ಮ ನ್ಯಾಯೋಚಿತ ಸ್ಥಾನಗಳನ್ನು ಆಶ್ರಯಿಸಿಕೊಳ್ಳಬೇಕು.

(ಆ) ಮಾನವೀಯತೆಯನ್ನು ಮಹೋದ್ದೇಶವಾಗಿ ಬೆಳೆಯಗೊಡಬೇಕು.

(ಇ) ತಮ್ಮ ಕೋಮು ಹಿತವನ್ನು ಸಂರಕ್ಷಿಸಬೇಕು ಮತ್ತು ಸುಭದ್ರ ಮಾಡಿಕೊಳ್ಳಬೇಕು. ಹಾಗೂ,

(ಈ) ತಮ್ಮ ಪೂರ್ವಜರು ಆಳವಾದ ಸಂಶೋಧನೆ ತಪಸ್ಸು ಮತ್ತು ಜ್ಞಾನ, ಸಿದ್ಧಿಗಳ ಮೂಲಕ ಪರಿಷ್ಕರಿಸಿ ಸಂರಕ್ಷಿಸಿಕೊಂಡು ಬಂದು ಮುಂದಿನ ಪೀಳಿಗೆಗಾಗಿ ಕೊಟ್ಟಿರುವ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ತಲೆ ತಲಾಂತರಗಳ ತನಕ ಮುಂದುವರೆಸಿಕೊಂಡು ಜತನವಾಗಿಟ್ಟುಕೊಳ್ಳಬೇಕು.''

ಲಜಪತರು ಸತ್ವಭರಿತ ಭಾಷಣ ಮಾಡುತ್ತಾ ಪ್ರಾಚೀನ ಹಿಂದೂ ವೈಭವದ ಉಧೃತಗಳೊಂದಿಗೆ ತಮ್ಮ ಮಾತಿನ ಅಂತರಾರ್ಥವನ್ನು ಗಟ್ಟಿ ಮಾಡಿದರು. ಧಾರ್ಮಿಕ ಕೋನದಿಂದಲೂ, ಸಾಮಾಜಿಕ ಮುಖದಿಂದಲೂ ಸದ್ಯದಲ್ಲಿ ಉದ್ಭವಿಸಿದ 'ಕೋಮು' ಮುಖದ ಹೊಸ ರೀತಿಯನ್ನು ಅವರು ತಮ್ಮ ಭಾಷಣದ ಉದ್ದಕ್ಕೂ ವಿಶ್ಲೇಷಿಸಿ ವಿವೇಚಿಸಿದರು. ಹಿಂದೂ ಸಮುದಾಯಕ್ಕೆ ಅವರು ನೀಡಿದ ಕರೆಯನ್ನು ಈ ಕೆಳಗಿನಂತೆ ಸಮೀಕರಿಸಬಹುದು.

''ಇತರ ಧಾರ್ಮಿಕ ನಂಬಿಕೆಗಳ ನನ್ನ ದೇಶವಾಸಿಗಳ ಬಗ್ಗೆ ನನ್ನಲ್ಲಿ ಖಂಡಿತವಾಗಿಯೂ ಕೆಟ್ಟ ಭಾವನೆಗಳಿಲ್ಲ. ನಾನು ಅವರಿಗೆ ಎಲ್ಲಾ ಸುಖ ಸಮೃದ್ಧಿಗಳು ಪ್ರಾಪ್ತವಾಗಲೆಂದು ಪ್ರಾರ್ಥಿಸುತ್ತೇನೆ. ತಮ್ಮ ಸಮುದಾಯದ ಸ್ಥಿತಿಗತಿಗಳನ್ನು ಉತ್ಕರ್ಷಗೊಳಿಸಿಕೊಳ್ಳುವ ಅವರ ಪ್ರಯತ್ನಗಳನ್ನು ಮತ್ತು ತಮ್ಮ ಸಹಧರ್ಮೀಯರಿಗೆ ಉನ್ನತ ಪದವಿಗಳನ್ನು ದೊರಕಿಸಿಕೊಡುವ ವಿಷಯದಲ್ಲೂ ನಾನು ಅವರಲ್ಲಿ ಯಾವುದೇ ತಪ್ಪು ನಡೆದಿದೆ ಎಂದು ಪರಿಗಣಿಸುವುದಿಲ್ಲ. ಭಾರತದ ಈಗಿನ ರಾಜಕೀಯ ಸ್ಥಿತಿಯಲ್ಲಿ ತಮ್ಮ ಸಮುದಾಯದ ಹಿತವನ್ನು ಕಾಪಾಡಿಕೊಳ್ಳುತ್ತಿರುವ ಅವರ ಪರಿ ನಿಜವಾಗಿಯೂ

ಯುಕ್ತವಾದುದು. ಎಲ್ಲಿಯತನಕ ಅವರು ಭಾರತೀಯರಲ್ಲದವರ ಜೊತೆ ಅಸಿಂಧು ಹೊಂದಾಣಿಕೆ ಮಾಡಿಕೊಂಡು ಹಿಂದೂಗಳಿಗೆ ಗಾಸಿ ಉಂಟು ಮಾಡುವುದಿಲ್ಲವೋ ಅಲ್ಲಿಯತನಕ ಇವೆಲ್ಲವೂ ಅವರಿಗೆ ಅಗತ್ಯವಾದ ಕಾರ್ಯಗಳೇ. ಹಿಂದೂಗಳನ್ನು ಹಿಂದೂಯೇತರರಿಗೆ ವಿರುದ್ಧವಾಗಿ ಭಾರತಿಯರನ್ನು ಭಾರತೀಯೇತರರಿಗೆ ವಿರುದ್ಧವಾಗಿ ಎತ್ತಿ ಕಟ್ಟುವ ಯತ್ನವನ್ನು ನಾನು ಯದಿಷ್ಠರನ ಮಾತುಗಳ ಮೂಲಕ ಹೀಗೆ ವ್ಯಾಖ್ಯಾನಿಸುತ್ತೇನೆ. ಶತ್ರುಗಳು ದುರ್ಯೋಧನನನ್ನು ಸುತ್ತುವರಿದ ಪ್ರಸಂಗ. ದುರ್ಯೋಧನನ ಶತ್ರುಗಳೊಂದಿಗೆ ಪಾಂಡವರು ಹೋರಾಟ ಮಾಡಬೇಕಾದ ಸಂದರ್ಭ. ಆಗ ಯದಿಷ್ಠರ ಹೇಳುತ್ತಾನೆ. : 'ನಾವು ಐವರು. ಅವರು ಒಂದು ನೂರು. ನಾವು ಐವರು ಅವರಿಗೆ ವಿರುದ್ಧವಾದಾಗ ಐವರೇ. ಅವರು ನೂರು ಮಂದಿಯೇ. ಆದರೆ ಇತರರೊಂದಿಗೆ ಹೋರಾಡಬೇಕಾಗಿ ಬಂದಾಗ ನಾವು ನೂರಾ ಐದು ಮಂದಿ.'

ಬಹುಶಃ ಪಂಜಾಬ್ ಹಿಂದೂ ಸಭಾ ರೂಪಿಸಿದವರಿಗೆ ನೂರಾಐದರ ಸಂಖ್ಯೆ ವ್ಯಾಖ್ಯೆ ಹಿಡಿಸಿರಲಿಕ್ಕಿಲ್ಲ. ಅದರಲ್ಲೂ ಕ್ಷಣ ಕಾಲ ಹಿಂದೂಗಳು ಐವರಲ್ಲ ನೂರು ಎಂಬ ಸಂಗತಿಯನ್ನು ಮರೆಮಾಚಬೇಕಾಗಿ ಬಂದಾಗ ಹಿಂದೂಗಳು ಮತ್ತು ಭಾರತೀಯರ ಘೋಷಣೆಗಳು 'ಅವರು' ಕೆಲವರು ಎಂದಾಗಿಯೂ, 'ನೀವು' ಅನೇಕರು ಎಂದಾಗಿಯೂ ಹೇಳಬೇಕಾಗಿ ಬಂದಾಗ ಸಭಾ ಧೋರಣೆ ಬಿನ್ನವಾಗಿ ನಿಂತಿತು. ಎರಡು ವರ್ಷಗಳ ನಂತರ ಶಾದಿ ಲಾಲ್ (ಪಂಜಾಬ್ ಉಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿ ಮತ್ತು ತತ್ಕಾಲದಲ್ಲಿ ಪ್ರಿವಿ ಕೌನ್ಸಿಲರ್) ಹಿಂದೂ ಸಭೆಯ ಮಹಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಅವರು ತಮ್ಮ ಭಾಷಣವನ್ನು ಮಹಾ ಭಾರತದ ಅದೇ ವಾಕ್ಯದೊಂದಿಗೆ ಅಂತ್ಯಗೊಳಿಸಿದರು. ಆದರೆ ಆ ಪ್ರಸ್ತಾವದಲ್ಲಿ ಅವರು ಒಂದು ಮಾರ್ಪಾಟು ಮಾಡಿಕೊಂಡರು. ಹಿಂದೂಗಳ ಏಕತೆಯನ್ನು ಹಿಂದೂಯೇತರರಿಗೆ ವಿರುದ್ಧವಾಗಿ ಘೋಷಿಸಿದರು. ದುರ್ಯೋಧನನ ದಾಯಾದಿತ್ವದ ನೆಂಟನ್ನು ಇಲ್ಲಿ ಅವರು ಇತರ ಭಾರತೀಯ ಸಮುದಾಯಗಳಿಗೆ ಸಮನ್ವಯಗೊಳಿಸಲಿಲ್ಲ!

ಲಜಪತರು ಪಂಜಾಬ್ ಹಿಂದೂ ಸಭಾ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿಗೆ ಆಸಕ್ತಿ ವಹಿಸಿದ್ದರೂ ಆ ಹೊಸ ಆಂದೋಲನದೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಂಡಂತೆ ಕಂಡು ಬರಲಿಲ್ಲ. ದಿನ ಕಳೆದಂತೆ ಆ ಚಳವಳಿಯು ಸಣ್ಣಪುಟ್ಟ ವಿಷಯಗಳಿಗೂ ಜಗಳಕ್ಕೆ ಇಳಿಯುವಂತಹ ತೀರಾ ಸಂಕುಚಿತ ಬೆಳವಣಿಗೆ ಕಂಡಿತು. ಲಜಪತರು ಆ ಚಳವಳಿಯಿಂದ ಬಹು ದೊಡ್ಡ ಫಲಿತವನ್ನು ನಿರೀಕ್ಷಿಸಿದ್ದರು. ಆದರೆ ಕಚೇರಿಯಲ್ಲಿ ಬ್ರೆಡ್ಡಿನ ಚೂರು ಮತ್ತು ಮೀನಿನ ತುಂಡುಗಳಿಗೆ ಕಚ್ಚಾಡುವಂತಹ ಪ್ರಸಂಗಗಳನ್ನಲ್ಲ.

ಕಾಂಗ್ರೆಸ್‌ಗೆ ಎದುರಾಳಿಯಾಗಿ ಪಂಜಾಬ್ ಹಿಂದೂ ಸಭಾ ಹುಟ್ಟಿಕೊಂಡಾಗ ಕಾಂಗ್ರೆಸ್ ಪ್ರಾತಿನಿಧ್ಯದ ಹಿಂದಿದ್ದ ಹರ್‌ಕಿಷನ್ ಲಾಲ್ ಸಭಾದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು ಕುತೂಹಲದ ಸಂಗತಿ. ಅತ್ತ ಲಜಪತರು ತಟಸ್ಥರಾಗಿದ್ದು ಅರ್ಥವತ್ತಾದ ಬೆಳವಣಿಗೆ! ರಾಜಕಾರಣದ ವಿಪರ್ಯಾಸಗಳಿಗೆ ಹೇಳಿ ಮಾಡಿಸಿದ ವಿದ್ಯಮಾನ. ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ ಲಜಪತರು ಸ್ನೇಹದ ಬೆಂಬಲ ನೀಡುವುದನ್ನು ನಿಲ್ಲಿಸಲಿಲ್ಲ

ಅವಕಾಶ ಬಂದಾಗಲೆಲ್ಲಾ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸುವ ಮೂಲಕ ಸ್ನೇಹದ ಎಚ್ಚರಿಕೆಗಳನ್ನು ಕೊಡುತ್ತಿದ್ದರು. ದೆಹಲಿಯಲ್ಲಿ 1912ರ ಅಕ್ಟೋಬರ್‌ನಲ್ಲಿ ನಡೆದ 4ನೇ ವಾರ್ಷಿಕ ಸಮ್ಮೇಳನದಲ್ಲಿ ಹಿಂದೂಗಳು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಮಾಡುವ ಗೊತ್ತುವಳಿಯೊಂದನ್ನು ಮಂಡಿಸಿದರು. ಹಿಂದೂ ಶಿಕ್ಷಣ ನಿಧಿಯೊಂದನ್ನು ಸ್ಥಾಪಿಸುವಂತೆ ಸಲಹೆ ಮಾಡಿದರು. ಅವರ ಭಾಷಣದಿಂದಲೇ ದೆಹಲಿಯ ಹಿಂದೂ ಕಾಲೇಜಿಗೆ 5005 ರೂಪಾಯಿಗಳ ಕಾಣಿಕೆ ದೊರೆಯಿತು. ಅದೆಲ್ಲಾ ಏನೇ ಆದರೂ ನಂತರದಲ್ಲಿ ಲೆಫ್ಟಿನೆಂಟ್ ಗವರ್ನರ್ ಬಳಿಗೆ ಹೋದ ಹಿಂದೂ ನಿಯೋಗಗಳಿಗೆ ಆದ ಅಪಮಾನ ಸಹಿಸಲು ಅಸಾಧ್ಯವಾಗಿತ್ತು. ಅನೇಕ ದೇಶೋಚ್ಚಾಟನೆಗಳಾದ ನಂತರದಲ್ಲೂ ಕಣ್ಣಿಗೆ ಕಟ್ಟಿದ ಆ ಅಪಮಾನಗಳ ದೃಶ್ಯವನ್ನು ಲಜಪತರಿಗೆ ಮರೆಯಲಾಗಲಿಲ್ಲ.

* * *

ಅಧ್ಯಾಯ-36

ತಾಯ್ನಾಡಿನಲ್ಲಿ ಪ್ರತಿಕ್ರಿಯೆ: ವಿದೇಶದಲ್ಲಿ ಪ್ರಚಾರ

1910ರವರೆಗಿನ 5-6 ವರ್ಷಗಳ ಆ ಬೆಳವಣಿಗೆಯನ್ನೆಲ್ಲಾ ಕ್ರೋಢಿಕರಿಸಿದಾಗ ಒಂದು ಅಂಶ ವಿಶೇಷ ಗಮನ ಸೆಳೆಯುತ್ತದೆ. 1909ರ ಅಂತ್ಯದ ವೇಳೆಗೆ ಪೊಲೀಸರು ಭಾಯಿ ಪರಮಾನಂದರ ಮನೆಯ ಮೇಲೆ ದಾಳಿ ನಡೆಸಿದರು. ನ್ಯಾಯಾಲಯದಲ್ಲಿ ಅವರ ವಿರುದ್ಧ ವಿಚಾರಣೆ ಆರಂಭಗೊಂಡಿತು. ಅವರ ವರ್ತನೆಗಳ ಉಚಿತವಾಗಿಲ್ಲವೆಂದು ಪರಿಗಣಿತವಾಯಿತು. ದಾಳಿಯ ನಂತರ ಮನೆಯಲ್ಲಿ ನಡೆಸಿದ ಶೋಧದಲ್ಲಿ ಪೊಲೀಸರು ಅನೇಕ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ಅವುಗಳಲ್ಲಿ ಎರಡು ಲಜಪತ್‌ರಾಯ್ ಬರೆದ ಪತ್ರಗಳು. ಆ ಪತ್ರಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ಪತ್ರಗಳನ್ನು ಬರೆದವರನ್ನು ವಿಚಾರಣೆಗೆ ಒಳಪಡಿಸಲಾಯಿತು. ದೇಶದ್ರೋಹ ಮತ್ತು ಕ್ರಾಂತಿಕಾರಿ ಸಂಚು ವಿಚಾರಣೆಯ ರೌಲತ್ ಸಮಿತಿಯು (1917-18) ಆ ಎರಡು (ವಿಶೇಷ) ಪತ್ರಗಳ ಬಗ್ಗೆ ಪ್ರಮುಖ ಪ್ರಸ್ತಾಪ ಮಾಡಿದೆ. ಸಮಿತಿಯ ವರದಿಯಲ್ಲಿ ಹೀಗೆ ದಾಖಲು ಮಾಡಲಾಗಿದೆ.

"ಅದೇ ವರ್ಷ (1910), ಭಾಯಿ ಪರಮಾನಂದ ಎಂಬುವರನ್ನು ಲಾಹೋರ್ ಸಂಚುಕಾರರಲ್ಲಿ ಒಬ್ಬರನ್ನಾಗಿ ಜೀವಾವಧಿ ಗಡಿಪಾರು ಶಿಕ್ಷೆಗೆ ಗುರಿಪಡಿಸಲಾಯಿತು. ಅಪರಾಧಗಳ ವಿಚಾರಣೆಯಲ್ಲಿ ಅವರ ನಡವಳಿಕೆ ಶಂಕಾಸ್ಪದವಾಗಿ ರುಜುವಾತಾಯಿತು. ಅಲಿಪುರದ ಸಂಚುಕಾರರು ಬಳಸಿದ್ದ ಬಾಂಬ್ ತಯಾರಿಕೆ ಪುಸ್ತಕದ ಒಂದು ಪ್ರತಿ, ಇತರ ಅನೇಕ ದಾಖಲೆಗಳು, ಲಜಪತ್‌ರಾಯ್ ಬರೆದ ಎರಡು ವಿಶೇಷ ಪತ್ರಗಳು ಅವರ ಬಳಿಯಲ್ಲಿದ್ದದ್ದು ಪತ್ತೆಯಾಯಿತು. ಆ ಪತ್ರಗಳನ್ನು 1907ರ ಗಲಭೆಯ ಸಂದರ್ಭದಲ್ಲಿ ಲಂಡನ್‌ನಲ್ಲಿದ್ದ ಭಾಯಿ ಪರಮಾನಂದರಿಗೆ ಬರೆಯಲಾಗಿತ್ತು. ಮೊದಲ ಪತ್ರದ ದಿನಾಂಕ 1907, ಫೆಬ್ರವರಿ 28. ಎರಡನೆಯದು ಏಪ್ರಿಲ್ 11ರಂದು. ಎರಡು ಪತ್ರಗಳನ್ನು ಲಾಹೋರಿನಿಂದ ಬರೆಯಲಾಗಿದೆ. 'ಇಲ್ಲಿರುವ ವಿದ್ಯಾರ್ಥಿ ಸಮುದಾಯಕ್ಕೆ ನಿಜವಾದ ರಾಜಕಾರಣದ ನೀತಿ ಸಿದ್ಧಾಂತಗಳನ್ನು ಪರಿಚಯ ಮಾಡಿಕೊಡುವ ಅಂಶಗಳನ್ನು ಒಳಗೊಂಡ ಅನೇಕ ಪುಸ್ತಕಗಳನ್ನು ಕಳುಹಿಸಲು ತಮ್ಮ ಹಣದಲ್ಲಿ ಸ್ವಲ್ಪ ಭಾಗವನ್ನು ವಿನಿಯೋಗ ಮಾಡುವಂತೆ ಕೃಷ್ಣವರ್ಮರಿಗೆ ತಿಳಿಸಿ' ಎಂದು ಮೊದಲ ಪತ್ರದಲ್ಲಿ ವಿಳಾಸದಾರರಿಗೆ ತಿಳಿಸಿದ್ದರು. 'ರಾಜಕೀಯ ಮಿಷನರಿ ಕಾರ್ಯಗಳಿಗಾಗಿ 10,000 ರೂಪಾಯಿಗಳಷ್ಟು ತಮ್ಮ ಕಾಣಿಕೆಯಲ್ಲಿ ಒಂದಷ್ಟನ್ನು ನಮ್ಮ ಬಳಕೆಗೆ ಒದಗುವಂತೆ ಇಡಲು ಕೃಷ್ಣವರ್ಮರಿಗೆ ತಿಳಿಸಿ' ಎಂದು ಸಹ ಭಾಯಿ ಪರಮಾನಂದರನ್ನು ಕೋರಲಾಗಿತ್ತು.

'' ಎರಡನೇ ಪತ್ರದಲ್ಲಿ,-'ಜನರ ಭಾವನೆಗಳು ನಿಸ್ತೇಜವಾಗಿವೆ. ಕೃಷಿ ವರ್ಗವೇನೋ ತಮ್ಮ ಚಳವಳಿಗೇನೋ ಸಿದ್ಧವಾಗಿದ್ದಾರೆ. ಪರಿಸ್ಥಿತಿ ಆಕಾಲಿಕವಾಗಿ ಬಿಗಡಾಯಿಸಬಹುದೆಂಬ ಭಯ ನನ್ನನ್ನು ಕಾಡುತ್ತಿದೆ.' ವಿಚಾರಣೆಗೆ ಭಾಯಿ ಪರಮಾನಂದರ ಪ್ರಕರಣ ಬಂದಾಗ ತಮ್ಮ ಎರಡನೇ ಪತ್ರದ ಒಕ್ಕಣೆಕೆಯ ಬಗ್ಗೆ ಲಜಪತರು ವಿವರಣೆ ನೀಡಿದರು. ತಮ್ಮ ಮಾತಿನ ಅರ್ಥವನ್ನು ಬಿಡಿಸಿ ತಿಳಿಸಿದರು. ರೈತರು ರಾಜಕೀಯ ಚಳವಳಿಯ ಸ್ವರೂಪವನ್ನು ಅರಿತವರಲ್ಲ. ಆದ್ದರಿಂದ ತಮ್ಮ ಚಳವಳಿಯನ್ನು ಶಾಂತ ರೀತಿಯಿಂದ ನಡೆಸಲು ಅವರಿಗೆ ಸಾಧ್ಯವಾಗದಿರಬಹುದೆಂಬ ಅರ್ಥದಲ್ಲಿ ತಾವು ಆ ಮಾತನ್ನು ತಿಳಿಸಿರುವುದಾಗಿ ವಿವರಿಸಿದರು. 'ಲಜಪತರು ಆ ಹಂತದಲ್ಲಿ ಕೃಷಿಕರು ರಾಜಕೀಯ ಚಳವಳಿ ನಡೆಸುವುದಕ್ಕೆ ಒಲವು ತೋರಿರಲಿಲ್ಲ.' ಇನ್ನೊಂದು ಪತ್ರದಲ್ಲಿ ಪುಸ್ತಕಗಳನ್ನು ಕಳುಹಿಸುವಂತೆ ಕೋರಿದ್ದಕ್ಕೆ ಪೂರಕವಾಗಿ ಆ ವಿಚಾರಣೆಯ ದಿನ ತಾವು ಬರೆದಿದ್ದ ಇನ್ನೊಂದು ಪತ್ರದ ಪ್ರತಿಯನ್ನು ಸಾದರಪಡಿಸಿದರು. ಆ ಪತ್ರದಲ್ಲಿ ತಮಗೆ ಬೇಕಾಗಿದ್ದ ಪುಸ್ತಕಗಳ ಪಟ್ಟಿಯನ್ನು ನಮೂದಿಸಿದ್ದರು. ಆ ಪಟ್ಟಿಯಲ್ಲಿ ಕ್ರಾಂತಿಕಾರಿ ರಾಜಕೀಯ ಮತ್ತು ಐತಿಹಾಸಿಕ ಕಾದಂಬರಿಗಳನ್ನು ಒಳಗೊಂಡ ಪ್ರಬುದ್ಧ ಪ್ರಕಟಣಾಲಯಗಳ ಪ್ರಕಾಶನಗಳನ್ನು ತಿಳಿಸಲಾಗಿತ್ತು. ಲಜಪತರು ತಮ್ಮ ವಾದದಲ್ಲಿ, 'ನಾನು ಗಡಿಪಾರು ಶಿಕ್ಷೆಯಿಂದ ಮರಳುವತನಕ ಶಾಮ್‌ಜಿ ಕಿಷನ್ ವರ್ಮ ಅವರ ರಾಜಕೀಯ ಹಿಂಸಾಚಾರ ಅಥವಾ ಅಪರಾಧಗಳನ್ನು ಕುರಿತಂತೆ ಈಗ ವ್ಯಕ್ತವಾಗುತ್ತಿರುವ ಅವರ ದೃಷ್ಟಿಕೋನದ ಬಗ್ಗೆ ನನಗೆ ಗೊತ್ತಿರಲಿಲ್ಲ. ಅದು ತಿಳಿದ ನಂತರ ನಾನು ಅವರೊಂದಿಗೆ ವ್ಯವಹರಿಸುವುದನ್ನು ಬಿಟ್ಟೆ.'' ಎಂದರು.

ಲಜಪತರ ವಿಶೇಷ ಪುಸ್ತಕಗಳು ಸಾಮಾನ್ಯ ನೋಟದಲ್ಲಿ ಸಾಮಾನ್ಯ ಒಕ್ಕಣಿಕೆಗಿಂತ ಭಿನ್ನವಾಗಿರಲಿಲ್ಲ. ಆದರೆ ವಿಶೇಷ ಅರ್ಥವನ್ನು ಅನ್ವಯಿಸಿ ಓದಿದಾಗ ಆ ಅಭಿಪ್ರಾಯಗಳ ಆಳ ನಿರಾಳವಾಗಿರಲಿಲ್ಲ. ಅದೇನೇ ಇರಲಿ ಆ ಪ್ರಕರಣದಿಂದ ಲಜಪತ್‌ರಾಯ್ ಅವರ ಮೇಲೆ ಪ್ರಮುಖ ಪರಿಣಾಮಗಳಾದವು. ಭಾಯಿ ರಾಮ ಪ್ರಸಾದ್ ಮನೆಯ ಮೇಲೆ ಪೊಲೀಸರ ದಾಳಿ ನಡೆದು ವಿಶೇಷ ಪತ್ರಗಳು ಸೇರಿದಂತೆ ಅನೇಕ ದಾಖಲೆಗಳನ್ನು ಜಪ್ತಿ ಮಾಡಿದ ಮೇಲೆ ಎಚ್ಚರವಾಗಿರುವಂತೆ ಲಜಪತರಿಗೆ ಅವರ ಗೆಳೆಯರು ಸೂಚಿಸಿದರು. ಅದೇ ರೀತಿಯ ದಾಳಿ ಅವರ ಮನೆಯ ಮೇಲೂ ನಡೆಯಬಹುದೆಂಬ ಶಂಕೆ ವ್ಯಕ್ತಪಡಿಸಿದರು. ಆಕ್ಷೇಪಾರ್ಹ ದಾಖಲೆಗಳನ್ನೆಲ್ಲಾ ತೊಡೆದು ಹಾಕಲು ಆ ಮಿತ್ರ ವರ್ಗ ಲಜಪತರಿಂದ ಮುಕ್ತ ಸಮ್ಮತಿ ಪಡೆದುಕೊಂಡು ಕಾರ್ಯೋನ್ಮುಖವಾಯಿತು. ತಮಗೆ ಸುರಕ್ಷಿತವಲ್ಲವೆನಿಸಿದ ಲಜಪತರ ಎಲ್ಲಾ ಕಾಗದ ಪತ್ರಗಳನ್ನು, ಹೊತ್ತಿಗೆಗಳನ್ನು ತೆಗೆದು ಹಾಕಿದರು. ಅವುಗಳನ್ನು ಮುಂದೇನೂ ಮಾಡಬೇಕು ಎಂಬ ಬಗ್ಗೆ ಲಜಪತರ ಸಲಹೆಯನ್ನು ಪಡೆಯಲಿಲ್ಲ. ಅಥವಾ ಅವರಿಗೆ ಏನನ್ನೂ ತಿಳಿಸಲಿಲ್ಲ. ಅವೆಲ್ಲವನ್ನು ನಾಶಪಡಿಸಿದರು.! ಬೆಂಕಿಗೆ ಆಹುತಿ ಮಾಡಿದ ಆ ಪತ್ರಗಳ ರಾಶಿ. ನಿಯತಕಾಲಿಕೆಗಳು, ವೃತ್ತಪತ್ರಿಕೆಗಳು. ಇತರ ದಾಖಲೆಗಳು, ಹಸ್ತಪ್ರತಿಗಳ ಮಧ್ಯೆ ಲಜಪತರು ಮಾಂಡಲೆಯಲ್ಲಿ ಅಪೂರ್ಣಗೊಳಿಸಿದ್ದ ಉರ್ದು ಭಾಷೆಯ ಅವರ ಜೀವನ ಚರಿತ್ರೆಯ ಕೃತಿಯೂ ಇತ್ತು. ಆ ಹಸ್ತಪ್ರತಿಯನ್ನು ಸುರಕ್ಷಿತ ಸ್ಥಳಕ್ಕೆ ತೆಗೆದಿಟ್ಟಿರಬಹುದೆಂದು ಅವರು ಭಾವಿಸಿಕೊಂಡಿದ್ದರು.

ಕೊನೆಯಲ್ಲಿ ಅಗ್ನಿಯು ಬಹುತೇಕ ತಮ್ಮ ಎಲ್ಲಾ ಕಾಗದ ಪತ್ರಗಳು, ದಾಖಲೆಗಳು, ಪುಸ್ತಕಗಳು, ಹಸ್ತಪ್ರತಿಗಳ ಜೊತೆಯಲ್ಲಿ ಅದನ್ನು ಸ್ವಾಹ ಮಾಡಿತೆಂದು ತಿಳಿದಾಗ ತುಂಬಾ ದುಃಖಪಟ್ಟರು. ತಮ್ಮ ಜೀವನಗಾಥೆಯನ್ನು ಮತ್ತೆ ಕಥೆಯ ರೂಪದಲ್ಲಿ ಹೆಣೆಯಲು ಅವರಿಗೆ ಮನಸ್ಸು ಬರಲಿಲ್ಲ. ಅವರು ಸಂಗ್ರಹಿಸಿಟ್ಟುಕೊಂಡಿದ್ದ ಪ್ರಸಿದ್ಧ ಕೃತಿಗಳಲ್ಲೂ ಕೆಲವು ಕಾಣೆಯಾಗಿದ್ದವು. ಅಂತಹ ಅಮೂಲ್ಯ ಹೊತ್ತಿಗೆಗಳಲ್ಲಿ ಕ್ರಿಲುಕರ್ ರಚಿತ ರಶಿಯನ್ ಹೀರೋಸ್ ಅಂಡ್ ಹೀರೋಯಿನ್ಸ್ ಪ್ರಮುಖವಾದದ್ದು. ಪದೇ ಪದೇ ಆ ಹೊತ್ತಿಗೆಯನ್ನು ಸ್ಮರಿಸಿಕೊಳ್ಳುತ್ತಾ ಲಜಪತರು,

"ಆ ದಿನಗಳಲ್ಲಿ ಅದು ನನ್ನ ಅಚ್ಚುಮೆಚ್ಚಿನ ಕೃತಿಯಾಗಿತ್ತು ಎಂದು ನಿಮಗೆ ಹೇಳಬಯಸುತ್ತೇನೆ. ಅದನ್ನು ಓದಲು ತರುಣರಿಗೆ ಶಿಫಾರಸು ಮಾಡುತ್ತಿದೆ. ಆದರೆ ನನ್ನ ಭದ್ರತೆ ಮತ್ತು ಸುರಕ್ಷತೆಯ ವಿಷಯದಲ್ಲಿ ವಿಚಲಿತರಾದ ನನ್ನ ಗೆಳೆಯರು ಬಹುತೇಕ ವಸ್ತುಗಳನ್ನು ನಾಶಪಡಿಸಿದರು. ಅವರು ನನ್ನ ಹೀರೋಸ್ ಅಂಡ್ ಹೀರೋಯಿನ್ಸ್ ಕೃತಿಯನ್ನು ಬಿಡಲಿಲ್ಲ." ಎಂದಿದ್ದಾರೆ.

ಭಾಯಿ ಪರಮಾನಂದ ವಿರುದ್ಧ ಜರುಗಿಸಿದ ವಿಚಾರಣೆ ಮತ್ತು ಶಿಕ್ಷೆ (ಅದೇ ತರಹದ ಕೆಲವು ಪ್ರಕರಣಗಳು) ಪಂಜಾಬಿನ ನಾಯಕರ ಮೇಲೆ ಘೋರ ಪರಿಣಾಮ ಬೀರಿ ಅವರ ಧೈರ್ಯ ಸ್ಥೈರ್ಯಗಳನ್ನು ಕುಂದಿಸಿತು. ಆಡಳಿತಶಾಹಿ ಕೈಗೊಂಡ "ಯಾರು ನಮ್ಮೊಡನಿಲ್ಲವೋ ಅವರು ನಮ್ಮ ಎದುರಾಳಿಗಳು" ಧೋರಣೆ ಇನ್ನು ಹೆಚ್ಚಿನ ಪರಿಣಾಮ ಬೀರಿತು. ಆ ಪರಿಣಾಮಗಳ ಘೋರ ಸ್ವರೂಪಕ್ಕೆ ವಿಚಲಿತರಾದ ಡಿ.ಎ.ವಿ. ಕಾಲೇಜಿನ ಅಧಿಕಾರಸ್ಥರು ಪರಮಾನಂದರನ್ನು ಕಾಲೇಜಿನ ಆಡಳಿತ ಮಂಡಳಿಯಿಂದ ವಜಾ ಮಾಡಿದರು. ಡಿ.ಎ.ವಿ. ಕಾಲೇಜಿನ ಅಭಿವೃದ್ಧಿಗೆ ಮತ್ತು ಸಮಾಜದ ವರ್ಚಸ್ಸು ವರ್ಧನೆಗೆ ಅವರು ಸಲ್ಲಿಸಿದ ತ್ಯಾಗ, ಅರ್ಪಣೆಯ ಅಮೋಘ ಸೇವೆಯನ್ನು ಆ ಸಂದರ್ಭದಲ್ಲಿ ಪರಿಗಣನೆಗೆ ತಂದುಕೊಳ್ಳದ, ನ್ಯಾಯಾಲಯದ ತೀರ್ಪು ಹೊರಬೀಳುವುದನ್ನು ಕಾಯದೆ ಅಂತಹ ಕಠಿಣ ಕ್ರಮ ಜರುಗಿಸಲಾಯಿತು. 1907ರ ಸುಮಾರಿನಲ್ಲಿಯೇ ಅನೇಕ ನಾಯಕರ ಬಗ್ಗೆ ಪೂರ್ವಾಪರಗಳನ್ನು ಸಂಗ್ರಹಿಸಿ ಅವರನ್ನು ಬೇಕಾದವರ ಪಟ್ಟಿಗೆ ಸೇರಿಸಲಾಗಿತ್ತು. ಲಜಪತರು ಅಂತಹವರ ಸಾಮರ್ಥ್ಯ, ನಿಷ್ಠೆಗಳನ್ನು ಪರಿಗಣಿಸಿ ಅವರ ರಕ್ಷಣೆಗೂ ಮುಂದಾಗಿದ್ದರು. ಇಂಗ್ಲೆಂಡಿನಿಂದ ಮರಳಿದ ನಂತರ ಅಂತಹ ಪ್ರಕರಣಗಳು ಹೆಚ್ಚಾಗಿದ್ದವು. ಪ್ರಸಂಗ ಜರುಗಿದಾಗಲೆಲ್ಲಾ ಸಂದಿಗ್ಧದಿಂದ ಅವರನ್ನು ಪಾರು ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲೇ ಲಜಪತರನ್ನು ಆರ್ಯ ಸಮಾಜದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಆದರೆ ಪರಿಸ್ಥಿತಿಯ ಸೂಕ್ಷ್ಮವನ್ನು ಅರಿತು ಲಜಪತರು ಆ ಗೌರವವನ್ನು ಸ್ವೀಕರಿಸಲಿಲ್ಲ.

ಪ್ರಸ್ತುತ ತಮ್ಮ ಕಣ್ಣೆದುರೆ ನಡೆಯತೊಡಗಿದ ವಿದ್ಯಮಾನಗಳನ್ನು ಅವರು ಅಸಹಾಯಕರಾಗಿ ವೀಕ್ಷಿಸಬೇಕಾಯಿತು. ತೀರಾ ನೋವಿನ ಆ ಪ್ರಸಂಗಗಳಿಂದ ದೂರವಾಗುವ ಉದ್ದೇಶದಿಂದ ಅವರು ಮತ್ತೆ ಇಂಗ್ಲೆಂಡಿಗೆ ತೆರಳಿದರು. ಆಗ ಅವರ ಮನಸ್ಸಿನ ತುಂಬಾ ಕರಾಳ ಛಾಯೆ ಆವರಿಸಿಕೊಂಡಿತ್ತು. 1910ರಲ್ಲಿ ಇಂಗ್ಲೆಂಡ್ ತಲುಪಿದ ನಂತರ ಅವರು ಅನೇಕ ಸಭೆಗಳಲ್ಲಿ ಭಾಷಣಗಳನ್ನು ಮಾಡಿದರು. ಜೂನ್ ಅಂತ್ಯದಲ್ಲಿ

ಕಾಕ್ಸ್‌ಟನ್ ಹಾಲ್‌ನಲ್ಲಿ ಏರ್ಪಟ್ಟ ರಾಷ್ಟ್ರೀಯತೆಗಳು ಮತ್ತು ಪ್ರಜೆಗಳ ವಂಶವಾಹಿನಿ ಕುರಿತ ಸಮ್ಮೇಳನದಲ್ಲಿ ಅವರು ಭಾರತವನ್ನು ಪ್ರತಿನಿಧಿಸಿದರು. ಪ್ರೊ. ಗಿಲ್ಬರ್ಟ್ ಮುರೇ ತಮ್ಮ ಉದ್ಘಾಟನಾ ಭಾಷಣದಲ್ಲಿ ಲಜಪತರ ಬಗ್ಗೆ ವಿಶೇಷ ಪ್ರಸ್ತಾಪ ಮಾಡಿದರು. ಲಜಪತ್‌ರಾಯ್ ಓರ್ವ ನಾಯಕರಾಗಿರುವಂತಹ ಚಳವಳಿಗಳ ಆರಂಭಕ್ಕೆ ಭಾರತ ಅವಕಾಶ ಮಾಡಿಕೊಟ್ಟಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಲಜಪತ್‌ರಾಯ್ ಅವರ ಗಡಿಪಾರು ಶಿಕ್ಷೆಗೆ ಅನುಮತಿ ನೀಡಿದ ಉನ್ನತ ಅಧಿಕಾರಿಯೊಬ್ಬರು ನನಗೆ ಹೇಳಿದ್ದನ್ನು ನಾನಿಲ್ಲಿ ಹೇಳಬಯಸುತ್ತೇನೆ. ಭಾರತದಲ್ಲಿ ತಾವು ಹೆಚ್ಚು ಗೌರವ ಕೊಡುವ ಕೆಲವೇ ವ್ಯಕ್ತಿಗಳಲ್ಲಿ ಅವರು ಒಬ್ಬರೆಂದು ಆ ಅಧಿಕಾರಿ ನನಗೆ ತಿಳಿಸಿದರು.''

ಲಜಪತ್‌ರಾಯ್ ಅವರ ಜೊತೆಗೆ ಆ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದವರಲ್ಲಿ ಬಿಪಿನ್‌ಚಂದ್ರ ಪಾಲ್, ದುಬೆ. ಮತ್ತು ಹೆನ್ರಿ ಕಾಟನ್ ಸಹ ಇದ್ದರು. ಭಾರತ- ಈಜಿಪ್ಟ್- ಮೊರೆಕಾ ಅಧಿವೇಶನದ ಅಧ್ಯಕ್ಷತೆಯನ್ನು ಫ್ರೆಡರಿಕ್ ಮೆಕರ್ನೆಸ್ ವಹಿಸಿದ್ದರು. ಲಜಪತ್‌ರಾಯ್‌ಅವರ ಭಾಷಣ ಭಾರತದ ಅತ್ಯುತ್ತಮ ಕೊಡುಗೆ ಎನಿಸಿತು. 'ಭಾರತದ ಇಂದಿನ ಸ್ಥಿತಿ' ಅವರ ಮುಖ್ಯ ವಿಷಯವಾಗಿತ್ತು. ಮಾರ್ಲೆ ಸುಧಾರಣೆಗಳನ್ನು ಆಧರಿಸಿದ ಹೊಸ ಸಂವಿಧಾನ ಸ್ವರೂಪವನ್ನು ಆ ಭಾಷಣಕಾರರು ಕಟುವಾಗಿ ಟೀಕಿಸಿದರು. ಲಿಬರಲ್ ಆಡಳಿತದ 'ಸುಧಾರಣೆ' ಬೆನ್ನಲ್ಲಿ ದೇಶದಲ್ಲಿ ಹರಣವಾಗುತ್ತಿದ್ದ ನಾಗರಿಕ ಸ್ವಾತಂತ್ರ್ಯದ ದೀನ ಸ್ಥಿತಿಯ ಬಗ್ಗೆ ಭಾಷಣದಲ್ಲಿ ಹೆಚ್ಚು ಒತ್ತು ನೀಡಿದರು. 'ಹನ್ನೊಂದು ಮಂದಿ ಭಾರತೀಯರನ್ನು' ಯಾವುದೇ ವಿಚಾರಣೆ ಇಲ್ಲದೆ ಗಡಿಪಾರು ಮಾಡಲಾಗಿದೆ ಎಂದು ಲಿಬರಲ್ ಆಡಳಿತದ ವೈಖರಿಯನ್ನು ಲೇವಡಿ ಮಾಡಿದರು. ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿದೆ. ಸಾರ್ವಜನಿಕ ಸಭೆಗಳ ಹಕ್ಕನ್ನು ಕಿತ್ತುಕೊಳ್ಳಲಾಗಿದೆ. ರಾಜಕೀಯ ಚಟುವಟಿಕೆಗಳಿಗೆ ಅನಾಗರಿಕ ಶಿಕ್ಷೆ ವಿಧಿಸಲಾಗುತ್ತಿದೆ. ಪತ್ರಿಕೆಗಳ ಮೇಲೆ ಸಂಪೂರ್ಣವಾಗಿ ದಬ್ಬಾಳಿಕೆ ನಡೆಯುತ್ತಿದೆ. ರಾಜಕೀಯ ಕೈದಿಗಳನ್ನು ಹೀನಾಯವಾಗಿ ಶಿಕ್ಷಿಸಲಾಗುತ್ತಿದೆ. ಸಾರ್ವಜನಿಕ ಮತ್ತು ಖಾಸಗಿ ಬೇಹುಗಾರಿಕೆ ಹದ್ದು ಮೀರಿದೆ ಎಂದು ಲಜಪತರು ಲಿಬರಲ್ ಆಡಳಿತದ ಕೆಟ್ಟ ಮುಖಗಳನ್ನೆಲ್ಲಾ ಹಿಂಜಿ ಹಿಂಜಿ ಸಭೆಯ ಮುಂದಿಟ್ಟರು. ನಾಗರಿಕ ಸ್ವಾತಂತ್ರ್ಯವನ್ನು ಸರ್ಕಾರ ಹತ್ತಿಕ್ಕಿದೆ ಎಂದು ಆರೋಪಿಸುವ ಜೊತೆಗೆ ವಿದೇಶಿ ಅಧಿಕಾರಶಾಹಿಯು ಸ್ಥಳೀಯ ಆಷಾಡಭೂತಿ ಜನರೊಂದಿಗೆ ಅಪವಿತ್ರ ಮೈತ್ರಿ ಮಾಡಿಕೊಂಡಿದೆ. ಬಂಡವಾಳಶಾಹಿಗಳನ್ನು ಬುಟ್ಟಿಗೆ ಹಾಕಿಕೊಂಡಿದೆ. ಅವರೆಲ್ಲರನ್ನು ಪ್ರಜ್ಞಾವಂತ ಶಿಕ್ಷಿತ ವರ್ಗದ ವಿರುದ್ಧ ಛೂ ಬಿಡಲಾಗುತ್ತಿದೆ. ಸುಧಾರಣಾ ನೀತಿಯ ಹತಾಶಕಾರಿ ಲಕ್ಷಣಗಳು ಇವು. ಹೊಸ ಪತ್ರಿಕಾ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಪ್ರಹಾರ ಮಾಡಲಾಗುತ್ತಿದೆ.'' ಎಂದು ಕಟು ಆರೋಪ ಮಾಡಿದ ಅವರು, 'ನಮ್ಮ ದೇಶದ ಆಡಳಿತದಲ್ಲಿ ನೀತಿಯ ಮೂಲಕ ವ್ಯವಸ್ಥಿತವಾಗಿ ವಂಶ ಮತ್ತು ಮತೀಯ ತಾರತಮ್ಯವನ್ನು ಬಹಿರಂಗವಾಗಿ ಪ್ರಚೋದನೆಗೊಳಿಸಲಾಗುತ್ತಿದೆ. ಐಕ್ಯಗಳಲ್ಲಿ ಈ ಅಪಾಯಕಾರಿ ಬೆಳವಣಿಗೆಯನ್ನು ಪ್ರಧಾನವಾಗಿ ಮಾಡಿಕೊಳ್ಳಲಾಗುತ್ತಿದೆ' ಎಂದು ಸಾರಿದರು.

ತಮ್ಮ ಇಡೀ ಭಾಷಣವನ್ನು ಕ್ರೋಢಿಕರಿಸುತ್ತಾ ಅವರು,

"ದೇಶಭಕ್ತಿಯನ್ನೇ ಒಂದು ಅಪರಾಧವಾಗಿ ಪರಿಗಣಿಸಲಾಗುತ್ತದೆ. ಸಾರ್ವಜನಿಕ ಚಟುವಟಿಕೆಯ ಪ್ರತಿ ಮುಖದ ಮೇಲೂ ಪ್ರಹಾರ ಮಾಡಲಾಗುತ್ತಿದೆ. ರಾಜಕೀಯ, ಶೈಕ್ಷಣಿಕ, ಧಾರ್ಮಿಕ , ಸಾಮಾಜಿಕ ಅಥವಾ ಧರ್ಮಪರ ಚಟುವಟಿಕೆಗಳಲ್ಲಿರುವ ಜನರಿಗೆ ತೀರಾ ಹಿಂಸೆ ಕೊಡಲಾಗುತ್ತಿದೆ."

ಮಾರ್ಲೆ ಸುಧಾರಣೆಯಲ್ಲಿನ ವಾಸ್ತವಹೀನತೆಗಳನ್ನು ಅವರು ಸಭೆಯ ಮುಂದೆ ಬಿಚ್ಚಿಟ್ಟರು. ಬಂಗಾಳ, ಮುಂಬಯಿ ಮತ್ತು ಮದ್ರಾಸಿನ ಮೂರು ಆಡಳಿತ ಪರಿಷತ್ತುಗಳಿಗೆ ಹಾಗೂ, ವೈಸ್‌ರಾಯ್ ಪರಿಷತ್ತಿಗೆ ಕೇವಲ ಓರ್ವ ಭಾರತೀಯನ ನೇಮಕ ಅವರು ಎತ್ತಿ ತೋರಿಸಿದ ಸುಧಾರಣೆಯ ಲೋಪಗಳಲ್ಲಿ ಮುಖ್ಯವಾದದ್ದು.

ಕೋಮುವಾದದ ಪ್ರಾತಿನಿಧ್ಯದ ಮಿಂಟೋ ಕೊಡುಗೆಯನ್ನು ಅವರು ತೆರೆದಿಡುತ್ತಾ: "ದೇಶವನ್ನು ಮುಸ್ಲಿಮರು ಮತ್ತು ಮುಸ್ಲಿಮೇತರರು ಎಂಬ ಎರಡು ಪಾಳೇಯವಾಗಿ ಇಬ್ಭಾಗಿಸಲಾಗಿದೆ. ಅದಕ್ಕೆ ಆಡಳಿತದ ಉನ್ನತ ಅನುಮೋದನೆಯು ಸಿಕ್ಕಿದೆ. ಸುಧಾರಣಾ ನೀತಿಯ ಅನುಗ್ರಹವೂ ಅದಕ್ಕಿದೆ. ಹೀಗೆ ಮಾಡುವ ಮೂಲಕ ಐಕ್ಯಮತವೇ ಪ್ರಧಾನವಾದ ದೇಶದಲ್ಲಿ ರಾಜಕೀಯ ಉದ್ದೇಶಗಳಿಗಾಗಿ ಧಾರ್ಮಿಕ ಪೈಪೋಟಿಯನ್ನು ಬೆಳೆಸುವ ಕಪಟ ಕೃತ್ಯ ನಡೆಯುತ್ತಿದೆ" ಎಂದು ಪರಿಸ್ಥಿತಿಯ ನವಿರು ಅಂಶವನ್ನು ವಿವೇಚಿಸಿದರು.

ಮಾರ್ಲೆ ಕಾಯ್ದೆಯಲ್ಲಿನ 'ಪ್ರಜಾಪ್ರಭುತ್ವ' ಪ್ರಸ್ತಾಪದ ನಗೆಪಾಟಲನ್ನು ಅವರು ಸಭೆಯ ಮುಂದೆ ನಗ್ನಗೊಳಿಸಿದರು. ಸುರೇಂದ್ರನಾಥ ಬ್ಯಾನರ್ಜಿಯವರಂತಹ ವ್ಯಕ್ತಿಗೆ ಅವರ ಪ್ರಾಂತ್ಯದ ಸ್ಥಳೀಯ ಆಡಳಿತ ಪರಿಷತ್ತಿನಲ್ಲಿ ಅವಕಾಶವಿಲ್ಲ. ಅವರು ಆ ಪರಿಷತಿನಲ್ಲಿರಲು ಅನರ್ಹರೇ? ಎಂಬ ವಿವೇಚನೆಯನ್ನು ಸಭೆಯ ಮುಂದಕ್ಕೆ ಇಟ್ಟರು. 'ಸಾಕಷ್ಟು ಪ್ರತಿಭಟನೆ ವಿರೋಧ ವ್ಯಕ್ತವಾದ ನಂತರ ಅವರ ಪ್ರಕರಣದಲ್ಲಿ ವಿನಾಯ್ತಿ ತೋರಿ ಆಡಳಿತ ಪರಿಷತ್ತಿನಲ್ಲಿ ಅವಕಾಶವನ್ನೇನೋ ಮಾಡಿಕೊಡಲಾಯಿತು. ಆದರ ಬ್ಯಾನರ್ಜಿ ಯೋಗ್ಯ ರೀತಿಯಲ್ಲಿ ಆ ನೇಮಕವನ್ನು ನಿರಾಕರಿಸುವ ಮೂಲಕ ತಮ್ಮತನವನ್ನು ಪ್ರದರ್ಶಿಸಿದ್ದಾರೆ." ಎಂದು ಸಭೆಗೆ ತಿಳಿಸಿದರು. ಲಜಪತ್‌ರಾಯ್ ಮುಂದುವರೆದು ಪ್ರಾಂತೀಯ ಪರಿಷತ್ತುಗಳಿಗೆ ಆಯ್ಕೆಯಾಗುವ ಬಗ್ಗೆ ಆಸ್ತಿಪಾಸ್ತಿಯ ಅರ್ಹತೆ ಗೊತ್ತುಪಡಿಸಿರುವುದರ ಔಚಿತ್ಯವನ್ನು ಪ್ರಶ್ನಿಸಿದರು. 'ಈ ವೈಪರಿತ್ಯದ ಅರ್ಹತೆಯಿಂದಾಗಿ ಗೋಖಲೆ ಮತ್ತು ದಾದಾಭಾಯಿ ನವರೋಜಿ ಅಂತಹವರು ಪ್ರಾಂತೀಯ ಪರಿಷತ್ತುಗಳಿಗೆ ಆಯ್ಕೆ ಹೊಂದಲು ಅನರ್ಹರಾಗಿದ್ದಾರೆ' ಎಂದು ಟೀಕಿಸಿದರು.

ತಮ್ಮದೇ ಆದ ಪ್ರಾಂತ್ಯ ಪಂಜಾಬ್ ಬಗ್ಗೆ ಪ್ರಸ್ತಾಪಿಸುತ್ತಾ ಅವರು, 'ಆ ಸ್ಥಳೀಯ ಪರಿಷತ್ತಿನಲ್ಲಿ 14 ಜನ ಅಧಿಕಾರೇತರರು, 11 ಅಧಿಕಾರಿ ಸದಸ್ಯರಿಗೆ ಅವಕಾಶವಿದೆ. 14 ಸದಸ್ಯರ ಪೈಕಿ ಕೇವಲ ಐವರು ಮಾತ್ರ ಆಯ್ಕೆಯಾಗಿರುವರು. ಈ ಇಡೀ ಆಯ್ಕೆಯ ಪದ್ಧತಿಯೇ ತೀರಾ ಕುತೂಹಲಕಾರಿ. ಪರಿಷತ್ತಿನ ಕಲಾಪವೆಲ್ಲಾ ಇಂಗ್ಲಿಷ್‌ನಲ್ಲಿ ನಡೆಯುತ್ತದೆ. ನಾಮ ನಿರ್ದೇಶನ ಹೊಂದಿದ ಬಹುತೇಕ ಸದಸ್ಯರಿಗೆ ಈ ಭಾಷೆಯ ಕಿಂಚಿತ್ತೂ ಜ್ಞಾನ

ಇಲ್ಲ.' ಎಂದು ಹೇಳಿದರು. ಪ್ರತಿಷ್ಠಿತವೆಂದು ಕರೆದುಕೊಳ್ಳಲಾದ ಲಿಬರಲ್ ಆಡಳಿತದಲ್ಲಿ ಭಾರತದಲ್ಲಿ ಎಗ್ಗಿಲ್ಲದೆ ನಡೆಯುತ್ತಿದ್ದ ಬೇಹುಗಾರಿಕೆಯ ಅನಾಗರಿಕ ವರ್ತನೆಯನ್ನು ತಮ್ಮ ಆ ಪ್ರಬುದ್ಧ ಭಾಷಣದಲ್ಲಿ ಲಜಪತರು ಓಗ್ಗಾಮುಗ್ಗಾ ಜಗ್ಗಾಡಿದರು. ''ಶಾಲಾ, ಕಾಲೇಜುಗಳನ್ನು ಬಿಡುತ್ತಿಲ್ಲ. ಅನಕ್ಷರಸ್ಥ, ಅತಿ ಕಡಿಮೆ ಸಂಬಳದ ಹಾಗೂ ಎಲ್ಲಾ ರೀತಿಯಲ್ಲೂ ಭ್ರಷ್ಟಾಚಾರಕ್ಕೆ ಸುಲಭಗ್ರಾಹ್ಯರಾದ ಪೊಲೀಸರ ನೆರವಿನಿಂದ ಈ ಬೇಹುಗಾರಿಕೆಯನ್ನು ನಡೆಸಲಾಗುತ್ತಿದೆ'' ಎಂದು ಅವರು ಯಥಾಸ್ಥಿತಿಯನ್ನು ಆ ಪ್ರಬುದ್ಧ ಸಭೆಯ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟರು.

'ಈ ವಿಷಯದಲ್ಲಿ ನನ್ನ ವೈಯಕ್ತಿಕ ಅನುಭವವನ್ನೇ ಸಂಪುಟಗಟ್ಟಲೆ ಬರೆಯಬಹುದು' ಎಂದು ಅವರು ಗಂಭೀರವಾಗಿ ಹೇಳಿದರು. 'ಆಡಳಿತದ ನಡವಳಿಕೆಗಳಿಗೆ ಸಮರ್ಥನೆಗಳೇ ಇಲ್ಲ' ಎಂದು ತಮ್ಮ ವಾಗ್ಝರಿಯನ್ನು ಮುಂದುವರಿಸಿದ ಅವರು 'ತಂದೆಯ ವಿರುದ್ಧ ಮಗನನ್ನು, ಸಹೋದರನ ವಿರುದ್ಧ ಸಹೋದರನನ್ನು , ಪತಿಯ ವಿರುದ್ಧ ಪತ್ನಿಯನ್ನು, ಗೆಳೆಯನ ವಿರುದ್ಧ ಗೆಳೆಯನನ್ನು; ಅಷ್ಟೇ ಸಾಲದು ಎಂಬಂತೆ ವಿದ್ಯಾರ್ಥಿ ವಿರುದ್ಧ ಶಿಕ್ಷಕರನ್ನು ಮತ್ತು ಶಿಕ್ಷಕರ ವಿರುದ್ಧ ವಿದ್ಯಾರ್ಥಿಗಳನ್ನು ಎತ್ತಿ ಕಟ್ಟುವಂತಹ ಮಾನವೀಯ ನಡವಳಿಕೆಗೆ ತೀರಾ ವಿರುದ್ಧವಾದ ನಾಗರಿಕ ಸಮಾಜ ನಾಚುವಂತಹ ನೀತಿಯನ್ನು ಆಡಳಿತ ಅನುಸರಿಸುತ್ತಿದೆ. ಮಾನವತೆಯ ಸ್ಫುರಣವನ್ನು ಹೀಗೆ ಕಲುಷಿತಗೊಳಿಸಲಾಗುತ್ತಿದೆ' ಎಂದು ವಿಷದವಾಗಿ ತಿಳಿಸಿದರು.

ಕ್ರೋಪ್ಟೋಕಿನ್ ಅವರ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಜನಪ್ರಿಯರಾಗಿದ್ದ ಐರಿಷ್ ಅನುವಾದಗಾರ್ತಿ ಎನ್. ಎಫ್. ಡ್ರೈವರ್ಟ್ ಆ ಸಮ್ಮೇಳನವನ್ನು ಆಯೋಜಿಸಿದ್ದ ಸಮಿತಿಯ ಕ್ರಿಯಾಶೀಲ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಲಜಪತ್‌ಗಾಯ್ ಮತ್ತು ಈಜಿಪ್ಟ್‌ನ ಫರೀದ್ ಬೇಗ್ ಬಗ್ಗೆ ಗಿಲ್ಬರ್ಟ್ ಮುರೇ ಮತ್ತು ಫ್ರೆಡರಿಕ್ ಮೆಕಾನೆರ್ಸ್ ವ್ಯಕ್ತಪಡಿಸಿದ್ದ ಮಹಾ ಗೌರವಗಳಿಂದ ಉತ್ಸಾಹ ಕೆರಳಿದ್ದ ಆಕೆಗೆ ಈ ಭಾಷಣ ನಿಜವಾಗಿಯೂ ಅನಿರ್ವಚನೀಯ ಅನುಭವ ನೀಡಿತು. ''ಹಿಂದೂ ಮತ್ತು ಈಜಿಪ್ಟ್‌ನ ನಾಯಕರನ್ನು ನೋಡಲು ಹಾಗೂ ಅವರ ಭಾಷಣವನ್ನು ಕೇಳಲು ನನ್ನಲ್ಲಿ ಸಹಜವಾಗಿ ಕುತೂಹಲ ಮೂಡಿತ್ತು; ಈಗ ಅವರಿಬ್ಬರು ನನ್ನ ವೈಯಕ್ತಿಕ ಗೆಳೆಯರಾಗಿದ್ದಾರೆ. ಫರಿದ್ ಬೇಗ್ ಫ್ರೆಂಚ್ ಭಾಷೆಯಲ್ಲಿ ಮಾತನಾಡಿದ್ದಾರೆ. ನಮಗೆ ಅವರು ಪಶ್ಚಿಮ ಯುರೋಪಿಯನ್ನರಿಗೆ ಸನಿಹರು. ಆದರೆ ಲಾಲಾ ಲಜಪತ್‌ರಾಯ್ ದೂರದ ಪೂರ್ವ ದೇಶವನ್ನು ವರ್ಣರಂಜಿತವಾಗಿ ನಮ್ಮ ಮುಂದೆ ಪರಿಚಯಿಸಿದ್ದಾರೆ. ನೋಟಕ್ಕೆ ಸಾಧಾರಣವಾದರೂ ಎತ್ತರದ, ಗಾಂಭೀರ್ಯದ ವ್ಯಕ್ತಿತ್ವ ಅವರದು. ಉದಾತ್ತ ಹಾಗೂ ಸಹಜ ಸ್ವಭಾವ ನರುಗಟ್ಟಿದ ಅವರ ನೋಟ, ಪ್ರೌಢಿಮೆ ನಮ್ಮೆಲ್ಲರನ್ನು ಸೆಳೆದಿಟ್ಟಿದೆ. ತಮ್ಮ ತಾಯ್ನಾಡಿನ ಸುಂದರ ಪೇಟವನ್ನು ಧರಿಸಿರುವ ಅವರು ಈ ಅಪಾರ ಜನ ಸಮುದಾಯದ ಸಭೆಯಲ್ಲಿ ತಮ್ಮ ನಿರರ್ಗಳವಾದ ಸುಂದರ ಇಂಗ್ಲಿಷ್ ಭಾಷೆಯಲ್ಲಿ ಓತಪ್ರೋತವಾಗಿ ಒಂದು ತಾಸಿಗೂ ಹೆಚ್ಚು ಕಾಲ ಮಂತ್ರ ಮುಗ್ಧರಾಗಿಸಿದ್ದಾರೆ'' ಎಂದು ವರ್ಣಿಸಿದ್ದಾರೆ.

ಶ್ರೀಮತಿ ಡ್ರ್ಯಾಪರ್ ಲಜಪತ್‌ರಾಯ್ ಗೆಳೆಯರಾದರು. ಕೆಲವು ವರ್ಷಗಳ ನಂತರ ಅವರು ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ಕೊಟ್ಟಾಗ ಆಕೆ ಅವರನ್ನು ಕುರಿತು ಚಿಕಾಗೋದಲ್ಲಿನ ತಮ್ಮ ಸ್ನೇಹಿತರಿಗೆ ಪತ್ರಗಳನ್ನು ಬರೆದು ತಿಳಿಸಿದರು. 'ಅಲ್ಲಿ ಶ್ರೀಮತಿ ಡ್ರ್ಯಾಪರ್ ಅವರ ಆ ಗೆಳತಿಯರು ಲಜಪತರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟರು. ಅವರನ್ನು ಹೊಗಳಿ ಉತ್ತಮ ಲೇಖನಗಳನ್ನು ಬರೆದರು'. ಹಾಗೆ ಆಕೆ ಅವರಿಗೆ ಇತರ ಸಂಪರ್ಕಗಳ ಸಂಪನ್ಮೂಲವಾದರು. ಹೊಸ ಹೊಸ ಗೆಳೆತನಗಳಿಗೆ ಕಾರಣಕರ್ತೆಯಾದರು. ಲಜಪತರು ತಮ್ಮ ಸಾಪ್ತಾಹಿಕ 'ದಿ ಪೀಪಲ್'ಗಾಗಿ ಜಾರ್ಜಿಯಾ ಬಗ್ಗೆ ಸೋವಿಯತ್ ದಳದ ನೀತಿಯನ್ನು ಟೀಕಿಸಿ ಲೇಖನವೊಂದನ್ನು ಬರೆಯುವಂತೆ ಆಕೆಯನ್ನು ಕೋರಿದರು. ಶ್ರೀಮತಿ ಡ್ರ್ಯಾಪರ್ ಲೇಖನವನ್ನು ಬರೆದರು. ಅವರಿಬ್ಬರ ಸ್ನೇಹದ ಸುಮಾರು 15 ವರ್ಷಗಳ ತರುವಾಯದ ಬೆಳವಣಿಗೆ ಅದು. ಬಹುಶಃ ಅದೇ ಅವರ ಕಡೆಯ ಭೇಟಿಯಾಯಿತು. 1910ರ ಸುಮಾರಿನಲ್ಲಿ ಲಜಪತರು ಅನೇಕ ಸಂದರ್ಭಗಳಲ್ಲಿ ಶ್ರೀಮತಿ ಡ್ರ್ಯಾಪರ್ ಮನೆಗೆ ಭೇಟಿ ಕೊಟ್ಟಿದ್ದರು. ಲಂಡನ್‌ಗೆ ಭೇಟಿ ಕೊಟ್ಟ ಸಮಯದಲ್ಲಿ ಲಜಪತರು ಏರ್ಪಡಿಸುತ್ತಿದ್ದ ಪೌರಾತ್ಯ ಭೋಜನದ 'ಕಿರು ಔತಣ ಕೂಟ'ಗಳಲ್ಲಿ ಆಕೆಯೂ ಪಾಲ್ಗೊಳ್ಳುತ್ತಿದ್ದರು. ಒಂದು ಮಧ್ಯಾಹ್ನ ಲಜಪತ್‌ರಾಯ್ ಆಕೆಯ ಮನೆಗೆ ಭೇಟಿ ಕೊಟ್ಟಿದ್ದ ಸನ್ನಿವೇಶದಲ್ಲಿ ಭಾರತೀಯ ಸೇನಾಧಿಕಾರಿ ಅಥವಾ ಆ ಸೇನಾಧಿಕಾರಿ ಹುದ್ದೆಗೆ ಹೋಲುವ ಅಂತಸ್ತಿನ ಭಾರತದಲ್ಲಿದ್ದ ಅಧಿಕಾರಿಯೊಬ್ಬರ ಪತ್ನಿ ಅಲ್ಲಿಗೆ ಬಂದಿದ್ದರು. ಲಜಪತರ ಹೆಸರನ್ನು ಕೇಳುತ್ತಿದ್ದಂತೆಯೇ ಆಕೆ ಬೆಚ್ಚಿ ಪಕ್ಕಕ್ಕೆ ಸರಿದರು. 'ಆಕೆಯ ಮುಖದ ಮೇಲೆ ಭಯದ ಛಾಯೆ ಆವರಿಸಿತು.' ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುತ್ತಾ ಆಕೆ ತನ್ನ ಗೆಳತಿಯನ್ನು ಪ್ರಶ್ನಿಸಿದರು. -'ಇಡೀ ಭಾರತದಲ್ಲೇ ಅತ್ಯಂತ ಅಪಾಯಕಾರಿಯಾದ ವ್ಯಕ್ತಿಯನ್ನು ನೀನು ಸತ್ಕರಿಸುತ್ತಿರುವೆಯೆಂದು ನಿನಗೆ ಗೊತ್ತಿದೆಯೇ?' ಎಂದು ಪ್ರಶ್ನಿಸಿದಳು.

ಆ ಅವಧಿಯಲ್ಲೇ ಲಜಪತರಿಗೆ ಒಂದು ದೊಡ್ಡ ಕೌಟುಂಬಿಕ ದುರಂತ ಎದುರಾಯಿತು. ತಮ್ಮ ಎರಡನೇ ಪುತ್ರ ಪ್ಯಾರೇಕಿಷನ್ ಅಭಿವೃದ್ಧಿಯ ಬಗ್ಗೆ ಅವರು ಹೆಚ್ಚು ಭರವಸೆ ಇಟ್ಟುಕೊಂಡಿದ್ದರು. ಔಷಧ ರಸಾಯನ ಅಧ್ಯಯನಕ್ಕಾಗಿ ಅವರು ತಮ್ಮ ಆ ಮಗನನ್ನು ಇಂಗ್ಲೆಂಡಿಗೆ ಕಳುಹಿಸಿದ್ದರು. ಭಾರತೀಯ ಗಿಡಮೂಲಿಕೆಗಳು ಮತ್ತು ಔಷಧಗಳ ವಿಷಯದಲ್ಲಿ ಹೆಚ್ಚಿನ ಪರಿಶ್ರಮ ಸಾಧಿಸುವಂತೆ ಹಾಗೂ ಹೊಸ ಸಂಶೋಧನೆಗಳನ್ನು ಅರಿತುಕೊಳ್ಳುವಂತೆ ತಮ್ಮ ಮಗನನ್ನು ಸನ್ನದ್ಧಗೊಳಿಸುವುದು ಅವರ ಉದ್ದೇಶವಾಗಿತ್ತು. ಆತ ಲಂಡನ್‌ಗೆ ತೆರಳಿ ಹೆಚ್ಚು ಕಾಲವೇನೂ ಆಗಿರಲಿಲ್ಲ. ಕಾಯಿಲೆಯಿಂದ ಹಾಸಿಗೆ ಹಿಡಿದ. ಡೆವೋನ್‌ಷೇರ್ ಸ್ಯಾನಿಟೋರಿಯಂಗೆ ಪ್ಯಾರೇಕಿಷನ್‌ನನ್ನು ಸೇರಿಸಲಾಯಿತು. 1908ರಲ್ಲಿ ಇಂಗ್ಲೆಂಡಿಗೆ ಭೇಟಿ ಕೊಟ್ಟದ್ದಾಗ ಲಜಪತರು ಜಾಪರ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಗನನ್ನು ಕಂಡಿದ್ದರು. ಅವನು ಚೇತರಿಸಿಕೊಳ್ಳುತ್ತಿದ್ದ ಭರವಸೆ ತಾಳಿದ್ದರು. ಆದರೆ ಪ್ಯಾರೇಕಿಷನ್ ಭಾರತಕ್ಕೆ ಮರಳಿದ. ಆತನಿಗೆ ಅಂಟಿದ ಕಾಯಿಲೆ ಮಾರಕವಾಗಿತ್ತು. ತಾವು ತುಂಬಾ ಪ್ರೀತಿಸುತ್ತಿದ್ದ, ಭರವಸೆ ಇಟ್ಟುಕೊಂಡಿದ್ದ ಯುವ ಪುತ್ರ ತನ್ನ ಬದುಕಿನ [illegible] ಹಂತದಲ್ಲೇ ಮುದುಡಿಹೋಗಿದ್ದು ಆ ತಂದೆಗೆ

ಭರಿಸಲಾಗದಷ್ಟು ದುಃಖ ತಂದಿತು. ತಮ್ಮ ಮಕ್ಕಳಲೆಲ್ಲಾ ಆತ ಬಹು ಬುದ್ಧಿವಂತನೆಂದು ಸದಾ ಹೆಮ್ಮೆ ಪಡುತ್ತಿದ್ದರು. ತಾವು ಕೈಗೊಂಡಿರುವ ಕೆಲಸಗಳನ್ನು, ತಮ್ಮ ಧ್ಯೇಯೋದ್ದೇಶಗಳನ್ನು ಮುಂದುವರಿಸುತ್ತಾನೆ; ದೇಶದ ಜನತೆಗಾಗಿ ಮಹಾ ಹೋರಾಟ ನಡೆಸುತ್ತಾನೆ: ತಮ್ಮ ಮಹಾನ್ ಹೋರಾಟ ಕುಟುಂಬದವರೊಬ್ಬರಿಂದಲೇ ಮುಂದುವರಿಯುತ್ತದೆ ಎಂಬ ಆಶೋತ್ತರಗಳನ್ನು ಇಟ್ಟುಕೊಂಡಿದ್ದ ಹೃದಯ ಮಗನ ಮೃತ್ಯುಶಯ್ಯೆಯ ಪಕ್ಕದಲ್ಲಿ ಕುಳಿತು ಚೀರಿತು.

ಕೆಲವು ವರ್ಷಗಳ ನಂತರ ರಾಜಕೀಯ ಕ್ರಿಯೆ ಪ್ರಕ್ರಿಯೆಗಳು ಮಂದಗೊಳ್ಳುತ್ತಿದ್ದ ಸಮಯದಲ್ಲೇ ಸಾವು ಲಜಪತರ ಅಚ್ಚುಮೆಚ್ಚಿನ ಗೆಳೆಯರನ್ನು, ಸಹವರ್ತಿಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಳ್ಳತೊಡಗಿತು. ಭಾರತೀಯ ರಾಜಕೀಯ ಆಂದೋಲನ ಕುರಿತು ತಾವು ಬರೆದ ಮಹತ್ ಕೃತಿ 'ಯಂಗ್ ಇಂಡಿಯಾ'ವನ್ನು ಅವರ ನೆನಪಿಗೆ ಸಮರ್ಪಿಸಿದರು. ಆಳವಾದ ಭಾವನೆಗಳನ್ನು ಅದರಲ್ಲಿ ಅಭಿವ್ಯಕ್ತಿಗೊಳಿಸಿದರು. ದ್ವಾರಕದಾಸ್ ಅವರನ್ನು 'ನನ್ನ ಆತ್ಮೀಯ ಗೆಳೆಯ... ಸಾರ್ವಜನಿಕ ಬದುಕಿನಲ್ಲಿ ಉಂಟಾದ ಕುಸಿತವನ್ನು ಭರಿಸಲಾಗದೆ ಹೃದಯ ಭಗ್ನವಾಗಿ ಈ ಲೋಕವನ್ನು ತ್ಯಜಿಸಿದರು' ಎಂದು 1912ರ ಅಕ್ಟೋಬರ್‌ನಲ್ಲಿ ಪಂಜಾಬಿನಲ್ಲಿದ್ದ ಪರಿಸ್ಥಿತಿಗೆ ಅನ್ವಯಿಸಿ ಬರೆದಿದ್ದಾರೆ. ಆ ಹೊತ್ತಿಗೆಯನ್ನು ಆ ಮಿತ್ರನ ನೆನಪಿಗೆ ಸಮರ್ಪಣೆ ಮಾಡಿ, 'ಸಾರ್ವಜನಿಕ ಬದುಕಿನ ಬಗ್ಗೆ ಅವರು ತಾಳಿದ್ದ ರಾಜಿರಹಿತ ಧೋರಣೆಗೆ, ಅವರ ಪರಮೋಚ್ಚ ತತ್ವ ನಿಷ್ಠೆಗಳಿಗೆ ಮತ್ತು ಅವುಗಳ ಪ್ರತಿಪಾದನೆಗೆ ತಮ್ಮನ್ನು ಸಮರ್ಪಿಸಿಕೊಂಡ ಶ್ರದ್ಧೆಗೆ ಈ ವಿನಮ್ರ ಕಾಣಿಕೆ' ಎಂದು ಪ್ರೀತಿಪೂರ್ವಕವಾಗಿ ಶ್ರದ್ಧೆಯ ನಿವೇದನೆ ಮಾಡಿಕೊಂಡಿದ್ದಾರೆ. ತಿಲಕರು ದೇಶೋಚ್ಚಾಟನೆಯ ಶಿಕ್ಷೆಯನ್ನು ಮುಗಿಸಿ ಮಾಂಡೇಲೆಯಿಂದ ಮರಳುವತನಕ ಭಗ್ನವಾಗಿದ್ದ ಕಾಂಗ್ರೆಸ್ ಒಗ್ಗೂಡಲೇ ಇಲ್ಲ. ಅಲ್ಲಿಯತನಕ ಅದು ಸೌಮ್ಯವಾದಿಗಳ ಬಣವಾಗಿಯೇ ಉಳಿದುಕೊಂಡಿತ್ತು. ಲಜಪತರು ಹೆಚ್ಚು ಕಡಿಮೆ ಸಂಪೂರ್ಣವಾಗಿ ಅವರ ಸಂಬಂಧದಿಂದ ದೂರವೇ ಉಳಿದಿದ್ದರು. 1909ರಲ್ಲಿ ಯುರೋಪಿನಿಂದ ಮರಳಿದ ಮೇಲೆ ತಮ್ಮ ವೃತ್ತಿಯನ್ನು ಆರಂಭಿಸಿದ್ದರು. ಸಾರ್ವಜನಿಕ ಬದುಕಿನಲ್ಲಿ ನೇರವಾದ ರಾಜಕೀಯ ಚಟುವಟಿಕೆಗಳಿಗೆ ಬದಲಾಗಿ ಇತರ ಮಾರ್ಗ ಮಾಧ್ಯಮಗಳನ್ನು ಕಂಡು ಕೊಂಡರು. ಈಗಾಗಲೇ ನಾವು ಓದಿರುವಂತೆ ಪಂಜಾಬ್ ಹಿಂದೂ ಸಭಾ ಸ್ಥಾಪನೆಯಲ್ಲಿ ಅವರ ಕೈ ಇತ್ತು. ಆರ್ಯ ಸಮಾಜದ ಕೆಲವು ಕಾರ್ಯಕ್ರಮಗಳಲ್ಲಿ ಅವರ ಆಸ್ಥೆ ಮುಂದುವರಿದಿತ್ತು. ಲಾಹೋರ್ (ಅನಾರ್ಕಲಿ)ನಲ್ಲಿ ನಡೆದ ಆರ್ಯ ಸಮಾಜದ ಒಂದು ವಾರ್ಷಿಕ ಅಧಿವೇಶನದಲ್ಲಿ ಡಿ.ಎ.ವಿ. ಕಾಲೇಜಿನಲ್ಲಿ ಆಯುರ್ವೇದ ಮತ್ತು ತಾಂತ್ರಿಕ ವಿಭಾಗಗಳನ್ನು ತೆರೆಯಲು ನಿಧಿ ಸಂಗ್ರಹಿಸಿದರು. ದೇಶಿಯ ಶಿಕ್ಷಣ ಪ್ರವರ್ಧನೆಯ ತಮ್ಮ ಧ್ಯೇಯೋದ್ದೇಶಕ್ಕೆ ಅದನ್ನೊಂದು ರೂಪವನ್ನಾಗಿ ಮಾಡಿಕೊಳ್ಳ ಬಯಸಿದರು. ಡಿ.ಎ.ವಿ. ಪ್ರೌಢಶಾಲೆಯಲ್ಲಿ ಪ್ರಿನ್ಸಿಪಾಲರಾಗಿದ್ದ ತಮ್ಮ ಗೆಳೆಯ ಮಹಾತ್ಮ ಹನ್ಸ್‌ರಾಜ್ ನೆನಪಿನಲ್ಲಿ ಉಪನ್ಯಾಸ ಸಭಾಂಗಣವೊಂದನ್ನು ನಿರ್ಮಿಸಲು ನಿಧಿ ಸಂಗ್ರಹಕ್ಕೆ ಅವರು ನೆರವಾದರು. 1909ರಲ್ಲಿ ಶೋಷಿತ ವರ್ಗಗಳ ಅಸ್ಪೃಶ್ಯರ ಹಿತಕ್ಕಾಗಿ ಒಂದು ಉಪನ್ಯಾಸ ಮಾಲಿಕೆಯನ್ನೇ ಲಜಪತರು ನೀಡಿದರು. ವಸ್ತುಶಃ ಶೋಷಿತ ವರ್ಗಗಳ ಹಿತರಕ್ಷಣೆಯ ಕೆಲಸಗಳಿಗಾಗಿ ಅವರು ಇತ್ತೀಚಿನ

ವರ್ಷಗಳಲ್ಲಿ ಹೆಚ್ಚು ಗಮನ ಹರಿಸುತ್ತಾ ಬಂದಿದ್ದರು. 1913ರ ನವೆಂಬರ್‌ನಲ್ಲಿ ನಡೆದ ಆರ್ಯ ಸಮಾಜದ ವಾರ್ಷಿಕ ಅಧಿವೇಶನದ ಕಲಾಪದಲ್ಲಿ ಮಹತ್ತರವಾದ ಪ್ರಕಟಣೆಯೊಂದು ಈ ನಿಟ್ಟಿನಲ್ಲಿ ಹೊರಬಿದ್ದಿತು. ಶೋಷಿತ ವರ್ಗಗಳ ಅಭಿವೃದ್ಧಿಯ ಕೆಲಸಗಳಿಗಾಗಿ ಲಜಪತರು 50,000 ರೂಪಾಯಿಗಳ ಮೊತ್ತವನ್ನು ನೀಡಿದ ಪ್ರಕಟಣೆ ಅದು. ಆ ದಿನಗಳಲ್ಲಿ ಅದೇನೂ ಕಡಿಮೆ ಮೊತ್ತದ ಹಣವೇನೂ ಆಗಿರಲಿಲ್ಲ. ಬೃಹತ್ ಪ್ರಮಾಣದ ನಿಧಿಯೇ ಸರಿ. ಆ ಮೊತ್ತದಲ್ಲಿ ಅರ್ಧದಷ್ಟು ಹಣವನ್ನು ವಿನಿಯೋಗಿಸಿ ರಾವಿ ನದಿಯ ತೀರದಲ್ಲಿ ಭೂಮಿಯೊಂದನ್ನು ಖರೀದಿಸಿ ಶೋಷಿತ ವರ್ಗಗಳ ಕುಟುಂಬಗಳಿಗಾಗಿ ಮಾದರಿ ಕಾಲೋನಿಯೊಂದನ್ನು ನಿರ್ಮಿಸಲು ಬಳಸಲಾಯಿತು. ಆ ವರ್ಗಗಳಲ್ಲಿ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಯ ಆಯಾಮ ಕಲ್ಪಿಸುವುದು ಆ ಯೋಜನೆಯ ಆಶಯವಾಗಿತ್ತು. ಜಲಂಧರ್ ಜಿಲ್ಲೆಯಲ್ಲಿ ಶೋಷಿತ ವರ್ಗಗಳಿಗಾಗಿ ಅನೇಕ ಶಾಲೆಗಳನ್ನು ಮತ್ತು ಕೇಂದ್ರಗಳನ್ನು ತೆರೆಯಲಾಯಿತು. ನಾವೀಗಾಗಲೇ ಓದಿರುವ ಮಹಾತ್ಮ ಭಾಯಿ ಬಲ್ಮೋಕಾಂಡ್ ಆ ಕೇಂದ್ರಗಳ ಉಸ್ತುವಾರಿಯನ್ನು ಲಜಪತರ ನಿರ್ದೇಶನಕ್ಕೆ ಅನುಗುಣವಾಗಿ ನಿರ್ವಹಿಸುತ್ತಿದ್ದರು.

ಅದೇ ವರ್ಷ (1913) ಲಜಪತರು ತಮ್ಮ ತವರೂರು ಜಗ್ರಾಂವ್‌ನಲ್ಲಿ ಪ್ರೌಢ ಶಾಲೆಯೊಂದನ್ನು ಸ್ಥಾಪಿಸಿ ತಮ್ಮ ತಂದೆಯವರ ನೆನಪಿನಲ್ಲಿ ದಿ. ರಾಧಾ ಕಿಷನ್ ಹೈಸ್ಕೂಲ್ ಎಂದು ಹೆಸರಿಸಿದರು.

ಈ ಮಧ್ಯೆ ಪುರಸಭೆಗೆ ನಡೆದ ಚುನಾವಣೆಗಳಲ್ಲಿ ಅವರಿಗೆ ಒಂದು ಸ್ಥಾನವನ್ನು ನೀಡಿ ಗೌರವಿಸಲಾಯಿತು. ಲಜಪತರು ಉಮೇದುವಾರರಾಗಿದ್ದೇ ಒಂದು ದೊಡ್ಡ ಬೆಳವಣಿಗೆ ಅಥವಾ ಘಟನೆ. ಮತದಾನದ ದಿನ ಲಜಪತರ ಕ್ಷೇತ್ರದಲ್ಲಿ ಕಂಡು ಬಂದ ಉತ್ಸಾಹ ಹಿಂದೆಂದೂ, ಎಲ್ಲೂ ಕಂಡು ಬಂದಿರಲಿಲ್ಲ. ಅವರಿಗೆ ಬಿದ್ದ ಮತಗಳದೇ ದೊಡ್ಡ ದಾಖಲೆಯಾಗಿದೆ. ಒಂದು ಪ್ರಸಂಗವನ್ನು ಪದೇ ಪದೇ ಸ್ಮರಿಸಿಕೊಳ್ಳುತ್ತಿದ್ದರು. ಒಂದು ದಿನ ಅವರು ತಮ್ಮ ಪ್ರಚಾರದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಂತರ ನಗರಪಿತೃವಾಗ ಬಯಸಿದ್ದ ವಿಭಿನ್ನ ರಾಜಕೀಯ ಪಕ್ಷಕ್ಕೆ ಸೇರಿದ್ದ ಮತ್ತೊರ್ವ ಅಭ್ಯರ್ಥಿ ಅವರ ಎದುರಿಗೆ ಬಂದು ಪ್ರಾಂಜಲ ಬದ್ಧರಾಗಿ ನಿಂತು ತಮ್ಮ ಪರವಾಗಿಯೂ ಕೆಲವು ಮಾತುಗಳನ್ನು ಆಡುವಂತೆ ಪ್ರಾರ್ಥಿಸಿದ್ದರು. ಹಾಗೆ ಲಜಪತರನ್ನು ಕೋರಿದ ಆ ಸಭ್ಯ ಅಭ್ಯರ್ಥಿ ಓರ್ವ ಗೌರವ ಮ್ಯಾಜಿಸ್ಟ್ರೇಟ್ ಆಗಿದ್ದವರು. ಆದ್ದರಿಂದಲೇ ಅವರು ತಮ್ಮ ಗೆಲುವಿಗೆ 'ಭದ್ರ'ವಾದ ಬೆಂಬಲವನ್ನೇ ಬಯಸಿದ್ದರು!

ಮತ್ತೊಂದು ಘಟನೆಯನ್ನು ಲಜಪತರು ದಶಕಗಳವರೆಗೆ ನೆನಪು ಮಾಡಿಕೊಳ್ಳುತ್ತಿದ್ದರು. ಅದೇ ಮೊದಲ ಬಾರಿಗೆ ಪಾಲ್ಗೊಂಡರೇನೋ ಎನ್ನುವಂತೆ ಓರ್ವ ನಿರಕ್ಷರಿ ಹಾಗೂ ಮುಗ್ಧ ಮತದಾರ ಬಂದು ಮತಗಟ್ಟೆಯ ಬಳಿ ಲಜಪತರ ಭಾವಚಿತ್ರವನ್ನು ತನ್ನ ಕೈಯಲ್ಲಿ ಹಿಡಿದು ತನ್ನ ಮತ ಇವರಿಗೆಂಬುದನ್ನು ಬಹಿರಂಗವಾಗಿ ಸಾದರಪಡಿಸುತ್ತಿದ್ದ ನೆನಪು ಅದು! ಆ ವೇಳೆಗೆ ಲಜಪತರು ಪ್ರಾಥಮಿಕ ಶಿಕ್ಷಣದ ಸಂಸ್ಥೆಯೊಂದನ್ನು ಆರಂಭಿಸಿದ್ದರು. ದೇವನಾಗರಿ ಲಿಪಿಯ ಮೂಲಕ ಸಾಕ್ಷರತೆಯನ್ನು ಬಿತ್ತರಿಸುವುದು ಅವರ

ಉದ್ದೇಶವಾಗಿತ್ತು. ಮೊಹಲ್ಲಾಗಳಲ್ಲಿ ಸೇವಾ ಮನಸ್ಸುಳ್ಳವರನ್ನು ಅರೆಕಾಲಿಕ ಶಿಕ್ಷಕರಾಗಿ ನೇಮಿಸಿಕೊಂಡು ಹೆಚ್ಚು ಖರ್ಚು ಬಾರದ ರೀತಿಯಲ್ಲಿ ಅಕ್ಷರ ಜ್ಞಾನವನ್ನು ಬಿತ್ತರಿಸುವುದು ಆ ಕಾರ್ಯಕ್ರಮದ ಮಹತ್ತರ ಉದ್ದೇಶವಾಗಿತ್ತು. ಸ್ವತಃ ಲಜಪತರೇ ಮೊಹಲ್ಲಾಗಳಲ್ಲಿ, ಗಲ್ಲಿಗಳಲ್ಲಿ ಅಡ್ಡಾಡಿ ಆ ಅಕ್ಷರ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡುತ್ತಿದ್ದರು. ಹಾಗೇ ವ್ಯವಸ್ಥೆ ಮಾಡಿದ ಕಡೆಗಳಲ್ಲೇ ಅವುಗಳ ಪ್ರಗತಿಯ ಉಸ್ತುವಾರಿ ಮಾಡುತ್ತಿದ್ದರು.

ಪುರಸಭೆಯಲ್ಲಿ ಲಜಪತರು ಕೈಗೊಂಡ ಕಾರ್ಯಕ್ರಮ ಅವರ ರಾಜಕೀಯ ಶತೃಗಳು ಸಹ ತಲೆದೂಗುವಂತೆ ಮಾಡಿತು.

ಅಧಿಕಾರಿ ವಲಯ ಮತ್ತು ಆಂಗ್ಲೋ ಇಂಡಿಯನ್ ವಲಯಗಳಲ್ಲಿ ಲಜಪತರ ಗೌರವ ಹೆಚ್ಚಿಸಿತು. ರಾಜಕೀಯ ಅಪರಾಧಗಳ ಕರಾಳ ಮುಖಗಳನ್ನು ರಹಸ್ಯವಾಗಿ ಪ್ರೇರೇಪಿಸುತ್ತಿದ್ದ ವ್ಯಕ್ತಿ ಎಂದು ಭಾವಿಸಿಕೊಂಡಿದ್ದ ಆ ಜನರಿಗೆ ನಿರ್ಮಾಣಕಾರಿ ಕೆಲಸ ಕಾರ್ಯಗಳಿಗೆ ಪ್ರೇರಣೆ ನೀಡಿದ ಓರ್ವ 'ಉತ್ಕರ್ಷಕ' ವ್ಯಕ್ತಿ ಎಂದು ಮನನ ಮಾಡಿಕೊಳ್ಳುವಂತಾಯಿತು. ಲಜಪತರು ಪುರಸಭಾ ಆಯುಕ್ತರಾಗಿದ್ದ ಅವಧಿಯಲ್ಲಿ ಲಾಹೋರಿನ ಬೀದಿಗಳಲೆಲ್ಲಾ ವಿದ್ಯುತ್ ದೀಪಗಳಲ್ಲಿ ಬೆಳಗಿದವು. ಅವರು ಕೈಗೊಂಡ ಪೌರ ಸುಧಾರಣಾ ಕಾರ್ಯಕ್ರಮಗಳಲ್ಲಿ ಪ್ರಮುಖವಾದದ್ದು ಹೀರಾ ಮಂಡಿ ಪ್ರದೇಶದಲ್ಲಿದ್ದ ವೇಶ್ಯಾವಾಟಿಕೆಗಳನ್ನು ಪ್ರತ್ಯೇಕಗೊಳಿಸಿದ್ದು. ಹಾಗೆ ಪ್ರತ್ಯೇಕಗೊಳಿಸುವ ಮೊದಲು ಅನೇಕರಿಗೆ ಅನಾರ್ಕಲಿಯಲ್ಲಿ ಪುನರ್ ವ್ಯವಸ್ಥೆ ಮಾಡಿಕೊಡಲಾಯಿತು.

ಲಜಪತರು ವಾಣಿಜ್ಯ ಮತ್ತು ಕೈಗಾರಿಕ ಅಭಿವೃದ್ಧಿಯಲ್ಲಿ ವಿಶೇಷ ಆಸ್ಥೆ ವಹಿಸಿದರು. ಪಂಜಾಬ್ ನ್ಯಾಷನಲ್ ಬ್ಯಾಂಕಿನ ನಿರ್ದೇಶಕ ಮಂಡಳಿಯಲ್ಲಿ ಅವರು ಸಲ್ಲಿಸಿದ ಸೇವೆ ಆ ಬ್ಯಾಂಕಿನ ಅಭಿವೃದ್ಧಿಗೆ ಹೆಚ್ಚು ಒತ್ತುಕೊಟ್ಟಿತು. ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಅವರು ಬಹು ಪ್ರೋತ್ಸಾಹ ನೀಡಿದರು. ಪಂಜಾಬ್‌ನಲ್ಲಿ ಸಿದ್ಧ ಉಡುಪು ಉದ್ಯಮ ಜನಪ್ರಿಯವಾಗಲು ಅವರ ಈ ಪ್ರೋತ್ಸಾಹ ಹೆಚ್ಚು ನೆರವಾಯಿತು. ಸಹಕಾರಿ ಜೀವ ವಿಮಾ ಕಂಪನಿಯೊಂದನ್ನು ಸ್ಥಾಪಿಸಲು ಲಜಪತರು ತಮ್ಮ ವರದ ಹಸ್ತ ನೀಡಿದರು.

ದಿ ಪಂಜಾಬಿ ಪತ್ರಿಕಾಲಯವನ್ನು ಆ ವೇಳೆಗೆ ಉತ್ತಮ ಲಾಭ ಪಡೆದು ಮಾರಲಾಗಿತ್ತು. ಅದರಿಂದ ಬಂದ ಹಣವನ್ನು ವಿನಿಯೋಗಿಸಿ ರಾಜಕೀಯ ಕಾರ್ಯಕರ್ತರ ತರಬೇತಿಗೆ ಅವರು ಯೋಜನೆಯೊಂದನ್ನು ರೂಪಿಸಿದರು.

ಆದರೆ ಅದೇ ಸಮಯದಲ್ಲಿ ಅವರು ಯುರೋಪಿಗೆ ಭೇಟಿ ಕೊಡಬೇಕಾಗಿ ಬಂದದ್ದು ಆ ಯೋಜನೆಯನ್ನು ವಿಳಂಬಗೊಳಿಸಿತು. ಅದಕ್ಕೆ ಹೊಂದಿಕೊಂಡಂತೆಯೋ ಎಂಬಂತೆ ಅವರ ವಕೀಲ ವೃತ್ತಿಯು ಅಲ್ಲಿಗೆ ಕೊನೆಯಾದಂತಾಯಿತು. 1909ರಲ್ಲಿ ಇಂಗ್ಲಿಷ್‌ಮನ್ ಪ್ರಕರಣದಲ್ಲಿ ಕಟಕಟೆಯಲ್ಲಿ ಸಾಕ್ಷಿ ನುಡಿಯುತ್ತಾ ಅವರು ವಕೀಲರಾಗಿ ತಮ್ಮ ಸ್ಥಾನದ ಅಂತಸ್ತನ್ನು ತಾವೇ ನಿರೂಪಿಸಿದರು. ಪಂಜಾಬ್ ಪ್ರಧಾನ ನ್ಯಾಯಾಲಯದಲ್ಲಿನ ಮೊದಲ ಹಂತದ ಆರು ಅಥವಾ ಏಳು ವಕೀಲರ ಪೈಕಿ ತಾವು ಒಬ್ಬರಾಗಿರುವುದಾಗಿ ಅವರು ಹೇಳಿದ್ದರು. ಈಗ ಅವರು ಅದೇ ವೃತ್ತಿಯಲ್ಲಿ

ಮುಂದುವರೆದಿದ್ದರೆ ಆ ಸಾಲಿನಲ್ಲಿ ಪ್ರಥಮರಾಗಿರುತ್ತಿದ್ದರು. ಅವರ ಮಾತಿನಲ್ಲಿ ಈ ಬಗ್ಗೆ ಓದೋಣ,

``ನ್ಯಾಯವಾದಿಯಾಗಿ ನನ್ನ ಸಂಪಾದನೆ ಅತ್ಯುತ್ತಮವಾಗಿತ್ತು. ವೃತ್ತಿಪರವಾಗಿ ಬಹು ಬೇಗ ಅಗ್ರಸ್ಥಾನಕ್ಕೆ ತಲುಪುವ ಅವಕಾಶವು ಉಜ್ವಲವಾಗಿತ್ತು. ಅಷ್ಟೇ ಭರವಸೆಯೂ ಇತ್ತು. ಪ್ರಧಾನ ನ್ಯಾಯಾಲಯದಲ್ಲಿ ಒಂದಲ್ಲ ಒಂದು ಕಾಲದಲ್ಲಿ ನನ್ನನ್ನು ಇಷ್ಟಪಡದಿದ್ದ, ನನ್ನ ಉಗ್ರವಾದ ರಾಜಕೀಯ ದೃಷ್ಟಿಕೋನ ಒಪ್ಪದಿದ್ದ, ಒಂದಲ್ಲ ಒಂದು ಕಾಲದಲ್ಲಿ ಪೂರ್ವಾಗ್ರಹ ಪೀಡಿತರಂತೆ ವರ್ತಿಸುತ್ತಿದ್ದ ನ್ಯಾಯಮೂರ್ತಿಗಳು ಸಹ ತಮ್ಮ ನಿಲುವನ್ನು ಬದಲಾಯಿಸಿಕೊಂಡಿದ್ದರು. (ಪಂಜಾಬಿನ ಆ ಪ್ರಧಾನ ನ್ಯಾಯಾಲಯವನ್ನು ಹೈಕೋರ್ಟಿನ ಸ್ಥಾನಮಾನಕ್ಕೆ ಆಗಿನ್ನೂ ಏರಿಸಿರಲಿಲ್ಲ.) ಆ ನ್ಯಾಯಮೂರ್ತಿಗಳು ತುಂಬಾ ಹಿತವಾಗಿ ಅಪ್ಯಾಯವಾಗಿ ನನ್ನೊಂದಿಗೆ ಮಾತನಾಡತೊಡಗಿದ್ದರು. ನನ್ನ ಕಕ್ಷಿದಾರರು ನನ್ನಲ್ಲಿ ಪೂರ್ಣ ಭರವಸೆ ಇಟ್ಟಿದ್ದರು. ಉತ್ತಮ ಮೊತ್ತದ ಶುಲ್ಕ ಸಂದಾಯ ಮಾಡುತ್ತಿದ್ದರು. ಪುರಸಭೆಯಲ್ಲಿ ನಾನು ಕೈಗೊಂಡ ಅಭಿವೃದ್ಧಿ ಕಾರ್ಯಗಳು ಅಧಿಕಾರಿ ವಲಯದ ಮನಸ್ಸಿನ ಮೇಲೆ ನಿರ್ದಿಷ್ಟ ಬದಲಾವಣೆ, ಪರಿಣಾಮ ಬೀರಿತ್ತು. ಆಂಗ್ಲೋ ಇಂಡಿಯನ್ನರಲ್ಲೂ ನನ್ನ ಬಗ್ಗೆ ಭಾವನೆಗಳು ಮಾರ್ಪಾಟಾಗಿದ್ದವು. ನಾನು ಯುಕ್ತನಾದ ಮನುಷ್ಯ ಎಂಬ ಭಾವನೆ ಅವರೆಲ್ಲರಲ್ಲೂ ಒಡಮೂಡಿತ್ತು. ತಾವು ಅಂದುಕೊಂಡಿದ್ದಂತೆ ನಾನೋರ್ವ ಕಟ್ಟಾ ಕ್ರಾಂತಿಕಾರಿ ಎಂಬ ಭಾವನೆ ಅವರಿಂದ ದೂರವಾಗಿತ್ತು!''

* * *

ವಿದೇಶವಾಸ-ರಾಯಭಾರಿ

(ವ್ಯರ್ಥ ನಿಯೋಗ ತಂದ ಸತ್ಫಲ)

ಅಧ್ಯಾಯ-37

ವ್ಯರ್ಥ ನಿಯೋಗ ತಂದ ಸತ್ಫಲ

ನಾಲ್ಕನೇ ಬಾರಿಗೆ ಇಂಗ್ಲೆಂಡಿಗೆ ಹೋಗುವ ಅವಕಾಶ ಒದಗಿ ಬಂದಿತು. ಅದು ಮೊದಲ ಅವಕಾಶದಂತೆ ಕಾಂಗ್ರೆಸ್ ನಿಯೋಗವೊಂದರ ಪ್ರತಿನಿಧಿಯಾಗಿ.

ಕರಾಚಿಯಲ್ಲಿ 1913ರ ಡಿಸೆಂಬರ್‌ನಲ್ಲಿ ನಡೆದ ವಾರ್ಷಿಕ ಅಧಿವೇಶನದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಇಂಗ್ಲೆಂಡಿಗೆ ನಿಯೋಗವೊಂದನ್ನು ಕಳುಹಿಸಲು ನಿರ್ಣಯಿಸಿತು. ಆಗ ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದ ಲಾರ್ಡ್ ಕ್ರೀವ್ 1914ರ ವಸಂತ ಋತುವಿನ ಸಂಸತ್ ಅಧಿವೇಶನದ ಆರಂಭದಲ್ಲೇ ವಿಧೇಯಕವೊಂದನ್ನು ಮಂಡಿಸುವವರಿದ್ದರು. ಭಾರತದ ಆಡಳಿತದ ಸುಧಾರಣೆಗಳನ್ನು ತರುವ ಅಂಶಗಳು ಆ ವಿಧೇಯಕದಲ್ಲಿದ್ದವು. ಆ ಸಂಬಂಧದಲ್ಲಿ ಭಾರತದ ಪ್ರಾತಿನಿಧ್ಯವನ್ನು ದಾಖಲು ಮಾಡುವ ಸಲುವಾಗಿ ಕರಾಚಿ ಅಧಿವೇಶನ ನಿಯೋಗ ಕಳುಹಿಸಲು ನಿರ್ಣಯಿಸಿತು. ಆದರೆ ನಿಯೋಗದ ಹೋಗಿ ಬರುವ ಖರ್ಚಿನ ಬಗ್ಗೆ ಅವರು ಯಾವುದೇ ನಿರ್ಣಯ ಕೈಗೊಳ್ಳಲಿಲ್ಲ. ಅಹಿತಕರವಾದ ಈ ನಿರ್ಧಾರವನ್ನು ಪ್ರಾಂತೀಯ ಘಟಕಗಳಿಗೆ ಬಿಟ್ಟು ಕೊಡಲಾಯಿತು. ಜೊತೆಗೆ ಆಯಾ ಪ್ರಾಂತ್ಯದ ಪ್ರತಿನಿಧಿ ನಿರ್ಧಾರವನ್ನು ಸಹ ಆಯಾ ಘಟಕಗಳಿಗೆ ವಹಿಸಲಾಯಿತು. ಒಟ್ಟಿನಲ್ಲಿ ನಿಯೋಗದ ಪ್ರತಿನಿಧಿ ಆಯ್ಕೆ ಮತ್ತು ಅವರ ಖರ್ಚು ವೆಚ್ಚದ ಜವಾಬ್ದಾರಿ ಕಾಂಗ್ರೆಸ್ಸಿನ ಪ್ರಾಂತೀಯ ಘಟಕಗಳಿಗೆ ನಿಯುಕ್ತಗೊಳಿಸಲಾಯಿತು. ಪಂಜಾಬ್ ಕಾಂಗ್ರೆಸ್ ತನ್ನ ಪ್ರತಿನಿಧಿಯಾಗಿ ಲಜಪತ್‌ರಾಯ್ ಅವರನ್ನು ನಾಮಕರಣ ಮಾಡಿತು. ಇತರ ಪ್ರಾಂತ್ಯಗಳ ಪೈಕಿ ಬಂಗಾಳದಿಂದ ಭೂಪೇಂದ್ರನಾಥ್ ಬಸು, ಮುಂಬಯಿಯಿಂದ ಎಂ.ಎ. ಜಿನ್ನಾ ಮತ್ತು ಸಮರ್ಥ್ ಹಾಗೂ ಬಿಹಾರದಿಂದ ಕೃಷ್ಣ ಸಹಾಯ್ ಆಯಾ ಪ್ರಾಂತ್ಯಗಳ ಪ್ರತಿನಿಧಿಯಾಗಿ ನೇಮಿಸಲ್ಪಟ್ಟರು. ಲಜಪತರು ತಮ್ಮ ನಾಮಕರಣಕ್ಕೆ ಸಮ್ಮತಿ ನೀಡಿದರು. ಅವರ ಅನುಭವದಲ್ಲಿ ಐರೋಪ್ಯ ಪ್ರವಾಸವೆಂದರೆ ''ಹೆಚ್ಚಿನ ಶಿಕ್ಷಣ ಮತ್ತು ಸ್ಫೂರ್ತಿ ಪ್ರಚೋದನೆ. ರಾಜಕೀಯವಾಗಿಯೂ ಅದು ಬಹು ಉಪಯುಕ್ತ.''

ಅದೇ ಸಮಯದಲ್ಲಿ ಅಂದರೆ ಮದ್ರಾಸ್‌ನಲ್ಲಿ 1914ರಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರನ್ನಾಗಿ ಸಹ ಲಜಪತರ ಹೆಸರನ್ನು ಪ್ರಸ್ತಾಪಿಸಲಾಗಿತ್ತು. ಅದರ ಜೊತೆಗೆ ಇಂಗ್ಲೆಂಡಿಗೆ ಹೋಗಿ ಕಾಂಗ್ರೆಸ್‌ನ್ನು ಪ್ರತಿನಿಧಿಸುವ ಹೊಣೆಗಾರಿಕೆಯನ್ನು ಗೊತ್ತುಪಡಿಸಲಾಯಿತು. ಅದು ಬ್ರಿಟಿಷ್ ಸಂಸತ್ತಿನಲ್ಲಿ ಭಾರತಕ್ಕೆ ಸಂಬಂಧಪಟ್ಟ ಶಾಸನವೊಂದರ ಕಲಾಪ ನಡೆಯುತ್ತಿದ್ದ ಪ್ರಸಂಗದಲ್ಲಿ ಲಾರ್ಡ್ ಕ್ರೀವ್ ಮಹಾಶಯರು ರೂಪಿಸಿದ ವಿಧೇಯಕದ ವ್ಯಾಪ್ತಿ, ಆದ್ಯತೆಗಳು ಮತ್ತು ಪದಪುಂಜಗಳ ಹಲವು

ಪ್ರಸ್ತಾಪಕ್ಕಿಂತಲೂ ಲಜಪತರಿಗೆ ವಹಿಸಿದ ಜವಾಬ್ದಾರಿಯ ಹೆಚ್ಚು ಮಹತ್ವದ್ದಾಗಿತ್ತು. ವಿಧೇಯಕ ಮತ್ತು ಅದರ ಕರಡು ಪರಿಶೀಲನೆಯ ಜವಾಬ್ದಾರಿಯನ್ನು ವಿಚಾರವಂತ ಸೌಮ್ಯ ಕಾಂಗ್ರೆಸ್ಸಿಗ ಕಲ್ಕತ್ತಾದ ಭೂಪೇಂದ್ರನಾಥ ಬಸು ಅವರಿಗೆ ಸುಲಭದಲ್ಲಿ ವಹಿಸಬಹುದಾಗಿತ್ತು. ಅವರು ಆ ವಿಧೇಯಕದ ವಿಷಯದಲ್ಲಿ ಗಂಭೀರ ಚಿಂತಕರಾಗಿದ್ದರು. ಅವರು ಎಲ್ಲಾ ''ಆದ್ದರಿಂದ- ಯಾವ ಕಾರಣಕ್ಕಾಗಿ'' ಮತ್ತು ಇಲ್ಲಿಂದ ಮುಂದೆ ಹೇಳುವಂತೆ ಪ್ರಸ್ತಾಪಗಳ ವಿಷಯದಲ್ಲಿ ಅವರು ಹೆಚ್ಚು ಆಸ್ಥೆ ವಹಿಸಿದ್ದರು.

ಲಜಪತರು ನಿಯೋಗದ ಇತರ ಸದಸ್ಯರೊಂದಿಗೆ ಲಂಡನ್‌ಗೆ ತೆರಳಲಾಗಲಿಲ್ಲ. ಕಾರಣ ಬಾಂಬ್ ವಿಸ್ಫೋಟ ಸಂಚೊಂದರ ಪ್ರಕರಣವೊಂದು ನ್ಯಾಯಾಲಯದ ವಿಚಾರಣೆಯಲ್ಲಿತ್ತು. ಆ ದಿನಗಳಲ್ಲಿ ಸಂಚಿನಲ್ಲಿ ಲಜಪತರ ಸಂಬಂಧವು ಒಂದಲ್ಲ ಒಂದು ರೀತಿಯಲ್ಲಿ ಇರಬಹುದೆಂಬ ವಿಕೃತ ಕರಾಳ ಊಹಾಪೋಹಗಳಾಗಿದ್ದವು. ಆ ಹಿನ್ನಲೆಯಲ್ಲಿ ಅವರ ಮನೆಯಲ್ಲಿ ದಾಳಿ ನಡೆಸಬಹುದೆಂದು ಭಯೋತ್ಪಾದಕ ಕೃತ್ಯಗಳಿಗೆ ಸ್ಫೂರ್ತಿ ನೀಡಿದರೆಂದೋ ಅಥವಾ ಸ್ವತಃ ಸಂಚುಗಾರರೆಂದೋ ಅವರನ್ನು ಆರೋಪಿಸಿ ಬಂಧಿಸುವ ಶಂಕೆಯೂ ಮೂಡಿತ್ತು. ಅಂತಹ ಯಾವುದೇ ಆರೋಪಕ್ಕಾಗಿ ತಮ್ಮ ವಿರುದ್ಧ ಇನಿತೂ ಸಾಕ್ಷಿ ಆಧಾರ ಇಲ್ಲವೆಂಬ ತುಂಬು ನಂಬುಗೆ ಲಜಪತರಲ್ಲಿತ್ತು. ಆದರೆ ಪೊಲೀಸರು ತಮ್ಮ ವಿಷಯದಲ್ಲಿ ಸ್ನೇಹಪರವಾಗಿಲ್ಲವೆಂಬ ಅಂಶವೂ ಅವರಿಗೆ ಗೊತ್ತಿತ್ತು. ಸಮಯ ಸಿಕ್ಕಾಗ ತಮ್ಮ ವಿರುದ್ಧ ಕಿಡಿಗೇಡಿತನ ನಡೆಸಬಹುದೆಂಬ ಅನುಮಾನವೂ ಅವರಲ್ಲಿತ್ತು. 1914ರ ಆ ದಿನಗಳ ಬಗ್ಗೆ ಬರೆಯುತ್ತಾ ಲಜಪತರು ಹೀಗೆ ದಾಖಲು ಮಾಡಿಟ್ಟಿದ್ದಾರೆ.

''ನನ್ನ ಜೀವನದ ಅತಿ ಪ್ರಕಾಶಮಾನವಾದ ಆ ದಿನಗಳಲ್ಲಿ ಇಂತಹ ಒಂದು ಶಂಕೆಯೂ ಇತ್ತು. ಒಂದಲ್ಲ ಒಂದು ಕಾರಣಕ್ಕಾಗಿ ಪೊಲೀಸರು ನನ್ನನ್ನು ಲಾಹೋರ್ ಬಾಂಬ್ ವಿಸ್ಫೋಟಕ್ಕೆ ಎಳೆಯಬಹುದು. ದೆಹಲಿಯಲ್ಲಿದ್ದ ವಿಚಾರಣೆಯಲ್ಲಿ ಆರೋಪಿಯನ್ನು ಮಾಡಬಹುದೆಂಬ ಅಂಶ ಕಾಡುತ್ತಿತ್ತು.'' ಜೊತೆಗೆ ಲಜಪತರು ಆ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇಬ್ಬರ ವಿಷಯದಲ್ಲಿ ಅತ್ಯಂತ ನಿಕಟವಾದ ಆಸಕ್ತಿಯನ್ನು ಹೊಂದಿದ್ದರು. ಅವರಿಬ್ಬರಿಗೆ ಸಾಧ್ಯವಾದ ಎಲ್ಲಾ ಸಹಾಯವನ್ನು ಒದಗಿಸುವ ಸಲುವಾಗಿಯಾದರೂ ಲಜಪತರು ಉಳಿದುಕೊಳ್ಳಬೇಕಾಗಿತ್ತು. ಈ ಇಬ್ಬರು ಆರೋಪಿಗಳಲ್ಲಿ ಓರ್ವ ಬಾಲ್‌ರಾಜ್. ಆತ ಲಜಪತರ ಆತ್ಮೀಯ ಮಿತ್ರರೂ, ಪ್ರಿನ್ಸಿಪಾಲರು ಆದ ಹನ್ಸ್‌ರಾಜ್‌ರ ಪುತ್ರ. ಜೊತೆಗೆ ಲಜಪತರು ಆಗಷ್ಟೇ ಕಳೆದುಕೊಂಡಿದ್ದ ಅವರ ಅಚ್ಚುಮೆಚ್ಚಿನ ಕಿರಿಯ ಪುತ್ರ ಪ್ಯಾರೇಕಿಷನ್‌ನ ಆಪ್ತ ಗೆಳೆಯ. ಬಾಲ್‌ರಾಜ್ ಸಹ ಲಜಪತರ ಮನೆಯಲ್ಲೇ ಇರುತ್ತಿದ್ದ. ಆ ಕುಟುಂಬದವರಲ್ಲಿ ಒಬ್ಬನಂತೆ ಆಗಿರುತ್ತಿದ್ದ. ಲಜಪತರ ಪುಸ್ತಕಗಳು ಹಾಗೂ ಪತ್ರಿಕೆಗಳ ನಿರ್ವಹಣೆಯನ್ನೆಲ್ಲಾ ನೋಡಿಕೊಳ್ಳುತ್ತಿದ್ದ. ಮತ್ತೋರ್ವ ಆರೋಪಿ ಭಾಯಿ ಬಾಲ್ಮುಕುಂದ್. ಆತ ಭಾಯಿ ಪರಮಾನಂದರ ರಕ್ತ ಸಂಬಂಧಿ. ಕಳೆದ ಒಂದು ವರ್ಷದಿಂದಲೂ ಲಜಪತರು ಕೈಗೊಂಡಿದ್ದ ಅಸ್ಪೃಶ್ಯರ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯ ನಿರತನಾಗಿದ್ದವ. ಭಾಯಿ ಬಾಲ್ಮುಕುಂದ್‌ರ ಉದಾತ್ತ ನಡವಳಿಕೆಗಳು ಲಜಪತರ ಅಪಾರ ಮೆಚ್ಚುಗೆಗೆ ಪಾತ್ರವಾಗಿದ್ದವು. ತಮ್ಮ ಜೀವನ ಚರಿತ್ರೆಯಲ್ಲಿ ಲಜಪತರು ಬಾಲ್ಮುಕುಂದ್‌ನನ್ನು ನೆನಸಿಕೊಳ್ಳುತ್ತಾ ಗಂಭೀರ ಹಾಗೂ ಆತ್ಮೀಯ ಪ್ರಸ್ತಾಪ ಮಾಡಿದ್ದಾರೆ ''ನನ್ನ ಜೀವಿತದ ಅವಧಿಗುಂಟ ನಾನು

ಅನೇಕ ಶಿಕ್ಷಕ ಹಾಗೂ ಅರೆ ಶಿಕ್ಷಿತ ಯುವ ಭಾರತೀಯರೊಂದಿಗೆ ಒಡನಾಡಿದೆ. ತಾಯಿ ನಾಡಿನ ಸೇವೆಗಾಗಿ ತ್ಯಾಗ, ಅರ್ಪಣೆ, ಬಲಿದಾನಗಳ ಉದಾತ್ತ ಸಮರ್ಪಣೆಗಳನ್ನು ಮಾಡಿದ ಯುವ ಪೀಳಿಗೆ ಅದು. ಅಂತಹ ವರ್ಗಕ್ಕೆ ಸೇರಿದವರಲ್ಲಿ ಸುಮಾರು 20ರ ಹರೆಯದ ಬಾಲ್ಮುಕ್ರಂಡ್ ಉತ್ಕೃಷ್ಟ ತರುಣ. ಆತನ ವ್ಯಕ್ತಿಗತ ನಡವಳಿಕೆಗಳು ಬಲು ಶುಭ್ರ. ಆತನ ನಿಸ್ವಾರ್ಥ ಗುಣ ಬಹು ಅಪರೂಪದ್ದು. ನನ್ನನ್ನು ಬಹುವಾಗಿ ಹಚ್ಚಿಕೊಂಡಿದ್ದ. ನನ್ನ ಒಳಿತಿಗಾಗಿ ಯಾವುದೇ ಕ್ಷಣದಲ್ಲೂ ಜೀವವನ್ನು ಕೊಡಲು ಸಿದ್ಧನಾಗಿದ್ದ. ಸೃಜನಾತ್ಮಕ, ಸಾಮಾಜಿಕ ಕೆಲಸದಲ್ಲಿ ತೊಡಗುವಂತೆ ನಾನು ಆತನ ಮನಸ್ಸಿನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದ್ದೆ. ಬೆಂಕಿಯುಗುಳುವ ರಾಜಕೀಯ ಚಟುವಟಿಕೆಗಳ ಗೊಡವೆ ಬೇಡವೆಂದು ತಿಳಿಸುತ್ತಿದ್ದೆ. ನನ್ನ ಸಲಹೆಯನ್ನು ಆತ ಮಾನ್ಯ ಮಾಡುತ್ತಿದ್ದ. ಅಸ್ಪೃಶ್ಯರ ಏಳಿಗೆಗಾಗಿ ಕೆಲಸ ಮಾಡಲು ವಿಧ್ಯುಕ್ತನೂ ಆಗಿದ್ದ. ಒಂದು ವರ್ಷ ತುಂಬುವ ಹಂತದಲ್ಲಿ ಒಮ್ಮೆ ಮಾತ್ರ ತನ್ನ ಮನಸ್ಸು ನಿರ್ಮಾಣಕಾರಿ ಕೆಲಸಗಳಲ್ಲಿ ಮಗ್ನವಾಗಿಲ್ಲವೆಂದು ತನ್ನ ತಾಯ್ನಾಡಿನ ರಾಜಕೀಯ ಉನ್ನತಿಗಾಗಿ ಇನ್ನೂ ಪ್ರಬಲವು, ಕ್ರಾಂತಿಕಾರಿಯೂ ಆದ ಕಾರ್ಯಗಳಲ್ಲಿ ತೊಡಗಿಸಲು ಪ್ರೇರೇಪಿಸುತ್ತಿದೆ ಎಂದು ಆತ ಹೇಳಿದ್ದ. ಕ್ರಾಂತಿಕಾರಿ ರಹಸ್ಯ ಸಂಘಟನೆಯ ಜೊತೆ ಅವನು ಹೊಂದಿದ್ದ ಸಂಬಂಧದ ಕಥೆಯನ್ನು 1914ರ ವಿಚಾರಣೆಯಲ್ಲಿ ಹೇಳಲಾಗಿದೆ. ಆ ಬಾಂಧವ್ಯ ಯಾವಾಗ ಹೇಗೆ ಆರಂಭಗೊಂಡಿತೆಂಬುದರ ನಿಕರತೆ ನನ್ನ ನೆನಪಿನಲ್ಲಿಲ್ಲ. ದಿನಾಂಕವೂ ಅಷ್ಟೇ. ಆದರೆ ಅವನೇ ಹೇಳಿಕೊಂಡಿರುವ ಸೂಕ್ತ ಕ್ರಮದ ''ಕಾಲ ಬಂದಾಗ ಆತ ತಾನೇ ತಾನಾಗಿ ನನ್ನ ಸೇವೆಗೆ ವಿದಾಯ ಹೇಳಿದ. ಹೊರಟು ಹೋದ. ಬಾಲ್ಮುಕ್ರಂಡ್ ಓರ್ವ ವಿನಯಶೀಲ ಸಹಿಷ್ಣು ಯುವಕನಾಗಿದ್ದ. ತಕ್ಷಣದ ಉದ್ವೇಗಗಳಿಗೆ ಭಾವುಕನಾಗುವ ಮನಸ್ಥಿತಿ ಅವನದಾಗಿರಲಿಲ್ಲ. ಈಗ ಸ್ಪಷ್ಟವಾಗಿ ತಿಳಿಯುತ್ತಿರುವಂತೆ ಸಂಪೂರ್ಣ ವಿಚಾರ ಮಂಥನ ಆಗುಹೋಗುಗಳ ಪರಿಶೀಲನೆ ನಡೆಸಿದ ನಂತರವೇ ಆತ ಕ್ರಾಂತಿಕಾರಿ ಆಂದೋಲನಕ್ಕೆ ಧುಮ್ಮಿಕ್ಕಿದ. ನನ್ನ ಜೊತೆಯಲ್ಲಿ ಆತ ಕೆಲಸ ಮಾಡುತ್ತಿದ್ದದ್ದು ಒಂದು ತಾತ್ಕಾಲಿಕ ವ್ಯವಸ್ಥೆಯಾಗಿತ್ತು. ನನಗೆ ಆತ ಎಂದಿಗೂ ವಿಶ್ವಾಸಘಾತ ಎಸಗುವವನಲ್ಲವೆಂದು ಅವನೊಂದಿಗೆ ನಾನು ನಡೆಸುತ್ತಿದ್ದ ಮಾತುಕತೆ ಮತ್ತು ಅವನ ನಡವಳಿಕೆಯಿಂದ ನನಗೆ ಖಾತ್ರಿಯಾಗಿತ್ತು. ಒಂದು ವರ್ಷದ ಅವಧಿಯ ಅವನ ಸೇವಾವಧಿಯಲ್ಲಿ ನಮ್ಮಿಬ್ಬರ ನಡುವೆ ನಡೆಯುತ್ತಿದ್ದ ಕೆಲವು ಸಂವಾದಗಳಿಂದಲೂ ಅದು ಖಾತರಿಯಾಗಿತ್ತು. ನನ್ನ ವಿರುದ್ಧ ವಿಶ್ವಾಸಘಾತುಕವೆಸಗಿ ಆತ ಹರ್ಷದಿಂದ ಇರಲಾರನೆಂಬ ನಂಬಿಕೆಯೂ ನನಗಿತ್ತು.

''ಆ ಒಂದು ವರ್ಷದ ಅವಧಿಯಲ್ಲಿ ನನ್ನ ಗಮನಕ್ಕೆ ಸಂಪೂರ್ಣವಾಗಿ ಬಾರದ ಒಂದು ಬೆಳವಣಿಗೆಯೂ ನಡೆಯಿತು. ಆತ ಎಳೆಯ ವಯಸ್ಸಿನ ತರುಣಿಯೊಬ್ಬಳನ್ನು ಮದುವೆ ಮಾಡಿಕೊಂಡಿದ್ದ. ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ.

ನನಗೆ ನೆನಪಿರುವಷ್ಟರ ಮಟ್ಟಿಗೆ ಅವನ ವಿರುದ್ಧದ ಆರೋಪವನ್ನು ಪ್ರಾಸಿಕ್ಯುಷನ್ ಸಾಬೀತು ಮಾಡಲಾಗಲಿಲ್ಲ. ಲಾಹೋರಿನ ಲಾರೇನ್ಸ್ ಗಾರ್ಡ್‌ನ್ಸ್‌ನಲ್ಲಿ ವಿಸ್ಫೋಟಕ ಬಾಂಬ್ ಎಸೆದ ಆರೋಪ ಅವರ ವಿರುದ್ಧ ಮಾಡಲಾಗಿತ್ತು. ಆದರೆ 1911ರ ಆ ಘಟನೆಯಲ್ಲಿ ಬಾಂಬ್ ಎಸೆಯಲು ಕಾರಣವಾದ ರಹಸ್ಯ ಸಂಘಟನೆಯ ಚಟುವಟಿಕೆಗಳಲ್ಲಿ

ಬಾಲ್ಮುಕುಂದ್ ಕೈವಾಡವು ಪ್ರತ್ಯಕ್ಷವಾಗಿದೆ ಎಂದು ನ್ಯಾಯಾಲಯ ಪರಿಗಣಿಸಿತು. 1912ರ ಡಿಸೆಂಬರ್‌ನಲ್ಲಿ ಲಾರ್ಡ್ ಹ್ಯಾರಿಂಗ್‌ರ ಮೇಲೆ ನಡೆದ ಮಾರಣಾಂತಿಕ ಹಲ್ಲೆಯಲ್ಲೂ ಆ ಆರೋಪಿಗಳ ಕೈವಾಡ ಇರುವುದಾಗಿ ಶಂಕಿಸಲಾಯಿತು.

ಬಾಲ್ಮುಕುಂದ್‌ಗೆ ನೇಣು ಶಿಕ್ಷೆ ವಿಧಿಸಲಾಯಿತು. ಅದೇ ದಿನ ಆತನ ತರುಣ ಪತ್ನಿಯು ಲಾಹೋರಿನಲ್ಲಿ ನಿಧನ ಹೊಂದಿದಳು.

''ಬಾಲ್ಮುಕುಂದ್‌ನ ಬಂಧನವಾಗುವತನಕ ಕ್ರಾಂತಿಕಾರಿ ರಹಸ್ಯ ಆಂದೋಲನದಲ್ಲಿ ಆತನ ಸಂಬಂಧ ಇದ್ದ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಅದಕ್ಕೆ ಮೊದಲು ನನಗೆ ಆ ಬಗ್ಗೆ ತಿಳಿದಿರಲಿಲ್ಲ. ಒಂದು ವೇಳೆ ತಿಳಿದಿದ್ದರೆ ಆತನ ಮನ ಒಲಿಸುವ ಪ್ರಯತ್ನ ಮಾಡಿರುತ್ತಿದ್ದೆ. ಇನ್ನೂ ಉತ್ತಮ ರೀತಿಯಲ್ಲಿ ದೇಶಕ್ಕೆ ಅವನ ಸೇವೆ ಒದಗುವ ರೀತಿಯಲ್ಲಿ ಅವನನ್ನು ಕಾಪಾಡುವ ಪ್ರಯತ್ನ ಮಾಡಿರುತ್ತಿದ್ದೆ.''

ಹೀಗಾಗಿ ಪ್ರಾಸಿಕ್ಯೂಷನ್ ತನ್ನ ಇನ್ನಿಂಗ್ಸ್ ಮುಗಿಸುವತನಕ ಲಜಪತರು ಇಂಗ್ಲೆಂಡಿಗೆ ಪ್ರಯಾಣ ಮಾಡಲಾಗಲಿಲ್ಲ. ಅದು ಮುಗಿದ ಮೇಲೆ ಪ್ರಿನ್ಸಿಪಾಲ್ ಹನ್ಸ್‌ರಾಜ್ ಸೇರಿದಂತೆ ಅವರ ಗೆಳೆಯರು ಇನ್ನು ವಿಳಂಬ ಮಾಡಬಾರದೆಂದು, ಕೂಡಲೇ ಹೊರಡಬೇಕೆಂದು ಸಲಹೆ ಮಾಡಿದರು. ಲಜಪತರು ಇಂಗ್ಲೆಂಡಿಗೆ ನಾಲ್ಕನೇಯ ಬಾರಿಗೆ ಮತ್ತೆ ಕಾಂಗ್ರೆಸ್ ಪ್ರತಿನಿಧಿಯಾಗಿ ತೆರಳಿದರು. ಆ ವೇಳೆಗಾಗಲೇ ಭೂಪೇಂದ್ರನಾಥ ಬಸು ಮತ್ತು ಇತರ ಪ್ರತಿನಿಧಿಗಳು ಲಾರ್ಡ್ ಕ್ರೀವ್ ಅವರನ್ನು ಭೇಟಿ ಮಾಡಿದ್ದರು. 1914 ಮೇ 17ರಂದು ಲಜಪತರ ಜೊತೆಗೂಡಿದ ಮೇಲೆ ಮತ್ತೆ ಅವರು ಲಾರ್ಡ್ ಕ್ರೀವ್ ಅವರನ್ನು ಭೇಟಿ ಮಾಡಿ ವಿಧೇಯಕದ ಆದ್ಯತೆಗಳ ಬಗ್ಗೆ ಚರ್ಚಿಸಿದರು. ಕಲ್ಕತ್ತಾದ ಸೌಮ್ಯವಾದಿ ಆ ನಿಯೋಗದ ಮುಖಂಡರಾಗಿ ಸ್ವಯಂಘೋಷಿತರಾಗಿದ್ದರು.

ಲಜಪತರು ಹೇಳುತ್ತಾರೆ, ''ಬಾಬು ಭೂಪೇಂದ್ರನಾಥ ಬೋಸರು ನಮ್ಮ ನಿಯೋಗದ ಅನೌಪಚಾರಿಕ ನೇತಾರರಾಗಿದ್ದರು. ಇಂಗ್ಲೆಂಡ್ ಸಾಮ್ರಾಜ್ಯದ ಭಾರತದ ಆಡಳಿತ ಕಚೇರಿಯ ಅಧಿಕಾರಿಗಳೊಂದಿಗೆ ಅವರು ನಿಕಟ ಸಂಪರ್ಕ ಇರಿಸಿಕೊಂಡಿದ್ದರು. ಇತರ ಬ್ರಿಟಿಷ್ ಅಧಿಕಾರಿಗಳೊಂದಿಗೂ ಅವರ ಅನುಬಂಧ ಇತ್ತು. ಪ್ರಭಾವದಲ್ಲಿಯೂ, ಸಂಧಾನಗಳನ್ನು ನಡೆಸುವುದರಲ್ಲಿಯೂ ಅವರು ನಿಷ್ಣಾತರಾಗಿದ್ದರು. ಅಧಿಕಾರಸ್ಥರು ಕೆಲಸಗಳನ್ನು ಹೇಗಾಗಬೇಕೆಂದು ಬಯಸುತ್ತಿದ್ದರೆಂಬುದನ್ನು ಅವರು ನಮಗೆ ಆಗಿಂದಾಗ್ಗೆ ತಿಳಿಸುತ್ತಿದ್ದರು. ಯಾವಾಗ ನಾವು ಅವರನ್ನು ಭೇಟಿ ಮಾಡಬೇಕು, ಹೇಗೆ ನಡೆದುಕೊಳ್ಳಬೇಕು ಅಥವಾ ನಡೆದುಕೊಳ್ಳಬಾರದು ಎಂಬ ಬಗ್ಗೆ ನಿರ್ದೇಶನ ನೀಡುತ್ತಿದ್ದರು. ಅವರ ಸೂಚನೆ ಸಲಹೆಗಳಿಗೆ ಅನುಗುಣವಾಗಿ ನಾವು ಅವುಗಳನ್ನು ಸಿದ್ಧಪಡಿಸುತ್ತಿದ್ದೆವು. ಅವರ ನಿರ್ದೇಶನದ ಆ ಟಿಪ್ಪಣಿಗಳನ್ನು ಭಾರತದ ರಾಜ್ಯ ಕಾರ್ಯದರ್ಶಿಯವರಿಗೆ ಪರಿಶೀಲನೆಗೆ ಸಲ್ಲಿಸುತ್ತಿದ್ದೆವು. ಅವರ ನಿರ್ಧಾರಗಳೇನಾಗಿದ್ದವೆಂಬುದು ಭೂಪೇಂದ್ರಬಾಬು ಅವರಿಗೆ ಮಾತ್ರ ತಿಳಿಯುತ್ತಿತ್ತು.''

ವಿಧೇಯಕದ ಬಗ್ಗೆ ಬರೆಯುತ್ತಾ ಲಜಪತರು ಹೀಗೆ ದಾಖಲು ಮಾಡಿದ್ದಾರೆ. ''ಲಾರ್ಡ್ ಕ್ರೀವ್ ಮಂಡಿಸಿದ ವಿಧೇಯಕ ಲಿಬರಲ್ ಆಡಳಿತ ರೀತಿಯ ಧೋರಣೆಗಿಂತ ಭಿನ್ನವಾಗಿರಲಿಲ್ಲ. ಅದು ಯಾರೊಬ್ಬರನ್ನು ತೃಪ್ತಿಪಡಿಸಲಿಲ್ಲ. ಎಲ್ಲಾ ಕಡೆಗಳಿಂದಲೂ

ವಿರೋಧ ವ್ಯಕ್ತವಾಯಿತು. ನಿಯೋಗ ಭಾರತಕ್ಕೆ ಮರಳತೊಡಗಿದಾಗ ವಿಧೇಯಕದ ಆದ್ಯತೆಗಳನ್ನು ಇನ್ನೂ ಪ್ರಕಟಿಸಿರಲಿಲ್ಲ. ಹೀಗಾಗಿ ಆ ವಿಧೇಯಕಕ್ಕೆ ಭಾರತದ ಅಭಿಪ್ರಾಯಗಳನ್ನು ಸೂಚಿಸಲಾಗಿರಲಿಲ್ಲ. ಆದ್ಯತೆಗಳು ಬೆಳಕಿಗೆ ಬಂದ ಮೇಲೆ ಭಾರತೀಯ ಪತ್ರಿಕೆಗಳು ತೀವ್ರ ಅಸಮಾಧಾನ ಮತ್ತು ಪ್ರತಿರೋಧವನ್ನು ವ್ಯಕ್ತಪಡಿಸಿದವು. ಸಾಧ್ಯವಿರುವಷ್ಟರ ಮಟ್ಟಿಗೆ ಭಾರತೀಯರ ಬೆಂಬಲ ಅರೆಬರೆಯಾಯಿತು. ಹಾಗೂ ಷರತ್ತು ಪೂರಕವಾಯಿತು. ನಿಯೋಗದಲ್ಲಿಯೂ ಸಹ ಭಿನ್ನಾಭಿಪ್ರಾಯ ಇಬ್ಭಾಗವಾಯಿತು. ವೈಯಕ್ತಿಕವಾಗಿ ಆ ವಿಧೇಯಕವನ್ನು ಸ್ವಾಗತಿಸುವ ಯಾವುದೇ ಕಾರಣ ನನಗೆ ಕಂಡು ಬರಲಿಲ್ಲ. ಆದರೆ ನಮ್ಮ ಸ್ವಯಂಘೋಷಿತ ಮುಖಂಡರು ವಿಧೇಯಕಕ್ಕೆ ಬೆಂಬಲ ಕೊಡಲು ಟೊಂಕ ಕಟ್ಟಿ ನಿಂತಿದ್ದರು. ಬಹುಮತದ ವಿಧಿಗಾಗಿ ನಾವು ರಾಜ್ಯ ಕಾರ್ಯದರ್ಶಿಗೆ ಭಿನ್ನಮತದ ಟಿಪ್ಪಣಿಗಳನ್ನು ಸಲ್ಲಿಸಿದೆವು. ತೀವ್ರ ಮಾರ್ಪಾಟುಗಳನ್ನು ಮಸೂದೆಗೆ ತರಬೇಕೆಂದು ಸೂಚಿಸಿದೆವು. ಹಾಗಾದರೆ ವಿಧೇಯಕಕ್ಕೆ ನಮ್ಮ ಪೂರ್ಣ ಬೆಂಬಲ ದೊರೆಯುತ್ತದೆ ಎಂದು ತಿಳಿಸಿದೆವು. ಅದೆಲ್ಲಾ ನಡೆಯುತ್ತಿರುವ ಸಂದರ್ಭದಲ್ಲೇ ಅತ್ತ ಟೋರಿ ಪಕ್ಷ ಆ ವಿಧೇಯಕವನ್ನು ಕಟುವಾಗಿ ವಿರೋಧಿಸಿತು. ಸಂಸತ್ತಿನ ಒಳಗೂ ಹೊರಗೂ ಅದು ಕೋಲಾಹಲವನ್ನೇ ಎಬ್ಬಿಸಿತು. ಟೋರಿ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದ ಅವರು ಸುಮ್ಮನಿರಲಿಲ್ಲ...'' ಲಾರ್ಡ್ ಕ್ರೀವ್ ವಿಧೇಯಕ ಬಿದ್ದು ಹೋಯಿತು. ಲಜಪತರು ಅದರ ಬಗ್ಗೆ ಹೀಗೆ ಬರೆದಿದ್ದಾರೆ, ''ಬಹುಶಃ ಭಾರತೀಯ ನಿಯೋಗದ ಸ್ವಯಂಘೋಷಿತ ನಾಯಕರನ್ನು ಹೊರತುಪಡಿಸಿ ಬೇರಾರಿಗೂ ಆ ವಿಧೇಯಕ ಬಿದ್ದು ಹೋದ ಬಗ್ಗೆ ಕಿಂಚಿತ್ತೂ ಪಶ್ಚಾತ್ತಾಪವಾಗಲಿಲ್ಲ.''

ಆ ವಿಧೇಯಕದ ಪ್ರಕರಣ ಲಜಪತರಿಗೆ ಮತ್ತೊಮ್ಮೆ ಇಂಗ್ಲೆಂಡಿಗೆ ಭೇಟಿ ಕೊಡಲು ಅನುಕೂಲಕರವಾದ ಅವಕಾಶ ಒದಗಿಸಿತು. ಅದರ ಜೊತೆಯಲ್ಲೇ ಇತರ ನಾನಾ ಕೆಲಸಗಳಲ್ಲಿ ಅವರಿಗೆ ಆಸ್ಥೆ ಇತ್ತು. ತಮ್ಮ ಸಂಪರ್ಕಗಳನ್ನು ಇನ್ನಷ್ಟು ಆಳ-ವಿಸ್ತಾರಗೊಳಿಸಿಕೊಳ್ಳಲು ತಾವು ಕೈಗೊಂಡ ಕಾರ್ಯಗಳಿಗೆ ಬೆಂಬಲ, ಶಕ್ತಿಯನ್ನು ಕ್ರೋಢಿಕರಿಸಿಕೊಳ್ಳಲು ಅವರು ಆ ಅವಕಾಶವನ್ನು ಸದುಪಯೋಗ ಮಾಡಿಕೊಂಡರು. ಭಾರತಕ್ಕೆ ಭೇಟಿ ಕೊಟ್ಟಿದ್ದ ಲಿಬರಲ್ ಮುಖಂಡ ಕೀರ್ ಹಾರ್ಡಿ ಅವರನ್ನು ಸಂದರ್ಶಿಸುವ ಅವಕಾಶ ಲಜಪತರಿಗೆ ಒದಗಿರಲಿಲ್ಲ. ಆಗ ಅವರು ಮಾಂಡೇಲೆ ಕೋಟೆಯಲ್ಲಿ ರಾಜಕೀಯ ಕೈದಿಯಾಗಿದ್ದರು. 1909ರಲ್ಲಿ ಕೀರ್ ಹಾರ್ಡಿಯವರನ್ನು ಭೇಟಿ ಮಾಡುವ ಸಂಕ್ಷಿಪ್ತ ಅವಕಾಶವೇನೋ ಸಿಕ್ಕಿತು. ಆದರೆ 1914ರಲ್ಲಿ ಪ್ರಾಪ್ತವಾದ ಭೇಟಿಯ ಅವಕಾಶ ಉತ್ತಮ ಫಲ ತಂದಿತು. ಇಬ್ಬರ ನಡುವೆ ಸ್ನೇಹದ ಬೆಸುಗೆಯಾಯಿತು. 1914ರಲ್ಲಿ ಲಂಡನ್ ತಲುಪುತ್ತಿದ್ದಂತೆ ಲಜಪತರಿಗೆ ಸಂದಾಯವಾದ ಸ್ವಾಗತದ ಪತ್ರಗಳಲ್ಲಿ ಕೀರ್ ಹಾರ್ಡಿಯವರದು ಅಗ್ರಮಾನ್ಯವಾಗಿತ್ತು. ''ಹೌಸ್ ಆಫ್ ಕಾಮನ್ಸ್‌ನ ಮೊಗಸಾಲೆಯಲ್ಲಿ ಭೋಜನಕ್ಕೆ ನಿಮ್ಮನ್ನು ಅತ್ಯಾದರದಿಂದ ಎದುರು ನೋಡುತ್ತಿರುತ್ತೇನೆ'' ಎಂದು ಆಹ್ವಾನಿಸಿದ್ದರು. ಬ್ರಿಟಿಷ್ ಮುಖಂಡ ಮೆಕಾರ್ನೆಸ್ ಲಜಪತರ ದೇಶೋಚ್ಚಾಟನೆ ಪ್ರಸಂಗದಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾರ್ಲೆಯ ನಿಲುವು ಧೋರಣೆಗಳಿಗೆ ತೀವ್ರ ಪ್ರತಿರೋಧ ಒಡ್ಡಿದ ಸದಸ್ಯರು ಅವರೆಂಬುದನ್ನು ನಾವು ಈಗಾಗಲೇ ಓದಿದ್ದೇವೆ.

ಈ ಭೇಟಿ ಅವಧಿಯಲ್ಲಿ ಅವರು ಮತ್ತು ಲಜಪತರ ನಡುವೆ ಸ್ನೇಹ ಸಹಜ ಸ್ವಾಭಾವಿಕವಾಗಿ ವೃದ್ಧಿ ಹೊಂದಿತು.

ಲಜಪತರು ತಮ್ಮ ಆತ್ಮಕಥೆಯಲ್ಲಿ ಆ ಪ್ರಸಂಗವನ್ನು ಹೀಗೆ ಕಂಡಿದ್ದಾರೆ.

''ಫ್ರೆಡರಿಕ್ ಮೆಕಾರ್ನೆಸ್ ನಾನು ಹೆಚ್ಚಾಗಿ ಹಚ್ಚಿಕೊಂಡ ಸ್ನೇಹಜೀವಿಗಳಲ್ಲಿ ಒಬ್ಬರಾಗಿದ್ದರು. ಅವರ ಸ್ನೇಹ ಮತ್ತು ಆತಿಥ್ಯದಲ್ಲಿ ನಾನು ವೈಚಾರಿಕ ರಸ ಪಿಪಾಸೆ ಮಾಡಿದೆ. 1907ರಲ್ಲಿ ಅವರು ನನ್ನ ಪ್ರಕರಣವನ್ನು ಗಂಭೀರವಾಗಿ ಕೈಗೆತ್ತಿಕೊಂಡಿದ್ದರು. ನನ್ನ ಗಡಿಪಾರು ಶಿಕ್ಷೆಗೆ ಸಂಬಂಧಪಟ್ಟಂತೆ ಪ್ರತಿನಿತ್ಯವೂ ಪ್ರಶ್ನೆಗಳನ್ನು ಕೇಳುತ್ತಿದ್ದರಿಂದ ಅವರು ಜಾನ್ ಮಾರ್ಲೆ ಕಣ್ಣಲ್ಲಿ ವ್ಯಗ್ರವಾಗಿ ಕಂಡಿದ್ದರು. ಲಿಬರಲ್ ಪಕ್ಷದ ಇತರ ನಾಯಕರು ಅವರನ್ನು ಕೇವಲವಾಗಿ ಕಾಣುವಂತಾಗಿತ್ತು. 1907ಕ್ಕೆ ಮೊದಲು ಅವರ ಬಗ್ಗೆ ಉನ್ನತ ಗೌರವ, ಆದರಗಳಿದ್ದವು. ಹದನಾದ ಅವರ ಪಾಂಡಿತ್ಯ, ಪರಿಣಿತ ಕಾನೂನು ಜ್ಞಾನ, ಸಮಾಹಿತ ನಡವಳಿಕೆ ಮತ್ತು ಸ್ನಿಗ್ಧ ಅಭಿಮತಗಳು, ಅವರ ಸಮತೋಲನದ ಭಾಷಣಗಳು ಅವರನ್ನು ವಿಶಿಷ್ಟ ಸ್ಥಾನಕ್ಕೆ ಏರಿಸಿದ್ದವು. ಒಂದು ಹಂತದಲ್ಲಂತೂ ಅವರನ್ನು ಭವಿಷ್ಯದ ಚಿಂತಕರ ವಲಯದಲ್ಲಿ ಓರ್ವ ಪ್ರಮುಖರೆಂದು ಪರಿಗಣಿಸಲಾಗಿತ್ತು. ಆದರೆ ಆಗಿದ್ದೇ ಬೇರೆ! ನನ್ನ ಗಡಿಪಾರು ಶಿಕ್ಷೆ ಅವರನ್ನು ಆ ಎತ್ತರದಿಂದ ಪತನಗೊಳಿಸಿತ್ತು. ''ಲಿಬರಲಿಸಂ' ಮೂಲಭೂತ ತತ್ವಗಳಲ್ಲಿ ವಿಚಾರಣೆ ಇಲ್ಲದೆ ಗಡಿಪಾರು ಶಿಕ್ಷೆ ವಿಧಿಸುವುದು ಸ್ವಾಭಾವಿಕ ನ್ಯಾಯದ ಉಲ್ಲಂಘನೆ. ಮೆಕಾರ್ನೆಸ್ ಅಂತಹ ಅಪಚಾರವನ್ನು ಸಹಿಸಲಿಲ್ಲ. ಚಂಚಲ ಮನಸ್ಸಿನ ಜಾನ್ ಮಾರ್ಲೆ ಕೊಟ್ಟ ಯಾವ ಉತ್ತರವೂ, ಯಾವ ವಿವರಣೆಯೂ ಅವರಿಗೆ ಸಮಾಧಾನ ತರಲಿಲ್ಲ. ನನ್ನ ಗಡಿಪಾರು ಶಿಕ್ಷೆಗೆ ಸಂಬಂಧಪಟ್ಟಂತೆ ಅವರು ಪ್ರತಿದಿನವೂ ಸದನದಲ್ಲಿ ಪ್ರಶ್ನೆಗಳನ್ನು ಹಾಕುತ್ತಲೇ ಇದ್ದರು. ಆ ದಿನಗಳಲ್ಲಿ ಅವರೆಂದೂ ನನ್ನನ್ನು ಭೇಟಿ ಮಾಡಿದವರಲ್ಲ. ನನ್ನ ಬಗ್ಗೆ ಅವರಿಗೇನೂ ಗೊತ್ತಿರಲಿಲ್ಲ. ಕೇವಲ ತಾತ್ವಿಕವಾಗಿ ಅವರು ಆ ನಿರ್ಧಾರ ಕೈಗೊಂಡಿದ್ದರು. ಅವರ ತತ್ವಪರತೆ ಅಷ್ಟೊಂದು ನಿಷ್ಠವಾಗಿತ್ತು. ಅದಕ್ಕೆ ಅವರು ನೀಡಿದ ಮನ್ನಣೆ ಮತ್ತು ತತ್ ಪ್ರಕಾರವಾಗಿ ನಡೆದುಕೊಂಡ ರೀತಿ ಅವರ ಪಕ್ಷದ ನಾಯಕರ ದೃಷ್ಟಿಯಲ್ಲಿ ಅವರನ್ನು ಕೀಳಾಗುವಂತೆ ಮಾಡಿತ್ತು. ಜಾನ್ ಮಾರ್ಲೆಯ ಭಾರತದ ನೀತಿಯ ಬಗ್ಗೆ ಅವರು ಮಾಡುತ್ತಿದ್ದ ದಾಳಿಯಿಂದಾಗಿ ಅವರನ್ನು ಅವರ ಪಕ್ಷದವರು ಬಹುವಾಗಿ ದ್ವೇಷಿಸುತ್ತಿದ್ದರು. ಗೌರವಹೀನವಾಗಿ ನಡೆದುಕೊಳ್ಳತೊಡಗಿದರು. ಸಹಾಯಕ ವಕೀಲರು ಅವರಿಗೆ ನೆರವು ನೀಡುವುದನ್ನು ನಿಲ್ಲಿಸಿದರು. ವಕೀಲ ವೃತ್ತಿಯಲ್ಲಿ ಹಿರಿಯರೆನಿಸಿದ ಅವರ ಸ್ಥಾನಮಾನಗಳು 'ಕಿರಿಯನ' ಹಂತಕ್ಕೆ ಕುಗ್ಗುವಂತಾಯಿತು.!

ಫ್ರೆಡರಿಕ್ ಮೆಕಾರ್ನೆಸ್ ಯಾವ ರೀತಿಯಲ್ಲೂ ಕ್ರಾಂತಿಕಾರಿ ಮನೋಭಾವದ ವ್ಯಕ್ತಿಯಾಗಿರಲಿಲ್ಲ. ಅಂತಹ ಧೋರಣೆಗಳು ಅವರಲ್ಲಿ ಇರಲಿಲ್ಲ. ಅತ್ಯಂತ ಕಠಿಣವಾಗಿ ಮಾತನಾಡುವುದು ಅವರಿಗೆ ಸಹಜ ಗುಣವಾಗಿ ಇರಲಿಲ್ಲ. ಕ್ರಾಂತಿಕಾರಿ ರೀತಿ, ರಿವಾಜುಗಳು ಅವರ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಅವರೊಬ್ಬ ಶಾಂತಿಯ ಪ್ರತಿಮೂರ್ತಿಯಾಗಿದ್ದರು. ಸಂವಿಧಾನಾತ್ಮಕ ನೆಲೆಗಟ್ಟಿನ ಉಗ್ರ ಚಳವಳಿಕಾರರಾಗಿದ್ದರು. ಅವರ ಪತ್ನಿಯೂ ಅಷ್ಟೇ

ಘನತೆವೆತ್ತ ಮನಸ್ಸಿನವರು. ಆಕೆಗೆ ಭಾರತೀಯ ತತ್ವಶಾಸ್ತ್ರ ಮತ್ತು ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇತ್ತು. ಅವರ ಪರಿಚಯವನ್ನು ನಾನು ಗಳಿಸಿಕೊಂಡಿದ್ದು 1908-1909ರಲ್ಲಿ. ಆ ತರುವಾಯ ಅವರ ವಿಶ್ವಾಸದ ಸವಿಯನ್ನು ಅನುಭವಿಸಿದೆ. ಗೆಳೆತನದ ಆಮೋದವನ್ನು ಸವಿದೆ...

ಬಹು ಮೌಲ್ವಿಕವಾದ ಇನ್ನೊಂದು ಸ್ನೇಹವೆಂದರೆ ವೆಬ್ಸ್ ಅವರದು. ಅವರ ಬಗ್ಗೆ ಬರೆಯುತ್ತಾ ಲಜಪತರು ಹೀಗೆ ವರ್ಣಿಸಿದ್ದಾರೆ,

"ಇಂಗ್ಲಿಷ್ ಗೆಳೆಯರಲ್ಲಿ ನನಗೆ ಬಹು ಅಪ್ಯಾಯಮಾನ. ಔದಾರ್ಯಪೂರ್ವಕವಾದ ಸ್ನೇಹ ಸಂಪತ್ತು ವೆಬ್ಸ್ ಅವರದು. ಅವರ ಪಾಂಡಿತ್ಯ ಮತ್ತು ವಿದ್ವತ್ ಚಿರಂತರವಾದ ಕೃತಿಗಳ ರಚನೆ ಇಡೀ ಜಗತ್ತಿಗೆ ಗೊತ್ತು. ಗೆಳೆಯರಾಗಿ ಅವರೆಷ್ಟು ಉದಾರಚರಿತರು, ಸುಮನಸ್ಕರು ಆಗಿದ್ದರೆಂಬುದು ಮಾತ್ರ ಬಹುಶಃ ಕೆಲವರಿಗಷ್ಟೇ ತಿಳಿದಿರಬಹುದು. ಸೈದ್ಧಾಂತಿಕವಾಗಿ ಅವರು ಸಮಾಜವಾದಿಗಳು. ಆದರೆ ಕ್ರಾಂತಿಕಾರಿ ಸಮಾಜವಾದಿಗಳಲ್ಲ. ಬ್ರಿಟಿಷ್ ಫೇಬಿಯನ್ ಮನೋಧರ್ಮ, ಫೇಬಿಯನ್ ಅವರ ಸಾರಸರ್ವಸ್ವವಾಗಿತ್ತು. 1914ರಲ್ಲಿ ನಾನು ಇಂಗ್ಲೆಂಡಿನಲ್ಲಿದ್ದ ಪ್ರಸಂಗದಲ್ಲಿ ಸಿಡ್ನಿ ವೇಬ್ ನನಗೆ ಬಹು ಉಪಕಾರ ಮಾಡಿದ್ದರು...

ಸರ್ ವಿಲಿಯಂ ವೆಡರ್ನ್‌ಬರ್ನ್ ಹಿರಿಯ ಧುರೀಣರು. ಅವರು ಲಜಪತರೊಂದಿಗೆ ಉದಾರವಾಗಿ ನಡೆದುಕೊಂಡರು. "ಎಲ್ಲಾ ಭಾರತೀಯ ರಾಜಕಾರಣದ ಕಾರ್ಯಕರ್ತರಿಗೆ, ವಸ್ತುಶಃ ಎಲ್ಲಾ ವರ್ಗಗಳ ಭಾರತೀಯರಿಗೆ ದಿ. ಸರ್ ವಿಲಿಯಂ ವೆಡರ್ನ್‌ಬರ್ನ್ ಓರ್ವ ಗೆಳೆಯರಾಗಿದ್ದರು. ತತ್ವವೇತ್ತರಾಗಿದ್ದರು, ಮಾರ್ಗದರ್ಶಿಯಾಗಿದ್ದರು, ಅವರು ಓರ್ವ ನಿವೃತ್ತ ಭಾರತೀಯ ನಾಗರಿಕ ಸೇವಕ. ಅತ್ಯುತ್ತಮ ಶ್ರೇಣಿಯ ಇಂಗ್ಲಿಷ್ ದೇಶಭಕ್ತರಾಗಿದ್ದರು. ಜೊತೆಗೆ ಅವರು ಭಾರತವನ್ನು ಅಷ್ಟೇ ಪ್ರೀತಿಸುತ್ತಿದ್ದರು. ಅವರಿಗೆ ಸಂದಾಯವಾಗುತ್ತಿದ್ದ ನಿವೃತ್ತ ಹಣದ ಪ್ರತಿ ಪೆನ್ನಿಯನ್ನು ಭಾರತದ ಹಿತದ ಕೆಲಸಗಳಿಗಾಗಿ ಉಪಯೋಗಿಸುತ್ತಿದ್ದರು. ಭಾರತದ ರಾಜಸ್ವದಿಂದ ಬರುತ್ತಿದ್ದ ವಿಶ್ರಾಂತಿ ವೇತನ ರೂಪದ ಹಣ ಆ ದೇಶದ ಒಳಿತಿಗಾಗಿ ವಿನಿಯೋಗವಾಗಬೇಕೆಂದು ತೀರ್ಮಾನ ಮಾಡಿಕೊಂಡಿದ್ದವರು ಅವರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಿತಿಯ ಅಧ್ಯಕ್ಷರು ಅವರಾಗಿದ್ದರು. ಬಹಳ ವರ್ಷಗಳ ಕಾಲ ಆ ಸಮಿತಿ ಹಾಗೂ ಅದರ ಸಾಪ್ತಾಹಿಕ ಮುಖವಾಣಿ ಇಂಡಿಯಾ ಪ್ರಕಟಣೆಯ ಖರ್ಚು ವೆಚ್ಚಗಳನ್ನೆಲ್ಲಾ ಅವರು ತಮ್ಮ ಹಣದಲ್ಲೇ ಭರಿಸುತ್ತಿದ್ದರು. ರಾಜಕೀಯ ಕಾರ್ಯಗಳಿಗಾಗಿ ಆಗಿಂದಾಗ್ಗೆ ಇಂಗ್ಲೆಂಡಿಗೆ ಭೇಟಿ ಕೊಡುತ್ತಿದ್ದ ಭಾರತೀಯ ರಾಜಕಾರಣಿಗಳು ಅವರ ಸಲಹೆ ಸೂಚನೆಗಳನ್ನು ಪಡೆದುಕೊಳ್ಳತೊಡಗುತ್ತಿದ್ದರು. ಕೆಲಸ ಕಾರ್ಯಗಳು ಸುಗಮವಾಗುವಂತೆ ಅವರಿಗೆ ಸರ್ ವಿಲಿಯಂ ವೆಡರ್ನ್‌ಬರ್ನ್ ನೆರವಾಗುತ್ತಿದ್ದರು. ಅವರ ಸಲಹೆ ಮತ್ತು ಸಹಾಯಗಳು ನಮಗೆ ತೀರಾ ಅನಿವಾರ್ಯವಾಗಿದ್ದವು."

ಲಜಪತರು ಲಂಡನ್ ತಲುಪಿದಾಗ ಸರ್ ವಿಲಿಯಂ ವೆಡರ್ನ್‌ಬರ್ನ್ ದೂರದ ಫ್ರಾನ್ಸ್‌ನಲ್ಲಿನ ವಿಷಿಯಲ್ಲಿದ್ದರು. ಜೂನ್ ಮಧ್ಯಭಾಗದಲ್ಲಿ ಅವರು ಇಂಗ್ಲೆಂಡಿಗೆ

ಮರಳುತ್ತಿದ್ದಂತೆ ಕಾಂಗ್ರೆಸ್ ನಿಯೋಗದ ಎಲ್ಲಾ ಸದಸ್ಯರನ್ನು ಭೇಟಿ ಮಾಡಿದರು. ಅದಕ್ಕೆ ಪೂರ್ವದಲ್ಲಿ ವಿಷಿಯಿಂದಲೇ ಲಜಪತರಿಗೆ ಅವರು ಪತ್ರವೊಂದನ್ನು ಬರೆದು ನಿಯೋಗದ ಇತರ ಸದಸ್ಯರನ್ನು ಬೆಳಿಗ್ಗೆ 11 ಗಂಟೆಗೆ ಭೇಟಿ ಮಾಡುತ್ತೇನೆ. ಆದರೆ ನೀವು ಮಾತ್ರ ಬೆಳಿಗ್ಗೆ 10.15ರ ವೇಳೆಗೆ ಬಂದಿರಬೇಕು. ನಿಮ್ಮೊಂದಿಗೆ 'ಇತರ ಸದಸ್ಯರು ಬರುವುದರೊಳಗೆ ಒಂದಷ್ಟು ಮಾತನಾಡುವುದಿದೆ' ಎಂದು ತಿಳಿಸಿದ್ದರು. ಆ ಸಭೆಯಲ್ಲಿ ಪ್ರಮುಖವಾದ ವಿಷಯ ಲಾರ್ಡ್ ಕ್ರೀವ್ ಅವರ ಭಾರತ ಕಚೇರಿ ವಿಧೇಯಕವಾಗಿತ್ತು. ಸರ್ ವಿಲಿಯಂ ವೆಡರ್ನ್‌ಬರ್ನ್ ಲಜಪತರನ್ನು ತಮ್ಮ ಹಳ್ಳಿ ಮೆರಿಡಿತ್‌ನಲ್ಲಿದ್ದ ಮನೆಗೆ ಒತ್ತಾಯಪೂರ್ವಕವಾಗಿ ಆಮಂತ್ರಣ ನೀಡಿದರು. 'ಪಂಜಾಬಿನ ಅಶಾಂತ ಪರಿಸ್ಥಿತಿ' ಅವರ ನಡುವೆ ನಡೆಯುತ್ತಿದ್ದ ಚರ್ಚೆಯ ವಿಷಯವಾಗಿತ್ತು. ಸರ್ ವಿಲಿಯಂರಿಗೆ ಆ ವಿಷಯದ ಬಗ್ಗೆ ಒಂದು ಲೇಖನ ಬರೆಯುವ ಬಗ್ಗೆ ಸಲಹೆಯನ್ನು ಮಾಡಲಾಗಿತ್ತು. ಆ ಲೇಖನವನ್ನು ಭಾರತ ಕಚೇರಿಗೆ ಸಲ್ಲಿಸಲು ಬಯಸಲಾಗಿತ್ತು. ಬಹುಶಃ ಅದು ಆಗಲಿಲ್ಲವೇನೋ?

ಲಜಪತರಿಗೆ ಬ್ರಿಟಿಷ್ ಕಾರ್ಮಿಕ ಮತ್ತು ಕಾರ್ಮಿಕ ಸಂಘಟನಾ ಚಳವಳಿಯಲ್ಲಿ ಸ್ವಯಂ ಆಸಕ್ತಿ ಮೂಡಿತು. 1914ರ ವೇಳೆಯಲ್ಲೇ ಅವರು ಭಾರತದಲ್ಲಿ ಕಾರ್ಮಿಕ ಚಳವಳಿಯನ್ನು ಸಂಘಟನಾತ್ಮಕವಾಗಿ ಆರಂಭಿಸಲು ಯೋಜಿಸಿದ್ದರು.

ವೆಬ್ಸ್ ಮಿತ್ರರು ಲಜಪತರನ್ನು ಫೇಬಿಯನ್ ಬೇಸಿಗೆ ಶಾಲೆಗೆ ಆಮಂತ್ರಿಸಿದರು. ಇಂಗ್ಲಿಷ್ ಲೇಕ್ ಜಿಲ್ಲೆಯ ಸುಂದರ ವಾತಾವರಣದ ಆ ಅಲ್ಪಕಾಲದ ವಾಸ್ತವ್ಯ ಅವರಿಗೆ ಏಕ ಕಾಲದಲ್ಲಿ 'ಮಾನಸಿಕ ವಿರಾಮ ಹಾಗೂ ವಿಚಾರಗಳ ಗ್ರಹಣ'ವನ್ನು ಒದಗಿಸಿತು. ಆ ಶಾಲೆಯ ಮಧುರವಾದ ನೆನಪನ್ನು ಸ್ಮರಿಸಿಕೊಳ್ಳುತ್ತಾ ಅವರು ತಮ್ಮ ಕೃತಿಯಲ್ಲಿ ಹೀಗೆ ವರ್ಣಿಸಿದ್ದಾರೆ. "ಜುಲೈ ತಿಂಗಳ ಕಡೆಯ ಹತ್ತು ದಿನಗಳು ಇಂಗ್ಲೆಂಡಿನಲ್ಲಿ ಅತಿ ಶ್ರೇಷ್ಠ ಸಮಾಜವಾದಿ ಕಾರ್ಯಕರ್ತರು ಮತ್ತು ವಿಚಾರವಂತರೊಂದಿಗೆ ಆಹ್ಲಾದಕರ ಚಿಂತನೆ, ಮಂಥನದಲ್ಲಿ ಕಳೆದವು. ಅಲ್ಲಿದ್ದ ಮಹಾಮಾನ್ಯರಲ್ಲಿ ಶ್ರೀಮತಿ ಮತ್ತು ಶ್ರೀ ವೆಬ್, ಬರ್ನಾಡ್ ಷಾ, ಕೋಲ್ ಮತ್ತು ಬ್ಯಾಬಿಟ್ ಮುಖ್ಯರು. ಕೋಲ್ ನೇತೃತ್ವದ ಯುವ ಜನರ ಪಕ್ಷ ಬಂಡಾಯ ಧೋರಣೆಯದಾಗಿತ್ತು. ಅವರು ವೆಬ್ಸ್‌ರನ್ನು ಬಹಿರಂಗವಾಗಿ ಟೀಕಿಸುತ್ತಿದ್ದರು. ಅವರ ವಿರುದ್ಧ ಸೈದ್ಧಾಂತಿಕ ದಾಳಿ ನಡೆಸುತ್ತಿದ್ದರು. ನಿಕೃಷ್ಟವಾಗಿ ಮಾತನಾಡುತ್ತಿದ್ದರು. ಹಾಗೆಂದ ಮಾತ್ರಕ್ಕೆ ವೆಬ್‌ಗಳು ತಮ್ಮ ತಾಳ್ಮೆ ಕಳೆದುಕೊಳ್ಳುತ್ತಿರಲಿಲ್ಲ. ಆ ಎಲ್ಲಾ ದಾಳಿ ಟೀಕೆಗಳನ್ನು ಉತ್ತಮ ಮಾನವೀಯ ಗುಣಗಳೊಂದಿಗೆ ಸ್ವೀಕರಿಸಿ ಅಷ್ಟೇ ದಿಟ್ಟ ಧೀಮಂತ ಪ್ರತ್ಯುತ್ತರ ಕೊಡುತ್ತಿದ್ದರು." ಲಜಪತರು ಹವಾಮಾನದ ಬಗ್ಗೆ ಬಹು ಜಾಗೃತರಾಗಿದ್ದರು. ತತ್ಕಾರಣದಿಂದ ವಿದೇಶದಲ್ಲಿ ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಅಧ್ಯಯನ ನಡೆಸುವ ಅವಕಾಶ ಅವರಿಗೆ ತಪ್ಪಿತು. ಈ ಭೇಟಿಯ ಕಾಲದಲ್ಲಿ ಅವರು ಇಂಗ್ಲೆಂಡಿನಲ್ಲಿದ್ದ ಭಾರತೀಯ ವಿದ್ಯಾರ್ಥಿಗಳ ಸಮಸ್ಯೆಗಳತ್ತ ವಿಶೇಷ ಗಮನ ಹರಿಸಿದರು. ಆ ಸಂಬಂಧದಲ್ಲಿ ಭಾರತ ಕಚೇರಿಯ ಟಿ.ಡಬ್ಲ್ಯು. ಅರ್ನಾಲ್ಡ್ ಜೊತೆಯಲ್ಲಿ ಅನೇಕ ಸುತ್ತಿನ ಮಾತುಕತೆ ನಡೆಸಿದರು. ಆ ದಿನಗಳಲ್ಲಿ ವೆಬ್‌ಗಳು 'ನ್ಯೂ ಸ್ಟೇಟ್ಸ್‌ಮನ್' ಪತ್ರಿಕೆಗೆ ಮಾರ್ಗಸೂಚಕರೂ ನಿಯಂತ್ರಕರೂ ಆಗಿದ್ದರು. ಅವರ ಸಲಹೆಯ ಮೇರೆಗೆ ಪತ್ರಿಕೆಯ ಸಂಪಾದಕರು

ಲಜಪತರಿಂದ ಭಾರತೀಯ ವಿಷಯಗಳಿಗೆ ಸಂಬಂಧಪಟ್ಟಂತೆ ಲೇಖನಗಳನ್ನು ಸ್ವೀಕರಿಸಲು ಒಪ್ಪಿಕೊಂಡರು. ಅವರು ಆ ಪತ್ರಿಕೆಗೆ ಕೊಟ್ಟ ಲೇಖನದಲ್ಲಿ 'ಭಾರತೀಯ ವಿದ್ಯಾರ್ಥಿಗಳ ಸಮಸ್ಯೆಗಳು' ಒಂದು. ಆ ಲೇಖನ 15 ವರ್ಷಗಳ ತರುವಾಯವೂ ಯಥೋಚಿತವಾಗಿತ್ತು. ತಮ್ಮ ಜೀವನ ಚರಿತ್ರೆ ಬರೆಯುವ ಕಾಲದಲ್ಲೂ ಅದು ಅನ್ವಯಿಕವಾಗಿತ್ತು. ಆ ಲೇಖನವನ್ನು ಹಾಗೆ ತಮ್ಮ ಕೃತಿಯಲ್ಲಿ ಬಳಸಿಕೊಂಡರು.

* * * *

ತೀರಾ ತೆಕ್ಕೆ ಹಾಕಿಕೊಂಡ ವಿದ್ಯಮಾನ ಕೋಮಘಟ ಮಾರು. ಆ ದಿನಗಳಲ್ಲಿ ಅದು ಪತ್ರಿಕೆಗಳಲ್ಲಿ ಕುತೂಹಲ ಕೆರಳಿಸಿದ ಪ್ರಕರಣ. ಬ್ರಿಟಿಷ್ ಆಡಳಿತದಲ್ಲಿ ಜಹಗೀರು ಪಡೆದುಕೊಂಡ ಪ್ರದೇಶಗಳಲ್ಲಿ ವಿಶೇಷವಾಗಿ ಕೆನಡಾದಲ್ಲಿ ಭಾರತೀಯರಿಗೆ ಎದುರಾದ ಸಮಸ್ಯೆಯೊಂದರ ವಿದ್ಯಮಾನ ಅದು. 1914ರ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಆ ಪ್ರಕರಣ ಜ್ವಲಂತವಾಗಿತ್ತು. ಲಜಪತರು ಲಂಡನ್‌ನಲ್ಲಿದ್ದ ಸಮಯದಲ್ಲಿ ಆ ಪ್ರಕರಣದ ಬಗ್ಗೆ ಪತ್ರಿಕೆಗಳ ಮೂಲಕ ಸಾರ್ವಜನಿಕರ ಗಮನ ಸೆಳೆದರು. ಸಮಸ್ಯೆ ನಿವಾರಣೆಗೆ ಪ್ರಯತ್ನಿಸಿದರು. ನ್ಯೂ ಸ್ಟೇಟ್ಸ್‌ಮನ್ ಜೊತೆಗೆ ಎ.ಜಿ. ಗಾರ್ಡಿನರ್ ಸಂಪಾದಕರಾಗಿದ್ದ ಡೇಲಿ ನ್ಯೂಸ್, ಜೆ.ಎಸ್. ಸ್ಪೆಂಡರ್ ಸಂಪಾದಕತ್ವದ ವೆಸ್ಟ್‌ಮಿನಿಸ್ಟರ್ ಗೆಜೆಟ್ ಪತ್ರಿಕೆಗಳೊಂದಿಗೂ ಅವರ ಅನುಬಂಧವಿತ್ತು.

ಕೋಮಘಟ ಮಾರು ಪ್ರಕರಣದ ಬಗ್ಗೆ ತಮ್ಮ ಜೀವನ ಚರಿತ್ರೆಯಲ್ಲಿ ಅವರು ಹೀಗೆ ಚಿತ್ರಣ ನೀಡಿದ್ದಾರೆ,

''ಈ ಪ್ರಕರಣದ ಕರ್ತೃ ಬಾಬಾ ಗುರುದಿತ್ ಸಿಂಗ್ ಅವರು ಒಂದು ವಿಶೇಷ ಹಡಗನ್ನು ಬಾಡಿಗೆಗೆ ಪಡೆದು ಅದರ ತುಂಬಾ 'ಹಿಂದೂಗಳನ್ನು ತುಂಬಿಕೊಂಡರು.' ಕೆನಡಾ ತೀರಕ್ಕೆ ಕರೆ ತಂದರು. ಭಾರತದಿಂದ ಕೆನಡಾಕ್ಕೆ ನೇರವಾಗಿ ಬರುವ ಹಡಗಿನಲ್ಲಿ ಅವರು ಬಂದಿಲ್ಲವೆಂಬ ಕಾರಣವನ್ನು ಮುಂದು ಮಾಡಿ ಬ್ರಿಟಿಷ್ ಕೊಲಂಬಿಯಾ ವಲಸೆ ನಿಯಮಾವಳಿಗಳ ಪ್ರಕಾರ ಆ ಹಡಗಿನ ಹಿಂದೂಗಳನ್ನು ಇಳಿಸಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು. ನೇರ ಹಡಗಿನಲ್ಲಿ ಅವರನ್ನು ಕರೆತರುವುದು ಸಾಧ್ಯವಿಲ್ಲದ ಮಾತಾಗಿತ್ತು. ಪಶ್ಚಿಮ ಕೆನಡಾಕ್ಕೆ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಅನುಗಾಲದ ಹಡಗುಗಳು ಭಾರತೀಯರನ್ನು ಕರೆದೊಯ್ಯುತ್ತಿರಲಿಲ್ಲ. ಒಂದು ವೇಳೆ ಕರೆದೊಯ್ದರೂ ಆತ ಮತ್ತೆ ತಾನು ಹತ್ತಿದ ಬಂದರಿಗೆ ವಾಪಸಾಗಬೇಕೆಂಬ ಷರತ್ತಿನ ಮೇಲೆ ಕರೆದೊಯ್ಯಲಾಗುತ್ತಿತ್ತು. ಆ ಷರತ್ತು ಅನುಕೂಲಕರವಾಗಿಲ್ಲದಿದ್ದರಿಂದ ಚೀನಾದಲ್ಲಿ ಓರ್ವ ಕಂಟ್ರಾಕ್ಟರ್ ಆಗಿದ್ದ ಪಂಜಾಬಿನ ಬಾಬಾ ಗುರುದಿತ್ ಸಿಂಗ್ ಅತಿ ದುಬಾರಿ ಖರ್ಚಿನಲ್ಲಿ ಪ್ರಚಂಡ ಆತ್ಮವಿಶ್ವಾಸದೊಂದಿಗೆ ಜಪಾನಿ ಹಡಗೊಂದನ್ನು ಬಾಡಿಗೆಗೆ ಪಡೆದು ಸುಮಾರು 500 ಮಂದಿ ಸಿಖ್‌ರನ್ನು ಕೆನಡಾ ತೀರಕ್ಕೆ ಕರೆದು ತಂದಿದ್ದ. ಆ ಸಿಖ್‌ರಿಗೆ ಅಲ್ಲಿ ಇಳಿಯಲು

ಅವಕಾಶ ನಿರಾಕರಿಸಲಾಯಿತು. ಸಮುದ್ರದಲ್ಲಿ ಬಿಗಿ ಪಹರೆ ಹಾಕಿ ಹಡಗಿನಿಂದ ಯಾರೂ ಇಳಿಯದಂತೆ ನೋಡಿಕೊಳ್ಳಲಾಯಿತು. ಆ ಪ್ರಯಾಣಿಕರಲ್ಲಿ ಓರ್ವ ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹೇಬಿಯಸ್ ಕಾರ್ಪಸ್ ರಿಟ್ ಸಲ್ಲಿಸಿದ. ಅದನ್ನು ನಿರಾಕರಿಸಲಾಯಿತು. ಆತ ಸುಪ್ರಿಂಕೋರ್ಟ್‌ಗೆ ಮಾಡಿಕೊಂಡ ಮನವಿಯೂ [illegible]ತು. ಕೊನೆಗೆ ಆ ಹಡಗು ಅಲ್ಲಿಂದ ನಿರ್ಗಮಿಸುವುದು ಅನಿವಾರ್ಯವಾಯಿತು. [illegible]ಗಳಿನಲ್ಲಿ ನಾನು ಇಂಗ್ಲೆಂಡಿಗೆ ತಲುಪಿದ ಮೇಲೆ ಆ ಪ್ರಕರಣದ ಬಗ್ಗೆ ಆಸಕ್ತಿ ವಹಿಸಿದೆ. ಭಾರತದ ಅಧೀನ ಕಾರ್ಯದರ್ಶಿಯನ್ನು ಭೇಟಿ ಮಾಡಿದೆ. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇತರ ವ್ಯಕ್ತಿಗಳನ್ನು ಕಂಡೆ. ಮಧ್ಯ ಪ್ರವೇಶಿಸಿ ಪರಿಹಾರ ದೊರಕಿಸುವಂತೆ ಕೋರಿದೆ. ಪ್ರಮುಖ ಸಂಪಾದಕರನ್ನು ಭೇಟಿ ಮಾಡಿ ನೀತಿಯ ಅಪಾಯಕಾರಿ ಅಂಶವನ್ನು ಎತ್ತಿ ಹಿಡಿದು ಲೇಖನಗಳನ್ನು ಬರೆದೆ.''

ಆ ಕಾಲದಲ್ಲಿ ಪ್ರಮುಖ ರಾಜಕಾರಣಿಯಾಗಿದ್ದ ಹೆನ್ರಿ ಬೌರಾಸ ಅವರನ್ನು ಸಹ ಲಜಪತರು ಭೇಟಿ ಮಾಡಿದರು.

''ಕೆನಡಾ ಸಂಸತ್ತಿನ ಫ್ರೆಂಚ್ ಕೆನಡಿಯನ್ ಲಿಬರಲ್‌ಗಳ ನಾಯಕರಾಗಿದ್ದವರು ಹೆನ್ರಿ ಬೌರಾಸ. ಅವರು ಶ್ರೇಷ್ಠ ಸಂಸ್ಕೃತವಂತರಾಗಿದ್ದವರು. ಅಧಿಕಾರಸ್ಥರಾಗಿದ್ದರು. ಪ್ರಭಾವಿ ರಾಜಕಾರಣಿಯಾಗಿದ್ದರು. ಮ್ಯಾಂಟ್ರಿಯಲ್‌ನಲ್ಲಿ ದಿನ ಪತ್ರಿಕೆಯೊಂದರ ಸಂಪಾದಕರಾಗಿದ್ದರು. ಅವರು ನನ್ನನ್ನು ಭೇಟಿ ಮಾಡಲು ಬಯಸುತ್ತಿದ್ದರು. ಈ ಬಗ್ಗೆ ಚಾರ್ಲ್ಸ್ ರಾಬರ್ಟ್ಸ್ ಚಿಂತನೆಗಿಂತ ಅವರ ನಿಲುವು ತೀರಾ ಭಿನ್ನವಾಗಿತ್ತು. ಲಂಡನ್‌ನಲ್ಲಿ ಅವರೊಂದಿಗೆ ನಾನು ಸುದೀರ್ಘ ಮಾತುಕತೆ ನಡೆಸಿದೆ. ಮತ್ತೊಮ್ಮೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಬ್ರಿಟಿಷ್ ಜಹಗಿರಿ ತಾಳಿದ್ದ ಏಷ್ಯಾ ವಿರೋಧಿ ನೀತಿಯನ್ನು ಅವರು ಕಟುವಾಗಿ ಖಂಡಿಸಿದರು. ಇಡೀ ಜಗತ್ತಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬರಬೇಕೆಂಬ ಅಪಾರ ಆಕಾಂಕ್ಷೆ ಅವರದಾಗಿತ್ತು. ಕೆನಡಾದಲ್ಲಿದ್ದ ಭಾರತೀಯರ ಬಗ್ಗೆ ಅವರಲ್ಲಿ ವಿಶೇಷ ಗೌರವವಿತ್ತು. ಅವರನ್ನು ಭೇಟಿ ಮಾಡುವುದೇ ಒಂದು ಹರ್ಷದ ಸಂಗತಿಯಾಗಿತ್ತು. ಆದರೇನು? ಆ ಕ್ಷಣದಲ್ಲಿ ನಾನು ಯಾವ ವಿಷಯದಲ್ಲಿ ಹೆಚ್ಚು ಆಸಕ್ತಿ ತಾಳಿದ್ದೆನೋ ಆ ವಿಷಯದಲ್ಲಿ ಅವರು ಯಾವುದೇ ಪರಿಹಾರದ ಭರವಸೆ ನೀಡಲಿಲ್ಲ.''

ಬ್ರಿಟಿಷ್ ಸಾಮ್ರಾಜ್ಯಷಾಹಿತನಕ್ಕೆ ಬಲಿಯಾದ ಕೋಮುಘಾಟ ಮಾರು ಸಂತ್ರಸ್ತರಿಗೆ ಪರಿಹಾರ ಕಲ್ಪಿಸಲು ಮಾಡಿದ ಎಲ್ಲಾ ಪ್ರಯತ್ನಗಳು ವ್ಯರ್ಥವಾದವು. ತಿರಸ್ಕೃತಗೊಂಡ ವಲಸೆಗಾರರು ಸ್ವದೇಶಕ್ಕೆ ಮರಳಿದರು. ಕಲ್ಕತ್ತಾ ಬಳಿಯ ಬಜ್ ಬಜ್ ತೀರಾದಲ್ಲಿ ಅವರು ಬಂದಿಳಿದಾಗ ಡಂ ಡಂ ಬುಲೆಟ್‌ಗಳನ್ನು ಸಿಡಿಸಿ ಅವರನ್ನು ಸ್ವಾಗತಿಸಲಾಯಿತು.

* * *

ಅಧ್ಯಾಯ-38

ನಿಯೋಗದ ಸದಸ್ಯರೊಂದಿಗೆ ಭಿನ್ನಮತ

ಭಾರತದಿಂದ ಹೊರಟಾಗ ಲಜಪತರು ಆರು ತಿಂಗಳ ಪ್ರವಾಸಕ್ಕೆ ನಿಯೋಜಿಸಿಕೊಂಡಿದ್ದರು. ಅವರು ಇಂಗ್ಲೆಂಡಿಗೆ ಬಂದು ಸುಮಾರು ಹತ್ತು ವಾರಗಳು ಆಗಿದ್ದವು. ಕಾಂಗ್ರೆಸ್ ನಿಯೋಗ ಬಂದಿದ್ದ ಅಧಿಕೃತ ಕಲಾಪ ಹೆಚ್ಚು ಕಡಿಮೆ ಮುಗಿದು ಹೋಗಿತ್ತು. ಲಜಪತರು ಐರೋಪ್ಯ ಪ್ರವಾಸಕ್ಕೆ ಯೋಜಿಸಿಕೊಂಡರು. ಐರೋಪ್ಯ ಪ್ರವಾಸ ಎಂದರೆ ಫ್ರಾನ್ಸ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯ ಒಳಗೊಂಡು ಬಾಲ್ಕನ್ಸ್‌ನೊಂದಿಗೆ ಮುಕ್ತಾಯವಾಗಿ, ಟರ್ಕಿ ಮತ್ತು ಅಲ್ಲಿಂದ ಈಜಿಪ್ಟ್ ಮಾರ್ಗವಾಗಿ ತಾಯ್ನಾಡಿಗೆ ಮರಳುವುದೆಂದು ಅವರ ಅಂದಾಜಾಗಿತ್ತು. ತಾವು ಭೇಟಿ ಕೊಡುವ ಎಲ್ಲಾ ದೇಶಗಳಲ್ಲೂ ಪ್ರಮುಖ ನಾಯಕರೊಂದಿಗೆ ಪರಿಚಯ ಮಾಡಿಕೊಳ್ಳಲು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಈ ವಿಷಯದಲ್ಲಿ ಲಜಪತರಿಗೆ ವಿಶೇಷವಾಗಿ ವೆಬ್ ಪೂರ್ಣ ಸಹಾಯ ನೀಡಿದ್ದರು. ಜುಲೈ ಅಂತ್ಯದಲ್ಲಿ ಫೇಬಿಯನ್ ಬೇಸಿಗೆ ಶಾಲೆಗೆ ಭೇಟಿ ಕೊಡುವ ಸಮಯದಲ್ಲೇ ಅವರು ತಮ್ಮ ಯೋಜಿತ ಪ್ರವಾಸದ ಎಲ್ಲಾ ಸಿದ್ಧತೆಗಳನ್ನು ಮಾಡಿ ಮುಗಿಸಿದ್ದರು. ಶಾಲೆ ಮುಗಿದ ನಂತರ ಇಂಗ್ಲೆಂಡಿನಿಂದ ಹೊರಡುವವರಾಗಿದ್ದರು. ಆದರೆ ಲೇಕ್ಸ್‌ಗೆ ವಿದಾಯ ಹೇಳುವ ಮೊದಲೇ ಹರ್‌ಜೆವೊ ಹತ್ಯೆಯ ಸುದ್ದಿ ಮುಟ್ಟಿತು. ಇದರ ಪರಿಣಾಮವಾಗಿ ಜಾಗತಿಕ ಸಂಘರ್ಷದ ಸುಳಿವು ಹೊರಬಿದ್ದಿತು.

ಜುಲೈ 31ರಂದು ಲಜಪತರು ಲಂಡನ್‌ಗೆ ಮರಳಿದರು. ಪರಿಸ್ಥಿತಿ ಉದ್ರಿಕ್ತವಾಗಿತ್ತು. ಸದ್ಯದಲ್ಲೇ ಸಂಭವಿಸಲಿರುವ ಅನಾಹುತದ ಸೂಚನೆ ಸ್ಪಷ್ಟವಾಗಿತ್ತು. ವಿನಾಶಕಾಲದ ಸಮಯದಲ್ಲಿ ಸಂಭವಿಸುವ ಅವಲಕ್ಷಣಗಳು ಆ ಸಮಯದಲ್ಲಿ ಪ್ರಕಟಗೊಳ್ಳುವಂತ್ತಿತ್ತು. ಮುಂದೆ ಆಗಲಿರುವ ಪರಿಣಾಮಗಳ ಬಗ್ಗೆ ತಿಳಿದುಕೊಳ್ಳುವತನಕ ಪ್ರವಾಸ ಕೈಗೊಳ್ಳುವುದು ಬೇಡವೆಂದು ಪ್ರವಾಸಿ ಸಂಸ್ಥೆ ಲಜಪತರಿಗೆ ಸಲಹೆ ಮಾಡಿತು. ಮರುದಿನವೇ ಆಸ್ಟ್ರೀಯ ಮತ್ತು ಜರ್ಮನಿಗಳು ಯುದ್ಧವನ್ನು ಘೋಷಿಸಿದವು. ಫ್ರಾನ್ಸ್ ಪರವಾಗಿ ಹೋರಾಟಕ್ಕೆ ಇಳಿಯಲು ಬ್ರಿಟಿಷ್ ಸರ್ಕಾರ ನಿರ್ಧರಿಸಿದ್ದು, ಬ್ರಿಟನ್‌ನಲ್ಲಿದ್ದ ಭಾರತೀಯರಿಗೆ ಗಹನವಾದ ವಿಷಯವಾಯಿತು. ಲಜಪತರು ಆ ಸಮಯದಲ್ಲಿ ತೋರಿದ ವ್ಯವಹಾರ ಜ್ಞಾನ ಬ್ರಿಟನ್‌ನಲ್ಲಿದ್ದ ಭಾರತೀಯರ ಹುಮ್ಮಸ್ಸು, ಉತ್ಸಾಹ, ವಾದ ವಿವಾದ, ಬೇಕು ಬೇಡಗಳಿಗೆ ಸ್ಪಷ್ಟವಾದ ದಿಗ್ದರ್ಶನ ನೀಡಿತು. ಆ ದಿನಗಳ ಪರಿಸ್ಥಿತಿಯನ್ನು ನಿಭಾಯಿಸಿದ ಬಗ್ಗೆ ಲಜಪತರು ತಮ್ಮ ಜೀವನ ಚರಿತ್ರೆಯಲ್ಲಿ ಸ್ಪಷ್ಟವಾಗಿ ಬರೆದಿಟ್ಟಿದ್ದಾರೆ.

ಸಚಿವ ಸಂಪುಟ ನಿರ್ಧಾರ ಕೈಗೊಂಡ 24 ತಾಸುಗಳ ಒಳಗೆ ನ್ಯಾಷನಲ್ ಲಿಬರಲ್ ಕ್ಲಬ್‌ನ ಧೂಮಪಾನ ಕೊಠಡಿಯಲ್ಲಿ ಸಮಾವೇಶಗೊಂಡಿದ್ದ ಅನೇಕ

ಭಾರತೀಯರನ್ನು ನಾನು ಭೇಟಿ ಮಾಡಿದೆ. ಯುದ್ಧದ ಮಾತುಕತೆ ಉತ್ಸವದ ಆಚರಣೆಯೋ ಎನ್ನುವಷ್ಟು ಹುರುಪಿನಿಂದ ಚರ್ಚೆ ನಡೆಯುತ್ತಿತ್ತು. ಆ ಸಮೂಹದಲ್ಲಿ ಭಾರತೀಯ ಹಿಂದೂಗಳು ಹಾಗೂ ಮುಸ್ಲಿಂ ಸಮುದಾಯಗಳ ಉನ್ನತ ಮಟ್ಟದ ಕೆಲವರು ಇದ್ದರು. ಅವರ ಹರ್ಷೋತ್ಸಾಹಗಳ ಬಗ್ಗೆ ಜಿನ್ನಾ ಟೀಕೆ ಮಾಡಿ ಸಮಯೋಚಿತ ನಡವಳಿಕೆಯಲ್ಲ ಎಂದಾಗ ಸಮುದಾಯದ ವರ್ತನೆಯಲ್ಲಿ ಸ್ವಲ್ಪ ಗಲಿಬಿಲಿ ಕಂಡಿತು. ಆ ಕ್ಲಬ್‌ನ ಇಂಗ್ಲಿಷ್ ಸದಸ್ಯರು ಚಿಂತಾಕ್ರಾಂತರಾದರು. ಮುಂದಿನ ಬೆಳವಣಿಗೆಯ ಬಗ್ಗೆ ಗಂಭೀರರೂ ಆಗಿರುವ ಹಿನ್ನಲೆಯಲ್ಲಿ ಅಂತಹ ನಡವಳಿಕೆ ಸಲ್ಲದೆಂದೂ ಜಿನ್ನಾ ಹೇಳಿದರು. ಮುಂದಿನ 24 ತಾಸುಗಳಲ್ಲಿ ಪರಿಸ್ಥಿತಿ ಮಾರ್ಪಾಟುಗೊಂಡಿತು. ಕ್ಲಬ್‌ನಲ್ಲಿದ್ದ ವ್ಯಕ್ತಿಗಳು ಸೇರಿದಂತೆ ಎಲ್ಲಾ ಭಾರತೀಯ ಪ್ರಮುಖರು ಚಕ್ರಾಧಿಪತ್ಯಕ್ಕೆ ನಿಷ್ಠೆ, ವಿಧೇಯತೆ ವ್ಯಕ್ತಪಡಿಸುವಲ್ಲಿ ಒಬ್ಬರಿಗಿಂತ ಒಬ್ಬರು ಪೈಪೋಟಿ ನಡೆಸತೊಡಗಿದರು. ಯಾರು ಮೊದಲು ನಿಷ್ಠೆ ಮತ್ತು ಶ್ರದ್ಧೆ ಸಲ್ಲಿಸಿದರೆಂದು ದಾಖಲು ಮಾಡಲು ಹಾತೊರೆದರು. ಅತ್ತ ಕಾಂಗ್ರೆಸ್ ನಿಯೋಗದ ಸದಸ್ಯರಲ್ಲಿ ಪರಸ್ಪರ ಭಿನ್ನಾಭಿಪ್ರಾಯ ತಲೆದೋರಿತು.

ಆ ಪ್ರಸಂಗದಲ್ಲಿ ಒಂದು ದಿನ ನಾನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಬ್ರಿಟಿಷ್ ಸಮಿತಿ ಕೊಠಡಿಯೊಂದಕ್ಕೆ ಹೋದೆ. ಕಾಂಗ್ರೆಸ್ ನಿಯೋಗದ ಸದಸ್ಯರ ಪೈಕಿ ನನ್ನ ಇಬ್ಬರು ಸಹವರ್ತಿಗಳು ಅಲ್ಲಿ ನನಗೆ ಕಂಡರು. ಕಾಂಗ್ರೆಸ್ ಪರವಾಗಿ ಚಕ್ರಾಧಿಪತ್ಯಕ್ಕೆ ನಿಷ್ಠೆ ವ್ಯಕ್ತಪಡಿಸಿ ಹೇಳಿಕೆ ನೀಡುವ ಬಗ್ಗೆ ಚರ್ಚೆ ನಡೆದಿತ್ತು. ಅವರು ಉನ್ನತ ದರ್ಜೆಯ ಬ್ರಿಟಿಷ್ ರಾಜಕಾರಣಿಗಳನ್ನು ಭೇಟಿ ಮಾಡಿದ್ದರು. ಯಾವುದೇ ಕಾಲ ವಿಳಂಬ ಮಾಡದೆ ನಿಷ್ಠೆ, ಬೆಂಬಲದ ಹೇಳಿಕೆಯನ್ನು ಪ್ರಕಟಿಸುವಂತೆ ಅವರು ನಿಯೋಗದ ಸದಸ್ಯರಿಗೆ ಸಲಹೆ ಮಾಡಿದರು. ಅದಕ್ಕೆ ಅನುಗುಣವಾಗಿ ಅಲ್ಲೇ ಆ ಕ್ಷಣದಲ್ಲೇ ಹೇಳಿಕೆ ನೀಡಲು ಆ ಇಬ್ಬರು ಸದಸ್ಯರು ಸಿದ್ಧತೆ ನಡೆಸಿದ್ದರು. ನಾನು ಅಲ್ಲಿಗೆ ಹೋದಾಗ ಅವರಿಗೆ ಸಂತೋಷವಾಯಿತು. ಹೇಳಿಕೆಗೆ ತಮ್ಮ ಮೂವರ ಜೊತೆಗೆ ಉಳಿದವರ ಅಂಕಿತವೂ ಪ್ರಾಪ್ತವಾಗುತ್ತದೆ ಎಂದು ಅವರು ಲೆಕ್ಕ ಹಾಕಿದ್ದರು. ನನ್ನಿಂದ ಅಷ್ಟು ಸುಲಭದಲ್ಲಿ ಅವರ ಆಶಯ ಈಡೇರುತ್ತದೆ ಎಂದು ಅವರು ಅಂದು ಕೊಂಡೂ ಇರಲಿಲ್ಲ. ಅದು ನಿಜವೂ ಆಯಿತು. ನಾನು ಅವರ ನಿಲುವನ್ನು ಆಕ್ಷೇಪಿಸಿದೆ. ಅದಕ್ಕೆ ವಿವಿಧ ಕಾರಣಗಳನ್ನು ಕೊಟ್ಟೆ:

1. ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳಲು ವಿಧ್ಯುಕ್ತವಾಗಿ ನಿಯೋಗದ ಸಭೆ ಕರೆದಿಲ್ಲ.

2. ನಿಯೋಗವು ತನ್ನ ಕಾರ್ಯವನ್ನು ಮುಗಿಸಿರುವುದರಿಂದ ಪ್ರತಿನಿಧಿಗಳು ಈಗ ಅಧಿಕೃತ ಅರ್ಹತೆಯನ್ನು ಕಳೆದುಕೊಂಡಿದ್ದಾರೆ. ವಿಧೇಯಕ ವಿಧ್ಯುಕ್ತವಾಗಿ ತಿರಸ್ಕೃತವಾದ ನಂತರ ಸದಸ್ಯರೆಲ್ಲರು ನಿಯೋಗದಿಂದ ವಿಸರ್ಜಿತರಾಗಿದ್ದಾರೆ.

3 ಮಾತೃಭೂಮಿಯಲ್ಲಿರುವ ಭಾರತೀಯ ನಾಯಕರು ತಮ್ಮ ನಿಲುವನ್ನು ಪ್ರಕಟಿಸಿಲ್ಲ. ಮತ್ತು ನಮಗೆ ಯಾವುದೇ ಸೂಚನೆಯನ್ನು ಕೊಟ್ಟಿಲ್ಲ

ನನ್ನ ವಿರೋಧದಿಂದ ನನ್ನ ಆ ಸಹವರ್ತಿಗಳಿಗೆ ಕಡು ಕೋಪ ಬಂದಿತು. ಆ ಪೈಕಿ ಓರ್ವರಾದ ಸಮರ್ಥ್ ನನ್ನನ್ನು ಹೀಗೆಳೆದರು. ನಮ್ಮಿಬ್ಬರ ನಡುವೆ ಬಿಸಿ ಬಿಸಿ ವಾಗ್ವಾದವಾಯಿತು. ಆ ಸಮಯದಲ್ಲಿ ಮತ್ತೋರ್ವ ಸದಸ್ಯ ಎಂ.ಎ. ಜಿನ್ನಾ ನ್ಯಾಷನಲ್ ಲಿಬರಲ್ ಕ್ಲಬ್‌ನಲ್ಲಿದ್ದಾರೆಂದು ಪತ್ತೆ ಹಚ್ಚಲಾಯಿತು. ಅವರನ್ನು ಕರೆಯಿಸಿಕೊಳ್ಳಲು ನಿರ್ಧರಿಸಲಾಯಿತು. ಜಿನ್ನಾ ವಿಷಯ ತಿಳಿಯುತ್ತಿದ್ದಂತೆಯೇ ಧಾವಿಸಿ ಬಂದರು. ಅವರು ನನ್ನ ನಿಲುವನ್ನೇ ಪ್ರತಿಪಾದಿಸಿದರು. ಹೀಗಾಗಿ ಆ ವಿಷಯವನ್ನು ಮುಂದಕ್ಕೆ ಹಾಕಲಾಯಿತು. ಮರುದಿನ ಬೆಳಿಗ್ಗೆ ವಿಧ್ಯುಕ್ತವಾಗಿ ಸಭೆ ಸೇರಲು ನಿರ್ಧರಿಸಿ ಆ ದಿನ ಹಾಜರಿರದಿದ್ದ ಸದಸ್ಯರಿಗೆ ಸೂಚನೆಯನ್ನು ಕಳುಹಿಸಲಾಯಿತು. ವಿಧ್ಯುಕ್ತ ಸಭೆ ಮರುದಿನ ಬೆಳಿಗ್ಗೆ ನಡೆಯಿತು. ಯಾವುದೇ ಅವಸರಕ್ಕೆ ಅಗತ್ಯವಿಲ್ಲವೆಂದು ಸೂಚನೆ ಭಾರತದಿಂದ ಬರುವತನಕ ಕಾಯಬೇಕೆಂದು ಸಭೆ ಬಹುಮತದಿಂದ ನಿರ್ಧರಿಸಿತು.

ಈ ಮಧ್ಯೆ ಲಂಡನ್‌ನಲ್ಲಿದ್ದ ಪ್ರಮುಖ ಭಾರತೀಯರೆಲ್ಲರಿಂದಲೂ ಅಂಕಿತ ಹಾಕಿದ ಸಾಮಾನ್ಯ ಘೋಷಣೆಯೊಂದನ್ನು ಹೊರಡಿಸಲು ಇತರ ಭಾರತೀಯರು ಉದ್ಯುಕ್ತರಾಗಿದ್ದರು. ಆ ಪ್ರಸ್ತಾವದ ಪ್ರಮುಖ ಸಂಯೋಜಕರು ಸರ್ ಎ. ಭಾವನಾಗ್ರೀ ಮತ್ತು ಪಂಡಿತ್ ಭಗವಾನ್ ದಿನ್ ದುಬೆ. ಇತ್ತ ಕಾಂಗ್ರೆಸ್ ನಿಯೋಗದಲ್ಲಿ ಸೋಲನ್ನು ಅನುಭವಿಸಿದ ಪ್ರತಿನಿಧಿಗಳು ತಮ್ಮ ಮನವಿಯನ್ನು ಸರ್ ವಿಲಿಯಂ ವೆಡರ್ನ್‌ಬರ್ನ್ ಬಳಿಗೆ ಕೊಂಡೊಯ್ದರು. ಆಗ ಅವರು ತಮ್ಮ ಮೆಡರಿತ್ ಗ್ರಾಮದಲ್ಲಿದ್ದರು. ಅವರು ಹಾಕಿಕೊಟ್ಟ ಕರಡೊಂದನ್ನು ಆ ಇಬ್ಬರು ಸದಸ್ಯರು ತೆಗೆದುಕೊಂಡು ಬಂದರು.

ಆ ಹೇಳಿಕೆಯ ಪ್ರಥಮ ಸುದ್ದಿ ನನಗೆ ಟೈಮ್ಸ್ ಪತ್ರಿಕೆಯಿಂದ ತಿಳಿದು ಬಂದಿತು. ಪ್ರಕಟಗೊಂಡಿದ್ದ ಹೇಳಿಕೆಯಲ್ಲಿ ನಾನೂ ಸೇರಿದಂತೆ ನಿಯೋಗದ ಎಲ್ಲಾ ಸದಸ್ಯರು ಅಂಕಿತ ಹಾಕಿರುವುದಾಗಿ ವರದಿ ಮಾಡಲಾಗಿತ್ತು. ಸರ್ ವಿಲಿಯಂ ವೆಡರ್ನ್‌ಬರ್ನ್ ಹಾಕಿ ಕೊಟ್ಟ ಕರಡು ಹೇಳಿಕೆಗೆ ನನ್ನ ಸಮ್ಮತಿಯೂ ಇದೆ ಎಂದು ಭಾವಿಸಿ ಯಾರೋ ಅದಕ್ಕೆ ನನ್ನ ಅಂಕಿತವನ್ನು ಸೇರಿಸಿದ್ದಂತೆ ಭಾಸವಾಗುತ್ತಿತ್ತು. ಆ ಹೇಳಿಕೆಗೆ ದೇಶದ ಹಿತದಿಂದಲೂ ನನ್ನ ವೈಯಕ್ತಿಕ ಹಿತದಿಂದಲೂ ನನ್ನ ಸಹಿ ಅತ್ಯವಶ್ಯಕವೆಂದು ಪರಿಗಣಿಸಿದಂತಿತ್ತು.

ಆಗಸ್ಟ್ 7ರಂದು ಹ್ಯಾಮ್‌ಸ್ಟಡ್‌ನಲ್ಲಿದ್ದ ಪಂಡಿತ್ ಭಗವಾನ್ ದುಬೆ ಅವರಿಂದ ನನಗೊಂದು ತಂತಿ ಸಂದೇಶ ಬಂದಿತು.-

'ಕಾಂಗ್ರೆಸ್ ನಿಯೋಗದ ಸದಸ್ಯರೂ ಸೇರಿದಂತೆ ಹಿರಿಯ ಭಾರತೀಯರು ಅಂಕಿತ ಹಾಕಿ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸುವ ಪತ್ರವೊಂದನ್ನು ಲಾರ್ಡ್ ಕ್ರೀವ್ ಅವರಿಗೆ ಸಲ್ಲಿಸಲಿದ್ದೇವೆ. ಅಂಕಿತ ಹಾಕಲು ನೀವು ಬಯಸುವಿರಾದರೆ ನಂ.3 ಮಿಡಲ್ ಟೆಂಪಲ್ ಲೇನ್, ಈ ಸ್ಥಳಕ್ಕೆ ಬನ್ನಿ.' ಎಂದು ಆ ತಂತಿ ಸಂದೇಶದಲ್ಲಿ ತಿಳಿಸಲಾಗಿತ್ತು.

ಮುಂದೆ ನಡೆದದ್ದನ್ನು ಲಜಪತರ ಲೆಕ್ಕಣಿಕೆಯಿಂದಲೇ ಓದೋಣ.

"ವೇಳೆಕೆಗೆ ಸರಿ ಹಾಕಲು ನಾನು ಪಂಡಿತ ಮದನ ಅವರ ಕೊಠಡಿಗೆ ಹೋಗಲಿಲ್ಲ ಅವರೂ ಒಂದೆರಡು ದಿನಗಳ ನಂತರ ನ್ಯಾಷನಲ್ ಲಿಬರಲ್ ಕ್ಲಬ್‌ನಲ್ಲಿ ನಾನು ಅವಕ್ಕೆ ಅಂಕಿತ ಹಾಕಿದ ಬಹುಶಃ ನನ್ನದೇ ಕಡೆಯ ಸಹಿ. ಹೀಗಾಗಿ ಚಕ್ರಾಧಿಪತ್ಯದ ಒಳಿತಿಗಾಗಿ ಯುದ್ಧದಲ್ಲಿ ನಿಷ್ಠೆ ಸಹಕಾರವನ್ನು ವ್ಯಕ್ತಪಡಿಸುವ ರೀತಿಯೊಂದಕ್ಕೆ ನಾನು ನಿಶ್ಚಿತವಾಗಿಯೂ ಬದ್ಧವಾದಂತಾಯಿತು. ಭಾರತದಿಂದ ಬಂದ ಸುದ್ದಿ ಇನ್ನೂ ಅಚ್ಚರಿಯಾಗಿತ್ತು. ಬಹುತೇಕ ಎಲ್ಲಾ ರಾಷ್ಟ್ರೀಯ ನಾಯಕರು ಚಕ್ರಾಧಿಪತ್ಯಕ್ಕೆ ನಿಷ್ಠೆ ಮತ್ತು ಶ್ರದ್ಧೆ ಘೋಷಿಸಿದ್ದರು. ಯುದ್ಧದಲ್ಲಿ ಬಳಸಿಕೊಳ್ಳುವ ಭಾರತೀಯ ತುಕಡಿಯ ಎಲ್ಲಾ ಖರ್ಚು ವೆಚ್ಚಗಳನ್ನು ಭಾರತದ ಖಜಾನೆಯಿಂದಲೇ ಭರಿಸಬೇಕೆನ್ನುವ ಸರ್ವಾನುಮತದ ನಿರ್ಣಯವೊಂದನ್ನು ವೈಸ್‌ರಾಯ್ ಅವರ ಶಾಸನ ಪರಿಷತ್ತು ಕೈಗೊಂಡಿತು. ಬ್ರಿಟಿಷ್ ಸಾರ್ವಜನಿಕರಲ್ಲಿ, ಸಂಸತ್ತಿನಲ್ಲಿ ಮತ್ತು ಪತ್ರಿಕೆಗಳಲ್ಲಿ ಭಾರತ ಮತ್ತು ಭಾರತೀಯರ ನಿಷ್ಠೆಯದೇ ಆ ದಿನಗಳ ಆಗುಹೋಗು ಆಯಿತು. ಸೆಪ್ಟೆಂಬರ್ 10ರಂದು ದಿ ಟೈಮ್ಸ್‌ನಲ್ಲಿ ಸರ್ ವ್ಯಾಲಂಟೀನ್ ಚಿರೋಲ್ ಬರೆದ ಪತ್ರವೊಂದು ಪ್ರಕಟಗೊಂಡಿತು. ಭಾರತದ ಶಿಕ್ಷಿತ ನಾಯಕರು ಅಲ್ಲಿನ ಮಹಾ ಮಾನ್ಯರು ಮತ್ತು ಜನಸಾಮಾನ್ಯರ ಮೇಲೆ ನಿಜವಾದ ಪ್ರಭಾವ ಹೊಂದಿಲ್ಲವೆಂಬುದನ್ನು ಯುದ್ಧ ರುಜುವಾತುಪಡಿಸಿದೆ. ಜೊತೆಗೆ ಬ್ರಿಟಿಷ್ ರಾಜ್ ಕಣ್ಮರೆಯಾಗುವುದನ್ನು ಅವರು ಒಪ್ಪುತ್ತಿಲ್ಲವೆಂಬುದನ್ನು ಸಹ ಎತ್ತಿ ತೋರಿಸುತ್ತಿದೆ ಎಂದು ಅವರು ಆ ಪತ್ರದಲ್ಲಿ ವಿಶ್ಲೇಷಿಸಿದರು. ಅದೇ ಸಂಚಿಕೆಯಲ್ಲಿ ಬಾಬು ಭೂಪೇಂದ್ರನಾಥ ಬಸು ಅಂಕಿತವಿದ್ದ ಲೇಖನವೊಂದು ಸಹ ಪ್ರಕಟಗೊಂಡಿತು. ಇಂಗ್ಲೆಂಡಿನಾದ್ಯಂತ ಸಂಭ್ರಮವೋ ಸಂಭ್ರಮ. ಭಾರತದ ನಿಲುವನ್ನು ಸ್ವಯಂ ಘೋಷಿತ, ಸ್ವಯಂ ಪ್ರೇರಿತ, ಉತ್ಸಾಹಭರಿತ, ಸಾರ್ವತ್ರಿಕ ಎಂದೆಲ್ಲಾ ವರ್ಣಿಸಲಾಯಿತು. ಬ್ರಿಟಿಷ್ ಆಡಳಿತ ಒದಗಿಸುತ್ತಿರುವ ತನ್ನ ಜನ್ಮಸಿದ್ಧ, ನ್ಯಾಯಬದ್ಧ ಆಳ್ವಿಕೆಯ ಫಲ ಇದೆಂದೂ ಮುಕ್ತವಾಗಿ ವಾದಿಸಲಾಯಿತು.

"ಸರ್ ಫಿರೋಜ್ ಷಹ ಮೆಹ್ತಾ ಮುಂಬಯಿಯಲ್ಲಿ ಮಾಡಿದ ಭಾಷಣವೊಂದನ್ನು ಬ್ರಿಟಿಷ್ ಪತ್ರಿಕೆಗಳು ವ್ಯಾಪಕವಾಗಿ ವರದಿ ಮಾಡಿದವು. ಡೈಲಿ ಮೇಲ್ ಪತ್ರಿಕೆಯು '*A Day Worth Living For*' ಶೀರ್ಷಿಕೆಯಲ್ಲಿ ಅಗ್ರಲೇಖನ ಪ್ರಕಟಿಸಿತು. ಆ ಎಲ್ಲಾ ಬೆಳವಣಿಗೆಗಳು ನನ್ನಂತಹವರಿಗೆ ತೀರಾ ನೋವುಂಟು ಮಾಡಿದವು ಅಪಮಾನಕರವೆನಿಸತೊಡಗಿತು. ಮಾಳಿಗೆಯ ಮೇಲೆ ನಿಂತು ಭಾರತದಲ್ಲಿ ಬ್ರಿಟಿಷ್ ಆಡಳಿತ ನ್ಯಾಯ ಸಮ್ಮತವಾಗಿಲ್ಲ, ಸಹಜ ಸ್ವಾಭಾವಿಕವಾಗಿಲ್ಲ, ಹಕ್ಕು ಬಾಧ್ಯತೆ ಹೊಂದಿಲ್ಲವೆಂತಲೂ 'ದೋಚು ರೀತಿಯಿಂದಾಗಿ ಭಾರತ ಆರ್ಥಿಕವಾಗಿ ಬಳಲುತ್ತಿದೆ' ಎಂತಲೂ ಹೇಳುತ್ತಿದ್ದ ನಮಗೆ ಅದರಿಂದ ಸಹಿಸಲು ಅಸಾಧ್ಯವಾದ ಆಘಾತವಾಯಿತು. ಬ್ರಿಟಿಷ್ ಆಡಳಿತಕ್ಕೆ ವಿರುದ್ಧವಾಗಿ ನಾವು ಕೊಡುತ್ತಿದ್ದ ಹೇಳಿಕೆಗಳಿಗೆ ಸಂಪೂರ್ಣ ಉತ್ತರವೋ ಎನ್ನುವಂತೆ ನಿಷ್ಠೆಯ 'ಮಹಾಪೂರ'ವನ್ನು ನಮ್ಮ ಮುಖಗಳ ಮೇಲೆ ಎರಚಲಾಯಿತು. ನಾನು ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ 'ಭಾರತ ಮತ್ತು ಯುದ್ಧ' ಕುರಿತು ಲೇಖನವೊಂದನ್ನು ಬರೆಯಲು ವೆಬ್ ಅವರ ಅನುಮತಿ ಕೇಳಿದೆ. ಸಹಜವಾಗಿ ಅವರು ಆ ಲೇಖನವನ್ನು ತಾವು ನೋಡಬೇಕೆಂದು ಹೇಳಿದರು. ಲೇಖನ ಸಂಪಾದಕರ ಕೈ ಸೇರಿತು. ಅದನ್ನು

ಅವರು ಪ್ರಕಟಿಸಲು ನಿರಾಕರಿಸಿದರು. ಇಂಗ್ಲೆಂಡಿನ ಬಗ್ಗೆ ಶತೃತ್ವ ಮತ್ತು ನಿಷ್ಠಾಹೀನ ಭಾವನೆಗಳನ್ನು ಆ ಲೇಖನ ಬಿತ್ತರಿಸುತ್ತದೆ ಎಂದು ಕಾರಣ ಕೊಡಲಾಯಿತು.''

ಲಜಪತರು ಮರಳಿ ಯತ್ನ ಮಾಡಿದರು. ವೆಬ್ಸ್ ಅವರು ಸಂಪಾದಕರನ್ನು ತರಾಟೆಗೆ ತೆಗೆದುಕೊಂಡರು. ಲೇಖನ ಸ್ವೀಕೃತವಾಯಿತು. ಅದು ಲಜಪತರ ನಿಜನಾಮದಲ್ಲಿ ಪ್ರಕಟವಾಗಲಿಲ್ಲ. ಲೇಖನದ ಕೆಳಗೆ 'ಬಲ್ಲವ' ಎಂದಷ್ಟೇ ಸಂಕೇತಿಸಲಾಗಿತ್ತು. ಸರ್ ವಿಲಿಯಂ ವೆಡರ್ನ್‌ಬರ್ನ್ ಅವರಿಗೆ ಆ ಲೇಖನದ ಕರ್ತೃ ಯಾರೆಂದು ಗೊತ್ತಾಗಿರಲಿಲ್ಲ. ಆದರೇನು? ಅವರು ಕೂಡಲೇ ಸುದೀರ್ಘ ಪತ್ರವೊಂದನ್ನು ಬರೆದು ಅದರಲ್ಲಿ ಆ 'ಬಲ್ಲವ' ಮಾಡಿದ್ದ ಪ್ರಸ್ತಾಪಗಳನ್ನು ಬೆಂಬಲಿಸಿದರು. ಜೊತೆಗೆ ಲಜಪತರಿಗೂ ಒಂದು ಪತ್ರವೊಂದನ್ನು ಬರೆದರು:

''ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ 'ಭಾರತ ಮತ್ತು ಯದ್ಧ' (ಅದನ್ನು ಬರೆದವರಾರೆಂದು ನಿಮಗೆ ಗೊತ್ತೇ?) ಕುರಿತ ಅತ್ಯುತ್ತಮ ಲೇಖನವನ್ನು ಓದಿ ಆ ವಿಷಯದಲ್ಲಿ ಸಂಪಾದಕರಿಗೆ ನಾನೊಂದು ಪತ್ರವನ್ನು ಬರೆದು ನನ್ನ ಅಭಿಮತವನ್ನು ತಿಳಿಸಿದ್ದೇನೆ. ಮುಂದಿನ ಸಂಚಿಕೆಯಲ್ಲಿ ಬಹುಶಃ ಅದು ಪ್ರಕಟಗೊಳ್ಳಬಹುದು. ದಯವಿಟ್ಟು ನೋಡಿ.''

ಆ 'ಬಲ್ಲವ' ಯಾರೊಂದು ತಿಳಿದುಕೊಂಡ ನಂತರ ಸರ್ ವಿಲಿಯಂ ವೆಡರ್ನ್‌ಬರ್ನ್ ಲಜಪತರಿಗೆ ಪತ್ರ ಬರೆದು:

''ನೀವು ನಿಮ್ಮ ಪದಗಳಲ್ಲೇ ನಿಮ್ಮ ವಾದವನ್ನು ಮುಂದು ಮಾಡಲು ನಿಮಗೆ ಅನುಮಾನವಿದ್ದರೆ ನಾನು ನಿಮ್ಮವಾದದ ಬಗ್ಗೆವೆಸ್ಟ್‌ಮಿನಿಸ್ಟರ್ ಅಥವಾ ನ್ಯೂ ಸ್ಟೇಟ್ಸ್‌ಮನ್ (ನಿಮಗೆ ಯಾವುದೋ ಇಷ್ಟವೋ ಅದಕ್ಕೆ) ಪತ್ರಿಕೆಗಳಿಗೆ ಲೇಖನ ಬರೆಯಬಲ್ಲೆ. ನಿಮ್ಮ ಅಭಿಪ್ರಾಯವನ್ನು ನನಗೆ ತಿಳಿಸಿ. 'ನಾನು ಬ್ರಿಟಿಷ್ ಸರ್ಕಾರದ ಹಿತ ಬಯಸುವ ಒಳಮುಖಗಳನ್ನೆಲ್ಲಾ ಸಮಗ್ರವಾಗಿ ಬಲ್ಲ ಓರ್ವ ಭಾರತೀಯನ ಆಶಯ' ಎಂಬ ಒಕ್ಕಣೆಕೆಯೊಂದಿಗೆ ಆ ಪತ್ರ ಬರೆಯುತ್ತೇನೆ. ನಿಮಗಿದು ಸಮ್ಮತವಾದರೆ ನಿಮ್ಮಪತ್ರವನ್ನು ನನಗೆ ಕಳುಹಿಸಿ. ನಾನು ಅದರ ಆಧಾರದ ಮೇಲೆ ಕರಡೊಂದನ್ನು ಸಿದ್ಧಪಡಿಸಿ ನಿಮ್ಮ ಅನುಮತಿಗೆ ಕಳುಹಿಸುವೆ.'' ಎಂದು ತಿಳಿಸಿದರು.

ಆ ಬಗ್ಗೆ ಲಜಪತರು, ''ಆದರೆ, ಇಂಗ್ಲಿಷ್ ಪತ್ರಿಕೆಗಳಲ್ಲಿ ಭಾರತದ ನಿಷ್ಠೆಯ ನಿಜ ಸ್ವರೂಪದ ಬಗ್ಗೆ ಪ್ರಕಟಗೊಂಡ ಇತರ ಏಕೈಕ ಲೇಖನವೆಂದರೆ ನ್ಯೂ ಏಜ್ ಪತ್ರಿಕೆಯ ಅಕ್ಟೋಬರ್ 1ರ ಸಂಚಿಕೆಯಲ್ಲಿ 'ಆಕ್ಸ್‌ಫರ್ಡ್ ಭಾರತೀಯನೋರ್ವ ಅಜ್ಞಾತ ವ್ಯಕ್ತಿಯಾಗಿ' ಬರೆದ ಲೇಖನ ಒಂದೇ.

''ಈ ಮಧ್ಯೆ ನಿಷ್ಠ ಭಾರತೀಯ ಪತ್ರಿಕೆಗಳು ಯುದ್ಧದ ಕಾಣಿಕೆ ಮತ್ತು ಯುದ್ಧದ ಸಾಲುಗಳ ಹೆಸರಿನಲ್ಲಿ ಭಾರತದಲ್ಲಿ ನಡೆಯತೊಡಗಿದ ಸುಲಿಗೆಯ ಬಗ್ಗೆ ವರದಿಗಳನ್ನು ಪ್ರಕಟಿಸತೊಡಗಿದವು. ಆಗ ನಾನು ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಗೆ (ಈ ಸಾರಿ ನಿಜ ನಾಮಧೇಯದಲ್ಲಿ) ಇನ್ನೊಂದು ಲೇಖನವೊಂದು ಬರೆದೆ. ಭಾರತದ ಮೇಲೆ ಯುದ್ಧದಿಂದ

ಆಗುತ್ತಿರುವ ಹಣಕಾಸಿನ ಪರಿಣಾಮಗಳನ್ನು ಕುರಿತ ಲೇಖನ ಅದು. ಕೆಲವು ಇಂಗ್ಲಿಷರು ನನ್ನ ಆ ಲೇಖನವನ್ನು ಕಟುವಾಗಿ ಟೀಕಿಸಿದರು. ತೀರಾ ನಿಷ್ಠಬಾಹಿರವೆಂದು ದೂರಿದರು.

"ಈಗ, 14 ವರ್ಷಗಳ ತರುವಾಯ ಆ ವಿಷಯವನ್ನು ಪರ್ಯಾಲೋಚಿಸಿದರೆ 1914ರ ಯುದ್ಧದ ಸಮಯದಲ್ಲಿ ರಾಷ್ಟ್ರೀಯ ನಾಯಕರು ನಡೆದುಕೊಂಡ ರೀತಿ ತೀರಾ ಅನುಚಿತವಾಗಿತ್ತು, ರಾಷ್ಟ್ರ ಹಿತದ ವಿರೋಧಿಯಾಗಿತ್ತು ಎಂದು ನನಗೆ ಮನವರಿಕೆಯಾಗುತ್ತಿದೆ. ಅವರು ಹಾಗೂ ಅವರ ಒಡನಾಡಿಗಳು ಇಂಗ್ಲೆಂಡ್ ನಾಡನ್ನು ಅಷ್ಟೊಂದು ಪ್ರೀತಿಸಿದರೇ ಎಂದು ನಂಬಲು ನನಗೆ ಸಾಧ್ಯವಾಗುತ್ತಿಲ್ಲ. ಆ ನಾಡನ್ನು ತನ್ನ ನಾಡಿನ ಹಿತದ ಬಲಿಯ ಮೇಲೆ ರಕ್ಷಿಸಲು ಮುಂದಾದರೇ? ಎಂದೂ ನಂಬಲು ನನಗೆ ಸಾಧ್ಯವಾಗುತ್ತಿಲ್ಲ. ಆಗ ಘೋಷಿತವಾದ ನಿಷ್ಠೆ ಮತ್ತು ಶ್ರದ್ಧೆಗಳು ಬಹುತೇಕ ಅಷಾಢಭೂತಿತನ ಮತ್ತು ಸಮಯಸಾಧಕತನವಾಗಿದ್ದವೆಂದು ಕರೆಯಲು ನಾನು ಹಿಂಜರಿಯುತ್ತಿಲ್ಲ. ಹೇಗಾದರೂ ಇರಲಿ, ಏನಾದರೂ ಆಗಿರಲಿ ಅವರ ಮುಂದೆ ಆಗ ಇದ್ದದ್ದು ಅದೊಂದೇ ಮಾರ್ಗವಾಗಿದ್ದಿರಬಹುದು. ಬೇರೆ ಯಾವುದಕ್ಕೂ ಅವರು ಸನ್ನದ್ಧವಾಗಿರಲಿಲ್ಲ. ಅದರಲ್ಲೂ ಕೆಲವರಂತೂ ಯುದ್ಧದ ಪರಿಣಾಮ ಮತ್ತು ಅದರ ಫಲಿತಗಳು ತೀರಾ ಕೆಟ್ಟದಾಗಿರುತ್ತವೆ ಎಂದು ಭಾವಿಸಿದ್ದರೇನೋ? ಆ ಯುದ್ಧಕ್ಕಾಗಿ ಭಾರತೀಯ ಹಣ ಮತ್ತು ಭಾರತೀಯರನ್ನು ಬಲಿ ಕೊಡುವುದರ ವಿರುದ್ಧ ದನಿ ಎತ್ತಿದವರು ಇಬ್ಬರು ಮಾತ್ರವೆಂದು ಇಲ್ಲಿ ಹೇಳಲೇಬೇಕಾಗುತ್ತದೆ. ಅವರು ದಿ. ಬಾಲ ಗಂಗಾಧರ ತಿಲಕ್ ಮತ್ತು ಪಂಡಿತ್ ಮದನ್ ಮೋಹನ್ ಮಾಳವೀಯ. ಸಾರ್ವಜನಿಕ ಬದುಕಿನಲ್ಲಿರುವ ಜನರಿಗೆ ಲಕ್ಷಾಂತರ ಜನರ ಪ್ರಾತಿನಿಧಿಕವಾಗಿ ದೇಶದ ಯೋಧರನ್ನು ಹಾಗೂ ಹಣವನ್ನು ಉದಾರವಾಗಿ ಒಪ್ಪಿಸುವುದು ಕಷ್ಟವಾಗಲಿಲ್ಲ. ಅದು ಯಾವುದೇ ಷರತ್ತಿಲ್ಲದೆ ಆ ಔದಾರ್ಯವನ್ನು ಪ್ರದರ್ಶಿಸಲಾಯಿತು. ಆದರೆ ರಾಜಕೀಯವಾಗಿ ಆ ಜನ ಎಷ್ಟು ಅಶಕ್ತರಾಗಿದ್ದರೆಂಬುದು ಮಾತ್ರ ರುಜುವಾತಾಗುತ್ತದೆ."

* * *

ಅಧ್ಯಾಯ-39

ಬಂಧಮುಕ್ತರಾದಾಗ

ಲಜಪತರು ಭಾರತಕ್ಕೆ ಮರಳುವುದು ಸಾಕಷ್ಟು ವಿಳಂಬವಾಯಿತು. ಅವರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ನಡೆಯಬೇಕಾಗಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಸಮಯ ಸನ್ನಿಹಿತವಾಗಿತ್ತು. ಸಕಾಲಕ್ಕೆ ಭಾರತದಲ್ಲಿ ಮರಳಿ ಆ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವರೇ ಎಂಬ ಪ್ರಶ್ನಾರ್ಥಕ ಚಿನ್ಹೆ ಎದ್ದಿತು. ಈ ಮಧ್ಯೆ, ಅದಕ್ಕಿಂತ ಹೆಚ್ಚಿನದಾಗಿ ಅವರಿಗೆ ಆ ಅಧ್ಯಕ್ಷತೆಯನ್ನು ವಹಿಸಿಕೊಡಲಾಗುವುದೇ ಎಂಬ ಪ್ರಶ್ನೆಯೂ ತಲೆದೋರಿತು. ವಿಧ್ಯುಕ್ತವಾಗಿ ಆಯ್ಕೆಯಾಗುವತನಕ ಅದರ ಬಗ್ಗೆ ಏನನ್ನು ಹೇಳುವಂತಿರಲಿಲ್ಲ. ಮುಂಬಯಿಯಿಂದ ಇಂಗ್ಲೆಂಡಿಗೆ ಅವರು ಮರ್ಮೋರಾ ಹಡಗಿನಲ್ಲಿ ಪ್ರಯಾಣ ಮಾಡಿದ ನಂತರ ಅನೇಕ ಬೆಳವಣಿಗೆಗಳಾಗಿದ್ದವು. ಎಲ್ಲಕ್ಕಿಂತಲೂ ಹೆಚ್ಚಿನದಾಗಿ ಯುದ್ಧ ನಡೆದಿತ್ತು. ಮಹಾಯುದ್ಧ.

ಸಾಮಾನ್ಯ ದಿನಗಳಲ್ಲೇ ಲಜಪತರನ್ನು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರನ್ನಾಗಿ ಒಪ್ಪಿಕೊಳ್ಳಲು ಸಿದ್ಧರಿಲ್ಲದ ಜನ ಈಗ ಅದರಲ್ಲೂ ಯುದ್ಧ ನಂತರದ ಆ ದಿನಗಳಲ್ಲಿ ಅವರು ಎಬ್ಬಿಸಿದ ವಿವಾದಗಳ ಹಿನ್ನಲೆಯಲ್ಲಿ ಅವರನ್ನು ಅಧ್ಯಕ್ಷರನ್ನಾಗಿ ಸ್ವೀಕರಿಸಿಯಾರೇ ಎಂಬ ಸಂಶಯ ಸಹಜವಾಗಿತ್ತು. ಸಾಲದ್ದಕ್ಕೆ ಕಾಂಗ್ರೆಸ್‌ನಲ್ಲಿ ಇನ್ನೂ ಸೌಮ್ಯವಾದಿಗಳ ಹಿಡಿತವೇ ಪ್ರಬಲವಾಗಿತ್ತು. ಭಾರತದಿಂದ ಲಭ್ಯವಾದ ವರ್ತಮಾನದ ಪ್ರಕಾರ 9 ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಪೈಕಿ ಆರು ಸಮಿತಿಗಳು ಲಜಪತರ ಪರವಾಗಿ ಮತ ಚಲಾಯಿಸಿದ್ದವು. ಸಾಮಾನ್ಯವಾಗಿ ಪ್ರಾಂತೀಯ ಘಟಕಗಳ ಬಹುಮತದ ನಿರ್ಧಾರಕ್ಕೆ ಸ್ವಾಗತ ಸಮಿತಿಯು ತನ್ನ ಅನುಮತಿಯ ಮೊಹರು ಒತ್ತಬೇಕಾಗಿತ್ತು. ಅಲಹಾಬಾದಿನ ದಿ ಲೀಡರ್ ಪತ್ರಿಕೆ ಕಾಂಗ್ರೆಸ್ಸಿನ ನಡವಳಿಕೆಗಳನ್ನೆಲ್ಲಾ ಸಮಗ್ರವಾಗಿ ದಾಖಲು ಮಾಡಿದ ಪತ್ರಿಕೆಯಾಗಿತ್ತು. ಯಾವುದೇ ಭಾರತೀಯ ಪತ್ರಿಕೆಗಳಿಗಿಂತ ಸಮರ್ಥವಾಗಿ ಅದು ಪ್ರಸ್ತುತದ ನಡವಳಿಕೆಗಳನ್ನು ವಿಶ್ಲೇಷಿಸಿ ಸಂಭವನೀಯ ಬೆಳವಣಿಗೆಗಳ ಬಗ್ಗೆ ವರದಿ ಮಾಡಿತು. ಆ ಅವಕಾಶ ತಿರುಗು ಮುರುಗಾಗಬಹುದೆಂಬ ಅನಿಸಿಕೆ ಸ್ವತಃ ಲಜಪತರಲ್ಲಿ ಉಂಟಾಗಿತ್ತಾದರೂ ತಿಲಕ್ ಮತ್ತು ಇತರರು ಅನೇಕ ವರ್ಷಗಳ ಮೊದಲೇ ತಮಗೆ ಒಪ್ಪಿಸಲು ಆಶಿಸಿದ್ದ ಆ ಗಾದಿಗೆ ತಮ್ಮನ್ನು ಈಗ ಆಹ್ವಾನಿಸುವ ಸಂಭವವನ್ನು ನಿರಾಕರಿಸುವಂತಿಲ್ಲ ಎಂದೂ ಅವರಿಗೆ ಅನಿಸುತ್ತಿತ್ತು. ಆಗ ಅವರಿಗೆ ಕಿರಿಕಿರಿ ಉಂಟಾಗಿದ್ದಿರಬಹುದು.

ಆದರೆ ಈಗ ಪರಿಸ್ಥಿತಿಯೇ ಬೇರೆಯಾಗಿತ್ತಲ್ಲವೇ? ಈ ಬೆಳವಣಿಗೆಗಳ ಹಿ ನ್ನಲೆಯಲ್ಲೂ ಸ್ವತಃ ಅವರ ನಡವಳಿಕೆಯ ಹಿನ್ನಲೆಯಲ್ಲೂ ಸಾಧ್ಯತೆಗಿಂತ ಅಸಾಧ್ಯತೆಯ ಸಂಭವವೇ ಹೆಚ್ಚಾಯಿತು. ಬೆಳವಣಿಗೆಗಳು ಪ್ರತಿಕೂಲವಾದವು. ಮದ್ರಾಸಿನ ಸೌಮ್ಯವಾದಿ

ಕಾಂಗ್ರೆಸ್ಸಿಗರು ಲಜಪತರ ಆಯ್ಕೆಯನ್ನು ಬಯಸಲಿಲ್ಲ. ಯುದ್ಧಾನಂತರ ಉಂಟಾಗಿರುವ ವಿಶೇಷ ಪರಿಸ್ಥಿತಿಯಲ್ಲಿ ಅವರು ಪ್ರಶಸ್ತ ಅಧ್ಯಕ್ಷರಾಗುವುದಿಲ್ಲವೆಂದು ವಾದಿಸಿದರು. ಸ್ವಾಗತ ಸಮಿತಿ ಆ ಒತ್ತಡಕ್ಕೆ ಮಣಿದು ಪ್ರಾಂತೀಯ ಘಟಕಗಳ ಬಹುಮತದ ನಿರ್ಧಾರಗಳನ್ನು ಬದಿಗೊತ್ತಿತು. ದಿ ಲೀಡರ್ ಪತ್ರಿಕೆಯ ಸಂಪಾದಕ ಸಿ.ವೈ. ಚಿಂತಾಮಣಿ ಎಲ್ಲಾ ಈ ಒಳತಂತ್ರಗಳ ವಿವರಣೆಯ ಸಹಿತ ಗೌಪ್ಯ ವರದಿಯನ್ನು ಕಳುಹಿಸಿಕೊಟ್ಟರು.

ಇಂಗ್ಲೆಂಡಿನಲ್ಲೂ ವಾತಾವರಣ ಅನುಕೂಲಕರವಾಗಿರಲಿಲ್ಲ. ಹೆಚ್ಚು ಕಾಲ ಅಲ್ಲಿರಲು ಅವರ ಮನಸ್ಸು ಒಪ್ಪಲಿಲ್ಲ. ಅವರು ಅಟ್ಲಾಂಟಿಕ ಸಾಗರವನ್ನು ದಾಟಲು ನಿರ್ಧರಿಸಿದರು. ಫಿಲಾಡೆಲ್ಫಿಯ ಹಡಗು ಲಿವರ್‌ಪೂಲ್‌ನಿಂದ ನ.14ರಂದು ಹೊರಟಿತು. ಅದರಲ್ಲಿ ಕೇವಲ ಒಂದು ವರ್ಗದ ಪ್ರಯಾಣಿಕರಿದ್ದರು. ಅವರಲ್ಲಿ ಅನೇಕ ಮಂದಿ ಭಾರತೀಯರೂ ಇದ್ದರು. ಆ ಪೈಕಿ ಲಜಪತರು ಒಬ್ಬರು. ಅವರೊಂದಿಗೆ ಬನಾರಸಿನ ಬಾಬು ಶಿವ ಪ್ರಸಾದ್ ಗುಪ್ತ ಸಹ ಇದ್ದರು. ಅವರು ಆ ಪ್ರವಾಸದಗುಂಟ ಲಜಪತರಿಗೆ ಅಚ್ಚುಮೆಚ್ಚಿನ ಸಹ ಪ್ರಯಾಣಿಕರಾದರು. ವಿಜ್ಞಾನಿ, ಪ್ರೊಫೆಸರ್ (ನಂತರ ಸರ್) ಜಗದೀಶಚಂದ್ರ ಬೋಸ್ ಮತ್ತು ಅವರ ಪತ್ನಿ ಪ್ರೊ. ಬಿನಯ್ ಕೆ. ಸರ್ಕಾರ್ ಅದೇ ಹಡಗಿನಲ್ಲಿದ್ದರು. ಇತರ ದೇಶಗಳ ಅನೇಕ ಪ್ರಯಾಣಿಕರೂ ಇದ್ದರು. ಬಹುಕಾಲದಿಂದ ಇಂಗ್ಲೆಂಡಿನಲ್ಲಿದ್ದು ಯುದ್ಧಾನಂತರ ಪರಿಸ್ಥಿತಿಯಿಂದಾಗಿ ಅವರೆಲ್ಲರನ್ನು ಆಗ 'ಶತ್ರು ರಾಷ್ಟ್ರಗಳವರೆಂದು' ಪರಿಗಣಿಸಲಾಗಿತ್ತು.

1905ರ ಅಟ್ಲಾಂಟಿಕ ಸಾಗರ ಪ್ರಯಾಣ ಹರ್ಷಕರವಾಗಿರಲಿಲ್ಲ. ನಿರಂತರರಾಗಿ 48 ಗಂಟೆಗಳ ಕಾಲ ಹವಾಗುಣ ವೈಪರಿತ್ಯವಾಗಿತ್ತು. ಆ ಬಗ್ಗೆ ಪ್ರಸ್ತಾಪಿಸುತ್ತಾ ಲಜಪತರು, ''ನಾವು ನಮ್ಮ ಕೋಣೆಯಿಂದ ಹೊರಗೆ ಬರಲಿಲ್ಲ. ಊಟಕ್ಕೂ ಸಹ'' ಎಂದಿದ್ದಾರೆ. ''ಒಟ್ಟಾರೆ ನಾನಂತೂ ಆ ನನ್ನ ಯಾನವನ್ನು ಸಂತೋಷದಿಂದ ಕಳೆದೆ'' ಎಂದೂ ದಾಖಲು ಮಾಡಿದ್ದಾರೆ.

ನ.21ರಂದು ಅವರು ಭೂ ಭಾಗವನ್ನು ಕಂಡರು. ಕೆಲವೇ ದಿನಗಳಲ್ಲಿ ನ್ಯೂಯಾರ್ಕ್ ತಲುಪಿದರು. ''ನಮ್ಮ ಪಂಜಾಬಿ ಗೆಳೆಯರನ್ನು'' ಕುರಿತು ಲಜಪತರು ಹೀಗೆ ಬರೆದಿದ್ದಾರೆ. ''ಆ ಹಡಗು ಕಟ್ಟೆಯಲ್ಲಿ ಅವರ ಗೆಳೆಯರು ಬರಮಾಡಿಕೊಂಡರು. ಮೊದಲೇ ಅವರಿಗೆ ಬರೆದು ತಿಳಿಸಿದ್ದರು'' ಆದರೆ ಅವರಿಗೆ (ಅವರ ಬನಾರಸ್ ಗೆಳೆಯರಿಗೆ) ''ಬಣ್ಣದ ಪೂರ್ವಗ್ರಹ ಪೀಡನೆಯ ಫಲವಾಗಿ ಹೋಟೆಲ್‌ನಲ್ಲಿ ಅವಕಾಶ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಯಿತು.'' ಅದನ್ನು ಅವರು ತಮ್ಮ ಈ ಅನುಭವದ ಮೊದಲ ಪ್ರಕರಣವೆಂದು ಹೇಳಿದ್ದಾರೆ. 1905ರ ಅವರ ಆ ಸಂಕ್ಷಿಪ್ತ ಭೇಟಿ ಸಮಯದಲ್ಲಿ ಅವರಿಗೆ ವರ್ಣ ವಿದ್ವೇಷದ ನೇರ ಅನುಭವವಾಯಿತು. ಕೊನೆಗೂ ಹೋಟೆಲ್‌ವೊಂದರಲ್ಲಿ ಕೊಠಡಿಗಳನ್ನು ಪಡೆಯಲು ಅವರು ಹೇಗೋ ಯಶಸ್ವಿಯಾದರು. ನಾಲ್ಕು ವಾರಗಳ ಕಾಲ ನ್ಯೂಯಾರ್ಕ್‌ನಲ್ಲಿ ಕಳೆದ ಮೇಲೆ ಅಮೆರಿಕ ಪ್ರವಾಸವನ್ನು ಆರಂಭಿಸಿ ಬೋಸ್ಟನ್ ತಲುಪಿದರು. ವಾಷಿಂಗ್‌ಟನ್, ಅಟ್ಲಾಂಟಾ, ನ್ಯೂ ಒರ್‌ಲೀನ್ಸ್, ಚಿಕಾಗೋ, ಸಾಲ್ಟ್‌ಲೇಕ್ ಸಿಟಿ ಸಂದರ್ಶಿಸಿದರು. 1915ರ ಮಾರ್ಚ್‌ನಲ್ಲಿ ಲಾಸ್ ಏಂಜಲೀಸ್ ತಲುಪಿದರು. ಆ ಪ್ರವಾಸದ ಅವಧಿಯಲ್ಲಿ

ಎಲ್ಲೂ ಅವರಿಗೆ ವರ್ಣ ವಿದ್ವೇಷದ ಕಹಿ ಅನುಭವ ಆಗಲಿಲ್ಲ. ಅನೇಕ ಸ್ಥಳಗಳಲ್ಲಿ ಲಜಪತರು ಅಮೆರಿಕದ ಜನತೆಯನ್ನು ಉದ್ದೇಶಿಸಿ ಉಪನ್ಯಾಸ ನೀಡಿದರು. ಭಾರತೀಯ ವಿಷಯವನ್ನೇ ಪ್ರಮುಖವಾಗಿ ಪ್ರಸ್ತಾಪ ಮಾಡಿದರು. ಅದರ ''ತಮ್ಮ ಆ ಭೇಟಿಯ ಉದ್ದೇಶ ಅಧ್ಯಯನ ಮತ್ತು ಅವಲೋಕನದ ಪ್ರವಾಸ'' ಎಂದು ಕರೆದುಕೊಂಡರು.

ಲಜಪತರು ತಮ್ಮ ಪ್ರವಾಸಕ್ಕೆ ಯಾವಾಗಲು ಶೈಕ್ಷಣಿಕ ಮೌಲ್ಯ ತುಂಬುತ್ತಿದ್ದರು. ಹವಾಮಾನ ಪರಿಸ್ಥಿತಿಯ ಬಗ್ಗೆ ತುಂಬಾ ನಿಗಾ ಇಡುತ್ತಿದ್ದರು. ಅದಕ್ಕೆ ಅನುಗುಣವಾಗಿಯೇ ಪ್ರವಾಸ ಹೊಂದಿಸಿಕೊಳ್ಳುತ್ತಿದ್ದರು. ಅಮೆರಿಕದ ಆ ಓಡಾಟದ ಕಾಲದಲ್ಲಿ ವರ್ಣ ನೀತಿಯ ಬಗ್ಗೆ ವಿಶೇಷ ಆಸಕ್ತ ವಹಿಸಲು ಅವರು ನಿರ್ಧರಿಸಿಕೊಂಡರು. ಅಲ್ಲಿನ ಶಿಕ್ಷಣ ಸಂಸ್ಥೆಗಳ ವಿಷಯದಲ್ಲಿ ಧಾರ್ಮಿಕ ದತ್ತಿ ಮೂಲಕ ನಡೆಸುತ್ತಿದ್ದ ಸಮಾಜ ಸೇವಾ ಕಾರ್ಯಗಳಲ್ಲಿ ಅವರು ಹೆಚ್ಚು ಆಸಕ್ತಿ ತೋರಿದರು. ''ವಿವಿಧ ವರ್ಣ ವಂಶಗಳಿಂದ ಕೂಡಿದ ಆ ದೇಶ ಒಂದು ರಾಷ್ಟ್ರವಾಗಿ ಮೇಳೈಸಿದ ಪ್ರಕ್ರಿಯೆಗಳ ಬಗ್ಗೆ'' ಲಜಪತರು ಹೆಚ್ಚು ಆಸಕ್ತಿ ವಹಿಸಿದರು. ಸ್ವತಃ ಅಮೆರಿಕನ್ನರೇ ಕರೆದುಕೊಳ್ಳುವ 'Melting pot' ಬಗ್ಗೆ ಅತೀವ ಉತ್ಸಾಹ ತೋರಿದರು. ಈ ಎಲ್ಲಾ ಅಧ್ಯಯನಗಳನ್ನು ಅವರು ದಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ: ದಿ ಇಂಪ್ರೆಷನ್ ಆಫ್ ಎ ಹಿಂದೂ ಕೃತಿಯಲ್ಲಿ ಸಾದರಪಡಿಸಿದ್ದಾರೆ. ಆ ಕೃತಿಯ ಒಕ್ಕಣೆಕೆಯನ್ನು ಕಲ್ಕತ್ತಾದ ಮಾಡರ್ನ್ ವ್ಯೂ ಪತ್ರಿಕೆ ಧಾರಾವಾಹಿಯಾಗಿ ಪ್ರಕಟಿಸಿತು. ನಂತರ ಅದೇ ಪ್ರಕಟಣಾಲಯ ಅದೇ ಶೀರ್ಷಿಕೆಯಲ್ಲಿ ಆ ಕೃತಿಯನ್ನು ಹೊರತಂದಿತು. (ಹಿಂದೂ ಉಪ ಶೀರ್ಷಿಕೆಯನ್ನು ಇಂಡಿಯನ್ ಎಂಬ ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಭಾರತ ಎಂಬ ಹೆಸರು ಬಳಕೆಗೆ ಬರುವ ಮೊದಲು ಆ ಪದವೇ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಚಿರಪರಿಚಿತವಾಗಿತ್ತು.) ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಲಜಪತರ ಪರ್ಯಟನೆ ಸುಮಾರು 6 ತಿಂಗಳ ಕಾಲ ನಡೆಯಿತು. ಆ ಅವಧಿಯಲ್ಲಿ ಗಮನಾರ್ಹ ಭಾಗದ ಸಮಯವನ್ನು ಅವರು ಲೇಖನಿಗೆ ವಿನಿಯೋಗಿಸಿಕೊಂಡರು. ಯಂಗ್ ಇಂಡಿಯಾ ಹೊರಬಂದಿದ್ದು ಆ ಸಮಯದಲ್ಲೇ. ಈ ಬಗೆಗಿನ ಕಥೆಯನ್ನು ಹಾಗೂ ಅವರ ಇತರ ಕೃತಿಗಳ ಬಗೆಗಿನ ಮಾಹಿತಿಯನ್ನು ಪ್ರತ್ಯೇಕ ಅಧ್ಯಯನವೊಂದರಲ್ಲಿ ತಿಳಿದುಕೊಳ್ಳೋಣ. ಲಜಪತರು ಫೆಸಿಫಿಕ್ ತೀರದಲ್ಲಿದ್ದ ಭಾರತೀಯ ಸಮುದಾಯದೊಂದಿಗೆ ನಿಕಟ ಸ್ನೇಹ ಸಾಧಿಸಿಕೊಂಡರು. ಈ ಬಗ್ಗೆಯೇ ಪ್ರತ್ಯೇಕ ಅಧ್ಯಾಯದಲ್ಲಿ ವಿಸ್ತಾರವಾದ ನಿರೂಪಣೆ ಇದೆ. ಆರು ತಿಂಗಳ ನಂತರ ಅವರು ಜಪಾನ್‌ಗೆ ಪ್ರಯಾಣ ಬೆಳೆಸಿದರು. ಕೆಲವು ತಿಂಗಳ ನಂತರ ಅವರು ಮತ್ತೆ ಅಮೆರಿಕಕ್ಕೆ ವಾಪಸಾದರು. ಕೆಲವು ಕಾಲ ಅಲ್ಲೇ ಉಳಿದುಕೊಂಡರು. ಜಪಾನ್‌ಗೆ ಅವರು ಭೇಟಿ ಕೊಟ್ಟ ಪ್ರಸಂಗವನ್ನು ಆ ಅಧ್ಯಾಯದಲ್ಲಿ ವಿವರವಾಗಿ ತಿಳಿದುಕೊಳ್ಳೋಣ. ಆ ವಿವರಣೆಯ ಜೊತೆಯಲ್ಲಿ ಅಮೆರಿಕದಲ್ಲಿದ್ದ ದಿನಗಳಲ್ಲಿ ಅವರು ಕಂಡು ಕೊಂಡ ಸಿದ್ಧಾಂತ ಜಪಾನ್‌ನಿಂದ ಮರಳಿದ ನಂತರ ಅಲ್ಲಿ ತಂಗಿದ ಅವಧಿಯ ವಿವರಗಳನ್ನು ಆ ಅಧ್ಯಾಯದಲ್ಲಿ ಓದೋಣ.

* * *

ಅಧ್ಯಾಯ-40

ಜಪಾನಿನಲ್ಲಿ

ಯುದ್ಧ ಸುಮಾರು ಒಂದು ವರ್ಷ ನಡೆಯಿತು. ಅದು ಅಂತ್ಯಗೊಳ್ಳುವ ಲಕ್ಷಣವೂ ಕಾಣಲಿಲ್ಲ. ನಿಮಗೆಲ್ಲಾ ಗೊತ್ತಿರುವಂತೆ ಇನ್ನು ಅನೇಕ ವರ್ಷಗಳ ಕಾಲ ನಡೆಯಬಹುದಾಗಿತ್ತು. 'ಯುದ್ಧ ವಿರಾಮ'ವಾಗುವತನಕ ಆ ವರ್ಷಗಳನ್ನೆಲ್ಲಾ ಲಜಪತರು ಕಳೆಯಬೇಕಾಗಿದ್ದಾದರೂ ಎಲ್ಲಿ? ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 7 ತಿಂಗಳು ಕಳೆದ ನಂತರ ತಾಯ್ನಾಡಿಗೆ ಮರಳುವುದೇ ಅಥವಾ ವಿದೇಶಗಳಲ್ಲಿ ಉಳಿದುಕೊಳ್ಳುವುದೇ? ಎಂಬ ಬಗ್ಗೆ ಅವರಿಗೆ ನಿರ್ಧಾರಕ್ಕೆ ಬರಲಾಗಲಿಲ್ಲ. ಇಂಗ್ಲೆಂಡಿನಲ್ಲಿ 7 ತಿಂಗಳು ಕಳೆದು ಅಟ್ಲಾಂಟ ಸಾಗರವನ್ನು ದಾಟಿದ್ದರು. ಅಮೆರಿಕ ತಲುಪಿದ್ದರು. ಅಲ್ಲಿ 7 ತಿಂಗಳು ಕಳೆದು ಫೆಸಿಫಿಕ್ ಸಾಗರವನ್ನು ದಾಟಿ ಜಪಾನ್ ದೇಶವನ್ನು ಕಾಣಲು ನಿರ್ಧರಿಸಿದ್ದರು. ತಮ್ಮ ತಾಯ್ನಾಡನ್ನು ಬಿಟ್ಟರೆ ಬೇರಾವುದೇ ಏಷ್ಯಾ ದೇಶವನ್ನು ಅವರು ನೋಡಿರಲಿಲ್ಲ. ಬರ್ಮಾಕ್ಕೆ ಗಡಿಪಾರು ಶಿಕ್ಷೆಗೆ ಒಳಗಾಗಿದ್ದರೂ ಅದು ಬ್ರಿಟನ್‌ನ ಭಾರತೀಯ ಆಳ್ವಿಕೆಯ ಒಂದು ಭಾಗವಾಗಿತ್ತು. ಜೊತೆಗ ಆ ದೇಶವನ್ನು ನೋಡಿದ್ದಾಗಿ ಅವರು ಹೇಳಿಕೊಳ್ಳುವಂತೆಯೂ ಇರಲಿಲ್ಲ. ಅಲ್ಲಿಗೆ ಅವರನ್ನು ರಾಜಕೀಯ ಕೈದಿಯಾಗಿ ಮಾತ್ರ ಕರೆದೊಯ್ಯಲಾಗಿತ್ತು. ಪೂರ್ವದಲ್ಲಿ ಆಧುನಿಕತೆಯ ಪ್ರಗತಿಯಲ್ಲಿ ಅಗ್ರಮಾನ್ಯವಾಗಿದ್ದ ಜಪಾನ್ ಭೇಟಿ ಕಟ್ಟದಾಗಿ ಅವರಿಗೆ ಕಂಡು ಬರಲಿಲ್ಲ. ಅವರ ಆ ವಿದೇಶವಾಸ ಇನ್ನೂ ಕೆಲವು ಕಾಲ ಮುಂದುವರೆಯಲೇ ಬೇಕಾಯಿತು. ಆ ಮುಂದುವರಿಕೆಗೆ ಉದಯ ಸೂರ್ಯನ ಭೂಮಿ ನಿಪ್ಪಾನ್ ಪ್ರಶಸ್ತವೆನಿಸಿತು. ಮೇ ತಿಂಗಳಲ್ಲಿ ಫೆಸಿಫಿಕ್ ಸಾಗರವನ್ನು ಹಾಯ್ದು ಬರುವಾಗ ಜಪಾನ್‌ಗೆ ಭೇಟಿ ಕೊಡುವ ವಿಷಯವನ್ನು ಶಿವಪ್ರಸಾದ್ ಗುಪ್ತ ಪ್ರಸ್ತಾಪಿಸಿ ಒಂದು ನಿರ್ಧಾರಕ್ಕೆ ಬರುವಂತೆ ಮಾಡಿದ್ದರು. ಒಂದೆರೆಡು ತಿಂಗಳ ನಂತರ ಲಜಪತರು ಜಪಾನ್‌ಗೆ ಭೇಟಿ ಕೊಡುವ ಪೂರ್ಣ ನಿಶ್ಚಯ ಮಾಡಿಕೊಂಡರು. ಆ ಮಧ್ಯೆ ಅವರು ತಾವು ಬರೆಯುತ್ತಿದ್ದ 'Mss., Young India' ಮತ್ತು 'England's Debt' ಕೃತಿಗಳ ರಚನೆಯನ್ನು ಪೂರ್ಣಗೊಳಿಸಬೇಕಾಗಿತ್ತು. ಸಾಲದ್ದಕ್ಕೆ ಮುನ್ಷಿರಾಮ್ (ನಂತರ ಸ್ವಾಮಿ ಶ್ರದ್ಧಾನಂದ) ಪತ್ರ ಬರೆದು ಅವರ ಹಿರಿಯ ಪುತ್ರ ಹರೀಶ್ ಚಂದ್ರ ಇಂಗ್ಲೆಂಡಿಗೆ ರಾಜಾ ಮಹೇಂದ್ರ ಪ್ರತಾಪ್ ಜೊತೆಯಲ್ಲಿ ತೆರಳಿದ್ದಾನೆಂದು ಅಲ್ಲಿಂದ ಆತ ಅಮೆರಿಕ ತಲುಪುವನೆಂದು ಅಲ್ಲಿ ಇಬ್ಬರು ಭೇಟಿ ಮಾಡಬಹುದೆಂದು ತಿಳಿಸಿದ್ದರು. ಲಜಪತರಿಗೆ ಹರೀಶ್ ಚಂದ್ರನನ್ನು ಭೇಟಿ ಮಾಡುವ ಆಸಕ್ತಿ ಇತ್ತು. ರಾಜಾ ಮಹೇಂದ್ರ ಪ್ರತಾಪ್‌ರ ಕುತೂಹಲಕಾರಿ ಯೋಜನೆಗಳನ್ನು ತಿಳಿದುಕೊಳ್ಳುವ ತವಕವಿತ್ತು. ಆದರೆ ಹರೀಶ್ ಚಂದ್ರ ಅಮೆರಿಕ ತಲುಪುವುದು ಸಾಕಷ್ಟು ವಿಳಂಬವಾಯಿತು.

1915ರ ಜುಲೈ 3ರಂದು ಲಜಪತ್‌ರಾಯ್ ಸ್ಯಾನ್‌ಫ್ರಾನ್ಸಿಸ್ಕೊದಿಂದ ಸಮುದ್ರಯಾನ ಆರಂಭಿಸಿದರು. ಅದು ಅಮೆರಿಕ ಸಂಯುಕ್ತ ಸಂಸ್ಥಾನದಿಂದ ತಾತ್ಕಾಲಿಕ ಬೀಳ್ಕೊಡುಗೆಯೋ ಅಥವಾ ಅಂತಿಮ ವಿದಾಯವೋ ಎಂಬುದು ಅವರಿಗೇ ನಿಶ್ಚಿತವಾಗಿರಲಿಲ್ಲ. ಭಾರತಕ್ಕೆ ಮರಳಲು ಅವರೇನೋ ಕಾತರಿಸಿದ್ದರು. ಆದರೆ ಯೋಜನೆಗಳು ನಿಶ್ಚಿತವಾಗಿರಲಿಲ್ಲ. ಪ್ರಶಾಂತ ಸಾಗರದ ಮೇಲೆ ಎರಡು ವಾರಗಳ ಕಾಲ ತೇಲುತ್ತಾ ಆ ಯಾನದ ಸವಿ ಆಮೋದವನ್ನು ಅನುಭವಿಸಿದರು. ವರ್ಣರಂಜಿತ ಹವಾಯಿ ದ್ವೀಪ ಸಮೂಹದಲ್ಲಿ ಇಳಿದು ಅಲ್ಲಿನ ಮನಮೋಹಕ ಸಾಗರದ ಸೌಂದರ್ಯವನ್ನು ಅನುಭವಿಸಿದರು. ಪ್ರಶಾಂತ ಸಾಗರದ ಕಡಲ ಕಿನಾರೆಯಲ್ಲಿ ಸಮುದ್ರ ಸಸ್ಯ, ಗಿಡ, ಪೊದೆ, ಮರಗಳ ಅಪೂರ್ವ ಸೌಂದರ್ಯದ ಸೊಬಗನ್ನು ಕಂಡುಂಡರು.

ಜುಲೈ 19ರಂದು ಅವರು ಯಕೊಹಮ ತಲುಪಿದರು. ಹಡಗು ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಯಾರೂ ಬಂದಿರಲಿಲ್ಲ. ಆ ಪಟ್ಟಣಕ್ಕೆ ತೀರಾ ಹೊಸಬ, ಆಗುಂತಕ ಅವರಾದರು. ಅವರ ಪ್ರಯಾಣದಲ್ಲಿ ಅದೇ ಮೊದಲ ಬಾರಿಗೆ ತಮ್ಮ ಸರಕು ಸರಂಜಾಮುಗಳನ್ನು ಹಡಗಿನಲ್ಲಿಯೇ ಇರಗೊಟ್ಟು ಅಲ್ಲಿಗೆ 27 ಕಿ.ಮೀ. ದೂರದ ಟೋಕಿಯೋ ತಲುಪಿ ಹೋಟೆಲ್ ವಾಸ್ತವ್ಯವೊಂದನ್ನು ಅವರೇ ಹುಡುಕಿಕೊಳ್ಳಬೇಕಾಯಿತು.

ನಿರೀಕ್ಷೆಗಿಂತ ಮೊದಲೇ ಅವರಿಗೆ ವಸತಿ ಅನುಕೂಲ ಒದಗಿ ಬಂದಿತು. ಹಡಗಿನಲ್ಲಿ ಅವರೊಂದಿಗೆ ಬಂದ ಸಹ ಪ್ರಯಾಣಿಕರಿಂದ ಪ್ರಾಪ್ತವಾದ ಅನುಕೂಲ ಅದಾಗಿರಲಿಲ್ಲ. ಅಮೆರಿಕದಲ್ಲಿ ಅವರ ಒಡನಾಡಿಗಳಾಗಿದ್ದ ಶಿವಪ್ರಸಾದ್ ಗುಪ್ತ ಮತ್ತು ಪ್ರೊ. ಬಿನಯ್ ಕೆ. ಸರ್ಕಾರ ಆ ವೇಳೆಗಾಗಲೇ ಅಲ್ಲಿಗೆ ಬಂದಿದ್ದರು. ಜಪಾನ್‌ನಲ್ಲಿ ಅಧ್ಯಯನಕ್ಕಾಗಲಿ, ಸ್ಥಳಗಳ ವೀಕ್ಷಣೆಗಾಗಲಿ ಆ ತಿಂಗಳು ಅನುಕೂಲಕರವಾಗಿರಲಿಲ್ಲ. ಸೂರ್ಯನ ಶಾಖ ಪಾದರಸ ತುಟ್ಟತುದಿಗೇರುವಂತೆ ಮಾಡಿತ್ತು. ಬೇಸಿಗೆಯಲ್ಲಿ ಲಾಹೋರಿನ ಪರಿಸ್ಥಿತಿಯನ್ನು ಅದು ನೆನಪಿಗೆ ತರುತ್ತಿತ್ತು. ಜಪಾನಿನ ವಿಶ್ವವಿದ್ಯಾಲಯಗಳ ಜನರು ಮತ್ತು ವಿದ್ಯಾರ್ಥಿಗಳನ್ನು ಸಂದರ್ಶಿಸುವುದು ಲಜಪತರ ಆಸಕ್ತಿಯಲ್ಲಿ ಒಂದು ಪ್ರಮುಖ ಅಂಗವಾಗಿತ್ತು. ಆದರೆ ಆಗ ವಿಶ್ವವಿದ್ಯಾಲಯಗಳೆಲ್ಲವೂ ರಜೆ ಪ್ರಯುಕ್ತ ಮುಚ್ಚಿದ್ದವು. ಹೀಗಾಗಿ ಅವರು ಕೆಲವು ಕಾಲ ಲೇಕ್ ಹ್ಯಾಕೋನ್ ಬೇಸಿಗೆ ವಿಶ್ರಾಂತಿಧಾಮದಲ್ಲಿ ಕಳೆದರು. ಟೋಕಿಯಾದಲ್ಲಿ ಅವರು ಇಳಿದುಕೊಂಡಿದ್ದು ಇಂಪಿರಿಯಲ್ ಹೋಟೆಲ್‌ನಲ್ಲಿ. ಜಪಾನ್‌ನಲ್ಲಿ ಹೆಚ್ಚು ಪ್ರವಾಸ ಮಾಡಬೇಕಾದ ಆಶಯ ಅವರದಾಗಿದ್ದರಿಂದ ಅವರ ವಾಸ್ತವ್ಯವನ್ನು ಬಾಡಿಗೆ ಮನೆಯೊಂದಕ್ಕೆ ಬದಲಿಸಿಕೊಳ್ಳುವುದು ಕಡಿಮೆ ಖರ್ಚಿಗೆ ಅನುಕೂಲವಾಗುತ್ತದೆ ಎಂಬ ಸಲಹೆ ಕೇಳಿಬಂದಿತು. ಇಂಪಿರಿಯಲ್‌ಗೆ ವಿಶ್ವವಿದ್ಯಾಲಯದ ಸನಿಹದಲ್ಲೇ ಇದ್ದ ಥರ್ಡ್ ಹೈಸ್ಕೂಲ್ ಹಿಂಭಾಗದ ಹೋಂಗೋ ವಾರ್ಡ್‌ನ ಕೊವಾಮಿಚೊದಲ್ಲಿ ಜಪಾನ್ ಮಾದರಿಯ ಎರಡು ಅಂತಸ್ತಿನ ಮನೆಯೊಂದಕ್ಕೆ ಅವರು ತಮ್ಮ ವಾಸ್ತವ್ಯವನ್ನು ಇಂಪಿರಿಯಲ್ ಹೋಟೆಲ್‌ನಿಂದ ಸ್ಥಳಾಂತರಿಸಿಕೊಂಡರು. ಲಜಪತರ ವಾಸ್ತವ್ಯ ಮೇಲು ಅಂತಸ್ತಿನಲ್ಲಿತ್ತು. ಕೆಳಗಿನ ಅಂತಸ್ತನ್ನು ಅವರು ಪೇಶಾವರದ ಕಿಶೋರಾಂ ಸಬರ್‌ವಾಲ್ ಎಂಬ ತರುಣ ಸಹವರ್ತಿಗೆ ಬಿಟ್ಟುಕೊಟ್ಟಿದ್ದರು. ಆತ ಲಜಪತರಿಗೆ ಕೆಲವು ವರ್ಷಗಳ ಹಿಂದೆ ಭಾರತದಲ್ಲಿ ಪರಿಚಿತನಾಗಿದ್ದವ. ಲಾಲಾಜಿಗಿಂತ ಮೊದಲೇ ಜಪಾನಿಗೆ ಬಂದಿದ್ದವ. ಶ್ರದ್ಧಾಳುವಾದ

ಆ ಯುವ ಸಹವಾಸಿ ಲಜಪತರಿಗೆ ಅನೇಕ ರೀತಿಯಲ್ಲಿ ಅನುಕೂಲಕರವೆನಿಸಿದ. ಅವರು ಜಪಾನ್‌ನಿಂದ ಮರಳುವತನಕ ಅವರ ಜೊತೆಯಲ್ಲೇ ಇದ್ದ. ಜಪಾನಿ ನಡವಳಿಕೆಗೆ ಅನುಗುಣವಾಗಿ ಓರ್ವ ಮಹಿಳಾ ಸೇವಕಿಯನ್ನು ಅಡಿಗೆ ಹಾಗೂ ಮನೆಕೆಲಸ ನಿರ್ವಹಣೆಗೆ ನೇಮಿಸಿಕೊಳ್ಳಲಾಗಿತ್ತು.

ಲಾಲಾಜಿ ಜಪಾನಿಗೆ ಆಗಮಿಸಿದ ಕಾರಣಗಳಲ್ಲಿ ಆ ಕ್ಷಣದಲ್ಲೇ ಅವರು ಕರ್ತವ್ಯಗಳ ಬಂಧಮುಕ್ತರಾಗಿದ್ದಂತೆ ಕಂಡು ಬಂದದ್ದು ಒಂದು. ಕೇವಲ ಖುಷಿಯ ಪ್ರವಾಸವಾಗಿ ಅವರು ಜಪಾನಿಗೆ ಭೇಟಿ ಕೊಟ್ಟವರಾಗಿರಲಿಲ್ಲ. ಅತ್ಯಾಧುನೀಕರಣದಲ್ಲಿ ಮಹತ್ಸಾಧನೆ ಮಾಡಿ ಪುನರ್ ಜನ್ಮ ಪಡೆದ ಆ ಪೌರಾತ್ಯ ರಾಷ್ಟ್ರದ ಭೇಟಿ ಅವರಲ್ಲಿ ನಿಜವಾಗಿಯೂ ಆಸಕ್ತಿ ಕೆರಳಿಸಿತ್ತು. ರಷ್ಯಾ ಹಾಗೂ ಜಪಾನ್ ಯುದ್ಧದ ನಂತರ ಪಂಜಾಬಿ ವಕೀಲರೊಬ್ಬರು ಜಪಾನಿನ ಪುನರುತ್ಥಾನ ಕುರಿತು ಹೊರತಂದ ಉರ್ದು ಕೈಪಿಡಿಯೊಂದಕ್ಕೆ ಲಜಪತರು ಪೀಠಿಕೆ ಬರೆದುಕೊಟ್ಟಿದ್ದರು. ಡಿ.ಎ.ವಿ. ಕಾಲೇಜಿನಲ್ಲಿ ಜಪಾನಿ ತರಗತಿಗಳನ್ನು ಆರಂಭಿಸಿದಾಗ ಜಪಾನಿ ಅಧ್ಯಾಪಕರೊಬ್ಬರನ್ನು ನೇಮಿಸಿಕೊಳ್ಳಲು ಅವರು ಕಾರಣಕರ್ತರಾಗಿದ್ದರು. ಅಂತಹ ವ್ಯವಸ್ಥೆ ಉತ್ತರ ಭಾರತದಲ್ಲಿ ಎಲ್ಲಿಯೂ ಆಗ ಲಭ್ಯವಿರಲಿಲ್ಲ. ಇಂಗ್ಲೆಂಡಿನಿಂದ ಅಮೆರಿಕಕ್ಕೆ ತಮ್ಮ ಪ್ರಯಾಣದ ಟಿಕೆಟ್‌ನ್ನು ಕಾಯ್ದಿರಿಸಿಕೊಳ್ಳುವುದಕ್ಕೂ ಮೊದಲು ಅವರು ನಡೆಸಿದ್ದ ಪತ್ರ ವ್ಯವಹಾರಗಳನ್ನು ವೀಕ್ಷಿಸಿದರೆ ಜಪಾನ್‌ಗೆ ಭೇಟಿ ಕೊಡುವ ಅವರ ಆಶಯ ವ್ಯಕ್ತವಾಗುತ್ತದೆ. ಜಪಾನಿನ ಅಮೋಘ ಪ್ರಗತಿಯ ರಹಸ್ಯವನ್ನು ಕಣ್ಣಾರೆ ಕಂಡು ತಮ್ಮ ಅಧ್ಯಯನದಲ್ಲಿ ಅದನ್ನು ಅಳವಡಿಸಿಕೊಳ್ಳುವ ಆಶಯ ಅವರದಾಗಿತ್ತು. ಅದಕ್ಕೂ ಹೆಚ್ಚಿನದಾಗಿ ಅವರ ಮನಸ್ಸಿನಲ್ಲಿ ಇನ್ನೊಂದು ಆಕಾಂಕ್ಷೆಯೂ ಇತ್ತು: ''ಎರಡು ದೇಶಗಳಿಗೆ ಕಾಯಂ ಮೌಲ್ಯ ತರಬಹುದಾದ ಸಂಬಂಧವೊಂದನ್ನು ಭಾರತ ಮತ್ತು ಜಪಾನ್ ನಡುವೆ ರೂಢಿಸುವ ಪ್ರಯತ್ನಕ್ಕಾಗಿ ನಾನು ನಿರ್ಧಾರ ಮಾಡಿಕೊಂಡಿದ್ದೆ. ಆ ಹಿನ್ನಲೆಯಲ್ಲೇ ನಾನು ಅಲ್ಲಿನ ವ್ಯಕ್ತಿಗಳನ್ನು ಮತ್ತು ಸಂಸ್ಥೆಗಳನ್ನು ಸಂದರ್ಶಿಸ ತೊಡಗಿದೆ.''

ಉಪನ್ಯಾಸಕ್ಕಾಗಿ ಆಹ್ವಾನಗಳು ಹೆಚ್ಚು ಕಡಿಮೆ ಎಲ್ಲಾ ವಿಶ್ವವಿದ್ಯಾಲಯಗಳಿಂದಲೂ (ಇಂಪೀರಿಯಲ್ ಹೊರತುಪಡಿಸಿ) ಬಂದವು. ಟೋಕಿಯೋದಲ್ಲಿದ್ದ ಪ್ರಮುಖ ಶಾಲೆಗಳಿಂದಲೂ ಆಹ್ವಾನಗಳು ಬಂದವು. ಒಸೆಗಾ ಮತ್ತು ಕಿಯೋ ವಿಶ್ವವಿದ್ಯಾಲಯಗಳ ಬಗ್ಗೆ ವಿಶೇಷ ಪ್ರಸ್ತಾಪ ಮಾಡಬೇಕಾಗುತ್ತದೆ. ಹೈಯರ್ ಕಮರ್ಷಿಯಲ್ ಶಾಲೆಯೂ ಸಹ ಹೆಚ್ಚು ಆಸಕ್ತಿ ವಹಿಸಿತು. ಕೌಂಟ್ ಒಕುಮೆ (ನಂತರ ಮಾರ್ಕಿಸ್) ಆಗಿನ ಪ್ರಧಾನ ಮಂತ್ರಿ. ಅವರೇ ಒಸೆಗಾ ವಿಶ್ವವಿದ್ಯಾಲಯಗಳ ಅಧ್ಯಕ್ಷರು. ವಿಶ್ವವಿದ್ಯಾಲಯದ ಡೀನ್ ಪ್ರೊ. ಶಿಯೋರಭಾವ ಅವರು ಲಜಪತರ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಂತರ ಅವರು ಲಜಪತರ ಅತ್ಯುತ್ತಮ ಗೆಳೆಯರಾದರು. ಆಗಿಂದಾಗ್ಗೆ ಲಜಪತರನ್ನು ಅವರು ನಿಪ್ಪೋನ್ ಕ್ಲಬ್‌ಗೆ ಆಹ್ವಾನಿಸುತ್ತಿದ್ದರು. ಆ ಕ್ಲಬ್ ಆ ವಿಶ್ವವಿದ್ಯಾಲಯದ ಪಕ್ಕದಲ್ಲೇ ಇತ್ತು.

ಕಿಯೋದಲ್ಲಿ ಲಜಪತರ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಲ್ಲಿನ ಅತ್ಯುನ್ನತ ಅಧಿಕಾರದ ಪ್ರೊ. ಕಮಡಾ ವಹಿಸಿದ್ದರು. (ಲಜಪತರು ಇಂಗ್ಲಿಷ್‌ನಲ್ಲಿ ಉಪನ್ಯಾಸ

ನೀಡುತ್ತಿದ್ದರು. ಆ ಭಾಷೆ ಬಲ್ಲ ಅಲ್ಲಿನ ಪ್ರೊಫೆಸರ್‌ಗಳು ಅದನ್ನು ಜಪಾನ್ ಭಾಷೆಗೆ ತರ್ಜುಮೆ ಮಾಡುತ್ತಿದ್ದರು.) ಅಲ್ಲಿಯೂ ಸಹ ಕ್ಲಬ್ ಸಂಪರ್ಕಗಳು ಬೆಳೆದವು. ಪ್ರೊ. ಕಮದಾ ಅವರು ಲಜಪತರನ್ನು ವಿಶ್ವವಿದ್ಯಾಲಯಗಳ 'ಕೊಜುನ್‌ಷಾ' ಕ್ಲಬ್‌ಗೆ ಬರಮಾಡಿಕೊಂಡರು. ಹೈಯರ್ ಕಮರ್ಷಿಯಲ್ ಶಾಲೆಯೂ ಕಾಲಾನಂತರದಲ್ಲಿ ವಾಣಿಜ್ಯ ವಿಶ್ವವಿದ್ಯಾಲಯವಾಗಿ ಪ್ರಗತಿ ಕಂಡಿತ್ತು. ಆ ಶಾಲೆಯ ಗವರ್ನರ್ ಬೇರೂಲ್ ಕಾಂಡ ಅವರು ಲಜಪತರ ಉಪನ್ಯಾಸ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು. ಅಲ್ಲಿಯ ಕಿರಿಯ ವಿದ್ಯಾರ್ಥಿಗಳಲ್ಲಿ ಓರ್ವ ಮುಂದೆ ಹೆಸರಾಂತ ಪ್ರೊಫೆಸರ್‌ಗಳಲ್ಲಿ ಓರ್ವರೆನಿಸಿದ ಉಯೇದಾ ತತ್ಸನುಸುಕೆ ಉಯೇದಾ ಪದೇ ಪದೇ ಲಜಪತರ ಮನೆಗೆ ಭೇಟಿ ಕೊಡುತ್ತಿದ್ದ. ಉಯೇದಾ ಲಜಪತರನ್ನು ತುಂಬಾ ಹಚ್ಚಿಕೊಂಡಿದ್ದ. ವಿದ್ಯಾರ್ಥಿ ಜಪಾನಿ ಪತ್ರಿಕೆಗಳಲ್ಲಿ ಅವರ ಬಗ್ಗೆ ಪ್ರಕಟಣೆಗೊಳ್ಳುತ್ತಿದ್ದ ವರದಿಗಳನ್ನು ಆತ ತರ್ಜುಮೆ ಮಾಡಿ ತಿಳಿಸುತ್ತಿದ್ದ. ಲಾಲಾಜಿ ಆ ವಿದ್ಯಾರ್ಥಿಯನ್ನು ತಮ್ಮೊಂದಿಗೆ ಉಪಹಾರಕ್ಕೋ, ಊಟಕ್ಕೋ ಜೊತೆಗೂಡಿಸಿಕೊಳ್ಳುತ್ತಿದ್ದರು.

ಲಜಪತರು ಪ್ರಧಾನಿ ಉಕುಮಾ ಅವರ ಸಂದರ್ಶನ ಪಡೆದರು. ಸುಮಾರು ಒಂದೂವರೆ ತಾಸಿನ ಆ ಸಂದರ್ಶನದಲ್ಲಿ ಪ್ರೊಫೆಸರ್ ಒಸೆದಾ ದುಭಾಷಿಯಾಗಿದ್ದರು. ಪ್ರಧಾನ ಮಂತ್ರಿ ಜಪಾನಿ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆದರೂ ಲಜಪತರ ಇಂಗ್ಲಿಷನ್ನು ಅನುಕರಿಸುತ್ತಿದ್ದರು. ಜಪಾನ್ ದೇಶವು ಮಿತ್ರ ರಾಷ್ಟ್ರಗಳ ಜೊತೆಯಲ್ಲಿದ್ದರೂ ಐರೋಪ್ಯ ರಾಷ್ಟ್ರಗಳು ಪರಸ್ಪರ ಮಾರಕ ಯುದ್ಧದಲ್ಲಿ ತೊಡಗಿದ್ದ ಬಗ್ಗೆ ಹರ್ಷಚಿತ್ತರಾಗಿದ್ದಾರೆಂದು ಲಜಪತರು ದಾಖಲೆ ಮಾಡಿದ್ದಾರೆ. ಪರಸ್ಪರ ವೈರಿಗಳು ನಿರ್ನಾಮವಾಗುವತನಕ ಆ ಯುದ್ಧ ನಿಲ್ಲಬಾರದೆಂದು ಅವರು ಆಶಿಸಿದರು! (ಅಮೆರಿಕ ಆಗಿನ್ನೂ ತಟಸ್ಥವಾಗಿತ್ತು) ಒಕುಮಾ ಅವರು ಒಸೆದಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಕುರಿತೂ ಅದೇ ಸ್ವರದಲ್ಲಿ ಮಾತನಾಡಿದರು. ರಾಜತಾಂತ್ರಿಕ ವಿಷಯಗಳಲ್ಲಿ ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡ ಜಪಾನಿ ಪ್ರಧಾನಮಂತ್ರಿಯ ಆ ನಡವಳಿಕೆ ಲಜಪತರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿತು. ಟೋಕಿಯೋ ಪತ್ರಕರ್ತರು ಲಜಪತರ ಗೌರವಾರ್ಥ ಔತಣಕೂಟವೊಂದನ್ನು ಏರ್ಪಡಿಸಿದ್ದರು. ಏಷ್ಯಾ ಒಕ್ಕೂಟವೊಂದರ ಸ್ಥಾಪನೆಯ ಸಲಹೆಯನ್ನು ಲಜಪತರು ಆ ಔತಣಕೂಟದ ಭಾಷಣದಲ್ಲಿ ಒತ್ತಿ ಹೇಳಿದರು. ಪತ್ರಿಕೆಗಳಲ್ಲಿ ಆ ಸಲಹೆಗೆ ಮಹತ್ವದ ಸ್ಥಾನ ದೊರೆಯಿತು. ಆದರೆ ಆ ಬಗ್ಗೆ ಯಾವುದೇ ಬೆಳವಣಿಗೆ ಆಗಲಿಲ್ಲ. ಆಗಷ್ಟೇ ಆರಂಭ ಸ್ಥಿತಿಯಲ್ಲಿದ್ದ ಸಣ್ಣ ಪ್ರಮಾಣದ ಯೋಮಿಯೂರಿ-ಶಿಂಬಮ್ ಪತ್ರಿಕಾಲಯದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಲಜಪತರು ಮಾತನಾಡಿದರು. ಈಗ ಜಪಾನಿನಲ್ಲಿ ಅತಿ ಹೆಚ್ಚು ಪ್ರಸಾರದಲ್ಲಿರುವ ಮೂರು ಮಹಾನಗರ ನಿಯತಕಾಲಿಕೆಗಳ ಪೈಕಿ ಅದು ಒಂದಾಗಿದೆ. ಅದರ ಪ್ರಸಾರ ಸಂಖ್ಯೆ ಜಪಾನಿನಾದ್ಯಂತ ಅರ್ಧ ದಶಲಕ್ಷಕ್ಕೂ ಹೆಚ್ಚು. ಆ ಪತ್ರಿಕೆಯಲ್ಲಿ ಲಾಲಾಜಿ ಅವರಿಗೆ ಅತ್ಯುತ್ತಮ ಪ್ರಚಾರ ಸಿಕ್ಕಿತು. ಅವರ ಅನೇಕ ಲೇಖನಗಳು ಕುಕುಮಿನ್ ಶಿಂಬಮ್ ಪತ್ರಿಕೆಯಲ್ಲಿ ಪ್ರಕಟಗೊಂಡವು. ಈಗ ಆ ಪತ್ರಿಕೆ ಇಲ್ಲ. ಆ ದಿನಗಳಲ್ಲಿ ಅದು ಅತ್ಯಂತ ಪ್ರಭಾವಿ ಪತ್ರಿಕೆಯಾಗಿತ್ತು. ಅಸಹಿ ಶಿಂಬಮ್ ಪತ್ರಿಕೆಯ ಕೆಲವು ಪತ್ರಕರ್ತರು ಲಜಪತರನ್ನು ಆಗಿಂದಾಗ್ಗೆ ಭೇಟಿ ಮಾಡುತ್ತಿದ್ದರು. ಈಗ

ಆ ಪತ್ರಿಕೆ ಜಗತ್ತಿನ ಅತಿ ಹೆಚ್ಚು ಪ್ರಸಾರ ಸಂಖ್ಯೆಯ ದೈನಿಕಗಳಲ್ಲಿ ಒಂದಾಗಿದೆ. ಭಾಷಾ ಅನಾನುಕೂಲವಿದ್ದರೂ ಜಪಾನಿ ಪತ್ರಿಕೆಗಳಲ್ಲಿ ಲಜಪತರಿಗೆ ಉತ್ತಮ ಸ್ಥಾನಮಾನ ದೊರೆಯಿತು.

ಲಜಪತರು ಸಾಧಿಸಿಕೊಂಡ ರಾಜಕಾರಣ ಮುತ್ಸದ್ದಿಗಳು ಮತ್ತು ರಾಜಕಾರಣಿಗಳ ಒಡನಾಟದ ಪೈಕಿ ಹೆಚ್ಚು ಪ್ರಮುಖವಾದದ್ದು ಪ್ರಧಾನಿ ಒಕೂಮಾ ಸಂಪರ್ಕ. ಆದರೆ ಅವರ ಅಧಿಕಾರದ ಸ್ಥಾನ ಆ ಸಂಬಂಧದಲ್ಲಿ ಕೆಲವು ತಾಂತ್ರಿಕ ನಿರ್ಬಂಧ ಹಾಕಿತ್ತು. ಒಕುಮಾ ಅವರಿಗೆ ತುಂಬಾ ನಿಕಟವಾಗಿದ್ದ ವಸೀದಾ ದೇನಾ, ಪ್ರೊ. ಶಿಯೋರಭಾವ ಅವರೊಂದಿಗೆ ನಿಪ್ಪೋನ್ ಕ್ಲಬ್‌ನಲ್ಲಿ ನಡೆಸುತ್ತಿದ್ದ ಸ್ನೇಹಾನುಬಂಧದ ಮಾತುಕತೆಗಳಲ್ಲಿ ಪ್ರಧಾನ ಮಂತ್ರಿಯವರ ಕಾರ್ಯವಿಧಾನ ಮತ್ತು ಆಲೋಚನೆಗಳ ಪ್ರಸ್ತಾಪವಾಗುತ್ತಿತ್ತು. ಅದರ ಆಧಾರದ ಮೇಲೆ ಕೌಂಟ್ ಒಕುಮಾ ಅವರ ನಿಲುವು ಧೋರಣೆಯನ್ನು ಲಜಪತರು ನಿರ್ಧರಿಸಿಕೊಳ್ಳುತ್ತಿದ್ದರು.

ಲಜಪತರು ಕೌಂಟ್ ಒಕುಮಾ ಸಂಪುಟದ ಅನೇಕ ಸಚಿವರನ್ನು ಹಾಗೂ ಇತರೆ ರಾಜಕೀಯ ಮುಖಂಡರನ್ನು ಭೇಟಿ ಮಾಡಿದರು. ಒಟ್ಟಾರೆ ಅವರ ಎಲ್ಲಾ ಆ ಭೇಟಿಗಳು ಮತ್ತು ಸಂದರ್ಶನಗಳು ಹತಾಶದಾಯಕವಾಗಿದ್ದವು. ಅವರು ಪ್ರಸ್ತಾಪಿಸಿದ 'ಏಷ್ಯನ್ ಒಕ್ಕೂಟ' ಪ್ರಸ್ತಾವ ಜಪಾನಿ ರಾಜಕಾರಣ ಸ್ಥಿತಿಗೆ ಸಮಂಜಸವಲ್ಲವೆಂಬ ವಾಸ್ತವ ಅವರಿಗೆ ಅತಿ ಬೇಗ ಮನವರಿಕೆಯಾಯಿತು. ಜಪಾನಿ ರಾಜಕೀಯ ನಾಯಕರು ಯಾವ ಕಾರಣದಿಂದಲೂ ಚೀನಾ ಬಲಗೊಳ್ಳುವುದನ್ನು ಇಚ್ಚಿಸುತ್ತಿರಲಿಲ್ಲ. ಆ ದೇಶವನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಶೋಷಿಸಲು ಜಪಾನ್ 'ಮುಕ್ತ ಅವಕಾಶ' ಬಯಸುತ್ತಿತ್ತು. ಭಾರತದ ವಿಷಯದಲ್ಲಿ ಆಂಗ್ಲೋ ಜಪಾನಿ ಮೈತ್ರಿ ಅಸಾಧ್ಯದ ಅಡ್ಡವನ್ನು ಮುಂದು ಮಾಡಿಕೊಂಡರು. ಅಂತಹ ಹೊಂದಾಣಿಕೆ ಸಾಧ್ಯವಾಗದ್ದೆಂದೂ ಹೇಳಿದರು. ಸಿಂಗಪುರದಲ್ಲಿ ಭಾರತೀಯ ಸೈನಿಕರು ನಡೆಸಿದ ಬಂಡಾಯಕ್ಕೆ ಜಪಾನಿನ ನೀಲಿ ಅಂಗಿ ಯೋಧರು ಬೆಂಬಲ ನೀಡಿ ಬ್ರಿಟನ್ ಶಕ್ತಿಯನ್ನು ಬಗ್ಗುಬಡಿದಿದ್ದರು. ಬ್ರಿಟಿಷ್ ಚಕ್ರಾಧಿಪತ್ಯದ 'ಆಂತರಿಕ ವಿಷಯ'ವೊಂದರಲ್ಲಿ ಜಪಾನಿ ಅಧಿಕಾರಸ್ಥರು ಹಸ್ತಕ್ಷೇಪ ಮಾಡಿದ ಪ್ರಸಂಗ ಅದಾಗಿತ್ತು.' ಕೆಲವು ಲೇಖಕರು ಜಪಾನಿ ಪತ್ರಿಕೆಗಳಲ್ಲಿ ಕಟುವಾಗಿ ಟೀಕಿಸಿದ್ದರು ಕೂಡಾ. ಮಿತ್ರ ರಾಷ್ಟ್ರಗಳ ವಿಷಯದಲ್ಲಿ ಅಲ್ಲಿನ ಕೆಲವು ಪತ್ರಿಕೆಗಳು ವ್ಯಗ್ರವಾಗಿದ್ದವು. ಮಿತ್ರ ರಾಷ್ಟ್ರಗಳು ಚೈನಾದಲ್ಲಿದ್ದ ವಿದೇಶಿ ಶಕ್ತಿಗಳಿಗೆ ಬೆಂಬಲ ನೀಡಿ ಜಪಾನಿನ 'ಮುಕ್ತ ಹಸ್ತ'ಕ್ಕೆ ಅಡ್ಡಿಯಾಗಿದ್ದವೆಂಬ ಕಾರಣ ಅಲ್ಲಿ ಪ್ರಧಾನವಾಗಿತ್ತು. ಇವೆಲ್ಲವೂ ಏಷ್ಯಾ ಏಕತೆಯ ವಿಷಯದಲ್ಲಿ ಒಕ್ಕೂಟವೊಂದರ ರಚನೆಗೆ ಲಜಪತರು ಬಯಸಿದ ಆಶಯಕ್ಕೆ ವ್ಯತಿರಿಕ್ತವಾಗಿತ್ತು

ಆ ಭೇಟಿಯ ಕಾಲದಲ್ಲಿ ಲಜಪತರಿಗೆ ಹೊಸ ಸಂಪರ್ಕವೊಂದು ಪ್ರಾಪ್ತವಾಯಿತು. ಚೀನಾದ ಮಹಾನ್ ನಾಯಕರೆನಿಸಿದ ಡಿ. ಸನ್ ಯಾಟ್ ಅವರೊಂದಿಗಿನ ಭೇಟಿ ಅದು. 1913ರ ಜುಲೈನಲ್ಲಿ ನಡೆದ ಚೈನಾದ ಎರಡನೇ ಕ್ರಾಂತಿಯ ವೈಫಲ್ಯದ ನಂತರ ಅವರು ಜಪಾನಿನಲ್ಲಿ ರಾಜಕೀಯ ಆಶ್ರಯ ಪಡೆದಿದ್ದರು. ಲಜಪತರು ಬಯಸಿದ 'ಏಷ್ಯನ್ ಒಕ್ಕೂಟ' ರಾಷ್ಟ್ರಗಳ ಪರಿಕಲ್ಪನೆ ಡಿ. ಸನ್ ಯಾಟ್‌ರ ಮೂಲ ಆಲೋಚನೆಗೆ

ಪೂರಕವಾಗಿತ್ತು. ಲಜಪತರು ಜಪಾನಿನಲ್ಲಿ ಇರುವಷ್ಟು ಕಾಲ ಆ ಇಬ್ಬರು ಪದೇ ಪದೇ ಭೇಟಿಯಾಗಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಆ ಭೇಟಿ ಉತ್ತಮ ಸ್ನೇಹವಾಗಿ ವರ್ಧಿಸಿತು. ಅಮೆರಿಕ ಹಿನ್ನಲೆ ಹೊಂದಿದ್ದ ಮೇಡಂ ಸೆನ್ ಇಬ್ಬರ ಮಿತ್ರರ ಮಾತುಕತೆಗೆ ದುಭಾಷಿಯಾಗಿ ನೆರವಾಗುತ್ತಿದ್ದರು. ಆ ಇಬ್ಬರ ಭೇಟಿಯ ಸಮಯದ ಸಂದರ್ಶನಗಳ ಬಗ್ಗೆ ಯಾವುದೇ ಅಧಿಕಾರಯುತ ದಾಖಲೆ ಲಭ್ಯವಿಲ್ಲದಿರುವುದು ದುರದೃಷ್ಟಕರ.

ಜಪಾನ್‌ನಲ್ಲಿರುವ ಭಾರತೀಯ ಸಮುದಾಯದ ಬಗ್ಗೆ ನಮಗೆ ಏನನ್ನೂ ತಿಳಿಸಿಲ್ಲ. ಲಾಲಾಜಿ ಅವರ ಹೊಸ ಒಡನಾಟಗಳಲ್ಲಿ ಪಿ.ಎನ್. ಠಾಕೂರ್ ಅವರ ವಿಶೇಷ ಪ್ರಸ್ತಾಪ ಬರುತ್ತದೆ. ಇತರ ಕೆಲವು ಕ್ರಾಂತಿಕಾರಿಗಳ ಬಗ್ಗೆಯೂ ಹೇಳಲಾಗಿದೆ. ಮುಂದಿನ ಅಧ್ಯಾಯದಲ್ಲಿ ಈ ಬಗ್ಗೆ ತಿಳಿದುಕೊಳ್ಳೋಣ. ಲಜಪತರು ಜಪಾನ್‌ನಲ್ಲಿ ಓರ್ವ ವಿದ್ಯಾರ್ಥಿಯಂತೆ ಅಧ್ಯಯನ ಮಾಡಿದ್ದನ್ನು ಕಲ್ಕತ್ತಾದ ಮಾಡರ್ನ್ ರಿವ್ಯೂ ಪತ್ರಿಕೆಯ ಮೂಲಕ ತಮ್ಮ ದೇಶವಾಸಿಗಳಿಗೆ ಮಾಹಿತಿ ಒದಗಿಸಿದರು. ಅದೆಲ್ಲವನ್ನು ಸೇರಿಸಿ ಜೊತೆಗೆ ಇನ್ನೂ ಸ್ವಲ್ಪ ಹೆಚ್ಚಿನದನ್ನು ಒಳಪಡಿಸಿ ಒಂದು ಕೃತಿಯನ್ನು ಹೊರತರಲಾಯಿತು. ಜಪಾನ್‌ನ ಕ್ರಾಂತಿ ಮತ್ತು ಇತರ ಪತ್ರಿಕೆಗಳು ಎಂದು ಅದಕ್ಕೆ ಹೆಸರಿಡಲಾಯಿತು. ಪತ್ರಿಕೆಗಳು ಎಂಬ ಪದವನ್ನು ಜಪಾನಿನ ಪರಿಸ್ಥಿತಿಯನ್ನು ವಿಶದವಾಗಿ ತಿಳಿಸುವ ವಿಶಾಲ ಅರ್ಥದಲ್ಲಿ ಹೊರತರಲಾಯಿತು. ಅಂದರೆ ಅಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳೆಲ್ಲವೂ ಅದರಲ್ಲಿ ಸಾಧ್ಯವಾದಷ್ಟು ವ್ಯಾಪಕವಾಗಿವೆ.

ಲಜಪತರಿಗೆ, ''ಜಪಾನಿಯರ ಆಳವಾದ ದೇಶಭಕ್ತಿ ಹೆಚ್ಚು ಆಸಕ್ತಿ ಹುಟ್ಟಿಸಿತು. ಕೇವಲ 50 ವರ್ಷಗಳ ಅವಧಿಯೊಳಗೆ ಬದುಕಿನ ಎಲ್ಲಾ ಮುಖಗಳಲ್ಲೂ ಅವರು ಸಾಧಿಸಿದ ಅದ್ಭುತ ಪ್ರಗತಿ ಸೆಳೆಯಿತು. ಅಂದರೆ ಮೀಜಿ ಯುಗದ ನಂತರ ಅಲ್ಲಿ ಹೊಸ ಶಕೆಯೊಂದು ಅರಳಿದೆ. ಅವರ ಯಶಸ್ಸಿನ ಗುಟ್ಟಿನ ಅಧ್ಯಯನ ಮಾಡುವುದು ಅತ್ಯಂತ ಉಪಯುಕ್ತವೆನಿಸಿತು. ತಮ್ಮನ್ನು ತಾವು ಉಳಿಸಿಕೊಂಡಿದ್ದಷ್ಟೇ ಅಲ್ಲದೇ ಐರೋಪ್ಯ ಅತ್ಯಾಸೆಗಳಿಗೆ ಬಲಿಯಾಗದಂತೆ ತಮ್ಮನ್ನು ತಾವು ರಕ್ಷಿಸಿಕೊಂಡ ಲಕ್ಷಣಗಳನ್ನು ಅಧ್ಯಯನ ಮಾಡಬೇಕೆನಿಸಿತು. ರಷ್ಯಾ ಜಪಾನಿ ಯುದ್ಧದಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಮೆರೆಸಿ ಸುವ್ಯವಸ್ಥಿತ ಹಾಗೂ ಸಮರ್ಥ ರಾಷ್ಟ್ರ ತಮ್ಮದೆಂಬುದನ್ನು ಮೆರೆಸಲು ಅವರಿಗೆ ಸಹಾಯಕವಾದ ಪ್ರೇರಣೆಯ ಗುಟ್ಟನ್ನು ತಿಳಿದುಕೊಳ್ಳಬೇಕೆನಿಸಿತು.''

ಲಜಪತರು ಜಪಾನಿನಲ್ಲಿದ್ದ ಅವಧಿಯಲ್ಲಿ ನಡೆದ ಮಹತ್ತರ ಘಟನೆ ಚಕ್ರವರ್ತಿ ತೈಷೋ ಪಟ್ಟಾಭಿಷೇಕ. ಅಲ್ಲಿದ್ದ ಭಾರತೀಯ ಸಮುದಾಯದವರು ತಮ್ಮ ಸಂತೋಷದ ಪ್ರತೀಕವಾಗಿ ಔತಣಕೂಟವೊಂದನ್ನು ಸಂಯೋಜಿಸಿದರು. ಅಧ್ಯಕ್ಷತೆ ವಹಿಸಲು ಲಾಲಾಜಿಯವರನ್ನು ಕೇಳಿಕೊಳ್ಳಲಾಯಿತು. ಆ ಆಹ್ವಾನ ಒಪ್ಪಿಕೊಳ್ಳುವ ಮೊದಲು ಅವರು ಎರಡು ಷರತ್ತುಗಳನ್ನು ಮುಂದಿಟ್ಟರು. ಭಾರತೀಯ ಸಮುದಾಯದ ಪರವಾಗಿ ಮಾತನಾಡುವವರು ತಾವೊಬ್ಬರೇ ಆಗಿರಬೇಕು ಎಂಬುದು ಮೊದಲನೆಯದು. ಯಾವುದೇ 'ಸ್ವಸ್ತಿವಾಚನವಾಗಲಿ', 'ರಾಜಕೀಯ ಭಾಷಣವಾಗಲಿ' ಇರಬಾರದು ಎಂಬುದು ಎರಡನೇಯದು. ಭಾರತೀಯ ಸಮುದಾಯ ಔತಣಕೂಟ 1915ರ ನವೆಂಬರ್ 27ರಂದು

ಉಯೇನೋ ಸೈಕೇನ್ ಹೋಟೆಲ್‌ನಲ್ಲಿ ಏರ್ಪಟ್ಟಿತು. ಅದೊಂದು ಉತ್ಕೃಷ್ಟ ಕೂಟ. ಬಹುಜನರು ಪಾಲ್ಗೊಂಡರು. ಭಾರತೀಯೇತರರಲ್ಲಿ ಅಮೆರಿಕನ್ನರು ಮತ್ತು ಬ್ರಿಟಿಷರು ಇದ್ದರು. ಹೆಚ್ಚಿನದಾಗಿ 70 ಜಪಾನಿ ಆಹ್ವಾನಿತರಿದ್ದರು. ಅವರಲ್ಲಿ ಬಹುತೇಕ ಮಂದಿ ಪ್ರಬುದ್ಧ ಶಿಕ್ಷಣವೇತ್ತರು. ಟೋಕಿಯೋದ ಎಲ್ಲಾ ವಿಶ್ವವಿದ್ಯಾಲಯಗಳು ಹಾಗೂ ಪ್ರಮುಖ ಕಾಲೇಜುಗಳ ಪ್ರಾತಿನಿಧ್ಯವಿತ್ತು. ಉಳಿದಂತೆ ಪತ್ರಿಕೋದ್ಯಮ, ವ್ಯಾಪಾರ, ಉದ್ಯಮ, ರಾಜಕಾರಣ ವಲಯಗಳಿಂದ ಖ್ಯಾತಿವೇತ್ತರರು ಆಗಮಿಸಿದ್ದರು. ಓರ್ವ ಅಮೆರಿಕನ್ ಯಹೂದಿ ಒಡೆತನದ ದಿ ಜಪಾನ್ ಅಡ್ವರ್ಟೈಸರ್ ಪತ್ರಿಕೆಯ ಬ್ರಿಟಿಷ್ ಸಂಪಾದಕ ಹ್ಯೂ ಬಯಾಸ್ ಮರುದಿನದ ತಮ್ಮ ಸಂಚಿಕೆಯಲ್ಲಿ ಆ ಬಗ್ಗೆ ವರದಿಯೊಂದನ್ನು ನೀಡಿದರು. ಲಜಪತರ ವಾಕ್ಪಟುತ್ವ ಲಾಯ್ಡ್ ಜಾರ್ಜ್‌ರನ್ನು ನೆನಪಿಗೆ ತಂದಿತು ಎಂದು ಅವರು ಬಣ್ಣಿಸಿದರು. ರಾಜಕೀಯವನ್ನು ಆ ಭಾಷಣದಿಂದ ಹೊರತುಪಡಿಸಿ ಲಜಪತರು ತಮ್ಮ ನಾಡಿನ ಜನತೆಯ ಪರವಾಗಿ ಅಭಿಮಾನಪೂರ್ವಕ ಗೌರವ, ಆದರಗಳ ಸ್ನೇಹ ಸೌಹಾರ್ದಗಳನ್ನು ಸಮರ್ಪಿಸಿದರೆಂದು ವರದಿಯಲ್ಲಿ ಚಿತ್ರಿಸಲಾಯಿತು.

ಆ ಔತಣಕೂಟದ ಹಿನ್ನೆಲೆಯಲ್ಲಿ ಕೆಲವು ಬೆಳವಣಿಗೆಗಳಾದವು. ಆ ಬೆಳವಣಿಗೆಗೆ ಔತಣಕೂಟವೇ ಕಾರಣವೆಂದು ಹೇಳಲಾಗದಿದ್ದರೂ ಭಾರತೀಯ ಸಮುದಾಯದಲ್ಲಿ ಸಾಕಷ್ಟು ಗೊಂದಲವೇರ್ಪಟ್ಟಿತು. ಇವೆಲ್ಲವನ್ನು ಮುಂದಿನ ಅಧ್ಯಾಯದಲ್ಲಿ ಓದೋಣ.

ಸ್ವಯಂ ಘೋಷಿತ ಈ ಗಡಿಪಾರು ಲಜಪತರಿಗೆ ಸ್ವದೇಶಕ್ಕೆ ಮರಳಲು ಇನ್ನೂ ಸಮ್ಮತಿ ನೀಡಲಿಲ್ಲ. ತಮ್ಮ ಆತ್ಮಕಥೆಯಲ್ಲಿ ಅವರು ಈ ಬಗ್ಗೆ ಬರೆದುಕೊಂಡಿರುವುದನ್ನು ನಾವು ಓದಬಹುದು. "ಅಮೆರಿಕದಿಂದ ಹೊರಡುವಾಗ ನಾನು ಮತ್ತೆ ಅಲ್ಲಿಗೆ ವಾಪಸಾಗುವ ಆಶಯ ಹೊಂದಿರಲಿಲ್ಲ. ಭಾರತಕ್ಕೆ ವಾಪಸಾಗುವುದು ಎಂದು ಕೊಂಡಿದ್ದೆ. ನನ್ನ ವೈಯಕ್ತಿಕ ಸುರಕ್ಷತೆಯ ದೃಷ್ಟಿಯಿಂದಲೂ ನನ್ನ ಆಶಯ ಅದಾಗಿತ್ತು. ಜಪಾನ್‌ನಲ್ಲಿ ಎರಡು ವಾರಕ್ಕಿಂತ ಹೆಚ್ಚು ಕಾಲ ಇರಲಾಗಲಿಲ್ಲ. ಆಗ ಭಾರತಕ್ಕೆ ಮರಳುವುದು ಸುರಕ್ಷಿತವೆಂದು ಅನಿಸಲಿಲ್ಲ." ಲಜಪತರು ಬಳಸಿರುವ 'ಸುರಕ್ಷತೆ' ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಬಹುಶಃ ಅವರು ಆ ಪದವನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಂಡಿರಲೂ ಬಹುದು. ಯುದ್ಧದಲ್ಲಿ ಎಲ್ಲವೂ ಅನುಕೂಲಕರವಾಗಿಯೇ ಇತ್ತು. ಆದರೆ ತಾವು ಬ್ರಿಟಿಷರನ್ನು ಕೆಣಕಿರುವ ವಿಷಯದಲ್ಲಿ ಅವರಿಗೆ ಕಿಂಚಿತ್ತೂ ಅನುಮಾನವಿರಲಿಲ್ಲ. ಅವರನ್ನು ಬಂಧಿಸಿ ಸೆರೆಮನೆಯಲ್ಲಿಡುವುದಷ್ಟೇ ಅಪಾಯ ಎನ್ನುವುದಕ್ಕಿಂತಲೂ ಯಾವುದೇ ವಿಚಾರಣೆ ಇಲ್ಲದೆ ಇನ್ನು ಘೋರವಾದ ಪ್ರಕರಣ ಸಂಭವಿಸುವ ಸಾಧ್ಯತೆಯೂ ಇತ್ತು. ಐರಿಷ್ ದೇಶಭಕ್ತ ರೋಜರ್ ಕ್ಯಾಸ್ಮೆಂಟ್ ವಿರುದ್ಧ ಬ್ರಿಟಿಷರು ನಡೆಸಿದ ಘೋರ ಕೃತ್ಯ ಪರಿಚಿತವಾಗಿತ್ತು. ಎಂ.ಎನ್. ರಾಯ್ ಅವರು ತಮ್ಮ 'Memoirs' ಕೃತಿಯಲ್ಲಿ ಅವರನ್ನು ಅಪಹರಿಸಲು ಪದೇ ಪದೇ ನಡೆದ ಯತ್ನದ ಬಗ್ಗೆ ವಿವರವಾಗಿ ಬರೆದಿದ್ದಾರೆ.

ಭಾರತದ ರಕ್ಷಣಾ ಕಾಯ್ದೆ ಪ್ರಕಾರ ದೇಶದ ಯುದ್ಧ ಕಾಲದ ಪರಿಸ್ಥಿತಿ, ಪಂಜಾಬಿನಲ್ಲಿ ಓ ಡಯರ್ ಆಡಳಿತದ ವೈಖರಿ, ಯುದ್ಧದ ಬಗೆ ತಮ್ಮ ನಿಲುವು ಕುರಿತು ಲಜಪತರು ತಾಳಿದ ಧೋರಣೆಯನ್ನು ಬ್ರಿಟಿಷ್ ಪತ್ರಿಕೆಗಳು ವಿವರವಾಗಿ ವರದಿ

ಮಾಡಿದ್ದವು. ಜರ್ಮನ್ ಪರವಾಗಿದ್ದ ಫಡ್ರೈಟ್ಸ್ ಜೊತೆ ಅವರು ಮುಕ್ತವಾಗಿ ಮಾತನಾಡುತ್ತಿದ್ದ, ಒಡನಾಟವಾಡುತ್ತಿದ್ದ ಬಗ್ಗೆ ಬೇಹುಗಾರಿಕೆ ದಳದವರು ಅತಿ ವರ್ಣ ರಂಜಿತವಾಗಿ ವರದಿಗಳನ್ನು ಕೊಟ್ಟಿರುವ ಸಾಧ್ಯತೆಗಳು ಇತ್ತು. ಈ ಎಲ್ಲಾ ಹಿನ್ನಲೆಯಲ್ಲಿ ಲಜಪತರ ಜೀವಕ್ಕೆ ಭಾರೀ ಗಂಡಾಂತರದ ಸಂಭವವಿತ್ತು. ಅದರಲ್ಲೂ ಸಿಂಗಪುರದಲ್ಲಿ ಎದ್ದ ಸಿಪಾಯಿ ದಂಗೆಯ ನಂತರ ಉಗ್ರವಾದದ ದೇಶವಾಸಿಗಳಿಗೆ ಭಾರೀ ಕಿರುಕುಳ ನೀಡುತ್ತಿರುವ ವರದಿಗಳು ಬರುತ್ತಿದ್ದವು. ಭಾರತಕ್ಕೆ ವಾಪಸಾಗುವ ತಮ್ಮ ಉದ್ದೇಶವನ್ನು ಅವರು ಈ ಹಿನ್ನಲೆಯಲ್ಲಿ ಕೈಬಿಟ್ಟರು. ಒಂದು ವಾರ ಜಪಾನ್‌ನಲ್ಲಿ ಇದ್ದದ್ದು ಹಾಗೂ ಅಲ್ಲಿನ ಅವರ ನಡವಳಿಕೆಗಳು ವರದಿಯಾಗಿದ್ದವು. ಚೀನಾ ಸಮುದ್ರದ ಮುಖಾಂತರ ಭಾರತಕ್ಕೆ ವಾಪಸಾದವರಿಗೆ ಶಿಕ್ಷೆ ಕೊಡುತ್ತಿದ್ದದ್ದು ಅವರಿಗೆ ತಿಳಿದು ಬಂದಿತ್ತು. ಹಾಗೆ ಬರುತ್ತಿದ್ದವರನ್ನು ಬಂಧಿಸಿ, ಶೋಧಕ್ಕೆ ಒಳಪಡಿಸಿ ಅವರನ್ನು ಬಂಧನದಲ್ಲಿ ಇಡಲಾಗುತ್ತಿತ್ತು. ಇಲ್ಲವೇ ಹಾಂಕಾಂಗ್‌ನಲ್ಲಿಯೋ ಅಥವಾ ಸಿಂಗಪುರದಲ್ಲಿಯೋ ಮಾರ್ಗ ಮಧ್ಯೆಯಲ್ಲಿ ಕಿರುಕುಳ ನೀಡಲಾಗುತ್ತಿತ್ತು. ಅಂತಹ ಕಿರುಕುಳಕ್ಕೆ ಒಳಪಟ್ಟವರಲ್ಲಿ ಲಜಪತರ ಗೆಳೆಯ ಶಿವಪ್ರಸಾದ್ ಗುಪ್ತ ಸಹ ಒಬ್ಬರಾಗಿದ್ದರು.

ಹೀಗಾಗಿ ಲಜಪತರು ಭಾರತಕ್ಕೆ ವಾಪಸಾಗುವ ಉದ್ದೇಶವನ್ನು ಕೈಬಿಡಬೇಕಾಯಿತು. ಜಪಾನಿನ ಉನ್ನತ ಅಧಿಕಾರಸ್ಥರು ಲಜಪತರನ್ನು ಅತ್ಯಂತ ಗೌರವದಿಂದ ಅತಿಥಿ ಆದರಗಳಿಂದ ಸನ್ಮಾನಿಸುತ್ತಿದ್ದದ್ದೇನೋ ದಿಟ. ಆದರೆ ರಾಷ್ಟ್ರೀಯ ನೀತಿಯ ಭಾಗವಾಗಿ ಮೈತ್ರಿಯ ಒಡಬಂಡಿಕೆಯಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಪರಿಸ್ಥಿತಿ ಹೇಗಾಗಬಹುದೆಂಬ ಒಳ ಆತಂಕವೂ ಅವರನ್ನು ಆವರಿಸದಿರಲಿಲ್ಲ. ಪ್ರೊ. ಪಿಸೋರಿಯಾವೋ ಒಮ್ಮೆ ಅವರೊಂದಿಗೆ ಮಾತನಾಡುತ್ತಾ ''ಜಪಾನಿನಲ್ಲಿ ಇರುವುದು ವಿಹಿತ'' ಎಂದು ತಿಳಿಸಿದರೂ 'ವ್ಯಕ್ತಿಗತ' ಅಭಿಪ್ರಾಯದಲ್ಲಿ ಬ್ರಿಟಿಷರು ಒತ್ತಡ ಹಾಕಿದರೆ ಯಾರೂ ತಮ್ಮನ್ನು ರಕ್ಷಿಸಲಾಗುವುದಿಲ್ಲ ಎಂದೂ ಹೇಳಿದ್ದರು. ಇನ್ನು ಹೆಚ್ಚಿನದಾಗಿ ಜಪಾನಿನಲ್ಲಿ ತಾವು ಮಾಡುವುದೇನೂ ಉಳಿದಿಲ್ಲವೆಂದು ಲಜಪತರಿಗೆ ಅನಿಸಿತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಾದರೆ ತಮ್ಮ ದೇಶಕ್ಕಾಗಿ ಏನ್ನನಾದರೂ ಮಾಡಬಹುದು ಎನಿಸಿತು. ತನ್ನ ತಾಯ್ನಾಡಿನ ರಾಯಭಾರಿಯಾಗಿ ಅಮೆರಿಕನ್ ಜನರೊಂದಿಗೆ ಒಡನಾಡ ಬಹುದೆನಿಸಿತು. ಜಪಾನ್‌ಗೆ ಹೋಲಿಸಿದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇಲೆ ಬ್ರಿಟಿಷರು ಅನಗತ್ಯ ಒತ್ತಡ ಹಾಕುವ ಸಂಭವ ಕಡಿಮೆ ಎಂದೂ ಅನಿಸಿತು. ಅಮೆರಿಕ ಆಗಿನ್ನೂ ತಟಸ್ಥ ಧೋರಣೆ ಅನುಸರಿಸುತ್ತಿದ್ದದ್ದು ಲಜಪತರಿಗೆ ಅನುಕೂಲಕರವಾಯಿತು. ಭೋಜನಕೂಟ ಏರ್ಪಾಟಾಗುವ ಮೊದಲೇ ಲಜಪತರು ಅಮೆರಿಕಕ್ಕೆ ವಾಪಸಾಗಲು ನಿರ್ಧರಿಸಿದರು. ಅದಕ್ಕೆ ಅನುಗುಣವಾಗಿ ಡಿಸೆಂಬರ್ ತಿಂಗಳ ಪ್ರಯಾಣದ ಮುಂಗಡವನ್ನು ಕಾಯ್ದಿರಿಸಿಕೊಂಡರು. ಭಾಷಾ ಅಡಚಣೆಯೂ ಲಜಪತರು ಹೆಚ್ಚು ತಂಗದಿರುವುದಕ್ಕೆ ಕಾರಣವೂ ಆಯಿತು. ಆಂಗ್ಲೋ ಜಪಾನಿಯರ ಮೈತ್ರಿ ಯಾವುದೇ ಹಂತದಲ್ಲಿ ತಮಗೆ ಬಲವಂತದ ಅಪಾಯ ತರಬಹುದೆಂಬ ಭಯವೂ ಅವರನ್ನು ಆವರಿಸಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಯುದ್ಧದ ವಿಷಯದಲ್ಲಿ ಇನ್ನೂ ತಟಸ್ಥವಾಗಿತ್ತು. ಮೈತ್ರಿಗೆ ಒಳಪಡದೆ ಏಷ್ಯಾ ವಿರೋಧಿ ನಿಲುವನ್ನು ತಾಳಿದ ದೇಶವಲ್ಲವೆಂಬ ಆಶಯ ಹುಟ್ಟಿಸಿತು. ಈ ಹಿನ್ನಲೆಯಲ್ಲಿ ಲಜಪತರು ಮತ್ತೆ ಅಮೆರಿಕಕ್ಕೆ ಹೋಗಲು ಬಯಸಿದರು.

ಡಿಸೆಂಬರ್ 4ರಂದು ಟಯೋ ಕಿಸ್ಸೆನ್ ಕೈಶಾ ಪ್ರಯಾಣ ಸಂಸ್ಥೆಯು ಲಜಪತರಿಗೆ ತೇನ್ಯಾ ಮಸು ಹಡಗಿನಲ್ಲಿ ಕ್ಯಾಬಿನ್ ಕಾದಿರಿಸುವುದಾಗಿ ತಿಳಿಸಿತು. ಒಂದು ವಾರದ ನಂತರ ಡಿಸೆಂಬರ್ 12ರಂದು ಅವರನ್ನು ಅವರ ಗೆಳೆಯರು ಯೋಕೋಹಮಾದಲ್ಲಿ ಬೀಳ್ಕೊಟ್ಟರು.

ಲಜಪತರು ತಮ್ಮೊಂದಿಗೆ ಯಾನ ಮಾಡುವಂತೆ ತಮ್ಮ ಯುವ ಸಹವರ್ತಿಯಾಗಿ ಕೇಶವರಾಂ ಸಬರ್‌ವಾಲ್‌ನನ್ನು ಕೇಳಿದರು. ಮೊದಲು ಆತ ಲಜಪತರನ್ನು ಭೇಟಿ ಮಾಡಿದ್ದಾಗ ತಾನು ಅಮೆರಿಕಕ್ಕೆ ಹೋಗಿ ಶಿಕ್ಷಣ ಪಡೆಯಲು ಬಯಸಿರುವುದಾಗಿ ತಿಳಿಸಿದ್ದ. ಈ ಉದ್ದೇಶಕ್ಕಾಗಿ ಮನೆಯಿಂದ ಹಣ ಬರುವುದಕ್ಕಾಗಿ ಕಾಯುದ್ದೇನೆಂದು ತಿಳಿಸಿದ್ದ. ಲಜಪತರು ಬಾಡಿಗೆ ಮನೆ ಹಿಡಿದು ಆತನನ್ನು ತಮ್ಮ ಕಿರಿಯ ಜೊತೆಗಾರರಾಗಿ ಸೇರಿಸಿಕೊಂಡ ನಂತರ ಹಣದ ಅಗತ್ಯವಿದ್ದರೆ ತಾವು ನೆರವಿನ ರೂಪದಲ್ಲಿ ಭರಿಸುವುದಾಗಿ ತಿಳಿಸಿದ್ದರು. ಆ ಹುಡುಗನಲ್ಲಿ ಕ್ರಾಂತಿಕಾರಿ ಮನೋಧರ್ಮ ಇದ್ದದ್ದನ್ನು ಮನಗಂಡಿದ್ದ ಲಜಪತರು ಅಮೆರಿಕ ತಲುಪಿದ ನಂತರ ಅಂತಹ ಕ್ರಾಂತಿಕಾರಿ ಸಂಬಂಧದಿಂದ ಸಾಧ್ಯವಾದಷ್ಟು ದೂರ ಉಳಿಯಲು ಷರತ್ತು ವಿಧಿಸಿದ್ದರು. ಆದರೆ ರಾಸ್ ಬಿಹಾರಿ, ಸಬರ್‌ವಾಲನನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. ಆತ ತಮ್ಮ ಜೊತೆಯಲ್ಲೇ ಇರಬೇಕೆಂದು ಅವರು ಬಯಸಿದರು. ಆ ತರುಣ ಗೊಂದಲದಲ್ಲಿ ಸಿಕ್ಕಿಕೊಂಡ. ಕೊನೆಗೆ ರಾಸ್ ಬಿಹಾರಿ ಒತ್ತಡದ್ದೇ ಮೇಲುಗೈ ಆಯಿತು. ಕಾರಣ ಆ ದಿನಗಳಲ್ಲಿ ಆ ಮಹಾನ್ ಕ್ರಾಂತಿಕಾರಿ ನಾಯಕ ವಿಚಿತ್ರ ಬಿಕ್ಕಟ್ಟು ಎದುರಿಸುತ್ತಿದ್ದರು. ಈ ಬಗ್ಗೆ ಮುಂದಿನ ಅಧ್ಯಾಯದಲ್ಲಿ ನೋಡೋಣ.

ಜಪಾನ್‌ನಲ್ಲಿ ಇರುವಷ್ಟು ಕಾಲ ಸಬರ್‌ವಾಲ್, ಲಜಪತರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಲಜಪತರು ಸಹಜವಾಗಿ ಆತನನ್ನು ಬಹುವಾಗಿ ಹಚ್ಚಿಕೊಂಡಿದ್ದರು. ಹೀಗಾಗಿ ಅವರಿಬ್ಬರ ಅನುಬಂಧ ಕೊನೆಯತನಕ ಉಳಿದಿತ್ತು. ಆಗಾಗ ಪರಸ್ಪರ ಪತ್ರ ವಿನಿಮಯವೂ ನಡೆಯುತ್ತಿತ್ತು.

ಲಜಪತರಿಗೆ ಸ್ವತಃ ತಾನು ತೆರಳಲು ಸಾಧ್ಯವಾಗದಿದ್ದರೂ ಮತ್ತೊರ್ವ ತರುಣನನ್ನು ಸಬರವಾಲ್ ಪತ್ತೆ ಹಚ್ಚಿದರು. ಅಮೆರಿಕಕ್ಕೆ ಹೋಗಿ ಕೃಷಿ ಬಗ್ಗೆ ಅಧ್ಯಯನ ಮಾಡಲು ಆ ತರುಣ ಬಯಸಿದ್ದ. ಆತ ಎಸ್. ಎಸ್. ಸರಣ ಮುಂದೆ ನ್ಯೂಯಾರ್ಕ್‌ನಲ್ಲಿ ಓರ್ವ ಯಶಸ್ವಿ ವ್ಯಾಪಾರೋದ್ಯಮಿಯಾದ ವ್ಯಕ್ತಿ. ಪ್ರಯಾಣದ ಸಮಯದಲ್ಲಿ ಕಿಡಿಗೇಡಿತ[illegible] ನಡೆಯುವ ಸಾಧ್ಯತೆ ಇದ್ದುದ್ದರಿಂದ ಲಜಪತರು ನಂಬಿಕೆಗೆ ಪಾತ್ರನಾದ ಇ[illegible] ಪ್ರಯಾಣಿಕರೊಬ್ಬರನ್ನು ಆರಿಸಿದ್ದರು. ಕೇಶವರಾಂ ಸಬರವಾಲನಿಗೆ ಅವರ ಮನ[illegible] ಅರ್ಥವಾಗಿತ್ತು. ಅದಕ್ಕೆ ಅನುಗುಣವಾಗಿ ಆತ ತನ್ನ ಕರ್ತವ್ಯ ನಿರ್ವಹಿಸಿದ್ದ. ಲಜಪ[illegible] ಮಾತನಾಡುವಾಗ ಬಳಸುವ 'ಅಪಾಯಗಳು ... ನನ್ನ ಸುರಕ್ಷತೆಗಾಗಿ' ಪದಗಳು ಅ[illegible] ಮನಸ್ಥಿತಿಯನ್ನು ಹೇಳುತ್ತಿತ್ತು.

* * *

ಅಧ್ಯಾಯ-41

ಯುದ್ಧ ಸಂದರ್ಭದಲ್ಲಿ ಭಾರತೀಯ ಕ್ರಾಂತಿಕಾರಿಗಳು

ಇಂಗ್ಲೆಂಡಿನಲ್ಲಿ ತಮ್ಮ ದೇಶವಾಸಿಗಳ ವೃತ್ತಿಪರ 'ನಿಷ್ಠೆ'ಯ ಆಷಾಡಭೂತಿತನದಿಂದ [illegible] ಲಜಪತ್‌ರಾಯ ಆ ದೇಶವನ್ನು ಬಿಡಬೇಕಾಯಿತು. ಅಂತಹ ದುರ್ದೆಶೆ ಅಮೆರಿಕದ ಭಾರತೀಯ ಸಮುದಾಯದಲ್ಲಿ ಖಂಡಿತವಾಗಿಯೂ ಇರಲಿಲ್ಲ. ಬದಲಾಗಿ ಅವರು ಫೆಸಿಫಿಕ್ ಕಡಲ ತೀರವನ್ನು ತಲುಪಿದಾಗ ಕ್ಯಾಲಿಫೋರ್ನಿಯಾದಲ್ಲಿದ್ದ ತನ್ನ ದೇಶವಾಸಿಗಳನ್ನು (ಬಹುತೇಕ ಪಂಜಾಬಿಗಳು) ಭೇಟಿ ಮಾಡಿದಾಗ ಇನ್ನೊಂದು ವೈಪರಿತ್ಯವನ್ನು ಅವರು ಎದುರಿಸಬೇಕಾಯಿತು. ಇಂಗ್ಲೆಂಡಿನ ಶತ್ರುಗಳ ಜೊತೆ ಮೈತ್ರಿಗಾಗಿ ಕಾತರಿಸಿದ್ದ ಆಂದೋಲನದ ಸ್ಥಿತಿ ಅದು. ಭಾರತದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ದಂಗೆ ಎಬ್ಬಿಸುವುದು ಆ ಆಂದೋಲನದ ತಂತ್ರವಾಗಿತ್ತು. ಲಜಪತರು ಈ ಪ್ರಸಂಗದಲ್ಲೂ ತಮ್ಮದೇ ನಿರ್ಧಾರಕ್ಕೆ ಕಟಿಬದ್ಧರಾಗಿದ್ದರು. ಇಲ್ಲಿನ ಅವರ ಆ ನಿರ್ಧಾರ ತಿಲಕರ ನಿರ್ಧಾರವನ್ನೇ ಹೋಲುವಂತಿತ್ತು. ಭಾರತದ ಹಿತರಕ್ಷಣೆ ಮತ್ತು ಗೌರವದ ನೆಪದಲ್ಲಿ ಬ್ರಿಟನ್ ವಿರೋಧಿಗಳಿಗೆ ನೆರವಾಗುವ ರೀತಿಯಲ್ಲಿ ಅಂತಹ ಕೃತ್ಯವನ್ನು ಕೈಗೊಳ್ಳುವುದು ಹೇಡಿತನವಾಗಿತ್ತು. ಜೊತೆಗೆ, ಭಾರತದ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಂತಾಗುತ್ತದೆ ಎಂದು ಲಜಪತರು ನಿಲುವು ತಾಳಿದರು. ಇಂಗ್ಲೆಂಡಿನಲ್ಲಿದ್ದ 'ನಿಷ್ಠ' ಭಾರತೀಯ ರಾಜಕಾರಣಿಗಳ ದೃಷ್ಟಿಯಲ್ಲಿ ಲಜಪತರು 'ರಾಜದ್ರೋಹಿ'ಯಂತೆ ಕಂಡುಬಂದರೆ ಇಲ್ಲಿ ಉನ್ಮತ್ತ ಕ್ರಾಂತಿಯ ನಂಜನ್ನೇ ತುಂಬಿಕೊಂಡ ಆ ಭಾರತೀಯ ಆಂದೋಲನಕಾರರ ಅನನುಭವಿಯ ವರ್ಗದ ಪ್ರಕ್ಷುಬ್ಧ ಮನಸ್ಸಿಗೆ ಅವರು 'ಓರ್ವ ಅಂಜುಬುರುಕ'-'ಹೇಡಿಯಂತೆ' ಕಂಡು ಬಂದರು! ಅಲ್ಲಿ ದೇಶ ಹಿತದ ಮೂಲಭೂತ ಪರಿಕಲ್ಪನೆಯನ್ನೇ ಉನ್ನತಗೊಳಿಸಿದ ಜನರ ಹಿಂಡು. ಇಲ್ಲಿ ದೇಶಭಕ್ತಿಯ ಅತಿರೇಕದಲ್ಲಿ ಯಥೋಚಿತ ನಿರ್ಧಾರಗಳನ್ನು ಗಾಳಿಗೆ ತೂರಿದ ಹುಚ್ಚೆದ್ದ ಬಿಸಿ ನೆತ್ತರಿನ ಯುವಕರ ಆಂದೋಲನ. ಜರ್ಮನಿ ಭಾರತದ ಪರವಾಗಿತ್ತೋ ಇಲ್ಲವೋ ಅದು ಬೇರೆ ಮಾತು. ಬ್ರಿಟನ್‌ನೊಂದಿಗೆ ಅದಂತೂ ಯುದ್ಧಕ್ಕೆ ಇಳಿದಾಗಿತ್ತು. ಆ ಸಮಯದಲ್ಲಿ ಜರ್ಮನಿಯ ಅನುಕೂಲಕ್ಕಾಗಿ ಭಾರತದಲ್ಲಿ ದಂಗೆ ಎಬ್ಬಿಸುವುದು ದೇಶದ ಹಿತದೃಷ್ಟಿಯಿಂದ ಒಳಿತೋ ಅಲ್ಲವೋ ಎಂಬುದರ ಪರ್ಯಾಲೋಚನೆ ಅಗತ್ಯವಾಗಿತ್ತು. ಒಂದು ವೇಳೆ ಅಂತಹ ಕರೆಯನ್ನು ಕೊಟ್ಟು ಅದು ತನ್ನ ನಿರೀಕ್ಷೆಯ ಮಹತ್ತರ ಉದ್ದೇಶದಿಂದ ಆಯ ತಪ್ಪಿ ಕಗ್ಗತ್ತಲಿನ ಪ್ರಪಾತಕ್ಕೆ ಬಿದ್ದರೆ ಭಾರತದ ಪಾಲಿಗೆ ಭವಿಷ್ಯ ಕರಾಳವಾಗಿರುತ್ತಿತ್ತು. ಅಂತಹ ಯತ್ನದ ಹಿಂದಿರುವ ಅವೈಚಾರಿಕ ಪ್ರಜ್ಞೆಯನ್ನು ಲಜಪತರು ಮನನ ಮಾಡಿಕೊಂಡಿದ್ದರು. ಅಂತಹ

ಆಂದೋಲನದಿಂದ ಉಂಟಾಗಲಿದ್ದ ಅಪಾಯದ ಅಂದಾಜನ್ನು ಲೆಕ್ಕ ಹಾಕಿದ್ದರು. ಭಾರತೀಯ ಕ್ರಾಂತಿಕಾರಿಗಳು ಅವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲು ಪದೇ ಪದೇ ಕಂಡರು. ಅವರ ಪೈಕಿ ಗದ್ದರ್ ಪಕ್ಷದ ನಾಯಕರು ಪ್ರಮುಖರು. ಯುದ್ಧ ಘೋಷಿಸುವುದಕ್ಕೆ ಸ್ವಲ್ಪ ಮೊದಲು ಹರ್‌ದಯಾಳ್ ಹುಟ್ಟು ಹಾಕಿದ ಪಕ್ಷ ಅದು. ಲಜಪತರನ್ನು ಆ ಪಕ್ಷಕ್ಕೆ ಸೇರಲು ಆ ಪಕ್ಷದ ಮುಖಂಡತ್ವ ವಹಿಸಲು ಮೇಲಿಂದ ಮೇಲೆ ಒತ್ತಾಯಿಸಲಾಯಿತು. ಲಜಪತರು ಎಲ್ಲರಿಗೂ ಹೇಳಿದ್ದು ಒಂದೇ ಮಾತು. 'ಬೇಡ ನನ್ನಿಂದ ಆಗುವುದಿಲ್ಲ. ನನ್ನಿಂದಾಗದ ಕಾರ್ಯಕ್ಕೆ ಈ ಆಮಂತ್ರಣ ಬೇಡ.'

ಆದರೂ ಕ್ರಾಂತಿಕಾರಿಗಳ ಒತ್ತಡ ನಿಲ್ಲಲಿಲ್ಲ. ಪ್ರಬೋಧಪೂರ್ವಕವಾಗಿ ಪ್ರಲೋಭನೆ ಒಡ್ಡಿ, ಅನುನಯನದಿಂದ ಮತ್ತು ಅವಹೇಳನದ ಮೂಲಕ ಅವರ ಮೇಲೆ ನಿರಂತರ ಒತ್ತಡ ಹೇರಲಾಯಿತು. ಜಪಾನಿಗೆ ಹೊರಡುವ ಮೊದಲು ಈ ಒತ್ತಡ ಇತ್ತು. ಜಪಾನ್‌ನಲ್ಲೂ ಇತ್ತು. ಅಲ್ಲಿಂದ ಮರಳಿದ ಮೇಲೂ ಇತ್ತು.

ಆಗಿಂದಾಗ್ಗೆ ಅಂತಹ ಪ್ರತಿಕೂಲ ಪರಿಸ್ಥಿತಿಗಳು ಅವರಿಗೆ ಎದುರಾಗುತ್ತಿದ್ದವು. ಕ್ರಾಂತಿಕಾರಿಗಳು ಅವರಿಗೆ ಅರಿವಿಲ್ಲದೆ ಅವರ ಸುತ್ತಲೂ ಆವರಿಸಿಕೊಳ್ಳತೊಡಗಿದರು. ಜಪಾನ್‌ನಲ್ಲಿದ್ದಾಗ ಅವರಿಗೆ ಕಾರ್ಯದರ್ಶಿಯಾಗಿಯೋ ಅಥವಾ ವಿವರಣಾಕಾರನಾಗಿಯೋ ಇಲ್ಲವೇ ದುಭಾಷಿಯಾಗಿಯೋ ಓರ್ವ ವ್ಯಕ್ತಿ ತಾನೇ ತಾನಾಗಿ ಮುಂದೆ ಬಂದ. ಪ್ರೊ. ಬಿನಾಯ್ ಕೆ. ಸರ್ಕಾರ್ ಅಂತಹ ವ್ಯಕ್ತಿಯೊಬ್ಬನ ಅಗತ್ಯದ ಬಗ್ಗೆ ಸೂಚನೆಯನ್ನು ಕೊಟ್ಟಿದ್ದರು. ಲಜಪತರು ಆ ತರುಣನನ್ನು ನಿಯೋಜಿಸಿಕೊಂಡರು. ಕೇವಲ ಎರಡು ವಾರಗಳಲ್ಲೇ ಆತ ಕ್ರಾಂತಿಕಾರಿಗಳ ಒಡನಾಟದಲ್ಲಿದ್ದುದು ತಿಳಿದು ಬಂದಿತು. ಒಂದು ದಿನ ಇದ್ದಕ್ಕಿದ್ದಂತೆ ಆತ ನಾಪತ್ತೆಯಾದ. ಹಾಗೆ ಕಾಣೆಯಾಗುವ ಮೊದಲು ಆತ ಒಂದು ಟಿಪ್ಪಣಿಯೊಂದನ್ನು ಬರೆದಿಟ್ಟು ಅನಿರ್ದಿಷ್ಟ ಅವಧಿಯತನಕ ತಾನು ಹೊರಗೆ ಹೋಗುವುದಾಗಿ ತಿಳಿಸಿದ್ದ! ನಂತರ ಲಜಪತರಿಗೆ ತಿಳಿದು ಬಂದ ಪ್ರಕಾರ ಕ್ರಾಂತಿಕಾರಿಗಳ ಪಕ್ಷವು ಆತನನ್ನು ಕ್ರಾಂತಿಕಾರಿ ಸಂದೇಶವಾಹಕನಾಗಿ ಚೀನಾಕ್ಕೆ ಕಳುಹಿಸಿತ್ತು.*

ಲಜಪತರು ಜಪಾನ್ ತಲುಪಿದ ಒಂದು ಪಾಕ್ಷಿಕದೊಳಗೆ ಕಿರಿಕಿರಿ ಉಂಟುಮಾಡಿದ ವಿದ್ಯಮಾನವೊಂದು ನಡೆಯಿತು. ಬೇಸಿಗೆ ವಿಶ್ರಾಂತಿಧಾಮಕ್ಕೆ ಭೇಟಿ

---

* ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಹಡಗಿನ ಮೂಲಕ ತರಿಸಿಕೊಳ್ಳುವ ಸಂಬಂಧದಲ್ಲಿ ಅಂತಹ ಸಂದೇಶವಾಹಕರ ಕೆಲಸವಿರುತ್ತಿತ್ತು. ಆ ಕೆಲಸಕ್ಕೆ ನಿಯುಕ್ತನಾದ ತರುಣನ ಹೆಸರು ಅಂಬಾನಿ ಮುಖರ್ಜಿ. ಅವನನ್ನು ಸಿಂಗಪುರದಲ್ಲಿ ಬಂಧಿಸಲಾಯಿತು. ಕೆಲವು ದಿನಗಳ ನಂತರ ಬಿಡುಗಡೆಯೂ ಆಯಿತು. ಡಾ. ರಯಿದ್ ಎಂಬ ಹೆಸರಿನಲ್ಲಿ ಆತ ಮಾಸ್ಕೋಗೆ ಪ್ರಯಾಣ ಮಾಡಿದ. ಆತನೊಬ್ಬ ವಿವಾದಾತ್ಮಕ ವ್ಯಕ್ತಿ. ಆತನನ್ನು ಅನುಮಾನದಿಂದಲೇ ನೋಡುತ್ತಿದ್ದರು. ಲಾಹೋರಿನಲ್ಲಿ ಲಜಪತರಿಗೆ ಆತನಿಂದ ಆಗಾಗ ಪತ್ರಗಳು ಬರುತ್ತಿದ್ದವು. 1922ರಲ್ಲಿ ಆತ ಅಲ್ಪಕಾಲದ ಭೇಟಿಗಾಗಿ ಭಾರತಕ್ಕೆ ಬರಬಯಸಿದ್ದ. ಆದರೆ ಆ ದಿನಗಳಲ್ಲಿ ಲಜಪತರು ಬಂಧನದಲ್ಲಿದ್ದರು.

ಕೊಟ್ಟಾಗ ಅವರು ತಂಗಿದ್ದ ಹೋಟೆಲಿನ ವಾಸ್ತವ್ಯದಾರರ ಪಟ್ಟಿಯನ್ನು ಪೀಕ್ಷಿಸಿದರು. ಭಾರತೀಯರಾರಾದರೂ ಅಲ್ಲಿ ತಂಗಿರಬಹುದೇ ಎಂಬುದನ್ನು ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು. ಇದ್ದಕ್ಕಿದ್ದಂತೆ ತಮಗೆ ಅನುಕೂಲಕರವಲ್ಲದ ಕೆಲವು ಹೆಸರುಗಳು ಕಂಡು ಬಂದವು. ಜಪಾನಿ ಪೋಲೀಸರಿಂದ ತಾನೇ ತಾನಾಗಿ ಕಿರುಕುಳ ತಂದುಕೊಳ್ಳುವುದು ಉಚಿತವಲ್ಲವೆಂದು ಅವರಿಗೆ ಅನಿಸಿತು. ಕೂಡಲೇ ಅವರು ತಾವು ತಂಗಿದ್ದ ಆ ಹೋಟೆಲನ್ನು ತೆರವು ಮಾಡಲು ನಿರ್ಧರಿಸಿದರು. ಹಿಂದೆ ಎಂದೂ ಭೇಟಿಯಾಗದಿದ್ದ, ತಾವು ಆ ಪಟ್ಟಿಯಲ್ಲಿದ್ದ ಹೆಸರುಗಳ ಪೈಕಿ ಲಜಪತರನ್ನು ಬಲ್ಲವನಾಗಿದ್ದ ಓರ್ವ ಕೂಡಲೇ ಅವರ ರೂಮಿಗೆ ಧಾವಿಸಿ ಬಂದ. ಲಜಪತರು ತಾವು ಆ ಹೋಟೆಲನ್ನು ತೆರವು ಮಾಡುತ್ತಿರುವುದಾಗಿ ನೇರವಾಗಿ ಅವನಿಗೆ ತಿಳಿಸಿದರು. ಆದರೆ ಅನನುಕೂಲಕರ ವ್ಯಕ್ತಿ ಲಜಪತರನ್ನು ತಡೆದು ''ತಾವೇ ಹೋಟೆಲನ್ನು ಆ ಕೂಡಲೇ ತೆರವು ಮಾಡುತ್ತಿರುವುದಾಗಿ ತಿಳಿಸಿದ. - ಮತ್ತು ಹಾಗೆ ಮಾಡಿದರೂ ಕೂಡಾ.'' ಅನಂತರ ಅವರು ಟೋಕಿಯೋದಲ್ಲಿ ಪೂರ್ವಾನುಮತಿ ಪಡೆದು ಲಜಪತರನ್ನು ಭೇಟಿ ಮಾಡಿದರು. ಪರಸ್ಪರ ಒಡಂಬಡಿಕೆಯೊಂದನ್ನು ಮಾಡಿಕೊಂಡರು. ''ತಮ್ಮ ತಮ್ಮ ಕೆಲಸವನ್ನು ತಾವು ಮಾಡುವುದು. ತಮ್ಮಲ್ಲಿ ಯಾರೂ ಯಾರಿಗೂ, ಉಪಟಳವಾಗದಂತೆ ನಡೆದುಕೊಳ್ಳಬೇಕು'' ಎಂದು ಆ ಒಡಂಬಡಿಕೆಯ ಆಶಯವಾಗಿತ್ತು. ''ನಾನು ನನ್ನ ಪಾಲಿನ ಒಡಂಬಡಿಕೆಗೆ ಬದ್ಧನಾದೆ. ಆದರೆ ಅವರು ಅದಕ್ಕೆ ಬದ್ಧರಾಗಲಿಲ್ಲ,''- ಎಂದು ಲಜಪತರು ಹೇಳಿದ್ದಾರೆ. ಬೆಳವಣಿಗೆ ವಿಪರೀತವಾಗಿದ್ದಂತೆ ಅತಿ ಸನಿಹದಲ್ಲೇ ತಮ್ಮನ್ನು ಯಾರೋ ಕಣ್ಗಾವಲು ಮಾಡುತ್ತಿರುವುದಾಗಿ ಲಜಪತರಿಗೆ ಭಾಸವಾಯಿತು. ಅವರು ಎಲ್ಲಿ ಹೋದರೂ ಹಗಲು ರಾತ್ರಿ ಎಡೆಬಿಡದೆ ಪೊಲೀಸರು ಹಿಂದೆ ಮುಂದೆ ತಿರುಗತೊಡಗಿದರು. ತಮ್ಮ ಚಲನವಲನಗಳನ್ನು ತೀರಾ ಹತ್ತಿರದಿಂದ ವೀಕ್ಷಿಸಲಾಗುತ್ತದೆ ಎಂಬುದನ್ನು ಮನಗಂಡ ಲಜಪತರು ಆ ಬೇಸಿಗೆಯ ವಿಶ್ರಾಂತಿಧಾಮದಲ್ಲಿ ತಮ್ಮನ್ನು ಕಂಡ ಅನನುಕೂಲಕರ ವ್ಯಕ್ತಿ ಅಂತಹವರನ್ನಾಗಲಿ ಅಥವಾ ಆತನ ವರ್ಗಕ್ಕೆ ಸೇರಿದವರನ್ನಾಗಲಿ ತಮ್ಮ ಹತ್ತಿರಕ್ಕೆ ಬರಲು ಅನುವು ಮಾಡಿಕೊಡಲಿಲ್ಲ.

ಆದರೆ 'ಒಂದು ದಿವಸ', ಲಜಪತರು ಬರೆದಿಟ್ಟಿದ್ದಾರೆ, ''ಅದೇ ಅನನುಕೂಲಕರ ವ್ಯಕ್ತಿ ಹೇಳದೆ ಕೇಳದೆ, ಏಕಾಏಕಿ... ಕಿಡಿಗೇಡಿ ನಡವಳಿಕೆಯವನಾಗಿ ನನ್ನನ್ನು ಭೇಟಿ ಮಾಡಲು ಬಂದ. ಅವನೊಂದಿಗೆ ಇಬ್ಬರು ಪೊಲೀಸ್ ಪೇದೆಗಳಿದ್ದರು. ಅವರು ನನ್ನ ಕಾಂಪೌಂಡ್ ಹಾಯ್ದು ಒಳಗೆ ಬರಲಿಲ್ಲ. ಅವರು ಹೊರಗೆ ಗೇಟಿನ ಮುಂದೆ ಕಾಯ್ದು ನಿಂತರು. ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಬೇಡವೆಂದು ನಾನು ಆತನನ್ನು ಕೇಳಿಕೊಂಡೆ. ಸಾಕಷ್ಟು ಪರಿಶ್ರಮಪಟ್ಟ ನಂತರ ನನ್ನನ್ನು ಒಂಟಿಯಾಗಿ ಬಿಡುವಂತೆ ಅವರ ಮನ ಒಲಿಸುವಲ್ಲಿ ಯಶಸ್ವಿಯಾದೆ. ಕೆಲವು ದಿನಗಳ ನಂತರ ಪ್ರಕಟಿಸಲಾದ ಪ್ರಕಾರ ಆತ ತನ್ನ 'ಪೋಷಕರನ್ನು' ತೊರೆದ. ಮತ್ತು ದೇಶವನ್ನು ಬಿಟ್ಟು ಹೋದ. ಆದರೆ ಇನ್ನೋರ್ವ ಅಲ್ಲೇ ಇದ್ದ. ಅತಿ ಶೀಘ್ರದಲ್ಲಿ ಅಮೆರಿಕದಿಂದ ಬಂದ ಮತ್ತೋರ್ವ ಅವನ ಜೊತೆಗೂಡಿದ. ಮೊದಲನೇಯ ವ್ಯಕ್ತಿ ನನ್ನ ಬಗ್ಗೆ ಏನೂ ಹಚ್ಚಿಕೊಂಡಿರಲಿಲ್ಲ. ನಾನಿದ್ದ ಜಾಗಕ್ಕೆ ಅವನು ಬರುತ್ತಲೂ ಇರಲಿಲ್ಲ. ನನ್ನನ್ನು ಒಂಟಿಯಾಗಿ ಇರಲು ಬಿಟ್ಟಿದ್ದ. ಆದರೂ ಇಬ್ಬರಿಗೂ ಸಮಾನವಾಗಿದ್ದ ಗೆಳೆಯನ ಮನೆಯಲ್ಲಿ ಆಗಾಗ ಭೇಟಿ ಮಾಡುತ್ತಿದ್ದೆವು. ಬಹಳ ದಿನಗಳ ಕಾಲ ಆತನ

ಹೆಸರು ನನಗೆ ಗೊತ್ತಿರಲಿಲ್ಲ. ಆತನ ಪೂರ್ವೋತ್ತರಗಳು ನನಗೆ ತಿಳಿದಿರಲಿಲ್ಲ. ಆದರೆ ಅಮೆರಿಕದಿಂದ ಬಂದ ಆ ಹೊಸಬ ನನ್ನನ್ನು ಒಂಟಿಯಾಗಿ ಇರಲು ಬಿಡುತ್ತಿರಲಿಲ್ಲ. ಪದೇ ಪದೇ ಕಾಣಲು ನನ್ನನ್ನು ಒತ್ತಾಯ ಪಡಿಸುತ್ತಿದ್ದ. ಆತನಿಗೆ ಹಣದ ಪೂರೈಕೆ ಸಮೃದ್ಧವಾಗಿತ್ತು. ಐಷಾರಾಮದ ಜೀವನ ನಡೆಸುತ್ತಿದ್ದ. ಆದಾಗಿ ಜಪಾನಿ ಅಧಿಕಾರಸ್ಥರು ಆತನ ಚಲನವಲನಗಳ ಬಗ್ಗೆ ಅದಷ್ಟು ಬೇಗ ಶಂಕೆ ಪಡುವಂತಾಯಿತು."

ಒಂದು ಪುಟ್ಟ ಗೊಂದಲ ಹುಟ್ಟಿದಂತೆ ಕಂಡು ಬರುತ್ತದೆ. ಸ್ವತಃ ಲಜಪತರನ್ನು ಗೊಂದಲಕ್ಕೆ ಸಿಲುಕಿಸಿದ ವ್ಯಕ್ತಿ ಬೇರಾರು ಅಲ್ಲ. ರಾಸ್ ಬಿಹಾರಿ ಬೋಸ್. ಹಾರ್ಡಿಂಜ್ ಬಾಂಬ್ ಸಂಚಿನ ನಾಯಕರು ಅವರು. ಆ ಪ್ರಕರಣದ ನಂತರ ತಲೆಮರೆಸಿಕೊಂಡು ಜಪಾನ್‌ಗೆ ಬಂದಿದ್ದರು. ಪಿ.ಎನ್. ಠಾಕೂರ್ ಹೆಸರಿನಲ್ಲಿ ಅಲ್ಲಿದ್ದರು. ಅವರು ಉಳಿದುಕೊಂಡಿದ್ದ ಬೇಸಿಗೆ ವಿಶ್ರಾಂತಿಧಾಮದ ಸಹವರ್ತಿ ಭಗವಾನ್ ಸಿಂಗ್ ಗ್ಯಾನಿ. ಕಿಶೋರ್ ರಾಮ್ ಸಬರವಾಲ್ ಭಾರತದಲ್ಲಿ ಒಮ್ಮೆ ರಾಸ್ ಬಿಹಾರಿ ಬೋಸ್ ಅವರನ್ನು ಭೇಟಿಯಾಗಿದ್ದ. 'ಠಾಕೂರ್'ರ ವ್ಯಕ್ತಿತ್ವದ ವಿಷಯದಲ್ಲಿ ಲಾಲಾಜಿ ಅವರಲ್ಲಿದ್ದ ಅನುಮಾನಗಳನ್ನು ನಿವಾರಿಸಿದ್ದು ಸಬರವಾಲನೇ.

ಜಪಾನಿ ಪ್ರಕರಣಗಳು ಲಜಪತರಿಗೆ ಆ ದೇಶದಲ್ಲಿ ಎದುರಾದ ಹೊಸ ಪ್ರಸಂಗಗಳೇನೂ ಅಲ್ಲ. 1914ರ ನವೆಂಬರ್‌ನಲ್ಲಿ ನ್ಯೂಯಾರ್ಕ್ ಪ್ರವೇಶಿಸಿದ ಹೊಸದರಲ್ಲೇ ಇಂತಹ ಪ್ರಕರಣಗಳು ಅವರಿಗೆ ಎದುರಾಗಿದ್ದವು. ಅವರ ಸಹವರ್ತಿಗಳಲ್ಲಿ ಒಬ್ಬರಾಗಿದ್ದ ಪ್ರೊ. ಬಿನಯ್ ಕೆ. ಸರ್ಕಾರ್ ಲಾಲಾಜಿ ಅವರನ್ನು ಡಾ. ಚಕ್ರವರ್ತಿಯವರ ನಿವಾಸಕ್ಕೆ ಊಟಕ್ಕೆ ಕರೆದೊಯ್ದಿದ್ದರು. ಆ ಭೋಜನ ಸಭೆಯಲ್ಲಿ ಜರ್ಮನ್ ಪರವಾದ ಕೆಲವು ಕಟ್ಟಾ ಭಾಷಣಗಳಾದವು. ಲಜಪತರಿಗೆ ಆ ಊಟ, ಸಹಯೋಗ ಇಡೀ ವಾತಾವರಣ ಅನುಕೂಲಕರವಾಗಿ ಕಂಡು ಬರಲಿಲ್ಲ. ಅದನ್ನು ಅವರು ಪ್ರೊ. ಸರ್ಕಾರ್ ಅವರಿಗೆ ಸ್ಪಷ್ಟವಾಗಿ ತಿಳಿಸಿದರು. ಅವರೊಡಗೂಡಿ ಎಲ್ಲರಿಗಿಂತ ಮೊದಲು ಅವರು ಆ ಸ್ಥಾನವನ್ನು ತೆರವು ಮಾಡಿದ್ದರು. ಭಾಷಣಗಳಾಗುತ್ತಿದ್ದ ಹಂತದಲ್ಲಿ ಓರ್ವ ಜರ್ಮನ್ ವ್ಯಕ್ತಿ ಪಿಂಗಾಣಿಯಲ್ಲಿ ಮಾಡಿದ ಜಾನ್‌ಬುಲ್ ಮಾದರಿಯೊಂದನ್ನು ಕೈಗೆತ್ತಿಕೊಂಡು ಬ್ರಿಟಿಷರ ವಿರುದ್ಧ ಉದ್ವೇಗದ ಭಾಷಣ ಮಾಡುತ್ತಾ ಅದನ್ನು ಅಪ್ಪಳಿಸಿ ಚೂರು ಚೂರು ಮಾಡಿದ್ದ. ಆ ಸ್ಥಳವನ್ನು ಬಿಡುವ ಮೊದಲು ಲಜಪತರು ತಮಗೂ ಅಲ್ಲಿ ನಡೆದ ಜವಾಬ್ದಾರಿಹೀನ ವರ್ತನೆಗೂ ಮತ್ತು ಆ ಜರ್ಮನಿಯನ ನಡವಳಿಕೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದರು. ತಮ್ಮ ನಿಲುವು ಧೋರಣೆಗಳ ಬಗ್ಗೆ ಯಾರಿಗೂ ಅನುಮಾನ ಬೇಡವೆಂದು ಅವರು ನೇರ ಮಾತುಗಳಲ್ಲಿ ಹೇಳಿದ್ದರು. ಅವರು ಹೇಳಿದ್ದು :

"ನಾನೊಬ್ಬ ಭಾರತೀಯ ದೇಶಭಕ್ತ. ನನ್ನ ದೇಶಕ್ಕೆ ಸ್ವಾತಂತ್ರ್ಯ ಬೇಕೆಂದು ಬಯಸಿದ್ದೇನೆ. ನನ್ನಲ್ಲಿ ಜರ್ಮನಿಯರ ಬಗ್ಗೆ ಅನುಕಂಪವಾಗಲಿ ಅಥವಾ ಅದಕ್ಕೆ ತದ್ವಿರುದ್ಧವಾದ ಭಾವನೆಯಾಗಲಿ ಇಲ್ಲ. ಸದ್ಯದ ವಿದ್ಯಮಾನಗಳ ಪ್ರಕಾರ ಸ್ವಯಂ ಸರ್ಕಾರ ಹೊಂದಿದವರಾಗಿ ಬ್ರಿಟಿಷ್ ಚಕ್ರಾಧಿಪತ್ಯದೊಳಗೆ ಇರುವುದು ಒಳ್ಳೆಯದೆಂದು ನಾವಂದು ಕೊಂಡಿದ್ದೇವೆ. ಇನ್ನೊಂದು ದೇಶದ ಆಡಳಿತಕ್ಕೆ ಒಳಪಡುವುದು ನಮಗೆ ಸಾಧ್ಯವಿಲ್ಲ.

''ವಿದೇಶಿ ನೆರವಿನಿಂದ ಗಳಿಸಿಕೊಂಡ ಸ್ವಾತಂತ್ರ್ಯ ಯೋಗ್ಯವಲ್ಲವೆಂದು ನಾನು ಸದಾ ಹೇಳುತ್ತಲೇ ಬಂದಿದ್ದೇನೆ. ಅದೇ ನನ್ನ ನಿಲುವು.''

ಕೆಲವು ದಿನಗಳ ನಂತರ ಬಿ.ಕೆ. ಸರ್ಕಾರ್ ಅವರ ಮುಖಾಂತರವೇ ಭೂಪಾಲದ ಮೌಲ್ವಿ ಬರ್ಕತ್ ಉಲ್ಲಾ ಅವರನ್ನು ಭೇಟಿ ಮಾಡುವ ಪ್ರಸಂಗ ಒದಗಿ ಬಂದಿತು. ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಪರ್ಷಿಯನ್ ಕಲಿಸುತ್ತಿದ್ದವರು ಅವರು. ಹರ್‌ದಯಾಳ್ ಜೊತೆಗೂಡಿ ಗದ್ದರ್ ಪಾರ್ಟಿ ಸ್ಥಾಪಿಸಿದವರೆಂದೂ ಪರಿಗಣಿಸಲಾಗಿತ್ತು. ಆ ಭೇಟಿ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ಲಜಪತರ ದಾಖಲೆ ಹೀಗಿದೆ. :

''ಅತಿ ಶೀಘ್ರದಲ್ಲೇ ಪ್ರೊ. ಸರ್ಕಾರರು ಬರ್ಕ್‌ತ್ ಉಲ್ಲಾ ಜೊತೆ ನನ್ನ ಭೇಟಿಗೆ ವ್ಯವಸ್ಥೆ ಮಾಡಿದರು. ನಾವು ಅವರನ್ನು ಅನೇಕ ಸಾರಿ ಕಂಡೆವು. ಭಾರತದಲ್ಲಿ ಅತಿ ದೊಡ್ಡ ಉತ್ಥಾನವೊಂದನ್ನು ತಾವು ನಿರೀಕ್ಷಿಸುತ್ತಿರುವುದಾಗಿ ಅವರು ಹೇಳಿದರು. ಅದಕ್ಕಾಗಿ ದಿನವನ್ನು ನಿಶ್ಚಿತಗೊಳಿಸಲಾಗಿದೆ. ಎಲ್ಲವೂ ಸಿದ್ಧವಾಗಿದೆ ಎಂದು ಅವರು ಹೇಳಿದರು. ಕಾಗೂರಿನ ಮೂರ್ ತಮ್ಮೊಂದಿಗಿದ್ದಾರೆ ಎಂದು ಸಹ ಅವರು ಹೇಳಿದರು. ಕೇವಲ 3 ತಿಂಗಳ ಒಳಗೆ ಭಾರತ ಸ್ವಾತಂತ್ರ್ಯವಾಗುವುದರಿಂದ ಅವರ ಜೊತೆ ಸೇರಿದ ಬಗ್ಗೆ ಭಯ ಪಡುವ ಅಗತ್ಯವಿಲ್ಲವೆಂದು ತಿಳಿಸಿದರು. ನಾನು ಆ ವ್ಯಕ್ತಿಯನ್ನು 'ಬಾಗ್ಲೋಲ್' ಎಂದು ಕರೆದೆ. ಅಂದರೆ ಅಧಿಕ ಪ್ರಸಂಗಿ ಹಾಗೂ ಒಂದು ರೀತಿಯ ಅವಿವೇಕಿ ಎಂದು. ಅವರು ಹೇಳಿದ ಮಾತಿನಲ್ಲಿ ನನಗೆ ಲವಶೇಷವೂ ನಂಬಿಕೆ ಇಲ್ಲವೆಂದು ನಾನು ತಿಳಿಸಿದೆ. ನನಗೆ ಭಾರತದಲ್ಲಿ ಅಮೀರರ ಆಳ್ವಿಕೆಯೂ ಬೇಡ. ಜರ್ಮನರ ಅಧಿಕಾರವೂ ಬೇಡವೆಂದು ತಿಳಿಸಿದೆ. ಬ್ರಿಟಿಷ್ ಆಳ್ವಿಕೆಯನ್ನು ಎಷ್ಟು ದ್ವೇಷಿಸುತ್ತೇವೆಯೋ ಅಷ್ಟೇ ಮಟ್ಟದಲ್ಲಿ ಈ ಹಂತದಲ್ಲಿ ಬೇರೆ ಯಾವುದೇ ವಿದೇಶಿ ದಾಳಿಕೋರರನ್ನು ದ್ವೇಷಿಸುತ್ತೇನೆ. ಬ್ರಿಟಿಷರನ್ನು ಹೊಡೆದೋಡಿಸುವಲ್ಲಿ ಅವರು ಒಂದು ವೇಳೆ ಯಶಸ್ವಿಯಾದರೂ ಭಾರತ ಆ ವಿದೇಶಿ ದಾಳಿಕೋರರನ್ನು ಎದುರಿಸಲು ಸನ್ನದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಅವರು ನನ್ನನ್ನು ಹೇಡಿ ಎಂದು ಕರೆದರು. ವಿಶ್ವಾಸ ಪಾತ್ರನಲ್ಲವೆಂದರು. ಯಾವುದೇ ಸಹಾಯ ನೀಡುವುದಿಲ್ಲವೆಂದರು. ಹೀಗೆ ನಾವು ದೂರವಾದೆವು. ಆದರೂ ಗೆಳೆತನ ಉಳಿದಿತ್ತು. ಅವರ ಬುದ್ಧಿಮತ್ತೆಯ ಬಗ್ಗೆ ನನ್ನ ಅಭಿಪ್ರಾಯ ಅಷ್ಟಕಷ್ಟೇ. ಆದರೂ ಅವರ ದೇಶಭಕ್ತಿ ಮತ್ತು ನಡವಳಿಕ ಉನ್ನತವಾದುದು. ನಾವು ಅನೇಕ ಸಾರಿ ಭೇಟಿಯಾದೆವು. ಮತ್ತೆ ಯಾವಾಗಲೂ ಅವರು ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲ.''

ಭೋಪಾಲ್ ಮೌಲ್ವಿಯ ಅಸಾಧಾರಣ ದೇಶಭಕ್ತಿ ಮತ್ತು ವಿಶ್ವಾಸಗಳು ಅವರ ಸಾವಿನಲ್ಲಿ ವ್ಯಕ್ತವಾಯಿತು. ಅವರ ಸಾವಿನ ಸುದ್ದಿ ತಿಳಿದ ನಂತರ ದಿ ಪೀಪಲ್ ಪತ್ರಿಕೆಯಲ್ಲಿ ಶೋಕಾಂಜಲಿ ಲೇಖನಗಳನ್ನು ಬರೆದು ಅವರ ಆ ಉನ್ನತ ಗುಣಗಳನ್ನು ಲಜಪತರು ಸ್ಮರಿಸಿದರು.

ಲಜಪತರಿಗೆ ಅನೇಕ ಜರ್ಮನಿಯರನ್ನು ಭೇಟಿಯಾಗುವ ಅವಕಾಶಗಳು ಪ್ರಾಪ್ತವಾದವು. ಚಿಕಾಗೋನಲ್ಲಿ ಪ್ರೊ. ಸರ್ಕಾರ್ ನೀಡಿದ ಔತಣಕೂಟವೊಂದರಲ್ಲಿ ಜರ್ಮನ್ ಪ್ರೊಫೆಸರ್ ಒಬ್ಬರ ಪರಿಚಯವಾಯಿತು. ಅತ್ಯುತ್ತಮ ಉನ್ನತ ಮಟ್ಟದ

ಜರ್ಮನ್ ಸಂಪರ್ಕ ತಮಗೆ ಇರುವುದಾಗಿ ಪ್ರೊ. ಸರ್ಕಾರ್ ಅವರಿಗೆ ತಿಳಿಸಿದ್ದರು. ಆದರೆ ಪ್ರೊ. ಸರ್ಕಾರರ ಪಾತ್ರವೇ ಅವರಿಗೆ ಒಗಟಾಗಿತ್ತು.

ಭಾರತ ಜರ್ಮನ್ ಯೋಜನೆಗಳಿಂದಾಗಿ ಲಾಲಾಜಿ ಅವರ ಬೆಂಬಲ ಗಳಿಸಿಕೊಳ್ಳಲು ಹೇರಂಬಲ ಗುಪ್ತ ವಿಫಲ ಪ್ರಯತ್ನ ಮಾಡಿದರು. ಅವರಿಬ್ಬರು ಮೊದಲ ಬಾರಿಗೆ ನ್ಯೂಯಾರ್ಕ್‌ನಲ್ಲಿ 1915ರ ಫೆಬ್ರವರಿ ಆರಂಭದಲ್ಲಿ ಭೇಟಿಯಾದರು.

"ನಾನು ವಾಷಿಂಗ್ಟನ್‌ಗೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದೆ. ಆ ದಿನ ಬೆಳಗ್ಗೆ ಹೇರಂಬಲ ಗುಪ್ತ ನನ್ನನ್ನು ಭೇಟಿ ಮಾಡಿದ್ದರು. ನಾನಿದ್ದ ಕೊಠಡಿಯಲ್ಲಿ ಅವರೊಂದಿಗೆ ಮಾತನಾಡುವಷ್ಟು ಸಮಯ ನನಗೆ ಇರಲಿಲ್ಲ. ನಾನು ಹೊರಟಿದ್ದ ಟ್ಯಾಕ್ಸಿಯಲ್ಲಿ ಅವರು ನನ್ನೊಂದಿಗೆ ಕುಳಿತುಕೊಂಡರು. ನಾವಿಬ್ಬರು ಪೆನ್ಸಿಲ್ವೇನಿಯಾ ನಿಲ್ದಾಣ ತಲುಪಿದೆವು. ತಾವು ಜರ್ಮನ್ ಸರ್ಕಾರದ ವಿಶ್ವಾಸ ಗಳಿಸಿಕೊಂಡಿರುವುದಾಗಿ ಅವರು ನನಗೆ ಹೇಳಿದರು. ನಾನು ಅವರ ಯೋಜನೆಗೆ ಪೂರ್ಣ ಸಹಕಾರ ಕೊಡಬೇಕೆಂದು ಒತ್ತಾಯಿಸಿದರು. ನನ್ನ ಉತ್ತರ ನಕಾರಾತ್ಮಕವಾಗಿತ್ತು. ಮಧ್ಯ ಪ್ರಾಂತ್ಯದಲ್ಲಿ ಎಲ್ಲಿಯಾದರೂ ನಾವಿಬ್ಬರು ಮತ್ತೆ ಭೇಟಿಯಾಗೋಣ ಎಂದು ಅವರು ಸಲಹೆ ಮಾಡಿದರು."

ಹೇರಂಬಲ ಗುಪ್ತ ಅವರನ್ನು ಲಜಪತರು ಮತ್ತೆ ಚಿಕಾಗೋದಲ್ಲಿ ಭೇಟಿ ಮಾಡಿದರು. :

"ನನ್ನೊಂದಿಗೆ ಅವರು ಬಹುಕಾಲ ಮಾತನಾಡಿದರು. ಬಹುಶಃ ಎರಡು ತಾಸಿನ ಮಾತಿರಬಹುದು. ಅವರೊಂದಿಗೆ ನನ್ನನ್ನು ಸೇರಿಸಿಕೊಳ್ಳಲು ತೀವ್ರ ಒತ್ತಾಯ ಮಾಡಿದರು. ಅವಕಾಶದ ಪ್ರಾಮುಖ್ಯತೆ ಅತಿ ಮುಖ್ಯವಾದುದೆಂದು ನನ್ನನ್ನು ತಣಿಸಲು ಯತ್ನಿಸಿದರು. ಅವರ ಪರವಾಗಿ ನಾನಿರಬೇಕೆಂದು ಜರ್ಮನರು ಬಯಸುತ್ತಿರುವುದಾಗಿ ತಿಳಿಸಿದರು. ನನ್ನ ಸಲಹೆಗಳನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿದ್ದಾರೆ ಎಂದು ಹೇಳಿದರು. ನಾನು ಹೇಳುವ ಷರತ್ತುಗಳಿಗೆ ಅವರು ಬದ್ಧರಾಗುತ್ತಾರೆಂದು ತಿಳಿಸಿದರು. ನಾನು ನನ್ನ ನಿಲುವನ್ನು ಹೇರಂಬಲ ಗುಪ್ತರಿಗೆ ತಿಳಿಸಿದೆ. ಆ ವಿಷಯದಲ್ಲಿ ನಾನು ಭಾಗಿಯಾಗಲು ನಿರಾಕರಿಸಿದೆ. ಜರ್ಮನಿಯಿಂದ ಪಡೆದುಕೊಳ್ಳುತ್ತಿದ್ದ ಹಣದಲ್ಲಿ ಒಂದಷ್ಟು ಮೊತ್ತವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ವಿನಿಯೋಗಿಸಲು ಅವರಿಗೆ ನಾನು ಸಲಹೆ ಕೊಟ್ಟೆ. ಭಾರತದ ರಾಜಕೀಯ ನಿರಾಶ್ರಿತರಿಗೆ ಅನುಕೂಲವಾಗುವ ದೃಷ್ಟಿಯಿಂದಲೂ ಇತರ ಭಾರತೀಯರ ಹಿತದೃಷ್ಟಿಯಿಂದಲೂ ದಕ್ಷಿಣ ಅಮೆರಿಕ ಗಣ ರಾಜ್ಯಗಳಲ್ಲಿ ಭಾರತೀಯ ವಸಾಹತುಗಳನ್ನು ಸ್ಥಾಪಿಸಲು ಆ ಹಣವನ್ನು ವಿನಿಯೋಗಿಸುವಂತೆ ಸೂಚಿಸಿದೆ."

ಹೇರಂಬಲ ಗುಪ್ತರ ಪ್ರಯತ್ನ ನಿಲ್ಲಲಿಲ್ಲ. ಅವರ ಕಡೆಯ ಭೇಟಿಯಲ್ಲಿ

"ಚಿಕಾಗೋ ಭೇಟಿಯ ನಂತರ ಕೆಲವು ದಿನಗಳಾದ ಮೇಲೆ ಹೇರಂಬಲ ಗುಪ್ತರು ನನ್ನನ್ನು ಲಾಸ್ ಏಂಜಲೀಸ್‌ನಲ್ಲಿ ಭೇಟಿ ಮಾಡಿದರು. ನನ್ನನ್ನು ಭೇಟಿ ಮಾಡಲೆಂದೇ ಅವರು ಅಲ್ಲಿಗೆ ಬಂದಿದ್ದರು. ನನ್ನನ್ನು ತಮ್ಮ ಪರ ಒಲಿಸಿಕೊಳ್ಳಲು ಅದು ಅವರ ಕಡೆಯ ಪ್ರಯತ್ನವಾಗಿತ್ತು. ಅವರು ಬಿಡುಗಡೆ ಮಾಡಲು ಸಿದ್ಧ ಮಾಡಿಟ್ಟುಕೊಂಡಿದ್ದ ಸ್ವತಂತ್ರ

ಘೋಷಣೆಯ ಹೇಳಿಕೆಯೊಂದಕ್ಕೆ ನನ್ನ ಅಂಕಿತ ಪಡೆಯಲು ಬಯಸಿದ್ದರು. ಅಂಕಿತದಲ್ಲಿ ಫ್ಲಾಂಡರ್ಸ್‌ನಲ್ಲಿ ಯುದ್ಧ ನಿರತರಾಗಿದ್ದ ಭಾರತೀಯ ಯೋಧರು ಬ್ರಿಟಿಷರ ವಿರುದ್ಧ ಬಂಡೇಳುವಂತೆ ಪ್ರಚೋದನೆ ನೀಡುವ ಅಂಶವೂ ಇತ್ತು. ಆ ಇಡೀ ಸಂಘಟನೆಯ ನಾಯಕತ್ವ ವಹಿಸಿಕೊಳ್ಳಲು ಅವರು ಮತ್ತೊಮ್ಮೆ ನನಗೆ ಸೂಚಿಸಿದರು. ಜರ್ಮನಿಯ ನಾಯಕರು ಅವರ ರಾಜತಾಂತ್ರಿಕರಿಗೆ ವಿಶೇಷ ಸೂಚನೆ ನೀಡಿ ನನ್ನನ್ನು ತಮ್ಮ ಪರ ವಹಿಸಿಕೊಳ್ಳಲು ತಿಳಿಸಿದ್ದಾರೆಂದು ಅದಕ್ಕಾಗಿ ಅವರು ಏನು ಮಾಡಲು ಸಿದ್ಧರಿದ್ದಾರೆಂದು ಗುಪ್ತ ನನಗೆ ತಿಳಿಸಿದರು. ನಾನು ಬಯಸಿದ್ದನಲ್ಲಾ ಈಡೇರಿಸಲು ಜರ್ಮನ್ ನಾಯಕರು ಸನ್ನದ್ಧರಾಗಿದ್ದಾರೆಂದರು. ನಾನು ನನ್ನ ನಿಲುವನ್ನು ಪುನರುಚ್ಚರಿಸಿದೆ. ನನ್ನ ಉದ್ದೇಶ ಏನೆಂಬುದನ್ನು ಈ ಮೊದಲೇ ತಿಳಿಸಿರುವುದಾಗಿ ಮತ್ತೆ ಹೇಳಿದೆ. ಅವರು ಮಾಡಬೇಕಾದ ಕೆಲಸದ ಬಗ್ಗೆ ನಾನು ಸೂಚಿಸಿದ್ದನ್ನು ಮತ್ತೆ ಪ್ರಸ್ತಾಪಿಸಿದೆ. ಸಾಧ್ಯವಾದರೆ ತಾವು ಪಡೆದುಕೊಳ್ಳುವ ಹಣದಲ್ಲಿ ಸ್ವಲ್ಪ ಮೊತ್ತವನ್ನು ಆ ಉದ್ದೇಶಗಳಿಗೆ ಬಳಸುವುದಾಗಿ ಗುಪ್ತ ಅವರು ಭರವಸೆ ನೀಡಿದರು. ಆ ಹಣವನ್ನು ನನಗೆ ಒಪ್ಪಿಸುವುದಾಗಿಯೂ ಸೂಕ್ಷ್ಮವಾಗಿ ತಿಳಿಸಿದರು. ಕೆಲವು ದಿನಗಳ ನಂತರ ಕಲ್ಪಿತ ಹೆಸರಿನಲ್ಲಿ ತಂತಿ ವರ್ತಮಾನವೊಂದನ್ನು ನೀಡಿ ಹಾಗೆ ಮಾಡಲು ತಮ್ಮಿಂದ ಸಾಧ್ಯವಿಲ್ಲವೆಂದರು. ನಾನು ಜಪಾನ್‌ಗೆ ಮರಳುವ ಮೊದಲು ನನ್ನನ್ನು ಗುಪ್ತರು ಕಂಡ ಕಡೆಯ ಭೇಟಿ ಅದು.''

''ನಾನು ಮಾಡಿದ ಸಲಹೆಗೆ ವಿರುದ್ಧವಾಗಿ ರಾಮಚಂದ್ರ ಅವರು ಗುಪ್ತರಿಗೆ ತಿಳಿಸಿದ್ದಾರೆಂದು ನನಗೆ ತಿಳಿದು ಬಂದಿತು.''

ಜಪಾನ್‌ನಲ್ಲಿ ಹೊಸ ಚಕ್ರವರ್ತಿಯ ಪಟ್ಟಾಭಿಷೇಕ ಸಮಾರಂಭ ನಡೆದ ನಂತರ ಭಾರತೀಯರು ನೀಡಿದ ಔತಣಕೂಟ ಮುಗಿದ ಮೇಲೆ ಸಂಭವಿಸಿದ ಕೆಲವು ವಿದ್ಯಮಾನಗಳಲ್ಲಿ ಹೇರಂಬಲ ಗುಪ್ತರ ಕೈವಾಡವಿತ್ತು. ಲಾಲಾಜಿ ಅವರ ನಿಧನದ ನಂತರ ಪ್ರಕಟಿಸಲಾದ ಅವರ ನೆನಪಿನ ಅಂಕಣದಲ್ಲಿ ನಾವು ಈ ಬಗ್ಗೆ ಓದಬಹುದು.

''ಔತಣಕೂಟ ಮುಗಿದ ಕೂಡಲೇ ಆ ಕೂಟದ ಏರ್ಪಾಟಿಗೆ ಮುಖ್ಯ ಕಾರಣರಾಗಿದ್ದ ಇಬ್ಬರು ಭಾರತೀಯ ಕ್ರಾಂತಿಕಾರಿಗಳಿಗೆ (ಇಬ್ಬರು ಬಂಗಾಳಿಗಳು) ಇನ್ನು ಐದು ದಿನಗಳ ಒಳಗೆ ಜಪಾನ್ ಬಿಡುವಂತೆ ನೋಟಿಸ್ ಜಾರಿ ಮಾಡಲಾಯಿತು. ಇಬ್ಬರು ಪೊಲೀಸರನ್ನು ನಿಯೋಜಿಸಿ 24 ತಾಸುಗಳಲ್ಲಿ ಅವರ ಚಲನವಲನಗಳ ಬಗ್ಗೆ ನಿಗಾ ಇಡಲಾಯಿತು. ಇದು ಭಾರತೀಯ ಹಾಗೂ ಜಪಾನ್ ಸಮುದಾಯಗಳೆರಡರಲ್ಲೂ ಭಾರೀ ಕುತೂಹಲ ಉಂಟುಮಾಡಿತು. ಜಪಾನಿನ ಪತ್ರಿಕೆಗಳು ಆ ಆದೇಶವನ್ನು ಖಂಡಿಸಿದವು. ರಾಜಕೀಯ ನಿರಾಶ್ರಿತರಿಗೆ ನೀಡುವ ರಾಜಾಶ್ರಯ ಹಕ್ಕಿನ ಉಲ್ಲಂಘನೆ ಅದೆಂದು ಪತ್ರಿಕೆಗಳು ಟೀಕಿಸಿ ಬರೆದವು. ಜಪಾನಿ ಪತ್ರಕರ್ತರು ಹಾಗೂ ಇತರ ಪ್ರಮುಖರ ನಿಯೋಗವೊಂದು ಪೊಲೀಸ್ ಮುಖ್ಯಸ್ಥರ ಬಳಿ ತೆರಳಿ ಈ ಬಗ್ಗೆ ಮನವಿಯೊಂದನ್ನು ಸಲ್ಲಿಸಿತು. ಆದರೆ ಆ ಆದೇಶ ವಿದೇಶಿ ಕಾರ್ಯಾಲಯದಿಂದ ಕೊಡಲ್ಪಟ್ಟಿರುವುದರಿಂದ ತಾವು ಅಸಹಾಯಕರೆಂದು ಆ ಅಧಿಕಾರಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಆ ದಿನಗಳಲ್ಲಿ ಕಾಯಿಲೆಯಿಂದ ತಮ್ಮ ಕೊಠಡಿಗೆ ಸೀಮಿತರಾಗಿದ್ದ ಪ್ರಧಾನಿ ಕೌಂಟ್ ಒಕುಮಾ

ಆ ಆದೇಶದ ವಿಷಯದಲ್ಲಿ ತಮ್ಮ ಆಪಕ್ಷೇಪವನ್ನು ಮುಂದು ಮಾಡಿದರು. ಅದನ್ನು ರದ್ದುಪಡಿಸಲು ತಮಗೆ ಸಾಧ್ಯವಿಲ್ಲವೆಂದು ಅಸಹಾಯಕರಾಗಿ ಹೇಳಿದರು. ಹಾಗೆ ಮಾಡುವುದರಿಂದ ವಿದೇಶಾಂಗ ಸಚಿವರಿಗೆ ಅಪಮಾನ ಮಾಡಿದಂತಾಗುತ್ತದೆ ಎಂದರು. ಆದರೆ ಜಪಾನಿನ ವಿರೋಧ ಪಕ್ಷದ ರಾಜಕಾರಣಿಗಳು ಆ ಆದೇಶದಿಂದ ತೊಂದರೆಗೆ ಒಳಗಾಗುತ್ತಿದ್ದ ಭಾರತೀಯರನ್ನು ರಕ್ಷಿಸಲು ಪರ್ಯಾಯ ಮಾರ್ಗವೊಂದನ್ನು ಅನುಸರಿಸಿದರು. ಕಡೆಯ ದಿನದ ಸಂಜೆ ಆ ಇಬ್ಬರು ಭಾರತೀಯರು ತಮ್ಮ ಮೇಲೆ ಕಣ್ಣಿಡಲು ನಿಯೋಜಿಸಲಾಗಿದ್ದ ಇಬ್ಬರು ಪೇದೆಗಳ ಕಣ್ಗಾವಲಿನಲ್ಲಿ ಜಪಾನಿ ಸಂಸತ್ತಿನ ಪ್ರಮುಖ ನಾಯಕರನ್ನು ಭೇಟಿ ಮಾಡಲು ಹೋದರು. ಅವರಿಬ್ಬರು ಒಳಗೆ ಹೋದರು. ಆ ಇಬ್ಬರು ಪೋಲೀಸರು ಹೊರಗೆ ಉಳಿಯಬೇಕಾಯಿತು. ಸ್ವಲ್ಪ ಹೊತ್ತಿನ ನಂತರ ಆ ಭಾರತೀಯರಿಬ್ಬರು ಇನ್ನೊಂದು ಬಾಗಿಲಿನಿಂದ ಹೊರಗೆ ಬಂದು ಕಾಣೆಯಾದರು. ಅವರನ್ನು ಬಂಧಿಸಲು ಆಗಲೇ ಇಲ್ಲ. ಆ ಪೈಕಿ ಒಬ್ಬರು ಕೆಲವು ದಿನಗಳ ನಂತರ ಅಮೆರಿಕಕ್ಕೆ ಮರಳಿದರು. ಮತ್ತೊಬ್ಬರು ಜಪಾನ್‌ನಲ್ಲೇ ಉಳಿದರು. ನನಗೆ ಬಂದಿರುವ ವರ್ತಮಾನದ ಪ್ರಕಾರ ಜಪಾನಿನ ಗೌರವಾನ್ವಿತ ಮಹಿಳೆಯೊರ್ವರನ್ನು ಮದುವೆ ಮಾಡಿಕೊಂಡಿದ್ದಾರೆ.''

ಹಾಗೆ ತಲೆ ಮರೆಸಿಕೊಂಡು ಅಲ್ಲೇ ಉಳಿದುಕೊಂಡ ಕೆಲವು ದಿನಗಳ ನಂತರ ಮದುವೆಯಾಗಿ ಗೌರವಾನ್ವಿತ ಜೀವನ ಕಂಡುಕೊಂಡ ಆ ವ್ಯಕ್ತಿ ರಾಸ್ ಬಿಹಾರಿ ಬೋಸ್. ಯಾನೆ 'ಠಾಕೂರ್'. ಅತಿ ಶೀಘ್ರದಲ್ಲೇ ಅವರು ಜಪಾನಿನ ವರ್ಚಸ್ವಿ ವ್ಯಕ್ತಿಯಾದರು. ಅತ್ಯುನ್ನತ ಗೌರವಾದರಗಳನ್ನು ಪಡೆದುಕೊಂಡರು. ಮತ್ತೊರ್ವರು ಹೇರಂಬಲ ಗುಪ್ತ. ಅಮೆರಿಕಕ್ಕೆ ಮರಳಿದ ಆತ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡ. ಜರ್ಮನ್ ನಿಧಿ ಮತ್ತು ಇಂಡೋ ಜರ್ಮನ್ ಯೋಜನೆಗಳ ವಿಶ್ವಾಸಾರ್ಹ ಪ್ರತಿನಿಧಿಯಾಗಿ ಡಾ. ಚಕ್ರವರ್ತಿಯವರನ್ನು ಅವರ ಸ್ಥಾನಕ್ಕೆ ನಿಯೋಜಿಸಲಾಯಿತು. ರಾಸ್ ಬಿಹಾರಿ ಬಳಿಯೂ ಸಾಕಷ್ಟು ಹಣವಿತ್ತು. ತಾನು ತಲೆಮರೆಸಿಕೊಂಡಿದ್ದಾಗ ಕ್ರಾಂತಿಕಾರಿ ಉದ್ದೇಶದ ಆ ಹಣವನ್ನೆಲ್ಲಾ ಆತ ಜತನ ಮಾಡಿಕೊಂಡಿದ್ದ. ಆ ದಿನಗಳಲ್ಲಿ ಆತ ಲಾಲಾಜಿ ಮತ್ತು ಸಬರ್‌ವಾಲ್‌ನಿಂದ ಸಹಾಯ ಯಾಚಿಸುತ್ತಿದ್ದ. ತನ್ನಲ್ಲಿದ್ದ ಹಣವನ್ನು ಅವರಿಬ್ಬರ ಮೂಲಕ ಸಂರಕ್ಷಿಸಿಕೊಂಡಿದ್ದ. ಲಜಪತರು ತನ್ನ ಬಳಿ ಆತ ಕೊಟ್ಟಿದ್ದ 19,500 ಯೆನ್‌ಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನದಿಂದ 'ಠಾಕೂರ್' ಹೆಸರಿನಲ್ಲಿ ಮರಳಿಸಿದರು. ನಂಬಿಕೆಗೆ ಪಾತ್ರರಾದ ವ್ಯಕ್ತಿಗಳ ಮೂಲಕ ಆತ ಆ ಹಣವನ್ನು ಲಜಪತರಿಂದ ತರಿಸಿಕೊಂಡ

ಲಜಪತರು ಜರ್ಮನಿ ಇಲ್ಲವೇ ಇತರ ವಿದೇಶಿ ಬೆಂಬಲದೊಂದಿಗೆ ಬ್ರಿಟಿಷರ ವಿರುದ್ಧ ಕ್ರಾಂತಿ ನಡೆಸುವ ಭಾರತೀಯ ಕ್ರಾಂತಿಕಾರರ ಯೋಜನೆಗಳನ್ನು ಸುತರಾಂ ಒಪ್ಪಲಿಲ್ಲ. ದಿಟ್ಟತನದಿಂದ ಅವುಗಳನ್ನು ನಿರಾಕರಿಸಿದರು. ನಿಜವಾದ ಕ್ರಾಂತಿಕಾರಿಗಳಿಗೆ ಅವರು ಅವರ ಸಂಕಷ್ಟ ದಿನಗಳಲ್ಲಿ ಮನಬಿಚ್ಚಿ ಸಹಾಯ ಮಾಡಿದರು. ತನ್ನ ದುರ್ದಿನಗಳ ಸಮಯದಲ್ಲಿ 'ಠಾಕೂರ್' ತನ್ನಲ್ಲಿದ್ದ ಹಣದ ಸಂರಕ್ಷಣೆಗೆ ಲಜಪತರ ನೆರವನ್ನು ತೆಗೆದುಕೊಂಡರು. ಮತ್ತೊರ್ವ ಕ್ರಾಂತಿಕಾರಿ ಎಂ.ಎನ್. ರಾಯ್ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ತಲೆ ತಪ್ಪಿಸಿಕೊಂಡು ಮೆಕ್ಸಿಕೊದಲ್ಲಿ ಆಶ್ರಯ ಪಡೆಯಬೇಕಾಯಿತು. ಆಗ

ಹೆಚ್ಚು ಕಡಿಮೆ ಅನಾಥ ಸ್ಥಿತಿಯಲ್ಲಿದ್ದ ಅವರಿಗೆ ಸಹಾಯದ ತೀರಾ ಅವಶ್ಯಕತೆ ಇತ್ತು. ಲಾಲಾಜಿ ಅವರ ನೆರವಿಗೆ ಬಂದರು. ಹೀಗೆ ಅದೆಷ್ಟೋ ಕ್ರಾಂತಿಕಾರಿಗಳಿಗೆ ಅವರ ಆಪತ್ ದಿನಗಳಲ್ಲಿ ಲಜಪತರು ಬೆಂಬಲ ನೀಡಿದರು. ಹಣದ ಸಹಾಯ ಒದಗಿಸಿದರು.

ಕ್ರಾಂತಿಕಾರಿಗಳೊಂದಿಗೆ ಲಜಪತರು ಹೊಂದಿದ್ದ ಸಂಬಂಧಗಳನ್ನು ತಿಳಿಸುವ ಈ ಸಂಕ್ಷಿಪ್ತ ಕಥನದಲ್ಲಿ ಯುದ್ಧದ ಬಗ್ಗೆ ಲಾಲಾಜಿ ಅವರ ಧೋರಣೆ ಏನಾಗಿತ್ತು ಎಂಬುದು ವ್ಯಕ್ತವಾಗುತ್ತದೆ. ಯುದ್ಧದ ಆ ದಿನಗಳಲ್ಲಿ ಭಾರತೀಯ ಕ್ರಾಂತಿಕಾರಿಗಳ ಚಟುವಟಿಕೆ ಏನಾಗಿತ್ತು ಎಂಬುದು ಇಲ್ಲಿ ವಿಶದವಾಗುತ್ತದೆ. ಲಾಲಾಜಿ ಕ್ರಾಂತಿಕಾರಿ ಆಂದೋಲನದ ನಿಷ್ಠ ಹಾಗೂ ಪ್ರಜ್ಞಾವಂತ ವಿದ್ಯಾರ್ಥಿಯಾಗಿದ್ದರು. ರಹಸ್ಯ ಸಂಘಟನೆಗಳ ಒಳಮರ್ಮವನ್ನು ಬಲ್ಲವರಾಗಿದ್ದರು. ತಮ್ಮದೇ ನಿಯತಕಾಲಿಕೆಗೆ ಅವರು ಬರೆದ 'Reflections On Revolutions'* ಇದೆಲ್ಲವನ್ನು ವಿಸ್ತೃತವಾಗಿ ಸಾದರಪಡಿಸುತ್ತದೆ. ಅವರು ಆ ದಿನಗಳಲ್ಲಿ ಹೊಂದಿದ್ದ ವ್ಯಕ್ತಿಗತ ಸಂಪರ್ಕಗಳು ಮತ್ತು ಅವುಗಳ ಒಳನೋಟ ಅವರ ಅಧ್ಯಯನ ಅದರಿಂದ ಅವರಿಗೆ ದೊರೆತ ಫಲಗಳ ಬಗ್ಗೆ ಈಗಲೂ ಒಂದು ಕುತೂಹಲಕಾರಿ ಅಧ್ಯಯನ ಅದಾಗುತ್ತದೆ. ಜೊತೆಗೆ ಅವರು ತಮ್ಮ ವೈಯಕ್ತಿಕ ಬಳಕೆಗಾಗಿ ಇಲ್ಲವೇ ಬಹುಶಃ ನೆನಪಿಗಾಗಿ ಬರೆದಿಟ್ಟಿದ್ದ ಇನ್ನೂ ಕೆಲವು ಟಿಪ್ಪಣಿಗಳು ಲಭ್ಯವಿದೆ. ಭಾರತೀಯ ಕ್ರಾಂತಿಕಾರಿಗಳ ಬಗ್ಗೆ ಅದರಲ್ಲಿ ಇನ್ನಷ್ಟು ಪ್ರಸ್ತಾಪವಿದೆ. ಅವೆಲ್ಲವನ್ನು ಮೊಹರಾದ ಲಕೋಟೆಯೊಂದರಲ್ಲಿ ಅವರ ಪ್ರಕಾಶಕ ಗೆಳೆಯ 'ಹ್ಯೂಬ್ಸ್ ಬಳಿ ನಿಕ್ಷಿಪ್ತವಾಗಿ ಇಡಲ್ಪಟ್ಟಿವೆ. ಟೀಕೆ ಟಿಪ್ಪಣಿಗಳಿವೆ.'**

* * *

---

* ಲಜಪತ್‌ರಾಯ್ ಅವರ ದಿ ಪೀಪಲ್ ಪೊತ್ತಿಗೆಯಿಂದ ಆಯ್ದುಕೊಂಡು ಯಂಗ್ ಇಂಡಿಯಾ ನಿಯತಕಾಲಿಕೆಯಲ್ಲಿ ಮರು ಪ್ರಕಟಿತ.

** ವಿ.ಎಸ್. ಜೋಷಿ ಮುದ್ರಿಸಿ ಮರು ಪ್ರಕಟಿಸಿದ ಆಟೋಬಯಾಗ್ರಫಿಕಲ್ ರೈಟಿಂಗ್ಸ್ ಆಫ್ ಕೃತಿ. ಲಜಪತ್‌ರಾಯ್ ಸಂಪಾದಿಸಿದ್ದಾರೆ.

ಅಧ್ಯಾಯ-42

ವಿದೇಶವಾಸ- ರಾಯಭಾರ

ಮೂಲತಃ ಆರು ತಿಂಗಳಿಗೆಂದು ಯೋಚಿಸಿಕೊಂಡು ವಿದೇಶಕ್ಕೆ ಬಂದರೂ ಆ ವೇಳೆಗಾಗಲೇ ಲಜಪತರು ದೇಶ ಬಿಟ್ಟು 20 ತಿಂಗಳು ಸಂದಿದ್ದವು. ಯುದ್ಧ ಆರಂಭಗೊಂಡೇ ಸುಮಾರು ಒಂದೂವರೆ ವರ್ಷವಾಗಿತ್ತು. ಆ ಯುದ್ಧ ಎಷ್ಟು ತಿಂಗಳು ಅಥವಾ ಎಷ್ಟು ವರ್ಷ ನಡೆಯಬಹುದೆಂಬ ಬಗ್ಗೆ ಯಾರಿಂದಲೂ ನಿಖರವಾಗಿ ಏನನ್ನು ಹೇಳಲು ಸಾಧ್ಯವಿರಲಿಲ್ಲ. ಲಜಪತರು ಮತ್ತೆ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಮರಳಿದರು. ಅವರ ಆ ಮರಳಿಕೆ ಅಲ್ಪ ಕಾಲದ ವಾಸ್ತವವಂತೆಯೇನೂ ಕಂಡು ಬರಲಿಲ್ಲ. ಆಗಿನ ಪರಿಸ್ಥಿತಿಯ ಸ್ಪಷ್ಟ ಸೂಚನೆಗಳ ಪ್ರಕಾರ ಭಾರತಕ್ಕೆ ಮರಳ ಬಯಸಿದರೂ ಅವರಿಗೆ ಅನುಮತಿ ದೊರೆಯುವ ಸಾಧ್ಯತೆ ಇರಲಿಲ್ಲ. ಯುದ್ಧ ವಿರಾಮ ಘೋಷಿತವಾದ ನಂತರವೂ ಸಹ ವೀಸಾ ದೊರೆಯುವುದು ದುಸ್ತರವಾದಂತೆ ಕಂಡು ಬಂದಿತು. ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಅನೇಕ ತಿಂಗಳುಗಳ ನಂತರವೂ ಸಹ ಆ ಸಾಧ್ಯತೆ ಇಲ್ಲವೇನೋ ಎನಿಸಿತು. ವಸ್ತುಶಃ ವಿದೇಶವಾಸವೇ ತಮಗೆ ಹಿತವೆಂದು ಅವರು ಭಾವಿಸಿಕೊಂಡರು. ರಾಜಕೀಯ ಆಸರೆ ಜಪಾನಿಗಿಂತಲೂ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೇ ಅನುಕೂಲಕರವೆಂದು ಅವರು ಸಂಕಲ್ಪ ಮಾಡಿಕೊಂಡರು.

1915ರ ಅಂತ್ಯದಲ್ಲಿ ಯುದ್ಧ ಕಾಲದ ವಿದೇಶಿ ವಾಸಿಯಾಗಿ ಅಮೆರಿಕೆಯಲ್ಲಿ ಅವರು ನೆಲಸಿ ಆ ಕಾಲಕ್ಕೆ ಸಮಂಜಸವಾದ ಕಾರ್ಯಗಳಲ್ಲಿ ತೊಡಗಿದರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದ್ದ ಅಮೆರಿಕನ್ನರು ಅಥವಾ ಭಾರತೀಯ ಕಾರ್ಮಿಕರ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಜಪಾನಿಗೆ ಹೋಗುವ ಮೊದಲೇ ಅವರು ಅಧ್ಯಯನ ಆರಂಭಿಸಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನದ ತಮ್ಮ ಹೊತ್ತಿಗೆಯಲ್ಲಿ ಅವರು ಈ ಬಗ್ಗೆ ವಿಶದವಾಗಿ ಬರೆದಿದ್ದಾರೆ. ಜೂನ್ ತಿಂಗಳಿನಲ್ಲಿ ಜಪಾನ್‌ಗೆ ಹೋಗುವ ಮೊದಲೇ ಅವರು ಅದನ್ನು ಬರೆದಿಟ್ಟಿದ್ದರು. ಸದ್ಯದಲ್ಲೇ ಅವರು ಆಯ್ಕೆ ಮಾಡಿಕೊಂಡ ಕಾರ್ಯ ಭಾರತೀಯ ಸಮಸ್ಯೆಗಳ ಬಗ್ಗೆ ಅಮೆರಿಕನ್ನರಿಗೆ ಪರಿಚಯ ಮಾಡಿಕೊಟ್ಟು ಅವರ ಅಭಿಪ್ರಾಯವನ್ನು ದೇಶದ ಹಿತಕ್ಕೆ ಅನುಗುಣವಾಗಿ ರೂಪಿ' ಕೊಳ್ಳುವುದಾಗಿತ್ತು. ಭಾರತದ ಹಿತಕ್ಕಾಗಿ ಸಾಧ್ಯವಾದಷ್ಟು ಅಮೆರಿಕನ್ನರ ಅನುಕಂಪವನ್ನು ಗಳಿಸಿಕೊಳ್ಳುವುದಾಗಿತ್ತು. ಈ ಮೊದಲು ಅಮೆರಿಕದಲ್ಲಿ ಹಂಗೇರಿಯನ್ ದೇಶಭಕ್ತ ಲೂಯಿಸ್ ಕೋಸತ್ ರಾಜಕೀಯ ಆಶ್ರಯ ಪಡೆದಿದ್ದರು ಸ್ವಾತಂತ್ರ್ಯ ಪ್ರೇಮಿಗಳಾದ ಅಮೆರಿಕನ್ನರ ಅನುಕಂಪ, ಬೆಂಬಲವನ್ನು ತನ್ನ ದೇಶದ ಪರವಾಗಿ ರೂಢಿಸಿಕೊಳ್ಳಲು ಆ ನತದೃಷ್ಟ ರಾಷ್ಟ್ರದ ರಾಯಭಾರಿಯಾಗಿ ಅವರು ಅಮೆರಿಕ ನಾಡಿನಲ್ಲಿ ಯಶಸ್ವಿಯಾಗಿದ್ದರು. ಪ್ರಸ್ತುತ ಲಜಪತರು ಅದೇ ಕಾರ್ಯಭಾರಿಯಾದರು

ವಿವೇಕಾನಂದರು ಅಮೆರಿಕದ ನಗರಗಳಲ್ಲಿ ಹೊಸ ಅಲೆಯನ್ನು ಎಬ್ಬಿಸುವ ಮುನ್ನ ಭಾರತವೆಂಬ ದೇಶ ಅಸ್ತಿತ್ವದಲ್ಲಿದೆ ಎಂಬ ಸಂಗತಿ ಆ ಖಂಡದ ಸುಶಿಕ್ಷಿತರು, ವಿಶಾಲ ಮನೋಧರ್ಮದ ಜನರಿಗೂ ಗೊತ್ತಿದ್ದಂತೆ ಕಂಡು ಬರಲಿಲ್ಲ. ಅಮೆರಿಕನ್ ಶಾಲೆಯೊಂದರ ಹಿಂದೂ ವಿದ್ಯಾರ್ಥಿಯೋರ್ವಳು ತನ್ನ ಶಾಲೆಯಲ್ಲಿ ಶಿಕ್ಷಕರು ಭಾರತೀಯ ಚರಿತ್ರೆಯ ಪ್ರಸಂಗ ಬಂದಾಗ ಆ ಪಠ್ಯವನ್ನು ಕೈಬಿಡುತ್ತಾರೆಂದು ಲಜಪತರಿಗೆ ತಿಳಿಸಿದಳು. ತಾನು ಆ ಶಿಕ್ಷಕನನ್ನು ಆ ಬಗ್ಗೆ ಪ್ರಶ್ನಿಸಿದಾಗ ಭಾರತ ಏನನ್ನೂ ಸಾಧಿಸಿಲ್ಲವೆಂದು ಚರಿತ್ರೆಯಲ್ಲಿ ಅದರ ಪ್ರಸ್ತಾಪಕ್ಕೆ ಅರ್ಹತೆ ಇಲ್ಲವೆಂದು ಪ್ರತ್ಯುತ್ತರ ಕೊಟ್ಟಿದ್ದಾಗಿ ಆ ವಿದ್ಯಾರ್ಥಿನಿ ತಿಳಿಸಿದಳು. ಲಜಪತರಿಗೆ ಅದು ನೋವಿನ ಸಂಗತಿ ಎನಿಸಿತು. ಅಮೆರಿಕದ ವಿಟ್ನಿ ಮತ್ತು ಲ್ಯಾನ್‌ಮ್ಯಾನ್‌ಗಳಂತಹ ಹೆಸರಾಂತ ಸಂಸ್ಕೃತವೇತ್ತರರೇ ಅಮೆರಿಕದಲ್ಲಿರುವಾಗ ಆ ಶಿಕ್ಷಕಿಯ ಧೋರಣೆ ಉದ್ಧಟತನದ್ದೆನಿಸಿತು. ಅದನ್ನು ಅವರು ಆ ಬಾಲಕಿಯ ಮೂಲಕ ಅವರ ಚರಿತ್ರೆಯ ಶಿಕ್ಷಕರಿಗೆ ತಿಳಿಯ ಪಡಿಸಿದರು.

ಇಂತಹ ಅಭಿಪ್ರಾಯಗಳಿಗೆ ಪರಿಹಾರ ಕಂಡುಕೊಳ್ಳಲು ಭಾರತದ ಸ್ವತಂತ್ರ ಸಮಸ್ಯೆಯ ಬಗ್ಗೆ ವಿಶೇಷವಾಗಿ ತೀವ್ರ ಲಕ್ಷ್ಯ ಸೆಳೆಯಲು ಲಜಪತರು ತಮ್ಮನ್ನು ತಾವು ತೊಡಗಿಸಿಕೊಂಡರು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಮೆರಿಕನ್ನರ ಬೆಂಬಲ ಸಾಧಿಸಿಕೊಳ್ಳಲು ಎಲ್ಲಾ ಪ್ರಯತ್ನ, ಪ್ರಚಾರ ನಡೆಸುತ್ತಿದ್ದರು. ಆ ಖಂಡ ತಟಸ್ಥ ಧೋರಣೆಯನ್ನೇ ತಾಳಿತು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಷಾಹಿ ಆಡಳಿತ ಮುಂದುವರಿಕೆಯನ್ನು ಸಮರ್ಥಿಸಿಕೊಳ್ಳುತ್ತಾ ಭಾರತ ವಿರೋಧಿ ಪ್ರಚಾರವನ್ನು ಸಹ ಅದರೊಂದಿಗೆ ಬ್ರಿಟನ್ ಕೈಗೊಂಡಿತು. ಬ್ರಿಟನ್ ಪ್ರಚಾರವನ್ನು ಹೀಗೆಳೆಯುವ ಬಗ್ಗೆ ಏನನ್ನಾದರೂ ಮಾಡಲೇ ಬೇಕಾಗಿತ್ತು. ಭಾರತದಲ್ಲಿ ಕ್ರಿಶ್ಚಿಯನ್ ಮಿಷನರಿಗಳ ಚಟುವಟಿಕೆಗೆ ಅಧಿಕ ಪ್ರಮಾಣದಲ್ಲಿ ಅಮೆರಿಕದಿಂದಲೇ ಹಣದ ಬೆಂಬಲ ಹರಿಯುತ್ತಿತ್ತು. ಭಾರತದ ಭವ್ಯ ಚರಿತ್ರೆಯನ್ನು ಮತ್ತು ಪರಮೋಚ್ಚ ಸಂಸ್ಕೃತಿಯನ್ನು ವಿಕೃತಗೊಳಿಸಿ ಅದನ್ನು ಅಮೆರಿಕನ್ನರ ಮುಂದೆ ಹೀನಾಯವಾಗಿ ತೋರ್ಪಡಿಸುವ ಜೊತೆಗೆ ಭಾರತೀಯರು ಅನಾಗರಿಕರೆಂದು, ದರಿದ್ರರೆಂದು ಚಿತ್ರಿಸುತ್ತಾ ತಮ್ಮ ಸ್ವಾರ್ಥಕ್ಕಾಗಿ ಹಣ ದೋಚುವ ಹೀನ ಕಾರ್ಯದಲ್ಲಿ ಆ ಮಿಷನರಿಗಳು ತೊಡಗಿದ್ದರು. ಅಮೆರಿಕ ಜನತೆಗೆ ಭಾರತದ ನೈಜ ಚಿತ್ರಣವನ್ನು ನೀಡುವ ಕಾರ್ಯಕ್ಕೆ ಅಂತಹ ಪಟ್ಟಭದ್ರ ಹಿತಾಸಕ್ತಿಗಳು ಅಡ್ಡಿಯಾಗಿದ್ದವು. ಅದರಲ್ಲೂ ಯುದ್ಧ ಕಾಲದಲ್ಲಿ ಅಮೆರಿಕದಲ್ಲಿ ಬ್ರಿಟಿಷರು ಕೈಗೊಂಡ ಪ್ರಚಾರವನ್ನು ಭಾರತದ ಹಿತದೃಷ್ಟಿಯಿಂದ ಹಿಂದೆಂದಿಗಿಂತಲೂ ಹೆಚ್ಚು ಸಮರ್ಥವಾಗಿ, ಪರಿಣಾಮಕಾರಿಯಾಗಿ ಪ್ರತಿರೋಧಿಸುವ ಅಗತ್ಯ ತುಂಬಾ ಹೆಚ್ಚಾಗಿತ್ತು.

ಎಲ್ಲೆಡೆಯಿಂದಲೂ ಬೆಂಬಲ ಗಳಿಸಿಕೊಳ್ಳಲು ಬ್ರಿಟನ್ ಸನ್ನಾಹ ಮಾಡುತ್ತಿದ್ದ ಆ ಸಂದರ್ಭ ಲಜಪತರಿಗೆ ಅನುಕೂಲಕರ ವಾತಾವರಣವಾಗಿ ಕಂಡು ಬಂದಿತು. ಭಾರತದ ಪ್ರಶ್ನೆಯನ್ನು ಪ್ರಮುಖ ಮಾಡಿಕೊಂಡು ನೈಜ ಪ್ರಚಾರಕ್ಕೆ ಅವರು ಆ ಸಂದರ್ಭವನ್ನು ಬಳಸಿಕೊಂಡರು. ಮಿಂಚಿನ ಗತಿಯಲ್ಲಿ ಲಜಪತರು ಅಮೆರಿಕ ಸಂಯುಕ್ತ ಸಂಸ್ಥಾನದ ನಾನಾ ಕಡೆ ಸಂಪರ್ಕಗಳನ್ನು ಸಾಧಿಸಿಕೊಂಡರು. ಭಾರತದ ಆ ದೇಶಿಯ ನಾಯಕನ ಬಗ್ಗೆ ಅಲ್ಲಿನ ವಿಶ್ವಾತ್ಮಕ ಹಾಗೂ ಕಾಸ್ಮೋಪಾಲಿಟನ್ ಸ್ವರೂಪದಲ್ಲಿ ಮನ್ನಣೆ ಬೇಗ

ಪ್ರಾಪ್ತವಾಯಿತು. ವೈವಿಧ್ಯತೆಯ ಜನತೆ ಮತ್ತು ವಿಭಿನ್ನ ವಂಶಾವಳಿಗಳ ಮಧ್ಯೆ ಲಜಪತರಿಗೆ ಆದರ, ಅಭಿಮಾನಗಳು ಮೂಡತೊಡಗಿದವು. ಅವರ ವಿದೇಶಿವಾಸ ಸ್ವದೇಶ ವಾಸದಷ್ಟೇ ಹಿತಕರವಾಯಿತು. ಅವರ ಪ್ರಜಾಸತ್ತಾತ್ಮಕ ಹಾಗೂ ನೇರ ನಡೆನುಡಿಗಳು ಅಮೆರಿಕನ್ನರ ಹೃದಯ ಗೆದ್ದವು. ಲಜಪತರು ಬಯಸಿದ ಅನುಕಂಪ ಸಹಜವಾಗಿ ಪ್ರಾಪ್ತವಾಗತೊಡಗಿತು. ಎಷ್ಟೋ ಸಂದರ್ಭಗಳಲ್ಲಿ ಅಹಿತಕರವೆನಿಸಿದ ಕಟು ಸತ್ಯಗಳನ್ನು ನೇರವಾಗಿ ಹೇಳುತ್ತಿದ್ದರು. ಅಂತಹ ಪ್ರಸಂಗಗಳನ್ನು ಆ ನಾಡಿನ ಸ್ವಾತಂತ್ರ್ಯ ಪ್ರಿಯ ಜನತೆ ಆ ಭಾರತೀಯ ಮುಖಂಡನ ಪ್ರಾಮಾಣಿಕತೆಯಾಗಿ, ನಿಷ್ಠುರ ನಡವಳಿಕೆಯಾಗಿ ಪರಿಗಣಿಸುತ್ತಿದ್ದರು. ಜೊತೆಗೆ ಲಜಪತರನ್ನು ಇನ್ನಷ್ಟು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದರು. ಚಾಣಾಕ್ಷ ಮತಿಯ ಐರಿಷ್ ಪತ್ರಕರ್ತ ಫ್ರಾನ್ಸಿಸ್ ಹಾಕೆಟ್ ಆಗಿನ ಅಮೆರಿಕದ 'ಫ್ರೀಮನ್' ಸಾಪ್ತಾಹಿಕದ ಪತ್ರಕರ್ತರಲ್ಲಿ ಒಬ್ಬರಾಗಿದ್ದರು. ದಿ ನ್ಯೂ ರಿಪಬ್ಲಿಕ್ ಸಾಪ್ತಾಹಿಕದಲ್ಲೂ ಅವರು ಕೆಲಸ ಮಾಡುತ್ತಿದ್ದರು. ಲಜಪತರು ಮತ್ತು ಆ ಪತ್ರಕರ್ತರು ಪರಸ್ಪರ ಭೇಟಿಯಾದಾಗ:

''ಹಾಯ್ ಐರಿಷ್, ನಿನಗಿದು ಗೊತ್ತೇ? ಭಾರತದವರಾದ ನಮ್ಮ ಪಾಲಿಗೆ ನೀನು ಇಂಗ್ಲಿಷರಿಗಿಂತ ಬಹು ಕೆಟ್ಟವನು''- ಎಂದು ನಮ್ಮ ಕಥಾನಾಯಕರು ನುಡಿದರು.

ಆ ಚುರುಕು ಪತ್ರಕರ್ತನಿಂದ ಅಷ್ಟೇ ತ್ವರಿತವಾದ ಉತ್ತರ-''ನಿಮ್ಮ ಮಾತು ಕೇಳಿ ನನಗೆ ಅಚ್ಚರಿಯೇನೂ ಆಗಿಲ್ಲ. ಕಾರಣ ಅಧಿಕಾರಕ್ಕೆ ಹೊಸದಾಗಿ ಬಂದವರು ಸರ್ವಾಧಿಕಾರಿಗಳಾಗುವ ಸಾಧ್ಯತೆ ಇರುತ್ತದೆ. ಆದರೆ ನಿಮ್ಮ ಪ್ರತಿಕ್ರಿಯೆಯಲ್ಲಿರುವ ರಾಜಕೀಯ ಪ್ರೇರಿತವಲ್ಲದ ಅಭಿಮತ ನನಗೆ ಖುಷಿ ನೀಡಿದೆ. ಲಜಪತ್‌ರಾಯ್ ಸತ್ಯವನ್ನು ಮರೆಮಾಚುವವರಲ್ಲ. ನಿಮ್ಮ ಮಾತು ನಿಚ್ಚಳಗೊಂಡಿದೆ.''

ಲಜಪತ್‌ರಾಯ್ ತಮ್ಮ ಸಂಬಂಧ ಅನುಬಂಧಗಳನ್ನು ವಿಶೇಷವಾಗಿ ವಿಚಾರವೇತ್ತ ನಾಯಕರು ಮತ್ತು ಪ್ರಗತಿಪರ ಪತ್ರಕರ್ತರು ಹಾಗೂ ವಿಶ್ವವಿದ್ಯಾಲಯಗಳ ಜನತೆಯ ಮಧ್ಯೆ ರೂಢಿಸಿಕೊಳ್ಳತೊಡಗಿದರು. ಸಾರ್ವಜನಿಕ ಭಾಷಣಕಾರರಾಗಿ ಅವರು ಬಹು ಬೇಗ ಮಾನ್ಯರಾದರು. ಜನಪ್ರಿಯರಾದರು. ಪತ್ರಿಕೆಗಳಿಗೂ ಸಾಕಷ್ಟು ಪ್ರಮಾಣದಲ್ಲಿ ಬರೆಯತೊಡಗಿದರು. ಇದರಿಂದ ಭಾರತದ ಸ್ವಾತಂತ್ರ್ಯ ಚಳವಳಿಯ ವಿವಿಧ ಮುಖಗಳಿಗೆ ಸಂಬಂಧಪಟ್ಟಂತೆ ಅವರೇ ಹೆಸರಿಸಿದ ಯಂಗ್ ಇಂಡಿಯಾ ಪುಸ್ತಕ ಹೊರಬರಲು ಪ್ರೇರಣೆಯಾಯಿತು. ಸ್ವಾತಂತ್ರ್ಯ ಪರವೂ ವಿಚಾರವೇತ್ತವೂ ಆದ ಉನ್ನತ ಶ್ರೇಣಿಯ ನಿಯತಕಾಲಿಕಗಳಿಗೆ ಲಜಪತರು ಭಾರತ ಕುರಿತ ಹೊಸ ಹೊತ್ತಿಗೆಗಳು ಹಾಗೂ ಇತರೆ ಏಷ್ಯಾ ದೇಶಗಳ ಹೊಸ ಪ್ರಕಟಣೆಗಳು ಇಲ್ಲವೇ ಪೌರಾತ್ಯ ಸಿದ್ಧಾಂತದ ಪುಸ್ತಕಗಳನ್ನು ನಿಯತವಾಗಿ ವಿಮರ್ಶೆ ಮಾಡಿಕೊಡತೊಡಗಿದರು. ಅದರಿಂದ ಅವರ ಸಂಪರ್ಕಗಳು ಇನ್ನಷ್ಟು ಹರವುಗೊಳ್ಳಲು ಅವರ ಪರಿಚಯ ವ್ಯಾಪಕವಾಗಲು ಸಹಾಯಕವಾಯಿತು. ಹೀಗೆ ಲಾಲಾಜಿ ನೆಲೆಗೊಳ್ಳತೊಡಗಿದಂತೆ, ನಿಯತವಾದ ಕೆಲಸಕ್ಕೆ ಅವಿಶ್ರಾಂತವಾಗ ತೊಡಗಿದಂತೆ ಭಾರತ ಸ್ವಾತಂತ್ರ್ಯ ಸಾಧನೆಯ ಉದ್ದೇಶಕ್ಕೆ ನಿಶ್ಚಿತ ಸ್ವರೂಪ ಮೂಡತೊಡಗಿದಂತೆ ಸಹಜವಾಗಿ ಅವರಿಗೆ ನೆರವಾಗುವ ಕೆಲವು ಬೆಂಬಲಿಗರ ಅಗತ್ಯ ಕಂಡು ಬಂದಿತು. ನಿಷ್ಠೆ ಹಾಗೂ ಶ್ರದ್ಧೆಯಿಂದ ತಮ್ಮೊಂದಿಗೆ ಬಡಿದಾಡಬಲ್ಲ ಸಹವರ್ತಿತ್ವ

ಅವರಿಗೆ ಆಗ ಅಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಎನ್.ಎಸ್. ಹರ್ಡಿಕರ್ ಅವರಲ್ಲಿ ಕಂಡು ಬಂದಿತು.

1915ರ ಅಕ್ಟೋಬರ್‌ನಲ್ಲಿ ಲಜಪತರು ಇಂಡಿಯನ್ ಹೋಂ ರೂಲ್ ಆಫ್ ಲೀಗ್ ಆಫ್ ಅಮೆರಿಕ ಸ್ಥಾಪಿಸಿದರು. ಅವರೇ ಅದರ ಅಧ್ಯಕ್ಷರೂ ಆದರು. ಭಾರತದ ಹಿತಕ್ಕಾಗಿ ಅವಿಶ್ರಾಂತ ಹೋರಾಟಗಾರರಾಗಿದ್ದ ಜೆ.ಡಿ. ಸುಂದರಲಾಲ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ''ಲಜಪತರು ಅಮೆರಿಕದಿಂದ ಹೊರಟ ನಂತರವೂ ಡಾ. ಸುಂದರ್ ಲಾಲ್ ಆ ಕೆಲಸವನ್ನು ಮುಂದುವರೆಸಿದರು.''

ಆ ಸಂಘಟನೆಯೊಂದಿಗೆ ಸಮ್ಮಿಳನಗೊಂಡವರಲ್ಲಿ ಕೆ.ಡಿ. ಶಾಸ್ತ್ರೀ, ಎನ್.ಎಸ್. ಹರ್ಡಿಕರ್ ಕಾರ್ಯದರ್ಶಿಗಳಾದರು. ಆರ್.ಎಲ್. ಬಾಜಪೇಯಿ ಸಲಹೆಗಾರರಾದರು. 1917 ಜನವರಿಯಿಂದ ಲೀಗ್ ತನ್ನದೇ ಆದ ಸಣ್ಣ ಪ್ರಮಾಣದ ಮಾಸಿಕವೊಂದನ್ನು ಆರಂಭಿಸಿತು. ಅದರ ಶೀರ್ಷಿಕೆ ಯಂಗ್ ಇಂಡಿಯಾ ಪತ್ರಿಕಾಲಯದ ಕಚೇರಿ ಭಾರತದ ವಿದ್ಯಮಾನಗಳ ಮಾಹಿತಿ ಬಯಸುವ ಜನರಿಗೆ ಆಕರ್ಷಣೆಯ ಕೇಂದ್ರವಾಯಿತು. ಜನಪ್ರಿಯತೆಯನ್ನು ಮನಗಂಡ ಲಾಲಾಜಿ 1400, ಬ್ರಾಡ್‌ವೇಯ ಕೇಂದ್ರದಲ್ಲಿ ವಾರ್ತಾ ಸೇವೆ ವ್ಯವಸ್ಥೆಯನ್ನು ನಿಯೋಜಿಸಿದರು. ಅದಕ್ಕೆ ಪೂರಕವಾಗಿ ವರ್ಕರ್ಸ್ ಯೂನಿಯನ್ ಒಂದನ್ನು ಆರಂಭಿಸಿದರು. ವಿಶ್ವ ವೇದಿಕೆಯಲ್ಲಿ ಭಾರತದ ಪ್ರಕರಣವನ್ನು ಜಾಗತಿಕಗೊಳಿಸುವ ನಿಟ್ಟಿನಲ್ಲಿ *ದಿ ಲೀಗ್, ಯಂಗ್ ಇಂಡಿಯಾ* ಮತ್ತು ವಾರ್ತಾ ಕೇಂದ್ರಗಳು ಮೊದಲ ಹಂತದ ಸಂಘಟಿತ ಪ್ರಯತ್ನಗಳಾದವು. ವಿದೇಶದಲ್ಲಿ ಭಾರತದ ಪ್ರಚಾರವನ್ನು ಸಂಘಟಿಸಿದ ಚರಿತ್ರೆಯಲ್ಲಿ ಅವು ಪ್ರಮುಖ ಪಾತ್ರ ವಹಿಸಿವೆ. ಈ ಮೊದಲು ವಿದೇಶಗಳಲ್ಲಿನ ಭಾರತೀಯ ಪ್ರಚಾರದ ನೆಲೆ ಇಂಗ್ಲೆಂಡಿನ ಸೀಮಿತ ಚೌಕಟ್ಟಿಗೆ ಮಾತ್ರ ಒಳಪಟ್ಟಿತ್ತು. ಅಲ್ಲಿ ವೆಡನ್ಬರ್ನ್ ನಿರ್ದೇಶನದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಬ್ರಿಟಿಷ್ ಸಮಿತಿ ಕಾಂಗ್ರೆಸ್ಸಿನ ದೃಷ್ಟಿಕೋನವನ್ನು ಮಾತ್ರ ಪ್ರತಿಪಾದಿಸುತ್ತಿತ್ತು. ಇಂಡಿಯಾ ನಿಯತಕಾಲಿಕೆ ಅದರ ವಾಣಿಯಾಗಿತ್ತು. *ಯಂಗ್ ಇಂಡಿಯಾ* ಪತ್ರಿಕೆಯನ್ನು ಸ್ವತಃ ಲಜಪತರೇ ಸಂಪಾದಿಸುತ್ತಿದ್ದರು. ಅದರ ನಿರ್ವಹಣೆಗೆ ಎನ್.ಎಸ್. ಹರ್ಡಿಕರ್ ನೆರವು ಒದಗಿಸುತ್ತಿದ್ದರು. ಸಣ್ಣ ಪ್ರಮಾಣದಲ್ಲಿ ಆರಂಭಗೊಂಡರೂ ಅದರ ಪ್ರಭಾವ ಬಲಿಷ್ಠ ಪರಿಣಾಮ ಬೀರಿತು.

ದಿ ಲೀಗ್ ಆಗಲಿ ಯಂಗ್ ಇಂಡಿಯಾ ಆಗಲಿ ಅಧಿಕೃತವಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ಸಹಯೋಗಗೊಳ್ಳಲಿಲ್ಲ. 1916ರಲ್ಲಿ ಲಕ್ನೋದಲ್ಲಿ ನಡೆದ ವಾರ್ಷಿಕ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಎರಡೂ ಬಣಗಳು ಒಗ್ಗೂಡಿದ ನಂತರವೂ ಲಜಪತರಿಗೆ ಅಂತಹ ಅಂಗೀಕಾರ ಪ್ರಸ್ತುತವೆನಿಸಲಿಲ್ಲ. ಅಮೆರಿಕದಲ್ಲಿ ಅವರು ಕೈಗೊಂಡ ಸಾಹಸ ಅನಧಿಕೃತವಾಗಿದ್ದರೂ ಅವರ ಆ ಸಾಹಸಕ್ಕೆ ಹೆಚ್ಚಿನ ಅನುಕಂಪ ಮತ್ತು ನೈತಿಕ ಬೆಂಬಲ ತುಂಬಿದವರು ಲೋಕಮಾನ್ಯ ಬಾಲ ಗಂಗಾಧರ ತಿಲಕರೊಬ್ಬರೇ. 1918ರಲ್ಲಿ ವ್ಯಾಲೆಂಟೀನ್ ಶಿರೋಲ್ ವಿರುದ್ಧದ ಮಾನನಷ್ಟ ಮೊಕದ್ದಮೆಯೊಂದನ್ನು ಎದುರಿಸಲು ಅವರು ಇಂಗ್ಲೆಂಡಿಗೆ ಭೇಟಿ ಕೊಟ್ಟಿದ್ದರು. ಆ ಮೊಕದ್ದಮೆಯಲ್ಲಿ ಅವರು ಸೋತಿದ್ದು ಬೇರೆ ಮಾತು. ಮಹಾತ್ಮಾ ಗಾಂಧಿ ಕಂಡಂತೆ ಲೋಕಮಾನ್ಯರ ವ್ಯಕ್ತಿತ್ವ ಹಿಮಾಲಯದಷ್ಟು ಎತ್ತರದ್ದು. ಸಾಗರದಷ್ಟು

ವಿಶಾಲವಾದದ್ದು. ಆದರೂ ಲಾಲಾಜಿಯವರೊಂದಿಗೆ ಹೋಲಿಸಿದರೆ ವಿಶ್ವಾಸಾತ್ಮಕ ಹಾಗೂ ಕಾಸ್ಮೋಪಾಲಿಟನ್ ಸ್ವರೂಪದಲ್ಲಿ ಅವರಿನ್ನೂ ಕುಬ್ಜರಾಗಿದ್ದರು. ಲಜಪತರ ವಿದೇಶಿ ಅನುಭವದೊಂದಿಗೆ ಹೋಲಿಸಿದರೂ ಅಷ್ಟೇ. ಯುನೈಟೆಡ್ ಕಿಂಗ್‌ಡಂಗೆ ಭೇಟಿ ಕೊಟ್ಟಾಗ ಲೋಕಮಾನ್ಯರು ಬ್ರಿಟಿಷ್ ಪತ್ರಿಕೆಗಳಲ್ಲಿ ಪ್ರಚಾರ ಪಡೆಯಲು ಸಾಕಷ್ಟು ಎಡರು ತೊಡರುಗಳನ್ನು ಹಾದು ಹೋಗಬೇಕಾಗಿತ್ತು. ಆ ಅನುಭವದ ಹಿನ್ನಲೆಯಲ್ಲಿ ಲೋಕಮಾನ್ಯರು ಲಾಲಾಜಿಯವರ ಅದ್ಭುತ ಸಾಧನೆಯನ್ನು ಹೃದಯ ಬಿಚ್ಚಿ ಪ್ರಶಂಸಿಸಿದರು. ಇಂಗ್ಲೆಂಡಿನಿಂದ ತಿಲಕರು ಲಜಪತರಿಗೆ ಪತ್ರಗಳನ್ನು ಬರೆದು ಹೃದಯಪೂರ್ವಕ ಧೈರ್ಯ ತುಂಬಿದರು. ಎಲ್ಲಾ ರೀತಿಯ ಬೆಂಬಲದ ನಿರ್ದಿಷ್ಟ ಭರವಸೆ ನೀಡಿದರು.

ಡಾ. ಎನ್.ಎಸ್. ಹರ್ಡಿಕರ್ ಅವರು ಆ ಪ್ರಸಂಗವನ್ನು ನೆನಪು ಮಾಡಿಕೊಂಡಿದ್ದಾರೆ. ತಮ್ಮ ಜನರಿಗೆ ಬರೆದ ಪತ್ರದಲ್ಲಿ ಅವರು ಆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಲಾಲಾಜಿ ತಾವು ಕೈಗೊಂಡಿರುವ ಕಾರ್ಯಗಳಿಗೆ ಹಣವಿಲ್ಲದೆ ತೀವ್ರ ಬಿಕ್ಕಟ್ಟು ಎದುರಿಸುತ್ತಿದ್ದಾರೆ ಎಂದು ಅವರು ಅದರಲ್ಲಿ ನಮೂದಿಸಿದ್ದಾರೆ. ಅಂತಹ ಕೆಲವು ಪತ್ರಗಳನ್ನು ಲೋಕಮಾನ್ಯರು ಓದಿದ್ದರೂ ಕೂಡಾ.

ಲೋಕಮಾನ್ಯರು ನೀಡಿದ ಬೆಂಬಲ ಅತ್ಯಂತ ಸಕಾಲಿಕವಾಗಿತ್ತು. ಅವರು ಲಜಪತರ ನೆರವಿಗೆ ಬರದಿದ್ದರೆ ಅಮೆರಿಕದಲ್ಲಿ ಇಂಡಿಯನ್ ಹೋಂ ರೂಲ್ ಲೀಗ್ ಅಸ್ತಿತ್ವ ತೀರಾ ತೊಂದರೆಗೆ ಒಳಪಡುತ್ತಿತ್ತೇನೋ? ಲಾಲಾಜಿ ಲೋಕಮಾನ್ಯರ ಬಗ್ಗೆ ಎಷ್ಟೊಂದು ಕೃತಜ್ಞರಾಗಿದ್ದಾರೆಂಬುದನ್ನು ಎನ್.ಎಸ್. ಹರ್ಡಿಕರ್ ನೆನಪು ಮಾಡಿಟ್ಟಿದ್ದಾರೆ.

ಲೋಕಮಾನ್ಯರು ಮೊದಲು ಸಂದಾಯ ಮಾಡಿದ ಮೊತ್ತ 5 ಸಾವಿರ ಅಮೆರಿಕನ್ ಡಾಲರ್ (ಆ ಕಾಲದಲ್ಲಿ ಅದು ಸುಮಾರು 17 ಸಾವಿರ ರೂಪಾಯಿಗಳಿಗೆ ಸಮ) ಯುದ್ಧ ಕಾಲದ ಕಟ್ಟುಕಟ್ಟಳೆ ಮತ್ತು ನಿರ್ಬಂಧಗಳು ಆ ಮೊತ್ತದ ನೆರವು ನೀಡಲು ಸಹ ಭಾರೀ ಅಡ್ಡಿ ಆತಂಕ ಉಂಟು ಮಾಡಿತ್ತು. ಲೋಕಮಾನ್ಯರು ಶ್ರೀಮತಿ ಅನಿಬೆಸೆಂಟರ ನೆರವು ಪಡೆದು ಆ ಸಹಾಯ ಲಾಲಾಜಿಗೆ ತಲುಪುವಂತೆ ಮಾಡಿದ್ದರು. ಅಷ್ಟಾದರೂ ತಿಲಕರಿಗ ನಂಬಿಕೆ ಇರಲಿಲ್ಲ. 1919ರಲ್ಲಿ ಲಂಡನ್‌ನಿಂದ ಲಜಪತರಿಗೆ ಪತ್ರ ಬರೆದು ''ನಾನು ಕಳುಹಿಸಿದ 5 ನಿಮಗೆ ಸೇರಿದೆಯೇ?, ಕೂಡಲೇ ತಿಳಿಸಿ'' ಎಂದು ಅಶಿಸಿದರು. ಆ 'ಐದು' ಅರ್ಥ ''5000ದ ಸಂಕೇತವಾಗಿತ್ತು.'' ಯುದ್ಧ ಕಾಲದ ಸೆನ್ಸಾರ್ ಗಮನವನ್ನು ಮರೆ ಮಾಚಲು ಆ ಸಂಕೇತ ಬಳಸಲಾಗಿತ್ತು. ಆ 'ಐದು' ಕೈತಪ್ಪಲಿಲ್ಲವೆಂದು ಖಾತ್ರಿ ಆದ ನಂತರ ಮತ್ತೆ ಒಂದು ಸಾವಿರ ಅಮೆರಿಕನ್ ಡಾಲರ್ ಕಳುಹಿಸಲು ಅವರು ವ್ಯವಸ್ಥೆ ಮಾಡಿದರು.

ಅಮೆರಿಕದಲ್ಲಿ ಭಾರತದ ವರ್ಚಸ್ಸನ್ನು ಸ್ಥಿರಗೊಳಿಸುವ ನಿಟ್ಟಿನಲ್ಲಿ ಪ್ರಮುಖವಾದ ಕಾರಣಗಳ ಪೈಕಿ 1918ರಲ್ಲಿ ಕವಿ ರವೀಂದ್ರನಾಥ ಠಾಗೂರ್ ಕೈಗೊಂಡ ಉಪನ್ಯಾಸ ಪ್ರವಾಸ ಪ್ರಮುಖ. ನೇರವಾಗಿ ರಾಜಕೀಯ ಲಕ್ಷಣವಿಲ್ಲವಾದರೂ ಅದಾಗ ಆ ದೇಶದಲ್ಲಿ ಭಾರತದ ಬಗ್ಗೆ ಉಂಟಾಗದಿದ್ದಂತಹ ಅರಿವು ಮೂಡಿಸುವಲ್ಲಿ ನಿಸ್ಸಂಶಯವಾಗಿಯೂ ಅದು ಫಲಕಾರಿಯಾಯಿತು. ನಮ್ಮ ಕಥಾನಾಯಕ ರಾಜಕಾರಣಿ ಮತ್ತು ಆ ಮಹಾ ಕವಿ

ಸ್ವಾತಂತ್ರ್ಯವೇ ಉಸಿರು ಬದುಕಾದ ಆ ನೆಲದಲ್ಲಿ ಒಬ್ಬರನ್ನೊಬ್ಬರು ಭೇಟಿಯಾಗಲಿಲ್ಲ. ಆದರೆ ಲಜಪತ್‌ರಾಯ್ ಕೈಗೊಂಡ ವ್ಯವಸ್ಥಿತ ಪ್ರಚಾರ ಕಾರ್ಯಕ್ಕೆ ಟಾಗೂರರ ಭೇಟಿ ಒತ್ತು ನೀಡಿದ್ದು ಸತ್ಯ.

ಅಮೆರಿಕನ್ ಸೆನೆಟ್‌ನ ವಿದೇಶಾಂಗ ಬಾಂಧವ್ಯ ಸಮಿತಿಯ ಮುಂದೆ ಭಾರತದ ಪ್ರಕರಣವನ್ನು ವಿಧ್ಯುಕ್ತವಾಗಿ ಮಂಡಿಸುವಲ್ಲಿ ಅದರ ಶಾಂತಿ ಸಮ್ಮೇಳನದ ಸಮಯದಲ್ಲಿ ಲಜಪತ್‌ರಾಯ್ ಅವರ ಹೋಂ ರೂಲ್ ಲೀಗ್ ಪ್ರಚಾರ ಆಂದೋಲನ ಪ್ರಮುಖ ಪಾತ್ರ ವಹಿಸಿತು. ಸೆನೆಟರ್ ಡೆಡ್ಲಿ ಫೀಲ್ಡ್ ಮಲೋನ್ ಸಮಿತಿಯ ಮುಂದೆ ಭಾರತದ ಪ್ರಕರಣದ ಪ್ರಸ್ತಾಪ ಮಾಡಿದರು. ಆ ಬೆಳವಣಿಗೆಯಲ್ಲಿ ಸಹಯೋಗ ಹೊಂದಿದ ಇತರರ ಪೈಕಿ ಸೆನೆಟರ್ ನೋರಿಸ್ ಮತ್ತೊರ್ವರು. ಭಾರತದ ಪ್ರಕರಣ ವರದಿಯನ್ನು ಬಹುತೇಕ ಸಿದ್ಧಪಡಿಸಿದ್ದು ಲಜಪತರೇ ಎಂಬುದರಲ್ಲಿ ಎರಡು ಮಾತಿಲ್ಲ. ಆ ಸಮಯದಲ್ಲಿ ಅವರು ಅಲ್ಲಿರದಿರದಿದ್ದರೆ ಅಂತಹ ಒಂದು ಪ್ರಯತ್ನ ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ. ವಿದೇಶಾಂಗ ಬಾಂಧವ್ಯಗಳ ಸಮಿತಿಯ ಮುಂದೆ ಭಾರತದ ಪ್ರಕರಣವನ್ನು ಪ್ರಸ್ತಾಪ ಮಾಡಿದ ಘಟನೆ ಎನ್.ಎಸ್. ಹರ್ಡಿಕರ್ ನಿರೂಪಣೆಯಲ್ಲಿ ವಿಸ್ತಾರವಾಗಿ ಮೂಡಿದೆ. ಲಾಲಾಜಿ ಅವರಿಗೆ ಆ ಸಮಿತಿಯ ವಿಷಯದಲ್ಲಿ ಅಷ್ಟೇನೂ ವಿಶ್ವಾಸವಿದ್ದಂತೆ ಕಂಡು ಬರುವುದಿಲ್ಲ. ಅನುಕಂಪ ತೋರಿದಂತಿದೆ ಎಂದು ತಾವು ಭಾವಿಸಿಕೊಂಡಿದ್ದ ಆ ಸಮಿತಿಯ ಬಾಗಿಲು ಬಡಿಯಲು ಸ್ವತಃ ಅವರು ಮುಂದಾಗಲಿಲ್ಲ. ಆದರೆ ಅವರ ಕೆಲವು ಬೆಂಬಲಿಗರು ಹರ್ಡಿಕರ್ ಜೊತೆಗೂಡಿ ಅಂತಹ ಅವಕಾಶವನ್ನು ಹೋಗಗೊಡಬಾರದೆಂದು ಆಲೋಚಿಸಿದರು.

ಸಮಿತಿಯಿಂದ ಭಾರತ ಪ್ರಕರಣದ ಪ್ರಸ್ತಾವದ ಬಗ್ಗೆ ವರದಿ ಕೇಳಿ ಆಹ್ವಾನ ಬಂದಾಗ ಕಚೇರಿಯಲ್ಲಿ ಹರ್ಡಿಕರ್ ಅವರಿರಲಿಲ್ಲವೆಂದು ಕಂಡು ಬರುತ್ತದೆ. ಆಗ ಲಾಲಾಜಿ ಅಲ್ಲಿದ್ದರು. ಸಮಿತಿಯು ಅಂತಹ ಆಹ್ವಾನ ನೀಡಿದ ಹಿನ್ನಲೆ ಅವರಿಗೆ ಗೊತ್ತಿರಲಿಲ್ಲ! ಒಟ್ಟಾರೆ ಒಂದು ಸಂದರ್ಭವನ್ನಂತೂ ಸೃಷ್ಟಿಸಿಯಾಗಿತ್ತು. ತಮ್ಮ ಬೆಂಬಲಿಗರು ಮಾಡಿದ ಕಟ್ಟುಪಾಡನ್ನು ಅವರು ನಿರಾಕರಿಸುವಂತೆಯೂ ಇರಲಿಲ್ಲ. ಆ ಆಹ್ವಾನವನ್ನು ಅವರು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಯಿತು! ಅವರ ಕಿರಿಯ ಸಹವರ್ತಿಗಳಿಗೆ ಆ ವಿಷಯದಲ್ಲಿ ಸಂಪೂರ್ಣ ವಿಶ್ವಾಸವಿತ್ತು. ಆ ಜವಾಬ್ದಾರಿಯನ್ನು ಲಾಲಾಜಿ ನಿರ್ವಹಿಸುತ್ತಾರೆಂಬ ಇಂಗಿತ ಖಾತರಿಯಾಗಿತ್ತು. ಅವರ ಕಿರಿಯ ಸಹವರ್ತಿಗಳಲ್ಲಿ ಬೇರಾರು ಅಂತಹ ವರದಿ ಸಿದ್ಧಪಡಿಸಲಾರರು ಎಂದು ಅವರಲ್ಲಿ ಮನವರಿಕೆಯಾಗಿತ್ತು. ಸಮಿತಿಯ ಮುಂದೆ ಆ ವರದಿ ಇನ್ನೆರಡು ದಿನಗಳಲ್ಲಿ ಮಂಡಿತವಾಗಬೇಕೆಂದು ಆಹ್ವಾನದಲ್ಲಿ ತಿಳಿಸಲಾಗಿತ್ತು. ಅಷ್ಟು ಅಲ್ಪಾವಧಿಯಲ್ಲಿ ಭಾರತದ ಪ್ರಕರಣವನ್ನು ಲಿಖಿತ ರೂಪದಲ್ಲಿ ಸಿದ್ಧಪಡಿಸಿ ಅದನ್ನು ಮುದ್ರಿಸಿ, ಸಲ್ಲಿಸಬೇಕಾಗಿತ್ತು! ಒಟ್ಟಾರೆ ಲಾಲಾಜಿ ಪಾಲಿಗೆ ಪರಿಸ್ಥಿತಿ ಬಲವಂತವಾಯಿತು. ಪ್ರಕರಣದ ಮನವಿ ವರದಿ ಸಿದ್ಧಪಡಿಸಲು ಅವರಿಗೆ ಇದ್ದದ್ದು ಒಂದು ದಿನದ ಸಮಯವಷ್ಟೇ. ಇಡೀ ರಾತ್ರಿ ಕುಳಿತು ಕೆಲಸ ಮಾಡಿದರು. ಮರುದಿನವೂ ಸಾಗಿತು. 12 ಪುಟಗಳ ಆ ಮನವಿ ವರದಿ ಮುದ್ರಣಕ್ಕೆ ಸಿದ್ಧವಾಯಿತು.

ವರದಿ ಸಿದ್ಧಪಡಿಸುವ ಸಮಯದಲ್ಲಿ ಲಾಲಾಜಿ ತಮ್ಮ ವಕೀಲ ಗೆಳೆಯ - ಸೆನೆಟರ್ ಡಡ್ಲಿ ಫೀಲ್ಡ್ ಮಲೋನ್ ಜೊತೆ ನಿಕಟ ಸಂಪರ್ಕ ಹೊಂದಿದ್ದರು. ಸಮಿತಿಯ ಮುಂದೆ ಆ ಮನವಿ ವರದಿ ಮಂಡಿಸುವ ಸಮಯದಲ್ಲಿ ತಮ್ಮೊಂದಿಗೆ ಇರಬೇಕೆಂದು ಅವರ ಮನ ಒಲಿಸಿದರು. ಇತ್ತ ಏನೂ ಅರಿಯದಂತೆ ಆ ಮಹತ್ತರ ವೇಳೆಯನ್ನು ಸೃಷ್ಟಿಸಿ ಅವರ ನಿರ್ವಹಣೆಯನ್ನು ಲಾಲಾಜಿಯವರಿಗೆ ಒಪ್ಪಿಸಿ ತೆರೆಮರೆಯಲ್ಲಿ ಉಳಿದುಕೊಂಡ ಅವರ ಕಿರಿಯ ಬೆಂಬಲಿಗರು ಹರ್ಷದಿಂದ ಬೀಗಿದರು. ಹರ್ಡಿಕರ್ ಅವರ ಮಾತುಗಳಲ್ಲಿ ಹೇಳುವುದಾದರೆ:

``ನೀವು ಮಲೋನ್ ಜೊತೆಗೂಡಿ ಸಮಿತಿಯ ಮುಂದೆ ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸಿ. ನಾವು ಈ ದಿನ ನಾಟಕವೊಂದನ್ನು ನೋಡುವ ಮೂಲಕ ಮನರಂಜನೆ ಮಾಡಿಕೊಳ್ಳುತ್ತೇವೆ.'' ಹಾಗೆಯೇ ಹೇಳಿ ಅವರು ನ್ಯೂಯಾರ್ಕ್‌ಗೆ ಮರಳಿದರು!

ಆ ಪ್ರಸಂಗದಲ್ಲಿ ಅಮೆರಿಕದಲ್ಲಿ ಸಾಧ್ಯವಾದಷ್ಟು ಮಟ್ಟಿಗೂ ಭಾರತಕ್ಕೆ ವ್ಯಾಪಕ ಪ್ರಚಾರ ಮತ್ತು ಬೆಂಬಲ ಪ್ರಾಪ್ತವಾಯಿತು. ತಮ್ಮ ವಿಧಿ ಮತ್ತು ನಿಷ್ಠೆಯ ಬಲಿಪಶುವಾಗಿ ವಿದೇಶಿವಾಸದಲ್ಲಿ ಶಿಕ್ಷೆಗೆ ತಮ್ಮನ್ನು ತಾವು ಒಳಪಡಿಸಿಕೊಂಡ ತನ್ನ ಸುಪುತ್ರ ಲಜಪತ್‌ರಾಯ್ ರಾಯಭಾರದ ಫಲವಾಗಿ ಭಾರತಾಂಬೆಗೆ ಆ ಬೆಂಬಲ, ಆ ಪರಿಸ್ಥಿತಿಯಲ್ಲಿ ಆ ನಾಡಿನಿಂದ ವ್ಯಕ್ತವಾಯಿತು. ಅವರು ಅಮೆರಿಕನ್ ಜನತೆಯ ಪಾಲಿಗೆ ಭಾರತೀಯ ಜನತೆಯ ರಾಯಭಾರಿಯಾಗಿದ್ದರು. ಅಸಾಧಾರಣ ಸಾಮರ್ಥ್ಯ, ಆಕರ್ಷಕ ವ್ಯಕ್ತಿತ್ವದ ರಾಯಭಾರಿ ಅವರಾದರು.''

1918-19ರ ಅವಧಿಯಲ್ಲಿ ಅಧ್ಯಕ್ಷ ವಿಲ್ಸನ್ ಅವರದು ಅತಿ ದೊಡ್ಡ ಅಬ್ಬರವಾಗಿತ್ತು. ವ್ಯಕ್ತಿಗಳು ಸ್ವತಂತ್ರ ಬದುಕು ಬಯಸುತ್ತಿದ್ದ ಮತ್ತು ರಾಷ್ಟ್ರ - ನಾಡುಗಳು ಸ್ವಾತಂತ್ರ್ಯದ ಜೊತೆಗೆ ಶಾಂತಿ, ಸಮ್ಯಕ್ತತೆಯ ಬದುಕಿನ ಮೂಲಕ ನಿರ್ಭೀತ ಹೊಸ ವಿಶ್ವವನ್ನು ಆಶಿಸುತ್ತಿದ್ದ ಆ ವೇಳೆಯಲ್ಲಿ ಅವರ ಹೆಸರು ಆಶೋತ್ತರಗಳ ಬೆಳಕಾಗಿ ಹೊಸ ಹುರುಪು, ಹುಮ್ಮಸ್ಸು ತುಂಬುತ್ತಿತ್ತು. ಅದೇ ಹಿನ್ನಲೆಯಲ್ಲಿ ಭಾರತದಿಂದ ಎಸ್. ಸುಬ್ರಮಣಿ ಅಯ್ಯರ್, ಅಧ್ಯಕ್ಷ ವಿಲ್ಸನ್‌ರ ವಿಳಾಸಕ್ಕೆ ಪ್ರಮುಖ ಪತ್ರವೊಂದನ್ನು ಬರೆದರು. ಅದರಲ್ಲಿ ಭಾರತದ ಪ್ರಕರಣವನ್ನು ಸಾಕಷ್ಟು ವಿಸ್ತಾರವಾಗಿ ತಿಳಿಸಲಾಗಿತ್ತು. ಭಾರತದ ಪತ್ರಿಕೆಗಳು ಸ್ವಾತಂತ್ರ್ಯ ಅಮೆರಿಕನ್ ದೂತನ ವಿಳಾಸಕ್ಕೆ ಬರೆದ ಆ ಪತ್ರದ ಸಂಬಂಧದಲ್ಲಿ ದಿನಗಟ್ಟಳೆ ವರದಿ ಪ್ರಕಟಿಸಿದವು. ಆ ದಿನಗಳಲ್ಲಿ ಆತನಕ ಆಗಿ ಹೋದ ಅಬ್ರಾಹಂ ಲಿಂಕನ್ ಹೆಸರು ಸೇರಿದಂತೆ ಅಮೆರಿಕದ ಮಹಾನ್ ನಾಯಕರುಗಳ ಹೆಸರುಗಳನ್ನೆಲ್ಲಾ ಮರೆಸುವಷ್ಟು ಜನಪ್ರಿಯವಾಗಿದ್ದ ಸ್ವತಂತ್ರ ಪ್ರೇಮಿ ವಿಲ್ಸನ್ ಅವರಿಗೆ ಬರೆದ ಪತ್ರವೆಂದ ಮೇಲೆ ಆ ಪ್ರಚಾರದ ಮಹತ್ವ ಸಾಧುವೇ ಸರಿ. ಆದರೆ ಅಷ್ಟೊಂದು ಪ್ರಚಾರಕ್ಕೆ ಎಳಸಿದ ಭಾರತೀಯ ಪ್ರಚಾರಕಾರರಿಗೆ ಅಮೆರಿಕದ ಅಂದಿನ ಕಸ್ತಲೆಯ ಹಿನ್ನಲೆಯಲ್ಲಿ ಅದು ಅಷ್ಟೊಂದು ಮಹತ್ವದ್ದಾಗಲಾರದು ಎಂಬ ವಾಸ್ತವದ ಅರಿವಾಗಿರಲಿಲ್ಲ. ಅದೇನೇ ಇರಲಿ ಅಮೆರಿಕದ ಪತ್ರಿಕೆಗಳಲ್ಲೂ ಆ ಪತ್ರದ ಬಗ್ಗೆ ಒಂದಷ್ಟು ಪ್ರಚಾರವಾಯಿತು. ಅವರ ಹೆಗ್ಗಳಿಕೆ ಲಜಪತರ ಪರಿಶ್ರಮಕ್ಕೆ ಸಂದಾಯ

ಮತ್ತೊಂದು ಪ್ರಸಂಗವನ್ನು ಹರ್ಡಿಕರ್ ಪ್ರಸ್ತಾಪಿಸಿದ್ದಾರೆ ಸೆನೆಟ್‌ನಲ್ಲಿ ಭಾರತದ ಬಗ್ಗೆ ಪ್ರಸ್ತಾಪ ಮಾಡಲು ಬಯಸಿದ ಓರ್ವ ಸೆನೆಟ್ ಸದಸ್ಯರು ಲಜಪತರ ನೆರವನ್ನು ಪಡೆದುಕೊಂಡ ಪ್ರಸಂಗ ಅದು.

ಲಾಲಾಜಿ ಇಡೀ ಅಮೆರಿಕನ್ ಜನತೆಗೆ ಭಾರತೀಯರ ರಾಯಭಾರಿಯಾಗಿದ್ದರು. ಆದ್ದರಿಂದ ವಾಷಿಂಗ್ಟನ್ ಒಂದೇ ಅವರ ಚಟುವಟಿಕೆ ಕೇಂದ್ರವಾಗಿರಲು ಸಾಧ್ಯವಿರಲಿಲ್ಲ. ತಾವು ಕೈಗೊಂಡ ಮಹಾನ್ ಮಹೋದ್ದೇಶದ ಕೆಲಸ ವ್ಯಾಪಕವಾಗಬೇಕಾದರೆ ಸ್ವತಂತ್ರವಾದಿಗಳು ಮತ್ತು ವಿಚಾರವಾದಿಗಳು, ಎಡಪಂಥೀಯ ವಲಯಗಳು ಎಲ್ಲಕ್ಕಿಂತ ಹೆಚ್ಚಿನದಾಗಿ ಹೆಚ್ಚು ಅನುಕೂಲಕರವಾದ ವಿಶ್ವವಿದ್ಯಾಲಯಗಳ ಜನರು, ಪತ್ರಕರ್ತರು ಮತ್ತು ಬುದ್ಧಿಜೀವಿಗಳೊಂದಿಗೆ ಒಡನಾಡಲು ಅವರು ಯೋಜಿಸಿಕೊಂಡರು. ಅದಕ್ಕಾಗಿ ಅನುಕೂಲಕರ ಪ್ರತಿಕ್ರಿಯೆ ನೀಡುವಂತೆ ಭಾರತದ ಪರವಾಗಿ ಅಭಿಪ್ರಾಯಗಳನ್ನು ಸಮರ್ಥವಾಗಿ ರೂಢಿಸಬಲ್ಲಂತಹವರನ್ನು ಅವರು ಸಂಪರ್ಕಿಸತೊಡಗಿದರು. ಆಡಳಿತಸ್ಥರ ಬಗ್ಗೆ ಲಜಪತರು ಹೆಚ್ಚು ಆಸಕ್ತಿ ತೋರಲಿಲ್ಲ. ಅದಕ್ಕಿನ್ನು ಕಾಲ ಹದವಾಗಿಲ್ಲವೆಂದು ಅವರು ತರ್ಕಿಸಿದ್ದೇ ಅದಕ್ಕೆ ಕಾರಣ.

ಅಮೆರಿಕದಲ್ಲಿ ಲಜಪತರು ಪ್ರಕಟಿಸಿದ ನಿಯತಕಾಲಿಕೆಗಳು, ಕೈಪಿಡಿಗಳು. ಹೊತ್ತಿಗೆಗಳು ಸೇರಿದಂತೆ ಅವರ ಯಾವ ಸಾಹಿತ್ಯವು ಭಾರತಕ್ಕೆ ಬರದಂತೆ ಬ್ರಿಟಿಷ್ ಸರ್ಕಾರ ನಿಷೇಧ ಹಾಕಿತು. ಅದೇ ಸಮಯದಲ್ಲಿ ಬ್ರಿಟಿಷ್ ಪರ ಪ್ರಚಾರಕರು ಲಜಪತರು ಜರ್ಮನ್ ಏಜೆಂಟರು ಎನ್ನುವ ಅರ್ಥದಲ್ಲಿ ಅಪಪ್ರಚಾರವನ್ನು ಹಬ್ಬಿಸಿದರೇ? ಬ್ರಿಟಿಷ್ ಸರ್ಕಾರ ಲಜಪತರ ಹೊತ್ತಿಗೆ ಯಂಗ್ ಇಂಡಿಯಾ ಮೇಲೆ ನಿಷೇಧ ಹೇರಿತು. ಆ ಹುಚ್ಚು ನಿಷೇಧವನ್ನು ಕಮಾಂಡರ್ ಜೋಸಯ್ಯ ಸಿ. ವೆಡ್ವುಡ್ ಹೌಸ್ ಆಫ್ ಕಾಮನ್ಸ್ ವೇದಿಕೆಯಲ್ಲಿ ಉಲ್ಲಂಘಿಸಿದರು. ಪುಸ್ತಕವನ್ನು ವಿಶ್ಲೇಷಿಸಿದರು. ಯಂಗ್ ಇಂಡಿಯಾದ ವಿಜಯೋತ್ಸವವಾಯಿತು. ಹೊತ್ತಿಗೆಯ ಮೇಲಣ ನಿಷೇಧ ಹಾಗೂ ಅದರ ವಿರುದ್ಧ ಹೋರಾಟ ಪ್ರಶಸ್ತವಾದ ಸ್ನೇಹವೊಂದರ ಹೊಸ ಅಧ್ಯಾಯಕ್ಕೆ ಪೀಠಿಕೆಯಾಯಿತು. ಆ ಕಥೆಯನ್ನು ಮುಂದಿನ ಅಧ್ಯಾಯದಲ್ಲಿ ಲಜಪತರು ತಮ್ಮ ಕೃತಿಯಲ್ಲಿ ವಿಸ್ತಾರವಾಗಿ ಬರೆದಿದ್ದಾರೆ.

ಲಜಪತ್‌ರಾಯ್ ಮತ್ತು ವೆಡ್‌ವುಡ್ ಸ್ನೇಹ ಅನೇಕ ವರ್ಷಗಳ ಕಾಲ ಚಿರನೂತನವಾಗಿತ್ತು. ಅವರಿಬ್ಬರ ದೇಶದಲ್ಲೂ ಅದು ಜನಪ್ರಿಯವಾಗಿತ್ತು. ಆದರೆ ಆ ಸ್ನೇಹಕ್ಕೆ ಮೊದಲು ಕಮಾಂಡರ್, ಭಾರತೀಯ ರಾಷ್ಟ್ರ ಭಕ್ತ- ಲೇಖಕನ ಕೃತಿಯೊಂದರ ವಿರುದ್ಧ ಹೋರಾಟ ಆರಂಭಿಸಿದಾಗ ಅವರಿಬ್ಬರ ನಡುವೆ ಪರಿಚಯವೇ ಇರಲಿಲ್ಲ. ಅಂದ ಮೇಲೆ ಒಬ್ಬರನೊಬ್ಬರು ನೋಡಿರಲೂ ಇಲ್ಲ. ಕೆಲ ಸಮಯದ ನಂತರ ವೆಡ್‌ವುಡ್ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಕೊಟ್ಟಾಗ ಬಾಲ್ಟಿಮೋರ್‌ನಲ್ಲಿ ಇಬ್ಬರು ಪ್ರಥಮ ಬಾರಿಗೆ ಕಲೆತರು. ಅದಕ್ಕೆ ಮೊದಲು (ಯಂಗ್ ಇಂಡಿಯಾ ನಿಷೇಧ ಪ್ರಕರಣದ ನಂತರ) ಅವರಿಬ್ಬರು ಪತ್ರಗಳ ವಿನಿಮಯ ಮಾಡಿಕೊಂಡಿದ್ದರು. ಅದು ಪರಸ್ಪರ ಆತ್ಮೀಯತೆಯ ಹಂತ ಮುಟ್ಟಿ ಕುಶಲೋಪರಿ ಪ್ರಶ್ನೆಯವರೆಗೆ ತಾದಾತ್ಮ್ಯಗೊಂಡಿತ್ತು. ಆಗು ಹೋಗು, ನಡೆನುಡಿಗಳನ್ನೆಲ್ಲಾ ಪತ್ರಗಳಲ್ಲೇ ಅವರು ವಿನಿಮಯ ಮಾಡಿಕೊಳ್ಳುತ್ತಿದ್ದರು. ಹೀಗೆ ಲಜಪತರು ವಿಶಿಷ್ಟ ಇಂಗ್ಲಿಷ್ ವ್ಯಕ್ತಿಯೊಬ್ಬರೊಡನೆ ಅಮೆರಿಕದಲ್ಲಿ ಅತ್ಯುತ್ತಮ ಸ್ನೇಹವರ್ಧನೆ ಸಾಧಿಸಿಕೊಂಡರು. ಯುದ್ಧದ ಕೊನೆಯ ವರ್ಷದ ಸಂದರ್ಭದಲ್ಲಿ ವೆಡ್‌ವುಡ್ ಪತ್ರವೊಂದರಲ್ಲಿ ಲಜಪತರು ಪರ್ಷಿಯಾಕ್ಕೆ ಭೇಟಿ ಕೊಡಬೇಕೆನ್ನುವ ವಿಚಿತ್ರ

ಸಲಹೆಯೊಂದರ ಪ್ರಸ್ತಾಪ ಬರುತ್ತದೆ. ಕೆಲವು ಷರತ್ತುಗಳು ಈಡೇರುವುದಾದರೆ ಸಂದೇಶವನ್ನು ಹೊತ್ತು ಪರ್ಷಿಯಾಕ್ಕೆ ಭೇಟಿ ಕೊಡಲು ಲಜಪತರು ಒಪ್ಪಿದ್ದಾರೆಂದು ಪತ್ರವೊಂದು ಹೇಳುತ್ತದೆ. ಲಜಪತರು ಆ ಪತ್ರದಲ್ಲಿ ಯುದ್ಧದ ಬಗ್ಗೆ ತಮಗಿರುವ ಅಭಿಪ್ರಾಯವನ್ನು ಬದಲಿಸಿಕೊಂಡಂತೆಯೂ ಬ್ರಿಟನ್ನಿನ ಯುದ್ಧ ಯತ್ನಕ್ಕೆ ಸಹಕಾರ ಪ್ರತಿಪಾದಿಸಿದಂತೆಯೂ ಪ್ರಸ್ತಾಪವಿದೆ. ಅದೊಂದು ಸಾಧ್ಯಾಸಾಧ್ಯತೆಯ ಪತ್ರ. ಲಜಪತರ ಅಂತಹ ಅಭಿಪ್ರಾಯದ ಬಗ್ಗೆ ಅಲ್ಲಿ ಮಾತ್ರವೇ ಪ್ರಸ್ತಾಪ ಬರುತ್ತದೆ. ಅವರ ಭಾಷಣದಲ್ಲಿ ಎಲ್ಲಿಯೂ, ಬರಹದ ಯಾವ ಹಂತದಲ್ಲಿಯೂ ಅಂತಹ ಪ್ರಸ್ತಾಪವನ್ನು ಕಾಣಲು ಸಾಧ್ಯವೇ ಇಲ್ಲ.

ಲಜಪತರೊಂದಿಗೆ ನಡೆಸಿದ ಪತ್ರ ವ್ಯವಹಾರದಲ್ಲಿ ವೆಡ್‌ವುಡ್ ಯಾವ ಸಲಹೆಯನ್ನು ನಿಶ್ಚಿತವಾಗಿ ಚರ್ಚಿಸಿದ್ದಾರೆಂಬುದಾಗಲಿ, ಭಾರತ ಕಚೇರಿ ಮತ್ತು ವಿದೇಶಾಂಗ ಕಚೇರಿಯ ಯಾವ ಜನರೊಂದಿಗೆ ಅವರು ಈ ಬಗ್ಗೆ ಚರ್ಚಿಸಿದ್ದಾರೆಂಬುದಾಗಲಿ ನಮಗೆಲ್ಲಿಯೂ ತಿಳಿದು ಬರುವುದಿಲ್ಲ. ಒಂದಂತೂ ನಿಜ. ಅಂತಹ ಯಾವ ಬೆಳವಣಿಗೆಯೂ ಕಾರ್ಯತಃ ನಡೆದಿಲ್ಲ. ವೆಡ್‌ವುಡ್‌ರ ಆ ಪ್ರಸ್ತಾಪದ ಬಗ್ಗೆ ಸ್ವತಃ ಲಜಪತರಿಂದ ನನಗೂ ಸಹ ಏನೂ ತಿಳಿದು ಬಂದಿಲ್ಲ. ಆ ಬಗ್ಗೆ ಅವರು ಒಂದಕ್ಷರವನ್ನು ನನಗೆ ತಿಳಿಸಿಲ್ಲ. ಆದರೆ ನನಗೆ ಅದರ ಬಗ್ಗೆ ತಿಳಿದು ಬಂದಿದ್ದು ಅವರು ನಿಧನ ಹೊಂದಿದ ನಂತರ. ಅವರ ಕೆಲವು ಅಪ್ರಕಟಿತ ಸಂಗ್ರಹಿತ ಕಾಗದ ಪತ್ರಗಳನ್ನು ನೋಡಿದಾಗ ಮಾತ್ರ. ನನಗೊಂದು ನಿಶ್ಚಿತವಾದ ನೆನಪಿದೆ. ಯುದ್ಧದ ಅಂತ್ಯದಲ್ಲಿ ಪರ್ಷಿಯಾಕ್ಕೆ ರಾಯಭಾರಿ ನಿಯೋಗವೊಂದನ್ನು ಕಳುಹಿಸುವಂತೆ ಆಗ ಆಗಾ ಖಾನ್ ಬ್ರಿಟಿಷ್ ವಿದೇಶಾಂಗ ಕಚೇರಿಯೊಂದಿಗೆ ವ್ಯವಹಾರ ನಡೆಸಿದ್ದಾರೆಂದು ಲಜಪತರು ನಮಗೆ ಹೇಳುತ್ತಿದ್ದರು. ಆ ರಾಯಭಾರದ ಬಗ್ಗೆ ತೆರೆಮರೆಯಲ್ಲಿ ಏನೋ ನಡೆಯುತ್ತಿತ್ತು ಎಂಬುದು ಬಹುಶಃ ಲಜಪತರಿಗೆ ಗೊತ್ತಿತ್ತು.

ಮಾರ್ಕ್ವಿಸ್ ರೀಡಿಂಗ್ ಭಾರತಕ್ಕೆ ವೈಸ್‌ರಾಯ್ ಆಗಿ ಬರುವ ಮೊದಲು ವಾಷಿಂಗ್ಟನ್‌ನಲ್ಲಿ ಬ್ರಿಟನ್ನಿನ ರಾಯಭಾರಿಯಾಗಿದ್ದರು. ಅವರು ವಾಷಿಂಗ್ಟನ್ ಕರ್ತವ್ಯ ವಹಿಸಿಕೊಂಡ ತರುವಾಯ ವೆಡ್‌ವುಡ್ ಆ ರಾಯಭಾರಿಗೆ ಪತ್ರವೊಂದನ್ನು ಬರೆದು ಭಾರತದ ವಿದೇಶವಾಸಿ- ರಾಯಭಾರಿಯನ್ನು ಅವರಿಗೆ ಪರಿಚಯಿಸಿದ್ದರು.

ಈತನಕ ನಾವು ಪ್ರಸ್ತಾಪಿಸುತ್ತಾ ಬಂದಿರುವ ವಿವರಣೆಯಲ್ಲಿ ಅಮೆರಿಕದಲ್ಲಿ ಲಾಲಾ ಲಜಪತ್‌ರಾಯ್ ಸಂಪಾದಿಸಿಕೊಂಡ ಸ್ನೇಹಿತರಲ್ಲಿ ಅನೇಕರ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೇವೆ. ರೆವರೆಂಡ್ ಜೆ.ಟಿ. ಸುಂದರ್‌ಲ್ಯಾಂಡ್ ಒಬ್ಬರು. ಅವರ ಹೆಸರು ಪ್ರಸ್ತಾಪವಾಗಿದೆ. ಲಜಪತರ ಧ್ಯೇಯೋದ್ದೇಶ ಸಾಧನೆಯಲ್ಲಿ ಅವರು ಸಾಧ್ಯವಾದಷ್ಟು ಹೆಚ್ಚು ಬೆಂಬಲ ನೀಡಿದವರು. ಭಾರತಕ್ಕೂ ಬಂದಿದ್ದರು. ಲಜಪತರನ್ನು ಕಂಡಿದ್ದರು. 1916ರ ಮಾರ್ಚ್‌ನಲ್ಲಿ ಯಂಗ್ ಇಂಡಿಯಾ (ಪತ್ರಿಕೆ, ಸಾಪ್ತಾಹಿಕವಲ್ಲ) ಪ್ರಕಾಶಕ ಹ್ಯೂಬ್ಸ್ ಅವರಿಗೆ ಟಿಪ್ಪಣಿಯೊಂದನ್ನು ಬರೆದು ಲಜಪತರ ಎಲ್ಲಾ ಸಾಧನೆಗಳನ್ನು ಬರೆದು ಪಟ್ಟಿ ಮಾಡುತ್ತಾ ಶೋಷಿತ ವರ್ಗಗಳು ಅರ್ಥಾತ್ 40 ದಶಲಕ್ಷ 'ಅಸ್ಪೃಶ್ಯರ' ಉದ್ಧಾರಕ್ಕಾಗಿ

ವಿಶಿಷ್ಟ ಸೇವೆ ಕೈಗೊಂಡಿದ್ದಾರೆ ಎಂದು ತಿಳಿಸಿ, ''ಈ ಉದ್ದೇಶಕ್ಕೋಸ್ಕರವಾಗಿ 2 ವರ್ಷಗಳ ಹಿಂದೆ ಅವರು ರಾಷ್ಟ್ರೀಯ ಸಮ್ಮೇಳನವೊಂದನ್ನು ನಡೆಸಿದ್ದರು. ಅದರಲ್ಲಿ ನಾನು ಪಾಲ್ಗೊಂಡೆ. ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಶಕ್ತಿಯುತ ಭಾಷಣ ಮಾಡಿದರು.''

ಲಜಪತರ ಈ ಅಮೋಘ ಚಟುವಟಿಕೆ ಕ್ರಿಶ್ಚಿಯನ್ ಮಿಷನರಿಗಳಲ್ಲಿ ಕೆಲವು ವರ್ಗಕ್ಕೆ ಸಹ್ಯವಾಗಲಿಲ್ಲ. ತಮಗೆ ಮೀಸಲಾದ ಇಂತಹ ಕಾರ್ಯಗಳಲ್ಲಿ ಲಜಪತರು ಒತ್ತುವರಿ ಮಾಡುತ್ತಿದ್ದಾರೆಂದು ಅವರು ಪರಿಗಣಿಸಿದರು. ಲಜಪತರನ್ನು ದ್ವೇಷದ ದೃಷ್ಟಿಯಿಂದ ನೋಡತೊಡಗಿದರು. ಆದರೆ ರೆವರೆಂಡ್ ಡೆ.ಟಿ. ಸುಂಡರ್‌ಲ್ಯಾಂಡ್ ಅಂಥವರಿಗಿಂತ ಎಷ್ಟೊಂದು ಭಿನ್ನ. ಅವರು ನೈಜ ಕ್ರೈಸ್ತರು. ನ್ಯೂಯಾರ್ಕ್ ದಿನಗಳ ಸಂದರ್ಭಗಳಲ್ಲಿ ಲಜಪತರಿಗೆ ಅತ್ಯುತ್ತಮ ಗೆಳೆಯರಲ್ಲಿ ಒಬ್ಬರಾಗಿ ಮೂಡಿ ಬಂದಿದ್ದವರು. 'ಭಾರತಕ್ಕೆ ಸ್ವಯಂ ಸರ್ಕಾರ ಬೇಕೇ?' ಎಂ ು ಪ್ರಶ್ನೆಗೆ ಉತ್ತರ ರೂಪದ ಕೃತಿಯನ್ನು ಹೊರತರಲು ಸುಂಡರ್‌ಲ್ಯಾಂಡ್ ತಮ್ಮನ್ನು ತಾವು ಅನೇಕ ವರ್ಷಗಳಿಂದ ತೊಡಗಿಸಿಕೊಂಡಿದ್ದರು. ಆದರೆ ಪ್ರಕಾಶಕರು ಲಭ್ಯವಾಗುವ ಸಾಧ್ಯತೆ ಇರಲಿಲ್ಲ. ಅವರ ಅನುರಾಗದ ಪ್ರಕಾಶಕರು ಧಾರ್ಮಿಕ ಸಾಹಿತ್ಯಗಳನ್ನಷ್ಟೇ ಪ್ರಕಟಿಸುತ್ತಿದ್ದರು. ರಾಜಕೀಯ ಕೃತಿಗಳಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಇನ್ನು ಕೆಲವರ ಬಗ್ಗೆ ಅವರು ಯೋಚಿಸಿದರಾದರೂ ಅವರೆಲ್ಲಾ ಅಮೆರಿಕದಲ್ಲಿ ಬ್ರಿಟಿಷ್ ಪರಪ್ರಚಾರ ಪ್ರಿಯರಾದ್ದರಿಂದ ಒಗ್ಗೊಡಲಿಲ್ಲ. ಅದಕ್ಕಿಂತ ಹೆಚ್ಚಿನದಾಗಿ ಐರೋಪ್ ಯುದ್ಧದಲ್ಲಿ ಅಮೆರಿಕ ಮಧ್ಯಸ್ಥಿಕೆ ವಹಿಸಬೇಕೆಂಬ ಪ್ರಶ್ನೆ ಆ ದಿನಗಳಲ್ಲಿ ಜ್ವಲಂತವಾಗಿತ್ತು. ಸುಂಡರ್‌ಲ್ಯಾಂಡ್ ಅವರ ವರ್ತನೆ, ನಿಲುವು ಬ್ರಿಟಿಷ್ ವಲಯದ ಪ್ರಭಾವಿ ವರ್ಗದಲ್ಲಿ ಅವರ ಜನಪ್ರಿಯತೆಗೆ ಕುಂದು ತಂದಿತು. ಕೊನೆಗೂ ಅವರ 'ಇಂಡಿಯಾ ಇನ್ ಬಾಂಡೇಜ್' ಪ್ರಕಟಗೊಂಡಿತು. ಅದು ಭಾರತದಲ್ಲಿ 1920ರ ದಶಕದಲ್ಲಿ ಅದೊಂದು ಮೌಲ್ವಿಕ ದಾಖಲೆಗಳ ಶಕ್ತಿ ಸಂಪನ್ನ ಕೃತಿ.

ಲಾಲಾಜಿ ಅವರ ಭಾರತ ಪ್ರಚಾರ ಕಾರ್ಯದಲ್ಲಿ ಹೆಚ್ಚು ಆಸಕ್ತಿ ತೋರಿದ ಮತ್ತೋರ್ವ ಕ್ರಿಶ್ಚಿಯನ್ ಗಣ್ಯರೆಂದರೆ ರೆವರೆಂಡ್ ಜಾನ್ ಹೇನ್ಸ್ ಹೋಮ್. ಯೂನಿಟೇರಿಯನ್ ಚರ್ಚ್‌ನಲ್ಲಿ ಅವರದು ಪ್ರಭಾವಿ ವ್ಯಕ್ತಿತ್ವವಾಗಿತ್ತು. ಚಿಕಾಗೋ ನಗರದಿಂದ ಪ್ರಕಟಗೊಳ್ಳುತ್ತಿದ್ದ ಸಾಪ್ತಾಹಿಕ *ಯೂನಿಟಿ* ಸಂಪಾದಕರು ಅವರಾಗಿದ್ದರು. ನ್ಯೂಯಾರ್ಕ್‌ನಲ್ಲಿ ತಮ್ಮ ಕೇಂದ್ರ ಕಚೇರಿ ಆರಂಭಿಸುವ ಮೊದಲು ಚಿಕಾಗೋದಲ್ಲಿ ತಂಗಿದ್ದ ಕಾಲದಲ್ಲೇ ಲಜಪತರು ಆ ಮಹಾಶಯರ ಅನುಬಂಧ ಸಾಧಿಸಿದ್ದಿರಬಹುದು. ಮುಂದೆ ಮಹಾತ್ಮ ಗಾಂಧೀ ಕೈಗೊಂಡ ಜನಾಂದೋಲನ ಅವಧಿಯಲ್ಲಿ *ಯೂನಿಟಿ* ಭಾರತದ ಪರವಾಗಿ ಚಿರಸ್ಮರಣೀಯ ಬೆಂಬಲ ನೀಡಿತು. ಪ್ರಕಾಶಕ ಬಿ. ಡಬ್ಲ್ಯು. ಹೇಬ್ಷ್ ಕೇವಲ ವಾಣಿಜ್ಯ ಒಡನಾಟಕ್ಕಾಗಿ ಲಾಲಾಜಿಯವರೊಂದಿಗೆ ಕೆಲಸ ಮಾಡುತ್ತಿರಲಿಲ್ಲ. ಅವರು ಭಾರತೀಯ ಜನತೆಯ ರಾಯಭಾರಿ ಹಾಗೂ ವಿಶ್ವಾಸ ಪಾತ್ರ ಗೆಳೆಯರಾಗಿದ್ದರು. ಲಾಲಾಜಿ ತಾವು ಜಪಾನ್‌ನಲ್ಲಿ ಭೇಟಿ ಮಾಡಿದ ಭಾರತೀಯ ಕ್ರಾಂತಿಕಾರಿಗಳ, ಅಮೆರಿಕದಲ್ಲಿ ತಮಗೆ ಎದುರಾದ ವಿಚಿತ್ರ ಮನೋಧರ್ಮದ ಕ್ರಾಂತಿಕಾರಿಗಳಿಗೆ ಸಂಬಂಧಪಟ್ಟಂತೆ ಸ್ವಹಸ್ತಾಕ್ಷರ (ಇಂಗ್ಲಿಷ್‌ನಲ್ಲಿ) ಬರೆದಿಟ್ಟಿರುವ, ಪ್ರಕಟಣೆಗಾಗಿ ಅಲ್ಲದ -ರಹಸ್ಯವಾದ ವರದಿ ಅಥವಾ ನಿಯತಕಾಲಿಕೆ ರೂಪದ ಒಕ್ಕಣೆಗಳಿದ್ದ

ಮೊಹರಾದ ಒಂದು ಲಕೋಟೆಯನ್ನು ಅವರು ಆ ವಿಶ್ವಾಸ ಪಾತ್ರ ಮಿತ್ರನಲ್ಲಿ ಜತನಗೊಳಿಸಿದ್ದರು. ಬಹುಶಃ ನೆನಪಿನ ಮೂಲವಾಗಿ ಅವರು ಅದನ್ನೆಲ್ಲಾ ಬರೆದಿದ್ದಿರಬಹುದು.

ಲಜಪತರ ನಿಧನದ ನಂತರ ಅವರಿಗೆ ಭಾಷ್ಪಾಂಜಲಿ ಸಲ್ಲಿಸಲು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಹೇಬ್ಸ್ ಭಾವುಕರಾಗಿ ಮಾತನಾಡಿದರು. ಲಜಪತರು ತಮಗೆ ಒಪ್ಪಿಸಿದ್ದ ಹಸ್ತಪ್ರತಿಯ ಲಕೋಟೆಯನ್ನು ಅವರ ನಿಧನದ ನಂತರ ಅವರ ಪರವಾಗಿ ಸ್ವೀಕರಿಸಲು ಯಾರೂ ಮುಂದೆ ಬಾರದಿದ್ದಾಗ 1943ರಲ್ಲಿ ಅವರು ಅದನ್ನು ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿಗೆ ಒಪ್ಪಿಸಿ ದಾಖಲೆ ಮಾಡಿಸಿದರು. ನಂತರ ಒಂದೂವರೆ ದಶಕದ ಮೇಲೆ ಭಾರತದ ರಾಷ್ಟ್ರೀಯ ಪತ್ರಗಾರ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಅಮೆರಿಕದ ಸಾಪ್ತಾಹಿಕಗಳ ಪೈಕಿ ಲಜಪತರು ವಿಶೇಷವಾಗಿ ಮೊದಲು ಇಷ್ಟಪಡುತ್ತಿದ್ದುದು ಹೇಬ್ಸ್ ಅವರ *'Preman'* ಅದು ಹುಟ್ಟಿದ್ದು ಲಾಲಾಜಿ ಭಾರತಕ್ಕೆ ಮರಳಿದ ಮೇಲೆ.

ಲಾಲಾಜಿ ಪತ್ರಕರ್ತರಲ್ಲಿ, ಸ್ವಾತಂತ್ರ್ಯವಾದಿಗಳಲ್ಲಿ, ವಿಚಾರವೇತ್ತರಲ್ಲಿ, ಎಡ ಸಿದ್ಧಾಂತವಾದಿಗಳಲ್ಲಿ, ಬೌದ್ಧಿಕವರ್ಗದವರಲ್ಲಿ ಅನೇಕ ಉತ್ತಮ ಗೆಳೆಯರನ್ನು ಸಂಪಾದಿಸಿಕೊಂಡಿದ್ದರು. ಆ ಪೈಕಿ ಒಸ್ವಾಲ್ ಗ್ಯಾರಿಸನ್ ವಿಲಡ್ಜ್ ಅತಿ ಪ್ರಮುಖರು. ಕಟ್ಟಾ ಸ್ವಾತಂತ್ರ್ಯ ಮನೋಧರ್ಮದ ಪತ್ರಕರ್ತ ಹಾಗೂ ಬುದ್ಧಿಜೀವಿ ಅವರಾಗಿದ್ದರು. ಭಾರತಕ್ಕೆ ಮರಳಿದ ನಂತರ ಅವರ ಸಾಪ್ತಾಹಿಕ ದಿ ನೇಷನ್ ಲಾಲಾಜಿ ಅವರನ್ನು ಸದಾ ಕಾತರಿಸುವಂತೆ ಮಾಡಿರುತ್ತಿತ್ತು. ಅದೇ ಹಂತದಲ್ಲಿ ಇನ್ನೊಂದು ಸಾಪ್ತಾಹಿಕ ದಿ ನ್ಯೂ ರಿಪಬ್ಲಿಕ್. ಆ ಸಾಪ್ತಾಹಿಕದ ಸಂಪಾದಕೀಯ ವರ್ಗದಲ್ಲಿ ಲಜಪತರಿಗೆ ಅನೇಕ ಗೆಳೆಯರಿದ್ದರು. ವಾಲ್ಟರ್ ಲಿಪ್ಮನ್ ಜೊತೆಗೆ ಮಹಾ ಪ್ರಚಂಡ ಪ್ರತಿಭಾವಂತ ಐರಿಷ್‌ನ ಫ್ರಾನ್ಸಿಸ್ ಹ್ಯಾಕಟ್ ಆ ಪೈಕಿ ಮುಖ್ಯರು. ಫ್ರಾನ್ಸಿಸ್ ಹ್ಯಾಕೆಟ್ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಅವರ ಕುಟುಂಬದವರೊಂದಿಗೂ ಲಜಪತರು ಆತ್ಮೀಯತೆ ಸಾಧಿಸಿಕೊಂಡಿದ್ದರು. ಹ್ಯಾಕೆಟ್ ಅವರ ಡ್ಯಾನಿಷ್ ಪತ್ನಿ ಅನಾಟೋಕ್ನಾಪಿಗ್ ಕಟ್ಟಾ ಸ್ತ್ರೀವಾದಿ. ಆಕೆಯೊಂದಿಗೆ ಮಾತನಾಡುವುದೇ ಲಜಪತರಿಗೆ ಅಪ್ಯಾಯಮಾನಿಸುತ್ತಿತ್ತು. ತಮ್ಮ ಹೆಸರಿನೊಂದಿಗೆ ಗಂಡನ ಹೆಸರು ಸೇರಿಸಿಕೊಳ್ಳದಷ್ಟು ಆಕೆ ಸ್ತ್ರೀ ದೃಷ್ಟಿಕೋನ ಹೊಂದಿದ್ದವರು. ''ನೋಡಿ, ನನ್ನ ಹೆಸರನ್ನು 'ಶ್ರೀಮತಿ ಹ್ಯಾಕೆಟ್' ಎಂದು ಕರೆದುಕೊಂಡರೆ ಅದು ಖಂಡಿತವಾಗಿಯೂ ಹಾಸ್ಯಾಸ್ಪದವಾಗುತ್ತದೆ. ನನಗೇನೂ ಹೆಸರಿಲ್ಲವೇ'' ಹೇಳಿ, ಮಿಸ್ಟರ್ ರಾಯ್'' ಎಂದು ಆಕೆ ಪ್ರತಿಭಟನೆಯ ದನಿ ಹಿಡಿಸುತ್ತಿದ್ದರು.

ಜಾನ್ ಹೇನ್ಸ್ ಹೋಮ್ಸ್ ಮತ್ತು ಅವರ ಸಾಪ್ತಾಹಿಕದ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಆ ಪಟ್ಟಿಗೆ ಈಗ ಎಡ ಸಿದ್ಧಾಂತ ಪ್ರಗತಿಪರ ದಿ ಮಾಸಸ್ [illegible]

ಭಾರತೀಯ ಜನತೆಯ ಸ್ವಯಂ ಘೋಷಿತ ಗಡಿಪಾರು ರಾಯಭಾರಿಯು ಅಮೆರಿಕದಲ್ಲಿ ಕಾರ್ಮಿಕ ಸಂಘಟನೆಗಳ ವಲಯದಲ್ಲಿ ಅನುಬಂಧ ಗಳಿಸಿಕೊಂಡಿದ್ದರು. ಅನೇಕ ನೀಗ್ರೋ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಆದರೆ ರಾಜಕೀಯ ನೇತಾರರೊಂದಿಗೆ ಮತ್ತು ಸರ್ಕಾರದೊಂದಿಗೆ ಯಾವುದೇ ಸಂಪರ್ಕ-ಸಂಬಂಧ ರೂಪಿಸಿಕೊಳ್ಳಲು ಅವರಿಗೆ ಆಸಕ್ತಿ ಇರಲಿಲ್ಲ. ಆದರೂ ನಾವು ಈಗಾಗಲೇ ಸೆನೆಟರ್‌ಗಳಾದ ಮಲೋನ್ ಮತ್ತು ಮೋರಿಸ್ ಬಗ್ಗೆ ಓದಿದ್ದೇವೆ. ಡೆಡ್ಲ್ ಫೀಲ್ಡ್ ಮಲೋನ್ ವೃತ್ತಿಪರವಾಗಿ ವಕೀಲರು. ಲಾಲಾಜಿ ತಮ್ಮ ಕಾನೂನು ಜ್ಞಾನ ವಿಪುಲತೆಗಾಗಿ ಸಂದರ್ಭ ಬಂದಾಗಲೆಲ್ಲಾ ಅವರ ಸಲಹೆ ಕೇಳುತ್ತಿದ್ದರು. ಹರ್ಡಿಕರ್ ಅವರು ಅವರನ್ನು 'ಅಮೆರಿಕದಲ್ಲಿ ನಮ್ಮ ವಕೀಲರು' ಎಂದೇ ಪ್ರಸ್ತಾಪಿಸಿದ್ದಾರೆ.

ಲಜಪತರ ಮತ್ತೋರ್ವ ನ್ಯಾಯವಾದಿ ಮಿತ್ರ ಜಾನ್ ಕ್ವೀನ್. ತಮ್ಮ ಉಯಿಲು ಬರೆಯಲು ಲಾಲಾಜಿ ಅವರ ಸಲಹೆ ತೆಗೆದುಕೊಂಡಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದ್ದ ಕಾಲದಲ್ಲಿ ಅವರು ಮೂರು ಬಾರಿ ತಮ್ಮ ಉಯಿಲು ಬರೆದರು. ಮೊದಲನೆಯದು 1916ರಲ್ಲಿ. ಕಡೆಯದು 1919ರಲ್ಲಿ. 1921ರ ಜುಲೈನಲ್ಲಿ ಗಾಂಧೀಜಿ ಪತ್ರ ಬರೆದು ವಿದೇಶದಲ್ಲಿ ತಾವಿದ್ದ ಸಮಯದಲ್ಲಿ ಸ್ವೀಕರಿಸಿದ ಸಾರ್ವಜನಿಕ ಹಣದ ಬಗ್ಗೆ ವಿವರವಾಗಿ ತಿಳಿಸಿದರು. ಅದನ್ನೆಲ್ಲಾ ಟ್ರಸ್ಟ್ ರೂಪದಲ್ಲಿ ನಿಕ್ಷಿಪ್ತ ಮಾಡಿರುವುದಾಗಿ ಬರೆದರು. ಭಾರತಕ್ಕೆ ಮರಳುವ ಸಂದರ್ಭದಲ್ಲಿ ಲಾಲಾಜಿ ತಮ್ಮ ಉಯಿಲಿನ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಅವರು 'ಮಿಸ್ಟರ್ ಜಾನ್ ಕ್ವಿನ್, ನಂ. 31, ನಸಾವ್ ಸ್ಟ್ರೀಟ್, ನ್ಯೂಯಾರ್ಕ್ ವಿಳಾಸದಲ್ಲಿ ನನ್ನ ಗೆಳೆಯ ಹಾಗೂ ವಿಶಿಷ್ಟ ವ್ಯಕ್ತಿತ್ವದ, ನ್ಯೂಯಾರ್ಕ್‌ನಲ್ಲಿ ಅತಿ ಸಂಭಾವಿತ ಮಿತ್ರರಲ್ಲಿ' ಜತನಗೊಳಿಸಲಾಗಿದೆ ಎಂದು ತಿಳಿಸಿದರು.

ಲಾಲಾಜಿ ವಾಷಿಂಗ್‌ಟನ್ ಸರ್ಕಾರಿ ಉನ್ನತ ಹಂತದ ಸಂಪರ್ಕಗಳಿಗಾಗಿ ಆಸ್ಥೆ ತೋರಲಿಲ್ಲ ಎಂಬುದನ್ನು ಈ ಹಿಂದೆಯೇ ತಿಳಿದುಕೊಂಡಿದ್ದೇವೆ. ಆದರೆ ಅಮೆರಿಕದಲ್ಲಿ ಭಾರತೀಯ ಸಮುದಾಯ ಎದುರಿಸುತ್ತಿದ್ದ ಸಮಸ್ಯೆಗಳ ನಿಶ್ಚಿತ ಅರಿವು ಅವರಿಗಿತ್ತು. ಕಾಲಕ್ಕೆ ತಕ್ಕಂತೆ ಅಧಿಕಾರಸ್ಥರ ಬಾಗಿಲು ತಟ್ಟದಿದ್ದರೆ ಆ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲವೆಂದು ಅವರಿಗೆ ಗೊತ್ತಿತ್ತು. ಕಾರ್ಮಿಕ ಇಲಾಖೆಯಿಂದ ಬಂದ ಕೆಲವು ಪತ್ರಗಳನ್ನು ನೋಡಿದಾಗ ಲಾಲಾಜಿ ತಮ್ಮ ದೇಶವಾಸಿಗಳಿಗೆ ಕೆಲವು ಕಡೆಗಳಲ್ಲಿ ವಸಾಹತುಗಳನ್ನು ಸ್ಥಾಪಿಸುವಂತೆ ಪ್ರಸ್ತಾವ ಕಳುಹಿಸಿರುವುದು ಕಂಡು ಬರುತ್ತದೆ. ಆ ಪ್ರಸ್ತಾವಕ್ಕೆ ಅಂತಿಮ ಉತ್ತರ ಬಂದಿರುವುದು ದಾಖಲೆಯಲ್ಲಿದೆ. ಕಾರ್ಮಿಕ ಇಲಾಖೆಯ ಸಹ ಕಾರ್ಯದರ್ಶಿ ಕಾರ್ಯಾಲಯದಿಂದ 1916ರ ಮೇ 15ರಂದು ಪತ್ರವೊಂದು ಬಂದಿದೆ. ಅದರಲ್ಲಿ ಕಾರ್ಯದರ್ಶಿ ವಿಲ್ಸನ್‌ರ ನಿರ್ಧಾರವನ್ನು ಲಜಪತರಿಗೆ ತಿಳಿಸಲಾಗಿದೆ:

''ಶಾಸನಾತ್ಮಕ ಅನುಮೋದನೆ ಇಲ್ಲದೆ ಅಮೆರಿಕ ಸಂಯುಕ್ತ ಸಂಸ್ಥಾನದ ಭೂಮಿಯಲ್ಲಿ ನೀವು ಮಾಡಿರುವಂತೆ ಹಿಂದೂಗಳಿಗೆ ವಸಾಹತು ಕಲ್ಪಿಸಿಕೊಡಲು ಸಾಧ್ಯವಾಗುವುದಿಲ್ಲ. ಸದ್ಯದ ಸ್ಥಿತಿಯಲ್ಲಿ ಅಂಥ ಶಾಸನ ರೂಪಿತವಾಗುವ ಲಕ್ಷಣವೂ ಕಾಣುವುದಿಲ್ಲ''

ಭಾರತೀಯ ಜನತೆಯ ರಾಯಭಾರಿಯಾಗಿ ವಿಶ್ವವಿದ್ಯಾಲಯಗಳಲ್ಲಿ ಮತ್ತು ಅಧ್ಯಯನ ಕೇಂದ್ರಗಳಲ್ಲಿ ಅತ್ಯುತ್ತಮ ಅನುಬಂಧ ಹೊಂದಿಸಿಕೊಂಡಿದ್ದರು. ಅಂಥ ಸಂಪರ್ಕಗಳ ಕೆಲವು ಪ್ರಮುಖ ಹೆಸರುಗಳನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಆ ಸಾಲಿಗೆ ಖ್ಯಾತ ಅಮೆರಿಕನ್ ಅರ್ಥಶಾಸ್ತ್ರಜ್ಞ, ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರೊ. ಇ.ಎ.ಆರ್. ಸಲಿಗ್ಮನ್ ಅವರನ್ನು ಸೇರಿಸಬೇಕಾಗುತ್ತದೆ. ಲಜಪತರು ಭಾರತಕ್ಕೆ ಮರಳಿದ ಮೇಲೆ ಅವರ ಪುತ್ರ ಅಮೃತ್ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಬಯಸಿದಾಗ ಅವನಿಗೆ ನೀಡಿದ ಸೂಚನೆ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೋಗಿ ಪ್ರೊ. ಇ.ಎ.ಆರ್. ಸೆಲಿಗ್ಮನ್ ಅವರನ್ನು ಭೇಟಿಯಾಗು ಎಂಬುದೇ ಆಗಿತ್ತು. ನಂತರ ಅವರ ಆ ಪುತ್ರ ಜರ್ಮನಿಗೆ ಸ್ಥಳಾಂತರಗೊಂಡಿದ್ದು ಬೇರೆ ಮಾತು. ಲಜಪತರು ರಾಜಕೀಯ ವಿಜ್ಞಾನದ ಮಹಾನ್ ಲೇಖಕರ ಜೊತೆಗೆ ಸಂಬಂಧಪಿರಿಸಿಕೊಂಡಿದ್ದು ಅವರ ಧ್ಯೇಯೋದ್ದೇಶಗಳಿಗೆ ಅನುಗತವಾಗಿದ್ದ ಕಾರ್ಯ. ಅಂತಹವರ ಪೈಕಿ ಜೆ.ಎ. ಅಬ್ಲಾನ್ ಒಬ್ಬರು. ''31ರ ಅಂತಾರಾಷ್ಟ್ರೀಯ ಭೋಜನಕೂಟದಲ್ಲಿ ನಿಮ್ಮೊಂದಿಗೆ ಪಾಲ್ಗೊಳ್ಳಲಾಗದಿರುವುದಕ್ಕೆ ವಿಷಾದವಾಗುತ್ತದೆ. ಆ ದಿನ ನಾನು ನ್ಯೂಯಾರ್ಕ್‌ನಲ್ಲಿ ಇರಬೇಕಾಗಿದೆ'' ಎಂದು ಒಮ್ಮೆ ಅವರು ನೀಡಿದ ಸಂದೇಶ ಲಜಪತರು ಗಳಿಸಿಕೊಂಡಿದ್ದ ಅಪ್ಯಾಯತೆಯನ್ನು ನಿರೂಪಿಸುತ್ತದೆ.

ಅಬ್ಲ್‌ಮನ್ ಮುಂದುವರೆದು ''ಅಮೆರಿಕದಲ್ಲಿ ಪ್ರಜಾಪ್ರಭುತ್ವ ನಡವಳಿಕೆ ಕೆಲವು ವಿಚಿತ್ರ ಪರಿಣಾಮಗಳನ್ನು ಕಾಣುತ್ತಿದೆಯಾದರೂ ಪ್ರಜಾಸತ್ತಾತ್ಮಕ ನೀತಿಯ ವಿಷಯದಲ್ಲಿ ನೀವು ಈ ದೇಶದಲ್ಲಿ ವರ್ಚಸ್ಸು ಬೀರುವ, ಪ್ರಭಾವಕಾರಿ ಪ್ರಗತಿ ಸಾಧಿಸುವಿರೆಂಬ ಖಾತ್ರಿ ನನಗಿದೆ.'' ಎಂದು ವಿಶ್ವಾಸಪೂರ್ವಕವಾಗಿ ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಬಾಂಧವ್ಯದ ವಿಷಯಗಳಲ್ಲಿ ಅಧಿಕೃತ ವಾಣಿ ಎನಿಸಿದೆ. ಆ ಸಮಯದಲ್ಲಿ ಅಮೆರಿಕದಲ್ಲಿದ್ದ ಜಪಾನಿನ ಕೆ.ಕೆ. ಕವಾಕಮಿ ಅವರ ಒಡನಾಟವನ್ನು ಇಲ್ಲಿ ಪ್ರಸ್ತಾಪಿಸಲೇ ಬೇಕಾಗಿದೆ. ಈ ವಿಷಯದಲ್ಲಿ ಅನೇಕ ಪುಸ್ತಕಗಳ ಕರ್ತೃ ಅವರು. ಜಪಾನಿನ ವಿದೇಶಾಂಗ ನೀತಿಯ ಬಗ್ಗೆ ಹೆಚ್ಚು ಒತ್ತು ಕೊಟ್ಟವರು ಅವರು. ಅವರ ಎಲ್ಲಾ ಕೃತಿಗಳು ಅಮೆರಿಕದಲ್ಲೇ ಪ್ರಕಟಣೆ ಕಂಡವು. ಅವರ ಕಿರಿಯ ಸಹವರ್ತಿಗಳಲ್ಲಿ ಅಭಿಮಾನಿಗಳಲ್ಲಿ ಯಜ್ನಸ್ ಮೆಡ್ಲಿ ಓರ್ವರು. ಆಕೆಗೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅತೀವ ಆಸಕ್ತಿ ಇತ್ತು. ಅದರಲ್ಲೂ ಭಾರತೀಯ ಕ್ರಾಂತಿಕಾರಿಗಳ ಹೋರಾಟ ಅವರನ್ನು ಬಹುವಾಗಿ ಸೆಳೆದಿಟ್ಟಿತ್ತು. ತತ್ಫಲವಾಗಿ ಆಕೆ ಮುಂದೆ ವೀರೇಂದ್ರ ಚಟ್ಟೋಪಾಧ್ಯಾಯರ ಒಡನಾಡಿಯಾದಳು. ಶ್ರೀಮತಿ ಸರೋಜಿನಿ ನಾಯ್ಡು ಅವರ ಆ ಸಹೋದರ ಬರ್ಲಿನ್‌ನಲ್ಲಿ ಇದ್ದಾಗಿನ ಬೆಳವಣಿಗೆ ಅದು. ಮೊದಲ ಜಾಗತಿಕ ಯುದ್ಧದ ಸಮಯದಲ್ಲಿ ಜರ್ಮನ್‌ರ ಒಡನಾಟಕ್ಕೆ ನಿಂತು ಭಾರತೀಯ ಕ್ರಾಂತಿಕಾರಿ ಹೋರಾಟಗಾರಿಕೆಯಲ್ಲಿ ಮಾನ್ಯವಾದವರು ಅವರು. ಯಜ್ನಸ್ ಮೆಡ್ಲಿ ಚೈನಾ ಕ್ರಾಂತಿಯ ಬಗ್ಗೆ ಪುಸ್ತಕಗಳನ್ನು ಬರೆದಿದ್ದು ಅನಂತರದಲ್ಲಿ. 'ಡಾಟರ್ ಆಫ್ ಅರ್ತ್' ಜೀವನ ಚರಿತ್ರಾತ್ಮಕ ಕಾದಂಬರಿ ಕರ್ತೃವಾದ ಆಕೆ ತನ್ನ ನಾಯಕನ ಓರ್ವನ ಪಾತ್ರವಲ್ಲಿ ಲಜಪತರನ್ನು ರಣಜಿತ್ ಸಿಂಗ್ ಹೆಸರಿನಿಂದ ಚಿತ್ರಿಸಿದ್ದಾಳೆ. ಲಜಪತರು ಆಕೆಯ ಚುರುಕು ನಡವಳಿಕೆ, ಸದಾ ಹರ್ಷದಿಂದಿರುತ್ತಿದ್ದ ಲವಲವಿಕೆಗಳಿಂದಾಗಿ ಆಕೆಯನ್ನು ಪಂಚಿ (ಪಕ್ಷಿ) ಎಂದು ಅಭಿಮಾನದಿಂದ ಕರೆಯುತ್ತಿದ್ದರು. ಮುಂದೆ ಭಾರತದ ಪತ್ರಿಕೆಗಳಿಗೆ ಆಕೆ

ಲೇಖನಗಳನ್ನು ಬರೆಯತೊಡಗಿದಾಗ ತನ್ನ ಅಂಕಿತ ನಾಮವನ್ನು (ಎ ಅಥವಾ Alice ಬರ್ಡ್) ಎಂದಿಟ್ಟುಕೊಂಡಳು.

ಲಜಪತರಲ್ಲಿದ್ದ ನಿತ್ಯ ನೂತನ ವಿದ್ಯಾರ್ಥಿ ಗುಣ ವಿದೇಶಿ ವಾಸದ ಸಮಯದಲ್ಲಿ ಸಿಗುತ್ತಿದ್ದ ವಿರಾಮಕಾಲದಲ್ಲಿ ಸದ್ವಿನಿಯೋಗಕ್ಕೆ ಬಳಸಿಕೊಳ್ಳುತ್ತಿತ್ತು. ನ್ಯೂಯಾರ್ಕ್‌ನಲ್ಲಿದ್ದಾಗ ದಿ ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯದ ಲೈಬ್ರರಿಗಳಲ್ಲಿ ತಮ್ಮ ಬಿಡುವಿನ ಸಮಯವನ್ನು ಅರ್ಥಪೂರ್ಣ ಮಾಡಿಕೊಳ್ಳುತ್ತಿದ್ದರು. ಆ ಎರಡು ಗ್ರಂಥಾಲಯಗಳು ಅವರಿಗೆ ವಿಶೇಷ ಸೌಕರ್ಯಗಳನ್ನು ಒದಗಿಸುತ್ತಿದ್ದವು. ಲಜಪತರು ಅನೇಕ ಪುಸ್ತಕಗಳ ಸೇರ್ಪಡೆಗೆ ಸಲಹೆ ಕೊಡುತ್ತಿದ್ದರು. ವಿಶೇಷವಾಗಿ ಭಾರತೀಯ ಚರಿತ್ರೆ ಮತ್ತು ರಾಜಕಾರಣದ ಬಗ್ಗೆ ಪುಸ್ತಕಗಳನ್ನು ಶಿಫಾರಸು ಮಾಡುತ್ತಿದ್ದರು. ಭಾರತಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಹೊತ್ತಿಗೆಗಳು ಅಲ್ಲಿದ್ದರೆ ಚೆಂದವೆಂದು ಹೇಳುತ್ತಿದ್ದರು. ನ್ಯೂಯಾರ್ಕ್‌ನ ತಮ್ಮ ವಾಸ್ತವ್ಯದಲ್ಲಿ ಅಲ್ಲಿನ ಆ ಗ್ರಂಥಾಲಯದ ವಿಷಯದಲ್ಲಿ ಲಜಪತರು ಬೆಳೆಸಿಕೊಂಡಿದ್ದ ಅನುಬಂಧದ ನೆಲೆಗಟ್ಟಿನ ಹಿನ್ನಲೆಯಲ್ಲಿ ಬಿ.ಡಬ್ಲ್ಯು. ಹ್ಯೂಬ್ಷ್ ಲಜಪತರ ಆ ಮೊಹರಾದ ಹಸ್ತಪ್ರತಿಯನ್ನು ಲಕೋಟೆಯನ್ನು ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿಗೆ ಸಮರ್ಪಿಸಿದ್ದು.

ಲಾಲಾಜಿ ಅಮೆರಿಕದಲ್ಲಿ ಇದ್ದ ಕಾಲದಲ್ಲಿ ಅವರ ದೇಶವಾಸಿಗಳಾಗಿ ಅಲ್ಲಿದ್ದ ಅನೇಕರ ವಿವರಗಳನ್ನು ಭಾರತೀಯ ಕ್ರಾಂತಿಕಾರಿಗಳು ಕುರಿತ ಈ ಹಿಂದಿನ ಅಧ್ಯಾಯವು ಸೇರಿದಂತೆ ಅನೇಕ ಪ್ರಸಂಗಗಳಲ್ಲಿ ಈಗಾಗಲೇ ಓದಿದ್ದೇವೆ.

ಅವರ ಅತ್ಯಂತ ನಿಕಟ ಸಹವರ್ತಿಗಳಲ್ಲಿ ಎನ್.ಎಸ್. ಹರ್ಡಿಕರ್ ಒಬ್ಬರು ಎಂಬುದರಲ್ಲಿ ಅನುಮಾನವಿಲ್ಲ. ಅವರ ಸಹಕಾರದಿಂದಲೇ ಅಮೆರಿಕದಲ್ಲಿನ ಲಜಪತರ ದಿನಗಳ ನೆನಪಿನ ಅಂಗಳವನ್ನು ಇಲ್ಲಿ ವಿವರಿಸಲು ಸಾಧ್ಯವಾಗಿದೆ. ಅವರ ಮತ್ತೋರ್ವ ಕಿರಿಯ ಸಹಯೋಗಿ ಬಿ.ಎಸ್.ವಿ. ರಾವ್ ಲಜಪತರೊಂದಿಗೆ ಭಾರತಕ್ಕೆ ಮರಳಿ ಅವರೊಂದಿಗೆ ಕೆಲವು ಕಾಲ ಸೇವಾ ನಿರತರಾದ ತರುಣ. ಭರವಸೆಪೂರ್ವಕವಾಗಿದ್ದ ಆತ ಲಾಲಾಜಿ ಬಂಧನದಲ್ಲಿದ್ದಾಗ ನಿಧನ ಹೊಂದಿದ ದುರ್ದೈವಿ.

ಅಮೆರಿಕದಲ್ಲಿದ್ದ ಅನೇಕ ಭಾರತೀಯ ಬುದ್ಧಿಜೀವಿ ವರ್ಗದ ವೃತ್ತಿಪರರು ಅಥವಾ ಉನ್ನತ ಅಧ್ಯಯನ ನಿರತರು ಸಹಜವಾಗಿ ಲಜಪತರ ಅಭಿಮಾನಿಗಳಾಗಿದ್ದರು. ತಮ್ಮ ನಾಡಿನ ಆ ಮಹಾನ್ ನೇತಾರರನ್ನು ತಾವಿರುವ ದೇಶದಲ್ಲಿಯೇ ನೋಡುವ ಸಲುವಾಗಿ ಅಥವಾ ಸಲಹೆ ಸೂಚನೆ ಮಾರ್ಗದರ್ಶನ ಪಡೆಯುವ ಸಲುವಾಗಿ ಅವರ ಬಳಿಗೆ ಬರುತ್ತಿದ್ದರು. ಭಾರತದ ಸ್ವಾತಂತ್ರ್ಯದ ಪ್ರಾಮುಖ್ಯತೆ ಬಗ್ಗೆ ಅಂತಾರಾಷ್ಟ್ರೀಯ ಅಭಿಪ್ರಾಯ ಕ್ರೋಡಿಕರಣದ ವಿಷಯದಲ್ಲಿ ದಿಟ್ಟ ಲೇಖಕರೆನಿಸಿದ ರಾಜಕೀಯ ವಿಜ್ಞಾನ ಉಪನ್ಯಾಸಕ ಡಾ. ತಾರಕ್‌ನಾಥ್ ದಾಸ್ ಅವರು ಲಾಲಾಜಿ ಅವರೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡಿದ್ದರು. ಲಾಲಾಜಿ ಲಾಹೋರ್‌ನಲ್ಲಿ ತಮ್ಮ ಸಾಪ್ತಾಹಿಕ ದಿ ಪೀಪಲ್ ಹೊರತಂದಾಗ ಡಾ. ತಾರಕ್‌ನಾಥ್ ದಾಸ್ ಅದರ ನಿಯತ ಲೇಖಕರಲ್ಲಿ ಒಬ್ಬರಾದರು. ಅವರ ಪತ್ನಿ ಅಮೆರಿಕನ್ ಆಗಿದ್ದರಿಂದ ಮುಂದೆ ಅವರು ಅಮೆರಿಕನ್ ಪೌರತ್ವವನ್ನೇ

ಪಡೆದುಕೊಂಡರು. ಆ ಕಾರಣದಿಂದಾಗಿ ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಅವರಲ್ಲಿದ್ದ ಕಳಕಳಿ ಕಿಂಚಿತ್ತೂ ಬಾಧಿತವಾಗಿರಲಿಲ್ಲ.

ಭಾರತ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ತೀರಾ ಹಿಂದುಳಿದಿದೆ ಎಂಬುದನ್ನು ಲಜಪತರು ಮನಗಂಡರು. ಅದಕ್ಕಾಗಿ ವಿಷಾದಪಟ್ಟರು. ಈ ಕ್ಷೇತ್ರಗಳ ಬಗ್ಗೆ ಕೆಲವು ಭಾರತೀಯರು ವಿಶೇಷ ಆಸಕ್ತಿ ವಹಿಸತೊಡಗಿದಾಗ ಲಜಪತರಿಗೆ ನಿಜವಾಗಿಯೂ ಹರ್ಷವಾಯಿತು. ಅಂತಹವರನ್ನು ಅವರು ಬೆನ್ನು ತಟ್ಟಿದರು. ಡಾ. ಕೊಂಕಟನೂರು. ಎನ್. ಬಿಸೀ ಮತ್ತು ಸಕ್ಕರೆ ತಂತ್ರಜ್ಞ ಸಾರಂಗಧರ್ ದಾಸ್ ಆ ಪೈಕಿ ಪ್ರಮುಖರು. ಸಾರಂಗಧರ್ ದಾಸ್ ಜರ್ಮನಿಯ ಸ್ನೈಡರ್‌ನ್ನು ವಿವಾಹವಾಗಿದ್ದರು. ಲಜಪತರಿಗೆ ಬೆಂಬಲ ನೀಡುವ ಸಲುವಾಗಿ ಆಕೆ 1920ರ ದಶಕದ ಅಂತ್ಯದಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಆಕೆ ಅತ್ಯುತ್ತಮ ಭಾವಚಿತ್ರ ವರ್ಣ ಕಲಾವಿದೆಯಾಗಿದ್ದರು. ಲಾಲಾಜಿ ಅವರಿಗಾಗಿ ಕೆಲವು ಅವಕಾಶಗಳನ್ನು ಒದಗಿಸಿಕೊಟ್ಟರು. ಆದರೆ ಆಕೆ ಈ ದೇಶದಲ್ಲಿ ನೆಲಸಲಿಲ್ಲ. ಯುರೋಪಿಗೆ ಮರಳಿದರು. ಮ್ಯಾರಿಡ್ ಟು ಇಂಡಿಯಾ ಶೀರ್ಷಿಕೆಯ ತಮ್ಮ ಕೃತಿಯಲ್ಲಿ ಆಕೆ ತನ್ನೆಲ್ಲಾ ಕಥೆಯನ್ನು ಬರೆದರು. ಕಲ್ಕತ್ತಾದಲ್ಲಿ ವ್ಯಾಪಾರೋದ್ಯಮಿಯಾಗಿ ನೆಲೆಯೂರಿದ ಆರ್.ಕೆ. ಕೇಮ್ಕಾ ಪತ್ರಗಳ ಮುಖಾಂತರ ಲಜಪತರ ಒಡನಾಟ ಸಂಪಾದಿಸಿಕೊಂಡು, ನಂತರ ಅದನ್ನು ಪರಸ್ಪರ ಭೇಟಿಯಲ್ಲಿ ಅಭಿವೃದ್ಧಿ ಮಾಡಿಕೊಂಡರು. ತಮ್ಮ ಆ ಬಾಂಧವ್ಯವನ್ನು ಅವರು ನಿರಂತರ ಉಳಿಸಿಕೊಂಡಿದ್ದರು. ನಾವಿಲ್ಲಿ ಪ್ರಮುಖರಾಗಿ ಪ್ರಸ್ತಾಪಿಸಬೇಕಾದ ಇನ್ನೊಂದು ವಿಶಿಷ್ಟ ಹೆಸರು ಡಾ. ಆನಂದ್ ಕೆ. ಕುಮಾರಸ್ವಾಮಿ. ಭಾರತೀಯ ಕಲಾ ಪ್ರಕಾರದಲ್ಲಿ ಅವರೊಂದು ಸ್ಥಿರ ಹೆಸರು. ಅಗಾಧವಾದ ಕಲಾಜ್ಞಾನದ ವಿಮರ್ಶಕರು. ಭಾರತದ ಚರಿತ್ರೆಯಲ್ಲಿ ವಾಸ್ತವಿಕ ಅಂತಃಸತ್ವದ ಏರಿಕ ಹಾಕಿ ಭಾರತೀಯ ಕಲಾಜ್ಞಾನವನ್ನು ಪುನರುತ್ಥಾನಗೊಳಿಸಿದ ಅತ್ಯುನ್ನತ ಕಲಾವಿದರು ಅವರು. ಲಾಲಾಜಿ ಸದಾ ಅಭಿಮಾನ ಮತ್ತು ಆದರದಿಂದ ಕಾಣುತ್ತಿದ್ದ ಭಗಿನಿ ನಿವೇದಿತಾ ಸಹಯೋಗದಲ್ಲಿ ಅವರು ಭಾರತೀಯ ಕಲೆ ಪುನರ್ ನಿರ್ಮಾಣದ ಯಶಸ್ಸು ಸಾಧಿಸಿದವರು.

ಹೀಗೆ ಹೆಸರುಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅಂತ್ಯವೇ ಇಲ್ಲದಂತಾಗುತ್ತದೆ. ಈತನಕ ಪ್ರಸ್ತಾಪವಾಗಿರುವ ಹೆಸರುಗಳು ಲಾಲಾಜಿ ಸಾಧಿಸಿಕೊಂಡ ವೈವಿಧ್ಯದ ಸಂಬಂಧ ಸಂಪರ್ಕಗಳ ಬಾಹುಳ್ಯಗಳನ್ನು ಸಾರುತ್ತಿದೆ. ಅವರನ್ನು ಭೇಟಿ ಮಾಡುತ್ತಿದ್ದ ಪ್ರತಿಯೊಬ್ಬರು ಭಾರತ ಸ್ವಾತಂತ್ರ್ಯಗೊಳ್ಳುವುದನ್ನು ಬಯಸುತ್ತಿದ್ದರು. ಅವರ ವ್ಯಕ್ತಿತ್ವದಿಂದ, ಅವರ ದೂರದೃಷ್ಟಿಯಿಂದ ಅವರ ಯುಕ್ತಾಯುಕ್ತತೆಯಿಂದ ನಿಷ್ಕರ್ಷ ಶಕ್ತಿಯಿಂದ ಅವರ ಅನುನಯದ ನಡವಳಿಕೆಯಿಂದ ಅವರ ಪ್ರಜಾಸತ್ತಾತ್ಮಕ ಧೋರಣೆಯಿಂದ ಅವರಲ್ಲಿಗೆ ಆಕರ್ಷಿತರಾಗುತ್ತಿದ್ದವರೇ ಬಹುತೇಕ ಅವರೆಲ್ಲರು. ಹಾಗೆ ಅವರಲ್ಲಿ ಅಭಿಮಾನ ಆಸಕ್ತಿ ಸಾಧಿಸಿಕೊಂಡವರೆಲ್ಲ ವರ್ಗ ಅಥವಾ ಜಾತಿ ವರ್ಣ ಅಥವಾ ಧರ್ಮದ ಸಂಕುಚಿತ ಮನೋಭಾವಗಳಿಂದ [illegible]. ವಿಶ್ವ ಬಾಂಧವ್ಯದ [illegible] ಪ್ರತೀಕವಾದ [illegible] [illegible] ಮತ್ತು [illegible] ಸಾರಿದ ಎ ಮ್ಯಾನ್ಸ್ ಎ ಮ್ಯಾನ್ ಫಾರ್ ಎ ದಟ್ ಹಾಡಿನ ಸಹಜ ಸಾಕ್ಷಾತ್

ಸ್ವರೂಪದಂತೆ ಲಜಪತರು ಕಂಡು ಬಂದರು. ವಾಲ್ಟ್ ವಿಟ್ಮನ್ ಅವರ ಮಹಾದೌತ್ಯದ ಸ್ವರೂಪದಂತೆ ಅವರನ್ನು ಪರಿಭಾವಿಸಲಾಯಿತು. ಒಟ್ಟಿನಲ್ಲಿ ಲಜಪತರು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಂತಹ ಮಹೋನ್ನತ ನೀತಿ ತತ್ವಗಳ ಆಕರ್ಷಕ ಕೇಂದ್ರವಾದರು. ಅವರು ಎಲ್ಲೂ ಸರ್ಕಾರದ ಉನ್ನತ ಹಂತದಲ್ಲಾಗಲಿ ಅಥವಾ ಹಣಕಾಸು ಮೂಲಗಳಲ್ಲಾಗಲಿ ತಮ್ಮ ಸಂಪರ್ಕಗಳನ್ನು ದೊರಕಿಸಿಕೊಳ್ಳಲಿಲ್ಲ. ಪ್ರಗತಿಪರ ಆಂದೋಲನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಗ್ರಶೀಲ ಲಕ್ಷಣಗಳನ್ನು ಹೊಂದಿದ ಜನರೊಂದಿಗೆ ಅವರು ಒಡನಾಡಿದರು. ವ್ಯವಸ್ಥೆಯೊಂದಿಗೆ ರಾಜಿಗಾಗಿ ಹೆಜ್ಜೆ ಹಾಕಲಿಲ್ಲ. ಭಿನ್ನಮತದೊಂದಿಗೆ ತಮ್ಮನ್ನು ತಾವೇ ಒಲ್ಲೈಸಿಕೊಂಡು ಪ್ರವಾಹದ ವಿರುದ್ಧ ಈಜಿದರು.

ಲಜಪತರನ್ನು ಬಹುವಾಗಿ ಆಕರ್ಷಿಸಿದ್ದೇ ಅಲ್ಲದೆ ಅವರ ಮೇಲೆ ಹೆಚ್ಚು ಪ್ರಭಾವ ಬೀರಿದ್ದು ನ್ಯೂಯಾರ್ಕ್‌ನ ರ್‍ಯಾಂಡ್ ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್. ಅದು ಪ್ರಗತಿಪರ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾಗಿತ್ತು. ವಯಸ್ಕರ ಕಲಿಕೆ ಅದು. ಅಮೆರಿಕ ಸಂಯುಕ್ತ ಸಂಸ್ಥಾನ ಕುರಿತ ತಮ್ಮ ಪುಸ್ತಕದಲ್ಲಿ ಲಾಲಾಜಿ ಅದರ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಬಹುಶಃ ಆ ಪುಸ್ತಕವನ್ನು ಹೊರತಂದ ನಂತರ ಆ ಶಾಲೆಯ ಸಂಪರ್ಕ ಸಾಧಿಸಿಕೊಂಡಿರಬಹುದು. ಅವರ ಪ್ರವಾಸದ ಆರಂಭದಲ್ಲಿ ಅವರೇ ಹೊಂದಿಸಿಕೊಂಡಿದ್ದ ತಮ್ಮ ವಿದ್ಯಾರ್ಥಿ ಮತ್ತು ಶಿಕ್ಷಕ ಇಬ್ಬಗೆ ಪಾತ್ರವನ್ನು ಅಮೆರಿಕದಲ್ಲಿಯೂ ಮುಂದುವರೆಸಿದ್ದರು. ರ್‍ಯಾಂಡ್ ಸ್ಕೂಲ್‌ನಲ್ಲಿ ಅವರು ಅನೇಕ ಉಪನ್ಯಾಸಗಳನ್ನು ಕೇಳಿದರು. ಸ್ವತಃ ತಾವೇ ಚರಿತ್ರೆ ಮತ್ತು ರಾಜಕಾರಣದ ಬಗ್ಗೆ ಆಗಾಗ ಉಪನ್ಯಾಸಗಳನ್ನು ನೀಡಿದರು. ''ವಿಶ್ವ ರಾಜಕಾರಣದಲ್ಲಿ ಏಷ್ಯಾ'' ಕುರಿತು ಆರು ಉಪನ್ಯಾಸಗಳ ಸರಣಿಯೊಂದನ್ನು ಅವರು ನೀಡಿದ್ದು ಇದಕ್ಕೊಂದು ಉದಾಹರಣೆ.

ಅಂತಹುದೇ ಒಂದು ಉಪನ್ಯಾಸ ಮಾಲಿಕೆಯನ್ನು ಅಮೆರಿಕನ್ ಮಹಿಳಾ ಸಂಘದಲ್ಲಿ ನೀಡಿದರು. ಅದೊಂದು ಪ್ರಗತಿಪರ ಧೋರಣೆಯ ಉಪನ್ಯಾಸ ಮಾಲಿಕೆ.

ಅಮೆರಿಕದಲ್ಲಿದ್ದ ಒಂದು ಹಂತದಲ್ಲಿ ಭಾಷಾ ಸಂಸ್ಥೆಯೊಂದರಲ್ಲಿ ನಿಯತ ವಿದ್ಯಾರ್ಥಿಯಾಗಿ ಅವರು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದರು. ಸ್ಪಾನಿಷ್ ಭಾಷೆ ಕಲಿಯುವ ಉದ್ದೇಶ ಅವರದಾಗಿತ್ತು. ''ಮಾನವೀಯ ವಸ್ತು ಸಂಗ್ರಹಣಗಾರ'' ಸ್ವರೂಪದಲ್ಲಿ ಸ್ಪಾನಿಷ್ ಭಾಷೆಗೆ ಹೆಚ್ಚು ಒತ್ತು ಇದ್ದದ್ದು ಅವರ ಆ ಬಯಕೆಗೆ ಕಾರಣವಾಗಿತ್ತು. ಆದರ ಆ ಕಲಿಕೆಯಲ್ಲಿ ಹೆಚ್ಚಿನನ್ನು ಸಾಧಿಸಲಾಗಲಿಲ್ಲ. ಕೊನೆಯತನಕ ಅವರಿಗೆ ಕರಗತವಾಗಿದ್ದ ವಿದೇಶಿ ಭಾಷೆಯೆಂದರೆ ಇಂಗ್ಲಿಷ್ ಒಂದೇ.

ಭಾರತೀಯರಂತೆ ಐರಿಷರು ಸಹ ಬ್ರಿಟನ್‌ನಿನ ದಾಸ್ಯತ್ವದಿಂದ ಹೊರಬರಲು ಹೋರಾಡುತ್ತಿದ್ದರು. ಅವರ ಹೋರಾಟಕ್ಕೆ ಸಹಜವಾಗಿ ಅನುಕಂಪದ ಬೆಂಬಲ ಪ್ರಾಪ್ತವಾಯಿತು. ಅಮೆರಿಕದಲ್ಲಿ ಆ ಬೆಂಬಲ ಬಹುತೇಕ ಮೂರ್ತ ಸ್ವರೂಪದಾಗಿತ್ತು. ಅದಕ್ಕೆ ಕಾರಣವೂ ಉಂಟು. ತಲೆತಲಮಾರುಗಳ ಹಿಂದೆ ಸಾಗರವನ್ನು ದಾಟಿ ಅಮೆರಿಕಕ್ಕೆ ಬಂದು ತಮ್ಮ ವಾಸ್ತವ್ಯವನ್ನು ಕಂಡುಕೊಂಡು ಗಟ್ಟಿಯಾಗಿ ಬೆಳೆದಿದ್ದ ಐರಿಷರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿತ್ತು. ಅವರೆಲ್ಲರೂ ಅಮೆರಿಕನ್ ನಾಗರಿಕರಾಗಿದ್ದರೂ ತಾಯ್ನಾಡಿನ

ಸ್ವಾತಂತ್ರ್ಯಕ್ಕೆ ಟೊಂಕ ಕಟ್ಟಿ ನಿಂತಿದ್ದರು. ಸಾಮ್ರಾಜ್ಯವಾದಿ ಸ್ವಾರ್ಥಕ್ಕೆ ಬಲಿಯಾಗಿದ್ದ ಐನ್ಲೆಯಲ್ಲಿ ಬಹುತೇಕ ಐರಿಷ್ ನಾಯಕರು ಭಾರತದ ಹೋರಾಟಕ್ಕೆ ಬೆಂಬಲ ನೀಡಿದ್ದರು. ಅದೇ ಸಮಯದಲ್ಲಿ ಐರಿಷ್‌ನ ಅಗ್ರಮಾನ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಇಮನ್ ಡಿ ವಲೇರಾ ಬಂಧನದಿಂದ ತಪ್ಪಿಸಿಕೊಂಡು ಸಾಗರ ದಾಟಿ ಅಮೆರಿಕ ತಲುಪಿದ್ದರು. ಲಜಪತ್‌ರಾಯ್ ಮತ್ತು ವಲೇರಾ ಭೇಟಿ ಮಹತ್ವದ ಬೆಳವಣಿಗೆಗಳಲ್ಲಿ ಒಂದೆನಿಸಿತು. ಇಬ್ಬರು ನಾಯಕರು ತಮ್ಮ ತಮ್ಮ ನಾಡಿಗೆ ಸ್ವಾತಂತ್ರ್ಯ ದಕ್ಕಿಸಿಕೊಳ್ಳುವ ನಿಟ್ಟಿನಲ್ಲಿ ಮಾರ್ಗ ಮತ್ತು ಮಾಧ್ಯಮಗಳ ಬಗ್ಗೆ ಆಳವಾಗಿ ಚರ್ಚೆ ನಡೆಸಿದರು ಎಂದು ಎನ್.ಎಸ್ ಹರ್ಡಿಕರ್ ನೆನಪು ಹೇಳುತ್ತಿದೆ.

* * *

ಅಧ್ಯಾಯ-43

ಯಂಗ್ ಇಂಡಿಯಾ

ಲಾಲಾಜಿ ಅವರು ಅಮೆರಿಕದಲ್ಲಿ ರಚಿಸಿದ ಕೃತಿಗಳ ಸಮೂಹದಲ್ಲಿ ತುಂಬಾ ಪ್ರಮುಖವಾದುದು ಯಂಗ್ ಇಂಡಿಯಾ. 'ಭುಗಿಲೆದ್ದ ರಾಷ್ಟ್ರೀಯ ಆಂದೋಲನದ ಒಂದು ಚರಿತ್ರೆ ಮತ್ತು ಒಂದು ವಿಶ್ಲೇಷಣೆ' ಎಂದು ಆ ಕೃತಿಯ ಶೀರ್ಷಿಕೆ ಪುಟದಲ್ಲಿ ಅದರ ಸ್ವರೂಪದ ಸೂಕ್ಷ್ಮ ನಿರೂಪಣೆ ಚಿತ್ರಿತವಾಗಿದೆ. ಆ ಕೃತಿಯಲ್ಲಿ ಒಳಪಡುವ ಕಾಲಗತಿಯೊಳಗಿನ ಭಾರತೀಯ ರಾಷ್ಟ್ರೀಯ ಆಂದೋಲನದ ವಿಶ್ಲೇಷಣೆಯು ಅದು ಪ್ರಕಟಗೊಂಡ ಕಾಲು ಶತಮಾನದ ನಂತರವೂ ಸಹ ಯಥಾರ್ಥವಾಗಿತ್ತು. ತತ್ಸಬಂಧದಲ್ಲಿ ಬಹಳಷ್ಟು ಸಾಹಿತ್ಯ ಹೊರಬಂದರೂ ಈ ಕೃತಿ ಎಲ್ಲಕ್ಕಿಂತ ಅಗ್ರ ಸ್ಥಾನದಲ್ಲಿತ್ತು. ಆಂದೋಲನದ ಬಗ್ಗೆ ಲೇಖಕರ ಜ್ಞಾನ ಮತ್ತು ಮಾಹಿತಿ ಸ್ವಯಂ ಮಿಳಿತದ್ದು. ಅಂತರ್ಯದಿಂದ ಭುಗಿಲೆದ್ದದ್ದಾಗಿತ್ತು. ಅದರ ವಿವಿಧ ಮುಖಗಳು ಹಾಗೂ ಹಂತಗಳು ಸಹಜವಾಗಿದ್ದದ್ದು. ಕಾಂಗ್ರೆಸ್ಸಿನ ಒಳಮುಖಗಳು ಮತ್ತು ಕಾಂಗ್ರೆಸ್ ಇಲ್ಲದಾಗಿನ ಒಳಮುಖಗಳು ಆಳವಾಗಿ ಚಿತ್ರಿತ. ಇನ್ನೂ ಹೆಚ್ಚಿನದಾಗಿ ಅದರ ವಿಶ್ಲೇಷಣೆ ಮತ್ತು ಕಥನ ಪಕ್ಷಾತೀತ. ಚಿಂತನೆ ಆಳ. ಲಜಪತರು ಭಾರತೀಯ ಸಮಸ್ಯೆಯನ್ನು ವಸ್ತುನಿಷ್ಠವಾಗಿ ವಿವೇಚಿಸಿರುವುದು ಅದರ ಮಹತ್ವವನ್ನು ಚಿರಂತನಗೊಳಿಸಿದೆ. ಅವರೊಬ್ಬರಿಂದಲೇ ಅಂತಹ ಕೃತಿಯೊಂದು ಹೊರಬರಲು ಸಾಧ್ಯವೆಂಬುದು ನಿಶ್ಚಿತ. ಭಾರತೀಯ ಸಮಸ್ಯೆಯ ಬಗ್ಗೆ ತಮ್ಮನ್ನು ಅಷ್ಟೊಂದು ಆಳವಾಗಿ ತೊಡಗಿಸಿಕೊಂಡವರು ಅವರು. ಅದು ಈ ಕೃತಿಯಲ್ಲಿ ಧ್ವನಿತ. ಸಂವಿಧಾನಾತ್ಮಕ ವಾದಕ್ಕೆ ಕಟ್ಟುಬದ್ಧತೆ, ನಕಾರಾತ್ಮಕ ಪ್ರಭಾವಕ್ಕೆ ತಡೆ, ಉಗ್ರವಾದಿಗಳ ಬಾಂಬ್, ರಿವಾಲ್ವರ್ ಮತ್ತು ಸಶಸ್ತ್ರ ಯತ್ನಗಳ ವಿಶ್ಲೇಷಣೆ ಮತ್ತು ವಿವೇಚನೆಗಳನ್ನು ಆಯಾ ಮುಖಗಳ ದೃಷ್ಟಿಕೋನದಲ್ಲೇ ನಡೆಸಲಾಗಿದೆ. ಅದಕ್ಕೆ ಯಥೋಚಿತವಾಗಿ ಬೇಕು ಬೇಡಗಳ ಸಲ್ಲದ್ದು ಒಲ್ಲದ್ದುಗಳ ವಿವೇಚನೆ ನೀಡಲಾಗಿದೆ. ಆ ಹೆಣಿಕೆ ಮತ್ತು ಸಂವಿಧಾನ ಅನ್ಯಾದೃಶ್ಯವಾದದ್ದು. ಅನೇಕ ವಿಧದಲ್ಲಿ, ಯಂಗ್ ಇಂಡಿಯಾ ಲಜಪತರ ಕೃತಿಗಳಲ್ಲಿ ಅತ್ಯುತ್ತಮ ಚಿತ್ರಣ. ಕೃತಿಯ ಶೀರ್ಷಿಕೆಯೇ ಅವರ ಚಿಂತನೆ ಏನಾಗಿತ್ತು ಎಂಬುದನ್ನು ಸ್ಥಿರಿಕರಿಸುತ್ತದೆ. ಯಂಗ್ ಇಂಡಿಯಾ ಸದಾ ಚಲನಶೀಲ ಪದಗುಚ್ಛ. ಕೆಲವು ಕಾಲದ ನಂತರ ಲಜಪತರು ಮಾಸಿಕವೊಂದನ್ನು ಆರಂಭಿಸಿದರು. ಅದಕ್ಕೂ ಅವರು ಯಂಗ್ ಇಂಡಿಯಾ* ಎಂದೇ ಹೆಸರಿಟ್ಟರು. ಅಮೆರಿಕದಿಂದ ಮರಳಿದ ಅವರು ಭಾರತದಲ್ಲಿ ಕೈಗೊಂಡ ಭಾಷಣಗಳು ಮತ್ತು ಪತ್ರಿಕಾ ಲೇಖನಗಳನ್ನೆಲ್ಲಾ ಸಂಗ್ರಹಿಸಿ

---

* ನಂತರ ಮಹಾತ್ಮ ಗಾಂಧೀ ಅದೇ ಶೀರ್ಷಿಕೆಯನ್ನು ಇಟ್ಟುಕೊಂಡು ಅದನ್ನು ಸಾಪ್ತಾಹಿಕವಾಗಿ ಮುಂದುವರೆಸಿದರು.

ಎ ಕಾಲ್ ಟು ಯಂಗ್ ಇಂಡಿಯಾ ಹೆಸರಿನಲ್ಲಿ ಇನ್ನೊಂದು ಸಂಗ್ರಹವನ್ನು ಪ್ರಕಟಿಸಿದರು. ಆ ಹೊತ್ತಿಗೆಯ ಚರಿತ್ರೆಯನ್ನು ಇಲ್ಲಿ ದಾಖಲೆ ಮಾಡುವುದು ಸಮಂಜಸವಾಗುತ್ತದೆ. ಯಂಗ್ ಇಂಡಿಯಾ ಹುಟ್ಟಿದ್ದು, ಪೂರ್ಣಗೊಂಡಿದ್ದು ಯುದ್ಧ ಕಾಲದಲ್ಲಿ. ಲಾಲಾಜಿ ಅವರು ವಿದೇಶವಾಸದಲ್ಲಿದ್ದ ಆರಂಭದ ದಿನಗಳಲ್ಲಿ. ಅವರು ಕ್ಯಾಲಿಫೋರ್ನಿಯಾದಲ್ಲಿದ್ದ ದಿನಗಳಲ್ಲಿ ಹಸ್ತಪ್ರತಿ ಸಿದ್ಧವಾಯಿತಾದರೂ ಅದಕ್ಕೆ ಇನ್ನಷ್ಟು ಭಾಗಗಳನ್ನು ಜಪಾನ್‌ನಲ್ಲಿದ್ದಾಗ ಬರೆದರು.

ಲಜಪತ್‌ರಾಯ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲು 1928 ನವೆಂಬರ್ 30ರಂದು ನ್ಯೂಯಾರ್ಕ್‌ನ ಸಿವಿಕ್ ಕ್ಲಬ್‌ನಲ್ಲಿ ಏರ್ಪಟ್ಟ ಸಭೆಯೊಂದರಲ್ಲಿ ಆ ಹೊತ್ತಿಗೆಯ ಕಥೆಯನ್ನೆಲ್ಲಾ ಪ್ರಕಾಶಕ ಬಿ.ಡಬ್ಲ್ಯು. ಹೇಬ್ಸ್ ಸಂಕ್ಷಿಪ್ತವಾಗಿ ತಿಳಿಸಿದರು.

ಕೆಲವು ಕಾರಣಗಳಿಂದಾಗಿ ಲೇಖಕರು ಆ ಕೃತಿಯನ್ನು ಪ್ರಕಟಿಸುವ ವಿಷಯದಲ್ಲಿ ಹಿಂಜರಿದದ್ದು ಉಂಟು. ಪ್ರಕಟಿಸುವುದಾದರೂ ಅವರು ಅಜ್ಞಾತರಾಗಿ ಉಳಿಯಲು ಬಯಸಿದ್ದರು. ಪ್ರಕಟಣೆ ನಿರ್ಧಾರವಾಗಿ ಎಲ್ಲಾ ಸಿದ್ಧತೆಗಳು ಮುಗಿದು ಅಂತಿಮ ಘಟ್ಟ ತಲುಪುವ ತನಕ ಲಾಲಾಜಿ ತಮ್ಮ ಹೆಸರಿನ ಬಗ್ಗೆ ನಿರಾಕರಣೆಯ ನಿರ್ಧಾರವನ್ನೇ ತಾಳಿದ್ದರು. ಆದರೆ ಪ್ರಕಾಶಕರಿಗೆ ಅದು ಸಮಂಜಸವಾಗಿ ಕಾಣಲಿಲ್ಲ. ಭಾರತದಂತಹ ವಿಷಯವನ್ನು ಒಳಗೊಂಡ ಕೃತಿ ಅದರಲ್ಲೂ ಅದರ ಲೇಖಕರ ಪರಿಚಯ ಅವರ ನಿಕಟ ಗೆಳೆಯ ವರ್ಗಕ್ಕೆ ಮಾತ್ರ ಇದ್ದ ಹಿನ್ನಲೆಯಲ್ಲಿ ಅದರ ಮಾರಾಟ ಸರಳವಾಗುವುದಿಲ್ಲವೆಂದು ಅವರು ಲೆಕ್ಕ ಹಾಕಿದ್ದರು. ಹೀಗಾಗಿ ಹೇಬ್ಸ್ ಪರ್ಯಾಯವೊಂದನ್ನು ಆಲೋಚಿಸಿ ಜನಪ್ರಿಯ ವರ್ಚಸ್ಸೊಂದನ್ನು ಆ ಕೃತಿಗೆ ಸಹಯೋಗ ಮಾಡಿಕೊಳ್ಳಲು ಬಯಸಿದರು. ಮುನ್ನುಡಿಯ ರೂಪದಲ್ಲಿ ಅಂತಹ ವರ್ಚಸ್ಸೊಂದನ್ನು ರೂಢಿಸಿಕೊಳ್ಳುವುದು ಅಂತಹ ವಿಧಾನ. ಈ ಬಗ್ಗೆ ಅವರು ಪ್ರೊ. ಎ.ಪಿ. ಪೋಪ್ ಅವರಿಗೆ ಪತ್ರ ಬರೆದರು. ಭಾರತದ ಆಂದೋಲನದ ಬಗ್ಗೆ ಹೆಚ್ಚು ಆಸಕ್ತಿ ಹಾಗೂ ಅನುರಕ್ತಿ ಹೊಂದಿದ್ದ ಅವರು ಲಜಪತರ ಅತ್ಯುತ್ತಮ ಗೆಳೆಯರಾಗಿದ್ದರು. ಕೆಲವು ಅಧಿಕಾರಯುತ ದುಬಾರಿ ಬೆಲೆಯ ಇಸ್ಲಾಮಿಕ್ ಕಲಾ ಪುಸ್ತಕಗಳನ್ನು ರಚಿಸಿ ಪ್ರಸಿದ್ಧಿಯನ್ನು ಪಡೆದಿದ್ದವರು ಅವರು. ಅವರಿಗೆ ಬರೆದ ಪತ್ರದಲ್ಲಿ ಹೇಬ್ಸ್ ಸಲಹೆಯೊಂದನ್ನು ಸೂಚಿಸಿ ಆ ಕೃತಿಗೆ ವಿನ್‌ಸ್ಟನ್ ಚರ್ಚಿಲರ ಮುನ್ನುಡಿ ಪಡೆದರೆ ಹೇಗೆಂದು ಕೇಳಿದರು. ಪ್ರೊ. ಪೋಪ್‌ರಿಗೆ ಆ ಸಲಹೆ ಹಿಡಿಸಿತು. ಅವರು ಚರ್ಚಿಲರಿಗೆ ಪತ್ರ ಬರೆದು ಮನವಿ ಮಾಡಿದರು. ಆದರೆ ಚರ್ಚಿಲರು "ಭಾರತದ ಬಗ್ಗೆ ಹೆಚ್ಚು ಗೊತ್ತಿಲ್ಲ"! ಎಂಬ ಕಾರಣದ ಮೇಲೆ ಆ ಆಹ್ವಾನವನ್ನು ನಿರಾಕರಿಸಿದರು. ಕೊನೆಗೆ ನಮ್ಮ ಲೇಖಕರ ಸ್ವಂತ ಹೆಸರಿನಲ್ಲೇ ಆ ಕೃತಿಯನ್ನು ಹೊರತರಲು ನಿರ್ಧರಿಸಲಾಯಿತು. ಅದಕ್ಕೆ ಮುನ್ನುಡಿಯನ್ನು ಭಾರತದ ಪ್ರಾಮಾಣಿಕ ಹಾಗೂ ಉತ್ಸಾಹಶೀಲ ಅಮೆರಿಕನ್ ಮಿತ್ರರಲ್ಲಿ ಒಬ್ಬರಾದ ರೆವರೆಂಡ್ ಸುಂದರ್‌ಲ್ಯಾಂಡ್ ಬರೆದರು. ಆ ಪುಸ್ತಕವನ್ನು ಸಮರ್ಪಣೆ ಮಾಡುತ್ತಾ ಲೇಖಕರು ಹೀಗೆ ಬರೆದಿದ್ದಾರೆ: "ತನ್ನ ತಾಯ್ನಾಡಿನಲ್ಲಿ ಸಾರ್ವಜನಿಕ ಜೀವನ ಕುಂಠಿತಗೊಂಡಿದ್ದನ್ನು ಸಹಿಸಲಾರದೆ (ಅಕ್ಟೋಬರ್ 1912) ಭಗ್ನ ಹೃದಯಿಯಾಗಿ ಜೀವಾರ್ಪಣೆ ಮಾಡಿದ ನನ್ನ ಆತ್ಮೀಯ ಗೆಳೆಯ ಪಂಜಾಬಿನ ದ್ವಾರಕಾದಾಸ್ ಎಂಬ ಅವರ ಚಿರನೆನಪಿಗೆ, ಅವರ ಸಾರ್ವಜನಿಕ ಜೀವನದ ಸಂಘಟನಾತೀತ ನಿಲುವು, ಉನ್ನತ ನೀತಿ ಮತ್ತು ಅವುಗಳ ಪ್ರತಿಪಾದನೆಗೆ ಅರ್ಪಿತ."

ಲೇಖಕರ ಪರಿಚಯ, ಬರ್ಕಲಿ, ಕ್ಯಾಲಿಫೋರ್ನಿಯಾ, ಮಾರ್ಚ್ 1. 1916. 1916ರ ಆಗಸ್ಟ್ ವೇಳೆಗೆ ಆ ಪುಸ್ತಕ ಪ್ರಕಟಗೊಂಡಿತು. ಅತ್ಯುತ್ತಮವಾದ ಮುದ್ರಣಾಲಯದಲ್ಲಿ ಅದು ಸಿದ್ಧಗೊಂಡಿತು. ಅದರ ಬಗ್ಗೆ ವಿಮರ್ಶೆ ಬರೆದ ಅನೇಕರಲ್ಲಿ ಎಚ್.ಡಬ್ಲ್ಯು. ನೇವಿನ್ಸನ್ ಒಬ್ಬರು. ಸುದೀರ್ಘವಾದ ಉತ್ಸಾಹ ಕೆರಳಿಸಿದ ಅವರ ವಿಮರ್ಶೆ ಅಮೆರಿಕನ್ ಸಾಪ್ತಾಹಿಕ ರಿಪಬ್ಲಿಕನ್‌ನಲ್ಲಿ ಪ್ರಕಟಗೊಂಡಿತು. ಆರು ತಿಂಗಳಲ್ಲಿ ಆ ಹೊತ್ತಿಗೆ ಮರು ಮುದ್ರಣಗೊಂಡಿದ್ದು ಅವರ ಪ್ರೌಢಿಮೆಯನ್ನು ಸಾಕ್ಷಿಕರಿಸಿತು. 1917ರ ಏಪ್ರಿಲ್ 17ರಲ್ಲಿ ಹೊಸ ಪೀಠಿಕೆಯೊಂದಿಗೆ ಮರು ಮುದ್ರಣವೂ ಆಯಿತು. ಭಾರತಕ್ಕಾಗಲಿ, ಬ್ರಿಟನ್‌ಗಾಗಲಿ ಆ ಪುಸ್ತಕವನ್ನ ಕಳುಹಿಸುವ ಸ್ಥಿತಿ ಇಲ್ಲದಿದ್ದರೂ ಅಮೆರಿಕದಲ್ಲಿಯೇ ಉತ್ತಮ ಖರೀದಿ ಪ್ರೋತ್ಸಾಹ ದೊರೆಯಿತು. ಅದರ ಮೂಲಕ ಅವರ ಲೇಖಕರ ಪರಿಚಯ ವ್ಯಾಪಕವಾದಂತೆ ಭಾರತದ ಪ್ರಚಾರ ಕಾರ್ಯವೂ ವಿಸ್ತಾರಗೊಳ್ಳತೊಡಗಿತು.

ಆ ಕೃತಿ ಕುರಿತು ಉಪನ್ಯಾಸ ನೀಡಲು ಸಂಘ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಂದ ಆಹ್ವಾನ ಮೇಲಿಂದ ಮೇಲೆ ಬರತೊಡಗಿದವು. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಅದನ್ನು ಕುರಿತು ಲೇಖನಗಳಿಗೆ ಬೇಡಿಕೆ ಹೆಚ್ಚಾಯಿತು. ಯಂಗ್ ಇಂಡಿಯಾ ಮೂಲಕ ಲಜಪತರು ಮಾಡಿದ ಆ ಸಾಧನೆ ವರ್ಣನಾತೀತ.

ಬ್ರಿಟನ್ ಮತ್ತು ಭಾರತ ಸರ್ಕಾರಗಳು ಲಜಪತರ ಯಂಗ್ ಇಂಡಿಯಾ ಮೇಲೆ ನಿಷೇಧ ವಿಧಿಸಲು ಕಿಂಚಿತ್ತೂ ಸಮಯ ವ್ಯರ್ಥ ಮಾಡಲಿಲ್ಲ. ಆದರೆ ಆ ನಿಷೇಧ ಅಷ್ಟೇ ತ್ವರಿತವಾಗಿ ಇಂಗ್ಲೆಂಡಿನಲ್ಲಿ ಉಲ್ಲಂಘಿಸಲ್ಪಟ್ಟಿದ್ದು ಚರಿತ್ರೆಯ ದಿಟ್ಟತನದ ತಿರುವು. ಕಮಾಂಡರ್ ಜೋಸಯ್ಯ ಸಿ. ವೆಡ್ವುಡ್ ಮಾರ್ಗದರ್ಶನದಲ್ಲಿ ಯಂಗ್ ಇಂಡಿಯಾ ಇಂಗ್ಲಿಷ್ ಆವೃತ್ತಿ ಸಿದ್ಧವಾಯಿತು. ಇಂಡಿಯಾ ಹೋಂ ರೂಲ್ ಲೀಗ್ ಅದರ ಪ್ರಕಟಣೆಗೆ ಪಾತ್ರಧಾರಿಯಾಯಿತು. ಸಂಸತ್ತಿನ ಎಲ್ಲಾ ಸದಸ್ಯರಿಗೆ ಪ್ರತಿಗಳನ್ನು ಹಂಚಲಾಯಿತು. ಸ್ವತಃ ವೆಡ್ವುಡ್ಡರೇ ಇಂಗ್ಲಿಷ್ ಆವೃತ್ತಿಗೆ ಮುನ್ನುಡಿ ಬರೆದರು. ಹೌಸ್ ಆಫ್ ಕಾಮನ್ಸ್‌ನಲ್ಲಿ ಅದರ ಪ್ರತಿಯೊಂದನ್ನು ಕೈಯಲ್ಲಿ ಹಿಡಿದು ಇಡೀ ಸದನಕ್ಕೆ ಕಾಣುವಂತೆ ತೋರಿಸುತ್ತಾ ಅವರು ಪೊಲೀಸರಿಗೆ ಸವಾಲು ಹಾಕಿ ಮಾಡಬೇಕಾದ್ದನ್ನು ಮಾಡುವಂತೆ ದಿಟ್ಟತನದಿಂದ ಘೋಷಿಸಿದರು. ಅನಂತರ ಸ್ಕಾಟ್‌ಲ್ಯಾಂಡ್ ಪೊಲೀಸರು ಉಳಿದಿದ್ದ ಎಲ್ಲಾ ಪ್ರತಿಗಳನ್ನು ವಶಪಡಿಸಿಕೊಂಡರು.

ಆ ಕಾಲದಲ್ಲಿ ವೆಡ್‌ವುಡ್ ಲಿಬರಲ್ ಪಕ್ಷದ ಸದಸ್ಯರಾಗಿದ್ದರು. ಸ್ವಲ್ಪಕಾಲದಲ್ಲೇ ಲೇಬರ್ ಪಕ್ಷ ಸೇರಿದರು. ಅಲ್ಲಿದ್ದರೂ ಅವರು ತಮ್ಮ ವಿಭಿನ್ನ ನಿಲುವು ಧೋರಣೆಗಳಿಂದಾಗಿ ಏಕ ವ್ಯಕ್ತಿಯಾಗಿ ಹೋರಾಟ ನಡೆಸಿದರು. ಅನೇಕ ವಿಷಯಗಳಲ್ಲಿ ಅವರದು ಪ್ರಗತಿಪರ ದೃಷ್ಟಿಕೋನವಾಗಿತ್ತು. ಬಹುತೇಕ ಸನ್ನಿವೇಶಗಳಲ್ಲಿ ಅವರ ಹೋರಾಟ ಪಕ್ಷೇತರ ಸದಸ್ಯನೋರ್ವನ ಹೋರಾಟದಂತೆ ಭಾಸವಾಗುತ್ತಿತ್ತು. ಆಗಷ್ಟೇ ರಚಿತವಾಗಿದ್ದ ಮೆಸಪೊಟೇನಿಯಾ ಆಯೋಗದ ಸದಸ್ಯರೂ ಅವರಾಗಿದ್ದರು. ಅಲ್ಲಿನ ಕೆಲಸ ಅವರಲ್ಲಿ ಭಾರತದ ಬಗ್ಗೆ ತೀವ್ರ ಆಸಕ್ತಿ ಹುಟ್ಟಿಸಿತು. ಅವರು ಹಾಕಿದ ಭಿನ್ನಾಭಿಪ್ರಾಯದ ಟಿಪ್ಪಣಿ ಅವರನ್ನು ಭಾರತಕ್ಕೆ ತೀರಾ ಸಮೀಪವರ್ತಿಯನ್ನಾಗಿ ಮಾಡಿತು.

ಪರಸ್ಪರ ವೆಡ್‌ವುಡ್ ಮತ್ತು ಲಜಪತರಿಗೆ ಪರಿಚಯವೇ ಇರಲಿಲ್ಲ. ಯಂಗ್ ಇಂಡಿಯಾ ಘಟನೆ ಅವರನ್ನು ದೂರದಿಂದ ಹತ್ತಿರಕ್ಕೆ ಕರೆ ತಂದಿತು. ಆ ವಿದ್ಯಮಾನ ಅವರಿಬ್ಬರ ಗೆಳೆತನಕ್ಕೆ ಬುನಾದಿಯೂ ಆಯಿತು. ಅವರಿಬ್ಬರೂ ನಿಯತವಾಗಿ ಪತ್ರಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಕಂಡೂ ಕಾಣದ ಸ್ನೇಹವನ್ನು ಗಾಢವಾಗಿ ಬೆಸೆದುಕೊಂಡರು. ಸುಮಾರು ಒಂದು ವರ್ಷದ ತರುವಾಯ ವೆಡ್‌ವುಡ್ ಅಮೆರಿಕಕ್ಕೆ ಭೇಟಿ ಕೊಟ್ಟಾಗ ಪ್ರಥಮ ಬಾರಿಗೆ ಇಬ್ಬರ ಸಾಕ್ಷಾತ್ ಮಿಲನವಾಯಿತು. ಯಂಗ್ ಇಂಡಿಯಾ ಕೃತಿಯಲ್ಲಿ ಆಕ್ಷೇಪಾರ್ಹವಾದ ಅಂಶ ಯಾವುದೆಂಬುದನ್ನು ಬ್ರಿಟಿಷ ಗೃಹ ಕಚೇರಿ ತಿಳಿದುಕೊಂಡರೆ ಆ ಭಾಗವನ್ನು ಮಾರ್ಪಡಿಸಿಯೋ ಅಥವಾ ಕೈಬಿಟ್ಟೋ ಪರಿವರ್ತನೆ ಮಾಡಬಹುದೆಂದೋ ಲಜಪತರು ವೆಡ್‌ವುಡ್‌ರನ್ನು ಕೇಳಿದರು. ಆ ಅಂಗ್ರೇಜಿ ಮಿತ್ರ ಭಾರತೀಯ ಹೋರಾಟ ಜೀವಿಯ ಆ ಸಲಹೆಯನ್ನು ಸುತರಾಂ ಒಪ್ಪಲಿಲ್ಲ.

ಲಜಪತರು ಭಾರತಕ್ಕೆ ಮರಳಿದರೂ ಆ ಪುಸ್ತಕದ ಮೇಲಿದ್ದ ನಿಷೇಧ ತೆರವಾಗಲಿಲ್ಲ. ಶಾಸನ ಸಭೆಯೊಂದರ ಸದಸ್ಯರಾದರೂ ಆ ಪುಸ್ತಕದ ಮೇಲಿನ ನಿಷೇಧ ಹಾಗೆಯೇ ಉಳಿದಿತ್ತು. 1927ರ ಅಂತ್ಯದ ವೇಳೆಗೆ ನಿಷೇಧ ತೆರವಾಯಿತು. ಸರ್ವೆಂಟ್ಸ್ ಆಫ್ ಪೀಪಲ್ಸ್ ಸೊಸೈಟಿ ಯಂಗ್ ಇಂಡಿಯಾ ಮರು ಮುದ್ರಣ ಹೊರತಂದಿತು. ವೆಡ್‌ವುಡ್ ಇಂಗ್ಲಿಷ್ ಮುದ್ರಣದಲ್ಲಿ ಬರೆದಿದ್ದ ಆಡಳಿತರೂಢ ಕಾನೂನುಬಾಹಿರ ಕ್ರಮದ ಟೀಕೆ ಆ ಮುದ್ರಣದಲ್ಲಿ ಮುಂದುವರೆಸಿದ್ದರಿಂದ ಯಾವುದೇ ಹೊಸ ಮುನ್ನುಡಿ ಸೇರ್ಪಡೆಯಾಗಲಿಲ್ಲ. ಯಂಗ್ ಇಂಡಿಯಾದ ಚರಿತ್ರೆಯಲ್ಲಿ ಆ ಮುನ್ನುಡಿ ಅವಿಭಾಜ್ಯ ಅಂಗವಾಗಿದೆ.

ಆ ಮುದ್ರಣವು ಅತಿ ಬೇಗ ಮುಗಿದು ಹೋಯಿತು. ಇನ್ನೊಂದು ಮುದ್ರಣ ತರುವ ಮೊದಲು 1916ರ ನಂತರದ ವಿದ್ಯಮಾನಗಳನ್ನು ಅಳವಡಿಸಲು ಲಜಪತರು ಯೋಚಿಸಿದರು. ರೈಲಿನಲ್ಲಿ ನಾವಿಬ್ಬರು ಕೈಗೊಂಡ ಕಟ್ಟಕಡೆಯ ಪ್ರಯಾಣದ ಸಮಯದಲ್ಲಿ ಈ ಕಾರ್ಯಕ್ಕೆ ನೆರವಾಗಲು ಲಜಪತರು ನನಗೆ ಸೂಚನೆ ಕೊಟ್ಟ ನೆನಪು ಇನ್ನೂ ಹಸಿರಾಗಿದೆ. ನಾನು ಅವರ ಹಿಂದಿನ ಕೃತಿ ಅನ್ ಹ್ಯಾಪಿ ಇಂಡಿಯಾ ರಚನೆಯಲ್ಲಿ ಅವರೊಂದಿಗಿದ್ದುದನ್ನು ನೆನಪು ಮಾಡಿಕೊಂಡರು. ಅದೇ ಸಮಯದಲ್ಲಿ ಪುಸ್ತಕಗಳ ಒಂದೆರಡು ಹೊಸ ಯೋಜನೆಗಳ ಬಗ್ಗೆಯೂ ಚರ್ಚಿಸಿದೆವು. ಆ ಪೈಕಿ ಪಾರ್ನೆಲ್ ಬದುಕಿನ ಚಿತ್ರಣ (ಉರ್ದು ಜೀವನ ಚರಿತ್ರೆ ಮಾಲಿಕೆ) ಒಂದಾಗಿತ್ತು. ಅದರಲ್ಲಿ ನಾವಿಬ್ಬರು ಕಲೆತು ಕೆಲಸ ಮಾಡಬಹುದೆಂದು ನಿರ್ಧರಿಸಿದ್ದೆವು. ಯಂಗ್ ಇಂಡಿಯಾ ಕೃತಿಗೆ ಎರಡನೇ ಭಾಗವನ್ನು ಅಳವಡಿಸಲು ಯೋಚಿಸಿದರು. ನಾವಿಬ್ಬರು ಜೊತೆಯಾಗಿ ಆ ಕೆಲಸ ಕೈಗೊಳ್ಳಬೇಕೆಂದು ಅವರು ಸಲಹೆ ಮಾಡಿದರು. ಮೊದಲನೇ ಭಾಗ ಯಥಾಸ್ಥಿತಿಯಲ್ಲೇ ಇರಬೇಕೆಂದು ನಿರ್ಧರಿಸಲಾಯಿತು. ಆದರೆ ಅವರ ಆ ಉದ್ದೇಶವನ್ನು ಕಾರ್ಯಗತಗೊಳಿಸಲು ಸಮಯ ಸಿಗಲೇ ಇಲ್ಲ.

ಸುಮಾರು ಒಂದು ವರ್ಷದ ನಂತರ ಯಂಗ್ ಇಂಡಿಯಾದ ಹೊಸ ಸಂಪುಟ ಸಿದ್ಧವಾಯಿತು. ಅದರಲ್ಲಿ ಬ್ರಿಟಿಷರ ಆಳ್ವಿಕೆ ಭಾರತದ ಮೇಲೆ ಉಂಟು ಮಾಡಿದ

ಆರ್ಥಿಕ ಪರಿಣಾಮಗಳ ಚಿತ್ರಣ ಸಮಗ್ರವಾಯಿತು. 'ಬ್ರಿಟಿಷ್ ಇಂಡಿಯಾದ ಆರ್ಥಿಕ ಚರಿತ್ರೆ' ಎಂದು ರಕ್ಷಾಪುಟದ ನಂತರ ಒಳಪುಟಗಳಲ್ಲಿ ವರ್ಣಿಸಲಾಗಿದೆ. ವಸ್ತುಶಃ ಅದು ಸಂಪೂರ್ಣವಾಗಿ ಸಿದ್ಧಗೊಂಡು ಹೊರಬಂದಾಗ ಅದರ ಶೀರ್ಷಿಕೆ ಇಂಗ್ಲಿಷ್‌ಮನ್ಸ್ ಡೆಬ್ಟ್ ಟು ಇಂಡಿಯಾ ಎಂದಾಯಿತು. ಅದರಲ್ಲಿ ಪ್ರಸ್ತಾಪಿಸಿದ ಸಿದ್ಧಾಂತಗಳೆಲ್ಲವೂ ಅಂಕಿ ಅಂಶಗಳಿಂದಲೂ ಸಾಕ್ಷಿ ಆಧಾರಗಳಿಂದಲೂ ನಿರೂಪಿತವಾಗಿವೆ. ಸಾಧ್ಯವಾದಷ್ಟು ಎಲ್ಲಾ ಅಂಶಗಳನ್ನು ಬ್ರಿಟಿಷರ ಬಾಯಿಯಿಂದಲೇ ಹೇಳಿಸಲು ಲೇಖಕರು ಬಳಸಿಕೊಂಡ ಚಾಣಾಕ್ಷತನದ ತಂತ್ರ ಪರಿಣಾಮಕಾರಿಯಾಗಿದೆ. ಪೀಠಿಕೆಯಲ್ಲಿ ಅವರೇ ಹೇಳಿರುವಂತೆ ತಾನು ಹಾಕಿಕೊಂಡಿರುವ ಷೂನಲ್ಲಿ ಎಲ್ಲೆಲ್ಲಿ ತೂತುಗಳಿವೆ ಎಂಬುದನ್ನು ಧರಿಸಿದವ ಪ್ರತಿನಿತ್ಯವೂ ಅನುಭವದ ಮೂಲಕ ತಿಳಿದುಕೊಳ್ಳುತ್ತಾನೆ. ಆದರೆ ರಾಜಕೀಯದಲ್ಲಿ ಈ ಸಾಮಾನ್ಯ ಪರಿಜ್ಞಾನವು ತಿರುಗು ಮುರುಗಾಗಿರುವಂತೆ ಕಾಣುತ್ತದೆ.

''ಸರ್ಕಾರಗಳು ಮತ್ತು ಆಡಳಿತಗಾರರ ಬಗ್ಗೆ ನಿಷ್ಕರ್ಷೆ ಮಾಡಬೇಕಾಗಿ ಬಂದಾಗ ಅವರು ಹೇಳುವ ಮಾತುಗಳನ್ನೇ ಮಾನ್ಯ ಮಾಡಬೇಕಾಗುತ್ತದೆ. ಆಳ್ವಿಕೆಗೆ ಒಳಪಟ್ಟವರು ಮತ್ತು ಆಡಳಿತಕ್ಕೆ ಅಧೀನವಾದವರ ಮಾತುಗಳನ್ನಲ್ಲ... ಆದ್ದರಿಂದ ನಾನು ಇಂಗ್ಲಿಷರ ಬಾಯಿಯಿಂದಲೇ ಮಾತನಾಡಿಸುವ ಮಾಧ್ಯಮವನ್ನು ಅಳವಡಿಸಿಕೊಂಡಿದ್ದೇನೆ.''

ಆ ಸಂಪುಟದಲ್ಲಿ ಮೂಲ ಕುರಿತಂತೆ ಯಾವುದೇ ಘೋಷಣೆ ಇಲ್ಲ. ಎಲ್ಲವೂ ಸಂಪೂರ್ಣವಾಗಿ ಮೂಲವೇ ಆಗಿರುವ ಪರಿಕಲ್ಪನೆ ಅದರಲ್ಲಿದೆ. ಮೂಲ ಲೇಖನದ ಒಳಸ್ತರ ಹೀಗಿದೆ.

ಕುಂಟೆಯ ಕೆಳಗೆ ಸಿಕ್ಕಿಕೊಂಡ ಕಪ್ಪೆಗೆ ಗೊತ್ತು

ನಿಜವಾದ ನೋವು ಎಲ್ಲಿ ಏನೆಂಬುದು

ಅಲ್ಲೇ ಮೇಲೆ ಹಾರಾಡುವ ಚಿಟ್ಟೆ

ಆ ಕಪ್ಪೆಗೆ ಸಮಾಧಾನ ಮಾಡಿದಂತೆ

ಎಂಬ ಭಾವಾರ್ಥ ಬರುವ ಇಂಗ್ಲಿಷ್ ಕವನದ ಭಾಗವೊಂದರ ಅನುವಾದವನ್ನು ಮೊದಲ ರಕ್ಷಾ ಪುಟದ ಒಳಗಿನ ಅಂಕಪುಟದಲ್ಲಿ ಮುದ್ರಿಸಲಾಗಿದೆ. ಬ್ರಿಟಿಷರ ನಡವಳಿಕೆ ಮತ್ತು ಅವರ ಇಬ್ಬಂದಿತನಗಳನ್ನು ಈ ಕವನದ ಭಾವಾರ್ಥದಲ್ಲಿ ಪರೋಕ್ಷವಾಗಿ ಅವರು ಓದುಗರ ಮುಂದೆ ತೆರೆದಿಟ್ಟಿದ್ದಾರೆ. ಹಲಗೆ ಕೆಳಗೆ ಸಿಕ್ಕಿಕೊಂಡ ಕಪ್ಪೆಯ ಸ್ಥಿತಿಗೆ ಹೋಲಿಸಿದ ಪರಿಸ್ಥಿತಿಯ ಬಗ್ಗೆ ಔದಾಸೀನ್ಯ ಇಲ್ಲವೇ ಅಸಹ್ಯ ತೋರಿದ ಒಂದು ವರ್ಗದ ಓದುಗರ ಮೇಲೂ ಆ ಕುಂಟೆಯ ತರಹದ ಘಟನೆಗಳ ಬಗ್ಗೆ ಸಮರ್ಥವಾದ ಅಂಕಿ ಅಂಶಗಳ ವರದಿಯನ್ನು ನೀಡಿದ ಲಜಪತರ ಪರಿ ಹಾಗೂ ಆ ಕುಂಟೆಯ ಕೆಳಗೆ ಸಿಕ್ಕಿಕೊಂಡ ಕಪ್ಪೆಯನ್ನು ಹೋಲುವಂತಹ ಜನರ ಮೇಲೆ ಕುಂಟೆಯನ್ನು ಒಡೆಯುವವರು ಅಥವಾ ಅವರ ಪರಿವಾರದ ಜನರ ದಬ್ಬಾಳಿಕೆ ಪ್ರಭಾವ ಬೀರದಿರಲಿಲ್ಲ. ಆ ಪುಸ್ತಕವನ್ನು ಯಥೋಚಿತವಾಗಿ 'ನಿರ್ದುಷ್ಟ, ಉನ್ನತ ಧೋರಣೆಗಳ ಹಾಗೂ ಪ್ರಾಮಾಣಿಕ ಬುದ್ಧಿಮತ್ತೆಯ ಆಂಗ್ಲ ಪುರುಷರು ಮತ್ತು ಮಹಿಳೆಯರಿಗಾಗಿ' ಎಂದು ಸಮರ್ಪಣೆ ಮಾಡಿದ್ದಾರೆ.

ಅಂತಹ ಜನರ ಕೈಫಿಯತ್ತನ್ನೇ ತಾತ್ವಿಕವಾಗಿ ಆ ಕೃತಿ ಒಳಗೊಂಡಿತ್ತು. ಇಂಗ್ಲಿಷ್‌ಮನ್ಸ್ ಡೆಬ್ಟ್ ಟು ಇಂಡಿಯಾ ಒಂದು ಅಮೋಘ ಆಕರ ಕೃತಿ ಎನಿಸಿತು. ಇತರ ಅಧಿಕೃತ ಬರಹಗಳೋ, ನಿಯತಕಾಲಿಕೆಗಳೋ ಅಥವಾ ವರದಿಗಳ ರೂಪದಲ್ಲಿ ಚೆಲ್ಲಾಚೆದುರಾಗಿರುತ್ತಿದ್ದ ಪ್ರಸಂಗದಲ್ಲಿ ಅದೊಂದು ಬಹು ಪರಿಶ್ರಮದ ಸಂಗ್ರಹ ಕೃತಿ ಎನಿಸಿತು. ಬಹು ಜನರಿಗೆ ಸುಲಭದಲ್ಲಿ ಅಲಭ್ಯವಾಗಿದ್ದ ದಾಖಲೆಗಳು ಕೈ ಅಳತೆಯಲ್ಲೇ ಪ್ರಾಪ್ತವಾಗುವಂತಹ ಸನಿಹದ ಹೊತ್ತಿಗೆ ಅದೆನಿಸಿತು. ಹೆಸರಾಂತ ಭಾರತೀಯ ರಾಜಕಾರಣಿಗಳಾಗಿದ್ದ ದಾದಾ ಭಾಯಿ ನವರೋಜಿ ಮತ್ತು ಆರ್.ಸಿ. ದತ್ ಹಾಗೂ ವಿಲಿಯಂ ಡಿ.ವಿ. ಪ್ರಣೀತ ಹಾಗೂ ಉದ್ಧೃತ ಅತ್ಯುತ್ತಮ ಆರ್ಥಿಕ ಸಂಶೋಧನಾ ಪರಂಪರೆಗೆ ಅನುಗುಣವಾಗಿ ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ಆರ್ಥಿಕ ನೀತಿಯ ಚರಿತ್ರೆ ಸೋದಾರಣ ಆಧಾರಗಳು ಆ ಮಹತ್ ಕೃತಿಯಲ್ಲಿ ಹೊರಹೊಮ್ಮಿದವು. ಅದರಲ್ಲೂ ಅಮೆರಿಕನ್ ಮತ್ತು ಐರೋಪ್ಯ ಚಿಂತನಶೀಲ ಓದುಗರಿಗೆ ಒಳ್ಳೆಯ ವೈಚಾರಿಕ ಸಂಪುಟ ಅದೆನಿಸಿತು. ಬ್ರಿಟಿಷರು ಭಾರತಕ್ಕೆ ಬರುವ ಮೊದಲಿನ ಆರ್ಥಿಕ ಚರಿತ್ರೆ ಐತಿಹಾಸಿಕ ನಿರೂಪಣೆಯೊಂದಿಗೆ ಆರಂಭಗೊಳ್ಳುತ್ತದೆ. ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿಯಿಂದಾದ ಬೆಳವಣಿಗೆಯನ್ನು ಚಿತ್ರಿಸುತ್ತದೆ. ಭಾರತವನ್ನು ಅಧೀನದಲ್ಲಿಟ್ಟುಕೊಂಡು ವಿಶಾಲವಾದ ಬ್ರಿಟಿಷ್ ಚಕ್ರಾಧಿಪತ್ಯ ಸ್ಥಾಪಿತವಾದದ್ದನ್ನು ನಿರೂಪಿಸಲಾಗಿದೆ. ಒಂದು ಅಧ್ಯಾಯದಲ್ಲಿ 'ಕೊಡುಗೆಯೋ ಅಥವಾ ಸುಲಿಗೆಯೋ?' ಜ್ವಲಂತ ಪ್ರಶ್ನೆಯನ್ನು ಮಥಿಸಲಾಗಿದೆ. ಗಿರಣಿ ಮತ್ತು ಹಡಗು ನಿರ್ಮಾಣ- ಈ ಎರಡು ಉದ್ಯಮಗಳನ್ನು ಆರಿಸಿಕೊಳ್ಳುವ ಮೂಲಕ ಭಾರತದ ಬಗ್ಗೆ ಬ್ರಿಟಿಷರು ತೋರಿದ ಆರ್ಥಿಕ ನೀತಿಯನ್ನು ಅದರಲ್ಲಿ ವಿವೇಚಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಕೃಷಿ, ಜನತೆಯ ಹಣಕಾಸು ಸ್ಥಿತಿ ಗತಿ, ಬರಗಾಲ ಮತ್ತು ಅವರ ಪರಿಣಾಮಗಳು ಚರ್ಚಿತವಾಗಿವೆ. ಬ್ರಿಟಿಷರು ಹೆಚ್ಚು ಪ್ರಚಾರ ನೀಡಿದ ರೈಲ್ವೆ, ನೀರಾವರಿ, ಶಿಕ್ಷಣದ ಅಧ್ಯಾಯಗಳು ಅನಂತದಲ್ಲಿ ಕಂಡು ಬರುತ್ತದೆ. ಅಂತ್ಯದಲ್ಲಿ ಒಂದು ಅಧ್ಯಾಯದಲ್ಲಿ ತೆರಿಗೆ ಮತ್ತು ಸರ್ಕಾರದ ಖರ್ಚುವೆಚ್ಚಗಳನ್ನು ವಿವೇಚಿಸಲಾಗಿದೆ. ಉಳಿದಂತೆ ಭಾರತದ ಪ್ರಗತಿ ಕುರಿತು ಕೆಲವು ಭ್ರಮೆಗಳ ಬಗ್ಗೆ ಧ್ವನಿಸಲಾಗಿದೆ.

ಈ ಸಂಪುಟವನ್ನು ಬಿ.ಡಬ್ಲ್ಯು. ಹೇಬ್ಸ್ ಅಮೆರಿಕದಲ್ಲಿ ಪ್ರಕಟಣೆ ಮಾಡಿದರು. ಪತ್ರಿಕೆಗಳಲ್ಲಿ ಒಳ್ಳೆಯ ಬೆಂಬಲ ವ್ಯಕ್ತವಾಯಿತು. ಬ್ರಿಟಿಷರದೇ ಅಧಿಕಾರವಾಣಿಯನ್ನು ಆಧರಿಸಿದ ಕೃತಿ ಅದಾಗಿದ್ದರಿಂದ ಯುದ್ಧ ಕಾಲದಲ್ಲಿ ಅಮೆರಿಕದಲ್ಲಿ ಬ್ರಿಟಿಷರು ನಡೆಸಿದ ಅತಿರೇಕದ ಪ್ರಚಾರಕ್ಕೆ ಸಮರ್ಥವಾದ ಉತ್ತರ ಅವರಿಂದಲೇ ದೊರೆತಂತಾಯಿತು. ಆ ಪ್ರಚಾರದಲ್ಲಿ ಬ್ರಿಟಿಷ್ ಆಡಳಿತವು ಭಾರತದ ಮಹಾನ್ ಅಭ್ಯುದಯದ ಬಗ್ಗೆ ದೊಡ್ಡ ದೊಡ್ಡ ಪದಗಳಲ್ಲಿ ಹೇಳಿತ್ತು. ಶೋಷಣೆಯೇ ಇಲ್ಲವೆನ್ನುವ ರೀತಿಯಲ್ಲಿ ತೋರಿಸಿಕೊಂಡಿತ್ತು. ಅದೆಲ್ಲವೂ ಆ ಕೃತಿಯ ಮೂಲಕ ಬಟ್ಟಬಯಲಾಯಿತು.

ಆ ಕೃತಿಗೆ ಗ್ರಂಥಭಂಡಾರದ ಸೌಲಭ್ಯ ಅಗತ್ಯವಾಗಿತ್ತು. ಕ್ಯಾಲಿಫೋರ್ನಿಯದಲ್ಲಿ ಲಾಲಾಜಿ ಅವರಿಗೆ ಅದು ಲಭ್ಯವಾಗಿರಲಿಲ್ಲ. ಲಜಪತರು ನ್ಯೂಯಾರ್ಕ್‌ಗೆ ತೆರಳಿದರು. ಅವರಿಗೆ ಅಗತ್ಯವಾಗಿದ್ದ ಸೌಲಭ್ಯವನ್ನು ಕೊಲಂಬಿಯಾ ವಿಶ್ವವಿದ್ಯಾಲಯ ಗ್ರಂಥಭಂಡಾರ ಕಲ್ಪಿಸಿಕೊಟ್ಟಿತು. ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಪೈಕಿ ಷೊ. ಪಿ ಆರ್. ಮೂರ್ ಮತ್ತು

ಹೆಸರಾಂತ ಅರ್ಥಶಾಸ್ತ್ರಜ್ಞ ಇ.ಎ.ಆರ್. ಸೆಲಿಗ್ಮನ್ ಹಸ್ತಪ್ರತಿಯನ್ನು ಅವಲೋಕಿಸಿದರು. ಆ ಸಂಪುಟದಲ್ಲಿ ವಿಶೇಷ ಪ್ರಸ್ತಾವಗಳಿದ್ದವು. ಬ್ರಿಟಿಷರು ಅಮೆರಿಕದಲ್ಲಿ ಕೈಗೊಂಡ ಭಾರತದ ಬಗೆಗಿನ ಪ್ರಚಾರಕಷ್ಟೇ ಅಲ್ಲದೆ ಯುದ್ಧಾನಂತರ ಭಾರತದಲ್ಲಿ ಕೈಗೊಳ್ಳಲು ಉದ್ದೇಶಿಸಿದ್ದ ಬ್ರಿಟಿಷ್ ಪ್ರಸ್ತಾವಗಳ ಮುಖವೂ ಅದರಲ್ಲಿತ್ತು. ಭಾರತಕ್ಕೆ ಬ್ರಿಟನ್ನಿನ ವಿದೇಶಿ ಸಾಲವನ್ನು ಒದಗಿಸಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ ಬ್ರಿಟಿಷ್ ಆಡಳಿತದ ಯುದ್ಧಾನಂತರದ ನೀತಿ ತಿರುಗುಮುರುಗಾಗಿತ್ತು. ಬ್ರಿಟನ್ ನಡೆಸಿದ ಯುದ್ಧದ ಖರ್ಚು ವೆಚ್ಚವನ್ನು ಭಾರತವೇ ಭರಿಸಬೇಕೆಂದು ತಿಳಿಸಲಾಗಿತ್ತು. ಅರ್ಥಾತ್ ಬ್ರಿಟನ್ನಿನ ವಿದೇಶಿ ಸಾಲಕ್ಕೆ ಭಾರತವು ಪಾತ್ರಧಾರಿಯಾಗಬೇಕೆಂದು ಪರಿಗಣಿಸಲಾಗಿತ್ತು. ಅದೆಲ್ಲವೂ ಲಜಪತರ ಮೂಲಕ ಹೊರಬಿದ್ದು ಬ್ರಿಟಿಷ್ ಇಬ್ಬಂದಿ ನೀತಿ ಬಯಲಿಗೆ ಬಿದ್ದಿತು.

ಲಾಲಾಜಿ ಮುನ್ನುಡಿಯಲ್ಲಿ, ''ಭಾರತವು ಇಂಗ್ಲೆಂಡಿಗೆ ಬೆಂಬಲವಾಗಿ ತನ್ನತನವನ್ನು ಮೆರೆಸಿತು. ಗ್ರೇಟ್ ಬ್ರಿಟನ್ನಿನ ಶತ್ರುಗಳು ಅನೇಕ ಹಂತಗಳಲ್ಲಿ ಹಾಕಿದ ಮುನ್ನಡೆಯ ಹೆಜ್ಜೆಗಳನ್ನು ಹದ್ದುಬಸ್ತಿನಲ್ಲಿಡಲು ಅನೇಕ ದೇಶಿಯ ಮುಖಂಡರು ಬಹುವಾಗಿ ಶ್ರಮಿಸಿದರು. ಅವರ ಆ ಸಾಹಸ ಪರಿಶ್ರಮಗಳು ಭ್ರಮಾತೀತವಾಗಿದ್ದವು, ವ್ಯರ್ಥಗೊಂಡವೆಂಬ ಭಾವನೆ ನಮಗೆ ಖಂಡಿತಾ ಬೇಡ. ಭಾರತ ತನ್ನ ಹಕ್ಕುಗಳು ಮತ್ತು ನ್ಯಾಯಕ್ಕಾಗಿ ಅಂತಾರಾಷ್ಟ್ರೀಯ ವ್ಯವಹಾರಶೀಲವಾದಾಗ ಗ್ರೇಟ್ ಬ್ರಿಟನ್ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತದೆ ಎಂದು ಭಾವಿಸೋಣ'' ಎಂದು ನವಿರಾಗಿ ನುಡಿದಿದ್ದಾರೆ.

ಆ ಮುನ್ನುಡಿಯಲ್ಲಿ ಯುದ್ಧಾನಂತರದ ಭರವಸೆಗಳನ್ನಷ್ಟೇ ಅವರು ಪ್ರಸ್ತಾಪ ಮಾಡಿಲ್ಲ. ಅಪಾರ್ಥಗಳ ಬಗ್ಗೆಯೂ ಗಂಭೀರ ಧ್ವನಿ ಎತ್ತಿದ್ದಾರೆ:

''ಯುದ್ಧದಲ್ಲಿ ಗ್ರೇಟ್ ಬ್ರಿಟನ್ ಬಹುದೊಡ್ಡ ಪ್ರಮಾಣದಲ್ಲಿ ನಷ್ಟ ಅನುಭವಿಸಿದೆ. ಯುದ್ಧ ಮುಗಿಯುತ್ತಿದ್ದಂತೆಯೇ ಅಪಾರವಾದ ನಷ್ಟವನ್ನು ಭರಿಸಿಕೊಳ್ಳುವ ಕೂಗು ಏಳದಿರುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಬೇರಾವುದೇ ಭಾಗ ಸಹ ಭಾರತದಷ್ಟು ಫಲವತ್ತಾದ ಸಂಪನ್ಮೂಲ ಎನಿಸುವುದಿಲ್ಲ. ಆ ತಾಯಿಗೆ ಸಾಮ್ರಾಜ್ಯಷಾಹಿ ಸರ್ಕಾರದಲ್ಲಿ ಧ್ವನಿಯೇ ಇಲ್ಲ. ಆಕೆಯ ಕೂಗು ಅಸಹಾಯಕವಾಗಿ ಅರಣ್ಯರೋಧನವಾಗಿದೆ. ಅಂಥ ಒತ್ತಡಗಳು ಬಂದಾಗ ಅದನ್ನು ತಡೆಯುವ ಅಥವಾ ಪ್ರತಿರೋಧಿಸುವ ಶಕ್ತಿಯೂ ಆಕೆಯಲ್ಲಿಲ್ಲ. ಯುದ್ಧದ ದಂಡವನ್ನು ತೆರುವಂತೆ ಆಕೆಯ ಮೇಲೆ ಹೊರೆ ಹಾಕುವುದಕ್ಕೆ ಇದಕ್ಕಿಂತ ಸುಲಭದ ಅವಕಾಶ ಇನ್ನಾವುದು ಬೇಕು?'

ಬ್ರಿಟಿಷ್ ಸಾಮ್ರಾಜ್ಯಷಾಹಿ ತಮ್ಮ ತಪ್ಪು ಚಟುವಟಿಕೆಗಳನ್ನು ನಂತರದ ವರ್ಷಗಳಲ್ಲಿ ಭಾರತೀಯ ವಿದೇಶಿ ವಿನಿಮಯದ ಅನುಪಾತದಲ್ಲಿ ಅಂಕಿ ಅಂಶಗಳ ಜಗ್ಗಾಟ ನಡೆಸುವ ಮೂಲಕ ಸಮರ್ಥಿಸಿಕೊಳ್ಳತೊಡಗಿದ್ದು ಗುಟ್ಟಾಗಿ ಉಳಿಯಲಿಲ್ಲ. ಭಾರತದಲ್ಲಿ ಆ ಪುಸ್ತಕವನ್ನು ಅನೇಕ ವರ್ಷಗಳವರೆಗೆ ನಿಷೇಧಿಸಲಾಗಿತ್ತು. ಕಡೆಗೂ ಆ ನಿಷೇಧವನ್ನು ಹಿಂತೆಗೆದುಕೊಂಡಾಗ ಹತ್ತು ವರ್ಷಗಳಷ್ಟು ಅವಧಿ ಮುಗಿದು ಹೋಗಿತ್ತು. ಒಂದು ದಶಕದ ಸುದೀರ್ಘ ಬೆಳವಣಿಗೆಗಳನ್ನು ಪುನಾರವರ್ತಿಸಿ ಕಾಲೋಚಿತ ಅನುಕ್ರಮದಲ್ಲಿ ಪುಸ್ತಕವನ್ನು ಹೊರತರಲು ಅಥವಾ ಬೇರೆ ಇನ್ನಾರಿಂದಲಾದರೂ ಅದನ್ನು ಹಾಗೆ ಸಿದ್ಧಪಡಿಸಿ ಹೊಸ ಹೊತ್ತಿಗೆ

ತರಲು ಲಾಲಾಜಿ ಯೋಜಿಸಿದರು. ಆದರೆ ಆ ಯೋಚನೆ ಯೋಜನೆಯಾಗಿಯೇ ಉಳಿಯಿತು.

ಲಜಪತ್‌ರಾಯ್ ಅವರ ರಾಜಕೀಯ ಪರಿಸ್ಥಿತಿ ಕುರಿತ ಇನ್ನೊಂದು ರಚನೆ 1919ರಲ್ಲಿ ಬೆಳಕು ಕಂಡಿತು. ಅದನ್ನು ಅವರು ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯಾ ಎಂದು ಹೆಸರಿಸಿದರು. ಅದಕ್ಕೆ ಕೆಲವು ತಿಂಗಳ ಮೊದಲು 1918 ಮಾಂಟೇಗೋ ಚೆಮ್ಸ್‌ಫೋರ್ಡ್ ಅವರ ಭಾರತದ ಸಂವಿಧಾನ ಸುಧಾರಣಾವಾದಿ ವರದಿ ಪ್ರಕಟಗೊಂಡಿತ್ತು. ಆಗ ಅದೊಂದು ಜ್ವಲಂತ ಚರ್ಚಾ ವಿಷಯವಾಗಿತ್ತು. ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯಾ (ಪ್ರಕಾಶಕರು ಅದೇ ಬಿ.ಡಬ್ಲ್ಯು. ಹೇಬ್ಸ್) ಸಾದ್ಯಂತವಾಗಿ ಆ ವರದಿಯನ್ನು ಟೀಕಿಸಿತು.

ಚರ್ಚೆಯ ಮಂಥನದ ಫಲ ಮತ್ತು ಸಮೀಕ್ಷೆಯ ಅಂತರ್ಯಗಳು ಆ ಹೊತ್ತಿಗೆಯ ಅಂತಿಮ ಭಾಗದಲ್ಲಿ ಸಮರ್ಥವಾಗಿ ನಿರೂಪಿಸಲಾಗಿದೆ.

"ಅತ್ತ ಈಶಾನ್ಯದಲ್ಲಿ ಚೀನಾ ಗಣರಾಜ್ಯ, ಇತ್ತ ವಾಯುವ್ಯದಲ್ಲಿ ಸಂವಿಧಾನಾತ್ಮಕ ಆಡಳಿತದ ಪರ್ಷಿಯಾ, ಮೇಲೆ ಉತ್ತರದ ತುದಿಯಲ್ಲಿ ಬೋಲ್ಷೆವಿಷ್ಕ್ ರಷ್ಯಾ ಆಡಳಿತಗಳ ಹಿನ್ನಲೆಯಲ್ಲಿ ಭಾರತದಲ್ಲಿ ದಬ್ಬಾಳಿಕೆಯ ಆಡಳಿತ ನಡೆಸುವುದು ತೀರಾ ಅತಿರೇಕದ ಮೂರ್ಖತನವಾಗುತ್ತದೆ. ದೇವತೆಗಳಿಂದಲೂ ಸಹ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಶಾಸನ ಸಭೆ ತನ್ನೆಲ್ಲಾ ಕಾಲವನ್ನು ಅಧಿವೇಶನದಲ್ಲೇ ಕಳೆದು ನೂರಾರು ಹದ್ದುಬಸ್ತಿನ ಶಾಸನಗಳನ್ನು ರೂಪಿಸಿ ಅನುಮೋದಿಸಿದರೂ ಸಹ ಅಂಥ ಅನಾಗರಿಕ ಆಡಳಿತ ಭಾರತದಲ್ಲಿ ಯಶಸ್ವಿಯಾಗುವುದಿಲ್ಲ. ವಿಶ್ವದ ಶಾಂತಿ, ಅಂತಾರಾಷ್ಟ್ರೀಯ ಏಕತೆ ಮತ್ತು ಸೌಹಾರ್ದ, ಬ್ರಿಟಿಷ್ ಕಾಮನ್‌ವೆಲ್ತ್ ಕಾಯ್ದುಕೊಂಡಿರುವ ಸಚ್ಚಾರಿತ್ರ್ಯ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ಸುರಕ್ಷತೆಯ ಹಿನ್ನಲೆಯಲ್ಲಿ ಭಾರತಕ್ಕೆ ಪ್ರಜಾಸತ್ತಾತ್ಮಕ ರೀತಿಯ ಆಡಳಿತ ಮತ್ತು ಅಭಿವೃದ್ಧಿಯನ್ನು ಪ್ರಶಾಂತ ವಾತಾವರಣದಲ್ಲಿ ಒದಗಿಸಿಕೊಡುವುದು ಔಚಿತ್ಯವಾಗುತ್ತದೆ."

ಪುಸ್ತಕ ನಿರೂಪಣೆ ಅಮೆರಿಕನ್ ಓದುಗರು ಹಾಗೂ ಬ್ರಿಟಿಷ್ ರಾಜಕಾರಣ ಮುತ್ಸದ್ದಿಗಳಲ್ಲಿ ಸಮಾನ ಆಸಕ್ತಿ ಕಂಡುಕೊಂಡಿತು. ಅಮೆರಿಕದ ತುಂಬೆಲ್ಲಾ ಪ್ರಜಾಸತ್ತಾತ್ಮಕ ನಡವಳಿಕೆಗಳು, ಮಾತುಗಳು, ಸ್ವಾವಲಂಬನೆಯ ಅನುಮೋದನೆಗಳು ತಾನೇ ತಾನಾಯಿತು. ಮಿತ್ರ ರಾಷ್ಟ್ರಗಳ ಧ್ಯೇಯ ಧೋರಣೆಗಳು ಅದೇ ಆಗಿರಬೇಕೆಂದು ಸಾರುವಂತಾಯಿತು. ಅಂತಹ ಮನಸ್ಥಿತಿಯಲ್ಲಿ ಭಾರತದ ಪ್ರಕರಣವನ್ನು ಆ ಹೊತ್ತಿಗೆ ಸಮಂಜಸವಾಗಿ ಪ್ರತಿನಿಧಿಸಿತು. ಹೊತ್ತಿಗೆಯ ಎಲ್ಲಾ ಅಧ್ಯಾಯದಲ್ಲಿ ಡೇವಿಡ್ ಲಾಯ್ಡ್ ಜಾರ್ಜ್ ಅವರ ಭಾಷಣಗಳನ್ನು ಉದ್ಧರಿಸಲಾಗಿತ್ತು. ಭಾರತೀಯ ಕ್ರಾಂತಿಕಾರಿ ಪಕ್ಷದ ಬಗ್ಗೆ ಚಿತ್ರಿಸಲಾದ ಅಧ್ಯಾಯದಲ್ಲಿಯೂ ಸಹ ಲೇಖಕರು ಆ ಭಾಷಣಗಳ ಭಾಗಗಳನ್ನು ಅಳವಡಿಸಿದರಲ್ಲ ಬ್ರಿಟಿಷ್ ಪ್ರಧಾನ ಮಂತ್ರಿಯ ಗ್ಲಾಸ್ಗೋದಲ್ಲಿ "ಯುದ್ಧದ ಕಾರಣಗಳು ಮತ್ತು ಉದ್ದೇಶ" ಕುರಿತು ಮಾಡಿದ ಭಾಷಣದ ಸಮಂಜಸ ಪತ್ರದೊಂದಿಗೆ ಆ ಅಧ್ಯಾಯ ಆರಂಭಗೊಂಡಿದೆ. ಅದರಲ್ಲಿ ಅವರು "ದೇಶವೊಂದರ ಸರ್ಕಾರ ಕಾನೂನುಗಳ ಆರೋಗ್ಯದ ಬಗ್ಗೆ

ನಿರಂತರವಾಗಿ ಔದಾಸೀನ್ಯ ಮತ್ತು ನಿರ್ಲಕ್ಷತನಗಳನ್ನು ತೋರಿದಾಗ ಕ್ರಾಂತಿಯ ಜ್ವರ ತಾನೇ ತಾನಾಗಿ ಹುಟ್ಟಿಕೊಳ್ಳುತ್ತದೆ'' ಎಂದು ಹೇಳಿದ್ದರು.

ರೌಲತ್ ಶಿಫಾರಸುಗಳ ಹಿನ್ನಲೆಯಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಯ ಆ ಭಾಷಣದ ಪತ್ರವನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಸ್ಫೋಟಗೊಳಿಸಬೇಕಾದ ಸಂದರ್ಭ ಅದಾಗಿತ್ತು. ಆ ಕೆಲಸವನ್ನು ಸಕಾಲಿಕವಾಗಿ ಹೊರಬಂದ ಲಜಪತರ ಆ ಕೃತಿ ಆ ಕೂಡಲೇ ಕೈಗೊಂಡಿತು. ಪಂಜಾಬಿನಲ್ಲಿ ಮಾರ್ಷಲ್ ಆಡಳಿತ ಜಾರಿಗೆ ತರಲಾಯಿತು. ಅದನ್ನು ಉಗ್ರವಾಗಿ ಪ್ರತಿಭಟಿಸಿ ರೌಲತ್ ಕಾಯ್ದೆ ಹಿನ್ನಲೆಯಲ್ಲಿ ಭಾರೀ ಚಳವಳಿ ಆ ಪ್ರಾಂತ್ಯದಲ್ಲಿ ಎದ್ದಿತ್ತು.

ಅದಕ್ಕಿಂತಲೂ ಪೂರ್ವದಲ್ಲಿ ಭಾರತದಲ್ಲಿನ ಬಹುತೇಕ ರಾಷ್ಟ್ರೀಯ ನಾಯಕರಂತೆ ಲಜಪತರು ಸಹ ಆ ಕಾಯ್ದೆಯನ್ನು ಸುಧಾರಣೆಯ ಒಂದು ಮಜಲಾಗಿ ಪರಿಗಣಿಸಿ ಸ್ವಾಗತಿಸಿದ್ದರು. ಲೋಕಾಭಿವೃದ್ಧಿಯ ಸುಧಾರಣೆ ಎಂದೆನ್ನುವ ಮಟ್ಟಿಗೂ ಆ ವಿಶ್ವಾಸವಿತ್ತು. ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯಾ ಓದಿದಾಗ ಈ ಭಾವನೆಯೇ ಉಂಟಾಗುತ್ತದೆ. ಕಾಲ ಗತಿಯಲ್ಲಿ ಮಾಂಟೆಗೋ ಆ ಸುಧಾರಣೆಯ ಸ್ವರೂಪಗಳನ್ನು ಆಚರಣೆಗೆ ತರತೊಡಗಿದಾಗ ನಿಜವಾದ ಬಣ್ಣ ಬಯಲಾಗತೊಡಗಿತು. ಪ್ರತಿ ಹಂತದಲ್ಲೂ ಪ್ರತಿಭಟನೆಗಳು ವ್ಯಕ್ತವಾಗತೊಡಗಿದವು. ಇಡೀ ಸುಧಾರಣೆಯ ಪ್ರಸ್ತಾಪವೇ ಕೆಟ್ಟದ್ದಾಗಿ ಕಂಡು ಬಂದಿತು. ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯಾ ಕೃತಿಯಲ್ಲಿ ತಾತ್ಕಾಲಿಕವಾಗಿ ಅಪಾರ್ಥವಾಗಿದ್ದು ಉಂಟು. ಆಗಿನ ಪರಿಸ್ಥಿತಿಯ ಪರಿಣಾಮವಲ್ಲದೆ ಬೇರೇನೂ ಅಲ್ಲ. ಅದರ ಮುನ್ನುಡಿ ಹೀಗೆ ಹೇಳಿದೆ:

''ವಿಧೇಯಕವು ನಿರಂತರವಾಗಿ ಅತೃಪ್ತಿಯನ್ನೇ ಉಂಟು ಮಾಡತೊಡಗಿದೆ. ಶಿಫಾರಸುಗಳನ್ನು ತಟಸ್ಥಗೊಳಿಸಬೇಕೆ ಇಲ್ಲವೇ ಸಂಪೂರ್ಣವಾಗಿ ಅವುಗಳನ್ನು ಕೈಬಿಡಬೇಕೆ ಎಂಬ ಜಿಜ್ಞಾಸೆ ಎದ್ದಿದೆ. ಮಾಂಟೆಗೋ ವಿಧೇಯಕ ಜೂನ್ ಆರಂಭದಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಂಡಿತವಾಗಲಿದೆ. ಈ ಪ್ರಶ್ನೆಗೆ ಉತ್ತರ ಆಗಲೇ ದೊರಕೀತು.''

ವಿಧೇಯಕ ನಿರಂತರವಾಗಿ ಹತಾಶೆಗೊಳಿಸತೊಡಗಿತು. ತಿದ್ದುಪಡಿಯಾಗಿ ಅದರಲ್ಲಿ ಕೈಗೊಂಡ ಕ್ರಮಗಳು ಸಹ ಯಾವುದೇ ತೃಪ್ತಿ ತರಲಿಲ್ಲ. ಜಂಟಿ ಸಂಸದೀಯ ಸಮಿತಿಗಳು ಹಾಗೂ ಆ ಕಾಯ್ದೆಯ ನಿಯಮ ನಿಬಂಧನೆಗಳನ್ನು ರೂಪಿಸಿದವರು ಪದೇ ಪದೇ ಪರಿಶೀಲನೆ ನಡೆಸತೊಡಗಿದರು.

ಈ ಅಧ್ಯಾಯದಲ್ಲಿ ನಾವು ಲಜಪತರ ಮೂರು ಕೃತಿಗಳ ಬಗ್ಗೆ ಓದಿದ್ದೇವೆ. ಅವಷ್ಟೇ ಅಲ್ಲದೆ ಅವರು ಕರಪತ್ರಗಳ ರೂಪದಲ್ಲಿ ಅಮೆರಿಕನ್ ಓದುಗರಿಗೆ ಅನೇಕ ವೈಚಾರಿಕ ವಸ್ತುಗಳನ್ನು ಒದಗಿಸಿದರು. ಅವುಗಳಲ್ಲಿ ಬಹು ಮುಖ್ಯವಾದವು. ಬ್ರಿಟನ್ ಪ್ರಧಾನ ಮಂತ್ರಿಗೆ ಬರೆದ ಬಹಿರಂಗ ಪತ್ರ ಆನ್ ಒಪನ್ ಲೆಟರ್ ಟು ಡೇವಿಡ್ ಲಾಯ್ಡ್ ಜಾರ್ಜ್ ಪ್ರಮುಖವಾದುದು. ಆ ಕಾಲದಲ್ಲಿ ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದ ಎಡ್ವರ್ಡ್ ಸ್ಯಾಮುಯೆಲ್ ಮಾಂಟೆಗೋ ಅವರಿಗೆ ಬರೆದ ಇನ್ನೊಂದು ಪತ್ರವು ಅಷ್ಟೇ ಕಾಲೋಚಿತವಾಗಿತ್ತು.

ಜರ್ಮನಿ ವಿರುದ್ಧ ನಡೆದ ಯುದ್ಧದಲ್ಲಿ ಬ್ರಿಟಿಷರಿಂದಾದ ನಷ್ಟವನ್ನು ಭರಿಸಿಕೊಳ್ಳಲು ಭಾರತ 150 ಕೋಟಿ ರೂಪಾಯಿಗಳನ್ನು ತನ್ನ ಕೊಡುಗೆಯಾಗಿ ನೀಡಬೇಕೆಂದು ಇಂಗ್ಲಿಷ್ ಆಡಳಿತಶಾಹಿ ಹಾಕಿದ ಒತ್ತಡಕ್ಕೆ ಭಾರತದಲ್ಲಿ ಎದ್ದ ಸುದ್ದಿ ಪ್ರತಿಭಟನೆ ರೂಪವಾಗಿ ತಕ್ಷಣದ ಪ್ರತಿಕ್ರಿಯೆಯನ್ನು ಲಜಪತರು ಆ ಬಹಿರಂಗ ಪತ್ರಗಳ ರೂಪದಲ್ಲಿ ವ್ಯಕ್ತಪಡಿಸಿದರು. ಅತಿ ದೀನ ಸ್ಥಿತಿಯಲ್ಲಿರುವ ಭಾರತವನ್ನು ಆಕೆಯ ಸಾಮ್ರಾಜ್ಯಶಾಹಿ ಆಡಳಿತಗಾರರು ಕಟುಕ ಮನಸ್ಸಿನಿಂದ ಶೋಷಿಸ ಹೊರಟದ್ದು ಹೃದಯವಿದ್ರಾವಕ. ಸ್ವತಃ ಮಾಂಟೇಗೋ ಹೇಳಿದ ರೀತಿಯಲ್ಲಿ -''ಭಾರತ ಬಿಳಿಚಿಕೊಂಡಿತ್ತು'' ಲಜಪತರನ್ನು ಆ ಸುದ್ದಿ ತಿಳಿದ ಸಂದರ್ಭದಲ್ಲಿ ಹತ್ತಿರದಿಂದ ಕಂಡ ಎನ್.ಎಸ್. ಹರ್ಡಿಕರ್ ಮಾತುಗಳಲ್ಲಿ -''ಅವರು ತುಂಬಾ ವಿಚಲಿತರಾದರು.'' ನಿರಂತರವಾಗಿ ಸುಮಾರು ಏಳು ತಾಸು ಕುಳಿತು ಅವರು ಬಹಿರಂಗ ಪತ್ರವನ್ನು ಸಿದ್ಧಪಡಿಸಿದರು ಎಂದು ಹರ್ಡಿಕರ್ ತಿಳಿಸಿದ್ದಾರೆ.

ಅಮೆರಿಕನ್ ಪತ್ರಿಕೆಗಳಲ್ಲಿ ಲಾಲಾಜಿ ಅವರ ಆ ಮೊದಲ ಬಹಿರಂಗ ಪತ್ರಕ್ಕೆ ವ್ಯಾಪಕ ಪ್ರಚಾರ ಸಿಕ್ಕಿತು. ಲಾಲಾಜಿ ಅವರು ಮಾಂಟೆಗೋ ಅವರಿಗೆ ಬರೆದ ಪತ್ರದ ಹುಟ್ಟಿನ ಕಥೆಯನ್ನು ಹರ್ಡಿಕರರು ಚಿತ್ರಿಸಿದ್ದಾರೆ.

ಮಾಂಟೇಗೋ ತನ್ನ ಸುಧಾರಣೆಗಳನ್ನು ಪ್ರಸ್ತಾಪಿಸಿದ ಆರಂಭದಲ್ಲಿ ಅನೇಕ ಭಾರತೀಯ ರಾಜಕಾರಣಿಗಳು ಪ್ರಶಂಸೆಯ ಮಾತುಗಳನ್ನಾಡಿದರು. 1906ರಲ್ಲಿ ಜಾನ್ ಮಾರ್ಲೆಗೆ ದೊರೆತಂತಹ ಉತ್ತೇಜನಕ್ಕಿಂತ ಇದು ಕಡಿಮೆ ಏನೂ ಇರಲಿಲ್ಲ. ಮಾಂಟೇಗೋ ಅದೇ ಮೊದಲ ಬಾರಿಗೆ ಭಾರತದ ಪರಿಚಯ ಮಾಡಿಕೊಳ್ಳುತ್ತಿದ್ದ ಸಂದರ್ಭ. ಆ ನೂತನ ಕಾರ್ಯದರ್ಶಿಗೆ ಆರಂಭದಲ್ಲಿ ದೊರೆತ ಸಮೂಹ ಸ್ವಾಗತ ಮತ್ತು ಪ್ರಶಂಸೆಗಳು ಕೊನೆಯಲ್ಲಿ ಅಷ್ಟೇ ತಿರಸ್ಕಾರ ಮತ್ತು ತೆಗಳಿಕೆಯಲ್ಲಿ ಅಂತ್ಯಗೊಂಡಿತು. ಲಾಲಾಜಿ ಮಾಂಟೇಗೋ ಅವರಿಗೆ ಬರೆದ ಬಹಿರಂಗ ಪತ್ರದಲ್ಲಿ ಇದನ್ನೆಲ್ಲಾ ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಅದೇ ಸಮಯದಲ್ಲಿ ಭಾರತದ ಭವಿಷ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರತಿಸ್ಪರ್ಧಿ ಪ್ರಸ್ತಾಪಗಳು ಪ್ರಕಟಗೊಂಡವು. ಅವುಗಳಲ್ಲಿ ಇಸ್ಲಿಂಗ್‌ಟನ್ ಪ್ರಸ್ತಾಪವೂ ಒಂದು. ಮತ್ತೊಂದು ಕಾಂಗ್ರೆಸ್ ಲೀಗ್ ಪ್ರಸ್ತಾಪ. ಜಿ.ಕೆ. ಗೋಖಲೆ ಒಂದು ಕರಡು ಸಿದ್ಧಪಡಿಸಿದರು. ಅದು ಅವರ ನಿಧನಾನಂತರ ಪ್ರಕಟಗೊಂಡಿತು. ಆ ಕರಡು ಮನವಿಯನ್ನು ಪ್ರಶಂಸಿಸುತ್ತಾ ಲಜಪತರು:

''ಗೋಖಲೆ ಅವರ ಯೋಜನೆಯ ಮಾಪನ ಮಾಡಬೇಕಾದರೆ ಕೆಲವು ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ. ಮೊದಲನೆಯದಾಗಿ ಅವರು ಅದನ್ನು ರೂಪಿಸಿದ್ದು ಅವರ ಆರೋಗ್ಯ ವಿಷಮ ಸ್ಥಿತಿಯಲ್ಲಿದ್ದ ಸಮಯದಲ್ಲಿ. ಎರಡನೇಯದಾಗಿ ಯುದ್ಧದ ಪೂರ್ವದಲ್ಲಿ ಅಂದರೆ 1915, 1916 ಮತ್ತು 1917ರ ಬೆಳವಣಿಗೆಗಳಿಗಿಂತ ಬಹು ಮೊದಲು. ಆಗ ಮುನ್ನಗಂಡಿದ್ದ ಪರಿಸ್ಥಿತಿಗಿಂತಲೂ ಜಗತ್ತು ಈಗ ಹಲವಾರು ಪಟ್ಟು ಅಭಿವೃದ್ಧಿ ಹೊಂದಿದೆ. ಯೋಜನೆಯಲ್ಲಿ ಅತಿ ಪ್ರಾಥಮಿಕ ಹಂತದಲ್ಲಿರುವ ಲಕ್ಷಣಗಳು ಎದ್ದು ಕಾಣುತ್ತಿವೆ. ಅವರ ಆಶೋತ್ತರಗಳ ಪಟ್ಟಿ ಅವಶ್ಯಕತೆಗಿಂತಲೂ ಒಂದು ವಿಧದ ರಾಜಿ ಧೋರಣೆ ವ್ಯಕ್ತವಾಗುತ್ತಿದೆ. ಲಜಪತರ ಒಳಗೆ ಅಡಗಿರುವ ಗೌರವ ಅವರ ಬಗ್ಗೆ

ಇತರರಲ್ಲಿರುವ ಗೌರವಕ್ಕಿಂತ ಕಿಂಚಿತ್ತೂ ಕಡಿಮೆ ಇಲ್ಲ. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಅಷ್ಟೊಂದು ಆಳವಾದ ದೇಶಭಕ್ತಿ, ಅತುಳ ದೇಶಪ್ರೇಮ, ಸೂಕ್ಷ್ಮ ಸಂವೇದನೆ ಮತ್ತು ಆತ್ಮ ಗೌರವಗಳಲ್ಲಿ ಅವರಿಗಿಂತಲೂ ಶ್ರೇಷ್ಠರಾದವರನ್ನು ನಾನು ಬೇರಾರನ್ನು ಕಾಣೆ. ಅವರ ಕರ್ತವ್ಯ ಶ್ರದ್ಧೆಯಾಗಲಿ, ಪಾರದರ್ಶಕ ನಡವಳಿಕೆಯಾಗಲಿ ಅನುಮಾನಕ್ಕೆ ಕಿಂಚಿತ್ತೂ ಎಡೆ ಇಲ್ಲದವು. ಸಾಧ್ಯಾಸಾಧ್ಯತೆಯ ಪರಿಕಲ್ಪನೆಯ ವಿಷಯ ಬಂದಾಗ, ಅವರದು, ಬಹುಶಃ ಸ್ವಲ್ಪ ಹಿಂಜರಿತದ ನಿಲುವಾಗಿತ್ತು. ಅತಿ ಎಚ್ಚರಿಕೆಯನ್ನು ಅವರು ವಹಿಸುತ್ತಿದ್ದರು. ತಮ್ಮನ್ನು ಕನಸುಗಾರರೆಂದು ಕರೆಯಿಸಿಕೊಳ್ಳುವುದು ಅವರಿಗೆ ಭಯದ ಸಂಗತಿಯಾಗಿತ್ತು. ದೂರದರ್ಶಿತ್ವದವರೆಂಬ ಮಾತು ಅವರಿಗೆ ಭಯಂಕರವಾಗಿ ಕಾಣುತ್ತಿತ್ತು. ಹೀಗಾಗಿ ಅವರ ಮನಸ್ಸು ಸದಾ ಆಯಾ ಕಾಲದ ಅಗತ್ಯಕ್ಕೆ ಮಾತ್ರ ತುಡಿಯುತ್ತಿತ್ತು. ಬಿಕ್ಕಟ್ಟಿನ ಸಂದರ್ಭಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸುವ ಹಂತದಲ್ಲಿ ಅವರು ತುಂಬಾ ದುರ್ಬಲರಾಗಿದ್ದರು.''

ಒಟ್ಟಿನಲ್ಲಿ ಭಾರತಕ್ಕೆ ರಾಜ್ಯಾದಾಯದ ಸ್ವಾವಲಂಬನೆ ದೊರಕಿಸಿಕೊಡುವ ನಿಟ್ಟಿನಲ್ಲಿ ಆ ಕರಡು ಮನವಿ ದಿಟ್ಟ ಹೋರಾಟ ಹುಟ್ಟಿಸಲಿಲ್ಲ. ರಾಜ್ಯ ಕೋಶದ ಸ್ವಾಯತ್ತತೆ ಇಲ್ಲದೆ ಭಾರತದ ಸಮಸ್ಯೆಗಳು ಬಗೆಹರಿಯುವಂತೆಯೂ ಇರಲಿಲ್ಲ.

ನಾವಿನ್ನೂ ಚರ್ಚಿಸದಿರುವ ಇನ್ನೊಂದು ಪತ್ರ ರಿಫ್ಲೆಕ್ಷನ್ಸ್ ಆನ್ ದಿ ಪೊಲಿಟಿಕಲ್ ಸಿಚುಯೇಷನ್ ಇನ್ ಇಂಡಿಯಾ ಅವರ ಒಂದು ರೋಚಕ ಕಥೆ. ಕಾಲಾನುಕ್ರಮಣಿಕೆಯಲ್ಲಿ ಹೇಳುವುದಾದರೆ ಅದರ ಪ್ರಸ್ತಾಪ ಈ ಅಧ್ಯಾಯದಲ್ಲಿ ಚರ್ಚಿಸಲಾಗಿರುವ ಇತರ ಎಲ್ಲಾ ಪುಸ್ತಕಗಳಿಗಿಂತ ಮೊದಲೇ ಆಗಬೇಕಾಗಿತ್ತು. ಆ ಪತ್ರವನ್ನು ಬರೆದದ್ದು ಮೂಲತಃ ಯುದ್ಧ ಆರಂಭದ ಸಮಯದಲ್ಲಿ. ಅದು ಜಪಾನಿನಲ್ಲಿ. ಆ ಪತ್ರ ಜರ್ಮನರ ಕೈಗೆ ಸಿಕ್ಕಿ ಬಿಟ್ಟಿತು. ಅವರು ಅದನ್ನು ಸಂಪಾದಿಸಿ 'ಭಾರತೀಯ ರಾಷ್ಟ್ರೀಯವಾದಿಗಳ ಸಮಿತಿ (ಐರೋಪ್ಯ ಕಾಲದ)' ಪ್ರಕಾಶನದ ಹೆಸರಿನೊಂದಿಗೆ ವೆರ್ಲ್‌ಲಾಗ್-ವನ್-ಒಟ್ಟೊ ವಿಗ್ಯಾಂಡ್, ಲೀಪ್ಜಿಗ್ ಹೆಸರಿನೊಂದಿಗೆ ಮುದ್ರಣಗೊಂಡಿತು. ತುಂಬಾ ವಿಷಯಪೂರ್ವಕವಾಗಿ ತಮ್ಮದೇ ಆದ ಪೀಠಿಕೆಯನ್ನು ಆ ಪತ್ರಿಕೆಗೆ ಸೇರಿಸಲಾಗಿತ್ತು. ವಿಚಿತ್ರವೆನಿಸುವ ರೀತಿಯಲ್ಲಿ ಆ ಪತ್ರದ ''ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿಕೊಳ್ಳಲಾಗಿತ್ತು! ಪೀಠಿಕೆಯಲ್ಲಿ ಕರಪತ್ರದ ಅಭಿಪ್ರಾಯವು 'ಲೇಖಕರಿಂದ' ಬ್ರಿಟಿಷ್ ಲಕ್ಷಣದಲ್ಲಿ 'ನ್ಯಾಯ ಮತ್ತು ಸಮದರ್ಶಿತ್ವಕ್ಕೆ' ಅಗ್ರಸ್ಥಾನ ಇದೆ ಎಂದು ಭಾರತದಲ್ಲಿರುವ ಸೌಮ್ಯವಾದಿ ಪಕ್ಷದ ವ್ಯಾಪಕ ನಂಬಿಕೆಯಾಗಿರುವುದರಿಂದ ಈ ಪತ್ರವನ್ನು ಗ್ರೇಟ್ ಬ್ರಿಟನ್‌ನ ಜನತೆಯ ವಿವೇಚನೆಗಾಗಿ ಬರೆಯಲಾಗಿದೆ. ಬ್ರಿಟಿಷ್ ಜನತೆಯಲ್ಲಿ ಸುಪ್ತ ಪ್ರಜ್ಞೆ ಜಾಗ್ರತವಾಗಿ ಅವರ ಆಡಳಿತಗಾರರ ದಬ್ಬಾಳಿಕೆಯಲ್ಲಿ ನರಳುತ್ತಿರುವ ಕೋಟ್ಯಾನುಕೋಟಿ ಭಾರತೀಯರ ನೆರವಿಗೆ ಅವರು ಧಾವಿಸುವರೆಂಬ ಆಶಯದೊಂದಿಗೆ ಈ ಪತ್ರ ಬರೆಯಲಾಗಿದೆ.''

ಲೇಖಕರ ಬಗ್ಗೆ ಹೀಗೆ ಪ್ರಸ್ತಾಪ ಮಾಡಲಾಗಿದೆ:

''ಅವರು ಅತ್ತ ಸೌಮ್ಯವಾದಿಗಳ ಗುಂಪಿಗೂ ಸೇರಿದವರಲ್ಲ. ಇತ್ತ ಕ್ರಾಂತಿಕಾರಿಗಳ ಪಾಳೇಯದಲ್ಲೂ ಇಲ್ಲ. ಮಧ್ಯದಲ್ಲಿದ್ದಾರೆ. ಜೀವನದುದ್ದಕ್ಕೂ ಲೇಖಕರು ಸೌಮ್ಯವಾದಿಗಳ

ವಿಧಾನವನ್ನೇ ಸಾರ್ವಜನಿಕ ಮಾರ್ಗದಲ್ಲಿ ಅಳವಡಿಸಿಕೊಳ್ಳುತ್ತಾ ಬಂದಿದ್ದಾರೆ ಅಂತರ್ಯದಲ್ಲಿ ಅವರ ದೃಷ್ಟಿಕೋನ ಮತ್ತು ಆಶೋತ್ತರಗಳು ಪಕ್ಕಾ ಉಗ್ರವಾದಿ ಪರ. ಈ ಕರಪತ್ರವು ಅವರ ರಾಜಕೀಯ ಧೋರಣೆಯ ರಕ್ಷಣಾತ್ಮಕ ನಡವಳಿಕೆಗೆ ಒಂದು ಉದಾಹರಣೆ. ಬ್ರಿಟಿಷ್ ಆಡಳಿತಷಾಹಿಗೆ ತಮ್ಮ ವಿಧಾನವನ್ನು ಬದಲಾಯಿಸಿಕೊಳ್ಳಲು ಸ್ನೇಹಪರವಾದ ಎಚ್ಚರಿಕೆಯನ್ನು ಇಲ್ಲಿ ನೀಡಲಾಗಿದೆ. ವಸ್ತುಶಃ ಭಾರತದಲ್ಲಿ ಆಗಬಹುದಾದ ಕ್ರಾಂತಿಯ ಬೂದಿ ಮುಚ್ಚಿದ ಕೆಂಡದ ಸ್ವರೂಪ ಇಲ್ಲಿದೆ. ಇದು ಬಹುಶಃ ಸೌಮ್ಯವಾದಿ ಸಾರ್ವಜನಿಕ ನಾಯಕರಾಗಿ ಬ್ರಿಟನ್‌ಗೆ ಅದರ ಕರ್ತವ್ಯದ ಅರಿವನ್ನು ಮೂಡಿಸಲು ಲಾಲಾ ಲಜಪತ್‌ರಾಯ್ ಕೈಗೊಂಡ ಪ್ರಕಟಣೆಯನ್ನು ಇದು ಹೋಲುತ್ತದೆ.''

ಆ ಪತ್ರದ ಪೀಠಿಕೆಯ ಲೇಖಕರು ಲಜಪತರ 'ಸಾರ್ವಜನಿಕ ಧೋರಣೆಯನ್ನು' ತಾವು ಒಪ್ಪುವುದಿಲ್ಲವೆಂದು ಸ್ಪಷ್ಟ ಮಾಡಿದ್ದಾರೆ. ಆದರೆ ಕರಪತ್ರದಲ್ಲಿ ''ಚಿಂತನೆ ಮತ್ತು ನಿಲುವುಗಳು ಸ್ಪಷ್ಟವಾಗಿರುವುದರಿಂದ, ಭಾರತದ ರಾಜಕೀಯ ಪರಿಸ್ಥಿತಿ ನಿಚ್ಚಳವಾಗಿ ಪ್ರತಿಪಾದಿತವಾಗಿ ಇರುವುದರಿಂದ ಈ ಪತ್ರವನ್ನು ಐರೋಪ್ಯ ಜನತೆಯ ಗಮನ ಸೆಳೆಯುವ ಸಲುವಾಗಿ ಪ್ರಕಟಿಸುತ್ತಿದ್ದೇವೆ.'' ಎಂದಿದ್ದಾರೆ.

ಆ ಕರಪತ್ರದಲ್ಲಿ ಭಾರತದ ವಸ್ತುಸ್ಥಿತಿ ನೈಜವಾಗಿ ಚಿತ್ರಿತವಾಗಿತ್ತು. ಬ್ರಿಟಿಷರ ಆಡಳಿತವನ್ನು ಲಜಪತರು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದರು. ಅದರಲ್ಲೂ ಪಂಜಾಬಿನ ಓ ಡಯರ್ ಆಡಳಿತದ ಬಗ್ಗೆ ಉಗ್ರವಾದ ಖಂಡನೆ ಮಾಡಿದ್ದರು. ಪಂಜಾಬಿನಲ್ಲಿ ಆಗಿನ ವಿಸ್ಫೋಟಕ ಪರಿಸ್ಥಿತಿಗೆ ಆ ಆಡಳಿತವೇ ಸಂಪೂರ್ಣ ಹೊಣೆಯಾಗಿತ್ತು. 'ಯುರೋಪಿನ ಸಾರ್ವಜನಿಕರ' ಲಕ್ಷ್ಯವನ್ನು ಕರಪತ್ರ ಸೆಳೆಯಿತೋ ಇಲ್ಲವೋ ಅದು ಬೇರೆ ಮಾತು. ಭಾರತ ಸರ್ಕಾರವಂತೂ ಖಂಡಿತವಾಗಿ ತಳಮಳಗೊಂಡಿತ್ತು. ಪಂಜಾಬಿನ ಪ್ರಧಾನ ನ್ಯಾಯಾಲಯದ ಮೂಲಕ ಲಜಪತರ ವಕೀಲ ಸದಸ್ಯತ್ವವನ್ನು ನಿಷೇಧಗೊಳಿಸಿತು. ಅಷ್ಟಕ್ಕೆ ಅದರ ಕೋಪ ತಗ್ಗಲಿಲ್ಲ. ಲಜಪತರ ಎಲ್ಲಾ ಪ್ರಕಟಣೆಗಳನ್ನು ನಿಷೇಧಿಸಿತು. ವಿದೇಶದಿಂದ ಅವರ ಯಾವುದೇ ಪ್ರಕಟಣೆ ಭಾರತಕ್ಕೆ ಬರದಂತೆ ಮಾಡಿತು. ಪ್ರಧಾನ ನ್ಯಾಯಾಲಯವು ಅಷ್ಟೊಂದು ಹೀನ ರೀತಿಯಲ್ಲಿ ಬೇರೆ ಯಾವುದೇ ವಕೀಲರನ್ನು ಹಿಂದೆಂದೂ ನಿಷೇಧಿಸಿರಲಿಲ್ಲ. ಅದು ಯಾವುದೇ ಅಪರಾಧವಿಲ್ಲದೆ, ಅವರ ಹೇಳಿಕೆಯನ್ನು ಪಡೆಯದೇ ಕೈಗೊಂಡ ಆ ಕ್ರಮ ಬ್ರಿಟಿಷ್ ಆಡಳಿತಷಾಹಿಯ ಕಠೋರ ಕೈವಾಡಕ್ಕೆ ಹಿಡಿದ ಕೈಗನ್ನಡಿ ಎನಿಸಿತು.

ನಿರಂತರ ಕ್ರಿಯಾಶೀಲವಾದ ಲಾಲಾಜಿ ಅವರ ಲೇಖನಿಯಿಂದ ಹೊರಬಿದ್ದ ಅನೇಕ ಸಣ್ಣ ಪುಟ್ಟ ಬರಹಗಳನ್ನು ನಮ್ಮ ಸಮೀಕ್ಷೆ ಒಳಗೊಂಡಿಲ್ಲ. ಆ ಪೈಕಿ ಫೈಟ್ ಫಾರ್ ಕಂಟ್ರಿ ಮತ್ತು ಎ ಕಾಲ್ ಟು ಯಂಗ್ ಇಂಡಿಯಾ ಕೃತಿಗಳನ್ನು ಇಲ್ಲಿ ನೆನಪು ಮಾಡುವುದು ಯಥೋಚಿತ. ತನ್ನ ನಾಡಿನ ಜನರಿಗಾಗಿ ಅಮೆರಿಕದ ಸಂಯುಕ್ತ ಸಂಸ್ಥಾನದ ಎಲ್ಲಾ ಭಾರತೀಯ ವಿದ್ಯಾರ್ಥಿ ಸಮುದಾಯಕ್ಕಾಗಿ ಅವರು ಕೊಡ ಮಾಡಿದ ವಸ್ತುಸ್ಥಿತಿ ಪ್ರಚೋದಕ ಹೊತ್ತಿಗೆಗಳು ಅವು. ಅಮೆರಿಕದಲ್ಲಿನ ಐರೋಪ್ಯ ಜನತೆಯನ್ನು ಉದ್ದೇಶಿಸಿ ಅವರು ನೀಡಿದ ಇನ್ನೊಂದು ಕೊಡುಗೆ ಸೆಲ್ಫ್ ಡಿಟರಮಿನೇಶನ್ ಫಾರ್ ಇಂಡಿಯಾ

ಇಂತಹ ಅನೇಕ ಕಿರು ಬರಹಗಳು ತಾತ್ಕಾಲಿಕವಾದರೂ ಭಾರೀ ಪ್ರಭಾವ ಬೀರಿದವು. ಭಾರತದ ಬಗ್ಗೆ ವಿದೇಶಗಳಲ್ಲಿ ದೇಶೀಯ ಜನರ ಹಾಗೂ ಅನ್ಯ ನಾಡಿಗರ ಭಾವನೆಗಳು ಸ್ಫುರಣಗೊಳ್ಳಲು ಅನುಕೂಲವಾಗುವಂತಹ ವಸ್ತು ಚಿತ್ರಣಗಳನ್ನು ನೀಡಿದವು. ಎನ್.ಎಸ್. ಹರ್ಡಿಕರರು *ಇಂಡಿಯಾ: ಗ್ರೇವ್‌ಯಾರ್ಡ್* ಕೈಪಿಡಿ ಬಗ್ಗೆ ವಿಶೇಷ ಪ್ರಸ್ತಾಪ ಮಾಡಿದ್ದಾರೆ. ವ್ಯಾಪಕ ಸಾರ್ವಜನಿಕ ಗಮನ ಸೆಳೆದ ಕರಪತ್ರ ಅದು. ''ಒಂದು ಲಕ್ಷಕ್ಕೂ ಹೆಚ್ಚು ಪ್ರತಿಗಳು ಮುದ್ರಿತವಾದವು.'' ವಿಶ್ವಾದ್ಯಂತ ಬಹುತೇಕ ಪತ್ರಿಕೆಗಳಲ್ಲಿ ಅದು ಪ್ರಚಾರ ಕಂಡಿತು. ಇಟಲಿ, ಜರ್ಮನಿ, ಫ್ರೆಂಚ್, ಸ್ಪಾನಿಷ್, ರಷ್ಯಾ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಹಾಗೂ ವಿವಿಧ ಭಾರತೀಯ ಭಾಷೆಗಳಲ್ಲಿ ತರ್ಜುಮೆಗೊಂಡು ವ್ಯಾಪಕ ಪ್ರಚಾರ ಒದಗಿಸಿತು.

ಈ ಅಧ್ಯಾಯದಲ್ಲಿ ಈತನಕ ಲಾಲಾಜಿ ತಮ್ಮ ಅಮೆರಿಕದ ವಾಸದ ದಿನಗಳಲ್ಲಿ ರಚಿಸಿದ ಕೃತಿಗಳ ಬಗ್ಗೆ ಅಷ್ಟೇ ಪ್ರಸ್ತಾಪಿಸಲಾಗಿದೆ. ಅದು ವಿದೇಶಿಯರಿಗಾಗಿ ಅದರಲ್ಲೂ ಅಮೆರಿಕನ್ನರ ಪರಿಚಯಕ್ಕಾಗಿ ಅವರು ರಚಿಸಿದ ಕೃತಿಗಳು ಅವು.

ಯಂಗ್ ಇಂಡಿಯಾ ಮತ್ತು *ಇಂಗ್ಲೆಂಡ್ಸ್ ಡೆಬ್ಟ್ ಟು ಇಂಡಿಯಾ*ವನ್ನು ಇಂಗ್ಲೆಂಡ್‌ನಲ್ಲಿ ಅಲೆನ್ ಮತ್ತು ಅನ್ವಿನ್ ಸಂಸ್ಥೆ ಅದನ್ನು ಪ್ರಕಟಿಸಿತು. ಅರ್ಧ ಶತಮಾನದಷ್ಟು ಮೊದಲು ಬರೆದ ಆ ಕೃತಿಯನ್ನು ಸ್ವತಂತ್ರ ಭಾರತದ ಕೇಂದ್ರ ಸರ್ಕಾರ ಪ್ರಕಟಣಾ ವಿಭಾಗ ಮರು ಮುದ್ರಣ ಮಾಡಿದ್ದು ಅದರ ಮಹತ್ವವನ್ನು ಎತ್ತಿ ತೋರಿಸುತ್ತದೆ. ಆ ಕೃತಿಗೆ ವಿಶಿಷ್ಟ ಶಿಕ್ಷಣವೇತ್ತರರೂ ಆಗಿದ್ದ ಜಾಕೀರ್ ಹುಸೇನ್ ಮುನ್ನುಡಿ ಬರೆದಿದ್ದಾರೆ. ದೇಶಿಯ ಶಿಕ್ಷಣದ ವಿಷಯದಲ್ಲಿ ಲಜಪತರ ದೃಷ್ಟಿಕೋನ, ಸಲಹೆಗಳು ಮತ್ತು ವಸ್ತುನಿಷ್ಠ ನಿಲುವುಗಳು ಸಾರ್ವಕಾಲಿಕ ಎಂದು ಅವರು ತಮ್ಮ ಮುನ್ನುಡಿಯಲ್ಲಿ ದಾಖಲೆ ಮಾಡಿದ್ದಾರೆ. ನಂತರ ಲಜಪತರು ಭಾರತೀಯ ಓದುಗರಿಗಾಗಿಯೇ ಎರಡು ಕೃತಿಗಳನ್ನು ಬರೆದರು. ಒಂದು ಜಪಾನ್ ದೇಶ ಕುರಿತದ್ದು. ಇನ್ನೊಂದು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಪರಿಚಯಿಸಿದ್ದು. ಈ ಎರಡು ಕೃತಿಗಳ ಬಗ್ಗೆ ನಾವು ಈಗಾಗಲೇ ಓದಿದ್ದೇವೆ. ಇವುಗಳ ಜೊತೆಗೆ ಲಜಪತರು ಉರ್ದುವಿನಲ್ಲಿ ಬರೆದ ತಮ್ಮ ಆತ್ಮ ಚರಿತ್ರೆಯ ಒಂದು ಭಾಗವು ಸೇರಿಕೊಳ್ಳುತ್ತದೆ. ಉರ್ದು ಆತ್ಮಚರಿತ್ರೆ ಬಗ್ಗೆ ನಾವಿಲ್ಲಿ ತಿಳಿದುಕೊಳ್ಳಬೇಕಾಗಿದೆ. ಈ ಹೊತ್ತಿಗೆಗಳ ಜೊತೆಗೆ ಅನೇಕ ಕರಪತ್ರಗಳ ಕೈಪಿಡಿಗಳನ್ನು ಓದುಗರ ಮುಂದಿಟ್ಟರು. ಲಜಪತರು ತಮ್ಮ ಸ್ವಯಂ ಘೋಷಿತ ಗಡಿಪಾರು ಅವಧಿಯಲ್ಲಿ ಕೈಗೊಂಡ ಸಾಹಿತ್ಯದ ಕೈಂಕರ್ಯದ ಒಂದು ಪಟ್ಟಿ ಈ ಅಧ್ಯಾಯದಲ್ಲಿ ಪ್ರಾಪ್ತವಾಗಿದೆ. ಪತ್ರಿಕೆಗಳಲ್ಲಿ ಅವರು ಬರೆದಿದ್ದನ್ನು ಸೇರಿಸಿದರೆ ಅನೇಕ ಸಂಪುಟಗಳನ್ನೇ ಹೊರತರಬಹುದು. ಸಾಹಿತ್ಯ ಪರಿಶ್ರಮ ಅವರ ವೃತ್ತಿನಿರತ ಚಟುವಟಿಕೆಯಲ್ಲಿ ಒಂದು ಇಲಾಖೆಯಷ್ಟೇ ಆದಾಗ್ಯೂ ಈ ಇಲಾಖೆಯ ಮೂಲಕ ಅವರು ಮಾಡಿದ ಸಾಧನೆ ವಿದೇಶಿ ವಾಸದ ಕಾಲದಲ್ಲಿ ಅವರು ಕಂಡು ಕೊಂಡ ದುರ್ಗಮ ಉದ್ಯಮದ ಸಮಗ್ರ ದರ್ಶನ ಮೂಡಿಸುತ್ತದೆ. ಅವರ ಶಿಷ್ಯ ಕಾರ್ಯದರ್ಶಿ ಎಂದೇ ಕರೆಯಬಹುದಾದ ಎನ್.ಎಸ್. ಹರ್ಡಿಕರ್ ಈ ಬಗ್ಗೆ ಆಡುವ ಮಾತಿನಲ್ಲಿ ಕಿಂಚಿತ್ತೂ ಉತ್ಪ್ರೇಕ್ಷೆ ಇಲ್ಲ. - ''ಲಾಲಾಜಿ ಲೀಗ್ ಕಚೇರಿಯಲ್ಲಿರಲಿ, ತಮ್ಮ

ಅಪಾರ್ಟ್‌ಮೆಂಟಿನಲ್ಲಿರಲಿ, ಕೈಯಲ್ಲಿ ಓದುವ ಪುಸ್ತಕವೋ ಅಥವಾ ಬರವಣಿಗೆಯ ಸಾಮಾಗ್ರಿ ಇಲ್ಲದೆ ಇದ್ದದ್ದನ್ನು ನಾನು ನೋಡಿಲ್ಲ.''

ಲಾಲಾಜಿ ಅವರ ಜೀವನ ಚರಿತ್ರೆಯ ಬರಹಗಾರನಿಗೆ ಪ್ರಾಪ್ತವಾದ ಆ ಕಾಲದ ಬರಹಗಳಲ್ಲಿ ಅತ್ಯಂತ ಮುಖ್ಯವಾದದು ಅವರ ಜೀವನ ಚರಿತ್ರೆಯ ಉರ್ದು ಹಸ್ತಪ್ರತಿ. ವಿಷಯಾನುಕ್ರಮಣಿಕೆಯಲ್ಲಿ ಹೇಳುವುದಾದರೆ ಅದೇ ಮೊಟ್ಟ ಮೊದಲ ಕೃತಿಯಾಗಬೇಕು. 1914ರಲ್ಲಿ ನ್ಯೂಯಾರ್ಕ್‌ನಲ್ಲಿದ್ದಾಗ ಉರ್ದು ಭಾಷೆಯಲ್ಲಿ ತಮ್ಮ ಜೀವನ ಚರಿತ್ರೆಯನ್ನು ಅವರು ಬರೆಯತೊಡಗಿದರು. 1907ರ ಗಡಿಪಾರು ಶಿಕ್ಷೆಯವರೆಗೆ ಆ ಕಥನ ಬರೆದರು. ಲಾಲಾಜಿ ಅವರ ಸ್ವಹಸ್ತಾಕ್ಷರಗಳಲ್ಲಿರುವ ಆ ಹಸ್ತಪ್ರತಿ ಇಂಗ್ಲೆಂಡಿನಲ್ಲಿ ವೆಸ್ಟಬ್ರೂಕ್ ಕುಟುಂಬದ ಸುರಕ್ಷಿತ ಸುಪರ್ದಿಯಲ್ಲಿತ್ತು. ಒಂದು ದಶಕದ ಮಧ್ಯದಲ್ಲಿ ಇಂಗ್ಲೆಂಡಿಗೆ ಭೇಟಿ ಕೊಟ್ಟ ಸಮಯದಲ್ಲಿ ಅವರು ತಮ್ಮ ಆ ಹಸ್ತಪ್ರತಿಯನ್ನು ತಂದರು. ಆದರೆ ಅದು ಪ್ರಕಾಶನ ಕಂಡಿದ್ದು ಅವರು ಈ ಲೋಕವನ್ನು ತ್ಯಜಿಸಿ, ಹುತಾತ್ಮರಾದ ನಂತರ. ಅದು ಅವರ ಉರ್ದು ಪತ್ರಿಕೆ ವಂದೇ ಮಾತರಂನಲ್ಲಿ ಧಾರಾವಾಹಿಯಾಗಿ ಮೂಡಿ ಬಂದಿತು. ಇಂಗ್ಲಿಷ್ ಮತ್ತು ಹಿಂದಿ ಅನುವಾದದೊಂದಿಗೆ ದಿ ಪೀಪಲ್, ದಿ ಪಂಜಾಬಿ, ಕೇಸರಿಗಳಲ್ಲೂ ಕ್ರಮವಾಗಿ ಪ್ರಕಾಶನ ಕಂಡಿತು.

ಅಮೆರಿಕದಲ್ಲಿ ಪ್ರಕಾಶನ ಕಂಡ ಲಾಲಾಜಿ ಅವರ ಪುಸ್ತಕಗಳ ಮೇಲೆ ಭಾರತದಲ್ಲಿ ನಿಷೇಧ ವಿಧಿಸಿದಂತೆ ಭಾರತೀಯ ಪತ್ರಿಕೆಗಳಲ್ಲಿ ಅವರ ಲೇಖನಗಳಿಗೆ ನಿರ್ಬಂಧ ವಿಧಿಸಲಾಗಿರಲಿಲ್ಲ. ಹೀಗಾಗಿ ಅವರ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಲೇಖನಗಳು, ಸ್ವತಃ ಅವರ ಕೊಡುಗೆಗಳು ಪ್ರಕಟಗೊಳ್ಳುತ್ತಿದ್ದವು. ರಮಾನಂದ ಚಟರ್ಜಿ ಅವರ ಮಾಸಿಕ ದಿ ಮಾಡರ್ನ್ ರಿವ್ಯೂ ಆ ಕಾಲದಲ್ಲಿ ಅತಿ ಹೆಚ್ಚು ಸಂಭಾವಿತ ನಿಯತಕಾಲಿಕೆಯಾಗಿತ್ತು. ಲಾಲಾಜಿ ಅವರ ಚಿಂತನಶೀಲ, ಬೋಧಪ್ರದ ಲೇಖನಗಳು ಆಗಿಂದಾಗ್ಗೆ ಆ ಮಾಸಿಕದಲ್ಲಿ ಪ್ರಕಟಗೊಳ್ಳುತ್ತಿದ್ದವು. ಜಪಾನ್ ಮತ್ತು ಅಮೆರಿಕದ ಅಧ್ಯಯನ ಲೇಖನಗಳು ಆ ನಿಯತಕಾಲಿಕೆಯಲ್ಲೇ ಮೊದಲು ಪ್ರಕಾಶನ ಕಂಡಿದ್ದು. ಆಗಿಂದಾಗ್ಗೆ ಲಾಲಾಜಿ ಅವರು ಭಾರತೀಯ ರಾಜಕೀಯ ವಿಷಯಗಳ ಬಗ್ಗೆಯೂ ಬರೆಯುತ್ತಿದ್ದರು. ರಾಜಕಾರಣದಲ್ಲಿ ಅಹಿಂಸೆಯ ಪಾತ್ರ ಕುರಿತು ಮಹಾತ್ಮ ಗಾಂಧೀಜಿಯವರ ನಿಲುವಿನೊಂದಿಗೆ ವಿವಾದಕ್ಕೆ ಇಳಿದ ಪ್ರಸಂಗ ಚಿರಸ್ಮರಣೀಯ. ಆ ವಿವಾದ ಲೇಖನ ಕೇವಲ ಭಾವಗ್ರಹಣ ಸ್ವರೂಪದಷ್ಟೇ. 1919ರಲ್ಲಿ ಪಂಜಾಬಿನಲ್ಲಿ ವಿಧಿಸಲಾದ ಮಾರ್ಷಲ್ ಆಡಳಿತದ ಅತಿರೇಕಗಳಿಂದ ಭಗ್ನ ಹೃದಯಿಯಾಗಿ ಅವರು ಆ ವಿವಾದಕ್ಕೆ ಇಳಿದಿದ್ದರು. ದೂರದ ದೇಶದಲ್ಲಿದ್ದ ಅವರಿಗೆ ತನ್ನ ದೇಶದ ಜನರು ಅನುಭವಿಸುತ್ತಿದ್ದ ಹಿಂಸೆ, ನೋವುಗಳು ಭರಿಸಲಾಗದ ದುಃಖ ತಂದಿದ್ದವು. ಅದನ್ನು ಅವರು ಲೇಖನಿಯ ಮೂಲಕ ಸಮರ್ಥವಾಗಿ ಬಿಚ್ಚಿಗೊಳಿಸುತ್ತಿದ್ದರು. ತನ್ನ ದೇಶವಾಸಿಗಳ ನೋವು ನಂಜುಗಳೊಂದಿಗೆ ಆ ದೇಶಭಕ್ತನ ಹೃದಯ ಛಿದ್ರ ವಿಛಿದ್ರಗೊಂಡ ನಿದರ್ಶನ ಅದಾಗಿದೆ.

* * *

ಅಧ್ಯಾಯ-44

ಇಣಕು ನೋಟ

"**ಯಾ**ವ ಕೆಲಸದಲ್ಲಿಯೂ ನನಗೆ ಅಸಡ್ಡೆ ಎಂಬುದೇ ಇಲ್ಲ. ನನ್ನ ಊಟವನ್ನು ನಾನೇ ಅಣಿ ಮಾಡಿಕೊಳ್ಳುತ್ತಿದ್ದೆ. ನನ್ನದೇ ಅಡಿಗೆ. ನನ್ನ ಬಟ್ಟೆಗಳನ್ನು ನಾನೇ ಸ್ವಚ್ಛ ಮಾಡಿಕೊಳ್ಳುತ್ತಿದ್ದೆ. ನನ್ನ ಕೊಠಡಿಯನ್ನು ನಾನೇ ಸ್ವಚ್ಛ ಮಾಡಿಕೊಳ್ಳುತ್ತಿದ್ದೆ. ಎಷ್ಟೋ ಸಾರಿ ನನ್ನ ರಾತ್ರಿಯ ಊಟಕ್ಕೆ ನನ್ನ ಬಳಿ ಐದು ಸೆಂಟ್ ಬೆಲೆಯ ಬ್ರೆಡ್‌ಗೂ ಕಷ್ಟವಾಗುತ್ತಿತ್ತು. ಅಂದರೆ ನನ್ನ ಬಳಿ ಹಣ ಇರುತ್ತಿರಲಿಲ್ಲವೆಂದಲ್ಲ. ಸಹಸ್ರಾರು ರೂಪಾಯಿಯಷ್ಟು ಸಾರ್ವಜನಿಕ ನಿಧಿ ನನ್ನ ಕೈಬಳಕೆಯಲ್ಲೇ ಇರುತ್ತಿತ್ತು. ಆದರೆ ನನ್ನ ವೈಯಕ್ತಿಕ ಬೇಕು ಬೇಡಗಳಿಗಾಗಿ ಅದರಲ್ಲಿ ಒಂದು ಸೆಂಟ್ ಸಹ ನಾನು ಬಳಸುತ್ತಿರಲಿಲ್ಲ." ಎಂದು ಲಜಪತರು ತಮ್ಮ ಜೀವನ ಚರಿತ್ರೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ.

ನಿಜ. ವಿದೇಶವಾಸ - ರಾಯಭಾರದ ಅವಧಿಯಲ್ಲಿ ಅವರ ಜೀವನ ವಾಸ್ತವಿಕ ರಾಯಭಾರಿಯ ವೈಭವ, ಅದ್ಧೂರಿ, ಆಟಾಟೋಪಗಳ ಸುಖದ ಸುಪ್ಪತ್ತಿಗೆ ಆಗಿರಲಿಲ್ಲ. ಅದೊಂದು ಕಠಿಣ ತಪಸ್ಸಿನ ಸ್ವಯಂ ಘೋಷಿತ ಗಡಿಪಾರು ಕಾಯಕವಾಗಿತ್ತು. ನಿಷ್ಠ ದೇಶಭಕ್ತನ ತೀರಾ ಸರಳ ಬದುಕಿನ ವಿಧಾನವಾಗಿತ್ತು. ಆದ್ದರಿಂದಲೇ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಲಜಪತರದು ನಿತ್ಯ ನೂತನ ಸುವರ್ಣ ಅಧ್ಯಾಯವಾಗಿದೆ. ತಮ್ಮ ವಿದೇಶವಾಸ ಅನಿರೀಕ್ಷಿತ ಅವಧಿಯದೆಂದು ಮನವರಿಕೆ ಆದ ತಕ್ಷಣ ಅವರು ಹೋಟೆಲ್ ವಾಸ್ತವ್ಯದ ದುಬಾರಿ ವೆಚ್ಚ ಸಾಧ್ಯವಿಲ್ಲವೆಂದು ನಿರ್ಧರಿಸಿಕೊಂಡರು. ಕಾಲ ಕಳೆದಂತೆ ಅಮೆರಿಕ ಪತ್ರಿಕೆಗಳಿಗೆ ಬರೆಯುತ್ತಿದ್ದ ಲೇಖನಗಳಿಗೆ ಸಂದಾಯವಾಗುತ್ತಿದ್ದ ಸಂಭಾವನೆಗಳ ಮೂಲಕ ತಮ್ಮ ವೈಯಕ್ತಿಕ ಖರ್ಚು ವೆಚ್ಚಗಳನ್ನು ಭರಿಸಿಕೊಳ್ಳತೊಡಗಿದರು. ಅನಿರ್ದಿಷ್ಟ ಕಾಲದತನಕ ತಮ್ಮ ಸ್ಥಿತಿ ಅದೆಂದು ನಿರ್ಧರಿಸಿಕೊಂಡ ಅವರು ಸಾಧ್ಯವಾದಷ್ಟು ಖರ್ಚು ವೆಚ್ಚಗಳನ್ನು ತಗ್ಗಿಸಿಕೊಂಡು ಉಳಿತಾಯಕ್ಕೆ ಅನುವು ಮಾಡಿಕೊಂಡರು. ಅವರ ಮನೆಯ ಖರ್ಚು ವೆಚ್ಚ ತೀರಾ ಕಡಿಮೆಯಾಗಿತ್ತು. ಅಪಾರವಾದ ಕಾಠಿಣ್ಯ ಅಲ್ಲಿ ಎದ್ದು ಕಾಣುತ್ತಿತ್ತು. ಅದೇ ಸಮಯದಲ್ಲಿ ಅವರೊಂದಿಗೆ ಅವರ ಶಿಷ್ಯ ಕಾರ್ಯದರ್ಶಿ ಹರ್ಡಿಕರ್ ಸೇರಿಕೊಂಡರು. ಕನಿಷ್ಠ ಅಗತ್ಯಗಳೊಂದಿಗೆ ಮನೆಯ ನಿರ್ವಹಣೆಯನ್ನು ಅವರು ನಿಭಾಯಿಸುತ್ತಾ ಬಂದರು. ಹರ್ಡಿಕರರು ನ್ಯೂಯಾರ್ಕ್‌ನ ಆ ದಿನಗಳ ಜೀವನದ ಬಗ್ಗೆ ಅಮೂಲ್ಯ ಇಣಕು ನೋಟಗಳನ್ನು ಒದಗಿಸಿದ್ದಾರೆ.

ಲಾಲಾಜಿ ಅವರಿಗೆ ಪೂರ್ಣ ಕಾಲದ ಕಾರ್ಯದರ್ಶಿ ಸೇವೆಯನ್ನು ಎರವಲು ಮಾಡುವ ಉದ್ದೇಶದೊಂದಿಗೆ ಹರ್ಡಿಕರ್ ಅವರು ತಮ್ಮ ವೈದ್ಯ ಅಧ್ಯಯನವನ್ನು ಮೊಟಕು ಗೊಳಿಸಿದರು. ಲಾಲಾಜಿ ಅವರೊಂದಿಗೆ ಅವರ ಒಡನಾಟ ಇನ್ನು

ಆತ್ಮೀಯವಾಗಿತ್ತು. ಓರ್ವ ಶಿಷ್ಯನಾಗಿ, ವಿದ್ಯಾರ್ಥಿಯಾಗಿ ಅವರ ಸಲಹೆ ಸೂಚನೆಗಳನ್ನು ನೆರವೇರಿಸುವ ವಿನಮ್ರ ಸೇವಕನಾಗಿ, ಕೆಲಸ ಕಾರ್ಯಗಳಲ್ಲಿ ಸಹಾಯಕನಾಗಿ ಎಲ್ಲಕ್ಕಿಂತ ಹೆಚ್ಚಿನದಾಗಿ ಅವರೊಂದಿಗೆ ವಾಸಿಸುತ್ತಾ ಅವರ ಆಗು ಹೋಗು ನೋಡಿಕೊಳ್ಳುವವರಾಗಿ ತಮ್ಮ ಇಡೀ ಸಮಯವನ್ನು ವಿನಿಯೋಗಿಸಿದ ಸಹವರ್ತಿ ಅವರಾದರು. ಲಾಲಾಜಿ ತಮ್ಮ ವೈಯಕ್ತಿಕ ಅನುಕೂಲಗಳಿಗಾಗಿ ಸಾರ್ವಜನಿಕ ಹಣ ಬಳಸಲು ಮರೆತು ಸಹ ಮುಂದಾದವರಲ್ಲ. ಅವರ ಇಡೀ ಬದುಕನ್ನು ಭಾರತದ ಹಿತಕ್ಕಾಗಿ, ದೇಶವಾಸಿಗಳ ಒಳಿತಿಗಾಗಿ ವಿನಿಯೋಗಿಸುತ್ತಿದ್ದರು. ಸ್ವಯಾರ್ಜಿತವಾಗಿ ಬರುತ್ತಿದ್ದ ಕಿರಿಯ ಗಳಿಕೆಯಲ್ಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಅವರಿಗೆ ಬರುತ್ತಿದ್ದ ಬಹುತೇಕ ವಂತಿಕೆಗಳು ವೈಯಕ್ತಿಕ ಕೊಡುಗೆಯ ರೂಪದಲ್ಲೇ ಇರುತ್ತಿದ್ದವು. ಯಾವುದೇ ಒಂದು ಸಂಸ್ಥೆಗೆ ನೀಡುವ ದಿನದ ವಂತಿಕೆಯ ರೂಪದಲ್ಲಿ ಅದು ಇರುತ್ತಿರಲಿಲ್ಲ. ನಿರ್ದಿಷ್ಟವಾದ ಯಾವುದೇ ಉದ್ದೇಶಕ್ಕೆ ಅದರ ಬಳಕೆಯಾಗಬೇಕೆಂಬ ಕಟ್ಟುಪಾಡು ಇರಲಿಲ್ಲ. ಅದು ಹೇಗೆ ಬಂದರೂ ಎಲ್ಲಾ ವಂತಿಕೆಗಳನ್ನು ಲಾಲಾಜಿ ಕಟ್ಟುನಿಟ್ಟಾಗಿ ಪುದುವಟ್ಟಿನ ಹಣವೆಂದು ಜತನ ಮಾಡಿದರು. ತಾವು ಕೈಗೊಂಡಿರುವ ಕೈಂಕರ್ಯ ಮಹೋದ್ದೇಶದ ಸಹಾಯಕ್ಕೆ ಅದನ್ನು ಬಳಸಲು ಕಟ್ಟುನಿಟ್ಟಿನ ಕಟ್ಟಳೆ ಹಾಕಿಕೊಂಡರು. ಆ ದಿನಗಳಲ್ಲೇ ಉಯಿಲು ಬರೆಯುತ್ತಾ ಬಂದರು. ತಮ್ಮಲ್ಲಿದ್ದ ಆ ನಿಧಿಯ ಪೂರ್ಣ ವಿವರಗಳನ್ನು ದಾಖಲು ಮಾಡುತ್ತಾ ಬಂದರು. ಒಬ್ಬಿಬ್ಬರು ಸಾರ್ವಜನಿಕ ಕ್ಷೇತ್ರದ ಮುಖಂಡರನ್ನು (ಪಂಡಿತ ಮಾಳವೀಯರಂಥ) ಅವರು ಈ ವಿಷಯದಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಕಾಲ ಕಾಲಕ್ಕೆ ಅವರು ಎಲ್ಲಾ ವಿವರಗಳನ್ನು ಒದಗಿಸುತ್ತಿದ್ದರು. ಒಂದು ವೇಳೆ ತಾವು ನಿಧನ ಹೊಂದಿದರೂ ತಮ್ಮ ಆ ಪುದುವಟ್ಟಿನ ಹಣ ಜತನವಾಗಿರಬೇಕೆಂದು ಅವರು ಬಯಸಿದ್ದರು. ಭಾರತಕ್ಕೆ ಮರಳಿದ ಮೇಲೆ ಲಾಲಾಜಿ ತಮ್ಮ ಆ ಪುದುವಟ್ಟು ನಿಧಿಯ ವಹಿವಾಟಿನ ಸುದೀರ್ಘ ಲೆಕ್ಕ ಪತ್ರಗಳನ್ನು ಮಹಾತ್ಮ ಗಾಂಧೀಜಿಯವರಿಗೆ ನಿಯತವಾಗಿ ಕಳುಹಿಸಿಕೊಡುತ್ತಿದ್ದರು. ಸುಮಾರು ಒಂದು ವರ್ಷದ ಹಿಂದೆ ಗಾಂಧೀಯವರನ್ನು ಕಂಡು ಅವರೊಂದಿಗೆ ನಡೆಸಿದ ಮಾತುಕತೆ ಸಂದರ್ಭದಲ್ಲಿ ನೀಡಿದ ಅಂಕಿ ಅಂಶಗಳು ಆ ವಿವರಣೆಯಲ್ಲಿ ಯಥಾವತ್ತಾಗಿ ಇರುತ್ತಿದ್ದಕ್ಕೆ 1921 ಜುಲೈ 9ರ ಅವರ ಪತ್ರ ಸಾಕ್ಷಿಯಾಗಿದೆ:

"ಮುಂಬೈಯಲ್ಲಿ ಕಳೆದ ಆಗಸ್ಟ್‌ನಲ್ಲಿ ನಾನು ನಿಮ್ಮನ್ನು ಭೇಟಿ ಮಾಡಿದಾಗ ಜಪಾನ್ ಮತ್ತು ಅಮೆರಿಕಗಳಲ್ಲಿ ಭಾರತೀಯರು ನನ್ನಲ್ಲಿ ವಿಶ್ವಾಸವಿಟ್ಟು ಕೊಟ್ಟ ಹಣದ ಕಥೆಯನ್ನು ನಿಮಗೆ ಹೇಳಿದ್ದೆ. ಅದನ್ನು ನಾನು ಹೇಗೆ ಬಳಸಿದ್ದೇನೆಂಬುದನ್ನು ನಿಮಗೆ ತಿಳಿಸಿದ್ದೆ... "

"ನಿಧಿಯ ಕಥೆಯನ್ನು" ವಿವರಿಸುವ ಮೊದಲು ಅವರು "ಆಗ ವಿದೇಶವಾಸದಲ್ಲಿ ನಾನು ನನ್ನ ವೈಯಕ್ತಿಕ ಖರ್ಚು ವೆಚ್ಚಗಳಿಗೆ ನನ್ನ ಸ್ವಂತ ಹಣವನ್ನೇ ವಿನಿಯೋಗಿಸುತ್ತಿದ್ದೆ. ಆ ಜೊತೆ ನನ್ನ ದೇಶದ ಹಿತಾಸಕ್ತಿಗಾಗಿ ಕೈಗೊಳ್ಳುತ್ತಿದ್ದ ಅನೇಕ ಕೆಲಸಗಳಿಗೂ ನನ್ನ ಗಳಿಕೆಯ ಹಣವನ್ನೇ ಬಳಸಿಕೊಂಡಿದ್ದೆ" ಎಂದು ಸ್ಪಷ್ಟನೆಯನ್ನು ಕೊಟ್ಟಿದ್ದಾರೆ.

1914ರ ನವೆಂಬರ್‌ನಲ್ಲಿ ಅವರು ನ್ಯೂಯಾರ್ಕ್‌ಗೆ ಬಂದಾಗ (ಅವರ ಪತ್ರಗಳಿಂದಲೇ ಇದು ನಮಗೆ ತಿಳಿಯುತ್ತದೆ), ಅವರ ಬಳಿ ಸುಮಾರು ಹತ್ತು ಸಾವಿರ ರೂಪಾಯಿಗಳಷ್ಟು ಸ್ವಂತ ಹಣವಿತ್ತು.

ಆಗಿಂದಾಗ್ಗೆ ಅವರ ಹಿರಿಯ ಪುತ್ರ ಅವರಿಗೆ ಹಣವನ್ನು ಕಳುಹಿಸಿ ಕೊಡುತ್ತಿದ್ದ. ಆ ಎಲ್ಲಾ ವಿವರವನ್ನು ಪತ್ರದಲ್ಲಿ ನಮೂದಿಸಲಾಗಿದೆ. ಒಟ್ಟು ಮೊತ್ತ ಅವರಲ್ಲಿ ಸ್ವಂತದ್ದಾಗಿ 27,000 ಸಾವಿರ ರೂಪಾಯಿಗಳಷ್ಟಿತ್ತು. ಪತ್ರಿಕೆಗಳು ಹಾಗೂ ಸಾರ್ವಜನಿಕ ಉಪನ್ಯಾಸಗಳಿಂದ ಅವರಿಗೆ (ನಾಲ್ಕು ವರ್ಷಗಳ ಅವಧಿಯಲ್ಲಿ) 12,000 ರೂಪಾಯಿಗಳಷ್ಟು ಮೊತ್ತ ಸಂದಾಯವಾಗಿತ್ತು. ಅವರ ಪುಸ್ತಕಗಳಿಂದ ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಗೌರವಧನ ಪ್ರಾಪ್ತವಾಗಿತ್ತು. ಒಟ್ಟಾರೆ ''ನನ್ನ ಸ್ವಂತ ಹಣ 52,000 ರೂಪಾಯಿಗಳಷ್ಟಿತ್ತು. ನನ್ನ ವೈಯಕ್ತಿಕ ಖರ್ಚು ವೆಚ್ಚ ಪ್ರಯಾಣಗಳಿಗೆಲ್ಲಾ ಅದು ಸಾಕಷ್ಟು ಆಗಿತ್ತು. ನನ್ನ ಜೀವನ ರೀತಿ ತೀರಾ ಸರಳವಾಗಿತ್ತು. ನನ್ನ ಬಟ್ಟೆಗಳನ್ನೆಲ್ಲಾ (ಸ್ವದೇಶಿ) ತರಿಸಿಕೊಳ್ಳುತ್ತಿದ್ದೆ... ನನ್ನ ವೈಯಕ್ತಿಕ ಖರ್ಚು ವೆಚ್ಚಗಳು ತಿಂಗಳಿಗೆ ನೂರು ಡಾಲರ್‌ಗಳಿಗಿಂತ ಹೆಚ್ಚಾಗುತ್ತಿರಲಿಲ್ಲ. ಕೆಲವು ಸಮಯಗಳಲ್ಲಿ ಅದಿನ್ನೂ ಕಡಿಮೆಯಾಗಿರುತ್ತಿತ್ತು. ಉಳಿದ ಎಲ್ಲಾ ಹಣವನ್ನು ನಾನು ನನ್ನ ದೇಶದ ಹಿತದ ಕೆಲಸಗಳಿಗಾಗಿ ವಿನಿಯೋಗಿಸಿಕೊಂಡಿದ್ದೇನೆ.''

ಮಹಾತ್ಮ ಗಾಂಧೀ ಅವರಿಗೆ ಅವರು ಬರೆದ ಸುದೀರ್ಘ ಪತ್ರದ ಕೆಲವು ವಾಕ್ಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವ ಮೂಲಕ ಲಜಪತರು ತಮ್ಮ ಜೀವನವನ್ನು ಹೇಗೆ ಕಳೆದರೆಂಬುದನ್ನು, ತಮ್ಮಲ್ಲಿ ವಿಶ್ವಾಸವಿಟ್ಟು ಜನತೆ ನೀಡಿದ ನಿಧಿಯನ್ನು ಅವರು ಕಾಪಾಡಿಕೊಂಡು ಬಂದ ರೀತಿಯನ್ನು ಇಲ್ಲಿ ವಿವರಿಸಿದ್ದು ಮುಖ್ಯವೆನಿಸುತ್ತದೆ. ವಿವಿಧ ಮೂಲಗಳಿಂದ ವಿವಿಧ ಉದ್ದೇಶಗಳಿಗಾಗಿ ತಾವು ಪಡೆದ ಹಣದ ಪೂರ್ಣ ವಿವರವನ್ನು ಮತ್ತು ಅದರ ವಿನಿಯೋಗ ಅಥವಾ ಜತನದ ಬಗ್ಗೆ ಪೂರ್ಣ ಮಾಹಿತಿ ನೀಡುತ್ತಾ ಅವರು:

''ನನಗೆ ಸಂದಾಯವಾದ ವಿವಿಧ ಕೊಡುಗೆಗಳ ಮೊತ್ತವನ್ನು ಹುಂಡಿ ರೂಪದಲ್ಲಿ ಭದ್ರಪಡಿಸಿಟ್ಟಿದ್ದೇನೆ. ಬಡ್ಡಿ ಸಮೇತ ಆ ಮೊತ್ತ ಬೆಳೆದಿರುವುದನ್ನು ಇಲ್ಲಿ ವಿವರಿಸಿದ್ದೇನೆ. 1919ರ ಡಿಸೆಂಬರ್ 23ರಂದು ಭಾರತಕ್ಕೆ ನಾನು ಮರಳುವ ಹಂತದಲ್ಲಿ ಆ ಮೊತ್ತವನ್ನು ಹುಂಡಿಯ ರೂಪದಲ್ಲಿ ನ್ಯೂಯಾರ್ಕ್‌ನ ಈಕ್ವಿಟಬಲ್ ಟ್ರಸ್ಟ್ ಕಂಪನಿಯಲ್ಲಿ ಸುರಕ್ಷಿತವಾಗಿ ನಿಕ್ಷೇಪಗೊಳಿಸಿದ್ದೇನೆ. ಅದೇ ಸಮಯದಲ್ಲಿ ಹೊಸ ಉಯಿಲೊಂದನ್ನು ಬರೆದು ಅದನ್ನು ಮಿಸ್ಟರ್ ಜಾನ್ ಕ್ವಿನ್ ಅವರಲ್ಲಿ ಭದ್ರವಾಗಿಟ್ಟಿದ್ದೇನೆ. ನ್ಯೂಯಾರ್ಕ್‌ನ ಸಂ. 31, ನಾಸೌ ಸ್ಟೀಟ್‌ನಲ್ಲಿರುವ ಅವರು ನನ್ನ ಅತ್ಯುತ್ತಮ ಗೆಳೆಯರಲ್ಲಿ ಒಬ್ಬರು. ವಿಶಿಷ್ಟ ವಕೀಲರು. ನ್ಯೂಯಾರ್ಕ್‌ನಲ್ಲಿ ಅತ್ಯುತ್ತಮ ಗೌರವ ಸ್ಥಾನ ಗಳಿಸಿಕೊಂಡಿದ್ದಾರೆ. ಈ ಹುಂಡಿಗಳು ನನಗೆ ಸೇರಿದವಲ್ಲವೆಂದು ಉಯಿಲಿನಲ್ಲಿ ನಾನು ಬರೆದಿಟ್ಟಿದ್ದೇನೆ. ಭಾರತಕ್ಕೆ ತಲುಪುವ ಮೊದಲು ನಾನೇನಾದರೂ ನಿಧನ ಹೊಂದಿದರೆ ಅಥವಾ ಭಾರತದಲ್ಲಿ ಆರು ತಿಂಗಳ ಒಳಗೆ ನಾನು ನಿಧನ ಹೊಂದಿದರೆ, ಪಂಜಾಬಿನಲ್ಲಿ ರಾಜಕೀಯ ಆಂದೋಲನದಲ್ಲಿ ತೊಡಗಿರುವ ಮೂರು ಟ್ರಸ್ಟಿಗಳಿಗೆ ಈ ಆಸ್ತಿ ಸಂದಾಯವಾಗಬೇಕು. ಪಂಡಿತ ಮದನ

ಮೋಹನ ಮಾಳವೀಯ ಆ ಟ್ರಸ್ಟಿಗಳಲ್ಲಿ ಒಬ್ಬರಾಗಿದ್ದಾರೆ. ಮೊದಲನೇಯ ಉಯಿಲು 1916ರಲ್ಲೂ, ಕೊನೆಯದು 1919ರಲ್ಲೂ ನಿರೂಪಿತವಾಗಿವೆ. 1916ರ ಉಯಿಲು ಈತನಕ ಊರ್ಜಿತವಾಗಿತ್ತು.'' ಎಂದಿದ್ದಾರೆ.

ಅದೃಷ್ಟ ಹೀನವಾದರೆ ಎಂತಹ ಪ್ರಯತ್ನವೂ ವ್ಯರ್ಥವಾಗುವುದು. ದೈವ ನಿಯಾಮಕ. ''1919ರ ನಂತರ ಹುಂಡಿಗಳ ಬೆಲೆಗಳು ನಿರಂತರವಾಗಿ ಕುಸಿಯತೊಡಗಿದವು.'' ಅವುಗಳಲ್ಲಿ ಕೆಲವಂತೂ ''ತೀರಾ ನಷ್ಟ ಅನುಭವಿಸಿದವು.'' ಆ ಬಂಡವಾಳಗಳ ಪೈಕಿ ಒಂದು ಗಣನೀಯವಾಗಿ ಲಾಭ ಸಂಪಾದಿಸಿತು ಎನ್ನಲಾದರೂ ಒಟ್ಟಾರೆ ನಷ್ಟವೇ ಹೆಚ್ಚಿನದಾಯಿತು. ಅಂತಿಮವಾಗಿ ಆ ನಿಧಿಯ ಲೆಕ್ಕಾಚಾರ ಈ ಕೆಳಕಂಡಷ್ಟು ಇತ್ತು.

''ಎಲ್ಲಾ ಆ ಹುಂಡಿಗಳ ಈಗಿನ ಮೌಲ್ಯ ಸುಮಾರು ಅಂದಾಜಿನಲ್ಲಿ 6,000 ಡಾಲರ್‌ಗಳಿಗಿಂತ ಸ್ವಲ್ಪ ಹೆಚ್ಚಾಗುತ್ತದೆ. ಆದರೂ ಸದ್ಯದ ವಿನಿಮಯ ದರದಲ್ಲಿ ಅಂದರೆ ಸುಮಾರು 24,000 ರೂಪಾಯಿಗಳಷ್ಟಾಗುತ್ತದೆ. ನಾನು ನ್ಯೂಯಾರ್ಕ್‌ನ ಈಕ್ವಿಟಬಲ್ ಟ್ರಸ್ಟ್ ಕಂಪನಿ ಹಾಗೂ ಅಲ್ಲಿರುವ ನನ್ನ ಪುತ್ರನಿಗೆ ಸೂಚನೆ ನೀಡಿ ಎಲ್ಲಾ ಷೇರುಗಳನ್ನು ಮಾರಾಟ ಮಾಡಿ ಹುಟ್ಟುವಳಿಯನ್ನು ಭಾರತಕ್ಕೆ ಕಳುಹಿಸಲು ತಿಳಿಸಿದ್ದೇನೆ. ಅಲ್ಲಿಂದ ಬರುವ ಆ ವರಮಾನವನ್ನು ಈ ಕೆಳಗೆ ಕಾಣಿಸಿರುವಂತೆ ಕಾಣಿಸಲು ತಿಳಿಸಿದ್ದೇನೆ'' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಅದಕ್ಕೆ ಅನುಗುಣವಾಗಿ ವಿವರಗಳನ್ನೆಲ್ಲಾ ಒದಗಿಸಿ ಕೊನೆಯಲ್ಲಿ -''ಖಿಲಾಫತ್ ನಿಧಿಗೆ ಒಂದು ಸಾವಿರ ರೂಪಾಯಿ'' ಎಂದು ತಿಳಿಸಿದ್ದಾರೆ. ಆ ಪತ್ರದ ಕೊನೆಯ ಭಾಗವನ್ನು ಇಲ್ಲಿ ಉದ್ಧರಿಸುವುದು ಯುಕ್ತವೆನಿಸುತ್ತದೆ.:

''ಅಮೇರಿಕಾದಲ್ಲಿ ನಾನು ಕ್ಷಣಾರ್ಧದಲ್ಲಿ ಹಣ ಮಾಡುತ್ತಿದ್ದೇನೆಂಬ ನನ್ನ ಬಗೆಗಿನ ಎಲ್ಲಾ ಕತೆಗಳು ಸತ್ಯಕ್ಕೆ ದೂರವಾದವೆಂದು ನಾನಿಲ್ಲಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ. ನಿಜವಾಗಿ ಹೇಳುವುದಾದರೆ ಅವಿವೇಕದ ವ್ಯವಹಾರದಲ್ಲಿ 700 ಡಾಲರ್‌ಗಳ ಮೊತ್ತವನ್ನು ನಾನು ಕಳೆದುಕೊಂಡಿದ್ದೇನೆ.

''ನಾನು ಅಮೆರಿಕ ಮತ್ತು ಜಪಾನ್‌ನಲ್ಲಿದ್ದ ಅವಧಿಯಲ್ಲಿ ನನಗೆ ಸಂದಾಯವಾದ ಮತ್ತು ಬಟವಾಡೆಯಾದ ನಿಧಿಯ ಸಂಪೂರ್ಣ ಕಥನ ಈ ಹೇಳಿಕೆಯಲ್ಲಿದೆ. ಇದೆಲ್ಲವನ್ನು ನೆನಪಿನ ಆಧಾರದ ಮೇಲೆ ತಿಳಿಸಿದ್ದೇನೆ. ಆಸೆ ಕಾಸುಗಳಿಗೆ ಕರಾರುವಕ್ಕಾದ ಲೆಕ್ಕ ಇಲ್ಲದಿರಲೂಬಹುದು. ನಿಮಗೆ ಸಮಂಜಸವಲ್ಲವೆಂದು ಕಂಡು ಬಂದ ರೀತಿಯಲ್ಲಿ ಈ ಹೇಳಿಕೆಯನ್ನು ನೀವು ಬಳಸಿಕೊಳ್ಳುವ ಸ್ವಾತಂತ್ರ್ಯ ನಿಮಗಿದೆ. ಈ ಹೇಳಿಕೆಯ ಪ್ರತಿಯೊಂದನ್ನು ಅವರ ಮಾಹಿತಿಗಾಗಿ ಪಂಡಿತ ಮದನ ಮೋಹನ ಮಾಳವೀಯರಿಗೂ ಕಳುಹಿಸುತ್ತಿದ್ದೇನೆ.''

ಅಮೆರಿಕದ ಜನತೆಯಲ್ಲಿ ನಿರ್ದಿಷ್ಟವಾಗಿ ಅಭಿಪ್ರಾಯ ಕ್ರೋಢೀಕೃತವಾಗುತ್ತಿದ್ದ ಬೆಳವಣಿಗೆಯನ್ನು ಗುರುತಿಸುವಲ್ಲಿ ಭಾರತದ ರಾಜಕೀಯ ಮನೋಧರ್ಮ ತೀರಾ ನಿಧಾನಗೊಂಡಿತು. ಹೀಗಾಗಿ ಲಜಪತರಿಗೆ ಅವರು ಕೈಗೊಂಡ ಕಾರ್ಯಕ್ಕೆ ಬೆಂಬಲವಾಗುವ ರೀತಿಯಲ್ಲಿ ತಾಯ್ನಾಡಿನಿಂದ ಆರ್ಥಿಕ ಬೆಂಬಲ ಪ್ರಾಪ್ತವಾಗಲಿಲ್ಲ. (ಲಜಪತರಿಂದಾಗಿ

ಅಮೆರಿಕದಲ್ಲಾಗುತ್ತಿದ್ದ ಬೆಳವಣಿಗೆಗಳನ್ನು ಗುರುತಿಸಿದ ಏಕ ಮಾತ್ರ ರಾಜಕೀಯ ನಾಯಕರೆಂದರೆ ತಿಲಕರು ಮಾತ್ರ) ಈ ಬಗ್ಗೆ ಸಮಂಜಸವಾಗಿ ಪ್ರಸ್ತಾಪವಾಗಿದೆ. ಪ್ರತಿ ಹಂತದಲ್ಲಿಯೂ ಲಜಪತರು ಸುತ್ತೋಲೆ ರೂಪದ ಪತ್ರಗಳನ್ನು ಭಾರತದಲ್ಲಿ ಕೆಲವರಿಗೆ ಕಳುಹಿಸಿರುವುದು ಕಂಡು ಬರುತ್ತದೆ. ಮುಶೀರ್ ಹುಸೇನ್ ಕಿದ್ವಾಯಿ ಅವರಿಗೆ ಬರೆದಿರುವ ಪತ್ರಗಳಲ್ಲಿ ಈ ಅಂಶಗಳು ಬೆಳಕಿಗೆ ಬರುತ್ತವೆ. ಲಜಪತರ ಪತ್ರಗಳ ಸಂಗ್ರಹದಲ್ಲಿ ಆ ಪತ್ರಗಳು ಜತನವಾಗಿವೆ.

(ಲಕ್ನೋದಲ್ಲಿನ ಗದ್ಯಾ ಮುಶೀರ್ ಹುಸೇನ್ ಕಿದ್ವಾಯಿ ಅವರು ಕೊನೆಯತನಕ ಲಾಲಾಜಿ ಅವರಿಗೂ ಪತ್ರಗಳನ್ನು ಬರೆಯುತ್ತಿದ್ದರು.) ಲಜಪತರು ಕಳುಹಿಸುತ್ತಿದ್ದ ಮನವಿಗಳಿಗೆ ಸೂಕ್ತ ಪ್ರತಿಫಲ ಸಿಕ್ಕಿದಂತೆ ಕಂಡು ಬರುವುದಿಲ್ಲ. ಆದರೆ ಇಸ್ಲಾಮಿ ರಾಜಕಾರಣಿಗಳ ಸಂಘಟನೆಯ ಪತ್ರ ಕುತೂಹಲಕಾರಿಯಾಗಿದೆ. ಸಾಮಾನ್ಯವೆಂದೆನ್ನಲಾಗದ ಒಂದು ಬಗೆಯ ಕುತೂಹಲ ಆ ಪತ್ರದಿಂದ ವ್ಯಕ್ತವಾಗುತ್ತದೆ:

''ಆತ್ಮೀಯ ಗೆಳೆಯ,

''ನಿಮ್ಮ ಸುತ್ತೋಲೆ ಪತ್ರ ನನಗೆ ಸೇರಿದೆ. ಬಹಳ ಆಸಕ್ತಿಯಿಂದ ಅದನ್ನು ಪೂರ್ಣವಾಗಿ ಓದಿದೆ. ನಾನೋರ್ವ ದೇಶಿಯವಾದಿ ಹಾಗೂ ಪಾನ್-ಇಸ್ಲಾಮಿಸ್ಟ್ ಎಂಬುದು ಬಹುಶಃ ನಿಮಗೆ ಗೊತ್ತಿಲ್ಲದಿರಬಹುದು. ತತ್ಕಾರಣದಿಂದಲೇ ನಾನು ನಿಮ್ಮ ಪತ್ರದಲ್ಲಿ ತುಂಬಾ ಆಸಕ್ತಿ ವಹಿಸುವಂತಾಗಿದೆ.

''ಭಾರತದ ರಾಜಕಾರಣ ಮತ್ತು ಮುಖ್ಯವಾಗಿ ಇಸ್ಲಾಂ ಬಗೆಗಿನ ನಿಮ್ಮ ಗೌರವ ಮತ್ತು ಸಲಹೆಗಳಲ್ಲಿ ಬಹುತೇಕ ನನಗೆ ಸಮ್ಮತ.

ನಮ್ಮ ಸಂಘಟನಾತ್ಮಕ ನ್ಯೂನತೆ ದೊಡ್ಡದಾಗಿದೆ. ದುರಾದೃಷ್ಟವಶಾತ್ ನಮ್ಮ ಎರಡು ವಲಯಗಳಲ್ಲಿ ಆ ಸ್ಥಿತಿ ಇನ್ನು ಮುಂದುವರೆದಿದೆ. ಆದರೆ ನೀವು ಹೇಗೆ ಯಾವುದೇ ವಿದೇಶಿ ಮಧ್ಯಸ್ಥಿಕೆಯಿಂದ ಒಳಿತಾಗುವುದಿಲ್ಲವೆಂದು ಆಶೆ ಕಳೆದುಕೊಂಡಿರುವಿರೋ ಅದೇ ಸ್ಥಿತಿ ನನ್ನದೂ ಆಗಿದೆ. ಯಾವುದೇ ವಿದೇಶಿ ಮಿಲಿಟರಿ ಮಧ್ಯಸ್ಥಿಕೆಯಿಂದ ಯಾವುದೇ ರೀತಿಯ ಒಳ್ಳೆಯದನ್ನು ನೀವು ನಿರೀಕ್ಷಿಸುತ್ತಿಲ್ಲ. ನನಗೂ ಸಹ ಯಾವುದೇ ವಿದೇಶಿ ಮಧ್ಯಸ್ಥಿಕೆಯಿಂದ ಒಳ್ಳೆಯದಾಗುತ್ತದೆ ಎಂಬ ಭರವಸೆ ಇಲ್ಲ. ನನ್ನ ಗ್ರಹಿಕೆಯಲ್ಲಿ ವಿದೇಶವೆಂದರೆ ಇಂಗ್ಲೆಂಡ್ ಮತ್ತು ಅಮೆರಿಕಗಳು ಸೇರಿವೆ. ಭಾರತ ಬಿಟ್ಟು ಉಳಿದ ಯಾವ ರಾಷ್ಟ್ರವು ನನಗೆ ವಿದೇಶವೇ.

''ಈತನಕ ನಮಗೆ ಮನವರಿಕೆಯಾಗಿರುವ ಪಾಠವೆಂದರೆ ಬಲವೊಂದೇ ಲೆಕ್ಕದ್ದು. ಈ ಕ್ಷಣದಲ್ಲಿ ನಮ್ಮಲ್ಲಿ ಆ ಬಲವಿಲ್ಲ. ತತ್ಕಾರಣದಿಂದಲೇ ನಮ್ಮನ್ನು ಇಷ್ಟೊಂದು ನಿಕೃಷ್ಟವಾಗಿ ನೋಡಲಾಗುತ್ತಿದೆ.

''ಸೆನೆಟರ್ ರೀಡ್ ನಮ್ಮನ್ನು ಗ್ರೇಟ್ ಬ್ರಿಟನ್‌ನ ಚರಾಸ್ಥಿ ಎಂದು ಕರೆದಿರುವುದರಲ್ಲಿ ಈ ಹಿನ್ನಲೆಯಲ್ಲಿ, ತಪ್ಪೇನೂ ಇಲ್ಲ. ಬೌದ್ಧಿಕವಾದಿಗಳ ಯುರೋಪಿಯನ್ನರಿಗೆ ಕೂದಲು ಮುಪ್ಪಾದ ಭಾರತದ ನಾಗರಿಕತೆ ಯಾವ ಲೆಕ್ಕಕ್ಕೂ ಇಲ್ಲ. ಇಸ್ಲಾಂ ಘನತೆವೆತ್ತವೆನಿಸುವ

ಸಂಸ್ಕೃತಿಯು ಅವರ ಆತ್ಮಕ್ಕೆ ಇಲ್ಲ. ಪೌರಾತ್ಯ ವಂಶಾನುಗತದಲ್ಲಿ ಯುರೋಪಿಯನ್ನರು ಗೌರವಿಸುವುದು ಜಪಾನ್‌ನನ್ನು ಮಾತ್ರ. ಕಾರಣ ಸರಳ. ಸಹಜ. ಜಪಾನಿಗೆ ಕತ್ತಿಯ ತುದಿಯಿಂದ ಎಲ್ಲವನ್ನು ಮಣಿಸುವ ಶಕ್ತಿ ಇದೆ. ವಿದೇಶಗಳಲ್ಲಿ ಇದ್ದುಕೊಂಡು ಕೇವಲ ಕಾಗದ ಮೇಣ ಪತ್ರಗಳ ಪ್ರಚಾರಕ್ಕಾಗಿ ಭಾರೀ ಖರ್ಚು ವೆಚ್ಚಗಳನ್ನು ಮಾಡುವುದು ನ್ಯಾಯೋಚಿತವಾಗುವುದಿಲ್ಲವೆಂಬ ಬಗ್ಗೆ ನಾನು ಶಂಕೆ ವ್ಯಕ್ತಪಡಿಸಿದಂತೆ ನನ್ನ ಆ ಅಭಿಮತಕ್ಕಾಗಿ ನೀವು ನನ್ನನ್ನು ನಿಂದಿಸಲಾರಿರಿ ಎಂದು ಕೊಂಡಿದ್ದೇನೆ. ಇವೆಲ್ಲಾ ನನ್ನ ವೈಯಕ್ತಿಕ ಅಭಿಪ್ರಾಯಗಳು. ನಿಮ್ಮ ಪತ್ರದ ಬಗ್ಗೆ ಭಾರತೀಯ ನಾಯಕರ ಜೊತೆ ವಿಶೇಷವಾಗಿ ಮುಸ್ಲಿಂ ಮುಖಂಡರೊಂದಿಗೆ ಸಮಾಲೋಚಿಸುತ್ತೇನೆ. ಅವರ ಆಲೋಚನೆ ಏನೆಂಬುದನ್ನು ಮುಂದೆ ನಿಮಗೆ ನಾನು ತಿಳಿಸುತ್ತೇನೆ.

''ನನಗೆ ನೀವು ಪತ್ರ ಬರೆದಿರುವುದಕ್ಕಾಗಿ ನಿಮ್ಮನ್ನು ಮತ್ತೊಮ್ಮೆ ನಾನು ಅಭಿನಂದಿಸುತ್ತೇನೆ.''

ಮುಂದಿನ ತಿಂಗಳಲ್ಲಿ ಆ ಪಾನ್-ಇಸ್ಲಾಮಿಕ್ ಮಿತ್ರ ಲಜಪತರಿಗೆ ತಮ್ಮ ಕೆಲವು ಸಾಹಿತ್ಯ ಕೃತಿಗಳನ್ನು ಕಳುಹಿಸಿಕೊಟ್ಟರು. ಅವರಲ್ಲಿ 'ರಹಸ್ಯ' ಕೃತಿಯೊಂದರ ಪ್ರತಿಯೊಂದು ಇತ್ತು. ಆ ಪ್ರತಿಯಲ್ಲಿ... ''ಅದರೂ ಈ ಕೃತಿಯನ್ನು ಯುರೋಪ್ ಮತ್ತು ಅಮೆರಿಕಗಳಲ್ಲಿ ಬಹಿರಂಗವಾಗಿ ಪ್ರಕಟಿಸಬಹುದು.'' ಎಂದು ತಿಳಿಸಲಾಗಿತ್ತು. ಅದರೊಂದಿಗೆ ಕಳುಹಿಸಿದ ಪತ್ರವೊಂದರಲ್ಲಿ ಅವರು ಲಜಪತರು ಕೈಗೊಂಡ ಕಾರ್ಯಗಳ ಬಗ್ಗೆ ಈ ಕೆಳಗಿನಂತೆ ತಮ್ಮ ಅಭಿಪ್ರಾಯ ತಿಳಿಸಿದರು.

''ಅಮೆರಿಕದಲ್ಲಿದ್ದುಕೊಂಡು ನೀವು ನಮಗಾಗಿ ಕೈಗೊಂಡಿರುವ ಕಾರ್ಯಗಳನ್ನು ನಾನು ಹುತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ದಯ ಮಾಡಿ ಭಾರತೀಯ ರಾಜಕಾರಣಕ್ಕೆ ಸಂಬಂಧಪಟ್ಟ ನಿಮ್ಮ ಕರಪತ್ರಗಳನ್ನು, ಪ್ರಕಟಣೆಗಳ ಪ್ರತಿಗಳನ್ನು ನನಗೆ ಕಳುಹಿಸಿಕೊಡಿ. ನಿಮಗೆ ಗೊತ್ತು. ನಾನೊಬ್ಬ ಭಾರತೀಯ, ದೇಶಿಯ ಹಾಗೂ ಮುಸ್ಲಿಂ ಪಾನ್-ಇಸ್ಲಾಮಿಕ್. ನನ್ನ ಜೀವನದ್ದುದ್ದಕ್ಕೂ ಈ ಎರಡು ನನ್ನ ನಿರ್ವಹಣೆಗಳಾಗಿವೆ. ಒಂದು ಕಾಲದಲ್ಲಂತೂ ಇಡೀ ದೇಶದಲ್ಲಿ ನಾನೊಬ್ಬನೇ ಈ ಎರಡು ಧೋರಣೆಯವನಾಗಿದ್ದೆ.

''ಸದಾ ಕಾಲವು ನಾನು ರಾಜಕೀಯವಾಗಿಯಾಗಲಿ ಇಲ್ಲವೇ ಶೈಕ್ಷಣಿಕವಾಗಿಯಾಗಲಿ ಪ್ರತ್ಯೇಕತೆಯ ನೀತಿ ಬೇಡವೆಂದೇ ಹೇಳುತ್ತಾ ಬಂದಿದ್ದೇನೆ.

''ನೀವು ಪ್ರಸ್ತಾಪ ಮಾಡಿರುವ ಪತ್ರಗಳು ನನಗಿನ್ನೂ ಸಂದಾಯವಾಗಿಲ್ಲ. ಅದು ತಲುಪುತ್ತಿದ್ದಂತೆ ಅವುಗಳನ್ನು ಜಿನ್ನಾ ಮತ್ತು ಹಸನ್ ಇಮಾಂ ಅವರಿಗೆ ತೋರಿಸುತ್ತೇನೆ.''

1916ರ ಅಂತ್ಯದ ವೇಳೆಗೆ ಲಜಪತರು ತಮ್ಮ ಕಾರ್ಯ ಚಟುವಟಿಕೆಗೆ ನ್ಯೂಯಾರ್ಕ್ ಉತ್ತಮ ಕೇಂದ್ರವೆಂದು ಮನಗಂಡು ಅಲ್ಲಿಗೆ ಸ್ಥಳಾಂತರಗೊಂಡರು. ಅಲ್ಲಿ ಅವರಿಗೆ ಅವರ ಸಾಹಿತ್ಯ ಚಟುವಟಿಕೆಗಳಿಗೆ ಒಳ್ಳೆಯ ಗ್ರಂಥಾಲಯ ಸೌಲಭ್ಯ ದೊರೆಯಿತು. ಸ್ವತಃ ನ್ಯೂಯಾರ್ಕ್ ಪಟ್ಟಣವೇ ಅವರಿಗೆ ಮನುಕುಲದ ವಸ್ತು ಸಂಗ್ರಹಾಲಯದ ರೂಪದಲ್ಲಿ ಅಧ್ಯಯನಕ್ಕೆ ಆಸಕ್ತಿಯ ನೆಲೆಯಾಯಿತು. ಭಾರತದ ಸಮಸ್ಯೆಗೆ ಸಂಬಂಧಪಟ್ಟಂತೆ ಅವರಲ್ಲು

ಅಮೆರಿಕ ಯುದ್ಧದಲ್ಲಿ ಪಾಲ್ಗೊಂಡ ನಂತರ ಅಮೆರಿಕನ್ನರಲ್ಲಿ ನೇರ ಪರಿಚಯ ಮಾಡಿಕೊಳ್ಳುವ ತಮ್ಮ ಕೆಲಸಕ್ಕೆ ನ್ಯೂಯಾರ್ಕ್ ಅತ್ಯುತ್ತಮ ಕೇಂದ್ರವೆಂದು ಅವರಿಗೆ ಮನವರಿಕೆಯಾಯಿತು. 1400 ಬ್ರಾಡ್‌ವೇ ಅವರ ಕೆಲಸದ ಕೇಂದ್ರ ಕಾರ್ಯವಾಯಿತು. ಭಾರತದ ಹಿತಕ್ಕೆ ಸಂಬಂಧಪಟ್ಟ ಎಲ್ಲಾ ಚಟುವಟಿಕೆಗಳು ಅಲ್ಲಿಯೇ ಹೊರಹೊಮ್ಮ ತೊಡಗಿದವು. ನ್ಯೂಯಾರ್ಕ್‌ಗೆ ಸ್ಥಳಾಂತರಗೊಂಡ ಕೆಲವೇ ದಿನಗಳಲ್ಲಿ ಲಜಪತರಿಗೆ ಅಲ್ಲಿದ್ದ ಗುಜರಾತಿ ಮತ್ತು ವ್ಯಾಪಾರಿ ದವೆ ಪರಿಚಯವಾಯಿತು. ಲಾಲಾಜಿ ಅವರ ಆದರ ಆತಿಥ್ಯ ಸವಿದರು. ಸ್ವತಃ ಅಗ್ನಿಮಾಂದ್ಯದ ರೋಗಿ ಅವರಾದರೂ ದವೆ ಅವರ ಬಳಿ ನೈಪುಣ್ಯತೆ ಸಾಧಿಸಿದ ಅಡಿಗೆಯವಳಿದ್ದಳು. ಆಕೆಯ ಪಾಕ ನಾಲಿಗೆಯಲ್ಲಿ ನೀರೂರಿಸುತ್ತಿತ್ತು. ಅತಿಥಿಗಳನ್ನು ಉಪಚರಿಸುತ್ತಿದ್ದ ಪರಿ ಶ್ಲಾಘನೀಯವಾಗಿತ್ತು.

ಲಜಪತರಿಗೆ ಅವರು ಕೈಗೊಂಡ ಕಾರ್ಯಗಳೆಲ್ಲವೂ ಸುಲಭವೂ ಸುಲಲಿತವೂ ಆಗಿರಲಿಲ್ಲ. ಜಪಾನಿನಲ್ಲಿರಲಿ, ಅಮೆರಿಕದಲ್ಲಿರಲಿ ಸೆನ್ಸಾರ್‌ಶಿಪ್ ಮತ್ತು ಬೇಹುಗಾರಿಕೆ ಮುಂತಾದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕರಿ ನೆರಳುಗಳು ಅವರ ಬೆನ್ನು ಹತ್ತಿದ್ದವು. ಅಮೆರಿಕ ಸರ್ಕಾರ ಯುದ್ಧದಲ್ಲಿ ಪಾಲ್ಗೊಳ್ಳಲು ಸಮ್ಮತಿಸದಿದ್ದ ಸಮಯದಲ್ಲೂ ಸಹ ಬ್ರಿಟಿಷ್ ಬೇಹುಗಾರರು ಲಜಪತರನ್ನು ಕಾಡತೊಡಗಿದರು.

ಬ್ರಿಟನ್‌ನಲ್ಲಿ ಬೆನ್ನು ಹತ್ತಿದ ಅವರು ಅಮೆರಿಕದಲ್ಲೂ ಪೀಡಿಸ ತೊಡಗಿದರು. ಲಜಪತರು ಅವರ ವಿಷಯದಲ್ಲಿ ಎಚ್ಚರಿಕೆಯ ನಿಗಾ ಇಟ್ಟಿದ್ದರು. ಈ ಬಗ್ಗೆ ಫ್ರಾನ್ಸಿಸ್ ಹ್ಯಾಕೆಟ್ ತಮ್ಮ ಅನುಭವವೊಂದನ್ನು ಬರೆದಿಟ್ಟಿದ್ದಾರೆ. ನ್ಯೂ ರಿಪಬ್ಲಿಕ್ ಕಚೇರಿಗೆ ಲಜಪತರು ಭೇಟಿ ಕೊಟ್ಟಾಗಿನ ಪ್ರಸಂಗಕ್ಕೆ ಸಂಬಂಧಪಟ್ಟದ್ದು ಅದು. ಲಜಪತ್‌ರಾಯ್ ಅವರ ಸ್ಮರಣ ಸಂಚಿಕೆಯಾಗಿ ಹೊರತರಲಾದ ದಿ ಪೀಪಲ್‌ನಲ್ಲಿ ಫ್ರಾನ್ಸಿಸ್ ಹ್ಯಾಕೆಟ್ ಅವರ ಆ ನೆನಪು ಪ್ರಕಟಗೊಂಡಿದೆ.

''ಒಂದು ದಿನ ಅವರು ನನ್ನ ಕಚೇರಿ ಇದ್ದ ಬೀದಿಗೆ ಬಂದರು. ಅವರು ತುಂಬಾ ಉದ್ರಿಕ್ತಗೊಂಡಂತೆ ಇದ್ದರು. ತೀರಾ ಅಪರೂಪದ್ದೆನ್ನ ಬಹುದಾದ ಹಳೆ ಮಾದರಿಯ ಪುಟ್ಟ ಡಿಸ್ಕ್‌ವೊಂದು ಅವರ ಕೈಯಲ್ಲಿತ್ತು. ಅದೊಂದು ಮೈಕ್ರೋ ಫೋನ್ ತಲೆ ಭಾಗ. ಅದನ್ನು ಅಮೆರಿಕನ್ ಬೇಹುಗಾರಿಕೆ ಪಡೆಯವರು ಅವರ ಕಚೇರಿ ಇದ್ದ ಬ್ರಾಡ್‌ವೇ ಕಟ್ಟಡದಲ್ಲಿ ಅಡಗಿಸಿದ್ದರು. ಅದು ಲಜಪತರ ಜೊತೆಯಲ್ಲಿದ್ದ ಇತರ ಭಾರತೀಯ ವಿದೇಶಿ ವಾಸಿಗಳು ಭೇಟಿಯಾಗುತ್ತಿದ್ದ ಸ್ಥಳದಲ್ಲಿ ಆ ಮೇಕ್ರೋಫೋನ್‌ನ್ನು ಅಳವಡಿಸಲಾಗಿತ್ತು. ಆದರೆ ನೆಲ ಮಾಳಿಗೆಯಲ್ಲಿ ಲಜಪತರು ಮತ್ತು ಇತರರು ಆ ಪತ್ತೆದಾರಿ ಸಾಧನವನ್ನು ಪತ್ತೆ ಹಚ್ಚಿದ್ದರು. ಲಜಪತರು ತಮ್ಮ ತಾಯಿ ಭಾಷೆಯ ಹಾಸ್ಯಪರ ವಾಕ್ಯಗಳನ್ನು ಬೆರೆಸಿ ಆ ದಿನ ನಡೆದ ಘಟನೆಯನ್ನು ಕುತೂಹಲಕಾರಿಯಾಗಿ ತಿಳಿಸಿದರು. ನೆಲ ಮಾಳಿಗೆಯಲ್ಲಿ ಅಡಗಿಸಿದ್ದ ಮೈಕ್ರೋಫೋನ್ ತೆಗೆಯುವ ಹಂತದಲ್ಲಿ ಅವರು ನಡೆಸಿದ ಯತ್ನ ಅಲ್ಲಿದ್ದ ಬೇಹುಗಾರರನೋರ್ವನ ತಲೆಗೆ ಭಾರಿ ಪೆಟ್ಟು ಕೊಟ್ಟಿತು. ಆ ಪ್ರಸಂಗ ನಮ್ಮನ್ನು ಚಕಿತಗೊಳಿಸಿತು. ಬ್ರಿಟನ್ ಬೇಹುಗಾರಿಕೆ ಪಡೆಯ ಚಟುವಟಿಕೆಯ ಬಗ್ಗೆ ಲಜಪತರು ಎಷ್ಟು ಜಾಗೃತರಾಗಿದ್ದರು ಎಂಬುದನ್ನು ಅದು ಸಾರಿ ಸಾರಿ ಹೇಳಿತು.''

ಲಾಲಾಜಿ ಅವರು ಆಗಿಂದಾಗ್ಗೆ ಬ್ರಿಟಿಷ್ ಪತ್ರಿಕೆಗಳಿಗೆ ಬರೆಯುತ್ತಿದ್ದರು. ಸಿಡ್ನಿ ವೆಬ್ ಲಜಪತರ ಬಗ್ಗೆ ಹೆಚ್ಚು ಅಭಿಮಾನ ಹೊಂದಿದ್ದವರು. ಅವರು ಒಮ್ಮೆ ಲಜಪತರಿಗೆ ಹೀಗೊಂದು ಪತ್ರ ಬರೆದರು. ಅದರಲ್ಲಿ ಸಾಧ್ಯವಾದಷ್ಟು ಲಜಪತರನ್ನು ಸಮಾಧಾನಪಡಿಸುವ ಯತ್ನ ಮಾಡಿದರು.

ಆತ್ಮೀಯ ಲಜಪತ್‌ರಾಯ್,

ನಿಮ್ಮ ಎರಡು ಪತ್ರಗಳು ತಲುಪಿವೆ. ಸದ್ಯದ ಅಂಚೆ ಸೇವಾ ಸ್ಥಿತಿ ಪತ್ರೋತ್ತರಕ್ಕೆ ಅನುಕೂಲವಾಗಿಲ್ಲ. ಎಲ್ಲಾ ಪತ್ರಗಳನ್ನು ಒಡೆದು ನೋಡಲಾಗುತ್ತಿದೆ ಎಂಬ ವಿಷಯವನ್ನು ನಾನು ನಿಮಗೆ ತಿಳಿಸುವ ಪ್ರಮೇಯವೂ ಇಲ್ಲ. ಆದ್ದರಿಂದ ವೈಯಕ್ತಿಕವಾದದ್ದು ಯಾವುದೂ ಪತ್ರದಲ್ಲಿ ಪ್ರಸ್ತಾಪ ಬೇಡ. ನೀವು ಹೆಸರಿಸಿರುವ ನಿಯತಕಾಲಿಕೆಯ ಸಂಪಾದಕರಿಗೆ ನೀವು ಕಳುಹಿಸಿರುವುದನ್ನು ನಾನು ತಲುಪಿಸುತ್ತೇನೆ. ನಿಮ್ಮ ಲೇಖನಗಳನ್ನು ನೇರವಾಗಿ ಅವರ ವಿಳಾಸಕ್ಕೆ ಕಳುಹಿಸಿದರೆ ಕ್ಷೇಮಕರ. ಸಾಮಾನ್ಯ ದಿನಗಳಲ್ಲಿ ಯಾವುದೇ ಸರ್ಕಾರ ಇಂಥ ಕೆಲಸಗಳನ್ನು ಮಾಡಿದರೆ ಅದು ಸರ್ವಾಧಿಕಾರದ ವರ್ತನೆ ಎಂತಲೋ, ಕಾನೂನುಬಾಹಿರವೆಂತಲೋ, ಖಂಡಿಸಬಹುದು. ಆದರೆ ಯುದ್ಧ ಕಾಲದಲ್ಲಿ ನ್ಯಾಯದ ದೃಷ್ಟಿಯಿಂದಾಗಲಿ ಇಲ್ಲವೇ ಬೇರಾವುದೇ ರೂಪದಲ್ಲಾಗಲಿ ಸರ್ಕಾರದ ವರ್ತನೆ ವಿರುದ್ಧ ಟೀಕೆಗಳನ್ನು ಮಾಡುವುದು ಕಷ್ಟಕರ. ಪತ್ರದಲ್ಲಿ ನೀವು ಪ್ರಸ್ತಾಪಿಸಿರುವ ದೇಶ, ಅಷ್ಟೇ ಏಕೆ ಇತರೆ ದೇಶಗಳ ಸರ್ಕಾರದಲ್ಲೂ ಸಹ ಇಂತಹ ಕೆಲಸಗಳು ನಡೆಯುತ್ತವೆ. ಈ ಸರ್ಕಾರ ಅಥವಾ ಬೇರಾವುದೇ ಸರ್ಕಾರದ ನಡವಳಿಕೆಗಳನ್ನು ನಾನು ಸಮರ್ಥಿಸಿಕೊಳ್ಳುತ್ತಿದ್ದೇನೆಂದು ನನ್ನ ಅಭಿಪ್ರಾಯದ ಭಾವನೆ ಅಲ್ಲ. ಆದರೆ ಹಾಗೆ ದೂರುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಜಗತ್ತಿನ ನಾನಾ ಕಡೆ ಅನೇಕ ಜನರು ಅನುಭವಿಸುತ್ತಿರುವ ಭಯಂಕರ ದಬ್ಬಾಳಿಕೆ ನಿಜಕ್ಕೂ ಶೋಚನೀಯವಾದದ್ದು. ಆದಾಗ್ಯೂ ನಾನು ಹೇಳುವುದಿಷ್ಟೇ. ಕಾಲದ ಗತಿಯಲ್ಲಿ ಇದೊಂದು ಹಂತವಷ್ಟೇ. ಶಾಂತಿ ಮರಳಿದಾಗ ಈಗ ನೋವು ನರಳಾಟಕ್ಕೆ ಒಳಗಾದ ಜನರೆಲ್ಲಾ ಉತ್ತಮ ಸ್ಥಿತಿ ಕಾಣುತ್ತಾರೆಂದು ನನ್ನ ಧೋರಣೆ. ನೀವು ಆ ಪತ್ರದ ಭಾವವನ್ನು ಅಪಾರ್ಥ ಮಾಡಿಕೊಳ್ಳುವುದಿಲ್ಲವೆಂಬ ಖಾತರಿ ನನಗಿದೆ. ನೋವಿನಿಂದ ನರಳುತ್ತಿರುವವರ ವಿಷಯದಲ್ಲಿ ಈ ಪತ್ರದಲ್ಲಿ ಕಿಂಚಿತ್ತೂ ಅನುಕಂಪವಿಲ್ಲವೆಂಬ ಭಾವನೆ ಬಂದರೂ ಬರಬಹುದು. ಜಗತ್ತನ್ನು ಆವರಿಸಿಕೊಂಡಿರುವ ಭಯಾನಕ ವಿಪ್ಲವದ ಈ ಪರಿಸ್ಥಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಒಳ್ಳೆಯದನ್ನೇ ನಾವು ಆಶಿಸ ಬಯಸೋಣ. ಈ ಹಿಂದಿನ ಎಲ್ಲಾ ಕ್ರೂರ ನಡವಳಿಕೆಗಳು ತಾತ್ಕಾಲಿಕವೆಂದು ಭಾವಿಸೋಣ. ನಾವಿಬ್ಬರು ಸಂಧಿಸುವ ಕಾಲ ಬಹಳ ದೂರವಿಲ್ಲವೆಂದು ನನಗೆ ಅನ್ನಿಸುತ್ತಿದೆ."

ಅಮೆರಿಕದ ರಾಜಕೀಯದ ಅಭಿಮತವನ್ನು ಭಾರತದ ಪರವಾಗಿ ಕಾಯ್ದಿರಿಸಿಕೊಳ್ಳಬೇಕಾದರೆ ಬ್ರಿಟಿಷರ ಪ್ರತಿಕೂಲ ಪ್ರಚಾರವನ್ನು ಹಿಮ್ಮೆಟ್ಟಿಸಲೇಬೇಕಾಗಿತ್ತು. ಆದರೆ ಕಾಲ ಕಾಲಕ್ಕೂ ಲಾಲಾಜಿ ಅವರಿಗೆ ಅವರ ಆಯ್ಕೆಯ ವ್ಯಕ್ತಿಗಳು ಹೆಚ್ಚು ಕಡಿಮೆ ತೊಡಕಾಗಿಯೇ ಕಂಡು ಬರತೊಡಗಿದರು. ಅಂತಹವರು ಬ್ರಿಟಿಷ್ ಏಜಂಟರು ಹೌದೋ ಅಲ್ಲವೋ ಎಂಬುದನ್ನು ಖಾತರಿ ಪಡಿಸಿಕೊಳ್ಳುವಷ್ಟರಲ್ಲಿ ಅನಾಹುತವಾಗಿರುತ್ತಿತ್ತು. ಕ್ರಿಶ್ಚಿಯನ್

ಮಿಷನರಿಗಳದು ಇನ್ನೊಂದು ಬಗೆಯ ಉಪಟಳ. ಭಾರತದಲ್ಲಿ ದುರ್ಭಿಕ್ಷ ಪೀಡಿತ ಪ್ರದೇಶಗಳಲ್ಲಿ ಅನಾಥರಿಗೆ ಪರಿಹಾರಗಳನ್ನು ಕಲ್ಪಿಸಿಕೊಟ್ಟವರೆಂಬ ಸಿಟ್ಟು ಬೇರೆ ಅವರಲ್ಲಿ ಮತ್ಸರ ಮೂಡಿಸಿತ್ತು. ಲಜಪತರು ಆ ಕಾರ್ಯ ಕೈಗೊಳ್ಳದಿದ್ದರೆ ಕ್ರಿಶ್ಚಿಯನ್ ಮಿಷನರಿಗಳಿಗೆ ವಾಸ್ತವ್ಯದ ಮುಸುಕಿನಲ್ಲಿ ಲೂಟಿಗೆ ರಾಜರೋಷದ ಅವಕಾಶ ಪ್ರಾಪ್ತವಾಗಿರುತ್ತಿತ್ತು. ಅನಾಥರ 'ಬಂಧುಗಳು' ತಾವೇ ಎಂದು ತೋರ್ಪಡಿಸಿಕೊಳ್ಳುವುದರ ಜೊತೆಗೆ ಮತಾಂಧದ ತಮ್ಮ ಘಾತಕ ಕೃತ್ಯಗಳನ್ನು ಸರಳ ಸುಲಭವಾಗಿ ಈಡೇರಿಸಿಕೊಳ್ಳುತ್ತಿದ್ದರು ಅವರು. ಆ ಮಿಷನರಿಗಳು ಅಮೆರಿಕದ ಜನತೆಗೆ ಲಜಪತರು ಪರಿಚಯ ಮಾಡಿಕೊಡತೊಡಗಿದ ಭಾರತದ ಬಿಳಿ ಕೂದಲಿನ ನಾಗರಿಕತೆಯ ನಡವಳಿಕೆಗೆ ವಿರುದ್ಧವಾಗಿದ್ದರು. ತಮ್ಮ ಹಿತಕ್ಕೆ ಆ ಪ್ರಚಾರ ಮಾರಕವಾಗುತ್ತದೆ ಎಂದು ಹೆದರಿದ್ದರು. ಈಗಾಗಲೇ ಹೇಳಿರುವಂತೆ ಕ್ರಿಶ್ಚಿಯನ್ ಮಿಷನರಿಗಳಿಗೆ ಹೆಚ್ಚಿನ ಹಣ ಒದಗುತ್ತಿದ್ದದ್ದು ಅಮೆರಿಕದಿಂದಲೇ. ಲಾಲಾಜಿ ಕ್ರಿಶ್ಚಿಯನ್ ಮಿಷನರಿಗಳ ಬಣ್ಣವನ್ನು ಬಯಲಿಗೆಳೆಯತೊಡಗಿದರು. ಲಾಹೋರ್ ಕ್ರಿಶ್ಚಿಯನ್ ಕಾಲೇಜಿಗೆ ಸಂಬಂಧಪಟ್ಟ ಪ್ರಕರಣವೊಂದನ್ನು ಅವರು ಆಧಾರವಾಗಿ ಪ್ರಸ್ತಾಪಿಸುತ್ತಿದ್ದರು. ಆ ಕಾಲೇಜಿಗೆ ಸಂಬಂಧಪಟ್ಟ ಓರ್ವರೊಂದಿಗೆ ಲಾಲಾಜಿ ಒಂದು ಪ್ರಸಂಗವನ್ನು ಎದುರಿಸಬೇಕಾಗಿ ಬಂದಿತು. ಲಜಪತರು ಭಾಷಣ ಮಾಡುತ್ತಿದ್ದ ಒಂದು ಸಭೆಯಲ್ಲಿ ಆ ವ್ಯಕ್ತಿಯೂ ಇದ್ದರು. ಭಾಷಣದ ಮಧ್ಯೆ ಅವರು ನೀಡಿದ ಕೆಲವು ಅಂಕಿ ಅಂಶಗಳ ವಾಸ್ತವಿಕತೆಯ ಬಗ್ಗೆ ಆತ ಸಭೆಯ ಮಧ್ಯದಲ್ಲಿ ಎದ್ದು ನಿಂತು ಸವಾಲು ಎಸೆದ. ತಾನು ಎಸೆದ ಸವಾಲು ತನಗೆ ತಿರುಗುಬಾಣವಾದಾಗ ಆತ ಕೇಳಿದ,

''ಅಂದರೆ ಮಿಸ್ಟರ್ ರಾಯ್, ಭಾರತವನ್ನು ನೀವು ಪ್ರೀತಿಸಿದಷ್ಟು ನಾವು ಪ್ರೀತಿಸುವುದಿಲ್ಲವೆಂದು ನಿಮ್ಮ ಮಾತಿನ ಅರ್ಥವೇ?'' ಎಂದು ಕೇಳಿದ. ಕ್ಷಣವೂ ತಡವಿಲ್ಲದೆ ಬಾಣದಂತೆ ಮರು ಉತ್ತರ ಎರಗಿತು. :''ನೀವು ನನ್ನ ದೇಶವನ್ನು ಪ್ರೀತಿಸುವಷ್ಟರಮಟ್ಟಿಗೆ ನಾನೇನಾದರೂ ಪ್ರೀತಿಸಬೇಕಾಗಿ ಬಂದರೆ ಅದಕ್ಕಿಂತಲೂ ಸಮೀಪದಲ್ಲಿರುವ ನದಿಗೋ, ಹೊಳೆಗೋ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವುದೇ ನನಗೆ ಹಿತಕರವಾಗುತ್ತದೆ!''

ಅಂಚೆಯ ಮೂಲಕ ಲಜಪತ್‌ರಾಯ್ ಅವರಿಗೆ ಅನೇಕ ವೇಳೆ ಅನಿರೀಕ್ಷಿತ ವಲಯಗಳಿಂದಲೂ ಪತ್ರಗಳು ಬರುತ್ತಿದ್ದವು. ಅದರಲ್ಲಿ ವಿಚಿತ್ರ ಕೋರಿಕೆಗಳಿರುತ್ತಿದ್ದವು. ಅವರು ತಮ್ಮ ಅನೇಕ ಕಾಗದ ಪತ್ರಗಳನ್ನು ಕಾಪಾಡಿಕೊಂಡು ಇಟ್ಟಿದ್ದ ಲಕೋಟೆಯಲ್ಲಿ ದೊರೆತ ಅಂಥ ಒಂದು ಸುರಕ್ಷಿತ ಪತ್ರವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಅದರಲ್ಲಿ ಒಂದು ಕುತೂಹಲದ ಅಂಶವಿದೆ.

ಪತ್ರದ ಪಾಠ ಹೀಗಿದೆ:

ಲಜಪತ್‌ರಾಯ್ ಅವರಿಗೆ,

ನನ್ನ ಆತ್ಮೀಯ ಲಜಪತ್‌ರಾಯ್,

ನನ್ನ ಗೆಳೆಯ ಹಾಗು ಹಿತೈಷಿ ಪಿ.ವಿ. ಶುಕ್ಲಾ ನಿಮ್ಮ ಬಗ್ಗೆ ನನಗೆ ತಿಳಿಸಿ ನೀವು

ನನ್ನ ಆಶಯ ಮತ್ತು ಕುತೂಹಲವನ್ನು ಈಡೇರಿಸಿಕೊಳ್ಳಲು ಸಹಾಯ ಮಾಡುವಿರಿ ಎಂದಿದ್ದಾನೆ. ಆಧ್ಯಾತ್ಮದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂಬುದು ನನ್ನ ಆಸೆ ಮತ್ತು ಕುತೂಹಲ. ನೀವು ನನಗೆ ಈ ಬಗ್ಗೆ ಯಾವುದೇ ಸಲಹೆ ಮತ್ತು ಸೂಚನೆಯನ್ನು ದಯಮಾಡಿ ನೀಡಿದರೆ ನಾನು ಅದನ್ನು ಶ್ರದ್ಧೆಯಿಂದ ಸ್ವೀಕರಿಸಿ ಅಧ್ಯಯನ ಮಾಡುತ್ತೇನೆ.''

ಹಾಲಿವುಡ್‌ನಲ್ಲಿ ಸಹ ಆಧ್ಯಾತ್ಮಿಕ ಮಾರ್ಗದರ್ಶಕರಾಗಿ ಹಿಂದೂಗಳಿಗೆ ಅಷ್ಟೊಂದು ಗೌರವ ಮನ್ನಣೆಗಳಿದ್ದವು.

ಲಜಪತರ ವಿಷಯದಲ್ಲಿ ಅನೇಕ ಸಣ್ಣಪುಟ್ಟ ಆಶ್ಚರ್ಯದ ನಡವಳಿಕೆಗಳನ್ನು ಕಾಣಬಹುದು. ಅವರ ಕಾಗದ ಪತ್ರಗಳನ್ನು ನೋಡುತ್ತಿದ್ದಾಗ ನನಗೆ ಅಂತಹುದೊಂದು ಆಶ್ಚರ್ಯ ಉಂಟಾಯಿತು. ಸ್ಯಾನಿಷ್ ಭಾಷೆ ಕಲಿಯಲು ಲಾಲಾಜಿ ಶಾಲೆಯೊಂದಕ್ಕೆ ಸೇರಿದ್ದ ಘಟನೆ ಅದು. ನಮಗೆ ಗೊತ್ತಿರುವಂತೆ ತಮ್ಮ ಶಾಲಾ ದಿನಗಳಲ್ಲಿ ಕಲಿತುಕೊಂಡ ಭಾಷೆಯನ್ನಲ್ಲದೆ ಬೇರೆ ಯಾವುದೇ ಭಾಷೆಯನ್ನು ಅವರು ಕಲಿಯಲಿಲ್ಲ. ಹಾಗಿದ್ದರೂ ಸ್ಯಾನಿಷ್ ಭಾಷೆ ಕಲಿಯಲು ಅವರು ಏಕೆ ತವಕಪಟ್ಟರು ಎಂಬುದು ಉತ್ತರ ಕಾಣದ ಪ್ರಶ್ನೆಯಾಗಿದೆ. ನಿಜ ಸ್ಯಾನಿಷ್ ಒಂದು ಪ್ರಮುಖವಾದ ಭಾಷೆ. ಆದರೂ ಅವರು ಕೈಗೊಂಡಿದ್ದ ಕೆಲಸಕ್ಕೂ ಆ ಭಾಷೆಗೂ ಅಷ್ಟೇನೂ ಸಂಬಂಧವಿರಲಿಲ್ಲ. ಹಾಗಿದ್ದರೆ ಸ್ಯಾನಿಷ್ ಮಾತನಾಡುತ್ತಿದ್ದ ಅವರ ಗೆಳೆಯರಾದರೂ ಈ ಬಗ್ಗೆ ಅವರನ್ನು ಪ್ರೋತ್ಸಾಹಿಸಿದ್ದಿರಬಹುದೇ? ಹಾಗಿದ್ದರೆ, ಅವರಾರು?

ಅಮೆರಿಕ ಸಂಯುಕ್ತ ಸಂಸ್ಥಾನಗಳಿಗಿಂತಲೂ ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಸ್ಯಾನಿಷ್ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಇತ್ತು. ಹಾಗಿದ್ದರೆ ಆ ದೇಶಗಳಲ್ಲಿ ಯಾವುದೇ ಸಂಪರ್ಕ ಸಾಧಿಸಿಕೊಳ್ಳಲು ಲಾಲಾಜಿ ಯಾವುದೇ ಹಂತದಲ್ಲಿ ಯೋಚಿಸಿದ್ದರೇ? ಈ ಹಿಂದೆ ನಾವು ಓದಿರುವಂತೆ ತಮ್ಮ ಕ್ರಾಂತಿಕಾರಿ ಗೆಳೆಯರಿಗೆ ಅವರು ಸಲಹೆಯೊಂದನ್ನು ಕೊಟ್ಟು ತಮಗೆ ಬರುತಿದ್ದ ಹಣದಲ್ಲಿ ಸ್ವಲ್ಪ ಭಾಗವನ್ನು ದಕ್ಷಿಣ ಅಮೆರಿಕಗಳ ರಾಜ್ಯದಲ್ಲಿ ಭಾರತೀಯ ರಾಜಕೀಯ ನಿರಾಶ್ರಿತರಿಗೆ ಅಗತ್ಯ ಬಿದ್ದಾಗ ಆಶ್ರಯ ಪಡೆಯಲು ಅನುಕೂಲವಾಗುವಂತೆ ವಸಹಾತುಗಳನ್ನು ಸ್ಥಾಪಿಸಲು ಸೂಚಿಸಿದ್ದರು. ಆದರೆ ಅವರ ಈ ಸಲಹೆಗೆ ಜರ್ಮನಿಯಿಂದ ಬರುತ್ತಿದ್ದ ಹಣವನ್ನು ನಿಭಾಯಿಸುತ್ತಿದ್ದ ಆ ಕ್ರಾಂತಿಕಾರಿ ಮಿತ್ರರಿಂದ ಅನುಕೂಲಕರ ಪ್ರತಿಕ್ರಿಯೆ ಕಂಡು ಬರಲಿಲ್ಲ. ಆ ಉದ್ದೇಶವನ್ನು ಸ್ವತಃ ತಾವಾಗಿಯೇ ಅಥವಾ ಇನ್ನಾವುದೇ ಮಾರ್ಗದ ಮೂಲಕ ಈಡೇರಿಸಿಕೊಳ್ಳಲು ಲಾಲಾಜಿ ಬಯಸಿದ್ದರೇ? ಈ ನಿಟ್ಟಿನಲ್ಲಿ ಸ್ಯಾನಿಷ್ ಭಾಷೆಯ ಕಲಿಕೆ ಮತ್ತು ಅದರ ಜ್ಞಾನ ತಮಗೆ ಸಹಾಯವಾಗಬಹುದೆಂದು ಅವರೇನಾದರೂ ಆಲೋಚಿಸಿಕೊಂಡಿದ್ದರೇ? ಈ ಪ್ರಶ್ನೆಗಳಿಗೆ ಯಾವ ಉತ್ತರವು ನಮಗೆ ತಿಳಿದು ಬರುವುದಿಲ್ಲ. ಇದಲ್ಲದೆ ಅವರು ಸ್ಯಾನಿಷ್ ಭಾಷೆ ತರಗತಿಗೆ ಸೇರಿದ ವಿಷಯದಲ್ಲಿ ಬೇರಾವುದೇ ರೀತಿಯ ಊಹೆ ಮಾಡಲು ಸಾಧ್ಯವಿಲ್ಲ. ಕಡೆಯದಾಗಿ ತಮ್ಮನ್ನು ತಾವೇ ಗಡಿಪಾರು ಮಾಡಿಕೊಂಡ ಆ ದೇಶಭಕ್ತನ ಸ್ವಮುಂ ನಿಲುವಿನ ಬಗ್ಗೆ ಒಂದು ಇಣುಕು ನೋಟ. ಈ ಬಗ್ಗೆ ಯಂಗ್ ಇಂಡಿಯಾದಲ್ಲಿ ಅಟ್ ದಿ ಮದರ್ಸ್ ಫೀಟ್ ಶೀರ್ಷಿಕೆಯ ಅಜ್ಞಾತ ವ್ಯಕ್ತಿಯ ಲೇಖನದಲ್ಲಿನ ಕೆಲವು ವಾಕ್ಯಗಳನ್ನು ಓದಿ ನೋಡೋಣ:

"ಓ ಜನನಿ, ನಿನಗೆ ನಾನು ಏನನ್ನು ಸಮರ್ಪಿಸಲಿ? ನಿನ್ನ ಅಡಿದಾವರೆಗಳಲ್ಲಿ ಸಮರ್ಪಿಸುವಂತಹ ಬೆಲೆ ಬಾಳುವ ಯಾವ ವಸ್ತುವೂ ನನ್ನಲಿಲ್ಲ. ನಾನು ಓರ್ವ ದೀನ. ಆದರೂ ಯಾವುದೇ ಸಮಯದಲ್ಲಾದರೂ, ಯಾವುದೇ ಸ್ಥಳದಲ್ಲಾದರೂ ನಿನಗೆ ಸಮರ್ಪಿಸಬಹುದಾದ ಒಂದು ವಸ್ತು ನನ್ನಲ್ಲಿದೆ. ಅದುವೇ ನಿನ್ನ ಬಗ್ಗೆ ನನ್ನಲ್ಲಿರುವ ಅತುಳ ಪ್ರೇಮ, ಪ್ರೀತಿ. ಹೇ ಮಾತೆ, ನಾನು ನಿನ್ನನ್ನು ಪ್ರೀತಿಸುತ್ತೇನೆ; ನಾನು ನಿನ್ನನ್ನು ಅಪಾರವಾಗಿ ಗೌರವಿಸುತ್ತೇನೆ. ನಾನು ನಿನ್ನ ನಿತ್ಯ ಆರಾಧಕನೆಂದು ಘೋಷಿಸಿಕೊಂಡರೆ ನೀನು ನನ್ನನ್ನು ಕ್ಷಮಿಸುವೆಯಾ? ಹಾಗೆ ಹೇಳುವುದು ತೀರಾ ಉದ್ಧಟತನ ಹಾಗು ಕೃತಕವೆನಿಸುತ್ತದೆ ಎಂಬುದನ್ನು ನಾನು ಬಲ್ಲೆ... ಆದರೆ ನನ್ನ ಹೃದಯವನ್ನು ಪವಿತ್ರಗೊಳಿಸಬಲ್ಲ ಮಾತೆ ನೀನು. ನಿನಗೆ ಎಲ್ಲವೂ ಗೊತ್ತು. ನೀನು ನನ್ನ ಪ್ರಾರ್ಥನೆಯನ್ನು ಮನ್ನಿಸದೇ ಇರಲಾರೆ ಎಂಬ ವಿಶ್ವಾಸ ನನ್ನಲ್ಲಿದೆ... ಹೇ ಜನನಿ ಜನ್ಮಭೂಮಿ! ನೀನು ಮಾತೆಯರ ಮಾತೆ. ನಿನ್ನ ಸ್ಥಾನ ಅತಿ ಎತ್ತರದ್ದು. ಸರ್ವಶ್ರೇಷ್ಠವಾದದ್ದು. ಅದಕ್ಕಾಗಿಯೇ ನೀನು ಜಗನ್ಮಾತೆ. (ವಿಶ್ವಮಾತೆ) ಹೇ ತಾಯಿ, ಭಾರತಿ! ನಾನು ನಿನ್ನನ್ನು ಮಾತ್ರವೇ ಆ ಉನ್ನತ ಸ್ಥಾನದಲ್ಲಿಟ್ಟು ಆರಾಧಿಸುವೆ."

ಒಟ್ಟಿನಲ್ಲಿ ಭಾವನಾತ್ಮಕ -ಸ್ವಲ್ಪ ಬಾಲಿಶವೆಂದರೂ ಸರಿಯೇ ಬದುಕು ಮಾಗಿದ ಹಂತದಲ್ಲಿ ಜನರಲ್ಲಿ ಹೀಗಾವುದು ಸಹಜವೇನೋ? ಹಾಗಿದ್ದರೆ ಈ ಭಾಗವನ್ನು ಅಜ್ಞಾತ ಹೆಸರಿನಲ್ಲಿ ಪ್ರಕಟಿಸಿದ್ದೇಕೇ? ಬಹುಶಃ ಅವರ ಧ್ಯೇಯ ಧೋರಣೆಗಳು ಮತ್ತು ಭಾವನೆಗಳು ಪರಸ್ಪರ ಅನುರಕ್ತವಾಗಿದ್ದವೆಂಬ ಕಾರಣದಿಂದ ಹಾಗೇ ಮಾಡಿರಲೂಬಹುದು. ಏನೇ ಆದರೂ ವಿದೇಶವಾಸ ಪ್ರತ್ಯೇಕತೆಯ ವಿರಹವನ್ನು ಉದ್ದೀಪನಗೊಳಿಸಿದ್ದರೆ ಅತಿಶಯೋಕ್ತಿ ಏನಿಲ್ಲ. ಅದು ಬಾಲ ಭಾಷೆಯಾಗಿ ಅಭಿವ್ಯಕ್ತಗೊಂಡಿರಲು ಬಹುದು. ಹೃದಯಾಂತರಾಳದ ಒತ್ತಡ ಹಾಗೆ ಹೊರಹೊಮ್ಮಿರಲೂಬಹುದು. ಅಂತಹ ಪರಿಸ್ಥಿತಿ ತಮ್ಮದಿತ್ತೆಂದು ಬಹಿರಂಗವಾಗಿ ಒಪ್ಪಿಕೊಳ್ಳಲು ಅವರ ಹೊರಮನಸ್ಸು ಒಪ್ಪದಿರಲೂಬಹುದು.!

ದೇಶಭಕ್ತ ಮಾತ್ರ ತನ್ನ ನಾಡನ್ನು ಮಹಾದೇವಿಯಾಗಿ ಆರಾಧಿಸಬಲ್ಲ. ಜನನಿಯಾಗಿ ಸವಿಮೋದ ಅನುಭವಿಸಬಲ್ಲ. ಆತ ಮಾತ್ರ ಅಷ್ಟೊಂದು ಭಾವುಕನಾಗಬಲ್ಲ. ಕವಿಯ ಹೃದಯವು ಹಾಗೆ ಕಂಡು ಬರುತ್ತದೆಯಾದರೂ ಆತನ ಅಭಿವ್ಯಕ್ತಿ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಲಜಪತರು ಖಂಡಿತವಾಗಿಯೂ ಕವಿಯಲ್ಲ. ಅವರ ಕೆಲವು ರಚನೆಗಳು ಬಾಲಿಶವಾಗಿ ಕಂಡು ಬಂದರೂ ಅದರಲ್ಲಿ ನಿಸ್ಸಂಶಯವಾಗಿಯೂ ಮಹಾಶಕ್ತಿ ಅಡಕವಾಗಿರುತ್ತಿತ್ತು. ನಾನು ಇದರ ಅಂತಿಮ ಸ್ವರೂಪವನ್ನು ಕಣ್ಣಾರೆ ಕಂಡಿದ್ದೇನೆ. ಅಜ್ಞಾತ ವ್ಯಕ್ತಿಯ ಹೆಸರಿನ ಆ ಲೇಖನವನ್ನು ಭಗತ್‌ಸಿಂಗ್ ಓದಿ ತನ್ನನ್ನು ತಾನು ಮರೆತದ್ದನ್ನು ಕಂಡಿದ್ದೇನೆ. ಅದನ್ನು ಆತ ಬರೆದಿಟ್ಟುಕೊಂಡು ಮೇಲಿಂದ ಮೇಲೆ ಓದಿ ಭಾವಪರವಶನಾಗುತ್ತಿದ್ದ. ತನ್ನ ಒಡನಾಡಿಗಳಿಗೆಲ್ಲಾ ಓದಿ ಹೇಳುತ್ತಿದ್ದ!

ವಿದೇಶ ವಾಸದಿಂದ ಮರಳಿ ಬಂದ ಮೇಲೆ ನಾನು ಲಜಪತರೊಂದಿಗೆ ಕೊನೆಯತನಕ ಒಡನಾಡಿಯಾಗಿದ್ದವ. ತೀರಾ ಹತ್ತಿರದಲ್ಲಿದ್ದುಕೊಂಡು ಅವರೆಲ್ಲಾ ಭಾವನೆಗಳನ್ನು ನಾನು ಮನನ ಮಾಡಿಕೊಂಡವ. ಅವರ ಭಾಷಣಗಳಲ್ಲಾಗಲಿ,

ಬರಹಗಳಲ್ಲಾಗಲಿ ಅಂಥ ಅತಿ ಭಾವುಕತೆಯನ್ನು ಎಲ್ಲಿಯೂ ಯಾವಾಗಲೂ ಕಂಡವನಲ್ಲ. ತನ್ನ ನಾಡಿನಿಂದ ನಿರಂತರವಾಗಿ ಅನೇಕ ವರ್ಷಗಳ ಕಾಲ ದೂರದಲ್ಲಿರಬೇಕಾದ ಸಂದರ್ಭದಲ್ಲಿ ಅವರಲ್ಲಿ ಹಾಗಾಗಿರಬಹುದು. ತೀರಾ ಶೋಚನೀಯ ಪರಿಸ್ಥಿತಿಯನ್ನು ಕಂಡಾಗ ಅವರ ಭಾವನೆಗಳಲ್ಲಿ ಅತ್ಯುದ್ರೇಕವಾಗುತ್ತಿದ್ದದ್ದು ಕಂಡು ಬರುತ್ತಿತ್ತು. ಉದಾಹರಣೆಗೆ ದುರ್ಭಿಕ್ಷದ ಕರಾಳ ಛಾಯೆ ಹರಡಿದ ಸ್ವದೇಶದಲ್ಲಿ ಅಸಂಖ್ಯಾತ ಜನರು ಅಸಹಾಯಕರಾಗಿ ಆರ್ತನಾದ ಮಾಡುತ್ತಿದ್ದ ಸ್ಥಿತಿಯನ್ನು ಕಂಡಾಗ ಅವರಲ್ಲಿ ಹಾಗಾಗಿತ್ತು. ಭಾವನಾತ್ಮಕ ಪ್ರಚೋದನೆಯ ಸಾಲಿಗೆ *ಯಂಗ್ ಇಂಡಿಯಾ* ಪ್ರಕಟಿತ ಅವರ ಲೇಖನವು ಇನ್ನೊಂದು ಬಗೆಯಲ್ಲಿ ಸೇರಿಕೊಳ್ಳುತ್ತದೆ.

* * *

ಅಧ್ಯಾಯ-45

ಭಾರತದ ಮೇಲೆ ಪರಿಣಾಮ

ಜರ್ಮನಿ ಪರಾಭವಗೊಂಡಿತು. ಐದು ವರ್ಷಗಳ ಆ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ತಮ್ಮ ವಿಜಯವನ್ನು ಕಂಡು ಕೊಂಡವು- ''ಪ್ರಪಂಚದಲ್ಲಿ ಪ್ರಜಾಸತ್ತೆಯನ್ನು ಸುರಕ್ಷತೆ ಮಾಡಿಕೊಳ್ಳಲು'' ಯುದ್ಧ ಭೂಮಿಯಲ್ಲಿ, ಯುರೋಪಿನಲ್ಲೂ, ಏಷ್ಯಾದಲ್ಲೂ ಭಾರತೀಯ ಸೈನಿಕರು ತಮ್ಮ ವೀರತ್ವವನ್ನು ಮೆರೆಸಿದರು. ಮಿತ್ರ ರಾಷ್ಟ್ರಗಳು ತಮ್ಮ ವಿಜಯದ ಸಾಧನೆಗೆ ಬೆಂಬಲವಾಗಿ ಭಾರತದ ಸಂಪನ್ಮೂಲವನ್ನೇ ಹಿಗ್ಗಾಮುಗ್ಗಾ ಬಳಸಿಕೊಂಡರು. ಆದಾಗ್ಯೂ ವ್ಯಂಗ್ಯದ ನಡವಳಿಕೆಯೆಂದರೆ, ಸಾಮ್ರಾಜ್ಯಷಾಹಿ ಆಡಳಿತಗಾರರು ಭಾರತದಲ್ಲಿನ ತಮ್ಮ ಆಡಳಿತವನ್ನು ದಮನಕಾರಿಗೊಳಿಸಿ ದೇಶಿಯ ಜನರನ್ನು ಮತ್ತಷ್ಟು ತುಳಿತಕ್ಕೆ ಒಳಪಡಿಸಿ ವಸಹಾತುಷಾಹಿ ಆಡಳಿತವನ್ನು ಭದ್ರ ಮಾಡಿಕೊಳ್ಳಲು ಎಳಸಿದರು. ರೌಲತ್ ವಿಧೇಯಕಗಳ ಕಥೆ, ಗಾಂಧೀಜಿ ನಾಯಕತ್ವದಲ್ಲಿ ಹುಟ್ಟಿಕೊಂಡ ಚಳವಳಿ, ಜಲಿಯಾನವಾಲ್‌ಬಾಗ್ ಸಾಮೂಹಿಕ ಹತ್ಯಾಕಾಂಡದಂತಹ ಪ್ರತ್ಯುತ್ತರಗಳ ಮೂಲಕ ಬ್ರಿಟಿಷರ ದಬ್ಬಾಳಿಕೆಗೆ ಉತ್ತರ, ಭಾರತೀಯ ಜನನಾಯಕರಾಗಿ ಗಾಂಧೀಜಿ ಉದಯ-ಇವೆಲ್ಲಾ ತತ್ಪೂರ್ವಕ ಬೆಳವಣಿಗೆಗಳು. ಜಲಿಯಾನವಾಲ್‌ಬಾಗ್ ಸಾಮೂಹಿಕ ಹತ್ಯಾಕಾಂಡದ ವಿಷಯ ಹಬ್ಬದಂತೆ ನೋಡಿಕೊಂಡ ಬ್ರಿಟಿಷರ ಸರ್ವಾಧಿಕಾರಿ ಆಡಳಿತದ ವರ್ಚಸ್ಸನ್ನು ಪ್ರಶಂಸಿಸಲೇಬೇಕಾಗುತ್ತದೆ. ಆ ಬೀಭತ್ಸ ಘಟನೆ ನಡೆದು ತಿಂಗಳುಗಳೇ ಉರುಳಿದರೂ ಖಚಿತವಾದ ಪೂರ್ಣ ಪ್ರಮಾಣದ ವರದಿಗಳು ವಿದೇಶಗಳಲ್ಲಿ ಪ್ರಕಟಗೊಳ್ಳದಂತೆ ಕಪಿ ಮುಷ್ಟಿಯ ಹಿಡಿತ ಸಾಧಿಸಲಾಗಿತ್ತು. ಲಜಪತರಿಗೆ ಸುದ್ದಿ ತಿಳಿದಾಕ್ಷಣ ಅವರ ನೆಮ್ಮದಿ ಹರಣವಾಯಿತು. ವಿದೇಶದಲ್ಲಿನ ವಾಸ್ತವ್ಯ ಅವರಿಗೆ ದುಸ್ತರ ಎನಿಸತೊಡಗಿತು. ತನ್ನ ನಾಡಿನ ಜನರ ನೋವು ನಗಳಿಕೆ, ಅವರು ಅನುಭವಿಸುತ್ತಿದ್ದ ಅಪಮಾನಗಳ ಕಥೆಗಳನ್ನು ಕೇಳಿ ತಳಮಳಿಸಿದರು. ಅಮೆರಿಕದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು ಯಾವ ರೀತಿಯಲ್ಲೂ ಸಹಾಯ ಮಾಡುವವರಾಗಿರಲಿಲ್ಲ. ಯುದ್ಧ ಮುಗಿದ ನಂತರವೂ ಭಾರತಕ್ಕೆ ಮರಳಲು ಅವರಿಗೆ ಅವಕಾಶ ನೀಡಿರಲಿಲ್ಲ. ಅಥವಾ ವಿಳಂಬ ಮಾಡಲಾಯಿತು. ಭಾರತದ ಪತ್ರಿಕೆಗಳಿಗೆ ಕಳುಹಿಸಿಕೊಟ್ಟ 'ಸಂದೇಶ' ಒಂದರಲ್ಲಿ ಲಜಪತರು ತಮ್ಮ ಹೃದಯದ ತುಡಿತಗಳನ್ನು ಬಿಚ್ಚಿಟ್ಟರು.

''ಪಂಜಾಬಿನ ಜನತೆಗೆ ಸಂದೇಶ'' ಎಂದು ಅದು ಆರಂಭಗೊಂಡಿದೆ.:

''ಆತ್ಮೀಯರೇ,

ಪಂಜಾಬಿನಲ್ಲಿ ಈಗ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ನನ್ನಲ್ಲಿ ಆಗುತ್ತಿರುವ ಭಾವನೆಗಳನ್ನು ನಿಮಗೆ ಹೇಗೆ ತಿಳಿಸಲಿ... ನನ್ನ ಹೃದಯ ತುಂಬಿ ಬಂದಿದೆ. ನನ್ನ ನಾಲಿಗೆ

ಮೂಕವಾಗಿದೆ... ನಿಮ್ಮೊಂದಿಗೆ ಬಂದು ನಿಮ್ಮೆಲ್ಲಾ ನೋವು ನಂಜುಗಳಲ್ಲಿ ನಾನು ಒಬ್ಬನಾಗಬೇಕೆಂದು ಬಹುವಾಗಿ ಪ್ರಯತ್ನಿಸುತ್ತಿದ್ದೇನೆ. ಆದರೆ ನನ್ನ ಯತ್ನಕ್ಕೆ ಫಲ ಸಿಗುತ್ತಿಲ್ಲ. ಹುತಾತ್ಮನಾಗಬೇಕೆಂದು ನನ್ನ ಬಯಕೆಯಲ್ಲ. ನಿಮ್ಮೊಂದಿಗೆ ಇದ್ದು ನಿಮ್ಮ ನೋವು ನಂಜುಗಳ ಸ್ಥಿತಿಯಲ್ಲಿ ನಿಮ್ಮ ನೆರವಿಗೆ ನಾನು ಒದಗಬೇಕೆಂದು ಬಯಸುತ್ತಿದ್ದೇನೆ.''

ದೂರದಲ್ಲಿದ್ದುಕೊಂಡೇ ತಮಗೆ ತಿಳಿದು ಬರುತ್ತಿರುವ ಭಾರತದ ಸ್ಥಿತಿಯ ಬಗ್ಗೆ ಅವರು ತಮ್ಮ ಪ್ರತಿಕ್ರಿಯೆ ನೀಡಿದರು. ''ಎಲ್ಲವನ್ನು ಕೇಳಿ ಪರಾಮರ್ಶಿಸಿ, ನಿರ್ಧರಿಸಿ ಮತ್ತು ಮುನ್ನೆಡೆಯಿರಿ.'' ಎಂದು ಅವರು ತಮ್ಮ ದೇಶವಾಸಿಗಳಿಗೆ ನಿರ್ದೇಶನ ಕೊಟ್ಟರು. ಅವರು ಅತ್ಯಂತ ಕಟುವಾದ ಮಾತುಗಳಲ್ಲಿ ವಿದೇಶಿ ಆಳ್ವಿಕೆದಾರರನ್ನು ಟೀಕಿಸುವುದಕ್ಕಿಂತಲೂ ಹೆಚ್ಚಾಗಿ ತಮಗೆ ಜನ್ಮವಿತ್ತ ನಾಡಿಗೆ ಅಂಥ ದೀನ ಸ್ಥಿತಿಯನ್ನು ತಂದಿಟ್ಟ ತಮ್ಮ ದೇಶವಾಸಿಗಳನ್ನೇ ಟೀಕಿಸಿದರು.

''ನನ್ನ ಹೃದಯದ ತುಂಬಾ ನಂಜು ತುಂಬಿಕೊಂಡಿದೆ. ನನ್ನ ಆತ್ಮ ಅಶಾಂತಿಯ ಬೀಡಾಗಿದೆ. ಅಧಿಕಾರಷಾಹಿಯ ವರ್ತನೆಯ ಬಗ್ಗೆ ನನಗೆ ರೋಸಿ ಹೋಗಿದೆ. ಇದೆಲ್ಲದಕ್ಕಿಂತಲೂ ಹೆಚ್ಚಿನದಾಗಿ ನನ್ನದೇ ನಾಡಿನ ಜನರ ನಡವಳಿಕೆ, ವರ್ತನೆಗಳನ್ನು ಕಂಡು ನನ್ನಲ್ಲಿ ತೀರಾ ಜಿಗುಪ್ಸೆ ಉಂಟಾಗಿದೆ. ಈ ಎಲ್ಲಾ ಹೀನತನಗಳಿಗೆ ನಮ್ಮ ಜನರೇ ಕಾರಣರೆಂದು ನಾನು ಸಾರಿ ಹೇಳುತ್ತೇನೆ. ಅಂಥ ಜನರಿಂದ ನಿಮಗಾಗುತ್ತಿರುವ ದುಸ್ಥಿತಿಯನ್ನು ಕಂಡು ನನಗೆ ನಾಚಿಕೆಯಾಗುತ್ತಿದೆ. ಪಂಜಾಬಿನ ಜೀವ ಹರಣ ಮಾಡಲಾಗಿದೆ. ಅದರ ನೀತಿ ಸತ್ವವನ್ನೇ ಹೀರಲಾಗುತ್ತಿದೆ ಎಂದು ನಾನು ಕೇಳಲ್ಪಟ್ಟಿದ್ದೇನೆ. ಸಾರ್ವಜನಿಕ ಜೀವನ ನಿಸ್ತೇಜಗೊಂಡಿದೆ. ಎಲ್ಲೆಲ್ಲೂ ಭಯದ ನೆರಳೇ ಚಾಚಿಕೊಂಡಿದೆ ಎಂದು ನಾನು ಕೇಳುತ್ತಿದ್ದೇನೆ. ರಾಜಕೀಯ ಹೋರಾಟಗಾರರರನ್ನು ರಕ್ಷಿಸಲು ನ್ಯಾಯವಾದಿಗಳು ಹಿಂಜರಿಯುತ್ತಿದ್ದಾರೆಂದೂ, ಪತ್ರಿಕೆಗಳ ಪ್ರಕಟಣೆ ಅದುಮಿಡಲಾಗಿದೆ ಎಂದು ತಿಳಿದು ಬರುತ್ತಿದೆ. ಸ್ನೇಹ, ಪ್ರೇಮ, ಅನುಕಂಪ, ಸೌಹಾರ್ದ ಒಡನಾಟ ಮತ್ತು ತಾವು ತಮ್ಮವರೆಂಬ ಭಾವನೆಗಳು ಮಾಯವಾಗುತ್ತಿರುವಂತಿದೆ. ಅವರವರು ಅವರವರ ಹಿತವನ್ನಷ್ಟೇ ನೋಡಿಕೊಳ್ಳುತ್ತಿದ್ದಾರೆಂದು ಇತರರ ಪಾಲಿಗ ದೈತ್ಯ ಸ್ವರೂಪಿಗಳಾಗುತ್ತಿದ್ದಾರೆಂದು ಕೇಳಲ್ಪಡುತ್ತಿರುವೆ. ಪಂಜಾಬಿನ ಸ್ಥಿತಿ ಹೇಗಿರಬಹುದೆಂದು ನನಗೆ ಕಣ್ಣಿಗೆ ಕಟ್ಟಿದಂತಾಗಿದೆ: 1907ರ ಆ ಭೀಕರ ಪರಿಸ್ಥಿತಿಗಿಂತಲೂ ಘೋರ ಸ್ಥಿತಿ ನನಗೆ ಭಾಸವಾಗುತ್ತಿದೆ. 1910ರ ಸ್ಥಿತಿಯನ್ನು ಇದು ಮೀರಿಸಿರಬಹುದು. ಆದರೆ ಈ ಸಾರಿ ಪ್ರತಿ ಹೊಡೆತ ಕಠೋರವಾಗಿರುತ್ತದೆ. ಅದರ ಫಲಿತಾಂಶದಲ್ಲಿ 'ನಾಕೌಟ್' ಪರಿಸಮಾಪ್ತವಾಗುತ್ತದೆ.''

ಪಂಜಾಬಿನ ಯುವ ಜನತೆಗೆ ಲಜಪತರು ಕರೆಕೊಟ್ಟು ''ಧೈರ್ಯ, ಸಾಹಸ ಮತ್ತು ಉದಾರ ಹೋರಾಟದಲ್ಲಿ ತೊಡಗಿರುವ'' ನಾಯಕರಿಗೆ ಬೆಂಬಲವಾಗಿರಲು ನಿರ್ದೇಶಿಸಿದರು.

ಲಜಪತರು 'ಸಂಸ್ಥೆ'ಗಳ ವಿಷಯದಲ್ಲಿಯೂ ತೀವ್ರವಾದ ಅಭಿಪ್ರಾಯಗಳನ್ನು ಸಲಹೆ, ಸೂಚನೆಗಳನ್ನು ನೀಡಿದರು.

‘‘ನಮ್ಮ ಜೊತೆಯಲ್ಲಿ ಸಂಸ್ಥೆಗಳಿಗೆ ನಿಷ್ಠರಾದ, ಪ್ರಾಮಾಣಿಕ ಹಾಗು ದೇಶಭಕ್ತ ಜನರು ಅನೇಕರಿದ್ದಾರೆ. ಅಂಥ ಸಂಸ್ಥೆಗಳಿಂದಲೇ ತಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಿಕೊಳ್ಳಲು ಸಾಧ್ಯ ಎಂಬುದನ್ನು ಮರೆಯಬಾರದು. ಅವು ನಮಗಾಗಿ ಇರಬೇಕೆ ಹೊರತು ನಾವು ಅವುಗಳಿಗಾಗಿ ಅಲ್ಲ. ನೈತಿಕವಾಗಿ ಔನತ್ಯ ಸಾಧಿಸಿಕೊಂಡವರು ಜವಾಬ್ದಾರಿಯನ್ನು ತಮ್ಮ ಪ್ರಜ್ಞೆಯನ್ನಾಗಿ ಮಾಡಿಕೊಂಡವರು, ತ್ಯಾಗ, ಅರ್ಪಣೆಗಳಿಗೆ ತಮ್ಮನ್ನು ಮೀಸಲಿಟ್ಟುಕೊಂಡವರು, ನೀತಿ ಮತ್ತು ಕಾರಣಗಳಿಗಾಗಿ ಯಾವುದೇ ನರಳಾಟಕ್ಕೂ ಹಿಂಜರಿಯದಿರುವವರು, ಅಂಥ ಸಂಸ್ಥೆಗಳನ್ನು ಕಟ್ಟುವುದು ಅರ್ಥಪೂರ್ಣವಾಗುತ್ತದೆ. ನೀತಿಬಾಹಿರವಾದ ಜನರು ಗೌರವ ಬಾಹಿರರೂ ಜನಹಿತದ ಸತ್ವವನ್ನು ಕಳೆದುಕೊಂಡವರು ಮಿತ್ರರು ಹಾಗೂ ಸಹವರ್ತಿಗಳಲ್ಲಿ ಔದಾರ್ಯ ಮತ್ತು ನಿಷ್ಠೆ ಇಲ್ಲದವರು, ರಾಜಿ ಮತ್ತು ಸ್ವಅನುಕೂಲಕ್ಕೆ ಸದಾ ಸಿದ್ಧರಾದವರು, ಕಾಲಕ್ಕೆ ತಕ್ಕಂತೆ ತತ್ವಗಳನ್ನು ಬದಲಾಯಿಸಿಕೊಳ್ಳುವವರು ಅಂತಹ ಸಂಸ್ಥೆಗಳಲ್ಲಿ ಇರಲೇಕೂಡದು. ಸಂಸ್ಥೆಗಳು ಜೀವ ಪ್ರೇರಕಗಳಲ್ಲ. ಉತ್ಸಾಹದ ಸಂಪನ್ಮೂಲಗಳೂ ಅಲ್ಲ. ಅವುಗಳನ್ನು ನಡೆಸುವ ಜನರ ಮೇಲೆ ಅವೆಲ್ಲಾ ಅವಲಂಬಿತವಾಗಿರುತ್ತದೆ. ತ್ಯಾಗಶೀಲರೂ, ಉದಾರಚರಿತರು ನೇತೃತ್ವದಲ್ಲಿದ್ದರೆ ಅಂಥ ಸಂಸ್ಥೆಗಳು ಅಷ್ಟೇ ಎತ್ತರದಲ್ಲಿರುತ್ತವೆ. ನೀವು ನಮ್ಮ ಸಂಸ್ಥೆಗಳಿಗೆ ಬದ್ಧರಾಗಿರಿ. ಅವುಗಳನ್ನು ಬಲಯುತಗೊಳಿಸಿಕೊಳ್ಳಿರಿ. ಸಾಧ್ಯವಾದ ಎಲ್ಲಾ ರೀತಿಯಿಂದಲೂ ಅವುಗಳ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಿರಿ. ಆದೇ ಸಮಯದಲ್ಲಿ ನಿಮ್ಮ ವೈಯಕ್ತಿಕ ಉನ್ನತ ಧ್ಯೇಯ ಧೋರಣೆಗಳನ್ನು ಕುತೂಹಲ ಇಲ್ಲವೇ ಉತ್ಸಾಹದ ಪ್ರವಾಹದಲ್ಲಿ ಕೊಚ್ಚಿ ಹೋಗಲು ಬಿಡಬೇಡಿ. ಎಲ್ಲಾ ಕಾರಣದಿಂದಲೂ ನಿಮ್ಮತನವನ್ನು ನೀವು ಕಾಪಾಡಿಕೊಳ್ಳಿ. ಸಂಸ್ಥೆಯ ಹಿತ ಮತ್ತು ಅದರ ಸ್ಥಿತಿಗತಿ ಹಾಗೂ ಅದರ ಬೆಂಬಲದ ಹಿತಕ್ಕಾಗಿ ನಿಮ್ಮ ನೈತಿಕ ಹಾಗೂ ಅಂತಃಸತ್ವದ ಶಕ್ತಿಯನ್ನು ತೊಂದರೆಗೆ ಈಡು ಮಾಡಿಕೊಳ್ಳಬೇಡಿ. ನಿಮ್ಮ ವ್ಯಕ್ತಿಗತ ಸ್ಫೂರ್ತಿ, ಉತ್ಸಾಹಗಳು ಸದಾ ಕ್ರಿಯಾಶೀಲವಾಗಿರಲಿ. ಉನ್ನತ ಸ್ಥಾನದಲ್ಲಿ ಅವಿರಲಿ. ಅವು ಭ್ರಷ್ಟವಾಗಲು ಬಿಡಬೇಡಿ. ವ್ಯರ್ಥವಾಗಲು ಬಿಡಬೇಡಿ.’’ ಇಂತಹ ವಾಕ್ಯಗಳನ್ನು ಬರೆಯಬೇಕಾದರೆ ಲಜಪತರನ್ನು ನೋವಿಗೆ ಸಿಕ್ಕಿಸಿದ ಪ್ರಸಂಗಗಳು ಇದ್ದಿರಲೇಬೇಕು. ಅವರೇ ಅನೇಕ ಸಂಸ್ಥೆಗಳಲ್ಲಿ ಇದ್ದುಕೊಂಡು ಆ ವೇದಿಕೆಯಿಂದಲೇ ಸಾರ್ವಜನಿಕ ಸೇವೆಗೆ ನಿಮಗ್ನರಾದ ಪರಿಸ್ಥಿತಿ ಅದಲು ಬದಲಾಗಿರಬಹುದು. ಅವನ್ನೆಲ್ಲಾ ಅರಿತೇ ಅವರು ಹೀಗೆ ಎಚ್ಚರಿಕೆ, ತಿಳುವಳಿಕೆಯ, ಮನವರಿಕೆಯ ಮಾರ್ಗದರ್ಶನ ನೀಡಿರಬಹುದು.

ಅವರ ಪ್ರತಿಕ್ರಿಯೆಗಳು ಸಂಕೀರ್ಣ ಮನೋಧರ್ಮದ ಸಂಸ್ಥೆಯ ವಿಷಯದಲ್ಲಿಯೂ ಪ್ರಕಟಗೊಂಡಿತು:

‘‘ನಿಮ್ಮ ಹಿಂದೂ ಸಭಾ ಮತ್ತು ಮುಸ್ಲಿಂ ಲೀಗ್‌ಗಳನ್ನು ಅವುಗಳ ಪಾಡಿಗೆ ಬಿಟ್ಟುಬಿಡಿ. ನಿಮ್ಮ ಈಗಿನ ಎಲ್ಲಾ ತೊಂದರೆ ತೊಡರುಗಳಿಗೆ ಬಹುಮಟ್ಟಿಗೆ ಅದೇ ಕಾರಣ. ಅಂಥ ಸಂಕಷ್ಟಗಳಿಂದ ದೂರವಿರಿ. ಅವುಗಳ ಮೂಲ ಕಲ್ಪನೆಯೇ ಹುಸಿ. ಅವುಗಳ ಪ್ರಚಾರ ಸತ್ಯಾತೀತ. ಅವುಗಳ ಗುರಿ ವಿಷಮಯ. ಅಂತಹುಗಳ ಸಹವಾಸ ನೀತಿ ಭ್ರಷ್ಟವಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಾದರೂ ಎಲ್ಲಾ ರೀತಿಯ ದಾಷ್ಟಿಕ ಹಾಗೂ ಮತೀಯ ವಿವಾದಗಳನ್ನು ಬದಿಗಿಡಿ.’’

ಲಜಪತ್‌ರಾಯ್ ಹಿಂದೆಂದೂ ಸಹ ಕೋಮು ಸಂಘಟನೆಗಳ ಬಗ್ಗೆ ಇಷ್ಟೊಂದು ಕಠಿಣವಾದ ಅಭಿಪ್ರಾಯ ವ್ಯಕ್ತಪಡಿಸಿರಲಿಲ್ಲ. ವಿದೇಶದಲ್ಲಿ ಐದು ವರ್ಷಗಳ ಕಾಲ ಅವರು ಮನಗಂಡ ವಿಶಾಲ ಮನೋಧರ್ಮದ ಪ್ರತಿಫಲನ ಅದೆಂಬುದರಲ್ಲಿ ಅನುಮಾನವೇ ಇಲ್ಲ. ಅಮೆರಿಕ ಘೋಷಣೆ ಮಾದರಿಯಲ್ಲಿ ಲಜಪತರು ತಮ್ಮ ದೇಶವಾಸಿಗಳಿಗೆ "ಸಂಘಟಿತರಾಗಿ, ತಿಳವಳಿಕೆ ನೀಡಿ ಮತ್ತು ಪ್ರತಿಭಟಿಸಿ ನಿಲ್ಲಿ" ಎಂಬ ಘೋಷಣೆಗಳನ್ನು ಕೊಟ್ಟರು. ಅವರು ತಮ್ಮೆಲ್ಲಾ ಸಂದೇಶಗಳನ್ನು ಕ್ರೋಢಿಕರಿಸಿ ಮೂರು ಪದಗಳ ಸೂತ್ರವನ್ನು ಸಾರಿದರು. -"ಪುರುಷರಂತೆ ನಡೆದುಕೊಳ್ಳಿ"

ಮಾಹಾತ್ಮ ಗಾಂಧೀಜಿಯವರ ಬಗ್ಗೆ ತಮ್ಮ ಗೌರವ ಸಮರ್ಪಣೆ ಮಾಡುತ್ತಾ ಲಜಪತರು 'ನೀವೀಗ ಕಂಡು ಕೊಂಡಿರುವ ಗಾಂಧೀ ಅತ್ಯುತ್ತಮ ನಾಯಕರಾಗಿದ್ದಾರೆ' ಎಂದು ಹೇಳಿ ಅವರ ಮಾರ್ಗದರ್ಶನವನ್ನು ಅನುಕರಿಸಲು ತಮ್ಮ ದೇಶವಾಸಿಗಳಿಗೆ ಸಲಹೆ ಮಾಡಿದರು. ಆ ಪರಿಸ್ಥಿತಿಯಲ್ಲಿ ಭಾರತದಲ್ಲಿ ತಾನು ಇರಲಾಗದಿರುವುದಕ್ಕೆ ಲಜಪತರು ತೀವ್ರ ಮರುಕ ವ್ಯಕ್ತಪಡಿಸಿ -

"ನೇರವಾಗಿ ನಿಮಗೆ ಸಹಾಯ ಮಾಡಲು ನನ್ನಿಂದ ಆಗದಿರುವುದಕ್ಕೆ ನನಗೆ ವಿಷಾದವಾಗುತ್ತದೆ. ಆದರೂ ನಾನು ನಿಮ್ಮೊಡನೆ ನೇರವಾಗಿ ಇರಲಾಗದಿದ್ದರೂ ನನ್ನ ನಾಲಿಗೆ, ಲೇಖನಿ ಮತ್ತು ಹಣದ ಮೂಲಕ ಎಷ್ಟು ಸಾಧ್ಯವೋ ಅಷ್ಟನ್ನು ಖಂಡಿತವಾಗಿಯೂ ಎರಕ ಹಾಕುತ್ತೇನೆ. ನಿಮ್ಮ ಹಿತಕ್ಕಾಗಿ ನಾನು ಬೇಡುತ್ತೇನೆ. ಸಾಲ ಎತ್ತುತ್ತೇನೆ. ಕಳ್ಳತನವನ್ನಾದರೂ ಮಾಡುತ್ತೇನೆ. ನಿಮ್ಮ ಒಳಿತಿಗಾಗಿ ನಾನು ದುಡಿಯುವೆ. ನಾನು ಗಳಿಸಿದ್ದನ್ನೆಲ್ಲಾ ನಿಮಗೆ ಕಳುಹಿಸುವೆ. 20ನೇ ಶತಮಾನದ ಪಂಜಾಬಿಗಳು ಆತ್ಮಸ್ಥೈರ್ಯ ಕಳೆದುಕೊಂಡಿದ್ದರು. ಅವರನ್ನು ಸಂಪೂರ್ಣವಾಗಿ ವಿವಶಗೊಳಿಸಲಾಗಿತ್ತು. ಎಂದೆಂದೂ 'ಅವರು ತಲೆ ಎತ್ತದಂತೆ ಅವರ ನೈತಿಕ ಪತನ ನಡೆದಿತ್ತು ಎಂಬ ಅಪಖ್ಯಾತಿ ಮೂಡದಂತಾಗಲಿ" ಎಂದು ಕಳಕಳಿಯಿಂದ ನುಡಿದರು.

ಆ ಸಂದೇಶವನ್ನು ಹೀಗೆ ಅಂತ್ಯಗೊಳಿಸಲಾಗಿದೆ.

"ನೋವು, ನಂಜಿನಲ್ಲಿ ನಿಮ್ಮೊಂದಿಗೆ ಇರುವವ"

ಐರೋಪ್ಯದಲ್ಲಿ ಯುದ್ಧ ಆರಂಭವಾಗುವ ಮೊದಲೇ ಪಂಜಾಬಿನ ಪರಿಸ್ಥಿತಿ ವಿಕ್ಷುಬ್ಧಗೊಳ್ಳತೊಡಗಿತ್ತು. ಆ ಪ್ರಾಂತ್ಯದಲ್ಲಿ ಓ ಡಯರ್ ಆಡಳಿತದ ಅತಿರೇಕ ತುಟ್ಟತುದಿಗೇರಿತ್ತು. ಅದಕ್ಕೆ ಮೊದಲು ಸಣ್ಣಪುಟ್ಟ ಹುದ್ದೆಯಲ್ಲಿ ಪಂಜಾಬಿನಲ್ಲಿದ್ದು ನಂತರ ಸುಮಾರು 15 ವರ್ಷಗಳ ಕಾಲ ದೂರವಾಗಿದ್ದ ಸರ್ ಮೈಕೆಲ್ ಓ ಡಯರ್ ಪ್ರಾಂತೀಯ ಸರ್ಕಾರದ ಮುಖ್ಯಸ್ಥರಾಗಿ 1913 ಮೇ 26ರಂದು ಮರಳಿದ್ದ.

ಗಾಂಧೀಜಿ ಬ್ರಿಟಿಷರ ಯುದ್ಧದ ಪ್ರಯತ್ನಗಳಿಗೇ ತಮ್ಮದೇ ಆದ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು. ಹಾಗಾಗಿ ಗಾಂಧೀಜಿ ಅವರ ಹೋರಾಟದ ವಿಷಯದಲ್ಲಿ ಆ ವಿದೇಶಿ ಆಡಳಿತಗಾರರಲ್ಲಿ ಅಷ್ಟೊಂದು ಗಂಭೀರ ಭಾವನೆ ಇರಲಿಲ್ಲ. ಲಜಪತರು ಅದನ್ನು ಮನಗಂಡಿದ್ದರು. ಎನ್.ಎಸ್. ಹರ್ಡಿಕರ್ ಅವರು ಆ ದಿನಗಳಲ್ಲಿ ಗಾಂಧೀಜಿಯವರ ಬಗ್ಗೆ ತಳೆದಿದ್ದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ರಾಷ್ಟ್ರಪಿತ ಮಹಾತ್ಮ ಗಾಂಧೀ ಬಗ್ಗೆ ಅವರು ಹೀಗೆ ಹೇಳಿದರು.

''ಇವರು ಒಂದು ಉದಯೋನ್ಮುಖ ತಾರೆ. ಇವರು ಏನನ್ನು ಸಾಧಿಸಬಹುದು. ಮತ್ತು ಯಾವಾಗ ಎಂಬುದನ್ನು ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಕೆಲವು ಕಾಲ ಅವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ಗಂಭೀರವಾಗಿ ವೀಕ್ಷಿಸಬೇಕಾಗುತ್ತದೆ. ಅವರು ಬರೆಯುವ ಅಥವಾ ಆಡುವ ಪ್ರತಿ ಮಾತನ್ನು ಸಮಂಜಸವಾಗಿ ವಿಶ್ಲೇಷಿಸಬೇಕಾಗುತ್ತದೆ. ಆದ್ದರಿಂದ ಕಾಯ್ದು ನೋಡುವುದೇ ಒಳ್ಳೆಯದು.''

ಭಾರತದಿಂದ ದೂರದಲ್ಲಿದ್ದರೂ ಸಹ ಲಜಪತರು ಅಮೆರಿಕದ ಪತ್ರಿಕೆಗಳಲ್ಲಿ ಭಾರತದ ಬಗ್ಗೆ ಬರುತ್ತಿದ್ದ ವರದಿಗಳನ್ನೇ ಆಧಾರವಾಗಿಟ್ಟುಕೊಂಡು ಅವರು ಗಾಂಧೀಜಿಯುವರ ಹೋರಾಟದ ಸ್ಥಿತಿಗತಿಗಳನ್ನು ನಿಕಟವಾಗಿ ಅಧ್ಯಯನ ಮಾಡುತ್ತಿದ್ದರೆನಿಸುತ್ತದೆ. ಅವರು ತಮ್ಮ ಸಂದೇಶಗಳನ್ನು ಬರೆದು ಕಳುಹಿಸುವ ವೇಳೆಗೆ ಆ ಹೊಸ ನಾಯಕನ ವಿಷಯದಲ್ಲಿ ತಮ್ಮ ದೃಷ್ಟಿಕೋನವನ್ನು ಸ್ಪಷ್ಟವಾಗಿ ಅಂದಾಜು ಮಾಡಿಕೊಂಡಿದ್ದಾರೆಂದು ಕಂಡು ಬರುತ್ತದೆ. ಯುದ್ಧದ ಆರಂಭದ ದಿನಗಳಲ್ಲಿ ಲಂಡನ್ನಿನಲ್ಲಿ ಗಾಂಧೀಜಿ ಅವರು ತೋರಿದ ಪ್ರತಿಭಟನೆಯನ್ನು ಅವರು ಮನಗಂಡಿದ್ದರು-

ಲಜಪತರು ದೇಶದೊಂದಿಗಿನ ಅನುಬಂಧದಿಂದ ಬಹುಕಾಲ ದೂರ ಉಳಿದರು.

''ಆ ದೂರದ ಅವಧಿ'' ಈಗ ಹೆಚ್ಚು ಕಡಿಮೆ ಮುಗಿಯುತ್ತಾ ಬಂದಿತು. ತನ್ನ ಜನರೊಂದಿಗೆ ಮಿಳಿತಗೊಳ್ಳುವ ಕಾಲ ಅವರಿಗೆ ಪುನರ್ ಪ್ರಾಪ್ತವಾಗಲೇ ಬೇಕಾಗಿತ್ತು. ವಾಪಸಾಗುವ ಸಂಬಂಧದಲ್ಲಿ ಅಗತ್ಯ ಕಾರ್ಯಗಳನ್ನೆಲ್ಲಾ ಅವರು ಕೈಗೊಳ್ಳ ತೊಡಗಿದರು. ಅಮೆರಿಕದಲ್ಲಿ ತಾವು ಕಟ್ಟಿದ ಸಂಸ್ಥೆಗಳ ಭದ್ರತೆಗೆ ತಕ್ಕ ವ್ಯವಸ್ಥೆ ಮಾಡಿದರು. ಭಾರತಕ್ಕೆ ಮರಳುವ ಅವರ ಯತ್ನಕ್ಕೆ ಬ್ರಿಟಿಷ್ ಅಧಿಕಾರಸ್ಥರಿಂದ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟು ಅಡ್ಡಿಯಾಯಿತು. ಪಾಸ್‌ಪೋರ್ಟ್ ಪಡೆದುಕೊಳ್ಳಲು ಅವರು ದೊಡ್ಡ ಹೋರಾಟವನ್ನೇ ಮಾಡಬೇಕಾಯಿತು.

ಫ್ರಾನ್ಸಿಸ್ ಹ್ಯಾಕೆಟ್ ಅವರು ಲಾಲಾಜಿ ಪಾಸ್‌ಪೋರ್ಟ್ ಪಡೆದುಕೊಂಡ ಹೋರಾಟದ ಒಂದು ಕಿರು ನೋಟವನ್ನು ನೀಡಿದ್ದಾರೆ. ಅದು ಆ ಹೋರಾಟ ಮುಕ್ತಾಯಗೊಂಡ ಹಂತಕ್ಕೆ ಸಂಬಂಧಪಟ್ಟದ್ದು:

''ನ್ಯೂಯಾರ್ಕ್‌ನಲ್ಲಿದ್ದ ಇಂಗ್ಲಿಷ್ ಪಾಸ್‌ಪೋರ್ಟ್ ಕಚೇರಿಯಿಂದ ವೀಸಾ ಪಡೆದುಕೊಳ್ಳಲು ಅವರಿಗೆ ತುಂಬಾ ಪ್ರಯಾಸವಾಯಿತು. ಅವರ ಹೆಸರು ಕಪ್ಪು ಪಟ್ಟಿಯಲ್ಲಿದ್ದದ್ದು ನಿಸ್ಸಂಶಯ. ಪಾಸ್‌ಪೋರ್ಟ್ ಗಳಿಕೆಗೆ ಪೂರ್ವ ಹಂತದ ಕಚೇರಿ ವ್ಯವಹಾರಕ್ಕೂ ಅವರಿಗೆ ಅವಕಾಶ ನೀಡಲಿಲ್ಲ. ಸಾಕಷ್ಟು ಹೋರಾಟದ ನಂತರ ಅಲ್ಲಿಗೆ ಪ್ರವೇಶ ಪ್ರಾಪ್ತವಾಯಿತಾದರೂ ನಿರೀಕ್ಷೆಗೆ ಮೀರಿದಷ್ಟು ವಿಳಂಬ ಮಾಡಲಾಯಿತು. ಇಂಗ್ಲಿಷ್ ಗುಮಾಸ್ತನೊಬ್ಬನೊಂದಿಗೆ ಲಜಪತರು ಸಂಘರ್ಷಕ್ಕೆ ಇಳಿದದ್ದು ಆ ತರಹದ ಅಡ್ಡಾದಿಡ್ಡಿ ಉದ್ಧಟತನಕ್ಕೆ ಕಾರಣವಾಗಿತ್ತು. ಈ ಬ್ರಿಟಿಷ್ ಅಧಿಕಾರಿಷಾಹಿ ಬಗ್ಗೆ ಷೇಕ್ಸ್‌ಪಿಯರ್ ಮಾಡಿರುವ ವ್ಯಂಗ್ಯ ಮತ್ತು ಗೂಂಡಾವೃತ್ತಿ ನಡವಳಿಕೆಗೆ ಹೇಳಿ

ಮಾಡಿಸಿದಂಥ ವ್ಯಕ್ತಿ ಆತ. ಲಜಪತರು ಆ ಕಚೇರಿಗೆ ಹೋದಾಗಲೆಲ್ಲಾ ಅವರನ್ನು ಸಾಕಷ್ಟು ಹೆಣಗಿಸಲಾಗುತ್ತಿತ್ತು. ಅವರ ಸಹನೆ, ತಾಳ್ಮೆಗಳನ್ನು ಪರೀಕ್ಷಿಸಲಾಗುತ್ತಿತ್ತು. ಇಡೀ ಬ್ರಿಟಿಷ್ ಆಡಳಿತವೇ ಲಜಪತರಿಗೆ ಕಿರುಕುಳ ಕೊಡುತ್ತಿದ್ದುದ್ದರ ಪ್ರತಿರೂಪ ಅಧಿಕಾರಿಯಾಗಿದ್ದಂತಿತ್ತು. ಒಮ್ಮೆ ಭೋಜನದ ಸಮಯದಲ್ಲಿ ಲಾಲಾಜಿ ಆ ಅಧಿಕಾರಿಯ ಅಸಹನೀಯ ವರ್ತನೆಯನ್ನು ನಿಸ್ಸಾಹಾಯಕರಾಗಿ ಹೇಳಿಬಿಟ್ಟರು. ಅವರು ಹಾಗೆ ಹೇಳಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಕಾರ್ಮೋಡದ ನಡುವೆ ಕಾಮನಬಿಲ್ಲುಗಳು ಮೂಡಿಬಂದ ಪ್ರಸಂಗಗಳು ಅವರ ವಿಪ್ಲವಕಾರಿ ಬದುಕಿನಲ್ಲಿ ಅದೆಷ್ಟೋ ಆಗಿದ್ದವು. ಆ ದಿನದ ಊಟದ ಕೂಟದಲ್ಲಿ ಓರ್ವ ಮಹಿಳೆಯೂ ಇದ್ದರು. ಆಕೆಗೆ ಓರ್ವ ಇಂಗ್ಲಿಷ್ ಅಧಿಕಾರಿಯ ಆತ್ಮೀಯ ಒಡನಾಟವಿತ್ತು. ತಮ್ಮಗೆಳೆಯ ಲಾಲಾಜಿ ಅವರಿಗೆ ಆಗುತ್ತಿದ್ದ ಕಿರುಕುಳವನ್ನು ಆಕೆಗೆ ಸಹಿಸಲಾಗಲಿಲ್ಲ. ಆಕೆ ತನ್ನ ಆ ಅಭಿಮಾನಿ ಇಂಗ್ಲಿಷ್ ಅಧಿಕಾರಿಯ ಬಳಿಗೆ ವಿಷಯವನ್ನು ಕೊಂಡೊಯ್ದರು. ಅವರ ಮುಖಾಂತರ ಲಾಲಾಜಿಗೆ ಕಿರುಕುಳ ಕೊಡುತ್ತಿದ್ದ ಅಧಿಕಾರಿ ಮೇಲೆ ಪ್ರಭಾವ ಬೀಳುವಂತೆ ಮಾಡಿದರು. ತತ್ಫಲವಾಗಿ ಮುಂದಿನ ಕೆಲವೇ ವಾರಗಳಲ್ಲಿ ಲಜಪತರು ಲಂಡನ್ ತಲುಪಿದರು. ಭಾರತದ ಕಾರ್ಯದರ್ಶಿಯೊಂದಿಗೆ ಮಾತುಕತೆ ನಡೆಸಿದರು.''

ಅಮೆರಿಕದಲ್ಲಿ 5 ವರ್ಷಗಳ ಪೂರ್ಣ ಅವಧಿ ಮುಗಿಸಿದ ಭಾರತೀಯ ಜನತೆಯ ಅನಧಿಕೃತ ರಾಯಭಾರಿಯ ವಿದೇಶವಾಸ ಎಷ್ಟೊಂದು ವಿಚಿತ್ರಮಯ, ವರ್ಣರಂಜಿತ, ಸಾಹಸಪ್ರಧಾನ. ನಿಜವಾಗಿಯೂ ಅದೊಂದು 'ರಾಜತಾಂತ್ರಿಕ' ರಾಯಭಾರವೇ ಸೈ. ಲಾಲಾ ಲಜಪತ್‌ರಾಯ್ 1921 ಫೆಬ್ರವರಿ 20ರಂದು 5 ವರ್ಷಗಳ ಸುದೀರ್ಘ ಸ್ವಯಂ ಗಡಿಪಾರಿನಿಂದ ಬಿಡುಗಡೆಗೊಂಡು ಮುಂಬಯಿಗೆ ಆಗಮಿಸುವ ಮೂಲಕ ತಾಯ್ನಾಡಿಗೆ ಪುನರ್ ಪಾದಾರ್ಪಣೆ ಮಾಡಿದರು.

* * *

ಕಡೆಗೂ ಸಂದಾಯ

ಅಧ್ಯಾಯ-46

ಕಾಂಗ್ರೆಸ್ ಅಧ್ಯಕ್ಷರಾಗಿ

ಮೂರನೇ ಬಾರಿಗೆ ಲಜಪತರಿಗೆ ಅದೇ ಸಂಘರ್ಷ ಎದುರಾಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಹೆಸರನ್ನು ಪ್ರಕಟಗೊಳಿಸಲು ಅನುಮತಿ ನೀಡಬೇಕೇ, ಬೇಡವೇ ಎಂಬ ತುಮುಲ ಅವರನ್ನು ಕಾಡತೊಡಗಿತು. ಹಿಂದಿನ ಸಂದಿಗ್ಧ ಈಗಿರಲಿಲ್ಲ. ಕೆಲವು ಸೌಮ್ಯವಾದಿ ನಾಯಕರನ್ನು ಬಿಟ್ಟುಕೊಡಬೇಕಾದಂತಹ ಇಕ್ಕಟ್ಟು ಇರಲಿಲ್ಲ. ಸೌಮ್ಯವಾದಿಗಳಲ್ಲೂ ಅವರನ್ನು ಹೇಗಾದರೂ ಮಾಡಿ ದೂರವಿಡಬೇಕೆಂದು ಬಯಸುತ್ತಿದ್ದ ವರ್ಗವೂ ಇರಲಿಲ್ಲ. ಕಾಂಗ್ರೆಸ್ ಅತ್ಯಂತ ತ್ವರಿತವಾಗಿ ಜನ ಸಮುದಾಯದ ಆಂದೋಲನವಾಗತೊಡಗಿತ್ತು. ಸೌಮ್ಯವಾದಿಗಳು ಲೆಕ್ಕಕ್ಕೂ ಇರಲಿಲ್ಲ. ಅಮೃತಸರದ ಅಧಿವೇಶನ ಈ ನಿಟ್ಟಿನಲ್ಲಿ ಗಮನಾರ್ಹವೆನಿಸತೊಡಗಿತು. ಸಾಮ್ರಾಜ್ಯಶಾಹಿ ಆಡಳಿತದ ವಿರುದ್ಧ ಕಠೋರ ಕಾರ್ಯಕ್ರಮವನ್ನು ನಿರೂಪಿಸದಿದ್ದರೂ ಆ ಅಧಿವೇಶನ ಜನಸಮುದಾಯದ ಆಶೋತ್ತರಗಳನ್ನು ಕಾಂಗ್ರೆಸ್ ಸಂಘಟನೆಯ ರೂಪದಲ್ಲಿ ನಿಚ್ಚಳವಾಗಿ ಪ್ರತಿಬಿಂಬಿಸಿತು. ಗೋಖಲೆ ಅವರ ನಿಧನದೊಂದಿಗೆ ಲಜಪತರು ವೈಯಕ್ತಿಕವಾಗಿ ಹೊಂದಿದ್ದ ಸಮಾನ ರಾಜಕೀಯ ದೃಷ್ಟಿಕೋನಕ್ಕಿಂತಲೂ ಭಿನ್ನವಾದ ಅನುಬಂಧ ಕಡಿದು ಹೋಗಿತ್ತು. 1907ರ ತಿಕ್ಕಾಟ ಈಗ ಅವರ ಮುಂದಿರಲಿಲ್ಲ. ಸೌಮ್ಯವಾದಿಗಳು ಅವರ ನಾಮಪತ್ರವನ್ನು ತಿರಸ್ಕರಿಸುವರೆಂದೂ, ಉಗ್ರವಾದಿಗಳ ಪರವಾಗಿ ಉಮೇದುವಾರರಾದರೆ ಗೋಖಲೆ ಅವರಿಗೆ ಇರಸುಮುರುಸಾಗುತ್ತದೆ ಎಂಬುದಾಗಲಿ ಈಗಿರಲಿಲ್ಲ. 1914ರ ಸಂದಿಗ್ಧವೂ ಇರಲಿಲ್ಲ. ವಿದೇಶದಲ್ಲಿದ್ದ ತಮ್ಮ ಸ್ಥಿತಿಯ ಲಾಭ ಪಡೆದು ಸೌಮ್ಯವಾದಿಗಳು ಯುಕ್ತಿಗಳ ಮೂಲಕ ಕಾಂಗ್ರೆಸ್ ಅಧ್ಯಕ್ಷ ಗೌರಿಯ ವಿರುದ್ಧ ಸಂಚು ಮಾಡುವ ಪ್ರಸಂಗವು ಅಳಿದು ಹೋಗಿತ್ತು. ಒಟ್ಟಾರೆ ಈಗ ಕಾಂಗ್ರೆಸ್‌ನಲ್ಲಿ ಸೌಮ್ಯವಾದಿಗಳು ಇದ್ದು ಇಲ್ಲದಂತಾಗಿದ್ದರು. ಈಗ ಅವರನ್ನು ಯಾವುದೇ ಒಂದು ಬಣದ ಅಭ್ಯರ್ಥಿಯನ್ನಾಗಿ ಪರಿಗಣಿಸುವ ಭೀತಿ ಖಂಡಿತ ಇರಲಿಲ್ಲ.

ಕಾಂಗ್ರೆಸ್ ರಾಜಕಾರಣದಲ್ಲಿ ಸೌಮ್ಯವಾದಿಗಳ ಪ್ರಭಾವ ಕಡಿಮೆಯಾಗುತ್ತಾ ಬಂದರೂ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಂಡವು. ಮಹಾತ್ಮ ಗಾಂಧೀ ತಮ್ಮ ಆಂದೋಲನದ ಪ್ರಥಮ ಅಸ್ತ್ರವಾಗಿ ಅಸಹಕಾರ ಚಳವಳಿ ಪ್ರಕಟಿಸುವ ವೇಳೆಗೆ ಲಾಲಾಜಿ ಭಾರತಕ್ಕೆ ಮರಳಿ ಮೂರು ವಾರಗಳಾಗಿತ್ತು. ಖಿಲಾಫತ್ ಚಳವಳಿ ನಾಯಕ ಗಾಂಧೀಯೊಂದಿಗೆ ಸಮಾಲೋಚನೆ ನಡೆಸಿ ತಾವು ಸಹ ಆಂದೋಲನದಲ್ಲಿ ಭಾಗಿಯಾಗಲು ಸಿದ್ಧವಿದ್ದರು. ಅಸಹಕಾರ ಚಳವಳಿ ಬಗ್ಗೆ ಲಾಲಾಜಿ ಒಂದು ರೀತಿಯಲ್ಲಿ ತಮ್ಮದೇ ಅಭಿಮತವನ್ನು ವ್ಯಕ್ತಪಡಿಸಿದರು. ತಮ್ಮ ರಾಜಕೀಯ ಸಿದ್ಧಾಂತದ ಅಳತೆಗೋಲಿನಿಂದ ಅದನ್ನು ಮಾಪನ ಸಹ ಮಾಡಿದರು. ಮಹಾತ್ಮ ಗಾಂಧೀ ರೂಪಿಸಿದ ಆಂದೋಲನದ

ಕೆಲವು ಅಂಶಗಳು ಕಾರ್ಯಗತಕ್ಕೆ ಬರಲು ತೀರಾ ಕಷ್ಟಕರದ್ದಾಗಿ ಕಂಡು ಬಂದಿತು. ಆ ಪೈಕಿ ಅತ್ಯಂತ ಪ್ರಮುಖವಾದುದು ಮಹಾತ್ಮ ಗಾಂಧೀ ಬಯಸಿದ ರೀತಿಯಲ್ಲಿ ಬಿರುಗಾಳಿಯಂತಹ ಆಂದೋಲನಕ್ಕೆ ಜನ ಸಮುದಾಯ ಪ್ರತಿಕ್ರಿಯೆ ನೀಡಿತೇ? ಎಂಬುದು ಪ್ರಮುಖ ಪ್ರಶ್ನೆಯಾಯಿತು. ಇನ್ನು ನೇರವಾಗಿ ಹೇಳುವುದಾದರೆ, ಕಾಲ ಮಾಗಿತ್ತೇ? ಎನ್ನುವುದು. ವ್ಯಕ್ತಿಗತವಾದ ಧೋರಣೆಗಳು ಯಾವುದೂ ಸಹ ಪ್ರಮುಖವಾಗಿರಲಿಲ್ಲ. ಆದಾಗ್ಯೂ ಪ್ರತಿ ಹಂತದಲ್ಲೂ ವಾಸ್ತವಿಕ ವರ್ಚಸ್ಸಿನ ಅಂದಾಜು ಪ್ರಮುಖವಾಗಬೇಕಿತ್ತು. ಲಾಲಾಜಿ ಅವರ ಹಿಂದಿನ ವೈಯಕ್ತಿಕ ರಾಜಕೀಯ ಬೆಳವಣಿಗೆಯಲ್ಲಿ ಅವರು ಮಹಾರಾಷ್ಟ್ರಕ್ಕೂ ಬಂಗಾಳಕ್ಕೂ ರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ತುಂಬಾ ನಿಕಟರಾಗಿದ್ದರು. ಆದರೆ ಗಾಂಧೀ ಹೊಸ ಶಕ್ತಿ ಅವರ ಪಾಲಿಗೆ ಸಂತರಂತಹ ನಡವಳಿಕೆ, ದಿಟ್ಟತನ, ಸರಳತೆ ಮತ್ತು ಸತ್ಯಸಂಧತೆಗಳು ದೊಡ್ಡ ಶಕ್ತಿಗಳಾಗಿದ್ದವು. ಲಾಲಾಜಿ, ಗಾಂಧೀಯವರನ್ನು ಭಾರತೀಯ ಜನ ಸಮುದಾಯಕ್ಕೆ ಸಮಂಜಸವಾದ ನಾಯಕರೆಂದು ಮಾನ್ಯ ಮಾಡಿಕೊಂಡರು. ತಮ್ಮ ಅನುದಿನದ ಬದುಕಿನಲ್ಲಿ ಜನಸಮುದಾಯದಲ್ಲಿ ಒಬ್ಬರಾಗಿದ್ದ ಅವರಲ್ಲಿ ಆ ಶಕ್ತಿ ಸಹಜವಾಗಿದೆ ಎಂದು ಪರಿಗಣಿಸಿದರು. ಈಜಿಪ್ಟ್‌ನಿಂದ ತನ್ನ ಜನ ಸಾಗರವನ್ನು ಹೊರಗೆ ಕರೆದೊಯ್ದು ಮೋಸೆಸ್‌ನಂಥ ಪ್ರವಾದಿ ಪುರುಷ ಗಾಂಧೀ ಎಂದು ನಿರ್ಣಯಿಸಿಕೊಂಡರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಬೆಳೆದು ಬಂದ ರೀತಿಯನ್ನು ಲಾಲಾಜಿ ಕುತೂಹಲದಿಂದ ವೀಕ್ಷಿಸುತ್ತಾ ಬಂದಿದ್ದರು. ತಾಯ್ನಾಡಿಗೆ ಮರಳಿದ ನಂತರವೂ ಭಾರತದಲ್ಲಿನ ಅವರ ಬೆಳವಣಿಗೆಯನ್ನು ಪರೀಕ್ಷಾ ದೃಷ್ಟಿಯಿಂದ ನೋಡುತ್ತಾ ಬಂದಿದ್ದರು.

ಯುದ್ಧ ಆರಂಭಗೊಂಡ ಕಾಲದಲ್ಲಿ ಇಂಗ್ಲೆಂಡ್‌ನಲ್ಲಿ ಗಾಂಧೀಜಿ ನಡೆದುಕೊಂಡ ರೀತಿಯನ್ನು ಅರಿತು ಕೊಂಡಿದ್ದರು. ಗಾಂಧೀಜಿಯವರ ನೈಜ ಉತ್ಸಾಹ, ಶ್ರದ್ಧಾವಂತ ಕಳಕಳಿ ಮತ್ತು ಸಂಘಟನಾ ಪ್ರತಿಭೆಯನ್ನು ಲಾಲಾಜಿ ಮೆಚ್ಚಿಕೊಂಡಿದ್ದರು. ಆದರೆ ಅವರ ರಾಜಕೀಯ ದೃಷ್ಟಿಕೋನವು ಸಂಪೂರ್ಣವಾಗಿ ಮಾನ್ಯ ಮಾಡಿರಲಿಲ್ಲ. ಈ ಹಿನ್ನಲೆಯಲ್ಲೇ ಅವರು ರಾಜಕಾರಣದಲ್ಲಿ ಅಹಿಂಸೆ ತತ್ವ ಸಿದ್ಧಾಂತವನ್ನು ಸಮ್ಮಿಳಿತಗೊಳಿಸಿದ ಗಾಂಧೀ ರಾಜಕೀಯ ಸಿದ್ಧಾಂತವನ್ನು ಅನುಮಾನದ ದೃಷ್ಟಿಯಿಂದ ಕಂಡಿದ್ದರು. ಆ ಬಗ್ಗೆ ಪತ್ರಿಕೆಗಳಲ್ಲಿ ವಿವಾದ ಎಬ್ಬಿಸಿದರು. ಬಾಹ್ಯಕ್ಕೆ ಹೀಗೆ, ಭಿನ್ನಾಭಿಪ್ರಾಯದ ದೃಷ್ಟಿಕೋನ ಅವರದಾಗಿದ್ದರೂ ವ್ಯಕ್ತಿಗತವಾಗಿ ಗಾಂಧೀಯವರ ಬಗ್ಗೆ ಉನ್ನತ ಗೌರವದ ಮಾತುಗಳನ್ನು ಆಡುತ್ತಿದ್ದರು. ಅವರ ಕಾರ್ಯ ರೀತಿಯನ್ನು ಪ್ರಶಂಸಿಸುತ್ತಿದ್ದರು. ಅದರಲ್ಲೂ ರೌಲತ್ ಕಾಯ್ದೆ ದಿನಗಳ ನಂತರ ಲಾಲಾಜಿ ಅವರ ಭಾವನೆಗಳು ಗಾಂಧೀಜಿಯವರತ್ತ ಸನಿಹವಾಗತೊಡಗಿದವು. ಅಮೆರಿಕ ಬಿಡುವ ಮೊದಲು ತಮ್ಮ ದೇಶವಾಸಿಗಳಿಗೆ ಬರೆದ ಪತ್ರದಲ್ಲಿ ಸಂದೇಶದ ಒಂದು ಭಾಗವಾಗಿ ಗಾಂಧೀ ಬಗ್ಗೆ ತಮಗಿದ್ದ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಕೂಡಾ. "ಅವರು (ಗಾಂಧೀ) ನಮ್ಮ ಹೃದಯಾಂತರಾಳದ ಸರ್ವ ಸಮ್ಮತ ನಾಯಕ" ಎಂದು ಬಣ್ಣಿಸಿದರು. ಅದಾಗ್ಯೂ, ಗಾಂಧೀಯವರ ನಾಯಕತ್ವದ ಶಕ್ತಿಯನ್ನು ಪ್ರಬಲವಾದ ಯಾವುದೇ ಆಂದೋಲನದ ರೂಪದಲ್ಲಿ ಪರೀಕ್ಷಿಸಲಾಗಿರಲಿಲ್ಲ. ಆಗ ಅವರು ಘೋಷಿಸಿದ ವಸಾಹತುಷಾಹಿ ಆಡಳಿತಗಾರರ ವಿರುದ್ಧದ ಮಹಾ ಹೋರಾಟದಲ್ಲಿ ಅವರೇ ಮಹಾ ಸೇನಾನಿಯಾಗಿ ನಿಲ್ಲಬಲ್ಲರೇ ಎಂಬುದು ಒರೆಗಲ್ಲಿಗೆ ಹಚ್ಚಲ್ಪಟ್ಟಿರಲಿಲ್ಲ. ಗಾಂಧೀಜಿಯು

ತಮಗಿಂತಲೂ ಹೆಚ್ಚು ಅನುಭವಿಗಳಾದರೂ ತಮ್ಮ ಆಂದೋಲನಕ್ಕೆ ಬೆಂಬಲ ಕೊಡುವರೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಉತ್ಸುಕರು ಆಗಿದ್ದರು. ಒಂದು ವೇಳೆ ಹಿರಿಯ ಹೋರಾಟಗಾರರು ಸಹಕಾರ ನೀಡದಿದ್ದರೆ ಅವರಿಗೆ ಪರಿಸ್ಥಿತಿ ಕ್ಲಿಷ್ಟಕರವಾಗುತ್ತದೆ ಎಂಬ ಲಕ್ಷಣಗಳು ಕಂಡು ಬಂದಿದ್ದು ಗಾಂಧೀಜಿ ಪರ ಒಲವಿನ ಸೂಚನೆಯಾಗಿತ್ತು. ಹೀಗಾಗಿ ಆಯ್ಕೆ ಸುಲಭದ್ದಾಗಿರಲಿಲ್ಲ. ಅದರಲ್ಲೂ ನಿರಂತರವಾಗಿ ಐದು ವರ್ಷಗಳ ಕಾಲ ದೇಶದಿಂದ ದೂರವಿದ್ದವರಿಗಂತೂ ಪರಿಸ್ಥಿತಿ ತುಂಬಾ ನಾಜೂಕಿನದಾಯಿತು. ಲಜಪತ್‌ರಾಯ್ ಹಿಂದಿನ ರೀತಿಯಲ್ಲೇ ಬಣಗಳ ಬಣ್ಣಕ್ಕೆ ಅಂಟಿಕೊಳ್ಳುವುದನ್ನು ತಪ್ಪಿಸಿಕೊಳ್ಳತೊಡಗಿದರು. ಹೊಸದೊಂದು ಬಗೆಯ ಇನ್ನೊಂದು ಬಣ ಹುಟ್ಟಿಕೊಳ್ಳುತ್ತಿರುವ ಲಕ್ಷಣಗಳು ಕಂಡು ಬಂದವು. ಏಪ್ರಿಲ್ ಮೂರನೇ ವಾರದಲ್ಲಿ ಗಾಂಧೀಜಿ ತಮ್ಮ ಆಂದೋಲನದ ಕರೆ ಪ್ರಕಟಿಸಿದರು. ಹೋಂ ರೂಲ್ ಲೀಗಿನ ಅಧ್ಯಕ್ಷರಾಗಿ ತಮ್ಮ ಆಂದೋಲನದ ಕಾರ್ಯಕ್ರಮವನ್ನು ನಿರೂಪಗೊಳಿಸಿದರು. ಅತ್ತ ತಿಲಕರು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಪಕ್ಷದ ಮುಖಂಡರಾಗಿ ಇನ್ನೊಂದು ಹೇಳಿಕೆಯನ್ನು ಪ್ರಕಟಿಸಿದರು. ಲಾಲಾಜಿ ತಟಸ್ಥ ಧೋರಣೆ ತಾಳಿದರು. ಯಾವ ಕಡೆಗೂ ತಮ್ಮ ಇರುವಿಕೆಯನ್ನು ತೋರಗೊಡಲಿಲ್ಲ. 1920ರ ಮೇ ಅಂತ್ಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬನಾರಸ್‌ನಲ್ಲಿ ಸಭೆ ಸೇರಿತು. ಅದೇ ಮೊದಲ ಬಾರಿಗೆ ಅಸಹಕಾರ ಚಳವಳಿಯ ಪ್ರಸ್ತಾವನೆ ಕೈಗೆತ್ತಿಕೊಂಡಿತು. ಅದಕ್ಕೆ ಅನುಮೋದನೆಯನ್ನು ನೀಡಿತು. ತಿಲಕರು ಬನಾರಸ್ ನಗರಿಯಲ್ಲೇ ಇದ್ದರೂ ಆ ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ. ಅಸಹಕಾರ ಚಳವಳಿಯ ಮುಂದಿನ ಕಾರ್ಯಕ್ರಮಗಳನ್ನು ಕಲ್ಕತ್ತಾದ ವಿಶೇಷ ಅಧಿವೇಶನದಲ್ಲಿ ನಿರ್ಧರಿಸಬೇಕೆಂದು ಸಭೆ ತೀರ್ಮಾನಿಸಿತು. *

ವಸ್ತುಶಃ; ಅಮೃತಸರದ ವಿಶೇಷ ಅಧಿವೇಶದಲ್ಲಿ ಪಂಜಾಬ್ ಘಟನಾವಳಿಗಳ ಬಗ್ಗೆ ಹಂಟರ್ಸ್ ಸಮಿತಿ ಸಿದ್ಧಪಡಿಸಿದ ವರದಿಯ ಆಧಾರದ ಮೇಲೆ ಸರ್ಕಾರ ಕೈಗೊಂಡಿದ್ದ ನಿರ್ಧಾರಗಳನ್ನು ಪರಿಶೀಲಿಸಬೇಕಾಗಿತ್ತು. ಆ ವರದಿಯು ಆ ವೇಳೆಗಾಗಲೇ ಪ್ರಕಟಗೊಂಡಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಚಿಸಿದ್ದ ಉಪ ಸಮಿತಿಯ ವರದಿ ಪ್ರಕಟವಾಗಿತ್ತು. ಅತ್ತ, ಸರ್ಕಾರವು ಸಹ ತನ್ನ ನಿರ್ಧಾರಗಳನ್ನು ಪ್ರಕಟಿಸಿತ್ತು. ಈ ಮಧ್ಯೆ ಸೆವರೆಸ್ ಶಾಂತಿ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು. ಖಿಲಾಫತ್ ವಿಷಯದಲ್ಲಿ ಮುಸ್ಲಿಮರಲ್ಲಿ ಮೂಡಿದ್ದ ಅಪಾರ್ಥಗಳು ನಿಜವಾದವು. ಇವೆಲ್ಲವೂ ಒಟ್ಟಿಗೆ

---

* ಕೆಲವು ದಿನಗಳ ನಂತರ ಅನೌಪಚಾರಿಕ ಸಭೆ ನಡೆಯಿತು. ಭಾರತದ ಎಲ್ಲಾ ಕಡೆಗಳಿಂದ ಒಬ್ಬರು ಪ್ರತಿನಿಧಿ ಇರಬೇಕೆಂದು ಅಲಹಾಬಾದ್‌ನಲ್ಲಿ ವಿಶೇಷವಾಗಿ ಸಭೆ ಸೇರಿ ಅಸಹಕಾರ ಚಳವಳಿಯ ಬಗ್ಗೆ ನಿರ್ಧರಿಸಬೇಕೆಂದು ಅಲ್ಲಿ ತೀರ್ಮಾನಿಸಲಾಯಿತು. ಗಾಂಧೀಜಿ ಮುಸಲ್ಮಾನರೊಂದಿಗೆ ತಮ್ಮ ಆಂದೋಲನದ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದರು. ತಮ್ಮ ಅಸಹಕಾರ ಚಳವಳಿಯ ಕಾರ್ಯಕ್ರಮಗಳು ತಮ್ಮ ಮಟ್ಟಿಗೆ 'ಸರ್ವಸಮ್ಮತ' ಕಾರ್ಯಕ್ರಮವಾಗುವಂತಹ ಹಿನ್ನಲೆ, ರೂಢಿಸಿಕೊಂಡಿದ್ದರು. ಹೀಗಾಗಿ ಕಾಂಗ್ರೆಸ್‌ನಲ್ಲಿ ತೀರ್ಮಾನ ಆಂದೋಲನದ ಪರವಾಗಿಯೇ ಇರಬೇಕಾದ ಅನಿವಾರ್ಯತೆ ಉಂಟಾಗಿತ್ತು.

ಇಕ್ಕಟ್ಟುಗೊಂಡವು. ಅಂದರೆ ಪಂಜಾಬ್ ಮತ್ತು ಖಿಲಾಫತ್ ವಿರೋಧಾಭಾಸಗಳು ಪೂರಕವಾದವು. ಗಾಂಧೀಜಿ ಪ್ರಣೀತ ಅಸಹಕಾರ ಚಳವಳಿಗೆ ಆ ಎರಡು ಅಸಮಾಧಾನಗಳು ನೀರೆರೆದವು. ಅಮೃತಸರದ ಅಧಿವೇಶನದಲ್ಲಿ ಮಾಂಟೆಗೋ ಸುಧಾರಣೆಗಳನ್ನು "ತೃಪ್ತಿಕರವಲ್ಲ ಮತ್ತು ನಿರಾಶಾದಾಯಕ" ಎಂದು ಘೋಷಿಸಲಾಗಿತ್ತು. ಆದರೂ ಅಧಿವೇಶನದ ನಂತರ ಸುಧಾರಣಾ ಕಾಯ್ದೆಯ ವ್ಯಾಪ್ತಿಯಲ್ಲಿ ನಿಯಮ ನಿರ್ಬಂಧಗಳನ್ನ ರಚಿಸಿ ಪ್ರಕಟಿಸಲಾಯಿತು. ಆ ಎಲ್ಲಾ ನಿಬಂಧನೆಗಳಿಗೆ ಮಾಂಟೆಗೋ ಸುಧಾರಣೆಯ ಅಂಶಗಳೇ ಮೂಲವೆಂದು ಅನೇಕ ಕಾಂಗ್ರೆಸ್ಸಿಗರು ಅಭಿಪ್ರಾಯಗಳನ್ನು ನೀಡಿದರು. ಈ ಎಲ್ಲಾ ಸಂಗತಿಗಳನ್ನು, ವಿದ್ಯಮಾನಗಳನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಅದಕ್ಕಾಗಿ 1920ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಕಲ್ಕತ್ತಾದಲ್ಲಿ ವಿಶೇಷ ಅಧಿವೇಶನಕ್ಕೆ ಕರೆ ಕೊಡಲಾಯಿತು. ಭಾರತದ ಪರಿಸ್ಥಿತಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ಬೆಳವಣಿಗೆಗಳ ಹಿನ್ನಲೆಯಲ್ಲಿ, ಪರಿಸ್ಥಿತಿಯ ಒತ್ತಡಕ್ಕೆ ಅನುಗುಣವಾಗಿ ಆ ಅಧಿವೇಶನಕ್ಕೆ ಅಧ್ಯಕ್ಷರನ್ನು ಆಯ್ಕೆ ಮಾಡಲೇ ಬೇಕಾದ ಸಂವಿಧಾನಾತ್ಮಕ ಅನಿವಾರ್ಯತೆ ಉಂಟಾಯಿತು. ಲಾಲಾಜಿ ಅವರ ಹೆಸರು ಸ್ವಾಭಾವಿಕವಾಗಿ ಅನೇಕರ ಬಾಯಿಯಿಂದ ಹೊರಟಿತು. ಅವರ ಮಹಾನ್ ಸೇವೆ ತ್ಯಾಗಗಳಿಗೆ ಅವರಿಗೆ ಸಂದಾಯವಾಗಬೇಕಾಗಿದ್ದ ಗೌರವ ಇನ್ನೂ ಸಂದಾಯವಾಗಿರಲಿಲ್ಲ. ವಿದೇಶಿವಾಸದ ಅಪಾರ ಅನುಭವದ ಹಿನ್ನಲೆಯಲ್ಲಿ ಅವರಿಂದ ಏನು ಸಿಗಬಹುದೆಂಬ ಕುತೂಹಲ ಜನತೆಯಲ್ಲೂ ಇತ್ತು. ಎಲ್ಲಕ್ಕಿಂತ ಹೆಚ್ಚಿನದಾಗಿ ಬ್ರಿಟಿಷ್ ಆಡಳಿತಶಾಹಿ ಪಂಜಾಬಿನಲ್ಲಿ ಎಸಗಿದ ಘೋರ ಅನಾಹುತದ ಪ್ರಶ್ನೆಯನ್ನು ಆ ಅಧಿವೇಶನದಲ್ಲಿ ಪರಿಗಣಿಸಬೇಕಾಗಿತ್ತು. ಅದಕ್ಕ ಅಧ್ಯಕ್ಷ ಪೀಠದಲ್ಲಿ ಪಂಜಾಬಿನ ಮಹಾನ್ ನಾಯಕನೇ ಅಲಂಕೃತನಾಗಬೇಕೆಂಬ ಅಭಿಪ್ರಾಯ ದಟ್ಟವಾಯಿತು.

ಅಧ್ಯಕ್ಷ ಸ್ಥಾನಕ್ಕೆ ಇತರರ ಹೆಸರುಗಳು ಪ್ರಸ್ತಾಪವಾಗದಿರಲಿಲ್ಲ. ಆ ಪೈಕಿ ತಿಲಕರ ಹೆಸರು ಇತ್ತು. ಆ ವರ್ಷದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೋತಿಲಾಲ್ ನೆಹರು ಅವರಿಂದ ಜುಲೈ 24ರಂದು ಲಾಲಾಜಿ ಅವರಿಗೆ ತಂತಿ ಸಂದೇಶವೊಂದು ಬಂದಿತು. ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ಒಪ್ಪಿಕೊಳ್ಳುವಂತೆ ಅದರಲ್ಲಿ ಒತ್ತಿ ಹೇಳಲಾಗಿತ್ತು. "ತಿಲಕರು ಖಡಾಖಂಡಿತವಾಗಿ ನಿರಾಕರಿಸಿದ್ದಾರೆ. ನಿಮಗಿಂತಲೂ ಸಮಂಜಸವಾದ ವ್ಯಕ್ತಿ ಯಾರೂ ಇಲ್ಲ" ಎಂದು ಮೋತಿಲಾಲರು ತಿಳಿಸಿದ್ದರು. ಜುಲೈ 27ರಂದು ದಮ್ರಾನ್‌ನಿಂದ ನೆಹರು ಮತ್ತೊಂದು ತಂತಿ ಸಂದೇಶ ಕಳುಹಿಸಿದರು. (ಪ್ರಮುಖವಾದ ಮೊಕದ್ದಮೆಯೊಂದರಲ್ಲಿ ವಾದ ವಿವಾದದ ನಿಮಿತ್ತ ನೆಹರು ಅಲ್ಲಿರಬೇಕಾಯಿತು. ಅವರ ವಿರುದ್ಧ ಸಿ.ಆರ್. ದಾಸ್ ಕಕ್ಷಿದಾರರ ವಕೀಲರಾಗಿದ್ದರು.) "ವಿಶೇಷ ಕಾಂಗ್ರೆಸ್ ಅಧಿವೇಶನದ ನಿಯೋಜಿತ ಅಧ್ಯಕ್ಷರಾಗಿ ನೀವು ಆಯ್ಕೆಗೊಂಡಿದ್ದೀರಿ. ಅಭಿನಂದನೆಗಳು" ಎಂದು ನೆಹರು ಆ ತಂತಿಯಲ್ಲಿ ಪ್ರಕಟಿಸಿದ್ದರು. ಆದರೂ ಲಾಲಾಜಿ ಅವರಿಗೆ ಸಮಾಧಾನ ವೆನಿಸಲಿಲ್ಲ. ಕಾರಣ ಆಯ್ಕೆ ಸರ್ವಾನುಮತದಿಂದ ಆಗಿದೆ ಎಂದು ಅವರಿಗೆ ಅನಿಸಲಿಲ್ಲ. ಬಹುಮತ ಇದ್ದ ಬಗ್ಗೆಯೂ ಅವರಿಗೆ ತಿಳಿದು ಬಂದಿರಲಿಲ್ಲ. ವಾಸ್ತವದಲ್ಲಿ 1907 ಅಥವಾ 1914ರಂತೆ ಆಗ ಕಾಂಗ್ರೆಸ್ಸಿನ ಯಾವ ಮೂಲದಿಂದಲೂ ಯಾವ ರೀತಿಯಲ್ಲೂ

ಅವರ ಅಧ್ಯಕ್ಷತೆಯ ಪ್ರಸ್ತಾಪದ ಬಗ್ಗೆ ಚಕಾರ ಸಹ ಎದ್ದಿರಲಿಲ್ಲ. ಲಾಲಾಜಿ ತಮ್ಮ ಅನೇಕ ಗೆಳೆಯರೊಂದಿಗೆ ಸಮಾಲೋಚಿಸಿದರು. ಆದರೂ, ಅನೇಕ ದಿನಗಳ ತನಕ ಅವರು ಯಾವುದೇ ನಿರ್ಧಾರ ತೆಗೆದುಕೊಳ್ಳಲಿಲ್ಲ. ಅವರ ಪತ್ರಗಳಲ್ಲಿನ ಸಂಗ್ರಹದಲ್ಲಿ ಟ್ರಿಬ್ಯೂನ್ ಪತ್ರಿಕೆಯ ಸಂಪಾದಕ ಕಾಳನಾಥ ರಾಯ್ ಬರೆದ ಪತ್ರ ಹಾಗೂ ಅವರ ಇನ್ನೊಬ್ಬ ಗೆಳೆಯ ಮುಲ್‌ರಾಜ್ ಬರೆದ ಪತ್ರಗಳು ಹೇಳುವಂತೆ ಆ ಇಬ್ಬರು ಅಧ್ಯಕ್ಷ ಸ್ಥಾನ ಅಂಗೀಕರಿಸುವಂತೆ ಲಾಲಾಜಿ ಅವರನ್ನು ಪ್ರಬಲವಾಗಿ ಒತ್ತಾಯಿಸಿದರು. ಆ ಎರಡು ಪತ್ರಗಳು ಜುಲೈ 28ರಂದು ಬರೆಯಲ್ಪಟ್ಟವು.

''ಸಿಚ್ಚಳ ಬಹುಮತದ ದಿನಗಳು ಹತ್ತಿರವಾಗುತ್ತಿವೆ.'' ಎಂದು ತಿಳಿಸಿದ ರಾಯ್ ''ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಆಯ್ಕೆಯನ್ನು ವಿರೋಧಿಸುವವರು ಯಾರೂ ಇಲ್ಲ.'' ಎಂದು ತಿಳಿಸಿದರು.

ಮುಲ್‌ರಾಜ್ ತಮ್ಮ ಪತ್ರದಲ್ಲಿ, ''ಬಂಗಾಳದ ಬಹುಮತ ನಿಮ್ಮ ಪರವಾಗಿದೆ'' ಎಂದು ತಿಳಿಸಿದರು.

ಲಾಲಾಜಿ ಮುಂದೆ ಒಂದು ತಿಂಗಳ ಅವಧಿಯಲ್ಲಿ ಕಲ್ಕತ್ತಾದಲ್ಲಿ ನಡೆಯಲಿದ್ದ ವಿಶೇಷ ಅಧಿವೇಶನದ ಅಧ್ಯಕ್ಷರಾಗಲು ಸಮ್ಮತಿ ಕೊಟ್ಟರು.

ಅದೇ ಸಮಯದಲ್ಲಿ ತಿಲಕರು ನಿಧನ ಹೊಂದಿದ್ದರು. (ಆಗಸ್ಟ್ 1, 1920) ವಿಚಿತ್ರ ಪರಿಸ್ಥಿತಿಗೆ ಕಾರಣವಾಯಿತು. ದೇಶಾದ್ಯಂತ ಮೌನ ಆವರಿಸಿತು. ಅಸಹಕಾರ ಚಳವಳಿಯ ಹೊಸ ಕಾರ್ಯಕ್ರಮದ ವಿಷಯದಲ್ಲಿ ಇನ್ನು ಯಾವುದೇ ನಿರ್ಧಾರ ಕೈಗೊಳ್ಳಲು ವಿಚಿತ್ರ ಪರಿಸ್ಥಿತಿ ಉಂಟಾಯಿತು. ಅವರಿಗೆ ಆ ಕಾಲದಲ್ಲಿ ತಿಲಕರ ನಿರ್ಧಾರ ಮತ್ತು ನಾಯಕತ್ವ ಅಗತ್ಯವಾಗಿತ್ತು. ಲೋಕಮಾನ್ಯರಂಥ ದಿಟ್ಟ ವ್ಯಕ್ತಿತ್ವದ ನಾಯಕತ್ವ ಎಲ್ಲಾ ಕಾಲದಲ್ಲಿಯೂ ಅವರ ನಿಧನದೊಂದಿಗೆ ಶೂನ್ಯವೊಂದನ್ನು ಉಂಟು ಮಾಡುತ್ತದೆ. ಅಂತಹ ನಿರ್ಣಾಯಕ ಪರಿಸ್ಥಿತಿಯಲ್ಲಿ ರಾಜಕೀಯ ವೇದಿಕೆ ಅನಿವಾರ್ಯವಾಗಿ ಸಂದಿಗ್ಧತೆಯನ್ನು ಎದುರಿಸಬೇಕಾಗುತ್ತದೆ. ಅಲ್ಲಿಗೆ ಸುಮಾರು ಎರಡು ದಶಕಗಳಿಂದಲೂ ಅಂದರೆ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಮಯದ ತಮ್ಮ ಪ್ರಥಮ ಭೇಟಿ ಅವಧಿಯಿಂದಲೂ ಲಾಲಾಜಿ ತಿಲಕರನ್ನು ಬಹುವಾಗಿ ಹಚ್ಚಿಕೊಂಡಿದ್ದವರು. ಮಧ್ಯದಲ್ಲಿ ಕಾಲದ ಒತ್ತಡದಿಂದಾಗಿ ಬಹು ಕಾಲ ದೂರವಾಗಬೇಕಾದ ಪರಿಸ್ಥಿತಿ ಬಂದರೂ ಆ ವ್ಯಕ್ತಿಗತ ಅನುಬಂಧಗಳು ದುರ್ಬಲವಾಗಿರಲಿಲ್ಲ. ಅವರಿಬ್ಬರ ರಾಜಕೀಯ ಧೋರಣೆಗಳು ಒಂದೇ ಆಗಿದ್ದವು. ಆದರೆ ಆಯಾ ಪರಿಸ್ಥಿತಿಗೆ ಅನುಗುಣವಾಗಿ ನೀತಿ ನಿರ್ಧಾರಗಳ ವಿಷಯದಲ್ಲಿ ಇಬ್ಬರು ಪರಸ್ಪರ ವಿಭಿನ್ನರಾಗುತ್ತಿದ್ದರು. ಅದು 1907ರ ಸೂರತ್ ಘಟನೆಯಂತೆ ಪರಾಕಾಷ್ಠೆಗೂ ಹೋಗುತ್ತಿತ್ತು. ಅಷ್ಟೊಂದು ಕಟುತರವಾದ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಲಜಪತರಲ್ಲಿ ತಿಲಕರ ಬಗೆಗಿನ ಮೋಹ ಕುಂದುತ್ತಿರಲಿಲ್ಲ. ಸೂರತ್‌ನಲ್ಲಿ ಲಜಪತರು ತಿಲಕರ ಪಕ್ಷಪಾತಿಯಾಗಲು ಒಪ್ಪಲಿಲ್ಲ. ಅದಕ್ಕಾಗಿ ಅವರ ಬೆಂಬಲಿಗರಲ್ಲಿ ಅನೇಕರ ಸ್ನೇಹ ಕಳೆದುಕೊಳ್ಳಬೇಕಾಯಿತು. ಆದರೆ ಸೂರತ್‌ನ ಆ ಘಟನೆ ಸ್ಫೂರ್ತಿಯ ಸಂಪನ್ಮೂಲವಾಗಿ ಉಳಿದುಕೊಂಡ ಅಳಿಸಲಾಗದ ಭಾವವೊಂದನ್ನು ಕೊಟ್ಟಿತು. ಅದನ್ನು

ಅವರು ಸದಾ ಕಾಲ ಸಂತೋಷದಿಂದ ಸ್ಮರಿಸಿಕೊಳ್ಳುತ್ತಿದ್ದರು. ಅದುವೆ ಸೂರತ್ ನಾಟಕದಲ್ಲಿ ತಿಲಕರು ಪ್ರಧಾನ ಮಾಡಿಕೊಂಡ ಪಾತ್ರ. ಅಲ್ಲಿ ತಿಲಕರು ತಮ್ಮ ಪಾತ್ರವನ್ನು ವಿಶಾಲ ಹೃದಯದ ನಡವಳಿಕೆಯಲ್ಲಿ ಧೀಮಂತಗೊಳಿಸಿಕೊಂಡಿದ್ದರು. ತಮ್ಮಿಬ್ಬರ ನಡುವೆ ಯಾವುದೇ ಅಹಿತ ನಡೆದಿಲ್ಲವೋ ಎಂದೆನ್ನುವ ರೀತಿಯಲ್ಲಿ ಅವರು ಲಾಲಾಜಿ ಅವರಿಗೆ ಸಹಕಾರದ ಹಸ್ತವನ್ನು ಮುಂದುವರಿಸಿದ್ದರು. ಅದೊಂದು ಅಪರೂಪದ ಅನುಬಂಧವೆನಿಸುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದ್ದ ಕಾಲದಲ್ಲಿ ಲಾಲಾಜಿ ಮತ್ತು ತಿಲಕರ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಿತ್ತು. ಬಹುಶಃ ಆ ದಿನಗಳಲ್ಲಿ ಲಾಲಾಜಿ ಅವರಿಗೆ ತಿಲಕರು ನೀಡಿದಷ್ಟು ಬೆಂಬಲ ಬೇರಾವುದೇ ಭಾರತೀಯ ನಾಯಕರಿಂದ ದೊರೆತಿರಲಿಲ್ಲ. ಲಾಲಾಜಿ ಎಲ್ಲಾ ಕಾಲಕ್ಕೂ ತಮ್ಮ ರಾಜಕೀಯ ನಿಷ್ಠೆಯನ್ನು ತೋರ್ಪಡಿಸಿಕೊಂಡವರಲ್ಲ. ರಾಜಕೀಯ ಮನೋದ್ದೇಶ ನಿಸ್ಸಂಶಯವಾಗಿಯೂ ತಿಲಕರನ್ನೇ ಒಲೈಸುತ್ತಿತ್ತು. ಗೋಖಲೆ ನಿಧನದ ನಂತರವಂತೂ ಲಾಲಾಜಿ, ತಿಲಕರ ನೇತೃತ್ವದ ಮಹಾರಾಷ್ಟ್ರ ಬಣಕ್ಕೆ ತೀರಾ ನಿಕಟವಾಗಿದ್ದರು. ಈಗ ನೇತಾರನೇ ಇಲ್ಲ. ಲಾಲಾಜಿ ಅವರ ಆ ಅನುಬಂಧ ಮತ್ತು ನಿಷ್ಠೆ ಮಹಾರಾಷ್ಟ್ರ ಬಣದೊಂದಿಗೆ ಯಥಾರೀತಿಯಲ್ಲಿ ಇದ್ದೀತೆ? ಅತ್ತ, ಆ ಬಣದಲ್ಲಿಯೇ ತಮ್ಮ ಮುಂದಿನ ನಾಯಕರಾರೆಂಬ ಬಗ್ಗೆ ಪ್ರಶ್ನೆ ಎದ್ದಿತು. ಕೆಲವರು ಮಹಾರಾಷ್ಟ್ರದ ಹೊರಗಿನವರತ್ತ ಆ ನಾಯಕತ್ವದತ್ತ ಒಲವು ತೋರಿದರು. ಆ ಒಲವಿನಲ್ಲಿ ಪಂಜಾಬಿನ ನಾಯಕರೇ ಮುಖ್ಯವಾಗಿದ್ದರು. ತಾವು ಸದಾಕಾಲ ಕಾಣುತ್ತ ಬಂದ ತಮ್ಮ ದಿವಂಗತ ನಾಯಕರಿಗೆ ತೀರಾ ಹತ್ತಿರವಲ್ಲಿದ್ದ ಹಾಗೂ ಭಾರತೀಯ ನಾಯಕರಲ್ಲಿ ಎಲ್ಲರಿಗಿಂತ ಅಗ್ರಪಂಕ್ತಿಯಲ್ಲಿದ್ದ ಲಾಲಾಜಿ ತಮ್ಮ ನಾಯಕರಾಗಬೇಕೆಂದು ಅವರು ಸಹಜವಾಗಿ ಬಯಸಿದರು. ತಿಲಕರ ನಿಧನಾನಂತರ ಕಾಂಗ್ರೆಸ್ಸಿನಲ್ಲಿಯೂ ಪರಿಸ್ಥಿತಿ ನಿಚ್ಚಳವಾಗತೊಡಗಿತು. ಲೋಕಮಾನ್ಯರು ಬದುಕಿದ್ದರೆ ಅವರ ಬೆಂಬಲ, ಅನುಗ್ರಹ ತಮ್ಮ ಆಂದೋಲನಕ್ಕೆ ಇರುತ್ತಿತ್ತು ಎಂದು ಗಾಂಧೀಜಿ ಹೇಳ ತೊಡಗಿದರಾದರೂ ಮಹಾರಾಷ್ಟ್ರದ ಬಣ ಗುಜರಾತಿನ ಹೊಸ ನಾಯಕನ ವಿಷಯದಲ್ಲಿ ಒಲವು ತೋರಲಿಲ್ಲ. ಅವರ ಹೊಸ ಸಿದ್ಧಾಂತದ ಬಗ್ಗೆಯೂ ಕುತೂಹಲ ತಾಳಲಿಲ್ಲ. ಇದು ಲಾಲಾಜಿ ಅವರನ್ನು ಮತ್ತೆ ಇಕ್ಕಟ್ಟಿಗೆ ಸಿಲುಕಿಸಿತು. ಅವರು ಗಾಂಧೀಜಿಯವರ ಬಗ್ಗೆಯಾಗಲಿ, ಅವರ ಅಸಹಕಾರ ಚಳವಳಿಯ ಬಗ್ಗೆಯಾಗಲಿ ನಿರ್ದಿಷ್ಟವಾಗಿ ಬದ್ಧತೆ ವ್ಯಕ್ತಪಡಿಸಲು ಸಾಧ್ಯವಾಗಲಿಲ್ಲ. ಮತ್ತೆ ಕೆಲವು ಕಾಲ ಬೆಳವಣಿಗೆಗಳನ್ನು ನಿಕಟವಾಗಿ ಅವಲೋಕನ ಮಾಡಬೇಕಾಗಿ ಬಂದಿತು

ಕಲ್ಕತ್ತಾ ಅಧಿವೇಶನದ ಅಧ್ಯಕ್ಷ ಭಾಷಣದಲ್ಲೂ ಸಹ ಲಾಲಾಜಿ ಅಸಹಕಾರ ಚಳವಳಿಯ ಪರವಾಗಿಯಾಗಲಿ, ವಿರೋಧವಾಗಿಯಾಗಲಿ ತಮ್ಮ ಗೊತ್ತುಪಾಡನ್ನು ಬಹಿರಂಗ ಪಡಿಸಲಿಲ್ಲ. ಕೆಲವು ವಿವಾದಗಳಲ್ಲಿ ಮುಂದಿನ ಅಧ್ಯಕ್ಷರುಗಳು ಯಾವುದೇ ಪಕ್ಷ ವಹಿಸುವ ಸಾಹಸ ಮಾಡಬಾರದೆಂದು ಅವರು ಆ ಸ್ಥಾನದಿಂದ ನುಡಿದರು. "ಈಗ ನಮ್ಮ ಮುಂದಿರುವ ಪ್ರಶ್ನೆಯಂತಹ ವಿಷಯಗಳಲ್ಲಿ ದೇಶದ ಅಭಿಮತ ಸ್ಪಷ್ಟವಾಗಿ ಇಬ್ಭಾಗವಾಗಿರುವಂತಹ ಸಂದರ್ಭಗಳಲ್ಲಿ ಕಾಂಗ್ರೆಸಿನ ಅಧ್ಯಕ್ಷರು ಯಾವುದೇ ಒಂದು ಅಭಿಪ್ರಾಯದ ಪರವಾಗಿ ನಿರ್ಧಾರಕ್ಕೆ ಬರಬಾರದು...

''ಅಸಹಕಾರ ಚಳವಳಿಯ ವಿಷಯದಲ್ಲಿ ಅಡಕವಾಗಿರುವ ಪ್ರಶ್ನೆಯ ಬಗ್ಗೆ ನನ್ನದೇ ಅಭಿಮತ ನನ್ನಲ್ಲಿದೆ. ಕಾಂಗ್ರೆಸ್‌ನ ಅಧಿವೇಶನದ ಕಲಾಪಗಳನ್ನು ನಡೆಸುತ್ತಿರುವ ಈ ಪ್ರಸಂಗದಲ್ಲಿ ನಾನು ಯಾವುದೇ ಪಕ್ಷದ ಪರವಾಗಿ ಒಲೈಸಲು ಸಾಧ್ಯವಿಲ್ಲ'' ಎಂದು ಘೋಷಿಸಿದರು. ('ವಿಶೇಷ ಅಧಿವೇಶನ'ದ ಅಧ್ಯಕ್ಷರಾಗಿ ಅವರು ಅಷ್ಟೊಂದು ಕಟ್ಟುಬದ್ಧರಾಗಿರಬೇಕಾಗಿರಲಿಲ್ಲ. ಕಾರಣ ಆ ಅಧಿವೇಶನದೊಂದಿಗೆ ಅವರ ಅಧ್ಯಕ್ಷ ಅವಧಿಯು ಮುಗಿದು ಹೋಗುತ್ತಿತ್ತು.)

ಅವರ ಅಧ್ಯಕ್ಷೀಯ ಭಾಷಣ ತುಂಬಾ ಹರಿತವಾಗಿತ್ತು. ಸುಮಾರು 50,000 ಪದಗಳ ದಿಟ್ಟ ಭಾಷಣ ಅದು. ನಿರರ್ಗಳವಾಗಿ ತಾಸುಗಟ್ಟಳೆ ಅವರ ಭಾಷಣ ಹರಿಯಿತು. ಆ ಧಾಟಿಯಲ್ಲಿ ಅದೊಂದು ಪ್ರಚಂಡ ಭಾಷಣ. ಲಿಖಿತ ಭಾಷಣವನ್ನು ಅವರೆಂದೂ ಸಭೆಯ ಮುಂದಿಡುತ್ತಿದ್ದವರಲ್ಲ. ನೇರವಾಗಿ ಮಾತನಾಡುತ್ತಿದ್ದರು. ಸಭಿಕರಲ್ಲೂ ತಮ್ಮ ಅಭಿಪ್ರಾಯದ ಓಘದಲ್ಲಿ ಚುಂಬಕ ಶಕ್ತಿಯಂತೆ ಸೆಳೆದೊಯ್ಯುತ್ತಿದ್ದರು. ಅವರ ಸ್ಮರಣ ಶಕ್ತಿಯು ಅಧ್ಭುತವಾದದ್ದು. ಹಾಗೆಂದ ಮಾತ್ರಕ್ಕೆ ಅವರ ಭಾಷಣವನ್ನು ಮೊದಲೇ ಮುದ್ರಿಸಿ ಅಧಿವೇಶನದಲ್ಲಿ ಹಂಚಿರಲಿಲ್ಲವೆಂದಲ್ಲ. ಆದರೆ ವೇದಿಕೆಯ ಮೇಲೆ ನಿಂತು ಭಾಷಣ ಮಾಡುವ ಹಂತದಲ್ಲಿ ಅವರು ಆ ಪ್ರತಿಯನ್ನು ತಮ್ಮ ಮುಂದಿಟ್ಟುಕೊಂಡಿರಲಿಲ್ಲ. ವಿಚಿತ್ರವೆಂದರೆ ಅವರಾಡುತ್ತಿದ್ದ ಪ್ರತಿ ಸಾಲು ಮುದ್ರಿತ ಭಾಷಣಕ್ಕೆ ಅನುಗುಣವಾಗಿಯೇ ಇರುತ್ತಿತ್ತು. ಅಂದರ ಮುದ್ರಿತ ಪ್ರತಿಯನ್ನು ನೋಡುತ್ತಾ ಅಧ್ಯಕ್ಷ ಭಾಷಣ ಓದುತ್ತಿರುವರೋ ಎನ್ನುವ ಆಶ್ಚರ್ಯ ಸಭಿಕರಲ್ಲಿ ಅನೇಕರಿಗೆ ಆಗುತ್ತಿದ್ದದ್ದುಂಟು.

ಲಾಲಾಜಿ ತಮ್ಮ ಭಾಷಣದಲ್ಲಿ ಮುಕ್ಕಾಲು ಭಾಗವನ್ನು ಓ ಡಯರ್ ಕ್ರೂರ ಆಡಳಿತದ ಅವಧಿಗೆ ಸಿಕ್ಕಿ ನಲುಗಿದ ಪಂಜಾಬಿನ ದುರಂತ ಚಿತ್ರಣಕ್ಕೆ ಮೀಸಲಾಗಿಟ್ಟರು. ಮಿಲಿಟರಿ ಆಡಳಿತದ ದುಃಸ್ವಪ್ನದ ಚಿತ್ರಣ ಆ ಭಾಷಣದಲ್ಲಿ ಕಣ್ಣಿಗೆ ಕಟ್ಟಿದಂತೆ ಹರಿಯಿತು. ಪಂಜಾಬಿನ ಅನಾಗರಿಕ ಆಡಳಿತ ಮತ್ತು ತಮ್ಮ ಜನರ ನೋವು ನರಳಾಟಗಳ ಸುದ್ದಿ ತಿಳಿದಾಗಿನಿಂದ ಅವರ ಹೃದಯದಲ್ಲಿ ಹೆಪ್ಪುಗಟ್ಟುತ್ತಾ ಬಂದಿದ್ದ ಪ್ರತಿರೋಧ ಆ ಭಾಷಣದಲ್ಲಿ ಪ್ರಪಾತದಂತೆ ಧುಮ್ಮಿಕ್ಕಿತು. ಓ ಡಯರ್ ಆಡಳಿತದ ಆರಂಭದ ದಿನಗಳ ಕೆಲವು ಘಟನೆಗಳೊಂದಿಗೆ ಭಾಷಣ ಆರಂಭಿಸಿದರು. ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ದುರ್ದಿನಗಳನ್ನು ತಂದಿಟ್ಟ ಘಟನೆಗಳನ್ನು ಅದರ ನಿರ್ದೇಶಕರಲ್ಲಿ ಒಬ್ಬರಾಗಿ ಅವರು ತಮ್ಮ ವ್ಯಕ್ತಿಗತ ಮಾಹಿತಿಯೊಂದಿಗೆ ಸಭೆಯ ಮುಂದೆ ಚಿತ್ರಿಸಿದರು.

''ಐರೋಪ್ಯ ವಹಿವಾಟು ಸಂಸ್ಥೆಗಳಿಗೆ ಪರಿಹಾರ ಧನವನ್ನು ಮುಕ್ತವಾಗಿ ಉದಾರವಾಗಿ ಹಂಚಲಾಯಿತು. ಅದೇ ಭಾರತೀಯ ಸಂಸ್ಥೆಗಳಿಗೆ ಪರಿಹಾರವನ್ನು ನೀಡಬೇಕಾದಾಗ ಉಪೇಕ್ಷೆ ತೋರಲಾಯಿತು. ವಿಳಂಬ ಮಾಡಲಾಯಿತು. ತಾತ್ಸಾರ ತಾನೇ ತಾನಾಯಿತು... ಬ್ಯಾಂಕಿನಲ್ಲಿ ಉಂಟಾದ ಬಿಕ್ಕಟ್ಟು ನಮಗೆ ನಿಜ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿತು. ಹಿಂದೆಂದೂ ಅಂಥ ಮನವರಿಕೆ ನಮಗಾಗಿರಲಿಲ್ಲ. ಸರ್ಕಾರದ ಪದ್ಧತಿ ನಮ್ಮನ್ನು ಅಷ್ಟೊಂದು ನಿಸ್ಸಹಾಯಕರಾಗಿ ಮಾಡಿತ್ತು. ತಮ್ಮ ಪದ್ಧತಿಯ ಮೂಲಕ ವಿದೇಶಿ ಬಂಡವಾಳಶಾಹಿಗಳು ನಮ್ಮ ಮೇಲೆ ಹಾಕಿದ ಹೇರಿಕೆಯನ್ನು ನಾವು ಅಕ್ಷರಶಃ

ಅನುಭವಿಸಬೇಕಾಯಿತು. ನಮ್ಮಿಂದಲೇ ಕ್ರೋಢೀಕರಿಸಿದ ಹಣವನ್ನು ವಿದೇಶಿಯರು ತಮ್ಮ ಬಂಡವಾಳಕ್ಕೆ, ವ್ಯಾಪಾರ ವಹಿವಾಟಿಗೆ ಬಳಸಿಕೊಳ್ಳಲು ಅನುಕೂಲವಾಗುವಂತಹ ನಿಯಮ ನಿರ್ಬಂಧಗಳನ್ನು ರೂಪಿಸಿದರು. ಕೈಗಾರಿಕ ಆಯೋಗ ಪಂಜಾಬಿಗೆ ಭೇಟಿ ಕೊಟ್ಟಾಗ ಹರ್‌ಕಿಷನ್ ಲಾಲ್ ಈ ಬಗ್ಗೆ ಬ್ರಿಟಿಷರಿಗೆ ಅನುಕೂಲಕರವಾದ ಸಾಕ್ಷ್ಯ ನೀಡಿದರು. ಆಯೋಗದ ಓರ್ವರು ಅವರ ಸಾಕ್ಷ್ಯದ ವಾಸ್ತವಿಕತೆ ಬಗ್ಗೆ ಪ್ರಶ್ನಿಸಿದಾಗ ಹರ್‌ಕಿಷನ್ ಲಾಲ್ 'ಹೌದೆಂದು' ಉತ್ತರ ಕೊಟ್ಟರು ಎಂದು ಲಾಲಾಜಿ ಸಭೆಗೆ ವಿವರಿಸಿದರು.

ತಮ್ಮ ಭಾಷಣದ ಮೂಲಕ ಲಜಪತರು ಓ ಡಯರ್ ಆಡಳಿತದ ದುರಾಚರಗಳನ್ನೆಲ್ಲಾ ಆ ಸಭೆಯ ಮುಂದೆ ಬಟ್ಟಂಬಯಲು ಮಾಡಿದರು. "ಅದೊಂದು ಭಯೋತ್ಪಾದಕ ದುಃಸ್ವಪ್ನದ ಆಡಳಿತವಾಗಿತ್ತು. ಅದರ ಫಲವೇ 1919ರ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕಂಡು ಬಂದ ವಿಪ್ಲವದ ಫಲಶ್ರುತಿ" ಎಂದು ಸಾರಿದರು. ಮಾಂಟೆಗೋ ಬಳಸಿರುವ ಪದಗಳಲ್ಲೇ (ಜನರಲ್ ಓ ಡಯರ್ ಪ್ರಸ್ತಾಪದೊಂದಿಗೆ) ಹೇಳುವುದಾದರೆ ಸರ್ ಮೈಕೆಲ್ ಓ ಡಯರ್ ತನಗೆ ತಾನೇ ರೂಪಿಸಿಕೊಂಡ ಸಿದ್ಧಾಂತಗಳೆಲ್ಲವೂ "ಭಯೋತ್ಪಾದನೆ, ಕಿರುಕುಳ ಮತ್ತು ಗುಲಾಮಿತನವಾಗಿತ್ತು. ಮಿಲಿಟರಿ ಆಡಳಿತ ಘೋಷಣೆಯೊಂದಿಗೆ ಅತಿರೇಕದ ತುಟ್ಟತುದಿಗೇರಿತ್ತು" ಎಂದ ಲಜಪತರು ಪರಿಸ್ಥಿತಿಯ ವಿವೇಚನೆ ಮಾಡಿದರು. ಅವರು ಮಾರ್ಷಲ್ ಲಾ ಆಡಳಿತದ ಅತಿರೇಕದ ನಡವಳಿಕೆಗಳನ್ನು ತೆರೆದಿಟ್ಟರು. ಅದಕ್ಕೆ ತಮ್ಮ ತೀರ್ಪನ್ನು ನೀಡುತ್ತಾ, "ಪಂಜಾಬಿನಲ್ಲಿ ಮಾರ್ಷಲ್ ಲಾ ಜಾರಿಗೆ ತರಲು ಕಾರಣರಾದ ವ್ಯಕ್ತಿಗಳ ಪೈಕಿ ಮತ್ತು ಅದರ ಆರಂಭದಿಂದ ಅಂತ್ಯದವರೆಗಿನ ವಿದ್ಯಮಾನಗಳಿಗೆಲ್ಲಾ ಕಾರಣರಾದ ವ್ಯಕ್ತಿ ಸರ್ ಮೈಕೆಲ್. ಅವರೇ ಅದರ ಪ್ರಮುಖ ಅಪರಾಧಿ ಎಂದು ಘೋಷಿಸಿದರು. "ಭಾರತದಲ್ಲಿನ ಬ್ರಿಟಿಷ್ ಆಡಳಿತದ ಚರಿತ್ರೆಯಲ್ಲಿ ಯಾವ ವ್ಯಕ್ತಿಯೂ ಸಹ ಇಷ್ಟೊಂದು ಕಟುಕತನದ ನಡವಳಿಕೆ ಪ್ರದರ್ಶಿಸಿಲ್ಲ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಘೋರ ಅಪಚಾರವಾಗುವಂತಹ, ಬ್ರಿಟಿಷ್ ರಾಷ್ಟ್ರಕ್ಕೆ ಅಪಖ್ಯಾತಿ ತಂದಂಥ ಮಹಾ ಅಪರಾಧಿ ಸರ್ ಓ ಡಯರ್ ಅವರಲ್ಲದೆ ಬೇರಾರು ಅಲ್ಲ." ಎಂದು ಲಾಲಾಜಿ ಸಾರಿದರು.

ತಮ್ಮ ಭಾಷಣದ ಗುಂಟ ಲಜಪತರು ಓ ಡಯರ್ ವಿರುದ್ಧ ಆರೋಪಗಳ ಪಟ್ಟಿಯನ್ನೇ ಮಾಡುತ್ತಾ ಸಾಗಿದರು. ಅಂಥ ಆರೋಪಗಳ ಪಟ್ಟಿ ಒಂದು ಡಜನ್‌ಗೂ ಹೆಚ್ಚಾಗಿತ್ತು. 'ಒಡೆದು ಆಳುವ ನೀತಿ'ಯನ್ನು ನಖಶಿಖಾಂತ ಬಳಸಿದ್ದು ಓ ಡಯರ್. ಕೋಮು ಸಂಘರ್ಷದ ಜ್ವಾಲೆ ಹೊತ್ತಿಸಿದ್ದು ಅವರೇ. ಗ್ರಾಮ-ನಗರಗಳ ನಡುವೆ ಅತೃಪ್ತಿಯ ಕಿಚ್ಚು ಹೊತ್ತಿಸಿದ್ದು ಆ ಅಪರಾಧಿ ಅಧಿಕಾರಿಯೇ. ತಮ್ಮ ಕಾನೂನುಬಾಹಿರ ದುರ್ನಡತೆಯ ಕ್ರಮಗಳ ಪ್ರಚಾರ ಮತ್ತು ಅನುಷ್ಠಾನಕ್ಕಾಗಿ ಹಾಗೂ ಯುದ್ಧದ ವೆಚ್ಚ ಭರಿಸುವ ನಿಧಿ ಸಂಗ್ರಹಕ್ಕಾಗಿ ಅದೇ ಮನಸ್ಸಿನ ಜನರನ್ನು ಸಹಾಯಕರಾಗಿ ನಿಯೋಜಿಸಿಕೊಂಡರು. ಅಂಥ ಜನರ ಭಯಾನಕ ಮತ್ತು ಹಿಂಸಾತ್ಮಕ ಕೃತ್ಯಗಳನ್ನು ಸಮರ್ಥಿಸಿಕೊಂಡು ತಮ್ಮ ದುರಾಡಳಿತ ನಿರಾತಂಕವಾಗಿ ಸಾಗುವಂತೆ ನೋಡಿಕೊಂಡರು. ಮಿಲಿಟರಿ ಆಡಳಿತ ಜಾರಿಗೆ ತರುವ ಪ್ರಯತ್ನದಲ್ಲಿ ಓ ಡಯರ್ ಭಾರತ ಸರ್ಕಾರವನ್ನು ಉದ್ದೇಶಪೂರ್ವಕವಾಗಿಯೇ ತಪ್ಪು ದಾರಿಗೆ ಎಳೆದರು. ಸರ್ಕಾರವನ್ನು ವಂಚಿಸಿದರು

ಪೂರ್ವಾಗ್ರಹ ಪೀಡಿತರಾಗಿ ಮಾರ್ಷಲ್ ಲಾ ಮುಂದುವರೆಯುವ ಷಡ್ಯಂತ್ರ ಹೂಡಿದರು. ಲಜಪತರ ಆರೋಪ ಪಟ್ಟಿಯಲ್ಲಿ ಓ ಡಯರ್ ಅನುಸರಿಸಿದ ಮಾರ್ಷಲ್ ಲಾ ಆದೇಶಗಳ ಪ್ರಯೋಗದಲ್ಲಿ ಜನರಿಗೆ ವಿಧಿಸಿದ ಅನಾಗರಿಕ ಶಿಕ್ಷೆಯ ವರ್ಣನೆಯೂ ಸೇರಿತ್ತು. ನಾಗರಿಕ ಸರ್ಕಾರ ಒಪ್ಪದಂಥ ಘೋರ ಆಡಳಿತ ಅದೆಂದು ಚಿತ್ರಿಸಿದರು. ಜಲಿಯನ್ ವಾಲ್‌ಬಾಗ್ ಸಾಮೂಹಿಕ ಹತ್ಯೆಗೆ ಪ್ರಮುಖ ಹೊಣೆ ಆ ಅಧಿಕಾರಿಯೇ ಎಂದು ಲಜಪತರು ಯದ್ವತ್ತಾಗಿ ಆರೋಪ ಹೊರಿಸಿದರು. ಕಿಂಚಿತ್ತೂ ವಿವೇಚನೆ ಇಲ್ಲದೆ ಆ ಆದೇಶ ಹೊರಡಿಸಿದ ಅನಾಗರಿಕ ಅಧಿಕಾರಿ ಎಂದು ಕರೆದರು. ಅಧಿಕಾರದಿಂದ ಮರಳುವ ಮೊದಲು ಓ ಡಯರ್ ಅನುಸರಿಸಿದ ಪಾತ್ರ ಲಜಪತರ ಆರೋಪ ಪಟ್ಟಿಯಲ್ಲಿ ಕಡೆಯದು. ''ಕಾನೂನು ಬಾಹಿರವಾಗಿ ಅದು ಭೀತಿಯನ್ನು ಒಡ್ಡಿ'' ಓ ಡಯರ್ ತಮ್ಮ ಕೃತ್ಯಗಳನ್ನು ಸಮರ್ಥಿಸುವ ಕೆಲವು ಹೇಳಿಕೆಗಳನ್ನು ಪಡೆದುಕೊಂಡರು. ಇಂಗ್ಲೆಂಡಿನಲ್ಲಿ ತಮ್ಮೆಲ್ಲಾ ಕೃತ್ಯಗಳನ್ನು ಸಮರ್ಥಿಸುವ ಪ್ರಮೇಯ ಬಂದಾಗ ಆ ಪ್ರಶಂಸೆಯ ಹೇಳಿಕೆಗಳನ್ನು ಮುಂದೆ ಮಾಡಿ ತಮ್ಮ ಅಪ್ರಾಮಾಣಿಕತೆಯನ್ನು ಸಾರಸಗಟಾಗಿ ಬಯಲು ಮಾಡಿಕೊಂಡರು ಎಂದು ಆ ಘಟನೆಯನ್ನು ಪದರು ಪದರಾಗಿ ಬಿಚ್ಚಿಟ್ಟರು.

ಲಜಪತರು ಮಾರ್ಷಲ್ ಲಾ ಅತಿರೇಕಗಳನ್ನು ಆರೋಪಿಸುತ್ತಾ ಸಾಗಿದಂತೆ ಅದಕ್ಕೆ ಬೆಂಬಲವಾಗಿ ಸಾಕ್ಷಿ ಆಧಾರಗಳನ್ನು ಸಭೆಯ ಮುಂದಿಟ್ಟರು. ಸಾಕ್ಷಿ ಆಧಾರಗಳಲ್ಲಿ ಹೆಚ್ಚಿನ ಅಂಶ ಓ ಡಯರ್ ಹೇಳಿದ ಮಾತುಗಳಲ್ಲೇ ಮುಕ್ತವಾಗಿ ಪ್ರಸ್ತಾಪಗೊಂಡವು. ಓ ಡಯರ್ ಆಡಳಿತದ ಆರಂಭದ ದಿನಗಳ ಭಯೋತ್ಪಾದಕ ಕೃತ್ಯಗಳಿಗೆ ಸ್ವಯಂ ಸಾಕ್ಷಿಯಾಗಿ ಕೆಲವು ವಿದ್ಯಮಾನಗಳನ್ನು ಅವರು ಸಭೆಯ ಮುಂದೆ ನಿದರ್ಶಿಸಿದರು. ಅಂತಿಮ ದಿನಗಳಲ್ಲಿ ಯುದ್ಧದ ನಿಧಿ ಸಂಗ್ರಹಕ್ಕೆ 'ಸ್ವಯಂ ಕೊಡುಗೆ' ರೂಪದಲ್ಲಿ ಓ ಡಯರ್ ವಸೂಲಿಗೆ ತೊಡಗಿದ ರೀತಿಯನ್ನು ಲಜಪತರು ಜೀವಂತ ಚಿತ್ರಣದೊಂದಿಗೆ ವಿವರಿಸಿದರು. ಜನತೆಯನ್ನು ವಂಚಿಸಲು ಜಾರ್ ದೊರೆಗಳ ವಿಧಾನವನ್ನು ಅನುಸರಿಸಿದರೆಂದು ದೂರಿದರು. 'ಸಂಚು' ಅಡೆತಡೆ ಇಲ್ಲದೆ ಸಾಗಿತು ಎಂದರು. ಆ ಎಲ್ಲಾ ಆರೋಪಗಳಿಗೆ ಅವರು ಹಂಟರ್ ವರದಿ, ಕಾಂಗ್ರೆಸ್ ಉಪ ಸಮಿತಿ ವರದಿಗಳನ್ನು ಆಧಾರವಾಗಿ ಸಭೆಯ ಮುಂದಿಟ್ಟರು. ಮಾರ್ಷಲ್ ಲಾ ಅವ್ಯವಸ್ಥೆಗಳ ಬಗ್ಗೆ ಸಮರ್ಥವಾದ ದಾಖಲೆಗಳ ಕೃತಿ ರೂಪದ ಎರಡು ಹೊತ್ತಿಗೆಗಳನ್ನು ಅವರು ತಮ್ಮ ಭಾಷಣದಲ್ಲಿ ಆಧಾರವಾಗಿ ಬಳಸಿಕೊಂಡರು.

ನಂತರದ ಪ್ರಕರಣವೊಂದರಲ್ಲಿ ಓ ಡಯರ್ ಸರ್ ಶಂಕರನ್ ನಾಯರ್ ವಿರುದ್ಧದ ಪ್ರಕರಣವೊಂದರಲ್ಲಿ ಜಯ ಗಳಿಸಿದರು. ತಮ್ಮನ್ನು ತಾವೇ ನಿರ್ದೋಷಿ ಎಂದೂ ಸಾರಿಕೊಂಡಿದ್ದರು. ವಸ್ತುಶಃ ಶಂಕರ್ ನಾಯರ್ ಬಲಿಪಶುವಾಗಿದ್ದರು. ಓ ಡಯರ್ ಕೈಗೊಂಡ ದುಷ್ಕೃತ್ಯಗಳಿಗೆಲ್ಲಾ ಅವರನ್ನೇ ಪಾತ್ರಧಾರಿಯನ್ನಾಗಿ ಮಾಡಲಾಗಿತ್ತು. ಅವರು ಭಾರತ ಸರ್ಕಾರದ ಪ್ರತಿನಿಧಿಯಾಗಿದ್ದ ಅವಕಾಶವನ್ನು ಓ ಡಯರ್ ಪರೋಕ್ಷವಾಗಿ ತಮ್ಮ ಕೆಲಸಗಳಿಗೆ ಅನುವಾಗುವಂತೆ ಬಳಸಿಕೊಂಡಿದ್ದರು. ಓ ಡಯರ್ ಪಾಲಿಗೆ ಸಿಮ್ಲಾ ಅಷ್ಟೊಂದು ಅನುಕೂಲಕರವಾಗಿರಲಿಲ್ಲ. ಸರ್ ಶಂಕರ್ ನಾಯರ್ ತಮ್ಮ ವೃತ್ತಿಯ ಅಪಚಾರಕ್ಕೆ ಬೇಸತ್ತು ಅದರಿಂದ ನಿರ್ಗಮಿಸುವ ವೇಳೆಗೆ ಓ ಡಯರ್ ಸಾಕಷ್ಟು

ಅನಾಮತ ಮಾಡಿಬಿಟ್ಟಿದ್ದರು. ತನ್ನನ್ನು ತಾನು ನಿರ್ದೋಷಿ ಎಂದು ಸಾಬೀತು ಮಾಡಿಕೊಳ್ಳಲು ಓ ಡಯರ್ ಬಳಸಿದ ಆಧಾರ ಭಾರತ ಸರ್ಕಾರ ತಮ್ಮ ಯಾವುದೇ ಕಾರ್ಯವನ್ನು ತಡೆ ಹಿಡಿದಿಲ್ಲ ಎಂಬುದಾಗಿತ್ತು. ಆದರೆ ತಮ್ಮ ನಿರ್ದೋಷಿತ್ವ ನ್ಯಾಯ ಸಮಂಜಸವಾದದ್ದು ಎಂಬುದನ್ನು ಸಾಬೀತುಪಡಿಸಲು ಅವರು ಕಾಂಗ್ರೆಸ್ ಉಪ ಸಮಿತಿ ವಿರುದ್ಧ ಮೊಕದ್ದಮೆ ಹೂಡಬಹುದಾಗಿತ್ತು. ಅಥವಾ ಹಂಟರ್ ಸಮಿತಿ ಸದಸ್ಯರ ವಿರುದ್ಧ ಮೊಕದ್ದಮೆಗೆ ಅನುಮತಿ ಕೇಳಬಹುದಾಗಿತ್ತು. ಎಲ್ಲಕ್ಕಿಂತ ಹೆಚ್ಚಿನದಾಗಿ ತಮ್ಮ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿ, ಸ್ಥಿರವಾದ ಶಬ್ದಗಳಲ್ಲಿ ಆ ಆರೋಪಗಳನ್ನು ಪ್ರತಿಪಾದಿಸಿದ ಲಾಲಾ ಲಜಪತ್‌ರಾಯ್ ವಿರುದ್ಧ ಮೊಕದ್ದಮೆ ಹೂಡಬಹುದಾಗಿತ್ತು. ಹಿಂದೆ ಯಾರೂ ತಮ್ಮ ವಿರುದ್ಧ ಹೊರಿಸದಷ್ಟು ಕಠೋರವಾದ ಆರೋಪಗಳನ್ನು ಲಾಲಾಜಿ ಮಾಡಿದ್ದರೂ ಓ ಡಯರ್ ಅವನ್ನು ಸಹಿಸಿಕೊಂಡಿದ್ದಾದರೂ ಏಕೆ? ಅವರ ವಿರುದ್ಧ ಮೊಕದ್ದಮೆ ಹೂಡಲಿಲ್ಲವೇಕೇ?

ಪಂಜಾಬಿ ಅತಿರೇಕಗಳ ಜೊತೆಗೆ ಕಾಂಗ್ರೆಸ್ ವಿಶೇಷ ಅಧಿವೇಶನವು ಇನ್ನೂ ಎರಡು ಪ್ರಮುಖ ಅಂಶಗಳನ್ನು ಪರಿಗಣಿಸಬೇಕಾಯಿತು. ಅವರಲ್ಲಿ ಮೊದಲನೆಯದು ತುರ್ಕಿಸ್ತಾನದ ಶಾಂತಿ ಒಪ್ಪಂದ. ಇನ್ನೊಂದು ಮಾಂಟೆಗೋ ಸುಧಾರಣೆಗಳಿಗೆ ಸಂಬಂಧಪಟ್ಟ ಕಾನೂನುಗಳ ರಚನೆ. ಸುಧಾರಣೆ ವಿಷಯದಲ್ಲಿ ಲಾಲಾಜಿ ಹೆಚ್ಚು ಪ್ರಸ್ತಾಪ ಮಾಡಲಿಲ್ಲ. ಅವರ ಬಗೆಗಿನ ತಮ್ಮ ಪ್ರತಿಕ್ರಿಯೆಯನ್ನು ತೀರಾ ಸಂಕ್ಷಿಪ್ತವಾಗಿ ಹೇಳಿದರು.

‘‘1918ರ ನಡವಳಿಕೆಯೊಂದರ ಭಾಗ ಇದಾಗಿದೆ. ಅದು 1919ರ ಕುಸಿತದಲ್ಲಿ ಮುಳುಗಿ ಹೋಯಿತು. ಪುನಃ ಹತಾಶೆಯ ಯತ್ನವಾಗಿ ಇನ್ನೊಂದು ರೂಪದಲ್ಲಿ 1920ರಲ್ಲಿ ತಲೆ ಎತ್ತಿತು’’ ಎಂದು ಅವರು ಸಂಕ್ಷಿಪ್ತವಾಗಿ ಹೇಳಿದರು.

ಮಾಂಟೆಗೋ ಸುಧಾರಣೆಗಳ ಬಗ್ಗೆ ಭಾರತದ ರಾಜಕೀಯ ಕಾರ್ಯದರ್ಶಿ ಮತ್ತು ವೈಸ್‌ರಾಯ್ ಅವರ ಜಂಟಿ ವರದಿ ಪ್ರಕಟಗೊಂಡಾಗ ಎಷ್ಟು ಉತ್ಸಾಹ ಹುರುಪು ಪ್ರಕಟಗೊಂಡಿತ್ತೋ ಅಷ್ಟು ನಿರುತ್ಸಾಹ, ಕೋಪ, ಆ ವರದಿ ಅಂತ್ಯವಾಗುವ ವೇಳೆಗೆ ಮೂಡಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಆ ವರದಿಯ ಆಧಾರದ ಮೇಲೆ ಕಾಯ್ದೆ ಕಾನೂನುಗಳನ್ನು ರೂಪಿಸಿದ್ದು ಸಂಪೂರ್ಣ ನಿರಾಸೆಗೆ ಪ್ರೇರಕವಾಗಿತ್ತು. ಲಜಪತರು ಜನತೆಗೆ ಕರೆ ಕೊಟ್ಟರು.- ‘‘ನಿಮಗೆ ಬೇಕಾಗಿರುವುದು ತುಣುಕುಗಳಲ್ಲ. ಇಡೀ ಬ್ರೆಡ್. ಒಂದು ವೇಳೆ ಅರ್ಧವನ್ನೇ ಕೊಡುವುದಾದರೂ ಅದನ್ನೇ ತೆಗೆದುಕೊಳ್ಳುವ ವಿಷಯದಲ್ಲಿ ನನ್ನ ಅಭ್ಯಂತರವಿಲ್ಲ- ಆದರೆ ಆ ಅರ್ಧವು ಸಂಪೂರ್ಣವಾಗಿ ಅಧಿಕಾರಶಾಹಿಯಿಂದ ಆಯ್ಕೆ ಮಾಡಿದ್ದಾಗಿರಬಾರದು. ಅಧಿಕಾರಶಾಹಿಗೆ ಮಿಶ್ರಣ ಮಾಡಿ ಬೇಯಿಸುವ ಕಲೆ ಗೊತ್ತಿಲ್ಲ. ಅವರಿಂದಾಗಿ ಆ ಇಡಿ ಅರ್ಧ ಬ್ರೆಡ್ಡಿನ ಪೌಷ್ಠಿಕಾಂಶಗಳೆಲ್ಲವೂ ಇಲ್ಲದಿರುವ ಅಪಾಯ ಖಂಡಿತವಾಗಿ ಇದೆ. ಅದೇ ಪ್ರಸಂಗದಲ್ಲಿ ಇನ್ನೊಂದು ಅರ್ಧ ಶ್ರೀಮಂತ ಪೌಷ್ಠಿಕಾಂಶಗಳಿಂದ ಕೂಡಿದ್ದಾಗುವ ಅಪಾಯವೂ ಇದೆ. ಹಿಟ್ಟನ್ನು ಕಲಸಿ ಹದಗೊಳಿಸುವ ಹಂತದಲ್ಲಿ ಪೌಷ್ಠಿಕಾಂಶಗಳೆಲ್ಲವೂ ಒಂದು ಕಡೆ ಸೇರಿ ರೋಗಕಾರಕ ಕೀಟಾಣುಗಳು ಇನ್ನೊಂದು ಕಡೆಗೆ ಸೇರಿಕೊಳ್ಳುವಂತೆ ಮಾಡುವ ಕಲೆ ಅಧಿಕಾರಶಾಹಿಯಲ್ಲಿ ಕರಗತ

ಆ ಕೀಟಾಣುಪೂರಕ ಅರ್ಧ ಭಾಗವನ್ನು ನಮಗೆ ಕೊಡುವ ಅಪಾಯವಿದೆ. ಆದ್ದರಿಂದ ಅದು ನಮಗೆ ಬೇಡ.

''ಹಿಂದೂಗಳು, ಮುಸಲ್ಮಾನರು, ಸಿಖ್‌ರು ಮತ್ತು ಕ್ರಿಶ್ಚಿಯನ್ನರು ; ಪಟ್ಟಣವಾಸಿಗಳು ಮತ್ತು ಗ್ರಾಮಸ್ಥರು, ಬ್ರಾಹ್ಮಣರು ಮತ್ತು ಅಬ್ರಾಹ್ಮಣರು, ದೇಶಿಯರು ಮತ್ತು ವಿದೇಶಿಯರು, ಬ್ರಿಟಿಷರು ಮತ್ತು ದೇಶವಾಸಿಗಳು, ಮಿಲಿಟರಿಯವರು ಮತ್ತು ನಾಗರಿಕರು- ಹೀಗೆ ಎಲ್ಲರೂ ವಿಶಿಷ್ಟವಾದ ರೀತಿಯಲ್ಲಿ ಬಾಳಲು ಅನುಕೂಲವಾಗುವಂಥ ಕಾಯ್ದೆ ಕಾನೂನುಗಳನ್ನು ರೂಪಿಸಿದ್ದೇ ಆದರೆ ನಮ್ಮಲ್ಲಿ ರಾಷ್ಟ್ರೀಯ ಸ್ಫೂರ್ತಿ ಉಗಮಿಸುತ್ತದೆ. ಸ್ವತಂತ್ರ ನಾಡಿಗರಾಗಿ ನಾವೆಲ್ಲವೂ ಬದುಕುತ್ತಾ ಅಭ್ಯುದಯ ಕಾಣಬಹುದು.'' ಎಂದು ಸಾರಿದರು.

ತುರ್ಕಿಸ್ಥಾನದ ಒಪ್ಪಂದದ ವಿಷಯದಲ್ಲಿ ಲಜಪತರು ಉಗ್ರವಾದ ಭಾಷೆಯಲ್ಲಿ ಮಾತನಾಡಿದರು. ಅಷ್ಟೇ ವಿವೇಚನಾಯುಕ್ತ ಭಾಷಣ ಅದಾಗಿತ್ತು. ಆ ಒಪ್ಪಂದದ ಧಾರ್ಮಿಕ ಸಂಗತಿಯನ್ನು ಅವರು ತಮ್ಮ ಅಭಿಪ್ರಾಯದಲ್ಲಿ ಅಳವಡಿಸಿಕೊಳ್ಳಲಿಲ್ಲ.

''ಲೇಲ್ಯಾಂಡ್ ಬಕ್ಸ್‌ಟನ್ ಪದಗಳಲ್ಲಿ ಹೇಳುವುದಾದರೆ ಪ್ರೊಫೆಸರ್ 'ಇ' ಆಗಲಿ ಅಥವಾ ಡಾಕ್ಟರ್ 'ಆ' ಆಗಲಿ ಮುಸ್ಲಿಮರ ನಂಬಿಕೆಗಳು ಹೇಗಿರಬೇಕೆಂಬುದನ್ನು ನಿರೂಪಿಸಲು ಸಾಧ್ಯವಿಲ್ಲ. ಸುನ್ನಿ ಮುಸ್ಲಿಮರಲ್ಲಿ ಬಹುಸಂಖ್ಯಾತರು ತುರ್ಕಿಯ ಸುಲ್ತಾನರನ್ನು ತಮ್ಮ ಖಲೀಫರೆಂದು ನಂಬಿರುವುದಷ್ಟೇ ಇಲ್ಲಿ ಪ್ರಸ್ತುತ. ಅವರು ಅಪಾರ ಜನಸ್ತೋಮದ ಮುಖ್ಯಸ್ಥರಾಗಿ, ಸಾಮರ್ಥ್ಯದಿಂದ ಸ್ವತಂತ್ರ ರಾಷ್ಟ್ರದ ಆಳ್ವಿಕೆ ನಡೆಸುವ ಮೂಲಕ ಇಸ್ಲಾಂ ಹಿತರಕ್ಷಣೆ ಮಾಡುವುದಷ್ಟೇ ಇಲ್ಲಿ ಪ್ರಸ್ತುತ. ಮಹಮದೀಯ ಕಾನೂನು ಪುಸ್ತಕಗಳು ಆ ರಾಜ್ಯದ ಎಲ್ಲೆಗಳನ್ನು ನಿರೂಪಿಸಲ್ಪಟ್ಟಿವೆ.''

ತಮ್ಮ ಭಾಷಣದ ಕಡೆಯಲ್ಲಿ ಅವರು ಬಳಸಿದ ಶುದ್ಧ ಧಾರ್ಮಿಕ ಪದ ಸಮೂಹ ಆ ಧರ್ಮದ ನಂಬಿಕೆಯ ಅನುಯಾಯಿಗಳಿಗೆ ಸಮ್ಮತವಾಗುವ ರೀತಿಯಲ್ಲಿತ್ತು.

''ಹೀಗಾಗಿ ಕೇಂದ್ರೀಯ ಖಿಲಾಫತ್ ಸಮಿತಿಯು ಈ ವಿಷಯದಲ್ಲಿ ವಿಶ್ಲೇಷಣೆ ಮಾಡಿರುವುದನ್ನು ನಾವು ಅನುಮೋದಿಸಬೇಕಾಗುತ್ತದೆ. ನಮ್ಮ ದೇಶದ ಮಹಮದೀಯ ದೇಶವಾಸಿಗಳು ನಿರ್ಧರಿಸಬೇಕಾದ ಸಂಗತಿ ಇದು. ಅವರು ಅದನ್ನು ನಿರ್ಧರಿಸಿ ಆಗಿದೆ.

ಬ್ರಿಟಿಷ್ ಪ್ರಧಾನಮಂತ್ರಿ ಭಾರತೀಯ ಮುಸ್ಲಿಂ ಸಮುದಾಯಕ್ಕೆ ನೀಡಿರುವ ಭರವಸೆಗಳನ್ನು ಶಾಂತಿ ಇತ್ಯರ್ಥದ ಸಮಯದಲ್ಲಿ ಗಾಳಿಗೆ ತೂರಿದರೆ ಆಶ್ಚರ್ಯವೇನೂ ಇಲ್ಲ. ತುರ್ಕಿಸ್ಥಾನದ ಶಾಂತಿ ಒಪ್ಪಂದವು ಮೂಲ ಸ್ವರೂಪಗಳನ್ನು ಉಲ್ಲಂಘಿಸುತ್ತದೆ ಎಂದೂ, ತಮ್ಮ ಧಾರ್ಮಿಕ ಕಟ್ಟುಪಾಡುಗಳನ್ನು ನೆರವೇರಿಸಿಕೊಳ್ಳಲು ಅಡ್ಡಿ ಉಂಟು ಮಾಡುತ್ತದೆ ಎಂದೂ ತಮ್ಮ ಹಿತಕ್ಕೆ ಸಂಬಂಧಿಸಿದ ದೇಶದೊಂದಿಗೆ ಸ್ನೇಹ ಸೌಹಾರ್ದ ಬೆಳೆಸಿಕೊಳ್ಳಲು ಅದರಿಂದ ದುಸ್ತರವಾಗುತ್ತದೆ ಎಂದು ಭಾರತೀಯ ಮುಸ್ಲಿಂ ಸಮುದಾಯ ಭೀತಿಗೊಂಡಿದ್ದರೆ ಅವರಲ್ಲೂ ಯಾವುದೇ ಅನುಮಾನಕ್ಕೆ ಕಾರಣವಿಲ್ಲ.''

ಆ ಶಾಂತಿ ಒಪ್ಪಂದದ ರಾಜಕೀಯ ಪರಿಣಾಮಗಳು ಮತ್ತು ಭಾರತದ ಸಮಸ್ಯೆಯ ಮೇಲೆ (ಕೇವಲ ಭಾರತೀಯ ಮುಸ್ಲಿಮರಷ್ಟೇ ಅಲ್ಲ) ಅದರಿಂದಾಗುವ ಪರಿಣಾಮಗಳ ಬಗ್ಗೆ ಸೂಕ್ಷ್ಮ ವಿವೇಚನೆ ಮಾಡಿದ ಲಜಪತರು,

''ತುರ್ಕಿಸ್ಥಾನದ ಶಾಂತಿ ಒಪ್ಪಂದದಲ್ಲಿ ಇನ್ನೂ ಕೆಲವು ಅಂಶಗಳು ಅಡಕವಾಗಿವೆ ಎಂದು ನನ್ನ ಅಭಿಮತವಾಗಿವೆ. ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ. ಏಷ್ಯಾದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಇನ್ನಷ್ಟು ವಿಸ್ತಾರಗೊಂಡಿದ್ದೇ ಆದರೆ ಅದು ಭಾರತದ ಹಿತಕ್ಕೆ ಮಾರಕವಾಗುತ್ತದೆ. ಮನುಕುಲದ ಸ್ವಾತಂತ್ರ್ಯಕ್ಕೆ ಘಾತಕವಾಗುತ್ತದೆ ಎಂದು ನನಗೆ ಅನಿಸುತ್ತಿದೆ. ಏಷ್ಯಾ ಮತ್ತು ಆಫ್ರಿಕಾದ ವಿರುದ್ಧ ಭಾಗಗಳನ್ನು ಗೆದ್ದುಕೊಳ್ಳಲು ಬ್ರಿಟಿಷರು ಮೇಲಿಂದ ಮೇಲೆ ಭಾರತೀಯ ಸೈನ್ಯ ಬಳಸಿಕೊಳ್ಳುತ್ತಿದ್ದಾರೆ. ಯುರೋಪೇತರ ಸೈನ್ಯವನ್ನು ಯಾವುದೇ ಐರೋಪ್ಯ ಯುದ್ಧದಲ್ಲಿ ಬಳಸಿಕೊಳ್ಳಬಾರದೆಂಬ ಅಲಿಖಿತ ಕಟ್ಟಳೆಯೊಂದು ಬಹು ಕಾಲದಿಂದಲೂ ಜಾರಿಯಲ್ಲಿದೆ. ಯುರೋಪಿನ ಪ್ರತಿ ಚಾನ್ಸಲರ್‌ಗಳು ಆ ಕಟ್ಟಳೆಗೆ ಬದ್ಧವೆಂದು ಹೇಳುತ್ತಲೇ ಬಂದಿದ್ದಾರೆ. ಆದರೆ ಕಳೆದ ಐರೋಪ್ಯದ ಯುದ್ಧದಲ್ಲಿ ಆ ಕಟ್ಟಳೆಗೆ ಬೆಲೆಯನ್ನೇ ಕೊಡಲಿಲ್ಲ. ಆಫ್ರಿಕಾ ಮತ್ತು ಭಾರತೀಯ ಸೈನ್ಯವನ್ನು ಬಹುವಾಗಿ ಬಳಸಿಕೊಳ್ಳಲಾಯಿತು. ಯುದ್ಧಾನಂತರವು ಮಿತ್ರ ರಾಷ್ಟ್ರಗಳು ಯುರೋಪಿನಲ್ಲಿ ಆ ಸೈನ್ಯದ ತುಕಡಿಗಳನ್ನು ಸ್ಥಿರಿಸಿಕೊಂಡಿದ್ದರು. ಜರ್ಮನಿಯನ್ನು ಕಪ್ಪು ಸೈನಿಕರು ಆಕ್ರಮಿಸಿಕೊಂಡಿದ್ದರು. ಕೆಲವು ಕಾಲ ಆ ಸೈನ್ಯವನ್ನು ಐರ್ಲೆಂಡ್‌ನಲ್ಲಿಯೂ ಇರಿಸಲಾಗಿತ್ತು. ಸಾಮಾಜಿಕ ಸಂಬಂಧಿ ಮಾತ್ಸರ್ಯ ನಿವಾರಿಸುವುದು ಅಂತಹ ಕ್ರಮದ ಉದ್ದೇಶವಾಗಿದ್ದರೆ ಅದಕ್ಕೆ ನನ್ನ ಪ್ರತಿರೋಧವಿಲ್ಲ. ಅಂಥ ದೃಷ್ಟಿಕೋನವನ್ನು ಸ್ವಾಗತಿಸಲು ಬಲ್ಲೆ. ಆದರೆ ಅದರ ಇನ್ನೊಂದು ಮುಖ ಗಂಭೀರವಾಗಿದೆ. ಮಿಲಿಟರೀಕರಣದ ವ್ಯಾಪ್ತಿಯನ್ನು ಅದು ಹೆಚ್ಚಿಸುತ್ತದೆ.'' ಎಂದರು.

ಈ ಮಿಲಿಟರಿ ಬಳಕೆಯ ವಿಸ್ತೃತ ರೂಪ ಒಂದಲ್ಲ ಒಂದು ದಿನ ಅನೂಹ್ಯವಾದ ಸಾಧ್ಯತೆಗಳಿಗೆ ಕಾರಣವಾಗುತ್ತದೆ ಎಂದು ವಿವೇಚಿಸುತ್ತಾ ಲಜಪತರು ''ಒಂದು ವೇಳೆ ಬ್ರಿಟಿಷ್ ಸಾಮ್ರಾಜ್ಯವಾದಿಗೆ ಭಾರತೀಯ ಸೈನ್ಯವನ್ನು ಈಜಿಪ್ಟ್, ಪರ್ಷಿಯಾ, ಅರೇಬಿಯಾ, ಮೆಸಪೊಟೋಮಿಯಾ, ಸಿರಿಯಾ ಮತ್ತು ಮಧ್ಯ ಏಷ್ಯಾಗಳಲ್ಲಿ ಬಳಸಿಕೊಳ್ಳುವುದರಲ್ಲಿ ಸ್ವಹಿತದ ಉದ್ದೇಶ ಇಲ್ಲವೆನ್ನುವುದಾದರೆ ಆ ದೇಶಗಳಲ್ಲಿ ನಮ್ಮ ವಿರುದ್ಧ ಮುಗಿ ಬೀಳುವಂತಹ ಸೈನ್ಯಗಳನ್ನು ಕಟ್ಟುತ್ತಿರುವುದೇಕೆ? ಇದು ಹೀಗೆ ಗಹನವಾದರೆ ಹಿಂದೂ-ಮುಸ್ಲಿಂ ಸಮಸ್ಯೆ ಹತ್ತಾರು ಪಟ್ಟು ಹೆಚ್ಚಾಗುತ್ತದೆ. ಅಪಾಯದ ಹಂತ ಮುಟ್ಟುತ್ತದೆ ಎಂದು ಈ ಬೆಳವಣಿಗೆ ಮುನ್ಸೂಚನೆ ನೀಡುತ್ತದೆ'' ಎಂದು ವಿಶ್ಲೇಷಿಸಿದರು.

ಮತ್ತೆ ಅವರು ಮುಂದುವರೆದು, ''ಬ್ರಿಟಿಷ್ ಆಕ್ರಮಣವನ್ನು ತಡೆಗಟ್ಟಲು ಈ ದೇಶದ ಮುಸ್ಲಿಂ ಸಮೂಹ ಪ್ರತಿರೋಧ ಮುಂದುವರಿಸಿದ್ದೇ ಆದರೆ ಅನೇಕ ವರ್ಷಗಳಿಂದ ಅವರು ಮಾಡುತ್ತಾ ಬಂದಿರುವ ಆ ಪ್ರತಿಭಟನೆಯನ್ನು ಹತ್ತಿಕ್ಕಲು ಭಾರತೀಯ ಸೈನ್ಯವನ್ನು ಆ ಪ್ರಾಂತ್ಯಗಳ ಮೇಲೆ ನುಗ್ಗಿಸುವ ಯತ್ನ ನಡೆಯಬಹುದು. ಅದರಿಂದ ನಮ್ಮ ಸಂಪನ್ಮೂಲಗಳನ್ನು ಆರ್ಥಿಕವಾಗಿಯೂ ಮಾನವ ಶಕ್ತಿಯ ರೂಪದಲ್ಲೂ ನಿರಂತರವಾಗಿ ಬರಿದು ಮಾಡುವ ಕೃತ್ಯ ಆಗುತ್ತದೆ'' ಎಂದೂ ಸಹ ವಿಶ್ಲೇಷಿಸಿದರು.

ಲಜಪತರಲ್ಲಿ ಲೀಗ್ ಆಫ್ ನೇಷನ್ಸ್ ಬಗ್ಗೆ ಯಾವುದೇ ಆಶಯ ಇರಲಿಲ್ಲ. ಹೊಸ ಬಗೆಯ ನಾಯಕರು ಅದರಲ್ಲಿರುತ್ತಾರೆಂದು ಅವರು ಅಂದು ಕೊಂಡಿರಲಿಲ್ಲ.

''ಬಂಧುಗಳೇ, ಲೀಗ್ ಆಫ್ ನೇಷನ್ಸ್ ಎಂಬ ಕಲ್ಪನೆಯೇ ಇಲ್ಲ. ಅಲ್ಲಿರುವುದೆಲ್ಲಾ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ಮಾತ್ರ. ಅವರೇ ಆ ಲೀಗ್ ಆಫ್ ನೇಷನ್ಸ್.'' ಎಂದು ಸಾರಿದರು.

ಲಜಪತರು ಖಿಲಾಫತ್ ತಪ್ಪು ತಡವರಿಕೆಗಳನ್ನು ಉಗ್ರವಾಗಿ ಖಂಡಿಸಿದರು. ಪಂಜಾಬಿನಲ್ಲಿ ನಡೆದ ಎಲ್ಲಾ ಅಪಚಾರ, ಅತ್ಯಾಚಾರಗಳನ್ನು ಬಿಚ್ಚಿಟ್ಟರು. ಆದರೆ ಈಗಾಗಲೇ ನಾವು ಓದಿರುವಂತೆ ಈ ಎರಡು ಸಂಗತಿಗಳನ್ನು ಮಹಾತ್ಮಗಾಂಧೀ ಪ್ರಣೀತ ಅಸಹಕಾರ ಚಳವಳಿ ಕಾರ್ಯಕ್ರಮಕ್ಕೆ ಪೂರಕವಾಗಿ ಸಮ್ಮಿಳಿತಗೊಳಿಸಿಕೊಳ್ಳುವ ವಿಷಯದಲ್ಲಿ ಅವರು ಗಂಭೀರರಾದರು. ಕಾಂಗ್ರೆಸ್ಸಿನ ಗಣ್ಯಾತಿಗಣ್ಯರು ಇಕ್ಕೆಡೆಗಳಲ್ಲೂ ಮೇಳೈಸಿದರು. ಗಾಂಧೀಜಿ ಅವರನ್ನು ಅಲಿ ಸಹೋದರರು ಸೇರಿದಂತೆ ಅನೇಕ ಮುಸ್ಲಿಂ ನಾಯಕರು ಸುತ್ತುವರಿದರು. ಅದಕ್ಕೆ ಪೂರಕವಾಗಿ ಎನ್ನುವಂತೆ ಅಮೃತಸರದ ಕಾಂಗ್ರೆಸ್ ಅಧ್ಯಕ್ಷ ಪಂಡಿತ್ ಮೋತಿಲಾಲ್ ನೆಹರು ಅವರು ಜೊತೆಗೂಡಿದರು. ಪಂಡಿತರು ಆ ಚಳವಳಿಗೆ ಸಣ್ಣದೊಂದು ಸಲಹೆ ಸೂಚಿಸಿದರು. ಶಾಲಾ ಕಾಲೇಜುಗಳು ಮತ್ತು ನ್ಯಾಯಾಲಯಗಳ ಬಹಿಷ್ಕಾರ ಹಂತ ಹಂತವಾಗಬೇಕೆಂಬ ಸಲಹೆ ಅದು. ಅದು ಸಮ್ಮತವೂ ಆಯಿತು. ಸ್ವತಃ ಗಾಂಧೀ ಆ ಆಂದೋಲನದ ನಿರ್ಣಯವನ್ನು ಮಂಡಿಸಿದರು. ಬಿಪಿನ್ ಚಂದ್ರ ಪಾಲ್ ತಿದ್ದುಪಡಿ ಸೂಚಿಸಿದರು. ಸಿ.ಆರ್. ದಾಸ್ ಅನುಮೋದಿಸಿದರು. ವಸ್ತುಶಃ ಅಸಹಕಾರ ಚಳವಳಿಯ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುವ ಹೊಣೆಗಾರಿಕೆ ದಾಸ್ ಅವರನ್ನೇ ಅವಲಂಬಿಸಿತ್ತು ಕೂಡಾ. ತಿಲಕರು ನಿಧನ ಹೊಂದಿದ್ದರೂ ಲಜಪತರು ಅಧ್ಯಕ್ಷ ಸ್ಥಾನದ ತಾಟಸ್ಥ ಧೋರಣೆಗೆ ತೃಪ್ತಿ ಪಟ್ಟುಕೊಂಡಿದ್ದರು. ಹೀಗಾಗಿ ಆ ಕಾರ್ಯಕ್ರಮವನ್ನು ವಿರೋಧಿಸುವ ಬಂಗಾಳ ಮತ್ತು ಮಹಾರಾಷ್ಟ್ರ ರಾಷ್ಟ್ರೀಯವಾದಿಗಳ ಬಣದ ನಾಯಕತ್ವ ದಾಸರ ಹೆಗಲ ಮೇಲಿತ್ತು. ವಿಷಯ ನಿಯಾಮಕ ಸಮಿತಿಯಲ್ಲಿ ಕೇವಲ ಏಳ ಮತಗಳಷ್ಟು ಅಂತರದ ಬಹುಮತದಲ್ಲಿ ನಿರ್ಣಯ ಅಂಗೀಕೃತವಾಯಿತು. ಅದೇ ನಿರ್ಣಯ ಬಹಿರಂಗ ಅಧಿವೇಶನದಲ್ಲಿ ಪ್ರಚಂಡ ವಿಜಯದೊಂದಿಗೆ ಅಂಗೀಕೃತವಾಯಿತು. ಆ ದಿನ ಗಾಂಧೀಜಿಯ ದಿನವಾಯಿತು. ಬಿದ್ದ ಮತಗಳದ್ದೇ ಒಂದು ದೊಡ್ಡ ದಾಖಲೆ ಎನಿಸಿತು. ಮತದಾನಕ್ಕಾಗಿ ಇಡೀ ಮಂಟಪವನ್ನೇ ಬಳಸಿಕೊಳ್ಳಲಾಯಿತು. ನಿರ್ವಾಚನಾ ಕೆಲಸವನ್ನು ಸ್ವತಃ ಅಧ್ಯಕ್ಷರೇ ವಹಿಸಿಕೊಂಡರು. ಆರು ತಾಸುಗಳ ಕಾಲ ಮತದಾನ ನಡೆಯಿತು. ಗಾಂಧೀಜಿ ನಿರ್ಣಯದ ಪರವಾಗಿ 1855 ಮತಗಳು ಚಲಾಯಿತವಾದವು. ತಿದ್ದುಪಡಿಯನ್ನು ಬೆಂಬಲಿಸಿದ್ದು 873 ಮತಗಳು. ಸಮಾರೋಪ ಅಧಿವೇಶನದಲ್ಲಿ ಲಜಪತರು ಕೆಲವು ಅಪಾಯಗಳ ಬಗ್ಗೆ ಮಾತನಾಡಿದರು. ಅದನ್ನು ಹೊರತುಪಡಿಸಿದರೆ ಉಳಿದಂತೆ ಅವರು ಸಂಪೂರ್ಣವಾಗಿ ತಾಟಸ್ಥ್ಯಕ್ಕೆ ಬದ್ಧರಾಗಿದ್ದರು.

ಅಸಹಕಾರ ಚಳವಳಿಯ ತತ್ವಗಳ ವಿಷಯದಲ್ಲಿ ಲಾಲಾಜಿಯವರಿಗೆ ಹೃದಯಪೂರ್ವಕವಾಗಿ ಸಮ್ಮತಿ ಇತ್ತು. ಕಲ್ಕತ್ತಾ ಕಾರ್ಯಕ್ರಮದಲ್ಲಿ ಸಹ ಅವರು ಆ

ನೀತಿಯಲ್ಲಿ ಯಾವುದೇ ಗಂಭೀರವಾದ ತಪ್ಪನ್ನು ಕಾಣಲಿಲ್ಲ. ಅದನ್ನು ಅವರು ತಮ್ಮ ಕೆಲವು ವೈಯಕ್ತಿಕ ಪತ್ರಗಳಲ್ಲಿ ದಾಖಲು ಮಾಡಿಟ್ಟಿದ್ದಾರೆ. ಆದರೂ ತಾವು ಎರಡು ಬಣಗಳಲ್ಲಿ ಯಾವುದರ ಕಡೆಗೂ ವಾಲಲಿಲ್ಲ ಎಂಬುದನ್ನು ತೋರಿಸಿಕೊಳ್ಳುವುದು ಅನಿವಾರ್ಯವಾಗಿತ್ತು.

``೧೯೨೦''ರಲ್ಲಿ ಕೆಲವರು ಅಸಹಕಾರ ಚಳವಳಿಗೆ ಪೂರಕವಾಗಿ ಸರ್ಕಾರದಿಂದ ಕೊಡಲ್ಪಟ್ಟ ಬಿರುದು ಬಾವಲಿ, ಸ್ಥಾನಮಾನಗಳನ್ನು ಬಿಟ್ಟುಕೊಡಲು ಸಿದ್ಧರಾಗಲಿಲ್ಲ. ಅಂಥ ಜನರನ್ನು ದೂರವಿಡುವುದೇ ಒಳ್ಳೆಯದೆಂದು ಚಳವಳಿಯ ನೇತಾರರು ತೀರ್ಮಾನಿಸಿದರು. ಚಳವಳಿಯ ಪೂರ್ಣ ಬೆಂಬಲವನ್ನು ಜನಸಾಗರದಲ್ಲಿ ಕಂಡುಕೊಳ್ಳಲು ಅವರು ಮುಂದಾದರು. ಜನತೆಗೆ ಆ ಚಳವಳಿಯಿಂದ ನಷ್ಟವಿರಲಿಲ್ಲ. ಬದಲಿಗೆ ಅನುಕೂಲಗಳೇ ಇದ್ದವು. ಈ ಹಿನ್ನಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರೆ ಅದು ಜನಸಾಮಾನ್ಯರ ಪಾಲಿಗೆ ಇನ್ನೂ ಅನುಕೂಲಕರವೆನಿಸುತ್ತಿತ್ತು. ಲಜಪತರಿಗೆ ಪುನಃ ವಕೀಲರಾಗಿ ತಮ್ಮ ವೃತ್ತಿಯನ್ನು ಪುನರ್ ಪ್ರತಿಷ್ಠಾಪಿಸಿಕೊಳ್ಳುವ ಕಿಂಚಿತ್ತೂ ಆಶಯ ಇರಲಿಲ್ಲ. ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆ ತಮ್ಮ ವಿರುದ್ಧ ಎಸಗಿದ ಅಪಚಾರ ಅವರ ಅನುಭವದಲ್ಲಿ ದೊಡ್ಡ ಕಹಿಯಾಗಿ ಉಳಿದುಕೊಂಡಿತ್ತು. ಗಾಂಧೀಜಿ ಅವರ ಕಾರ್ಯಕ್ರಮವನ್ನು ಟೀಕಿಸುತ್ತಿದ್ದ ದೇಶಿಯವಾದಿಗಳ ಆಕ್ಷೇಪಗಳಲ್ಲಿ ಶಾಸಕಾಂಗ ಬಹಿಷ್ಕಾರವೂ ಒಂದಾಗಿತ್ತು. ವಾಸ್ತವದಲ್ಲಿ ಶಾಸಕಾಂಗದ ಬಹಿಷ್ಕಾರದ ಪ್ರಣೇತರೂ ಸ್ವತಃ ಲಜಪತರೇ. ಅವರಿಂದ ಬಂದ ಆ ಸಲಹೆಯನ್ನು ಗಾಂಧೀಜಿ ಪ್ರಶಂಸಿಸಿ ತಮ್ಮ ಚಳವಳಿಯಲ್ಲಿ ಸೇರಿಸಿಕೊಂಡಿದ್ದರು. ಕಲ್ಕತ್ತಾ ಅಧಿವೇಶನದ ನಂತರ ಈ ವಿಷಯದಲ್ಲಿ ತಮ್ಮ ನಿರ್ಧಾರವನ್ನು ಬದಲಾಯಿಸಿಕೊಳ್ಳಲು ಅವರಿಗೆ ಯಾವುದೇ ಸಮಂಜಸ ಕಾರಣ ಕಂಡು ಬರಲಿಲ್ಲ. ಆದರೆ ಶಾಲಾ ಕಾಲೇಜುಗಳ ಬಹಿಷ್ಕಾರ ಅವರಿಗೆ ಸುಲಭದಲ್ಲಿ ಸಮ್ಮತವಾಗಲಿಲ್ಲ. ದೇಶಿಯ ಶಿಕ್ಷಣವನ್ನು ಪ್ರತಿಪಾದಿಸುತ್ತಾ ಬಂದಿದ್ದವರು ಅವರು. ಅದು ತಾರುಣ್ಯದಲ್ಲಿ ಸಾರ್ವಜನಿಕ ಬದುಕಿಗೆ ಇಳಿದಾಗಿನಿಂದಲೂ ಅವರು ಆ ಶಿಕ್ಷಣವನ್ನು ಹೆಚ್ಚು ಪ್ರತಿಪಾದಿಸುತ್ತಾ ಬಂದಿದ್ದರು. ದೇಶದಲ್ಲಿ ಇದ್ದಾಗಲೂ, ದೇಶದ ಹೊರಗಡೆ ಇದ್ದಾಗಲೂ ಲಾಲಾಜಿ ದೇಶಿಯ ಶಿಕ್ಷಣಕ್ಕೆ ಸಂಬಂಧಪಟ್ಟ ಸಮಸ್ಯೆಗಳ ನಿವಾರಣೆಗೆ ಹೆಚ್ಚು ಶ್ರದ್ಧೆಯಿಂದ ಅಧ್ಯಯನ ನಡೆಸುತ್ತಾ ಬಂದಿದ್ದವರು. ಉನ್ನತ ನಾಯಕರಲ್ಲಿ ಕೆಲವರು ಈ ಸಮಸ್ಯೆಯನ್ನು ಅರ್ಧಕ್ಕೆ ಬಿಟ್ಟಿದ್ದದ್ದು ಆಗಿತ್ತು. ಆದರೆ ಲಜಪತರು ಅದನ್ನು ತಮ್ಮ ಅಂತಿಮ ಗುರಿಯನ್ನಾಗಿ ಸ್ವೀಕರಿಸಿದ್ದರು. ಅವರ ಅನುಭವ ಮತ್ತು ಅಧ್ಯಯನಗಳು ದಿ ಪ್ರಾಬ್ಲಮ್ ಆಫ್ ನ್ಯಾಷನಲ್ ಎಜುಕೇಷನ್ ಇನ್ ಇಂಡಿಯಾ ಕೃತಿಯಲ್ಲಿ ಮಡುಗಟ್ಟಿತ್ತು. ಭಾರತಕ್ಕೆ ಮರಳುವ ಮೊದಲೇ ಆ ಕೃತಿಯ ಹಸ್ತಪ್ರತಿಯನ್ನು ಅವರು ತಮ್ಮ ಇಂಗ್ಲಿಷ್ ಪ್ರಕಾಶಕರಿಗೆ ಒಪ್ಪಿಸಿ ಬಂದಿದ್ದರು. ತಾವು ಈ ಮೊದಲು ಅತಿ ಶ್ರದ್ಧೆಯಿಂದ ನೆರವು ನೀಡಿ ಕಟ್ಟಿದ ಕೆಲವು ಸಂಸ್ಥೆಗಳು ಆಗ ನಡೆದುಕೊಳ್ಳುತ್ತಿದ್ದ ರೀತಿ ಅವರನ್ನು ಭ್ರಮನಿರಸನಗೊಳಿಸುತ್ತಿದ್ದದ್ದು ಉಂಟು. ಜನತೆಯ ಮೇಲೆ ಅವರಿಗೆ ಉಪಯುಕ್ತವಿಲ್ಲದ ಶಿಕ್ಷಣ ಪದ್ಧತಿ ಹೇರಿ ತೊಂದರೆ ಉಂಟು ಮಾಡುತ್ತಿದ್ದ ಬಗ್ಗೆ ಯಾರೂ ಲಕ್ಷ್ಯ ಹರಿಸದಿದ್ದನ್ನು ಕಂಡಾಗಲೂ ಲಾಲಾಜಿಗೆ ಅತೀವ ವೇದನೆಯಾಗುತ್ತಿತ್ತು. ದೇಶಕ್ಕೆ ವರದಾನವಾದ ಯುವ

ಜನಾಂಗಕ್ಕೆ ಶಾಲಾ ಕಾಲೇಜುಗಳನ್ನು ತಪ್ಪಿಸುವ ರೀತಿ ಅವರಿಗೆ ಈ ಎಲ್ಲಾ ಹಿನ್ನಲೆಯಲ್ಲಿ ಮಾನ್ಯವಾಗಿರಲಿಲ್ಲ. ಅಸಹಕಾರ ಚಳವಳಿಯ ಆ ಅಂಶವನ್ನು ಅವರು ಒಪ್ಪಿರಲಿಲ್ಲ.

ಅಸಹಕಾರ ಚಳವಳಿಯ ವಿವಿಧ ಅಂಶಗಳ ಅರ್ಹತೆ, ಅನರ್ಹತೆಗಳಿಗಿಂತ ಹೆಚ್ಚಿನದಾಗಿ ಕಾಲಪಕ್ವವಾಗಿದೆಯೇ ಎಂಬ ಸಂಗತಿ ಲಾಲಾಜಿ ಅವರನ್ನು ಸದಾ ಕಾಡುತ್ತಿತ್ತು. ಜನ ಸಮೂಹದಿಂದ ಚಳವಳಿಗೆ ಅಗಾಧ ಬೆಂಬಲ ದೊರೆತು ಅದು ಬಿರುಗಾಳಿಯ ಸ್ವರೂಪ ಪಡೆದುಕೊಂಡರೆ ಕೆಲವು ತಪ್ಪುಗಳಾಗಿದ್ದರೂ ಅದು ಅತಿಶಯವಾಗುವುದಿಲ್ಲ. ಆದರೆ ಅದೇನಾದರೂ ಜನಪರ ಆಂದೋಲನವಾಗದಿದ್ದರೆ ಅನಾಹುತವಾಗುತ್ತದೆ ಎಂದು ಲಾಲಾಜಿ ಶಂಕಿಸಿದರು. ಈ ಹಿನ್ನಲೆಯಲ್ಲಿ ಕೆಲವು ಕಾಲ ಕಾಯ್ದು ನೋಡುವ ಧೋರಣೆಗೆ ತಮ್ಮನ್ನು ಒಳಪಡಿಸಿಕೊಂಡರು. ಚಳವಳಿಗೆ ಧುಮುಕಲಿಲ್ಲ. ಹಾಗೆಂದು ಚಳವಳಿಯಲ್ಲಿ ನಿರತರಾದವರನ್ನು ಟೀಕಿಸಲು ಇಲ್ಲ. ಖಂಡಿಸಲೂ ಇಲ್ಲ. "ಸ್ವಯಂ ತಿರಸ್ಕಾರದ ಘೋಷಣೆಯಲ್ಲಿ ಇಡೀ ದೇಶ ಸಮ್ಮೊದಿಗಿದೆ ಎಂಬ ಬಗ್ಗೆ ನನ್ನದೇ ಆದ ಅನುಮಾನಗಳು ಇವೆ... ಹಾಗೆಂದ ಮಾತ್ರಕ್ಕೆ ನಾನು ಚಳವಳಿಯ ಪ್ರಗತಿಗೆ ಅಡ್ಡಿಯಾಗುವ ಯಾವುದೇ ಕೆಲಸ ಮಾಡುವುದಿಲ್ಲ. ನಿಮಗೆ ಸರ್ವ ಯಶಸ್ಸು ಪ್ರಾಪ್ತವಾಗಲೆಂದು ನಾನು ಹಾರೈಸುತ್ತೇನೆ. ನಿಮ್ಮ ಈ ಆಂದೋಲನಕ್ಕೆ ಯಶಸ್ಸು ಸಿಕ್ಕಿದ್ದೇ ಆದರೆ ನನ್ನಲ್ಲಿಯೂ ಓರ್ವ ಉತ್ಸಾಹಶೀಲ ಬೆಂಬಲಿಗನನ್ನು ನೀವು ಖಂಡಿತವಾಗಿಯೂ ಕಂಡು ಕೊಳ್ಳುವಿರಿ ಎಂಬುದು ಅಸಹಕಾರ ಚಳವಳಿಯ ಬಗ್ಗೆ ತಿಲಕರ ಧೋರಣೆಯಾಗಿತ್ತು ಎಂದು (ಅವರ ನಿಧನದ ನಂತರ) ಗಾಂಧೀಜಿ ಪ್ರಕಟಿಸಿದರು. ಆ ಸ್ಥಿತಿಯಲ್ಲಿ ಲಾಲಾ ಲಜಪತ್‌ರಾಯ್ ಅವರ ಧೋರಣೆಯೂ ಸಹ ಅದಕ್ಕಿಂತ ಭಿನ್ನವಾಗಿರಲಿಲ್ಲ. ಒಂದು ವಿಷಯದಲ್ಲಂತೂ ಅವರಿಗೆ ಖಾತ್ರಿಯಾಗಿತ್ತು. ಅದು ಸ್ವರಾಜ್ಯ ಪ್ರಾಪ್ತಿ ಅಸಾಧ್ಯವೆಂಬುದು. ಅಸಹಕಾರ ಚಳವಳಿಯನ್ನು ಒಂದು ಅಥವಾ ಅದಕ್ಕಿಂತ ಹೆಚ್ಚು ಸಮಯ ನಡೆಸಿದರೆ ಸರ್ಕಾರಿಯಂತ್ರ ತಟಸ್ಥವಾಗುತ್ತದೆ. ಬ್ರಿಟಿಷರ ಭಾರತದ ಆಡಳಿತ ಅಸ್ತವ್ಯಸ್ತಗೊಳ್ಳುತ್ತದೆ ಎಂದು ಕಲ್ಕತ್ತಾ ಕಾರ್ಯಕ್ರಮ ನಂತರ ಭಾವಿಸಿದವರ ಗುಂಪಿನಲ್ಲಿ ಲಾಲಾಜಿ ಒಬ್ಬರಾಗಲಿಲ್ಲ. ಸ್ವರಾಜ್ಯ ಗಳಿಕೆಯ ಹೋರಾಟ ತುಂಬಾ ದುಸ್ತರವಾದದ್ದು, ದೀರ್ಘಕಾಲದ್ದು ಎಂದು ಅವರು ಚೆನ್ನಾಗಿ ಮನಗಂಡಿದ್ದರು. ಕಲ್ಕತ್ತಾ ಕಾರ್ಯಕ್ರಮ ಆ ನಿಟ್ಟಿನಲ್ಲಿ ಒಂದು ಪೂರ್ವ ಸಿದ್ಧತೆ ಎಂದು ಅವರು ಲೆಕ್ಕ ಹಾಕಿದ್ದರು. 'ಸ್ವರಾಜ್ಯ ಬೇಕು' ಜನಾಂದೋಲನಕ್ಕೆ ಆಕರ್ಷಕವಾದ ಘೋಷಣೆಯೇನೋ ಆಗಿತ್ತು. ಆದರೆ ನಾಯಕರುಗಳು ರಾಷ್ಟ್ರೀಯ ರಾಜಕಾರಣದಲ್ಲಿ ಅಂಥ ಘೋಷಣೆ ಅವಲಂಬಿಸುವುದು ಮತ್ತು ಅದನ್ನೇ ತಮ್ಮ ಯಶಸ್ಸಿಗೆ ಹತ್ತಿರದೆಂದು ಭಾವಿಸಿಕೊಳ್ಳುವುದು ವಿಹಿತವಾಗುವುದಿಲ್ಲವೆಂದು ಲಾಲಾಜಿ ವಿವೇಚಿಸಿದ್ದರು.

* * *

ಅಧ್ಯಾಯ-47

ಅಸಹಕಾರ

ಲಾಹೋರಿಗೆ ಮರಳಿದ ನಂತರ ಲಜಪತರು ಅಸಹಕಾರ ಚಳವಳಿ ಅಧಿವೇಶನಕ್ಕೆ ಮೊದಲು ಕೈಗೊಂಡಿದ್ದ ತಮ್ಮ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ತಮ್ಮ ಉರ್ದು ದೈನಿಕ ವಂದೇ ಮಾತರಂ ಕೆಲಸಗಳನ್ನು ಮುಂದುವರಿಸಿದರು. ಆ ವೇಳೆಗಾಗಲೇ ಅವರು ಪ್ರಕಟಿಸಿದ್ದ ತಿಲಕ್ ರಾಜ್ಯಶಾಸ್ತ್ರ ಶಾಲೆಯ ಆರಂಭಕ್ಕೆ ಎಲ್ಲಾ ಸಿದ್ಧತೆಗಳನ್ನು ನಡೆಸತೊಡಗಿದರು. ಆ ಶಾಲೆಗಾಗಿ ನಿಧಿ ಸಂಗ್ರಹಿಸಲು ಪರ್ಯಟನೆ ಕೈಗೊಂಡರು. ವಿದ್ಯಾರ್ಥಿಗಳನ್ನು ಕಾಲೇಜಿನಿಂದ ದೂರವಿರಿಸಲು ಅವರು ಬಯಸದಿದ್ದರೂ ಅವರಲ್ಲಿ ಕೆಲವರನ್ನು ಅಸಹಕಾರ ಚಳವಳಿಯಲ್ಲಿ ತೊಡಗಿಸಿದರೆ ಅವರಿಗೆ ರಾಜಕೀಯ ತರಬೇತಿಯನ್ನು ಯುಕ್ತವಾದ ವೇದಿಕೆಯಲ್ಲಿ ಒದಗಿಸಲು ಒಂದು ಅವಕಾಶ ಕಲ್ಪಿತವಾಗುತ್ತದೆ ಎಂದು ಪರಿಗಣಿಸಿದರು.

ಪಂಜಾಬಿನಲ್ಲಿ ಅಸಹಕಾರ ಚಳವಳಿ ನಿರೀಕ್ಷಿತ ಪ್ರಮಾಣದಲ್ಲಿ ಆರಂಭಗೊಳ್ಳಲಿಲ್ಲ. ಪಂಜಾಬ್ ಕಾಂಗ್ರೆಸ್ ಸಮಿತಿಯು ಆ ಚಳವಳಿಯ ಬಗ್ಗೆ ಹೆಚ್ಚು ಉತ್ಸಾಹ ತೋರಿಸಲಿಲ್ಲ. ಆ ಕಾರಣದಿಂದಾಗಿ ಸೈಫ್-ಉದ್ದೀನ್- ಕಿಚಲಿ, ಕೆ. ಸಂತಾನಂ, ಸರ್ದುಲ್ ಸಿಂಗ್, ಕವಿಷರ್ ಕಾರ್ಯದರ್ಶಿತನದಲ್ಲಿ ಹೊಸ ಆಡ್ ಹಾಕ್ ಅಸಹಕಾರ ಚಳವಳಿ ಸಮಿತಿಯನ್ನು ರಚಿಸಲಾಯಿತು. ಅವರ ಜೊತೆಗೆ ರಾಂಭಜ್ ದತ್ತ ಚೌಧರಿ ಮತ್ತು ಸರಳಾದೇವಿ ಪಂಜಾಬಿನಲ್ಲಿ ಅಸಹಕಾರ ಚಳವಳಿಯ ತೀವ್ರ ಸ್ವರೂಪಕ್ಕೆ ಮುಂದಾದರು. ಕೆಲವು ಕಾಲೇಜು ವಿದ್ಯಾರ್ಥಿಗಳು ಕ್ರಮೇಣ ಅವರ ನೆರವಿಗೆ ಸೇರಿಕೊಂಡರು. ಲಜಪತರ ಮನಸ್ಸನ್ನು ಒಲಿಸಿಕೊಳ್ಳಲು ಸಂತಾನಂ ಮತ್ತು ಕವಿಷರ್ ಬಹು ಪ್ರಯತ್ನ ಪಟ್ಟರು. ಹರ್‌ಕಿಷನ್ ಲಾಲರನ್ನು ಚಳವಳಿಗೆ ಎಳೆದುಕೊಳ್ಳಲು ತೀವ್ರ ಪ್ರಯತ್ನಗಳು ನಡೆದವು. ಈ ನಾಯಕರಲ್ಲದೆ ಪಂಜಾಬಿನಲ್ಲಿ ಅಸಹಕಾರ ಚಳವಳಿ ಯಶಸ್ವಿಯಾಗುವುದಿಲ್ಲವೆಂದು ಅವರಿಗೆ ಗೊತ್ತಿತ್ತು. ಹರ್‌ಕಿಷನ್ ಲಾಲ್ ತಮ್ಮ ಎಂದಿನ ನಡವಳಿಕೆಯನ್ನೇ ಪ್ರದರ್ಶಿಸಿ ಚಳವಳಿಯ ಮುಖಂಡರನ್ನು ಗೊಂದಲಕ್ಕೆ ಸಿಕ್ಕಿಸಿದರು. ಅವರು ಬರುವರೋ ಇಲ್ಲವೋ ಎಂಬುದೇ ಅನೂಹ್ಯವಾಯಿತು. ಲಜಪತರು ಚಳವಳಿಗೆ ಶುಭ ಹಾರೈಸಿ ಕೆಲವು ಕಾಲ ತಾವು ತೆರೆಮರೆಯಲ್ಲಿ ಇರುವುದಾಗಿ ಸ್ಪಷ್ಟವಾಗಿ ತಿಳಿಸಿದರು.

ಸ್ವತಃ ಮಹಾತ್ಮ ಗಾಂಧೀ ಪಂಜಾಬಿಗೆ ಆಗಮಿಸಿದರು. ವಿದ್ಯಾರ್ಥಿಗಳು ಅವರು ಉತ್ಸಾಹ ತೋರಿದ್ದರಿಂದ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಅವರನ್ನು ನಿಭಾಯಿಸುವುದೇ ಕಷ್ಟಕರವಾಯಿತು. ಕಾಲೇಜು ಮುಷ್ಕರಗಳು ದಿನ ನಿತ್ಯದ ಮಾತಾದವು. ಮಹಾತ್ಮ ಗಾಂಧೀಯವರನ್ನು ನೋಡಲು ಅವರ ಮಾತುಗಳನ್ನು ಕೇಳಲು ಜನ ಬಂದರು

ಹಿಂಡಾಗಿ ಸೇರತೊಡಗಿದರು. ಆದರೂ ಅಸಹಕಾರ ಚಳವಳಿಗೆ ಲಜಪತರನ್ನು ಒಪ್ಪಿಸಿಕೊಳ್ಳುವ ಕಾರ್ಯಕ್ಕೆ ಗಾಂಧೀಜಿಯವರ ಆ ಭೇಟಿ ಯಶಸ್ಸು ತರಲಿಲ್ಲ. ಮಹಾತ್ಮ ಗಾಂಧೀ ನಿರ್ಗಮಿಸಿದ ನಂತರ ಚಳವಳಿ ನಿರತರಾದ ವಿದ್ಯಾರ್ಥಿಗಳಲ್ಲಿ ಬಹುತೇಕ ಮಂದಿ ಎಂದಿನಂತೆ ಅಧ್ಯಯನಕ್ಕೆ ಆಗಮಿಸತೊಡಗಿದರು. ಕೇವಲ ಹಿಡಿಯಷ್ಟು ಮಂದಿ ಹೊರಗುಳಿದರು. ಒಟ್ಟಿನಲ್ಲಿ ಗಾಂಧೀಜಿ ಹೆಚ್ಚಿನ ಪರಿಣಾಮವನ್ನು ಬೀರಲಿಲ್ಲ. ಲಾಲಾಜಿಯಂತೆ ಪಂಜಾಬ್ ಪ್ರಾಂತ್ಯವು ಕಾಯ್ದು ನೋಡುವ ತತ್ವಕ್ಕೆ ಬದ್ಧವಾದಂತಿತ್ತು. ವಿದ್ಯಾರ್ಥಿಗಳು -ವೈಯಕ್ತಿವಾಗಿ (ಸಣ್ಣ ಗುಂಪುಗಳಲ್ಲಿ) ದೊಡ್ಡ ಸಮೂಹವಲ್ಲದ ರೀತಿಯಲ್ಲಿ ಲಾಲಾಜಿ ಅವರ ಬಳಿಗೆ ಬಂದು ಅವರ ಸಲಹೆ ಸೂಚನೆಗಳನ್ನು, ಅಸಹಕಾರ ಚಳವಳಿಯ ಬಗ್ಗೆ ನಿಲುವು ಧೋರಣೆಗಳನ್ನು ತಿಳಿದುಕೊಳ್ಳತೊಡಗಿದರು. ವಿದ್ಯಾರ್ಥಿಯು ಆಗುಹೋಗನ್ನು ಸ್ವಯಂ ನಿರ್ಣಯಿಸಿದ ನಂತರ ತನ್ನ ನಿರ್ಧಾರ ಕೈಗೊಳ್ಳಬೇಕೆಂದು ಲಜಪತರು ಅವರಿಗೆ ಪ್ರತ್ಯುತ್ತರ ರೂಪದಲ್ಲಿ ಸೂಚಿಸುತ್ತಿದ್ದರು. ಕಾಲೇಜುಗಳಲ್ಲಿ ಕೂಡ ತೊಡಗಿದ್ದ ಮುಕ್ತ ಶಿಕ್ಷಣದ ಬಗ್ಗೆ ಲಾಲಾಜಿ ಹೆಚ್ಚು ಒಲವು ತೋರಲಿಲ್ಲ. ಅವರಿಂದ ತನಗೆ ಅನುಕೂಲವಿಲ್ಲವೆಂದು ಮನದಟ್ಟಾದಾಗ ಅಂತಹ ಶಿಕ್ಷಣ ಪದ್ಧತಿಯನ್ನು ತೊರೆಯಬೇಕೆಂದು ಅವರು ಹೇಳುತ್ತಿದ್ದರು. ಅಂತಹ ನಿರ್ಧಾರಗಳನ್ನು ಕೈಗೊಳ್ಳುವಾಗ ಖಚಿತವಾದ ವಿವೇಚನೆ ಮಾಡಬೇಕೆಂದು ತಕ್ಷಣದ ಪ್ರಭಾವದಲ್ಲಿ ದುಡುಕಬಾರದೆಂದು ವಿವೇಕ ಹೇಳುತ್ತಿದ್ದರು. ವೈದ್ಯಕೀಯ ಅಥವಾ ಎಂಜಿನಿಯರಿಂಗ್ ವಿದ್ಯಾರ್ಥಿಗಳಾಗಲಿ ಇಲ್ಲವೇ ಅವರ ಪೋಷಕರಾಗಲಿ ತಮ್ಮ ಸಲಹೆ ಕೇಳಿದಾಗ ಅವರು ಅಸಹಕಾರ ಚಳವಳಿಯಲ್ಲಿ ಪಾಲ್ಗೊಳ್ಳುವುದನ್ನು ಸಂಪೂರ್ಣವಾಗಿ ಬೇಡವೆನ್ನುತ್ತಿದ್ದರು. ಕೇವಲ ಪದವೀಧರರಾಗುವುದರಿಂದ ಹೆಚ್ಚು ಪ್ರಯೋಜನವಾಗದೆಂದು ಅರಿತಿದ್ದ ಲಾಲಾಜಿ ದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವೈದ್ಯರು, ಎಂಜಿನಿಯರ್‌ಗಳು, ತಂತ್ರಜ್ಞರ ಅಗತ್ಯವಿದೆ ಎಂದು ಮನಗಂಡಿದ್ದರು. ಕಾನೂನು ವಿದ್ಯಾರ್ಥಿಗಳು ಬಂದು ಸಲಹೆ ಕೇಳುವಾಗ ಮುಕ್ತ ಮನಸ್ಸಿನ ಬೆಂಬಲ ನೀಡಿ ಅಸಹಕಾರ ಚಳವಳಿಯಲ್ಲಿ ಪಾಲ್ಗೊಳ್ಳಲು ಹುರಿದುಂಬಿಸುತ್ತಿದ್ದರು.

ಒಮ್ಮೊಮ್ಮೆ ತಮ್ಮ ಕಾಲೇಜು ಬೋಧಕ ಸಿಬ್ಬಂದಿಯೊಂದಿಗೆ 'ಅಸಹಕಾರ' ಕೊಡುತ್ತಿದ್ದ ಕೆಲವು ವಿದ್ಯಾರ್ಥಿಗಳು ಲಾಲಾಜಿ ಅವರನ್ನು ಕಾಣಲು ಬರುತ್ತಿದ್ದರು. ಹಾಗೆ ಬರುತ್ತಿದ್ದವರಲ್ಲಿ ಲಾಲಾಜಿ ಅಸಹಕಾರ ಚಳವಳಿ ಪರ ಇಲ್ಲವೆಂಬ ಅಪಾರ್ಥವು ಇರುತ್ತಿತ್ತು. ಹಾಗೆ ಬರುತ್ತಿದ್ದವರು ಅವರಲ್ಲಿದ್ದ ಸ್ನೇಹ, ಸೌಹಾರ್ದಗಳಿಗೆ ಮಾರು ಹೋಗುತ್ತಿದ್ದರು. ಅವರ ಸಲಹೆಯನ್ನು ಮಾನ್ಯ ಮಾಡುತ್ತಿದ್ದರು. ಅವರ ತಿಲಕ್ ಶಾಲೆ ಅಂಥ ವಿದ್ಯಾರ್ಥಿಗಳಿಗೆ ಆಹ್ವಾನವನ್ನು ಕೊಡುತ್ತಿತ್ತು. ಎಲ್ಲಾ ಬಗೆಯ ಶಿಕ್ಷಣದೊಂದಿಗೂ ಅಸಹಕಾರ ಕೂಡದೆಂದು ಲಾಲಾಜಿ ಹಿತವಚನ ಹೇಳುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳ ಆಶೋತ್ತರಗಳ ಬಗ್ಗೆಯೂ ಅಸಹಕಾರಿಗಳಾಗಿರುತ್ತಾರೆಂಬ ವಾಸ್ತವ ಪ್ರಜ್ಞೆ ಲಾಲಾಜಿ ಅವರಲ್ಲಿತ್ತು. ತಮ್ಮ ಶಾಲೆಯಲ್ಲಿ ಕಲಿಯುತ್ತಿದ್ದವರಿಗಾಗಿ ಅವರು ಬಾಡಿಗೆಯ ಹಾಸ್ಟೆಲ್‌ವೊಂದರ ವ್ಯವಸ್ಥೆ ಮಾಡಿಕೊಟ್ಟರು. ಹಾಸ್ಟೆಲ್‌ವಾಸಿಗಳ ನಿರ್ವಹಣೆಗಾಗಿ ಸ್ಟೈಪೆಂಡ್ ಸೌಲಭ್ಯಕ್ಕೆ ಏರ್ಪಾಟು ಮಾಡಿದರು. ಆ ಶಾಲೆಗೆ ಅಸಹಕಾರಿ ಮನೋಧರ್ಮದ ವಿದ್ಯಾರ್ಥಿಗಳು ಕೇವಲ ಅವರ ಪ್ರಾಂತ್ಯದಿಂದಷ್ಟೇ ಅಲ್ಲದೆ ಉತ್ತರ ಪ್ರದೇಶ,

ಮಹಾರಾಷ್ಟ್ರಗಳ ಜೊತೆಗೆ ದೂರದ ದಕ್ಷಿಣದ ಪ್ರಾಂತ್ಯದಿಂದಲೂ ಬಂದು ಸೇರಿಕೊಳ್ಳತೊಡಗಿದರು.

ಹೀಗೆ ಮುಂದಿನ ಕಾಂಗ್ರೆಸ್ ಅಧಿವೇಶನ ನಾಗಪುರದಲ್ಲಿ ಸಮಾವೇಶಗೊಳ್ಳುವತನಕ ಪರಿಸ್ಥಿತಿಯು ಬೆಳವಣಿಗೆ ಆಗುತ್ತಾ ಬಂದಿತು. ಆಗ ಪರಿಸ್ಥಿತಿ ನಿರ್ದಿಷ್ಟವಾಗಬೇಕಾಗಿತ್ತು. ಲಾಲಾಜಿ ಚಳವಳಿಯಲ್ಲಿ ಪಾಲ್ಗೊಳ್ಳಬೇಕು ಇಲ್ಲವೇ ಅದರಿಂದ ಹೊರತಾಗಿರಬೇಕು ಎಂಬ ವಿಷಯ ನಿರ್ಧಾರವಾಗಬೇಕಾಗಿ ಬಂದಿತು.

ಪಂಜಾಬಿನಲ್ಲಿ ಚಳವಳಿ ನಿಶ್ಚಿತ ಪ್ರಮಾಣ ಮುಟ್ಟಿದರೂ ಅದಕ್ಕೆ ವಿಪುಲ ಅವಕಾಶವಿದ್ದುದನ್ನು ಅವರು ಮನಗಂಡಿದ್ದರು. ಇತರ ಅನೇಕ ಪ್ರಾಂತ್ಯಗಳಲ್ಲಿ ಅಸಹಕಾರ ಚಳವಳಿಗೆ ಸಿಕ್ಕುತ್ತಿದ್ದ ಪ್ರತಿಕ್ರಿಯೆ ಲಜಪತರನ್ನು ಹರ್ಷಾತೀತರನ್ನಾಗಿ ಮಾಡಿತ್ತು.

ಒಂದಲ್ಲ ಒಂದು ರೀತಿಯಲ್ಲಿ ಲಜಪತರು ಚಳವಳಿಗೆ ನಿಕಟವಾಗತೊಡಗಿದ್ದರು. ತಟಸ್ಥವಾಗಿ ಉಳಿದ ತಮ್ಮ ಧೋರಣೆ ಅವರನ್ನೇ ಅಪಹಾಸ್ಯಕ್ಕೆ ಈಡು ಮಾಡಿದಂತೆ ಭಾಸವಾಗತೊಡಗಿತು. ಕಾಂಗ್ರೆಸ್ ಅಧಿವೇಶನದ ಜೊತೆಯಲ್ಲೇ ನಾಗಪುರದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಸಮ್ಮೇಳನವನ್ನು ಸಹ ಸಂಯೋಜಿಸಲಾಯಿತು. ಆ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಲಾಲಾಜಿ ಒಪ್ಪಿಕೊಂಡರು. ಹೆಚ್ಚು ಕಡಿಮೆ ಕಲ್ಕತ್ತಾ ಪರಿಸ್ಥಿತಿಯೇ ಮರುಕಳಿಸಿತು. ಅಲ್ಲಿನ ಅಧಿವೇಶನದಲ್ಲಿ ಕಾಂಗ್ರೆಸ್ ಅಸಹಕಾರ ಚಳವಳಿಯನ್ನು ನಿರ್ಣಯ ರೂಪದಲ್ಲಿ ಅಂಗೀಕರಿಸಿತ್ತು. ಆದರೆ ಅಧಿವೇಶನದ ಅಧ್ಯಕ್ಷರಾಗಿ ಲಜಪತರು ತಟಸ್ಥ ಧೋರಣೆ ತಳೆದಿದ್ದರು. ನಾಗಪುರದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಸಮ್ಮೇಳನದಲ್ಲೂ ಅಂತಹುದೇ ಪರಿಸ್ಥಿತಿ ಉದ್ಭವವಾಗುವ ಸಂದರ್ಭವಿತ್ತು. ಚಳವಳಿಯಲ್ಲಿ ಪಾಲ್ಗೊಳ್ಳಲು ತಾವು ನಿಶ್ಚಯಿಸಿದರೂ ಅದಕ್ಕೆ ಸಮ್ಮೇಳನ ಅಧ್ಯಕ್ಷರು ಸಮ್ಮತಿ ಕೊಡುವುದಿಲ್ಲವೆಂಬ ಭಾವನೆ ಸಮ್ಮೇಳನ ಆಯೋಜಿಸಿದ್ದ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಮೂಡಿತ್ತು!

ಲಜಪತರು ಮುಚ್ಚುಮರೆ ಮಾಡಲಿಲ್ಲ. ಅಸಹಕಾರ ಚಳವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರದ ಬಗ್ಗೆ ತಮ್ಮ ಚಿಂತನೆಯನ್ನು ಅವರು ತಮ್ಮ ಭಾಷಣದ ಮೂಲಕ ಪ್ರಕಟಿಸಿದರು:

"ಕಲ್ಕತ್ತಾದಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನದ ಸಮಾರೋಪ ಭಾಷಣದಲ್ಲಿ ನಾನು ಶಾಲಾ ಕಾಲೇಜುಗಳನ್ನು ಬಹಿಷ್ಕಾರ ಮಾಡಬೇಕೆನ್ನುವ ಅಸಹಕಾರ ಚಳವಳಿಯ ಅಂಶಕ್ಕೆ ವಿರೋಧ ವ್ಯಕ್ತಪಡಿಸಿದ್ದೇನೆ... ಕಾಂಗ್ರೆಸ್ ಅಧಿವೇಶನದಿಂದ ಮರಳಿದ ಕೂಡಲೇ ಲಾಹೋರಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ನಾನು ಮಾತನಾಡಿ ಎಲ್ಲಾ ಕಲೆ ಮತ್ತು ಕಾನೂನು ಕಾಲೇಜುಗಳನ್ನು ರದ್ದುಪಡಿಸಿದರೆ ಅದನ್ನು ಸ್ವಾಗತಿಸುವುದಾಗಿ ತಿಳಿಸಿದೆ. ವಿದ್ಯಾರ್ಥಿಗಳು ನನ್ನ ಸಲಹೆ ಅರಿಸಿ ಬಂದಾಗಲೆಲ್ಲಾ ನಾನು ಈ ಕೆಳಕಂಡ ರೀತಿಯಲ್ಲಿ ಬುದ್ಧಿ ಹೇಳುತ್ತಾ ಬಂದಿದ್ದೇನೆ.

"ಕಾನೂನು ಕಾಲೇಜಿನ ವಿದ್ಯಾರ್ಥಿಗಳಾಗಿದ್ದರೆ ಕೂಡಲೇ ಬಿಡಿ. ವೈದ್ಯಕೀಯ, ಎಂಜಿನಿಯರಿಂಗ್, ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರೆ ಮುಂದುವರಿಸಿ. ಕಲಾ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರೆ ಪರಿಸ್ಥಿತಿ ವಿವೇಚಿಸಿ ನಿರ್ಧಾರ ಕೈಗೊಳ್ಳಿ

ಮಾಡಿದ್ದವು. ಜರ್ಮನ್ ಪರವಾಗಿದ್ದ ಫಡ್ರೈಟ್ಸ್ ಜೊತೆ ಅವರು ಮುಕ್ತವಾಗಿ ಮಾತನಾಡುತ್ತಿದ್ದ, ಒಡನಾಟವಾಡುತ್ತಿದ್ದ ಬಗ್ಗೆ ಬೇಹುಗಾರಿಕೆ ದಳದವರು ಅತಿ ವರ್ಣ ರಂಜಿತವಾಗಿ ವರದಿಗಳನ್ನು ಕೊಟ್ಟಿರುವ ಸಾಧ್ಯತೆಗಳು ಇತ್ತು. ಈ ಎಲ್ಲಾ ಹಿನ್ನಲೆಯಲ್ಲಿ ಲಜಪತರ ಜೀವಕ್ಕೆ ಭಾರೀ ಗಂಡಾಂತರದ ಸಂಭವವಿತ್ತು. ಅದರಲ್ಲೂ ಸಿಂಗಪುರದಲ್ಲಿ ಎದ್ದ ಸಿಪಾಯಿ ದಂಗೆಯ ನಂತರ ಉಗ್ರವಾದದ ದೇಶವಾಸಿಗಳಿಗೆ ಭಾರೀ ಕಿರುಕುಳ ನೀಡುತ್ತಿರುವ ವರದಿಗಳು ಬರುತ್ತಿದ್ದವು. ಭಾರತಕ್ಕೆ ವಾಪಸಾಗುವ ತಮ್ಮ ಉದ್ದೇಶವನ್ನು ಅವರು ಈ ಹಿನ್ನಲೆಯಲ್ಲಿ ಕೈಬಿಟ್ಟರು. ಒಂದು ವಾರ ಜಪಾನ್‌ನಲ್ಲಿ ಇದ್ದದ್ದು ಹಾಗೂ ಅಲ್ಲಿನ ಅವರ ನಡವಳಿಕೆಗಳು ವರದಿಯಾಗಿದ್ದವು. ಚೀನಾ ಸಮುದ್ರದ ಮುಖಾಂತರ ಭಾರತಕ್ಕೆ ವಾಪಸಾದವರಿಗೆ ಶಿಕ್ಷೆ ಕೊಡುತ್ತಿದ್ದದ್ದು ಅವರಿಗೆ ತಿಳಿದು ಬಂದಿತ್ತು. ಹಾಗೆ ಬರುತ್ತಿದ್ದವರನ್ನು ಬಂಧಿಸಿ, ಶೋಧಕ್ಕೆ ಒಳಪಡಿಸಿ ಅವರನ್ನು ಬಂಧನದಲ್ಲಿ ಇಡಲಾಗುತ್ತಿತ್ತು. ಇಲ್ಲವೇ ಹಾಂಕಾಂಗ್‌ನಲ್ಲಿಯೋ ಅಥವಾ ಸಿಂಗಪುರದಲ್ಲಿಯೋ ಮಾರ್ಗ ಮಧ್ಯೆಯಲ್ಲಿ ಕಿರುಕುಳ ನೀಡಲಾಗುತ್ತಿತ್ತು. ಅಂತಹ ಕಿರುಕುಳಕ್ಕೆ ಒಳಪಟ್ಟವರಲ್ಲಿ ಲಜಪತರ ಗೆಳೆಯ ಶಿವಪ್ರಸಾದ್ ಗುಪ್ತ ಸಹ ಒಬ್ಬರಾಗಿದ್ದರು.

ಹೀಗಾಗಿ ಲಜಪತರು ಭಾರತಕ್ಕೆ ವಾಪಸಾಗುವ ಉದ್ದೇಶವನ್ನು ಕೈಬಿಡಬೇಕಾಯಿತು. ಜಪಾನಿನ ಉನ್ನತ ಅಧಿಕಾರಸ್ಥರು ಲಜಪತರನ್ನು ಅತ್ಯಂತ ಗೌರವದಿಂದ ಅತಿಥಿ ಆದರಗಳಿಂದ ಸನ್ಮಾನಿಸುತ್ತಿದ್ದರೇನೋ ದಿಟ. ಆದರೆ ರಾಷ್ಟ್ರೀಯ ನೀತಿಯ ಭಾಗವಾಗಿ ಮೈತ್ರಿಯ ಒಡಬಂಡಿಕೆಯಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಪರಿಸ್ಥಿತಿ ಹೇಗಾಗಬಹುದೆಂಬ ಒಳ ಆತಂಕವೂ ಅವರನ್ನು ಆವರಿಸದಿರಲಿಲ್ಲ. ಪ್ರೊ. ಪಿಸೋರಿಯಾವೋ ಒಮ್ಮೆ ಅವರೊಂದಿಗೆ ಮಾತನಾಡುತ್ತಾ "ಜಪಾನಿನಲ್ಲಿ ಇರುವುದು ವಿಹಿತ" ಎಂದು ತಿಳಿಸಿದರೂ 'ವ್ಯಕ್ತಿಗತ' ಅಭಿಪ್ರಾಯದಲ್ಲಿ ಬ್ರಿಟಿಷರು ಒತ್ತಡ ಹಾಕಿದರೆ ಯಾರೂ ತಮ್ಮನ್ನು ರಕ್ಷಿಸಲಾಗುವುದಿಲ್ಲ ಎಂದೂ ಹೇಳಿದ್ದರು. ಇನ್ನು ಹೆಚ್ಚಿನದಾಗಿ ಜಪಾನಿನಲ್ಲಿ ತಾವು ಮಾಡುವುದೇನೂ ಉಳಿದಿಲ್ಲವೆಂದು ಲಜಪತರಿಗೆ ಅನಿಸಿತು. ಅಮೆರಿಕ ಸಂಯುಕ್ತ ಸಂಸ್ಥಾನವಲ್ಲಾದರೆ ತಮ್ಮ ದೇಶಕ್ಕಾಗಿ ಏನ್ನನಾದರೂ ಮಾಡಬಹುದು ಎನಿಸಿತು. ತನ್ನ ತಾಯ್ನಾಡಿನ ರಾಯಭಾರಿಯಾಗಿ ಅಮೆರಿಕನ್ ಜನರೊಂದಿಗೆ ಒಡನಾಡ ಬಹುದೆನಿಸಿತು. ಜಪಾನ್‌ಗೆ ಹೋಲಿಸಿದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇಲೆ ಬ್ರಿಟಿಷರು ಅನಗತ್ಯ ಒತ್ತಡ ಹಾಕುವ ಸಂಭವ ಕಡಿಮೆ ಎಂದೂ ಅನಿಸಿತು. ಅಮೆರಿಕ ಆಗಿನ್ನೂ ತಟಸ್ಥ ಧೋರಣೆ ಅನುಸರಿಸುತ್ತಿದ್ದದ್ದು ಲಜಪತರಿಗೆ ಅನುಕೂಲಕರವಾಯಿತು. ಭೋಜನಕೂಟ ಏರ್ಪಾಟಾಗುವ ಮೊದಲೇ ಲಜಪತರು ಅಮೆರಿಕಕ್ಕೆ ವಾಪಸಾಗಲು ನಿರ್ಧರಿಸಿದರು. ಅದಕ್ಕೆ ಅನುಗುಣವಾಗಿ ಡಿಸೆಂಬರ್ ತಿಂಗಳ ಪ್ರಯಾಣದ ಮುಂಗಡವನ್ನು ಕಾಯ್ದಿರಿಸಿಕೊಂಡರು. ಭಾಷಾ ಅಡಚಣೆಯೂ ಲಜಪತರು ಹೆಚ್ಚು ತಂಗದಿರುವುದಕ್ಕೆ ಕಾರಣವೂ ಆಯಿತು. ಆಂಗ್ಲೋ ಜಪಾನಿಯರ ಮೈತ್ರಿ ಯಾವುದೇ ಹಂತದಲ್ಲಿ ತಮಗೆ ಬಲವಂತದ ಅಪಾಯ ತರಬಹುದೆಂಬ ಭಯವೂ ಅವರನ್ನು ಆವರಿಸಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಯುದ್ಧದ ವಿಷಯದಲ್ಲಿ ಇನ್ನೂ ತಟಸ್ಥವಾಗಿತ್ತು. ಮೈತ್ರಿಗೆ ಒಳಪಡದೆ ಪಕ್ಷಾ ಪಿರೋಧಿ ನಿಲುವನ್ನು ತಾಳಿದ ದೇಶವಲ್ಲವೆಂಬ ಆಶಯ ಹುಟ್ಟಿಸಿತು. ಈ ಹಿನ್ನಲೆಯಲ್ಲಿ ಲಜಪತರು ಮತ್ತೆ ಅಮೆರಿಕಕ್ಕೆ ಹೋಗಲು ಬಯಸಿದರು.

ಡಿಸೆಂಬರ್ 4ರಂದು ಟೊಯೋ ಕಿಸ್ಸೆನ್ ಕೈಶಾ ಪ್ರಯಾಣ ಸಂಸ್ಥೆಯು ಲಜಪತರಿಗೆ ತೇನ್ಯಾ ಮರು ಹಡಗಿನಲ್ಲಿ ಕ್ಯಾಬಿನ್ ಕಾದಿರಿಸುವುದಾಗಿ ತಿಳಿಸಿತು. ಒಂದು ವಾರದ ನಂತರ ಡಿಸೆಂಬರ್ 12ರಂದು ಅವರನ್ನು ಅವರ ಗೆಳೆಯರು ಯೋಕೋಹಮಾದಲ್ಲಿ ಬೀಳ್ಕೊಟ್ಟರು.

ಲಜಪತರು ತಮ್ಮೊಂದಿಗೆ ಯಾನ ಮಾಡುವಂತೆ ತಮ್ಮ ಯುವ ಸಹವರ್ತಿಯಾಗಿ ಕೇಶವರಾಂ ಸಬರ್‌ವಾಲ್‌ನನ್ನು ಕೇಳಿದರು. ಮೊದಲು ಆತ ಲಜಪತರನ್ನು ಭೇಟಿ ಮಾಡಿದ್ದಾಗ ತಾನು ಅಮೆರಿಕಕ್ಕೆ ಹೋಗಿ ಶಿಕ್ಷಣ ಪಡೆಯಲು ಬಯಸಿರುವುದಾಗಿ ತಿಳಿಸಿದ್ದ. ಈ ಉದ್ದೇಶಕ್ಕಾಗಿ ಮನೆಯಿಂದ ಹಣ ಬರುವುದಕ್ಕಾಗಿ ಕಾಯುತ್ತಿದ್ದೇನೆಂದು ತಿಳಿಸಿದ್ದ. ಲಜಪತರು ಬಾಡಿಗೆ ಮನೆ ಹಿಡಿದು ಆತನನ್ನು ತಮ್ಮ ಕಿರಿಯ ಜೊತೆಗಾರರಾಗಿ ಸೇರಿಸಿಕೊಂಡ ನಂತರ ಹಣದ ಅಗತ್ಯವಿದ್ದರೆ ತಾವು ನೆರವಿನ ರೂಪದಲ್ಲಿ ಭರಿಸುವುದಾಗಿ ತಿಳಿಸಿದ್ದರು. ಆ ಹುಡುಗನಲ್ಲಿ ಕ್ರಾಂತಿಕಾರಿ ಮನೋಧರ್ಮ ಇದ್ದದ್ದನ್ನು ಮನಗಂಡಿದ್ದ ಲಜಪತರು ಅಮೆರಿಕ ತಲುಪಿದ ನಂತರ ಅಂತಹ ಕ್ರಾಂತಿಕಾರಿ ಸಂಬಂಧದಿಂದ ಸಾಧ್ಯವಾದಷ್ಟು ದೂರ ಉಳಿಯಲು ಷರತ್ತು ವಿಧಿಸಿದ್ದರು. ಆದರೆ ರಾಸ್ ಬಿಹಾರಿ, ಸಬರ್‌ವಾಲನನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. ಆತ ತಮ್ಮ ಜೊತೆಯಲ್ಲೇ ಇರಬೇಕೆಂದು ಅವರು ಬಯಸಿದರು. ಆ ತರುಣ ಗೊಂದಲದಲ್ಲಿ ಸಿಕ್ಕಿಕೊಂಡ. ಕೊನೆಗೆ ರಾಸ್ ಬಿಹಾರಿ ಒತ್ತಡವೇ ಮೇಲುಗೈ ಆಯಿತು. ಕಾರಣ ಆ ದಿನಗಳಲ್ಲಿ ಆ ಮಹಾನ್ ಕ್ರಾಂತಿಕಾರಿ ನಾಯಕ ವಿಚಿತ್ರ ಬಿಕ್ಕಟ್ಟು ಎದುರಿಸುತ್ತಿದ್ದರು. ಈ ಬಗ್ಗೆ ಮುಂದಿನ ಅಧ್ಯಾಯದಲ್ಲಿ ನೋಡೋಣ.

ಜಪಾನ್‌ನಲ್ಲಿ ಇರುವಷ್ಟು ಕಾಲ ಸಬರ್‌ವಾಲ್, ಲಜಪತರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಲಜಪತರು ಸಹಜವಾಗಿ ಆತನನ್ನು ಬಹುವಾಗಿ ಹಚ್ಚಿಕೊಂಡಿದ್ದರು. ಹೀಗಾಗಿ ಅವರಿಬ್ಬರ ಅನುಬಂಧ ಕೊನೆಯತನಕ ಉಳಿದಿತ್ತು. ಆಗಾಗ ಪರಸ್ಪರ ಪತ್ರ ವಿನಿಮಯವೂ ನಡೆಯುತ್ತಿತ್ತು.

ಲಜಪತರಿಗೆ ಸ್ವತಃ ತಾವು ತೆರಳಲು ಸಾಧ್ಯವಾಗದಿದ್ದರೂ ಮತ್ತೊರ್ವ ತರುಣನನ್ನು ಸಬರವಾಲ್ ಪತ್ತೆ ಹಚ್ಚಿದರು. ಅಮೆರಿಕಕ್ಕೆ ಹೋಗಿ ಕೃಷಿ ಬಗ್ಗೆ ಅಧ್ಯಯನ ಮಾಡಲು ಆ ತರುಣ ಬಯಸಿದ್ದ. ಆತ ಎಸ್. ಎಸ್. ಸರಣ. ಮುಂದೆ ನ್ಯೂಯಾರ್ಕ್‌ನಲ್ಲಿ ಓರ್ವ ಯಶಸ್ವಿ ವ್ಯಾಪಾರೋದ್ಯಮಿಯಾದ ವ್ಯಕ್ತಿ. ಪ್ರಯಾಣದ ಸಮಯದಲ್ಲಿ ಕಿಡಿಗೇಡಿತ[illegible] ನಡೆಯುವ ಸಾಧ್ಯತೆ ಇದ್ದುದರಿಂದ ಲಜಪತರು ನಂಬಿಕೆಗೆ ಪಾತ್ರನಾದ ಸ[illegible] ಪ್ರಯಾಣಿಕರೊಬ್ಬರನ್ನು ಆರಿಸಿದ್ದರು. ಕೇಶವರಾಂ ಸಬರವಾಲರಿಗೆ ಅದರ ಮಹ[illegible] ಅರ್ಥವಾಗಿತ್ತು. ಅದಕ್ಕೆ ಅನುಗುಣವಾಗಿ ಆತ ತನ್ನ ಕರ್ತವ್ಯ ನಿರ್ವಹಿಸಿದ್ದ. ಲಜಪ[illegible] ಮಾತನಾಡುವಾಗ ಬಳಸಿರುವ 'ಅಪಾಯಗಳು ... ನನ್ನ ಸುರಕ್ಷಿತನಾಗಿ' ಪದಗಳು ಅವರ ಮನಸ್ಥಿತಿಯನ್ನು ಹೇಳುತ್ತಿತ್ತು.

* * *

ಅಧ್ಯಾಯ-41

ಯುದ್ಧ ಸಂದರ್ಭದಲ್ಲಿ ಭಾರತೀಯ ಕ್ರಾಂತಿಕಾರಿಗಳು

ಇಂಗ್ಲೆಂಡಿನಲ್ಲಿ ತಮ್ಮ ದೇಶವಾಸಿಗಳ ವೃತ್ತಿಪರ 'ನಿಷ್ಠೆ'ಯ ಆಷಾಢಭೂತಿತನದಿಂದ [illegible] ಲಜಪತ್‌ರಾಯ ಆ ದೇಶವನ್ನು ಬಿಡಬೇಕಾಯಿತು. ಅಂತಹ ದುರ್ದೆಶೆ ಅಮೆರಿಕದ ಭಾರತೀಯ ಸಮುದಾಯದಲ್ಲಿ ಖಂಡಿತವಾಗಿಯೂ ಇರಲಿಲ್ಲ. ಬದಲಾಗಿ ಅವರು ಪೆಸಿಫಿಕ್ ಕಡಲ ತೀರವನ್ನು ತಲುಪಿದಾಗ ಕ್ಯಾಲಿಫೋರ್ನಿಯಾದಲ್ಲಿದ್ದ ತನ್ನ ದೇಶವಾಸಿಗಳನ್ನು (ಬಹುತೇಕ ಪಂಜಾಬಿಗಳು) ಭೇಟಿ ಮಾಡಿದಾಗ ಇನ್ನೊಂದು ವೈಪರಿತ್ಯವನ್ನು ಅವರು ಎದುರಿಸಬೇಕಾಯಿತು. ಇಂಗ್ಲೆಂಡಿನ ಶತ್ರುಗಳ ಜೊತೆ ಮೈತ್ರಿಗಾಗಿ ಕಾತರಿಸಿದ್ದ ಆಂದೋಲನದ ಸ್ಥಿತಿ ಅದು. ಭಾರತದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ದಂಗೆ ಎಬ್ಬಿಸುವುದು ಆ ಆಂದೋಲನದ ತಂತ್ರವಾಗಿತ್ತು. ಲಜಪತರು ಈ ಪ್ರಸಂಗದಲ್ಲೂ ತಮ್ಮದೇ ನಿರ್ಧಾರಕ್ಕೆ ಕಟಿಬದ್ಧರಾಗಿದ್ದರು. ಇಲ್ಲಿನ ಅವರ ಆ ನಿರ್ಧಾರ ತಿಲಕರ ನಿರ್ಧಾರವನ್ನೇ ಹೋಲುವಂತಿತ್ತು. ಭಾರತದ ಹಿತರಕ್ಷಣೆ ಮತ್ತು ಗೌರವದ ನೆಪದಲ್ಲಿ ಬ್ರಿಟನ್ ವಿರೋಧಿಗಳಿಗೆ ನೆರವಾಗುವ ರೀತಿಯಲ್ಲಿ ಅಂತಹ ಕೃತ್ಯವನ್ನು ಕೈಗೊಳ್ಳುವುದು ಹೇಡಿತನವಾಗಿತ್ತು. ಜೊತೆಗೆ, ಭಾರತದ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಂತಾಗುತ್ತದೆ ಎಂದು ಲಜಪತರು ನಿಲುವು ತಾಳಿದರು. ಇಂಗ್ಲೆಂಡಿನಲ್ಲಿದ್ದ 'ನಿಷ್ಠ' ಭಾರತೀಯ ರಾಜಕಾರಣಿಗಳ ದೃಷ್ಟಿಯಲ್ಲಿ ಲಜಪತರು 'ರಾಜದ್ರೋಹಿ'ಯಂತೆ ಕಂಡುಬಂದರೆ ಇಲ್ಲಿ ಉನ್ಮತ್ತ ಕ್ರಾಂತಿಯ ನಂಜನ್ನೇ ತುಂಬಿಕೊಂಡ ಆ ಭಾರತೀಯ ಆಂದೋಲನಕಾರರ ಅನನುಭವಿಯ ವರ್ಗದ ಪ್ರಕ್ಷುಬ್ಧ ಮನಸ್ಸಿಗೆ ಅವರು 'ಓರ್ವ ಅಂಜುಬುರುಕ'-'ಹೇಡಿಯಂತೆ' ಕಂಡು ಬಂದರು! ಅಲ್ಲಿ ದೇಶ ಹಿತದ ಮೂಲಭೂತ ಪರಿಕಲ್ಪನೆಯನ್ನೇ ಉನ್ನತಗೊಳಿಸಿದ ಜನರ ಹಿಂಡು. ಇಲ್ಲಿ ದೇಶಭಕ್ತಿಯ ಅತಿರೇಕದಲ್ಲಿ ಯಥೋಚಿತ ನಿರ್ಧಾರಗಳನ್ನು ಗಾಳಿಗೆ ತೂರಿದ ಹುಚ್ಚೆದ್ದ ಬಿಸಿ ನೆತ್ತರಿನ ಯುವಕರ ಆಂದೋಲನ. ಜರ್ಮನಿ ಭಾರತದ ಪರವಾಗಿತ್ತೋ ಇಲ್ಲವೋ ಅದು ಬೇರೆ ಮಾತು. ಬ್ರಿಟನ್‌ನೊಂದಿಗೆ ಅದಂತೂ ಯುದ್ಧಕ್ಕೆ ಇಳಿದಾಗಿತ್ತು. ಆ ಸಮಯದಲ್ಲಿ ಜರ್ಮನಿಯ ಅನುಕೂಲಕ್ಕಾಗಿ ಭಾರತದಲ್ಲಿ ದಂಗೆ ಎಬ್ಬಿಸುವುದು ದೇಶದ ಹಿತದೃಷ್ಟಿಯಿಂದ ಒಳಿತೋ ಅಲ್ಲವೋ ಎಂಬುದರ ಪರ್ಯಾಲೋಚನೆ ಅಗತ್ಯವಾಗಿತ್ತು. ಒಂದು ವೇಳೆ ಅಂತಹ ಕರೆಯನ್ನು ಕೊಟ್ಟು ಅದು ತನ್ನ ನಿರೀಕ್ಷೆಯ ಮಹತ್ತರ ಉದ್ದೇಶದಿಂದ ಆಯ ತಪ್ಪಿ ಕಗ್ಗತ್ತಲಿನ ಪ್ರಪಾತಕ್ಕೆ ಬಿದ್ದರೆ ಭಾರತದ ಪಾಲಿಗೆ ಭವಿಷ್ಯ ಕರಾಳವಾಗಿರುತ್ತಿತ್ತು. ಅಂತಹ ಯತ್ನದ ಹಿಂದಿರುವ ಅವೈಚಾರಿಕ ಪ್ರಜ್ಞೆಯನ್ನು ಲಜಪತರು ಮನನ ಮಾಡಿಕೊಂಡಿದ್ದರು. ಅಂತಹ

ಆಂದೋಲನದಿಂದ ಉಂಟಾಗಿದ್ದ ಅಪಾಯದ ಅಂದಾಜನ್ನು ಲೆಕ್ಕ ಹಾಕಿದ್ದರು. ಭಾರತೀಯ ಕ್ರಾಂತಿಕಾರಿಗಳು ಅವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲು ಪದೇ ಪದೇ ಬಂದರು. ಅವರ ಪೈಕಿ ಗದ್ದರ್ ಪಕ್ಷದ ನಾಯಕರು ಪ್ರಮುಖರು. ಯುದ್ಧ ಘೋಷಿಸುವುದಕ್ಕೆ ಸ್ವಲ್ಪ ಮೊದಲು ಹರ್ ದಯಾಳ್ ಹುಟ್ಟು ಹಾಕಿದ ಪಕ್ಷ ಅದು. ಲಜಪತರನ್ನು ಆ ಪಕ್ಷಕ್ಕೆ ಸೇರಲು ಆ ಪಕ್ಷದ ಮುಖಂಡತ್ವ ವಹಿಸಲು ಮೇಲಿಂದ ಮೇಲೆ ಒತ್ತಾಯಿಸಲಾಯಿತು. ಲಜಪತರು ಎಲ್ಲರಿಗೂ ಹೇಳಿದ್ದು ಒಂದೇ ಮಾತು: 'ನೋಡಿ, ನನ್ನಿಂದ ಆಗುವುದಿಲ್ಲ. ನನ್ನಿಂದಾಗದ ಕಾರ್ಯಕ್ಕೆ ಈ ಆಮಂತ್ರಣ ಬೇಡ.'

ಆದರೂ ಕ್ರಾಂತಿಕಾರಿಗಳ ಒತ್ತಡ ನಿಲ್ಲಲಿಲ್ಲ. ಪ್ರಯೋಗಪೂರ್ವಕವಾಗಿ ಪ್ರಲೋಭನ ಒಡ್ಡಿ, ಅನುನಯನದಿಂದ ಮತ್ತು ಆವೇಶನದ ಮೂಲಕ ಅವರ ಮೇಲೆ ನಿರಂತರ ಒತ್ತಡ ಹೇರಲಾಯಿತು. ಜಪಾನಿಗೆ ಹೊರಡುವ ಮೊದಲು ಈ ಒತ್ತಡ ಬಿತ್ತು. ಜಪಾನ್‌ನಲ್ಲೂ ಬಿತ್ತು. ಅಲ್ಲಿಂದ ಮರಳಿದ ಮೇಲೂ ಇತ್ತು.

ಆಗಿಂದಾಗ್ಗೆ ಅಂತಹ ಪ್ರತಿಕೂಲ ಪರಿಸ್ಥಿತಿಗಳು ಅವರಿಗೆ ಎದುರಾಗುತ್ತಿದ್ದವು. ಕ್ರಾಂತಿಕಾರಿಗಳು ಅವರಿಗೆ ಅರಿವಿಲ್ಲದೆ ಅವರ ಸುತ್ತಲೂ ಆವರಿಸಿಕೊಳ್ಳತೊಡಗಿದರು. ಜಪಾನಿನಲ್ಲಿದ್ದಾಗ ಅವರಿಗೆ ಕಾರ್ಯದರ್ಶಿಯಾಗಿಯೋ ಅಥವಾ ಬೆರಳಚ್ಚುಗಾರನಾಗಿಯೋ ಇಲ್ಲವೇ ಸಹಾಯಕನಾಗಿಯೋ ಒರ್ವ ವ್ಯಕ್ತಿ ತಾನೇ ತಾನಾಗಿ ಮುಂದೆ ಬಂದ. ಪ್ರೊ. ಬಿನಾಯ್ ಕೆ. ಸರ್ಕಾರ್ ಅಂತಹ ವ್ಯಕ್ತಿಯೊಬ್ಬನ ಅಗತ್ಯದ ಬಗ್ಗೆ ಸೂಚನೆಯನ್ನು ಕೊಟ್ಟಿದ್ದರು. ಲಜಪತರು ಆ ತರುಣನನ್ನು ನಿಯೋಜಿಸಿಕೊಂಡರು. ಕೇವಲ ಎರಡು ವಾರಗಳಲ್ಲೇ ಆತ ಕ್ರಾಂತಿಕಾರಿಗಳ ಒಡನಾಟದಲ್ಲಿದ್ದದ್ದು ತಿಳಿದು ಬಂದಿತು. ಒಂದು ದಿನ ಇದ್ದಕ್ಕಿದ್ದಂತೆ ಆತ ನಾಪತ್ತೆಯಾದ. ಹಾಗೆ ಕಾಣೆಯಾಗುವ ಮೊದಲು ಆತ ಒಂದು ಟಿಪ್ಪಣಿಯೊಂದನ್ನು ಬರೆದಿಟ್ಟು ಅನಿರ್ದಿಷ್ಟ ಅವಧಿಯತನಕ ತಾನು ಹೊರಗೆ ಹೋಗುವುದಾಗಿ ತಿಳಿಸಿದ್ದ! ನಂತರ ಲಜಪತರಿಗೆ ತಿಳಿದು ಬಂದ ಪ್ರಕಾರ ಕ್ರಾಂತಿಕಾರಿಗಳ ಪಕ್ಷವು ಆತನನ್ನು ಕ್ರಾಂತಿಕಾರಿ ಸಂದೇಶವಾಹಕನಾಗಿ ಚೀನಾಕ್ಕೆ ಕಳುಹಿಸಿತ್ತು.*

ಲಜಪತರು ಜಪಾನ್ ತಲುಪಿದ ಒಂದು ಪಾಕ್ಷಿಕದೊಳಗೆ ಕಿರಿಕಿರಿ ಉಂಟುಮಾಡಿದ ವಿದ್ಯಮಾನವೊಂದು ನಡೆಯಿತು. ಟೋಕಿಯೋ ವಿಶ್ರಾಂತಿಧಾಮಕ್ಕೆ ಭೇಟಿ

---

* ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಹಡಗಿನ ಮೂಲಕ ತರಿಸಿಕೊಳ್ಳುವ ಸಂಬಂಧದಲ್ಲಿ ಅಂತಹ ಸಂದೇಶವಾಹಕರ ಕೆಲಸವಿರುತ್ತಿತ್ತು. ಆ ಕೆಲಸಕ್ಕೆ ನಿಯುಕ್ತನಾದ ತರುಣನ ಹೆಸರು ಅಬಾನಿ ಮುಖರ್ಜಿ. ಆತನನ್ನು ಸಿಂಗಪೂರದಲ್ಲಿ ಬಂಧಿಸಲಾಯಿತು. ಕೆಲವು ದಿನಗಳ ನಂತರ ಬಿಡುಗಡೆಯೂ ಆಯಿತು. ಡಾ. ಹಬೀಬ್ ಎಂಬ ಹೆಸರಿನಲ್ಲಿ ಆತ ಮಾಸ್ಕೋಗೆ ಪ್ರಯಾಣ ಮಾಡಿದ. ಆತನೊಬ್ಬ ವಿಚಾರವಾದಿ ವ್ಯಕ್ತಿ. ಆತನನ್ನು ಅನುಮಾನದಿಂದಲೇ ನೋಡುತ್ತಿದ್ದರು. ಮಾಸ್ಕೋದಲ್ಲಿ ಲಜಪತರಿಗೆ ಆತನಿಂದ ಆಗಾಗ ಪತ್ರಗಳು ಬರುತ್ತಿದ್ದವು. 1922ರಲ್ಲಿ ಆತ ಅಜ್ಞಾತದ ರೂಪದಲ್ಲಿ ಭಾರತಕ್ಕೆ ಬಂದಿದ್ದ. ಬಳಿಕ ೮ ದಿನಗಳಲ್ಲಿ ಆತನನ್ನು ಬಂಧಿಸಲಾಗಿತ್ತು.

ಕೊಟ್ಟಾಗ ಅವರು ತಂಗಿದ್ದ ಹೋಟೆಲಿನ ವಾಸ್ತವ್ಯದಾರರ ಪಟ್ಟಿಯನ್ನು ಪೀಕ್ಷಿಸಿದರು. ಭಾರತೀಯರಾರಾದರೂ ಅಲ್ಲಿ ತಂಗಿರಬಹುದೇ ಎಂಬುದನ್ನು ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು. ಇದ್ದಕ್ಕಿದ್ದಂತೆ ತಮಗೆ ಅನುಕೂಲಕರವಲ್ಲದ ಕೆಲವು ಹೆಸರುಗಳು ಕಂಡು ಬಂದವು. ಜಪಾನಿ ಪೋಲೀಸರಿಂದ ತಾನೇ ತಾನಾಗಿ ಕಿರುಕುಳ ತಂದುಕೊಳ್ಳುವುದು ಉಚಿತವಲ್ಲವೆಂದು ಅವರಿಗೆ ಅನಿಸಿತು. ಕೂಡಲೇ ಅವರು ತಾವು ತಂಗಿದ್ದ ಆ ಹೋಟೆಲನ್ನು ತೆರವು ಮಾಡಲು ನಿರ್ಧರಿಸಿದರು. ಹಿಂದೆ ಎಂದೂ ಭೇಟಿಯಾಗದಿದ್ದ, ತಾವು ಆ ಪಟ್ಟಿಯಲ್ಲಿದ್ದ ಹೆಸರುಗಳ ಪೈಕಿ ಲಜಪತರನ್ನು ಬಲ್ಲವನಾಗಿದ್ದ ಓರ್ವ ಕೂಡಲೇ ಅವರ ರೂಮಿಗೆ ಧಾವಿಸಿ ಬಂದ. ಲಜಪತರು ತಾವು ಆ ಹೋಟೆಲನ್ನು ತೆರವು ಮಾಡುತ್ತಿರುವುದಾಗಿ ನೇರವಾಗಿ ಅವನಿಗೆ ತಿಳಿಸಿದರು. ಆದರೆ ಅನನುಕೂಲಕರ ವ್ಯಕ್ತಿ ಲಜಪತರನ್ನು ತಡೆದು "ತಾವೇ ಹೋಟೆಲನ್ನು ಆ ಕೂಡಲೇ ತೆರವು ಮಾಡುತ್ತಿರುವುದಾಗಿ ತಿಳಿಸಿದ. - ಮತ್ತು ಹಾಗೆ ಮಾಡಿದರೂ ಕೂಡಾ." ಅನಂತರ ಅವರು ಟೋಕಿಯೋದಲ್ಲಿ ಪೂರ್ವಾನುಮತಿ ಪಡೆದು ಲಜಪತರನ್ನು ಭೇಟಿ ಮಾಡಿದರು. ಪರಸ್ಪರ ಒಡಂಬಡಿಕೆಯೊಂದನ್ನು ಮಾಡಿಕೊಂಡರು. "ತಮ್ಮ ತಮ್ಮ ಕೆಲಸವನ್ನು ತಾವು ಮಾಡುವುದು. ತಮ್ಮಲ್ಲಿ ಯಾರೂ ಯಾರಿಗೂ, ಉಪಟಳವಾಗದಂತೆ ನಡೆದುಕೊಳ್ಳಬೇಕು" ಎಂದು ಆ ಒಡಂಬಡಿಕೆಯ ಆಶಯವಾಗಿತ್ತು. "ನಾನು ನನ್ನ ಪಾಲಿನ ಒಡಂಬಡಿಕೆಗೆ ಬದ್ಧನಾದೆ. ಆದರೆ ಅವರು ಅದಕ್ಕೆ ಬದ್ಧರಾಗಲಿಲ್ಲ,"- ಎಂದು ಲಜಪತರು ಹೇಳಿದ್ದಾರೆ. ಬೆಳವಣಿಗೆ ವಿಪರೀತವಾಗಿದ್ದಂತೆ ಅತಿ ಸನಿಹದಲ್ಲೇ ತಮ್ಮನ್ನು ಯಾರೋ ಕಣ್ಗಾವಲು ಮಾಡುತ್ತಿರುವುದಾಗಿ ಲಜಪತರಿಗೆ ಭಾಸವಾಯಿತು. ಅವರು ಎಲ್ಲಿ ಹೋದರೂ ಹಗಲು ರಾತ್ರಿ ಎಡೆಬಿಡದೆ ಪೊಲೀಸರು ಹಿಂದೆ ಮುಂದೆ ತಿರುಗತೊಡಗಿದರು. ತಮ್ಮ ಚಲನವಲನಗಳನ್ನು ತೀರಾ ಹತ್ತಿರದಿಂದ ವೀಕ್ಷಿಸಲಾಗುತ್ತದೆ ಎಂಬುದನ್ನು ಮನಗಂಡ ಲಜಪತರು ಆ ಬೇಸಿಗೆಯ ವಿಶ್ರಾಂತಿಧಾಮದಲ್ಲಿ ತಮ್ಮನ್ನು ಕಂಡ ಅನನುಕೂಲಕರ ವ್ಯಕ್ತಿ ಅಂತಹವರನ್ನಾಗಲಿ ಅಥವಾ ಆತನ ವರ್ಗಕ್ಕೆ ಸೇರಿದವರನ್ನಾಗಲಿ ತಮ್ಮ ಹತ್ತಿರಕ್ಕೆ ಬರಲು ಅನುವು ಮಾಡಿಕೊಡಲಿಲ್ಲ.

ಆದರೆ 'ಒಂದು ದಿವಸ', ಲಜಪತರು ಬರೆದಿಟ್ಟಿದ್ದಾರೆ, "ಅದೇ ಅನನುಕೂಲಕರ ವ್ಯಕ್ತಿ ಹೇಳದೆ ಕೇಳದೆ, ಏಕಾಏಕಿ... ಕಿಡಿಗೇಡಿ ನಡವಳಿಕೆಯವನಾಗಿ ನನ್ನನ್ನು ಭೇಟಿ ಮಾಡಲು ಬಂದ. ಅವನೊಂದಿಗೆ ಇಬ್ಬರು ಪೊಲೀಸ್ ಪೇದೆಗಳಿದ್ದರು. ಅವರು ನನ್ನ ಕಾಂಪೌಂಡ್ ಹಾಯ್ದು ಒಳಗೆ ಬರಲಿಲ್ಲ. ಅವರು ಹೊರಗೆ ಗೇಟಿನ ಮುಂದೆ ಕಾಯ್ದು ನಿಂತರು. ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಬೇಡವೆಂದು ನಾನು ಆತನನ್ನು ಕೇಳಿಕೊಂಡೆ. ಸಾಕಷ್ಟು ಪರಿಶ್ರಮಪಟ್ಟ ನಂತರ ನನ್ನನ್ನು ಒಂಟಿಯಾಗಿ ಬಿಡುವಂತೆ ಅವರ ಮನ ಒಲಿಸುವಲ್ಲಿ ಯಶಸ್ವಿಯಾದೆ. ಕೆಲವು ದಿನಗಳ ನಂತರ ಪ್ರಕಟಿಸಲಾದ ಪ್ರಕಾರ ಆತ ತನ್ನ 'ಪೋಷಕರನ್ನು' ತೊರೆದ. ಮತ್ತು ದೇಶವನ್ನು ಬಿಟ್ಟು ಹೋದ. ಆದರೆ ಇನ್ನೋರ್ವ ಅಲ್ಲೇ ಇದ್ದ. ಅತಿ ಶೀಘ್ರದಲ್ಲಿ ಅಮೆರಿಕದಿಂದ ಬಂದ ಮತ್ತೋರ್ವ ಅವನ ಜೊತೆಗೂಡಿದ. ಮೊದಲನೇಯ ವ್ಯಕ್ತಿ ನನ್ನ ಬಗ್ಗೆ ಏನೂ ಹಚ್ಚಿಕೊಂಡಿರಲಿಲ್ಲ. ನಾನಿದ್ದ ಜಾಗಕ್ಕೆ ಅವನು ಬರುತ್ತಲೂ ಇರಲಿಲ್ಲ. ನನ್ನನ್ನು ಒಂಟಿಯಾಗಿ ಇರಲು ಬಿಟ್ಟಿದ್ದ. ಆದರೂ ಇಬ್ಬರಿಗೂ ಸಮಾನವಾಗಿದ್ದ ಗೆಳೆಯನ ಮನೆಯಲ್ಲಿ ಆಗಾಗ ಭೇಟಿ ಮಾಡುತ್ತಿದ್ದೆವು. ಬಹಳ ದಿನಗಳ ಕಾಲ ಆತನ

ಹೆಸರು ನನಗೆ ಗೊತ್ತಿರಲಿಲ್ಲ. ಆತನ ಪೂರ್ವೋತ್ತರಗಳು ನನಗೆ ತಿಳಿದಿರಲಿಲ್ಲ. ಆದರೆ ಅಮೆರಿಕದಿಂದ ಬಂದ ಆ ಹೊಸಬ ನನ್ನನ್ನು ಒಂಟಿಯಾಗಿ ಇರಲು ಬಿಡುತ್ತಿರಲಿಲ್ಲ. ಪದೇ ಪದೇ ಕಾಣಲು ನನ್ನನ್ನು ಒತ್ತಾಯ ಪಡಿಸುತ್ತಿದ್ದ. ಆತನಿಗೆ ಹಣದ ಪೂರೈಕೆ ಸಮೃದ್ಧವಾಗಿತ್ತು. ಐಷಾರಾಮದ ಜೀವನ ನಡೆಸುತ್ತಿದ್ದ. ಆದಾಗಿ ಜಪಾನಿ ಅಧಿಕಾಸ್ಥರು ಆತನ ಚಲನವಲನಗಳ ಬಗ್ಗೆ ಆದಷ್ಟು ಬೇಗ ಶಂಕೆ ಪಡುವಂತಾಯಿತು.''

ಒಂದು ಪುಟ್ಟ ಗೊಂದಲ ಹುಟ್ಟಿದಂತೆ ಕಂಡು ಬರುತ್ತದೆ. ಸ್ವತಃ ಲಜಪತರನ್ನು ಗೊಂದಲಕ್ಕೆ ಸಿಲುಕಿಸಿದ ವ್ಯಕ್ತಿ ಬೇರಾರು ಅಲ್ಲ. ರಾಸ್ ಬಿಹಾರಿ ಬೋಸ್. ಹಾರ್ಡಿಂಜ್ ಬಾಂಬ್ ಸಂಚಿನ ನಾಯಕರು ಅವರು. ಆ ಪ್ರಕರಣದ ನಂತರ ತಲೆಮರೆಸಿಕೊಂಡು ಜಪಾನ್‌ಗೆ ಬಂದಿದ್ದರು. ಪಿ.ಎನ್. ಠಾಕೂರ್ ಹೆಸರಿನಲ್ಲಿ ಅಲ್ಲಿದ್ದರು. ಅವರು ಉಳಿದುಕೊಂಡಿದ್ದ ಬೇಸಿಗೆ ವಿಶ್ರಾಂತಿಧಾಮದ ಸಹವರ್ತಿ ಭಗವಾನ್ ಸಿಂಗ್ ಗ್ಯಾನಿ. ಕಿಶೋರ್ ರಾಮ್ ಸಬರವಾಲ್ ಭಾರತದಲ್ಲಿ ಒಮ್ಮೆ ರಾಸ್ ಬಿಹಾರಿ ಬೋಸ್ ಅವರನ್ನು ಭೇಟಿಯಾಗಿದ್ದ. 'ಠಾಕೂರ್'ರ ವ್ಯಕ್ತಿತ್ವದ ವಿಷಯದಲ್ಲಿ ಲಾಲಾಜಿ ಅವರಲ್ಲಿದ್ದ ಅನುಮಾನಗಳನ್ನು ನಿವಾರಿಸಿದ್ದು ಸಬರವಾಲನೇ.

ಜಪಾನಿ ಪ್ರಕರಣಗಳು ಲಜಪತರಿಗೆ ಆ ದೇಶದಲ್ಲಿ ಎದುರಾದ ಹೊಸ ಪ್ರಸಂಗಗಳೇನೂ ಅಲ್ಲ. 1914ರ ನವೆಂಬರ್‌ನಲ್ಲಿ ನ್ಯೂಯಾರ್ಕ್ ಪ್ರವೇಶಿಸಿದ ಹೊಸದರಲ್ಲೇ ಇಂತಹ ಪ್ರಕರಣಗಳು ಅವರಿಗೆ ಎದುರಾಗಿದ್ದವು. ಅವರ ಸಹವರ್ತಿಗಳಲ್ಲಿ ಒಬ್ಬರಾಗಿದ್ದ ಪ್ರೊ. ಬಿನಯ್ ಕೆ. ಸರ್ಕಾರ್ ಲಾಲಾಜಿ ಅವರನ್ನು ಡಾ. ಚಕ್ರವರ್ತಿಯವರ ನಿವಾಸಕ್ಕೆ ಊಟಕ್ಕೆ ಕರೆದೊಯ್ದಿದ್ದರು. ಆ ಭೋಜನ ಸಭೆಯಲ್ಲಿ ಜರ್ಮನ್ ಪರವಾದ ಕೆಲವು ಕಟ್ಟಾ ಭಾಷಣಗಳಾದವು. ಲಜಪತರಿಗೆ ಆ ಊಟ, ಸಹಯೋಗ ಇಡೀ ವಾತಾವರಣ ಅನುಕೂಲಕರವಾಗಿ ಕಂಡು ಬರಲಿಲ್ಲ. ಅದನ್ನು ಅವರು ಪ್ರೊ. ಸರ್ಕಾರ್ ಅವರಿಗೆ ಸ್ಪಷ್ಟವಾಗಿ ತಿಳಿಸಿದರು. ಅವರೊಡಗೂಡಿ ಎಲ್ಲರಿಗಿಂತ ಮೊದಲು ಅವರು ಆ ಸ್ಥಾನವನ್ನು ತೆರವು ಮಾಡಿದ್ದರು. ಭಾಷಣಗಳಾಗುತ್ತಿದ್ದ ಹಂತದಲ್ಲಿ ಓರ್ವ ಜರ್ಮನ್ ವ್ಯಕ್ತಿ ಪಿಂಗಾಣಿಯಲ್ಲಿ ಮಾಡಿದ ಜಾನ್‌ಬುಲ್ ಮಾದರಿಯೊಂದನ್ನು ಕೈಗೆತ್ತಿಕೊಂಡು ಬ್ರಿಟಿಷರ ವಿರುದ್ಧ ಉದ್ವೇಗದ ಭಾಷಣ ಮಾಡುತ್ತಾ ಅದನ್ನು ಅಪ್ಪಳಿಸಿ ಚೂರು ಚೂರು ಮಾಡಿದ್ದ. ಆ ಸ್ಥಳವನ್ನು ಬಿಡುವ ಮೊದಲು ಲಜಪತರು ತಮಗೂ ಅಲ್ಲಿ ನಡೆದ ಜವಾಬ್ದಾರಿಹೀನ ವರ್ತನೆಗೂ ಮತ್ತು ಆ ಜರ್ಮನಿಯನ ನಡವಳಿಕೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದರು. ತಮ್ಮ ನಿಲುವು ಧೋರಣೆಗಳ ಬಗ್ಗೆ ಯಾರಿಗೂ ಅನುಮಾನ ಬೇಡವೆಂದು ಅವರು ನೇರ ಮಾತುಗಳಲ್ಲಿ ಹೇಳಿದ್ದರು. ಅವರು ಹೇಳಿದ್ದು :

''ನಾನೊಬ್ಬ ಭಾರತೀಯ ದೇಶಭಕ್ತ. ನನ್ನ ದೇಶಕ್ಕೆ ಸ್ವಾತಂತ್ರ್ಯ ಬೇಕೆಂದು ಬಯಸಿದ್ದೇನೆ. ನನ್ನಲ್ಲಿ ಜರ್ಮನಿಯರ ಬಗ್ಗೆ ಅನುಕಂಪವಾಗಲಿ ಅಥವಾ ಅದಕ್ಕೆ ತದ್ವಿರುದ್ಧವಾದ ಭಾವನೆಯಾಗಲಿ ಇಲ್ಲ. ಸದ್ಯದ ವಿದ್ಯಮಾನಗಳ ಪ್ರಕಾರ ಸ್ವಯಂ ಸರ್ಕಾರ ಹೊಂದಿದವರಾಗಿ ಬ್ರಿಟಿಷ್ ಚಕ್ರಾಧಿಪತ್ಯದೊಳಗೆ ಇರುವುದು ಒಳ್ಳೆಯದೆಂದು ನಾನಂದು ಕೊಂಡಿದ್ದೇನೆ. ಇನ್ನೊಂದು ದೇಶದ ಆಳ್ವಿಕೆಗೆ ಒಳಗಾಗುವುದು ನಮಗೆ ಸಾಧ್ಯವಿಲ್ಲ.

''ವಿದೇಶಿ ನೆರವಿನಿಂದ ಗಳಿಸಿಕೊಂಡ ಸ್ವಾತಂತ್ರ್ಯ ಯೋಗ್ಯವಲ್ಲವೆಂದು ನಾನು ಸದಾ ಹೇಳುತ್ತಲೇ ಬಂದಿದ್ದೇನೆ. ಅದೇ ನನ್ನ ನಿಲುವು.''

ಕೆಲವು ದಿನಗಳ ನಂತರ ಬಿ.ಕೆ. ಸರ್ಕಾರ್ ಅವರ ಮುಖಾಂತರವೇ ಭೂಪಾಲದ ಮೌಲ್ವಿ ಬರ್ಕತ್ ಉಲ್ಲಾ ಅವರನ್ನು ಭೇಟಿ ಮಾಡುವ ಪ್ರಸಂಗ ಒದಗಿ ಬಂದಿತು. ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಪರ್ಷಿಯನ್ ಕಲಿಸುತ್ತಿದ್ದವರು ಅವರು. ಹರ್‌ದಯಾಳ್ ಜೊತೆಗೂಡಿ ಗದ್ದರ್ ಪಾರ್ಟಿ ಸ್ಥಾಪಿಸಿದವರೆಂದೂ ಪರಿಗಣಿಸಲಾಗಿತ್ತು. ಆ ಭೇಟಿ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ಲಜಪತರ ದಾಖಲೆ ಹೀಗಿದೆ. :

''ಅತಿ ಶೀಘ್ರದಲ್ಲೇ ಪ್ರೊ. ಸರ್ಕಾರರು ಬರ್ಕ್‌ತ್ ಉಲ್ಲಾ ಜೊತೆ ನನ್ನ ಭೇಟಿಗೆ ವ್ಯವಸ್ಥೆ ಮಾಡಿದರು. ನಾವು ಅವರನ್ನು ಅನೇಕ ಸಾರಿ ಕಂಡೆವು. ಭಾರತದಲ್ಲಿ ಅತಿ ದೊಡ್ಡ ಉತ್ಥಾನವೊಂದನ್ನು ತಾವು ನಿರೀಕ್ಷಿಸುತ್ತಿರುವುದಾಗಿ ಅವರು ಹೇಳಿದರು. ಅದಕ್ಕಾಗಿ ದಿನವನ್ನು ನಿಶ್ಚಿತಗೊಳಿಸಲಾಗಿದೆ. ಎಲ್ಲವೂ ಸಿದ್ಧವಾಗಿದೆ ಎಂದು ಅವರು ಹೇಳಿದರು. ಕಾಗೂರಿನ ಮೂರ್ ತಮ್ಮೊಂದಿಗಿದ್ದಾರೆ ಎಂದು ಸಹ ಅವರು ಹೇಳಿದರು. ಕೇವಲ 3 ತಿಂಗಳ ಒಳಗೆ ಭಾರತ ಸ್ವಾತಂತ್ರ್ಯವಾಗುವುದರಿಂದ ಅವರ ಜೊತೆ ಸೇರಿದ ಬಗ್ಗೆ ಭಯ ಪಡುವ ಅಗತ್ಯವಿಲ್ಲವೆಂದು ತಿಳಿಸಿದರು. ನಾನು ಆ ವ್ಯಕ್ತಿಯನ್ನು 'ಬಾಗ್ಲೋಲ್' ಎಂದು ಕರೆದೆ. ಅಂದರೆ ಅಧಿಕ ಪ್ರಸಂಗಿ ಹಾಗೂ ಒಂದು ರೀತಿಯ ಅವಿವೇಕಿ ಎಂದು. ಅವರು ಹೇಳಿದ ಮಾತಿನಲ್ಲಿ ನನಗೆ ಲವಶೇಷವೂ ನಂಬಿಕೆ ಇಲ್ಲವೆಂದು ನಾನು ತಿಳಿಸಿದೆ. ನನಗೆ ಭಾರತದಲ್ಲಿ ಅಮೀರರ ಆಳ್ವಿಕೆಯೂ ಬೇಡ. ಜರ್ಮನರ ಅಧಿಕಾರವೂ ಬೇಡವೆಂದು ತಿಳಿಸಿದೆ. ಬ್ರಿಟಿಷ್ ಆಳ್ವಿಕೆಯನ್ನು ಎಷ್ಟು ದ್ವೇಷಿಸುತ್ತೇವೆಯೋ ಅಷ್ಟೇ ಮಟ್ಟದಲ್ಲಿ ಈ ಹಂತದಲ್ಲಿ ಬೇರೆ ಯಾವುದೇ ವಿದೇಶಿ ದಾಳಿಕೋರರರನ್ನು ದ್ವೇಷಿಸುತ್ತೇನೆ. ಬ್ರಿಟಿಷರನ್ನು ಹೊಡೆದೋಡಿಸುವಲ್ಲಿ ಅವರು ಒಂದು ವೇಳೆ ಯಶಸ್ವಿಯಾದರೂ ಭಾರತ ಆ ವಿದೇಶಿ ದಾಳಿಕೋರರನ್ನು ಎದುರಿಸಲು ಸನ್ನದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಅವರು ನನ್ನನ್ನು ಹೇಡಿ ಎಂದು ಕರೆದರು. ವಿಶ್ವಾಸ ಪಾತ್ರನಲ್ಲವೆಂದರು. ಯಾವುದೇ ಸಹಾಯ ನೀಡುವುದಿಲ್ಲವೆಂದರು. ಹೀಗೆ ನಾವು ದೂರವಾದೆವು. ಆದರೂ ಗೆಳೆತನ ಉಳಿದಿತ್ತು. ಅವರ ಬುದ್ಧಿಮತ್ತೆಯ ಬಗ್ಗೆ ನನ್ನ ಅಭಿಪ್ರಾಯ ಅಷ್ಟಕಷ್ಟೇ. ಆದರೂ ಅವರ ದೇಶಭಕ್ತಿ ಮತ್ತು ನಡವಳಿಕ ಉನ್ನತವಾದುದು. ನಾವು ಅನೇಕ ಸಾರಿ ಭೇಟಿಯಾದೆವು. ಮತ್ತೆ ಯಾವಾಗಲೂ ಅವರು ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲ.''

ಭೋಪಾಲ್ ಮೌಲ್ವಿಯ ಅಸಾಧಾರಣ ದೇಶಭಕ್ತಿ ಮತ್ತು ವಿಶ್ವಾಸಗಳು ಅವರ ಸಾವಿನಲ್ಲಿ ವ್ಯಕ್ತವಾಯಿತು. ಅವರ ಸಾವಿನ ಸುದ್ದಿ ತಿಳಿದ ನಂತರ ದಿ ಪೀಪಲ್ ಪತ್ರಿಕೆಯಲ್ಲಿ ಶೋಕಾಂಜಲಿ ಲೇಖನಗಳನ್ನು ಬರೆದು ಅವರ ಆ ಉನ್ನತ ಗುಣಗಳನ್ನು ಲಜಪತರು ಸ್ಮರಿಸಿದರು.

ಲಜಪತರಿಗೆ ಅನೇಕ ಜರ್ಮನಿಯರನ್ನು ಭೇಟಿಯಾಗುವ ಅವಕಾಶಗಳು ಪ್ರಾಪ್ತವಾದವು. ಚಿಕಾಗೋನಲ್ಲಿ ಪ್ರೊ. ಸರ್ಕಾರ್ ನೀಡಿದ ಔತಣಕೂಟವೊಂದರಲ್ಲಿ ಜರ್ಮನ್ ಪ್ರೊಫೆಸರ್ ಒಬ್ಬರ ಪರಿಚಯವಾಯಿತು. ಅತ್ಯುತ್ತಮ ಉನ್ನತ ಮಟ್ಟದ

ಜರ್ಮನ್ ಸಂಪರ್ಕ ತಮಗೆ ಇರುವುದಾಗಿ ಪ್ರೊ. ಸರ್ಕಾರ್ ಅವರಿಗೆ ತಿಳಿಸಿದ್ದರು. ಅವರ ಪ್ರೊ. ಸರ್ಕಾರರ ಪಾತ್ರವೇ ಅವರಿಗೆ ಒಗಟಾಗಿತ್ತು.

ಭಾರತ ಜರ್ಮನ್ ಯೋಜನೆಗಳಿಂದಾಗಿ ಲಾಲಾಜಿ ಅವರ ಬೆಂಬಲ ಗಳಿಸಿಕೊಳ್ಳಲು ಹೇರಂಬಲ ಗುಪ್ತ ಏನೆಲ್ಲಾ ಪ್ರಯತ್ನ ಮಾಡಿದರು. ಅವರಿಬ್ಬರು ಮೊದಲ ಬಾರಿಗೆ ನ್ಯೂಯಾರ್ಕ್‌ನಲ್ಲಿ 1915ರ ಫೆಬ್ರವರಿ ಆರಂಭದಲ್ಲಿ ಭೇಟಿಯಾದರು.

"ನಾನು ವಾಷಿಂಗ್ಟನ್‌ಗೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದೆ. ಆ ದಿನ ಬೆಳಿಗ್ಗೆ ಹೇರಂಬಲ ಗುಪ್ತ ನನ್ನನ್ನು ಭೇಟಿ ಮಾಡಿದ್ದರು. ನಾನಿದ್ದ ಕೊಠಡಿಯಲ್ಲಿ ಅವರೊಂದಿಗೆ ಮಾತನಾಡುವಷ್ಟು ಸಮಯ ನನಗೆ ಇರಲಿಲ್ಲ. ನಾನು ಹೊರಟಿದ್ದ ಟ್ಯಾಕ್ಸಿಯಲ್ಲಿ ಅವರು ನನ್ನೊಂದಿಗೆ ಕುಳಿತುಕೊಂಡರು. ನಾವಿಬ್ಬರು ಪೆನ್ಸಿಲ್ವೇನಿಯಾ ನಿಲ್ದಾಣ ತಲುಪಿದೆವು. ತಾವು ಜರ್ಮನ್ ಸರ್ಕಾರದ ವಿಶ್ವಾಸ ಗಳಿಸಿಕೊಂಡಿರುವುದಾಗಿ ಅವರು ನನಗೆ ಹೇಳಿದರು. ನಾನು ಅವರ ಯೋಜನೆಗೆ ಪೂರ್ಣ ಸಹಕಾರ ಕೊಡಬೇಕೆಂದು ಒತ್ತಾಯಿಸಿದರು. ನನ್ನ ಉತ್ತರ ನಕಾರಾತ್ಮಕವಾಗಿತ್ತು. ಮಧ್ಯ ಪ್ರಾಂತ್ಯದಲ್ಲಿ ಎಲ್ಲಿಯಾದರೂ ನಾವಿಬ್ಬರು ಮತ್ತೆ ಭೇಟಿಯಾಗೋಣ ಎಂದು ಅವರು ಸಲಹೆ ಮಾಡಿದರು."

ಹೇರಂಬಲ ಗುಪ್ತ ಅವರನ್ನು ಲಜಪತರು ಮತ್ತೆ ಚಿಕಾಗೋದಲ್ಲಿ ಭೇಟಿ ಮಾಡಿದರು. :

"ನನ್ನೊಂದಿಗೆ ಅವರು ಬಹುಕಾಲ ಮಾತನಾಡಿದರು. ಬಹುಶಃ ಎರಡು ತಾಸಿನ ಮಾತಿರಬಹುದು. ಅವರೊಂದಿಗೆ ನನ್ನನ್ನು ಸೇರಿಸಿಕೊಳ್ಳಲು ತೀವ್ರ ಒತ್ತಾಯ ಮಾಡಿದರು. ಅವಕಾಶದ ಪ್ರಾಮುಖ್ಯತೆ ಅತಿ ಮುಖ್ಯವಾದುದೆಂದು ನನ್ನನ್ನು ತಣಿಸಲು ಯತ್ನಿಸಿದರು. ಅವರ ಪರವಾಗಿ ನಾನಿರಬೇಕೆಂದು ಜರ್ಮನರು ಬಯಸುತ್ತಿರುವುದಾಗಿ ತಿಳಿಸಿದರು. ನನ್ನ ಸಲಹೆಗಳನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿದ್ದಾರೆ ಎಂದು ಹೇಳಿದರು. ನಾನು ಹೇಳುವ ಷರತ್ತುಗಳಿಗೆ ಅವರು ಬದ್ಧರಾಗುತ್ತಾರೆಂದು ತಿಳಿಸಿದರು. ನಾನು ನನ್ನ ನಿಲುವನ್ನು ಹೇರಂಬಲ ಗುಪ್ತರಿಗೆ ತಿಳಿಸಿದೆ. ಆ ವಿಷಯದಲ್ಲಿ ನಾನು ಭಾಗಿಯಾಗಲು ನಿರಾಕರಿಸಿದೆ. ಜರ್ಮನಿಯಿಂದ ಪಡೆಯುತ್ತಿದ್ದ ಹಣದಲ್ಲಿ ಒಂದಷ್ಟು ಮೊತ್ತವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ವಿನಿಯೋಗಿಸಲು ಅವರಿಗೆ ನಾನು ಸಲಹೆ ಕೊಟ್ಟೆ. ಭಾರತದ ರಾಜಕೀಯ ನಿರಾಶ್ರಿತರಿಗೆ ಅನುಕೂಲವಾಗುವ ದೃಷ್ಟಿಯಿಂದಲೂ ಇತರ ಭಾರತೀಯರ ಹಿತದೃಷ್ಟಿಯಿಂದಲೂ ದಕ್ಷಿಣ ಅಮೆರಿಕ ಗಣ ರಾಜ್ಯಗಳಲ್ಲಿ ಭಾರತೀಯ ವಸಾಹತುಗಳನ್ನು ಸ್ಥಾಪಿಸಲು ಆ ಹಣವನ್ನು ವಿನಿಯೋಗಿಸುವಂತೆ ಸೂಚಿಸಿದೆ."

ಹೇರಂಬಲ ಗುಪ್ತರ ಪ್ರಯತ್ನ ನಿಲ್ಲಲಿಲ್ಲ. ಅವರ ಕಡೆಯ ಭೇಟಿಯಲ್ಲಿ.

"ಚಿಕಾಗೋ ಭೇಟಿಯ ನಂತರ ಕೆಲವು ದಿನಗಳಾದ ಮೇಲೆ ಹೇರಂಬಲ ಗುಪ್ತರು ನನ್ನನ್ನು ಲಾಸ್ ಏಂಜಲೀಸ್‌ನಲ್ಲಿ ಭೇಟಿ ಮಾಡಿದರು. ನನ್ನನ್ನು ಭೇಟಿ ಮಾಡಲೆಂದೇ ಅವರು ಅಲ್ಲಿಗೆ ಬಂದಿದ್ದರು. ನನ್ನನ್ನು ತಮ್ಮ ಪರ ಒಲಿಸಿಕೊಳ್ಳಲು ಇದು ಅವರ ಕಡೆಯ ಪ್ರಯತ್ನವಾಗಿತ್ತು. ಅವರು ಬಿಡುಗಡೆ ಮಾಡಲು ಸಿದ್ಧ ಮಾಡಿಟ್ಟುಕೊಂಡಿದ್ದ ಸ್ವತಂತ್ರ

ಘೋಷಣೆಯ ಹೇಳಿಕೆಯೊಂದಕ್ಕೆ ನನ್ನ ಅಂಕಿತ ಪಡೆಯಲು ಬಯಸಿದ್ದರು. ಅಂಕಿತದಲ್ಲಿ ಫ್ಲಾಂಡರ್ಸ್‌ನಲ್ಲಿ ಯುದ್ಧ ನಿರತರಾಗಿದ್ದ ಭಾರತೀಯ ಯೋಧರು ಬ್ರಿಟಿಷರ ವಿರುದ್ಧ ಬಂಡೇಳುವಂತೆ ಪ್ರಚೋದನೆ ನೀಡುವ ಅಂಶವೂ ಇತ್ತು. ಆ ಇಡೀ ಸಂಘಟನೆಯ ನಾಯಕತ್ವ ವಹಿಸಿಕೊಳ್ಳಲು ಅವರು ಮತ್ತೊಮ್ಮೆ ನನಗೆ ಸೂಚಿಸಿದರು. ಜರ್ಮನಿಯ ನಾಯಕರು ಅವರ ರಾಜತಾಂತ್ರಿಕರಿಗೆ ವಿಶೇಷ ಸೂಚನೆ ನೀಡಿ ನನ್ನನ್ನು ತಮ್ಮ ಪರ ವಹಿಸಿಕೊಳ್ಳಲು ತಿಳಿಸಿದ್ದಾರೆಂದು ಅದಕ್ಕಾಗಿ ಅವರು ಏನು ಮಾಡಲು ಸಿದ್ಧರಿದ್ದಾರೆಂದು ಗುಪ್ತ ನನಗೆ ತಿಳಿಸಿದರು. ನಾನು ಬಯಸಿದ್ದನ್ನೆಲ್ಲಾ ಈಡೇರಿಸಲು ಜರ್ಮನ್ ನಾಯಕರು ಸನ್ನದ್ಧರಾಗಿದ್ದಾರೆಂದರು. ನಾನು ನನ್ನ ನಿಲುವನ್ನು ಪುನರುಚ್ಚರಿಸಿದೆ. ನನ್ನ ಉದ್ದೇಶ ಏನೆಂಬುದನ್ನು ಈ ಮೊದಲೇ ತಿಳಿಸಿರುವುದಾಗಿ ಮತ್ತೆ ಹೇಳಿದೆ. ಅವರು ಮಾಡಬೇಕಾದ ಕೆಲಸದ ಬಗ್ಗೆ ನಾನು ಸೂಚಿಸಿದ್ದನ್ನು ಮತ್ತೆ ಪ್ರಸ್ತಾಪಿಸಿದೆ. ಸಾಧ್ಯವಾದರೆ ತಾವು ಪಡೆದುಕೊಳ್ಳುವ ಹಣದಲ್ಲಿ ಸ್ವಲ್ಪ ಮೊತ್ತವನ್ನು ಆ ಉದ್ದೇಶಗಳಿಗೆ ಬಳಸುವುದಾಗಿ ಗುಪ್ತ ಅವರು ಭರವಸೆ ನೀಡಿದರು. ಆ ಹಣವನ್ನು ನನಗೆ ಒಪ್ಪಿಸುವುದಾಗಿಯೂ ಸೂಕ್ಷ್ಮವಾಗಿ ತಿಳಿಸಿದರು. ಕೆಲವು ದಿನಗಳ ನಂತರ ಕಲ್ಪಿತ ಹೆಸರಿನಲ್ಲಿ ತಂತಿ ವರ್ತಮಾನವೊಂದನ್ನು ನೀಡಿ ಹಾಗೆ ಮಾಡಲು ತಮ್ಮಿಂದ ಸಾಧ್ಯವಿಲ್ಲವೆಂದರು. ನಾನು ಜಪಾನ್‌ಗೆ ಮರಳುವ ಮೊದಲು ನನ್ನನ್ನು ಗುಪ್ತರು ಕಂಡ ಕಡೆಯ ಭೇಟಿ ಅದು.''

''ನಾನು ಮಾಡಿದ ಸಲಹೆಗೆ ವಿರುದ್ಧವಾಗಿ ರಾಮಚಂದ್ರ ಅವರು ಗುಪ್ತರಿಗೆ ತಿಳಿಸಿದ್ದಾರೆಂದು ನನಗೆ ತಿಳಿದು ಬಂದಿತು.''

ಜಪಾನ್‌ನಲ್ಲಿ ಹೊಸ ಚಕ್ರವರ್ತಿಯ ಪಟ್ಟಾಭಿಷೇಕ ಸಮಾರಂಭ ನಡೆದ ನಂತರ ಭಾರತೀಯರು ನೀಡಿದ ಔತಣಕೂಟ ಮುಗಿದ ಮೇಲೆ ಸಂಭವಿಸಿದ ಕೆಲವು ವಿದ್ಯಮಾನಗಳಲ್ಲಿ ಹೇರಂಬಲ ಗುಪ್ತರ ಕೈವಾಡವಿತ್ತು. ಲಾಲಾಜಿ ಅವರ ನಿಧನದ ನಂತರ ಪ್ರಕಟಿಸಲಾದ ಅವರ ನೆನಪಿನ ಅಂಕಣದಲ್ಲಿ ನಾವು ಈ ಬಗ್ಗೆ ಓದಬಹುದು.

''ಔತಣಕೂಟ ಮುಗಿದ ಕೂಡಲೇ ಆ ಕೂಟದ ಏರ್ಪಾಟಿಗೆ ಮುಖ್ಯ ಕಾರಣರಾಗಿದ್ದ ಇಬ್ಬರು ಭಾರತೀಯ ಕ್ರಾಂತಿಕಾರಿಗಳಿಗೆ (ಇಬ್ಬರು ಬಂಗಾಳಿಗಳು) ಇನ್ನು ಐದು ದಿನಗಳ ಒಳಗೆ ಜಪಾನ್ ಬಿಡುವಂತೆ ನೋಟಿಸ್ ಜಾರಿ ಮಾಡಲಾಯಿತು. ಇಬ್ಬರು ಪೊಲೀಸರನ್ನು ನಿಯೋಜಿಸಿ 24 ತಾಸುಗಳಲ್ಲಿ ಅವರ ಚಲನವಲನಗಳ ಬಗ್ಗೆ ನಿಗಾ ಇಡಲಾಯಿತು. ಇದು ಭಾರತೀಯ ಹಾಗೂ ಜಪಾನ್ ಸಮುದಾಯಗಳೆರಡರಲ್ಲೂ ಭಾರೀ ಕುತೂಹಲ ಉಂಟುಮಾಡಿತು. ಜಪಾನಿನ ಪತ್ರಿಕೆಗಳು ಆ ಆದೇಶವನ್ನು ಖಂಡಿಸಿದವು. ರಾಜಕೀಯ ನಿರಾಶ್ರಿತರಿಗೆ ನೀಡುವ ರಾಜಾಶ್ರಯ ಹಕ್ಕಿನ ಉಲ್ಲಂಘನೆ ಅದೆಂದು ಪತ್ರಿಕೆಗಳು ಟೀಕಿಸಿ ಬರೆದವು. ಜಪಾನಿ ಪತ್ರಕರ್ತರು ಹಾಗೂ ಇತರ ಪ್ರಮುಖರ ನಿಯೋಗವೊಂದು ಪೊಲೀಸ್ ಮುಖ್ಯಸ್ಥರ ಬಳಿ ತೆರಳಿ ಈ ಬಗ್ಗೆ ಮನವಿಯೊಂದನ್ನು ಸಲ್ಲಿಸಿತು. ಆದರೆ ಆ ಆದೇಶ ವಿದೇಶಿ ಕಾರ್ಯಾಲಯದಿಂದ ಕೊಡಲ್ಪಟ್ಟಿರುವುದರಿಂದ ತಾವು ಅಸಹಾಯಕರೆಂದು ಆ ಅಧಿಕಾರಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಆ ದಿನಗಳಲ್ಲಿ ಕಾಯಿಲೆಯಿಂದ ತಮ್ಮ ಕೊಠಡಿಗೆ ಸೀಮಿತರಾಗಿದ್ದ ಪ್ರಧಾನಿ ಕೌಂಟ್ ಒಕುಮಾ

ಆ ಆದೇಶದ ವಿಷಯದಲ್ಲಿ ತಮ್ಮ ಅವಜ್ಞತೆಯನ್ನು ಮುಂದು ಮಾಡಿದರು. ಅದನ್ನು ರದ್ದುಪಡಿಸಲು ತಮಗೆ ಸಾಧ್ಯವಿಲ್ಲವೆಂದು ಅಸಹಾಯಕರಾಗಿ ಹೇಳಿದರು. ಹಾಗ ಮಾಡುವುದರಿಂದ ವಿದೇಶಾಂಗ ಸಚಿವರಿಗೆ ಅಪಮಾನ ಮಾಡಿದಂತಾಗುತ್ತದೆ ಎಂದರು. ಆದರೆ ಜಪಾನಿನ ವಿರೋಧ ಪಕ್ಷದ ರಾಜಕಾರಣಿಗಳು ಆ ಆದೇಶದಿಂದ ತೊಂದರೆಗೆ ಒಳಗಾಗುತ್ತಿದ್ದ ಭಾರತೀಯರನ್ನು ರಕ್ಷಿಸಲು ಪರ್ಯಾಯ ಮಾರ್ಗವೊಂದನ್ನು ಅನುಸರಿಸಿದರು. ಕಡೆಯ ದಿನದ ಸಂಜೆ ಆ ಇಬ್ಬರು ಭಾರತೀಯರು ತಮ್ಮ ಮೇಲೆ ಕಣ್ಣಿಡಲು ನಿಯೋಜಿಸಲಾಗಿದ್ದ ಇಬ್ಬರು ಪೇದೆಗಳ ಕಣ್ಗಾವಲಿನಲ್ಲಿ ಜಪಾನಿ ಸಂಸತ್ತಿನ ಪ್ರಮುಖ ನಾಯಕರನ್ನು ಭೇಟಿ ಮಾಡಲು ಹೋದರು. ಅವರಿಬ್ಬರು ಒಳಗೆ ಹೋದರು. ಆ ಇಬ್ಬರು ಪೊಲೀಸರು ಹೊರಗೆ ಉಳಿಯಬೇಕಾಯಿತು. ಸ್ವಲ್ಪ ಹೊತ್ತಿನ ನಂತರ ಆ ಭಾರತೀಯರಿಬ್ಬರು ಇನ್ನೊಂದು ಬಾಗಿಲಿನಿಂದ ಹೊರಗೆ ಬಂದು ಕಾಣೆಯಾದರು. ಅವರನ್ನು ಬಂಧಿಸಲು ಆಗಲೇ ಇಲ್ಲ. ಆ ಪೈಕಿ ಒಬ್ಬರು ಕೆಲವು ದಿನಗಳ ನಂತರ ಅಮೆರಿಕಕ್ಕೆ ಮರಳಿದರು. ಮತ್ತೊಬ್ಬರು ಜಪಾನ್‌ನಲ್ಲೇ ಉಳಿದರು. ನನಗೆ ಬಂದಿರುವ ವರ್ತಮಾನದ ಪ್ರಕಾರ ಜಪಾನಿನ ಗೌರವಾನ್ವಿತ ಮಹಿಳೆಯೋರ್ವರನ್ನು ಮದುವೆ ಮಾಡಿಕೊಂಡಿದ್ದಾರೆ.''

ಹಾಗೆ ತಲೆ ಮರೆಸಿಕೊಂಡು ಅಲ್ಲೇ ಉಳಿದುಕೊಂಡ ಕೆಲವು ದಿನಗಳ ನಂತರ ಮದುವೆಯಾಗಿ ಗೌರವಾನ್ವಿತ ಜೀವನ ಕಂಡುಕೊಂಡ ಆ ವ್ಯಕ್ತಿ ರಾಸ್ ಬಿಹಾರಿ ಬೋಸ್. ಯಾನೆ 'ತಾಕೂರ್'. ಅತಿ ಶೀಘ್ರವಲ್ಲೇ ಅವರು ಜಪಾನಿನ ವರ್ಚಸ್ವಿ ವ್ಯಕ್ತಿಯಾದರು. ಅತ್ಯುನ್ನತ ಗೌರವಾದರಗಳನ್ನು ಬೆಳೆಸಿಕೊಂಡರು. ಮತ್ತೋರ್ವರು ಹೇರಂಬಲ ಗುಪ್ತ. ಅಮೆರಿಕಕ್ಕೆ ಮರಳಿದ ಆತ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡ. ಜರ್ಮನ್ ನಿಧಿ ಮತ್ತು ಇಂಡೋ ಜರ್ಮನ್ ಯೋಜನೆಗಳ ವಿಶ್ವಾಸಾರ್ಹ ಪ್ರತಿನಿಧಿಯಾಗಿ ಡಾ. ಚಕ್ರವರ್ತಿಯವರನ್ನು ಅವರ ಸ್ಥಾನಕ್ಕೆ ನಿಯೋಜಿಸಲಾಯಿತು. ರಾಸ್ ಬಿಹಾರಿ ಬಳಿಯೂ ಸಾಕಷ್ಟು ಹಣವಿತ್ತು. ತಾನು ತಲೆಮರೆಸಿಕೊಂಡಿದ್ದಾಗ ಕ್ರಾಂತಿಕಾರಿ ಉದ್ದೇಶದ ಆ ಹಣವನ್ನೆಲ್ಲಾ ಆತ ಜತನ ಮಾಡಿಕೊಂಡಿದ್ದ. ಆ ದಿನಗಳಲ್ಲಿ ಆತ ಲಾಲಾಜಿ ಮತ್ತು ಸಬರ್‌ವಾಲ್‌ನಿಂದ ಸಹಾಯ ಯಾಚಿಸುತ್ತಿದ್ದ. ತನ್ನಲ್ಲಿದ್ದ ಹಣವನ್ನು ಅವರಿಬ್ಬರ ಮೂಲಕ ಸಂರಕ್ಷಿಸಿಕೊಂಡಿದ್ದ. ಲಜಪತರು ತನ್ನ ಬಳಿ ಆತ ಕೊಟ್ಟಿದ್ದ 19,500 ಯೆನ್‌ಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನದಿಂದ 'ತಾಕೂರ್' ಹೆಸರಿನಲ್ಲಿ ಮರಳಿಸಿದರು. ನಂಬಿಕೆಗೆ ಪಾತ್ರರಾದ ವ್ಯಕ್ತಿಗಳ ಮೂಲಕ ಆತ ಆ ಹಣವನ್ನು ಲಜಪತರಿಂದ ತರಿಸಿಕೊಂಡ.

ಲಜಪತರು ಜರ್ಮನಿ ಇಲ್ಲವೇ ಇತರ ವಿದೇಶಿ ಬೆಂಬಲದೊಂದಿಗೆ ಬ್ರಿಟಿಷರ ವಿರುದ್ಧ ಕ್ರಾಂತಿ ನಡೆಸುವ ಭಾರತೀಯ ಕ್ರಾಂತಿಕಾರರ ಯೋಜನೆಗಳನ್ನು ಸುತರಾಂ ಒಪ್ಪಲಿಲ್ಲ. ಬಿಚ್ಚುಮಾತಿನಿಂದ ಅವುಗಳನ್ನು ನಿರಾಕರಿಸಿದರು. ನಿಜವಾದ ಕ್ರಾಂತಿಕಾರಿಗಳಿಗೆ ಅವರು ಅವರ ಸಂಕಷ್ಟ ದಿನಗಳಲ್ಲಿ ಮನಬಿಚ್ಚಿ ಸಹಾಯ ಮಾಡಿದರು. ತನ್ನ ದುರ್ದಿನಗಳ ಸಮಯದಲ್ಲಿ 'ತಾಕೂರ್' ತನ್ನಲ್ಲಿದ್ದ ಹಣದ ಸಂರಕ್ಷಣೆಗೆ ಲಜಪತರ ನೆರವನ್ನು ತೆಗೆದುಕೊಂಡರು. ಮತ್ತೋರ್ವ ಕ್ರಾಂತಿಕಾರಿ ಎಂ.ಎನ್. ರಾಯ್ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ತಲೆ ತಪ್ಪಿಸಿಕೊಂಡು ಮೆಕ್ಸಿಕೋದಲ್ಲಿ ಆಶ್ರಯ ಪಡೆಯಬೇಕಾಯಿತು. ಆಗ

ಹೆಚ್ಚು ಕಡಿಮೆ ಅನಾಥ ಸ್ಥಿತಿಯಲ್ಲಿದ್ದ ಅವರಿಗೆ ಸಹಾಯದ ತೀರಾ ಅವಶ್ಯಕತೆ ಇತ್ತು. ಲಾಲಾಜಿ ಅವರ ನೆರವಿಗೆ ಬಂದರು. ಹೀಗೆ ಅದೆಷ್ಟೋ ಕ್ರಾಂತಿಕಾರಿಗಳಿಗೆ ಅವರ ಆಪತ್ ದಿನಗಳಲ್ಲಿ ಲಜಪತರು ಬೆಂಬಲ ನೀಡಿದರು. ಹಣದ ಸಹಾಯ ಒದಗಿಸಿದರು.

ಕ್ರಾಂತಿಕಾರಿಗಳೊಂದಿಗೆ ಲಜಪತರು ಹೊಂದಿದ್ದ ಸಂಬಂಧಗಳನ್ನು ತಿಳಿಸುವ ಈ ಸಂಕ್ಷಿಪ್ತ ಕಥನದಲ್ಲಿ ಯುದ್ಧದ ಬಗ್ಗೆ ಲಾಲಾಜಿ ಅವರ ಧೋರಣೆ ಏನಾಗಿತ್ತು ಎಂಬುದು ವ್ಯಕ್ತವಾಗುತ್ತದೆ. ಯುದ್ಧದ ಆ ದಿನಗಳಲ್ಲಿ ಭಾರತೀಯ ಕ್ರಾಂತಿಕಾರಿಗಳ ಚಟುವಟಿಕೆ ಏನಾಗಿತ್ತು ಎಂಬುದು ಇಲ್ಲಿ ವಿಶದವಾಗುತ್ತದೆ. ಲಾಲಾಜಿ ಕ್ರಾಂತಿಕಾರಿ ಆಂದೋಲನದ ನಿಷ್ಠ ಹಾಗೂ ಪ್ರಜ್ಞಾವಂತ ವಿದ್ಯಾರ್ಥಿಯಾಗಿದ್ದರು. ರಹಸ್ಯ ಸಂಘಟನೆಗಳ ಒಳಮರ್ಮವನ್ನು ಬಲ್ಲವರಾಗಿದ್ದರು. ತಮ್ಮದೇ ನಿಯತಕಾಲಿಕೆಗೆ ಅವರು ಬರೆದ 'Reflections On Revolutions'* ಇದೆಲ್ಲವನ್ನು ವಿಸ್ತೃತವಾಗಿ ಸಾದರಪಡಿಸುತ್ತದೆ. ಅವರು ಆ ದಿನಗಳಲ್ಲಿ ಹೊಂದಿದ್ದ ವ್ಯಕ್ತಿಗತ ಸಂಪರ್ಕಗಳು ಮತ್ತು ಅವುಗಳ ಒಳನೋಟ ಅವರ ಅಧ್ಯಯನ ಅದರಿಂದ ಅವರಿಗೆ ದೊರೆತ ಫಲಗಳ ಬಗ್ಗೆ ಈಗಲೂ ಒಂದು ಕುತೂಹಲಕಾರಿ ಅಧ್ಯಯನ ಆದಾಗುತ್ತದೆ. ಜೊತೆಗೆ ಅವರು ತಮ್ಮ ವೈಯಕ್ತಿಕ ಬಳಕೆಗಾಗಿ ಇಲ್ಲವೇ ಬಹುಶಃ ನೆನಪಿಗಾಗಿ ಬರೆದಿಟ್ಟಿದ್ದ ಇನ್ನೂ ಕೆಲವು ಟಿಪ್ಪಣಿಗಳು ಲಭ್ಯವಿದೆ. ಭಾರತೀಯ ಕ್ರಾಂತಿಕಾರಿಗಳ ಬಗ್ಗೆ ಅದರಲ್ಲಿ ಇನ್ನಷ್ಟು ಪ್ರಸ್ತಾಪವಿದೆ. ಅವೆಲ್ಲವನ್ನು ಮೊಹರಾದ ಲಕೋಟೆಯೊಂದರಲ್ಲಿ ಅವರ ಪ್ರಕಾಶಕ ಗೆಳೆಯ 'ಹ್ಯೂಬ್ಸ್' ಬಳಿ ನಿಕ್ಷಿಪ್ತವಾಗಿ ಇಡಲ್ಪಟ್ಟಿವೆ. ಟೀಕೆ ಟಿಪ್ಪಣಿಗಳಿವೆ.'**

* * *

---

* ಲಜಪತ್‌ರಾಯ್ ಅವರ ದಿ ಪೀಪಲ್ ಹೊತ್ತಿಗೆಯಿಂದ ಆಯ್ದುಕೊಂಡು ಯಂಗ್ ಇಂಡಿಯಾ ನಿಯತಕಾಲಿಕೆಯಲ್ಲಿ ಮರು ಪ್ರಕಟಿತ.

** ವಿ.ಎಸ್. ಜೋಷಿ ಮುದ್ರಿಸಿ ಮರು ಪ್ರಕಟಿಸಿದ ಆಟೋಬಯಾಗ್ರಫಿಕಲ್ ರೈಟಿಂಗ್ಸ್ ಆಫ್ ಕೃತಿ. ಲಜಪತ್‌ರಾಯ್ ಸಂಪಾದಿಸಿದ್ದಾರೆ.

ಅಧ್ಯಾಯ-42

ವಿದೇಶವಾಸ- ರಾಯಭಾರ

ಮೂಲತಃ ಆರು ತಿಂಗಳಿಗೆಂದು ಯೋಚಿಸಿಕೊಂಡು ವಿದೇಶಕ್ಕೆ ಬಂದರೂ ಆ ವೇಳೆಗಾಗಲೇ ಲಜಪತರು ದೇಶ ಬಿಟ್ಟು 20 ತಿಂಗಳು ಸಂದಿದ್ದವು. ಯುದ್ಧ ಆರಂಭಗೊಂಡೇ ಸುಮಾರು ಒಂದೂವರೆ ವರ್ಷವಾಗಿತ್ತು. ಆ ಯುದ್ಧ ಎಷ್ಟು ತಿಂಗಳು ಅಥವಾ ಎಷ್ಟು ವರ್ಷ ನಡೆಯಬಹುದೆಂಬ ಬಗ್ಗೆ ಯಾರಿಂದಲೂ ನಿಖರವಾಗಿ ಏನನ್ನು ಹೇಳಲು ಸಾಧ್ಯವಿರಲಿಲ್ಲ. ಲಜಪತರು ಮತ್ತೆ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಮರಳಿದರು. ಅವರ ಆ ಮರಳಿಕೆ ಅಲ್ಪ ಕಾಲದ ವಾಸ್ತವದಂತೆಯೇನೂ ಕಂಡು ಬರಲಿಲ್ಲ. ಆಗಿನ ಪರಿಸ್ಥಿತಿಯ ಸ್ಪಷ್ಟ ಸೂಚನೆಗಳ ಪ್ರಕಾರ ಭಾರತಕ್ಕೆ ಮರಳ ಬಯಸಿದರೂ ಅವರಿಗೆ ಅನುಮತಿ ದೊರೆಯುವ ಸಾಧ್ಯತೆ ಇರಲಿಲ್ಲ. ಯುದ್ಧ ವಿರಾಮ ಘೋಷಿತವಾದ ನಂತರವೂ ಸಹ ವೀಸಾ ದೊರೆಯುವುದು ದುಸ್ತರವಾದಂತೆ ಕಂಡು ಬಂದಿತು. ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಅನೇಕ ತಿಂಗಳುಗಳ ನಂತರವೂ ಸಹ ಆ ಸಾಧ್ಯತೆ ಇಲ್ಲವೇನೋ ಎನಿಸಿತು. ವಸ್ತುಶಃ ವಿದೇಶವಾಸವೇ ತಮಗೆ ವಿಹಿತವೆಂದು ಅವರು ಭಾವಿಸಿಕೊಂಡರು. ರಾಜಕೀಯ ಆಸರೆ ಜಪಾನಿಗಿಂತಲೂ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲೇ ಅನುಕೂಲಕರವೆಂದು ಅವರು ಸಂಕಲ್ಪ ಮಾಡಿಕೊಂಡರು.

1915ರ ಅಂತ್ಯದಲ್ಲಿ ಯುದ್ಧ ಕಾಲದ ವಿದೇಶಿ ವಾಸಿಯಾಗಿ ಅಮೆರಿಕೆಯಲ್ಲಿ ಅವರು ನೆಲಸಿ ಆ ಕಾಲಕ್ಕೆ ಸಮಂಜಸವಾದ ಕಾರ್ಯಗಳಲ್ಲಿ ತೊಡಗಿದರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದ್ದ ಅಮೆರಿಕನ್ನರು ಅಥವಾ ಭಾರತೀಯ ಕಾರ್ಮಿಕರ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಜಪಾನಿಗೆ ಹೋಗುವ ಮೊದಲೇ ಅವರು ಅಧ್ಯಯನ ಆರಂಭಿಸಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನದ ತಮ್ಮ ಹೊತ್ತಿಗೆಯಲ್ಲಿ ಅವರು ಈ ಬಗ್ಗೆ ವಿಶದವಾಗಿ ಬರೆದಿದ್ದಾರೆ. ಜೂನ್ ತಿಂಗಳಿನಲ್ಲಿ ಜಪಾನ್‌ಗೆ ಹೋಗುವ ಮೊದಲೇ ಅವರು ಅದನ್ನು ಬರೆದಿಟ್ಟಿದ್ದರು. ಸದ್ಯದಲ್ಲೇ ಅವರು ಆಯ್ಕೆ ಮಾಡಿಕೊಂಡ ಕಾರ್ಯ ಭಾರತೀಯ ಸಮಸ್ಯೆಗಳ ಬಗ್ಗೆ ಅಮೆರಿಕನ್ನರಿಗೆ ಪರಿಚಯ ಮಾಡಿಕೊಟ್ಟು ಅವರ ಅಭಿಪ್ರಾಯವನ್ನು ದೇಶದ ಹಿತಕ್ಕೆ ಅನುಗುಣವಾಗಿ ರೂಪಿ' ಕೊಳ್ಳುವುದಾಗಿತ್ತು. ಭಾರತದ ಹಿತಕ್ಕಾಗಿ ಸಾಧ್ಯವಾದಷ್ಟು ಅಮೆರಿಕನ್ನರ ಅನುಕಂಪವನ್ನು ಗಳಿಸಿಕೊಳ್ಳುವುದಾಗಿತ್ತು. ಈ ಮೊದಲು ಅಮೆರಿಕದಲ್ಲಿ ಹಂಗೇರಿಯನ್ ದೇಶಭಕ್ತ ಲೂಯಿಸ್ ಕೋಸುತ್ ರಾಜಕೀಯ ಆಶ್ರಯ ಪಡೆದಿದ್ದರು. ಸ್ವಾತಂತ್ರ್ಯ ಪ್ರೇಮಿಗಳಾದ ಅಮೆರಿಕನ್ನರ ಅನುಕಂಪ, ಬೆಂಬಲವನ್ನು ತನ್ನ ದೇಶದ ಪರವಾಗಿ ರೂಢಿಸಿಕೊಳ್ಳಲು ಆ ನತದೃಷ್ಟ ರಾಷ್ಟ್ರದ ರಾಯಭಾರಿಯಾಗಿ ಅವರು ಅಮೆರಿಕ ನಾಡಿನಲ್ಲಿ ಯಶಸ್ವಿಯಾಗಿದ್ದರು. ಪ್ರಸ್ತುತ ಲಜಪತರು ಅದೇ ಕಾರ್ಯಭಾರಿಯಾದರು

ವಿವೇಕಾನಂದರು ಅಮೆರಿಕದ ನಗರಗಳಲ್ಲಿ ಹೊಸ ಅಲೆಯನ್ನು ಎಬ್ಬಿಸುವ ಮುನ್ನ ಭಾರತವೆಂಬ ದೇಶ ಅಸ್ತಿತ್ವದಲ್ಲಿದೆ ಎಂಬ ಸಂಗತಿ ಆ ಖಂಡದ ಸುಶಿಕ್ಷಿತರು, ವಿಶಾಲ ಮನೋಧರ್ಮದ ಜನರಿಗೂ ಗೊತ್ತಿದ್ದಂತೆ ಕಂಡು ಬರಲಿಲ್ಲ. ಅಮೆರಿಕನ್ ಶಾಲೆಯೊಂದರ ಹಿಂದೂ ವಿದ್ಯಾರ್ಥಿಯೋರ್ವಳು ತನ್ನ ಶಾಲೆಯಲ್ಲಿ ಶಿಕ್ಷಕರು ಭಾರತೀಯ ಚರಿತ್ರೆಯ ಪ್ರಸಂಗ ಬಂದಾಗ ಆ ಪಠ್ಯವನ್ನು ಕೈಬಿಡುತ್ತಾರೆಂದು ಲಜಪತರಿಗೆ ತಿಳಿಸಿದಳು. ತಾನು ಆ ಶಿಕ್ಷಕನನ್ನು ಆ ಬಗ್ಗೆ ಪ್ರಶ್ನಿಸಿದಾಗ ಭಾರತ ಏನನ್ನೂ ಸಾಧಿಸಿಲ್ಲವೆಂದು ಚರಿತ್ರೆಯಲ್ಲಿ ಅದರ ಪ್ರಸ್ತಾಪಕ್ಕೆ ಅರ್ಹತೆ ಇಲ್ಲವೆಂದು ಪ್ರತ್ಯುತ್ತರ ಕೊಟ್ಟಿದ್ದಾಗಿ ಆ ವಿದ್ಯಾರ್ಥಿನಿ ತಿಳಿಸಿದಳು. ಲಜಪತರಿಗೆ ಅದು ನೋವಿನ ಸಂಗತಿ ಎನಿಸಿತು. ಅಮೆರಿಕದ ವಿಟ್ನಿ ಮತ್ತು ಲ್ಯಾನ್‌ಮ್ಯಾನ್‌ಗಳಂತಹ ಹೆಸರಾಂತ ಸಂಸ್ಕೃತವೇತ್ತರರೇ ಅಮೆರಿಕದಲ್ಲಿರುವಾಗ ಆ ಶಿಕ್ಷಕಿಯ ಧೋರಣೆ ಉದ್ಧಟತನದ್ದೆನಿಸಿತು. ಅದನ್ನು ಅವರು ಆ ಬಾಲಕಿಯ ಮೂಲಕ ಅವರ ಚರಿತ್ರೆಯ ಶಿಕ್ಷಕರಿಗೆ ತಿಳಿಯ ಪಡಿಸಿದರು.

ಇಂತಹ ಅಭಿಪ್ರಾಯಗಳಿಗೆ ಪರಿಹಾರ ಕಂಡುಕೊಳ್ಳಲು ಭಾರತದ ಸ್ವತಂತ್ರ ಸಮಸ್ಯೆಯ ಬಗ್ಗೆ ವಿಶೇಷವಾಗಿ ತೀವ್ರ ಲಕ್ಷ್ಯ ಸೆಳೆಯಲು ಲಜಪತರು ತಮ್ಮನ್ನು ತಾವು ತೊಡಗಿಸಿಕೊಂಡರು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಮೆರಿಕನ್ನರ ಬೆಂಬಲ ಸಾಧಿಸಿಕೊಳ್ಳಲು ಎಲ್ಲಾ ಪ್ರಯತ್ನ, ಪ್ರಚಾರ ನಡೆಸುತ್ತಿದ್ದರು. ಆ ಖಂಡ ತಟಸ್ಥ ಧೋರಣೆಯನ್ನೇ ತಾಳಿತು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತ ಮುಂದುವರಿಕೆಯನ್ನು ಸಮರ್ಥಿಸಿಕೊಳ್ಳುತ್ತಾ ಭಾರತ ವಿರೋಧಿ ಪ್ರಚಾರವನ್ನು ಸಹ ಅದರೊಂದಿಗೆ ಬ್ರಿಟನ್ ಕೈಗೊಂಡಿತು. ಬ್ರಿಟನ್ ಪ್ರಚಾರವನ್ನು ಹೀಗೆಳೆಯುವ ಬಗ್ಗೆ ಏನನ್ನಾದರೂ ಮಾಡಲೇ ಬೇಕಾಗಿತ್ತು. ಭಾರತದಲ್ಲಿ ಕ್ರಿಶ್ಚಿಯನ್ ಮಿಷನರಿಗಳ ಚಟುವಟಿಕೆಗೆ ಅಧಿಕ ಪ್ರಮಾಣದಲ್ಲಿ ಅಮೆರಿಕದಿಂದಲೇ ಹಣದ ಬೆಂಬಲ ಹರಿಯುತ್ತಿತ್ತು. ಭಾರತದ ಭವ್ಯ ಚರಿತ್ರೆಯನ್ನು ಮತ್ತು ಪರಮೋಚ್ಚ ಸಂಸ್ಕೃತಿಯನ್ನು ವಿಕೃತಗೊಳಿಸಿ ಅದನ್ನು ಅಮೆರಿಕನ್ನರ ಮುಂದೆ ಹೀನಾಯವಾಗಿ ತೋರ್ಪಡಿಸುವ ಜೊತೆಗೆ ಭಾರತೀಯರು ಅನಾಗರಿಕರೆಂದು, ದರಿದ್ರರೆಂದು ಚಿತ್ರಿಸುತ್ತಾ ತಮ್ಮ ಸ್ವಾರ್ಥಕ್ಕಾಗಿ ಹಣ ದೋಚುವ ಹೀನ ಕಾರ್ಯದಲ್ಲಿ ಆ ಮಿಷನರಿಗಳು ತೊಡಗಿದ್ದರು. ಅಮೆರಿಕ ಜನತೆಗೆ ಭಾರತದ ನೈಜ ಚಿತ್ರಣವನ್ನು ನೀಡುವ ಕಾರ್ಯಕ್ಕೆ ಅಂತಹ ಪಟ್ಟಭದ್ರ ಹಿತಾಸಕ್ತಿಗಳು ಅಡ್ಡಿಯಾಗಿದ್ದವು. ಅದರಲ್ಲೂ ಯುದ್ಧ ಕಾಲದಲ್ಲಿ ಅಮೆರಿಕದಲ್ಲಿ ಬ್ರಿಟಿಷರು ಕೈಗೊಂಡ ಪ್ರಚಾರವನ್ನು ಭಾರತದ ಹಿತದೃಷ್ಟಿಯಿಂದ ಹಿಂದೆಂದಿಗಿಂತಲೂ ಹೆಚ್ಚು ಸಮರ್ಥವಾಗಿ, ಪರಿಣಾಮಕಾರಿಯಾಗಿ ಪ್ರತಿರೋಧಿಸುವ ಅಗತ್ಯ ತುಂಬಾ ಹೆಚ್ಚಾಗಿತ್ತು.

ಎಲ್ಲೆಡೆಯಿಂದಲೂ ಬೆಂಬಲ ಗಳಿಸಿಕೊಳ್ಳಲು ಬ್ರಿಟನ್ ಸನ್ನಾಹ ಮಾಡುತ್ತಿದ್ದ ಆ ಸಂದರ್ಭ ಲಜಪತರಿಗೆ ಅನುಕೂಲಕರ ವಾತಾವರಣವಾಗಿ ಕಂಡು ಬಂದಿತು. ಭಾರತದ ಪ್ರಶ್ನೆಯನ್ನು ಪ್ರಮುಖ ಮಾಡಿಕೊಂಡು ನೈಜ ಪ್ರಚಾರಕ್ಕೆ ಅವರು ಆ ಸಂದರ್ಭವನ್ನು ಬಳಸಿಕೊಂಡರು. ಮಿಂಚಿನ ಗತಿಯಲ್ಲಿ ಲಜಪತರು ಅಮೆರಿಕ ಸಂಯುಕ್ತ ಸಂಸ್ಥಾನದ ನಾನಾ ಕಡೆ ಸಂಪರ್ಕಗಳನ್ನು ಸಾಧಿಸಿಕೊಂಡರು. ಭಾರತದ ಆ ದೇಶಿಯ ನಾಯಕನ ಬಗ್ಗೆ ಅಲ್ಲಿನ ವಿಶ್ವಾತ್ಮಕ ಹಾಗೂ ಕಾಸ್ಮೋಪಾಲಿಟನ್ ಸ್ವರೂಪದಲ್ಲಿ ಮನ್ನಣೆ ಬೇಗ

ಪ್ರಾಪ್ತವಾಯಿತು. ವೈವಿಧ್ಯತೆಯ ಜನತೆ ಮತ್ತು ವಿಭಿನ್ನ ವಂಶಾವಳಿಗಳ ಮಧ್ಯೆ ಲಜಪತರಿಗೆ ಅವರ, ಅಭಿಮಾನಗಳು ಮೂಡತೊಡಗಿದವು. ಅವರ ವಿದೇಶಿವಾಸ ಸ್ವದೇಶ ವಾಸದಷ್ಟೇ ಹಿತಕರವಾಯಿತು. ಅವರ ಪ್ರಜಾಸತ್ತಾತ್ಮಕ ಹಾಗೂ ನೇರ ನಡೆನುಡಿಗಳು ಅಮೆರಿಕನ್ನರ ಹೃದಯ ಗೆದ್ದಿತು. ಲಜಪತರು ಬಯಸಿದ ಅನುಕಂಪ ಸಹಜವಾಗಿ ಪ್ರಾಪ್ತವಾಗತೊಡಗಿತು. ವಿದೇಶಿ ಭಾಷಣಗಳಲ್ಲಿ ಅಹಿತಕರವೆನಿಸಿದ ಕಟು ಸತ್ಯಗಳನ್ನು ನೇರವಾಗಿ ಹೇಳುತ್ತಿದ್ದರು. ಅಂತಹ ಪ್ರಸಂಗಗಳನ್ನು ಆ ನಾಡಿನ ಸ್ವಾತಂತ್ರ್ಯ ಪ್ರಿಯ ಜನತೆ ಆ ಭಾರತೀಯ ಮುಖಂಡನ ಪ್ರಾಮಾಣಿಕತೆಯಾಗಿ, ನಿಷ್ಠುರ ನಡವಳಿಕೆಯಾಗಿ ಪರಿಗಣಿಸುತ್ತಿದ್ದರು. ಜೊತೆಗೆ ಲಜಪತರನ್ನು ಇನ್ನಷ್ಟು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದರು. ಚಾಣಾಕ್ಷ ಮತಿಯ ಐರಿಷ್ ಪತ್ರಕರ್ತ ಫ್ರಾನ್ಸಿಸ್ ಹಾಕೆಟ್ ಆಗಿನ ಅಮೆರಿಕದ 'ಡೈಯ್ರೋ' ಸಾಪ್ತಾಹಿಕದ ಪತ್ರಕರ್ತರಲ್ಲಿ ಒಬ್ಬರಾಗಿದ್ದರು. ದಿ ನ್ಯೂ ರಿಪಬ್ಲಿಕ್ ಸಾಪ್ತಾಹಿಕದಲ್ಲೂ ಅವರು ಕೆಲಸ ಮಾಡುತ್ತಿದ್ದರು. ಲಜಪತರು ಮತ್ತು ಆ ಪತ್ರಕರ್ತರು ಪರಸ್ಪರ ಭೇಟಿಯಾದಾಗ:

``ಹಾಯ್ ಐರಿಷ್, ನಿನಗಿದು ಗೊತ್ತೇ? ಭಾರತದವರಾದ ನಮ್ಮ ಪಾಲಿಗೆ ನೀನು ಇಂಗ್ಲಿಷರಿಗಿಂತ ಬಹು ಕೆಟ್ಟವನು''- ಎಂದು ನಮ್ಮ ಕಥಾನಾಯಕರು ನುಡಿದರು.

ಆ ಚುರುಕು ಪತ್ರಕರ್ತನಿಂದ ಅಷ್ಟೇ ತ್ವರಿತವಾದ ಉತ್ತರ-``ನಿಮ್ಮ ಮಾತು ಕೇಳಿ ನನಗೆ ಅಚ್ಚರಿಯೇನೂ ಆಗಿಲ್ಲ. ಕಾರಣ ಅಧಿಕಾರಕ್ಕೆ ಹೊಸದಾಗಿ ಬಂದವರು ಸರ್ವಾಧಿಕಾರಿಗಳಾಗುವ ಸಾಧ್ಯತೆ ಇರುತ್ತದೆ. ಆದರೆ ನಿಮ್ಮ ಪ್ರತಿಕ್ರಿಯೆಯಲ್ಲಿರುವ ರಾಜಕೀಯ ಪ್ರೇರಿತವಲ್ಲದ ಅಭಿಮತ ನನಗೆ ಖುಷಿ ನೀಡಿದೆ. ಲಜಪತ್‌ರಾಯ್ ಸತ್ಯವನ್ನು ಮರೆಮಾಚುವವರಲ್ಲ. ನಿಮ್ಮ ಮಾತು ನಿಚ್ಚಳಗೊಂಡಿದೆ.''

ಲಜಪತ್‌ರಾಯ್ ತಮ್ಮ ಸಂಬಂಧ ಅನುಬಂಧಗಳನ್ನು ವಿಶೇಷವಾಗಿ ವಿಚಾರವೇತ್ತ ನಾಯಕರು ಮತ್ತು ಪ್ರಗತಿಪರ ಪತ್ರಕರ್ತರು ಹಾಗೂ ವಿಶ್ವವಿದ್ಯಾಲಯಗಳ ಜನತೆಯ ಮಧ್ಯೆ ರೂಢಿಸಿಕೊಳ್ಳತೊಡಗಿದರು. ಸಾರ್ವಜನಿಕ ಭಾಷಣಕಾರರಾಗಿ ಅವರು ಬಹು ಬೇಗ ಮಾನ್ಯರಾದರು. ಜನಪ್ರಿಯರಾದರು. ಪತ್ರಿಕೆಗಳಿಗೂ ಸಾಕಷ್ಟು ಪ್ರಮಾಣದಲ್ಲಿ ಬರೆಯತೊಡಗಿದರು. ಇದರಿಂದ ಭಾರತದ ಸ್ವಾತಂತ್ರ್ಯ ಚಳವಳಿಯ ವಿವಿಧ ಮುಖಗಳಿಗೆ ಸಂಬಂಧಪಟ್ಟಂತೆ ಅವರೇ ಹೆಸರಿಸಿದ ಯಂಗ್ ಇಂಡಿಯಾ ಪುಸ್ತಕ ಹೊರಬರಲು ಪ್ರೇರಣೆಯಾಯಿತು. ಸ್ವಾತಂತ್ರ್ಯ ಪರವು ವಿಚಾರವೇತ್ತವೂ ಆದ ಉನ್ನತ ಶ್ರೇಣಿಯ ನಿಯತಕಾಲಿಕಗಳಿಗೆ ಲಜಪತರು ಭಾರತ ಕುರಿತ ಹೊಸ ಹೊತ್ತಿಗೆಗಳು ಹಾಗೂ ಇತರೆ ಪಶ್ಚಾ ದೇಶಗಳ ಹೊಸ ಪ್ರಕಟಣೆಗಳು ಇಲ್ಲವೇ ಪೌರಾತ್ಯ ಸಿದ್ಧಾಂತದ ಪುಸ್ತಕಗಳನ್ನು ನಿಯತವಾಗಿ ವಿಮರ್ಶೆ ಮಾಡಿಕೊಡತೊಡಗಿದರು. ಇದರಿಂದ ಅವರ ಸಂಪರ್ಕಗಳು ಇನ್ನಷ್ಟು ಹರವುಗೊಳ್ಳಲು ಅವರ ಪರಿಚಯ ವ್ಯಾಪಕವಾಗಲು ಸಹಾಯಕವಾಯಿತು. ಹೀಗೆ ಲಾಲಾಜಿ ನೆಲೆಗೊಳ್ಳತೊಡಗಿದಂತೆ, ನಿಯತವಾದ ಕೆಲಸಕ್ಕೆ ಅನಿವಾರ್ಯವಾಗ ತೊಡಗಿದಂತೆ ಭಾರತ ಸ್ವಾತಂತ್ರ್ಯ ಸಾಧನೆಯ ಉದ್ದೇಶಕ್ಕೆ ನಿಶ್ಚಿತ ಸ್ವರೂಪ ಮೂಡತೊಡಗಿದಂತೆ ಸಹಜವಾಗಿ ಅವರಿಗೆ ನೆರವಾಗುವ ಕೆಲವು ಬೆಂಬಲಿಗರ ಅಗತ್ಯ ಕಂಡು ಬಂದಿತು. ನಿಷ್ಠೆ ಹಾಗೂ ಶ್ರದ್ಧೆಯಿಂದ ತಮ್ಮೊಂದಿಗೆ ಒಡನಾಡಬಲ್ಲ ಸಹಾಯಕರ

ಅವರಿಗೆ ಆಗ ಅಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಎನ್.ಎಸ್. ಹರ್ಡಿಕರ್ ಅವರಲ್ಲಿ ಕಂಡು ಬಂದಿತು.

1915ರ ಅಕ್ಟೋಬರ್‌ನಲ್ಲಿ ಲಜಪತರು ಇಂಡಿಯನ್ ಹೋಂ ರೂಲ್ ಆಫ್ ಲೀಗ್ ಆಫ್ ಅಮೆರಿಕ ಸ್ಥಾಪಿಸಿದರು. ಅವರೇ ಅದರ ಅಧ್ಯಕ್ಷರೂ ಆದರು. ಭಾರತದ ಹಿತಕ್ಕಾಗಿ ಅವಿಶ್ರಾಂತ ಹೋರಾಟಗಾರರಾಗಿದ್ದ ಜೆ.ಡಿ. ಸುಂದರಲಾಲ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ''ಲಜಪತರು ಅಮೆರಿಕದಿಂದ ಹೊರಟ ನಂತರವೂ ಡಾ. ಸುಂದರ್ ಲಾಲ್ ಆ ಕೆಲಸವನ್ನು ಮುಂದುವರೆಸಿದರು.''

ಆ ಸಂಘಟನೆಯೊಂದಿಗೆ ಸಮ್ಮಿಳನಗೊಂಡವರಲ್ಲಿ ಕೆ.ಡಿ. ಶಾಸ್ತ್ರೀ, ಎನ್.ಎಸ್. ಹರ್ಡಿಕರ್ ಕಾರ್ಯದರ್ಶಿಗಳಾದರು. ಆರ್.ಎಲ್. ಬಾಜಪೇಯಿ ಸಲಹೆಗಾರರಾದರು. 1917 ಜನವರಿಯಿಂದ ಲೀಗ್ ತನ್ನದೇ ಆದ ಸಣ್ಣ ಪ್ರಮಾಣದ ಮಾಸಿಕವೊಂದನ್ನು ಆರಂಭಿಸಿತು. ಅದರ ಶೀರ್ಷಿಕೆ ಯಂಗ್ ಇಂಡಿಯಾ ಪತ್ರಿಕಾಲಯದ ಕಚೇರಿ ಭಾರತದ ವಿದ್ಯಮಾನಗಳ ಮಾಹಿತಿ ಬಯಸುವ ಜನರಿಗೆ ಆಕರ್ಷಣೆಯ ಕೇಂದ್ರವಾಯಿತು. ಜನಪ್ರಿಯತೆಯನ್ನು ಮನಗಂಡ ಲಾಲಾಜಿ 1400, ಬ್ರಾಡ್‌ವೇಯ ಕೇಂದ್ರದಲ್ಲಿ ವಾರ್ತಾ ಸೇವೆ ವ್ಯವಸ್ಥೆಯನ್ನು ನಿಯೋಜಿಸಿದರು. ಅದಕ್ಕೆ ಪೂರಕವಾಗಿ ವರ್ಕರ್ಸ್ ಯೂನಿಯನ್ ಒಂದನ್ನು ಆರಂಭಿಸಿದರು. ವಿಶ್ವ ವೇದಿಕೆಯಲ್ಲಿ ಭಾರತದ ಪ್ರಕರಣವನ್ನು ಜಾಗತಿಕಗೊಳಿಸುವ ನಿಟ್ಟಿನಲ್ಲಿ ದಿ ಲೀಗ್, ಯಂಗ್ ಇಂಡಿಯಾ ಮತ್ತು ವಾರ್ತಾ ಕೇಂದ್ರಗಳು ಮೊದಲ ಹಂತದ ಸಂಘಟಿತ ಪ್ರಯತ್ನಗಳಾದವು. ವಿದೇಶದಲ್ಲಿ ಭಾರತದ ಪ್ರಚಾರವನ್ನು ಸಂಘಟಿಸಿದ ಚರಿತ್ರೆಯಲ್ಲಿ ಅವು ಪ್ರಮುಖ ಪಾತ್ರ ವಹಿಸಿವೆ. ಈ ಮೊದಲು ವಿದೇಶಗಳಲ್ಲಿನ ಭಾರತೀಯ ಪ್ರಚಾರದ ನೆಲೆ ಇಂಗ್ಲೆಂಡಿನ ಸೀಮಿತ ಚೌಕಟ್ಟಿಗೆ ಮಾತ್ರ ಒಳಪಟ್ಟಿತ್ತು. ಅಲ್ಲಿ ವೆಡನ್ಬರ್ನ್ ನಿರ್ದೇಶನದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಬ್ರಿಟಿಷ್ ಸಮಿತಿ ಕಾಂಗ್ರೆಸ್ಸಿನ ದೃಷ್ಟಿಕೋನವನ್ನು ಮಾತ್ರ ಪ್ರತಿಪಾದಿಸುತ್ತಿತ್ತು. ಇಂಡಿಯಾ ನಿಯತಕಾಲಿಕೆ ಅದರ ವಾಣಿಯಾಗಿತ್ತು. ಯಂಗ್ ಇಂಡಿಯಾ ಪತ್ರಿಕೆಯನ್ನು ಸ್ವತಃ ಲಜಪತರೇ ಸಂಪಾದಿಸುತ್ತಿದ್ದರು. ಅದರ ನಿರ್ವಹಣೆಗೆ ಎನ್.ಎಸ್. ಹರ್ಡಿಕರ್ ನೆರವು ಒದಗಿಸುತ್ತಿದ್ದರು. ಸಣ್ಣ ಪ್ರಮಾಣದಲ್ಲಿ ಆರಂಭಗೊಂಡರೂ ಅದರ ಪ್ರಭಾವ ಬಲಿಷ್ಠ ಪರಿಣಾಮ ಬೀರಿತು.

ದಿ ಲೀಗ್ ಆಗಲಿ ಯಂಗ್ ಇಂಡಿಯಾ ಆಗಲಿ ಅಧಿಕೃತವಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ಸಹಯೋಗಗೊಳ್ಳಲಿಲ್ಲ. 1916ರಲ್ಲಿ ಲಕ್ನೋದಲ್ಲಿ ನಡೆದ ವಾರ್ಷಿಕ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಎರಡೂ ಬಣಗಳು ಒಗ್ಗೂಡಿದ ನಂತರವೂ ಲಜಪತರಿಗೆ ಅಂತಹ ಅಂಗೀಕಾರ ಪ್ರಸ್ತುತವೆನಿಸಲಿಲ್ಲ. ಅಮೆರಿಕದಲ್ಲಿ ಅವರು ಕೈಗೊಂಡ ಸಾಹಸ ಅನಧಿಕೃತವಾಗಿದ್ದರೂ ಅವರ ಆ ಸಾಹಸಕ್ಕೆ ಹೆಚ್ಚಿನ ಅನುಕಂಪ ಮತ್ತು ನೈತಿಕ ಬೆಂಬಲ ತುಂಬಿದವರು ಲೋಕಮಾನ್ಯ ಬಾಲ ಗಂಗಾಧರ ತಿಲಕರೊಬ್ಬರೇ. 1918ರಲ್ಲಿ ವ್ಯಾಲೆಂಟೇನ್ ಶಿರೋಲ್ ವಿರುದ್ಧದ ಮಾನನಷ್ಟ ಮೊಕದ್ದಮೆಯೊಂದನ್ನು ಎದುರಿಸಲು ಅವರು ಇಂಗ್ಲೆಂಡಿಗೆ ಭೇಟಿ ಕೊಟ್ಟಿದ್ದರು. ಆ ಮೊಕದ್ದಮೆಯಲ್ಲಿ ಅವರು ಸೋತಿದ್ದು ಬೇರೆ ಮಾತು. ಮಹಾತ್ಮಾ ಗಾಂಧಿ ಕಂಡಂತೆ ಲೋಕಮಾನ್ಯರ ವ್ಯಕ್ತಿತ್ವ ಹಿಮಾಲಯದಷ್ಟು ಎತ್ತರದ್ದು. ಸಾಗರದಷ್ಟು

ವಿಶಾಲವಾದದ್ದು. ಆದರೂ ಲಾಲಾಜಿಯವರೊಂದಿಗೆ ಹೋಲಿಸಿದರೆ ವಿಶ್ವಾಸಾತ್ಮಕ ಹಾಗೂ ಕಾಸ್ಮೋಪಾಲಿಟನ್ ಸ್ವರೂಪದಲ್ಲಿ ಅವರಿನ್ನೂ ಕುಬ್ಜರಾಗಿದ್ದರು. ಲಜಪತರ ವಿದೇಶಿ ಅನುಭವದೊಂದಿಗೆ ಹೋಲಿಸಿದರೂ ಅಷ್ಟೇ. ಯುನೈಟೆಡ್ ಕಿಂಗ್‌ಡಂಗೆ ಭೇಟಿ ಕೊಟ್ಟಾಗ ಲೋಕಮಾನ್ಯರು ಬ್ರಿಟಿಷ್ ಪತ್ರಿಕೆಗಳಲ್ಲಿ ಪ್ರಚಾರ ಪಡೆಯಲು ಸಾಕಷ್ಟು ಎಡರು ತೊಡರುಗಳನ್ನು ಹಾದು ಹೋಗಬೇಕಾಗಿತ್ತು. ಆ ಅನುಭವದ ಹಿನ್ನೆಲೆಯಲ್ಲಿ ಲೋಕಮಾನ್ಯರು ಲಾಲಾಜಿಯವರ ಅದ್ಭುತ ಸಾಧನೆಯನ್ನು ಹೃದಯ ಬಿಚ್ಚಿ ಪ್ರಶಂಸಿಸಿದರು. ಇಂಗ್ಲೆಂಡಿನಿಂದ ತಿಲಕರು ಲಜಪತರಿಗೆ ಪತ್ರಗಳನ್ನು ಬರೆದು ಹೃದಯಪೂರ್ವಕ ಧೈರ್ಯ ತುಂಬಿದರು. ಎಲ್ಲಾ ರೀತಿಯ ಬೆಂಬಲದ ನಿರ್ದಿಷ್ಟ ಭರವಸೆ ನೀಡಿದರು.

ಡಾ. ಎನ್.ಎಸ್. ಹರ್ಡಿಕರ್ ಅವರು ಆ ಪ್ರಸಂಗವನ್ನು ನೆನಪು ಮಾಡಿಕೊಂಡಿದ್ದಾರೆ. ತಮ್ಮ ಜನರಿಗೆ ಬರೆದ ಪತ್ರದಲ್ಲಿ ಅವರು ಆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಲಾಲಾಜಿ ತಾವು ಕೈಗೊಂಡಿರುವ ಕಾರ್ಯಗಳಿಗೆ ಹಣವಿಲ್ಲದೆ ತೀವ್ರ ಬಿಕ್ಕಟ್ಟು ಎದುರಿಸುತ್ತಿದ್ದಾರೆ ಎಂದು ಅವರು ಅದರಲ್ಲಿ ನಮೂದಿಸಿದ್ದಾರೆ. ಅಂತಹ ಕೆಲವು ಪತ್ರಗಳನ್ನು ಲೋಕಮಾನ್ಯರು ಓದಿದ್ದರೂ ಕೂಡಾ.

ಲೋಕಮಾನ್ಯರು ನೀಡಿದ ಬೆಂಬಲ ಅತ್ಯಂತ ಸಕಾಲಿಕವಾಗಿತ್ತು. ಅವರು ಲಜಪತರ ನೆರವಿಗೆ ಬರದಿದ್ದರೆ ಅಮೆರಿಕದಲ್ಲಿ ಇಂಡಿಯನ್ ಹೋಂ ರೂಲ್ ಲೀಗ್ ಅಸ್ತಿತ್ವ ತೀರಾ ತೊಂದರೆಗೆ ಒಳಪಡುತ್ತಿತ್ತೇನೋ? ಲಾಲಾಜಿ ಲೋಕಮಾನ್ಯರ ಬಗ್ಗೆ ಎಷ್ಟೊಂದು ಕೃತಜ್ಞರಾಗಿದ್ದಾರೆಂಬುದನ್ನು ಎನ್.ಎಸ್. ಹರ್ಡಿಕರ್ ನೆನಪು ಮಾಡಿಟ್ಟಿದ್ದಾರೆ.

ಲೋಕಮಾನ್ಯರು ಮೊದಲು ಸಂದಾಯ ಮಾಡಿದ ಮೊತ್ತ 5 ಸಾವಿರ ಅಮೆರಿಕನ್ ಡಾಲರ್ (ಆ ಕಾಲದಲ್ಲಿ ಅದು ಸುಮಾರು 17 ಸಾವಿರ ರೂಪಾಯಿಗಳಿಗೆ ಸಮ) ಯುದ್ಧ ಕಾಲದ ಕಟ್ಟುಕಟ್ಟಳೆ ಮತ್ತು ನಿರ್ಬಂಧಗಳು ಆ ಮೊತ್ತದ ನೆರವು ನೀಡಲು ಸಹ ಭಾರೀ ಅಡ್ಡಿ ಆತಂಕ ಉಂಟು ಮಾಡಿತ್ತು. ಲೋಕಮಾನ್ಯರು ಶ್ರೀಮತಿ ಅನಿಬೆಸೆಂಟರ ನೆರವು ಪಡೆದು ಆ ಸಹಾಯ ಲಾಲಾಜಿಗೆ ತಲುಪುವಂತೆ ಮಾಡಿದ್ದರು. ಅಷ್ಟಾದರೂ ತಿಲಕರಿಗೆ ನಂಬಿಕೆ ಇರಲಿಲ್ಲ. 1919ರಲ್ಲಿ ಲಂಡನ್‌ನಿಂದ ಲಜಪತರಿಗೆ ಪತ್ರ ಬರೆದು "ನಾನು ಕಳುಹಿಸಿದ 5 ನಿಮಗೆ ಸೇರಿದೆಯೇ?, ಕೂಡಲೇ ತಿಳಿಸಿ" ಎಂದು ಆಶಿಸಿದರು. ಆ 'ಐದು' ಅರ್ಥ "5000ದ ಸಂಕೇತವಾಗಿತ್ತು." ಯುದ್ಧ ಕಾಲದ ಸೆನ್ಸಾರ್ ಗಮನವನ್ನು ಮರೆ ಮಾಚಲು ಆ ಸಂಕೇತ ಬಳಸಲಾಗಿತ್ತು. ಆ 'ಐದು' ಕೈತಪ್ಪಿಲ್ಲವೆಂದು ಖಾತ್ರಿ ಆದ ನಂತರ ಮತ್ತೆ ಒಂದು ಸಾವಿರ ಅಮೆರಿಕನ್ ಡಾಲರ್ ಕಳುಹಿಸಲು ಅವರು ವ್ಯವಸ್ಥೆ ಮಾಡಿದರು.

ಅಮೆರಿಕದಲ್ಲಿ ಭಾರತದ ವರ್ಚಸ್ಸನ್ನು ಸ್ಥಿರಗೊಳಿಸುವ ನಿಟ್ಟಿನಲ್ಲಿ ಪ್ರಮುಖವಾದ ಕಾರಣಗಳ ಪೈಕಿ 1916ರಲ್ಲಿ ಕವಿ ರವೀಂದ್ರನಾಥ ಟಾಗೂರ್ ಕೈಗೊಂಡ ಉಪನ್ಯಾಸ ಪ್ರವಾಸ ಪ್ರಮುಖ. ನೇರವಾಗಿ ರಾಜಕೀಯ ಲಕ್ಷಣವಿಲ್ಲವಾದರೂ ಅವರು ಆ ದೇಶದಲ್ಲಿ ಭಾರತದ ಬಗ್ಗೆ ಉಂಟಾಗಿದ್ದಂತಹ ಅರಿವು ಮೂಡಿಸುವಲ್ಲಿ ನಿಸ್ಸಂದೇಹವಾಗಿಯೂ ಬಹು ಫಲಕಾರಿಯಾಯಿತು. ನಮ್ಮ ಕಥಾನಾಯಕ ರಾಜಕಾರಣಿ ಮತ್ತು ಆ ಖ್ಯಾತ ಕವಿ

ಒಂದಲ್ಲ ಒಂದು ಕಡೆ ಇಡಬೇಕಾಗುತ್ತದೆ. ಈ ಪ್ರಸಂಗದಲ್ಲಿ ಅದಕ್ಕೆ ವಿರುದ್ಧವಾಗಿ ಆ ನಾಲ್ವರನ್ನು ಆ ಜನ ಸರ್ಕಾರಿ ಅಂಚೆ ಕಚೇರಿಗೆ ಕರೆದೊಯ್ದರು. ಸಶಸ್ತ್ರ ಪೊಲೀಸ್ ಪಹರೆ ಹಾಕಲಾಗಿತ್ತು. ಸುಮಾರು 3 ತಾಸುಗಳ ನಂತರ ಓರ್ವ ಮ್ಯಾಜಿಸ್ಟ್ರೇಟರು ಬಂದಿಗಳನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಆಗ ಅವರನ್ನು ಅಲ್ಲಿಂದ ಸೆಂಟ್ರಲ್ ಜೈಲಿನ ಲಾಕಪ್ ಒಂದಕ್ಕೆ ಹಾಕಲಾಯಿತು. ಲಜಪತ್‌ರಾಯ್ ಬಂಧನ ಅಧಿಕಾರಸ್ಥರನ್ನು ಪುನಃ 1907ರ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಸಿತೇ? ಆಗ ಆದಂಥ ಅನಾನುಕೂಲ ಪರಿಸ್ಥಿತಿಯನ್ನು ಅವರು ಈಗಲೂ ತಂದುಕೊಂಡಿದ್ದರೇ? ಯಥಾ ರೀತಿಯ ಸ್ಥಾನಗಳಿಗೆ ಲಾಲಾಜಿ ಮತ್ತು ಇತರ ಬಂದಿಗಳನ್ನು ಕರೆದೊಯ್ಯುವ ಬದಲು ಸರ್ಕಾರಿ ಕಚೇರಿಯಾದ ಟೆಲಿಗ್ರಾಫ್ ಆಫೀಸ್‌ಗೆ ಅವರನ್ನು ಕರೊದೊಯ್ದ ಪರಿಯೇ ಅವರ ಈ ಪ್ರಶ್ನೆಗಳಿಗೆ ಉತ್ತರವಾಯಿತು.

ಅಹಿತಕರ ಘಟನೆಗಳೇನೂ ನಡೆಯಲಿಲ್ಲ. ಸಮೂಹ ಹಿಂಸಾಚಾರಗಳು ಸಂಭವಿಸಲಿಲ್ಲ. ಹೆಚ್ಚಿನ ಬಂಧನಗಳು ಆಗಲಿಲ್ಲ. ಹಾಗೆಂದ ಮಾತ್ರಕ್ಕೆ ಅಧಿಕಾರಶಾಹಿಗಳಿಗೆ ಆತಂಕ ಇರಲಿಲ್ಲವೆಂದಲ್ಲ. ಅವರು ಲಾಲಾಜಿ ಮತ್ತು ಇತರರನ್ನೇನೋ ಬಂಧಿಸಿದ್ದರು. ಈಗ ತಮ್ಮ ತಲೆಯನ್ನು ತಾವೇ ತುಳಿಸಿಕೊಳ್ಳುವ ಪರಿಸ್ಥಿತಿ ಅವರ ಮುಂದಿತ್ತು. ಆ ಬಂಧನಕ್ಕೆ ನಿರ್ದಿಷ್ಟವಾದ ಕಾರಣಗಳನ್ನು ಕೊಡಬೇಕಾಗಿತ್ತು. ಅಂಥ ಪ್ರಬಲವಾದ ಕಾರಣಗಳು ಪ್ರಾಸಿಕ್ಯುಷನ್‌ಗೆ ಪ್ರಾಪ್ತವಾಗಲಿಲ್ಲ. ಅದೇ ಕಾರಣದಿಂದ ವಿಚಾರಣೆ ಬಂದಾಗಲೆಲ್ಲಾ ಮೇಲಿಂದ ಮೇಲೆ ದಿನಾಂಕ ಮುಂದೂಡಿಕೆ ಕೋರುತ್ತಾ ಬರಲಾಯಿತು. ಆ ಪ್ರಕರಣ ಅತ್ಯಂತ ಸರಳವಾಗಿತ್ತು. ತನಿಖೆಗೆ ಅಷ್ಟೊಂದು ಆಳವಾದ ಅಗತ್ಯವಾಗಲಿ, ದೀರ್ಘ ಕಾಲದ ಸಮಯಾವಕಾಶವಾಗಲಿ ಬೇಕಾಗಿರಲಿಲ್ಲ. ಆದರೂ ಪ್ರತಿ ವಿಚಾರಣೆಯಲ್ಲೂ ನ್ಯಾಯಾಲಯ ಪೊಲೀಸರಿಗೆ ಅನುಕೂಲಕರವಾಗಿ ನಡೆದುಕೊಂಡಿತು. ವಿಚಾರಣೆ ನಡೆಯುತ್ತಿದ್ದ ಹಂತದಲ್ಲೇ ಲಾಲಾಜಿ ಹೇಳಿಕೆಯೊಂದನ್ನು ನೀಡಿದರು. ಆ ಕಥೆಯನ್ನು ನಾವು ಮುಂದಿನಂತೆ ಓದೋಣ.

ಪತ್ರದ ಸಾರಾಂಶ -'' ಇದೊಂದು ಸರಳವಾದ ಪ್ರಕರಣ. ಯಾವುದೇ ರಿಮಾಂಡ್ ಅಗತ್ಯವಿಲ್ಲ. ಅದು ಉಚಿತವೂ ಅಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟರು ಚಳವಳಿ ಪ್ರಚೋದನೆ ಸಭೆಗಳ ಕಾಯ್ದೆಯಂತೆ ಈ ಕ್ರಮ ಜರುಗಿಸಿದ್ದಾರೆ. ಸ್ವತಃ ಅವರೇ ನಮ್ಮನ್ನು ಬಂಧಿಸಿರುವರು. ಆ ಕಾಯ್ದೆ ಅನ್ವಯಿಸುವುದಾದರೆ ನಾವು ಅಪರಾಧಿಗಳೇ ಸರಿ. ಈ ಆಧಾರದ ಮೇಲೆ ಪ್ರಕರಣವನ್ನು ಕೇವಲ ಒಂದು ತಾಸಿನೊಳಗೆ ಇತ್ಯರ್ಥ ಮಾಡಿಬಿಡಬಹುದು.''

ಅಧಿಕಾರಶಾಹಿ ಲಾಲಾಜಿ ಮತ್ತು ಇತರರ ಬಂಧನವನ್ನೇನೋ ಮಾಡಿಬಿಟ್ಟಿತು. ಆದರೆ ಅದರ ಕಾನೂನುಬದ್ಧ ಅನುಮಾನಗಳು ಅನಂತರ ಹುಟ್ಟಿಕೊಂಡವು. ಸರ್ಕಾರಿ ತಂತಿ ಕಚೇರಿಯಲ್ಲೇ ಅಧಿಕಾರಶಾಹಿ ಪೇಚಿಗೆ ಸಿಕ್ಕಿಕೊಂಡಿದ್ದನ್ನು ಲಾಲಾಜಿ ಗಮನಿಸಿದ್ದರು. ''ನಮ್ಮ ವಿಚಾರಣೆ ನಡೆಸಿದ ಮ್ಯಾಜಿಸ್ಟ್ರೇಟರು ಆ ಇಡೀ ಸಮಯದಗುಂಟ ಆ ಪರಿಸರದಲ್ಲೇ ಇದ್ದರು. ಅವರು ಅಧಿಕಾರಶಾಹಿ ಸಂಚಿನಲ್ಲೇ ಪಾಲುದಾರರಾಗಿದ್ದಾರೆಂಬುದು ತಿಳಿದು ಬಂದಿತ್ತು.'' ಸಾಕ್ಷಿ ಆಧಾರಗಳನ್ನು ಹುಡುಕುವ ವಿಚಾರವು ಸಹ ತಂತಿ ಕಚೇರಿಯಲ್ಲೇ ಆರಂಭಗೊಂಡಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟರು ಎಲ್ಲಾ ಹಂತದಲ್ಲೂ ಬಂದಿಗಳ ವಿರುದ್ಧ

ಚಳವಳಿ ಪ್ರಚೋದಕ ಸಭೆಯ ಕಾಯ್ದೆಯನ್ನೇ ಮುಂದು ಮಾಡಿದ್ದರು. ಆದರೆ ಆಗ ಸಮಿತಿಯ ಸಭೆಯೊಂದಕ್ಕೆ ಆ ಕಾಯ್ದೆ ಅನ್ವಯಿಸುವುದೇ ಎಂಬ ಅನುಮಾನ ಹುಟ್ಟಿಕೊಂಡಿತ್ತು. ಪೊಲೀಸ್ ಕಸ್ಟಡಿಗೆ ಒಪ್ಪಿಸಿದ್ದ ಮ್ಯಾಜಿಸ್ಟ್ರೇಟರು ಆ ಅಧಿಕಾರಶಾಹಿಗೆ ಪರ್ಯಾಯ ಮಾರ್ಗವನ್ನು ಸೂಚಿಸುತ್ತಾ ಐಪಿಸಿ 145ರ ವಿಧಿಯಂತೆ ಕ್ರಮ ಜರುಗಿಸಲು ಸಲಹೆ ಮಾಡಿದರು. ಬಂದಿಗಳು ಬಯಸಿದ್ದರೆ ವಿಧಿಯ ವ್ಯಾಪ್ತಿಯಲ್ಲಿ ಜಾಮೀನು ಪಡೆದುಕೊಳ್ಳಬಹುದಾಗಿತ್ತು. ಪ್ರಾಸಿಕ್ಯುಷನ್‌ಗೆ ತಮ್ಮ ಪ್ರಕರಣವನ್ನು ಸಾಕ್ಷಿ ಆಧಾರ ಸಹಿತ ಸಿದ್ಧಪಡಿಸಲು ಮ್ಯಾಜಿಸ್ಟ್ರೇಟರು ಎರಡು ವಾರಗಳ ಮುಕ್ತ ಅವಕಾಶ ಕೊಟ್ಟು ಬಂದಿಗಳನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು.

1921 ಡಿಸೆಂಬರ್ 7ರಂದು ಅವರೆಲ್ಲರನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು. ಅಂದು ಪ್ರಕರಣ ಇತ್ಯರ್ಥವಾಗಲಿಲ್ಲ. ಇನ್ನೊಂದು ಮುಂದೂಡಿಕೆಗೆ ರಿಮ್ಯಾಂಡ್ ಕೊಡಲ್ಪಟ್ಟವು.

"ಅದರರ್ಥ ಇಷ್ಟೇ. ಅಧಿಕಾರಶಾಹಿಗೆ ತಮ್ಮ ಕಾಯ್ದೆಯ ಬಗ್ಗೆಯೇ ಖಾತ್ರಿ ಇರಲಿಲ್ಲ. ತಾವು ಕೈಗೊಂಡಿರುವ ಕ್ರಮಕ್ಕೆ ಬೆಂಬಲವಾಗುವ ಕಾಯ್ದೆಗಾಗಿ ಅವರು ತಡಕಾಡುತ್ತಿದ್ದರು.ಅದಕ್ಕಾಗಿ ಸಮಯ ಕೇಳುತ್ತಿದ್ದರು. ನಮ್ಮ ವಿರುದ್ಧ ಆರೋಪ ಹೊರಿಸಬಹುದಾದ ಕ್ರಿಮಿನಲ್ ಕಾನೂನಿನ ಸಮಂಜಸ ವಿಧಿ ತಮಗೆ ಲಭ್ಯವಾಗುವ ವಿಷಯದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರು ಹಾಗೂ ಪೊಲೀಸರಿಗೆ ಖಾತ್ರಿಯೇ ಇದ್ದಂತಿರಲಿಲ್ಲ. ಡಿಸೆಂಬರ್ 13ರಂದು ನಾವು ನ್ಯಾಯಾಲಯದ ಕೊಠಡಿ ಪ್ರವೇಶಿಸುತ್ತಿದ್ದಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ನಮ್ಮ ವಿರುದ್ಧ ತಮ್ಮ ದೂರನ್ನು 1911ರ 10ನೇ ಕಾಯ್ದೆಯ 6ನೇ ವಿಧಿಯಂತೆ ದಾಖಲು ಮಾಡಿದ್ದಾರೆಂದು ತಿಳಿದು ಬಂದಿತು. ಒಂದು ಸಮನ್ಸ್ ಪ್ರಕರಣ ಇನ್ನೊಂದು ವಾರಂಟ್ ಪ್ರಕರಣವಾದ್ದರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರು ಆ ದೂರಿನ ಪ್ರಕರಣವನ್ನೇ ಮೊದಲು ಕೈಗೊಳ್ಳುವುದಾಗಿ ತಿಳಿಸಿದರು. ಅದೆಲ್ಲವು ಆಡಳಿತಶಾಹಿಯ ಕಾನೂನು ಅಧಿಕಾರಿ ಜಿಲ್ಲಾ ಮ್ಯಾಜಿಸ್ಟ್ರೇಟರು ಕಲೆತು ಸೇರಿ ಹೊಸೆದ ಕೃತ್ಯವಾಗಿದೆ ಎಂದು ನನ್ನ ಮನಸ್ಸಿಗೆ ಭಾಸವಾಗುತ್ತಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಕಾಯ್ದೆಯನ್ನು ಹೊಂದಿಸಿಕೊಳ್ಳುವ ಸಲುವಾಗಿ ಪ್ರಾಸಿಕ್ಯುಷನ್ 9 ದಿನ ತಗೆದುಕೊಂಡಿದೆ ಎಂದು ನನಗನಿಸುತ್ತಿದೆ. ಸಮರ್ಥವಾಗಿ ಯಾವುದೇ ಕಾಯ್ದೆ ಪ್ರಾಪ್ತವಾಗದಿದ್ದರಿಂದ ತಮ್ಮ ಬಿಲ್ಲಿಗೆ ಎರಡು ನಾರುಗಳನ್ನು ಕಟ್ಟಲು ನಿರ್ಧರಿಸಿರುವುದು ಆ ಮೂಲಕ ನಮಗೆ ಕಠಿಣ ಶಿಕ್ಷೆ ವಿಧಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅನುವಾಗುವಂತೆ ಮಾಡಲಾಗಿದೆ." ಎಂದು ಲಜಪತರು ತಮ್ಮ ಹೇಳಿಕೆಯಲ್ಲಿ ತಿಳಿಸಿದರು.

ಪ್ರಕರಣದ ವಿಚಾರಣೆ ನಿರಂತರವಾಗಿ ವಿಳಂಬಗೊಳ್ಳುತ್ತಲೇ ಹೋಯಿತು. ಅಂತಿಮವಾಗಿ ಪ್ರಾಸಿಕ್ಯುಷನ್ ಡಿಸೆಂಬರ್ 19ರಂದು ತಮ್ಮ ಪ್ರಕರಣವನ್ನು ದಾಖಲು ಮಾಡಿದರು. 21ರಂದು ಹೇಳಿಕೆ ನೀಡುವಂತೆ ಲಾಲಾಜಿ ಅವರನ್ನು ಆಹ್ವಾನಿಸಲಾಯಿತು. ಮರುದಿನ ಸರ್ಕಾರಿ ವಕೀಲರು ತಮ್ಮ 'ವಾದ' ಮಂಡಿಸಿದರು. ಮ್ಯಾಜಿಸ್ಟ್ರೇಟರು ತಮ್ಮ ತೀರ್ಪನ್ನು 1922 ಜನವರಿ 4ಕ್ಕೆ ಕಾಯ್ದಿರಿಸಿದರು. ಆದರೂ ಅದನ್ನು ಪ್ರಕಟಿಸದ್ದು

7ರಂದು. ಹೀಗೆ ನಿರರ್ಥಕವಾಗಿ ಅಥವಾ ತಾವು ನಡೆಸಿದ ಬುದ್ಧಿಹೀನ ಅಸಮರ್ಥ ಕೃತ್ಯವನ್ನು ಸಮರ್ಥಗೊಳಿಸಿಕೊಳ್ಳುವ ಸಂಚನ್ನು ಹೊಸೆಯುವ ಸಲುವಾಗಿ ಐದು ವಾರಗಳ ಕಾಲ ಲಾಲಾಜಿ ಮತ್ತು ಇತರ ಮೂವರನ್ನು ಅನ್ಯಾಯವಾಗಿ ಬಂಧನದಲ್ಲಿ ಇರಿಸಲಾಯಿತು.

ಆರೋಪ ಹೊರಿಸುವ ಮುನ್ನ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರನ್ನು ನೀವು ''ಅಪರಾಧಿಯೇ? ಅಥವಾ ಅಲ್ಲವೇ?'' ಎಂದು ಕೇಳಿದರು. ''ವಾದಿಸುವುದೇನೂ ಇಲ್ಲ'' ಎಂದು ಎಲ್ಲರೂ ಒಂದೇ ರೀತಿಯ ಉತ್ತರ ಕೊಟ್ಟರು. ಆ ಉತ್ತರದಲ್ಲಿ ಅಸಹಕಾರ ನಿಲುವು ಸ್ಪಷ್ಟವಾಗಿತ್ತು. ತಾವು ಸರ್ಕಾರದ ಅಧಿಕಾರವನ್ನಾಗಲಿ ಅಥವಾ ಅದರ ನ್ಯಾಯಾಲಯಗಳನ್ನಾಗಲಿ ಮಾನ್ಯ ಮಾಡುವುದಿಲ್ಲ ಎಂದೂ ಈ ವಿಚಾರಣೆಯಲ್ಲಿ ಪಾಲ್ಗೊಳ್ಳುವುದಿಲ್ಲವೆಂದೂ ಸಾರಿದರು. ತಮ್ಮ ಪರವಾಗಿ ಅವರು ಯಾವ ವಕೀಲರನ್ನು ನೇಮಿಸಿಕೊಳಲಿಲ್ಲ. ಯಾವ ಸಾಕ್ಷಿಯನ್ನು ಒದಗಿಸಲಿಲ್ಲ. ಪ್ರಾಸಿಕ್ಯುಷನ್ ಬೆಂಬಲದ ಯಾವ ಸಾಕ್ಷಿಯನ್ನು ಪಾಟಿ ಸವಾಲಿಗೆ ಒಳಪಡಿಸಿಕೊಳ್ಳಲೂ ಇಲ್ಲ.

ವಿಚಾರಣೆ ಮುಗಿಯುತ್ತಾ ಬಂದ ಹಂತದಲ್ಲಿ ಲಾಲಾಜಿ ಅಸಹಕಾರ ಚಳವಳಿಯ ಪ್ರತೀಕವಾಗಿ ಸಂಕ್ಷಿಪ್ತ ಹೇಳಿಕೆಯನ್ನು ನೀಡಿದರು. ಆ ಹೇಳಿಕೆಯಲ್ಲಿ -'ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಮೇಜರ್ ಫೇರಾರ್ ಬರೆದ ಮೊದಲ ಎರಡು ಪತ್ರಗಳಲ್ಲಿ ಸಭೆಯನ್ನು ನಿಷೇಧಿಸುವ ಯಾವುದೇ ಆದೇಶ ಹೊರಡಿಸಿರಲಿಲ್ಲ ; ಆ ಪತ್ರಗಳಂತೆ ಮೇಜರ್ ಫೇರಾರ್ ಸಭೆಯನ್ನು ನಿಷೇಧಿಸಿ ಅಂತಿಮವಾಗಿ ತಮ್ಮ ಪತ್ರವನ್ನು ಲಾಹೋರಿನ ಡೆಪ್ಯುಟಿ ಕಮಿಷನರ್ ಆಗಿ ಬರೆದಿರುವರೇ ಹೊರತು ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಅಲ್ಲ. ಡಿ.ಸಿ ಆಗಿ ಚಳವಳಿ ಪ್ರಚೋದಕ ಕಾಯ್ದೆಗಳನ್ನು ಬಳಸಿಕೊಳ್ಳುವ ಅಧಿಕಾರ ಅವರಿಗೆ ಇಲ್ಲ. ಇನ್ನೂ ಹೆಚ್ಚಿನದಾಗಿ ಆ ಸಭೆಯು ಯಾವ ತರದಲ್ಲೂ ''ಸಾರ್ವಜನಿಕರ ಯಾವುದೇ ವರ್ಗಕ್ಕೆ'' ಮುಕ್ತವಾಗಿರಲಿಲ್ಲ- ''ಸಭೆಯ ಸೂಚನೆಯನ್ನು ಕಟ್ಟುನಿಟ್ಟಾಗಿ ಪ್ರಾಂತ್ಯದ ವಿವಿಧ ಕಾಂಗ್ರೆಸ್ ಸಮಿತಿಗಳಿಂದ ಚುನಾಯಿತರಾದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಿಗೆ ಮಾತ್ರ ನೀಡಲಾಗಿತ್ತು. ಕೆಲವು ಸಹ ಸದಸ್ಯರಿಗೂ -ನಾಮ ನಿರ್ದೇಶನ ಹೊಂದಿದ ಸದಸ್ಯರಿಗೂ ಸೂಚನೆ ನೀಡಲಾಗಿತ್ತು.'' ಡಿ.ಸಿ.ಗೆ ಈ ಎಲ್ಲಾ ಅಂಶಗಳನ್ನು ವಿವರವಾಗಿ ತಿಳಿಸಲಾಗಿತ್ತು. (ಸಭೆಯ ಸಂದರ್ಭದಲ್ಲಿ ಕಚೇರಿಯ ಗುಮಾಸ್ತರು ಮತ್ತು ಆಳುಗಳು ಅಲ್ಲಿರದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು.) ಜೊತೆಗೆ, ಮೇಜರ್ ಫೇರಾರ್ ಸಭೆ ಸ್ಥಳಕ್ಕೆ ಬಂದವರು ನಾವು ಕಾನೂನು ಬಾಹಿರವಾಗಿ ಸಭೆ ಸೇರಿದ್ದೇವೆಂದು ಹೇಳಲಿಲ್ಲ. ಆ ಸಭೆಯನ್ನು ನಿಷೇಧಿಸಿರುವುದಾಗಿಯೂ ತಿಳಿಸಲಿಲ್ಲ. ಅವರೆಲ್ಲಾ ಹೇಳಿದ್ದು ಇಷ್ಟೇ. - ''ಈ ಸಭೆ ಸಾರ್ವಜನಿಕ ಸಭೆ ಎಂದು ನಾನು ಘೋಷಿಸುತ್ತೇನೆ. ನೀವೆಲ್ಲಾ ಚದುರಬೇಕೆಂದು ಆದೇಶಿಸುತ್ತೇನೆ.'' ಆ ಘೋಷಣೆಯಲ್ಲಿ ಸಾಮಾನ್ಯ ಜ್ಞಾನವಾಗಲಿ, ಕಾಯ್ದೆಯ ತಿಳುವಳಿಕೆಯಾಗಲಿ ಇರಲಿಲ್ಲ ಎಂದು ಅವರು ವಿವರಿಸಿದರು.

''ಯಾವುದೇ ತಾಂತ್ರಿಕ ನೆಪದ ಲಾಭವನ್ನು ಪಡೆದುಕೊಳ್ಳಲು ನನಗೆ ಇಷ್ಟವಿಲ್ಲ. ನನ್ನ ಅಭಿಪ್ರಾಯವಿಷ್ಟೇ. - ಅಪರಾಧದಿಂದ ಅಂತ್ಯದ ತನಕ ಇಡೀ ಪ್ರಕರಣ

ಕಾನೂನುಬಾಹಿರವಾಗಿದೆ. ನಾನು ಈ ಸರ್ಕಾರವನ್ನು ಮಾನ್ಯ ಮಾಡುವುದಿಲ್ಲ ಎನ್ನುವುದಕ್ಕೆ ಕಾರಣವಿದೆ. -ಇದು ಕಾನೂನುಬದ್ಧವಾಗಿ ರಚಿತವಾದ ಸರ್ಕಾರವೆಂದು ನಾನು ಒಪ್ಪುವುದಿಲ್ಲ'' ಎಂದು ಲಾಲಾಜಿ ನ್ಯಾಯಾಲಯದಲ್ಲಿ ಸಾರಿದರು.

ಸರ್ಕಾರಿ ವಕೀಲ ಹರ್ಬರ್ಟ್ ಲಾಲಾಜಿ ಅವರ ಹೇಳಿಕೆಯನ್ನು ಆಕ್ಷೇಪಿಸಿ ಆರೋಪಿಯು ವಾಸ್ತವಾಂಶವನ್ನು ಹೇಳುತ್ತಿಲ್ಲವೆಂದು ಆರೋಪಿಸಿದರು. ಲಾಲಾಜಿ ಉತ್ತರ ಬಾಣದಂತೆ ಎರಗಿ ಬಂದಿತು. -''ಅದು ನಿಜ ಮಿಸ್ಟರ್ ಹರ್ಬರ್ಟ್. ಮೇಜರ್ ಫೆರಾರ್ ಪ್ರಧಾನವಾಗಿರುವ ಈ ಸರ್ಕಾರ ಒಂದು ಅನಾಗರಿಕ ಬಲದಲ್ಲದೇ ಬೇರೇನೂ ಅಲ್ಲ.'' ಹರ್ಬರ್ಟ್ ಮತ್ತೆ ತಮ್ಮ ಆಕ್ಷೇಪ ಸ್ಥಿರೀಕರಿಸಿದರು. ನ್ಯಾಯಾಲಯ ಲಜಪತರ ಹೇಳಿಕೆಯ ಭಾಗವನ್ನು ದಾಖಲು ಮಾಡಲು ಒಪ್ಪಲಿಲ್ಲ. ಲಜಪತರು ಮತ್ತೆ ಹೇಳಿದರು. -''ಹೇಳಿಕೆ ನೀಡುವಂತೆ ನೀವು ನನ್ನನ್ನು ಕೇಳಿದಿರಿ. ಅದನ್ನು ನಾನು ಮಾಡಿದ್ದೇನೆ. ಆ ಹೇಳಿಕೆಯನ್ನು ದಾಖಲು ಮಾಡುವುದು ಬಿಡುವುದು ನನ್ನ ಕೆಲಸವಲ್ಲ.'' ಅದಕ್ಕೆ ಸಂಬಂಧಪಟ್ಟ ಸಂಭಾಷಣೆ ಈ ರೀತಿ ದಾಖಲಾಗಿದೆ.

ಮ್ಯಾಜಿಸ್ಟ್ರೇಟ್: ''ಇಂಥ ಹೇಳಿಕೆಯನ್ನು ನಾನು ಕೇಳುವುದಿಲ್ಲ.

ಲಜಪತ್‌ರಾಯ್ : ''ಹಾಗಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.''

''ನನ್ನ ಕೆಲವು ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಿಲ್ಲವೆಂದು ನೀವು ದಯಮಾಡಿ ದಾಖಲೆಯಲ್ಲಿ ಟಿಪ್ಪಣಿ ಬರೆಯುವಿರಾ? ದಯಮಾಡಿ ಕೆಲವು ವಾಸ್ತವಾಂಶಗಳನ್ನು ದಾಖಲು ಮಾಡಿರಿ...''

ಮ್ಯಾಜಿಸ್ಟ್ರೇಟ್: ''ಅವು ಕಾರಣ ಸಹಿತವಾಗಿದ್ದರೇ?''

ಲಜಪತ್‌ರಾಯ್ : ''ಹೌದು, ಸಭೆಯಲ್ಲಿ ನನ್ನನ್ನು ಬಿಟ್ಟರೆ ಬೇರೆ ಯಾರೂ ಯಾವುದೇ ಹೇಳಿಕೆ ನೀಡಿಲ್ಲ. ಯಾವುದೇ ಭಾಷಣವನ್ನು ಮಾಡಿಲ್ಲ. ಆ ಇಡೀ ಸಭೆಯ ಜವಾಬ್ದಾರಿಯನ್ನು ನಾನೇ ನನ್ನ ಮೇಲೆ ಹಾಕಿಕೊಳ್ಳುತ್ತೇನೆ. ಸಭೆಯನ್ನು ಕರೆದದ್ದು ನಾನೇ. ಅದರ ಅಧ್ಯಕ್ಷತೆಯನ್ನು ವಹಿಸಿದ್ದು ನಾನೇ. ಕಲಾಪ ನಡೆಸಿದ್ದು ನಾನೇ.''

1922 ಜನವರಿ 7ರಂದು ಆ ಮ್ಯಾಜಿಸ್ಟ್ರೇಟರು ತೀರ್ಪಿತ್ತರು. ಲಾಲಾಜಿ ಅವರಿಗೆ 115ನೇ ವಿಧಿಯಂತೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು 6 ತಿಂಗಳ ಸಾದಾ ಶಿಕ್ಷೆ. ಜೊತೆಗೆ ಇತರ ಆರೋಪಗಳಿಗಾಗಿ 500 ರೂಪಾಯಿ ದಂಡ ವಿಧಿಸಲಾಯಿತು.

ಆ ಬಂಧನ, ವಿಚಾರಣೆ, ಆ ಶಿಕ್ಷೆ ಎಲ್ಲವೂ ಒಂದಕ್ಕೊಂದು ತೆಕ್ಕೆ ಹಾಕಿಕೊಂಡಿದ್ದುವು. ಅದೊಂದು ದೊಡ್ಡ ಷಡ್ಯಂತ್ರ. ಭಾರತದಲ್ಲಿ ಅಷ್ಟೇ ಅಲ್ಲ. ಬ್ರಿಟನ್ ಸೇರಿದಂತೆ ವಿದೇಶಗಳಲ್ಲೆಲ್ಲಾ ಗಮನಸೆಳೆದ ಹಗರಣ ಅದಾಯಿತು. ಮ್ಯಾಂಚೆಸ್ಟರ್ ಗಾರ್ಡಿಯನ್ ಮತ್ತು ದಿ ನೇಷನ್‌ಗಳಂತಹ ಬ್ರಿಟಿಷ್ ನಿಯತಕಾಲಿಕೆಗಳಿಗೆ ನಿಯತ ಸಮಿತಿ ಸಭೆಗಳನ್ನು ತಡೆಯಲು ಚಳವಳಿ ಪ್ರಚೋದಕ ಸಮಿತಿಗಳ ಕಾಯ್ದೆ ಅನ್ವಯಗೊಳಿಸಿದ್ದರ ಪರಿ ಆಕರ್ಷಕ ಸಂಗತಿಯೇ ಆಯಿತು. ಸಾಮಾನ್ಯ ಪರಿಜ್ಞಾನವನ್ನು ಪ್ರಶ್ನಿಸುವ ಅವಕಾಶ ಒದಗಿಸಿತು.

ವಿಚಾರಣೆಗೆ ಮೊದಲೇ ಆ ನಿಯತಕಾಲಿಕೆಗಳು ತಮ್ಮ ಟೀಕೆಗಳನ್ನು ಬರೆದಿದ್ದವು. ದಿ ನೇಷನ್ ಪತ್ರಿಕೆಯು ಲಾಲಾಜಿ ಅವರನ್ನು -''ಈಶಾನ್ಯ ಭಾರತದಲ್ಲಿ ಗಾಂಧೀ ಅವರ ಪ್ರಬಲ ಸಹವರ್ತಿ... ಇಂಗ್ಲೆಂಡ್ ಮತ್ತು ಅಮೆರಿಕಗಳಲೆಲ್ಲಾ ಚಿರಪರಿಚಿತವಾದ ವ್ಯಕ್ತಿ. ಸಮಕಾಲೀನ ಭಾರತೀಯ ರಾಷ್ಟ್ರೀಯರಲ್ಲಿ ವಿದೇಶಗಳಲ್ಲಿ ಅಷ್ಟೊಂದು ಮಾನ್ಯತೆ ಪಡೆದವರು ಇನ್ನೊಬ್ಬರಿಲ್ಲ'' ಎಂದು ಬರೆಯಿತು. ಮತ್ತು ಮುಂದುವರೆದು ಅದು ''ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯೊಂದನ್ನು ಕರೆದ ಕಾರಣಕ್ಕಾಗಿ ಅವರನ್ನು ಬಂಧಿಸಲಾಗಿದೆ. ಅದು ಕ್ರಿಸ್‌ಮಸ್ ವಾರದಲ್ಲಿ ನಡೆಯಲಿದ್ದ ರಾಷ್ಟ್ರೀಯ ಕಾಂಗ್ರೆಸ್ ವಾರ್ಷಿಕ ಅಧಿವೇಶನಕ್ಕೆ ಸಂಬಂಧಪಟ್ಟ ಪೂರ್ವಭಾವಿ ಕಾರ್ಯಗಳ ನಿಯತ ಕಲಾಪಗಳನ್ನು ನಡೆಸಲು ಸೇರಿದ್ದ ಸಭೆಯಲ್ಲಿ ಈ ಬಂಧನವಾಗಿದೆ.'' ಎಂದು ಬರೆಯಿತು.

ದಿ ನೇಷನ್ ತನ್ನ ಪ್ರತಿಕ್ರಿಯನ್ನು ಇನ್ನಷ್ಟು ವ್ಯಾಪಕಗೊಳಿಸಿ -''ನಿರೀಕ್ಷಿಸುವಂತೆ, ಲಜಪತ್‌ರಾಯ್ ಅವರನ್ನು ನಿಯತ ವಿಚಾರಣೆಗೆ ಒಳಪಡಿಸಲಾಗುತ್ತದೆ. 14 ವರ್ಷಗಳ ಹಿಂದೆ ಭಾರತದಲ್ಲಿ ಮತ್ತು ಸಂಸತ್ತಿನಲ್ಲಿ ಸಾಕಷ್ಟು ಬಿರುಗಾಳಿ ಎಬ್ಬಿಸಿದ, ಈಸ್ಟ್ ಇಂಡಿಯಾ ಕಂಪನಿಯ ಹಳೆಯ ವಿಶೇಷ ಆಜ್ಞೆಯೊಂದನ್ನು ಬಳಸಿ ಗಡಿಪಾರು ಶಿಕ್ಷೆಗೆ ಗುರಿಪಡಿಸಿದ ವ್ಯಕ್ತಿಗೆ ಅದೊಂದು ಹೊಸ ಅನುಭವವಾಗಲಿದೆ. ಅಧಿಕಾರಷಾಹಿ ಸರ್ಕಾರದ ದೋಷಪೂರಿತವಾದ ನಡವಳಿಕೆಯು ಭಾರತದ ಚರಿತ್ರೆಯಲ್ಲಿ ಘನತೆವೆತ್ತ ವ್ಯಕ್ತಿಯು ಚಾರಿತ್ರಿಕ ಪುರುಷ ಎನಿಸಿರುವ ಲಜಪತರಿಗೆ ಎಸಗಿರುವ ಅಪಚಾರ ಘೋರವಾದದ್ದು. ಅವರು ಗಾಂಧೀಯಂತೆ ಅಲ್ಲ. ಮಿಝ್ನಿ ಕುರಿತು ಶ್ರೀಮತಿ ಬ್ರೋನಿ ಹೇಳಿರುವಂತೆ ಕೇವಲ ಕಿಡಿಗೇಡಿ ಸಿದ್ಧಾಂತದ ಓರ್ವ ವ್ಯಕ್ತಿಯೂ ಅಲ್ಲ. ಸ್ವಭಾವತಃ ಅವರು ಓರ್ವ ಸ್ವತಂತ್ರ ಮನೋಧರ್ಮದ ರಾಜಕಾರಣಿ. ವೃತ್ತಿಯಲ್ಲಿ ಓರ್ವ ವಕೀಲ, ಓರ್ವ ನಿಷ್ಠಾವಂತ ಲೋಕ ಕಲ್ಯಾಣಕಾರಿ ಮತ್ತು ಕಟ್ಟಾ ಶೈಕ್ಷಣಿಕ ಸುಧಾರಕ. ನಿಸ್ವಾರ್ಥ ಸಾಮಾಜಿಕ ಸೇವೆಯಲ್ಲಿ ಸುದೀರ್ಘವಾದ ದಾಖಲೆಯುಳ್ಳವರು ಅವರು. ಇಂದು ಅವರು ಅಸಹಕಾರಿಯಾಗಿ ಕಾಣುವುದಕ್ಕೆ ಕಾರಣ ಗಾಂಧೀಜಿ ನಂತರದಲ್ಲಿ ಸಿಮ್ಲಾ ಆಡಳಿತಕ್ಕೆ ಅಪಾಯದ ಎರಡನೇ ವ್ಯಕ್ತಿಯಾಗಿ ಕಾಣುತ್ತಿರುವುದಕ್ಕೆ ಕಾರಣ ಪಂಜಾಬಿನ ಸರ್ಕಾರದಲ್ಲಿ ಜವಾಬ್ದಾರಿಯುತ ಸಚಿವರಾಗದಿರುವುದಕ್ಕೆ ಕಾರಣ ಏನೆಂಬುದು ಕನ್ಯಾಕುಮಾರಿಯಿಂದ ಹಿಡಿದು ಖೈಬರ್ ಕಣಿವೆಯವರೆಗೆ ಪ್ರತಿ ಶಿಕ್ಷಿತ ಭಾರತೀಯನಿಗೂ ತಿಳಿದಿದೆ.''

ಲಾಲಾಜಿ ಅವರಿಗೆ 'ನಿಯತವಾದ ವಿಚಾರಣೆ' ಏನೋ ಒದಗಿತು. ಅದು ಅವರಿಗೆ 'ಹೊಸ ಅನುಭವವೂ' ಅಲ್ಲ. ವಿಶೇಷವಾದದ್ದು ಅಲ್ಲ. ಒಟ್ಟಿನಲ್ಲಿ ಸರ್ಕಾರದ ಹಗರಣವೊಂದಂತೂ ಬಟ್ಟಬಯಲಾಯಿತು. ಆ ನಿಟ್ಟಿನಲ್ಲಿ ಮಹತ್ವದ್ದೆನಿಸಿತು. ಬ್ರಿಟಿಷ್ ಅಧಿಕಾರಷಾಹಿ ಕೂಡಲೇ ಮಧ್ಯ ಪ್ರವೇಶಿಸಿತು. ಐಪಿಸಿ 145ನೇ ವಿಧಿಯ ಶಿಕ್ಷೆಯನ್ನು ಕೈಬಿಡುವಂತೆ ಮಾಡಿತು. ಉಳಿದ ಕಾಯ್ದೆಗಳ ವ್ಯಾಪ್ತಿಯ ಶಿಕ್ಷೆಯ ಬಗ್ಗೆಯೂ ಕಾನೂನು ಅಧಿಕಾರಿಗಳೊಂದಿಗೆ ಸರ್ಕಾರ ಸಮಾಲೋಚನೆ ನಡೆಸಿತು. ಜನವರಿ ಮುಗಿಯುವುದರೊಳಗೆ ಎಲ್ಲಾ ಶಿಕ್ಷೆಯನ್ನು ರದ್ದುಪಡಿಸಿ ಆದೇಶ ಹೊರಡಿಸಲಾಯಿತು. ಅಧಿಕೃತ ಘೋಷಣೆಯೊಂದನ್ನು ಹೊರಡಿಸಿ ಲಜಪತ್‌ರಾಯ್ ಮತ್ತು ಅವರ ಬೆಂಬಲಿಗರು

ನಡೆಸಿದಂತಹ ಸಭೆಗಳು ಸಾರ್ವಜನಿಕ ಸಭೆಗಳಲ್ಲವೆಂದು ಘೋಷಿಸಲಾಯಿತು. ಅವು ಚಳವಳಿ ಪ್ರಚೋದಕ ಸಭೆಗಳ ಕಾಯ್ದೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸ್ಪಷ್ಟಪಡಿಸಲಾಯಿತು.

ಹೀಗೆ ಬ್ರಿಟಿಷ್ ಚಕ್ರಾಧಿಪತ್ಯ ನಾಲ್ವರು ಪ್ರಜೆಗಳನ್ನು ಬಂಧಿಸಿ, ಕಾನೂನು ಕ್ರಮಕ್ಕೆ ಒಳಪಡಿಸಿ, ಶಿಕ್ಷೆ ವಿಧಿಸಿ 59 ದಿನಗಳ ಕಾಲ ಬಂಧನದಲ್ಲಿರಿಸಿದ್ದು ಪಂಜಾಬ್ ಸರ್ಕಾರ ನಡೆಸುತ್ತಿದ್ದೆಲ್ಲವೂ ಅಕ್ರಮ ಕಾನೂನು ಬಾಹಿರವಲ್ಲದೆ ಬೇರೇನೂ ಅಲ್ಲವೆಂಬುದನ್ನು ಬಯಲು ಮಾಡಿದಂತಾಯಿತು!

ತಮ್ಮ ಮ್ಯಾಜಿಸ್ಟ್ರೇಟರುಗಳು ಎಸಗಿದ ಅಪಚಾರವನ್ನು ಸರಿಪಡಿಸುವ ನಿಟ್ಟಿನಲ್ಲಿ ಬ್ರಿಟಿಷ್‌ಶಾಹಿ ಕ್ರಮ ಕೈಗೊಂಡರೂ ಇತ್ತ ಪಂಜಾಬ್ ಸರ್ಕಾರ ಲಾಲಾ ಲಜಪತ್‌ರಾಯ್ ಅವರಿಗೆ ಸ್ವಾತಂತ್ರ್ಯ ಮರಳಿಸುವ ವಿಷಯದಲ್ಲಿ ಆಸಕ್ತಿ ವಹಿಸಲಿಲ್ಲ. ಅವರ ಮೂವರು ಸಹವರ್ತಿಗಳನ್ನು ಬಿಡುಗಡೆ ಮಾಡಲಾಯಿತಾದರೂ ಲಜಪತರನ್ನು ಬಂಧನದಲ್ಲೇ ಇರಿಸಲಾಯಿತು. ಜನವರಿ 3ರ ಮಧ್ಯರಾತ್ರಿ ಲಜಪತರನ್ನು ನಿದ್ದೆಯಿಂದ ಎಬ್ಬಿಸಲಾಯಿತು. ಸುಪರಿಂಟೆಂಡೆಂಟರ ಕಚೇರಿಗೆ ಕರೆದೊಯ್ಯಲಾಯಿತು. ಅಲ್ಲಿ 'ಬಿಡುಗಡೆ' ಮಾಡಲಾಯಿತು. ಲಜಪತರು ಬಂದಿಖಾನೆಯ ಬಾಗಿಲನ್ನು ದಾಟಿ ಹೊರಗೆ ಹೋಗುತ್ತಿದ್ದಂತೆಯೇ ಅವರಿಗೆ ಇನ್ನೊಂದು 'ವಾರಂಟ್' ನೀಡಲಾಯಿತು. ಅಂದರೆ ಅವರಿಗೆ ಕೊಟ್ಟ ಸ್ವಾತಂತ್ರ್ಯದ ಅವಧಿ ಕೇವಲ ಐದು ನಿಮಿಷಗಳಷ್ಟೂ ಇರಲಿಲ್ಲ. ಆ ವಾರಂಟ್‌ಗೆ ಮೇಜರ್ ಫೆರಾರ್ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಸಹಿ ಹಾಕಿದ್ದರು. ಅದು -"1908ರ 14ನೇ ಕಾಯ್ದೆ 17ನೇ ವಿಧಿ ಮತ್ತು 1911ರ 10ನೇ ಕಾಯ್ದೆ 7ನೇ ವಿಧಿಯಂತೆ ಲಾಲಾ ಲಜಪತ್‌ರಾಯ್ ಆರೋಪಿಯಾಗಿರುವುದರಿಂದ ಅವರನ್ನು ಕೂಡಲೇ ಬಂಧಿಸಲು ನಿಮಗೆ ಈ ಮೂಲಕ ಆದೇಶ ನೀಡುತ್ತಿದ್ದೇನೆ. ಜನವರಿ 31ರಂದು ಸೆಂಟ್ರಲ್ ಜೈಲಿನಲ್ಲಿ ನನ್ನ ಮುಂದೆ ಹಾಜರುಪಡಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಸಹಿ) ಎಂ.ಎಲ್. ಫೆರಾರ್

ಜಿಲ್ಲಾ ಮ್ಯಾಜಿಸ್ಟ್ರೇಟರು

1922, ಜನವರಿ 30 ಲಾಹೋರ್

ಎಂದು ಆದೇಶದಲ್ಲಿ ಹೊರಡಿಸಲಾಗಿತ್ತು.

ಬಂದಿಖಾನೆಯ ಬಾಗಿಲು ಲಜಪತರ ಪಾಲಿಗೆ ಆ ಬೆಳಗಿನ ಜಾವದಲ್ಲಿ ಹೇಗೆ ತೆಗೆಯಿತೋ ಹಾಗೆಯೇ ಮುಚ್ಚಿಕೊಂಡಿತು. ಅವರು ಮತ್ತು ಅವರ ಹಾಸಿಗೆ ಮುಂತಾದ ಸರಂಜಾಮುಗಳನ್ನು ಹೇಗೆ ಹೊರಗೆ ತೆಗೆಯಲಾಗಿತ್ತೋ ಹಾಗೆಯೇ ವಾಪಸಾಗುವಂತಾಯಿತು. ಹೆಚ್ಚು ಕಡಿಮೆ ಎರಡೂ ತಿಂಗಳಿಂದಲೂ ಅವರಿದ್ದ ಸೆರೆಮನೆಯ ಕೋಣೆ ಮತ್ತೊಮ್ಮೆ ಅವರದೇ ಆಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಇಲಿ ಬೆಕ್ಕಿನಾಟದಲ್ಲಿ ಅಂತರ್ಯದ ಮರ್ಮ ಬಹು ತೀಕ್ಷ್ಣವಾಗಿತ್ತು. ಅದೊಂದು ಕಗ್ಗತ್ತಲ ರಹಸ್ಯ. ಆ

ಬೆಳವಣಿಗೆಯಲ್ಲಿತ್ತು. ಕೊಟ್ಟಷ್ಟೇ ಬೇಗ ಲಾಲಾಜಿ ಅವರ ಸ್ವಾಂತಂತ್ರ್ಯವನ್ನು ಹರಣ ಮಾಡಿದ ಇನ್ನೊಂದು ಷಡ್ಯಂತ್ರ ಅದೆನಿಸಿತು. ರಾತ್ರಿಯ ಆ ಅವೇಳೆಯಲ್ಲಿ ಅವರನ್ನು ಬಿಡುಗಡೆ ಮಾಡಿ ಮತ್ತೆ ಕೇವಲ 5 ನಿಮಿಷಗಳ ಅಂತರದಲ್ಲಿ ಬಂಧಿಸಿ ತುರಂಗವಾಸದಲ್ಲಿಟ್ಟ ಸುದ್ದಿ ಜಗತ್ತಿಗೆ ಮರುದಿನ ಗೊತ್ತಾಯಿತು.

ಆ ಮರು ಬಂಧನವೂ ಸಹ ಅವರ ಮೊದಲ ಬಂಧನದ ಅಕ್ರಮ ಹಾಗೂ ಕಾನೂನುಬಾಹಿರ ಕೃತ್ಯಗಳಿಗೆ ಭಿನ್ನವಾಗಲಿಲ್ಲ. ಮೊದಲು ಮಾಡಿದ ತಪ್ಪನ್ನು ಮುಚ್ಚಿ ಹಾಕಬಯಸಿದ ಅಧಿಕಾರಿಷಾಹಿಯ ಯತ್ನ ಫಲಕಾರಿಯಾಗಲಿಲ್ಲ. ಇನ್ನೂ ಹೇಳಬೇಕೆಂದರೆ ಎರಡನೇ ಬಂಧನದಲ್ಲಿ ನಡೆದದ್ದೆಲ್ಲವೂ ಕಾನೂನುಬಾಹಿರಗಳೇ. ಅದಕ್ಕೆ ಹೋಲಿಸಿದರೆ ಹಿಂದಿನ ಬಂಧನದಲ್ಲಿ 2-3 ತಪ್ಪುಗಳಾಗಿದ್ದವಷ್ಟೇ. ತಾಂತ್ರಿಕವಾಗಿ ಹಿಂದಿನ ಅಕ್ರಮ ಬಂಧನ ಇನ್ನೂ ಮುಗಿದಿರಲಿಲ್ಲ. ಆ ಅಕ್ರಮದ ನಡವಳಿಕೆಯಲ್ಲೇ ಪ್ರಾಸಿಕ್ಯುಷನ್ ಅವರನ್ನು ಮತ್ತೆ ಬಂಧಿಸಿತು. ಲಾಲಾಜಿ ಅವರ ಬಂಧನಕ್ಕೆ ಆದೇಶ ಹೊರಡಿಸಿದ್ದ ಸರ್ಕಾರ ಅವರಿಗೆ ಶಿಕ್ಷೆ ವಿಧಿಸಿದ್ದ ಅಪರಾಧ ದಂಡ ಸಂಹಿತೆಯ 104ನೇ ವಿಧಿಯನ್ವಯವನ್ನು ಅನೂರ್ಜಿತಗೊಳಿಸಿತು. ಅಂದರೆ (ಘನತೆ ಕಾಪಾಡಿಕೊಳ್ಳುವ ತಪ್ಪು ಕಲ್ಪನೆಯೊಂದಿಗೆ) ಶಿಕ್ಷೆಯನ್ನು ಸಮಾಪ್ತಗೊಳಿಸಿರಲಿಲ್ಲ. ಸರ್ಕಾರದ ಈ ಅರೆಬರೆ ಕ್ರಮ ಅನೇಕ ಸಂಶಯಗಳಿಗೆ ಎಡೆಯಾಯಿತು. ಆ ಧೋರಣೆಯಿಂದಾಗಿ ಸರ್ಕಾರಕ್ಕೆ ಇರಸುಮುರಸಾಯಿತು. ನಂತರ ಲಾಲಾಜಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಈ ಕೆಳಗಿನಂತೆ ಅನೇಕ ಪ್ರಶ್ನೆಗಳನ್ನು ಎತ್ತಿದರು:

''(ಅ). ಈ ಬಂಧನಗಳು ಮತ್ತು ಶಿಕ್ಷೆಗಳಿಗೆ ಪಂಜಾಬ್ ಸರ್ಕಾರವು ಪಾತ್ರಧಾರಿಯೇ? ಸರ್ಕಾರ ಅವುಗಳಿಗೆ ಅಧಿಕಾರ ನೀಡಿತ್ತೇ? ಅಥವಾ ಅವುಗಳನ್ನು ಸಮರ್ಥಿಸಿತ್ತೇ?

(ಆ). ಹಾಗಿದ್ದರೆ, ಆ ಕ್ರಮಗಳಿಗೆ ಅನುಮತಿ ನೀಡುವ ಮೊದಲು ಸರ್ಕಾರದವರು ತಮ್ಮ ಕಾನೂನು ಅಧಿಕಾರಿಗಳ ಸಲಹೆ ಪಡೆದಿರುವರೇ?

(ಇ). ಒಂದು ವೇಳೆ ಆ ಸಲಹೆ ಪಡೆದುಕೊಂಡಿದ್ದರೆ, ಸರ್ಕಾರದವರು ಆ ರೀತಿಯಲ್ಲೇ ಅನುಮತಿ ನೀಡಲು ಆ ಸಲಹೆ ಕಾರಣವಾಗಿದ್ದರೆ ಭಾರತೀಯ ದಂಡ ಸಂಹಿತೆಯ 145ನೇ ವಿಧಿಯಂತೆ ವಿಧಿಸಲಾದ ಶಿಕ್ಷೆಯನ್ನು ಅಷ್ಟೊಂದು ಅವಸರದಲ್ಲಿ ಕೈಬಿಡಲಾಯಿತೇಕೆ? ಅದೊಂದು ಜವಾಬ್ದಾರಿ ಹೀನ ಕೃತ್ಯವೇ? ಅಥವಾ ಕಾನೂನುಬಾಹಿರವೆಂದು ತಮಗೆ ಮನವರಿಕೆಯಾಗಿದ್ದರಿಂದ ತೀರ್ಪಿನ ಹಂತ ಮುಟ್ಟುವ ತನಕ ಆ ಪ್ರಕರಣದ ವಿಚಾರಣೆ ನಡೆಯಗೊಡದೇ ಮೊದಲೇ ಅದನ್ನು ಹಿಂತೆಗೆದುಕೊಳ್ಳಲು ಸರ್ಕಾರದ ವಕೀಲರಿಗೆ ಸೂಚಿಸಲಿಲ್ಲವೇಕೇ? ಒಂದು ವೇಳೆ ಅದು ಸರ್ಕಾರ ತೋರಿದ ದಯೆಯಾಗಿದ್ದರೆ ಅದನ್ನು ಅಧಿಕೃತ ಹೇಳಿಕೆಯಲ್ಲಿ ಪ್ರಕಟಿಸಲಿಲ್ಲವೇಕೇ?

(ಈ). ಒಂದು ವೇಳೆ ಸರ್ಕಾರದವರು ತಮ್ಮ ಕಾನೂನು ಅಧಿಕಾರಿಗಳ ಸಲಹೆ ಪಡೆಯದೇ ಇದ್ದರೆ ಈ ತಪ್ಪುಗಳಿಗೆಲ್ಲಾ ಯಾರು ಹೊಣೆ? ಸರ್ಕಾರವೇ? ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರೇ?

(ಉ). ಒಂದು ವೇಳೆ ಜಿಲ್ಲಾ ಮ್ಯಾಜಿಸ್ಟ್ರೇಟರೇ ಜವಾಬ್ದಾರಿಯಾಗಿದ್ದರೆ, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ವಿಚಾರಣಾ ಮ್ಯಾಜಿಸ್ಟ್ರೇಟರ ಈ ಕಾನೂನು ಉಲ್ಲಂಘನೆಯ ಘೋರ ಅಪರಾಧಕ್ಕೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

(ಊ). ಅಕ್ರಮವಾಗಿ ಬಂಧಿಸಿಟ್ಟವರಿಗೆ ಉಂಟಾದ ತೊಂದರೆ, ಮಾನಸಿಕ ಅಶಾಂತಿ ಮತ್ತು ಖರ್ಚುವೆಚ್ಚಗಳ ಪರಿಹಾರ ನೀಡಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ?

(ಋ). ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯನ್ನು ಚದುರಿಸುವಾಗ ಡಿಸೆಂಬರ್ 3ರಂದು ಅಲ್ಲಿದ್ದವರ ಮೇಲೆ ನಡೆಸಿದ ಬಲಾತ್ಕಾರಕ್ಕೆ ಕ್ಷಮೆ ಯಾಚಿಸಲು ಹಾಗೂ ಪರಿಹಾರ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

(ಉ) ಶಿಕ್ಷೆ ವಿಧಿಸಿದ ಮ್ಯಾಜಿಸ್ಟ್ರೇಟರಿಗೆ ಬಡ್ತಿ ನೀಡಿರುವುದನ್ನು ಗಮನಿಸಿದರೆ ಜಿಲ್ಲಾ ಮ್ಯಾಜಿಸ್ಟ್ರೇಟರು ಇನ್ನೂ ಲಾಹೋರ್ ಜಿಲ್ಲೆಯ ಉಸ್ತುವಾರಿಯಲ್ಲೇ ಇರುವರು.

(ಊ) ಪ್ರಶ್ನೆಯಲ್ಲಿ ನನ್ನನ್ನು ಮೊದಲು ಬಂಧಿಸಲಾಗಿದ್ದು ಭಾರತೀಯ ದಂಡ ಸಂಹಿತೆಯ 145ನೇ ವಿಧಿಯಂತೆಯೇ ಎರಡನೇ ಬಾರಿಗೂ, ನನ್ನನ್ನು ಬಿಡುಗಡೆ ಮಾಡಿದ ನಂತರ, ಬಂಧಿಸಲು ಅದೇ ಆರೋಪಗಳನ್ನು ಆಧಾರ ಮಾಡಿಕೊಂಡಿರುವುದು ಕಂಡು ಬರುತ್ತದೆ. ಅಂದರೆ ತಾಂತ್ರಿಕವಾಗಿ ಎರಡೂ ಬಂಧನಗಳ ಆರೋಪಗಳು ನನ್ನ ವಿರುದ್ಧ ಒಂದೇ ಆಗಿವೆ. ಈ ಅಪರಾಧಗಳನ್ನು ಸರ್ಕಾರ ತನಗೆ ಅನುಕೂಲಕರವಾದ ರೀತಿಯಲ್ಲಿ ಬಳಸಿಕೊಳ್ಳಬಹುದಾಗಿದೆ.''

ವಿಚಾರಣ ಮ್ಯಾಜಿಸ್ಟ್ರೇಟರು - ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಾಗಿ ಬಡ್ತಿ ಹೊಂದಿದ ಡಿ.ಎಚ್. ಹ್ಯಾರಿಸ್ - ಪ್ರಥಮ ಮ್ಯಾಜಿಸ್ಟ್ರೇಟರು ಫೆಬ್ರವರಿ 13ರಂದು ಸಿದ್ಧಪಡಿಸಿದ ಲಜಪತರ ವಿರುದ್ಧದ ಆರೋಪ ಹೀಗಿದೆ-

''ನೀವು, 1921 ಡಿಸೆಂಬರ್ 3ನೇ ದಿನ ಅಥವಾ ಆ ಸಂದರ್ಭದಲ್ಲಿ ಲಾಹೋರಿನಲ್ಲಿ, ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಪ್ರಕಟಣೆಯೊಂದನ್ನು ನೀಡಿದ್ದೀರಿ. ಆ ಪ್ರಕಟಣೆ 1921, ಡಿಸೆಂಬರ್ 6ರಂದು ಟ್ರಿಬ್ಯುನಲ್‌ನಲ್ಲಿ ಪ್ರಕಟಣೆಗೊಂಡಿದೆ. ಆ ಹೇಳಿಕೆಯಲ್ಲಿ ನೀವು ಯಾವುದೇ ಪರಿಣಾಮಗಳಿಗೆ ಹೆದರುವುದಿಲ್ಲ ಎನ್ನುವ ಪ್ರತಿ ಕಾಂಗ್ರೆಸ್ಸಿಗರು ರಾಷ್ಟ್ರೀಯ ಸ್ವಯಂ ಸೇವಕರ ದಳಕ್ಕೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕೆಂದು ಪುಸಲಾಯಿಸಿದ್ದೀರಿ. ಸರ್ಕಾರ ಆ ಸಂಘಟನೆಯನ್ನು ಕಾನೂನುಬಾಹಿರವೆಂದೂ ಘೋಷಿಸಿದ್ದರೂ ನೀವು ಎಸಗಿರುವ ಕೃತ್ಯ 1908ರ 14ನೇ ಕಾಯ್ದೆಯ ಅಪರಾಧ ಕಾನೂನು ತಿದ್ದುಪಡಿಯ 17(1) ವಿಧಿ ವ್ಯಾಪ್ತಿಯಲ್ಲಿ ಬರುವ ಭಾರತೀಯ ದಂಡ ಸಂಹಿತೆ 117ರ ಪ್ರಕಾರ ಅಪರಾಧವಾಗುತ್ತದೆ. ನಾನು ಈ ಅಪರಾಧದಲ್ಲಿ ಮನವರಿಕೆ ಮಾಡಿಕೊಂಡಿದ್ದೇನೆ.''

ಮತ್ತೊಮ್ಮೆ ಪ್ರಾಸಿಕ್ಯುಷನ್ ಮತ್ತು ನ್ಯಾಯಾಲಯದವರ ಮನಸ್ಸಿನಲ್ಲಿ ಕಾನೂನು ಕಳವಳ ಆವರಿಸಿಕೊಂಡಿತು. ಆ ವೇಳೆಗಾಗಲೇ ಜಿಲ್ಲಾ ಮ್ಯಾಜಿಸ್ಟ್ರೇಟರು ಕಾಯ್ದೆಯ ಕಣ್ಣಾಕಟ್ಟಾಟದಲ್ಲಿ ಸಾಕಷ್ಟು ಚೆಲ್ಲಾಟವಾಡಿದರು. ಹೊಸ ಪ್ರಕರಣದಲ್ಲೂ ಆ ಹಂತದವರೆಗಿನ ಆ ಜಿಲ್ಲಾ ಮ್ಯಾಜಿಸ್ಟ್ರೇಟರ ಅಕ್ರಮಗಳನ್ನು ಲಜಪತ್‌ರಾಯ್ ತಮ್ಮ ಹೇಳಿಕೆಯಲ್ಲಿ ವಿಷದಪಡಿಸಿದರು. ಅದರ ಮುಂದಿನ ಭಾಗ ಹೀಗಿದೆ:

''ಆ ಎರಡು ಆರೋಪಗಳಲ್ಲಿ, ಒಂದು ಸಮನ್ಸ್ ಪ್ರಕರಣ. ಅದು ಜಾಮೀನು ವ್ಯಾಪ್ತಿಯದು. ಎರಡನೇದು 1908ರ 14ನೇ ಕಾಯ್ದೆ 17ನೇ ವಿಧಿಯ (1) ಉಪವಿಧಿಯಲ್ಲಿದ್ದರೆ ಸಮನ್ಸ್ ಪ್ರಕರಣವೇ ಜಾಮೀನು ವ್ಯಾಪ್ತಿಗೆ ಬರುತ್ತಿತ್ತು. ಆದರೆ ವಾರಂಟ್‌ನಲ್ಲಿ ಅನುಕೂಲಕರ ಉಪವಿಧಿಯನ್ನು ಪ್ರಸ್ತಾಪಿಸಿಲ್ಲ. ಜನವರಿ 31ರಂದು ನನ್ನನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಲಾಯಿತು. ದಂಡ ಸಂಹಿತೆ 167ನೇ ವಿಧಿಯಂತೆ ಅವರನ್ನು ರಿಮ್ಯಾಂಡ್‌ಗೆ ಒಳಪಡಿಸಿದರು. ಪುನಃ ಜಿಲ್ಲಾ ಮ್ಯಾಜಿಸ್ಟ್ರೇಟರು ಕಾನೂನು ತಪ್ಪು ಎಸಗಿದರು. ಆ ಪ್ರಕರಣಕ್ಕೆ ಅವರ ಆ ಕ್ರಮ ಅನ್ವಯಿಸುತ್ತಿರಲಿಲ್ಲ. ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೇ ಎಂದು ನನ್ನನ್ನು ಅವರು ಕೇಳಲಿಲ್ಲ. ಆಗಸ್ಟ್ 31ರಂದು, ನನ್ನ ವಿರುದ್ಧ ಇರುವ ಆರೋಪಗಳೇನು ಎಂದು ನಾನು ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಕೇಳಿದೆ. ಅವರು ವಾರಂಟ್‌ನಲ್ಲಿ ಹೇಳಲಾಗಿದ್ದ ವಿಧಿಗಳನ್ನಷ್ಟೇ ಉದ್ಧರಿಸಿದರು. 1908ರ 14ನೇ ಕಾಯ್ದೆ 17ನೇ ವಿಧಿಯ ಉಪವಿಧಿಯ ಬಗ್ಗೆ ನಾನು ಕೇಳಿದ ಪ್ರಶ್ನೆಗೆ ಅವರು ಉತ್ತರ ಕೊಟ್ಟು ತಾನೇನು ಹೇಳುವುದಿಲ್ಲವೆಂದರು. ಆದರೆ ನ್ಯಾಯಾಲಯದ ಇನ್‌ಸ್ಪೆಕ್ಟರ್ 2ನೇ ಉಪವಿಧಿಯನ್ನು ಪ್ರಸ್ತಾಪಿಸಿದರು.

''ಅಪರಾಧ ದಂಡ ಸಂಹಿತೆಯ 167ನೇ ವಿಧಿ ಅನ್ವಯಿಸುವುದಿಲ್ಲ. ಕಾರಣ ಪ್ರಕರಣವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ ಆದೇಶದ ಪ್ರಕಾರ, ಮತ್ತು ಅವರಿಂದಲೇ ಕೈಗೊಳ್ಳಲಾಗಿದೆ. ರಿಮ್ಯಾಂಡ್‌ಗೆ ಒಳಪಡಿಸಿದ ನಂತರ ಪೊಲೀಸರು ಕ್ರಮಗಳನ್ನು ಕಾನೂನು ಬದ್ಧಗೊಳಿಸಲು ಅಪರಾಧ ದಂಡ ಸಂಹಿತೆಯ 154ನೇ ವಿಧಿಯಂತೆ (ಪ್ರಥಮ ವರದಿಯ ಕಾಲಂ 1 ಮತ್ತು ಅಂತಿಮ ಟಿಪ್ಪಣಿಗಳನ್ನು ನೋಡಿ) ಪೊಲೀಸರು ಪ್ರಥಮ ವರದಿಯನ್ನು ದಾಖಲು ಮಾಡಿದರು.''

ಮ್ಯಾಜಿಸ್ಟ್ರೇರಿಯಲ್ ಹಂತದ ಚೆನ್ನಾಟಗಳು ಅಂತ್ಯಗೊಳ್ಳುವ ಅಥವಾ ಆ ಪ್ರಕರಣದಲ್ಲಿ ಲಜಪತ್‌ರಾಯ್ ಅವರ ವಿಚಿತ್ರ ಅನುಭವಕ್ಕೆ ತೆರೆ ಬೀಳುವ ಸಂಭವವಂತೂ ಕಂಡೂ ಬರಲಿಲ್ಲ.

13ರಂದು ಆರೋಪವನ್ನು ಸಿದ್ಧಪಡಿಸಿ ಓದಿದ ನಂತರ (ಯಾವುದೇ ಹೇಳಿಕೆ ನೀಡಲು ಲಜಪತ್‌ರಾಯ್ ನಿರಾಕರಿಸಿದರು.) ಸರ್ಕಾರಿ ವಕೀಲರು ತಮ್ಮ ವಾದ ಮಂಡಿಸಲು ಬಯಸಿದರು. ಪ್ರಕರಣವು ಸರಳವೂ, ನೇರವೂ ಆಗಿರುವುದರಿಂದ ಯಾವುದೇ ವಾದ ವಿವಾದದ ಅಗತ್ಯವಿಲ್ಲವೆಂದು ನ್ಯಾಯಾಲಯ ತಿಳಿಸಿತು! ಕೊನೆಗೆ ಉಳಿದಿದ್ದು ತೀರ್ಮಾನ ಹಂತ ಮಾತ್ರ. ಅದಕ್ಕಾಗಿ ಫೆಬ್ರವರಿ 15ನ್ನು ನ್ಯಾಯಾಲಯ ಗೊತ್ತುಪಡಿಸಿತು.

ಫೆಬ್ರವರಿ 15ರಂದು ಯಾವುದೇ ತೀರ್ಪು ಹೊರಬೀಳಲಿಲ್ಲ. ಬದಲಾಗಿ ಹೊಸ ಬಗೆಯ ಕಣ್ಣಾಮುಚ್ಚಾಟ ಆರಂಭಗೊಂಡಿತು. ಆಧಾರಗಳೇ ಇಲ್ಲದ ಅಂಶವನ್ನು ಉತ್ತಮ ಆಧಾರವೆಂದು ಭಾವಿಸಿಕೊಂಡು ತನ್ನನ್ನು ತಾನೇ ಅವಹೇಳನಕ್ಕೆ ಗುರಿ ಮಾಡಿಕೊಳ್ಳುತ್ತಿರುವ ಅಪಾಯವನ್ನು ಅವರು ಕಂಡು ಕೊಂಡಿದ್ದರು. ಲಜಪತ್‌ರಾಯ್ ಅವರ ಈ ಹೇಳಿಕೆ ಇದನ್ನು ಸ್ಪಷ್ಟಪಡಿಸುತ್ತದೆ:

"ಫೆಬ್ರವರಿ 13-15ರ ನಡುವೆ ಮ್ಯಾಜಿಸ್ಟ್ರೇಟರು ಅಥವಾ ಪ್ರಾಸಿಕ್ಯೂಷನ್ ಈ ಅಂಶವನ್ನು ಮನಗಂಡರೆಂದು ಕಂಡು ಬರುತ್ತದೆ:

(1). ಡಿಸೆಂಬರ್ 3 ಮತ್ತು 6ರಂದು 'ರಾಷ್ಟ್ರೀಯ ಸ್ವಯಂ ಸೇವಕರ ದಳ' ಅಸ್ತಿತ್ವಕ್ಕೆ ಬಂದಿರಲಿಲ್ಲ.

(2). ಡಿಸೆಂಬರ್ 16ರ ತನಕ ಆ ಸಂಘಟನೆಯನ್ನು ಕಾನೂನುಬಾಹಿರವೆಂದು ಘೋಷಿಸಲಾಗಿರಲಿಲ್ಲ. ತತ್ಸಂಬಂಧದ ಆಜ್ಞೆ ಡಿಸೆಂಬರ್ 12ರಂದು ಹೊರಬಿದ್ದು ಪಂಜಾಬ್ ಸರ್ಕಾರದ ಗೆಜೆಟ್‌ನಲ್ಲಿ ನಂತರ ಪ್ರಕಟಗೊಂಡಿದೆ.

(3). ಡಿಸೆಂಬರ್ 3ರಿಂದಲೇ ನಾನು ಜೈಲಿನಲ್ಲಿರುವುದರಿಂದ ಆ ಸಂಸ್ಥೆಯನ್ನು ರೂಪಿಸುವುದಕ್ಕಾಗಲಿ ಅಥವಾ ಅದರ ಚಟುವಟಿಕೆಗಳಿಗೆ ನನ್ನನ್ನು ಜವಾಬ್ದಾರರನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಈ ಅಂಶಗಳನ್ನು ಮನಗಂಡ ನಂತರ ಪ್ರಾಸಿಕ್ಯೂಷನ್ ಮತ್ತು ಮ್ಯಾಜಿಸ್ಟ್ರೇಟರು ಒಳ ಸಮಾಲೋಚನೆ ನಡೆಸಿದ್ದಾರೆ. ತೀರ್ಪನ್ನು ಮುಂದೂಡಲು ನಿರ್ಣಯಿಸಿದ್ದಾರೆ. ಮಹಾ ತಪ್ಪುಗಳನ್ನು ಸರಿಪಡಿಸಿ ಕೊಳ್ಳಲು ಹವಣಿಸಿದ್ದಾರೆ. ಅದೆಲ್ಲವೂ ಆರೋಪಿಯ ಬೆನ್ನ ಹಿಂದೆ ನಡೆದಿರುವ ವಿದ್ಯಮಾನಗಳು. ಎಲ್ಲಾ ಈ ವಿದ್ಯಮಾನಗಳಿಗೂ ಜಿಲ್ಲಾ ಮ್ಯಾಜಿಸ್ಟ್ರೇಟರು, ಕಾನೂನು ಅಧಿಕಾರಿಗಳು ಮತ್ತು ವಿಚಾರಣಾ ಮ್ಯಾಜಿಸ್ಟ್ರೇಟರು, ಹೊಣೆಗಾರರಾಗಿದ್ದರೆಂದು ಭಾವಿಸಲು ನನ್ನಲ್ಲಿ ಕಾರಣಗಳಿವೆ."

ಅದರಂತೆ ಫೆಬ್ರವರಿ 15ರಂದು ಯಾವುದೇ ತೀರ್ಪು ಹೊರಬೀಳಲಿಲ್ಲ. ಮ್ಯಾಜಿಸ್ಟ್ರೇಟರು ತೀರ್ಪಿನ ದಿನಾಂಕವನ್ನು 20ಕ್ಕೆ ಮುಂದೂಡಿದರು. ಅದಕ್ಕೆ ಅವರು ಕೊಟ್ಟ ಕಾರಣ - ಸರ್ಕಾರಿ ವಕೀಲರು ಮಿ. ಹರ್ಬರ್ಟ್ ಮನವಿ ಅರ್ಜಿಯೊಂದನ್ನು ಸಲ್ಲಿಸುವ ಸಲುವಾಗಿ ಕಾಲಾವಕಾಶ ಕೋರಿದ್ದಾರೆ. ಪ್ರಕರಣದಲ್ಲಿ ತಪ್ಪೊಂದು ಆಗಿದೆ ಎಂದು, ಆ ತಪ್ಪಿಗೆ ಪ್ರಾಸಿಕ್ಯೂಷನ್ ಕಾರಣವಾಗಿದೆ ಎಂದು, ನ್ಯಾಯಾಲಯಕ್ಕೆ ಆರಂಭದಲ್ಲಿ ಸಲ್ಲಿಸಿದ ಈ ಪ್ರಕರಣದಲ್ಲಿ ಲೋಪವೊಂದು ಆಗಿದೆ ಎಂದು ಅವರು ಹೇಳಿದ್ದಾರೆ. ಪ್ರಕರಣವನ್ನು 1922ರ ಫೆಬ್ರವರಿ 20 ಸೋಮವಾರಕ್ಕೆ ಮುಂದೂಡುವಂತೆ ಅವರು ಕೋರಿದ್ದಾರೆ."

ಫೆಬ್ರವರಿ 20ರಂದು ಮ್ಯಾಜಿಸ್ಟ್ರೇಟರು ಆರೋಪವನ್ನು ಹೊಸದಾಗಿ ಪ್ರತ್ಯೇಕವಾಗಿ ಎರಡು ಪ್ರಕರಣಗಳಿಗೆ ಅನ್ವಯಿಸುವಂತೆ ಸಿದ್ಧಪಡಿಸಿದರು. ಅವು ಈ ರೀತಿ ಇದ್ದವು.

"ನೀವು, 1921ರಂದು ಡಿಸೆಂಬರ್ 3ರಂದು ಅಥವಾ ಆ ಸುಮಾರಿನಲ್ಲಿ ಲಾಹೋರಿನಲ್ಲಿ ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ

ಪ್ರಕಟಣೆಯೊಂದನ್ನು ನೀಡಿದ್ದೀರಿ. ಆ ಪ್ರಕಟಣೆ 1921 ಡಿಸೆಂಬರ್ 6ರಂದು ಟ್ರಿಬ್ಯೂನ್‌ನಲ್ಲಿ ಪ್ರಕಟಗೊಂಡಿದೆ. ಆ ಹೇಳಿಕೆಯಲ್ಲಿ ನೀವು ಚಳವಳಿ ಪ್ರಚೋದಕ ಸಭೆಗಳ ಕಾಯ್ದೆಗಳ ಕಾಯ್ದೆಗೆ ಒಳಪಡುವ ಸ್ಥಳಗಳಲ್ಲೆಲ್ಲಾ ಸಾರ್ವಜನಿಕ ಸಭೆಗಳನ್ನು ನಡೆಸುವಂತೆ ನೀವು ಸಾರ್ವಜನಿಕರನ್ನು ಪ್ರಚೋದಿಸಿದ್ದೀರಿ. ಕಾಯ್ದೆಗಳ ಆದ್ಯತೆಗಳಿಗೆ ಅವಿಧೇಯರಾಗುವಂತೆ ಪುಸಲಾಯಿಸಿದ್ದೀರಿ. ಬಂಧನಕ್ಕೆ ಒಳಪಡುವಂತೆ ಪ್ರೇರೇಪಿಸಿದ್ದೀರಿ. ಅಸಹಕಾರ ಪ್ರಚಾರವನ್ನು ನಡೆಸಿದ್ದೀರಿ. ಹಾಗೆ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ 119ನೇ ವಿಧಿ ಸಾರುವ 1911ರ 10ನೇ ಕಾಯ್ದೆಯ 7ನೇ ವಿಧಿಯಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ. ನಾನು ಈ ಅಪರಾಧವನ್ನು ಪರಿಗಣಿಸಿದ್ದೇನೆ.

ನೀವು 1921ರ ಡಿಸೆಂಬರ್ 3ರಂದು ಅಥವಾ ಆ ಸುಮಾರಿನಲ್ಲಿ ಲಾಹೋರಿನಲ್ಲಿ, ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಪ್ರಕಟಣೆಯೊಂದನ್ನು ನೀಡಿದ್ದೀರಿ. ಅದು 1921ರ ಡಿಸೆಂಬರ್ 15ರಂದು ಟ್ರಿಬ್ಯೂನ್‌ನಲ್ಲಿ ಪ್ರಕಟಗೊಂಡಿದೆ. ಆ ಹೇಳಿಕೆಯಲ್ಲಿ ನೀವು ಪ್ರತಿ ಕಾಂಗ್ರೆಸ್ಸಿಗರನ್ನು ಪ್ರಚೋದಿಸಿ ಯಾವುದೇ ಪರಿಣಾಮಗಳಿಗೆ ಹೆದರದವರು 'ರಾಷ್ಟ್ರೀಯ ಸ್ವಯಂ ಸೇವಕ ದಳ'ದ ಸದಸ್ಯರಾಗಲು ಹೇಳಿದ್ದೀರಿ. ಆ ದಳ 17ನೇ ವಿಧಿಯ ಅಪರಾಧ ಕಾಯ್ದೆ ತಿದ್ದುಪಡಿ ವ್ಯಾಪ್ತಿಯಲ್ಲಿ ಕಾನೂನುಬಾಹಿರ ಸಂಘಟನೆಯಾಗಿದೆ. ಅದಕ್ಕೆ ಅನುಗುಣವಾಗಿ ಆ ಸಂಘಟನೆ ಮತ್ತು ಖಿಲಾಫತ್ ಸ್ವಯಂ ಸೇವಕರ ಸಂಘಟನೆಯನ್ನು ಸರ್ಕಾರ ನಿಷಿದ್ಧವೆಂದು ಘೋಷಿಸಿದೆ. ತನ್ಮೂಲಕ 10 ಜನರನ್ನು ಒಳಗೊಂಡ ಗುಂಪು ಅಥವಾ ವರ್ಗದ ಸೇರ್ಪಡೆ ಅಪರಾಧವೆಂದು ಭಾರತೀಯ ದಂಡ ಸಂಹಿತೆ 117ನೇ ವಿಧಿ ಒಳಪಡುವ 1908ರ 14ನೇ ಕಾಯ್ದೆ 17 (1) ಉಪವಿಧಿಯ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಈ ಅಪರಾಧವನ್ನು ಮನಗಂಡಿದ್ದೇನೆ.''

ಆ ದಿನ, ಅದೇ ಮೊದಲ ಬಾರಿಗೆ ಲಾಲಾಜಿ ಅಸಹಕಾರ ಆಶಯವನ್ನು ಕ್ಷಣಕಾಲ ಕೈಬಿಟ್ಟರು. ಉದ್ವೇಗದ ಭರದಲ್ಲಿ ಸರ್ಕಾರಿ ವಕೀಲರ ಆರೋಪ ತಿದ್ದುಪಡಿ ಅರ್ಜಿಗೆ ತಮ್ಮ ಉತ್ತರವನ್ನು ಸಲ್ಲಿಸಲು ಮುಂದೆ ಕಾಲಾವಕಾಶ ನೀಡಬೇಕೆಂದು ನ್ಯಾಯಾಲಯವನ್ನು ಕೇಳಿಕೊಂಡರು. ಆತನಕ ಪ್ರಾಸಿಕ್ಯೂಷನ್ ತೋರಿಕೆಗೆ ಸಹಕರಿಸುತ್ತಾ ಕಾಲಾವಕಾಶ ನೋಡುತ್ತಿದ್ದ ನ್ಯಾಯಾಲಯ ಲಜಪತರ ಕೋರಿಕೆಯನ್ನು ಕಡೆಗಣಿಸಿತು. ಅದನ್ನು ಹೀಗೆ ದಾಖಲು ಮಾಡಿದೆ:

''ಸರ್ಕಾರಿ ವಕೀಲರಾದ ಮಿ. ಹರ್ಬರ್ಟ್ ಇಂದು ಅರ್ಜಿ ಸಲ್ಲಿಸಿದ್ದಾರೆ. ಈ ಪ್ರಕರಣವನ್ನು ಸಮನ್ಸ್ ಪ್ರಕರಣವಾಗಿ ಪರಿಗಣಿಸಲಾಗುತ್ತಿದೆ ಎಂದೂ ಆದರೆ 1927ರ ಫೆಬ್ರವರಿ 7ರಂದು ಆರೋಪಿಯನ್ನು ಕೇಳಲಾದ ಪ್ರಶ್ನೆಗಳಿಗೆ ಅನ್ವಯವಾಗಿ ಹಾಗೂ ಪ್ರಾಸಿಕ್ಯೂಷನ್ ಸಂಗ್ರಹಿಸಿರುವ ಸಾಕ್ಷ್ಯಕ್ಕೆ ಅನ್ವಯವಾಗಿಯೂ ಈ ಪ್ರಕರಣ ಒಂದು ವಾರಂಟ್ ಪ್ರಕರಣವಾಗಿ ಕಂಡು ಬರುತ್ತಿದೆ. ಅಂದರೆ ಭಾರತೀಯ ದಂಡ ಸಂಹಿತೆಯ 117ನೇ ವಿಧಿ ಪ್ರಾಪ್ತವಾಗುವ 1881ರ 10ನೇ ಕಾಯ್ದೆ 7ನೇ ವಿಧಿಯ ವ್ಯಾಪ್ತಿಗೆ ಒಳಪಡುತ್ತದೆ ಎಂದು ಅರ್ಜಿಯಲ್ಲಿ ವಿನಂತಿಸಲಾಗಿದೆ. ಸರ್ಕಾರಿ ವಕೀಲರು ತನ್ಮೂಲಕ ಮೇಲಿನ ವಿಧಿಗಳಿಗೆ ಒಳಪಡುವ ರೀತಿಯಲ್ಲಿ ಆರೋಪವನ್ನು ಸಿದ್ಧಪಡಿಸಬೇಕೆಂದು ಒಂದು ವೇಳೆ

ಆರೋಪಿಯು ಇಷ್ಟಪಟ್ಟರೆ ಅವರಿಗೆ ರಕ್ಷಣೆಯ ಅವಕಾಶವನ್ನು ಕೊಡಬೇಕೆಂದು, ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ಪಾಟೀ ಸವಾಲಿಗೆ ಒಳಪಡಿಸಲು ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸಿದ್ದಾರೆ.

ಅರೋಪಿಯು ಸರ್ಕಾರಿ ವಕೀಲರು ಸಲ್ಲಿಸಿರುವ ಅರ್ಜಿಗೆ ಉತ್ತರ ಕೊಡಲು ನ್ಯಾಯಾಲಯ ತಮಗೆ ಕಾಲಾವಕಾಶ ಕೊಡಬೇಕೆಂದು ಕೇಳಿದ್ದಾರೆ. ಈ ಹಂತದಲ್ಲಿ ಕಾಲಾವಕಾಶ ಕೊಡುವುದು ಅನಗತ್ಯವಾಗುತ್ತದೆ ಎಂದು ನನಗೆ ಭಾಸವಾಗುತ್ತಿದೆ. ಈ ಪ್ರಕರಣವನ್ನು ವಾರಂಟ್ ಪ್ರಕರಣವಾಗಿ ವಿಚಾರಣೆಗೆ ಒಳಪಡಿಸಬೇಕೆಂದು ಸರ್ಕಾರಿ ವಕೀಲರು ಮಾಡಿರುವ ಮನವಿಯನ್ನು ನಾನು ಒಪ್ಪುತ್ತೇನೆ. 1922, ಫೆಬ್ರವರಿ 7ರಂದು ನ್ಯಾಯಾಲಯ ಆರೋಪಿಯನ್ನು ಪ್ರಶ್ನಿಸಲಾಗಿ ವಕೀಲರು ಆಗಿರುವ ಆರೋಪಿಯು ತಮ್ಮ ವಿರುದ್ಧದ ಆರೋಪ ಭಾರತೀಯ ದಂಡ ಸಂಹಿತೆಯ 1911-117ರ 10ನೇ ಕಾಯ್ದೆಯ 7ನೇ ವಿಧಿಯ ವ್ಯಾಪ್ತಿಗೆ ಈ ಪ್ರಕರಣ ಒಳಪಡುವುದು ತಮಗೆ ಗೊತ್ತಿದೆ ಎಂದಿದ್ದಾರೆ.

ಆರೋಪಿಯು ಈತನಕ ತಾವೊಬ್ಬ ಅಸಹಕಾರಿಯಾಗಿ ಈ ಕಲಾಪಗಳಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ಹೇಳುತ್ತಾ ಬಂದಿದ್ದಾರೆ. ಸರ್ಕಾರಿ ವಕೀಲರು ಹೇಳಿರುವಂತೆ ಆರೋಪಿಯ ವಿರುದ್ಧ ಇಂದು ಈ ಆರೋಪವನ್ನು ಸ್ಥಿರೀಕರಿಸಿದರೆ ಆರೋಪಿಗೆ ಅನ್ಯಾಯವಾಗುವುದಿಲ್ಲವೆಂದು ಹೇಳಿರುವುದನ್ನು ನಾನು ಮಾನ್ಯ ಮಾಡುತ್ತೇನೆ. ಅನಂತರ ಯಾವುದೇ ಬಗೆಯ ಅರ್ಜಿ ಸಲ್ಲಿಸಲು ಅವರಿಗೆ ಅವಕಾಶ ನೀಡಬಹುದೆಂಬುದನ್ನು ನಾನು ಒಪ್ಪುತ್ತೇನೆ.''

ಲಜಪತರು, ಹೀಗೆ, ನ್ಯಾಯಾಲಯದ ಮುಂದಿಟ್ಟ ಕಾಲಾವಕಾಶದ ಕೋರಿಕೆಯನ್ನು ತಿರಸ್ಕರಿಸಲಾಯಿತು. ಆ ಪ್ರಕರಣವನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವುದಾಗಿ ಲಾಲಾಜಿ ಬೆದರಿಕೆ ಹಾಕಿದರು. ನ್ಯಾಯಾಲಯ ಮಾಡಿದ್ದು, ಪ್ರಾಸಿಕ್ಯೂಷನ್‌ಗೆ ಅದು ಅನುಮತಿ ಕೊಟ್ಟಿದ್ದು ಅನುಮಾನತೀತವಾಗಿರಲಿಲ್ಲ ಎಂಬುದರಲ್ಲಿ ಸಂಶಯವೇ ಇರಲಿಲ್ಲ. ಲಾಲಾಜಿ ಉದ್ರಿಕ್ತವಾಗಿದ್ದಕ್ಕೆ ಬೇರೆ ಕಾರಣವೇ ಇತ್ತು. (ಅದನ್ನು ನಾವು ಮುಂದಿನ ಅಧ್ಯಾಯದಲ್ಲಿ ಓದೋಣ.) ನಂತರ ಲಾಲಾಜಿ ಆ ನ್ಯಾಯಾಲಯದ ಮುಂದೆ ಯಾವುದೇ ಹೇಳಿಕೆ ನೀಡಲಿಲ್ಲ. ಆದರೆ ತಮ್ಮ ವಿರುದ್ಧದ ಎರಡು ವಿಚಾರಣೆಗಳ ಚರಿತ್ರೆಗೆ ಸಂಬಂಧಪಟ್ಟಂತೆ ಅವರು ಹೇಳಿಕೆಯೊಂದನ್ನು ಬಿಡುಗಡೆ ಮಾಡಿದರು. ಆ ಹೇಳಿಕೆಯ ಕೆಲವು ಭಾಗಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಆ ಹೇಳಿಕೆಯನ್ನು ಅವರು ಅಧಿಕಾರಸ್ಥರ ಹೆಸರಿನಲ್ಲಿ ಬಿಡುಗಡೆ ಮಾಡಲಿಲ್ಲ. ತಮ್ಮ ದೇಶವಾಸಿಗಳನ್ನು ಉದ್ದೇಶಿಸಿ ಅದರಲ್ಲಿ ಬರೆದಿದ್ದಾರೆ. ಅಧಿಕಾರದಲ್ಲಿರುವವರು ನಡೆಸುವ ಮೋಸ, ತಂತ್ರಗಳನ್ನು ಬಯಲಿಗೆಳೆದಿದ್ದಾರೆ. ಆ ಹೇಳಿಕೆಯ ಉದ್ದೇಶ ಸರಳವಾದದ್ದು. ತಮ್ಮ ಮುಗ್ಧತೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಅದಲ್ಲ. ಜನರಿಂದ ಕರುಣೆ ನಿರೀಕ್ಷಿಸುವ ಲೇಖನವೂ ಅದಲ್ಲ. ಯಾವುದೇ ದಯೆ ದಾಕ್ಷಿಣ್ಯವನ್ನು ಆಶಿಸಿದ್ದು ಅದಲ್ಲ. ''ಸಾಮ್ರಾಜ್ಯಶಾಹಿ ಆಡಳಿತದ ಕೆಲವು ಅಧಿಕಾರಿಗಳು ಮತ್ತು ಮ್ಯಾಜಿಸ್ಟ್ರೇಟರುಗಳು

ಪಂಜಾಬಿನಲ್ಲಿ ಕಾನೂನು ಪರಿಜ್ಞಾನವಿಲ್ಲದೆ ಹೇಗೆ ನಡೆದುಕೊಳ್ಳುತ್ತಿದ್ದಾರೆ, ಕಾನೂನಿನ ರೂಪಗಳನ್ನು ರಾಜಕೀಯ ಉದ್ದೇಶಗಳಿಗಾಗಿ ಹೇಗೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ" ಎಂಬುದನ್ನು ಸಾರ್ವತ್ರಿಕವಾಗಿ ಎತ್ತಿ ತೋರಿಸುವುದು ಅವರ ಲೇಖನದ ಉದ್ದೇಶವಾಗಿತ್ತು. ಮ್ಯಾಜಿಸ್ಟ್ರೇಟರ ಹಂತದ ಆ ಭಯಾನಕ ಕೃತ್ಯಗಳನ್ನು ವಿಷದವಾಗಿ ತಿಳಿಸಿ, ಹೇಳಿಕೆ ಅಂತ್ಯದಲ್ಲಿ ಅವರು ಹೀಗೆ ಬರೆದಿದ್ದಾರೆ:

''ನಾವು ಅಸಹಕಾರ ಚಳವಳಿಯ ಕಾರಣದಿಂದಾಗಿ ಕಾನೂನು ಉಲ್ಲಂಘನೆ ಮಾಡಿದ್ದೇವೆ ಎಂದು ಮ್ಯಾಜಿಸ್ಟ್ರೇಟ್ ಸೇರಿದಂತೆ ಆ ಹಂತದ ಎಲ್ಲಾ ಅಧಿಕಾರಸ್ಥರು ಕಾರಣಗಳನ್ನು ಮುಂದೆ ಮಾಡಿದ್ದಂದ ಸತ್ಯದ ರಕ್ಷಣೆಯಾಗುತ್ತಿತ್ತು. ಅದರಿಂದ ಸರ್ಕಾರದ ಗೌರವ ಪ್ರತಿಷ್ಠೆಗಳು ವರ್ಧಿಸುತ್ತಿದ್ದವು. ಬದಲಾಗಿ ನಮ್ಮ ಮಟ್ಟಿಗೆ ಹೇಳುವುದಾದರೆ ಎಲ್ಲಾ ಕಾನೂನು ನಿಯಮ ನಿರ್ಬಂಧಗಳನ್ನು ಗಾಳಿಗೆ ತೂರಲಾಗಿದೆ. ನಾವು ಕಾಯ್ದೆ ಕಾನೂನುಗಳಿಗೆ ವಿಧೇಯರಾಗಿಲ್ಲವೆಂದು ಸಾರಿದ್ದರೆ ಅದರಿಂದ ಎರಡು ಕಡೆಗಳಲ್ಲೂ ಅನಾವಶ್ಯಕ ತೊಂದರೆಗಳು ಇಲ್ಲವಾಗುತ್ತಿದ್ದವು.

ಹೊಸದಾಗಿ ಹೊರಿಸಿರುವ ಆರೋಪಗಳಿಗೆ ಸಂಬಂಧಪಟ್ಟ ವಾಸ್ತವಿಕ ಅಂಶಗಳನ್ನು ಲಾಲಾಜಿ ತಮ್ಮ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ವಾಸ್ತವಿಕ ಸಂಗತಿಗಳು:

ನವೆಂಬರ್ 14ರಂದು, ಈಗ ''ಖಿಲಾಫತ್ ಸ್ವಯಂ ಸೇವಕರು'' ಎಂದು ಹೇಳಲಾಗುತ್ತಿರುವ, ಸಂಘಟನೆಯನ್ನು ಕಾನೂನುಬಾಹಿರವೆಂದು ಹೊರಡಿಸಿದ ಮೂಲ ಪ್ರಕಟಣೆ ಸಹ ದೋಷಪೂರಿತವಾಗಿತ್ತು. ಮೊದಲನೆಯದಾಗಿ, ''ಕಾಂಗ್ರೆಸ್ ಸ್ವಯಂ ಸೇವಕರು'' ಎನ್ನುವಂಥ ಯಾವುದೇ ಸಂಘ ಇರಲಿಲ್ಲ. ಸ್ವಯಂ ಸೇವಕರು ಎಂದು ಕರೆದುಕೊಳ್ಳುತ್ತಿದ್ದ ಯುವ ಜನರು ಬೇರೆ ಬೇರೆ ಪ್ರದೇಶಗಳಲ್ಲಿ, ಬೇರೆ ಬೇರೆ ಹೆಸರುಗಳಿಂದ ಪರಿಚಿತರಾಗಿದ್ದರು. ಅಂಥ ಯಾವುದೇ ಪ್ರಾಂತೀಯ ಸಂಘಟನೆ ಇರಲಿಲ್ಲ. ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಕೆಲಸ ಮಾಡುತ್ತಿದ್ದವರು ''ಭಾರತೀಯ ರಾಷ್ಟ್ರೀಯ ಸೇವೆ'' ವ್ಯಾಪ್ತಿಗೆ ಒಳಪಡುತ್ತಿದ್ದರು. ಲಾಹೋರಿನ ನಗರ ಕಾಂಗ್ರೆಸ್ ಸಮಿತಿ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದವರನ್ನು ''ಸ್ವರಾಜ್ಯ ಸೇನಾ'' ಅಂದರೆ (ಆರ್ಮಿ ಆಫ್ ಸ್ವರಾಜ್ಯ) ಎಂದು ಕರೆಯಲ್ಪಡುತ್ತಿದ್ದರು. ನವೆಂಬರ್ 20ರಂದು ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯಕಾರಿಣಿಯಲ್ಲಿ ಈ ವಿಷಯವನ್ನು ಚರ್ಚಿಸಲಾಗಿತ್ತು. ಸಂಪೂರ್ಣವಾಗಿ ಹೊಸ ಸಂಘಟನೆಯಲ್ಲಿ ಸ್ವಯಂ ಸೇವಕರನ್ನು ಒಗ್ಗೂಡಿಸಲು ಆ ಸಭೆಯಲ್ಲಿ ನಿರ್ಧರಿಸಲಾಯಿತು. 1. ಆ ಸಂಘಟನೆಯನ್ನು 'ರಾಷ್ಟ್ರೀಯ ಸ್ವಯಂ ಸೇವಕ ದಳ' ಎಂದು ಕರೆಯಬೇಕು. 2. ಇಡೀ ಪ್ರಾಂತ್ಯಕ್ಕೆ ಒಂದೇ ಘಟಕ ಇರಬೇಕು ಮತ್ತು 3. ಅದು ಕೇಂದ್ರಿಯ ಪ್ರಾಂತ್ಯ ಮಂಡಳಿಯ ನಿಯಂತ್ರಣಕ್ಕೆ ಒಳಪಟ್ಟಿರಬೇಕು. 4. ಅಹಿಂಸೆ ಮತ್ತು ಇತರ ಸಿದ್ಧಾಂತಗಳಿಗೆ ತಾವು ಬದ್ಧರಾಗಿರುವುದಾಗಿ ಘೋಷಿಸಿ ಪ್ರತಿಯೊಬ್ಬರು ಲಿಖಿತ ರೂಪದಲ್ಲಿ ಅಂಕಿತ ಹಾಕಿದ ಮೂರು ಪ್ರತ್ಯೇಕ ಪ್ರವೇಶ ಪತ್ರಗಳನ್ನು ಸಲ್ಲಿಸಬೇಕು. 5. ಆ ಎಲ್ಲಾ ಅರ್ಜಿಗಳನ್ನು ಪಂಜಾಬ್ ಪ್ರಾಂತೀಯ ಮಂಡಳಿ ಮಾನ್ಯ ಮಾಡಬೇಕು

ಎಂದು ನಿರ್ಧರಿಸಲಾಗಿತ್ತು. ಈ ಹಿನ್ನಲೆಯಲ್ಲಿ ಸರ್ಕಾರ ಹೊರಡಿಸಿದ ಮೊದಲ ಪ್ರಕಟಣೆಯು ಸಹ ಕಾನೂನು ಬದ್ಧವಾಗಿರಲಿಲ್ಲ. ಅದಕ್ಕನುಗುಣವಾಗಿ ಎರಡನೇ ಪ್ರಕಟಣೆಯು ಸಹ ಕಾನೂನು ಸಿಂಧುತ್ವವನ್ನು ಹೊಂದಿರಲಿಲ್ಲ. ಆ ಲೋಪವನ್ನು ಸರಿಪಡಿಸಿಕೊಳ್ಳಲು ಸ್ವತಂತ್ರ ಮ್ಯಾಜಿಸ್ಟ್ರೇಟರೊಬ್ಬರಿದ್ದರೆ ಪ್ರಾಸಿಕ್ಯೂಷನ್‌ಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಈ ಜನರು ಕಳೆದ 10 ವಾರಗಳಿಂದಲೂ ನನ್ನನ್ನು ಕಾನೂನು ಕ್ರಮಕ್ಕೆ ಒಳಪಡಿಸುತ್ತಲೇ ಇದ್ದಾರೆ. ನನ್ನ ವಿರುದ್ಧ ಸಾಕ್ಷಿ ಆಧಾರಗಳನ್ನು ಸಾದರಪಡಿಸಲು ಅದು ಸಾಕಷ್ಟು ಕಾಲವಾಗಿತ್ತು. ನ್ಯಾಯನ್ಯಾಯವನ್ನು ವಿವೇಚಿಸಲು ಮ್ಯಾಜಿಸ್ಟ್ರೇಟರಿಗೆ ವಿಪುಲ ಅವಕಾಶವಿತ್ತು. ಆದರೆ ಮ್ಯಾಜಿಸ್ಟ್ರೇಟರು ಎಲ್ಲಾ ನ್ಯಾಯ ಮತ್ತು ನ್ಯಾಯೋಚಿತ ಮಾರ್ಗಗಳನ್ನು ಮುಚ್ಚಿ ಹಾಕಿದರು. ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಸಾಮ್ರಾಜ್ಯಷಾಹಿಗಳನ್ನು ಸಂತುಷ್ಟಗೊಳಿಸುವುದೊಂದೇ ಅವರ ಅಪೇಕ್ಷೆಯಾಯಿತು. ಅದರಿಂದಾಗಿಯೇ ಅವರನ್ನು ತೃಪ್ತಿಪಡಿಸಲು ಅವರು ಎಲ್ಲಾ ರೀತಿಯಲ್ಲೂ ಉತ್ಸುಕರಾದರು. ನನಗೆ ನನ್ನ ಪ್ರತ್ಯುತ್ತರ ಅಥವಾ ಆಕ್ಷೇಪ ಸಲ್ಲಿಸಲು ಒಂದು ದಿನದ ಅವಕಾಶವನ್ನು ಸಹ ಕೊಡಲಿಲ್ಲ.'' ಈ ಹೇಳಿಕೆ ಪ್ರಕಟಗೊಳ್ಳುವ ವೇಳೆಗೆ ಅವರ ವಿರುದ್ಧ ಶಿಕ್ಷೆ ವಿಧಿಸಿ ತೀರ್ಪು ನೀಡಲಾಗಿತ್ತು. ಆ ಶಿಕ್ಷೆ ಮತ್ತು ಆರೋಪಗಳನ್ನು ಲಜಪತರು ತಮ್ಮ ಹೇಳಿಕೆಯಲ್ಲಿ ಅಲ್ಲಗಳೆದಿದ್ದಾರೆ:

''ಭಾರತೀಯ ದಂಡ ಸಂಹಿತೆ 117ನೇ ವಿಧಿಯನ್ನು ಪರಾಮರ್ಶಿಸಿದಾಗ ಈ ಪ್ರಕರಣಕ್ಕೆ ಅದು ಅನ್ವಯಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ

ಮೊದಲನೆಯದಾಗಿ, ಒಂದು ವೇಳೆ ನಾನು ಸ್ವಯಂ ಸೇವಕನಾಗಲು ಜನರನ್ನು ಪ್ರಚೋದಿಸಿದ್ದೇನೆ ಎಂದುಕೊಂಡರೂ, ಸಾರ್ವಜನಿಕ ಸಭೆಗಳನ್ನು ನಡೆಸಲು ಪುಸಲಾಯಿಸಿದ್ದೇನೆ ಎಂದುಕೊಂಡರೂ 117ನೇ ವಿಧಿಯು ಅನ್ವಯವಾಗುವುದಿಲ್ಲ. (ವೀಕ್ಲಿ ರಿಪೋರ್ಟರ್ 3ರ ಪ್ರಕಾರ ರತನ್‌ಲಾಲ್ ಮೊಕದ್ದಮೆ ಅಪರಾಧ ಸಂಹಿತೆಯ 41ನೇ ಪ್ರಕರಣದ ಪ್ರಕಾರ) ಅದು ಸಾಮೂಹಿಕ ಅಪರಾಧದ ವ್ಯಾಪ್ತಿಗೆ ಬರುತ್ತದೆ. ಸ್ವಯಂ ಸೇವಕರ ಸೇರ್ಪಡೆಯ ನಡವಳಿಕೆಯು ಪ್ರತಿ ಸ್ವಯಂ ಸೇವಕನ ವೈಯುಕ್ತಿಕ ನಡವಳಿಕೆಯಾಗುತ್ತದೆ. ಸಾರ್ವಜನಿಕರು ಸಾಮೂಹಿಕವಾಗಿ, ಸಂಘಟನಾತ್ಮಕವಾಗಿ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಹಾಗೆಯೇ 1911ರ 10ನೇ ಕಾಯ್ದೆ 7ನೇ ವಿಧಿ ವ್ಯಾಪ್ತಿಯಲ್ಲಿ ಸಾರ್ವಜನಿಕವಾದ ಸಮೂಹ ಭಾಷಣಗಳು ಅಥವಾ ಉಪನ್ಯಾಸಗಳನ್ನು ಅಪರಾಧ ವ್ಯಾಪ್ತಿಗೆ ಒಳಪಡಿಸುವುದಿಲ್ಲ.

ಎರಡನೆಯದಾಗಿ, ರಾಷ್ಟ್ರೀಯ ಸ್ವಯಂ ಸೇವಕ ದಳವು ಆ ಪ್ರಕಟಣೆಯ ನಂತರ ಅಸ್ತಿತ್ವಕ್ಕೆ ಬಂದದ್ದೂ ಅಲ್ಲ.

ಮೂರನೆಯದಾಗಿ, ಕಾರ್ಯಕಾರಿಣಿಯ ಪೂರ್ವ ಸಮ್ಮತಿ ಇಲ್ಲದೆ ಯಾರೂ ಅಸಹಕಾರ ಚಳವಳಿ ಕೈಗೊಳ್ಳಬಾರದೆಂದು ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ

ನಾಲ್ಕನೆಯದಾಗಿ, ಈ ಪ್ರಕಟಣೆ ಮತ್ತು ಈ ಆರೋಪಗಳ ಅಂಶಗಳು ಭಾರತೀಯ ದಂಡ ಸಂಹಿತೆಯ 14ನೇ ವಿಧಿಯಂತೆ ಈಗಾಗಲೇ ನನ್ನ ವಿರುದ್ಧ ಹೊರಿಸಲಾಗಿರುವ ಅಪರಾಧದಲ್ಲಿರುವ ಅಂಶಗಳನ್ನೇ ಆಧರಿಸಿದೆ.

ಐದನೆಯದಾಗಿ, ಈ ಎರಡು ಕಾಯ್ದೆಗಳ ಪರಿಭಾಷೆಯು ಪ್ರಚೋದನೆಯೇ ಘೋರ ಅಪರಾಧ ಎನ್ನುವಂತೆ ಸಲಹೆ ಮಾಡುತ್ತಿರುವಂತಿದೆ. ನನ್ನ ಪ್ರಕಟಣೆಯನ್ನೇ ಆಧರಿಸಿ ನನ್ನ ತಲೆಯ ಮೇಲೆ ಇನ್ನಷ್ಟು ಆರೋಪಗಳು ತೂಗುತ್ತಿವೆಯೋ, ನನಗೆ ಆಶ್ಚರ್ಯವಾಗುತ್ತಿದೆ. ಏನೇ ಆದರೂ ಕಂಡು ಕಂಡಂತೆ ನಾನೋರ್ವ ಬಲಿಪಶುವಾಗುತ್ತಿದ್ದೇನೆ.''

ಅವರಿಗೆ ಅದೇ ಆರೋಪಗಳ ಮೇಲೆ ಶಿಕ್ಷೆಯಾಯಿತು. ಮೂರು ತಿಂಗಳ ಜೈಲುವಾಸ ವಿಧಿಸಲಾಯಿತು.

* * *

ಅಧ್ಯಾಯ -49

ಬರ್ದೋಲಿ ತೀರ್ಮಾನ

ಲಜಪತ್‌ರಾಯ್ ಬಂಧನದ ಮತ್ತು 1922 ಫೆಬ್ರವರಿ 20ರಂದು ಅವರಿಗೆ ಶಿಕ್ಷೆ ವಿಧಿಸಿದ ಮೂರು ತಿಂಗಳ ಅವಧಿಯಲ್ಲಿ ಭಾರತೀಯ ರಾಜಕಾರಣದಲ್ಲಿ ಮಹತ್ತರ ಬದಲಾವಣೆಗಳು ನಡೆದು ಹೋದವು. ಪಂಜಾಬ್ ಪ್ರದೇಶ ಕಾಂಗ್ರೆಸ್ ಸಭೆಯಲ್ಲಿ ಲಜಪತರನ್ನು ಬಂಧಿಸಿದ ಸಮಯದಲ್ಲೇ ಆ ಬೆಳವಣಿಗೆಗಳ ಬಿತ್ತನೆಯಾಗಿತ್ತು. ಆ ನಂತರದ ಆ ಬಿತ್ತನೆ ಕಂಡ ಮೊಳಕೆ ಮತ್ತು ಅದರ ಮೇಲಾದ ಪರಿಣಾಮಗಳು ಮುನ್ನುಡಿಯಲು ಸಾಧ್ಯವಿಲ್ಲದಷ್ಟು ತೀವ್ರ ಗತಿಯಲ್ಲಿ ನಡೆದು ಹೋದವು. ಆ ಬದಲಾವಣೆಗಳಲ್ಲಿ ಎರಡು ಪ್ರಮುಖ ಅಂಶಗಳು. ಅಸಹಕಾರ ಚಳವಳಿ ಮುಂದುವರೆಸಲು ಕಾಂಗ್ರೆಸ್ ಕೈಗೊಂಡ ತೀರ್ಮಾನ ಒಂದು. ಆ ಚಳವಳಿಯಲ್ಲಿ ಅಹಿಂಸೆಗೆ ಕಾಂಗ್ರೆಸ್ ಎಷ್ಟೇ ಪ್ರತಿಪಾದನೆ ಮಾಡಿದರೂ ತದ್ವಿರುದ್ಧವಾಗಿ ಜನ ಸಮುದಾಯ ಮುಗಿಬಿದ್ದದ್ದು ಎರಡನೆಯದು.

ಅಸಹಕಾರ ಚಳವಳಿಯನ್ನು ಹುಟ್ಟು ಹಾಕಿದ ಆರಂಭದಲ್ಲೇ ಅದು ಅಹಿಂಸಾತ್ಮಕ ನಾಗರಿಕ ಅವಿಧೇಯತೆಯ ಪ್ರಗತಿಪರ ಚಳವಳಿಯಾಗಿರಬೇಕೆಂದು ಮುಂದಾಲೋಚಿಸಲಾಗಿತ್ತು. ಆ ಚಳವಳಿಯ ಪಿತಾಮಹ ತಮ್ಮ ಅಸಹಕಾರ ಚಳವಳಿ ಒಂದು ಬಿಗಿ ಹಂತ ತಲುಪುತ್ತಿದ್ದಂತೆ ಕರ ನಿರಾಕರಣೆ ಆಂದೋಲನದ ಮೂಲಕ ಸರ್ಕಾರದೊಂದಿಗಿನ ತಮ್ಮ ಹೋರಾಟವನ್ನು ಒಂದು ನಿರ್ಣಾಯಕ ಹಂತಕ್ಕೆ ತರುವ ಭರವಸೆ ಹೊಂದಿದ್ದರು. ಆದರೆ ಆ ಭರವಸೆಗಳು ಈಡೇರದೆ ಬರ್ದೋಲಿಯಲ್ಲಿ ತದ್ವಿರುದ್ಧವಾದ ನಿರ್ಣಯ ಕೈಗೊಳ್ಳಬೇಕಾದ ಪ್ರಸಂಗ ಬಂದದ್ದು ಮುಂದಿನ ಬೆಳವಣಿಗೆ. ಬರ್ದೋಲಿ ಗುಜರಾತಿನ ಒಂದು ತಾಲ್ಲೂಕು ಕೇಂದ್ರ. ವಲ್ಲಭಬಾಯಿ ಪಟೇಲ್ ಅಧ್ಯಕ್ಷತೆಯಲ್ಲಿ ಬರ್ದೋಲಿ ಜನತೆ 1921ರ ಅಕ್ಟೋಬರ್‌ನಲ್ಲಿ ಚಳವಳಿಯನ್ನು ಆರಂಭಿಸಿದ್ದು ಹಿಂದಿನ ವಿದ್ಯಮಾನ. ಈಗ ಅದೇ ಜಾಗದಲ್ಲಿ ಆ ಚಳವಳಿಯನ್ನು ರದ್ದುಪಡಿಸಬೇಕಾದ ನಿರ್ಣಯ ಕೈಗೊಳ್ಳಬೇಕಾಗಿ ಬಂದದ್ದು ವಿಚಿತ್ರ. ಅಸಹಕಾರ ಚಳವಳಿಯ ಪಿತಾಮಹ ತಮ್ಮ ಆ ಪ್ರಯೋಗವು ಬರ್ದೋಲಿಯಲ್ಲಿ ತಮ್ಮ ವೈಯಕ್ತಿಕ ಉಸ್ತುವಾರಿಯಲ್ಲಿ, ಇತರೆಡೆಗಳ ಸ್ಥಳೀಯ ನಾಯಕರುಗಳಿಗೆ ಮಾರ್ಗದರ್ಶಿಯಾಗಬೇಕೆಂಬ ಉದ್ದೇಶದಿಂದ ನಡೆಸಲು ಯೋಜಿಸಿದ್ದರು. ಅದಕ್ಕೆ ಪೂರಕವಾಗಿ 1921ರ ನವೆಂಬರ್ 3ರಂದು ನಡೆದ ಕಾಂಗ್ರೆಸ್ ಕಾರ್ಯಕಾರಿಣಿ '' ಚಳವಳಿಗೆ ಕೆಲವು ಪ್ರಯೋಗಗಳನ್ನು ಸಂಯೋಜಿಸಿತು. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ವೈಯಕ್ತಿಕ ಜವಾಬ್ದಾರಿಯ ಮೇಲೆ ಸಾಮೂಹಿಕ ಅಸಹಕಾರ ಚಳವಳಿಯನ್ನು ನಡೆಸುವುದು ಆ ಪ್ರಯೋಗಗಳಲ್ಲಿ ಪ್ರಮುಖವಾಗಿತ್ತು. ಅವುಗಳಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಯಶಸ್ವಿಯಾದರೆ ಅವುಗಳಿಗೆ ಪೂರ್ಣ ಅಧಿಕಾರವನ್ನು ಕೊಡುವ ನಿಶ್ಚಯವಾಗಿತ್ತು. ಆದರೆ ಕಾಂಗ್ರೆಸ್ ಕೈಗೊಂಡ ಒಂದು ಪಾಕ್ಷಿಕದೊಳಗೆ

ಮುಂಬಯಿಯಲ್ಲಿ ಹಿಂಸಾಚಾರ ನಡೆದು ಹೋಯಿತು. 50ಕ್ಕೂ ಹೆಚ್ಚು ಮಂದಿ ಸತ್ತರು. 400ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ವೇಲ್ಸ್ ರಾಜಕುಮಾರ ಭಾರತಕ್ಕೆ ಭೇಟಿ ಕೊಡುವುದನ್ನು ಬಹಿಷ್ಕರಿಸುವ ಸಲುವಾಗಿ ಸಂಘಟಿಸಲಾದ ಹರತಾಳ ಸಂದರ್ಭದ ಫಲಶ್ರುತಿ ಅದಾಯಿತು. ಆ ಹಿಂಸಾಚಾರದಿಂದ ಅಸಹಕಾರ ಚಳವಳಿಯ ನೇತಾರನಿಗೆ ಮೊದಲ ಬಾರಿಗೆ ಭ್ರಮನಿರಸನವಾಯಿತು. ಆದರೂ ಅವರು ಕೈಗೊಂಡ ಸತ್ಯಾಗ್ರಹದ ಮಹಾಸ್ತ್ರ ನಿರೀಕ್ಷಿತ ಫಲ ಕೊಡದಿದ್ದರಿಂದ ಅಸಹಕಾರ ಚಳವಳಿಯನ್ನು ಮುಂದುವರೆಸಲು ಕೆಲವು ಕಟ್ಟುನಿಟ್ಟಿನ ನಿರ್ಬಂಧಗಳನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಅಸಹಕಾರ ಚಳವಳಿಯ ಸ್ವಯಂ ಸೇವಕರಿಗೆ ಅನೇಕ ಕಟ್ಟುಪಾಡುಗಳನ್ನು ವಿಧಿಸಲಾಯಿತು. ಆ ಚಳವಳಿಯಲ್ಲಿ ಪಾಲ್ಗೊಳ್ಳುವವರು ಕಟ್ಟುನಿಟ್ಟಿನ ದೀಕ್ಷೆ ತೊಡುವಂತೆ ಮಾಡಲಾಯಿತು. ಹೀಗಾಗಿ ಯಾವ ಕಾರಣದಿಂದಲೂ ಆಂದೋಲನವನ್ನು ರದ್ದು ಪಡಿಸುವ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ ಆಂದೋಲನವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಸೇವಕರನ್ನು ಸೇರ್ಪಡೆ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಯಿತು. ಚಳವಳಿಯನ್ನು ಅಂತಿಮವಾಗಿ ನಿರ್ಣಯಿಸುವ ಅಧಿಕಾರವನ್ನು ಪ್ರಾಂತೀಯ ಸಮಿತಿಗಳಿಗೆ ವಹಿಸಿಕೊಡಲಿಲ್ಲ. ಚಳವಳಿ ನಡೆಯಬೇಕಾದ ಸ್ಥಳದ ನಿರ್ಧಾರವನ್ನು ಆ ಸಮಿತಿಗಳ ಆಯ್ಕೆಗೆ ಬಿಡಲಿಲ್ಲ. ಆದರೆ ಬೆಳವಣಿಗೆಗೆ ಪೂರಕವಾಗುವ ಸಿದ್ಧತೆಗಳನ್ನೆಲ್ಲಾ ಆ ಸಮಿತಿಗಳು ಮಾಡಬೇಕಾಯಿತು. ಅಗತ್ಯವೆನಿಸಿದಾಗ ತ್ವರಿತಗತಿಯ ಸಿದ್ಧತೆಗಳಿಗೂ, ಸಮಿತಿಗಳು ಸನ್ನದ್ಧವಾಗಬೇಕಾಯಿತು. ಮುಂಬಯಿಯಿ ಹಿಂಸಾಚಾರ ಬರ್ದೋಲಿ ಚಳವಳಿಯ ಸಿದ್ಧತೆಗಳನ್ನು ನಿಧಾನಗೊಳಿಸಿತು. ಆದರೆ ಚಳವಳಿಯನ್ನು ಕೈಬಿಡುವ ಸ್ಪಷ್ಟವಾದ ತೀರ್ಮಾನವನ್ನೇನೂ ಕೈಗೊಳ್ಳಲಿಲ್ಲ. ಚಳವಳಿಯನ್ನು ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ ಎಂದಷ್ಟೇ ಹೇಳಲಾಯಿತು. ವಾತಾವರಣ ಹದಗೆಡುವ ನಿರೀಕ್ಷೆಯಂತೂ ಸ್ಪಷ್ಟವಾಗಿತ್ತು.

ಲಾಲಾಜಿ ಬಂಧನಕ್ಕೆ ಒಳಪಡುವ ಸಂದರ್ಭದಲ್ಲಿ ಇದ್ದ ಪರಿಸ್ಥಿತಿ ಇದು. ದೇಶದಲ್ಲಿ ಯಾವುದೋ ದೊಡ್ಡ ಘಟನೆ ಸಂಭವಿಸುವ ನಿರೀಕ್ಷೆ ಪ್ರತಿ ಕ್ಷಣದಲ್ಲೂ ಕಂಡು ಬರುತ್ತಿತ್ತು. ''ಒಂದೇ ಒಂದು ವರ್ಷದಲ್ಲಿ ಸ್ವರಾಜ್ಯ'' ಎನ್ನುವ ಮಾತಿನಲ್ಲಿ ಲಾಲಾಜಿ ಅವರಿಗೆ ಖಂಡಿತವಾಗಿ ವಿಶ್ವಾಸವಿರಲಿಲ್ಲ. ಆದರೆ ಆ ನಿಟ್ಟಿನಲ್ಲಿ ಅತಿ ಶೀಘ್ರದಲ್ಲಿ ನಿಶ್ಚಿತವಾದದ್ದು ನಡೆದೇ ತೀರುತ್ತದೆ ಎಂಬ ನಿರ್ದಿಷ್ಟವಾದ ವಿಶ್ವಾಸ ಅವರಲ್ಲಿತ್ತು. ಬಂಧನದ ಸಮಯದಲ್ಲಿ ಲಾಲಾಜಿ ತಮ್ಮ ದೇಶವಾಸಿಗಳಿಗೆ ಸಂದೇಶವೊಂದನ್ನು ನೀಡಿದ್ದರು. ಅದರಲ್ಲಿ ಅವರು:

''ನಾನು ಅಮೆರಿಕ ತೀರವನ್ನು ಬಿಟ್ಟಾಗಲೇ ಹೆಚ್ಚು ಕಾಲ ಜೈಲಿನಿಂದ ಹೊರಗುಳಿಯಲು ಬಿಡುವುದಿಲ್ಲವೆಂದು ಅಂದುಕೊಂಡಿದ್ದೆ. ನಾನು ಅಲ್ಲಿಂದ ಹೊರಟ ಮೇಲೆ ನನ್ನ ಜನರೊಂದಿಗೆ ಕಲೆತು ಆರು ತಿಂಗಳಷ್ಟು ಕಾಲವು ಸಹ ಕೆಲಸ ಮಾಡಲು ನನ್ನನ್ನು ಬಿಡುವುದಿಲ್ಲವೆಂದು ನನ್ನ ಗೆಳೆಯರಿಗೆ ತಿಳಿಸಿಯೂ ಇದ್ದೆ. ಆದರೂ ದೇವರ ದಯೆಯಿಂದ ನಾನು ನಿಮ್ಮೊಂದಿಗೆ ಕಲೆತು ಸುಮಾರು 19 ತಿಂಗಳ ಕಾಲ ಕೆಲಸ ಮಾಡುವ ಅವಕಾಶ ಪ್ರಾಪ್ತವಾಯಿತು. ಈಗ ನಾನು ಹರ್ಷಚಿತ್ತನಾಗಿ ಜೈಲಿಗೆ ಹೋಗುತ್ತಿದ್ದೇನೆ. ಈತನಕ ನಾವು ಏನನ್ನು ಮಾಡಿದ್ದೇವೋ ಅದನ್ನು ನಮ್ಮ ಪ್ರಜ್ಞೆಗೆ ಒಪ್ಪುವ ರೀತಿಯಲ್ಲಿ ನಾವು ಮಾಡಿದ್ದೇವೆ ಎಂಬ ದೃಢ ವಿಶ್ವಾಸ ನನ್ನಲ್ಲಿದೆ. ನನ್ನ ಮನಸ್ಸಿನಲ್ಲಿ

ಯಾವುದೇ ಅಪಾರ್ಥವಾಗಲಿ ಅಥವಾ ಯಾವುದೇ ರೀತಿಯ ಭೀತಿಯಾಗಲಿ ಇಲ್ಲ. ನಾವು ಆರಿಸಿಕೊಂಡ ಮಾರ್ಗ ರಾಜೋಚಿತ ಮಾರ್ಗವೆಂದು ನನಗೆ ಮನವರಿಕೆಯಾಗಿದೆ. ನಮ್ಮ ವಿಜಯ ಕಟ್ಟಿಟ್ಟ ಬುತ್ತಿ. ನಾನು ಅತಿ ಶೀಘ್ರದಲ್ಲಿ ಹೊರಬಂದು ನಿಮ್ಮೆಲ್ಲರೊಂದಿಗೆ ಮಿಳಿತಗೊಂಡು ನನ್ನ ಕಾರ್ಯವನ್ನು ಮುಂದುವರೆಸುತ್ತೇನೆ ಎಂಬ ವಿಶ್ವಾಸವೂ ನನ್ನಲ್ಲಿದೆ. ಒಂದು ವೇಳೆ ಹಾಗಾದಿದ್ದರೂ ನಾನು ನನ್ನ ಸೃಷ್ಟಿಕರ್ತನ ಬಳಿಗೆ ಮರಳುವಾಗ ಯಾವುದೇ ರೀತಿಯ ವಿಷಾದಪಟ್ಟುಕೊಳ್ಳುವುದಿಲ್ಲವೆಂಬ ಖಾತ್ರಿಯನ್ನು ನಾನು ನಿಮಗೆ ನೀಡುತ್ತೇನೆ. ನಾನೋರ್ವ ದೈಹಿಕವಾಗಿ ದುರ್ಬಲ ವ್ಯಕ್ತಿ. ಅನಾರೋಗ್ಯದ ಮನುಷ್ಯ. ಮಹಾತ್ಮಗಾಂಧೀಜಿ ಸಾಧಿಸಿಕೊಂಡಂತಹ ಅದ್ಭುತ ಆಧ್ಯಾತ್ಮಿಕ ಶಕ್ತಿ ನನ್ನಲ್ಲಿದೆ ಎಂದು ಹೇಳಲಾರೆ. ಅನೇಕ ಸಮಯಗಳಲ್ಲಿ ನನಗೆ ನನ್ನ ಕೋಪವನ್ನೇ ನಿಯಂತ್ರಣ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ನಾನು ಮಾಡಬಾರದೆಂದು ಕೊಂಡ ಕೆಲಸಗಳನ್ನು ಎಂದೂ ಮಾಡಿಲ್ಲವೆಂದೂ ಹೇಳಲಾರೆ. ಹಾಗೇ ಯಾವುದೇ ಕೆಲಸವನ್ನು ನಾನು ಮಾಡುವಾಗ ನನ್ನ ದೇಶದ ಹಿತವನ್ನೇ ಪ್ರಾಮಾಣಿಕವಾಗಿ ಗಮನದಲ್ಲಿಟ್ಟು ಕೊಂಡಿದ್ದೇನೆಂದು ಪ್ರಮಾಣೀಕರಿಸಿ ಹೇಳಬಲ್ಲೆ. ನನ್ನ ಎಲ್ಲಾ ಕೆಲಸಗಳಲ್ಲೂ ನನ್ನ ಮನಸ್ಸಿನ ಮುಂದೆ ನನ್ನ ದೇಶದ ಹಿತವೇ ಪ್ರಧಾನವಾಗುತ್ತಾ ಬಂದಿದೆ. ಆ ಕೆಲಸಗಳನ್ನೆಲ್ಲವನ್ನು ನನ್ನ ದೇಶದ ಹಿತದ ಮೇಲೆ ದೃಷ್ಟಿ ಇಟ್ಟುಕೊಂಡೇ ಮಾಡುತ್ತಾ ಬಂದಿದ್ದೇನೆ. ನನ್ನ ಕರ್ತವ್ಯ ನಿರ್ವಹಣೆಯಲ್ಲಿ ಅನೇಕ ತಪ್ಪುಗಳನ್ನು ಮಾಡಿದ್ದೇನೆಂದು ನನಗೆ ಗೊತ್ತು. ಕೆಲವು ಸಮಯಗಳಲ್ಲಿ ಟೀಕೆಗಳನ್ನು ಮಾಡಿದ್ದೇನೆ. ಅದರಿಂದ ನನ್ನ ದೇಶವಾಸಿಗಳಿಗೆ ನೋವಾಗಿರಲೂ ಬಹುದು. ಅಂಥ ನಡವಳಿಕೆಗಾಗಿ ನಾನು ಕ್ಷಮೆ ಕೋರುತ್ತೇನೆ. ಅವರು ನನ್ನನ್ನು ಕ್ಷಮಿಸುವರೆಂಬ ಭರವಸೆಯೂ ನನಗಿದೆ. ನನ್ನ ಸೌಮ್ಯವಾದಿಗಳು ಮತ್ತು ಆರ್ಯ ಸಮಾಜದ ಸಹೋದರರು ನನ್ನನ್ನು ಕ್ಷಮಿಸುವರೆಂಬ ವಿಶ್ವಾಸ ನನ್ನಲ್ಲಿದೆ.

ನನ್ನ ದೇಶವಾಸಿ ಬಂಧುಗಳೇ, ನಾನೀಗ ನಿಮಗೆ ವಿದಾಯ ಹೇಳುತ್ತಿದ್ದೇನೆ. ನನ್ನ ಆತ್ಮೀಯ ನಾಡಿನ ಗೌರವ ಮತ್ತು ಹಿತರಕ್ಷಣೆ ನಿಮ್ಮ ಕೈಯಲ್ಲಿ ಭದ್ರವಾಗಿದೆ ಎಂಬ ದೃಢ ವಿಶ್ವಾಸದೊಂದಿಗೆ ನಾನೀಗ ಜೈಲಿಗೆ ಹೋಗುತ್ತಿದ್ದೇನೆ. ದಿ ವಂದೇ ಮಾತರಂ ಮತ್ತು ತಿಲಕ್ ರಾಜ್ಯಶಾಸ್ತ್ರ ಶಾಲೆ ನನ್ನ ಎರಡು ಕೂಸುಗಳು. ಅವುಗಳ ಪಾಲನೆ ಪೋಷಣೆಯನ್ನು ನಿಮಗೊಪ್ಪಿಸುತ್ತಿದ್ದೇನೆ''

ಲಾಲಾಜಿ ಬಂಧನಕ್ಕೆ ಮೊದಲೇ ಅಲಿ ಸಹೋದರರ ಬಂಧನವಾಗಿತ್ತು. ಅವರು ಮಾಡಿದ್ದ ಕೆಲವು ಹೇಳಿಕೆಗಳ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸುವಂತೆ ಮಹಾತ್ಮ ಗಾಂಧೀ ಅವರಿಗೆ ಮುನ್ಸೂಚನೆ ಸಲಹೆಯನ್ನೇನೋ ಮಾಡಿದ್ದರು. ಆದರೆ ಅವರು ಅದಕ್ಕೆ ಬೆಲೆ ಕೊಟ್ಟಿರಲಿಲ್ಲ. ಅನಂತರ ಒಬ್ಬರ ಹಿಂದೊಬ್ಬರಂತೆ ಪ್ರಮುಖ ನಾಯಕಗಣವೆಲ್ಲ ಬಂಧಿಸಲ್ಪಡತೊಡಗಿತು. -ಸಿ.ಆರ್. ದಾಸ್, ಅಬುಲ್ ಕಲಂ ಆಜಾದ್, ಮೋತಿಲಾಲ್ ನೆಹರು ಹೀಗೆ. ಅವರಾರು ಮಹಾತ್ಮಗಾಂಧೀಯವರ ಸಲಹೆಯನ್ನಾಗಲಿ, ಟೀಕೆಯನ್ನಾಗಲಿ ಮಾನ್ಯ ಮಾಡಿರಲಿಲ್ಲ. ಈಗ ನಾಯಕತ್ವ ಅಕ್ಷರಶಃ ಏಕವ್ಯಕ್ತಿ ಪ್ರಧಾನವಾಯಿತು.

1921 ಡಿಸೆಂಬರ್‌ರಂದು ಅಲಹಾಬಾದ್‌ನಲ್ಲಿ ಸಭೆ ಸೇರಿತು. ಮಹಾತ್ಮ ಗಾಂಧೀಯವರನ್ನು ವಿಧ್ಯುಕ್ತವಾಗಿ ಕಾಂಗ್ರೆಸ್ಸಿನ ಆಡಳಿತ ನೇತಾರರಾಗಿ ನೇಮಿಸಲಾಯಿತು. - ಅವರನ್ನು ನೀವು ಅದರ ಸರ್ವಾಧಿಕಾರಿ ಎಂದರೂ ಸರಿ. ಆದರೆ ಅದೆಲ್ಲವೂ ಅತ್ಯಂತ ತ್ವರಿತವಾಗಿ ನಡೆಯಲೇ ಬೇಕಾಗಿದ್ದ ವಿದ್ಯಮಾನವಾಗಿತ್ತು. ಆ ಆಂದೋಲನವನ್ನು ಬಿರುಸುಗೊಳಿಸಲು ಮಹಾತ್ಮ ಗಾಂಧೀಯವರಿಗೆ ತನ್ಮೂಲಕ ವಿಶೇಷ ಅಧಿಕಾರವನ್ನು ನೀಡಲಾಯಿತು. ಅದರಿಂದ ಎಷ್ಟು ಸಾಧ್ಯವೋ ಅಷ್ಟು ಒಳಿತು ಸಾಧಿಸಿಕೊಳ್ಳುವುದು ಆ ತೀರ್ಮಾನದ ಉದ್ದೇಶವಾಗಿತ್ತು. ಗಾಂಧೀ ಅವರನ್ನು ಕಾಂಗ್ರೆಸ್ಸಿನ ಮಹಾ ಸೇನಾನಿಯನ್ನಾಗಿ ನೇಮಿಸಿದ ನಿರ್ಣಯದ ಪಾಠ-

"ಭಾರೀ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿರುವ ಹಿನ್ನಲೆಯಲ್ಲಿ ಈ ಕಾಂಗ್ರೆಸ್ ಸಭೆಯು ಸಂಘಟನೆಯ ಸಾಮಾನ್ಯ ಸ್ತರ ಯಥಾವತ್ತಾಗಿ ಉಳಿಯಬೇಕೆಂಬ ಉದ್ದೇಶದಿಂದ ಆ ಸ್ತರವನ್ನು ಅಗತ್ಯ ಬಂದಾಗ ಸಮರ್ಥವಾಗಿ ಬಳಸಿಕೊಳ್ಳಬೇಕೆಂಬ ಧ್ಯೇಯದಿಂದಲೂ ಸರ್ಕಾರ ಮುಂದಿನ ಕ್ರಮ ಕೈಗೊಳ್ಳುವ ತನಕ ಮಹಾತ್ಮ ಗಾಂಧೀಯವರನ್ನು ಸಂಘಟನೆ ಏಕೈಕ ಆಡಳಿತ ಅಧಿಕಾರಿಯನ್ನಾಗಿ ನೇಮಿಸುತ್ತದೆ. ಅಗತ್ಯವೆನಿಸಿದಾಗ ವಿಶೇಷ ಕಾಂಗ್ರೆಸ್ ಅಧಿವೇಶನ ಅಥವಾ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಇಲ್ಲವೇ ಕಾರ್ಯಕಾರಿಣಿ ಸಭೆ ಕರೆಯುವ ಪೂರ್ಣಾಧಿಕಾರವನ್ನು ಅವರಿಗೆ ನೀಡುತ್ತದೆ. ಈ ಅಧಿಕಾರವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಯಾವುದೇ ಎರಡು ಅಧಿವೇಶನಗಳ ನಡುವೆ ಅವರು ಬಳಸಿಕೊಳ್ಳಬಹುದು. ಜೊತೆಗೆ ಅತ್ಯಂತ ತುರ್ತಾದ ಸಂದರ್ಭದಲ್ಲಿ ತಮ್ಮ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಅವರಿಗೆ ಕೊಡುತ್ತದೆ.

ಈ ಸಭೆಯ ಮೂಲಕ ಹಾಗೆ ನೇಮಕಗೊಳ್ಳುವ ಉತ್ತರಾಧಿಕಾರಿಗಳು ಮತ್ತು ಉತ್ತರೋತ್ತರದ ಎಲ್ಲಾ ಉತ್ತರಾಧಿಕಾರಿಗಳಿಗೂ ಮೇಲೆ ಹೇಳಿದ ಅಧಿಕಾರಗಳು ದತ್ತವಾಗುತ್ತದೆ ಎಂದು ಖಾತ್ರಿಪಡಿಸುತ್ತದೆ.

ಆದರೆ, ಭಾರತ ಸರ್ಕಾರದೊಂದಿಗಾಗಲಿ ಅಥ'ವಾ ಬ್ರಿಟಿಷ್ ಸರ್ಕಾರದೊಂದಿಗಾಗಲಿ ಯಾವುದೇ ಶಾಂತಿ ಒಡಂಬಡಿಕೆ ಮಾಡಿಕೊಳ್ಳಬೇಕಾಗಿ ಬಂದರೆ ಅದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪೂರ್ವಾನುಮತಿ ಇಲ್ಲದೇ, ಆ ಉದ್ದೇಶಕ್ಕಾಗಿ ಕರೆಯುವ ವಿಶೇಷ ಕಾಂಗ್ರೆಸ್ ಅಧಿವೇಶನದಲ್ಲಿ ಅಂತಿಮವಾಗಿ ಅದು ಉರ್ಜಿತವಾಗದೆ ಮಹಾತ್ಮ ಗಾಂಧೀಯಾಗಲಿ ಅಥವಾ ಮೇಲೆ ಹೇಳಿದ ಯಾವುದೇ ಉತ್ತರಾಧಿಕಾರಿಗಳಾಗಲಿ ಅದನ್ನು ಕೈಗೊಳ್ಳುವಂತಿಲ್ಲ ಎಂದೂ ನಿರ್ಣಯ ಹೇಳುತ್ತದೆ. ಜೊತೆಗೆ ಕಾಂಗ್ರೆಸ್ಸಿನ ಈಗಿನ ಸಿದ್ಧಾಂತವನ್ನು ಮಹಾತ್ಮ ಗಾಂಧೀಯಾಗಲಿ ಅಥವಾ ಅವರ ಉತ್ತರಾಧಿಕಾರಿಗಳಾಗಲಿ ಕಾಂಗ್ರೆಸ್ಸಿನ ವಿಧ್ಯುಕ್ತ ಅನುಮತಿ ಇಲ್ಲದೇ ಬದಲಾವಣೆ ಮಾಡಲಾಗದು."

ಮಹಾತ್ಮ ಗಾಂಧೀ ಹುಟ್ಟುಗಳನ್ನು ಎರಡೂ ಕೈಗಳಲ್ಲೂ ಹಿಡಿದರು. ಪೂರ್ಣ ಪ್ರಮಾಣದಲ್ಲಿ ನೌಕೆಯನ್ನು ಮುನ್ನಡೆಸತೊಡಗಿದರು. 1922ರ ಫೆಬ್ರವರಿ 1ರಂದು ಅವರು ಲಾರ್ಡ್ ರೀಡಿಂಗ್ ಅವರಿಗೆ ಅಂತಿಮ ಗಡುವು ಸಹಿತ ನಿರೂಪವೊಂದನ್ನು

ಕಳುಹಿಸಿದರು. ಅದು 7 ದಿನಗಳ ಒತ್ತಾಯಪೂರ್ವಕ ನೋಟಿಸ್ ಆಗಿತ್ತು. ಯಾರ ವಿರುದ್ಧ ಹಿಂಸಾಚಾರದ ಆರೋಪಗಳು ರುಜುವಾತಾಗಿಲ್ಲವೋ ಅವರೆಲ್ಲರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆ ಐತಿಹಾಸಿಕ ಗಡುವಿನಲ್ಲಿ ಸೂಚಿಸಲಾಯಿತು. ಜೊತೆಗೆ, ಖಿಲಾಫತ್ ಮತ್ತು ಪಂಜಾಬಿನಲ್ಲಿ ನಡೆಸಿರುವ ಅತಿರೇಕಗಳಿಗೆ ಪರಿಹಾರಕ್ಕೆ ಒತ್ತಾಯಿಸಿ ಅಹಿಂಸಾತ್ಮಕ ಚಳವಳಿಯನ್ನು ನಡೆಸಲು ಪೂರ್ಣ ಸ್ವಾತಂತ್ರ್ಯದ ಖಾತ್ರಿಯನ್ನು ಕೊಡಬೇಕು. ಸ್ವರಾಜ್ಯ ಸ್ಥಾಪನೆಗಾಗಿ ಹೋರಾಡಲು ಯಾವುದೇ ಅಡ್ಡಿ, ಆತಂಕವನ್ನು ಉಂಟು ಮಾಡಬಾರದು ಎಂದು ಆ ಗಡುವು ಪತ್ರದಲ್ಲಿ ಅವರು ಸೂಚಿಸಿದರು.

ಆ ಗಡುವಿಗೆ ಒಡಂಬಡದಿದ್ದರೆ ಗಡುವಿನ ಅವಧಿ ಮುಗಿಯುತ್ತಿದ್ದಂತೆ ಅಸಹಕಾರ ಚಳವಳಿಯನ್ನು ಘೋಷಿಸಲಾಗುತ್ತದೆ. ಅದು ಬರ್ದೋಲಿಯಿಂದಲೇ ಆರಂಭಗೊಳ್ಳುತ್ತದೆ ಎಂದು ಮಹಾತ್ಮ ಗಾಂಧೀ ಆ ನಿರ್ಣಾಯಕ ಪತ್ರದಲ್ಲಿ ತಿಳಿಸಿದರು.

ಅನಂತರ ಏಕಾಏಕಿಯಾಗಿ ಹೊಸ ಅಧ್ಯಾಯವೊಂದು ವಿಚಿತ್ರ ರೀತಿಯಲ್ಲಿ ನಡೆದುಹೋಯಿತು. ಚೌರಿಚೌರದಲ್ಲಿ ಒಮ್ಮೆಗೆ ಹಿಂಸಾಚಾರವೊಂದು ಭುಗಿಲೆದ್ದಿತು. ಉತ್ತರ ಪ್ರದೇಶ ಗೋರಕ್ ಜಿಲ್ಲೆಯಲ್ಲಿ ಅದೊಂದು ಆತನಕ ಅಪರಿಚಿತವಾಗಿದ್ದ ಸಣ್ಣ ಹಳ್ಳಿ. ಈಗ ಐತಿಹಾಸಿಕ ಮಹತ್ವ ಪಡೆದಿರುವ ಆ ಹಳ್ಳಿಯಲ್ಲಿ ಆಗ 22 ಪೊಲೀಸ್ ಪೇದೆಗಳನ್ನು ಸಾಮೂಹಿಕವಾಗಿ ಹತ್ಯೆ ಮಾಡಲಾಯಿತು.

ಮುಂಬಯಿಯಲ್ಲಿ (ನವೆಂಬರ್ 17) ನಂತರ ಮದ್ರಾಸಿನಲ್ಲಿ (ಜನವರಿ 13) ಮತ್ತು ಅಂತಿಮವಾಗಿ ಫೆಬ್ರವರಿ 15ರಂದು ಚೌರಿಚೌರಾದಲ್ಲಿ, ಅದು ಬರ್ದೋಲಿಯ 'ಅಂತಿಮ ಗಡುವು' ಮುಗಿಯವುದಕ್ಕೆ ಎರಡು ದಿನ ಮೊದಲು ಘಟಿಸಿದ ವಿದ್ಯಮಾನಗಳು.

ಮಹಾತ್ಮ ಗಾಂಧೀ ಮತ್ತೊಮ್ಮೆ ಹಿಮ್ಮೆಟ್ಟಿದ್ದರು. ಎರಡನೇ ಹಾಗೂ ಅನಿರೀಕ್ಷಿತವಾದ ಆ ಹಿಂಜರಿತದಿಂದ ಅವರು ಅಸಹಕಾರ ಚಳವಳಿಯ ಬಗ್ಗೆ ತಮ್ಮ ಚಿಂತನೆಯನ್ನು ಪುನರ್ ವಿಮರ್ಶೆ ಮಾಡಿದರು. ಮುಂಬೈ ವಿದ್ಯಮಾನದ ನಂತರವೇ ಆ ಚಿಂತನೆ ಮೂಡಿದ್ದಿರಬಹುದೇ? ಮುಂಬೈಯಲ್ಲಿ ನಿರ್ಣಯಗಳನ್ನು ಕೈಗೊಂಡ ನಂತರವೂ ವೇಲ್ಸ್ ರಾಜಕುಮಾರ ಬಂದ ಸಮಯದಲ್ಲಿ ನಡೆದ ಘಟನೆಗಳ ಹಿನ್ನಲೆಯಲ್ಲಿ ಸಹ ಅವರಲ್ಲಿ ಆ ಚಿಂತನೆ ಮರುಕಳಿಸಿರಬಹುದೇ? ಯಾವುದಕ್ಕೆ ಅವರು 'ಪಿಷ್ಟರೂಪ' ಕೊಡಬೇಕೆಂದು ಬಯಸಿದ್ದರೋ ಅದಕ್ಕೆ ಹಿಂಸೆಯ ಕಳಂಕ ಹತ್ತಿದಾಗ ಅವರಲ್ಲಿ ಆ ಮರುಚಿಂತನೆ ಮೂಡಿರಬಹುದೇ?

ಈ ಪ್ರಶ್ನೆಗಳಿಗೆ ಉತ್ತರವೇನೇ ಇರಲಿ ಈ ಕಥೆಗೆ ಮುಂದಿನ ಬೆಳವಣಿಗೆ 1922ರ ಫೆಬ್ರವರಿ 12ರಂದು ಅಂತ್ಯ ಬರೆಯಲಾಯಿತು.

ಕಾಂಗ್ರೆಸ್ ಕಾರ್ಯಕಾರಿಣಿ ಬರ್ದೋಲಿಯಲ್ಲಿ ಸಭೆ ಸೇರಿತು. ಸಾಮೂಹಿಕ ಅಸಹಕಾರ ಚಳವಳಿಯನ್ನು ಅನಿರ್ದಿಷ್ಟ ಕಾಲ ಅಮಾನತುಗೊಳಿಸಲು ಮಹಾತ್ಮ ಗಾಂಧೀಜಿ ಸಲಹೆ ಮಾಡಿದರು. ಮುಂಬೈ ಮತ್ತು ಚೌರಿಚೌರ ಹಿಂಸಾಚಾರಗಳು ಅವರ ಸಲಹೆ

ಮೇಲೆ ನಿರ್ಧಾರಗಳನ್ನು ಕೈಗೊಳ್ಳಲು ಪ್ರೇರಕವಾದವು. ಸ್ವಯಂ ಬಂಧನಕ್ಕೆ ಒಳಗಾಗುವ ಎಲ್ಲಾ ಚಟುವಟಿಕೆಗಳನ್ನು, ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳ ಎಲ್ಲಾ ಕ್ರಿಯೆಗಳನ್ನು ಸ್ಥಗಿತಗೊಳಿಸಲಾಯಿತು. ಅಧಿಕಾರಸ್ಥ ಜನ ಹಾಕಿದ್ದ ನಿಷೇದಾಜ್ಞೆ, ಮುರಿಯುವ ಕೆಲಸಗಳಿಗೂ ತೆರೆ ಬಿದ್ದಿತು. ಬದಲಾಗಿ ಕಾಂಗ್ರೆಸ್ಸಿಗರಿಗೆ ತಮ್ಮ ಶಕ್ತಿಯನ್ನು ಸೃಜನಾತ್ಮಕ ಕೆಲಸಗಳಲ್ಲಿ ಬಳಸಲು ಆ ಸಭೆ ಕರೆಕೊಟ್ಟಿತು. ಅಂತಹ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರಮುಖವಾದದ್ದು ಕೈನಿಂದ ನೂಲುತೆಗೆಯುವ ಕೆಲಸ ಪ್ರಧಾನದ್ದೆನಿಸಿತು.

ಹೀಗೆ ಅನಾಹುತದ ನಿರೀಕ್ಷೆ ಅನಿರೀಕ್ಷಿತ ಪರಾಕಾಷ್ಠೆಯಲ್ಲಿ ಅಂತ್ಯಗೊಂಡಿತು!

* * *

ಅಧ್ಯಾಯ-50

'ಸೌಜನ್ಯ ಶಕ್ತಿ ಕುಂದಿದವರು'

ಮಹಾತ್ಮರ ಹೋರಾಟ ಅಂತ್ಯ ಕೊನೆಗೂ ಬಂದಿತು! ಲಾಲಾಜಿಯವರಿಗೆ ಈ ಬಗ್ಗೆ ಆರಂಭದಲ್ಲೇ ಇದ್ದ ಅಳಕು ಆ ರೀತಿಯಲ್ಲಿ ನಿಜವಾಗಿದ್ದು ಸಮಾಧಾನ ತರಲಿಲ್ಲ. ಪ್ರಾರಂಭದ ಹಂತದಲ್ಲೇ ತಮ್ಮಲ್ಲಿ ಅಳುಕುಗಳಿದ್ದರೂ ಅವೆಲ್ಲವನ್ನು ಅವರು ಬದಿಗಿಟ್ಟಿದ್ದರು. ಮಾನಸಿಕವಾಗಿ ಮೀಸಲು ಭಾವನೆಗಳನ್ನು ಇಟ್ಟುಕೊಳ್ಳದೆ ಮಹಾತ್ಮ ಗಾಂಧೀಯವರ ನಾಯಕತ್ವವನ್ನು ಅವರು ಮಾನ್ಯ ಮಾಡಿದ್ದರು. ಅವರಿಗೆ ಸಂಪೂರ್ಣವಾಗಿ ತಮ್ಮ ನಿಷ್ಠೆಯನ್ನು ಎರಕ ಹಾಕಿದ್ದರು. ಅವರು ಮತ್ತು ಅವರ ಇತರ ಬೆಂಬಲಿಗರು ಸಂಪೂರ್ಣ ನಿಷ್ಠೆಯನ್ನಿಟ್ಟು ಆ ಚಳವಳಿಯ ಅಗ್ರ ನಾಯಕರು ತೋರಿಸಿದ ಹೋರಾಟವನ್ನು 'ಮಾಡು, ಇಲ್ಲವೇ ಮಡಿ' ಹುರುಪಿನೊಂದಿಗೆ ಕೈಗೊಂಡಿದ್ದರು. ಅದರ ಫಲವೇನೆಂಬುದರ ಧ್ವನಿತವು ಅವರಿಗಾಗಿತ್ತು. ಈಗ ಆ ಹೋರಾಟದ ಸ್ವರೂಪವನ್ನು ಪರೀಕ್ಷೆಗೆ ಸಹ ಇಡದೆ ಚಳವಳಿಯ ಅಗ್ರ ನಾಯಕರು ಅದನ್ನು ಕೈಬಿಟ್ಟಿದ್ದರು! ಆ ಪತನ ಹೆಚ್ಚು ಕಡಿಮೆ ನಡು ನೀರಿನಲ್ಲಿ ಕೈಬಿಟ್ಟಂತಾಗಿತ್ತು. ಒಂದು ದಶಲಕ್ಷ ಐರಿಷ್ ರೈತರು ತಮ್ಮ 'ನಾಯಕ' ಡೇನಿಯಲ್ ಓ ಕಾನಿಲ್ 'ಕೊಡಲಿದ್ದ ಆದೇಶವನ್ನು' ಆಲಿಸಲು ಮತ್ತು ತನ್ಮೂಲಕ ಹೋರಾಟಕ್ಕೆ ಸಿದ್ಧವಾಗಲು ಸನ್ನದ್ಧರಾಗಿದ್ದಂತಹ ವಿಶಿಷ್ಟ ಉದಾಹರಣೆಯನ್ನು ಸಹ ಗಾಂಧೀಜಿ ತಮ್ಮ ಮುಂದಿದ್ದನ್ನು ಮರೆತಿದ್ದರು. ಅತ್ಯುನ್ನತ ನಿರೀಕ್ಷೆಯನ್ನು ಹೊತ್ತು ಅರ್ಥಗರ್ಭಿತವಾಗಿದ್ದ ಕ್ಷಣದಲ್ಲಿ ಗಾಂಧೀಜಿ ಆ ಹೋರಾಟವನ್ನು ನಿಲ್ಲಿಸುವ ಮೂಲಕ ಸಮುದಾಯದ ಮನಸ್ಥಿತಿಯ ಮೇಲೆ ಅನೂಹ್ಯ ಪರಿಣಾಮ ಉಂಟು ಮಾಡಿದ್ದರು.

ಈ ಹಿನ್ನಲೆಯಲ್ಲಿ ನಾವು ಫೆಬ್ರವರಿ 20ರಂದು ಲಾಲಾಜಿ ಸಮಯಾವಕಾಶ ಕೋರಿದ ನ್ಯಾಯಾಲಯದ ಪರಿಸ್ಥಿತಿಯನ್ನು ಪರಿಗಣಿಸಬೇಕಾಗಿದೆ. ಆ ಪ್ರಕರಣವನ್ನು ಇನ್ನೊಂದು ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಕೋರಿ ಅರ್ಜಿ ಸಲ್ಲಿಸಲು ಬೆದರಿಕೆ ಹಾಕಿದ್ದನ್ನು ಈ ಚೌಕಟ್ಟಿನಲ್ಲಿ ಮನಗಾಣಬೇಕಾಗುತ್ತದೆ. ವಸ್ತುಶಃ ಆ ಪ್ರಕರಣವನ್ನು ವರ್ಗಾಯಿಸಿದ್ದಲ್ಲಿ ಅವರಿಗೆ ನಿಶ್ಚಿತವಾಗಿಯೂ ಆಸಕ್ತಿ ಇರಲಿಲ್ಲ. ನಂತರ ಅವರು ಬಿಡುಗಡೆ ಮಾಡಿದ ಸುದೀರ್ಘ ಹೇಳಿಕೆಯಲ್ಲಿ ''ನನಗೆ ಕಾಲಾವಕಾಶ ಖಂಡಿತವಾಗಿಯೂ ಬೇಕಾಗಿತ್ತು.'' ಎಂದಿರುವುದನ್ನು ಸಂದರ್ಭಾನುಸಾರ ಮತ್ತೆ ಓದೋಣ. ಪರಿಸ್ಥಿತಿಯನ್ನು ಕಲಸುಮೇಲೋಗರ ಮಾಡಿದ್ದಕ್ಕೆ ಅವರು ತೀರಾ ಉದ್ವಿಕ್ತಗೊಂಡಿದ್ದರು. ಅದನ್ನು ಸರಿಪಡಿಸುವ ಸಲುವಾಗಿ ಸೆರೆಯಿಂದ ಹೊರಗೆ ಬರಬೇಕೆಂದು ಬಯಸಿದ್ದರು. ಅಥವಾ ತಮ್ಮಲ್ಲಿದ್ದ ಆಂತರಿಕ ಬೇಗುದಿಯನ್ನು ಬಹಿರಂಗಪಡಿಸಲು ಅವಕಾಶವನ್ನು ಬಯಸಿದರು. ತಮ್ಮ ವಿರುದ್ಧ ಹೊಸೆಯಲಾದ ಆ ಪ್ರಕರಣ ಕಾನೂನು ಅಪಚಾರಗಳ ಕುತಂತ್ರವೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಅದೊಂದು ಸಮನ್ಸ್ ಪ್ರಕರಣವಾಗಿದ್ದರಿಂದ ಜಾಮೀನು

ಮೇಲೆ ಬಿಡುಗಡೆ ಹೊಂದುವ ಅವಕಾಶವೂ ಅವರಿಗೆ ಇತ್ತು. ಅದರಿಂದ ಚಳವಳಿಯನ್ನು ನಿಲ್ಲಿಸಿದವರಿಗೆ ತಮ್ಮ ಮನಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಸಾಕಷ್ಟು ಅವಕಾಶ ಅವರಿಗೆ ಒದಗುತ್ತಿತ್ತು. ಅದೇ ಸಮಯದಲ್ಲಿ ಜೈಲಿನಿಂದ ತಮ್ಮ ಸಹ ಹೋರಾಟಗಾಗರ ಮನಸ್ಥಿತಿಯ ಬಗ್ಗೆಯೂ ಅವರ ಮನಸ್ಸು ತುಡಿಯುತ್ತಿತ್ತು. ಎಐಸಿಸಿ ಅಧಿವೇಶನವನ್ನು ಫೆಬ್ರವರಿ 24ರಂದು ಕರೆಯಲಾಗಿತ್ತು. ಬರ್ದೋಲಿಯಲ್ಲಿ ಕಾರ್ಯಕಾರಿಣಿ ಕೈಗೊಂಡ ನಿರ್ಣಯವನ್ನು ಆ ಸಭೆಯಲ್ಲಿ ಪರಿಶೀಲಿಸಬೇಕಾಗಿತ್ತು. ಹೀಗಾಗಿ ಆ ಸಮಯಕ್ಕನುಗುಣವಾಗಿ ಬಂಧನದಿಂದ ಹೊರಬರಲು ಸಹಜವಾಗಿ ತವಕಿಸಿದ್ದರು. ಹೀಗೆ ಲಜಪತರು ಹೊರಗೆ ಬರಲು ಬಯಸಿದ ಪರಿಸ್ಥಿತಿ ಮತ್ತು ಆಶಯ ಗಂಭೀರವಾಗಿತ್ತು. ಯಾವ ಕಾಲಕ್ಕೂ ಬಂಧನಕ್ಕೆ ಒಳಪಡದ ವಿಚಾರಣಾಧೀನ ಕೈದಿಯಾಗದ ಅಥವಾ ಇನ್ನಾವುದೇ ರೀತಿಯ ಕಾನೂನಿನ ತೊಡಕುಗಳಿಗೆ ಸಿಕ್ಕಿಬೀಳದ ಕೆ. ಸಂತಾನಂ ಆ ಸಮಯದಲ್ಲಿ ನ್ಯಾಯಾಲಯದಲ್ಲಿ ಲಜಪತರೊಂದಿಗೆ ಸ್ನೇಹಿತರಂತೆ ವರ್ತಿಸ ತೊಡಗಿದರು. ಆವೇಶದಿಂದ ಬಂಡಾಯ ಆರಂಭಿಸುವುದು ಸಲ್ಲದೆಂದು ಬುದ್ಧಿವಾದ ಹೇಳಲು ಪ್ರಯತ್ನಿಸಿದರು. ಆದರೆ ಸಿಡಿದೆದ್ದ ಭಾವನೆಗಳ ತಾರಕ ಸ್ವರದಲ್ಲಿದ್ದ ಲಾಲಾಜಿ ಅವರನ್ನು ಮಣಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆ ಜೈಲು ನ್ಯಾಯಾಲಯದ ಕೋಣೆಯೊಂದರ ಮೂಲೆಯಲ್ಲಿ ಬಹು ಹೊತ್ತಿನ ತನಕ ಮಾತುಕತೆಗಳಾದವು. ಸಂತಾನಂ ವಾದಕ್ಕಾಗಲಿ ಮತ್ತು ಅವರೊಂದಿಗೆ ಬಂದಿದ್ದ ಅವರ ಇತರ ಗೆಳೆಯರ ಮಾತುಗಳಿಗಾಗಲಿ ಲಾಲಾಜಿ ಸೊಪ್ಪು ಹಾಕಲಿಲ್ಲ.

ಅವರು ಬಯಸಿದಂತೆ ನ್ಯಾಯಾಲಯದಲ್ಲಿ ಕಾಲಾವಕಾಶ ಸಿಗಲಿಲ್ಲ. ಅನಿವಾರ್ಯವಾಗಿ ಅನ್ಯ ಮಾರ್ಗವನ್ನು ಅವರು ಕಂಡುಕೊಳ್ಳಬೇಕಾಯಿತು. ತಮ್ಮ ಮನದಲ್ಲಿದ್ದ ಭುಗಿಲನ್ನು ಆರಿಸುವ ಸಲುವಾಗಿ ಸುದೀರ್ಘವಾದ ಪತ್ರವೊಂದನ್ನು ಮಹಾತ್ಮ ಗಾಂಧೀಗೆ ಬರೆದರು. ಆ ಪತ್ರವನ್ನು ಬರೆಯುವ ಬಗ್ಗೆ ಸ್ವತಃ ಸಂತಾನಂ ಮಾಡಿದ್ದ ಸಲಹೆ ಲಜಪತರಿಗೆ ಸಮುದಾಯಿಸಿಯಾಗಿತ್ತು. ಎಐಸಿಸಿ ಅಧಿವೇಶನದಲ್ಲಿ ಖುದ್ದಾಗಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಿಂತಲೂ ಪತ್ರದ ಮೂಲಕ ತಿಳಿಸುವುದು ಸಮಂಜಸವಾಗುತ್ತದೆ ಎಂದು ಸಂತಾನಂ ಮಾಡಿದ ಸಲಹೆ ಪರಿಸ್ಥಿತಿಗೆ ಅನುಗುಣವಾಗಿ ಲಜಪತರಿಗೆ ಸಮ್ಮತವೂ ಆಯಿತು. ಆ ಪತ್ರವನ್ನು ಸ್ವತಃ ಸಂತಾನಂ ಅವರಿಗೆ ತಲುಪಿಸುವುದೆಂದು ವ್ಯವಸ್ಥೆಯಾಗಿತ್ತು. ಲಾಲಾಜಿ ಓರ್ವ ವ್ಯಕ್ತಿಯಾಗಿ, ಜನ ಸಮುದಾಯದ ಓರ್ವ ನಾಯಕರಾಗಿ ಗಾಂಧೀಜಿಗೆ ಆದರದ ಗೌರವಗಳನ್ನು ವ್ಯಕ್ತಪಡಿಸುವ ಮೂಲಕ ಪತ್ರವನ್ನು ಆರಂಭಿಸಿದ್ದರು. ಆದರೆ ತಾವೆಸಗಿದ ಪ್ರಮಾದವು ಅಷ್ಟೇ ಎತ್ತರದ್ದು. (ಎರಡು 'ಹಿಮಾಲಯದಷ್ಟು ಎತ್ತರದ್ದು', ಎಂದು ಗಾಂಧೀಜಿ ಮತ್ತು ಅವರ ಆ ನಿರ್ಧಾರವನ್ನು ಹೋಲಿಸಲಾಗಿತ್ತು.) ಮತ್ತು ಅಷ್ಟೇ ಎತ್ತರದಿಂದ ಅದು ಕುಸಿದು ಬಿದ್ದಿದೆ ಎಂದು ತಿಳಿಸಿದರು. ಅನೇಕ ಪ್ರಸಂಗಗಳಲ್ಲಿ ಅಂಥ ಪ್ರಮಾದವನ್ನು ತಾವೆಸಗಿರುವುದಾಗಿಯೂ ಹಿಂದಿನ ಕೆಲವು ಘಟನೆಗಳನ್ನು ಪ್ರಸ್ತಾಪಿಸಿದರು. ಅಸಹಕಾರ ಚಳವಳಿಯ ಕೆಲವ ಅಸಂಗತಗಳನ್ನು ಕಟುವಾಗಿ ಟೀಕಿಸಿದರು. ತಾವು ಸೇರಿದಂತೆ ಇತರ ಅನೇಕರು ಅ- ತಮ್ಮ ಒತ್ತಾಯಕ್ಕೆ ಮಣಿದು ಒಪ್ಪಿಕೊಳ್ಳಬೇಕಾಯಿತೆಂದು ಹೇಳದಿರಲಿಲ್ಲ. ತಮ್ಮ ಅ- ವಿರುದ್ಧವಾಗಿ ಆ ಚಳವಳಿಗೆ ಬೆಂಬಲ ಕೊಟ್ಟೆವೆಂದು ಸಹ ಪತ್ರದಲ್ಲಿ ಬರೆದರು.

ಹೆಚ್ಚಿನದಾಗಿ ಆ ಪತ್ರವು ಬರ್ದೋಲಿಯ ನಿರ್ಧಾರವನ್ನು ನಿಷ್ಠುರವಾಗಿ ಟೀಕಿಸಿತು. ಅಹಿಂಸೆಯ ಚೌಕಟ್ಟಿನೊಳಗೆ ಅಸಹಕಾರ ಚಳವಳಿ ಉಳಿಯಲು ಸಾಧ್ಯವಿದ್ದಿದ್ದ ಪರಿಸ್ಥಿತಿಗಳನ್ನು ಅವರು ಪತ್ರದಲ್ಲಿ ವಿವರಿಸಿದರು. ಬೃಹತ್ ಪ್ರಮಾಣದಲ್ಲಿ ಜನ ಸಮುದಾಯ ಪಾಲ್ಗೊಳ್ಳುವ ಅಂಥ ಚಳವಳಿಯನ್ನು ನಿಭಾಯಿಸುವುದು ಕಷ್ಟ ಸಾಧ್ಯವೆಂದು ಈಗ ತಾವು ಮನಗಂಡಿದ್ದು ತೀರಾ ವಿಳಂಬವಾಯಿತು. ಮತ್ತು ಆ ಚಳವಳಿಯನ್ನು ಇದ್ದಕ್ಕಿದ್ದಂತೆ ನಿಲ್ಲಿಸಿದ್ದು ಹೋರಾಟ ಮುಗ್ಗರಿಸುವಂತಾಯಿತು ಎಂದು ಪತ್ರದಲ್ಲಿ ಗಾಂಧೀಜಿಗೆ ನೆನಪು ಮಾಡಿಕೊಟ್ಟರು. ಆ ಪತ್ರ ಸತ್ಯ ನಿಷ್ಠುರವಾಗಿತ್ತು. ನಿಷ್ಕಪಟವಾಗಿತ್ತು. ಇದ್ದದ್ದನ್ನು ಇದ್ದಂತೆ ಮಾತ್ರ ನೀಡಿತು. ಕೊನೆಯಲ್ಲಿ ಲಾಲಾಜಿ ಉದ್ದೇಶಪೂರ್ವಕವಾಗಿ ಎಸಗದ ಅಪಚಾರ ಆ ಪತ್ರದಿಂದ ಆಗಿದ್ದರೆ ತಮ್ಮನ್ನು ಕ್ಷಮಿಸಬೇಕೆಂದು ಕೋರಿದರು. ತಮ್ಮ ಸತ್ಯ ನಿಷ್ಠುರ ಹಾಗೂ ಆವೇಗದ ನಿಲುವನ್ನು ಅರ್ಥ ಮಾಡಿಕೊಳ್ಳಬೇಕೆಂದು ಬಹುಶಃ ತಮ್ಮ ಅಭಿಪ್ರಾಯದ ಧಾಟಿ ಒರಟಾಗಿದ್ದರೂ ಅದು ಅವಿಶ್ವಾಸದಲ್ಲದ್ದೆಂದು ಅವರು ಗಾಂಧೀಜಿಗೆ ನಿವೇದಿಸಿದರು.

ಮಹಾತ್ಮ ಗಾಂಧೀಜಿ ಆ ಪತ್ರಕ್ಕೆ ಅಂಚೆ ಕಾರ್ಡ್‌ವೊಂದರಲ್ಲಿ ಸ್ವೀಕೃತಿ ಬರೆದು ಕೆ. ಸಂತಾನಂ ಮೂಲಕ ರವಾನಿಸಿದರು. ಆ ಪತ್ರವನ್ನು ಅವರು ಸ್ವೀಕರಿಸಿದ ಪರಿ ಅವರು ಲಾಲಾಜಿ ಅವರ ಬಗ್ಗೆ ವ್ಯಕ್ತಪಡಿಸಿದ ''ಸೌಜನ್ಯ ಶಕ್ತಿ ಕುಂದಿದವರು'' ಎಂಬ ಮಾತಿನಲ್ಲಿ ವ್ಯಕ್ತವಾಗಿದೆ. ಅಂಥ ಪತ್ರವನ್ನು ಬರೆಯುವುದು ಅವರಿಗೆ ತರವಲ್ಲ ಎನ್ನುವ ರೀತಿಯಲ್ಲಿ ಗಾಂಧೀಜಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ರಾಜಕೀಯ ಬಂದಿಗಳ ವಿಷಯದಲ್ಲಿ ಮಹಾತ್ಮರ ಉದಾರ ನಡವಳಿಕೆಯ ನೀತಿಯನ್ನು ಲಾಲಾಜಿ ಎಂದೂ ಮಾನ್ಯ ಮಾಡಿರಲಿಲ್ಲ ಎಂಬುದು ಅವರ ಆ ಪ್ರತ್ಯುತ್ತರದಲ್ಲಿ ಪ್ರತಿಧ್ವನಿತವಾಯಿತು. ಅದಕ್ಕೆ ಅವರು ಕಟಿಬದ್ಧರಾಗಿರಲಿಲ್ಲವೆಂಬುದು ಸಹ ಅದರಿಂದ ವ್ಯಕ್ತವಾಯಿತು. ಗಾಂಧೀ ಅವರಿಗೆ ಅದೇ ತರಹದ ಪತ್ರಗಳನ್ನು ಬಂಧನದಲ್ಲಿದ್ದ ಅವರ ಅಗ್ರ ನಾಯಕರು ಬರೆದು ಅದೇ ಅಸಮ್ಮತಿಗಳನ್ನು ವ್ಯಕ್ತಪಡಿಸಿದರು. ಆದರೆ ಅವರಾರ ಬಗ್ಗೆಯೂ ''ಸೌಜನ್ಯ ಶಕ್ತಿ ಕುಂದಿದವರು'' ಎಂದು ಬಣ್ಣಿಸಲಿಲ್ಲ. ನಿಜವಾಗಿಯೂ ಅದೊಂದು ದೊಡ್ಡ ದಾಖಲೆ. ಆ ಪತ್ರವನ್ನು ಲಾಹೋರ್ ಸೆಂಟ್ರಲ್ ಜೈಲಿನಿಂದ ಜತನವಾಗಿ ಹೊರಗೆ ತಂದು ಕಾಯ್ದಿರಿಸಿಕೊಳ್ಳಲಾಗಿತ್ತು. ಗಾಂಧೀಜಿಯವರು ಉದ್ವೇಗದಲ್ಲಿ ತಮ್ಮತನವನ್ನು ಕಳೆದುಕೊಳ್ಳುತ್ತಿದ್ದಕ್ಕೆ ಅದೊಂದು ಜೀವಂತ ಸಾಕ್ಷಿ. ಗಾಂಧೀಜಿಯವರ ಆ ಪ್ರತಿಕ್ರಿಯೆ ಬರ್ದೋಲಿಯಲ್ಲಿ ಅವರು ಎಡವಿದ ಬಗ್ಗೆ ಲಾಲಾಜಿ ವ್ಯಕ್ತಪಡಿಸಿದ ಶಾಂತ ಹಾಗೂ ವಸ್ತುನಿಷ್ಠ ಭಾವನೆಗೆ ಸಮಂಜಸವಾದ ಉತ್ತರವಾಗಲಿಲ್ಲ. ಆವೇಗದ ಆ ದಿನಗಳು ಕಳೆದ ನಂತರ ಅಸಹಕಾರ ಚಳವಳಿಯ ಬಗ್ಗೆ ಸಮಗ್ರ ಅವಲೋಕನ ಮಾಡುತ್ತಾ ಲಾಲಾಜಿ ಪತ್ರಿಕೆಗಳಿಗೆ ನಿರಂತರ ಲೇಖನಗಳನ್ನು ಬರೆದರು. ಒಂದು ಪತ್ರದಲ್ಲಿ ಬರ್ದೋಲಿಯ ನಿರ್ಧಾರ ಮತ್ತು ಆ ನಿರ್ಧಾರಕ್ಕೆ ಅನುಗುಣವಾಗಿ ಅಲ್ಲಿ ಕೈಗೊಳ್ಳಲಾದ ಕೊರತೆ ನಿರ್ಣಯಗಳು ದೇಶದ ಭವಿಷ್ಯದ ಬಗ್ಗೆ ವಿಶ್ವಾಸ ಹೊಂದಿದ್ದ ದೃಢವಾದ ನಿರೀಕ್ಷೆ ಇಟ್ಟುಕೊಂಡ ಮತ್ತು ಆಶಾದಾಯಕ ನಿಲುವು ತಾಳಿದ್ದ ಜನತೆಯ ಮೇಲೆ ಬಾಂಬ್ ಶೆಲ್‌ನಂತೆ ಬಿದ್ದು ಸ್ಫೋಟಿಸಿದೆ. ಅದರಿಂದ ಉಂಟಾದ ಭಯ ಏಕಾಏಕಿ ಆವರಿಸಿಕೊಂಡಿದೆ ಅದು ಪ್ರಳಯ ಕಾಲದಂತಹ ಅನಿರೀಕ್ಷಿತವಾದ ಭಯ. ಆ ನಿರ್ಧಾರ ಮತ್ತು ನಿರ್ಣಯಗಳು

ದೇಶದ ಜನತೆಯ ಆಶೋತ್ತರದ ಹೋರಾಟದ ದಾರಿ ತಪ್ಪಿಸಿದೆ. ಸಾಕಷ್ಟು ಪ್ರಮಾಣದಲ್ಲಿ ಜನತೆಯನ್ನು ಪೇಚಿಗೆ ಸಿಲುಕಿಸಿ ಕೋಪೋದ್ರಿಕ್ತರಾಗುವಂತೆ ಮಾಡಿದೆ. 20 ಸಾವಿರಕ್ಕೂ ಹೆಚ್ಚು ನಾಯಕರು ಮತ್ತು ಕಾರ್ಯಕರ್ತರು ಜೈಲಿನಲ್ಲಿ ಇದ್ದಾರೆ. ಸುಮಾರು ಒಂದು ಕೋಟಿ ರೂಪಾಯಿ ಸಂಗ್ರಹಿಸಲಾಗಿದೆ. ಬಹುತೇಕ ಪ್ರಾಂತ್ಯಗಳಲ್ಲಿ ಪ್ರಮುಖ ಕಾರ್ಯಕರ್ತರೇ ಇಲ್ಲದಂತಾಗಿದೆ. ಸರ್ಕಾರವು ಮತ್ತು ಅದರ ಅಧಿಕಾರಿಗಳು ಪ್ರಚೋದಿತರಾಗಿ ಉನ್ಮತ್ತರಂತೆ ವರ್ತಿಸುತ್ತಿರುವುದನ್ನು ಕಂಡು ಜನತೆ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ. ಪೊಲೀಸರ ಕೈಯಲ್ಲಿ ಮತ್ತು ಜೈಲುಗಳಲ್ಲಿ ಸಹಸ್ರಾರು ಚಳವಳಿಗಾರರು ಘೋರ ಹಿಂಸೆ ಅನುಭವಿಸುತ್ತಿದ್ದಾರೆ. ಸಹಿಸಲಾಗದ ಅತಿರೇಕಗಳು ನಡೆಯುತ್ತಿವೆ. ಅದಕ್ಕೆ ಪ್ರತಿಭಟನೆಯೇ ಇಲ್ಲವಾಗಿದೆ. ದೊಡ್ಡದಾದ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡು ಹೊಸ ಯುಗವೊಂದರ ಭರವಸೆಯ ಮೇಲೆ ಜನತೆ ಹೋರಾಟ ನಡೆಸಿ ಈ ನೋವು ನಂಜುಗಳಿಗೆ ತಮ್ಮನ್ನು ತಾವು ಒಳಪಡಿಸಿಕೊಂಡಿರುವುದರ ಮೇಲೆ ಬರ್ದೋಲಿಯ ನಿರ್ಧಾರ, ನಿರ್ಣಯಗಳು ಭೀಕರ ಅಪಚಾರವೆಸಗಿದೆ. ಎಲ್ಲಾ ಆ ಹೋರಾಟ ನಿರರ್ಥಕವಾಗಿದೆ. ಈ ಸ್ಥಿತಿಯಲ್ಲಿ ಅತೃಪ್ತಿ, ಅಸಹನೆ, ಮತ್ತು ಸಿಟ್ಟು ಮತ್ತು ಪ್ರತಿಕ್ರಿಯೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ತೀರಾ ಸಹಜ, ಸಮಂಜಸ'' ಎಂದು ವಸ್ತುಸ್ಥಿತಿಯ ವಿವೇಚನೆ ನಡೆಸಿದ್ದಾರೆ. ಮಹಾತ್ಮ ಗಾಂಧೀಗೆ ಬಹುತೇಕ ಮೋತಿಲಾಲ್ ನೆಹರು, ಸಿ.ಆರ್. ದಾಸ್ ಸೇರಿದಂತೆ ಜೈಲಿನಲ್ಲಿದ್ದ ಇತರ ಮುಖಂಡರಿಂದಲೂ ಇದೇ ತರಹದ ಟೀಕೆಯ ಪತ್ರಗಳು ಸಂದಾಯವಾದವು. 1922ರ ಫೆಬ್ರವರಿ 24ರಂದು ಡಾ. ಎಂ.ಎ. ಅನ್ಸಾರಿ ಅವರ ಮನೆಯಲ್ಲಿ ಕೆಲವು ಗೆಳೆಯರೊಂದಿಗೆ ಅನೌಪಚಾರಿಕವಾಗಿ ಮಾತುಕತೆ ನಡೆಸುತ್ತಾ ಮಹಾತ್ಮ ತಮಗೆ ಲಾಲಾಜಿ ಬರೆದ ಪತ್ರದ ಅಭಿಪ್ರಾಯವನ್ನು ಹಂಚಿಕೊಂಡರು. ಅದಕ್ಕೆ ಅವರು ಪ್ರತಿಕ್ರಿಯೆ ನೀಡುತ್ತಾ ಜೈಲಿನಲ್ಲಿರುವವರು ''ಸೌಜನ್ಯ ಶಕ್ತಿ ಕುಂದಿದವರು'' ಎಂದು ರಾಜಕೀಯ ಚಳವಳಿಗೆ ಮಾರ್ಗದರ್ಶನ ನೀಡಲಾಗಲಿ ಅಥವಾ ಸಲಹೆ ಸೂಚನೆ ವ್ಯಕ್ತಪಡಿಸಲಾಗಲಿ ಅವರಿಂದ ಸಾಧ್ಯವಿಲ್ಲವೆಂದು ಹೇಳಿದರು! ವಸ್ತುಶಃ ಅವರು ಗಾಂಧೀಗೆ ಸಂಸ್ಥೆಯನ್ನು ನಡೆಸುವ ನಿಟ್ಟಿನಲ್ಲಿ ಯಥಾರ್ಥತೆ ಇಲ್ಲದವರ ದ್ಯೋತಕವೆನಿಸಿದೆ. ಲಾಲಾಜಿಯವರಾಗಲಿ, ಮೋತಿಲಾಲರಾಗಲಿ, ದಾಸ್ ಆಗಲಿ ''ಸೌಜನ್ಯ ಶಕ್ತಿ ಕುಂದಿದವರು'' ಆಗಿರಲಿಲ್ಲ.

ಬರ್ದೋಲಿ ಬೆಳವಣಿಗೆಯ ನಂತರ ಮಹಾತ್ಮ ಗಾಂಧೀಜಿಯ ಎಲ್ಲಾ ಬುದ್ಧಿಜೀವಿ ಬೆಂಬಲಿಗರು ಅಸಹಕಾರ ಚಳವಳಿಯ ಆಗು ಹೋಗುಗಳ ವಿವೇಚನೆಯಲ್ಲಿ ತೊಡಗಿದರು. ಬರ್ದೋಲಿ ಅವಘಡದ ಸುದ್ದಿ ತಿಳಿದ ನಂತರ ಆ ಬಗ್ಗೆ ಮರು ಚಿಂತನೆ ಮಾಡುವುದನ್ನು ಲಾಲಾಜಿ ಆಗಲೇ ಕೈಬಿಟ್ಟಿದ್ದರು.

ಇತರೆ ಪ್ರಮುಖ ನಾಯಕರು ಬಂಧನದಿಂದ ಹೊರ ಬಂದ ಮೇಲೆ ಹೋರಾಟಕ್ಕೆ ಹೊಸ ರೂಪ ನೀಡುವ ಕಾರ್ಯ ಆರಂಭವಾಯಿತು. 1922ರ ಜೂನ್‌ನಲ್ಲಿ ಎಐಸಿಸಿ ''ನಾಗರಿಕ ಅವಿಧೇಯ ಸಮಿತಿಯೊಂದನ್ನು ರಚಿಸಿತು. ನವೆಂಬರ್ ತಿಂಗಳಲ್ಲಿ ಸಭೆ ಸೇರಿದ ಎಐಸಿಸಿ ಆ ಸಮಿತಿ ಸಲ್ಲಿಸಿದ ವರದಿಯನ್ನು ಪರಿಶೀಲಿಸಿತು. ಅಸಹಕಾರ ಚಳವಳಿಗೆ ಮತ್ತೆ ಜೀವ ಕೊಡುವ ಕೋರಿಕೆಗಾಗಿ ಆ ಸಮಿತಿಯನ್ನು ರಚಿಸಲಾಯಿತು.

ಕೆಲವು ಷರತ್ತುಗಳಿಗೆ ಅನುಗುಣವಾಗಿ ಪ್ರಾಂತೀಯ ಸಮಿತಿಗಳನ್ನು ಅಸಹಕಾರ ಚಳವಳಿಯನ್ನು ಪುನರಾರಂಭಿಸಲು ನಿರ್ಣಯಗಳ ಮೂಲಕ ಅಧಿಕಾರ ನೀಡಲಾಯಿತು. ಆದರೆ ಅಂಥ ಅಧಿಕಾರಿಗಳಿಗೆ ಮುಂದೆ ಅದರಲ್ಲೂ ಅತಿ ಶೀಘ್ರದಲ್ಲೇ ಯಾವುದೇ ಗೌರವ ಇರುವುದಿಲ್ಲವೆಂದು ಅಸಹಕಾರ ಚಳವಳಿ ಆರಂಭಗೊಳ್ಳುವ ಸ್ಪಷ್ಟ ಸೂಚನೆ ಇಲ್ಲವೆಂದು ಒಟ್ಟಾರೆ ಆ ಸಮಿತಿಯ ಕೊಡುಗೆ ಶಾಸಕಾಂಗ ಸಂಸ್ಥೆಗಳ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ತೆಗೆದು ಹಾಕುವುದಕ್ಕಷ್ಟೇ ಸೀಮಿತವಾಗಿತ್ತು. 1924ರಲ್ಲಿ ನಡೆಯಲಿದ್ದ ಸಾರ್ವತ್ರಿಕ ಚುನಾವಣೆಗಳಿಗೆ ಕಾಂಗ್ರೆಸ್ ಪಕ್ಷವನ್ನು ಸಕ್ರಿಯಗೊಳಿಸುವ ಹಿನ್ನಲೆಗೆ ಆ ಸಮಿತಿ ವೇದಿಕೆ ಸಿದ್ಧಪಡಿಸಿ ಕೊಟ್ಟಿತಷ್ಟೇ.

ಲಾಲಾಜಿ ಸಹ ಹೆಚ್ಚು ಕಡಿಮೆ ಅದೇ ನಿಟ್ಟಿನಲ್ಲಿ ಆಲೋಚಿಸುತ್ತಿದ್ದರು. ಬಂಧನದ ಕೋಣೆಯಲ್ಲಿ ಅವರು ಬಂಡಾಯಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸ ತೊಡಗಿದ್ದರು. ಮುಂದೆ ಸ್ವರಾಜ್ ಪಕ್ಷದ ಸ್ಥಾಪನೆಗೆ ಅವೆಲ್ಲಾ ಪೀಠಿಕೆಯಾಯಿತು. ಸಿ.ಆರ್. ದಾಸ್ ಪಂಜಾಬಿಗೆ ಧಾವಿಸಿ ಬಂದರು. ಬರ್ದೋಲಿ ಬೆಳವಣಿಗೆಗಳ ನಂತರದ ವಿದ್ಯಮಾನಗಳ ಬಗ್ಗೆ ಖುದ್ದಾಗಿ ಲಾಲಾಜಿ ಅಭಿಪ್ರಾಯ ತಿಳಿದುಕೊಳ್ಳಲು ಅಲ್ಲಿಗೆ ಬಂದಿದ್ದರು. ಲಾಲಾಜಿ ಅವರನ್ನು ಭೇಟಿ ಮಾಡಲು ಅವರಿಗೆ ಅವಕಾಶ ಸಿಗಲಿಲ್ಲ. ಹಾಗಾಗಿ ಅವರಿಬ್ಬರ ನಡುವೆ ವ್ಯಕ್ತಿಗತ ಚರ್ಚೆಗೆ ಅವಕಾಶವಾಗಲಿಲ್ಲ. ಲಾಲಾಜಿ ಪತ್ರವೊಂದನ್ನು ಬರೆದರು. ''ಹೀಗೊಂದು ಆಲೋಚನೆ ಮತ್ತು ಅದರ ತಾತ್ಕಾಲಿಕ ಅಭಿಮತ ಹಾಗೂ ಒಲವುಗಳು'' ಎಂದು ಕರೆಯಲ್ಪಟ್ಟ ಆ ಪತ್ರ ಸಿ.ಆರ್. ದಾಸ್ ಅವರ ವಿಳಾಸಕ್ಕೆ ಬರೆಯಲ್ಪಟ್ಟಿತು. ಅದರಲ್ಲಿ ''ಐದು ನದಿಗಳ ಈ ನಾಡಿಗೆ ಹುತ್ಪೂರ್ವಕ ಸ್ವಾಗತ. ನಿಮ್ಮ ಅಭಿಮಾನಿಗಳು ಮತ್ತು ಬೆಂಬಲಿಗರ ಕೋಟಿಗೆ ಸಪ್ರೇಮ ವಂದನೆಗಳು ಮತ್ತು ಗೌರವಾದರಗಳು'' ಎಂಬ ಸಂಬೋಧನೆಯೊಂದಿಗೆ ಆರಂಭಿಸಲಾಗಿತ್ತು. ಆ ಪತ್ರದಲ್ಲಿ ಲಾಲಾಜಿ ತಮ್ಮ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿ ನಮ್ಮ ಆಂದೋಲನಕ್ಕೆ ಜನರ ಪ್ರಚಂಡ ಬೆಂಬಲ ಸಿಕ್ಕಿದೆ. ಅದು ಅದ್ವಿತೀಯ ಯಶಸ್ಸು ಕಂಡಿದೆ. ನಾನು ಅನೇಕ ತಪ್ಪುಗಳನ್ನು ಮಾಡಿದ್ದರೂ ಅದನ್ನು ನಮ್ಮ ಜನತೆಯ ಮನಸ್ಥಿತಿಯನ್ನು ಮಾರ್ಪಡಿಸಿದೆ. ಅವರ ರಾಜಕೀಯ ದೃಷ್ಟಿಕೋನವನ್ನು ಕಲ್ಪನೆಯಲ್ಲಿ ಮತ್ತು ಭಾವನೆಗಳಲ್ಲಿ ಅಪಾರವಾದ ಬದಲಾವಣೆ ತಂದಿದೆ. ಆ ದೃಷ್ಟಿಯಿಂದ ನೋಡಿದಾಗ ನಾವು ಕೈಗೊಂಡ ಕಾರ್ಯಗಳಿಗೆ ನನ್ನಲ್ಲಿ ಯಾವ ಪಶ್ಚಾತ್ತಾಪವು ಮೂಡುತ್ತಿಲ್ಲ'' ಎಂದು ತಿಳಿಸಿದರು.

ಆರಂಭದಲ್ಲಿ ಅಸಹಕಾರ ಚಳವಳಿ ಬಗ್ಗೆ ತಮಗಿದ್ದ ಅನುಮಾನವನ್ನು ಪ್ರಸ್ತಾಪಿಸುತ್ತಾ ಅವರು ಹೀಗೆ ಬರೆದರು:

''ಕಲ್ಕತ್ತಾದಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಈ ಕಾರ್ಯಕ್ರಮದ ಬಗ್ಗೆ ನಾನು ಸಾಕಷ್ಟು ಅನುಮಾನ ವ್ಯಕ್ತಪಡಿಸಿದ್ದು ನಿಮಗೆ ಗೊತ್ತಿದೆ ಅದೇನೇ ಇರಲಿ. ಮಹಾತ್ಮಾಜೀ ಆಲೋಚನೆ ಸರಿಯಾಗಿತ್ತು ಎಂಬುದರಲ್ಲಿ ನನಗೆ ಅನುಮಾನವೇನೂ ಉಳಿದಿಲ್ಲ.''

ಈ ಅಭಿಪ್ರಾಯ ವ್ಯಕ್ತಪಡಿಸಿದ್ದರೂ ಅಸಹಕಾರ ಚಳವಳಿಯನ್ನು ಹಂತ ಹಂತವಾಗಿ ಅವರು ಪರೀಕ್ಷಿಸುತ್ತಾ ಬಂದಾಗ ಕೆಲವು ಸಲಹೆಗಳನ್ನು ಮಾಡಲೇಬೇಕೆಂಬ ನಿರ್ಧಾರಕ್ಕೆ ಬಂದರು. ಒಟ್ಟಾರೆಯಾಗಿ ಒಂದು ವರ್ಷದ ಅವಧಿಗೆ ಚಳವಳಿ ಅತ್ಯುತ್ತಮ ಎನಿಸಿತು. ನಂತರ ಅದನ್ನು ಇನ್ನಷ್ಟು ವ್ಯಾಪಕ ಮತ್ತು ಗಾಢಗೊಳಿಸಲು ಕಾರ್ಯಕ್ರಮ ರೂಪಿಸಬೇಕಾಯಿತು. ಹಳೆಯ ಲಾಂಛನವನ್ನೇ ಮುಂದುವರಿಸಿ ಅದರಡಿಯಲ್ಲಿ ಅದೇ ಕಾರ್ಯಗಳನ್ನು ಪುನರಾವರ್ತಿಸುವುದು ಅವರಿಗೆ ಸಮ್ಮತವೆನಿಸಲಿಲ್ಲ. ದೀರ್ಘಾವಧಿಯ ಹೊಸ ಬಗೆಯ ಆಂದೋಲನಕ್ಕೆ ರೂಪುರೇಷೆಗಳನ್ನು ನಿರ್ಧರಿಸಬೇಕಾಗಿತ್ತು. ಒಂದು ವರ್ಷದ ಅವಧಿಗೆ ಜನತೆಯನ್ನು ತ್ಯಾಗ, ಬಲಿದಾನಗಳಿಗೆ ಸಿದ್ಧವಾಗಲು ಕೇಳಿಕೊಳ್ಳಬಹುದಾಗಿತ್ತು. ಕಾರ್ಯಕ್ರಮ ಅನುಷ್ಠಾನದಲ್ಲಿ ಮಹಾತ್ಮ ಗಾಂಧೀಯವರಲ್ಲಿ ಕೊರತೆಯಾಗಿದ್ದ ನಮ್ರತೆ, ನಮ್ಯತೆಗಳನ್ನು ಪ್ರಧಾನವಾಗಿಸಲು ಲಾಲಾಜಿ ಬಯಸಿದ್ದರು:

''ನನಗೆ ತೀವ್ರ ವಿಷಾದ ತಂದಿರುವ ನಿಜವಾದ ಅಪಚಾರವೆಂದರೆ ಡಿಸೆಂಬರ್ ಮತ್ತು ಜನವರಿಯಲ್ಲಿ ಮಹಾತ್ಮಾಜಿ ಗತಿಶೀಲರಾಗಲಿಲ್ಲ. ರಾಜಕಾರಣದಲ್ಲಿ ನನ್ನ ಅನಿಸಿಕೆಯಲ್ಲಿ ಯಾರೇ ಆದರೂ (ಖಚಿತವಾದರೂ ಸರಿ) ವಾರ್ಷಿಕ ವಿಷಯಗಳಲ್ಲಿ ಗತಿಶೀಲರಾಗುವ ಅಗತ್ಯವಿಲ್ಲ. ಆದರೆ ಅದನ್ನು ಜಾರಿಗೆ ಕೊಡುವ ತಂತ್ರ ಮತ್ತು ವಿಧಾನಗಳಲ್ಲಿ ಸ್ಥಿತಿಸ್ಥಾಪಕತೆ ಅಗತ್ಯವಾಗುತ್ತದೆ. ದಯ ಮಾಡಿ ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡಿ. ಇಲ್ಲಿ ತಂತ್ರವೆಂದರೆ ನನ್ನ ಅರ್ಥದಲ್ಲಿ 'ವಿವೇಕ' ಎಂದು. ಯಾವ ಪರಿಸ್ಥಿತಿಯಲ್ಲಿಯೂ ನಾನು ಅವಸರದ ಗುಂಗಿನಲ್ಲಿ ಅನುಕೂಲಸಿಂಧುವಾಗಿ ಪ್ರಾಮಾಣಿಕತೆ ಮತ್ತು ಸತ್ಯಗಳನ್ನು ಬಲಿ ಕೊಡುವುದಿಲ್ಲ. ಆದಾಗ್ಯೂ ತಂತ್ರ ಮತ್ತು ಹೊಂದಾಣಿಕೆಗಳನ್ನು ರಾಜಕೀಯ ಆಂದೋಲನದಲ್ಲಿ ಸಂಪೂರ್ಣವಾಗಿ ಹೊರಗಿಡಬೇಕೆಂಬುದರಲ್ಲಿ ನನಗೆ ನಂಬಿಕೆಯೂ ಇಲ್ಲ. ನನ್ನ ತೀರ್ಮಾನದ ಪ್ರಕಾರ ಮಹಾತ್ಮ ಗಾಂಧೀಜಿ ಡಿಸೆಂಬರ್‌ನಲ್ಲಿ ವೈಸ್‌ರಾಯ್ ನೀಡಿದ ಅವಕಾಶವನ್ನು ಹೋಗಗೊಟ್ಟರು. ಮತ್ತೆ ಪುನಃ ಮಾಳವೀಯ ಸಮ್ಮೇಳನದಲ್ಲಿ ಅವರು ಅದೇ ಹಟಮಾರಿತನ ಹಿಡಿದು ಅವರು ಸರ್ಕಾರಕ್ಕೆ ಕೊಟ್ಟ ಗಡುವು ಘೋರ ಅಪಚಾರವಾಯಿತು. ನಾನು ಇದೆಲ್ಲವನ್ನು ಆಕ್ರಮಣಕಾರಿ ಟೀಕೆಯ ಅಂಶವಾಗಿ ಪ್ರಸ್ತಾಪಿಸುತ್ತಿಲ್ಲ. ಅಥವಾ ಮಹಾತ್ಮಾಜಿಯವರಲ್ಲಿರುವ ತಪ್ಪುಗಳನ್ನು ಹೆಕ್ಕುವ ಕೆಲಸಗಳನ್ನು ಮಾಡುತ್ತಿಲ್ಲ. ಕೇವಲ ನಮ್ಮ ಕೆಲಸ ಕಾರ್ಯಗಳ ಕರಾರುವಕ್ಕಾದ ಪರಾಮರ್ಶೆ ಮಾಡಿಕೊಳ್ಳುವ ಸಲುವಾಗಿ ಇದು ಅಗತ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಭವಿಷ್ಯವನ್ನು ಭದ್ರವಾಗಿಸುವ ದೃಷ್ಟಿಯಿಂದ (ನಮ್ಮ ಲಾಭಾಲಾಭ, ತಪ್ಪುತೊಡರುಗಳನ್ನು) ಇವೆಲ್ಲವೂ ಅಗತ್ಯವಾಗುತ್ತದೆ. ಈಗ ನಾವಿಲ್ಲಿದ್ದೇವೆ ಎಂಬುದನ್ನು ಪರಿಶೀಲಿಸೋಣ. ಸರ್ಕಾರ ಕೆರಳಿದೆ. ದಬ್ಬಾಳಿಕೆ ನೀತಿಯನ್ನು ಅನುಸರಿಸಿದೆ. ದೇಶದಲ್ಲಿ ನಮ್ಮ ಪ್ರಭಾವ ಬಲಾಢ್ಯಗೊಳ್ಳುತ್ತಿರುವುದಕ್ಕೆ ಅವರು ಹೆದರಿದ್ದಾರೆ. ನಮ್ಮನ್ನು ಸಂಪೂರ್ಣವಾಗಿ ಬಗ್ಗುಬಡಿಯಲು ನಿಶ್ಚಯಿಸಿರುವಂತೆ ಕಂಡು ಬರುತ್ತದೆ. ಈ ಕಡೆಯ ಯತ್ನದಲ್ಲಿ ಅವರು ನ್ಯಾಯ, ಔಚಿತ್ಯ ಮತ್ತು ನೈತಿಕತೆಗಳನ್ನೆಲ್ಲವನ್ನು ಗಾಳಿಗೆ ತೂರಿದ್ದಾರೆ. ''ಪ್ರೇಮ ಮತ್ತು ಸಮರದಲ್ಲಿ ಎಲ್ಲರೂ ಒಂದೇ'' ಎನ್ನುವ ನೀತಿಯನ್ನು ಅವರೀಗ ಕಾಯ, ವಾಚ, ಮನಸಾ ಕೃತಿಗಿಳಿಸಿದ್ದಾರೆ. ನಾವೇನೂ ಅವರಿಂದ ಅಂಥ ನಡವಳಿಕೆಗಳಾಗುವುದಿಲ್ಲವೆಂಬ ನಿರೀಕ್ಷೆಯನ್ನು ಎಂದೂ

ಮಾಡಿದವರಲ್ಲ. ಆದರೆ ಮಹಾತ್ಮಾಜಿ ಮತ್ತು ನಮ್ಮಲ್ಲಿನ ಇತರ ಕೆಲವರು ಭರವಸೆಗಳನ್ನು ಇಟ್ಟುಕೊಂಡಿದ್ದರು. ಅಂಥ ಎಲ್ಲಾ ಪರಿಗಳನ್ನು ಆಡಳಿತಶಾಹಿಗಳು ಗಾಳಿಗೆ ತೂರುವುದಿಲ್ಲವೆಂದು ಅಂದು ಕೊಂಡಿದ್ದರು.''

ಸಿ.ಆರ್. ದಾಸ್ ಅವರಿಗೂ ಸಹ ಶಾಸಕಾಂಗಳ ಮೇಲೆ ವಿಧಿಸಿದ್ದ ನಿಷೇಧವನ್ನು ರದ್ದುಪಡಿಸುವುದು ಅಗತ್ಯವಾಗಿ ಬೇಕಾಗಿತ್ತು. ತತ್ಸಂಬಂಧದ ನಿರ್ಧಾರದ ಪರಾಮರ್ಶೆಗೆ ಅವರು ತೀರಾ ಉತ್ಸುಕರಾಗಿದ್ದರು. ಮಹಾರಾಷ್ಟ್ರದ ನಾಯಕಗಣ ಇಡೀ ಅಸಹಕಾರ ಚಳವಳಿಯನ್ನೇ ಕೈಬಿಡಬೇಕೆಂದು ಒತ್ತಾಯಿಸುತ್ತಿತ್ತು. ಲಾಲಾಜಿ ಅವರ ದೃಷ್ಟಿಕೋನವೂ ಆ ನಿಲುವುಗಳಿಗ ತೀರಾ ಹತ್ತಿರದಲ್ಲಿದ್ದುದ್ದರ ಜೊತೆಗೆ ಆ ವೇಳೆಗಾಗಲೇ ಕಾರ್ಯನಿರತವಾಗಿದ್ದ ಕೆಲವು ವ್ಯವಸ್ಥೆಗಳ ಮೇಲೆ ನಿಷೇಧ ಮುಂದುವರೆಸುವುದರ ಔಚಿತ್ಯವೂ ಸಹ ಅವರಿಗೆ ಸಮ್ಮತವೆನಿಸಿಲಿಲ್ಲ. ಶಾಲೆಗಳ ಬಹಿಷ್ಕಾರದ ಹಿನ್ನಲೆಯಲ್ಲಿ ಅವರು ಹೀಗೆ ಹೇಳಿದರು:

''ಶಾಲೆಗಳ ವಿರುದ್ಧ ನಾವು ಯಾವುದೇ ಪ್ರಚಾರ ಮಾಡುತ್ತಿಲ್ಲ. ಈ ವಿಷಯ (ಶಾಲೆಗಳ ಬಹಿಷ್ಕಾರದ ಬಗ್ಗೆ) ಉತ್ತಮವೆಂದು ಅನಿಸುವುದಿಲ್ಲ. ಯಾರೂ ತನ್ನ ನಿರ್ದೇಶನವನ್ನು ಅನುಷ್ಠಾನಕ್ಕೆ ತರುವುದಿಲ್ಲವೋ ಅಂಥವರ ಮೇಲೆ ಕಾಂಗ್ರೆಸ್ ಒತ್ತಡ ತರುವುದು ಸರಿಯಲ್ಲ.''

ಅದೇ ಧ್ವನಿಯಲ್ಲಿ ಲಾಲಾಜಿ ನ್ಯಾಯಾಲಯಗಳ ಬಹಿಷ್ಕಾರವನ್ನು ಖಂಡಿಸಿದರು. ಸಂಪೂರ್ಣವಾಗಿ ನ್ಯಾಯಾಲಯವನ್ನು ಬಹಿಷ್ಕರಿಸುವುದು ಸಾಧ್ಯವೂ ಇರಲಿಲ್ಲ. ಅಸಹಕಾರ ಚಳವಳಿಯಲ್ಲಿ ಇದ್ದವರು ಈ ಮಾತನ್ನು ಒಪ್ಪುತ್ತಿದ್ದರು.

''ನನಗೆ ಅನೇಕ ಕಾಂಗ್ರೆಸ್ಸಿಗರು (ಆ ಪೈಕಿ ಕೆಲವರು ಮುಖಂಡರು) ನ್ಯಾಯಾಲಯಗಳಿಗೆ ಬಹಿಷ್ಕಾರ ಹಾಕದೆ ತಮ್ಮ ಕಾರ್ಯಗಳಿಗೆ ಹಾಜರಾಗುತ್ತಿರುವುದು ಗೊತ್ತು. ವ್ಯಾಪಾರಿಗಳು ಮತ್ತು ವಹಿವಾಟುದಾರರು ಸಿವಿಲ್ ನ್ಯಾಯಾಲಯಗಳನ್ನು ಬಹಿಷ್ಕರಿಸಲು ಸಾಧ್ಯವೇ? ಜಮೀನುದಾರರಿಂದ ಗೇಣಿದಾರರಿಂದ ಸಾಧ್ಯವೇ? ಕಾಂಗ್ರೆಸ್ ಸಂಘಟನೆಯು ಎಲ್ಲಾ ವರ್ಗದವರನ್ನು ಒಳಗೊಂಡ ರಾಷ್ಟ್ರೀಯ ಸಂಘಟನೆಯಾಗಬೇಕೆಂದು ಬಯಸುವುದಾದರೆ ಇಂಥ ನಿರ್ಧಾರಗಳನ್ನು ಕೈಗೊಳ್ಳುವುದು ದುಸ್ತರವಾಗುತ್ತದೆ.'' ಆದರೆ, ''ನನ್ನ ಅಭಿಪ್ರಾಯದಲ್ಲಿ ಸರ್ಕಾರವು ಆರಂಭಿಸಿರುವ ಕ್ರಿಮಿನಲ್ ಕಾನೂನು ಕ್ರಮಗಳಲ್ಲಿ ನಮ್ಮನ್ನು ನಾವು ಸಮರ್ಥಿಸಿಕೊಳ್ಳದೆ ಉತ್ತಮ ನಡವಳಿಕೆ ತೋರಿಸಿದ್ದೇವೆ. ನಾವು ನಮ್ಮ ನಡವಳಿಕೆಯನ್ನು ಮಾಡಿ ತೋರಿಸಬೇಕಾಗಿತ್ತು. ಅದನ್ನು ಸಾಧ್ಯವಾದಷ್ಟು ಸಮರ್ಥವಾಗಿ ನಿಭಾಯಿಸಿದ್ದೇವೆ... ನಾವು ಈತನಕ ಎಲ್ಲಿಯಾದರೂ ತಪ್ಪು ಎಸಗಿದ್ದೇವೆಯೇ ಎಂಬುದು ಅಸಂಗತ... ಈ ವಿಷಯದಲ್ಲಿ ನಮ್ಮ ನಿಲುವನ್ನು ಮಾರ್ಪಾಡಿಸಿಕೊಳ್ಳಬೇಕಾದ ಸಮಯ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ಇದು (ಅಸಹಕಾರ ಚಳವಳಿ) ಯುದ್ಧ ಕಾಲದಂಥ ಹೋರಾಟವೆಂದು ಯಾರಾದರೂ ಸಮರ್ಥಿಸಬಹುದು. ಆದರೆ ಅದನ್ನು ನೈತಿಕ ನೆಲೆಗಟ್ಟಿನ ಹಿನ್ನಲೆಯಲ್ಲಿಯೂ ಸಹ ಅನಿರ್ದಿಷ್ಟ ಕಾಲದವರೆಗೆ ಬಲವಂತದೊಂದಿಗೆ ಅನುಷ್ಠಾನದಲ್ಲಿ ಇಡಲಾಗುವುದಿಲ್ಲ. ನಮ್ಮಲ್ಲಿ ಕೆಲವರು ಹಾಗೆ ಮಾಡಿದರೂ ಮಾಡಬಹುದು

ಆದರೆ ದೇಶ ಅಥವಾ ಇಡಿಯಾಗಿ ಕಾಂಗ್ರೆಸ್ ಅದನ್ನು ಅನುಷ್ಠಾನದಲ್ಲಿ ಇಡಲು ಸಾಧ್ಯವಾಗುವುದಿಲ್ಲ.

''ಆ ಪತ್ರದಲ್ಲಿ ಲಜಪತರು ದಾಸ್ ಪ್ರಮುಖವಾಗಿ ಪ್ರಸ್ತಾಪಿಸ ಬಯಸಿದ್ದ - ಶಾಸಕಾಂಗಗಳ ಮೇಲಣ ಕಾಂಗ್ರೆಸ್ ನಿಷೇಧ ವಿಷಯದ ಬಗ್ಗೆ ವಿಸ್ತಾರವಾಗಿ ಚರ್ಚಿಸಲು ಆಸಕ್ತಿ ತೋರಲಿಲ್ಲ. ಆ ನಿಷೇಧವನ್ನು ಸಮರ್ಥಿಸಿಕೊಳ್ಳುತ್ತಾ (ತತ್ಸಂಬಂಧದ ನಿರ್ಣಯ ಪ್ರಣೀತರು ಅವರೇ ಆಗಿದ್ದರು; ಅಸಹಕಾರ ಚಳವಳಿಯ ಪ್ರಣೀತರೂ ಅನುಮೋದಕರು ಆಗಿದ್ದರು.) ಲಾಲಾಜಿ ಹೀಗೆ ತಿಳಿಸಿದರು:

''ನಾವೀಗ ಬಹುಶಃ ಅತಿ ಪ್ರಮುಖವಾದ ಮೂರನೇ ಅಂಶದ ಬಗ್ಗೆ ಬರೋಣ. ತೀರಾ ಲಕ್ಷ್ಯವಿಟ್ಟು ಪರಿಶೀಲಿಸಿದ ನಂತರ ನನ್ನ ಆಲೋಚನೆಯ ಪ್ರಕಾರ (ತಾತ್ಕಾಲಿಕವಾಗಿ ಶಾಸಕಾಂಗಗಳ ಕಾರ್ಯ ನಡೆಯುವುದಾಗಲಿ ಅಥವಾ ನಿರ್ಬಂಧಿತವಾಗುವುದಾಗಲಿ ವಿಮರ್ಶೆಗೆ ತಕ್ಕ ಸಂಗತಿಯಾಗುವುದಿಲ್ಲ) ''ಜವಾಬ್ದಾರಿಯುತ ಸರ್ಕಾರ'' ಹಾಗೂ ''ಜವಾಬ್ದಾರಿಯುತ ಅಸಹಕಾರ''ದ ಕಲ್ಪನೆಯು ಕೇವಲ ಪದಪುಂಜಗಳಷ್ಟೇ ಹೊರತು ವಸ್ತುಶಃ ಕಾರ್ಯಗತಕ್ಕೆ ಒದಗುವವಲ್ಲ. ನಾವು ಅನುಸರಿಸಲು ಯೋಗ್ಯವಾದ ಮಾರ್ಗವೆಂದರೆ ಸಿಂಥ್ ಫ್ರೇಮ್ ತಂತ್ರ-ಅಂದರೆ ಪರ್ಯಾಯ ಸರ್ಕಾರಗಳನ್ನು ಸ್ಥಾಪಿಸುವ ಯತ್ನ. ಸರ್ಕಾರಿ ಚುನಾವಣಾ ವ್ಯವಸ್ಥೆಯ ಮೂಲಕವೇ ಸಮಾನಾಂತರ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳನ್ನು ರೂಪಿಸಿಕೊಳ್ಳುವುದು ನಮ್ಮ ನೈತಿಕ ವಿಜಯಕ್ಕೆ ದೊರೆಯುವ ದೊಡ್ಡ ಶಕ್ತಿಯಾಗುತ್ತದೆ. ನನ್ನ ವಿನಮ್ರ ತೀರ್ಮಾನವಿಷ್ಟೇ. ಬರುವ ವರ್ಷವೋ ಅಥವಾ ಏಪ್ರಿಲ್‌ನಲ್ಲಿ ನಡೆಸಲು ಉದ್ದೇಶಿಸಿರುವ ವಿಶೇಷ ಅಧಿವೇಶನದಲ್ಲಿ ಕೈಗೊಳ್ಳಲಾಗುವ ಎಲ್ಲಾ ಕಾರ್ಯಕ್ರಮಗಳಲ್ಲಿನ ಬದಲಾವಣೆಗಳನ್ನು ಮುಂದೂಡುವುದು ಒಳ್ಳೆಯದು.

ಪ್ರತಿನಿತ್ಯವು ಬದಲಾವಣೆಗಳಾಗುತ್ತಿವೆ. ಆದ್ದರಿಂದಲೇ ನಾವು ಈಗಾಗಲೇ ನಮ್ಮ ಕೈಗಳನ್ನು ಕಟ್ಟಿ ಹಾಕಿಕೊಳ್ಳುವುದು ಬೇಡ. ರಾಜಕಾರಣ ನಿತ್ಯ ಬದಲಾವಣೆಯ ಆಟ. ಯಾವುದೇ ಹಟಮಾರಿತನದ, ಹೀಗೆ ಇರಬೇಕೆನ್ನುವ ಧೋರಣೆ ಎಲ್ಲಾ ಕಾಲಕ್ಕೂ ಮತ್ತು ಎಲ್ಲಾ ಸಂದರ್ಭಗಳಿಗೂ ಯೋಗ್ಯವಾಗುತ್ತದೆ ಎಂದು ನನಗನಿಸುವುದಿಲ್ಲ. ಆಗಬಹುದಾದ ಕಷ್ಟ ನಷ್ಟಗಳೆಲ್ಲವನ್ನು ಎದುರಿಸಲು ನೀವು ಸಿದ್ಧವಿಲ್ಲವಾದರೆ ಸಾಮೂಹಿಕ ಅಸಹಕಾರ ಚಳವಳಿಗೆ ಅನುಮೋದನೆ ನೀಡಬೇಡಿ. ವೈಯಕ್ತಿಕ ನಾಗರಿಕ ಅವಿಧೇಯತೆಗೆ ಮಂಜೂರಾತಿ ಕೊಡುವಾಗಲೂ ಅಷ್ಟೇ. ಕನಿಷ್ಠ ಐವತ್ತು ಸಾವಿರ ಮಂದಿ ಬಂಧನಕ್ಕೆ ಸಿದ್ಧವಾಗಿ ಸೆರೆವಾಸ ಅನುಭವಿಸಲು ತಯಾರಿಲ್ಲದಿದ್ದ ಪಕ್ಷದಲ್ಲಿ ದೇಶಾದ್ಯಂತ ಆ ಚಳವಳಿ ಕೈಗೊಳ್ಳಲು ಕರೆ ಕೊಡುವುದು ಅರ್ಥವತ್ತಾಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಅಂಥ ಚಳವಳಿಗೆ ಒಟ್ಟಾರೆ ನಿಷೇಧ ಬೇಡ.''*

---

* ಈ ಪತ್ರದ ಕೊನೆಯ ಭಾಗದಲ್ಲಿ ಹಿಂದೂ ಮುಸ್ಲಿಂ ಐಕ್ಯತೆಯ ಬಗ್ಗೆ ಕೆಲವು ಪ್ರಸ್ತಾಪವಿದೆ. ಈ ಪತ್ರದ ಭಾಗಗಳನ್ನು ಇಂದಿಗೂ ಸಹ ಆಗಾಗ ಉದ್ಧರಿಸಲಾಗುತ್ತಿದೆ. (ಅಥವಾ ಅಪಾರ್ಥದಲ್ಲಿ ಬಳಸಲಾಗುತ್ತದೆ) ಮುಂದಿನ ಅಧ್ಯಾಯದಲ್ಲಿ ಈ ಬಗ್ಗೆ ಓದೋಣ.

ಸದ್ಯದಲ್ಲಿ ಅವರು ಶಾಸಕಾಂಗಗಳ ಮೇಲಿನ ನಿಷೇಧವನ್ನು ತೆರವು ಮಾಡುವ ವಿಷಯದಲ್ಲಿ ಯೋಚಿಸುತ್ತಿದ್ದರು. ಆದರೂ ಅವರಲ್ಲಿನ ಆಶಯಗಳು ಅಂತಿಮವಾಗಿ ಮೂರ್ತಿಭವಿಸಿರಲಿಲ್ಲ. ಸುಧಾರಣೆಯಲ್ಲಿ ಮುಕ್ತ ಪರಿಕಲ್ಪನೆ ಅಳವಡಿಸುವ 'ಕಾರ್ಯವಾಗಲಿ' ಅಥವಾ ಹೊಸ ಬಗೆಯ ಚಿಂತನೆಗಳಲ್ಲಿ ಒಂದಾದ ''ಅಸಹಕಾರ ಚಳವಳಿ''ಯೊಳಗೆ ತೊಡಕು ಉಂಟು ಮಾಡುವ ತಂತ್ರವಾಗಲಿ ಅವರಿಗೆ ಹಿಡಿಸಲಿಲ್ಲ. ಅದೆಲ್ಲಾ ಏನೇ ಇರಲಿ ಒಂದಂತೂ ನಿಶ್ಚಿತವಾಗಿತ್ತು. ಶಾಸಕಾಂಗಗಳ ಮೇಲಿನ ನಿಷೇಧದ ಕರ್ತೃಗಳಲ್ಲಿ ಅವರು ಒಬ್ಬರಾಗಿ ಇನ್ನು ಹೆಚ್ಚು ಕಾಲ ನಿಷೇಧ ಮುಂದುವರಿಯಬೇಕೆಂದು ಆಶಿಸಿರಲಿಲ್ಲ. ದಾಸ್‌ರಿಗೆ ಬೇಕಾಗಿದ್ದ ಆ ಕ್ಷಣದ ಅಗತ್ಯವೂ ಅದೇ ಆಗಿತ್ತು. ದಾಸ್, ಲಜಪತರಿಗೆ ಲಿಖಿತ ರೂಪದಲ್ಲಿ ಈ ಬಗ್ಗೆ ಬರೆದು ತಿಳಿಸಿದರು. ಗಯಾದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದಲ್ಲಿಯೇ ನಿಷೇಧ ತೆರವಿನ ಬಗ್ಗೆ ಒತ್ತಾಯಿಸುವುದಾಗಿ ತಿಳಿಸಿದರು. ಸೆರೆಮನೆಯ ಕೋಣೆಯಿಂದಲೇ ತಮ್ಮ ಆ ಕೆಲಸಕ್ಕೆ ಬೆಂಬಲವಾಗುವ ರೀತಿಯಲ್ಲಿ ಸಾಧ್ಯವಾದ ನೆರವು ನೀಡಲು ಅವರು ಲಾಲಾಜಿ ಅವರನ್ನು ಆ ಪತ್ರದ ಮೂಲಕ ಕೋರಿದರು.

ಅವರ ಕೋರಿಕೆ ವ್ಯರ್ಥವಾಗಲಿಲ್ಲ. ಲಾಲಾಜಿ ಅನೇಕ ಲೇಖನಗಳನ್ನು ಬರೆದರು. ಅವುಗಳಲ್ಲಿ ಶಾಸಕಾಂಗಗಳ ಮೇಲಿನ ನಿಷೇಧದ ಆಗುಹೋಗು ತೀವ್ರವಾಗಿ ಚರ್ಚಿಸಿದರು. ಪತ್ರಿಕೆಗಳಲ್ಲಿ ಆ ಲೇಖನಗಳು 'ಓರ್ವ ಸಂವಿಧಾನಾತ್ಮಕ ಅತೃಪ್ತನ ಚಿಂತನೆಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದವು. ಆ ಸಂವಿಧಾನಾತ್ಮಕ ಅತೃಪ್ತನು ತನ್ನ ತಲೆಯಲ್ಲಿದ್ದ ಹೊರೆಯನ್ನೆಲ್ಲಾ ದಯಾಳ್ ದಾಸ್‌ರಿಗೆ ವರ್ಗಾಯಿಸಿದರು. ದಯಾಳ್ ದಾಸ್ ಶುದ್ಧ ಗಾಂಧೀ ಸಿದ್ಧಾಂತದ ಓರ್ವ ತಪಸ್ವಿ. ಪ್ರತಿನಿತ್ಯವು ಬೆಳಿಗ್ಗೆ 6 ಗಂಟೆಗೆ ಸರಿಯಾಗಿ ಗಾಂಧೀಜಿಯವರನ್ನು ಭೇಟಿ ಮಾಡುತ್ತಿದ್ದವರು. ನವೆಂಬರ್ ತಿಂಗಳಿನ ಬೆಳಗಿನ ಚಳಿಯನ್ನು ಲೆಕ್ಕಿಸುತ್ತಿರಲಿಲ್ಲ. ಆ ಚಳಿಯಲ್ಲಿ ತಮ್ಮನ್ನು ತಾವು ಬೆಚ್ಚಗೆ ಮಾಡಿಕೊಳ್ಳಲು ಒಂದು ಕಪ್ ಟೀಯನ್ನು ಸಹ ತೆಗೆದುಕೊಳ್ಳುತ್ತಿರಲಿಲ್ಲ. ಆ ತಾಪಸಿ ಜೀವನ ಹೇಗಿತ್ತೆಂದರೆ ತಾವು ನಂಬಿದ ಸಿದ್ಧಾಂತಕ್ಕಾಗಿ ''ನೇಣುಗಂಭಕ್ಕೆ ಏರಲು ಸಿದ್ಧ ಅಥವಾ ಬೆಂಕಿಗೆ ಬೀಳಲು ಸಿದ್ಧವಿದ್ದವರು''. ''ಗಾಂಧೀಜಿಯವರ ಪ್ರಭಾವ ಅವರ ಮೇಲೆ ಅಷ್ಟೊಂದು ಅಚ್ಚೊತ್ತಿತ್ತು. ಆ ಪ್ರಭಾವದಿಂದಾಗಿ ಅವರ ಜೀವನದ ಸಮಸ್ಯೆಗಳು ಸಾವು ನೋವಿನ ಹಂಗು ಚಿಂತನೆ ಆಲೋಚನೆಗಳ ಬಾಧೆ ಅವರಿಗಿಲ್ಲವಾಗಿತ್ತು. ತಮ್ಮ ಬಗ್ಗೆ ತಾವು ಯೋಚನೆಯನ್ನು ಮಾಡುತ್ತಿರಲಿಲ್ಲ.''

* * *

ಅಧ್ಯಾಯ - 51

ಬಂಧನ

"ನಿಮ್ಮ ಕೈದಿಯಾಗಿ ನಾನು ಯಾವುದೇ ಸಹಾಯ ಅಥವಾ ಹಕ್ಕುಗಳನ್ನು ನಿಮ್ಮಿಂದ ಕೇಳುವುದಿಲ್ಲ. ನೀವೇನು ಕೊಡುತ್ತೀರೋ ಅದನ್ನೇ ನಾನು ತಿನ್ನುತ್ತೇನೆ. ನೀವು ಏನು ಹೇಳುತ್ತೀರೋ ಆ ಕೆಲಸ ಮಾಡುತ್ತೇನೆ." - ಎಂದು ಲಾಲಾಜಿ ಹರ್‌ಕಿಷನ್ ಲಾಲ್ ಅವರಿಗೆ (ಆ ದಿನ ಪಂಜಾಬ್ ಸರ್ಕಾರದ ಓರ್ವ ಸದಸ್ಯ) ತಮ್ಮ ಬಂಧನಕ್ಕೆ ಕೆಲವು ವಾರಗಳ ಹಿಂದೆ ಒಂದು ಪ್ರಸಂಗದಲ್ಲಿ ಹೇಳಿದ್ದರು. ಒಂದು ದಿನ ಮಧ್ಯಾಹ್ನ ಲಾಹೋರಿನ ಕೋರ್ಟ್ ರಸ್ತೆಯ ನಂಬರ್ 2ರಲ್ಲಿ ಆ ಸಚಿವರು ಲಾಲಾಜಿಯವರನ್ನು ಭೇಟಿ ಮಾಡಿದಾಗ ಉದ್ಭವಿಸಿದ ಮಾತುಕತೆಯೊಂದರಲ್ಲಿ ಆ ಮಾತುಕತೆ ನಡೆದಿತ್ತು.

ವಸ್ತುಶಃ ಲಾಲಾಜಿಯವರು ಜೈಲು ಶಿಕ್ಷೆಯನ್ನು ಸ್ವಶಿಸ್ತು ಮತ್ತು ನಿರಾತಂಕಗಳ ಶಾಲೆಯಾಗಿ ಪರಿಗಣಿಸಲು ಭಾವಿಸಿಕೊಂಡಿದ್ದರು. (ನಾನು ತುಂಬಾ ಸಂತೋಷವಾಗಿದ್ದೇನೆ. ಮತ್ತು ಹರ್ಷದಿಂದಿದ್ದೇನೆ") - ಆ ದಿನ ಬೆಳಿಗ್ಗೆ (ಅಂದು ತಮ್ಮ ಬಂಧನದ ನಿರೀಕ್ಷೆ ಮಾಡುತ್ತಾ) ಲಾಲಾಜಿ ಮಹಾತ್ಮ ಗಾಂಧೀಜಿಗೆ ಬರೆದ ಪತ್ರದಲ್ಲಿ ತಿಳಿಸಿ, "ಹೆಚ್ಚಿನದೇನನ್ನು ನಾನು ಆಶಿಸುವುದಿಲ್ಲ. ಬೇಕು ಬೇಡಗಳ ಬಗ್ಗೆ ರಾಗ ತೆಗೆಯುವುದೂ ಇಲ್ಲ. ಒಂದು ವೇಳೆ ಅವರು ದೊಡ್ಡತನವನ್ನು ತೋರಿ ಕೆಲವು ಸವಲತ್ತುಗಳನ್ನು ನೀಡಲು ಮುಂದಾದರೂ ನನ್ನನ್ನು ಸಾಮಾನ್ಯ ಕೈದಿಯಂತೆ ಪರಿಗಣಿಸಲು ಒತ್ತಾಯಿಸುತ್ತೇನೆ. ಅಂಥ ಸವಲತ್ತುಗಳನ್ನು ಕೊಡುತ್ತಾರೆಂದು ನಾನಂತೂ ನಂಬಿಲ್ಲ. ನಿಮ್ಮ ಚಳವಳಿಗೆ ಯಾವ ರೀತಿಯಲ್ಲೂ ಅಪಚಾರ ಉಂಟು ಮಾಡುವುದಿಲ್ಲ ಎಂಬ ಖಾತ್ರಿಯನ್ನು ನಾನು ನಿಮಗೆ ಕೊಡುತ್ತೇನೆ." ಎಂದು ತಿಳಿಸಿದ್ದರು.

ಸರ್ಕಾರಿ ತಂತಿ ಕಚೇರಿಯಲ್ಲಿ, ಲಾಕಪ್‌ಗೆ ಅವರನ್ನು ವರ್ಗಾಯಿಸುವ ಮೊದಲು, ತಮಗೆ ಮನೆಯಿಂದ ಆಹಾರ ಕಳುಹಿಸಬಾರದೆಂದು ಬಂಧನದಲ್ಲಿ ಸಿದ್ಧವಾದ ಅನ್ನವನ್ನೇ ಊಟ ಮಾಡುವುದಾಗಿ ತಿಳಿಸಿದ್ದರು. ಅವರನ್ನು ಓರ್ವ ವಿಚಾರಣಾಧೀನ ಕೈದಿಯಾಗಿ ಸೆರೆಮನೆಗೆ ಕಳುಹಿಸಿದ ಮೇಲೆ ಅನೇಕ ವಾರಗಳ ನಂತರ ಪಂಜಾಬಿನ ಜನತೆಗೆ ನೀಡಿದ ತಮ್ಮ ಸಂದೇಶದಲ್ಲಿ ಅದೇ ಮಾತುಗಳನ್ನು ಉಚ್ಚರಿಸಿದರು. ತಮ್ಮ ಬಂಧನವನ್ನು ಅವರು 'ನೈತಿಕ ಸಾಧನೆ' ಎಂದು ಬಣ್ಣಿಸಿದರು. ಅಂಥ ಒಂದು ಅವಕಾಶ ನೀಡಿದ್ದಕ್ಕಾಗಿ ದೇವರಿಗೆ ವಂದನೆ ಸಲ್ಲಿಸಿದ್ದರು. ಜೈಲಿನ ಆ ಪರಿಸ್ಥಿತಿಯ ಮೊದಲ ನೋಟದಲ್ಲೇ ಅವರ ಮನಸ್ಸಿಗೆ ಹೊಳೆದದ್ದು ಕೆಲವು ಮೂಲಭೂತ ಹಾಗೂ ಅತ್ಯಾವಶ್ಯಕವಾದ ಜೈಲು ಸುಧಾರಣೆಯ ಅಗತ್ಯ. ಲಾಲಾಜಿ ಕೇವಲ ರಾಜಕಾರಣಿಯಷ್ಟೇ ಆಗಿರಲಿಲ್ಲ. ರಾಜಕೀಯ ಕೈದಿಗಳಿಗೆ ಮಾತ್ರ ರಿಯಾಯ್ತಿಗಳು ದೊರೆಯಬೇಕೆಂದು ಬಯಸುವವರು ಅವರಾಗಿರಲಿಲ್ಲ. ಅವರ

ವಿಶಾಲ ಮನೋಧರ್ಮ ಅಲ್ಲಿನ ಉಪೇಕ್ಷಿತ ಕೆಟ್ಟ ಪರಿಸ್ಥಿತಿಯನ್ನು ಆವರಿಸಿಕೊಂಡಿತ್ತು. ಇಲ್ಲಿಂದ ಉದ್ಧೃತವಾಗಿರುವ ಸಂದೇಶದಲ್ಲಿ ಅವರ ಆ ಭಾವನೆಗಳ ಒಂದು ಇಣುಕು ನೋಟ ಲಭ್ಯವಾಗುತ್ತದೆ.

"ಹಿಂದಿನ ಸಲ (1907) ನನಗೆ ಸೆರೆಮನೆವಾಸದ ಅನುಭವವಾಗಿರಲಿಲ್ಲ. ಮನುಷ್ಯರನ್ನು ಮನುಷ್ಯತ್ವಕ್ಕಿಂತ ಹೀನಾಯವಾಗಿ ಕಾಣುವ ಅದ್ಭುತವನ್ನು ಕಣ್ಣಾರೆ ಕಂಡು ಅನುಭವಿಸುವ ಅವಕಾಶ ನನಗೆ ಪ್ರಾಪ್ತವಾಗಿರಲಿಲ್ಲ. ಈಗ ನನಗೆ ದೊರೆಯುತ್ತಿರುವ ಅನುಭವ ಹೊಸತನದ್ದು. ಅದೊಂದು ಪಾಠ ಕಲಿಸುತ್ತಿದೆ. ಕೇವಲ ಐಶ್ವರ್ಯ, ಶ್ರೀಮಂತಿಕೆ, ವಿದ್ಯೆ ಮತ್ತು ಸ್ಥಾನಮಾನಗಳಿಂದ ಅಷ್ಟೇ ಮನುಷ್ಯನ ಅಂತಸ್ತು, ಗೌರವಗಳು ಹೆಚ್ಚುವುದಿಲ್ಲವೆಂದು ಅನಿಸುತ್ತಿದೆ. ಆ ವರ್ಗಕ್ಕೆ ಸೇರಿದ ಕೆಲವೇ ಜನರು ಈ ಜಗತ್ತಿನಲ್ಲಿದ್ದಾರೆ. ಆದ್ದರಿಂದ ನನ್ನ ಏಕೈಕ ಆಸೆಯು ಮೊದಲು ಮಾನವನಾಗಬೇಕೆಂದು. ನನ್ನ ಸುತ್ತಲೂ ಅಸಂಖ್ಯಾತ ಜನರಿದ್ದಾರೆ. ಅವರಲ್ಲಿ ಅನೇಕರು ಕೈದಿಗಳು ಮತ್ತು ಕೆಲವರು ಅಧಿಕಾರಿಗಳು. ನನ್ನ ನಿರ್ಣಯದ ಪ್ರಕಾರ ಜೈಲಿನಿಂದ ಹೊರಗಿರುವ ಈ ಜನರಲ್ಲಿ ಬಹುಪಾಲು ಮಂದಿ ಸಮಾಜವು ಗೌರವಾಸ್ಪದವಾಗಿ ಕಾಣುವ ಐಶ್ವರ್ಯ, ಶ್ರೀಮಂತಿಕೆ, ವಿದ್ಯೆ ಅಥವಾ ಸ್ಥಾನಮಾನಗಳು ಇಲ್ಲದವರು. ಅವರ ಬದುಕು ಇಲ್ಲಿರುವ ಕೈದಿಗಳಿಗಿಂತ ಯಾವುದೇ ರೀತಿಯಲ್ಲೂ ಉತ್ತಮವಾದದ್ದಲ್ಲ. ಅವರೆಲ್ಲಾ ಜೈಲಿನಿಂದ ಹೊರಗಿರುವುದಕ್ಕೆ ಕಾರಣ ಸಮಾಜವೇ. ಅವರ ಮೇಲೆ ಬಡತನ ಮತ್ತು ಅಸಹಾಯಕತೆಗಳ ಶಿಕ್ಷೆ ವಿಧಿಸಿದೆ. ಅದೇ ಅವರ ಪಾಲಿನ ಅಪರಾಧಗಳು. ಅಲ್ಲಿ 'ಅತಿಕ್ರಮಣ' (ಬದ್ಮಾಷಿ*) ಎಸಗುವವರಿಲ್ಲ? ಆದರೆ ಮಾನವತೆಯ ಮೂಲಪೀಠದಿಂದ ಪದಚ್ಯುತಗೊಳಿಸಿ ಕ್ರೌರ್ಯದ ಬಡತನ ಮತ್ತು ಅಸಹಾಯಕತೆಗಳ ಬಂಧನಕ್ಕೆ ದೂಡಲ್ಪಟ್ಟಿರುವ ಜನರಿಂದ ಅಂತಹ ಬದ್ಮಾಷಿ ನಡೆದಿತಾದರೂ ಹೇಗೆ? ಆದರೆ ಅಂತಹ ಜನರನ್ನು ಶೋಷಿಸುವ ಬದ್ಮಾಷಿ ಮೂಲಕ ಬಡ್ತಿ ಮತ್ತು ಏಳಿಗೆಯನ್ನು ಕಾಣುವ ಜನರಿಗೇನೂ ಕಡಿಮೆ ಇಲ್ಲ. ಕೇವಲ ಕೈದಿ ಎನ್ನುವ ಕಾರಣಕ್ಕಾಗಿಯೇ ಓರ್ವ ಕೈದಿಗೆ ಆತನಿಗೆ ಸಲ್ಲಬೇಕಾದ ಮಾನವ ಪ್ರಧಾನ ಅಗತ್ಯಗಳು ಸಲ್ಲದಂತೆ ಮಾಡಲಾಗುತ್ತಿದೆ. ಅದರೊಂದಿಗೆ ಅವನಲ್ಲಿರುವ ಇತರ ಎಲ್ಲಾ ಒಳ್ಳೆಯ ಗುಣಗಳನ್ನು ತೊಡೆದು ಹಾಕಲಾಗುತ್ತಿದೆ. ಅವನನ್ನು ಚತುಷ್ಪಾದಿಯನ್ನಾಗಿ ಮಾಡಲಾಗುತ್ತಿದೆ. ಕೈದಿಗಳ ಕಾವಲುಗಾರರು ಚತುಷ್ಪಾದಿಗಳಿಗಿಂತ ಭಿನ್ನವೇನೂ ಅಲ್ಲ. ಆದರೂ ಅವರನ್ನು ಸಮಾಜ ಸಹಿಸಿಕೊಳ್ಳುತ್ತಿದೆ. ನನ್ನ ಭಾವನೆಯಲ್ಲಿ ನಾವು ಮನುಷ್ಯರನ್ನು ಅವರು ಮನುಷ್ಯರು ಎಂಬ ಕಾರಣದಿಂದಲೇ ಮೊದಲು ಪ್ರೀತಿಯಿಂದ ಕಾಣಬೇಕಾಗುತ್ತದೆ. ಅವರಲ್ಲಿರುವ ಐಶ್ವರ್ಯ, ಶ್ರೀಮಂತಿಕೆ, ವಿದ್ಯೆ ಅಥವಾ ಸ್ಥಾನಮಾನಗಳಿಗೆ ಅವರನ್ನು ಪ್ರೀತಿಸುವುದಲ್ಲ. ಜೈಲುಗಳು ಸೈತಾನನ ಮನೆಗಳಂತಿವೆ. ಈ ಮನೆಯಲ್ಲಿರುವವರೆಲ್ಲರನ್ನೂ ಅಪ್ರಾಮಾಣಿಕತೆಯ

---

* ಪಂಜಾಬಿನ ಜೈಲುಗಳಲ್ಲಿ ಇದು ಸಾಮಾನ್ಯ ಬಳಕೆಯ ಪದ. ಜೈಲಿನ ನಿಯಮ ನಿರ್ಬಂಧಗಳನ್ನು ಉಲ್ಲಂಘಿಸುವವರಿಗೆ ಈ ಪದವನ್ನು ಅನ್ವಯಿಸಲಾಗುತ್ತದೆ. ವಿಶೇಷವಾಗಿ ಕಳ್ಳಸಾಗಣೆದಾರರಿಗೆ ಈ ಪದದ ಅನ್ವಯ ಹೆಚ್ಚು, ಅರ್ಥಾತ್ ಅನಧಿಕೃತ ಮಾರ್ಗಗಳ ಮೂಲಕ ಅನುಕೂಲಗಳನ್ನು ಪಡೆದುಕೊಳ್ಳುವುದು.

ಕಿಡಿಗೇಡಿಗಳೆಂದು ವರ್ಣಿಸುವುದು ತರವಲ್ಲ ಎನಿಸುತ್ತದೆ. ಆದರೆ ನನ್ನ ಹೃದಯ ಈ ದಾರಿದ್ರ್ಯದ ಪ್ರಾರಬ್ಧ ಅಂಟಿಕೊಂಡ ಅಪರಾಧಿಗಳನ್ನು ಹೆಚ್ಚು ಹೆಚ್ಚು ಪ್ರೀತಿಸಬೇಕೆಂದು ಚೀರಿಡುತ್ತಿದೆ. ಅವರು ಕ್ರೂರಿಗಳು ಮತ್ತು ಕೆಟ್ಟವರು. ಕಾರಣ ಸಮಾಜವೇ ತನ್ನ ಅಮಾನವೀಯ ನಡವಳಿಕೆಗಳಿಂದ ಅವರನ್ನು ಹಾಗಾಗುವಂತೆ ಮಾಡಿದೆ. ಇಲ್ಲವಾದರೆ ಆ ಪೈಕಿ ಪ್ರತಿಯೊಬ್ಬರು ತಮ್ಮಲ್ಲಿ ಮಹಾತ್ಮ ಗಾಂಧೀಜಿ ಹೊಂದಿರುವ ಗುಣಾತೀಶಯಗಳನ್ನು ಹೊಂದಿರುತ್ತಿದ್ದರು. ಈ ಜೈಲುಗಳನ್ನು ಸುಧಾರಣೆಗಾಗಿ ಮಾಡಿದಂತಿಲ್ಲ. ಅಧಿಕಾರದಲ್ಲಿ ಉನ್ನತ್ತರಾದ ಕೆಲವು ಜನರು ತಮ್ಮ ದರ್ಪವನ್ನು ಮೆರೆಸುವ ಸಲುವಾಗಿ ಇವುಗಳನ್ನು ಕಲ್ಪಿಸಿದಂತಿದೆ. ಈ ಜನರು ನಿಸ್ಸಹಾಯಕರೇ. ಅವರು ಕಲಿತಿರುವ ಶಿಕ್ಷಣ ಮತ್ತು ಪಡೆದಿರುವ ತರಬೇತಿಗಳು ಅವರನ್ನು ಹಾಗೆ ನಿಸ್ಸಹಾಯಕರನ್ನಾಗಿ ಮಾಡಿದೆ. ಆದ್ದರಿಂದಲೇ ಅವರಿಗೆ ಕರುಣೆ ಎಂಬುದೇ ಇಲ್ಲ. ಅವರ ಬಗ್ಗೆಯೂ (ಯಾವ ಕೆಟ್ಟ ಆಲೋಚನೆ ಬಾರದಂತೆ) ನನ್ನ ಮನಸ್ಸನ್ನು ಮುಕ್ತವಾಗಿಸಿಕೊಳ್ಳಲು ನಾನು ಪ್ರಯತ್ನಿಸುತ್ತೇನೆ. ಹಾಗೆ ಮಾಡುವ ಮೂಲಕ ನನ್ನ ಮನದಲ್ಲಿ ಯಾವುದೇ ದ್ವೇಷ ಅಥವಾ ನಂಜು ಆ ಜನರ ಬಗ್ಗೆ ಉಳಿಯಬಾರದೆಂದು ಬಯಸುತ್ತೇನೆ. ಈ ಕಾರಣಗಳಿಗೆ ಋಣಿಯಾಗಿ ನಾನು ನನ್ನ ಈ ಸೆರೆಮನೆ ವಾಸವನ್ನು ಅನಾದೃಶ್ಯ ಅನುಗ್ರಹವೆಂದು ಪರಿಭಾವಿಸಿಕೊಂಡಿದ್ದೇನೆ. ಆತ್ಮ ಸಂಯಮ ಸಾಧಿಸಿಕೊಳ್ಳಲು ಮತ್ತು ಮಾನವೀಯತೆಯನ್ನು ಕಲಿಯಲು ಇದಕ್ಕಿಂತ ಉತ್ತಮವಾದ ಇನ್ನೊಂದು ಶಾಲೆ ಇಲ್ಲ. ಬಹುಶಃ ಈ ಶಾಲೆಗೆ ಬರುವವರು ತಮ್ಮ ಸ್ವಭಾವವನ್ನು ಈ ಕಲಿಕೆಗೆ ಯೋಗ್ಯವಾಗುವಂತೆ ಅಳವಡಿಸಿಕೊಳ್ಳಬೇಕಾಗುತ್ತದೆ ಅಷ್ಟೇ...

ಇನ್ನೊಂದು ದೊಡ್ಡ ಉಧೃತ ಪ್ರಸ್ತಾಪಿಸಿದ್ದಕ್ಕಾಗಿ ಯಾವುದೇ ಕ್ಷಮೆ ಕೋರುವ ಅಗತ್ಯವಿಲ್ಲವೆಂದು ನನಗನಿಸುತ್ತಿದೆ. ಇದರಲ್ಲಿ ಜೈಲುಗಳ ಸುಧಾರಣೆಯ ವಿಶಾಲ ದೃಷ್ಟಿಕೋನವಷ್ಟೇ ವ್ಯಕ್ತವಾಗುತ್ತಿಲ್ಲ. ನೀವು ಒಳಹೊಕ್ಕು ನೋಡಿದರೆ ಇದರಲ್ಲಿ ಲಜಪತ್‌ರಾಯ್ ಅವರ ವಿವಿಧ ಮುಖಗಳನ್ನು ಕಾಣಬಹುದು. ಅದರಲ್ಲೂ ಅಸಾಧಾರಣಾ ಅನ್ಯಾದೃಶ್ಯ ಪ್ರಜಾಸತ್ತಾತ್ಮಕ ವ್ಯಕ್ತಿಯಾಗಿ ಅವರು ಎದ್ದು ನಿಲ್ಲುತ್ತಾರೆ.

ಲಾಲಾಜಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲು ಅಧಿಕಾರಸ್ಥರು ಮುಂದಾಗಲಿಲ್ಲ. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ತಾವೆಸಗಿದ ಘೋರ ಅಜ್ಞಾನದಲ್ಲಿ ಮಾಜಿಸ್ಟ್ರೇಟರುಗಳು ಸಿಕ್ಕಿ ತೊಳಲುತ್ತಿದ್ದರು. ಅದರಿಂದ ಹೊರಗೆ ಬರುವುದು ಅವರಿಗೆ ದೊಡ್ಡ ತೊಂದರೆಯಾಗಿತ್ತು. ಲಾಲಾಜಿ ತಮ್ಮ ಪಾಲಿಗೆ ದೊಡ್ಡ ತೊಡಕಾಗುವುದನ್ನು ಮರೆ ಮಾಚಲು ಅವರು ಅತಿರೇಕದ ತಂತ್ರಗಳನ್ನು ಹೊಸೆದುಕೊಂಡಿದ್ದರು. ಇಲ್ಲವಾಗಿದ್ದರೆ ಲಾಲಾಜಿ ಅವರೊಂದಿಗೆ ಸಂದರ್ಶನಗಳಿಗೆ ಅಥವಾ ಭೇಟಿಗೆ ಅನುಮತಿ ನಿರಾಕರಿಸುತ್ತಿರಲಿಲ್ಲ. ಅವರ ಪರವಾಗಿ ಬಂಧುಗಳು ಅಥವಾ ಗೆಳೆಯರು ರಕ್ಷಣೆಯ ಮಾರ್ಗಕ್ಕೆ ಮುಂದಾದಾಗಲೂ ಅವಕಾಶಗಳು ದೊರೆಯದಂತೆ ಮಾಡುತ್ತಿರಲಿಲ್ಲ. ಮೂಲತಃ ಅವರನ್ನಾಗಲಿ ಅಥವಾ ಅವರಾಗಲಿ ಕನಿಷ್ಠ ವಕೀಲರೊಂದಿಗೆ ಸಹ ಭೇಟಿಯಾಗಲು ಅವಕಾಶ ನೀಡಲಿಲ್ಲ. ಲಾಲಾಜಿ ದಾಖಲೆ ಮಾಡಿಟ್ಟಿರುವಂತೆ ಜೈಲಿನ ಶ್ರಮದಾನಗಳನ್ನು ಸಹ ಸಸ್ಪೆಂಡ್ ಮಾಡಲಾಯಿತು. ಸಾಧ್ಯವಾದಷ್ಟು ಬೇಗ ಆ ತಾರತಮ್ಯದ ಹಂತ ಹಾದು ಹೋಯಿತು. ವಿಚಾರಣಾಧೀನ ಕೈದಿಯಾಗಿ ಅವರಿಗೆ ಯಥೋಕ್ತ ಭೇಟಿಯ ಅವಕಾಶಗಳು ದೊರೆತವು. ಗೆಳೆಯರು

ಮುಕ್ತವಾಗಿ ಅವರಿಗೆ ಹಣ್ಣಿನ ಬುಟ್ಟಿ ಮುಂತಾದವುಗಳನ್ನು ತಂದು ಕೊಡತೊಡಗಿದರು. ಅದೆಲ್ಲವನ್ನು ಲಾಲಾಜಿ ತಮ್ಮೊಡನಿದ್ದ ಕೈದಿಗಳೊಂದಿಗೆ ಹಂಚಿ ಕೊಳ್ಳುತ್ತಿದ್ದರು. ಜೈಲಿನ ಅಧಿಕಾರಿಗಳು ಕೊಡುತ್ತಿದ್ದ ಊಟದ ಪ್ರಮಾಣ ತೀರಾ ಕಡಿಮೆ. ಅದು ಬಹಳ ಕೆಳ ದರ್ಜೆಯದು. ಸರಿಯಾಗಿ ಪಕ್ವವಾಗಿರುತ್ತಿರಲಿಲ್ಲ. ಇನ್ನೊಂದು ಬಗೆಯ ಕೈದಿಗಳಿಗೆ ಅವರು ಕಾಂಗ್ರೆಸ್ಸಿಗರೇ ಆದರೆ ಇನ್ನೂ ಕೆಳ ದರ್ಜೆಯ ಊಟವನ್ನು ಪೂರೈಸಲಾಗುತ್ತಿತ್ತು. ಲಾಲಾಜಿ ನೇತೃತ್ವದಲ್ಲಿ ''ಉತ್ತಮ ದರ್ಜೆಯವರು ಎನಿಸಿಕೊಂಡ 14 ಕೈದಿಗಳು ಸುಪರಿಂಟೆಂಡೆಂಟರಿಗೆ ಪತ್ರ ಬರೆದು ಆ ತಾರತಮ್ಯ ನಿವಾರಿಸುವಂತೆ ಕೇಳಿಕೊಂಡರು.''

ಆದರೆ ಅಧಿಕಾರಸ್ಥರು ಅಂತಹ ಮಾರ್ಪಾಟಿನ ಆ ಮನವಿಗಳಿಗೆ ಬೆಲೆ ಕೊಡಲಿಲ್ಲ. ಸ್ವಾರ್ಥರಹಿತರಾಗಿ ಉತ್ತಮ ದರ್ಜೆಯವರು ಕೈಗೊಂಡ ಸಲಹೆಯಾಗಲಿ, ಕೆಟ್ಟದ್ದನ್ನು ಸುಧಾರಿಸುವ ಸಲುವಾಗಿ ಮಾಡಿದ ಪ್ರತಿಪಾದನೆಯನ್ನಾಗಲಿ ಅಥವಾ ಸಾಮಾನ್ಯ ವರ್ಗದವರ ಅನುಕೂಲಕ್ಕಾಗಿಯಾಗಲಿ ಸೂಚಿಸಿದ ಸಲಹೆಗಳನ್ನಾಗಲಿ ಅಧಿಕಾರಷಾಹಿ ಸುಧಾರಣೆಯ ಅರ್ಥದಲ್ಲಿ ಸ್ವೀಕರಿಸಲಿಲ್ಲ. ಅನೇಕ ಸಂದರ್ಭಗಳಲ್ಲಿ ಸ್ವಲ್ಪ ಉತ್ತಮ ಸ್ಥಿತಿಯವರು ಎನಿಸಿಕೊಂಡವರ ಸ್ಥಿತಿಗತಿಗಳು ಸಾಮಾನ್ಯ ದರ್ಜೆಯವರಿಗೆ ಸಹ್ಯವಾಗುತ್ತಿರಲಿಲ್ಲ. ಉತ್ತಮ ದರ್ಜೆಯ ಕೈದಿಗಳು ತಮ್ಮ ಗೆಳೆಯರು ಹಾಗೂ ಇತರರಿಂದ ಏನು ಬರುತ್ತಿತ್ತೋ ಅದನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದರೂ ಸಹ ಅವರು ಆ ಅತೃಪ್ತಿಯನ್ನು ತ್ಯಜಿಸುತ್ತಿರಲಿಲ್ಲ. ತಮ್ಮವರೇ ಆದ ಜನರಿಂದ ಹಾಗೇ ಹೊರಗಿನ ವಸ್ತುಗಳನ್ನು ಸ್ವೀಕರಿಸಲು ತಮಗೆ ಅವಕಾಶವಿಲ್ಲವೆಂಬ ಅಸಮಾಧಾನ ಆ ವರ್ಗಗಳ ಕೈದಿಗಳಲ್ಲಿ ಎದ್ದು ಕಾಣುತ್ತಿತ್ತು.

ನಿಷ್ಫಲಕಾರಿಯಾದ ಪ್ರತಿಭಟನೆ ಮತ್ತು ಮನವಿಗಳ ಹಂತ ಮುಗಿಯಿತು. ಕೊನೆಗೆ ಲಾಹೋರಿನ ಆ ಸೆಂಟ್ರಲ್ ಜೈಲಿನಲ್ಲಿ ಉತ್ತಮ ದರ್ಜೆಯ ಕೈದಿಯಾಗಿ ಲಜಪತರು ಅನುಗಾಲದ ಸೆರೆವಾಸಕ್ಕೆ ತಮ್ಮನ್ನು ತಾವು ಒಗ್ಗಿಸಿಕೊಂಡರು. ದೀರ್ಘ ಕಾಲ ಎಳೆಯಲ್ಪಟ್ಟ ವಿಚಾರಣೆ ಕೊನೆಗೊಂದು ದಿನ ಮುಕ್ತಾಯಗೊಂಡಾಗ ಹೊರಗಿನ ಜಗತ್ತಿನೊಂದಿಗೆ ಅವರಿಗಿದ್ದ ಸಂಬಂಧ ಸಂಪರ್ಕಗಳು ಕಡಿಮೆಯಾದವು. ಆಗಿನ ಬಂದಿಖಾನೆ ನಿಯಮಗಳ ಪ್ರಕಾರ ಕೈದಿಗೆ ಒಂದು ಭೇಟಿಯಿಂದ ಇನ್ನೊಂದು ಭೇಟಿಗೆ ಒಂದು ತಿಂಗಳ ಸುದೀರ್ಘ ಅಂತರವನ್ನು ವಿಧಿಸಲಾಗಿತ್ತು. ಶಿಕ್ಷೆ ವಿಧಿಸಲ್ಪಟ್ಟ ಮೇಲೆ ಹೊರಗಿನಿಂದ ಸಂದಾಯವಾಗುತ್ತಿದ್ದ ಆಹಾರವನ್ನು ಅವರು ಅವಲಂಬಿಸಲಾಗುತ್ತಿರಲಿಲ್ಲ. ಗೆಳೆಯರು ಹಾಗೂ ಇತರರು ಅವರನ್ನು ಭೇಟಿ ಮಾಡಲು ಒಂದು ತಿಂಗಳ ಸುದೀರ್ಘ ಅಂತರವಿದ್ದದ್ದೇ ಅದಕ್ಕೆ ಕಾರಣ. ಬಂದಿಖಾನೆಯ ಅಧೀನ ಸಿಬ್ಬಂದಿ ಲಜಪತರ ವಿಷಯದಲ್ಲಿ ಹೆಚ್ಚು ಗೌರವ ಹಾಗೂ ಸಹಾಯಕ ಮನೋಧರ್ಮ ಹೊಂದಿದ್ದರು. ಆ ಸೆರೆಮನೆಯಲ್ಲಿದ್ದ ಸಾಮಾನ್ಯ ದರ್ಜೆಯ ಕೈದಿಗಳು ಮತ್ತು ಬಂಧಿತ ಕೆಲಸಗಾರರಿಂದ ಲಜಪತರಿಗೆ ಗೌರವ ಮರ್ಯಾದೆಗಳು ಪ್ರಾಪ್ತವಾಗುತ್ತಿದ್ದವು. ಅವರು ತೋರುತ್ತಿದ್ದ ಗೌರವಪೂರ್ವಕ ನಮಸ್ಕಾರಗಳ ಆ ಸಂದರ್ಭ ಲಜಪತರನ್ನು ಮಾಂಡೇಲೆ ಕೋಟೆಯ ಘಟನೆಗೆ ಹೋಲಿಕೆಯಾಗುತ್ತಿತ್ತು. ರಾಜಕೀಯ ಕೈದಿಗಳಲ್ಲದ ಇತರೆ ಕೆಲವರು ಸಹ ತಾವೇ ತಾವಾಗಿ ಆಗಾಗ ಲಜಪತರ ವೈಯಕ್ತಿಕ

ಸಹಾಯಕ್ಕೆ ಮುಂದಾಗುತ್ತಿದ್ದರು. ಅದು ಅವರ ಬಗ್ಗೆ ಆ ಕೈದಿಗಳು ಇಟ್ಟುಕೊಂಡಿದ್ದ ಪ್ರೀತಿ ಸೌಹಾರ್ದಗಳ ಸಂಕೇತವಾಗಿರುತ್ತಿತ್ತು. ಆಗಾಗ ಲಾಲಾಜಿ ಬಳಲಿದಂತೆ ಕಂಡು ಬರುತ್ತಿದ್ದದ್ದು ಉಂಟು. ಅಂತಹ ಪ್ರಸಂಗಗಳಲ್ಲಿ ಮಾದಕ ವಸ್ತು ಅಪರಾಧಕ್ಕಾಗಿ ಶಿಕ್ಷೆಗೆ ಒಳಗಾಗಿದ್ದ ಕಟ್ಟುಮಸ್ತಾದ ನೀಲವರ್ಣ ಮುಖದ ಓರ್ವ ತರುಣ ಲಜಪತರಿಗೆ ಮಾಲೀಶ್ ನೆರವು ಒದಗಿಸುತ್ತಿದ್ದ. ಅವರ ಕೈಕಾಲು ಒತ್ತುತ್ತಿದ್ದ. ಲಾಲಾಜಿ ಅವರೊಂದಿಗಿದ್ದ ಇತರ ಕೆಲವು ಮಿತ್ರ ಕೈದಿಗಳು ಆ ತರುಣ ಅವರಿಗೆ ನೀಡುತ್ತಿದ್ದ ಉಪಚಾರದ ಬಗ್ಗೆ ಅಸೂಯೆ ಪಟ್ಟುಕೊಳ್ಳುತ್ತಿದ್ದದ್ದು ಉಂಟು! ಅನೇಕ ಕಾಂಗ್ರೆಸ್ ಕಾರ್ಯಕರ್ತರು ಲಾಲಾಜಿ ಅವರಿಗೆ ತಮ್ಮಿಂದಾಗುವ ನೆರವು ಒದಗಿಸುವ ಅವಕಾಶವನ್ನು ಅಭಿಮಾನದಿಂದ ಬಳಸಿಕೊಳ್ಳತೊಡಗಿದರು. ಲಾಹೋರ್ ಪೊಲೀಸರ ಕೆಳಸ್ತರದ ಮುಖಂಡನಾಗಿದ್ದ ಓರ್ವ ವ್ಯಕ್ತಿ ಮತ್ತೋರ್ವ ಪಂಜಾಬಿನ ದೋವಾಬ ಪ್ರಾಂತ್ಯದ ಅಕಾಲಿ ಸಿಖ್ ತರುಣ ಲಜಪತರ ಸಹ ಕೈದಿಯಾಗಿ ಅವರಿಗೆ ಸಾಧ್ಯವಾದ ಎಲ್ಲಾ ಸಹಾಯವನ್ನು ನೀಡುತ್ತಿದ್ದರು. ಆ ಜೈಲಿನಲ್ಲಿರುವ ತನಕ ಲಾಲಾಜಿ ಅವಿದ್ಯಾವಂತನಾಗಿದ್ದ ಆ ಅಕಾಲಿ ತರುಣನಿಗೆ ಅಕ್ಷರ ಕಲಿಸುವ ಕಾರ್ಯ ಬಿಡಲಿಲ್ಲ.

ಪುಸ್ತಕಗಳು ಮತ್ತು ಲೇಖನ ಸಾಮಾಗ್ರಿಗಳು ಯಾವುದೇ ಅಡೆತಡೆ ಇಲ್ಲದೆ ಸಾಗಿಸುವ ಅವಕಾಶವಿತ್ತು. ಆದರೆ ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಿಗೆ ಅಷ್ಟೇ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಲಾಗಿತ್ತು. ಲಾಲಾಜಿ ಅವರಿಗಾದರೋ ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಿಲ್ಲದೇ ಬದುಕುವುದು ಕಷ್ಟವೆನಿಸುತ್ತಿತ್ತು. ಅವರು ಕೈದಿಯ ಜೀವನಕ್ಕೆ ತಮ್ಮನ್ನು ಸಂಪೂರ್ಣವಾಗಿ ಒಗ್ಗಿಸಿಕೊಂಡಿದ್ದು ನಿಜ. ಆ ಕಠಿಣ ಜೀವನವನ್ನು ಸಂತೋಷದಿಂದ ಅನುಭವಿಸುತ್ತಿದ್ದದ್ದು ನಿಜ. ಒಳ್ಳೆಯದಕ್ಕಾಗಲಿ, ಅನುಕೂಲಗಳಿಗಾಗಲಿ ಅವರೆಂದೂ ರಾಗ ತೆಗೆದವರಲ್ಲ. ಗೌರವದ ಸೀಮಾರೇಖೆಯನ್ನು ಎಂದೂ ಉಲ್ಲಂಘಿಸಿದವರಲ್ಲ. ತಮ್ಮ ಸುತ್ತಲೂ ಇದ್ದ ಮಾನವ ಸಂಪತ್ತನ್ನು ಅತ್ಯಾಸಕ್ತಿಯಿಂದ ತಮಗೆ ಅನುಕೂಲಕರವಾಗುವ ರೀತಿಯಲ್ಲಿ ಹೊಂದಿಸಿಕೊಂಡಿದ್ದರು. ಗೆಳೆತನ ಸಾಧಿಸಿಕೊಂಡಿದ್ದರು. ಅವರ ಎದೆಯ ಕದ ತಟ್ಟುವವರೆಗೂ ಆತ್ಮೀಯತೆ ಸಾಧಿಸಿಕೊಂಡಿದ್ದರು. ಈ ಎಲ್ಲಾ ಗುಣಗಳಿಂದಾಗಿ ಅವರು ಮಹಾತ್ಮ ಗಾಂಧೀಯ ಸತ್ಯಾಗ್ರಹ ದೃಷ್ಟಿಗಿಂತ ತೀರಾ ಭಿನ್ನರಾಗಿ ನಿಷ್ಕಪಟ, ಋಜುತನದ ವ್ಯಕ್ತಿಯಾಗಿ ಅವರಿಗೆಲ್ಲಾ ಒಡನಾಡಿ ಎನಿಸಿದರು.

ವೃತ್ತಪತ್ರಿಕೆಗಳು ಲಾಲಾಜಿಯವರಿಗೆ ಎಷ್ಟೊಂದು ಅನ್ಯೋನ್ಯವಾಗಿದ್ದವು ಎಂಬುದನ್ನು ಜೈಲಿನ ಅಧಿಕಾರಿಗಳ ಕಲ್ಪನೆಗೂ ನಿಲುಕುವಂತಿರಲಿಲ್ಲ. ಅವರೆಷ್ಟು ಕಟ್ಟುಕಟ್ಟಳೆ ವಿಧಿಸಿದ್ದರೂ ಅವುಗಳನ್ನು ತರಿಸಿಕೊಳ್ಳದೇ ಇರಲು ಲಾಲಾಜಿ ಅವರಿಗೆ ಸಾಧ್ಯವಾಗದೇ ಇರಲಿಲ್ಲ. ಮಹಾನ್ ರಾಜಕೀಯ ನಾಯಕರ ಬಂಧನದ ಸ್ಮರಣೆಗಳನ್ನು ಓದಿರುವ ಓದುಗರಿಗೆಲ್ಲಾ ಆ ಸ್ಥಿತಿ ಮನವರಿಕೆಯಾಗುತ್ತದೆ. ಲಾಲಾಜಿ ಅವರಿಗೆ ಅತ್ಯುತ್ತಮ ಸಹವಾಸಿಗಳಿದ್ದರು. ಅಂಥ ಸಹವಾಸಗಳಲ್ಲಿ ಮಹಾತ್ಮ ಗಾಂಧೀಯಂಥವರು ಇಲ್ಲದಿದ್ದಿರಬಹುದು. ಸ್ವಾತಂತ್ರ್ಯ ಹೋರಾಟದ ರಾಜಕೀಯ ನಡವಳಿಕೆಗಳಲ್ಲಿ ನರಳಿದವರು

ಮತ್ತು ಹುತಾತ್ಮರಾದವರಲ್ಲಿ ಇಂಥ ವೈಚಿತ್ರ್ಯ ಮತ್ತು ವಿಪರೀತಗಳನ್ನು ಕಂಡವರದು ಒಂದು ದೊಡ್ಡ ವರ್ಗ - ಒಂದು ವೇಳೆ ಲಾಲಾಜಿ ಮಹಾತ್ಮ ಗಾಂಧೀಯ ಸತ್ಯಾಗ್ರಹಿಗಳಲ್ಲಿ ಒಬ್ಬರಾಗಿ ಅವರು ಬಣ್ಣಿಸಿದಂತೆ ''ಸೌಜನ್ಯ ಶಕ್ತಿ ಕುಂದಿದವರು'' ಆಗಿದಿದ್ದರೆ ಪರಿಸ್ಥಿತಿ ಬೇರೆಯದೇ ಆಗಿರುತ್ತಿತ್ತು.

ಗಾಂಧೀ ರೀತಿಗೆ ಬದ್ಧರಾಗದೆ ಲಾಲಾಜಿ ಹೊರಗಿನ ಜಗತ್ತಿನೊಂದಿಗೆ ತಮ್ಮದೇ ರೀತಿಯಲ್ಲಿ ಸಂಪರ್ಕಗಳನ್ನು ಸಾಧಿಸಿಕೊಂಡಿದ್ದರು. ಆ ಸಂಪರ್ಕಗಳ ಮೂಲಕ ಅವರಿಗೆ ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು ಪೂರೈಕೆಯಾಗುತ್ತಿದ್ದವು. ಆಗಿಂದಾಗ್ಗೆ ತಾವು ಬರೆದದ್ದನ್ನು ಅವರು ಅದೇ ಮಾರ್ಗವಾಗಿ ಪತ್ರಿಕೆಗಳಿಗೂ ಕಳುಹಿಸುತ್ತಿದ್ದರು. ನಿಯೋಜಿತ ರೀತಿಯಲ್ಲಿ ರವಾನಿಸಲಾಗದ ಪತ್ರಗಳನ್ನು ಸಹ ಅವರು ಅದೇ ಮಾರ್ಗದಲ್ಲಿ ಹೊರಗೆ ಸಾಗಿಸುತ್ತಿದ್ದರು. ಆ ಕೆಲಸವನ್ನೆಲ್ಲಾ ಅವರ ಯುವಶಕ್ತಿ ಜನತಾ ಸೇವಕರು ನಿರ್ವಹಿಸುತ್ತಿದ್ದರು. ಆ ತರುಣ ವರ್ಗವೇ ಲಾಲಾಜಿ ಅವರಿಗೆ ವೃತ್ತಪತ್ರಿಕೆಗಳಿಂದ ಆಯ್ದು ಕತ್ತರಿಸಿದ ಭಾಗಗಳು ಹಾಗೂ ವಿಶೇಷ ಸುದ್ದಿ ಭಾಗ ಮುಂತಾದವುಗಳನ್ನು ಒದಗಿಸುತ್ತಿದ್ದರು. ಪ್ರತಿನಿತ್ಯವು ಅವು ಲಾಲಾಜಿ ಅವರಿಗೆ ಸಂದಾಯವಾಗುವಷ್ಟು ವ್ಯವಸ್ಥಿತವಾದ ಏರ್ಪಾಟು ಅಲ್ಲಿತ್ತು. ಸಿ.ಆರ್. ದಾಸ್ ಅವರಿಗೆ ಲಾಲಾಜಿಯನ್ನು ಭೇಟಿ ಮಾಡುವ ಅನುಮತಿ ದೊರೆಯದಾದಾಗ ಇದೇ ಮಾರ್ಗದ ಮೂಲಕ ಅವರಿಬ್ಬರ ಅಭಿಪ್ರಾಯ ವಿನಿಮಯಗಳು ಲಿಖಿತ ರೂಪದಲ್ಲಿ ನಡೆದದ್ದು. ದೇಶಬಂಧುವಿನ ಸಲಹೆಯ ಮೇರೆಗೆ ವಿಧಾನಮಂಡಲಗಳ ಮೇಲಿನ ನಿಷೇಧವನ್ನು ಕೈಬಿಡುವಂತೆ ಕಾಂಗ್ರೆಸ್ ಅಧಿವೇಶನದ ಮೇಲೆ ಪ್ರಭಾವ ಬೀರುವ ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದು ಸಹ ಇದೇ ಮಾರ್ಗದಿಂದಲೇ.

ಲಾಲಾಜಿ ಅವರು ಬರೆದ ಲೇಖನಗಳು ಮತ್ತು ಅದರಿಂದ ತಮಗೆ ಬಂದ ಪತ್ರಗಳನ್ನು ದೇಶಬಂಧು ಸಿ.ಆರ್. ದಾಸ್ ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ಸಮರ್ಥವಾಗಿ ಬಳಸಿಕೊಂಡರು. ಅಸಹಕಾರ ಚಳವಳಿಯ ಆಂದೋಲನವನ್ನು ರದ್ದುಪಡಿಸಿದಾಗ ಅವರ ಆ ಕ್ರಮದ ಔಚಿತ್ಯದ ಬಗ್ಗೆ ಪ್ರತಿಕ್ರಿಯೆ ನೀಡಿ ಪತ್ರಗಳನ್ನು ಬರೆದ ಲಾಲಾಜಿ ಮತ್ತು ಮೋತಿಲಾಲ್‌ಜಿ ಅವರನ್ನು ಮಹಾತ್ಮ ಗಾಂಧೀಜಿ ''ಸೌಜನ್ಯ ಶಕ್ತಿ ಕುಂದಿದವರು'' ಆಗುತ್ತಾರೆಂದು ನಂಬಿರಲೂ ಇಲ್ಲ. (ಮುಂದಿನ ಹಂತದಲ್ಲಿ ಬಂಧನಕ್ಕೆ ಒಳಪಟ್ಟಾಗ ಮಹಾತ್ಮ ಗಾಂಧೀಜಿ ಅಂಥ ಅಭಿಪ್ರಾಯವನ್ನು ನೀಡಲಿಲ್ಲ ಎಂಬುದು ಇಲ್ಲಿ ಪ್ರಸ್ತುತ)

ಸೆರೆಮನೆಯ ಕಾಯ್ದೆ ಕಾನೂನುಗಳು ಏನೇ ಇರಲಿ ಲಾಲಾಜಿ ವರ್ತಮಾನ ಪತ್ರಿಕೆಗಳನ್ನು ಪಡೆದುಕೊಳ್ಳುತ್ತಿದ್ದರು. ಅವುಗಳಿಲ್ಲದೆ ಅವರಿಗೆ ಇರಲು ಸಾಧ್ಯವಾಗುತ್ತಲೂ ಇರಲಿಲ್ಲ. ಯಾವುದೇ ಕಾರಣದಿಂದ ತಮಗೆ ತಲುಪಬೇಕಾದ ಕಟ್ಟು ವಿಳಂಬವಾದರೂ ಅವರು ಚಡಪಡಿಸುತ್ತಿದ್ದರು. ಒಂದು ವೇಳೆ ತುಂಬಾ ತಡವಾಗಿ ಬಿಟ್ಟರಂತೂ ಅವರಿಗೆ ಉದ್ವೇಗವನ್ನೇ ತಾಳಿಕೊಳ್ಳಲಾಗುತ್ತಿರಲಿಲ್ಲ. ಗಟ್ಟಿಯಾಗಿ ಕೂಗಾಡುತ್ತಿದ್ದರು. ತಮ್ಮವರು ತನ್ನನ್ನು ಕಡೆಗಣಿಸುತ್ತಿದ್ದಾರೆಂದು ರೇಗಾಡುತ್ತಿದ್ದರು. ಬೇಸರಗೊಳ್ಳುತ್ತಿದ್ದರು. ದಿನ ಪತ್ರಿಕೆಗಳಿಗಾಗಿ ಲಾಲಾಜಿ ಎಷ್ಟು ತವಕ ಪಡುತ್ತಿದ್ದಾರೆಂಬುದು ಜೈಲು ಸಿಬ್ಬಂದಿಗಳಲ್ಲಿ ಅನೇಕರಿಗೆ ಗೊತ್ತಿತ್ತು

ಅಲ್ಲಿನ ವೈದ್ಯರು ಆ ಪೈಕಿ ಒಬ್ಬರಾಗಿದ್ದು ತಮ್ಮ ದಿನನಿತ್ಯದ ಭೇಟಿಯ ಸಮಯದಲ್ಲಿ ಉದ್ದೇಶಪೂರ್ವಕವಾಗಿಯೇ ತಾವು ತರುತ್ತಿದ್ದ ಟ್ರಿಬ್ಯೂನ್ ಪ್ರತಿಯನ್ನು ಲಾಲಾಜಿ ಇದ್ದ ಸೆಲ್‌ನಲ್ಲಿ 'ಮರೆತು' ಹೋಗುತ್ತಿದ್ದರು. ಹೀಗಾಗಿ ತಮ್ಮದೇ ಮಾರ್ಗದಲ್ಲಿ ತಮ್ಮ ಪ್ರತಿ ಬಂದು ಮುಟ್ಟುವುದಕ್ಕೆ 3-4 ತಾಸು ಮೊದಲೇ ಅವರು ಆ ದಿನದ ವೃತ್ತಪತ್ರಿಕೆಯನ್ನು ನೋಡಲು ಸಾಧ್ಯವಾಗುತ್ತಿದ್ದ ಪ್ರಸಂಗಗಳು ಅದೆಷ್ಟೋ! ಮಾಂಡೇಲೆಯಲ್ಲಿ ಭಜತ್ರಿ ಮತ್ತಿತರರು ಲಾಲಾಜಿ ಅವರಿಗೆ ಅದೇ ರೀತಿಯಲ್ಲಿ ನೆರವಾಗುತ್ತಿದ್ದರೆಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಸಾಮಾನ್ಯವಾಗಿ ಪಂಜಾಬಿನ ಆಡಳಿತರೂಢರು ಲಾಲಾಜಿಯೊಂದಿಗೆ ವಿಶೇಷ ಸಂದರ್ಶನಗಳಿಗೆ ಅವಕಾಶ ಕೊಡುತ್ತಿರಲಿಲ್ಲವಾದರೂ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ಅವರು ಮಣಿಯಲೇ ಬೇಕಾಗುತ್ತಿತ್ತು. ದೇಶಬಂಧು ಸಿ.ಆರ್. ದಾಸ್ ಅವರಂಥ 'ಆಕ್ಷೇಪಾರ್ಹ' ವ್ಯಕ್ತಿಗಳು ಅಲ್ಲದ ಪ್ರಸಂಗಗಳಲ್ಲಿ ಅಂಥ ಭೇಟಿಯ ಅವಕಾಶವನ್ನು ಸುಲಭದಲ್ಲಿ ನೀಡಲಾಗುತ್ತಿತ್ತು. ಪಂಡಿತ ಮದನ ಮೋಹನ ಮಾಳವೀಯ ಲಾಲಾಜಿಯೊಂದಿಗೆ ಜೈಲಿನಲ್ಲಿ ದೀರ್ಘ ಕಾಲದ ಭೇಟಿ ಮಾಡಿದ್ದು ಅಂಥ ಉದಾಹರಣೆಗಳಲ್ಲಿ ಒಂದು. ಆದರೂ ತಮ್ಮೊಂದಿಗೆ ತಂದಿದ್ದ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಕಟ್ಟನ್ನು ಅವರು ಲಾಲಾಜಿ ಅವರಿಗೆ ನೇರವಾಗಿ ನೀಡಲಾಗುತ್ತಿರಲಿಲ್ಲ. ಅದನ್ನು ಯೋಗ್ಯ ವಿಧಾನದ ಮೂಲಕ ಸಲ್ಲಿಸಲು ಜೈಲಿನ ಅಧಿಕಾರಿಗಳಿಗೆ ಒಪ್ಪಿಸಬೇಕಾಯಿತು. ಸಿ.ಎಫ್. ಆಂಡ್ರೂಸ್ ಲಾಲಾಜಿ ಭೇಟಿಗೆ ಅವಕಾಶ ಕ್ಲಿಷ್ಟವಾಗಲಿಲ್ಲ. ಪಡಿಹ್ಯಾಂ (ಲಂಡನ್)ನಲ್ಲಿ ಇನ್ನೂ ವೃತ್ತಿಶೀಲವಾಗಿದ್ದು ಬಹುಕಾಲದ ನಂತರ ಭಾರತಕ್ಕೆ ಅಲ್ಪಕಾಲದ ಭೇಟಿ ನೀಡಿದ್ದ ಎನ್.ಆರ್. ಧರ್ಮವೀರ್ ಲಾಲಾಜಿ ಅವರನ್ನು ಭೇಟಿ ಮಾಡಲು ಬಯಸಿದರು. ಅವರಿಗೆ ಎರಡು ಬಾರಿ ಆ ಭೇಟಿಯ ಅವಕಾಶ ಪ್ರಾಪ್ತವಾಯಿತು. ಒಂದು ಲಾಹೋರ್‌ನಲ್ಲಿ. ಇನ್ನೊಂದು ಧರ್ಮಶಾಲೆಯಲ್ಲಿ.

ಸಂತ ನಿಹಾಲ್‌ಸಿಂಗ್ ಬಹುಕಾಲದ ನಂತರ ಅಲ್ಪಕಾಲದ ಭೇಟಿಗಾಗಿ ಭಾರತಕ್ಕೆ ಬಂದಿದ್ದರು. ಲಾಲಾಜಿಯವರ ಬಂಧನ ಮತ್ತು ವಿಚಾರಣೆಯ ಸಮಯದಲ್ಲಿ ಅವರು ಲಾಹೋರಿನಲ್ಲಿ ಇದ್ದರು. ವೇಲ್ಸ್ ರಾಜಕುಮಾರನ ಭಾರತ ಭೇಟಿಯಲ್ಲಿ ಪತ್ರಿಕಾ ಪ್ರತಿನಿಧಿಯಾಗಿ ವರದಿ ಕಾರ್ಯಗಳ ನಿಮಿತ್ತ ಅವರು ಭಾರತಕ್ಕೆ ಬಂದಿದ್ದರು. ಭೋಜನ ಕೂಟವೊಂದರಲ್ಲಿ ನಿಹಾಲ್‌ಸಿಂಗ್ ಪಂಜಾಬಿನ ಗವರ್ನರ್ ಸರ್ ಎಡ್ವರ್ಡ್ ಮೆಕ್ಲಾಗನ್ ಅವರೊಂದಿಗೆ ತಮ್ಮ ಮಿತ್ರ ಲಜಪತರನ್ನು ಕಾಣುವ ಆಶಯ ವ್ಯಕ್ತಪಡಿಸಿದರು. ಸರ್ ಎಡ್ವರ್ಡ್ ಕೂಡಲೇ ಅಗತ್ಯ ಸೂಚನೆಗಳನ್ನು ಕೊಟ್ಟು ಭೇಟಿಗೆ ಅನುವು ಮಾಡಿದರು. ಪ್ರತಿಷ್ಠಿತ ಭೇಟಿಕಾರರು ತಾವಾದ್ದರಿಂದ ಲಾಲಾಜಿಯವರನ್ನು ಅವರ ಕೋಣೆಯಲ್ಲಿಯೇ ನೋಡುವುದಾಗಿ ನಿಹಾಲ್‌ಸಿಂಗ್ ಸೆಂಟ್ರಲ್ ಜೈಲಿನ ಅಧಿಕಾರಿಗಳಿಗೆ ತಿಳಿಸಿದರು. ಅವರನ್ನು ನೇರವಾಗಿ ಲಾಲಾಜಿ ಇದ್ದ ಸೆಲ್‌ಗೆ ಕರೆದೊಯ್ಯಲಾಯಿತು. ಸಂತ ನಿಹಾಲ್‌ಸಿಂಗ್ ಆ ಭೇಟಿಯನ್ನು ಅನೇಕ ಕಡೆಗಳಲ್ಲಿ ದಾಖಲು ಮಾಡಿದ್ದಾರೆ. ಲಾಲಾಜಿ ಅವರಿಗೆ ಒದಗಿಸುತ್ತಿದ್ದ ಊಟವನ್ನು ಕಂಡು ತಮಗೆ ದಿಗ್ಭ್ರಮೆಯಾಯಿತು ಎಂದು ಬರೆದಿದ್ದಾರೆ. ಆ ಊಟದ ಪೈಕಿ ಬ್ರೆಡ್ಡಿನ ತುಣುಕೊಂದನ್ನು ತಮ್ಮೊಂದಿಗೆ ತಂದಿದ್ದಾಗಿ

ದಾಖಲೆ ಮಾಡಿರುವ ಅವರು ''ಮಾಂಟೇಗೋ ಅವರಿಗೆ ತೋರಿಸುವ ಉದ್ದೇಶದಿಂದ ಚರ್ಮದ ತುಂಡಿನಂತಿದ್ದ ಬ್ರೆಡ್ಡಿನ ತುಣುಕೊಂದನ್ನು ತಂದೆ. ಆದರೆ ನಾನು ಲಂಡನ್‌ಗೆ ಮರಳಿ ಬರುವ ವೇಳೆಗೆ ಮಾಂಟೇಗೋ ಪದಚ್ಯುತರಾಗಿದ್ದರು'' ಎಂದು ಪ್ರಸ್ತಾಪ ಮಾಡಿದ್ದಾರೆ.

ಸಂತ ನಿಹಾಲ್‌ಸಿಂಗ್ ದಾಖಲೆಯಲ್ಲಿ, ''ಕೈದಿಯಾಗಿ ಲಾಲಾಜಿ ಕಂಡು ಕೊಂಡ 'ಒಳಗಿನ' ಪರಿಸ್ಥಿತಿ ಅವರಲ್ಲಿನ ಬಂಡಾಯದ ಗುಣವನ್ನು ಸಹಜವಾಗಿ ಜಾಗೃತಗೊಳಿಸಿತ್ತು. ನನ್ನ ಎದುರಿನಲ್ಲಿಯೇ ಅವರು ಜೈಲಿನ ಅಧಿಕಾರಿಗೆ ತಮ್ಮ ಅಸಮಾಧಾನ ತಿಳಿಸಿದರು. ಸೆರೆಮನೆಯಿಂದ ಹೊರಗೆ ಹೋಗುತ್ತಿದ್ದಂತೆಯೇ ಅವುಗಳ ಸುಧಾರಣೆಗಾಗಿ ಹೋರಾಟ ಕೈಗೊಳ್ಳುವುದನ್ನು ಪ್ರಕಟಿಸಿದರು'' ಎಂಬುದು ಕಂಡು ಬರುತ್ತದೆ.

ಗೆಳೆಯರಲ್ಲದಿದ್ದರೂ ಅವರೊಂದಿಗೆ ನಿಕಟವಾಗಿದ್ದು ಅದೇ ಬಂದಿಖಾನೆಯಲ್ಲಿ ಕೆಲವು ಕಾಲ ಕೈದಿಗಳಾಗಿದ್ದವರ ಪೈಕಿ ಕೆ. ಸಂತಾನಂ, ಗೋಪಿಚಂದ್ ಭಾರ್ಗವ ಸೇರಿದ್ದರು. ಶಿಕ್ಷೆಗೆ ಗುರಿಪಡಿಸಿದ್ದ ಮ್ಯಾಜಿಸ್ಟ್ರೇಟರು ಎಸಗಿದ್ದ ಕಾನೂನು ಅಪಚಾರಗಳನ್ನು ಸರಿಪಡಿಸಿದ ನಂತರ ಪಂಜಾಬಿನ ಸರ್ಕಾರ ಆ ಇಬ್ಬರನ್ನು ಬಿಡುಗಡೆ ಮಾಡಿತು. ತೆರವಾದ ಆ ಸ್ಥಾನಕ್ಕೆ ತಮಗಿನ್ನೂ ನಿಕಟವಾದ ಇನ್ನೊಬ್ಬರು ಬಂದಿದ್ದು ಲಾಲಾಜಿಯವರಿಗೆ ಅನೇಕ ರೀತಿಯಲ್ಲಿ ನೆರವಾಯಿತು. ವಂದೇ ಮಾತರಂ ಪತ್ರಿಕೆಯಲ್ಲಿ ಕಟುವಾದ ಲೇಖನ ಬರೆದ ಕಾರಣಕ್ಕಾಗಿ ರಾಂಪ್ರಸಾದರಿಗೆ ಆ ಶಿಕ್ಷೆ ವಿಧಿಸಲಾಗಿತ್ತು. ಲಾಲಾಜಿ ಮತ್ತು ಅವರ ಪಂಜಾಬಿ ಮಿತ್ರರಿಗೆ ಯಾವ ಕಾರಣಗಳ ಮೇಲೆ ಶಿಕ್ಷೆ ವಿಧಿಸಲಾಯಿತೋ ಅದೇ ಕಾರಣಗಳನ್ನು ಮುಂದು ಮಾಡಿ ಎಸ್.ಇ. ಸ್ಟೋಕ್ಸ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಯಿತು. ತಮ್ಮ ನಂತರ ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥರಾಗಬೇಕೆಂದು (ಪ್ರಾಂತೀಯ ಕಾಂಗ್ರೆಸ್ ಸಮಿತಿ ಸಮ್ಮತಿಯೊಂದಿಗೆ) ಲಾಲಾಜಿ ನೇಮಕಗೊಂಡಿದ್ದ ಆಘಾ ಮಹಮದ್ ಸಫ್ದಾರ್ ಸಹ ಕೈದಿಯಾಗಿ ಸೇರ್ಪಡೆಯಾದರು. ವಾಯುವ್ಯ ಗಡಿನಾಡಿನ ಅಬ್ದುಲ್ ಗಫರ್ ಖಾನ್ ಸೇರಿದಂತೆ ಇನ್ನೂ ಅನೇಕ ಹೆಸರಾಂತ ಮುಸಲ್ಮಾನ ಗೆಳೆಯರು ಸಹ ಕೈದಿಗಳಾದರು. ಆ ಕಾಲದಲ್ಲಿ, ಇನ್ನು ತರುಣನಾಗಿದ್ದ ಅಬ್ದುಲ್ ಗಫಾರ್‌ಖಾನ್ ಅಷ್ಟೊಂದು ಹೆಸರು ಮಾಡಿರಲಿಲ್ಲ. ಆದರೆ ಅವರ ಎತ್ತರದ ನಿಲುವು, ನಡವಳಿಕೆ ಹೋರಾಟದ ಗತ್ತು ಮತ್ತು ಆಕರ್ಷಕ ವ್ಯಕ್ತಿತ್ವದಿಂದಾಗಿ ಸಾಕಷ್ಟು ಕುತೂಹಲ ಕೆರಳಿಸಿದ್ದರು. ಹೊಸ ಕೈದಿಗಳ ಪೈಕಿ ಮತ್ತೊಬ್ಬ ಪ್ರಮುಖರು ಹಬೀಬ್-ಉರ್- ರಹಮಾನ್. ಅವರು ಲೂಧಿಯಾನದ ಜನಪ್ರಿಯ ಮೌಲ್ವಿ. ಪಂಜಾಬ್ ಖಿಲಾಫತ್ ಸಮಿತಿಯ ವಿಶಿಷ್ಟ ನೇತಾರರಲ್ಲಿ ಒಬ್ಬರು. ಇಂತಹ ಸಮರ್ಥ ಮುಸ್ಲಿಂ ಗೆಳೆಯರ ಗಣ ಆ ಜೈಲಿನಲ್ಲಿ ತಮ್ಮ ಸುತ್ತಲೂ ಕೂಡಿಕೊಂಡಿದ್ದು ಲಾಲಾಜಿಯವರಿಗೆ ಮುಸ್ಲಿಂ ಸಮುದಾಯದ ದೃಷ್ಟಿಕೋನವನ್ನು ಸೈದ್ಧಾಂತಿಕವಾಗಿಯೂ, ನಾಗರಿಕವಾಗಿಯೂ ಅರಿಯಲು ಒಳ್ಳೆಯ ಅವಕಾಶ ಕಲ್ಪಿಸಿತು. ಈ ಮೊದಲು ಅಂಥ ಮುಕ್ತ ಹಾಗೂ ತೆರೆದ ವಾತಾವರಣದಲ್ಲಿ ಆ ವಿಷಯಗಳನ್ನೆಲ್ಲವನ್ನು ಅಂತರ್ಗತ ಮಾಡಿಕೊಳ್ಳುವ ವಿಪುಲ ಅವಕಾಶ ಲಾಲಾಜಿಯವರಿಗೆ ಪ್ರಾಪ್ತವಾಗಿರಲಿಲ್ಲ.

ಬಂಧನದಲ್ಲಿದ್ದ ಆ ಅವಧಿಯಲ್ಲಿ ಲಕ್ಷ್ಮೀ ವಿಮಾ ಕಂಪನಿಯನ್ನು ಸ್ಥಾಪಿಸುವ ವಿಷಯ ಕುಡಿಯೊಡೆದಿದ್ದು. ಸಂತಾನಂ ಅವರಲ್ಲಿದ್ದ ಚುರುಕು, ಜಾಣ್ಮೆ ಮತ್ತು ವೃತ್ತಿಪರವಾದ ಅವರ ಭರವಸೆದಾಯಕ ನಡೆನುಡಿಗಳನ್ನು, ಚಾಣಾಕ್ಷತನಗಳನ್ನು ಲಾಲಾಜಿ ಹತ್ತಿರದಿಂದ ಮನಗಂಡಿದ್ದರು. ಪಂಜಾಬಿನಿಂದ ಆ ಪ್ರತಿಭೆ ಜೀವನೋಪಾಯಕ್ಕಾಗಿ ಹೊರಗೆ ಹೋಗುವ ಪ್ರಸಂಗ ಬಂದಾಗ ಲಾಲಾಜಿಗೆ ಸಹ್ಯವಾಗಲಿಲ್ಲ. ಸಂತಾನಂ ಅವರನ್ನು ಅಲ್ಲಿಯೇ ಉಳಿಸಿಕೊಳ್ಳುವ ಸಲುವಾಗಿ ಲಾಲಾಜಿ ವಿಮಾ ಕಂಪನಿ ಸ್ಥಾಪನೆಯ ಯೋಚನೆ ಮಾಡಿದರು.

ಈ ಬಂಧನದ ಅವಧಿಯಲ್ಲಿ ಲಾಲಾಜಿಯವರಿಂದ ಮೂರನೇ ಕಂತಿನ ಕೃತಿಗಳ ಕೃಷಿ ನಡೆಯಿತು. ಮೊದಲ ಕಂತಿನ ಕೃಷಿ 19ನೇ ಶತಮಾನದ ಅಂತ್ಯದಲ್ಲಿ ಅವರ ಆರ್ಯ ಸಮಾಜ ಒಡನಾಟದ ಸಮಯದಲ್ಲಿ ನಡೆದಿತ್ತು. ಆಗ ಉರ್ದು ಭಾಷೆಯಲ್ಲಿ ಜೀವನ ಕಥೆಗಳನ್ನು ಪ್ರಕಟಿಸಿದ್ದರು. ಅದು ಅಬೊಟ್ಟಾಬಾದ್‌ನಲ್ಲಿ ದೀರ್ಘ ಕಾಲದ ಅನಾರೋಗ್ಯದಿಂದ ಹಾಸಿಗೆ ಹಿಡಿದ ಸಮಯದಲ್ಲಿ ಆ ಕೃತಿಗಳಿಗೆ ಹೆಚ್ಚು ಒತ್ತು ನೀಡಿದ್ದರು. ಮಾಂಡೇಲೆ ಕೋಟೆಯಲ್ಲಿನ ಗಡಿಪಾರು ಶಿಕ್ಷೆ ಅವಧಿಯ 6 ತಿಂಗಳಲ್ಲಿ ಪುಟ್ಟದೊಂದು ಕೃತಿ ಹೊರಬಂದಿತ್ತು. ಅವರ ಎರಡನೇ ಪ್ರಮುಖ ಹಂತದ ಲೇಖನ ಕೃಷಿ ನಡೆದದ್ದು ಐದು ವರ್ಷಗಳ ಸ್ವಯಂ ಘೋಷಿತ ಗಡಿಪಾರು ಅವಧಿಯಲ್ಲಿ. ಈಗ ಮೂರನೇ ಕಂತಿನ ಹೊತ್ತಿಗೆಗಳ ಕೆಲಸ ಆ ಸೆರೆಮನೆಯಲ್ಲಿ ನಡೆಯಿತು. ಹೊಸ ಕೃತಿಗಳ ಪೈಕಿ (ಕೆಲವು ವೃತ್ತಪತ್ರಿಕೆಗಳ ಲೇಖನಗಳು ಸೇರಿ) ಆರು ಪುಟಗಳಷ್ಟು ಸುದೀರ್ಘವಾದ ಪ್ರಾಚೀನ ಭಾರತದ ಉರ್ದು ಚರಿತ್ರೆ ಪ್ರಮುಖವಾದದ್ದು. ''ಮಹಾಪುರುಷರು'' ಸರಣಿಯ ಪುಸ್ತಕದ ಸಾಲಿಗೆ ಅಶೋಕನನ್ನು ಕುರಿತ ಹೊಸ ಹೊತ್ತಿಗೆಯನ್ನು ಸೇರಿಸಿದರು. ಎಲ್ಲದಕ್ಕಿಂತ ಹೆಚ್ಚಿನದಾಗಿ ಮಹಾ ಹೋರಾಟಗಾರ ಸ್ವಾತಂತ್ರ್ಯ ಪ್ರೇಮಿ ಶಿವಾಜಿ ಕೃತಿಯನ್ನು ಸಂಪೂರ್ಣವಾಗಿ ಪುನರ್ ನಿರೂಪಣೆಗೊಳಿಸಿದರು.

ದೇಶಬಂಧು ಸಿ.ಆರ್. ದಾಸ್ ಅವರ ಆಶಯಕ್ಕೆ ಪೂರಕವಾಗಿ ತಮ್ಮ ನಿಲುವನ್ನು ದೃಢೀಕರಿಸಿ ಶಾಸಕಾಂಗಗಳ ಮೇಲಿನ ನಿಷೇಧವನ್ನು ರದ್ದುಪಡಿಸುವ ಸಲುವಾಗಿ ಅಸಹಕಾರ ಚಳವಳಿಯ ಸಂಪ್ರದಾಯ ಬದ್ಧ ಚಳವಳಿ ಪ್ರಕಾರದ ತಪ್ಪು ತಡವರಿಕೆಯನ್ನು ಕಾಂಗ್ರೆಸ್ಸಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಬರೆದ ಲೇಖನಗಳು ಸೇರಿದಂತೆ ವೃತ್ತಪತ್ರಿಕೆ ಬರಹಗಳದೇ ಒಂದು ಕೃತಿಯಾಯಿತು. ಸಂವಿಧಾನಾತ್ಮಕ ಅತೃಪ್ತನ ವಿಶ್ಲೇಷಣೆಗಳು ಲೇಖನಮಾಲೆ ಆ ಬಗೆಯಲ್ಲಿ ಒಂದು ಅತ್ಯುತ್ತಮ ಕೊಡುಗೆ. 'ಸೌಜನ್ಯದ ಶಕ್ತಿ ಕುಂದಿದವರು' ಆ ಕೋಪ ಲಜಪತರನ್ನು ಗುಪ್ತನಾಮದಲ್ಲಿ ಅಥವಾ ಅಜ್ಞಾತ ಹೆಸರಿನಲ್ಲಿ ಆ ಸರಣಿ ಲೇಖನ ಬರೆಯುವಂತೆ ಮಾಡಿತು! ಆ ಲೇಖನಗಳನ್ನು ಬರೆದವರು 'ವಿಧುರ' ಎಂದು ಕಾಣಿಸುತ್ತಿದ್ದರು. ಲೇಖಕರು ಅಜ್ಞಾತರಾಗಿ ಉಳಿದುಕೊಳ್ಳಬೇಕಾಗಿ ಬಂದ ಪರಿಸ್ಥಿತಿ ''ಸಂವಿಧಾನಾತ್ಮಕ ಅತೃಪ್ತನ'' ಸೃಷ್ಟಿಗೆ ಪ್ರೇರಣೆಯಾಯಿತು. ಆ ಅತೃಪ್ತನು ವ್ಯಕ್ತಪಡಿಸಿದ ವಿವರಣೆಗಳು, ವಿಶ್ಲೇಷಣೆಗಳು ಆಂದೋಲನಕಾರರು ಎಡವಿದ್ದ ಸ್ಥಿತಿಯನ್ನು ಪ್ರತಿಮಾ ರೂಪದ ವಿವರಣೆಯೊಂದಿಗೆ ಆಳವಾದ ವಿವೇಚನೆ ಮತ್ತು ವಿಸ್ತೃತ ನಿರೂಪಣೆಯೊಂದಿಗೆ ವಿಷದವಾಗಿ ಪ್ರಕಟಗೊಳಿಸಿದವು. ಹಾಗೆ ಮಾಡುವಾಗ ಕಪಟವಾಗಲಿ, ವೈಭವಿಕರಣವಾಗಲಿ ಅದರಲ್ಲಿ ವ್ಯಕ್ತವಾಗಿಲ್ಲ. ಎಲ್ಲವೂ ನೇರವಾಗಿ ಸಂದರ್ಭಕ್ಕೆ ತಕ್ಕಂತೆ ವ್ಯಂಗ್ಯ ಮತ್ತು ಕಟು

ಟೀಕೆಗಳೊಂದಿಗೆ ವಸ್ತುಸ್ಥಿತಿಯನ್ನು ವಿವೇಚಿಸಲಾಯಿತು. ಲೇಖಕನು ಸ್ವತಃ ಬಹಿರಂಗವಾಗಿ ವ್ಯಕ್ತಪಡಿಸಲಾಗದ ಒಳ ಅಂಶಗಳೆಲ್ಲವೂ ಅದರಲ್ಲಿ ನೇರವಾಗಿ ಪ್ರಸ್ತಾಪಿಸಲ್ಪಟ್ಟವು. ಲಾಲಾಜಿ ಅಷ್ಟೊಂದು ಸಮರ್ಥವಾದ ಲೇಖಕರು ಮಾಧ್ಯಮವನ್ನು ಬಳಸಿಕೊಂಡಿರುವುದು ಆ ಸರಣಿ ಲೇಖನಗಳಿಂದ ವ್ಯಕ್ತವಾಗುತ್ತದೆ.

ಆಗ ಅವರು ಬರೆದ ಹೊತ್ತಿಗೆಗಳಲ್ಲಿ ಪ್ರಮುಖವಾದ ಇನ್ನೊಂದು ಬರಹ (ಎಬಿಸಿ ಆಫ್ ಇಂಡಿಯನ್ ಪಾಲಿಟಿಕ್ಸ್) ಭಾರತೀಯ ರಾಜಕಾರಣದ ಓನಾಮ. ಅದು ಅವರ ಮಗನ ಹೆಸರಿನಲ್ಲಿ ಮಾಡರ್ನ್ ರಿವ್ಯೂ ನಿಯತಕಾಲಿಕೆಯಲ್ಲಿ ಪ್ರಕಟಗೊಂಡಿತ್ತು. ಆದರೆ ಸೂಕ್ಷ್ಮಗ್ರಾಹಿಗಳಾದ ಓದುಗರಿಗೆ ಅದು ಆ ಲೇಖಕನ ತಂದೆಯ ಕೃಷಿ ಎಂಬುದು ಸುಲಭದಲ್ಲಿ ತಿಳಿದುಹೋಯಿತು. ಆ ಲೇಖನ ಒಂದು ಅಪರೂಪದ (ಮಾರ್ಕ್ಸ್‌ವಲಯ ಹೊರತುಪಡಿಸಿ) ಪ್ರಯತ್ನವೆನಿಸಿತು. ಭಾರತೀಯ ರಾಜಕಾರಣದ ನಾಯಕನೋರ್ವ ಸೈದ್ಧಾಂತಿಕ ಮೂಲಭೂತ ಅಂಶಗಳನ್ನು ಪರಿಷ್ಕರಿಸಿದ್ದು ಮತ್ತು ಸಕ್ರಿಯ ರಾಜಕಾರಣವನ್ನು ಸೃಜನಾತ್ಮಕ ಸಾಮಾಜಿಕ ನೆಲೆಗಟ್ಟುಗಳೊಂದಿಗೆ ಅನುಬಂಧಗೊಳಿಸಲು ಪ್ರಯತ್ನಿಸಿದ್ದು ಆ ಲೇಖನದ ವೈಶಿಷ್ಟ್ಯ.

ಸ್ವತಃ ಲಾಲಾಜಿ ಸಿದ್ಧಾಂತವಾದಿಯಾಗಿ ಎಂದೂ ಪಾತ್ರಧಾರಿಗಳಾದವರಲ್ಲ. ಆದರೆ ಕೆಲವು ಲಿಬರಲ್ ನಾಯಕರುಗಳು 'ಕಾನೂನು ಮತ್ತು ಸುವ್ಯವಸ್ಥೆ' ಬಗ್ಗೆ ಹಾಗೂ 'ಮೂಲಭೂತ.ಕರ್ತವ್ಯಗಳ' ಬಗ್ಗೆ ಬಹುವಾಗಿ ಮಾತನಾಡುತ್ತಿದ್ದರು. ಆ ಮಾತುಗಳಲ್ಲಿ ಪುಸ್ತಕದ ಹಳಸಲು ಪರಿಭಾಷೆ ಹಾಗೂ ಅದಕ್ಕನುಗುಣವಾದ ತೋರಿಕೆಯ ನಡವಳಿಕೆಗಳು ಎದ್ದು ಕಾಣುತ್ತಿದ್ದವು. ಮಾತಿಗೂ ಕೃತಿಗೂ ಹೊಂದಾಣಿಕೆ ಇಲ್ಲದ ನಡವಳಿಕೆ ಅವರದಾಗಿತ್ತು. ಅಂಥವರಿಗೆ ರಾಜಕಾರಣ ಮತ್ತು ಸಾಮಾಜಿಕ ನೆಲೆಗಟ್ಟುಗಳ ಭಾವನಾತ್ಮಕ ನಂಟು ಏನೆಂಬುದನ್ನು ಚಿತ್ರಿಸಿ ತೋರಿಸಲು ಲಾಲಾಜಿ ಬಹುಕಾಲದಿಂದ ಆಶಿಸಿದ್ದರು. ಅದು ಅವರ ಆ ತುರಂಗ ವಾಸದ ಅವಧಿಯಲ್ಲಿ ಕೃತಿ ರೂಪದಲ್ಲಿ ಹೊರಹೊಮ್ಮಿತು. ಮುಂಬೈ ಕಾಂಗ್ರೆಸ್ ಅಧಿವೇಶನದ ತಮ್ಮ ಹೆಸರಾಂತ ಭಾಷಣದಲ್ಲಿ ಅವರು ಸೌಮ್ಯವಾದಿಗಳನ್ನು ಉನ್ನತ ದರ್ಜೆಯ ನಂಬಿಕೆ ದ್ರೋಹಿಗಳೆಂದು ದೂರಿದ್ದರು. ಅದಕ್ಕೆ ಪ್ರತಿಫಲವಾಗಿ ಶ್ರೀನಿವಾಸ ಶಾಸ್ತ್ರಿ ಅಂತವರಿಂದ ತಿರುಗಿ ಬಿದ್ದ ಪ್ರತ್ಯಾರೋಪವನ್ನು ಸಂತೋಷದಿಂದ ಅನುಭವಿಸಿದ್ದರು. ಈಗಿನ 'ವಿಶ್ಲೇಷಣೆ'ಯಲ್ಲಿ ಅವರು ಆ ಪ್ರತ್ಯಾರೋಪಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿ ಅವುಗಳನ್ನು ಬರೆದವರಿಗೆ ಹಿಂತಿರುಗುವಂತೆ ಮಾಡಿದರು. ಎಬಿಸಿ...ಯಲ್ಲಿ ಲಾಲಾಜಿ ಸೌಮ್ಯವಾದಿಗಳನ್ನು ಸ್ವಯಂಘೋಷಿತ ತನ್ನನ್ನು ತಾನೇ ಲಿಬರಲ್ಸ್ ಎಂದು ಕರೆದುಕೊಂಡವರು ಎಂದು ಅವರ ನಿಲುವು ಮತ್ತು ನಡವಳಿಕೆಗಳ ತಪ್ಪು ತಟವಟಿಕೆಗಳಿಗಾಗಿ ತರಾಟೆಗೆ ತೆಗೆದುಕೊಂಡರು. ಅಧಿಕಾರಶಾಹಿಯೊಂದಿಗೆ ಶಾಮೀಲಾಗಿ ದಬ್ಬಾಳಿಕೆ ನೀತಿಗೆ ಬೆಂಬಲ ಕೊಟ್ಟವರೆಂದು ಅವರ ಬಣ್ಣಗಳನ್ನು ಬಯಲಿಗೆಳೆದರು.

ಲಜಪತರು ಜೈಲಿನಲ್ಲಿ ಕೈದಿಗಳ ಪರಿಶ್ರಮದ ಕೆಲಸವನ್ನು ಮಾಡುತ್ತಿದ್ದರು. ಆ ಕೆಲಸಗಳನ್ನು ಮಾಡಲು ತುಂಬಾ ಸಂತೋಷವಾಗುತ್ತಿತ್ತು. ಆರಂಭದ ಕೆಲವು ದಿನಗಳನ್ನು

ಬಿಟ್ಟರೆ ನಂತರ ಅವರು ಜೈಲಿನ ಕೆಲಸಗಳನ್ನು ಮಾಡುವಾಗ ತುಂಬಾ ಹರ್ಷಚಿತ್ತರಾಗಿರುತ್ತಿದ್ದರು. ಆರಂಭದಲ್ಲಿ ಅವರಿಗೆ ಬೇಸರವಾಗಿದ್ದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಕೈನಿಂದ ನೂಲು ತೆಗೆಯುವ ಕೆಲಸವನ್ನು ಮಾಡಬೇಕಾಗಿತ್ತು. ಅದು ಅವರ ಮನಸ್ಥಿತಿಗೆ ಆಗಿನ ಸಮಯದಲ್ಲಿ ಒಗ್ಗದ ಕೆಲಸವಾಗಿತ್ತು. ಬರ್ದೋಲಿ ತೀರ್ಮಾನಗಳ ಹಿನ್ನಲೆಯಲ್ಲಿ ಕೈನೂಲು ತೆಗೆಯುವ ಕೆಲಸದ ಪ್ರಣೇತರ ಬಗ್ಗೆ ಲಜಪತರಲ್ಲಿ ಗೌರವ ಚ್ಯುತಿಯಾಗಿದ್ದದ್ದು ಪ್ರಮುಖ. ಈ ಮಧ್ಯೆ ಅವರಿಗೆ ಇನ್ನೊಂದು ಪರ್ಯಾಯ ಮನಸ್ಸಿಗೆ ಹಿಡಿಸುವ ಕೆಲಸ ಒದಗಿ ಬಂದಿತು. ಮುಂಜಾ ಹುಲ್ಲನ್ನು ಬಳಸಿಕೊಂಡು ಹೆಣಿಕೆ ಹಾಕುವ ಕೆಲಸ ಅದು. ಅದು ಲಜಪತರನ್ನು ಬಹುವಾಗಿ ಆಕರ್ಷಿಸಿತು. ಅನೇಕ ಚಾಪೆಗಳನ್ನು ಹೆಣೆದರು. ಅದರಲ್ಲಿ ಅವರ ಕರಕುಶಲ ಕೌಶಲ್ಯ ಪ್ರೌಢವಾಗಿತ್ತು. ಅಭಿಮಾನದ ಕೆಲಸ ಅದೆಂದು ಅವರಿಗೂ ಅನಿಸಿತು. ಜೈಲಿನಿಂದ ಬಿಡುಗಡೆಯಾದಾಗ ತಾನು ಹೆಣೆದಿದ್ದ ಅನೇಕ ಚಾಪೆಗಳನ್ನು ಅವರು ತಮ್ಮೊಡನೆ ತೆಗೆದುಕೊಂಡು ಬಂದರು. ಕಾಲಾನುಕ್ರಮದಲ್ಲಿ ಒಂದೊಂದಾಗಿ ಆ ಚಾಪೆಗಳೆಲ್ಲವೂ ಅವರಿಂದ ಬೇರ್ಪಡತೊಡಗಿದವು. ಅಂದರೆ ಅವರ ಶ್ರೀಮಂತ ಅಭಿಮಾನಿಗಳು ಅವರು ಕೈಗೊಂಡ ಕೆಲವು ಜನಪರವಾದ ಕಾರ್ಯಗಳಿಗೆ ಉದಾರ ನೆರವು ಕೊಟ್ಟು ಅವರ ಮೇಲಿನ ಪ್ರೀತಿಯ ನೆನಪಾಗಿ ಆ ಚಾಪೆಗಳನ್ನು ತೆಗೆದುಕೊಂಡು ಹೋಗತೊಡಗಿದರು. ಮತ್ತೆ ಕೆಲವು ಗೆಳೆಯರು ಆತ್ಮೀಯತೆಯ ಸಂಕೇತವಾಗಿ ಅವುಗಳನ್ನು ಕೊಂಡೊಯ್ದರು.

ಎರಡು ವರ್ಷಗಳ ಕಾಲದಲ್ಲಿ ಆ ಶಿಕ್ಷೆ ಮೆಚ್ಚಿಗೆಯ ಕಠಿಣತರ ಅವಧಿಯಾಗಿ ಲಜಪತರ ಜೀವನ ಚರಿತ್ರೆಯಲ್ಲಿ ದಾಖಲಾಗಿದೆ. ಅವರ ದುರ್ಬಲ ಆರೋಗ್ಯ ಕಾಡದಿರುತ್ತಿದ್ದರೆ ಆ ಅವಧಿ ಇನ್ನಷ್ಟು ಆಶ್ಚರ್ಯಕರವಾಗಿದ್ದುದ್ದರಲ್ಲಿ ಅನುಮಾನವಿಲ್ಲ. ಜೈಲಿನ ಅಹಿತಕರ ವಾತಾವರಣ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿತು. ಬರ್ದೋಲಿ ಹಿನ್ನಡೆ -ಹಿನ್ನಡೆ ಎನ್ನುವುದಕ್ಕಿಂತಲೂ ಪಲಾಯನವೆಂದರೆ ಸರಿ -ಮತ್ತು ಆಗಾಗ ತಲೆದೋರ ತೊಡಗಿದ ಕೋಮು ದಂಗೆಗಳು ದೇಶದ ಪರಿಸ್ಥಿತಿಯನ್ನು ತೀರಾ ಮಬ್ಬಾಗಿಸಿದ ದಿನಗಳು ಅವು. ಅದೆಲ್ಲವೂ ಲಜಪತರ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದವು. ದೈಹಿಕವಾಗಿಯೂ, ಮಾನಸಿಕವಾಗಿಯೂ ಜರ್ಜರಿತವಾಗಿದ್ದ ಅವರಿಗೆ 1923ರಲ್ಲಿ ಎರಗಿ ಬಂದ ತಮ್ಮ ತಂದೆಯ ಸಾವಿನ ಸುದ್ದಿ ಇನ್ನಷ್ಟು ಭೀಕರ ಪರಿಣಾಮ ಬೀರಿತು. ತಂದೆಯ ಕೊನೆಯ ದಿನಗಳ ಸಮಯದಲ್ಲಿ ಅವರ ಬಳಿಯಲ್ಲಿ ಇರಲಾಗದಿದ್ದಕ್ಕೆ ಲಜಪತರು ಮಮ್ಮಲ ಮರುಗಿದರು. ಅಪಾರ ವೇದನೆ ಅನುಭವಿಸಿದರು.

ಹೀಗೆ ಒಂದರ ಮೇಲೊಂದಾಗಿ ಎರಗಿ ಬಂದ ಒತ್ತಡಗಳಿಂದ ಲಾಲಾಜಿ ಆರೋಗ್ಯ ವಿಷಮಿಸಿತು. ವಾತಾವರಣದ ಬದಲಾವಣೆ ಹಿನ್ನಲೆಯಲ್ಲಿ ಸ್ವಲ್ಪ ಸಮಯದವರೆಗೆ ಅವರನ್ನು ಕಾಂಗ್ರಾ ಕಣಿವೆಯ ಧರ್ಮಶಾಲಾ ಜೈಲಿಗೆ ವರ್ಗಾವಣೆ ಮಾಡಲಾಯಿತು. ಆದರೂ ಲಾಲಾಜಿ ಆರೋಗ್ಯ ಉತ್ತಮಗೊಳ್ಳಲಿಲ್ಲ. ಇನ್ನಷ್ಟು ಕಳವಳಕರವಾಯಿತು. ಸೆರೆವಾಸ ಆರಂಭಗೊಂಡ ದಿನಗಳಲ್ಲಿ ಅವರ ಕಿರಿಯ ಒಡನಾಡಿ ಡಾ. ಗೋಪಿಚಂದ್ ಭಾರ್ಗವ ಲಜಪತರ ಕ್ಷೀಣಿಸುತ್ತಿದ್ದ ಆರೋಗ್ಯವನ್ನು ಗುರುತಿಸಿದ್ದರು. ಜೈಲಿನ ಆಹಾರ

ಅವರಿಗೆ ಆರೋಗ್ಯಕರವಾಗಿರಲಿಲ್ಲ ಎಂಬುದನ್ನು ತಿಳಿಸಿದ್ದರು. ಲಾಲಾಜಿ ಅವರ ನಿರ್ನಿದ್ದೆ ಅವರಲ್ಲಿ ಅಗ್ನಿಮಾಂದ್ಯಕ್ಕೆ ಕಾರಣವಾಗಿ ಜೀರ್ಣ ಶಕ್ತಿಯ ಮೇಲೆ ವಿಪರೀತದ ಹೊಡೆತ ಹಾಕಿತ್ತು.

ದಿನ ಕಳೆದಂತೆ ಲಾಲಾಜಿ ಅವರ ಇಡೀ ಆರೋಗ್ಯ ವ್ಯವಸ್ಥೆಯೇ ಏರುಪೇರಾಗತೊಡಗಿತ್ತು. ಬಿಟ್ಟು ಬಿಡದ ಜ್ವರ ಆವರಿಸಿಕೊಂಡಿತ್ತು. ಬಂದಿಖಾನೆಯ ವೈದ್ಯರು ಅಸಹಾಯಕರಾದರು. ಜ್ವರ ಬಿಡಲೇ ಇಲ್ಲ. ಅವರ ಶಕ್ತಿ ಕುಂದತೊಡಗಿತು. ಯಕೃತ್ತಿನ ತೊಂದರೆಯೊಂದರ ಬಗ್ಗೆ ವೈದ್ಯರು ಶಂಕೆ ವ್ಯಕ್ತಪಡಿಸಿದರು. ಆದರೆ ಆ ತೊಂದರೆಯ ನಿರ್ದಿಷ್ಟ ಸ್ವರೂಪ ಏನೆಂಬುದನ್ನು ನಿರ್ಧರಿಸುವುದು ಸುಲಭ ಸಾಧ್ಯವಾಗಿರಲಿಲ್ಲ.

ಲಾಲಾಜಿಯವರ ಆರೋಗ್ಯ ಸ್ಥಿತಿ ತೀರಾ ಕಳವಳಕಾರಿಯಾಗಿದ್ದು ವ್ಯಾಪಕ ಆತಂಕಕ್ಕೆ ಕಾರಣವಾಯಿತು. ಶಾಸಕಾಂಗಗಳಲ್ಲಿ ಸರ್ಕಾರ ಅವರ ಆರೋಗ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮೇಲಿಂದ ಮೇಲೆ ಎದುರಿಸಬೇಕಾದ ಪರಿಸ್ಥಿತಿ ಉದ್ಭವಿಸಿತು. ಆರಂಭದಲ್ಲೇ ಲಾಲಾಜಿಯವರ ಆರೋಗ್ಯದ ತೊಂದರೆ ಅಷ್ಟೊಂದು ಗಂಭೀರಕರವಲ್ಲದ್ದೆಂದು ಸರ್ಕಾರ ತಿಳಿಸಿತಾದರೂ ವಸ್ತುಸ್ಥಿತಿಯನ್ನು ಹೆಚ್ಚುಕಾಲ ಮುಚ್ಚಿಡಲು ಸಾಧ್ಯವಾಗಲಿಲ್ಲ. ಆ ವೇಳೆಗೆ ಅವರ ಯಕೃತ್ತಿನ ತೊಂದರೆಯ ಕಾರಣವು ಹೆಚ್ಚು ಕಡಿಮೆ ಪತ್ತೆಯಾಗಿತ್ತು. ಬಂದಿಖಾನೆಯ ಡಾಕ್ಟರ್ ವಿಫಲವಾದ್ದರಿಂದ ತಮ್ಮದೇ ಆದ ವೈದ್ಯರ ಸೇವೆ ಪಡೆದುಕೊಳ್ಳಲು ಲಜಪತರಿಗೆ ಅವಕಾಶ ನೀಡಲಾಯಿತು. ಡಾ. ಮಹಾರಾಜ್ ಕೃಷ್ಣ ಕಪೂರ್ ಮತ್ತು ಡಾ. ನಿಹಾರ್ ಚಂದ್ ಸಿಕ್ರಿ ಅವರನ್ನು ಪರೀಕ್ಷಿಸಿದರು. ಜೈಲಿನ ಸುಪರಿಂಟೆಂಡೆಂಟ್ ಲೆಫ್ಟಿನೆಂಟ್ ಕರ್ನಲ್, ಎ.ಡಬ್ಲ್ಯೂ. ಗ್ರೀಗ್ ಜೊತೆ ಸುದೀರ್ಘ ಚರ್ಚೆ ನಡೆಸಿದರು. ಡಾ. ಕಪೂರ್ ತಮ್ಮ ಅಭಿಪ್ರಾಯವನ್ನು ಪತ್ರ ರೂಪದಲ್ಲಿ ವಿಸ್ತಾರವಾಗಿ ಬರೆದು ಗ್ರೀಗ್‌ರಿಗೆ ಕೊಟ್ಟರು. ಲಜಪತರ ಯಕೃತ್ತಿನ ಸ್ಥಿತಿ ತೀರಾ ಚಿಂತಾಜನಕವೆನಿಸಿತು. ಇನ್ನಷ್ಟು ಪರೀಕ್ಷೆ ಅಗತ್ಯವೆನಿಸಿತು. ವೈದ್ಯಕೀಯ ತಪಾಸಣೆ ಮತ್ತು ಅಧ್ಯಯನ ಆಳವಾದಷ್ಟು ಲಜಪತರ ಆರೋಗ್ಯದ ಸ್ಥಿತಿಯು ಚಿಂತಾಜನಕವಾಯಿತು. ಅವರ ಕುಟುಂಬದ ಹಿನ್ನಲೆಯಲ್ಲಿ ಕ್ಷಯರೋಗದ ಸಂಗತಿಯು ಇದ್ದದ್ದರಿಂದ ವೈದ್ಯರು ಹೆಚ್ಚು ಎಚ್ಚರ ವಹಿಸಿದ್ದರು. ಅದಕ್ಕೆ ಅನುಗುಣವಾಗಿ ಮುನ್ನೆಚ್ಚರಿಕೆಯನ್ನು ನೀಡಿದರು. 6-7 ವಾರಗಳ ಕಾಲವಾದರೂ ಜ್ವರ ಇಳಿಯದಿದ್ದರಿಂದ ಲಾಹೋರಿನ ಕಡು ಉಷ್ಣದ ವಾತಾವರಣಕ್ಕೆ ಬದಲಾಗಿ ಕಾಂಗ್ರಾ ಕಣಿವೆಯ ಶೀತಲ ಹವಾಗುಣಕ್ಕೆ ಅವರನ್ನು ಸ್ಥಳಾಂತರಿಸಲು ನಿರ್ಧರಿಸಲಾಯಿತು. ಅದರ ಫಲವಾಗಿ ಲಜಪತರನ್ನು ಧರ್ಮಶಾಲಾ ಜೈಲಿಗೆ ವರ್ಗಾಯಿಸಲಾಯಿತು. ಅಲ್ಲಿಯೂ ಸಹ ಅವರ ಆರೋಗ್ಯ ಸ್ಥಿತಿ ಉತ್ತಮಗೊಳ್ಳಲಿಲ್ಲ. ದಿನ ಕಳೆದಂತೆ ಕಳವಳವೇ ಹೆಚ್ಚಾಯಿತು. ಪಂಜಾಬಿನ ಸರ್ಕಾರ ಲಜಪತರನ್ನು ಬಿಡುಗಡೆ ಮಾಡುವುದೇ ಸಮಂಜಸವೆಂಬ ನಿರ್ಧಾರಕ್ಕೆ ಬರಲೇಬೇಕಾಯಿತು. ಮತ್ತೆ ಅವರನ್ನು ಲಾಹೋರಿಗೆ ಕರೆತರಲಾಯಿತು. ಬಿಡುಗಡೆಯೂ ಆಯಿತು.

1923 ಆಗಸ್ಟ್ 16ರಂದು ಲಜಪತರು ಆ ಬಂಧನದಿಂದ ಬಿಡುಗಡೆ ಹೊಂದಿದರು.

ಲಜಪತರನ್ನು ಧರ್ಮಶಾಲಾ ಜೈಲಿಗೆ ವರ್ಗಾಯಿಸಿದ್ದು ಅಲ್ಲಿಂದ ಮತ್ತೆ ಲಾಹೋರಿಗೆ ಕರೆ ತಂದದ್ದು ಎಲ್ಲವೂ ತೀರಾ ಗೌಪ್ಯವಾಗಿ ನಡೆದವು. ಆದರೂ ಆ ವಿದ್ಯಮಾನಗಳು ಬಹಿರಂಗಗೊಳ್ಳದೆ ಇರಲಿಲ್ಲ. ಲಜಪತರು ತಮ್ಮದ್ದೇ ಆದ ಮಾರ್ಗವೊಂದನ್ನು ಕಂಡು ಕೊಂಡಿದ್ದರೆಂಬುದನ್ನು ನಾವು ಈ ಹಿಂದೆಯೇ ಓದಿದ್ದೇವೆ. ಅವರು ಮಾಡಿಕೊಂಡಿದ್ದ ಆ ಗುಪ್ತ ವ್ಯವಹಾರ ಕೊನೆಯತನಕ ಗುಪ್ತವಾಗಿಯೇ ಉಳಿಯಲಿಲ್ಲ. ಪಿ.ಎಲ್. ಸೌಂದಿ ಅವರಿಗೆ (ಸರ್ವೆಂಟ್ಸ್ ಆಫ್ ದಿ ಪೀಪಲ್) ಬರೆದಿದ್ದ ಎರಡು ಪತ್ರಗಳನ್ನು ಅಧಿಕಾರಿಗಳು ಭೇದಿಸಿದ್ದರು. ಧರ್ಮಶಾಲೆಯಿಂದ ವಾಪಸಾಗುವ ಮೊದಲೇ ಲಜಪತರಿಗೆ ಆ ವಿಷಯ ತಿಳಿದಿತ್ತು. ಆದಾಗ್ಯೂ ಬೆಳವಣಿಗೆಗಳು ಗುಟ್ಟಾಗಿ ಉಳಿದಿರಲಿಲ್ಲ. ಲಾಹೋರಿನಲ್ಲಿ ಆ ವಿದ್ಯಮಾನಗಳೆಲ್ಲಾ ಬೆಳಕು ಕಂಡಿದ್ದವು. ಹೀಗಾಗಿ ಲಾಲಾಜಿ ಲಾಹೋರಿನ ದಂಡು ಪ್ರದೇಶದ ರೈಲು ನಿಲ್ದಾಣದಲ್ಲಿ ಇಳಿದಾಗ ಅಲ್ಲಿಂದ ಅವರನ್ನು ಜೈಲಿಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಪಿ.ಎಲ್. ಸೌಂದಿ ಹಾಜರಾಗಿದ್ದರು. ಲಾಲಾಜಿ ರೈಲಿನಿಂದ ಇಳಿಯುತ್ತಿದ್ದ ಬೋಗಿಯ ಎದುರಿಗೆ ಅವರು ನಿಂತಿದ್ದರು. ಅದನ್ನು ಕಂಡು ಲಾಲಾಜಿಗೆ ಆಶ್ಚರ್ಯವು, ಆನಂದವೂ ಒಮ್ಮೆಗೆ ಆಯಿತು. ಆ ಪ್ರಸಂಗವನ್ನು ತಮ್ಮ ಜೀವನ ಕಥನದಲ್ಲಿ ಪ್ರಸ್ತಾಪಿಸುತ್ತಾ ''ನೋಡಿ, ನನ್ನ ಬೇಹುಗಾರಿಕೆ ವ್ಯವಸ್ಥೆ ಹೇಗೆ ಕೆಲಸ ಮಾಡಿತ್ತು'' ಎಂದು ಬಣ್ಣಿಸಿದ್ದಾರೆ.

* * *

ಅಧ್ಯಾಯ-52

ಮಹಾ ಪುರುಷರು:ದ್ವಿತೀಯ ಅವಲೋಕನ

ಜೈಲು ಜೀವನಕ್ಕೆ ಹೊಂದಿಕೊಳ್ಳುತ್ತಿದ್ದಂತೆ ಲಾಲಾಜಿ ಭಾರತೀಯ ಚರಿತ್ರೆಗೆ ಸಂಬಂಧಪಟ್ಟಂತೆ ಲಭ್ಯವಿದ್ದ ಬಹುತೇಕ ಎಲ್ಲಾ ಪುಸ್ತಕಗಳನ್ನು ಸಂಗ್ರಹಿಸಿಕೊಂಡರು. ಅವುಗಳನ್ನೆಲ್ಲಾ ಅಧ್ಯಯನ ಮಾಡಿ ಪ್ರಾಚೀನ ಭಾರತ ಕುರಿತು ಸಮಗ್ರವಾದ ಕೃತಿಯೊಂದನ್ನು ಉರ್ದುವಿನಲ್ಲಿ ರಚಿಸುವ ಕಾರ್ಯದಲ್ಲಿ ನಿರತರಾದರು. 600ಕ್ಕೂ ಹೆಚ್ಚು ಪುಟಗಳ (ಮುದ್ರಿತ) ಆ ಕೃತಿಯನ್ನು ಅವರು ಲಾಹೋರ್ ಸೆಂಟ್ರಲ್‌ನಲ್ಲಿ ಜೈಲಿನ ಮೊದಲ ಎರಡು ತಿಂಗಳ ಅವಧಿಯಲ್ಲಿ ಬರೆಯಿಸಿದರು. ಆಗ ಅವರೊಂದಿಗಿದ್ದ ಡಾ. ಗೋಪಿಚಂದ್ ಭಾರ್ಗವ ಉಕ್ತಲೇಖನ ತೆಗೆದುಕೊಂಡರು.

ಕೃತಿಯ ಮೊದಲ ಕರಡು ಸಿದ್ಧವಾಗುವ ವೇಳೆಗೆ ಡಾ. ಗೋಪಿಚಂದ್ ಭಾರ್ಗವ ಬಿಡುಗಡೆಯಾದರು. ಲಾಲಾಜಿ ಬಂಧನದಿಂದ ಮುಕ್ತವಾಗುವ ವೇಳೆಗೆ ಸರ್ವೆಂಟ್ಸ್ ಪೀಪಲ್ಸ್ ಸೊಸೈಟಿಯು ಲಜಪತರ ಅನುಗಾಲದ ಲಾಹೋರ್ ಪ್ರಕಾಶಕರೊಂದಿಗೆ ಒಡಂಬಡಿಕೆ ಮಾಡಿಕೊಂಡು ಆ ಹೊತ್ತಿಗೆಯನ್ನು ಹೊರತಂದಿತ್ತು. ನಾವು ಈ ಮೊದಲೇ ಓದಿರುವಂತೆ 19ನೇ ಶತಮಾನದ ಅಂತ್ಯದಲ್ಲಿ ಲಾಲಾಜಿ ಪ್ರಾಚೀನ ಭಾರತ ಕುರಿತು ಕಿರು ಹೊತ್ತಿಗೆಯೊಂದನ್ನು ಹೊರ ತಂದಿದ್ದರು. ಅವರ ವಿಸ್ತುತ ರೂಪವೊಂದನ್ನು ಮುಂದೆ ರಚಿಸುವುದಾಗಿ ಆಗ ಅವರು ಭರವಸೆಯನ್ನು ನೀಡಿದ್ದರು. ಬಂಧನದ ಶಿಕ್ಷೆ ಅವರಿಗೆ ಈಗ ಬಿಡುವು ಮಾಡಿಕೊಟ್ಟಿತು.

ಬಹುಕಾಲದಿಂದ ಬಾಕಿಯಾಗಿದ್ದ ತಮ್ಮ ಭರವಸೆಯನ್ನು ಈಡೇರಿಸಿಕೊಳ್ಳಲು ಅವರಿಗೆ ಸಮಯ ಪ್ರಾಪ್ತವಾದಂತಾಗಿತ್ತು. ಎಲ್ಲಕ್ಕಿಂತ ಹೆಚ್ಚಿನದಾಗಿ ಆ ಕೃತಿ ರಚನೆ ಅವರಿಗೆ ಸಂತೋಷದ ಸಂಪನ್ಮೂಲವಾಗಿತ್ತು. ಹಿಂದಿನ ಕೃತಿಯಂತೆ ಈ ಕೃತಿಯು ಸಹ ಮೂಲಭೂತ ಸಂಶೋಧನೆ ಅಧ್ಯಯನಗಳನ್ನು ಒಳಗೊಂಡದ್ದಾಗಿಲ್ಲವಾದರೂ ಆ ಕಾಲದಲ್ಲಿ ಸಾಮಾನ್ಯ ಓದುಗರಿಗೆ ಐರೋಪ್ಯ ಭಾಷೆಗಳ ಅಗತ್ಯವಿಲ್ಲದೆ ಭಾರತೀಯ ಚರಿತ್ರೆಯನ್ನು ಒದಗಿಸುವ ಅತ್ಯುತ್ತಮ ಕೃತಿ ಎನಿಸಿತು. ಆಗ ಲಭ್ಯವಿದ್ದ ಮಾಹಿತಿಗಳನ್ನು ಕ್ರೋಡಿಕರಿಸಿಕೊಂಡು ಸಾಧ್ಯವಾದಷ್ಟು ಪ್ರಾಚೀನ ಸಿಂಧು - ಆರ್ಯರ ನಾಗರಿಕತೆಯ ಪೂರ್ಣ ಚಿತ್ರಣ ನೀಡುವ ಪ್ರಯತ್ನಗಳನ್ನು ಲಾಲಾಜಿ ತಮ್ಮ ಕೃತಿಯಲ್ಲಿ ನಡೆಸಿದ್ದರು. ಕುತೂಹಲಕಾರಿ ಎನಿಸಿದ ಅನುಬಂಧದಲ್ಲಿ ಆ ನಾಗರಿಕತೆಯನ್ನು ಅವರು ಆಧುನಿಕ ಪಾಶ್ಚಾತ್ಯ ನಾಗರಿಕತೆಯೊಂದಿಗೆ ತೌಲನಿಕವಾಗಿ ಅಧ್ಯಯನ ನಡೆಸಿದರು. ಎರಡು ನಾಗರಿಕತೆಯ ಅತ್ಯುತ್ತಮ ಅಂಶಗಳನ್ನು ಸಂಯೋಜನೆಗೊಳಿಸಿ ಸಮಕ್ಯತೆಯ ಸಂಘಟಿತವಾದ ಹೊಸ ಸಂಸ್ಕೃತಿಯನ್ನು ಸೃಷ್ಟಿಸಬಹುದಾಗಿದೆ ಎಂಬ ಭರವಸೆ ವ್ಯಕ್ತಪಡಿಸಿದರು.

ಮುಸಲ್ಮಾನ ಅವಧಿಗೆ ಸಂಬಂಧಪಟ್ಟ ಅಂಶಗಳನ್ನು ಒಳಗೊಂಡಂತೆ ಆ ಕೃತಿಗೆ ಎರಡನೇ ಸಂಪುಟವೊಂದನ್ನು ಸಂಯೋಜಿಸಲು ಲಾಲಾಜಿ ಬಯಸಿದರು. ಅಗತ್ಯವಾದ ಬಹುತೇಕ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿಕೊಂಡರು ಕೂಡಾ. ಜೈಲಿನಲ್ಲಿದ್ದಾಗ ಪರ್ಷಿಯನ್ ಮೂಲದ ಕೆಲವು ಪುಸ್ತಕಗಳನ್ನು ಸಂಗ್ರಹಿಸಿಕೊಂಡರು. ಬಿಡುಗಡೆಯಾದ ನಂತರ ಇನ್ನಷ್ಟು ಪುಸ್ತಕಗಳನ್ನು ಕಲೆ ಹಾಕಿದರು. ಆದರೆ ತಮ್ಮ ಉದ್ದೇಶಿತ ಆ ಎರಡನೇ ಸಂಪುಟವನ್ನು ಕೃತಿ ರೂಪದಲ್ಲಿ ಹೊರತರಲು ಅವರಿಗೆ ಸಮಯದ ಅವಕಾಶವಾಗಲಿಲ್ಲ. ಕೆಲವು ವರ್ಷಗಳ ನಂತರ ತಮ್ಮ ಮೊದಲ ಸಂಪುಟವನ್ನು ಪರಿಷ್ಕರಿಸಲು ಸಹ ಆಶಿಸಿದರು. ಅದಕ್ಕೂ ಸಹ ಅಗತ್ಯವಾದ ಸಮಯ ಸಿಗಲಿಲ್ಲ. ಇದ್ದ ಕಾಲದಲ್ಲೇ ಹೊಂದಾಣಿಕೆ ಮಾಡಿಕೊಂಡು ಅವರ ಸೂಚನೆಗಳಿಗೆ ಅನುಗುಣವಾಗಿ ಅವರ ಒಡನಾಡಿಗಳು ಕೆಲವು ಮಾರ್ಪಾಟುಗಳನ್ನು ಸಂಯೋಜಿಸಿಕೊಂಡು ಹಿಂದಿ ಮುದ್ರಣಕ್ಕೆ ಸಿದ್ಧತೆ ನಡೆಸಿದರು. ಆ ಕೃತಿಯೂ ಸಹ ಲಾಲಾಜಿ ಅವರ ನಿಧನಕ್ಕೆ ಸ್ವಲ್ಪ ಮೊದಲು ಪ್ರಕಾಶನ ಕಂಡಿತು. ಪ್ರಾಚೀನ ಭಾರತದ ಚರಿತ್ರೆ ಕುರಿತ ಉರ್ದು ಹೊತ್ತಿಗೆಯನ್ನು ಲಾಲಾಜಿ ತಮ್ಮ ಪೂಜ್ಯ ತಂದೆ ಹಾಗೂ ಪ್ರಥಮ ಗುರು ಮುನ್ಷಿ ರಾಧಾಕಿಷನ್ ಅವರಿಗೆ ಸಮರ್ಪಿಸಿದರು. ತಮ್ಮಲ್ಲಿ ಚರಿತ್ರೆಯ ಬಗ್ಗೆ ಆಸಕ್ತಿ ಮೂಡಿಸಿದ ಆ ಗುರುವಿಗೆ ತನ್ಮೂಲಕ ಅಕ್ಷರ ಕೃತಜ್ಞತೆ ಸಲ್ಲಿಸಿದರು.

ಚಾರಿತ್ರಿಕ ಅಧ್ಯಯನ ಕುರಿತ ಹೊತ್ತಿಗೆಗಳ ಪಾಲಿಗೆ ಸೇರಿದ ಅವರ ಇನ್ನೊಂದು ಉರ್ದು ಕೃತಿ ಮಹಾರಾಜ ಅಶೋಕ. 300ಕ್ಕೂ ಹೆಚ್ಚು ಪುಟಗಳ ಆ ಕೃತಿ ಏಕ ವ್ಯಕ್ತಿ ಚಿತ್ರ ನಿರೂಪಣ ಶೈಲಿಯದು. 18-19ನೇ ಶತಮಾನದಲ್ಲಿ ಅಶೋಕ ಅಷ್ಟೇನೂ ಸ್ಪಷ್ಟವಾಗಿದ್ದ ದೊರೆ ಎನಿಸಿರಲಿಲ್ಲ. ನಂತರದ ವರ್ಷಗಳಲ್ಲಿ ಇಂಡೋಲಾಜಿಸ್ಟ್ (ಶಾಸನಶಾಸ್ತ್ರಜ್ಞರು) ಅಶೋಕ ಚಕ್ರವರ್ತಿಯ ಗುಣಗಳನ್ನು ಬೆಳಕಿಗ ತಂದು ಅಜರಾಮರ ಕೀರ್ತಿವಂತರ ಸಾಲಿನಲ್ಲಿ ಅವರ ಚರಿತ್ರೆ ನಿತ್ಯ ನೂತನವಾಗುವಂತೆ ಮಾಡಿದ್ದಾರೆ. ಸ್ವತಃ ಅಶೋಕ ಚಕ್ರವರ್ತಿಯ ದೂರದೃಷ್ಟಿ ಕಾಲಾನಂತರದಲ್ಲಿಯಾದರೂ ಆತನ ಸಾಧನೆ ಬೆಳಕಿಗೆ ಬರಲು ಸಹಾಯಕವಾಗಿದ್ದು ಒಂದು ಅನುಕರಣೀಯ ಕಥನ. ಆ ಮಹಾ ಸಾಮ್ರಾಟನು ತನ್ನ ಕಥೆಯನ್ನೆಲ್ಲಾ ಶಿಲಾ ಶಾಸನಗಳಲ್ಲಿ ದಾಖಲೆ ಮಾಡಿಟ್ಟಿದ್ದ. ಆ ಶಾಸನಗಳು ಆ ಚಕ್ರವರ್ತಿಯ ಸಾಧನೆ ವಿಜಯ ಉತ್ಸವಗಳನ್ನೆಲ್ಲಾ ವಿವರಿಸಿದೆ. ತೀರಾ ಒಳಪ್ರದೇಶಗಳಲ್ಲಿ ಲಭ್ಯವಾಗಿರುವ ಶಿಲಾ ಶಾಸನಗಳ ಪ್ರಕಾರ ಅಶೋಕ ಚಕ್ರವರ್ತಿ ಆಳಿದ ಸಾಮ್ರಾಜ್ಯ ಭಾರತದಲ್ಲಿ ಬ್ರಿಟಿಷರು ಹೊಂದಿದ್ದ ಆಡಳಿತ ವ್ಯಾಪ್ತಿಗಿಂತಲೂ ವಿಶಾಲವಾಗಿತ್ತು. ಬ್ರಿಟಿಷ್ ಆಡಳಿತಕ್ಕೆ ಮೊದಲು ಭಾರತದಲ್ಲಿ ಏಕತೆಯ ಆಡಳಿತ ಇರಲಿಲ್ಲವೆಂಬ ಆರೋಪಗಳಿಗೆ ಅಶೋಕ ಚಕ್ರವರ್ತಿಯ ಸಾಧನೆ ದೊಡ್ಡ ಉದಾಹರಣೆಯಾಯಿತು. ಅಶೋಕನ ಬದುಕಿನಲ್ಲಿದ್ದ ಮಹೋದ್ದೇಶ ಉದಾತ್ತವಾದ ಸಿದ್ಧಾಂತವನ್ನು ಒಳಗೊಂಡಿತ್ತು. ತತ್ವಶಾಸ್ತ್ರಜ್ಞರು, ಸಂತರು ಹೊಂದಿದ್ದ ದೃಷ್ಟಿಕೋನ ಆ ಚಕ್ರವರ್ತಿಯಲ್ಲಿತ್ತು. ಸಾಮಾನ್ಯವಾಗಿ ರಾಜರಲ್ಲಿ ಅಂಥ ಗುಣಗಳು ಇರುವುದು ಆ ಹಿಂದಿನ ದಾಖಲೆಗಳಲ್ಲಿ ಅಪರೂಪವೆನಿಸಿದೆ. ಅಶೋಕನ ಆ ಮಹೋನ್ನತ ಹಾಗೂ ಅಪರೂಪದ ಗುಣ ಲಾಲಾಜಿ ಅವರನ್ನು ಸೆಳೆದಿಟ್ಟಿತು. ಜನಸಾಮಾನ್ಯರಿಗೆ ಅಶೋಕನ ಜೀವನ ಚರಿತ್ರೆಯನ್ನು ತಿಳಿಸಬೇಕೆಂಬ ಅದಮ್ಯ ಬಯಕೆ ಅವರಲ್ಲಿ ಉಂಟಾಗುವಂತೆ ಮಾಡಿತು.

ಅಶೋಕನ ರಾಜ ಶಾಸನಗಳ ಬಗ್ಗೆ ವಿವರಣೆಯನ್ನು ಬರೆಯುವಾಗ ಲಾಲಾಜಿ ಓರ್ವ ಸಂವೇದನಾಶೀಲ ಮನಶಾಸ್ತ್ರಜ್ಞನಂತೆ ಕಂಡು ಬರುತ್ತಾರೆ. ಅತ್ಯಂತ ಎತ್ತರಕ್ಕೆ ಬೆಳೆದ ಜನರು ಕೆಲವು ಸಲ ತಮ್ಮ ಪೊಳ್ಳುತನವನ್ನು ಪ್ರದರ್ಶಿಸದಿರುವುದಿಲ್ಲ. ''ಇಗರಿಂದ ಯಾವ ಪ್ರವಾದಿಯಾಗಲಿ ಅಥವಾ ಸಂತನಾಗಲಿ, ವಾಗ್ಮಿಯಾಗಲಿ, ಫಕೀರನಾಗಲಿ ಉನ್ನತ ನಾಯಕತ್ವದ ವ್ಯಕ್ತಿಯಾಗಲಿ ಹೊರತಾಗುವುದಿಲ್ಲ. ಒಂದು ವೇಳೆ ಯಾರಾದರೂ ಅಂಥ ಸಾಧನೆ ಮಾಡಿದ್ದಾದರೆ ಅಂಥ ವ್ಯಕ್ತಿ ಮುಂದಿನ ತಲೆಮಾರಿಗೆ ಸಂಪೂರ್ಣವಾಗಿ ಕಂಡು ಬರುವುದೂ ಇಲ್ಲ.''

ಮಹಾರಾಜ ಅಶೋಕ ಕೃತಿಯನ್ನು ಮಹಾತ್ಮ ಗಾಂಧೀಜಿಗೆ ಸಮರ್ಪಿಸಲು ಲಾಲಾಜಿ ಆಶಿಸಿದರು. ಅದಕ್ಕಾಗಿ ಗಾಂಧೀಜಿ ಅನುಮತಿ ಕೋರಿದರು. ಆದರೆ ಪುಸ್ತಕ ಹೊರಬಂದಾಗ ಅಂಥ ಯಾವುದೇ ಸಮರ್ಪಣೆ ಇರಲಿಲ್ಲ. ಬಹುಶಃ ಪ್ರಕಾಶಕರ ಕಣ್ಣುತಪ್ಪಿನಿಂದ ಹಾಗಾಗಿರಬಹುದು ಅಥವಾ ಗಾಂಧೀಜಿಯಿಂದ ಸಮ್ಮತಿ ಬಂದದ್ದು ವಿಳಂಬವಾಗಿರಬಹುದು.

ಮಹಾರಾಜ ಅಶೋಕ ಧರ್ಮದ ಮೇಲಣ ಸುಮಾರು 40 ಪುಟಗಳ ಪ್ರೌಢ ಪ್ರಬಂಧದೊಂದಿಗೆ ಅಂತ್ಯಗೊಳ್ಳುತ್ತದೆ. ಲಾಲಾಜಿ ಅವರ ಸ್ವಂತ ಜೀವನದ ಸಿದ್ಧಾಂತದ ಬಗ್ಗೆ ಆಸಕ್ತಿ ಇರುವವರಿಗೆ ಈ ರಚನೆ ಕುತೂಹಲ ಕೆರಳಿಸುವ ಕೊಡುಗೆ. ವಿಧ್ಯುಕ್ತವಾಗಿ ಯಾವುದೇ ಧರ್ಮಕ್ಕೆ ಅಂಟಿಕೊಳ್ಳದಿದ್ದ ಅವರಲ್ಲಿ ಜೀವನ ಸಿದ್ಧಾಂತ ವಿಶಿಷ್ಟವಾದ ರೀತಿಯಲ್ಲಿ ಮೂಡಿತ್ತಾದರೂ ಹೇಗೆ ಎಂಬುದು ಅಲ್ಲಿ ಕಂಡು ಬರುತ್ತದೆ. ಅದನ್ನು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಪರಿಪಕ್ವವಾದ ಅವರ ಮುಕ್ತ ಜೀವನದಲ್ಲಿ ಅವರ ದೃಷ್ಟಿಕೋನ ದೇವರು ಮತ್ತು ಮನುಷ್ಯ ಧರ್ಮ, ಅವರು ವಿಹಿತವೆಂದು ಭಾವಿಸಿಕೊಂಡಿದ್ದ ಮಾನವೀಯ ಬದುಕುಗಳ ಅಂತರ್ಗತಗಳು ಇಲ್ಲಿ ಚಿತ್ರಿತವಾಗಿದೆ. ಅಂತಿಮವಾಗಿ ಅವರು ಪರಿಗಣನೆಗೆ ತೆಗೆದುಕೊಂಡ ಮುಖ್ಯ ಸಂಗತಿಗಳು ಮತ್ತು ಆಸಕ್ತಿ ಅಂಶಗಳು ಏನೆಂಬುದು ವೇದ್ಯವಾಗುತ್ತದೆ. ಯಾವುದೇ ಉಪದೇಶಕ್ಕೆ ಅವರು ಪ್ರೌಢಾವಸ್ಥೆಯಲ್ಲಿ ಒಳಗಾದವರಲ್ಲ. ಬಾಲ್ಯದಲ್ಲಿ ಸ್ವಲ್ಪ ಕಾಲ ಅಂಥ ಅವಸ್ಥೆ ಪ್ರಾಪ್ತವಾಗಿತ್ತಷ್ಟೇ. ಆದರೆ ಅಶೋಕ ಚಕ್ರವರ್ತಿಯ ಧರ್ಮವನ್ನು ಸಾಂಗತ್ಯ ಮಾಡಿಕೊಂಡ ಪರಿಯನ್ನು ಅಧ್ಯಯನ ಮಾಡಿದಾಗ ಲಾಲಾಜಿ ಅವರಲ್ಲಿ ತಮ್ಮದೇ ಆದ ದೃಷ್ಟಿಕೋನದ ಬಗ್ಗೆಯೂ ಮಂಥನ ಮಾಡಿಕೊಳ್ಳುವ ಅವಕಾಶ ಕಲ್ಪಿಸಿರಬೇಕು. ಅದನ್ನು ಅವರು ಆ ಲೇಖನದಲ್ಲಿ ಅಭಿವ್ಯಕ್ತಿಗೊಳಿಸಿರಬಹುದು. ಅವರ ನಿರೂಪಣೆಯ ಕೆಲವು ಭಾಗಗಳನ್ನು ಇಲ್ಲಿ ಅನುವಾದ ಮಾಡಲಾಗಿದೆ.

''ದೇವರನ್ನು ನಂಬಿರುವವರಿಗೆ ನಾನು ಹೇಳುವುದಿಷ್ಟೇ. ಕಣ್ಣಿಗೆ ಕಾಣದ ಸ್ಥಾನದಲ್ಲಿ ಕುಳಿತು ಆತ ಹಗಲು ರಾತ್ರಿ ನಮ್ಮನ್ನು ಆಳುತ್ತಿದ್ದಾನೆ. ಅವನು ನಿಶ್ಚಿತವಾಗಿಯೂ ಸರ್ವಶಕ್ತ, ಸರ್ವ ಸಮರ್ಥ. ದಯಾನಿಧಿ. ಆತ ಶಿಕ್ಷಕನೂ ಹೌದು. ವಿನಾಶಕನೂ ಹೌದು. ಆತನನ್ನು ಪೂಜೆ, ಪ್ರಾರ್ಥನೆಗಳಿಂದ ಆರಾಧಿಸಿಕೊಳ್ಳಬಹುದು. ಎಲ್ಲಾ ಚರಾಚರ ಅಸ್ತಿತ್ವಗಳಿಗೆ ಕಾರಣನಾಗಿರುವ ಯಾರಿಂದಲೂ ಆತನ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು

ಸಾಧ್ಯವಿಲ್ಲದಿರುವ ಚಿತ್ ಶಕ್ತಿಯನ್ನು ನಾನು ನಂಬುತ್ತೇನೆ. ಯಾರು ಆ ಚಿತ್ ಶಕ್ತಿ? ಆತ ಹೇಗೆ ಅಗೋಚರನಾಗಿ ಉಳಿದಿದ್ದಾನೆ? ಈ ವಿಶ್ವ ಅನಂತವಾದದ್ದು. ರಮ್ಯವಾದದ್ದು. ಪರಿಪೂರ್ಣವಾದದ್ದು. ಹಾಗೆಯೇ ಈ ಚಿತ್ ಶಕ್ತಿಯೂ ಸಹ. ಈತನಕ ಅರಿತುಕೊಳ್ಳಲು ಯಾರಿಗೂ ಸಾಧ್ಯವಾಗಿಲ್ಲ. ಅಥವಾ ಸಾಧ್ಯವಾಗುವುದು ಇಲ್ಲ. ವೇದ ಮತ್ತು ಉಪನಿಷತ್ತುಗಳು ಇದನ್ನೇ ''ನೇತಿ...ನೇತಿ'' -'ಇದು ಹೀಗಲ್ಲ... ಹೀಗಲ್ಲ' ಎಂದಿವೆ. ನನ್ನ ಒಳಕಣ್ಣುಗಳಿಗೆ ಅನಂತವಾದ ಸತ್ಯದರ್ಶನ ಒಂದಾಗುತ್ತಿದೆ... ಉಪನಿಷತ್ತುಗಳು ಸ್ಪಷ್ಟವಾಗಿ ಸಾರುತ್ತಿವೆ. ಯಾರು ತನಗೆ ಗೊತ್ತಿದೆ ಎನ್ನುವರೋ ಅವರಿಗೆ ಏನೂ ಗೊತ್ತಿರುವುದಿಲ್ಲ ಎಂದು...

''ದೇವರು ಸರ್ವಾಂತರ್ಯಾಮಿ ಎಂದು ಧರ್ಮಗಳು ಹೇಳುವುದಾದರೆ ಅದು ಸರಿ. ಬದಲಾಗಿ ಈ ಜಗತ್ತು ಸಂಪೂರ್ಣವಾಗಿ ನೋವು, ನರಳಾಟಗಳಿಂದ ಕೂಡಿದ್ದು ಅದರಿಂದ ಮುಕ್ತಿ ಹೊಂದಬೇಕಾದರೆ ಪರಿತ್ಯಾಗದ ದಾರಿ ಹಿಡಿಯಬೇಕೆಂದು ಆ ಧರ್ಮಗಳು ತಮ್ಮ ಅನುಯಾಯಿಗಳಿಗೆ ಹೇಳುವುದಾದರೆ ಅದು ಆ ದೇವರನ್ನು ಅಪಮಾನಗೊಳಿಸಿದಂತೆ... ನಮಗೆ ಬದುಕಲಿಕ್ಕಾಗಿಯೇ ದೇವರು ಈ ಜೀವನ ಕೊಟ್ಟಿದ್ದಾನೆ. 'ಸಾವು, ಬದುಕಿನ ವರ್ತುಲ'ದಿಂದ ಪಲಾಯನ ಮಾಡುವ ಸಲುವಾಗಿ ಅಲ್ಲ. ಜೀವನವನ್ನು ಆಶಾಮಯ ಮಾಡಿಕೊಳ್ಳಲು ಸೌಂದರ್ಯಯುಕ್ತಗೊಳಿಸಿಕೊಳ್ಳಲು, ಅದನ್ನು ಹರವುಗೊಳಿಸಿಕೊಳ್ಳಲು, ಪ್ರೀತಿ ಮತ್ತು ದಯೆಯಿಂದ ಶ್ರೀಮಂತಗೊಳಿಸಿಕೊಳ್ಳಲು, ಬದುಕಿಗೆ ಪ್ರೇಮದ ಉದ್ದೀಪನ ಅಗತ್ಯವಾಗುತ್ತದೆ. ಹಾಗೆ ಮಾಡಿದರೆ ಬದುಕು ಪ್ರೀತಿಯ ಆಗರವಾಗುತ್ತದೆ. ಬದುಕುವುದೇ ಒಂದು ಪ್ರೇಮದ ಆಶಯವಾಗುತ್ತದೆ. ಅಂಥ ಪರಿಪೂರ್ಣವಾದ ಔನತ್ಯದೆಡೆಗೆ ಜೀವನವನ್ನು ಸಾಗಿಸುವಂತಾಗಲು, ಆ ಹಂತವನ್ನು ತಲುಪಲು ನೈಜವಾದ ಸಂತೋಷವೇ ಬದುಕಿನ ತುಂಬಾ ಆವರಿಸಬೇಕು. ಅದೇ ಸ್ವರ್ಗ ಸದೃಶ್ಯ ಹಂತ. ಅಂಥ ಸಂತೃಪ್ತಿಯನ್ನು ಸಾಧಿಸಿಕೊಳ್ಳಲು ಸತ್ಯಕ್ಕಿಂತಲೂ ಸಹಾಯಕವಾದ ಇನ್ನೊಂದು ಪರಿ ಇಲ್ಲ. ಉಪನಿಷತ್ತುಗಳು ಇದನ್ನೇ ಸಾರಿವೆ. : ಸತ್ಯಕ್ಕಿಂತ ಉನ್ನತವಾದ ಧರ್ಮ ಇನ್ನೊಂದಿಲ್ಲ ಎಂದು. ಈ ಧರ್ಮವನ್ನು ಯಾರೂ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳುವರೋ ಅವರೇ ನಿಜವಾದ ಧರ್ಮಾತ್ಮ. ಆತ ಸತ್ಯದ ಬೆಳಕಿನಲ್ಲಿ ಅಹಂಕಾರ ಮತ್ತು ಮೋಹಗಳಿಂದ ಮುಕ್ತನಾಗುತ್ತಾನೆ. ಆಸೆ ಮತ್ತು ಲೋಭ ಹಾಗೂ ಕ್ರೋಧದಿಂದ ದೂರವಾಗುತ್ತಾನೆ. ಧನದ ಆಸೆ ಮತ್ತು ಇತರ ವ್ಯಾಮೋಹಗಳಿಂದ ಅತೀತನಾಗುತ್ತಾನೆ. ಅವೆಲ್ಲವೂ ತೀರಾ ಸಂಕುಚಿತವಾದವು. ಮತ್ತು ಪತನಕಾರಿಯಾದವು ಎಂದು ಮನಗಾಣುತ್ತಾನೆ. ಅಂಥ ಬೇರೆ ಯಾವುದೂ ಸಹ ಆತನ ಬಳಿಗೆ ಸುಳಿಯುವುದಿಲ್ಲ. ಧರ್ಮಾತ್ಮನು ಸದಾ ಉನ್ನತ ಚಿಂತನೆ ಮತ್ತು ಕಲ್ಪನೆಗಳಲ್ಲಿ ಬಾಳ್ವೆ ಕಾಣುತ್ತಾನೆ. ಭಯ ಆತನನ್ನು ಆವರಿಸುವುದಿಲ್ಲ. ದಯಾಶೀಲನಾಗಿರುತ್ತಾನೆ. ಆತನಿಂದ ಸದಾ ಪ್ರೇಮ, ಅನುರಾಗ ಹೊರಹೊಮ್ಮುತ್ತಿರುತ್ತದೆ. ಹೇಡಿತನವಾಗಲಿ, ಭಯವಾಗಲಿ ಆತನ ಹತ್ತಿರಕ್ಕೂ ಸುಳಿಯವುದಿಲ್ಲ. ಅವುಗಳ ನೆರಳು ಸಹ ಆತನ ಮೇಲೆ ಬೀಳಲಾರದು. ಧರ್ಮಾತ್ಮನಿಗೆ ಇಡೀ ವಿಶ್ವವೇ ಸೌಂದರ್ಯದ ಆಗರವಾಗುತ್ತದೆ.

ಸೃಷ್ಟಿಕರ್ತನು ಪ್ರಕೃತಿ ಮತ್ತು ಸೌಂದರ್ಯವನ್ನು ಮನುಷ್ಯನಿಗಾಗಿಯೇ ಸೃಷ್ಟಿಸಿಲ್ಲವೇ? ಅವೆರಡು ಮಾರಕ ವಿಷಯಗಳೆಂದು ಮನುಷ್ಯ ಅವುಗಳನ್ನು ತ್ಯಜಿಸಿ ಬಿಡಬೇಕೆ? ಮನುಷ್ಯ ತ್ಯಾಜ್ಯ ಮಾಡಬೇಕೆಂಬ ಕಾರಣದಿಂದಲೇ ತನ್ನ ಸೃಷ್ಟಿಯಲ್ಲಿ ಅತ್ಯಂತ ಸುಂದರವಾದ ಹೆಣ್ಣನ್ನು ಆ ದೇವರು ಹುಟ್ಟು ಹಾಕಿದ್ದಾನೆಯೇ? ಧಾರ್ಮಿಕ ಸತ್ಯ ಮತ್ತು ಪ್ರೀತಿಗಳು ಸೌಂದರ್ಯದ ಖನಿಯಾದ ಹೆಣ್ಣನ್ನು ದುರ್ಬಳಕೆ ಮಾಡಿಕೊಳ್ಳಬಾರದು ಮತ್ತು ಆಕೆಯನ್ನು ಕೇವಲ ತನ್ನ ಕಾಮನೆಗಳಿಗೆ ಗುಲಾಮಳಂತೆ ನಡೆಸಿಕೊಳ್ಳಬಾರದೆಂದೂ ಹೇಳಿವೆ...''

ಸೌಂದರ್ಯದ ಪರಿಕಲ್ಪನೆಯಲ್ಲಿ ಹೆಣ್ಣಿನ ಪಾತ್ರವಾದರೂ ಏನು? ಇದೊಂದು ಪ್ರಶಸ್ತವಾದ ಪ್ರಶ್ನೆ. ಅದರಲ್ಲೂ ವೈರಾಗ್ಯದ ಬದುಕಿನಲ್ಲಿ ಈ ಪ್ರಶ್ನೆಗೆ ಹೆಚ್ಚಿನ ಅರ್ಥವಿದೆ. ''ಭಾರತದಲ್ಲಿ ಅನೇಕ ಶತಮಾನಗಳಿಂದಲೂ ವೈರಾಗ್ಯದ ಪರಿಕಲ್ಪನೆ ಇದೆ. ವೈರಾಗ್ಯಕ್ಕೆ ಅಂಟಿಕೊಂಡವರು ಹೆಣ್ಣನ್ನು ಪಾಪದ ಪ್ರತಿರೂಪವೆಂದು ಪರಿಗಣಿಸಿದ್ದಾರೆ. ಅಥವಾ ಮನುಷ್ಯನ ಸೋಲಿಗೆ ಆಕೆಯೇ ಮೂಲಕಾರಣವೆಂದು ಅಂದುಕೊಂಡಿದ್ದಾರೆ. ಹೆಣ್ಣಿಗೆ ಬಲಿಯಾಗುವ ಮೂಲಕ ತಮ್ಮ ಉದ್ದೇಶಗಳು ಈಡೇರುವುದಿಲ್ಲವೆಂದು ಹೇಳುತ್ತಾರೆ. ಲಾಲಾಜಿ ಇಂಥ ಪ್ರಶ್ನೆಗಳನ್ನ ಮಾನ್ಯ ಮಾಡಿಲ್ಲ. ಹೆಣ್ಣಿನ ತಾಯ್ತನದ ಸೌಂದರ್ಯವನ್ನು ಅಮೋಘವೆಂದು ಅವರು ಒತ್ತಿ ಹೇಳಿದ್ದಾರೆ. ಆ ಪಾತ್ರದ ಮಹತ್ವವನ್ನು ಉದಾತ್ತಗೊಳಿಸಿದ್ದಾರೆ. ಇನ್ನು ಹೆಚ್ಚಿನ ಸೌಂದರ್ಯ ಪ್ರತಿಪಾದನೆ ಮಾಡಿ ತಮ್ಮದೇ ಸಿದ್ಧಾಂತವನ್ನು ಲಾಲಾಜಿ ಹೀಗೆ ನಿರೂಪಗೊಳಿಸಿದ್ದಾರೆ.

''ಸೃಷ್ಟಿಯಲ್ಲಿ ಅಮೋಘವಾದ ಪರಿಕಲ್ಪನೆ ಹೆಣ್ಣು, ಇಡೀ ಪ್ರಕೃತಿಯ ಒಂದು ಪುಟ್ಟ ರೂಪ ಆಕೆ. ತಾಯ್ತನ ಅದ್ಭುತವಾದದ್ದು. ಬಹು ಸುಂದರವಾದುದು. ವಿಶ್ವ ರಚನೆಯಲ್ಲಿ ಅತಿ ಶ್ರೇಷ್ಠ ಕೊಡುಗೆ. ಸೃಷ್ಟಿಯ ಕಾರ್ಯವನ್ನು ವಿಸ್ತಾರಗೊಳಿಸುವ ಶಕ್ತಿಗೆ ತನ್ನ ಕೊಡುಗೆಯನ್ನು ಸೇರಿಸುವುದು ಹೊರತುಪಡಿಸಿ ಅದಕ್ಕಿಂತ ಹೆಚ್ಚಿನದು ಪುರುಷನ ಪಾಲಿಗೆ ಬೇರೇನೂ ಇಲ್ಲ.

''ಹೆಣ್ಣು ಪುರಷನಲ್ಲಿ ಪ್ರೇಮವನ್ನು ಉದ್ದೀಪನಗೊಳಿಸುತ್ತಾಳೆ. ಸ್ಫೂರ್ತಿಯುತಗೊಳಿಸುತ್ತಾಳೆ. ಹೆಣ್ಣು ಧೀರೋದಾತ್ತ ನಾಯಕರ ತಾಯಿಯಾಗಬೇಕೆಂದು ವೇದಗಳು ಸೂಚಿಸುತ್ತವೆ. ಹೆಣ್ಣು ಮತ್ತು ಗಂಡು ಲೇಶಮಾತ್ರವು ಪಾಪ ಪ್ರಜ್ಞೆ ಇಲ್ಲದೆ ಶುದ್ಧ ಪ್ರೀತಿಯ ತತ್ವದಲ್ಲಿ ಮಿಳಿತವಾದಾಗ ಮಾತ್ರ ಪ್ರಕೃತಿ ಮತ್ತು ಪುರುಷನ ವಿಧೇಯಪೂರ್ವಕ ಸಂಸರ್ಗವಾಗಿ ವೇದಗಳ ಆಶಯ ಈಡೇರಲು ಸಾಧ್ಯ..

''ಸೃಷ್ಟಿಯ ಈ ಕರ್ತವ್ಯದಲ್ಲಿ ತ್ಯಜಿಸುವುದು ಧರ್ಮವಾಗುವುದಿಲ್ಲ. ಅದೊಂದು ಅನಿವಾರ್ಯ ಅಗತ್ಯ.

''ಸೃಷ್ಟಿಯ ಕರ್ತವ್ಯದಲ್ಲಿ ಯಾವ ಅಪಾಯವೂ ಇಲ್ಲವೆಂಬುದನ್ನು ಮತ್ತೆ ಪುರುಷನಿಗೆ ಮನವರಿಕೆ ಮಾಡಿಕೊಡುವವಳೂ ಹೆಣ್ಣೇ. ಅದರ ಮುಂದೆ ಸಾವು ಸಹ ದೊಡ್ಡದಲ್ಲವೆಂದು ನಿರೂಪಿಸಿ ತೋರಿಸುತ್ತಾಳೆ... ಆಕೆ ಸೃಷ್ಟಿಕ್ರಿಯೆಯಲ್ಲಿ ನಿರತಳಾದಾಗ ಎಂಥ ಮಹಾವಿಪತ್ತನ್ನು ಎದುರಿಸುತ್ತಾಳೆ! ಪುನರ್ ಸೃಷ್ಟಿಯೊಂದೇ ಸೃಷ್ಟಿಯ ಇನ್ನೊಂದು ರೂಪವಲ್ಲ. ಅನ್ವೇಷಣೆ,

ಹೊಸ ಶೋಧ, ಲೇಖನ ರಚನೆ, ಆವಿಷ್ಕಾರ, ಕಲೆ ಮತ್ತು ಕರಕುಶಲ ಪ್ರಕಾರಗಳೆಲ್ಲವೂ ಸೃಷ್ಟಿಯ ಶಕ್ತಿಗಳೇ. ಈ ಸೃಷ್ಟಿಯ ಶಕ್ತಿಗಳನ್ನು ವಿಕಾಸಗೊಳಿಸಿಕೊಳ್ಳಲು ಅವುಗಳಿಂದ ಗರಿಷ್ಠ ಪ್ರತಿಫಲ ಪಡೆದುಕೊಳ್ಳಲು ಶ್ರಮಿಸುವುದೇ ಸ್ವರ್ಗ ಸುಖ. ಅದಕ್ಕಿಂತ ಮಿಗಿಲಾದುದು ಇನ್ನೊಂದಿಲ್ಲ. ಆಧ್ಯಾತ್ಮಿಕ ಚಿಂತನೆಯ ಅರ್ಥ ರಾಮನನ್ನು ಕಾಡಿನಲ್ಲಿ ಕುಳಿತು ಜಪಿಸು ಎಂದಲ್ಲ. ವೇದಗಳನ್ನಷ್ಟೇ ಪಠಿಸುವುದಲ್ಲ. ದೇಗುಲಗಳಲ್ಲಿ ಘಂಟೆ ಶಬ್ದ ಮಾಡುವುದೂ ಅಲ್ಲ. ಯಾರೂ ತಮ್ಮ ಕ್ರಿಯಾ ಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳುತ್ತಾರೆಯೋ ಅವರಿಗೆ ಅದರಲ್ಲೇ ಔನತ್ಯದ ಸಾಕ್ಷಾತ್ಕಾರ ಆಗುತ್ತದೆ. ಅದು ಈ ಜಗತ್ತಿನ ಸೌಂದರ್ಯಕ್ಕೆ ಕೊಡುಗೆಯಾಗಿ ಸೇರ್ಪಡೆಯಾಗುತ್ತದೆ. ಅಂಥ ವ್ಯಕ್ತಿಯು ಸಂಕುಚಿತವಾದ ತನ್ನ ಎಲ್ಲಾ ಲೋಪದೋಷಗಳನ್ನು ತ್ಯಜಿಸಿ ಉನ್ನತ ಸೌಂದರ್ಯದಲ್ಲಿ ಅಂತರ್ಗತಗೊಳ್ಳುತ್ತಾನೆ.

ಕೇವಲ ಪರಿತ್ಯಾಗದ ಮಾರ್ಗವನ್ನೇ ಹಿಡಿದು ಜೀವನವನ್ನು ಅಂತ್ಯಗೊಳಿಸುವುದು ಸೃಷ್ಟಿಯೇ ಆದ ಸೌಂದರ್ಯವನ್ನು ನಿರಾಕರಿಸಿದಂತೆಯೇ ಸರಿ. ಯೋಗ್ಯವಾದ ಸಾವು ಸಹ ತನ್ನದೇ ಆದ ಸೌಂದರ್ಯದ ಒಂದು ಮುಖ. ಅಹಿತಕರ ಘಟ್ಟದ ಅಂತಿಮ ಸ್ಥಿತಿ ಅಕಾಲಿಕ ಸಾವು''

ಇಡೀ ಪ್ರಕೃತಿಗೆ ವಿರೋಧವಾದುದು ಅಕಾಲಿಕ ಸಾವು ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಪರಿಗಣಿಸಬೇಕಾಗುತ್ತದೆ.

ಧರ್ಮವೆಂಬುದು ಪುರೋಹಿತಷಾಹಿಯ ಕಲ್ಪಿತ ಕೊಡುಗೆ ಎಂದು ಪ್ರತಿಪಾದಿಸುತ್ತಾ ಅದನ್ನು ಅವರು ಹೀಗೆ ನಿರೂಪಿಸಿದ್ದಾರೆ.

''ಧರ್ಮದ ಪದ್ಧತಿಗಳು ಮತ್ತು ಸಿದ್ಧಾಂತಗಳು ಯಾವ ರೀತಿಯಲ್ಲಿ ಬೆಳಕಿಗೆ ಬರುತ್ತದೆ ಎಂಬುದನ್ನು ಚರ್ಚಿಸಲು ನಾನು ಉದ್ದೇಶಿಸಿಲ್ಲ. ; ಆದರೆ ಅವು ಶುದ್ಧವಲ್ಲದ ಧರ್ಮವೆಂದು ಮಾತ್ರ ಖಚಿತವಾಗಿ ಹೇಳಬಲ್ಲೆ. ಅವೆಲ್ಲವೂ ಸಾಮಾಜಿಕ ನಡವಳಿಕೆಯ ಭಾಗವಷ್ಟೇ. ಧರ್ಮ ಮತ್ತು ಅದಕ್ಕೆ ಅನುಬಂಧವಾದ ಪದ್ಧತಿ ಮತ್ತು ಸಿದ್ಧಾಂತಗಳನ್ನು ಯಾರೂ ಒಪ್ಪಿಕೊಳ್ಳುವುದಿಲ್ಲವೋ ಅವರು ನರಕಕ್ಕೆ ಹೋಗುತ್ತಾರೆಂದು ಹೇಳುವುದು ಮಾನವ ಕುಲವನ್ನು ತಪ್ಪು ದಾರಿಗೆ ಎಳೆದಂತೆಯೇ ಸರಿ. ಸಾವಿನ ನಂತರ ಬದುಕಿದೆಯೋ ಇಲ್ಲವೋ ಅದನ್ನು ಒಪ್ಪಿಕೊಳ್ಳುವುದು ಬಿಡುವುದು ನನಗೆ ಅವಶ್ಯಕವಲ್ಲ. ಆದರೆ ಸಾವಿಗಿಂತಲೂ ಮೊದಲಿನ ಜೀವನವನ್ನು ನಾನು ಕಡೆಗಣಿಸಲಾರೆ. ಈ ಜೀವನದಿಂದ ನಾವು ಸತ್ಯಸಂಧ ಬದುಕಿನ ಮೂಲಕ ಗರಿಷ್ಠ ಫಲವನ್ನು ಸಂಪಾದಿಸಿಕೊಳ್ಳಲೇಬೇಕು. ಮುಂದಿನ ಜನ್ಮಕ್ಕಾಗಿ ಈ ಜನ್ಮವನ್ನು ನಿರರ್ಥಕಗೊಳಿಸಿಕೊಳ್ಳಬೇಕೆಂಬ ನಿಲುವಿನಲ್ಲಿ ನನಗೆ ಕಿಂಚಿತ್ತೂ ನಂಬಿಕೆ ಇಲ್ಲ. ಸಾವಿನ ನಂತರ ಇನ್ನೊಂದು ಜೀವನ ಇದೆ ಎನ್ನುವುದಾದರೂ ಈ ಜೀವನವನ್ನು ಪರಿಪೂರ್ಣವಾಗಿ ಸಾಧಿಸಿದವನಿಗೆ ಅದು ತೃಪ್ತಿಕರವಾಗಿಯೇ ಸಂಭವಿಸಬಹುದು. ಅಕಾಲಿಕ ಮರಣಕ್ಕೆ ತುತ್ತಾದವನಿಗಿಂತಲೂ ಈ ಜೀವನವನ್ನು ಸಹಜ ಸಾವಿನ ತನಕ ಅನುಭವಿಸುವವನಿಗೆ ಆ ಜೀವನ ಇನ್ನಷ್ಟು ಸಮೃದ್ಧವಾಗಬಹುದು. ಧರ್ಮದ ನಿಜವಾದ ಅರ್ಥದಲ್ಲಿ ಜೀವನವು ಸನ್ಯಾಸಿಯಾಗು ಎಂದಾಗಲಿ ಅಥವಾ ಹೆಣ್ಣಿನ ಮೋಹವನ್ನು ತ್ಯಜಿಸಿ ಎಂದಾಗಲಿ ಹೇಳುವುದಿಲ್ಲ. ಒಂದು ವೇಳೆ ಯಾವುದೇ ಒಬ್ಬ

ಮನುಷ್ಯನಿಗೆ ಸನ್ಯಾಸಿ ಜೀವನವೇ ಸಮ್ಮತವೆನಿಸಿದರೆ ಆತ ಸನ್ಯಾಸತ್ವ ಸ್ವೀಕರಿಸಲಿ. ಅಂಥವರ ವಿಷಯದಲ್ಲಿ ನಾನು ಮಾತನಾಡುವುದಿಲ್ಲ. ಅಂಥ ಜೀವನವನ್ನು ಉನ್ನತಿಯ ಜೀವನವೆಂದು ನಾನು ಒಪ್ಪುವುದಿಲ್ಲ. ಈ ಜೀವನದ ಪರೀಕ್ಷೆಗಳನ್ನು ಎದುರಿಸಬೇಕಾದರೆ ಆ ಪರೀಕ್ಷೆಗಳಿಂದ ಪುಟವಿಟ್ಟು ಹೊರಬರಬೇಕಾದರೆ ಅದು ಸನ್ಯಾಸಿತನದಲ್ಲಿ ಆಶ್ರಯ ಪಡೆದುಕೊಳ್ಳುವುದಕ್ಕೋಸ್ಕರ ಪಲಾಯನ ಮಾಡುವುದಕ್ಕಿಂತಲೂ ಕೊನೆ ತನಕ ಸಾಧಿಸುವುದರಲ್ಲೇ ಅಡಗಿದೆ ಎಂದು ನನ್ನ ನಂಬಿಕೆ. ಹೆಣ್ಣಿನ ಮೋಹದಿಂದ ಮುಕ್ತನಾಗಬೇಕಾದರೆ ಪುರುಷತನದ ಅಭಾವವೆಂದೇ ಅನಿಸುತ್ತದೆ. ಆಕೆಯ ಸೌಂದರ್ಯವನ್ನು ಆಸ್ವಾದಿಸುವುದರಲ್ಲಿ, ತಾಯ್ತನದಲ್ಲಿ ಆಕೆಯ ಸಮಗ್ರತೆ ಕಾಣುವುದರಲ್ಲಿ, ಮತ್ತು ಆಕೆಯನ್ನು ಸಂಭಾವಿಸುವುದರಲ್ಲಿ ಬದುಕಿನ ಸತ್ಯ ಅಡಕವಾಗಿದೆ. ಎಲ್ಲಾ ಗಂಡಾಂತರಗಳನ್ನು ದಿಟ್ಟವಾಗಿ ಎದುರಿಸಿ ಅವುಗಳಿಂದ ಧ್ವನಿತವಾಗುವ ಸೌಂದರ್ಯವನ್ನು ಆಸ್ವಾದಿಸಿ ಅದನ್ನು ಮನಸ್ಸಿನಲ್ಲಿ ಅಂತರ್ಗತಗೊಳಿಸಿಕೊಂಡು ಬದುಕಿನ ಸವಿಯನ್ನು ಸವಿಯುವುದೇ ಪರಿಪೂರ್ಣ ಜೀವನದ ಅರ್ಥವೆನಿಸುತ್ತದೆ. ಅಂಥ ನೋಟದಲ್ಲೇ ನಿಮ್ಮ ಕಣ್ಣಿನ ಸೌಂದರ್ಯವನ್ನು ಹೆಚ್ಚಿಸುವ ಕಾಡಿಗೆ ಪ್ರಾಪ್ತವಾಗುತ್ತದೆ. ನಿಮ್ಮ ಹೃದಯ ಸದಾ ಪ್ರೇಮದ ಚಿಲುಮೆಯಾಗುತ್ತದೆ. ಇದೇ ಪರಿಪೂರ್ಣ ಬದುಕಿನ ಪರಮೋಚ್ಚ ಘಟ್ಟ. ಇದಕ್ಕಿಂತ ಉನ್ನತವಾದ ಬದುಕು ಇನ್ನೊಂದಿಲ್ಲ.''

ಬೌದ್ಧ ಚಕ್ರವರ್ತಿಯ ವ್ಯಕ್ತಿ ಚಿತ್ರದ ನಿರೂಪಣೆಯಲ್ಲಿ ಲಾಲಾಜಿ ಸಹಜವಾಗಿ, ಅದೂ ಪ್ರಸಂಗವಶಾತ್ ಬುದ್ಧನಿಗೆ ಅತ್ಯುನ್ನತ ಗೌರವ ಸಮರ್ಪಣೆ ಮಾಡಿದ್ದಾರೆ. ಆತನಲ್ಲಿ ಎಲ್ಲಾ ಪೂರ್ವ ಪೀಡನೆಗಳಿಂದ ಅತೀತವಾದ ದೇವ ಮಾನವತ್ವ ಕಂಡಿದ್ದಾರೆ. ಬುದ್ಧನ ಕುರಿತೆ ಪ್ರತ್ಯೇಕ ಕೃತಿ ಪುಷ್ಪವೊಂದನ್ನು ಸಮರ್ಪಿಸಲು ಲಾಲಾಜಿ ಆಶಿಸಿದ್ದರು. ಅವರ ಬೋಧನೆಗಳನ್ನು ನಿರೂಪಿಸಲು ಬಯಸಿದ್ದರು. ಆ ಬಗ್ಗೆ ಪ್ರಕಟಣೆಯನ್ನು ನೀಡಿದ್ದರು. ಆದರೆ ತಮ್ಮ ಆಶಯವನ್ನು ಅವರು ಈಡೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಆ ಲೇಖನ ಕೃಷಿಯ ಸಾಲಿನಲ್ಲಿ ಲಾಲಾಜಿ ಹೊರತಂದ ಕಡೆಯ ಬೆಳೆ ಶಿವಾಜಿ ಕುರಿತ ಉರ್ದು ಭಾಷೆಯ ವ್ಯಕ್ತಿ ಚಿತ್ರಣ. 1896ರಲ್ಲಿ ಆ ಮರಾಠ ಮಹಾರಾಜನನ್ನು ಕುರಿತು ಹೊರ ತಂದಿದ್ದ ಕೃತಿಯನ್ನು ಹಿಂದಕ್ಕೆ ತೆಗೆದುಕೊಂಡು ಆ ಕೃತಿಯನ್ನು ರಚಿಸಿದರು. ಮೂಲ ಶಿವಾಜಿ ಕೃತಿಯ ಆರನೇ ಮುದ್ರಣವನ್ನು ಪರಿಷ್ಕರಿಸುವ ಹಂತದಲ್ಲಿ ಕೃತಿಕಾರರಲ್ಲಿ ಅನೇಕ ಮಾರ್ಪಾಟುಗಳನ್ನು ಮಾಡಿಕೊಳ್ಳಲು ಪ್ರೇರಣೆ ಮೂಡಿತೆಂದು ಅವರೇ ಪೀಠಿಕೆಯಲ್ಲಿ ಹೇಳಿಕೊಂಡಿದ್ದಾರೆ. ಮೊದಲ ಕೃತಿಯಲ್ಲಿ ಪ್ರಸ್ತಾಪವಾಗಿದ್ದ ಕೆಲವು ಸಂಗತಿಗಳು ಮತ್ತು ವಿಶ್ಲೇಷಣೆಗಳು ಕಾಲಾತೀತವಾಗಿದ್ದದ್ದನ್ನು ತಾವು ಕಂಡು ಕೊಂಡಿದ್ದಾಗಿಯೂ, ಇದೇ ಆ ಕೃತಿಯನ್ನೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಆ ಜಾಗದಲ್ಲಿ ಇನ್ನೊಂದು ಕೃತಿಯನ್ನು ಹೊರ ತರಬೇಕೆಂದು ನಿಶ್ಚಯಿಸಿದ್ದಾಗಿ ತಿಳಿಸಿದ್ದಾರೆ. ಶಿವಾಜಿ ಕುರಿತು ಸಂಪೂರ್ಣವಾಗಿ ಭಿನ್ನವಾದ ಗಾತ್ರದಲ್ಲಿ ಇನ್ನು ಕಿರಿದಾದ ಕೃತಿಯನ್ನು ರಚಿಸಿದರು. ಅವರ ಮುನ್ನುಡಿ ಮತ್ತು ಹಿನ್ನುಡಿಗಳನ್ನು ಹಿಂದಿನ ಕೃತಿಯಲ್ಲಿ ಇದ್ದಂತೆ ಉಳಿಸಿಕೊಂಡರು. 1896ರಲ್ಲಿ ಆ ಕೃತಿಯನ್ನು ಬರೆದಾಗ ತಮ್ಮಲ್ಲಿದ್ದ ಉದ್ದೇಶ, ಆಶಯ, ಧ್ಯೇಯ, ಧೋರಣೆಗಳನ್ನು ಚಿರಂತನಗೊಳಿಸುವುದು ಲಜಪತರ ಆ ನಿರ್ಧಾರದ ಹಿನ್ನಲೆಯಾಗಿತ್ತು ಹಿಂದಿನ ಕೃತಿ

ಮತ್ತು ಹೊಸ ಕೃತಿ ರಚನೆಯ ನಡುವಣದ ಕಾಲು ಶತಮಾನದ ಅಂತರದಲ್ಲಿ ಶಿವಾಜಿಯ ಆರಂಭದ ಬದುಕು ಮತ್ತು ನಂತರದ ಅವನ ಚಳವಳಿಗಳು ನಿಚ್ಚಳವಾಗಿ ಬೆಳಕಿಗೆ ಬಂದಿದ್ದವು. ಲಾಲಾಜಿ ಮೊದಲ ಕೃತಿಯನ್ನು ರಚಿಸಿದಾಗ ಅಷ್ಟೊಂದು ಮಾಹಿತಿಗಳು ಲಭ್ಯವಾಗಿರಲಿಲ್ಲ. ಪರ್ಷಿಯನ್ ಸಾಹಿತ್ಯದಲ್ಲಿ ಶಿವಾಜಿ ಕುರಿತ ದಾಖಲೆಗಳು ವೈಜ್ಞಾನಿಕ ಸಾಂಗತ್ಯದಲ್ಲಿ ಪ್ರಕಟಗೊಂಡಿದ್ದವು. ಜದುನಾಥ್ ಸರ್ಕಾರ್ ಅವರ ಉದ್ಧೃತಗಳು ಅದರಲ್ಲಿ ಅಡಕವಾಗಿದ್ದವು. ಮರಾಠಿ ಸಂಪನ್ಮೂಲಗಳನ್ನೆಲ್ಲಾ ಅನೇಕ ವಿದ್ವಾಂಸರು ಅಧ್ಯಯನ ಮಾಡಿ ಸಂಶೋಧನಾತ್ಮಕ ದಾಖಲೆಗಳನ್ನು ಕ್ರೋಡಿಕರಿಸಿದ್ದರು. 1896ರಲ್ಲಿ ಮರಾಠಿ ಸಂಪನ್ಮೂಲಗಳು ಅಷ್ಟಾಗಿ ಲಭ್ಯವಾಗಿರಲಿಲ್ಲ. ಆಗ ಲಾಲಾಜಿ ಓರ್ವ ಮಹಾರಾಷ್ಟ್ರೀಯ ಗೆಳೆಯನನ್ನು ಆಶ್ರಯಿಸಿ ಆ ಕೃತಿಯನ್ನು ರಚಿಸಿದರು. ಆಗ ಲಭ್ಯವಿದ್ದ ಎಂ.ಜಿ. ರಾನಡೆಯವರ ಮರಾಠರ ಚರಿತ್ರೆ ಕೃತಿಯ ಹಸ್ತಪ್ರತಿಯನ್ನು ಆ ಗೆಳೆಯನಿಂದ ಓದಿಸಿ ತಮ್ಮ ಕೃತಿಗೆ ಮಾಹಿತಿಗಳನ್ನು ದೊರಕಿಸಿಕೊಂಡಿದ್ದರು. ಇಂಗ್ಲಿಷ್ ಚರಿತ್ರೆಕಾರರು (ಗ್ರಾಂಡ್ ಟಫ್ ಅವರಂಥ) ರಚಿಸಿದ್ದ ಕೃತಿಗಳು ಲಭ್ಯವಾಗಿದ್ದವು. ಲಾಲಾಜಿ ಸಂಪೂರ್ಣವಾಗಿ ಪರ್ಷಿಯನ್ ಸಂಪನ್ಮೂಲವನ್ನೇ ಆಧರಿಸಿಕೊಂಡಿದ್ದರು. ಈಗ ಶಿವಾಜಿ ಕುರಿತಂತೆ ಸಾಕಷ್ಟು ಅಧ್ಯಯನ ಸಂಶೋಧನೆಗಳು ಆಗಿದ್ದವು. ಇಂಗ್ಲಿಷ್ ಚರಿತ್ರೆಕಾರರಲ್ಲಿ ರಾವಿಲ್‌ಸನ್ ಅವರಂಥವರು ಪ್ರಾಚೀನ ಕೃತಿಗಳನ್ನೆಲ್ಲಾ ಪರಿಷ್ಕರಿಸಿ ಮರಾಠಿ ದಾಖಲೆಗಳನ್ನು ಆಧರಿಸಿ ಹೊಸ ಹೊತ್ತಿಗೆಗಳನ್ನು ಹೊರ ತಂದಿದ್ದರು. (ಲಾಲಾಜಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದ್ದ ಕಾಲದಲ್ಲಿ ಹೊರಬಂದ ರಾವಿಲ್‌ಸನ್ ಅವರ ಪುಸ್ತಕವನ್ನು ಪರಾಮರ್ಶಿಸಿದ್ದರು) ಜೊತೆಗೆ ತಾಕಾಕುವ್ ಮತ್ತು ಕಿರ್ಲೋಸ್ಕರ್ ಅವರಂಥ ಮರಾಠಿ ವಿದ್ವಾಂಸರು ಮರಾಠಿ ಇತಿಹಾಸವನ್ನು ಮಹಾರಾಷ್ಟ್ರದ ದೃಷ್ಟಿಕೋನವನ್ನು ಆಧಾರವಾಗಿಸಿಕೊಂಡು ಇಂಗ್ಲಿಷ್‌ನಲ್ಲಿ ಲಭ್ಯವಾಗುವಂತೆ ಮಾಡಿದ್ದರು. ಎಲ್ಲಾ ಆ ಬೆಳವಣಿಗೆಗಳ ಹಿನ್ನಲೆಯಲ್ಲಿ ಸಂಪೂರ್ಣವಾಗಿ ಭಿನ್ನವಾದ ಸಮಗ್ರ ಪರಿಷ್ಕೃತ ಶಿವಾಜಿಯ ಹೊಸ ಕೃತಿಯನ್ನೇ ರಚಿಸಲು ಲಾಲಾಜಿ ಕಾರ್ಯಶೀಲರಾದರು.

ಅಷ್ಟೇ ಅಲ್ಲದೆ, ಲಾಲಾಜಿ ಅವರ ಸ್ವಯಂ ಅಧ್ಯಯನ ಕ್ಷಿತಿಜವೂ ವಿಸ್ತಾರಗೊಂಡಿತು. 19ನೇ ಶತಮಾನದ ಅಂತ್ಯಕ್ಕಿಂತ ಹೆಚ್ಚು ಅನುಭವ ಅವರಲ್ಲಿ ಸಾಧಿತವಾಗಿತ್ತು. 1895ರ ಜೂನ್‌ನಲ್ಲಿ, ಬಾಲಗಂಗಾಧರನಾಥ್ ತಿಲಕ್ ಮತ್ತು ಅವರ ಸಹವರ್ತಿಗಳು ಮಹಾರಾಷ್ಟ್ರಕ್ಕೆ ಒಂದು ಹೊಸ ವಾರ್ಷಿಕ ಉತ್ಸವವನ್ನು ರೂಪಿಸಿಕೊಟ್ಟರು. ಅದುವೇ ಶಿವಾಜಿ ಉತ್ಸವ. ಆ ಮರಾಠ ಮಹಾರಾಜ ಪಟ್ಟಾಭಿಷಿಕ್ತನಾದ ದಿನಕ್ಕೆ ಆ ಉತ್ಸವವನ್ನು ಸಮನ್ವಯಗೊಳಿಸಲಾಗಿತ್ತು. ಶಿವಾಜಿಯನ್ನು ಓರ್ವ ರಾಷ್ಟ್ರೀಯ ನಾಯಕನನ್ನಾಗಿ ಚಿತ್ರಿಸುವ ಮೂಲಕ ಮಹಾರಾಷ್ಟ್ರೀಯನ್ನರನ್ನು ಒಗ್ಗೂಡಿಸುವ ಆಶಯ ಆ ಉತ್ಸವದ ಕಲ್ಪನೆಯ ಹಿಂದಿತ್ತು. ದಿನ ಕಳೆದಂತೆ ಅದೊಂದು ವ್ಯಕ್ತಿಯ ಆರಾಧನೆಯಾಗಿ ಬೆಳೆದು ಬಂದಿತು. ಆ ಸಂದರ್ಭದಲ್ಲೇ ಲಾಲಾಜಿ ತಮ್ಮ ಮೊದಲ ಶಿವಾಜಿಯನ್ನು ಹೊರತಂದಿದ್ದರು. ಕಥಾ ನಾಯಕನನ್ನು ನಾಯಕ ಪೂಜೆಯಲ್ಲೇ ಕಂಡಿದ್ದರು. ಆತನನ್ನು ಆ ಸಂದರ್ಭದ ಅಗತ್ಯಕ್ಕೆ ಅನುಗುಣವಾಗಿ ಓರ್ವ ದೂತನಂತೆ ಮತ್ತು ಪ್ರಚಾರಕನಂತೆ ಚಿತ್ರಿಸಿದ್ದರು. ಆದರೆ ಈಗ ಲಾಲಾಜಿ ತಮ್ಮ ಇಂದಿನ ಆ ಕಥಾನಾಯಕನನ್ನು ಸಂಪೂರ್ಣವಾಗಿ ಓರ್ವ ಚರಿತ್ರೆಯ

ವಿದ್ಯಾರ್ಥಿಯಾಗಿ ನಿಂತು ಪರಿಶೀಲಿಸಿದರು. ತಮ್ಮ ಆ ಪುನರ್ ರಚನೆಯನ್ನು ವಸ್ತುನಿಷ್ಠವಾಗಿ ನಿರ್ಣಾಯಕವಾಗಿ ಹೊರತರಲು ಪ್ರಯತ್ನಪಟ್ಟರು.

ಹೊಸ ಮುನ್ನುಡಿಯಲ್ಲಿ ಅವರು ಅದನ್ನೆಲ್ಲಾ ಹೀಗೆ ತಿಳಿಸಿದ್ದಾರೆ:

''ಸುಳ್ಳು ಸುಳ್ಳೇ, ಅಪ್ರಾಮಾಣಿಕತೆ ಅಪ್ರಾಮಾಣಿಕತೆಯೇ, ದ್ರೋಹ ಎಂದೂ ದ್ರೋಹವೇ, ಸ್ವಾರ್ಥ ಎಂದೂ ಸ್ವಾರ್ಥವೇ...ಹಾಗೇ ಸಾಮ್ರಾಜ್ಯವಾದಿತನ ಎಂದೂ ಸಾಮ್ರಾಜ್ಯವಾದಿತನವಾಗಿಯೇ ಇರುತ್ತದೆ. ಅದನ್ನು ಅವರು ಏಷ್ಯಾದಲ್ಲಿ ಬೇರೂರಿಸಿದರೂ ಸರಿ ಅಥವಾ ಯುರೋಪಿನಲ್ಲಾದರೂ ಅಷ್ಟೇ. ಇಲ್ಲವೇ ಅಮೆರಿಕದಲ್ಲಿ ಸ್ಥಾಪಿಸಿದರೂ ಅಷ್ಟೇ. ಸಾಮ್ರಾಜ್ಯಷಾಹಿಗಳು ಇಂಗ್ಲಿಷರು ಆಗಬಹುದು ಅಥವಾ ಭಾರತೀಯರೂ ಆಗಬಹುದು, ಚೀನಿಯರೂ ಆಗಿರಬಹುದು, ನೀಗ್ರೋಗಳು ಆಗಿರಬಹುದು ಇಲ್ಲವೇ ಜಪಾನಿಯರು ಆಗಿರಬಹುದು. ಸಾಮ್ರಾಜ್ಯವಾದಿಗಳು ಸಾಮ್ರಾಜ್ಯವಾದಿಗಳೇ. ಕೃತಿಕಾರ ನಮ್ಮವನು ಎಂಬುವ ಕಾರಣದಿಂದ ಸಾಮ್ರಾಜ್ಯವಾದಿಯನ್ನು ಬೇರೆ ರೀತಿಯಲ್ಲಿ ಭಾವಿಸುವುದಾದರೆ ಅದೊಂದು ಅಪಚಾರವಾಗುತ್ತದೆ. ಪಾಪಿ ಯಾವುದೇ ವಂಶಕ್ಕೆ ಸೇರಿರಲಿ ಅಥವಾ ಯಾವುದೇ ರಾಷ್ಟ್ರಕ್ಕೆ ಸೇರಿರಲಿ ಆತ ಪಾಪಿಯೇ. ಅತಿರೇಕದ ಪ್ರಸಂಗಗಳು ಮತ್ತು ಭಾವನೆಗಳು ಆತನನ್ನು ಬೇರೆ ತರದಲ್ಲಿ ಚಿತ್ರಿಸಲು ಪ್ರಯತ್ನಿಸಬಹುದು. ಆದರೂ ಅಂಥ ಜನರು ಆತ ಎಸಗಿದ ಪಾಪಗಳನ್ನು ಮುಚ್ಚಿಡಲು ಸಾಧ್ಯವಿಲ್ಲ. ನೈತಿಕ ಮೌಲ್ಯಗಳು ಯುಗದಿಂದ ಯುಗಕ್ಕೆ ವ್ಯತ್ಯಾಸಗೊಳ್ಳುತ್ತಾ ಬಂದಿವೆ. ಯಾವುದೇ ಓರ್ವ ವ್ಯಕ್ತಿಯನ್ನು ಆಯಾ ಕಾಲದ ಮೌಲ್ಯಗಳ ಆಧಾರದ ಮೇಲೆ ಮಾಪನ ಮಾಡಬೇಕಾಗುತ್ತದೆ... ಶಿವಾಜಿಯ ಬಗ್ಗೆ ನಾವು ನಮ್ಮ ನಿರ್ಣಯವನ್ನು ಪ್ರಚುರ ಪಡಿಸುವ ಮೊದಲು ಈ ಸರ್ವ ಮಾನ್ಯವಾದ ತಪ್ಪುಗಳನ್ನು ಮೊದಲು ಪರಿಗಣಿಸಬೇಕಾಗುತ್ತದೆ. ನನ್ನ ಯೌವ್ವನದ ದಿನಗಳಲ್ಲಿ ನನ್ನಲ್ಲಿದ್ದ ಹಿಂದೂ ರಾಷ್ಟ್ರೀಯವಾದದ ಉನ್ಮತ್ತ ಪ್ರಭಾವದಲ್ಲಿ ಅದಕ್ಕೆ ಅನುಗುಣವಾದ ರೀತಿಯಲ್ಲಿ ಶಿವಾಜಿಯ ಲಕ್ಷಣಗಳನ್ನು ನಾನು ಗುರುತಿಸಿಕೊಂಡಿದ್ದೆ. ಅದನ್ನು ನಾನು ಈ ಕೃತಿಯ ಅಂತಿಮ ಅಧ್ಯಾಯದಲ್ಲಿ ತಿಳಿಸಿದ್ದೇನೆ. ಆಗಿನ ನನ್ನ ಅಂದಾಜುಗಳು ಮತ್ತು ಅನಿಸಿಕೆಗಳು ತಪ್ಪೆಂದು ಹೇಳುವುದು ನನ್ನ ಆಶಯವಲ್ಲ. ಅವು ತಪ್ಪೆಂಬ ಕಾರಣದಿಂದಲೇ ಅಂದು ಹೇಳಿದ್ದನ್ನೆಲ್ಲಾ ಇಂದು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ ಎಂದಲ್ಲ. ಅಂದು ನಾನು ಯಾವುದನ್ನು ವಿಹಿತವೆಂದು ಭಾವಿಸಿಕೊಂಡು ಬರೆದೆನೋ ಇಂದು ನನಗೆ ಭಿನ್ನವಾಗಿ ಕಾಣುತ್ತದೆ. ಕಾಲದ ಉರುಳಿನಲ್ಲಿ ಭಾವನೆಗಳು ಪರಿಣಾಮಕ್ಕೆ ಒಳಗಾಗದೇ ಇರುವುದಿಲ್ಲ.''

ಶಿವಾಜಿ ಪುನರ್ ರೂಪದಲ್ಲಿ ನಿರ್ಣಾಯಾತ್ಮಕವಾಗಿಯೂ ಅನೇಕ ಸತ್ಯಾಸತ್ಯಗಳನ್ನು ಪರೀಕ್ಷಿಸಲ್ಪಟ್ಟ ಕೃತಿಯಾಗಿಯೂ ಹೊರಹೊಮ್ಮಿತು. ಉತ್ತಮ ಕೃತಿ ಎಂದೂ ಪರಿಗಣಿತವಾಯಿತು. ಆತನ ಸಾಧನೆಗಳು ಮಹತ್ತದ ಸಾಧನೆಗಳೆಂದು ಪರಿಗಣಿಸುವುದರಲ್ಲಿ ಅತಿಶಯೋಕ್ತಿ ಎನಿಸಲಿಲ್ಲ. ಆತನ ಬದುಕು ಪರಿಶುದ್ಧವಾಗಿತ್ತು. ಯುದ್ಧ ಕಾಲದಲ್ಲಾಗಲಿ, ಸುಲಿಗೆ ಕಾಲದಲ್ಲಾಗಲಿ ಮಹಿಳೆಯರ ಗೌರವಕ್ಕೆ ಕಿಂಚಿತ್ತೂ ಚ್ಯುತಿಯಾಗದಂತೆ ಆ ಮರಾಠ ವೀರ ನಡೆದುಕೊಳ್ಳುತ್ತಿದ್ದ. ಆತನ ನಾಯಕತ್ವದ ಗುಣಗಳು ಮತ್ತು ಉದಾತ್ತ ನಡವಳಿಕೆಗಳು ಆತನ ಮೇರು ಸದೃಶ ಗುಣಕ್ಕೆ ಕಾರಣವಾಗಿದ್ದವು. ಆತನ

ಸಮಕಾಲೀನರೊಂದಿಗೆ ಹೋಲಿಸಿದಾಗ ಈ ಎಲ್ಲಾ ಗುಣಗಳಿಂದ ಆತ ವಿಶಿಷ್ಟನಾಗಿ ಕಂಡು ಬಂದ. ಔರಂಗಜೇಬನೊಂದಿಗೆ ಆತನ ಸಂಘರ್ಷ ಮತ್ತು ಹೋಲಿಕೆ ಅನ್ಯಾದೃಶ್ಯ ಎಂದು ಲಾಲಾಜಿ ತಮ್ಮ ಶಿವಾಜಿಯನ್ನು ಚಿತ್ರಿಸಿದರು. ಆದರೆ ತಾಕಕುವ ಅವರಂಥ ಸ್ತುತಿಪಾಠಕರು ಚಿತ್ರಿಸಿದಷ್ಟು ಎತ್ತರದಲ್ಲಿ ಶಿವಾಜಿಯ ಗುಣಗಳು ಲಾಲಾಜಿ ಅವರಿಗೆ ಕಂಡು ಬರಲಿಲ್ಲ. ಆ ಸ್ತುತಿಪಾಠಕರು ಶಿವಾಜಿಯನ್ನು ಪ್ರಾಚೀನ ಇತಿಹಾಸದಲ್ಲಾಗಲಿ ಅಥವಾ ಆಧುನಿಕ ಇತಿಹಾಸದಲ್ಲಾಗಲಿ ಸರಿಸಾಟಿ ಇಲ್ಲದ ಆಡಳಿತಗಾರ, ಜನತೆಯ ಅಪ್ರತಿಮ ನಾಯಕ ಹಾಗೂ ಆಧುನಿಕ ಪ್ರಜಾಸತ್ತಾತ್ಮಕ ಕಲ್ಪನೆಗಳಿಗೆ ಅನುರೂಪವಾದ ಆಡಳಿತ ನೀಡಿದವ ಎಂದೆಲ್ಲಾ ಪ್ರಶಂಸಿಸಿದ್ದು ಲಾಲಾಜಿ ಅವರಿಗೆ ಅತಿ ಎನಿಸಿತು. ಶಿವಾಜಿ ಲಾಲಾಜಿ ಅವರ ದೃಷ್ಟಿಯಲ್ಲಿ ಸಾಮ್ರಾಜ್ಯಶಾಹಿ. ರಾಷ್ಟ್ರ ನಿರ್ಮಾಣಕಾರಿಯಾಗಿರಲಿಲ್ಲ. ಆತನ ಆಡಳಿತ ವಿಧಾನ ಜನತೆಯದೇ ಆದ ಆಡಳಿತದ ಗಂಗಾ ತುಂಬಿದ ಸ್ವರಾಜ್ಯ ಸ್ವರೂಪದ್ದಾಗಿರಲಿಲ್ಲ. ಆತನ ಅಧಿಕಾರಶಾಹಿ ಯಂತ್ರದಲ್ಲಿದ್ದವರೆಲ್ಲಾ ಸಾಮ್ರಾಜ್ಯಶಾಹಿ ಆಶೋತ್ತರಗಳಿಗೆ ಅನುಗುಣವಾಗಿ ನೇಮಿಸಲ್ಪಟ್ಟವರಾಗಿದ್ದರು. ಅವರಾರು ಜನತೆಯನ್ನು ಪ್ರತಿನಿಧಿಸುವವರಾಗಿರಲಿಲ್ಲ. ಒಟ್ಟಾರೆ ಶಿವಾಜಿಯ ಆಡಳಿತ ಜನ ಕಲ್ಯಾಣಕಾರಿ ಎನಿಸಿದರೂ ಕೃಷಿಕರಿಂದ ಆತ ಸಂಗ್ರಹಿಸುತ್ತಿದ್ದ ಕಂದಾಯ ರೂಪದ ಕಾಣಿಕೆ ತೀರಾ ದುಬಾರಿಯಾಗಿತ್ತು. 5ನೇ ಎರಡರಷ್ಟು ಮತ್ತು ಅದರ ಮೇಲೆ ಇನ್ನಷ್ಟು. ಎಲ್ಲವೂ ಸೇರಿ ಒಟ್ಟಿನಲ್ಲಿ ಅರ್ಧದಷ್ಟು ಉತ್ಪನ್ನವನ್ನು ಕೃಷಿಕ ಶಿವಾಜಿಯ ಬೊಕ್ಕಸಕ್ಕೆ ಸಲ್ಲಿಸಬೇಕಾಗಿತ್ತು ಎಂದು ಲಾಲಾಜಿ ವಿಶ್ಲೇಷಿಸಿದ್ದಾರೆ. ಶಿವಾಜಿಯ ಆಡಳಿತದ ಬಗ್ಗೆ ಒಟ್ಟಾರೆ ಮೆಚ್ಚಿಗೆ ವ್ಯಕ್ತಪಡಿಸಿದರೂ ಲಾಲಾಜಿ ಆತನನ್ನು 'ಸ್ವಾತಂತ್ರ್ಯದ ಚಾಂಪಿಯನ್' ಎಂದು ಕರೆಯಲಿಲ್ಲ.

ಲಾಲಾಜಿ ತಮ್ಮ ಕೃತಿಯಲ್ಲಿ ಅಫಜಲ್‌ಖಾನ್ ಮತ್ತು ಶಾಹಿಸ್ತಾಖಾನ್ ಘಟನೆಗಳನ್ನು ಹೊಸ ದಾಖಲೆಗಳೊಂದಿಗೆ ಪರಿಷ್ಕರಿಸಿದರು. ಅವರಲ್ಲಿ ಶಿವಾಜಿಯ ದೋಷವೇನೂ ಕಂಡು ಬಂದಿಲ್ಲ. 'ವಿದ್ರೋಹ'ದ ಆರೋಪ ಸಾಬೀತಾಗಿಲ್ಲ. ಲಾಲಾಜಿ ಶಿವಾಜಿ ತನ್ನ ಹೋರಾಟದಲ್ಲಿ ಅಳವಡಿಸಿಕೊಂಡ ಗೆರಿಲ್ಲಾ ತಂತ್ರಗಳನ್ನು ಟೀಕಿಸಿಲ್ಲ. ಬದಲಾಗಿ ಪ್ರಶಂಸಿಸಿದ್ದಾರೆ. -''ಸಂಪನ್ಮೂಲವೇ ಇಲ್ಲದ ಒಂದು ಬಣಕ್ಕೆ ಅದರಲ್ಲೂ ವ್ಯವಸ್ಥಿತ ಹಾಗೂ ಶಕ್ತಿವಂತ ಸೈನ್ಯವನ್ನು ಎದುರಿಸಲು ಗೆರಿಲ್ಲಾ ಯುದ್ಧ ತಂತ್ರ ಅತ್ಯುತ್ತಮ ಹೋರಾಟ ವಿಧಾನ'' ಎಂದಿದ್ದಾರೆ. ಈ ನಿಟ್ಟಿನಲ್ಲಿ ಲಾಲಾಜಿ ಅವರಲ್ಲಿ ರಜಪೂತರ ದಿಡೀರ್ ದಾಳಿ ಮತ್ತು ಹಿಗ್ಗಾಮುಗ್ಗಾ ಆಕ್ರಮಣಗಳ ಬಗ್ಗೆ ಅಪಾರ ಗೌರವವಿತ್ತು. ಆ ಪರಿಸ್ಥಿತಿಯಲ್ಲಿ ಅದಕ್ಕಿಂತ ಉತ್ತಮವಾದ ಎದುರಾಳಿಗಳನ್ನು ಎದುರಿಸುವ ಪರಿ ಬೇರೇನೂ ಇರಲಿಲ್ಲ. ಅಂಥ ತಂತ್ರವನ್ನು ಅನುಸರಿಸದಿದ್ದರೆ ದುರ್ದಶೆಯೇ ಕಾದಿರುತ್ತಿತ್ತು ಎಂದು ಲಾಲಾಜಿ ವಿವೇಚಿಸಿದ್ದಾರೆ. ತಮ್ಮ ವಿಸ್ತೃತ ಅನುಭವ ಮತ್ತು ಮೌಲ್ವಿಕೃತ ಪರಿಜ್ಞಾನದ ಹಿನ್ನಲೆಯಲ್ಲಿ ಲಾಲಾಜಿ ಅವರ ಶಿವಾಜಿ ಉತ್ತಮ ಕೃತಿಯಾಗಿ ಹೊರಬಂದಿತು. ಅವರಿಗೆ ತೃಪ್ತಿಯನ್ನು ನೀಡಿತು. ಕೇವಲ ವಿದೇಶಿ ಆಮದು ಗುಣವನ್ನು ಒಗ್ಗಿಸಿಕೊಂಡ ಜನರು ಆ ಕೃತಿಯ ಬಗ್ಗೆ ವಿಮರ್ಶೆ ಮಾಡಿ ತಪ್ಪು ದಾರಿ ತುಳಿದದ್ದು ಉಂಟು. ಅವರು ಹಾಗೆ ಬರೆದ ಮಾತ್ರಕ್ಕೆ ಅವರು ಹೇಳುತ್ತಿದ್ದ ಪಾಶ್ಚಾತ್ಯ ಸಾಹಿತ್ಯದ ಮಟ್ಟಕ್ಕಿಂತಲೂ ಲಾಲಾಜಿ ಅವರ

ಕೃತಿ ಮೌಲ್ಯ ಯಾವ ರೀತಿಯಲ್ಲೂ ಕಡಿಮೆಯಾಗಿರಲಿಲ್ಲ. ಶಿವಾಜಿಯನ್ನು ಅವನ ಕಾಲದ ಮೌಲ್ಯಗಳು ಮತ್ತು ಅವನ ಜನರ (ಅಥವಾ ದೇಶದ) ವ್ಯಾಪ್ತಿಗಳಿಂದ ಹೊರತಾಗಿ ನಿರ್ಣಯಿಸಲಾಗದು ಎಂದು ಪ್ರೊ. ರಾಲಿನ್‌ಸನ್ ತಮ್ಮ ವಿಮರ್ಶೆಯಲ್ಲಿ ಮಾಡಿದ ಸೂಕ್ಷ್ಮ ಟೀಕೆಯನ್ನು ಲಾಲಾಜಿ ಗಮನಿಸದಿರಲಿಲ್ಲ. ಅದಕ್ಕೆ ತಕ್ಕ ಉತ್ತರವನ್ನು ಅವರು ಕೊಟ್ಟರು. ಪಾಶ್ಚಾತ್ಯ ವಿಮರ್ಶಕರು ತಮ್ಮ ವಿಮರ್ಶೆಗೆ ಆಧಾರ ಮಾಡಿಕೊಳ್ಳುತ್ತಿದ್ದ ಮೂರು ಬಗೆಯ ಮಾಪನಗಳನ್ನು ಲಾಲಾಜಿ ತಮ್ಮ ಪ್ರತ್ಯುತ್ತರದಲ್ಲಿ ಹಿಂಜಿಟ್ಟರು. ಹೆಸರಾಂತ ವಿದ್ವಾಂಸರುಗಳು ಕೂಡಾ ರಾಷ್ಟ್ರ ರಾಷ್ಟ್ರಗಳ ನೈತಿಕ ನಡವಳಿಕೆಗಳನ್ನು ವಿಶ್ಲೇಷಿಸುವಾಗ ಈ ಮೂರು ಮಾಪನಗಳನ್ನು ಅಳವಡಿಸಿಕೊಳ್ಳುತ್ತಿದ್ದ ಬಗೆ ಲಾಲಾಜಿ ಅವರ ಉತ್ತರದಲ್ಲಿ ಸ್ಪಷ್ಟವಾಗಿ ಚಿತ್ರಿತವಾಯಿತು. ಆ ಪೈಕಿ ಮೊದಲನೆಯದು ಸೈದ್ಧಾಂತಿಕ ಉದ್ದೇಶ ಮತ್ತು ಕೇವಲ ಬೋಧನಾತ್ಮಕವಾದುದು. ಎರಡನೆಯದು ಐರೋಪ್ಯ ದೇಶಗಳೊಳಗಿನ ವ್ಯವಹಾರಕ್ಕೆ ಸಾಂಗತ್ಯ ಮಾಡಿಕೊಂಡಿದ್ದು. ಮೂರನೇಯದು "ಯಾವುದೇ ನಿಯಮವಿಲ್ಲದೆ ಕೆಳಸ್ತರದ ಸಂಗತಿಗಳನ್ನು" ಖಂಡಿಸುತ್ತಿದ್ದದ್ದು. "ಈ ನಿರ್ದಿಷ್ಟವಾದ ಮಾಪನಗಳು" ಲಾಲಾಜಿ ಅವರಿಗೆ ವಿಹಿತವಾದವು. ಸಾಮ್ರಾಜ್ಯಷಾಹಿಗಳು ಪೌರಾತ್ಯವಿರಲಿ, ಪಾಶ್ಚಾತ್ಯರಿರಲಿ ಈ ಮಾಪನಗಳು ಒಂದೇ ಎನಿಸಿದವು. ಅಲೆಗ್ಸಾಂಡರ್, ಟಾಮರ್ಲೇನ್, ಘಝ್ನಿ ಮಹಮದ್, ಅಲ್ಲಾ ಉದ್ದೀನ್ ಖಿಲ್ಜಿ ನೆಪೋಲಿಯನ್ ಅಥವಾ ಕ್ಲೈವ್, ಶಿವಾಜಿ ಯಾರೇ ಆಗಿರಲಿ ನೈತಿಕತೆ ಮತ್ತು ಸಾರ್ವಜನಿಕ ಅಥವಾ ಖಾಸಗಿ ಬದುಕಿನ ಮೌಲ್ಯಗಳಲ್ಲಿ ತೂಗಿದಾಗ ಅದನ್ನು ನ್ಯಾಯೋಚಿತವಾಗಿ ವಿಶ್ಲೇಷಿಸಲು ನಾಚಿಕೆ ಪಡುವ ಅಗತ್ಯವಿಲ್ಲವೆಂದು ಲಾಲಾಜಿ ಸ್ಪಷ್ಟಪಡಿಸಿದರು. ಒಂದು ವೇಳೆ ಶಿವಾಜಿ ಕುಬ್ಜನಾಗಿ ಕಂಡು ಬಂದರೆ ಅದು ಅಶೋಕ ಚಕ್ರವರ್ತಿಯ ಮೌಲ್ಯಗಳಿಗೆ ಹೋಲಿಸಿದಾಗ ಮಾತ್ರ. ಅಲೆಗ್ಸಾಂಡರ್ ಅಥವಾ ನೆಪೋಲಿಯನ್‌ಗೆ ಹೋಲಿಸಿದಾಗ ಅಲ್ಲ ಎಂದು ಲಾಲಾಜಿ ಸಾರಿದರು.

ಅಂತಿಮವಾಗಿ ಎಲ್ಲವನ್ನು ಕ್ರೋಡಿಕರಿಸುತ್ತಾ, ಲಾಲಾಜಿ ಮಹಾಪುರುಷರನ್ನು ಮೂರು ವರ್ಗವಾಗಿ ವಿಂಗಡಿಸಿದರು. ಅದರಲ್ಲಿ ಬುದ್ಧ, ಶಂಕರ, ಕ್ರೈಸ್ತ, ಮಹಮದ್, ಓಮರ್, ಸೆಲ್ಟ್‌ಪಾಲ್, ನಾನಕ್, ದಯಾನಂದ, ಗಾಂಧೀ, ಅಶೋಕ, ಕಾಲ್‌ಮಾರ್ಕ್ಸ್, ಮಝ್ಜಿನಿ, ವಾಷಿಂಗ್‌ಟನ್ ಅವರನ್ನು ತಮ್ಮ ವ್ಯಕ್ತಿಗತ ಆಶೋತ್ತರಗಳನ್ನು ಬದಿಗಿಟ್ಟು ಇತರರ ಅನುಕೂಲಕ್ಕಾಗಿಯೇ ಉನ್ನತ ಆದರ್ಶಗಳಲ್ಲಿ ಸಾಧನೆ ಮಾಡಿದವರೆಂದು ಮೊದಲ ವರ್ಗಿಕರಣದಲ್ಲಿ ಹೇಳಿದರು. ಈ ಉನ್ನತ ವರ್ಗದಲ್ಲಿ ಶಿವಾಜಿ ಸೇರಲಿಲ್ಲ. ಮಹಾಪುರುಷರಲ್ಲಿ ಮೂರನೇ ವರ್ಗಕ್ಕೆ ಸ್ವಾರ್ಥ ಸಾಧನೆಯನ್ನೇ ಪರಮೋಚ್ಚ ಗುರಿಯನ್ನಾಗಿ ಮಾಡಿಕೊಂಡ ಗೆಂಗೆಹಿಜ್ ಮತ್ತು ಟಾಮರ್‌ಲೇನ್ಸ್‌ರಂಥ ಪ್ರಜಾಪೀಡಕರನ್ನು ವರ್ಗಿಕರಿಸಿದರು. ಶಿವಾಜಿಯನ್ನು ಅವರು ಸೇರಿಸಿದ್ದು ಮಧ್ಯಮ ವರ್ಗಕ್ಕೆ. ತಮ್ಮ ವೈಯಕ್ತಿಕ ಆಶೋತ್ತರಗಳನ್ನು ಪ್ರಧಾನವಾಗಿಟ್ಟುಕೊಂಡು ಅದರ ಮೂಲಕ ಜನತೆಯ ಸೇವೆಗೆ ತೊಡಗಿದ ಮಹಾಪುರುಷರ ಗುಂಪು ಅದೆಂದು ಹೇಳಿದರು.

* * *

ಅಧ್ಯಾಯ-53

ಸೋಲಾನ್ ಗಿರಿಧಾಮದಲ್ಲಿ ಚೇತರಿಕೆ

ಲಾಹೋರಿನ ತೀಕ್ಷ್ಣ ಬಿಸಿಲಿನ ಹವಾಗುಣದಿಂದ ಪಾರು ಮಾಡಿ ಶೀತಲ ವಾತಾವರಣದ ಸ್ಥಳವೊಂದಕ್ಕೆ ಲಾಲಾಜಿಯವರನ್ನು ಸ್ಥಳಾಂತರಿಸುವುದು ತೀರಾ ಅಗತ್ಯವಾಯಿತು. ಸೋಲಾನ್ ಗಿರಿಧಾಮದಲ್ಲಿ ಅದಕ್ಕೆ ಅನುಗುಣವಾದ ವ್ಯವಸ್ಥೆ ಕೈಗೊಳ್ಳಲಾಯಿತು. ಬಂಧನದಿಂದ ಬಿಡುಗಡೆಯಾದ ಎರಡು-ಮೂರು ದಿನಗಳಲ್ಲೇ ಲಾಲಾಜಿಯವರನ್ನು ಗಿರಿಧಾಮಕ್ಕೆ ಕರೆದೊಯ್ಯಲಾಯಿತು. ಅಲ್ಲಿ ನಿರಂತರ ಚಿಕಿತ್ಸೆಯ ನಂತರ ಸಾಧ್ಯವಾದಷ್ಟು ಶೀಘ್ರದಲ್ಲೇ ಜ್ವರ ಇಳಿಮುಖವಾಯಿತು. ತರುವಾಯ ಹಂತ ಹಂತವಾಗಿ ಲಾಲಾಜಿ ಚೇತರಿಸಿಕೊಳ್ಳತೊಡಗಿದರು. ತಾರುಣ್ಯದಲ್ಲೇ ಕಾಯಿಲೆ ಬಿದ್ದಾಗ ಚೇತರಿಸಿಕೊಂಡ ನಂತರ ತ್ವರಿತವಾಗಿ ಕ್ರಿಯಾಶೀಲರಾಗುತ್ತಿದ್ದ ಶಕ್ತಿ ಈಗ ಲಾಲಾಜಿಯವರಲ್ಲಿ ಇಲ್ಲವಾಗಿತ್ತು. ಆಗ ಕಾಯಿಲೆ ಎಷ್ಟೇ ಗಹನವಾಗಿದ್ದರೂ ಅದನ್ನು ಉಚಿತ ಚಿಕಿತ್ಸೆಯ ಮೂಲಕ ಗುಣಮುಖ ಗೊಳಿಸುತ್ತಿದ್ದಂತೆ ಶೀಘ್ರವಾಗಿ ಚೇತರಿಸಿಕೊಂಡು ಬಿಡುತ್ತಿದ್ದರು. ತಕ್ಷಣವೇ ತಮ್ಮ ಅನುಗಾಲದ ಬರಹ, ಸಾರ್ವಜನಿಕ ಭಾಷಣ, ಪ್ರವಾಸ ಹಾಗೂ ಇತರೆ ಚಿರಪರಿತ ಕೆಲಸಗಳಲ್ಲಿ ಕ್ರಿಯಾಶೀಲರಾಗಿಬಿಡುತ್ತಿದ್ದರು. ಅವರ ಆರೋಗ್ಯದ ಗುಣಧರ್ಮ ಅವರ ಗೆಳೆಯರನ್ನು ಅವರ ವೈದ್ಯರನ್ನು ಆಶ್ಚರ್ಯಗೊಳಿಸುತ್ತಿತ್ತು. ಶಕ್ತಿಯನ್ನೆಲ್ಲಾ ಒತ್ತಿಟ್ಟು ಹತೋಟಿಯಲ್ಲಿಟ್ಟುಕೊಂಡ ಸ್ಪ್ರಿಂಗ್‌ವೊಂದು ಆ ಶಕ್ತಿಯನ್ನು ತೆಗೆಯುತ್ತಿದ್ದಂತೆ ಹೇಗೆ ಒಮ್ಮೆಗೆ ಪುಟಿಯುವುದೋ ಹಾಗಿರುತ್ತಿತ್ತು. ಕಾಯಿಲೆಯಿಂದ ಚೇತರಿಸಿಕೊಂಡ ಲಾಲಾಜಿಯವರ ಕರ್ತವ್ಯದ ಪರಿ. ಆದರೆ, ಸೋಲಾನ್ ಗಿರಿಧಾಮದಲ್ಲಿ ಆರೋಗ್ಯ ಸಾಧ್ಯವಾದಷ್ಟು ಬೇಗ ಸುಧಾರಿಸಿದರೂ ಅಪಾಯದ ಹಂತದಿಂದ ಪಾರಾದರು ಎಂದು ವೈದ್ಯರು ಸಾರಿದರೂ ಅವರ ದೇಹಸ್ಥಿತಿ ಸಂಪೂಣವಾಗಿ ಯಥಾಸ್ಥಿತಿಗೆ ಮರಳಲಿಲ್ಲ. ಅವರ ದೈಹಿಕ ವ್ಯವಸ್ಥೆಗಳು ದೀರ್ಘ ಕಾಲದ ವಿಶ್ರಾಂತಿ ಬಯಸುತ್ತಿದ್ದಂತೆ ಕಂಡು ಬಂದಿತು. ಆ ಇಡೀ ಬೇಸಿಗೆ ಋತುವನ್ನು ಲಾಲಾಜಿ ಆ ಗಿರಿಧಾಮದಲ್ಲಿ ವಿಶ್ರಾಂತಿ ಪಡೆಯುವ ಮೂಲಕ ಕಳೆಯಬೇಕಾಗಿ ಬಂದಿತು. ಅನುಕೂಲಕ್ಕೆ ತಕ್ಕಂತೆ ಓದು, ಬರಹಗಳನ್ನು ಕೈಗೊಳ್ಳುತ್ತಿದ್ದರು. ತಾವು ಸಂಬಂಧ ಇಟ್ಟುಕೊಂಡಿದ್ದ ಸಂಘ ಸಂಸ್ಥೆಗಳಿಗೆ ನಿರ್ದೇಶನ ಮತ್ತು ಮಾರ್ಗ ಸೂಚಿಗಳನ್ನು ಅಲ್ಲಿಂದಲೇ' ನೀಡುತ್ತಿದ್ದರು. ಆಗಾಗ ರಾಜಕೀಯ ಸಲಹೆಗಳಲ್ಲೂ ಭಾಗಿಯಾಗುತ್ತಿದ್ದರು. ಅದೇ ದಿನಗಳಲ್ಲಿ ಆ ಗಿರಿಧಾಮದಲ್ಲೇ ಅಬುಲ್ ಕಲಂ ಆಜಾದ್ ಮತ್ತು ಮೋತಿಲಾಲ್ ನೆಹರು ವಿಶ್ರಾಂತಿ ಪಡೆಯುತ್ತಿದ್ದರು. ಕೆಲವೇ ದಿನಗಳಲ್ಲಿ ಜವಹರಲಾಲ್ ನೆಹರು ತಮ್ಮ ತಂದೆಯನ್ನು ಕೂಡಿಕೊಂಡರು. ಎಲ್ಲರೂ ಆಗಾಗ ಸಭೆ ಸೇರುತ್ತಿದ್ದರು. ಹೊಸದಾಗಿ ಉದ್ಭವಿಸಿದ ಸಮಸ್ಯೆಗಳನ್ನು ಉತ್ಸಾಹದಿಂದ ಚರ್ಚಿಸುತ್ತಿದ್ದರು. ಆ ಸಮಸ್ಯೆಗಳಲ್ಲಿ ಹಿಂದೂ-ಮುಸ್ಲಿಂ ವಿವಾದ ಪ್ರಮುಖವಾಗಿರುತ್ತಿತ್ತು.

ಶಾಸಕಾಂಗಗಳನ್ನು 'ಸುಪರ್ದಿ'ಗೆ ತೆಗೆದುಕೊಳ್ಳುವ ವಿಷಯವು ಚರ್ಚಿತವಾಗುತ್ತಿತ್ತು. ಅಂಥ ಸಭೆಗಳಲ್ಲಿ ಹಿಂದೂ-ಮುಸ್ಲಿಂ ಸಮಸ್ಯೆಗೆ ಪರಿಹಾರವಾಗುವಂಥ 'ರಾಷ್ಟ್ರೀಯ ಒಡಂಬಡಿಕೆ'ಯೊಂದನ್ನು ರೂಪಿಸಲು ಅಭಿಪ್ರಾಯ ಮೂಡಿತು. ಅದರ ಫಲವಾಗಿ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಸೀಮಿತ ವ್ಯಾಪ್ತಿಯಲ್ಲಿ ಆ ಒಡಂಬಡಿಕೆ ವಿಷಯ ಪ್ರಸ್ತಾಪಗೊಂಡಿತು. ಮುಂದೆ ಕಾಕಿನಾಡ (ಆಂಧ್ರ ಪ್ರದೇಶ)ದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಆ ಒಡಂಬಡಿಕೆಯ ವಿಷಯವನ್ನು ಪರಿಗಣಿಸುವ ಆಶಯವೂ ಮೂಡಿತು. ಒಡಂಬಡಿಕೆಗೆ ಸಂಬಂಧಪಟ್ಟಂತೆ ಲಾಲಾಜಿ ಮತ್ತು ಆಜಾದ್ ವಿಶಾಲ ವ್ಯಾಪ್ತಿಯ ಸಲಹೆ, ಸೂಚನೆಗಳನ್ನು ರೂಪಿಸಲು ಅನೇಕ ಸುತ್ತು ಮಾತುಕತೆಗಳನ್ನು ನಡೆಸಿದರು. ಅದನ್ನು ಅವರೆಲ್ಲರೂ ಬಹುತೇಕ ಒಪ್ಪಿಕೊಂಡರು ಕೂಡಾ.

ಮೋತಿಲಾಲ್ ನೆಹರು ಅವರೊಂದಿಗೆ ನಡೆಸಿದ ರಾಜಕೀಯ ಚರ್ಚೆಗಳಲ್ಲಿ ಸ್ವರಾಜ್ಯ ಪಕ್ಷಕ್ಕೆ ರೂಪು ನೀಡುವ ವಿಷಯ ಪ್ರಮುಖವಾಗಿತ್ತು. ಕಾಂಗ್ರೆಸ್ಸಿಗೆ ಶಾಸಕಾಂಗಗಳಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಹಿಡಿದುಕೊಡುವ ತನ್ನ ಕಾರ್ಯಕ್ರಮವನ್ನು ಪಕ್ಷವು ಜನತೆಗೆ ಮನವರಿಕೆ ಮಾಡಿಕೊಡುವ ಅಗತ್ಯದ ಬಗ್ಗೆಯೂ ಚರ್ಚೆಗಳು ನಡೆದವು. ಸ್ವರಾಜ್ ಪಕ್ಷವು ಲಾಲಾಜಿ ಇನ್ನು ಸೆರೆಮನೆಯಲ್ಲಿದ್ದಾಗಲೇ ಸಿ.ಆರ್. ದಾಸ್ ಅವರ ಅಧ್ಯಕ್ಷತೆಯಲ್ಲಿ ಮತ್ತು ಮೋತಿಲಾಲ್ ನೆಹರು ಕಾರ್ಯದರ್ಶಿತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಜೈಲಿನಲ್ಲಿದ್ದುಕೊಂಡೇ ಲಾಲಾಜಿ ಪಕ್ಷ ಸ್ಥಾಪನೆಗೆ ನೆರವು ನೀಡಿದ್ದರು. ಈಗ ಅವರು ಬಿಡುಗಡೆಗೊಂಡಾಗಿತ್ತು. ಆರೋಗ್ಯವು ಉತ್ತಮಗೊಂಡಿದ್ದ ಆ ಪರಿಸ್ಥಿತಿಯಲ್ಲಿ ಪಕ್ಷಕ್ಕೆ ಅವರಿಂದ ಸಾಧ್ಯವಾದಷ್ಟು ಗರಿಷ್ಠ ಪ್ರಮಾಣದ ಸಹಾಯ ನಿರೀಕ್ಷಿಸಲಾಗಿತ್ತು. ವಿಶೇಷವಾಗಿ ಪಂಜಾಬಿನಲ್ಲಿ ನಡೆಯಲಿದ್ದ ವಿಧಾನ ಪರಿಷತ್ತು ಚುನಾವಣೆಗಳ ಹೊಣೆಗಾರಿಕೆ ಅವರ ಮೇಲಿತ್ತು. ಸೋಲಾನ್ ಗಿರಿಧಾಮದಲ್ಲಿದ್ದುಕೊಂಡೇ ಲಾಲಾಜಿ ಪಂಜಾಬ್ ಚುನಾವಣೆಗೆ ಸ್ವರಾಜ್ ಪಕ್ಷದ ಧ್ವಜದಡಿಯಲ್ಲಿ ಅಭ್ಯರ್ಥಿಗಳನ್ನು ಆರಿಸಿದರು. ಆ ಚುನಾವಣೆಯಲ್ಲಿ ಅವರಿಗೆ ದೊರೆತ ವಿಜಯ ಸ್ವರಾಜ್ ಪಕ್ಷದ ಸಂತೃಪ್ತಿಗೆ ಅನುಗುಣವಾಗಿತ್ತು. ಇತರ ಕೆಲವು ಶಾಸಕಾಂಗಗಳಲ್ಲಿ ಪಕ್ಷವು ತಿಳಿಸಿದಷ್ಟು ನಿಚ್ಚಳ ಬಹುಮತವನ್ನು ಪಂಜಾಬಿನಲ್ಲಿ ಗಳಿಸಲು ಸಾಧ್ಯವಾಗಲಿಲ್ಲ. ಅದರಲ್ಲೂ ಸ್ವರಾಜ್ ಪಕ್ಷಕ್ಕೆ ನಾಗಪುರದಲ್ಲಿ ದೊರೆತಂಥ ವಿಜಯವು ಪಂಜಾಬಿನಲ್ಲಿ ಆಗಲಿಲ್ಲ. ಆದರೂ ಪಟ್ಟಣದ ಪ್ರದೇಶದ ಎಲ್ಲಾ ಹಿಂದೂಸ್ಥಾನಗಳು, ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಸ್ಥಾನಗಳು ಮತ್ತು ಕೆಲವು ಸಿಖ್ ಪ್ರಧಾನ ಸ್ಥಾನಗಳು ಸ್ವರಾಜ್ ಪಕ್ಷಕ್ಕೆ ಲಭಿಸಿದವು. ಇದಕ್ಕಿಂತ ಹೆಚ್ಚಿನದಾಗಿ ಆ ಪ್ರಾಂತ್ಯದಲ್ಲಿ ಆಗಿದ್ದ ಪರಿಸ್ಥಿತಿಯಲ್ಲಿ ಏನನ್ನು ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಹಿಂದೂ-ಮುಸ್ಲಿಂರ ಬಾಂಧವ್ಯ ಆರೋಗ್ಯಕರವಾಗಿರಲಿಲ್ಲ. ಮುಸ್ಲಿಂರೊಂದಿಗಿನ ಪೈಪೋಟಿಯಲ್ಲಿ ಸ್ವರಾಜ್ಯ ಪಕ್ಷದವರಿಗೆ ಹೆಚ್ಚಿನ ವಿಜಯ ದೊರೆಯುವ ಸಾಧ್ಯತೆ ಇರಲಿಲ್ಲ. ಅಂದರೆ ಅರ್ಧದಷ್ಟು ಸ್ಥಾನಗಳಿಗಷ್ಟೇ ತೃಪ್ತಿ ಪಟ್ಟುಕೊಳ್ಳಬೇಕಾಗಿತ್ತು. ಈ ಮೊದಲು ಪಂಜಾಬಿನಲ್ಲಿ ಓ ಡಯರ್ ಬಿತ್ತಿದ್ದ ಪಟ್ಟಣ ವಿರೋಧಿ ಹಳ್ಳಿಗರ ಪ್ರಚೋದನೆ ಆ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಪ್ರಚೋದಿತವಾಯಿತು. ಕ್ಷೇತ್ರಗಳನ್ನು ಅದಕ್ಕನುಗುಣವಾಗಿ ವಿಂಗಡಿಸಿ ಬಹುತೇಕ ಸ್ಥಾನಗಳನ್ನು

ಭೂ ಮಾಲೀಕಷಾಹಿಗೆ ಕಾಯ್ದಿರಿಸಲಾಯಿತು. ಆ ದಿನಗಳಲ್ಲಿ ಪಂಜಾಬಿನ ಭೂ ಮಾಲೀಕಷಾಹಿ ಪ್ರಬಲ ಪ್ರಗತಿ ವಿರೋಧಿಷಾಹಿಯಾಗಿದ್ದವು. ಈ ಎಲ್ಲಾ ಕಾರಣಗಳಿಂದ ಆ ಚುನಾವಣೆಯಲ್ಲಿ ಪಕ್ಷಕ್ಕೆ ಸಮರ್ಥ ಬಲವೆನಿಸದಿದ್ದರೂ ದೊರೆತ ವಿಜಯ ಪರಿಣಾಮಕಾರಿ ಎನಿಸಿತು. ಅದಕ್ಕಾಗಿ ಲಾಲಾಜಿಯವರಿಗೆ ಅಭಿನಂದನೆ ಸಂದಾಯವಾಯಿತು. ಸ್ವರಾಜ್ಯ ಪಕ್ಷದ ಪಂಜಾಬ್ ಘಟಕವನ್ನು ಲಾಲಾಜಿಯವರ ಉಸ್ತುವಾರಿಗೆ ಒಪ್ಪಿಸಲಾಯಿತು. ಅವರೇನು ವಿಧಾನ ಪರಿಷತ್ತಿನ ಸದಸ್ಯರಾಗಿರಲಿಲ್ಲ. (ಪತ್ರಕ್ಕೂ ಸಹ) ಪಂಜಾಬಿಗೆ ಸಂಬಂಧಪಟ್ಟಂತೆ ಪಕ್ಷಕ್ಕೆ ಕೆಲವು ವಿಷಯಗಳಲ್ಲಿ ಸ್ವಾತಂತ್ರ್ಯ ಕೊಡಬೇಕೆಂದು ಕೆಲವು ದಿನಗಳ ನಂತರ ಲಾಲಾಜಿ, ಮೋತಿಲಾಲ್ ನೆಹರು ಅವರಿಗೆ ತಿಳಿಸಿದರು. ಆ ಪ್ರಾಂತ್ಯದ ಹಿಂದೂಗಳು (ಶಾಸಕಾಂಗದಲ್ಲಿ ಅಲ್ಪಸಂಖ್ಯಾತರು ಮತ್ತು ಪಕ್ಷದ ಪ್ರಮುಖ ಬೆಂಬಲಿಗರು) ಅನೇಕ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅವುಗಳಿಗೆ ನಿವಾರಣೆ ಕಂಡುಕೊಳ್ಳುವ ಸಲುವಾಗಿ ಪಂಜಾಬ್ ಸ್ವರಾಜ್ಯ ಪಕ್ಷಕ್ಕೆ ವಿಶೇಷ ಅವಕಾಶವನ್ನು ಕಲ್ಪಿಸಬೇಕೆಂದು ಲಾಲಾಜಿ ಸಲಹೆ ಮಾಡಿದರು.

ತಮ್ಮ ಸ್ವಂತ ಪ್ರಾಂತ್ಯದಲ್ಲಿ ಪಕ್ಷವು ಎದುರಿಸುತ್ತಿದ್ದ ಕೆಲವು ವಿಚಿತ್ರ ತೊಂದರೆಗಳ ಜೊತೆಗೆ ಒಟ್ಟಾರೆ ಪಕ್ಷದ ನೀತಿಗಳು ಮತ್ತು ಅದರ ನಡವಳಿಕೆಗಳು ಉತ್ತಮವಾಗಿರಲಿಲ್ಲವೆಂದು ಲಾಲಾಜಿ ಮನಗಂಡಿದ್ದರು. ಪಕ್ಷದಲ್ಲಿದ್ದುಕೊಂಡು ಅದರ ನಡವಳಿಕೆ ಮತ್ತು ಅದರ ಕಾರ್ಯ ವಿಧಾನಗಳನ್ನು (ಪಂಜಾಬ್ ಮತ್ತು ಕೇಂದ್ರದಲ್ಲಷ್ಟೇ ಅಲ್ಲದೆ ಭಾರತದ ಇತರೆಡೆಗಳಲ್ಲೂ) ಲಾಲಾಜಿ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದ್ದರು. ಶಾಸನ ಸಭೆಗಳಲ್ಲಿ ''ಆಘಾತಕಾರಿ ತಂತ್ರಗಳನ್ನು'' ಕೈಗೊಳ್ಳುವವರೆಗೆ ಪಕ್ಷದಲ್ಲಿ ಮಾತುಕತೆಗಳಾಗ ತೊಡಗಿದಾಗ ಅದನ್ನು ಲಾಲಾಜಿ ಅವರಿಗೆ ಸಹಿಸಲಾಗಲಿಲ್ಲ.

ಗಯಾದಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನದಲ್ಲಿ ''ಸೀಮಿತ ವ್ಯಾಪ್ತಿಯ ಅಸಹಕಾರ ಚಳವಳಿ'' ಕ್ರಮಕ್ಕೆ ಹೆಚ್ಚಿನ ಉತ್ಸಾಹ ಸಿಗಲಿಲ್ಲ. ಕಾಂಗ್ರೆಸ್ಸಿನ ಅಧಿಕೃತ ಚರಿತ್ರೆಕಾರರು ಆ ಬಗ್ಗೆ ಈ ರೀತಿ ಬರೆದಿಟ್ಟಿದ್ದಾರೆ:

''ಗಯಾದಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನವು ಎರಡು ಪ್ರತಿದ್ವಂದಿ ಬಣಗಳ ನಡುವಿನ ಬಹಿರಂಗ ಸೆಣಸಾಟದ ಕಣವಾಯಿತು. ಜನತೆ ಅಮಿತೋತ್ಸಾಹಕ್ಕೆ ದಾಸ್ ಅವರಂಥ ನಿಷ್ಣಾತ ವ್ಯಕ್ತಿಯು ಮೋತಿಲಾಲ್ ಮತ್ತು ವಿಠಲಭಾಯಿ ಅವರಂಥ ಪ್ರಖ್ಯಾತ ಗಣ್ಯರ ಬೆಂಬಲದೊಂದಿಗೆ ಮಣಿಯದಿರಲು ಸಾಧ್ಯವಿರಲಿಲ್ಲ. ಅದಾಗಿ ವಿಧಾನಪರಿಷತ್ತುಗಳನ್ನು ಬಹಿಷ್ಕರಿಸುವ ವಿಷಯ ಯಶಸ್ವಿಯಾಗಲಿಲ್ಲ. ಅದಕ್ಕನುಗುಣವಾಗಿ ಒಂದು ಬಣವನ್ನು ಸನ್ನದ್ಧಗೊಳಿಸಿ ಕಾರ್ಯಕ್ರಮ ನಿರೂಪಿಸಲಾಯಿತು. ಬಂಗಾಳ ಪ್ರಾಂತೀಯ ಪರಿಷತ್ತನ್ನು ದಾಸ್ ಆಕ್ರಮಿಸಿಕೊಳ್ಳಬೇಕೆಂದೂ, ದೆಹಲಿ ಮತ್ತು ಸಿಮ್ಲಾ ಪರಿಷತ್ತುಗಳ ಕಾರ್ಯವನ್ನು ಮೋತಿಲಾಲ್ ನಿರ್ವಹಿಸಬೇಕೆಂದು, ಮಹಾರಾಷ್ಟ್ರ ನಾಗಪುರ ಘಟಕಕ್ಕೆ ಒಳಪಡಬೇಕೆಂದೂ... ಕಾರ್ಯಕ್ರಮ ನಿಶ್ಚಿತವಾಯಿತು. ಗಯಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ದಾಸ್ ತಮ್ಮ ಜೇಬಿನಲ್ಲಿ ಎರಡು ಅಮೂಲ್ಯ

ದಾಖಲೆಗಳನ್ನು ಇಟ್ಟು ಕೊಂಡಿದ್ದರು. ಆ ಪೈಕಿ ಒಂದು ಅಧ್ಯಕ್ಷೀಯ ಭಾಷಣ. ಎರಡನೇಯದು ಪಕ್ಷಕ್ಕೆ ರಾಜೀನಾಮೆ ಕೊಟ್ಟು ಸ್ವರಾಜ್ಯ ಪಕ್ಷವನ್ನು ಹುಟ್ಟು ಹಾಕುವುದಕ್ಕೆ ಸಂಬಂಧಿಸಿದ್ದಾಗಿತ್ತು.'' *

ಶಾಸಕಾಂಗಗಳ ಮೇಲಣ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುವ ನಿಟ್ಟಿನ ತಮ್ಮ ಒತ್ತಡ ವಿಫಲಗೊಂಡ ಹಿನ್ನಲೆಯಲ್ಲಿ ಆ ಅಧಿವೇಶನ ಮುಗಿಯುತ್ತಿದ್ದಂತೆಯೇ ದಾಸ್ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಆ ರಾಜೀನಾಮೆ ಪತ್ರದ ಬಗ್ಗೆ ಮುಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಧಾರ ಕೈಗೊಳ್ಳಬೇಕಾಗಿದ್ದುದ್ದರಿಂದ ಅವರು ಅಲ್ಲಿಯತನಕ ಕಾಯಬೇಕಾಯಿತು. ಒಂದು ಕಡೆ ದಾಸ್ ನೇತೃತ್ವದ ಪಕ್ಷ. ಅದಕ್ಕೆ ಎದುರಾಗಿ ಸಹಕಾರ ಚಳವಳಿಯಲ್ಲಿ 'ಬದಲಾವಣೆ ಬಯಸುವವರ' ಗುಂಪು. ಸಿ. ರಾಜಗೋಪಾಲಾಚಾರಿ ನೇತೃತ್ವದಲ್ಲಿ ಪರಸ್ಪರ ವಿರೋಧಿ ಪ್ರಚಾರದಲ್ಲಿ ತೊಡಗಿದವು. ಆ ಅಧಿವೇಶನ ಸಮಯದಲ್ಲಿ ಅಬುಲ್ ಕಲಂ ಆಜಾದ್ ಮತ್ತು ಜವಹರಲಾಲ್ ಜೈಲಿನಿಂದ ಬಿಡುಗಡೆ ಹೊಂದಿದ್ದರು. ಗಯಾ ಕಾಂಗ್ರೆಸ್ ಅಧಿವೇಶನದ ವಿಷಾದಕರ ಬೆಳವಣಿಗೆಯನ್ನು ತಪ್ಪಿಸಲು ಮತ್ತು ಅದು ಇಬ್ಭಾಗವಾಗುವುದನ್ನು ತಡೆಗಟ್ಟಲು ಅವರಿಬ್ಬರು ಶಕ್ತಿ ಮೀರಿ ಶ್ರಮಿಸಿದರು. ಕೆಲವು ಕಾಲ ಎರಡೂ ಕಡೆಯವರು ಸುಮ್ಮನಿರಬೇಕೆಂದು ಆ ಮಧ್ಯೆ ಪುನರೈಕ್ಯಕ್ಕೆ ಪರಿಹಾರ ಕಂಡು ಕೊಳ್ಳಬೇಕೆಂದು ಒಂದು ಹಂತದಲ್ಲಿ ಸಮ್ಮತಿ ಏರ್ಪಟ್ಟಿತು. ಆ ಅವಧಿ ಮುಗಿಯದಿದ್ದರೂ, ಜಿದ್ದಿನ ಕಾರಣದಿಂದಾಗಿ ಎರಡು ಬಣಗಳು ಒಂದುಗೂಡಲು ಸಾಧ್ಯವಾಗಲಿಲ್ಲ. ಮತ್ತೆ ಎಐಸಿಸಿ ಅಧಿವೇಶನ ಸೇರಿ ನಿರ್ಣಯವೊಂದನ್ನು ಕೈಗೊಂಡಿತು. 'ಬದಲಾವಣೆ ಬಯಸುವವರ' ಅಥವಾ ಸಂಪ್ರದಾಯ ಬದ್ಧರ ಗುಂಪು ಸಿ. ರಾಜಗೋಪಾಲಾಚಾರಿ ನೇತೃತ್ವದಲ್ಲಿ ಅಧಿವೇಶನವನ್ನು ಬಹಿಷ್ಕರಿಸಿತು. ಆ ಪೈಕಿ ಪ್ರಮುಖರಾದ ಆರು ಮಂದಿ ಕಾರ್ಯಕಾರಿಣಿಗೆ ರಾಜೀನಾಮೆ ಕೊಟ್ಟರು. ದಾಸ್ ರಾಜೀನಾಮೆ ಅಂಗೀಕೃತವಾಯಿತು. ಡಾ. ಅನ್ಸಾರಿ ನೇತೃತ್ವದಲ್ಲಿ ಹೊಸ ಕಾರ್ಯಕಾರಿಣಿ ರಚನೆಗೊಂಡಿತು. ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಅಬುಲ್ ಕಲಂ ಆಜಾದ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ವಿಶೇಷ ಅಧಿವೇಶನ ಕರೆಯಲು ನಿರ್ಧರಿಸಲಾಯಿತು.

ಆ ಅಧಿವೇಶನ ನಡೆಯುತ್ತಿದ್ದ ಸಮಯದಲ್ಲಿ ಲಾಲಾಜಿ ಸೋಲಾನ್ ಗಿರಿಧಾಮದಲ್ಲಿ ಇನ್ನೂ ವಿಶ್ರಾಂತಿ ಸ್ಥಿತಿಯಲ್ಲಿದ್ದರು. ಕಾಂಗ್ರೆಸ್ ಅಧಿವೇಶನವು ಜೈಲಿನಿಂದ ಬಿಡುಗಡೆ ಹೊಂದಿದ್ದಕ್ಕಾಗಿ ಅವರಿಗೆ ಅಲ್ಲಿಗೆ ಶುಭ ಸಂದೇಶ ಕಳುಹಿಸಿತ್ತು.

---

* ದೇಶಬಂಧು ಅವರ ಬಳಿ ಮೂರನೇಯ ದಾಖಲೆಯೊಂದು ಇತ್ತು. ಅದು ಲಾಲಾಜಿ ಅವರ 'ವಿಶ್ವಾಸ ಪತ್ರ'. (ಜೈಲಿನಿಂದ ಕಳುಹಿಸಿದ್ದು) ಅವೆಲ್ಲವನ್ನು ಹಿನ್ನಲೆಯಲ್ಲಿಟ್ಟುಕೊಂಡೇ ವಿಧಾನಪರಿಷತ್ತುಗಳ ಕಾರ್ಯಕ್ರಮದ ಬಗ್ಗೆ ಅವರು ತಮ್ಮ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದರು. ಲಾಲಾಜಿ ಅವರ ಪತ್ರದಲ್ಲಿ ದಾಸ್ ಅವರು ಯಾರು ಯಾರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂಬ ವಿವರ ಇತ್ತು. ಆದರೆ ದಾಸ್ ಆ ಪತ್ರವನ್ನು ಬಹಿರಂಗಗೊಳಿಸಿ ತಮ್ಮ ವಿಶ್ವಾಸಾರ್ಹತೆಗೆ ಚ್ಯುತಿ ತಂದುಕೊಂಡರು.

ಕಾಂಗ್ರೆಸ್ ನೇರವಾಗಿ ಇಬ್ಭಾಗವಾಗುವುದೆಂಬ ಭೀತಿಯ ಹಿನ್ನಲೆಯಲ್ಲಿ ಆ ಅಧಿವೇಶನ ಹೆಚ್ಚು ಕುತೂಹಲ ಕೆರಳಿಸಿತ್ತು. ದೆಹಲಿಯಲ್ಲಿ ತಮ್ಮ ಸಂಪೂರ್ಣ ಬಲ ಪ್ರದರ್ಶನ ನಡೆಸಲು ದಾಸ್ ಮತ್ತು ನೆಹರು ಎಲ್ಲಾ ಮುನ್ನೆಚ್ಚರಿಕೆಗಳನ್ನು, ತಂತ್ರಗಳನ್ನು ಚುರುಕಾಗಿ ಅಳವಡಿಸಿಕೊಳ್ಳತೊಡಗಿದರು. ಸೆಪ್ಟೆಂಬರ್ 6ರಂದು ಮೋತಿಲಾಲ್ ಅವರಿಂದ ಲಜಪತರಿಗೆ ತಂತಿ ಸಂದೇಶವೊಂದು ಬಂದಿತು:

''ವೈದ್ಯರು ಅನುಮತಿ ನೀಡಿದರೆ ದೆಹಲಿಗೆ ಬನ್ನಿ. ಅಧಿವೇಶನದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳಿ. ಸೆಪ್ಟೆಂಬರ್ 10ರ ಸಭೆ ಅಮೂಲ್ಯವಾದುದು. ನಿಮ್ಮ ವಾಸ್ತವ್ಯಕ್ಕೆ ಕುತುಬ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಕೇವಲ ಕೆಲವರನ್ನು ಮತ್ರ ಆಯ್ಕೆ ಮಾಡಲಾಗಿದೆ. ಅಲ್ಲಿ ನಿಮ್ಮನ್ನು ಭೇಟಿ ಮಾಡುತ್ತೇವೆ. ತಂತಿ ಸಂದೇಶ-ನೆಹರು''

ಆದರೆ ಲಾಲಾಜಿ ಪೂರ್ವಭಾವಿ ಸಭೆಯಿಂದ ದೂರ ಉಳಿಯಲು ಬಯಸಿದರು. ಅಷ್ಟೇ ಏಕೆ, ಅಧಿವೇಶನದಲ್ಲಿ ಪಾಲ್ಗೊಳ್ಳಲು ಬಯಸಲಿಲ್ಲ. ಆಜಾದರು ಇಬ್ಬಣಗಳ ವಿಶ್ವಾಸ ಗಳಿಸಿಕೊಂಡಿರುವವರೆಂಬ ಆಶಯದ ಮೇಲೆ ಅವರನ್ನು ದೆಹಲಿ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಆದರೆ ಬೆಳವಣಿಗೆಗಳನ್ನು ವೀಕ್ಷಿಸಿದಾಗ ಕಾಂಗ್ರೆಸ್ ಇಬ್ಭಾಗವಾಗುವುದನ್ನು ತಪ್ಪಿಸುವುದು ಸಾಧ್ಯವಿಲ್ಲವೆಂಬ ಸಂಶಯ ಬರತೊಡಗಿತು. ಆಜಾದರು ಸೆರೆಮನೆಯಿಂದ ಬಿಡುಗಡೆಯಾದಾಗ ಅವರು ಕೈಗೊಂಡ ಪ್ರಯತ್ನಗಳ ಫಲವಾಗಿ ಆ ಇಬ್ಭಾಗವನ್ನು ತಡೆಯಲು ಎರಡು ತಿಂಗಳ ಅಂತರವನ್ನು ಕಲ್ಪಿಸಿಕೊಳ್ಳುವಷ್ಟಕ್ಕೆ ಯಶಸ್ಸು ಕಂಡು ಬಂದಿತ್ತು. ಈಗ ಪರಿಸ್ಥಿತಿ ಅವರ ಮಧ್ಯಸ್ಥಿಕೆ ಹಿಡಿತದಲ್ಲಿದ್ದಂತೆ ಕಂಡು ಬರಲಿಲ್ಲ. ಆದರೂ ಅದೃಷ್ಟವೋ ಎಂಬಂತೆ ಆ ಸಮಯಕ್ಕೆ ಸರಿಯಾಗಿ ಮತ್ತೋರ್ವ ನಾಯಕರು ಸೆರೆಮನೆಯಿಂದ ಅಧಿವೇಶನಕ್ಕೆ ಬರುವಂತಾಯಿತು. ಕಾಂಗ್ರೆಸ್ ಇಬ್ಭಾಗದ ಭೀತಿಯನ್ನು ತಪ್ಪಿಸುವ ಸಲುವಾಗಿ ಪ್ರಯತ್ನ ಕೈಗೊಂಡಂತಾಯಿತು. ಮಹಮದಲಿ ''ತಮ್ಮ ಕಿವಿಗೆ ಮುಟ್ಟಿದ ಸಂದೇಶ''ವನ್ನು ಬಹಿರಂಗಪಡಿಸಿ ಸ್ವತಃ ಮಹಾತ್ಮ ಗಾಂಧೀಜಿ ವಿಧಾನಪರಿಷತ್ತುಗಳ ಪ್ರವೇಶಕ್ಕೆ ವಿರುದ್ಧವಾಗಿ ಹೋರಾಡುವುದಿಲ್ಲ ಎಂದರು. ಹದಗೆಟ್ಟಿದ ಪರಿಸ್ಥಿತಿಯನ್ನು ಹೀಗೆ ಮಹಮದಲಿ ಹರ್ಷದ ಸ್ಥಿತಿಗೆ ಪರಿವರ್ತಿಸಿದರು. 'ಬದಲಾವಣೆ ಬಯಸದಿದ್ದ' ಗುಂಪಿನವರು ಅವರ ಮಾತುಗಳಲ್ಲಿ ಯಾವುದೇ ಅನುಮಾನ ಕಾಣಲಿಲ್ಲ. ಅವರು ಪಕ್ಷಪಾತಿ ಎಂದೂ ಶಂಕಿಸಲಿಲ್ಲ. ಮಹಾತ್ಮ ಗಾಂಧೀಜಿ ಜೈಲಿನಿಂದ ತಮ್ಮ ಸಂದೇಶವನ್ನು ದೇವದಾಸ್ ಗಾಂಧೀ ಮೂಲಕ ಮಹಮದಲಿ ಅವರಿಗೆ ಕಳುಹಿಸಿ ಕಾಂಗ್ರೆಸ್‌ನಲ್ಲಿ ಸಮರಸ ಸಾಧಿಸುವ ಪ್ರಯತ್ನ ಮಾಡಿದ್ದಾರೆಂಬ ಭಾವನೆ ಎಲ್ಲರಲ್ಲೂ ಉಂಟಾಯಿತು. ಅದಕ್ಕನುಗುಣವಾಗಿ ಕಾಂಗ್ರೆಸ್ ಸರ್ವಸಮ್ಮತವಾದ ನಿರ್ಣಯ ಘೋಷಿಸಿತು.

''ಧಾರ್ಮಿಕ ಹಾಗೂ ಇತರೆ ಯಾವುದೇ ಆಕ್ಷೇಪಾರ್ಹ ಧೋರಣೆಗಳು ಇಲ್ಲದಂಥ ಕಾಂಗ್ರೆಸ್ಸಿಗರು ಶಾಸಕಾಂಗಗಳನ್ನು ಪ್ರವೇಶಿಸುವುದರ ಬಗ್ಗೆ ಮುಕ್ತ ಅವಕಾಶ ಇದೆ. ಅವರು ಚುನಾವಣೆಗಳಲ್ಲಿ ಅಭ್ಯರ್ಥಿಗಳಾಗಿ ಸ್ಪರ್ಧಿಸಬಹುದು. ಮತದಾನ ಮಾಡಬಹುದು. ಈ ಅಧಿವೇಶನವು, ಆದ್ದರಿಂದ ಪರಿಷತ್ತುಗಳಿಗೆ ಪ್ರವೇಶಿಸುವುದಕ್ಕೆ ವಿರುದ್ಧವಾದ ಎಲ್ಲಾ ಪ್ರಚಾರಗಳನ್ನು ಅಮಾನತುಗೊಳಿಸುತ್ತದೆ.''

ಮೂರು ತಿಂಗಳುಗಳ ನಂತರ ಕಾಕಿನಾಡದಲ್ಲಿ ನಡೆದ ವಾರ್ಷಿಕ ಕಾಂಗ್ರೆಸ್ ಅಧಿವೇಶನದಲ್ಲಿ ಇದೇ ನಿರ್ಣಯವನ್ನು ಪುನರುಚ್ಚರಿಸಿ ಊರ್ಜಿತಗೊಳಿಸಲಾಯಿತು. ಸ್ವತಃ ಸಿ. ರಾಜಗೋಪಾಲಾಚಾರಿ ನಿರ್ಣಯವನ್ನು ಬೆಂಬಲಿಸಿದರು. ಕಾಂಗ್ರೆಸ್ಸಿನ ನಿರ್ಧಾರವು ಸ್ವರಾಜ್ಯ ಪಕ್ಷಕ್ಕೆ ಅಗತ್ಯವಾಗಿದ್ದ ಮಹತ್ವವನ್ನು ದೊರಕಿಸಿಕೊಟ್ಟಿತು. ಕಾಂಗ್ರೆಸ್ಸಿನ ಹೆಸರಿನಲ್ಲಿ ತನ್ನ ರಾಜಕೀಯ ಉದ್ದೇಶವನ್ನು ಮುಂದುವರಿಸಲು ಅದಕ್ಕೆ ಇನ್ನಷ್ಟು ಶಕ್ತಿ ಸೇರಿದಂತಾಯಿತು.

ಹಿಂದೂ-ಮುಸ್ಲಿಂ ಹೊಂದಾಣಿಕೆಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಒಡಂಬಡಿಕೆಯೊಂದನ್ನು ರೂಪಿಸಲು ದೆಹಲಿ ಕಾಂಗ್ರೆಸ್ ಅಧಿವೇಶನ ಇಬ್ಬರ ಸಮಿತಿಯೊಂದನ್ನು ಸಹ ರಚಿಸಿತ್ತು. ಅದರ ಹಿಂದಿನ ಎಐಸಿಸಿ ಅಧಿವೇಶನದಲ್ಲಿ ಆ ಹೊಣೆಗಾರಿಕೆಯನ್ನು ಡಾ. ಅನ್ಸಾರಿ ಅವರಿಗೆ ಒಪ್ಪಿಸಲಾಗಿತ್ತು. ದೆಹಲಿ ಅಧಿವೇಶನದಲ್ಲಿ ಅನ್ಸಾರಿ ಅವರ ಜೊತೆಗೆ ಲಾಲಾಜಿ ಅವರನ್ನು ಸೇರಿಸಿ ದ್ವಿ ಸದಸ್ಯ ಸಮಿತಿ ರೂಪಿಸಲಾಗಿತ್ತು.

ಸೋಲಾನ್ ಗಿರಿಧಾಮದಲ್ಲಿ ಲಾಲಾಜಿ ವಿಶ್ರಾಂತಿ ಸಮಯ ಮುಗಿಯಿತು. ಅವರು ಲಾಹೋರಿಗೆ ಮರಳಿದರು. ಆರೋಗ್ಯ ಇನ್ನು ಸುಧಾರಿಸಿರಲಿಲ್ಲ. ಅವರು ತೀರಾ ದುರ್ಬಲರಾಗಿದ್ದರು. ಅಲ್ಪಸ್ವಲ್ಪ ಮಟ್ಟಿಗೆ ಸಾಮಾನ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸತೊಡಗಿದರು.

* * *

ಅಧ್ಯಾಯ-54

ಹಕೀಂ ತಂದುಕೊಟ್ಟ ಆರೋಗ್ಯ

ಸೋಲಾನ್ ಗಿರಿಧಾಮದಲ್ಲಿದ್ದಾಗಲೇ ಲಾಲಾಜಿ ಅವರಿಗೆ ಒಂದು ರೀತಿಯ ಹೊಟ್ಟೆನೋವು ಕಾಣಿಸಿಕೊಂಡಿತು. ಎರಡನೇ ಬಾರಿಗೂ ಮರುಕಳಿಸಿತ್ತು. ಮತ್ತೆ ಮೂರನೇ ಬಾರಿಗೆ ಅವರನ್ನು ಹಿಂಸಿಸತೊಡಗಿತು. ನಂತರ ಅದು ಆಗಿಂದಾಗ್ಗೆ ಕಾಣಿಸಿಕೊಳ್ಳುವ ರೋಗವಾಗಿ ಉಲ್ಬಣಗೊಳಿಸಿತು. ಪ್ರತಿ ಹಂತದಲ್ಲೂ ನೋವು ಹಿಂದಿನದಕ್ಕಿಂತ ಘೋರವಾಗತೊಡಗಿತು. ಸೋಲಾನ್ ಮತ್ತು ಸಿಮ್ಲಾ ವೈದ್ಯರುಗಳು ಚಿಕಿತ್ಸೆ ನೀಡಿ ಇಂಜೆಕ್ಷನ್ ಮೂಲಕ ಔಷಧ ಕೊಟ್ಟರೂ ಪರಿಹಾರ ಕಾಣಲಿಲ್ಲ. ಇತರ ಪರೀಕ್ಷೆಗಳನ್ನು ನಡೆಸಿ ಚಿಕಿತ್ಸೆ ವಿಧಾನ ಬದಲಾಯಿಸಿದರೂ ಹೊಟ್ಟೆನೋವು ಮಾತ್ರ ಕಡಿಮೆಯಾಗಲಿಲ್ಲ. ದಿನ ಕಳೆದಂತೆ ಪದೇ ಪದೇ ಕಾಣಿಸಿಕೊಳ್ಳತೊಡಗಿತು. ಪ್ರತಿ ಹಂತದಲ್ಲೂ ಲಜಪತರ ಸ್ಥಿತಿ ಇನ್ನಷ್ಟು ಕ್ಷೀಣಿಸತೊಡಗಿತು.

ಉತ್ತಮ ವೈದ್ಯಕೀಯ ಸೇವೆ ಪಡೆದುಕೊಳ್ಳುವ ಸಲುವಾಗಿ ಬೇಸಿಗೆ ಕಾಲ ಇನ್ನೂ ಮುಗಿಯದಿದ್ದರೂ ಲಾಲಾಜಿ ಲಾಹೋರಿಗೆ ಮರಳಿದರು. ಮಹಾರಾಜ ಕಿಷನ್ ಕಪೂರ್, ನಿಹಾಲ್ ಚಂದ್ರ ಸಿಕ್ರಿ, ಗೋಪಿಚಂದ್ ಭಾರ್ಗವ, ಲೆಫ್ಟಿನೆಂಟ್ ಕರ್ನಲ್ ಡಿ.ಎಚ್ ರಾಯ್, ಲೆಫ್ಟಿನೆಂಟ್ ಕರ್ನಲ್ ಅಮೀರ್ ಚಂದ್ ಮುಂತಾದ ಹೆಸರಾಂತ ವೈದ್ಯ ಮಿತ್ರರೆಲ್ಲರೂ ಪ್ರತಿದಿನವೂ ಲಾಲಾಜಿ ಅವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡತೊಡಗಿದರು. ಆ ಪೈಕಿ ಕೆಲವರು ದಿನದಲ್ಲಿ ಅನೇಕ ಬಾರಿ ಅವರನ್ನು ಪರೀಕ್ಷಿಸುತ್ತಾ ಬಂದರು ಒಟ್ಟಾಗಿ ಕಲೆತು ಸಮಾಲೋಚಿಸಿ ತಮ್ಮಿಂದ ಸಾಧ್ಯವಿದ್ದ ಅತ್ಯುತ್ತಮವಾದ ವೈದ್ಯ ಶುಶ್ರೂಷೆ ಒದಗಿಸುತ್ತಾ ಬಂದರು. ಲಾಲಾಜಿ ಅವರಿಗೆ ಸಂಪೂರ್ಣವಾಗಿ ದ್ರವಾಹಾರ ನಿಯೋಜಿಸಲಾಯಿತು. ಪೂರ್ಣ ಹಾಸಿಗೆ ವಿಶ್ರಾಂತಿ ಸಲಹೆ ಮಾಡಲಾಯಿತು. ಪ್ರತಿನಿತ್ಯವು ವಿರೇಚಕ ನಿಯುಕ್ತವಾಯಿತು. ಈ ಮಾರ್ಪಾಟುಗಳಾಗಲಿ, ಚಿಕಿತ್ಸೆಗಳಾಗಲಿ ಲಾಲಾಜಿ ಅವರ ಹೊಟ್ಟೆನೋವಿನ ಮೇಲೆ ಕಿಂಚಿತ್ತೂ ಪರಿಣಾಮ ಬೀರಲಿಲ್ಲ. ಕೊನೆಗೆ ವೈದ್ಯರೆಲ್ಲರೂ ಸೇರಿ ಪಿತ್ತಕೋಶದ ಏರುಪೇರಿನಿಂದ ಹೊಟ್ಟೆನೋವು ಬರುತ್ತಿದೆ ಎಂಬ ನಿರ್ಧಾರಕ್ಕೆ ಬಂದರು. ಪಿತ್ತಕೋಶದಲ್ಲಿ ಕಲ್ಲುಗಳು ಕಾಣಿಸಿಕೊಂಡು ಉದರಬೇನೆಗೆ ಕಾರಣವಾಗಿದೆ ಎಂದು ತರ್ಕಿಸಿದರು. ಅದನ್ನು ರುಜುವಾತು ಪಡಿಸಿಕೊಳ್ಳಲು ಕೆಲವು ವೈದ್ಯಕೀಯ ಪರೀಕ್ಷೆಗಳು ಅಗತ್ಯವೆನಿಸಿತು. ರೋಗನಿದಾನ ತಜ್ಞ ಮೇಜರ್ ಸಿ.ಜೆ. ಫಾಕ್ಸ್ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಸಿಮ್ಲಾ ಗಿರಿಧಾಮದಲ್ಲಿ ವಾಸ್ತವ್ಯ ಹೂಡಿದ್ದರು. ಸೋಲಾನ್ ಗಿರಿಧಾಮದಲ್ಲಿದ್ದಾಗ ಅವರು ಲಾಲಾಜಿ ಅವರನ್ನು ಪರೀಕ್ಷಿಸುತ್ತಿದ್ದರು. ಲಾಲಾಜಿ ಅವರಿಗೆ ಕೌಟಂಬಿಕ ಹಿನ್ನಲೆಯಲ್ಲಿ ಕ್ಷಯರೋಗದ ಅಪಾಯ ಇರಬಹುದೇ ಎನ್ನುವ ವಿಷಯದಲ್ಲಿ

ಅವರು ಪರೀಕ್ಷೆ ನಡೆಸಿದ್ದರು. ಆ ಬಗ್ಗೆ ಡಾ. ಫಾರ್ಕ್ಸ್ ಸಂಶಯವನ್ನು ವ್ಯಕ್ತಪಡಿಸಿದ್ದರು. ತತ್ಫಲವಾಗಿ ತೀವ್ರ ಪರಿಣಾಮಗಳಾಗಬಹುದೆಂಬ ಅನುಮಾನವನ್ನು ಆ ವೈದ್ಯರು ನಿರೀಕ್ಷಿಸಿದ್ದರು.

ವೈದ್ಯಕೀಯ ಪರೀಕ್ಷೆಗಳ ನಂತರ ಪಿತ್ತಕೋಶದಲ್ಲಿ ಕಲ್ಲಿನ ತೊಂದರೆ ಇಲ್ಲವೆಂದು ಕಂಡು ಬಂದಿತು. ದ್ರವಾಹಾರವಾಗಲಿ, ವಿರೇಚಕ ಕ್ರಿಯೆಯಾಗಲಿ ಲಜಪತರ ಉದರ ಬೇನೆಯನ್ನು ನಿವಾರಿಸಲು ಸಹಾಯಕವಾಗಲಿಲ್ಲ. ಈ ಮಧ್ಯೆ ಉದರಬೇನೆ ದಿನೇ ದಿನೇ ಉಲ್ಬಣ ಸ್ಥಿತಿ ಮುಟ್ಟಿತು. ರೋಗಿಯ ಸ್ಥಿತಿ ತುಂಬಾ ಕ್ಷೀಣಿಸತೊಡಗಿತು. ಆಗ ಉಳಿದ ಒಂದೇ ಪರಿಹಾರವೆಂದರೆ ಶಸ್ತ್ರಚಿಕಿತ್ಸೆ. ಆ ಸಮಯದಲ್ಲಿ ಲಾಹೋರಿನಲ್ಲಿ ಉನ್ನತ ತರಬೇತು ಪಡೆದ ಶಸ್ತ್ರಚಿಕಿತ್ಸಾ ವೈದ್ಯರು ಲಭ್ಯವಿರಲಿಲ್ಲ.

ಲಾಲಾಜಿ ಅಲೋಪತಿ ವೈದ್ಯರಿಂದ ಚಿಕಿತ್ಸೆ ಪಡೆಯುವ ಬಗ್ಗೆ ಒಂದು ಗಡುವನ್ನು ಗುರುತಿಸಿಕೊಂಡರು. ಆ ಸಮಯದೊಳಗೆ ಚಿಕಿತ್ಸೆ ಫಲ ನೀಡದಿದ್ದರೆ ಇನ್ನೊಂದು ವಿಧಾನದ ಚಿಕಿತ್ಸೆ ಪಡೆಯಲು ಆಶಿಸಿದರು. ವೈದ್ಯ ಮಿತ್ರರಿಗೆ ಏನು ತೋಚದಂತಾಯಿತು. ಆ ಗಡವು ಮುಗಿದರೂ ರೋಗ ಗುಣಮುಖವಾಗದಿದ್ದಾಗ ಲಾಲಾಜಿ ಆ ದಿನಗಳಲ್ಲಿ ಲಾಹೋರಿನಲ್ಲಿ ಲಭ್ಯವಿದ್ದ ಒಬ್ಬ ಹೋಮಿಯೋಪತಿ ವೈದ್ಯನಿಂದ ಚಿಕಿತ್ಸೆ ಪಡೆದರು. ಅದರಿಂದಲೂ ಪ್ರಯೋಜನವಾಗಲಿಲ್ಲ. ಲಾಹೋರಿನಲ್ಲಿ ಹೆಸರುವಾಸಿಯಾಗಿದ್ದ ಹಕೀಂ ಶಫೀ-ಉಲ್- ಮುಲಕ್ ಫಕೀರ್ ಮುಹಮದ್ ಯುನಾನಿ ವೈದ್ಯ ಶಾಸ್ತ್ರದಲ್ಲಿ ಪರಿಣಿತರಾಗಿದ್ದವರು. ಅವರು ಸ್ವತಃ ಲಾಲಾಜಿ ಜನ್ಮ ಸ್ಥಳ ಜಗ್ರಾಂವ್‌ನವರು. ಇನ್ನೂ ಹೆಚ್ಚಿನದಾಗಿ ಮುನ್ಷಿ ರಾಧಾಕಿಷನ್ ಅವರ ವಿದ್ಯಾರ್ಥಿಯಾಗಿದ್ದವರು. ಅವರು ಲಾಲಾಜಿ ಅವರನ್ನು ಪರೀಕ್ಷಿಸಿ ಯುನಾನಿ ಚಿಕಿತ್ಸೆ ನೀಡಿದರು. ಅದರಿಂದಲೂ ಫಲ ಸಿಗಲಿಲ್ಲ. ಈ ಹಿಂದೆ ಲಾಲಾಜಿ ಅನೇಕ ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದಿದ್ದ ಹಕೀಂ ಅಜ್ಮೀರ್ ಖಾನ್ ಆ ದಿನಗಳಲ್ಲಿ ದೆಹಲಿಗೆ ಹೋಗಿದ್ದರು. ಅವರ ವಿಳಾಸ ಪತ್ತೆಯಾಗಲಿಲ್ಲ. ದೆಹಲಿಯಲ್ಲಿ ಪ್ರಸಿದ್ಧರಾದ ಒಬ್ಬಿಬ್ಬರು ಹಕೀಂರನ್ನು ಕರೆಯಿಸುವ ಪ್ರಯತ್ನವು ವಿಫಲವಾಯಿತು. ಆಗ ಕೆ.ಡಿ. ಕೊಯ್ಲಿ ಅವರಿಗೆ ಅಂಧ ಹಕೀಂ ನಬೀನ್ ಸಾಹಿ ನೆನಪಾಯಿತು. ಅವರು ದೆಹಲಿಯಲ್ಲಿದ್ದರು. ಪವಾಡ ಸದೃಶ್ಯ ಚಿಕಿತ್ಸೆಗೆ ಅವರು ಹೆಸರುವಾಸಿಯಾಗಿದ್ದರು. ಅಲೋಪತಿ ವೈದ್ಯರು ವಿಫಲವಾಗಿದ್ದ ಅಪೆಂಡಿಸೈಟೀಸ್ ಅಥವಾ ಉದರಬೇನೆಯ ಅನೇಕ ಕಾಯಿಲೆಗಳನ್ನು ಆ ಅಂಧ ಹಕೀಂ ನಿರಾಯಾಸವಾಗಿ ಗುಣಪಡಿಸಿದ್ದರು. ಕೊಯ್ಲಿ ಪ್ರಯತ್ನದ ಫಲವಾಗಿ ಪವಾಡ ಸದೃಶ್ಯ ಅಂಧ ಹಕೀಂರು ಲಾಹೋರಿಗೆ ಧಾವಿಸಿ ಬಂದರು.

ಸಾಕಷ್ಟು ವಯಸ್ಸಾಗಿದ್ದ ಆ ಹಕೀಂ ಲಾಲಾಜಿಯವರ ಚಿಕಿತ್ಸೆಯಲ್ಲಿ ತೊಡಗಿದ್ದರು. ತಾವು ಕೊಡುವ ಔಷಧದಿಂದ ಇಪ್ಪತ್ತನಾಲ್ಕು ತಾಸಿನಲ್ಲಿ ಹೊಟ್ಟೆನೋವು ಕಡಿಮೆಯಾಗುತ್ತದೆ ನಂತರ ಅದು ಇಲ್ಲದಂತಾಗಿ ಮುಂದೆಂದೂ ಕಾಣಿಸಿಕೊಳ್ಳುವುದಿಲ್ಲ. ಎರಡು ದಿನ ಇಲ್ಲಿದ್ದು ನಂತರ ದೆಹಲಿಗೆ ಹೋಗುವುದಾಗಿ ಆ ಹಕೀಂ ತಿಳಿಸಿದರು.

ಆ ಹಕೀಂ ಬೇರೆ ಯಾರೂ ಆಗಿರಲಿಲ್ಲ. ಡಾ. ಎಮ್. ಎ. ಅನ್ಸಾರಿ ಅವರ ಅಣ್ಣ ಎಂದು ತಿಳಿದು ಬಂದಿತು. ದೆಹಲಿಯಲ್ಲಿ ಅವರು ಅಷ್ಟೇನೂ ಚಿರಪರಿಚಿತರಾಗಿರಲಿಲ್ಲ

ಕಾರಣ ಅವರು ಹೊಸದಾಗಿ ಅಲ್ಲಿಗೆ ಬಂದು ವಾಸ್ತವ್ಯ ಹೂಡಿದ್ದವರು. ಹೈದರಾಬಾದ್ ದರ್ಬಾರಿನಲ್ಲಿ ಹಕೀಮರಾಗಿ ಸೇವೆ ಸಲ್ಲಿಸಿ ತುಂಬಾ ಹೆಸರುವಾಸಿಯಾಗಿದ್ದರು. ದರ್ಬಾರಿನಲ್ಲಿ ಅಹಿತಕರ ಪ್ರಸಂಗ ಎದುರಾದ್ದರಿಂದ ಅವರು ಹೈದರಾಬಾದ್ ತ್ಯಜಿಸಿದ್ದರು. ಹಕೀಂ ನವೀನ್ ಸಾಹಿ ಸುಮಾರು 15 ನಿಮಿಷಗಳ ಕಾಲ ಅಂದರೆ ನಾನು ಅವರ ಸರಕುಗಳನ್ನು ತಂದು ಕೊಠಡಿಯಲ್ಲಿ ಒಂದು ಕಡೆ ಇಡುವಷ್ಟು ಸಮಯದತನಕ ಲಾಲಾಜಿಯವರ ನಾಡಿ ಪರೀಕ್ಷೆ ಮಾಡಿದರು. ಲಾಲಾಜಿ ತಮ್ಮ ಮೊದಲ ಮಹಡಿಯ ಕೊಠಡಿಯಲ್ಲಿದ್ದರು. ಅಲ್ಲಿಗೆ ಹಕೀಂರನ್ನು ನೇರವಾಗಿ ಕರೆದುಕೊಂಡು ಹೋಗಲಾಗಿತ್ತು. ಅವರ ವಸ್ತುಗಳನ್ನು ಕೋಣೆಯಲ್ಲಿಟ್ಟು ನಾನು ಅಲ್ಲಿಗೆ ಹೋಗುವ ವೇಳೆಗೆ ಹಕೀಂ ತಮ್ಮ ವೈದ್ಯ ಪರೀಕ್ಷೆ ಮುಗಿಸಿದ್ದರು. ರೋಗಕ್ಕೆ ಕಾರಣ ಪತ್ತೆ ಮಾಡಿದ್ದರು. ಹೊಟ್ಟೆಯಲ್ಲೆಲ್ಲೂ ಕಲ್ಲುಗಳಿಲ್ಲವೆಂದು ಅವರು ಹೇಳಿದರು. ಆ ತೀವ್ರವಾದ ಉದರಶೂಲೆಗೆ ಪಿತ್ತಕಾರಕ ಸಂಧಿವಾತ ಕಾರಣವೆಂದೂ, ಯೋಗ್ಯ ಔಷಧಿಯಿಂದ ತಕ್ಷಣವೇ ಗುಣಪಡಿಸಬಹುದೆಂದು ಹೇಳಿದರು. ಲಾಲಾಜಿ ಅವರಿಗೆ ದ್ರವ ಆಹಾರ ಹಾಗೂ ವಿರೇಚಕ ಉಪಯೋಗವು ಸಾಕೆಂದು ತಿಳಿಸಿದರು. ಮೊದಲ ದಿನವೇ ಲಾಲಾಜಿ ಗಟ್ಟಿ ಆಹಾರ ತಿನ್ನುವಂತೆ ಸಲಹೆ ಮಾಡಿದರು. ಲಾಲಾಜಿ ಒಮ್ಮೆಗೆ ಆ ಸಲಹೆಯನ್ನು ಒಪ್ಪಿಕೊಳ್ಳಲಿಲ್ಲ. ಹಕೀಮರ ಕಟ್ಟುನಿಟ್ಟಿನ ಸೂಚನೆಗೆ ಮಣಿದು ದಿನಕ್ಕೆ ಒಂದು ಊಟ ಮಾತ್ರ ತೆಗೆದುಕೊಳ್ಳಲು ಒಪ್ಪಿಕೊಂಡರು. ಅದು ಸಹ ಸೂಪ್‌ನಲ್ಲಿ ನೆನಸಿದ ಚಪಾತಿಯನ್ನು ಮಾತ್ರ ಗಟ್ಟಿ ಆಹಾರವಾಗಿ ತೆಗೆದುಕೊಳ್ಳತೊಡಗಿದರು.

ಲಾಲಾಜಿ ಬಳಿಗೆ ಆ ಹಕೀಂ ಬಂದಾಗ ಅವರ ಉದರಶೂಲೆ ತೀವ್ರವಾಗಿತ್ತು. ಸಹಿಸಲಾಗದಷ್ಟು ನೋವಿನಿಂದ ಅವರು ನರಳುತ್ತಿದ್ದರು. ಅವರ ಶುಶ್ರೂಷೆ ಮಾಡುತ್ತಿದ್ದವರಿಗೆ ಅವರು ಪಡುತ್ತಿದ್ದ ವೇದನೆಯ ದೃಶ್ಯ ಹೃದಯ ವಿದ್ರಾವಕವಾಗಿತ್ತು. ಹಕೀಂ ನವೀನ್ ಅವರನ್ನು ಕಳುಹಿಸುತ್ತಿರುವುದಾಗಿ ಆ ಹಿಂದಿನ ದಿನ ದೆಹಲಿಯಿಂದ ಕೆ.ಡಿ. ಕೊಯ್ಲಿ ದೂರವಾಣಿಯಲ್ಲಿ ತಿಳಿಸಿದ ಸಮಯದಲ್ಲಂತೂ ಲಾಲಾಜಿ ಪಡುತ್ತಿದ್ದ ವೇದನೆ ನೋಡುವವರ ಕರುಳು ಕಿತ್ತುಬರುವಂತಿತ್ತು. ಕಿಷನ್ ಸಿಂಗ್ ಆ ಸಂಜೆಯ ಭೇಟಿ ಕೈಗೊಂಡಾಗಲಂತೂ ಲಾಲಾಜಿಯವರ ವೇದನೆ ನೋಡಲು ಸಾಧ್ಯವಿಲ್ಲದಂತಹ ಉಲ್ಬಣ ಸ್ಥಿತಿಯಲ್ಲಿತ್ತು. ಅಲೋಪತಿಕ್ ವೈದ್ಯರೆಲ್ಲರೂ ಚಿಕಿತ್ಸೆ ನಿಲ್ಲಿಸಿದ್ದರಿಂದ ಆ ಸ್ಥಿತಿಯಲ್ಲಿ ಡಾ. ಮಹಾರಾಜ ಕಿಷನ್ ಏನೂ ಮಾಡುವಂತಿರಲಿಲ್ಲ. ಆದರೂ ತಮಗೆ ಅನುಮತಿ ಕೊಟ್ಟರೆ ಆ ನೋವು ಕಾಣದಂತೆ ಮಾಡುವುದಾಗಿ ಸಲಹೆ ಮಾಡಿದರು. ಲಾಲಾಜಿ ಒಪ್ಪಿಕೊಂಡರು. ಅವರು ಕೂಡಲೇ ತಮ್ಮ ವೈದ್ಯಕೀಯ ಕಿಟ್ ತೆಗೆದು ಸೂಜಿಯನ್ನು ಸಿದ್ಧಪಡಿಸಿಕೊಂಡರು. ಆ ಕಿಟ್‌ನ ಇನ್ನೊಂದು ಬದಿಗೆ ಕೈ ಇಟ್ಟು ಮರ್ಫಿನ್ ಟ್ಯೂಬ್‌ಗಾಗಿ ಹುಡುಕಾಡಿದರು. ಅದು ಅಲ್ಲಿರಲಿಲ್ಲ. ತಮ್ಮದೇ ಕಾರಿನಲ್ಲಿ ಮನೆಗೆ ಧಾವಿಸಿದರು. ಅಲ್ಲೂ ಇರಲಿಲ್ಲ. ರಾತ್ರಿಯಾಗಿದ್ದರಿಂದ ಔಷಧಿ ಅಂಗಡಿಗಳೆಲ್ಲಾ ಮುಚ್ಚಿದ್ದರು. ಇಡೀ ರಾತ್ರಿ ಕೆಲಸ ಮಾಡುವ ಔಷಧಿ ಅಂಗಡಿಯೊಂದರ ವ್ಯವಸ್ಥೆ ಅವರಿಗೆ ಗೊತ್ತಿದ್ದರಿಂದ ಕೂಡಲೇ ಅಲ್ಲಿಗೆ ಧಾವಿಸಿ ನಿದ್ದೆ ಬರಿಸುವ ಆ ಔಷಧಿಯನ್ನು ತಂದರು. ಇತ್ತ ಲಾಲಾಜಿಯವರಿಗೆ ಒಂದೊಂದು ಕ್ಷಣವು ನರಕ ಸದೃಶ್ಯ ಹಿಂಸೆಯಾಗಿತ್ತು. ಡಾ. ಮಹಾರಾಜ ಕಿಷನ್ ಧಾವಿಸಿ ಬಂದು ಇಂಜೆಕ್ಷನ್ ಕೊಟ್ಟರು. ನೋವು ಇಳಿಯದಿದ್ದರೂ ಅದರ ಹಿಂಸೆ ಲಾಲಾಜಿಯವರ

ಅರಿವಿಗೆ ಕಮ್ಮಿಯಾಗುವಂತಾಯಿತು. ಇಂಥ ಇಂಜೆಕ್ಷನ್‌ಗಳನ್ನು ಈ ಮೊದಲು ಅಲೋಪತಿ ವೈದ್ಯಕೀಯ ಚಿಕಿತ್ಸೆಯಲ್ಲಿ ಹಲಾವಾರು ಬಾರಿ ನೀಡಿದ್ದರಿಂದ ಅವರ ನರಗಳೆಲ್ಲವೂ ಸಡಿಲಗೊಳ್ಳತೊಡಗಿತು. ಆ ರಾತ್ರಿ ಮಹಾರಾಜ ಕಿಷನ್ ಬಹು ಹೊತ್ತಿನ ತನಕ ಲಾಲಾಜಿ ಹಾಸಿಗೆ ಬಳಿ ಇದ್ದರು. ಎಲ್ಲರಲ್ಲೂ ಕಳವಳ ಆವರಿಸಿತ್ತು. ಏನೇನೋ ಯೋಚನೆಗಳು. ಔಷಧಿ ಚಿಕಿತ್ಸೆ ಇನ್ನು ಫಲಕಾರಿಯಲ್ಲ ಎಂಬ ನಿಶ್ಚಯಕ್ಕೆ ಬರಲಾಯಿತು. ಇನ್ನು ಉಳಿದದ್ದು ಒಂದೇ ಮಾರ್ಗ. ಶಸ್ತ್ರಚಿಕಿತ್ಸೆ. ರೋಗಿಯ ದೈಹಿಕ ಸ್ಥಿತಿಗೆ ಶಸ್ತ್ರಚಿಕಿತ್ಸೆ ಉಚಿತವೆನಿಸಲಿಲ್ಲ. ಸಾಲದ್ದಕ್ಕೆ ಪರಿಣಿತ ಶಸ್ತ್ರಚಿಕಿತ್ಸೆ ವೈದ್ಯರಾರು ಆ ಋತುಗಾಲದಲ್ಲಿ ಅಲ್ಲಿರಲಿಲ್ಲ. ಏನೇ ಆದರೂ ಸಾಕಷ್ಟು ಆಗುಹೋಗು ವಿವೇಚಿಸಿದ ನಂತರ ಶಸ್ತ್ರಚಿಕಿತ್ಸೆ ವೈದ್ಯರನ್ನು ಮೊರೆ ಹೋಗುವುದೇ ಉತ್ತಮವೆಂಬ ನಿರ್ಧಾರಕ್ಕೆ ಬರಲಾಯಿತು. ಮರುದಿನ ಲಾಲಾಜಿಯವರನ್ನು ಆ ಚಿಕಿತ್ಸೆಗೆ ಕರೆದೊಯ್ಯಬೇಕಾಗಿತ್ತು.

ಅಷ್ಟರಲ್ಲಿ ಹಕೀಂ ನವೀನ್ ಸಾಹಿ ಧಾವಿಸಿ ಬಂದಿದ್ದರು. ಲಾಲಾಜಿಯವರ ಚಿಕಿತ್ಸೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಅವರು ಬಂದು, ರೋಗ ನಿದಾನ ಕೈಗೊಂಡ ನಂತರ ಒಮ್ಮೆ ಮಾತ್ರ ಹೊಟ್ಟೆನೋವು ಮರುಕಳಿಸಿತು. ಅದು ಅಷ್ಟೇನೂ ತೀವ್ರತರವಾಗಿರಲಿಲ್ಲ. ಹೆಚ್ಚು ಹೊತ್ತು ಇರಲಿಲ್ಲ. ಆ ನೋವು ಸಹ ಈ ಮೊದಲು ಉಂಟಾಗಿದ್ದ ಕಾರಣದ ನೋವಲ್ಲ. ಅದೊಂದು ಬೇರೆ ರೀತಿಯ ನೋವೆಂದು ಹಕೀಂ ಹೇಳಿದರು. ಆತನಕ ರೋಗಿಯನ್ನು ಕಾಡುತ್ತಿದ್ದ ಉದರಶೂಲೆ ಬಿಟ್ಟು ಹೋಗಿದೆ ಎಂದು ಹಕೀಂ ನವೀನ್ ಸಾಹಿ ಘೋಷಿಸಿದರು.

ಆ ಹಕೀಂ ರೋಗಿಯನ್ನು ನೋಡಿಕೊಳ್ಳುತ್ತಿದ್ದ ಪರಿ, ಸಂತೈಸುತ್ತಿದ್ದ ರೀತಿ, ಅವರ ವ್ಯಕ್ತಿಗತ ವರ್ಚಸ್ಸು, ಸುಸಂಸ್ಕೃತವಂತ ನಡವಳಿಕೆ ವರದಾನದಂತಿದ್ದ ಮಾತಿನ ಮೋಡಿ ಹಾಗೂ ಆತ್ಮವಿಶ್ವಾಸಗಳು ಅವರು ಕೊಟ್ಟ ಔಷಧಕ್ಕಿಂತಲೂ ಹೆಚ್ಚಿನ ಪ್ರಭಾವ ಬೀರಿದವೇನೋ ಎನಿಸಿತು. ಅವರು ತಮ್ಮ ಔಷಧ ಚೀಲದಿಂದ ಗಾಜಿನ ಶೀಷೆಯೊಂದನ್ನು ತೆಗೆದು ಅದರಲ್ಲಿದ್ದ ಚೂರ್ಣವನ್ನು ಲಾಲಾಜಿಗೆ ಸೇವಿಸಲು ಕೊಟ್ಟರು. ಅಂಧರಾದರೂ ಅವರ ಬೆರಳುಗಳು ಬಹು ಪದರಗಳಿದ್ದ ಆ ಚೀಲದಲ್ಲಿ ಆ ಔಷಧಿ ಇದ್ದ ಸ್ಥಳಕ್ಕೆ ತಲುಪಿದ ರೀತಿ ಸೋಜಿಗದ್ದೆನಿಸಿತು.

ಹಕೀಂ ಲಾಹೋರಿನಲ್ಲಿ ಎರಡು ರಾತ್ರಿ ಮೂರು ದಿನ ಉಳಿದರು. ಇನ್ನು ಹೆಚ್ಚು ಕಾಲ ಉಳಿಯುವ ಅಗತ್ಯವಿಲ್ಲವೆಂದು ನಂತರ ಅವರು ತಿಳಿಸಿದರು. ಇನ್ನೊಂದು ವಾರ ಅಥವಾ ಹತ್ತು ದಿನಗಳ ನಂತರ ದೆಹಲಿಯಲ್ಲಿ ಲಾಲಾಜಿಯವರನ್ನು ಭೇಟಿ ಮಾಡಲು ತಾವು ಸಂತೋಷಿಸುವುದಾಗಿ ಹೇಳಿ ಅವರು ಹೊರಟರು. ಆ ಸಮಯದಲ್ಲಿ ಲಾಲಾಜಿಯವರ ಇಡೀ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಚಿಕಿತ್ಸೆ ನೀಡುವುದಾಗಿ ಸಹ ಅವರು ತಿಳಿಸಿದರು.

ಪವಾಡ ಸದೃಶ್ಯವಾದ ಆ ಚಿಕಿತ್ಸೆಯನ್ನು ನೋಡಿಯೂ ಸಹ ಲಾಲಾಜಿಯವರ ವೈದ್ಯ ಮಿತ್ರರಿಗೆ ಅನುಮಾನಗಳು ಹೋಗಿರಲಿಲ್ಲ. ಆ ಪೈಕಿ ಒಬ್ಬರು ಹಕೀಂರಿಗೆ ಮಾನವ ದೇಹದ ಶಾಸ್ತ್ರದ ಬಗ್ಗೆ ಅನೇಕ ಪ್ರಶ್ನೆಗಳನ್ನು ಹಾಕಿದರು. ಅವರಿಗೆ ಏನೇನೂ ಗೊತ್ತಿಲ್ಲವೆಂದು

ಟೀಕೆಯನ್ನು ಮಾಡಿದರು. ಹಕೀಂ ಮರಳಿದ ಕೆಲವು ದಿನಗಳ ನಂತರವೂ ಲಾಲಾಜಿಯವರಿಗೆ ಉದರಶೂಲೆ ಮರುಕಳಿಸಲಿಲ್ಲ. ಕೇವಲ ಅದೊಂದು ಅದೃಷ್ಟದ ಗಳಿಗೆ ಎಂದು ಪವಾಡ ಸದೃಶ್ಯ ಚಿಕಿತ್ಸೆ ಎಂದು ವೈದ್ಯರು ನಂಬಿದರೇ ಹೊರತು ಆ ಹಕೀಂ ನಿದಾನಗೊಳಿಸಿದ ಪಿತ್ತಕಾರಕ ಸಂದಿವಾತದ ಅತಿರೇಕದತ್ತ ಗಮನಹರಿಸಲಿಲ್ಲ. ಬದಲಾಗಿ ಆ ವೈದ್ಯಕೀಯ ಗೆಳೆಯರು ಪಿತ್ತಕೋಶದಲ್ಲಿದ್ದ ಕಲ್ಲುಗಳು ತಮ್ಮ ಸ್ಥಾನವನ್ನು ಬದಲಿಸಿದ್ದರಿಂದ ಲಾಲಾಜಿಯವರ ಉದರಶೂಲೆ ಕಡಿಮೆಯಾಯಿತೆಂದು ವ್ಯಾಖ್ಯಾನಿಸಿದರು. ಅದೇನೇ ಇರಲಿ ಮುಂದೆಂದೂ ಅವರಿಗೆ ಉದರಶೂಲೆಯ ಆ ಸಂಕಟ ಕಾಣಿಸಿಕೊಳ್ಳಲಿಲ್ಲ. ಹಕೀಂ ಕೊಟ್ಟ ಔಷಧದಿಂದ ತಾತ್ಕಾಲಿತ ಉಪಶಮನ ಎನಿಸದೆ ಎಂದೆಂದಿಗೂ ಮರುಕಳಿಸದಂತ ತಡೆಕಾರಕವಾಯಿತು.

?ಂ ನವೀನ್ ಸಾಹಿಬ್ ನೀಡಿದ ಚಿಕಿತ್ಸೆ ಪಂಜಾಬಿನಲ್ಲೆಲ್ಲಾ ಮಿಂಚಿನಂತೆ ಹರಡಿತು. ಅವರ ಜನಪ್ರಿಯತೆ ಬೆಳಕು ಹರಿಯುವುದರೊಳಗೆ ಪ್ರಾಂತ್ಯದಲ್ಲೆಲ್ಲಾ ಹಬ್ಬಿ ಪ...ತ್ತು. ನಿಜ. ಪಂಜಾಬಿನ ಅಗ್ರಮಾನ್ಯ ನೇತಾರನು ವಾರಾಂತರಗಳಿಂದ ಅನುಭವಿಸುತ್ತಿದ್ದ ಅಸೀಮಾ ಯಾತನೆ ಕೇವಲ ಒಂದು ತಾಸಿನೊಳಗೆ ಗುಣವಾಯಿತೆಂದರೆ ಅದು ಮಹತ್ವದ ಸುದ್ದಿಯಾಗದಿದ್ದೀತೆ? ದೆಹಲಿಯಲ್ಲಿ ಹಕೀಂ ನವೀನ್ ಸಾಹಿಬ್ ಆಸ್ಪತ್ರೆ ಚಿಕಿತ್ಸೆಗಾಗಿ ಬಂದ ರೋಗಿಗಳಿಂದ ಕಿಕ್ಕಿರಿಯತೊಡಗಿತು. ಅವರ ವೈದ್ಯಕೀಯ ಚಿಕಿತ್ಸೆಗೆ ಎಲ್ಲಿಲ್ಲದ ಬೇಡಿಕೆ ಬಂದಿತು. ವರ್ಷಾಂತರಗಳು ಉರುಳಿದಂತೆ ಅವರು ಜನಪ್ರಿಯ ಹಕೀಂರೆಂದೇ ಪ್ರಸಿದ್ಧರಾಗುತ್ತಾ ಬಂದರು.

ತಮ್ಮ ಯಾತನೆಯನ್ನು ನಿವಾರಿಸಿದ್ದಕ್ಕೆ ಕೃತಜ್ಞತೆಯಾಗಿ ಲಾಲಾಜಿ ಕೆಲವು ಕಾಣಿಕೆಗಳನ್ನು ತೆಗೆದುಕೊಂಡು ಹಕೀಂರ ಬಳಿಗೆ ಹೋದರು. ಅವರು ಅವುಗಳನ್ನು ವಿನಯದಿಂದ ನಿರಾಕರಿಸಿದರು. ಬದಲಾಗಿ :''ನನ್ನ ಹೆಸರು ಜನಪ್ರಿಯವಾಗುವ ಮೂಲಕ ನಾನೀಗ ಈ ಪ್ರತಿಫಲವನ್ನು ಪಡೆದಿಲ್ಲವೇ? ಹಿಂದೆ ನನ್ನ ಹೆಸರನ್ನು ಕೇಳಿಲ್ಲದ ಜನರೆಲ್ಲರೂ ಈಗ ಸಹಸ್ರಾರು ಸಂಖ್ಯೆಯಲ್ಲಿ ಇಲ್ಲಿಗೆ ಬಂದು ಹೋಗುತ್ತಿದ್ದಾರೆ. ಅದಕ್ಕಿಂತ ಹೆಚ್ಚಿನದಿನ್ನೇನೂ ಬೇಕು?'' ಎಂದರು.

* * *

ಅಧ್ಯಾಯ-55

ಬಂಗಾಳಿ ಒಡಂಬಡಿಕೆ

ಲಾಲಾಜಿ ಅವರಿಗೆ ಇನ್ನು ಹೆಚ್ಚಿನ ವಿಶ್ರಾಂತಿ ಅಗತ್ಯವಾಗಿತ್ತು. ಸಮುದ್ರ ತೀರದ ವಿರಾಮ ಅವರ ಆರೋಗ್ಯಕ್ಕೆ ಉತ್ತಮವೆಂದು ಸಲಹೆ ಬಂದಿತು. ಕರಾಚಿ ಉತ್ತಮವಾದ ಅಂಥ ಸ್ಥಳವೆಂದು ಅಲ್ಲಿನ ಶುಷ್ಕ ಹಾಗೂ ಹದನಾದ ಹವೆ ಉತ್ತಮವೆಂದು ಪರಿಗಣಿಸಲಾಯಿತು. ಲಾಲಾಜಿ ಅವರ ದಿ ಪಂಜಾಬಿ ದಿನಗಳಿಂದಲೂ ಓರ್ವ ಪ್ರಗತಿಪರ ವ್ಯಾಪಾರೋದ್ಯಮಿಯಾಗಿ ಕರಾಚಿಯಲ್ಲಿ ಅಭಿವೃದ್ಧಿ ಕಾಣುತ್ತಾ ಬಂದಿದ್ದ ಜಸ್ವಂತ್‌ರಾಯ್ ಅತಿಥಿಯಾಗಿ ಅವರು ಅಲ್ಲಿ ತಂಗಿದರು. 1924 ಡಿಸೆಂಬರ್ 8ರಂದು ಕರಾಚಿ ವಿಳಾಸಕ್ಕೆ ಅವರಿಗೆ ಮೋತಿಲಾಲ್ ನೆಹರು ಅವರಿಂದ ತಂತಿ ವರ್ತಮಾನವೊಂದು ಬಂದಿತು: ''ದೆಹಲಿಯಲ್ಲಿ ಅಬುಲ್ ಕಲಂ ಆಜಾದರು ಪ್ರಮುಖ ಸಲಹಾ ಸಭೆಯೊಂದನ್ನು ಕರೆದಿದ್ದಾರೆ. ಆರೋಗ್ಯ ಹಿತಕರವಾಗಿದ್ದರೆ ದಯಮಾಡಿ ಬನ್ನಿ- ನೆಹರು'' ಎಂದು ಅದರಲ್ಲಿ ಸಂದೇಶವಿತ್ತು. ಅದರ ಹಿಂದೆಯೇ ಇನ್ನೊಂದು ತಂತಿ ಸಂದೇಶವು ಪಂಡಿತರಿಂದ ಬಂದಿತ್ತು. ಅದರಲ್ಲಿ ''12ರಂದು ಲಾಹೋರಿಗೆ ಬರಲು ಸಾಧ್ಯವೇ? ತಂತಿ -ದಾಸ್'' ಎಂದಿತ್ತು. ಲಾಹೋರಿನಲ್ಲಿ ಅವರಿಬ್ಬರು ಭೇಟಿಯಾಗಿ ವಿಚಾರ ವಿನಿಮಯ ಮಾಡಿಕೊಂಡರು. ಆ ಮಾತುಕತೆಯಿಂದಾಗಿ ಮುಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕೆಂಬ ಆಶಯ ಮೂಡಿತು.

ಕೆಲವು ದಿನಗಳ ನಂತರ ಲಾಲಾಜಿ ಮತ್ತೆ ಸಿಂಧ್ ಪ್ರಾಂತ್ಯಕ್ಕೆ ತೆರಳಿ ಕರಾಚಿಯ ಅನುಕೂಲಕರವಾದ ವಾತಾವರಣದಲ್ಲಿ ತಮ್ಮ ಆರೋಗ್ಯದ ಸುಧಾರಣೆಗೆ ಗಮನಕೊಟ್ಟರು. ಹೈದರಾಬಾದ್‌ಗೂ ಭೇಟಿಕೊಟ್ಟು ಕೆಲವು ದಿನ ತಾತ್ಕಾಲಿಕ ವಾಸ್ತವ್ಯ ಹೂಡಿದರು. ಈ ಹಿಂದೆ ಅಲ್ಲಿಗೆ ಭೇಟಿ ಕೊಟ್ಟಿದ್ದ ಸಮಯದಲ್ಲಿ ಜಯರಾಂದಾಸ್ ದೌಲತ್‌ರಾಂ ಚೋಯಿತ್‌ರಾಂ ಗಿದ್ವಾನಿ ಮತ್ತು ಇತರ ಕೆಲವು ರಾಜಕೀಯ ಕಾರ್ಯಕರ್ತರೊಂದಿಗೆ ಮಾತುಕತೆ ನಡೆಸಿದ್ದರು. ಆ ಮಾತುಕತೆಯಲ್ಲಿ ಹಿಂಸಾಚಾರದಿಂದ ಉದ್ಭವವಾಗಿದ್ದ ಸಮಸ್ಯೆಗಳು ಪ್ರಮುಖವಾಗಿದ್ದವು. ಹೊಂದಾಣಿಕೆಯ ಸೂತ್ರ ರೂಪಿಸಿದ ನಂತರದ ಪರಿಣಾಮಗಳ ಬಗ್ಗೆಯೂ ವಿಮರ್ಶೆ ನಡೆದಿತ್ತು. ತಾವು ಕೊಟ್ಟ ಸಲಹೆಗಳ ಬಗ್ಗೆ ಹೈದರಾಬಾದಿನ ಮಿತ್ರರು ತೋರಿದ ಉತ್ಸಾಹ ಲಾಲಾಜಿಯವರಿಗೆ ಹರ್ಷ ತಂದಿತ್ತು. ಲಾಹೋರಿನಿಂದ ಕರಾಚಿಗೆ ಎರಡನೇ ಬಾರಿಗೆ ತೆರಳುವ ಮೊದಲು ಲಾಲಾಜಿಯವರಿಗೆ ಜಯರಾಂದಾಸ್ ಮತ್ತು ಕೆಲವರಿಂದ ಪತ್ರಗಳು ಮತ್ತು ತಂತಿ ಸಂದೇಶಗಳು ಬಂದಿದ್ದವು. ಕಾಕಿನಾಡದಲ್ಲಿ ನಡೆಯುವ ಹಿಂದೂ ಮುಸ್ಲಿಂ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕೆಂದು ಅವುಗಳಲ್ಲಿ ಒತ್ತಾಯಿಸಲಾಗಿತ್ತು. ''ಡಾ. ಚೋಯಿತ್‌ರಾಂ ಮತ್ತು ನನ್ನ ಕೋರಿಕೆ ಇದು.

22ರ ಹಿಂದೂ ಮುಸ್ಲಿಂ ಸಭೆಯನ್ನು ಮುಂದೂಡಲು ಸಾಧ್ಯವಾಗದಿದ್ದರೆ ಹಿಂದೂ ಕಾಂಗ್ರೆಸ್ಸಿಗರ ಸಭೆಯೊಂದನ್ನು 22ಕ್ಕೆ ಮೊದಲೇ ಕರೆಯಬೇಕೆಂದು ನಿಮ್ಮನ್ನು ಕೋರುತ್ತಿದ್ದೇವೆ...'' ಎಂದು ಆ ಪೈಕಿ ಒಂದು ಪತ್ರದಲ್ಲಿ ತಿಳಿಸಲಾಗಿತ್ತು. ಆ ಪತ್ರಕ್ಕೆ ಪೂರಕವಾಗಿ ಇನ್ನೊಂದು ತಂತಿ ಸಂದೇಶವು ಬಂದಿತು. ಅದರಲ್ಲಿ ''ನಾನು ಮತ್ತು ಚೋಯಿತ್‌ರಾಂ ತಮ್ಮಲ್ಲಿ ಮನವಿ ಮಾಡುತ್ತಾ ಕಾಕಿನಾಡಕ್ಕೆ ಬರಲು ಕೋರುತ್ತಿದ್ದೇವೆ. ಇಲ್ಲವಾದರೆ ಹಿಂದೂ ಮುಸ್ಲಿಂ ಪ್ರಶ್ನೆ ಅಪಾರ್ಥವಾಗಲಿದೆ.'' ಎಂದು ತಿಳಿಸಲಾಯಿತು. ಕಾಕಿನಾಡಕ್ಕೆ ಹೋಗುವ ಆಶಯ ಇಲ್ಲದ್ದರಿಂದ ಈಗ ಲಾಲಾಜಿ ಹೈದರಾಬಾದಿಗೆ ಭೇಟಿ ಕೊಟ್ಟು ಅಲ್ಲಿನ ಆ ಗೆಳೆಯರನ್ನು ಕಂಡಿದ್ದರು. ಆ ಮಿತ್ರರು ಕಾಂಗ್ರೆಸ್ ಅಧಿವೇಶನಕ್ಕೆ ತೆರಳುವ ಮೊದಲೇ ಈ ಭೇಟಿ ನಡೆಯಿತು. ಹೈದರಾಬಾದಿನ ಆ ಮಿತ್ರರಂಥ ಕಾರ್ಯಕರ್ತರನ್ನು ಲಾಲಾಜಿ ತುಂಬಾ ಇಷ್ಟಪಡುತ್ತಿದ್ದರು. ಅದರಲ್ಲೂ ಜಯರಾಂದಾಸ್ ಅವರ ಮೇಲೆ ತುಂಬಾ ಪ್ರಭಾವ ಬೀರಿದ್ದರು. ಆ ಕಾರ್ಯಕರ್ತನ ಪ್ರಾಮಾಣಿಕತೆ ಮತ್ತು ನಿಷ್ಠೆ ಹಾಗೂ ಆತ ನಡೆದುಕೊಳ್ಳುತ್ತಿದ್ದ ರೀತಿ ನೀತಿಗಳು ಅವರನ್ನು ಆಕರ್ಷಿಸಿದವು. ಲಾಲಾಜಿ, ಜಯರಾಂದಾಸ್ ಮತ್ತು ಇತರ ಮಿತ್ರರೊಂದಿಗೆ ಅಂದಿನ ರಾಜಕೀಯ ವಿದ್ಯಮಾನಗಳ ಬಗ್ಗೆ ವ್ಯಾಪಕವಾಗಿ ಚರ್ಚಿಸಿದರು. ತಮ್ಮ ಪ್ರಾಂತ್ಯದ ವಿಚಿತ್ರ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಅವರ ಪ್ರಾಂತ್ಯದ ಸಮಸ್ಯೆಗಳನ್ನು ತಿಳಿದುಕೊಂಡರು. ಆ ವಿಚಾರ ವಿನಿಮಯಗಳ ಮಧ್ಯೆ ಭಾರತದ ಚರಿತ್ರೆಯ ಪ್ರಸ್ತಾಪವು ಬಂದಿತು. ತಾವು ಬಂಧನದಲ್ಲಿದ್ದ ಕಾಲದಲ್ಲಿ ಭಾರತದ ಚರಿತ್ರೆಯ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದಾಗ ದೇಶದ ಮೇಲೆ ಮುಸ್ಲಿಂರು ಮೊದಲು ನಡೆಯಿಸಿದ ದಾಳಿಯ ಬಗ್ಗೆ ಕೆಲವು ಮಾಹಿತಿಗಳು ಅಗತ್ಯವಾಗಿದ್ದನ್ನು ನೆನಪು ಮಾಡಿಕೊಂಡರು. ಚಚ್ನಾಮ ಕೃತಿಯ ಪ್ರತಿಯೊಂದು ಅವರಿಗೆ ಲಭ್ಯವಾಗಿರಲಿಲ್ಲ. ಚಚ್ನಾಮ ಘಟನೆಗಳನ್ನು ಸಂಪೂರ್ಣವಾಗಿ ಓದಲು ಅವರು ಆಶಿಸಿದ್ದರು. ಆ ಪುಸ್ತಕದ ಇಂಗ್ಲಿಷ್ ಭಾಷಾಂತರದ ಪ್ರತಿಗಳು ಮುಗಿದು ಹೋಗಿದ್ದವು. ಜಯರಾಂದಾಸ್ ಮತ್ತು ಇತರರು ಕೂಡಲೇ ಆ ಕೃತಿಯನ್ನು ಒದಗಿಸಲು ಸಾಧ್ಯವಿಲ್ಲವೆಂದು ಲಾಲಾಜಿಗೆ ವಿಷಾದದಿಂದ ತಿಳಿಸಿದರಾದರೂ ಹುಡುಕಿ ಅದನ್ನು ಒದಗಿಸುವ ಭರವಸೆ ನೀಡಿದರು. ಕೆಲವು ದಿನಗಳ ನಂತರ ಅವರು ಆ ಕೃತಿಯ ಪ್ರತಿಯೊಂದನ್ನು ಸಂಪಾದಿಸಿ ಲಾಲಾಜಿಗೆ ಕಳುಹಿಸಿಕೊಟ್ಟರು.

ಕಾಕಿನಾಡ ಅಧಿವೇಶನದಲ್ಲಿ ಪಾಲ್ಗೊಳ್ಳಲು ಲಾಲಾಜಿಯವರಿಗೆ ಸಹಜವಾಗಿ ಆಸೆ ಮೂಡಿತಾದರೂ ಕರಾಚಿಯಲ್ಲಿ ಅವರು ಉಳಿದುಕೊಳ್ಳುವುದು ಅನಿವಾರ್ಯವಾಯಿತು. ಕಾಂಗ್ರೆಸ್ ಅಧಿವೇಶನ ಆರಂಭಗೊಂಡ ಸಮಯದಲ್ಲಿ ಸುದ್ದಿಗಾಗಿ ಲಾಲಾಜಿ ಸದಾ ಕಾತರಿಸತೊಡಗಿದರು. ಪ್ರತಿ ಅಪರಾಹ್ನ ಅವರು ಕಾರೊಂದರಲ್ಲಿ ಹೊರಟು ಕ್ಲಿಫ್‌ಟನ್ ಕಡಲು ತಡಿಯ ಉದ್ದಕ್ಕೂ ಅಡ್ಡಾಡುತ್ತಿದ್ದರು. ಮರಳುವಾಗ ಆ ದಿನಗಳಲ್ಲಿ ಕಾರನ್ನು ವೃತ್ತಪತ್ರಿಕೆಯೊಂದರ ಕಚೇರಿಯ ಹೊರಗಡೆ ನಿಲ್ಲಿಸಿ ಅದುವರೆಗಿನ ಸುದ್ದಿಗಳನ್ನು ತಿಳಿದುಕೊಳ್ಳಲು ತವಕಿಸುತ್ತಿದ್ದರು. ಅಲ್ಲಿನ ಸಂಪಾದಕರು ನಗುಮುಖದಿಂದ ಹೊರಗೆ ಬಂದು ಲಾಲಾಜಿಯವರೊಂದಿಗೆ ಮಾತನಾಡುತ್ತಿದ್ದರು. ಅದುವರೆಗಿನ ಸುದ್ದಿಯ ಬಗ್ಗೆ ಹೇಳಿದಾಗ ಆತ ಒಂದು ರೀತಿಯಲ್ಲಿ ನಗೆ ಚೆಲ್ಲುತ್ತಾ ಯಾವುದೇ ಬೆಳವಣಿಗೆಗಳು ಆಗಿಲ್ಲ

ಎಂದು ಹೇಳಿ ಅಲ್ಲಿಂದ ಪಾರಾಗುತ್ತಿದ್ದರು. ಇದು ಹೀಗೆ ಕೆಲವು ದಿನಗಳು ನಡೆಯಿತು. ಒಂದು ದಿನ ನಿಜಾಂಶವು ಹೊರಬಿದ್ದಿತು. ಆತನ ಪತ್ರಿಕಾಲಯದಲ್ಲಿ ತ್ವರಿತವಾಗಿ ಸುದ್ದಿಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಇರಲಿಲ್ಲ. ಅದನ್ನು ಹೇಳಲಾಗದೆ ಆತ ಹಾಗೆ ನಟನೆ ಮಾಡುತ್ತಿದ್ದ. ತನ್ನ ಪತ್ರಿಕೆಗೆ ಸುದ್ದಿಯ ಸಂಪನ್ಮೂಲನವಾಗಿ ಬೇರೆ ಸಂಜೆ ಪತ್ರಿಕೆಗಳು ಹೊರಬರುವ ತನಕ ಕಾಯುತ್ತಿದ್ದನೆಂಬ ನಿಜ ಸಂಗತಿಯು ತಿಳಿದು ಬಂದಿತು!

ಅದೇನೇ ಇರಲಿ, ಲಾಲಾಜಿ ಕರಾಚಿಯಲ್ಲಿದ್ದ ಸಮಯದಲ್ಲೇ ಕೆಲವು ಬೆಳವಣಿಗೆಗಳು ವರದಿಯಾದವು. ಆ ಪೈಕಿ ಮೂರು ಮುಖ್ಯವೆನಿಸಿದವು. ಮೊದಲನೆಯದು ಕಾಂಗ್ರೆಸ್ ಅಧಿವೇಶನಕ್ಕೆ ಮೊದಲ ವಿದ್ಯಮಾನಗಳು. ಎರಡನೇಯದು ಅಧಿವೇಶನದ ಕಲಾಪ. ಮೂರನೇಯದು ಅದರ ನಂತರದ ಬೆಳವಣಿಗೆಗಳು. ಈ ಪೈಕಿ ಮೊದಲನೆಯದು 'ಬಂಗಾಳಿ ಒಡಂಬಡಿಕೆ' ಬಂಗಾಳದ ರಾಜಕಾರಣದಲ್ಲಿ ಮುಸ್ಲಿಂರ ಬೆಂಬಲ ಸಾಧಿಸಿಕೊಳ್ಳಲು ಸಿ.ಆರ್. ದಾಸ್ ಮಾಡಿಕೊಂಡ ಏರ್ಪಾಟು ಅದು. ಆ ಸುದ್ದಿ ಲಾಲಾಜಿಯವರಿಗೆ ದಿಗ್ಭ್ರಮೆ ತಂದಿತು. ಅಂಥ ಒಡಂಬಡಿಕೆ ಲಾಲಾಜಿಯವರಿಗೆ ಸಮ್ಮತ್ರವಿರಲಿಲ್ಲ. ಪ್ರತ್ಯೇಕವಾಗಿ ಬಂಗಾಳದ ಸಮಸ್ಯೆಯನ್ನಷ್ಟೇ ಇತ್ಯರ್ಥ ಪಡಿಸಿಕೊಳ್ಳುವ ಆ ಒಡಂಬಡಿಕೆ ಅಲ್ಪ ದೃಷ್ಟಿಯದೆಂದು ಅವರು ಪರಿಭಾವಿಸಿಕೊಂಡರು. ಅದರಲ್ಲೂ ರಾಷ್ಟ್ರಮಟ್ಟದ ಒಡಂಬಡಿಕೆಯೊಂದನ್ನು ಸಂಯೋಜಿಸುತ್ತಿದ್ದ ಸಮಯದಲ್ಲಿ ಆ ಬೆಳವಣಿಗೆ ಅವರಿಗೆ ಸಮ್ಮತ್ರವೆನಿಸಲಿಲ್ಲ. ಹಿಂದೂ-ಮುಸ್ಲಿಂ ರಾಷ್ಟ್ರೀಯ ಒಡಂಬಡಿಕೆ ಸಮಿತಿಯ ಸದಸ್ಯರಾಗಿ ಲಾಲಾಜಿ ವರದಿಯೊಂದನ್ನು ಕಾಕಿನಾಡ ಅಧಿವೇಶನಕ್ಕೆ ಸಲ್ಲಿಸಿದ್ದರು. ಅದು ಆ ಅಧಿವೇಶನದಲ್ಲಿ ಪರಿಶೀಲನೆಗೊಳ್ಳಬೇಕಾಗಿತ್ತು. ಅಂಥ ಪ್ರಸಂಗದಲ್ಲಿ ಪ್ರತ್ಯೇಕವಾಗಿ ಬಂಗಾಳಕ್ಕೆ ಸಂಬಂಧಪಟ್ಟ ಹೊಂದಾಣಿಕೆ ಮಾಡಿಕೊಂಡಿದ್ದು ರಾಷ್ಟ್ರೀಯ ಹೊಂದಾಣಿಕೆಯ ಒಟ್ಟಾರೆ ಸ್ಥಳದ ಒಂದು ಎಳೆಯನ್ನು ಎಳೆದಂತಾಗಿತ್ತು. ಈ ರೀತಿಯ ಇಬ್ಬಗೆ ಕರಡುಗಳಿಂದಾಗಿ ಕಾಕಿನಾಡ ಅಧಿವೇಶನ ಆ ಒಡಂಬಡಿಕೆಗಳಿಗೆ ತನ್ನ ಮುದ್ರೆಯನ್ನು ಒತ್ತಲಿಲ್ಲ. ಖಾಸಗಿಯಾಗಿ ಅವೆರಡು ಕರಡುಗಳು ಅಧಿವೇಶನದಲ್ಲಿ ಪ್ರಸಾರಗೊಂಡವು.

ಆ ಬೆಳವಣಿಗೆಯಲ್ಲಿ ಪ್ರತ್ಯೇಕ ಸೂತ್ರವೊಂದನ್ನು ರಚಿಸಿದ್ದಕ್ಕಿಂತಲೂ ಆ ಸೂತ್ರದ ರಚನೆಗೆ ಆಯ್ದು ಕೊಂಡ ಪ್ರಸಂಗಕ್ಕಿಂತಲೂ ತಮ್ಮ ಆತ್ಮೀಯ ಒಡನಾಡಿಯಾಗಿ ದಾಸ್ ನಡೆದುಕೊಂಡ ರೀತಿ ಲಾಲಾಜಿಯವರಿಗೆ ತೀರಾ ಕಳವಳ ತಂದಿತು. ಅದು ಆ ಬೆಳವಣಿಗೆ ನಡೆದ ಮೇಲೆ ಪತ್ರಿಕೆಗಳ ಮೂಲಕ ಅದನ್ನು ತಿಳಿದುಕೊಳ್ಳುವಂಥ ಪರಿಸ್ಥಿತಿ ತಂದದ್ದು ಅವರನ್ನು ತೀರಾ ಅಸಂತುಷ್ಟರನ್ನಾಗಿ ಮಾಡಿತು. ಎಲ್ಲಾ ಕಾಲಕ್ಕೂ ಕಲೆತು ಕೆಲಸ ಮಾಡುತ್ತಿದ್ದೇವೆ ಎಂದುಕೊಂಡಿದ್ದ ಲಾಲಾಜಿ ಅವರಿಗೆ ಆ ವಿದ್ಯಮಾನ ನಂಬಿಕೆ ದ್ರೋಹ ಮಾಡಿದಂತೆ ಕಂಡು ಬಂದಿತು. ಇತರ ಅನೇಕರಂತೆ ಲಾಲಾಜಿ ಸಹ ಆ ಬೆಳವಣಿಗೆಯ ಹಿಂದೆ ಅಬುಲ್ ಕಲಂ ಆಜಾದರ ಪ್ರಭಾವ ಇರಬೇಕೆಂದು ಶಂಕಿಸಿದ್ದೂ ಉಂಟು. ಮೌಲಾನಾ ಅವರು ದಾಸ್‌ರ ರಾಜಕಾರಣ ಧುರೀಣತ್ವಕ್ಕೆ ಸಲ್ಲಿಸುತ್ತಿದ್ದ ಗೌರವ ಹೆಚ್ಚು ಕಡಿಮೆ ಅಂಥ ಭಾವನೆಗೆ ಕಾರಣವಾಗಿತ್ತು. ಆ ಅಪಾರ್ಥ ನಿಜವೇನಾದರೂ ಆಗಿದ್ದಿದ್ದರೆ ಮುಂದಿನ ಬೆಳವಣಿಗೆಗಳು ವಿಪರೀತವಾಗುತ್ತಿದ್ದವು. ಲಾಲಾಜಿಯೊಂದಿಗೆ ಅಬುಲ್ ಕಲಂ ಆಜಾದರು ರಾಷ್ಟ್ರೀಯ ಒಡಂಬಡಿಕೆ ವಿಷಯದಲ್ಲಿ ಚರ್ಚೆ ನಡೆಸಿ ವಿಭಿನ್ನವಾದ ದೃಷ್ಟಿಕೋನ

ವ್ಯಕ್ತಪಡಿಸುತ್ತಿದ್ದರು. ಆದರೂ ಆ ಮಾತುಕತೆ ಸಮಯದಲ್ಲಿ ಆಜಾದರು ದಾಸ್ ಕೈಗೊಂಡ ಹೊಂದಾಣಿಕೆ ರೀತಿಯನ್ನು ಖಂಡಿಸಿದರೇ ಇಲ್ಲವೇ ಎಂಬುದು ಖಚಿತವಾಗಿ ತಿಳಿದುಬರಲಿಲ್ಲ. ಆ ಒಡಂಬಡಿಕೆ ನಡೆಯುತ್ತಿದ್ದ ಸಮಯದಲ್ಲಿ ಅಬುಲ್ ಕಲಂ ಅವರು ಕಲ್ಕತ್ತಾದಲ್ಲಿದ್ದದ್ದು ನಿಜ. ಅಂದರೆ ಕಲ್ಕತ್ತಾ ಮುಸ್ಲಿಂರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಹಂತದಲ್ಲಿ ದಾಸ್‌ರು ಆಜಾದರನ್ನು ಸಂಪೂರ್ಣವಾಗಿ ಉಪೇಕ್ಷಿಸಿದರೇ ಎಂಬ ಪ್ರಶ್ನೆಯು ಉಳಿದುಕೊಳ್ಳುತ್ತದೆ. ಇದೆಲ್ಲಕ್ಕಿಂತ ಹೆಚ್ಚಿನದಾಗಿ ಅಧಿವೇಶನಕ್ಕೆ ಕೆಲವೇ ದಿನಗಳ ಮೊದಲು ಲಾಲಾಜಿಯನ್ನು ದಾಸ್ ಲಾಹೋರಿನಲ್ಲಿ ಭೇಟಿ ಮಾಡಿದ್ದರು. ಹಿಂದೂ ಮುಸ್ಲಿಂ ಹೊಂದಾಣಿಕೆ ಬಗ್ಗೆ ಇಬ್ಬರು ಸಾಕಷ್ಟು ಮಾತುಕತೆ ನಡೆಸಿದ್ದರು. ಆದರೂ ಸಹ ದಾಸ್‌ರು 'ಬಂಗಾಳ ಒಡಂಬಡಿಕೆ' ವಿಷಯದಲ್ಲಿ ಒಂದಕ್ಷರವನ್ನು ಪ್ರಸ್ತಾಪಿಸಿರಲಿಲ್ಲ. ಲಾಲಾಜಿ ರಾಷ್ಟ್ರೀಯ ಹೊಂದಾಣಿಕೆ ವಿಷಯದಲ್ಲಿ ತತ್ಸಬಂಧದ ಸಮಿತಿಯ ಸದಸ್ಯರಾಗಿ ಕಾರ್ಯನಿರತವಾಗಿದ್ದದ್ದು ದಾಸ್‌ರಿಗೆ ಗೊತ್ತಿತ್ತು. ಒಂದು ವೇಳೆ ತಾವು ಸ್ಥಳೀಯ ತುರ್ತು ಅಗತ್ಯಗಳ ಒತ್ತಡಕ್ಕೆ ಸಿಕ್ಕಿಬಿದ್ದಿದ್ದರೆ ಅದನ್ನು ಅವರು ಲಾಲಾಜಿ ಅವರಿಗೆ ಖಂಡಿತವಾಗಿಯೂ ತಿಳಿಸಬಹುದಾಗಿತ್ತು. ಆ ಒಂದು ಕನಿಷ್ಠ ಸೌಜನ್ಯವನ್ನು ಅವರು ತೋರಿರಲಿಲ್ಲ.

ಬಂಗಾಳಕ್ಕೆ ಮಾತ್ರ ಸೀಮಿತಗೊಳ್ಳುವಂತೆ ಹಿಂದೂ ಮುಸ್ಲಿಂ ಒಡಂಬಡಿಕೆ ಮಾಡಿಕೊಂಡ ಬೆಳವಣಿಗೆಯಲ್ಲಿ ಅಬುಲ್ ಕಲಂ ಕೈಯಿದ್ದಿರಬಹುದು. ಇಲ್ಲದಿರಬಹುದು. ಒಂದು ವೇಳೆ ಅವರೇನಾದರೂ ಅದಕ್ಕೆ ಕಾರಣರಾಗಿದ್ದರೆ ಅದು ನ್ಯಾಯೋಚಿತದ್ದಾಗಿರಲಿಲ್ಲ. ಆದರೆ ದಾಸ್‌ರಂತೂ ಲಾಲಾಜಿಯವರನ್ನು ವ್ಯಕ್ತಿಶಃ ವೇದನೆಗೆ ಗುರಿ ಮಾಡಿದ್ದು ನಿಜ. ಅವರಿಬ್ಬರ ನಡುವೆ ಇದ್ದ ಸ್ನೇಹ ಮತ್ತು ನಿಷ್ಠೆಯ ಸಂಹಿತೆಯನ್ನು ಸ್ವತಃ ಅವರೇ ಉಲ್ಲಂಘಿಸಿದರು. ದಾಸ್ ನಿಜವಾಗಿಯೂ ಲಾಲಾಜಿಯವರ ಆತ್ಮೀಯ ಗೆಳೆಯರಾಗಿದ್ದರು. ಲಾಲಾಜಿಯವರ ರಾಜಕೀಯ ಜೀವನದಲ್ಲಿ ಮಹಾರಾಷ್ಟ್ರ ಮತ್ತು ಬಂಗಾಳದಲ್ಲಿ ದೇಶಿಯವಾದಿಗಳು ಅತೀವ ಆತ್ಮೀಯರಾಗಿದ್ದರು. ದೀರ್ಘ ಕಾಲ ದೇಶದಿಂದ ಹೊರಗಿದ್ದರೂ ಮರಳಿದ ನಂತರ ಕಲ್ಕತ್ತಾ ವಿಶೇಷ ಅಧಿವೇಶನದಲ್ಲಿ ಹಳೆಯ ಆ ಎಳೆಗಳನ್ನೆಲ್ಲಾ ಇನ್ನಷ್ಟು ಒತ್ತಟ್ಟಿಗೆ ಹೆಣೆದುಕೊಂಡಿದ್ದರು. ಬಂಗಾಳಿ ದೇಶಿಯವಾದಿಗಳಲ್ಲಿ ದಾಸ್‌ರದು ಎತ್ತರದ ಮುಖಂಡತ್ವವಾಗಿತ್ತು. ಕಲ್ಕತ್ತಾ ಅಧಿವೇಶನದಲ್ಲಿ ಗಾಂಧೀಜಿಯವರಿಗೆ ಲಾಲಾಜಿಯನ್ನಾಗಲಿ, ದಾಸ್‌ರನ್ನಾಗಲಿ ತಮಗೆ ಅನುಕೂಲಕರವಾಗುವ ರೀತಿಯಲ್ಲಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ನಾಗಪುರ ಅಧಿವೇಶನದ ತನಕವೂ ಆ ಪ್ರಯತ್ನ ನಡೆಯಿತು. ಅಂತಿಮವಾಗಿ ಇಬ್ಬರು ಗಾಂಧೀಜಿಯನ್ನೇ ಮರೆಸಿದರು. ಲಾಲಾಜಿ ಬಂಧನದಲ್ಲಿದ್ದಾಗಲೂ ಸಹ ಇಬ್ಬರು ಸೇರಿ ಗಾಂಧೀಜಿಯವರ ಸಂಪ್ರದಾಯಶೀಲ ಅಸಹಕಾರ ಚಳವಳಿಯ ವಿರುದ್ಧ ಬಂಡೆದ್ದರು. ಆ ಬಂಡಾಯದಲ್ಲಿ ಮೊದಲಿಗರು ದಾಸ್ ಅವರೇ. ಬಹಿರಂಗವಾಗಿಯೇ ಬಂಡೆದಿದ್ದರು. ಲಾಲಾಜಿ ಸೆರೆಮನೆಯಲ್ಲಿದ್ದುಕೊಂಡೇ ಸಾಧ್ಯವಾದ ಎಲ್ಲಾ ಬೆಂಬಲವನ್ನು ಒದಗಿಸಿದ್ದರು. ಬಿಡುಗಡೆಯಾದ ನಂತರ ಮೋತಿಲಾಲ್ ಮತ್ತು ದಾಸ್ ಅವರನ್ನು ತುಂಬಾ ಹಚ್ಚಿಕೊಂಡರು. ಅವರೊಂದಿಗೆ ನಿಕಟವರ್ತಿಯಾಗಿ ಕೆಲಸ ಮಾಡುತ್ತಾ ಬಂದಿದ್ದರು. ನೆಹರುಗಿಂತಲೂ ಲಾಲಾಜಿ ಆತ್ಮೀಯತೆ ದಾಸ್ ಅವರ ಕಡೆಗೆ ಹೆಚ್ಚಾಗಿತ್ತು. ಬಂಗಾಳಕ್ಕೆ ಸಂಬಂಧಪಟ್ಟಂತೆ ಲಾಲಾಜಿಯವರ ಹಿರಿಯ ಹಾಗೂ

ಉತ್ಕಟ ಬಾಂಧವ್ಯ ದಾಸ್‌ರದಾಗಿತ್ತು. ಗಾಂಧೀ ಪ್ರಣೀತ ಅಸಹಕಾರ ಚಳವಳಿಯನ್ನು ಕೈಬಿಡಿಸುವ ನಿಟ್ಟಿನಲ್ಲಿ ಅವರಿಬ್ಬರು ನಿಕಟವಾಗಿ ಕೆಲಸ ಮಾಡುತ್ತಾ ಬಂದಿದ್ದರು. ಅಲಹಾಬಾದ್ ಪಂಡಿತರ ವಿಷಯದಲ್ಲಿ ಹಾಗಾಗಿರಲಿಲ್ಲ. ಅಸಹಕಾರ ಚಳವಳಿಯನ್ನು ಗಾಂಧೀ ಪ್ರಣೀತಗೊಳಿಸಿದ ಆರಂಭದಲ್ಲೇ ಅದನ್ನು ನೆಹರು ಒಪ್ಪಿಕೊಂಡಿದ್ದರು. ಅದು ಕಲ್ಕತ್ತಾ ಅಧಿವೇಶನದಲ್ಲೇ ವ್ಯಕ್ತವಾಗಿತ್ತು. ಶಾಸಕಾಂಗಗಳ ಮೇಲಣ ನಿರ್ಬಂಧವನ್ನು ರದ್ದುಪಡಿಸುವ ವಿಷಯದಲ್ಲಿ ಲಾಲಾಜಿ ಮತ್ತು ದಾಸ್ ಒಂದಾದ ನಂತರ ಮೋತಿಲಾಲ್ ಅವರೊಂದಿಗೆ ಕೈಜೋಡಿಸಿದ್ದರು. ಹೀಗಾಗಿ ಲಾಲಾಜಿ ಅವರ ಆತ್ಮೀಯತೆ ದಾಸ್‌ರ ಕಡೆಗೆ ಸಹಜವಾಗಿತ್ತು.

ತಮ್ಮ ಬಗ್ಗೆ ದಾಸ್ ನಡೆದುಕೊಂಡ ಮೊದಲ ಅನುಚಿತ ವರ್ತನೆ ಲಾಲಾಜಿಗೆ ಈ ಸಂದರ್ಭದಲ್ಲಿ ನೆನಪಾಗಿ ಅವರ ವೇದನೆಯನ್ನು ಇನ್ನಷ್ಟು ಹೆಚ್ಚಿಸಿತು. ಜೈಲಿನಲ್ಲಿದ್ದಾಗ ವಿಶ್ವಾಸವಿಟ್ಟು ಬರೆದ ಕೆಲವು ಪತ್ರಗಳನ್ನು ಅವರು ಬಹಿರಂಗಗೊಳಿಸಿದ್ದರು. ಅದು ವಿಶ್ವಾಸಘಾತುಕ ನಡವಳಿಕೆಯಾಗಿ ಲಾಲಾಜಿ ಅವರಿಗೆ ನೋವುಂಟು ಮಾಡಿತು. ಲಾಹೋರಿನ ಸೆಂಟ್ರಲ್ ಜೈಲಿನಲ್ಲಿ ಕೆಲವು ಮುಸ್ಲಿಂ ಗೆಳೆಯರೊಂದಿಗೆ ತಾವು ನಡೆಸಿದ ಮಾತುಕತೆ ಸಂಬಂಧದಲ್ಲಿ ದಾಸರಿಗೆ ಒಂದು ಪತ್ರ ಬರೆದಿದ್ದರು. ಆ ಪತ್ರ ತೀರಾ ವೈಯಕ್ತಿಕವೆಂದೂ ದಾಸ್‌ರಿಗೆ ತಿಳಿಸಿದ್ದರು. ಆದಂ ಅವರು ಅದಕ್ಕೆ ವೈಯಕ್ತಿಕ ಮೌಲ್ಯ ಕೊಡುವುದಿಲ್ಲವೆಂಬ ಸಂಗತಿ ಅವರಿಗೆ ಜೈಲಿನಲ್ಲಿದ್ದಾಗಲೇ ತಿಳಿಯಿತು.

ಈ ಮೊದಲು ಕೆಲವು ದಿನಗಳ ಹಿಂದೆ ಜೇಸೆಫ್ ಬ್ಯಾಪಿಸ್ಟ್ ಐತಿಹಾಸಿಕ ತೀರ್ಪಿನ ಒಂದು ನುಡಿಗಟ್ಟನ್ನು ಪ್ರಸ್ತಾಪಿಸಿದ್ದರು. ಬ್ಯಾಪಿಸ್ಟ್ ಮುಂಬೈ ಕಾರ್ಮಿಕ ಸಂಘಟನೆಯ ನಾಯಕರಾಗಿದ್ದರು. ಅವರ ನಾಲಿಗೆ ತೀರಾ ಹರಿತವಾಗಿತ್ತು. ಮಹಾರಾಷ್ಟ್ರ ಶೈಲಿಯಲ್ಲಿ ಹರಿತವಾದ ಪದಗಳನ್ನು ಬಳಕೆ ಮಾಡುತ್ತಿದ್ದರು. ಐತಿಹಾಸಿಕ ತೀರ್ಪಿನ ನುಡಿಗಟ್ಟನ್ನು ಅವರು ಪ್ರಾಸಂಗಿಕವಾಗಿ ಇಂಗ್ಲೀಷ್‌ನಲ್ಲಿ 'Dasses were Asses' ಎಂದು ಕರೆದಿದ್ದರು. ಲಾಲಾಜಿಗೆ ಈಗ ಆ ನುಡಿಗಟ್ಟು ನೆನಪಾಯಿತು. ಅದರ ಅರ್ಧ ಭಾಗವಂತೂ ಅವರಿಗೆ ನಗು ತಂದಿತು. ಬಹಳ ದಿನಗಳ ತನಕ ಅವರು ಆ ನುಡಿಗಟ್ಟನ್ನು ತಮ್ಮಲ್ಲೇ ಗುಂಯ್‌ಗುಟ್ಟುಕೊಳ್ಳುತ್ತಿದ್ದರು. ದಾಸ್ ಕೈಗೊಂಡ ಒಡಂಬಡಿಕೆ ತೀರಾ ಒತ್ತಡಕಾರಿಯಾಗಿತ್ತು. ಆ ಒಡಂಬಡಿಕೆಗೆ ಸಮ್ಮತಿ ಸೂಚಿಸಲು ಲಾಲಾಜಿಗೆ ಸಾಧ್ಯವಿರಲಿಲ್ಲ. ಆ ಬಗ್ಗೆ ಅವರು ತಮ್ಮ ಭಾವನೆಯನ್ನು ವ್ಯಕ್ತಪಡಿಸಲೂ ಇಲ್ಲ. ಸಿ.ಆರ್. ದಾಸ್ ಬೆಳವಣಿಗೆಗಳಿಗೆ ಸಂಬಂಧಪಟ್ಟಂತೆ ಲಾಲಾಜಿ ಸಾಧ್ಯವಾದಷ್ಟು ಮೌನಿಯಾದರು.

ಕಾಂಗ್ರೆಸ್ ಅಧಿವೇಶನದಿಂದಲೂ ಲಾಲಾಜಿ ಅವರಿಗೆ ಇನ್ನೊಂದು ಬಗೆಯ ನೋವು ಕಾಡತೊಡಗಿತು. ಅಧಿವೇಶನದ ಅಧ್ಯಕ್ಷರಾಗಿ ಮಹಮದಲಿ ಮಾಡಿದ ಭಾಷಣದಲ್ಲಿ ಒಂದು ಭಾಗ ಅವರನ್ನು ಒಳಗೊಳಗೆ ಕಾಡುತ್ತಿತ್ತು. 'ಅಸ್ಪೃಶ್ಯರು' ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಹಂಚಿಕೊಳ್ಳಬೇಕೆಂದು ಅವರು ಹೇಳಿದ್ದ ಮಾತು ಅದು. ಅದೂ ಏಕತೆಯ ಹೆಸರಿನಲ್ಲಿ ಅವರು ಆ ಮಾತು ಹೇಳಿದ್ದರು. ಬಹಳ ದಿನಗಳು ಆ ಬಗ್ಗೆ ಯೋಚಿಸಿದರು. ಆ ದಿನ ಗುರು ಗೋವಿಂದ ಸಿಂಗರ ಜನ್ಮ ದಿನ. [illegible]

ಏಳುವ ವೇಳೆಗೆ ಲಾಲಾಜಿ ಅವರು ನಿರ್ಧಾರವೊಂದನ್ನು ಮಾಡಿಕೊಂಡಿದ್ದರು. ಆ ಪವಿತ್ರ ದಿನದಂದು ಅವರು ತಮ್ಮ ನಿರ್ಧಾರವನ್ನು ಪ್ರಕಟಿಸಿದರು. 'ಅಸ್ಪೃಶ್ಯತೆ' ನಿವಾರಣೆಗಾಗಿ ದೇಶಾದ್ಯಂತ ಆಂದೋಲನವನ್ನು ಆ ಕೂಡಲೇ ಆರಂಭಿಸುವ ನಿರ್ಧಾರ ಅವರದಾಯಿತು. ಲಾಲಾಜಿ ಆಳವಾದ ಲೇಖನವೊಂದನ್ನು ಬರೆದರು. ಆ ಸಮಸ್ಯೆಯ ಹಿನ್ನಲೆ ಮತ್ತು ಅದರ ಪರಿಣಾಮಗಳನ್ನು ವಿವೇಚಿಸಿದರು. ಅದನ್ನು ನನಗೆ ಕೊಟ್ಟು ಪತ್ರಿಕೆಗಳ ಪ್ರಕಟಣೆಗೆ ಅನುವಾಗುವಂತೆ ಸಾರಾಂಶವನ್ನು ಸಿದ್ಧಪಡಿಸಲು ಸೂಚಿಸಿದರು. ನನ್ನನ್ನು ಪತ್ರಕರ್ತ ವೃತ್ತಿಗೆ ತೊಡಗಿಸಿಕೊಳ್ಳಲು ಅವರು ನೀಡಿದ ಪರೀಕ್ಷೆಯಂತಿತ್ತು ಆ ಪರಿಶ್ರಮ. (ಆ ವೇಳೆಗಾಗಲೇ ಅವರು ನನ್ನನ್ನು ಪತ್ರಿಕೋದ್ಯಮದಲ್ಲಿ ತರಬೇತುಗೊಳಿಸಲು ಯೋಜಿಸಿದ್ದರು) ಒಂದು ವರ್ಷದೊಳಗೆ ಸ್ವರಾಜ್ಯ ಸ್ಥಾಪಿಸುವ ವಿಷಯದಲ್ಲಿ ಅವರಿಗೆ ವಿಶ್ವಾಸ ಇರಲಿಲ್ಲ. ಆದರೆ 12 ತಿಂಗಳ ಅವಧಿಯಲ್ಲಿ 'ಅಸ್ಪೃಶ್ಯತೆ' ನಿವಾರಣೆ ಕಾರ್ಯದಲ್ಲಿ ಸಾಕಷ್ಟು ಯಶಸ್ಸು ಸಾಧಿಸುತ್ತೇನೆ ಎಂಬ ವಿಶ್ವಾಸ ಅವರಲ್ಲಿತ್ತು. ಅಸಹಕಾರ ಚಳವಳಿ ತಣ್ಣಗಾಗಿತ್ತು. ಆ 'ಸೃಜನಾತ್ಮಕ ಕಾರ್ಯ'ಕ್ಕೆ ಲಾಲಾಜಿ ಸಮಂಜಸವಾಗಿ ತಮ್ಮನ್ನು ತೊಡಗಿಸಿಕೊಂಡರು.

ಕರಾಚಿಯಲ್ಲಿದ್ದಾಗಲೇ ಅವರಿಗೆ ತಲುಪಿದ ಮೂರು ವಿಶೇಷ ಸುದ್ದಿಗಳ ಪೈಕಿ ಕಡೆಯದು ಜನವರಿ 12 ಮತ್ತು 13ರ ವಿದ್ಯಮಾನಗಳು. ಆ ಸುದ್ದಿಗಳು ಆತಂಕಕಾರಿಯಾಗಿದ್ದವು. ಯರವಾಡ ಜೈಲಿನಲ್ಲಿ ಅಪೆಂಡೀಸ್‌ಸೈಟಿಸ್ ಕಾಯಿಲೆಯಿಂದ ಗಾಂಧೀಜಿ ತೀವ್ರವಾಗಿ ಬಳಲುತ್ತಿದ್ದಾರೆಂಬುದು ಆ ಸುದ್ದಿಯ ಮುಖ್ಯಾಂಶವಾಗಿತ್ತು. ಪೂನಾದ ಸೆಸೂನ್ ಆಸ್ಪತ್ರೆಯಲ್ಲಿ ಕರ್ನಲ್ ಮಡೋಕ್ ಅವರು ಗಾಂಧೀಜಿಯವರಿಗೆ ಶಸ್ತ್ರಚಿಕಿತ್ಸೆ ನಡೆಸುವರೆಂದು ಆ ಸುದ್ದಿ ಹೇಳಿತು. ಚಿಕಿತ್ಸೆ ಯಶಸ್ವಿಯಾಯಿತೆಂಬ ವರದಿ ಸಮಾಧಾನ ತಂದಿತು. ಲಾಲಾಜಿ ಅವರಲ್ಲಿ ಆ ಸುದ್ದಿಯಿಂದ ಸಮಾಧಾನವಾದಂತಾಗಲಿಲ್ಲ. ಕೂಡಲೇ ಪೂನಾಕ್ಕೆ ಹೊರಡಲು ನಿರ್ಧರಿಸಿದರು. ಅಲ್ಲಿಂದ ಸಮುದ್ರ ಮಾರ್ಗದಲ್ಲಿ ಮುಂಬೈ ತಲುಪಿದರು.

ಮಾನಸಿಕವಾಗಿ ಏನೇ ಒತ್ತಡ ಬಿದ್ದರೂ ಕರಾಚಿಯ ವಿಶ್ರಾಂತ ಜೀವನ ಅವರ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರಿತು. ಸ್ವಲ್ಪ ಸಮಯ ಓದಿನಲ್ಲೋ, ಇನ್ನಷ್ಟು ಸಮಯ ಬರಹದಲ್ಲೋ ಮಧ್ಯೆ ಮಧ್ಯೆ ಪತ್ರ ವ್ಯವಹಾರದಲ್ಲೂ ಅವರು ಕಾಲ ವಿನಿಯೋಗ ಮಾಡಿಕೊಂಡರು. ಕಠಿಣವಾದ ಕೆಲಸಗಳು ಯಾವೂದು ಇರಲಿಲ್ಲ. ಹವಾಗುಣ ತುಂಬಾ ಆಹ್ಲಾದಕರವಾಗಿತ್ತು. ವಾತಾವರಣ ಹಿತಕರವಾಗಿತ್ತು. ಕ್ಲಿಫ್ಟನ್ ಹರ್ಷದಾಯಕ ಕಡಲತೀರ. ಹೃದಯ ತಣಿಯುವಷ್ಟು ದೂರ ಕಾರಿನಲ್ಲಿ ಹೋಗಿ ಬರಬಹುದಾದಷ್ಟು ಮಾಧುರ್ಯ ಅಲ್ಲಿತ್ತು. ಎಲ್ಲಕ್ಕಿಂತ ಹೆಚ್ಚಿನದಾಗಿ ಬಂದು ಹೋಗುವವರ ಸಂಖ್ಯೆ ತೀರಾ ವಿರಳ. ಅವರನ್ನು ಆಗಾಗ ಕಾಡುತ್ತಿದ್ದವರೆಂದರೆ ಟಿ.ಎಲ್. ವಾಸ್ವಾನಿ ಮಾತ್ರ. ಅವರೊಂದಿಗೆ ಲಾಲಾಜಿ ಗೀತೆಯ ಬಗ್ಗೆ ವಿಮರ್ಶೆ ನಡೆಸುತ್ತಿದ್ದರು. ಸಾಲದ್ದಕ್ಕೆ ವಾಸ್ವಾನಿ ಲಾಲಾಜಿ ಅವರಿಗೆ ಆರೋಗ್ಯ ರಕ್ಷಣೆಯ ಸೂಕ್ಷ್ಮ ಸಂಗತಿಗಳನ್ನು ತಿಳಿಸುತ್ತಿದ್ದರು. ದೈಹಿಕ ವ್ಯಾಯಾಮದಲ್ಲಿ ಅವರ ಆಸಕ್ತಿ ಕೆರಳುವಂತೆ ಮಾಡಿದರು. ಅವರೊಂದು ಪಾದಮಾಪಕವನ್ನು ಲಾಲಾಜಿ ಅವರಿಗೆ ಕೊಟ್ಟು ಒಂದೊಂದು ಕಾಲು ದಿನದಲ್ಲಿ ಎಷ್ಟು ಕೆಲಸ ಮಾಡುತ್ತದೆ ಎಂಬುದನ್ನು ಅಳೆದು ತಿಳಿದುಕೊಳ್ಳುವ ಪ್ರತ್ಯಕ್ಷ ಅವಕಾಶ ಮಾಡಿಕೊಟ್ಟರು. ಈ ಮಧ್ಯೆ ಲಾಲಾಜಿ

ಸ್ವತಃ ತಾವೇ ಆಗಾಗ ಜೆಂಷೆಡ್ ಮೆಹ್ತಾ ಅಥವಾ ಅಬ್ದುಲ್ ಹರೂನ್ ಇಲ್ಲವೇ ಹತೀಂ ಆಲ್ವಿ ಅವರನ್ನು ಭೇಟಿ ಮಾಡುತ್ತಿದ್ದರು. ಒಮ್ಮೊಮ್ಮೆ ಪರ್ಯಟನೆ ಕೈಗೊಂಡು ಪ್ರಗತಿಪರ ಉದ್ಯಮಿಗಳು, ಪಂಜಾಬಿಗಳು, ಸಿಂಧಿಗಳು ಅಥವಾ ಮಾರ್‍ವಾಡಿಗಳಿಂದ ತಮ್ಮ ಸರ್ವೆಂಟ್ಸ್ ಆಫ್ ಪೀಪಲ್ಸ್ ಸೊಸೈಟಿ ಕಾರ್ಯಗಳಿಗಾಗಿ ಚಂದಾ ಸಂಗ್ರಹಿಸುತ್ತಿದ್ದರು. ಲಾಲಾಜಿ ಅವರಿಗೆ ಎಲ್ಲಿಯೂ ಗುಂಪುಗಳನ್ನು ಎದುರಿಸುವ ಪ್ರಸಂಗ ಬರಲಿಲ್ಲ. ಸಂದರ್ಶಕರ ಒತ್ತಡ ಉಂಟಾಗಲಿಲ್ಲ. ವೇಳೆಯಲ್ಲದ ವೇಳೆಯಲ್ಲಿ ಬಂದು ಹೋಗುವವರು ಯಾರೂ ಇರಲಿಲ್ಲ. ಸಾರ್ವಜನಿಕ ಸಭೆ, ಸಮಾರಂಭಗಳು ಇರಲಿಲ್ಲ. ಅವರ ಗೌರವಾರ್ಥ ಕರಾಚಿಯ ನಾಯಕರು ಏರ್ಪಡಿಸಿದ ಉನ್ನತ ದರ್ಜೆಯ ಉದ್ಯಾನವನ ಪಾರ್ಟಿಯೇ ಅಲ್ಲಿ ಏರ್ಪಟ್ಟ ದೊಡ್ಡ ಕಲಾಪವಾಯಿತು.

ಮುಂಬೈಯಲ್ಲಿ ಲಾಲಾಜಿ ಒಂದು ದಿನ ತಂಗಿದರು. ಕೆಲವು ಗೆಳೆಯರನ್ನು ಕಂಡು ಮರುದಿನ ಪುನಃ ಪ್ರಯಾಣ ಕೈಗೊಂಡರು. ಎನ್.ಸಿ. ಕೇಳ್ಕರ್ ಮತ್ತು ಕೇಸರಿ ಸಮೂಹದ ಅವರ ಗೆಳೆಯರು ಲಾಲಾಜಿ ಅವರನ್ನು ಹೃದಯಪೂರ್ವಕವಾಗಿ ಸ್ವಾಗತಿಸಿದರು. ಮಹಾರಾಷ್ಟ್ರದ ಹಿರಿಯ ಗೆಳೆತನದ ಆತ್ಮೀಯತೆ ತುಂಬಿ ಬಂದಿತು. ಅವರ ಮೊದಲ ಆದ್ಯತೆ ಮಹಾತ್ಮಗಾಂಧೀಯನ್ನು ಕಂಡು ಅವರ ಆರೋಗ್ಯವನ್ನು ವಿಚಾರಿಸುವುದ್ದಾಗಿದ್ದರಿಂದ ಸಸೂನ್ ಆಸ್ಪತ್ರೆಗೆ ಧಾವಿಸಿದರು. ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದ ಆ ರೋಗಿಯು ಮುಗುಳ್ನಗೆಯಿಂದ ಲಾಲಾಜಿಯವರನ್ನು ಬರಮಾಡಿಕೊಂಡರು. ಆ ನೋಟದಲ್ಲೇ ಲಾಲಾಜಿ ಅವರಿಗೆ ಹೆಚ್ಚಿನ ನೆಮ್ಮದಿ ಪ್ರಾಪ್ತವಾದಂತಾಯಿತು. ಆ ವೇಳೆಗಾಗಲೇ ಗಾಂಧೀಜಿಯವರ ಆರೋಗ್ಯದ ಕಳವಳಕಾರಿ ಘಟ್ಟ ನಿವಾರಣೆಯಾಗಿತ್ತು. ಅವರು ತೀರಾ ಬಳಲಿದಂತೆ ಕಂಡು ಬಂದರು. ಆದರೆ ನೋವು, ಹಿಂಸೆಯ ಲಕ್ಷಣ ಮುಖದಲ್ಲಿ ಇರಲಿಲ್ಲ. ಕಣ್ಣುಗಳಲ್ಲಿ ಯಾತನೆ ಇರಲಿಲ್ಲ. ಲಾಲಾಜಿ ಅದೆಲ್ಲವನ್ನು ಅಧ್ಯಯನ ಮಾಡಿ ತೃಪ್ತಿಪಟ್ಟುಕೊಂಡರು.

ಪೂನಾ ಭೇಟಿ ಲಾಲಾಜಿ ಅವರಿಗೆ ತುಂಬಾ ಸಂತೋಷ ತಂದಿತು. ತಾವು ಹಿಂದೆ ಅಲ್ಲೆಲ್ಲಾ ಒಡನಾಡಿದ ತಮ್ಮ ಹೃದಯಕ್ಕೆ ತುಂಬಾ ಹತ್ತಿರವೆನಿಸಿದ ಮಹಾನಾಯಕರು ಈಗ ಅಲ್ಲಿರಲಿಲ್ಲ. ಆದರೆ ನೆನಪುಗಳಿಗೆ ತೆರೆ ಎಲ್ಲಿ! ಲೋಕಮಾನ್ಯರು ಮತ್ತು ಗೋಖಲೆ ಅವರೊಂದಿಗೆ ಮಿತ್ರರಾಗಿ, ಒಡನಾಡಿಯಾಗಿ, ಆತ್ಮೀಯರಾಗಿ ಒಡನಾಡಿದ ಗಳಿಗೆಗಳು ನೆನಪಿನಂಗಳದಲ್ಲಿ ಮೂರ್ತವಾಗಿ ನಿಂತವು. 1905ರಲ್ಲಿ ಮೊದಲ ಬಾರಿಗೆ ಪುಣೆಗೆ ಭೇಟಿ ಕೊಟ್ಟ ದಿನಗಳು ಕಣ್ಮುಂದೆ ತೆರೆ ತೆರೆಯಾಗಿ ಹಾಯ್ದು ಹೋದವು. ನಂತರ ಲಾಹೋರಿನಲ್ಲಿ ಗೋಖಲೆ ತಮ್ಮ ಅತಿಥಿಯಾಗಿದ್ದ ದಿನಗಳು ನೆನಪಿನಂಗಳದಲ್ಲಿ ಇಳಿದವು. ಸಿಂಹಗಡ ಮತ್ತು ಶಿವಾಜಿ ಕುರಿತು ತಮ್ಮ ಶಿವಾಜಿಯಲ್ಲಿ ಚಿತ್ರಿಸಿಕೊಂಡ ಚಿತ್ರಾವಳಿಗಳೆಲ್ಲಾ ಹರಿದು ಹೋದವು. ಲೋಕಮಾನ್ಯರನ್ನು ಕುರಿತು ಕೇಳ್ಕರ್ ಮರಾಠಿಯಲ್ಲಿ ಸುದೀರ್ಘ ಜೀವನ ಚರಿತ್ರೆ ಬರೆಯುತ್ತಾರೆಂಬ ಸಂಗತಿ ತಿಳಿದು ಲಾಲಾಜಿ ಅವರಿಗ ಅತೀವ ಹರ್ಷವೆನಿಸಿತು. ಅವರು ತುಂಬಾ ಸಂತೋಷಪಟ್ಟರು. ಪ್ರಮುಖ ನಾಯಕ ಗಣಗಳೊಂದಿಗೆ ಮುಕ್ತ ಮನಸ್ಸಿನ ವಿಚಾರ ವಿನಿಮಯ ಮಾಡಿಕೊಂಡರು. ಹಿಂಸಾಚಾರಗಳು, ಹಿಂದೂ ಮುಸ್ಲಿಂ ಏಕತೆ ಅಸ್ಪೃಶ್ಯತೆ ಬಗ್ಗೆ ಮಹಮದಲಿ ಮಾಡಿದ ಪ್ರಸ್ತಾಪಗಳು ಮುಂತಾದ ವಿಷಯಗಳೆಲ್ಲವೂ ಚರ್ಚಿತವಾದವು. ಪುಣೆಯ ವಾಸ್ತವ್ಯ ಲಾಲಾಜಿ ಅವರಿಗೆ ಸ್ವಂತ

ಮನೆಯಲ್ಲಿದ್ದಂತೆಯೇ ಹರ್ಷಕರವೂ, ಸುಖಕರವೂ ಆಯಿತು. ಪುಣೆಯ ಗೆಳೆಯರ ಜೊತೆಗೆ ಮಹಾತ್ಮಗಾಂಧೀಜಿಯವರ ಆರೋಗ್ಯ ವಿಚಾರಿಸಲು ಅಲ್ಲಿಗೆ ಆಗಮಿಸಿದ್ದ ಇತರ ಅನೇಕ ಮುಖಂಡರುಗಳ ಭೇಟಿಯೂ ಆಯಿತು. ಆ ಪೈಕಿ ಕರ್ನಾಟಕದ ಗಂಗಾಧರ್ ದೇಶಪಾಂಡೆ ಒಬ್ಬರು.

ಮುಂಬೈಗೆ ಮರಳಿದ ನಂತರ ಲಾಲಾಜಿ ವಿಠಲಬಾಯಿ ಪಟೇಲ್, ಆರ್.ಬಿ. ಲೋತ್ವಾಲ್ ಸೇರಿದಂತೆ ಅನೇಕ ಗೆಳೆಯರನ್ನು ಭೇಟಿ ಮಾಡಿದರು. ಅವರು ವಾಲ್ಕೇಶ್ವರ ರಸ್ತೆಯ ಸೇಠ್ ಹಿಂದೂಮಲ್ ದಾನಿ ಅವರ ನಿವಾಸದಲ್ಲಿ ಬಿಡಾರ ಬಿಟ್ಟರು. ಪುಣೆಗೆ ತೆರಳುವ ಮೊದಲು ವಿಠಲಬಾಯಿ ಪಟೇಲ್ ಅಲ್ಲಿಗೆ ಬಂದು ಲಾಲಾಜಿಯವರೊಂದಿಗೆ ಮಾತುಕತೆ ನಡೆಸಿದರು. ನಂತರ ಅವರಿಬ್ಬರು ಪಟೇಲರ ಕಚೇರಿಯಲ್ಲಿ ಕಲೆತರು. ಚಾಪಟಿ ಬಳಿ ಸ್ಯಾಂಡ್ಹರ್ಸ್ಟ್ ರಸ್ತೆಯ ಆರ್ಯಭವನದಲ್ಲಿ ಸಾರ್ವಜನಿಕ ಕೆಲಸ ಕಾರ್ಯಗಳಿಗಾಗಿ ಪಟೇಲರು ತಮ್ಮ ಕಚೇರಿಯನ್ನು ಆರಂಭಿಸಿದ್ದರು. ಮಾತುಕತೆಯ ಸಮಯದಲ್ಲಿ ಪಟೇಲರು ಕಾಕಿನಾಡ ಕಾಂಗ್ರೆಸ್ ಅಧಿವೇಶನದ ಬಗ್ಗೆ ತಮ್ಮ ಅನಿಸಿಕೆಗಳನ್ನು ಲಾಲಾಜಿಯವರಿಗೆ ತಿಳಿಸಿದ್ದರು. ಮುಂಬೈಯಿಂದ ಲಾಲಾಜಿ ಮುಂದಿನ ಪ್ರಯಾಣ ಎಲ್ಲಿಗೆ ಎಂಬುದನ್ನು ತಿಳಿಯಬಯಸಿದರು. ಲಾಲಾಜಿ ಕಲ್ಕತ್ತಾಕ್ಕೆ ಹೋಗುವ ತಮ್ಮ ಇಂಗಿತವನ್ನು ತಿಳಿಸಿ ಸಿ.ಆರ್. ದಾಸ್ ಅವರಿಗೆ ಅವರು ಮಾಡಿಕೊಂಡಿರುವ 'ಬಂಗಾಳಿ ಒಡಂಬಡಿಕೆ' ಬಗ್ಗೆ ತಮ್ಮ ಅಭಿಪ್ರಾಯವನ್ನು ನೇರವಾಗಿ ತಿಳಿಸುವ ಆಶಯವಿದೆ ಎಂದರು. -''ನಾನು ಅವರನ್ನು ಚುಂಬಿಸಬೇಕಾಗಿದೆ. ನೀವೊಂದು ಕತ್ತೆಯೆಂದು ತನ್ಮೂಲಕ ತಿಳಿಸಬೇಕಾಗಿದೆ. ಈತನಕ ಆ ಕತ್ತೆಯನ್ನು ಪ್ರೀತಿಸುತ್ತಾ ಬಂದಿದೆನೆಂದು ಹೇಳಬೇಕಾಗಿದೆ.'' ಎಂದರು. ಸ್ವತಃ ಪಟೇಲರು ಸಹ ಆ ಒಡಂಬಡಿಕೆಯನ್ನು ಮಾನ್ಯ ಮಾಡಿರಲಿಲ್ಲ. ಚುಂಬಿಸುವ ವಿಷಯದಲ್ಲಿ ಅವರು ಚಕಾರ ಎತ್ತಿದರೂ ದಾಸ್ ಅದಕ್ಕೂ ಸಹ ಯೋಗ್ಯರಲ್ಲವೆಂದು ಪಟೇಲ್ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಕಲ್ಕತ್ತಾ ಮಾರ್ಗ ಮಧ್ಯೆ ಲಾಲಾಜಿ ನಾಗಪುರದಲ್ಲಿ ಸ್ವಲ್ಪ ಕಾಲ ತಂಗಿದರು. ಅಲ್ಲಿನ ಹೆಸರಾಂತ ವಕೀಲ ದೇಶ್‌ಮುಖ್ ಅವರನ್ನು ಭೇಟಿ ಮಾಡಿದರು. ಅಭಿಯಂತರರನ್ನು ಭೇಟಿ ಮಾಡುವ ಅವಕಾಶ ಅಲ್ಲಿ ಒದಗಿ ಬಂದಿತು. ಮೂಂಜೇ ಅವರು ಸಹ ಲಾಲಾಜಿಯವರ ಭೇಟಿಗೆ ಧಾವಿಸಿ ಬಂದರು. ಹೀಗಾಗಿ ಪುಣೆಯಿಂದ ನಾಗಪುರ ತಲುಪುವ ವೇಳೆಗೆ ಲಾಲಾಜಿ ಮಹಾರಾಷ್ಟ್ರದ ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ನಾಯಕರನ್ನು ಭೇಟಿ ಮಾಡಿದಂತಾಗಿತ್ತು. ಅವರೆಲ್ಲರೊಂದಿಗೂ ಮುಕ್ತವಾಗಿ ಕೂಲಂಕುಷವಾಗಿ ವಿಚಾರ ವಿನಿಮಯ ಮಾಡಿಕೊಂಡರು.

ಲಾಲಾಜಿ ಕಲ್ಕತ್ತಾ ತಲುಪಿದರು.

ರೂಸ ರಸ್ತೆಯ ಅರಮನೆ ಸದೃಶ್ಯ ಭವನದ ಮೆಟ್ಟಿಲುಗಳನ್ನು ಲಾಲಾಜಿ ಹತ್ತುತ್ತಿದ್ದಾರೆ. ಆ ಮೆಟ್ಟಿಲುಗಳಿಗೆ ಹೊಂದಿಸಿದ ಕಿಂಡಿಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮೂರ್ತಿ ಆಕೃತಿಗಳು ಸಮೃದ್ಧವಾಗಿ ಅಲಂಕರಿಸಿರುವುದನ್ನು ನೋಡುತ್ತಾ ಹತ್ತುತ್ತಿದ್ದಾರೆ. ಮೆಟ್ಟಿಲುಗಳ ಇಕ್ಕೆಡೆಗಳಲ್ಲೂ ಕಣ್ಮನ ಸೆಳೆಯುತ್ತಿದ್ದ ದೃಶ್ಯಗಳು ಅವಾಗಿದ್ದವು.

ಅತ್ತ ಅವರ ಮನಸ್ಸಿನಲ್ಲಿ ಬ್ಯಾಪ್ಟಿಸನ್ ಸೈನ್ಯ ಚಾರಿತ್ರಿಕ ಅಸಂಗತ ತೀರ್ಪು ಪದೇ ಪದೇ ಮರುಕಳಿಸುತ್ತಿದೆ. ಅದಕ್ಕೆ ಪೂರಕವೋ ಎನ್ನುವಂತೆ ತಾವೇ ತಾವಾಗಿ ದಾಸ್‌ರನ್ನು ಚುಂಬಿಸಲು ಮತ್ತು ನೀನೊಂದು ಕತ್ತೆ ಎಂದು ಅವರಿಗೆ ಹೇಳಲು ಹೋಗುತ್ತಿರುವ ಪರಿ ಕುತೂಹಲವೆನಿಸಿದೆ. ಹಾಗಿದ್ದು ಇನ್ನೂ ನಿಮ್ಮನ್ನು ಪ್ರೀತಿಸುತ್ತಿದ್ದೇನೆಂದು ಹೇಳುವ ವಿಚಿತ್ರವು ಅವರ ಮುಂದಿದೆ -ಅವುಗಳ ಜೊತೆಯಲ್ಲೇ ಕಡೆಯದಾಗಿ ವಿಠಲಬಾಯಿ ಪಟೇಲ್ ನೀಡಿದ್ದ ಅಭಿಪ್ರಾಯವು ಸಹ ಕಣ್ಮುಂದೆ ಹಾಯ್ದು ಹೋಗುತ್ತಿದೆ.

ಅದೊಂದು ವಿಶಾಲವಾದ ಕೋಣೆ. ಇಬ್ಬರು ಮಾತುಕತೆಗಾಗಿ ಎದುರು ಬದುರು ಕುಳಿತಿದ್ದಾರೆ. ಅಂದು ಕೊಂಡಿದ್ದಂತೆ ಏನು ಆಗಲಿಲ್ಲ. ವಾತಾವರಣ ತುಂಬಾ ಶೀತಲವಾದಂತಿದೆ. ಯಾರಿಂದಲೂ ತಾನೇ ತಾನಾಗಿ ಮಾತುಗಳು ಹೊರಡಲಿಲ್ಲ. ಲಾಲಾಜಿಯವರು ತಮ್ಮ ಆಕ್ರಮಣವನ್ನು ಆರಂಭಿಸಲಿಲ್ಲ. ಸಾಂಪ್ರಾದಾಯಿಕ ಕುಶಲೋಪರಿಗಳ ನಂತರ ದಾಸ್ ಲಾಲಾಜಿಯವರನ್ನು ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು. ಲಾಲಾಜಿಯವರು ದಾಸ್‌ರ ಮಗನ ಆಗುಹೋಗು ಕೇಳಿದರು. ಅವನ ಭವಿಷ್ಯ ಏನೆಂದು ತಿಳಿದುಕೊಳ್ಳಲು ಬಯಸಿದರು. ದಾಸ್‌ರು ಕೇಳಿದ್ದಕಷ್ಟೇ ಉತ್ತರ ಕೊಡುತ್ತಾ ಬಂದರು. ತೀರಾ ಖಾಸಗಿ ವಿಷಯ ಬಂದಾಗ ತೇಲಿಕೆಯ ಉತ್ತರ ಅವರದಾಯಿತು. ಬಿಹಾರದ ಹಳ್ಳಿಯೊಂದರಲ್ಲಿ ಇದ್ದ ಮನೆಯೊಂದನ್ನು ಬಿಟ್ಟರೆ (ಅವರ ಮಗ ಅಲ್ಲೇ ಇದ್ದದ್ದು) ಅವರ ಬಳಿ ಉಳಿದಿದ್ದು ರೋಸಾ ರಸ್ತೆಯ ಆ ಭವ್ಯ ಮನೆಯೊಂದೇ. ತಮ್ಮ ಮಗನ ಬಗ್ಗೆ ಲಾಲಾಜಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ 'ಅವನ ಮುಂದಿನ ಯೋಜನೆಗಳೇನೋ? ಈಗಂತೂ ಅವನು ಅಲ್ಲಿ, ಆರಾಮವಾಗಿದ್ದಾನೆ. ಅಷ್ಟೇ' ಎಂದಷ್ಟೇ ಹೇಳಿದರು. ಹೆಚ್ಚೇನನ್ನು ತಿಳಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವರ ನಡವಳಿಕೆಯು ಹಾಗೆಯೇ ಇತ್ತು. ಅಗಾಧ ಸಾಲ ಮಾಡಿಕೊಂಡಿದ್ದರು. ಅದಕ್ಕಾಗಿ ಆ ಮನೆಯು ಎಂದೋ ಅವರ ಕೈತಪ್ಪಿ ಹೋಗುತ್ತದೆಯೋ ಎನ್ನುವಂತಿತ್ತು. ದಾಸ್ ಔನತ್ಯ ಕಾಣುವುದು ಇಲ್ಲೇ. ದೇಶ ಹಿತದ ಕಾರ್ಯಕ್ಕಾಗಿ ತಮ್ಮೆಲ್ಲಾ ಸಂಪತ್ತನ್ನು ಕಳೆದುಕೊಳ್ಳುವವರು ಎಷ್ಟು ಮಂದಿ? ಆದರೆ ದೇಶಬಂಧುವಿಗೆ ಆ ಕೆಲಸದ ಮುಂದೆ ವೈಯಕ್ತಿಕ ಆಸ್ತಿ ಲೆಕ್ಕಕ್ಕೆ ಇರಲಿಲ್ಲ. ಆ ನಂತರ ದಾಸ್‌ರು ಲಾಲಾಜಿಯವರನ್ನು ಅದೇ ಧಾಟಿಯಲ್ಲಿ ಅವರ ಗೃಹಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿದರು. ಮತ್ತೆ ಸ್ವಲ್ಪಕಾಲ ಮೌನ. "ವಿಷಯ ಪ್ರಸ್ತಾಪಕ್ಕೆ" ಬರುವ ಕಾಲ ಸನ್ನಿಹಿತವಾಯಿತು. ದಾಸ್‌ರೇ ನಿರ್ಧಾರ ಮಾಡಿಕೊಂಡರು. ಬಿಗಿಯನ್ನು ಸಡಿಲಿಸಿ ಅವರು ಕೇಳಿದರು:

ದಾಸ್- ಅದಿರಲಿ, ನನ್ನ ಬಗ್ಗೆ ನಿಮ್ಮಲ್ಲಿ ಸಿಟ್ಟಿದೆಯೇ?

ಲಾಲಾಜಿ- ನೀವು ನಡೆದುಕೊಂಡ ರೀತಿ ನನ್ನನ್ನು ಹಾಗೆ ಮಾಡಿದೆ.

ದಾಸ್- ಅದೇ ನನ್ನ ಕೆಲಸ ಕಾರ್ಯಗಳ ರೀತಿ.

ಅಷ್ಟೇ. ಅವರ ವಿರಸದ ಪರಾಕಾಷ್ಠೆ!

ಆ ಬಗ್ಗೆ ಹೆಚ್ಚಿನ ಮಾತುಕತೆ ನಡೆಯಲೇ ಇಲ್ಲ. ಮತ್ತೆ ದೀರ್ಘ ಮೌನ

ಅಷ್ಟರಲ್ಲಿ ಇನ್ನೊಬ್ಬರು ಆಗಮಿಸಿದರು. ಅವರು ಮತ್ತಾರು ಅಲ್ಲ. ಅಬುಲ್ ಕಲಂ ಆಜಾದ್. ಅವರ ಆಗಮನದೊಂದಿಗೆ ವಿಷಯಾಂತರವಾಯಿತು. ಬ್ರಿಟನ್‌ನಲ್ಲಿ ಮೊದಲ ಬಾರಿಗೆ ಲೇಬರ್ ಸರ್ಕಾರ ಅಸ್ತಿತ್ವಕ್ಕೆ ಬಂದ ಸುದ್ದಿಯನ್ನು ಅವರು ತಂದಿದ್ದರು. ರ್‍ಯಾಮಸೆ ಮ್ಯಾಕ್‌ಡೊನಾಲ್ಡ್ ಪ್ರಧಾನಿಯಾಗಿದ್ದರು. ಆ ಬದಲಾವಣೆಯಿಂದ ಬ್ರಿಟಿಷ್ ಸರ್ಕಾರ ನಡವಳಿಕೆ ಮೂಲಭೂತ ಬದಲಾವಣೆಗಳಾಗಬಹುದೆ ಎಂಬ ಪ್ರಶ್ನೆ ಮುಖ್ಯವಾಗಿತ್ತು. ಭಾರತದ ಉಸ್ತುವಾರಿಗೆ ನೇಮಕವಾಗಿರುವ ಆಲಿವರ್ ಯಾರೆಂಬ ಪ್ರಶ್ನೆ ಕುತೂಹಲ ಕೆರಳಿಸಿತ್ತು. ಲಾಲಾಜಿ ಆ ವ್ಯಕ್ತಿಯನ್ನು ಬಲ್ಲರೇ? ಹಾಗಾದರೆ ಪೂರ್ವೋತ್ತರಗಳೇನು ಎಂದೆಲ್ಲಾ ಪ್ರಶ್ನೆಗಳನ್ನು ಅಬುಲ್ ಕಲಂ ಆಜಾದ್ ಮುಂದಿಟ್ಟರು.

ಲಾಲಾಜಿಯವರಿಗೆ ಆಲಿವರ್ ಗೊತ್ತಿತ್ತು. ಅದು ಅಷ್ಟೊಂದು ನಿಕಟವಾದ ಪರಿಚಯವೇನೂ ಅಲ್ಲ. ವೆಬ್ಸ್‌ಗಳು ಆ ಪರಿಚಯ ಮಾಡಿಕೊಟ್ಟಿದ್ದರು. ಆತ ಓರ್ವ ಫ್ಯಾಬಿಯನ್. ಜಮೇಕಾ ದೇಶದ ಸ್ವತಂತ್ರವಾಗಿ ಆಳಲು ಪ್ರಯತ್ನಿಸಿದ್ದರೆಂಬ ಕಥನವು ಇತ್ತು. ಆಲಿವರ್‌ನಿಂದ ಭಾರತಕ್ಕೆ ಮಹತ್ವದ್ದೇನೋ ಆಗುತ್ತಿದೆ ಎಂಬ ಭರವಸೆ ಲಾಲಾಜಿಯವರಲ್ಲಿ ಮೂಡಲಿಲ್ಲ. ಲೇಬರ್ ಸರ್ಕಾರದಿಂದಲಾದರೂ ಮಾರ್ಪಾಟು ಆಗುತ್ತದೆ ಎಂಬ ನಿರೀಕ್ಷೆಯು ಆಸೆಯಾಗಿ ಉದ್ಭವಿಸಲಿಲ್ಲ. ಲ್ಯಾಂಕ್‌ಸ್ಟರ್ ಡ್ಯೂಟಿ ಬಿಡಿಸಿದ್ದಕ್ಕಾಗಿ ತಮ್ಮಗೆಳೆಯ ವೆಡ್‌ವುಡ್ಡರನ್ನು ಕಾನೂನು ಕ್ರಮಕ್ಕೆ ಒಳಪಡಿಸಿದ ಘಟನೆ ಲಾಲಾಜಿಯವರ ಮನಸ್ಸಿನಲ್ಲಿ ಇನ್ನೂ ಹಸಿರಾಗಿತ್ತು. ಯಾರಾದರೂ ಲಂಡನ್‌ಗೆ ಹೋಗಿ ಹೊಸ ಸಾಧ್ಯತೆಗಳ ಬಗ್ಗೆ ಹತ್ತಿರದಿಂದ ಪ್ರಯತ್ನಿಸಬೇಕೆಂಬ ಸಲಹೆಯೊಂದು ಮೂಡಿತು. ಆ ಕೆಲಸಕ್ಕೆ ಲಾಲಾಜಿಯವರ ನೆರವನ್ನೇ ಕೋರುವ ಯತ್ನವೂ ಆಯಿತು.

ಲೇಬರ್ ಪಕ್ಷದ ಬಗ್ಗೆ ಲಾಲಾಜಿಯವರಲ್ಲಿ ಯಾವುದೇ ಆಸೆ ಭರವಸೆಗಳು ಇರಲಿಲ್ಲ. ರಾಮ್‌ಸೆ ಮ್ಯಾಕ್‌ಡೊನಾಲ್ಡ್ ಅವರಿಂದ ಮಹತ್ವದ್ದೇನೋ ಆಗುತ್ತವೆ ಎಂಬ ನಿರೀಕ್ಷೆಗಳು ದೇಶಬಂಧು ಅವರಲ್ಲೂ ಮೂಡಲಿಲ್ಲ. ಲಾಯ್ಡ್ ಜಾರ್ಜ್ ಬಗ್ಗೆ ಭಿನ್ನವಾದ ಅಭಿಪ್ರಾಯವೇ ಲಾಲಾಜಿ ಅವರಲ್ಲಿತ್ತು. ಲಾಯ್ಡ್ ಜಾರ್ಜ್ ಮತ್ತು ದೇಶಬಂಧು ಅವರ ನಡುವೆ ಕೆಲವು ಸಮಾನವಾದ ಗುಣಗಳಿದ್ದವು. ತ್ವರಿತವಾಗಿ ನಿರ್ಧಾರ ಕೈಗೊಳ್ಳುವುದು ತಾವೇ ನಾಯಕತ್ವದಲ್ಲಿ ಇರಬೇಕು ಎನ್ನುವುದು ತಮ್ಮ ಅನುಕೂಲಕ್ಕಾಗಿ ಇತರರನ್ನು ಪೇಚಿಗೆ ಸಿಕ್ಕಿಸುವುದು ಅವುಗಳಲ್ಲಿ ಪ್ರಮುಖ. ಅನಿರೀಕ್ಷಿತ ನಿರ್ಧಾರ ತೆಗೆದುಕೊಳ್ಳುವುದರಲ್ಲೂ, ಆಶ್ಚರ್ಯ ಜಿಜ್ಞಾಸೆ ಉಂಟುಮಾಡುವುದರಲ್ಲೂ ಇಬ್ಬರ ನಡವಳಿಕೆಗಳು ಒಂದೇ ಆಗಿತ್ತು. ಲಾಯ್ಡ್ ಜಾರ್ಜ್ ಬಗ್ಗೆ ದಾಸ್‌ರಲ್ಲಿ ಒಲವು ಇತ್ತು. ಯಾವುದೇ ಕೆಲಸಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಬಲ್ಲ ವ್ಯಕ್ತಿ ಅವರೊಬ್ಬರೇ ಎಂದು ದಾಸ್ ಹೇಳುತ್ತಿದ್ದರು. ಒಂದಲ್ಲ ಒಂದು ದಿನ ಲಾಯ್ಡ್ ಜಾರ್ಜ್ ಲೇಬರ್ ಪಕ್ಷದ ಮುಖ್ಯಸ್ಥರಾಗಿ ಅಧಿಕಾರಕ್ಕೆ ಬರುತ್ತಾರೆಂದು ದಾಸ್ ಯೋಚಿಸಿದ್ದರು ಕೂಡಾ. ಯುದ್ಧಕ್ಕೆ ಪೂರ್ವದ ದಿನಗಳಲ್ಲಿ ಲಾಯ್ಡ್ ಜಾರ್ಜ್ ಕೈಗೊಂಡಿದ್ದ ಸಾಮಾಜಿಕ ಕಾರ್ಯಗಳು ಪರಿಣಾಮಕಾರಿಯಾಗಿದ್ದವೆಂದು ದಾಸ್ ಭಾವಿಸಿದ್ದರು. ಲೇಬರ್ ಪಕ್ಷವು ಶ್ರಮಿಕ ವರ್ಗವನ್ನು ಶಿಸ್ತಿನಿಂದ ಇಟ್ಟುಕೊಳ್ಳಬಲ್ಲ ಜಾಣತನ ಅವರೊಬ್ಬರಲ್ಲಿ ಮಾತ್ರ ಇದೆ ಎಂದೂ ದಾಸ್ ಭಾವಿಸಿದ್ದರು. ಲಿಬರಲ್ ಪಕ್ಷವು ವರ್ಷಗಳು ಉರುಳಿದಂತೆ ಜನಪ್ರಿಯತೆ ಕಳೆದು

ಕೊಳ್ಳುತ್ತಾ ಬಂದಾಗ ಲಾಯ್ಡ್ ಜಾರ್ಜ್ ನಾಯಕತ್ವ ವರ್ಧಿಸುತ್ತಾ ಬಂದದ್ದು ನಿಜ. 'ಲಿಗ್ ಲಿಬ್' ಎಂಬ ಹೊಸ ಪದ ಬಳಿಕೆ ಎಲ್ಲೆಲ್ಲೂ ಜನಪ್ರಿಯವಾಗಿತ್ತು.

ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ದ್ವಿಪ್ರಭುತ್ವ ಆಡಳಿತ ಅಂತ್ಯಗೊಳ್ಳುತ್ತದೆ ಎಂದೂ ಸಿ.ಆರ್. ದಾಸ್ ಕನಸಿನ ಮಾತನ್ನಾಡಿದರು. ಅದು ಅತೀ ಶೀಘ್ರದಲ್ಲೇ ಆಗಿ ಬಿಡುತ್ತದೆ ಎನ್ನುವಷ್ಟರ ಮಟ್ಟಿಗೆ ಅವರ ಮಾತಿನ ಧಾಟಿ ಇತ್ತು. ಆದರೆ ಬೆಳವಣಿಗೆಗಳು ಅದಕ್ಕೆ ಅನುಗುಣವಾಗಿ ಆಗಲಿಲ್ಲ. ಪ್ರಾಂತೀಯ ದ್ವಿ ಪ್ರಭುತ್ವ ಆಡಳಿತ ತಾಂತ್ರಿಕವಾಗಿ ಬದಲಾಯಿಸಿದರೂ ಆ ಜಾಗದಲ್ಲಿ ಹೊಸದೊಂದು ಬಗೆಯ ಆಡಳಿತ ನಿಯೋಜಿಸಲಾಯಿತು. ರೋಸಾ ರಸ್ತೆಯಿಂದ ಮರಳಿದ ಮೇಲೆ ಲಾಲಾಜಿ ಅವರ ಮನಸ್ಸಿನ ಮೇಲೆ ನಾನಾ ತರಹದ ಆಲೋಚನೆಗಳು ತುಂಬಿಕೊಂಡವು. ದಾಸ್ ಕೈಗೊಂಡ ಒಡಂಬಡಿಕೆಯಿಂದ ಮುಸ್ಲಿಮರ ಬೆಂಬಲ ಪಡೆದು ಬಂಗಾಳಿಗಳು ಪ್ರತ್ಯೇಕ ಸಂವಿಧಾನವನ್ನೇ ಪಡೆದುಕೊಳ್ಳುವ ನಿಟ್ಟಿನಲ್ಲಿ ಹೋರಾಡಬಹುದೆಂಬುದೇ ಅದರಲ್ಲಿ ಒಂದು. ದಾಸ್ ಅವರಲ್ಲಿ ಅತ್ಯುತ್ತಮ ನಾಯಕತ್ವದ ಗುಣವಿದ್ದದ್ದರಲ್ಲಿ ಶಂಕೆಯೇ ಇರಲಿಲ್ಲ. ಅವರ ತ್ಯಾಗ ಸಮರ್ಪಣೆಗಳು ಅವರ ನಾಯಕತ್ವದ ಜನಪ್ರಿಯತೆಗೆ ಪೂರಕವಾಗಿದ್ದವು. ಅದನ್ನು ಲಾಲಾಜಿ ಗ್ರಹಿಸಿದ್ದರು. ಆದರೂ ಯಾವುದೇ ಒಂದು ಹಂತದಲ್ಲಿ ಅತ್ಯುನ್ನತ ರಾಜತಾಂತ್ರಿಕ ನಯವಂಚನೆಗೆ ದಾಸ್ ಕಂಡು ಕಾಣದಂತೆ ಸಿಕ್ಕಿಹಾಕಿಕೊಂಡಿರಬಹುದೇ ಎಂಬ ಭಾವನೆ ಲಾಲಾಜಿ ಅವರಲ್ಲಿ ಮೂಡದಿರಲಿಲ್ಲ. ಕರಾಚಿಯಲ್ಲಿ ಈ ಹಿಂದೆ ದಾಸ್ ಬಗ್ಗೆ ತಮ್ಮಲ್ಲಿ ಮೂಡಿದ ಅಸಮಾಧಾನ, ಸಿಟ್ಟುಗಳ ಹಿನ್ನಲೆಯಲ್ಲಿ ಆಗ ಅಂದುಕೊಂಡಿದ್ದಂತೆ ಅವರ ಒಡನಾಟವನ್ನು ಕಳೆದುಕೊಳ್ಳುವ ಸಾಹಸವನ್ನು ಲಾಲಾಜಿ ಅವರಿಗೆ ಈಗ ಮಾಡಲಾಗಲಿಲ್ಲ. ಅವರ ಬಗೆಗಿದ್ದ ಅಸಮಾಧಾನ, ಸಿಟ್ಟುಗಳ ಭಾವನೆಗಳನ್ನು ತೆಗೆದು ಹಾಕುವ ಪ್ರಯತ್ನ ಮಾಡುವಂತಾಗಿತ್ತು ಅವರ ಮನಸ್ಥಿತಿ. ಅದನ್ನು ಅವರು ಇನ್ನೊಂದು ರೀತಿಯಲ್ಲಿ ಸರಿ ಹೊಂದಿಸಿಕೊಳ್ಳತೊಡಗಿದರು. ದಾಸ್ ನಡವಳಿಕೆಗಳನ್ನೆಲ್ಲಾ 'ಅವರ ಧಾಟಿ' ಎಂದು ಸಮಾಧಾನ ಮಾಡಿಕೊಳ್ಳತೊಡಗಿದರು. ಅವರ ಉನ್ನತ ಗುಣಗಳನ್ನು ಗೌರವಿಸುತ್ತಾ, ಪ್ರಶಂಸಿಸುತ್ತಾ ಅವರ ಒಡನಾಟವನ್ನು ಹೊಸ ತರದಲ್ಲಿ ವ್ಯಾಖ್ಯಾನಿಸಿಕೊಳ್ಳಲು ಲಾಲಾಜಿ ನಿರ್ಧರಿಸಿಕೊಂಡರು. ತನ್ಮೂಲಕ ಬಂಗಾಳಿ ಒಡಂಬಡಿಕೆಯಿಂದ ತಮ್ಮ ಮೇಲಾಗುತ್ತಿದ್ದ ಅತೃಪ್ತಿಯನ್ನು ನಿವಾರಿಸಿಕೊಂಡರು. ಅವರಿಬ್ಬರ ಗೆಳೆತನ ಮುಂದುವರೆಯಿತು. ಕೆಲವು ತಿಂಗಳು ಕಳೆಯುವಷ್ಟರಲ್ಲಿ ಬಂಗಾಳದಲ್ಲಿ ದಬ್ಬಾಳಿಕೆ ಆರಂಭಗೊಂಡಿತು. ಯಾವುದೇ ಆರೋಪಗಳನ್ನು ಹೊರಿಸದೆ ಸುಭಾಷ್ ಚಂದ್ರ ಬೋಸರನ್ನು ಬಂಧನಕ್ಕೆ ಒಳಪಡಿಸಲಾಯಿತು. ಕೇವಲ ಆದೇಶದ ಮೂಲಕ ಅವರನ್ನು ಸೆರೆಮನೆಗೂ ಕಳುಹಿಸಲಾಯಿತು. ಆ ಬೆಳವಣಿಗೆಗಳು ಲಾಲಾಜಿ ಅವರನ್ನು ತೀರಾ ಕಳವಳಕ್ಕೆ ಒಳಪಡಿಸಿದವು. ಸುದ್ದಿ ತಿಳಿಯುತ್ತಿದ್ದಂತೆಯೇ ಅವರು ದೇಶಬಂಧುವಿಗೆ ತಂತಿ ಸಂದೇಶ ಕಳುಹಿಸಿ ತಮ್ಮ ಸೇವೆಗೆ ಸಂಪೂರ್ಣ ಸಿದ್ಧವಿರುವುದಾಗಿ ತಿಳಿಸಿದರು.

ಕಲ್ಕತ್ತಾದಿಂದ ತೌರು ರಾಜ್ಯಕ್ಕೆ ಹೊರಟ ಅವರ ಪಯಣವು ಮಧ್ಯೆ ಮಧ್ಯೆ ವಿಶ್ರಾಂತವಾಗುತ್ತಾ ಬಂದಿತು. ಬನಾರಸ್, ಅಲಹಾಬಾದ್ ಮತ್ತು ದೆಹಲಿಗಳಲ್ಲಿ ತಂಗಿ ಅಲ್ಲಿದ್ದ ನಾಯಕ ಗಣವನ್ನೆಲ್ಲಾ ಭೇಟಿ ಮಾಡಿದರು. ಅಭಿಪ್ರಾಯ ವಿನಿಮಯ

ಮಾಡಿಕೊಂಡರು. ಚರ್ಚಿಸಿದರು. ಅಲಹಾಬಾದ್‌ನಲ್ಲಿ ಮದನ ಮೋಹನ ಮಾಳವೀಯರನ್ನು ಭೇಟಿ ಮಾಡುವುದು ಪ್ರಮುಖ ವಿಷಯವಾಗಿತ್ತು. ಅವರೊಂದಿಗೆ ಕೆಲವು ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳಬೇಕಾಗಿತ್ತು.

ಅದು ಅರ್ಧ ಕುಂಭಮೇಳದ ವರ್ಷ. ಆರು ವರ್ಷಕ್ಕೆ ನಡೆಯುವ ಆ ಧಾರ್ಮಿಕ ಮಹಾ ಕೈಂಕರ್ಯಕ್ಕೆ ಪ್ರಯಾಗದಲ್ಲಿ ಯಾತ್ರಾರ್ಥಿಗಳು ಸಂಗಮಿಸಿತೊಡಗಿದ್ದರು. ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ಸಂಗಮದಲ್ಲಿ ಮಾಳವೀಯರು ವಿದ್ವತ್ ಪರಿಷತ್ತೊಂದನ್ನು ಕರೆದಿದ್ದರು. ಲಾಲಾಜಿ ಆ ಕಾಲಕ್ಕೆ ಸರಿಯಾಗಿ ಅಲ್ಲಿಗೆ ತಲುಪಿದ್ದರು. ' ಅಸ್ಪೃಶ್ಯತೆ' ಸಮಸ್ಯೆ ಬಗ್ಗೆ ಚರ್ಚಿಸಲು ಕಾಶಿ ಸೇರಿದಂತೆ ನಾನಾ ಕಡೆಗಳಿಂದ ಪಂಡಿತರು ಆ ವಿದ್ವತ್ ಸಭೆಗೆ ಆಗಮಿಸಿದ್ದರು. ಅವರೆಲ್ಲರೂ ಹಿಂದೂ ಧರ್ಮದ ಪ್ರತಿಪಾದಕರಂತಿದ್ದರು. ಲಿಖಿತ ಆಧಾರದ ಮೇಲೆ ಆ ವಿಷಯದಲ್ಲಿ ತೀರ್ಪು ಕೊಡುವವರು ಅವರಾಗಿದ್ದರು. ಅತ್ತ ಬ್ರಾಹ್ಮಣರು ಅಲ್ಲದ ಇತ್ತ ಸಂಸ್ಕೃತವೇತ್ತರೂ ಅಲ್ಲದ ಲಾಲಾಜಿ ಹುಟ್ಟಿನಿಂದಾಗಲಿ ಇಲ್ಲವೇ ಕಲಿಕೆಯಿಂದಾಗಲಿ ಯಾವುದೇ ಅಭಿಮತ ನೀಡಲು ಅವಕಾಶವಿಲ್ಲದವರಾಗಿ ಆ ಸಭೆಯಲ್ಲಿ ಮೂಕಪ್ರೇಕ್ಷರಲ್ಲಿ ಒಬ್ಬರಾದರು. ಅವರು ವಿದ್ವತ್ ಪರಿಷತ್ತಿನ ಕಲಾಪಗಳನ್ನು ವೀಕ್ಷಿಸಿದರು. ವಾದಗಳನ್ನು ಕೇಳಿದರು. ಸ್ಮೃತಿಯ ಬಗ್ಗೆ ಅವರಿಗೂ ಅಲ್ಪಸ್ವಲ್ಪ ಗೊತ್ತಿತ್ತು. ಅದನ್ನು ಅವರು ಇಂಗ್ಲಿಷ್‌ನಲ್ಲಿ ಭಾಷಾಂತರದ ಮೂಲಕ ಓದಿ ತಿಳಿದು ಕೊಂಡಿದ್ದರು. ಅಷ್ಟನ್ನೇ ಆಧಾರವಾಗಿಟ್ಟುಕೊಂಡು ಪಂಡಿತ ಮಹಾಶಯರೊಂದಿಗೆ ವಾದಕ್ಕಿಳಿದು ಸಮರ್ಥಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಸಂಸ್ಕೃತದಲ್ಲಿ ಅರ್ಧ ವಾಕ್ಯವನ್ನು ರಚಿಸುವ ಶಕ್ತಿಯೂ ಅವರಿಗೆ ಇರಲಿಲ್ಲ. ಆ ಪರಿಷತ್ತು ಬೇರೆ ಯಾವುದೇ ಭಾಷೆಯನ್ನು ಮಾನ್ಯ ಮಾಡುತ್ತಲೂ ಇರಲಿಲ್ಲ. ಕಲಾಪವನ್ನು ಗಮನವಿಟ್ಟು ಕೇಳುವುದು ಪ್ರಸಂಗಕ್ಕೆ ಅನುಗುಣವಾಗಿ ತಲೆಯಾಡಿಸುವುದಷ್ಟೇ ಲಾಲಾಜಿ ಅವರ ಪಾತ್ರವಾಯಿತು. ಆದರೆ ಸಾಮಾಜಿಕ ಪ್ರಶ್ನೆಗಳು ಬಂದಾಗ ಸಂಪ್ರದಾಯಗಳಲ್ಲಿ ಸಂಪ್ರದಾಯವಾದಿ ಎಂದು ಮಾಳವೀಯರನ್ನು ಅವರ ರಾಜಕೀಯ ನಿಕಟವರ್ತಿಗಳು ಕರೆಯುತ್ತಿದ್ದರಲ್ಲಿ ಅಕ್ಷರವೂ ಸತ್ಯ ಎಂಬ ಸಂಗತಿ ಮಾತ್ರ ಯಾವ ಸಂಸ್ಕೃತ ಪರಿಜ್ಞಾನವೂ ಇಲ್ಲದೆಯೇ ಕೇವಲ ಆ ಸಭೆಯ ಆಯೋಜನೆಯಿಂದಲೇ ತಿಳಿದುಕೊಳ್ಳಬಹುದಾಗಿತ್ತು! ಆಗಾಗ ಆ ವಿದ್ವತ್ ಸಭೆಯಲ್ಲಿ ಉದ್ರೇಕಕಾರಿ ಮಾತುಗಳಾಗುತ್ತಿದ್ದವು. ಆಟದ ಹುಚ್ಚು ಹಿಡಿದ ಆರು ಮಂದಿ ಬ್ಯಾಟ್ಮಿಂಟನ್ ರಾಕೆಟ್ ಹಿಡಿದು ಒಮ್ಮೆಗೆ ಬಾಲನ್ನು ಹಿಗ್ಗಾಮುಗ್ಗಾ ಬಾರಿಸುತ್ತಿರುವಂತೆ ಆ ವಿದ್ವತ್ ಸಭೆಯ ಕಲಾಪ ಕಂಡು ಬಂದಿತು. ಒಂದು ಹಂತದಲ್ಲಿ ಕಲಾಪ ಪರಾಕಾಷ್ಠೆ ಮುಟ್ಟಿದಾಗ ಒಂದು ಡಜನ್ ಅಥವಾ ಅದಕ್ಕೂ ಹೆಚ್ಚು ಪಂಡಿತರು ಕುಳಿತ ಸ್ಥಳದಿಂದಲೇ ಗಟ್ಟಿಯಾಗಿ 'ವಯ-ಮಸಿ ಪಂಡಿತಃ' (ನಾವು ಸಹ ಪಂಡಿತರೇ) ಎಂದು ಗಟ್ಟಿಯಾಗಿ ಕೂಗುತ್ತಿದ್ದದ್ದು ಕೇಳಿ ಬಂದಿತು.

ಪಂಡಿತರು ಸಭೆ ಸೇರಿ ಅಸ್ಪೃಶ್ಯತೆಯ ಬಗ್ಗೆ ಮಾತನಾಡಿದರು ಎಂಬ ವಿಷಯ ದೊಡ್ಡ ಸಂಗತಿಯಾಯಿತು. ಹಿಂದೂಗಳಿಗೆ ಅದು ನಂಬಲಾರದ ಸಂಗತಿ ಎನಿಸಿತು. ಕೇವಲ ಭಾಷಣ ನಡೆ ನುಡಿಗಳಿಂದಲೇ ಅಸ್ಪೃಶ್ಯರನ್ನು ಕ್ರೈಸ್ತ ಮತ್ತು ಮುಸ್ಲಿಂ ಮಿಷನರಿಗಳು ಶತಮಾನಗಳಷ್ಟು ಕಾಲ ಆಮಿಷ ಒಡ್ಡಿದರೂ ಮತಪರಿವರ್ತನೆಗೆ ಒಗ್ಗದಷ್ಟು ಜನ

ಹಿಂದೂಗಳಲ್ಲಿನ ಈ ವರ್ಗದ ನಡವಳಿಕೆಗೆ ರೋಸಿ ಹೋಗಿ ಮತಾಂತರಕ್ಕೆ ಸುಲಭವಾಗಿ ಒಳಗಾಗುತ್ತಿದ್ದ ಪ್ರಸಂಗಗಳೇ ಹೆಚ್ಚಾಗಿದ್ದ ಸಮಯ ಅದು. ಅಂಥ ಪಂಡಿತ ವರ್ಗವನ್ನು ಸುಧಾರಣೆಯ ಹಾದಿಗೆ ಕರೆ ತರುವ ನಿಟ್ಟಿನಲ್ಲಿ ಮಾಳವೀಯರು ವಹಿಸಿದ ಆಸ್ಥೆ, ತಳೆದ ಆಶಾಭಾವ ಮತ್ತು ಭರಿಸಿಕೊಂಡ ತಾಳ್ಮೆಗಳು ನಿಜಕ್ಕೂ ಪ್ರಶಂಸನೀಯ.

ಅದೇ ಸಮಯದಲ್ಲಿ ದೆಹಲಿಯಲ್ಲಿ ಸ್ವಾಮಿ ಶ್ರದ್ಧಾನಂದ ನೇತೃತ್ವದಲ್ಲಿ ಶುದ್ಧಿ ಸಭೆ ನಡೆದು ಅಲ್ಲಿನ ಪರಿಶುದ್ಧ ಕಾರ್ಯಗಳು ಏರ್ಪಟ್ಟಿದ್ದು ಆ ಸಭೆಯ ಫಲಿತಾಂಶಕ್ಕೆ ಹಿಡಿದ ಕನ್ನಡಿಯಾಯಿತು. ಲಾಲಾಜಿ ಅವೆಲ್ಲವನ್ನು ಖುದ್ದಾಗಿ ಕಂಡು ವಿಷಾದದ ನಗೆ ಚೆಲ್ಲಿದರು. ನೇರವಾಗಿ ಆ ಸಭೆಯಲ್ಲಿ ಪಾಲ್ಗೊಳ್ಳುವ ಆಸೆ ಅವರಿಗಿಲ್ಲವಾದರೂ ಅತಿರೇಕಗಳನ್ನು ಖುದ್ದಾಗಿ ನೋಡುವ ಅವಕಾಶ ತಾನೇ ತಾನಾಗಿ ಒದಗಿ ಬಂದಿತು.

ಆ ದಿನಗಳಲ್ಲಿ ದೆಹಲಿಯಲ್ಲಿ ಆಕರ್ಷಣೆಯೋ ಆಕರ್ಷಣೆ. ಗಾಂಧೀ ಟೋಪಿ ತೊಟ್ಟ ಹೊಸ ಶಾಸಕರು ಅದೇ ಮೊದಲ ಬಾರಿಗೆ ಶಾಸಕಾಂಗದ ಅಧಿವೇಶನದಲ್ಲಿ ಪಾಲ್ಗೊಳ್ಳಲು ಸಾಗುತ್ತಿದ್ದರು. ಆ ಹೊಸ ಜವಾಬ್ದಾರಿ ನಿರ್ವಹಿಸಲು ಅವರಲ್ಲಿದ್ದ ಉತ್ಸಾಹ ನೋಟಕ್ಕೊಂದು ಒಳ್ಳೆಯ ದೃಶ್ಯವಾಗಿ ಕಂಡು ಬರುತ್ತಿತ್ತು. ಲಾಲಾಜಿ ಅವರಿಗೆ ಕೆಲವು ನಾಯಕರನ್ನು ಭೇಟಿ ಮಾಡುವ ಅವಕಾಶವು ಪ್ರಾಪ್ತವಾಯಿತು. ಅದರಲ್ಲೂ ದಕ್ಷಿಣ ಭಾರತದ ಮುಖಂಡರ ಭೇಟಿ ಅವರ ಪಾಲಿಗೆ ಒದಗಿ ಬಂದಿತು. ಪಂಡಿತ್ ಮೋತಿಲಾಲ್ ನೆಹರು ಆಹ್ವಾನದ ಮೇರೆಗೆ ಸಮಾಜವಾದಿ ಪಕ್ಷದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡರು. ಆ ಸಭೆಯಲ್ಲಿ ಎನ್.ಸಿ. ಕೇಳ್ಕರ್, ವಿಠಲಭಾಯಿ ಪಟೇಲ್, ಎ. ರಂಗಸ್ವಾಮಿ ಅಯ್ಯಂಗಾರ್ ಪಾಲ್ಗೊಂಡಿದ್ದರು. ಸೈದ್ಧಾಂತಿಕವಾದ ಕೆಲವು ವಿಷಯಗಳನ್ನು ಸಭೆ ಚರ್ಚಿಸಿತು. ವಿಧಾನಸಭೆಯ ಸಭಾಂಗಣದಲ್ಲಿ ಖಾಕಿ ಉಡುಪು, ಗಾಂಧೀ ಟೋಪಿ ಧರಿಸಿದ ಪ್ರತಿನಿಧಿಗಳದೇ ಒಂದು ಆಕರ್ಷಣೆಯಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಸಭಾಂಗಣದ ತುಂಬಾ ಅವರೇ ಕಂಡು ಬರುತ್ತಿದ್ದರು.

ಅಂದಿನ ಅಧಿವೇಶನದಲ್ಲಿ ಪ್ರಮಾಣವಚನ ಸ್ವೀಕರಿಸಿ ಪೂರ್ವವಿಧಿಗಳನ್ನು ಮುಗಿಸಿದ ನಂತರ ಮಹಾತ್ಮ ಗಾಂಧೀಯವರ ಬಿಡುಗಡೆಗೆ ಒತ್ತಾಯಿಸುವುದು ಮೊದಲ ಕಾರ್ಯಕ್ರಮವಾಗಿತ್ತು. ''ಯರವಾಡ ಜೈಲಿನ ಬೀಗದ ಕೀಲಿಗೈ'' ಪಡೆದುಕೊಳ್ಳಲು ತಾವು ಬಯಸುತ್ತಿರುವುದಾಗಿ ಕಾಂಗ್ರೆಸ್ ಅಧ್ಯಕ್ಷ ಮಹಮದಲಿ ಘೋಷಿಸುತ್ತಿದ್ದರು. ಸ್ವರಾಜ್ಯ ಪಕ್ಷದ ಆಶಯ ಆ ಉದ್ದೇಶವನ್ನು ಈಡೇರಿಸಿಕೊಳ್ಳುವುದೇ ಆಗಿತ್ತು. ಆದರೆ ಅದು ಈಡೇರುವ ವಿಷಯದಲ್ಲಿ ಮೌಲನಾ ಅವರಿಗೆ ಆಶಾಭಾವನೆ ಇರಲಿಲ್ಲ. ಫೆಬ್ರವರಿ 5ರಂದು ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಗೊಳ್ಳುವುದಿತ್ತು. ಆ ಬೆಳಗ್ಗೆ ಲಾಲಾಜಿ ಪಂಡಿತ್ ಮೋತಿಲಾಲರ ವೆಸ್ಟರ್ನ್ ಕೋರ್ಟ್ ಕಾರ್ಯಾಲಯಕ್ಕೆ ತೆರಳಿದರು. ಅವರಿಗೆ ಸಂದರ್ಶಕರ ಪಾಸ್ ವ್ಯವಸ್ಥೆ ಮಾಡಲಾಯಿತು. ಸಭೆ ಆರಂಭವಾಗುತ್ತಿದ್ದಂತೆಯೇ ವಿಷಯದ ಪ್ರಸ್ತಾಪವಾಗಬೇಕು ಎನ್ನುವಷ್ಟರಲ್ಲಿ ಮಹಾತ್ಮ ಗಾಂಧೀಯವರನ್ನು ಬಿಡುಗಡೆ ಮಾಡಿದ ಸುದ್ದಿ ಬಂದಿತು. ಗಾಂಧೀಜಿಯವರ ಬಿಡುಗಡೆಗೆ ಆಗ್ರಹಿಸಿ ಕಿರು ಭಾಷಣಗಳನ್ನು ಮಾಡಬೇಕೆಂದು ಕೊಂಡವರಿಗೆ ಅವರ ಬಿಡುಗಡೆಯನ್ನು ಸ್ವಾಗತಿಸಿ ಮೆಚ್ಚುಗೆಯ

ಮಾತನಾಡುವ ಸಂದರ್ಭ ಏರ್ಪಟ್ಟಿತು. ತಮ್ಮ ಪಕ್ಷದ ವಿಜಯದ ಫಲವಾಗಿಯೇ ''ಯರವಾಡ ಜೈಲಿನ ಬೀಗದ ಕೀಲಿಕೈ'' ಪ್ರಾಪ್ತವಾಯಿತೆಂದು ಸ್ವರಾಜ್ಯ ಸ್ಥಾಪನೆಯ ನಿಟ್ಟಿನಲ್ಲಿ ಇದು ಮೊದಲ ವಿಜಯವೆಂದು ಸದನದಲ್ಲಿ ಸಾರಿದರು.

ದೆಹಲಿ ಬಿಡಾರದ ಅವಧಿಯಲ್ಲಿ ಲಾಲಾಜಿಯವರಿಗೆ ಹಕೀಂ ಅಜ್ಮಲ್ ಖಾನ್, ಡಾ. ಎನ್.ಎ. ಅನ್ಸಾರಿ ಅವರನ್ನು ಭೇಟಿ ಮಾಡಿ ಹಿಂದೂ ಮುಸ್ಲಿಂ ಭಾಂಧವ್ಯ ಸಮರಸಗಳ ಬಗ್ಗೆ ಚರ್ಚಿಸುವ ಅವಕಾಶವು ಪ್ರಾಪ್ತವಾಯಿತು.

ಸಮುದ್ರ ತೀರದ ವಿಶ್ರಾಂತಿ, ಆರೋಗ್ಯ ಸುಧಾರಣೆಗಳ ಜೊತೆಗೆ ಪುಣೆಯಿಂದ ದೆಹಲಿತನಕ ಕೈಗೊಂಡ ಅನೇಕ ಪ್ರಾಂತ್ಯಗಳ ಪ್ರವಾಸ ಮತ್ತು ಅಲ್ಲಿಂದ ಲಾಹೋರಿಗೆ ಮರಳಿದ್ದು ಲಾಲಾಜಿಯವರ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿಗಳ ಮೇಲೆ ಉಲ್ಲಾಸದ ಪ್ರಭಾವ ಉಂಟು ಮಾಡಿತು. ಅದರಿಂದ ದೇಶದ ''ಆಗಿನ ಪರಿಸ್ಥಿತಿ''ಯನ್ನು ಸಿಂಹಾವಲೋಕನ ಮಾಡುವ ಉತ್ತಮ ಅವಕಾಶ ಪ್ರಾಪ್ತವಾಯಿತು. ಅಸಹಕಾರ ಚಳವಳಿಯ ಘೋಷಣೆಯಿಂದ ಹಿಡಿದು ಕಾಕಿನಾಡ ಅಧಿವೇಶನದಲ್ಲಿ ಕಾಂಗ್ರೆಸ್ ಕೈಗೊಂಡ ನಿರ್ಧಾರದವರೆಗೆ ಆಗಿದ್ದ ಬೆಳವಣಿಗೆಗಳ ದರ್ಶನವಾಯಿತು. ಆಗ ಅವರು ಹೊಸದಾಗಿ ಸಂಯೋಜಿಸಿಕೊಂಡಿದ್ದ ಅಸ್ಪೃಶ್ಯತೆ ವಿರುದ್ಧದ ಹೋರಾಟಕ್ಕೆ ದಾರಿ ಸುಗಮ ಮಾಡಿಕೊಳ್ಳುವ ವೇದಿಕೆಯು ನಿರ್ಮಾಣವಾಯಿತು.

ಈ ಲೇಖಕರು ಲಾಹೋರಿನಿಂದ ಸಿಂಧ್ ಮತ್ತೆ ಅಲ್ಲಿಂದ ಲಾಹೋರ್, ಪುನಃ ಸಿಂಧ್ ಮತ್ತು ಅಲ್ಲಿಂದ ಮತ್ತೆ ಲಾಹೋರಿಗೆ ಮರಳುವವರೆಗಿನ ಅವಧಿಗುಂಟ ಲಾಲಾಜಿ ಅವರೊಂದಿಗಿದ್ದರು.

* * *

ಅಧ್ಯಾಯ-56

ಅಸ್ಪೃಶ್ಯತೆಯ ವಿರುದ್ಧ ಹೋರಾಟ

"ಅಸ್ಪೃಶ್ಯತೆಯ ವಿರುದ್ಧ ಹೋರಾಟ" 1923ರ ಅಂತ್ಯದಲ್ಲಿ ರೂಪುಗೊಂಡಿತು. ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣದ ಮೂಲಕ ಮಹಮದಲಿ ಮಾಡಿದ ಪ್ರಸ್ತಾಪ ತೀವ್ರ ಪ್ರತಿಭಟನೆಗೆ ಒಳಗಾಯಿತು. ಅಸ್ಪೃಶ್ಯತಾ ಸಮುದಾಯದವರು ಹಿಂದೂ ಮುಸ್ಲಿಂ ಮಿಷನರಿ ವ್ಯವಸ್ಥೆಗಳ ನಡುವೆ ಹಂಚಿಕೊಳ್ಳಬೇಕೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು. ಆ ಮಾತಿನ ಹಿಂದೆ ಒಂದು ತಂತ್ರವೇ ಇದ್ದಂತಿತ್ತು. ಮುಸ್ಲಿಮರ ಪರವಾಗಿ ಪರಿವರ್ತನೆಯ ಕಾರ್ಯಕ್ಕೆ ಶ್ರೀಮಂತ ಮುಸ್ಲಿಂ ವರ್ಗದಿಂದ ಭಾರೀ ಹಣ ಹರಿದುಬರುವ ಲಕ್ಷಣ ಅದರಲ್ಲಿತ್ತು. ಅದನ್ನು ಕಾಂಗ್ರೆಸ್ಸಿನ ವೇದಿಕೆಯ ಮೂಲಕ ಸಂಘರ್ಷವನ್ನು ತಪ್ಪಿಸುವ ರೂಪದಲ್ಲಿ ಬಳಸಿಕೊಳ್ಳುವ ಯತ್ನ ಮಾಡಿದಂತಿತ್ತು. ಅತಿ ಶೀಘ್ರದಲ್ಲೇ ಆ ಯತ್ನದ ಹಿಂದೆ ಅದೃಶ್ಯ ಶ್ರೀಮಂತ ಮುಸ್ಲಿಂ ದಾನಿಯೊಬ್ಬರಿರುವ ವಿಷಯವು ಬೆಳಕಿಗೆ ಬಂದಿತು. ಆ ಅದೃಶ್ಯ ವ್ಯಕ್ತಿ ಮಹಾರಾಜ್ ಆಗಾಖಾನ್ ಎಂಬ ಸಂಗತಿ ಬೆಳಕು ಕಂಡಾಗ ಪರಿಸ್ಥಿತಿ ಇನ್ನಷ್ಟು ನಾಜೂಕಾಯಿತು. ಆ ವೇಳೆಗಾಗಲೇ ಅವರು ಹಣ ಮತ್ತು ಮತಾಂತರದ ಹುಮ್ಮಸ್ಸಿನಲ್ಲಿ ಹಿಂದೂ ಧರ್ಮದೊಳಕ್ಕೆ ನಾನಾ ರೀತಿಯಲ್ಲಿ ಕೈಚಾಚಿದ್ದರು.

ತಾವು ಕೈಗೊಂಡ ಅಸ್ಪೃಶ್ಯತೆಯ ವಿರುದ್ಧದ ಹೋರಾಟಕ್ಕೆ ಅಗತ್ಯ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಲಾಲಾಜಿ ಶ್ರಮಿಸುತ್ತಿದ್ದಕ್ಕೆ ಪೂರಕವಾಗಿ ಜುಗಲ್ ಕಿಶೋರ್ ಬಿರ್ಲಾ ದೊಡ್ಡ ನೆರವಾಗಿ ಒದಗಿ ಬಂದರು. ಪ್ರತಿ ತಿಂಗಳು ಐದು ಸಾವಿರ ರೂಪಾಯಿ ಖರ್ಚು ಭರಿಸುವ ನೆರವು ಅವರಿಂದ ಒದಗಿತು. ಅದರಿಂದ ಲಾಲಾಜಿ ಅವರ ಶ್ರಮ ಸಾಕಷ್ಟು ಮಟ್ಟಿಗೆ ಸುಲಭವಾಯಿತು. ಕೂಡಲೇ ಅವರು ಅಚ್ಯುತರ ಉದ್ಧಾರ ಸಮಿತಿ ಸ್ಥಾಪಿಸಿದರು.

ಪಂಜಾಬಿನಲ್ಲಿ ಆರಂಭಗೊಂಡ ಆ ಸಮಿತಿಗೆ ಸನಾತನಿಗಳು, ಸಂಪ್ರದಾಯಸ್ಥರು ಬೆಂಬಲ ಕೊಡುವ ನಿರೀಕ್ಷೆ ಇತ್ತು. ಅಸ್ಪೃಶ್ಯರ ನಿವಾರಣಾ ಕಾರ್ಯ ಪಂಜಾಬಿಗಷ್ಟೇ ಸೀಮಿತವಾಗಲಿಲ್ಲ. ತಮ್ಮ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಸಮಿತಿಯೊಂದನ್ನು ರೂಪಿಸಿದರು. ದೆಹಲಿಯ ಸಬ್ಜಿ ಮಂಡಿಯಲ್ಲಿ ಕೇಂದ್ರ ಕಚೇರಿ ಸ್ಥಾಪಿಸಿದರು. ಸರ್ವೆಂಟ್ಸ್ ಆಫ್ ಪೀಪಲ್ಸ್ ಶಾಖೆಗಳ ಜೊತೆಗೆ ಈ ಹೊಸ ಕೈಂಕರ್ಯವೂ ಸೇರಿಕೊಂಡಿತು. ಅದರ ಒಂದು ಡಜನ್‌ನಷ್ಟು ಶಾಖೆಗಳು ಹೊಸ ಕೈಂಕರ್ಯವನ್ನು ಹುರುಪಿನಿಂದ ಕೈಗೊಂಡರು. ಪಂಜಾಬ್ ಮತ್ತು ಉತ್ತರ ಪ್ರದೇಶಗಳ ವಿವಿಧ ಜಿಲ್ಲೆಗಳಲ್ಲಿ ಅಚ್ಯುತ ಉದ್ಧಾರ ಕಾರ್ಯಗಳು ಆರಂಭಗೊಂಡವು. ಒಂದು ಹಂತದಲ್ಲಿ ಈ ಕಾರ್ಯದ ಪೂರ್ಣಾವಧಿ ಕಾರ್ಯಕರ್ತರ

ಸಂಖ್ಯೆ 100ರ ಗಡಿ ದಾಟಿತು. ಅಚ್ಯುತ್ ಉದ್ಧಾರದ ಕೆಲಸ ಪಂಜಾಬ್, ದೆಹಲಿ ಮತ್ತು ಉತ್ತರಪ್ರದೇಶಗಳಲ್ಲಿ ವ್ಯಾಪಕವಾಯಿತು. ಈ ಪ್ರದೇಶಗಳ ಹೊರಗೂ ಸಹ ಸರ್ವೆಂಟ್ಸ್ ಆಫ್ ಪೀಪಲ್ಸ್ ಸೊಸೈಟಿಯು ತನ್ನ ಅನೇಕ ಕೇಂದ್ರಗಳನ್ನು ಆರಂಭಿಸಿತು. ಈ ಮೊದಲೇ ಲಾಲಾಜಿ ರಾವಿ ನದಿಯ ಬಳಿ ಷಹರಾರ್ ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿ ಒಂದಷ್ಟು ಭೂಮಿಯನ್ನು ಖರೀದಿಸಿದ್ದರು. ಹೆಚ್ಚು ಕಡಿಮೆ ಬರದಾರಿ ಸಮೀಪದಲ್ಲಿ ಆ ಭೂಮಿ ಇತ್ತು. ಶೋಷಿತ ವರ್ಗಗಳ ಕೆಲವು ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಭೂಮಿಯನ್ನು ಅವರು ಖರೀದಿಸಿದ್ದರು. ಅಲ್ಲಿ ಕೇಂದ್ರವೊಂದನ್ನು ಸ್ಥಾಪಿಸಿ ಅದರ ಮೂಲಕ ಶೋಷಿತ ಕುಟುಂಬಗಳಿಗೆ ಸಣ್ಣ ಕೈಗಾರಿಕ ತರಬೇತಿ ಒದಗಿಸಿ ಶಿಕ್ಷಣ ಮತ್ತು ಜೀವನೋಪಾಯಗಳನ್ನು ರೂಪಿಸಿಕೊಳ್ಳಲು ನೆರವಾಗುವುದು ಅವರ ಆಶಯವಾಗಿತ್ತು.

ಈ ಮಧ್ಯೆ ಇತರ ಬೆಳವಣಿಗೆಗಳು ತಲೆದೋರಿದದವು. ದೀರ್ಘಕಾಲ ದೇಶದಿಂದ ಹೊರಗುಳಿಯ ಬೇಕಾದ ಪರಿಸ್ಥಿತಿಯೂ ಅದರಲ್ಲಿ ಒಂದು. ಈಗ ಲಾಲಾಜಿಗೆ ಅಂದಿನ ಆ ಆಶಯವನ್ನು ಕೃತಿರೂಪಕ್ಕೆ ಇಳಿಸುವ ತವಕ ಹೆಚ್ಚಾಗಿತ್ತು. ತಾವು ಬಯಸಿದ ಉದ್ದೇಶಕ್ಕೆ ಅನುಗುಣವಾಗಿ ಆ ಭೂಮಿಯನ್ನು ಬಳಸಿಕೊಳ್ಳಲು ಯೋಜಿಸಿದರು. ಅದರಲ್ಲಿ ಅಸ್ಪೃಶ್ಯರ ಕಾಲೋನಿ ಒಂದು ಹಂತವಾಯಿತು. ಸಾರ್ವಜನಿಕ ಸಭೆಗಳು, ರಾತ್ರಿ ಭಾಷಣಗಳು ಸಮ್ಮೇಳನಗಳು ಮುಂತಾದ ಸಾಮೂಹಿಕ ಕಾರ್ಯಕ್ರಮಗಳ ಮೂಲಕ ಅಸ್ಪೃಶ್ಯತೆ ವಿರುದ್ಧದ ಚಳವಳಿಯನ್ನು ಅವರು ಸಂಘಟಿಸಿದರು. ಸ್ವಜಾತಿಯ ಹಿಂದೂಗಳ ನಡುವೆ ಪ್ರಗತಿಪರ ವಿಚಾರಧಾರೆ ಹರಿಸಿ ಅಸ್ಪೃಶ್ಯತಾ ನಡವಳಿಕೆಯನ್ನು ಕೈಬಿಡುವಂತೆ ಮನ ಒಲಿಸುವ ಕಾರ್ಯಕ್ರಮ ಅದಾಯಿತು. ಲಾಲಾಜಿ ನಿಧನಾನಂತರ ಬರಡಾದ ಭೂಮಿಯನ್ನು ಸರ್ವೇಂಟ್ಸ್ ಆಫ್ ಪೀಪಲ್ಸ್ ಸೊಸೈಟಿಯು ಮಾರಿತು. ಅದರಿಂದ ಬಂದ ಹಣವನ್ನು ಸೊಸೈಟಿಯ ಅಚ್ಯುತ್ ಉದ್ಧಾರ ನಿಧಿಗೆ ಜಮಾ ಮಾಡಲಾಯಿತು. ಆ ಭೂಮಿಯಲ್ಲಿ ಒಂದು ಭಾಗವನ್ನು ಸೊಸೈಟಿ ಉಳಿಸಿಕೊಂಡಿತ್ತು. ಅಲ್ಲಿ ಆದರ್ಶ ಆಶ್ರಮವೊಂದನ್ನು ಸ್ಥಾಪಸಿಲಾಯಿತು. ಆ ಆಶ್ರಮದ ಉಸ್ತುವಾರಿ ಗ್ರಾಮ ಕೈಗಾರಿಕಾ ಸಂಘಕ್ಕೆ ವಹಿಸಲ್ಪಟ್ಟಿತು.

ಮಹಾತ್ಮಗಾಂಧೀಯವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಸಂಘಟನೆ ಅಸ್ಪೃಶ್ಯತೆ ನಿವಾರಣೆಯನ್ನು ತನ್ನ ಸೃಜನಾತ್ಮಕ ಕಾರ್ಯಗಳಲ್ಲಿ ಆವರಿಸಿಕೊಂಡಿತ್ತು. ಲಾಲಾಜಿ ಈ ಕಾರ್ಯಕ್ರಮಕ್ಕಾಗಿ ಮತ್ತು ಅದರ ಯಶಸ್ಸಿಗಾಗಿ ಆ ದಿನಗಳಲ್ಲಿ ಶ್ರಮ ಮತ್ತು ಸಮಯವನ್ನು ಗರಿಷ್ಠ ಪ್ರಮಾಣದಲ್ಲಿ ವಿನಿಯೋಗ ಮಾಡಿಕೊಂಡಿದ್ದರು. ಅದುವರೆಗೆ ಅವರು ಕೈಗೊಂಡ ಕಾರ್ಯಕ್ರಮಗಳಲ್ಲಿ ಅದು ತುಂಬಾ ಮನಮೆಚ್ಚಿದ ಕಾರ್ಯವೆನಿಸಿತು. ಅಸ್ಪೃಶ್ಯತೆ ನಿವಾರಣೆಯನ್ನು ಸೈದ್ಧಾಂತಿಕ ಚಟುವಟಿಕೆಯಾಗಿ ಆಗಲಿ ಅಥವಾ ಮತ ಪರಿವರ್ತನೆಯನ್ನು ತಡೆಗಟ್ಟುವ ಕ್ರಮವಾಗಿಯಾಗಲಿ ಪರಿಗಣಿಸಲಿಲ್ಲ. ಮಾನವತೆಯನ್ನು ಮೆರೆಸುವ ಜೊತೆಗೆ ಸೃಜನಾತ್ಮಕ ಕಾರ್ಯಕ್ರಮವಾಗಿ ಅವರು ಅದನ್ನು ಅಪ್ಪಿಕೊಂಡಿದ್ದರು.

ಮುಂದೆ ಮಹಾತ್ಮಗಾಂಧೀ ಅದನ್ನು ಅಳವಡಿಸಿಕೊಂಡು ಅನುಷ್ಠಾನಕ್ಕೆ ತರಲು ಹೊರಟಿದ್ದಕ್ಕಿಂತ ತೀರಾ ಭಿನ್ನವಾದ ಕ್ರಮ ಲಾಲಾಜಿಯವರದಾಗಿತ್ತು. ಆದರೂ ಲಾಲಾಜಿಯವರ ಆ ಕಾರ್ಯಕ್ರಮವನ್ನು ನಿರ್ಮಾಣಕಾರಿ ಎಂಬ ವಿಷಯದಲ್ಲಿ ಯಾವುದೇ

ಅನುಮಾನ ವ್ಯಕ್ತಪಡಿಸದಿದ್ದರೂ ಸಹ ಅದೊಂದು ಕೋಮು ಕಾರ್ಯಕ್ರಮವೆಂದು ಲಾಲಾಜಿಯವರ ಟೀಕಾಕಾರರು ಕರೆದ ಪ್ರಸಂಗಗಳು ಇಲ್ಲದಿಲ್ಲ. ಅದಕ್ಕೆ ಕಾರಣ ಅಂಥ ಟೀಕಾಕಾರರರು ಕಾಂಗ್ರೆಸ್ಸಿನ ಮನಸ್ಸಿಗರೇ ಆಗಿದ್ದರು. ತಮ್ಮ ಸಂಘಟನೆಯಲ್ಲಿ ಆ ಕಾರ್ಯಕ್ರಮ ಕೈಗೊಡಲಿಲ್ಲವೆಂಬ ಬೇಗುದಿ ಹಿನ್ನಲೆಯನ್ನು ಅವರು ಆ ರೀತಿ ವ್ಯಕ್ತಪಡಿಸುತ್ತಿದ್ದರು. ಅಷ್ಟಾಗಿ ಪ್ರಚಾರ ಪಡೆಯದ ಬೆಳವಣಿಗೆಯೊಂದು ಇಲ್ಲಿದೆ. ತಮ್ಮ ಆ ಕಾರ್ಯಕ್ರಮವನ್ನು ಸೃಜನಾತ್ಮಕ ಕಾರ್ಯಕ್ರಮವಾಗಿ ಅಳವಡಿಸಿಕೊಳ್ಳುವಂತೆ ಲಾಲಾಜಿ ಕಾಂಗ್ರೆಸ್ ಕಾರ್ಯಕಾರಿಣಿಗೆ ಸಲಹೆ ಮಾಡಿದ್ದ ಸಂಗತಿ ಅದು. ಕಾರ್ಯಕ್ರಮ ತೀರಾ ವಿಸ್ತುತವು, ಖರ್ಚಿನದು ಆಗಿದ್ದರಿಂದ ಅಷ್ಟೊಂದು ಬೃಹತ್ ಮೊತ್ತವನ್ನು ಸಂಘಟನೆ ಸುಲಭದಲ್ಲಿ ಭರಿಸಬಹುದೆಂಬುದು ಲಾಲಾಜಿಯವರ ಆಶಯವಾಗಿತ್ತು.

ಆದರೆ ಕಾರ್ಯಕಾರಿಣಿ ಲಾಲಾಜಿಯವರ ಸಲಹೆಯನ್ನು ಸ್ವೀಕರಿಸಲೇ ಇಲ್ಲ. ಆದರೂ, ಕೆಲವು ಸಮಯದ ನಂತರ ದೇಶಬಂಧು ದಾಸ್ ಲಾಲಾಜಿಯವರೊಂದಿಗೆ ಪ್ರಸ್ತಾಪ ಮಾಡಿದರು. ಸಮಿತಿಯು ಆ ಸಲಹೆಯನ್ನು ಪರಿಗಣಿಸಲು ಮನಸ್ಸಾಗಿದೆಯಾದರೂ ಅಧ್ಯಕ್ಷರು (ಮಹಮದ್ ಅಲಿ) ಸಮ್ಮತಿಸುತ್ತಿಲ್ಲ ಎಂದು ತಿಳಿಸಿದರು. ಆ ಕಾರ್ಯಕ್ರಮವನ್ನು ಕೈಗೊಳ್ಳುವ ಸಲುವಾಗಿ ಲಾಲಾಜಿ ಸಲಹೆ ಮಾಡಿದ್ದ ಮಂಡಳಿಗೆ ಸೂಚಿಸಿದ್ದ ಕೆಲವರ ಹೆಸರುಗಳ ಬಗ್ಗೆ ಅಧ್ಯಕ್ಷರು ಆಕ್ಷೇಪ ಹೊಂದಿದ್ದಾರೆಂದು ಹೇಳಿದರು. ಆ ಪೈಕಿ ಮಾಳವೀಯ ಹೆಸರನ್ನು ಸೂಕ್ಷ್ಮವಾಗಿ ತಿಳಿಸಿದರು. ಆ ನಿಟ್ಟಿನಲ್ಲಿ ತಾವು ಮೌಲಾನ ಜೊತೆ ಪುನಃ ಮಾತುಕತೆ ನಡೆಸುವುದಾಗಿ ದೇಶಬಂಧು ಹೇಳಿದರು. ಆದರೆ ಕಾರ್ಯಕಾರಿಣಿಯಿಂದಾಗಲಿ, ಅಧ್ಯಕ್ಷರಿಂದಾಗಲಿ ಅಥವಾ ಸ್ವತಃ ದೇಶಬಂಧುವಿನಿಂದಾಗಲಿ ಆ ಬಗ್ಗೆ ಮುಂದೆ ಲಾಲಾಜಿಯವರಿಗೆ ಯಾವ ಸಂಗತಿಯು ತಿಳಿದು ಬರಲಿಲ್ಲ. ಈ ಮಧ್ಯೆ ಬಲ್ಲ ವಲಯಗಳಿಂದ ಖಾತ್ರಿಯಾಗುವಂಥ ಸಂಗತಿ ಲಾಲಾಜಿಯವರಿಗೆ ಮುಟ್ಟಿತ್ತು. ತನ್ನ ಕಾರ್ಯಕ್ರಮದಡಿಯಲ್ಲಿ 'ಇನ್ನೊಬ್ಬ ಶ್ರದ್ಧಾನಂದ' ಕಾರ್ಯ ನಿರ್ವಹಿಸಲು ಕಾಂಗ್ರೆಸ ಅನುಮತಿ ಕೊಡುವುದಿಲ್ಲವೆಂದು ಮೌಲಾನಾ ನೀಡಿದ ಪ್ರತಿಕ್ರಿಯೆ ಆ ಸಂಗತಿಯಲ್ಲಿತ್ತು.

ಅದೇನೇ ಇರಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕೆ ಬೆಂಬಲವಾಗುವ ರೀತಿಯಲ್ಲಿ ಕಾಂಗ್ರೆಸ್‌ಗೆ ಒತ್ತಾಸೆ ಒದಗಲು ಮೌಲಾನಾ ಲಾಲಾಜಗೆ ಅವಕಾಶ ಕೊಡಲಿಲ್ಲ ಎಂಬುದಂತೂ ನಿಜ. ಅದರಲ್ಲಿ ಆಶ್ಚರ್ಯದ ಮಾತು ಇರಲಿಲ್ಲ. ಮಹಮದ್ ಅಲಿ ಅವರನ್ನು ಅವರ ಅಧ್ಯಕ್ಷೀಯ ವಿಚಿತ್ರ ನಡವಳಿಕೆಗಾಗಿ ಖಂಡಿಸಬೇಕೆಂದು ಆಗಾಖಾನ್ ನೀಡಿದ್ದ ಹೇಳಿಕೆಗೆ ಲಾಲಾಜಿ ಪ್ರತಿ ಹೇಳಿಕೆ ನೀಡಲಿಲ್ಲವೆಂಬ ಅತೃಪ್ತಿ ಅವರಲ್ಲಿ ಇದ್ದಿರಬಹುದೇ? ಆ ಬೆಳವಣಿಗೆಗಳೆಲ್ಲಾ ಹೇಗಾದರೂ ಇರಲಿ, ಕೊನೆಗೆ ಸ್ವತಃ ಮಹಾತ್ಮ ಗಾಂಧೀಯೇ ಹರಿಜನ ಸಂಘ ಸ್ಥಾಪಿಸಿದ್ದು ಲಾಲಾಜಿ ಕೈಗೊಂಡ ನಿರ್ಮಾಣಕಾರಿ ಕಾರ್ಯಕ್ಕೆ ಹಿಡಿದ ಕನ್ನಡಿಯಾಗಿತ್ತು. ಆ ವೇಳೆಗೆ ಸ್ವತಃ ಗಾಂಧೀಜಿ ಅಲಿ ಸಹೋದರರ ಪ್ರಭಾವದಿಂದ ಸಂಪೂರ್ಣವಾಗಿ ಹೊರಬಂದಿದ್ದು ಇಲ್ಲಿ ವಿಶ್ಲೇಷಿಸಬೇಕಾದ ಅಂಶ.

ಲಾಲಾಜಿಯವರ ಅಚ್ಯುತ ಕಾರ್ಯಕ್ರಮಗಳಿಗೆ ಒಂದು ವರ್ಷದವರೆಗಷ್ಟೇ ನೆರವು ಕೊಡುವುದಾಗಿ ಆರಂಭದಲ್ಲಿ ಬಿರ್ಲಾಗಳು ಭರವಸೆ ನೀಡಿದ್ದರು. ಆದರೆ ಅವರು ತಮ್ಮ

ನೆರವನ್ನು ಲಾಲಾಜಿಯವರು ಬದುಕಿರುವ ತನಕ ಮುಂದುವರೆಸಿದರು. ನಂತರವೂ ಸಹ ಮೊತ್ತದ ಪ್ರಮಾಣವನ್ನು ಇಳಿಸಿದರೂ ನೆರವು ನಿಲ್ಲಿಸಲಿಲ್ಲ. ಹರಿಜನ ಸಂಘ ಆರಂಭಗೊಂಡಿದ್ದರಿಂದ ತಮ್ಮ ನೆರವನ್ನು ಅತ್ತ ಕಡೆಗೆ ತಿರುಗಿಸಿ ಆ ಮೊತ್ತವನ್ನು ಹೆಚ್ಚಿಸಿದರು. ಹರಿಜನ ಸಂಘದ ಪಂಜಾಬ್ ಕಾರ್ಯಕ್ರಮಗಳು ಲಾಲಾಜಿ ಕೈಗೊಂಡಿದ್ದ ಕಾರ್ಯಕ್ರಮದ ಮುಂದುವರೆದ ಭಾಗವಾಯಿತು. ಲಾಲಾಜಿ ಹಂತ ಹಂತವಾಗಿ ಆ ಕಾರ್ಯಕ್ರಮಕ್ಕೆ ತೊಡಗಿಸಿದ್ದ ತಮ್ಮ ಅಜೀವ ಸದಸ್ಯ ನೀತಿಯನ್ನು ಬೇರೆ ಕಾರ್ಯಗಳಿಗೆ ವಿನಿಯೋಗಿಸಿಕೊಂಡರು.

* * *

ಅಧ್ಯಾಯ -57

ಪುನಃ ಯುರೋಪಿಗೆ

ಅಸ್ಪೃಶ್ಯರ ಉದ್ಧಾರ ಆಂದೋಲನವನ್ನು ಲಾಲಾಜಿ ವ್ಯವಸ್ಥಿತವಾಗಿ ಆರಂಭಿಸಿ ಆ ಸೇವೆ ನಿರ್ದಿಷ್ಟವಾಗಿ ನಡೆದುಕೊಂಡು ಹೋಗಲು ತರುಣ ಕಾರ್ಯಕರ್ತರನ್ನು ಅಜೀವ ಸದಸ್ಯರನ್ನಾಗಿ ನೇಮಿಸಿದರು. ಈ ಮೂಲಕ ಅಸ್ಪೃಶ್ಯತೆ ನಿವಾರಣೆಗೆ ಹೋರಾಟವನ್ನು ವ್ಯವಸ್ಥಿತಗೊಳಿಸಿದರು. ಅದರ ಉಸ್ತುವಾರಿಗೆ ಮತ್ತು ನಿರ್ವಹಣೆಗೆ ನಿಷ್ಠರಾದ ಸಹಾಯಕರನ್ನು ನಿಯೋಜಿಸಿದರು. ಅದರ ಫಲವಾಗಿ ಲಾಲಾಜಿಯವರಿಗೆ ಹೆಚ್ಚಿನ ಪರಿಶ್ರಮವಾಗಲಿಲ್ಲ. ಸಾಕಷ್ಟು ಬಿಡುವು ಸಿಗತೊಡಗಿತು. ಸೋಲಾನ್ ಗಿರಿಧಾಮದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಏರ್ಪಟ್ಟ ಪಂಜಾಬ್ ಚುನಾವಣೆಗಳನ್ನು ಅಲ್ಲಿದ್ದುಕೊಂಡೇ ಅಭ್ಯರ್ಥಿಗಳನ್ನೇ ಆರಿಸಿದ್ದರು. ಅವರ ಸ್ವರಾಜ್ಯ ಪಕ್ಷದ ತಂಡ ಪಂಜಾಬ್ ವಿಧಾನಪರಿಷತ್ತಿನಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿತ್ತು. ತಾವು ಕೈಗೊಂಡ ಪರ್ಯಟನೆಗಳೆಲ್ಲಾ ಸರ್ವೆಂಟ್ಸ್ ಆಫ್ ಪೀಪಲ್ಸ್ ಸೊಸೈಟಿಯ ನಿಧಿಗೆ ಹಣ ಕ್ರೋಢಿಕರಿಸಿ ಆ ವ್ಯವಸ್ಥೆಯನ್ನು ಸುಭದ್ರಗೊಳಿಸಿದ್ದರು. ಲಾಹೋರಿಗೆ ಮರಳಿದ ನಂತರ ವಂದೇಮಾತರಂ ಪತ್ರಿಕೆಯ ಚಟುವಟಿಕೆಗೆ ಸಾಕಷ್ಟು ಸಮಯ ವಿನಿಯೋಗಿಸಿದರು. ಒಟ್ಟಿನಲ್ಲಿ ತಮ್ಮ ಆರೋಗ್ಯ ಸುಧಾರಣೆಗಾಗಿ ವಿಶ್ರಾಂತಿ ಆರಂಭಿಸಿದ್ದಾಗಿನಿಂದ ಆತನಕ ನಡೆದಿದ್ದ ಎಲ್ಲಾ ಕಾರ್ಯಗಳು ತೃಪ್ತಿಕರವಾಗಿದೆ ಎಂಬುದು ಅವರಿಗೆ ನೆಮ್ಮದಿ ತಂದಿತು.

ಆದರೂ, ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಲಾಲಾಜಿಯವರಿಗೆ ಇನ್ನೂ ಹೆಚ್ಚಿನ ವಿಶ್ರಾಂತಿ ಹಾಗೂ ಬದಲಾದ ವಾತಾವರಣ ಅಗತ್ಯವೆಂದು ಸಲಹೆಗಳು ಬಂದವು. ಅತ್ತ ಇಂಗ್ಲೆಂಡ್‌ನಲ್ಲಿ ಲೇಬರ್ ಪಕ್ಷ ಆಡಳಿತ ಸ್ಥಾನಕ್ಕೆ ಬಂದಿದ್ದರಿಂದ ಹೆಚ್ಚು ಅನುಭವ ಹೊಂದಿರುವ ಕಾಂಗ್ರೆಸ್ ನಾಯಕರೊಬ್ಬರು ವಿದೇಶಕ್ಕೆ ತೆರಳಿ ಭಾರತದ ಹಿತಕ್ಕೆ ಅನುಗುಣವಾಗಿ ಕೆಲಸ ಮಾಡಬೇಕೆಂಬ ಸಲಹೆಯೂ ಕ್ರೋಢಿಕೃತವಾಯಿತು. ಅಂಥ ವ್ಯಕ್ತಿ ಇಂಗ್ಲೆಂಡ್‌ನಲ್ಲಿ ಹೆಚ್ಚು ಜನಪ್ರಿಯತೆ ಹಾಗೂ ಸಂಪರ್ಕ (ಅದರಲ್ಲೂ ರ್‍ಯಾಡಿಕಲ್ಸ್ ಮತ್ತು ಲೇಬರ್ ಪಕ್ಷದವರೊಂದಿಗೆ) ಹೊಂದಿದವರಾಗಿದ್ದಾರೆ. ಕೆಲಸ ಸುಲಭವಾಗುತ್ತದೆ ಎಂದು ತರ್ಕಿಸಲಾಯಿತು. ಲಾಲಾಜಿ ಅವರನ್ನು ಕಳುಹಿಸಿದರೆ ಆ ಕೆಲಸ ಸಮಂಜಸವಾಗುತ್ತದೆ ಎಂದು ಭಾವಿಸಲಾಯಿತು. ಅನೌಪಚಾರಿಕ ಪ್ರತಿನಿಧಿಯ ರೂಪದಲ್ಲಿ ಅಲ್ಪಕಾಲದ ಅವಧಿಗೆ ಲಾಲಾಜಿ ವಿದೇಶಕ್ಕೆ ಭೇಟಿ ಕೊಡುವುದರಿಂದ ಅವರ ಆರೋಗ್ಯವು ಉತ್ತಮಗೊಳ್ಳುತ್ತದೆ. ಭಾರತದ ಪರವಾಗಿ ರಾಜಕೀಯ ಕಾರ್ಯಗಳನ್ನು ಕೈಗೊಂಡಂತಾಗುತ್ತದೆ ಎಂಬ ಅನಿಸಿಕೆಗಳಿಗೆ ಹೆಚ್ಚು ಒತ್ತು ಮೂಡಿತು. ಅದೇ ಸಮಯದಲ್ಲಿ ಇಂಗ್ಲೆಂಡಿನಿಂದಲೂ ಅಂಥ ಸಲಹೆಗಳು ಕೇಳಿ ಬಂದವು. ಬ್ರಿಟಿಷ್ ವೆಬ್ ಅವರಿಂದ ಪತ್ರವು ಬಂದು ಅದೇ ನಿಲುವನ್ನು ಸ್ಥಿರೀಕರಿಸಿತು. (ಸಿಡ್ನಿ ವೆಬ್, ತಮ್ಮ ಹೆಸರನ್ನು

ಲಾರ್ಡ್ ಪಾಸ್ಫೀಲ್ಡ್ ಎಂದು ಮಾರ್ಪಡಿಸಿಕೊಂಡು, ಸಚಿವ ಸಂಪುಟ ಸೇರಿದ್ದರು. ಆದರೆ ಅವರ ಪತ್ನಿ ತಮ್ಮ ಹೆಸರನ್ನು ಲೇಡಿ ಪಾಸ್ಫೀಲ್ಡ್ ಎಂದು ಪರಿವರ್ತಿಸಿಕೊಳ್ಳಲು ಇಷ್ಟಪಟ್ಟಿರಲಿಲ್ಲ) ಸಂಪುಟದಲ್ಲಿರುವ ಕೆಲವರಿಗೆ ಭಾರತದ ಒಳಿತಿಗೆ ಏನು ಮಾಡಬೇಕೆಂಬ ವಿಷಯದಲ್ಲಿ ಸಲಹೆ ನೀಡಬೇಕಾದ ಅಗತ್ಯವಿದೆ ಎಂದೂ ಆಕೆ ತಮ್ಮ ಪತ್ರದಲ್ಲಿ ತಿಳಿಸಿದ್ದರು. ಲಾಲಾಜಿಯವರೇ ಆ ಕಾರ್ಯಕ್ಕೆ ಸಂಯೋಜಿತರಾದರೆ ಒಳ್ಳೆಯದೆಂದು ಕೆಲವು ದಿನಗಳ ಮಟ್ಟಿಗೆ ಅವರು ತಮ್ಮೊಂದಿಗೆ ಇರಬೇಕೆಂದು ಬ್ರಿಟಿಷ್ ವೆಬ್ ಬರೆದಿದ್ದರು. ಹಾಗೆಂದ ಮಾತ್ರಕ್ಕೆ ಅಸಾಧ್ಯವಾದದ್ದೇನೂ ಸಾಧ್ಯವಾಗುತ್ತದೆ ಎಂಬ ನಿರೀಕ್ಷೆಯು ಬೇಡವೆಂದು ಅವರು ಎಚ್ಚರಿಸಿದರು. ''ಲೇಬರ್ ಪಕ್ಷ ಸ್ಥಾನಮಾನ ಗಳಿಸಿಕೊಂಡಿದೆ. ಆದರೆ ಅಧಿಕಾರವನ್ನಲ್ಲ'' ಎಂದೂ ಆ ಲೇಡಿ ವಾಸ್ತವಿಕ ಅಂಶವನ್ನು ಸೂಚ್ಯವಾಗಿ ತಿಳಿಸಿದ್ದರು.

ಸೋಲಾನ್ ಗಿರಿಧಾಮ ಮತ್ತು ಕರಾಚಿ ಕಡಲ ತಡಿಯ ವಿಶ್ರಾಂತಿ ಲಾಲಾಜಿಯವರಲ್ಲಿ ಭಾಗಶಃ ಲವಲವಿಕೆ ತಂದಿದ್ದವು. ಚೇತರಿಕೆ ಉಂಟು ಮಾಡಿದ್ದವು. ಯುರೋಪ್ ಸಂಕ್ಷಿಪ್ತ ಭೇಟಿ ಕೈಗೊಂಡಿದ್ದರೆ ತನ್ಮೂಲಕ ಇನ್ನಷ್ಟು ಜವಾಬ್ದಾರಿಗಳನ್ನು ನಿರ್ವಹಿಸಲು ಅನುವಾಗುವಂತೆ ಅವರಲ್ಲಿ ಕಸುವು ಶಕ್ತಿ ಇಮ್ಮಡಿಸುತ್ತದೆ ಎಂದು ವಿಶ್ವಾಸ ಹುಟ್ಟಿತು. ನಿಜವಾಗಿ ಹೇಳುವುದಾದರೆ ಸೋಲಾನ್ ಗಿರಿಧಾಮದಲ್ಲಾಗಲಿ ಅಥವಾ ಬೇರಾವುದೇ ಕಡೆಯಲ್ಲಾಗಲಿ ಅವರ ದೇಹಸ್ಥಿತಿಗೆ ಆಗ ಅಗತ್ಯವಾಗಿದ್ದಷ್ಟು ಸಮಗ್ರ ವಿಶ್ರಾಂತಿ ಪ್ರಾಪ್ತವಾಗಿರಲಿಲ್ಲ. ಐರೋಪ್ಯ ಆರೋಗ್ಯ ತಜ್ಞರ ಸಲಹೆ ಪಡೆಯುವುದು ಸಹ ಸಮಯೋಚಿತವೆಂದು ಅನ್ನಿಸಿತು. ಲೇಬರ್ ಸರ್ಕಾರದಿಂದ ಹೆಚ್ಚಿನದೇನನ್ನೂ ನಿರೀಕ್ಷಿಸುವಂತಿರಲಿಲ್ಲ. ಆದರೂ ಪರಿಸ್ಥಿತಿಯ ಅನುಕೂಲಕ್ಕೆ ಅದೊಂದು ಸಮಂಜಸ ಅವಕಾಶವೆಂದು ಕಂಡು ಬಂದಿತು. 1924ರಲ್ಲಿ ಮತ್ತೆ ಯುರೋಪಿಗೆ ಹೋಗಿ ಬರಲು ಲಾಲಾಜಿ ನಿರ್ಧರಿಸಿದರು. ಏಪ್ರಿಲ್ 9ರಂದು ಅವರು ಮುಂಬೈಯಿಂದ ಲಾಯ್ಡ್ ಟ್ರಿಸ್ಟಿನೊ ಹಡಗಿನಲ್ಲಿ ಪ್ರಯಾಣ ಕೈಗೊಂಡರು. (ಮೇಲ್ನೋಟದಲ್ಲಿ ತಮ್ಮ ಆರೋಗ್ಯವನ್ನೇ ಪ್ರಾಥಮಿಕ ಆದ್ಯತೆಯಾಗಿಟ್ಟುಕೊಂಡು ಲಾಲಾಜಿ ಕೈಗೊಂಡ ಐರೋಪ್ಯ ಪ್ರವಾಸ ಅದಾಯಿತು. ಸಮುದ್ರಯಾನ ತುಂಬಾ ಅಹ್ಲಾದಕರವಾಗಿತ್ತು. ಆ ಯಾನದ ಅವಧಿಯಲ್ಲಿ ಸಿಕ್ಕಿದ ವಿಶ್ರಾಂತಿ ಅವರ ಲವಲವಿಕೆ ಹೆಚ್ಚಿಸಿತು. ಯುರೋಪ್ ತಲುಪಿದ ಮೇಲೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ವಿಶೇಷವಾಗಿ ನರ್ಸಿಂಗ್ ಹೋಂಗಳಲ್ಲಿ ತಜ್ಞ ವೈದ್ಯರ ಸಲಹೆ ಪಡೆದುಕೊಂಡರು. ತಮ್ಮ ಹಳೆಯ ಮಿತ್ರರನ್ನು ಭೇಟಿ ಮಾಡುವುದು ಅವರಿಗೆ ತುಂಬಾ ಹರ್ಷಕರವಾಯಿತು. ಆ ಪೈಕಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಶಾಂಜಿ ಕೃಷ್ಣ ವರ್ಮ, ಪ್ಯಾರಿಸ್‌ನಲ್ಲಿ ರಾಣಾಗಳು ಹಾಗೂ ಮೇಡಂ ಕಾಮಾ ಹಿರಿಯ ತಲೆಮಾರಿನವರಲ್ಲಿ ಪ್ರಮುಖರು. ಕಿರಿಯ ಪೀಳಿಗೆಯ ಪೈಕಿ ಬರ್ಲಿನ್‌ನಲ್ಲಿ ಚಟ್ಟೋಪಾಧ್ಯಾಯ ಮತ್ತು ಆಗ್ನೇಸ್ ಮೆಡ್ಲಿ ವಿಶಿಷ್ಟರೆನಿಸಿದರು. ಸ್ಮೆಡ್ಲಿಯನ್ನು ಈ ಹಿಂದೆ ಅಮೆರಿಕದಲ್ಲಿದ್ದಾಗ ಪ್ರೀತಿಯಿಂದ 'ಪಂಚಿ' (ಪಕ್ಷಿ) ಎಂದು ಕರೆಯುತ್ತಿದ್ದರು. ಆ ಆಪ್ಯಾಯತೆಯ ಹೆಸರಿನ ಅನುರಾಗಕ್ಕೆ ಆಕರ್ಷಿತಳಾದ ಆಕೆ ಭಾರತೀಯ ನಿಯತಕಾಲಿಕೆಗಳಲ್ಲಿ 'ಎ ಬರ್ಡ್' (ಒಂದು ಪಕ್ಷಿ) ಅಥವಾ 'ಆಲಿಸ್ ಹಕ್ಕಿ' ಎಂಬ ಹೆಸರಿನಲ್ಲಿ ಲೇಖನಗಳನ್ನು ಬರೆದಿದ್ದಳು. ಆಕೆಯ ಅತ್ಯುತ್ತಮ ಕೃತಿ ಡಾಟರ್ ಆಫ್ ದಿ ಅರ್ಥ್ ಜೀವನ ಕಥಾತ್ಮಕ ಕಾದಂಬರಿಯಲ್ಲಿ ಲಾಲಾಜಿಯವರನ್ನು 'ರಣಜಿತ

ಸಿಂಗ್' ಹೆಸರಿನಲ್ಲಿ ವಿಶಿಷ್ಟ ಪಾತ್ರದಲ್ಲಿ ಚಿತ್ರಿಸಿದಳು. ಕೆಲವು ದಿನಗಳ ಹಿಂದೆ ಅಟ್ಲಾಂಟಿಕ್ ಸಾಗರವನ್ನು ದಾಟಿ ಬರ್ಲಿನ್‌ಗೆ ಬಂದಿದ್ದು ಆಕೆ ಚಟ್ಟೋಪಾಧ್ಯಾಯರ ಜೊತೆ ವೃತ್ತಿಪರಳಾಗಿದ್ದಳು. ಅವರಿಬ್ಬರು ಕಮ್ಯೂನಿಸ್ಟ್ ವಿಶ್ವ ಕ್ರಾಂತಿಗಾಗಿ ಶ್ರಮಿಸುತ್ತಿದ್ದರು. ಇಂಗ್ಲೆಂಡ್‌ನಲ್ಲಿ, ಲಾಲಾಜಿ ತಮ್ಮ ಭಾರತೀಯ ಮಿತ್ರ ಸಮೂಹ ಹಾಗೂ ವೆಡ್‌ವುಡ್ಸ್‌ರನ್ನು ಭೇಟಿ ಮಾಡಿದರು. ಲೇಬರ್ ಮತ್ತು ರ್‍ಯಾಡಿಕಲ್ ವಲಯಗಳ ವೇರ್ಸ್ ಹಾಗೂ ಇತರೆ ಆಂಗ್ಲ ಗೆಳೆಯರನ್ನು ಭೇಟಿ ಮಾಡಿದರು. ವಸ್ತುತಃ ಅಧಿಕೃತವಾಗಿ ಲಾಲಾಜಿ ನಿರ್ದಿಷ್ಟವಾದ ದೂತರಾಗಿರಲಿಲ್ಲ. ಈ ಬಾರಿ ಅವರು ಸಾರ್ವಜನಿಕ ಸಭೆಗಳಲ್ಲಿ ಹೆಚ್ಚಾಗಿ ಮಾತನಾಡಲಿಲ್ಲ. ತಮ್ಮ ಪ್ರವಾಸದ ಅವಧಿಯಲ್ಲಿ ಹೆಚ್ಚು ಬರೆಯಲೂ ಇಲ್ಲ. ಹಿಂದಿನ ಎಲ್ಲಾ ಮಿತ್ರರು ಆತ್ಮೀಯರೊಂದಿಗೆ ಹೆಚ್ಚು ಸಲಿಗೆ ಮತ್ತು ವಿಶ್ವಾಸದ ಒಡನಾಟ ಕೈಗೊಂಡರು.

1924ರ ಮೇ ತಿಂಗಳು ಪೂರ್ತಿ ಅವರು ಇಂಗ್ಲೆಂಡಿನಲ್ಲಿ ಇದ್ದರು. ಹ್ಯಾಮ್ಸ್ಟೆಡ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಆರಂಭದ ದಿನಗಳಲ್ಲೇ ಪ್ರಧಾನ ಮಂತ್ರಿ ರಾಮ್ಸೆಮ್ಯಾಕ್‌ಡೊನಾಲ್ಡ್ ಅವರನ್ನು ಕಂಡರು. ಲಾರ್ಡ್ ಅಲಿವ್‌ರ ಜೊತೆ ಪುನರ್ ಸಂಪರ್ಕ ಸಾಧಿಸಿದರು. ಮೇ 7ರಂದು ಭಾರತದ ರಾಜ್ಯ ಕಾರ್ಯದರ್ಶಿ ಸವ್ವೆನಲ್ಲಿ ಲಾಲಾಜಿಗೆ ಭೋಜನ ಕೂಟದ ಸಂದರ್ಶನ ನೀಡಿದರು. ಕೆಲವು ದಿನಗಳ ನಂತರ ಲಾರ್ಡ್ ಅಲಿವ್‌ರಿಂದ ಪತ್ರವೊಂದು ಬಂದಿತು. ''ನಿಮ್ಮೊಂದಿಗೆ ಇನ್ನೊಂದು ಸುತ್ತು ಮಾತನಾಡಲು ಹರ್ಷವೆನಿಸುತ್ತದೆ'' ಎಂದು ತಿಳಿಸಿ ಸವ್ವೆನಲ್ಲಿ ಊಟಕ್ಕೆ ತಮ್ಮ ಜೊತೆಗೂಡಲು ಆಹ್ವಾನ ನೀಡಿದರು. ನಂತರ ಅವರಿಬ್ಬರ ಭೇಟಿ ಅನೇಕ ಸುತ್ತು ನಡೆಯಿತು. ಲೇಬರ್ ಸರ್ಕಾರ ಅಧಿಕಾರ ಕಳೆದುಕೊಂಡ ನಂತರವೂ ಸಹ ಅವರಿಬ್ಬರ ಮೈತ್ರಿ ಬಹುಕಾಲ ಉಳಿದಿತ್ತು. ವಿಶಾಲವಾದ ಅನುಕಂಪದ ಮನಸ್ಥಿತಿ ಮತ್ತು ಪ್ರಬುದ್ಧ ಸಂಸ್ಕೃತಿ ಹೊಂದಿದ್ದ ಲಾರ್ಡ್ ಅಲಿವರ್ ಹೆಚ್ಚು ವಿಹಿತ ಸ್ನೇಹಜೀವಿಯಾಗಿದ್ದರು. ಭಾರತದ ಆಡಳಿತದ ಉಸ್ತುವಾರಿ ಹೊತ್ತಿದ್ದ ಆ ರಾಜಕಾರಣಿಯೊಂದಿಗೆ ತಮ್ಮ ಒಡನಾಟ ಆತ್ಮೀಯವಾದ ಪರಿಣಾಮವಾಗಿ ಲಾಲಾಜಿ ಭಾರತದ ಜೈಲುಗಳಲ್ಲಿ ತ್ವರಿತವಾಗಿ ಸುಧಾರಣೆಯಾಗುವಂತೆ ನೋಡಿಕೊಂಡರು. ಲಾಹೋರಿನ ಸೆಂಟ್ರಲ್ ಜೈಲಿನಲ್ಲಿ ತಾವು ಕಂಡಿದ್ದ, ಅನುಭವಿಸಿದ್ದ ದೀನ, ಹೀನ ಸ್ಥಿತಿಗಳು ಉತ್ತಮಗೊಳ್ಳಲು ತಮ್ಮ ಪ್ರಭಾವ ಬೀರಿದರು. ಉಳಿದ ವಿಷಯಗಳಲ್ಲಿ ಲಾಲಾಜಿ ಕಂಡಂತೆ ಲಾರ್ಡ್ ಅಲಿವರ್ ''ಓರ್ವ ಕಾಯಂ ಚಂಚಲ'' ಮನಸ್ಥಿತಿಯವರಾಗಿದ್ದರು.

ಲಾಲಾಜಿ ಇಂಗ್ಲೆಂಡಿನಲ್ಲಿದ್ದ ಕಾಲದಲ್ಲಿ ಒಂದು ದಿನ (ಮೇ 5) ಟೈಮ್ಸ್ ಒಂದು ವರದಿಯನ್ನು ಪ್ರಕಟಿಸಿತು. ಕಲ್ಕತ್ತಾ ಪ್ರತಿನಿಧಿ ಕೇಬಲ್ ಮೂಲಕ ಕಳುಹಿಸಿದ್ದ ವರದಿ ಅದಾಗಿತ್ತು. ವಿಧಾನಪರಿಷತ್ತುಗಳಲ್ಲಿ ಸರ್ಕಾರಕ್ಕೆ ಸಹಕಾರ ನೀಡಲು ಗಾಂಧೀಜಿ ಮುಂದಾಗಿದ್ದಾರೆಂದು ಮುಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ಆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಹಾಗೂ ವಿಧಾನಸಭೆ ಮತ್ತು ಪರಿಷತ್ತುಗಳಲ್ಲಿ ಬಹುಮತ ಗಳಿಸಿಕೊಳ್ಳಲು ಅವರು ಪ್ರಯತ್ನಿಸುತ್ತಿದ್ದಾರೆಂದು ಆ ವರದಿ ತಿಳಿಸಿತ್ತು. ಲಾಲಾಜಿ ಅವರಿಗೆ ಆ ಸುದ್ದಿಯನ್ನು ಓದಿ ತಳಮಳವಾಯಿತು. ನಂಬಲು ಸಾಧ್ಯವಾಗಲಿಲ್ಲ. ಆ ದಿನಗಳಲ್ಲಿ ಮಹಾತ್ಮ ಗಾಂಧೀಜಿ ಜುಹುನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಪತ್ರಕರ್ತರಿಗೆ ಅಲಭ್ಯವಾಗಿದ್ದರಿಂದ ಅವರ ಯೋಜನೆಗಳ ಬಗ್ಗೆ ಊಹಾಪೋಹದ ಸುದ್ದಿಗಳು

ಹುಟ್ಟಿಕೊಳ್ಳಲು ಕಾರಣವಾಗಿತ್ತು. ಟೈಮ್ಸ್ ಪ್ರತಿನಿಧಿ ತೀರಾ ಹಗುರವಾದ ಊಹೆಯೊಂದನ್ನು ಕಲ್ಪಿಸಿ ಕಳುಹಿಸಿದ್ದರು. ಲಾಲಾಜಿ ಆ ಕೂಡಲೇ ಕೇಬಲ್ ಮೂಲಕ ಮಹಾತ್ಮಗಾಂಧೀಯನ್ನು ಸಂಪರ್ಕಿಸಿದರು. ಗಾಂಧೀ ಕೊಟ್ಟ ಉತ್ತರ :

''ಕನಸಿನಲ್ಲಿಯೂ ಅಂಥ ಕೆಲಸ ಸಾಧ್ಯವಿಲ್ಲ. ಆತ್ಮಸಾಕ್ಷಿಗೆ ವಿರುದ್ಧವಾದ ಆ ಸಹಕಾರವನ್ನು ನಾನೆಂದು ಕೊಡಲಾರೆ- ಗಾಂಧೀ'' ಎಂದು ಉತ್ತರ ತಿಳಿಸಿತು. ಆ ಉತ್ತರವನ್ನು ಕೂಡಲೇ ಲಾಲಾಜಿ ಟೈಮ್ಸ್ ಪತ್ರಿಕಾಲಯಕ್ಕೆ ಕಳುಹಿಸಿಕೊಟ್ಟರು. ಪ್ರತಿಯನ್ನು ರಾಮ್ಸೆಮ್ಯಾಕ್‌ಡೊನಾಲ್ಡ್ ಮತ್ತು ಲಾರ್ಡ್ ಅಲಿವ್ ಅವರಿಗೂ ತಲುಪಿಸಿದರು.

ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಉಂಟಾದ ಭಾವನೆಗಳನ್ನು ಕುರಿತು ಲಾಲಾಜಿ ಪಂಡಿತ್ ಮೋತಿಲಾಲ್ ನೆಹರು ಹಾಗೂ ಮಾಳವೀಯ ಅವರಿಗೆ ಪತ್ರಗಳನ್ನು ಬರೆದರು. ಯುರೋಪ್ ಪ್ರವಾಸ ಕೈಗೊಂಡಾಗಿನಿಂದಲೂ ನಿಯತವಾಗಿ ಆ ಇಬ್ಬರು ಮುಖಂಡರೊಂದಿಗೆ ಪತ್ರ ಸಂಪರ್ಕ ಇಟ್ಟುಕೊಂಡಿದ್ದರು. ಈ ಕೆಳಗಿನ ಉಧೃತವು ಇಂಗ್ಲೆಂಡಿನಲ್ಲಿ ಆಗ ಮೂಡಿದ ಅಭಿಪ್ರಾಯವನ್ನು ಮತ್ತು ಆಗ ಅಲ್ಲಿದ್ದ ಪರಿಸ್ಥಿತಿಯನ್ನು ತಿಳಿಸುತ್ತದೆ:

''ಲೇಬರ್ ಪಕ್ಷದ ವಿಷಯದಲ್ಲಿ ಹೇಳುವುದಾದರೆ ಅದರ ನಿಲುವು ಧೋರಣೆಗಳೇನೆಂಬುದನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಭಾರತಕ್ಕಾಗಿ ಏನನ್ನಾದರೂ ಒಳ್ಳೆಯದನ್ನು ಮಾಡಬೇಕೆಂದು ಅವರಿಗೆ ಆಸೆ ಇದೆ. ಆದರೆ ಅವರ ಕೈಯಲ್ಲಿ ಸಾಕಷ್ಟು ಅಧಿಕಾರವಿಲ್ಲ. ತಾವು ಕೈಗೊಳ್ಳುವ ಯಾವುದೇ ಅಂಥ ನಿರ್ಧಾರಕ್ಕೆ ಲಿಬರಲ್ಸ್ ಮತ್ತು ಕನ್ಸರ್‌ವೇಟಿವ್ಸ್‌ಗಳಿಂದ ಬೆಂಬಲ ಗಳಿಸಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಅಂಥ ಯಾವುದೇ ಯೋಜನೆಯನ್ನು ರೂಪಿಸಲು ಅವರು ಸಿದ್ಧರಿಲ್ಲ. ಭಾರತ ಸರ್ಕಾರ ಬೆಂಬಲಿಸಿದಂಥ ಯಾವ ಪ್ರಸ್ತಾವಗಳಿಗೂ ಲಿಬರಲ್ಸ್ ಮತ್ತು ಕನ್ಸರ್‌ವೇಟಿವ್ಸ್‌ಗಳ ಬೆಂಬಲ ದೊರೆಯುವುದಿಲ್ಲ. ಈ ದೇಶದಲ್ಲಿ ಭಾರತ ಸರ್ಕಾರದ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯ ಬೇಸತ್ತಿದೆ. ಲೇಬರ್ ಪಕ್ಷದವರೇನೋ ಇಂಗ್ಲೆಂಡಿನ ಸಾರ್ವಜನಿಕ ಅಭಿಪ್ರಾಯಕ್ಕೆ ಅನುಗುಣವಾಗಿ ನಡೆದುಕೊಳ್ಳಲು ಸಿದ್ಧರೂ ಇದ್ದಾರೆ. ಈ ಹಿನ್ನಲೆಯಲ್ಲಿ ನಾವು ಇನ್ನೂ ಸಂಘಟಿತರಾಗಿ ಕೆಲಸ ಮಾಡಬೇಕಾಗಿದೆ. ಬಿರುಸಾದ ಪ್ರಚಾರಗಳನ್ನು ಕೈಗೊಳ್ಳಬೇಕಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಹೆಚ್ಚಿನದೇನನ್ನಾದರೂ ಸಾಧಿಸಿಬಹುದೆಂಬ ಭರವಸೆ ಕಂಡು ಬರುತ್ತಿಲ್ಲ. ಸುಧಾರಣಾ ಸಮಿತಿಯಲ್ಲಿ ಸರ್ ಟಿ.ಬಿ. ಸಪ್ರು, ಸರ್ ಶಿವಸ್ವಾಮಿ ಅಯ್ಯರ್ ಮತ್ತು ಜಿನ್ನಾ ಅವರಿದ್ದು ಪ್ರಾಂತೀಯ ಮತ್ತು ಕೇಂದ್ರ ಸರ್ಕಾರಗಳೆರಡರಲ್ಲೂ ಮುನ್ನಡೆ ಸಾಧಿಸಲು ಸಾಧ್ಯವಾಗುವಂಥ ಅನೇಕ ಶಿಫಾರಸುಗಳನ್ನು ಮಾಡುವ ವಿಷಯದಲ್ಲಿ ಅನುಮಾನವಿಲ್ಲ. ಆದರಿಂದ ಪ್ರಾದೇಶಿಕವಾರು ಸ್ವಾಯತ್ತತೆ ಪಡೆದುಕೊಳ್ಳುವ ನಿಟ್ಟಿನಲ್ಲಿ ಸಹಾಯಕವಾಗುವಂಥ ಬೆಳವಣಿಗೆಗಳಾಗಲು ಸಹಾಯವಾಗುತ್ತದೆ. ಆದರೆ ಸಮಿತಿಯು ಸರ್ವಾನುಮತದಿಂದ ಅಂಥ ಶಿಫಾರಸುಗಳನ್ನು ಅನುಮೋದಿಸುವುದೇ ಎಂಬುದರ ಬಗ್ಗೆ ನನಗೆ ಖಾತ್ರಿ ಇಲ್ಲ. ಅದು ಸಾಧ್ಯವೂ ಇಲ್ಲವೆಂದು ಅನಿಸುತ್ತದೆ.

ಕೇಂದ್ರ ಸರ್ಕಾರದ ವಿಷಯದಲ್ಲಿ ಬೆಳವಣಿಗೆಗಳು ಸಂತೋಷಕರವಾಗಿ ಕಂಡು ಬರುತ್ತಿಲ್ಲ. ಕೇಂದ್ರ ಸರ್ಕಾರವು ಜವಾಬ್ದಾರಿಯುತವಾಗುವಂತೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುವುದನ್ನು ಬಿಟ್ಟರೆ ನನ್ನ ಮುಂದೆ ಬೇರಾವುದೇ ಪರ್ಯಾಯವಿಲ್ಲ. ನಾನು ಈ ಮೇಲೆ ಹೆಸರಿಸಿದ ಮೂವರು ಈ ನಿಟ್ಟಿನಲ್ಲಿ ಸೀಮಿತ ಪ್ರಮಾಣದಲ್ಲಿಯಾದರೂ ಶಿಫಾರಸುಗಳನ್ನು ಮಾಡುವರೆಂದು ನಾನು ನಿರೀಕ್ಷಿಸಿದ್ದೇನೆ. ಆದರೆ ನಮ್ಮ ಯಶಸ್ಸು ಸಾರ್ವಜನಿಕ ಅಭಿಪ್ರಾಯದ ಪ್ರಬಲ ಕ್ರೋಡಿಕರಣವನ್ನು ಅವಲಂಬಿಸಿದೆ. ಆ ಅಭಿಪ್ರಾಯ ಸ್ಪಷ್ಟವಾಗಿ ಬಹಿರಂಗಗೊಳ್ಳಬೇಕು. ಅದಾಗಬೇಕಾದರೆ ಭಾರತದ ಎಲ್ಲಾ ವರ್ಗಗಳ ಅಭಿಪ್ರಾಯ ಏಕೀಕೃತವಾಗಿರಬೇಕು. ಆದರೆ ಕಾಂಗ್ರೆಸ್ ನಾಯಕ ವರ್ಗದಲ್ಲೇ ದೊಡ್ಡ ಭಿನ್ನಾಭಿಪ್ರಾಯ ಕಂಡು ಬರುತ್ತಿರುವುದು ದುರಾದೃಷ್ಟಕರ ಬೆಳವಣಿಗೆ...''

ಅದೆಲ್ಲಾ ಏನೇ ಇರಲಿ ಇನ್ನಷ್ಟು ಕಾಲ ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಹೊಂದಿರುವಂತೆ ಲಾಲಾಜಿಯವರನ್ನು ಕೇಳಿಕೊಳ್ಳಲಾಯಿತು. ಮಾಳವೀಯರ ಒಂದು ಪತ್ರ ಈ ನಿಟ್ಟಿನಲ್ಲಿ ಪ್ರಸ್ತಾಪಿತ:

''ನೀವು ಭಾರತಕ್ಕೆ ಮರಳುವ ಮೊದಲು ಇಂಗ್ಲೆಂಡಿಗೆ ಹೋಗಲು ನಾನು ಕೋರುತ್ತಿದ್ದೇನೆ. ನೀವು ಅಲ್ಲಿ ಪ್ರಧಾನಮಂತ್ರಿ, ಭಾರತದ ಕಾರ್ಯದರ್ಶಿ ಮತ್ತು ಲೇಬರ್ ಪಕ್ಷದ ಪ್ರಮುಖರನ್ನು ಭೇಟಿ ಮಾಡಿ ನಮ್ಮ ದೇಶಿಯ ಸಮಸ್ಯೆಗಳ ಬಗ್ಗೆ ಇನ್ನಷ್ಟು ಚರ್ಚಿಸಿ ಕೆಲವು ಹಂತದ ಪರಿಹಾರಗಳಿಗೆ ಶ್ರಮಿಸಬಹುದು. ಆ ಪೈಕಿ ರಕ್ಷಣಾ ವೆಚ್ಚಗಳನ್ನು ತಗ್ಗಿಸುವ ಬಗ್ಗೆ ನಾನು ನಿಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ವಿಧಾನಸಭೆಯಲ್ಲಿ ನನ್ನ ಒಡನಾಡಿಯಾಗಿರುವ ಕೆ. ರಾಮ ಅಯ್ಯಂಗಾರ್ ಬರೆದಿರುವ ಕೆಲವು ಲೇಖನಗಳನ್ನು ಈ ಮೂಲಕ ನಿಮಗೆ ಕಳುಹಿಸಿದ್ದೇನೆ. ಈ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರದ ಅಗ್ರಮಾನ್ಯ ನಾಯಕರ ವಿಶೇಷ ಗಮನವನ್ನು ಸೆಳೆಯಲು ನಿಮಗೆ ಸಹಾಯಕವಾಗಬಹುದು. ನಮ್ಮ ಮಿಲಿಟರಿ ಖರ್ಚು ವೆಚ್ಚಗಳನ್ನು ಕಡಿಮೆ ಮಾಡಲು ಇರುವ ಅವಕಾಶವನ್ನು ಲೇಬರ್ ಪಕ್ಷಕ್ಕೆ ಮನದಟ್ಟು ಮಾಡಿಕೊಡಲು ಸಾಧ್ಯವಾಗಬಹುದು. ಇಲ್ಲಿ 27 ಸಾವಿರ ಬ್ರಿಟಿಷ್ ದಳಗಳಿವೆ. ಅಷ್ಟೊಂದು ದೊಡ್ಡ ಪ್ರಮಾಣದ ಸೈನ್ಯದ ಅಗತ್ಯವಿಲ್ಲ. ಹಣಕಾಸು ವಿಧೇಯಕವನ್ನು ವಿರೋಧಿಸುತ್ತಾ ನಾನು ಇಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದೇನೆ. ಸಶಸ್ತ್ರ ಮೀಸಲು ಪಡೆಯಾಗಿ ಎರಡನೇ ಹಂತದಲ್ಲಿ ಭಾರತೀಯ ಪ್ರಾಂತೀಯ ಪಡೆಯನ್ನು ಸಂಘಟಿಸುವ ಬಗ್ಗೆಯೂ ನಾನು ಒತ್ತಿ ಹೇಳಿದ್ದೇನೆ. ಇದರಿಂದ ಮಿಲಿಟರಿ ವೆಚ್ಚದಲ್ಲಿ ಸಾಕಷ್ಟು ಉಳಿತಾಯವಾಗುತ್ತದೆ. ನಮಗೆ ಅವರು ಅಧಿಕಾರ ಕೊಡಲು ಸಾಧ್ಯವಿಲ್ಲದಿರಬಹುದು. ಆದರೆ ನಮ್ಮ ಮಿಲಿಟರಿ ಖರ್ಚುವೆಚ್ಚಗಳನ್ನು ತಗ್ಗಿಸುವ ವಿಷಯದಲ್ಲಿ ಲೇಬರ್ ಸರ್ಕಾರ ಒಪ್ಪಿಕೊಳ್ಳಬಾರದೇಕೇ? ಒಂದು ವೇಳೆ ಆ ಖರ್ಚು ತಗ್ಗಿದ್ದೇ ಆದರೆ ಅದರಿಂದ ನಮ್ಮ ಜನರ ಮೇಲೆ ಭಾರೀ ಪ್ರಮಾಣದ ಹೊರೆ ಎನಿಸಿರುವ ತೆರಿಗೆಗಳನ್ನು ಇಳಿಸಲು ಸಹಾಯವಾಗುತ್ತದೆ. ಪ್ರಾಂತೀಯ ಸರ್ಕಾರಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಜನತೆಯ ಆಗುಹೋಗುಗಳನ್ನು ನೋಡಿಕೊಳ್ಳಲು ಅವಕಾಶವಾಗುತ್ತದೆ. ಇದರ ಜೊತೆಗೆ ಇಂಗ್ಲಿಷ್ ಸಾರ್ವಜನಿಕ ಬದುಕಿನ ಜನರೊಂದಿಗೆ ನೀವು ಚರ್ಚಿಸಿ ಅಭಿಪ್ರಾಯ ಕ್ರೋಡಿಕರಿಸುವ ಇನ್ನು ಇತರ ಅನೇಕ ವಿಷಯಗಳು ನಿಮ್ಮ ಮುಂದಿವೆ. ಒಟ್ಟಿನಲ್ಲಿ

ಹೇಳುವುದಾದರೆ ಅನೇಕ ಕಾರಣಗಳಿಂದಾಗಿ ನೀವು ಇಲ್ಲಿಗೆ ಮರಳುವ ಮುನ್ನ ಪುನಃ ಇಂಗ್ಲೆಂಡಿಗೆ ಹೋಗಿ ಬರುವುದು ಅನುಕೂಲಕರ ಎಂದು ನನಗನಿಸುತ್ತಿದೆ.''

ಮಾಳವೀಯರ ಪತ್ರ ಅಷ್ಟಕ್ಕೆ ನಿಲ್ಲುವುದಿಲ್ಲ. ಇಲ್ಲಿ ನಡೆಯುತ್ತಿದ್ದ ಅನೇಕ ವಿದ್ಯಮಾನಗಳನ್ನು ಅವರು ಲಾಲಾಜಿಯವರಿಗೆ ತಿಳಿಸಿದರು.

''ನಿಮಗೆ ಅನೇಕ ವೃತ್ತ ಪತ್ರಿಕೆಗಳು ಅಲ್ಲಿ ದೊರೆಯುತ್ತವೆ ಎಂದು ನಾನಂದು ಕೊಂಡಿದ್ದೇನೆ. ಅಲಹಾಬಾದ್‌ನಲ್ಲಿ ಏನು ನಡೆಯಿತು ಎಂಬುದರ ವರದಿಗಳು ನಿಮ್ಮ ಅರಿವಿಗೆ ಬಂದಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಬೆಳಗಾವಿಯಲ್ಲಿ ನಡೆಯಲಿರುವ ಕಾಂಗ್ರೆಸ್ ವಾರ್ಷಿಕ ಅಧಿವೇಶನದಲ್ಲಿ ಏನಾಗುತ್ತದೆ ಎಂದು ಹೇಳುವುದು ನನಗೆ ಕಷ್ಟ. ಸ್ವರಾಜ್ಯವಾದಿಗಳು ಮುಂದಿನ ತಿಂಗಳ ಆರಂಭದಲ್ಲಿ ಕಲ್ಕತ್ತಾದಲ್ಲಿ ಸಭೆ ಸೇರಲಿದ್ದಾರೆ. ಗಾಂಧೀಜಿ ತಮ್ಮ ಪರವಾಗಿ ಸಾರ್ವಜನಿಕ ಅಭಿಪ್ರಾಯ ಕ್ರೋಡಿಕರಿಸಿಕೊಳ್ಳಲು ಅಖಿಲ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಒಂದು ವೇಳೆ ಅವರು ಅಸಹಕಾರ ಚಳವಳಿಗೆ ಸಾಕಷ್ಟು ಜೀವ ಮತ್ತು ಹುರುಪು ತುಂಬಿದರೆ ಸ್ವರಾಜ್ಯವಾದಿಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅವರೇ ಸರ್ಕಾರದ ಮೇಲೆ ಪ್ರಭಾವ ಬೀರಬಹುದೆಂದು ನನಗನಿಸುತ್ತದೆ. ವಿಧಾನಪರಿಷತ್ತುಗಳ ಮೂಲಕ ಈಗ ಸ್ವರಾಜ್ಯವಾದಿಗಳು ಮಾಡುತ್ತಿರುವ ಒತ್ತಡ ತಂತ್ರಕ್ಕಿಂತಲೂ ಬಹಿರಂಗ ಆಂದೋಲನ ಸಮರ್ಥವೆನಿಸಬಹುದು. ಆದರೆ ತಾವು ಅಂದು ಕೊಂಡಿರುವುದನ್ನು ಗಾಂಧೀಜಿ ಸಾಧಿಸಿಕೊಳ್ಳುವರೇ ಎಂಬುದು ತೀರಾ ಅನುಮಾನದ ಸಂಗತಿ ಎನಿಸುತ್ತದೆ. ಆದಾಗ್ಯೂ, ಈವರೆಗಿನ ಬೆಳವಣಿಗೆ ಬಗ್ಗೆ ಹೇಳುವುದಾದರೆ ಬೇರೆ ಯಾವುದೇ ಪರ್ಯಾಯ ಯೋಜಿಸಿಕೊಂಡಂತಿಲ್ಲ. ತಾವು ಕೈಗೊಂಡಿರುವ ಕ್ರಮವನ್ನೇ ಗಾಂಧೀಜಿ ಮುಂದುವರೆಸುತ್ತಾರೆಂದು ಒಂದು ವರ್ಷದ ಹಿಂದೆಯೇ ಸ್ವರಾಜ್ಯ ಪಕ್ಷದವರಿಗೆ ತಿಳಿಸಿದ್ದೆ. ಅದಿಲ್ಲವಾದರೆ ಕೌನ್ಸಿಲ್ ಬಹಿಷ್ಕಾರವನ್ನು ಅಷ್ಟೊಂದು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದಾರೆಂದು ನನಗನಿಸುವುದಿಲ್ಲ.''

ಮಾಳವೀಯರು ಅದೇ ಪಥದಲ್ಲಿ ಲಾಲಾಜಿಯವರ ಆರೋಗ್ಯದ ಬಗ್ಗೆಯೇ ಹೆಚ್ಚು ಲಕ್ಷ್ಯವನ್ನು ವಹಿಸಿದರು. ವಿಶ್ರಾಂತಿಯ ಅಗತ್ಯವನ್ನು ಒತ್ತಿ ಹೇಳಿದರು. ಇನ್ನೂ ಹೆಚ್ಚಿನದಾಗಿ ದೇಶದಲ್ಲಿ ನಡೆಯುತ್ತಿದ್ದ ವಿವಾದಗಳ ಬಗ್ಗೆ ಸಾಧ್ಯವಾದಷ್ಟು ಮೌನವಾಗಿರುವಂತೆ ಸಲಹೆ ಮಾಡಿದರು.

''ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಇರುವಷ್ಟು ಕಾಲ ನಿಮಗೆ ಉತ್ತಮ ವಿಶ್ರಾಂತಿ ದೊರೆಯಲೆಂದು ನಾನು ಹಾರೈಸುತ್ತೇನೆ. ಅಚ್ಯುತೋದ್ಧಾರ ಕಾರ್ಯ ಸುಗಮವಾಗಿ ನಡೆಯುತ್ತಿದೆ. ರಾಂ ಪ್ರಸಾದರು ಉತ್ತಮ ಉಸ್ತುವಾರಿ ಮಾಡುತ್ತಿದ್ದಾರೆ. ಆದರೂ ಮಾಡಬೇಕಾದುದು ಇನ್ನೂ ಬಹಳಷ್ಟಿದೆ... ಸಾಧ್ಯವಾದಷ್ಟು ಶೀಘ್ರವಾಗಿ ಅನುಕೂಲಕರವಾಗಿ ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂಬುದೇ ನನ್ನ ಆಶಯ. ಆ ನಿಟ್ಟಿನಲ್ಲಿ ಪೂರ್ಣವಾಗಿ ಕಾರ್ಯನಿರತನಾಗಿದ್ದೇನೆ.''

ದೇಶದ ರಾಜಕೀಯ ಬೆಳವಣಿಗೆಗಳ ವಿಷಯದಲ್ಲಿ ಲಾಲಾಜಿಯವರಿಗೆ ನಿರಂತರವಾಗಿ ಮಾಹಿತಿ ಒದಗಿಸುತ್ತಿದ್ದವರು ಮೋತಿಲಾಲ್ ನೆಹರು. ಸ್ವರಾಜ್ಯ ಪಕ್ಷದ

ಇತರ ಯಾವುದೇ ಸದಸ್ಯರೊಂದಿಗೆ ಹಂಚಿಕೊಳ್ಳುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅವರು ಲಾಲಾಜಿಯವರೊಂದಿಗೆ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಭಾರತೀಯ ಪತ್ರಿಕೆಗಳಲ್ಲಿ ಪ್ರಕಟಗೊಳ್ಳದಿದ್ದಂತಹ ವಿವರಗಳೆಲ್ಲವನ್ನು ಅವರು ಲಾಲಾಜಿಯವರಿಗೆ ಒದಗಿಸುತ್ತಿದ್ದರು. ಮಹಾತ್ಮಗಾಂಧೀ ಮತ್ತು ತಮ್ಮೊಂದಿಗೆ ನಡೆಯುತ್ತಿದ್ದ ಸಂವಾದ, ಕಾರ್ಯಕಾರಿಣಿ ಸಭೆ ಮತ್ತು ಎಐಸಿಸಿ ಸಭೆಗಳ ಒಳ ಮಾಹಿತಿಗಳೆಲ್ಲವನ್ನು ಅವರು ವಿವರವಾಗಿ ತಿಳಿಸುತ್ತಿದ್ದರು.

ಇಂಗ್ಲೆಂಡಿನ ಈ ಭೇಟಿಯ ಕಾಲದಲ್ಲಿ ಲಾಲಾಜಿ ಅದೇ ಮೊದಲ ಬಾರಿಗೆ ವಿಧ್ಯುಕ್ತವಾಗಿ ಸೋಷಲಿಸ್ಟ್ ಪಕ್ಷವನ್ನು ಸೇರಿದರು. ಅವರ ದೃಷ್ಟಿಕೋನ ದೀರ್ಘಕಾಲದಿಂದಲೂ ಸೋಷಲಿಸಂ ಪ್ರಭಾವದಲ್ಲಿತ್ತು ಎಂಬುದರಲ್ಲಿ ಅನುಮಾನವೇ ಇರಲಿಲ್ಲ. ನ್ಯೂಯಾರ್ಕ್‌ನಲ್ಲಿದ್ದಾಗ ರ್‍ಯಾಂಡ್ ಸ್ಕೂಲ್ ಜೊತೆ ಸಂಪರ್ಕ ಇಟ್ಟುಕೊಂಡು ತಮ್ಮ ಸಾಮಾಜಿಕ ದೃಷ್ಟಿಕೋನವನ್ನು ಉದ್ದೀಪನಗೊಳಿಸಿಕೊಂಡಿದ್ದರು. ಭಾರತದಲ್ಲಿ ಅವರು ಕೈಗೊಂಡ ಸಾಮಾಜಿಕ ಕಾರ್ಯಗಳು, ಆ ಸಂಬಂಧದಲ್ಲಿ ಅಮೆರಿಕದಲ್ಲಿದ್ದಾಗಲೇ ಅವರು ರೂಪಿಸಿದ ನೀಲಿ ನಕಾಶೆಗಳು ಅವರು ಸಮಾಜವಾದಿ ವಾದದತ್ತ ವಾಲುತ್ತಿದ್ದುದನ್ನು ಸ್ಪಷ್ಟವಾಗಿ ತೋರಿಸುತ್ತಿದ್ದವು. ಆದರೆ ಭಾರತದಲ್ಲಿ ಸಮಾಜವಾದಿ ಆಂದೋಲನವನ್ನು ಕೈಗೊಳ್ಳಲಾಗಲಿ ಅಥವಾ ಸಮಾಜವಾದಿ ಪಕ್ಷವನ್ನು ಕಟ್ಟಲಾಗಲಿ ಕಾಲ ಪಕ್ವವಾಗಿಲ್ಲ ಎಂಬುದನ್ನು ಅವರು ಮನಗಂಡಿದ್ದರು. 1920ರಲ್ಲಿ ಭಾರತಕ್ಕೆ ಮರಳಿದ ನಂತರ ಕಾರ್ಮಿಕ ಚಳವಳಿಯನ್ನು ಅಖಿಲ ಭಾರತೀಯ ಸ್ತರದಲ್ಲಿ ಅವರು ಸಂಘಟಿಸಿದ್ದಕ್ಕೆ ಆ ಸಿದ್ಧಾಂತದ ನೆಲೆಗಟ್ಟೇ ಹಿನ್ನಲೆ. ತತ್ ಪ್ರಭಾವದಿಂದಲೇ ಅವರು ಅಖಿಲ ಭಾರತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು. ಅದೆಲ್ಲದರ ಮುಂದಿನ ಬೆಳವಣಿಗೆಯಾಗಿ ಅವರು ಈಗ ಸಮಾಜವಾದಿ ಪಕ್ಷವನ್ನು ಸೇರಿದರು. ಆ ವೇಳೆಗಾಗಲೇ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಾಗಿತ್ತು. ಆದರೆ ಅದು ರಷ್ಯಾ ನಿರ್ದೇಶಿತವಾಗಿತ್ತು. ದೇಶಿಯವಾಗಿ ಸಮಾಜವಾದಿ ಆಂದೋಲನ ಇನ್ನೂ ಮೂಡಿರಲಿಲ್ಲ. ಇಂಗ್ಲೆಂಡಿನಲ್ಲಿದ್ದಾಗ ಸ್ವತಂತ್ರ ಲೇಬರ್ ಪಕ್ಷ ಸೇರಲು ಒಪ್ಪಿಕೊಂಡಿದ್ದರು. ಅದಕ್ಕೆ ಪೂರಕವಾಗಿ ಭಾರತದಲ್ಲಿ ಸೋಷಲಿಸ್ಟ್ ಅಥವಾ ಲೇಬರ್ ಗುಂಪು ರೂಢಿಸಲು ಅವರು ಅನೇಕ ಸಾರಿ ಪ್ರಯತ್ನ ಪಟ್ಟಿದ್ದರೂ ಯಶಸ್ವಿಯಾಗಿರಲಿಲ್ಲ. ಅವರ ಪ್ರಯತ್ನಕ್ಕೆ ಒದಗಿ ಬಂದ ಕೆಲವೇ ವ್ಯಕ್ತಿಗಳೆಂದರೆ ದೇವನ್ ಚಮನ್‌ಲಾಲ್, ತಾರಿಣಿ ಸಿನ್ಹಾ ಮತ್ತು ಎಂ. ಎನ್. ಜೋಷಿ. ಇವೆಲ್ಲಾ ಏನೇ ಇದ್ದರೂ ಇಂಗ್ಲೆಂಡಿನಲ್ಲಿ ಲಾಲಾಜಿ ಈ ಮೊದಲೇ ಸ್ವತಂತ್ರ ಲೇಬರ್ ಪಕ್ಷವನ್ನು ಸೇರಿಯಾಗಿತ್ತು. ಲಾಲಾಜಿ ಇಸ್ತಾನ್‌ಬುಲ್ (ಅಂದಿನ ಕಾನ್‌ಸ್ಟಾಂಟಿನೋಪಲ್)ನಲ್ಲಿದ್ದಾಗ ಜಾರ್ಜ್ ಲ್ಯಾನ್ಸ್‌ಬರಿ ಅವರ ಪತ್ರವೊಂದು ಎ. ಫೆನರ್ ಬ್ರಾಕ್ವೇ ಎನ್ನುವವರ ಮೂಲಕ ತಲುಪಿತು.:

''ಲಜಪತ್‌ರಾಯ್ ಅವರನ್ನು ಸೆಂಟ್ರಲ್ ಲಂಡನ್ ಶಾಖೆಯ ಸದಸ್ಯರನ್ನಾಗಿ ನೀವು ನಾಮಕರಣ ಮಾಡಬಹುದು. ಅವರೇನೂ ರಾಷ್ಟ್ರೀಯ ಶಾಖೆಯ ಸದಸ್ಯರಾಗಲು ಆಶಿಸುತ್ತಿದ್ದಾರೆ. ಲಂಡನ್‌ನಲ್ಲಿ ಅವರು ಸದಾ ಕಾಲವು ಲಭ್ಯವಿರುವ ಸಾಧ್ಯತೆ ಇಲ್ಲ.''

''ಸಾಲಿಯಾನ ಕನಿಷ್ಠ 5 ಪೌಂಡ್ ಚಂದಾ ನೀಡಿ ಅವರು ರಾಷ್ಟ್ರೀಯ ಶಾಖೆ ಸದಸ್ಯರಾಗಬಹುದು. ಒಂದು ವೇಳೆ ನೀವು ಅವರನ್ನು ಸೆಂಟ್ರಲ್ ಲಂಡನ್ ಶಾಖೆಯ ಸದಸ್ಯರನ್ನಾಗಿ ನೇಮಿಸಿಕೊಳ್ಳಲು ಆಶಿಸಿದರೆ ಅವರನ್ನು ಕಾರ್ಯದರ್ಶಿ ಜೆ. ಅಲೆನ್ ಸ್ಕಿನ್ನರ್ ಅವರ ಬಳಿಗೆ ಕಳುಹಿಸಿ''

ಲಂಡನ್‌ನಲ್ಲಿ ಹೆಚ್ಚಿನದನ್ನು ಮಾಡಲು ಸಾಧ್ಯವಿರುವಂತೆ ಲಾಲಾಜಿ ಅವರಿಗೆ ಕಂಡು ಬಂದಿತು. ಹಿಂದಿನ ಮಿತ್ರರನ್ನೆಲ್ಲಾ ಭೇಟಿ ಮಾಡಿಯಾಗಿತ್ತು. ಕೆಲವು ಮಂದಿ ಹೊಸಬರನ್ನು ಮಿತ್ರರನ್ನಾಗಿ ಮಾಡಿಕೊಂಡಾಗಿತ್ತು. ಲೇಬರ್ ರಾಜಕೀಯ ಧುರೀಣರ ಮನಸ್ಥಿತಿಯನ್ನು ಅಧ್ಯಯನ ಮಾಡಿಯಾಗಿತ್ತು. ಅವರಿಂದಲೇ ಅವರ ತೊಂದರೆಗಳನ್ನು ಅರಿತುಕೊಂಡಾಗಿತ್ತು. ಪರಿಸ್ಥಿತಿ ಮತ್ತು ತಮ್ಮ ಸ್ವಯಂ ಬುದ್ಧಿಯ ಲೆಕ್ಕಾಚಾರದಲ್ಲಿ ಆ ಜನರು ಮಿತ್ರರು ಮತ್ತು ಸಹಾನುಭೂತಿ ಹೊಂದಿದವರಿಗಿಂತ ಹೆಚ್ಚಿನದನ್ನೇನೂ ಮಾಡುವ ಸ್ಥಿತಿಯಲ್ಲಿ ಇಲ್ಲವೆಂಬುದೆನ್ನು ಲಾಲಾಜಿ ಮನನ ಮಾಡಿಕೊಂಡಿದ್ದರು. ಆ ಭೇಟಿಯಲ್ಲಿ ಪ್ರಮುಖವಾದ ಬೆಳವಣಿಗೆ ಎಂದರೆ ಅವರು ಸ್ವತಂತ್ರ ಲೇಬರ್ ಪಕ್ಷ ಸೇರಿದ್ದಷ್ಟೇ. ಭಾರತದ ಜೈಲುಗಳ ಸುಧಾರಣೆ ಬಗ್ಗೆ ಆಲ್ವಿವರ್ ಆಸಕ್ತಿ ವಹಿಸುವಂತೆ ಮಾಡಿದ್ದಷ್ಟೇ. ಹೀಗಾಗಿ ಆರು ವಾರಗಳ ಕಾಲ ಸ್ವಿಟ್ಜರ್‌ಲ್ಯಾಂಡ್‌ನಲ್ಲಿದ್ದು ಅಲ್ಲಿಂದ ಆ ಖಂಡದಲ್ಲಿ ಪ್ರವಾಸ ಕೈಗೊಳ್ಳುವ ಮೂಲಕ ವಾಪಸಾಗಲು ನಿರ್ಧರಿಸಿದರು. ಅವರ ವೀಸಾದಲ್ಲಿ ಜರ್ಮನಿ, ಡೆನ್ಮಾರ್ಕ್, ಆಸ್ಟ್ರೀಯಾ, ಹಂಗೇರಿ ಮತ್ತು ಟರ್ಕಿಗಳಿಗೆ ಭೇಟಿ ಕೊಡುವ ಅನುವು ಮಾಡಿಕೊಡಲಾಗಿತ್ತು. ಇಂಗ್ಲೆಂಡ್ ಬಿಡುವ ಮುನ್ನ ಅಲ್ಲಿನ ಭಾರತೀಯ ವಿದ್ಯಾರ್ಥಿಗಳು ಮತ್ತು ವೈದ್ಯರು ಲಾಲಾಜಿ ಅವರಿಗೆ ನಿಧಿಯೊಂದನ್ನು ಸಮರ್ಪಿಸಿದರು. ಮುಂದೆ ಅವರು ಅದನ್ನು ಗುಲಾಬ್‌ದೇವಿ ಕ್ಷಯರೋಗ ಆಸ್ಪತ್ರೆ ನಿಧಿಗೆ ಸಮರ್ಪಿಸಿದರು. ಆರೋಗ್ಯಕ್ಕೆ ಹೆಚ್ಚಿನ ಗಮನ ಹರಿಸಬೇಕಾಗಿದ್ದರಿಂದ ಅವರು ಇನ್ನಷ್ಟು ಕಾಲ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಕಳೆಯಲು ನಿರ್ಧರಿಸಿದರು.

ಸ್ವಿಟ್ಜರ್‌ಲ್ಯಾಂಡ್‌ನಲ್ಲಿದ್ದ ಸಮಯದಲ್ಲೇ ಲಾಲಾಜಿ ಅವರಿಗೆ ಅವರ ಬಹುತೇಕ ಪತ್ರಗಳು ಸಂದಾಯವಾಗಿದ್ದು. ಮಹಾತ್ಮ ಗಾಂಧೀಜಿಯವರಿಂದಲೂ ಒಂದು ಪತ್ರ ಬಂದಿತ್ತು:

''ಪ್ರಿಯ ಲಾಲಾಜಿ,

ನೀವು ಎಲ್ಲಿ ವಿಶ್ರಾಂತಿ ಪಡೆಯಬೇಕಾಗಿತ್ತೋ ಅಲ್ಲಿಗೆ ತಲುಪಿರುವುದನ್ನು ಕೇಳಿ ನನಗೆ ಸಂತೋಷವಾಗಿದೆ. ನಿಮ್ಮ ಆರೋಗ್ಯ ಸಂಪೂರ್ಣವಾಗಿ ಮರಳುವ ತನಕ ನೀವು ಅಲ್ಲಿಂದ ಚಲಿಸುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ.

ಇಲ್ಲಿನ ಘಟನೆಗಳಿಂದ ನೀವು ವಿಚಲಿತರಾಗಬಾರದೆಂದು ನನ್ನ ಸಲಹೆ. ನನ್ನ ಮತ್ತು ಸ್ವರಾಜ್‌ವಾದಿಗಳ ನಡುವೆ ಒಂದೇ ಬೇಡಿಕೆಯಲ್ಲಿ ಸಹಕಾರ ಸಾಧ್ಯವಿಲ್ಲ: ಇಬ್ಬರೂ ಬೇರೆ ಬೇರೆ ಸಂಘಟನೆಗಳ ಮೂಲಕ ಕೆಲಸ ಮಾಡುವುದಾದರೆ ಅದು ಸಾಧ್ಯವಾಗಬಹುದು. ಕಾಂಗ್ರೆಸ್ ಸಂಘಟನೆಯು ಒಂದು ಕಾಲಕ್ಕೆ ಒಂದು

ಕಾರ್ಯಕ್ರಮವನ್ನಷ್ಟೇ ಕೈಗೆತ್ತಿಕೊಳ್ಳಲು ಸಾಧ್ಯ. ಒಮ್ಮೆಗೆ ನೀವು ಸರ್ಕಾರದತ್ತಲೂ, ಇತ್ತ ಜನತೆಯತ್ತಲೂ ನೋಡಲು ಹೇಗೆ ಸಾಧ್ಯ?

ಇತಿ ತಮ್ಮ ವಿಶ್ವಾಸಿ

ಎಂ.ಕೆ. ಗಾಂಧೀ

ಲಾಲಾ ಲಜಪತ್‌ರಾಯ್

ಗ್ಲಾರೆನ್ಸ್, ಮಾಂಟೇರಸ್, ಸ್ವಿಟ್ಜರ್‌ಲ್ಯಾಂಡ್

ಕಾನ್‌ಸ್ಟಾಂಟಿನೋಪಲ್‌ಗೆ ಭೇಟಿ ಕೊಡಲು ಲಾಲಾಜಿ ತುಂಬಾ ಉತ್ಸುಕರಾಗಿದ್ದರು. ಯಂಗ್ ಟರ್ಕ್ ಚಳವಳಿಯನ್ನು ಅದರ ಆರಂಭದ ಕಾಲದಿಂದಲೂ ಕುತೂಹಲದಿಂದ ವೀಕ್ಷಿಸುತ್ತಾ ಬಂದಿದ್ದರು. ಆ ಚಳವಳಿಯ ನಾಯಕರನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ಆ ಸಂದರ್ಭದಲ್ಲೇ ಆ ನಾಯಕರು ಅಧಿಕಾರಕ್ಕೂ ಬಂದಿದ್ದರು. ಸುಲ್ತಾನ್ ಅಬ್ದುಲ್ ಹಮೀದ್ ಆಳ್ವಿಕೆ ಮಾಡುತ್ತಿದ್ದಷ್ಟು ವಿಶಾಲವಾದ ಸಾಮ್ರಾಜ್ಯ ಅದಲ್ಲವಾಗಿದ್ದರೂ ತಮ್ಮದೇ ನಾಡಿನಲ್ಲಿ ತಮ್ಮದೇ ಆಡಳಿತವನ್ನು ಅವರು ರೂಪಿಸಿಕೊಂಡಿದ್ದರು. ಅದಾಗ್ಯೂ, ಐರೋಪ್ಯ ಶಕ್ತಿಯು ಒಡ್ಡುತ್ತಿದ್ದ ಅಸಾಧ್ಯವಾದ ಬಿಕ್ಕಟ್ಟು ಮತ್ತು ಕಷ್ಟಗಳನ್ನು ಆಡಳಿತಗಾರರು ಎದುರಿಸಬೇಕಾಗಿತ್ತು. 1923ರಲ್ಲಿ ಏರ್ಪಟ್ಟ ಟ್ರೀಟಿ ಆಫ್ ಲಾಸೆನ್ನೆ ಒಡಂಬಡಿಕೆಯಲ್ಲಿ ಆ ಬಿಕ್ಕಟ್ಟುಗಳಲ್ಲಿ ಕೆಲವು ಪರಿಹಾರವನ್ನು ಕಂಡಿದ್ದವು. ಟರ್ಕಿಯ ವೀರ ಸೇನೆಯು ಅನ್ಯರ ಹಿಡಿತದಿಂದ ಅಧಿಕಾರವನ್ನು ಕಸಿದುಕೊಂಡ ನಂತರ ಯಂಗ್ ಟರ್ಕಿಗಳು ಹೇಗೆ ಆಡಳಿತ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಖುದ್ದಾಗಿ ವೀಕ್ಷಿಸುವ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಲು ಲಾಲಾಜಿ ಬಯಸಿದ್ದರು. ಕಾನ್‌ಸ್ಟಾಂಟಿನೋಪಲ್‌ನಲ್ಲಿ ಅವರಿಗೆ ಸ್ವಾಗತ ದೊರೆಯಿತು. ಅನೇಕ ಗೆಳೆಯರನ್ನು ಅಲ್ಲಿ ಅವರು ಸಂಪಾದಿಸಿಕೊಂಡರು. ಆ ಪೈಕಿ ಭಾರತೀಯ ಮಹಾರಾಜರಲ್ಲಿ ಒಬ್ಬರಾಗಿದ್ದ ಶೌಕತ್ ಉಸ್ಮಾನಿ ಒಬ್ಬರು. ಮತ್ತೊಬ್ಬರು ಸೆಂಟ್ರಲ್ ಏಷ್ಯಾದ ಅನ್ವರ್ ಪಾಷ.

ಲಜಪತ್‌ರಾಯ್ ಅವರ ಪುತ್ರ ಅಮೃತ್‌ರಾಯ್ ಆಗ ಜರ್ಮನಿಯಲ್ಲಿ ಓದುತ್ತಿದ್ದರು. ಅವರು ಲಾಲಾಜಿ ಅವರನ್ನು ಕೂಡಿ ಕೊಂಡರು. ಟರ್ಕಿಯಿಂದ ತಂದೆ ಮಕ್ಕಳು ಈಜಿಪ್ಟ್‌ಗೆ ಭೇಟಿ ಕೊಟ್ಟರು. ಕೆಲವು ದಿನ ಅಲ್ಲಿದ್ದು ಅಲೆಗ್ಸಾಂಡ್ರಿಯಾ ಮೂಲಕ ಪ್ರಯಾಣ ಬೆಳೆಸಿದರು. ಇಟಲಿಗೆ ಬಂದು ತಾವು ಮುಂಬಯಿಯಿಂದ ಆರಂಭಿಸಿದ್ದ ಹಡಗಿನ ಮೂಲಕವೇ ಮರು ಪ್ರಯಾಣ ಕೈಗೊಂಡರು. 1924, ಸೆಪ್ಟೆಂಬರ್ 20ರಂದು ಮುಂಬಯಿ ತಲುಪಿದರು.

* * *

ಅಧ್ಯಾಯ -58

ಸ್ವರಾಜ್ಯ ಪಕ್ಷದಲ್ಲಿ

''ಈಗ, ನೀವು ಮೂವರಲ್ಲಿ ಲಾಲಾಜಿಗಾಗಿ ಯಾರು ಅವಕಾಶ ಮಾಡಿ ಕೊಡುವಿರಿ?'' - ಶ್ಯಾಮಲಾಲ್ ನೆಹರು ಈ ಪ್ರಶ್ನೆಯನ್ನು ಇದ್ದಕ್ಕಿದ್ದಂತೆ ವಿಧಾನಸಭೆಯ ಸಮಾಜವಾದಿ ಸದಸ್ಯರಾಗಿದ್ದ ಪಂಜಾಬಿನ ಧೂನಿಚಂದ್ (ಅಂಬಾಲ), ರೈಘುದ ಹನ್ಸ್‌ರಾಜ್ ಮತ್ತು ದಿವಾನ್ ಚಮನ್ ಲಾಲ್ ಅವರ ಮುಂದಿಟ್ಟರು. ಪಂಜಾಬ್ ವಿಧಾನಸಭೆಯ ಗ್ರಂಥಾಲಯದಲ್ಲಿ ಮಾತುಕತೆಯಲ್ಲಿ ತೊಡಗಿದ್ದಾಗ ಇದ್ದಕ್ಕಿದ್ದಂತೆ ಉದ್ಭವಿಸಿದ ಪ್ರಸಂಗ ಅದು. ಶ್ಯಾಮ್‌ಲಾಲ್‌ರಲ್ಲಿ ಸುದ್ದಿ ಇದ್ದಕ್ಕಿದ್ದಂತೆ ಕಂಡು ಬರುತ್ತಿತ್ತು. ಅವರು ಆ ಪ್ರಶ್ನೆಯನ್ನು ಆ ಮೂವರ ಮುಂದಿಟ್ಟು ಕುತೂಹಲದಿಂದ ಉತ್ತರವನ್ನು ನಿರೀಕ್ಷಿಸತೊಡಗಿದರು. ವಿಧಾನಸಭೆಯ ಪ್ರವೇಶಕ್ಕೆ ಅರ್ಹವಾಗಿದ್ದ ನಿಯಮಗಳನ್ನು ತಿದ್ದುಪಡಿಯನ್ನು ಮಾಡಲಾಗುತ್ತದೆ ಎಂದೂ, ಆರು ತಿಂಗಳಿಗಿಂತ ಹೆಚ್ಚು ಕಾಲ ಬಂಧನದಲ್ಲಿದ್ದವರಿಗೆ ನಿರ್ಬಂಧಿಸಲಾಗಿದ್ದ ಅನರ್ಹತೆಯನ್ನು ತೆಗೆದು ಹಾಕಲು ನಿರ್ಧರಿಸಲಾಗಿದೆ ಎಂದು ಅವರಿಗೆ ಖಚಿತ ಮೂಲಗಳಿಂದ ಮಾಹಿತಿ ದೊರೆತಿತ್ತು.

ಪಂಜಾಬಿನ ಆ ಮೂವರು ಸದಸ್ಯರು ಹಿಂದು ಮುಂದೆ ನೋಡದೆ ಒಮ್ಮೆಗೆ ಉತ್ತರಿಸಿದರು-

''ನಮ್ಮಲ್ಲಿ ಯಾರಾದರೂ ಸರಿ ಸಿದ್ಧವಿದ್ದೇವೆ.'' ಲಾಲಾಜಿ ಅವರಿಗೆ ವಿಧಾನಸಭೆ ಪ್ರವೇಶದ ಅವಕಾಶ ದೊರೆಯುತ್ತದೆ ಎಂಬ ಸುದ್ದಿ ತಿಳಿದು ಅವರೆಲ್ಲಾ ಹರ್ಷಚಿತ್ತರಾಗಿದ್ದರು.

ವಿಧಾನಸಭೆಯ 1925ರ ದೆಹಲಿ ಅಧಿವೇಶನದ ಆರಂಭದಲ್ಲಿ ಅನಧಿಕೃತವಾಗಿ ಈ ಸಂಗತಿ ಹೊರಬಿದ್ದಿತು. ಲಾಲಾಜಿ ಅವರಿಗೆ ಕೇವಲ ಬಂಧನದ ಶಿಕ್ಷೆಯ ಕಾರಣವಾಗಿಯಷ್ಟೇ ವಿಧಾನಸಭೆಯ ಪ್ರವೇಶದ ಅರ್ಹತೆ ತಪ್ಪಿರಲಿಲ್ಲ. ಪ್ರಧಾನ ನ್ಯಾಯಾಲಯ ಅವರನ್ನು ವಕೀಲರ ಪಟ್ಟಿಯಿಂದ ತೆಗೆದು ಹಾಕಿ ನಿಷಿದ್ಧ ವಿಧಿಸಿದ್ದು ಸಹ ಕಾರಣವಾಗಿತ್ತು. 1917ರ ಯುದ್ಧದ ಸಮಯದಲ್ಲಿ ಸ್ವಯಂ ಘೋಷಿತ ವಿದೇಶವಾಸದಲ್ಲಿದ್ದಾಗ ಅವರು ಹೊರ ತಂದ ಪುಸ್ತಕಗಳನ್ನು ಭಾರತದಲ್ಲಿ ಪ್ರಸಾರಗೊಳ್ಳಲು ಬ್ರಿಟಿಷ್ ಆಡಳಿತಷಾಹಿ ನಿಷೇಧಿಸಿತ್ತು. ಆ ಏಕಪಕ್ಷೀಯ ನಿಷೇಧವನ್ನು ಆಧಾರವಾಗಿಟ್ಟುಕೊಂಡು ಪ್ರಧಾನ ನ್ಯಾಯಾಲಯವು ಸಹ ಲಜಪತರನ್ನು ಕೇಳದೆ ವಕೀಲರ ಪಟ್ಟಿಯಿಂದ ಅವರ ಹೆಸರನ್ನು ತೆಗೆದು ಹಾಕಿತ್ತು. ಈ ಅನರ್ಹತೆಯ ವಿಷಯ ಅವರ ನಿಕಟವಲಯದಲ್ಲೂ ಅನೇಕರಿಗೆ ಗೊತ್ತಿರಲಿಲ್ಲ. ಜೈಲು ಶಿಕ್ಷೆ ಅನುಭವಿಸಿದ್ದೇ ಅನರ್ಹತೆಗೆ ಕಾರಣ ಎಂಬ ಅಭಿಪ್ರಾಯ ಎಲ್ಲೆಡೆ ಇತ್ತು. ಅನರ್ಹತೆಯ ಅಡ್ಡಿಯನ್ನು ನಿವಾರಿಸಿದರೆ ಲಾಲಾಜಿ ವಿಧಾನಸಭೆಯನ್ನು ಪ್ರವೇಶಿಸಬಹುದೆಂಬ ಸಾಮಾನ್ಯ ಅಭಿಪ್ರಾಯ ಮೂಡಿತ್ತು. ಆದರೆ ಲಾಲಾಜಿ ಹಾಗೂ

ಇತರ ವಕೀಲರಿಗೆ ಪ್ರಧಾನ ನ್ಯಾಯಾಲಯ ವಿಧಿಸಿದ್ದ ನಿಷೇಧದ ಹಿನ್ನಲೆಯಲ್ಲಿ ಅದು ಸಾಧ್ಯವೇ ಎಂಬ ಪ್ರಶ್ನೆಯೂ ಕಾಡುತ್ತಿತ್ತು. ಶ್ಯಾಂಲಾಲ್ ನೆಹರು ಆ ಸುದ್ದಿಯನ್ನು ಬಹಿರಂಗ ಪಡಿಸಿದ ದಿನವೇ ರೈಝದ ಹನ್ಸ್‌ರಾಜ್ ಲಾಲಾಜಿ ಅವರಿಗೊಂದು ಪತ್ರವೊಂದನ್ನು ಬರೆದರು. ತಮ್ಮ ಸ್ಥಾನವನ್ನು ತೆರವು ಮಾಡಿಕೊಡುತ್ತಿರುವುದಾಗಿ ತಾವಾಗಿ ತಿಳಿಸಿದರು. ಮುಂದಿನ ಕೆಲವು ತಿಂಗಳ ತನಕ ಆಗಿಂದಾಗ್ಗೆ ಅವರು ತಮ್ಮ ನಿಲುವನ್ನು ಬಹಿರಂಗ ಪಡಿಸುತ್ತಲೇ ಬಂದರು. ಕಾಲದ ಅಗತ್ಯಕ್ಕೆ ಅನುಗುಣವಾಗಿ ಲಾಲಾಜಿ ವಿಧಾನಸಭೆಯಲ್ಲಿರುವುದು ಹೆಚ್ಚು ಸಮಂಜಸ ಎಂದು ಕೇಳಿ ಬರತೊಡಗಿತು.

ಆ ಅಧಿವೇಶನದಲ್ಲೇ ಚುನಾವಣಾ ನಿಯಮವಳಿಗೆ ತಿದ್ದುಪಡಿ ಕೈಗೊಳ್ಳಲಾಯಿತು. ಅದರಲ್ಲಿ ಇನ್ನು ಹೆಚ್ಚಿನ ಬದಲಾವಣೆ ಮಾಡಲಾಯಿತು. ಜೈಲು ಶಿಕ್ಷೆಯ ಆರು ತಿಂಗಳ ಅವಧಿಯನ್ನು ಒಂದು ವರ್ಷದ ಮಿತಿಗೆ ಹೆಚ್ಚಿಸಲಾಯಿತು. ಲಾಲಾಜಿ ಒಟ್ಟಾರೆ ಆ ಅವಧಿಗಿಂತಲೂ ಹೆಚ್ಚು ಕಾಲ ಬಂಧನದ ಶಿಕ್ಷೆ ಅನುಭವಿಸಿದ್ದರಿಂದ ಅವರಿಗೆ ಅರ್ಹತೆ ಸಿಗುವುದೇ ಎಂಬ ಪ್ರಶ್ನೆ ಉದ್ಭವಿಸಿತು. ಸ್ವತಃ ರೈಯುದ ವಿಧಾನಸಭೆಯಲ್ಲಿದ್ದ ಅನೇಕ ಪರಿಣಿತ ವಕೀಲರನ್ನು ಈ ವಿಷಯದಲ್ಲಿ ಕೇಳಿದರು. ಆ ಪೈಕಿ ಎಂ.ಎ. ಜಿನ್ನಾ ಸಹ ಒಬ್ಬರು. ಅವರಾರು ಭರವಸೆದಾಯಕ ಉತ್ತರ ನೀಡಲಿಲ್ಲ. ಸಿಮ್ಲಾ ಅಧಿವೇಶನದ ಸಮಯದಲ್ಲಿ ಗೃಹ ಖಾತೆಯ ಸದಸ್ಯರಾಗಿದ್ದ ಸರ್ ಅಲೆಗ್ಸಾಂಡರ್ ಮಡಿಮನ್ ಅವರನ್ನು ಈ ಬಗ್ಗೆ ಪ್ರಶ್ನಿಸಲಾಯಿತು. ಅನೌಪಚಾರಿಕವಾಗಿ ಅವರು ಉತ್ತರ ಕೊಡುತ್ತಾ, ಲಾಲಾಜಿ ವಿಧಾನಸಭೆಗೆ ಪ್ರವೇಶಿಸಬಹುದೆಂದು ವ್ಯಾಖ್ಯಾನಿಸಿದರು. ಅವರು ನೀಡಿದ ಆ ವ್ಯಾಖ್ಯಾನದ ಪ್ರಕಾರ ವಿವಿಧ ಸಂದರ್ಭಗಳಲ್ಲಿ ನೀಡಿದ ಶಿಕ್ಷೆಗಳೆಲ್ಲವನ್ನು ಒಟ್ಟಿಗೆ ಪರಿಗಣಿಸುವುದಿಲ್ಲ. ಒಂದು ಅವಧಿಗೆ ಒಂದು ವರ್ಷ ನಿರಂತರವಾಗಿ ಶಿಕ್ಷೆ ಅನುಭವಿಸಿದರೆ ಮಾತ್ರ ಲೆಕ್ಕಕ್ಕೆ ಬರುತ್ತಿತ್ತು. ಲಾಲಾಜಿ ಅವರಿಗೆ ಯಾವುದೇ ಪ್ರಸಂಗದಲ್ಲೂ ವಿಧಿಸಿದ ಶಿಕ್ಷೆ ಒಂದು ವರ್ಷದ ಅವಧಿ ದಾಟಿರಲಿಲ್ಲ. ಆ ವ್ಯಾಖ್ಯಾನದ ಹಿನ್ನಲೆಯಲ್ಲಿ ಅವರು ಸದಸ್ಯರಾಗುವ ಅರ್ಹತೆ ಹೊಂದಿದ್ದರು.

ಅದಾದ ನಂತರ ಅನಾರೋಗ್ಯದಿಂದ ಲಾಲಾಜಿ ಸೋಲಾನ್ ಗಿರಿಧಾಮ ಸೇರಿದ್ದರು. ಚೇತರಿಸಿಕೊಂಡು ಬಂದ ನಂತರ ಚುನಾವಣಾ ಕಾಯ್ದೆಗೆ ತಿದ್ದುಪಡಿ ತರುವ ನಿಯಮದ ವಿಶ್ಲೇಷಣೆಯು ತಮಗೆ ಅನುಕೂಲಕರವಾಗಿದೆ ಎಂದು ಅವರು ರೈಝದಗೆ ತಿಳಿಸಿದರು. ತಾವು ಅರ್ಹತೆ ಹೊಂದಿರುವುದಾಗಿ ಹೇಳಿದರು. ರೈಝದ ತಮ್ಮ ಸ್ಥಾನಕ್ಕೆ ರಾಜೀನಾಮೆ ಪತ್ರವನ್ನು ಬರೆದರು. ಲಾಹೋರಿಗೆ ಖುದ್ದಾಗಿ ಬಂದು ಅದನ್ನು ಲಾಲಾಜಿ ಅವರ ಕೈಗಿತ್ತರು.

ಲಾಲಾಜಿ ಅವರಿಗಿದ್ದ ಅನರ್ಹತೆಯ ಇತರ ಕಾರಣಗಳ ಬಗ್ಗೆ, ಈ ಮಧ್ಯೆ, ಅವರ ಗೆಳೆಯರು ಪಂಜಾಬ್ ಅಧಿಕಾರಿಗಳೊಂದಿಗೆ ಪ್ರಸ್ತಾಪಿಸಿ ವಿವರಣೆಗಳನ್ನು ಪಡೆದುಕೊಂಡರು. ಲಾಲಾಜಿ ಅವರು ವಿಧಾನಸಭೆ ಪ್ರವೇಶಿಸುವುದಕ್ಕೆ ಯಾವುದೇ ಅಡ್ಡಿ ಒಡ್ಡುವುದಿಲ್ಲ ಎಂಬ ಸೂಚನೆಯು ಅಧಿಕಾರಸ್ಥರಿಂದ ಸಿಕ್ಕಿತು. ಒಂದು ವೇಳೆ ಯಾವುದೇ ತೊಡಕು ಇಣುಕು ಹಾಕಿದರೂ ಅದನ್ನು ಉಚ್ಚ ನ್ಯಾಯಾಲಯದಲ್ಲಿ ಸುಲಭದಲ್ಲಿ

ನಿವಾರಿಸಿಕೊಳ್ಳಬಹುದೆಂದು ಕಂಡು ಬಂದಿತು. ಕಣದಲ್ಲಿ ಲಾಲಾಜಿ ಅವರನ್ನು ಎದುರಿಸುವ ಎದುರು ಅಭ್ಯರ್ಥಿ ಯಾರೂ ಇರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರ ನಿರ್ವಾಚನಾಧಿಕಾರಿಯೊಂದಿಗೆ ವಿಧ್ಯುಕ್ತ ಕ್ರಮಗಳನ್ನು ಕೈಗೊಳ್ಳಲಾಯಿತು. ವಿಧಾನಸಭೆ ಪ್ರವೇಶಿಸುವುದು ನಿಚ್ಚಳವೆಂಬುದನ್ನು ಲಾಲಾಜಿಯು ಖಾತ್ರಿ ಪಡಿಸಿಕೊಂಡರು. ಹನ್ಸರಾಜ್ ರಾಜೀನಾಮೆ ಪತ್ರ ಸ್ವೀಕೃತವಾಯಿತು. ಪತ್ರಿಕೆಗಳ ಮುಖಾಂತರ ಅವರು ಹೇಳಿಕೆಯನ್ನು ನೀಡಿ ತಮ್ಮನ್ನು ಆರಿಸಿ ಕಳುಹಿಸಿದ್ದ ಕ್ಷೇತ್ರದ ಜನತೆಗೆ ಕೃತಜ್ಞತೆ ಸಲ್ಲಿಸಿದರು. ಯಾವುದೇ ವಿರೋಧವಿಲ್ಲದೆ ಸರ್ವಾನುಮತದಿಂದ ತಮ್ಮನ್ನು ಆರಿಸಿದ್ದಕ್ಕಾಗಿ ಜನತೆಗೆ ಸದಾ ತಾವು ಅಭಾರಿಯಾಗಿರುವುದಾಗಿ ರೈಝುದ ತಮ್ಮ ವಿದಾಯ ಸಂದೇಶದಲ್ಲಿ ತಿಳಿಸಿದರು. ಲಾಲಾಜಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡುತ್ತಿರೆಂಬ ವಿಶ್ವಾಸ ತಮಗಿರುವುದಾಗಿಯೂ ಹೇಳಿದರು. ಶಾಸನಸಭೆಯಲ್ಲಿ ತಮಗೆ ಸಹಕಾರ ಇತ್ತವರು ಮತ್ತು ಸಹವರ್ತಿಗಳಿಗೆಲ್ಲಾ ಅಭಿನಂದನೆ ಸಲ್ಲಿಸಿದ ರೈಝುದ ಪಂಡಿತ್ ಮೋತಿಲಾಲ್ ನೆಹರು ಅವರಿಗೆ ಲಾಲಾಜಿ ಪ್ರವೇಶದಿಂದ ''ಅತ್ಯುತ್ತಮ ಗೆಳೆಯರು, ನೈಜ ಸಹವರ್ತಿಯೂ'' ಜೊತೆಗೂಡಿದಂತಾಗುತ್ತದೆ ಎಂದು ಹೇಳಿದರು.

ಉಪ ಚುನಾವಣೆಗೆ ಪ್ರಕಟಣೆ ಹೊರಬಿದ್ದಿತು. ತಂತಿ ಸಂದೇಶ ಕೊಟ್ಟು ದೆಹಲಿಯಲ್ಲಿದ್ದ ಲಾಲಾಜಿ ಅವರನ್ನು ಜಲಂಧರ್‌ಗೆ ಬರಮಾಡಿಕೊಳ್ಳಲಾಯಿತು. ಲಾಲಾಜಿ ಮತ್ತು ರೈಝುದ ಇಬ್ಬರು ನಾಮಪತ್ರಗಳನ್ನು ಸಲ್ಲಿಸಿದರು. 1925ರ ಡಿಸೆಂಬರ್ 6ರಂದು ಮುಂಬೈಯಲ್ಲಿ ಹಿಂದೂ ಸಮ್ಮೇಳನ ಏರ್ಪಟ್ಟು ಅದರ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದರಿಂದ ಅವರು ನಾಮಪತ್ರ ವಾಪಸಾತಿಯ ದಿನವೇ ಅಲ್ಲಿಗೆ ಹೊರಟು ಬಿಟ್ಟರು. ಆ ದಿನ (ಲಾಲಾಜಿ ಹೊರಟ ನಂತರ) ರೈಝುದ ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರು. ಲಾಲಾಜಿ ಅವಿರೋಧವಾಗಿ ಆಯ್ಕೆಗೊಂಡರೆಂದು ಘೋಷಿಸಲಾಯಿತು. ದಿ ಪೀಪಲ್ ಪತ್ರಿಕೆಯ ಮೂಲಕ (ಡಿ. 13ರಂದು) ಅವರು ರೈಝುದ ಹನ್ಸ್‌ರಾಜ್‌ರಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿದರು. ಅವಿರೋಧವಾಗಿ ತಮ್ಮನ್ನು ಆಯ್ಕೆ ಮಾಡಿದ ಕ್ಷೇತ್ರಕ್ಕೆ ಋಣಿಯಾಗಿದ್ದೇನೆಂದು ಸಾರಿದರು. ತಮ್ಮ ಈ ಆಯ್ಕೆಗೆ ಯಾವುದೇ ಅಡ್ಡಿ 'ಆಗದಂತೆ ನೋಡಿಕೊಂಡ' ಅಧಿಕಾರ ವರ್ಗಕ್ಕೂ ಸಹ ಲಾಲಾಜಿ ಅಭಿವಂದನೆ ತಿಳಿಸಿದರು. ಆ ಹೇಳಿಕೆಯ ಕಡೆ ಭಾಗ ಹೀಗಿತ್ತು:

''ವಿಧಾನಸಭೆಯಲ್ಲಿ ನನ್ನ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳಲು ನನಗೆ ಸ್ವಲ್ಪ ಕಾಲಾವಕಾಶ ಬೇಕಾಗಿದೆ'' ಎಂದು ಹೇಳಿದರು.

ಇಲ್ಲಿ ಈ ಪ್ರಸ್ತಾಪವನ್ನು ಉದ್ದೇಶಪೂರ್ವಕವಾಗಿ ನೀಡಲಾಗಿದೆ. ಸ್ವರಾಜ್ಯ ಪಕ್ಷವನ್ನು ಸೇರುವುದಾಗಿ ಚುನಾವಣೆಯ ಸಮಯದಲ್ಲಿ ಲಾಲಾಜಿ ಯಾವುದೋ ಭರವಸೆ ನೀಡಿದ್ದಾರೆ ಎಂಬ ವಿವಾದ ಮುಂದಿನ ಹಂತದಲ್ಲಿ ವ್ಯಾಪಕವಾಗುವ ಹಿನ್ನಲೆಯಲ್ಲಿ ನಮಗೆ ಈ ವಿವರಣೆ ಅಗತ್ಯವಾಗುತ್ತದೆ. ಪಕ್ಷದ ಕಟ್ಟಾ ನೀತಿ ನಡವಳಿಕೆಗಳಿಕೆಗೆ ಅನುಗುಣವಾಗಿ ನಡೆದುಕೊಳ್ಳುವುದಾಗಿದ್ದರೆ ರೈಝುದ ಹನ್ಸ್‌ರಾಜ್ ತಮ್ಮ ತ್ಯಾಗ ಪತ್ರವನ್ನು ಪಕ್ಷದ ನಾಯಕರಿಗೆ ಕೊಡಬೇಕಾಗಿತ್ತು. ಲಾಲಾಜಿಯವರಿಗಲ್ಲ. ಹೆಚ್ಚು ಕಡಿಮೆ ಒಂದು

ವರ್ಷದ ತನಕ ನಡೆದ ಬೆಳವಣಿಗೆಯಲ್ಲಿ ರೈಝದ ಲಾಲಾಜಿಯವರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡುತ್ತಿರುವುದಾಗಿ ಪದೇ ಪದೇ ಪ್ರಕಟಿಸಿದ್ದರು. ಯಾವ ಹಂತದಲ್ಲಿಯೂ ಅವರು ತಾವು ತಮ್ಮ ಸ್ಥಾನವನ್ನು ತೆರವು ಮಾಡುವ ವಿಷಯದಲ್ಲಿ ಯಾವುದೇ ಷರತ್ತು ಅಥವಾ ನಿರೀಕ್ಷೆ ಮುಂದು ಮಾಡಿರಲಿಲ್ಲ. ಅವರು ಲಾಲಾಜಿಯೊಂದಿಗೆ ನಡೆಸಿದ ಪತ್ರ ವ್ಯವಹಾರಗಳಲ್ಲಿಯಾಗಲಿ, ಖುದ್ದಾಗಿ ಮಾತನಾಡಿದಾಗಲಾಗಲಿ ಯಾವುದೇ ಷರತ್ತು ತಮ್ಮ ನಿರೀಕ್ಷೆಯ ಕಿಂಚಿತ್ತೂ ಸೂಚನೆ ಸಹ ವ್ಯಕ್ತಪಡಿಸಿರಲಿಲ್ಲ. ರೈಝದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಅಂತಿಮ ಸಮಯದಲ್ಲೂ ಸಹ 'ಲಾಲಾಜಿ' ಅವರಿಗಾಗಿಯೇ ಯಾವುದೇ ಷರತ್ತು ಇಲ್ಲದೆ ಬಿಟ್ಟು ಕೊಡುತ್ತಿದ್ದಾರೆ ಎಂದು ಲಾಲಾಜಿ ಭಾವಿಸಿದರೇ ಹೊರತು ತಮ್ಮ ಪಕ್ಷದ ಓರ್ವ ಸದಸ್ಯರಿಗೆ ಅಥವಾ ತಮ್ಮ ಪಕ್ಷಕ್ಕೆ ಮುಂದೆ ಸದಸ್ಯರಾಗುವವರಿಗೆ ಇಲ್ಲವೇ ಈ ಪಕ್ಷದ ಅಥ'ವಾ ಆ ಪಕ್ಷದ ಕಾರ್ಯಕರ್ತರಾಗಿರುವವರೊಬ್ಬರಿಗೆ ಆ ಸ್ಥಾನವನ್ನು ತೆರವು ಮಾಡಿಕೊಡುತ್ತಿದ್ದಾರೆಂದು ಖಂಡಿತವಾಗಿಯೂ ಭಾವಿಸಿರಲಿಲ್ಲ. ರೈಝದ ಆಶಿಸಿದ್ದ ಒಂದೇ ಒಂದು ಸಂಗತಿ ತಮ್ಮ ಕ್ಷೇತ್ರದ ಜನತೆಗೆ ವಿದಾಯ ಹೇಳುವ ಸಮಯದಲ್ಲಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ವ್ಯಕ್ತವಾಗಿತ್ತು.

ಪಂಡಿತ ಮೋತಿಲಾಲ್ ನೆಹರು ಅವರಿಗೆ ಲಾಲಾಜಿಯವರ ಈ ಪ್ರವೇಶದಿಂದ 'ಓರ್ವ ಅತ್ಯುತ್ತಮ ಗೆಳೆಯ ಹಾಗೂ ನೈಜ ಸಹವರ್ತಿ' ಸಿಕ್ಕಿದಂತಾಗುತ್ತದೆ ಎಂಬ ಆಶಯ ಅದಾಗಿತ್ತು. ಆ ಆಶಯ ಅವರ ಸ್ವಂತ ಆಕಾಂಕ್ಷೆ ಆಗಿತ್ತು. ಲಾಲಾಜಿ ಕೊಟ್ಟ ಭರವಸೆಯಾಗಲಿ, ಲಾಲಾಜಿಯವರಿಂದ ಪಡೆದ ಭರವಸೆಯಾಗಲಿ ಅದಾಗಿರಲಿಲ್ಲ. ಅಲ್ಲದೆ ಲಾಲಾಜಿ ಸ್ವತಂತ್ರ ಪಕ್ಷ ಸೇರಬೇಕೆಂದು ಅವರೇನು ಹೇಳಿರಲೂ ಇಲ್ಲ. ಹಾಗಿದ್ದು ಅವರ ಆ ಆಶಯಕ್ಕೆ ಯಾವುದೇ ಭರವಸೆಯ ಆಧಾರವಿತ್ತೇ? ಇದಕ್ಕೆ ಉತ್ತರ ಕಂಡು ಕೊಳ್ಳಬೇಕಾದರೆ ಇನ್ನೂ ಎರಡು ಹಂತದ ವಿವರಣೆಗಳನ್ನು ಪರಿಶೀಲಿಸಬೇಕಾಗುತ್ತದೆ. ರೈಝದ ಹನ್ಸ್‌ರಾಜ್ ಹೇಳಿಕೆ ನೀಡುವುದಕ್ಕೆ ಮೊದಲ ಒಂದು ಸಣ್ಣ ಮಾತುಕತೆ ಮತ್ತು ಅದಕ್ಕೆ ಪೂರಕವಾಗಿ ಬರೆದ ಪ್ರಸ್ತಾಪ ಇಲ್ಲಿ ಬರುತ್ತದೆ. ರೈಝದ ಹನ್ಸ್‌ರಾಜ್ ತಮ್ಮ ರಾಜೀನಾಮೆ ಪತ್ರವನ್ನು ಬರೆದು ಅದನ್ನು ಲಾಲಾಜಿಯವರ ಕೈಗಳಿಗೆ ಕೊಟ್ಟ ನಂತರ ಒಂದು ಮಾತು ಹೇಳಿದರು. ತಾವು ಪಂಡಿತ್ ಮೋತಿಲಾಲರನ್ನು ಬಹಳ ಗೌರವದಿಂದ ಕಾಣುತ್ತಿರುವುದಾಗಿಯೂ ಒಂದು ವೇಳೆ ಅವರು (ಲಾಲಾಜಿ) ಪಂಡಿತ್ ಅವರಿಗೆ ಅನಾನುಕೂಲವಾಗುವ ರೀತಿಯಲ್ಲಿ ನಡೆದುಕೊಂಡರೆ ಅದರಿಂದ ತನಗೆ ನೋವಾಗುತ್ತದೆ ಎಂದು ಆ ಮಾತಿನಲ್ಲಿ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಲಾಲಾಜಿ ಮೋತಿಲಾಲರು ತಮ್ಮಲ್ಲಿ ಓರ್ವ ಮಿತ್ರನನ್ನು ಹಾಗೂ ನೈಜ ಸಹವರ್ತಿಯನ್ನು ಕಾಣುತ್ತಾರೆಂದು ಹೇಳಿದ್ದರು. ಅದು ತೀರಾ ಸಂಕ್ಷಿಪ್ತವಾದ ಮಾತುಕತೆಯಾಗಿತ್ತು. ಅದು ಲೋಕಾಭಿರಾಮದ ಮಾತುಕತೆಯಾಗಿತ್ತು. ನಂತರ ರೈಝದ ಪತ್ರಿಕೆಗಳಿಗೆ ಹೇಳಿಕೆ ನೀಡಿದಾಗ ಅದರಲ್ಲಿ ಲಾಲಾಜಿ ಹೇಳಿದ್ದ ಮಾತುಗಳನ್ನೇ ಪುನರುಚ್ಚರಿಸಿದರು. ಲಾಲಾಜಿ ಅದನ್ನು ರೈಝದ ಬಳಸಿದ ಅರ್ಥದಲ್ಲಿ ಹೇಳಿರಲಿಲ್ಲ. ಹೀಗಾಗಿ ರೈಝದ ನೀಡಿದ ಹೇಳಿಕೆಯಲ್ಲಿ ತಪ್ಪು ಕಲ್ಪನೆ ಹಾಗೂ ತಪ್ಪು ತಿಳುವಳಿಕೆಯಾಗುವ ಸಾಧ್ಯತೆ ಇತ್ತು. ಅದನ್ನು ಮನಗಂಡ

ಲಾಲಾಜಿ ರೈಝುದ ಹನ್ಸ್‌ರಾಜ್‌ರಿಗೆ ಪತ್ರವೊಂದನ್ನು ಬರೆದರು. ತಮ್ಮ ಸ್ಥಾನವನ್ನು ತೆರವು ಮಾಡುತ್ತಿರುವುದರ ಹಿಂದೆ ಯಾವುದೇ ಷರತ್ತಾಗಲಿ ಪ್ರತಿಫಲ ಅಪೇಕ್ಷೆಯಾಗಲಿ ಇರುವುದಾದರೆ ತಾವು ಆ ಸ್ಥಾನವನ್ನು ಸ್ವೀಕರಿಸಲು ಸಿದ್ಧವಿಲ್ಲವೆಂದೂ, ತೆರವಾದ ಸ್ಥಾನ ಇನ್ನು ಭರ್ತಿಯಾಗದಿರುವುದರಿಂದ ನೀವೇ ಪುನರಾಯ್ಕೆಗೊಳ್ಳಬಹುದೆಂದು ತತ್ಸಂಬಂಧದ ಎಲ್ಲಾ ಖರ್ಚುವೆಚ್ಚಗಳನ್ನು ತಾವೇ ಭರಿಸುವುದಾಗಿ ತಿಳಿಸಿದರು.

ರೈಝುದ ಹನ್ಸ್‌ರಾಜ್ ಯಾವುದೇ ರೀತಿಯಲ್ಲೂ ಮುಂದೆ ಆ ವಿಷಯದಲ್ಲಿ ಯಾವುದೇ ನಡವಳಿಕೆ ವ್ಯಕ್ತಪಡಿಸಿದ್ದು ಕಂಡು ಬರಲಿಲ್ಲ. ತಾವು ನೀಡಿದ್ದ ಹೇಳಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳಲೂ ಇಲ್ಲ. ಅಥವಾ ಅದರ ಬಗ್ಗೆ ಲಾಲಾಜಿಯವರಿಗೆ ವಿವರಣೆಯನ್ನು ಕೊಡಲಿಲ್ಲ. ಪುನರಾಯ್ಕೆ ಮಾಡಿಕೊಳ್ಳಲು ಅವರು ಮುಂದಿಟ್ಟ ಸಲಹೆಯನ್ನು ಸ್ವೀಕರಿಸಲಿಲ್ಲ. ಮತ್ತೆ ಇಬ್ಬರು ಪರಸ್ಪರ ಭೇಟಿಯಾಗಿದ್ದು ಜಲಂಧರ್‌ನಲ್ಲಿ. ನಾಮಪತ್ರ ಸಲ್ಲಿಸುವ ವೇಳೆಯಲ್ಲಿ ಮಾತ್ರ. ಇಬ್ಬರು ನಾಮಪತ್ರ ಸಲ್ಲಿಸಿದರು. ಪತ್ರದ ಬಗ್ಗೆಯಾಗಲಿ, ಪತ್ರಿಕಾ ಹೇಳಿಕೆಯ ಬಗ್ಗೆಯಾಗಲಿ ಯಾವುದೇ ಪ್ರಸ್ತಾಪ ನಡೆಯಲಿಲ್ಲ. ನಾಮಪತ್ರ ಸಲ್ಲಿಸಿದ ನಂತರ ಲಾಲಾಜಿ ಮುಂಬೈಗೆ ತೆರಳಿದರು. ರೈಝುದ ಹನ್ಸ್‌ರಾಜ್ ತಮ್ಮ ಉಮೇದುವಾರಿಕೆ ಕೋರಿದ ಪತ್ರಗಳನ್ನು ಹಿಂದಕ್ಕೆ ಪಡೆದರು. ತನ್ಮೂಲಕ ಲಾಲಾಜಿ ಅವಿರೋಧವಾಗಿ ಆಯ್ಕೆಗೊಳ್ಳುವಂತೆ ಮಾಡಿದರು.

1925ರ ಡಿಸೆಂಬರ್ ಆರಂಭದಲ್ಲಿ ಲಾಲಾಜಿ ಮರಳಿದರು. ಆ ತಿಂಗಳ ಅಂತ್ಯದಲ್ಲಿ ಕಾನ್ಪುರದಲ್ಲಿ ಏರ್ಪಟ್ಟ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಸ್ವರಾಜ್ ಪಕ್ಷವನ್ನು ಸೇರುವ ಸಂಬಂಧದಲ್ಲಿ ಯಾವುದೇ ಕಟ್ಟುಪಾಡಿಗೆ ಒಳಪಡಲಿಲ್ಲ. ಬದಲಾಗಿ ಕಾನ್ಪುರದ ಬೆಳವಣಿಗೆಯೊಂದರಲ್ಲಿ ಅವರು ಪಂಡಿತ್ ಮೋತಿಲಾಲ್‌ರಿಂದ ದೂರವಾಗುವಂಥ ಪ್ರಸಂಗವೊಂದು ಉದ್ಭವಿಸಿತು. ಜನವರಿ 17ರ ದಿ ಪೀಪಲ್ ಸಂಚಿಕೆಯಲ್ಲಿ ಪ್ರಕಟಗೊಂಡ ಅವರ ಲೇಖನ ಈ ಬಗ್ಗೆ ಬೆಳಕು ಚೆಲ್ಲುತ್ತದೆ:

''ನಾನು ಸ್ವರಾಜ್ ಪಕ್ಷದ ಸದಸ್ಯನಲ್ಲ: ಸದಸ್ಯನಾಗ ಬೇಕಾಗಿಯೂ ಲ್ಲ. ನಾನೋರ್ವ ಕಾಂಗ್ರೆಸ್ಸಿಗನಾಗಿ ಕಾರ್ಯತಃ ಓರ್ವ ಸ್ವರಾಜ್ ವಾದಿಯಾಗಿದ್ದೇನೆ''

ವಿಧಾನಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಅವರು ಇನ್ನೂ ಪಕ್ಷವನ್ನು ಸೇರಿರಲಿಲ್ಲ. ಜನವರಿ 25ರಂದು ಪಕ್ಷಕ್ಕೆ ಸೇರ್ಪಡೆಯಾಗುವ ಮೊದಲು ವಿಧಾನಸಭೆಯ ಅನೇಕ ಅಧಿವೇಶನಗಳಲ್ಲಿ ಅವರು ಪಾಲ್ಗೊಂಡು ಆಗಿತ್ತು. ವಿಧ್ಯುಕ್ತವಾಗಿ ಪಕ್ಷಕ್ಕೆ ಸೇರುವ ಐದು ವರ್ಷಗಳ ಮೊದಲೇ ಅವರು ಪಂಡಿತ್ ಮೋತಿಲಾಲರು ಸ್ವರಾಜ್ಯ ಪಕ್ಷಕ್ಕೆ ಸೇರುವಂತೆ ನೀಡಿದ್ದ ಆಹ್ವಾನವನ್ನು ಒಪ್ಪಿಕೊಂಡಿದ್ದರು. ಈಗ ವಿಧ್ಯುಕ್ತವಾಗಿ ಪಕ್ಷಕ್ಕೆ ಸೇರುವ ಮುನ್ನ ಪಕ್ಷದ ನಾಯಕರಾಗಿದ್ದ ಅವರಿಗೆ ಪತ್ರವೊಂದನ್ನು ಬರೆದರು.

ಜನವರಿ 20, 1926

ನನ್ನ ಪ್ರಿಯ ಪಂಡಿತ್‌ಜಿ,

ವಿಧಾನಸಭೆಯಲ್ಲಿ ಸ್ವರಾಜ್ ಪಕ್ಷವನ್ನು ಸೇರಲು ನನಗೆ ಆಮಂತ್ರಣ ಕೊಟ್ಟಿರುವುದಕ್ಕೆ ನಾನು ನಿಮ್ಮನ್ನು ಅಭಿನಂದಿಸಬೇಕಾಗಿದೆ. ಕಳೆದ ಬಾರಿ ನಿಮ್ಮನ್ನು ನಾನು

ಭೇಟಿ ಮಾಡಿದಾಗ ವ್ಯಕ್ತಿಗತವಾಗಿ ನಿಮ್ಮ ಆಮಂತ್ರಣವನ್ನು ಒಪ್ಪಿಕೊಳ್ಳಲು ಮನಸ್ಸು ಮಾಡಿದ್ದೇನೆ. ನನ್ನ ಅಂತಿಮ ನಿರ್ಧಾರ ನೀಡುವ ಮೊದಲು ನಾನು ನನ್ನ ಲಾಹೋರ್ ಗೆಳೆಯರನ್ನು ಸಹಮತಕ್ಕೆ ತೆಗೆದುಕೊಳ್ಳಬೇಕಾಗಿದೆ. ಮುಂದಿನ ಮಂಗಳವಾರ ನಿಮಗೆ ಅಂತಿಮ ಉತ್ತರವನ್ನು ನೀಡುತ್ತೇನೆ ಎಂದು ತಿಳಿಸಿದ್ದೆ. ಅದಕ್ಕನುಗುಣವಾಗಿ ನಾನು ನನ್ನ ಗೆಳೆಯರೊಂದಿಗೆ ಸಮಾಲೋಚಿಸಿದ್ದೇನೆ. ಆ ಸಮಾಲೋಚನೆಯ ಪ್ರತಿಫಲವೇ ಈ ಪತ್ರ. ಪಕ್ಷ ಸೇರುವ ಹಂತದಲ್ಲಿ ನನ್ನ ನಿಲುವನ್ನು ಸ್ಪಷ್ಟಪಡಿಸಬಯಸುತ್ತೇನೆ. ಈಗಾಗಲಿ ಅಥವಾ ಮುಂದೆಯಾಗಲಿ ಯಾವುದೇ ತಪ್ಪು ಗ್ರಹಿಕೆಗೆ ಅವಕಾಶ ಇರಬಾರದೆಂದು ನನ್ನ ಗ್ರಹಿಕೆ. ಪಕ್ಷದ ನಿಯಮಗಳನ್ನು ನಾನು ಓದಿದ್ದೇನೆ. ನನ್ನ ನಿಲುವು ಅದಕ್ಕೆ ಅಸಂಗತವಾಗಿದೆ ಎಂದು ನಾನು ಭಾವಿಸಿಕೊಂಡಿಲ್ಲ.

(ಅ). ವಿಧಾನಸಭೆಯ ಕೆಲಸಗಳಲ್ಲಿ ನನಗೆ ನಂಬಿಕೆ ಇದೆ. ವಿಧಾನಸಭೆ ಮತ್ತು ಪರಿಷತ್ತುಗಳನ್ನು ಬಹಿಷ್ಕರಿಸಬೇಕೆಂಬುದನ್ನು ನಾನು ವಿರೋಧಿಸುತ್ತೇನೆ. ಸರ್ಕಾರದ ಕಾಣಿಕೆ ರೂಪದ ಅಧಿಕಾರಗಳನ್ನು ಸ್ವರಾಜ್‌ವಾದಿಗಳು ಸ್ವೀಕರಿಸುವುದು ನನಗೆ ಸಮ್ಮತವಲ್ಲ.

(ಆ). ಇಡೀಯಾಗಿ ಎಲ್ಲವನ್ನು ವಿರೋಧಿಸಬೇಕೆಂಬುದರಲ್ಲಿ ನನಗೆ ವಿಶ್ವಾಸವಿಲ್ಲ. ಅದನೆಂದು ನಾನು ಒಪ್ಪಿಕೊಂಡವನೂ ಅಲ್ಲ.

(ಇ). ಕೋಮು ಪ್ರಶ್ನೆಗಳು ಬಂದಾಗ ನನ್ನ ನಡವಳಿಕೆಯ ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಳ್ಳಲು ನಾನು ಬಯಸುತ್ತೇನೆ. ಕೋಮು ಪ್ರಶ್ನೆಗಳನ್ನು ಪಕ್ಷದ ವೇದಿಕೆಯಲ್ಲಿ ನಿರ್ಧರಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

(ಈ). ಕಾರ್ಮಿಕರು ಮತ್ತು ಬಂಡವಾಳಷಾಹಿತನದ ವಿವಾದ ಬಂದಾಗ ನಾನು ಕಾರ್ಮಿಕರ ಪರ ವ್ಯಕ್ತಿಯಾಗುತ್ತೇನೆ. ನನಗೆ ತಿಳಿದಿರುವ ಮಟ್ಟಿಗೆ ಸ್ವರಾಜ್ಯ ಪಕ್ಷದ ಬಹುಮತ ಅಭಿಪ್ರಾಯವು ಅದೇ ಸ್ತರದಲ್ಲಿದೆ ಅನಿಸುತ್ತದೆ. ಈ ವಿಷಯಗಳ ಆಧಾರದ ಮೇಲೆ ಪಕ್ಷದ ಸದಸ್ಯನಾಗಲು ನಾನು ಸಂತೋಷ ಪಡುತ್ತೇನೆ.

ತಮ್ಮ ವಿಶ್ವಾಸಿ

ಲಜಪತ್‌ರಾಯ್

ಅಷ್ಟೇ ಅಲ್ಲ ಅವರು ಮೋತಿಲಾಲರಿಗೆ ಇನ್ನೂ ಒಂದು ಸಂಗತಿಯನ್ನು ಸ್ಪಷ್ಟಪಡಿಸಿದರು. ತಮ್ಮ ದಿ ಪೀಪಲ್ ಮತ್ತು ದೈನಿಕ ವಂದೇ ಮಾತರಂ ಪತ್ರಿಕೆಗಳು ಪಕ್ಷದ ನಿಯಂತ್ರಣಕ್ಕೆ ಒಳಪಟ್ಟ ವಾಣಿಗಳಾಗುವುದಿಲ್ಲ ಎಂದು ಹೇಳಿದರು. ಎರಡೂ ಪತ್ರಿಕೆಗಳು ಈಗಿರುವಂತೆಯೇ ಮುಕ್ತವಾಗಿರುತ್ತವೆ. ಪಕ್ಷದ ಹಣೆಪಟ್ಟಿ ಹಚ್ಚಿ ಕೊಳ್ಳುವುದಿಲ್ಲ ಎಂದು ತಿಳಿಸಿದರು.

ಈ ಭರವಸೆಗಳು ಮತ್ತು ವಿಧಿ ವಿಧಾನಗಳಿಗಿಂತಲೂ ಹೊರತಾಗಿ ಅವರು ವಿಧಾನಸಭೆಯನ್ನು ಪ್ರವೇಶಿಸಿದ್ದ ಸಮಯದಲ್ಲಿದ್ದ ಅವರ ರಾಜಕೀಯ ನಿಲುವು ಏನಾಗಿತ್ತು? 1925ರ ಜುಲೈನಲ್ಲಿ ದಿ ಪೀಪಲ್ ಸಾಪ್ತಾಹಿಕವನ್ನು ಅವರು ಆರಂಭಿಸಿದ್ದರು. ಅದಕ್ಕೆ

ಮೊದಲು ಸಹ ಅವರು ಪತ್ರಿಕೆಗಳಿಗೆ ಆಗಿಂದಾಗ್ಗೆ ಬರೆಯುತ್ತಿದ್ದರು. ತಮ್ಮ ನಿಲುವು ಧೋರಣೆಗಳನ್ನು ವ್ಯಕ್ತಪಡಿಸುತ್ತಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ಅವರು ದುರ್ಬಲಗೊಂಡಿದ್ದದ್ದು ನಿಜ. ಹಾಗಾಗಿ ಯಾವುದನ್ನು ಅವರು ಒಪ್ಪಿಕೊಳ್ಳುತ್ತಾರೆ, ಯಾವುದನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ಅಂಶವನ್ನು ಊಹಿಸಲು ಯಾರಿಂದಲೂ ಸಾಧ್ಯವಿಲ್ಲ. ಚೌರಿಚೌರಾ ಅತಿರೇಕದೊಂದಿಗೆ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡಾಗ ರಾಜಕೀಯದ ಬಗ್ಗೆ ಮರು ಆಲೋಚನೆ ಆರಂಭಿಸಿದ್ದರು. ಜೈಲಿನಿಂದಲೇ ತಮ್ಮ ಲೇಖನಗಳನ್ನು (ಕೃತಿಕಾರರ ಹೆಸರು ಅಷ್ಟೇನೂ ರಹಸ್ಯವಾಗಿ ಇರಲಿಲ್ಲ) ಬರೆದು ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸಿದ್ದರು. ಅದೆಲ್ಲವೂ ಸ್ಪಷ್ಟವಾಗಿ ಸ್ವರಾಜ್‌ವಾದಿಯ ಧೋರಣೆಯಾಗಿತ್ತು. ಅಂದರೆ ಶಾಸಕಾಂಗಳನ್ನು ಕಾಂಗ್ರೆಸ್ಸಿಗರು ಆಕ್ರಮಿಸಿಕೊಳ್ಳಬೇಕೆಂದು ಅವರು ಬಯಸಿದ್ದರು. ಕೈದಿಯಾಗಿದ್ದುಕೊಂಡೇ ಈ ಪಕ್ಷವನ್ನು ಸ್ಥಾಪಿಸುವುದಕ್ಕೆ ಬುನಾದಿ ಹಾಕಲು ಅವರು ಸಿ.ಆರ್. ದಾಸ್ ಅವರಿಗೆ ಸಹಾಯ ಮಾಡಿದ್ದರು. ಹೊರಬಂದ ನಂತರ, ಆರೋಗ್ಯ ವಿಶ್ರಾಂತಿ ಪಡೆಯುತ್ತಿದ್ದ ಸಮಯದಲ್ಲೂ ಸ್ವರಾಜ್‌ವಾದಿ ಅಭ್ಯರ್ಥಿಗಳ ಪರವಾಗಿ ತಮ್ಮ ಕೊಡುಗೆ ಸಲ್ಲಿಸಿದ್ದರು. ಪಂಜಾಬಿನಲ್ಲಿ ಇಡೀ ಪ್ರಚಾರ ಮತ್ತು ಉಸ್ತುವಾರಿ ಅವರದೇ ಆಗಿತ್ತು. ಮುಂದೆ ಇಂಗ್ಲೆಂಡಿಗೆ ಹೋದಾಗಲೂ ಅವರು ಮೋತಿಲಾಲರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ಸ್ವರಾಜ್ ಪಕ್ಷದ ಪರವಾಗಿ ಲೇಬರ್ ಪಕ್ಷದೊಂದಿಗೆ ಮಾತುಕತೆ ಸಹ ನಡೆಸಿದ್ದರು. ಆದರೆ ಆ ಪಕ್ಷವನ್ನು ಸೇರಿರಲಿಲ್ಲ. ಆ ಪಕ್ಷದ ಶಿಸ್ತಿಗೆ ಬದ್ಧರಾಗಿರಲಿಲ್ಲ. ಅಲ್ಲಿ ತಪ್ಪಾದಾಗಲೆಲ್ಲಾ ತಮಗೆ ಸಮಂಜಸ ಎಂದು ಕಂಡು ಬಂದಾಗಲೆಲ್ಲಾ ಅದನ್ನು ಟೀಕಿಸುವ ಇಲ್ಲವೇ ಪ್ರಶಂಸಿಸುವ ತಮ್ಮ ಸ್ವಾತಂತ್ರ್ಯವನ್ನು ತಾವು ಗೌರವಯುತವಾಗಿ ಪ್ರದರ್ಶಿಸುತ್ತಾ ಬಂದಿದ್ದರು. ಒಂದು ಅರ್ಥದಲ್ಲಿ ಅವರು ಅನಧಿಕೃತ ಸ್ವರಾಜ್‌ವಾದಿಯಾಗಿದ್ದರು. ಅದನ್ನು ಹೀಗೆ ಪರಿಗಣಿಸಬಹುದು:

1. ವಿಧಾನಮಂಡಲದ ಕಾರ್ಯಕ್ರಮಗಳಲ್ಲಿ ಅವರಿಗೆ ನಂಬಿಕೆ ಇತ್ತು. "ಬದಲಾವಣೆ ಬಯಸದ" ವರ್ಗಕ್ಕೆ ಅವರು ಸೇರಿರಲಿಲ್ಲ.

2. ಅಧಿಕಾರದ ಸ್ಥಾನ ಒಪ್ಪಿಕೊಳ್ಳಬೇಕೆಂಬುದಕ್ಕೆ ಅವರು ವಿರುದ್ಧವಾಗಿದ್ದರು. ಹೀಗಾಗಿ ಅವರು 'ಉತ್ತರದಾಯಿತ್ವದ' ವರ್ಗಕ್ಕೂ ಸೇರಿರಲಿಲ್ಲ.

ಮೇಲ್ನೋಟದಲ್ಲಿ ತೀರ್ಮಾನಕ್ಕೆ ಬರುವವರೆಗೆ ಅವರು ಸ್ವರಾಜ್‌ವಾದಿಯಲ್ಲದೆ ಬೇರೇನೂ ಆಗಿರಲಿಲ್ಲ ಎಂದು ಅನ್ನಿಸದಿರಲಿಲ್ಲ. ಆದರೆ ತೀರಾ ಸೂಕ್ಷ್ಮವಾಗಿ ಅವರ ನಿಲುವು ಧೋರಣೆಗಳನ್ನು ಒಳ ಹೊಕ್ಕು ನೋಡಿದವರಿಗೆ ಸ್ವರಾಜ್‌ವಾದದಲ್ಲಿದ್ದ ಭಿನ್ನಾಭಿಪ್ರಾಯಗಳು ಸ್ಪಷ್ಟವಾಗಿ ಗೋಚರಿಸದಿರುವುದಿಲ್ಲ. ಪ್ರತಿ ವಾರವು ಅವರು ಬರೆಯುತ್ತಿದ್ದ ಲೇಖನಗಳಲ್ಲಿ ಸಿದ್ಧಾಂತ ಭೇದವನ್ನು ಗುರುತಿಸಬಹುದಾಗಿತ್ತು. ಸಂಪ್ರದಾಯ ವಿರೋಧಿಯಾದರೂ ಬದಲಾವಣೆ ಬಯಸದ ಸಂಪ್ರದಾಯಸ್ಥರನ್ನು ದೂರವಿಟ್ಟಿದ್ದರು. ಸ್ವರಾಜ್‌ವಾದದಲ್ಲಿ ಒಂದು ರೀತಿಯ ಸಂಪ್ರದಾಯತ್ವ ನೆಲೆಯೂರಿತ್ತು. ತನ್ನದೇ ಆದ ಸಿದ್ಧಾಂತವಾಗಿಯೂ ಅದು ಬೆಳೆಯತೊಡಗಿತ್ತು. "ಎಲ್ಲದಕ್ಕೂ ವಿರೋಧ ಒಡ್ಡುವುದು ಆ ವಾದದ ಪರಿಯಾಗಿತ್ತು." ಆ ಸಿದ್ಧಾಂತವನ್ನು ಒಪ್ಪಿಕೊಳ್ಳಲು ಲಾಲಾಜಿ ಎಲ್ಲಾ

ಹಂತದಲ್ಲೂ ಸ್ಥಿರರಿರಲಿಲ್ಲ. 'ಒಂದೇ ವರ್ಷದಲ್ಲಿ ಸ್ವರಾಜ್ಯ'ದಂಥ ಘೋಷಣೆಗಳನ್ನು ಅವರು ಒಪ್ಪುತ್ತಿರಲಿಲ್ಲ. ಆ ರೀತಿ ಒಂದು ದಿನಾಂಕವನ್ನು ಗೊತ್ತುಪಡಿಸುವುದು ವಿವೇಕಯುತವಲ್ಲ ಎಂದು ಅವರು ಮನಗಂಡಿದ್ದರು. ಹಾಗೆ ಹೇಳುವುದನ್ನು ಕೇಳುವುದು ಅವರಿಗೆ ಕಷ್ಟವಾಗುತ್ತಿತ್ತು. ಅನೇಕ ಸಂದರ್ಭಗಳಲ್ಲಿ ಸ್ವರಾಜ್‌ವಾದಿಗಳು ಹೇಳುವುದಕ್ಕೂ ಮಾಡುವುದಕ್ಕೂ ತಾಳೆ ಇರುತ್ತಿರಲಿಲ್ಲ. ಸರ್ಕಾರವು ನೀಡುತ್ತಿದ್ದ ಕಾಣಿಕೆ ರೂಪಗಳ ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳಬಾರದೆನ್ನುತ್ತಿದ್ದ ಸ್ವರಾಜ್ಯವಾದಿಗಳು ವಿ.ಜೆ. ಪಟೇಲರನ್ನು ಸಭಾಧ್ಯಕ್ಷರನ್ನಾಗಿ ನೇಮಿಸಿದಾಗ ಅದನ್ನು ಮಾನ್ಯ ಮಾಡಿದರು. ಹಾಗಿದ್ದು ಪ್ರತಿನಿತ್ಯವು ಅವರು ಶಾಸಕಾಂಗದಲ್ಲಿ ನಡೆದುಕೊಳ್ಳುತ್ತಿದ್ದ ರೀತಿ ವಿರೋಧಕ್ಕಾಗಿ ವಿರೋಧವಷ್ಟೇ ಆಗಿತ್ತು. ಅವರ ಆಂದೋಲನದ ಬತ್ತಳಿಕೆಯಲ್ಲಿದ್ದದ್ದು ಅಡ್ಡಿಪಡಿಸುವ ಅಸ್ತ್ರವೊಂದೇ. ಎಲ್ಲಾ ಕಲಾಪದಲ್ಲೂ ಅಡ್ಡಿ ಒಡ್ಡುವುದು ಒಂದು ದೊಡ್ಡ ಕಮರಿ ಹಳ್ಳದಂತೆ ಕಂಡು ಬರುತ್ತಿತ್ತು.

ಅಭಾಸಕ್ಕೆ ಹೇಳಿ ಮಾಡಿಸಿದಂಥ ಕೆಲವು ವೈಪ್ಯರಿತ್ಯಗಳು ಅವರಲ್ಲಿದ್ದವು. ಒಂದು ಕಡೆ ವಿರೋಧ ಒಡ್ಡುತ್ತಾ ಇನ್ನೊಂದು ಕಡೆ ಕೆಲವು ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳುತ್ತಿದ್ದರು. ತಾತ್ವಿಕವಾಗಿ ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳಬಾರದು ಎಂಬುದು ಪಕ್ಷದ ನಿಯಮವಾಗಿತ್ತು. ಸದನ ಸಮಿತಿಗಳಿಗೆ ನೇಮಕಗೊಳ್ಳುವುದು ಸಹ ಅವರ ಪ್ರಕಾರ ನಿಷಿದ್ಧವಾಗಿತ್ತು. ಹಾಗಿದ್ದು, ಲಾಲಾಜಿ ವಿಧಾನಸಭೆ ಪ್ರವೇಶಿಸುವ ವೇಳೆಗೆ ಆ ನಿಷೇಧ ಸಡಿಲಗೊಳ್ಳತೊಡಗಿತ್ತು. ಸ್ವರಾಜ್‌ವಾದಿ ನಾಯಕರು ಅಂಥ ಒಂದು ಸ್ಥಾನವನ್ನು ಅಲಂಕರಿಸಿದ್ದರು. ಅದು ಬಹು ಬುದ್ಧಿವಂತಿಕೆಯ ನಡವಳಿಕೆ ಎನಿಸುತ್ತಿತ್ತು. ''ಲಾಲಾಜಿ ಹಾಗೆಯೇ ಭಾವಿಸಿದ್ದರು.'' ಸೇವೆಯನ್ನು ಭಾರತೀಕರಣಗೊಳಿಸಲು ಸಂಬಂಧಪಟ್ಟ ಸ್ಕೀನ್ ಸಮಿತಿಯ ಸದಸ್ಯತ್ವ ಅದಾಗಿತ್ತು. ಸ್ವರಾಜ್‌ವಾದಿಗಳು ತಾವೇ ಹೆಣೆದುಕೊಂಡ ಸಿದ್ಧಾಂತದ ಪಲಾಯನ ಸೂತ್ರವಲ್ಲದೆ ಅದು ಬೇರೇನೂ ಆಗಿರಲಿಲ್ಲ. ಒಂದಾದ ಮೇಲೊಂದರಂತೆ ತಮ್ಮ ನಿಷೇಧಗಳನ್ನು ತಾವೇ ಮುರಿಯುವ ಬೆಳವಣಿಗೆ ಸ್ವರಾಜ್‌ವಾದಿಗಳಲ್ಲಿ ಆಗುತ್ತಾ ಬಂದಿತ್ತು. ಕೆಲವರಂತೂ ಉತ್ತರದಾಯಿತ್ವದ ತೆಳು ಹದರ ದಟ್ಟವಾಗುತ್ತಿದೆ ಎಂದು ಭಯ ಪಡುತ್ತಿದ್ದರು. (ಕೆಲವರು ಭರವಸೆ ತಾಳುತ್ತಿದ್ದರು)

ಕೆಲವು ಸಮಯಗಳಲ್ಲಿ ಲಾಲಾಜಿಯವರಿಗೆ ಸ್ವರಾಜ್‌ವಾದಿಗಳ ನಾಯಕತ್ವ ಶಿಸ್ತಿನ ಹೆಸರಿನಲ್ಲಿ ಅತಿಯಾದ ನಿರ್ಬಂಧ ವಿಧಿಸುತ್ತಿದೆ ಎನಿಸುತ್ತಿತ್ತು. ಹಾಗೆ ಮಾಡುವ ಮೂಲಕ ಯಾವ ಸಂಪ್ರದಾಯ ವಿರೋಧಿ ಧೋರಣೆಗಳ ವಿರುದ್ಧ ತಾನು ಸಿಡಿದಿತ್ತೋ ಅದೇ ಸಂಪ್ರದಾಯಗಳನ್ನು ಅದು ತೆಕ್ಕೆ ಹಾಕಿಕೊಳ್ಳುತ್ತಿದ್ದಂತೆ ಕಂಡು ಬರುತಿತ್ತು. ಕೊನೆ ಕೊನೆಗೆ ಅದು 'ರೋಗಗ್ರಸ್ತವಾದ ಕೈಕಾಲು ಭಾಗವನ್ನು ತೆಗೆದು ಹಾಕಬೇಕು' ಎನ್ನುವ ಹಂತಕ್ಕೆ ಮುಟ್ಟಿತು. ಅಸಹಕಾರ ಚಳವಳಿ ಸಂಪ್ರದಾಯಬದ್ಧವೆಂದು ಕಂಡು ಬಂದಿದ್ದ ಲಾಲಾಜಿಯವರಿಗೆ ಸ್ವರಾಜ್ಯ ಪಕ್ಷದ ಹೆಸರಿನಲ್ಲಿ ಸಂಘಟಿತವಾದ ಸಂಸದೀಯ ಅಂಗವು ಸಹ ಇನ್ನೊಂದು ರೀತಿಯಲ್ಲಿ ಅದೇ ಜಾಡು ಹಿಡಿದು ರಾಷ್ಟ್ರ ಶರೀರವನ್ನು ಬಾಧಿಸುತ್ತಿದೆ ಎನಿಸತೊಡಗಿತ್ತು. ನಾಯಕತ್ವದ ಸಹಿಸಲು ಅಸಾಧ್ಯವಾದ ಧೋರಣೆಯನ್ನು ಕಟುವಾಗಿ ಟೀಕಿಸಿದ ಲಾಲಾಜಿ ಕೆಲವು ಸಲ 'ಉತ್ತರದಾಯಿತ್ವ' ವಾದಿಗಳ ಕಡೆಗೆ ವಾಲುತ್ತಿದ್ದಂತೆ

ಕಂಡು ಬರುತ್ತಿತ್ತು. 1925ರ ಅಂದಿನ ಪರಿಸ್ಥಿತಿಯ ಮಂಥನ ಮಾಡಿದಾಗ ದ್ವಿಸದಸ್ಯತ್ವ ಮಾದರಿಯಲ್ಲಿ ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳುವುದು ಅಪೇಕ್ಷಣೀಯವೆಂಬ ಉತ್ತರದಾಯಿತ್ವ ವಾದಿಗಳ ನಿಲುವಿನ ಕಡೆಗೆ ಲಾಲಾಜಿ ಅನುಕಂಪ ವಾಲತೊಡಗಿತ್ತು.

ತಮ್ಮ ಸಂಸದೀಯ ಪ್ರವೇಶವನ್ನು ತಪ್ಪು ಕಾಲದಲ್ಲಿ ಆರಿಸಿಕೊಂಡದ್ದಕ್ಕಾಗಿ ಅನೇಕ ಪ್ರಸಂಗಗಳಲ್ಲಿ ಸ್ವತಃ ಲಾಲಾಜಿ ಅತೃಪ್ತಿ ವ್ಯಕ್ತಪಡಿಸಿದ್ದು ಉಂಟು. ''ಪರಿಸ್ಥಿತಿಯು ನಿಶ್ಚಿತವಾಗಿಲ್ಲ. ಮತ್ತು ಸ್ಫುಟವಾಗಿಲ್ಲವೆಂದು ಅವರು ಹೇಳಿಕೊಳ್ಳುತ್ತಿದ್ದರು. 1925ರಲ್ಲಿ ಪಕ್ಷದೊಳಗಿನ ಶಿಸ್ತು ಮತ್ತು ಏಕತೆಗಳಿಗಾಗಿ ಭಂಗವುಂಟಾಯಿತು. ಭಿನ್ನಮತ ದಟ್ಟವಾಯಿತು. ಅತಿಯಾದ ಶಿಸ್ತು ನಡವಳಿಕೆಗಳೇ ಅದಕ್ಕೆ ಕಾರಣವೆನಿಸಿತು. ಟಾಂಬೇ ಪ್ರಕರಣದಲ್ಲಿ ಆ ಸ್ಥಿತಿ ಬಿಕ್ಕಟ್ಟಿನ ಹಂತ ತಲುಪಿತು. ಶ್ರೀಪಾದ ಬಲವಂತ್ ಟಾಂಬೆ ಸಿಪಿ ವಿಧಾನಪರಿಷತ್ತಿನ ಸ್ವರಾಜ್‌ವಾದಿ ಸಭಾಧ್ಯಕ್ಷರಾಗಿದ್ದರು. ಅವರಿಗೆ ಕೌನ್ಸಿಲರ್‌ಶಿಪ್ ಆಡಳಿತಾಧಿಕಾರವನ್ನು ಸರ್ಕಾರ ನೀಡಿತು. ಅವರು ಅದನ್ನು ಒಪ್ಪಿಕೊಂಡರು. ಅವರಲ್ಲಿ ಆ ನಡವಳಿಕೆ ಪಕ್ಷದೊಳಗೆ ಬಲವಾದ ವಿರೋಧ, ಆಕ್ಷೇಪಣೆಗಳಿಗೆ ಎಡೆ ಮಾಡಿಕೊಟ್ಟಿತು. ದ್ವಿಪ್ರಭುತ್ವ ಪದ್ಧತಿಯಲ್ಲಿ ಕಾಂಗ್ರೆಸ್ಸಿಗರೊಬ್ಬರು ಅಂಥ ಸ್ಥಾನ ಅಲಂಕರಿಸುವುದು ತಪ್ಪೆಂದು ಪರಿಗಣಿಸಲಾಯಿತು. ಸಭಾಧ್ಯಕ್ಷರು ಸರ್ಕಾರದ ಆಮಿಷಕ್ಕೆ ಒಳಗಾಗುವುದು ಸಂಸದೀಯ ನಡವಳಿಕೆಗೆ ಅಪಚಾರವೆಂದೆನ್ನಲಾಯಿತು. ಶಿಸ್ತು ಉಲ್ಲಂಘನೆಯ ಸ್ಪಷ್ಟ ನಡವಳಿಕೆ ಅದೆಂಬುದರಲ್ಲಿ ಅನುಮಾನವೂ ಇರಲಿಲ್ಲ. ತನಗೆ ಪ್ರಾಪ್ತವಾದ ಆ ಸ್ಥಾನದ ಬಗ್ಗೆ ಸ್ವರಾಜ್ಯ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಗೆ ತಿಳಿಸುವ ಸೌಜನ್ಯವನ್ನು ಟಾಂಬೆ ತೋರಿರಲಿಲ್ಲ. ತಮ್ಮ ನಿಲುವಿನ ಬಗ್ಗೆಯೂ ಅವರು ತಿಳಿಸಿರಲಿಲ್ಲ. ಪಂಡಿತ್ ಮೋತಿಲಾಲರು ಸ್ವಾಭಾವಿಕವಾಗಿ ರೊಚ್ಚಿಗೆದ್ದರು. ಅವರ ಆ ಸಿಟ್ಟನ್ನು ತಣಿಸುವ ಪ್ರಯತ್ನ ಕೈಗೊಳ್ಳುವ ಬದಲು ಜಯ್ಕರ್ ಮತ್ತು ಕೇಳ್ಕರ್ ಹಾಗೂ ಇತರೆ ಕೆಲವು ಸ್ವರಾಜ್‌ವಾದಿಗಳು ಇನ್ನಷ್ಟು ತುಪ್ಪ ಸುರಿದರು. ಟಾಂಬೆ ನಡವಳಿಕೆಯ ಬಗ್ಗೆ ಕ್ಷಮೆ ಕೋರುವುದಿರಲಿ, ಚಕಾರವನ್ನು ಸಹ ಅವರು ಎತ್ತಲಿಲ್ಲ. ಅವರ ಪಾಲಿಗೆ ಅದು ವಿ.ಜೆ. ಪಟೇಲರನ್ನು ಸಬಾಧ್ಯಕ್ಷರನ್ನಾಗಿ ನೇಮಿಸಿದ್ದಕ್ಕಿಂತ ಭಿನ್ನವಾಗಿ ಕಂಡು ಬಂದಿರಲಿಲ್ಲ. ಸ್ವತಃ ಪಂಡಿತ್ ಮೋತಿಲಾಲರು ಸ್ಕೀನ್ ಸಮಿತಿಗೆ ನೇಮಕಗೊಂಡಿದ್ದಕ್ಕಿಂತ ಹೆಚ್ಚಿನದಾಗಿ ತೋರಿರಲಿಲ್ಲ. ಪಂಡಿತ್ ಮೋತಿಲಾಲ್ ಮತ್ತು ವಿ.ಜೆ. ಪಟೇಲರ ನಡವಳಿಕೆಗಳನ್ನು ಪಕ್ಷದ ನಿಯಮಗಳ ವ್ಯಾಪ್ತಿಯಲ್ಲಿ ಉಲ್ಲಂಘನೆ ಎಂದು ಸಾರಿರಲಿಲ್ಲ. ತಾಂತ್ರಿಕವಾಗಿ ಆ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬ ಧೋರಣೆ ತಾಳಲಾಗಿತ್ತು. ಹೀಗಾಗಿ ಎರಡು ಬಣಗಳ ನಡುವೆ ಭಿನ್ನಾಭಿಪ್ರಾಯಗಳು ಉಲ್ಬಣಿಸುತ್ತಾ ಬಂದವು. ಕೊನೆಗೆ ಪಕ್ಷದೊಳಗೆ ಉತ್ತರದಾಯಿತ್ವದ ಸಹಕಾರದ ಕಡೆಗೆ ಒಲವು ಹೆಚ್ಚಾಗಿ ಪಕ್ಷದ ನಿಯಮ ಮತ್ತು ನಾಯಕತ್ವಗಳು ಅದಕ್ಕೆ ಮಾನ್ಯತೆ ಕೊಡುವಂಥ ಬೆಳವಣಿಗೆ ಆಯಿತು.

ಟಾಂಬೆ ಪ್ರಕರಣ ಅಕ್ಟೋಬರ್ ತಿಂಗಳ ತುಂಬೆಲ್ಲಾ ರಾಜಕೀಯ ವೇದಿಕೆಯನ್ನು ಆವರಿಸಿಕೊಂಡಿತ್ತು. ನವೆಂಬರ್ ಒಂದರಂದು ನಾಗಪುರದಲ್ಲಿ ಸ್ವರಾಜ್ ಪಕ್ಷದ ಕಾರ್ಯಕಾರಿಣಿ ಸಭೆ ಸೇರಿತು. ಟಾಂಬೆಯವರೊಬ್ಬರದೇ ನಡವಳಿಕೆ ಅದಲ್ಲವೆಂದು ಇತರ ಅನೇಕರ ಬೆಂಬಲ ಅದಕ್ಕಿದೆ ಎಂದೂ ಪಂಡಿತ್ ಮೋತಿಲಾಲರು ಸಾರಿದರು.

ಅದಕ್ಕೆ ವಿರೋಧವು ಪ್ರಬಲವಾಗಿ ಎದ್ದಿತು. ಸ್ವತಃ ಪಕ್ಷದ ನಾಯಕತ್ವವೇ ಸರ್ಕಾರದ ಸ್ಥಾನಗಳನ್ನು ಒಪ್ಪಿಕೊಂಡಿದೆ ಎಂದು ಪ್ರತ್ಯಾರೋಪ ಮಾಡಲಾಯಿತು. ಟಾಂಬೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಧ್ಯ ಪ್ರಾಂತ್ಯದ ಸ್ವರಾಜ್ ಪಕ್ಷದಲ್ಲಿ ನಿರ್ಧಾರ ಕೈಗೊಳ್ಳಲಾಗಲಿಲ್ಲ. ದೇಶದ ಇತರೆ ಯಾವುದೇ ಭಾಗಗಳಿಗಿಂತಲೂ ಸ್ವರಾಜ್ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳು ಮಧ್ಯ ಪ್ರಾಂತ್ಯದಿಂದಲೇ ಪ್ರಾಪ್ತವಾಗಿದ್ದುದರಿಂದ ಅಲ್ಲಿನ ಸದಸ್ಯರ ನಿರ್ಧಾರವೇ ನಿರ್ಣಾಯಕವಾಗುವ ಸ್ಥಿತಿಯಲ್ಲಿತ್ತು. ಟಾಂಬೆಯು ಅದೇ ಪ್ರಾಂತ್ಯಕ್ಕೆ ಸೇರಿದ್ದವರಾಗಿದ್ದರಿಂದ ಕಾರ್ಯಕಾರಿಣಿಯ ಹೆಚ್ಚು ಕಡಿಮೆ ಒಲವು ಉತ್ತರದಾಯಿತ್ವ ನಿಲುವಿನ ಕಡೆಗೆ ವಾಲಿತು. ಮುಂಬೈಯಲ್ಲಿ ಕೇಳ್ಕರ್ ಮತ್ತು ಜಯ್ಕರ್ ಅವರಿಗೆ ಸ್ಥಳೀಯ ಸ್ವರಾಜ್ ಪಕ್ಷದ ಸಹಕಾರ ಸಿಕ್ಕಿತು. ಸಿ.ಆರ್. ದಾಸ್ ಅವರು ಕೆಲವು ತಿಂಗಳ ಹಿಂದೆ ನಿಧನ ಹೊಂದಿದ್ದರಿಂದ ಸ್ವರಾಜ್ ಪಕ್ಷದ ನಾಯಕತ್ವಕ್ಕೆ ದೊಡ್ಡ ಪೆಟ್ಟು ಬಿದ್ದಿತು. ಹೀಗಾಗಿ ಮೋತಿಲಾಲರು ಸಾಕಷ್ಟು ಬಿಕ್ಕಟ್ಟು ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿತ್ತು. ಸಿ.ಆರ್. ದಾಸ್ ಅವರ ಅಪ್ರತಿಮ ಧುರೀಣತ್ವ ಮತ್ತು ಸಹಕಾರದಲ್ಲಿ ಅವರು ತಮ್ಮ ನಾಯಕತ್ವವನ್ನು ಸುಲಲಿತವಾಗಿ ನಡೆಸಿಕೊಂಡು ಬಂದಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ಅಂಥ ಚಾಲಕ ಸಲಹಾ ಶಕ್ತಿ ಅವರಿಗಿರಲಿಲ್ಲ. ಅದೇ ಸಮಯದಲ್ಲಿ ಎಐಸಿಸಿ ಸಭೆಯು ಸಹ ನಾಗಪುರದಲ್ಲಿ ನಡೆಯಿತು. ಕೊನೆಗೆ ಹೊಂದಾಣಿಕೆಯೊಂದಿಗೆ ಆ ಕಹಿ ಪ್ರಸಂಗ ತಾತ್ಕಾಲಿಕವಾಗಿ ಉಪಶಮನಗೊಂಡಿತು. ಅದು ಹೆಚ್ಚು ಕಾಲ ಉಳಿಯಲಿಲ್ಲ. ಕೆಲವೇ ದಿನಗಳಲ್ಲಿ ಕೇಳ್ಕರ್ ಮತ್ತು ಜಯ್ಕರ್ ಕಾರ್ಯಕಾರಿಣಿಗೆ ರಾಜೀನಾಮೆ ಕೊಟ್ಟರು. ಉತ್ತರದಾಯಿತ್ವವಾದಿಗಳ ವಿರುದ್ಧ ಟೀಕೆಗಳನ್ನು ಆರಂಭಿಸುವ ಮೂಲಕ ನಾಯಕತ್ವ ತಾತ್ಕಾಲಿಕ ಒಡಂಬಡಿಕೆಯ ಸಿಂಧುತ್ವವನ್ನು ಉಲ್ಲಂಘಿಸಿದೆ ಎಂದು ಅವರು ತಮ್ಮ ರಾಜೀನಾಮೆ ಪತ್ರಕ್ಕೆ ಕಾರಣ ಕೊಟ್ಟರು. ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸುವ ಸಲುವಾಗಿ ರಾಜೀನಾಮೆ ಕೊಡುತ್ತಿರುವುದಾಗಿ ಅವರು ಪ್ರಕಟಿಸಿದರು.

ಲಾಲಾಜಿ ಜಲಂಧರ್ ಕ್ಷೇತ್ರದಿಂದ ಸಂಸದೀಯ ವೇದಿಕೆ ಪ್ರವೇಶಿಸಿದಾಗ ಎಲ್ಲಾ ಈ ಬಿರುಗಾಳಿಯು ಆವರಿಸಿಕೊಂಡಿತ್ತು.

ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳುವುದಕ್ಕೆ ಸ್ವತಃ ಲಾಲಾಜಿಯವರ ವಿರೋಧವಿತ್ತಾದರೂ ಅವರ ಅನುಕಂಪ ಹೆಚ್ಚಿನ ಪ್ರಮಾಣದಲ್ಲಿ ಉತ್ತರದಾಯಿತ್ವವಾದಿಗಳ ಕಡೆಗೆ ಇತ್ತು. ಅದಕ್ಕೆ ಕಾರಣ ವೈಯಕ್ತಿಕ ಅನುಬಂಧ. ಅದು ತಿಲಕರ ಕಾಲದಿಂದಲೂ ಅನುಗತವಾಗಿದ್ದು. ಕೇಳ್ಕರ್ ಮತ್ತು ಜಯ್ಕರ್ ಹಾಗೂ ಮಹಾರಾಷ್ಟ್ರದ ವರ್ಗ ಅವರಿಗೆ ಬಹುಕಾಲದಿಂದಲೂ ಆಪ್ಯಾಯವಾಗಿತ್ತು. ಹಿಂದೂ ಸಂಘಟನೆಯ ಏರ್ಪಾಡಿನಲ್ಲಿ ಲಾಲಾಜಿ ತಮ್ಮ ದೃಷ್ಟಿಕೋನವನ್ನು ಅವರೊಂದಿಗೆ ಮಿಳಿತಗೊಳಿಸಿಕೊಂಡಿದ್ದರು. ಆದರೆ ಸದ್ಯದಲ್ಲಿ ಪ್ರಶ್ನಿತವಾಗಿದ್ದ ವಿಷಯದಲ್ಲಿ ಲಾಲಾಜಿಯವರ ಧೋರಣೆ ಅಧಿಕಾರಕ್ಕಿಂತಲೂ ''ಸಮಾನ ರೀತಿಯ ನಿರಂತರವಾದ ರಚನಾತ್ಮಕ ವಿರೋಧ''ಗಳ ಕಡೆಗೆ ವಾಲಿತ್ತು. ಅದರಲ್ಲೂ ಅಸಹಕಾರ ಚಳವಳಿಯಂತಹ ದೊಡ್ಡ ಆಂದೋಲನ ಇಲ್ಲವಾಗಿದ್ದ ಸಮಯದಲ್ಲಿ ಯಾವುದೇ ಕಾರ್ಯಕ್ರಮ ಹೋರಾಟಗಳಿಲ್ಲದೆ ನಾಯಕ ವರ್ಗ ಕತ್ತಲಲ್ಲಿ ತಡವರಿಸುತ್ತಿದ್ದ ಸಮಯದಲ್ಲಿ ಪಕ್ಷದೊಳಗೆ ಶಿಸ್ತಿನ ಹೆಸರಿನಲ್ಲಿ ಭಿನ್ನಾಭಿಪ್ರಾಯಗಳನ್ನು ಬೆಳೆಸಿಕೊಳ್ಳುವುದು ಸರಿಯಲ್ಲವೆಂದು

ಲಾಲಾಜಿ ಮನಗಂಡಿದ್ದರು. ಪರಿಸ್ಥಿತಿಯನ್ನು ಹೊಂದಾಣಿಕೆ ಮಾಡಿಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡುವ ಕಡೆಗೆ ಒತ್ತು ಕೊಡಬೇಕೆಂಬುದು ಲಾಲಾಜಿಯವರ ಬಹುತೇಕ ಆಶಯವಾಗಿತ್ತು. ಆದರೆ ಜಯ್ಕರ್ ನಾಯಕತ್ವದ ಉದ್ಧಟತನದ ಬಗ್ಗೆ ಮೇಲಿಂದ ಮೇಲೆ ಆಪಾದಿಸತೊಡಗಿದರು. ಅದನ್ನು ಬೆಂಬಲಿಸುವವರ ಸಂಖ್ಯೆಯು ಹೆಚ್ಚಾಗಿತ್ತು. ಜಯ್ಕರ್‌ರ ಉತ್ತರದಾಯಿತ್ವ ವಾದವನ್ನು ಒಪ್ಪದಿದ್ದವರು ಸಹ ಪಕ್ಷದ ನಾಯಕತ್ವ ಶಿಸ್ತನ್ನು ಅತಿರೇಕಗೊಳಿಸುತ್ತಿದೆ ಎಂದು ದೂರತೊಡಗಿದರು. ಶಿಸ್ತಿನ ಹೆಸರಿನಲ್ಲಿ ಪಕ್ಷದ ಭಾಗಗಳನ್ನು ಕಡಿದು ಹಾಕಲು ನಾಯಕತ್ವ ಹೊರಟಿದೆ ಎಂದು ಕಟುವಾಗಿ ಟೀಕೆ ಮಾಡಲಾಯಿತು.

ಪಕ್ಷದ ನಾಯಕತ್ವದ ವಿರುದ್ಧ ದಟ್ಟವಾದ ದೂರುಗಳು ಲಾಲಾಜಿಯವರ ಬಲವನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಲು ಉತ್ತರದಾಯಿತ್ವ ವಾದಿಗಳಿಗೆ ಅನುಕೂಲ ಒದಗಿ ಬಂದಿತು. ಸ್ವತಃ ಲಾಲಾಜಿ ಸಹ ಅವರ ಹಣೆಪಟ್ಟಿಯ ಬಗ್ಗೆಯಾಗಲಿ ದ್ವಿಪ್ರಭುತ್ವ ಪದ್ಧತಿಯಲ್ಲಿ ಅವರು ಒಪ್ಪಿಕೊಳ್ಳ ಹೊರಟ ಅಧಿಕಾರದ ಸ್ಥಾನಗಳ ಬಗ್ಗೆಯಾಗಲಿ ಕಟುವಾದ ಧೋರಣೆಯನ್ನು ತಾಳಲಿಲ್ಲ. ವಿ.ಜೆ. ಪಟೇಲರು ಸಭಾಧ್ಯಕ್ಷರ ಸ್ಥಾನ ಅಲಂಕರಿಸಿದ ಬಗ್ಗೆಯೂ ಲಾಲಾಜಿ ಪೂರ್ಣ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ಅವರ ಮನಸ್ಸಿನಲ್ಲಿ ಕೆಲವು ಆತಂಕಗಳಿದ್ದರೂ ಅವೆಲ್ಲವೂ ವಿ.ಜೆ. ಪಟೇಲರ ಚಾಣಾಕ್ಷ ನಡವಳಿಕೆಯಲ್ಲಿ ನಿವಾರಣೆಗೊಂಡಿದ್ದವು. ತಮಗೆ ದೊರೆತ ಅಧಿಕಾರದ ಸ್ಥಾನವನ್ನು ಅವರು ಗೌರವಯುತವಾಗಿ ಪಕ್ಷಪಾತಕ್ಕೆ ಎಡೆಯಾಗದಂತೆ ನಿರೀಕ್ಷೆ ಮೀರಿ ನಿರ್ವಹಿಸುತ್ತಾ ಬಂದಿದ್ದರು.

ಪಕ್ಷದೊಳಗೆ ಗಟ್ಟಿಯಾಗತೊಡಗಿದ ಒಳಜಗಳ ಲಾಲಾಜಿ ವಿಧಾನಸಭೆ ಪ್ರವೇಶಿಸಿದ ಸಮಯದಲ್ಲಿ ಒಂದು ನಿರ್ದಿಷ್ಟ ತಿರುವು ಮುಟ್ಟಿತು. ಲಾಲಾಜಿ ಯಾವುದೇ ಕಡೆಗೆ ವಾಲದೇ ಪಕ್ಷದ ಸದಸ್ಯತ್ವ ಪಡೆಯದೇ ಕೆಲವು ಕಾಲ ಮಧ್ಯಸ್ಥಿಕೆಯ ಪಾತ್ರಧಾರಿಯಾಗಿ ಕೆಲಸ ಮಾಡಬೇಕಾಯಿತು. ನಾಮಪತ್ರವನ್ನು ಸಲ್ಲಿಸಿದ ನಂತರ ಅವರು ಮುಂಬೈಗೆ ತೆರಳಿದ್ದರು. ಹಿಂದೂ ಸಮ್ಮೇಳನದ ಅಧ್ಯಕ್ಷತೆಯನ್ನು ಅವರು ವಹಿಸಬೇಕಾಗಿತ್ತು. ಜಯ್ಕರ್ ಅವರೇ ಲಾಲಾಜಿಯವರನ್ನು ಬರ ಮಾಡಿಕೊಂಡಿದ್ದರು. ಅವರೇ ಸ್ವಾಗತ ಸಮಿತಿಯ ಅಧ್ಯಕ್ಷರು ಆಗಿದ್ದರು. ಪಂಡಿತ್ ಮೋತಿಲಾಲ್ ಮತ್ತು ಮುಂದಿನ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ನಿಯೋಜಿತವಾಗಿದ್ದ ಶ್ರೀಮತಿ ಸರೋಜಿನಿ ಮಹಿಷಿ ಆಗ ಮುಂಬೈಯಲ್ಲಿದ್ದರು. ಲಾಲಾಜಿ ಆ ಇಬ್ಬರೊಂದಿಗೆ ಸಾಕಷ್ಟು ಮಾತುಕತೆ ನಡೆಸಿ ಸ್ವರಾಜ್ ಪಕ್ಷದೊಳಗೆ ತೆಕ್ಕೆ ಹಾಕಿಕೊಂಡಿದ್ದ ಭಿನ್ನಮತಕ್ಕೆ ತಾತ್ಕಾಲಿಕ ಕಡಿವಾಣ ಬೀಳುವಂತೆ ನೋಡಿಕೊಂಡಿದ್ದರು.

ಆದರೆ ಆ 'ಕದನ ವಿರಾಮ' ಸಂಪೂರ್ಣ ಇತ್ಯರ್ಥವೇನೂ ಆಗಿರಲಿಲ್ಲ. ಅದೊಂದು ತಾತ್ಕಾಲಿಕ ತಡೆಯಷ್ಟೇ ಆಗಿತ್ತು. ಆ ತಿಂಗಳ ಅಂತ್ಯದಲ್ಲಿ ಕಾನ್ಪುರದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಇತ್ಯರ್ಥವಾಗಬೇಕಾಗಿತ್ತು.

ಕಾನ್ಪುರದಲ್ಲಿ ಅಧಿವೇಶನ ಸೇರಿದ ನಂತರವು ಸ್ವರಾಜ್ ಪಕ್ಷದ ಒಳಗಿನ ಭಿನ್ನಾಭಿಪ್ರಾಯಗಳ ನಿವಾರಣೆಗೆ ಪರಿಹಾರ ಸೂತ್ರ ಕಂಡು ಕೊಳ್ಳಲಾಗಲಿಲ್ಲ. ಸರೋಜಿನಿ

ನಾಯ್ಡು ಮಹಾತ್ಮ ಗಾಂಧೀಯವರಿಂದ ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಿಕೊಂಡರು. ತಮ್ಮ ಅವಧಿ ಮುಗಿಯುತ್ತಿದ್ದಂತೆ ಮಹಾತ್ಮ ರಾಜಕೀಯದಿಂದ ನಿವೃತ್ತಿ ಹೊಂದಿ ಆ ಇಡೀ ವರ್ಷವನ್ನು ತಮ್ಮ ಆಶ್ರಮಕ್ಕೆ ಸೀಮಿತಗೊಳಿಸಿಕೊಂಡರು. ತಮ್ಮ ಅಚ್ಚುಮೆಚ್ಚಿನ ಸೃಜನಶೀಲ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಕೊಟ್ಟರು. ಹೀಗಾಗಿ ಇಡೀ ಕಾಂಗ್ರೆಸ್ ಸಂಘಟನೆ ಈಗ ಸ್ವರಾಜ್ ವಾದಿಗಳ ಹಸ್ತಗತವಾಯಿತು.

ಅಧಿವೇಶನಕ್ಕೆ ಬಹು ಮೊದಲೇ ಗಾಂಧೀಜಿ ಕಾಂಗ್ರೆಸ್ಸಿನ ಜವಾಬ್ದಾರಿ ಬಿಟ್ಟು ಕೊಡುವ ನಿಟ್ಟಿನಲ್ಲಿ ಸಾಗುತ್ತಾ ಬಂದಿದ್ದರು. ಸ್ವರಾಜ್ ವಾದಿಗಳ ಸಂಸದೀಯ ಕಾರ್ಯಕ್ರಮದ ಸಿದ್ಧಾಂತಕ್ಕೆ ಕಾಂಗ್ರೆಸ್ ಸಂಪೂರ್ಣವಾಗಿ ಒಡಂಬಟ್ಟಂತಾಯಿತು. ಆ ತನಕ ಅವರು ಅಷ್ಟಾಗಿ ಹಚ್ಚಿಕೊಳ್ಳದಿದ್ದ ಭಾರೀ ಕಾರ್ಯಕ್ರಮಕ್ಕೆ ವಿಶೇಷ ಒತ್ತು ಕೊಡಬೇಕಾಗಿಯೂ ಬಂದಿತು. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸದಸ್ಯತ್ವ ಪಡೆದುಕೊಳ್ಳಲು 'ಖಾದಿ ಕಡ್ಡಾಯ'ವನ್ನು ಅವರು ಒಪ್ಪಿಕೊಂಡಿದ್ದರು. ಕೆಲವು ತಿಂಗಳ ನಂತರ ಪಾಟ್ನದಲ್ಲಿ ನಡೆದ ಎಐಸಿಸಿ ಸಭೆಯಲ್ಲಿ ಆ ಕಡ್ಡಾಯ ಕಾರ್ಯ ಸಾಧುವಲ್ಲವೆಂದು ಸ್ವರಾಜ್‌ವಾದಿಗಳು ವಾದಿಸಿ ಅದನ್ನು ಕಡೆಗಣಿಸಿದ್ದರು. 'ಬದಲಾವಣೆ ಬಯಸದ' ಕಾಂಗ್ರೆಸ್ಸಿಗರು ಸ್ವರಾಜ್ಯವಾದಿಗಳೆಂದೂ ಖಾದಿ ಕಡ್ಡಾಯವನ್ನು ಮಾನ್ಯ ಮಾಡಿರಲಿಲ್ಲವೆಂದು ಗಂಭೀರ ಆರೋಪ ಹೊರಿಸಿದರು. ಗಾಂಧೀಜಿ ಸಹ ಪಟ್ಟು ಹಿಡಿದಿರಲಿಲ್ಲ. ಪರಿಸ್ಥಿತಿಗೆ ಹೊಂದಿಕೊಳ್ಳುವ ನಿಲುವು ತಾಳಿದ್ದರು. ಖಾದಿ ನೂಲು ತೆಗೆಯುವುದನ್ನು ಕೈಬಿಡುವ ಬಗ್ಗೆ ಬಹಿರಂಗ ಅಧಿವೇಶನ ಕೈಗೊಂಡ ನಿರ್ಣಯವನ್ನು ಎಐಸಿಸಿ ಪರಿಗಣಿಸಬಹುದೇ ಎಂಬ ಪ್ರಶ್ನೆಯನ್ನು ಅವರು ಬದಿಗಿರಿಸಿದರು. ಸಂಘಟನೆಯಲ್ಲಿ ಶಾಂತಿ ಉಳಿಯಬೇಕೆಂದು ಬಯಸಿ ಅವರು ತಮ್ಮ ಅಚ್ಚುಮೆಚ್ಚಿನ ಖಾದಿ ಕಾರ್ಯಕ್ಕೆ ಒದಗಿದ ಅಡ್ಡಿ, ಆತಂಕವನ್ನು ಕಾನ್ಪುರ ಅಧಿವೇಶನದಲ್ಲಿ ಕಾಂಗ್ರೆಸ್ ಮಂತ್ರವನ್ನು ಸಂಪೂರ್ಣವಾಗಿ ಸ್ವರಾಜ್ ಪಕ್ಷಕ್ಕೆ ವಹಿಸಿ ಜವಾಬ್ದಾರಿಯಿಂದ ಬಿಡುಗಡೆ ಹೊಂದಿದರು.

ಆ ತನಕ ಸ್ವರಾಜ್ಯ ಪಕ್ಷವು ಚುನಾವಣೆಗಳನ್ನು ತನ್ನದೇ ಖರ್ಚಿನಲ್ಲಿ ನಿಭಾಯಿಸುತ್ತಿತ್ತು. ಕಾಂಗ್ರೆಸ್ಸಿನಿಂದ ಯಾವುದೇ ಸಹಾಯ ಒದಗುತ್ತಿರಲಿಲ್ಲ. ಈಗ ಸಂಪೂರ್ಣವಾಗಿ ಛತ್ರಿಯಡಿಯಲ್ಲಿ ಚುನಾವಣೆಗಳನ್ನು ನಡೆಸುವ ಅವಕಾಶ ಒದಗಿ ಬಂದಿತು. ಈ ತನಕ ಸಂಸದೀಯ ಕಾರ್ಯಕ್ರಮಗಳು ಕೇವಲ ಸ್ವರಾಜ್‌ದ ಪಕ್ಷದ ವ್ಯವಹಾರ ಮಾತ್ರವಾಗಿತ್ತು. ಈಗ ಅದು ಕಾಂಗ್ರೆಸ್ ವ್ಯಾಪ್ತಿಗೆ ಒಳಪಟ್ಟಿತ್ತು. ಒಟ್ಟಿನಲ್ಲಿ ಸ್ವರಾಜ್‌ವಾದಿಗಳಿಗೆ ಕಾಂಗ್ರೆಸ್ಸಿನ ಘನತೆ, ಗೌರವ ಮಂತ್ರ ಮತ್ತು ನಿಧಿ ಎಲ್ಲವೂ ಪ್ರಾಪ್ತವಾಯಿತು. ಸಂಸದೀಯ ಪಕ್ಷವಾಗಿ ಅವರು ಹೋಗುತ್ತಿದ್ದ, ಅವರು ಕೈಗೊಳ್ಳುತ್ತಿದ್ದ ನಿರ್ಧಾರ ನಡವಳಿಕೆಗಳಿಗೆ ಕಾಂಗ್ರೆಸ್ಸಿನ ಸಮ್ಮತಿ ಲಭ್ಯವಾಗುವಂತಾಗಿತ್ತು. ತದ್ವಿರುದ್ಧವಾಗಿ ಅವರ ನಡವಳಿಕೆ ಮತ್ತು ಜವಾಬ್ದಾರಿಗಳು ಇಡೀ ಕಾಂಗ್ರೆಸ್ ಪಕ್ಷಕ್ಕೆ ಉತ್ತರದಾಯಿತ್ವ ಎನಿಸಿದವು. ಹೀಗೆ ಸ್ವರಾಜ್‌ದ ಒಂಟೆ ಅರಬ್ ಡೇರೆಯನ್ನು ಆವರಿಸಿಕೊಂಡಂತಾಯಿತು. ಗಾಂಧೀಜಿ ಸಬರಮತಿಗೆ ಮರಳಿ ಚರಕ ಮತ್ತು ನೂಲು ರಾಟೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಂತೆ ಸ್ವರಾಜ್‌ವಾದಿಗಳಿಗೆ ಕಾಂಗ್ರೆಸ್ಸಿನ ಸಮರ್ಪಣೆಯು ಪೂರ್ಣಗೊಂಡಿತ್ತು.

ಕಾನ್ಪುರ ಅಧಿವೇಶನದ ಪ್ರಮುಖ ನಿರ್ಣಯವು ಸ್ವರಾಜ್‌ವಾದಿಗಳಿಗೆ ಕಾಂಗ್ರೆಸ್ಸಿನಲ್ಲಿ ಕೇವಲ ಅಧಿಕಾರವನ್ನಷ್ಟೇ ತಂದು ಕೊಡಲಿಲ್ಲ. ಅವರಿಗೊಂದು ಕಾರ್ಯಕ್ರಮವನ್ನು ವಿಧಿಸಿತು. ಅದರಿಂದ ಮತ್ತೊಂದು ವಿವಾದ ಹೆಡೆ ಎತ್ತಿತ್ತು: ಆ ಕಾರ್ಯಕ್ರಮ ವಿರೋಧಾತ್ಮಕವಾಗಿರಬೇಕೇ ಅಥವಾ ಉತ್ತರದಾಯಿತ್ವದ್ದಾಗಿರಬೇಕೇ?

ಈ ಪ್ರಶ್ನೆಗಳಿಗೆ ಮಧ್ಯಂತರ ಮಾರ್ಗವೊಂದನ್ನು ಕಂಡು ಕೊಳ್ಳುವ ಪ್ರಯತ್ನವೆಲ್ಲಾ ವಿಫಲಗೊಂಡಿತು. ಪಂಡಿತ ಮೋತಿಲಾಲ್ ನೆಹರು ಅವರಿಗೆ ಉತ್ತರದಾಯಿತ್ವದ ಹಣೆಪಟ್ಟಿ ಕಟ್ಟಿಕೊಳ್ಳುವುದು ಸಹ್ಯವಿರಲಿಲ್ಲ. ಯಾವುದೇ ಕಾರಣದಿಂದಲೂ ಅಧಿಕಾರವನ್ನು ಒಪ್ಪಿಕೊಳ್ಳುವಂಥ ಅಥವಾ ಅದರ ಪ್ರಭಾವಕ್ಕೆ ಒಳಗಾಗುವಂಥ ಸೂತ್ರವನ್ನು ಸಹ ಅವರು ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆ ಸೀಮಿತ ಚೌಕಟ್ಟಿನೊಳಗೆ ಕೇಳ್ಕರ್ ಮತ್ತು ಜಯ್ಕರ್ ಅವರನ್ನು ತೃಪ್ತಿಪಡಿಸುವ ಸಾಧ್ಯತೆಯೂ ಕಂಡು ಬರಲಿಲ್ಲ.

1907ರಲ್ಲಿ ಸೂರತ್‌ನಲ್ಲೂ ಮತ್ತು 1920ರಲ್ಲಿ ನಾಗಪುರದಲ್ಲೂ ಇದ್ದ ರೀತಿಯಲ್ಲೇ ಲಾಲಾಜಿ ಆ ಕಾಂಗ್ರೆಸ್ ಅಧಿವೇಶನದಲ್ಲೂ ಸಹ ಪ್ರಶ್ನಾರ್ಥಕವಾಗಿ ಕಂಡು ಬಂದರು. ಅವರು ಸ್ವರಾಜ್ ಪಕ್ಷವನ್ನು ಸೇರಿರಲಿಲ್ಲ. ಅವಿರೋಧವಾಗಿ ವಿಧಾನಸಭೆಗೆ ಆಯ್ಕೆಯಾದಾಗಲೂ ಅವರು ಪಕ್ಷದ ಉಮೇದುವಾರಿಕೆ ಕೋರಿರಲಿಲ್ಲ. ಆ ಪಕ್ಷದ ಹೆಸರಿನಲ್ಲಿ ಮತದಾರರಿಗೆ ಮನವಿಯನ್ನು ಮಾಡಿರಲಿಲ್ಲ. ಆ ಪಕ್ಷದ ಕಾರ್ಯಕ್ರಮಗಳು ತಮ್ಮ ಪಕ್ಷದ ಕಾರ್ಯಕ್ರಮಗಳೆಂದು ಘೋಷಿಸಿರಲೂ ಇಲ್ಲ. ತಮ್ಮ ಚುನಾವಣೆ ಮುಗಿದ ನಂತರ ಪತ್ರಿಕೆಗಳಲ್ಲಿ ಬರೆದ ಲೇಖನಗಳ ಮೂಲಕ ಕೆಲವು ಸ್ವರಾಜ್‌ವಾದಿಗಳ ನಡೆ ನುಡಿ ಮತ್ತು ರೀತಿ ನೀತಿಗಳನ್ನು ಅವರು ಮುಕ್ತವಾಗಿ, ಕಟುವಾಗಿ ಟೀಕಿಸುತ್ತಾ ಬಂದಿದ್ದರು. ಉತ್ತರದಾಯಿತ್ವ ವಾದಿಗಳೇನೋ ಲಾಲಾಜಿ ಅವರಿಂದ ಒಂದು ರೀತಿಯ ಬೆಂಬಲವನ್ನು ಪಡೆದುಕೊಳ್ಳುತ್ತಾ ಬಂದಿದ್ದರು. ಆದರೆ ಅವರೆಂದೂ ಆ ಗುಂಪಿಗೆ ತಮ್ಮನ್ನು ಹಚ್ಚಿಕೊಂಡಿರಲಿಲ್ಲ. ಇಲ್ಲವೇ ಅವರ ಹಣೆಪಟ್ಟಿಯನ್ನು ಕಟ್ಟಿಕೊಂಡಿರಲಿಲ್ಲ. ಅಥವಾ ಅಧಿಕಾರದ ಸ್ಥಾನಗಳನ್ನು ಆಕ್ರಮಿಸಿಕೊಳ್ಳಬೇಕೆಂಬ ಅವರ ನಿಲುವಿಗೆ ಬೆಂಬಲಿಗರೂ ಆಗಿರಲಿಲ್ಲ. ಲಾಲಾಜಿಯವರ ತೌರು ರಾಜ್ಯದಲ್ಲಂತೂ ಸ್ವರಾಜ್ ಪಕ್ಷ ಅಧಿಕಾರದ ಬೆನ್ನು ಹತ್ತುವ ಪ್ರಶ್ನೆಯೇ ಇರಲಿಲ್ಲ. ಅಥವಾ ಅವರ ಪಂಜಾಬಿನ ಬೆಂಬಲಿಗರಲ್ಲಿ ಮತ್ತು ಗೆಳೆಯರಲ್ಲಿ ಅಧಿಕಾರದ ದಾಹ ಹೊಂದಿದ್ದವರಾರು ಇರಲಿಲ್ಲ. ವಸ್ತುಶಃ ಪಂಡಿತ ಮೋತಿಲಾಲರೊಂದಿಗೆ ಸ್ಪಷ್ಟವಾದ ನಿರ್ಧಾರಗಳನ್ನು ಕೈಗೊಳ್ಳುವ ವಿಷಯದಲ್ಲಿ ಅವರೆಲ್ಲರೂ ಲಾಲಾಜಿಯವರ ಮೇಲೆ ಒತ್ತಡ ಹಾಕುತ್ತಿದ್ದರು. ಆದರೆ ಅತ್ತ ಉತ್ತರದಾಯಿತ್ವವಾದಿಗಳು ಮೋತಿಲಾಲರು ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ಭಾವಿಸಿ ಅವರೊಂದಿಗೆ ಇತ್ಯರ್ಥ ಮಾಡಿಕೊಳ್ಳಲು ಹಾತೊರೆಯುತ್ತಿದ್ದರು.

ಸ್ವರಾಜ್‌ವಾದಿಗಳು ಮೊದಲ ಬಾರಿಗೆ ಸ್ವತಂತ್ರ ಪಕ್ಷದ ಬೆಂಬಲದೊಂದಿಗೆ ವಿಧಾನಸಭೆಯಲ್ಲಿ ಆಡಳಿತ ವಿಷಯದಲ್ಲಿ ಸರ್ಕಾರಕ್ಕೆ ಷರತ್ತುಗಳನ್ನು ಸಲ್ಲಿಸಿದರು. ಇದು ನಡೆದದ್ದು 1924 ಫೆಬ್ರವರಿ 18ರಂದು. ಕಾಂಗ್ರೆಸ್ಸಿನ ಎಲ್ಲಾ 'ಮುಗ್ಧ ಜನರು' ಆ ಬೆಳವಣಿಗೆಯನ್ನು ವಿಧಾನಸಭೆಯ ಸ್ವರೂಪದ ಬದಲಾವಣೆಗಾಗಿ ಆ ಷರತ್ತುಗಳನ್ನು

ಸ್ವರಾಜ್‌ವಾದಿಗಳು ಮಂಡಿಸಿದ್ದಾರೆಂದು ಭಾವಿಸಿದರು. ಕೆಲವರಂತೂ ಅದನ್ನು ಸರ್ಕಾರಕ್ಕೆ ''ಅಂತಿಮ ಗಡುವು'' ಎಂದು ಕರೆದದ್ದುಂಟು. ಷರತ್ತುಗಳ ಒತ್ತಾಯವನ್ನೇನೋ ಸಲ್ಲಿಸಿಯೂ ಆಯಿತು. ಅದನ್ನು ಒಪ್ಪಿಕೊಳ್ಳುವ ವಿಷಯದಲ್ಲಿ ಎರಡು ವರ್ಷ ಸಂದರೂ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಈ ಮಧ್ಯೆ ಕಾಂಗ್ರೆಸ್ಸಿಗರು ವಿಧಾನಸಭೆಯಿಂದ ಅಂತಿಮವಾಗಿ ನಿರ್ಗಮಿಸುವುದನ್ನು ಕುತೂಹಲದಿಂದ ಕಾಯುತ್ತಿದ್ದರು. ವಿರೋಧಕ್ಕಾಗಿಯೇ ವಿರೋಧವನ್ನು ಒಡ್ಡುತ್ತಿದ್ದ ಕಾರ್ಯಕ್ರಮವನ್ನು ಪೂರ್ಣವಾಗಿ ಕೈಬಿಡುವ ಆಶಯ ಹೊತ್ತಿದ್ದರು. ಅವರ ಆಶಯ ಮತ್ತು ಆತುರಗಳು ಸ್ಕೀನ್ ಸಮಿತಿಯಲ್ಲಿ ನಾಮಕರಣದ ಸ್ಥಾನವನ್ನು ಒಪ್ಪಿಕೊಳ್ಳುವ ನಿಕೃಷ್ಟ ಸ್ಥಿತಿಗೂ ಮುಟ್ಟಿತು. ಆ ವೇಳೆಗೆ ಮುಂದಿನ ಮಹಾ ಚುನಾವಣೆ ಹತ್ತಿರವಾಗತೊಡಗಿದ್ದರಿಂದ ಸ್ವರಾಜ್ಯವಾದಿಗಳು ಆತನಕ ಸಾಕಷ್ಟು ವಿಳಂಬವಾಗಿದ್ದ ತಾವು ಸರ್ಕಾರಕ್ಕೆ ಒಪ್ಪಿಸಿದ್ದ 'ರಾಷ್ಟ್ರೀಯ ಬೇಡಿಕೆ' ಬಗ್ಗೆ ಪುನರ್ ಚಿಂತನೆ ಆರಂಭಿಸಿದ್ದರು... ಕಾನ್ಪುರ ಕಾಂಗ್ರೆಸ್ ಅಧಿವೇಶನದ ಕರಡು ನಿರ್ಣಯವು ಅವರಿಗೆ ವಿಧಾನಸಭೆಯಲ್ಲಿ ಸಭಾತ್ಯಾಗ ಮಾಡಬೇಕೆಂದು, ಗ್ರಾಮೀಣ ಪ್ರದೇಶಕ್ಕೆ ಹೋಗಬೇಕೆಂದು, ನಿರ್ಮಾಣಕಾರಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಸೂಚಿಸಿತು. ಹಾಗೆ ಮಾಡುವುದರಿಂದ ಮತದಾರರ ಒಲವು ಗಳಿಸಿಕೊಳ್ಳಲು ಸಹಾಯಕವಾಗುತ್ತದೆ; 1923ರ ಚುನಾವಣೆಗಳಲ್ಲಿ ಗಳಿಸಿದ್ದಕ್ಕಿಂತಲೂ ಹೆಚ್ಚು ವಿಜಯ ಸಾಧಿಸಿಕೊಳ್ಳಲು ಪಕ್ಷಕ್ಕೆ ಅದರಿಂದ ಸಾಧ್ಯವಾಗುತ್ತದೆ ಎಂದು ಆ ನಿರ್ಣಯ ಹೇಳಿತು.

ಲಾಲಾಜಿಯವರಿಗೆ ಆ ಕಾರ್ಯಕ್ರಮ ಸಮ್ಮತವಾಗಿರಲಿಲ್ಲ. ಅದಕ್ಕೆ ಬದಲಾಗಿ ಮಾಳವೀಯ, ಜಯ್ಕರ್ ಮತ್ತು ಕೇಳ್ಕರ್ ನಿಲುವನ್ನೇ ಅನುಮೋದಿಸುವುದು ಉತ್ತಮವೆನಿಸಿತು. ಅನಂತರ ಸ್ವರಾಜ್ ಪಕ್ಷಕ್ಕೆ ವಿದಾಯ ಹೇಳುವುದು ವಿಹಿತವೆಂದು ಅನಿಸಿತು. ಆ ವೇಳೆಯಲ್ಲಿ ಕಾಂಗ್ರೆಸ್ಸಿನ ಬಹುತೇಕ ಜನರಿಗೂ ಅದೇ ಸರಿಯಾದ ಮಾರ್ಗವೆಂದು ಅನಿಸುತ್ತಿತ್ತು. ಆದರೆ ಅವರ ಮೇಲೆ ಅಂಥ ಯಾವುದೇ ನಿರ್ಧಾರ ಕೈಗೊಳ್ಳದಿರಲು ಅತಿಯಾದ ಒತ್ತಡ ಬಿದ್ದಿತ್ತು. ಅದರಲ್ಲೂ ಪಂಜಾಬಿನ ಗೆಳೆಯರು ಆ ವಿಷಯದಲ್ಲಿ ಬಿಗಿಯಾದ ಪಟ್ಟು ಹಾಕಿದ್ದರು. ಅಂಥ ಯಾವುದೇ ಘಟನೆ ನಡೆಯದಂತೆ ತಪ್ಪಿಸುವಲ್ಲಿ ಯಶಸ್ವಿಯಾದರು. ಕರಡು ನಿರ್ಣಯದ ಚೌಕಟ್ಟಿನೊಳಗೆ ವಿವರವಾದ ಮಾರ್ಪಾಟುಗಳು ಮಾಡುವ ಬಗ್ಗೆ ಪರಿಶೀಲಿಸಲು ಪಂಡಿತ ಮೋತಿಲಾಲ ನೆಹರು ಸಮ್ಮತಿಸಿದ್ದರು. ಅವರೊಂದಿಗೆ ಕಲೆತು ಸಮ್ಮತವಾದ ಇತ್ಯರ್ಥಕ್ಕೆ ಬರಲು ಲಾಲಾಜಿಯವರನ್ನು ಅವರ ಗೆಳೆಯರು ಮನ ಒಲಿಸಿದರು.

ನಾಗಪುರ ಅಧಿವೇಶನದಲ್ಲೂ ಸಹ ಪಂಜಾಬಿನ ತಂಡ ತಮ್ಮ ನಾಯಕನ ಮೇಲೆ ಅದೇ ಪ್ರಭಾವ ಬೀರಿ ಗಾಂಧೀಜಿಯವರೊಂದಿಗೆ ಒಪ್ಪಂದವೊಂದಕ್ಕೆ ಬರುವಂತೆ ಮಾಡಿತು. ಆಗ ಅಲ್ಲಿದ್ದ ಭಿನ್ನಾಭಿಪ್ರಾಯ ಅಷ್ಟೊಂದು ತೀಕ್ಷ್ಣವಾಗಿದ್ದೇನೂ ಆಗಿರಲಿಲ್ಲ. ಹಾಗಾಗಿ ಸ್ವಂತ ಲಾಲಾಜಿಯವರೇ ಗಾಂಧೀಜಿಯವರೊಂದಿಗೆ ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲು ಸಿದ್ಧವಾಗಿದ್ದರು. ಅದಕ್ಕೆ ಕಾರಣ ಅವರು ಅಸಹಕಾರ ಚಳವಳಿಯ ತತ್ವವನ್ನು ಒಪ್ಪಿಕೊಂಡಿದ್ದರು. ದೊಡ್ಡ ಪ್ರಮಾಣದಲ್ಲಿ ಅಸಹಕಾರ ಚಳವಳಿಯನ್ನು ಆರಂಭಿಸಲು ಮನಸ್ಸು ಮಾಡಿದ್ದರು. ಅವರಿಗೆ ಬೇಕಾಗಿದ್ದದ್ದು ಕೇವಲ ವಿವರಣೆಗಳು

ಮಾತ್ರ. ಆ ವಿವರಣೆ ಸಿಗದಿದ್ದ ಅಂಶಗಳ ಬಗ್ಗೆ ಅವರು ಸಮಾಧಾನ ಹೊಂದಿರಲಿಲ್ಲ. ನಾಲ್ಕು ವರ್ಷಗಳ ಹಿಂದೆ ಕಾರ್ಯಕ್ರಮದ ಜೊತೆಯಲ್ಲಿ ಅವರಿಗಿದ್ದ ಸೀಮಿತ ಅಸಮಾಧಾನಕ್ಕೆ ಹೋಲಿಸಿದರೆ 1929ರ ಡಿಸೆಂಬರ್‌ನಲ್ಲಿ ನೆಹರು ಕೈಗೊಂಡ ನಿರ್ಣಯ ಮತ್ತು ಕಾರ್ಯಕ್ರಮಗಳ ಬಗ್ಗೆ ಲಾಲಾಜಿ ಅವರಲ್ಲಿ ಅಜಗಜಾಂತರದ ವ್ಯತ್ಯಾಸ ಕಂಡು ಬಂದಿತು. ಸಂಧಾನಗಳು ಒಡಂಬಡಲಿಲ್ಲ. ಪರಿಸ್ಥಿತಿ ಇಬ್ಭಾಗವಾಗುವ ಹಂತ ಮುಟ್ಟಿತು. ಆದರೆ ಇಬ್ಬರೂ ಮುಖಂಡರಿಗೆ ಆತ್ಮೀಯರಾದ ಗೆಳೆಯರು ಅವಿಶ್ರಾಂತವಾಗಿ ಒಡಂಬಡಿಕೆಗೆ ಪ್ರಯತ್ನಿಸಿದರು. ಮತ್ತೆ ಮತ್ತೆ ಅಸಮಾಧಾನ. ಮತ್ತೆ ಮತ್ತೆ ಅಸಮಾಧಾನ. ಅಂತೂ ಕೊನೆಗೆ ಪಂಡಿತ್‌ಜಿ ಮತ್ತು ಲಾಲಾಜಿ ನಡುವೆ ಒಂದು ಇತ್ಯರ್ಥ ಏರ್ಪಟ್ಟಿತು. ಕರಡು ನಿರ್ಣಯದಲ್ಲಿ ಪ್ರಸ್ತಾಪವಾಗಿದ್ದ ಅನೇಕ ಕಾರ್ಯಕ್ರಮಗಳನ್ನು ಬದಲಾಯಿಸಬೇಕೆಂದು ಲಜಪತರು ಒತ್ತಾಯಿಸಿದರು. ವಿಧಾನಸಭೆ ಮತ್ತು ರಾಜ್ಯ ಪರಿಷತ್ತುಗಳಲ್ಲಿ ಸ್ವರಾಜ್ ಪಕ್ಷದ ಸದಸ್ಯರು ಹಣಕಾಸು ವಿಧೇಯಕವನ್ನು ತಿರಸ್ಕರಿಸಿದ ಕೂಡಲೇ ಸಭಾತ್ಯಾಗ ಮಾಡಬೇಕೆಂಬ ಅಂಶವೂ ಇತ್ತು. ಅಲ್ಲಿಯತನಕ ಪಕ್ಷದ ನಿಯಮಗಳ ಪ್ರಕಾರ ಹೇಗೆ ಕೆಲಸ ಮಾಡಿಕೊಂಡು ಬಂದಿದ್ದರೋ ಅದೇ ಸ್ಥಿತಿ ಇರಬೇಕೆಂದು ನಿರ್ಣಯದಲ್ಲಿ ಹೇಳಲಾಗಿತ್ತು. ಲಾಲಾಜಿ ಅವರ ಒತ್ತಡಕ್ಕೆ ಮಣಿದು ಬದಲಾವಣೆಗಳನ್ನು ಮಾಡಲಾಯಿತು. ಬದಲಾದ ಕರಡು ನಿರ್ಣಯದ ಭಾಗ ಹೀಗಿತ್ತು:

''ಸ್ವರಾಜ್ ಪಕ್ಷದ ಸದಸ್ಯರಿಗೆ ಅನುಮತಿ ನೀಡುವ ಅವಕಾಶ ವಿಶೇಷ ಸಮಿತಿಗೆ ಬಿಟ್ಟಿದ್ದು... ಸಮಿತಿಯು ತನ್ನ ಅಭಿಪ್ರಾಯದಲ್ಲಿ ವಿಶಿಷ್ಟ ಹಾಗೂ ದೂರದೃಷ್ಟಿಯ ಅಗತ್ಯವೆಂದು ಭಾವಿಸಿದಾಗ ಸದಸ್ಯರು ವಿಧಾನಸಭೆ ಮತ್ತು ರಾಜ್ಯ ಪರಿಷತ್ತುಗಳಿಗೆ ಹಾಜರಾಗಬೇಕು.''

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬಜೆಟ್ (ಅಥವಾ ನವದೆಹಲಿ) ಅಧಿವೇಶನದಲ್ಲಿ ಕಡೆಯ ಕಾರ್ಯಕ್ರಮವೇ ನಿರ್ಣಾಯಕವಾದುದು. ಅತ್ಯಂತ ಕಿರು ಅವಧಿಯದಾದರೂ ಸಿಮ್ಲಾ ಅಧಿವೇಶನದ ಆ ಭಾಗ ಪ್ರಮುಖವಾದದ್ದು. ವಿಶೇಷ ಸಮಿತಿಯು ಅದನ್ನೇನಾದರೂ ಮುಖ್ಯವೆಂದು ಪರಿಗಣಿಸದಿದ್ದರೆ ಅದು ತನ್ನ ಸ್ವರಾಜ್‌ವಾದಿ ಸದಸ್ಯರಿಗೆ ವಿಧಾನಸಭೆಗೆ ಹಾಜರಾಗಲು ಅನುಮತಿ ಕೊಡಬಹುದು. ಪಂಡಿತ ಮೋತಿಲಾಲ್ ನೆಹರು ಮಂಡಿಸಿದ ಸಂಧಾನಪೂರ್ವಕ ನಿರ್ಣಯ ಅದಾಯಿತು. ಲಾಲಾಜಿ ಅದನ್ನು ಬೆಂಬಲಿಸಿದರು. ಮಾಳವೀಯ ಸಂಕ್ಷಿಪ್ತವಾದ ತಿದ್ದುಪಡಿಯೊಂದನ್ನು ಅದಕ್ಕೆ ಸೂಚಿಸಿದರು:

''ಶಾಸಕಾಂಗಳಲ್ಲಿನ ಕಾರ್ಯವಿಧಾನ ಸಂಪೂರ್ಣ ಜವಾಬ್ದಾರಿಯುತ ಸರ್ಕಾರವನ್ನು ಅತಿ ಬೇಗ ಸ್ಥಾಪಿಸಲು ಅನುಕೂಲವಾಗುವ ರೀತಿಯಲ್ಲಿರಬೇಕು. ರಾಷ್ಟ್ರೀಯ ಹಿತಕ್ಕೆ ಅನುಕೂಲವಾಗುತ್ತದೆ ಎನ್ನುವ ಸಂದರ್ಭಗಳಲ್ಲಿ ಸಹಕಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮತ್ತು ಅದೇ ಕಾರ್ಯಕ್ಕೆ ಅನುಕೂಲವಾಗುತ್ತದೆ ಎನ್ನುವ ಪ್ರಸಂಗಗಳಲ್ಲೂ ವಿರೋಧವನ್ನು ಪ್ರದರ್ಶಿಸಬೇಕು.''

ಜಯ್ಕರ್ ಆ ತಿದ್ದುಪಡಿಗೆ ಅನುಮೋದನೆಯನ್ನೇನೋ ಸೂಚಿಸಿದರು. ಆದರೆ ಅದರೊಟ್ಟಿಗೆ ವಿಧಾನಸಭೆಗೆ ತಮ್ಮ ಮತ್ತು ತಮ್ಮ ಮಿತ್ರ ಕೇಳ್ಕರ್ ರಾಜೀನಾಮೆಯನ್ನು, ಸಿ.ಪಿ. ವಿದಾನಪರಿಷತ್ತಿಗೆ ಮೂಂಜೆ ಅವರ ರಾಜೀನಾಮೆಯನ್ನು ಪ್ರಕಟಿಸಿದರು.

ಹೀಗೆ ಇಬ್ಭಾಗವೊಂದಾಯಿತು. ಆ ಇಬ್ಭಾಗ ಮೋತಿಲಾಲ್ ನೆಹರು ಜೊತೆಯಲ್ಲಲ್ಲ. ಕೇಳ್ಕರ್ ಮತ್ತು ಜಯ್ಕರ್ ಜೊತೆಯಲ್ಲಿ. ಲಾಲಾಜಿ ಅವರಿಗೆ ಆ ವಿಚ್ಛೇಧನದ ನೋವು ಅನುಭವಿಸುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಅದು ಸಣ್ಣ ಪ್ರಮಾಣದ್ದೂ ಆಗಿರಲಿಲ್ಲ. ಒಂದು ವೇಳೆ ಅವರ ಪಂಜಾಬಿ ಬೆಂಬಲಿಗರು ಅಷ್ಟೊಂದು ಪ್ರಬಲವಾಗಿ ಅವರ ಮನ ಒಲಿಸದಿದ್ದರೆ ಆಗ ಪರಿಸ್ಥಿತಿ ಬೇರೆ ಆಗಿರುತ್ತಿತ್ತು. ಲಜ್ಜಾವತಿ, ಸಂತಾನಂ ಮತ್ತು ಅಚ್ಯುತರಾಂ ಅವರು ಲಾಲಾಜಿ ಅವರಿಗೆ ವಿನಮ್ರ ಮನವಿ ಮಾಡಿದರು. ಯಾವುದೇ ಕಹಿ ನಿರ್ಧಾರ ಕೈಗೊಳ್ಳದಿರಲು ಪ್ರಾರ್ಥಿಸಿದರು. ತಮ್ಮ ಬೆಂಬಲಿಗರ ನಿಲುವು ಆಶಯವನ್ನು, ಮನವಿಯನ್ನು ಅಷ್ಟೊಂದು ಸುಲಭದಲ್ಲಿ ಹತ್ತಿಕ್ಕಲು ಲಾಲಾಜಿ ಅವರಿಗೂ ಸಾಧ್ಯವಾಗಲಿಲ್ಲ. ಬಹುಶಃ ಆ ಬೆಂಬಲಿಗರು ತಮ್ಮ ನಾಯಕ ಜಯ್ಕರ್ ಹಾಗೂ ಪುಣೆಯ ಸಮೂಹದೊಂದಿಗೆ ಹೊಂದಿದ್ದ ಆತ್ಮೀಯತೆ- ತಲ್ಲೀನತೆಗಳನ್ನು ಮನಗಂಡಿದಿದ್ದರೆ ಮನವಿ ರೂಪದಲ್ಲಿ ಅಷ್ಟೊಂದು ಒತ್ತಡವನ್ನು ಅವರ ಮೇಲೆ ತರುತ್ತಿರಲಿಲ್ಲವೇನೋ, ಇಲ್ಲವೇ ಅವರೊಂದಿಗೆ ಛಿದ್ರಗೊಂಡ ಆ ಬೆಳವಣಿಗೆಯ ಬಗ್ಗೆ ಲಜಪತರು ಎಷ್ಟು ಮನ ನೊಂದರೆಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿತ್ತೇನೋ.

ಅಂದಿನ ರಾಜಕೀಯ ಪರಿಸ್ಥಿತಿಗೆ ಅಗತ್ಯವಾಗಿದ್ದ ಧೋರಣೆಗೆ ಅನುಗುಣವಾಗಿ ಲಜಪತರು ವೈಯಕ್ತಿಕವಾಗಿ ಯಾವ ಅಂದಾಜು ಮಾಡಿದ್ದರೋ ಅದಕ್ಕೆ ಅನುಗುಣವಾಗಿಯೇ ಕಾನ್ಪುರ ನಿರ್ಣಯವೇನೋ ಇತ್ತು. ಆ ನಿರ್ಣಯ ತಮ್ಮ ಆಶಯಕ್ಕೆ ಅನುಗುಣವಾಗಿದೆ ಎಂದ ಮಾತ್ರಕ್ಕೆ ಜಯ್ಕರ್ ಮತ್ತು ಕೇಳ್ಕರ್ ಪುಣೆ ಸಮೂಹದೊಂದಿಗೆ ತಮ್ಮ ಅನುಬಂಧವನ್ನು ಕಂಡು ಕೊಳ್ಳಬೇಕೆಂದು ಲಾಲಾಜಿ ಬಯಸಿರಲಿಲ್ಲ. ಕಾನ್ಪುರ ಅಧಿವೇಶನ ಅಂಗೀಕರಿಸಿದ ಆ ನಿರ್ಣಯದ ಗುಣಗಳ ಬಗ್ಗೆ ಲಾಲಾಜಿ ತಮ್ಮ ಪತ್ರಿಕೆಯಲ್ಲಿ ಬರೆದರು. ''ಅದು ಕಾಂಗ್ರೆಸ್ಸಿಗೆ ಅದರ ಹಳೆಯತನವನ್ನು ತಂದು ಕೊಟ್ಟಿದೆ'' ಎಂದರು. ಇನ್ನೂ ಮುಂದೆ ರಾಜಕೀಯ ಕಾರ್ಯಗಳೆಲ್ಲವೂ ''ಕಾಂಗ್ರೆಸ್ಸಿನ ಮಾರ್ಗದರ್ಶನದಲ್ಲಿ ಮತ್ತು ಅದರ ಹೆಸರಿನಲ್ಲಿ ನಡೆಯುತ್ತದೆ. ಸ್ವರಾಜ್ ಪಕ್ಷವು ಶಾಸಕಾಂಗದಲ್ಲಿ ಮಾತ್ರ ಪ್ರಬಲವಾಗಿತ್ತು. ಹೊರಗಡೆ ಹೆಸರಿಸಬಹುದಾದಂಥ ಅದರ ಸಂಘಟನೆ ಯಾವುದೂ ಇಲ್ಲ'' ಎಂದರು. ಹೀಗೆ ಸ್ವಯಂ ಸಂತೃಪ್ತವಾದ, ವಿರೋಧಾಭಾಸಗಳನ್ನು ಹೊಂದಿರುವ ಪಕ್ಷಕ್ಕೆ ಮತದಾರರಲ್ಲದೆ ಬೇರೆ ಯಾರೂ ಮಾನ್ಯತೆ ಕೊಡಲು ಸಾಧ್ಯವಿರಲಿಲ್ಲ. ಆ ಬಗ್ಗೆ ತಮ್ಮ ಟಿಪ್ಪಣಿ ನೀಡುತ್ತಾ ಲಜಪತರು ಹೀಗೆ ಬರೆದರು: ''ಬಹುತೇಕ ಸ್ವರಾಜ್‌ವಾದಿಗಳು ಕಾಂಗ್ರೆಸ್ ಸಮಿತಿಗಳನ್ನು ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. ಅನೇಕರು ತಮ್ಮ ಚಂದಾ ಹಣವನ್ನು ತುಂಬಿಲ್ಲ. ಸಭೆಗಳಿಗೆ ಹಾಜರಾಗುವುದಿಲ್ಲ. ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ಮುಂದುವರೆಸಲು ಮುಂದಾಗುತ್ತಿಲ್ಲ. ಅವರಿಗೆ ಬೇಕಾಗಿರುವುದು ಅವರ ನಾಯಕರೊಬ್ಬರೇ... ಇನ್ನು ಹೇಳಬೇಕೆಂದರೆ, ರಾಜ್ಯ ಪರಿಷತ್ತಿನಲ್ಲಿರುವ ಸ್ವರಾಜ್ ಪಕ್ಷದಲ್ಲಿನ ಸದಸ್ಯರಲ್ಲಿ ಅನೇಕರು ಕಾಂಗ್ರೆಸ್ಸಿನ ಸದಸ್ಯರೇ ಅಲ್ಲ. ಕಾನ್ಪುರ ನಿರ್ಣಯ ಇದೆಲ್ಲವನ್ನು ಬದಲಾವಣೆ ಮಾಡಿದೆ.''

ಆಗಿನ ವಿವಾದಗಳಲ್ಲಿ ಮೂರ್ತರೂಪವಾದದ್ದು ಎರಡು ಅಂಶಗಳಲ್ಲಿ ವಿರೋಧಕ್ಕಾಗಿ ವಿರೋಧ ಮತ್ತು ಅಧಿಕಾರದ ಸ್ಥಾನಮಾನ

ಈ ಪೈಕಿ ಮೊದಲನೆಯದರ ಬಗ್ಗೆ ಲಜಪತರು ತಮ್ಮ ನಿಶ್ಚಿತ ನಿರ್ಧಾರವನ್ನು ಪುನರುಚ್ಚರಿಸಿದರು. -''ರಾಜ್ಯ ಪರಿಷತ್ತುಗಳನ್ನು ಬಹಿಷ್ಕರಿಸಬೇಕೆಂಬ ನಿಲುವನ್ನು ನಾನು ಅತ್ಯಂತ ಪ್ರಬಲವಾಗಿ ವಿರೋಧಿಸುತ್ತಾ ಬಂದಿದ್ದೇನೆ. ಅಲ್ಲಿ ವಿರೋಧಕ್ಕಾಗಿಯೇ ವಿರೋಧ ಮಾಡಬೇಕೆಂಬ ಸಾರಸಗಟು ಧೋರಣೆಯನ್ನು ನಾನು ಕಟುವಾಗಿ ಆಕ್ಷೇಪಿಸುತ್ತಾ ಬಂದಿದ್ದೇನೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸ್ವರಾಜ್ ಪಕ್ಷವು ಯಾವ ರೀತಿಯಲ್ಲಿ ಅಲ್ಲಿನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುತ್ತಿದೆಯೋ ಅದೇ ರೀತಿ ಆ ಕಾರ್ಯಕಲಾಪಗಳು ಮುಂದುವರೆಯಬೇಕು ಎಂಬುದರಲ್ಲಿ ನನಗೆ ಆಳವಾದ ನಂಬಿಕೆ ಇದೆ.''

ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳುವ ಬಗ್ಗೆ ಅವರು ಹೀಗೆ ಬರೆದರು: ''ಸರ್ಕಾರವು ಕಾಣಿಕೆ ರೂಪದಲ್ಲಿ ಒಪ್ಪಿಸುವ ಯಾವುದೇ ಅಧಿಕಾರವನ್ನು ಒಪ್ಪಿಕೊಳ್ಳದಿರುವಂಥ ಭಾರತೀಯ ರಾಜಕಾರಣಿಗಳ ಒಂದು ಪಕ್ಷವಾದರೂ ಇರಬೇಕೆಂಬ ದೇಶಿಯವಾದಿಗಳ ಐತಿಹಾಸಿಕ ಉದಾಹರಣೆಯನ್ನು ಕಾರ್ಯಗತ ಮಾಡಿಕೊಂಡಂತೆ ಆಗುತ್ತದೆ.''

ಕಾನ್ಪುರದ ನಿರ್ಣಯವು ಅಂಥ ನಿಲುವುಗಳಿಗೆ ವಿರೋಧವಾಗಿಯೇನೂ ಇರಲಿಲ್ಲ. ಆದರೂ, ''ಮುಂದಿನ ಅಧಿವೇಶನದ ನಂತರ ರಾಜ್ಯ ಪರಿಷತ್ತುಗಳಿಂದ ಹೊರ ಬಂದು, ಸ್ವರಾಜ್‌ವಾದಿಗಳು ಜನತೆಯ ಮುಂದೆ ಹೋಗಬೇಕೆಂಬ ನಿರ್ಣಯ ಭಾಗದ ಅರ್ಥವಾದರೂ ಏನು?''ಎಂಬ ಪ್ರಶ್ನೆ ಎದ್ದಿತು.

ಲಾಲಾಜಿ ನಿರ್ಣಯದ ಆ ಭಾಗವನ್ನು ಹೀಗೆ ವಿಶ್ಲೇಷಿಸಿದರು. (ಸಮರ್ಥನೆ) - ''ನನ್ನ ಮನವರಿಕೆ ಪ್ರಕಾರ ಅದರ ಉದ್ದೇಶ ಪ್ರಬಲವಾದ ಪ್ರದರ್ಶನವೊಂದನ್ನು ವಿರೋಧದ ರೂಪದಲ್ಲಿ ಸರ್ಕಾರಕ್ಕೆ ತೋರಗೊಡುವುದು. ನಮ್ಮಂಥ ಅಸಹಾಯಕ ಜನರು ಅಧಿಕಾರಸ್ಥರು ಇಡುವ ಹಣಕಾಸು ಬೇರೆಡೆಗಳಿಗೆ ಅದನ್ನು ಬಹಿಷ್ಕರಿಸುವ ಮತ್ತು ಸಭಾತ್ಯಾಗ ಮಾಡುವ ಕಾರ್ಯಕ್ರಮದ ಮೂಲಕ ಪ್ರತಿಭಟನೆ ತೋರುವುದಲ್ಲದೆ ಬೇರೇನೂ ಮಾಡಲು ಸಾಧ್ಯವಿಲ್ಲ. ಭಾರತೀಯ ದೇಶಿಯವಾದದ ಚರಿತ್ರೆಯಲ್ಲಿ ಇಂಥ ಬಹಿಷ್ಕಾರ ಮತ್ತು ಸಭಾತ್ಯಾಗಗಳು ಅನೇಕ ಸಂದರ್ಭಗಳಲ್ಲಿ ನಡೆದಿದೆ. ಮಹಾತ್ಮ ಗಾಂಧೀಜಿಯವರ ಚಳವಳಿ ಆರಂಭವಾಗುವುದಕ್ಕೆ ಮೊದಲೇ ಅವು ನಡೆದಿವೆ. ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಫಿರೋಜ್ ಷಾ ಮೆಹ್ತಾ ತಮ್ಮ ಬೆಂಬಲಿಗರೊಂದಿಗೆ ವಿಧಾನಪರಿಷತ್ತಿನಲ್ಲಿ ಸಭಾತ್ಯಾಗ ಮಾಡಿದ ಉದಾಹರಣೆ ನಮ್ಮ ಮುಂದಿದೆ... ಪಂಜಾಬಿನಲ್ಲಿ ಮಾರ್ಷಲ್ ಲಾ ಆಡಳಿತ ಜಾರಿಗೆ ಬಂದ ಸಂಬಂಧದಲ್ಲಿ ತಾವು ಮಂಡಿಸಿದ ನಿರ್ಣಯವನ್ನು ವೈಸ್‌ರಾಯ್ ತಿರಸ್ಕರಿಸಿದ್ದಕ್ಕೆ ಪ್ರತಿಭಟನೆಯಾಗಿ ಶಾಸ್ತ್ರೀ ವಿಧಾನಪರಿಷ್ತತಿನಿಂದ ಹೊರಬಂದರು. ಸ್ವರಾಜ್‌ವಾದಿಗಳು ಈ ನಿರ್ಣಯದ ಪ್ರಕಾರ ನಡೆದುಕೊಂಡ ನಂತರ ಚುನಾವಣೆಗಳಲ್ಲಿ ಜನತೆಯ ಮುಂದೆ ಹೋಗಿ ತೀರ್ಪು ಕೇಳುತ್ತಾರೆ. ಸದ್ಯದಲ್ಲಿ ಸಂವಿಧಾನದ ಬದಲಾವಣೆಯ ತಮ್ಮ ಕನಿಷ್ಠ ಬೇಡಿಕೆಯ ಈಡೇರಿಕೆಗೆ ಸರ್ಕಾರದ ಮೇಲೆ ಒತ್ತಡ ತರುವ ಸಲುವಾಗಿ ಸ್ವರಾಜ್‌ವಾದಿಗಳು ಇತರ ಪಕ್ಷಗಳ ಬೆಂಬಲದೊಂದಿಗೆ

ಐಕ್ಯವಾಗಿ ವಿಧಾನಸಭೆಯಲ್ಲಿ ಕಾರ್ಯತಂತ್ರವನ್ನು ರೂಪಿಸಿಕೊಳ್ಳಲು ಹೊರಟಿದ್ದಾರೆ. ತಾತ್ವಿಕವಾಗಿ ಅವರ ಈ ಕಾರ್ಯತಂತ್ರದ ಬಗ್ಗೆ ನನಗೆ ಯಾವುದೇ ಆಕ್ಷೇಪಾರ್ಹ ನಿಲುವು ಕಂಡು ಬರುತ್ತಿಲ್ಲ. ತನ್ಮೂಲಕ ಅವರು ಭಾರತದ ಜನತೆಗೆ ಹಾಗೂ ಪ್ರಮುಖವಾಗಿ ವಿಶ್ವದ ಜನತೆಗೆ ಬ್ರಿಟಿಷ್ ಸರ್ಕಾರಕ್ಕೆ ಷರತ್ತು ವಿಧಿಸುವ ನಿಟ್ಟಿನಲ್ಲಿ ತಮ್ಮ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನು ತೋರಗೊಡಲು ಬಯಸಿದ್ದಾರೆ. ಸರ್ಕಾರ ತಮ್ಮ ಆಶಯಗಳನ್ನು ಕಡೆಗಣಿಸುತ್ತಿದೆ ಎಂಬುದನ್ನು ಅವರೊಂದಿಗೆ ಪ್ರದರ್ಶಿಸಲು ಆಶಿಸಿದ್ದಾರೆ.''

ಕಾಂಗ್ರೆಸ್ಸಿಗಾದ ಲಾಭದ ಬಗ್ಗೆ ಅಂದಾಜು ಮಾಡುತ್ತಾ ಲಾಲಾಜಿ ಹೀಗೆ ಬರೆದರು. ಈ ಕಾಂಗ್ರೆಸ್ ಅಧಿವೇಶನದ ಪ್ರಮುಖ ಕೊಡುಗೆ ಎಂದರೆ ಕಾಂಗ್ರೆಸ್ ಸಂಘಟನೆಯು ತನ್ನತನವನ್ನು ತಾನು ಮತ್ತೆ ಗಳಿಸಿಕೊಂಡಿದ್ದು. ರಾಜಕೀಯದ ಕಾರ್ಯ ಚಟುವಟಿಕೆಗಳ ಬಗ್ಗೆ ಹೇಳುವುದಾದರೆ ಕಳೆದ ಮೂರು ವರ್ಷಗಳಿಂದಲೂ ಅದು ತಟಸ್ಥವಾಗಿತ್ತು. ಎಲ್ಲಾ ರಾಜಕೀಯ ಕಾರ್ಯಗಳನ್ನು ಸ್ವರಾಜ್ ಪಕ್ಷವೇ ನಡೆಸಿಕೊಂಡು ಬಂದಿತ್ತು. ತತ್ಪರಿಣಾಮವಾಗಿ ಆ ಪಕ್ಷದ ಚಟುವಟಿಕೆಗಳೇ ಎದ್ದು ಕಾಣುತ್ತಿದ್ದವು. ಕಾಂಗ್ರೆಸ್ ಸಂಘಟನೆ ತೆರೆಮರೆ ಸೇರಿತ್ತು. ಈಗ ಸ್ವರಾಜ್ ಪಕ್ಷದ ಚಟುವಟಿಕೆ ಕಾರ್ಯತಃ ಗೌಣವಾಗುತ್ತದೆ. ಕಾಂಗ್ರೆಸ್ ಕಾರ್ಯಕಾರಿಣಿ ಎಲ್ಲವನ್ನು ನಿಯಂತ್ರಿಸುತ್ತದೆ. ರಾಜ್ಯ ಪರಿಷತ್ತು ಮತ್ತು ವಿಧಾನಸಭೆಗಳಿಗೆ ಆಯ್ಕೆ ಬಯಸುವವರಿಗೆ ಸಿದ್ಧಾಂತ, ನಿರ್ದೇಶನಗಳನ್ನು ನೀಡುತ್ತದೆ. ತನ್ನದೇ ಹೆಸರು ಮತ್ತು ಲಾಂಛನದಡಿಯಲ್ಲಿ ಚುನಾವಣೆ ಎದುರಿಸುವಂತೆ ಮಾಡುತ್ತದೆ. ತಾಂತ್ರಿಕ ಮತ್ತು ಕಾರ್ಯಭಾರಿ ದೃಷ್ಟಿಕೋನಗಳಿಗೆ ಅನುಗುಣವಾಗಿ ಇದೆಲ್ಲವನ್ನು ನಿರ್ಧರಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಕಾಂಗ್ರೆಸ್ ಸಂಘಟನೆಯು ಸಂಪೂರ್ಣವಾಗಿ ಕಷ್ಟದಿಂದ ಪಾರಾಗಿದೆ ಎಂದೂ ಹೇಳಲಾಗದು.''

ಈ ಮುಖಿಗಳನ್ನು ಅರ್ಥ ಮಾಡಿಕೊಂಡೋ ಏನೋ ಎರಡು ಕಡೆಯ ನಾಯಕರುಗಳು ಸಂಘರ್ಷಕ್ಕೆ ಇಳಿಯಲಿಲ್ಲ. ಯಾವ ಕಡೆಯವರು ರಾಜಿ ಅಥವಾ ಹೊಂದಾಣಿಕೆಯ ಸೂತ್ರವನ್ನು ಹಿಡಿಯಲಿಲ್ಲ. ಅತ್ತ ಪಂಜಾಬಿನಲ್ಲಿ ಸಂತಾನಂ ಮತ್ತು ಲಜ್ಜಾವತಿ ಪ್ರಮುಖವಾಗಿ ಲಾಲಾಜಿಯವರ ಬೆಂಬಲಿಗರ ಮೇಲೆ ಒತ್ತಡ ಹಾಕಿ ಪಂಡಿತ್ ಮೋತಿಲಾಲರ ಸಹಯೋಗ ಕಡಿದುಕೊಳ್ಳದಂತೆ ನೋಡಿಕೊಂಡರು. ಅಷ್ಟಕ್ಕೆ ಬಿಡದೆ ಒಂದು ರೀತಿಯಲ್ಲಿ ರಾಜಿ ಮಾಡಿಕೊಳ್ಳುವಂತೆಯೂ ಮಾಡಿದರು. ಮುಂದಿನ ಬೆಳವಣಿಗೆಗಳನ್ನು ಕಂಡಾಗ ಆ ರಾಜಿಯೂ ಸಹ ಹೆಚ್ಚು ಕಾಲ ಉಳಿಯುವಂತೆ ಕಂಡು ಬರುವುದಿಲ್ಲ.

ಈ ಮಧ್ಯೆ ಬೆಳವಣಿಗೆ ಕಾರ್ಯದ ವಿನೂತನ ರೀತಿಯ ನಡವಳಿಕೆಯೊಂದು ಆ ಅಧಿವೇಶನದಿಂದಲೇ ಮೊದಲಿಟ್ಟಿತು. ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ವಿಧ್ಯುಕ್ತವಾಗಿ ಆರಿಸುವ ಕಲಾಪ ಅದು. ಹರ್ಡಿಕರ್ ಅವರ ಹಿಂದೂಸ್ತಾನಿ ಸೇವಾದಳ ಆ ವೇಳೆಗ ನಿಯತವಾಗಿ ಕಾರ್ಯನಿರತವಾಗಿತ್ತು. ಅಧಿವೇಶನದಲ್ಲಿ ಅದೇ ಮೊದಲ ಬಾರಿಗೆ ಧ್ವಜಾರೋಹಣ ನೆರವೇರಿಸಿ ವಂದನೆ ಸ್ವೀಕರಿಸುವ ಗೌರವ ಕಾರ್ಯವನ್ನು ಲಾಲಾಜಿ ನೆರವೇರಿಸಿದರು.

ಇತ್ತ ಮಹಾರಾಷ್ಟ್ರ ಬಣ ನಿರೀಕ್ಷಿಸಿದಂತೆ ಲಾಲಾಜಿ ವಿರುದ್ಧ ತಳಮಳಗೊಂಡಿತ್ತು. ಅವರ ವಿರುದ್ಧ ಆ ಬಣ ಮಾಡುತ್ತಿದ್ದ ಟೀಕೆ ಮತ್ತು ದೂರುಗಳು ಮೇಲಿಂದ ಮೇಲೆ ಲಾಲಾಜಿ ಅವರಿಗೆ ಕೇಳಿ ಬರತೊಡಗಿತು. ದಿ ಪೀಪಲ್‌ನಲ್ಲಿ ಆ ಬಗ್ಗೆ ಅವರು ಬರೆಯುವುದು ಅನಿವಾರ್ಯವಾಯಿತು. ''ನನ್ನ ಮರಾಠ ಗೆಳೆಯರು ನನ್ನ ಬಗ್ಗೆ ತುಂಬಾ ಕೋಪಗೊಂಡಿರುವಂತೆ ಕಂಡು ಬರುತ್ತದೆ. ಕಾಂಗ್ರೆಸ್ ಕಾನ್ಪುರದ ಅಧಿವೇಶನದ ನಂತರದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಈ ಮರಾಠರು ನನ್ನನ್ನು ಹೀಗೆಳೆಯುತ್ತಲೇ ಇದ್ದಾರೆ. ಪ್ರತಿ ಹಂತದಲ್ಲೂ ನನ್ನ ಕಡೆಗೆ ಬೊಟ್ಟು ಮಾಡುತ್ತಿದ್ದಾರೆ. ನಾನು ಅದಕ್ಕೆ ಪ್ರತಿಕ್ರಿಯೆಯನ್ನು ನೀಡಿಲ್ಲ. ಈಗಲೂ ಸಹ ಹಾಗೇ ಮಾಡಲು ಹೋಗುವುದಿಲ್ಲ. ನನ್ನ ನೀತಿಯಲ್ಲಿ ಆಗಿರುವ ವ್ಯತ್ಯಾಸಗಳಿಂದಾಗಿ ಜಯ್ಕರ್ ಮತ್ತು ಕೇಳ್ಕರ್ ಅವರೊಡನೆ ನನಗಿರುವ ವೈಯಕ್ತಿಕ ಅನುಬಂಧದಲ್ಲೂ ಕಿಂಚಿತ್ತೂ ತೊಡಕಾಗಿಲ್ಲ. ಪುಣೆಯ ಮಹಾರಾಷ್ಟ್ರಿಯರು ಮತ್ತು ನನ್ನ ನಡುವೆ ಜೀವಾವಧಿ ಗೆಳೆತನವಿದೆ. ಅವರ ಬಗ್ಗೆ ನಾನು ಯಾವುದೇ ಗಳಿಗೆಯಲ್ಲಿ ಯಾವುದೇ ರೀತಿಯಲ್ಲಿ ಕಿಂಚಿತ್ತು ಮಾತನಾಡಿದರೂ ಅದರಿಂದ ನನ್ನ ಮನಸ್ಸಿಗೆ ನೋವಾಗುತ್ತದೆ. ನನ್ನಲ್ಲಿ ಶಕ್ತಿ ಇರುವುಷ್ಟರ ಮಟ್ಟಿಗೆ ಉದ್ವೇಗದ ಪ್ರಸಂಗಗಳನ್ನು ಹತೋಟಿ ಮಾಡಿಕೊಳ್ಳುತ್ತಾ ಬಂದಿದ್ದೇನೆ. ಈ ಹಿಂದೆ ನಾನು ನಿರಂತರವಾಗಿ ಮಾಡುತ್ತಾ ಬಂದಿರುವ ದೇಶಹಿತದ ಕಾರ್ಯವನ್ನು ಅದೇ ಪರಸ್ಪರ ಸೌಹಾರ್ದತೆಯ ಸಮಾನ ವೇದಿಕೆಯಲ್ಲಿ ಮತ್ತೆ ಮುಂದುವರಿಸಿಕೊಂಡು ಹೋಗುತ್ತೇನೆ ಎಂಬ ವಿಶ್ವಾಸವೂ ನನ್ನಲ್ಲಿದೆ. ಈಗಿನ ಭಿನ್ನಾಭಿಪ್ರಾಯಗಳು ತೀರಾ ತಾತ್ಕಾಲಿಕ. ಗೆಳೆಯರ ವಿರುದ್ಧ ಲೇವಡಿಯನ್ನಾಗಲಿ, ಅಣಕವನ್ನಾಗಲಿ ಮಾಡಬೇಕು ಎಂಬುದರಲ್ಲಿ ನನಗೆ ಸನ್ನಡತೆ ಕಂಡು ಬರುವುದಿಲ್ಲ. ಮರಾಠ ಗೆಳೆಯರಿಗೆ ಇದಿಷ್ಟೇ ನನ್ನ ಉತ್ತರ''

ಬರ್ಮಾದಲ್ಲಿ ಏರ್ಪಟ್ಟ ಹಿಂದೂ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಅವರನ್ನು ಆಹ್ವಾನಿಸಲಾಯಿತು. ಆಮಂತ್ರಣವನ್ನು ಅವರು ಒಪ್ಪಿಕೊಂಡರು. ಆದರೆ ದೆಹಲಿ ಅಧಿವೇಶನ ಮುಗಿಯುವ ತನಕ ಸಮ್ಮೇಳನ ಮುಂದೂಡುವಂತೆ ಸಲಹೆ ಮಾಡಿದರು. ಆದರೆ (ಮುಂದೆ ದಿ ಪೀಪಲ್‌ನಲ್ಲಿ ಅವರೇ ಬರೆದುಕೊಂಡಂತೆ) ''ಬರ್ಮಾ ನೋಡಬೇಕೆಂಬ ಕುತೂಹಲ ಮತ್ತು ಆ ನೆಲದ ಮೇಲೆ ಓಡಾಡಬೇಕೆಂಬ ಆಸೆ ಪ್ರಬಲವಾಯಿತು.'' 1907ರ ನಂತರ ಅವರು ಬರ್ಮಾಕ್ಕೆ ಭೇಟಿ ನೀಡಿರಲಿಲ್ಲವಾದ್ದರಿಂದ ಅವರ ಆತುರ ಸಹಜವೇ ಆಗಿತ್ತು. ತಮ್ಮನ್ನು ಆ ನಾಡಿನಲ್ಲಿ ಬಂಧನದಲ್ಲಿ ಇಟ್ಟಿದ್ದುದ್ದರ ಹಿನ್ನಲೆಯಲ್ಲಿ ಅಲ್ಲಿಗೆ ಭೇಟಿ ಕೊಡುವ ಕುತೂಹಲಕ್ಕೆ ಅವಕಾಶ ಸಿಗದ ದಾಹ ಅವರನ್ನು ಕಾಡುತ್ತಿತ್ತು. ಕಾನ್ಪುರ ವಿದ್ಯಮಾನಗಳಿಂದ ಉಂಟಾಗಿದ್ದ ಖೇದ ಮತ್ತು ಅಸಂತೋಷಗಳನ್ನು ನೀಗಿಕೊಳ್ಳುವ ಸಲುವಾಗಿಯೂ ಅವರಿಗೆ ವಾತಾವರಣದ ಬದಲಾವಣೆ ಅವಕಾಶ ಅವರಿಗೆ ಬೇಕಾಗಿತ್ತು. ತಮ್ಮ ನಿರ್ಧಾರವನ್ನು ಬದಲಿಸಿಕೊಂಡು ಬರ್ಮಾ ಆಹ್ವಾನಕ್ಕೆ ಓಗೊಡಲು ಅವರು ತ್ವರಿತ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದರು. ಅಚಿಂತ್‌ರಾಂ ಒಡಗೂಡಿ ಕಾನ್ಪುರದಿಂದ ಹೊರಟರು. ಕಲ್ಕತ್ತಾ ತಲುಪಿ ಹಡಗಿನ ಮೂಲಕ ಹೊಸ ವರ್ಷದ ದಿನ ಬರ್ಮಾ ಪ್ರಯಾಣ ಕೈಗೊಂಡರು.

ಅವರು ಬರ್ಮಾದಲ್ಲಿ ಹಳೆಯ ಗೆಳೆಯರನ್ನು ಭೇಟಿ ಮಾಡಿದರು. ಹೊಸ ಒಡನಾಟಗಳನ್ನು ಸಾಧಿಸಿಕೊಂಡು ಅಲ್ಲಿದ್ದ ಭಾರತೀಯ ನಿವಾಸಿಗಳನ್ನು ಭೇಟಿ ಮಾಡಿದರು.

ಅವರ ಆಗುಹೋಗುಗಳನ್ನು ತಿಳಿದುಕೊಂಡರು. ಅವರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ತಮಗೆ ಸಮಂಜಸವೆನಿಸಿದ ಸಲಹೆಗಳನ್ನು ನೀಡಿದರು. ಎಲ್ಲಕ್ಕಿಂತ ಹೆಚ್ಚಿನದಾಗಿ ಡೆಫ್ರಿನ್ ಕೋಟೆಗೆ ಭೇಟಿ ನೀಡಿದರು. ಮಾಂಡೇಲೆ ಕೋಟೆಯೊಳಗಿನ ಪಿಡಬ್ಲ್ಯುಡಿ ಬಂಗಲೆ ಒಳಗೆಲ್ಲಾ ಅಡ್ಡಾಡಿದರು. ತಾವು ಬಂದಿಯಾಗಿ ಕಳೆದ ದಿನಗಳನ್ನು, ಅಲ್ಲೆಲ್ಲಾ ಅಡ್ಡಾಡಿದ ಕ್ಷಣಗಳನ್ನು ನೆನಸಿಕೊಂಡು ವಿಚಿತ್ರ ಅನುಭವ ಪಡೆದುಕೊಂಡರು.

ಬೌದ್ಧ ಪಗೋಡಗಳು ಹಾಗೂ ಸ್ಮಾರಕಗಳನ್ನು ನೋಡಿದರು. ಹಳೆಯ ಬೌದ್ಧ ವಿಹಾರಗಳು ಮತ್ತು ಹೊಸ ಮಂದಿರಗಳನ್ನೆಲ್ಲಾ ಕಂಡರು. ಆ ಕಾಲದಲ್ಲಿ ಪೇಶಾವರದಲ್ಲಿದ್ದ ಬ್ರಿಟಿಷ್ ಅಧಿಕಾರಸ್ಥರು ಬರ್ಮಾ ಪುರೋಹಿತರಿಗೆ ಕೊಟ್ಟಿದ್ದ ಬರ್ಮಾ ಮಹಾ ಪುರುಷನಿಗೆ ಸಂಬಂಧ ಪಟ್ಟ ದೈಹಿಕ ಪವಿತ್ರ ಪಳೆಯುಳಿಕೆಯನ್ನು ಇಟ್ಟು ನಿರ್ಮಿಸಿದ ಹೊಸ ಮಂದಿರ ಆ ಪೈಕಿ ಒಂದಾಗಿತ್ತು.

ದಿ ಪೀಪಲ್ ಪತ್ರಿಕೆಯಲ್ಲಿ ಲಜಪತರು ಬರ್ಮಾದಲ್ಲಿ ತಾವು ಕಂಡು ಅನುಭವಿಸಿದ್ದನ್ನೆಲ್ಲಾ ಕುತೂಹಲಕಾರಿ ಕಥನ ರೂಪದಲ್ಲಿ ಬರೆದರು. ಅದರಲ್ಲಿ ಬರ್ಮಿಯರ ಆಚಾರ, ನಡೆ ನುಡಿ, ವಿಚಾರ ಆಧ್ಯಾತ್ಮಿಕತೆ ಹಾಗೂ ಲೌಕಿಕಗಳ ನಿರೂಪಣೆ ಇತ್ತು. ಅಲ್ಲಿನ ಜನರ ವಿಶೇಷವಾಗಿ ಪುರುಷರ ಸುಂದರ ಪೋಷಾಕಿನ ಬಗ್ಗೆಯೇ ಒಂದು ವಿವರಣೆ ಒದಗಿಸಿತ್ತು. ಮಹಿಳೆಯರ ನೀಳ ಕೇಶದ ಬಗ್ಗೆ ಲಾಲಾಜಿ ಚಿತ್ರಣ ಹೃದಯಂಗಮ. ಹಿಮ್ಮಡಿಯತನಕ ಇಳಿ ಬಿದ್ದ ಕೇಶರಾಶಿ ಬರ್ಮಾ ಮಹಿಳೆಯರದು. ಪ್ರಪಾತದ ಅಲೆಯಂತೆ ಕಪ್ಪು ಕೇಶ ಸೌಂದರ್ಯ ನೋಟಕರನ್ನು ಮೋಹಿತರನ್ನಾಗಿ ಮಾಡುತ್ತಿತ್ತು; ಕೆಲವರಲ್ಲಿ ಹಿಮ್ಮಡಿಯ ಅಂಚನ್ನು ದಾಟುವಷ್ಟು ನೀಳವಾಗಿ ಬೆಳೆದ ಕೇಶರಾಶಿಯನ್ನು ಅವರು ಕಂಡರು. ಬರ್ಮಿಯ ಸೌಂದರ್ಯವತಿಯರ ಕೇಶರಾಶಿಯ ಶ್ರೀಮಂತಿಕೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಬಗ್ಗೆಯೂ ಅವರಿಗೆ ಕೆಲವು ಪ್ರಸಂಗಗಳು ಕೇಳಿ ಬಂದವು. ''ಕೆಲವು ಕಾಲದ ಹಿಂದೆ ಬರ್ಮಿಯ ದೇಶಭಕ್ತ ಹಾಗೂ ಪುರೋಹಿತ ಉತ್ತಮರನ್ನು ಬಂಧನದಿಂದ ಬಿಡುಗಡೆ ಮಾಡಲಾಯಿತೆಂದೂ, ಯುವ ಬರ್ಮಿಯ ಮಹಿಳೆಯರು ತಮ್ಮ ಕೇಶವನ್ನು ದಾರಿಯುದ್ದಕ್ಕೂ ಹರಡಿ ಉತ್ತಮರನ್ನು ನಡೆಮುಡಿಯ ಮೂಲಕ ಸ್ವಾಗತಿಸಿದರೆಂದು ಕೇಳಿ ಬಂದಿತು.'' ಅದೇ ರೀತಿಯ ಪ್ರಕರಣಗಳು ಹಿಂದೆ ನಡೆದಿದ್ದ ಬಗ್ಗೆಯೂ ಅವರಿಗೆ ತಿಳಿದು ಬಂದಿತು. ದೇಶಭಕ್ತ ಹೋರಾಟಗಾರ ಉತ್ತಮರಿಗೆ ಬರ್ಮಿ ಜನತೆ ತೋರಿದ ಭಾವನಾತ್ಮಕ ಬೆಂಬಲವನ್ನು ಲಜಪತರು ಗೌರವಯುತವಾಗಿ ಕಂಡಿದ್ದಾರೆ. ತಮ್ಮದೇ ನಾಡಿನಲ್ಲಿ ಜನತೆ ಬ್ರಿಟಿಷ್ ವಿರುದ್ಧ ಹೋರಾಡುವ ಮುಖಂಡರಿಗೆ ತೋರುತ್ತಿರುವ ಗೌರವ, ಆದರಗಳಿಗಿಂತಲೂ ಅದು ಹೆಚ್ಚಿನದು ಎಂದು ಬರೆದಿಟ್ಟಿದ್ದಾರೆ.

ಲಜಪತರು ಬರ್ಮಕ್ಕೆ ಭೇಟಿ ಕೊಟ್ಟ ಕಾಲದಲ್ಲಿ ಹೊಸ ಶಾಸನವೊಂದು ರೂಪಿತವಾಗುತ್ತಿತ್ತು. ಬರ್ಮಿಯೇತರರನ್ನು ದೇಶದಿಂದ ಹೊರಗಟ್ಟುವುದಕ್ಕೆ ಸಂಬಂಧಪಟ್ಟ ಶಾಸನ ಅದಾಗಿತ್ತು. ಆ ಶಾಸನದಿಂದ ಭಾರತೀಯ ಸಮುದಾಯ ವಿಚಲಿತಗೊಂಡಿತ್ತು. ಲಜಪತರು ಪರಿಸ್ಥಿತಿಯ ಅಧ್ಯಯನ ಮಾಡಿದರು. ವಾಸ್ತವಿಕತೆಯನ್ನು ಮನಗಂಡರು. ಆ ಬೆಳವಣಿಗೆಯನ್ನೆಲ್ಲಾ ತಮ್ಮ ತಿಳುವಳಿಕೆಯ ಬೆಳಕಲ್ಲಿ ವಿಶ್ಲೇಷಿಸಿ ಹೀಗೆ ತಿಳಿಸಿದರು

:''ಭಾರತೀಯನು ತನ್ನ ಕಾಲವನ್ನು ಅನುಭವಿಸಿದ್ದಾನೆ. ಈಗ ಇಲ್ಲಿ ಅವನ ಅಗತ್ಯ ಇಲ್ಲ. ಆತನ ಸಹಾಯ ಅಥವಾ ಸಹಕಾರವಿಲ್ಲದೆ ತನ್ನನ್ನು ತಾನು ಆಳಿಕೊಳ್ಳಬಲ್ಲ ಮತ್ತು ತನ್ನನ್ನು ತಾನು ನಿರ್ವಹಿಸಿಕೊಳ್ಳಬಲ್ಲ ಶಕ್ತಿ ದೇಶಕ್ಕೆ ಬಂದಿದೆ. ಬರ್ಮದಿಂದ ಭಾರತೀಯರನ್ನು ವಾಪಸು ಕಳುಹಿಸಿದರೆ ಇಲ್ಲಿನ ಆಂಗ್ಲೋ ಇಂಡಿಯನ್ ಆಳ್ವಿಕೆದಾರರಿಗೆ, ವ್ಯಾಪಾರಿಗಳಿಗೆ ಮತ್ತು ಉದ್ಯಮಿಗಳಿಗೆ ಸಂತೋಷವಾಗಲಿದೆ.'' ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸುತ್ತಾ, ''ಬರ್ಮ ಸಮಸ್ಯೆಯನ್ನು ಬರ್ಮದ ಹಿತಾಸಕ್ತಿಯ ಚೌಕಟ್ಟಿನಲ್ಲೇ ನಿರ್ಣಯಿಸಬೇಕು. ಅದನ್ನು ಬರ್ಮಿಯರೇ ನಿರ್ಧರಿಸಿಕೊಳ್ಳಬೇಕು. ಬೇರೆ ಯಾರೂ ಆ ಬಗ್ಗೆ ನಿರ್ಧಾರ ಮಾಡಲಾಗದು'' ಎಂದು ಬರೆದರು. ತಮ್ಮ ಈ ಸ್ಪಷ್ಟ ಅಭಿಮತದ ಆಧಾರದ ಮೇಲೆ ಭಾರತೀಯ ಸಮುದಾಯಕ್ಕೆ ಸಲಹೆ ನೀಡಿ,''ಅಲ್ಲಿರುವುದಾದರೆ ಬರ್ಮಿಯರಾಗಿಯೇ ಇರಿ'' ಎಂದರು. ತನ್ಮೂಲಕ ಬರ್ಮಿಯರೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಳ್ಳಬೇಕೆಂದು, ಆಡಳಿತದಲ್ಲಿ ಯಾವುದೇ ವಿಶೇಷ ಪ್ರಾತಿನಿಧ್ಯ ಕೇಳಬಾರದೆಂದೂ, ಬರ್ಮಿಯರು ಸಹ ಅವರನ್ನು ಅನ್ಯ ದೇಶಿಯರಾಗಿ ಪರಿಗಣಿಸಬಾರದೆಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದರು.

ಲಾಲಾಜಿಯವರ ಪರಿಪೂರ್ಣವಾದ ಈ ಸಲಹೆಯನ್ನು ಅಲ್ಲಿನ ಭಾರತೀಯ ಸಮುದಾಯದವರು ಮಾನ್ಯ ಮಾಡಲಿಲ್ಲ. ಮುಂದೆ ಅವರು ಅದಕ್ಕೆ ಬೆಲೆ ತೆರಬೇಕಾಯಿತು. ಜಪಾನ್ ದಾಳಿಯ ಪರಾಕಾಷ್ಠೆಗೆ ಮೊದಲು· 1942ರಲ್ಲಿ ಭಾರತೀಯರು ಬರ್ಮದಿಂದ ಬಲವಂತವಾಗಿ ಭಯ, ಹಿಂಸೆಯ ಹಿನ್ನಲೆಯಲ್ಲಿ ಓಡಿ ಬರಬೇಕಾಯಿತು.

1926ರ ಜನವರಿ ಅಂತ್ಯದಲ್ಲಿ ಲಜಪತರು ಬರ್ಮದಿಂದ ದೆಹಲಿಗೆ ವಾಪಸಾದರು. ಆಗ ಆರಂಭಗೊಂಡ ರಾಷ್ಟ್ರೀಯ ವಿಧಾನಸಭೆ ಅಧಿವೇಶನದಲ್ಲಿ ಪಾಲ್ಗೊಂಡರು. ಈ ಹಿಂದೆ ಹೇಳಿರುವಂತೆ ಆ ಅವಧಿಯಲ್ಲಿ ಅವರು ವಿಧ್ಯುಕ್ತವಾಗಿ ಸ್ವರಾಜ್ ಪಕ್ಷ ಸೇರಿಕೊಂಡರು. ಆ ಅಧಿವೇಶನದಲ್ಲಿ ಲಜಪತರು ಪ್ರಮುಖವಾದ ಚರ್ಚೆಗಳಲ್ಲಿ ಪಾಲ್ಗೊಂಡು ತಮ್ಮ ಮೊನಚಾದ ಕಾನೂನು ತರ್ಕದಿಂದ ಕೂಡಿದ ಚರ್ಚೆಯ ಮೂಲಕ ಪ್ರಮುಖವಾದ ಶಾಸನಾತ್ಮಕ ಕೊಡುಗೆಗಳನ್ನು ಸಲ್ಲಿಸಿದರು. ಅವುಗಳಲ್ಲಿ ಭಾರತೀಯ ಕಾರ್ಮಿಕ ಚಳವಳಿ ವಿಧೇಯಕವು ಒಂದು. ಮತ್ತೊಂದು (ಶಫಿ ಸೂಚಿತ) ರಾಜಕೀಯ ಕೈದಿಗಳು ಗಡಿಪಾರು ಶಿಕ್ಷೆಗೆ ಸಂಬಂಧಪಟ್ಟಿದ್ದು. ಚರ್ಚೆಯಲ್ಲಂತೂ ಲಜಪತರ ವ್ಯಕ್ತಿಗತ ಅನುಭವ, ಆದರ ಹಿನ್ನಲೆಯಲ್ಲಿ ಅವರು ಬಯಸಿದ್ದ ಸುಧಾರಣೆಗಳು ಬಹು ಪರಿಣಾಮ ಬೀರಿದ್ದವು. ಅವರಷ್ಟು ಸಮರ್ಥವಾಗಿ, ಆಳವಾಗಿ ಆ ವಿಷಯದ ಮೇಲೆ ಚರ್ಚೆ, ಸಲಹೆಗಳನ್ನು ನೀಡಿದವರು ಬೇರಾರು ಕಂಡು ಬರಲಿಲ್ಲ.

''ವಸ್ತುಶಃ, ಆ ಶಾಸನದಲ್ಲಿರುವ ಎಲ್ಲಾ ಮೂರು ವಿಧಿಗಳು ನನ್ನ ಜೀವನದಲ್ಲಿ ನನಗೆ ಒಂದಲ್ಲ ಒಂದು ಹಂತದಲ್ಲಿ ಅನ್ವಯವಾಗಿವೆ. 1907ರಲ್ಲಿ 1818ರ ನಿಯಂತ್ರಣ ಕಾಯ್ದೆ 3ರ ಪ್ರಕಾರ ನನ್ನನ್ನು ಗಡಿಪಾರು ಮಾಡಲಾಯಿತು. 1921ರಲ್ಲಿ ಭಾರತ ಸರ್ಕಾರ ನನ್ನನ್ನು ಅಪರಾಧಿಯನ್ನಾಗಿ ಮಾಡಿತು. ಆದರೆ ಮುಂದೆ ಅದೇ ಸರ್ಕಾರ ನಾನು ಅಪರಾಧಿಯಲ್ಲವೆಂದು ಸಾರಿತು. ಅದೇ ವರ್ಷ ಪುನಃ ಭಾರತ ಸರ್ಕಾರ ನನಗೆ ಶಿಕ್ಷೆ

ವಿಧಿಸಿತು. ಅವರ ನನ್ನ ವಿರುದ್ಧ ಹೊರಿಸಿದ ಅಪರಾಧ ರುಜುವಾತಾಗಿಲ್ಲವೆಂದು ಸರ್ಕಾರಿ ವಕೀಲರೇ ಹೇಳಿದರು. ನಾನು ಅಮೆರಿಕದಿಂದ ದೇಶಕ್ಕೆ ವಾಪಸಾಗಲು ಬಯಸಿದಾಗ ಪಾಸ್‌ಪೋರ್ಟ್ ನಿರಾಕರಣೆ ಮಾಡುವ ಮೂಲಕ ನನ್ನನ್ನು ಗಡಿಪಾರು ಶಿಕ್ಷೆಗೆ ಒಳಪಟ್ಟವನಂತೆ ನೋಡಿಕೊಳ್ಳಲಾಯಿತು" ಎಂದು ಚರ್ಚೆಯಲ್ಲಿ ವಿವರಿಸಿದರು.

ರಾಷ್ಟ್ರೀಯ ವಿಧಾನಸಭೆಯ ಅಧಿವೇಶನ ನಡೆಯುತ್ತಿದ್ದಾಗಲೇ ದೆಹಲಿಯಲ್ಲಿ ರಾಜ ನರೇಂದ್ರ ನಾಥರ ಅಧ್ಯಕ್ಷತೆಯಲ್ಲಿ ಹಿಂದೂ ಮಹಾ ಸಭಾ ಅಧಿವೇಶನ ನಡೆಯಿತು. ಲಜಪತರು ಆ ಅಧಿವೇಶನದ ಕಾರ್ಯಕಲಾಪಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಆಗ, ಮಹಾಸಭೆಯು ನೀತಿ ನಿರೂಪಣೆಗಳೆಲ್ಲವೂ ಮುಖ್ಯವಾಗಿ ಮಾಳವೀಯರು, ಲಾಲಾಜಿ ಮತ್ತು ರಾಜ ಸಾಹೇಬರಿಂದಲೇ ನಿರೂಪಿತವಾಗಿದ್ದವು. ಅದರಲ್ಲೂ ಅಧ್ಯಕ್ಷರ ನಿಲುವು ನಿರ್ಧಾರಗಳೇ ಮೊದಲ ಹಂತದಲ್ಲಿರುತ್ತಿದ್ದವು. ಉಳಿದಂತೆ ಅವರಿಬ್ಬರು ಜಂಟಿಯಾಗಿ ಅವುಗಳನ್ನು ಪ್ರಣೀತಗೊಳಿಸುತ್ತಿದ್ದರು.

ಕೆಲವೇ ತಿಂಗಳುಗಳ ಅಂತರದಲ್ಲಿ ನಡೆಯಲಿದ್ದ ಮಹಾ ಚುನಾವಣೆಗಳಲ್ಲಿ ಹಿಂದೂ ಮಹಾಸಭಾ ತನ್ನ ಅಭ್ಯರ್ಥಿಗಳನ್ನು ತನ್ನ ಟಿಕೆಟ್ ಮೇಲೆಯೇ ಕಣಕ್ಕೆ ಇಳಿಸಬೇಕೆಂದು ಒಂದು ವರ್ಗ ಬಲವಾಗಿ ಹಿಂದೂ ಮಹಾ ಸಭಾ ಮುಖಂಡರ ಮೇಲೆ ಒತ್ತಡ ಹಾಕಿತು. ಲಜಪತರು (ಮಾಳವೀಯರು ಸೇರಿ) ಆ ಒತ್ತಡವನ್ನು ವಿರೋಧಿಸಿದರು. ಅವರ ಅಭಿಪ್ರಾಯಕ್ಕೆ ಹಿಂದೂ ಮಹಾಸಭಾದ ಪ್ರತಿನಿಧಿಗಳಲ್ಲಿ ಬಹುತೇಕ ಮಂದಿ ಬೆಂಬಲ ಕೊಟ್ಟರು. ಆದರೂ ಆ ಸಂಖ್ಯೆ ಸೀಮಿತವಾಗಿತ್ತು. ಮಹಾಸಭಾ ಟಿಕೆಟ್ ಮೇಲೆ ಅವರ ಅಭ್ಯರ್ಥಿಗಳು ಕಣಕ್ಕೆ ಇಳಿಯಬೇಕೆಂದು ಬಯಸುತ್ತಿದ್ದ ದೇಶಿಯರ ಸಂಖ್ಯೆ ಮತ್ತು ಒತ್ತಡ ಅಧಿಕವಾಯಿತು.

ರಾಷ್ಟ್ರೀಯ ವಿಧಾನಸಭೆಯ ಅಧಿವೇಶನ ನಡೆಯುತ್ತಿದ್ದಾಗಲೇ, ಮಾರ್ಚ್‌ನಲ್ಲಿ ದೆಹಲಿಯಲ್ಲಿ ಎಐಸಿಸಿ ಅಧಿವೇಶನ ನಡೆಯಿತು. ಕಾನ್ಪುರ ಅಧಿವೇಶನದಲ್ಲಿ ಕೈಗೊಂಡ ಸಭಾತ್ಯಾಗ ಕಾರ್ಯಕ್ರಮವನ್ನು .ಅಲ್ಲಿ ಗಣನೀಯ ಪ್ರಮಾಣದಲ್ಲಿ ಬದಲಾವಣೆ ಮಾಡಲಾಯಿತು. ಹಣಕಾಸು ವಿಧೇಯಕ ತಿರಸ್ಕೃತವಾಗುವತನಕ ಸಭಾತ್ಯಾಗ ಮಾಡಬಾರದು ಎಂಬುದು ದೆಹಲಿ ಅಧಿವೇಶನದ ಬದಲಾದ ನಿರ್ಧಾರವಾಯಿತು. ಲಾಲಾಜಿಗೆ ಅದು ಹಿತವೆನಿಸಲಿಲ್ಲ. ಕಾನ್ಪುರದಲ್ಲಿ ಏರ್ಪಟ್ಟ ಮಹಾ ಅಧಿವೇಶನ ಕೈಗೊಂಡ ನಿರ್ಣಯವನ್ನು ತಿದ್ದುಪಡಿ ಮಾಡುವ ವ್ಯಾಪ್ತಿ ಎಐಸಿಸಿಗೆ ಇಲ್ಲವೆಂದು ಅವರು ಆಕ್ಷೇಪ ಎತ್ತಿದರು. ಅದನ್ನು ಒಪ್ಪಿಕೊಳ್ಳಲಾಯಿತಾದರೂ ತಿದ್ದುಪಡಿ ಕೈಗೊಂಡವರು ತಮ್ಮ ಉದ್ದೇಶದ ಈಡೇರಿಕೆಗೆ ಅನುಗುಣವಾಗಿ ತಮ್ಮ ತಂತ್ರ ಬದಲಾಯಿಸಿಕೊಂಡರು. ಕಾನ್ಪುರ ಅಧಿವೇಶನದ ಈ ನಿರ್ಣಯವನ್ನು ಅವರು ವಿಪರೀತ ಅರ್ಥದಲ್ಲಿ 'ವಿಶ್ಲೇಷಿಸಿದರು'.

ಕಾನ್ಪುರ ನಿರ್ಣಯವು ಇತ್ತೀಚಿನ ವಿದ್ಯಮಾನಗಳಿಗೆ ಸಂಬಂಧಪಟ್ಟ ನಿರ್ಣಯವಾಗಿದ್ದು ಅದರಲ್ಲಿ ಲಾಲಾಜಿ ಎತ್ತಿದ ಆಕ್ಷೇಪಕ್ಕೆ ಆಧಾರವೇನೂ ಇಲ್ಲವೆಂದು ಹೇಳಿದರು. ಸಭೆಯು ಲಾಲಾಜಿಯವರ ಆಕ್ಷೇಪವನ್ನು ಬಹುಮತದಿಂದ ತಿರಸ್ಕರಿಸಿತು ಆ ಸಮಯಕ್ಕಾಗಲೇ ರಾಷ್ಟ್ರೀಯ ವಿಧಾನಸಭೆ ಅಧಿವೇಶನ ಮುಕ್ತಾಯ ಹಂತದಲ್ಲಿತ್ತು.

ದೆಹಲಿ ಎಐಸಿಸಿ ಕೈಗೊಂಡ ನಿರ್ಣಯದಿಂದಾಗಿ ಅಧಿವೇಶನದಲ್ಲಿ ಪಾಲ್ಗೊಳ್ಳುವುದಕ್ಕಷ್ಟೇ ಸ್ವರಾಜ್ ಪಕ್ಷ ಸೀಮಿತವಾಗಿತ್ತು.

ಲಾಲಾಜಿ ಆ ಬೆಳವಣಿಗೆ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಬರೆದು ''ತಮ್ಮ ಸಲಹೆಯಂತೆ ನಡೆದಿದ್ದರೆ ಸಭಾತ್ಯಾಗದ ಪ್ರತಿಭಟನೆಯನ್ನು ಆಗಸ್ಟ್ ಅಧಿವೇಶನದ ತನಕ ಮುಂದೂಡಬಹುದಿತ್ತು. ಆದರೆ ಅತಿ ಶೀಘ್ರದಲ್ಲೇ ಆ ನಿರ್ಧಾರ ಬಂದು ಬಿಟ್ಟಿದೆ'' ಎಂದರು.

* * *

ಅಧ್ಯಾಯ-59

ಕಾರ್ಮಿಕ ಪ್ರತಿನಿಧಿಯಾಗಿ ಜಿನೀವಾದಲ್ಲಿ

1926 ಮೇ ತಿಂಗಳಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಕಾರ್ಯಾಲಯವು ಜಿನೀವಾದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದನ್ನು ಏರ್ಪಡಿಸಿತು. ಆ ಸಮ್ಮೇಳನದ ಕಾರ್ಯಕಲಾಪದ ಪಟ್ಟಿಯಲ್ಲಿ ಪ್ರಮುಖವಾದ ವಿಷಯ ''ಹಡಗು ಹತ್ತುವ ವಲಸೆಗಾರರ ತಪಾಸಣೆಗಳಲ್ಲಿ ಸರಳೀಕರಣ'' ಎಂಬುದಾಗಿತ್ತು. ವಲಸೆಗಾರರ ತಪಾಸಣೆಯ ವಿವರಣೆಗಳಲ್ಲಿ ಲಾಲಾಜಿಯವರಿಗೆ ಯಾವ ಆಸಕ್ತಿ ಇದ್ದೀತು? 1914ರಲ್ಲಿ ಕಾಂಗ್ರೆಸ್ ನಿಯೋಗಿಯಾಗಿ ಲಂಡನ್‌ಗೆ ತೆರಳಿದಾಗ ತಾವು ಎದುರಿಸಿದ ಇಂಡಿಯಾ ಬಿಲ್‌ನಲ್ಲಿ ಕಂಡು ಬಂದ ವಿಧಿಗಳಿಗಿಂತಲೂ ಕ್ಲಿಷ್ಟಕರವಾದ ಸಮಸ್ಯೆಗಳು ಈ ಕಾರ್ಯಕ್ರಮದಲ್ಲಿ ಚರ್ಚೆಯಲ್ಲಿ ಇದ್ದಂತೆ ಅವರಿಗೆ ಕಂಡು ಬರಲಿಲ್ಲ. ಇನ್ನು ಹೆಚ್ಚಿನದಾಗಿ ಕಾರ್ಮಿಕರಿಗೆ ಇತರ ರೂಪದಲ್ಲಿ ಅನುಕೂಲವಾಗುವ ವಿಷಯಗಳ ಬಗ್ಗೆ ಲಾಲಾಜಿ ಹೆಚ್ಚು ಆಸಕ್ತರಾಗಿದ್ದರು. ಅದೇನೇ ಇದ್ದರೂ ವಿಶ್ವದ ನಾನಾ ಕಡೆಗಳಿಂದ ಆಗಮಿಸಿದ್ದ ಕಾರ್ಮಿಕರು ಪ್ರತಿನಿಧಿಸಿದ್ದ ಆ ಸಮ್ಮೇಳನ ಲಾಲಾಜಿಯವರಿಗೆ ಅವರ ಕಾರ್ಯಕ್ರಮಗಳಿಗಿಂತಲೂ ಅತಿಶಯದಾಗಿತ್ತು. ಆ ದಿನ ಬಹುತೇಕ ಪ್ರತಿನಿಧಿಗಳೊಂದಿಗೆ ಲಾಲಾಜಿ ಹಸ್ತಲಾಘವ ವಿನಿಮಯ ಮಾಡಿಕೊಂಡು ಕಾರ್ಮಿಕ ಮೈತ್ರಿಯ ಬಂಧುತ್ವ ಸಾಧಿಸಿಕೊಂಡರು.

ನಾವು ಈಗಾಗಲೇ ತಿಳಿದುಕೊಂಡಿರುವಂತೆ ಲಜಪತರ ಕಾರ್ಮಿಕ ಸಂಘಟನೆಯ ಕ್ರಿಯಾಶೀಲತೆ 1920ರಷ್ಟು ಹಿಂದೆಯೇ ಆರಂಭಗೊಂಡಿತ್ತು. ಭಾರತೀಯ ಕಾರ್ಮಿಕ ಒಕ್ಕೂಟದ ಆಂದೋಲನದಲ್ಲಿ ಅವರು ಆಗಲೇ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕಲ್ಕತ್ತಾದಲ್ಲಿ ನಡೆದ ಪ್ರಥಮ ಐಟಕ್ ಅಧಿವೇಶನದ ಅಧ್ಯಕ್ಷತೆಯನ್ನು ಅವರೇ ವಹಿಸಿದ್ದರು. ಕಾರ್ಮಿಕರ ಹಿತಸಾಧನೆಗೆ ಸಂಬಂಧಪಟ್ಟಂತೆ ಬಹು ಮುಖ್ಯವಾದ ಸಲಹೆ, ಸಮಾಲೋಚನೆಗಳನ್ನು ನಡೆಸಿದ್ದರು. ಪಂಜಾಬಿನಲ್ಲಿ ಕೆಲವು ಕಾರ್ಮಿಕ ಸಂಘಗಳನ್ನು ಸಂಘಟಿಸಲು ಅವರು ಒಂದಾಗಿದ್ದರು. ವಾಯುವ್ಯ ರೈಲ್ವೆ ಮುಷ್ಕರಕಾರರು ಲಾಲಾಜಿಯವರ ಮಾರ್ಗದರ್ಶನ ಮತ್ತು ಬೆಂಬಲ ಪಡೆದುಕೊಂಡಿದ್ದರು. ಆದರೂ ತಮ್ಮ ಇತರ ಚಟುವಟಿಕೆಗಳು - ಬದ್ಧತೆಗಳ ಕಾರಣದಿಂದಾಗಿ ಕಾರ್ಮಿಕ ಸಂಘಟನೆಯಲ್ಲಿ ಇನ್ನು ಹೆಚ್ಚು ತೊಡಗಿಸಿಕೊಳ್ಳಲು ಅವರಿಗೆ ಸಾಧ್ಯವಾಗಿರಲಿಲ್ಲ. ಆ ಚಳವಳಿಗೆ ಅವರ ಅಗತ್ಯ ಎಷ್ಟರಮಟ್ಟಿಗೆ ಇತ್ತೋ ಅಷ್ಟನ್ನು ತುಂಬಲು ಅವರಿಗೆ ಸಾಧ್ಯವಾಗಿರಲಿಲ್ಲ. ಆ ಸಂದರ್ಭದಲ್ಲಿ 'ಅಸಹಕಾರ ಚಳವಳಿ' ಶ್ರಮಿಕ ವರ್ಗಕ್ಕೆ ಅನ್ವಯಿಸಬಾರದೆಂಬುದು ಅವರ ನಿಲುವಾಗಿತ್ತು. ಅದೇ ಕಾರಣದಿಂದಾಗಿ ತಮ್ಮ ಅವಧಿ ಮುಗಿಯಲು ಸಾಕಷ್ಟು ಕಾಲವಿದ್ದರೂ ಅವರು ಐಟಕ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಆ ಬೆಳವಣಿಗೆ ಏನೇ ಇರಲಿ ಕಾರ್ಮಿಕ ಸಂಘಟನೆ ವಿಷಯದಲ್ಲಿ ಅವರ ಮನಸ್ಸು ಸದಾ ಹಾತೊರೆಯುತ್ತಿತ್ತು. ಆ ಆಂದೋಲನವನ್ನು ತೀವ್ರಗೊಳಿಸಲು ತಮ್ಮಿಂದ ಸಾಧ್ಯವಿದ್ದ ಎಲ್ಲಾ ನೆರವನ್ನು ಅವರು ಒದಗಿಸುತ್ತಿದ್ದರು. ಕಾನ್ಪುರದಲ್ಲಿ ಮಜ್ದೂರ್ ಸಭಾ ಕೆಲಸಕ್ಕೆ ತೀವ್ರ ಅಗತ್ಯ ಒದಗಿ ಬಂದಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಲಾಲಾಜಿ ಸರ್ವೆಂಟ್ಸ್ ಆಫ್ ಪೀಪಲ್ಸ್ ಸೊಸೈಟಿಯ ಇಬ್ಬರು ತರುಣರನ್ನು ಕೂಡಲೇ ಆ ಕೆಲಸಕ್ಕೆ ನಿಯೋಜಿಸಿದರು. ಹರಿಹರನಾಥ ಶಾಸ್ತ್ರೀ ಮತ್ತು ರಾಜರಾಂ ಶಾಸ್ತ್ರೀ ಬಹು ಶೀಘ್ರದಲ್ಲೇ ಉತ್ತರ ಪ್ರದೇಶದಲ್ಲಿ ಸಮರ್ಥ ಕಾರ್ಮಿಕ ನಾಯಕರಾಗಿ ರೂಪುಗೊಂಡದ್ದು ಲಾಲಾಜಿಯವರು ಕಾರ್ಮಿಕ ಆಂದೋಲನದ ಬಗ್ಗೆ ಹೊಂದಿದ್ದ ಕಳಕಳಿಯನ್ನು ನಿದರ್ಶಿಸಿತು. ತಮ್ಮ ಹೊಸ ಪತ್ರಿಕೆಗಳಲ್ಲಿ ಅದರಲ್ಲೂ ದಿ ಪೀಪಲ್ ಮೂಲಕ ಕಾರ್ಮಿಕ ಮತ್ತು ಸಮಾಜವಾದಿ ಆಂದೋಲನಗಳಿಗೆ ಹೆಚ್ಚು ಬೆಂಬಲ ಸಿಗುವಂತೆ ಅವರು ನೋಡಿಕೊಂಡರು. ರಾಷ್ಟ್ರೀಯ ವಿಧಾನಸಭೆ ಪ್ರವೇಶಿಸುತ್ತಿದ್ದಂತೆಯೇ ಲಾಲಾಜಿ ಸಂಸದೀಯ ಕಾರ್ಮಿಕ ಸಂಘಟನೆಯೊಂದನ್ನು ಕಟ್ಟಲು ಯೋಚಿಸಿದರು. ಹೆಚ್ಚು ಕಡಿಮೆ ಈ ಹಿನ್ನಲೆಯಲ್ಲೇ, ಸ್ವರಾಜ್ ಪಕ್ಷಕ್ಕೆ ಪಂಡಿತ ಮೋತಿಲಾಲರಿಂದ ಬಂದ ನಿಮಂತ್ರಣವನ್ನು ಒಪ್ಪಿಕೊಳ್ಳುತ್ತಾ ಅವರು ಕಾರ್ಮಿಕರ ವಿಷಯದಲ್ಲಿ ತಮ್ಮ ಧ್ವನಿಯನ್ನು ದಾಖಲು ಮಾಡಲು ತಮಗೆ ಮುಕ್ತ ಅವಕಾಶ ನೀಡಬೇಕೆಂದು ವಿಶೇಷವಾಗಿ ಸೂಚಿಸಿದ್ದರು. ರಾಷ್ಟ್ರೀಯ ವಿಧಾನಸಭೆಯಲ್ಲಿ ಕೆಲವು ನಿರ್ದಿಷ್ಟ ಉದ್ದೇಶಗಳಿಗಾಗಿ ಕಾರ್ಮಿಕ ಗುಂಪೊಂದನ್ನು ಕಟ್ಟಬೇಕೆಂಬ ಆಶಯ ಅವರದಾಗಿತ್ತು. ಆ ಉದ್ದೇಶಕ್ಕಾಗಿ ಕೇವಲ ಸ್ವರಾಜ್ ಪಕ್ಷದ ಸದಸ್ಯರನ್ನಷ್ಟೇ ಆಶಿಸಲಿಲ್ಲ. ಕಾಂಗ್ರೆಸ್, ಸ್ವತಂತ್ರ ಹಾಗೂ ಮುಸ್ಲಿಂ ಲೀಗ್ ಹಾಗೂ ಪಕ್ಷೇತರ ಸದಸ್ಯರೆಲ್ಲರನ್ನು ಸಂಘಟಿಸಿಕೊಳ್ಳುವ ಉದ್ದೇಶ ಅವರದಾಗಿತ್ತು.

ಸಂಸದೀಯ ಲೇಬರ್ ಬಣವನ್ನು ಸ್ಥಾಪಿಸುವ ಅವರ ಆಶಯಕ್ಕೆ ಒತ್ತು ಕೊಟ್ಟು ಜೊತೆಗೂಡಿದವರು ಎನ್. ಎಂ. ಜೋಷಿ ಮತ್ತು ಡಿ. ಚಮನ್ ಲಾಲ್. ಮೂವರು ಕಲೆತು ಹೊಸ ಬಣ ರೂಪಿಸಲು ವೇದಿಕೆ ಸನ್ನದ್ಧಗೊಳಿಸಿದರು. ತಾರಿಣಿ ಪಿ. ಸಿನ್ಹಾ ಸೇರಿದಂತೆ ಅನೇಕರೊಂದಿಗೆ ಅನೇಕ ಸುತ್ತು ಮಾತುಕತೆ ನಡೆಸಿದರು. ಏಕೋ ಏನೋ ಆ ಯೋಜನೆ ಯಶಸ್ಸು ಕಾಣಲಿಲ್ಲ. ಸಂಸದೀಯ ಕಾರ್ಮಿಕ ಸಂಘಟನೆ ಅಸ್ತಿತ್ವಕ್ಕೆ ಬರಲಿಲ್ಲ. ಲಾಲಾಜಿ ಐಟಕ್ ಅಧ್ಯಕ್ಷ ಭಾಷಣದಲ್ಲಿ ರಾಷ್ಟ್ರ ಸಂಘಟನೆಯ ಅಂಗವಾಗಿ ರೂಪಿತವಾದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು. ಅದೇ ಆಧಾರದ ಮೇಲೆ ಭಾರತದಲ್ಲೂ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಕಟ್ಟುವುದು ಅಗತ್ಯವಿದೆ ಎಂದು, ಯಾವುದೇ ವಿಳಂಬವಿಲ್ಲದೆ ತ್ವರಿತವಾಗಿ ಆ ಸಂಘಟನೆ ಅಸ್ತಿತ್ವಕ್ಕೆ ಬರಬೇಕೆಂದು ಕರೆ ಕೊಟ್ಟಿದ್ದರು. ಅಂಥ ಸಂಘಟನೆಗೆ ಕಾಲ ಪಕ್ವವಾಗಿಲ್ಲವೆಂದು ಮಹಾತ್ಮ ಗಾಂಧೀ ಹೇಳಿದ್ದರ ಹಿನ್ನಲೆಯಲ್ಲಿ ಐಟಕ್ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಅಂದಿನ ಪ್ರಮುಖ ಕಾರ್ಮಿಕ ನಾಯಕ ನೇತಾರ ಸಿ. ಎಫ್. ಆಂಡ್ರ್ಯೂಸ್ ಪಾಲ್ಗೊಳ್ಳದಿದ್ದರೂ ಲಾಲಾಜಿ ವ್ಯಕ್ತಪಡಿಸಿದ್ದ ಅಭಿಮತವನ್ನು ಅವರು ಸಮರ್ಥಿಸಿದರು. ಒಂದೆರೆಡು ವರ್ಷಗಳ ನಂತರ ಐಟಕ್ ಅಧಿವೇಶನದ ಅಧ್ಯಕ್ಷತೆ ವಹಿಸಿದ ಅವರು ಭಾರತೀಯ ಕಾರ್ಮಿಕ ವರ್ಗಕ್ಕೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾನ್ಯತೆ ಅಗತ್ಯವಿದೆ ಎಂದು

ಪ್ರತಿಪಾದಿಸಿದರು. ತತ್ಫಲವಾಗಿ ಅವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿದ್ದ ಸಮಿತಿಯೊಂದು ಲಾಲಾಜಿಯವರನ್ನು ಜಿನೀವಾ ಕಾರ್ಮಿಕ ಅಧಿವೇಶನಕ್ಕೆ ಭಾರತದ ಕಾರ್ಮಿಕ ಪ್ರತಿನಿಧಿಯಾಗಿ ಆಯ್ಕೆ ಮಾಡಿತ್ತು.

ಲಾಲಾಜಿಯವರನ್ನು ಜನೀವಾ ಕಾರ್ಮಿಕ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಆಯ್ಕೆ ಮಾಡಿದ ಬಗ್ಗೆ ಅಸಹಕಾರ ಚಳವಳಿಯ ಪ್ರತಿಪಾದಕರಲ್ಲಿ ವಿವಾದ ಹುಟ್ಟಿಕೊಂಡಿತು. ಕಾಂಗ್ರೆಸ್ಸಿಗರೋರ್ವರು ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕೆ ನಾಮ ನಿರ್ದೇಶನ ಹೊಂದುವುದು ಸರಿಯೇ ಎಂಬ ಪ್ರಶ್ನೆ ಹುಟ್ಟಿತು. ಅದನ್ನು ಕಾಂಗ್ರೆಸ್ಸಿಗರು ಒಪ್ಪಿಕೊಳ್ಳುವುದು ವಿಹಿತವೇ ಎಂದು ಕೇಳಲಾಯಿತು. ಒಂದು ವೇಳೆ ಅದು ವಿಹಿತವಾಗಿದ್ದರೆ ರಾಷ್ಟ್ರೀಯ ವಿಧಾನಸಭೆಯ ಸಭಾತ್ಯಾಗ ಹಿನ್ನಲೆಯಲ್ಲಿ ಅದರ ಔಚಿತ್ಯ ಎಷ್ಟರಮಟ್ಟಿಗೆ ಸಮಂಜಸವೆಂಬ ಸಂಶಯವನ್ನು ವ್ಯಕ್ತಪಡಿಸಲಾಯಿತು. ಇದಕ್ಕೂ ಮೊದಲು ಮಾರ್ಚ್ ತಿಂಗಳ ಎಐಸಿಸಿ ದೆಹಲಿ ಸಭೆಯಲ್ಲಿ ಇದೇ ರೀತಿಯ ಪ್ರಶ್ನೆಗಳನ್ನು ಎತ್ತಲಾಯಿತು ವಿಧಾನಸಭೆಯ ಸಭಾಧ್ಯಕ್ಷ ವಿ.ಜೆ ಪಟೇಲರು ಸಭಾತ್ಯಾಗದಲ್ಲಿ ಪಾಲ್ಗೊಳ್ಳಬೇಕೇ? ಸ್ಕೀನ್ ಸಮಿತಿಯಲ್ಲಿ ಮುಂದುವರೆಯಲು ಪಂಡಿತ ಮೋತಿಲಾಲರಿಗೆ ಅನುಮತಿ ನೀಡಬೇಕೆ? ಎಂಬ ಪ್ರಶ್ನೆಗಳು ಅವಾಗಿದ್ದವು. ಆದರೆ ಕಾರ್ಮಿಕ ಪ್ರತಿನಿಧಿಯಾಗಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಲಾಲಾಜಿ ಅವರ ಪ್ರಶ್ನೆಯನ್ನು ಎಐಸಿಸಿ ಸಭೆಯ ಅಧ್ಯಕ್ಷರು ಚರ್ಚೆಗೆ ಎತ್ತಿಕೊಂಡಿರಲಿಲ್ಲ. ಅವರ ಪ್ರಸ್ತಾಪಕ್ಕೂ ಅವಕಾಶ ಕೊಟ್ಟಿರಲಿಲ್ಲ. ಪಟೇಲರು ವಿಧಾನಸಭೆಯ ಸಭಾಧ್ಯಕ್ಷರಾಗಿ ಮುಂದುವರೆಯಬೇಕೆಂದು ನಿರ್ಧರಿಸಲಾಯಿತು. ಲಾಲಾಜಿಯವರ ಆಯ್ಕೆಯನ್ನು ಕಾಂಗ್ರೆಸ್ಸಿಗರು ಅಧಿಕಾರದ ಸ್ಥಾನವನ್ನು ಸ್ವೀಕರಿಸಬಾರದೆಂಬ ವ್ಯಾಪ್ತಿಗೆ ಒಳಪಟ್ಟಿದ್ದಲ್ಲವೆಂದು ಕಾಂಗ್ರೆಸ್ ಅಧ್ಯಕ್ಷರು ಹಾಗೂ ಸ್ವರಾಜ್ಯ ಪಕ್ಷದ ನಾಯಕರು ಸ್ಪಷ್ಟವಾಗಿ ಹೇಳಿದರು. ಲಾಲಾಜಿಯವರು ತಮ್ಮ ಆಯ್ಕೆಯನ್ನು ಸ್ಪಷ್ಟವಾಗಿ ತಿಳಿಸಿದರು. ತಾವು ಬನ್ನ ಕಾರ್ಮಿಕ ಪ್ರಾತಿನಿಧ್ಯದ ಆಯ್ಕೆಯಾಗಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕೆ ತೆರಳುತ್ತಿರುವುದಾಗಿಯೂ, ಸರ್ಕಾರದ ಪ್ರತಿನಿಧಿಯಾಗಿ ಅಲ್ಲವೆಂದೂ, ತಮಗೆ ಆ ಅವಕಾಶವನ್ನು ನಮ್ಮ ಸೇವೆಗಾಗಿ ಭಾರತೀಯ ಕಾರ್ಮಿಕರು ನೀಡಿದ್ದಾರೆಂದೂ ಭಾರತೀಯ ಕಾರ್ಮಿಕರಿಗೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಸ್ಥಾನಮಾನ ಕಲ್ಪಿಸುವುದನ್ನು ಕೈಬಿಟ್ಟಿರುವುದು ವಿಹಿತವಲ್ಲವೆಂದು ಲಾಲಾಜಿ ಹೇಳಿದರು.

ಲಜಪತರು ಮುಂಬೈ ತಲುಪಿದರು. ಅಲ್ಲಿಂದ ಜಿನೀವಾಕ್ಕೆ ಹೊರಡಲು ಎರಡು ದಿನಗಳಿವೆ ಎನ್ನುವಾಗ ಡೆಹರಾಡೂನ್‌ನಿಂದ ತಂತಿ ಸಂದೇಶವೊಂದು ಬಂದಿತು. ನಾಭಾದ ಪದಚ್ಯುತ ಮಹಾರಾಜ ರಿಪು ದಮನ್‌ಸಿಂಗ್ ಕಳುಹಿಸಿದ ತಂತಿ ಅದು. ಆ ತಂತಿ ಸಂದೇಶದ ಹಿಂದೆಯೇ ಓರ್ವ ವಿಶೇಷ ದೂತ ಧಾವಿಸಿ ಬಂದ. ಪದಚ್ಯುತ ಮಹಾರಾಜರು ಸರ್ಕಾರದ ಹಿತದೃಷ್ಟಿಯಲ್ಲಿ ಇರಲಿಲ್ಲ. ಆಡಳಿತಶಾಹಿಗೆ ನಿಷ್ಠರಾಗಿಲ್ಲರೆಂದು ಅವರನ್ನು ಅನುಮಾನದ ದೃಷ್ಟಿಯಿಂದ ಬ್ರಿಟಿಷ್ ಆಳರಸರು ನೋಡುತ್ತಿದ್ದರು. ಆ ಮಹಾರಾಜರಿಗೆ ಅನೇಕ ದೇಶಿಯವಾದಿ ನಾಯಕರ ಅನುಕಂಪವಿತ್ತು. ಸಿಖ್ ಸಮುದಾಯವಂತೂ ಅವರ ಬಗ್ಗೆ ಅಪಾರ ಬೆಂಬಲ ವ್ಯಕ್ತಪಡಿಸುತ್ತಿತ್ತು. ಆ ಸಮಯದಲ್ಲಿ ಆ ಮಹಾರಾಜರು

ಬ್ರಿಟನ್‌ನಲ್ಲಿದ್ದ ಭಾರತೀಯ ಕಚೇರಿಯಿಂದ ಪರಿಹಾರ ಬಯಸಿದ್ದರು. ಲಂಡನ್‌ನಲ್ಲಿದ್ದ ಅವರ ವಕೀಲ ಸಲಹೆಗಾರರ ಮೂಲಕ ತಮ್ಮ ಪ್ರಕರಣವನ್ನು ಪ್ರತಿನಿಧಿಸುವಂತೆ ಮಾಡಿದರು. ತತ್ಸಂಬಂಧದಲ್ಲಿ ಅವರು ಲಾಲಾಜಿಯವರ ಸಹಾಯ ನಿರೀಕ್ಷಿಸಿದ್ದರು. ಅವರ ಪ್ರಕರಣವನ್ನು ಯೋಗ್ಯ ರೀತಿಯಲ್ಲಿ ಪರಿಗಣಿಸುವಂತೆ ಲಾಲಾಜಿ ಪ್ರಭಾವ ಬೀರಬೇಕೆಂದು ಮಹಾರಾಜರು ಬಯಸುತ್ತಿದ್ದರು. ಅಂಥ ಕಾರ್ಯಕ್ಕೆ ಲಾಲಾಜಿ ಸಿದ್ಧರಿರಲಿಲ್ಲ. ಸಾರ್ವಜನಿಕ ಬದುಕಿನ ವ್ಯಕ್ತಿಯಾಗಿ ಆ ಬಗೆಯ ದೌತ್ಯದಲ್ಲಿ ತಮಗೆ ಎಳ್ಳಷ್ಟು ಆಸಕ್ತಿ ಇಲ್ಲವೆಂದು ಲಜಪತರು ಮಹಾರಾಜರಿಗೆ ಅವರ ಸಂದೇಶಕಾರನ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸಿದರು. ಆದರೆ ಒಂದು ವೇಳೆ ಮಹಾರಾಜರು ತಮ್ಮ ಸೇವೆಯನ್ನು ಓರ್ವ ವಕೀಲರಾಗಿ ಪರಿಗಣಿಸುವುದಾದರೆ ಅದನ್ನು ತಾವು ಸ್ವೀಕರಿಸಲು ಸಿದ್ಧವಿರುವುದಾಗಿ ಹೇಳಿದರು. ಮುಂಬೈಯಿಂದ ಹೊರಡುವ ಮೊದಲು ಅವರು ಮಹಾರಾಜರಿಗೆ ಪತ್ರವೊಂದನ್ನು ಬರೆದು ಈ ಬಗ್ಗೆ ಹೀಗೆ ತಿಳಿಸಿದರು: ''ನಾನು ನಿಮ್ಮ ಕೆಲಸವನ್ನು ನಿಮ್ಮ ಓರ್ವ ಲಾಯರ್ ಏಜೆಂಟ್ ಆಗಿ ಕೈಗೊಂಡಿದ್ದೇನೆ. ಓರ್ವ ಸಾರ್ವಜನಿಕ ಬದುಕಿನ ಮನುಷ್ಯನಾಗಿ ಅಲ್ಲ.''

ಲಜಪತರು ಈ ಬಾರಿಯೂ ತಮ್ಮ ಸಮುದ್ರಯಾನವನ್ನು ಪಿ ಅಂಡ್ ಓ ಕಂಪನಿಯ ರಾನ್‌ಪುರ ಹಡಗಿನ ಮೂಲಕ ಕೈಗೊಂಡರು. ಆವರೆಗಿನ ತಂತ್ರಜ್ಞಾನದಲ್ಲಿ ಅದು ಕಂಪನಿಯ ಅತಿ ದೊಡ್ಡ ಹಡಗು ಹಾಗೂ ಅತಿ ನವೀನ ಪ್ರಯಾಣಿಕರ ಹಡಗಾಗಿತ್ತು. ಆದರೆ ಲಾಲಾಜಿ ಅವರು ಬರೆದಿಟ್ಟಿರುವ ಪ್ರಕಾರ ಅದರಲ್ಲಿ ಒದಗಿಸುತ್ತಿದ್ದ ಆಹಾರ ಯುದ್ಧ ಪೂರ್ವದ ದಿನಗಳ ಸ್ಥಿತಿಗಿಂತ ಉತ್ತಮ ದರ್ಜೆಯದಾಗಿರಲಿಲ್ಲ. ಇನ್ನು ಹೇಳುವುದಾದರೆ ಎರಡು ವರ್ಷಗಳ ಹಿಂದೆ ಯುರೋಪಿಗೆ ತೆರಳುವಾಗ ಅವರು ಪ್ರಯಾಣ ಕೈಗೊಂಡ ಇಟಾಲಿಯನ್ ನೌಕೆಯಲ್ಲಿ ಒದಗಿಸುತ್ತಿದ್ದ ಆಹಾರಕ್ಕಿಂತಲೂ ಕೆಳದರ್ಜೆಯದಾಗಿತ್ತು.

ಆ ಹಡಗು ಪಿ ಅಂಡ್ ಓ ಕಂಪನಿಯ ಅನುವಂಶೀಯತೆಗೆ ವಿಶಿಷ್ಟವಾಗಿತ್ತು. ಅದರ ಸ್ಥಾಪಕರು ಜೆಮ್‌ಷೆಟ್ಜಿ ಟಾಟಾ. ಭಾರತೀಯ ಕೈಗಾರಿಕೋದ್ಯಮದ ಪಿತಾಮಹರೆನಿಸಿಕೊಂಡಿರುವ ಅವರು ಭಾರತೀಯ ಹಡಗು ಉದ್ಯಮದ ಅಗತ್ಯ ತುಂಬಲು ಆ ಸಂಸ್ಥೆಯನ್ನು ಸ್ಥಾಪಿಸಿದ್ದರು. ಕಾಲಕ್ರಮದಲ್ಲಿ ಅನೇಕ ಬದಲಾವಣೆಗಳೇನೋ ಆಗಿದ್ದವಾದರೂ, ''ಪಿ ಅಂಡ್ ಓ ಕಂಪನಿಯ ವಾತಾವರಣದಿಂದ ಅನುವಂಶೀಯತೆಯ ಪ್ರಭಾವ ಸಂಪೂರ್ಣವಾಗಿ ಮರೆಯಾಗಿರಲಿಲ್ಲ.''

ಲಾಲಾಜಿ 1926, ಮೇ 7ರ ಬೆಳಿಗಿನ ಜಾವದಲ್ಲಿ ಮರ್ಸೇಲಿಸ್ ತಲುಪಿದರು. ಅಲ್ಲಿಂದ ಕೂಡಲೇ ಪ್ಯಾರಿಸ್‌ಗೆ ಪ್ರಯಾಣ ಬೆಳೆಸಿದರು. ಜಿನೀವಾದಲ್ಲಿ ಅವರು ಭಾಗವಹಿಸಬೇಕಾಗಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಮೇ ಕಡೆಯ ವಾರಕ್ಕೆ ಆಯೋಜಿತವಾಗಿತ್ತು. ಬ್ರಿಟನ್‌ನಲ್ಲಿ ಆ ದಿನಗಳಲ್ಲಿ ಮಹಾ ಮುಷ್ಕರ ನಡೆಯುತ್ತಿತ್ತು. ಅದನ್ನು ಒಂದು ರೀತಿಯಲ್ಲಿ ಬ್ರಿಟನ್ನಿನ ಅಂತರ ಯುದ್ಧ ಎಂದೇ ಕರೆಯಲಾಗುತ್ತಿತ್ತು. ಹೀಗಾಗಿ ಲಜಪತರು ತಮ್ಮ ಪ್ರಯಾಣವನ್ನು ಲಂಡನ್‌ಗೆ ಕ್ಲುಪ್ತಗೊಳಿಸಿಕೊಂಡಿದ್ದರೂ

ಅಲ್ಲಿಗೆ ಹೋಗುವುದು ಹಿತವಲ್ಲವೆಂದು ಮನಗಂಡರು. ಅದಕ್ಕೆ ಮೊದಲು ಎಚ್.ಎಸ್. ಎಲ್. ಪೋಲಕ್ ತಂತಿ ಸಂದೇಶವನ್ನು ನೀಡಿ ಕೆಲವು ಕಾಲ ಪ್ಯಾರಿಸ್‌ನಲ್ಲಿ ಉಳಿದುಕೊಳ್ಳಲು ಸಲಹೆ ಮಾಡಿದ್ದರು. ಅದಕ್ಕನುಗುಣವಾಗಿ ಲಾಲಾಜಿ ಪ್ಯಾರಿಸ್‌ನಲ್ಲಿ ಉಳಿದುಕೊಂಡರು. ಮಹಾ ಮುಷ್ಕರ ಮುಗಿಯುವ ತನಕ ಲಂಡನ್ ಪ್ರಯಾಣ ಕೈಗೊಳ್ಳಲಿಲ್ಲ.

ಪ್ಯಾರಿಸ್‌ನಲ್ಲಿ ಅವರು ಮುತ್ತು ವ್ಯಾಪಾರಿ ಆರ್.ಎಸ್. ರಾಣಾ ಅವರ ವಸತಿಯಲ್ಲಿ ಬಿಡಾರ ಹೂಡಿದರು. ಅನೇಕ ಹಳೆಯ ಮಿತ್ರರನ್ನು ಭೇಟಿ ಮಾಡಿದರು. ಹೊಸದಾಗಿ ಮಾಡಿಕೊಂಡ ಪರಿಚಯ ಮತ್ತು ಸಂಪರ್ಕಗಳಲ್ಲಿ ಮುಖ್ಯವಾದದ್ದು ಜೀನ್ ಲಾಂಗೇಟ್ ಅವರ ಒಡನಾಟ. ''ಫ್ರೆಂಚ್ ಸೋಷಲಿಸ್ಟ್ ಪಕ್ಷದ ಇಬ್ಬರು ಪರಮೋಚ್ಚ ನಾಯಕರಲ್ಲಿ ಅವರು ಒಬ್ಬರಾಗಿದ್ದರು.'' ಅವರು ಕಾರ್ಲ್‌ಮಾರ್ಕ್ಸ್‌ರ ಮೊಮ್ಮಗ. ಫ್ರೆಂಚ್ ದೇಶಿಯರೊಬ್ಬರನ್ನು ವರಿಸಿದ್ದ ಅವರ ಪುತ್ರಿಯ ಪುತ್ರ ಲಾಲಾಜಿ ಅವರೊಂದಿಗೆ ಆತ್ಮೀಯ ಅನುಬಂಧ ಬೆಳೆಸಿದರು. ಆ ಬಗ್ಗೆ ತಮ್ಮ ಕೃತಿಯಲ್ಲಿ ಬರೆಯುತ್ತಾ, ''ನೋಟಕ್ಕೆ ಸುಂದರವಾಗಿಯೂ, ಕಟ್ಟುಮಸ್ತಾದ ಮೈಕಟ್ಟಿನವರೂ, ಎತ್ತರದ ಫ್ರೆಂಚ್ ವ್ಯಕ್ತಿ ಅವರಾಗಿದ್ದರು. ವಿಶಾಲವಾದ ಹಣೆ ಅವರ ಮುಖ ಲಕ್ಷಣವನ್ನು ಹೆಚ್ಚಿಸಿತ್ತು. ತುಂಬಾ ವಿನಯವಂತರು. ಚೆನ್ನಾಗಿ ತಿಳಿದುಕೊಂಡಿದ್ದರು. ತಮ್ಮ ಅಭಿಪ್ರಾಯಗಳನ್ನು ಪರಿಪೂರ್ಣವಾಗಿ ಸಮತೋಲನ ಗೊಳಿಸಿಕೊಂಡಿದ್ದರು.'' ಕಮ್ಯೂನಿಸ್ಟ್ ಸಿದ್ಧಾಂತವೆಂದರೆ - ಅವರಿಗೆ ಹಿಡಿಸುತ್ತಿರಲಿಲ್ಲ. ರಷ್ಯಾದಲ್ಲಿ ರೈತರು ಅಧಿಕಾರಕ್ಕೆ ಬರುತ್ತಾರೆಂದೂ ಕಮ್ಯೂನಿಸ್ಟರ ಆಡಳಿತವನ್ನು ಕಿತ್ತೆಸೆಯುತ್ತಾರೆಂದೂ ಅವರು ಆಗಲೇ ನಂಬಿದ್ದರು.

''ಲಾಲಾಜಿ, ಮಹಾ ಮುಷ್ಕರ ನಿಂತ ನಂತರ ಲಂಡನ್‌ಗೆ ತೆರಳಿದರು. ಒಂದು ವಾರಕ್ಕಿಂತ ಹೆಚ್ಚು ಕಾಲ ಅಲ್ಲಿ ಉಳಿಯಲಿಲ್ಲ. ಆ ಅವಧಿಯಲ್ಲಿ ಸಾಧ್ಯವಾದಷ್ಟು ತಮ್ಮ ಗೆಳೆಯರನ್ನೆಲ್ಲಾ ಭೇಟಿ ಮಾಡಿದರು. ಆಗಷ್ಟೇ ಮುಗಿದಿದ್ದ ಮುಷ್ಕರದ ಒಳಹೊರಗನ್ನು ಸಂಗ್ರಹಿಸಿದರು. ನಾಭಾ ಮಹಾರಾಜ ವಿಷಯದಲ್ಲಿ ತಮ್ಮ ವಕೀಲ ಸಲಹೆಗಾರ-ಗೆಳೆಯ ಎಚ್.ಎಸ್.ಎಲ್. ಪೋಲಕ್ ಅವರೊಂದಿಗೆ ಪೂರ್ವಭಾವಿ ಸಮಾಲೋಚನೆ ನಡೆಸಿದರು. ಸಂಬಂಧಪಟ್ಟ ದಾಖಲೆಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಿದರು. ಆಗಷ್ಟೇ ಬಿಡುಗಡೆಯಾಗಿದ್ದ ಭಾರತದ ಮೊಟ್ಟ ಮೊದಲ ಇಂಗ್ಲೆಂಡಿನಲ್ಲಿ ಚಿತ್ರಿತವಾದ ಸಿನಿಮಾ ಲೈಟ್ ಆಫ್ ಏಷ್ಯ ವೀಕ್ಷಿಸಿದರು. ದೇವಿಕಾರಾಣಿ ಅದರ ನಾಯಕಿ. ನಿರಂಜನಪಾಲ್ ಅದರ ನಿರ್ಮಾಪಕರು. ಬಿಪಿನ್ ಚಂದ್ರ ಪಾಲ್ ಪುತ್ರರಾಗಿದ್ದರಿಂದ ಆ ನಿರ್ಮಾಪಕರ ಬಗ್ಗೆ ಲಾಲಾಜಿ ಅವರಲ್ಲಿ ಕುತೂಹಲ ಹುಟ್ಟಿತ್ತು.

ಅಲ್ಲಿಂದ ಲಾಲಾಜಿ ಜಿನೀವಾಕ್ಕೆ ತೆರಳಿದರು.

ಎಂಟನೇ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನ 1926ರ ಮೇ 26ರಂದು ಆರಂಭಗೊಂಡಿತು. ಆ ಸಮ್ಮೇಳನದ ಮುಖ್ಯ ಚರ್ಚಾ ವಿಷಯ -''ಹಡಗಿನಲ್ಲಿ ವಲಸೆಗಾರರ ತಪಾಸಣಾ ಕ್ರಮದ ಸರಳೀಕರಣ.'' ಮೊದಲನೆಯ ದಿನವೇ ಲಾಲಾಜಿ ಎರಡು ನಿರ್ಣಯಗಳನ್ನು ಕಳುಹಿಸಿಕೊಟ್ಟರು. ಆಫ್ರಿಕಾ ಮತ್ತು ಅಮೆರಿಕಾಗಳಲ್ಲಿ ಸ್ಥಳೀಯ ಹಾಗೂ ವರ್ಣ ವಂಶೀಯ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ತನಿಖೆ ನಡೆಸಬೇಕೆಂಬುದು ಅವರಲ್ಲಿ

ಮೊದಲನೆಯದು. ಕೆಲವು ತಪ್ಪು ತಿದ್ದುಪಡಿಗಳೊಂದಿಗೆ ಸಮ್ಮೇಳನ ಆ ನಿರ್ಣಯಗಳನ್ನು ಅಂಗೀಕರಿಸಿತು. ಲಾಲಾಜಿ ಆ ತಿದ್ದುಪಡಿಗಳಿಗೆ ಸಮ್ಮತಿಸಿ ಸೂಚಿಸಿದರು. ಎರಡನೇ ನಿರ್ಣಯ ಭಾರತಕ್ಕೆ ಸಂಬಂಧಪಟ್ಟಿದ್ದು. ಸುಮಾರು ನಾಲ್ಕು ವರ್ಷಗಳಿಂದಲೂ ಮೂಲೆಗುಂಪು ಮಾಡಲ್ಪಟ್ಟಿದ್ದ ಹಳೆಯ ನಿರ್ಣಯವೊಂದರ ಪೂರಕ ಕ್ರಮ ಆ ಹೊಸ ನಿರ್ಣಯದಲ್ಲಿತ್ತು. ಭಾರತಕ್ಕೆ ಓರ್ವ ಐಎಲ್‌ಓ ಪ್ರತಿನಿಧಿಯನ್ನು ನೇಮಕ ಮಾಡಬೇಕೆಂದು ಈ ಹಿಂದೆ ಕೈಗೊಂಡಿರುವ ನಿರ್ಣಯಕ್ಕೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲು ಆಡಳಿತ ಮಂಡಳಿಯ ಗಮನ ಸೆಳೆಯಬೇಕೆಂದು ಆ ಸೂಚನೆಯಲ್ಲಿ ತಿಳಿಸಲಾಯಿತು. ಆ ವರ್ಷದ ಆಯವ್ಯಯ ಕಾರ್ಯ ಮುಗಿದಿರುವುದರಿಂದ ತಕ್ಷಣದಲ್ಲಿ ಪ್ರತಿನಿಧಿ ನೇಮಕದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆಂದು ಅವರಿಗೆ ತಿಳಿಸಲಾಯಿತು. ಮುಂದಿನ ವರ್ಷ ಅವರ ಸೂಚನೆಯನ್ನು ಜಾರಿಗೊಳಿಸುವ ಭರವಸೆ ಅವರಿಗೆ ಸಿಕ್ಕಿತು.

ಲಾಲಾಜಿ ಅವರ ಪ್ರಮುಖ ಭಾಷಣ, ನಿರ್ದೇಶಕರು ತಮ್ಮ ವರದಿಗಳನ್ನು ಸಲ್ಲಿಸಿದ ನಂತರ ಜೂನ್ 2ರಂದು ನಡೆಯಿತು. ಅದೇ ಸಮಯದಲ್ಲಿ ಅವರಿಗೆ ಕಾನ್ಪುರದಿಂದ ಕೇಬಲ್‌ವೊಂದು ಬಂದಿತು. ಭಾರತದಲ್ಲಿ ಎಂಟು ಗಂಟೆಗಳ ಕೆಲಸವನ್ನು ನಿರ್ಬಂಧಗೊಳಿಸಲಾಗಿದೆ ಎಂದು ಆ ಕೇಬಲ್ ತಿಳಿಸಿತು. ಆ ಸಮಯದಲ್ಲಿ ಸಮ್ಮೇಳನದಲ್ಲಿ ಎಂಟು ಗಂಟೆ ಕೆಲಸ ಕಡ್ಡಾಯದ ಬಗ್ಗೆ ಪ್ರಮುಖವಾದ ಕೆಲವು ಐರೋಪ್ಯ ರಾಷ್ಟ್ರಗಳು ಕೂಡಾ ಯಾವುದೇ ನಿರ್ಧಾರಕ್ಕೆ ಬಂದಿರಲಿಲ್ಲ. ತತ್ಸಂಬಂಧದಲ್ಲಿ ಅದೇ ವರ್ಷ ಲಂಡನ್‌ನಲ್ಲಿ ಪ್ರತ್ಯೇಕ ಸಮ್ಮೇಳನವೊಂದು ಏರ್ಪಾಟಾಗಿದ್ದದ್ದು ಲಾಲಾಜಿ ಅವರಿಗೆ ತಿಳಿದಿತ್ತು. ಭಾರತ ತನ್ನ ಸಮಾನ ಪ್ರತಿಸ್ಪರ್ಧಿ ಜಪಾನ್‌ನನ್ನು ಬಿಟ್ಟು ಮುನ್ನಡಿ ಇಡಲು ಸಾಧ್ಯವಿಲ್ಲ ಎಂಬುದು ಲಾಲಾಜಿ ಅವರಿಗೆ ಗೊತ್ತಿತ್ತು. ಹೀಗಾಗಿ ಆ ಸಮಸ್ಯೆಯ ಬಗ್ಗೆ ಮುಂದಿನ ಕ್ರಮಕ್ಕಾಗಿ ಅವರು ಜಪಾನ್ ನೆರವನ್ನು ಕೋರಿದರು. ಲಜಪತರು ಆ ಸಮ್ಮೇಳನದಲ್ಲಿ ''ನಮ್ಮ ಅಲಮಾರಿನಲ್ಲಿರುವ ಅಸ್ಥಿಪಂಜರ'' ಎಂಬ ಶೀರ್ಷಿಕೆಯಡಿ ಮಾತನಾಡಿದರು. ಬ್ರಿಟಿಷ್ ಇಂಡಿಯಾ ಹಾಗೂ ಭಾರತದ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದ ಬಲವಂತ ದುಡಿತದ ಬಗ್ಗೆ ಬೆಳಕು ಚೆಲ್ಲಿದರು. ಭಾರತ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದ ಸರ್ ಎ.ಸಿ. ಚಟರ್ಜಿ ಅದನ್ನು ವಿರೋಧಿಸಿದರು. ಅವರು ಭಾರತದ ಅಧಿಕೃತ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಮಾರನೇಯ ದಿನವೇ ಲಾಲಾಜಿ ಸಮ್ಮೇಳನಾಧ್ಯಕ್ಷರಿಗೆ ಪತ್ರವೊಂದನ್ನು ಬರೆದರು. ತನಿಖೆಯೊಂದನ್ನು ನಡೆಸಲು ಒತ್ತಾಯಿಸಿದರು. ''ಭಾರತಕ್ಕೆ ಮರಳುತ್ತಿದ್ದಂತೆಯೇ ತಾವು ಮಂಡಿಸಿರುವ ಹೇಳಿಕೆಯನ್ನು ಸಮರ್ಥಿಸುವ ರುಜುವಾತುಗಳನ್ನು ಅಂತಾರಾಷ್ಟ್ರೀಯ ಕಾರ್ಮಿಕ ಕಚೇರಿಗೆ ಕಳುಹಿಸುತ್ತೇನೆ'' ಎಂದು ತಿಳಿಸಿದರು. ಲಾಲಾಜಿ ಅವರ ಕೋರಿಕೆಯಂತೆ ಆ ಪತ್ರವನ್ನು ಸಮ್ಮೇಳನದ ದಾಖಲೆಯಾಗಿ ಪರಿಗಣಿಸಲಾಯಿತು. ಭಾರತಕ್ಕೆ ಮರಳಿದ ನಂತರ ಸಮ್ಮೇಳನಾಧ್ಯಕ್ಷರಿಗೆ ತಾವು ಮಾತುಕೊಟ್ಟಂತೆ ತಾವು ನೀಡಿದ ಹೇಳಿಕೆಯನ್ನು ಸಮರ್ಥಿಸುವ ದಾಖಲೆಗಳನ್ನೆಲ್ಲಾ ಲಾಲಾಜಿ ಕಳುಹಿಸಿಕೊಟ್ಟರೆಂದು ಹೇಳುವ ಅಗತ್ಯವಿಲ್ಲವೆನಿಸುತ್ತದೆ.

ಲಾಲಾಜಿ ಅವರಿಗೆ ಆ ಸಮ್ಮೇಳನದ ಕಲಾಪ ನೆಮ್ಮದಿ ನೀಡಿರಲಿಲ್ಲ. ಸಮ್ಮೇಳನದ ಉದ್ದಕ್ಕೂ ಐರೋಪ್ಯ ವಾತಾವರಣವೇ ಕಂಡು ಬಂದಿತು. ಬ್ರಿಟಿಷರ ಪ್ರಾಧಾನ್ಯತೆ

ಹೆಚ್ಚಾಗಿತ್ತು ಎಂಬುದರಲ್ಲಿ ಅನುಮಾನವೇ ಇರಲಿಲ್ಲ. ಆದರೂ ಕಾರ್ಮಿಕ ಸಮ್ಮೇಳನ ತನ್ನದೇ ರೀತಿಯಲ್ಲಿ ಸಂಘಟಿತವಾಗಿತ್ತು. ಬ್ರಿಟಿಷರ ತಂತ್ರವೇನೂ ಅಲ್ಲಿ ನಡೆಯಲು ಸಾಧ್ಯವಾಗಿರಲಿಲ್ಲ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಬಗ್ಗೆ ಭಾರತ ಹೆಚ್ಚು ಶ್ರದ್ಧೆ ವಹಿಸಬೇಕು ಎಂಬುದರ ಅರಿವು ಸಹಜವಾಗಿ ಅವರಿಗೆ ಕಂಡು ಬಂದಿತು. ಅದರ ಸಮ್ಮೇಳನಕ್ಕೆ ಪೂರ್ಣ ಪ್ರಮಾಣದ ನಿಯೋಗವನ್ನು ಭಾರತ ಕಳುಹಿಸುವ ಅಗತ್ಯವು ಪ್ರಶಸ್ತವೆನಿಸಿತು. ಲಾಲಾಜಿ ಭಾಗವಹಿಸಿದ ಆ ಸಮ್ಮೇಳನಕ್ಕೆ ಭಾರತ ನಾಲ್ವರು ಸದಸ್ಯರ ನಿಯೋಗವನ್ನು ಕಳುಹಿಸಿತ್ತು. ಸರ್ಕಾರದ ಪರವಾಗಿ ಸರ್ ಎ.ಸಿ. ಚಟರ್ಜಿ, ಸರ್ ಲೂಯಿಸ್ ಕರ್ಷವ್ ಪಾಲ್ಗೊಂಡಿದ್ದರೆ, ಸರ್ ಆರ್ಥರ್ ಫ್ರೂಮ್ ಉದ್ಯಮಿಗಳ ಪರವಾಗಿಯೂ, ಲಾಲಾಜಿ ಕಾರ್ಮಿಕರ ಪರವಾಗಿಯೂ ಭಾಗವಹಿಸಿದ್ದರು. ಕೇವಲ ನಾಲ್ಕು ಜನರ ನಿಯೋಗ ಅದಾಗಿತ್ತು. ಸರ್ಕಾರದ ಪ್ರಾತಿನಿಧ್ಯದಲ್ಲಿ ಓರ್ವ ಕಾರ್ಯದರ್ಶಿ ಮಾತ್ರ ಅದರಲ್ಲಿದ್ದರು. ಉದ್ಯಮಿಗಳ ಪರವಾಗಿಯಾಗಲಿ, ಕಾರ್ಮಿಕರ ಪರವಾಗಿಯಾಗಲಿ ಓರ್ವ ಸಲಹೆಗಾರರಾಗಲಿ, ಪರ್ಯಾಯ ಸದಸ್ಯರಾಗಲಿ ನಿಯೋಜಿತರಾಗಿರಲಿಲ್ಲ. ಆ ನಿಯೋಗದಲ್ಲಿ ಸರ್ ಅತುಳ್ ಮತ್ತು ಲಾಲಾಜಿ ಇಬ್ಬರೇ ಭಾರತೀಯರು. ಸಿಂಧಿಯಾ ಸ್ಟೀಲ್ ನೇವಿಯಷೇನ್ ಕಂಪನಿಯ ಮ್ಯಾನೇಜರ್ ಎಸ್.ಎನ್. ಹಾಜಿ ಜಿನೀವಾದಲ್ಲಿದ್ದರು. ಅವರು ಸಮ್ಮೇಳನದಲ್ಲಿ ಮಾತನಾಡಿ ಸರ್ ಆರ್ಥರ್ ಫ್ರೂಮ್ ಅವರ ಪ್ರಸ್ತಾವಗಳ ಔಚಿತ್ಯವನ್ನು ಪ್ರಶ್ನಿಸಿದರು. ಲಾಲಾಜಿ ಅವರಿಗೆ ತಜ್ಞ ಸಲಹೆಗಾರರ ನೆರವು ದೊರಕಲಿಲ್ಲ. ಆ ಸಮ್ಮೇಳನದಲ್ಲಿ 30 ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅಲ್ಲಿಗೆ ಬಂದಿದ್ದ ಪ್ರತಿನಿಧಿಗಳ ಪೈಕಿ ಸಲಹೆಗಾರರಿಲ್ಲದಿದ್ದವರೆಂದರೆ ಲಾಲಾಜಿ ಮತ್ತು ಸರ್ ಆರ್ಥರ್ ಇಬ್ಬರೇ. ಭಾರತಕ್ಕೆ ಹೋಲಿಸಿದರೆ ಜಪಾನಿ ನಿಯೋಗ ಸುಮಾರು ನಾಲ್ಕು ಪಟ್ಟು ದೊಡ್ಡದಿತ್ತು. ಜಪಾನಿನ 15 ಪ್ರತಿನಿಧಿಗಳು ಆ ನಿಯೋಗದಲ್ಲಿದ್ದರು. ಸಾಲದ್ದಕ್ಕೆ ಪರ್ಯಾಯ ಪ್ರತಿನಿಧಿಗಳು ಹಾಗೂ ಸಲಹೆಗಾರರು ಇದ್ದರು. ಇತರೆ ಕೆಲವರು ಸಹ ಆ ನಿಯೋಗದಲ್ಲಿದ್ದರು. ಜಪಾನಿ ನಿಯೋಗ ಆ ಸಮ್ಮೇಳನದ ಪೂರ್ಣ ಲಾಭ ಪಡೆದುಕೊಂಡಿದ್ದನ್ನು ಲಾಲಾಜಿ ಗುರುತಿಸದೇ ಇರಲಿಲ್ಲ.

ಅಮೆರಿಕದಿಂದ ಮರಳಿದ ಲಾಲಾಜಿ ಅವರಿಗೆ ಅಂತಾರಾಷ್ಟ್ರೀಯ ವೇದಿಕೆಯೊಂದರಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದ್ದು ಅದೇ ಮೊದಲಾದದ್ದರಿಂದ ಅವರು ಆ ಕಾರ್ಮಿಕ ಸಮ್ಮೇಳನದ ಬಗ್ಗೆ ಬಹು ವಿಧದ ಆಶೋತ್ತರಗಳನ್ನು ಇಟ್ಟುಕೊಂಡಿದ್ದರು. ಅಂತಾರಾಷ್ಟ್ರೀಯ ಸಂಬಂಧ, ಅನುಭವಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಲಭ್ಯವಾದ ಆ ಅವಕಾಶವನ್ನು ಅವರು ಶಕ್ತಿ ಮೀರಿ ಬಳಸಿಕೊಂಡರು. ಸಮ್ಮೇಳನದ ಅವಧಿಯಲ್ಲೇ ಅನೌಪಚಾರಿಕವಾಗಿ ಏರ್ಪಟ್ಟ ಹಲವು ಕೂಟಗಳು, ಸತ್ಕಾರಗಳು ಅದಕ್ಕೆ ನೆರವಾದವು. ಜೂನ್ 3ರಂದು ಸ್ವತಃ ಲಾಲಾಜಿ ಭೋಜನ ಕೂಟವನ್ನು ನೀಡಿದರು. ಅದೊಂದು ಅಪೂರ್ವ ಅವಕಾಶವೆನಿಸಿತು. ಐರೋಪ್ಯ ಹಾಗೂ ಪೌರಾತ್ಯದ ಬಹುತೇಕ ಎಲ್ಲಾ ದೇಶಗಳ ಗಣ್ಯಾತಿಗಣ್ಯರು, ಕಾರ್ಮಿಕ ಸಂಘಟಕರು ಆ ಭೋಜನಕೂಟದಲ್ಲಿ ಪಾಲ್ಗೊಂಡಿದ್ದರು. ಫ್ರೆಂಚ್ ಸೋಷಲಿಸ್ಟ್ ಮುಖಂಡ ಜೋರಾಸ್, ಜಪಾನಿನ [illegible] ಮತ್ತು ಸುಜುಕಿ [illegible] ಕಾರ್ಮಿಕ ಸಂಘಟನೆಯ ನಾಯಕರುಗಳು [illegible]

ಫಾಗ್, ಬೆನ್‌ಟಿಲಿಟ್ ಮತ್ತು ಮಾರ್ಗರೇಟ್ ಬ್ಯಾಂಡ್ಫೀಲ್ಡ್ (ನಂತರ ಆಕೆ ಲೇಡಿ ಚಟರ್ಜಿ) ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಹಾಲೆಂಡ್, ಜರ್ಮನಿ, ಬಲ್ಗೇರಿಯಾ, ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾಗಳ ನಾಯಕರು, ಕಾರ್ಮಿಕ ಪ್ರತಿನಿಧಿಗಳು ಆ ಪೈಕಿ ಮುಖ್ಯರು.

ಸಮ್ಮೇಳನ ನಡೆಯುತ್ತಿದ್ದ ಸಮಯದಲ್ಲಿ ಜವಹರ್‌ಲಾಲ್ ನೆಹರು ಸ್ವಿಟ್ಜರ್‌ಲ್ಯಾಂಡ್‌ನಲ್ಲಿದ್ದರು. ತಮ್ಮ ಪತ್ನಿ ಕಮಲಾರವರ ಚಿಕಿತ್ಸೆಗಾಗಿ ಅಲ್ಲಿಗೆ ಆಗಮಿಸಿದ್ದರು. ಅವರು ಸಮ್ಮೇಳನ ಕಲಾಪವನ್ನು ಭಾರತೀಯ ಸಂದರ್ಶಕರಲ್ಲಿ ಒಬ್ಬರಾಗಿ ವೀಕ್ಷಿಸಿದರು. ಇತರ ಭಾರತೀಯ ಸಂದರ್ಶಕರ ಪೈಕಿ ಡಾ. ತಾರಕ್‌ನಾಥ್ ದಾಸ್, ಸಕ್ಕರೆ ತಂತ್ರಜ್ಞ. ಸಾರಂಗರದಾಸ್ ಮತ್ತು ಅವರ ಅಮೆರಿಕನ್ ಪತ್ನಿ ಫ್ರೀಡಾ (ನಂತರ ಅವರು ದಾಸ್‌ರನ್ನು ತ್ಯಜಿಸಿದ ನಂತರದ ದಿನಗಳಲ್ಲಿ 'ಮ್ಯಾರೇಜ್ ಟು ಇಂಡಿಯಾ' ಶೀರ್ಷಿಕೆಯಲ್ಲಿ ಪುಸ್ತಕವನ್ನು ಬರೆದರು.) ಎಸ್. ಎನ್. ಹಾಜಿ (ಸಿಂಧಿಯಾರೊಂದಿಗೆ ಕಾರ್ಯನಿರತವಾಗಿದ್ದ ಹಡಗುಯಾನ ತಜ್ಞ) ಮತ್ತು ಶ್ರೀಮತಿ ಹಾಜಿ ಮುಖ್ಯರು.

ಜಪಾನಿನಲ್ಲಿ ಲಾಲಾಜಿಯವರು ತಮ್ಮ ಹಳೆಯ ಮಿತ್ರ ಶಾಮ್ಜಿ ಕೃಷ್ಣವರ್ಮರನ್ನು ಭೇಟಿ ಮಾಡಿದರು. ಅವರ ಸ್ಥಿತಿ ಆಗ ಖೇದಕರವೆನಿಸಿತು. ಮೇಲ್ನೋಟಕ್ಕೆ ದುಃಖಿತಪ್ತರಂತೆ, ಹತಾಶರಂತೆ ಕಂಡು ಬರುತ್ತಿದ್ದರು. ರೌಸಿಯೋ, ಮಝ್ಝಿನಿ, ಕ್ರೋಪ್ಟೋಕಿನ್, ಲೆನಿನ್ ಅವರಂತೆ ಬಂಡಾಯ ಎದ್ದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ರಾಜಾಶ್ರಯ ಪಡೆದ ಹೋರಾಟಗಾರರಿಗಿಂತ ತೀರಾ ಭಿನ್ನವಾಗಿ ವರ್ಮ ಕಂಡು ಬಂದರು. ಬಹಳ ಕಾಲ ಬಡತನದಲ್ಲಿ ನಲುಗಿ, ಕಷ್ಟಸಹಿಷ್ಣುವಾದಂತೆ ತೋರುತ್ತಿದ್ದರು. ಶಾಮ್ಜಿ ಕೃಷ್ಣವರ್ಮ ಅವರ ಬಳಿ ಅಪಾರ ಹಣವಿತ್ತು. ಆದರೆ ಅವರು ಬಡತನದ ಬದುಕನ್ನು ಆಯ್ದುಕೊಂಡಿದ್ದರು. ತಮ್ಮ ಆ ಆದ್ಯತೆಗೆ ಅವರು ಯಾವುದೇ ಪ್ರಚಾರಕ್ಕೆ ಎಡೆ ಮಾಡಿಕೊಟ್ಟಿರಲಿಲ್ಲ. ಸರಳ ಬದುಕು ನಡೆಸುತ್ತಿದ್ದರು. ಹೇಗೋ ಏನೋ ಆಶ್ಚರ್ಯಕರ ರೀತಿಯಲ್ಲಿ ಶಾಮ್ಜಿ ಕೃಷ್ಣವರ್ಮ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಅವರನ್ನು ಭೇಟಿಯಾಗಿ ವಿಚಾರ ವಿನಿಮಯ ಮಾಡಿದ ನಂತರ ಲಾಲಾಜಿ ಅವರಿಗೆ ತಿಳಿದು ಬಂದದ್ದು ಅವರೋರ್ವ ಪತ್ರಕರ್ತರಾಗಿ ಪಾಲ್ಗೊಂಡಿದ್ದಾರೆಂದು. ತಮ್ಮ ಇಂಡಿಯನ್ ಸೋಷಿಯಾಲಜಿಸ್ಟ್ ಪತ್ರಿಕೆಗೆ ಅವರು ವರದಿ ಮಾಡಲು ಬಯಸಿದ್ದರು. ಎರಡು ದಶಕಗಳ ಹಿಂದೆ ಇಂಗ್ಲೆಂಡ್ ಬಿಟ್ಟು ಬಂದ ನಂತರ ಅವರ ಆ ಪತ್ರಿಕೆಯ ಪ್ರಕಟಣೆ ನಿಯತವಾಗಿರಲಿಲ್ಲ. 1920ರಲ್ಲಿ ಲೋಕಮಾನ್ಯರು ನಿಧನ ಹೊಂದಿದಾಗ ತಮ್ಮ ಆ ಪತ್ರಿಕೆಯ ಒಂದು ಸಂಚಿಕೆಯನ್ನು ಹೊರ ತಂದಿದ್ದರು.

ರೋಮೇನ್ ರೊಸಾಲ್ಡ್ ಆ ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲೇ ವಾಸಿಸುತ್ತಿದ್ದರು. ಲಾಲಾಜಿ ಅವರ ನಿವಾಸಕ್ಕೆ ಅನೇಕ ಬಾರಿ ಭೇಟಿ ಕೊಟ್ಟು ಆತ್ಮೀಯತೆ ಹೆಚ್ಚಿಸಿಕೊಂಡಿದ್ದರು.

ಜನೀವಾದಲ್ಲಿ ಲಾಲಾಜಿ ಸುಮಾರು ಮೂರು ವಾರ ಇದ್ದರು. ಆ ಸಮಯದಲ್ಲಿ ತಾವು ಪಾಲ್ಗೊಂಡಿದ್ದ ಕಾರ್ಮಿಕ ಸಮ್ಮೇಳನವು ಸೇರಿ ಮೂರು ಅಂತಾರಾಷ್ಟ್ರೀಯ ಒಕ್ಕೂಟಗಳಲ್ಲಿ ಭಾಗವಹಿಸಿದರು. ಆ ಪೈಕಿ ವಿಶ್ವ ಸಂಸದೀಯ ಒಕ್ಕೂಟ ವಿಶಿಷ್ಟವೆನಿಸಿತು.

ಲಾಲಾಜಿ ಜಿನೀವಾದಿಂದ ಮತ್ತೆ ಇಂಗ್ಲೆಂಡಿಗೆ ಭೇಟಿ ನೀಡಿದರು. ಎರಡು ತಿಂಗಳ ಕಾಲ ಅಲ್ಲಿ ತಂಗಿ ಅಸಂಖ್ಯಾತ ಗೆಳೆಯರನ್ನು ಭೇಟಿ ಮಾಡಿದರು..

ಈ ಮುನ್ನ ಜಿನೀವಾದಲ್ಲಿ ಇತರ ಅನೇಕ ಸಂಘಟನೆಗಳೊಂದಿಗೂ ಅವರು ಒಡನಾಟ ಕಲ್ಪಿಸಿಕೊಂಡಿದ್ದರು. ಹೇಳಿ ಕೇಳಿ ಆ ನಗರ ಅನೇಕ ಅಂತಾರಾಷ್ಟ್ರೀಯ ಸಂಘ, ಸಂಸ್ಥೆಗಳಿಗೆ ಕೇಂದ್ರ ನಗರವಾಗಿದ್ದರಿಂದ ಸಾಧ್ಯವಾದಷ್ಟು ಅದರ ಲಾಭ ಪಡೆದುಕೊಳ್ಳುವಲ್ಲಿ ಲಾಲಾಜಿ ಯಶಸ್ವಿಯಾದರು. ಅದರಲ್ಲಿ ಹೆಚ್ಚು ಆಸಕ್ತಿ ಕೆರಳಿಸಿದ್ದು ವಿಶ್ವ ಸಂಸದೀಯ ಒಕ್ಕೂಟ. ಅದರ ಕಾರ್ಯ ವೈಖರಿ ಕುತೂಹಲಕಾರಿಯಾಗಿತ್ತು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಮ್ಮೇಳನ ಆರಂಭವಾಗುವುದಕ್ಕೆ ಸ್ವಲ್ಪ ಮೊದಲು ಆ ಒಕ್ಕೂಟದ ಅಧಿವೇಶನ ಲಂಡನ್‌ನಲ್ಲಿ ಏರ್ಪಟ್ಟಿತ್ತು. ಸರ್ ಪುರುಷೋತ್ತಮ ದಾಸ್ ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು.

ವಿಶ್ವ ವಲಸೆ ಕಾಂಗ್ರೆಸ್‌ನ ಅಧಿವೇಶನವೂ ಸಹ ಲಂಡನ್‌ನಲ್ಲಿ ವ್ಯವಸ್ಥೆಯಾಗಿತ್ತು. ಭಾರತೀಯ ಕಾರ್ಮಿಕ ವರ್ಗದ ಪರವಾಗಿ ಲಾಲಾಜಿ ಅವರಿಗೆ ಅದರಲ್ಲಿ ಪಾಲ್ಗೊಳ್ಳಲು ಆಹ್ವಾನ ಬಂದಿತ್ತು. ತಮ್ಮ ಭಾಷಣದಲ್ಲಿ ಅವರು ವರ್ಣಭೇದದ ಪ್ರಶ್ನೆಯನ್ನು ಪ್ರಮುಖವಾಗಿ ಪ್ರಸ್ತಾಪಿಸಿ ಟೀಕಾತ್ಮಕ ನಿಲುವು, ಸುಧಾರಣೆಯ ಸಲಹೆ, ಸೂಚನೆಗಳನ್ನು ಅಧಿವೇಶನದ ಮುಂದಿಟ್ಟರು. ಅವರ ಕಟು ಸತ್ಯದ ಮಾತುಗಳು ಬ್ರಿಟಿಷರು ಹಾಗೂ ವಸಾಹತುಷಾಹಿಗಳಿಗೆ ಬಹುಶಃ ಹಿಡಿಸಲಿಲ್ಲವೇನೋ? ಸ್ವತಃ ಭಾರತದ ಪ್ರತಿನಿಧಿಯಾಗಿ ಅವರು ಹೇಳುತ್ತಿದ್ದ ಸತ್ಯ ಸಾಮ್ರಾಜ್ಯವಾದಿಗಳಿಗೆ ಕಹಿ ಗುಳಿಗೆಯಾಯಿತೇನೋ?

ಆ ಎರಡು ಸಮ್ಮೇಳನಗಳು ಲಜಪತರಿಗೆ ವಿಶ್ವದ ಕಾರ್ಮಿಕ ಮತ್ತು ಸಮಾಜವಾದಿ ಆಂದೋಲನದ ನಾಯಕರ ಜೊತೆ ಅತ್ಯುತ್ತಮ ಬಾಂಧವ್ಯದ ಬೆಸುಗೆ ಹಾಕಿದವು.

ಲಜಪತರು ಲಂಡನ್‌ನಲ್ಲಿದ್ದ ಸಮಯದಲ್ಲೇ ಅಂತಾರಾಷ್ಟ್ರೀಯ ಮುಖಂಡರು ಅಂಕಿತ ಹಾಕಿದ ಪ್ರಣಾಳಿಕೆಯೊಂದನ್ನು ಬಿಡುಗಡೆ ಮಾಡಿ ಬಲಾತ್ಕಾರವಾಗಿ ಸೈನ್ಯಕ್ಕೆ ಸೇರ್ಪಡೆ ಮಾಡಿಕೊಳ್ಳುವ ಪದ್ಧತಿ ರದ್ದತಿಗೆ ಒತ್ತಾಯಿಸಲಾಯಿತು. ಆ ಪ್ರಣಾಳಿಕೆಗೆ ರೋಮೆನ್ ರೊಲೆಂಡ್, ಹೆನ್ರಿ ಬರ್ಬೂಸ್, ಭಾರತದ ಠಾಗೂರ್, ಲಜಪತ್‌ರಾಯ್ ಮತ್ತು ಗಾಂಧೀಜಿ ಅಂಕಿತ ಹಾಕಿದರು.

ಲಜಪತರು ಸಂಬಂಧ ಗಳಿಸಿಕೊಂಡ ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರಸ್ತಾಪ ಮಾಡುವಾಗ ಇನ್ನೊಂದು ಸಂಸ್ಥೆಯನ್ನು ಮರೆಯಲಾಗುವುದಿಲ್ಲ. ಆ ಸಂಸ್ಥೆಯೇನೋ ಕಾರ್ಮಿಕ ಪ್ರತಿನಿಧಿಗಳನ್ನು ಒಳಗೊಂಡದ್ದಲ್ಲ. ಕಾರ್ಮಿಕರ ಬಗ್ಗೆಯಾಗಲಿ ಅಥವಾ ಎಡ ಸಿದ್ಧಾಂತದ ಆಂದೋಲನದ ಬಗ್ಗೆಯಾಗಲಿ ಕಳಕಳಿ ಹೊಂದಿದ್ದೂ ಅಲ್ಲ. ಭಿನ್ನ ರೀತಿಯ ಸಂಸ್ಥೆ ಅದು. ಅವರಲ್ಲಿ ಆ ಸಂಸ್ಥೆಯ ಬಗ್ಗೆ ಒಂದು ರೀತಿಯ ಆಸಕ್ತಿ ಹುಟ್ಟಿತು. ಅದು ಚಕ್ರಾಧಿಪತ್ಯದ ಸಂಸದೀಯ ಒಕ್ಕೂಟ. ಲಾಲಾಜಿ ಅವರ ಜೊತೆಗೆ ಕೆಲವು ಪ್ರಮುಖ ಸ್ವರಾಜ್‌ವಾದಿಗಳು ಸಹ ಆ ಸಂಸ್ಥೆಯ ವಿಷಯದಲ್ಲಿ ಆಸಕ್ತಿ ತಾಳಿದ್ದರು. ಮುಂದೆ ಭಾರತದಲ್ಲಿ ಅದರ ಶಾಖೆಯೊಂದನ್ನು ತೆರೆಯಲಾಯಿತು. ನಂತರದ ಎರಡು ವರ್ಷಗಳ ಅವಧಿಯಲ್ಲಿ ಭಾರತೀಯ ಸ್ವರಾಜ್‌ವಾದಿ ವಿಧಾನಸಭಾ ಸದಸ್ಯರು ಆ ಸಂಸ್ಥೆಯ ಪರವಾಗಿ

ಕೆನಡಾ ಮತ್ತು ಆಸ್ಟ್ರೇಲಿಯಾಗಳಿಗೂ ಭೇಟಿ ಕೊಟ್ಟರು. ಸ್ವರಾಜ್‌ವಾದಿ ಸಿದ್ಧಾಂತದಲ್ಲಾಗಲಿ, ನೀತಿಯಲ್ಲಾಗಲಿ, ಚಕ್ರಾಧಿಪತ್ಯದ ಸಂಸದೀಯ ಒಕ್ಕೂಟದಲ್ಲಿ ಕ್ರಿಯಾಶೀಲರಾಗಲು ನಿರ್ಬಂಧಿಸುವಂಥ ಯಾವ ಅಂಶವು ಇರಲಿಲ್ಲ. ಸಂಸ್ಥೆಯ ಕಾರ್ಯದರ್ಶಿ ಸರ್ ಹೋವರ್ಡ್ ಡಿ ಎಡ್ವಿಲ್ ಭಾರತಕ್ಕೆ ಅಲ್ಪ ಕಾಲದ ಭೇಟಿ ನೀಡಿದರು. ಭಾರತೀಯ ನಾಯಕರಲ್ಲಿ ಅನೇಕರನ್ನು ತಮ್ಮ ಗೆಳೆಯರನ್ನಾಗಿ ಮಾಡಿಕೊಂಡರು. ಸ್ವರಾಜ್‌ವಾದಿ ನಾಯಕರು ಅವರೊಂದಿಗೆ ಕಲ್ಪಿಸಿಕೊಂಡ ರಾಜತಾಂತ್ರಿಕ ಬಾಂಧವ್ಯ ಅನುಕೂಲಕರವೇ ಆಯಿತು.

ಲಾಲಾಜಿ ಲಂಡನ್‌ನಲ್ಲಿದ್ದ ಆ ಸಮಯದಲ್ಲೇ ಭಾರತೀಯ ಕರೆನ್ಸಿ ಸಂಬಂಧದಲ್ಲಿ ರಾಯಲ್ ಕಮಿಷನ್ ಕಾರ್ಯನಿರತವಾಗಿತ್ತು. ಸರ್ ಹಿಲ್ಟನ್ ಯಂಗ್ ಅಧ್ಯಕ್ಷತೆಯಲ್ಲಿ ಆಯೋಗ ಕರಡು ವರದಿ ಸಿದ್ಧಪಡಿಸುತ್ತಿತ್ತು. ಆ ಸಮಿತಿಯು ನೀಡಿದ ವರದಿಯ ಶಿಫಾರಸುಗಳ ಆಧಾರದ ಮೇಲೆ ಸರ್ಕಾರ ಸ್ವಲ್ಪ ದಿನಗಳಲ್ಲೇ ಭಾರತೀಯ ಕರೆನ್ಸಿ ಮೌಲ್ಯದ ಬಗ್ಗೆ ನಿರ್ಧಾರ ಪ್ರಕಟಿಸಿತು. ಅದರಂತೆ ರೂಪಾಯಿ ಬೆಲೆ 18 ಪೆನ್ನಿಗಳೆಂದು ಶಾಸನಾತ್ಮಕಗೊಳಿಸಲಾಯಿತು. ಅದೇ ವಿದೇಶಿ ವಿನಿಮಯ ದರವಾಯಿತು. ಭಾರತದಲ್ಲಿ ಆ ವಿನಿಮಯ ದರದ ನಿರ್ಧಾರವನ್ನು ಕಟುವಾಗಿ ಖಂಡಿಸಲಾಯಿತು. ಬ್ರಿಟನ್ ತನ್ನ ಹಿತಾಸಕ್ತಿಗೆ ಅನುಗುಣವಾಗಿ ರೂಪಾಯಿ ಮೌಲ್ಯದಲ್ಲಿ ಕುತಂತ್ರ ನಡೆಸಿದೆ ಎಂದು ಕಟು ಟೀಕೆ ವ್ಯಕ್ತವಾಯಿತು. ಭಾರತೀಯ ಅರ್ಥಶಾಸ್ತ್ರಜ್ಞರ ಪ್ರಕಾರ 16 ಪೆನ್ನಿ ಪ್ರಮಾಣ ನ್ಯಾಯೋಚಿತವಾಗುತ್ತಿತ್ತು. ಆಯೋಗದ ಸದಸ್ಯರಾಗಿ ಲಂಡನ್‌ನಲ್ಲಿದ್ದ ಸರ್ ಪುರುಷೋತ್ತಮ ದಾಸ್, ಠಾಕೂರ್ ದಾಸ್ ಸಹ ಸರ್ಕಾರದ ಈ ಕ್ರಮವನ್ನು ಒಪ್ಪಿಕೊಳ್ಳಲಿಲ್ಲ. ಆಯೋಗ ಮಾಡಿದ ಶಿಫಾರಸು ಭಾರತದ ಹಿತಾಸಕ್ತಿಗೆ ಪೂರಕವಾಗಿಲ್ಲವೆಂದು ಅವರು ವಿರೋಧ ವ್ಯಕ್ತಪಡಿಸಿದರು. ಆಯೋಗದ ಇತರ ಕೆಲವು ಶಿಫಾರಸುಗಳು ಸಹ ಭಾರತಕ್ಕೆ ಅನುಕೂಲಕರವಾಗಿರಲಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಲಾಲಾಜಿಯೊಂದಿಗೆ ಠಾಕೂರ್ ದಾಸ್ ಸಮಾಲೋಚಿಸಿದರು. ಆಯೋಗದ ಶಿಫಾರಸುಗಳ ಬಗ್ಗೆ ಅನುಮಾನಗಳು ಮತ್ತು ಅದರಿಂದ ಆಗಬಹುದಾಗಿದ್ದ ಪರಿಣಾಮಗಳ ಬಗ್ಗೆ ಇಬ್ಬರು ವ್ಯಾಪಕವಾಗಿ ಅನೇಕ ಸುತ್ತು ಮಾತುಕತೆಗಳನ್ನು ನಡೆಸಿ ಚರ್ಚಿಸಿದರು. ಆಯೋಗದ ಶಿಫಾರಸುಗಳ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಲು ಠಾಕೂರ್ ದಾಸ್ ಲಾಲಾಜಿ ಅವರ ನೆರವನ್ನು ಪಡೆದುಕೊಂಡರು. ಭಾರತದ ಹಿತಕ್ಕೆ ಧಕ್ಕೆಯಾಗದ ರೀತಿಯಲ್ಲಿ ತಮ್ಮ ತೀರ್ಪನ್ನು ದಾಖಲಿಸಿ ಆ ವರದಿಗೆ ಅಂಕಿತ ಹಾಕಲು ಅವರಿಗೆ ಲಾಲಾಜಿ ಸಹಾಯಕರಾದರು. ಹಣಕಾಸಿನ ವಿಷಯದಲ್ಲಿ ತಜ್ಞರ ಸಲಹೆಯನ್ನು ಲಾಲಾಜಿ ಕೊಡುವ ಸಾಹಸಕ್ಕೆ ಕೈ.ಹಾಕಲಿಲ್ಲ. ಆದರೆ ಆ ಸಮಯದಲ್ಲಿ ಅವರಿಗೆ ಅಗತ್ಯವಾಗಿದ್ದ ನೈತಿಕ ಬೆಂಬಲವನ್ನು ಶಕ್ತಿ ಮೀರಿ ತುಂಬಿದರು. ಅದರ ಸಲುವಾಗಿ ವರದಿಗೆ ಭಿನ್ನಮತದ ಟಿಪ್ಪಣಿಯೊಂದನ್ನು ಬರೆಯುವ ಮೂಲಕ ಸರ್ ಪುರುಷೋತ್ತಮ ದಾಸ್, ಠಾಕೂರ್ ದಾಸ್ ಅಂಕಿತ ಹಾಕಲು ಸಾಧ್ಯವಾಯಿತು. ತತ್ಸಂಬಂಧದಲ್ಲಿ ತಮ್ಮ ಆತ್ಮಸಾಕ್ಷಿಯನ್ನು ಎತ್ತಿ ಹಿಡಿಯಲು ಅವರಿಗೆ ಲಾಲಾಜಿ ನೀಡಿದ ಬೆಂಬಲ ಅಮೂಲ್ಯದ್ದಾಗಿತ್ತು.

ಲಾಲಾಜಿ ಗೊತ್ತು ಪಡಿಸಿದ್ದಕ್ಕಿಂತಲೂ ಹೆಚ್ಚು ಕಾಲ ಲಂಡನ್‌ನಲ್ಲಿ ಇರಬೇಕಾಯಿತು. ನಾಭಾ ಮಹಾರಾಜರ ಪ್ರಕರಣದ ಸಲುವಾಗಿ ಒಂದೆರಡು ಬಾರಿ ಪ್ರಯಾಣದ ಅಂತಿಮ ಸಿದ್ಧತೆಯನ್ನು ಮುಂದೂಡಬೇಕಾಗಿ ಬಂದಿತು. ಮಹಾರಾಜರ ಓರ್ವ ಸಹಾಯಕರು ಲಾಲಾಜಿಯವರ ಜೊತೆಗೂಡಿದರು. ಆದರೆ ಅವರ ಬಳಿ ಅವಶ್ಯಕವಾದ ದಾಖಲೆಗಳು ಇರಲಿಲ್ಲ. ಅಂಚೆ ಮೂಲಕ ಆ ದಾಖಲೆಗಳು ಬರುತ್ತವೆ ಎಂದು ಭಾವಿಸಲಾಯಿತು. ಲಾಲಾಜಿ ಆ ವೇಳೆಗಾಗಲೇ ತಮ್ಮ ಕಾನೂನು ಸಲಹೆಗಾರ ಗೆಳೆಯ ಎಚ್.ಎಸ್.ಎಲ್. ಪೋಲಕ್.ಜೊತೆ ಸಾಕಷ್ಟು ಸಮಾಲೋಚನೆ ನಡೆಸಿದ್ದರು. ಅವರು ಯಾವುದೇ ಪ್ರಭಾವಕಾರಿ ಕಾರ್ಯಕ್ಕೆ ಕೈ ಹಾಕುವ ಮೊದಲು ತಮಗೆ ದಾಖಲೆಗಳ ಅಗತ್ಯವಿದೆ ಎಂದು ಸ್ಪಷ್ಟವಾಗಿ ತಿಳಿಯಪಡಿಸಿದರು. ಅವರು ಕೇಳುತ್ತಿದ್ದ ದಾಖಲೆಗಳು ಆ ಸಮಯದಲ್ಲಿ ಲಾಲಾಜಿ ಬಳಿಯಲ್ಲಾಗಲಿ ಅಥವಾ ಮಹಾರಾಜರ ಪ್ರತಿನಿಧಿಯ ಬಳಿಯಲ್ಲಾಗಲಿ ಇರಲಿಲ್ಲ. ಸಾಧ್ಯವಾದಷ್ಟು ಬೇಗನೆ ಕೆಲವು ದಾಖಲೆಗಳನ್ನಾದರೂ ತರಿಸಿಕೊಳ್ಳಲು ಪತ್ರಗಳು ಮತ್ತು ಕೇಬಲ್‌ಗಳ ಮೂಲಕ ನಡೆಸಿದ ಪ್ರಯತ್ನಗಳು ಫಲ ತರಲಿಲ್ಲ. ಅಂತಿಮವಾಗಿ ಲಾಲಾಜಿ ಮಹಾರಾಜರಿಗೆ ಕೇಬಲ್ ಕೊಟ್ಟು ಹೆಚ್ಚು ಕಾಲ ಲಂಡನ್‌ನಲ್ಲಿ ಇರಲು ಸಾಧ್ಯವಿಲ್ಲವೆಂದೂ, ತಾವು ವಾಪಸು ಆಗುತ್ತಿರುವುದಾಗಿಯೂ ತಿಳಿಸಿದರು. ಮಹಾರಾಜರಿಗೆ ಗೊಂದಲಕ್ಕೆ ಇಟ್ಟುಕೊಂಡಿತು. ಆದರೂ ಪರಿಸ್ಥಿತಿಯ ವಿಶ್ಲೇಷಣೆ ಮಾಡಿದಾಗ ಲಾಲಾಜಿ ಅವರ ನಿರ್ಧಾರ ಸರಿ ಎಂದು ಅವರಿಗೂ ಮನವರಿಕೆ ಆಯಿತು. ತಾವು ಆತುರಪಟ್ಟು ಬೇಸರದ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿ ಅವರು ಲಾಲಾಜಿಯವರಿಗೆ ಪತ್ರ ಬರೆದರು. ಮುಂದಿನ ವರ್ಷ ಮತ್ತೆ ಲಂಡನ್‌ಗೆ ಭೇಟಿ ಕೊಡುವ ಸಮಯದಲ್ಲಿ ತಮ್ಮ ಪ್ರಕರಣ ಕೈಗೆತ್ತಿಕೊಳ್ಳುವಂತೆ ಅವರು ಲಾಲಾಜಿಯವರನ್ನು ಕೋರಿದರು. ಅಗತ್ಯವಾಗಿದ್ದ ಕಾನೂನು ಸಲಹೆಗಳನ್ನು ಒದಗಿಸುವುದಾಗಿ ಹೇಳಿದಾಗ ಲಾಲಾಜಿ ಸಂತೋಷದಿಂದ ಒಪ್ಪಿಕೊಂಡರು.

ಲಾಲಾಜಿ ಲಂಡನ್‌ನಲ್ಲಿದ್ದ ಸಮಯದಲ್ಲೇ ಹೌಸ್ ಆಫ್ ಕಾಮನ್ಸ್ ಸಭೆ ನಡೆಯುತ್ತಿತ್ತು. ಭಾರತದ ಬಗ್ಗೆ ಚರ್ಚೆಯೂ ಆಗಿನ ಕಲಾಪಗಳಲ್ಲಿ ಸೇರಿತ್ತು. ಲಾಲಾಜಿ ಅಧಿವೇಶನದಲ್ಲಿ ಸಂದರ್ಶಕರಾಗಿ ಪಾಲ್ಗೊಂಡು ಕಲಾಪ ವೀಕ್ಷಿಸಿದರು

ಭಾರತಕ್ಕೆ ಮರಳುವ ಒಂದು ವಾರ ಮೊದಲು ಟೈಮ್ಸ್ ಪತ್ರಿಕೆ ಲಜಪತರ ಪತ್ರವೊಂದನ್ನು ಪ್ರಕಟಿಸಿತು. ''ಭಾರತದಲ್ಲಿ ಕೋಮು ಸಂಘರ್ಷ'' ಕುರಿತು ಆ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಕೆಲವು ವರದಿಗಳಿಗೆ ಸಂಬಂಧಪಟ್ಟ ವಿವರಣೆ ಅದಾಗಿತ್ತು. ಅದರಿಂದ ಲಾಲಾಜಿ ಅವರಿಗೆ ವಿಚಿತ್ರ ರೀತಿಯಲ್ಲಿ ವಿಚಿತ್ರ ಮೂಲಗಳಿಂದ ಆಕ್ಷೇಪಗಳು ಎದುರಾದವು. ಅವರು ನ್ಯಾಷನಲ್ ಲಿಬರಲ್ ಕ್ಲಬ್ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ್ದರು. ಆ ಸದಸ್ಯತ್ವ ಖಾತ್ರಿಯಾಗುವ ಮೊದಲೇ ಕ್ಲಬ್‌ನ ನಿಯಮ, ನಿರ್ಬಂಧಗಳನ್ನು ಉಲ್ಲಂಘಿಸಿದರೆಂಬ ಆಕ್ಷೇಪ ಅದಾಗಿತ್ತು. ಕಾರಣ ಟೈಮ್ಸ್ ಪತ್ರಿಕೆಗೆ ಬರೆದಿದ್ದ ಪತ್ರದಲ್ಲಿ ಅವರು ತಮ್ಮ ಹೆಸರಿನ ಕೆಳಗೆ ಕ್ಲಬ್ ವಿಳಾಸ ನೀಡಿದ್ದರು. ಕ್ಲಬ್ ಕಾರ್ಯದರ್ಶಿ ಲಾಲಾಜಿ ಅವರಿಗೆ ನಿಯಮಗಳನ್ನು ಗಮನಕ್ಕೆ ತಂದರು. ಕ್ಲಬ್‌ನ ಸಭೆಯ ಪೂರ್ವಾನುಮತಿ ಪಡೆಯದೇ ಯಾವ ಸದಸ್ಯರು ಸಹ ಕ್ಲಬ್‌ನ ಹೆಸರನ್ನಾಗಲಿ, ವಿಳಾಸವನ್ನಾಗಲಿ ಬಳಸಿಕೊಳ್ಳಬಾರದೆಂದು ಆ ನಿಯಮ ಹೇಳುತ್ತಿತ್ತು.

ಲಜಪತರು ಇನ್ನು ಎರಡು ದಿನ ಲಂಡನ್‌ನಲ್ಲಿ ಉಳಿಯಬೇಕಾಗಿ ಬಂದಿತು. ಅವರ ಹಳೆಯ ಅಚ್ಚುಮೆಚ್ಚಿನ ಗೆಳೆಯರಾದ ವೆಬ್ಸ್‌ಗಳು ಅವರನ್ನು ಬಿಟ್ಟು ಕೊಡಲಿಲ್ಲ. ಮುಂದೆ ಆ ಪ್ರಸಂಗವನ್ನು ದಿ ಪೀಪಲ್‌ನಲ್ಲಿ ಬರೆಯುತ್ತಾ ಲಜಪತರು ಅವರ ಸ್ನೇಹದ ಒಳಮುಖವನ್ನು ತಾವು ಅನುಭವಿಸಿದ ಪರಿಯನ್ನು ವಿವರಿಸಿದ್ದಾರೆ: ''ಅವರೊಂದಿಗೆ ಆ ಎರಡು ದಿನಗಳ ಒಡನಾಟದಲ್ಲಿ ನಾನು ಕೊಂಡುಕೊಂಡ ಆತ್ಮೀಯತೆ ಅನನ್ಯವಾದುದು. ಹಿಂದೆಯೂ ಅವರೊಂದಿಗಿದ್ದೆ. ಆದರೆ ಅಂಥ ಅನುಭವವನ್ನು ಆಗ ನಾನು ಗುರುತಿಸಲಾಗಿರಲಿಲ್ಲ. ಆ ಎರಡು ದಿನಗಳ ಅವಧಿಯಲ್ಲಿ ಶ್ರೀಮತಿ ವೆಬ್ಸ್‌ರ ಮೈ ಅಪೆಂಟ್ರಿಸ್‌ಶಿಪ್ ಕೃತಿಯನ್ನು ಸಾದ್ಯಂತವಾಗಿ ಓದಿದೆ.''

ಆ ಪುಸ್ತಕ ಲಾಲಾಜಿ ಅವರ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಭಾರತಕ್ಕೆ ಮರಳಿದ ಮೇಲೂ ಅನೇಕ ದಿನಗಳ ಕಾಲ ಅವರ ನೆನಪಿನಂಗಳದಲ್ಲಿ ಆ ಕೃತಿ ಓಡಾಡುತ್ತಲೇ ಇತ್ತು. ದಿ ಪೀಪಲ್‌ನಲ್ಲಿ ಅವರು ಮೈ ಅಪೆಂಟ್ರಿಸ್‌ಶಿಪ್ ಬಗ್ಗೆ ಆಳವಾದ, ಕುತೂಹಲಕಾರಿಯಾದ ಲೇಖನ ಬರೆದರು. ಲಂಡನ್‌ನಿಂದ ಮರಳುವಾಗ ಅವರ ಅನೇಕ ಕೃತಿಗಳನ್ನು ಜೊತೆಯಲ್ಲಿ ತಂದಿದ್ದರು. ಅವುಗಳನ್ನು ಗೆಳೆಯರಿಗೆ ಹಂಚಿದರು. ಆ ಕೃತಿಯನ್ನು ಪಡೆದುಕೊಂಡವರ ಪೈಕಿ ಲಜ್ಜಾವತಿಯವರು ಒಬ್ಬರು. ಮತ್ತೋರ್ವರು ಲಜಪತರ ಸೊಸೆ ಸರಸ್ವತಿ (ಶ್ರೀಮತಿ ಅಮೃತ್‌ರಾಯ್). ಅವರಿಬ್ಬರು ಶ್ರೀಮತಿ ವೆಬ್ಸ್‌ರ ಕೃತಿಯನ್ನು ಬಹುವಾಗಿ ಪ್ರಶಂಸಿಸಿದರು.

ಲಜಪತರು ಮರಳುವಾಗ ಜೊತೆಗೂಡಿದವರಲ್ಲಿ ಹೆಸರಾಂತ ವಿಜ್ಞಾನಿ ಆಚಾರ್ಯ ಪ್ರಫುಲ್ಲಚಂದ್ರ ರಾಯ್ ಒಬ್ಬರು. ಆ ಸಮಯದಲ್ಲಿ ಆಚಾರ್ಯ ಪ್ರಫುಲ್ಲಚಂದ್ರ ರಾಯ್ ತಮ್ಮ ಆತ್ಮಚರಿತ್ರೆಯನ್ನು ಬರೆಯುತ್ತಿದ್ದರು. ಆತನಕ ತಾವು ಬರೆದು ಮುಗಿಸಿದ್ದ ಅಧ್ಯಾಯಗಳನ್ನು ಅವರು ಓದಿ ಲಾಲಾಜಿ ಅವರಿಗೆ ಸಾಗರಯಾನದ ಉದ್ದಕ್ಕೂ ತಿಳಿಸುತ್ತಾ ಬಂದರು. ಮಧ್ಯೆ ಮಧ್ಯೆ ಅವರ ಅಭಿಪ್ರಾಯ ಮತ್ತು ಟೀಕೆ ಟಿಪ್ಪಣಿಗಳನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದರು. ಅಭ್ಯಾಸ ಬಲವೋ ಏನೋ ಪ್ರತಿ ಹಂತದಲ್ಲೂ ಲಾಲಾಜಿ ಅವರನ್ನು 'ತಿಳಿಯಿತೇ?' ಎಂದು ಕೇಳುತ್ತಿದ್ದರು. ಅವರ ಆ ನಡವಳಿಕೆ ಲಾಲಾಜಿ ಅವರಿಗೆ ಕಸಿವಿಸಿ ತರತೊಡಗಿತು. ಕೆಲವು ಸಂದರ್ಭದಲ್ಲಂತೂ ವಿಪರೀತಕ್ಕೆ ಇಟ್ಟು ಕೊಳ್ಳುತ್ತಿತ್ತು. ಒಂದು ಹಂತದಲ್ಲಿ ಲಾಲಾಜಿ ಹೇಳಿಯೂ ಬಿಟ್ಟರು: ''ನನಗೆ ಚೆನ್ನಾಗಿ ತಿಳಿಯುತ್ತದೆ. ದಯಮಾಡಿ ಪದೇ ಪದೇ ಹಾಗೆ ನನ್ನನ್ನು ಕೇಳಬೇಡಿ.''

1926, ಆಗಸ್ಟ್ 13ರಂದು ಲಜಪತ್‌ರಾಯ್ ಮುಂಬೈಗೆ ಪುನರಾಗಮಿಸಿದರು.

* * *

ಅಧ್ಯಾಯ-60

''ಕೋಮುವಾದಿ''?

I

ಅಮರತ್ವವನ್ನು ಸಾಧಿಸುವ ದಾಹವನ್ನು ಇಂಗಿಸಿಕೊಳ್ಳಲು ದೇವತೆಗಳು ಮತ್ತು ದೈತ್ಯರು ಸಮುದ್ರ ಮಂಥನ ನಡೆಸಿದರು. ಆ ಮಂಥನದಿಂದ ಅಪರೂಪದ, ಅಮೂಲ್ಯವಾದ ಅನೇಕ ವಸ್ತುಗಳು ಉದ್ಭವಿಸಿದವು. ಘೋರ ರೂಪದ ಚಿರಂತನವಾದ ಪೂರಕ ವಸ್ತುಗಳು ಸಮುದ್ರದ ಒಡಲಿನಿಂದ ಮೂಡಿ ಬಂದವು. ಅಂತಿಮವಾಗಿ ಸುರರಿಗೂ, ಅಸುರರಿಗೂ ಅಗತ್ಯವಾಗಿದ್ದದ್ದು ಪ್ರಾಪ್ತವಾಯಿತು. ಇಬ್ಬರು ಅಮೃತಕ್ಕಾಗಿ ಪೈಪೋಟಿ ನಡೆಸಿದರು.

ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಮಹದಾಶೆಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಮಹಾತ್ಮನ ನಿರ್ದೇಶನದಲ್ಲಿ ಅಪೂರ್ವವೆನಿಸಿದ ಹೋರಾಟ ಮಂಥನದಲ್ಲಿ ತೊಡಗಿದರು. ಗುರಿಯನ್ನು ಸಾಧಿಸಿಕೊಳ್ಳಲು ಗೊತ್ತು ಪಡಿಸಿದ್ದ ವರ್ಷ ಫಲವಿಲ್ಲದೆ ಬಂದು ಹೋಯಿತು. ಮಂಥನವನ್ನು ಕೂಡಲೇ ನಿಲ್ಲಿಸಲಾಯಿತು. ಸ್ವಾತಂತ್ರ್ಯದ ಅಮೃತ ಉದ್ಭವಿಸದಿದ್ದರೂ ಇತರ ಉತ್ಪನ್ನಗಳು ಕಾಣಿಸಿಕೊಳ್ಳತೊಡಗಿದವು. ಅದರ ಲಾಭವನ್ನು ಎರಡೂ ಕಡೆಯವರು ಪಡೆಯಬಹುದೆಂದು ಇತ್ತ ಕಡೆಯವರೂ, ಇತ್ತ ಕಡೆಯವರು ಪಡೆಯಬಹುದೆಂದು ಎದುರು ಪಕ್ಷದವರು ಪರಸ್ಪರ ಅನುಮಾನ ಪಡತೊಡಗಿದರು. ಆ ಅನುಕೂಲಗಳು ಪ್ರಾಪ್ತವಾಗುವುದಕ್ಕೆ ಸಹ ಕಾಲ ಪಕ್ವವಾಗಿರಲಿಲ್ಲ. ಕಚ್ಚಾಟವನ್ನು ಕಂಡ ಪ್ರಜ್ಞಾವಂತರು ಎರಡೂ ಕಡೆಯವರನ್ನು ಎಚ್ಚರಿಸಿದರು. ಮಂಥನವನ್ನು ನಿಲ್ಲಿಸಿದರೆ ಅಮೃತ ಉದ್ಭವಿಸುವುದೇ ಇಲ್ಲವೆಂದು ಮುಂಜಾಗ್ರತೆ ನೀಡಿದರು. ಸ್ವಾತಂತ್ರ್ಯ ಪ್ರಾಪ್ತವಿಲ್ಲದೆ ಬೇರಾವ ಗಳಿಕೆಯೂ ಅರ್ಥಪೂರ್ಣವಲ್ಲವೆಂದರು.

ಲಜಪತ್‌ರಾಯ್ ಅವರ ಸ್ವಯಂ ಘೋಷಿತ ಗಡಿಪಾರು ಅವಧಿಯ ಕಡೆಯ ವರ್ಷದಲ್ಲಿ ಪಂಜಾಬಿನಲ್ಲಾದ ವಿದ್ಯಮಾನಗಳ ಸುದ್ದಿ ಅವರನ್ನು ತೀವ್ರವಾಗಿ ನೋಯಿಸಿತು. ಆ ಸಮಯದಲ್ಲಿ ಸ್ವಾಮಿ ಶ್ರದ್ಧಾನಂದರು ಜುಮ್ಮಾ ಮಸೀದಿಯಲ್ಲಿ ನಿಂತು ಧರ್ಮ ಸಮನ್ವಯದ ಮಾತನಾಡಿದ್ದು ಲಜಪತರಿಗೆ ನೋವಿನ ನಡುವೆಯೂ ಹೊಸ ಭರವಸೆಯನ್ನು ಹುಟ್ಟಿಸಿತು. ಅದೊಂದು ಹಿಂದೆಂದೂ ಕಾಣದಂಥ ಬೆಳವಣಿಗೆ ಎನಿಸಿತ್ತು. ಅಮೆರಿಕದ ತೀರವನ್ನು ಬಿಡುವ ಮೊದಲು ತನ್ನ ದೇಶವಾಸಿಗಳಿಗೆ ನೀಡಿದ ಸಂದೇಶದಲ್ಲಿ ಅವರು, ''ಐಕ್ಯತೆಯ ಪರಮೋಚ್ಚ ಅಗತ್ಯ''ವನ್ನು ಒತ್ತಿ ಹೇಳಿದರು. ಗಾಂಧೀಜಿಯ ನೇತೃತ್ವವನ್ನು ಅನುಸರಿಸಲು ಕರೆ ಕೊಟ್ಟಿದ್ದರು. ಎಲ್ಲಕ್ಕಿಂತ ಹೆಚ್ಚಿನದಾಗಿ ಏಕತೆಯೇ ಅತಿ ಅಗತ್ಯವೆಂದು ಸ್ಪಷ್ಟ ಶಬ್ದಗಳಲ್ಲಿ ತಿಳಿಸಿದ್ದರು. ಭರತ ಭೂಮಿಗೆ ಮರಳಿದ ಮೇಲೂ ಅವರು ಕೋಮುವಾದದ ವಿರುದ್ಧ ಕಟ್ಟೆಚ್ಚರ ನೀಡಿದರು. ವಿಶೇಷವಾಗಿ ತಮ್ಮ ಧರ್ಮದವರನ್ನೇ ಜಾಗೃತಗೊಳಿಸಲು ಅವರು ಮುಂದಾದರು. ಖಿಲಾಫತ್ ತಪ್ಪುಗಳನ್ನು ಖಂಡಿಸಿದರು

ಸಾಮ್ರಾಜ್ಯಷಾಹಿಗಳು ಬಿತ್ತಿದ ವಿಷ ಬೀಜವನ್ನು ಖಂಡಿಸಿದರು. ತಾವು ಅಮೆರಿಕದಲ್ಲಿದ್ದಾಗ ಗೆಳೆಯ ವರ್ಗ ತಮಗೆ ನೀಡಿದ್ದ ಹಣದಲ್ಲಿ ಉಳಿದಿದ್ದ ಭಾಗದಲ್ಲಿ ಖಿಲಾಫತ್ ನಿಧಿಗಾಗಿ ಅವರು ವಂತಿಕೆ ಸಲ್ಲಿಸಿದರು. ಶೌಕತ್ ಅಲಿ ಜೊತೆಯಲ್ಲಿ ಅಸಹಕಾರ ಆಂದೋಲನಕಾರರಾಗಿ ಪ್ರವಾಸ ಕೈಗೊಂಡರು. ಅಲಿ ಸಹೋದರರ ವಿರುದ್ಧ ಕರಾಚಿಯಲ್ಲಿ ವಿಚಾರಣೆ ಆರಂಭಗೊಂಡಾಗ ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸಿದ್ದನ್ನು ಖಂಡಿಸಿ 17 ಜನರೊಂದಿಗೆ ತಾವು ಅಂಕಿತ ಹಾಕಿದ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದರು. ತಮ್ಮಲ್ಲಿ ಕೆಲವು ಅನುಮಾನಗಳಿದ್ದರೂ ಸಹ ಅವರು ಮಹಾತ್ಮಗಾಂಧೀ ನಾಯಕತ್ವವನ್ನು ಅಮೂಲ್ಯವೆಂದೇ ಮಾನ್ಯ ಮಾಡಿದ್ದರು. ಅದನ್ನು ಜನತೆಗೂ ತಿಳಿಯಪಡಿಸಿದ್ದರು. ಅದಕ್ಕೆ ಕಾರಣವಿಲ್ಲದಿರಲಿಲ್ಲ. ಮುಸ್ಲಿಂ ಬೆಂಬಲ ಗಳಿಸಿಕೊಳ್ಳುವ ಶಕ್ತಿ ಮಹಾತ್ಮರಲ್ಲಿ ಇದ್ದದ್ದನ್ನು ಅವರು ಮನಗಂಡಿದ್ದರು.

ii

ಲಾಲಾಜಿ ಜೈಲಿನಲ್ಲಿದ್ದಾಗಲೇ ಕೋಮು ಸೌಹಾರ್ದ ಹದಗೆಟ್ಟಿತ್ತು. ಹಿಂದೂ ಮುಸ್ಲಿಂ ಹಿಂಸಾಚಾರ ಅನುದಿನದ ಮಾತಾಗಿತ್ತು. ಏಕತೆ ಹಿಂದೆಂದಿಗಿಂತಲೂ ಅತ್ಯಗತ್ಯವಾಗಿದ್ದನ್ನು ಅವರು ಮನಗಂಡಿದ್ದರು. ಗಾಂಧೀಜಿ ಎಷ್ಟೇ ಪ್ರಯತ್ನಿಸಿದ್ದರೂ ಆ ಏಕತೆ ಸಾಧಿತವಾಗಿರಲಿಲ್ಲ. ಜೈಲಿನಲ್ಲಿದ್ದುಕೊಂಡೇ ವಿರಾಮದ ಸಮಯದಲ್ಲಿ ಲೇಖನಗಳನ್ನು ಬರೆದು ಕಳ್ಳ ಮಾರ್ಗದ ಮೂಲಕ ಅದನ್ನು ಬೇನಾಮಿ ಹೆಸರಿನಲ್ಲಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಎರಡೂ ಧರ್ಮದವರಲ್ಲಿ ಜಾಗೃತಿ ಉಂಟು ಮಾಡುವ ಕಾರ್ಯವನ್ನು ಅವರು ಕೈಗೊಂಡರು. ಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ, ಏಕತೆಯ ಸಮಸ್ಯೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ ಅವರು ಇಸ್ಲಾಂ ಧರ್ಮವನ್ನು ಆಳವಾಗಿ ಅಭ್ಯಸಿಸಿದರು. ಮುಸ್ಲಿಂ ಚರಿತ್ರೆಯನ್ನು ಓದಿದರು. ಮುಸ್ಲಿಂ ಪ್ರಧಾನ ನಾಡಿನಲ್ಲಿ ಆಗುತ್ತಿದ್ದ ಆಧುನಿಕ ನಡವಳಿಕೆಯನ್ನು ಅರಿತುಕೊಂಡರು. ಶಿಬ್ಲಿ ಅವರ ಬೋಧನೆಗಳು ಅವರಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟವು. ಪ್ರವಾದಿಯಂತೆ ಅವರು ನಡೆಸಿದ ಜೀವನ ಅವರನ್ನು ಹೆಚ್ಚು ಆಕರ್ಷಿಸಿತು. ಓಮರನ ಚರಿತ್ರೆಯೂ ಅಷ್ಟೇ. ಆತನ ಇತರ ಜೀವನ ಚರಿತ್ರೆಗಳು ಐತಿಹಾಸಿಕ ಲೇಖನಗಳು ಲಾಲಾಜಿ ಅವರಿಗೆ ಉಪಯುಕ್ತವಾದವು. ತಮ್ಮೊಡನಿದ್ದ ಇತರ ಕೈದಿಗಳೊಂದಿಗೆ ಅವರು ಚರ್ಚಿಸಿದರು. ಅನುಗಾಲದ ನಡವಳಿಕೆಗಳನ್ನು ಅವರು ಮನನ ಮಾಡಿಕೊಂಡರು. ಅಂಥ ಚರ್ಚೆಯ ಸಂದರ್ಭದಲ್ಲಿ ಅಪಾರ್ಥಗಳಿಗೆ ಕಾರಣವಾಗುತ್ತಿದ್ದ ಸೂಕ್ಷ್ಮಗಳು ಅವರಿಗೆ ಕಂಡು ಬರುತ್ತಿದ್ದವು. ಲೂಧಿಯಾನದ ಮೌಲ್ವಿ ಹಬೀಬ್-ಉಲ್-ರೆಹಮಾನ್ ಜೊತೆ ಚರ್ಚಿಸುತ್ತಿದ್ದಾಗ ಅಂಥ ಪ್ರಸಂಗಗಳು ಅವರಿಗೆ ಹೆಚ್ಚಾಗಿ ಗಮನಕ್ಕೆ ಬಂದವು. ರೆಹಮಾನ್ ಖಿಲಾಫತ್ ಚಳವಳಿಯಲ್ಲಿ ಅಗ್ರಮಾನ್ಯರಾಗಿದ್ದವರು. ಅಪ್ರತಿಮ ದೇಶಭಕ್ತ. ಜೊತೆಗೆ ಸಹ ಬಂದಿ. ಆ ಮೌಲ್ವಿಯೊಂದಿಗೆ ಸಲಿಗೆ ಸಾಧಿಸಿಕೊಂಡ ಲಾಲಾಜಿ ಮುಕ್ತ ವಿಚಾರ ವಿನಿಮಯಕ್ಕೆ ಅವರನ್ನು ಒಗ್ಗಿಸಿಕೊಂಡಿದ್ದರು. ಮುಸ್ಲಿಮರು ಹಾಗೂ ಹಿಂದೂಗಳ ನಡುವೆ ಸೌಹಾರ್ದ, ಸಹಕಾರ ಏರ್ಪಡದಿರುವುದಕ್ಕೆ ಸೂಕ್ಷ್ಮವಾದ ಕಾರಣಗಳು ಏನೆಂಬುದನ್ನು

ತಿಳಿದುಕೊಳ್ಳಲು ಲಾಲಾಜಿ ಅವರಿಗೆ ಅದರಿಂದ ಸಹಾಯಕವಾಯಿತು. ಸಾಲದ್ದಕ್ಕೆ ಕೇವಲ ಬ್ರಿಟಿಷರನ್ನು ಭಾರತದಿಂದ ಹೊರಗಟ್ಟುವುದಕಷ್ಟೇ ಹಿಂದೂ ಮುಸ್ಲಿಂ ಮೈತ್ರಿ ಉಳಿಯಲಾರದೆಂದು ಅವರಿಗೆ ಮನವರಿಕೆಯಾಯಿತು. ಲಾಲಾಜಿ ಜೈಲಿನಿಂದಲೇ ಸಿ ಆರ್. ದಾಸ್ ಅವರಿಗೆ ಪತ್ರವೊಂದನ್ನು ಬರೆದರು. ಎರಡು ಧರ್ಮಗಳ ನಡುವೆ ಅಡ್ಡಗೋಡೆಯ ಅಪಾರ್ಥಗಳನ್ನು ನಿವಾರಿಸಲು ಪ್ರಯತ್ನಿಸಬೇಕೆಂದು ಸಲಹೆ ಮಾಡಿದರು ತನ್ಮೂಲಕ ರಾಷ್ಟ್ರೀಯ ಕಾರ್ಯಕ್ರಮಕ್ಕೆ ತಡೆ ಒಡ್ಡಿರುವುದನ್ನು ನಿವಾರಿಸಲು ಮುಂದಾಗುವಂತೆ ತಿಳಿಸಿದರು. ರಹಸ್ಯ ರೂಪದ ಸುದೀರ್ಘವಾದ ಆ ಪತ್ರದಲ್ಲಿ ಲಾಲಾಜಿ ಹಿಂದೂ ಮುಸ್ಲಿಂ ಏಕತೆಯ ಬಗ್ಗೆ ಆಳವಾದ ಚಿಂತನೆ ನಡೆಸಿದ್ದರು. ಆದರೆ ದಾಸ್ ಅವರಿಗೆ ಅದರಲ್ಲಿ ಆಸಕ್ತಿ ಇದ್ದಂತೆ ಕಂಡು ಬರಲಿಲ್ಲ. ಜೈಲಿನಲ್ಲಿ ಮೌಲ್ವಿ ಲಾಲಾಜಿ ಅವರಿಗೆ ಹೇಳಿದ್ದ ಮಾತಿನಲ್ಲಿ ವಿಶ್ವಾಸ ಬರಲಿಲ್ಲ. ಆ ಪತ್ರವನ್ನು ಅವರು ರಹಸ್ಯವಾಗಿ ಇಡಲಿಲ್ಲ. ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಆ ಪತ್ರವನ್ನು ಬಹಿರಂಗಗೊಳಿಸಿದರು. ಶಾಸನಸಭೆಯನ್ನು ಬಹಿಷ್ಕರಿಸುವ ವಿಷಯದಲ್ಲಿ ಲಾಲಾಜಿ ದಾಸ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬರೆದಿದ್ದ ಖಾಸಗಿ ವಿಷಯಗಳನ್ನು ಸಹ ಬಯಲು ಮಾಡಿದರು. ಹಾಗೆ ಮಾಡುವ ಮೂಲಕ ಅವರು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಂಡರು. ಸಣ್ಣತನವನ್ನು ತೋರಿಸಿದರು! ಮುಂದಾಗಬಹುದಾದ ಪರಿಣಾಮಗಳನ್ನು ಲೆಕ್ಕಿಸದೇ ಅವರು ಮತ್ತೊರ್ವ ಮೌಲ್ವಿಯೊಂದಿಗೆ ಸೇರಿಕೊಂಡು ಕಾಬೂಲ್ ಯೋಜನೆಯನ್ನು ಒಪ್ಪಿಕೊಂಡರು. ಅದರ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಓದೋಣ.

ಲೂಧಿಯಾನ ಮಾಡಿದ್ದ ಸಲಹೆ ದಾಸ್‌ರಲ್ಲಿ ಮಾತ್ರ ಉಳಿಯದೆ ಬಹುತೇಕ ದೇಶಿಯವಾದಿಗಳಲ್ಲಿ ಹರಡಿ ಹೋಯಿತು. ಆ ಸಲಹೆಯ ಮನಸ್ಥಿತಿಯನ್ನು ಮನನ ಮಾಡಿಕೊಳ್ಳುವ ಸ್ಥಿತಿ ಅವರಲ್ಲಿರಲಿಲ್ಲ. ಬದಲಾಗಿ ಅಪಾರ್ಥ ಮಾಡಿಕೊಂಡರು. ದೂರದೃಷ್ಟಿಯುಳ್ಳ ಕೆಲವರು ಸಲಹೆಯನ್ನು ತಾತ್ವಿಕವಾಗಿ ಒಪ್ಪಿಕೊಂಡರಾದರೂ ಮೌಲ್ವಿಯ ಆ ಸಲಹೆ ಅನುಕೂಲಕರವಲ್ಲವೆಂದು ಹೇಳ ತೊಡಗಿದರು.

ಲಜಪತರಿಗೆ ಸಿ.ಆರ್. ದಾಸ್ ಅವರ ಆ ವಿಶ್ವಾಸಘಾತುಕತನ ಒಡನಾಡಿಗಳ ಜೊತೆ ಹೇಗೆ ನಡೆದುಕೊಳ್ಳಬೇಕೆಂಬ ಪಾಠ ಕಲಿಸಿತು. ಅವರು ದಾಸ್‌ರನ್ನು ತುಂಬಾ ಎತ್ತರದ ದೃಷ್ಟಿಯಿಂದ ಪರಿಗಣಿಸಿದ್ದರು. ಆದರೆ ದಾಸ್ ಮಾಡಿದ್ದು ತೀರಾ ನಿಕೃಷ್ಟವಾಗಿತ್ತು. ತಕ್ಷಣದ ತಮ್ಮ ರಾಜಕೀಯ ಲಾಭಕ್ಕಾಗಿ ಅವರು ಆ ಪತ್ರದ ರಹಸ್ಯವನ್ನು ಕಾಪಾಡಲಿಲ್ಲ. ಅದೇನೇ ಇದ್ದರೂ ಲಜಪತರು ಅತ್ತ ಕಡೆಗೆ ಗಮನ ಹರಿಸದೆ ಮೌನ ವಹಿಸಿದರು. ಅಂಥ ಕೀಳುತನದ ನಡವಳಿಕೆ ಅವರ ಮನಸ್ಸಿಗೆ ನೋವು ತಂದಿತಾದರೂ ವಹಿಸಬೇಕಾದ ಮುನ್ನೆಚ್ಚರಿಕೆ ಪಾಠವೊಂದನ್ನು ಕಲಿಯುವಂತೆ ಮಾಡಿತ್ತು.

ಜೈಲಿನಿಂದ ಬಿಡುಗಡೆಯಾಗುತ್ತಿದ್ದಂತೆಯೇ ಲಾಲಾಜಿ ಅವರನ್ನು ಹಿಂದೂ ಮುಸ್ಲಿಂ ಸೌಹಾರ್ದ ಸಾಧಿಸುವ 'ರಾಷ್ಟ್ರೀಯ ಒಡಂಬಡಿಕೆ' ಸಮಿತಿಯ ಇಬ್ಬರು ಸದಸ್ಯರಲ್ಲಿ ಓರ್ವರನ್ನಾಗಿ ಕಾಂಗ್ರೆಸ್ ಕಾರ್ಯಕಾರಿಣಿ ನೇಮಕ ಮಾಡಿತು. ಅನ್ಸಾರಿ, ಲಜಪತ್‌ರಾಯ್ ಕರಡು ವರದಿ ಪರಿಗಣನೆಗೆ ಕೈಗೆತ್ತಿಕೊಳ್ಳುತ್ತಿದ್ದ ಸಮಯದಲ್ಲೇ ಸಿ.ಆರ್. ದಾಸ್ ಕಲ್ಕತ್ತೆಯಲ್ಲಿ

ಬಂಗಾಳಕ್ಕೆ ಮಾತ್ರ ಸೀಮಿತವಾದ ಒಡಂಬಡಿಕೆ ಮಾಡಿಕೊಂಡ ಸುದ್ದಿ ಬಂದಿತ್ತು! ಆ ಒಡಂಬಡಿಕೆ ಆರಂಭದಲ್ಲಿ ಯಶಸ್ಸು ತಾರದಂತೆ ಕಂಡು ಬಂದರೂ ಹೆಚ್ಚು ಕಾಲ ಉಳಿಯಲಿಲ್ಲ. ಮುಂದೆ ಹೊಸ ಬಿಕ್ಕಟ್ಟುಗಳಿಗೆ ಅದು ಕಾರಣವಾಗಿದ್ದು ಅವರು ಹಾಕಿದ್ದ ತಪ್ಪು ಹೆಜ್ಜೆಯನ್ನು ಎತ್ತಿ ತೋರಿಸಿತು. ಬಂಗಾಳ ಕಾಂಗ್ರೆಸ್ಸಿನಲ್ಲಿ ಭಿನ್ನಮತ ತಲೆ ಎತ್ತಿತು. ಅದು ರಾಷ್ಟ್ರೀಯ ಒಡಂಬಡಿಕೆ ಮೇಲೆ ತೀವ್ರ ಪರಿಣಾಮ ಬೀರಿತು. ದಾಸ್ ಆ ವಿಕೃತ ಬೆಳವಣಿಗೆಯ ಬೆಲೆ ತೆರಬೇಕಾಯಿತು.

ಲಾಲಾಜಿ ಸೋಲಾನ್ ಗಿರಿಧಾಮದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಅಬುಲ್ ಕಲಂ ಆಜಾದ್ ಸೇರಿಂತೆ ಕೆಲವು ಕಾಂಗ್ರೆಸ್ ನಾಯಕರು ಅಲ್ಲಿದ್ದರು. ಅವರು ಗಿರಿಧಾಮದ ವಿಶ್ರಾಂತಿ ಮುಗಿಸಿ ತೆರಳಿದ ಕೆಲವು ದಿನಗಳಲ್ಲಿ ಸಿ.ಆರ್. ದಾಸ್ ಬಂಗಾಳ ಒಡಂಬಡಿಕೆ ಬರ ಸಿಡಿಲಿನಂತೆ ಬಂದೆರಗಿತ್ತು. ಲಾಲಾಜಿ ಅವರಿಗೆ ಆಶ್ಚರ್ಯವಾಯಿತು. ತಮ್ಮೊಂದಿಗೆ ಆಜಾದರು ಮುಕ್ತವಾಗಿ ಮಾತನಾಡಿದ್ದರೂ ಬಂಗಾಳದ ಹೊಸ ರಚನೆಯ ವಿಷಯದಲ್ಲಿ ತಮ್ಮದೇ ಆದ ವಿಭಿನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದರು. ಹಾಗಿದ್ದೂ ದಾಸ್ ಮುಸ್ಲಿಮರೊಂದಿಗೆ ಮೈತ್ರಿಯನ್ನು ಬಂಗಾಳಕ್ಕಷ್ಟೇ ಸೀಮಿತಗೊಳಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? ಅಬುಲ್ ಕಲಂ ಅದಕ್ಕೆ ಅನುಮೋದನೆ ನೀಡುವರೇ ಎಂಬ ಶಂಕೆ ಕಾಡಿತು. ತೆರೆಮರೆಯಲ್ಲಿ ನಡೆದದ್ದೇನು ಎಂಬುದರ ಬಗ್ಗೆ ಯಾವುದೇ ಮಾಹಿತಿ, ಆಧಾರಗಳಿರಲಿಲ್ಲ. ಆದರೆ ದಾಸ್‌ರ ನಡವಳಿಕೆ ಹಿಂದಿನ ವೈಪರಿತ್ಯಗಳು ಅವರಿಗೆ ಮನವರಿಕೆ ಆಗಿರಲಿಲ್ಲ. ಮುಂದೆ ಮೌಲಾನಾ ಬರೆದು ಅವರ ಮರಣಾನಂತರ ಪ್ರಕಟಗೊಂಡ ಇಂಡಿಯಾ ವಿನ್ಸ್ ಫ್ರೀಡಂ ಕೃತಿಯಲ್ಲಿ ಲಾಲಾಜಿ ಅವರ ಅನುಮಾನ ಖಚಿತವಾಗುವ ಅಂಶಗಳು ಬೆಳಕಿಗೆ ಬಂದವು.

ಹಿಂದೂ ಮುಸ್ಲಿಂ ಏಕತೆಯ ಬಗ್ಗೆ ಮಹಾತ್ಮ ಗಾಂಧೀಜಿ ಹಾಕಿದ 'ತೆರೆದ ಅವಕಾಶ'ದ ಯೋಜನೆಯೂ ಫಲಕಾರಿಯಾಗಲಿಲ್ಲ. ಸುಸಂಘಟಿತವಾದ ಇತ್ಯರ್ಥವೊಂದನ್ನು ಕೈಗೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ನಾಯಕರು ನಡೆಸಿದ ಸಂಧಾನಗಳು ವಿಫಲವಾದವು. ಸ್ಥಳೀಯ ಅಗತ್ಯಗಳು ಅವಕ್ಕೆ ದೊಡ್ಡ ಅಡ್ಡಿಯಾದವು. ದೀರ್ಘ ಕಾಲದ ಅನುಕೂಲ ಹಾಗೂ ಪರಸ್ಪರ ಮನವರಿಕೆಯ ಹೊಂದಾಣಿಕೆಗಳನ್ನು ಅನುಕೂಲಕರ ರೀತಿಯಲ್ಲಿ ಕೈಗೊಳ್ಳಲು ಸೀಮಿತ ನಿಲುವು ನೀತಿಗಳು ಅನುವು ಮಾಡಿಕೊಡಲಿಲ್ಲ.

iii

ಹಿಂದೂ ಮುಸ್ಲಿಂ ಹಿಂಸಾಚಾರಗಳು ಲಾಲಾಜಿ ಅವರ ಮೇಲೆ ಯಾವ ಪರಿಣಾಮ ಬೀರಿದವು?

ಇದಕ್ಕೆ ಉತ್ತರವನ್ನು ಕೊಂಡುಕೊಳ್ಳ ಬೇಕಾದರೆ 1924ರ ವಿದ್ಯಮಾನಗಳನ್ನು ವಿಶೇಷವಾಗಿ ಪರಿಶೀಲಿಸಬೇಕಾಗುತ್ತದೆ. ಅದರಲ್ಲೂ ಕೋಹಟ್ ಹತ್ಯಾಕಾಂಡವನ್ನು ಹೆಚ್ಚು ಅಧ್ಯಯನ ಮಾಡಬೇಕಾಗುತ್ತದೆ.

1924ರಲ್ಲಿ ದೇಶದ ನಾನಾ ಕಡೆ ಕೋಮು ಹಿಂಸೆಯ ದಳ್ಳುರಿ ಎದ್ದಿತು. ಅದು ಒಂದಾದ ಮೇಲೆ ಒಂದರಂತೆ. ಅನೇಕ ಕಡೆಗಳಲ್ಲಿ -''ವಿಶೇಷವಾಗಿ ದೆಹಲಿ, ಗುಲ್ಬರ್ಗ, ನಾಗಪುರ, ಲಕ್ನೋ, ಷಹಜಾನ್‌ಪುರ, ಅಲಹಾಬಾದ್, ಜಬ್ಬಲ್‌ಪುರ ಮತ್ತು ಇವೆಲ್ಲಾ ಕಡೆಗಳಿಗಿಂತ ಘೋರವಾಗಿ ಕೋಹತ್‌ನಲ್ಲಿ.''* ಕೋಹತ್‌ನಲ್ಲಿ ಹಿಂದೂಗಳು ತೀರಾ ಅಲ್ಪಸಂಖ್ಯಾತರಾಗಿದ್ದರು. ಶೇ. 5ಕ್ಕಿಂತಲೂ ಕಡಿಮೆ ಪ್ರಮಾಣ ಅವರದು. ಹಿಂಸಾಚಾರಕ್ಕೆ ತುತ್ತಾದವರ ಸಂಖ್ಯೆ ಗಂಭೀರವಾಗಿತ್ತು. ಅದಕ್ಕೂ ಹೆಚ್ಚಿನ ಹೃದಯ ವಿದ್ರಾವಕ ಪರಿಸ್ಥಿತಿ ಎಂದರೆ ವಲಸೆ. ಇಡೀ ಹಿಂದೂ ಸಮುದಾಯ ಕೋಹತ್‌ನಿಂದ ಹೊರಬಿದ್ದು 320 ಕಿ.ಮೀ. ದೂರದ ರಾವಲ್ಪಿಂಡಿಗೆ ಹೋಗಿ ಆಶ್ರಯ ಪಡೆಯಬೇಕಾಯಿತು.

ಕೋಹತ್‌ನಲ್ಲಿ ನಡೆದ ಎಲ್ಲಾ ಕೋಮು ಹಿಂಸಾಚಾರಗಳಲ್ಲಿ 1924 ಸೆಪ್ಟೆಂಬರ್ ಘಟನೆ ಮಹಾ ಭೀಕರ. ಲಾಲಾಜಿ ಆ ಹಿಂಸಾಚಾರದಲ್ಲಿ ಸಂತ್ರಸ್ತರಾದವರಿಗೆ ಪರಿಹಾರಗಳನ್ನು ಒದಗಿಸಲು ತಮ್ಮಲ್ಲಿದ್ದ ಶಕ್ತಿಯನ್ನೆಲ್ಲಾ ವಿನಿಯೋಗಿಸಿದರು. ಆದರೆ, ಆರಂಭದಲ್ಲಿ, ತತ್ಸಂಬಂಧದಲ್ಲಿ, ಗಾಂಧೀಜಿಯಿಂದ ಬಂದ ಧ್ಯೇಯ ರೂಪದ ಸಲಹೆ ಮತ್ತು ಅದಕ್ಕನುಗುಣವಾಗಿ ಅವರು ಕೈಗೊಂಡ ಕ್ರಮ ಲಾಲಾಜಿ ಅವರಿಗೆ ಸಮ್ಮತವಾಗಲಿಲ್ಲ. ಹಿಂಸಾಚಾರಗಳು ಪರಾಕಾಷ್ಠೆಗೆ ಏರಿದ ದಿನಗಳಲ್ಲಿ ಗಾಂಧೀಜಿ ತಮ್ಮ ಬತ್ತಳಿಕೆಯಿಂದ ಪ್ರಬಲವಾದ ಅಸ್ತ್ರವನ್ನು ಹೊರತೆಗೆದರು. ಅಂದರೆ ಪ್ರಾಯಶ್ಚಿತ್ತಕ್ಕಾಗಿ ಪ್ರಾರ್ಥನೆ ಮತ್ತು 21 ದಿನಗಳ ಉಪವಾಸ ಕೈಗೊಂಡರು. ಅದರ ಫಲವಾಗಿ ತದ ನಂತರದಲ್ಲಿ ಏಕತಾ ಸಮ್ಮೇಳನವೇನೋ ಏರ್ಪಟ್ಟಿತು. ಅದರ ಆರಂಭ ಉತ್ಸಾಹಕಾರಿಯಾಗಿತ್ತು. ಅನೇಕ ಭರವಸೆಗಳನ್ನು ಹುಟ್ಟಿಸಿತ್ತು. ವಿಚಿತ್ರವೆಂದರೆ ಅಷ್ಟೇ ತೀವ್ರ ಗತಿಯಲ್ಲಿ ಅದರ ಉತ್ಸಾಹವೂ ತಣ್ಣಗಾಯಿತು. ಫಲಿತಾಂಶವೂ ಶೂನ್ಯ. ಕಾಂಗ್ರೆಸ್ ಚರಿತ್ರೆಯಲ್ಲಿ ಆ ಘಟನೆಯನ್ನು ದುಃಖಕರ ಪ್ರಸಂಗವಾಗಿ ನಮೂದಿಸಿ ''ಕೋಹತ್ ಹಿಂಸಾಚಾರ ಭಾರತದ ಬೆನ್ನು ಮೂಳೆಯನ್ನು ಮುರಿಯಿತು'' ಎಂದು ದಾಖಲು ಮಾಡಿದೆ.

ಗಾಂಧೀಜಿ ಅವರಿಗೆ ಅಲಿ ಸಹೋದರರಲ್ಲಿ ಪರಮಾದರದ ವಿಶ್ವಾಸವಿತ್ತು. ಏಕತಾ ಸಮ್ಮೇಳನವಷ್ಟೇ ಅಲ್ಲದೆ ಇಡೀ ಪರಿಸ್ಥಿತಿಯನ್ನು ಶಾಂತಗೊಳಿಸಲು ಅವರೊಂದಿಗೆ ಮಹಾತ್ಮ ನಿರತರಾದರು. ಕೋಹತ್‌ನಿಂದ ಗುಳೆ ಎದ್ದ ಜನರನ್ನು ಅವರವರ ವಾಸ್ತವ್ಯಕ್ಕೆ ಮರಳಿಸಲು ಅವರು ಪ್ರಯತ್ನಪಟ್ಟರು. ಆ ಪ್ರಯತ್ನಕ್ಕೆ ಗಾಂಧೀಜಿ ಪಡೆದುಕೊಂಡ ಫಲ ಭರಿಸಲಾಗದ ಹತಾಶೆ. ಆಚಾರ್ಯ ಕೃಪಲಾನಿ ಗಾಂಧೀ ಕುರಿತ ತಮ್ಮ ಕೃತಿಯಲ್ಲಿ ಆ ಪ್ರಸಂಗವನ್ನು ಹೀಗೆ ಬರೆದಿದ್ದಾರೆ:''ಗಾಂಧೀಜಿ ಕೆಲವು ಮುಸ್ಲಿಂ ನಾಯಕರೊಂದಿಗೆ ಕೋಹತ್ ಭೇಟಿ ಕೈಗೊಂಡು ಅಲ್ಲಿನ ಕೋಮು ವಿದ್ಯಮಾನಗಳನ್ನು ಪರಿಶೀಲಿಸಲು ಬಯಸಿದರು. ಶಾಂತಿ ಸಂಧಾನ ನಡೆಸಲು ಆಶಿಸಿದರು. ಅಲ್ಲಿಗೆ ಹೋಗಲು ಅವರಿಗೆ ಸರ್ಕಾರ ಅನುಮತಿ ನೀಡಲಿಲ್ಲ. ಆದಾಗ್ಯೂ, ಕೆಲವು ತಿಂಗಳ ನಂತರ ಅನುಮತಿ ದೊರೆಯಿತು. ಅವರು ಮತ್ತು ಶೌಕತ್ ಅಲಿ ಒಗ್ಗೂಡಿ ಹಿಂಸಾಚಾರದ ಬಗ್ಗೆ ವಿಚಾರಣೆ

*ದಿ ಹಿಸ್ಟರಿ ಆಫ್ ಕಾಂಗ್ರೆಸ್ ಸಂಪುಟ. 1, ಪುಟ 275

ನಡೆಸಿ ವರದಿಯೊಂದನ್ನು ಸಲ್ಲಿಸುವಂತೆ ಕಾಂಗ್ರೆಸ್ ಕಾರ್ಯಕಾರಿಣಿ ಸೂಚಿಸಿತು. ಆ ಕೆಲಸ ಸುಗಮವಾಗಿ ನಡೆಯಲಿಲ್ಲ. ಮುಸ್ಲಿಮರು ವಾಸ್ತವಾಂಶಗಳನ್ನು ಮುಂದಿಡಲು ಖುದ್ದಾಗಿ ಬಯಸಿದ್ದರು. ಆದರೆ ಹಾಗೆ ಮಾಡದಿರಲು ಶೌಕತ್ ಅಲಿ ಅವರನ್ನು ತಡೆಗಟ್ಟಿದರು. ತತ್ಫಲವಾಗಿ ಗಾಂಧೀಜಿ ಮತ್ತು ಅಲಿ ಸಹೋದರರು ಒಗ್ಗೂಡಿ ವರದಿಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಗಾಂಧೀಜಿ ಮತ್ತು ಆಲಿ ಸಹೊದರರ ನಡುವೆ ಭಾವನೆಗಳು ನಂಜಾಗಿದ್ದು ಅಲ್ಲಿಂದಲೇ. ಅದಕ್ಕೂ ಮೊದಲು ಏಕತಾ ಸಮ್ಮೇಳನದ ಸಂದರ್ಭದಲ್ಲಿ ಕಂಡು ಕಾಣದ ಅಸಮಾಧಾನ ತಲೆದೋರಿತ್ತು.''*

ಗಾಂಧೀಜಿ ಮತ್ತು ಅಲಿ ಸಹೋದರರ ನಡುವೆ ಹಳಸಿಕೊಂಡ ಬಾಂಧವ್ಯದ ಬಗ್ಗೆ ಮಹಾದೇವ ದೇಸಾಯಿ ಅವರ ಡೈರಿಯಲ್ಲಿ ಕೆಲವು ಕುತೂಹಲಕಾರಿ ವಿವರಣೆಗಳನ್ನು ಕಾಣಬಹುದಾಗಿದೆ. ಮಹಾತ್ಮ ಗಾಂಧೀ ತಮಗೆ ಉಂಟಾದ ಪರಿತಾಪದ ಕಾರಣದಿಂದ ಮುಂಜಾವಿನ 3 ಗಂಟೆಗೆ ಎದ್ದು ಪ್ರಾಯಶ್ಚಿತ್ತದ ಪ್ರಾರ್ಥನೆ ಮಾಡುತ್ತಿದ್ದರೆಂದು ಕಂಡು ಬರುತ್ತದೆ. ನಂತರ ಸೆಪ್ಟೆಂಬರ್ 16ರಂದು ಇದ್ದಕ್ಕಿದ್ದಂತೆ 21 ದಿನಗಳ ಉಪವಾಸ ಸತ್ಯಾಗ್ರಹದ ಘೋಷಣೆ ಮಾಡಿಬಿಟ್ಟರು. ಅದು ಅವರ ಏಕಾಂಗಿ ನಿರ್ಧಾರವಾಗಿತ್ತು. ಅವರ ಅನೇಕ ಗೆಳೆಯರು, ಬೆಂಬಲಿಗರು (ಮಹಾದೇವ ಸೇರಿ) ಮನವಿ ಮಾಡಿದರು. ಹತ್ಯಾಕಾಂಡದಲ್ಲಿ ಹಿಂದೂ ಮಹಿಳೆಯರು ಮುಸ್ಲಿಂ ಗೂಂಡಾಗಳ ಭಯೋತ್ಪಾದನೆಯಲ್ಲಿ ತತ್ತರಿಸಿ ಹೋಗಿದ್ದಾರೆ. ಅನೇಕ ಕಡೆಗಳಲ್ಲಿ ಒಂಟಿಯಾಗಿ ಹೊರಗೆ ಹೋಗಲು ಅವರು ಭಯ ಪಡುತ್ತಿದ್ದಾರೆ. ನನಗೊಂದು ಪತ್ರ ಬಂದಿದೆ... ಸಣ್ಣ ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ನಾನು ಹೇಗೆ ಸಹಿಸಿಕೊಳ್ಳಲಿ? ಎಲ್ಲವನ್ನು ಶಾಂತಿಯಿಂದ ಸಹಿಸಿಕೊಳ್ಳಿ ಎಂದು ನಾನು ಹಿಂದೂಗಳಿಗೆ ಹೇಗೆ ಕೇಳಿಕೊಳ್ಳಲಿ? ಮುಸಲ್ಮಾನರೊಂದಿಗೆ ಸ್ನೇಹದಿಂದಿರುವುದರಿಂದ ಉತ್ತಮ ಫಲ ದೊರೆಯುತ್ತದೆ ಎಂದು ನಾನು ಈ ಹಿಂದೆ ಭರವಸೆ ಪೂರ್ಣವಾಗಿ ಸಲಹೆ ಮಾಡಿದ್ದೆ. ಅವರೊಂದಿಗೆ ಗೆಳೆತನ ಸಾಧಿಸಿಕೊಳ್ಳಿರಿ ಎಂದು ಸೂಚಿಸಿದ್ದೆ. ಪರಿಣಾಮದ ಬಗ್ಗೆ ಯೋಚಿಸಬಾರದೆಂದು ಹೇಳಿದ್ದೆ. ಅಂದು ನಾನಿತ್ತ ಭರವಸೆ ಫಲಕಾರಿಯಾಗದಿರುವುದನ್ನು ನಾನಿಂದು ಕಾಣುತ್ತಿದ್ದೇನೆ... ಆದಾಗ್ಯೂ, ಇಂದು ಸಹ ನಾನು ಹಿಂದೂಗಳಿಗೆ ಅದನ್ನೇ ಹೇಳುತ್ತಿದ್ದೇನೆ. ನಿಮ್ಮ ಸಮರ್ಪಣೆಗೆ ನೀವು ಸಿದ್ಧವಾಗಿರಿ. ಆದರೆ ಕೊಲೆಗಡುಕರಾಗಬೇಡಿ ಎಂದು. ನಾನೇ ಈಗ ನನ್ನ ಜೀವವನ್ನೇ ಮುಡುಪಾಗಿಟ್ಟು ಅದನ್ನು ಮಾಡಿ ತೋರಿಸಬೇಕಾಗಿದೆ. ನನ್ನದೇ ವಿಧಾನದ ಮೂಲಕ ಸಮರ್ಪಣೆ ಮಾಡಿಕೊಳ್ಳುವುದು ಹೇಗೆಂಬುದನ್ನು. ಆಗಿರುವ ಅನಾಹುತಕ್ಕೆ ತಾವು ಯಾವುದೇ ರೀತಿಯಲ್ಲಿ ಕಾರಣರಲ್ಲವೆಂದು ವಿವರಿಸಿದರು. ಅದಕ್ಕಾಗಿ ತಾವು ಯಾವುದೇ ಪಶ್ಚಾತ್ತಾಪವನ್ನಾಗಲಿ, ಪರಿತಾಪವನ್ನಾಗಲಿ ಪಡುವ ಅಗತ್ಯವಿಲ್ಲವೆಂದು ಹೇಳಿದರು. ಆ ಎಲ್ಲಾ ಮನವಿಗಳು, ಸಲಹೆಗಳಿಗೆ ಗಾಂಧೀ ಕೊಟ್ಟ ಉತ್ತರ:

''ನನ್ನ ತಪ್ಪೇ! ಏಕಿಲ್ಲ? ಹಿಂದೂಗಳಲ್ಲಿ ನಾನಿಟ್ಟ ವಿಶ್ವಾಸಕ್ಕೆ ಚ್ಯುತಿ ಕಡಿಮೆ

---

* ಜೆ.ಬಿ. ಕೃಪಲಾನಿ, ಗಾಂಧೀ: ಹಿಸ್ ಲೈಫ್ ಅಂಡ್ ಥಾಟ್, ಪುಟ. 102.

ಏನಲ್ಲ. ಮುಸ್ಲಿಮರೊಂದಿಗೆ ಸ್ನೇಹದಿಂದಿರಿ ಎಂದು ನಾನು ಕೇಳಿಕೊಂಡೆ. ನಿಮ್ಮ ಜೀವವನ್ನು, ಆಸ್ತಿಪಾಸ್ತಿಯನ್ನು ಮುಸಲ್ಮಾನರ ರಕ್ಷಣೆಗೆ ಒಳಪಡಿಸಿ ಅವರ ಪವಿತ್ರ ಸ್ಥಳಗಳನ್ನು ರಕ್ಷಿಸಿ ಎಂದು ಕೇಳಿಕೊಂಡೆ. ಇಂದೂ ಸಹ ನಾನು ಅವರನ್ನು ಕೇಳಿಕೊಳ್ಳುತ್ತಿರುವುದು ಇಷ್ಟೇ. ಅಹಿಂಸೆ ಮಾರ್ಗ ಅನುಸರಿಸಿ ಎಂದು. ನಿಮ್ಮನ್ನು ನೀವೇ ಸಮರ್ಪಿಸಿಕೊಳ್ಳುವ ಮೂಲಕ ಇತ್ಯರ್ಥಕ್ಕೆ ಮುಂದಾಗಿ ಎಂದು. ಹತ್ಯೆಗಿಳಿಯುವ ಮೂಲಕ ಅಲ್ಲವೆಂದು. ಆದರೆ ನಾನು ಕಾಣುತ್ತಿರುವ ಫಲತಾಂಶ ಏನು? ಎಷ್ಟು ದೇವಾಲಯಗಳು ನಾಶವಾಗಿವೆ? ಅದೆಷ್ಟು ಜನ ಸಹೋದರಿಯರು ನನ್ನ ಬಳಿಗೆ ಬಂದು ದೂರು ಕೊಟ್ಟಿಲ್ಲ. ನಿನ್ನೆ ನಾನು ಹಕೀಂಜಿಗೆ ಹೇಳಿದ ತರಹ ಅವರಿಗೆ ತಿಳಿಸಬೇಕಾಗಿದೆ.*

ಗಾಂಧೀಜಿ ಆರಂಭಿಸಿದ 21 ದಿನಗಳ ಉಪವಾಸದ ಎರಡನೇ ವಾರದಲ್ಲಿ ಏಕತಾ ಸಮ್ಮೇಳನ ಏರ್ಪಟ್ಟಿತು. ಸಾಕಷ್ಟು ಸಂಖ್ಯೆಯಲ್ಲಿ ಜನರು ಆಸಕ್ತಿ ತೋರಿದ ಸಭೆ ಅದಾಯಿತು. ಆ ಸಮ್ಮೇಳನ ನೀಡಿದ ಕರೆ ಮತ್ತು ಕೊಟ್ಟ ಭರವಸೆಗಳು ಆಶಾದಾಯಕವಾಗಿದ್ದವು. ಐಕ್ಯಮತ ಸಾಧಿಸುವ ಲಕ್ಷಣಗಳು ಅದರಲ್ಲಿ ಭಾಸವಾದವು. ರಾಷ್ಟ್ರೀಯ ಪಂಚಾಯತ್ ಮಂಡಳಿಯೊಂದು ಆ ಸಮ್ಮೇಳನದ ಪರವಾಗಿ ರೂಪುಗೊಂಡಿತು. ಅದು ರೂಪುಗೊಂಡಿತಷ್ಟೇ ಹೊರತು ಹುಟ್ಟು ಕಾಣಲೇ ಇಲ್ಲ. ವರ್ಷಾಂತ್ಯದ ವೇಳೆಗೆ ಗಾಂಧೀಜಿ ಪಂಜಾಬಿಗೆ ಭೇಟಿ ಕೊಟ್ಟರು. (ಗಾಂಧೀಜಿ ಕೆಲವು ಮುಸ್ಲಿಂ ಮುಖಂಡರೊಂದಿಗೆ ಕೋಹತ್‌ಗೆ ಹೋಗಲು ಬಯಸಿದ್ದರು. ಆದರೆ ಅಧಿಕಾರಸ್ಥರು ಅದಕ್ಕೆ ಅವಕಾಶ ಕೊಡಲಿಲ್ಲ.) ಅಲಿ ಸಹೋದರರು, ಹಕೀಂ ಸಾಹೇಬ್ ಮತ್ತು ಡಾ. ಅನ್ಸಾರಿ ಸೇರಿದಂತೆ ಇತರರು ಗಾಂಧೀಜಿಯವರೊಂದಿಗಿದ್ದರು. ಲಾಲಾಜಿ ಅವರ ಸ್ಥಳದಲ್ಲಿ ಸುದೀರ್ಘ ಚರ್ಚೆ ನಡೆಸಿದರು. ಪ್ರತಿಯೊಬ್ಬರು ಹೇಳಬೇಕಾದೆಲ್ಲವನ್ನು ಹೇಳಿದರು. ಹಕ್ಕುಗಳು ಮತ್ತು ಸ್ಥಾನಮಾನಗಳಿಗೆ (ಶಾಸಕಾಂಗ ಇತ್ಯಾದಿ) ಒಡಂಬಡಿಕೆ ರೂಪದಲ್ಲಿ ಸೂತ್ರವೊಂದನ್ನು ಕಂಡು ಹಿಡಿಯಲು ಆ ಸಭೆಯಲ್ಲಿ ವಿಶೇಷ ಒತ್ತು ನೀಡಲಾಯಿತು. ಅಂತಹ ಒಪ್ಪಂದ ಮುಂದೆಂದೂ ಆಗಲಿಲ್ಲ. ಈ ಸಭೆ ಮತ್ತು ಚರ್ಚೆಗಳಲ್ಲೂ ಸಹ ಲಾಲಾಜಿ (ಏಕತಾ ಸಮ್ಮೇಳನ ಮತ್ತು ರಾಷ್ಟ್ರೀಯ ಒಡಂಬಡಿಕೆ ಉಪಸಮಿತಿ ಸಭೆಗಳಲ್ಲಿದ್ದಂತೆ) ತಾಳ್ಮೆಯಿಂದ ಎಲ್ಲವನ್ನು ಕೇಳಿದರು. ವಿಶಾಲವಾದ ತಳಹದಿಯ ಮೇಲೆ (ಶುದ್ಧ ಭಾವನಾತ್ಮಕ ಧೋರಣೆಗೆ ಹೊರತಾಗಿ) ಒಪ್ಪಂದವನ್ನು ಕಂಡು ಕೊಳ್ಳಲು ಅವರು ಯೋಚಿಸುತ್ತಿದ್ದರು. ಇಡೀ ಪರಿಸ್ಥಿತಿಯನ್ನು, ಅದು ವಾಸ್ತವಿಕ ಇರಲಿ, ಭಾವನಾತ್ಮಕ ಇರಲಿ ಸಮಗ್ರವಾಗಿ ಪರಿಶೀಲಿಸಿ ವಾಸ್ತವಗಳನ್ನು ಕಂಡು ಕೊಳ್ಳಲು ಅವರು ಆಲೋಚಿಸುತ್ತಿದ್ದರು. ಶುದ್ಧ ಹಿಂದೂಗಳ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗಲೂ ಲಾಲಾಜಿ ಕೋಮು ಸೌಹಾರ್ದತೆಯನ್ನೇ ಒತ್ತಿ ಹೇಳುತ್ತಿದ್ದರು. ಕೊಡು ಕೊಳ್ಳುವಿಕೆಯ ಸ್ಫೂರ್ತಿಯ ಮೂಲಕ ಹೊಂದಾಣಿಕೆಗೆ ಮುಂದಾಗಲು ಜನತೆಗೆ ಮನವರಿಕೆ ಮಾಡಿಕೊಡುತ್ತಿದ್ದರು. ಗೂಂಡಾ ನಡವಳಿಕೆಯನ್ನು ಇಸ್ಲಾಂ ಧರ್ಮಕ್ಕಾಗಲಿ ಅಥವಾ ಪ್ರವಾದಿ ಮಹಮದರ ಬಗ್ಗೆಯಾಗಲಿ ಅವಮಾನಕಾರಿ ಮಾತುಗಳನ್ನು ಆಡುವುದನ್ನು

* ಮಹಾದೇವ ದೇಸಾಯಿ: ಡೇ ಟು ಡೇ ವಿತ್ ಗಾಂಧೀ, ಸಂಪುಟ 4, ಪುಟ. 195.

ಅವರು ಉಗ್ರವಾಗಿ ಖಂಡಿಸುತ್ತಿದ್ದರು. ಬೆಳಗಾವಿಯಲ್ಲಿ ನಡೆದ ಹಿಂದೂ ಮಹಾ ಸಭೆಗಳಲ್ಲಿ (ಗಾಂಧೀ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದಾಗ) ಕೋಹತ್ ಹಿಂಸಾಕಾಂಡ ಪ್ರಮುಖ ಚರ್ಚಾ ವಿಷಯವಾಗಿತ್ತು. ಅಲ್ಲಿ ಲಾಲಾಜಿ ಮಾಡಿದ ಭಾಷಣದ ಬಗ್ಗೆ ಗಾಂಧೀಜಿ ಆಕ್ಷೇಪ ವ್ಯಕ್ತಪಡಿಸಲಿಲ್ಲ. (ಅದೇ ವಿಷಯದಲ್ಲಿ ಕಾಂಗ್ರೆಸ್ ವೇದಿಕೆಯಲ್ಲಿ ಮಾತನಾಡಿದಾಗಲೂ ಸಹ) ಆ ಹಿಂದೆ ಕಾಂಗ್ರೆಸ್ ಸಭೆಗಳಲ್ಲಿ ''ಚರಕ ಕಾರ್ಯಕ್ರಮದ'' ಬಗ್ಗೆ ಲಾಲಾಜಿ ಮಾತನಾಡುತ್ತಾ ಟೀಕೆಗಳನ್ನು ಮಾಡಿದಾಗ ಅದರಲ್ಲಿ ಇರುತ್ತಿದ್ದ ಕೆಲವು ಅಂಶಗಳನ್ನು ಅವರು ಆಕ್ಷೇಪಿಸುತ್ತಿದ್ದರು. ಆ ಆಕ್ಷೇಪದ ಭಾಗಗಳು ಕೋಹತ್ ದುರಂತಕ್ಕೆ ಸಂಬಂಧಪಟ್ಟ ಅಂಶಗಳಾಗಿದ್ದವು. ಕೋಹತ್ ದುರ್ಘಟನೆಗಳು ಲಾಲಾಜಿಯವರ ನೆಮ್ಮದಿ, ನಿದ್ದೆ ಕೆಡಿಸಿದ್ದವು. ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಉಂಟು ಮಾಡಿದ್ದವು. ಆದರೆ ಆ ಹಿಂದೂ ಮಹಾಸಭೆಯಲ್ಲಿ, ಹಾಗೂ ಕಾಂಗ್ರೆಸ್ ಸಭೆಯಲ್ಲಿ ಅವರು ಮಾತನಾಡಿದ ರೀತಿ ವಿಮರ್ಶಾತ್ಮಕ ವಿಶ್ಲೇಷಣೆ, ರಚನಾತ್ಮಕ ಸಲಹೆಗಳು ತಮ್ಮ ಆರೋಗ್ಯ ಹೇಗೆ ಇದ್ದರೂ ಪರಿಸ್ಥಿತಿಯ ಅಧ್ಯಯನ ಮತ್ತು ಅದರ ನಿವಾರಣೆಗೆ ತಮ್ಮಲ್ಲಿರುವ ಸ್ಥಿಮಿತವನ್ನು ಕಳೆದುಕೊಂಡಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿತ್ತು.

ಲಾಲಾಜಿ ಅವರ ನಿಲುವು ಮತ್ತು ಸಂದೇಶಗಳು ಯಾವ ರೀತಿಯಲ್ಲಿಯೂ ಗಾಂಧೀಜಿಯವರ ನಿಲುವು, ಸಂದೇಶಗಳಿಗಿಂತ ಭಿನ್ನವಾಗಿರಲಿಲ್ಲ. ಆದರೆ ಲಾಲಾಜಿ ಮಾಡಿಕೊಂಡ ವೇದಿಕೆ ಹಿಂದೂ ಮಹಾಸಭೆಯ ಸಮ್ಮೇಳನವಾಗಿತ್ತು ಅಷ್ಟೇ. ದಾನ ಇಲ್ಲವೇ ಕಾಣಿಕೆ ರೂಪದಲ್ಲಿ ನೆರವು ಸಂಗ್ರಹಿಸುವುದಕ್ಕೆ ಗಾಂಧೀಜಿ ಸಮ್ಮತಿ ಇರಲಿಲ್ಲ. ಆದರೂ ಲಾಲಾಜಿ ಆ ಹಿಂದೂ ವೇದಿಕೆಯಲ್ಲಿ ಕರೆ ಕೊಡುವ ಮೂಲಕವೇ ಕಾಣಿಕೆ, ವಂತಿಗೆಗಳನ್ನು ಸ್ವೀಕರಿಸಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಮುಂದಾದರು.

iv

ಕೋಹತ್ ಹಿಂಸಾಕಾಂಡದ ಬಗ್ಗೆ ಅಲಿ ಸಹೋದರರು ನಡೆದುಕೊಂಡ ರೀತಿ ಮಹಾತ್ಮ ಗಾಂಧೀಯವರಲ್ಲಿ ಅವರ ಬಗ್ಗೆ ಭ್ರಮನಿರಸನ ತಂದಿತು. ಲಾಲಾಜಿಯವರ ಸ್ಥಳದಲ್ಲಿ (1924, ಡಿಸೆಂಬರ್.) ನಡೆದ ಮುಖಂಡರ ಚರ್ಚೆಗಳಲ್ಲಿ ನಾವೀಗಾಗಲೇ ಓದಿರುವಂತೆ ಹೋಳಿ ಆಚರಣೆಗೆ ಶೌಕತ್ ಅಲಿ ಕರೆ ಕೊಟ್ಟಿದ್ದರು. ಲಾಲಾಜಿಯವರು ಪ್ರಬಲವಾಗಿ ವಿರೋಧಿಸಿ 'ಕೋಡಂಗಿ'ತನದ ನಡವಳಿಕೆ ಎಂದು ಜರೆದಿದ್ದರು. ಆದರೂ ಗಾಂಧೀಜಿ ಅಲಿ ಸಹೋದರರನ್ನು ಬಿಟ್ಟು ಕೊಟ್ಟಿರಲಿಲ್ಲ. ಬದಲಾಗಿ ಅವರನ್ನು 'ಅಪರಂಜಿ' ಎಂದು ಬಣ್ಣಿಸಿದ್ದರು. ಇನ್ನೊಂದು ಚರ್ಚೆಯಲ್ಲಿ ಅಲಿಗಳು ಪಂಜಾಬಿನಲ್ಲಿ ಹಿಂದೂ ಮುಸ್ಲಿಂ ರಕ್ತಪಾತದಲ್ಲಿ ಗಂಗಾ ನದಿ ಹರಿಯುತ್ತಿದೆ ಎಂಬರ್ಥದಲ್ಲಿ ಮಾತನಾಡಿದ್ದರು. ಅದಕ್ಕೆ ಲಾಲಾಜಿ ಥಟ್ಟನೆ ನೀಡಿದ ಪ್ರತಿಕ್ರಿಯೆ -''ಗಂಗೋತ್ರಿ ರಾಮಪುರದಲ್ಲಿದೆ. ಅದು ಅಲಿಗಳ ಸ್ಥಳವಾಗಿತ್ತು!''

ಅಲಿಗಳ ಬಗ್ಗೆ ಗಾಂಧೀಜಿ ಅವರಲ್ಲಿ ಉಂಟಾದ ಭ್ರಮನಿರಸನ ಹೆಚ್ಚುತ್ತಾ ಬಂದ ಪ್ರಸಂಗಗಳನ್ನು ಮಹದೇವ ದೇಸಾಯಿ ಅವರ ಡೈರಿಯಲ್ಲಿ ಗುರುತಿಸುತ್ತಾ ಬರಬಹುದು. ಅದಕ್ಕೆ ಕೆಲವು ಉದಾಹರಣೆಗಳೇ ಸಾಕಾಗುತ್ತದೆ. ಡಿಸೆಂಬರ್ ತಿಂಗಳ (1924) ಕೊನೆ ವಾರ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ವಿಧ್ಯುಕ್ತವಾಗಿ ಮಹಮದಲಿಯಿಂದ ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಕೋಹತ್ ಹಿಂಸಾಕಾಂಡಕ್ಕೆ ಸಂಬಂಧಪಟ್ಟಂತೆ ಆ ಸಮಯದಲ್ಲಿ ನೂತನ ಅಧ್ಯಕ್ಷರು ಹಾಗೂ ನಿರ್ಗಮಿಸುತ್ತಿರುವ ಅಧ್ಯಕ್ಷರ ನಡುವೆ ಅಭಿಪ್ರಾಯ ಭೇದವಿದ್ದಂತೆ ಕಂಡು ಬರಲಿಲ್ಲ. ಆ ಅಧಿವೇಶನದಲ್ಲಿ ಆ ಪ್ರಕರಣವೇ ಪ್ರಮುಖ ವಿಷಯವಾಗಿತ್ತು. ತೀವ್ರ ಕಳಕಳಿಯೂ ಆ ಬಗ್ಗೆ ಇತ್ತು. ಬೆಳಗಾವಿ ಅಧಿವೇಶನ ನಡೆದ ಒಂದೆರೆಡು ದಿನಗಳಲ್ಲಿ ಮುಸ್ಲಿಂ ಲೀಗ್ ಅಧಿವೇಶನ ನಡೆಯಿತು. ಕೋಹತ್ ಘಟನೆಯ ಬಗ್ಗೆ ಆ ಅಧಿವೇಶನ ನಿರ್ಣಯವೊಂದನ್ನು ಕೈಗೊಂಡಿದ್ದು ಗಾಂಧೀಜಿ ಅವರನ್ನು ತೀವ್ರ ಕಳವಳಕ್ಕೆ ಈಡು ಮಾಡಿತು. ಕಾರಣ ಆ ನಿರ್ಣಯವನ್ನು ಸ್ವತಃ ಮಹಮದಲಿ ಮಂಡಿಸಿದ್ದರು. ಕಾಂಗ್ರೆಸ್ ಅಧಿವೇಶನ ಕೈಗೊಂಡ ನಿರ್ಣಯಗಳಿಗಿಂತ ತೀರಾ ಭಿನ್ನವಾದ ನಿರ್ಣಯ ಅದಾಗಿತ್ತು. (1925, ಜನವರಿ 1) ಮರುದಿನವೇ ಗಾಂಧೀಜಿ ಮೌಲನಾರಿಗೆ ಪತ್ರವೊಂದನ್ನು ಬರೆದರು. ತಮ್ಮ ಸಂಪೂರ್ಣ ಅತೃಪ್ತಿ ಹಾಗೂ ಅಸಮಾಧಾನವನ್ನು ಅದರಲ್ಲಿ ವ್ಯಕ್ತಪಡಿಸಿದ್ದರು. ಮಹದೇವ ದೇಸಾಯಿ ಅವರ ಡೈರಿಯಲ್ಲಿ ಆ ಪತ್ರದ ಒಕ್ಕಣಿಕೆಯನ್ನು ಓದಿದ ನಂತರ ಲೇಖಕರ ಸ್ವಯಂ ನಿರೂಪಣೆಯೊಂದು ಹೀಗಿದೆ:

‘‘ಮೊದಲಿಗೆ ಬಾಪು ಆ ಪತ್ರದ ಪ್ರತಿಯೊಂದನ್ನು ಬರೆದಿಟ್ಟುಕೊಳ್ಳಲು ನನಗೆ ಅನುಮತಿ ಕೊಡಲಿಲ್ಲ. ಆದರೆ ಕೊನೆಗೂ ಒಪ್ಪಿಕೊಂಡರು. ಶೌಕತ್ ಅಲಿಯ ‘ನಾಚಿಕೆಗೇಡಿತನ’ದ ನಿಲುವಿನ ಬಗ್ಗೆ ನಾನು ಪ್ರಸ್ತಾಪ ಮಾಡಿದೆ. ಆಗ ಬಾಪು ‘ಇನ್ನೊಂದು ವರ್ಷದೊಳಗೆ ಅವರ ಬಣ್ಣ ಬಯಲಾಗುವುದು ನಿಶ್ಚಿತ.’ ‘ಬಾಪು, ಇನ್ನು ಬೇಗನೆ, ಇನ್ನು ಒಂದೆರೆಡು ತಿಂಗಳಲ್ಲೇ ಅದಾಗಬಹುದು!’- ಎಂದೆ. ‘ಹಾಗಾದರೆ, ಒಳ್ಳೆಯದು’ ಬಾಪು ಕೂಡಲೇ ಪ್ರತಿಕ್ರಿಯೆ ನೀಡಿದರು.’’*

ಮಹದೇವ ದೇಸಾಯಿ ಹೇಳಿದ್ದಂತೆಯೇ ಶೌಕತ್ ಅಲಿ ಬಣ್ಣ ಬಯಲಾಗುವ ಕಾಲ ಸನಿಹವಾಗತೊಡಗಿತು. ಅವರು ನಡೆದುಕೊಂಡ ‘ನಾಚಿಗೇಡಿತನ’ದ ವರ್ತನೆ ಲೀಗ್ ಸಭೆಯಲ್ಲಿ ನಡೆಯಿತೋ ಏನೋ ಸ್ಪಷ್ಟವಾಗಿ ತಿಳಿದು ಬರಲಿಲ್ಲ. ಮೌಲನಾ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯ ಮಂಡಿಸಿದ್ದಕ್ಕೆ ಕಿರಿಯ ಅಲಿ ಕಾರಣಕರ್ತರಲ್ಲಿ ಒಬ್ಬರಾಗಿದ್ದರು. ಅದೇ ವಿಷಯದ ಮೇಲೆ ಅವರು ಲೀಗ್ ಸಭೆಯಲ್ಲಿ ತದ್ವಿರುದ್ಧ ನಿರ್ಣಯ ಮಂಡಿಸಿದ್ದರು. ಮಹಮದಲಿ ಮಂಡಿಸಿದ್ದ ನಿರ್ಣಯ ಅದೇ ಸಮಯದಲ್ಲಿ ಮತ್ತೊಬ್ಬರು ಕಳುಹಿಸಿದ ನಿರ್ಣಯಕ್ಕಿಂತ ಸಮರ್ಥವಾಗಿದೆ ಎಂಬ ಕಾರಣದಿಂದ ಗಾಂಧೀಜಿ

---

* ಮಹದೇವ ದೇಸಾಯಿ : ಡೇ-ಟು-ಡೇ ವಿತ್ ಗಾಂಧೀ, ಸಂಪುಟ. 5. ಪುಟ. 112.

ಅದನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಪರಿಗಣಿಸಿದ್ದರು. ಆ ಇನ್ನೊಂದು ನಿರ್ಣಯ ಕಳುಹಿಸಿದ್ದವರು ಜಫರ್ ಅಲಿಖಾನ್. ಕಾಂಗ್ರೆಸ್ಸಿಗೆ ಮತ್ತು ದೇಶಕ್ಕೆ ನಿಜವಾಗಿಯೂ ನಿಷ್ಠರಾಗಿದ್ದ ಮುಸ್ಲಿಂ ಬಂಧು ಅವರು. ಬೆಳಗಾವಿ ಅಂಗೀಕರಿಸಿದ್ದ ನಿರ್ಣಯಕ್ಕೆ ಅವರು ತಮ್ಮ ಸಹಜ ಪ್ರತಿಕ್ರಿಯೆ ವ್ಯಕ್ತಪಡಿಸಿ ಅತೃಪ್ತಿಯನ್ನು ಸೂಚಿಸಿದ್ದರು. ಅಲಿ ಸಹೋದರರು ಕಾಂಗ್ರೆಸ್ಸಿನಿಂದ ದೂರವಾಗುವ ಲಕ್ಷಣಗಳು ಸಮೀಪವಾಗುತ್ತಿದ್ದ ಸಮಯದಲ್ಲೇ ಅಂದರೆ ಫೆಬ್ರವರಿ ತಿಂಗಳ ಆರಂಭದಲ್ಲಿ ಗಾಂಧೀಜಿ ರಾವಲ್ಪಿಂಡಿಗೆ ತೆರಳಿದರು. ಶೌಕತ್ ಅಲಿಯನ್ನು ಕರೆದೊಯ್ದರು. ಕಾಂಗ್ರೆಸ್ ಕಾರ್ಯಕಾರಿಣಿ ವಹಿಸಿಕೊಟ್ಟಿದ್ದಂತೆ ಕೋಹತ್ ಹತ್ಯಾಕಾಂಡದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವುದು ಅವರಿಬ್ಬರ ಹೊಣೆಗಾರಿಕೆಯಾಗಿತ್ತು. ವಿಚಾರಣೆಯೇನೋ ನಡೆಯಿತು. ಆದರೆ ಆ ಹಂತದಲ್ಲಿ ಬಹಿರಂಗ ವಿರಸ ಕಾಣಿಸಿಕೊಂಡದ್ದು ಇನ್ನೊಂದು ಮುಖವಾಯಿತು. ಅಲಿ ಸಹೋದರರ ಬಣ್ಣ ಬಯಲಾಗತೊಡಗಿತು. ಮುಂದಿನ ಒಂದೆರೆಡು ತಿಂಗಳಲ್ಲಂತೂ ಅವರ ನಿಜವಾದ ರೂಪ ಬೆಳಕಿಗೆ ಬಂದಿತು!

ಡೈರಿಯಲ್ಲಿ 10-2-1925ರ ದಿನಾಂಕದಲ್ಲಿ ಒಂದು ದಿಗ್ಭ್ರಮೆಗೊಳಿಸುವ ಸಂಗತಿಯ ದಾಖಲೆ ಇದೆ. ಆ ಇಡೀ ದಾಖಲೆಯನ್ನು ಇಲ್ಲಿ ವಿಸ್ತಾರವಾಗಿ ಉದ್ಧರಿಸಲು ಸಾಧ್ಯವಿಲ್ಲ. ಮಾದರಿಗಾಗಿ ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇವೆ. ಗಾಂಧೀಜಿಯವರು ವಿಚಾರಣೆ ಸಮಯದಲ್ಲಿ ಪಾಟಿ ಸವಾಲು ನಡೆಸತೊಡಗಿದಾಗ ಇಬ್ಬರು ಪ್ರಮುಖ ಮುಸ್ಲಿಂ ನಾಯಕರು ಸಾಕ್ಷಿದಾರರಾಗಿ ''ತಮಗರಿವಿಲ್ಲದಂತೆಯೇ ಅನೇಕ ವಾಸ್ತವಾಂಶಗಳನ್ನು ಉತ್ತರ ರೂಪದಲ್ಲಿ ಬಹಿರಂಗ ಪಡಿಸತೊಡಗಿದರು. ಅದು ಹಿರಿಯ ಮೌಲನಾರಿಗೆ ಸಹ್ಯವಾಗಲಿಲ್ಲ. ಡೈರಿ ವರದಿ ಪ್ರಕಾರ ಶೌಕತ್ ಅಲಿ ''ಆ ಸಾಕ್ಷಿದಾರರಿಗೆ ಸಾಕಷ್ಟು ಮುಂಚಿತವಾಗಿ ಹೇಗೆ ಹೇಳಿಕೆ ನೀಡಬೇಕು. ಉತ್ತರ ನೀಡಬೇಕು, ಎಂಬುದನ್ನು ತಿಳಿಸಿದ್ದರು.'' ಸಾಕ್ಷಿ ನೀಡುವಾಗ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆಯಬೇಕೆಂದು ಸೂಚಿಸಿದ್ದರು. ಆದರೆ ಅವರ ಆ ಬೋಧನೆ ಫಲಕಾರಿಯಾಗಲಿಲ್ಲ. ಪಾಟಿ ಸವಾಲಿಗೆ ಉತ್ತರಿಸುತ್ತಿದ್ದ ಪೀರ್ ಹಾಗೂ ಇತರರು ದಿಗ್ಭ್ರಮೆ ಹುಟ್ಟಿಸುವ ಸಂಗತಿಗಳನ್ನು ಬಹಿರಂಗ ಪಡಿಸಿದರು.

''ಪ್ರತಿವರ್ಷವೂ ಇಸ್ಲಾಂ ಧರ್ಮಕ್ಕೆ ಪರಿವರ್ತಿತರಾಗುವವರ ಸಂಖ್ಯೆ (ಕೋಹತ್‌ನಲ್ಲಿ) 150ರತನಕ ಇರುತ್ತಾ ಬರುತ್ತಿದೆ. ಪ್ರತಿ ಶುಕ್ರವಾರ ಕೆಲವರಂತೂ ಖಂಡಿತವಾಗಿಯೂ ಇಸ್ಲಾಂ ಸೇರುತ್ತಿರುವವರು. ಮದುವೆಯಾದ ಮಹಿಳೆಯರು ಇದರಿಂದ ಹೊರತಾಗಿಲ್ಲ. ತೊಂದರೆ ಇರುವುದು ಈ ಹಂತದಲ್ಲೇ. ಪರಿವರ್ತಿತವಾದ ಮಹಿಳೆ ಯಾರ ಪತ್ನಿಯಾಗಬೇಕೆಂಬ ಪ್ರಶ್ನೆ ಇದು. ಷರಿಯತ್ ಪ್ರಕಾರ ಆಕೆ ಮತ್ತೆ ತನ್ನ ಗಂಡನ ಬಳಿಗೆ ಹೋಗುವಂತಿಲ್ಲ.''*

ಸಾಕ್ಷಿದಾರರು ನೀಡಿದ 'ದಿಗ್ಭ್ರಮೆ' ತರಿಸುವ ಈ ಹೇಳಿಕೆ ''ಹಾಗೆ ಹೇಳುವುದರಲ್ಲಿ ಯಾವುದೇ ತಪ್ಪಿಲ್ಲವೆನ್ನುವ ರೀತಿ ಲೋಕಾಭಿರಾಮವಾಗಿ ಪ್ರಕಟಗೊಂಡಿತ್ತು.'' ಗಾಂಧೀಜಿ ಆ ವಿಷಯದಲ್ಲಿ ಶೌಕತ್ ಅಲಿಯವರ 'ಪ್ರಾಮಾಣಿಕ' ಅಭಿಪ್ರಾಯವನ್ನು ತಿಳಿಯಬಯಸಿದರು.

---

* ಅದೇ ಪುಸ್ತಕದ ಪುಟ. 262.

ಆಗ ಗಾಂಧೀಜಿ ಹೇಳಿದ್ದು -''ಇದು ನಿಜವಾಗಿಯೂ ದಿಗ್ಭ್ರಮೆ ತರಿಸುವ ವ್ಯವಹಾರ. ನಿಮ್ಮಂಥ ವ್ಯಕ್ತಿಯೂ ಸಹ ಕುರಾನ್ ಹಾಗೂ ಷರಿಯತ್ ಪಾಠಗಳನ್ನು ಹೀಗೆ ವ್ಯಾಖ್ಯಾನಿಸುವ ಉಲೇಮಾ ನಡವಳಿಕೆ ಸರಿಯಾದದ್ದಲ್ಲ'' ಎಂದರು. ಮೌಲನಾ ತಮಗೇನೂ ಗೊತ್ತಿಲ್ಲದವರಂತೆ ವಾದಿಸಿದರು. ಆಗ ಗಾಂಧೀ ಇನ್ನೂ ಅನೇಕ ವಿಷಯಗಳನ್ನು ಮೌಲನಾ ಮುಂದಿಟ್ಟರು. ಅವೆಲ್ಲಕ್ಕೂ ಶೌಕತ್ ಅಲಿ ಹಾರಿಕೆಯ ಉತ್ತರ ಕೊಟ್ಟರು. ಅಥವಾ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಮಾರನೇಯ ದಿನ ಬೆಳಿಗ್ಗೆ (ಫೆಬ್ರವರಿ 10)ರಂದು ಗಾಂಧೀಜಿ 'ಆತ್ಮಶೋಧನೆ'ಯಲ್ಲಿ ತೊಡಗಿದರು. ಆಗ ಅವರಾಡಿದ ಮಾತುಗಳು -

''ತನ್ನ ದಿಂಬಿನೊಳಗೆ ಸೇರಿಕೊಂಡ ಹಾವನ್ನು ಕಂಡು ಭಯಗ್ರಸ್ತನಾದ ಮನುಷ್ಯನ ತರಹ ನಾನಿದ್ದೇನೆ. ಆ ಹಾವನ್ನು ಅಲ್ಲಿಯೇ ಇರಗೊಟ್ಟು ಇಡೀ ಕೊಠಡಿಯನ್ನು ಸ್ವಚ್ಛ ಮಾಡಲು ಹೊರಟ ಪರಿಸ್ಥಿತಿ ನನ್ನದಾಗಿದೆ. ಕೋಹತ್ ಹತ್ಯಾಕಾಂಡದ ವಿಷಯದಲ್ಲಿ ನನಗೆ ಈತನಕ ಕಂಡರಿಯದಿದ್ದ ಅನೇಕ ಸಂಗತಿಗಳು ತಿಳಿದು ತುಂಬಾ ದಿಗ್ಭ್ರಮೆಯಾಗಿದೆ.''* ಬಲವಂತದಿಂದ ಮತ ಪರಿವರ್ತನೆ ಮಾಡಿಕೊಳ್ಳುತ್ತಿದ್ದ ಬಗ್ಗೆ ಗಾಂಧೀಜಿ ಪ್ರಸ್ತಾಪ ಮಾಡಿದಾಗ ಮೌಲನಾ 'ತುಟಿ ಪಿಟಕ್ಕೆನ್ನಲಿಲ್ಲ.'

ದಿಗ್ಭ್ರಮೆ ತರಿಸುವ ಸಂಗತಿಗಳು ಅಷ್ಟಕ್ಕೆ ನಿಲ್ಲಲಿಲ್ಲ. ಆದರೆ ಆ ಬೆಳವಣಿಗೆಗಳು ಕೋಹತ್ ಹತ್ಯಾಕಾಂಡಕ್ಕೆ ಸಂಬಂಧಿಸಿದ್ದಲ್ಲ. ಅಫಘಾನಿಸ್ತಾನದಿಂದ ಬಂದ ಸುದ್ದಿಗಳ ಪ್ರಕಾರ ಅಲ್ಲಿನ ಮತಾಂಧರು ತಾವು ನಾಸ್ತಿಕರು ಎಂದುಕೊಂಡವರನ್ನೆಲ್ಲಾ ಕಲ್ಲುಗಳಿಂದ ಹೊಡೆದು ಕೊಲ್ಲುತ್ತಿದ್ದರು. ಶೌಕತ್ ಅಲಿ ಆ ಕೃತ್ಯಗಳನ್ನು ಮೆಚ್ಚಿಕೊಳ್ಳುತ್ತಿದ್ದರು. ಯಾವ ಗಾಂಧೀ ಈ ಹಿಂದೆ 'ಅಪರಂಜಿ' ಎಂದು ಬಣ್ಣಿಸಿದ್ದರೋ, ಬಹು ಹಿಂದೆಯೇ ಲಾಲಾಜಿ ಆ ವ್ಯಕ್ತಿಯ ಒಳಮುಖವನ್ನು ಗುರುತಿಸಿ ಅಸಂತೃಪ್ತಿ ವ್ಯಕ್ತಪಡಿಸಿದ್ದನ್ನು ನಾವು ಈಗಾಗಲೇ ಓದಿದ್ದೇವೆ.

ನಂತರ ನೆಹರು ವರದಿ ಅಲಿ ಸಹೋದರರ ನಿಜವಾದ ಬಣ್ಣಗಳನ್ನೆಲ್ಲವನ್ನು ಬೀದಿಗೆ ಹಾಕಿತು. ಅವರು ಪ್ರಜಾಪ್ರಭುತ್ವದ ವಿರೋಧಿಗಳಾಗಿದ್ದರೆಂಬುದು ಜಾಹೀರಾಯಿತು. ರಾಷ್ಟ್ರೀಯವಾದಿಗಳಾಗಿರಲಿಲ್ಲ ಎಂಬ ಸಂಗತಿಯೂ ಗೌಪ್ಯವಾಗಿ ಉಳಿಯಲಿಲ್ಲ. ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲ ನೀತಿಗಳಿಗೆ ಬದ್ಧರಾಗಿರಲಿಲ್ಲ ಎಂಬ ಸಂಗತಿಯೂ ಬೆಳಕಿಗೆ ಬಂದಿತು. ಆ ಪ್ರಕರಣ ಅತಿರೇಕಕ್ಕೆ ಹೋಗುವ ಮೊದಲೇ ಸಾವು ಮಧ್ಯೆ ಪ್ರವೇಶಿಸಿತು.

ವಿಚಿತ್ರವೆಂದರೆ ಮತಾಂಧ ಅಲಿ ಸಹೋದರರನ್ನು ಕಾಂಗ್ರೆಸ್ ರಾಷ್ಟ್ರೀಯವಾದದ ವಕ್ತಾರರನ್ನಾಗಿ ಆತನಕ ಮಾನ್ಯ ಮಾಡಿದ್ದು. ಅವರ ಮಾತುಗಳನ್ನು ನಂಬಿ ಅನೇಕರು ಶ್ರದ್ಧಾನಂದರಷ್ಟೇ ಅಲ್ಲದೆ ಮಾಳವೀಯ, ಲಜಪತ್‌ರಾಯ್ ಅವರನ್ನು

---

* ಅದೇ ಪುಸ್ತಕದ ಪುಟ. 264.

''ಕೋಮುವಾದಿ''ಗಳೆಂದು ಕರೆಯುವಂತಾಗಿದ್ದು ಎಂಥಾ ವಿಚಿತ್ರ. ಎಲ್ಲಿಯತನಕ ಅಲಿ ಸಹೋದರರು ಕಾಂಗ್ರೆಸ್ಸಿನಲ್ಲಿ ವರ್ಚಸ್ವಿಗಳಾಗಿದ್ದರೋ ಅಲ್ಲಿಯತನಕ ಅವರು ಲಾಲಾಜಿ ಮತ್ತು ಕಾಂಗ್ರೆಸ್ಸಿನ ಅನೇಕ ನಾಯಕರ ನಡುವೆ ವಿರಸಕ್ಕೆ ಕಾರಣರಾಗಿದ್ದರು. ಗಾಂಧೀಜಿಯವರೇನೋ ಲಾಲಾಜಿಯವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಅಲಿ ಸಹೋದರರ ಮಾತುಗಳಿಗೆ ಅವರು ಮಾರು ಹೋಗಿರಲಿಲ್ಲ. ಆದರೂ ಲಾಲಾಜಿ ಮತ್ತು ಗಾಂಧೀಜಿ ನಡುವೆ ಮಧುರ ಬಾಂಧವ್ಯ ಏರ್ಪಟ್ಟಿರಲಿಲ್ಲ. ಅಲಿ ಸಹೋದರರ ಬಣ್ಣ ಬಯಲಾದ ನಂತರ ಅವರಿಬ್ಬರು ನಿಕಟವರ್ತಿಗಳಾದರು. ಲಾಲಾಜಿ ಪ್ರತಿನಿಧಿಸುತ್ತಿದ್ದ ರಾಷ್ಟ್ರೀಯವಾದ ನಿಚ್ಚಳಗೊಂಡಿತು. ಅಲಿ ಸಹೋದರರಿಂದಾಗಿ ಗಾಂಧೀ ಲಾಲಾಜಿ ನಡುವೆ ಬಾಂಧವ್ಯ ಬೆಳೆದಿದ್ದು ರಾಷ್ಟ್ರೀಯವಾದ ಮತ್ತು ಕೋಮುವಾದಗಳ ಸ್ಪಷ್ಟ ಧೋರಣೆಗಳು ಸ್ಫುಟಗೊಂಡಿದ್ದು ಮುಂದಿನ ಕಥೆ.

V

ಅಲಿ ಸಹೋದರರ ವಿಷಯದಲ್ಲಿ ಲಾಲಾಜಿ ಬಹು ಹಿಂದೆಯೇ ಸಮಂಜಸವಾದ ತೀರ್ಮಾನಕ್ಕೆ ಬಂದಿದ್ದರು. ರಾಷ್ಟ್ರೀಯವಾದಿಗಳೆಂದು ಅವರನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಕಟ್ಟಾ ಮತಾಂಧರೆಂದು ಪರಿಗಣಿಸಬೇಕಾಗುತ್ತದೆ ಎಂಬ ಅವರ ತರ್ಕ ಶತಃಸಿದ್ಧವಾಯಿತು. ಅಲಿ ಸಹೋದರರ ವಿಷಯದಲ್ಲಿ ಈ ನಿರ್ಧಾರಕ್ಕೆ ಬರಲು ಗಾಂಧೀಜಿಯವರಿಗೆ ಬಹು ವಿಳಂಬವಾಯಿತು.

ಲಾಲಾಜಿ ದೇಶದ ಅನೇಕ ಪ್ರಾಂತ್ಯಗಳಲ್ಲಿ ಪ್ರವಾಸ ಮಾಡಿದ್ದನ್ನು ಈ ಹಿಂದೆ ಓದಿದ್ದೇವೆ. ದೆಹಲಿಯಲ್ಲಿ ಬೀಡು ಬಿಟ್ಟ ಸಮಯದಲ್ಲಿ ಆಗ ಅವರು ಹಕೀಂ ಅಜ್ಮಲ್ ಖಾನ್‌ರನ್ನು ಭೇಟಿ ಮಾಡಿದರು. ಡಾ. ಅನ್ಸಾರಿ ಸಹ ಜೊತೆಯಲ್ಲಿದ್ದರು. ಪ್ರಾಯಶಃ ಅಬುಲ್ ಕಲಂ ಆಜಾದರು ಇದ್ದರೆನಿಸುತ್ತದೆ. ಮಾತುಕತೆ ಅನಿವಾರ್ಯವಾಗಿ ಹಿಂದೂ ಮುಸ್ಲಿಂ ಏಕತೆ ಉಲ್ಬಣಗೊಳ್ಳುತ್ತಿರುವುದರತ್ತ ಕೇಂದ್ರೀಕೃತವಾಯಿತು. ''ಹಿಂದೂ ಕಡೆಯಿಂದ ಕನಿಷ್ಠ ಐದು ಮಂದಿ, ಮುಸ್ಲಿಂ ಸಮುದಾಯದಿಂದಲೂ ಕನಿಷ್ಠ ಐದು ಮಂದಿ ಕಲೆತು ಸುತ್ತು ಬಳಸಿಲ್ಲದೆ ನೇರವಾದ ವಿಚಾರ ವಿಮರ್ಶೆಯಲ್ಲಿ ತೊಡಗಬೇಕು. ಪರಸ್ಪರ ನಂಬಿಕೆ ಮತ್ತು ಪರಿಪೂರ್ಣ ವಿಶ್ವಾಸದಲ್ಲಿ ಸಮಸ್ಯೆಯ ಅಧ್ಯಯನವಾಗಬೇಕು. ತಮ್ಮ ತಮ್ಮ ಅನುಮಾನ ಆತಂಕಗಳನ್ನು ಮುಚ್ಚುಮರೆಯಿಲ್ಲದೆ ವಿನಿಮಯ ಮಾಡಿಕೊಂಡು ಪರಿಹಾರಕ್ಕೆ ಮುಂದಾಗಬೇಕು.'' ಎಂದು ತೀರ್ಮಾನಿಸಲಾಯಿತು. ಮುಸ್ಲಿಂರ ಕಡೆಯಿಂದ ಹಕೀಂ ಸಾಹೇಬ್, ಆಜಾದ್, ಅನ್ಸಾರಿ ಸ್ವತಃ ತಾವು ಮತ್ತು ಇಬ್ಬರು ಅಲಿಗಳನ್ನು ಹೆಸರಿಸಿದರು. ಲಾಲಾಜಿ ನೇರವಾದಿ. ಇದ್ದುದ್ದನ್ನು ಇದ್ದಂತೆ ಹೇಳುವವರು. ಆಗಲೂ ತಮ್ಮ ಅಭಿಪ್ರಾಯವನ್ನು ಅವರು ಹೇಳಿದರು. ''ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಬಯಸುತ್ತೇನೆ. ನನ್ನ ದೃಷ್ಟಿಯಲ್ಲಿ ಅಲಿಗಳು, ಅನ್ಸಾರಿ ಮತ್ತು ಅಜ್ಮಲ್ ಖಾನ್‌ರಿಗಿಂತ ಭಿನ್ನವಾಗಿ ಕಂಡು ಬರುತ್ತಿದ್ದಾರೆ. ಅವರಿಂದ ನಮಗೆ ಅನುಕೂಲವಾಗುತ್ತದೆ ಎಂದು ನನಗನಿಸುವುದಿಲ್ಲ'' ಎಂದಿದ್ದರು.

ಅಲಿ ಸಹೋದರರ ವಿಷಯದಲ್ಲಿ ಲಾಲಾಜಿ ಅವರು ಮನಗಂಡಿದ್ದ ಸತ್ಯ ಮಹಮದಲಿ ಕಾಕಿನಾಡ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದಾಗ (1923ರ ಅಂತ್ಯ) ಬಹಿರಂಗಗೊಂಡಿತು. ಅಧ್ಯಕ್ಷ ಭಾಷಣದಲ್ಲಿ ಅವರು ಬಹಿರಂಗವಾಗಿ ಮಾಡಿದ ಪ್ರಸ್ತಾಪ ಅವರ ವರ್ತನೆಯನ್ನು ಜಾಹೀರುಪಡಿಸಿತು. ಅವರ ಆ ಪ್ರಸ್ತಾಪಕ್ಕೆ ಹಿನ್ನಲೆಯಲ್ಲಿ ಆಗಾಖಾನ್ ಇದ್ದರೆಂಬುದು ನಂತರ ತಿಳಿಯಿತು. ಮಹಮದಲಿ ತಮ್ಮ ಆ ಪ್ರಸ್ತಾಪದಲ್ಲಿ 'ಅಸ್ಪೃಶ್ಯರು' ಹಿಂದೂ ಮುಸ್ಲಿಮರ ಮಧ್ಯೆ ಹಂಚಿ ಹೋಗಬೇಕೆಂದು ಹೇಳಿದರು. ಮಹಮದಲಿ ಅವರ ಆ ಆಘಾತಕಾರಿ ಬಹಿರಂಗ ಪ್ರಸ್ತಾಪ ಲಾಲಾಜಿ ಅವರನ್ನು ದಿಗ್ಭ್ರಮೆಗೊಳಿಸಿದ್ದಷ್ಟೇ ಅಲ್ಲದೆ ತೀವ್ರ ಆತಂಕಕ್ಕೆ ಒಳಪಡಿಸಿತು.

ನಾವು ಈಗಾಗಲೇ ಓದಿರುವಂತೆ ಕಾಂಗ್ರೆಸ್ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾಡಿದ ಪ್ರಸ್ತಾಪದ ಹಿನ್ನಲೆಯಲ್ಲೇ ಲಾಲಾಜಿ ಅಸ್ಪೃಶ್ಯತೆ ನಿವಾರಣೆಗಾಗಿ ಕೂಡಲೇ ದೇಶವ್ಯಾಪಿ ಕಾರ್ಯಕ್ರಮಕ್ಕೆ ಮುಂದಾದರು. ತಮ್ಮ ಅಂದಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಪ್ರಥಮ ಸ್ಥಾನ ನೀಡಿದರು. ತತ್ಸಂಬಂಧ ಹಿಂದಿನ ಅಧ್ಯಾಯದಲ್ಲಿ ನಾವು ಓದಿರುವಂತೆ, ಅಸ್ಪೃಶ್ಯತೆ ನಿವಾರಣೆ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಲಾಲಾಜಿ ಕಾಂಗ್ರೆಸ್ ಕಾರ್ಯಕಾರಿಣಿಗೆ ಸಲಹೆಯನ್ನು ಮಾಡಿದರು. ಆದರೆ ಮೌಲಾನಾ (ಆಗಿದ್ದ ಕಾಂಗ್ರೆಸ್ ಅಧ್ಯಕ್ಷರು) ಹಾಗೂ ಇತರರಿಂದ ಆ ಸಲಹೆಗೆ ದೊರೆತ ಪ್ರತಿಕ್ರಿಯೆ ಏನೆಂಬುದು ನಮಗೆ ಗೊತ್ತಿದೆ. ಲಾಲಾಜಿ ಅವರ ಬಗ್ಗೆ ಅಲಿಗಳು ಮತ್ಸರ ತಾಳಲು ಇದಕ್ಕಿಂತ ಹೆಚ್ಚಿನ ಕಾರಣಗಳು ಇದ್ದಿರಲಿಲ್ಲ.

ಅಲಿ ಅವರಿಗಿದ್ದ ಅನೇಕ 'ವಿಶೇಷ ಗುಣ'ಗಳಲ್ಲಿ ಕುಟಿಲ ಲೇಖನಿ ಮತ್ತು ಕುಹಕದ ನಾಲಿಗೆಯೂ ಸೇರಿತ್ತು. ತಮ್ಮ ಅನಿಸಿಕೆ ಮತ್ತು ಆಶೋತ್ತರಗಳನ್ನು ಒಪ್ಪದವರ ವಿರುದ್ಧ ಆ ಎರಡನ್ನೂ ಅವರು ಯಾವುದೇ ಅಡೆತಡೆ ಇಲ್ಲದೆ ಬಳಸುತ್ತಿದ್ದರು. ಕಾಂಗ್ರೆಸ್ ಅಧ್ಯಕ್ಷರ ಧೋರಣೆಯ ಬಗ್ಗೆ ಲಾಲಾಜಿ ರಚನಾತ್ಮಕವಾದ ಟೀಕೆಗಳನ್ನು ಮಾಡ ತೊಡಗಿದಾಗ ಮಹಮದಲಿ ತಮ್ಮ 'ಬತ್ತಳಿಕೆಯ ವಿಶೇಷ ಬಾಣ'ಗಳನ್ನು ಪ್ರಯೋಗಿಸತೊಡಗಿದರು. ದುರಾಚಾರದ ಆರೋಪ ಮತ್ತು ಕಳಂಕದ ನಂಜಿನಿಂದ ತುಂಬಿದ ತಮ್ಮ ಹೃದಯದ ಮಸಿ ಕುಡಿಕೆಯಲ್ಲಿ ಅದ್ದಿದ ಕುಹಕದ ಲೇಖನಿಯ ಮೂಲಕ ಲಾಲಾಜಿ ವಿರುದ್ಧ ನಿರಂತರ ಆರೋಪಗಳನ್ನು ಮಾಡ ತೊಡಗಿದ್ದರು. ಎಡೆಬಿಡದೆ ನಡೆಯುತ್ತಾ ಬಂದ ಮಹಮದಲಿ ಮಾಡುತ್ತಿದ್ದ ಚಾರಿತ್ರ್ಯವಧೆಯತ್ತ ಲಾಲಾಜಿ ಲಕ್ಷ್ಯ ಹರಿಸಲಿಲ್ಲ. ಅದೆಲ್ಲವನ್ನು ಅವರು 'ಕೊಳಕು ಮಾತುಗಳು' ಎಂದು ತುಚ್ಛೀಕರಿಸಿದರು. ಆದರೂ ಕೆಲವು ವಲಯದಲ್ಲಿ ಅದರ ಕರಾಳ ನೆರಳು ಕಾಣಿಸಿಕೊಳ್ಳದಿರಲಿಲ್ಲ. ಲಾಲಾಜಿ ಅವರ ಸಾಧನೆ, ಯಶಸ್ಸು ಸಹಿಸದವರಿಗೆ ಅದು ಅಪ್ಯಾಯವಾಯಿತು.

ಮಹಮದಾಲಿ ತಮ್ಮ ಕೊಳಕು ಮಾತುಗಳ ಮೂಲಕ ಲಾಲಾಜಿ ವಿರುದ್ಧ ನಡೆಸತೊಡಗಿದ ದುರಾಚಾರದ ಆರೋಪ ಮತ್ತು ಅಪವಾದಗಳಲ್ಲಿ ಹೆಚ್ಚಿನ ಅಂಶ ಅವರು ಕೈಗೊಳ್ಳುತ್ತಿದ್ದ ಕಾರ್ಯಕ್ರಮ ಮತ್ತು ಅವರು ತಳೆದಿದ್ದ ಸಿದ್ಧಾಂತದ ಕುರಿತದ್ದಾಗಿತ್ತು. ಅವರೆಷ್ಟೇ ಬರೆದರೂ ಆ ಆಪಾದನೆಗಳನ್ನು ಜನ ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಬದಲಾಗಿ

ಲಾಲಾಜಿ ತಮ್ಮ ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಇನ್ನಷ್ಟು ವ್ಯಾಪಕಗೊಳಿಸಿದರು. ಅಸ್ಪೃಶ್ಯರು ಹಿಂದೂ ಮುಸ್ಲಿಮರ ಮಧ್ಯೆ ಶೇ. 50ರಷ್ಟು ಪ್ರಮಾಣದಲ್ಲಿ ಹಂಚಿ ಹೋಗಬೇಕೆಂದು ಕಾಂಗ್ರೆಸ್ ವೇದಿಕೆಯಲ್ಲಿ ಮಹಮದಲಿ ನೀಡಿದ ಕರೆಯನ್ನು ಲಾಲಾಜಿ ಸಾರ್ವತ್ರಿಕವಾಗಿ ಖಂಡಿಸತೊಡಗಿದರು. ಅಂಥ ಯಾವುದೇ ಯತ್ನ ಫಲಕಾರಿಯಾಗದಂತೆ ನೋಡಿಕೊಳ್ಳಲು ಅವರು ಶೋಷಿತ ವರ್ಗಗಳ (ಹರಿಜನರು) ಉದ್ಧಾರದ ಕಾರ್ಯದಲ್ಲಿ ತೊಡಗಿದರು. ಮೌಲಾನಾ ಮಾಡಿದ ಪ್ರಸ್ತಾಪವನ್ನು ಕಾಂಗ್ರೆಸ್ಸಿನ ಪ್ರಥಮ ಶ್ರೇಣಿಯ ಹಿಂದೂ ಮುಖಂಡರು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಅಧ್ಯಕ್ಷ ಸ್ಥಾನದಿಂದ ಹೊರಬಿದ್ದ ಕುತಂತ್ರದ ಆ ಪ್ರಸ್ತಾವವನ್ನು ಅವರೆಲ್ಲರೂ ದೂರದರ್ಶಿತ್ವದ ದೃಷ್ಟಿಯಿಂದ ಪರಿಗಣಿಸಿದ್ದರು. ಆ ಸಮಯದಲ್ಲಿ ಗಾಂಧೀಜಿ ಬಂಧನದಲ್ಲಿದ್ದರೆಂಬುದು ಇಲ್ಲಿ ಮರೆಯಬಾರದು.

ಲಾಲಾಜಿ ಕಾಕಿನಾಡ ಅಧಿವೇಶನದಲ್ಲಿ ಪಾಲ್ಗೊಳ್ಳದಿದ್ದರೂ ಕಾಂಗ್ರೆಸ್ ಅಧ್ಯಕ್ಷರು ಎಸಗಬಯಸಿದ್ದ ಕುತ್ಸಿತ ಯೋಜನೆಯನ್ನು ಸಮರ್ಥವಾಗಿ ನಿಷ್ಫಲಗೊಳಿಸಲು ಅಷ್ಟೇ ತ್ವರಿತವಾಗಿ ಕಾರ್ಯಶೀಲರಾದರು. ಮೌಲಾನಾರಲ್ಲಿ ಧರ್ಮ ಪರಿವರ್ತನೆಯ ಗೀಳು ಹೆಚ್ಚಾಗುತ್ತಾ ಬಂದಿತು. ಅದನ್ನು ಹೇಗಾದರೂ ಸಾಧಿಸಿಕೊಳ್ಳುವ ಉದ್ದೇಶದಿಂದಲೇ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ತಮ್ಮ ಆಸೆಗೆ ಪೂರಕ ಮಾಡಿಕೊಂಡಿದ್ದರು. ತಮ್ಮ ಉದ್ದೇಶದ ಪ್ರಸ್ತಾವನೆಯ ಮೂಲಕ ಮೌಲ್ಯದ ಅಧಃಪತನವನ್ನು ಸುಲಭದಲ್ಲಿ ಮಾಡಿಕೊಳ್ಳುವ ಅವರ ಯತ್ನ ಲಾಲಾಜಿ ಅವರಿಗೆ ಚೆನ್ನಾಗಿ ಮನದಟ್ಟಾಗಿತ್ತು. ಅಂಥ ಬುಡಮೇಲು ಕೃತ್ಯವನ್ನು ಖಂಡಿಸಿ ತದ್ವಿರುದ್ಧವಾಗಿ ಸೆಟೆದು ನಿಂತದ್ದರಿಂದ ಮೌಲಾನಾ ಅವರಿಗೆ ಅವರು 'ಕೋಮುವಾದಿ'ಯಾಗಿ ಕಂಡು ಬಂದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

vi

ಕಟ್ಟಾ ದೇಶಿಯವಾದಿಯಾಗಿ ಲಾಲಾಜಿ ತಾವು ಕೈಗೊಂಡ ಕಾರ್ಯಕ್ರಮ, ಧ್ಯೇಯಗಳು ಇಂಥ ಅಪವಾದಗಳಿಂದ ನಲುಗದಂತೆ ನೋಡಿಕೊಂಡರು. ಅವರ ಕಾರ್ಯಕ್ರಮಗಳೆಲ್ಲವೂ ಹಿಂದೂ ಸಮುದಾಯದ ಪರವಾಗಿ ಇರುತ್ತಿದ್ದದ್ದು ಕಾಕತಾಳೀಯ. ಸಾಮಾಜಿಕ ಸುಧಾರಣೆ ಮತ್ತು ಶೋಷಿತ ವರ್ಗಗಳ ಉದ್ಧಾರದ ಕರೆಗಳಲ್ಲಿ ಅದು ಎದ್ದು ಕಾಣುತ್ತಿತ್ತು. ಹಿಂದೂಗಳಿಗೆ ತೊಂದರೆ ಉಂಟಾದ ಯಾವುದೇ ಸ್ಥಳದಲ್ಲಾದರೂ ಲಾಲಾಜಿ ಅವರ ಪರಿಹಾರ ಕಾರ್ಯ ಸಿದ್ಧವಾಗಿರುತ್ತಿತ್ತು. ಅದು ಪ್ರಕೃತಿ ವಿಕೋಪದ್ದಾಗಿರಲಿ ಅಥವಾ ಮಾನವ ಪ್ರೇರಿತ ಹಿಂಸೆ, ಅತ್ಯಾಚಾರಗಳಾಗಿರಬಹುದು. ಲಾಲಾಜಿ ಅವರ (ಜೊತೆಗೆ ಮಾಳವೀಯರ) ಸೇವೆ ಸಂತ್ರಸ್ತರನ್ನು ಖಂಡಿತವಾಗಿಯೂ ಸಂತೈಸುತ್ತಿತ್ತು. ವಿಪತ್ತಿನ ಸಮಯದಲ್ಲಿ ಅವರಿಗೆ ಆಸರೆಯಾಗುತ್ತಿತ್ತು. ಈ ಕಾರಣದಿಂದಾಗಿಯೇ ಮಹಮದಲಿ ಮತ್ತು ಅವರ ವರ್ಗ ಲಾಲಾಜಿ ಅವರಿಗೆ 'ಕೋಮುವಾದಿ' ಹಣೆಪಟ್ಟಿ ಕಟ್ಟಿತ್ತು. ಲಾಲಾಜಿ ಅವರು ಎಷ್ಟರಮಟ್ಟಿಗೆ 'ಕೋಮುವಾದಿ'ಯಾಗಿದ್ದರು ಅವರ ಚಟುವಟಿಕೆಗಳು ಅದಕ್ಕೆ ಹೇಗೆ ಪೂರಕವಾಗಿದ್ದವು, ಅವು ಅವರ ರಾಷ್ಟ್ರೀಯವಾದಕ್ಕೆ ಪ್ರತಿಕೂಲವಾಗಿದ್ದವೇ

ಎಂಬುದನ್ನು ನಾವು ಪರಿಶೀಲಿಸಬೇಕಾಗುತ್ತದೆ. ಲಾಲಾಜಿ ಕೈಗೊಂಡ ಅತಿ ದೊಡ್ಡ ಹಾಗೂ ವ್ಯಾಪಕ 'ಕೋಮುವಾದಿ' ಕಾರ್ಯಕ್ರಮ 'ಅಸ್ಪೃಶ್ಯರ' ಉದ್ಧಾರ. ಈ ಕಾರ್ಯಕ್ರಮದಲ್ಲಿ ಲಾಲಾಜಿ ಮಹಮದಲಿ ಬಹಿರಂಗ ಪ್ರಸ್ತಾಪದ ನಂತರವೇ ತೊಡಗಿದವರೇನೂ ಅಲ್ಲ. ಸಾರ್ವಜನಿಕ ಬದುಕಿಗೆ ಪ್ರವೇಶಿಸಿದಾಗಿನಿಂದಲೂ ಅವರು ಅದರಲ್ಲಿ ಆಸಕ್ತಿ ವಹಿಸಿದ್ದರು.

ಕ್ರೈಸ್ತ ಮಿಷನರಿಗಳು ಪಡೆದುಕೊಳ್ಳುತ್ತಿದ್ದ ಅಸಹಾಯಕತೆಯ ಲಾಭವನ್ನು ಅವರು ತಡೆಗಟ್ಟಲು ಮುಂದಾದ ಕಾರ್ಯಕ್ರಮಗಳು ಅದೆಷ್ಟೋ. ಅವರು ಸುಧಾರಕರಾಗಿ, ಕಟ್ಟಾ ಭಾರತೀಯವಾದಿಯಾಗಿ, ಅದಕ್ಕಿಂತಲೂ ಹೆಚ್ಚಿನದಾಗಿ ಮಾನವೀಯತೆಯ ಅಪ್ಪಟ ನಿಷ್ಠಾವಾದಿಯಾಗಿ ಅವರು ಆ ಕಾರ್ಯಕ್ರಮದಲ್ಲಿ ತೊಡಗಿದ್ದರು. ಅವರು ತಾವು ನಂಬಿದ ತತ್ವ, ಮನಗಂಡ ಸತ್ಯ ಮತ್ತು ಅವುಗಳನ್ನು ಈಡೇರಿಸಿಕೊಳ್ಳಲು ಅಳವಡಿಸಿಕೊಂಡ ಮಾರ್ಗಗಳು ಯಾವುದೇ ರೀತಿಯಲ್ಲೂ ರಾಷ್ಟ್ರೀಯವಾದಕ್ಕೆ ಪ್ರತಿಕೂಲವಾಗಿರಲಿಲ್ಲ. ಮುಂದೆ ಗಾಂಧೀಜಿ ನಾಯಕತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮವನ್ನು ತನ್ನ 'ಸೃಜನಾತ್ಮಕ' ಕಾರ್ಯಕ್ರಮವಾಗಿ ಒಪ್ಪಿಕೊಂಡಿತು. ಮಹಮದಲಿ ಅಧ್ಯಕ್ಷ ಭಾಷಣಕ್ಕೆ ಸಂಪೂರ್ಣ ವಿರೋಧವಾಗಿ ಕಾಂಗ್ರೆಸ್ ಆ ಕಾರ್ಯಕ್ರಮವನ್ನು ಮುಂದುವರೆಸಿತು.

ಲಾಲಾಜಿ ತಮ್ಮ ರಾಷ್ಟ್ರವ್ಯಾಪಿ ಆಂದೋಲನವನ್ನು ಗಾಂಧೀಜಿ ಹರಿಜನ ಸೇವಾ ಸಂಘ ಸ್ಥಾಪಿಸುವುದಕ್ಕೆ ಸುಮಾರು ಒಂದು ದಶಕದಷ್ಟು ಮೊದಲೇ ಆರಂಭಿಸಿದ್ದರು. ನಾಗರಿಕ ಅವಿಧೇಯತೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದ ನಂತರ ಕಾಂಗ್ರೆಸ್ ಸೃಜನಾತ್ಮಕ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕಾಗಿತ್ತು. ಕಾಂಗ್ರೆಸ್ ವಿಷಯದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಉಪೇಕ್ಷಿತವಾಗಿದ್ದ ಅಸ್ಪೃಶ್ಯತಾ ನಿವಾರಣೆ ವಿಷಯ ಉಪೇಕ್ಷಿತವಾಗಿತ್ತು. ಲಾಲಾಜಿ ಬಹು ಹಿಂದಿನಿಂದಲೂ ತಮ್ಮಲ್ಲಿ ಅದಮ್ಯವಾಗಿದ್ದ ಆಕಾಂಕ್ಷೆಗೆ ಒತ್ತುಕೊಟ್ಟು ತಮ್ಮದೇ ಆದ ಮಾಧ್ಯಮ ರೂಪಿಸಿಕೊಂಡು ಅದಕ್ಕಾಗಿ 'ಕೋಮು' ಸಂಸ್ಥೆಗಳ ನೆರವನ್ನು ಪಡೆದುಕೊಂಡು ದೇಶವ್ಯಾಪಿ ಕಾರ್ಯಕ್ರಮವಾಗಿ ಅದನ್ನು ಕೈಗೊಂಡರು. ಲಾಲಾಜಿ ಕೈಗೊಂಡ ಆ ಕಾರ್ಯಕ್ರಮ ಗಾಂಧೀಜಿ ಮುಂದೆ ಹರಿಜನ ಸೇವಾ ಸಂಘದ ಮೂಲಕ ಕೈಗೊಂಡ ಕಾರ್ಯಕ್ರಮಕ್ಕೆ ಬುನಾದಿ ಆಯಿತು. ಲಾಲಾಜಿ ಅಷ್ಟೊಂದು ತ್ವರಿತವಾಗಿ ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮಕ್ಕೆ ಧುಮುಕಲು ಕಾರಣ ಆಗಾಖಾನ್ ಪ್ರಚೋದನೆಯಲ್ಲಿ ಮಹಮದಾಲಿ ಸಾಧಿಸ ಬಯಸಿದ್ದ ಸಂಚು.

ಲಾಲಾಜಿ ವಿರುದ್ಧ ಹೊರಿಸಲಾದ ಇನ್ನೊಂದು 'ಕೋಮುವಾದಿ' ಅಪವಾದ ಹಿಂದೂ ಮಹಾಸಭಾದೊಂದಿಗೆ ಅವರು ಹೊಂದಿದ್ದ ಸಂಬಂಧ ಮತ್ತು ಚಟುವಟಿಕೆಗೆ ಸೇರಿದ್ದು. ಲಾಲಾಜಿ ಅಂಥ ಸಂಸ್ಥೆಯೊಂದಿಗೆ ನಿಕಟವರ್ತಿಯಾಗಿದ್ದು ಶತಮಾನದ ಮೊದಲ ದಶಕದಲ್ಲಿ. ಪಂಜಾಬ್ ಹಿಂದೂ ಮಹಾಸಭಾ ಆರಂಭಗೊಂಡಾಗ. ಅಂದಿನ ಪರಿಸ್ಥಿತಿ ಹಾಗಿತ್ತು. ಸಂವಿಧಾನದ ಕೆಲವು ಕೋಮು ಸಂಬಂಧಿ ಆದ್ಯತೆಗಳಿಗೆ ಅನುಗುಣವಾಗಿ ಕೋಮು ಸಂಸ್ಥೆ, ಸಂಘಟನೆಗಳು ಅಗತ್ಯವಾಗಿದ್ದ ಸಮಯ. ಲಾಲಾಜಿ ಅವನ್ನು ಮನಗಂಡಿದ್ದರು. ಮಿಂಟೋ ಆಗಷ್ಟೇ ಕೋಮು ಸ್ವರೂಪದ ಮತವಾದದ ವಿಧಾನವನ್ನು

ಜಾರಿಗೆ ತಂದಿದ್ದರು. ಗೋಖಲೆ ಅದನ್ನು ಅನುಮೋದಿಸಿದ್ದು ಲಾಲಾಜಿ ಅವರಿಗೆ ಆಶ್ಚರ್ಯವಾಗಿತ್ತು. ಆ ಪರಿಸ್ಥಿತಿಯನ್ನು ಗಮನವಿಟ್ಟೇ ಅಧ್ಯಯನ ಮಾಡಬೇಕಾಗುತ್ತದೆ. ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಕೋಮು ಮತದಾರ ವಿಧಾನ ವಿಷಕಾರಿ ಎಂಬ ಅಪಾಯವನ್ನು ಲಾಲಾಜಿ ಮನಗಂಡಿದ್ದರು. ಆದರೆ ಪರಿಸ್ಥಿತಿಯ ಒತ್ತಡ ಹಾಗೆ ಇತ್ತು. ಹಾಗಾಗಿ ಕೋಮು ವರ್ಗಗಳ ಮತದಾರರನ್ನು ಆಕರ್ಷಿಸುವ ಮೂಲಕವೇ ರಾಷ್ಟ್ರೀಯ ಗುರಿ ಸಾಧನೆಗೆ ಅನುಕೂಲ ಮಾಡಿಕೊಳ್ಳುವ ತಂತ್ರವನ್ನು ಅಳವಡಿಸಿಕೊಳ್ಳಬೇಕಾದ ಪರಿಸ್ಥಿತಿ ಅದಾಗಿತ್ತು. ಭಾರತೀಯ ಚಳವಳಿಯ ಬ್ರಿಟಿಷ್ ಮಿತ್ರರೊಬ್ಬರು ಲಾಲಾಜಿ ಆಗ ಮನಗಂಡ ವಾಸ್ತಾವಿಕತೆಯನ್ನು ಮನಮೆಚ್ಚಿಕೊಳ್ಳುವ ರೀತಿಯಲ್ಲಿ ಬರೆದಿಟ್ಟಿದ್ದಾರೆ:

''... ಕೋಮುವಾದಿ ಪ್ರಾತಿನಿಧ್ಯವನ್ನು ತಪ್ಪಿಸದಿದ್ದರೆ ಎರಡು ಸಮುದಾಯಗಳನ್ನು ಐಕ್ಯಗೊಳಿಸುವ ನಿಟ್ಟಿನಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಬಳಸಿಕೊಳ್ಳಬಹುದಾಗಿತ್ತು; ಎರಡೂ ಸಮುದಾಯಗಳನ್ನು ಆರ್ಥಿಕ ಹಿತದೃಷ್ಟಿಯಿಂದಲೂ ಒತ್ತಟ್ಟಿಗೆ ತರಬಹುದಾಗಿತ್ತು. ಆದರೆ ಕೋಮು ಮತದಾರ ನಿರೂಪಣೆಯು ಪೂರ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದಿರುವುದರಿಂದಲೂ, ಅದನ್ನು ನಿವಾರಿಸುವ ಪರಿಹಾರೋಪಾಯ ಇಲ್ಲದಿರುವುದರಿಂದಲೂ ಪರಿಸ್ಥಿತಿ ಈಗ ತಿರೋಗಾಮಿಯಾಗುತ್ತಿರುವುದನ್ನು ನಾವು ಕಾಣಬೇಕಾಗಿದೆ.''*

ಹಿಂದೂ ಮಹಾಸಭಾ ಅನೇಕ ಹಂತದಲ್ಲಿ ಕಾರ್ಯ ಚಟುವಟಿಕೆ ಕೈಗೊಂಡಿದ್ದನ್ನು ಇಲ್ಲಿ ಸ್ಮರಿಸುವುದು ಅಗತ್ಯವಾಗುತ್ತದೆ. ಲಾಲಾಜಿ ಅದರ ಎಲ್ಲಾ ನೀತಿ ಮತ್ತು ಕಾರ್ಯಕ್ರಮಗಳನ್ನು ಅನುಮೋದಿಸಿರಲಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ. ಪಂಜಾಬ್ ಸಭಾದಲ್ಲಿ ಸಹ ಲಾಲಾಜಿ ಅವರ ಪಾತ್ರ ಸೀಮಿತವಾಗಿತ್ತು. ಅದರ ನಿಲುವು, ನಿರ್ಧಾರಗಳನ್ನು ಬಹುತೇಕವಾಗಿ ಅವರು ಅನುಮೋದಿಸುತ್ತಿರಲಿಲ್ಲ. ಹಿಂದೂ ಮಹಾಸಭಾ ಕಾರ್ಯಕ್ರಮಗಳಲ್ಲಿ ಲಾಲಾಜಿ ಅವರ ಚಟುವಟಿಕೆಯನ್ನು ವಿಶ್ಲೇಷಿಸುವ ಮುನ್ನ ಅಂಥ ವಿಶ್ಲೇಷಕರು ಅವರು ಆ ಸಭಾದಲ್ಲಿ ನೀತಿ ನಿರ್ಧಾರಕರಾಗಿದ್ದಾಗ ಕೈಗೊಂಡ ಕಾರ್ಯಕ್ರಮಗಳೇನು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ.

ಲಾಲಾಜಿ ಮತ್ತು ಮಾಳವೀಯರ ನಾಯಕತ್ವದ ಸಮಯದಲ್ಲಿ ಹಿಂದೂ ಮಹಾಸಭಾದಲ್ಲಿ ಗಮನಾರ್ಹ ಕಾರ್ಯ ಚಟುವಟಿಕೆಗಳು ನಡೆದವು. ಆ ಅವಧಿಯಲ್ಲಿ ವಿದ್ವೇಷಕಕಾರಿಯಾದ ಯಾವ ಕ್ರಮವು ಹಿಂದೂ ಮಹಾಸಭಾ ವ್ಯಾಪ್ತಿಯಲ್ಲಿ ಸುಳಿದಿರಲೂ ಇಲ್ಲ. ಕಾಂಗ್ರೆಸ್‌ನಂಥ ಸಂಸ್ಥೆಗಳೊಂದಿಗೆ ಸಹ ಕಿಂಚಿತ್ತೂ ಸಂಘರ್ಷಕ್ಕೆ ಎಡೆ

---

* 1926 ಅಕ್ಟೋಬರ್ 8ರಂದು ಜೊಸೆಯ್ ಸಿ. ವೆಡ್‌ವುಡ್ ಅವರು ಲಾಲಾಜಿ ಅವರಿಗೆ ಬರೆದ ಪತ್ರ. ದಿ ಪೀಪಲ್‌ನಲ್ಲಿ 1926ರ ನವೆಂಬರ್ 7ರಂದು ಪ್ರಕಟಗೊಂಡಿತು.

ಮಾಡಿಕೊಟ್ಟಿರಲಿಲ್ಲ. ಸ್ವಾತಂತ್ರ್ಯ ಹೋರಾಟವನ್ನು ದುರ್ಬಲಗೊಳಿಸುವಂಥ ಪ್ರಶ್ನೆಯೇ ಇರಲಿಲ್ಲ. ಬದಲಾಗಿ ಮಹಾಸಭಾ ಜೊತೆ ಲಾಲಾಜಿ ಇರಿಸಿಕೊಂಡಿದ್ದ ಸಂಬಂಧ ಪರೋಕ್ಷವಾಗಿ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಸಹಾಯಕವಾಗಿತ್ತು. ಸ್ವತಃ ಪಂಡಿತ್ ಮೋತಿಲಾಲರೇ ಅದರ ಮಹತ್ವವನ್ನು ಮನನ ಮಾಡಿಕೊಂಡಿದ್ದರು. ಲಾಲಾಜಿ ಜೊತೆ ಅವರ ಬಾಂಧವ್ಯ ವಿವಾದದ ಪರಾಕಾಷ್ಠೆ ಮುಟ್ಟುವ ಸಮಯದಲ್ಲಿ ಸಹ ಮೋತಿಲಾಲರು ಅದನ್ನು ಪ್ರಸ್ತಾಪಿಸಿರಲಿಲ್ಲ:

''ನೀವು ಭಾರತವನ್ನು ಬಿಟ್ಟು ನಿರ್ಗಮಿಸುವವರೆಗೆ ಕಾಂಗ್ರೆಸ್ ಅಭ್ಯರ್ಥಿಗಳ ವಿಜಯಕ್ಕಾಗಿ ಶ್ರಮಿಸುತ್ತಿದ್ದ ನಿಷ್ಠ ಶ್ರದ್ಧಾಳುವಾಗಿದ್ದೀರಿ. ಹಿಂದೂ ಮಹಾಸಭಾ ಮೂಲಕ ಅವರಿಗೆ ಎಲ್ಲಾ ತರಹದ ಶಕ್ತಿ ಮತ್ತು ಧೈರ್ಯವನ್ನು ತುಂಬುತ್ತಿದ್ದೀರಿ* ಕಳೆದ 4 ತಿಂಗಳ ಅವಧಿಯಲ್ಲಿ ನಿಮ್ಮ ಸಿದ್ಧಾಂತದ ಮೇಲೆ ಉಂಟಾದ ಕ್ರಾಂತಿಕಾರಿ ಪ್ರಚೋದನೆ ಯಾವುದು ಎಂಬುದರ ಬಗ್ಗೆ ನೀವು ನಿರ್ದಿಷ್ಟವಾಗಿ ತಿಳಿಸಿಲ್ಲ.'' (ಸ್ವರಾಜ್ ಪಕ್ಷಕ್ಕೆ ರಾಜೀನಾಮೆ ನೀಡಿದ ಸಮಯದಲ್ಲಿ ಲಾಲಾಜಿ ಬರೆದ ಪತ್ರದ ಮೂರನೇ ಪ್ಯಾರಕ್ಕೆ ಆಗಸ್ಟ್ 30ರಂದು ಪಂಡಿತ ಮೋತಿಲಾಲರು ಬರೆದ ಉತ್ತರ.)

ಹಿಂದೂ ಮಹಾಸಭಾದ ಮೇಲೆ ಲಾಲಾಜಿ ಹೊಂದಿದ್ದ ಹಿಡಿತ, ಬಹುತೇಕ ಹೆಚ್ಚಿನ ಪ್ರಮಾಣದಲ್ಲಿ ರಾಷ್ಟ್ರೀಯವಾದದ ಹಿತಕ್ಕೆ ಪೂರಕ ಪ್ರೇರಕವಾಗಿತ್ತು. 'ನಿರ್ದಿಷ್ಟವಾದ ಪ್ರಕರಣ'ವೊಂದು ಸಹ ಇಲ್ಲಿ ನಮಗೆ ಕಂಡು ಬರುತ್ತದೆ. ಬಹುಶಃ ಮೋತಿಲಾಲರಿಗೆ ಆ ಬಗ್ಗೆ ಆಂತರಿಕವಾಗಿ ಅನುಮಾನ ಕಾಡಿರಲು ಬಹುದು. ಲಾಲಾಜಿ ಬಹಿರಂಗವಾಗಿ ಅದನ್ನು ವ್ಯಕ್ತಪಡಿಸಲು ಇಷ್ಟ ಪಡದಿದ್ದಿರಬಹುದು ಎಂಬುದು ಮೇಲಿನ ಪತ್ರೋತ್ತರದಲ್ಲಿ ವ್ಯಕ್ತವಾಗುತ್ತದೆ. ಸ್ವರಾಜ್ ಪಕ್ಷವನ್ನು ಬಿಟ್ಟ ನಂತರವೂ ಲಾಲಾಜಿ ಮಾಳವೀಯರೊಂದಿಗೆ ಸ್ವತಂತ್ರ ಕಾಂಗ್ರೆಸ್ ಪಕ್ಷವೊಂದನ್ನು ಹುಟ್ಟುಹಾಕಲು ಮುಂದಾಗಿದ್ದು ಉಂಟು. ಆ ಪ್ರಸಂಗ ತುಂಬಾ ನವಿರಾಗಿತ್ತು. ಹಿಂದೂ ಮಹಾಸಭಾ ತನ್ನದೇ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುತ್ತಿದ್ದನ್ನು ತಪ್ಪಿಸುವುದು ಲಾಲಾಜಿ ಆಶಯವಾಗಿತ್ತು.

ಮುಂಬಯಿಯಲ್ಲಿ ನಡೆದ ಹಿಂದೂ ಮಹಾಸಭಾ ಸಮ್ಮೇಳನದಲ್ಲಿ ಹಿಂದೂಯೇತರ ಗಣ್ಯರೊಬ್ಬರು ಪಾಲ್ಗೊಂಡರು. ಅವರು ಬೇರಾರು ಅಲ್ಲ. ಹೆಸರಾಂತ ಪಾರ್ಸಿ ವಿದ್ವಾಂಸ ಜೆ.ಕೆ. ನಾರಿಮನ್. ಅವರು ಆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದನ್ನು ಅನೇಕ ಹಿಂದೂಗಳು ಆಕ್ಷೇಪಿಸಿದರು. ಲಾಲಾಜಿ ಆ ಆಕ್ಷೇಪಗಳನ್ನು ಸಹಿಸಲಿಲ್ಲ. (ಸ್ವತಃ ನಾರಿಮನ್‌ರೇ ಆ ಪ್ರಸಂಗವನ್ನು ನೆನಪು ಮಾಡಿಕೊಂಡಿದ್ದಾರೆ.)* ಹಿಂದೂ ಮುಸ್ಲಿಂ ಇಲ್ಲವೇ ಕಸಾಯಿಖಾನೆಗಳಲ್ಲಿ ಯಾರಾದರೂ ಸರಿ ಭಾರತವನ್ನು ಪ್ರೀತಿಸುವವರೆಲ್ಲರೂ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಬಹುದು ಎಂದು ಲಾಲಾಜಿ ಆಕ್ಷೇಪಕಾರರ ಬಾಯಿ

---

* ದಿ ಪೀಪಲ್: ಲಜಪತ್‌ರಾಯ್ ವಿಶೇಷಾಂಕ ಏಪ್ರಿಲ್ 13, 1929

ಮುಚ್ಚಿಸಿದರು. ಹಿಂದೂ ಮಹಾಸಭಾದಲ್ಲಿದ್ದಷ್ಟು ಕಾಲವೂ ಲಾಲಾಜಿ ಕಾರ್ಯ ಚಟುವಟಿಕೆಯ ವಿಶಾಲ ಮನೋಧರ್ಮ ಹೀಗೆ ಇತ್ತು.

ತಾವು ಪ್ರತಿನಿಧಿಸುತ್ತಿದ್ದ ಸಮುದಾಯ ಹಿತಕ್ಕಾಗಿ ಕೈಗೊಳ್ಳುತ್ತಿದ್ದ ಎಲ್ಲಾ ಕೆಲಸವನ್ನು ಸಹ ಅವರು ಅತಿ ಜಾಗೃತರಾಗಿ ತಮ್ಮ ಮಹದುದ್ದೇಶದ ಕಾರ್ಯಕ್ಕೆ ಪೂರಕವಾಗುವ ರೀತಿಯಲ್ಲಿ ಸಂಯೋಜಿಸಿಕೊಳ್ಳುತ್ತಿದ್ದರು. ಅಂದರೆ ಕೋಮು ಹಿತದ ರೂಪದಲ್ಲಿ ಕೈಗೊಳ್ಳುತ್ತಿದ್ದ ಕಾರ್ಯಗಳನ್ನು ಲಾಲಾಜಿ ಅವರು ಭಾರತದ ಸ್ವಾತಂತ್ರ್ಯ ಮತ್ತು ಭಾರತವನ್ನು ಮಹಾ ನಾಡನ್ನಾಗಿ ಕಟ್ಟುವ ಉದ್ದೇಶಕ್ಕೆ ಅನುರೂಪಗೊಳಿಸಿಕೊಳ್ಳುತ್ತಿದ್ದರು. ಹಿಂದೂ ಮುಸ್ಲಿಂ ಏಕತೆ ಸಾಧಿಸಲು ಸಹ ಅವರು ಕೋಮು ಸಂಸ್ಥೆಯೊಂದರ ಮೂಲಕವೇ ಪ್ರಯತ್ನಶೀಲರಾಗಲು ಆಲೋಚಿಸಿದ್ದು ಉಂಟು. ರಾಷ್ಟ್ರೀಯ ಹಿತಸಾಧನೆಗಾಗಿ ಅದು ಅವರ ಸ್ವಯಂ ಕಲ್ಪಿತ ಕಾರ್ಯಕ್ರಮವಾಗಿತ್ತು. ಇತರರು ಕೈಗೊಂಡ ಕಾರ್ಯಕ್ರಮಗಳು ಜಾತಿವಾದಿ ಇಲ್ಲವೇ ಕೋಮುವಾದದ ರೇಖೆಯನ್ನು ತೊಡೆದು ಹಾಕುವಲ್ಲಿ ವಿಫಲವಾದರೆ, ಭಿನ್ನವಾದ ಶೈಲಿಯಲ್ಲಿ ತಮ್ಮ ಆಲೋಚನೆಯನ್ನು ಕಾರ್ಯಗತಕ್ಕೆ ಇಳಿಸಲು ಅವರು ಯೋಜಿಸಿಕೊಂಡಿದ್ದರು. ಭಾರತೀಯ ನೇಯ್ಗೆಯಲ್ಲಿರುವ ವಾಸ್ತವಿಕತೆಗಳನ್ನು ಕಡೆಗಣಿಸುವ ಹಿಂದೂ ನಾಯಕರು ದಾರಿ ತಪ್ಪುವ ಹಂತದಲ್ಲಿದ್ದದ್ದು ಅವರ ಪರ್ಯಾಯ ಆಲೋಚನೆಗೆ ಕಾರಣವಾಗಿತ್ತು. ಹಿಂದೂ ಸಮುದಾಯದ ಸಂಘ ಸಂಸ್ಥೆಗಳೆಲ್ಲವನ್ನು ಕಡೆಗಣಿಸಿ ರಾಷ್ಟ್ರೀಯವಾದ ಕಟ್ಟುತ್ತೇವೆ ಎನ್ನು ಹುಸಿ ಭ್ರಮೆಯ ಪರಿಸ್ಥಿತಿಯಲ್ಲಿ ಲಜಪತರ ಆ ಚಿಂತನೆ ಸಹಜವಾಗಿತ್ತು! ಈ ರೀತಿ ಲಾಲಾಜಿ ಅವರು ದೇಶಹಿತ, ಕೋಮು ಸಂಘಟನೆಗೆ ಕೈಗೊಳ್ಳುತ್ತಿದ್ದ ಇಲ್ಲವೇ ಆಲೋಚಿಸುತ್ತಿದ್ದ ರೀತಿ ನೀತಿಗಳಿಗೆ ಅನೇಕ ಜನರು ಆಂತರ್ಯದಲ್ಲಿ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತಿದ್ದರು. ವಿಚಿತ್ರವೆಂದರೆ ಅದೇ ಜನ ಸಾರ್ವತ್ರಿಕವಾಗಿ ಭಿನ್ನವಾದ ನಿಲುವು ತಾಳುತ್ತಿದ್ದರು! ಬೆಳಗಾವಿಯಲ್ಲಿ ಶ್ರೀನಿವಾಸ ಅಯ್ಯಂಗಾರ್ ಹೇಳಿದ ಒಂದು ಪ್ರಸಂಗ ಈ ನಿಟ್ಟಿನಲ್ಲಿ ಇಲ್ಲಿ ಪ್ರಸ್ತಾಪಿಸಲಾಗಿದೆ: ''ನಾನು ನಿಮ್ಮ ನಿಲುವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಸುಮಾರು ಒಂದು ವರ್ಷ ಕಾಲ ನಾನು ಇದಾವುದರಲ್ಲೂ ಒಳಗಾಗದೆ ದೂರವಿರಲು ಬಯಸುತ್ತೇನೆ.''!

vii

ಖಿಲಾಫತ್ ಚಳವಳಿ ಹತೋಟಿ ತಪ್ಪಿ ತಪ್ಪು ದಾರಿಗೆ ಎಳೆಯಲ್ಪಟ್ಟಿದ್ದರ ಹಿಂದೆ ಕೋಮುವಾದದ ಅತಿರೇಕ ಇತ್ತೆಂಬುದನ್ನು ಬಹುತೇಕ ಜನರಂತೆ ಲಾಲಾಜಿ ಸಹ ಮನಗಂಡಿದ್ದರು. ಖಿಲಾಫತ್ ಚಳವಳಿ ಮೂಲಕ ಮುಸಲ್ಮಾನರು ಮುಂದಿಟ್ಟಿದ್ದ ಬೇಡಿಕೆಗಳಿಗೆ ಲಾಲಾಜಿ ಅವರ ಸಂಪೂರ್ಣ ಬೆಂಬಲವಿತ್ತು. ಆದರೆ ಕೆಲವರು ಅತಿರೇಕದ ನಿಲುವುಗಳನ್ನು ಕೈಗೊಂಡು ಅನ್ವರ್ ಪಾಷ ಬೆಂಬಲಿಗಳನ್ನೋ ಅಥವಾ ಅಫಘಾನಿಸ್ತಾನದ ಇತರರನ್ನೋ ಭಾರತಕ್ಕೆ ಕರೆಯಿಸುವ ಹಂತಕ್ಕೆ ಕೈ ಹಾಕಿದಾಗ ಅವರಿಗೆ ಸುಮ್ಮನಿರಲಾಗಲಿಲ್ಲ. ತಮಗೆ ತಪ್ಪೆನಿಸಿದ್ದನ್ನು ಲಾಲಾಜಿ ಖಿಲಾಫತ್ ವೇದಿಕೆಯೊಂದರ ಮೂಲಕವೇ ಬಹಿರಂಗಗೊಳಿಸಿದ್ದು ಅವರ ಸ್ಪಷ್ಟ ನಿಲುವಿಗೆ ಸಾಕ್ಷಿ! ಸರ್ ತೇಜ್ ಬಹುದ್ದೂರ್ ಸಪ್ರು (ಹಿಂದೂ ಸಭಾ

ಸದಸ್ಯರಾಗಿದ್ದವರಲ್ಲ) ಅವರು ಎಲ್ಲಾ ಬೆಳವಣಿಗೆಗಳನ್ನು ಮುಕ್ತ ಮನಸ್ಸಿನಿಂದ ವೀಕ್ಷಿಸುತ್ತಿದ್ದವರು. ಆಗ ಲಾಲಾಜಿಗೆ ಸಪ್ರು ಬರೆದ ಪತ್ರವೊಂದು ಹೀಗಿದೆ:

''ಖಿಲಾಫತ್ ಚಳುವಳಿ ಎರಡನೇ ಅಧಿವೇಶನದಲ್ಲಿ ನೀವು ಮಾಡಿದ ಸ್ಫೂರ್ತಿಯುತ ಹಾಗೂ ನೇರ ಭಾಷಣ ಕೇಳಿ ನನಗೆ ಭರಿಸಲಾಗದಷ್ಟು ಸಂತೋಷವಾಗಿದೆ. ಅಫಘನ್ನರು ಬಂದು ನಮ್ಮನ್ನು 'ರಕ್ಷಿಸು'ವಂತೆ ಮಾಡುವ ಶೌಕತ್ ಅಲಿ ಮತ್ತು ಅವರ ಗೆಳೆಯರ ನಡವಳಿಕೆಗಳನ್ನು ತಡೆಗಟ್ಟುವ ಸಮಯ ನಮ್ಮ ಮುಂದಿದೆ ಎಂದು ನನಗನಿಸುತ್ತಿದೆ. ಅದು ಅರ್ಥಹೀನ ಕಾರ್ಯ. ಶುದ್ಧ ಕುಚೇಷ್ಟೆಯದು. ಅಗತ್ಯವೇ ಇಲ್ಲದ್ದು. ಮಹಮದೀಯ ಸಮುದಾಯದಲ್ಲಿ ಗಾಂಧೀ ಪ್ರಣೀತ ಅಸಹಕಾರ ಚಳವಳಿಯನ್ನು ಬೇರೊಂದು ರೀತಿಯಲ್ಲಿ ಅರ್ಥೈಸಿಕೊಳ್ಳಲಾಗಿದೆ ಎಂಬ ಭಾವನೆ ನನಗೆ ಉಂಟಾಗುತ್ತಿದೆ. ನಮ್ಮ ಕೆಲವು ಮಹಮದೀಯ ಮಿತ್ರರು ಅಸಹಕಾರ ಚಳವಳಿಯನ್ನು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನಿಸಿಕೊಂಡಿದ್ದಾರೆಂದೂ ನನಗೆ ಕಂಡು ಬರುತ್ತದೆ. ನನಗೆ ಗಾಂಧೀ ಪ್ರಣೀತ ಅಸಹಕಾರ ಚಳವಳಿಯ ಬಗ್ಗೆ ಅಸಮ್ಮತಿ ಇಲ್ಲವಾದರೂ ಅದು ಇಲ್ಲಿ ಅಪಾರ್ಥವಾಗುತ್ತಿರುವುದು ಕಳವಳಕಾರಿ ಎನಿಸುತ್ತಿದೆ. ಗಾಂಧೀಜಿಯವರ ಸಿದ್ಧಾಂತದ ಬಗ್ಗೆ ಭಿನ್ನಮತ ಏನೇ ಇದ್ದರೂ ಅವರನ್ನು ಹಾಗೂ ಅವರ ದೃಷ್ಟಿಕೋನವನ್ನು ಗೌರವಿಸಲೇ ಬೇಕಾಗುತ್ತದೆ. ಆದರೆ ಶೌಕತ್ ಅಲಿ ಮತ್ತು ಅವರ ಗೆಳೆಯರ ನಡವಳಿಕೆಗಳನ್ನು ಮಾನ್ಯ ಮಾಡಲು ಸಾಧ್ಯವಿಲ್ಲ. ಅಫಘಾನಿಸ್ತಾನರೇ ತಮ್ಮ ಆಪತ್ ರಕ್ಷಕರೆಂಬ ಕನಸನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ. ಅವರೇ ಭಾರತದ ರಕ್ಷಕರು ಎಂಬುದನ್ನು ನಿಶ್ಚಿತವಾಗಿ ಮಾನ್ಯ ಮಾಡಲಾಗದು. ಹಿಂದೂಗಳ ನಿರ್ಧಾರ ಏನೆಂಬುದನ್ನು ನೀವು ಅಧಿವೇಶನದಲ್ಲಿ ಸ್ಪಷ್ಟವಾಗಿ ಹೇಳಿದ್ದನ್ನು ಕೇಳಿ ನನಗೆ ಅಪಾರ ಸಂತೋಷವಾಯಿತು.''

ಬಹುದಿನಗಳ ನಂತರ ಮಧ್ಯ ಏಷ್ಯಾದಲ್ಲಿ ಒಂದು ಕಡೆ ಭಾರತದ ಓರ್ವ ಮುಹಜಿರಿನ್ ತರುಣ ಅನ್ವರ್ ಪಾಷರನ್ನು ಭೇಟಿ ಮಾಡಿದ. ಆಗ ಆ ಕ್ರಾಂತಿಕಾರಿ ಟರ್ಕ್ ಕೇಳಿದ ಮೊದಲ ಪ್ರಶ್ನೆ ಲಾಲಾಜಿ ಅವರಿಗೆ ಸಂಬಂಧಪಟ್ಟದ್ದಾಗಿತ್ತು. ಭಾರತೀಯ ನಾಯಕರಲ್ಲಿ ಅನ್ವರ್ ಪಾಷ ಅಂಥ ಆಸಕ್ತಿ ಹೊಂದಿದ್ದು ಅವರೊಬ್ಬರ ಬಗ್ಗೆ ಮಾತ್ರವೇ! ಯಂಗ್‌ಟರ್ಕ್‌ಗಳಲ್ಲಿ ಮತ್ತು ಈಜಿಪ್ಟ್‌ನಿನ ಕ್ರಾಂತಿಕಾರಿಗಳಲ್ಲಿ ಲಾಲಾಜಿ ಆತ್ಮೀಯ ಒಡನಾಟ ಸಾಧಿಸಿಕೊಂಡಿದ್ದರು. ಅವರ ನಿಯೋಗ ಭಾರತಕ್ಕೆ ಬಂದಾಗಲೆಲ್ಲಾ ಅವರಿಗೆ ಆದರ ಆತಿಥ್ಯ ನೀಡಲು ಲಾಲಾಜಿ ಹೆಮ್ಮೆಪಡುತ್ತಿದ್ದರು. ಆ ದೇಶಗಳಿಗೆ ಹೋದಾಗಲು ಅವರು ನೀಡುತ್ತಿದ್ದ ಸತ್ಕಾರಗಳನ್ನು ಅಭಿಮಾನದಿಂದ ಸ್ವೀಕರಿಸುತ್ತಿದ್ದರು.

viii

ಕೋಹತ್ ದುರಂತವಷ್ಟೇ ಅಲ್ಲದೆ ಕೋಮುವಾದದ ಹುಚ್ಚುತನದ ಕೃತ್ಯಗಳು ಲಾಲಾಜಿ ಅವರನ್ನು ಇನ್ನೂ ಅನೇಕ ರೀತಿಯಲ್ಲಿ ಹಿಂಸೆಗೆ ಒಳಪಡಿಸಿದವು. ಆ ಪೈಕಿ ಅತೀವವಾದ ವೇದನೆ ಶ್ರದ್ಧಾನಂದರ ಹತ್ಯೆ. ಇಂಥ ಘೋರ ಹಾಗೂ ಸಹಿಸಲು

ಅಸಾಧ್ಯವಾದ ಘಟನೆಗಳು ಮೇಲಿಂದ ಮೇಲೆ ನಡೆದರೂ ಸಹ ಲಾಲಾಜಿ ಅವರನ್ನು ರಾಷ್ಟ್ರೀಯ ಹಿತದ ಚಿಂತನೆ ಬಿಟ್ಟು ಕೊಡಲಿಲ್ಲ. ಅವಕಾಶ ಸಿಕ್ಕಿದಾಗಲೆಲ್ಲಾ ಹಿಂದೂ ಮುಸ್ಲಿಂ ಏಕತೆಗಾಗಿ ಶಕ್ತಿ ಮೀರಿ ಶ್ರಮಿಸುತ್ತಾ ಬಂದರು. ಅವರ ಜೀವಕ್ಕೆ ಬೆದರಿಕೆ ಬಂದದ್ದನ್ನು ಲೆಕ್ಕಿಸಲಿಲ್ಲ. ಶ್ರದ್ಧಾನಂದರ ಹತ್ಯೆಯ ಸ್ವಲ್ಪ ದಿನಗಳಲ್ಲೇ ಲಾಲಾಜಿ ಅವರಿಗೆ ಬೇನಾಮಿ ಪತ್ರವೊಂದು ಬಂದಿತು. 'ಸಂಘಟನೆ' ಚಟುವಟಿಕೆಗಾಗಿ ನಿಮ್ಮ ಜೀವದ ಬೆಲೆ ತೆರಬೇಕಾಗುತ್ತದೆ ಎಂದು ಆ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿತ್ತು. ಆ ಪತ್ರದ ಮೂಲವನ್ನು ತಮ್ಮ ಹೇಳಿಕೆಯ ಪತ್ರವೊಂದರೊಂದಿಗೆ ಲಗತ್ತಿಸಿ ಲಾಹೋರಿನ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿಕೊಟ್ಟರು. ಅದೇ ಸಮಯದಲ್ಲಿ ಒಂದು ದಿನ ಅವರು ಕೋರ್ಟ್ ಸ್ಟ್ರೀಟ್ ನಿವಾಸಕ್ಕೆ ಒಬ್ಬ ಆಗುಂತಕ ನುಸುಳಿದ. ಅನುಮಾನ ರೀತಿಯ ನಡವಳಿಕೆಯಲ್ಲಿ ಆತ ಲಾಲಾಜಿ ಅವರನ್ನೇ ಹವಣಿಸಿ ಹೊಂಚು ಹಾಕತೊಡಗಿದ. ಲಾಲಾಜಿ ಅವರ ಬೆಂಬಲಿಗರಲ್ಲಿ ಕೆಲವರು ಆತನ ಚಲನವಲನಗಳಿಂದ ಶಂಕಿತರಾಗಿ ಪ್ರಶ್ನಿಸಿದರು. ಅವನು ಕೊಟ್ಟ ಉತ್ತರ ತೃಪ್ತಿಕರವಾಗಿರಲಿಲ್ಲ. ಅಲ್ಲಿಗೆ ಬಂದ ಉದ್ದೇಶವೂ ಸ್ಪಷ್ಟವಾಗಿರಲಿಲ್ಲ. ದುರುದ್ದೇಶದಿಂದಲೇ ಆಗಮಿಸಿದ್ದಂತೆ ಕಂಡು ಬಂದಿತು. ಆತನೋರ್ವ ಮುಸಲ್ಮಾನನಂತೂ ಖಂಡಿತಾ ಆಗಿದ್ದ. ಯಾವುದೇ ಸಂದೇಶ ಹೊತ್ತು ಬಂದಿರಲಿಲ್ಲ. ಲಾಲಾಜಿ ಅವರ ಗಮನಕ್ಕೆ ಅದು ಬರುತ್ತಿದ್ದಂತೆ ಅವರು ಆತನನ್ನು ಹೇಗೆ ಬಂದಿದ್ದನೋ ಹಾಗೆಯೇ ಹೋಗಗೊಟ್ಟರು. ಪೊಲೀಸರಿಗೆ ಸುದ್ದಿ ಮುಟ್ಟಿಸುವ ಬೆಂಬಲಿಗರ ಪ್ರಯತ್ನವನ್ನು ತಡೆಗಟ್ಟಿದರು. ತದನಂತರ ಲಾಲಾಜಿ ಜಾಗೃತರಾಗಲೇ ಬೇಕಾಯಿತು. ತಮ್ಮೊಂದಿಗೆ ರಿವಾಲ್ವರ್‌ನ್ನು ಇಟ್ಟುಕೊಂಡೇ ಇರುತ್ತಿದ್ದರು. ಅವರ ಬೆಂಬಲಿಗರು ಹಾಗೂ ಕಟ್ಟಾ ಅನುಯಾಯಿಗಳು ಸಾಧ್ಯವಾದಷ್ಟು ರಕ್ಷಣೆ ಒದಗಿಸತೊಡಗಿದರು. ಒಂಟಿಯಾಗಿ ಎಲ್ಲಿಗೂ ಹೋಗಲು ಬಿಡುತ್ತಿರಲಿಲ್ಲ. ಆದರೂ ಆ ಬೆಳವಣಿಗೆಗಳ ಬಗ್ಗೆ ಯಾವುದೇ ಸದ್ದು, ಪ್ರಚಾರ ಮಾಡಲಿಲ್ಲ. ಬೆದರಿಕೆಯ ಪತ್ರವಾಗಲಿ, ಶಂಕಾಸ್ಪದ ಆಗುಂತಕನ ನಡವಳಿಕೆಯನ್ನಾಗಲಿ ಬಯಲಾಗಲು ಬಿಡಲಿಲ್ಲ. ನನ್ನ ನೆನಪಿನಲ್ಲಿರುವಷ್ಟರ ಮಟ್ಟಿಗೆ ಇದಾವುದೂ ಸಹ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲಿಲ್ಲ.

ix

ಧರ್ಮದ ಬಗ್ಗೆ ಗಾಂಧೀಜಿ ಕೊಡುತ್ತಿದ್ದ ಒತ್ತು ಲಾಲಾಜಿ ಅವರನ್ನು ತೀವ್ರ ಸಂವೇದನೆಗೆ ಒಳಪಡಿಸುತ್ತಿತ್ತು. ಎಲ್ಲದರ ಬಗ್ಗೆಯೂ ಸಹಿಷ್ಣುತೆ ವಹಿಸುವಂತೆ ಮಹಾತ್ಮ ಮಾಡುತ್ತಿದ್ದ ಬೋಧನೆಯು ವೇದನೆಯನ್ನು ಹೆಚ್ಚಿಸುತ್ತಿತ್ತು. ಯಾವುದನ್ನು ಮಹಾತ್ಮ ಪವಿತ್ರದ ದೃಷ್ಟಿಯಿಂದ ಸಿದ್ಧಾಂತವಾಗಿ ನಿರೂಪಿಸ ಹೊರಟಿದ್ದರೋ ಅದು ಅವರ ಮೂಲ ಉದ್ದೇಶವನ್ನೇ ಕಡೆಗಣಿಸಿ ಕಗ್ಗಂಟನ್ನೇ ಸೃಷ್ಟಿಸುತ್ತಾ ಹೊರಟಿತು. ಧರ್ಮ ಹಾಗೂ ಸಹಿಷ್ಣುತೆಯ ಅವರ ನಿರೂಪಣೆ ಮತಾಂಧತೆ ಅಲ್ಲದೆ ಬೇರಾವ ಸ್ವರೂಪವನ್ನು ತಾಳುತ್ತಿರುವಂತೆ ಕಂಡು ಬರುತ್ತಿರಲಿಲ್ಲ. ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ

ಸಮಾನತೆ ಮತ್ತು ಪರಸ್ಪರ ಕೊಡು ಕೊಳ್ಳುವ ಪರಿಭಾಷೆಯ ಮೇಲೆ ಸುಸ್ಥಿರವಾದ ಮೂರ್ತ ರೂಪದ ಇತ್ಯರ್ಥ ಏರ್ಪಡಿಸಲು ಲಾಲಾಜಿ ಸದಾ ಹಾತೊರೆಯುತ್ತಾ ಬಂದರು.

ಆ ನಿಟ್ಟಿನಲ್ಲಿ ಹಿಂದೂ ಸಮುದಾಯದಿಂದ ಮುಸ್ಲಿಮರಿಗೆ 'ಬ್ಲಾಂಕ್ ಚೆಕ್' ರೀತಿಯ ಸಮರ್ಪಣೆಗೂ ಅವರು ಸಿದ್ಧತೆ ನಡೆಸಿದರು. ವಿಚಿತ್ರವೆಂದರೆ ಮುಸ್ಲಿಂ ನಾಯಕರು ಅತ್ಯುನ್ನತ ಔದಾರ್ಯವನ್ನು ನಗದು ಮಾಡಿಕೊಳ್ಳದಷ್ಟು ಮತಾಂಧರಾದರು. ಮುಸ್ಲಿಂ 'ಖಾಂದನಿ' (20ನೇ ಶತಮಾನದ ಆದಿ ಭಾಗದಲ್ಲಿ ಗಾಂಧೀಜಿ ಬಳಸುತ್ತಿದ್ದ ಅಚ್ಚುಮೆಚ್ಚಿನ ನುಡಿಗಟ್ಟು) ರಾಜಿಗೆ ಒಡಂಬಡಲಿಲ್ಲ. ಸಮಸ್ಯೆ ಬಗೆಹರಿಸಲು; ಅದು ಸಹಾಯಕವಾಗಲಿಲ್ಲ. ಲಾಲಾಜಿ ಚರಿತ್ರೆಯಲ್ಲಿ ತಾವು ಓದಿದ್ದೆಲ್ಲವನ್ನು ತಮ್ಮ ನಿಲುವಿಗೆ ಆಧಾರ ಮಾಡಿಕೊಳ್ಳಲು, ತನ್ಮೂಲಕ ಮುಸ್ಲಿಂ ಸಮುದಾಯದ ಮನ ಒಲಿಸಲು ನಡೆಸಿದ ಪ್ರಯತ್ನಗಳು ಫಲ ಕೊಡಲಿಲ್ಲ. ಸಮಕಾಲೀನ ಭಾರತೀಯ ವೇದಿಕೆಯಲ್ಲಿ ಇಸ್ಲಾಂ ತತ್ವದ ವಾಸ್ತವಿಕತೆಗಳು ಸಂಗತವಾಗಲಿಲ್ಲ. ಲಾಲಾಜಿ ಮುಸಲ್ಮಾನ ಸಮುದಾಯದ ಮುಂದಿಟ್ಟ 'ಬ್ಲಾಂಕ್ ಚೆಕ್' ಪರಿಗೆ ಹಿಂದೂಗಳಲ್ಲೂ ಒಂದು ವರ್ಗದ ಸಮ್ಮತಿ ಇರಲಿಲ್ಲ. ಅತ್ತ ಮುಸ್ಲಿಮರು ಸಹ ಅದರ ಬಗ್ಗೆ ವಿಶ್ವಾಸ ತೋರಲಿಲ್ಲ. ತಮ್ಮನ್ನು ದಾರಿ ತಪ್ಪಿಸುವ ಇಲ್ಲವೇ ವಂಚಿಸುವ ಕ್ರಮವೆಂದು ಆ ಸಮುದಾಯ ಅಪಾರ್ಥ ಮಾಡಿಕೊಂಡಿದ್ದು ಇಂದು ಸ್ಪಷ್ಟವಾಗಿ ಗೋಚರವಾಗುತ್ತದೆ. 20ನೇ ಶತಮಾನದ ಆದಿ ಭಾಗದಲ್ಲಿ ಗಾಂಧೀಜಿ ಪ್ರಣೀತಗೊಳಿಸಿದ ಸೈದ್ಧಾಂತಿಕ ನಿಲುವು ಧೋರಣೆಗಳನ್ನು ಲಾಲಾಜಿ ಸಂಪೂರ್ಣವಾಗಿ ಸ್ವೀಕರಿಸಲಿಲ್ಲ. ಕಾರಣ ಪರಿಸ್ಥಿತಿಯ ಹಿನ್ನಲೆಯಲ್ಲಿ ಆ ಸಿದ್ಧಾಂತದಲ್ಲೂ ವಾಸ್ತವಿಕತೆಯ ಅಭಾವವಿತ್ತು. ಅನುಷ್ಠಾನದಲ್ಲಿದ್ದ ರಾಜಕಾರಣದ ನಡವಳಿಕೆಗೆ ಅದು ಹೊಂದಿಕೊಳ್ಳುತ್ತಿರಲಿಲ್ಲ.

ಲಾಲಾಜಿ ತಮ್ಮದೇ ಧಾಟಿಯಲ್ಲಿ ಹಿಂದೂ ಮುಸ್ಲಿಂ ಸಮಸ್ಯೆ ಬಗ್ಗೆ ಪರಿಹಾರೋಪಾಯಗಳನ್ನು ರೂಪಿಗೊಳಿಸಲು ಕಾರ್ಯಶೀಲರಾಗಿದ್ದಕ್ಕೆ ಇದೇ ಹಿನ್ನಲೆ. ಎಷ್ಟೇ ಗಟ್ಟಿತನವಿದ್ದರೂ ಪರಿಸ್ಥಿತಿಯ ಚೌಕಟ್ಟಿನೊಳಗೆ ನಯ ನಾಜೂಕಿನಿಂದ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಿದೆ ಎಂಬ ನಂಬಿಕೆ ಅವರದಾಗಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದ್ದಾಗಲೇ ಲಾಲಾಜಿ ಹಿಂದೂ ಮುಸ್ಲಿಂ ಐಕ್ಯತೆಯ ಸಾಧನೆಯ ಬಗ್ಗೆ ಕೇವಲ ಚಿಂತನೆಯನ್ನಷ್ಟೇ ನಡೆಸಿರಲಿಲ್ಲ. ಕಾರ್ಯಶೀಲರೂ ಆಗಿದ್ದರು. ನಾವೀಗಾಗಲೇ ಓದಿರುವಂತೆ ಭಾರತಕ್ಕೆ ಮರಳುವ ಮೊದಲು ಅವರು ಅಲ್ಲಿಂದಲೇ ಕೊಟ್ಟ ಕರೆ ಅದಕ್ಕೆ ಒಂದು ಉದಾಹರಣೆ. ಮುಂದೆ ಹಿಂದೂಗಳನ್ನು ಕೋಮು ವೇದಿಕೆಯಲ್ಲಿ ಸಂಘಟಿಸುವ ಅಗತ್ಯ ಬಂದಾಗಲೂ ಸಹ ಅವರು ತಾವು ಹಿಂದೆ ಕೊಟ್ಟಿದ್ದ ಎಚ್ಚರಿಕೆಯನ್ನೇ ಪುನರುಚ್ಚರಿಸಿದರು.

ಕೋಮು ವಿವಾದವನ್ನು ಆಯಾ ಕೋಮು ನಡವಳಿಕೆಗಳ ನೆಲೆಗಟ್ಟಿನಲ್ಲಿ ಬಗೆಹರಿಸಬೇಕೆಂಬುದನ್ನು ಲಾಲಾಜಿ ತಮ್ಮ ಒಳಗಣ್ಣಿನಿಂದ ಕಂಡು ಕೊಂಡಿದ್ದರು. ಹಿಂದೂ ಮಹಾ ಸಭೆ ಆಘಾತಕಾರಿಯಾಗುವ ರೀತಿಯಲ್ಲಿ ಕಾರ್ಯ ಮಾಡದಿರಲು ಅವರು ಕಡಿವಾಣ ಹಾಕಿದ್ದು ಇದೇ ಹಿನ್ನಲೆಯಲ್ಲೇ. ಕೊನೆಯತನಕ ಮಹಾಸಭೆಯ ಟಿಕೆಟ್ ಮೇಲೆ ಅಭ್ಯರ್ಥಿಗಳು ಚುನಾವಣಾ ಕಣಕ್ಕೆ ಇಳಿಯಲು ಅವಕಾಶ ಕೊಡಲಿಲ್ಲ ಅವು. ರಾಷ್ಟ್ರೀಯ ಕಾಂಗ್ರೆಸ್ಸಿನ ದೃಷ್ಟಿಯಲ್ಲಿ ಲಾಲಾಜಿ ಅವರನ್ನು ಅಪಾರ್ಥಕ್ಕೆ ಎಡೆ

ಮಾಡಿಕೊಟ್ಟಿತು. ಲಾಲಾಜಿ ಅವರ ಅಮೆರಿಕ ದಿನಗಳ ಸಮಯದಲ್ಲಿ ಘೋಷಿತವಾಗಿದ್ದ ಹಿಂದೂ ಮುಸ್ಲಿಂ ಏಕತೆ ಕುರಿತ ಘೋಷಣೆ ಬಗ್ಗೆ ಚಿಂತನೆ ಇನ್ನೂ ಮುಂದುವರೆದಿತ್ತು. ಲಾಲಾಜಿ ತಮ್ಮ ಬದುಕಿನ ಅಂತಿಮ ದಿನಗಳಲ್ಲಿ ಮೋತಿಲಾಲಾ ನೆಹರು ಪ್ರಣೀತ ಆ ಆಧಾರದ ಮೇಲೆ ಇತ್ಯರ್ಥಕ್ಕಾಗಿ ಶ್ರಮಿಸುತ್ತಲೇ ಬಂದರು. ತಾವು ದುರ್ಘಟನೆಯಲ್ಲಿ ಈ ಲೋಕದ ಬದುಕಿಗೆ ತೆರೆ ಎಳೆಯುವುದಕ್ಕೆ ಮೂರು ವಾರಗಳ ಮೊದಲು, ಇಟಾವದಲ್ಲಿ ಜರುಗಿದ ಹಿಂದೂ ಸಮ್ಮೇಳನಕ್ಕೆ ಬರೆದು ಕಳುಹಿಸಿದ ತಮ್ಮ ಕಟ್ಟ ಕಡೆಯ ಅಧ್ಯಕ್ಷೀಯ ಭಾಷಣದಲ್ಲಿ ಲಾಲಾಜಿ ಹಿಂದೂ ಮುಸ್ಲಿಂ ಸಾಮರ್ಥ್ಯವನ್ನೇ ಪ್ರತಿಪಾದಿಸಿದರು. ಎರಡೂ ಸಮುದಾಯಗಳಿಗೆ ಹೃದಯಪೂರ್ವಕ ವಿನಂತಿ ಮಾಡಿದರು. ನೆಹರು ವರದಿ ಆಧಾರದ ಮೇಲೆ ಹೊಂದಾಣಿಕೆ ಸಾಧಿಸಿಕೊಳ್ಳಲು ಕರೆ ಕೊಟ್ಟರು. ಈ ವಿಷಯದಲ್ಲಿ ಮೋತಿಲಾಲರು ಹಾಗೂ ಲಾಲಾಜಿ ಸಂಪೂರ್ಣವಾಗಿ ಸಮಾನ ಮನಸ್ಕರಾಗಿದ್ದರು. ಸಮಸ್ಯೆಯ ಆಳ, ಸೂಕ್ಷ್ಮತೆಗಳನ್ನು ಬೇರು ಸಹಿತ ಅರ್ಥ ಮಾಡಿಕೊಂಡಿದ್ದರು. ಏಕತೆ ಸಾಧಿತವಾಗದಿದ್ದರೆ ಪರಿಸ್ಥಿತಿ ಘೋರವಾಗುತ್ತದೆ ಎಂದು ಇಬ್ಬರು ಮನಗಂಡಿದ್ದರು. ಆದರೆ ಏಕತೆ ಸಾಧಿಸುವ ನಿಟ್ಟಿನಲ್ಲಿ ಅವರಿಬ್ಬರು ಹಿಡಿದ ಜಾಡು ಮಾತ್ರ ಭಿನ್ನವಾಗಿತ್ತು. ಲಾಲಾಜಿ ಹಿಂದೂ ಮಹಾಸಭಾ ವೇದಿಕೆಯಲ್ಲಿ ನಿಂತು ಹಿಂದೂಗಳ ಪ್ರತಿನಿಧಿಯಾಗಿ ಕೋಮು ಚೌಕಟ್ಟಿನಲ್ಲಿ ಸಮನ್ವಯದ ಕಾರ್ಯದಲ್ಲಿ ತೊಡಗಿದರು. ಮೋತಿಲಾಲರು ಆ ವೇದಿಕೆಯ ಬಳಿಗೂ ಸುಳಿಯಲಿಲ್ಲ. ವಿಚಾರವೇತ್ತ ರಾಜಕಾರಣಿಯಾಗಿ ಮೋತಿಲಾಲರು ಲಾಲಾಜಿ ಕೈಗೊಂಡ ದಾರಿಯನ್ನು ಪ್ರಶಂಸಿಸಿರಲೇಬೇಕು. ತಮ್ಮ ವರದಿಯು ಫಲಕಾರಿಯಾಗಬೇಕಾದರೆ ಲಾಲಾಜಿ ಹಿಡಿದಿದ್ದ ಮಾರ್ಗ ಉಪಯೋಗಕಾರಿ, ತೀರಾ ಅವಶ್ಯಕವಾದದ್ದೆಂದು ಅವರು ವಿಮರ್ಶಿಸಿರಲೇ ಬೇಕು.

ಸ್ವತಂತ್ರ ನಂತರ - ಮತ್ತು ವಿಭಜನೆಯ ನಂತರವೂ ಹಿಂದೂ ಮುಸ್ಲಿಂ ಏಕತೆ ರಾಜಕಾರಣ ಮುತ್ಸದ್ಧಿತನದಲ್ಲಿ ಮೆರೆದಿಲ್ಲ. ಆದರೂ, ಭಾರತೀಯ ಸಂವಿಧಾನದಲ್ಲಿ ನೆಹರು ಪ್ರಣೀತ ಆದ್ಯತೆಗಳನ್ನು ಅಳವಡಿಸಲಾಗಿದೆ. ಮುಸ್ಲಿಂ ಸಮುದಾಯಕ್ಕೆ ಪ್ರಾತಿನಿಧ್ಯದ ಅವಕಾಶ ಮಾಡಿಕೊಡಲಾಗಿದೆ. ಅದರಿಂದಲೂ ಸಮಸ್ಯೆ ಇತ್ಯರ್ಥವಾಗಿಲ್ಲ. ಕೇವಲ ಭಾಗಶಃ ಹೊಂದಾಣಿಕೆ ಆಗಿದೆ. ಇಡೀ ಒಡಂಬಡಿಕೆ ಸಾಧ್ಯವಾಗಿಲ್ಲ.

ಲಾಲಾಜಿಯವರು ಹಿಂದೂ ಮುಸ್ಲಿಂ ವೈಷಮ್ಯದ ಬಗ್ಗೆ ಪ್ರಾಮಾಣಿಕ, ವಾಸ್ತವಿಕ ಹಾಗೂ ವಿಸ್ತೃತ ಅಧ್ಯಯನವನ್ನು ಆಳವಾಗಿ ಕೈಗೊಂಡರು. 1924ರಲ್ಲಿ ಕೈಗೊಂಡ ಈ ಅಧ್ಯಯನವನ್ನು 13 ಸರಣಿ ಲೇಖನಗಳ ಮೂಲಕ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಆ ಎಲ್ಲಾ ಲೇಖನಗಳನ್ನು ಕ್ರೋಡಿಕರಿಸಿ ಕೈಪಿಡಿಯೊಂದನ್ನು ಹೊರ ತರಲಾಯಿತು. ಕೈಪಿಡಿಯ ಪುಟ ಪುಟವು ಅನೇಕ ಬಾರಿ ಪುನರ್ ಮುದ್ರಣಗೊಂಡಿತು. ಅವರು ತಮ್ಮ ಅಧ್ಯಯನದಲ್ಲಿ ವ್ಯಕ್ತಪಡಿಸಿದ ಐಕ್ಯತೆ, ಆಕಾಂಕ್ಷೆಗಳು ಮತ್ತು ಮೈತ್ರಿ ಸೌಹಾರ್ದದ ಬಗ್ಗೆ ನೀಡಿದ ಅನೇಕ ಸಲಹೆಗಳು ಇಂದಿಗೂ ಕಾಲೋಚಿತವಾಗಿದೆ. 1967ರ ನಂತರ ಭಾರತದ ಭೂಪಟವನ್ನು ಹೊಸದಾಗಿ ಬರೆದಿದ್ದರೂ, ಅನೇಕ ಚಿಂತನೆಗಳು ಕಾಲಾತೀತವಾಗಿದ್ದರೂ ಹಿಂದೂ ಮುಸ್ಲಿಂ ಸಹಬಾಳ್ವೆಯ ಬಗ್ಗೆ ಲಾಲಾಜಿಯವರು ಮಾಡಿದ ಚಿಂತನೆಗಳು ಸಾರ್ವಕಾಲಿಕ ಎನಿಸಿವೆ.

ಲಾಲಾಜಿ ಅವರ 'ಕೋಮುವಾದ' ಮತ್ತು ರಾಷ್ಟ್ರೀಯವಾದದ ಬಗ್ಗೆ ತಿಳಿದುಕೊಳ್ಳಲು ಯಾರಾದರೂ ಆಸಕ್ತಿ ಹೊಂದಿದ್ದರೆ ಅವರಿಗೆ ನಾವು ಈ ಕೈಪಿಡಿಯನ್ನು ಓದುವಂತೆ ನೇರವಾಗಿ ಸಲಹೆ ಮಾಡಬಹುದು. ಜೊತೆಗೆ ತಾವು ಪಾಲ್ಗೊಂಡ ಎಲ್ಲಾ ಹಿಂದೂ ಸಮ್ಮೇಳನಗಳಲ್ಲಿ ಅವರು ಮಾಡಿದ ಭಾಷಣಗಳ ಹೊತ್ತಿಗೆಯನ್ನು ಸಹ ಓದುವಂತೆ ಸೂಚಿಸಬಹುದು.*

ಲಾಲಾಜಿ ಅವರು ಹಿಂದೂ ಮುಸ್ಲಿಂ ವೈಷಮ್ಯದ ಬಗ್ಗೆ ಕೇವಲ ಇತ್ಯರ್ಥವನ್ನಷ್ಟೇ ಬಯಸಲಿಲ್ಲ. ಅದೊಂದರಿಂದಲೇ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಯುತ್ತದೆ ಎಂದು ಅವರು ಮನಗಂಡಿರಲೂ ಇಲ್ಲ. ಶಿಕ್ಷಣದ ಮೂಲಕ ವಾಸ್ತವಿಕ ನೆಲೆಗಟ್ಟಿನಲ್ಲಿ ಪರಿವರ್ತನೆಯ ಸಮಗ್ರಿಕರಣರಾಗಬೇಕೆಂದು ಅವರು ಬಯಸಿದರು. ಲಾಲಾಜಿ ಅವರ ಕೊಡುಗೆಯನ್ನು ಈ ನಿಟ್ಟಿನಲ್ಲಿ ಅವರ ರಾಷ್ಟ್ರೀಯ ಶಿಕ್ಷಣದ ಹೊತ್ತಿಗೆಯಲ್ಲಿ ಗಮನಿಸಬಹುದು. ಮುಸ್ಲಿಂ ಆಳ್ವಿಕೆಯ ಇತಿಹಾಸವನ್ನು ಪುನಃ ರಚಿಸಬೇಕೆಂಬ ಸಂಕೀರ್ಣ ಸಮಸ್ಯೆಯನ್ನು ಸಹ ಅವರು ಅರ್ಥಗರ್ಭಿತವಾಗಿ ಅದರಲ್ಲಿ ಅಳವಡಿಸಿದ್ದಾರೆ. ಸ್ವತಃ ಜಕೀರ್ ಹುಸೇನ್ ಅವರಂತಹ ಮಹಾ ಮೇಧಾವಿಗಳೇ ಲಾಲಾಜಿ ಅವರ ಕೊಡುಗೆಯನ್ನು ಅತಿ ಎತ್ತರದ ಪದಗಳಲ್ಲಿ ಶ್ಲಾಘಿಸಿದ್ದಾರೆ. ಶತಮಾನದೋತ್ಸವದ ನೆನಪಿಗಾಗಿ ಹೊರತಂದ ಆ ಪುಸ್ತಕದ ಪುನರ್ ಮುದ್ರಣಕ್ಕೆ ಬರೆದ ಡಾ. ಹುಸೇನ್ ಅವರ ಮುನ್ನುಡಿ ಇದಕ್ಕೊಂದು ಸಾಕ್ಷಿ.

X

ನೆಹರು ಕೈಗೊಂಡ ಯೋಜನೆಗೆ ಹಿಂದೂಗಳ ಬೆಂಬಲವನ್ನು ಕ್ರೋಡಿಕರಿಸಲಷ್ಟೇ ಮೋತಿಲಾಲ್‌ಜಿ, ಲಾಲಾಜಿ ಅವರನ್ನು ಬಹುವಾಗಿ ಅವಲಂಬಿಸಲಿಲ್ಲ ಎಂಬುದು ಇಲ್ಲಿ ಗಹನವಾದದ್ದು; ಜಿನ್ನಾ ಅವರಂಥ ವಿಶಿಷ್ಟ ಮುಸ್ಲಿಂ ನಾಯಕರ ಬೆಂಬಲವನ್ನು ಸಮನ್ವಯ ಮಾಡಿಕೊಳ್ಳಲು ಅವರು.ಲಾಲಾಜಿ ಅವರನ್ನು ಬೆಂಬಲಿಸಿದರು. ಆ ದಿನಗಳ ಸಂದರ್ಭ ಸನ್ನಿವೇಶದ ಮಾಹಿತಿ ಅಂಶಗಳನ್ನು ಸಮಗ್ರವಾಗಿ ಪರಿವೀಕ್ಷಿಸಿದರೆ ಲಾಲಾಜಿ ಅವರ ಕೊಡುಗೆ ಯಾವುದೇ ಇತರ ಕಾಂಗ್ರೆಸ್ ನಾಯಕರ ಕೊಡುಗೆಗಿಂತ ವಿಶಿಷ್ಟವಾಗಿತ್ತೆಂಬುದು ಎದ್ದು ನಿಲ್ಲುತ್ತದೆ. ಲಾಲಾಜಿ ಅವರು ಸೈಮನ್ ಆಯೋಗದ ವಿರುದ್ಧ ಪ್ರಬಲ ಪ್ರತಿರೋಧ

* ಈ ಸರಣಿಯನ್ನು ಪಿ.ಸಿ. ಜೋಷಿಯವರ ಎರಡನೇ ಸಂಪುಟದ ಅವತರಣಿಕೆಯಲ್ಲಿ ಅಳವಡಿಸಲಾಗಿದೆ. ಹಿಂದೂ ಮುಸ್ಲಿಂ ಸಮಸ್ಯೆಯ ಬಗ್ಗೆ ಲಾಲಾ ಲಜಪತ್‌ರಾಯ್ ಅವರ 'ಬರಹಗಳು ಮತ್ತು ಲೇಖನಗಳು' ಶೀರ್ಷಿಕೆಯಡಿಯಲ್ಲಿ. (ನವದೆಹಲಿ, ಸರ್ವೆಂಟ್ಸ್ ಆಫ್ ದಿ ಪೀಪಲ್ ಸೊಸೈಟಿ 1966) ಸಂಪುಟ 2 ಪುಟ 170-222.

ಒಡ್ಡಿದವರು. ಅದಕ್ಕೆ ಅವರು ಜಿನ್ನಾ ಅವರ ಬೆಂಬಲವನ್ನು ಸಂಪೂರ್ಣವಾಗಿ ಸಮನ್ವಯ ಮಾಡಿಕೊಂಡರು. ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಸಹ ಲಾಲಾಜಿ ಅವರು ಜಿನ್ನಾ ಬೆಂಬಲವನ್ನು ಕ್ರೋಡಿಕರಿಸಿ ನೆಹರು ಯೋಜನೆಯ ಯಶಸ್ಸಿಗೆ, ಸರ್ವ ಪಕ್ಷಗಳ ಸಮ್ಮೇಳನವನ್ನು ಸಮನ್ವಯಗೊಳಿಸಲು ನೆರವಾದರು. ಮಹಮದಲಿ ಜಿನ್ನಾ ಜೊತೆ ಸಾಮಾನ್ಯವಾಗಿ ಲಾಲಾಜಿ ಅವರ ಕಾರ್ಯ ವಿಧಾನ ಸುಲಲಿತವಾಗಿತ್ತು. ಅಸಹಕಾರ ಚಳವಳಿ ಪೂರ್ವದ ದಿನಗಳಲ್ಲಿ ಅವರಿಬ್ಬರು ಕಲೆತು ಕೆಲಸ ಮಾಡುತ್ತಿದ್ದರು.

ಮಹಾತ್ಮ ಗಾಂಧೀ ಸಂಘಟನೆ ಅಧಿಕಾರದ ಸ್ಥಾನಕ್ಕೆ ಬಂದ ನಂತರ ಜಿನ್ನಾ ಕಾಂಗ್ರೆಸ್ಸಿನಿಂದ ದೂರವಾದರೂ ಲಾಲಾಜಿ ಶಾಸನಸಭೆ ಪ್ರವೇಶಿಸಿದ ನಂತರ ಮತ್ತೆ ಕಲೆತು ಕೆಲಸ ಮಾಡತೊಡಗಿದರು. ಅದೆಷ್ಟೋ ಸಂದರ್ಭಗಳಲ್ಲಿ ಅವರಿಬ್ಬರು ಶಾಸನಸಭೆಯ ಕಾರ್ಯ ಕಲಾಪಕ್ಕೆ ಹೊರತಾದ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದದ್ದು ಸಾಮಾನ್ಯವಾಗಿರುತ್ತಿತ್ತು. ಅಂಥ ವಿಷಯಗಳಲ್ಲಿ ಹಿಂದೂ ಮುಸ್ಲಿಂ ಬಾಂಧವ್ಯದ ಮುಖಗಳೇ ಹೆಚ್ಚಾಗಿರುತ್ತಿದ್ದವು. ಕೆಲವು ಸಲ ಅವರು ಪರಸ್ಪರ ದೃಷ್ಟಿ ತಾಗದಷ್ಟು ವಿರುದ್ಧ ಮನಸ್ಕರಾಗುತ್ತಿದ್ದರು. ಭಿನ್ನಾಭಿಪ್ರಾಯಗಳು ಪರಾಕಾಷ್ಠೆಗೆ ಏರುತ್ತಿದ್ದವು. ಬಹಿರಂಗದಲ್ಲಿ ಒಬ್ಬರನ್ನೊಬ್ಬರು ಕಟುವಾಗಿ ಟೀಕಿಸುತ್ತಿದ್ದರು. ಆದರೆ ಅವರ ಆಯಾ ಭಿನ್ನಮತಗಳು ಆಯಾ ವಿಷಯಗಳಿಗಷ್ಟೇ ಸೀಮಿತವಾಗಿರುತ್ತಿದ್ದವು. ಬೇರೆಯ ವಿಷಯಕ್ಕೆ ಸಂಬಂಧಪಟ್ಟಂತೆ ಇಬ್ಬರು ಸನ್ನಿಹಿತರಾಗಿ ಬಿಡುತ್ತಿದ್ದರು.

ಸೈಮನ್ ಆಯೋಗದ ಬಹಿಷ್ಕಾರ ಕಾರ್ಯಕ್ರಮದಲ್ಲಿ ಅವರ ಅನ್ಯೋನ್ಯತೆ ಅನ್ಯಾದೃಶ್ಯವಾಗಿತ್ತು. ಶಾಸನಸಭೆ ಅಧಿವೇಶನವಿರುತ್ತಿದ್ದ ಕಾಲದಲ್ಲಿ ಜಿನ್ನಾ ಹೇಳದೆ ಕೇಳದೆ, ಪೂರ್ವ ಸೂಚನೆ ಇಲ್ಲದೆ ಲಾಲಾಜಿ ಅವರ ಕೋಣೆಗೆ ನುಗ್ಗುತ್ತಿದ್ದರು. ಕೆಲವೊಮ್ಮೆ ದಿನದಲ್ಲಿ ಅದೆಷ್ಟೋ ಬಾರಿ ಹಾಗೆ ಮಾಡುತ್ತಿದ್ದರು. ಲಾಲಾಜಿಯು ಅದರಿಂದ ಹೊರತಾಗಿರಲಿಲ್ಲ. ಇಬ್ಬರು ಕಲೆತು ಅಭಿಪ್ರಾಯ ಸಮನ್ವಯ ಮಾಡಿಕೊಂಡು ಒಟ್ಟಿಗೆ ಶಾಸನಸಭೆಗೆ ಹೋಗುತ್ತಿದ್ದರು. ಇಬ್ಬರು ಒಟ್ಟಿಗೆ ವಿಷಯವೊಂದನ್ನು ಚರ್ಚಿಸಿ ಅದರ ಮುಂದಿನ ಹರವು ವೈವಿಧ್ಯತೆಯ ಬಗ್ಗೆ ಚರ್ಚಿಸಲು ಮಾಳವೀಯರ ಬಳಿಗೆ ತೆರಳುತ್ತಿದ್ದರು. ಯಾವುದೇ ವಿಧಿ ವಿಧಾನಗಳನ್ನು ಅವರಿಬ್ಬರು ಪರಿಗಣಿಸುತ್ತಿರಲಿಲ್ಲ. ಸಂಬಂಧಪಟ್ಟ ವಿಷಯದಲ್ಲಿ ಫಲಿತಾಂಶ ಏನೇ ಆಗಲಿ ಯಾರು ಯಾರನ್ನು ಮೊದಲು ಕಾಣಬೇಕೆಂಬ ವಿಷಯದಲ್ಲಿ ಹಿಂದು ಮುಂದೆ ನೋಡುತ್ತಿರಲಿಲ್ಲ. 1930-40ರ ದಶಕದಲ್ಲಿ ಹೀಗೆ ಅದೆಷ್ಟೋ ಬಾರಿ ಅವರಿಬ್ಬರ ನಡುವೆ ಸರಸ ವಿರಸಗಳು ನಡೆಯಿತು. ಕೇಂದ್ರ ಶಾಸನಸಭೆಯಲ್ಲಿ ಜಿನ್ನಾ ಅವರ ಮುಸ್ಲಿಂ ಲೀಗ್ ಪಕ್ಷವಿರಲಿಲ್ಲ. ಪಕ್ಷೇತರರ ಸಣ್ಣ ಗುಂಪೊಂದಕ್ಕೆ ಅವರು ನಾಯಕರಾಗಿದ್ದರು ಅಷ್ಟೇ. ಲಾಲಾಜಿ, ಜಿನ್ನಾ ಇಬ್ಬರೂ ವಿರೋಧಿ ನಾಯಕರು. ಸಮಾಜವಾದಿ ನಾಯಕ ಮತ್ತು ಪಕ್ಷೇತರ ಗುಂಪಿನ ನಾಯಕರ ನಡುವೆ ಸಂಧಾನ, ಅನುಸಂಧಾನಗಳು ಅಷ್ಟೇನೂ ಮೃದುವಾಗಿಯೂ ಇರಲಿಲ್ಲ. ಕೋಮು ಇತ್ಯರ್ಥದ ವಿಷಯದಲ್ಲಿ ಲಾಲಾಜಿ ಮತ್ತು ಜಿನ್ನಾ ಅನುಕೂಲಕರವಾದ ಸೂತ್ರವನ್ನು ಕಂಡುಕೊಳ್ಳಲು ಸಾಧ್ಯವಾಗಲೂ ಇಲ್ಲ. ಆದರೆ ಶಾಸನಸಭೆಯ ಇತರ ಕಲಾಪಗಳಲ್ಲಿ ಬಹುಮಟ್ಟಿಗೆ ಅವರಿಬ್ಬರು ಏಕಮನಸ್ಕರಾಗಿರುತ್ತಿದ್ದರು. ಸಹಕಾರವಿರುತ್ತಿತ್ತು.

XI

1926ರ ಚುನಾವಣೆಗಳ ಬಗ್ಗೆ ಜವಹರ್‌ಲಾಲ್ ನೆಹರು ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಬರೆದು ಕೊಂಡಿದ್ದಾರೆ;*

ನಮ್ಮಿಬ್ಬರ ಮಾತುಕತೆಯಲ್ಲಿ ಕಾಂಗ್ರೆಸ ಪಕ್ಷದ ಬಗ್ಗೆ ಅವರು ಉಗ್ರ ಧೋರಣೆ ಹೊಂದಿದ್ದ ಅಂಶ ನನ್ನ ಗಮನಕ್ಕೆ ಬರಲಿಲ್ಲ... ಆದರೆ ಚುನಾವಣಾ ಪ್ರಚಾರದ ಸಮಯದಲ್ಲಿ ಅವರು ಕೆಲವು ನಿರ್ದಿಷ್ಟ ಆರೋಪಗಳನ್ನು ಮಾಡಿದರು. ಅವರ ಮನಸ್ಥಿತಿ ಹೇಗಿತ್ತು ಎಂಬುದು ಅದರಿಂದ ವ್ಯಕ್ತವಾಯಿತು. ಕಾಂಗ್ರೆಸ್ ಮುಖಂಡರುಗಳು ಭಾರತದ ಹೊರಗಿರುವ ಕೆಲವು ಜನರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆಂಬುದು ಅವರ ಆರೋಪವಾಗಿತ್ತು. ಅಂಥ ಹೊಂದಾಣಿಕೆಯ ಸಲುವಾಗಿ ಕಾಬೂಲ್‌ನಲ್ಲಿ ಕಾಂಗ್ರೆಸ್ ಶಾಖೆಯೊಂದನ್ನು ಸ್ಥಾಪಿಸಲಾಗಿದೆ ಎಂದು ಸಹ ಅವರು ಆರೋಪಿಸಿದ್ದರು...

"ಆ ಬೇಸಿಗೆಯಲ್ಲಿ ನಾನು ಜಿನೀವಾದಲ್ಲಿ ಲಾಲಾಜಿಯವರನ್ನು ಭೇಟಿ ಮಾಡಿದ್ದೆ. ನನ್ನ ನೆನಪಿರುವಷ್ಟರ ಮಟ್ಟಿಗೆ ಭಾರತದ ವೃತ್ತಪತ್ರಿಕೆಗಳಲ್ಲಿ ಲಾಲಾಜಿ ಅವರ ಆರೋಪಗಳನ್ನು ಓದಿ ನನಗೆ ಆಶ್ಚರ್ಯವಾಯಿತು. ಕಾಂಗ್ರೆಸ್ ಕಾರ್ಯದರ್ಶಿಯಾಗಿ ನನಗೆ ನನ್ನ ಸಂಘಟನೆಯ ಎಲ್ಲಾ ಸಂಗತಿಗಳು ಗೊತ್ತಿದ್ದವು. ಕಾಬೂಲ್ ಸಮಿತಿಯು ಅಂಗೀಕೃತವಾಗುವುದರ ಹಿಂದೆ ನನ್ನದೇ ನೇರ ಪಾತ್ರವಿತ್ತು. (ದೇಶಬಂಧು ದಾಸ್ ಈ ವಿಷಯದಲ್ಲಿ ಸೂತ್ರಧಾರಿಯಾಗಿದ್ದರು.) ಲಾಲಾಜಿ ಅವರು ಆ ವಿಷಯದಲ್ಲಿ ಹೇಗೆ ತಪ್ಪು ಗ್ರಹಿಕೆಯುಳ್ಳವರಾಗಿದ್ದರೋ ನನಗೆ ತಿಳಿಯದು. ಬಹುಶಃ ಅವರು ಅನೇಕ ವದಂತಿಗಳನ್ನು ಆಧಾರ ಮಾಡಿಕೊಂಡಿರಬೇಕು. ಜೊತೆಗೆ ಆಗಷ್ಟೇ ಅವರು ಮೌಲ್ವಿ ಒಬೆದುಲ್ಲಾ ಜೊತೆ ನಡೆಸಿದ್ದ ಮಾತುಕತೆಯಿಂದಲೂ ಅವರು ಪ್ರಭಾವಿತರಾಗಿರಬೇಕೆಂದು ನನ್ನ ಅನಿಸಿಕೆ. ಅವರ ಆ ಮಾತುಕತೆಯಲ್ಲಿ ಅಷ್ಟೊಂದು ವಿಶೇಷವಾದದ್ದು ಯಾವುದು ಇದ್ದಂತೆ ನನಗೆ ಕಂಡು ಬರಲಿಲ್ಲ." ನಿಜ, ಜವಹರಲಾಲ್‌ಜಿ ಆಗ ಯುರೋಪಿನಲ್ಲಿದ್ದರು. ಅವರು ಅಷ್ಟರಮಟ್ಟಿಗೆ ಬೆಳವಣಿಗೆಗಳ ವಿಷಯದಲ್ಲಿ ನಿಕಟ ಸಾಮಿಪ್ಯ ಹೊಂದಿರಲಿಲ್ಲ. ಇಲ್ಲವಾಗಿದ್ದರೆ ಅವರು ಕಾಬೂಲ್ ಕಾಂಗ್ರೆಸ್ ಸಮಿತಿಗೆ ಮಾನ್ಯತೆಯನ್ನು ನೀಡಲು ಮುಂದಾಗುತ್ತಿರಲಿಲ್ಲ. ಲಾಲಾಜಿ ಅವರು ಸಾರ್ವಜನಿಕ ಸಭೆಗಳಲ್ಲಿ ಮಾಡುತ್ತಿದ್ದ ಟೀಕೆಗಳ ಹಿಂದೆ ಅಡಕವಾಗಿದ್ದ ಗಹನವಾದ ಸಂಗತಿಯನ್ನು ಅವರು ಮಾನ್ಯ ಮಾಡಿಕೊಳ್ಳುತ್ತಿದ್ದರೇನೋ?

ಕಾಬೂಲ್ ಕಾಂಗ್ರೆಸ್ ಸಮಿತಿಯು ಸಹ ತನ್ನದೇ ಕೊಡುಗೆ ಸಲ್ಲಿಸದೇ ಇರಲಿಲ್ಲ. ಅವರ ನಡವಳಿಕೆಗಳು ತೆರೆಮರೆಯಲ್ಲಿ ಲಾಲಾಜಿ ಓವರು ಅವರ ಬಗ್ಗೆ ತಳೆದಿದ್ದ ಧೋರಣೆಗೆ ಪೂರಕವಾಗಿದ್ದವು. ಮುಲ್ತಾನ್, ಕೋಹತ್ ಮುಂತಾದ ಕಡೆಗಳಲ್ಲಿ ನಡೆದ ಕೋಮು ಹಿಂಸಾಚಾರಗಳಿಗೆ ಅದರ ನಡವಳಿಕೆಗಳು ಪೂರಕವಾಗಿದ್ದಂತೆ ಕಂಡು ಬಂದಿತ್ತು.

---

* ಪುಟ. 158-159. "ಆ ಬೇಸಿಗೆಯಲ್ಲಿ ನಾನು ಜಿನೀವಾದಲ್ಲಿ ಲಾಲಾಜಿಯುವರನ್ನು ಭೇಟಿ ಮಾಡಿದ್ದೆ."

ಅದೆಲ್ಲವನ್ನು ಲಾಲಾಜಿ ಗ್ರಹಿಸಿದ್ದರು. ಲಾಹೋರ ಜೈಲಿನ ಹಬೀಬ್-ಉರ್-ರೆಹಮಾನ್ ಪ್ರಕರಣ ಒಬೆದುಲ್ಲಾ ಪ್ರಕರಣದಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಘಟ್ಟ. ಒಬೆದುಲ್ಲಾ ಅವರ ಪೂರ್ಣ ಹೆಸರು ಮೌಲ್ವಿ ಒಬೆದುಲ್ಲಾ ಸಿಂಧಿ. ಕಾಬೂಲ್‌ನಲ್ಲಿ ಭಾರತೀಯ ನ್ಯಾಷನಲ್ ಕಾಂಗ್ರೆಸ್ ಶಾಖೆಯನ್ನು ಸ್ಥಾಪಿಸಿದ್ದು ಅವರೇ. ಒಬೆದುಲ್ಲಾ ಪ್ರಕರಣವನ್ನು ವಿಶೇಷವಾಗಿ ಪರಿಗಣಿಸಬೇಕಗುತ್ತದೆ. 1920ರ ಚುನಾವಣೆಗಳ ಮೇಲೆ ಅದರ ಪರಿಣಾಮಗಳು ದೊಡ್ಡ ಪ್ರಮಾಣದಲ್ಲಿ ಇದ್ದದ್ದು ಇಲ್ಲಿ ಮುಖ್ಯ. ಲಾಲಾಜಿ ಅವರ ಚಿಂತನೆ, ದೃಷ್ಟಿಕೋನ ಸಮಕಾಲೀನ ಕಾಂಗ್ರೆಸ್ಸಿನ ನಾಯಕರೊಂದಿಗೆ ಅವರು ಹೊಂದಿದ್ದ ಬಾಂಧವ್ಯಗಳು ಹಾಗೂ ಎಲ್ಲಕ್ಕಿಂತ ಹೆಚ್ಚಿನದಾಗಿ ನಂತರದ ಘಟನೆಗಳ ಪ್ರಾಮುಖ್ಯತೆಯ ಹಿನ್ನಲೆಯಲ್ಲಿ ಒಬೆದುಲ್ಲಾ ಪ್ರಕರಣ ಗಂಭೀರವೆನಿಸಿದೆ.

1924ರ ಆಗಸ್ಟ್ ತಿಂಗಳಿನಲ್ಲಿ ಒಬೆದುಲ್ಲಾ ಇಸ್ತಾನ್‌ಬುಲ್‌ನಲ್ಲಿ ಲಾಲಾಜಿಯವರನ್ನು ಮೊದಲ ಬಾರಿಗೆ ಭೇಟಿ ಮಾಡಿದರು. ಅಲ್ಲಿಂದ ಈ ಪ್ರಕರಣ ಪ್ರಾರಂಭವಾಗುತ್ತದೆ. ಅವರು ಲಾಲಾಜಿಯವರಿಗೆ ಕೊಟ್ಟ ಸಂದರ್ಶಕರ ಕಾರ್ಡಿನಲ್ಲಿ ನಮೂದಿಸಿದ್ದ ವಿವರ ಇಲ್ಲಿ ಮುಖ್ಯ. ಕಾಬೂಲ್ ಕಾಂಗ್ರೆಸ್ ಸಮಿತಿಯ ಓರ್ವ ಪದಾಧಿಕಾರಿ ಎಂದು ಆ ಕಾರ್ಡಿನಲ್ಲಿ ಇತ್ತು. ಜೊತೆಗೆ ಮೌಲ್ವಿ ಲಾಲಾಜಿ ಅವರಿಗೆ ಒಂದು ಮುದ್ರಿತ ಕಾರ್ಯ ಯೋಜನೆಯನ್ನು ಒದಗಿಸಿದರು. ಕಾಂಗ್ರೆಸ್ ಸಮಿತಿಯ ಪರವಾಗಿ ಉಪಖಂಡದ ಸಂಯುಕ್ತ ಗಣ ರಾಜ್ಯಗಳ ಒಕ್ಕೂಟ ಸ್ಥಾಪನೆಯ ಪ್ರಸ್ತಾಪ ಅದರಲ್ಲಿತ್ತು. ಲಾಲಾಜಿ ಅವರಿಗೆ ಆ ತನಕ ಕಾಬೂಲ್‌ನಲ್ಲಿ ಕಾಂಗ್ರೆಸ್ ಸಮಿತಿಯೊಂದಿದೆ ಎಂಬ ವಿಷಯವಾಗಲಿ ಅಥವಾ ಉಪಖಂಡದ ಸಂಯುಕ್ತ ರಾಜ್ಯಗಳ ಒಕ್ಕೂಟ ಸ್ಥಾಪನೆಯ ಯೋಜನೆಯಾಗಲಿ ತಿಳಿದಿರಲಿಲ್ಲ. ಭಾರತಕ್ಕೆ ಮರಳುತ್ತಿದ್ದಂತೆಯೇ ಅವರು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಆ ಸಂಬಂಧದಲ್ಲಿ ವಿಚಾರಣೆ ನಡೆಸಿದರು. ಆಗ ಎಐಸಿಸಿ ಕೇಂದ್ರ ಕಚೇರಿ ಅಲಹಾಬಾದ್‌ನಲ್ಲಿತ್ತು. ವಿಷಯಗಳೆಲ್ಲವೂ ಖಾತ್ರಿಯಾದವು. ಲಾಲಾಜಿ ಅವರು ಬಂದಿಯಾಗಿದ್ದ ಸಮಯದಲ್ಲಿ ದೇಶಬಂಧು ದಾಸ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ 1922ರಲ್ಲಿ ಕಾಬೂಲ್ ಕಾಂಗ್ರೆಸ್ ಘಟಕಕ್ಕೆ ಅನುಮತಿ ನೀಡಿದ್ದು ಖಾತ್ರಿಯಾಯಿತು.

ವಿಸಿಟಿಂಗ್ ಕಾರ್ಡಿನಲ್ಲಿ ಸಾಕಷ್ಟು ಅನುಮಾನಗಳಿದ್ದವು. ಮೊದಲನೆಯದಾಗಿ ಭಾರತೀಯ ಕಾಂಗ್ರೆಸ್ಸಿನ ಕಾಬೂಲ್ ಶಾಖೆ ಅಸ್ತಿತ್ವವೇ ಅರ್ಥಪೂರ್ಣವಾಗಿರಲಿಲ್ಲ. ಎರಡನೆಯದಾಗಿ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಲಾಲಾಜಿ ಅವರ ಗಮನಕ್ಕೆ ಆ ಶಾಖೆಯ ಅಸ್ತಿತ್ವವೇ ಬಂದಿರಲಿಲ್ಲ. ಹೀಗಾಗಿ ಕಾಬೂಲ್ ಕಾಂಗ್ರೆಸ್ ಘಟಕದ ರಚನೆ ಅಧಿಕೃತವೇ ಎಂಬ ಶಂಕೆಯು ಮೂಡಿತ್ತು. ಒಬೆದುಲ್ಲಾ ಕೊಟ್ಟಿದ್ದ ಯೋಜನೆಯನ್ನು ಗಮನಿಸಿ ಅದರೊಂದಿಗೆ ಪ್ರತ್ಯೇಕ ಮುಸ್ಲಿಂ ರಾಷ್ಟ್ರವೊಂದರ ಸ್ಥಾಪನೆಯ ಮಸಲತ್ತು ಸಹ ಅವರಿಗೆ ಭಾಸವಾಯಿತು. ಅದೆಲ್ಲದರಲ್ಲಿ ಕಾಬೂಲ್ ಕೈವಾಡ ಇರಬಹುದೆಂಬುದನ್ನು ಅವರ ಮನಸ್ಸು ಶಂಕಿಸದಿರಲಿಲ್ಲ. ಒಬೆದುಲ್ಲಾ ಕೇಂದ್ರ ವ್ಯಕ್ತಿಯಾಗಿ ಕಂಡು ಬರುತ್ತಿದ್ದರು. ಅವರ ವೈಯಕ್ತಿಕ ನಿಲುವು ಧೋರಣೆಗಳಾದರೂ ಏನು? ಎಲ್ಲಕ್ಕಿಂತ ಹೆಚ್ಚಿನದಾಗಿ ತನ್ನ ಪ್ರತಿಷ್ಠೆಯನ್ನು ಧಾರೆ ಎರೆದು ಕೊಡಲು ಕಾಂಗ್ರೆಸ್‌ಗೆ ಇದ್ದ ಅವಸರವಾದರೂ ಏನು? ಕಾಬೂಲ್ ಸಮಿತಿಯು ವಿಚಿತ್ರ ಯೋಜನೆಯನ್ನು

ಸಿದ್ಧಪಡಿಸುವಷ್ಟರ ಮಟ್ಟಿಗೆ ಅಧಿಕಾರ ಕೊಟ್ಟದ್ದಾದರೂ ಹೇಗೆ? ಇತ್ಯಾದಿ ಪ್ರಶ್ನೆಗಳೆಲ್ಲವೂ ಲಾಲಾಜಿ ಅವರನ್ನು ಕಾಡಿದವು. ಲಾಲಾಜಿ ಅವರ ಮನಸ್ಸಿನಲ್ಲಿ ಮೂಡಿದ ಕಳವಳಕ್ಕೆ ಆಧಾರವೂ ಇಲ್ಲದಿರಲಿಲ್ಲ. ಭಾರತ ಭಂಗವಾಗಲಿ, ಪ್ರತ್ಯೇಕ ಮುಸ್ಲಿಂ ರಾಷ್ಟ್ರ ಸ್ಥಾಪನೆಯಾಗಲಿ ಅವರಿಗೆ ಭ್ರಮೆ ಎನಿಸಲಿಲ್ಲ. ಆದರೂ ಬಹು ಜಾಗೃತೆಯಿಂದ ಕಟ್ಟೆಚ್ಚರದಿಂದ ಎಲ್ಲವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆನಿಸಿತು.

ಅನುಮಾನಗಳು ಬಲವಾಗತೊಡಗಿದಂತೆ ಲಾಲಾಜಿ ಅವರು ತಮ್ಮ ಅನಿಸಿಕೆಗಳನ್ನು ಉಚ್ಚ ನಾಯಕರೊಂದಿಗೆ ಹಂಚಿಕೊಳ್ಳ ತೊಡಗಿದರು. ಆದರೆ ಅವರಿಗೆ ಆ ನಾಯಕರಿಂದ ದೊರೆತ ಉತ್ತರಗಳು ಸಮಾಧಾನ ತರುವ ಬದಲಾಗಿ ಆಘಾತವನ್ನು ಉಂಟು ಮಾಡಿದವು. 'ಆದರೇನಾಯಿತು?' ಎಂದೆಂಬ ಧಾಟಿಯಲ್ಲಿ ಪ್ರತಿಕ್ರಿಯೆಗಳು ಲೋಕಾಭಿರಾಮವಾಗಿ ಕೇಳಿಬಂದವು. ತಮ್ಮ ಸಹವರ್ತಿಗಳ ಉದಾಸೀನ ನಡವಳಿಕೆ ಲಾಲಾಜಿ ಅವರ ಆತಂಕವನ್ನು ಇನ್ನಷ್ಟು ಹೆಚ್ಚಿಸಿತು. ಭವಿಷ್ಯದಲ್ಲಿ ಪರಿಸ್ಥಿತಿ ಕಠೋರವಾಗುತ್ತದೆ ಎಂಬ ಅರಿವು ಅವರಿಗಾಗ ತೊಡಗಿತು. ಆತನಕ ಮನಸ್ಸಿನಲ್ಲಿ ಕಳವಳ ರೂಪದಲ್ಲಿ ಕಾಡುತ್ತಿದ್ದ ಸಂಗತಿಗಳು ಸ್ಪಷ್ಟ ರೂಪ ಪಡೆದುಕೊಳ್ಳತೊಡಗಿದವು. ಅದರ ಹಿನ್ನಲೆ ಮುನ್ನಲೆಗಳೆಲ್ಲವೂ ಪೂರಕವಾಗಿದ್ದದ್ದು ಸ್ಪಷ್ಟವಾಯಿತು. ಸಿಯಾಲ್ ಕೋಟೆಯ ಸಿಖ್ ಕುಟುಂಬದಲ್ಲಿ ಹುಟ್ಟಿದ ಬಾಲಕನೋರ್ವ ಮುಂದೆ ಇಸ್ಲಾಂ ಧರ್ಮವನ್ನು ಅಪ್ಪಿಕೊಂಡಿದ್ದು, ಒಬೆದುಲ್ಲಾ ಸಿಂಧಿ ಎಂದು ತನ್ನನ್ನು ತಾನೇ ಕರೆದುಕೊಂಡಿದ್ದು, ಆ ಚೌಕಟ್ಟಿನಲ್ಲಿ ಆತ ಬೆಳೆದು ಬಂದಿದ್ದು, ಇಸ್ಲಾಂ ಸೇವೆಗಾಗಿ ತನ್ನ ಬದುಕನ್ನು ಸಮರ್ಪಿಸಿಕೊಳ್ಳಲು ಆತ ನಿರ್ಧರಿಸಿಕೊಂಡಿದ್ದು, ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಪತನಗೊಂಡ ನಂತರ ಸೈದ್ಧಾಂತಿಕವಾದ ಮುಸ್ಲಿಂ ರಾಷ್ಟ್ರವೊಂದನ್ನು ಅಸ್ತಿತ್ವಕ್ಕೆ ತರಬೇಕೆಂದು ಕಟ್ಟಾ ಧೋರಣೆ ತಾಳಿದವರಲ್ಲಿ ಒಬ್ಬನಾಗಿ ಬೆಳೆದ್ದದ್ದು, ಗುರಿ ಸಾಧನೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧನೆಂದು ಘೋಷಿಸಿಕೊಂಡ ವ್ಯಕ್ತಿಯ ನಡವಳಿಕೆಗಳೆಲ್ಲವೂ ಲಾಲಾಜಿ ಅವರ ಅನುಮಾನಗಳನ್ನು ಅಪಾಯದ ಸೂಚನೆಯಾಗಿ ರೂಢಿಸಿದವು. ಆ ವ್ಯಕ್ತಿ ವಿದೇಶಿ ಮುಸ್ಲಿಂ ಶಕ್ತಿಗಳೊಂದಿಗೆ ಮೈತ್ರಿ ಸಾಧಿಸಿಕೊಂಡಿದ್ದು ಗಂಡಾಂತರದ ಆಳವನ್ನು ಹೇಳುತ್ತಿತ್ತು.

ಮುಂದೆ, ಅಂದರೆ ಮೊದಲನೆ ಮಹಾಯುದ್ಧದ ನಂತರ ಒಬೆದುಲ್ಲಾ ಮತ್ತು ಆ ಸಂಚಿನ ಜನರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಭಾರತೀಯ ರಾಷ್ಟ್ರೀಯ ವಾದಿಗಳೊಂದಿಗೆ ಇಲ್ಲವೇ ಕ್ರಾಂತಿಕಾರಿ ಶಕ್ತಿಗಳೊಂದಿಗೆ ಮಿಳಿತಗೊಂಡಿದ್ದರ ಹಿನ್ನಲೆಯು ಸ್ಪಷ್ಟವಾಯಿತು. ಸ್ವಾತಂತ್ರ್ಯ ಹೋರಾಟದ ನೆಪದಲ್ಲಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಂಚು ಅವರದಾಯಿತು. 1920ರ ದಶಕದಲ್ಲಿ ವಿಭಜಕ ಗುರಿ ಹೊಂದಿದ್ದ ಈ ಶಕ್ತಿಗಳ ತಂತ್ರ ಮತ್ತು ಕಾರ್ಯ ಸಾಧನೆಯ ರೀತಿಗಳನ್ನು ಗ್ರಹಿಸುವುದು ಕಷ್ಟಕರವಾಗಿತ್ತು ಎಂದು ಅಂದಿನ ಆ ವಿದ್ಯಮಾನಗಳನ್ನೆಲ್ಲ ಒಳ ಹೊಕ್ಕು ನೋಡಬಲ್ಲ ಯಾವುದೇ ವ್ಯಕ್ತಿಯೂ ಸಹ ಲಾಲಾಜಿ ಅವರು ಆಗ ಗ್ರಹಿಸಿದ ಅಪಾಯ ಮತ್ತು ಅವರ ದೂರದೃಷ್ಟಿಯನ್ನು ಮೆಚ್ಚಿಕೊಳ್ಳದೇ ಇರಲಾರ. ಇಷ್ಟಾನ್‌ಬುಲ್ ಘಟನೆಯ ನಂತರ ದಾಸ್, ನೆಹರು ಸೇರಿದಂತೆ ಎಲ್ಲಾ ನಾಯಕರುಗಳಿಗೂ ಪರಿಸ್ಥಿತಿಯ ಅರಿವಾಗತೊಡಗಿತು. ಲಾಲಾಜಿ ಅವರು ಬಹು ಹಿಂದೆಯೇ ಮನಗಂಡಿದ್ದ ವಾಸ್ತವ ಅಷ್ಟೊಂದು ನಿಧಾನವಾಗಿ ತಿಳಿಯ ತೊಡಗಿತು

ಇತರರು 'ವಿಭಜನೆ'ಯ ವಾಸನೆಯನ್ನು ಗ್ರಹಿಸುವುದಕ್ಕೆ ಅಸಮರ್ಥರಾಗಿದ್ದ ಸಮಯದಲ್ಲೇ ಲಾಲಾಜಿ ಆ ದುರ್ಗಂಧವನ್ನು ಆಘ್ರಾಣಿಸಿದ್ದರು.

ಆದರೆ ಲಾಲಾಜಿ ಸಾರ್ವತ್ರಿಕವಾಗಿ 'ವಿಭಜನೆ' ಪದವನ್ನು ಬಳಸುತ್ತಿರಲಿಲ್ಲ. ಪರೋಕ್ಷವಾಗಿ ಅದೇ ಅರ್ಥ ಬರುವ ರೀತಿಯಲ್ಲಿ ಮಾತನಾಡುತ್ತಿದ್ದರಷ್ಟೇ. ಪರಿಸ್ಥಿತಿಯನ್ನು ನವಿರಾಗಿ ಅವರು ಜನತೆಯ ಮುಂದಿಡುತ್ತಿದ್ದರು. ಮುಂದಾಗಲಿದ್ದ ಅಪಾಯವನ್ನು ಮೊಳಕೆಯಲ್ಲೇ ಚಿವುಟುವ ಪ್ರಯತ್ನವನ್ನು ಲಾಲಾಜಿ ಕೈಗೊಂಡಿದ್ದರು. ಖಾಸಗಿಯಾಗಿ ಸಮಾನ ಮನೋಧರ್ಮದವರೊಂದಿಗೆ ಅವರು ಅಪಾಯದ ಗಂಭೀರ ಸ್ವರೂಪವನ್ನು ಹಂಚಿಕೊಳ್ಳುತ್ತಿದ್ದರು. ಕೆಲವರು ಅದನ್ನು ಕಾಗಕ್ಕ ಗುಬ್ಬಕ್ಕನ ಕಥೆ ಎಂದು ಕೊಂಡಿದ್ದು ಉಂಟು. ಏನಾದರೇನು? ಅವರು ನಿಧನ ಹೊಂದಿದ ಎರಡು ದಶಕಗಳ ನಂತರ ಎಲ್ಲವೂ ಸ್ಪಷ್ಟವಾಯಿತು. ಯಾವ ಅಪಾಯವನ್ನು ಅವರು 1920ರ ದಶಕದಲ್ಲಿ ಬಿಚ್ಚಿಡುತ್ತಾ ಬಂದಿದ್ದರೋ ಅದು ನಡೆದೇ ಹೋಯಿತು. ದೇಶ ವಿಭಜನೆಯಾಯಿತು. ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಮುಸ್ಲಿಂ ರಾಷ್ಟ್ರ ಸ್ಥಾಪಿತವಾಯಿತು. 1920ರ ಚುನಾವಣಾ ಸಮಯವನ್ನು ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಲೇ ಬೇಕಾಗುತ್ತದೆ. ಆ ಚುನಾವಣೆಗಳಲ್ಲಿ ಒಬೆದುಲ್ಲಾ ಪ್ರಕರಣ ಒಂದು ಪ್ರಮುಖ ಸಂಗತಿಯಾಗಿತ್ತು. ಲಾಲಾಜಿ ಒಬೆದುಲ್ಲಾ ವಿಷಯದಲ್ಲಿ ಸಾಧ್ಯವಾದಷ್ಟು ಮಾತನಾಡುತ್ತಿರಲಿಲ್ಲ. ಅವರ ಕಾರ್ಯ ಯೋಜನೆಯ ವಿಷಯವನ್ನು ಪ್ರಸ್ತಾಪಿಸುತ್ತಿರಲಿಲ್ಲ. 'ವಿಭಜನೆ'ಯು ಪರ ಬಳಕೆಯುನ್ನು ಬಹಿರಂಗವಾಗಿ ಮಾತನಾಡುತ್ತಿರಲಿಲ್ಲ. ಕಾಂಗ್ರೆಸ್ ನಾಯಕರ ದೂರದೃಷ್ಟಿಯ ಅಭಾವ, ತಂತ್ರಗಾರಿಕೆಯನ್ನು ಅರಿಯುವ ಜಾಗೃತಿಹೀನತೆಗಳ ಬಗ್ಗೆ ಲಾಲಾಜಿಯವರಿಗೆ ಸ್ಪಷ್ಟವಾಗಿ ಮನವರಿಕೆಯಾಗಿತ್ತು. ಯಾವುದನ್ನು ಅವರು ಮೂಲಭೂತ ಪ್ರಾಮುಖ್ಯವೆಂದು ಭಾವಿಸಿದ್ದರೋ ಅದನ್ನು ಇತರ ಕಾಂಗ್ರೆಸ್ ನಾಯಕರು ತಮ್ಮ ಯೋಚನೆಯ ಹತ್ತಿರಕ್ಕೂ ಬರಮಾಡಿಕೊಂಡಿರಲಿಲ್ಲ. ಚುನಾವಣೆಯಲ್ಲಿ ಸಾಕಷ್ಟು ಕಾವು ಹುಟ್ಟಿತು. ಲಾಲಾಜಿ ಮತ್ತು ಇತರ ಕೆಲವು ನಾಯಕರ ನಡುವೆ ಅಹಿತಕರ ಮತಭೇದ ಉಂಟಾಯಿತು.*

ರಾಜಕಾರಣದ ಬಗ್ಗೆ ಲಾಲಾಜಿಯವರು ಹೊಂದಿದ್ದ ದೃಷ್ಟಿಕೋನದ ಪ್ರಭಾವ ಮತ್ತು ಪರಿಣಾಮಗಳನ್ನು ಅದರಲ್ಲೂ ಈ ಅಧ್ಯಾಯದ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ಕ್ರೋಡಿಕರಿಸಿಕೊಳ್ಳಬಹುದು;

(ಅ). 'ವಿಭಜನೆ' ಕುರಿತಂತೆ ಅವರ ಮನಸ್ಸಿನಲ್ಲಿ ಉಂಟಾದ ಕಳವಳ ಇಲ್ಲವೇ ಸೈದ್ಧಾಂತಿಕವಾಗಿ ಮುಸ್ಲಿಂ ರಾಷ್ಟ್ರ ಸ್ಥಾಪನೆಯ ಆತಂಕಗಳು ಕೋಮು ಪ್ರಾತಿನಿಧ್ಯದ ಬಗ್ಗೆ ಅವರು ಹೊಂದಿದ್ದ ಖಚಿತ ಧೋರಣೆಯನ್ನು ಸಾದರ ಪಡಿಸುತ್ತದೆ. ಅಂದರೆ ಕೋಮು ಆಧಾರದ ಮೇಲೆ ಮತದಾರರು ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ

---

* ಈ ಘಟನೆಯ ಬಗ್ಗೆ ಪೂರ್ಣ ವಿಷಯಗಳನ್ನು ತಿಳಿದುಕೊಳ್ಳಬೇಕಾದರೆ ಇದೇ ಲೇಖಕರ ''The Unheeded Prophet'' ಕೃತಿಯನ್ನು ಓದಬೇಕಾಗುತ್ತದೆ. (ನವದೆಹಲಿ: ಲಜಪತ್ ಭವನ 1972)

'ವಿಭಜನೆ' ಒತ್ತಾಯಕ್ಕೆ ಇಂಬುಕೊಟ್ಟಂತೆ ಆಗುತ್ತದೆ ಎಂಬ ಅವರ ತರ್ಕ ಖಚಿತವಾಗಿತ್ತು. ಕೋಮು ಆಧಾರದ ಮೇಲೆ ಮತದಾನವನ್ನು ಲಾಲಾಜಿ ವಿರೋಧಿಸುತ್ತಿದ್ದದ್ದು ಇದರಿಂದ ಸ್ಪಷ್ಟ. ಹೀಗಾಗಿ ತೆರೆಮರೆಯಲ್ಲಿ ನಡೆಯುತ್ತಿದ್ದ ಒಬೆದುಲ್ಲಾ ತಂತ್ರಗಳ ಬಗ್ಗೆ ಜಾಗೃತವಾಗಿರುವುದಷ್ಟೇ ಅಲ್ಲದೆ ಕೋಮು ಪ್ರಾತಿನಿಧ್ಯ ಮುಂದುವರಿಯದಂತೆ ಕಟು ಧೋರಣೆ ತಾಳುವ ಅಗತ್ಯವನ್ನು ಒತ್ತಿ ಹೇಳಿತ್ತು. ಅದಕ್ಕೆ ಪೂರಕವಾಗಿ ಕೋಮು ಮತದಾನ ಆಧರಿಸಿದ ಎಲ್ಲಾ ನಡವಳಿಕೆಗಳನ್ನು ಬಲವಾಗಿ ವಿರೋಧಿಸಬೇಕೆಂದು ಅವರು ತಾಳಿದ ನಿಲುವಿನ ನಿಜಾಂಶವನ್ನು ಗಮನಿಸಬೇಕು.

(ಆ). ಕಾಬೂಲ್ ಸಮಿತಿಯಂಥ ಯೋಜನೆಗಳನ್ನು ವಿಷದೋಪಾದಿಯಲ್ಲಿ ರಾಷ್ಟ್ರೀಯ ನಾಯಕರು ದೂರವಿಡಬೇಕಾಗಿತ್ತು. ಆ ನಾಯಕರಲ್ಲಿ ದೂರದೃಷ್ಟಿ ಇಲ್ಲದಿದ್ದದ್ದು ಭಾರತದ ಏಕತೆಯನ್ನು ಗಂಡಾಂತರದಲ್ಲಿ ಸಿಕ್ಕಿಸಿತು.

ವಿಚಿತ್ರವೋ ಎನ್ನುವಂತೆ 1940ರ ದಶಕದ ಆರಂಭದಲ್ಲಿ ಒಬೆದುಲ್ಲಾ ಧೋರಣಾವಾದಿಗಳು ಮುಸ್ಲಿಂ ಲೀಗ್ ರೂಪಿತ 'ವಿಭಜನೆ'ಯ ಯೋಜನೆಯನ್ನು ವಿರೋಧಿಸಿದಂತೆಯೂ ಕಂಡು ಬಂದಿತು. ಆ ಭಿನ್ನಮತಕ್ಕೆ ಕಾರಣವೂ ಇಲ್ಲದಿರಲಿಲ್ಲ. ಒಬೆದುಲ್ಲಾ ಬಣದವರಿಗೆ ಬ್ರಿಟಿಷರನ್ನು ಸಂಧಾನಕಾರರನ್ನಾಗಿ ಒಪ್ಪಿಕೊಳ್ಳುವ ಮನಸ್ಥಿತಿ ಇರಲಿಲ್ಲ. ಸಂಪೂರ್ಣವಾಗಿ ಇಸ್ಲಾಂ ಸಿದ್ಧಾಂತವನ್ನು ಮುಸ್ಲಿಂ ರಾಷ್ಟ್ರವನ್ನು ಸ್ಥಾಪಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಲಾಲಾಜಿ ಆ ಎರಡು ಬಣಗಳ 'ವಿಚ್ಛಿದ್ರಕ' ಷಡ್ಯಂತ್ರವನ್ನು ಗ್ರಹಿಸಿದ್ದರು. ಕಾಂಗ್ರೆಸ್- ಖಿಲಾಫತ್ ಮಧುಚಂದ್ರದ ನಂತರ ಒಬೆದುಲ್ಲಾ ವಾದಿಗಳ ಪ್ರಭಾವ ತಗ್ಗಿತ್ತು. ಅದಕ್ಕೆ ಕಾರಣ ಅವರು ಹೊಂದಿದ್ದ ರಹಸ್ಯ ಮಾರ್ಗಗಳು ಬಯಲಾಗಿದ್ದು. ಕಟ್ಟಾ ಸಿದ್ಧಾಂತವಾದಿತನ ಒಬೆದಲ್ಲಾ ವಾದಿಗಳ ಪತನಕ್ಕೆ ಕಾರಣವಾಯಿತೆಂದರೂ ಸರಿ.

ನಾವು ಈ ಅಧ್ಯಾಯದಲ್ಲಿ ಪ್ರಮುಖ ಘಟನೆಗಳ ಬಗ್ಗೆ ಗಮನ ಹರಿಸಿದ್ದೇವೆ. ಹಿಂಸಾಚಾರಗಳು ಮತ್ತು ಅವುಗಳ ನಂತರ ಉದ್ಭವಿಸಿದ ಪ್ರಸಂಗಗಳನ್ನು ಹೆಚ್ಚು ಕಡಿಮೆ ಸಮಗ್ರವಾಗಿ ತಿಳಿದುಕೊಂಡಂತಾಗಿದೆ. ಲಾಲಾಜಿಯವರಿಗೆ ಏಕತೆಯ ವಿಷಯದಲ್ಲಿ ಆಶಾಭಾವನೆ ಮೂಡಿದ್ದು ನಿಜ. ಲಾಹೋರ್ ಜೈಲಿನಲ್ಲಿ ಅವರು ನಡೆಸಿದ ಮುಕ್ತ ಚರ್ಚೆ, ಮಹಮದಲಿ ಅಧ್ಯಕ್ಷ ಭಾಷಣ, ಒಬೆದುಲ್ಲಾ ವಾದಿಗಳ ಪತನ ಅವರ ಆಶಾವಾದಕ್ಕೆ ಆಸರೆಯಾಗಿದ್ದವು. ಪರಿಸ್ಥಿತಿಯ ಏಳು ಬೀಳು ಹೇಗೆ ಇದ್ದರೂ ಲಾಲಾಜಿಯವರ ಪ್ರಯತ್ನ ಮಾತ್ರ ನಿರಂತರವಾಗಿ ಏಕತೆ ಕಡೆಗೆ ಹರಿದಿತ್ತು. ಆ ಯತ್ನ ಬಹು ಕಷ್ಟಕರವಾಗಿದ್ದರಿಂದ ಅವರು ತಮ್ಮ ಶಕ್ತಿಯನ್ನು ಇಮ್ಮಡಿಗೊಳಿಸಿಕೊಳ್ಳಲು ಮುಂದಾಗಿದ್ದು ಉಂಟು! ಜೈಲಿನಿಂದ ಹೊರ ಬರುತ್ತಿದ್ದಂತೆ ಲಾಲಾಜಿ ಹೆಚ್ಚಿನ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡರು ಅನ್ಸಾರಿಯವರನ್ನು ಒಳಗೂಡಿಸಿಕೊಂಡರು. 'ರಾಷ್ಟ್ರೀಯ ಒಡಂಬಡಿಕೆ'ಯನ್ನು ನಿರೂಪಿಸಲು ಮುಂದಾದರು. ಒಬೆದುಲ್ಲಾ ಭೇಟಿಯ ನಂತರ ಸರಣಿಯಾಗಿ 13 ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಗೊಳಿಸಿದರು. ಪ್ರಮುಖ ದೈನಿಕಗಳಲ್ಲಿ ಅವರ ಲೇಖನ ಮಾಲೆ ಅಚ್ಚಾಯಿತು. ಅವೆಲ್ಲವನ್ನು ಒಗ್ಗೂಡಿಸಿ ಕೃತಿಯೊಂದನ್ನು ಹೊರ ತಂದರು. ದೇಶದ ಏಕಮತದ ವಿಷಯದಲ್ಲಿ ಲಾಲಾಜಿ ಅವರು ಸಮರ್ಪಿಸಿದ ಪ್ರಾಮಾಣಿಕ ಕೊಡುಗೆ

ಅದೆಂದೇ ಪರಿಗಣಿತವಾಗಿದೆ. ಬೇರೆ ಯಾವುದೇ ವ್ಯಕ್ತಿ ದೇಶದ ಮುಂದಿದ್ದ ಸಮಸ್ಯೆಗಳನ್ನು ಎಡರು ತೊಡರುಗಳನ್ನು ಇಷ್ಟೊಂದು ಆಳವಾಗಿ ನಿರೂಪಿಸಿದ ಘಟನೆ ಇನ್ನೊಂದಿರುವ ಬಗ್ಗೆ ನನಗಂತೂ ಅರಿವಿಲ್ಲ. ಪರಸ್ಪರ ಹೊಂದಾಣಿಕೆ ಮತ್ತು ವಾಸ್ತವಿಕ ಅಂಶಗಳ ನೆಲೆಗಟ್ಟಿನಲ್ಲಿ ನಿಂತು ಗಂಭೀರವಾದ ಪರಿಹಾರಕ್ಕೆ ಪ್ರಯತ್ನಿಸಿದ ವ್ಯಕ್ತಿಯು ನನಗೆ ಕಂಡು ಬಂದಿಲ್ಲ.

ತಮ್ಮ 13 ಲೇಖನಗಳನ್ನು ಬರೆಯುವ ಸಮಯದಲ್ಲಿ ಲಾಲಾಜಿಯವರ ಮನಸ್ಸಿನ ತುಂಬಾ 'ವಿಭಜನೆ'ಯ ಕಳವಳವೇ ತುಂಬಿಕೊಂಡಿತ್ತು ಎಂಬುದು ಗಮನಿಸಬೇಕಾದ ಸಂಗತಿ. ಆ ಲೇಖನಗಳಲ್ಲಿ ಅವರು ಎಲ್ಲಿಯೂ ಸಹ ಕಾಬೂಲ್ ಯೋಜನೆಯನ್ನಾಗಲಿ ಅದರ ಕರ್ತೃವಿನ ಬಗೆಯಾಗಲಿ ನೇರ ಪ್ರಸ್ತಾಪ ಮಾಡಲಿಲ್ಲ. ಆದರೆ ಲೇಖನಗಳ ಒಟ್ಟಾರೆ ಆಶಯ ಮಾತ್ರ ಅದೆಲ್ಲವನ್ನು ಹೇಳುತ್ತಿತ್ತು. ಕೊನೆಯಲ್ಲಿ ಅವರು ಬರೆದ ಸಾಲುಗಳು ಹೀಗಿವೆ:

''ನಾನು ಏನೆಲ್ಲವನ್ನು ಹೇಳಬೇಕೆಂದುಕೊಂಡಿದ್ದೆನೋ ಅವೆಲ್ಲವನ್ನು ಹೇಳಿಲ್ಲ. ಕೆಲವು ಪ್ರಮುಖವಾದ ಹಾಗೂ ಕಟುವಾದ ಅಂಶಗಳನ್ನು ಉದ್ದೇಶಪೂರ್ವಕವಾಗಿ ತೆರೆಮರೆಯಲ್ಲಿಟ್ಟಿದ್ದೇನೆ. ಇತ್ತೀಚೆಗೆ ನನ್ನ ಗಮನಕ್ಕೆ ಬಂದಿರುವ ಸಂಗತಿಗಳಿವು. ಅಂಥ ವಿಷಯಗಳಿಗೆ ಈಗ ಪ್ರಚಾರ ಕೊಡುವ ಅಗತ್ಯವಿಲ್ಲವೆಂದು ನನಗನಿಸುತ್ತದೆ.''

* * *

ಅಧ್ಯಾಯ-61

ಸೇವೆಗಾಗಿ ಸೇವೆ

"ನಮ್ಮ ಶಿಸ್ತುಬದ್ಧ ಜೀವನದಲ್ಲಿ ಅವಿಭಾಜ್ಯ ಅಂಗವಾಗಿ ನಮ್ಮ ನಡವಳಿಕೆಗಳಲ್ಲಿ ಒಂದೆನ್ನುವಂತೆ ಸೇವಾ ಮನೋಭಾವ ಮೂಡಬೇಕು. ಸೇವೆಯ ನಿಷ್ಠೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಎಲ್ಲಾ ಬಗೆಯ ಸ್ಪರ್ಧಾಕಾಂಕ್ಷೆಗಳಿಂದ ಮುಕ್ತವಾಗಿರಬೇಕು. ಪ್ರತಿಫಲ ಅಪೇಕ್ಷೆ ಇರಬಾರದು. 'ಸಮಯ ವ್ಯರ್ಥ' ಎಂಬ ಭಾವನೆ ಇಲ್ಲದೆ ಕೈದಿಗಳ ಸೇವೆಯಲ್ಲಿ ತೊಡಗಬೇಕು. ಬಡವರ್ಗಗಳ ಮಕ್ಕಳು ಎಷ್ಟೇ ಗಲೀಜಾಗಿರಲಿ, ಕೊಳಕಾಗಿರಲಿ ಅವರ ಸಂರಕ್ಷಣೆ, ಅವರಿಗೆ ಆಹಾರ ವಿತರಣೆ ಮತ್ತು ಪ್ರೀತಿ ಸಮರ್ಪಣೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು. ಧರ್ಮ, ಕೋಮು, ವರ್ಣ ಅಥವಾ ರಾಷ್ಟ್ರೀಯತೆಯ ಸೋಂಕಿಲ್ಲದೆ ಮಹಿಳಾ ಕುಲಕ್ಕೆ ಸಹಾಯಮಾಡಬೇಕು. ಒಟ್ಟಿನಲ್ಲಿ ಇತರರಿಗೆ ಸೇವೆ ಮಾಡಬೇಕು. ಇತರರ ಹಿತಕ್ಕಾಗಿ ತ್ಯಾಗ ಮಾಡಬೇಕು. ಅದೇ ನಮ್ಮ ಬದುಕಿನ ಘನೋದ್ದೇಶವಾಗಬೇಕು.''

-ಲಜಪತ್‌ರಾಯ್

ಯುದ್ಧಕಾಲದ ಸ್ವಯಂ ಘೋಷಿತ ಗಡಿಪಾರು ಶಿಕ್ಷೆಯಿಂದ ಮರಳಿದ ಲಾಲಾಜಿಯವರು ನಾನಾ ಬಗೆಯ ಸಮುದಾಯ ಹೋರಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಯಿತು. ಸೀಮಿತ ಚೌಕಟ್ಟುಗಳ ಫಲವಾಗಿ ದೀರ್ಘಕಾಲದ ಯಾವುದೇ ಯೋಚನೆಗಳನ್ನು ಕೈಗೊಳ್ಳಲು ಅವಕಾಶವಾಗಲಿಲ್ಲ. ಆದರೂ, ಸ್ವಯಂ ಘೋಷಿತ ಗಡಿಪಾರು ಕಾಲದಲ್ಲಿದ್ದ ಸಮಯದಲ್ಲಿ ಅವರೊಡನೆ ಕವಲೊಡೆದಿದ್ದ ನಾನಾ ಯೋಜನೆಗಳು ಅವಕಾಶಗಳಿಗೆ ಅನುಗುಣವಾಗಿ ಕಾರ್ಯಗತಗೊಳ್ಳತೊಡಗಿದವು.

ಆ ಪೈಕಿ ಮೊಟ್ಟ ಮೊದಲನೆಯದು ಅವರದೇ ಆದ ದೈನಿಕವೊಂದರ ಪ್ರಕಟನೆ. ನಂತರದ್ದು, ಸ್ವಲ್ಪ ಕಾಲಾವಧಿಯ ನಂತರ ಕೈಗೊಂಡ ತಿಲಕ್ ರಾಜಕೀಯ ಶಾಲೆ. ಅದು, ಮುಂದೆ ಜೀವಾವಧಿ ಸದಸ್ಯರಿಂದ ಕೂಡಿದ 'ಜನತಾ ಸೇವಕರ' ಸಂಘಟನೆಯಾಗಿ ವಿಕಾಸ ಹೊಂದಿತು. ಲಾಲಾಜಿಯವರು ಸ್ಥಾಪಿಸಿದ ಸಾಂಸ್ಥಿಕ ಕಾರ್ಯಗಳಲ್ಲಿ ಅದೇ ಮೊಟ್ಟ ಮೊದಲನೆಯದು. ಈ ಅಧ್ಯಾಯವು ಲಾಲಾಜಿ ಅವರು ಗಡಿಪಾರು ಶಿಕ್ಷೆಯಿಂದ ಮರಳಿದ ಮೇಲೆ ಸಂಸ್ಥೆಗಳನ್ನು ಸ್ಥಾಪಿಸಲು ಅವರು ಕೈಗೊಂಡ ಕಾರ್ಯಗಳಿಗೆ ಸೀಮಿತವಾಗಿದೆ. ಅದೂ ಸಹ 'ಜನತಾ ಸೇವಕರ' ಸಂಘಟನೆಯ ಆರಂಭದೊಂದಿಗೆ ಪ್ರಾರಂಭವಾಗಿದೆ. ಕಾಲಾನುಗತದ ಕ್ರಮಣಿಕೆಯಲ್ಲಿ ಸಹ ಈ ಸಂಘದ ಸ್ಥಾಪನೆ ಆದ್ಯತೆಯನ್ನು ಪಡೆಯುತ್ತದೆ. ಅದರ ದೀರ್ಘ ಕಾಲದ ಅಸ್ತಿತ್ವದ ವಿಷಯದಲ್ಲಿಯೂ ಮಹತ್ವ ಹೊಂದಿದೆ

'ಜನತಾ ಸೇವಕರ' ಸಂಘಟನೆ ಅಸ್ತಿತ್ವಕ್ಕೆ ಬಂದಿದ್ದನ್ನು ಗುರುತಿಸಬೇಕಾದರೆ 1905ರ ಸಂದರ್ಭದಲ್ಲಿ ಲಾಲಾಜಿಯವರ ಮನಸ್ಸಿನಲ್ಲಿ ಮೂಡಿದ್ದ ಚಿಂತನೆಗಳಿಗೆ ನಾವು ಹಿಂದೆ ಸರಿಯಬೇಕಾಗುತ್ತದೆ. ಆಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಭಾರತೀಯ ಸಂಘದ ಜಂಟಿ ನಿಯೋಗವೊಂದರ ಸದಸ್ಯರಾಗಿ ಲಾಲಾಜಿಯವರನ್ನು ಇಂಗ್ಲೆಂಡಿಗೆ ಕಳುಹಿಸಿಕೊಟ್ಟ ಸಂದರ್ಭ. ಅವರ ಖರ್ಚು ವೆಚ್ಚಕ್ಕಾಗಿ ಪಂಜಾಬಿನ ಭಾರತೀಯ ಸಂಘವು ಸುಮಾರು 3 ಸಾವಿರ ರೂಪಾಯಿಗಳಷ್ಟು ಸಂಗ್ರಹ ಮಾಡಿಕೊಟ್ಟಿತ್ತು. ಇಂಗ್ಲೆಂಡಿನಿಂದ ಮರಳಿದ ನಂತರ ಆ ಭೇಟಿಯಲ್ಲಿ ತಾವು ತಮ್ಮ ಸ್ವಂತ ಹಣವನ್ನಷ್ಟೇ ಖರ್ಚು ಮಾಡಿದ್ದಾಗಿ ಲಾಲಾಜಿ ಪ್ರಕಟಿಸಿದರು. ಚಂದಾ ಮೂಲಕ ಸಂಗ್ರಹಿಸಿ ತಮಗೆ ಕೊಟ್ಟ ಹಣವನ್ನು ರಾಜಕೀಯ ಅಧ್ಯಯನಕ್ಕಾಗಿ ತೊಡಗುವ ಯುವ ವಿದ್ಯಾರ್ಥಿಗಳಲ್ಲಿ ಆಯ್ದವರಿಗೆ ಸ್ಟೈಪೆಂಡ್ ರೂಪದಲ್ಲಿ ಆ ಹಣವನ್ನು ಕೊಡಬಹುದೆಂಬ ಚಿಂತನೆಯನ್ನು ಲಾಲಾಜಿ ಮಂಡಿಸಿದರು. ಅದರಲ್ಲೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆ ಸ್ಟೈಪೆಂಡ್ ಕೊಡಲು ಸಲಹೆ ಮಾಡಿದರು. ತಾವು ಇಂಗ್ಲೆಂಡಿಗೆ ತೆರಳುವ ಮೊದಲು ಮುಂಬಯಿಗೆ ಭೇಟಿ ಕೊಟ್ಟಾಗ ಪೂನಾದಲ್ಲಿ ತಂಗಿದ್ದ ಸಂದರ್ಭದಲ್ಲಿ ತಾವು ಕಂಡಿದ್ದರ ಪ್ರಭಾವ ಲಾಲಾಜಿಯವರ ಆ ನಿಲುವಿಗೆ ಪ್ರೇರಣೆಯಾಗಿತ್ತು. ಗೋಖಲೆಯವರು ಆಗಷ್ಟೇ 'ಭಾರತೀಯ ಸೇವಕರ' ಸಂಘವನ್ನು ಸ್ಥಾಪಿಸಿದ್ದರು. ಲಾಲಾಜಿ ಈ ಬಗ್ಗೆ ಮೊದಲೇ ತಿಳಿದುಕೊಂಡಿದ್ದರು. ಲಾಲಾಜಿ ಕಣ್ಣಾರೆ ಕಂಡ ನಂತರವಂತೂ ತಮ್ಮ ಪಂಜಾಬಿನಲ್ಲೂ ಅದೇ ರೀತಿಯ ಸಂಘವೊಂದನ್ನು ಸ್ಥಾಪಿಸಬೇಕೆಂಬ ಅದಮ್ಯ ಬಯಕೆ ಅವರಲ್ಲಿ ಮೂಡಿತ್ತು. ರಾಜಕೀಯ ಶಿಕ್ಷಣಕ್ಕೆ ಸ್ಟೈಪೆಂಡ್ ನೆರವು ಒದಗಿಸುವ ಮೂಲಕ ತಮ್ಮ ಆ ಬಯಕೆಯನ್ನು ಈಡೇರಿಸಿಕೊಳ್ಳುವ ಸಣ್ಣ ಪ್ರಾರಂಭವೊಂದಕ್ಕೆ ಅವರು ಮುಂದಾದರು.

1905ರ ಆ ಕನಸು ನನಸಾಗಲು ಅನೇಕ ಎಡರು ತೊಡರುಗಳು ಮುಂದಾಗಿದ್ದು ಉಂಟು. ವಿಳಂಬವು ಕಾರಣವಾಯಿತು. ಸಂಘವು ಸ್ಥಾಪನೆಗೊಂಡು ಐದು ವರ್ಷ ತುಂಬಿದ ಸಂದರ್ಭದಲ್ಲಿ ಸ್ವಂತ ಲಾಲಾಜಿಯವರೇ ಆ ಬಗ್ಗೆ ಬರೆದು ಕೊಂಡಿದ್ದಾರೆ. ಸಂಘದ ನಿಯತ ವರದಿಗಳಲ್ಲಿ ಒಂದರಲ್ಲಿ ದಾಖಲೆಯಾಗಿರುವ ಅವರ ಅಭಿಪ್ರಾಯ ಹೀಗಿದೆ:

''1907ರಲ್ಲಿ ನನಗೆ ವಿಧಿಸಲ್ಪಟ್ಟ ಗಡಿಪಾರು ಶಿಕ್ಷೆಯಿಂದಾಗಿ ನಿರ್ದಿಷ್ಟವಾದ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. 1907, 1910 ಮತ್ತು 1914ರ ನನ್ನ ಕೆಟ್ಟ ಕಾಲಗಳು ಹಾಗೂ ನನ್ನ ಸಾರ್ವಜನಿಕ ಕಟ್ಟುಪಾಡುಗಳು ಹಾಗೂ ಆ ಅವಧಿಯಲ್ಲಿ ಅವ್ಯಾಹತವಾಗಿ ಉಂಟಾದ ಹತಾಶೆಗಳು ನನಗೆ ಹೆಚ್ಚಿನದೇನನ್ನು ಯೋಚಿಸಲು ಅನುವು ಮಾಡಿಕೊಡಲಿಲ್ಲ. ನನಗೆ ವಿಶ್ರಾಂತಿಯೂ ಇರಲಿಲ್ಲ. ನನ್ನ ಧ್ಯೇಯೋದ್ದೇಶಗಳನ್ನು ವಿಸ್ತರಿಸಿಕೊಳ್ಳಲು ಕಾಲಾನುಕೂಲವೂ ಒದಗಲಿಲ್ಲ. ಹೀಗಾಗಿ ಈ ಸಂಘದ ಅಭ್ಯುದಯಕ್ಕೆ ಕಾರ್ಯೋಚಿತವಾದ ರೂಪು ಕೊಡಲು ವಿಳಂಬವಾಯಿತು.''

ನಾವೀಗ ಓದಿದ ಮೇಲಿನ ಒಕ್ಕಣೆ ಇರುವ ವರದಿಯಲ್ಲಿ ಲಾಲಾಜಿಯವರು ಡೆಕ್ಕನ್ ಎಜುಕೇಷನ್ ಸೊಸೈಟಿಯಂಥ ಘನತೆವೆತ್ತ ಸಂಸ್ಥೆಗಳ ಸ್ಥಾಪಕ ಮಹಾರಾಷ್ಟ್ರೀಯರಿಗೆ

ಅನನ್ಯ ಗೌರವ ಸಲ್ಲಿಸಿದ್ದಾರೆ. ಭಾರತೀಯ ಸೇವಕರ ಸಂಘ ಸ್ಥಾಪಕ ಗೋಖಲೆಯವರಿಗೆ ಋಣಿಯಾಗಿದ್ದಾರೆ. ತಮ್ಮ ಸೈದ್ಧಾಂತಿಕ ನೆಲೆಗಟ್ಟಿಗೆ ನಿರ್ದಿಷ್ಟ ರೂಪವನ್ನು ಕೊಟ್ಟ ಅಮೆರಿಕದ ಘನತವೆತ್ತ ಸಂಸ್ಥೆಗಳ ಬಗ್ಗೆ ಲಾಲಾಜಿ ಹೃದಯ ತುಂಬಿ ಮಾತನಾಡಿದ್ದಾರೆ. ಅಮೆರಿಕ ವಾಸ್ತವ್ಯದ ಕಾಲದಲ್ಲಿ ಅವರು ''ಕಲಿತದ್ದು ಮತ್ತು ಕಲಿಯದೆ ಇದ್ದದ್ದು ಅಪಾರ.'' ಕೆಲವು ಅಮೆರಿಕನ್ ಸಂಸ್ಥೆಗಳಲ್ಲಿ ಅವರು ಕೆಲವು ಕಾಲ 'ಉಪನ್ಯಾಸಕರಾಗಿಯೋ ಅಥವಾ ವಿದ್ಯಾರ್ಥಿಯಾಗಿಯೋ'' ಅನುಭವ ಶ್ರೀಮಂತ ಮಾಡಿಕೊಂಡಿದ್ದು ಉಂಟು. ಅವರು ವಿಶೇಷವಾಗಿ ರ್‍ಯಾಂಡ್ ಸಮಾಜಶಾಸ್ತ್ರ ಶಾಲೆಗೆ ಹೆಚ್ಚು ಆಕರ್ಷಿತರಾಗಿದ್ದರು. ನ್ಯೂಯಾರ್ಕ್‌ನ ಆ ಶಾಲೆಯು ಸಮಾಜ ವಿಜ್ಞಾನವನ್ನು ಜನತೆಗೆ ಬೋಧಿಸುತ್ತಿತ್ತು. ನಿಯತವಾದ ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಸಮಾಜ ವಿಜ್ಞಾನಗಳ ಬಗ್ಗೆ ಕಲಿಯಲು ಅವಕಾಶ ವಂಚಿತರಾಗಿದ್ದ ಜನರಿಗೆ ಅದರಿಂದ ತುಂಬಾ ಅನುಕೂಲವಾಯಿತು. ಹೆಚ್ಚು ಶುಲ್ಕ ತೆತ್ತು ಕಲಿಯಲು ಶಕ್ತಿ ಇಲ್ಲದವರಿಗೆ ರ್‍ಯಾಂಡ್ ಸಮಾಜ ವಿಜ್ಞಾನ ಶಾಲೆಯಿಂದ ಪ್ರಯೋಜನವಾಗಿತ್ತು. ಲಾಲಾಜಿ ತಮ್ಮ ಅಭಿಪ್ರಾಯದಲ್ಲಿ ''ಈ ಶಾಲೆಯು ಹೆಚ್ಚು ಕಡಿಮೆ ಸ್ವಸಹಾಯ ನೆಲೆಗಟ್ಟಿನಲ್ಲಿ ನಡೆಯುತ್ತಿದೆ. ಸಂಗ್ರಹಿತವಾಗುವ ಶುಲ್ಕದಲ್ಲಿ ಸಾಧ್ಯವಿರುವಷ್ಟು ಪ್ರಮಾಣದ ಹಣವನ್ನು ಗೌರವಧನವಾಗಿ ಉಪನ್ಯಾಸಕರಿಗೆ ನೀಡಲಾಗುತ್ತಿದೆ...'' ಎಂದಿದ್ದಾರೆ. ಶಾಲೆಯ ಬಗ್ಗೆ ತಮ್ಮ ಕೃತಜ್ಞತೆಯನ್ನು ದಾಖಲಿಸುತ್ತಾ ಲಾಲಾಜಿ:

''ನ್ಯೂಯಾರ್ಕ್‌ನಲ್ಲಿದ್ದ ಕಾಲದಲ್ಲಿ ನಾನು ರಾಜಕೀಯ ಮತ್ತು ಸಮಾಜ ವಿಜ್ಞಾನ ಶಿಕ್ಷಣವನ್ನು ಬಹುವಾಗಿ ಪಡೆದುಕೊಂಡೆ. ಅಂಥದ್ದೇ ಶಾಲೆಗಳಲ್ಲಿ ಒಂದನ್ನು ನನ್ನ ತಾಯ್ನಾಡಿನಲ್ಲಿಯೂ ಸ್ಥಾಪಿಸಬೇಕೆಂಬ ಮಹೋದ್ದೇಶವನ್ನು ನಾನು ಅಲ್ಲಿಂದ ಎರವಲಾಗಿ ಪಡೆದುಕೊಂಡಿದ್ದೇನೆ.'' ಎಂದಿದ್ದಾರೆ. ಲಾಲಾಜಿ ದಾಖಲೆ ಮಾಡಿರುವ ಪ್ರಕಾರ ರ್‍ಯಾಂಡ್ ಶಾಲೆಯು 'ಸಮಾಜವಾದ'ದ ನೆಲೆಗಟ್ಟಾಗಿತ್ತು.'' ಆ ಶಾಲೆಯಿಂದ ಲಾಲಾಜಿಯವರು ತಮ್ಮ ತಾಯ್ನಾಡಿನಲ್ಲಿ ರಾಜಕೀಯ ಶಾಸ್ತ್ರದ ಶಾಲೆಯನ್ನು ಆರಂಭಿಸುವ ಯೋಜನೆಯನ್ನು ಸಿದ್ಧಪಡಿಸಿಕೊಂಡರು. ತಾಯ್ನಾಡಿಗೆ ಮರಳುತ್ತಿದ್ದಂತೆಯೇ ಅವರು ಅದನ್ನು ಪ್ರಕಟಿಸಿಯೂ ಬಿಟ್ಟರು.

ಲಜಪತ್‌ರಾಯ್ ಮರಳಿದಾಗ ಅವರಿಗೆ ಅದ್ಭುತ ಸ್ವಾಗತ ನೀಡಿ ಅಧ್ಯಕ್ಷ ಭಾಷಣ ಮಾಡಿದವರು ತಿಲಕರು. ಮುಂಬಯಿಯಲ್ಲಿ ಪ್ರಚಂಡ ಸಭೆಯನ್ನು ಸಂಘಟಿಸಿದರು. ಲೋಕಮಾನ್ಯರೆಂದೇ ಜನತೆಯಿಂದ ಗೌರವಾದರ ಸಂಪಾದಿಸಿಕೊಂಡಿದ್ದ ತಿಲಕರು 1920ರ ಆಗಸ್ಟ್ 1ರಂದು ಇಹದ ಹೋರಾಟವನ್ನು ತ್ಯಜಿಸಿದರು. ಲೋಕಮಾನ್ಯರಿಗಾಗಿ ಯಾವುದೇ ತ್ಯಾಗ, ನೋವು, ಹಿಂಸೆಗೆ ಒಳಗಾಗಲು ಸಿದ್ಧರಾಗಿದ್ದ ಲಾಲಾಜಿಯವರಿಗೆ ಇದರಿಂದ ಭರಿಸಲಾಗದಷ್ಟು ನಷ್ಟವಾಯಿತು. ಆ ದುಃಖದ ಪ್ರಸಂಗದಲ್ಲಿ ಲಾಲಾಜಿಯವರು ತಾವು ಯೋಚಿಸಿದ ಸಂಸ್ಥೆಗೆ ತಿಲಕರ ರಾಜಕೀಯ ಶಾಲೆ ಎಂದು ನಾಮಕರಣ ಮಾಡಿದರು. ಶಾಲೆಯ ಸ್ಥಾಪನೆಯಲ್ಲಿ ಆರಂಭದ ಯೋಜನೆಗಳೆಲ್ಲವೂ ಅವರ ಮೇಲೆ ಪ್ರಭಾವ ಬೀರಿದ ರ್‍ಯಾಂಡ್ ಶಾಲೆಯ ಮಾದರಿಯಲ್ಲಿಯೇ ಇತ್ತು. ಆದರೆ ಈಗ ನಾವು ಕಾಣುತ್ತಿರುವಂತೆ ಕಾಲ ಗತಿಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಭಾರೀ ಪ್ರಮಾಣದ ಮಾರ್ಪಾಟುಗಳಾಗಿವೆ.

ತಿಲಕ್ ಶಾಲೆಯ ಆರಂಭ ಭರವಸೆ ಪೂರ್ಣವಾಗಿತ್ತು. ಯಥೋಚಿತವಾಗಿ ಸ್ವಂತ ಕಟ್ಟಡ, ಅತ್ಯುತ್ತಮವಾದ ಗ್ರಂಥಭಂಡಾರ, ಲಾಲಾಜಿಯವರ ಮನವಿಗೆ ಓಗೊಟ್ಟು ಸಂಗ್ರಹವಾದ ಚಂದಾ ಮೊತ್ತ ಅದೆಲ್ಲದರ ಫಲವಾಗಿ ಉತ್ತಮವಾದ ಸಂಸ್ಥೆ ಅದೆನಿಸಿದಂತೆ ಕಂಡು ಬಂದಿತು. ಆರಂಭದ ಬೆಳವಣಿಗೆಯನ್ನು ಗಮನಿಸಿದಾಗ ಲಾಲಾಜಿ ಅವರ ಉಸ್ತುವಾರಿಯಲ್ಲಿ ಶಾಲೆ ತ್ವರಿತ ಬೆಳವಣಿಗೆ ಸಾಧಿಸಬಹುದೆಂಬ ನಿರೀಕ್ಷೆಯೂ ಹುಟ್ಟಿತ್ತು. ಆದರೆ ಶಾಲೆ ಆರಂಭ ಪ್ರಕಟಿಸಿದ ದಿನದಿಂದ ಅದು ಪ್ರಾರಂಭವಾದ ದಿನದವರೆಗಿನ ಮೂರು ತಿಂಗಳ ಅವಧಿಯಲ್ಲಿ ಅದೆಷ್ಟೋ ಭಿನ್ನ ಭಿನ್ನ ಬೆಳವಣಿಗೆಗಳಾದವು. ಆ ಬೆಳವಣಿಗೆಗಳ ಪ್ರಭಾವ ಮೊಳಕೆಯೊಡೆಯುತ್ತಿದ್ದ ಸಂಸ್ಥೆಗಳ ಮೇಲೆ ಬೀಳದಿರಲಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಶಾಲೆಯ ಸ್ಥಾಪನೆಯಾಗಲಿಲ್ಲ.

ಎಡರು ತೊಡರಾಗಿ ಮೂಡಿದ ಬೆಳವಣಿಗೆಗಳೆಲ್ಲವೂ ಅಸಹಕಾರ ಚಳವಳಿಗೆ ಸಂಬಂಧಪಟ್ಟದ್ದಾಗಿದ್ದವು. 1920ರಲ್ಲಿ ಅಂತ್ಯದಲ್ಲಿ ನಾಗಪುರದಲ್ಲಿ ಏರ್ಪಟ್ಟ ಕಾಂಗ್ರೆಸ್ ಅಧಿವೇಶನ ಲಾಲಾಜಿ ಅವರ ಮೇಲೆ ಹೆಚ್ಚಿನ ಹೊಣೆಗಾರಿಕೆಗೆ ಕಾರಣವಾಯಿತು. ಅಸಹಕಾರ ಚಳವಳಿಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಕಾರ್ಯ ಅವರದಾಯಿತು. ಅವರ ಕರೆಗೆ ಓಗೊಟ್ಟು ಬಹುತೇಕ ಮಂದಿ ತಮ್ಮ ವಿದ್ಯಾಭ್ಯಾಸಕ್ಕೆ ಪರ್ಯಾಯ ವ್ಯವಸ್ಥೆಯನ್ನು ಸಹಜವಾಗಿ ಬಯಸಿದರು. ದೇಶಿಯ ಸ್ತರದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಪಂಜಾಬಿನಲ್ಲಿ ಮಂಡಳಿಯೊಂದನ್ನು ಸ್ಥಾಪಿಸಬೇಕಾಯಿತು. ಆ ಮಂಡಳಿಯ ಆಶ್ರಯದಲ್ಲಿ ಮಹಾ ವಿದ್ಯಾಲಯ ಅಥವಾ ದೇಶಿಯ ಕಾಲೇಜೊಂದನ್ನು ಸ್ಥಾಪಿಸಬೇಕಾಯಿತು. ತಿಲಕ್ ಶಾಲೆಯು ತನ್ನದೇ ಸ್ವರೂಪವನ್ನು ಹೊಂದಬೇಕಾಗಿದ್ದರಿಂದ ಅದರ ಅಸ್ತಿತ್ವ ರೂಪು ರೇಷೆಗಳು ಭಿನ್ನವಾಗಬೇಕಾಗಿತ್ತು. ಆದರೆ ಒತ್ತಡಗಳು ಮತ್ತು ಸಮಯ ಅಭಾವದ ಕಾರಣದಿಂದಾಗಿ ಹೆಚ್ಚು ಕಡಿಮೆ ಒಂದೇ ಬಗೆಯ ಕಾರ್ಯ ಸ್ವರೂಪವನ್ನು ಸಂಯೋಜಿಸಿಕೊಳ್ಳುವುದು ಅನಿವಾರ್ಯವಾಯಿತು. ಅದರ ಫಲವಾಗಿ ಮಹಾವಿದ್ಯಾಲಯದ ಸ್ಥಾಪನೆಯಾದಾಗ ತಿಲಕ್ ಶಾಲೆಗಾಗಿ ನೇಮಿಸಿಕೊಂಡಿದ್ದ ಕೆಲವು ಶಿಕ್ಷಕರನ್ನು ಅಲ್ಲಿಗೆ ವರ್ಗಾವಣೆ ಮಾಡಲಾಯಿತು. ಆ ಪೈಕಿ ಒಬ್ಬರನ್ನು ಪ್ರಾಂಶುಪಾಲರನ್ನಾಗಿಯೂ ಸಂಯೋಜಿಸಲಾಯಿತು. ತತ್ಫಲವಾಗಿ ತಿಲಕ್ ಶಾಲೆಯ ಪ್ರಾಥಮಿಕ ಪಾತ್ರ ನಿರ್ವಹಣೆಯಲ್ಲಿ ಏರುಪೇರಾಯಿತು.

ಅದೇ ಸಮಯದಲ್ಲಿ ಇನ್ನೂ ಹೆಚ್ಚು ಅನುಕೂಲಕರವೆನಿಸುವಂಥ ಸಂದರ್ಭವೊಂದು ಒದಗಿ ಬಂದಿತು. ಅಸಹಕಾರ ಚಳವಳಿಯಲ್ಲಿ ತೊಡಗಿದ್ದ ಕೆಲವು ಯುವಕರು ಬಹುಕಾಲದವರೆಗೆ ಸಮರ್ಪಣಾ ಸೇವೆಗೆ ಒದಗಿ ಬಂದರು. ಸಾಮಾಜಿಕ ಮತ್ತು ರಾಜಕೀಯ ಕಾರ್ಯಕ್ಕೆ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳಬಲ್ಲಂತಹ ಸಮರ್ಪಣಾ ಧೋರಣೆಯ ಕಾರ್ಯಕರ್ತ ತಂಡವೊಂದು ಲಾಲಾಜಿಯವರಿಗೆ ದೊರೆತಂತಾಯಿತು. ಪುಣೆ ಸಂಘದ ತದ್ರೂಪವಾಗಿ ತಿಲಕ್ ಶಾಲೆಯನ್ನು ಊರ್ಜಿತಗೊಳಿಸಿಕೊಳ್ಳುವ ಬಗ್ಗೆ ಅವಕಾಶ ಪ್ರಾಪ್ತವಾಯಿತು. ತಿಲಕ್ ಶಾಲೆಯ ಬೋಧನಾ ವ್ಯವಸ್ಥೆಯು ಮಹಾ ವಿದ್ಯಾಲಯದಲ್ಲಿ ಅಂತರ್ಗತವಾಯಿತು. ಅದರ ಆಸ್ತಿಪಾಸ್ತಿ ಎಲ್ಲವೂ ಹೊಸ ವ್ಯವಸ್ಥೆಗೆ ಪೂರಕವಾಗುವಂತೆ ವಿನಿಯೋಗವಾಗತೊಡಗಿತು. ಹೊಸ ವ್ಯವಸ್ಥೆಗೆ ಜನತಾ ಸೇವಕರ ಸಂಘವೆಂದು

ಹೆಸರಿಸಲಾಯಿತು. ಬಹು ವರ್ಷಗಳ ತನಕ ಅದನ್ನು ತಿಲಕ್ ಶಾಲೆ ಎಂತಲೂ, ಜನತಾ ಸೇವಕರ ಸಂಘವೆಂತಲೂ ಕರೆಯುತ್ತಾ ಬರಲಾಯಿತು. ಸ್ವತಃ ಲಾಲಾಜಿಯವರೇ ಈ ಎರಡು ಹೆಸರುಗಳನ್ನು ಸಮನಾಂತರವಾಗಿ ಬಹು ಕಾಲದವರೆಗೆ ಬಳಸುತ್ತಿದ್ದರು.

ಯಾವುದೇ ಕೆಲಸವನ್ನು ಬೇರೆಯವರಿಗೆ ಹೇಳುವ ಮೊದಲು ಅದರಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಿದ್ದರು. ಇದು ಲಾಲಾಜಿಯವರ ಸಾರ್ವಕಾಲಿಕ ಪ್ರವೃತ್ತಿಯಾಗಿತ್ತು. ತಾವು ಕೈಗೊಂಡ ಸಂಘದ ಸ್ಥಾಪನೆಗೆ ಸಾರ್ವಜನಿಕರಿಂದ ವಂತಿಕೆಯನ್ನು ಕೋರುವ ಮೊದಲು ಅವರು ನಂ. 2 ಕೋರ್ಟ್ ಸ್ಟ್ರೀಟ್‌ನಲ್ಲಿದ್ದ ತಮ್ಮ ಸ್ವಂತ ನಿವಾಸವನ್ನು ತಿಲಕ್ ರಾಜಕೀಯ ಶಾಲೆ ಟ್ರಸ್ಟ್ ಸ್ಥಾಪನೆಗೆ ಬಿಟ್ಟು ಕೊಟ್ಟಿರುವುದಾಗಿ ಪ್ರಕಟಿಸಿದರು. ಅದೇ ಕಾಂಪೌಂಡಿನಲ್ಲಿ ಖಾಲಿ ಜಾಗದಲ್ಲಿ ತಮ್ಮ ಕುಟುಂಬದ ವಾಸ್ತವ್ಯಕ್ಕಾಗಿ ಕಾಟೇಜ್‌ವೊಂದನ್ನು ಟ್ರಸ್ಟಿನ ನಿಧಿ ಮೂಲಕವೇ ಕಟ್ಟಿಸಿಕೊಡುವ ಸಣ್ಣ ಮಾರ್ಪಾಟನ್ನು ಲಾಲಾಜಿ ತಮ್ಮ ಪ್ರಕಟಣೆಯಲ್ಲಿ ಮಾಡಿದ್ದರು. ಬಹುಶಃ ತಮ್ಮ ಆ ಕಟ್ಟಡವನ್ನು ಟ್ರಸ್ಟಿಗೆ ಬಿಟ್ಟು ಕೊಡುವ ವಿಷಯದಲ್ಲಿ ಕುಟುಂಬದ ಸದಸ್ಯರಿಂದ ಬರುತ್ತಿದ್ದ ವಿರೋಧವನ್ನು ತಪ್ಪಿಸಿಕೊಳ್ಳಲು ಅವರು ಆ ಮಾರ್ಪಾಟನ್ನು ಮಾಡಿಕೊಂಡರೆಂದೇ ಕಂಡು ಬರುತ್ತದೆ. ಆದರೂ ಪರ್ಯಾಯ ವ್ಯವಸ್ಥೆಗೆ ಲಾಲಾಜಿ ಟ್ರಸ್ಟಿನಿಂದ ಯಾವ ಮೊತ್ತವನ್ನು ಬಳಸಿಕೊಳ್ಳಲಿಲ್ಲ. ತಮ್ಮ ಕುಟುಂಬದವರನ್ನು ಸಂತೃಪ್ತಿಪಡಿಸಿ ತಮ್ಮ ಉದ್ದೇಶವನ್ನು ಸಾರ್ಥಕ್ಯ ಮಾಡಿಕೊಂಡರು.

ಟ್ರಸ್ಟಿನಲ್ಲಿ ಧೂನಿಚಂದ್ (ಬ್ಯಾರಿಸ್ಟರ್), ಭಾಯಿ ಪರಮಾನಂದ, ರಾಂ ಪ್ರಸಾದ್ ಮತ್ತು ಜಸ್ವಂತ್‌ರಾಯ್ ಇದ್ದರು. ಲಾಲಾಜಿ ಛೇರಮನ್. 1921ರ ವಸಂತ ಕಾಲದಲ್ಲಿ ರಾವಲ್ಪಿಂಡಿಯಲ್ಲಿ ಏರ್ಪಟ್ಟ ರಾಜಕೀಯ ಸಮ್ಮೇಳನವೊಂದರಲ್ಲಿ ತಿಲಕ್ ಶಾಲೆಯನ್ನು ಗೋಖಲೆ ಭಾರತೀಯ ಸೇವಕರ ಸಂಘದ ಆಜೀವ ಸದಸ್ಯತ್ವದ ಸ್ವರೂಪದಲ್ಲಿ ನಿರ್ದಿಷ್ಟವಾಗಿ ಪ್ರತಿಷ್ಠಾಪನೆ ಮಾಡಿಕೊಳ್ಳಲು ಉದ್ದೇಶಿಸಲಾಯಿತು. ಅಚಿಂತ್‌ರಾಂ, ಪಿ.ಎಲ್. ಸೋಂದಿ ಮತ್ತು ಈ ಕೃತಿಯ ಲೇಖಕರು ಅದರ ಮೊಟ್ಟ ಮೊದಲ ಮೂವರು ಸದಸ್ಯರಾದರು. ಸರಳ ಹಾಗೂ ಸಂಕ್ಷಿಪ್ತ ನಿಯಮ ನಿರ್ಬಂಧಗಳನ್ನು ರಚಿಸಲಾಯಿತು. ಕೇವಲ ಒಂದು ಹಾಳೆಯ ಮೇಲೆ ಅಡಕವಾಗಿದ್ದ ನಿಯಮ ನಿರ್ಬಂಧಗಳ ಪ್ರಕಾರ 20 ವರ್ಷಗಳ ಸೇವೆಯನ್ನು ಖಾತ್ರಿ ಪಡಿಸಲಾಯಿತು. ಅದಕ್ಕಿಂತ ಹೆಚ್ಚಿನದಾಗಿ ಯಾವುದೇ ವಿಧಿ ವಿಧಾನಗಳನ್ನು ಲಾಲಾಜಿ ರೂಪಿಸಲಿಲ್ಲ. ಬೇಕು ಬೇಡಗಳನ್ನು ಕಾಣಿಸಲಿಲ್ಲ. ದೀಕ್ಷೆ, ಪ್ರಮಾಣಗಳ ಬಗ್ಗೆಯೂ ಪ್ರಸ್ತಾಪ ಮಾಡಲಿಲ್ಲ.

ಹೊಸ ಸಂಸ್ಥೆಯು ಅಸ್ತಿತ್ವಕ್ಕೆ ಬಂದ ಮೂರು ವಾರಗಳಲ್ಲೇ ಲಾಲಾಜಿ ಅವರ ಬಂಧನವಾಯಿತು. ಅವರನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು.

ಯುವ ಪೀಳಿಗೆಗೆ ಆರಂಭದಲ್ಲೇ ತೊಡಕು ಎದುರಾಯಿತು. ನಿಯತವಾದ 'ತರಬೇತು', ಮಾರ್ಗದರ್ಶನ ಅವರಿಗೆ ಇಲ್ಲವಾಯಿತು. ಜೈಲಿನಲ್ಲಿದ್ದರೂ ಲಾಲಾಜಿ ಸಂಸ್ಥೆಯ ಬಗ್ಗೆಯೇ ಯೋಚಿಸುತ್ತಿದ್ದರು. ಅಲ್ಲಿಂದ ಅವರು ಬರೆದು ಕಳುಹಿಸಿದ ಪತ್ರವೊಂದು ಮಾರ್ಗದರ್ಶಕವಾಯಿತು. ಅವರು ಉರ್ದುವಿನಲ್ಲಿ ಬರೆದಿದ್ದ ಆ ಪತ್ರದಲ್ಲಿ ತಿಲಕ್

ರಾಜಕೀಯ ಶಾಲೆಯ ಯುವಜನಸರು ಲಾಲಾಜಿಯವರ ಆಶೋತ್ತರಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕೆಂದು ಆದೇಶ ನೀಡಲಾಗಿತ್ತು. ತಾವು ಬಯಸಿದ್ದ ರೀತಿಯಲ್ಲೇ, ತರಬೇತಿ ಪಡೆದುಕೊಂಡ ರೀತಿಯಲ್ಲೇ ಜೀವನ ವಿಧಾನ ರೂಪಿಸಿಕೊಳ್ಳಬೇಕೆಂದು ಅವರು ಆ ಪತ್ರದಲ್ಲಿ ಬಯಸಿದ್ದರು. ಪತ್ರದ ಕೊನೆಯಲ್ಲಿ 'ನಿಮ್ಮ ಗೆಳೆಯ, ಕೈದಿ' ಎಂದು ನಮೂದಿಸಲಾಗಿತ್ತು. ಪತ್ರವನ್ನು 3ನೇ ವ್ಯಕ್ತಿ ಬರೆದಂತೆಯೂ ಲಾಲಾಜಿಯವರ ಹೀಗೆ ಬಯಸುತ್ತಿದ್ದಾರೆ ಎಂದು ತಿಳಿಸುವಂತೆ ಬರೆಯಲಾಗಿತ್ತು.

ಆ ಪತ್ರ ಶಾಲೆಯ ಅಭ್ಯರ್ಥಿಗಳಿಗೆ ಮೂಲ ಆಧಾರವಾಯಿತು. ಅವರ ಅಧ್ಯಯನಕ್ಕೆ ಮಾರ್ಗದರ್ಶನ ದೊರೆತಂತಾಯಿತು. ತಮ್ಮ ಜೀವನದ ಸಂದೇಶವನ್ನಾಗಿ ಯಾವುದನ್ನು ಸಮರ್ಪಕ ಮಾಡಿಕೊಳ್ಳಬೇಕು ಎಂಬುದರ ಬಗ್ಗೆಯೂ ದಿಕ್ಸೂಚಿ ದೊರೆತಂತಾಯಿತು. ತಾವು ಮಾಡಬೇಕಾಗಿದ್ದ ಕಾರ್ಯದ ಬಗ್ಗೆ ಸ್ಪಷ್ಟ ಗುರಿ ಸಿಕ್ಕಂತಾಯಿತು. ಆ ಪತ್ರ ಸಿಗದೇ ಇದ್ದಿದ್ದರೆ ಶಾಲೆಯ ಅಭ್ಯರ್ಥಿಗಳಿಗೆ ಮಾರ್ಗದರ್ಶನವೇ ಇಲ್ಲದಂತಾಗಿರುತ್ತಿತ್ತು. ಅವರಿಗೆ ತರಬೇತಿಯ ದಿಗ್ದರ್ಶನ ಇಲ್ಲದಂತಾಗುತ್ತಿತ್ತು. ಸಾಧನಾ ಹೀನರಾಗಬೇಕಾದ ಪರಿಸ್ಥಿತಿ ಉಂಟಾಗುತ್ತಿತ್ತು. ಈ ಅಧ್ಯಾಯದ ಕೊನೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಮೂಲ ಆಧಾರ ಆ ಪತ್ರದ್ದೇ ಆಗಿದೆ. ಆ ದಿನಗಳಲ್ಲಿ ರಾಜಕೀಯ ತರಬೇತಿ ಸೈದ್ಧಾಂತಿಕ ಚೌಕಟ್ಟಿನಲ್ಲಿ ರೂಪಿತವಾಗಿತ್ತು. ಅವು ಅಷ್ಟೊಂದು ಸರಳ ಸುಗಮದ ಕಾರ್ಯಗಳನ್ನು ಒಳಗೊಂಡಂತಿರಲಿಲ್ಲ. ಜನತೆಯೊಂದಿಗೆ ಸಂಪರ್ಕ ಸಾಧಿಸಿಕೊಳ್ಳುವುದು ಆ ಪೈಕಿ ಮಹತ್ವದ್ದಾಗಿತ್ತು. ಹಳ್ಳಿಗಾಡಿನ ಕಡೆ ಜನ ಪ್ರಚಾರ ಆಂದೋಲನ ಸಾಧಿಸಿಕೊಳ್ಳಬೇಕಾಗಿತ್ತು. ಸಹ ಅಭ್ಯರ್ಥಿಗಳೊಂದಿಗೆ ಸ್ನೇಹದ ಮನೋಧರ್ಮದಲ್ಲಿ ಕಾರ್ಯಶೀಲರಾಗ ಬೇಕಾಗುತ್ತಿತ್ತು. ಸಂಘಟಕರಾಗಿ ಅನುಭವ ಹೆಚ್ಚಿಸಿಕೊಳ್ಳಬೇಕಾಗುತ್ತಿತ್ತು. ಕೈದಿಗಳ ಜೀವನ ರೀತಿಯನ್ನು ಅಭ್ಯಾಸ ಮಾಡಿಕೊಳ್ಳಬೇಕಾಗುತ್ತಿತ್ತು. ತರಗತಿಗಳು ಮತ್ತು ಕಾರ್ಯಾಗಾರಗಳ ಮೂಲಕ ಅಭ್ಯರ್ಥಿಗಳು ತಮ್ಮ ಅನುಭವಗಳನ್ನು ಸೈದ್ಧಾಂತಿಕ ಗೊಳಿಸಿಕೊಳ್ಳುವುದು ಒಂದು ರೀತಿಯದಾದರೆ ಪ್ರಾಯೋಗಿಕ ತರಬೇತಿ ಅದಕ್ಕೆ ಪೂರಕವಾದ ಇನ್ನೊಂದು ಬಗೆಯದಾಗಿರುತ್ತಿತ್ತು. ಬೌದ್ಧಿಕವಾಗಿ ಸನ್ನದ್ಧರಾಗ ಬಯಸುವವರಿಗೆ ದ್ವಾರಕದಾಸ್ ಗ್ರಂಥಭಂಡಾರ ಒಳ್ಳೆಯ ಅವಕಾಶ ಕಲ್ಪಿಸುತ್ತಿತ್ತು. ಲಾಲಾಜಿಯವರ ಕಾಣಿಕೆಯೊಂದಿಗೆ ಸ್ಥಾಪಿತವಾದ ಅತ್ಯುತ್ತಮ ಗ್ರಂಥಭಂಡಾರಕ್ಕೆ ದ್ವಾರಕದಾಸ್‌ರ ಹೆಸರಿಟ್ಟು ಗೌರವಿಸಲಾಗಿತ್ತು.

ಲಾಲಾಜಿ ಅವರಿಂದ ಬಂದಿದ್ದ ಆ ಪತ್ರ ಮತ್ತು ಅದರಲ್ಲಿದ್ದ ಮಾರ್ಗದರ್ಶನ ಅಭ್ಯರ್ಥಿಗಳ ಮೂಲ ಅಗತ್ಯವನ್ನು ತನ್ಮೂಲಕ ಈಡೇರಿಸಿತ್ತು. ಪೂರ್ಣ ಪ್ರಮಾಣದ ಮಿಷನರಿ ಸ್ವರೂಪದ ಕಾರ್ಯಕರ್ತರಿಗೆ ಲಾಲಾಜಿ ಅವರು ಕೊಟ್ಟ ತರಬೇತಿಯ ಅವಕಾಶ ಸ್ಪಷ್ಟವಾಗಿತ್ತು. ಕಾಲೋಚಿತ ವಾರಪೂರ್ಣ ಬೌದ್ಧಿಕ ಸನ್ನದ್ಧತೆಯ ಜೊತೆಗೆ ಅಕಾಡೆಮಿಕ್ ಸ್ವರೂಪದ ಶಿಕ್ಷಣಕ್ಕಿಂತ ಭಿನ್ನವಾದ ತರಬೇತು ಅವರಿಗೆ ಪ್ರಾಪ್ತವಾಯಿತು. ಅಂದರೆ ಪುಸ್ತಕದಿಂದ ಕಲಿತಿದ್ದಕ್ಕಿಂತಲೂ ಬದುಕಿನ ವಾಸ್ತವಿಕತೆಯಿಂದ ಅರಿತುಕೊಳ್ಳುವುದೇ ಹೆಚ್ಚಿನ ಪ್ರಮಾಣದಲ್ಲಿತ್ತು. ಅದಾಗಿ ಬೌದ್ಧಿಕ ವಲಯದಲ್ಲಿ ಸೇವೆಗೆ ತೊಡಗುವವರು ಸಹ ಸಾಕಷ್ಟು ಕ್ಷೇತ್ರಾನುಭವ ಹೊಂದಿಸಿ ಕೊಳ್ಳುವಂತಾಗಿತ್ತು. ಲಾಲಾಜಿಯವರು ತಮ್ಮ ಕಾರ್ಯಕ್ಕೆ

ಸಂಘಟಿಸಿಕೊಂಡ ಹೆಚ್ಚು ಕಡಿಮೆ ಎಲ್ಲಾ ಯುವಕರು ಅಸಹಕಾರ ಚಳವಳಿಯಲ್ಲಿ ಅದ್ವಿತೀಯ ಸಮೂಹ ಪ್ರಚಾರ ಆಂದೋಲನ ಕೈಗೊಂಡರು. ಕಾಲಾನಂತರದಲ್ಲಿ ಲಾಲಾಜಿ ಕೈಗೊಂಡ ಅಸ್ಪೃಶ್ಯತಾ ವಿರೋಧಿ ಚಳವಳಿಯಲ್ಲೂ ಆ ಯುವ ಕಾರ್ಯಕರ್ತರು ಯಶಸ್ವಿ ಸೇವೆ ಸಲ್ಲಿಸಿದ್ದಕ್ಕೆ ಆ ತರಬೇತಿ ಮೂಲಮಂತ್ರವಾಯಿತು. ಅಚ್ಯುತ್ ಉದ್ಧಾರ ಸಮಿತಿಯ ಯಶಸ್ಸಿನ ಗುಟ್ಟು ಲಾಲಾಜಿಯವರು ಹೆಣೆದುಕೊಂಡ ಹೊಸ ಬಗೆಯ ತರಬೇತಿನ ಫಲ ಎನ್ನುವುದರಲ್ಲಿ ಎರಡು ಮಾತಿಲ್ಲ. ನಮ್ಮ ಸಂಸ್ಥಾಪಕರು ತಮ್ಮ ಈ ಸಂಘ ಸ್ಥಾಪನೆಯ ಆಧಾರವನ್ನು ಗೋಖಲೆಯವರ ಹೆಸರಾಂತ ಸಂಸ್ಥೆಯಿಂದ ಪಡೆದ ಸ್ಫೂರ್ತಿ ಎಂದು ಹೇಳಿಕೊಂಡಿದ್ದರೂ ಎರಡೂ ಸಂಘಗಳ ನಡುವೆ ಪರಸ್ಪರ ಭಿನ್ನ ಧೋರಣೆಗಳು ಭಾರೀ ಪ್ರಮಾಣದಲ್ಲಿದ್ದವು. ನಮ್ಮ ಸಂಸ್ಥೆಯು ಅಸ್ತಿತ್ವಕ್ಕೆ ಬರುವ ವೇಳೆಗೆ ಪುಣೆ ಸಂಸ್ಥೆಯು ತನ್ನನ್ನು ಸಂಪೂರ್ಣವಾಗಿ ಸ್ವತಂತ್ರ ಪಕ್ಷದ ರಾಜಕಾರಣದಲ್ಲಿ ತೊಡಗಿಸಿಕೊಂಡಿತ್ತು ಲಾಹೋರ್ ಸೊಸೈಟಿಯು ಸ್ಥಾಪಿತವಾಗಿದ್ದು ಅಸಹಕಾರ ಚಳವಳಿಯ ಅಧ್ವರ್ಯುಗಳಿಂದ. ನಮ್ಮ ಸ್ಥಾಪಕರ ಮೂಲ ಉದ್ದೇಶವೇ ಭಿನ್ನವಾಗಿತ್ತು. ಬದಲಾಗುತ್ತಿರುವ ರಾಜಕೀಯ ಧೋರಣೆ ಅಥವಾ ಕಾರ್ಯಕ್ರಮಗಳು ಸಮಾಜದ ಕಾರ್ಯಕ್ರಮಗಳಾಗಬಾರದೆಂದು ಅವರು ಸ್ಪಷ್ಟ ನಿಲುವು ತಾಳಿದ್ದರು. ಭಾರತೀಯ ಸೇವಕರ ಸಂಘವು 'ಬ್ರಿಟಿಷ್ ಸಂಬಂಧ'ವನ್ನು ಹೆಚ್ಚಾಗಿ ಅಂತರ್ಗತ ಮಾಡಿಕೊಂಡಿತ್ತು. ಒಂದು ರೀತಿಯಲ್ಲಿ ಅದರ ಸ್ವರೂಪ ಅತನೇಸಿಯನ್ ಸಂಘದ ರೀತಿಯಲ್ಲಿತ್ತು. ಮಿಷನರಿ ನೆಲೆಗಟ್ಟಿನಲ್ಲಿ ಆಜೀವ ಸದಸ್ಯತ್ವದೊಂದಿಗೆ ಲಜಪತ್‌ರಾಯ್ ತಮ್ಮ ಸಂಸ್ಥೆಯನ್ನು ಕಟ್ಟಿದರೂ ಅದರ ನಡವಳಿಕೆಗಳನ್ನು ಅವರು ಎಲ್ಲಾ ಕಾಲಕ್ಕೂ ಏಕವಾಗಿರುವಂತೆ ಮಾಡಿರಲಿಲ್ಲ. ಶಿಸ್ತು ಕಟ್ಟಳೆಗಳನ್ನು ಕಠಿಣಗೊಳಿಸಿರಲಿಲ್ಲ. ಭಿನ್ನಮತವನ್ನು ನಿಷೇಧಿಸಿರಲಿಲ್ಲ.

ಬಹಳಷ್ಟು ಜನರಿಗೆ ನಮ್ಮ ಸಂಸ್ಥಾಪಕರ ನಡವಳಿಕೆಗಳು ವಿಚಿತ್ರವಾಗಿ ಕಾಣಬಹುದು. ಹೊಸ ವ್ಯವಸ್ಥೆಯ ಸದಸ್ಯರಂತೆ ಅವರೆಂದೂ ಕಂಡು ಬರಲಿಲ್ಲ. ಪುಣೆ ಮತ್ತು ಲಾಹೋರ್ ಸಂಘಗಳ ನಡುವಿನ ಅಂತರವನ್ನು ಕಂಡಾಗ ಇದರ ಪರಿಚಯವಾಗುತ್ತದೆ. ನಮ್ಮ ಸಂಘದ ಸಂವಿಧಾನ ರಚನೆಯೂ ಲಾಲಾಜಿಯವರ ಸ್ಥಾನವನ್ನು ಆಜೀವ ಸ್ಥಾಪಕ ನಿರ್ದೇಶಕರೆಂದು ಸ್ಪಷ್ಟವಾಗಿ ಹೇಳಿದೆ. ಪುಣೆಯ ಸಂಘಕ್ಕೆ ಗೋಖಲೆ ಸ್ಥಾಪಕ ಸದಸ್ಯರು.. ಅವರು ಮೊದಲು ಪ್ರಮಾಣವಚನ ಸ್ವೀಕರಿಸಿದ್ದರೂ ನಂತರ ತಮ್ಮ ಏಳು ಸದಸ್ಯರಿಗೆ ಅವರು ಪ್ರಮಾಣವಚನ ಮತ್ತು ದೀಕ್ಷಾ ವಿಧಿಯನ್ನು ಬೋಧಿಸಿದ್ದರು ಆದರೆ ಲಾಲಾಜಿ ಯಾವುದೇ ಪ್ರಮಾಣವಚನ ಸ್ವೀಕರಿಸಲಿಲ್ಲ. ಇತರರಿಗೆ ಬೋಧಿಸಲೂ ಇಲ್ಲ. ಹೇಳಿ ಕೇಳಿ ಅವರದು ವಿಚಿತ್ರ ಸಮರ್ಪಣ ಬದುಕಾಗಿತ್ತು ಅದು ಬಹುಕಾಲದಿಂದ ನಡೆದು ಬಂದಿದ್ದ ಜೀವನ ವಿಧಾನವಾಗಿತ್ತು. ಔಪಚಾರಿಕವಾಗಿ ವಿಧಿ, ದೀಕ್ಷೆ ತೊಡುವುದು ಅರ್ಥ ಹೀನವೆಂಬುದರಲ್ಲಿ ಸಂದೇಹವಿಲ್ಲ. ಅವೆಲ್ಲಾ ತೋರಿಕೆಯಷ್ಟೇ. ಜೊತೆಗೆ ತಮ್ಮ ವೃತ್ತಿಯನ್ನು ಬಿಟ್ಟುಕೊಟ್ಟು ಅನುದಿನದ ಗಳಿಕೆಯಿಂದ ದೂರ ಸರಿದರೂ ಅವರೆಂದೂ ಸಾರ್ವಜನಿಕ ಹಣಕ್ಕೆ ಹೊರೆಯಾಗಲಿಲ್ಲ. ಸಾರ್ವಜನಿಕ ಸೇವೆಗೆ ಅವರೆಂದೂ ಮಾನಸಿಕವಾಗಿ ದಣಿದವರಂತೆ ಕಾಣುತ್ತಿರಲಿಲ್ಲ. ಸಂಘದ ನಿಧಿಯಿಂದ ಅವರೆಂದೂ ಯಾವುದೇ ಭತ್ಯೆಯನ್ನು ಪಡೆದುಕೊಂಡವರಲ್ಲ. ಅವರ ನಡವಳಿಕೆ ಕೆಲವರಿಗೆ ವಿಚಿತ್ರವಾಗಿ ಕಂಡಿದ್ದರೆ ನಮಗದು

ನಿತ್ಯ ನಿರಂತರದ ದೃಶ್ಯವಾಗಿತ್ತು. ಸಂಘದ ಮೇಲೆ ಅವರ ನೈತಿಕ ಅಧಿಕಾರದ ಛಾಪು ಇತ್ತು. ಆಜೀವ ನಿರ್ದೇಶಕರನ್ನಾಗಿ ಮಾನ್ಯ ಮಾಡುವ ಮೂಲಕ ಸಂವಿಧಾನ ಅವರ ಮಾರ್ಗದರ್ಶನವನ್ನು ಸದಾ ಕಾಲಕ್ಕೆ ಕಾಯ್ದಿರಿಸಿತು. ತಂದೆಯಂತೆ ಯಾವಾಗಲೂ ಅವರ ವಾತ್ಸಲ್ಯ ಲಭ್ಯವಿರುತ್ತಿತ್ತು. ಹಾಗೆಂದು ಅವರೆಂದೂ ಸದಸ್ಯರ ಮೇಲೆ ಕಟ್ಟಲೆಗಳ ನಿರ್ಬಂಧ ಹೇರುತ್ತಿರಲಿಲ್ಲ. ಸಭೆಗಳಲ್ಲಿ ಚರ್ಚೆ ಮುಕ್ತವಾಗಿರುತ್ತಿತ್ತು. ಅಭಿಪ್ರಾಯಗಳು ಎಗ್ಗಿಲ್ಲದೆ ವಿನಿಮಯವಾಗುತ್ತಿದ್ದವು. ಅಂತಿಮ ಒಪ್ಪಂದ ಸರ್ವ ಸಾಮಾನ್ಯವಾಗಿರುತ್ತಿತ್ತು. ಸರ್ವ ಸಮ್ಮತವಾದ ಸಂದರ್ಭಗಳಲ್ಲಿ ಭಿನ್ನಮತಕ್ಕೆ ಪೂರ್ಣ ಅಂಗೀಕಾರ ಇರುತ್ತಿತ್ತು. ಅಂಥ ಸಂಘದಲ್ಲಿ ಇಂಥ ನಡವಳಿಕೆಗಳು ಸಾಧುವೇ ಎಂದು ಅನಿಸಬಹುದು. ಉತ್ತರವಿಷ್ಟೇ. ಭಿನ್ನಮತ ತಿಕ್ಕಾಟಗಳು ಇದ್ದರೂ ಯಾವ ಸದಸ್ಯರು ಸಹ ತಮ್ಮ 20 ವರ್ಷದ ಸೇವಾವಧಿಯನ್ನು ರಾಜಕೀಯ ಭಿನ್ನಾಭಿಪ್ರಾಯದಲ್ಲಿ ಮೊಟಕುಗೊಳಿಸಿಕೊಂಡ ಘಟನೆ ನಡೆಯಲಿಲ್ಲ. ರಾಜಕೀಯ ಸಾದಿಲ್ವಾರುಗಳು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಿದ್ದವು. ನಿಯತವಾಗಿ ಕಾರ್ಯಕ್ರಮಗಳ ಪರಾಮರ್ಶೆಯಾಗುತ್ತಿತ್ತು. ಈ ವಿಷಯದಲ್ಲಿ ವಿಳಂಬದ ಮಾತೇ ಇರುತ್ತಿರಲಿಲ್ಲ. ಕಾಲೋಚಿತವಾದ ಅವಶ್ಯಕತೆಗಳನ್ನು ಆಧರಿಸಿ ಕಾರ್ಯ ಯೋಜನೆಗಳನ್ನು ಸಮನ್ವಯ ಮಾಡಿಕೊಳ್ಳಲಾಗುತ್ತಿತ್ತು. ಅಂಥ ವಿಷಯಗಳಲ್ಲಿ ಚರ್ಚೆ, ಭಿನ್ನಾಭಿಪ್ರಾಯಗಳು ಸಹಮತ, ತಿರಸ್ಕಾರಗಳು ಸಹಜವಾಗಿರುತ್ತಿದ್ದವು. ಉಳಿದ ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಅಸಮಧಾನಗಳು ತಲೆ ಹಾಕುತ್ತಿರಲಿಲ್ಲ. ಒಡಂಬಡಿಕೆ ಸಾಮಾನ್ಯವಾಗಿ ಅಪೇಕ್ಷಣೀಯ. ಹಾಗೆಂದು ಇನ್ನೊಬ್ಬರ ಉದ್ದೇಶವನ್ನು, ದೃಷ್ಟಿಕೋನವನ್ನು ದಮನ ಮಾಡಿ ಒಡಂಬಡಿಕೆ ಸಾಧಿಸಿಕೊಳ್ಳುವ ಹುಂಬತನ ಖಂಡಿತಾ ಇರಲಿಲ್ಲ.

ಹಿಂದಿನದೆಲ್ಲವನ್ನು ತಿರುಗಿ ನೋಡಿದಾಗ ನನಗನಿಸುವುದಿಷ್ಟೇ. ನಮ್ಮ ತರಬೇತು, ನಮ್ಮ ಸೇವೆಗಳು ಬಹುತೇಕವಾಗಿ ನಮ್ಮ ಸಂಸ್ಥಾಪಕರ ಪ್ರಭಾವ ವರ್ಚಸ್ಸನ್ನು ಪ್ರತಿನಿಧಿಸುತ್ತಿದ್ದವು. ಅದರ ಮುಂದೆ ಬೇರೆಲ್ಲವೂ ಗೌಣವಾಗುತ್ತಿತ್ತು. ಅವರ ತ್ಯಾಗ, ಸಮರ್ಪಣೆಗಳು ಸ್ವಾತಂತ್ರ್ಯ ಗಳಿಕೆಯ ಧ್ಯೇಯೋದ್ದೇಶಗಳು ನಮಗೆ ನಿತ್ಯ ನಿರಂತನ ಸ್ಫೂರ್ತಿಯ ಸೆಲೆಗಳಾಗಿದ್ದವು. ಭಾರತೀಯರ ವಿಷಯದಲ್ಲಿ ಅವರಿಗಿದ್ದ ಅದಮ್ಯ ಪ್ರೀತಿ, ಆದರಗಳು ನಮಗೆ ದಾರಿದೀಪಗಳಾಗಿದ್ದವು. ಏಕಮತದಿಂದ ಕೆಲಸ ಮಾಡುವುದು ಅವರಿಂದ ನಮಗೆ ದೊರೆತ ದೊಡ್ಡ ಪಾಠ. ಅವರ ವಿಶಾಲ ಚಿಂತನೆ, ಬಿಕ್ಕಟ್ಟಿನ ಪರಿಸ್ಥಿತಿಗಳನ್ನು ಬಹುಹಿತದ ನೆಲೆಗಟ್ಟಿನಲ್ಲಿ ಬಗೆ ಹರಿಸಿಕೊಳ್ಳುತ್ತಿದ್ದ ರೀತಿ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ನಮಗೆ ನೆರವಾಗುತ್ತಿದ್ದವು. 1926ರ ಚುನಾವಣೆಯ ಒಂದು ಘಟನೆ. ಅಚಿಂತ್‌ರಾಂ ವಿಚಿತ್ರವಾಗಿ ನಡೆದುಕೊಂಡಿದ್ದರು. ಲಾಲಾಜಿ ಕಣಕ್ಕಿಳಿಸಿದ ಅಭ್ಯರ್ಥಿಯ ಬದಲಾಗಿ ಸ್ವರಾಜ್ಯದ ಪಕ್ಷದ ಅಭ್ಯರ್ಥಿಗೆ ಅವರು ತಮ್ಮ ಮತ ನೀಡಿದ್ದರು. ಲಾಲಾಜಿ ಕಿಂಚಿತ್ತೂ ಅಸಮಾಧಾನ ತೋರಲಿಲ್ಲ. ಅಚಿಂತ್‌ರಾಂ ಅವರ ವಿಷಯದಲ್ಲಿ ಅವರು ನಡೆದುಕೊಂಡ ರೀತಿ ನಮಗೆಲ್ಲಾ ದಾರಿ ದೀಪವಾಯಿತು. ನಾವು ಹಾಕಿಕೊಂಡ ಬಂದ ನಡವಳಿಕೆ ಮತ್ತು ಸಂಪ್ರದಾಯದಲ್ಲಿ ಅವರ ಮಾರ್ಗದರ್ಶನ ಘನತೆವೆತ್ತದ್ದಾಗಿದೆ. ನಮ್ಮ ಸಂಸ್ಥಾಪಕರು ನಮಗೆ ಕೊಟ್ಟ ಅದ್ವಿತೀಯ ಸದಾಚಾರಗಳಲ್ಲಿ ಅದೂ ಒಂದು.

ಲಾಲಾಜಿ ಜೈಲಿನಿಂದ ಮರಳುತ್ತಿದ್ದಂತೆ ಸಂಘವು ನಾನಾ ಶಾಖೆಗಳಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಪಂಜಾಬ್ ಮತ್ತು ಉತ್ತರ ಪ್ರಾಂತ್ಯದಾದ್ಯಂತ ಅದರ ಕಾರ್ಯವ್ಯಾಪ್ತಿ ವಿಸ್ತೃತವಾಯಿತು. ಅದರ ಜೊತೆಯಲ್ಲೇ ಅಚ್ಯುತ್ ಉದ್ಧಾರ ಕಾರ್ಯಕ್ರಮವನ್ನು ಕೈಗೊಂಡರು. ಸಂಘದ ಅನೇಕ ಸದಸ್ಯರು ಲಾಲಾಜಿ ಅವರ ಹೆಗಲಿಗೆ ಹೆಗಲು ಕೊಟ್ಟು ನಿಂತರು. ಅದರ ಜೊತೆಯಲ್ಲೇ ಕಾಂಗ್ರೆಸ್ ಕಾರ್ಯವು ಅನಾಚೂನವಾಗಿ ನಡೆಯತೊಡಗಿತು. ಈ ಮಧ್ಯೆ ಲಾಲಾಜಿ ಅವರು ಪತ್ರಕರ್ತರಾಗಿ ತಮ್ಮ ಸೇವೆಯನ್ನು ಇನ್ನಷ್ಟು ಮಹತ್ವಪೂರ್ಣಗೊಳಿಸಿಕೊಂಡರು. ಇವೆಲ್ಲವುಗಳ ಜೊತೆಯಲ್ಲೇ ಲಾಲಾಜಿ ಕಾರ್ಮಿಕ ಚಟುವಟಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಕಾನ್ಪುರದಲ್ಲಿ ಕಾರ್ಮಿಕ ಸಂಘದ ಕೇಂದ್ರವನ್ನು ಸ್ಥಾಪಿಸಿದರು. ಬಂದೇ ಮಾತರಂ ಪತ್ರಿಕೆಯ ಕಾರ್ಯವನ್ನು ಪಿ.ಎಲ್. ಸೋಂದಿಯವರಿಗೆ ವಹಿಸಿಕೊಟ್ಟರು. ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ಛಬಿಲ್ ದಾಸ್ ನೇಮಕಗೊಂಡರು.

ಸಂಘವು ಬಾಲ್ಯವನ್ನು ದಾಟಿತು. ಸ್ಥಿರತೆ ಸಾಧಿಸಿಕೊಂಡಿತು. ಸಂಸ್ಥಾಪಕರು ತೃಪ್ತಿ ವ್ಯಕ್ತಪಡಿಸಿದರು. ಅದರ ಕಾರ್ಯವ್ಯಾಪ್ತಿಯನ್ನು ಸಾದರ ಪಡಿಸುವ ಸಲುವಾಗಿ ಸಾರ್ವಜನಿಕರ ಬೆಂಬಲವನ್ನು ಇನ್ನಷ್ಟು ಗಳಿಸಿಕೊಳ್ಳುವ ಸಲುವಾಗಿ 1927ರ ಮಾರ್ಚ್‌ನಲ್ಲಿ ಅದೇ ಮೊದಲ ಬಾರಿಗೆ ವಾರ್ಷಿಕೋತ್ಸವವನ್ನು ಸಾರ್ವಜನಿಕ ಸಮಾರಂಭವಾಗಿ ಸಂಘಟಿಸಲಾಯಿತು. ಸಂಘಕ್ಕೆ ಒಂದು ಸಭಾಂಗಣದ ಅವಶ್ಯಕತೆ ಇತ್ತು. ಗ್ರಂಥಾಲಯ ಮತ್ತು ಕಚೇರಿಗಳು ಇದ್ದ ಹಳೆಯ ಪೀತ ವರ್ಣದ ಬಂಗಲೆ ಅಸಮರ್ಪಕ ಎನಿಸಿತ್ತು. ಎರಡು ಅಂತಸ್ತಿನ ಹೊಸ ಕಟ್ಟಡವೊಂದರ ನಿರ್ಮಾಣಕ್ಕೆ ಆಗ ಸಂಯೋಜಿಸಲಾಯಿತು. ಅಗತ್ಯವಾದ ಹಣವನ್ನು ಚಂದಾ ಮೂಲಕ ಸಂಗ್ರಹಿಸುವ ಕಾರ್ಯ ನಡೆಯಿತು. ಸಾರ್ವಜನಿಕವಾಗಿ ವಾರ್ಷಿಕೋತ್ಸವ ಆಚರಿಸುವುದಕ್ಕೆ ಕೆಲವು ದಿನಗಳ ಮೊದಲು ಸಂಸ್ಥಾಪಕರ ಹುಟ್ಟುಹಬ್ಬವನ್ನು ಸಂಯೋಜಿಸಲಾಯಿತು. 60 ವರ್ಷ ತುಂಬಿದ್ದ ಸಂದರ್ಭವು ಅದಾಗಿದ್ದರಿಂದ ಲಾಲಾಜಿಯವರಿಗೆ ಗಣನೀಯ ಪ್ರಮಾಣದಲ್ಲಿ ನಗದು ಕಾಣಿಕೆ ಸಂದಾಯವಾಯಿತು. ಲಜಪತ್‌ರಾಯ್ ಸಭಾಂಗಣದ ಹೆಸರಿನಲ್ಲಿ ಹೊಸ ಕಟ್ಟಡದ ನಿರ್ಮಾಣ ಆರಂಭಗೊಂಡಿತು. 1928ರ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾಳವೀಯಾಜಿ ಹೊಸ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಸ್ಥಾಪಕ ನಿರ್ದೇಶಕರು ಖತಿಯಾವಾರದಲ್ಲಿ ಬಲ್ವಂತ್‌ರಾಯ್ ಜಿ. ಮೆಹ್ತಾ ಅವರನ್ನು ಹೊಸ ಸದಸ್ಯರನ್ನಾಗಿ ನೇಮಿಸಿಕೊಂಡರು. ಒಡಿಸ್ಸಾದಲ್ಲಿ ಗೋಪಬಂಧು ದಾಸ್ ನೇತೃತ್ವದಲ್ಲಿ ಸಂಘದ ಶಾಖೆಯೊಂದನ್ನು ಆರಂಭಿಸಿದರು. ಅವರನ್ನು ಸಂಘದ ಉಪಾಧ್ಯಕ್ಷರನ್ನಾಗಿ ಲಾಲಾಜಿ ಹೆಸರಿಸಿದರು. ಸಂಘದ ಮುದ್ರಣಾಲಯವನ್ನು 'ಸಮಾಜ' ಹೆಸರಿನಲ್ಲಿ ಸ್ಥಾಪಿಸಿದರು. ಗೋಪಬಂಧು ಬೆಂಬಲಿಗರಲ್ಲಿ ಲಿಂಗರಾಜ್ ಮಿಶ್ರಾ, ರಾಧಾನಾಥ್ ರಥ್ ಮುಂತಾದವರು ಮುದ್ರಣಾಲಯದ ಉಸ್ತುವಾರಿಗೆ ನೇಮಕಗೊಂಡರು. 1928ರ ವಾರ್ಷಿಕೋತ್ಸವ ಮುಗಿಸಿಕೊಂಡು ಮರಳಿದ ನಂತರ ಗೋಪಬಂಧು ಬಾಬು ಹಾಸಿಗೆ ಹಿಡಿದರು. ಸ್ವಲ್ಪ ಕಾಲದಲ್ಲೇ ಅವರು ವಿಧಿವಶರಾದರು. ಅಚ್ಚುಮೆಚ್ಚಿನ ನಾಯಕನ ಅಗಲಿಕೆಗೆ ಒಡಿಸ್ಸಾ ಭಾಷ್ಪಾಂಜಲಿ ಸುರಿಸಿತು. ಲಾಲಾಜಿ ಮತ್ತು ಸಂಘಕ್ಕಂತೂ

ಭರಿಸಲಾಗದ ನಷ್ಟವಾಯಿತು. ಗೋಪಬಂಧು ಬಾಬು ಸ್ಥಾನಕ್ಕೆ ಲಾಲಾಜಿ (ಹಾಗೂ ಸದಸ್ಯರು) ಈ ಲೇಖಕರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದರು. ಅದರೊಂದಿಗೆ ಸಂಘದಲ್ಲಿ ಉತ್ತರ ಪ್ರಾಂತ್ಯದ ಸದಸ್ಯರ ಸಂಖ್ಯೆ ಹೆಚ್ಚಾಯಿತು. ಕಾಶಿ ವಿದ್ಯಾಪೀಠದ ಅಲಗುರಾಯ್, ಹರಿಹರನಾಥ್, ಲಾಲ್ ಬಹುದ್ದೂರ್ ಮತ್ತು ರಾಜಾರಾಂ ಈ ಪೈಕಿ ಸೇರಿದ್ದರು. ಹರ್‌ನಾಮ್ ಸಿಂಗ್ ಸ್ಥಾನ ತ್ಯಜಿಸಿದ್ದರಿಂದ ಆ ಜಾಗಕ್ಕೆ ಬಲದೇವ್ ನೇಮಕಗೊಂಡಿದ್ದರು. ಮೋಹನ್‌ಲಾಲ್ ಗೌತಮ್ ಮತ್ತೋರ್ವ ಸದಸ್ಯರು.

1947ರ ಇಬ್ಭಾಗದ ನಂತರ ಸಂಘವು ತನ್ನ ಕೇಂದ್ರ ಕಚೇರಿಯನ್ನು ಹೊಸ ದೆಹಲಿಗೆ ವರ್ಗಾಯಿಸಿಕೊಂಡಿತು. ಸ್ವಲ್ಪ ಕಾಲದಲ್ಲೇ ಅದು ತನ್ನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪಕಗೊಳಿಸಿಕೊಂಡಿತು. ಹೊಸ ಹೊಸ ಶಾಖೆಗಳನ್ನು ಆರಂಭಿಸಿ ಹೆಚ್ಚಿನ ಪ್ರದೇಶಕ್ಕೆ ತನ್ನ ಸೇವೆಯನ್ನು ವಿಸ್ತೃತ ಮಾಡಿಕೊಂಡಿತು. ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೇಷ್ಠರಲ್ಲಿ ಪುರುಷೋತ್ತಮ ದಾಸ್ ಟಂಡನ್, ಬಲವಂತ್‌ರಾಯ್ ಮೆಹ್ತಾ, ಲಾಲ್ ಬಹುದ್ದೂರ್, ಬಿಸುನಾಥ್ ದಾಸ್ ಸೇರಿದ್ದಾರೆ. ಆ ಪೈಕಿ ಬಲವಂತ್‌ರಾಯ್ ಮೆಹ್ತಾ, ಲಾಲ್ ಬಹುದ್ದೂರ್ ಅವರನ್ನು ಲಾಲಾಜಿ ಅವರೇ ಸಂಘಕ್ಕೆ ಸೇರಿಸಿಕೊಂಡಿದ್ದು. ಟಂಡನ್‌ಜಿ ಅವರು ಲಾಲಾಜಿ ಅವರ ಪ್ರಭಾವದ ಮೇರೆಗೆ ಅಲಹಾಬಾದ್‌ನಿಂದ ಲಾಹೋರಿಗೆ ಆಗಮಿಸಿದ್ದರು. ಅದೂ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಕಾರ್ಯದರ್ಶಿಯಾಗಿ. ಲಾಲಾಜಿ ಮತ್ತು ಸಂಘದ ನಡುವೆ ಅವರ ಸಂಬಂಧ ತೀರಾ ನಿಕಟವಾಗಿತ್ತು. ಲಾಲಾಜಿ ಸಹಜವಾಗಿ ಒಂದು ದಿನ ಅವರನ್ನು ತಮ್ಮ ಆಜೀವ ಸಂಘಟನೆಯಾದ ಸಂಘದ ನೇತೃತ್ವ ವಹಿಸಲು ಅಪೇಕ್ಷಿಸಿದರು. ಆದರೆ ಟಂಡನ್‌ಜಿ ಒಪ್ಪಿರಲಿಲ್ಲ. ಅದಕ್ಕೆ ಅವರ ಕುಟುಂಬದ ಸಮಸ್ಯೆಯೂ ಕಾರಣವಾಗಿತ್ತು. ಗಳಿಕೆ ಮಾಡುವವರು ಇರದಿದ್ದ ಕಾರಣ ತ್ಯಾಗ ಮತ್ತು ಸಮರ್ಪಣೆಯೇ ಪ್ರಧಾನವಾದ ಆ ಕಾರ್ಯವನ್ನು ನಿರ್ವಹಿಸಲು ಕಷ್ಟ ಸಾಧ್ಯವಾಗುತ್ತದೆ ಎಂದು ಟಂಡನ್‌ಜಿ ಲಾಲಾಜಿಯವರಿಗೆ ತಿಳಿಸಿದ್ದರು. ಆದರೆ ಲಾಲಾಜಿ ಅವರ ನಿಧನದ ನಂತರ ಟಂಡನ್‌ಜಿ ಆ ಜವಾಬ್ದಾರಿಯನ್ನು ನಿರ್ವಹಿಸಲೇ ಬೇಕಾಯಿತು. ಲಾಲಾಜಿಯವರ ಆಶಯವನ್ನು ಅರಿತಿದ್ದ ನಾವು ಟಂಡನ್‌ಜಿ ಅವರನ್ನು ಸಂಘದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿಕೊಂಡೆವು.

ಲಾಲಾಜಿ ಅವರು ತಮ್ಮ ಬದುಕಿನ ಅಂತ್ಯದತನಕ ವಿಶ್ರಮಿಸಲೇ ಇಲ್ಲ. ಹೊಸ ಹೊಸ ಸೇವಾ ಸಂಸ್ಥೆಗಳನ್ನು ಸ್ಥಾಪಿಸುತ್ತಲೇ ಬಂದರು. ಅವರ ಬದುಕಿನ ಅಂತಿಮ ದಿನಗಳಲ್ಲಿ ಸ್ಥಾಪಿಸಿದ ಅಂಥ ಒಂದು ಸಂಸ್ಥೆ ತಮ್ಮ ತಾಯಿಯ ಸ್ಮರಣೆಯ ಕ್ಷಯರೋಗ ಆಸ್ಪತ್ರೆ. ಆ ಆಸ್ಪತ್ರೆಯು ಲಾಲಾಜಿ ಅವರ ನಿಧನ ನಂತರ ಸ್ವರೂಪ ಕಂಡಿತ್ತು. ಜೀವಂತವಿದ್ದಾಗ ಲಾಲಾಜಿ ಅವರು ಅದಕ್ಕಾಗಿ ಟ್ರಸ್ಟೊಂದನ್ನು ಸ್ಥಾಪಿಸಿದ್ದರು. ಎರಡು ಲಕ್ಷ ರೂಪಾಯಿಗಳಿಗೂ ಹೆಚ್ಚು ಪುದವಟ್ಟನ್ನು ಅದಕ್ಕೆ ಕೊಟ್ಟಿದ್ದರು. ತಮ್ಮ ಸಹೋದರರಲ್ಲಿ ಹೆಚ್ಚು ಪ್ರತಿಭಾವಂತರಾಗಿದ್ದ ದಳಪತ್‌ರಾಯ್ ಅವರನ್ನು ಕ್ಷಯರೋಗ ಕಸಿದುಕೊಂಡಿದ್ದು ಲಾಲಾಜಿ ಅವರನ್ನು ಬಹುವಾಗಿ ಚಿಂತಿಸುವಂತೆ ಮಾಡಿತ್ತು. ಬದುಕಿನ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಳಪತ್‌ರಾಯ್ ಮಾರಕ ರೋಗಕ್ಕೆ ಈಡಾಗಿದ್ದರು. ಅದರ ಹಿಂದೆ

ಬಂದಿದ್ದದ್ದು ತಮ್ಮ ಪುತ್ರರಲ್ಲಿ ಅಚ್ಚುಮೆಚ್ಚಿನವನಾಗಿದ್ದ ಪ್ಯಾರೇ ಕಿಷನ್‌ನ ಅಗಲಿಕೆ. 20ರ ಹರೆಯದ ಆ ತರುಣ ತಂದೆಯ ವಿಶೇಷ ಗಮನ ಸೆಳೆದಿದ್ದ.

ಲಾಲಾಜಿ ಅವರು ಗುಲಾಬ್‌ದೇವಿ ಟ್ರಸ್ಟ್‌ನ ತಮ್ಮ ತಾತ್ಕಾಲಿಕ ಯೋಜನೆಯನ್ನು ಗಾಂಧೀಜಿ ಸೇರಿದಂತೆ ಕೆಲವು ನಿಕಟವರ್ತಿ ಗಳೆಯರಿಗೂ ಪ್ರತಿಕ್ರಿಯೆಗಾಗಿ ಕಳುಹಿಸಿ ಕೊಟ್ಟಿದ್ದರು. ಗಾಂಧೀಜಿ ಅದೊಂದು ಅಮೋಘ ಸೇವೆ ಎಂದು ಅಭಿಪ್ರಾಯಪಟ್ಟರು. ಯೋಜನೆಯನ್ನು ಕಾರ್ಯಗತ ಗೊಳಿಸುವಾಗ ಕೆಲವು ಸುಧಾರಣೆಗಳಾಗಬೇಕೆಂದು ಅವರು ಸಲಹೆ ಮಾಡಿದ್ದರು. ಗಾಂಧೀಜಿಯವರ ಅಭಿಪ್ರಾಯಕ್ಕೆ ಅನುಗುಣವಾಗಿ ಯೋಜನೆಯ ಮೂಲ ಸ್ವರೂಪದಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿಕೊಳ್ಳಲಾಗಿತ್ತು. 1947ರ ಭಾರತ ವಿಭಜನೆಯ ವೇಳೆಗೆ ಗುಲಾಬ್‌ದೇವಿ ಆಸ್ಪತ್ರೆ ಸ್ಥಾಪನೆಗೊಂಡು ಸುಸಜ್ಜಿತವೆನಿಸಿತ್ತು. ಅದರ ಸೇವೆ ವ್ಯಾಪಕಗೊಂಡಿತ್ತು. ಆಸ್ಪತ್ರೆ ಮತ್ತು ಅದರ ಉಪಕರಣಗಳು ಹೊಸ ಗಡಿ ದಾಟಲು ಸಾಧ್ಯವಾಗಲಿಲ್ಲ. ಸಹಜವಾಗಿ ಲಾಹೋರ್ ವಿಮಾನ ನಿಲ್ದಾಣದ ಬಳಿಯ ಆಸ್ಪತ್ರೆಯು ಪಾಕಿಸ್ತಾನದ ಜನತೆಗಷ್ಟೇ ಸೀಮಿತಗೊಂಡಿತು.

. ಲಾಲಾಜಿಯವರು ಕೈಗೊಂಡ ಸಮಾಜಸೇವಾ ಕಾರ್ಯದಲ್ಲಿ ಗುಲಾಬ್‌ದೇವಿ ಟ್ರಸ್ಟ್ ಕಡೆಯದೇನೂ ಆಗಲಿಲ್ಲ. ಅವರ ಅಂತಿಮ ಕಾಣಿಕೆ ಮಹಿಳೆಯರಿಗಾಗಿ ದೈಹಿಕ ತರಬೇತು ಕೇಂದ್ರದ ಸ್ಥಾಪನೆ. ಅದೊಂದು ಪುಟ್ಟ ಯೋಜನೆ. ವಿಸ್ತೃತವಾದ ನೀಲ ನಕಾಶೆಯ ಅಗತ್ಯವೇನೂ ಇರಲಿಲ್ಲ. ಆದರೂ ಲಾಲಾಜಿ ಪರಿಪಕ್ವ ದೃಷ್ಟಿಕೋನದೊಂದಿಗೆ ಅದನ್ನು ಸ್ಥಾಪಿಸಿದರು. ಲಾಲಾಜಿ ಅವರಿಗೆ ಸ್ತ್ರೀಯರ ದೈಹಿಕ ತರಬೇತು ಕೇಂದ್ರ ಸ್ಥಾಪಿಸುವ ಉದ್ದೇಶದ ಹಿಂದೆ ಸ್ಪಷ್ಟ ಕಲ್ಪನೆ ಇತ್ತು. ಹಿಂದೂ ಮುಸ್ಲಿಂ ಸಮಸ್ಯೆ ಉಂಟು ಮಾಡಲಿದ್ದ ವಿಷಮ ಸ್ಥಿತಿ ಅದು. ವಿಭಜನೆಯಾದರೆ ಅಗಾಧ ಪ್ರಮಾಣದಲ್ಲಿ ಹಿಂಸಾಚಾರವಾಗುತ್ತದೆ ಎಂಬುದನ್ನು ಲಾಲಾಜಿ ಮನಗಂಡಿದ್ದರು. ಜನೋನ್ಮಾದ ಅದರಲ್ಲೂ ಗೂಂಡಾತನಗಳು ಏನೆಲ್ಲವನ್ನು ಮಾಡುತ್ತವೆ ಎಂಬುದನ್ನು ಲಾಲಾಜಿ ಅವರ ಅಂತರಾತ್ಮ ಪರಿಭಾವಿಸಿತ್ತು. ಅಂಥ ಪ್ರಸಂಗ ಒದಗಿದರೆ ಅದನ್ನೆದುರಿಸಲು ಮಹಿಳಾ ಕುಲ ಸಶಕ್ತವಾಗಿರಬೇಕೆಂದು ಅವರು ಯೋಜಿಸಿದ್ದರು. ಮಹಿಳೆಯರಿಗೆ ಕೆಲವು ಬಗೆಯ ತರಬೇತು ಕೊಡುವುದರಿಂದ ಪರಿಸ್ಥಿತಿ ನಿಭಾಯಿಸಲು ಶಕ್ತಿ ಒದಗುತ್ತದೆ ಎಂದು ಅವರು ತರ್ಕಿಸಿದ್ದರು. ಇಂಥ ಯೋಚನೆ ಮನಸ್ಸಿನಲ್ಲಿ ಹೊಳೆದಾಗ ಪ್ರಾರಂಭದಲ್ಲಿ ಅವರು ಯೋಚಿಸಿದ್ದು ತಮಗೆ ಅತ್ಯಂತ ನಿಕಟವಾಗಿದ್ದ ಒಬ್ಬರಿಗೆ ಕಠಾರಿ ಕೊಟ್ಟು ಆತ್ಮರಕ್ಷಣೆಗೆ ಅದನ್ನು ಬಳಸಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡಿದರು. ಅವರಿಗೆ ಆ ಯೋಚನೆ ಹೊಳೆದದ್ದು ಗುರು ಗೋವಿಂದ ಸಿಂಗ್‌ರ ಮಾರ್ಗದರ್ಶನದಿಂದ. ತಮ್ಮ ಬೆಂಬಲಿಗರಿಗೆ ಆತ್ಮ ರಕ್ಷಣಾರ್ಥವಾಗಿ ಸದಾ ಕಿರ್ಪಾಣ್ ಜೊತೆಯಲ್ಲಿಟ್ಟು ಕೊಳ್ಳಲು ಗುರು ಗೋವಿಂದ ಸಿಂಗ್‌ರು ಆದೇಶಿಸಿದ್ದರು. ಭಾರತದ ಸಮಗ್ರತೆ ಮತ್ತು ಸ್ವಾತಂತ್ರ್ಯದ , ಶ್ರೀರಕ್ಷೆಯ ಸಾಧನವಾಗಿ ಹಿಂದೂ ಮಹಿಳೆಯರು ಗುರು ಗೋವಿಂದ ಸಿಂಗ್‌ರ ಸಲಹೆಯನ್ನು ಮಾನ್ಯ ಮಾಡುವುದು ಸಹಜವೆನಿಸಿತ್ತು. ಶಕ್ತಿಹೀನರಲ್ಲವೆಂಬುದನ್ನು ಸಾದರ ಪಡಿಸಬೇಕಾಗಿತ್ತು ರಜಪೂತರು. ಖಾಲ್ಸಗಳ ಧಾಟಿಯಲ್ಲಿ ಸಬಲತೆ ಮತ್ತು ಉಗ್ರತನವನ್ನು ಹಿಂದೂ ಮಹಿಳೆಯರು ಪ್ರದರ್ಶಿಸಬೇಕಾಗಿತ್ತು.

ಲಾಲಾಜಿಯವರ ಈ ಚಿಂತನೆಯನ್ನು ಅಪಾರ್ಥ ಮಾಡಿಕೊಂಡವರು ಉಂಟು. ಧಾರ್ಮಿಕ ಚಿಂತನೆ ಎಂದರೆ ಸಾಮಾನ್ಯ ರೀತಿಯಲ್ಲಿ ತಿಳಿದುಕೊಂಡಿರುವುದು ಮತ್ತು ಅದನ್ನು ಅನುಷ್ಠಾನಕ್ಕೆ ಅಳವಡಿಸಿಕೊಂಡಿರುವುದಷ್ಟೇ ಅಲ್ಲ. ಕಾಲಕ್ಕೆ ತಕ್ಕಂತೆ ಪರಿವರ್ತನೆಯೂ ಅಗತ್ಯವಾಗುತ್ತದೆ. ಲಾಲಾಜಿ ಆ ಪರಿವರ್ತನೆಯನ್ನು ಮನಗಂಡಿದ್ದರು. ಅದನ್ನು ಕಾರ್ಯ ರೂಪಕ್ಕೆ ಇಳಿಸಿದರು. ಅವರ ಆ ಕಾರ್ಯಕ್ಕೆ ಯಾರು ಏನೇ ಪಟ್ಟ ಕಟ್ಟಿರಲಿ ಹೊಸ ಬಗೆಯೊಂದಂತೂ ಆರಂಭಗೊಂಡಿತ್ತು. ಅದು ಸಕಾಲಿಕವಾಗಿ. ಇತರ ಎಲ್ಲಾ ಕೆಲಸಗಳಿಗಿಂತ ಹೆಚ್ಚಿನ ಒತ್ತು ಅದಕ್ಕೆ ಸಿಕ್ಕಿತ್ತು. ತಮಗೆ ಬರುತ್ತಿದ್ದ ಗಳಿಕೆಯಲ್ಲಿ ಕುಟುಂಬ ನಿರ್ವಹಣೆಗೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಬಳಸಿಕೊಂಡು ಉಳಿದದ್ದೆಲ್ಲವನ್ನು ಲಾಲಾಜಿ ಆ ಕಾರ್ಯಕ್ಕೆ ವಿನಿಯೋಗ ಮಾಡಿದರು.

ಲಾಲಾಜಿ ತಮ್ಮ ಬದುಕಿನ ಅಂತ್ಯದ ವೇಳೆಗೆ ತಾವು ಗಳಿಸಿದ್ದೆಲ್ಲವನ್ನು ದೇಶ ಮತ್ತು ಸಮಾಜದ ಸೇವೆಗೆ ಸಮರ್ಪಿಸಿದರು. ಬಂಡವಾಳದ ರೂಪದಲ್ಲಿದ್ದ, ಉಳಿತಾಯದ ರೂಪದಲ್ಲಿದ್ದ ಮೊತ್ತವೂ ಸೇರಿದಂತೆ ಅದಕ್ಕೆ ಪೂರಕವಾಗಿ ಕೂಡಿಕೊಂಡು ಬಂದಿದ್ದ ಹಣವೆಲ್ಲವನ್ನು ಅವರು ಈ ಕಾರ್ಯಕ್ಕೆ ಬಳಸಿದರು.

ಧಾನ, ಧರ್ಮ ಅತ್ಯುತ್ತಮವಾದದ್ದು. ಆದರೆ ಧಾನ ಧರ್ಮದಲ್ಲಿ ಶೇ.5ರಷ್ಟಾದರೂ ಉತ್ತಮ ಸ್ತರವಿರಬೇಕೆಂದು ಹೆಸರಾಂತ ಧಾರ್ಮಿಕವಾದಿ ಶಿಸಿಲ್ ರೋಡ್ಸ್ ಹೇಳಿದ್ದಾರೆ. ಆ ಕಾಲದ ಲಾಲಾಜಿ ಅವರ ಸಂಸ್ಥೆಗಳಲ್ಲಿ ಲಕ್ಷ್ಮೀ ಇನ್‌ಷ್ಯುರೆನ್ಸ್ ಒಂದು. ಅದರ ಕಾರ್ಯ ವಿಧಾನ ರೋಡ್ಸ್ ಸಿದ್ಧಾಂತಕ್ಕೆ ಅನುಗುಣವಾಗಿತ್ತೆಂದು ಕಂಡು ಬರುತ್ತದೆ. ವೈಯಕ್ತಿಕ ದೃಷ್ಟಿಕೋನದಿಂದ ನೋಡಿದರೆ ಆ ಸಂಸ್ಥೆಯನ್ನು ಕೆ. ಸಂತಾನಂ ಅವರ ಸಮಸ್ಯೆಗೆ ಪರಿಹಾರವಾಗಿ ಸ್ಥಾಪಿಸಲಾಗಿತ್ತು. ಹೆಸರಾಂತ ವಕೀಲರಾಗಿದ್ದ ಅವರು ಅಸಹಕಾರ ಚಳವಳಿಗೆ ಧುಮುಕಿ ವೃತ್ತಿಯನ್ನು ಬಿಟ್ಟುಕೊಟ್ಟಿದ್ದರು. ತಮ್ಮ ಅಚ್ಚುಮೆಚ್ಚಿನ ಬೆಂಬಲಿಗರಲ್ಲಿ ಒಬ್ಬರಾಗಿದ್ದ ಸಂತಾನಂ ಅವರ ಬೆಂಬಲಕ್ಕಾಗಿಯೇ ಲಾಲಾಜಿ ಲಕ್ಷ್ಮೀ ಇನ್‌ಷ್ಯುರೆನ್ಸ್ ಸ್ಥಾಪಿಸಿದ್ದರು. ವಕೀಲ ವೃತ್ತಿಯನ್ನು ಮುಂದುವರೆಸಲು ಸಾಧ್ಯವಿಲ್ಲದ್ದರಿಂದ ಸಂತಾನಂ ಪಾಲಿಗೆ ಉಳಿದದ್ದು ದಕ್ಷಿಣದ ತಮ್ಮ ಹುಟ್ಟೂರಿಗೆ ಮರಳಿ ಹೊಸ ಉದ್ಯೋಗ ಹಿಡಿಯುವುದಾಗಿತ್ತು. ಲಾಲಾಜಿ ವಿಮಾ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸಂತಾನಂ ಅವರನ್ನು ಅದರ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿಯೋಜಿಸಿದರು. ಅದರಿಂದ ಸಂತಾನಂ ಅವರ ವೈಯಕ್ತಿಕ ಸಮಸ್ಯೆಗೆ ಪರಿಹಾರ ಉಂಟಾಗಿತ್ತು. ತಮ್ಮ ಸ್ವದೇಶಿ ಕಾರ್ಯಕ್ರಮದಲ್ಲಿ ವಿಮಾ ಸಂಸ್ಥೆಯೊಂದನ್ನು ಪ್ರಾರಂಭಿಸಬೇಕೆಂಬ ಲಾಲಾಜಿಯವರ ಪರಿಕಲ್ಪನೆಯೂ ಈಡೇರಿದಂತಾಗಿತ್ತು. ಸಂಸ್ಥೆಯ ಅಧ್ಯಕ್ಷರು ಲಾಲಾಜಿಯವರೇ. ಹಾಗಾಗಿ ಅದು ಶೀಘ್ರದಲ್ಲೇ ಪ್ರಚಂಡ ಯಶಸ್ಸು ಕಂಡಿತು. ಲಾಲಾಜಿ ಅವರ ಕಾಲದಲ್ಲಿ ಸಂಸ್ಥೆಯ ಆಡಳಿತದಲ್ಲಿ ವಿಶೇಷ ಉಸ್ತುವಾರಿ ಇತ್ತು. ನೂರಕ್ಕಿಂತಲೂ ಹೆಚ್ಚು ಷೇರುಗಳನ್ನು ಬಯಸಿದ ಯಾವುದೇ ಅರ್ಜಿಯನ್ನು ಮಾನ್ಯ ಮಾಡುತ್ತಿರಲಿಲ್ಲ. ಪ್ರತಿ ಷೇರಿನ ಬೆಲೆ ನೂರು ರೂಪಾಯಿ. ಯಾವುದೇ ರೀತಿಯಲ್ಲೂ ಸಂಸ್ಥೆಯಲ್ಲಿ ಓರ್ವ ವ್ಯಕ್ತಿ ಇಲ್ಲವೇ ಒಂದು ಗುಂಪಿನ ಹಿಡಿತ ಮೇಲುಗೈ ಸಾಧಿಸಲು

ಲಾಲಾಜಿ ಅವಕಾಶ ಮಾಡಿಕೊಟ್ಟಿರಲಿಲ್ಲ. ಅವರು ಸಂತಾನಂ ಅವರಿಗೂ ಆ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದ್ದರು.

ಲಾಲಾಜಿ ಅವರ ಸೃಜನಾತ್ಮಕ ಕಾರ್ಯಗಳಲ್ಲಿ ವೃತ್ತಪತ್ರಿಕೆಗಳದು ಪ್ರಮುಖ ಅಂಗ. ಗಡಿಪಾರು ಶಿಕ್ಷೆಯಿಂದ ಮರಳುತ್ತಿದ್ದಂತೆ ದಿನ ಪತ್ರಿಕೆಯೊಂದನ್ನು ಆರಂಭಿಸಲು ಅವರು ನಿರ್ಧರಿಸಿದ್ದಿರಬೇಕು. ಅವರು ಪೂರ್ಣವಾಗಿ ತಳ ಊರಿದ ನಂತರ ಜಂಟಿ ವಲಯದಲ್ಲಿ ಪಂಜಾಬ್ ಅಕ್ಬಾರಾತ್ ಮತ್ತು ಪತ್ರಿಕಾ ಕಂಪನಿಯೊಂದನ್ನು ನೋಂದಣಿ ಮಾಡಿಸಿದರು. ಅದರಡಿಯಲ್ಲಿ ಉರ್ದು ದೈನಿಕ ಬಂದೇ ಮಾತರಂ ಆರಂಭಿಸಿದರು. ಲಾಲಾಜಿ ಆ ಕಂಪನಿಯ ಚೇರ್ಮನ್. ಪತ್ರಿಕೆಗೆ ಅವರೇ ಸಂಪಾದಕರು. ಷೇರುದಾರರಿರಲಿ, ಬೇರೆ ಯಾರಿಗೂ ಅಷ್ಟು ಆಸಕ್ತಿ ಇರಲಿಲ್ಲ. ಆದರೆ ಹರ್‌ಕಿಷನ್ ಲಾಲ್ ಹೆಚ್ಚು ಆಸಕ್ತಿ ವಹಿಸಿದ್ದರು. ಅವರ ಷೇರು ಮೊತ್ತವೂ ಹೆಚ್ಚಾಗಿತ್ತು. ಮಾಂಟೇಗೋ ಕಿಮ್ಸ್ ಫೋರ್ಡ್ ಸುಧಾರಣೆಯ ಪರಿಣಾಮವಾಗಿ ಪಂಜಾಬಿನ ಮಂತ್ರಿಯಾಗುವ ತನಕ ಹರ್‌ಕಿಷನ್ ಲಾಲ್ ಕಂಪನಿಯ ನಿರ್ದೇಶಕ ಮಂಡಳಿಯಲ್ಲಿದ್ದರು.

ಬಂದೇ ಮಾತರಂ ಆರಂಭದಿಂದಲೂ ಶಕ್ತಿಶಾಲಿ ಮಾಧ್ಯಮವೆನಿಸಿತು. ಉರ್ದು ಪತ್ರಿಕೋದ್ಯಮದಲ್ಲಿ ಅದರ ಪ್ರಭಾವದ್ದೇ ಒಂದು ಪ್ರಮುಖ ಅಧ್ಯಾಯವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆ ಸಲ್ಲಿಸಿದ ಪಾತ್ರ, ನಿರ್ವಹಿಸಿದ ಪಾತ್ರ ಅಸಾಮಾನ್ಯ. ಲಾಲಾಜಿಯವರು ಪತ್ರಿಕೆಯ ಯಶಸ್ಸಿನಲ್ಲಿ ತಮ್ಮ ಹೆಸರನ್ನಷ್ಟೇ ಸಂದಾಯ ಮಾಡಲಿಲ್ಲ. ಪತ್ರಿಕೆಯನ್ನು ಆರಂಭಿಸಿದಾಗ ಗೋವಲ್ ಮಂಡಿಯ ಕಚೇರಿಯಲ್ಲಿ ಸಂಪಾದಕೀಯ ಡೆಸ್ಕ್ ಸಹ ಅವರ ನೆರವಿಗೆ ಇರಲಿಲ್ಲ. ಎಷ್ಟೋ ಹಗಲು ರಾತ್ರಿಗಳನ್ನು ಅವರು ಆ ಕಚೇರಿಯಲ್ಲೇ ಕಳೆಯುತ್ತಿದ್ದರು. ಅವರಿಗೆ ಬೆಂಬಲವಾಗಿ ನಿಂತವರು ಅವರ ಅಚ್ಚುಮೆಚ್ಚಿನ ಆರ್ಯ ಸಮಾಜದ ದಿನಗಳ ಬೆಂಬಲಿಗ ರಾಂ ಪ್ರಸಾದ್. ಲಾಲಾಜಿ ಅವರು ಬೇರೆ ಕಾರ್ಯಗಳಲ್ಲಿ ನಿಮಿತ್ತರಾದಾಗ ಪತ್ರಿಕೆಯ ಉಸ್ತುವಾರಿಯನ್ನು ರಾಂ ಪ್ರಸಾದ್ ನಿರ್ವಹಿಸುತ್ತಿದ್ದರು. ಮಧ್ಯಾಹ್ನದ ವೇಳೆಗೆ ಪತ್ರಿಕೆ ಮಾರುಕಟ್ಟೆಗೆ ಬರುತ್ತಿದ್ದದ್ದು ಆಗಿನ ವಿಶೇಷ. ಬೆಳಗಿನ ಪತ್ರಿಕೆಗಳು ಬಹು ದಿನಗಳ ನಂತರ ಆರಂಭಗೊಂಡವು. ಬದಲಾವಣೆಗೆ ಪೂರಕವಾಗಿ ಬಂದೇ ಮಾತರಂ ಸಹ ಮೊಟ್ಟ ಮೊದಲ ಬೆಳಗಿನ ಪತ್ರಿಕೆಯಾಗಿ ಮಾರ್ಪಾಟುಗೊಂಡಿತು. ಬಂದೇ ಮಾತರಂ ಅಗ್ರಮಾನ್ಯ ಉರ್ದು ದೈನಿಕವಾಯಿತು. ಜನಾಭಿಪ್ರಾಯದ ಸಮಗ್ರ ಪ್ರತಿನಿಧಿ ಎನಿಸಿತು. ಪಂಜಾಬಿನಲ್ಲಿ ಅದರ ಪ್ರಭಾವಕ್ಕೆ ಸರಿಸಾಟಿಯಾದ ಇನ್ನೊಂದು ಪತ್ರಿಕೆ ಇಲ್ಲವಾಯಿತು. ಉರ್ದು ಪತ್ರಿಕೆಗಳ ಸ್ಥಾನಮಾನಗಳ ಸುಧಾರಣೆಯಲ್ಲಿ ಬಂದೇ ಮಾತರಂ ಸಲ್ಲಿಸಿದ ಕೊಡುಗೆ ಸರ್ವ ಸಾಮನಿಕ. ಸುದ್ದಿಗಳ ನಿರೂಪಣೆ, ಸಂಗ್ರಹ ವೈವಿಧ್ಯ, ಟೀಕೆ ಟಿಪ್ಪಣಿಗಳು, ನಿರ್ಭಿಡೆಯ ಚಿಂತನೆ, ವೃತ್ತಿಪರ ನೈತಿಕ ಮಟ್ಟ ಮತ್ತು ಗಟ್ಟಿತನಗಳು ಪತ್ರಿಕೆಯ ಹೆಸರನ್ನು ಬಹು ಜನಪ್ರಿಯಗೊಳಿಸಿದವು. ಒಟ್ಟಾರೆ ಪತ್ರಿಕೆಯ ಸ್ವರೂಪ ಆ ಕಾಲದಲ್ಲಿ ಅತ್ಯುತ್ತಮವೆನಿಸಿತು. ಕಾರ್ಮಿಕರಿಗೆ ಸಾಧ್ಯವಿದ್ದಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಂಭಾವನೆ ನೀಡಲಾಗುತ್ತಿತ್ತು.

ದಿನ ಕಳೆದಂತೆ ಬಂದೇ ಮಾತರಂ ಪ್ರಸಾರ ಮುಪ್ಪಟ್ಟುಗೊಂಡಿತು. ಜನಪ್ರಿಯತೆ

ಅಪಾರವಾಯಿತು. ಪ್ರಭಾವ ವಿಸ್ತೃತವಾಯಿತು. ಮಹಾತ್ಮ ಗಾಂಧೀ ನಾಯಕತ್ವದಲ್ಲಿ ಕಾಂಗ್ರೆಸ್ ಕೈಗೊಂಡ ದೊಡ್ಡ ಜನಾಂದೋಲನಕ್ಕೆ ಅಪ್ರತಿಮ ಶಕ್ತಿ ತುಂಬಿದ್ದು ಈ ಪತ್ರಿಕೆ. ಅದರೊಟ್ಟಿಗೆ ಲಜಪತ್‌ರಾಯ್ ಇಂಗ್ಲಿಷ್ ಸಾಪ್ತಾಹಿಕ ದಿ ಪೀಪಲ್ ಪ್ರಾರಂಭಿಸಿದರು. ಅಸಹಕಾರ ಚಳವಳಿ ಪರಾಕಾಷ್ಠೆ ತಲುಪಿದ ಸಮಯದಲ್ಲಿ ಹುಟ್ಟಿದ್ದು ಈ ಸಾಪ್ತಾಹಿಕ. ದಿ ಪೀಪಲ್ ವೈವಿಧ್ಯದ ವಿಷಯ ವಸ್ತುಗಳನ್ನು ಓದುಗರಿಗೆ ಒದಗಿಸುತ್ತಿತ್ತು. ಶೈಕ್ಷಣಿಕ ಮೌಲ್ಯದ ಬಗ್ಗೆ ಅದರಲ್ಲಿ ಹೆಚ್ಚು ಒತ್ತು ಇರುತ್ತಿತ್ತು. ನಿರ್ಭೀತ, ನಿರ್ದುಷ್ಟ, ವಿಶ್ಲೇಷಣೆ, ವಿವೇಚನೆಯ ಲೇಖನಗಳೊಂದಿಗೆ ಸಾಪ್ತಾಹಿಕದ ಗೌರವ ದಿನೇ ದಿನೇ ಹೆಚ್ಚ ತೊಡಗಿತು. ಅದರ ಸ್ವತಂತ್ರ ಪ್ರವೃತ್ತಿ, ವಾಸ್ತವಿಕ ವಿಶ್ಲೇಷಣೆ, ರಾಜಕೀಯ ನೀತಿ ಕಾರ್ಯಕ್ರಮಗಳ ಬಗ್ಗೆ ಒಳಮುಖಗಳ ಚಿತ್ರಣ ಪತ್ರಿಕೆಯ ಘನತೆಯನ್ನು ಹೆಚ್ಚಿಸಿದ್ದವು. ವ್ಯಕ್ತಿ ಯಾರೇ ಆಗಿರಲಿ, ಎಷ್ಟೇ ಸ್ಥಾನಮಾನ ಇರಲಿ ಅವರ ಬಗ್ಗೆ ಹೇಳಬೇಕಾದುದನ್ನು ಸಾಪ್ತಾಹಿಕ ಮುಚ್ಚುಮರೆ ಇಲ್ಲದೆ ಹೇಳುತ್ತಿತ್ತು. ಆಡಳಿತಷಾಹಿಗಳ ವಿರುದ್ಧ ರಚನಾತ್ಮಕ ದಾಳಿ ಪತ್ರಿಕೆಯ ಮೂಲಕ ನಡೆಯುತ್ತಿತ್ತು. ಸ್ವಾತಂತ್ರ್ಯದ ಹೋರಾಟಕ್ಕೆ ಅದು ಸ್ಫೂರ್ತಿ ತುಂಬುತ್ತಿತ್ತು!

ಬಂಧನದಲ್ಲಿದ್ದಾಗ ಲಾಲಾಜಿ ಬಂದಿಗಳ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ಮನನ ಮಾಡಿಕೊಂಡಿದ್ದರು. ಬಂದಿಖಾನೆಗಳ ಸ್ಥಿತಿಗತಿಗಳನ್ನು ಖುದ್ದಾಗಿ ಅನುಭವಿಸಿದ್ದರು. ಸೆರೆಮನೆವಾಸಿಗಳ ಜೊತೆಗೆ ಜೈಲು ಸುಧಾರಣೆಗೆ ಅವರು ವಿಶೇಷ ಮುತುವರ್ಜಿ ವಹಿಸಿದ್ದರು. ಅದಕ್ಕೆ ಪೂರಕವಾಗಿ ತಮ್ಮ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ವಸ್ತುಸ್ಥಿತಿಯನ್ನು ಬೆಳಕಿಗೆ ತಂದರು. ಬಂದೇ ಮಾತರಂನಲ್ಲಿ ಪ್ರಕಟಗೊಂಡ ಲೇಖನಗಳನ್ನು ಆಧರಿಸಿ ಆಡಳಿತಷಾಹಿ ಅದರ ವಿರುದ್ಧ ಮಾನನಷ್ಟ ಕಟ್ಲೆ ಹೂಡಿತು. ಅದರಿಂದ ಲಾಲಾಜಿ ಅವರು ಹಿಡಿದ ಕಾರ್ಯಕ್ಕೆ ಇನ್ನಷ್ಟು ಶಕ್ತಿ ಬಂದಿತೇ ವಿನಃ ಮತ್ತೇನೂ ಆಗಲಿಲ್ಲ. ಜೈಲಿನ ಮತ್ತು ಜೈಲುವಾಸಿಗಳ ದುರವಸ್ಥೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಹಿರಂಗಗೊಂಡಿತು. ಕೊನೆಗೆ ಆಡಳಿತಷಾಹಿ ಜೈಲುಗಳ ಸುಧಾರಣೆಗೆ ಸಂಬಂಧಪಟ್ಟಂತೆ ಸಮಿತಿಯೊಂದನ್ನು ಸ್ಥಾಪಿಸಿತು. ಆ ಸಮಿತಿಯು ಕೆಲವು ಶಿಫಾರಸುಗಳನ್ನು ಶಾಸನಾತ್ಮಕಗೊಳಿಸಲು ಸಲಹೆ ಮಾಡಿತು. ಭಾರತದ ರಾಜ್ಯ ಕಾರ್ಯದರ್ಶಿ ಲಾರ್ಡ್ ಆಲಿವರ್ ಅವರು ದಿ ಪೀಪಲ್ ಮತ್ತು ಬಂದೇ ಮಾತರಂ ಪತ್ರಿಕೆಗಳನ್ನು ಬಹುವಾಗಿ ಪ್ರಶಂಸಿಸಿರುವರು.

* * *

ಅಧ್ಯಾಯ-62

ಜಯಾಪಜಯಗಳ ಕಥೆ

ಭಾರತೀಯ ರಾಜಕಾರಣದಲ್ಲಿ, ಉನ್ನತ ಹಂತದಲ್ಲಿ ಏರುಪೇರುಗಳು ತಲೆದೋರಿದ ಸಂದರ್ಭದಲ್ಲಿ ಶಾಂತಿ ದೇವತೆಯಂತೆ ಕೆಲಸ ಮಾಡಿದವರು ಶ್ರೀಮತಿ ಸರೋಜಿನಿ ನಾಯ್ಡು ಎಂದು ಹೆಮ್ಮೆಯಿಂದ ಗುರುತಿಸಬಹುದು. 1926ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವಧಿ ಗುಂಟ ಇಂಥ ಎಡರು ತೊಡರುಗಳನ್ನು ಬಗೆಹರಿಸಿ ಸುಗಮವಾಗಿ ರಾಜಕಾರಣ ಸಾಗಲು ಅವರ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಕಾನ್ಪುರ ಮತ್ತು ಸಾಬರಮತಿ ಪ್ರಸಂಗಗಳಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ತೋರಿದ ಜಾಣ್ಮೆ, ಗಳಿಸಿದ ಯಶಸ್ಸು ವಿಶಿಷ್ಟವಾದದ್ದು. ಆದರೂ, ಅವರು ಸಾಧಿಸಿದ ಹೊಂದಾಣಿಕೆ ದೀರ್ಘ ಕಾಲ ಉಳಿಯದಿದ್ದದ್ದು ದುರ್ದೈವ. ಆ ವರ್ಷದ ಚಳಿಗಾಲದ ವಿಧಾನಸಭಾ ಅಧಿವೇಶನದ ಮುನ್ನಾ ದಿನಗಳಲ್ಲಿ ಅವರು ಇಂಥ ಕಾರ್ಯಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ದೆಹಲಿಯ ಅಧಿವೇಶನಗಳ ಸಮಯದಲ್ಲಿ ವಿಶಿಷ್ಟ ಪ್ರೇಕ್ಷಕರ ವೇದಿಕೆಗಳಲ್ಲಿ ಕುಳಿತು ಕಲಾಪಗಳನ್ನು ವೀಕ್ಷಿಸುತ್ತಿದ್ದರು. ತಾವು ಕೈಗೊಂಡ ಹೊಂದಾಣಿಕೆ ಫಲಭರಿತವಾಗುತ್ತಿದ್ದನ್ನು ಆ ಕಲಾಪಗಳಲ್ಲಿ ಕಂಡು ಹೆಮ್ಮೆಪಡುತ್ತಿದ್ದರು. ಆದರೆ ಸಿಮ್ಲಾ ಅಧಿವೇಶನದಲ್ಲಿ ಸರೋಜಿನಿಯವರಿಗೆ ನಿರಾಶೆಯಾಯಿತು. ಅಲ್ಪಕಾಲದ್ದೂ ಅಷ್ಟೇ ಮುಖ್ಯವಲ್ಲದ್ದೂ ಆದ ಅಧಿವೇಶನ ಆದಾದರೂ ಆಕೆಯ ಪಾಲಿಗೆ ಅದೇಕೋ ಯಶಸ್ವಿಯಾದಂತೆ ಕಂಡು ಬರಲಿಲ್ಲ. 1926ರ ಸಮಸ್ಯೆಗಳೇ ಹಾಗಿದ್ದವು. ಚಿತ್ರ ವಿಚಿತ್ರ ಸಮಸ್ಯೆಗಳು ಅವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಖ್ಯಸ್ಥೆಯಾಗಿ ಅವರು ಸದಾ ಕರ್ತವ್ಯ ನಿರತರಾಗಿರುತ್ತಿದ್ದರು. ಆ ಸಮಯದಲ್ಲಂತೂ ಅವರ ಸೇವೆ ತುಂಬಾ ಜಾಗೃತವಾಗಿತ್ತು.

ಲಾಲಾಜಿಯವರು ಆಗಸ್ಟ್ ಮಧ್ಯ ಭಾಗದಲ್ಲಿ ವಿದೇಶದಿಂದ ಮರಳಿದರು. ತದ ನಂತರ ಕೆಲವೇ ದಿನಗಳಲ್ಲಿ ವಿಧಾನಸಭೆಯ ಚಳಿಗಾಲದ ಅಧಿವೇಶನ ಆರಂಭವಾಗಬೇಕಿತ್ತು.

ಏಪ್ರಿಲ್ ಅಂತ್ಯದಲ್ಲಿ ಅವರು ಭಾರತದಿಂದ ತೆರಳುವ ಸಮಯದಲ್ಲಿ, ಸಾಬರಮತಿ ಒಡಂಬಡಿಕೆ ಆಗಷ್ಟೇ ರೂಪಿತವಾಗುತ್ತಿತ್ತು. ಬಾಲಗ್ರಹವೂ ಕಾಣಿಸಿಕೊಂಡಿತ್ತು. ಅವರಿದ್ದ ಹಡಗು ಭಾರತೀಯ ಸಾಗರವನ್ನು ದಾಟುವ ಮೊದಲೇ ಒಡಂಬಡಿಕೆಯ ಬಗ್ಗೆ ಅಪಸ್ವರಗಳು ಇಣುಕು ಹಾಕಿದ್ದವು. ಅತ್ತ ಕಲ್ಕತ್ತಾ ಕಡೆಯಿಂದ ಕೋಮು ಹಿಂಸೆ ಮತ್ತು ರಕ್ತಪಾತದ ಸುದ್ದಿ ಬರತೊಡಗಿತು.

ಲಾಲಾಜಿ ವಿದೇಶ ಪ್ರವಾಸ ಮುಗಿಸಿ ಬಂದಾಗ ಸಾಬರಮತಿ ಒಡಂಬಡಿಕೆಯ ಮಾರಣ ಹೋಮವಾಗಿತ್ತು. ಮೋತಿಲಾಲ್ ಅವರ ಮಾತಿನಲ್ಲಿ ಹೇಳುವುದಾದರೆ ಆ ಒಡಂಬಡಿಕೆ ರೂಪ ಕಾಣಲಿಲ್ಲ. ಚರ್ಚೆಯ ಹಂತದಲ್ಲೇ ಪಕ್ಷದ ಪ್ರತಿ ನಾಯಕರು ಅದರ ಬಗ್ಗೆ ತಮ್ಮದೇ ಆದ ವಿಶ್ಲೇಷಣೆ ಕೊಡ ತೊಡಗಿದರು. ಹೀಗಾಗಿ ಪಕ್ಷದಲ್ಲಿ ಸ್ವರಾಜ್ ವಾದಿಗಳು ಹಾಗೂ ಸೌಮ್ಯವಾದಿಗಳ ಹಿಡಿತ ತಾನೇ ತಾನಾಯಿತು. ದಿನೇ ದಿನೇ ಉಲ್ಬಣಿಸ ತೊಡಗಿದ ಕೋಪ ದಳ್ಳುರಿಯಿಂದಾಗಿ ದೇಶದ ವಾತಾವರಣ ತೀರಾ ಹದಗೆಡತೊಡಗಿತು.

ಯುರೋಪಿನಿಂದ ಮರಳಿದ ಲಾಲಾಜಿಯವರು ಅಲ್ಲಿ, ಇಲ್ಲಿ ತಮಗೆ ಲಭ್ಯವಾದ ಕೆಲವು ಮಿತ್ರರೊಂದಿಗೆ ಮಾತುಕತೆ ನಡೆಸಿದರು. ಭಾರತದ ಇಬ್ಭಾಗದ ಬಗ್ಗೆ ಕೆಲವರು 'ಕ್ರಾಂತಿಕಾರಿಗಳು' ಮುಂದಾಗಿದ್ದ ವಿಷಯಗಳ ಬಗ್ಗೆ ಮತ್ತು ಅವರ ಯೋಜನೆಗಳ ಬಗ್ಗೆ ತಿಳಿದುಕೊಂಡರು. 'ಕಾಬೂಲ್-ಕಾಂಗ್ರೆಸ್ ಸಮಿತಿಯ ರಚನೆ'ಯಂಥ ಯೋಜನೆಗಳಿಗೆ ಕುಮ್ಮಕ್ಕು ಕೊಡುತ್ತಿದ್ದ ಬಗ್ಗೆಯೂ ಮನನ ಮಾಡಿಕೊಂಡರು.

ಕಾಬೂಲ್ ಸಮಿತಿಯ ವಿಷಯದಲ್ಲಿ ನಾವು ಈ ಹಿಂದೆ ಈಗಾಗಲೇ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದೇವೆ. ಇಲ್ಲಿ ನಮಗೆ ಅಗತ್ಯವಾಗಿರುವುದು ಇಷ್ಟೇ. ಸೂಕ್ಷ್ಮವಾದ ಆ ವಿಷಯದಲ್ಲಿ ಸಾರ್ವಜನಿಕ ವಿವಾದವನ್ನು ಹುಟ್ಟಿಸುವುದು ವಿಹಿತವಲ್ಲವೆಂದು ಲಾಲಾಜಿಯೇನೋ ಭಾವಿಸಿದ್ದರು. ವಿಚಿಧ್ರಕಾರಿ ಎನಿಸುವ ಆ ಸಮಿತಿಯನ್ನು ಸ್ಥಾಪಿಸಿದ ಬಗ್ಗೆ ಯಾರೂ ಸಹ ವಿವರಣೆ ಕೊಡುವ ಹಂತದಲ್ಲಿ ಇಲ್ಲದ್ದು ಲಾಲಾಜಿಯವರಿಗೆ ಮನವರಿಕೆಯಾಯಿತು. ಅಂತಹ ಸಮಯದಲ್ಲಿ ಆ ಸಮಿತಿಯ ನಡವಳಿಕೆಯ ಬಗ್ಗೆ ಬಹಿರಂಗ ಪ್ರಾಮುಖ್ಯತೆ ಕೊಡುವುದರಿಂದ ಇನ್ನಷ್ಟು ಕಿಡಿಗೇಡಿತನವಾಗುತ್ತದೆ ಎಂದು ಅವರು ಭಾವಿಸಿದರು. ಕಾಂಗ್ರೆಸ್ ಮುಖಂಡರುಗಳು ಲಾಲಾಜಿಯವರನ್ನು ಗಂಭೀರವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದದ್ದು ಮುಂದಾಗಲಿದ್ದ ವಿಪತ್ತಿನ ಇನ್ನೊಂದು ಗುರುತರ ಅಪಾಯದ ಲಕ್ಷಣ ಎನಿಸಿತು. ಕಾಂಗ್ರೆಸ್ ಮುಖಂಡರ ಅಂತಹ ನಡವಳಿಕೆಯಿಂದಾಗಿ ಅವರ ಮತ್ತು ಲಾಲಾಜಿಯವರ ನಡುವೆ ಸಾಕಷ್ಟು ದೀರ್ಘವಾದ ಅಂತರ ಬೇರ್ಪಡುತ್ತಾ ಬಂದಿತು. ಈಗ ಪ್ರಸ್ತಾಪವಾಗುತ್ತಿರುವ ಪ್ರಸಂಗಕ್ಕೆ ಇದೆಲ್ಲವೂ ಪ್ರಬಲವಾದ ಹಿನ್ನಲೆಯಾಗುತ್ತದೆ.

ಇನ್ನೂ ವಿಸ್ತಾರವಾಗಿ ಹೇಳುವುದಾದರೆ 'ಕೋಮು' ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಕೆಲವು ನಾಯಕರು ತೋರಿದ ನಡವಳಿಕೆ ಮತ್ತು ವರ್ತನೆಗಳು ಲಾಲಾಜಿಯವರಿಗೆ ಸಮ್ಮತವಾಗಿರಲಿಲ್ಲ. ವಿಧಾನಸಭೆಯ ಕಾರ್ಯ ಕಲಾಪದಿಂದ ಪ್ರತಿಭಟನೆಯ ರೂಪದಲ್ಲಿ ದೀರ್ಘ ಕಾಲ ಸಭಾತ್ಯಾಗ ಕೈಗೊಂಡು ದೂರ ಉಳಿಯುವ ನಡವಳಿಕೆಯನ್ನು ಲಾಲಾಜಿಯವರು ಮಾನ್ಯ ಮಾಡಿರಲಿಲ್ಲ. ಸಭಾತ್ಯಾಗ ಇಲ್ಲವೇ ಬಹಿಷ್ಕಾರಗಳ ಮೂಲಕ ಪ್ರಜಾಪ್ರತಿನಿಧಿಗಳು ತಮ್ಮ ಕ್ಷೇತ್ರಗಳ ಹಿತವನ್ನು ಕಡೆಗಣಿಸುತ್ತಿದ್ದಾರೆಂದೇ ಅವರು ಮನಗಂಡಿದ್ದರು. ಅದರಲ್ಲೂ ಕಲಾಪ ಬಹಿಷ್ಕಾರದಲ್ಲಿ ನಿರತರಾಗಿದ್ದ ಜನ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಕ್ಷೇತ್ರಗಳಿಗೆ ಸಂಬಂಧಪಟ್ಟವರಾಗಿದ್ದರಿಂದ ಸಹಜವಾಗಿ ಹಿಂದೂಗಳ ಹಿತಾಸಕ್ತಿ ಕಡೆಗಣಿಸಲ್ಪಡುತ್ತಿತ್ತು. ವಿಧಾನಸಭೆಯ ಕಡೆಯ ಅಧಿವೇಶನ

ಆದಾಗಿದ್ದರಿಂದ ಕ್ಷೇತ್ರ ಮತ್ತು ಜನತೆಯ ಹಿತ ಬಯಸುತ್ತಿದ್ದ ಕೆಲವರಿಗಂತೂ ಸಭಾತ್ಯಾಗ, ಕಲಾಪ ಬಹಿಷ್ಕಾರಗಳು ಸಮ್ಮತವಾಗುತ್ತಿರಲಿಲ್ಲ. ಸದ್ಯದಲ್ಲೇ ಸನ್ನಿಹಿತವಾಗುತ್ತಿದ್ದ ಚುನಾವಣೆಗಳಲ್ಲಿ ತಮ್ಮ ಗೆಲುವಿಗೆ ಬಂಡವಾಳ ಮಾಡಿಕೊಳ್ಳಲು ಅವರೆಲ್ಲಾ ತವಕಿಸುತ್ತಿದ್ದರು. ಲಾಲಾಜಿಯವರ ಚಿಂತನೆ ತದ್ವಿರುದ್ಧವಾಗಿರುತ್ತಿತ್ತು. ಚುನಾವಣೆಯಲ್ಲಿ ಮತದಾರರ ಮುಂದೆ ಹೋದಾಗ ಆತ ಹಿಂದಿನ ಅವಧಿಯಲ್ಲಿ ತಮ್ಮ ಹಿತವನ್ನು ಕಡೆಗಣಿಸಿ ವಿಶ್ವಾಸ ಕಳೆದುಕೊಂಡಿದ್ದೀರಿ ಎಂದು ಮೂದಲಿಸಬಹುದೆಂಬ ಭೀತಿ ಅವರನ್ನು ಕಾಡುತ್ತಿತ್ತು. ಸಿಮ್ಲಾ ಅಧಿವೇಶನದಲ್ಲಿ ಎರಡು ಪ್ರಮುಖ ಅಧಿಕೃತ ಕಲಾಪಗಳನ್ನು ಕೈಗೊಳ್ಳ ಬೇಕಾಗಿತ್ತು. ಕರೆನ್ಸಿ ಮತ್ತು ಹಣಕಾಸು ಸ್ಥಿತಿಗೆ ಸಂಬಂಧಪಟ್ಟಂತೆ ರಾಯಲ್ ಆಯೋಗದ ಶಿಫಾರಸುಗಳ ಬಗ್ಗೆ ಸರ್ಕಾರದ ನಿರ್ಧಾರಗಳನ್ನು ಒಳಗೊಂಡ ಕಲಾಪ ಆ ಪೈಕಿ ಒಂದಾಗಿತ್ತು. ಆ ನಿರ್ಧಾರಗಳಲ್ಲಿ ಭಾರತದ ಉದ್ಯಮ ಮತ್ತು ವಾಣಿಜ್ಯಕ್ಕೆ ಅತಿ ಹೆಚ್ಚಿನ ಮಹತ್ವವಿತ್ತು. ನಾಗರಿಕ ಸ್ವಾತಂತ್ರ್ಯದ ಮೇಲೆ ಪರಿಣಾಮ ಬೀರಬಹುದಾದ ದಂಡ ಸಂಹಿತೆಯ ತಿದ್ದುಪಡಿ ಇನ್ನೊಂದು ಪ್ರಸ್ತಾಪವಾಗಿತ್ತು. ಸರ್ಕಾರ ಈ ಎರಡು ಕಲಾಪಗಳನ್ನು ಅವಸರ ಅವಸರದಲ್ಲಿ ಮಂಜೂರು ಮಾಡಿಕೊಳ್ಳಲು ತವಕಿಸಿತ್ತು. ಸ್ವರಾಜ್ ವಾದಿಗಳು ಸಭಾತ್ಯಾಗ ಮತ್ತು ಕಲಾಪ ಬಹಿಷ್ಕಾರ ಹಾಕುತ್ತಿದ್ದರಿಂದ ಆ ಎರಡು ಪ್ರಸ್ತಾವಗಳಿಗೆ ಅನುಮೋದನೆ ಪಡೆದುಕೊಳ್ಳುವುದು ಸುಲಭವೆಂದು ಸರ್ಕಾರ ಲೆಕ್ಕ ಹಾಕಿಕೊಂಡಿತ್ತು. ಒಟ್ಟಿನಲ್ಲಿ ತಮ್ಮ ಆಶಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಸ್ವರಾಜ್ ವಾದಿಗಳು ಮತ್ತು ಸೌಮ್ಯವಾದಿಗಳು ನಡೆದುಕೊಳ್ಳುತ್ತಿದ್ದ ಸಂಸದೀಯ ನಡವಳಿಕೆಗಳನ್ನು ಬಳಸಿಕೊಳ್ಳಲು ಬ್ರಿಟಿಷ್ ಆಡಳಿತ ಉದ್ಯುಕ್ತವಾಗಿತ್ತು.

ಹೀಗಾಗಿ ಪರಿಸ್ಥಿತಿಯ ವಾಸ್ತವಿಕತೆಯನ್ನು ಸಂಪೂರ್ಣವಾಗಿ ಮನಗಂಡ ಲಾಲಾಜಿ ಸಭಾತ್ಯಾಗ ಧೋರಣೆ ಬಗ್ಗೆ ಸಾಧ್ಯವಾದಷ್ಟು ಚಿಂತನೆ ನಡೆಸಿ ತಮ್ಮ ಮಹಾರಾಷ್ಟ್ರದ ಗೆಳೆಯರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಿಮ್ಲಾಗೆ ಆಗಮಿಸಿದರು. ಸಾಬರಮತಿ ಒಡಂಬಡಿಕೆ ಊರ್ಜಿತವಾಗಿರಲಿಲ್ಲ.

ಲಾಲಾಜಿಯವರು ಮಾಳವೀಯಜಿಯವರನ್ನು ಭೇಟಿ ಮಾಡಿ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿದರು. ಮಾಳವೀಯಜಿಯವರು ತಮ್ಮ ಅನುಮಾನ ಹಾಗೂ ಶಂಕೆಗಳನ್ನು ಲಾಲಾಜಿಯವರೊಂದಿಗೆ ಹಂಚಿಕೊಂಡರು. ಅವರು ಸಹ ಸ್ವರಾಜ್ ವಾದಿಗಳ ತಂತ್ರ ಹಾಗೂ ಸಂಸದೀಯ ನಡವಳಿಕೆಗಳನ್ನು ಒಪ್ಪಿಕೊಳ್ಳಲಿಲ್ಲ. ಮಾಳವೀಯಜಿಯವರು ತತ್ಸಂಬಂಧವಲ್ಲಿ ಮೋತಿಲಾಲ್‌ಜಿ ಮತ್ತು ಇತರ ಸಮಾಜವಾದಿ ಗೆಳೆಯರೊಂದಿಗೆ ಮಾತುಕತೆ ನಡೆಸುವ ಪ್ರಯತ್ನವನ್ನು ಕೈಗೊಂಡರು. ಅಂತಹ ಮಾತುಕತೆಗಳು ಮಹ್ಮಾದಂತೆ ಪಕ್ಷದಲ್ಲಿ ಇಬ್ಭಾಗದ ಭೀತಿ ಕಾಣಿಸಿಕೊಂಡಿತು. ಸರೋಜಿನಿ ನಾಯ್ಡು ಅವರಿಗೆ ಪಕ್ಷದ ಏಕತೆಯನ್ನು ಕಾಪಾಡುವುದು ಪರಮ ಲಕ್ಷ್ಯವಾಗಿತ್ತು. ಅದಕ್ಕೆ ಪೂರಕವಾಗಿ ಸ್ತ್ರೀ ಸಹಜವಾದ ತಮ್ಮೆಲ್ಲಾ ನಯಗಾರಿಕೆಯನ್ನು ಬಳಸಿಕೊಳ್ಳ ತೊಡಗಿದರು. ಅಸಾಧಾರಣಾ ತಾಳ್ಮೆಯೊಂದಿಗೆ ಅವರು ಒಂದು ವರ್ಗದ ನಿಲುವನ್ನು ಇನ್ನೊಂದು ವರ್ಗಕ್ಕೆ ವಿವರಿಸಿ ಹೇಳಿ ಮನವರಿಕೆ ಮಾಡಿ ಕೊಡುವ ಪ್ರಯತ್ನಗಳನ್ನು ಕೈಗೊಂಡರು. ಆಗ ತಮಗೆ ಎದುರಾಗುತ್ತಿದ್ದ ಸಲಹೆ, ಸೂಚನೆ, ಅನುಮಾನ, ಶಂಕೆ, ಪ್ರಶ್ನೆ, ಉತ್ತರ, ಸಂದೇಶ, ಸೂತ್ರಗಳನ್ನು ಒಂದು ಕಡೆಯಿಂದ

ಇನ್ನೊಂದು ಕಡೆಗೂ ಆ ಕಡೆಯಿಂದ ಈ ಕಡೆಗೂ ಕಿಂಚಿತ್ತೂ ಬಳಲದೆ ವಿನಿಮಯ ಮಾಡುತ್ತಿದ್ದರು. ಸಮಯದ ಅರಿವೂ ಅವರಿಗೆ ಇರುತ್ತಿರಲಿಲ್ಲ. ವೈಯಕ್ತಿಕ ಕಷ್ಟ ನಷ್ಟಗಳನ್ನು ಅವರು ಲೆಕ್ಕಿಸುತ್ತಿರಲಿಲ್ಲ. ಲಾಲಾಜಿ ತಂಗಿದ್ದ ಫಿರ್‌ಗ್ರೋವ್‌ನಿಂದ ಮಾಳವೀಯಜಿಯವರು ಬಿಡಾರ ಹೂಡಿದ್ದ ಶಾಂತಿ ಕುಟೀರಕ್ಕೂ ಅಲ್ಲಿಂದ ಮೋತಿಲಾಲ್‌ಜಿ ಇಳಿದುಕೊಂಡಿದ್ದ ಹೋಟೆಲ್ ಸಿಸಿಲಿಗೂ ಅಡ್ಡಾಡುವುದೇ ಅವರ ಬಹುತೇಕ ಕೆಲಸವಾಗಿತ್ತು. ಆದರೇನೂ ಸರೋಜಿನಿ ನಾಯ್ಡು ಅವರ ಎಲ್ಲಾ ಆ ಪರಿಶ್ರಮಗಳು ವ್ಯರ್ಥವಾದವು. ಪಕ್ಷಕ್ಕೆ ತಟ್ಟಲಿದ್ದ ಅನಾಹುತ ನಿಲ್ಲಲಿಲ್ಲ. ಆದರೂ ಸ್ವರಾಜ್ ವಾದಿಗಳು ಒಂದು ದಿನದ ಮಟ್ಟಿಗೆ ಮಾತ್ರ ಬಹಿಷ್ಕಾರವನ್ನು ರದ್ದುಗೊಳಿಸಿ ವಿಧಾನಸಭೆಯಲ್ಲಿ ಪಾಲ್ಗೊಂಡರು. ಆ ಕಲಾಪ ಕರೆನ್ಸಿ ಮಸೂದೆಗೆ ಸಂಬಂಧಪಟ್ಟಿದ್ದಾಗಿತ್ತು. ತನಗೆ ಬಹುಮತವಿಲ್ಲದಿದ್ದರಿಂದ ಮಸೂದೆ ಅಂಗೀಕೃತವಾಗುವ ಸಾಧ್ಯತೆ ಇಲ್ಲವೆಂದು ಮನಗಂಡ ಸರ್ಕಾರ ಆ ಶಾಸನವನ್ನು ಹೊಸ ವಿಧಾನಸಭೆಯ ಮೊದಲ ಅಧಿವೇಶನಕ್ಕೆ ಮುಂದೂಡಿತು. ಆ ದಿನದ ನಂತರ ಪಕ್ಷದ ಕಾರ್ಯಕಾರಿಣಿ ಅಧಿವೇಶನದ ಉಳಿದ ದಿನಗಳ ಕಲಾಪವನ್ನು ಬಹಿಷ್ಕರಿಸಲು ನಿರ್ಧರಿಸಿತು. ಅದು ಲಾಲಾಜಿಯವರಿಗೆ ಹಿಡಿಸಲಿಲ್ಲ. 24ರಂದು ಪಕ್ಷದ ಪ್ರಮುಖ ಸಭೆಯೊಂದು ಸಮಾವೇಶಿತವಾಗಿತ್ತು. ರಾತೋರಾತ್ರಿ ಸರೋಜಿನಿ ನಾಯ್ಡು ಮತ್ತು ಎ. ರಂಗಸ್ವಾಮಿ ಅಯ್ಯಂಗಾರ್ ಅವರು ಲಾಲಾಜಿಯವರಿಗೆ ಸಂದೇಶವೊಂದನ್ನು ಕೊಟ್ಟು ಸಭೆಯಲ್ಲಿ ಪಾಲ್ಗೊಳ್ಳುವಂತೆ ಮೋತಿಲಾಲ್‌ಜಿ ಕೋರಿದ್ದಾರೆಂದು ತಿಳಿಸಿದರು. ಸಭೆಗೆ ಮೊದಲು ಹೋಟೆಲ್ ಸಿಸಿಲ್‌ನ ತಮ್ಮ ಕೊಠಡಿಯಲ್ಲಿ ಭೇಟಿ ಮಾಡಲು ಸಹ ಮೋತಿಲಾಲ್‌ಜಿ ಬಯಸಿದ್ದಾರೆಂದು ಸಹ ಆ ಸಂದೇಶದಲ್ಲಿ ತಿಳಿಸಲಾಗಿತ್ತು. ಸಂಧಾನಕ್ಕೆ ಕಾಲಾತೀತವಾಗಿದೆ ಎಂದು ಭಾವಿಸಿಕೊಂಡು ಲಾಲಾಜಿಯವರು ಪಂಡಿತ್‌ಜಿ ಅವರನ್ನು ಸಭೆಗೆ ಮೊದಲು ಭೇಟಿ ಮಾಡಲಿಲ್ಲ. ಆದರೆ ವಿಶೇಷ ಸಂದೇಶಕ್ಕೆ ಓಗೊಟ್ಟು ಆ ಮಹತ್ವದ ಸಭೆಯಲ್ಲಿ ಅವರು ಪಾಲ್ಗೊಂಡರು. ಸಭೆಯಲ್ಲಿ ಸ್ವರಾಜ್ ಪಕ್ಷದ ತಮ್ಮ ಸ್ಥಾನಕ್ಕೆ ಲಾಲಾಜಿ ಸಲ್ಲಿಸಿದ್ದ ರಾಜೀನಾಮೆ ಪತ್ರವನ್ನು ಓದಲಾಯಿತು. ಬೆರಳಚ್ಚು ಮಾಡಿದ್ದ ಆ ಪತ್ರ ಸುದೀರ್ಘ ಒಕ್ಕಣೆ ಹೊಂದಿತ್ತು.

ಸರೋಜಿನಿ ನಾಯ್ಡು ಅವರು ತಮ್ಮ ಪ್ರಯತ್ನವನ್ನು ಕೈಬಿಡಲಿಲ್ಲ. ಭಿನ್ನಮತಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹಾಗೂ ರಾಜೀನಾಮೆ ಪತ್ರವನ್ನು ಹಿಂದಕ್ಕೆ ಪಡೆಯುವ ನಿಟ್ಟಿನಲ್ಲಿ ತೀವ್ರ ಪ್ರಯತ್ನ ನಡೆಸಿದರು. ಅವರ ಯತ್ನಗಳಿಗೆ ಫಲ ಸಿಗಲಿಲ್ಲ. 3-4 ದಿನಗಳ ನಂತರ ಲಾಲಾಜಿಯವರ ರಾಜೀನಾಮೆ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ಆ ವರ್ಷ ರಾಜಕೀಯ ರಾಜಕೀಯ ಬೆಳವಣಿಗಳಲ್ಲಿ ಪ್ರಮುಖ ಘಟ್ಟವಾಗಿ ಈ ಪ್ರಕರಣ ವ್ಯಾಪಕ ಪ್ರಚಾರ ಕಂಡಿತು. ಬಹುಶಃ ಅದುವರೆಗಿನ ಅನೇಕ ವರ್ಷಗಳಲ್ಲಿ ಅಷ್ಟೊಂದು ಗಮನ ಸೆಳೆದ ಬೆಳವಣಿಗೆ ಇನ್ನೊಂದಿರಲಿಲ್ಲವೇನೋ ಅನ್ನಿಸಿತು. ರಾಜೀನಾಮೆ ಪತ್ರದ ಮೊದಲ ಪ್ಯಾರ ಸುದೀರ್ಘವಾಗಿದ್ದು ಪ್ರಮುಖ ಅಂಶಗಳೆಲ್ಲಾ ಅದರಲ್ಲೇ ಅಡಕವಾದಂತಿತ್ತು. ಸ್ವರಾಜ್ ವಾದಿಗಳು ವಿಧಾನಸಭೆಯಲ್ಲಿ ಕೈಗೊಳ್ಳುತ್ತಿದ್ದ ಸಭಾತ್ಯಾಗ ಮತ್ತು ಬಹಿಷ್ಕಾರಗಳ ಟೀಕೆ ಪ್ರಮುಖವಾಗಿತ್ತು. ಮಾರ್ಚ್ ತಿಂಗಳಲ್ಲಿ ನಡೆದ ಎಐಸಿಸಿ ಅಧಿವೇಶನದ ನಿರ್ಣಯವು ತಮಗೆ ವೈಯಕ್ತಿಕವಾಗಿ ವಿಪಂಚನೆ ಉಂಟು ಮಾಡಿತೆಂದು ಲಾಲಾಜಿ ದೂರಿದರು.

"ಕಾನ್ಪುರದಲ್ಲಿ ನಾನು, ಮುಂಗಡ ಪತ್ರಕ್ಕೆ ಸಂಬಂಧಪಟ್ಟ ಚರ್ಚೆಯ ವಿಷಯದಲ್ಲಿ ನನ್ನ ಬೆಂಬಲಕ್ಕೆ ಪೂರಕವಾಗುವಂತೆ ತಿದ್ದುಪಡಿಯೊಂದನ್ನು ಮಂಡಿಸಿದ್ದೆ. ಅದನ್ನು ಅಧಿವೇಶನವು ಕೈಗೊಳ್ಳುವ ನಿರ್ಣಯಕ್ಕೆ ಅಳವಡಿಸಬೇಕೆಂದು ಒತ್ತಾಯಿಸಿದ್ದೆ. ಪಕ್ಷವು ಒಪ್ಪಿಕೊಂಡಿತ್ತು. ಆ ಬಗ್ಗೆ ಸಾಕಷ್ಟು ಚರ್ಚೆಯೂ ಆಗಿತ್ತು. ಆದರೆ ಎರಡು ತಿಂಗಳ ನಂತರ ಕಾನ್ಪುರದಲ್ಲಿ ಅಂಗೀಕೃತವಾದ ತಿದ್ದುಪಡಿಯನ್ನು ಕಡೆಗಣಿಸಲಾಯಿತು. ಅದೂ ಕಾಂಗ್ರೆಸ್ಸಿಗಿಂತಲೂ ಕಡಿಮೆ ಅಧಿಕಾರದ ಪಕ್ಷ ಎಸಗಿದ ಕೃತ್ಯ. ನಾನು ಆ ಬದಲಾವಣೆಯ ವಿರುದ್ಧ ಮತ ಚಲಾಯಿಸಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ನಿರ್ಣಯವನ್ನು ಮಾರ್ಪಡಿಸಿದ್ದರ ಬಗ್ಗೆ ಅದರ ನಿಂಧುತ್ವವನ್ನು ಪ್ರಶ್ನಿಸಿದೆ. ನನ್ನ ಆಕ್ಷೇಪಕ್ಕೆ ಬೆಲೆ ಸಿಗಲಿಲ್ಲ. ಶಿಸ್ತು ನೀತಿಯ ಹಿತಾಸಕ್ತಿಯನ್ನು ಮುಂದು ಮಾಡಿಕೊಂಡು ನಾನು ಸಭಾತ್ಯಾಗ ಮಾಡಿದೆ. ನನ್ನ ನಿಲುವನ್ನು ಬೆಂಬಲಿಸಿದ ಇತರರು ನನ್ನೊಂದಿಗೆ ಹೊರ ನಡೆದರು."

ಲಾಲಾಜಿಯವರು ಎಐಸಿಸಿ ಅಧಿವೇಶನದಲ್ಲಿ ಅಂಗೀಕೃತವಾದ ನಿರ್ಣಯವನ್ನು ವಿಕೃತಗೊಳಿಸಿದ ಪ್ರಕರಣವನ್ನೇ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಳ್ಳಲಿಲ್ಲ. ಅದನ್ನು ಅವರು ಕಟ್ಟ ಕಡೆಯದಾಗಿ ಬಳಸಿದರು.

"ನಿಧಾನವಾಗಿಯೂ, ಹಂತ ಹಂತವಾಗಿಯೂ ಸ್ವರಾಜ್ ಪಕ್ಷದ ಬಗ್ಗೆ ಅನೇಕ ಹಿಂದೂಗಳಲ್ಲಿ ಉಂಟಾಗ ತೊಡಗಿದ್ದ ಭಾವನೆಗಳನ್ನು ನಾನು ಅರ್ಥ ಮಾಡಿಕೊಳ್ಳತೊಡಗಿದೆ. ಪಕ್ಷದ ಈಗಿನ ಸ್ವರೂಪ ಮತ್ತು ನಡವಳಿಕೆಗಳು ಹಿಂದೂಗಳ ಹಿತಕ್ಕೆ ಹಾನಿಕಾರವಾಗಿವೆ ಎಂಬ ಅಂಶ ನನಗೆ ಕಂಡು ಬಂದಿತು. ಆದರೆ ಪಕ್ಷದ ನೀತಿ ನಡವಳಿಕೆಗಳು ಮುಸ್ಲಿಂ ಸಮುದಾಯದ ವಿಷಯದಲ್ಲಿ ಹಾಗಿಲ್ಲ... ಸರ್ಕಾರ ಮತ್ತು ಹಿಂದೂಗಳ ನಡುವಣದ ವಿಷಯದಲ್ಲಿ ಪಕ್ಷವು ನಡೆದುಕೊಳ್ಳುತ್ತಿರುವ ರೀತಿ ಇದಕ್ಕೆ ಉದಾಹರಣೆಯಾಗಿದೆ" ಎಂದು ಪತ್ರದಲ್ಲಿ ಲಾಲಾಜಿ ತಿಳಿಸಿದರು.

ವಿಧಾನಸಭೆಯ ಕಾರ್ಯ ಕಲಾಪ ಬಹಿಷ್ಕಾರ ಮತ್ತು ಸಭಾತ್ಯಾಗಗಳ ಕೃತ್ಯಗಳ ಮೂಲಕ ಜನ ಪ್ರತಿನಿಧಿಗಳು ಅದರಲ್ಲೂ ಹಿಂದೂಗಳ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದವರು ತಮ್ಮ ಕ್ಷೇತ್ರಗಳ ಸಾಮಾನ್ಯ ಸೇವೆಗಳನ್ನು ಸಹ ಉಪೇಕ್ಷಿಸುತ್ತಿದ್ದರು ಎಂಬುದನ್ನು ಪತ್ರದಲ್ಲಿ ಅವರು ಸಾದರಪಡಿಸಿದರು.

"ನಮ್ಮನ್ನು ವಿಧಾನಸಭೆಗೆ ಆರಿಸಿ ಕಳುಹಿಸಿದ ಹಿಂದೂ ಕ್ಷೇತ್ರಗಳ ಜನರಿಗೆ ಅವರ ಪ್ರತಿನಿಧಿಗಳಿಂದ ಸಂದಾಯವಾಗಬೇಕಾದ ಸೇವೆಯನ್ನು ತಪ್ಪುವಂತೆ ಮಾಡಲಾಗುತ್ತಿದೆ.. ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಇದೊಂದು ವಿಶ್ವಾಸಘಾತುಕ ನಡವಳಿಕೆ ಎಂದು ನಾನು ಭಾವಿಸಿದ್ದೇನೆ. ಅಂಥ ವಿಶ್ವಾಸಘಾತುಕತನಕ್ಕೆ ನಾನೆಂದೂ ಜೊತೆಗಾರನಾಗಲಾರೆ" ಎಂದೂ ಲಾಲಾಜಿ ಪತ್ರದಲ್ಲಿ ಸ್ಪಷ್ಟವಾಗಿ ವಿವರಿಸಿದರು.

ನಿರ್ಣಾಯಕ ಸಮಯದಲ್ಲಿ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಪಕ್ಷವು ಪರಾಕಾಷ್ಠೆಯ ಕ್ರಮಗಳನ್ನೇ ಅನುಸರಿಸಬೇಕೆಂದೇನೂ ಇಲ್ಲ. ಅಂಥ ಸಮಯಗಳಲ್ಲಿ ನೀತಿ ನಿರ್ಧಾರಗಳನ್ನು ಕೈಗೊಳ್ಳಬಲ್ಲ ಸಾರ್ವಜನಿಕ ವರ್ಗದಲ್ಲಿನ ಎಲ್ಲಾ ಪ್ರಗತಿಪರ

ಗಣ್ಯರು ಹಾಗೂ ಸಾರ್ವಜನಿಕ ಪ್ರಾತಿನಿಧ್ಯದ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂಬ ಸಲಹೆಯನ್ನು ಸಹ ಲಾಲಾಜಿ ಕಡೆಯದಾಗಿ ತಮ್ಮ ಪತ್ರದಲ್ಲಿ ನಮೂದಿಸಿದರು.

ಕೆಲವು ಪತ್ರಿಕೆಗಳು ಲಾಲಾಜಿ ಅವರ ಪತ್ರವನ್ನು ಸ್ವರಾಜ್ ಪಕ್ಷದ ಕಾರ್ಯಕ್ಷಮತೆ, ವಿಧಾನಗಳಿಗೆ ಹಿಡಿದ ಕನ್ನಡಿ ಎಂದು ಬರೆದವು. ನಿಜ. ಸ್ವರಾಜ್ ಪಕ್ಷದ ತಂತ್ರಗಾರಿಕೆಗಳು ಆ ಪತ್ರದಲ್ಲಿ ಸಾಕಷ್ಟು ಟೀಕೆಗೆ ಒಳಗಾಗಿದ್ದವು. ಪ್ರಕರಣ ವ್ಯಾಪಕ ಪ್ರಚಾರ ಪಡೆದುಕೊಂಡು ಅದರ ನಿಲುವಿನ ಬಗ್ಗೆ ಹೆಚ್ಚು ಸ್ವಾಗತ ದೊರೆಯಿತು. ಹಾಗೆಂದು ಲಾಲಾಜಿ ತಮ್ಮ ನಿಲುವಿಗೆ ಬೆಂಬಲವಾಗಿದ್ದ ಚರ್ಚೆಗಳಿಗೆ ಇನ್ನಷ್ಟು ಒತ್ತು ಕೊಡುವ ವಿಷಯದಲ್ಲಿ ಆಸಕ್ತಿ ವಹಿಸಲಿಲ್ಲ. ಅಂಥ ಚರ್ಚೆ ಸಭೆಗಳಿಂದ ಸಾಧ್ಯವಾದಷ್ಟು ದೂರ ಉಳಿಯಲು ಅವರು ಪ್ರಯತ್ನಿಸತೊಡಗಿದರು.

ಕೆಲವರಂತೂ ಲಾಲಾಜಿಯವರ ಪತ್ರವನ್ನು 'ದೋಷಾರೋಪ' ಪತ್ರವೆಂದೇ ಬಣ್ಣಿಸಿದರು. ಮೋತಿಲಾಲ್‌ಜಿ ಆ ಪತ್ರಕ್ಕೆ ಉತ್ತರವನ್ನು ಬರೆದರು. ಅದರಲ್ಲಿ ಸಭಾತ್ಯಾಗ ಮತ್ತು ಕಲಾಪ ಬಹಿಷ್ಕಾರಗಳನ್ನು ತಂತ್ರಗಳನ್ನು ಸಮರ್ಥಿಸುವ ಉತ್ತರ ಇರಲಿಲ್ಲ. ಲಾಲಾಜಿ ಅವರ ರಾಜೀನಾಮೆಗೆ ಅದೇ ಪ್ರಮುಖ ಸಂಗತಿಯಾಗಿತ್ತು. ಉತ್ತರದಲ್ಲಿ ಆ ಅಂಶಕ್ಕೆ ಹೆಚ್ಚು ಒತ್ತು ಕೊಡಬೇಕಾಗಿತ್ತು. ಆದರೆ ಮೋತಿಲಾಲ್‌ಜಿ ಅದನ್ನು ನಯವಾಗಿ ಮರೆ ಮಾಚಿದ್ದರು. ಬದಲಾಗಿ ಲಾಲಾಜಿಯವರ ವೈಯಕ್ತಿಕ ಧೋರಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದರು. ಸ್ವರಾಜ್ ಪಕ್ಷದ ಟಿಕೆಟ್ ಮೇಲೆ ಆಯ್ಕೆಯಾಗಿ ಬಂದವರಂತೆ ಲಾಲಾಜಿ ಮಾತನಾಡಿದ್ದಾರೆಂದೂ ಅವರು ಟೀಕಿಸಿದ್ದರು. ಕೇವಲ ಉತ್ತರವಷ್ಟೇ ಆದಾಗಿ ಕೆಲವು ಅಂಶಗಳನ್ನು ಮರೆ ಮಾಚುವುದು ಎದ್ದು ಕಾಣುತ್ತಿತ್ತು. ವಿಧಾನಸಭೆಯ ಅಧಿವೇಶನ ಒಂದೆರೆಡು ದಿನಗಳಲ್ಲಿ ಅಂತ್ಯಗೊಳ್ಳುವುದರಲ್ಲಿತ್ತು. ಇನ್ನೊಂದು ಮಹಾ ಚುನಾವಣೆಗೆ ಸಿದ್ಧತೆಗಳೆಲ್ಲವೂ ಆಗಿದ್ದವು. ಮೋತಿಲಾಲರು ಪ್ರಸ್ತಾಪ ಮಾಡಿದ ವಿಷಯಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ನಾವಿಗಾಗಲೇ ಓದಿದ್ದೇವೆ. ಅದನ್ನು ಇಲ್ಲಿ ಮತ್ತೆ ಪ್ರಸ್ತಾಪ ಮಾಡುವ ಅಗತ್ಯವಿಲ್ಲವೆನಿಸುತ್ತದೆ. ಓದುಗರು ತಮ್ಮ ಅಭಿಪ್ರಾಯಕ್ಕೆ ಬರಲಿ. ಮೋತಿಲಾಲರು ಎತ್ತಿದ ಪ್ರಶ್ನೆಗೆ ಅವರದೇ ಉತ್ತರವನ್ನು ಕಂಡು ಕೊಳ್ಳಲಿ.

ಪಂಡಿತ್ ಮೋತಿಲಾಲರ ಪತ್ರ ಸ್ವರಾಜ್ ಪಕ್ಷದ ತಂತ್ರಗಾರಿಕೆಯನ್ನು ಸಮರ್ಥಿಸಿಕೊಳ್ಳುವಂಥ ಅಂಶ ಮತ್ತು ಸತ್ವಗಳನ್ನು ಒಳಗೊಂಡಿರಲಿಲ್ಲ. ಪತ್ರದ ಆರಂಭದಲ್ಲೇ ಅವರು ಲಾಲಾಜಿ ಅವರನ್ನು ಅಭಿನಂದಿಸಿ ''ಪಯನೀರ್ ಅಂಥ ಭಾರತೀಯ ಹಕ್ಕುಗಳು ಮತ್ತು ಆಶೋತ್ತರಗಳ ಮಿತ್ರನಿಂದ ಯಥೋಚಿತ ಅಭಿನಂದನೆಗಳನ್ನು ಪಡೆದವರು ನೀವು'' ಎಂದಿದ್ದಾರೆ. ಸಭಾತ್ಯಾಗ ತಂತ್ರಗಳಿಗೆ ಸಂಬಂಧಪಟ್ಟಂತೆ ಲಾಲಾಜಿ ಪ್ರಸ್ತಾಪಿಸಿದ್ದ ಆಕ್ಷೇಪಗಳ ವಿಷಯದಲ್ಲಿ ಮೋತಿಲಾಲ್‌ಜಿಯವರು ಪದೇ ಪದೇ ಲಾಲಾಜಿಯವರನ್ನೇ ತಪ್ಪಿತಸ್ಥರನ್ನಾಗಿ ಮಾಡುವ ಪ್ರಯತ್ನ ನಡೆಸಿದ್ದರು. ಆ ಸಂಬಂಧದಲ್ಲಿ ಕೈಗೊಳ್ಳಲಾದ ನಿರ್ಧಾರಗಳಿಗೆ ಲಾಲಾಜಿ ಒಪ್ಪಿದ್ದರು (ಕಾನ್ಪುರದಲ್ಲಿ), ಇಲ್ಲವೇ ಅವರ ಸಮ್ಮುಖದಲ್ಲೇ ಚರ್ಚೆಗಳು ನಡೆದಿದ್ದವು (ದೆಹಲಿ ಎಐಸಿಸಿ ಅಧಿವೇಶನದಂತೆ) ಎಂಬ ಹಾರಿಕೆಯ

ಪ್ರಸ್ತಾವಗಳನ್ನು ಮಾಡಿದ್ದರು. 'ನಿಧಾನವಾಗಿ, ಹಂತ ಹಂತವಾಗಿ' ಎಂದು ಲಾಲಾಜಿ ಬಳಸಿದ್ದ ಪದ ಪುಂಜವನ್ನು ಮೋತಿಲಾಲ್‌ಜಿ ತಮ್ಮ ಉತ್ತರದಲ್ಲಿ ಸಾಕಷ್ಟು ಅಣಕದ ರೂಪದಲ್ಲಿ ಬಳಸಿಕೊಂಡರು. ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಅವರು ಅದನ್ನು ಮುಖ್ಯ ಅಸ್ತ್ರವನ್ನಾಗಿ ಮಾಡಿಕೊಂಡಂತೆಯೂ ಕಂಡು ಬಂದಿತು. ಲಾಲಾಜಿಯವರು ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿದ್ದ 'ವಿಶ್ವಾಸಘಾತುಕತನ' ಪದ ಪುಂಜವನ್ನು ಸಹ ಮೋತಿಲಾಲ್‌ಜಿ ತಮ್ಮ ಉತ್ತರದಲ್ಲಿ ವ್ಯಂಗ್ಯಕ್ಕೆ ಬಳಸಿಕೊಂಡರು. ಅವರು ಸ್ವರಾಜ್ ಪಕ್ಷದ ಟಿಕೆಟ್ ಮೇಲೆ ಆಯ್ಕೆಯಾದವರಲ್ಲ ಎಂದು ಹೇಳುವ ಮೂಲಕ ಪಕ್ಷದ ಅಂಥ ನಿರ್ಣಯಗಳಿಗೆ ಅವರೆಂದೂ 'ಹೊಣೆಗಾರರಲ್ಲ' ಎಂದು ಬರೆದರು.

ಸಬರಮತಿ ಒಡಂಬಡಿಕೆಯನ್ನು ಊರ್ಜಿತಗೊಳಿಸದ ಬಗ್ಗೆ ಜವಾಬ್ದಾರಿಯನ್ನು ಮೋತಿಲಾಲರು ಒಪ್ಪಿಕೊಳ್ಳಲಿಲ್ಲ. ''ನಾನಂದು ಕೊಂಡಿದ್ದಂತೆ ಒಡಂಬಡಿಕೆಯನ್ನು ಕೈಗೊಂಡಿದ್ದರೂ ಅದಕ್ಕೆ ಖಾತ್ರಿ ಸಿಗುತ್ತಿರಲಿಲ್ಲ'' ಎಂಬರ್ಥದಲ್ಲಿ ಅವರು ಉತ್ತರ ಕೊಟ್ಟರು. ಆ ಉತ್ತರದಲ್ಲಿ ಅಣಕವೂ ಇಲ್ಲದಿರಲಿಲ್ಲ. ''ಅಧಿಕಾರದ ಸ್ಥಾನಗಳನ್ನು ಒಪ್ಪಿಕೊಳ್ಳುವ ವಿಷಯದಲ್ಲಿ ನಿಮ್ಮ ಧೋರಣೆ ಬದಲಾಗದಿರುವುದು ನನಗೆ ಸಂತೋಷ ಉಂಟು ಮಾಡಿದೆ. ಕನಿಷ್ಠ ಕೆಲವು ಕಾಲದ ಮಟ್ಟಿಗಾದರೂ ನೀವು ಅಂಥ ಸ್ಥಾನಗಳಿಗೆ ಮಾನ್ಯತೆ ನೀಡುತ್ತೀರೆಂದು ನಾನಂದು ಕೊಂಡಿರುವೆ'' ಎಂದು ಮೋತಿಲಾಲ್‌ಜಿ ತಿಳಿಸಿದರು. ಆದರೆ ಲಾಲಾಜಿಯವರ ಅಣಕಪೂರ್ಣವಾದ ಆ ಆಶಯ ಈಡೇರಲಿಲ್ಲ.

ಕಾಂಗ್ರೆಸ್ ಕಾರ್ಯಕಾರಿಣಿ ಕೈಗೊಂಡ ನಿರ್ಣಯ ಕೇವಲ ಒಂದು ಸಮುದಾಯ ಮಾತ್ರ ಶಾಸನಕ್ಕೆ ತಡೆ ಒಡ್ಡಬೇಕೆಂದು ಹೇಳುತ್ತಿತ್ತು. ಏಕಮುಖವಾದ ಆ ನಿರ್ಣಯವನ್ನು ಮೋತಿಲಾಲ್‌ಜಿ ಸಹ ಮಾನ್ಯ ಮಾಡಲಿಲ್ಲ. ''ನನ್ನ ಗೈರು ಹಾಜರಿಯಲ್ಲಿ ಅಪಾರ್ಥದೊಂದಿಗೆ ನಿರ್ಣಯವನ್ನು ಅಂಗೀಕರಿಸಲಾಗಿದೆ. ಈಗ ಅದನ್ನು ಪುನರ್ ಪರಿಶೀಲನೆಗೆ ಒಳಪಡಿಸಲಾಗಿದೆ'' ಎಂದು ಅವರು ಹೇಳಿದರು. ಸ್ವರಾಜ್ ಪಕ್ಷವು ಚುನಾವಣಾ ಹೋರಾಟ ನಡೆಸಬೇಕೆಂದು ಮೋತಿಲಾಲ್‌ಜಿ ಅವರ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ನಿರ್ಣಯದ ಮೂಲಕ ಶಿಫಾರಸು ಮಾಡಿತ್ತು. ಅದೇ ರೀತಿಯ ನಿರ್ಣಯ ಆ ಹಿಂದೆ ಕಾನ್ಪುರದಲ್ಲಿಯೂ ಅಂಗೀಕೃತವಾಗಿತ್ತು. ನೇರವಾಗಿ ಕಾಂಗ್ರೆಸ್ ಕಣಕ್ಕೆ ಇಳಿಯುವುದಕ್ಕೆ ಬದಲಾಗಿ ಸ್ವರಾಜ್ ಪಕ್ಷವೇ ಚುನಾವಣಾ ಹೋರಾಟ ನಡೆಸಬೇಕೆಂಬುದು ನಿರ್ಣಯದ ಆಶಯವಾಗಿತ್ತು. ಆದರೆ ಮೋತಿಲಾಲ್‌ಜಿ ತಮ್ಮದೇ ಪ್ರಾಂತೀಯ ಸಮಿತಿಯ ಆ ಶಿಫಾರಸನ್ನು ಮಾನ್ಯ ಮಾಡಲಿಲ್ಲ. ತಾಂತ್ರಿಕ ಕಾರಣವೊಂದನ್ನು ಮುಂದಿಟ್ಟುಕೊಂಡು ಅದನ್ನು ವಜಾ ಮಾಡಿದರು. ಕಾರ್ಯಕಾರಿಣಿಯ ಅಧ್ಯಕ್ಷರು ಹಾಗೂ ಇತರ ಕೆಲವರು ನಿರ್ಣಯಕ್ಕೆ ಬೆಂಬಲ ಕೊಟ್ಟಿಲ್ಲವೆಂಬ ಕಾರಣವನ್ನು ಅವರು ಮುಂದೆ ಮಾಡಿಕೊಂಡರು. ''ಕಾರ್ಯಕಾರಿಣಿಯ ಸಭೆಯಲ್ಲಿ ಪಾಲ್ಗೊಂಡ ಅನೇಕ ಸದಸ್ಯರು ನಿರ್ಣಯದ ಬಗ್ಗೆ ಅವಲೋಕಿಸಲು ನಿರಾಕರಿಸಿದರು'' ಎಂದು ಅವರು ಹೇಳಿದರು. ಚುನಾವಣೆಯ ಹೋರಾಟಗಳಲ್ಲಿ ಕಾಂಗ್ರೆಸ್ ಪಕ್ಷದ ಮುದ್ರೆಯನ್ನು ಒತ್ತಬಾರದೆಂದು ಅನೇಕ ಕಾಂಗ್ರೆಸ್ಸಿಗರಲ್ಲಿ ಬೆಳೆಯತೊಡಗಿದ್ದ ಭಾವನೆಗಳನ್ನು ತಾವು ಗಮನಿಸಿಲ್ಲವೇನೋ ಎನ್ನುವ ರೀತಿಯಲ್ಲಿ ಮೋತಿಲಾಲ್‌ಜಿ ನಡೆದುಕೊಳ್ಳ ತೊಡಗಿದರು. ಲಾಲಾಜಿಯವರ ರಾಜೀನಾಮೆ

ಪತ್ರದಲ್ಲಿಯೂ ಆ ಬಗ್ಗೆ ಪ್ರಸ್ತಾಪವಾಗಿತ್ತು. ಕಾಂಗ್ರೆಸ್ ಪಕ್ಷಕ್ಕೆ ಬದಲಾಗಿ ಸಂಯುಕ್ತ ರಂಗವೊಂದು ಚುನಾವಣಾ ಕಾರ್ಯಗಳನ್ನು ನೋಡಿಕೊಳ್ಳಬೇಕೆಂದು ಅದರಲ್ಲಿ ಸಲಹೆ ಮಾಡಲಾಗಿತ್ತು.

ಲಾಲಾಜಿಯವರ ರಾಜೀನಾಮೆ ಪತ್ರದ ಮೇಲೆ ಇತರ ಕೆಲವು ಭಗೆಯ ಟೀಕೆಗಳು ಹುಟ್ಟಿಕೊಂಡವು. ಸೌಮ್ಯವಾದಿಗಳಿಗೆ ಲಾಲಾಜಿಯವರು ಕುಮ್ಮಕ್ಕು ಕೊಟ್ಟಿದ್ದಾರೆ ಎನ್ನುವ ಅರ್ಥವೂ ಬರುವಂತೆ ನೋಡಿಕೊಳ್ಳಲಾಯಿತು. ಅಂತಿಮವಾಗಿ ಮೋತಿಲಾಲ್‌ಜಿ ಅವರ ಪತ್ರವು ಲಾಲಾಜಿಯವರ ಪತ್ರದ ರೀತಿಯಲ್ಲೇ ಸೌಹಾರ್ದಯುತ ಟಿಪ್ಪಣಿಯೊಂದಿಗೆ ಮುಕ್ತಾಯಗೊಂಡಿತು. ಆದರೂ ಆ ಹಂತದಲ್ಲೂ ಸಹ ಮೋತಿಲಾಲ್‌ಜಿ 'ನಿಧಾನವಾಗಿಯೂ, ಹಂತ ಹಂತವಾಗಿಯೂ' ಪದ ಪುಂಜವನ್ನು ಬಳಸದಿರಲಿಲ್ಲ. ಆ ಪದ ಪುಂಜವನ್ನು ಅವರು ಲಾಲಾಜಿಯವರ ಪತ್ರದಿಂದಲೇ ಎತ್ತಿಕೊಂಡಿದ್ದರು. ''ನಿಮ್ಮ ನಿರ್ಧಾರವನ್ನು ನೀವು ತರಾತುರಿಯಲ್ಲಿ ಬದಲಾಯಿಸಿಕೊಳ್ಳುವುದಿಲ್ಲವೆಂದು ನಾನು ಭಾವಿಸಿದ್ದೇನೆ. ನೀವು 'ನಿಧಾನವಾಗಿಯೂ, ಹಂತ ಹಂತವಾಗಿಯೂ' ನಿಮ್ಮಲ್ಲಿರುವ ವಿಶ್ವಾಸವನ್ನು ದೃಢೀಕರಿಸಿಕೊಳ್ಳುತ್ತಿರೆಂಬ ಆಶಯ ನನ್ನಲ್ಲಿದೆ. ಅತಿ ಶೀಘ್ರದಲ್ಲೇ ನಿಮ್ಮ ಆ ವಿಶ್ವಾಸವನ್ನು ಜಗತ್ತಿಗೆ ಪ್ರಕಟಗೊಳಿಸುತ್ತೀರೆಂದು ನಾನು ಭಾವಿಸಿದ್ದೇನೆ'' ಎಂದು ಮೋತಿಲಾಲ್‌ಜಿ ತಮ್ಮ ಉತ್ತರವನ್ನು ಮುಕ್ತಾಯಗೊಳಿಸಿದ್ದರು. ಲಾಲಾಜಿಯವರ ರಾಜೀನಾಮೆ ಪತ್ರ ಮತ್ತು ಅದಕ್ಕೆ ಮೋತಿಲಾಲ್‌ಜಿ ಕೊಟ್ಟ ಉತ್ತರದ ಪತ್ರಗಳ ಮೇಲೆ ನಿರಂತರವಾಗಿ ಕ್ರಿಯೆ, ಪ್ರತಿಕ್ರಿಯೆಗಳ ಮಹಾಪೂರವೇ ಹರಿಯತೊಡಗಿತು. ಲಾಲಾಜಿ ಅವರ ಪತ್ರ ಪ್ರಕಟಗೊಂಡ ದಿನವೇ ಮೋತಿಲಾಲ್‌ಜಿ ತಮ್ಮ ಪತ್ರವನ್ನು ಬರೆದು ಪತ್ರಿಕಾಲಯಗಳಿಗೆ ಕಳುಹಿಸಿಕೊಟ್ಟರು. ಅತ್ತ ಸರೋಜಿನಿ ನಾಯ್ಡು ಭರವಸೆ ಇಲ್ಲದ ಭರವಸೆಯಲ್ಲೂ ಹೊಂದಾಣಿಕೆಯ ತಮ್ಮ ಪ್ರಯತ್ನವನ್ನು ಮುಂದುವರೆಸುತ್ತಲೇ ಇದ್ದರು. ಆ ಮಧ್ಯೆ ಮೋತಿಲಾಲ್‌ಜಿ ಇದ್ದಕ್ಕಿದ್ದಂತೆ ತಮ್ಮ ಸಂದೇಶಕಾರರನ್ನು ಬದಲಾಯಿಸಿಕೊಂಡರು. ಅವರು ತಮ್ಮ ಪ್ರತ್ಯುತ್ತರವನ್ನು ಲಾಲಾಜಿಯವರಿಗೆ ಅಮೃತಸರದ ಗಿರಿಧರ್ ಲಾಲ್ ಅವರ ಮುಖಾಂತರ ಕಳುಹಿಸಿ ಕೊಟ್ಟರು. ಮೋತಿಲಾಲ್‌ಜಿ ಅವರ ಪತ್ರ ಲಾಲಾಜಿಯವರಿಗೆ ಆಗಸ್ಟ್ 30ರ ರಾತ್ರಿ ತಲುಪಿಸಲಾಯಿತು. ಸೆಪ್ಟೆಂಬರ್ 2ರಂದು ಲಾಲಾಜಿ ತಮ್ಮ ಎರಡನೇ ಪತ್ರವನ್ನು ಕಳುಹಿಸಿಕೊಟ್ಟರು. ಮೋತಿಲಾಲ್‌ಜಿ ಅವರ ಉತ್ತರದಲ್ಲಿ ''ಅರೆಬರೆ ಸತ್ಯಾಂಶ, ಅಪಾರ್ಥದ ಹೇಳಿಕೆ, ಕುಹಕ ಮತ್ತು ಕೀಟಲೆಗಳು ಇದ್ದುದ್ದನ್ನು ಲಾಲಾಜಿ ಗುರುತಿಸಿದ್ದರು. ಅವುಗಳನ್ನು ಗಮನಿಸಿ ಉತ್ತರ ಕೊಡದಿರಲು ಸಾಧ್ಯವಿಲ್ಲ'' ಎಂದು ಲಾಲಾಜಿ ತಮ್ಮ ಎರಡನೇ ಪತ್ರದಲ್ಲಿ ತಿಳಿಸಿದರು.

ದಂಡ ಸಂಹಿತೆ ಕಾಯ್ದೆಗೆ ಉದ್ದೇಶಿಸಿದ್ದ ತಿದ್ದುಪಡಿ ವಿಷಯದಲ್ಲಿ ಮೋತಿಲಾಲ್‌ಜಿ ತಮ್ಮ ನಿಲುವನ್ನು ಪ್ರಕಟಗೊಳಿಸಲಿಲ್ಲ. ಆ ತಿದ್ದುಪಡಿ ತರುವುದರಿಂದ ನಾಗರಿಕ ಸ್ವಾತಂತ್ರ್ಯದ ಮೇಲೆ ಗಂಭೀರ ಪರಿಣಾಮಗಳಾಗುತ್ತವೆ ಎಂದು ಲಾಲಾಜಿ ತಿಳಿಸಿದ್ದರು. ಸ್ವರಾಜ್ ವಾದಿಗಳು ವಿಧಾನಸಭೆಯಲ್ಲಿ ಅಂಥ ಅಪಾಯಕಾರಿ ತಿದ್ದುಪಡಿ ವಿಷಯದಲ್ಲಿ ತಳೆಯಬೇಕಾಗಿದ್ದ ನಿರ್ಧಾರದ ಬಗ್ಗೆ ಮೋತಿಲಾಲ್‌ಜಿ ಸ್ಪಷ್ಟ ನಿರ್ದೇಶನ ಕೊಡಲಿಲ್ಲ. ಬದಲಾಗಿ ಅವರು ಮಾಳವೀಯಾಜಿ ತಳೆದ ನಿಲುವನ್ನು ಬೆಂಬಲಿಸಿದರು. ತಿದ್ದುಪಡಿಗೆ

ಸಂಬಂಧಪಟ್ಟಂತೆ ಮಾಳವೀಯಾಜಿ ತಳೆದಿದ್ದ ನಿಲುವನ್ನು ಲಾಲಾಜಿ ವಿರೋಧಿಸಿದ್ದರು. ಮೋತಿಲಾಲ್‌ಜಿ ಮಾಳವೀಯಾಜಿ ಅವರ ನಿಲುವಿಗೆ ಬೆಂಬಲ ವ್ಯಕ್ತಪಡಿಸುತ್ತಾ, ''ಇಂಥ ಪ್ರಸಂಗದಲ್ಲಿ ಸ್ವರಾಜ್ ವಾದಿಗಳ ಪಾತ್ರ ಹೇಗಿರಬೇಕೆಂಬುದನ್ನು ನೀವೇ ತಿಳಿಸಬೇಕು'' ಎಂದು ಕೇಳಿದರು. ಸಭಾತ್ಯಾಗಗಳಂತಹ ಗಂಭೀರ ಪ್ರತಿಭಟನಾ ಪ್ರದರ್ಶನಗಳು ಸಾಕಷ್ಟು ಟೀಕೆಗೆ ಒಳಗಾಗ ತೊಡಗಿದವು. ಅವು ಮೌಲ್ಯವನ್ನು ಕಳೆದುಕೊಳ್ಳತೊಡಗಿದವು. ಸಭಾತ್ಯಾಗ ಮಾಡುವುದು ಮತ್ತು ಸಭಾ ಪ್ರವೇಶ ಮಾಡುವುದು ಒಂದು ರೀತಿಯಲ್ಲಿ ಲೇವಡಿಯಾಗತೊಡಗಿತು. ಆ ಪ್ರತಿಭಟನೆಯ ಫಲವು ಸಹ ವಿಫಲವೆನಿಸತೊಡಗಿತು. ಸ್ವರಾಜ್ ವಾದಿಗಳು ಸಂಸದೀಯ ಕಲಾಪದ ದಿನಗಳಲ್ಲಿ ಚರಕ ಕಾರ್ಯಕ್ರಮದಲ್ಲಿ ತೊಡಗಬೇಕು, ಖಾದಿ ಪ್ರಚಾರ ಮಾಡಬೇಕು ಹಾಗೂ ಇತರ ಸೃಜನಾತ್ಮಕ ಕೆಲಸ ಕಾರ್ಯಗಳಲ್ಲಿ ತೊಡಗಬೇಕು ಎಂಬ ನಿರ್ದೇಶನವೂ ಸಹ ಜಾಳು ಜಾಳಾಗತೊಡಗಿತು. ಈ ವಿಷಯಕ್ಕೆ ಸಂಬಂಧಪಟ್ಟಂತೆಯೂ ಲಾಲಾಜಿ ಮಾಡಿದ್ದ ಆರೋಪವನ್ನು ಮೋತಿಲಾಲ್‌ಜಿ ನಿರಾಕರಿಸಲೂ ಇಲ್ಲ, ಒಪ್ಪಿಕೊಳ್ಳಲೂ ಇಲ್ಲ. ಬದಲಾಗಿ ಸಭಾಪ್ರವೇಶಗಳನ್ನು ಲಾಲಾಜಿ ಅವರ ಆಶಯಕ್ಕೆ ಅನುಕೂಲಕ್ಕಾಗಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಒಂದು ವೇಳೆ 'ಸೃಜನಾತ್ಮಕ ಕಾರ್ಯಗಳು' ಕೈಗೂಡದಿದ್ದರೆ ಪಕ್ಷದ ಸದಸ್ಯರಲ್ಲಿ ಓರ್ವರಾಗಿ ಲಾಲಾಜಿ ಅವರು ಸಹ ಅದಕ್ಕೆ ಕಾರಣರೆಂದು ಮೋತಿಲಾಲ್‌ಜಿ ದೂರಿದರು. ವಿಚಿತ್ರವೆಂದರೆ ಆ ಹಿಂದಿನ ದಿನಗಳಲ್ಲಿ ಲಾಲಾಜಿ ಹೆಚ್ಚಿನ ಭಾಗವನ್ನು ಯುರೋಪಿನಲ್ಲಿ ಕಳೆದಿದ್ದು ಗೊತ್ತಿತ್ತು.

ಲಾಲಾಜಿ ತಮ್ಮ ಎರಡನೇ ಪತ್ರದಲ್ಲಿ ವಿಧಾನಸಭೆಯನ್ನು ತಾವು ಪಕ್ಷೇತರ ಅಭ್ಯರ್ಥಿಯಾಗಿ ಪ್ರವೇಶಿಸಿದ್ದನ್ನು ಸ್ಪಷ್ಟವಾಗಿ ತಿಳಿಸಿದರು. ತಮ್ಮ ಮತದಾರರಿಗೆ ತಾವು ಯಾವುದೇ ಭರವಸೆಯನ್ನಾಗಲಿ, ಪ್ರಮಾಣವನ್ನಾಗಲಿ ಸ್ವರಾಜ್ ಪಕ್ಷದ ಪರವಾಗಿ ನೀಡಿಲ್ಲವೆಂದು ಅವರು ತಿಳಿಸಿದರು. ಸ್ವರಾಜ್ ಪಕ್ಷವನ್ನು ಸೇರುವ ಬಗ್ಗೆಯಾಗಲಿ, ಆ ಪಕ್ಷದಲ್ಲಿ ಉಳಿಯುವ ಬಗ್ಗೆಯಾಗಲಿ ಯಾವುದೇ ಪ್ರಮಾಣೀಕರಣ ಮಾಡಿಲ್ಲವೆಂದು ಲಾಲಾಜಿ ಬರೆದರು. ಸಭಾಪ್ರವೇಶದ ವಿಷಯದಲ್ಲೂ ಅವರು ಪ್ರಸ್ತಾಪ ಮಾಡದಿರಲಿಲ್ಲ. ''ಎಲ್ಲಾ ಸಭಾಪ್ರವೇಶಗಳು ನಾನು ಭಾರತದಿಂದ ಹೊರಗಡೆ ಇದ್ದ ಸಂದರ್ಭದಲ್ಲೇ ನಡೆದಿವೆ. ಅದಕ್ಕೆ ಸಂಬಂಧಪಟ್ಟ ಯಾವುದೇ ನಿರ್ಧಾರಕ್ಕೆ ನಾನು ಪಾತ್ರನಲ್ಲ'' ಎಂದು ತಿಳಿಸಿದರು.

ಸಭಾ ಪ್ರವೇಶಗಳಿಗೆ ಸಂಬಂಧಪಟ್ಟಂತೆ ವಿಶೇಷ ಸಮಿತಿಯಲ್ಲಿ ಅನೇಕ ಚರ್ಚೆಗಳಾಗಿ ಅನುಮತಿ ಪಡೆದುಕೊಳ್ಳಲಾಗಿತ್ತು. ಮತ್ತೆ ಕೆಲವು ಪ್ರಸಂಗಗಳಲ್ಲಿ ವಿಧ್ಯುಕ್ತವಾದ ಅನುಮತಿಯನ್ನು ಪಡೆದು ಕೊಂಡೂ ಇರಲಿಲ್ಲ. ಇನ್ನೂ ಕೆಲವು ಸಭಾಪ್ರವೇಶಗಳು ತಾವೇ ತಾವಾಗಿ ನಡೆದಿದ್ದವು. ಅವೆಲ್ಲವನ್ನು ಮಾನ್ಯ ಮಾಡಲಾಗಿತ್ತು.

ಅವರು ಮತ್ತೆ ಗೊಂದಲಕಾರಿಯಾದ ಸಾಬರಮತಿ ಒಡಂಬಡಿಕೆಯ ಬಗ್ಗೆ ಪ್ರಸ್ತಾಪ ಮಾಡಿದರು.

ಪಯನೀರ್ ಪತ್ರಿಕೆ ತಮ್ಮನ್ನು ಅಭಿನಂದಿಸಿದ ಬಗ್ಗೆ ಹಾಗೂ 'ಸೌಮ್ಯವಾದಿಗಳಿಗೆ ಕುಮ್ಮಕ್ಕು' ಕುರಿತಂತೆ ಲಾಲಾಜಿ ಸಮರ್ಥ ಪ್ರತ್ಯುತ್ತರ ನೀಡಿದರು:

''ಪಯನೀರ್ ಪತ್ರಿಕೆಯ ಅಭಿನಂದನೆಗೆ ಸಂಬಂಧಪಟ್ಟಂತೆ ನೀವು ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಕೇವಲ ಒಂದು ಚುನಾವಣಾ ತಂತ್ರವಲ್ಲದೇ ಬೇರೇನೂ ಅಲ್ಲ. ಓರ್ವ ಸಭ್ಯ ವ್ಯಕ್ತಿಯಿಂದ ಬರಬೇಕಾದ ಪ್ರತಿಕ್ರಿಯೆ ಅದಾಗಿಲ್ಲ. ಅದರಲ್ಲೂ ಆಂಗ್ಲೋ ಇಂಡಿಯನ್ ಪತ್ರಿಕೆಗಳಿಂದ ಅನೇಕ ಪ್ರಶಂಸೆಗಳನ್ನು ಗಳಿಸಿಕೊಂಡಿರುವವರು ಹಾಗೂ ವಿಧಾನಸಭೆಯಲ್ಲಿ ಸೌಮ್ಯವಾದಿ ರಾಜಕೀಯ ಪಕ್ಷದ ಮುಖಂಡರಾಗಿರುವವರು ವ್ಯಕ್ತ ಪಡಿಸುವ ಪ್ರತಿಕ್ರಿಯೆ ಅದಲ್ಲ. ನೀವು ಅತ್ತ ಸೌಮ್ಯವೂ ಅಲ್ಲದ ಅತ್ತ ಉಗ್ರವೂ ಅಲ್ಲದ ದಾರಿಯೊಂದನ್ನು ಕಂಡು ಹಿಡಿದಿದ್ದೀರಿ. ಲಂಡನ್‌ನ ಪ್ರೀವಿ ಕೌನ್ಸಿಲ್‌ನಲ್ಲಿ ಮಾತನಾಡಿದ ನಿಮ್ಮ ಧಾಟಿಗೂ ನ್ಯಾಯಾಲಯದ ನಿಂದನೆ ವಿಧೇಯಕದ ಬಗ್ಗೆ ಬೆಂಬಲ ಕೊಟ್ಟು ನೀವು ಮಾತನಾಡಿದಾಗಿನ ರೀತಿಗೂ, ಭಾರತದಲ್ಲಿ ಭಾರತೀಯ ಸುಪ್ರಿಂ ಕೋರ್ಟಿನಲ್ಲಿ ನೀವು ವಾದ ಮಂಡಿಸಿದ ರೀತಿಗೂ, ನಿಮ್ಮ ಪತ್ರದ ಒಕ್ಕಣಿಕೆಗೂ ಅಜಗಜಾಂತರ ವ್ಯತ್ಯಾಸವಿದೆ. ''ನಿಮ್ಮ ಈ ಕೆಲವು ನಡವಳಿಕೆಗೆ ಪಯನೀರ್ ಮತ್ತು ಸರ್ಕಾರದ ಆಶಯವಿತ್ತು ಎಂದೇ ನಾನು ಭಾವಿಸಿಕೊಂಡಿದ್ದೇನೆ'' ಎಂದು ಪತ್ರದಲ್ಲಿ ಮೂದಲಿಸಿದರು.

ಎಲ್ಲಕ್ಕಿಂತ ಹೆಚ್ಚಿನದಾಗಿ ಮಾಳವೀಯಾಜಿ ಅವರಿಗೆ ಸಂಬಂಧಪಟ್ಟಂತೆ ಮೋತಿಲಾಲ್‌ಜಿ ಮಾಡಿದ ಪ್ರಸ್ತಾಪವನ್ನು ಲಾಲಾಜಿ ಪರಿಗಣಿಸಿದರು.

ಉತ್ತರದ ಕೊನೆಯ ಪ್ಯಾರದಲ್ಲಿ ಅವರು ಮನವಿ ಪೂರ್ವಕ ಸದಾಶಯವೊಂದನ್ನು ವ್ಯಕ್ತಪಡಿಸಿ ಬಹಿರಂಗ ಟೀಕೆಗಳನ್ನು ಕೊನೆಗಾಣಿಸಲು ಸಲಹೆ ಮಾಡಿದರು. -''ಒಂದು ವೇಳೆ ಈ ಹೋರಾಟ ಮಾಡಲೇಬೇಕು ಎಂದೆನ್ನುವುದಾದರೆ ಉತ್ತಮ ರೀತಿಯ ಹೋರಾಟ ಕೈಗೊಳ್ಳೋಣ'' ಎಂದೂ ಸಲಹೆ ಮಾಡಿದರು.

ಮೋತಿಲಾಲ್‌ಜಿ ಅವರಿಂದ ಬಂದ ಇನ್ನೊಂದು ಉತ್ತರದೊಂದಿಗೆ ಪತ್ರ ಹೋರಾಟದ ಆ ಪ್ರಕರಣ ಮುಕ್ತಾಯವಾಯಿತು. ಅದರಲ್ಲಿ ''ಅನಗತ್ಯವಾಗಿದ್ದ ವಿವಾದಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ನಾನು ಪಾತ್ರಧಾರಿಯಾದೆ. ನಿಮ್ಮ ರಾಜೀನಾಮೆ ಪತ್ರ ಪ್ರಕಟಗೊಂಡಿದ್ದೇ ಅದಕ್ಕೆ ಕಾರಣ'' ಎಂದು ಮೋತಿಲಾಲ್‌ಜಿ ತಿಳಿಸಿದರು. ಆ ಪತ್ರದಲ್ಲಿ ಬೇರಾವುದೇ ಪ್ರಸ್ತಾಪವಿರಲಿಲ್ಲ. ಚರ್ಚಾಸ್ಪದವಾಗಿದ್ದ ಯಾವುದೇ ವಿಷಯಗಳ ಒಕ್ಕಣಿಕೆಯೂ ಇರಲಿಲ್ಲ. ವಿಧಾನಸಭೆಗೆ ಲಾಲಾಜಿ ಆಯ್ಕೆಯಾದ ಬಗ್ಗೆ ಪಂಡಿತ್‌ಜಿ ಪುನಃ ಪ್ರಸ್ತಾಪ ಮಾಡಿದರು. ಅದಕ್ಕೆ ಸಂಬಂಧಪಟ್ಟಂತೆ ತಾವು ಮಾಡಿದ ಆರೋಪಕ್ಕೆ ''ನಾಲ್ಕು ಪ್ರಮುಖ ಅಂಶಗಳನ್ನು'' ತಿಳಿಸಿದರು. ''ನೀವು ನಾಲ್ಕು ಅಂಶಗಳನ್ನು ಒಪ್ಪುವುದಿಲ್ಲವೆಂದು ನನಗೆ ಗೊತ್ತು... ಇದರೊಂದಿಗೆ ಪತ್ರ ವ್ಯವಹಾರ ಮುಗಿಸುವೆ. ನಿಮ್ಮ ವಿಶ್ವಾಸಿ.'' ಎಂದು ಬರೆದರು.

ಅದರೊಂದಿಗೆ ಪತ್ರಗಳ ಸಮರ ಮುಗಿಯಿತು. ಸೆಪ್ಟೆಂಬರ್ 5ರಂದು ಟ್ರಿಬ್ಯೂನ್ ಪತ್ರಿಕೆಯಲ್ಲಿ ಲಾಲಾಜಿ ಅವರ ಸಂದರ್ಶನವೊಂದು ಪ್ರಕಟಗೊಂಡಿತು. ವಿಧಾನಸಭೆಗೆ

ತಾವು ಹೋಗುವುದನ್ನು ಲಾಲಾಜಿ ಪುನರುಚ್ಚರಿಸಿದರು. ರಾಯ್ಜದ ಹನ್ಸ್‌ರಾಜ್ ಬೇಷರತ್ತಾಗಿ ತಮ್ಮ ಸ್ಥಾನವನ್ನು ತಮಗೆ ತೆರವು ಮಾಡಿಕೊಡಲು ಮುಂದಾಗಿದ್ದನ್ನು, ತಾವು ಅವನ್ನು ಒಪ್ಪಿಕೊಂಡಿದ್ದನ್ನು ಅದರಲ್ಲಿ ಪ್ರಕಟಿಸಿದರು. ಪಂಜಾಬಿನ ಇತರ ಕೆಲವು ಸದಸ್ಯರು ಸಹ ಲಾಲಾಜಿ ಅವರಿಗಾಗಿ ತಮ್ಮ ಸ್ಥಾನಗಳನ್ನು ತೆರವು ಮಾಡಲು ಮುಂದಾದರು. ಯಾರು ಯಾವುದೇ ಬಗೆಯ ಷರತ್ತುಗಳನ್ನು ಹಾಕಿರಲಿಲ್ಲ. ಲಾಲಾಜಿ ಅವರ ನಿಲುವು ಒಂದೇ ಆಗಿತ್ತು. ಸಭಾತ್ಯಾಗ ಮತ್ತು ಕಲಾಪ ಬಹಿಷ್ಕಾರದಿಂದ ದೇಶಕ್ಕೆ ಹಾನಿಯಾಗುತ್ತದೆ ಎಂಬುದು ಅದು. ಅದರಲ್ಲೂ ಹಿಂದೂಗಳಿಗೆ ಭರಿಸಲಾಗದಷ್ಟು ಅನಾಹುತವಾಗುತ್ತದೆ ಎಂಬುದನ್ನು ಅವರು ಮನಗಂಡಿದ್ದರು. ಅದೆಲ್ಲವನ್ನು ಆ ಸಂದರ್ಶನದಲ್ಲಿ ಹೇಳಿದ್ದರು. ಅಪರಾಧ ದಂಡ ಸಂಹಿತೆ ತಿದ್ದುಪಡಿ ವಿಧೇಯಕದ ಚರ್ಚೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದರೆ ತಾವು ಸ್ವರಾಜ್ ಪಕ್ಷಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಇರುತ್ತಿರಲಿಲ್ಲವೆಂದು ಸಹ ಲಾಲಾಜಿ ಸ್ಪಷ್ಟಪಡಿಸಿದರು. ಕೋಮು ನಿರ್ಣಯದ ವಿಷಯದಲ್ಲೂ ಸಹ ತಮ್ಮ ನಿಲುವು ಅದೇ ಆಗಿತ್ತೆಂದರು. ತಾವು ರಾಜೀನಾಮೆ ಪತ್ರವನ್ನು ಪ್ರಕಟಿಸಿದ ನಂತರವೂ ಸಂಧಾನಗಳು ನಡೆದ ಬಗ್ಗೆ, ಯಾವುದೇ ಆಶಾದಾಯಕ ಬೆಳವಣಿಗೆ ಕಂಡು ಬರದ ಬಗ್ಗೆ, ಹೆಚ್ಚಿನದಾಗಿ ಪಂಡಿತ್ ಮೋತಿಲಾಲ್‌ಜಿ ಅವರ ಪತ್ರದಲ್ಲಿ ಮಾಳವೀಯಾಜಿ ಅವರಿಗಾದ ಅಪಮಾನದ ಬಗ್ಗೆ ಲಾಲಾಜಿ ಸಂದರ್ಶನದಲ್ಲಿ ವಿವರಿಸಿದರು.

ಲಾಲಾಜಿಯವರ ರಾಜೀನಾಮೆ ಪತ್ರವು ಕೆಲವು ರಾಜಕೀಯ ಬೆಳವಣಿಗೆಗೆ ಕಾರಣವಾಯಿತು. ಅವುಗಳಲ್ಲಿ ಸಬರಮತಿ ಒಡಂಬಡಿಕೆ, ಎಐಸಿಸಿ ಮಾರ್ಚ್ ಅಧಿವೇಶನದ ನಿರ್ಣಯ, ಸಭಾತ್ಯಾಗ ಮತ್ತು ಕಾರ್ಯ ಕಲಾಪ ಬಹಿಷ್ಕಾರ ನೀತಿ ಮತ್ತು ಅದರ ಪರಿಣಾಮಗಳು ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ನೇರವಾಗಿ ಪಾಲ್ಗೊಳ್ಳಬೇಕೇ ಬೇಡವೇ ಎಂಬ ಅಂಶ, ಆ ಹಿಂದೆ ಇದ್ದಂತೆ ಕಾಂಗ್ರೆಸ್ಸಿಗರು ಪ್ರತ್ಯೇಕ ವ್ಯವಸ್ಥೆಯ ಮೂಲಕ ಸಂಸದೀಯ ಕಾರ್ಯಗಳನ್ನು ಕೈಗೊಳ್ಳಬೇಕೇ ಮುಂತಾದವು ಮುಖ್ಯವಾದವು. ಆದರೂ ಈ ಎಲ್ಲಾ ವಿಷಯಗಳಿಗೆ ತೌಲನಿಕವಾಗಿ ಹೆಚ್ಚಿನ ಲಕ್ಷ್ಯ ಹರಿಯಲಿಲ್ಲ. ಇಡೀ ವಿವಾದದಲ್ಲಿ ಲಾಲಾಜಿಯವರು ವಿಧಾನಸಭೆಯನ್ನು ಪ್ರವೇಶಿಸಬೇಕೇ ಬೇಡವೇ ಎಂಬುದೇ ಕೇಂದ್ರೀಕೃತವಾಯಿತು. ಪರಿಸ್ಥಿತಿ ಮತ್ತು ಅನುಕೂಲಗಳು ಲಾಲಾಜಿಯವರ ಪರವಾಗಿ ಇದ್ದುದ್ದರಿಂದ ಅವರ ತನವನ್ನು ಅವರು ಪ್ರದರ್ಶಿಸಲು ಸಮರ್ಥ ಅವಕಾಶಗಳಿದ್ದವು. ಸ್ವರಾಜ್ ವಾದಿಗಳ ತಂತ್ರಗಾರಿಕೆಯನ್ನು ಎಗ್ಗಿಲ್ಲದೆ ಟೀಕಿಸುತ್ತಿದ್ದ ಅವರ ಪರಿ ತನ್ನದೇ ಪರಿಣಾಮ ಬೀರಿತ್ತು. ಆದರೆ ಲಾಲಾಜಿ ಮತ್ತು ಮೋತಿಲಾಲ್‌ಜಿ ಅವರ ಪತ್ರ ವ್ಯವಹಾರವನ್ನು ರಾಜಕೀಯ ದೃಷ್ಟಿಕೋನದಿಂದಲ್ಲದೆ ಕೇವಲ ಸಾಹಿತ್ಯಿಕ ವಿವಾದವನ್ನಾಗಿ ಪರಿಗಣಿಸಿದವರಿಗೆ ಅದೊಂದು ಬೇರೆ ಬಗೆಯ ಬೆಳವಣಿಗೆಯಾಗೇ ಕಂಡು ಬಂದಿತು. ಯಾರೂ ಹೆಚ್ಚು ವ್ಯಂಗ್ಯವಾಗಿಯೂ, ಲೇವಡಿ ರೂಪವಾಗಿಯೂ ಟೀಕಿಸಿದರೆಂಬುದೇ ಹೆಚ್ಚಾಗಿ ಕಂಡು ಬಂದಂತಾಯಿತು. ಅಲಹಾಬಾದಿನ ಪ್ರತಿಷ್ಠಿತ ವಕೀಲರ ಭಾಷಾ ಶೈಲಿಯಲ್ಲಿ ಅಡಕವಾಗಿದ್ದ ಸಂಕ್ಷಿಪ್ತ ಗೌರವ ಏನೂ ಕಾಣಲಿಲ್ಲ.

ಇಬ್ಬರೂ ಅನುಭವಿ ಮಹಾನ್ ಹೋರಾಟಗಾರರು. ಎರಡು ದಶಕಕ್ಕೂ ಹೆಚ್ಚು ಗೌರವ, ವಿಶ್ವಾಸ ಮತ್ತು ನಂಬಿಕೆಗಳನ್ನು ಗಳಿಸಿ ಮಾಡಿಕೊಂಡು ಬಂದ ಜೋಡಿಗಳು

ಅದು. ಕೇವಲ ಎರಡು ತಿಂಗಳ ಅವಧಿಯಲ್ಲಿ ನಡೆಯಲಿದ್ದ ಸಾರ್ವತ್ರಿಕ ಚುನಾವಣೆಗಳ ಮೇಲೆ ಆ ಹೋರಾಟ ತನ್ನದೇ ಪರಿಣಾಮ ಬೀರದಿರಲಿಲ್ಲ.

ಇಬ್ಬರು ಮಹಾ ದಿಗ್ಗಜರ ಪತ್ರ ಹೋರಾಟ ಸಾರ್ವತ್ರಿಕ ಚುನಾವಣೆಯಲ್ಲಿ ಎದುರಾಗಲಿದ್ದ ಪರಸ್ಪರ ಜಿದ್ದಾಜಿದ್ದಿನ ಪೂರ್ವ ಸೂಚನೆ ಆಗಿತ್ತು. ಎರಡೂ ಕಡೆಯವರು ಅಂತಿಮ ಹೋರಾಟಕ್ಕಾಗಿ ತಮ್ಮ ತಮ್ಮ ತಂಡಗಳನ್ನು ಸಿದ್ಧಪಡಿಸಿಟ್ಟು ಕೊಂಡಿದ್ದರು. ಕಾಂಗ್ರೆಸ್ ಅಭ್ಯರ್ಥಿಗಳ ಅಧಿಕೃತ ಆಯ್ಕೆ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ನಿರ್ಧಾರಕ್ಕೆ ಒಳಪಟ್ಟಿತ್ತು. ಲಾಲಾಜಿಯವರು ಆ ಸಮಿತಿಯ ಸದಸ್ಯರಾಗಿ ಇನ್ನೂ ಮುಂದುವರೆದಿದ್ದರು. ಸೆಪ್ಟೆಂಬರ್ ಆರಂಭದಲ್ಲೇ ಕಾರ್ಯಕಾರಿಣಿಯು ತನ್ನ ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ಹೋರಾಟದ ಪರಿಯನ್ನು ಆರಂಭಿಸಿತು. ಲಾಲಾಜಿಯವರು ಆ ವಿಧಿ ವಿಧಾನದಿಂದಲೂ ನಂತರದ ಕ್ರಿಯೆಗಳಿಂದಲೂ ದೂರ ಉಳಿದರು. ಯಾವುದೇ ಸಭೆಗಳಿಗೆ ಹಾಜರಾಗಲಿಲ್ಲ. ಇತರೆ ಕಾಂಗ್ರೆಸ್ಸಿಗರೊಂದಿಗೆ ಕಲೆತು ಇನ್ನೊಂದು ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಅವರು ಕಾರ್ಯ ಬಾಹುಳ್ಯರಾದರು. ಸಂಸದೀಯ ಕಾರ್ಯಕ್ರಮಗಳು ಯಥಾವತ್ತಾಗಿ ನಡೆಯಬೇಕು ಎಂಬ ಮನಸ್ಸಿನವರೂ, ಸ್ವರಾಜ್ ವಾದಿಗಳ ತಂತ್ರಗಾರಿಕೆಯಿಂದ ಅತೃಪ್ತರಾದವರೂ, ಲಾಲಾಜಿಯವರ ಚಿಂತನೆ ಮನೋಧರ್ಮ ಹಂಚಿಕೊಂಡವರೂ, ಮಾಳವೀಯಾಜಿ ಹಾಗೂ ಮಹಾರಾಷ್ಟ್ರ ಗುಂಪಿನ ಬೆಂಬಲಿಗರೂ ಆ ಬಣದಲ್ಲಿದ್ದರು.

ಚುನಾವಣೆ ಹತ್ತಿರವಾದಂತೆ ಒಂದು ಕಡೆ ಮೋತಿಲಾಲ್‌ಜಿ ಹಾಗೂ ಅವರ ಬೆಂಬಲಿಗರು, ಇನ್ನೊಂದು ಕಡೆ ಲಾಲಾಜಿ, ಮಾಳವೀಯಾಜಿ ಹಾಗೂ ಅವರ ಸ್ನೇಹಿತ ವರ್ಗದವರು ಬಿರುಸಿನ ಪ್ರಚಾರ ಕೈಗೊಂಡರು. ಲಾಲಾಜಿ ಮತ್ತು ಮಾಳವೀಯಾಜಿ ಬಣ ತಮ್ಮನ್ನು ಸ್ವತಂತ್ರ ಕಾಂಗ್ರೆಸ್ ಪಕ್ಷವೆಂದು ಕರೆದುಕೊಂಡಿತು. ಒಂದು ರೀತಿಯಲ್ಲಿ ಅದು ಬ್ರಿಟಿಷ್ ಐ.ಎಲ್.ಪಿ ಮಾದರಿಯಲ್ಲಿತ್ತು. ಹಿಂದೂ ಮಹಾ ಸಭಾ ಹೆಸರಿನಲ್ಲಿ ಮತದಾರರ ಮುಂದೆ ಮನವಿ ಮತ್ತು ತಮ್ಮ ಅಭಿಮತಗಳನ್ನು ಇಡಲು ಹೊಸ ಪಕ್ಷ ಆಶಿಸಲಿಲ್ಲ. ಬದಲಾಗಿ ತಾವು ಕಾಂಗ್ರೆಸ್ಸಿಗ ಎಂದು ಸ್ವರಾಜ್ ಪಕ್ಷದಷ್ಟೇ ಸಂಪೂರ್ಣ ಜವಾಬ್ದಾರಿ ತಮ್ಮದೆಂದು ಸಾರಿಕೊಂಡರು. ಆದರೆ ಆಯಾ ಕ್ಷೇತ್ರ ಮತ್ತು ಮತದಾರರ ಹಿತದೃಷ್ಟಿಗೆ ಸಂಬಂಧಪಟ್ಟಂತೆ ತಮ್ಮದು ಸ್ವರಾಜ್ ಪಕ್ಷಕ್ಕಿಂತ ಭಿನ್ನವಾದ ಧೋರಣೆ ಮತ್ತು ನೀತಿ ಎಂದು ಪ್ರಚುರಪಡಿಸಿದರು. ಜೊತೆಗೆ ಕಾಂಗ್ರೆಸ್ಸಿನ ಪಕ್ಷವು ನೇರವಾಗಿ ಚುನಾವಣೆಗೆ ಇಳಿಯುವುದನ್ನು ಒಪ್ಪುವುದಿಲ್ಲವೆಂದೂ ಹೊಸ ಪಕ್ಷ ಸ್ಪಷ್ಟವಾಗಿ ಸಾರಿತು.

ಚುನಾವಣೆಯಲ್ಲಿ ನಿಜವಾದ ಸಂಘರ್ಷ ತತ್ವ ಮತ್ತು ನೀತಿಗಳದ್ದೋ ಅಥವಾ ವ್ಯಕ್ತಿಗತವಾದದ್ದೋ ಎಂಬ ಅನುಮಾನ ಪದೇ ಪದೇ ಕಾಡುತ್ತಿತ್ತು. ನೀತಿ ಮತ್ತು ತತ್ವಗಳಿಗೆ ಸಂಬಂಧಪಟ್ಟ ಆ ಭಿನ್ನಾಭಿಪ್ರಾಯಗಳ ಬಗ್ಗೆ ನಾವು ಈಗಾಗಲೇ ಓದಿದ್ದೇವೆ. ಆ ಭಿನ್ನಾಭಿಪ್ರಾಯಗಳು ವಾಸ್ತವಿಕವಾಗಿದ್ದವು. ಬಹುಮಾನ್ಯವಾಗಿದ್ದವು. ಆದರೆ ವ್ಯಕ್ತಿಗತವಾದ ಸಂಘರ್ಷ ಸ್ವಲ್ಪಮಟ್ಟಿಗೆ ಅತಿರೇಕಕ್ಕೆ ಹೋಗಿ ಪರಿಸ್ಥಿತಿಯನ್ನು ಹದಗೆಡಿಸುತ್ತಿದ್ದಂತೆ ಕಂಡು ಬಂದಿತು. ಮೂಲತಃ ಸ್ವರಾಜ್ ಪಕ್ಷವನ್ನು ಕಟ್ಟಿದಾಗ ಲಾಲಾಜಿ ಸೆರೆವಾಸದಲ್ಲಿದ್ದರು.

ಬಂಧನದಲ್ಲಿದ್ದುಕೊಂಡೂ ಸಹ ಅವರು ಸಾಧ್ಯವಾದ ಮಟ್ಟಿಗೆ ತಮ್ಮ ನೆರವನ್ನು ಒದಗಿಸಿಯೂ ಇದ್ದರು. ಸೆರೆಮನೆಯಿಂದ ಹೊರಗ ಬಂದಾಗ ಶಾಸನಸಭೆಯನ್ನು ಪ್ರವೇಶಿಸುವ ಅರ್ಹತೆ ಅವರಿಗೆ ಇಲ್ಲದಂತೆ ಮಾಡಲಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಪಕ್ಷವನ್ನು ಸೇರುವ ಅಗತ್ಯವನ್ನು ಅವರು ಮನಗಾಣಲಿಲ್ಲ. ದಾಸ್ ಮತ್ತು ನೆಹರು ಪಕ್ಷದ ಸಂಸ್ಥಾಪಕರು. ತಮ್ಮ ತಮ್ಮ ವ್ಯಾಪ್ತಿಗಳನ್ನು ಹಾಗೂ ಚೌಕಟ್ಟುಗಳನ್ನು ಅವರಿಬ್ಬರು ಸ್ಪಷ್ಟವಾಗಿ ಮನಗಂಡಿದ್ದರು. ದಾಸ್ ಪಕ್ಷದ ಅಧ್ಯಕ್ಷರಾದರು. ಬಂಗಾಳದ ಶಾಸಕಾಂಗ ಪಕ್ಷಕ್ಕೆ ಸಂಬಂಧಪಟ್ಟಂತೆ ಅವರೇ ನಾಯಕರೂ ಆದರು. ನೆಹರು ಪಕ್ಷದ ಕಾರ್ಯದರ್ಶಿ. ರಾಷ್ಟ್ರೀಯ ವಿಧಾನಸಭೆಯಲ್ಲಿ ಅವರೇ ಪಕ್ಷದ ನಾಯಕರು. ದಾಸ್ ನಿಧನ ನಂತರ ನೆಹರು ಅವರು ಪಕ್ಷದ ಅಧ್ಯಕ್ಷರೂ ಆದರು. ರಾಷ್ಟ್ರೀಯ ವಿಧಾನಸಭೆಗೆ ಲಾಲಾಜಿಯವರ ಆಯ್ಕೆ ಆಯಿತು. ಶಾಸಕಾಂಗ ಪ್ರವೇಶದ ಬಗ್ಗೆ ಅವರ ಮೇಲೆ ವಿಧಿಸಲಾಗಿದ್ದ ನಿರ್ಬಂಧ ಆ ವೇಳೆಗೆ ತೆರವಾಗಿತ್ತು. ಲಾಲಾಜಿ ಮತ್ತು ಮೋತಿಲಾಲ್‌ಜಿ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳು ಸಹಜವಾಗಿದ್ದವು. ಮೋತಿಲಾಲ್‌ಜಿ ಅವರ ಗುಂಪಿನೊಂದಿಗೆ ಲಾಲಾಜಿ ಸೇರಿಕೊಳ್ಳಲಿಲ್ಲ. ಅದು ಅವರಿಬ್ಬರ ನಡುವಣ ಭಿನ್ನಾಭಿಪ್ರಾಯಗಳು ಉಲ್ಬಣಗೊಳ್ಳಲು ಕಾರಣವಾಯಿತು. ಆ ದೃಷ್ಟಿಯಿಂದ ನೋಡಿದಾಗ ಲಾಲಾಜಿ ಅವರು ಶಾಸಕಾಂಗವನ್ನು ಪ್ರವೇಶಿಸಿದ್ದು ಸರಿ ಎನಿಸುವುದಿಲ್ಲ. ಪಕ್ಷದ ನಾಯಕನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಶಿಸ್ತಿನ ಹೆಸರಿನಲ್ಲಿ ಉಸಿರು ಕಟ್ಟಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದ ಅನುಭವ ಲಾಲಾಜಿ ಅವರಿಗೆ ಅನೇಕ ವೇಳೆ ಆಗಿದ್ದು ಉಂಟು. ನಾಯಕರ ವರ್ತನೆ ಅತಿರೇಕದ್ದು ಎನಿಸುತ್ತಲೂ ಇತ್ತು. ಮೋತಿಲಾಲ್‌ಜಿ ಅವರಿಗೂ ತಮ್ಮ ಗುಂಪಿನವರಿಗಾಗಿ ತಾವು ರೂಪಿಸಿದ ಚೌಕಟ್ಟುಗಳು ಲಾಲಾಜಿ ಅವರಿಗೆ ಅನ್ವಯಿಸುವುದಿಲ್ಲವೆನ್ನುವ ಅಸಹನೆಯೂ ಉಂಟಾಗತೊಡಗಿದ್ದುಂಟು. ಮೋತಿಲಾಲ್‌ಜಿ ಅವರಿಗೆ ಯಾವುದೇ ರೀತಿಯಲ್ಲಿಯೂ ಎರಡನೇಯವರಾಗಿ ಕಾಣದ ಲಾಲಾಜಿ ಪರ್ಯಾಯ ಶಕ್ತಿಯಾಗತೊಡಗಿದರು. ಪರಸ್ಪರ ಭಿನ್ನಾಭಿಪ್ರಾಯದ ಇತ್ಯರ್ಥಕ್ಕೆ ಇಬ್ಭಾಗವೊಂದೇ ಪರ್ಯಾಯವೆನಿಸಿತು. ಇಲ್ಲವೇ ಲಾಲಾಜಿ ರಾಷ್ಟ್ರೀಯ ವಿಧಾನಸಭೆಯಿಂದ ಹೊರಗುಳಿಯ ಬೇಕಾಗುತ್ತಿತ್ತು.

ಚುನಾವಣಾ ಪ್ರಚಾರ ಬಿಸಿಯಾಗ ತೊಡಗಿದಂತೆ ಲಾಲಾಜಿ ಅವರ ಪರಿಶ್ರಮವೂ ಜಾಸ್ತಿಯಾಗತೊಡಗಿತು. ವಿವಿಧ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಮುಖ ಹೊಣೆಗಾರಿಕೆ ಅವರ ಮೇಲಿತ್ತು. ಚುನಾವಣಾ ಪ್ರಚಾರದ ಪ್ರಮುಖ ಅಂಶಗಳನ್ನು ನಿರ್ಧರಿಸಿ ಜಾರಿಗೆ ತರುವವರು ಅವರೇ ಆಗಿದ್ದರು. ತಮ್ಮ ಪಂಜಾಬ್ ಪ್ರಾಂತ್ಯದಲ್ಲಷ್ಟೇ ಅಲ್ಲದೇ ಇತರೆ ಪ್ರಾಂತ್ಯಗಳ ಅನೇಕ ಕ್ಷೇತ್ರಗಳಿಗೆ ಅವರ ಭೇಟಿ ಮತ್ತು ಪ್ರಚಾರ ಅನಿವಾರ್ಯವಾಗಿತ್ತು. ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ಒದಗಿಸುವುದರ ಜೊತೆಗೆ ಮತದಾರರಿಗೆ ಹೊಸ ಪಕ್ಷದ ನೀತಿ, ಧ್ಯೇಯೋದ್ದೇಶಗಳನ್ನು ಮನವರಿಕೆ ಮಾಡಿಕೊಡುವ ಹೊಣೆಗಾರಿಕೆಯೂ ಅವರ ಮೇಲಿತ್ತು. ಈ ಮಧ್ಯೆ ಅವರ ಎದುರಾಳಿಗಳು ಪ್ರಬಲರಾಗಿದ್ದರು. ಲಾಲಾಜಿಯವರ ವಿರುದ್ಧ ವೈಯಕ್ತಿ ಟೀಕೆ, ವಿರೋಧಗಳು ಪ್ರಬಲವಾಗಿದ್ದವು. ಸಿಂಹವನ್ನು ಅದರ ತಾಣದಲ್ಲೇ ಎದುರಿಸಲೋ ಎಂಬಂತೆ ಸ್ವತಃ

ಮೋತಿಲಾಲ್‌ಜಿ ಲಾಹೋರಿಗೆ ಬಂದರು. ಲಾಲಾಜಿ ಮತ್ತು ಮಾಳವೀಯಾಜಿಯವರನ್ನು ವಿರೋಧಿಸಬಾರದೆಂದು ಅನೇಕ ಕಾಂಗ್ರೆಸ್ಸಿಗರು ಮೋತಿಲಾಲ್‌ಜಿ ಅವರಿಗೆ ಸಲಹೆ ಮಾಡಿದರು. ಕಾಂಗ್ರೆಸ್ ಪಕ್ಷದ ಸಂಸದೀಯ ನಾಯಕತ್ವದೊಂದಿಗೆ ಕೆಲವು ವಿಷಯಗಳಲ್ಲಿ ಅವರಲ್ಲಿ ಭಿನ್ನಾಭಿಪ್ರಾಯವಿದ್ದರೂ ಶಾಸನಸಭೆಯಲ್ಲಿ ಅವರಿಬ್ಬರ ಅಸ್ತಿತ್ವ ಅತ್ಯಂತ ಮೌಲ್ವಿಕವಾದದ್ದೆಂದು ಅವರು ವಿವರಿಸಿದರು. ಸಾಲದ್ದಕ್ಕೆ ಆ ಇಬ್ಬರು ನೇತಾರರನ್ನು ವಿರೋಧಿಸುವುದರಿಂದ ಕೆಟ್ಟ ಪರಂಪರೆಯನ್ನು ಹಾಕಿ ಕೊಟ್ಟಂತಾಗುತ್ತದೆ ಎಂದು ನವಿರಾಗಿ ಎಚ್ಚರಿಸಲಾಯಿತು. ಅಂಥ ಕಾಂಗ್ರೆಸ್ಸಿಗರ ಅಭಿಮತ ಮತ್ತು ದೃಷ್ಟಿಕೋನವನ್ನು ಕೆಲವು ವಕ್ತಾರರು ಮೋತಿಲಾಲರ ಮುಂದಿಟ್ಟರು. ಅಂಥ ಮಹಾನ್ ನಾಯಕರು ಹಾಗೂ ರಾಷ್ಟ್ರಭಕ್ತರ ವಿರುದ್ಧ ಚುನಾವಣಾ ಕಣದಲ್ಲಿ ಅಭ್ಯರ್ಥಿಗಳನ್ನು ಹಾಕುವುದರಿಂದ ಮತದಾರರ ವಿರೋಧವನ್ನು ಕಟ್ಟಿಕೊಂಡಂತೆ ಆಗುತ್ತದೆ ಎಂದು ಮೋತಿಲಾಲ್‌ಜಿ ಅವರಿಗೆ ತಿಳಿಸಲಾಯಿತು. ಇದರಿಂದ ಕಾಂಗ್ರೆಸ್ ಪಕ್ಷದ ಹಿತಕ್ಕೆ ಧಕ್ಕೆಯಾಗುತ್ತದೆ ಎಂದೂ ತಿಳಿಸಲಾಯಿತು. ಆದರೆ ಮೋತಿಲಾಲ್‌ಜಿ ಅವರ ಬೆಂಬಲಿಗರ ನಿಲುವೇ ಬೇರೆಯಾಗಿತ್ತು. ಪಂಜಾಬಿನಲ್ಲಿ ತಮ್ಮ ಪಕ್ಷಕ್ಕೆ ಪ್ರಚಂಡ ವಿಜಯ ದೊರೆಯುತ್ತದೆ ಎಂದು ಅವರು ಹೇಳಿದರು. ಮೋತಿಲಾಲ್‌ಜಿ ಅವರನ್ನು ಅವರ ಬೆಂಬಲಿಗರು ದಾರಿ ತಪ್ಪಿಸಿದರು.

ಮೋತಿಲಾಲ್‌ಜಿ ತಮ್ಮ ಬೆಂಬಲಿಗರ ವಿವೇಚನರಹಿತ ಲೆಕ್ಕಾಚಾರವನ್ನು ನಂಬಿ ಮರೀಚಿಕೆಯನ್ನೇ ಕುದರೆಯನ್ನಾಗಿ ಮಾಡಿ ಕೊಂಡರು. ಕೊನೆಗೆ ಸೋಲುಂಡರು. ಫಲಿತಾಂಶಗಳು ಪ್ರಕಟಗೊಂಡಾಗ ಮೋತಿಲಾಲ್‌ಜಿ ಅವರ ಪಕ್ಷಕ್ಕೆ ಬರಿ ಸೋಲಲ್ಲ. ಪಕ್ಷವೇ ನಿರ್ನಾಮವಾಗಿತ್ತು. ಆದರೂ ರಾಷ್ಟ್ರೀಯ ವಿಧಾನಸಭೆಯಲ್ಲಿ ಅವರೇ ಪ್ರತಿಪಕ್ಷದ ನಾಯಕರಾಗಿ ಮುಂದುವರಿದರು. ಅದಕ್ಕೆ ಕಾರಣ ಸಂಪೂರ್ಣವಾಗಿ ಮಾಳವೀಯಾಜಿ ಮತ್ತು ಲಾಲಾಜಿಯವರು. ಈ ಇಬ್ಬರು ನಾಯಕರು ಮೋತಿಲಾಲ್‌ಜಿ ಅವರಿಗೆ ಕೇವಲ ಉತ್ತರ ಭಾರತದಲ್ಲಷ್ಟೇ ಹೋರಾಟ ನೀಡಿದ್ದರು. ಪರ್ಯಾಯ ದ್ವೀಪದಲ್ಲಿ ಮಾಳವೀಯಾಜಿ ಮತ್ತು ಲಾಲಾಜಿ ಸ್ಪರ್ಧೆ ಒಡ್ಡಿರಲಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಮೋತಿಲಾಲ್‌ಜಿ ಇಡೀ ವಿರೋಧ ಪಕ್ಷದ ನಾಯಕರಾಗಿರಲಿಲ್ಲ. ತಮ್ಮನ್ನು ಬೆಂಬಲಿಸಿದ್ದ ಮದ್ರಾಸಿನ ಶಾಸಕರ ಬಣಕಷ್ಟೇ ಮುಖಂಡರಾಗಿದ್ದರು. ಸ್ವತಃ ಅವರ ಪ್ರಾಂತ್ಯದಲ್ಲೇ ಮತದಾರರು ಅವರಿಗೆ ಮಣ್ಣು ಮುಕ್ಕಿಸಿದ್ದರು.

ಪಂಜಾಬಿನಲ್ಲಿ ಸ್ವರಾಜ್ ಪಕ್ಷವು ಸ್ಥಳೀಯ ವಿಧಾನಸಭೆ ಚುನಾವಣೆಯಲ್ಲಿ ಧೂಳಿಪಟವಾಯಿತು. ಲಾಲಾಜಿಯವರು ತಳೆದ ಧೋರಣೆ ಫಲವಾಗಿ ಒಂದೇ ಒಂದು ಸ್ಥಾನ ಮಾತ್ರ ಆ ಪಕ್ಷಕ್ಕೆ ಅಲ್ಲಿ ಪ್ರಾಪ್ತವಾಯಿತು. ಹಾಗೆ ಆಯ್ಕೆಯಾದವರು ಮುಲ್ತಾನದ ಭೋದ್ ರಾಜ್. ಅದೂ ಅತ್ಯಲ್ಪ ಬಹುಮತದಿಂದ ಆರಿಸಿಬಂದರು. ರಾಷ್ಟ್ರೀಯ ವಿಧಾನಸಭೆಗೆ ಪಂಜಾಬಿನಿಂದ ಸ್ವರಾಜ್ ಪಕ್ಷದ ಓರ್ವ ಅಭ್ಯರ್ಥಿಯೂ ಆಯ್ಕೆಯಾಗಲಿಲ್ಲ. ವಿಶೇಷ ನಿಲುವು ತಾಳಿದ ಲಾಲಾಜಿಯವರು ಎರಡು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದಿದ್ದರು. ಹಾಗಿದ್ದೂ ಅವರು ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಪಂಜಾಬಿನಲ್ಲೂ ಇತರ ಪ್ರಾಂತ್ಯಗಳಲ್ಲಿಯೂ ನಿರಂತರ ಪ್ರಚಾರ ಕೈಗೊಂಡರು. ಅವರ ಎರಡು ಕ್ಷೇತ್ರಗಳಲ್ಲಿ ಒಂದು ಕಡೆ ರಾಯ್ಜಾದ ಹನ್ಸ್‌ರಾಜ್, ಇನ್ನೊಂದು ಕಡೆ ಡಿ. ಚಮನ್‌ಲಾಲ್ ಎದುರಾಳಿಗಳು.

ರಾಯ್ಜದ ಹನ್ಸ್‌ರಾಜ್ ಅವರಿಗೆ ಲಾಲಾಜಿ ಅವರ ವಿರುದ್ಧ ಕಣಕ್ಕೆ ಇಳಿಯುವುದು ಇಷ್ಟವಿರಲಿಲ್ಲ. ಲಾಲಾಜಿ ಅವರ ವಿರುದ್ಧ ಯಾವುದೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಬಾರದೆಂದು ಮೋತಿಲಾಲ್‌ಜಿ ಅವರ ಮನ ಒಲಿಸಲು ಅವರು ಪ್ರಯತ್ನಿಸಿದ್ದರು. ಆದರೆ ಅವರ ಆ ಪ್ರಯತ್ನಕ್ಕೆ ಬೆಲೆ ಸಿಕ್ಕಿರಲಿಲ್ಲ. ಸ್ಪರ್ಧೆಗೆ ಇಳಿಯಬೇಕೆಂದು ಆದೇಶಿಸಲಾಗಿತ್ತು. ಸ್ವರಾಜ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಅವರು ಆ ಆದೇಶಕ್ಕೆ ಮಣಿದು ಸ್ಪರ್ಧೆಗೆ ಇಳಿದಿದ್ದರು. ಪ್ರಚಾರವನ್ನು ನಡೆಸಿದ್ದರು. ಆರಂಭದಲ್ಲೇ ಅವರಿಗೆ ತಿಳಿದುಹೋಯಿತು ತಮ್ಮದು ವ್ಯರ್ಥ ಸಾಹಸವೆಂದು. ಆದಾಗಿ ಮತದಾನಕ್ಕೆ ಸಾಕಷ್ಟು ಮುಂಚಿತವಾಗಿ ಕಣದಿಂದ ಹಿಂದೆ ಸರಿದರು. ಜನತಾ ಸೇವಕರ ಸಂಘದ ಕೆಲವು ಸದಸ್ಯರು ಮೋತಿಲಾಲ್‌ಜಿಗೆ ಬೆಂಬಲ ಕೊಟ್ಟಿದ್ದರು. ಲಾಲಾಜಿ ಮತ್ತು ಮಾಳವೀಯಾಜಿ ಸ್ಥಾಪಿಸಿದ ಹೊಸ ಪಕ್ಷದಲ್ಲಿ ತಮಗೆ ನಿಷ್ಠೆ ಇಲ್ಲವೆಂದು ಅವರು ತಿಳಿಸಿದ್ದರು. ತಮ್ಮ ನಿಷ್ಠೆ ಕಾಂಗ್ರೆಸ್ಸಿಗೆ ಸೀಮಿತವೆಂದು ಹೇಳಿದರು. ಸ್ವತಃ ಲಾಲಾಜಿ ಅಂತಹ ಸದಸ್ಯರ ಬೆಂಬಲವನ್ನು ತಮ್ಮ ಪಕ್ಷಕ್ಕೆ ಕೋರಲಿಲ್ಲ.

ಆ ಪೈಕಿ ಸಂಘದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಅಚಿಂತ್‌ರಾಂ ಒಬ್ಬರು. ಚುನಾವಣೆಯ ದಿನ ಚಮನ್‌ಲಾಲ್‌ರಿಗೆ ಮತ ನೀಡಲು ಅವರು ಮತಗಟ್ಟೆಗೆ ಹೋದರು. ಮತ ಚಲಾಯಿಸಿ ಹೊರ ಬರುತ್ತಿದ್ದಂತೆಯೇ ಅವರಿಗೆ ಎದುರಾದ ಲಾಲಾಜಿಯವರನ್ನು ಅಪ್ಯಾಯತೆಯಿಂದ ಮಾತನಾಡಿಸಿ ಆಲಂಗಿಸಿಕೊಂಡರು. ಮನಃಸಾಕ್ಷಿಗೆ ತಕ್ಕಂತೆ ನಡೆದುಕೊಂಡಿದ್ದಕ್ಕಾಗಿ ಅಭಿನಂದಿಸಿದರು. ಬಹುಶಃ ಆ ಪ್ರಕರಣ ಅಚಿಂತ್‌ರಾಂ ಅವರ ಅಂತಃಕರಣವನ್ನು ಕೆಣಕಿರಬೇಕು. ಪಂಜಾಬಿನ ಸ್ವರಾಜ್ ಪಕ್ಷದ ಕೆಲವು ನಾಯಕರು ತಮಗೆ ದಾರಿ ತಪ್ಪಿಸಿದ್ದರ ಅರಿವಾಗಿರಬೇಕು. ವಿಚಿತ್ರವೆಂದರೆ ಆ ಪ್ರಸಂಗವನ್ನು ಮರುದಿನದ ಪತ್ರಿಕೆಗಳಲ್ಲಿ ಅಪಾರ್ಥವಾಗುವ ರೀತಿಯಲ್ಲಿ ಪ್ರಕಟವಾಗುವಂತೆ ಕೆಲವು ಸ್ವರಾಜ್ ಪಕ್ಷದ ನಾಯಕರು ಮಾಡಿದ್ದರು. ಲಾಲಾಜಿ ಅದನ್ನು ಲೆಕ್ಕಿಸಲಿಲ್ಲ.

ಫಲಿತಾಂಶಗಳು ಪ್ರಕಟಗೊಂಡಾಗ ಲಾಲಾಜಿ ಎರಡು ಕ್ಷೇತ್ರಗಳಲ್ಲಿ ಪ್ರಚಂಡ ವಿಜಯ ಸಾಧಿಸಿದ್ದರು. ಪ್ರತಿಸ್ಪರ್ಧಿಯಾಗಿದ್ದ ಚಮನ್‌ಲಾಲ್ ಸೋತಿದ್ದರು. ಎರಡೂ ಕ್ಷೇತ್ರಗಳನ್ನು ಲಾಲಾಜಿ ಅವರು ಇಟ್ಟುಕೊಳ್ಳುವಂತಿರಲಿಲ್ಲ. ಕೋರ್ಟ್ ಸೀಟ್ ಕ್ಷೇತ್ರವನ್ನು ತೆರವು ಮಾಡಿದರು. ಚಮನ್‌ಲಾಲ್ ಆ ಸೋಲನ್ನು ತೀವ್ರವಾಗಿ ಪರಿಗಣಿಸಿದರು. "ವಿಧಾನಸಭೆಗೆ ಆಯ್ಕೆಯಾಗದಿದ್ದರೆ ನಾನು ಇದ್ದು ಇಲ್ಲದಂತೆ" ಎನ್ನುವಷ್ಟರ ಮಟ್ಟಿಗೆ ಹತಾಶರಾದರು. ಪ್ರಚಾರದ ಸಮಯದಲ್ಲಿ ಲಾಲಾಜಿ ಅವರ ವಿರುದ್ಧ ಅವರು ನಡೆದುಕೊಂಡ ರೀತಿಯಲ್ಲವೂ ಮುಗಿದ ಅಧ್ಯಾಯವಾಗಿತ್ತು. ಚಮನ್‌ಲಾಲ್‌ರಿಗಾಗಿ ಲಾಲಾಜಿ ತಮ್ಮ ಆ ಒಂದು ಸ್ಥಾನವನ್ನು ತೆರವು ಮಾಡಿಕೊಟ್ಟರು. ರಾಯ್ಜದ ತಮಗೆ ಬಿಟ್ಟು ಕೊಟ್ಟಿದ್ದ ಜಲಂಧರ್ ಕ್ಷೇತ್ರವನ್ನು ಉಳಿಸಿಕೊಂಡರು. ರಾಯ್ಜದ ಹನ್ಸ್‌ರಾಜ್ ಸಹ ಲಾಹೋರಿಗೆ ಬಂದರು. ಹಿಂದಿನ ಆತ್ಮೀಯತೆ ಮತ್ತು ಸೌಹಾರ್ದದಲ್ಲೇ ಇಬ್ಬರು ಕಲೆತರು. ಮುಂದೆ ಅವರನ್ನು ಪಂಜಾಬ್ ಶಾಸನಸಭೆಗೆ ಆಯ್ಕೆ ಮಾಡಿದ್ದು ನಂತರದ ಬೆಳವಣಿಗೆ. ಲಾಲಾಜಿಯವರು ಲಾಯ್ಡ್ ಜಾರ್ಜ್ ಕಪ್ ಹೂಡಿದ ತಂತ್ರಕ್ಕೆ ಸೊಪ್ಪು ಹಾಕಿದ್ದರೆ ಚಮನ್‌ಲಾಲ್‌ರು ರಾಷ್ಟ್ರೀಯ ವಿಧಾನಸಭೆಗೆ ಆಯ್ಕೆಗೊಳ್ಳುತ್ತಿರಲಿಲ್ಲ.

ಚುನಾವಣೆಗಳು ಒಂದು ವಿಧಿ ವಿಧಾನವಷ್ಟೇ. ಸ್ಪರ್ಧಿಗಳ ನಡವಳಿಕೆಗಳು ಮತ್ತು ಮೌಲ್ಯಗಳು ಆ ವಿಧಿ ವಿಧಾನಗಳಿಗೆ ವಿರುದ್ಧವೆನಿಸಿದಾಗ ಪರಿಣಾಮ ಬೇರೆ ಬೇರೆಯಾಗುತ್ತದೆ. ಲಾಲಾಜಿಯವರು ಕೆಲವು ಹೊತ್ತಿಗೆಗಳನ್ನು ಪ್ರಕಟಿಸಿದ್ದರಷ್ಟೇ. ಆ ಹೊತ್ತಿಗೆಗಳಲ್ಲಿ ಆಕ್ಷೇಪಾರ್ಹವಾದ ಅಂಶಗಳಿವೆ ಎಂದು ಪ್ರಧಾನ ನ್ಯಾಯಾಲಯವು ಅವರನ್ನು ನ್ಯಾಯಾಲಯದ ವಕೀಲ ಸಿಂಧುತ್ವದಿಂದ ಉಚ್ಚಾಟನೆ ಮಾಡಿತ್ತು. ಸರ್ಕಾರವು ಸಂಚಿನ ಆರೋಪ ಹೊರಿಸಿ ಅವರ ವಿರುದ್ಧ ನಿಷೇದಾಜ್ಞೆ ವಿಧಿಸಿತ್ತು. ಅದನ್ನೇ ಆಧಾರ ಮಾಡಿಕೊಂಡು ಕಾಂಗ್ರೆಸ್ ಪಕ್ಷದ ಪರವಾಗಿ ಲಾಲಾಜಿ ಸಲ್ಲಿಸಿದ ನಾಮಪತ್ರವನ್ನು ಆಕ್ಷೇಪಿಸಲಾಗಿತ್ತು. ವಿಧಾನಸಭೆಗೆ ಆಯ್ಕೆಯಾಗದಂತೆ ಲಾಲಾಜಿ ಅವರನ್ನು ಅನರ್ಹಗೊಳಿಸಬೇಕೆಂದು ಲಾಲಾಜಿ ಅವರ ಎದುರಾಳಿ ನಾಮಪತ್ರಗಳ ಪರಿಶೀಲನೆ ಹಂತದಲ್ಲಿ ಒತ್ತಾಯವನ್ನೂ ಮಾಡಿದ್ದರು! ಆದರೆ ಅಂತಹ ಸಾಧ್ಯತೆಯನ್ನು ಲಾಲಾಜಿ ಮೊದಲೇ ನಿರೀಕ್ಷಿಸಿ ಸರ್ವ ಸನ್ನದ್ಧರಾಗಿದ್ದರು. 1917ರಲ್ಲಿ ತಮ್ಮ ವಿರುದ್ಧ ಹೊರಿಸಲಾಗಿದ್ದ ನಿಷೇದಾಜ್ಞೆಯನ್ನು ಅರ್ಥಹೀನವೆಂದು ಸಾರುವಂತೆ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರು. ಅವರ ಮನವಿಯನ್ನು ನ್ಯಾಯಾಲಯ ಎತ್ತಿ ಹಿಡಿದು ಆ ನಿಷೇದಾಜ್ಞೆಯನ್ನು ಅನೂರ್ಜಿತಗೊಳಿಸಿತ್ತು.

ಸ್ವರಾಜ್ ಪಕ್ಷ, ಸ್ವತಃ ಮೋತಿಲಾಲರು ಹಾಗೂ ಅವರ ಬೆಂಬಲಿಗರು ತಮಗೆಷ್ಟೇ ಅಪಚಾರ ಮಾಡಿದರೂ ಲಾಲಾಜಿ ಮಾತ್ರ ಪ್ರತಿಕಾರದ ಕ್ರಮಕ್ಕೆ ಇಳಿಯಲಿಲ್ಲ. ಉತ್ತರ ಪ್ರದೇಶದಲ್ಲಿ ಮೋತಿಲಾಲ್‌ಜಿ ಅವರಿಗೆ ಎದುರಾಗಿ ಸಮರ್ಥ ಅಭ್ಯರ್ಥಿಯೊಬ್ಬರನ್ನು ಕಣಕ್ಕೆ ಇಳಿಸಲು ಮಾಳವೀಯಾಜಿ ಬೆಂಬಲಿಗರು ಪಟ್ಟು ಹಿಡಿದಿದ್ದು ತಿಳಿಯುತ್ತಿದ್ದಂತೆಯೇ ಲಾಲಾಜಿ ಅಲ್ಲಿಗೆ ಧಾವಿಸಿದರು. ಅದನ್ನು ಪ್ರಬಲವಾಗಿ ವಿರೋಧಿಸಿದರು. 1926 ಅಕ್ಟೋಬರ್ 14ರಂದು ಮಾಳವೀಯಾಜಿ ಅವರಿಗೆ ಈ ಸಂಬಂಧದಲ್ಲಿ ಪತ್ರವೊಂದನ್ನು ಬರೆದರು.

ನನ್ನ ಆತ್ಮೀಯ ಪಂಡಿತ್ ಮಾಳವೀಯಾಜಿ,

ಬರುವ ರಾಷ್ಟ್ರೀಯ ವಿಧಾನಸಭಾ ಚುನಾವಣೆಗಳಲ್ಲಿ ಪಂಡಿತ್ ಮೋತಿಲಾಲರಿಗೆ ಪ್ರತಿಸ್ಪರ್ಧಿಯಾಗಿ ಅದೇ ಕ್ಷೇತ್ರದಿಂದ ಸ್ಪರ್ಧಿಸುವಂತೆ ಸ್ವತಂತ್ರ ಕಾಂಗ್ರೆಸ್ ಪಕ್ಷದ ಉತ್ತರ ಪ್ರದೇಶ ಕೆಲವು ಸದಸ್ಯರು ನಿಮ್ಮ ಮೇಲೆ ಒತ್ತಡ ಹಾಕುತ್ತಿರುವ ಹೇಳಿಕೆಯನ್ನು ನಾನು ಪತ್ರಿಕೆಗಳಲ್ಲಿ ಓದಿರುವೆ. ಆ ಹೇಳಿಕೆಗೆ ಯಾವುದೇ ಆಧಾರವಿಲ್ಲವೆಂದು ನಾನು ಭಾವಿಸಿಕೊಂಡಿರುವೆ. ಆದರೂ ಈ ವಿಷಯದಲ್ಲಿ ತಾವು ತಮ್ಮ ಮಿತ್ರರ ಸಲಹೆಯನ್ನು ಮಾನ್ಯ ಮಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಪ್ರಕಾರ ರಾಷ್ಟ್ರೀಯ ವಿಧಾನಸಭೆಯಲ್ಲಿ ನೀವಿಬ್ಬರೂ ಇರುವುದು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯವಾಗಿದೆ. ನನ್ನ ವಿಷಯದಲ್ಲಿ ಹೇಳುವುದಾದರೆ ನನ್ನನ್ನು ನಾನು ನಿಭಾಯಿಸಿಕೊಳ್ಳ ಬಲ್ಲೆನೆಂಬ ವಿಶ್ವಾಸ ನನಗಿದೆ. ಮುಯ್ಯಿಗೆ ಮುಯ್ಯಿ ಧೋರಣೆಯಲ್ಲಿ ನನಗೆ ವಿಶ್ವಾಸವಿಲ್ಲ.

ನಿಮ್ಮ ವಿಶ್ವಾಸಿ

ಲಜಪತ್‌ರಾಯ್

ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವ ಮಹೋದ್ದೇಶದ ಹಿನ್ನಲೆಯಲ್ಲಿ ಲಾಲಾಜಿಯವರು ಪಕ್ಷದ ಅತಿರೇಕದ ಅಂಶಗಳಿಗೆ ಹೆಚ್ಚಿನ ಗಮನ ಕೊಡಲಿಲ್ಲ. ರಾಜಕೀಯ ಪಕ್ಷ ಒಂದರೊಳಗಿನ ಶಿಸ್ತಿನ ಹೆಸರಿನಲ್ಲಿ ವಿಧಿಸಲ್ಪಡುತ್ತಿದ್ದ ನಿರ್ಬಂಧಗಳನ್ನು ಅವರು ಹಚ್ಚಿಕೊಳ್ಳಲಿಲ್ಲ. ಸ್ವರಾಜ್ ಪಕ್ಷದ ಮುಖಂಡರ ಬಹುತೇಕ ಧೋರಣೆ, ನಿಲುವುಗಳಿಗೆ ಅವರು ಹೊರತಾಗಿರುತ್ತಿದ್ದರು.

ಲಾಲಾಜಿ ದಿಟ್ಟತನದ ಹೋರಾಟ ನಡೆಸಿದರು. ತಮ್ಮ ಹೋರಾಟವನ್ನು ಸಾಧ್ಯವಾದಷ್ಟು ಅವರು ಸ್ವಚ್ಛವಾಗಿರುವಂತೆಯೂ, ಗೌರವಾನ್ವಿತವಾಗಿರುವಂತೆಯೂ ನೋಡಿಕೊಂಡರು. ತಮ್ಮ ಕಾರ್ಯಕ್ಕೆ ಕಳಂಕದ ಕೆಸರು ಎರಚುವ ಪ್ರಸಂಗಗಳನ್ನು ಅವರು ಎಚ್ಚರಿಕೆಯಿಂದ ನಿರ್ವಹಿಸಿದರು. ಅಂಥ ಪಶ್ಚಾತ್ತಾಪಕರ ಪ್ರಸಂಗಗಳಲ್ಲಿ ಇದು ಒಂದು. ಅವರ ಅರಿವಿಗೆ ಬಾರದೆ ನಡೆದು ಹೋದ ಪ್ರಕಟಣೆಯ ಅಪಚಾರ. ಮೋತಿಲಾಲ್‌ಜಿ ವಿರುದ್ಧ ಅಗೌರವಕರ ಲೇಖನವೊಂದು ಬಂದೇ ಮಾತರಂ ಹಾಗೂ ಇತರ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿ ಹೋಯಿತು. ಈ ಪ್ರಕರಣ ನಡೆದಾಗ ಲಾಲಾಜಿ ಲಾಹೋರಿನಲ್ಲಿ ಇರಲಿಲ್ಲ. ಆದರೆ ಅಪಚಾರ ತಮ್ಮ ಗಮನಕ್ಕೆ ಬರುತ್ತಿದ್ದಂತೆಯೇ ಅವರು ಉದ್ವಿಗ್ನರಾದರು. ಸಂಬಂಧಪಟ್ಟವರನ್ನು ತರಾಟೆಗೆ ತೆಗೆದುಕೊಂಡರು. ಪತ್ರಿಕೆಯು ಮೋತಿಲಾಲ್‌ಜಿ ಅವರಿಗೆ ಬೇಷರತ್ ಕ್ಷಮೆ ಯಾಚಿಸುವಂತೆ ನೋಡಿಕೊಂಡರು. ಸ್ವರಾಜ್ ಪಕ್ಷದ ಮುಖಂಡರಿಗೆ ತೃಪ್ತಿಯಾಗುವ ರೀತಿಯಲ್ಲಿ ತಿದ್ದುಪಡಿಯು ಪ್ರಕಟಗೊಳ್ಳುವಂತೆ ಮಾಡಿದರು.

ಕಮಲಾ ನೆಹರು ತೀವ್ರ ಅಸ್ವಸ್ಥರಾಗಿದ್ದ ಕಾರಣ ಜವಹರ್‌ಲಾಲ್ ನೆಹರು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಅವರ ಆರೋಗ್ಯದ ಉಸ್ತುವಾರಿಯಲ್ಲಿ ತೊಡಗಿದ್ದರು. ಪಂಡಿತ್ ಮೋತಿಲಾಲ್‌ಜಿ ಪ್ರಚಾರ, ಪ್ರವಾಸವನೆಲ್ಲಾ ಮುಗಿಸಿ ಫಲಿತಾಂಶಗಳು ಪ್ರಕಟಗೊಳ್ಳುವುದಕ್ಕೆ ಸ್ವಲ್ಪ ಮೊದಲು ತಮ್ಮ ಮಗನಿಗೆ ಸುದೀರ್ಘ ಪತ್ರವೊಂದನ್ನು ಬರೆದರು. ಅವರಿಗೆ ತಮ್ಮ ಸೋಲಿನ ಅರಿವಾಗಿತ್ತು. ತಾವು ತೀವ್ರ ಹತಾಶರಾಗಿದ್ದು ವಿಧಾನಸಭೆಯ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲು ಹಾಗೂ ಸಾರ್ವಜನಿಕ ಬದುಕಿನಿಂದ ನಿವೃತ್ತಿ ಹೊಂದಲು ಗಂಭೀರವಾಗಿ ಯೋಚಿಸುತ್ತಿರುವುದಾಗಿ ಅವರು ಅದರಲ್ಲಿ ಬರೆದರು. ''ಪ್ರಬಲ ಪಕ್ಷವೊಂದರ ನಾಯಕರು ತಾವಾಗಿದ್ದು ಕೂಡಾ'' ಪಂಜಾಬ್ ಮಾತ್ರವೇ ಅಲ್ಲದೆ ಸ್ವಪ್ರಾಂತ್ಯ ಉತ್ತರ ಪ್ರದೇಶದಲ್ಲೂ ತಮಗೆ ಎದುರಾದ ಸೋಲನ್ನು ಮರೆಯಲು ಸಾಧ್ಯವಿಲ್ಲ. ಆಗಿರುವುದು 'ಭಾರೀ ಅನಾಹುತವಲ್ಲದೆ ಮತ್ತೇನೂ ಅಲ್ಲ'* ಎಂದು ತಿಳಿಸಿದರು.

ಮತದಾರರಿಂದ ಮಾನ್ಯತೆ ಸಿಗದಿರುವುದು ಒಂದು ಪರಿ. ಆದರೆ ಇನ್ನೂ ಅಚ್ಚರಿಯ ತಪ್ಪೊಪ್ಪಿಗೆ ಎಂದರೆ ''ನನ್ನ ಸ್ವಂತ ಪ್ರಾಂತ್ಯದಲ್ಲೇ ನನಗೆ ನಿಷ್ಠೆಯಿಂದ ಸೇವೆ ಸಲ್ಲಿಸುವಂಥ ಕಾರ್ಯಕರ್ತರು ಸಿಗಲಿಲ್ಲ.''** ಎಂದು ಅವರು ಬರೆದದ್ದು.

---

* ಹಳೆಯ ಪತ್ರಗಳ ಗೊಂಚಲು. ಪುಟ. 49.

** ಅದೇ ಪುಟ. 49.

ಇದರರ್ಥ 'ಬಿರ್ಲಾ ಹಣ'ದ ವರ್ಚಸ್ಸನ್ನು ತಗ್ಗಿಸಿತೆಂದಾಗಲಿ ಅಥವಾ ''ಮಾಳವೀಯಾ- ಲಾಲಾ ಗ್ಯಾಂಗಿನ ಸುಳ್ಳುಗಳನ್ನು'' ಸಮರ್ಥಿಸಿತೆಂದಾಗಲಿ ಅರ್ಥವಲ್ಲ! ಆದರೆ ಚುನಾವಣಾ ಸೋಲಿಗೆ ಕಾರಣಗಳೇನೇ ಇದ್ದರೂ -''ನಾನು ತುಂಬಾ ವಿಚಲಿತನಾಗಿದ್ದೇನೆ. ಸಾರ್ವಜನಿಕ ಬದುಕಿನಿಂದ ನಿವೃತ್ತಿ ಹೊಂದಲು ಈಗ ಗಂಭೀರವಾಗಿ ಚಿಂತಿಸುತ್ತಿರುವೆ''* ಎಂದು ಮೋತಿಲಾಲ್‌ಜಿ ತಿಳಿಸಿದರು. ತಮ್ಮ ಪುತ್ರನಿಗೆ ಮೋತಿಲಾಲರು ಆ ಪತ್ರ ಬರೆದ ಮೂರು- ನಾಲ್ಕು ವಾರಗಳ ನಂತರ ಗುವಾಹತಿಯಲ್ಲಿ ಕಾಂಗ್ರೆಸ್ ಅಧಿವೇಶನ ಸಮಾವೇಶಗೊಳ್ಳುವತನಕ ಅವರು ಮೌನವಾಗಿದ್ದರು. ಕಾಂಗ್ರೆಸ್ ಅಧಿವೇಶನದ ನಂತರ ವಿಧಾನಸಭೆಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಪತ್ರ ಸಲ್ಲಿಸಲು ಅವರು ಆಲೋಚಿಸಿದ್ದರು. ಆದರೆ ಆ ಅಧಿವೇಶನ ಅನುಕೂಲಕರವಾಗಿದ್ದರಿಂದ ತಮ್ಮ ಯೋಚನೆಯನ್ನು ಬದಲಾಯಿಸಿಕೊಂಡರು.

* * *

---

* ಅದೇ ಪುಸ್ತಕದ ಪುಟ. 50.

ಅಧ್ಯಾಯ-63

ಸಂಸತ್ತಿನಲ್ಲಿ

ರಾಷ್ಟ್ರೀಯ ವಿಧಾನಸಭೆಯಲ್ಲಿ ಪಂಡಿತ್ ಮೋತಿಲಾಲರು ವಿರೋಧ ಪಕ್ಷದ ನಾಯಕರಾಗಿ ಮುಂದುವರೆದರು. ಚುನಾವಣೆಗಳಲ್ಲಿ ಮಾಳವೀಯಾಜಿ ಮತ್ತು ಲಾಲಾಜಿಯವರ ಹೋರಾಟ ದಕ್ಷಿಣ ಪ್ರಾಂತ್ಯವನ್ನು ಮುಟ್ಟಿರಲಿಲ್ಲ. ಅವರು ಉತ್ತರ ಭಾರತದ ಹಿಂದೂಗಳ ಬೆಂಬಲಕ್ಕಷ್ಟೇ ತಮ್ಮ ಪ್ರಭಾವವನ್ನು ಸೀಮಿತಗೊಳಿಸಿಕೊಂಡಿದ್ದರು. ಅದು ಅವರಿಗೆ ನಿರೀಕ್ಷಿತ ಫಲ ನೀಡಿತ್ತು. ಮಧ್ಯ ಭಾರತ ಮತ್ತು ಪಶ್ಚಿಮ ಭಾರತವನ್ನು ಅವರೇನೂ ಕಡೆಗಣಿಸಿರಲಿಲ್ಲ. ಆದರೆ ಪರ್ಯಾಯ ದ್ವೀಪದಲ್ಲಿ ಪ್ರಚಾರ ಕೈಗೊಳ್ಳಲು ಆ ಇಬ್ಬರು ನಾಯಕರಿಗೆ ಸಾಧ್ಯವಾಗಿರಲಿಲ್ಲ. ಇಬ್ಬರು ಎಲ್ಲೆಲ್ಲಿ ಪ್ರಚಾರ ನಡೆಸಿದ್ದರೋ ಅಲ್ಲೆಲ್ಲಾ ಅವರ ಪರವಾಗಿ ಚುನಾವಣಾ ಫಲಿತಾಂಶ ಪ್ರಚಂಡವಾಗಿತ್ತು. ಆ ಚುನಾವಣಾ ಪ್ರಚಾರದ ನಿರಂತರ ಒತ್ತಡ ಲಾಲಾಜಿಯವರ ಆರೋಗ್ಯದ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಉಂಟು ಮಾಡಿತ್ತು. ಸಿಂಧ್ ಪ್ರಾಂತ್ಯದ ಪ್ರವಾಸದ ಕಾಲದಲ್ಲಂತೂ ಅವರು ಅಧೀರರಾಗಿ ಹೋಗಿದ್ದರು. ಸ್ವತಂತ್ರ ಕಾಂಗ್ರೆಸ್ ಪಕ್ಷದಲ್ಲಿ ಪ್ರತಿಭೆ ಮತ್ತು ರಾಷ್ಟ್ರಭಕ್ತಿಯ ಮಹಾನ್ ಓತಪ್ರೋತವಿತ್ತು. ಲಾಲಾಜಿ ಮತ್ತು ಮಾಳವೀಯಾಜಿಯಂತಹ ಮಹಾನ್ ನಾಯಕತ್ವ ಆ ಪಕ್ಷದಲ್ಲಿತ್ತು. "ನಾನು ಈ ಪಕ್ಷದ ನಾಯಕ. ಮಾಳವೀಯಾಜಿ ನನ್ನ ನಾಯಕರು" ಎಂದು ಲಾಲಾಜಿ ಎಲ್ಲೆಡೆ ಹೇಳುತ್ತಿದ್ದರು. ಇಬ್ಬರು ಪ್ರಚಂಡ ನಾಯಕರ ಹೊಂದಾಣಿಕೆ, ಅಂತರ್ಗತಗಳು ಅಷ್ಟೇ ಸಮನ್ವಯಿತವಾಗಿದ್ದವು. ಅವರ ಹೊಸ ಪಕ್ಷವು ಸ್ವಾತಂತ್ರ್ಯ ಹೋರಾಟವನ್ನು ಪರಮೋಚ್ಚ ಗುರಿಯಾಗಿ ಪರಿಗಣಿಸಿತ್ತು. ಅಧಿಕಾರಷಾಹಿ ಮತ್ತು ಸ್ವರಾಜ್ ವಾದಿಗಳ ವಿರುದ್ಧ ಪ್ರತಿ ಹೋರಾಟದಲ್ಲೂ ಸ್ವತಂತ್ರ ಕಾಂಗ್ರೆಸ್ಸಿಗರು ಹೆಗಲಿಗೆ ಹೆಗಲು ಕೊಟ್ಟು ಮುನ್ನುಗ್ಗುತ್ತಿದ್ದರು. ಚುನಾವಣೆಗಳು ಮುಗಿದ ಹೊಸತರಲ್ಲೇ ಕಾಂಗ್ರೆಸ್ ಅಧಿವೇಶನ ಅಸ್ಸಾಂನ ಗುವಾಹತಿಯಲ್ಲಿ ಎಸ್. ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯಲ್ಲಿ ಏರ್ಪಾಟಾಯಿತು. ಅಧಿವೇಶನದಲ್ಲಿ ತಮ್ಮ ಪರವಾದ ನಿರ್ಣಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಲಾಲಾಜಿ ಮತ್ತು ಅವರ ಸಂಗಾತಿಗಳು ಕೃತ ನಿಶ್ಚಯ ಮಾಡಿದರು. ಸಾಧ್ಯವಾದರೆ ಕಾಂಗ್ರೆಸ್ಸಿನಿಂದ ಅನುಕೂಲಕರ ಅನುಮತಿ ಪಡೆದುಕೊಳ್ಳಲು ಅವರೆಲ್ಲಾ ಯೋಚಿಸಿದರು. ಗುವಾಹತಿ ಅಧಿವೇಶನದ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಳವೀಯಾಜಿ ಲಾಲಾಜಿಯವರನ್ನು ಬಹುವಾಗಿ ಕೇಳಿಕೊಂಡರು. ಎಂ. ಆರ್. ಜಯ್ಕರ್ ಸಹ ಲಾಲಾಜಿಯವರ ಮನ ಒಲಿಸಲು ಹಿಂದೆ ಬೀಳಲಿಲ್ಲ. ಬಹುಶಃ ಲಾಲಾಜಿ ಆ ಅಧಿವೇಶನದಲ್ಲಿ ಬೆಂಬಲ ಗಳಿಸಿಕೊಳ್ಳುವ ನಿಟ್ಟಿನಲ್ಲಿ ನಿರ್ದಿಷ್ಟವಾದ ಯಾವುದೇ ಪ್ರಯತ್ನವನ್ನು ಮಾಡಿದಂತೆ ಕಂಡು ಬರಲಿಲ್ಲ. ಆದರೆ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅವರು ಒಪ್ಪಿಕೊಂಡಿದ್ದರು. ಗುವಾಹತಿಗೆ ತೆರಳುವ ಹಂತದಲ್ಲಿ ಮಾರ್ಗ ಮಧ್ಯೆ [illegible]

ಸುದ್ದಿಯೊಂದು ಅವರಿಗೆ ತಲುಪಿತು. ಮತಾಂಧ ಮುಸ್ಲಿಂ ಹಂತಕನೊಬ್ಬನು ಸ್ವಾಮಿ ಶ್ರದ್ಧಾನಂದರನ್ನು ಕೊಲೆ ಮಾಡಿದ್ದ. ಆಘಾತಕರ ಸುದ್ದಿ ಅದಾಗಿತ್ತು. ಸ್ವಾಮಿ ಶ್ರದ್ಧಾನಂದರು ಹುತಾತ್ಮರಾದ ಘಟನೆಯಿಂದಾಗಿ ಗುವಾಹತಿಯ ಅಧಿವೇಶನದಲ್ಲಿ ದುಃಖದ ಛಾಯೆ ಆವರಿಸಿತು. ಅದರ ಹಿನ್ನಲೆಯಲ್ಲಿ ರಾಜಕೀಯ ವಾದ ವಿವಾದಗಳು ಮಹತ್ವ ಪಡೆದುಕೊಳ್ಳಲಿಲ್ಲ. ದೆಹಲಿ ಇಲ್ಲವೇ ಉತ್ತರ ಭಾರತದ ನಾನಾ ಕಡೆಗಳಲ್ಲಿ ಮುಂದೇನಾಗ ಬಹುದೆಂದು ಆತಂಕ ಆವರಿಸಿಕೊಂಡಿತ್ತು. ಆ ವೇಳೆಯಲ್ಲಿ ಅವರು ಕಲ್ಕತ್ತಾ ತಲುಪಿದ್ದರು. ಕೂಡಲೇ ದೆಹಲಿಗೆ ಮರಳಿ ಅಲ್ಲಿಂದ ಪಂಜಾಬ್ ತಲುಪಲು ನಿಶ್ಚಯಿಸಿದರು. ಮಹಾತ್ಮ ಗಾಂಧೀಜಿಯು ಅದಕ್ಕೆ ಒಪ್ಪಿಕೊಂಡರು. ಗುವಾಹತಿ ತಲುಪುವ ಬದಲು ಲಾಲಾಜಿ ದೆಹಲಿಗೆ ಮರಳಿದರು. ಅನಾರೋಗ್ಯದ ಕಾರಣದಿಂದ ಕೇಳ್ಕರ್ ಮತ್ತು ಜಯ್ಕರ್ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಳ್ಳಲಿಲ್ಲ. ಹೀಗಾಗಿ ಆ ಅಧಿವೇಶನ ಸ್ವರಾಜ್ ವಾದಿಗಳಿಗೆ ಮುಕ್ತವಾದ ವೇದಿಕೆಯಾಯಿತು. ಲಾಲಾಜಿ ಪಾಲ್ಗೊಂಡ ಕೊನೆಯ ಕಾಂಗ್ರೆಸ್ ಅಧಿವೇಶನ ಉತ್ತರ ಪ್ರದೇಶದ ಕಾನ್ಪುರದಲ್ಲಿ ಏರ್ಪಟ್ಟ 40ನೇ ಅಧಿವೇಶನ. ಅವರು ಪಾಲ್ಗೊಂಡ ಮೊದಲ ಕಾಂಗ್ರೆಸ್ ಅಧಿವೇಶನ ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ ಏರ್ಪಟ್ಟ 4ನೇಯದು.

ಅನತಿ ಕಾಲದಲ್ಲೇ ದೆಹಲಿಯ ರಾಷ್ಟ್ರೀಯ ವಿಧಾನಪರಿಷತ್ತಿನ ಅಧಿವೇಶನ ಸಮಾವೇಶಗೊಂಡಿತು. ಹಿಂದಿನ ವರ್ಷ ಆಗಸ್ಟ್ ಮಧ್ಯದಲ್ಲಿ ಯುರೋಪಿನಿಂದ ಮರಳಿದ ನಂತರ ಅವರಿಗೆ ವಿಶ್ರಾಂತಿಯೇ ಸಿಕ್ಕಿರಲಿಲ್ಲ. ಆ ಅಧಿವೇಶನ ಗುಂಟ ಅವರಿಗೆ ಒತ್ತಡದ ಮೇಲೆ ಒತ್ತಡ ಬಿದ್ದಿತು. ಅಧಿವೇಶನ ಮುಗಿಯುತ್ತಿದ್ದಂತೆಯೇ ತಮಗೆ ವಿಶ್ರಾಂತಿ ಅಗತ್ಯವಿದೆ ಎಂದು ಲಾಲಾಜಿಯವರಿಗೆ ಅನಿಸಿತು. ಅದಕ್ಕಾಗಿ ಅವರು 3-4 ತಿಂಗಳ ಕಾಲ ಯುರೋಪ್ ಪ್ರವಾಸ ಕೈಗೊಳ್ಳಲು ನಿರ್ಧರಿಸಿ ವ್ಯವಸ್ಥೆ ಮಾಡಿಕೊಂಡರು. ತತ್ಸಂಬಂಧದಲ್ಲಿ ಅವರು ದಿ ಪೀಪಲ್ ಪತ್ರಿಕೆಯಲ್ಲಿ ಹೀಗೆ ಬರೆದರು:

''ನಾನೀಗ ಯಾವುದೇ ಸಂದೇಶ ಅಥವಾ ಉದ್ದೇಶ ಹೊತ್ತು ಯುರೋಪಿಗೆ ಹೋಗುತ್ತಿಲ್ಲ. ವಿಶ್ರಾಂತಿ ಹಾಗೂ ಪುನಶ್ಚೇತರಿಕೆಯಲ್ಲದೆ ಮತ್ತೇನೂ ಈ ಪ್ರವಾಸದಲ್ಲಿ ಇಲ್ಲ. ಭಾರತದ ಆರೋಗ್ಯ ಪ್ರೇರಕ ವಿಶ್ರಾಂತಿ ದಾಮಗಳಲ್ಲಿ ಪದೇ ಪದೇ ಗಳಿಸಿದ ಅನುಭವದಿಂದ ಹೆಚ್ಚಿನ ಪ್ರಯೋಜನವೇನೂ ಆಗಿಲ್ಲ. ಗಿರಿಧಾಮಗಳು ಮತ್ತು ಕಡಲ ಕಿನಾರೆಗಳ ವಾಸ್ತವ್ಯಗಳಿಂದ ನನಗೆ ಅಗತ್ಯವಾದ ವಿಶ್ರಾಂತಿ ಸಿಕ್ಕಿಲ್ಲ. ಗಿರಿಧಾಮಗಳ ವಾತಾವರಣ ನನಗೆ ಹಿಡಿಸುತ್ತಿಲ್ಲ. ನನ್ನ ಉದರದ ಸ್ಥಿತಿ ನಿರಂತರವಾಗಿ ಏರುಪೇರಾಗುತ್ತಲೇ ಇದೆ. ಆ ಮಧ್ಯೆ ಭಾಷಣಗಳು ಮತ್ತು ಸಭೆಗಳು ಮುಂತಾದ ಕಲಾಪಗಳು ಹೆಚ್ಚು ಒತ್ತಡ ಬೀರುತ್ತಿವೆ. ಆಪ್ತರು ಮತ್ತು ಕ್ಷೇತ್ರಗಳ ಜನರ ಆಶೋತ್ತರಗಳನ್ನು ನಿರಾಕರಿಸಲು ಸಾಧ್ಯವಾಗುತ್ತಿಲ್ಲ. ಭಾರತೀಯ ಗಿರಿಧಾಮಗಳಲ್ಲಿ ವಿಶ್ರಾಂತಿ ಪಡೆಯಲು ತಗಲುವ ಖರ್ಚು ಯುರೋಪ್ ಪ್ರವಾಸದ ಖರ್ಚಿಗಿಂತ ಕಡಿಮೆಯದೇನೂ ಅಲ್ಲ. ನಾನು ಯಾವುದೇ ಮೋಜು ಅಥವಾ ಐಷಾರಾಮದ ಬದುಕು ಬಯಸುವವನಲ್ಲವಾದ್ದರಿಂದ ಅತ್ಯಂತ ಕಡಿಮ ಖರ್ಚಿನಲ್ಲಿ ಯುರೋಪಿನಲ್ಲಿರಬಲ್ಲೆ. ಸುಮಾರು ಮೂರೂವರೆ ತಿಂಗಳ ಈ ಪ್ರವಾಸ (ನನಗೆ ಲಭ್ಯವಾಗುವುದು ಅಷ್ಟೇ) ನನ್ನ ಆರೋಗ್ಯವನ್ನು ಸುಧಾರಿಸಿ ದೇಶದ

ಕಾರ್ಯವನ್ನು ಇನ್ನಷ್ಟು ಲವಲವಿಕೆಯಿಂದ ಕೈಗೊಳ್ಳಲು ಶಕ್ತಿ ನೀಡುತ್ತದೆ ಎಂದು ನಂಬಿದ್ದೇನೆ. ನಾನು ಭಾರತದಿಂದ ಅಲ್ಪಕಾಲದ ಮಟ್ಟಿಗೆ ದೂರವಾಗುವ ನನ್ನ ಈ ಅನಿವಾರ್ಯಕ್ಕೆ ಗೆಳೆಯರು ಮತ್ತು ದೇಶವಾಸಿಗಳು ನನ್ನನ್ನು ಕ್ಷಮಿಸುವರೆಂಬ ಭರವಸೆ ನನಗಿದೆ. ನಾನು ಮರಳಿದ ನಂತರ ನಾನು ನಿಮ್ಮೆಲ್ಲರ ಸೇವೆಗೆ ತನ್ಮೂಲಕ ನಾಡಿನ ಸೇವೆಗೆ ನನ್ನನ್ನು ಮತ್ತೆ ಸಮರ್ಪಿಸಿಕೊಳ್ಳುತ್ತೇನೆ.''

1927 ಮೇ 4ರಂದು ಅವರು ಎಸ್. ಎಸ್ ರಾವಲ್ಪಿಂಡಿ ಹಡಗಿನ ಮೂಲಕ ಯುರೋಪ್ ಪ್ರವಾಸ ಕೈಗೊಂಡರು. ಈ ಪ್ರವಾಸದಲ್ಲಿ ಅವರು ವಿದೇಶದಲ್ಲಿದ್ದಷ್ಟು ಕಾಲ ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ತೊಡಗಲಿಲ್ಲ. ಸಾಧ್ಯವಾದಷ್ಟು ತಮ್ಮ ಆರೋಗ್ಯ ಸುಧಾರಣೆಯ ಕಡೆಗೆ ಆಸಕ್ತಿ ವಹಿಸಿದರು. ಆಗಸ್ಟ್ ಮಧ್ಯ ಭಾಗದಲ್ಲಿ ಭಾರತಕ್ಕೆ ಮರಳಿದ ನಂತರ ಹೀಗೆ ಬರೆದರು:

``ನಾನು ನನ್ನ ಪ್ರವಾಸದ ಕಾಲದಲ್ಲಿ ಸಂಪೂರ್ಣವಾಗಿ ಆರೋಗ್ಯದ ಕಡೆಗೆ ಗಮನ ಹರಿಸಿದೆ. ಅಲ್ಲಿನ ಜನರೊಂದಿಗೆ ಅದನ್ನೇ ನಾನು ನಿವೇದಿಸಿಕೊಂಡೆ. ವಿಶ್ರಾಂತಿಯಲ್ಲದೆ ಬೇರಾವುದೇ ಚಟುವಟಿಕೆಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳಲಿಲ್ಲ. ವೈದ್ಯರಿಂದ ನಿರಂತರವಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಈ ಪ್ರವಾಸದ ಗುಂಟ ನಾನು ರಾಜಕೀಯೇತರ ವ್ಯಕ್ತಿಯಾಗಿರಬೇಕೆಂದು ನಾನು ಆರಂಭದಲ್ಲೇ ನಿರ್ಧರಿಸಿಕೊಂಡಿದ್ದೆ. ಕಳೆದ ವರ್ಷ ನವೆಂಬರ್‌ನಲ್ಲಿ ನರಮಂಡಲದ ಏರುಪೇರಿನಿಂದ ನರಳಿದ್ದೆ. ಮಾರ್ಚ್ ಅಂತ್ಯದತನಕ ನನಗೆ ಅದರಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಏಪ್ರಿಲ್‌ನಲ್ಲಿ ನಾನು ಸಿಂಧ್ ಪ್ರಾಂತ್ಯದ ಪ್ರವಾಸದಲ್ಲಿದ್ದಾಗ ನನ್ನ ಯಕೃತ್ತಿನ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಉಂಟಾಯಿತು. ಹೀಗಾಗಿ ನಾನು ಯುರೋಪ್ ಪ್ರವಾಸದ ನಿರ್ಧಾರ ಕೈಗೊಂಡೆ. ಹಡಗಿನಲ್ಲಿ ಕುಳಿತು ಪ್ರಯಾಣ ಮಾಡುವಾಗಲೂ ನಾನು ಯಾವುದೇ ಕೆಲಸ ಕಾರ್ಯದಲ್ಲಿ ತೊಡಗಲಿಲ್ಲ. 10 ದಿನಗಳ ಆ ಪ್ರವಾಸ ಪರ್ಯಂತ ನಾನು ಸಂಪೂರ್ಣ ವಿಶ್ರಾಂತಿ ಪಡೆದೆ. ಸುಧಾರಣೆ ಕಂಡೆ. ಲವಲವಿಕೆ ಉಂಟಾಯಿತು. ಮಾರ್ಗ ಮಧ್ಯೆ ಮೆಡಿಟೇರಿಯನ್‌ನಲ್ಲಿ ದುರಾದೃಷ್ಟವಶಾತ್ ನನಗೆ ಶೀತದ ಪೀಡೆ ಉಂಟಾಯಿತು. ಐದು ವಾರಗಳ ಕಾಲ ನರಳಿದೆ. ನಾನು ಲಂಡನ್‌ನಲ್ಲಿ ಇದ್ದದ್ದು ಕೇವಲ ನಾಲ್ಕು ವಾರಗಳು. ಮತ್ತು ಕೆಲವು ದಿನಗಳು ಅಷ್ಟೇ. ಆ ಅವಧಿಯಲ್ಲಿ ಯಾವುದೇ ಕೆಲಸ ಮಾಡಲಿಲ್ಲ ಲೇಬರ್ ಪಕ್ಷದ ಕೆಲವು ಗೆಳೆಯರನ್ನು ಬಿಟ್ಟರೆ ನಿರ್ದಿಷ್ಟವಾಗಿ ಬೇರೆ ಯಾರನ್ನು ಭೇಟಿ ಮಾಡಲಿಲ್ಲ. ಭಾರತದ ರಾಜ್ಯ ಕಾರ್ಯದರ್ಶಿಯನ್ನು ಭೇಟಿ ಮಾಡಲು ಅವಕಾಶವನ್ನು ಕೋರಲಿಲ್ಲ. ಭಾರತದ ಕಚೇರಿಗೂ ಸಹ ಹೋಗಲಿಲ್ಲ. ಹೌಸ್ ಆಫ್ ಕಾಮನ್ಸ್‌ನಲ್ಲಿ ಏರ್ಪಟ್ಟ ಭೋಜನ ಕೂಟವೊಂದರಲ್ಲಿ ಭಾರತದ ಅಧೀನ ಕಾರ್ಯದರ್ಶಿಯನ್ನು ಭೇಟಿ ಆಗುವ ಅವಕಾಶ ಪ್ರಾಪ್ತವಾಯಿತು. ಆ ಭೇಟಿಯಲ್ಲಿ ರಾಜಕಾರಣದ ಬಗ್ಗೆ ಯಾವುದೇ ಮಾತನಾಡಲಿಲ್ಲ. ಅವರಿಂದಲೂ ತಿಳಿದುಕೊಳ್ಳಲಿಲ್ಲ. ಮಾತುಕತೆ ಎಲ್ಲವೂ ಸಂಪೂರ್ಣವಾಗಿ ಸಾಹಿತ್ಯ, ಕಲೆ ಇಲ್ಲವೇ ಪ್ರಾರ್ಥನಾ ಗೋಷ್ಠಿಗೆಯ ಚೌಕಟ್ಟಿಗೆ ಸೀಮಿತವಾಗಿತ್ತು.''

ಲಾಲಾಜಿ ಭಾರತಕ್ಕೆ ಮರಳಿದಾಗ ನಿರ್ದಿಷ್ಟವಾದ ಕಾರ್ಯವೊಂದನ್ನು ಕೈಗೊಂಡಂತೆ ಕಂಡು ಬಂದಿತು. ಮುಂದಿನ ಕೆಲವು ತಿಂಗಳವರೆಗೆ ಅವರು ಆ ಕಾರ್ಯದಲ್ಲೇ ನಿರತರಾಗಿದ್ದರು. ಯುರೋಪಿನಿಂದ ಮರಳುತ್ತಿದ್ದಂತೆಯೇ ಪ್ರಕಟಣೆಗೆ ನಿಯೋಜಿಸಿದ್ದ ತಮ್ಮ ಹೊತ್ತಿಗೆಯೊಂದಕ್ಕೆ ಅಂತಿಮ ರೂಪು ಕೊಡುವ ಕಾರ್ಯ ಅದಾಗಿತ್ತು. ತಮ್ಮ ಇತರ ಅನೇಕ ಸಹ ಪ್ರಯಾಣಿಕರಂತೆ ತಾವು ಹೊತ್ತು ತಂದಿದ್ದ ನೆನಪಿನ ಬುತ್ತಿ ಅಕ್ಷರ ರೂಪಕ್ಕೆ ಇಳಿದಿತ್ತು. ಮದರ್ ಇಂಡಿಯಾ ಅಂಕಣಗಾರ್ತಿ ಕ್ಯಾಥರಿನ್ ಮೇಯೋ ಆ ಪುಸ್ತಕದ ಬಗ್ಗೆ ಬರೆದಿದ್ದಾರೆ. ಸಿಮ್ಲಾದಲ್ಲಿ ಏರ್ಪಟ್ಟ ವಿಧಾನಸಭೆ ಅಧಿವೇಶನದಲ್ಲಿ ಪಾಲ್ಗೊಂಡು ಮರಳಿದ ನಂತರ ತಮ್ಮ ಆ ಪುಸ್ತಕದ ಪ್ರಕಟಣಾ ಕಾರ್ಯದಲ್ಲಿ ಅವರು ನಿರತರಾದರು. ಅವರು ಸಿಮ್ಲಾದಿಂದ ಲಾಹೋರಿಗೆ ಮರಳುವ ವೇಳೆಗಾಗಲೇ ಹೊತ್ತಿಗೆಯ ಹಸ್ತಪ್ರತಿಯ ಭಾಗ ಅಂತಿಮ ರೂಪಕ್ಕೆ ಬಂದಿತ್ತು. ಮುದ್ರಣ ಮತ್ತು ಪ್ರಕಟಣಾ ಕಾರ್ಯ ನಿಧಾನವಾಗಿತ್ತು. ಲಾಲಾಜಿ ಅವರಿಗೆ ಹೆಚ್ಚಿನ ಬಿಡುವು ಇರಲಿಲ್ಲ. ಆಗ ಅವರು ತಮ್ಮ ಆ ಹೊತ್ತಿಗೆಯ ಹಸ್ತಪ್ರತಿಯನ್ನು ಸಂಪಾದಿಸುವ ಹೊಣೆಗಾರಿಕೆಯನ್ನು ನನಗೆ ವಹಿಸಿದರು. ಅವಸರ ಅವಸರದಲ್ಲಿ ಬರೆದಿದ್ದ ಹಸ್ತಪ್ರತಿಗೆ ಅಂತಿಮ ರೂಪು ಕೊಡುವ ಜವಾಬ್ದಾರಿ ನನ್ನದಾಯಿತು. ನನಗೂ ಸಹ ಇತರ ಕೆಲಸಗಳ ಬಾಹುಳ್ಯವಿತ್ತು. ಹೀಗಾಗಿ ಇಬ್ಬರು ಕಲ್ಕತ್ತಾಕ್ಕೆ ಹೋಗಿ ಆ ಕೆಲಸದಲ್ಲಿ ನಿಮಗ್ನರಾಗಿ ಅದು ಪೂರ್ಣಗೊಂಡ ನಂತರ ಮರಳುವುದೆಂದು ನಿರ್ಧರಿಸಿಕೊಂಡೆವು. ಕಲ್ಕತ್ತಾಕ್ಕೆ ಹೋದೆವು. ಒಂದೂವರೆ ತಿಂಗಳ ಎಡಬಿಡದ ನಿರಂತರ ಕೆಲಸದ ನಂತರ *Unhappy India* ಒಂದು ರೂಪಕ್ಕೆ ಬಂದಿತು. ತಮ್ಮ ಕಡೆಯ ಆ ಹೊತ್ತಿಗೆಯನ್ನು ಅವರು ಅದೇ ಹೆಸರಿನಿಂದ ಕರೆಯಲು ಇಚ್ಛಿಸಿದರು. ಹಸ್ತಪ್ರತಿಯನ್ನು ಒಂದು ರೂಪಕ್ಕೆ ಸಿದ್ಧಗೊಳಿಸಿ ಪ್ರಕಾಶನಕ್ಕೆ ಅಣಿ ಮಾಡಲಾಯಿತು. ಆದರೂ ಆ ಹೊತ್ತಿಗೆ 1928ರ ವಸಂತ ಕಾಲದ ಕೊನೆಯತನಕ ಪ್ರಕಾಶನಗೊಳ್ಳಲಿಲ್ಲ. ಲಾಲಾಜಿಯುವರು ರಾಷ್ಟ್ರೀಯ ವಿಧಾನಸಭೆಯ ಎರಡು ಸಮಿತಿಗಳಲ್ಲಿ ಕಾರ್ಯಪ್ರವೃತ್ತರಾಗಿದ್ದರು. ಅದರಿಂದ ಅವರಿಗೆ ಇತರ ಕೆಲಸ ಕಾರ್ಯಗಳಿಗೆ ಹೆಚ್ಚಿನ ಸಮಯವೇ ಪ್ರಾಪ್ತವಾಗುತ್ತಿರಲಿಲ್ಲ. ಆ ಎರಡು ಸಮಿತಿಗಳು ಜನಪರ ಕೆಲಸಗಳಿಗೆ ಸಂಬಂಧಪಟ್ಟಿದ್ದರಿಂದ ಸಾಕಷ್ಟು ಪ್ರವಾಸ ಕೈಗೊಳ್ಳಬೇಕಾಗುತ್ತಿತ್ತು. ರಸ್ತೆ ಸಮಿತಿಯಲ್ಲಿ ಅವರಿದ್ದುದ್ದರಿಂದ ಅಡ್ಯಾರ್ ಸ್ಥಳಕ್ಕೆ ಭೇಟಿ ಕೊಡುವ ಅವಕಾಶವೂ ಒದಗಿತು. ಅನೇಕ ವರ್ಷಗಳ ನಂತರ ಶ್ರೀಮತಿ ಅನಿಬೆಸಂಟರನ್ನು ಅವರು ಭೇಟಿ ಮಾಡುವಂತಾಯಿತು. ಏಪ್ರಿಲ್ 4ರಂದು ಸಮಿತಿಯ ಕೆಲಸ ಪೂರ್ಣಗೊಂಡ ನಂತರ ಅವರು ಏಪ್ರಿಲ್ 6ರಂದು ಸಾಬರಮತಿಗೆ ತೆರಳಿ ಮಹಾತ್ಮ ಗಾಂಧೀಜಿಯವರನ್ನು ಭೇಟಿ ಮಾಡಿದರು. ಆ ಸಮಯದಲ್ಲಿ ಮಹಾತ್ಮ ಗಾಂಧೀ ಯುರೋಪ್ ಪ್ರವಾಸಕ್ಕೆ ಯೋಜಿಸಿಕೊಂಡಿದ್ದರು. ಆದರೆ ಸೈಮನ್ ಆಯೋಗದ ಗಂಭೀರ ಪರಿಸ್ಥಿತಿಯಿಂದಾಗಿ ಆ ಪ್ರವಾಸವನ್ನು ಅವರು ಕೈಬಿಡಬೇಕಾಯಿತು. ಲಾಲಾಜಿ ಮಹಾತ್ಮ ಗಾಂಧೀಜಿಯೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಕಾಂಗ್ರೆಸ್ ಪಕ್ಷದ ನೂಲು ತೆಗೆಯುವ ಕಾರ್ಯಕ್ರಮದ ಆಂದೋಲನಕ್ಕೆ ಸಂಬಂಧಪಟ್ಟ ಚರ್ಚೆ ಅದಾಗಿತ್ತು. ಜವಳಿ ಗಿರಣಿ ಮಾಲೀಕರನ್ನು ಶೋಷಣೆಯಿಂದ ಸಂರಕ್ಷಿಸುವ ವಿಷಯದಲ್ಲಿ ಲಾಲಾಜಿ ಪ್ರಬಲ ನಿಲುವು ತಾಳಿದರು. ದೇಶದ ಹಿತದೃಷ್ಟಿಯಿಂದಲೂ, ಭಾರತದಲ್ಲಿರುವ ಗಿರಣಿಗಳಿಂದ ಉತ್ಪಾದನೆಯಾಗುವಷ್ಟೇ ದೇಶದ

ಬಟ್ಟೆಯ ಅಗತ್ಯ ಈಡೇರುವುದಿಲ್ಲವೆಂಬ ಕಾರಣದಿಂದ ಅವರು ಆ ಬಹಿಷ್ಕಾರ ನಿರ್ಧಾರವನ್ನು ಹಿಂದೆಯೂ ವಿರೋಧಿಸಿದ್ದರು. ಭಾರತದಲ್ಲಿ ನಿರುದ್ಯೋಗದ ಮೂಲಕ ಅಪಾರ ನಷ್ಟವಾಗುತ್ತಿದೆ ಎಂಬ ಅಂಶವನ್ನು ಲಾಲಾಜಿ ಗ್ರೇಗ್ ರಚಿತ ಪುಸ್ತಕದಲ್ಲಿ ಓದಿದ್ದರು. ಅದು ಅವರ ಮೇಲೆ ಪರಿಣಾಮವನ್ನು ಬೀರಿತ್ತು. ನೂಲು ತೆಗೆಯುವುದು ಮತ್ತು ಕೈಮಗ್ಗದ ನೇಯ್ಗೆಯಿಂದ ಈ ಸಮಸ್ಯೆಗೆ ಎಷ್ಟರಮಟ್ಟಿಗೆ ಪರಿಹಾರವಾಗುತ್ತದೆ ಎಂಬುದರ ಬಗ್ಗೆ ಲಾಲಾಜಿ ಯೋಚಿಸಿದ್ದರು.

ಜೂನ್ ವೇಳೆಗೆ ಬರ್ದೋಲಿಯಲ್ಲಿ ಬಾಡಿಗೆ ನಿರಾಕರಣೆ ಚಳವಳಿ ಆರಂಭವಾಯಿತು. ಪೂನಾದಲ್ಲಿದ್ದಾಗ ಲಾಲಾಜಿಯವರು ವಲ್ಲಭಭಾಯಿ ಪಟೇಲ್ ಅವರಿಗೆ ಪತ್ರವೊಂದನ್ನು ಬರೆದರು. ಬರ್ದೋಲಿಗೆ ತಾವು ಬಂದರೆ ಏನಾದರೂ ಸಹಾಯವಾಗಬಹುದೇ ಎಂದು ಕೇಳಿದರು. ಸರ್ದಾರರು ಬರೆದ ಪ್ರತ್ಯುತ್ತರ ಹೀಗಿತ್ತು:

“ಮಳೆ ಬಿರುಸಾಗಿ ಆರಂಭಗೊಂಡಿದೆ. ಹಳ್ಳಿಗಳಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಜಪ್ತಿ ಕಾರ್ಯಗಳನ್ನು ತಡೆಗಟ್ಟಲಾಗಿದೆ. ಜನರು ತಮ್ಮ ತಮ್ಮ ಕೃಷಿ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ನಿಮ್ಮನ್ನು ನಾನು ವಿವಿಧ ಶಿಬಿರಗಳಿಗೆ ಕರೆದುಕೊಂಡು ಹೋಗಲು ಅಸಾಧ್ಯವಾಗುತ್ತದೆ. ಯಾವುದೇ ಪ್ರಮುಖ ಹಳ್ಳಿಗಳಿಗೂ ಕರೆದುಕೊಂಡು ಹೋಗಲಾಗುವುದಿಲ್ಲ. ನೀವು ಬರುವುದಾದರೆ ಬರ್ದೋಲಿ ಆಶ್ರಮಕ್ಕಷ್ಟೇ ಬರಬಹುದು. ಅಲ್ಲಿ ನೀವು ನನ್ನನ್ನು ಭೇಟಿ ಮಾಡಬಹುದು. ಆಶ್ರಮದಲ್ಲಿರುವ ನನ್ನ ಕೆಲವು ಸಹವರ್ತಿಗಳು ನಿಮಗೆ ಸಿಗುತ್ತಾರೆ.”

ಪತ್ರದ ಒಕ್ಕಣೆ ನೋಡಿ ಅಲ್ಲಿಗೆ ಹೋಗುವ ಉದ್ದೇಶವನ್ನು ಲಾಲಾಜಿ ಕೈಬಿಟ್ಟರು.

ಚುನಾವಣಾ ಹೋರಾಟ ಹೆಚ್ಚು ಕಡಿಮೆ ಮುಗಿದ ಕಥೆಯಾಗಿತ್ತು. ವಿಧಾನಸಭೆಯಲ್ಲಿ ಲಾಲಾಜಿ ಮತ್ತು ಪಂಡಿತ್ ಮೋತಿಲಾಲರು ಪರಸ್ಪರ ಸ್ನೇಹ ಹುರುಪಿನಲ್ಲಿ ಕಲೆತು ಕೆಲಸ ಮಾಡುತ್ತಿದ್ದರು. ನೆಹರು ಸಿದ್ಧಪಡಿಸಿದ ವರದಿಯನ್ನು ಲಾಲಾಜಿ ಅನುಮೋದಿಸಿದರು. ಅಗತ್ಯವಾದ ಎಲ್ಲಾ ಸಂದರ್ಭಗಳನ್ನು ಪಂಡಿತ್ ಮೋತಿಲಾಲರ ಕೆಲಸಗಳಲ್ಲಿ ಲಾಲಾಜಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಅವರ ಈ ಸಮನ್ವಯದ ಕೆಲಸ 1921 ಇಲ್ಲವೇ 1924ರಲ್ಲಿ ನಡೆಯುತ್ತಿದ್ದ ಕೆಲಸ ಕಾರ್ಯಗಳಿಗಿಂತಲೂ ಹೆಚ್ಚು ಆತ್ಮೀಯವಾಗಿತ್ತು. ಆಗಸ್ಟ್ ಅಂತ್ಯದ ವೇಳೆಗೆ ಲಕ್ನೋದಲ್ಲಿ ಸಮಾವೇಶಗೊಂಡ ಸಭೆಯಲ್ಲಿ ನೆಹರು ವರದಿಯನ್ನು ಪರ್ಯಾಲೋಚಿಸಲಾಯಿತು. ಕೆಲವು ತಿದ್ದುಪಡಿಗಳೊಂದಿಗೆ ಅದನ್ನು ಅಂಗೀಕರಿಸಲಾಯಿತು. ಡಾ. ಅನ್ಸಾರಿ, ಶ್ರೀಮತಿ ಅನಿಬೆಸೆಂಟ್, ಮಾಳವೀಯಾಜಿ, ಜಿನ್ನಾ, ಸಿ. ವಿಜಯ ರಾಘವಾಚಾರ್ಯ ಮುಂತಾದವರೊಂದಿಗೆ ಜೊತೆಗೂಡಿ ಲಾಲಾಜಿಯವರನ್ನು ಸಮಿತಿಯಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲಾಯಿತು. ಪ್ರಚಾರದ ಆಂದೋಲನದಲ್ಲಿ ಲಾಲಾಜಿ ಮನಃಪೂರ್ವಕವಾಗಿ ಪಾಲ್ಗೊಂಡರು. ಆ ಸಮಯದಲ್ಲಿ ಲಾಲಾಜಿ ಮತ್ತು ಪಂಡಿತ್ ಮೋತಿಲಾಲರ ನಡುವೆ ಬೆಸಗೊಂಡ ಆತ್ಮೀಯತೆ ಹೇಗಿತ್ತು ಎಂಬುದನ್ನು ಆಗ ಅವರಿಬ್ಬರ ನಡುವೆ ನಡೆದ ಕೆಲವು ಪತ್ರಗಳ ವಿನಿಮಯದ ಒಕ್ಕಣೆಯಿಂದ ತಿಳಿದುಕೊಳ್ಳಬಹುದಾಗಿದೆ

* * *

ಅಧ್ಯಾಯ-64

ಅಂತ್ಯ

ದಾಳಿಗೆ ಸನ್ನದ್ಧವಾದಾಗ ಯಾರೂ 'ಹೋಗು' ಎನ್ನುವುದಿಲ್ಲ. 'ಬಾ' ಎಂದೇ ಆಹ್ವಾನವೀಯುತ್ತಾರೆ. ಲಾಲಾಜಿಯವರಿಗೆ ಸಲ್ಲಿಸಿದ ಶ್ರದ್ಧಾಂಜಲಿಯಲ್ಲಿ ಶ್ರೀಮತಿ ಅನಿಬೆಸೆಂಟರು ಚಾರ್ಲ್ಸ್ ಬ್ರಾಡ್ಲ್ ಅವರ ಈ ಮಾತುಗಳನ್ನು ಯಥೋಚಿತವಾಗಿ ಸ್ಮರಿಸಿಕೊಂಡಿದ್ದಾರೆ.

ಸೈಮನ್ ಆಯೋಗವು ಎರಡನೇ ಬಾರಿಗೆ 1928ರ ಅಕ್ಟೋಬರ್ 11ರಂದು ಕರಾಳ ರಾತ್ರಿಯಲ್ಲಿ ಭಾರತಕ್ಕೆ ಆಗಮಿಸಿತು. ಅವರ ಕಾರ್ಯ ಕಲಾಪ ಪಟ್ಟಿಯ ಪ್ರಕಾರ 30ರಂದು ಅದು ಲಾಹೋರಿಗೆ ಭೇಟಿ ಕೊಡಬೇಕಾಗಿತ್ತು. 27 ಮತ್ತು 28ರಂದು ಇಟಾವದಲ್ಲಿ ಏರ್ಪಟ್ಟ ಆಗ್ರಾ ಪ್ರಾಂತೀಯ ಹಿಂದೂ ಸಮ್ಮೇಳನದ ಅಧ್ಯಕ್ಷತೆಯನ್ನು ಲಾಲಾಜಿ ವಹಿಸಿದ್ದರು. ನೆಹರು ವರದಿಯ ಪ್ರಸ್ತಾಪಗಳಿಗೆ ಬೆಂಬಲವಾಗಿ ಹಿಂದೂಗಳ ಮತಾಭಿಪ್ರಾಯವನ್ನು ಕ್ರೋಡಿಕರಿಸಲು ಅವರು ಅಲ್ಲಿಗೆ ತೆರಳಿದ್ದರು. ನೆಹರು ಯೋಜನೆಗೆ ಬೆಂಬಲ ಗಳಿಸಿಕೊಳ್ಳುವ ಜೊತೆಗೆ ಸೈಮನ್ ಆಯೋಗದ ಬಹಿಷ್ಕಾರವು ಅವರ ಆಶಯಗಳಲ್ಲಿ ಸೇರಿತ್ತು. ತಮ್ಮದೇ ನಗರಕ್ಕೆ ಸೈಮನ್ ಆಯೋಗ ಭೇಟಿ ಕೊಡುತ್ತದೆ ಎಂದು ತಿಳಿದ ತಕ್ಷಣ ತಾವು ಅಲ್ಲಿರಲೇ ಬೇಕೆಂದು ನಿಶ್ಚಯಿಸಿ ಲಾಲಾಜಿ ಕೂಡಲೇ ಇಟಾವದಿಂದ ಹೊರಟರು. ಅಲ್ಲಿ ನಡೆಸಲು ಸಂಯೋಜಿಸಿದ ಬಹಿಷ್ಕಾರದ ಕಲಾಪದಲ್ಲಿ ಎದುರಾಳಿಗಳಿಗೆ 'ಹೋಗು' ಎನ್ನುವ ಬದಲು 'ಬಾ' ಎಂದು ನಿಮಂತ್ರಣ ನೀಡುವ ಕೆಚ್ಚೆದೆಯ ಹೋರಾಟ ಅವರದಾಗಿತ್ತು. 30ರ ಬೆಳಿಗ್ಗೆ ಪ್ರಚಂಡ ಪ್ರತಿಭಟನಾ ರ್‍ಯಾಲಿ ''ಸೈಮನ್ ಹಿಂದಕ್ಕೆ ಹೋಗು'' ಎಂದು ರ್‍ಯಾಲಿ ಒಕ್ಕೊರಲಿನಿಂದ ಕೂಗುತ್ತಿದ್ದರೆ ಲಾಲಾಜಿ ದಾಳಿಯನ್ನು 'ಬಾ' ಎಂದು ಆಹ್ವಾನಿಸುತ್ತಿದ್ದರು. ಪ್ರತಿಭಟನಾಕಾರರ ಉದ್ವೇಗ, ಉನ್ಮಾದಗಳು ಮುಗಿಲು ಮುಟ್ಟಿದ್ದವು. 'ಸೈಮನ್ ಮರಳಿ ಹೋಗು' ಘೋಷಣೆ ಅಣುರಣಿತವಾಗುತ್ತಿತ್ತು. ಪ್ರತಿ ಪ್ರದರ್ಶನಕಾರನು ಕಪ್ಪು ಬಾವುಟವನ್ನು ಪ್ರದರ್ಶಿಸುತ್ತಾ ಪ್ರತಿಭಟನೆಯ ಸಂಕೇತವನ್ನು ದಟ್ಟಗೊಳಿಸಿದ್ದರು. ಕಪ್ಪು ಬಾವುಟಗಳ ಸಂಕೇತ ಜಾನ್ ಸೈಮನ್ ಮತ್ತು ಅವರ ಒಡನಾಡಿಗಳಿಗೆ ನಿರಾಕರಣೆಯ ದ್ಯೋತಕವಾಗಿತ್ತು. ''ಸೈಮನ್ ಹಿಂದಕ್ಕೆ ಹೋಗು'' ಎನ್ನುವ ತಮ್ಮ ಒತ್ತಾಯಕ್ಕೆ ಪೂರಕವಾಗಿ ಪ್ರತಿಭಟನಕಾರರು ಕಪ್ಪು ಬಾವುಟಗಳನ್ನು ನಿರಂತರವಾಗಿ ಆಡಿಸುತ್ತಿದ್ದರು. ಆ ಪ್ರದರ್ಶನ ಸುವ್ಯವಸ್ಥಿತವಾಗಿತ್ತು. ಪೂರ್ಣ ಹತೋಟಿಯಲ್ಲಿತ್ತು. ಲಾಹೋರ್ ನಗರ ಹಿಂದೆಂದೂ ಅಂಥ ಪ್ರದರ್ಶನವನ್ನು ಕಂಡಿರಲಿಲ್ಲ. ಪ್ರತಿಭಟನೆಯ ಮುಂಚೂಣಿಯಲ್ಲಿ ಎದೆಯೊಡ್ಡಿ ನಿಂತಿದ್ದರು. ಪ್ರದರ್ಶನ ಸ್ತೋಮಕ್ಕೆ ಅದೊಂದು ಮಹಾನ್ ಸ್ಫೂರ್ತಿಯಾಗಿತ್ತು. ಪ್ರದರ್ಶನಕಾರರು ಎಷ್ಟರಮಟ್ಟಿಗೆ ಶಿಸ್ತುಬದ್ಧರು ಶಾಂತಚಿತ್ತರಾಗಿರುತ್ತಾರೆ ಎಂಬುದಕ್ಕೆ ಅದೊಂದು ಅತ್ಯುತ್ತಮ ಉದಾಹರಣೆ ಎನಿಸಿತು.

ಇಡೀ ಪ್ರತಿಭಟನೆ ಏಕ ವ್ಯಕ್ತಿಯ ಪ್ರತಿಭಟನೆಯಂತಿತ್ತು. ಲಾಲಾಜಿ ಬೊಮ್ಮನಹಳ್ಳಿಯ ಕಿಂದರಜೋಗಿಯ ರೀತಿಯಲ್ಲಿ ಆ ಪ್ರದರ್ಶನ ಸಮೂಹವನ್ನು ಮುನ್ನಡೆಸುತ್ತಿದ್ದರೇ ಹೊರತು ಹೋರಾಟಕ್ಕೆ ಪ್ರತಿ ಹೋರಾಟದ ಕೆಚ್ಚು ತುಂಬುವ ಸೇನಾಧಿಪತಿಯಂತಿರಲಿಲ್ಲ. ಪೊಲೀಸರು ಹಾಗೂ ಸೇನಾ ಪಡೆಗಳು ಸಾಕಷ್ಟು ಮುಂಚಿತವಾಗಿ ತಮ್ಮ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ರೈಲ್ವೆ ನಿಲ್ದಾಣಕ್ಕೆ ಪ್ರವೇಶವಿದ್ದ ಪಶ್ಚಿಮ ಭಾಗದಲ್ಲಿ ರಾತ್ರೋರಾತ್ರಿ ಮುಳ್ಳುತಂತಿಯಿಂದ ಬೇಲಿ ಕಟ್ಟಲಾಗಿತ್ತು. ಸೈಮನ್ ಆಯೋಗದ ಸದಸ್ಯರನ್ನು ನಿಲ್ದಾಣದ ಪೂರ್ವ ತುದಿಯ ಮುಖಾಂತರ ಪಾರು ಮಾಡುವುದು ಅದರ ಉದ್ದೇಶವಾಗಿತ್ತು. ಪ್ರತಿಭಟನೆಕಾರರು ಮುಳ್ಳುತಂತಿ ಬೇಲಿಗೆ ಸಮೀಪದಲ್ಲಿ ನಿಂತರು. ತಮ್ಮ ಒಕ್ಕೊರಲಿನ, ಮುಗಿಲು ಮುಟ್ಟುವ ದನಿ ಸರ್ ಜಾರ್ಜ್ ಸೈಮನ್ ಮತ್ತು ಅವರ ಒಡನಾಡಿಗಳಿಗೆ ಮುಟ್ಟುತ್ತದೆ ಎಂದು ಆ ಪ್ರತಿಭಟನಕಾರರಿಗೆ ಗೊತ್ತಿತ್ತು. ನಿಲ್ದಾಣದ ಹೊರಗೆ ನಿಲ್ಲಿಸಲಾಗಿದ್ದ ಮೋಟಾರು ಕಾರುಗಳಿಗೆ ಹತ್ತುವ ಹಂತದಲ್ಲಿ ಅವರಿಗೆ ಪ್ರದರ್ಶನಕಾರರು ಬೀಸುವ ಕಪ್ಪು ಬಾವುಟಗಳ ಕರಾಳ ದರ್ಶನವಾಗುತ್ತದೆ ಸೈಮನ್ ಆಯೋಗ ಅನಗತ್ಯದ ಬಗ್ಗೆ ಸಾಂಕೇತಿಕ ಅರ್ಥವಾಗುತ್ತದೆ ಎಂದು ರ್‍ಯಾಲಿಕಾರರು ಅಂದು ಕೊಂಡರು. ಪ್ರತಿಭಟನಾ ಮೆರವಣಿಗೆ ಅಲ್ಲಿ ನಿಂತಿತು. ಸೈಮನ್ ತಂಡ ಆಗಮಿಸುವ ನಿರೀಕ್ಷೆ ಮಾಡತೊಡಗಿತು. ಕಾಲ ಉರುಳುತ್ತಿದೆ. ಆ ಇಡೀ ಪ್ರತಿಭಟನಾ ರ್‍ಯಾಲಿಯ ಪ್ರಮುಖ ವ್ಯಕ್ತಿತ್ವ ಅತುಲ್ಲಾ ಷಾ ಬೋಖಾರಿಯದಾಗಿತ್ತು. ರಾತ್ರಿ ಇಡೀ ರ್‍ಯಾಲಿಯನ್ನು ಸಂಯೋಜಿಸಿ ಬೆಳಗಿನ ಜಾವದ ವೇಳೆಗೆ ಅದನ್ನು ಶಿಸ್ತುಬದ್ಧವಾಗಿ ಸಂಯೋಜಿಸಿಕೊಂಡಿದ್ದ ಆತನ ಪರಿ ಲಾಲಾಜಿಯವರಿಗೆ ಹಿಡಿಸಿತು. ಪ್ರತಿಭಟನಕಾರರು ಬಹು ಹೊತ್ತಿನ ತನಕ ಕಾಯ್ದರು. ನಸುಕು ಇನ್ನೂ ಹರಿದಿರಲಿಲ್ಲ. ಆದರೂ ಸೈಮನ್ ತಂಡ ಬರಲಿಲ್ಲ. ದಿನ ಸಾಗತೊಡಗಿದಂತೆ ಬಿಸಿಲಿನ ಝಳ ಹೆಚ್ಚಾಗತೊಡಗಿತು. ಲಾಲಾಜಿ ಛತ್ರಿಯೊಂದರ ಅಡಿ ನಿಂತಿದ್ದರು. ಪ್ರದರ್ಶನಕಾರರು ಶಿಸ್ತುಬದ್ಧವಾಗಿ ನಡೆದುಕೊಂಡಿದ್ದದ್ದು ಅವರಿಗೆ ಸಂಪೂರ್ಣ ತೃಪ್ತಿ ತಂದುಕೊಟ್ಟಿತು. ಪ್ರಚೋದನೆ ನೀಡಬಹುದಾದ ಮುಳ್ಳಿನ ತಂತಿಯ ಬೇಲಿಯನ್ನು ಕಂಡೂ ಸಹ ರ್‍ಯಾಲಿ ಸಂಯಮದಿಂದ ಇದ್ದದ್ದು ಅವರನ್ನು ಅಚ್ಚರಿಗೊಳಿಸಿತು

ಕಾನೂನು ಮತ್ತು ಸುವ್ಯವಸ್ಥೆ ಸೂಕ್ಷ್ಮವಾದದ್ದು. ಪೊಲೀಸರ ಕೈಯಲ್ಲಿ ನಿಯಂತ್ರಣದ ಹೆಸರಿನಲ್ಲಿ ಲಾಠಿ, ಬಂದೂಕುಗಳಿರುತ್ತವೆ. ಕೇವಲ ಪ್ರದರ್ಶನಕಾರರ ಕಡೆಗಷ್ಟೇ ಅಲ್ಲ ಪತ್ರಕರ್ತರ ಮೇಲೂ ಸಹ ಪೊಲೀಸರ ಪ್ರದರ್ಶನ 'ಅರ್ಥಹೀನವಾಗಿ' ನಡೆಯುವುದುಂಟು ಟ್ರಿಬ್ಯೂನ್ ಪತ್ರಿಕೆಯ ಪ್ರತಿನಿಧಿ ರೈಲ್ವೆ ಪ್ಲಾಟ್‌ಫಾರಂಗೆ ಪ್ರವೇಶಿಸಿದಾಗ, ಆತನ ಬಳಿಯಿದ್ದ ಪರವಾನಗಿ ಪತ್ರದ ಸಿಂಧುತ್ವವನ್ನು ಹಿರಿಯ ಪೊಲೀಸ್ ಸುಪರಿಂಟೆಂಡೆಂಟರು ಪ್ರಶ್ನಿಸಿದರು ಅವರ ಆ ಕೃತ್ಯ ಅಷ್ಟಕ್ಕೆ ನಿಲ್ಲಲಿಲ್ಲ. ಆ ಪ್ರತಿನಿಧಿಯನ್ನು ಅವಹೇಳನ ಮಾಡಿದರು ಕೊನೆಗೆ ಅವರ ವಿರುದ್ಧ ಕಟ್ಟಳೆಯನ್ನು ವಿಧಿಸಿ ದಂಡ ಹಾಕಿದರು. ಪ್ರದರ್ಶನ, ಪ್ರತಿಭಟನೆಯ ಸಮಯಗಳಲ್ಲಿ ಪೊಲೀಸರು ಹೇಗೆ ಪ್ರಚೋದನೆ ಉಂಟು ಮಾಡುತ್ತಾರೆ ಎಂಬುದನ್ನು ವಿವರಿಸಿ ಹೇಳುವುದು ಕೂಡಾ ಅರ್ಥಹೀನವಾಗುತ್ತದೆ. ಬಹುತೇಕ ಮೊದಲೇ ಅವರು ಮುಂಗಡವಾಗಿ ತಮ್ಮ ಮನಸ್ಥಿತಿಯನ್ನು ರೂಪಿಸಿಕೊಂಡಿರುತ್ತಾರೆ ಪೂರ್ವಯೋಜಿತವಾಗಿದ್ದರೆ ಮಾಡುವುದಾದರೂ ಏನು? ಈಸೋಪನ ಕಟ್ಟುಕಥೆಗಳ ತೋಳ ಮತ್ತು ಕುರಿಮರಿಯ ಪ್ರಸಂಗ

ಗೊತ್ತಿಲ್ಲವೇ? ಪ್ರದರ್ಶನ ಮತ್ತು ಪ್ರತಿಭಟನೆಯ ಕಾಲದಲ್ಲಿ ಪೊಲೀಸರ ಧೋರಣೆಯು ಅದೇ ತೆರನಾಗಿರುತ್ತದೆ. ಸಭೆ ಎಷ್ಟೇ ಶಾಂತವಾಗಿದ್ದರೂ ನಾಯಕ ಆ ರ್‍ಯಾಲಿಯನ್ನು ಎಷ್ಟೇ ಶಿಸ್ತು ಸಂಯಮದಿಂದ ಹತೋಟಿಯಲ್ಲಿಟ್ಟಿದ್ದರೂ ಪೊಲೀಸರ ಲ್ಯಾಠಿಗಳು ಮಾತ್ರ ಸುಮ್ಮನಿರುವುದಿಲ್ಲ. ಅಲ್ಲಿಯೂ ನಡೆದದ್ದು ಅದೇ. ಪೊಲೀಸರ ಮೊದಲ ಲಾಠಿ ಪ್ರಹಾರ ಲಾಲಾಜಿಯವರ ಮೇಲಾಯಿತು. ಆ ಪ್ರಹಾರ ನಡೆಸಿದ್ದು ಹಿರಿಯ ಪೊಲೀಸ್ ಸುಪರಿಂಟೆಂಡೆಂಟ್ ಸ್ಕಾಟ್. ಇನ್ನೊಬ್ಬ ಆತನ ಸಹಾಯಕ ಸಾಂಡರ್ಸ್. ಜಾನ್ ಬುಲ್‌ನ ಅನಾಗರಿಕ ಕಣ್ಣುಗಳಿಗೆ ಗುರಿಯಾದಂತೆ ಆ ಇಬ್ಬರು ಪೊಲೀಸರ ಕ್ರೂರ ಹಿಂಸೆಗೆ ಅಂದು ಗುರಿಯಾಗಿದ್ದು ಸಾಧಾರಣ ಎತ್ತರದ ಹಿರಿಯ ವಯಸ್ಸಿನ ಮಹಾ ಮೇಧಾವಿ ಲಾಲಾಜಿ. ಕೊಡೆ ಹಿಡಿದು ನಿಂತಿದ್ದ, ಊರುಗೋಲು ಹಿಡಿದಿದ್ದ ಲಾಲಾಜಿ..ತಮಗೆ ಪೆಟ್ಟಿನ ಮೇಲೆ ಪೆಟ್ಟು ಬೀಳುತ್ತಿದ್ದರೂ ಶಾಂತವಾಗಿರುವಂತೆ ಪ್ರದರ್ಶನಕಾರರಿಗೆ ಲಾಲಾಜಿ ಮನವಿ ಮಾಡುತ್ತಿದ್ದರು.

ಜರ್ಜರಿತ ದೇಹದ ವ್ಯಕ್ತಿ. ಆದರೆ ಅವರ ಮನಃಶಕ್ತಿ ಅದ್ವಿತೀಯವಾಗಿತ್ತು. ಸಾಧಾರಣ ಮನುಷ್ಯನಂತೆ ಪೊಲೀಸರ ಅನಾಗರಿಕ ಲಾಠಿ ಪೆಟ್ಟುಗಳನ್ನು ಅನುಭವಿಸಿದರು. ನಿಂತ ಜಾಗದಿಂದ ಕದಲಲಿಲ್ಲ. ಪ್ರತ್ಯಾಕ್ರಮಣ ಮಾಡಲೂ ಇಲ್ಲ. ಪೊಲೀಸರತ್ತ ನುಗ್ಗಲು ಸನ್ನದ್ಧರಾಗುತ್ತಿದ್ದ ತನ್ನ ಜನರಿಗೆ ಅನುಮತಿಯನ್ನು ಕೊಡಲಿಲ್ಲ. ಅವರ ಬೆಂಬಲಿಗರು ಅವರನ್ನು ಸುತ್ತುವರಿದು ಅವರಿಗೆ ಬೀಳುತ್ತಿದ್ದ ಏಟುಗಳನ್ನು ತಾವು ತಿನ್ನಲು ಮುನ್ನುಗ್ಗಿ ಬಂದರು. ಆದರೂ ಹೆಚ್ಚಿನ ಪೆಟ್ಟು ಬಿದ್ದಿದ್ದು ಲಾಲಾಜಿಯವರಿಗೆ. ಅವರ ವೈದ್ಯರಲ್ಲಿ ಒಬ್ಬರಾದ ಗೋಪಿಚಂದ್ ಭಾರ್ಗವ ಆ ಸಮಯದಲ್ಲಿ ಅಲ್ಲೇ ಇದ್ದರು. ಅವರು ಲಾಲಾಜಿಯವರ ಮೇಲೆ ಬೀಳುತ್ತಿದ್ದ ಪೆಟ್ಟುಗಳನ್ನು, ಆ ಪೆಟ್ಟುಗಳನ್ನು ಅತ್ಯಂತ ಹತ್ತಿರದಿಂದ ಕಂಡವರು. ಅನಾಗಕರಿಕವಾದ, ಕ್ರೂರವಾದ ಅಂಥ ಪೆಟ್ಟುಗಳನ್ನು ಆ ಮಹಾ ನೇತಾರ ಸಹಿಸಿಕೊಂಡಿದ್ದು ಹೇಗೆಂದು ಅವರು ಆಶ್ಚರ್ಯ ಪಟ್ಟಿದ್ದಾರೆ. ಅಷ್ಟೊಂದು ಪೆಟ್ಟುಗಳು ಬಿದ್ದರೂ ನೆಲಕ್ಕೆ ಕುಸಿಯದೆ ದಿಟ್ಟ ಪರ್ವತದಂತೆ ನಿಂತಿದ್ದ ಅವರ ಮನಸ್ಥೈರ್ಯವನ್ನು ಪ್ರಶಂಸಿಸಿದ್ದಾರೆ.

ಮನುಷ್ಯನಾಗಿ ಲಾಲಾಜಿ ಆ ಪೊಲೀಸರಿಬ್ಬರ ದೈತ್ಯ ಪೆಟ್ಟುಗಳನ್ನು ತಿಂದರು. ಮಧ್ಯೆ ಮಧ್ಯೆ ಅವರ ಸಿಂಹ ಘರ್ಜನೆ ಕೇಳಿಸುತ್ತಿತ್ತು. ನಿನ್ನ ಹೆಸರೇನು? ಎಂಬ ಅವರ ಪ್ರಶ್ನೆಗೆ ಕೆಲವು ಕೆಂಪು ಮೂತಿಯ ಆ ಬ್ರಿಟಿಷ್ ಪೊಲೀಸರು ಪೈಶಾಚಿಕ ಹೃದಯಿಗಳಾಗಿ ನೀಡುತ್ತಿದ್ದ ಉತ್ತರ ಇನ್ನಷ್ಟು ಲಾಠಿ ಏಟು. ಲಾಲಾಜಿ ಪದೇ ಪದೇ ಹೆಸರು ಹೇಳುವಂತೆ ಕೂಗುತ್ತಿದ್ದರು. ಅಷ್ಟೇ ಬಿರುಸಾದ ಏಟು ಆಗ ಅವರ ಮೇಲೆ ಬೀಳುತ್ತಿತ್ತು. ಹಲವಾರು ನಿಮಿಷಗಳ ಕಾಲ ಹೊಡೆತಗಳ ಮೇಲೆ ಹೊಡೆತ. ಅನಾಗರಿಕ ಬ್ರಿಟಿಷ್ ಪೊಲೀಸ್ ಅಧಿಕಾರಿಗಳು ತಮ್ಮ ಹೆಸರು ಹೇಳಲೆ ಇಲ್ಲ. ಅಪ್ಪಳಿಸುವುದನ್ನು ನಿಲ್ಲಿಸಲೂ ಇಲ್ಲ. ಅತ್ತ ಅವರ ರಕ್ಷಣೆಗೆ ಧಾವಿಸಿ ಬರುತ್ತಿದ್ದ ಗುಂಪನ್ನು ಲಾಲಾಜಿ ಕೂಗಿ ಹೇಳುತ್ತಾ ತಡೆಗಟ್ಟುತ್ತಿದ್ದರು. ಶಾಂತಿ ಭಂಗ ಮಾಡದಂತೆ ಸೂಚಿಸುತ್ತಿದ್ದರು. ಲಾಲಾಜಿಯವರ ಮೇಲೆ ನಿರಂತರವಾಗಿ ನಡೆದ ಲಾಠಿ ಪ್ರಹಾರ ನಿಂತಾಗ ಹೆಚ್ಚು ಕಡಿಮೆ ಆ ಪ್ರದರ್ಶನವೇ ಅಂತ್ಯಗೊಂಡಂತಾಯಿತು.

ಮೈತುಂಬಾ ಪೆಟ್ಟುಗಳ ಮೇಲೆ ಪೆಟ್ಟುಗಳನ್ನು ತಿಂದ ಇಳಿ ವಯಸ್ಸಿನ ಮಹಾನ್ ನಾಯಕ ಆ ಪ್ರದರ್ಶನ ಹಿಂತಿರುಗಿದಾಗಲೂ ಮುಂಚೂಣಿಯಲ್ಲಿದ್ದರು. ಮಾನಸಿಕವಾಗಿ ಕಿಂಚಿತ್ತೂ ವಿಚಲಿತರಾದಂತೆ ಕಂಡು ಬರಲಿಲ್ಲ.

ಆ ಸಂಜೆ ಭಾತಿ ಗೇಟ್‌ನಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದು ಏರ್ಪಾಟಾಯಿತು. ಗಾಯಗೊಂಡ ಸಿಂಹ ಮತ್ತೆ ಗರ್ಜಿಸಿತು. ನಡೆದದ್ದೆಲ್ಲವನ್ನು ಲಜಪತ್ ರಾಯ್ ಸಭೆಗೆ ವಿವರಿಸಿದರು. ಅತಿಯಾದ ಪ್ರಚೋದನೆ ಇದ್ದರೂ ಅತಿರೇಕಕ್ಕೆ ಇಳಿಯದಿದ್ದಕ್ಕಾಗಿ ಅವರು ತಮ್ಮ ಜನರನ್ನು ಅಭಿನಂದಿಸಿದರು. ಅಂದು ಬೆಳಿಗ್ಗೆ ನಡೆದ ಅರಣ್ಯ ನ್ಯಾಯದ ಕ್ರೂರ ವರ್ತನೆಗೆ ಲಾಲಾಜಿ ಚರಿತ್ರೆಯ ಪುಟಗಳಿಂದ ಎಂದೂ ಅಳಿಸಲಾಗದಂತಹ ಉತ್ತರ ನೀಡಿದರು. ಅವರು ನೀಡಿದ ಉತ್ತರದ ಒಂದು ವಾಕ್ಯ ರಾತ್ರಿ ಹರಿದು ಬೆಳಗಾಗುವುದರೊಳಗ ಇಡೀ ದೇಶದ ಮೂಲೆ ಮೂಲೆಯಲ್ಲೂ ಅನುರಣಿತವಾಯಿತು. ಇಂದೂ ಸಹ ಆ ವಾಕ್ಯವನ್ನು ಮಹಾನ್ ಪ್ರವಾದಿಯೊಬ್ಬರ ವಾಕ್ಯವಾಗಿ ಪುನರುಚ್ಚರಿಸಲಾಗುತ್ತದೆ. ''ನಮ್ಮ ಮೇಲೆ ಅವರು ಹಾಕಿರುವ ಒಂದೊಂದು ಹೊಡೆತವು ಸಹ ಬ್ರಿಟಿಷ್ ಸಾಮ್ರಾಜ್ಯಷಾಹಿಗಳ ಮರಣ ಪೆಟ್ಟಿಗೆಗೆ ಹೊಡೆದ ಒಂದೊಂದು ಮೊಳೆಯಾಗಿದೆ.'' ಒಂದು ವೇಳೆ ತಾನು ಮರಣ ಹೊಂದಿದರೆ ತಾವು ಯಾವ ಪೀಳಿಗೆಯನ್ನು ಹತೋಟಿಯಲ್ಲಿಡಲು ಕೇಳಿಕೊಂಡಿದ್ದರೋ ಆ ಪೀಳಿಗೆ ತಮಗೆ ಸಮಂಜಸವೆನಿಸಿದ ಪ್ರತಿಕೂಲ ಕ್ರಮವನ್ನು ಕೈಗೊಂಡರೆ ತಮ್ಮ ಆತ್ಮವು ಅವರನ್ನು ಅನುಗ್ರಹಿಸುತ್ತದೆ ಎಂದು ಲಾಲಾಜಿ ಹೇಳಿದರು. ಲಾಲಾಜಿಯವರ ಅಂದಿನ ಆ ಭಾಷಣ ಅಮೋಘವಾದದ್ದೆಂದೇ ಪರಿಗಣಿಸಲಾಗಿದೆ. ಗಾಯಗೊಂಡ ಪಂಜಾಬಿನ ಸಿಂಹ ಮಾಡಿದ ಅಂದಿನ ಘೋಷಣೆ ಚಾರಿತ್ರಿಕವಾಗಿದೆ. ಅಂದು ಅಲ್ಲಿ ಸೇರಿದ್ದ ಸಭಿಕರು ಅಸಂಖ್ಯಾತ ಸಂಖ್ಯೆಯಲ್ಲಿದ್ದರು. ಲಾಲಾಜಿಯ ಒಂದು ಮಾತಿನ ಮೇಲೆ ಆ ಸಭೆಯ ನಡವಳಿಕೆ ಅವಲಂಬಿತವಾಗಿತ್ತು. ತಮ್ಮ ಶತ್ರುಗಳ ಮೇಲೆ ಎರಗಲು ಸನ್ನದ್ಧರಾಗಿದ್ದ ಒಂದು ಲಕ್ಷ ಐರಿಷ್ ಜನರು ಓ ಕಾನೆಲ್‌ನ ಒಂದೇ ಒಂದು ವಾಕ್ಯಕ್ಕಾಗಿ ಪರಿತಪಿಸಿದ್ದಂತೆ ಆ ಸಭೆಯು ಕಾತರವಾಗಿತ್ತು. ಆದರೆ ಲಾಲಾಜಿ, ಅಂಥ ಪ್ರಚೋದನೆಯ ಯಾವುದೇ ಒಂದು ಘೋಷಣೆಯನ್ನು ನೀಡಲಿಲ್ಲ. ಪ್ರತಿಭಟನೆ ಕೈಗೊಳ್ಳಲು ಸೂಚಿಸಲಿಲ್ಲ. ಶಾಂತಿ, ಸಹನೆಯನ್ನು ಮೂರ್ತೀಕರಿಸಿಕೊಳ್ಳುವಂತೆ ತಿಳಿಸಿದರು. ಶಾಂತ ಮಾರ್ಗದಲ್ಲಿ ಹೋರಾಟವನ್ನು ಮುಂದುವರಿಸುವಂತೆ ಕೇಳಿಕೊಂಡರು. ಹೋರಾಟದ ಯಶಸ್ಸಿಗಾಗಿ ತ್ಯಾಗ, ಬಲಿದಾನಕ್ಕೆ ಸಿದ್ಧವಾಗಲು ಮನವಿ ಮಾಡಿದರು. ಮಾರನೇಯ ದಿನ ಆ ಘಟನೆಯ ಬಗ್ಗೆ ಅಧಿಕೃತ ಹೇಳಿಕೆಯೊಂದು ಹೊರಬಿದ್ದಿತು. ಅದರ ಬೆನ್ನಲ್ಲೇ ಇಲಾಖಾ ತನಿಖೆಯೊಂದು ನಡೆಯಿತು. ಆ ತನಿಖೆಯು ಪೊಲೀಸರನ್ನು ತಪ್ಪಿತಸ್ಥರಲ್ಲವೆಂದು ಸಾರಿತು. ಎರಡು ವಾರಗಳ ನಂತರ ಇನ್ನೊಂದು ತನಿಖೆಯನ್ನು ಪ್ರಕಟಿಸಲಾಯಿತು. ರಾವಲ್ಪಿಂಡಿ ವಿಭಾಗದ ಕಮೀಷನರ್, ಐ.ಸಿ.ಎಸ್ ಅಧಿಕಾರಿ ಡಿ.ಜೆ. ಬಾಯ್ಡ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಯಿತು ವರದಿಯೊಂದನ್ನು ಸಲ್ಲಿಸುವಂತೆ ತಿಳಿಸಲಾಯಿತು. ಲಾಲಾಜಿ ಹಾಗೂ ಇತರ ಪ್ರಮುಖ ಸಾರ್ವಜನಿಕ ಮುಖಂಡರು ಬಾಯ್ಡ್ ತನಿಖೆಯ ಮುಂದೆ ಹಾಜರಾಗಲು ನಿರಾಕರಿಸಿದರು. ಲಾಲಾಜಿ ಪರ್ಯಾಯ ಸಲಹೆಯೊಂದನ್ನು ಮಂಡಿಸಿದರು.

"ಅಕ್ಟೋಬರ 30ರಂದು ನನ್ನ ಹಾಗೂ ಇತರರ ಮೇಲೆ ಪೊಲೀಸರು ಲಗ್ಗೆ ಮಾಡಿ ಲಾಠಿ ಪ್ರಹಾರ ನಡೆಸಿದ ಬಗ್ಗೆ ಸರ್ಕಾರದ ಪ್ರಕಟಣೆಯನ್ನು ನಾನು ಓದಿದ್ದೇನೆ. ಎಂದಿನಂತೆ ಅದು ತೀರಾ ಏಕಪಕ್ಷೀಯವಾದ ಹೇಳಿಕೆ. ಅಸತ್ಯವಲ್ಲದೆ ಬೇರೆನೂ ಅದರಲ್ಲಿಲ್ಲ. ಈಗ ನಾನು ಅದರ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಬಾಯ್ಡ್ ವರದಿ ಬರುವ ತನಕ ಕಾಯುತ್ತೇನೆ. ಅಧಿಕೃತ ಹೇಳಿಕೆ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಬಾಯ್ಡ್ ವರದಿ ಪ್ರಕಟಗೊಳ್ಳುವ ವೇಳೆಗೆ ಈ ಹೇಳಿಕೆ ಇನ್ನೆಷ್ಟು ರೂಪ ಪಡೆಯುತ್ತದೆಯೋ ಕಾಯ್ದು ನೋಡಬೇಕಾಗಿದೆ. ನಾವು ಈ ವಿಚಾರಣೆಯನ್ನು ಮಾನ್ಯ ಮಾಡಿಲ್ಲ. ಯಾವುದೇ ಹೇಳಿಕೆ ಸಾಕ್ಷ್ಯ ನೀಡಲು ನಾನು ಬಾಯ್ಡ್ ಸಮಿತಿಯ ಮುಂದೆ ಹಾಜರಾಗುವುದಿಲ್ಲ. ಅದೇ ಮಾರ್ಗ ಅನುಸರಿಸುವಂತೆ ನನ್ನ ಮಿತ್ರರಿಗೂ ನಾನು ಸಲಹೆ ಮಾಡುತ್ತಿದ್ದೇನೆ. ಪಂಜಾಬ್ ಸರ್ಕಾರದಿಂದ ಉತ್ತಮವಾದ ಕೆಲಸ ಆಗುತ್ತದೆ ಎಂದು ನಾನು ಖಂಡಿತವಾಗಿಯೂ ನಂಬಿಲ್ಲ. ನನಗೆ ಇಲಾಖಾ ತನಿಖೆ ಬೇಕಾಗಿಲ್ಲ. ಓರ್ವ ಐಸಿಎಸ್ ಅಧಿಕಾರಿಯ ತನಿಖೆಯೂ ಬೇಕಾಗಿಲ್ಲ. ಯಾವುದೇ ತನಿಖೆಯನ್ನು ನಡೆಸುವುದಾದರೆ ಅದು ಮುಕ್ತ ವಿಚಾರಣೆ ಆಗಬೇಕು. ಅದರಲ್ಲಿ ಇಬ್ಬರು ಅಧಿಕಾರೇತರರು ಹಾಗೂ ಓರ್ವ ನ್ಯಾಯಾಂಗ ಅಧಿಕಾರಿ ಸದಸ್ಯನಾಗಿರಬೇಕು. ಪೊಲೀಸ್ ಅಧಿಕಾರಿಗಳು ನೀಡುವ ಹೇಳಿಕೆಗಳ ಮೇಲೆ ಪಾಟಿ ಸವಾಲಿಗೆ ಅವಕಾಶವಿರಬೇಕು. ನಾನು ಈಗಾಗಲೇ ಘೋಷಿಸಿರುವ ಸವಾಲಿಗಿಂತ ಭಿನ್ನವಾದದ್ದು ಏನನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ."

ಪಂಜಾಬ್ ಶಾಸಕಾಂಗ ಸಭೆಯಲ್ಲೂ ವಿಷಯ ಪ್ರಸ್ತಾಪಕ್ಕೆ ಬಂದಿತು. ಸರ್ಕಾರದ್ದೇ ಮೇಲುಗೈ ಆದ್ದರಿಂದ ವಿಚಾರಣೆ ನಡೆಸಬೇಕೆಂದು ಪ್ರತಿಪಕ್ಷ ಮಂಡಿಸಿದ್ದ ನಿರ್ಣಯ ಬಿದ್ದು ಹೋಯಿತು.

ಆ ದುರ್ಘಟನೆ ನಡೆದ ಸಂಜೆ ಏರ್ಪಟ್ಟ ಬಹಿರಂಗ ಸಭೆಯಲ್ಲಿ ಬೆಳಿಗ್ಗೆ ನಡೆದಿದ್ದ ವಿದ್ಯಮಾನವೆಲ್ಲ ಲಾಲಾಜಿ ತಾವು ಕಂಡು ಅನುಭವಿಸಿದ ವಿವರಗಳನ್ನು ಸಭೆಯ ಮುಂದಿಟ್ಟರು. ಅವರ ವೈದ್ಯರು ಅವರನ್ನು ಆ ಭಾರೀ ಪೆಟ್ಟುಗಳು ಬಿದ್ದ ನಂತರದಲ್ಲೇ ಪರೀಕ್ಷಿಸಿದ್ದರು. ಅವರ ಎದೆಯ ಎಡಭಾಗದಲ್ಲಿ ಉದ್ದುದ್ದಾಗಿ ಎರಡು ಭಾರೀ ಪೆಟ್ಟುಗಳು ಬಿದ್ದಿದ್ದು ಕಂಡು ಬಂದಿತು. ಲಾಠಿ ಪ್ರಹಾರ ನಡೆದ 24 ಗಂಟೆಗಳ ನಂತರ ಆ ಪೆಟ್ಟುಗಳ ಫೋಟೋಗಳನ್ನು ತೆಗೆಸಲಾಯಿತು. ಆ ಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಲಾಲಾಜಿ ಯಾವುದೇ ಹುಸಿ ಆರೋಪಕ್ಕೆ ಅವಕಾಶ ಕೊಡಲಿಲ್ಲ. ತಮ್ಮ ಸಾಪ್ತಾಹಿಕದಲ್ಲಿ ಅಂಕಿತ ಹಾಕಿದ ಲೇಖನವೊಂದನ್ನು ಅವರು ಪ್ರಕಟಿಸಿದರು. "ಕಾನೂನು ರಕ್ಷಕರು ಹೇಗೆ ನಡೆದುಕೊಳ್ಳುತ್ತಾರೆ?" ಎಂಬ ಶೀರ್ಷಿಕೆಯಲ್ಲಿ ಬರೆದ ಆ ಲೇಖನದಲ್ಲಿ ಆರೋಪಿ ಅಧಿಕಾರಿಗಳನ್ನು ಹೆಸರಿಸಿದರು. ಬಹಿರಂಗ ಸವಾಲನ್ನು ಹಾಕಿದರು.

"ಭಾರತದಲ್ಲಿ ಆಡಳಿತಶಾಹಿಯು ಸಂಪೂರ್ಣ ಶಕ್ತಿ ಪ್ರದರ್ಶನ ಮಾಡುತ್ತಿರುವುದು ಸ್ಥಿರೀಕೃತವಾಗುತ್ತಿದೆ. ಸೈಮನ್ ಆಯೋಗದ ವಿರುದ್ಧ ಮಂಗಳವಾರ ಏರ್ಪಡಿಸಿದ ಪ್ರತಿಭಟನೆಯಲ್ಲಿ ಪ್ರತಿಭಟನಕಾರರ ಮೇಲೆ ನಡೆದ ಅನಾಗರಿಕ ಶಕ್ತಿ ಪ್ರದರ್ಶನ ನಾನು ಹಿಂದೆಂದೂ ಕಂಡರಿದಂತಹುದು." ಇಡೀ ಘಟನೆಯನ್ನು ವಿವರಿಸಿದ ಅವರು ಮುಳ್ಳು

ತಂತಿ ಬೇಲಿ ಬಳಿ ಪ್ರದರ್ಶನಕಾರರನ್ನು ಹೇಗೆ ತಡೆದು ನಿಲ್ಲಿಸಲಾಯಿತು ಎಂಬುದನ್ನು ವಿವರಿಸಿದರು. ರೈಲ್ವೆ ಕೈಗಾರಿಕ ಶಾಲೆಯ ಕಡೆ ಸುಮಾರು ಐದು ಅಡಿ ಇಲ್ಲವೇ ಅದಕ್ಕಿಂತಲೂ ಹೆಚ್ಚು ಎತ್ತರವಿದ್ದ ಗೋಡೆಗೆ ಹೊಂದಿ ಕೊಂಡಂತಿದ್ದ ಬೇಲಿಯನ್ನು ಹಾಕಲಾಗಿತ್ತು. ಪ್ರದರ್ಶನಕಾರರಿಗೆ ಆ ಬೇಲಿಯನ್ನು ದಾಟಿ ಹೋಗುವ ಆಶಯ ಖಂಡಿತವಾಗಿಯೂ ಇರಲಿಲ್ಲ. ನಾನಾಗಲಿ ಅಥವಾ ಇತರೆ ಯಾರೇ ಆಗಲಿ ಆ ಬೇಲಿಯನ್ನು ದಾಟಲು ಪ್ರಯತ್ನಿಸಿದೆವೆಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಿರುವುದು ಹುಸಿ ಸುಳ್ಳು. ಯಾವುದೇ ಪ್ರೇರಣೆ ಇಲ್ಲದೆ ಶಿಸ್ತು, ಸಂಯಮದಿಂದ ಇದ್ದ ಪ್ರದರ್ಶನಕಾರರ ಮೇಲೆ ಹೇಡಿಯಂತೆ ಲಾಹೋರ್ ಪೊಲೀಸರು, ಸುಪರಿಂಟೆಂಡೆಂಟ್ ಸ್ಕಾಟ್ ನಡೆಸಿದ್ದ ಹೇಡಿತನದ ದಾಳಿಯನ್ನು ಮುಚ್ಚಿಹಾಕುವ ಪ್ರಯತ್ನ ಅದು.

ಸ್ಕಾಟ್ ಮತ್ತು ಆತನೊಂದಿಗಿದ್ದ ಇತರ ಇಂಗ್ಲಿಷ್ ಪೊಲೀಸ್ ಅಧಿಕಾರಿಗಳು ಇದ್ದಕ್ಕಿದ್ದಂತೆ ನಮ್ಮ ಮೇಲೆ ಎರಗಿ ಬಂದು ಹೀನಾಯವಾಗಿ ಅಪ್ಪಳಿಸತೊಡಗಿದರು. ಸ್ಕಾಟ್ ಎಂಬ ಆ ವ್ಯಕ್ತಿ ಹಾಗೂ ಆತನ ಒಬ್ಬ ಇಲ್ಲವೇ ಇಬ್ಬರು ಐರೋಪ್ಯ ಅಧಿಕಾರಿಗಳು ನಡೆದುಕೊಂಡ ರೀತಿಯಿಂದ ಅವರು ಸಂಪೂರ್ಣವಾಗಿ ನೀತಿ ಭ್ರಷ್ಟರಾಗಿದ್ದಾರೆಂದು ನನಗೆ ಕಂಡು ಬಂದಿತು. ಕಿಂಚಿತ್ತೂ ಪ್ರಚೋದನೆ ಇರಲಿಲ್ಲ. ಆದರೂ ಈ ಜನ ಸಹನೆ ಕಳೆದುಕೊಂಡರು. ನಾವೆಲ್ಲರೂ ನಿಶ್ಶಸ್ತ್ರರಾಗಿದ್ದೇವೆ ಎಂಬುದು ಅವರಿಗೆ ಗೊತ್ತಿತ್ತು. ನನ್ನೊಬ್ಬನ ಕೈಯಲ್ಲಿ ಮಾತ್ರ ಸಣ್ಣದೊಂದು ಊರುಗೋಲಿತ್ತು. ಈ ಪ್ರಚೋದನೆ ರಹಿತ ದಾಳಿ ಮತ್ತು ಪೊಲೀಸ್ ಅಟ್ಟಹಾಸ ಗಮನಿಸಿದಾಗ ಭಾರತವನ್ನು ಆಳುತ್ತಿರುವ ಬ್ರಿಟಿಷ್ ಅಧಿಕಾರಿಗಳು ಶೀಲಹೀನರು, ನಡವಳಿಕೆಗೆಟ್ಟವರು ಆಗಿದ್ದಾರೆಂದು ನನಗೆ ಭಾಸವಾಗಿದೆ. ಅಧಿಕಾರಶಾಹಿಯಲ್ಲಿ ಗಾಂಭೀರ್ಯವಿಲ್ಲ. ಕಿಂಚಿತ್ತೂ ಸೌಜನ್ಯವಿಲ್ಲ... ನನ್ನನ್ನು ಚಚ್ಚುತ್ತಿದ್ದ ಪೊಲೀಸ್ ಅಧಿಕಾರಿಗಳಿಗೆ ಅವರ ಹೆಸರು ತಿಳಿಸುವಂತೆ ನಾನು ಅನೇಕ ಬಾರಿ ಕೂಗಿ ಕೂಗಿ ಹೇಳಿದೆ. ನನ್ನ ಬದಿಯಲ್ಲಿದ್ದ ಪಂಜಾಬ್ ಎಂ.ಎಲ್.ಸಿಗಳು ಮ್ಯಾಜಿಸ್ಟ್ರೇಟರಿಗೆ ಹಾಗೂ ಡೆಪ್ಯುಟಿ ಕಮಿಷನರಿಗೆ ಪತ್ರಗಳನ್ನು ಕಳುಹಿಸಿ ನನ್ನನ್ನು ಥಳಿಸಿದ ಅಧಿಕಾರಿ ಮತ್ತು ಆತನ ಸಹಾಯಕನ ಹೆಸರು ತಿಳಿಸುವಂತೆ ಕೇಳಿದರು. ಅದಕ್ಕೂ ಉತ್ತರ ಬರಲಿಲ್ಲ. ನನ್ನನ್ನು ಅಪ್ಪಳಿಸುತ್ತಿದ್ದ ವ್ಯಕ್ತಿಯತ್ತ ನಾನು ಗಟ್ಟಿಯಾಗಿ ಸವಾಲಿನಂತೆ ಕೇಳಿದೆ. ನೀನೇನಾದರೂ ಮನುಷ್ಯನಾಗಿದ್ದರೆ ನಿನ್ನ ಹೆಸರು ಹೇಳು ಎಂದೆ. ಅದಕ್ಕೂ ಉತ್ತರ ಬರಲಿಲ್ಲ. ಆ ಘಟನೆ ನಡೆದ ಅನೇಕ ನಿಮಿಷಗಳ ನಂತರ ಸಭೆಯು ತಮ್ಮ ಕಡೆಗೆ ಕಲ್ಲು ಹಾಗೂ ಇತರ ವಸ್ತುಗಳನ್ನು ಎಸೆಯಿತು ಎಂಬ ದಾಖಲೆಗಳನ್ನು ಸಂಗ್ರಹಿಸಿಕೊಳ್ಳುವ ಕಾರ್ಯದಲ್ಲಿ ಪೋಲಿಸರು ನಿರತರಾದರು. ಗುಂಪು ಹಿಂಸಾಚಾರದಲ್ಲಿ ತೊಡಗಿತ್ತೆಂದು ಅಧಿಕೃತ ಹೇಳಿಕೆಯಲ್ಲಿ ಮಾಡಲಾಗಿರುವ ಆರೋಪವು ಶುದ್ಧ ಸುಳ್ಳು. ಅಧಿಕೃತ ಹೇಳಿಕೆಯ ಹೆಸರಿನಲ್ಲಿ ಟ್ರಿಬ್ಯೂನ್ ಪತ್ರಿಕೆಯಲ್ಲಿ ಪ್ರಕಟಗೊಂಡಿರುವುದನ್ನು ಯಾರೇ ಬರೆದಿರಲಿ, ಬರೆಸಿರಲಿ ಆತನೊಬ್ಬ ಮಹಾನ್ ಸುಳ್ಳುಗಾರ ಎಂದು ಕರೆಯುತ್ತೇನೆ. ನನ್ನ ಈ ಆಪಾದನೆಗಾಗಿ ನನ್ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸವಾಲು ಹಾಕುತ್ತಿದ್ದೇನೆ ಆ ಹೇಳಿಕೆಯಲ್ಲಿ ಇರುವುದೆಲ್ಲಾ ಬರಿ ಸುಳ್ಳುಗಳ ಕಂತೆ. ಇಡೀ ಘಟನೆಯನ್ನು ಸಮರ್ಥಿಸಿಕೊಳ್ಳಲೋ ಎನ್ನುವ ರೀತಿಯಲ್ಲಿ ಪ್ರಸಂಗಗಳನ್ನು ಕಪೋಲ ಕಲ್ಪಿತಗೊಳಿಸಲಾಗಿದೆ."

ಈ ಮೊದಲಿನ ಅಸಹಕಾರ ಚಳವಳಿಯ ದಿನಗಳಿಂದಲೂ ಸಹ ಪಂಜಾಬಿನ ಅಧಿಕಾರಿಗಳು ಒಳ್ಳೆಯ ಹೆಸರು ಗಳಿಸಿಕೊಂಡವರಲ್ಲ, ''ಕಾನೂನಿನ ಪರಿಜ್ಞಾನವಿಲ್ಲದ, ಮುತ್ಸದ್ಧಿತನವಿಲ್ಲದ, ದಬ್ಬಾಳಿಕೆ; ಹಿಂಸಾಚಾರಕ್ಕೆ ಹೇಳಿ ಮಾಡಿಸಿದ ಹೆಸರೆಂದರೆ ಪಂಜಾಬಿ ಅಧಿಕಾರಿಗಳು'' ಎಂದು ಲಾಲಾಜಿ ಚಿತ್ರಿಸಿದರು. ಆ ಘಟನೆಯ ಬಗ್ಗೆ ಅವರ ನಿರೂಪಣೆ ಅಷ್ಟಕ್ಕೆ ನಿಲ್ಲಲಿಲ್ಲ:

''ಟ್ರಿಬ್ಯೂನ್ ಪ್ರತಿನಿಧಿ ರೈಲ್ವೆಫ್ಲಾಟ್‌ಫಾರಂ ಪ್ರವೇಶಕ್ಕೆ ಅನುಮತಿ ಕೋರಿದಾಗ ಹಿರಿಯ ಪೊಲೀಸ್ ಸುಪರಿಂಟೆಂಡೆಂಟ್, ಸರ್ಕಾರವು ನೀಡಿದ್ದ ಅನುಮತಿ ಪತ್ರದ ಸಿಂಧುತ್ವವನ್ನೇ ಪ್ರಶ್ನಿಸಿದ್ದಾರೆ. ಇತ್ತ ರೈಲ್ವೆ ನಿಲ್ದಾಣದ ಇನ್ನೊಂದು ಬದಿ ಪ್ರದರ್ಶನ ನಡೆಸುತ್ತಿದ್ದ ಜನತೆಯ ಮೇಲೆ ಅದೇ ಅಧಿಕಾರಿ ಅನಾಗರಿಕವಾಗಿ ಅತಿರೇಕದ ಹಲ್ಲೆ ನಡೆಸಿದ್ದಾರೆ. ಇಂಥ ಅಧಿಕಾರಿ ಈ ಪ್ರಾಂತ್ಯವನ್ನು ತನ್ನಂತೆಯೇ ಮನೋಧರ್ಮ ಹೊಂದಿದ ಜನರೊಂದಿಗೆ ಆಳುವುದಾದರೆ ಜನತೆಯ ಗತಿ ಏನು ಎಂದು ನಾನು ಗೌರವಾನ್ವಿತ ಗವರ್ನರ್ ಅವರನ್ನು ಕೇಳಬಹುದೇ? ಒಂದು ವೇಳೆ ಅದು ನಿಜವಾಗಿದ್ದರೆ ಈ ಭಾಗದ ರಾಜಕಾರಣಿಗಳು ಮಾಡಬೇಕಾದದ್ದು ಏನು ಇಲ್ಲ. ಈ ಅಧಿಕಾರಶಾಹಿಯೇ ರಕ್ತದ ಕೋಡಿ ಹರಿಸುತ್ತದೆ... ಮುಂದೆ ಸಂಭವಿಸಲಿರುವ ಮಹಾಕ್ರಾಂತಿಯನ್ನು ನಿಗ್ರಹಿಸಲು ಇಂಥ ವರ್ಗದ ಅಧಿಕಾರಿಗಳನ್ನೇ ಸರ್ಕಾರ ಅವಲಂಬಿಸಬಹುದೇ?''

ತಮ್ಮ ಮೇಲೆ ನಡೆದ ಹಲ್ಲೆಗೆ ಅನುಕಂಪ, ಪೊಲೀಸ್ ವರ್ತನೆಗೆ ಖಂಡನೆ ಹಾಗೂ ಶೀಘ್ರ ಗುಣಮುಖಕ್ಕೆ ಹಾರೈಕೆಗಳನ್ನು ಹೊತ್ತು ಬಂದ ಅನೇಕ ಅಸಂಖ್ಯಾತ ಸಂದೇಶಗಳಿಗೆ ಉತ್ತರ ನೀಡುತ್ತಾ:

''ನನ್ನ ಬಗ್ಗೆ ಅಭಿನಂದನೆ, ಅನುಕಂಪ ವ್ಯಕ್ತಪಡಿಸಿದ ದೇಶದ ಎಲ್ಲ ಕಡೆಗಳಿಂದ ಬಂದಿರುವ ಅಸಂಖ್ಯಾತ ಸಂದೇಶಗಳು ನನ್ನ ಹೃದಯವನ್ನು ಸ್ಪರ್ಶಿಸಿದೆ. ಅವರ ಪ್ರೀತಿ ಪ್ರೇಮ, ಸೌಹಾರ್ದಗಳಿಗೆ ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುವ ಶಕ್ತಿ ನನ್ನಲ್ಲಿಲ್ಲ. ಪೊಲೀಸರ ಈ ಹಲ್ಲೆ ದೇಶದ ಹಿತರಕ್ಷಣೆಗೆ ಇನ್ನಷ್ಟು ಶಕ್ತಿ ತುಂಬುವುದಾದರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೊಂದಿರಲಾರದು. ನನ್ನ ಮೇಲೆ ಬೀಳುತ್ತಿದ್ದ ಏಟುಗಳನ್ನು ಮುನ್ನುಗ್ಗಿ ತಾವು ತಿಂದು ನನ್ನನ್ನು ರಕ್ಷಿಸ ಹೊರಟವರಿಗೆ ಅದಮ್ಯ ಕೃತಜ್ಞತೆಗಳು. ಅಂಥವರಲ್ಲಿ ಸತ್ಯಪಾಲ್, ಡಾ. ಗೋಪಿಚಂದ್, ರಾಯ್ಜದ ಹನ್ಸ್‌ರಾಜ್, ಡಾ. ಅಲಂ ಹಾಗೂ ಇತರರಿದ್ದಾರೆ. ಪೊಲೀಸರ ಲಾಠಿ ಪ್ರಹಾರ ನನ್ನನ್ನೇ ಪ್ರಮುಖವಾಗಿ ಗುರಿ ಮಾಡಿಕೊಂಡಿತ್ತೆಂದು ಸರ್ದಾರ್ ಸರ್ದೂಲ್ ಸಿಂಗ್ ಕಮಿಷನರ್‌ಗೆ ನೀಡಿರುವ ಹೇಳಿಕೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮೇಲೆ ಹೇಳಿದ ಮಹಾಶಯರುಗಳು ಆ ಲಾಠಿ ಪ್ರಹಾರವನ್ನು ಹಂಚಿ ಕೊಳ್ಳದಿದ್ದರೆ ಅದು ನನ್ನ ಪಾಲಿಗೆ ಇನ್ನಷ್ಟು ಗಂಭೀರವೂ, ಪ್ರಾಣಾಂತಿಕವೂ ಆಗಿರುತ್ತಿತ್ತು.''

ಆದರೂ ಲಾಲಾಜಿಯವರು ಪ್ರತಿನಿತ್ಯವು ತಮ್ಮ ಎಂದಿನ ಕಾರ್ಯಕ್ರಮಗಳಲ್ಲಿ ನಿರತರಾದರು. ದೆಹಲಿಯಲ್ಲಿ ಎಐಸಿಸಿ ಅಧಿವೇಶನ ಸಭೆ ನವೆಂಬರ್ 3 ಮತ್ತು 4ರಂದು ಸಮಾವೇಶಗೊಂಡಿತು. ಅದರಲ್ಲಿ ಅವರು ಪಾಲ್ಗೊಂಡು ಭಾಷಣ ಮಾಡಿದರು.

ಅಧಿವೇಶನದ ಕಲಾಪಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರಿಗೆ ಅತಿ ಆಯಾಸವಾಗುತ್ತಿದ್ದ ಅನುಭವ ಆಗತೊಡಗಿತು. ಅನೇಕ ಸಭೆಗಳನ್ನು ವರ್ಜಿಸಿದರು. ಲಾಹೋರಿಗೆ ಧಾಪಿಸಿ ಬಂದರು. ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಅವರು ಮಾತನಾಡಬೇಕಾಗಿತ್ತು. ಅನಿಬೆಸೆಂಟ್ ಅವರಿಗೆ ಅವರು ಈ ಬಗ್ಗೆ ತಿಳಿಸಿಯೂ ಇದ್ದರು. ಲಾಹೋರಿಗೆ ಮರಳಿದ ನಂತರ ತಮ್ಮ ಪತ್ರಿಕೆ ದಿ ಪೀಪಲ್‌ನಲ್ಲಿ ನವೆಂಬರ್ 8ರಂದು ಹೀಗೆ ಬರೆದರು. ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ನಾನು ಮಾಡಿದ ಭಾಷಣ ಮುಕ್ತವಾಗಿಲ್ಲ. ನಾನು ಸ್ವಲ್ಪ ಭಾವುಕನಾಗಿದ್ದೆ. ಅತಿರೇಕವೂ ಇತ್ತು. ಲಾಹೋರಿನಲ್ಲಿ ಪೊಲೀಸ್ ಹಲ್ಲೆಯಲ್ಲಿ ನಾನಗಾದ ಪೆಟ್ಟುಗಳು ಗಂಭೀರವೆಂದೇನೂ ನಾನು ಭಾವಿಸಲಿಲ್ಲ. ಆದರೂ ಆ ಪೆಟ್ಟುಗಳ ಪರಿಣಾಮ ನನ್ನ ದೈಹಿಕ ವ್ಯವಸ್ಥೆಯ ಮೇಲೆ ತೀವ್ರ ಅಘಾತ ಉಂಟು ಮಾಡಿದೆ ಎಂದು ನನಗನಿಸುತ್ತಿದೆ. ತತ್ಪರಿಣಾಮವಾಗಿ ನನ್ನ ಆರೋಗ್ಯ ಹದಗೆಡುತ್ತಿದೆ. ದೆಹಲಿಯಲ್ಲಿದ್ದಷ್ಟು ದಿನ ನಾನು ಅಧೀರನಾಗ ತೊಡಗಿದೆ. ತೀವ್ರ ಜ್ವರ ಬಾಧೆಯಿಂದ ಸೋಮವಾರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಲಾಗಲಿಲ್ಲ. ಇನ್‌ಫ್ಲುಯೆಂಜ ನರಳುವಿಕೆಯಿಂದಾಗಿ ನಾನು ನೆಹರು ಸಮಿತಿಯನ್ನು ಕೈಬಿಡಬೇಕಾಗಿ ಬಂತು. ಆ ನರಳಿಕೆಯಿಂದ ನಾನಿನ್ನೂ ಚೇತರಿಸಿಕೊಂಡಿಲ್ಲ.''

ಎಐಸಿಸಿ ಅಧಿವೇಶನದ ತಮ್ಮ ಭಾಷಣದಲ್ಲಿ ಅವರು ಜವಹರ ಲಾಲ್ ನೆಹರು ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರು. ತಮ್ಮ ಆತ್ಮಚರಿತ್ರೆಯಲ್ಲಿ ನೆಹರು ಅದನ್ನು ಹೀಗೆ ಪ್ರಸ್ತಾಪ ಮಾಡಿದ್ದಾರೆ;

''ಸೈಮನ್ ಆಯೋಗದ ಪ್ರಕರಣದ ಕೆಲವು ದಿನಗಳ ನಂತರದಲ್ಲೇ ದೆಹಲಿಯಲ್ಲಿ ಏರ್ಪಟ್ಟ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಲಾಲಾ ಲಜಪತ್‌ರಾಯ್ ಪಾಲ್ಗೊಂಡರು. ಪೊಲೀಸ್ ಲಾಠಿ ಪ್ರಹಾರದಿಂದ ಗಾಯಗಳ ಗುರುತುಗಳು ಇನ್ನೂ ಕಾಣುತ್ತಿದ್ದವು. ತತ್ಪರಿಣಾಮದ ನರಳಿಕೆಯಿಂದ ಅವರಿನ್ನೂ ಮುಕ್ತರಾಗಿರಲಿಲ್ಲ...ಒಂದಲ್ಲ ಒಂದು ರೀತಿಯಲ್ಲಿ ಸ್ವಾತಂತ್ರ್ಯದ ಪ್ರಶ್ನೆ ಚರ್ಚೆಗೆ ಬಂದಿತು... ಸ್ವಲ್ಪ ಮಟ್ಟಿಗೆ ಮಾತನಾಡಿದ ನೆನಪು ನನಗಿದೆ... ಆ ಭಾಷಣದಲ್ಲೇನು ಅಂಥ ಪ್ರಾಮುಖ್ಯತೆ ಇರಲಿಲ್ಲ. ಅದನ್ನು ಮರೆತು ಬಿಡಬಹುದಾಗಿತ್ತು. ಆದರೆ ಲಾಲಾಜಿ ಪ್ರತ್ಯುತ್ತರ ಕೊಟ್ಟಿದ್ದರು... ಅದರ ಕೆಲವು ಅಂಶಗಳ ಬಗ್ಗೆ ಅವರು ಟೀಕೆಗಳನ್ನು ಮಾಡಿದ್ದರು.

ಲಾಹೋರಿಗೆ ಮರಳಿದ ಮೇಲೆ ಎಐಸಿಸಿ ಸಭೆಯಲ್ಲಿ ನಾನು ಮಾಡಿದ ಭಾಷಣದ ಬಗ್ಗೆ ಪ್ರತಿಕೂಲ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ತಮ್ಮ ಸಾಪ್ತಾಹಿಕ ದಿ ಪೀಪಲ್‌ನಲ್ಲಿ ಅದಕ್ಕೆ ಸಂಬಂಧಪಟ್ಟಂತೆ ವಿವಿಧ ವಿಷಯವನ್ನು ಆಧರಿಸಿ ಲೇಖನ ಮಾಲೆಯನ್ನೇ ಪ್ರಾರಂಭಿಸಿದರು. ಆದರೆ ಆ ಪೈಕಿ ಮೊದಲ ಲೇಖನ ಪ್ರಕಟಗೊಂಡಿತು. ಮುಂದಿನ ಸಂಚಿಕೆಯಲ್ಲಿ ಎರಡನೇ ಲೇಖನ ಪ್ರಕಟಗೊಳ್ಳುವ ಮೊದಲೇ ಅವರು ನಿಧನ ಹೊಂದಿದರು. ಬಹುಶಃ ಅಪೂರ್ಣವಾದ ಅವರ ಮೊಟ್ಟಮೊದಲ ಲೇಖನವೇ ಅವರ ಪತ್ರಿಕೆಯಲ್ಲಿ ಪ್ರಕಟಗೊಂಡ ಅವರ ಕೊನೆಯ ಲೇಖನವೇನೂ? ಆದಾಗಿ ಅದು ನನ್ನ ನೆನಪಿನಂಗಳದಲ್ಲಿ ಮರೆಯದ ಬೆಳವಣಿಗೆಯಾಗಿ ಉಳಿದಿದೆ.''

ಲಾಲಾಜಿಯವರು ವಾಸ್ತವವಾಗಿ, ಜವಹರ ಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸ್ ಅವರಿಗೆ ಹೆಚ್ಚು ಗೌರವ ಕೊಟ್ಟಿದ್ದಾರೆ. ''ಯುವ ವರ್ಗದ ಪೈಕಿ ಇಬ್ಬರು ಮಾತ್ರ ಪ್ರಾಮಾಣಿಕರು, ಉನ್ನತ ಚಾರಿತ್ರ್ಯ ಉಳ್ಳವರು. ಪಾಂಡಿತ್ಯಪೂರ್ಣರೂ ಆಗಿದ್ದಾರೆ. ನಾನು ಅವರನ್ನು ಗೌರವಿಸುವೆ'' ಎಂದಿರುವರು. ಆದರೆ, ''ಸಂಪೂರ್ಣ ಸ್ವಾತಂತ್ರ್ಯ'' ವಿಷಯಕ್ಕೆ ಸಂಬಂಧಪಟ್ಟಂತೆ ಅವರ ಸಹಮತ ಇರಲಿಲ್ಲ. ಆ ಪರಿಸ್ಥಿತಿಯಲ್ಲಿ ಅದರ ಬಳಕೆ ಸ್ವಲ್ಪಮಟ್ಟಿಗೆ ಅಕಾಡೆಮಿಕ್ ಎನಿಸಿತ್ತು. ಇನ್ನೂ ಹೆಚ್ಚಿನದಾಗಿ ಅವರ ಅಭಿಪ್ರಾಯ ಪ್ರಕಾರ ಕೆಲವರು ಆ ಪದ ಬಳಕೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ನೆಹರು ಅವರನ್ನು ಓಲೈಸಲು ಎನ್ನುವಂತೆ ಮಾಡುತ್ತಿದ್ದರು. ನವೆಂಬರ್ 1ರಂದು ದಿ ಪೀಪಲ್‌ನಲ್ಲಿ ಬರೆದ ಲೇಖನವೊಂದರ ಮೂಲಕ ಲಾಲಾಜಿ ''ನನ್ನ ಬೆಂಬಲಕ್ಕಿಲ್ಲದವರು ನಮಗೆ ವಿರೋಧಿಗಳಾಗಿದ್ದಾರೆಂದೇ ಅರ್ಥ.'' ಎಂದು ಸವಾಲಿನ ರೂಪದಲ್ಲಿ ಬರೆದದ್ದು ಉಂಟು. ಆಗ ಸುಮಾರು ಎರಡು ದಶಕಗಳ ಹಿಂದೆ ಅವರ ಎದುರಾಳಿಗಳು ಅಂತಹ ಸವಾಲನ್ನೇ ಹಾಕಿದ್ದರು. ಇದೇ ಅರ್ಥದ ವಾಕ್ಯವನ್ನು ಅವರು ತಮ್ಮ ಅಪ್ರಕಟಿತ ಇನ್ನೊಂದು ಲೇಖನದಲ್ಲಿ ಸಹ ಬಳಸಿದ್ದಾರೆ. ಅಕ್ಟೋಬರ್ 30ರ ತಮ್ಮ ಭಾಷಣಕ್ಕಾಗಿ ಸಿದ್ಧಪಡಿಸಿದ ಲೇಖನವೊಂದರಲ್ಲಿ ಯುವ ಪೀಳಿಗೆಯನ್ನು ಉತ್ತೇಜನಗೊಳಿಸುವ ಹುಮ್ಮಸಿನಲ್ಲಿ ಸಹ ಇಂಥದ್ದೇ ಪ್ರಸ್ತಾಪ ಮಾಡಿದ್ದಾರೆ. ಯುವ ಪೀಳಿಗೆ ಅತ್ಯುತ್ತಮವೆನಿಸುವ ಕೆಲಸಕ್ಕಾಗಿ ತಮಗೆ ಯಥೋಚಿತವೆನಿಸಿದ ಕೆಲಸದಲ್ಲಿ ತೊಡಗಬೇಕೆಂದು, ಅಂಥ ಕೆಲಸಗಳಿಗೆ ತಮ್ಮ ಅನುಗ್ರಹವಿದೆ ಎಂದು ಅವರು ಬರೆದಿರುವರು.

* * * * *

''ಪ್ರತಿ ಹೊಡೆತವು ಸಾಮ್ರಾಜ್ಯವಾದಿಗಳ ಹೆಣದ ಪೆಟ್ಟಿಗೆಗೆ ಹೊಡೆದ ಒಂದೊಂದು ಮೊಳೆಯಾಗುತ್ತದೆ.'' ಅವರ ಈ ಹೇಳಿಕೆ ಲಾಠಿ ಪ್ರಹಾರ ಮಾಡಿದವರಿಗೆ ಅಪ್ಪಳಿಸಿದ ಹೇಳಿಕೆ. ಮಹಾ ಬೋಧಕರೊಬ್ಬರು ತಮ್ಮ ಕಟ್ಟಕಡೆಯ ದೀಕ್ಷೆಯಾಗಿ ಇದಕ್ಕಿಂತ ದೊಡ್ಡ ಮಂತ್ರವೊಂದನ್ನು ಕೊಡಲು ಸಾಧ್ಯವೇ?

''ನನ್ನನ್ನು ಯಾವುದೂ ಘಾಸಿಗೊಳಿಸುವುದಿಲ್ಲ. ಮೆಲಟಸ್ ಆಗಲಿ ಅನೈಟಸ್ ಆಗಲಿ ಏನೂ ಮಾಡಲು ಆಗುವುದಿಲ್ಲ. ಕ್ರೂರಿಯೊಬ್ಬ ತನಗಿಂತ ಒಳ್ಳೆಯವನಾದ ಮನುಷ್ಯನೊಬ್ಬನು ಘಾಸಿಗೊಳಿಸಲು ಅವಕಾಶವಿಲ್ಲ. ಬಹುಶಃ ಅನೈಟಸ್ ಅವನನ್ನು ಕೊಲ್ಲಬಹುದು. ಅದನ್ನು ನಾನು ನಿರಾಕರಿಸುವುದೂ ಇಲ್ಲ. ಇಲ್ಲವೇ ಆತ ಅವನನ್ನು ಗಡಿಪಾರು ಮಾಡಬಹುದು. ಅಥವಾ ಅವನಿಗೆ ನಾಗರಿಕ ಹಕ್ಕುಗಳನ್ನು ಕೊಡದಿರಲೂ ಬಹುದು. ಅವನಿಗೆ ದೊಡ್ಡ ಆಘಾತ ಉಂಟು ಮಾಡಲಾಗುತ್ತಿದೆ ಎಂದು ಸ್ವತಃ ಅನೈಟಸ್ ಕಲ್ಪಿಸಿಕೊಳ್ಳಬಹುದು. ಇಲ್ಲವೇ ಇತರರು ಹಾಗೆ ಭಾವಿಸಿಕೊಳ್ಳಲು ಬಹುದು. ಆದರೆ ನಾನು ಅದೆಲ್ಲವನ್ನು ಒಪ್ಪುವುದಿಲ್ಲ. ಅವನು ಎಸಗುತ್ತಿರುವಂಥ ನೀಚ ಕಾರ್ಯಗಳು

ಇನ್ನೊಬ್ಬನ ಜೀವವನ್ನು ಅನ್ಯಾಯವಾಗಿ ತೆಗೆದುಕೊಳ್ಳುತ್ತದೆ. ಈಗ, ಅನೇಕೀಯನ್ನರು (ಮಹಾಶಕ್ತಿವಂತರು, ಮೇಧಾವಿಗಳು ಆದ ಬ್ರಿಟಿಷರು), ನನ್ನ ಹಿತಕ್ಕಾಗಿ ನಾನು ಈ ವಾದವನ್ನು ಮಾಡುತ್ತಿಲ್ಲ, ನೀನು ಒಂದು ವೇಳೆ ಹಾಗೆಂದುಕೊಂಡಿರಲೂ ಬಹುದು. ಅದು ನನ್ನಿಂದ ಸಾಧ್ಯವೂ ಇಲ್ಲ... ಒಂದು ವೇಳೆ ನೀನು ನಾನೆಂದುಕೊಂಡಿದ್ದೇ ಆಗಿದ್ದರೆ ನನಗೆ ಸರಿಸಾಟಿಯಾದ ಉತ್ತರಾಧಿಕಾರಿಯನ್ನು ಸುಲಭದಲ್ಲಿ ಕಂಡುಕೊಳ್ಳಲಾರೆ...''

ಹೀಗೆ ತಮ್ಮ ಕೃತಿಗಳಲ್ಲಿ ಅವರು ಬರೆಯುತ್ತಾ ಬಂದರು. ವಿಶೇಷವಾಗಿ ನೆಹರು ವರದಿಗೆ ಸಂಬಂಧಪಟ್ಟಂತೆ ಅವರ ಸೃಜನಾತ್ಮಕ ಕಾರ್ಯ ಮುಖ್ಯವಾಗಿತ್ತು. ಲಾಲಾಜಿ ಸದಾ ಕಾಲ ಹಿಂದೂ ಮುಖಂಡರನ್ನು ಕಂಡು ತಮ್ಮ ಚಿಂತನೆಗೆ ಅನುಗುಣವಾಗಿ ಅವರನ್ನು ಒಗ್ಗಿಸಿಕೊಳ್ಳುವ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಅವರ ಆಕ್ಷೇಪಗಳನ್ನು ಸ್ವೀಕರಿಸುತ್ತಿದ್ದರು. ಅವುಗಳಿಗೆ ಪರಿಹಾರವನ್ನು ನೀಡಿ ನೆಹರು ವರದಿಗೆ ಪೂರಕವಾಗಿ ಕೆಲಸ ಮಾಡುವಂತೆ ಪ್ರೇರೇಪಿಸುತ್ತಿದ್ದರು. ತತ್ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಪ್ರಚಾರಕ್ಕೆ ಏರ್ಪಾಟು ಮಾಡುತ್ತಿದ್ದರು. ವೇದಿಕೆಗಳ ಮೂಲಕ ಪ್ರಚಾರ ಕಾರ್ಯದಲ್ಲಿ ತೊಡಗುತ್ತಿದ್ದರು. ಸದಾ ಅವರು ತಮ್ಮನ್ನು ತಾವು ಒಂದಲ್ಲ ಒಂದು ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ವೈದ್ಯರು ಸಲಹೆ ಮಾಡಿದಂತೆ ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿಲ್ಲ. ಗಾಯಗಳಿನ್ನೂ ಮಾಗಿರಲಿಲ್ಲ. ಪದೇ ಪದೇ ಅವುಗಳ ನೋವಿನಿಂದಾಗಿ ದೇಹದ ಉಷ್ಣಾಂಶ ಹೆಚ್ಚಾಗುತ್ತಿತ್ತು. ಆದರೂ ಅವುಗಳ ಕಡೆಗೆ ಅವರು ಹೆಚ್ಚು ಲಕ್ಷ್ಯ ಹರಿಸುತ್ತಿರಲಿಲ್ಲ. ಸದಾ ಕಾಲ ಲಾಲಾಜಿ ತಮ್ಮ ತಲೆಯ ಮೇಲೆ ಅಪಾರವಾದ ಭಾರವನ್ನು ಹೊತ್ತಿರುತ್ತಿದ್ದರು. ಹೃದಯದ ತುಂಬಾ ಭಾವನೆಗಳು ಗೂಡು ಕಟ್ಟಿಕೊಂಡಿದ್ದವು. ಅವರು ಬಸವಳಿಯುತ್ತಿದ್ದನ್ನು ಅವರ ವೈದ್ಯರು ಗುರುತಿಸಿದರು. ಇರಬೇಕಾದ ಸ್ಥಿತಿಗಿಂತ ಕ್ಷೀಣವಾಗುತ್ತಿದ್ದುದ್ದನ್ನು ಗಮನಿಸುತ್ತಿದ್ದರು. ಆದರೆ ಅವರು ವಿಶ್ರಾಂತಿಗಾಗಿ ನೀಡುತ್ತಿದ್ದ ಸಲಹೆ ವ್ಯರ್ಥವಾಗುತ್ತಿತ್ತು.

ಆ ವರ್ಷದ ದೀವಳಿಯ ಸಂಭ್ರಮ ಲಾಲಾಜಿಯವರನ್ನು ಸಂಗಮಿಸಿಕೊಳ್ಳುವಲ್ಲಿ ವಿಫಲವಾಯಿತು. ಮಗುವಿನಂತೆ ಅವರ ಬಯಕೆಗಳು ವಿಚಿತ್ರವಾದವು. ಎಳೆಯ ಮಕ್ಕಳು ತಮ್ಮೊಂದಿಗೆ ಬೆರೆಯಬೇಕೆಂದೂ, ಸಿಹಿ ಹಂಚಿಕೊಳ್ಳಬೇಕೆಂದು ಬಯಸಿದರು. ನವೆಂಬರ್ 12 ದೀವಳಿಯ ಸಂಜೆ ಅಂಥ ಕೂಟವೊಂದನ್ನು ಏರ್ಪಡಿಸಲಾಯಿತು. ಆ ಸಂಜೆಯ ಬಗೆ ಬಗೆಯ ಚಿತ್ರಗಳನ್ನು ಕಂಪನಿಯೊಂದರ * ವ್ಯಕ್ತಿಯೊಬ್ಬರು ನಂತರ ಹೀಗೆ ಚಿತ್ರಿಸಿದ್ದಾರೆ.

'' 'ಆದರೆ ಸರ್, ಈ ದಿನ ಸಂಜೆ ನನಗೆ ಬಿಡುವಿಲ್ಲ.' ಆ ದಿನ ರಾತ್ರಿ ಊಟ ಮಾಡಲು ನನ್ನನ್ನು ಆಹ್ವಾನಿಸಿದರು. ಮಾರನೇಯ ದಿನ ನಾನು ಲಾಹೋರಿಗೆ ಹೋಗಬೇಕಾಗಿತ್ತು. ಸುಮಾರು 15 ದಿನಗಳ ಭೇಟಿ ಅದು. ಅದಕ್ಕಾಗಿ ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಇಲ್ಲವಾದರೆ ನಾನು ಆ ದಿನ ಸಂಜೆಯ ಊಟದಲ್ಲಿ ಪಾಲ್ಗೊಳ್ಳಲು ಸಿದ್ಧವಿದೆ. ಆದರೆ ನನ್ನ ಮಾತುಗಳು, ಪ್ರಾರ್ಥನೆ ವ್ಯರ್ಥವಾದವು. ಅವರು ನನ್ನ ಭುಜಗಳ ಮೇಲೆ ಕೈ ಇಟ್ಟರು. ಹಿಂದೆಯೂ ಹಾಗೆ ಅದೆಷ್ಟೋ ಸಲ ಭುಜಗಳನ್ನು ನೇವರಿಸುತ್ತಿದ್ದರು.

---

* ಮದನ್ ಮೋಹನ್ ಸಿಂಗ್

ಅದು ನಾನು ಹುಡುಗನಾಗಿದ್ದಾಗ. ಅವರೇ ಹೇಳಿದರು. 'ಹೌದು. ನನಗೆ ಗೊತ್ತು. ಆದರೂ ಈ ಸಂಜೆ ನೀನು ನಮ್ಮೊಡನೆ ಊಟಕ್ಕೆ ಬರುವೆ. ಬಹುಶಃ ನಾನು ಬಹು ಬೇಗದಲ್ಲೇ ಬಹು ದೂರಕ್ಕೆ ಹೋಗಬಹುದು. ನಂತರ ಮರಳುವ ಸಾಧ್ಯತೆ ಇಲ್ಲ.' ''

* * * * *

''ಅಲ್ಲಿ ನಾವು ಒಂದು ರೂಮಿನಲ್ಲಿ ಕುಳಿತಿದ್ದೆವು. ನೆಲದ ಮೇಲೆ ಕುಳಿತು ಲೋಕಾಭಿರಾಮವಾಗಿ ಕುಳಿತು ಮಾತನಾಡುತ್ತಿದ್ದೆವು. ಚಳಿ ಸ್ವಲ್ಪ ಜಾಸ್ತಿ ಇತ್ತು. ಅವರು ಹಾಗೆ ಗೋಡೆಯನ್ನು ಆನಿಸಿ ಕುಳಿತರು. ಎಳೆತನದ ನೆನಪುಗಳನ್ನೆಲ್ಲ ಅವರು ಮಾಡಿಕೊಳ್ಳುತ್ತಿದ್ದುದ್ದರಿಂದ ಆ ರೂಮಿನ ತುಂಬಾ ಪದೇ ಪದೇ ನಗು ಹಾರಾಡುತ್ತಿತ್ತು. ಆ ರಾತ್ರಿಯ ಊಟ ಅದ್ದೂರಿಯಾಗಿತ್ತು. ಮನದಣಿಯ ಊಟ ಮಾಡಿದೆವು. ಎಲ್ಲರೂ ಯಾವುದೇ ಪಥ್ಯವಿಲ್ಲದೆ ತಿಂದೆವು. ತಿನ್ನುವುದಕ್ಕಿಂತ ಹೆಚ್ಚಿನದಾಗಿ ಅವರು ಹೇಳುವುದರಲ್ಲೇ ನಮ್ಮ ಮನಸ್ಸು, ಕಿವಿ ನಾಟಿತ್ತು. ಅವರೆಷ್ಟು ಬುದ್ಧಿವಂತರು, ಎಷ್ಟೊಂದು ಆಳವಾಗಿ ತಿಳುವಳಿಕೆ ನೀಡುತ್ತಾರೆಂಬುದನ್ನು ಅರಿತು ಆಶ್ಚರ್ಯವಾಗುತ್ತಿತ್ತು. ಇದ್ದಕ್ಕಿದ್ದಂತೆ ಕೆಲವೊಮ್ಮೆ ಅವರ ಧ್ವನಿ ಮ್ಲಾನವಾಗುತ್ತಿತ್ತು. ಅಂಥ ಸಮಯದಲ್ಲಿ ಕಂಡು ಕಾಣದ ದುಃಖ ನಮ್ಮನ್ನು ಆವರಿಸಿಕೊಳ್ಳುತ್ತಿತ್ತು. ಅವರಿಗೆ ಆರೋಗ್ಯ ಸರಿ ಇಲ್ಲವೆಂದು ಇನ್ನೂ ಬಾಧೆಯಲ್ಲಿದ್ದಾರೆಂದು ನಮಗೆ ಗೊತ್ತಿತ್ತು. ಆ ಬಾಧೆ ಅವರನ್ನು ಪೀಡಿಸುತ್ತಲೂ ಇತ್ತು. ಹಾಗೆಂದು ಅವರು ಅದನ್ನೆಂದೂ ಹೇಳಿಕೊಂಡವರಲ್ಲ. ಸದಾ ನಗು ನಗುತ್ತಲೇ ಇದ್ದರು. ಮರಣಶಯ್ಯೆಯಲ್ಲಿದ್ದಾಗಲೂ ಸಹ ಅವರು ತಮ್ಮ ನೋವಿನ ಬಗ್ಗೆ ಹೇಳಿಕೊಳ್ಳಲಿಲ್ಲ. ಅವರು ಸಿಂಹದಂಥ ಹೃದಯ ಉಳ್ಳವರಾಗಿದ್ದರು. ಅದು ನಮಗೆ ಗೊತ್ತಿತ್ತು. ಇಡೀ ಜಗತ್ತೇ ಅದನ್ನು ಹೇಳುತ್ತಲೂ ಇದೆ.

* * * * *

''ನಮ್ಮನ್ನು ಇನ್ನೊಂದು ಕೊಠಡಿಗೆ ಸ್ಥಳಾಂತರಿಸಲಾಯಿತು. ಅದು ಅವರ ಮಲಗುವ ಕೋಣೆ. ಅವರು ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಸಾಕಷ್ಟು ಬಳಲಿದ್ದರು. ಸಾಧ್ಯವಾದಷ್ಟು ತಮ್ಮಲ್ಲಿದ್ದುದ್ದನ್ನು ಅವರು ನಮಗೆ ಅರಹಲು ಪ್ರಯತ್ನಿಸುತ್ತಿದ್ದರು. ಸದಾ ಮುಗುಳ್ನಗೆ. ಅದನ್ನು ನಾವು ಹಂಚಿಕೊಳ್ಳುತ್ತಿದ್ದೆವು. ಆ ದಿನ ಸಂಜೆ ಹಿಂದೆಂದಿಗಿಂತಲೂ ಹೆಚ್ಚು ಹರ್ಷಚಿತ್ತರಾಗಿ ಕಂಡರು. ಆ ದಿನ ತಮ್ಮ ಮುಂದಿದ್ದ ಎಲ್ಲಾ ಕೆಲಸಗಳನ್ನು ಅವರು ಕೈಬಿಟ್ಟಿದ್ದರು. ದೇಶದ ವ್ಯವಹಾರಗಳ ಬಗ್ಗೆ ತಾವು ಹಿಡಿದಿದ್ದ ಕಾರ್ಯವನ್ನು ಮುಕ್ತಗೊಳಿಸಿಕೊಳ್ಳುತ್ತಿರುವುದಾಗಿ ಅವರು ಹೇಳಿದರು. ನಾವು ಹೊಸ ಮಾರ್ಗವನ್ನು

ಅರಿಸಿಕೊಳ್ಳಬೇಕು. ಹಿಂದಿನ ನಮ್ಮ ಅನುಭವವನ್ನು ಮರೆಯಬಾರದು. ಬೇರೆಲ್ಲಿಗೋ ಹೋಗಿ ಏನನ್ನು ಸಾಧಿಸಬೇಕಾಗಿಲ್ಲ. ಭದ್ರ ಬುನಾದಿಯ ಮೇಲೆ ಅವರು ಹಾಕಿಕೊಟ್ಟ ಮಾರ್ಗಗಳೇ ಅನೇಕ ಉಂಟು. ನಿರ್ದಿಷ್ಟವಾಗಿ ಏನನ್ನು ಮಾಡಬೇಕು ಅದನ್ನೇ ಅವರು ಬಿಟ್ಟಿದ್ದಾರೆ. ನಮಗೆ ಎದುರಾಗಬಹುದಾದ ವಿಪತ್ತುಗಳೇನು ಎಂಬುದು ಅವರಿಗೆ ಗೊತ್ತಿತ್ತು. ಅವುಗಳನ್ನು ಎದುರಿಸಲು ನಮ್ಮನ್ನು ಸನ್ನದ್ಧರನ್ನಾಗಿ ಮಾಡಿದ್ದಾರೆ. ಅವರ ವೈಯಕ್ತಿಕ ನರಳಾಟ ಆರಂಭದ ಸೂಚನೆಯಾಗಿತ್ತು. ಮುಂದೆ ಆಗಬೇಕಾಗಿದ್ದನ್ನು ಅದು ಮುನ್ಸೂಚನೆಯಾಗಿ ತಿಳಿಸುತ್ತಿತ್ತು. ನಮ್ಮ ದಿಟ್ಟ ಹೋರಾಟದ ಮಧ್ಯದಲ್ಲಿ ತಾವಿದ್ದೇವೆಯೋ ಎನ್ನುವ ರೀತಿಯಲ್ಲಿ ಅವರು ಕಾಣಿಸಿಕೊಂಡರು.

*   *   *   *   *

''ಹೌದು. ನಾವೆಲ್ಲರೂ ಈಗ ತೀರಾ ಚಿಕ್ಕವರು. ನಾನು ಅವರ ಪಕ್ಕದಲ್ಲೇ ಕುಳಿತಿದ್ದೆ. ಅದು ತೀರಾ ಹತ್ತಿರದಲ್ಲಿ. ಅವರ ಹಾಸಿಗೆಯ ಮೇಲೆ ಅವರ ಕಾಲ ಬಳಿಯಲ್ಲೇ. ಬಹುಶಃ ಅದಕ್ಕೆ ಇರಬೇಕು. ನನಗೆ ಭರಿಸಲಾಗದಷ್ಟು ದುಃಖ. ಅವರಲ್ಲಿ ಕಿಂಚಿತ್ತೂ ಶೋಕವಿರಲಿಲ್ಲ: ಗಂಭೀರವಾಗಿದ್ದರು. ದೂರದಲ್ಲಿ ಏನನ್ನೋ ಹುಡುಕುವಂತಿದ್ದರು. ದೃಷ್ಟಿ ಭವಿಷ್ಯದಲ್ಲಿ ನೆಟ್ಟಿತ್ತು. ಅದು ಅವರ ಅನುದಿನದ ರೀತಿಯಂತಿರಲಿಲ್ಲ. ಅವರು ಸದಾ ಕಾಲ ತಮ್ಮ ಕನಸುಗಳನ್ನು ತಮ್ಮಲ್ಲೇ ಇಟ್ಟುಕೊಂಡಿರುತ್ತಿದ್ದರು. ಯಾವುದು ಆಗಿದೆಯೋ ಅದರ ಬಗ್ಗೆಯಷ್ಟೇ ಮಾತನಾಡುತ್ತಿದ್ದರು, ಆಗಬಹುದಾದರ ಬಗ್ಗೆ ಎಂದೂ ಮಾತನಾಡುತ್ತಿರಲಿಲ್ಲ. ಆದರೆ ಆ ರಾತ್ರಿ ಅವೆಲ್ಲ ತದ್ವಿರುದ್ಧವಾಗಿತ್ತು. ಆ ಕಾರಣದಿಂದಲೇ ನನಗೆ ಅವೆಲ್ಲವೂ ನೆನಪಿನಲ್ಲಿ ಮರುಕಳಿಸುತ್ತಿದೆ. ಅದೆಲ್ಲ ನಿನ್ನೆಯೇ ನಡೆಯಿತೇನೋ ಎನ್ನುವಂತಿದೆ.

*   *   *   *   *

''ಹೌದು. ನಾನು ಅವರಿಗೆ ಸಮೀಪದಲ್ಲೇ ಕುಳಿತಿದ್ದೆ. ಹಾಸಿಗೆಯ ಮೇಲೆ ಮಲಗಿ ಅವರು ಹೇಳುತ್ತಿದ್ದೆಲ್ಲವನ್ನು ಕೇಳುತ್ತಿದ್ದೆ. ಅವರು ತುಂಬಾ ನರಳಿದ್ದವರು. ಹಾಗೆಂದು ಎಂದೂ ಹೇಳಿಕೊಂಡವರಲ್ಲ. ಅದೆಲ್ಲ ನಮಗೇಕೆ ಗೊತ್ತಾಗಬೇಕು. ಯಾರು ಹೆಚ್ಚು ನರಳಿದವರು, ಯಾರು ಹೆಚ್ಚು ಹೇಳಿಕೊಂಡವರೆಂದು ಗೊತ್ತಾಗಬೇಕು. ಏನದ ಕೆಲಸದ ನಂತರ ಕೊನೆಯ ಘಳಿಗೆಯಲ್ಲಿ ಸ್ವಲ್ಪ ಬಳಲಿರಬಹುದೇನೋ ಎಂದು ನಾವು ಅಂದುಕೊಂಡಿದ್ದು. ಅವರು ನಮ್ಮ ಹಿತಕ್ಕಾಗಿ ಎಲ್ಲವನ್ನು ಚಿತ್ರಿಸುತ್ತಾ ಹೋದರು. ಹಾಗಾಗಿ ಒಂದೊಂದಾಗಿ ಅವರ ಬಾಯಿಯಿಂದ ಘಟನೆಗಳೆಲ್ಲ ಹೊರಬರತೊಡಗಿದವು

ಈ ಮಧ್ಯೆ ಅಲ್ಲಿದ್ದ ನಮ್ಮೆಲ್ಲರ ಪೈಕಿ ಒಬ್ಬೊಬ್ಬರಾಗಿ ಎಲ್ಲ ನಿರ್ಗಮಿಸತೊಡಗಿದರು. ಬಹುಶಃ 7-8 ಮಂದಿ ಇದ್ದಿರಬಹುದು. ನನಗೇಕೋ ಅವರನ್ನು ಬಿಟ್ಟು ಹೋಗುವ ಮನಸ್ಸಾಗಲಿಲ್ಲ. ನಾನು ಅವರನ್ನೇ ನೋಡತೊಡಗಿದೆ. ಅವರು ಸುತ್ತಲೂ ನೋಡಿದರು. ಎಲ್ಲರೂ ಹೊರಟು ಹೋಗಿದ್ದರು. ಅವರೇಕೆ ಹೋದರೆಂದು ಅವರಿಗೆ ಅರ್ಥವಾಗಿರಬೇಕು. ನನ್ನನ್ನು ನೋಡುತ್ತಾ ಹೇಳಿದರು.-'ಇನ್ನೂ ಸ್ವಲ್ಪ ಹೊತ್ತು ಇರುವೆಯಾ. ನೀನು ನನ್ನ ಬಳಿಗೆ ಬರುವುದೇ ಅಪರೂಪ. ಅವರೆಲ್ಲ ಯಾವಾಗಲೂ ಇಲ್ಲಿಯೇ ಇರುತ್ತಾರೆ. ನನ್ನೊಂದಿಗೆ ಕೆಲಸ ಮಾಡುತ್ತಿರುತ್ತಾರೆ.'

*　　*　　*　　*　　*

''ಅವರ ಧ್ವನಿಯಲ್ಲಿ ಹೊಸತನವೇನೂ ಕಾಣಲಿಲ್ಲ. ಅದೇ ಜಾಡಿನ ಪದಗಳು-ಈಡೇರದ ಬಯಕೆ, ಈಡೇರದ ಆಶಯ. ಹೌದು. ಏನೇನೋ ಆಲೋಚನೆಗಳ ಗೋಜಲಿನಲ್ಲಿ ನಾನು ಸಿಕ್ಕಿಕೊಂಡೆ. ಅವರಿಗೆ ನನ್ನಿಂದ ಏನೂ ಉಪಯೋಗವಿರಲಿಲ್ಲ. ಅವರ ಮಹಾ ಕಾರ್ಯಕ್ಕೂ ನನ್ನಿಂದ ಏನೂ ಉಪಯೋಗವಿರಲಿಲ್ಲ. ಅವರು ನನ್ನಲ್ಲಿ ಏನನ್ನೋ ಕಂಡು ಕೊಂಡಂತಿದ್ದರು. ನನ್ನನ್ನು ಹರಸುವುದನ್ನು ಬಿಟ್ಟರೆ ಅದರ ಬಗ್ಗೆ ನನ್ನೊಂದಿಗೆ ಎಂದೂ ಏನನ್ನೂ ಮಾತನಾಡಿರಲಿಲ್ಲ. ಸಾಲದ್ದಕ್ಕೆ ನಾವೆಂದೂ ಏನನ್ನೂ ಯೋಜಿಸಿಕೊಂಡವರಲ್ಲ. ನಾನು ಸರಳಜೀವಿಯಾಗಿ, ಸ್ವತಂತ್ರವಾಗಿ, ಘನತೆವೆತ್ತ ವ್ಯಕ್ತಿತ್ವದವನಾಗಿ ಹೇಗೆ ರೂಪಿತವಾಗಬೇಕೆಂಬುದರ ಬಗ್ಗೆಯೂ ಮಾತನಾಡಿಕೊಂಡವರಲ್ಲ. ಆದರೆ ಇಂದು ನಾನು ಕೇಳುತ್ತಿದ್ದ ದನಿಯ ಆಳ ನನಗೆ ಹಿಂದೆಂದೂ ಗೋಚರವಾಗಿರಲಿಲ್ಲ. ಅದೇನೋ ಅತೃಪ್ತಿ, ಆಶಯ.

*　　*　　*　　*　　*

''ಹೌದು. ನಾನು ಅವರನ್ನು ಹತಾಶೆಗೊಳಿಸಿದ್ದೆ. ನಾನು ನಿರೀಕ್ಷಿಸಿದ್ದಕ್ಕಿಂತ ಮೊದಲೇ ಬಹು ಶೀಘ್ರವಾಗಿ ಅಂತ್ಯ ಸಮೀಪಿಸಿತು. ದೂರದ, ಸುದೂರದ ಊರಿಗೆ ಅವರು ಪ್ರಯಾಣ ಬೆಳೆಸಿ ಆಗಿತ್ತು. ನಾನು ಮತ್ತೆಂದೂ ಅವರನ್ನು ನೋಡಲಾಗಲಿಲ್ಲ.''

ಹೀಗೆ ನಂ. 2, ಕೋರ್ಟ್ ಸ್ಟ್ರೀಟ್ ನಿವಾಸದಲ್ಲಿ ಘಟನೆಗಳು ಒಂದೊಂದಾಗಿ ರೆಕ್ಕೆಪುಕ್ಕ ಕಳಚಿಕೊಂಡವು.

ನವೆಂಬರ್ 16ರ ಆ ಸಂಜೆ: ಎಂದಿನಂತೆ ಅವರು ತಮ್ಮ ಮಿತ್ರರು ಮತ್ತು ತಮ್ಮನ್ನು ನೋಡಲು ಬಂದವರೊಂದಿಗೆ ಮಾತನಾಡುತ್ತಿದ್ದರು. ವ್ಯವಹಾರಿಕವಾದ

ಮಾತುಗಳು ಸಾಗಿದ್ದವು. ಪ್ರತಿಭಾನ್ವಿತ ಪತ್ರಕರ್ತ ಜಿ.ಎಸ್. ರಾಘವನ್ ಜೊತೆಯಲ್ಲಿ ಮುಕ್ತ ಮನಸ್ಸಿನಿಂದ ಮಾತನಾಡುತ್ತಾ ಹೃದಯಪೂರ್ವಕವಾಗಿ ನಕ್ಕಿದ್ದರು. ನೆಹರು ವರದಿಗೆ ಸಂಬಂಧಪಟ್ಟಂತೆ ಪತ್ರಿಕಾ ಪ್ರಚಾರಕ್ಕಾಗಿ ಅವರನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಲಾಲಾಜಿ ತಮ್ಮ ಇಂಗಿತ ವ್ಯಕ್ತಪಡಿಸಿದ್ದರು. ಅದಕ್ಕೆ ಮೊದಲು ಅವರ ವೈದ್ಯ ಎನ್.ಆರ್. ಧರ್ಮವೀರ್ ಭೇಟಿ ಕೊಟ್ಟು ಸ್ವಲ್ಪ ಕಾಲ ಅವರೊಂದಿಗಿದ್ದು ಪರೀಕ್ಷಿಸಿ ಹೋಗಿದ್ದರು. ಆ ದಿನ ಸಂಜೆ ತಮ್ಮನ್ನು ವಿಹಾರಕ್ಕೆ ಕರೆದೊಯ್ಯಬೇಕೆಂದು ಲಾಲಾಜಿ ಅವರನ್ನು ಕೇಳಿಕೊಂಡಿದ್ದರು. ಆದರೆ ಆ ಸಂಜೆ ಅವರನ್ನು ಕರೆದೊಯ್ಯಲು ವೈದ್ಯರು ಹೋದಾಗ ಲಾಲಾಜಿ ಬೇರೊಂದು ಕೆಲಸದ ಮೇಲೆ ಹೊರಗೆ ಹೋಗಿದ್ದರು. ಮತ್ತೆ ಅವರನ್ನು ಆ ವೈದ್ಯರು ಭೇಟಿ ಮಾಡಿದ್ದು ಊಟದ ಸಮಯ ಮುಗಿದ ನಂತರ. ಕುಟುಂಬದ ಸದಸ್ಯರು ಎಲೆಯಾಟ ಆಡುತ್ತಿದ್ದರು. ಲಾಲಾಜಿಯವರು ಕ್ಲಿಷ್ಟಕರವಾದ ಕೆಲಸಗಳಲ್ಲಿ ತೊಡಗಬಾರದಾಗಿದ್ದರಿಂದ ಅದು ಅವರಿಗೆ ಅನುಕೂಲಕರವಾಗಿತ್ತು. ಆಗಿಂದಾಗ್ಗೆ ವೈದ್ಯರು ಅವರನ್ನು ಪರೀಕ್ಷಿಸುತ್ತಿದ್ದರು. ಲಾಲಾಜಿಯವರು ಬಳಲುತ್ತಿದ್ದುದನ್ನು ಅವರ ಬಲ ಎದೆಯಲ್ಲಿ ನರಗಳು ಬಿಗಿಗೊಳ್ಳುತ್ತಿದ್ದನ್ನು ವೈದ್ಯರು ಗಮನಿಸುತ್ತಿದ್ದರು. ಬೆನ್ನುಮೂಳೆಯ ಸಮೀಪದಲ್ಲೂ ಸಹ ಆ ಬಾಧೆ ಹೆಚ್ಚಾಗತೊಡಗಿತ್ತು. ಹೃದಯದಲ್ಲಾಗಲಿ, ನಾಡಿ ಮಿಡಿತದಲ್ಲಾಗಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಎದೆ ಬಡಿತ ಯಥಾಸ್ಥಿತಿಯಲ್ಲಿತ್ತು. ದೇಹದ ಉಷ್ಣತೆಯೂ ಹತೋಟಿಯಲ್ಲಿತ್ತು. ಉಸಿರಾಟದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಾಗುತ್ತಿತ್ತು. ನಾಲಿಗೆ ಒಂದು ರೀತಿಯಲ್ಲಿ ಭಿನ್ನವಾಗಿ ಕಾಣುತ್ತಿತ್ತು. ಆದರೆ ತಲೆನೋವಾಗಲಿ, ನೀರಡಿಕೆಯಾಗಲಿ ಇರಲಿಲ್ಲ. ನೋವು ಸಹ ಹೆಚ್ಚಿಗೆ ಏನೂ ಸಹ ಇರಲಿಲ್ಲ. ಡೆಂಗಿ ಜ್ವರದ ಭಯ ಭೀತಿ ಲಾಲಾಜಿಯವರನ್ನು ಕಾಡುತ್ತಿದ್ದರೂ ಅದಕ್ಕೆ ಕಳವಳವಿರಲಿಲ್ಲ. ನಿರಂತರ ಅಂಗಮರ್ಧನ, ಇಲ್ಲವೇ ವಿಶ್ರಾಂತಿ ಅಥವಾ ತಂಗಾಳಿಯಲ್ಲಿ ವಿಹಾರ ಕೈಗೊಳ್ಳುವುದರಿಂದ ಬಳಲಿಕೆ ಮತ್ತು ಆಯಾಸವನ್ನು ನಿವಾರಿಸಬಹುದೆಂದು ವೈದ್ಯರು ಹೇಳುತ್ತಿದ್ದರು. ಅಕ್ಟೋಬರ್ 30ರಿಂದ ನಿರಂತರವಾಗಿ ಆ ಶುಶ್ರೂಷೆಯನ್ನು ನೀಡಲಾಗುತ್ತಿತ್ತು. ನವೆಂಬರ್ 17... ಇನ್ನೂ ನಸುಕು ನಸುಕು. ಲಾಲಾಜಿಯವರ ಶುಶ್ರೂಷೆಗೆ ನಿಯುಕ್ತವಾಗಿದ್ದ ವ್ಯಕ್ತಿ ಅವರ ಕೊಠಡಿಯಿಂದ ಹಳೆಯ ಬಂಗಲೆಯ ಕಡೆಗೆ ಏದುಸಿರು ಬಿಡುತ್ತಾ ಓಡಿ ಬರುತ್ತಿದ್ದಾನೆ. ಜನತಾ ಸೇವಾ ಸಂಘದ ಸದಸ್ಯರಿದ್ದ ಜಾಗ ಆ ಬಂಗಲೆ. ಎಲ್ಲಾ ಸದಸ್ಯರು ಇನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ನೋಡ ನೋಡುತ್ತಿದ್ದಂತೆ ಎಲ್ಲರೂ ಲಾಲಾಜಿಯವರ ಕೊಠಡಿಯ ಕಡೆಗೆ ಧಾವಿಸತೊಡಗಿದರು. ಪತ್ನಿ, ಪುತ್ರ ಮತ್ತು ಪುತ್ರಿ ಆ ವೇಳೆಗಾಗಲೇ ಅಲ್ಲಿಗೆ ತಲುಪಿ ಗರಬಡಿದವರಂತೆ ನಿಂತಿದ್ದರು. ವೈದ್ಯರಿಗೆ ದೂರವಾಣಿ ಕರೆ ಹೋಗಿತ್ತು. ಆಗಬಾರದ್ದು ಆಗಿ ಹೋಗಿದೆ ಎಂದು ಪರಿಸ್ಥಿತಿ ಹೇಳುತ್ತಿತ್ತು

ವೈದ್ಯರು ಬಂದರು. ಯಾವುದನ್ನು ಘೋಷಿಸಬಾರದಿತ್ತೋ! ಅದನ್ನು ಅವರು ಘೋಷಿಸಿದರು.

ಹಿಂದಿನ ರಾತ್ರಿ ವೈದ್ಯರು ತೆರಳಿದ ನಂತರ ಲಾಲಾಜಿ ನಿದ್ರೆಯ ತೆಕ್ಕೆಗೆ ಜಾರಿದ್ದರು. ಆಗ ಅವರ ಬಳಿ ಅವರ ಮೊಮ್ಮಗ ಭಾರತಿ ಅವರ ಕೈ ಕಾಲುಗಳನ್ನು ಒತ್ತುತ್ತಿದ್ದ. ಸುಮಾರು ಒಂದೂವರೆ ಗಂಟೆಯ ತನಕ ಆ ಶುಶ್ರೂಷೆ ನಡೆದಿತ್ತು. ಬೆಳಗ್ಗೆ 6.30ರ

ಸುಮಾರಿನಲ್ಲಿ ನೋವು ಜಾಸ್ತಿಯಾಗಿರುವುದಾಗಿ ಲಾಲಾಜಿ ಹೇಳುತ್ತಿದ್ದದ್ದು ಕೇಳಿಸಿತು. ಆತ ಕೂಡಲೇ ಅಮೃತನ ಕೊಠಡಿಗೆ ಹೋಗಿ ಅವನನ್ನು ಎಬ್ಬಿಸಿದ. ಆತ ಬರುವ ವೇಳೆಗೆ ಸಮಯ 6.45ರಷ್ಟಾಗಿತ್ತು. ಇಬ್ಬರು ನೋಡುತ್ತಾರೆ ಅಂತ್ಯ ಆವರಿಸಿಯಾಗಿತ್ತು. ಸಾವಿನ ನಿಜವಾದ ಕಾರಣವನ್ನಾಗಲಿ ರೂಪುರೇಷೆಯನ್ನಾಗಲಿ ಯಾರಿಂದ ವರ್ಣಿಸಲು ಸಾಧ್ಯ? ಆದರೆ ಲಾಲಾಜಿ ಅವರಿಗೆ ನಿರಂತರವಾಗಿ ಚಿಕಿತ್ಸೆ ನೀಡಿದ ಅವರ ವೈದ್ಯ ಮಿತ್ರರಾದ ಧರ್ಮವೀರ್ ಮತ್ತು ಗೋಪಿಚಂದ್ ಪ್ರಕಾರ ದೈಹಿಕವಾಗಿ ಮತ್ತು ಮಾನಸಿಕವಾಗಿ ಅವರಿಗಾದ ಆಘಾತವೇ ಅವರ ಆ ಅಂತ್ಯಕ್ಕೆ ಕಾರಣವಾಯಿತು. ಅಕ್ಟೋಬರ್ 30ರಂದು ಬ್ರಿಟಿಷ್ ಪೊಲೀಸ್ ಅಧಿಕಾರಿ ಮತ್ತು ಆತನ ಸಹಾಯಕ ಅನಾಗರಿಕವಾಗಿ ನಡೆಸಿದ ಹಲ್ಲೆ ಲಾಲಾಜಿಯವರ ಅಂತ್ಯದಲ್ಲಿ ಪರ್ಯಾವಸಾನಗೊಂಡಿತು.

ಕೆಲವೇ ಕ್ಷಣಗಳಲ್ಲಿ ಸುದ್ದಿ ಬರಸಿಡಿಲಿನಂತೆ ಲಾಹೋರ್ ಪಟ್ಟಣದ ತುಂಬೆಲ್ಲಾ ಹಬ್ಬಿತು. ಹಳೆಯ ಕೋಟೆ ನಗರಿ ಹಾಗೂ ಹೊಸ ಪಟ್ಟಣದ ಜನರೆಲ್ಲಾ ಅಂತಿಮ ದರ್ಶನ ಪಡೆಯಲು ಧಾವಿಸಿ ಬಂದರು. ಅಪ್ರತಿಮ ಹೋರಾಟಗಾರ ಸಿಂಹ ಹೃದಯದ ನೇತಾರನಿಗೆ ಬಾಷ್ಪಾಂಜಲಿ ಸಲ್ಲಿಸಿದರು. ನವೆಂಬರ್ 17ರ ಆ ಅಂತ್ಯಕ್ಕೆ ಅಕ್ಟೋಬರ್ 30ರ ಪೈಶಾಚಿಕ ಕೃತ್ಯವೇ ಕಾರಣವೆಂದು ಪ್ರತಿ ಆತ್ಮವೂ ಚೀರಿ ಚೀರಿ ಹೇಳಿತು. ರೈಲ್ವೆನಿಲ್ದಾಣದ ಹೊರಗಡೆ ಪಶುವಿನಂತೆ ಅನಾಗರಿಕರು ತಮ್ಮ ನೇತಾರರನ್ನು ಥಳಿಸಿದ ಪ್ರಕರಣ ಆ ಪ್ರಾರ್ಥಿವ ಶರೀರವನ್ನು ನೋಡುತ್ತಿದ್ದ ಪ್ರತಿಯೊಬ್ಬರ ಕಣ್ಣ ಮುಂದೆ ಕಟ್ಟಿದಂತಾಯಿತು. ಜನರ ಮನಸ್ಸಿನ ಅಂಗಳದಲ್ಲಿ ಅಳಿಸಲಾಗದ ಚಿತ್ರವಾಗಿ ಆ ಘಟನೆ ಉಳಿಯಿತು. ಪ್ರಾಸಂಗಿಕವಾಗಿ ಆ ಪ್ರಸಂಗದ ಬಗ್ಗೆ ಜನತೆ ಮಮ್ಮಲ ಮರಗಿದರು. ಧೀರೋದಾತ್ತತೆ ಮತ್ತು ವೀರ ಕಲಿಯಾಗಿ ಪಂಜಾಬಿನ ಸಿಂಹವನ್ನು ಅವರೆಲ್ಲರೂ ಅಪಾರ ಅಭಿಮಾನ, ಗೌರವದಿಂದ ನಮಿಸಿದರು. ಪೆಟ್ಟು ಬಿದ್ದ ಆ ಸಂಜೆ ಆ ಸಿಂಹ ಗುಡುಗಿದ - ''ಪ್ರತಿ ಏಟು ಸಾಮ್ರಾಜ್ಯಶಾಹಿಗಳ ಶವದ ಪೆಟ್ಟಿಗೆಗೆ ಹೊಡೆದ ಒಂದೊಂದು ಮೊಳೆ'' ಎಂಬ ವಾಣಿಯನ್ನು ಪುನರುದ್ಘರಿಸಿದರು.

ಮಧ್ಯಾಹ್ನದ ವೇಳೆಗೆ ರಾವಿ ನದಿಯ ತೀರದ ಕಡೆಗೆ ಶೋಕತಪ್ತ ಜನಸಾಗರವೇ ಹರಿಯುತ್ತಿದ್ದದ್ದು ಕಂಡು ಬಂದಿತು. ಅವರ ಪುತ್ರ ಪವಿತ್ರ ಬೆಂಕಿಯನ್ನು ಹಿಡಿದು ಪಾರ್ಥಿವ ಶರೀರದ ಯಾತ್ರೆ ಮುಂದೆ ಸಾಗಿದ. ಅಗ್ನಿದೇವನ ಜ್ವಾಲೆಗಳು ಆ ಮಹಾನ್ ರಾಷ್ಟ್ರ ಪ್ರೇಮಿಯ ಪಾರ್ಥಿವ ಶರೀರವನ್ನು ಆಸ್ವಾದಿಸುತ್ತಾ ಅಂತರಿಕ್ಷಕ್ಕೆ ಏರತೊಡಗಿದವು. ರಾವಿ ನದಿಯ ನೆರೆಗಳಲ್ಲಿ ಅವರ ಪಾರ್ಥಿವ ಶರೀರದ ಅವಶೇಷಗಳನ್ನು ಸಂಸ್ಕಾರಗೊಳಿಸಲಾಯಿತು. ಸೂರ್ಯಾಸ್ತವಾದರೂ ಅಲ್ಲಿ ಸೇರಿದ್ದ ಜನ ಮೂಕರಾಗಿ, ಅಭಿಮಾನದಿಂದ ಅಗಲಿದ ತಮ್ಮ ಮಹಾನ್ ಹೋರಾಟಗಾರನ ಆತ್ಮಕ್ಕೆ ಶಾಂತಿ ಕೋರಿದರು. ನೋಡ ನೋಡುತ್ತಿದ್ದಂತೆ ಮನುಷ್ಯ- ಪ್ರಕೃತಿ ಜ್ವಾಲೆಗಳು ಎಲ್ಲವೂ ಅಸ್ತಂಗತವಾಗುತ್ತಿದ್ದ ಸೂರ್ಯನ ಆ ಕಿರಣಗಳಲ್ಲಿ ಲೀನವಾದಂತೆ ಭಾಸವಾಯಿತು.

* * *

ಅಧ್ಯಾಯ-65

ವಿದಾಯ

ಒಂದು ತಿಂಗಳ ನಂತರ.

ಡಿಸೆಂಬರ್ 17. ಸಂಜೆಯ ಹೊತ್ತು. ಜಿಲ್ಲಾ ಪೊಲೀಸ್ ಅಧಿಕಾರಿಯ ಕಚೇರಿಯ ಸಮೀಪದಲ್ಲಿ ರಿವಾಲ್ವರ್ ಗುಂಡುಗಳು ಹಾರಿದ ಶಬ್ದ. ಗುಸು ಗುಸು ಸುದ್ದಿ ಬರಸಿಡಿಲಿನಂತೆ ಹರಡಿತು. ಆ ರಾತ್ರಿಯಲ್ಲೂ ಜನ ಅಕ್ಟೋಬರ್ 30ರ ಮಹಾ ದುರ್ಘಟನೆಯನ್ನು ಸ್ಮರಿಸಿಕೊಳ್ಳುವಂತಾಯಿತು. ಆ ಸಂಜೆ ಪಂಜಾಬಿನ ಸಿಂಹ ಗುಡುಗಿದ್ದ- 'ಪ್ರತಿ ಪೆಟ್ಟು... ಸಾಮ್ರಾಜ್ಯಷಾಹಿಗಳ ಹೆಣದ ಪೆಟ್ಟಿಗೆಗೆ ಒಂದೊಂದು ಮೊಳೆಯಾಗುತ್ತದೆ' ಎಂಬ ಮಾತು ಮರುಕಳಿಸಿದಂತಿತ್ತು. 'ಈಗ, ನೀನು ನನ್ನನ್ನು ಹಿಂಸಿಸಿದ್ದಿಯೇ... ನನ್ನ ಭವಿಷ್ಯವಾಣಿಯನ್ನು ಕೇಳು. ನಾನು ಸಾಯುತ್ತಿದ್ದೇನೆ. ಸಾವಿನ ಸ್ಥಿತಿಯಲ್ಲಿ ಮನುಷ್ಯರಿಗೆ ಶಾಪ ಕೊಡುವ ಶಕ್ತಿ ಇರುತ್ತದೆ. ನೀನು ನನ್ನನ್ನು ಸಾಯುವಂತೆ ಮಾಡಿದ್ದೀಯ. ನಾನು ನಿನಗೆ ಶಾಪ ಕೊಡುತ್ತಿದ್ದೇನೆ. ನಾನು ಸತ್ತ ಸ್ವಲ್ಪದರಲ್ಲೇ ನೀನು ನನಗೆ ಕೊಟ್ಟಿರುವ ಹಿಂಸೆಗಿಂತಲೂ ಘೋರವಾದ ಶಿಕ್ಷೆ ನಿನಗೆ ಕಾದಿದೆ... ನಿನ್ನನ್ನು ದ್ವೇಷಿಸುವವರ ಸಂಖ್ಯೆ ಆಗ ಇನ್ನೂ ಹೆಚ್ಚಾಗಿರುತ್ತದೆ ಎಂದು ನಾನೀಗ ಹೇಳುತ್ತಿದ್ದೇನೆ. ಈತನಕ ನಿನ್ನನ್ನು ದ್ವೇಷಿಸುವವರು ಹತೋಟಿಯಲ್ಲಿದ್ದರು. ಅವರೆಲ್ಲರೂ ಇನ್ನೂ ಬಿಸಿನೆತ್ತರಿನವರಾದ್ದರಿಂದ ನಿನ್ನನ್ನೆಂದೂ ಕ್ಷಮಿಸುವುದಿಲ್ಲ. ನಿನ್ನ ಮೇಲೆ ಆಕ್ರಮಣ ಮಾಡಿಯೇ ತೀರುತ್ತಾರೆ. ನಾನು ಹೋಗುವ ಮುನ್ನ ಹೇಳುತ್ತಿರುವ ಭವಿಷ್ಯವಾಣಿ ಇದು...'' ಎಂದು ಹೇಳಿದಂತೆ ಅನೇಕರಿಗೆ ಭಾಸವಾಯಿತು.

ಪ್ರವಾದಿ ಸಾಕ್ರೇಟಿಸ್. ಹೇಳಿದ್ದ ಈ ಮಾತುಗಳು ಅವನ ನಿಧನ ನಂತರ ಸತ್ಯವಾದವೆಂದು ಟೀಕಕಾರರು ಬರೆದಿಟ್ಟಿದ್ದಾರೆ. ಸಾಕ್ರೇಟಿಸ್‌ನನ್ನು ಹಿಂಸಿಸಿದವರು ಅನುಭವಿಸಿದ ಶಿಕ್ಷೆ, ಯಾತನೆಗಳು ಜಗತ್ತಿಗೆ ವಿಧಿತ. ಓರ್ವನನ್ನು ಸಿಗಿದು ತುಂಡು ತುಂಡು ಮಾಡಲಾಯಿತು. ಮತ್ತೋರ್ವ ಆಶ್ರಯಕ್ಕೆ ಮೊರೆ ಇಡುತ್ತಾ ಹುಚ್ಚನಂತೆ ಅಲೆದ. ಎಲ್ಲಕ್ಕಿಂತ ಹೆಚ್ಚಿನದಾಗಿ ಅಥೇನರನ್ನು ಪ್ಲೇಗ್ ಮಾರಿ ಭಯಂಕರವಾಗಿ ಕಾಡಿತು. ಲಜಪತ್‌ರಾಯ್ ಅವರ ಮೇಲೆ ಪಶು ರೀತಿಯ ಹಲ್ಲೆ ನಡೆಸಿದ ಪ್ರಮುಖ ಬ್ರಿಟಿಷ್ ಅಧಿಕಾರಿ ಸ್ಕಾಟ್‌ನನ್ನು ಲಾಹೋರಿನಿಂದ ಬೇರೆಡೆಗೆ ವರ್ಗಾಯಿಸಲಾಯಿತು. ಅಪಾಯದಿಂದ ಪಾರು ಮಾಡುವುದು ಆ ವರ್ಗಾವಣೆಯ ಉದ್ದೇಶವಾಗಿತ್ತು. ಆತನ ಸಹಾಯಕರಲ್ಲಿ ಒಬ್ಬರನ್ನು ಬಿಸಿ ನೆತ್ತರಿನ ಕೆಲವು ಯುವಕರು ಗುಂಡಿಟ್ಟು ಕೊಂದರು. ಬಹುಶಃ ಆ ಗುಂಡಿನ ಗುರಿ ಸ್ಕಾಟ್‌ನನ್ನೇ ಲಕ್ಷ್ಯವಾಗಿಟ್ಟುಕೊಂಡಿತ್ತು ಎಂದರೆ ಚಿನ್ನ. ಆದರೆ ಬಲಿಯಾಗಿದ್ದು ಸಾಂಡರ್ಸ್. ಆತ ಸ್ಥಳದಲ್ಲೇ ಸತ್ತು ಬಿದ್ದ. ಆ ಘಟನೆಯಲ್ಲದೆ ಅಥೇನರನ್ನು ಕಾಡಿದ ಪ್ಲೇಗ್ ಮಾರಿಯ ಸ್ವರೂಪವಾಗಲಿ ಇನ್ನೂ ಹೆಚ್ಚಿನದೇನೇ ಆಗಲಿ ಸಂಭವಿಸಲಿಲ್ಲ. ಜವಹರ ಲಾಲ್ ನೆಹರು ಆಡಿದ ಮಾತುಗಳು ಸಮಂಜಸವೆನಿಸುತ್ತವೆ.

''ಭಗತ್‌ಸಿಂಗ್ ತಮ್ಮ ಭಯೋತ್ಪಾದಕ ಚಟುವಟಿಕೆಯ ಮೂಲಕ ಜನಪ್ರಿಯರಾಗಲಿಲ್ಲ. ಅವರು ಜನಪ್ರಿಯರಾಗಿದ್ದು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಮೂಲಕ. ಲಾಲಾ ಲಜಪತ್‌ರಾಯ್ ಅವರಿಗೆ ಗೌರವ ಸಲ್ಲಿಸಲು, ತನ್ಮೂಲಕ ರಾಷ್ಟ್ರ ಸಮರ್ಪಣೆ ಮಾಡಿಕೊಂಡಿದ್ದರ ಸಂಕೇತ ಅವರಾಗಿದ್ದಾರೆ. ಅವರು ಎಸಗಿದ ಕಾರ್ಯ ಮರೆತು ಹೋಗಿದೆ. ಆದರೆ ಸಂಕೇತ ಮಾತ್ರ ಉಳಿದಿದೆ. ಕೆಲವು ತಿಂಗಳ ತನಕ ಪಂಜಾಬ್‌ನ ಪ್ರತಿ ಪಟ್ಟಣ, ಹಳ್ಳಿ, ಹಳ್ಳಿಯೂ ಉತ್ತರ ಭಾರತದ ಬಹುತೇಕ ಕಡೆಗಳಲ್ಲೂ ಅವರ ಹೆಸರು ಎಲ್ಲರ ನಾಲಿಗೆಯ ಮೇಲೂ ಇರುತ್ತದೆ. ಅವರಿಗಾಗಿ ಅಸಂಖ್ಯಾತ ಹಾಡುಗಳು ಹುಟ್ಟಿಕೊಳ್ಳುತ್ತವೆ. ಆ ವ್ಯಕ್ತಿ ಗಳಿಸಿದ ಜನಪ್ರಿಯತೆ ಒಂದು ಬಗೆಯಲ್ಲಿ ಅಚ್ಚರಿ ಮೂಡಿಸುವಂತಹುದು.''

ಈ ಎಲ್ಲಾ ಘಟನೆಗಳನ್ನು ಚರಿತ್ರೆಕಾರರು ಮಾಡಿಕೊಳ್ಳಲಿ. 1907ರಲ್ಲಿ ಲಾಲಾ ಲಜಪತ್‌ರಾಯ್ ಅವರನ್ನು ಗಡಿಪಾರು ಮಾಡಿದ್ದು ಯುವ ಪೀಳಿಗೆ ಹಿಂಸಾಚಾರಕ್ಕೆ ಇಳಿಯಲು ಕಾರಣವಾದ ಮೊದಲ ಘಟ್ಟ. 1928ರಲ್ಲಿ ಅವರ ಮೇಲೆ ನಡೆದ ಹಲ್ಲೆ, ತನ್ಮೂಲಕ ಆದ ರಾಷ್ಟ್ರೀಯ ಅಪಮಾನ ಆ ಹಿಂಸಾಚಾರಕ್ಕೆ ಇನ್ನಷ್ಟು ಎಣ್ಣೆ ಸುರಿದಿತ್ತು. ಅವರ ಸಾವು ಆ ಹಿಂಸಾಚಾರಕ್ಕೆ ಪರಾಕಾಷ್ಠೆಯಾಯಿತು. 1907ರ ಘಟನೆಗಳನ್ನು ಸ್ವತಃ ಲಾಲಾಜಿಯವರೇ ತಮ್ಮ ಯಂಗ್ ಇಂಡಿಯಾದಲ್ಲಿ ದಾಖಲೆ ಮಾಡಿಟ್ಟಿದ್ದಾರೆ. An Interpretation and a History, ಹೆಸರಿನ ಲೇಖನ ಎಲ್ಲವನ್ನು ಹೇಳುತ್ತಿದೆ. 1928ರ ಘಟನೆಯ ಬಗ್ಗೆ ಅಂಥ ದಾಖಲೆ ಲಭ್ಯವಿಲ್ಲ. ಯಾವುದೇ ಚರಿತ್ರೆಕಾರ ಆ ಘಟನೆಯ ಬಗ್ಗೆ ಬರೆದರೆ ಅದೊಂದು ದಾಖಲೆಯಾಗುವುದರಲ್ಲಿ ಅನುಮಾನವಿಲ್ಲ. ಸಾಕ್ರೇಟಿಸ್‌ನ ಭವಿಷ್ಯವಾಣಿ ಇಲ್ಲಿನ ಘಟನೆಗಳಲ್ಲಿ ವಾಸ್ತವಿಕತೆಯನ್ನು ಕಂಡು ಕೊಂಡಿರುವುದು ಕಂಡು ಬರುತ್ತದೆ.

''ಹಿಂದಿಗಿಂತಲು ಇಂದು ನಿನ್ನನ್ನು ದ್ವೇಷಿಸುವವರು ಹೆಚ್ಚಾಗಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ನಿನ್ನನ್ನು ದ್ವೇಷಿಸುವವರನ್ನು ನಾನು ಈತನಕ ಹಿಡಿದಿಟ್ಟುಕೊಂಡಿದ್ದೆ. ಅವರೆಲ್ಲರೂ ಬಿಸಿ ನೆತ್ತರಿನವರು. ಅವರಾರು ನಿನ್ನನ್ನು ಈಗ ಕ್ಷಮಿಸುವುದಿಲ್ಲ. ನೀನು ಅವರಿಗೀಗ ಎರವಾಗದಿರಲಾರೆ. ಇದು ನಾನು ಹೋಗುವ ಮೊದಲು ನುಡಿಯುತ್ತಿರುವ ಭವಿಷ್ಯವಾಣಿ.'' 1907ರಲ್ಲಿ ಪಂಜಾಬಿನ ಆಡಳಿತಷಾಹಿ ಲಜಪತ್‌ರಾಯ್ ಮತ್ತು ಅಜಿತ್‌ಸಿಂಗ್‌ರನ್ನು ಒಂದೇ ಕಾಯ್ದೆಯಡಿ ವಿಭಿನ್ನ ರೀತಿಯಲ್ಲಿ ಗಡಿಪಾರು ಶಿಕ್ಷೆಗೆ ಗುರಿಪಡಿಸಿತ್ತು. ಇಬ್ಬರನ್ನು ಒಂದೇ ಕೋಟೆಯಲ್ಲಿ ಬೇರೆ ಬೇರೆ ಹಂತದಲ್ಲಿ ಬಂಧನದಲ್ಲಿಟ್ಟಿತ್ತು. ಅವರನ್ನು ಬಿಡುಗಡೆ ಮಾಡಿದಾಗ ಒಂದೇ ರೈಲಿನಲ್ಲಿ ಲಾಹೋರಿಗೆ ಕರೆ ತಂದರೂ ಪರಸ್ಪರ ಭೇಟಿಗೆ ಅನುವು ಮಾಡಿಕೊಟ್ಟಿರಲಿಲ್ಲ. ಭಗತ್‌ಸಿಂಗ್ ಬೇರೆ ಯಾರೂ ಅಲ್ಲ. ಆ ಅಜಿತ್‌ಸಿಂಗ್‌ರ ಸೋದರಳಿಯ. 1928ರಲ್ಲಿ ಇದ್ದಕ್ಕಿದ್ದಂತೆ ಎಲ್ಲರ ನಾಲಿಗೆಯ ಮೇಲೆ ವಿಜೃಂಬಿಸಿದ ಹೆಸರು ಅದು. ಲಜಪತ್‌ರಾಯ್ ಅವರ ಸೇಡಿಗೆ ಸೇಡು ತೀರಿಸಿಕೊಂಡು ಹುತಾತ್ಮನಾದ ಬಿಸಿನೆತ್ತರಿನ ತರುಣ ಅವರು. ಲಜಪತ್‌ರಾಯ್ ಸತ್ತ ಒಂದು ತಿಂಗಳೊಳಗೆ ಪ್ರತಿಕಾರವನ್ನು ತೀರಿಸಿಕೊಂಡ ಭಗತ್‌ಸಿಂಗ್‌ರಿಗೆ ದೇಶ ಹುತಾತ್ಮ ಬಿರುದು ನೀಡಿ ಗೌರವಿಸಿದೆ. ಭಗತ್‌ಸಿಂಗ್ ಶ್ರೀಮಂತ ಕುಟುಂಬದಿಂದ ಬಂದವರು. ಅವರ ತಂದೆ

ಕಿಷನ್‌ಸಿಂಗ್ ಸಮಾಜಸೇವಾ ಕಾರ್ಯಕರ್ತರಾಗಿ ಲಜಪತ್‌ರಾಯ್ ಮಾರ್ಗದರ್ಶನದಲ್ಲಿ ದೇಶಸೇವೆಗೆ ತಮ್ಮನ್ನು ತೊಡಗಿಸಿಕೊಂಡವರು. ನಂತರ ಉಗ್ರವಾದಿ ರಾಜಕೀಯ ಚಟುವಟಿಕೆಯಲ್ಲಿ 'ಭಾರತಮಾತಾ' ಮೂಲಕ ದೇಶದ ಪ್ರಥಮ ದಶಕದಲ್ಲಿ ರಾಜಕೀಯ ಆಂದೋಲನದ ಬಿರುಸಿನಲ್ಲಿ ತೊಡಗಿದವರು. ಚಿಕ್ಕಪ್ಪ ಅಜಿತ್‌ಸಿಂಗ್‌ರ ಪ್ರಭಾವ, ಬ್ರಿಟಿಷರಿಂದ ಅವರಿಗಾದ ಶೋಷಣೆ ಭಗತ್‌ಸಿಂಗ್‌ರ ರಕ್ತದಲ್ಲಿ ಹರಿಯುತ್ತಿತ್ತು. ಅಜಿತ್‌ಸಿಂಗ್ ಸೆರೆಮನೆಯಲ್ಲಿದ್ದಾಗಲೇ ಭಗತ್‌ಸಿಂಗ್ ಅವರನ್ನು ಭೇಟಿ ಮಾಡುತ್ತಿದ್ದರು. ಎಳೆತನದಿಂದಲೇ ಅವರಲ್ಲಿ ಸೇಡಿನ ಮನೋಧರ್ಮ ಬೆಳೆಯುತ್ತಾ ಬಂದಿತ್ತು. ಲಾಹೋರಿನ ನ್ಯಾಷನಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಭಾಯಿ ಪರಮಾನಂದರಂಥ ಪ್ರಭಾವಿ ಗುರುವಿನ ಸ್ಫೂರ್ತಿ ಸಿಕ್ಕಿದ್ದು ಭಗತ್‌ಸಿಂಗ್ ಬೆಳವಣಿಗೆಯ ಮೇಲೆ ಇನ್ನಷ್ಟು ಪರಿಣಾಮ ಬೀರಿತ್ತು. ಸ್ವಾತಂತ್ರ್ಯಕ್ಕಾಗಿ ಭಾರತ ತಹತಹಿಸುತ್ತಿದ್ದ ಪರಿಸ್ಥಿತಿ ಅವರ ಭಾವನೆಗಳಿಗೆ ಉದ್ದೀಪನವಾಯಿತು. ಕುಕಾ ಬಂಡಾಯದ ಬಗ್ಗೆ ಭಗತ್‌ಸಿಂಗ್ ಕೇಳಿದ್ದರು. ಓದಿದ್ದರು. ಕರ್ತಾರ್‌ಸಿಂಗ್ ಸರಬರಂಥ ಯುವ ಕ್ರಾಂತಿಕಾರಿಗಳು ಆತ್ಮಾರ್ಪಣೆ ಮಾಡಿಕೊಂಡಿದ್ದನ್ನೆಲ್ಲ ಅವರು ತಿಳಿದುಕೊಂಡಿದ್ದರು. ಧೈರ್ಯ, ಸಾಹಸ ಮತ್ತು ನಿಶ್ಚಯಗಳೇ ಮೂರ್ತಿವೆತ್ತಿದ್ದ ಭಗತ್‌ಸಿಂಗ್‌ರಲ್ಲಿ ನಾಯಕತ್ವದ ಲಕ್ಷಣಗಳು ಸಹಜವಾಗಿದ್ದವು. ಮೇಲೆ ಪ್ರಸ್ತಾಪಿಸಿದ ಪ್ರಸಂಗಗಳು ಆ ನಿಟ್ಟಿನಲ್ಲಿ ಅವರನ್ನು ಹದಗಟ್ಟಿಸಿದ್ದವು.

ಭಗತ್‌ಸಿಂಗ್‌ರನ್ನು ನೋಡಿದಾಗ ಹುತಾತ್ಮರ ಸಾಲಿಗೆ ಸೇರುವವರು ಇವರೆಂದೇ ಭಾಸವಾಗುತ್ತಿತ್ತು. ಈ ಕೃತಿಯ ಲೇಖಕರು ಅನೇಕ ವರ್ಷಗಳ ಕಾಲ ಅವರನ್ನು ಕಂಡಿದ್ದಾರೆ. ಚಲನವಲನಗಳನ್ನು ಲಕ್ಷಿಸಿದ್ದಾರೆ. ಭಗತ್‌ಸಿಂಗ್‌ರ ಚಹರೆಯಲ್ಲೂ ಒಟ್ಟಾರೆ ಅವರ ವ್ಯಕ್ತಿತ್ವ ಗಾಲಿಬ್ ತನ್ನ ಕೃತಿಯಲ್ಲಿ ವರ್ಣಿಸುವ ಪರ್ಷಿಯನ್ ಕಥಾನಾಯಕನಿಗೆ ಅನ್ವಯವಾಗುವಂತಿದ್ದವು. ಮಹಾನ್ ಜನತಾ ನಾಯಕ ಅಪ್ರತಿಮ ದೇಶಭಕ್ತನ ಮೇಲೆ ನಡೆದ ಹಲ್ಲೆ ಭಗತ್‌ಸಿಂಗ್ ಮನಸ್ಸಿನ ಮೇಲೆ ಜ್ವಾಲಾಮುಖಿಯಾಗಿ ಪರಿಣಮಿಸಿತು. ಆ ಜ್ವಾಲೆ ಹೊರಹೊಮ್ಮಲು ಅವಕಾಶಕ್ಕಾಗಿ ಕಾಯುತ್ತಿತ್ತು. ದೇಶಬಂಧು ಸಿ.ಆರ್. ದಾಸ್‌ರ ಪತ್ನಿ ಬಸಂತಿದೇವಿ 'ಭಾರತದ ಮಹಿಳೆ' ಎಂದು ಕರೆಯಿಸಿಕೊಂಡವರು. ತಮ್ಮ ಪತಿಯ ಮರಣದ ನಂತರ ಆ ವೀರವನಿತೆ ದೇಶದ ಯುವಪೀಳಿಗೆಗೆ ಕೊಟ್ಟ ಕರೆ ಭಗತ್‌ಸಿಂಗ್‌ರ ನಿರ್ಣಾಯಕ ನಿರ್ಧಾರಕ್ಕೆ ಪ್ರೇರಕವಾಯಿತು. ಆಕೆಯ ಕರೆಗೆ ಉತ್ತರವಾಗಲು ಅವರು ಸನ್ನದ್ಧರಾದರು. ಬಸಂತಿದೇವಿಯ ಕರೆ ಅವರ ಕಿವಿಗಳಲ್ಲಿ ಗುಂಯ್‌ಗುಡುತ್ತಿತ್ತು. ಸವಾಲಾಗಿ ಅವರನ್ನು ಅಣಕಿಸುವಂತೆ ಕಾಣುತ್ತಿತ್ತು. ವ್ಯವಸ್ಥೆ ಎಷ್ಟೇ ರಹಸ್ಯವಾಗಿಟ್ಟಿದ್ದರೂ ಭಗತ್‌ಸಿಂಗ್ ಶೋಧಿಸದೇ ಬಿಡಲಿಲ್ಲ. ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಯೊಂದಿಗೆ ಭಗತ್‌ಸಿಂಗ್ ತನ್ನ ದಾಹವನ್ನು ತೀರಿಸಿಕೊಳ್ಳದಿರಲಿಲ್ಲ. ಪ್ರತಿ ಸೇಡು ತೆಗೆದುಕೊಳ್ಳದಿರಲಿಲ್ಲ.

* * *

ಬರರ

ಆಕರ

ಲಜಪತ್‌ರಾಯ್ ಕುರಿತ ಕಾಗದ ಪತ್ರಗಳ ಸಂಕ್ಷಿಪ್ತ ಟಿಪ್ಪಣಿ, ಆತ್ಮ ಚರಿತ್ರೆಯ ಸಂಪನ್ಮೂಲಗಳು ಮುಂತಾದವು.

ಲಜಪತ್‌ರಾಯ್ ಅವರ ಕಾಗದ ಪತ್ರಗಳು ಎಲ್ಲಿ ಲಭ್ಯವೆಂಬ ಬಗ್ಗೆ ಆಗಾಗ ವಿಚಾರಣೆಗಳು ಕೇಳಿ ಬರುತ್ತಿರುವುದುಂಟು. ಲಾಲಾಜಿಯವರ ವೈಯಕ್ತಿಕ ಕಾಗದ ಪತ್ರಗಳು ಅಂದರೆ ವ್ಯವಹಾರದ ಪತ್ರಗಳನ್ನು (ಮತ್ತು ವೃತ್ತಪತ್ರಿಕೆಯ ಭಾಗಗಳು) ಅವರು ಗ್ರಹಿಸಿಟ್ಟಿದ್ದರು. ಯುದ್ಧ ಕಾಲದಲ್ಲಿ ವಿದೇಶದಲ್ಲಿದ್ದ ಅವರಿಗೆ ಸಂಬಂಧಪಟ್ಟವು ಅವು. ಆ ಜೀವನ ಚರಿತ್ರೆಯನ್ನು ಬರೆಯುವ ಸಂದರ್ಭದಲ್ಲಿ ನನಗೆ ಅವೆಲ್ಲವೂ ಲಾಹೋರಿನಲ್ಲಿ ಪ್ರಾಪ್ತವಾದವು. ಅಮೂಲ್ಯವಾದ ಆ ವಸ್ತುಗಳು 1947ರ ಇಬ್ಭಾಗದ ಸಂದರ್ಭದಲ್ಲಿ ನಾಶಯಾಗಿವೆ. ಈಗ ಲಭ್ಯವಿರುವ ಪ್ರತಿಗಳು ಹಾಗೂ ಇತರೆ ಸಾಮಾಗ್ರಿಗಳು ಮುದ್ರಿತ ರೂಪದಲ್ಲಿವೆ.

ಲಾಲಾಜಿಯವರು ಯಾವುದೇ ದಿನಚರಿಯನ್ನು ಬರೆದಿಟ್ಟಿಲ್ಲ. ಬರೆದಿದ್ದರೂ ಅದು ಸ್ವಲ್ಪ ಕಾಲದಾಗಿದ್ದು ಅದನ್ನು ಅವರು ಕಾಯ್ದಿರಿಸಿಲ್ಲ.

ಆತ್ಮಚರಿತ್ರೆಯ ಬರಹಗಳು ಲಾಲಾಜಿಯವರ *Story of My Deportation* (ಉರ್ದು ಭಾಷೆಯಲ್ಲಿ ಮೇರಿ ಜಲವಂತಿ ಕಿ ದಾಸ್ತಾನ್.) ಅವರು ಮಾಂಡೇಲಿಯಿಂದ ಮರಳಿದ ಕೆಲವೇ ದಿನಗಳಲ್ಲಿ ಪ್ರಕಟಗೊಂಡಿದೆ. ಲಾಲಾಜಿಯವರ ಗಡಿಪಾರು ಶಿಕ್ಷೆ ಮಾಂಡೇಲೆ ಬಂಧನಕ್ಕೆ ಸಂಬಂಧಪಟ್ಟಂತೆ ಆಯಾ ಅಧ್ಯಾಯಗಳಲ್ಲಿ ಉದ್ಧೃತವಾಗಿರುವ ಭಾಗಗಳನ್ನು ಅವರ ಈ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ. 1914ರಲ್ಲಿ ಉರ್ದುವಿನಲ್ಲಿ ಅವರು ಬರೆದಿರುವ ಗಡಿಪಾರು ಶಿಕ್ಷೆ ಪೂರ್ವದ ಕಥೆ ವಿದೇಶಗಳಲ್ಲೇ ಉಳಿದಿದೆ. ಅಸಹಕಾರ ಚಳವಳಿ ನಂತರದ ಐರೋಪ್ಯ ಪ್ರವಾಸ ಕಾಲದಲ್ಲಿ ಬರೆದ ಅವರ ಕೃತಿಯೊಂದು ಅವರ ಬಳಿಯಲ್ಲೇ ಉಳಿದುಕೊಂಡಿತ್ತು. ಇದಿನ್ನೂ ಅಪ್ರಕಟಿತ. ಅವರ ಮರಣಾನಂತರ ವಂದೇ ಮಾತರಂ ಉರ್ದು ದೈನಿಕದಲ್ಲಿ ಆ ಕೃತಿ ಧಾರಾವಾಹಿಯಾಗಿ ಬೆಳಕು ಕಂಡಿದೆ. ದಿ ಪೀಪಲ್ ಸಾಪ್ತಾಹಿಕದಲ್ಲಿ 1929 ಎಪ್ರಿಲ್ ನಂತರ ಅವರ ಇಂಗ್ಲಿಷ್ ಅವತರಣಿಕೆಯು ಪ್ರಕಟವಾಗಿವೆ. ಪಂಜಾಬಿನ ಕೇಸರಿ ಹಿಂದಿ ಪತ್ರಿಕೆಯಲ್ಲಿ ಅದನ್ನು ಜನತಾ ಸೇವಾ ಸಂಘ ಧಾರಾವಾಹಿಯಾಗಿ ಪ್ರಕಟಿಸಿದೆ. ತಮ್ಮ ಕಡೆಯ ದಿನಗಳಲ್ಲಿ ಲಾಲಾಜಿ ಯುದ್ಧ ಕಾಲಧ ಸ್ವಯಂ ಘೋಷಿತ ಗಡಿಪಾರು ಅವಧಿಗೆ ಸಂಬರಧಪಟ್ಟಂತೆ ಬರೆಯಲು ಉದ್ಯುಕ್ತರಾಗಿದ್ದರು. ಅದರ ಕೆಲವು ಭಾಗಗಳು ಇಂಗ್ಲಿಷ್‌ನಲ್ಲಿ ಬರೆಯಲ್ಪಟ್ಟಿವೆ. ಲಾಲಾಜಿ ಅವರ ನಿಧನ ನಂತರ ಆ ಭಾಗಗಳು ದಿ ಪೀಪಲ್ ಸಾಪ್ತಾಹಿಕದಲ್ಲಿ (1929-30) ಪ್ರಕಟಗೊಂಡಿದೆ. ಗದ್ದರ್ ಪಾರ್ಟಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಜನರ ಬಗ್ಗೆ ನೆನಪಿನ ಕೃತಿಯಾಗಿ ಲಜಪತ್‌ರಾಯ್ 1919ರ ಜೂನ್ ತಿಂಗಳಿನಲ್ಲಿ ಬರಹವೊಂದನ್ನು ಸಿದ್ಧಪಡಿಸಿರುವರು. ಅದನ್ನು ಮುದ್ರಿತ ಲಕೋಟೆಯೊಂದರಲ್ಲಿ ಇರಿಸಿ ತಮ್ಮ ಗೆಳೆಯ ಹಾಗೂ ಪ್ರಕಾಶಕ ನ್ಯೂಯಾರ್ಕ್‌ನ ಬಿ.ಡಬ್ಲ್ಯೂ. ಹೇಬ್ಸ್ ಅವರಲ್ಲಿ ಇಡಗೊಟ್ಟಿದ್ದರು.

ಲಾಲಾಜಿಯವರ ನಿಧನದ ಅನೇಕ ವರ್ಷಗಳ ನಂತರ ಹೇಬ್ಸ್ ತಮ್ಮಲ್ಲಿದ್ದ ಆ ಲಕೋಟೆಯನ್ನು ನ್ಯೂಯಾರ್ಕ್‌ನ ಸಾರ್ವಜನಿಕ ಗ್ರಂಥಾಲಯಕ್ಕೆ ಒಪ್ಪಿಸಿದರು. ಈಗ ಅದು ಭಾರತದ ರಾಷ್ಟ್ರೀಯ ಪತ್ರಾಗಾರದಲ್ಲಿ ಲಭ್ಯವಿದೆ. ಅದರ ಪ್ರಕಟಣೆಯನ್ನು ಕೈಗೊಂಡಿಲ್ಲ. ಲಾಲಾ ಲಜಪತ್‌ರಾಯ್ ಅವರ *Auto-biographical Writings* ಕೃತಿಯಲ್ಲಿ ಅವನ್ನು ಪುನರ್ ಮುದ್ರಿಸಲಾಗಿದೆ. ಜನತಾ ಸೇವಕ ಸಂಘದ ಪರವಾಗಿ ವಿ.ಸಿ. ಜೋಷಿ ಆ ಕೃತಿಯನ್ನು ಸಂಪಾದಿಸಿರುವರು.

ಲಾಲಾಜಿಯವರ ಪ್ರವಾಸ ಲೇಖನಗಳು ಆತ್ಮಚರಿತ್ರೆಯ ರೂಪದಲ್ಲಿ ಕುತೂಹಲ ಕೆರಳಿಸುತ್ತವೆ. ಲಾಲಾಜಿಯವರು ದಿ ಪಂಜಾಬಿ ಪತ್ರಿಕೆಗೆ ಮೊದಲ ಬಾರಿಗೆ ತಾವು ಯುರೋಪ್ ಮತ್ತು ಅಮೆರಿಕಕ್ಕೆ (1904) ಭೇಟಿ ಕೊಟ್ಟಾಗ ಬರೆದ ಪತ್ರಗಳೊಂದಿಗೆ ಆರಂಭಗೊಂಡಿದೆ. ಅವರು (ಜಮಾನೆಯಂಥ ಕೆಲವು ಹಸರಾಂತ ನಿಯತಕಾಲಿಕೆಗಳಿಗೂ ಸಹ ಬರೆದಿರುವರು. ಜಮಾನೆ ಕಾನ್ಪುರದಿಂದ ಪ್ರಕಟಗೊಳ್ಳುತ್ತಿದ್ದ ಒಂದು ಸಾಹಿತ್ಯಿಕ ಮಾಸಿಕ) ದಿ ಪೀಪಲ್ ಪ್ರಕಟಣೆ ಕೈಗೊಂಡ ನಂತರ ವಿದೇಶ ಪ್ರವಾಸ ಕೈಗೊಂಡಾಗಲೆಲ್ಲಾ ಲಾಲಾಜಿಯವರು ತಮ್ಮ ಲೇಖನಗಳನ್ನು ಸಾಪ್ತಾಹಿಕಕ್ಕೆ ಬರೆದು ಕಳುಹಿಸುತ್ತಿದ್ದರು. ಪೀಪಲ್ ಸಾಪ್ತಾಹಿಕವು ಲಜಪತ್‌ರಾಯ್ ವಿಶೇಷಾಂಕವೊಂದನ್ನು 1929 ಏಪ್ರಿಲ್ ತಿಂಗಳಲ್ಲಿ ಹೊರತಂದಿದೆ. ಲಾಲಾಜಿಯವರ ಜೀವನ ಚರಿತ್ರೆಯ ಬರಹಗಳ ಧಾರಾವಾಹಿ ಆ ಸಂಚಿಕೆಯಿಂದ ಆರಂಭಗೊಂಡಿದೆ. ಆ ನಂತರ ಲಾಲಾಜಿಯವರ ಪತ್ರಗಳ ಸಂಗ್ರಹಕ್ಕೆ ಸಂಬಂಧಪಟ್ಟಂತೆ ಕೆಲವು ಆಯ್ದ ಹೊತ್ತಿಗೆಗಳು ಪ್ರಕಟಗೊಂಡಿವೆ. ಅದರಲ್ಲೂ ಭಾರತ ಮತ್ತು ಹೊರದೇಶಗಳಲ್ಲಿರುವ ಲಾಲಾಜಿಯವರ ಗೆಳೆಯರಿಂದ ಬರೆಸಲಾದ ಇಲ್ಲವೇ ಸಂಗ್ರಹಿಸಲಾದ ನೆನಪುಗಳ ಕೃತಿ ಅತಿ ಶ್ರೀಮಂತವಾದದ್ದು ಮತ್ತು ಅಪರೂಪದ್ದು.

* * *

आधुनिक भारत के निर्माता

BUILDERS OF MODERN INDIA

আধুনিক ভারতের স্রষ্টা

আধুনিক ভাৰতৰ নিৰ্মাতা

આધુનિક ભારતના ઘડવૈયા

ಆಧುನಿಕ ಭಾರತದ ನಿರ್ಮಾಪಕರು

आधुनिक भारताचे शिल्पकार

ଆଧୁନିକ ଭାରତର ନିର୍ମାତା

आधुनिक-भारतस्य निर्मातारः

ਨਵ-ਭਾਰਤ ਦੇ ਨਿਰਮਾਤਾ

PUBLICATIONS DIVISION
MINISTRY OF INFORMATION & BROADCASTING
GOVERNMENT OF INDIA

PRICE : Rs. 145.00

ISBN:81-230-0721-3

నవ భారత నిర్మాతలు

جدید ہندوستان کے معم